నవయుగ

6—1—1966

226

౨౦
పై సె

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ವರೆಗೆ—

ಅಲವಂತಿಯ ರಾಮಚಂದ್ರ ರೈತ ಮುರುಗನ ಮನವೊಲಿಸಿ ಮದ್ರಾಸಿಗೆ ತೆರಳಿದ ಬಿ.ಎ. ಮಾಡುವ ಹಂಬಲದಿಂದ. ಅದಾಗದೆ ಹೋದರೂ ಜಾನಕಿ ಕೈಹಿಡಿದಳು, ಕೇದಾರಿಯ ಸಹಾಯದಿಂದ. ಹಳ್ಳಿಯು ನೆರೆಯಲ್ಲಿ ಮುಳುಗಿದ ಸಂದರ್ಭ ವರಸೆ ಅತ್ತೆ ಮೀನಾಕ್ಷಿ ಬಿಸಿ ಕಬ್ಬಿಣವನ್ನು ಬಡೆದಳು. ಅಳಿಯನು ಕಡಪ ಜಿಲ್ಲಾಧಿಕಾರಿಯ ಬಳಿ ಶಿಬಿರಗುಮಾಸ್ತನಾಗಿ ಸೇರಲು ಪ್ರೇರಕಳಾದಳು. ಸದಾ ಬಣ್ಣದ ಜೀವನವನ್ನೇ ಬದುಕುವ, ಮಹತ್ವಾಕಾಂಕ್ಷೆಯ ನಾರಿಯಾಗಿದ್ದ ಮೀನಾಕ್ಷಿಗೆ ಅಳಿಯನ ವರ್ತನೆ ಎಳ್ಳಷ್ಟೂ ಸರಿಬರುತ್ತಿರಲಿಲ್ಲ. ಮದ್ರಾಸದಲ್ಲಿನ ಕೇದಾರಿ, ಕಡಪದ ಕಮಲಮ್ಮನವರ ಸುಖಜೀವನವನ್ನು ನೆನೆನೆನೆದು ಆಕೆ ಮರುಗುತ್ತಿದ್ದಳು. ಅಳಿಯನ ಧರ್ಮ ಪರಾಯಣತೆಗಾಗಿ ಒಂದು ದಿನ ಕೆಡೆಲ್ ತನ್ನ ವಿಧೇಯ ರಾಮಚಂದ್ರನ ಆತ್ಮವನ್ನೇ ಕೆಣಕಿದರು. ಆದು ಅವರ ಆತ್ಮವನ್ನೂ ಕೆಣಕದೆ ಬಿಡಲಿಲ್ಲ.

ಮುಂದೆ—

ಒಂದು ಮಹತ್ವಪೂರ್ಣ ಮುಗುಳ್ನಗೆ ಆಕೆಯ ತುಟಿಗಳ ನಡುವೆ ಕಾಣಿಸಿಕೊಂಡಿತು.

"ಇಂದು ಬೆಳಿಗ್ಗೆಯೂ ರಾಮಚಂದ್ರನ ಬಳಿ ಒರಟುತನದಿಂದ ನಡೆದುಕೊಂಡಿದ್ದೀರಿ. ಅವನಾಗ ಕೋಪಾವಿಷ್ಟನಾಗಿದ್ದಂತೆ ಹಾಗೂ ರಾಜಿನಾಮೆ ಕೊಡಲು ಸಿದ್ಧನಾಗಿದ್ದಂತೆ ನನಗೆ ಕಾಣಿಸಿಕೊಂಡಿತು; ಒಂದು ತಪ್ಪಿಗಾಗಿ ಹೇಗೆ ಕಠಿಣ ಹೃದಯಿಯಂತೆ ಅವನ ಬಳಿ ಮಾತಾಡಿದಿರಿ! ಅದೂ ನಿಮ್ಮಿಂದಲೇ ಘಟಿಸಿರುವ ತಪ್ಪೆಂದು ಅನಂತರ ನೀವು ಕಂಡುಕೊಂಡಿದ್ದೀರಿ. ಆದರೂ ಅಲ್ಲಿ, ಎದುರಿಗೇನೇ, ಅವನ ಬಳಿ ಕ್ಷಮಾಪಣೆಯನ್ನು ನೀವು ಕೇಳಲಿಲ್ಲ."

"ಎಲ್ಲರೆದುರಿಗೆ ಶಿಬಿರ-ಗುಮಾಸ್ತನ ಹತ್ತಿರ ಕ್ಷಮೆ ಬೇಡುವದು! ಕಛೇರಿ ಪ್ರಪಂಚ ನನ್ನನ್ನು ಕಂಡು ಹಾಸ್ಯಮಾಡೀತು. ಆದರ ಕುರಿತೇ ನಾನೀಗ ಆಲೋಚಿಸುತ್ತಲಿದ್ದೆ—ಅನೂ ಪಶ್ಚಾತ್ತಾಪದಿಂದ ಮುಳುಗಿದ್ದೇನೆ. ಅದನ್ನು ತೊಡೆದು ಹಾಕಲು, ನಾಳೆ ಮುಖ್ಯ ಗುಮಾಸ್ತನೆದುರಿಗೇ ಅವನನ್ನು ಹೆಸರು ಹಿಡಿದು ಕರೆದು, ಅವನಿಗೆ ಮಾತ್ರ ತಿಳಿಯುವಂತೆ, ಮುಗುಳ್ನಗೆಯನ್ನು ಕಾಣಿಸುತ್ತೇನೆ."

"ಆದರೂ, ನೀವು ಮಾಡಿರುವುದು ತಪ್ಪು ತಾನೇ; ನಿಮ್ಮ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಳ್ಳುವದರಲ್ಲಿ ಏನು ಅವಮಾನವಿದೆ?"

"ಈ ಪ್ರಪಂಚದಲ್ಲಿ ಅಳ್ವಿಕೆ ಹಾಗೂ ಆಜ್ಞೆಗಳ ಅಗತ್ಯವೇ ಇಲ್ಲವೆಂದು ಭಾವಿಸಿರುವ ಹೆಂಗಸಿನಂತೆ ನೀನು ಮಾತಾಡುತ್ತಿರುವೆ. ಕಛೇರಿ ಜೀವನದಲ್ಲಿ ಗೌರವ ವು ಕಿಡ; ಅದಿಲ್ಲದಿದ್ದಲ್ಲಿ ನಾವು ಧಂಡಿಬಾದಿಯಾಗಿ ಹೋಗಬೇಕಾದೀತು. ಶಿಬಿರ-ಗುಮಾಸ್ತನನ್ನು ಬಹಿರಂಗವಾಗಿ ಹೊಗಳಲು ನೀನು ಶಕ್ತಳಾಗಿರುವದಿಲ್ಲ. ಒಂದು ವೇಳೆ ನೀನು ಹಾಗೆ ಮಾಡಿದಲ್ಲಿ ಅಧಿಕಾರವು ಸ್ವಾತಂತ್ರ್ಯದೊಂದಿಗೆ ಮುಕ್ತಾಯವಾದೀತು ಮತ್ತು........"

"ದೇಶದಾದ್ಯಂತ ಗಲಬಲಿ ಹಬ್ಬಿಕೊಂಡಿದೆ! ಆದರದು ಸೌಜನ್ಯವನ್ನು ಪ್ರತಿಬಂಧಿಸಿದೆಯೇನು?"

"ಆದರೆ, ಅಂತಹ ವಾತಾವರಣದಲ್ಲಿ ಸೌಜನ್ಯತೆ ಹೇಗೆ ಬೆಳೆದೀತು? ರೂಢಿ ಹಾಗೂ ಸಂಪ್ರದಾಯಗಳು ಶಕ್ತಿಶಾಲಿಗಳವೆ. ಶಕ್ತಿಯು ಉರಿ ಮೊಗದ್ದಿದೆ. ಆದೆಂದೂ ಮುಗುಳ್ನಗೆಯನ್ನು ಬೀರುವದಿಲ್ಲ; ಭಾವನೆಯು ಅನುಭವವೇ ಆದಕ್ಕೆ ಇರುವದಿಲ್ಲ. ಕುದುರೆಯು ವೇಗವನ್ನು ಕಡಿಮೆ ಮಾಡಿದಂತೆ, ಸಾರಥಿಯು ಯಾವಾಗಲೂ ಚಾಟಿಯಿಂದ ಶಬ್ದ ಮಾಡುತ್ತಲೇ ಇರುತ್ತಾನೆ."

"ಬಾಕಿ ಉಳಿದಿರುವದು ನನಗೆ ಗೊತ್ತಿದೆ— ಕೆಟ್ಟ ಸಾರಥಿ, ನಿಜವಾಗಿ ಇದೊಂದು ಪ್ರತಿಯೋರ್ವರ ಕ್ರಿಯಾಶೀಲ ಮನುಷ್ಯರ ಹಳಸಿದ ತತ್ವ. ಇತರರ ದೌರ್ಜನ್ಯಕ್ಕೊಳಗಾಗುವ ಮುಂಚೆಯೇ, ತನ್ನನ್ನು ಕಾಪಾಡಿಕೊಳ್ಳಲು, ಅವರನ್ನು ಮರ್ದಿಸುವ ನೀತಿ ಬಹಳ ಅಲ್ಪ ಹಾಗೂ ಕ್ರೂರವಿದೆ. ಈ ತತ್ವವು ನಿಮಗೆ ಹೇಳಿಸಿದುದಲ್ಲ. ನಾವು ಇಲ್ಲಿಯ ಸಮಾಜದೊಂದಿಗೆ ಬೆರೆತುಕೊಳ್ಳದೆ ಗರ್ವದಿಂದಿದ್ದೇವೆ. ನಾವು ಬಾಡಿ ಹೋಗಿರುವ ಮುಖದಿಂದ ಒತ್ತಟ್ಟಿಗೆ ದೂರ ನಿಂತುಕೊಂಡಿದ್ದೇವೆ. ಆದು ಆಳ್ವಿಕೆಗೊಳಪಟ್ಟಿರುವವರನ್ನು ತಿಳಿದುಕೊಳ್ಳುವ ರೀತಿ ಇರುವದಿಲ್ಲ. ನಾವು ಈಗ ಕೇವಲ ನಮ್ಮ ಜಾಣಾಕ್ಷ ಪೂರ್ವಜರ ಕೆಲಸದ ಬಂಡವಾಳದಿಂದ ಜೀವಿಸಿಕೊಂಡು ಇದ್ದೇವೆ. ಶ್ರೀ ಮತ್ತು ಶ್ರೀಮತಿ ರಾಮಚಂದ್ರರನ್ನು ನಾವು ಚಹಾಕ್ಕೆ ಆಮಂತ್ರಿಸಿ, ಅವರ ಜೀವನ ಹಾಗೂ ಪದ್ಧತಿಗಳನ್ನು ತಿಳಿದುಕೊಳ್ಳಲು ಏತಕ್ಕೆ ಪ್ರಯತ್ನಿಸಬಾರದು?"

"ನಾನೂ ಹಾಗೆಯೇ ಆಲೋಚಿಸುತ್ತಿದ್ದೇನೆ, ರಾಣಿ."

'ನೀವು ನಿಜವಾಗಿ ಕಾರ್ಯ ಪ್ರೇಮಿಗಳಾಗಿದಲ್ಲಿ, ಅದರಂತೆ ವರ್ತಿಸಿರಿ.'

"ನನ್ನತ್ತ ನೋಡಿ ಎಲ್ಲರೂ ನಗಾಡಿಯಾರು. ಈ ಜಿಲ್ಲೆಯ ಆಡಳಿತವು ಲಂಚ, ತಿರಸ್ಕಾರ ಮತ್ತು ಗಲಿಬಿಲಿಗಳ ದವಡೆಯಲ್ಲಿ ಸಿಕ್ಕಿ ಬಿದ್ದೀತು. ನನ್ನ ವರ್ಗದ ಗೌರವವು ಗೋರಿ ಪಾಲಾದೀತು. ಒಮ್ಮೆ ನಮ್ಮ ಕಾದಿರಿಸಲ್ಪಟ್ಟಿರುವ ಒಳರಹಸ್ಯವು ಬಯಲಾಯಿತೆಂದರೆ...."

"ಎಂದಿಗೂ ಇಲ್ಲ, ನೀವು ತಪ್ಪು ತಿಳಿದುಕೊಂಡಿದ್ದೀರಿ, ದೊರೆ ವ್ಯಾಪಾರಿ ಸಂಘದ (ಕಂಪೆನಿ) ಕಾಲದಲ್ಲೂ ಸಿವಿಲ್ ಮಾವನವರು ತಂಜಾವೂರಿನಲ್ಲಿ ಜಿಲ್ಲಾಧಿಕಾರಿಗಳಾಗಿದ್ದರು. ಅವರು ಬಹಳ ಪರಾಕ್ರಮದ ಕಾರ್ಯಗಳನ್ನು ಮಾಡಿದ್ದಾರೆ. ಶಕ್ತಿಶಾಲಿ ಹಾಗೂ ಹಟಮಾರಿ ರಾಜರುಗಳನ್ನು ಹತೋಟಿಯಲ್ಲಿಟ್ಟುಕೊಂಡಿದ್ದರು. ಆದರೆ ಅವುಗಳನ್ನೆಲ್ಲಾ ಮಾಡಿದ್ದು ಜನರ ನಸ್ಸಿನ ಇಂಗಿತವನ್ನು ತಿಳಿಸದೆ ಆಥವಾ ಮೌನವಾಗಿದ್ದು ಅಲ್ಲ. ಕೇವಲ ಸಿಹಿ ಮಾತುಗಳನ್ನಾಡಿ ಹಾಗೂ ಮನ ಒಲಿಸಿಕೊಂಡು ಅವರು ಪ್ರಜೆಗಳೊಂದಿಗೂ ರಾಜರೊಂದಿಗೂ ಸರಿಯಾಗಿ ತಿರುಗಾಡುತ್ತಿದ್ದರು. ಅವರ ಪದ್ಧತಿ, ರೀತಿ ನೀತಿಗಳನ್ನು ತಿಳಿದುಕೊಂಡಿದ್ದರು; ಪ್ರಯೋಜಕ ಪುಸ್ತಕಗಳ ಮೂಲಕ, ಸ್ವತಃ ಜೀವನವನ್ನು ನೋಡಿ ತಿಳಿದುಕೊಂಡಿದ್ದರು. ತಮಿಳು ಮತ್ತು ತೆಲುಗು ಭಾಷೆಗಳು ಬರುತ್ತಿದ್ದುವು. ಅವರು ಅನ್ನ ಹಾಗೂ ಪಲ್ಯ ಲೋಗಂಗಳನ್ನು ತಿನ್ನುತ್ತಿದ್ದರು. ಅವರ ಜ್ಞಾನ ಪಂಚಾಂಗದ ಮೇಲೆ ಸಾಮ್ರಾಜ್ಯ ಮಹಲನ್ನು ಕಟ್ಟಿದ್ದರು. ನಾವು ಸ್ಥಳೀಯ ಪ್ಪರ ಹಾಗೂ ವಸ್ತುಗಳ ಕುರಿತು ತಿಳಿದುಕೊಳ್ಳದೆ ಒಬ್ಬಾರೆ ಸವಾರಿ ಮಾಡುತ್ತಿದ್ದೇವೆ, ಬೀಳುವದು ಖಂಡಿತ."

"ಇದೇ ರೀತಿಯಲ್ಲಿ ಸಾಗಿದರೆ, ಈ ಕೋಟೆಯನ್ನು ಹತ್ತು ವರ್ಷಗಳಾದರೂ ನಾವು ಕಾಪಾಡಿಕೊಳ್ಳಲು ಶಕ್ತರಿದ್ದೇವೆಂಬ ಭರವಸೆ ನನಗಿಲ್ಲ."

"ನೀನು ಪುಸ್ತಕದ ಮಾತುಗಳನ್ನಾಡಿದರೂ ಬುದ್ಧಿವಂತಳಂತೆ ಹಾಗಾ ಮಾತನಾಡುವುದೇ ಸರಿ ಎಂದು ತೋರುತ್ತಿದೆ. ವ್ಯಾಪಾರದಿಂದ ರಾಜಕೀಯಕ್ಕೆ, ಉದ್ಯೋಗದಿಂದ ಸಾರ್ವಭೌಮ ಅಧಿಕಾರದತ್ತ ಸಮಾಜವು ಸರಿದಿದೆ. ಅಲ್ಲದೆ ಸಂಪ್ರದಾಯ ವೃಕ್ಷ ಬುಡಕ್ಕೆ ಯಾರು ಕೊಡಲಿಯೇಟನ್ನು ಹಾಕುತ್ತಾರೆ? ಅದೆಲ್ಲವನ್ನೂ ಒಂದೇ ಒಂದು ದಿನದೊಳಗೆ ಹೇಗೆ ಬದಲಾಯಿಸಿಕೊಳ್ಳಬಹುದು?'

"ಒಬ್ಬನೇ ಒಬ್ಬ ಮನುಷ್ಯನು, ಜನರ ಪ್ರಕರಣವನ್ನು ಬದಲಾಯಿಸಬಹುದು. ಬದಲಾವಣೆಗಳನ್ನು ಹಲವಾರು ಜನರು ಸೇರಿ ಮಾಡಿರುವದಿಲ್ಲ, ಅವೆಲ್ಲ ಒಬ್ಬನೇ ಒಬ್ಬ ಮನುಷ್ಯನ ಕೆಲಸವೆ'

"ಅದಕ್ಕೆ ಸಮಯ ಕೂಡಿ ಬರಲಿಲ್ಲ. ಬಹುಶಃ ನನ್ನ ಜೀವನಾನದಲ್ಲಿ ಬರಲಿಕ್ಕಿಲ್ಲ—ಮಹತ್ವದ ಫಲಿತಾಂಶದತ್ತ ಸಹಾನ್ ಕಾರಣವು ಕೊಂಡೊಯ್ಯದ ಹೊರತು ನನಗೆ." ಕೆಡೆಲರು ತನ್ನಷ್ಟಕ್ಕೆ ಗೊಣಗಿಕೊಂಡರು.

ಆಗ, ಕೆಡೆಲರಿಗೆ ಒಂದು ಪತ್ರವನ್ನು ಹಿಡಿದುಕೊಂಡು ಪಹೇದಾರನು ಒಳಬಂದನು. ಆವರದನ್ನು ತೆರೆದು ನೋಡಿ ಶ್ರೀಮತಿ ಕಡೆಲಳ ಕೈಗಿತ್ತರು. ಅವಳು ಅದನ್ನು ಓದಿ ಹೇಳಿದಳು:

ಕಡಪ,
ಹತ್ತನೇ ನ...

ಮಾನ್ಯರಾದ ಸ್ವಾಮಿ,

ಕೆಲ ಆಕಸ್ಮಿಕ ಸಂಸಾರದ ಮುಖ್ಯ ಕಾರಣಗಳಿಂದಾಗಿ, ನಾನಿಂದು ರಾತ್ರಿಯೇ ಹಳ್ಳಿಗೆ ಹೊರಡಬೇಕಾಗಿದೆ. ನ...

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7½
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್	ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೧೮	೬—೧—೧೯೬೬	No. 18

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹಣಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಯುನೈಟೆಡ್ ಸ್ಟೇಟ್ಸ್‌ನ ಸಪ್ತ ಸದಸ್ಯರ ಸೆನೆಟ್ ನಿಯೋಗದ ಮುಂದಾಳು, ಓರಿಗೋನಿನ ಸೆನೇಟರ್ ವೆಯಿನ್ ಮೋರ್ಸ್‌ಯವರು ಇತ್ತೀಚೆಗೆ ಡಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ರಾಧಾಕೃಷ್ಣನ್ ಅವರನ್ನು ಭೇಟಿಯಾದಾಗಿನ ಚಿತ್ರ.

ಬಿರುಗಾಳಿ ಮತ್ತು ಬೆಟ್ಟ

ಕೇಂದ್ರ ಸಚಿವ ಸಂಪುಟದಲ್ಲಿ ಮಹತ್ವಪೂರ್ಣ ಬದಲಾವಣೆಗಳು ಆಗ ಬಹುದೆಂದೂ ಮುರಾರ್ಜಿ ದೇಸಾಯಿ ಮತ್ತು ಅಶೋಕ ಮೆಹತಾರಿಗೆ ಆಗ ಸ್ಥಾನ ದೊರೆಯುವುದೆಂದೂ ಇವರಿಬ್ಬರಿಗೂ ಮಹತ್ವದ ಖಾತೆಗಳೂ, ಗೃಹ, ಅರ್ಥ, ನೀಡಲಾಗುವುವೆಂದೂ ದಟ್ಟವಾದ ವಾರ್ತೆ ಕಳೆದ ವಾರದಲ್ಲಿ ಹರಡಿತ್ತು. ಹಾಗಿದ್ದರೂ ಪ್ರಧಾನಿ ಶಾಸ್ತ್ರಿಯವರು ತಾಷ್ಕೆಂಟ್ ಮಾತುಕತೆಗಳ ಪೂರ್ವಭಾವಿ ತಯಾರಿಯಲ್ಲಿರುವಾಗ, ಅಲ್ಲಿಂದ ಮರಳುವುದಕ್ಕೆ ಮೊದಲಿನ ಅಲ್ಪ ಕಾಲದಲ್ಲಿ ಯಾವ ಬದಲಾವಣೆಯೂ ಸಂಭಾವ್ಯವಾಗಿರಲಿಲ್ಲ. ಅರ್ಥ ಮಂತ್ರಿ ಟಿಟಿಕೆಯವರ ನಿರ್ಗಮನದ ಸುಳಿವೂ ಆಗ ಲಭಿಸಿರಲಿಲ್ಲ. ಅಷ್ಟಲ್ಲದೆ ಟಿಟಿಕೆಯವರು ಮಂತ್ರಿಮಂಡಲವನ್ನು, ಶಾಸ್ತ್ರಿಯವರು ಟಿಟಿಕೆಯಂತಹ ಸಮರ್ಥ ಅರ್ಥಮಂತ್ರಿಯನ್ನು ಬಿಡಲೂ ಮನಸ್ಸು ಮಾಡಿರಲಿಲ್ಲ. ಕೆಲವೊಮ್ಮೆ ಅಸಂಭಾವ್ಯವೇ ಸಂಭವಿಸುತ್ತದೆ. ಹೊಸ ಕ್ರಿಸ್ತ ವರ್ಷದೊಂದಿಗೆ ಭಾರತವು ಹೊಸ ಅರ್ಥಮಂತ್ರಿಯನ್ನೂ ಪಡೆಯಬೇಕಾಗಿ ಬಂತು.

ಟಿಟಿಕೆ ನಿರ್ಗಮನವು ಅನಿರೀಕ್ಷಿತ; ಶಾಸ್ತ್ರಿ ಸಂಪುಟದ ಮೇಲೆ ಬಿದ್ದ ಬಲವಾದ ಆಘಾತ, ಭಾರತದ ಭವಿಷ್ಯ ಚಿಂತಕರಿಗೂ ಒಂದು ಚಿಂತೆ. ಅದೇನೇ ಇದ್ದರೂ ಈ ಸಂದರ್ಭದಲ್ಲಿ ಪ್ರಧಾನಿಯವರು ಕೈಗೊಂಡ ನಿರ್ಧಾರವು ದಿಟ್ಟತನದ ಹೆಜ್ಜೆ, ಶಾಸ್ತ್ರಿಯವರ ನಿಸ್ಪೃಹತೆ, ದೇಶಹಿತದೃಷ್ಟಿ, ದೃಢ ನಿಲುವುಗಳ ದ್ಯೋತಕ. ಕೆಲವು ಸಮಯಕ್ಕೆ ಮೊದಲು ವಿರೋಧೀ ಪಕ್ಷಗಳ ತಂಡವೊಂದು ಟಿಟಿಕೆಯವರ ಮೇಲಣ ದೋಷಾರೋಪಣೆಯ ಪತ್ರವನ್ನು ರಾಷ್ಟ್ರಪತಿಗಳಿಗೆ ಅರ್ಪಿಸಿತ್ತು. ಈ ಸಂಬಂಧದ ವಿಚಾರಣಾ ಪ್ರಣಾಲಿಯ ಬಗ್ಗೆ ಶಾಸ್ತ್ರಿ—ಟಿಟಿಕೆಯವರಲ್ಲಿ ಭಿನ್ನಾಭಿಪ್ರಾಯ ಹುಟ್ಟಿತು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಭಿಪ್ರಾಯಕ್ಕೆ ತಲೆಬಾಗಬೇಕು. ಇದು ಶಾಸ್ತ್ರೀ ಮತ. ಇದರಿಂದ ತನ್ನ ಆತ್ಮಪ್ರತಿಷ್ಠೆಗೆ ಕುಂದುಂಟಾಗುವುದು—ಇದು ಟಿಟಿಕೆ ವಾದ. ಪ್ರಧಾನಿಗಳೇ ವಿಚಾರಣೆ ಮಾಡಿದರೇನು? ಹಿಂದೆ ಇದೇ ರೀತಿಯಲ್ಲಿ ಕೆಲವು ಮಂತ್ರಿಗಳ ಮೇಲಣ ಆರೋಪಗಳ ವಿಚಾರಣೆಯನ್ನು ಮಾಡಿಲ್ಲವೆ? ಆದರೆ, ಈ ತರಹದ ವೈಯಕ್ತಿಕ ಜವಾಬುದಾರಿಯನ್ನು ಹೊರಲು ಶಾಸ್ತ್ರಿಯವರು ಈಗ ತಯಾರಾಗಲಿಲ್ಲ. ದೇಶಕ್ಕೊಂದು ಆದರ್ಶ ಪರಂಪರೆಯನ್ನು ಹಾಕಿ ಕೊಡುವ ಆವಲು ನ್ಯಾಯಾನ್ವಯ ವಿಚಾರಣೆಯು ನ್ಯಾಯಾಧೀಶರಿಂದಲೇ ಆಗುವುದು ಒಳ್ಳೆಯದೆಂದು ಅಂದರು, ವೈಯಕ್ತಿಕ ಹೊಣೆಗಾರಿಕೆಯಿಂದ ಸಂಪುಟದಲ್ಲಿಯೂ, ದೇಶದ ಮೇಲೆಯೂ ಅನಿಷ್ಟ ಪರಿಣಾಮವಾಗುವುದು. ಹಿಂದೆ ವಿ. ಕೆ. ಕೃಷ್ಣ ಮೆನನ್ನರ ಮೇಲೆ ಜನ ದೋಷಾರೋಪಣೆ ಮಾಡಿದುದನ್ನೂ ಅವರನ್ನು ಅಂದಿನ ಪ್ರಧಾನಿ ನೆಹರು ತನ್ನ ವೈಯಕ್ತಿಕ ಹೊಣೆಗಾರಿಕೆಯ ಮೇಲೆ ಸಂಪುಟದಲ್ಲಿ ಇರಿಸಿಕೊಂಡುದನ್ನೂ, ಮುಂದೆ ಚೀನೀ ದಾಳಿಯ ಮೇಲೆ ಅನಿವಾರ್ಯವಾಗಿ ಮೆನನ್ನರ ಕೈಬಿಡಲೇ ಬೇಕಾಗಿ ಬಂದುದನ್ನೂ ನಾವು ಮರೆಯುವಂತಿಲ್ಲ. ನ್ಯಾಯ ವಿಚಾರಣೆಗೆ ಸಿದ್ಧರಾಗದ ಟಿಟಿಕೆ ರಾಜೀನಾಮೆಗೇನೇ ತಯಾರಾದರು; ಅಸ್ತು ಎಂದರು ಶಾಸ್ತ್ರೀ.

ಬಿರುಗಾಳಿಯೆದ್ದಿತು; ಆದರೆ ಶಾಸ್ತ್ರಿ ಇದರಿಂದ ಬೆದರಲಿಲ್ಲ; ತನ್ನ ನಿಲುವಿನಿಂದ ವಿಚಲಿತರಾಗಲಿಲ್ಲ. ರಾಜಿನಾಮೆಯನ್ನು ಸ್ವೀಕರಿಸಿದರು; ಬಂಗಾಳದ ಒರ್ವ ಬ್ಯಾರಿಸ್ಟರ್ ಸಚೀಂದ್ರ ಚೌಧರಿಯವರನ್ನು ಅರ್ಥಮಂತ್ರಿಯಾಗಿ ನೇಮಿಸಿಕೊಂಡರು. ಇದರ ಜೊತೆಗೆ ಕರ್ನಾಟಕದ ಪೂಣಚ್ಚರಿಗೂ ಒಂದು ಅವಕಾಶ ದೊರೆಯಿತು; ಕರ್ನಾಟಕಕ್ಕೆ ಕೇಂದ್ರದಲ್ಲಿ ಪ್ರಾತಿನಿಧ್ಯವಿಲ್ಲವೆಂಬ ಕೊರತೆಯೂ ದೂರವಾಯಿತು. ಚೌಧುರಿಯವರು ಅಖಿಲ ಭಾರತ ವ್ಯಕ್ತಿಯಾಗಿಲ್ಲ; ಟಿ. ಟಿ. ಕೆ.ಯವರಂತಹ ಸಮರ್ಥ ಪ್ರತಿಭಾವಂತರ ಸ್ಥಾನಕ್ಕೆ, ಮುಗ್ಗಟ್ಟಿನಿಂದ ತತ್ತರಿಸುತ್ತಿರುವ ಭಾರತದ ಅರ್ಥ ಶಾಖೆಗೆ ಶಾಸ್ತ್ರಿ ಇವರನ್ನು ಆಯ್ದುಕೊಳ್ಳಬೇಕಾಗಿದ್ದರೆ, ಅವರ ಯೋಗ್ಯತೆಯೂ ದೊಡ್ಡದಿರಬೇಕು. ಪ್ರಜ್ಞಾವಿಧಿಯನಂತರ ಮಾಡಿದ ಭಾಷಣದಲ್ಲಿ ಚೌಧುರಿ ಹೇಳಿದರು: 'ಸಂಪನ್ನತೆ ಮತ್ತು ಸಮೃದ್ಧಿಯ ಭರವಸೆಯನ್ನು ನಾನು ಕೊಡಲಾರೆ' — ಇದು ಅವರು ಅನುಸರಿಸುವ ಸೂತ್ರ ಪಾಠವಾದರೆ, ಅವರನ್ನು ಯಥಾರ್ಥವಾದಿಯೆನ್ನಬಹುದು. ಬರಿಯ ಭರವಸೆಗಳನ್ನು ಕೊಡುವುದರಿಂದ ದೇಶದ ಜನರನ್ನು ವಂಚಿಸಿದಂತಾಗುತ್ತದೆ. ಸಮಾಜವಾದ ಮಾದರಿಯ ಸಮಾಜ ರಚನೆಯ ಗುರಿಯತ್ತ ಸಾಗಬೇಕಾಗಿರುವ ನಮ್ಮ ಅರ್ಥನೀತಿಯು ಚೌಧುರಿಯವರ ಕೈಯಲ್ಲಿ ಲಕ್ಷ್ಯಭೇದಿಸಿದರೂ ಭೇದಿಸಬಹುದು. ದೂರವಾದ ಟಿಟಿಕೆಯವರು ಪ್ರಶ್ನಾತೀತ ವ್ಯಕ್ತಿಮತ್ವ. ಅವರ ದುಡಿಮೆಗೆ ಕೃತಜ್ಞತೆಗಳು; ಹೊಸ ಅರ್ಥಮಂತ್ರಿಗೆ ಸ್ವಾಗತ; ಜತೆಗೆ ಪ್ರಧಾನಿ ಶಾಸ್ತ್ರಿಯವರ ಪ್ರಜಾಹಿತ—ಪಕ್ಷಪಾತ ಬುದ್ಧಿ—ಧೈರ್ಯ ಮತ್ತು ನೀತಿಗಳ ಮುಂದೆ ಭಾರತವೇ ಅವನತ.

ಯಶೋಧರಮ್ಮಾ

ಕರ್ನಾಟಕದ ಪಾನಪ್ರತಿಬಂಧ ನೀತಿಯಿಂದ ನೊಂದ ಯಶೋಧರಮ್ಮ ದಾಸಪ್ಪನವರ ರಾಜಿನಾಮೆಯನ್ನು ರಾಜ್ಯಪಾಲ ಗಿರಿಯವರು ಸ್ವೀಕರಿಸಿದರು; ಬೇರೆ ಉಪಾಯವೂ ಇರಲಿಲ್ಲ. ಮದ್ಯಪಾನವೊಂದು ಶಾಪ; ಅದು ಭಾರತದಲ್ಲಿ ಇರುವವರೆಗೆ ಜನತೆ ಅಧಃಪತನ, ಅನೀತಿಗಳ ಹೊಂಡದಿಂದ ಮೇಲೇಳದು ಎಂದು ತಿಳಿದ ಗಾಂಧೀಜಿಯವರು ಪಾನಪ್ರತಿಬಂಧಕ್ಕೂ ತನ್ನ ಸತ್ಯಾಗ್ರಹದಲ್ಲಿ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದರು. ಮಹಾತ್ಮರ ಶಿಷ್ಯೆಯಾದ ಯಶೋಧರಮ್ಮರ ಮಾತಿನಲ್ಲೇ ಹೇಳುವುದಾದರೆ,'ಅವರ ಗುರುಮತ್ತು ದೇವರು ಸ್ವರ್ಗದಲ್ಲಿದ್ದಾರೆ. ತಾನೂ ಮುಂದೆ ಅಲ್ಲಿಗೆ ಹೋದಾಗ, ತನ್ನ ಕಾರ್ಯನೀತಿಯ ಬಗೆಗೆ ಅವರ ಮುಂದೆ ವರದಿಯೊಪ್ಪಿಸಬೇಕು. ಬೆಂಕಿಯೊಡನೆ ಸರಸವಾಡಿ ಅವರ ಮುಖವನ್ನು ಹೇಗೆ ನೋಡಲಿ?'— ಶ್ರೀಮತಿಯವರ ಉದ್ಗಾರವು ಭಾವ ಪ್ರೇರಿತವಿರಬಹುದು; ಆದರೆ, ಅಷ್ಟೇ ಯಥಾರ್ಥತೆಯೂ ಅದರಲ್ಲಿದೆ. ಇಲಿ ಕಾಟವನ್ನು ತಡೆಯಲು ಯಾರಾದರೂ ಮನೆಗೆ ಬೆಂಕಿ ಕೊಡುತ್ತಾರೆಯೆ? ಉನ್ನತ ಮಟ್ಟದ ನೈತಿಕ ವ್ಯಕ್ತಿತ್ವವುಳ್ಳ ಯಶೋಧರಮ್ಮರ ನಿಲುವು ನೈಜ ಗಾಂಧೀವಾದಿಗಳ ಪ್ರಶಂಸೆಗೆ ಪಾತ್ರವಾಗಿದೆ. ಸಮಷ್ಟಿಯ ಹಿತದ ಮುಂದೆ ದೃಷ್ಟಿ ಹಿತ ತ್ಯಾಜ್ಯವಾದರೂ ಪಾನಪ್ರತಿಬಂಧದಲ್ಲಿಯೇ ಸಮಷ್ಟಿ ಹಿತ ಕಾಣುವ ಯಶೋಧರಮ್ಮರಿಗೆ ರಾಜಿನಾಮೆ ನೀಡಿ ಹೊರ ನಿಲ್ಲುವುದೊಂದೇ ದಾರಿಯಾಯಿತು. ಅದರಲ್ಲೇ ನಡೆಯು ಪಾನ ಪ್ರತಿಬಂಧದ ಬಗ್ಗೆ ಸಮಾಜದಲ್ಲಿ ನವ ಜಾಗ್ರತಿಯುಂಟು ಮಾಡುವ ಆಕೆಯ ರಚನಾತ್ಮಕ ಕಾರ್ಯ ಯಶಃ ಪಥಗಾಮಿಯಾಗಲಿ.

ವಚನ ಸುಧೆ

ಷಡೇವ ತು ಗುಣಾಃ ಪುಂಸಾ
ನ ಹಾತವ್ಯಾಃ ಕದಾಚನ॥
ಸತ್ಯಂ ದಾನಮನಾಲಸ್ಯ
ಮನಸೂಯಾ ಕ್ಷಮಾ ಧೃತಿಃ॥

ಸತ್ಯ, ದಾನ, ಕರ್ಮಣ್ಯತೆ, ಅನಸೂಯೆ, ಕ್ಷಮೆ ಮತ್ತು ಧೈರ್ಯ—ಈ ಆರು ಗುಣಗಳನ್ನು ಮಾನವನು ಯಾವ ಕಾಲದಲ್ಲೂ ತ್ಯಜಿಸಬಾರದು; ತ್ಯಜಿಸಿದರೆ, ಆತನ ಪತನ ನಿಶ್ಚಿತ.

ನವಯುಗದ

ಪ್ರಜಾರಾಜ್ಯ ವಿಶೇಷಾಂಕ

ಎಂದಿನಂತೆ ವೈವಿಧ್ಯಪೂರ್ಣವಾಗಿ

ಜನವರಿ 26ಕ್ಕೆ ಪ್ರಕಟವಾಗುವುದು.

ನರಸಣ್ಣನ ಸರಸ

'ಕರ್ನಾಟಕಕ್ಕೆ ಕೇಂದ್ರ ಸಂಪುಟದಲ್ಲಿ ಪ್ರಾತಿನಿಧ್ಯ ದೊರೆಯಬೇಕಾದರೆ, ಮಲ್ಯರು ಪರಲೋಕ ವಾಸಿಯಾಗಬೇಕಾಯಿತು.... ಟಿಟಿಕೆ ರಾಜಿನಾಮೆಕೊಡಬೇಕಾಯಿತು....'

ಆರ್ಥಿಕ ಸಮೀಕ್ಷೆ

ಸರಕಾರ .... ಮಾಲಿಕ .... ಮಜ್ದೂರ

ಯಾರೂ ಜವಾಬ್ದಾರಿಯನ್ನು ಅರಿತಂತಿಲ್ಲ.

ಒಂದು ದೇಶದ ಶಕ್ತಿ ಮತ್ತು ಅಭಿವೃದ್ಧಿಯು ಆ ದೇಶದ ಜನರ ಸ್ಥಿತಿಗತಿಗಳನ್ನೇ ಹೊಂದಿಕೊಂಡಿರುತ್ತದೆ. ದೇಶದ ಮಾನವ ಶಕ್ತಿಯು ಮತ್ತು ನೈಸರ್ಗಿಕ ಸಂಪತ್ತಿನ ಸದುಪಯೋಗದಲ್ಲೇ ಜನತೆಯ ಸ್ಥಿತಿಗತಿಯು ಹೊಂದಿಕೊಂಡಿದೆ. ಆರ್ಥಿಕ ದೃಷ್ಟಿಯಿಂದ ದೇಶ ಸುಸ್ಥಿರ ಬುನಾದಿಯ ಮೇಲೆ ನಿಂತಿದೆಯೆಂದು ಹೇಳಬೇಕಾದರೆ ಜೀವನಾವಶ್ಯಕ ವಸ್ತುಗಳ ಬೆಲೆ ಹಾಗೂ ಕೆಲಸಗಾರರಿಗೆ ದೊರೆಯುವ ವೇತನ ಇವುಗಳನ್ನು ಅಳೆದು ನೋಡಬೇಕು. ವಸ್ತುಗಳ ಬೆಲೆ ಆದಷ್ಟು ಕಡಿಮೆ ಇದ್ದು, ದುಡಿಯುವವರ ವೇತನ ಅತಿ ಹೆಚ್ಚಿರುವುದು ದೇಶದ ಸುಸ್ಥಿರ ಆರ್ಥಿಕ ಪದ್ಧತಿಯ ಅಳತೆ ಕೋಲು.

ಬೆಲೆ ಕಡಿಮೆಯಾಗಲು ಉತ್ಪಾದನೆ ಹೆಚ್ಚಬೇಕು. ವೇತನ ಅಂದರೆ ಜೀವನ ಮಟ್ಟ ಏರಿತೆಂದು ವಸ್ತುಗಳ ಬೆಲೆ ಏರಬಾರದು; ವಸ್ತುಗಳ ಅಭಾವವು ಉಂಟಾಗಬಾರದು. ಹೀಗಾಗಬೇಕಾದರೆ ದುಡಿಯುವವನ ಪರಿಶ್ರಮ ಫಲದಾಯಕವಾಗಬೇಕು. ದಿನಕ್ಕೆ ಎಂಟು ಗಂಟೆ ದುಡಿಯುವವನು ತನಗೆ ರೂ. ೫|- ವೇತನ ಬೇಕೆಂದು ಕೇಳುವುದಾದರೆ ಆತನು ದುಡಿದು ಉತ್ಪಾದಿಸುವ ವಸ್ತುವಿನ ಲಾಭ ಅದರ ಮೂರು ಪಟ್ಟಾಗಬೇಕು.

ಕೆಲಸಗಾರನ ಒಟ್ಟು ದುಡಿಮೆಯೂ ರಾಷ್ಟ್ರೀಯ ಆರ್ಥಿಕ ಪ್ರಗತಿಗೆ ಅತ್ಯಾವಶ್ಯಕ. ದಿನಕ್ಕೆ ಎಂಟು ಗಂಟೆ ಹೆಸರಿಗೆ ದುಡಿದು ವೇತನ ಐದು ರೂಪಾಯಿ ಪಡೆದು, ಉತ್ಪಾದನೆ ಅದಕ್ಕನುಸಾರ ಹೆಚ್ಚದಿದ್ದರೆ ರಾಷ್ಟ್ರಕ್ಕೆ ಅವನತಿಯಲ್ಲದೆ ಬೇರೇನು? ಇಂದು ಭಾರತದಲ್ಲಿ ನಡೆದಿರುವ ಕಥೆ ಇದು.

ದುಡಿಯುವವನಿಗೆ ಒಳ್ಳೆ ಸಂಬಳ ಬೇಕೆಂದು, ಎಲ್ಲರೂ ಕೂಗುತ್ತಾರೆ. ಆದರೆ ಆ ವೇತನಕ್ಕೆ ಸರಿಯಾಗಿ ಆತನು ದುಡಿಯುತ್ತಿರುವನೋ ಎಂದು ವಿಚಾರಿಸುವವರಿಲ್ಲ. ಕೇವಲ ಶಾರೀರಿಕ ಪರಿಶ್ರಮದಿಂದಲೇ ದುಡಿಮೆಯ ಪ್ರತಿಫಲ ಹೆಚ್ಚಾಗಲಾರದು. ಆಧುನಿಕ ಸಾಧನಗಳನ್ನು ಬಳಸಬೇಕಾದುದು ಅಗತ್ಯ. ಅಮೇರಿಕದ ಒಬ್ಬ ಮಜ್ದೂರನು ಮಾಡುವ ಉತ್ಪಾದನೆಯನ್ನು ಇಂಗ್ಲೆಂಡಿನ ಇಬ್ಬರು ಮಾಡಬೇಕು. ಫ್ರಾನ್ಸಿನ ಮೂರು ಜನರು ಮಾಡಬೇಕು. ಆದ್ದರಿಂದ ದುಡಿಮೆಗನುಸಾರವಾಗಿಯೇ ಅವರು ವೇತನವನ್ನು ಪಡೆಯುತ್ತಾರೆ. ಫ್ರಾನ್ಸಿನ ಮಜ್ದೂರನ ಸಂಬಳ ಮೂರರಷ್ಟು ಅಮೇರಿಕಾದ ಮಜ್ದೂರನ ವೇತನವಿದೆ.

ಇದಕ್ಕೆ ಕಾರಣ ಶಾರೀರಿಕ ದುಡಿಮೆಯಲ್ಲ. ಶರೀರತಃ ಅಮೇರಿಕನ್, ಬ್ರಿಟನ್ ಮತ್ತು ಫ್ರಾನ್ಸಿನ ಮಜ್ದೂರರಲ್ಲಿ ಹೆಚ್ಚಿನ ವ್ಯತ್ಯಾಸವಿರಲಾರದು. ಆದರೆ ಅವರು ತಮ್ಮ ಕೆಲಸದಲ್ಲಿ ಬಳಸುವ ಯಂತ್ರೋಪಕರಣಗಳು ಈ ವ್ಯತ್ಯಾಸವನ್ನುಂಟು ಮಾಡುತ್ತವೆ. ಈ ದೃಷ್ಟಿಯಿಂದ ಭಾರತದ ಮಜ್ದೂರನ ಸ್ಥಿತಿ ಅವರೊಡನೆ ಹೋಲಿಕೆಗೆ ನಿಲ್ಲದು.

ಕಾರಣವಿಷ್ಟೆ. ಭಾರತದ ಮಜ್ದೂರನು ಇನ್ನೂ ವಿದ್ಯಾವಂತನಲ್ಲ. ಆತನು ಜವಾಬ್ದಾರಿಯನ್ನು ಅರಿತವನಲ್ಲ. ಜೊತೆಗೆ ಶರೀರ ಪರಿಶ್ರಮವಿಲ್ಲದೆ ಸಮಯ ತಳ್ಳಿ ವೇತನ ಪಡೆಯಬೇಕೆನ್ನುವ ಹಂಬಲದವನಲ್ಲದೆ ಆತನಲ್ಲಿ ರಾಷ್ಟ್ರೀಯತಾ ಭಾವನೆ ಇಲ್ಲ. ಪರಿಣಾಮವಾಗಿ ಭಾರತದ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಭಾರತ ಮತ್ತು ಇತರ ದೇಶಗಳ ಮಜ್ದೂರರ ದುಡಿಮೆಯ ಒಂದು ತುಲನೆಯನ್ನು ಇಲ್ಲಿ ಕೊಡಲಾಗಿದೆ.

ಸಕ್ಕರೆ

ದೇಶ	ಒಂದು ಟನ್ ಉತ್ಪಾದಿಸಲು ಬೇಕಾದ ಸಮಯ
	ಗ.ಮಿ.
ಉಸಿಯೂನ (ಅಮೇರಿಕಾ)	೭.೮೨
ಹವಾಯಿ ,,	೪.೬೫
ಪೋರ್ಟೊರಿಕೊ	೫.೧೦
ಭಾರತ	೮೩.೪೦

ಸಿಮೆಂಟ್

ಅಮೇರಿಕಾ	೧.೫೨
ಜಪಾನ್	೧.೭೫
ಇಂಗ್ಲೆಂಡ್	೧.೮೨
ಜರ್ಮನಿ	೨.೨೦
ಭಾರತ	೧೦.೧೫

ಗೋಧಿ

	ಎಕರೆಗೆ ಉತ್ಪತ್ತಿ
ಇಂಗ್ಲೆಂಡ್	೧.೪೫ ಟನ್
ಜರ್ಮನಿ	೧.೪೪ ,,
ಸ್ವಿಟ್ಜರ್ಲೆಂಡ್	೧.೪೦ ,,
ಭಾರತ	೦.೩೨ ,,

ಉತ್ಪಾದನೆಯಲ್ಲಿ ಪ್ರಮುಖ ಪಾತ್ರಧಾರಿಗಳೆಂದರೆ (೧) ಸರಕಾರ (೨) ಮಾಲೀಕ (೩) ಮಜ್ದೂರ. ಉತ್ಪಾದನೆಗೆ ಅನುಕೂಲವಾಗುವಂತೆ ಸರಕಾರ ಕಾನೂನಿನ ತೊಂದರೆ ತೊಡರುಗಳನ್ನು ನಿವಾರಿಸಿ ಹೆಚ್ಚಿನ ಸಹಾಯ ಮಾಡಬೇಕು. ಯಂತ್ರಗಳಿಗೆ ಬೇಕಾದ ಸರ್ವ ಸೌಕರ್ಯ ಒದಗಿಸುವುದು ಮಾತ್ರವಲ್ಲ, ಭಂಡವಾಳ ತೊಡಗಿಸಿದವನಿಗೆ ನ್ಯಾಯ ಸಮರ್ಪಕ ಲಾಭ ದೊರೆಯುವಂತೆ ನೋಡಬೇಕು.

ಭಾರತದಲ್ಲಿ ಸರಕಾರವು ಅಂಥಾ ವಾತಾವರಣ ಕಲ್ಪಿಸಿಲ್ಲ. ಉದ್ಯಮಗಳಲ್ಲಿ ಹಣ ವಿನಿಯೋಗಿಸುವವರೂ ಕೂಡ ತಮ್ಮ ಉತ್ಪಾದನೆಯ ಉತ್ಕೃಷ್ಟತೆಯ ಬಗ್ಗೆ ಹೆಚ್ಚು ಗಮನವೀಯುತ್ತಿಲ್ಲ. (ಭಾರತದಲ್ಲಿ ಉತ್ಪಾದಿಸಿದುದಕ್ಕೆಲ್ಲ ಮಾರ್ಕೆಟ್ ಇದೆ. ಎಂಬ ತೃಪ್ತಿ) ಏಕೆಂದರೆ ಅಲ್ಲಿ ಸ್ಪರ್ಧೆಗೆ ಎಡೆ ಇಲ್ಲ. ಕೆಲಸಗಾರನೂ ಸದಾ ಅತೃಪ್ತಿಯ ಕಾಲುವೆಯಲ್ಲೇ ಕುದಿಯುತ್ತಿದ್ದು ತನ್ನ ಕೆಲಸದ ಬಗ್ಗೆ ಹೆಚ್ಚು ನಿಗವಹಿಸಿಯೇ ಇಲ್ಲ. ಹೀಗಾಗಿ ನಮ್ಮ ದೇಶದ ಆರ್ಥಿಕ ಪ್ರಗತಿಕುಂಟುತ್ತಾ ನಡೆದಿದೆ.

ಇತಿಹಾಸ ಚಕ್ರ

ಶಿಲಾಯುಗದ ಆಭರಣಗಳಿಗೂ ಗಿರಾಕಿ ಹೆಚ್ಚಿದೆ

ಕೆಲವು ಒಡವೆಗಳ, ನಾಗರಿಕತೆ, ಫ್ಯಾಷನ್‌ಗಳ ವಿಶೇಷವೇ ಹಾಗೆ, ಯಾವುದೋ ಒಂದು ಕಾಲದಲ್ಲಿ ಹುಟ್ಟಿಕೊಳ್ಳುತ್ತದೆ. ಮತ್ತೆ, ಅದು ಇದ್ದ ಜಾಗವೇ ತಿಳಿಯದು ಎನ್ನುವಂತೆ ಮಾಯವಾಗಿ ಹೋಗಿರುತ್ತದೆ. ಕೆಲಕಾಲಾನಂತರ, ಮತ್ತೆ ಇದಕ್ಕಿದ್ದಂತೆ ಅದಕ್ಕೆ ಗಿರಾಕಿ ಹುಟ್ಟಿಕೊಳ್ಳುತ್ತದೆ. ನಮ್ಮಲ್ಲೇ ಎಷ್ಟೋ ಒಡವೆಗಳು, ಉದಾಹರಣೆಯಾಗಿ ಅಡ್ಡಿಕೆ, ಪದಕ, ವಂಕಿ, ನಾಗಮುರಿಗೆ, ಕಾಸಿನಸರ, ವಂಕಿ ಡಾಬು, ಜಡೆಬಿಲ್ಲೆ, ಜಡೆಬಂಗಾರ, ಚಳತುಂಬು ಮುಂತಾದವು, ನಮ್ಮ ಅಜ್ಜ, ಮುತ್ತಜ್ಜಿಯಂದಿರ ಅತಿ ಪ್ರೀತಿಯ ಒಡವೆಗಳಾಗಿದ್ದವು. ಆ ಒಡವೆಗಳೆಲ್ಲಾ ಅವರೊಂದಿಗೆಯೇ ಹೋದವು ಆ ಕಾಲದ ಮೆಚ್ಚುಗೆಯಾಗಿದ್ದ ಕೊಠಡಿ ಸೀರೆ, ಬುಟ್ಟಾ ಸೀರೆ, ಚೌಕಳಿ ಸೀರೆ ಮುಂತಾದ ಅಂಗೈ ಅಗಲದ ಅಂಚಿನ ಸೀರೆಗಳೂ ಮಾಯವಾದವು. ಎಷ್ಟೋ ವರ್ಷಗಳ ಕಾಲ ಅವು ಅನಾಗರಿಕವೆನಿಸಿಕೊಂಡು ಮೂಲೆಗುಂಪಾಗಿ ಬಿದ್ದಿದ್ದವು. ಮತ್ತೆ, ಈಗ ಇದ್ದುದಿದ್ದಂತೆ ಅವುಗಳಲ್ಲಿ ಎಷ್ಟೋ ನಾಗರಿಕವೆನಿಸಿಕೊಂಡು ಮತ್ತೆ ಜೀವಪಡೆದಿವೆ.

ಅಂಬರ್ ಒಡವೆಗಳ ಕಥೆಯೂ ಹಾಗೆಯೇ, ಶಿಲಾಯುಗದ ಕಾಲದಲ್ಲಿ ಅವು ಅತ್ಯಂತ ಜನಪ್ರಿಯವಾಗಿದ್ದವು. ಆದರೆ, ಆದಾದನಂತರ, ಅದರ ಜನಪ್ರಿಯತೆ ಕುಗ್ಗಿ ಹೋಗಿ, ಮತ್ತೆ ರೋಮನ್ ಸಾಮ್ರಾಜ್ಯ ಸ್ಥಾಪನೆಯಾಗುವವರೆಗೆ, ಅವುಗಳನ್ನು ಕೇಳುವವರೇ ಇಲ್ಲವೆನ್ನುವ ಸ್ಥಿತಿ ಬಂದು ಬಿಟ್ಟಿತು. ರೋಮನ್ ಚಕ್ರಾಧಿಪತ್ಯದ ಕಾಲದಲ್ಲಿ ಅಂಬರ್ ಕಲ್ಲುಗಳಿಗೆ ವಿಪುಲ ಗಿರಾಕಿ ಹೆಚ್ಚು. ಅದರಿಂದಾಗಿ, ಆ ಕಲ್ಲುಗಳು ಹೆಚ್ಚಾಗಿ ದೊರಕುವ ಬಾಲ್ಟಿಕ್ ಸಮುದ್ರ ತೀರ ಮತ್ತು ಜಾರ್ಜ್ ಪರ್ವತ ಪ್ರದೇಶಗಳೊಂದಿಗೆ ರೋಮನ್ನರ ಸಂಪರ್ಕ ಹೆಚ್ಚಿತು. ಹದಿನೇಳನೆಯ ಶತಮಾನದ ಮಧ್ಯಭಾಗದಲ್ಲಿ ಜರ್ಮನಿಯ ಕೋನಿಂಗ್ಸ್ ಬರ್ಗನಲ್ಲಿ ಅಂಬರ್ ಕುಶಲ ಕರ್ಮಿಗಳ ಸಂಘವೊಂದನ್ನು ತೆರೆಯಲಾಯಿತು. ಸಂಘಟಿಕರಾಗಿ ಅವರು ದುಡಿಯ ತೊಡಗಿದ ಅತ್ಯಲ್ಪ ಕಾಲದಲ್ಲಿಯೇ ಅವರ ಖ್ಯಾತಿ ಎಲ್ಲೆಗಳನ್ನೂ ದಾಟಿ, ದೇಶಾಂತರಗಳಲ್ಲಿಯೂ ಪಸರಿಸಿತು.

ಅಂಬರ್ ಸಣ್ಣ ಕಲ್ಲುಗಳನ್ನು ಒಡವೆಗಳಲ್ಲಿ ಉಪಯೋಗಿಸುತ್ತಿದ್ದಂತೆ, ದೊಡ್ಡ ಚದುರಗಳನ್ನು ಗೋಡೆಗಳಿಗೆ, ನೆಲಗಳಿಗೆ ಹಾಸಲು ಉಪಯೋಗಿಸಲಾಗುತ್ತಿತ್ತು. ಅಂತೆಯೇ, 1713ರಲ್ಲಿ ಪ್ರಷ್ಯಾದ ರಾಜನಾಗಿದ್ದ ಒಂದನೆಯ ಫ್ರೆಡರಿಚ್ ವಿಲ್‌ಹೆಲ್ಮನು ರಷ್ಯಾದ ಜಾರ್ ಚಕ್ರವರ್ತಿ ಪೀಟರ್ ದಿ ಗ್ರೇಟನ ಪೀಟರ್ಸ್‌ಬರ್ಗ್ ಅರಮನೆಯ ಹಜಾರದ ಗೋಡೆಗಳ ಮೇಲೆಲ್ಲಾ ಹೊದಿಯಿಸುವಷ್ಟು ಅಂಬರ್ ಬಿಲ್ಲೆಗಳನ್ನು ಕಳುಹಿಸಿ ಕೊಟ್ಟಿದ್ದನು. 17,18ನೆಯ ಶತಮಾನಗಳಲ್ಲಿ ಅಂಬರ್ ಕೆತ್ತನೆ ಕಲೆಯು ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ, ಅದರಿಂದ ಆಭರಣಗಳನ್ನು ತಯಾರಿಸುವ ವಿಷಯಕ್ಕೇ ಹೆಚ್ಚಿನ ಗಮನವನ್ನು ನೀಡಲಾರಂಭಿಸಲಾಯಿತು.

ಸೋವಿಯತ್ ಆಳ್ವಿಕೆಯಲ್ಲಿರುವ ಪೂರ್ವ ಪ್ರಷ್ಯಾದಲ್ಲಿ 'ಗೋಲ್ಡನ್ ಅಂಬರ್' ಹೇರಳವಾಗಿ ದೊರಕುತ್ತದೆ. ಅದನ್ನು ಅಲ್ಲಿಂದ ಆಮದು ಮಾಡಿಕೊಂಡು, ಅವುಗಳನ್ನು ಪಾತ್ರೆ, ಆಭರಣಗಳ ತಯಾರಿಕೆಯಲ್ಲಿ ಉಪಯೋಗಿಸುವ ಸಲುವಾಗಿ ಬರ್ಲಿನ್ ಮತ್ತು ಇನ್ನೂ ಅನೇಕ ಪಶ್ಚಿಮ ಜರ್ಮನ್ ನಗರಗಳಲ್ಲಿ ಕಾರ್ಖಾನೆಗಳನ್ನು ತೆರೆಯಲಾಯಿತು. ಕೋನಿಂಗ್ಸ್ ಬರ್ಗಿನ ಕಾರ್ಖಾನೆಯೂನಂತರ, ಹ್ಯಾಂಬರ್ಗಿನಲ್ಲಿ ತ

(ಒಂಭತ್ತನೇ ಪುಟ ನೋಡಿ)



ನೀವೂ ತಿಳಿಯಿರಿ

ಗೀತೆಯ ಮಹಿಮೆ

ಬರೆದವರು
ಶ್ರೀ ರಾಜಗೋಪಾಲ.

"ಗೀತೆ ಚಿದಂಬರ ಸ್ವರೂಪನಾದ ಕೃಷ್ಣನು ತನ್ನ ಬಾಯಿಯಿಂದ ಅರ್ಜುನನಿಗೆ ಹೇಳಿದ್ದು. ಮೂರು ವೇದಗಳ ಸಾರರೂಪವಾದದ್ದು. ಬ್ರಹ್ಮ ಸ್ವರೂಪವನ್ನು ತಿಳಿಸುವ ಜ್ಞಾನದಿಂದ ಕೂಡಿದ್ದು." ಬರೇ ನಮ್ಮ ದೇಶದ ಧರ್ಮ ಗ್ರಂಥವೆಂದು ಗೀತೆ ಪರಿಗಣಿಸಲ್ಪಟ್ಟಿದರೂ ಅದು ಬೇರೆ ಬೇರೆ ಭಾಷೆಗಳಿಗೆ ಪರಿವರ್ತಿತವಾಗಿ ಬೇರೆ ಬೇರೆ ದೇಶಗಳಲ್ಲಿ ತುಂಬಿ ಅನೇಕರು ಅದರಲ್ಲಿರುವ ತತ್ವಗಳನ್ನು ಮನನ ಮಾಡಿ ಮನಗಂಡು ತಮ್ಮ ನಿತ್ಯ ಜೀವನದಲ್ಲಿ ಆ ಪ್ರಯೋಗಗಳನ್ನು ಪ್ರಯೋಗಿಸಿ ಜಯಶಾಲಿಗಳಾಗಿದ್ದಾರೆ. ಅಂತಹ ಸಂದರ್ಭದಲ್ಲಿ ಭಾರತೀಯರಾದ ನಾವು ಇದನ್ನು ಲೆಕ್ಕಿಸದೆಯೆ ಗೀತೆಯನ್ನು ದೂರ ಸರಿಸಿ ಕುಳಿತುಕೊಳ್ಳುವುದು ಶುದ್ಧ ಶೋಚನೀಯ. ಪರಮಾತ್ಮನ ಪರಮಾನುಗ್ರಹದಿಂದ ಬಂದ ಆ ಪುಸ್ತಕವನ್ನು ಪಠಿಸಿ ಪರಮ ಸಂತೋಷ ಹೊಂದಿ ಪರಮ ಪದವಿಗೇರುವುದೇ ನಮ್ಮ ಪಂಥವಾಗಿರಲಿ."ಏಳಿ! ಎಚ್ಚರಗೊಳ್ಳಿ; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಹೊಸಕೆರೆ ಚಿದಂಬರಯ್ಯನವರು ಗೀತೆಯ ಕುರಿತಾಗಿ ಹೀಗೆ ಅಭಿಪ್ರಾಯ ಪಡುತ್ತಾರೆ.

"ಶ್ರೀಕೃಷ್ಣನು ತನ್ನ ಉಪದೇಶದ ಜೀವ ಕಳೆಗಳನ್ನೆಲ್ಲ ಇದರಲ್ಲಿ ಚೆನ್ನಾಗಿ ಪ್ರತಿಷ್ಠೆ ಮಾಡಿದ್ದಾನೆ. ಇದು ಈಗ ನಿಮ್ಮ ಸುದೈವದಿಂದ ನಿಮ್ಮ ಬಳಿಗೆ ಬಂದಿದೆ. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳಬಾರದು. ಇದರ ಮೂಲವೂ ಅರ್ಥವೂ ನಿಮ್ಮ ರಕ್ತನಾಳಗಳಲ್ಲೆಲ್ಲ ಗುಡುಗುಟ್ಟಿಕೊಂಡು ಅಲೆಗಳಾಗಿ ಎದ್ದು ಭೋರ್ಗರೆಯುವಂತೆ ಎಲ್ಲರೂ ಇದನ್ನು ಬಾಯಿ ತುಂಬ ಓದಿ ಅರ್ಥವನ್ನೆಲ್ಲ ಅರೆದು ಕುಡಿದು ಹೊಟ್ಟೆಯನ್ನು ತುಂಬಿಸಿ ಕೊಳ್ಳಬೇಕು."

ಅನೇಕ ಧರ್ಮ ಸಂಸ್ಥಾಪಕರೆಂದು ಹೆಸರುಗೊಂಡ ಅನೇಕ ಮೇಧಾವಿಗಳು ಗೀತೆಯ ಪಠನದಿಂದಲೇ ತಮ್ಮ ಕಾರ್ಯವನ್ನು ಸಾಧಿಸಿದವರಾಗಿದ್ದಾರೆ.

ಸರ್ವೋಪನಿಷದೋ ಗಾವೋ
ದೋಗ್ಧಾ ಗೋಪಾಲ ನಂದನಃ
ಪಾರ್ಥೋ ವತ್ಸಃ ಸುಧೀ ಭೋಕ್ತಾ
ದುಗ್ಧಂ ಗೀತಾಮೃತಂ ಮಹತ್.

"ಎಲ್ಲ ಉಪನಿಷತ್ತುಗಳೂ ಆಕಳುಗಳು. ಶ್ರೀಕೃಷ್ಣನು ಹಾಲು ಕರೆಯುವವನು. ಅರ್ಜುನನು ಕರು. ಕುಡಿಯುವವರು ಪಂಡಿತರು. ಶ್ರೇಷ್ಠವಾದ ಗೀತಾಮೃತವು ಹೀಗೆ ಕರೆದದ್ದಾಗಿದೆ. ಗೀತೆಯನ್ನು ಶ್ರೀಕೃಷ್ಣನ ಬಾಯಿಯಿಂದ ಕುರುಕ್ಷೇತ್ರದಲ್ಲಿ ಕೇಳಿದವನಾದ ಅರ್ಜುನನು ಹೀಗೆ ಹೇಳುತ್ತಾನೆ.

ನಷ್ಟೋಮೋಹಃ ಸ್ಮೃತಿರ್ಲಬ್ಧಾ ।
ತ್ವತ್ಪ್ರಸಾದನ್ಮಯಾ ಚ್ಯುತ!
ಸ್ಥಿತೋಸ್ಮಿ ಗತಸಂದೇಹಃ
ಕರಿಷ್ಯೇವಚನಂ ತವ!

ಗೀತಾ ಶ್ರವಣದಿಂದ ಭ್ರಾಂತಿಯನ್ನು ಕಳೆದು ಅರ್ಜುನನಿಗೆ ಜ್ಞಾನೋದಯವಾಯಿತು. ಶ್ರೀ ಕೃಷ್ಣನು ೧೮ನೇ ಅಧ್ಯಾಯದ ಶ್ಲೋಕ ೭೦-೭೧ರಲ್ಲಿ ಹೀಗೆ ಹೇಳುತ್ತಾನೆ.

"ಯಾವನು ಧರ್ಮ ಸಮ್ಮತವಾದ ನಮ್ಮಿಬ್ಬರ ಈ ಮಾತುಗಾರಿಕೆಯನ್ನು ಓದುವನೋ ಅವನು ಜ್ಞಾನ ಯಜ್ಞದಿಂದ ಪೂಜೆಗೊಂಡವನಾಗಿ ಹಾಗೂ ಕೇಳಿದವನು ಪಾಪದಿಂದ ಬಿಡುಗಡೆಯನ್ನು ಹೊಂದಿ ಪುಣ್ಯವಂತನು ಪಡೆಯುವ ಮಂಗಳಕರವಾದ ಲೋಕವನ್ನು ಪಡೆಯುವನು.

ಗೀತೆಯ ಮಹಾತ್ಮ್ಯವಾದರೋ ಅತ್ಯುಜ್ವಲವಾದುದು. ಆದರೆ ಯಾರೂ ಆ ಫಲದಾಸೆಯನ್ನೇ ತಮ್ಮ ಮುಖ್ಯೋದ್ದೇಶವನ್ನಾಗಿಟ್ಟುಕೊಂಡು ಗೀತೆಯನ್ನು ಓದಬಾರದು. ಇದಕ್ಕೆ ಗೀತೆಯಲ್ಲೇ ಅರ್ಜುನನಿಗೆ ಶ್ರೀಕೃಷ್ಣನು ಹೇಳುತ್ತಾನೆ—"ಕರ್ಮಣ್ಯೇವಾಧಿಕಾರಸ್ತೇ, ಮಾಫಲೇಷು ಕದಾಚನ" ನಮಗೆ ಕರ್ಮದಲ್ಲಿ ಮಾತ್ರ ಅಧಿಕಾರ. ಫಲದಲ್ಲಿ ಇಲ್ಲ. ತದೇಕ ಚಿತ್ತದಿಂದ ಗೀತಾಪಠನ ಮಾಡುವುದು ನಮ್ಮ ಕರ್ತವ್ಯ. ಫಲ ಕೊಡುವುದು ಪರಮಾತ್ಮನ ಕೆಲಸ.

ಗೀತೆಯ ಮಹಾತ್ಮ್ಯವನ್ನು ವಿಷ್ಣುವು ಭೂ ದೇವಿಗೆ ಈ ರೀತಿಯಾಗಿ ವಿವರಿಸುತ್ತಾನೆ—

"ಗೀತೆಯ ಧ್ಯಾನವನ್ನು ಯಾರು ಶ್ರದ್ಧಾಪೂರ್ವಕವಾಗಿ ಒಂದೇ ಚಿತ್ತದಿಂದ ಯಾವಾಗಲೂ ಮಾಡುತ್ತಾರೋ ಅವರ ಪಾಪಗಳು ಕಮಲದ ಎಲೆಯ ಮೇಲೆ ಹಾಕಿದ ನೀರಿನಂತೆ ಅಂಟುವುದಿಲ್ಲ. ಗೀತೆಯ ಪುಸ್ತಕಗಳಿರುವಲ್ಲಿ, ಅದರ ಪಾಠಗಳು ನಡೆಯುವಲ್ಲಿ ಎಲ್ಲ ತೀರ್ಥ ಪ್ರಯಾಗಗಳು ಬಂದು ನೆಲಸುವುವು. ಇದಲ್ಲದೆ ವೇದಗಳು, ಋಷಿಗಳು, ಯೋಗಿಗಳೇ ಮೊದಲಾದ ಮಹಾ ಪುರುಷರು ಬಂದು ವಾಸ ಮಾಡುವರು ಮಾತ್ರವಲ್ಲದೆ ಸ್ವತಃ ವಿಷ್ಣುವೇ ಬಂದು ನೆಲಸುವನು."

"ಯಾವಾಗಲೂ ಶುದ್ಧ ಮನಸ್ಸಿನಿಂದ ಹದಿನೆಂಟು ಅಧ್ಯಾಯಗಳನ್ನು ಜಪಿಸುವವನಿಗೆ ಜ್ಞಾನ ಸಿದ್ಧಿಯನ್ನು ಪಡೆದು ಮೋಕ್ಷವೂ, ೯ ಅಧ್ಯಾಯಗಳನ್ನು ಓದುವವನಿಗೆ ಗೋದಾನದ ಪುಣ್ಯವೂ, ೬ ಅಧ್ಯಾಯಗಳನ್ನು ಪಠಿಸುವವನಿಗೆ ಗಂಗಾ ಸ್ನಾನದ ಫಲವೂ, ೩ ಅಧ್ಯಾಯಗಳನ್ನು ಓದುವವನಿಗೆ ಸೋಮಯಾಗದ ಫಲವೂ, ಒಂದು ಅಧ್ಯಾಯ ಓದಿದವನಿಗೆ ರುದ್ರ ಲೋಕವೂ, ಹತ್ತು, ಎಂಟು, ಏಳು....ಒಂದು ಶ್ಲೋಕವನ್ನು ಓದುವವನಿಗೆ ಶಾಶ್ವತವಾದ ಚಂದ್ರ ಲೋಕವೂ ದೊರೆಯುತ್ತದೆ" ಎಂದು ಗೀತಾ ಮಹಾತ್ಮ್ಯವು ತಿಳಿಸುತ್ತದೆ.

"ಆದುದರಿಂದ ಈ ಸಂಸಾರವೆಂಬ ಸಾಗರದಲ್ಲಿ ತೇಲಿ ಮುಳುಗುತ್ತಿರುವ ಎಲ್ಲರೂ ಒಮ್ಮೆ ಗೀತೆಯೆಂಬ ನೀರಿನಿಂದ ಸ್ನಾನ ಮಾಡಿ ಕೊಳೆಯನ್ನು ಕಳೆದು ಕೊಳ್ಳಲಿ. ಭಯಂಕರವಾದ ಸಂಸಾರವೆಂಬ ಸಾಗರವನ್ನು ದಾಟ ಬಯಸುವವನು ಗೀತೆಯೆಂಬ ಹಡಗನ್ನು ಹತ್ತಿ ಹೊರಟರೆ ಕಷ್ಟವಿಲ್ಲದೆ ದಡ ಸೇರಬಹುದು. ಜನಕನೇ ಮೊದಲಾದ ರಾಜರು ಗೀತೆಯನ್ನು ಪಠಿಸಿ ಪರಮ ಪದವಿ ಗೇರಿದರಂತೆ."

ರಾಜಕೀಯವೆಂಬ ಮುಳ್ಳಿನ ಹಾಸಿಗೆಯಲ್ಲಿ ತೊಳಲಾಡುತ್ತಿರುವ ರಾಜಕಾರಣಿಗಳೂ ಇಂದು ಗೀತಾ ಪಠನದಿಂದ ಅಭಿವ್ಯಕ್ತ ಮಾಡಲು ಸಾಧ್ಯವಿಲ್ಲದಂತಹ ಸುಖವನ್ನು ಪಡೆಯಲು ಸಾಧ್ಯವಿದೆ ಎಂದು ಮನಗಂಡಿದ್ದಾರೆ. ಆದುದರಿಂದ ನಿತ್ಯ ಜೀವನದ ಕಷ್ಟಗಳಿಂದ ಆದ ಛಿನ್ನಭೇದ ಕ್ಷತ ಶರೀರ ವ್ಯಥೆಯನ್ನು ಗೀತಾ ಪಠನದಿಂದ ಕಳೆಯಲು ಸಾಧ್ಯವಿದೆ. ಬರೇ ದಿನಕ್ಕೆ ಎರಡು ಶ್ಲೋಕಗಳಂತೆ ಬಾಯಿಪಾಠ ಕಲಿತು ಕೆಲವೇ ದಿನಗಳಲ್ಲಿ ಮಹಾತ್ಮಾ ಗಾಂಧೀಯವರು ಗೀತೆಯನ್ನು ಕಲಿತು ಬಿಟ್ಟರು ಮಾತ್ರವಲ್ಲದೆ ಗೀತಾ ಕಲಿಯುವುದೇನೂ ಕಷ್ಟವಲ್ಲ ಎಂದು ವಿಶದಪಡಿಸಿದರು.

ಲೋಕದಲ್ಲಿ ನಡೆಯುವ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಗೀತೆಯೊಳಗಿದೆ. ಅಂದಿನ ಸಮಾಜಕ್ಕೆ ಹೊಂದಿ ಹೇಳಲ್ಪಟ್ಟ ಆ ಗೀತೆ ಇಂದಿನ ಸಮಾಜಕ್ಕೆ ಹೆಚ್ಚು ಹೊಸತಾಗಿ ಒಪ್ಪುತ್ತದೆ. ಯಾರು ಈ ವೈವಿಧ್ಯ ಪೂರ್ಣತೆಯಿಂದ ತುಂಬಿ ತುಳುಕಾಡುತ್ತಿರುವ ಜಗತ್ತಿನ ವೈವಿಧ ಗಳ ಅಂತರಾಳದಲ್ಲಿ ಪ್ರವಹಿಸುತ್ತಿರುವ ಸಂಗತಿಗಳನ್ನು ಬದಿಗೊತ್ತಿ ಗೀತೆಯನ್ನು ಮನನ ಮಾಡಿ ಜ್ಞಾನ ಸಂಪಾದಿಸುವರೋ, ಯಾರು ಈ ಜಡವಾದ, ಅಜ್ಞಾನಮಯವಾದ ಲೋಕರಂಗದಲ್ಲಿ ಆ ಕಲ್ಪನಾತೀತವಾದ ಪ್ರಕಾಶಪೂರ್ಣವಾದ ಜ್ಞಾನ ಜ್ಯೋತಿಯಾದ ಗೀತೆಯನ್ನು ಕಾಣುವರೋ, ಯಾರು ಈ ಜನ್ಮ ಮೃತ್ಯುಗಳ ವಿಷಪಾಶವನ್ನು ಆಲೋಚಿಸುತ್ತ ಕಾಲ ಕಳೆಯದೆ ಗೀತಾ ಧ್ಯಾನದಿಂದ ಅನಂತಾತ್ಮನನ್ನು ಕಾಣುವರೋ ಅವರಿಗೆ ಮಾತ್ರ ಆ ಸಚ್ಚಿದಾನಂದ ಶಾಂತಿ—ಆ ಶಾಶ್ವತ ಶಾಂತಿ ಲಭ್ಯ. ಗೀತೆಯ ಪ್ರತಿಯೊಂದು ಮಾತೂ ನಮ್ಮ ನಿತ್ಯ ಜೀವನದ ಗಾಯತ್ರಿಯಾಗಿ ರಂಗೊಳಿಸುತ್ತಿರಲಿ. ಗೀತೆಯ ಸುಧಾಪಾನ ನಮ್ಮನ್ನಾ ಸಚ್ಚಿದಾನಂದ ಶಾಂತಿ ನಮ್ಮ ಜೀವನ ದೇವತೆಯ ಮುಕುಟ ಮಣಿಯಾಗಿ ರಾರಾಜಿಸುತ್ತಿರಲಿ.

ನಿಮ್ಮ ಮಗನ ಭಾವನಾ ಪ್ರಪಂಚದಲ್ಲಿ
ನೀವೆಂದಾದರೂ ವಿಹರಿಸಿದ್ದುಂಟೆ?
ಆತನ ಕನಸುಗಳಲ್ಲಿ ಪಾಲುಗೊಂಡಿದ್ದೀರಾ?
ಅವನ ರಹಸ್ಯಗಳು ನಿಮಗೆ ತಿಳಿದಿವೆಯೆ?

ನಿಮ್ಮೆಡೆಗೆ ಆತ ನೋಡುತ್ತಿದ್ದಾನೆ. ಅವನ ಕಣ್ಣುಗಳಲ್ಲಿ ಹೊಳೆಯುವ ಪ್ರೀತಿ ಮತ್ತು ಸಂತೋಷವನ್ನು ನೋಡಿರಿ. ನೀವೇ ಆತನ ಸುರಕ್ಷೆ. ಆವನಿಗಾಗಿ ಯೋಜನೆಗಳನ್ನು ಹಾಕಿ ಭವ್ಯ ಭವಿಷ್ಯತ್ತಿನ ಕಡೆಗೆ ಸಾಗಲು ಅವನಿಗೆ ನೀವೊಬ್ಬರೇ ಸಹಾಯ ಮಾಡತಕ್ಕವರು. ಆದ್ದರಿಂದ ಇಂದೇ ವಿವೇಕ ಪೂರಿತ ನಿರ್ಧಾರವನ್ನು ಮಾಡಿರಿ— ನಾಳೆ ನಿಮ್ಮ ಆಕಾಂಕ್ಷೆಗಳನ್ನು ಅವನು ಪೂರೈಸುವನು. ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಗೆ ಹೋಗಿ ಆವನ ಹೆಸರಿನಲ್ಲಿ ಒಂದು ಕ್ಯುಮುಲೇಟಿವ್ ಡಿಪಾಸಿಟ್ ಖಾತೆಯನ್ನು ತೆರೆಯಿರಿ. ನೀವು ಉಳಿಸುವ ಪ್ರತಿಯೊಂದು ರೂಪಾಯಿಯೊಡನೆ ಅವನ ಭವಿಷ್ಯ ಬಲಗೊಳ್ಳುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು:
200ಕ್ಕೂ ಮಿಕ್ಕಿವೆ.

ಚಲಾವಣಾ ನಿಧಿ:
ರೂ. 70 ಕೋಟಿಗೂ ಮಿಕ್ಕಿದೆ.

ಪ್ರಗತಿ...

ಭಾರತಕ್ಕೆ ಅಮೆರಿಕ...

ಸ್ವಾವಲಂಬನೆಯ ಗು...

ನಾವು ಸ್ವಾತಂತ್ರ್ಯ ಪಡೆದು ಹದಿನೆಂಟು ವರ್ಷಗಳೇ ಗತಿಸಿದುವು. ರಾಜಕೀಯ ಸ್ವಾತಂತ್ರ್ಯದಿಂದ ಸಂತೃಪ್ತರಾಗದ ನಾವು ಆರ್ಥಿಕ ಸ್ವಾತಂತ್ರ್ಯ ಹೊಂದಲು ಎಡೆಬಿಡದೆ ಶ್ರಮಿಸುತ್ತಿದ್ದೇವೆ. ಎರಡು ಮಹಾ ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ, ಮೂರನೆಯದನ್ನು ಮುಗಿಸುವುದರಲ್ಲಿದ್ದೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ತಯಾರಿ ನಡೆದಿದೆ. ಈ ಯೋಜನೆಗಳ ಸಫಲತೆಗಾಗಿ ನಾವು ನಮ್ಮ ಸರ್ವ ಸಂಪತ್ತನ್ನು ಮುಡಿಪಾಗಿರಿಸಿದುದಲ್ಲದೆ ವಿದೇಶೀಯರ ನೆರವನ್ನು ಸಾಕಷ್ಟು ಪಡೆದಿದ್ದೇವೆ. ನಮ್ಮ ಆರ್ಥಿಕ ಪ್ರಗತಿಗೆ ವಿದೇಶೀಯರೂ ಬಹುಮಟ್ಟಿಗೆ ಕಾರಣರಾಗಿದ್ದಾರೆ. ಆರ್ಥಿಕ ನೆರವಿನ ಜತೆ ತಾಂತ್ರಿಕ ನೆರವನ್ನಿತ್ತು ನಮ್ಮನ್ನು ಅವರು ಮುಂದೆ ಸಾಗುವಂತೆ ಮಾಡಿರುತ್ತಾರೆ. ಈ ದಿಶೆಯಲ್ಲಿ ಮಹಾರಾಷ್ಟ್ರವಾದ ಅಮೆರಿಕದ ಕೊಡುಗೆ ವಿಶೇಷವಾದುದು ಹಾಗೂ ಗಣನೀಯವಾದುದು. ಆಪತ್ತಿನ ಸಂದರ್ಭ ಒದಗಿದಾಗಲೆಲ್ಲಾ ನಾವು ಅಮೆರಿಕದತ್ತ ದೃಷ್ಟಿಹರಿಯಿಸಿದ್ದೇವೆ. ಅಮೆರಿಕನ್ನರ ಸಹಾಯವನ್ನು ಸಾಕಷ್ಟು ಪಡೆದಿದ್ದೇವೆ.

ಆಹಾರರಂಗದಲ್ಲಿ ನಾವು ಇನ್ನೂ ಸ್ವಾವಲಂಬಿಗಳಾಗಿಲ್ಲ. ಬಹುಮಟ್ಟಿಗೆ ನಾವಿನ್ನೂ ಆಹಾರ ವಸ್ತುಗಳನ್ನು ಆಮದು ಮಾಡುತ್ತಿದ್ದೇವೆ. ದೇಶದ ಕೊರತೆಯನ್ನು ತುಂಬಿಸಲು ನಾವು ಅಮೆರಿಕದಿಂದ ಹೆಚ್ಚಿನ ಆಹಾರ ಧಾನ್ಯವನ್ನು ಖರೀದಿಸುತ್ತಾ ಬಂದಿದ್ದೇವೆ. ಪಿ. ಎಲ್. 480 ಯೋಜನೆಯನ್ವಯ ೧೯೫೬ರಿಂದ ಇಂದಿನವರೆಗೂ ನಾವು ಆಹಾರ ಧಾನ್ಯ ಪಡೆಯುತ್ತಿದ್ದೇವೆ. ೧೯೬೦–೬೧ರಲ್ಲಿ ನಮ್ಮ ಆಹಾರದ ಉತ್ಪಾದನೆ ೮೦ ಮಿಲಿಯ ಟನ್ನುಗಳಷ್ಟಿದ್ದುದು ೧೯೬೪-೬೫ರಲ್ಲಿ ೮೭.೫ ಮಿಲಿಯ ಟನ್ನುಗಳಾಗಿದ್ದರೂ ಇನ್ನೂ ಕೊರತೆಯಲ್ಲೇ ನಾವು ಇದ್ದೇವೆ. ದೇಶದ ಆರ್ಥಿಕ ಅಭಿವೃದ್ಧಿಯೊಂದರಿಂದ ೭೫ ಸೇಕಡಾದ ಹೆಚ್ಚಳವೂ ನಮಗೆ ಸಾಕಾಗಲಿಲ್ಲ. ಹಾಗೆಂದು ಕೊರತೆ ತುಂಬದಿದ್ದರೆ ದೇಶದಲ್ಲಿ ಅತಿಪ್ರಕರಣ ತಲೆದೋರಿ ನಮ್ಮ ಆರ್ಥಿಕ ರಂಗವೇ ಕುಸಿದು ಬೀಳಬಹುದು. ಹೀಗಾಗಿ ನಾವು ಆಹಾರವನ್ನು ಆಮದು ಮಾಡದೆ ಗತ್ಯಂತರವಿಲ್ಲ.

ಪಿ. ಎಲ್. ೪೮೦ ಅಮೆರಿಕವು ಭಾರತಕ್ಕಿಂತ್ತ ಕೊಡುಗೆ. ಈ ಕೊಡುಗೆಯನ್ವಯ ವರ್ಷಂಪ್ರತಿ ಮಿಲಿಯ ಟನ್ನುಗಳಷ್ಟು ಆಹಾರ ನಮಗೆ ಸರಬರಾಜಾಗುತ್ತದೆ. ದಿನಕ್ಕೆ ಇಪ್ಪತ್ತು ಸಾವಿರ ಟನ್ನಿನಂತೆ ಬರುವ ಆಹಾರ, ನಮ್ಮ ಆಹಾರ ಧಾನ್ಯದ ಬೆಲೆಯನ್ನು ಬಹುಮಟ್ಟಿಗೆ ಹಿಡಿತದಲ್ಲಿಟ್ಟುಕೊಳ್ಳಲು ಸಹಕಾರಿಯಾಯಿತು.

ಪ್ರಚಲಿತ ವರ್ಷದಲ್ಲಿ ದೇಶದಲ್ಲಿ ಆಹಾರದ ಸ್ಥಿತಿ ಬಹುಮಟ್ಟಿಗೆ ಹಾಳಾಗಿ ಹೋಗಿದೆ. ಅನಾವೃಷ್ಟಿಯ ದೆಸೆಯಿಂದ ನಿರೀಕ್ಷಿಸಿದಷ್ಟು ಬೆಳೆ ಬಾರದಾಗಿದೆ. ಆದುದರಿಂದ ನಾವು ಅಮೆರಿಕದಿಂದ ಇನ್ನೂ ಹೆಚ್ಚಿನ ಆಹಾರಧಾನ್ಯ ಬೇಡಬೇಕಾಯಿತು. ನಮ್ಮ ಕೃಷಿಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರು ಇತ್ತೀಚೆಗೆ ಅಮೆರಿಕವನ್ನು ಸಂದರ್ಶಿಸಿ, ದೇಶದ ಗಂಭೀರ ಪರಿಸ್ಥಿತಿಯನ್ನು ಮನಮುಟ್ಟುವಂತೆ ಅಮೆರಿಕದ ಅಧ್ಯಕ್ಷರಿಗೂ ಇತರರಿಗೂ ತಿಳಿಯಪಡಿಸಿ, ಪ್ರಚಲಿತ ವರುಷದಲ್ಲಿ ಹೆಚ್ಚು ಹದಿನೈದು ಮಿಲಿಯ ಟನ್ನುಗಳಷ್ಟು ಆಹಾರ ಧಾನ್ಯ ಸರಬರಾಜು ಮಾಡಲು ಒಪ್ಪಿಗೆ ಪಡೆದು ಬಂದಿದ್ದಾರೆ. ಇದು ನಿಜಕ್ಕೂ ಅಮೆರಿಕನ್ನರ ಉದಾರ ಮನೋಭಾವಕ್ಕೆ ದ್ಯೋತಕ. ದೇಶದ ಕಠಿಣ ಪರಿಸ್ಥಿತಿಯಲ್ಲಿ ನಮ್ಮ ನೆರವಿಗೆ ಬಂದ ಅಮೆರಿಕವನ್ನು ಭಾರತದ ಜನತೆ ಎಂದೂ ಮರೆಯಲಾರರು. ಈ ಎಲ್ಲಾ ಪೂರೈಕೆಗಳ ಪಾವತಿ ರೂಪಾಯಿ ನಾಣ್ಯದಲ್ಲೇ ಆಗುವುದೆಂಬುದು ಇನ್ನೊಂದು ಗಮನಾರ್ಹವಾದ ಸಂಗತಿ. ಇದಕ್ಕಿಂತ ಸಮಯೋಚಿತ ಸಹಾಯವೆಂದು ಸ್ಮರಿಸದೆ ಉಪಾಯವಿದೆಯೆ?



ದೆಹಲಿಗೆ ಸಮೀಪದ ಹಳ್ಳಿಯೊಂದರಲ್ಲಿ ಶಾಂತಿದಳದ ಸ್ವಯಂ ಸೇವಕರು ಜೋಳದ ಗ್ಯೂಲನ್ನು ಪರೀಕ್ಷಿಸುತ್ತಿದ್ದಾರೆ.



ಅಧಿಕ ಉತ್ಪಾದನೆಗೆ ವಿದ್ಯುಚ್ಛಕ್ತಿಯ ನೆರವು ಪಡೆದು, ನೀರಾವರಿ ಸೌಕರ್ಯ ಒದಗಿಸಿದರೆ ಆಗ ಅಧಿಕ ಬೆಳೆ ಬೆಳೆಯಬಹುದು.

ಥದಲ್ಲಿ

ಅನುಪಮ ಸಹಕಾರ

ಸ್ವಯಂಪ್ರೇರಿತ ನೆರವು

ಭಾರತೀಯರು ಆಹಾರ ರಂಗದಲ್ಲಿ ಸ್ವಾವಲಂಬಿಗಳಾಗಬೇಕೆಂದು ಅಮೆರಿಕನ್ನರು ಬಯಸುತ್ತಾರೆ. ನಾವು ಬಹುಕಾಲ ಅನ್ಯರನ್ನು ನೆಚ್ಚಿ ಬಾಳುವಂತಿಲ್ಲ. ಆಹಾರ ರಂಗದಲ್ಲಿಯೂ ನಾವು ಸ್ವಾವಲಂಬಿಗಳಾಗದೆ ಗತ್ಯಂತರವಿಲ್ಲ. ಹೀಗಾಗಿ ನಮ್ಮ ಸರಕಾರ ಇಂದು ಆಹಾರೋತ್ಪಾದನೆಯತ್ತ ವಿಶೇಷ ಗಮನ ಹರಿಸುತ್ತಿದೆ. ನಮ್ಮ ಯೋಜನೆಗಳ ರೂಪರೇಷೆಯೂ ಈ ನಿಟ್ಟಿನಲ್ಲೇ ರೂಪಿಸಲ್ಪಟ್ಟಿವೆ. ಹೆಚ್ಚು ಆಹಾರ ಬೆಳೆಯುವ ದಾರಿ ಹೆಚ್ಚು ನೀರಾವರಿ ಸೌಲಭ್ಯಗಳನ್ನೊದಗಿಸುವುದೇ. ಈ ದಿಸೆಯಲ್ಲಿ ನೀರಾವರಿ ಯೋಜನೆಗಳು ಹಾಗೂ ವಿದ್ಯುದುತ್ಪಾದಕ ಕೇಂದ್ರಗಳ ಪಾತ್ರ ಮಹತ್ವವಾದುದು.

ಅಧಿಕ ವಿದ್ಯುದುತ್ಪಾದನೆ ಎಂದರೆ ಅಧಿಕ ನೀರಾವರಿ ಸೌಲಭ್ಯ ಹಾಗೂ ಇದರ ದೆಸೆಯಿಂದ ಜನತೆಗೆ ಅಧಿಕ ಆಹಾರ. ಇದು ಅಮೆರಿಕ ತಿಳಿದುಕೊಂಡ ರೀತಿ. ಆದುದರಿಂದ ಅದು ನಮ್ಮ ದೇಶದಲ್ಲಿ ಪ್ರಮುಖ ವಿದ್ಯುದುತ್ಪಾದನಾ ಕೇಂದ್ರಗಳ ಸ್ಥಾಪನೆಯತ್ತ ಗಮನ ಹರಿಸಿತು. ಅದಕ್ಕಾಗಿ ತನ್ನ ಆರ್ಥಿಕ ಹಾಗೂ ತಾಂತ್ರಿಕ ಸಹಕಾರವನ್ನಿತ್ತಿತ್ತು. ಇಂದು ನಮ್ಮಲ್ಲಿನ ಐದು ಮಹಾ ವಿದ್ಯುದುತ್ಪಾದನಾ ಕೇಂದ್ರಗಳ ರಚನೆ ಅಮೆರಿಕದ ನೆರವಿನಿಂದ ಸಾಗುತ್ತಿದೆ.

ಕೇರಳದ ಶಬರಗಿರಿ ಯೋಜನೆಯು ಕೇರಳದ ವಿದ್ಯುದುತ್ಪಾದನಾ ಸಾಮರ್ಥ್ಯದ ಎರಡು ಪಾಲಷ್ಟು ವಿದ್ಯುದುತ್ಪಾದನೆಯನ್ನು ಬರುವ ವರ್ಷದಿಂದ ಮಾಡಲಿದೆ. ಮೈಸೂರಿನ ಶರಾವತಿಯೋಜನೆಯು ಮೈಸೂರು, ಆಂಧ್ರ ಹಾಗೂ ಮದ್ರಾಸ ಗಳಿಗೆ ಅಧಿಕ ವಿದ್ಯುಚ್ಛಕ್ತಿಯ ಸರಬರಾಜು ಮಾಡಲಿದೆ. ತಾರಾಪುರದಲ್ಲಿ ಭಾರತದ ಪ್ರಥಮ ಅಣುಶಕ್ತಿ ವಿದ್ಯುದುತ್ಪಾದನಾ ಕೇಂದ್ರವು ೧೯೬೭ರಿಂದ ಕಾರ್ಯಾರಂಭ ಮಾಡಲಿದೆ. ಚಂದ್ರಪುರ ಹಾಗೂ ಬಂಡೇಲ್ ಉಷ್ಣ ವಿದ್ಯುದುತ್ಪಾದನಾ ಕೇಂದ್ರಗಳು ಕಾರ್ಯಾರಂಭ ಮಾಡಲಿವೆ.

ಈ ಪಂಚ ಯೋಜನೆಗಳು ಅಮೆರಿಕದ ಆರ್ಥಿಕ ನೆರವು ಹಾಗೂ ತಾಂತ್ರಿಕ ಸಹಾಯದಿಂದ ಕಾರ್ಯರೂಪಕ್ಕೆ ಬರುವವುಗಳು. ಈ ಯೋಜನೆಗಳು ಕಾರ್ಯಾರಂಭ ಮಾಡಿದಾಗ ಅಧಿಕ ವಿದ್ಯುದುತ್ಪಾದನೆಯಾಗಿ, ಇದರ ಬಳಕೆಯು ಕೃಷಿರಂಗದಲ್ಲಾಗಿ ನಮ್ಮ ಆಹಾರ ಸಮಸ್ಯೆಯು ಪರಿಹಾರವಾಗಲೆಂದೇ ಅಮೆರಿಕನ್ನರೂ ಈ ದೃಷ್ಟಿಯಿಂದಲೇ ಈ ಯೋಜನೆಗಳಿಗೆ ಸಹಾಯವಿತ್ತಿತ್ತು. ನಮ್ಮ ರೈತವರ್ಗ ಈ ಸೌಲಭ್ಯ ಪಡೆದು ಅಧಿಕ ಬೆಳೆ ಬೆಳೆಸಿ, ಆಹಾರ ರಂಗದಲ್ಲಿನ ಕೊರತೆ ತುಂಬಿದರೆ ನಮ್ಮ ಭಾಗ್ಯಕ್ಕೆಣೆಯುಂಟೆ? ಕೊಡುವವರು ಅವರು. ಪಡೆಯುವ ನಾವು ಸದ್ವಿನಿಯೋಗ ಪಡೆಯದಿದ್ದರೆ ಹೇಗೆ?

ನಾವು ಸರ್ವ ರಂಗದಲ್ಲೂ ಮುಂದುವರಿಯಬೇಕೆಂಬುದು ಅಮೆರಿಕದ ಬಯಕೆ. ಅದು ಎಲ್ಲಾ ಬಗೆಯ ನೆರವನ್ನು ನಮಗೆ ಈಯುತ್ತಿದೆ. ಅಮೆರಿಕವು ಶಾಂತಿದಳದ ಸ್ವಯಂ ಸೇವಕರನ್ನು ಇಲ್ಲಿಗೆ ಕಳುಹಿಸುವುದರ ಮೂಲಕ ನಮ್ಮ ಜನತೆಗೆ ತುಂಬಾ ನೆರವಿತ್ತಂತಾಗಿದೆ. ಈ ಶಾಂತಿದಳದ ಸ್ವಯಂ ಸೇವಕರು ಬಹುಮುಖ ರಂಗಗಳಲ್ಲಿ ನಿಷ್ಣಾತರಾದವರು. ಈ ವರೆಗೆ ಬಂದ ಸ್ವಯಂ ಸೇವಕರಲ್ಲಿ ಕೃಷಿಕಾರ್ಮಿಕರು ಅಧ್ಯಾಪಕರು, ದಾದಿಯರು, ಹೈನ, ಕೋಳಿಸಾಕಣೆಗಳಲ್ಲಿನಿಷ್ಣಾತರು, ಸಹಕಾರಿ ರಂಗದ ತಜ್ಞರು, ಪುಟ್ಟ ಕೈಗಾರಿಕಾ ನಿಪುಣರು ಸೇರಿದ್ದಾರೆ. ಇವರು ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ದುಡಿಯುತ್ತ ತಮ್ಮ ಅನುಭವವನ್ನು ಭಾರತೀಯರಿಗಿತ್ತು ಅವರ ಅಭಿವೃದ್ಧಿಗೆ ನೆರವಾಗುತ್ತಿದ್ದಾರೆ. ಈ ರೀತಿಯ ಸಹಕಾರ ಹಾಗೂ ಸಹಾಯವನ್ನು ಪಡೆದು ನಮ್ಮ ಜನ ಸುಧಾರಿಸಿದರೆ ಆಗ ನಾವು ನಿಷ್ಣಾತರೆನಿಸಿಕೊಂಡೇವು.

ಈ ವರೆಗೆ ಬಂದ ಸ್ವಯಂ ಸೇವಕರಲ್ಲಿ ಡಾಕ್ಟರುಗಳು ಇರಲಿಲ್ಲ. ನವೆಂಬರ ಮೊದಲ ವಾರದಲ್ಲಿ ಅಮೆರಿಕದ ಶಾಂತಿದಳದ ವತಿಯಿಂದ ನಾಲ್ವರು ತಜ್ಞ ಡಾಕ್ಟರುಗಳು ನವದೆಹಲಿಗೆ ಆಗಮಿಸಿದ್ದಾರೆ. ಇವರಲ್ಲಿ ಒಬ್ಬರು ಮಹಿಳೆ, ಒಬ್ಬರು ಅರುವತ್ತೈದು ವರ್ಷ ವಯಸ್ಸಿನ ವೃದ್ಧ. ಆದರೂ ಸೇವಾಕಾಂಕ್ಷಿಯಾಗಿ ಅವರು ಇಲ್ಲಿಗೆ ಬಂದಿದ್ದಾರೆ. ಪ್ರಕೃತ ಈ ಡಾಕ್ಟರರುಗಳು ಬಿಹಾರ, ಕೇರಳ, ರಾಜಸ್ಥಾನ ಹಾಗೂ ಮಹಾರಾಷ್ಟ್ರಗಳಲ್ಲಿ ದುಡಿಯಲಿದ್ದಾರೆ.

ಶಾಂತಿದಳದ ಸ್ವಯಂ ಸೇವಕರು ಕಾರ್ಯ ಚತುರರು. ಹಳ್ಳಿಗರೊಡನೆ ಬೆರೆತು ಅನುಭವ ಪಡೆದು ಅನುಭವ ಕೊಡಬಲ್ಲ ಚತುರರು. ಸೇವಾ ಭಾವನೆಯಿಂದ ಪ್ರೇರಿತರಾಗಿ ಬಂದಿರುವ ಅವರ ಅನುಭವದ ಸಂಪೂರ್ಣ ಪ್ರಯೋಜನವನ್ನು ನಾವು ಪಡೆಯದೆ ಹೋದರೆ ನಮ್ಮ ಮೂರ್ಖತನಕ್ಕೆ ಯಾರಾದರೂ ಏನಂದಾರು? ನಾವು ಪ್ರಗತಿ ಹೊಂದ ಬೇಕಾದರೆ ಇತರರ ಅನುಭವವೂ ಅತಿ ಅಗತ್ಯ ಅಲ್ಲವೆ?

ಹೀಗೆ ಹತ್ತು ಹಲವು ರೀತಿಯಿಂದ ಅಮೆರಿಕ ನಮಗೆ ನೆರವನ್ನೀಯುತ್ತಿದೆ. ರಾಜಕೀಯ ಭಿನ್ನಾಭಿಪ್ರಾಯಗಳೇನೇ ಇರಲಿ, ನಮ್ಮ ಪ್ರಗತಿಯ ಪಥದಲ್ಲಿ ಅಮೆರಿಕೆ ಇತ್ತ ನೆರವನ್ನು ನಾವು ಮರೆಯುವಂತಿಲ್ಲ ಮರೆಯಬಾರದು.

ಪಿ. ಎಲ್. ೪೮೦ ಯೋಜನೆಯನ್ವಯ ಭಾರತಕ್ಕಾಗಮಿಸುತ್ತಿರುವ ಆಹಾರಧಾನ್ಯದ ವಿತರಣೆಯಾಗುತ್ತಿದೆ.

— ನನ್ನೂರು —

ಮರೆವೆನೆ ಜೀವದ ಕೊನೆಯುಸಿರಾಟವು
ನಿಲ್ಲುವ ವರೆಗೂ ಹುಟ್ಟೂರ!
ಮರೆವೆನೆ ಪಡುವಣ ಕಡಲಿನ ದಡದಾ
ತೆಂಗಿನ ಕಂಗಿನ ನನ್ನೂರ ॥ ೧ ॥

ಪಡುವಣ ಕಡಲಿನ ಮೂಡಣ ಬೆಟ್ಟದ
ನಡುವಣ ನಾಡೊಳು ನಾನಿದ್ದೆ!
ರವಿಯುದಯಾಸ್ತದ ಸೊಬಗನು ನಿತ್ಯವು
ಉಣ್ಣುವ ಭಾಗ್ಯವ ಪಡೆದಿದ್ದೆ ॥ ೨ ॥

ಕಡಲಿನ ಗಾಳಿಗೆ ತಲೆಯಲ್ಲಾಡಿಸಿ
ಗರಿಗಳ ಕೆದರುವ ತೆಂಗುಗಳು।
ಫಲಗಳ ಭಾರಕೆ ಒಲೆದೊಲೆದಾಡುವ
ಕಂಗಿನ ಚೆಂದದ ನೋಟಗಳು! ॥ ೩ ॥

ಸೂರ್ಯನ ಚಂದ್ರನ ಉದಯಾಸ್ತಕೆ
ಬಲ್
ಭೋರ್ಗೆರೆಯುವ ಕಡಲಿನ ಮೊರೆತ।
ಏಳುತ ಬೀಳುತ ಭರದಿಂ ದಡದೆಡೆ
ಬಡಿಯುವ ತೆರೆಗಳ ಏನ್ ಹೊಡೆತ! ॥೪॥

ಕಾರ್ಗಾಲದ ಜಲ ತುಂಬುತ ಸೊಕ್ಕುತ
ಹರಿಯುವ ನದಿಗಳ ಸೊಬಗೇನು!
ಗಿರಿಗಳ ಮೇಲಿಂ ಬೀಳುತ ತೇಲುತ
ಪಡವನು ಮೀರುವ ಹರಿವೇನು! ॥ ೫ ॥

ಕೆಸರಿನ ಗದ್ದೆಗೆ ನೇಜಿಯ ನೆಡುವಾ
ಹೆಣ್ಮಕ್ಕಳ ಸವಿ ಹಾಡೇನು।
'ಕ್ಷೈಕಸಂತಾನರೆ ಬಾಯಿ ಗೆ ಮೊಸರೆ'
ನ್ನುವ ದುಡಿಮೆಯ ಹಿಂಬಾಳೇನು! ॥೬॥

ಹಬ್ಬವು ಕಣ್ಣಿಗೆ ಮನಸಿಗೆ ಸಂತಸ
ಕವಿಗಳ ಭಾವಕೆ ರಸದೂಟ
ಸುಗ್ಗಿಯ ಕುಣಿತವು ದೈವದ ಕೋಲವು
ತನನ್ನು ತಾ ಮರೆಸುವ ನೋಟ! ॥ ೭ ॥

ಬಿಟ್ಟನೆ ವಿಧಿ ನಿರ್ದಯಿ ನನ್ನನು
ದೂರದ ನಾಡಿಗೆ ಕರೆತಂದ।
ಹೊಟ್ಟೆಯ ದಾಸಗೆ ಇದುವೇ ಭಾಗ್ಯವು
ಇದುವೇ ನಿನ್ನಯ ನಾಡೆಂದ ॥ ೮ ॥

ಲೋಕವೆ ನಿನ್ನದು ಮಾನವ ಕುಲವೇ
ನಿನ್ನಯ ಕುಲ ನಡೆ ನಡೆಯೆಂದ।
ಏನೇ ಆಗಲಿ ಯಾರೇನೆನ್ನಲಿ
ಹೃದಯವು ನೆನೆವುದು ಎನ್ನೂರ ॥೯॥

—ಶ್ರೀ ಕಾ. ಶ. ನಾ. ಭ.

ಮನಮೋಹಿಸುವ

ಕುಸುಮ ಮಾಲೆ

ಬರೆದವರು:
ಶ್ರೀ ಸ. ನಾರಾಯಣ.

ಕುಸುಮ ಎಂದರೆ ಹೂವು. ಹಿರಿಯರು 'ಕುಸುಮ ಕೋಮಲ' ಎಂದರು. ಮೃದುತ್ವಕ್ಕೆ ಅಥವಾ ಸೂಕ್ಷ್ಮತೆಗೆ ಹೂವು ಹೆಸರಾದುದು. ಹಳಗನ್ನಡದಲ್ಲಿ ಹೂವಿಗೆ 'ಮಲರ್' ಎಂದು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಪುಷ್ಪ, ಕುಸುಮ, ಮಲರ್, ಹೂವು ಎಲ್ಲವೂ ಒಂದೇ ಅರ್ಥ ಕೊಡುವ ಪದಗಳು.

ಪ್ರಕೃತಿ ದೇವಿಯ ಮಡಿಲಲ್ಲಿ ತಾವಾಗಿಯೇ ರಂಜಿಸುವ ಹೂವುಗಳ ಸಂಖ್ಯೆ ಎಣಿಕೆಗೆ ಸಿಲುಕದಷ್ಟು. ಸಹಸ್ರ ಸಂಖ್ಯೆಯ ಹೂವುಗಳ ಆಕಾರ ಮನಮೋಹಕ ಸುಗಂಧ ಎಲ್ಲವೂ ಸಂಖ್ಯೆಗೆ ಅನುಗುಣವಾಗಿಯೇ ಇದೆ. ವಿವಿಧ ಆಕಾರ, ಬಣ್ಣ, ವಾಸನೆ ಇವು ಹೂಗಳ ವೈಶಿಷ್ಟ್ಯ. ಒಂದು ಗಿಡದ ಹೂವು ಮತ್ತೊಂದು ಗಿಡದ ಹೂವಿನ ಬಣ್ಣ, ಆಕಾರ, ವಾಸನೆಗಳಿಂದ ಭಿನ್ನವಾಗಿರುವಂತೆಯೇ ಒಂದೇ ಗಿಡದಲ್ಲಿಯೇ ಇದೇ ಬಗೆಯ ಬದಲಾವಣೆಗಳನ್ನು ಕಾಣಬಹುದು.

ಹೂಗಳ ವ್ಯಾಪ್ತಿ ಕಿರಿದಲ್ಲ, ಹಿರಿದು. ನೆಲದಲ್ಲೂ ಉಂಟು, ಜಲದಲ್ಲೂ ಉಂಟು. ಮರ, ಗಿಡ, ಬಳ್ಳಿ ಎಲ್ಲೆಡೆಯಲ್ಲಿಯೂ ಅಸಂಖ್ಯಾತ ಪುಷ್ಪಗಳನ್ನು ಕಾಣಬಹುದು. ವನಶ್ರೀಯ ಮಕುಟ ಮಣಿಯಂತೆ ಕಂಗೊಳಿಸುವ ಪುಷ್ಪಗಳನ್ನು ನೋಡುವುದೆಂದರೆ ಅಕ್ಷಿಕ್ಕೆ ಆನಂದ ಕಣ್ಣಿಗೆ ಹಬ್ಬ.

ಹೂಗಳ ಸೊಬಗನ್ನು ಕಂಡು ಆನಂದಿಸಲು ವಸಂತ ಸಕಾಲ. ಒಂದು ಮಾತಿನಿಂದ, ಒಂದು ಸಾಲಿನಿಂದ, ಒಂದು ನೋಟದಿಂದ ಒಂದು ಅತ್ಮದಿಂದ ಹೂವನ್ನು, ವರ್ಣಿಸಲು, ಹೂವಿನ ಅಂದ ಚೆಂದ-ಸುಗಂಧವನ್ನು ಅನುಭವಿಸಲು ಸಾಧ್ಯವಿಲ್ಲ. ಮಾಗಿಯ ದಿನಗಳು ಕಳೆದ ತರುವಾಯ ಗಿಡ, ಮರ ಬಳ್ಳಿಗಳು ಹಳೆಯ ಎಲೆಗಳನ್ನು ಕಳಚಿ ಹೊಸ ಚಿಗುರು-ಹೂವು ಹೊತ್ತು ಮೆರೆಯುವ ನೋಟ ಅವರ್ಣನೀಯ. ಹೂಗಳ ಗೊಂಚಲನ್ನು ನೋಡಿ ತಣಿಯದ ಹೃದಯವಿಲ್ಲ.

ಮರ ಗಿಡ ಬಳ್ಳಿಗಳ ಬೆಳವಣಿಗೆ ಮತ್ತು ಸಂತಾನಾಭಿವೃದ್ಧಿಯ ಕಾರ್ಯದಲ್ಲಿ ಹೂವಿನ ಪಾತ್ರ ಹಿರಿದು. ಕಾಯಿ ಹಣ್ಣು ಪಡೆಯುವ ಮುಂಚೆ ನಾವು ಹೂವನ್ನು ನೋಡುತ್ತೇವೆ. ಮೊದಲು ಪುಷ್ಪ ಅನಂತರ ಫಲ. ಫಲಕ್ಕಿಂತಲೂ ಪುಷ್ಪಕ್ಕೆ ಪ್ರಾಶಸ್ತ್ಯ ಹೆಚ್ಚೆಂದು ತೋರುತ್ತದೆ. ಪುಷ್ಪವಾಗಿ ಅರಳಿದ ನಂತರ ಕಾಯಿ-ಹಣ್ಣಾಗುವ ಹೂವುಗಳೇ ಬೇರೆ. ಪುಷ್ಪ ಪುಷ್ಪವಾಗಿಯೇ ಬೆಳೆದು ಅಳಿಯುವ ಹೂಗಳ ಸಮೂಹವೇ ಬೇರೆ.

ನಿಸರ್ಗ ದೇವಿಯ ಆಡೊಂಬಲದಲ್ಲಿ ತಾನಾಗಿಯೇ ಬೆಳೆದು ಜನ ಮನವನ್ನು ಆಕರ್ಷಿಸುವ ಹೂಗಳ ಸಂಖ್ಯೆ ಅಸಂಖ್ಯಾತ. ಒಂದೊಂದು ಹೂವಿಗೂ ಒಂದೊಂದು ಬಗೆಯ ಪ್ರತ್ಯೇಕ ವೈಶಿಷ್ಟ್ಯವಿದೆ ಸಹಜ ರೂಪಾಕಾರಗಂಧವಿದೆ. ಇದು ಪ್ರಕೃತಿಯ ಸಹಜ ಸ್ವರೂಪ, ಸೃಷ್ಟಿ.

ಪ್ರಕೃತಿಯಲ್ಲಿ ಎರಡು ಬಗೆಯ ಹೂಗಳನ್ನು ಕಾಣಬಹುದು. ಕಾಯಿ ಅಥವಾ ಹಣ್ಣಾಗುವ ಮೊದಲು ಗಿಡ ಮರ ಬಳ್ಳಿಗಳಲ್ಲಿ ಮೂಡುವ ಹೂವು ಒಂದು ಬಗೆಯದು. ಮತ್ತೊಂದು ಬಗೆಯ ಹೂವು ಗಿಡ ಮರ ಬಳ್ಳಿಗಳಲ್ಲಿ ಹುಟ್ಟಿದಂದಿನಿಂದ ಕೊನೆಯ ವರೆವಿಗೂ ಹೂವಾಗಿಯೇ ಉಳಿದಿರುವುದು.

ಒಂದು ಹೂವು ಪ್ರಪಂಚದ ಮೇಲೆ ಇರುವ ಕಾಲವೂ ಹೆಚ್ಚಲ್ಲ, ಯಾವುದೋ ಒಂದು ನಿರ್ದಿಷ್ಟವಾದ ಅವಧಿ, ಕೆಲವು ಗಂಟೆ, ಕೆಲವು ದಿನ ಅಥವಾ ಕೆಲವು ವಾರ ಮಾತ್ರ ಇದ್ದು ಮರೆಯಾಗುವುದೂ ಉಂಟು. ಒಟ್ಟಿನಲ್ಲಿ ಹೇಳುವುದಾದರೆ ಹೂಗಳ ಪಾತ್ರ ಪ್ರಕೃತಿಯಲ್ಲಿ ಎಷ್ಟು ಹಿರಿದೋ ಅಷ್ಟೇ ಕಿರಿದು ಅದರ ಜೀವಿತ ಅವಧಿ.

ಎಲ್ಲ ಹೆಬ್ಬಗಳೂ ವರ್ಷದ ಎಲ್ಲ ಕಾಲದಲ್ಲಿಯೂ ಇರುವುದಿಲ್ಲ. ನಿರ್ದಿಷ್ಟವಾದ ಅವಧಿಯಲ್ಲಿ ಗಿಡ ಮರ ಬಳ್ಳಿಗಳಲ್ಲಿ ಮೆರೆತು ಮರೆಯಾಗುತ್ತವೆ. ಪುಷ್ಪಗಳು ವರ್ಷದ ಯಾವುದೋ ಕೆಲವು ತಿಂಗಳುಗಳಲ್ಲಿ, ಯಾವುದೋ ತಿಂಗಳಿನ ಕೆಲ ದಿನಗಳಲ್ಲಿ ಇರುವುದುಂಟು. ವರ್ಷದ ಎಲ್ಲ ದಿನಗಳಲ್ಲೂ ಹೂವೂ ಇಲ್ಲವೆ ಇರುವುದಿಲ್ಲ ಎನ್ನುವುದಕ್ಕೆ ಅಪವಾದವಿಲ್ಲ. ಒಂದು ಮುಖ್ಯ ಸಂಗತಿ ಹೇಳುವುದಾದರೆ ವಸಂತ ಋತು 'ಹೂಗಳ ಸುಗ್ಗಿಯ ಕಾಲ' ಎಂದು ಹೇಳಬಹುದಾಗಿದೆ.

ಪ್ರಕೃತಿಯಲ್ಲಿ ನಾವು ಕಂಡಿರುವ, ಕೇಳಿರುವ, ಅರಿತಿರುವ ಪುಷ್ಪಗಳ ಸಂಖ್ಯೆ ಕಿರಿದೆಂದೇ ಹೇಳಬೇಕು. ನಮಗೆ ಅರಿಯದ ಹಾಗೆ ಬೆಟ್ಟಗುಡ್ಡ, ಕಾಡು-ಮೇಡು, ಹೊಲ-ನೆಲಗಳಲ್ಲಿ ಬೆಳೆದು ಬಾಳಿ ಕಾಣದೆ ಕಣ್ಮರೆಯಾಗಿರುವ, ಕಾಣದೆ ಉಳಿದಿರುವ ಪುಷ್ಪಗಳ ಸಂಖ್ಯೆಯೂ ಅಲ್ಪವಲ್ಲ.

ಪುಷ್ಪಕ್ಕೆ ಮನ ಆಕರ್ಷಿಸುವ ಗುಣವೂ ಇದೆ. ಅರಳಿಸುವ ಗುಣವೂ ಇದೆ. ಆನಂದ ನೀಡುವ ಶಕ್ತಿಯೂ ಇದೆ.

ನೂರಾರು ಬಣ್ಣ, ನೂರಾರು ಆಕಾರ ಅಷ್ಟೇ ಬಗೆಯ ವಾಸನೆ ನೀಡುವ ಎಣಿಕೆಗೆ ಮೀರಿದ ಹೂಗಳ ಸಂಖ್ಯೆ ಶಾಸ್ತ್ರಜ್ಞರ ಪ್ರಯೋಗ, ಸಂಶೋಧನೆಗಳಿಂದ ಇಮ್ಮಡಿಯಾಗುತ್ತಲಿದೆ. ಪುಷ್ಪಗಳ ಮಾಲೆಯನ್ನು ಧರಿಸಿರುವ ವನಶ್ರೀಯ ನೃತ್ಯ ನಡೆದಿದೆ.

ಹೂವು ಕಂಡು ಆನಂದಿಸದ ಹೃದಯವಿಲ್ಲ. ಹೂವಿನಿಂದ ಆಕರ್ಷಿಸಲ್ಪಡದ ಹೆಣ್ಣಿಲ್ಲ. ಹೂಗಳ ರೂಪ, ಕಂಪು ಜನಮನಕ್ಕೆ ಅಪ್ಯಾಯಮಾನವೆನ್ನುವುದರಲ್ಲಿ ಸಂದೇಹವಿಲ್ಲ. ಹೂವಿನ ತೋಟಗಳಿವೆ, ಉದ್ಯಾನವನಗಳಿವೆ. ಮನೆಯ ಅಂದವನ್ನು ಹೆಣ್ಣಿನಂತೆಯೇ ಹೂಗಿಡವೂ ಹೆಚ್ಚಿಸುತ್ತದೆ. ಮನೆಯ ಮುಂದೆ ಬೆಳೆಸಿರುವ ಹೂ ಗಿಡಗಳ ರೀತಿ ನೀತಿ ಮನೆಯೊಡತಿಯ ಅಭಿರುಚಿ, ಸಂಸ್ಕೃತಿಯನ್ನೂ ಸಾರಬಲ್ಲದು.

ಗಿಡದಲ್ಲಿ ಬೆಳೆದಿರುವ ಆಕರ್ಷಣೀಯವಾದ ಹೂವನ್ನು ಕಂಡು ಹಿಗ್ಗುತ್ತ... ಹೃದಯ, ಪಡೆಯಲು ಆಶಿಸುತ್ತದೆ. ... ನದಲ್ಲಿ ಆಸೆ ಮೂಡಿದೊಡನೆಯೇ ... ಮುಂದಾಗಿ ಅಂದವಾಗಿ ಬೆಳೆದು ನೋ... ದವರ ಮನತಣಿಸುವ ಅಂದವಾದ ... ಷ್ಪವನ್ನು ಗಿಡದಿಂದ ಬೇರ್ಪಡಿಸುತ್ತ... ಕೆಲ ನಿಮಿಷಗಳಲ್ಲಿಯೇ ಹೊ... ಬಾಡಿ ಹೋಗುತ್ತದೆ. ಮರುಕ್ಷಣದ... ಯೇ ಹೂವು ಬಾಡಿತೆಂದು ಬೀದಿಗೆ ... ಯುತ್ತೇವೆ. ಬಣ್ಣ ಅಂದ ಆಕಾರವಿಲ್ಲ... ಹೂವನ್ನು ಕಂಡರೂ ಅದರ ಗೊಡವೆ... ಹೋಗುವುದಿಲ್ಲ. ಹೂವನ್ನು ಗಿಡದಿಂ... ಬೇರ್ಪಡಿಸಿ ಬಾಡಿಸಿ ಬೀದಿಗೆ ಎಸೆಯು... ದಕ್ಕಿಂತಲೂ ಗಿಡದಲ್ಲಿರುವುದನ್ನೇ ಕಂಡು ಆನಂದಿಸುವ ಸಂಸ್ಕೃತಿ ಬೆಳೆಯಬೇಕು.

ಸುಗಂಧ ಬೀರುವ ಹೂಗಳೂ ಇವೆ ದುರ್ಗಂಧ ಪುಷ್ಪಗಳೂ ಇವೆ. ನಿರ್ಗಂ... ಕುಸುಮಗಳೂ ಸಾಕಷ್ಟಿವೆ. ಪ್ರಕೃತಿಮಾತೆ ಎಲ್ಲವನ್ನೂ ತನ್ನ ಮಡಿಲಲ್ಲಿ ಇಟ್ಟುಕೊಂಡಿದ್ದಾಳೆ. ಅತಿ ಸೂಕ್ಷ್ಮ ಪ್ರಕೃತಿ... ಹೂಗಳನ್ನು ಹಾಳು ಮಾಡದ ಅಭಿರು... ಬೆಳೆಯಬೇಕು. ನಮ್ಮಲ್ಲಿ-ನಿಮ್ಮಲ್ಲಿ.

ಹೂವು ದೇವ ದೇವನ ಅಡಿಯನ್ನು ಸೇರುತ್ತದೆ. ಹೆಣ್ಣಿನ ಮುಡಿಯನ್ನೂ ಅಲಂಕರಿಸುತ್ತದೆ. ಹೂಗಳ ಮಾಲೆ ಇಲ್ಲದ ... ದುವೆ ಇಲ್ಲ, ಸಭೆಯೂ ಇಲ್ಲ ಸಮಾರಂಭವೂ ಇಲ್ಲ. ಪುಷ್ಪಗಳ ಬಳಕೆ ಶುಭ-ಸಂತೋಷ ಸಮಾರಂಭಗಳಲ್ಲಿ ವಿಶೇಷ ... ಬಂದು ಗಣಾನೀಯ. ಹೆಣ್ಣಿನ ಮುಡಿ... ಹೂವು ಕಣ್ಣಿಗೆ ಹಬ್ಬ. ದೇವ ದೇವನ... ಯ ಹೂವು ಮಹಾ ಪ್ರಸಾದ.

ಶ್ರಾವಣ ಮಾಸದಲ್ಲಿ ಮಲ್ಲಿಗೆಯ ಮೊ... ಗ್ಗಿನ ಜಡೆ ಹಣಿಸಿಕೊಂಡು ಬೀದಿಗಳ... ಸಂಭ್ರಮದಿಂದ ತಿರುಗುವ ಹೆಣ್ಣು ಮಕ್ಕಳನ್ನು ಕಾಣಬಹುದು. 'ಹೂವಿನ ದಂಡೆ ಹೆಣ್ಣಿನ ಮುಡಿಗೊಂದು ಆಭರಣ' ಎನ್ನುವ ಮಾತನ್ನು ಹಿರಿಯ ಮುತ್ತೈದೆಯ... ಬಾಯಿಂದಲೇ ಕೇಳಬಹುದು.

ಕೇದಿಗೆ ಹೂವು ಮುಳ್ಳಿನ ಪೊದೆಯನ್ನಲ್ಲಿ ಬೆಳೆಯುತ್ತದೆ. ಮುಳ್ಳಿನಿಂದ ಕೂಡಿರುವುದು ನಿಜ. ಆದರೆ ಅದರ ಕಂಪು ಮನಮೋಹಕ. ನೀಳವಾದ ಈ ಹೂವು ಹ... ದಿನ ಅನೇಕ ಮಹಿಳೆಯರಿಗೆ ರಂಜಿಸದಿ... ಬಹುದು. ಆದರೆ ಅದನ್ನು ಹಿಂದಿನವರ...

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

- ● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ
- ● ಮೆಳ್ಳಗಣ್ಣಿನ ದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ.

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು— ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

...ವಾಗಿ ಮೆಚ್ಚಿದ್ದರು ಎಂದು ಹೇಳಬಹುದು. ಈ ಹೂವುಗಳ ಪದರಿನಲ್ಲಿ ಹಾವುಗಳಂತೂ ಎಕ್ಷೇಚ್ಛವಾಗಿರುತ್ತವೆ. ಮುಳ್ಳಿನ ಮತ್ತೊಂದು ಜನಪ್ರಿಯ ವಿಶ್ವವಿಖ್ಯಾತ ಹೂವೆಂದರೆ ಗುಲಾಬಿ. ಇಂಗ್ಲೀಷಿನ 'ರೋಜ್' (Rose). ಇದರ ಕೀರ್ತಿ ವಿಶ್ವವ್ಯಾಪಕ. ದಿ. ನೆಹರೂರವರಿಗಂತೂ ಗುಲಾಬಿ ಎಂದರೆ ಪಂಚಪ್ರಾಣ. ನಿತ್ಯವೂ ಒಂದು ಹೂವು ಅವರ ಕೋಟನ್ನು ಅಲಂಕರಿಸಿ ಅವರ ಮುಗುಳ್ನಗೆಯೊಂದಿಗೆ ಸ್ಪರ್ಧಿಸುತ್ತಿತ್ತು.

...ಕೆಂಪು ಗುಲಾಬಿ, ಬಿಳಿ ಗುಲಾಬಿ ಚಿಹ್ನೆಗಳನ್ನು ಧರಿಸಿದ ರಾಜಮನೆತನಗಳೆರಡು ಇಂಗ್ಲೇಡಿನಲ್ಲಿ 'ಗುಲಾಬಿ ಯುದ್ಧ' ನಡೆಸಿದವಂತೆ, ಅದೂ ಮೂವತ್ತು ವರ್ಷ.

ನಾರದರು ತಂದಿತ್ತ ಪಾರಿಜಾತ ಪುಷ್ಪ ದೊಡ್ಡ ಹಗರಣವನ್ನುಂಟುಮಾಡಿತು. ಶ್ರೀಕೃಷ್ಣ ದೇವೇಂದ್ರನೊಂದಿಗೆ ಯುದ್ಧ ಮಾಡಿ ತನ್ನ ಪ್ರೀತಿಯ ಮಡದಿ ಸತ್ಯಭಾಮೆಗೆ ಪಾರಿಜಾತ ಪುಷ್ಪ ತಂದೊಪ್ಪಿಸಬೇಕಾಯಿತು. ಸೌಗಂಧಿಕಾ ಪುಷ್ಪ ತಂದು ದ್ರೌಪದಿಯ ಮನ ಸಂತೋಷಗೊಳಿಸಲು ಭೀಮಸೇನ ನಡೆಸಿದ ಸಾಹಸ ಅಲ್ಪವಲ್ಲ. ಹೀಗೆ ಹೂವಿನ ಕಥೆಗಳು ಹಲವಿವೆ.

ಕಮಲ ಹೂಗಳಲ್ಲೆಲ್ಲ ಶ್ರೇಷ್ಠವಾದುದು. ದೇವತೆಗಳಿಗೆಲ್ಲ ಪ್ರಿಯವಾದುದು. ಇದರ ಹುಟ್ಟಿದುದು ಕೆಸರಿನಲ್ಲಿ, ಕೊಳಚೆಯಲ್ಲಿ ಇದಕ್ಕೆ ಪದ್ಮ, ಸರೋಜ, ಜಲಜ, ಪಂಕಜ ಎಂಬ ಅನೇಕ ಹೆಸರುಗಳಿವೆ. ತಾವರೆಯೂ ಇದೇ ಜಾತಿಗೆ ಸೇರಿದ ಹೂವು. ಕೆಂಪು ತಾವರೆಯಲ್ಲಿ ಎರಡು ಬಗೆ. ಒಂದು ಕೆಂದಾವರೆ ಮತ್ತೊಂದು ಬಿಳಿಯ ತಾವರೆ. ಈ ಹೂವಿನ ಸೊಬಗನ್ನು ಇಂದಿಗೂ ಸವಿಯಬಹುದು. ತಾವರೆ ಸೂರ್ಯನಿರುವಾಗ ಮಾತ್ರ ಅರಳಿದ್ದು ಸೂರ್ಯಾಸ್ತವಾದೊಡನೆಯೇ ಮುದುಡುತ್ತದೆ. ನೈದಿಲೆಯೂ ತಾವರೆಯಂತೆ ನೀರಿನಲ್ಲಿಯೇ ಇರುವ ಹೂವು.

ಮಲ್ಲಿಗೆ, ಜಾಜಿ, ಸಂಪಿಗೆಯ ಬಣ್ಣ ಮತ್ತು ಕಂಪು ಮನೋಲ್ಲಾಸಕರವಾದುದು. ಒಂದೊಂದು ಹೂವಿನಲ್ಲಿಯೂ ಅನೇಕ ಜಾತಿಗಳಿವೆ.

ದಾಸವಾಳ, ಕಣಗಿಲೆ, ಸೇವಂತಿಗೆ, ಇರುವಂತಿಗೆ ಮೊದಲಾದ ನಾನಾ ಜಾತಿಯ ಹೂಗಳ ಆಕಾರ, ವರ್ಣ, ಕಂಪು ಬೇರೆ ಬೇರೆಯಾದರೂ ಆಕರ್ಷಣೀಯ ಎನ್ನುವುದು ಗಮನಾರ್ಹ.

ಅರಳಿದ ಹೂಗಳಲ್ಲಿ ಅಡಗಿರುವ ಮಧುವನ್ನು ಸಂಗ್ರಹಿಸಿ ಶೇಖರಿಸುವುದು ದುಂಬಿಗಳ ವೃತ್ತಿ. ಒಂದು ದುಂಬಿ ತನ್ನ ಜೀವನದಲ್ಲಿ ಅದೆಷ್ಟು ಹೂಗಳನ್ನು ಸಂದರ್ಶಿಸಿರುತ್ತದೆಯೋ ಅದೆಷ್ಟು ಹೂಗಳ ಮಕರಂದವನ್ನು ಹೀರಿರುತ್ತದೆಯೋ ತಿಳಿಯದು. ಹೂವಿನೊಂದಿಗೆ ನಿಕಟ ಸಂಪರ್ಕ ಹೊಂದಿರುವ ದುಂಬಿಯ ಬಾಳೇ ಧನ್ಯ!

ಸುರಗಿ, ಬೇವು ಮೊದಲಾದ ಹೂಗಳ ಕಂಪೇ ಒಂದು ವಿಧ. ಕನಕಾಂಬರ, ಸ್ಫಟಿಕ ಹೂಗಳ ಬಣ್ಣ ವೈವಿಧ್ಯಪೂರ್ಣ. ತೋಟ, ಉದ್ಯಾನವನ, ಕಾಡುಗಳಲ್ಲಿ ನಾಡುಗಳಲ್ಲಿ ಹೂವನ್ನು ಹೊತ್ತ ಮರಗಿಡ ಬಳ್ಳಿಗಳ ಸಾಲನ್ನೇ ಕಾಣಬಹುದು. ಕಾಫಿಯ ತೋಟಗಳ ಹೂವಿನ ಗೊಂಚಲು ಅವುಗಳ ಮನೋಹರ ತೂಗಾಟದ ದೃಶ್ಯವನ್ನು ಕಂಡು ಮನದಣಿಯದವರಾರು? ತಾಳೆ, ತೆಂಗು, ಅಡಿಕೆಗಳಲ್ಲಿ ಹೂ ಮುಗಿಲಲ್ಲಿ ಕಂಡು ಕಂಪು ಬೀರುತ್ತಿರುತ್ತದೆ. ಪ್ರಕೃತಿಯಲ್ಲಿ ಹತ್ತು ಬಗೆಯ ನೋಟ. ಯಾವುದು ಬೇಕು? ಯಾವುದು ಬೇಡ? ಎಲ್ಲವೂ ಬೇಕು ನಿಸ್ಸಂದೇಹವಾಗಿ.

ಹೂಗಳ ಬಣ್ಣ, ಸುಗಂಧವನ್ನು ಸಂಗ್ರಹಿಸುವ ಕಾರ್ಯ ಬಹುದಿನದಿಂದ ಬೆಳೆದು ಬಂದಿದೆ. ಸುಗಂಧದೆಣ್ಣೆ, ಊದುಬತ್ತಿ, ಬಣ್ಣಗಳ ಬೆಳವಣಿಗೆಯೂ ನಡೆದಿದೆ. ಕುಸುಮದ ಕಂಪು ವ್ಯಾಪಿಸಿದೆ. ರಾಸಾಯನಿಕ ವಸ್ತುಗಳನ್ನು ನೀರಲ್ಲಿ ಬೆರೆಸಿ ಅದರಲ್ಲಿ ಹೂವನ್ನಿಟ್ಟು ಹಲವರ್ಷಗಳ ವರೆಗೆ ಕೆಡದಂತೆ ಕಾಪಾಡಿರುವುದು ಕಾಣಬರುತ್ತದೆ. ಔಷಧಿಗಳ ತಯಾರಿಕೆಯಲ್ಲಿಯೂ ಪುಷ್ಪಗಳ ಪಾತ್ರ ಹಿರಿದು.

ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು. ಎಂಬ ಮಾತು ಹೂವುಗಳಿಗೆ ಸರಿಯಾಗಿ ಒಪ್ಪುತ್ತದೆ.

ಹೂವುಗಳ ಸಂದೇಶವಿಷ್ಟೆ. ಅಲ್ಪಕಾಲ ಸದುಪಯೋಗವಾಗಲಿ. ಬಾಳು ಪರರ ಸೇವೆಗೆ ಮೀಸಲಾಗಿರಲಿ. ನಿಮಗಾಗಿ ಬದುಕಬೇಡಿ ಲೋಕಕ್ಕಾಗಿ ಬದುಕಿ—ಎಂದು. ಅರಳುವ ಹೂವಿಗೆ ಮಾನವನ ಮನ ಅರಳಿಸುವ ಶಕ್ತಿ ಇದೆ ಎಂಬುದು ಸಹಜ. ಆದರೆ ಹೂವಿನ ಸಂದೇಶ ಜನಮನ ಮುಟ್ಟಬೇಕಷ್ಟೆ.

ಶಿಲಾಯುಗದ ಆಭರಣಗಳಿಗೂ ಗಿರಾಕಿ ಹೆಚ್ಚಿದೆ

(ನಾಲ್ಕನೇ ಪುಟದಿಂದ)

ರೆಯಲಾದ ಎರಡನೆಯ ಅಂಬರ್ ಕಾರ್ಖಾನೆಯು ಇಡೀ ಜಗತ್ತಿಗೇ ಅಂಬರ್ ಆಭರಣಗಳನ್ನು ರಫ್ತು ಮಾಡುತ್ತಿದೆ. ಹಿಂದೆ ಕೋನಿಗ್ಸ್ ಬರ್ಗನಲ್ಲಿ ಕೆಲಸ ಮಾಡಿದ ಅನೇಕ ಪರಿಣತರು ಇಂದು ಹ್ಯಾಂಬರ್ಗ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.

ಅಂಬರ್ ಕೆತ್ತನೆ ಕೆಲಸ ಹುಡುಗಾಟವಲ್ಲ. ಅದನ್ನು ವಿಚಕ್ಷಣೆಯಿಂದ ಸಾಧಿಸಲು ಹಲವಾರು ವರ್ಷಗಳ ಅಪಾರ ಸಾಧನೆ ಅತ್ಯಾವಶ್ಯಕ. ಇಪ್ಪತ್ತು ಅಥವಾ ಅದಕ್ಕೂ ಹೆಚ್ಚು ಮಿಲಿಯನ್ ಸಂವತ್ಸರಗಳಿಂದ ಭೂಮಿಯಲ್ಲಿದ್ದ ಪ್ರಾಣಿ ಅಥವಾ ಸಸ್ಯ ವಸ್ತುಗಳಿಂದ ಅಂಬರ್ ಮಿಳಿತಗೊಂಡಿದ್ದರೆ, ಅಂತಹ ಅಂಬರ್‌ನ ಬೆಲೆಯು ಇನ್ನೂ ಹೆಚ್ಚಾಗಿರುವುದು.

ಅಂಬರ್ ನೆಕ್ಲೇಸುಗಳು, ಪಿನ್‌ಗಳು, ತೋಳಪಟ್ಟಿ ಮುಂತಾದವು ಅತ್ಯಂತ ಜನಪ್ರಿಯವಾಗಿವೆ. ಸಾಧಾರಣವಾಗಿ ಎಲ್ಲಾ ಜವಾಹಿರಿ ಅಂಗಡಿಗಳಲ್ಲಿಯೂ ಇವುಗಳನ್ನು ಕಾಣಬಹುದು. ವಿದೇಶಗಳಿಂದ ಬರುವ ಪ್ರವಾಸಿಗಳು "ಜರ್ಮನ್ ಚಿನ್ನದ" ಈ ಒಡವೆಗಳನ್ನು ತೆಗೆದು ಕೊಂಡೊಯ್ಯದೇ ಇರುವುದಿಲ್ಲ. ಏಷ್ಯಾ, ಆಫ್ರಿಕಾ ದೇಶಗಳಲ್ಲಿ ಅಂಬರ್ ಹಾರಗಳಿಗೆ ಅತಿ ಹೆಚ್ಚಿನ ಗಿರಾಕಿಯಿದೆ. ಧಾರ್ಮಿಕ ಶ್ರದ್ಧೆಯುಳ್ಳ ಮುಸಲ್ಮಾನರು ಅಂಬರ್ ಮಣಿಗಳನ್ನು ಜಪಮಾಲೆಗೆ ಉಪಯೋಗಿಸುತ್ತಾರೆ.

ರಾಷ್ಟ್ರೀಯ ರಕ್ಷಣಾ ಚಿನ್ನದ ಬಾಂಡುಗಳು.

ಸರಕಾರ ನಿಮ್ಮ ಚಿನ್ನ ಮಾರಬೇಕೆನ್ನುವುದಿಲ್ಲ. ಚಿನ್ನವನ್ನು ದಾನವಾಗಿ ಕೊಡಬೇಕೆಂದೂ, ಕೇಳುವುದಿಲ್ಲ. ಪ್ರಸ್ತುತ ರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ನಿಮ್ಮ ಚಿನ್ನವನ್ನು ಸರಕಾರಕ್ಕೆ ಸಾಲವಾಗಿ ಕೊಡಿರಿ. 15 ವರ್ಷಗಳ ನಂತರ ಪರಿಶುದ್ಧ ಚಿನ್ನ ನಿಮಗೆ ಹಿಂದಕ್ಕೆ ಸಿಗುತ್ತದೆ. ನೀವು ಕೊಡುವ ಚಿನ್ನಕ್ಕೆ ಪ್ರತಿ 10 ಗ್ರಾಂಗೆ ರೂಪಾಯಿ ಎರಡರಂತೆ ವಾರ್ಷಿಕ ಬಡ್ಡಿ ಕೊಡಲಾಗುವುದು. ಅದಲ್ಲದೆ ಆಭರಣ ಪ್ರತಿ 10 ಗ್ರಾಮಿಗೆ ರೂಪಾಯಿ ಮೂರರಂತೆ ಆಭರಣ ತಯಾರಿಯ ಪ್ರತಿಫಲ ಕೊಡಲಾಗುವುದು. ಚಿನ್ನ ಬಾಂಡುಗಳಿಗೆ ನೀವು ಸಂಪಾದಿಸುವ ಹಣ ಗರಮಾನ ತೆರಿಗೆಯಿಂದ ವಿಮುಕ್ತವಾಗುತ್ತದೆ. ಚಿನ್ನದ ಬಾಂಡುಗಳ ಬಗ್ಗೆ ಸಂಪತ್ತು ತೆರಿಗೆ, ದಾನ ತೆರಿಗೆ ವಗೈರೆ ತೆರಿಗೆಗಳಿಂದಲೂ ರಿಯಾಯತಿ ಇದೆ. ನೀವು ಬಾಂಡುಗಳಿಗಾಗಿ ನೀಡುವ ಚಿನ್ನ ನಿಮ್ಮ ವಶ ಹೇಗೆ ಬಂತೆಂಬ ಬಗ್ಗೆ ಏನೂ ಪ್ರಶ್ನೆ ಕೇಳಲಾಗುವುದಿಲ್ಲ. ಸ್ವರ್ಣ ನಿಯಂತ್ರಣ ಆಜ್ಞೆಯ ಮೇರೆಗೆ ಯಾವ ಕ್ರಮಗಳನ್ನೂ ಕೈಗೊಳ್ಳಲಾಗುವುದಿಲ್ಲ.

ಚಿನ್ನದ ಬಾಂಡುಗಳಿಗಾಗಿ ಚಿನ್ನವನ್ನು ಉಡುಪಿಯಲ್ಲಿರುವ ಸ್ಟೇಟ್ ಬ್ಯಾಂಕ್ ಓಫ್ ಇಂಡಿಯಾದ ಶಾಖೆಯಲ್ಲಿ ಸ್ವೀಕರಿಸಿ ರಶೀದಿ ನೀಡಲ್ಪಡುವುದು. ಅನಂತರ ನಮ್ಮ ಚಿನ್ನವು ರಿಸರ್ವ್ ಬೇಂಕಿಗೆ ರವಾನಿಸಲ್ಪಟ್ಟು ಅಲ್ಲಿಂದ ನಿಮಗೆ ಚಿನ್ನದ ಬಾಂಡು ಕಳುಹಿಸಲಾಗುವುದು. ನಿಮ್ಮ ಮನೆ ಬಾಗಿಲಿನಲ್ಲಿಯೇ ಸ್ಟೇಟ್ ಬೇಂಕಿನ ಸಂಚಾರಿ ಶಾಖೆಯು ಬಂದು ಚಿನ್ನವನ್ನು ಸ್ವೀಕರಿಸಿ ರಶೀದಿ ನೀಡುವ ವ್ಯವಸ್ಥೆಯೂ ಇದೆ.

ಮೈಸೂರು ರಾಜ್ಯದಲ್ಲಿ ಒಟ್ಟಿಗೆ ರೂ. 25 ಕೋಟಿ ಬೆಲೆಬಾಳುವ ಚಿನ್ನವಾದರೂ ಚಿನ್ನದ ಬಾಂಡುಗಳಿಗೆ ನೀಡಬೇಕೆಂಬ ಗುರಿಯನ್ನು ರಾಜ್ಯ ಸರಕಾರದವರು ಇಟ್ಟು ಕೊಂಡಿದ್ದಾರೆ. ಈ ಬಾಬಿನಲ್ಲಿ ಸಾರ್ವಜನಿಕರ ಸಹಕಾರವನ್ನು ಪಡೆಯುವರೇ ತಾ. 13—12—65ರಂದು ಉಡುಪಿ ತಾಲೂಕು ಕಛೇರಿಯಲ್ಲಿ ಒಂದು ಸಭೆ ಜರಗಿತು. ಜನತೆ ಉತ್ಸಾಹದಿಂದ ಮುಂದೆ ಬಂದು ಅತೀ ಹೆಚ್ಚು ಪ್ರಮಾಣದಲ್ಲಿ ತಮ್ಮ ಚಿನ್ನವನ್ನು ಚಿನ್ನದ ಬಾಂಡುಗಳಿಗೆ ನೀಡಬೇಕಾಗಿ ವಿನಂತಿ. ಚಿನ್ನವನ್ನು ನೀಡುವವರು ದಯಮಾಡಿ ತಮ್ಮ ಚಿನ್ನವನ್ನು ಉಡುಪಿ ಸ್ಟೇಟ್ ಬ್ಯಾಂಕಿನಲ್ಲಿ ಹಾಜರು ಪಡಿಸಬಹುದು ಅಥವಾ ಉಡುಪಿ ತಾಲೂಕು ತಹಶಿಲ್ದಾರರಿಗೆ ತಿಳಿಸಿದಲ್ಲಿ ಚಿನ್ನವನ್ನು ಸ್ಟೇಟ್ ಬ್ಯಾಂಕಿನ ಸಂಚಾರ ಶಾಖೆಯ ಮುಖಾಂತರ ಸ್ವೀಕರಿಸಿ ರಶೀದಿ ನೀಡುವ ವ್ಯವಸ್ಥೆ ಮಾಡುವರು.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಎಲ್ಲೆಲ್ಲಿ ಏನೇನು?

ಹೊಸ ವರ್ಷದ ಸನ್ಮಾನ ಸಮಾರಂಭ

ಉಡುಪಿ, ಹೊಸ ವರ್ಷದ ಆರಂಭದ ದಿನದಂದು ಹಿರಿಯ ಗಣ್ಯ ವ್ಯಕ್ತಿಗಳನ್ನು ಗೌರವಿಸಿ ಅವರಿಂದ ನೂತನ ವರ್ಷದ ಸಂದೇಶ ಪಡೆಯುವ ಸಂಪ್ರದಾಯದಂತೆ ಈ ವರ್ಷವೂ ಎಕೆಡೆಮಿ ಆಫ್ ಜನರಲ್ ಎಜುಕೇಶನ್ ಮತ್ತು ಉಡುಪಿ ರೋಟರಿ ಕ್ಲಬ್‌ನವರು ತಾ. 1ರಂದು ಕಲ್ಪನಾ ಥಿಯೇಟರಿನಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ಡಾ| ಕೆ. ಸಿ. ನಾಯಕ್, ಬೆಂಗಳೂರು; ಶ್ರೀ ಬಿ. ಶಿವರಾವ್ ನವದೆಹಲಿ; ಶ್ರೀ ಎಫ್. ಎಕ್ಸ್. ಡಿ. ಪಿಂಟೋ, ಮಂಗಳೂರು; ಡಾ| ಎ. ಎಸ್. ಆಡ್ಯೆ, ಸುರತ್ಕಲ್ ಅವರನ್ನು ಅವರು ಸಲ್ಲಿಸಿದ ಸೇವೆಗಾಗಿ ಗೌರವಿಸಿ ಸನ್ಮಾನಿಸಲಾಯಿತು. ಉಪಾಹಾರವಾದ ನಂತರ ಡಾ| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣಮಾಡಿ ಈ ಸತ್ಸಂಪ್ರದಾಯದ ವಿವರ ಔಚಿತ್ಯಗಳನ್ನು ತಿಳಿಸಿದರು. ಶ್ರೀಗಳಾದ ಪಿ. ಶ್ರೀಪತಿ ಆಚಾರ್, ಎ. ಜೆ. ಅಲ್ಸೆ, ಟಿ. ಎ. ಪೈ, ಟಿ. ರಮೇಶ ಪೈ ಇವರು ಒಬ್ಬೊಬ್ಬ ಅತಿಥಿಯ ಸೇವಾಕಾರ್ಯಗಳನ್ನು ಓದಿಹೇಳಿದರು. ಡಾ|| ಪೈಗಳು ಹೊಸ ವರ್ಷದ ಪ್ರಶಸ್ತಿ ಪತ್ರಗಳನ್ನು ವಿತರಣೆ ಮಾಡಿದರು. ಅತಿಥಿಗಳು ತಮ್ಮ ಸಂದೇಶಗಳನ್ನು ಓದಿ ಹೇಳಿದರು. (ಶ್ರೀ ಬಿ. ಶಿವರಾಯರು ಅಸೌಖ್ಯದ ನಿಮಿತ್ತ ಬಂದಿರಲಿಲ್ಲ.) ಅಂತ್ಯದಲ್ಲಿ ಶ್ರೀ ಕೆ. ಕೆ. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಉಡುಪಿಯಲ್ಲಿ ಕೇರಳ ಸಮಾಜ

ಉಡುಪಿ ಡಾನ್‌ಬೋಸ್ಕೋ ಕ್ಲಬ್ಬಿನಲ್ಲಿ ಕೇರಳ ಸಮಾಜದ ಉದ್ಘಾಟನಾ ಸಮಾರಂಭವು ಡಾ| ಟಿ. ಮಾಧವ ಪೈಗಳಿಂದ ಕಳೆದ 19ರಂದು ನೆರವೇರಿತು. ಆರಂಭದಲ್ಲಿ ಸಮಾಜದ ಅಧ್ಯಕ್ಷ ಶ್ರೀ ಟಿ. ವಿ. ಪಿ. ರಾಮನ್‌ರವರು ಸ್ವಾಗತಿಸುತ್ತಾ ಸಮಾಜ ಸ್ಥಾಪನೆಯ ಉದ್ದೇಶವನ್ನು ವಿವರಿಸಿದರು. ಶ್ರೀ ಟಿ. ಕರುಣಾಕರನ್‌ರವರು ಸಂದೇಶ ವಾಚನಗೈದರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರದ ಅಸಿಸ್ಟೆಂಟ್ ಕಮಿಶನರ್ ಶ್ರೀ ಜೆ. ಅಲೆಕ್ಸಾಂಡರ್‌ರವರು ವಹಿಸಿದ್ದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಉಣ್ಣಿಯವರು ವಂದಿಯೊಪ್ಪಿಸಿದರು.

ಅಖಿಲ ಕರ್ನಾಟಕ ಸಾಹಿತ್ಯ ಸ್ಪರ್ಧೆ ೧೯೬೬

ಬೆಂಗಳೂರಿನ ಮಲ್ಲೇಶ್ವರದ ಬಡಾವಣೆಯಲ್ಲಿರುವ ಶ್ರೀ ಸರಸ್ವತಿ ಕಲಾನಿಕೇತನದ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಸಣ್ಣ ಕಥೆ, ಕವನ ಮತ್ತು ಪ್ರಬಂಧದ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಕುಂದಾಪುರ

ಮುನ್ಸೀಫ್ ಕೋರ್ಟಿನಲ್ಲಿ

O. S. 513/1965.

ವಾದಿ. P. ರಾಜಗೋಪಾಲ ರಾವ್

ಪ್ರತಿವಾದಿದು. 1. ಅಲೆಕ್ಸ್ ಲುವಿಸ್ 2. ಗುಸ್ತಿವ್ ಲುವಿಸ್ 3. ಸಂತಾನ ಲುವಿಸ್ 4. ಲೋರಿಯೊ ಲುವಿಸ್

ಉಪ್ಪಿ ತಾಲ್ಕು ಬಾಳಕುದ್ರು ಗ್ರಾಮದಲ್ಲಿದ್ದ ಬೆಂಜಿಮನ್ ಲುವಿಸರ ಮಗ ಗುಸ್ತಿವ್ ಲುವಿಸರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಪ್ರತಿವಾದಿರಿಂದ ವಾದಿಗೆ ಬರತಕ್ಕ ಕಳೆದ ಪ್ಲವ ಸಂವತ್ಸರದ ಆದಿಯಾಗಿ ಕ್ರೋಧಿ ಸಂವತ್ಸರದ ಅಂತ್ಯದ ವರೆಗಿನ ಮೂಲಗೇಣಿ ಗೇಣಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆಯು ತಾ. 18.1.1966ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಗೆ ಇಟ್ಟಿರುತ್ತದೆ. ಆ ಕುರಿತು ಯೇನಾದ್ರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ 11 ಗಂಟೆಗೆ ಹಾಜ್ರಾಗಿ ಜಾಹೀರುಮಾಡಿ ಕೊಳ್ಳತಕ್ಕದ್ದು, ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿಯದೆ.

(Sd.) **N. S. Parameshwaraih**
Advocate for Plaintiff.

Date 30—12—1965
Coondapoor

ಪ್ರಬಂಧದ ವಿಶಯ "ಸಾಹಿತ್ಯ ಮತ್ತು ರಂಜನೆ"

ಪ್ರಬಂಧವು ನಾಲ್ಕು ಪುಟಗಳಿಗೂ ಕಥೆಯು ಒಂದು ಪುಟಕ್ಕೂ ಕಥೆಯು ಎಂಟು ಪುಟಗಳಿಗೂ ಮೀರದಂತಿರಬೇಕು.

ಪ್ರವೇಶ ಧರ:— ಪ್ರತಿಯೊಂದು ವಿಭಾಗದ ಪ್ರತಿ ಕೃತಿಗೂ ಒಂದು ರೂಪಾಯಿ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಕಡೆಯ ದಿನಾಂಕ ೩೧-೧-೬೬.

ಪೂರ್ಣ ವಿವರಗಳಿಗೆ ಶ್ರೀಮತಿ ಕಮಲಾಬಾಯಿ, ಶ್ರೀ ಸರಸ್ವತಿ ಕಲಾನಿಕೇತನ, ೧೬೦, ೧೬ನೇ ಅಡ್ಡರಸ್ತೆ (ಪೂರ್ವದ ಕೊನೆ) ಮಲ್ಲೇಶ್ವರ, ಬೆಂಗಳೂರು 2 ಇವರಿಗೆ ಬರೆದು ಪಡೆಯ ಬಹುದು.

ಅಂಗಹೀನ ಜವಾನನಿಗೆ ಲಯನ್ಸ್ ಕ್ಲಬ್ಬಿನ ನೆರವು

ಕಳೆದ ತಾರೀಕು 22ರಂದು, ಉಡುಪಿ ಲಯನ್ಸ್ ಕ್ಲಬ್ಬಿನವರು, ಶ್ರೀ ಯು. ಕೆ. ಕಿಣಿಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಕಳೆದ ಪಾಕ್ ಘರ್ಷಣೆಯಲ್ಲಿ ಹೋರಾಡುತ್ತಿದ್ದ ಉಡುಪಿಯವರೇ ಆದ ಶ್ರೀ ದೇವದಾಸ ನಾಯಕರು ಕಿವಿ ಕೈಗಳಲ್ಲಿ ಅಂಗವಿಕಲರಾಗಿದ್ದು, ಅವರಿಗೊಂದು ನಿಧಿಯನ್ನಿತ್ತು ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಅವರ ಸಹೋದರ ಕೇಪ್ಟನ್ ನಾಯಕ್ ಹಾಗೂ ಪೈಲಟ್ ಆಫೀಸರ್ ಆಲ್ವಿನ್ ರೇಗೋ ಹಾಗೂ ಮೇಜರ್ ಚಂದ್ರಪಾಲ್‌ರವರು ಭಾಗವಹಿಸಿದ್ದರು. ಕೇಪ್ಟನ್ ನಾಯಕ್ ಹಾಗೂ ಪೈಲಟ್ ಆಫೀಸರ್ ಆಲ್ವಿನ್ ರಿಗೋರವರು ತಮ್ಮ ಅನುಭವಗಳನ್ನು ಹೇಳಿದರು. ಆರಂಭದಲ್ಲಿ ಶ್ರೀ ಎಸ್. ಎಸ್. ಕಾಮತರು ಜವಾನರ ಪರಿಚಯ ಮಾಡಿಕೊಟ್ಟರು. ಡಾ| ಪಿ. ಆರ್. ನಾಯಕ್ ಮತ್ತು ಶ್ರೀ ಬಿ ಎನ್. ಆಚಾರ್ಯರು ಸಭಿಕರ ಪರವಾಗಿ ಜವಾನರನ್ನು ಅಭಿನಂದಿಸಿದರು.

ಮೇಜರ್ ಚಂದ್ರಪಾಲ್‌ರವರು ಮಾತಾಡುತ್ತಾ ಜವಾನರಿಗೆ ಈ ರೀತಿ ಪ್ರೀತಿ ಗೌರವವನ್ನು ತೋರಿಸುವುದರಿಂದ ಅವರಿಗೆ ಸ್ಫೂರ್ತಿ, ಆತ್ಮ ವಿಶ್ವಾಸವುಂಟಾಗುವುದೆಂದು ಹೇಳಿದರು. ಕೊನೆಯಲ್ಲಿ ಶ್ರೀ ಎನ್. ಎಸ್. ಪಕ್ಕಳರವರು ವಂದನಾರ್ಪಣೆ ಗೈದರು.

ವಿದ್ಯಾರ್ಥಿಗಳು ತಮ್ಮ ಶಾಲೆ, ಮನೆ ಮತ್ತು ರಾಷ್ಟ್ರವನ್ನು ಬೆಳಗಿಸಲಿ

ಸುರತ್ಕಲ್, ದ. 26 "ವಿದ್ಯಾರ್ಥಿಗಳಾದವರು ತಾವು ಕಲಿತ ಶಾಲೆ ಮತ್ತು ಅಲ್ಲಿಯ ಅಧ್ಯಾಪಕರನ್ನು ಪ್ರೀತಿಸಬೇಕು; ತಮ್ಮ ಮನೆ ಹಾಗೂ ತಂದೆ ತಾಯಿಗಳನ್ನು ಪ್ರೀತಿಸಬೇಕು, ರಾಷ್ಟ್ರಭಕ್ತಿಯನ್ನು ಬೆಳೆಸಿಕೊಳ್ಳಬೇಕು. ನಾವು ಉಜ್ವಲ ಸಂಸ್ಕೃತಿಯುಳ್ಳ ರಾಷ್ಟ್ರದಲ್ಲಿ ಬೆಳೆದು ಬಾಳುತ್ತಿದ್ದೇವೆ, ಎಂಬ ಭಾವನೆಯು ವಿದ್ಯಾರ್ಥಿಗಳಲ್ಲಿ ಸದಾ ಜಾಗೃತವಾಗಿದ್ದಲ್ಲಿ, ಮುಂದವನು ಉತ್ತಮ ನಾಗರಿಕನಾಗುವುದರಲ್ಲಿ ಸಂದೇಹವಿಲ್ಲ." ಎಂದು ವಿದ್ಯಾದಾಯಿನೀ ಹಯರ್ ಸೆಕೆಂಡರೀ ಶಾಲೆಯ ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನದಿಂದ ಡಾ|| ಯು. ವಿ. ಚಾರಿ ಇವರು ನುಡಿದರು.

ಆರಂಭದಲ್ಲಿ ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯೊಡನೆ ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಆಚಾರ್, ಎಂ. ಎಲ್. ಸಿ. ಇವರು ಅಂದಿನ ಸಭಾಧ್ಯಕ್ಷರ ಪರಿಚಯ ಗೈದು, ಸ್ವಾಗತ ಭಾಷಣವಿತ್ತ ಬಳಿಕ, ಶಾಲೆಯ ಹಳೆಯ ವಿದ್ಯಾರ್ಥಿ ಶ್ರೀ ಎಚ್. ಗಿರಿಧರ ರಾವ್ ಇವರು ಸ್ವಸ್ತಿವಾಚನ ಗೈದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಂ. ವಾಸುದೇವ ರಾವ್ ಇವರು ಶಾಲಾ ವಾರ್ಷಿಕ ವರದಿಯನ್ನು ಓದಲು, ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ಶಾಲೆಯ ಪ್ರಗತಿಯನ್ನು ಕಂಡು ಮೆಚ್ಚಿದ ಅಧ್ಯಕ್ಷರು ತಮ್ಮ ಭಾಷಣದಿಂದ ಶಾಲೆಯ ಮೇಲ್ಮೆಯನ್ನು ಹಾರೈಸಲು ಸಂಘದ ಕೋಶಾಧಿಕಾರಿ ಶ್ರೀ ಪಿ. ಶ್ರೀನಿವಾಸ ರಾವ್ ಎಡ್ವೊಕೇಟ್, ಇವರು ಧನ್ಯವಾದಗಳನ್ನರ್ಪಿಸಲು ವಿದ್ಯಾರ್ಥಿಗಳ ನೃತ್ಯನಾಟಕ, ಹಿಂದಿ, ಇಂಗ್ಲಿಷ್, ಹಾಗೂ ಕನ್ನಡ ನಾಟಕಗಳು ಅಭಿನಯಿಸಲ್ಪಟ್ಟು ಕಾರ್ಯಕ್ರಮವು ಮುಕ್ತಾಯವಾಯಿತು.

ಮರುದಿನ ಸಂಜೆ ವಿದ್ಯಾದಾಯಿನೀ ಶಾಲಾ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ವಕೀಲ್ ಬಿ. ಮಂಜಯ್ಯ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಸ್. ವಾಸುದೇವ ರಾವ್ ಅವರು ಸಂಘದ ವಾರ್ಷಿಕ ವರದಿಯನ್ನು ಓದಲು, ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಅಧ್ಯಕ್ಷರು ಬಹುಮಾನವನ್ನಿತ್ತರು "ಹಳೆ ವಿದ್ಯಾರ್ಥಿ ಸಂಘದ ಕಾರ್ಯಕ್ಷೇತ್ರವೇನು? ಅದರಿಂದಾಗುವ ಪ್ರಯೋಜನವೇನು? ಶೈಕ್ಷಣಿಕ ರಂಗದಲ್ಲಿ ಹಳೆ ವಿದ್ಯಾರ್ಥಿ ಸಂಘವು ಯಾವ ರೀತಿ ನೆರವನ್ನೀಯುತ್ತಿದೆ." ಇವೇ ಮೊದಲಾದ ವಿಚಾರಗಳಲ್ಲಿ ಅಧ್ಯಕ್ಷರು ಬಗೆ ಬಗೆಯ ದೃಷ್ಟಾಂತಗಳಿಂದ ಹೃದಯಂಗಮವಾಗಿ ಮಾತನಾಡಲು, ಹಳೆ ವಿದ್ಯಾರ್ಥಿಗಳಿಂದ "ಮದುವೆಯ ಗಡಿಬಿಡಿ"—ಹಳೆ ವಿದ್ಯಾರ್ಥಿನಿಯರಿಂದ "ಆಗುಮಾನದ ಅವಾಂತರ" ಎಂಬ ಸಾಮಾಜಿಕ ನಾಟಕಗಳು ಅಭಿನಯಿಸಲ್ಪಟ್ಟುವು.

ಸುಬ್ರಹ್ಮಣ್ಯದಲ್ಲಿ ಧರ್ಮ ಸಮ್ಮೇಳನ

ಕಳೆದ ತಾ. 29ರಂದು ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಕಿರುಷಷ್ಠಿ ಮಹೋತ್ಸವದ ಸಂದರ್ಭದಲ್ಲಿ ಶ್ರೀ ವಿದ್ಯಾನಾಥ ಕಾಮತ್‌ರವರ ಅಧ್ಯಕ್ಷತೆಯಲ್ಲಿ ಧರ್ಮ ಸಮ್ಮೇಳನವು ನೆರವೇರಿತು.

ಪ್ರಾರಂಭದಲ್ಲಿ ದೇವಳದ ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿದರು. ಶ್ರೀ ದೇರಾಜೆ ಸೀತಾರಾಮಯ್ಯನವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀ ಪ್ರೊ. ವೆಂಕಟರಮಣ ಭಟ್ಟರು "ಧರ್ಮ ಮತ್ತು ಜೀವನ" ಎಂಬ ಕುರಿತು ಮಾತನಾಡಿದರು. ಅಧ್ಯಕ್ಷರು ಮಾತನಾಡುತ್ತಾ ನಮ್ಮ ದೇವಾಲಯಗಳು ಸ್ಥಾಪಿತ ಹಿತಾಸಕ್ತಿಗಳ ಕೇಂದ್ರಗಳಾಗಿರದೆ, ಹತ್ತು ಹಲವು ಧಾರ್ಮಿಕ ಚಟುವಟಿಕೆಗಳ ಸ್ಥಾನಗಳಾಗಿರಬೇಕೆಂದರು.

ಕೊನೆಯಲ್ಲಿ ದೇವಳದ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಬಿ. ನಾರಾಯಣ ಶೇಕರ್‌ರವರು ವಂದನಾರ್ಪಣೆ ಗೈದರು.

ರಾತ್ರಿ ಶ್ರೀ ಕೆ. ಎಸ್. ನೀಲಕಂಠಯ್ಯ ಮತ್ತು ಬಳಗದವರಿಂದ ಸಂಗೀತ ಕಚೇರಿ ಜರಗಿತು. ಅಲ್ಲದೆ ಪ್ರಸಿದ್ಧ ಕಲಾವಿದರಿಂದ ಭೀಷ್ಮಾರ್ಜುನ (ಭೀಷ್ಮ ಪರ್ವ) ಎಂಬ ಯಕ್ಷಗಾನ ಪ್ರಸಂಗವು ಯಶಸ್ವಿಯಾಗಿ ನೆರವೇರಿತು. ಇದರಲ್ಲಿ ಶ್ರೀ ನೆಕ್ರಾಜೆ ಜಗನ್ನಾಥ ಶೆಟ್ರು ಭಾಗವತರಾಗಿಯೂ, ಶ್ರೀ ಕೆ. ಬಾಬು ರೈಗಳು ಮೃದಂಗಗಾರರಾಗಿಯೂ ಶ್ರೀಗಳಾದ ಪೆರ್ಲ ಕೃಷ್ಣ ಭಟ್, ದೇರಾಜೆ ಸೀತಾರಾಮಯ್ಯ, ಕೆ. ಕಾಂತ ರೈ, ಬಿ ಕಿಟ್ಟಣ್ಣ ರೈ ಮೊದಲಾದವರು ಅರ್ಥದಾರಿಗಳಾಗಿಯೂ ಭಾಗವಹಿಸಿದ್ದರು.

ಮುಂಚಿನ ದಿನ ರಾತ್ರಿ ಶ್ರೀ ಎಸ್. ಆರ್. ವಿ. ಶರ್ಮ ಕೊಯಮುತ್ತೂರು ಮತ್ತು ಬಳಗದವರಿಂದ ಸಂಗೀತ ಮತ್ತು ಜಲತರಂಗ ಕಚೇರಿಯೂ ಜರಗಿತು.

ಸ್ವದೇಶಿ ಔಷಧ ಭಂಡಾರದ ಮಾರಾಟ ಕೇಂದ್ರ.

ಪ್ರಸಿದ್ಧ ಆಯುರ್ವೇದ ಔಷಧಗಳ ತಯಾರಕರಾದ ಸ್ವದೇಶಿ ಔಷಧ ಭಂಡಾರ ರಿಜಿಸ್ಟರ್ಡ್, ಕುಂಜಾಲ್ ಇವರ ನೂತನ ಮಾರಾಟ ಕೇಂದ್ರವು ತಾ. 1ನೇ ಬೆಳಿಗ್ಗೆ ಉಡುಪಿ ಸಂತೆಕಟ್ಟೆಯಲ್ಲಿ (ಬಸ್‌ಸ್ಟ್ಯಾಂಡಿನ ಬಳಿ) ತೆರೆಯಲ್ಪಟ್ಟಿರುವುದು. ನಾಗರಿಕರನೇಕರು ಆಗಮಿಸಿ ಈ ಕೇಂದ್ರಕ್ಕೆ ಶುಭ ಹಾರೈಸಿದರು. ಡಾ| ಕೆ. ಶಾಂತಾರಾಮ ಪ್ರಭುಗಳು ಎಲ್ಲರನ್ನೂ ಸ್ವಾಗತಿಸಿ ಅತಿಥಿ ಸತ್ಕಾರವಿತ್ತು ಆಭಾರ ಮನ್ನಿಸಿದರು.

ರಕ್ಷಣಾ ನಿಧಿಗೆ ಕೊಡುಗೆ

ಉಡುಪಿ ತಹಶಿಲ್ದಾರರ ಮೂಲಕ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ. 100ಕ್ಕಿಂತ ಹೆಚ್ಚಿನ ಹಣ ಸಹಾಯ ಮಾಡಿದ ವ್ಯಕ್ತಿ ಮತ್ತು ಸಂಸ್ಥೆಗಳು:—

ಶ್ರೀ ರಾಮಕೃಷ್ಣ ಥಿಯೇಟರ್ಸ್ ಲಿ., ಇದರ ಸ್ಥಾಪಕ ದಿ| ಉಪೇಂದ್ರ ಅನಂತ ಪೈಗಳ ನೆನಪಿಗಾಗಿ ರೂ. 1186-10; ಶ್ರೀ ಎಂ. ಮಧ್ವರಾಜ್, ಎಂ. ಎಲ್. ಏ., ರೂ. 250; ಕೋರೊನೆಟ್ ಕ್ಯಾನಿಂಗ್ ಕೊ; ಮಲ್ಪೆ ಇದರ ಕೆಲಸಗಾರರ ಪರವಾಗಿ ರೂ. 300; ಶ್ರೀ ಎ. ಉಪನಾಥ ಹೆಗ್ಡೆ, ಪೆರ್ಡೂರು ರೂ. 101; ಶ್ರೀ ಪೆರ್ಡೂರು ಅನಂತ ಪದ್ಮನಾಭ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ರೂ. 101 ಮತ್ತು (ಚಿನ್ನದ ಬೋಂಡಿಗಾಗಿ ಸಾವಿರ ಗ್ರಾಮ್ ಚಿನ್ನವನ್ನು ವಾಗ್ದಾನ ಮಾಡಿದ್ದಾರೆ.); ಡಾ| ರವೀಂದ್ರ ಹೆಗ್ಡೆ ಪೆರ್ಡೂರು ರೂ. 100; ಶ್ರೀ ಕೆ. ಶಂಕರ ಹೆಗ್ಡೆ ಪೆರ್ಡೂರು ರೂ. 101; ಮೆಸರ್ಸ್ ವಾಮನ ಶೇಷಗಿರಿ ಮಲ್ಯ ಎಂಡ್ ಸನ್ಸ್ ಪೆರ್ಡೂರು ರೂ. 205; ಪಿ. ಅನಂತ ಪದ್ಮನಾಭ ಅಡಿಗ, ಪೆರ್ಡೂರು ರೂ. 101; ಶ್ರೀ ಪದ್ಮನಾಭ ಅಡಿಗ, ಪೆರ್ಡೂರು ರೂ. 101; ಶ್ರೀ ಪಿ. ಅಬ್ದುಲ್ ಕರೀಮ್ ಬ್ಯಾರಿ, ಪುತ್ತಿಗೆ ರೂ. 101; ಶ್ರೀ ಓಬಯ್ಯ ಹೆಗ್ಡೆ ಪೆರ್ಡೂರು ರೂ. 101; ಎಂ. ಜಿ. ಎಂ. ಕಾಲೇಜಿನ ಸಿಬಂಧಿ ಮತ್ತು ವಿದ್ಯಾರ್ಥಿಗಳು ರೂ. 2001. ಈ ವರೆಗೆ ತಹಶಿಲ್ದಾರರ ಮೂಲಕ ರೂ. 25,329-38 ಸಂಗ್ರಹವಾಗಿದೆ.

— ಅವನಾರು? —

ಹುಲ್ಲಿನ ಮೇಲೆ
ಮುತ್ತಿನ ಮಾಲೆ
ಪೋಣಿಸುತ್ತಿರುವವನಾರವ್ವಾ?
ಬೆಳಕಿನ ಕೋಲೆ
ಬಣ್ಣದ ಸಾಲೆ
ಆಗಿದೆ, ಮಾಡಿದನಾರವ್ವಾ? ||೧||

ಗುಡ್ಡದ ಅಂಚಿನ
ಸೂರ್ಯಗೆ ಕುಂಕುಮ
ಮೆತ್ತಿದ ಬಲ್ಲಿದನಾರವ್ವಾ?
ನಿಲ್ಲದೋಡಿರೆ ತಮ,
ಕಂಪಿನೊಳೀ ಸಮ—
ಪರಳಿಸಿ ನಗಿಸುವನಾರವ್ವಾ? ||೨||

ಪೈರಿನ ತಲೆಗಳ
ತೆರೆಯಲಿ ಕಲಕಲ
ನಾದವ ಕರೆವವನಾರವ್ವಾ?
ಝರಿ ನೀರ್ದೊರೆಗಳ
ಮಣಿಮಯ ಸರಗಳ
ಮಾಡಲು ಕಲಿಸಿಹನಾರವ್ವಾ? ||೩||

ಅಲ್ಲಿ ಮಾಮರದಲ್ಲಿ,
ಮೋಹಿಪ ಸರದಲ್ಲಿ,
ಹಾಡುವ ಕಿನ್ನರಿಯಾರವ್ವಾ?
ಹಳದಿನ, ಕಪ್ಪಿನ—
ದೇಹಕೆ ನುಣ್ಪಿನ—
ರಾಗವ ಸುರಿದವನಾರವ್ವಾ? ||೪||

ಬಾನಿರೆ ನೀಲಿಮ:
ನಗುವನು ಚಂದ್ರಮ;
ಚಿತ್ರದ ಮೋಡವ ನೋಡವ್ವಾ!
ಹರ್ಷದೊಳೀ ಮನ
ಹಾಡುತಿದೆ ತನನ!
ಈ ತೆರಮಾಡುವನಾರವ್ವಾ? ||೫||

ಅಣುವಾಗಿಹನಂತೆ!
ಘನವಾಗಿಹನಂತೆ!
ನಾನರಿಯದಿಹನವನಾರವ್ವಾ?
ಚಿತ್ರ-ವೈಚಿತ್ರ್ಯದಿ
ಆವ ಬರೆದ ಚಿತ್ರದಿ
ಅರ್ಥ ತುಂಬಿಹುದಂತೆ ಏನವ್ವಾ
||೬||

ನಾ ಕೇಳುವ ರೀತಿ
ಹಿತವಲ್ಲದಿರೆ, ಪ್ರೀತಿ
ಮನದಿ ತುಂಬಿಹನೇಕೆ ಹೇಳವ್ವಾ!
ಅವನಾರಾಗಿರಲಿ,
ಹೀಗೆ ಮಾಡುತಲಿರಲಿ,
ಬೇಡುವೆ! ನಾನವನೇನವ್ವಾ?......
..........ಹುಲ್ಲಿನ ಮೇಲೆ
ಮುತ್ತಿನ ಮಾಲೆ..........

— ಶ್ರೀ. ಎನ್. ಕೃಷ್ಣ ಮುಖಾರಿ

ಕ್ರೈತ್ರ ಮುರುಗ

(ಎರಡನೇ ಪುಟದಿಂದ)

ನ ಏಳು ದಿನ ಆಕಸ್ಮಿಕ ಬಿಡುವಿಗಾಗಿ (ಕ್ಯಾಜುವಲ್ ಲೀವ್) ಕೇಳಿಕೊಳ್ಳುತ್ತಿದ್ದೇನೆ. ಬಿಡುವು ಕೊಡಲ್ಪಡುವ ಮೊದಲ ತಾಣ್ಯವನ್ನು ಬಿಟ್ಟುದುದಕ್ಕಾಗಿ ಕ್ಷಮೆ ಬೇಡಿಕೊಳ್ಳುತ್ತೇನೆ. ನನ್ನ ಕೆಲಸವು ಅವಸರದ್ದು ಹಾಗೂ ಅಗತ್ಯದ್ದಿದೆ. ಈ ಮೂರು ವರ್ಷಗಳಲ್ಲಿ ನಾನು ಬಿಡುವನ್ನೇ ತೆಗೆದುಕೊಂಡಿರುವದಿಲ್ಲ."

ನಿಮ್ಮ ಅತಿ ವಿಧೇಯ ಸೇವಕ,
ಆರ್. ರಾಮುಚಂದ್ರನ್.

"ನಾನು ಹೇಳಿದ ಹಾಗೆಯೇ ಆಯಿತು. ನನ್ನ ಮಾತುಗಳಲ್ಲಿ ಭವಿಷ್ಯ ಅಡಗಿಕೊಂಡಿದೆ. 'ರಾಮುಚಂದ್ರನ ಕುರಿತು ನಾನು ಊಹಿಸಿಕೊಂಡಿರುವದೇ ಸತ್ಯವಿದೆ. ಸಾಮ್ರಾಜ್ಯದ ಕುರಿತು ನಾನಾಡಿರುವ ಭವಿಷ್ಯವೂ ಸತ್ಯವಾಗಲಿಕ್ಕಿದೆ. ಇರಲಿ. ಇದು ರಾಜಿನಾಮೆಗೆ ಆರಂಭದ ವ್ಯಂಗ್ಯವಾಗಬಹುದೇನು? ಭವಿಷ್ಯ ಸೂಚನೆ, ರಾಮಾ. ಹಾಗಾದಲ್ಲಿ, ರಾಮುಚಂದ್ರನನ್ನು ಕಳೆದುಕೊಳ್ಳುವದಕ್ಕೆ ನನಗೆ ಬಹಳ ವ್ಯಥೆಯಾಗುತ್ತದೆ.'

ಆರಾಮಾಸನದಲ್ಲಿ ಬಾಣದಂತೆ ಆವರು ನೇರವಾಗಿ ಕುಳಿತುಕೊಂಡು, ಅವಳ ಮಸ್ಸಿಗಾಗಿರುವ ಗಾಯದ ಆಳ ನೋಡಲು, ಗುಪ್ತ ನೋಟವನ್ನು ಹೆಂಡತಿಯತ್ತ ಬೀರಿದರು. ಆದರೆ ಭವಿಷ್ಯವಾದಿನಿಯು ಜಯೋತ್ಸವದಲ್ಲಿ, ಹೊಸ ಪುಸ್ತಕದ ಸಿಮುಳಭಂತ ತಿರುಳಿನಲ್ಲಿ ಆಸಕ್ತಳಾಗಿ ಬಿಟ್ಟಿದ್ದಳು.

o o o

೧೮

ಸಾಮ್ರಾಜ್ಯ ಮತ್ತು ಉದ್ಯೋಗಗಳ ಪ್ರಮುಖ ಸಮಸ್ಯೆಯ ಮೇಲೆ ಶ್ರೀ ಮತ್ತು ಶ್ರೀಮತಿ ಕಡೆಲರ ಸಂವಾದ ನಡೆಯುತ್ತಿದ್ದಾಗ, ಅತ್ತ, ಜಾನಕಿ ಮತ್ತು ರಾಮು ಗೃಹ ಜೀವನದ ಕುರಿತು ಚರ್ಚಿಸುತ್ತಿದ್ದರು.

ರಾಮು ಶಾಂತ, ನಿಶ್ಚಿತ ಹಾಗೂ ಬಲಯುಕ್ತ ಮನಸ್ಸಿನವನು. ಆ ಶಾಂತತೆಯೊ ಕೋ, ಬಿರುಗಾಳಿ ಬೀಸುವ ಮುಂಚೆ ಇರುವ ಶಾಂತತೆಯ ಹಾಗೆ ಇತ್ತು. ಅಂದೇ ಸಾಯಂಕಾಲ ಬಿರುಗಾಳಿ ಬೀಸಿತು.

"ಈ ಜೀವನವು ನನ್ನಲ್ಲಿ ಬೇಸರವನ್ನುಂಟು ಮಾಡಿದೆ, ಮುದ್ದು, ಜಾನಕಿ." ತನ್ನ ಕಾರ್ಯಾಲಯದ ಕೋಣೆಯಲ್ಲಿ ಆಸನದ ತಲೆಯ ಮೇಲೆ ಕೈ ಇಟ್ಟು, ನಿಂತುಕೊಂಡು ಸಾಮಾನ್ಯ ದೃಢ ಸ್ವರದಿಂದ ರಾಮು ಹೃದಯದ ಹೀರಿಕೆ ಹಾಕಿದನು. 'ಈ ಅಪ್ರವಾಸೀ, ಹೀನ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟು, ಪವಿತ್ರ ನದಿಯ ದಡದಲ್ಲಿರುವ ನಮ್ಮ ಹಳ್ಳಿಗೆ ಹಿಂದಿರುಗಬೇಕೆಂದಿದ್ದೇನೆ. ಮೂರು ವರ್ಷಗಳಲ್ಲಿ ಒಮ್ಮೆಯಾದರೂ ಹರಿಯುವ ನೀರನ್ನು ಮುಟ್ಟಿರುವದಿಲ್ಲ. ಶುಷ್ಕ, ಹಾಳು ಭೂಮಿಯ ಹಾಗೆ ನನ್ನ ಬಾಳಿದೆ. ಇಲ್ಲಿಯ ಭೂಮಿ ನನ್ನ ಬಾಳಿನ ಹಾಗಿದೆ. ಪೆನ್ನಾರಿನಂತೆ ನನ್ನ ಜೀವನವೂ, ವರ್ಷದಲ್ಲಿ ಹಲವಾರು ತಿಂಗಳು ನೀರಿಲ್ಲದೆ ಉಸುಬಿನ ಹಾಸಿಗೆಯ ಹಾಗೆ ಇದೆ. ಈ ಮೂರು ವರ್ಷಗಳಲ್ಲಿ ಉದ್ಯೋಗದಲ್ಲಿ ಬದಲಾವಣೆಯೂ ಆಗಿರುವದಿಲ್ಲ. ನಿನ್ನ "ತಾಯಿಯವರನ್ನೂ ಎದುರಿಸ ಬೇಕಾಗಿ ಬಂದಿದೆ. ಚಿನ್ನ—ಜಾನಕಿ, ನೀನು ನನ್ನ ಹಿಂದೆಯೇ ನಿಲ್ಲಬೇಕು. ನಿನೇನೋ ಒಳ್ಳೆಯವಳೇ ಸರಿ. ಆದರೆ ನಿನ್ನ ಜೀವನವು ಅಶ್ವತ್ಥ ಮರದ ಸುತ್ತ ಬೆಳೆದಿರುವ ಬೇವಿನ ಮರದ ಹಾಗೆ ಇದೆ. ನಿನ್ನ ನಿರ್ಬಲ ಮನಸ್ಸೇ ಅದಕ್ಕೆಲ್ಲ ಕಾರಣ. ಇದಕ್ಕೆಲ್ಲ ಮೂಲ ಕಾರಣ ನಿನ್ನ ಮಾತಾಜಿಯವರು...."

"ಅದು ಅಸಾಧ್ಯ, ಪ್ರಭು," ಮೆಲ್ಲನೆ ಭಯದಿಂದ ಹಾಗೂ ಕಷ್ಟದಿಂದ ಎದುರು ಮಾತಾಡಿದಳು. "ಭೂಮಿಯನ್ನು ಮಾರಲಿಕ್ಕೆ ಸಾಧ್ಯವಿಲ್ಲವಾದಲ್ಲಿ ನೀವು ಹಳ್ಳಿಗೆ ಹೋಗಿ ಸಾವಿರ ರೂಪಾಯಿ ಸಾಲವನ್ನಾದರೂ ತರಬೇಕೆಂದು ಅವ್ವ ಸೂಚಿಸಿದ್ದಾರೆ. ಇಲ್ಲೇ ಆಕ್ಕ ಪಕ್ಕದವರ ಬಳಿ ನಾವು ಸಾಧಾರಣ ಐನ್ನೂರು ರೂಪಾಯಿ,ಸಾಲ ತೆಗೆದುಕೊಂಡಿದ್ದೇವೆ. ಇಲ್ಲದಿದ್ದಲ್ಲಿ ಈ ಮೂರು ವರ್ಷಗಳಲ್ಲಿ, ಇಪ್ಪತ್ತೈದು ರೂಪ್ಯಾಗಳಿಂದ ಹೇಗೆ ಜೀವನ ಸಾಗಿಸಲು ಸಾಧ್ಯವಿತ್ತು? ಇತರ ಶಿಬಿರ ಗುಮಾಸ್ತರು ಲಾಭಗಳಿಸುತ್ತಿದ್ದಂತೆ ನಿಮಗೆ ಗಳಿಸಲು ಗೊತ್ತೇ ಇರುವದಿಲ್ಲ."

"ಅಸಾಧ್ಯ ಜಾನಕಿ. ನಿನ್ನ ತಾಯಿಯವರ ಮಾತುಗಳನ್ನು ನೀನು ಗಿಳಿಯಂತೆ ಬಡಬಡ ಒಪ್ಪಿಸುತ್ತಿರುವೆ. ಕ್ಷಣಕಾಲ ನೀನು ಸ್ವತಂತ್ರವಾಗಿ ಆಲೋಚಿಸು. ನನ್ನ ವಿದ್ಯಾಭ್ಯಾಸಕ್ಕಾಗಿ, ಜಮೀನಿನ ಮೇಲೆ ಸಾವಿರ ರೂಪಾಯಿ ಸಾಲ ತೆಗೆದು ಕೊಂಡಿರುವದು ನಿನ್ನ ತಾಯಿಗೂ ಗೊತ್ತಿದೆ. ಐದು ವರ್ಷಗಳಿಂದ ಆದರ ಬಡ್ಡಿಯನ್ನು ಕೊಡಲಿಕ್ಕೂ ನಮ್ಮಿಂದ ಸಾಧ್ಯವಾಗಿರುವುದಿಲ್ಲ."

"ಹಾಗಾಗರೆ, ತಾಯಿಯವರು ಹೇಳುವಂತೆ, ದೊಡ್ಡ ಸಾಲವನ್ನು ತೆಗೆದುಕೊಂಡು, ವಿಷಯವನ್ನು ಮುಗಿಸಿಬಿಡಬೇಕು. ಇತರರು ನೋಡುವಂತೆ ನೀವೂ ಪ್ರಪಂಚವನ್ನು ನೋಡಬೇಕು. ನನಗೇಕೋ ಭಯ. ಅಗುತ್ತದೆ. ನಾವು ಹೋಗುತ್ತಿರುವುದು ಗೋಪೆಯತ್ತ...."

'ಅಸಾಧ್ಯ—ಜಾನಕಿ. ನಿನ್ನ ತಾಯಿಯವರೊಂದಿಗೆ ಸೇರಿ ನೀನೂ ಹುಚ್ಚು ಮಾತುಗಳನ್ನಾಡುತ್ತಿರುವೆ. ಆಹಾರಕ್ಕಾಗಿ, ಹೊಲೆಯನ ನಾಯಿಯಂತೆ, ನಾನು ಸತ್ತರೂ ಏಳು ತಲೆಮಾರುಗಳಿಂದ—ಪೂರ್ವಿಜರಿಂದ—ಬಂದಿರುವ ಭೂಮಿಯ ಒಂದಂಗುಲವನ್ನೂ ಮಾರಲಾರೆ. ಇದರ ಕೆಡುಕು ನಿನ್ನ ತಾಯಿಯವರಲ್ಲಿದೆ. ಅವರ ಜೀವನದ ಈ ಸಮಯದಲ್ಲೂ, ವಿಲಾಸ, ದುಂದುವೆಚ್ಚ ಹಾಗೂ ಮಹತ್ವಾಕಾಂಕ್ಷೆ! ಈಗ ಹೆಚ್ಚುಕಡಿಮೆ ನೀನೂ ಅವರನ್ನೇ ಹೋಲುತ್ತಿ ಎನ್ನಬಹುದು. "ಆದರೂ ನಿನ್ನನ್ನು ಸುಲಭವಾಗಿ ತಿದ್ದಿ ಮುಂದಕ್ಕೆ ತರಬಹುದು. ನಾನು ನಿರ್ಬಲ, ನಿರ್ಗತಿಕ ಆದರ್ಶವಾದಿ ಹಾಗೂ ಅಸಂತೋಷ ಇದ್ದೇನೆ. ಅನಾವಶ್ಯಕ ಈ ಒಣ ಭೂಮಿಯಲ್ಲಿ ನೀವೂ ಏತಕ್ಕಾಗಿ ಬೆವರು ಸುರಿಸಬೇಕು? ಹಳ್ಳಿಯಲ್ಲಾದರೋ ಒಂದು ಎಕರೆ ಭೂಮಿಯ ಉತ್ಪನ್ನದಿಂದ ನಾವು ಸುಖವಾಗಿರಬಹುದು. ತೆಂಗಿನ ತೋಟ ಹಾಗೂ ವಿಶ್ವಾಸಿ ಮುರುಗನಿಂದಾಗಿ ನಾವು ಸ್ವತಂತ್ರವಾಗಿದ್ದು ಸಂತೋಷದಿಂದ ದಿನ ಕಳೆಯಬಹುದು. ಇಲ್ಲಿ ನಮ್ಮ ಬಟ್ಟೆಗನೇ ಬೇಕಾಗುವಷ್ಟು ಹಣ ಕೂಡಾ ದೊರೆಯುವದಿಲ್ಲ. ನನ್ನ ಇಂಗ್ಲೀಷ್ ಜ್ಞಾನದೊಂದಿಗೆ ಬಿ. ಏ. ಗಾಗಿ ಕೂಡಿರುವ ಸಾಲವನ್ನೂ ತೀರಿಸಿಬಿಡಬಹುದು. ಜಾನಕಿ, ನೀನು ನನ್ನ ಬಳಿ ಇದ್ದಲ್ಲಿ, ಹಳ್ಳಿಯು ನನಗೆ ಸ್ವರ್ಗವಿದೆ. ಒಮ್ಮೆ ನನ್ನ ಮನಸ್ಸನ್ನು ಕಲುಕಿಸಿರುವ ಕಳವಳದಿಂದ ನಾನೇನೂ ಸತ್ತುಹೋಗಿಲ್ಲ. ಆದರೆ ಅಯ್ಯೋ!......"

"ಆದನ್ನೆಲ್ಲಾ ನಾವು ಒಮ್ಮೆ ಪ್ರಯತ್ನಿಸಿ ಆಗಿದೇಂದ್ರೆ," ಜಾನಕಿ ಜ್ಞಾಪಕಪಡಿಸಿದಳು.

"ಆದೆಲ್ಲಾ ಮೂರು ವರ್ಷಗಳ ಹಿಂದೆ ತಾನೇ ಅಂದು ಮುರುಗನು ಹೇಳುತ್ತಿದ್ದದ್ದು ನಿನಗೆ ಜ್ಞಾಪಕ ಇಲ್ಲವೇನೇ? ನೆರೆಯಿಂದಾಗಿ ಭೂಮಿ ಇಮ್ಮಡಿ ಫಲವತ್ತಾಗುತ್ತದೆ. ಅವು ಈಗ ಉತ್ತಮ ಫಲವನ್ನೀಯುತ್ತವೆ. ಜಿಲ್ಲಾಧಿಕಾರಿಯು, ಅವರ ರೀತಿಯಲ್ಲಿ, ಒಳ್ಳೆಯವ ಹಾಗೂ ದಯೊಮಯನಿದ್ದರೂ ನಿರ್ದಯಿ ಅಲ್ಲದೆ ಮುಂಗೋಪಿಯೂ ಇದ್ದಾನೆ. ನೋಡೆ, ನೀನು ನನ್ನ ರಾಜಿನಾಮೆಯ ಪತ್ರ. ಈಗ ಬೇಕಾದರೂ ನಾಸಿದನ್ನು ಕಳುಹಿಸಿಕೊಡಬಹುದು. ನಿನ್ನ ತಾಯಿಯವರು ಸಿಟ್ಟಿನಿಂದ ಸಿಡಿದು ಹೋಗಬಹುದು. ಇನ್ನು ಮುಂದೆ ಅವರ ಬಾಯಿಬಡುಕತನ ನನಗೇನೂ ಮಾಡಲಾರದು."

ನಾಟಕವೋ ಎಂಬಂತೆ ಬಾಗಿಲು ತೆರೆಯಲ್ಪಟ್ಟಿತು. ಆದು ವರೆಗಿನ ಪೂರ್ಣ ಸಂಭಾಷಣೆಯನ್ನು ಮರೆಯಲ್ಲಿದ್ದು ಕೇಳಿಕೊಂಡಿದ್ದ ಜಾನಕಿಯ ತಾಯಿಯು ಹೊರ ಬಂದು ಮಗಳ ಬಲ ಬದಿಯಲ್ಲಿ ಬಂದು ನಿಂತುಕೊಂಡಳು. ಅಲ್ಲಿಂದ ಆಜ್ಞಾಪನೆಯ ಹಾಗೂ ನಿರ್ಭರ ಸ್ವರದಿಂದ ಹೇಳಲಾರಂಭಿಸಿದಳು.

"ರಾಯರೇ, ನನ್ನ ಮಗಳೊಂದಿಗೆ ನೀವಾಡುತ್ತಿದ್ದ ಮಾತುಗಳನ್ನು ನಾನು ಕದ್ದು ಕೇಳಬೇಕಾಯಿತು. ಈಗ ನಾನು ಹೇಳಿದಂತೆ ನೀವು ಕೇಳಬೇಕು. ಇಲ್ಲದಿದ್ದಲ್ಲಿ ಈ ಹಾಳು ಮನೆಯನ್ನು ಬಿಟ್ಟು ನಾನು ಹೋಗುತ್ತೇನೆ. "ಮೊಲೆ ಹಾಲು ಕುಡಿಯುವ ಸಣ್ಣ ಮಗು ತನ್ನ ತಾಯಿಯ ಮಡಿಲೇ ಸ್ವರ್ಗವಿದೆ, ಅದು ಶಾಶ್ವತವಾಗಿರುತ್ತದೆ ಎಂದು ಎಣಿಸಿಕೊಳ್ಳುವ ಹಾಗೆ ನೀನು ಭಾವಿಸಿಕೊಂಡು ಮಾತಾಡುತ್ತಿರುವೆ."

ತನ್ನ ವಾಡಿಕೆಯ ಬೆದರಿಸುವ ಅಭಿನಯದಂತೆ, ಮೀನಾಕ್ಷಿಯು ಆವಳ ಎಡಗೈಯನ್ನು ಎತ್ತಿದಳು.

"ನಿನ್ನ ನೆರೆಕರೆಯವರತ್ತ ಮಾವರೂ ನೋಡು. ಅವನು ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುವ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವದೂ ಇಲ್ಲ. ಉದ್ಯೋಗದಲ್ಲಿ ಕೇವಲ ಹತ್ತು ವರ್ಷ ಕಾಲದೊಳಗೆ ಅಧಿಕಾರದ ಹಾಗೂ ವೈಭವದ ಉಪನ್ಯಾಯಾಧಿಕಾರಿಯಾಗಿ ಬಿಟ್ಟಿದ್ದಾನೆ. ಅವನು ಕೂಡಾ ನಿನ್ನನ್ನು ಹುರಿದುಂಬಿಸದಿದ್ದಲ್ಲಿ ನನ್ನ ಮಾತುಗಳು ಹಾಗೂ ಜಾನಕಿಯ ಅವಸ್ಥೆಯಾದರೂ ಹುರಿದುಂಬಿಸಬಹುದು. ಈ ಮೂರು ವರ್ಷಗಳಲ್ಲಿ, ದಾಸಿಯ ಸಹಾಯವಿಲ್ಲದೆ, ನಾವು ಅಡುಗೆ ಕೋಣೆಯೊಳಗೂ ಹೊರಗೂ ಗುಲಾಮರಂತೆ ದುಡಿಯುತ್ತಿದ್ದೇವೆ. ಪಾಪದ ಜಾನಕಿಯ ಕೈಗಳನ್ನು ನೋಡಿರುವೆಯೊ? ಕೆಲಸ ಮಾಡಿ ಮಾಡಿ ಕೂಲಿಯವಳ ಕೈಯ ಹಾಗೆ ದೊರಗಾಗಿವೆ. ಆವಳ ಮೇಲೆ ನಿನಗೆಂದಿಷ್ಟೂ ಕನಿಕರವೆಂಬುದಿಲ್ಲವಲ್ಲಾ! ತನ್ನ ಕೈಹಿಡಿದಿರುವಾಕೆ ಎಂಬ ಅಭಿಮಾನ, ನಾಯಲಿ, ಸಾಮಾನ್ಯ ಜ್ಞಾನವಾದರೂ ಬೇಡವೇ? ನಿನ್ನ ನೆರೆಮನೆಯವನ ಹೆಂಡತಿ ಕಮಲಮ್ಮನನ್ನು ನೋಡು. ಆಕೆ ಓರ್ವ ಬಡ ಪೂಜಾರಿಯ ಮಗಳು. ಈಗ ನೋಡು ಅವಳ ಉಡುಗೆ, ತೊಡುಗೆ, ಆಭರಣಗಳನ್ನು, ನವಿಲಿನ ನಡಿಗೆಯನ್ನು ನೋಡು. ಇಡಿ ದಿನ ಜಗಲಿಯಲ್ಲಿ ಆಸನದ ಮೇಲೆ ಸುಮ್ಮಗೆ ಬಿದ್ದುಕೊಂಡು, ತಾನೇ ಉಪನ್ಯಾಯಾಧಿಕಾರಿ ಎಂಬಂತೆ ಎಲ್ಲರ ಮೇಲೆ ಅಧಿಕಾರ ನಡೆಸುತ್ತ ಇದ್ದಾಳೆ ನನ್ನ ಮಗುವಿನ ಕೈಯನ್ನು ಯಾವದು ಬಿಡುವದಿಲ್ಲವೋ, ಆ ಹಿಡಿಸೂಡಿಯನ್ನು ಆವಳೆಂದೂ ಮುಟ್ಟುವದಿಲ್ಲ."

ಈ ಇಂದ್ರಜಾಲಿಕ ಮಾತುಗಳ ಪ್ರವಾಹಕ್ಕೆದುರಾಗಿ ಮಾತಾಡಲು ರಾಮು ಪ್ರಯತ್ನಿಸಿದುದು ಪ್ರಯೋಜನವಿಲ್ಲದೆ ಹೋಯಿತು.

"ಹೀನ ಕೆಲಸಕ್ಕೆ ಗುಲಾಮರಾಗಿರುವದರಿಂದ ನಾವು ತಿರಸ್ಕರಿಸಲ್ಪಟ್ಟವೇವೆ. ನಮ್ಮ ಸ್ಥಿತಿಯನ್ನು ನೀನು ಸುಧಾರಿಸಲೇಬೇಕು. ಆದಕ್ಕಾಗಿ ಬೇಕಾದರೆ ನೀನು ಬೇಡು, ಬಲಾತ್ಕರಿಸು ಅಥವಾ ಲಂಚ ತೆಗೆದುಕೋ. ನಾಶದ ದವಡೆಗೆ ಸಿಲುಕಿರುವ ನಿನ್ನ ತಿರಸ್ಕರಣೀಯ, ಪ್ರಯೋಜನಶೂನ್ಯ, ಜವುಗು ಹಳ್ಳಿಯ ಕುರಿತು ಇನ್ನು ಆಲೋಚಿಸಬೇಡ. ನಿನ್ನ ಬಡ ಜಮೀನನ್ನು "ಮಾರಿಬಿಟ್ಟು, ಹಳ್ಳಿಯನ್ನು ಮರೆತು ಬಿಡು. ನಿನ್ನನ್ನೂ ಬಂಧನಕ್ಕೊಳಪಡಿಸಿರುವ ನೇಣನ್ನು ಕಡಿದು ಬಿಡು. ನಗದಿ ಹಣವನ್ನು ತಾ. ಈ ದಾರಿಯಲ್ಲಿ ಮುಂದರಿಯಲು ನಾನು ಸಹಾಯ ಮಾಡುತ್ತೇನೆ. ನನ್ನ ಮಗಳು, ತಿರುಕ ಶಿಬಿರ-ಗುಮಾಸ್ತನ ಹೆಂಡತಿಯಾಗಿರಲು ದುಃಖಿಸುತ್ತಿದ್ದಾಳೆ. ಆ ಇನ್ನೊಬ್ಬ ಹುಡುಗ, ಆವಳ ಕೈಯ್ಯನ್ನು ಹಿಡಿಯ ಬೇಕಾಗಿದ್ದವು ಖ್ಯಾತ ವಕೀಲನಾಗಿದ್ದುಕೊಂಡು, ಅಬ್ಬಾ! ಹೇಗೆ ಹಣ ಸಂಪಾದಿಸುತ್ತಿದ್ದಾನೆ."

ರಾಮು ಪುನಃ ಮಾತಾಡಲು ಪ್ರಯತ್ನಿಸಿದನು. ಆದರೆ ಮೀನಾಕ್ಷಿಯು ತನ್ನ ಎಡಗೈಯನ್ನೂ, ತುಟಿಯನ್ನೂ ತಿರುಗಿಸುತ್ತ ಮುಂದರಿಸಿದಳು.

'ನೀನು ಕ್ರಿಯಾಶೀಲನಾಗಬೇಕಲ್ಲದೆ ತತ್ವ ವಿಚಾರ ಮಾತುತ್ತಾ ಕುಳಿತುಕೊಳ್ಳಬಾರದು. ಕಲಾ ಶಾಲೆಯಲ್ಲೂ ನಿನ್ನ ಬೆನ್ನು ಹಿಡಿದಿರುವ ಸಾಧುತ್ವ ಹಾಗೂ ದೋಷಮಯ ನಿಷ್ಠೆಯಗಳನ್ನು ಬಿಟ್ಟುಬಿಡು. ಆದರ್ಶವಾದವು ಪುಸ್ತಕರವಾದವಿದೆ, ಜೀವನದಲ್ಲೊಂದು ಆಕಾಂಕ್ಷೆ ಇಲ್ಲ

NAVAYUGA 6-1-1966
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೬-೧-೬೬ರಿಂದ ೧೨-೧-೬೬ರ ವರೆಗೆ

೧. ಮೇಷ

ಅವಿಶ್ರಾಂತವಾಗಿ ದುಡಿಯುವಿರಿ. ದುಡಿಮೆಗೆ ತಕ್ಕುದಾದ ಫಲವು ಲಭಿಸುವದು. ಆದರೇನು? ಇಂದು ಬಯಸುವ ಖರ್ಚುಗಳು ನಿಮ್ಮನ್ನು ಹಿಂಬಾಲಿಸುವವು. ಆದಕಾರಣದಿಂದಾಗಿ ಹಣದ ಅಡಚಣೆ ತಪ್ಪದು. ಹಣದ ಲೇವಾದೇವಿ ನಿಮಿತ್ತ ಪರಸ್ಪರ ಕಲಹವೆದ್ದು ಕೋರ್ಟಿಗೆ ಹೋಗುವ ಪ್ರಸಂಗವೂ ಬಂದೀತು. ನಿರೋಗಿಗಳಾದ ನಿಮಗೆ ತಾ. 6, 7, 12, ತುಂಬ ಅನುಕೂಲದ ದಿನಗಳು.

೨. ವೃಷಭ

ಅಲ್ಪಾಯಾಸದಿಂದ ಅಧಿಕ ಫಲವಂ ಪಡೆವಿರಿ. ಒಳ್ಳೆಯ ವಾಗ್ಮಿಗಳಾದ ನಿಮಗೆ ಯಾರ ಕೂಡೆಯೂ ವಿರೋಧವಿರದು. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮಿಕ್ಕಿ ಲಾಭ ಪಡೆವಿರಿ. ಆದರೆ ಕೋರ್ಟು ವ್ಯವಹಾರಗಳಿಗೀ ಸಮಯವು ಚೆನ್ನಾಗಿಲ್ಲವು. ಅಧಾರಾಂಗಿಯ ಆರೋಗ್ಯವು ಪಿತ್ಥಕಫ ದೋಷದಿಂದ ಕೆಡಲಿದೆ. ತಾ. 8, 9, ಇತರ ದಿನಗಳಿಗಿಂತ ಲೇಸು.

೩. ಮಿಥುನ

ಹೆಚ್ಚಿನ ನಿಮ್ಮ ಮನೋರಥಗಳಿಂದು ತಿರುಕನ ಕನಸಿನಂತಾಗಲಿವೆ. ಬಲೀಯನಾದ ಅಂಗಾರಕನು ಅಷ್ಟಮದಲ್ಲಿದ್ದು ನಿಮ್ಮ ಎಲ್ಲ ವ್ಯವಹಾರಗಳಿಗೆ ನಾನಾ ತರದ ವಿಘ್ನಗಳನ್ನೊಡ್ಡುವನು. ದುರ್ಬಲನಾದ ಪ್ರತಿಪಕ್ಷಿಯೂ ಕೂಡ ಪ್ರತೀಕಾರಾಸಕ್ತನಾಗುವನು. ನಿಮ್ಮ ಧೈರ್ಯ ಸ್ಥೈರ್ಯಗಳು ಗಾಳಿಗೆ ಸಿಲುಕಿದ ಅರಳೆಯಂತೆ ಹಾರಿ ಹೋಗಲಿವೆ. ಅತೀವ ಕಷ್ಟದಿಂದ ಕಾಲ ಕಳೆವ ನಿಮಗೆ ತಾ. 6, 7, 10, 11, ಇತರ ದಿನಗಳಷ್ಟು ಅನಿಷ್ಟಕಾರಿಗಳಾಗಲಾರವು.

೪. ಕರ್ಕಟಕ

ಚಿಕ್ಕಪುಟ್ಟ ವ್ಯವಹಾರದಲ್ಲಿ ಹೆಚ್ಚಿನ ನಷ್ಟ ಸೋಲುಗಳಿಲ್ಲದೆ ಪಾರಾಗುವಿರಿ. ಅದರೆ ಹಲವರ ವಿರೋಧಕ್ಕೆ ಗುರಿಯಾದ ನಿಮಗೆ ಸಮಾಜದಲ್ಲೂ ಸ್ಥಾನವಿಲ್ಲ. ಮನೆಯಲ್ಲೂ ಸುಖ ನೆಮ್ಮದಿಯಿಲ್ಲ. ಅಧಿಕಾರಿ ವರ್ಗದವರ ಆಗ್ರಹಕ್ಕೆ ಸಿಲುಕಿದ ನಿಮಗೆ ಸ್ಥಾನ ಚಲನೆಯ ಯೋಗವು ಆರಂಭವಹಲ್ಲವು. ತಾ 8, 9, 12 ಈ ದಿನಗಳಲ್ಲಿ ಕೆಲ ಮಟ್ಟಿಗೆ ಧನ ಸುಖ ಲಭಿಸೀತು.

೫. ಸಿಂಹ

ನಿಮ್ಮ ಉತ್ಸಾಹ ಧೈರ್ಯಗಳು ಅದ್ವಿತೀಯವಿರುವವು. ಅರಿಕೆಯೇ ಕರ್ತೃತ್ವ ಶಕ್ತಿಯೂ ಎಂದು ನಿಮಗೆ ಈ ವಾರದಲ್ಲಿ ಒಳ್ಳೆಯ ಧನ ಲಾಭವಾಗಲಿದೆ. ಮಹಾತ್ಮರ ಸ್ನೇಹ ಸಹವಾಸಗಳಿಂದ ಕೂಡಿದ ನಿಮಗೆ ಎಲ್ಲೆಲ್ಲೂ ಸ್ಥಾನ ಮಾನಗಳಿಗೆ ಕೊರತೆಯಿರದು. ಆದರೆ ಆಯಕ್ಕಿಂತ ದ್ವಿಗುಣವಾಗಿ ವ್ಯಯಿಸುವ ಈ ಸಂದರ್ಭದಲ್ಲಿ ಹಣದ ಅಡಚಣೆಯು ಕೆಲವೊಮ್ಮೆ ಕಾಣಿಸೀತು. ತಾರೀಕು 6-7-10-11 ರಲ್ಲಿ ಧನ ಸುಖ ಭೋಗಗಳಂ ಪಡೆವಿರಿ.

೬. ಕನ್ಯಾ

ಸಮುದ್ಯಮ ಪ್ರವರ್ತಕರಾದ್ದ ನಿಮಗೆ ನಿರೀಕ್ಷಿಸಿದ ಫಲವು ನಿರ್ವಿಘ್ನದಿಂದ ಲಭಿಸಲಿದೆ. ಗೃಹ ತಾಪತ್ರಯಗಳಿಂದ ಮುಕ್ತರಾದ ನಿಮ್ಮ ಆರೋಗ್ಯವು ತೃಪ್ತಿಕರವಿರುವದು. ಖರ್ಚಿಗೆ ಸಾಲುವಷ್ಟು ಆದಾಯವಿರೋದರಿಂದ ಹಣದ ತಾಪತ್ರಯವು ಕಾಣಿಸದು. ಮಕ್ಕಳಿಂದ ಹೆಚ್ಚಿನ ನೆರವು ಲಭಿಸಲಿದೆ ತಾ. 6-7-8-9-12 ಈ ದಿನಗಳು ತುಂಬ ಅನುಕೂಲವಾಗಿವೆ.

೭. ತುಲಾ

ಚಿಕ್ಕಪುಟ್ಟ ಗೃಹತಾಪತ್ರಯಗಳು ನಿಮ್ಮಲ್ಲಿಂದು ಕಾಣಿಸಬಹುದು ಅಷ್ಟೇ. ವಿನಾ ಬೇರೇನೂ ಕೊರತೆಗಳು ನಿಮಗಿರವು. ಆರ್ಥಿಕ ಮಟ್ಟವು ಅತ್ಯುತ್ತಮವಾಗಿರುವುದಾದರೂ ಕೆಲವೊಂದು ದುರ್ವ್ಯಯಗಳು ನಿಮಗೆ ಗಂಟು ಬೀಳಲಿವೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ವಿದ್ಯೋಪಜೀವಿಗಳಾದ ನೌಕರಿ ವರ್ಗದವರಿಗೂ ಅನಿರೀಕ್ಷಿತ ತೊಂದರೆಗಳು ಪ್ರಾಪ್ತವಾಗುವ ಸಂಭವವಿದೆ. ಜಾಗ್ರತರಾಗಿರಿ. ತಾ. 8 ರಿಂದ 11ರ ವರೆಗಿನ ದಿನಗಳು ಸುಖ ಲಾಭದಾಯಿಗಳಾಗಿವೆ.

೮. ವೃಶ್ಚಿಕ

ದಿನದಿಂದ ದಿನಕ್ಕೆ ನಿಮ್ಮ ಒಂದೊಂದೇ ತಾಪತ್ರಯಗಳು ಮಾಯವಾಗಲಿವೆ. ಉದ್ಯಮಶೀಲರಾದ ನಿಮಗೆ ಅನಾಯಾಸದಿಂದ ಕಾರ್ಯ ಸಿದ್ಧಿಯಾಗಲಿದೆ. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗಿ ಸುಖದಿಂದ ಕಾಲಕಳೆವಿರಿ. ಮನೋದೌರ್ಬಲ್ಯವು ನಿಮ್ಮನ್ನು ಹೆಚ್ಚಾಗಿ ಕಾಡುವದಾದರೂ ಹಿಡಿದ ಕಾರ್ಯವನ್ನು ಮಧ್ಯದಲ್ಲಿ ನಿಲ್ಲಿಸಲಾರಿರಿ. ವಿಶೇಷತಃ ಕೃಷಿ ಭೂ ಸಂಬಂಧ ವ್ಯವಹಾರಗಳಲ್ಲಿ ಹೆಚ್ಚಿನ ಫಲಾಪ್ತಿಯಿದೆ. ವಾರಾಂತ್ಯದ ಮೂರುದಿನಗಳು ಇಷ್ಟಾರ್ಥಪ್ರದಗಳಿವೆ.

೯. ಧನು

ಕಂಡದ್ದನ್ನು ಕಂಡಂತೆ ಹೇಳಿದರೆ ಕೆಂಡದಂತಹ ಕೋಪವೆಂಬ ಗಾದೆಯಂತೆ ಇಂದು ನೀವು ಇಂತಹ ಪರಿಸ್ಥಿತಿಯನ್ನೆದುರಿಸಬೇಕಾಗಿ ಬರುವುದು. ಅಲ್ಲದೆ, ಆರೋಗ್ಯ ಆಗಾಗ ಕೆಡುವಂತಿದೆ ಎಂತಹ ದುಃಸಾಧ್ಯವಾದ ಕಾರ್ಯವೂ ನಿಮಗಿಂದು ತೃಣ ಸಮವೆನಿಸೀತು. ಪ್ರಬಲರಾದ ಶತ್ರುಗಳನ್ನೂ ರಾಭವಗೊಳಿಪ ಅಸಾಮಾನ್ಯ ಶಕ್ತಿ ಸಂಪನ್ನರಾದ ನಿಮಗೆ ತಾ. 6-7-12 ಈ ದಿನಗಳು ತುಂಬ ಅನುಕೂಲವಾಗಿದೆ.

೧೦. ಮಕ[ರ]

ಜನ್ಮಸ್ಥ ಶುಕ್ರಾಚಾರ್ಯರೋರ್ವರನ್ನು ಬಿಟ್ಟು ಇತರ ಎಲ್ಲಾ ಗ್ರಹರ ಮುನಿಸಿಗೆ ಗುರಿಯಾದ ನಿಮಗೆ ಸದ್ಯದ ದಿನಗಳು ಅತೀವ ಕಷ್ಟದಾಯಿಗಳಾಗಿ ಪರಿಣಮಿಸಲಿವೆ. ನಿಮ್ಮ ಬಿತ್ತಕಾರವು ನಿರಾಶೆ ಶಾವರ್ಗಗಳಿಂದ ಕವಿದಿರುವುದು ಇಷ್ಟರಿಂದಾಗಿ ನಿಮಗೆ ಮುಂದೇನು ಮಾಡಬೇಕೆಂಬುದೇ ಅರಿವಾಗದು. ಆರ್ಥಿಕ ಬಿಕ್ಕಟ್ಟು ದೇಹಾಲಸ್ಯ ಗೃಹತಾಪತ್ರಯ ಸ್ವಜನ ವಿರೋಧ ವಿಯೋಗಗಳಿಗೀಡಾದ ನಿಮಗೆ ವಾರಾದಿಯ 4 ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿ ಕಾಣಿಸುವದು.

೧೧. ಕುಂ[ಭ]

ಸ್ವಯಂ ನೀವು ಅಶಕ್ತರಿದ್ದರೂ ದೈವದ ಒಲುಮೆಯು ನಿಮ್ಮ ಮೇಲೆ ಪರಿಪೂರ್ಣವಾಗಿರುವುದರಿಂದ ಪರರ ನೆರವಿನಿಂದ ನಿಮ್ಮ ಕಾರ್ಯಕಲಾಪಗಳು ಹೆಚ್ಚಿನಂಶ ಕೊನೆಗಾಣುವವು. ನಿಮ್ಮ ಪರಿಶ್ರಮಕ್ಕೂ ಮಿಕ್ಕಿ ಧನವು ಕ... ಡ ಲಭಿಸಲಿದೆ. ಪಿತ್ಥದೋಷದಿಂದ ನಿದ್ರಾಭಂಗ ಮದಾಗ್ನಿ ಮೊದಲಾದ ದೇಹಾಲಸ್ಯಗಳು ಕಾಣಿಸಬಹುದು. ವಿಪಕ್ಷೀಯರ ಉಪಟಳವು ಮುಂಚಿಗಿಂತ ಅಧಿಕವಾದೀತು. ತಾ. 8ರಿಂದ 11ರ ವರೆಗಿನ ದಿನಗಳು ಇಷ್ಟಾರ್ಥ ಪ್ರದಗಳಿವೆ.

೧೨. ಮೀ[ನ]

ದೈವವಂ ಅತಿಕ್ರಮಿಸಿ ಪೌರುಷವನ್ನೆ ಪ್ರಧಾನವಾಗಿಟ್ಟುಕೊಂಡು ಕಾರ್ಯಕ್ಷೇತ್ರದಲ್ಲಿ ಧೈರ್ಯದಿಂದ ಮುನ್ನುಗ್ಗುವಿರಿ. ನಿಮ್ಮ ಶ್ರಮವು ಸಾರ್ಥಕವಾಗುವದು. ಎಂತಹ ಪ್ರಬಲ ಪ್ರತಿಪಕ್ಷಿಯೂ ನಿಮ್ಮೆದಿರು ಇಂದು ನಿಲ್ಲಲಾರನು. ನಾನಾತೆರದಿಂದ ನಿಮಗಿಂದು ಧನಾಗಮವಾಗಲಿದೆ. ಜನತೆಯ ನೆರವು ಸಾಕಷ್ಟು ಲಭಿಸದಾದರೂ ನೀವು ನಿಮ್ಮ ಕರ್ತೃತ್ವದಿಂದ ಜಯಶಾಲಿಗಳಾಗಲಾರಿರಿ. ವಾರಾಂತ್ಯದ 3 ದಿನಗಳು ನಿಮ್ಮ ಬಯಕೆಯನ್ನು ಪೂರೈಸುವವು.

ದಿರುವದೆಂದರೆ, ರಕ್ತದಲ್ಲಿ ಕೆಂಪು ಕಣಗಳ ಕುಟ್ಟಿಯಿಂದಾಗುವ ರೋಗವೇ ಇದ. ಎಲ್ಲಾ ಬಡ ಹಾಗೂ ಅಶಕ್ತ ಜನರ ಧ್ಯೇಯ ಸರಳ ಜೀವನವಿದೆ, ಹಳ್ಳಿಯೂ ದರೋ ಕಷ್ಟೆ, ಬಸವನ ಹುಳಗಳಂತಿರುವ ನಿಕೃಷ್ಟ ಜೀವಿಗಳಿರುವ ಸ್ಥಳ. ಅದನ್ನು ತ್ಯಜಿಸಿ, ಕಷ್ಟಪಟ್ಟು ಕೆಲಸ ಮಾಡು. ರಾತ್ರಿ ಹಗಲು ಉನ್ನತಿಯ ಕನಸು ಕಾಣು. ಉಪನ್ಯಾಯಾಧೀಶರಂಥ ಪದವಿ ನಿನಗ ಸಿಕ್ಕೇ ಸಿಗುತ್ತದೆ. ನಾನು ಹೇಳುತ್ತೇನೆ, ನನಗದು ಯೋಗ್ಯವಿದೆ. ಒಂದಲ್ಲ ಇನ್ನೊಂದು ದಿನ ನೀನದನ್ನು ತಿಳಿದುಕೊಳ್ಳುತ್ತೀ. ಅಂದು, ನಾನೀಗ ಆಡುವ ಕಟು ನುಡಿಗಳಿಗೆ, ಧನ್ಯವಾದಗಳನ್ನು ಅರ್ಪಿಸುತ್ತೀ."

ಕೋಪಗೊಂಡ ಕಡಲು, ಒಡೆದ ಹಡಗಿನಲ್ಲಿದ್ದ ಸರಕುಗಳನ್ನು ದಡದ ಮೇಲೆ ಬಿಸಾಡುವಂತೆ, ಮಾತುಗಳು ಮತ್ತು ಆಲೋಚನಗಳು ಮುಕ್ತಾಯಕ್ಕೆ ಬಂದುವು.

ಒಡನೆ ಮೀನಾಕ್ಷಿಯು ಆ ಕೋಣೆಯಿಂದ ಹೊರಗೆ ಹೋದಳು. ಆದರೂ ಅವಳಾಡಿದುದು ವಿಪುಲ ಹಾಗೂ ನಿರ್ಧಾರವ ಮಾತುಗಳು ಒಳಗೂ ಹೊರಗೂ ರಾಮುವಿನ ಮೆದುಳಿನಲ್ಲಿ ಝೇಂಕರಿಸುತ್ತಿದ್ದುವು. ಈ ಚರ್ಚೆಯ ನಂತರ ತನ್ನ ರಾಜೀನಾಮೆಯ ಪತ್ರವನ್ನು ಹರಿದು ಬಿಡು ಎನ್ನು ಕೇಳುವ ವಿನಂತಿಯನ್ನು ಶ್ರೀ ಕಡಲಿಂಗೆ ರಾಮು ಕಳುಹಿಸಿದನು.

(ಮುಂದುವರಿಯುವುದು)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

Edited, printed & Published by K. H. Shetty at the Navayuga Press, Udipi, S. India.

ನವಯುಗ

13-1-1966

ephone 226

೨೦

<u>ಧಾರಾವಾಹಿ ಕಾದಂಬರಿ</u>

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ಮೊದಲು—

ಆಲವಂತಿಯ ರಾಮಚಂದ್ರ ರೈತಮುರುಗನ ಮನನೋಯಿಸಿ ಮದ್ರಾಸಿನಲ್ಲಿ ಓದಿದರೂ ಬಿ. ಎ. ಮಾಡಿಕೊಳ್ಳಲಿಲ್ಲ. ಜಾನಕಿಯ ಪತಿಯಾಗಿ ಊರಿಗೆ ಬಂದು ಸುಖ ವೃಣ್ಣುವ ಹಂಬಲದಿಂದಿದ್ದ. ಆದರೆ, ನೆರೆಯಿಂದ ಊರು ಮುಳುಗಿದಾಗ ಅತ್ತೆ ಮೀನಾಕ್ಷಿಯ ಆಗ್ರಹ ಬೆಳೆದು ನಿಂತಾಗ, ದಾರಿಗಾಣದ ರಾಮು ಕಡಪದ ಕಲೆಕ್ಟರ್ ನಿಷ್ಠುರಿ ಕೆಡೆಲ್‌ರ ಬಳಿ ಶಿಬಿರ ಗುಮಾಸ್ತನಾದ. ದೊರೆಯುತಿದ್ದ ಅಲ್ಪ ವೇತನದಲ್ಲಿ ಮನೆ ನಡೆಸುವುದೇ ಕಷ್ಟವಾಗಿದ್ದ ಕಾಲದಲ್ಲಿ, ಲಂಚಕ್ಕೆ ಕೈಯೊಡ್ಡುವಂತೆ ಅತ್ತೆ ಪರೋಕ್ಷವಾಗಿ ಹೇಳುತ್ತಿದ್ದ ವೇಳೆ, ಅಧಿಕಾರಿಯ ದುರ್ವರ್ತನೆಯಿಂದ ನೊಂದ ರಾಮು ರಾಜಿನಾಮೆಗೆ ಪೂರ್ವಭಾವಿಯಾದ ರಜೆ ತೆಗೆದು ಊರಿಗೆ, ಆಲವಂತಿಗೆ ತೆರಳಿದ.

ಮುಂದೆ—

ಅದೇ ಸಮಯದಲ್ಲಿ, ಆಲವಂತಿಯ ತೆಂಗಿನ ತೋಟದಲ್ಲಿ, ಮುರುಗನು ಮುದದಿಂದಿದ್ದನು. ಅವನು ದಿನದಿಂದ ದಿನ ಅಭಿವೃದ್ಧಿಯ ಪಥದಲ್ಲಿ ಶೀಘ್ರವಾಗಿ ಮುನ್ನಡೆಯುತ್ತಿದ್ದನು. ತನ್ನ ತರುಣಧನಿ ಹೇಳಿದ್ದ ಬುದ್ಧಿ ಮಾತುಗಳನ್ನೂ, ಪೊನ್ನಿಯ ಸೂಕ್ಷ್ಮ ಎಚ್ಚರಿಕೆಗಳನ್ನೂ—ಅಂತಹ ವಿಷಯಗಳಲ್ಲಿ ಆಕೆ ಉತ್ತಮ ಬಾಳ ಪಾಲುಗಾರ್ತಿ—ಅನುಸರಿಸಿಕೊಂಡು ಹಣವನ್ನುಳಿಸಿಕೊಂಡಿದ್ದನು. ನಿಜವಾಗಿ ಪೊನ್ನಿ ಮತ್ತು ಮುರುಗ ಆ ತೆಂಗಿನ ತೋಟವನ್ನು ಒಂದು ಚಿಕ್ಕ ಭೂಸ್ವರ್ಗವನ್ನಾಗಿ ಮಾಡಿದ್ದರು. ಆದರಿಂದಾಗಿ ಅವರು ಆ ಇಡೀ ಹಳ್ಳಿಯ ಹೊಟ್ಟೆಕಿಚ್ಚಿಗೆ ಒಳಗಾಗಬೇಕಾಯಿತು.

"ಪೊನ್ನಿ, ನನ್ನ ಒಡೆಯನ ಮುಖ ನೋಡದೆ ಮೂರು ವರ್ಷ ಕಳೆದು ಹೋಯ್ತು. ಈಗೀಗ ಅವರು ಸರಿಯಾಗಿ ಪತ್ರ ಬರೆಯುವದೂ ಇಲ್ಲ. ನಮ್ಮ ಶಾಂತಿ ಹಾಗೂ ಸಂತೋಷ, ಎಲ್ಲವೂ, ಅವರ ಬಳಿ ಎರವಲು ತೆಗೆದುಕೊಂಡಲ್ಪಟ್ಟವು". ಉಪಕಾರ ಸ್ಮರಣೆಯ ದೀರ್ಘ ನಿಶ್ವಾಸ ಒಂದನ್ನು ಬಿಡುತ್ತ ಮುರುಗನು ಹೇಳಿದನು.

"ಹೌದು. ಆದರೆ ನಮ್ಮ ಅಭಿವೃದ್ಧಿ ಹಾಗೂ ಸ್ವಾತಂತ್ರ್ಯವನ್ನು ಕಂಡು ಈ ಹಳ್ಳಿಯ ಜನರು ಕರುಬುತ್ತಿದ್ದಾರೆ."

"ಅದು ನಿಸರ್ಗನಿಯಮವೆನ್ನು; ಪೊನ್ನಿ. ನಾವು ಮಾತ್ರ ನಮ್ಮಷ್ಟಕ್ಕೆನೇ ಕೆಲ ಕಾಲದ ವರೆಗೆ ನಮ್ರತೆಯಿಂದ ಇದ್ದುಕೊಂಡಲ್ಲಿ, ಆ ಅಭಿಪ್ರಾಯವು ತಾನೇ ತಾನಾಗಿ ಮಾಯವಾಗಿ ಬಿಡುತ್ತದೆ." ಮುರುಗನು ಬುದ್ಧಿ ಹೇಳಿ, ವಿಷಯವನ್ನು ಬದಲಾಯಿಸಿದನು.

"ಪೊನ್ನಿ, ನಮ್ಮ ಕುರಿತೇ ನಾವೀಗ ನೋಡೋಣ. ಈ ಮೂರು ವರ್ಷಗಳಲ್ಲಿ ಎದೆಷ್ಟು ನಾವು ಉಳಿಸಿಕೊಂಡಿದ್ದೇವೆ? ಐನ್ನೂರು ರೂಪಾಯಿ, ಮತ್ತು ಈ ಜೋತೆ ಹೋರಿಗಳು—ಅಂದರೆ ಇನ್ನೊಂದು ನೂರು ರೂಪಾಯಿ—ನಾವು—ಕೂಲಿಯಾಳುಗಳು, ಭೂಮಿಯುನ್ನುಳುವವರು—ಭೂಮಿಯನ್ನು ತೆಗೆದುಕೊಳ್ಳುವ ಹಾಗೆಯೂ ಇಲ್ಲ ಅಥವಾ ಹಣವನ್ನು ಬಡ್ಡಿಗೆ ಕೊಡುವಂತೆಯೂ ಇಲ್ಲ. ಹಾಗಾಗಿ ಈ ಸಂಪತ್ತನ್ನು ಹೊಳಡಬೇಕಾಗುತ್ತದೆಂಬುದು ದುಃಖದಾಯಕ ಸಂಗತಿ ಇದೆ. ಅದು ಹೊಟ್ಟೆಕಿಚ್ಚನ್ನು ಜಾಗ್ರತ ಪಡಿಸುತ್ತದೆ. ಇದು ಕದ್ದ ಹಣವೆಂದು ದೊಡ್ಡ ಜನರು ಮುಟ್ಟಿಗೋಲು ಹಾಕಲಿಕ್ಕೂ ಹೇಸಲಿಕ್ಕಿಲ್ಲ."

"ಹೌದು," ಪೊನ್ನಿಯು ಮೋಹಕವಾದ ಮುಗ್ನಳಗೆಯನ್ನು ಸೂಸುತ್ತ, ಮಾತಾಡಿದಳು. "ಎಂದೆಂದಿಗೂ ನಮ್ಮದಾಗಿರುವಂತೆ, ಈ ಚಿಕ್ಕ ತೋಟವನ್ನು ನಾವು ಸ್ವಂತ ಮಾಡಿಕೊಂಡರೆ, ಆಹ್ಹ! ಅದೆಂತಹ ಕನಸು! ಯಾರಿಗೂ ಕೇಡು ಬಯಸದೆ ಈ ಭೂಮಿಯಲ್ಲಿ ಸರಳರಾಗಿದ್ದು ಸಂತೋಷದಿಂದ ನಾವು ಜೀವಿಸಬಹುದು."

'ಅದು ಪಾಪವಿದೆ, ಪೊನ್ನಿ. ನಮ್ಮ ಧನಿಯ ಭೂಮಿಯನ್ನು ನಾವು ಆಶಿಸುವುದು ಪಾಪವಿದೆ. ಸುತ್ತಲೂ ನೋಡು. ಯಾವ ಪಳ್ಳ ಅಥವಾ ಪಡ್ಯಾಚಿ ಒಂದೆ ಕರೆ ಭೂಮಿಯನ್ನು ತೆಗೆದುಕೊಂಡು ಜೀವಿಸುತ್ತಾನೆ? ಅದೂ ಬೇಡ. ನಾಳೆಗೆ ಆಹಾರ ಎಲ್ಲಿಂದ ಬರುತ್ತದೆ ಎನ್ನುವದೂ ಅವನಿಗೆ ಗೊತ್ತಿರುವದಿಲ್ಲ!'

ಸಮಸ್ಯೆಯನ್ನು ವಿಶೇಷಿಸಲು ಹಾಗೂ ತನ್ನ ಕಾರಣಗಳನ್ನು ಕೊಡಲು ಪೊನ್ನಿಯು ಧೈರ್ಯದಿಂದ ಪ್ರಯತ್ನಿಸಿದಳು.

"ಯಾಕೇನ್ನಿ? ನಿಮಗೆ, ಗಂಡಸರಿಗೆ, ಹೇಗೆ ಉಳಿಸ ಬೇಕು ಎಂಬುದರ ಕಲ್ಪನೆಯೇ ಇರುವದಿಲ್ಲ. ಸಿಕ್ಕಿದ್ದನ್ನು ಸುಖ ಸಂತೋಷ, ಬೋಗಕ್ಕಾಗಿ, ಕುಡಿತಕ್ಕಾಗಿ ಹಾಳು ಮಾಡಿಬಿಡುತ್ತೀರಿ. ಆದರೆ, ಈ ಚೆಂದವಾದ ಗ್ರಾಮದಲ್ಲಿ ಕಳ್ಳಂಗಡಿ ಇಲ್ಲದಿರುವದಕ್ಕೆ ನಾವು ದೇವರಿಗೆ ಆಭಾರಿಗಳಾಗಿರಬೇಕು. ಅದು ಇರುತ್ತಿದ್ದಲ್ಲಿ ಅದರ ಗೆಡುಕು ಎಲ್ಲೆಲ್ಲೂ ಹಬ್ಬಿರುತ್ತಿತ್ತಲ್ಲದೆ, ನಮ್ಮ ಸ್ಥಿತಿ ಅಧೋಗತಿಯಾಗುತ್ತಿತ್ತು.'

"ಇಲ್ಲ, ಪೊನ್ನಿ, ಇಲ್ಲ. ನೀನೇನೋ ಸಮಸ್ಯೆಯನ್ನು ಅಂದಾಜು ಮಾಡಿಕೊಂಡಿರುವೆಯಾದರೆ ಕೊನೆಯನ್ನು ಮಾತ್ರ. ನೀನೀಗ ಹೇಳಿರುವ ವಿಷಯ— ಕುಡಿತ —ಸಣ್ಣ ವಿಷಯವಿದೆ ಬಡ ಸಂಗಾತಿಗಳಿಗೆ, ಬಹಳ ಕೆಲಸಮಾಡಿ ಕಡಿಮೆ ಕೂಲಿ ಪಡೆದುಕೊಳ್ಳುವವರಿಗೆ ಜೀವನದಲ್ಲಿ ಅದೊಂದು ಸಂತೋಷದ ಸಮಯವೇ ಸರಿ. ಕುಡಿತಕ್ಕೆ ಪ್ರೇರಣೆಯೂ
ಎಲ್ಲಿಂದ ಬಂದಿದೆ? ಕೆಡುಕು ತಂಗಿ
ದು ಎಕರೆಗಳನ್ನು ವಶಪಡಿಸಿಟ್ಟುಕೊ
ರುವ ಹಸ್ತದಲ್ಲಿ. ಆ ಪದ್ಧತಿಯೇ ಸೋ
ತನ್ನು. ಭೂಪಾತನು ಭೂಮಿಯನ್ನು
ತ್ತಾನೋ, ಅವನಿಗದರ ಮೇಲೆ ಅ
ಇರುವದಿಲ್ಲ. ತಲೆಮಾರಿನಿಂದ ತಲೆ
'ರುಗಳ ವರೆಗೂ ಭೂಮಿಗೂ ಉಳು
ನಿಗೂ ಸಂಬಂಧ ಇದ್ದರೂ ಕೂಡಾ
ರಾತ್ರಿ ಹಗಲೂ ದೊರಕುವ ಕೂಲಿ
ಮೇಲೆ ಹೊಂದಿಕೊಂಡಿದೆ; ಕೇವಲ
ಡಿಗೆಯ ಸಂಬಂಧದಂತಿದೆ. ನಾವೀಗ
ವೃದ್ಧರಾಗಿರಲು ಕಾರಣವೇನು? ನಾ
ಇದರ ಸಾಗುವಳಿದಾರರಿರುವದರಿಂದ
ದೆ ಕೊಡುತ್ತಿದ್ದುದಕ್ಕಿಂತ ಎರಡರಷ್ಟು
ಭೂಮಿಯೀಗ ಕೊಡುತ್ತದೆ. ಉಳುವವ
ಹೊಲದೊಡೆಯನಾದಲ್ಲಿ, ಎಲ್ಲರ ಜೀ
ದಲ್ಲೂ ಐಶ್ವರ್ಯ, ತೃಪ್ತಿ ಹಾಗೂ ಸ
ತಾನಾಗಿ ಬಂದು ನೆಲಸುತ್ತದೆ. ನವ
ಬೇಕಾದುದಕ್ಕಿಂತಲೂ ಹೆಚ್ಚು ಉ
ರು ಭೂಮಿಯತ್ತ ಕಣ್ಣೆತ್ತಿಯೂ ನ
ಡುವದಿಲ್ಲ. ಅದು ಬಹಳ ವಿಷಾದದ
ತ್ತು ಕಟ್ಟ ವಿಷಯವಿದೆ. ಅಲ್ಲದೆ ಮ
ಷ್ಯರು ಯಾವಾಗಲೂ ವಿಚಿತ್ರ ದ್ವಂ
ಸ್ವಭಾವದವರಿದ್ದಾರೆ. ಆ ವಿಷಯವ
ಬೋಧಿಸಲಿಕ್ಕೆ ನಾನಿರುವದಲ್ಲ."

ಪೊನ್ನಿಯು, ಕಣ್ಣಿಗೆ ನೆರಳು ಮಾ
ತ್ತ, ಮುರುಗನ ಸಿದ್ಧ ಹಾಗೂ ತಾತ್ವಿ
ಮಾತುಗಳ ಪ್ರವಾಹದ ನಡುವೆ, ಗ
ಯಾಗಿ ಹೇಳಿದಳು.

"ಅತ್ತ ನೋಡೀಂವ್ರಿ, ನಮ್ಮತ್ತ ಬ
ರೋ ಬರುತ್ತಿದ್ದಾರೆ. ಅವನು ಅಂಚೆ
ವನಲ್ಲ; ತಲಯಾರಿ ಇದ್ದಾನೆ. ತಲೆಯ
ಅಪಶಕುನದ ಹಕ್ಕಿ ಇದ್ದಾನೆ. ನೋ
ಡೋಣ."

ಹಳ್ಳಿಯ ಆ ಕಾವಲುಗಾರನನ್ನು
ಲ್ಲಿಂದಲೇ ಮಾತನಾಡಿಸಿ ಹಿಂದಕ್ಕೆ ಕ
ಹಿಸಿ ಬಿಟ್ಟು, ತೆಂಗಿನ ಕಾಯಿಗಳ ಬಲ
ತ್ಕಾರದ ಕಾಣಿಕೆಯನ್ನುಳಿಸಿಕೊಳ್ಳುವ
ಕಸ್ಕಾಗಿ ಮುರುಗನು ತೋಟದಿಂದ ಹೊ
ಗೆ ಅವನನ್ನು ಭೇಟಿಯಾಗಲು ಹೋ
ದನು.

'ಮುರುಗ, ನಿನ್ನ ಸುಖದ ದಿನಗಳ
ಲೆಕ್ಕ ಹಾಕಿಡಲ್ಪಟ್ಟವೇ ಇವೆ. ನಿನ್ನ ಧ
ಯು ಕಡಪದಿಂದ ಬಂದಿದ್ದಾರೆ. ನೀನಿ
ಗಲೆ ಬರಬೇಕೆಂದು ಹೇಳಿ ಕಳುಹಿಸಿದ್ದಾ
ರೆ. ಆಗಲೇ ವಿಚಿತ್ರ ಸುದ್ದಿಗಳು ಹಬ್ಬಿ
ಬಿಟ್ಟವೆ."

'ಅಂತಹ ಸುದ್ದಿಗಳೇನಿವೆ?"

'ನೀನೇ ಅವುಗಳನ್ನು ಕೇಳಿ ತಿಳಿದು
ಕೊಂಡು, ನನ್ನ ಊಹನೆ ಸರಿಯಾದಲ್ಲಿ
ತಿಳಿಸು. ಈ 'ದೊಂಬ್ಸಾನಿ ಸುದ್ದಿಗಳು' ಸು
ಳ್ಳಿನ 'ತಾಟಕಿ'ಗಳಾಗಿರದಿದ್ದಲ್ಲಿ ನಿನ್ನ ಸು
ಖದ ದಿನಗಳು ಮುಗಿದು ಹೋದುವೆ.
ನಿನ್ನ ಒಡೆಯರು ಇನ್ನು ಮುಂದಕ್ಕೆ ನಿನ್ನ
ಅಥವಾ ನನ್ನ ಒಡೆಯರಿರುವದಿಲ್ಲ, ಮ
ತ್ತು ನಾನು......"

ಗದರಿಕೆಯನ್ನು ಮುಗಿಸುವತ್ತ ಗಮ
ನ ಕೊಡದೆ, ತಲಯಾರಿಯು ಚಿಹ್ನೆ ಇರು
ವ ಉದ್ದ ಕೋಲನ್ನು ಬೀಸಿ, ವೇಗದಿಂದ
ಗದ್ದೆ ಕಡೆ ಹೋದನು.

ಅವನನ್ನು ಬೇಗನೆ ಕಳುಹಿಸಲು ಬ

(ಹನ್ನೊಂದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	$5\frac{1}{2}$
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	$6\frac{1}{2}$
24 ತಿಂಗಳಿಂದ	36 ತಿಂಗಳ ಕೆಳಗೆ	$6\frac{3}{4}$
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	$7\frac{1}{4}$
60 ತಿಂಗಳಿಂದ	84 ತಿಂಗಳ ಕೆಳಗೆ	$7\frac{3}{4}$
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೧೯	೧೩—೧—೧೯೬೬	No. 19

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರ್ಯಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಭಾರತದ ಫುಡ್ ಕೊರ್ಪರೇಶನಿನ [illegible]ಕ್ಷರಾಗಿ ಒಂದು ವರ್ಷ ಸೇವೆ ಸಲ್ಲಿಸಿ [illegible]ದೀಗ ರಾಜಿನಾಮೆಯಿತ್ತು ಪುನಃ [illegible]ಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ [illegible]ರೆಕ್ಟರ್ ಪದವಿಯನ್ನು ಸ್ವೀಕರಿಸಿದ

ಜನಪ್ರಿಯ ಮುಂದಾಳು

ಶ್ರೀ ಟಿ. ಎ. ಪೈ.

(ವಿವರಕ್ಕೆ ಬೇರೆ ಪುಟ ನೋಡಿರಿ)

ದೊಡ್ಡ ನಿರೀಕ್ಷೆ ಇಲ್ಲ

ಸೋವಿಯತ್ತಿನ ತಾಷ್ಕೆಂಟದಲ್ಲಿ ನಡೆಯುತ್ತಿರುವ ಭಾರತ—ಪಾಕಿಸ್ತಾನಿ ವರಿಷ್ಠರ ಸಭೆಯು ಇಷ್ಟರಲ್ಲೇ ಕೊನೆಗೊಂಡಿದೆ. ಸಭೆಯ ಕಾರ್ಯಕಲಾಪಗಳ ಬಗೆಗೆ, ಅದರ ಸಂಪೂರ್ಣ ವಿವರಗಳು ಬರುವ ವರೆಗೆ ಯಾವ ಅಭಿಪ್ರಾಯವನ್ನೂ ಸ್ಪಷ್ಟವಾಗಿ ವ್ಯಕ್ತ ಪಡಿಸುವುದು ಶಕ್ಯವಿಲ್ಲ. ಆದರೂ ಮಾತುಕತೆಗಳು ಆರಂಭವಾದ ಮತ್ತು ಅದು ಮುಂದುವರಿದ ಗತಿಯನ್ನು ಅವಲೋಕಿಸುವಾಗ, ಆರಂಭಕ್ಕೆ ಮೊದಲೇ ಊಹಿಸಿದ್ದ ಸತ್ಯ ಸಂಗತಿಗಳೇ ಘಟಿಸಿದುವು ಎಂದು ಹೇಳಲೇ ಬೇಕಾಗುತ್ತದೆ. ಭಾರತವು ಶಾಂತಿಪ್ರಿಯ ದೇಶ, ಅದ್ದರಿಂದ ಶಸ್ತ್ರಾಸ್ತ್ರಗಳಿಂದ ಹೋರಾಡಲು ಬಯಸುವುದಿಲ್ಲ. ಹಾಗೆಂದು, ತನ್ನ ಸಾರ್ವಭೌಮತೆಯನ್ನು ಯಾರಾದರೂ ಶಸ್ತ್ರಾಸ್ತ್ರಗಳ ಮೂಲಕ ಪ್ರಶ್ನಿಸಲು ಮುಂದೆ ಬಂದಾಗ ಕೈಕಟ್ಟಿ ಕುಳಿತಿರುವಷ್ಟು ದುರ್ಬಲ ರಾಷ್ಟ್ರವಲ್ಲ. ಈ ಕಾರಣದಿಂದಲೇ ಆತ್ಮರಕ್ಷಣೆಗಾಗಿಯೇ ಭಾರತವು ಅನ್ಯಾಯಿ ಪಾಕಿಸ್ತಾನವನ್ನು ಕಳೆದ ಸಪ್ಟಂಬರದಲ್ಲಿ ಎದುರಿಸಲೇ ಬೇಕಾಯಿತು. ಭಾರತದ ಈ ಕೃತಿಯನ್ನು ಮಾನವ ಜಗತ್ತು ಅರ್ಥಮಾಡಿಕೊಂಡಿದೆ. ಇನ್ನೂ ಅರ್ಥವಿಸಿಕೊಳ್ಳಲಾರದವರು ಯಾರಾದರೂ ಇರುವರಾದರೆ, ಅವರನ್ನು ಶುದ್ಧ ಪಕ್ಷಪಾತಿಗಳು ಎಂದೇ ಕರೆಯಬೇಕು.

ಉಭಯ ವರಿಷ್ಠರೂ ಶಾಂತಿಯನ್ನು ಬಯಸಿ ತಾಷ್ಕೆಂಟಿಗೆ ಕಾಲಿರಿಸಿದ್ದಾರೆ; ತಮ್ಮ ತಮ್ಮ ವಿವಾದಗಳನ್ನು ಶಾಂತ ವಿಧಾನಗಳಿಂದಲೇ ಬಗೆಹರಿಸ ಬಯಸಿದ್ದಾರೆ. ಪರಸ್ಪರ ಕಾದಾಟದಿಂದ ಇಡಿಯ ಭಾರತ ಉಪಖಂಡಕ್ಕೆ ಹಾನಿ ಖಂಡಿತ. ಶಸ್ತ್ರಾಸ್ತ್ರಗಳಿಗಿಂತಲೂ ಜನ ಜೀವನ ಮಟ್ಟ ಸುಧಾರಣೆಯತ್ತ ಗಮನ ಹರಿಸುವುದು ಎರಡೂ ದೇಶಗಳಿಗೂ ಅಗತ್ಯ—ಈ ಮುಂತಾದ ಭಾರತದ ನಿಲುವನ್ನು ಪಾಕ್ ಅಧ್ಯಕ್ಷ ಅಯ್ಯೂಬಖಾನರು ಈಗ ಬೆಂಬಲಿಸುತ್ತಿರುವುದು ಸಂತೋಷವೇ. ಆದರೆ, ವಿವಾದಕ್ಕೆ, ಭಿನ್ನತೆಗೆ, ಘರ್ಷಣೆಗೆ ಮೂಲ ಅವರೆನ್ನುವಂತೆ 'ಕಾಶ್ಮೀರ'. ಆದುದರಿಂದ "ಕಾಶ್ಮೀರ"ದ ಇತ್ಯರ್ಥ ಉಭಯತರರಿಗೂ ಸಮಾಧಾನವಾಗುವಂತಾದರೆ, ಮುಂದೆ ಎಲ್ಲವೂ ಸುಗಮವಾಗುವುದು—ಇದು ಅಯ್ಯೂಬರ ವಾದ ಸರಣಿ. ಇತ್ತೀಚೆಗಿನ ತನ್ನ ಅಮೇರಿಕನ್ ಸಂದರ್ಶನದ ವೇಳೆಯೂ ಫೀಲ್ಡ್ ಮಾರ್ಶಲ್ಲರು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯಲ್ಲಿ ಊದಿದುದೂ ಇದೇ ರಾಗವನ್ನು 'ಕಾಶ್ಮೀರ"ದ ಪ್ರಶ್ನೆಯು ಉಭಯತ್ರ ಗೌರವ ರೀತಿಯಲ್ಲಿ ಪರಿಹಾರಗೊಂಡರೆ, ಭಾರತದೊಡನೆ 'ಯುದ್ಧವಿಲ್ಲ" ಒಪ್ಪಂದವನ್ನು ಮಾಡಿಕೊಳ್ಳಲು ಸಿದ್ಧವಿರುವುದಾಗಿ ಅವರಂದಿದ್ದರು. ಅಂದರೆ, "ಕಾಶ್ಮೀರ"ದ ಮೇಲಿನ ಭಾರತದ ಸಾರ್ವಭೌಮಾಧಿಕಾರವನ್ನೇ ಅವರು ಪ್ರಶ್ನಿಸುತ್ತಾರೆ. ಭಾರತದ ನೀತಿ ಇದಕ್ಕೆ ತದ್ವಿರುದ್ಧ. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಿದಾಗ, ದೇಶೀಯ ಸಂಸ್ಥಾನಗಳ ವರಿಷ್ಠರಿಗೆ ಸ್ವಯಂ ನಿರ್ಣಯಾಧಿಕಾರವನ್ನು ಕೊಟ್ಟಿದ್ದರು. ಅಲ್ಲಿನ ರಾಜರು ಸ್ವತಂತ್ರವಾಗಿಯೂ ಇರಬಹುದು, ಭಾರತ—ಪಾಕಿಸ್ತಾನಗಳಲ್ಲಿ ಯಾವುದಾದರೊಂದಕ್ಕೆ ಸೇರುವುದಾದರೂ ಸೇರಬಹುದು. ಕಾಶ್ಮೀರವನ್ನು ಬಲಪ್ರಯೋಗ ಮೂಲಕ ಪಾಕಿಸ್ತಾನ ತನ್ನತ್ತ ಎಳೆಯಲು ಹವಣಿಸಿದಾಗ, ಅವರ ಮಹಾರಾಜರು ರಾಜ್ಯವನ್ನು ಭಾರತದಲ್ಲಿ ವಿಲೀನಗೊಳಿಸುವ ಒಡಂಬಡಿಕೆಗೆ ಸಹಿ ಹಾಕಿ, ಪಾಕ್ ಆಕ್ರಮಣವನ್ನು ತಡೆಯಲು ಭಾರತದ ಸಹಾಯ ಬಯಸಿದರು. ಆಗಲೇ ಕಾಶ್ಮೀರದ ಭವಿಷ್ಯ ನಿರ್ಧಾರವಾಯಿತು—ಕಾಯಿದೆ ರೀತ್ಯಾ. ಮುಂದೆ, ಭಾರತವು ಭದ್ರತಾ ಮಂಡಳದಲ್ಲಿ ಜನಮತಗಣನೆಯ ಬಗ್ಗೆ ಸಮ್ಮತಿಸಿದ್ದರೂ ಅದು ರಿಯಾಯಿತಿ ಮಾತ್ರವೆಂದೇ ಹೇಳಬೇಕು. ಆದರೆ, ಆಕ್ರಮಣ ತರವು ಪಾಕಿಸ್ತಾನ ಮಾಡದೆ ಇದ್ದುದರಿಂದ ಜನಮತಗಣನೆಯೂ ನಡೆಯಲಿಲ್ಲ. ಸಿಕ್ಕಿದ್ದ ಸೌಲಭ್ಯವನ್ನು ಪಾಕಿಸ್ತಾನ ಕಳೆದುಕೊಂಡಿತು. ಹಾಗಿರುವಾಗ, ಇನ್ನೂ ಇನ್ನೂ ಸತ್ತ ಗೊತ್ತುವಳಿಗೆ ಜೋತು ಬೀಳುವ ಪಾಕ್ ಕಾಶ್ಮೀರ ನೀತಿ ಅರ್ಥಶೂನ್ಯವಾಗಿದೆ. ಈಗ ಉಳಿದಿರುವ ಸಮಸ್ಯೆಯೆಂದರೆ, ಆಜಾದ ಕಾಶ್ಮೀರದಿಂದ ಪಾಕ್ ಸೇನೆ ಹಿಂದೆ ಸರಿಯುವುದು ಮಾತ್ರ, ಇಡಿಯ ಜಮ್ಮೂ ಕಾಶ್ಮೀರ ಭಾರತದ ಒಂದು ರಾಜ್ಯ.

ಅಂದು ಭದ್ರತಾ ಸಮಿತಿಯ ಗೊತ್ತುವಳಿಯನ್ನು ಪಾಕ್ ಮಾನ್ಯ ಮಾಡಲಿಲ್ಲ. ಇಂದೀಗಾದರೂ ಸಮರ ವಿರಾಮದ ಗೊತ್ತುವಳಿ ಮತ್ತು ಸೇನಾ ವಾಪಸಾತಿಯ ನಿರ್ಣಯಗಳನ್ನು ಅದು ಕಟ್ಟುನಿಟ್ಟಾಗಿ ಅನುಸರಿಸುತ್ತಿಲ್ಲ. ಶಾಂತಿ ಬಯಸಿ ತಾಷ್ಕೆಂಟಿಗೆ ಅಯ್ಯೂಬ್-ಭುಟ್ಟೋ ಪ್ರಭೃತಿಗಳು ಹೋಗಿದ್ದರೂ ಗಡಿಯಲ್ಲಿ ಮಾತ್ರ ಗುಂಡುಗಳ ಹಾರಾಟ ನಡೆಯುತ್ತಲೇ ಇದೆ. ಹಾಗಿರುವಾಗ, ಪಾಕಿಸ್ತಾನಕ್ಕೆ ಶಾಂತಿಯ ಇಚ್ಛೆ ಲವಲೇಶವೂ ಇಲ್ಲ; ಕಾಶ್ಮೀರದ ಮೇಲೆ ಪಾಕ್ ಧ್ವಜದ ಹಾರಾಟ ಮಾತ್ರ ಬೇಕು—ಎನಿಸುತ್ತದೆ. ಇದು ಎಂದಿಗೂ ಸಾಧ್ಯವಾಗಲಾರದು. ರಶ್ಯನ್ ಪ್ರಧಾನಿ ಕೋಸಿಗಿನ್ನರ ಭಗೀರಥ ಪ್ರಯತ್ನದಿಂದ ಉಭಯ ದೇಶಗಳ ನಡುವಣ ದ್ವೇಷ ಕಡಿಮೆಯಾಗುವ ಲಕ್ಷಣಗಳು ಗೋಚರವಾಗುವುದಿಲ್ಲ. ಆದರೆ, ಸಂಯುಕ್ತ ರಾಷ್ಟ್ರ ಸಂಘವು ಗೊತ್ತುವಳಿಯಂತೆ ಉಭಯತರರ ಸೇನೆಗಳು ತಮ್ಮ ಪೂರ್ವದ ನೆಲೆಗಳಿಗೆ ಮರಳುವ ಬಗ್ಗೆ ಮತ್ತು ಸಮರ ವಿರಾಮವನ್ನು ಸಂಪೂರ್ಣವಾಗಿ ಪರಿಪಾಲಿಸುವ ಸಂಬಂಧದಲ್ಲಾದರೂ ಒಮ್ಮತವು ಸಾಧಿತವಾಗಿ ಕಾರ್ಯಗತವಾಯಿತೆಂದರೆ ಅದೇ ದೊಡ್ಡ ಸಾಧನೆ. ಇದನ್ನು ಬರೆಯುವ ವರೆಗೆ ಬಂದ ವರದಿಗಳಂತೆ ಇದಕ್ಕಿಂತ ಹೆಚ್ಚಿನ ನಿರೀಕ್ಷೆಯನ್ನು ಯಾರೂ ಇಟ್ಟುಕೊಳ್ಳುವಂತಿಲ್ಲ.

ಶ್ರದ್ಧಾಂಜಲಿ

ನೆಹರೂ ಅನಂತರ ಅವರ ಉತ್ತರಾಧಿಕಾರಿಯಾಗಿ ಬಂದ ಲಾಲಬಹದೂರ್ ಶಾಸ್ತ್ರಿಯವರು ನೆಹರೂ ಪಥಗಾಮಿಯಾಗಿ ದೇಶದ ಗೌರವವನ್ನು, ಸ್ಥಾನಮಾನವನ್ನು ಉಳಿಸಿದರು, ಬೆಳೆಸಿದರು. ಒಂದೂವರೆ ವರ್ಷಗಳ ಅಲ್ಪ ಕಾಲದಲ್ಲೂ ಬೃಹದ್ದೇಶದ ಪ್ರಧಾನಿಯು ಎದುರಿಸಬೇಕಾಗುವ ಎಲ್ಲ ಸಮಸ್ಯೆಗಳನ್ನೂ ಅವರು ಎದುರಿಸಿದರು, ಜಯಿಸಿದರು. ತಾಷ್ಕೆಂಟ್ ಮಾತುಕತೆಗಳನ್ನು ನಡೆಸಿ, ಜಂಟಿ ಹೇಳಿಕೆಗೆ ಸಹಿಹಾಕಿ ಇಟ್ಟು, ಅದನ್ನು ಕಾರ್ಯರೂಪಕ್ಕೆ ತರಲು ನಮ್ಮನ್ನಿರಿಸಿ ಅಗಲಿದರು.

ಜನತೆಯ ಲಾಲ್, ದೇಶದ ಬಹದೂರ್, ಲೋಕದ ಶಾಸ್ತ್ರಿ—ಲಾಲ ಬಹದೂರ್ ಶಾಸ್ತ್ರಿಯವರ ಮಹಾನ್ ಆತ್ಮ ಚಿರಶಾಂತಿಯನ್ನು ಪಡೆಯಲಿ.

ಜನನ: ೨—೧೦—೧೯೦೪

ಮರಣ: ೧೧—೧—೧೯೬೬

ವಿನಂತಿ

ಪ್ರಜಾರಾಜ್ಯ ವಿಶೇಷ ಸಂಚಿಕೆಯ ಕಾರ್ಯಬಾಹುಲ್ಯದಿಂದಾಗಿ ಬರುವ ವಾರದ ಅಂದರೆ ತಾ. 20—1—'66ರ ನವಯುಗ ಸಂಚಿಕೆ ಪ್ರಕಟವಾಗುವುದಿಲ್ಲ. ವಾಚಕರು ಗಮನಿಸಬೇಕಾಗಿ ವಿನಂತಿ.

ಮೆನೇಜರ್.

ಕೃತಜ್ಞತಾ ಸಮರ್ಪಣೆ

ನನ್ನ ಪುತ್ರಿ ಚಿ| ಸೌ| ಉಷಾ ಇವಳ ವಿವಾಹ ಸಮಾರಂಭವು ದಿ| ಕಕ್ಕುಂಜೆ [illegible] ಶೀನ ಶೆಟ್ರ ಪುತ್ರ ಚಿ| ದಿನಕರ ಶೆಟ್ಟಿ, ಬಿ.ಎ., Extension Officer (Industries) ಉಡುಪಿ ಇವರೊಂದಿಗೆ ಇದೇ ತಾ. 2–12–೬೫ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದದಿಂದ ವಿಜೃಂಭಣೆಯಿಂದ ನೆರವೇರಿತು.

ಈ ಶುಭ ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದ, ಉಡುಗೊರೆಗಳನ್ನಿತ್ತ, ಹಾಗೂ ಶುಭಕೋರಿಕೆಯನ್ನು ಕಳುಹಿಸಿ ಕೊಟ್ಟ ಮಹನೀಯರಿಗೆಲ್ಲರಿಗೆ ಪ್ರತ್ಯ ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸಲು ಅಸಾಧ್ಯವಾದುದರಿಂದ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಬಿ. ರಾಮರಾಯ ಶೆಟ್ಟಿ, B.A.L.T.,

ರಿಟಾಯರ್ಡ್ ಹೆಡ್‌ಮಾಸ್ಟರ್, ಉಡುಪಿ.

ಗೇಹ ರಾಜ್ಯದಲ್ಲಿ

ನಾಲಗೆಯಲ್ಲ ಹೃದಯ ಮಾತಾಡಬೇಕು

"ನೋಡಿದ್ರ್ಯಾ?'

'ಏನನ್ನ?"

"ಅಲ್ರಿ, ಒಬ್ಬನ ಮೇಲೆ ಆರೋಪ ಹೊರಿಸ್ಬೇಕಾದ್ರೆ ಮುಂದೂ ಹಿಂದೂ ಬಹುದೂರ ನೋಡಿಕೊಳ್ಬೇಕು...'

'ಸರಿಯಪ್ಪ, ಏನಾಯ್ತು ಈಗ? ಯಾರು ಆರೋಪ ಹೊರಿಸಿದ್ರು? ನಾನಂತೂ ಬಂದವ ಒದ್ದೆಗಾಲಲ್ಲೇ ಕುಳಿತಿದ್ದೇನೆ...'

"ಹ್ಞಾನ್ನಿ...ಆದ್ರೂ ನೋಡಿ, ನಮ್ಮ ಬ್ರಿಟನ್ನಿನ ಪ್ರಧಾನಿ ವಿಲ್ಸನ್ನರ ಮೇಲೆ ನೀವೆಲ್ಲಾ ಅಲ್ಲ ಸಲ್ಲದ ಅಪವಾದ ಹಾಕಿದ್ರಿ..."

"ಶೂ...ಹಾಗೆಲ್ಲಾ ಅನ್ನಬೇಡ...'

"ಮತ್ತೇನನ್ನ ಬೇಕು?"

"ನಾವೆಲ್ಲಾ ಅನ್ನ..."

"ಯಾಕೆ?"

"ನೋಡು, ನೀನನ್ನೋ ಸಂಗತಿ ಭಾರತ—ಪಾಕ್ ಹೋರಾಟದ ವೇಳೆಯದ್ದು..."

"ಹ್ಞಾನ್ನಿ..."

"ನಾನ್ಯಾಕೆ ಹ್ಞಾಂ ಅನ್ನಬೇಕ? ಕೇಳೋವ್ರು ಹ್ಞಾಂ ಅನ್ನಬೇಕು ತಾನೆ?"

"ಸುರುವಾಯ್ತು ಇವ್ರದ್ದೊಂದು... ಅಲ್ರಿ, ಶಿವ ಪೂಜೆಯಲ್ಲಿ ಕರಡಿ ಬಿಡೋ ಕಲೆ ನಿಮಗೆ ಪರಿಪೂರ್ಣ ಕರಗತವಾಗಿದೆ...."

"ಸದ್ಯ ಮರ್ಯಾದೆ ಉಳಿಸಿದೆಯಲ್ಲಾ...."

"ಹ್ಞಾಂ....ಏನಂದಿರಿ?"

"ಮತ್ತೇನೂ ಇಲ್ಲಾನ್ನ. ಪಾಯಸದಲ್ಲಿ ಪಾಷಾಣ ಎಸೆಯೋ ಕಲೆ ಅನ್ನಿಲ್ಲ ತಾನೆ?"

"ಇದ್ದದ್ದನ್ನ ಇದ್ದಂತೆ ಹೇಳ್ಬೇಕು. ನೋಡಿ, ನಮ್ಮ ಯಶೋಧರಮ್ಮ... ಎಷ್ಟೊಂದು ಧೈರ್ಯ? ಸಿಪಾಯಿ! ಖಂಡಿತಕ್ಕೂ ಆಕೆ ಒಬ್ಬಾಕೆ ಮಹಾ ನಾರಿಯಾಗುತ್ತಾರೆ ನೋಡಿ...."

"ಸರೀನ್ನು. ಆದ್ದರಿಂದ್ಲೇ ಗಾಂಧಿ—ದಾಸಪ್ಪ ನೀತಿ, ಪ್ರಶ್ನೆ—ಉತ್ತರ ಅಂದು ರಾಜಿನಾಮೆಯಿತ್ತರು...."

'ಮತ್ತೆ ಎಂಥದರಿ ನಿಮ್ಮದು? ಜನರು ಹೆಚ್ಚೆಚ್ಚು ಕುಡಿದರೆ ಸರಕಾರಕ್ಕೆ ಹೆಚ್ಚೆಚ್ಚು ದುಡ್ಡು ಸಿಗುತ್ತೆ ಅಂತ ಡಂಗುರ ಸಾರ್ಲೋವ್ರು.."

"ಇದೂ ಸತ್ಯಾನ್ನ...."

"ಹೌದೌದು. ನಿಮ್ಮ ಸರಕಾರಕ್ಕೆ ಬೇಕಾಗಿರೋದು ಹಣ. ತೆರೆಯಲಿ ಗಲ್ಲಿಗಲ್ಲಿಯಲ್ಲಿ ಮದ್ಯದಂಗಡಿಗಳನ್ನು, ಜೂಜಾಟದ ಕೇಂದ್ರಗಳನ್ನು, ಹಾದರಗಿತ್ತಿಯರ ವಾಟಿಕೆಗಳನ್ನು ಬೆಳೆಸಲಿ, ಕಳ್ಳರ ಗುಂಪನ್ನು..."

"ಸಾಕು ಕಣೆ... ಸಾಕುಮಾಡು..."

"ಏಕೆ? ಸತ್ಯವನ್ನು ಹೇಳಬೇಕಾದರೂ ಹೆದರಬೇಕೆ?"

"ಹೆದರೋದು ಬೇಡ. ಆದರೂ ಸತ್ಯಂ ಬ್ರೂಯಾತ್ ಎಂದವರೇ ಪ್ರಿಯಂ ಬ್ರೂಯಾತ್ ಅಂದಿದ್ದಾರೆ. ಅಷ್ಟು ಮಾತ್ರವಲ್ಲ....'

"ಅಯ್ತಪ್ಪ, ಮತ್ತೂ ಏನಂದಿದ್ದಾರೆ?"

'ನ ಬ್ರೂಯಾತ್ ಸತ್ಯಮಪ್ರಿಯಂ...."

"ಅಂದರೆ, ಮೆಚ್ಚಿಸಲಾರದ ಸತ್ಯವನ್ನು ಆಡಬಾರದೂಂತಲ್ಲವೆ?...."

"ಹ್ಞಾಂ..."

"ಅದೂ ಸರೀನ್ನಿ...ನಮ್ಮ ದಾಸರು ಅನ್ನಲಿಲ್ಲವೆ? ಒಕ್ಕಣ್ಣರ ರಾಜ್ಯದಲ್ಲಿ ಒಂದು ಕಣ್ಣನ್ನು ಮುಚ್ಚಿಕೊಂಡಿರಬೇಕೂಂತ..."

'ಎಲ್ಲರೂ ಅನ್ನುತ್ತಾರೆ....'

"ನೀವು ಅನ್ನುತ್ತೀರಾ?'

"ಅನ್ನದೆ ಏನು? ಆದರೆ,ಅದನ್ನು ಈ ಮೊದಲೇ ಯಾರಾದರೂ ಅಂದಿರುತ್ತಾರೆ ಅಷ್ಟೆ...."

"ಮತ್ತೆ ಎಂಥವರು ನೀವು?'

"ಎಂಥವರು' ಎಂದರೆ? ನಿನ್ನಂಥವನು....'

"ಸರಿಯಾಯ್ತು ಬಿಡಿ...."

'ಏನು?"

'ನನ್ನ—ನಿಮ್ಮ...."

'ಅದೇನು ಈಗ ಗೊತ್ತಾಗೋದೇನು?'

"ಮತ್ತೆ?"

"ನಿನ್ನ ತವರಿಗೆ ಮೊದಲಬಾರಿ ಬರುವುದಕ್ಕೆ ಮೊದಲೇ...."

"ಓ ನೀವು ಭಾರಿ ಹುಷಾರಿದ್ದೀರಿ...."

'ಆದ್ರಿಂದ್ಲೆ ನೋಡು ನಿನ್ನಂಥವಳನ್ನೂ..."

"ಏನು ಹೇಳಿ ಹೇಳಿ..."

"ಬೇಡ...ಬೇಡ...'

"ಯಾಕೆ ಬೇಡ?"

"ನಬ್ರೂಯಾತ್ ಪ್ರಿಯಂ ಅಪ್ರಿಯಂ...."

'ಅಯ್ಯೋ—ಪಾರ್ವತಿ ಪರಮೇಶ್ವರರು, ಅಹಲ್ಯಾ—ಗೌತಮರಂತಿರುವಾಗ..'

'ಅದು ಏನೇ ಇರಲಿ, ನೀನು ಮೊದಲು ಮಾನವಿ, ಅನಂತರ ನನ್ನವಳು..."

"ಅದುದರಿಂದ...."

'ಮಾನವ ಸಹಜವಾದ ಗುಣಗಳು ನಿನ್ನ ರಕ್ತದಲ್ಲಿ..."

'ಮತ್ತೆ ನೀವು ಮಾತ್ರ...'

"ನಾನೂ ಹಾಗೆಯೇ ಅನ್ನು....

'ಪತಿ-ಪತಿಯರು ಮನವನ್ನು ಕದ್ದಾಡಬಾರದು ನೋಡಿ....'

"ಸರಿಯೇ, ನಿಜವಾದ ದಂಪತಿಗಳು ಒಬ್ಬರ ಹೃದಯವನ್ನು ಮತ್ತೊಬ್ಬರು ತಿಳಿದು ಕೊಳ್ಳುತ್ತಾರೆ. ಅವರ ನಾಲಿಗೆಗಿಂತ ಹೆಚ್ಚು ಹೃದಯ ಮಾತಾಡುತ್ತದೆ. ನಾಲಿಗೆ ಒಂದೊಮ್ಮೆ ಸುಳ್ಳಾಡಲೂ ಬಹುದು; ಆದರೆ ಹೃದಯ ಸದಾಕಾಲ ಸತ್ಯವನ್ನೇ ಆಡುತ್ತದೆ...."

"ಇದೆಂತದನ್ನಾ, ವೇದಾಂತ?"

ವೇದಾಂತವಲ್ಲವಮ್ಮಾ, ಇದು ಸತ್ಯ ನಿತ್ಯ ಸತ್ಯ...'

"ಅಂದ್ರೆ ಬಾಯಿಗಿಂತ ಹೃದಯ ದೊಡ್ಡದು...."

"ಹ್ಞಾ....ಮಾತಿಗಿಂತ ಕೃತಿ ದೊಡ್ಡದು..."

'ಸರೀನ್ನಿ, ಆದರ್ಶದ ಲೆಕ್ಚರ್ ನೋಡಿ ಬಿಡೋದಕ್ಕಿಂತ ಒಂದನ್ನಾದರೂ ಕೃತಿಯಲ್ಲಿ ತರುವುದು ಹೆಚ್ಚಿನದು. ನಮ್ಮ ಯಶೋಧರಮ್ಮಾ ನಿಜಕ್ಕೂ ಒಳ್ಳೆಯದನ್ನೇ ಮಾಡಿದರು...'

"ಯಶೋಧರಮ್ಮಾ ನಿಮ್ಮವರು ಮಾತ್ರವಲ್ಲ, ಅವರಲ್ಲಿ ನಮಗೂ ಪಾಲಿದೆ..."

"ಅದು ಹೇಗೆ? ಅವರು ನಮ್ಮವರು, ನಮ್ಮ ಸ್ತ್ರೀ ವರ್ಗಕ್ಕೆ ಸೇರಿದವರು....'

'ಅದೇನೇ ಇರಲಿ, ಒಳ್ಳೆಯದಾದ ಒಂದು ವಸ್ತುವಿನ ಮೇಲೆ ಎಲ್ಲರಿಗೂ ಅಭಿಲಾಷೆಯಿದೆ. ಸೂರ್ಯ—ಚಂದ್ರ—ಗಾಳಿಗಳು ಬರಿಯ ಒಂದು ದೇಶದವರಾಗಿ ಉಳಿದಿಲ್ಲ ನೋಡು; ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಅವರನ್ನು ನನ್ನವರು ಎನ್ನುವ ಅಧಿಕಾರವಿದೆ...."

"ಹ್ಞಾಂ.... ನಿಮ್ಮ ಮಾತಿನ ಮರ್ಮ ಅರ್ಥವಾಯಿತು ಬಿಡಿ. ಆದರೆ ನೋಡಿ, ನೀವೆಲ್ಲಾ ವಿಲ್ಸನ್ನರನ್ನು ಬೈದಿರಲ್ಲಾ... ನೋಡಿ, ಅದರ ಪರಿಣಾಮ...."

(ಒಂಭತ್ತನೇ ಪುಟ ನೋಡಿರಿ)

ನೀವು ನಿಮ್ಮ ಮಕ್ಕಳನ್ನು ಪ್ರೀತಿಸುವಿರಾ ನಿಮ್ಮ ಕುಟುಂಬವನ್ನು ನಿಯಂತ್ರಣ ಗೊಳಿಸಿರುವಿರಾ

ತಾಯಿತಂದೆಯರ ಪ್ರೀತಿಯು ಅನುಭವದಲ್ಲಿ ಹೆಚ್ಚು. ಅಲ್ಲದೆ ಪ್ರೀತಿಯು ಯೋಜನೆ ಮತ್ತು ಕ್ರಿಯೆಗಳಲ್ಲಿಯೂ ಇರಬೇಕು. ತಮ್ಮ ಮಕ್ಕಳಿಗೆ ಒಳ್ಳೆಯ ಪುಷ್ಟಿಕರವಾದ ಆಹಾರ, ಬಟ್ಟೆ, ಆರೋಗ್ಯ ಮತ್ತು ವಿದ್ಯಾಭ್ಯಾಸ ಇವುಗಳ ವಿಷಯದಲ್ಲಿ ಹೆಚ್ಚು ಪ್ರಯತ್ನಿಸಬೇಕು.

ಸುಖಮಯ ಜೀವನಕ್ಕೆ ಪ್ರಯತ್ನಿಸಿ

ನಿಮಗೆ ಯೋಗ್ಯತೆ ಇರುವಷ್ಟು ಮಾತ್ರ ಮಕ್ಕಳನ್ನು ಪಡೆಯಿರಿ... ನೀವು ಅವರಿಗೆ ತೃಪ್ತಿಯಾಗಿ ಕೊಡಲು ಇರುವಾಗ ಮಾತ್ರವೇ. ನಿಮ್ಮ ಸಂಸಾರವು ಯಾವಾಗಲೂ ಸಂತೋಷದಲ್ಲಿರಬೇಕು.

ಏಳಿಗೆಗೆ ಪ್ರಯತ್ನಿಸಿ

ನಿಮ್ಮ ಆದಾಯವು ಇದ್ದಂತೆ ನಿಮ್ಮ ಸಂಸಾರಕ್ಕೆ ಸುಖವಾದ ಊಟ ಉಡಿಗೆ. ನೀವು ಕುಟುಂಬ ನಿಯಂತ್ರಣ ಮಾಡಿದರೆ ನಿಮ್ಮ ಊಟ ಉಡಿಗೆಗಳು ಇನ್ನೂ ಉತ್ತಮ ಗೊಳ್ಳುವುವು. ಮತ್ತು ಉತ್ತಮ ವಿದ್ಯಾಭ್ಯಾಸವನ್ನು ಕೊಡಲು ಅನುಕೂಲ ಇದು ನಿಮ್ಮ ಅಭಿವೃದ್ಧಿಗೆ ಬಹು ಮುಖ್ಯ... ನಿಮ್ಮ ದೇಶಕ್ಕೂ ಅಗತ್ಯ.

ನಿಮ್ಮ ಹತ್ತಿರದ ಕುಟುಂಬ ನಿಯಂತ್ರಣ ಕೇಂದ್ರವನ್ನು ಸಂದರ್ಶಿಸಿ.

ವೈದ್ಯರು ನಿಮ್ಮ ಸ್ನೇಹಿತರು ಮತ್ತು ಸಲಹೆಗಾರರು ಅವರು ಅಲ್ಲಿದ್ದು ನಿಮ್ಮ ಕುಟುಂಬ ನಿಯಂತ್ರಣಕ್ಕೆ ಸಹಾಯನೀಡುವರು.

ನಿಮ್ಮ ಸಂಸಾರವು ಆರೋಗ್ಯಕರ ಸಂಸಾರವಾಗಿದ್ದರೆ ದೇಶಕ್ಕೆ ಅಧಿಕಬಲ

DA 65/321

ಸಾಹಿತ್ಯ ನಂದನ

ಸಾಹಿತ್ಯ ಮತ್ತು ಸಮಾಜ

ಎಂ ನಾರಾಯಣ ಭಟ್ಟ,
ಶ್ರೀ ಪೂರ್ಣಪ್ರಜ್ಞ ಕಾಲೇಜು, ಉಡುಪಿ.

"ಸಾಹಿತ್ಯವು ಜೀವನ ಚಿತ್ರಣ" (Literature is the expression of life) ಹಾಗೂ "ಸಾಹಿತ್ಯವು ಸಮಾಜದ ಕನ್ನಗನ್ನಡಿ" (Literature is the mirror of society) ಯಾಗಿದೆ ಸಾಹಿತ್ಯ ಮತ್ತು ಸಮಾಜದ ಸಂಬಂಧ ಅತ್ಯಂತ ನಿಕಟವಾಗಿದೆ ಹಾಗೂ ಅವೆರಡೂ ತಮ್ಮ ಉತ್ಥಾನ-ಪತನಗಳಿಗೆ ಪರಸ್ಪರ ಸಹಾಯಕಗಳಾಗಿವೆ, ಪರಸ್ಪರ ಪೂರಕಗಳಾಗಿವೆ ಜೀವನ ವಿಕಾಸವಿಲ್ಲದೆ ಸಾಹಿತ್ಯದ ಉದಯವೂ ಇಲ್ಲ, ವಿಕಾಸವೂ ಇಲ್ಲ. ಮಾನವ ಜೀವನದ ವಿಕಾಸದ ಗತಿಯನ್ನು ಅವಲೋಕಿಸಿದಾಗ, ಕಾಡಾಡಿಯಾಗಿ ಅನಾಗರಿಕ ಜೀವನವನ್ನು ಸಾಗಿಸುತ್ತಿದ್ದ ಮಾನವ ಕುಲವನ್ನು ಸಂಘಟಿಸಿ ಸುಸಂಸ್ಕೃತವನ್ನಾಗಿ ಮಾಡಲು ಭಾಷೆ ಮತ್ತು ಸಾಹಿತ್ಯ ಅಮೂಲ್ಯವಾದ ಕಾಣಿಕೆಯನ್ನಿತ್ತುದು ವಿದಿತವಾಗುತ್ತದೆ. ಅಸ್ತವ್ಯಸ್ತವಾದ ಮಾನವಕುಲದ ಸಂಘಟನೆಗೆ ಭಾಷೆಯು ಕಾರಣವಾಗಿದ್ದರೆ, ಸಂಘಟಿತವಾಗಿ ಸಮಾಜವನ್ನು ಕಟ್ಟಲೆನಿಂತ ಜನಾಂಗವನ್ನು ಸುಸಂಸ್ಕೃತವನ್ನಾಗಿಸಲು ಸಾಹಿತ್ಯ ನೆರವಾಯಿತು ಮನುಷ್ಯ ಪಶುವಿನ ಮಟ್ಟದಿಂದ ಮೇಲಕ್ಕೇರಿದ ಹಾಗೆ ಅವನಲ್ಲಿ ತನ್ನ ಹೃದಯದ ಭಾವನೆಗಳನ್ನು ಮನಸ್ಸಿನ ವಿಚಾರಗಳನ್ನು ಪ್ರಕಟಗೊಳಿಸುವ ಇಚ್ಛೆ ಬಲಿತಾಗ ಭಾಷೆಯು ಉದಯವಾಯಿತು. ಭಾಷೆಯ ಉದಯವೆಂದರೆ ಸಾಹಿತ್ಯದ ಉದಯವೇ ಸರಿ. ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ. ಸಾಹಿತ್ಯದ ಮೂಲ ಸತ್ವವು ಅಭಿವ್ಯಕ್ತಿಯ ಸಾಧನವಾದ ಭಾಷೆಯಲ್ಲಿ ಇರುತ್ತದ ಸೌಂದರ್ಯದ ಪ್ರಜ್ಞೆ ಮನುಷ್ಯನಷ್ಟೇ ಪ್ರಾಚೀನವಾಗಿದೆ. ಜನ ಒಳೆದಂತೆ ಎಲ್ಲಿ ಭಾಷೆ ಬೆಳೆದಿದೆಯೋ ಅಲ್ಲಿ ಸಹಜ ಸ್ಫೂರ್ತಿಯಾದ ಸಾಹಿತ್ಯವೂ ಬೆಳೆದಿದೆ, ಬೆಳೆಯುತ್ತಿದೆ. ಮನುಷ್ಯನ ಮನಸ್ಸು ಬೆಳೆದಂತ ಅವನು ಹೊಸ ಹೊಸ ಹಂಬಲಗಳನ್ನು ಪಡೆಯುತ್ತಾನೆ, ಹೊಸ ಹೊಸ ಸಂಸ್ಕಾರಗಳನ್ನು ಹೊಂದುತ್ತಾನೆ. ಅಂದಂದಿನ ಮಟ್ಟಿಗೆ ಯೋಚಿಸುವ ಅವಗೆ ಹಿಂದು ಮುಂದನ್ನು ಬಗೆಯುತ್ತಾನೆ. ತಾನು ಕಂಡ ಚೆಲುವು, ಉಂಡ ನಲಿವು ತನ್ನಂತೆಯೇ ಇತರರಿಗೂ ದೊರೆಯಲಿ, ಇಂದಿನಂತೆ ಮುಂದೆಯೂ ದೊರೆಯಲಿ ಎಂಬ ಸಾಮಾಜಿಕ ಪ್ರಜ್ಞೆ ಅವನಲ್ಲಿ ಮೂಡಿ ಬಂದಾಗ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಯೊದಗುತ್ತದೆ, ಭೂಮಿಕ ಸಿದ್ಧವಾಗುತ್ತದೆ. ಶಾಶ್ವ ಜೀವನದ ಗರುತಾದ ನಾಗರಿಕತೆ, ಅಂತರಿಕ ಜೀವನದ ಗುರುತಾದ ಸಂಸ್ಕೃತಿ— ರಸಿಕತೆಗಳು ಒಂದು ನೆಲೆಗೆ ಬಂದಾಗ ಮಾತ್ರ ಸಾಹಿತ್ಯವು ಉದಯಿಸುತ್ತದೆ, ಪರಂಪರೆಯಾಗಿ ಮುನ್ನಡೆಯುತ್ತದೆ. ಸಾಹಿತ್ಯವು ಸಮಾಜದ ಪ್ರತಿಬಿಂಬ ಮಾತ್ರವಲ್ಲದೆ, ಸಾಮಾಜಿಕ ಜೀವನದ ದರ್ಶನವೂ ಆಗಿದೆ ಹಾಗೂ ಒಂದು ಜನಾಂಗದ ನೈತಿಕತೆ, ಅಭಿರುಚಿ, ಮತ್ತು ಸಂಸ್ಕೃತಿಗಳ ಪ್ರತೀಕವೂ ಆಗಿದೆ, ಮಾನದಂಡವೂ ಆಗಿದೆ

ಸಾಹಿತ್ಯವನ್ನು ಸಮಾಜದಿಂದ ಹೊರತುಪಡಿಸಲು ಸಾಧ್ಯವಿಲ್ಲ ಸಾಹಿತ್ಯದ ಹುಟ್ಟು, ಸಾಮಾಜಿಕ ಜೀವನದಲ್ಲಿಯೇ ಸಾಹಿತ್ಯವು ಸಮಾಜವನ್ನೇ ಮೂಲ ವಸ್ತುವನ್ನಾಗಿಟ್ಟುಕೊಂಡು, ಜೀವನದ ಆಶೆ–ಆಕಾಂಕ್ಷೆ, ಒಲವು—ನಿಲುವು, ಸುಖದುಃಖಗಳನ್ನು, ವಿಚಾರ ವಿಮರ್ಶೆಗಳನ್ನು ಕಲಾತ್ಮಕವಾಗಿ ರೂಪಿಸುತ್ತದೆ, ಜೀವನದ ಆಶೆ-ಆಕಾಂಕ್ಷೆಗಳನ್ನು ಪೂರೈಸುವ ಸಾಧನವಾಗಿದೆ, ಜೀವನದ ಸಮಸ್ಯೆಗಳನ್ನೂ ಬಗೆಹರಿಸುವ, ಆಚಾರ-ವಿಚಾರಗಳನ್ನು ವಿವೇಚಿಸುವ ಮಾಧ್ಯಮವಾಗಿದೆ ಅಭಿವ್ಯಕ್ತಿ ಸಾಧನವಾದ ಭಾಷೆಯ ಮೂಲಕ ರೂಪುಗೊಂಡ ಸಾಮಾಜಿಕ ಜೀವನದ ಪ್ರತಿರೂಪವೇ ಸಾಹಿತ್ಯ ಸಾಹಿತ್ಯದ ಗುರಿ ಮಾನವ ಕಲ್ಯಾಣವಾಗಿದೆ, ಮಾನವನನ್ನು ಪರಿಪೂರ್ಣತೆಯೆಡೆಗೊಯ್ಯುವುದಾಗಿದೆ ಸಾಹಿತ್ಯವು ಜೀವನದ ಕುಂದುಕೊರತೆಗಳನ್ನು, ಲೋಪದೋಷಗಳನ್ನು ಸಮಾಜಕ್ಕೆ ಎತ್ತಿತೋರಿಸುವುದಲ್ಲದೆ, ಅವುಗಳನ್ನು ನಿವಾರಿಸಿ ಉನ್ನತಿಯತ್ತ ಸಾಗುವ ಮಾರ್ಗದರ್ಶನವನ್ನೂ ನೀಡುತ್ತದೆ.

ಸಾಹಿತ್ಯಕ್ಕೂ ಸಮಾಜಕ್ಕೂ ಇರುವ ನಿಕಟ ಸಂಬಂಧವನ್ನು ಅವಲೋಕಿಸಿದ ತರುವಾಯ ಸಾಹಿತ್ಯದ ಸ್ವರೂಪ ಮತ್ತು ಮೌಲ್ಯಗಳತ್ತ ಕ್ಷ-ಕಿರಣವನ್ನು ಬೀರುವುದು ಅಗತ್ಯವಾಗಿದೆ ಮಾನವನ ಮನಸ್ಸಿನ ಜಟಿಲ ವಿಚಾರಗಳನ್ನೂ ಹೃದಯದ ಮಧುರ ಭಾವಗಳನ್ನೂ ಭಾವನೆಯನ್ನೂ ವಿಸ್ಮೃತಿಯ ಮುಸುಕಿನಿಂದ ಕಾಪಾಡಿ, ಚಿರಸ್ಥಾಯಿಯಾಗಿರಿಸಲು ಲಿಪಿಯ ಸೃಷ್ಟಿಯಾಯಿತು ವಿಚಾರಗಳು ಲಿಪಿಬದ್ಧವಾದಾಗ ಸಾಹಿತ್ಯದ ಉದಯವಾಯಿತು. "Literature is the vital record of what men have seen in life, what they have experinced of it, what they have thought and felt about those aspects of it which have the most immediate and enduring interest for all of us" ಎಂಬುದು ಸಾಹಿತ್ಯದ ಸ್ವರೂಪದ ವಿವರಣೆಯಾಗಿದೆ ನಿರ್ದಿಷ್ಟವಾದ ಲಕ್ಷಣಗಳಿಲ್ಲದಿರುವಾಗ "ಸಾಹಿತ್ಯ" ಎಂಬ ಈ ವ್ಯಾಪಕ ಪದವನ್ನು ಕುರಿತು "ಉತ್ಕೃಷ್ಟ ವಿಚಾರಗಳ ಸರಸಾಭಿವ್ಯಕ್ತಿಯನ್ನು ಲಿಪಿಬದ್ಧಗೊಳಿಸುವುದೇ ಸಾಹಿತ್ಯ" ವೆಂದು ಎನ್‌ಸೈಕ್ಲೋಪೀಡಿಯಾದ ಪರಿಭಾಷೆಯಿದೆ. ಅನೇಕ ಗ್ರಂಥಗಳ ಸಮೂಹವೇ ಸಾಹಿತ್ಯವೆಂಬ ವ್ಯಾಪಕವಾದ ಅರ್ಥವೂ ಇದೆ. ಇದರಿಂದ ಸಾಹಿತ್ಯದಲ್ಲಿ ವಿಚಾರಕ್ಕಿರುವ ಸರ್ವೋತ್ಕೃಷ್ಟ ಸ್ಥಾನದ ಅರಿವಾಗುವುದು. "ಹಿತೇನ ಯುಕ್ತ ಸಹಿತಂ, ತಸ್ಯ ಭಾವಃ ಸಾಹಿತ್ಯಂ' ಹಾಗೂ "ಸರ್ವಾನಾಂ ಜನಾನಾಂ ಉಪಕಾರಕಂ ಸಾಹಿತ್ಯಂ" ಎಂಬು ಸಾಹಿತ್ಯದ ವ್ಯಾಖ್ಯೆಗಳೂ ಇವೆ. ಶಬ್ದ ಶಕ್ತಿ ಸಾಹಿತ್ಯದಲ್ಲಿ ಪರಾಕಾಷ್ಠತೆಯನ್ನು ಮುಟ್ಟುತ್ತದೆ. ಮನುಷ್ಯನು ಶಿಷ್ಟನಿರಲಿ, ಇಲ್ಲದೆ ಇರಲಿ ಆತನ ಜೀವನದ ಎಲ್ಲ ವ್ಯವಹಾರಗಳಲ್ಲಿ ಶಬ್ದ ಶಕ್ತಿಯ ಪ್ರಭಾವವಿದ್ದೇ ಇದೆ ವಾಕ್ಶಕ್ತಿಯು ಪ್ರಪಂಚದ ಅಂಧಕಾರವನ್ನು ಹೊಡೆದೋಡಿಸುವ ಜ್ಯೋತಿಯಾಗಿದೆ ವಾಗ್ಜ್ಯೋತಿಯಿಲ್ಲದಿದ್ದರೆ, ಸಂಸಾರವು ಅಂಧಕಾರಮಯವಾಗುವುದು. ಶಬ್ದ ಶಕ್ತಿಯನ್ನು 'ಅವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು ವ್ಯಾಪಿಪ' ಎಂಬುದಾಗಿ ಕೇಶೀರಾಜನು ಬಣ್ಣಿಸುತ್ತಾನೆ. 'ಕಬ್ಬಿಗರು ವಾಗೈಂದ್ರ ಜಾಲಿಕರು" ಎಂಬ ಕುವೆಂಪುರವರ ಅಭಿಮತದಲ್ಲಿ ಸವಿನುಡಿಯ ಸೀಗುಡಿಯ ಕಟ್ಟುವ, ಸಾಣೆಯಲಿ ಸಗ್ಗವನು ಕತ್ತುವ' ಸಾಮರ್ಥ್ಯ ಲೆಕ್ಕಣಿಕೆಯಲ್ಲದೆ. 'ಲೇಖನಿಯ ಕೊರಸಿನಿಂದ ದೇಶಗಳು ತಾಗುವುವು, ದೇಶಗಳು ತೂಗುವುವು'. ಹಟ್ಟೀಸ್; 'ಕವಿಯ ಕೈಬುಟ್ಟ ಸಂಕ್ಷಿಪ್ತ ಬ್ರಹ್ಮವಿದ್ದಂತೆ.' ವಾಕ್ಶಕ್ತಿಯ ಪರಿಪೂರ್ಣವಾದ ಫಲವು ಕಂಡು ಬರುವುದು ಸಾಹಿತ್ಯದಲ್ಲಿಯೇ ಪಾರ್ವತಿ-ಪರಮೇಶ್ವರರಂತಿರುವ ಸುಂದರ ಸಂಯೋಗವು ಕಂಡು ಬರುವುದೂ ಸಾಹಿತ್ಯದಲ್ಲಿಯೇ.

ವಾಕ್ಶಕ್ತಿಯ ಪರಿಪೂರ್ಣತೆಯ ಫಲವಾದ ಸಾಹಿತ್ಯವು ಜನತೆಯ ಉಪಕಾರಕ್ಕಾಗಿ, ಹಿತಕ್ಕಾಗಿ ಇರಬೇಕೆಂಬ ಮಾತನ್ನು ಪ್ರಾಚೀನ ಸಾಹಿತ್ಯದಿಂದ ಅರಿಯಬಹುದು "ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ। ಸದ್ಯ ಪರನಿರ್ವೃತಯೇ ಕಾಂತಾ ಸಂಹಿತತಯಾ ಉಪದೇಶಯುಜೇ' ಎಂದು ಸಂಸ್ಕೃತ ಲಕ್ಷಣಕಾರರ ಮತ. ಸಾಹಿತ್ಯವು ಮನೋರಂಜನೆಯ ಸಾಧನವೆಂಬ ಕಲ್ಪನೆ ಆಲವರಲ್ಲಿ ಬೆಳೆದು ಬಂದಿವೆ. ಆದರೆ ಸಾಹಿತ್ಯವು ಮನೋರಂಜನೆಯ ಸಾಧನ ಮಾತ್ರವಲ್ಲದೆ, ಸಾಂಸ್ಕೃತಿಕ ಜೀವನದ ಪ್ರತೀಕವಾಗಿದೆ, ಜೀವನ ದರ್ಶನವಾಗಿದೆ. "ಸಾಹಿತ್ಯವು ಬಾಳಬಟ್ಟೆಯ ಪರಮಾಗಮವಾಗಿದೆಯೆಂದು ನಾರಿದ ಕವಿಚಕ್ರವರ್ತಿ ಜನ್ನನ ವಾಣಿ ಯಥಾರ್ಥವಾಗಿದೆ, ಅರ್ಥಯುಕ್ತವಾಗಿದೆ. ಸಾಹಿತ್ಯೋದ್ಯಾನದ ಪರಿಪಕ್ವ ಫಲವೇ ಕಾವ್ಯವಾದರೂ ಕಾವ್ಯವೊಂದೇ ಸಾಹಿತ್ಯವಲ್ಲ, ಸಾಹಿತ್ಯವು ಸಾರಸ್ವತ ಲೋಕದ ಹಲವಾರು ರೂಪಗಳ ಒಂದು ಸಮೂಹ. ಸಾಹಿತ್ಯವು ಜೀವನದ ಆಶೆ-ಆಕಾಂಕ್ಷೆಗಳನ್ನು ಪೂರೈಸುವ ಸಾಧನವಾಗಿರುವುದಲ್ಲದೆ, ಆತ್ಮೋನ್ನತಿಯ ಮಾರ್ಗವೂ

(ಎಂಟನೇ ಪುಟ ನೋಡಿರಿ)

ಹಣದ ಗಿಲಿ ಗಿಲಿ ನಿನಾದವು
ನಿಮಗೆ ಮೆಚ್ಚಿಗೆಯಲ್ಲವೇ ?

ಜೀವಮಾನದ ಮುಂದಿನ ದಿನಗಳಲ್ಲಿ ನೀವು ಸಂಪತ್ತಿನಲ್ಲಿರುವ ಕಲ್ಪನೆಯು ಎಷ್ಟೊಂದು ಆಹ್ಲಾದಕರವಾದುದು! ಇದಕ್ಕೆ ನೀವು ಮಾಡಬೇಕಾದದ್ದು ಉಳಿತಾಯದ ಯೋಜನೆ ಪ್ರತೀ ತಿಂಗಳ ಆದಿಯಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿಸಿರಿ ನಿಮ್ಮ ಮಿಗಿತಾಯವು ಬೆಳೆಯುತ್ತಿರುವುದನ್ನು ಅವಲೋಕಿಸಿರಿ. ಕೆಲವು ವರ್ಷಗಳಲ್ಲಿ ನಿಮ್ಮ ಉಳಿತಾಯ ಸಂಕುಲದ ನಾದ ಮಾಧುರ್ಯದಿಂದ ರೋಮಾಂಚನಗೊಳ್ಳುವಿರಿ— ಕಾರಣ, ಸುಖಕರವಾದ ಜೀವನದ ಭರವಸೆಯನ್ನು ಅದು ಧ್ವನಿಸುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿ
ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ.

ಪರ್ಯಾಯ

ಅನನ್ಯ ಭಕ್ತಿಯ

ದೈವಜ್ಞ ಬ್ರಾಹ್ಮಣ ಸಮಾಜವು ತನ್ನ ಗು

ಇದೇ ತಾರೀಕು ೧೭ರಂದು ಸದ್ಯ ಶ್ರೀ ಮಧ್ವಾಚಾರ್ಯರ ಸರ್ವಜ್ಞ ಪೀಠಸ್ಥರಾಗಿ ಶ್ರೀಕೃಷ್ಣನ ಪೂಜಾದಿಗಳನ್ನು ನಡೆಸಿಕೊಂಡು ಬರುತ್ತಿರುವ ಶ್ರೀ ಸೋದೆ ವಾದಿರಾಜ ಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು ಸರದಿಯಂತೆ ತನ್ನ ಎರಡು ವರ್ಷಗಳ ಅಧಿಕಾರವನ್ನು ನಿರ್ವಹಿಸಿ, ಶ್ರೀ ಕಾಣಿಯೂರು ಮಠದ ಶ್ರೀಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದಂಗಳವರಿಗೆ ಬಿಟ್ಟು ಕೊಡಲಿರುವರು. ಈ ಸಂದರ್ಭ ವಿಶೇಷ ಮೆರವಣಿಗೆ ಪೂಜೆ, ಆರಾಧನೆಗಳು ನಡೆಯಲಿದ್ದು ಇದನ್ನೇ 'ಪರ್ಯಾಯ ಮಹೋತ್ಸವ' ಎಂದು ಕರೆಯುತ್ತಾರೆ. ಎರಡು ವರ್ಷಗಳಿಗೊಮ್ಮೆ ನಡೆಯುವ ಈ ಸಮಾರಂಭವು ಅತ್ಯಂತ ಆಕರ್ಷಕ ಮತ್ತು ಹೃದಯಸ್ಪರ್ಶಿಯೂ ಆಗಿರುತ್ತದೆ. ಎಂತಲೇ ಎಲ್ಲೆಲ್ಲಿನ ಶ್ರದ್ಧಾಳುಗಳಾದ ಜನರು ದಟ್ಟಣಿಸಿ ಇಲ್ಲಿ ನೆರೆಯುತ್ತಾರೆ.

ಸರ್ವಜ್ಞ ಪೀಠವನ್ನೇರಲಿರುವ ಶ್ರೀ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದಂಗಳವರದು ಇದು ಮೊದಲನೆಯ ಪರ್ಯಾಯ. ಆದರೂ ತಮ್ಮ ಗುರುಗಳಿಗೆ ಹಿಂದಿನ ಪರ್ಯಾಯ ವೇಳೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ನೆರವಾದ ಸಂಪೂರ್ಣ ಅನುಭವ ಅವರಿಗಿದೆ. ಧಾರ್ಮಿಕ ಕಾರ್ಯಗಳಲ್ಲೂ ಅಚ್ಚುಕಟ್ಟುತನವನ್ನು ಅಪೇಕ್ಷಿಸುವವರು ಇವರು, ಲಲಿತ ಕಲೆಗಳಲ್ಲಿ ಆಸಕ್ತಿ ತುಂಬ ಇವರಿಗೆ. ಶ್ರೀ ಮಠದ ಉತ್ಪತ್ತಿಯು ಪರಿಸೀಮಿತವಿದ್ದು, ಲಭ್ಯವಿರುವ ಸಾಧನ ಸಂಪತ್ತಿನಲ್ಲಿಯೇ ಉಚಿತ ರೀತಿಯಲ್ಲಿ ತನ್ನ ಪರ್ಯಾಯ ಕಾಲದಲ್ಲಿ ವ್ಯವಸ್ಥೆಗೊಳಿಸುವರೆಂದು ಆಶಿಸಬಹುದು. ಉತ್ಸಾಹಿಗಳೂ ಕಾರ್ಯಶೀಲರೂ ಆದ ಶ್ರೀಪಾದಂಗಳವರ ಪರ್ಯಾಯ ಕಾಲವು ಉತ್ಸಾಹಪ್ರದಾಯವಾಗಲಿ; ಕಾರ್ಯ ಸಾಧಕವಾಗಲಿ.

ಶ್ರೀ ಸೋದೇ ಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು ಮೌನವಾಗಿದ್ದೇ ಕಾರ್ಯ ಸಾಧಿಸುವವರು. ಎಷ್ಟೋ ಪ್ರತಿಕೂಲ ಪರಿಸ್ಥಿತಿಗಳು ಕಳೆದ ಎರಡು ವರ್ಷಗಳಲ್ಲಿ ಎದುರಾದುವು. ಆದರೂ ಧರ್ಮರಕ್ಷಣೆಯಲ್ಲಿ ಧಾರ್ಮಿಕ ಕಾರ್ಯಗಳಲ್ಲಿ, ದಾನಧರ್ಮಾದಿಗಳಲ್ಲಿ, ಯಾವುದೇ ಚ್ಯುತಿಯಾಗದಂತೆ ತೀರ ಎಚ್ಚರಿಕೆಯಿಂದ ನಡೆದುಕೊಂಡಿದ್ದಾರೆ; ತಮ್ಮ ಪರ್ಯಾಯ ಕಾಲವನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಮೌನ ತಪಸ್ವಿಗಳೂ, ಅಧ್ಯಯನಕ್ಕಿಂತಲೂ ಮನನ ಚಿಂತನಗಳಿಗೆ ಪ್ರಾಶಸ್ತ್ಯ ನೀಡುವವರೂ ಆಗಿರುವ ಶ್ರೀ ಪಾದಂಗಳವರು ತ್ಯಾಗವಿಲ್ಲದೆ ಧಾರ್ಮಿಕ ಜೀವನವಿಲ್ಲ ಎಂಬುದನ್ನು ತನ್ನ ಶಿಷ್ಯರಿಗೆ, ಉಪದೇಶದ ಮೂಲಕವಲ್ಲ, ತನ್ನ ಕಾರ್ಯಾಚರಣೆ ಮತ್ತು ಸಾಧನೆಗಳಿಂದ ತೋರಿಸಿಕೊಟ್ಟಿದ್ದಾರೆ.

ಶ್ರೀ ಸೋದೆ ವಾದಿರಾಜ ಮಠದ ಶಿಷ್ಯ ವರ್ಗ ಅತಿ ವಿಶಾಲವಾದುದು. ಇವರಲ್ಲಿ ದೈವಜ್ಞ ಬ್ರಾಹ್ಮಣ ಸಮಾಜವೂ ಒಂದು. ಶ್ರೀ ವಾದಿರಾಜ ಯತಿವರ್ಯರು ಈ ಮಠದ ಪ್ರಭಾವಶಾಲಿ ಯತಿಗಳಾಗಿದ್ದ ಕಾಲದಲ್ಲಿ ಉಡುಪಿಯ ಕೀರ್ತಿ ಅನೇಕ ರೀತಿಯಿಂದ ಪ್ರಚಾರವಾಯಿತು. ಅವರ ಕಾಲದಲ್ಲೇ ಸೋದೆ ಮಠದ ಸ್ಥಾನಮಾನಗಳೂ ಹೆಚ್ಚಿ ಮಠದ ಶಿಷ್ಯಮಂಡಳಿಯೂ ಅಧಿಕವಾಯಿತು. ದೈವಜ್ಞ ಬ್ರಾಹ್ಮಣ ಸಮಾಜದ ಶಿಲ್ಪಿಯೊಬ್ಬರು ತನ್ನ ಉದ್ಯೋಗದಂತೆ ಗಣಪತಿಯ ವಿಗ್ರಹವನ್ನು ನಿರ್ಮಿಸಲುದ್ಯೋಗಿಸಿ ಕಾರ್ಯತತ್ಪರರಾದರು. ಆದರೆ, ವಿಗ್ರಹವು ಗಣಪತಿಯಾಗದೆ ಹಯಗ್ರೀವ ದೇವರದಾಯಿತು. ಅದೆಷ್ಟೇ ಪ್ರಯತ್ನಿಸಿದರೂ ವಿಗ್ರಹವು ಅಂತಿಮವಾಗಿ ಹಯಗ್ರೀವನದೇ ಆಯಿತು. ಇದೇಕೆ ಹೀಗೆ ಎಂದು ಯೋಚಿಸುತಿದ್ದ ಶಿಲ್ಪಿಗೆ ಮತ್ತೂ ಆಶ್ಚರ್ಯವಾಗುವಂತೆ ತನ್ನನ್ನು ಶ್ರೀ ಸೋದೆ ಮಠದ ಶ್ರೀ ವಾದಿರಾಜ ತೀರ್ಥ ಸ್ವಾಮಿಯವರಿಗೆ ಅರ್ಪಿಸಬೇಕೆಂಬ ಪ್ರೇರಣೆಯನ್ನೂ ಮೂರ್ತಿ ನೀಡಿತು. ದೈವ ಲೀಲೆಯೆಂದು ಭಾವಿಸಿದ ಶಿಲ್ಪಿ ದೈವ ಪ್ರೇರಣೆಯಂತೆ ಮಾಡಿದರು. ಪೂರ್ವೋತ್ತರ ಕಥನದಿಂದ ಸುಪ್ರೀತರಾದ ಶ್ರೀ ವಾದಿರಾಜರು ತಮ್ಮ ತಪೋಬಲದಿಂದ ಎಲ್ಲವನ್ನೂ ಅರಿತು ದೈವಜ್ಞ ಬ್ರಾಹ್ಮಣ ಸಮಾಜವನ್ನು ತನ್ನ ಶಿಷ್ಯ ಮಂಡಳಿಯಲ್ಲಿ ಸೇರಿಸಿದರು. ಶ್ರೀ ಹಯಗ್ರೀವನ ದಯೆಯಿಂದ ದೈವಜ್ಞ ಬ್ರಾಹ್ಮಣರು ಮಧ್ವ ಸಂಪ್ರದಾಯದವರಾಗಿ ಶ್ರೀ ಮಠದ ಅನುಯಾಯಿಗಳಾಗಿ ಪರಿಣಮಿಸಿದರು. ಶ್ರೀ ವಾದಿರಾಜರು ಆದಿಯಾಗಿ ಅವರ ಪೀಳಿಗೆಯ ಎಲ್ಲ ಯತಿಗಳೂ ಲೋಕ ಕಲ್ಯಾಣ ಕಾಮನೆಯಿಂದ ದೈವಜ್ಞ ಬ್ರಾಹ್ಮಣ ಶಿಲ್ಪಿ ಸಮರ್ಪಿಸಿದ ಈ ಹಯಗ್ರೀವ ಮೂರ್ತಿಯನ್ನೇ ಪಟ್ಟದ ದೇವರನ್ನಾಗಿ ಸ್ವೀಕರಿಸಿ ಅರ್ಚನಾದಿಗಳಿಂದ ಸೇವಿಸುತ್ತ ಬಂದಿದ್ದಾರೆ.

ಗುರುಸೇವನೆಯು ಭಕ್ತವೃಂದದ ಕರ್ತವ್ಯಗಳಲ್ಲಿ ಒಂದು. ದೈವಜ್ಞ ಬ್ರಾಹ್ಮಣ ಸಮಾಜದವರು ತಮ್ಮ ಗುರು-ಗುರು ಮಠಗಳ ಮೇಲಿನ ಭಕ್ತಿ ಗೌರವಗಳ ಸಂಕೇತವಾಗಿ ರಜತ ಸಿಂಹಾಸನವನ್ನು



ಸಮಸ್ತ ದೈವಜ್ಞ ಬ್ರಾಹ್ಮಣಸಮಾಜದವರು ಶ್ರೀ ಸೋದೆ ಮಠದ ಹಯಗ್ರೀವ ದೇವರಿಗೆ ಸಮರ್ಪಿಸಿದ ರಜತ ಮಂಟಪ.

ತಾ. 9—4—1965ರಂದು ಉಡುಪಿ ಶ್ರೀ ಸೋದೆಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥರ ಸಮಕ್ಷಮದಲ್ಲಿ



ಶ್ರೀ ಜಿ. ಜಿ. ಸಜೇಕರ್, ಬೆಂಗಳೂರು ಸಿಟಿ ಮೆಜಿಸ್ಟ್ರೇಟರವರು ಅಧ್ಯಕ್ಷ ಸ್ಥಾನದಲ್ಲಿ. ಮಂಗಳೂರು ರಜತ ಸಿಂಹಾಸನ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಎಸ್. ಎಲ್. ಶೇಟ್‌ರವರು ಸ್ವಾಗತ ಸಮಿತಿಯ ಭಾಷಣ ಮಾಡಿದಾಗ ತೆಗೆದ ಭಾವಚಿತ್ರ. ಈ ಭಾವಚಿತ್ರದಲ್ಲಿ ಎಡದಿಂದ ಬಲಕ್ಕೆ ಶ್ರೀ ಜಿ. ಜಿ. ಸಜೇಕರ್, ಅಧ್ಯಕ್ಷರು, ಶ್ರೀ ಎಸ್. ಎಲ್. ಶೇಟ್, ಶ್ರೀಮತಿ ಪಿ. ಪಿ. ಶಿರೂರ್‌ಕಾರ್, ಶ್ರೀ ಪಿ. ಪಿ. ಶಿರೂರ್‌ಕಾರ್, ಶ್ರೀ ಯು. ಪಿ. ಯನ್. ರಾಯಕರ್, ರಜತ ಸಿಂಹಾಸನ ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಕೆ. ಆರ್. ಶೇಟ್ ಮತ್ತು ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು.

ಸವಿ ನೆನಪು

ಮರ ದ್ಯೋತಕ

ಪ್ರದರ್ಶಿಸಿದ ಅಪೂರ್ವ ಅಮರ ಘಟನೆ



ಮಸ್ತ ದೈವಜ್ಞ ಬ್ರಾಹ್ಮಣ ಸಮಾಜ ಬಂಧುಗಳು ಉಡುಪಿಯ ಶ್ರೀ ಸೋದೆ ಮಠಕ್ಕೆ ಸಮರ್ಪಿಸಿದ ರಜತ ಸಿಂಹಾಸನ.

ಸರುಗಳಿಗೂ ರಜತ ಮಂಟಪವನ್ನು ಪಟ್ಟದ ದೇವರಿಗೂ ಅರ್ಪಿಸಲು ನಿರ್ಧರಿಸಿದರು. ಮಂಗಳೂರು, ಉಡುಪಿ, ಕುಂದಾಪುರಗಳ ಸಮಾಜದ ಮುಖಂಡರೆಲ್ಲರೂ ಸೇರಿ, ತಮ್ಮ ಗುರುಗಳೊಡನೆ ಸಮಾಲೋಚನೆ ನಡಸಿ ಕಾರ್ಯತತ್ಪರರಾದರು ದೇಶದ ಬೇರೆ ಬೇರೆಡೆಯಲ್ಲಿ ಹಂಚಿರುವ ಸಮಾಜ ಬಾಂಧವರ ಸಮ್ಮಿಳಿತ ಪ್ರಯತ್ನ, ಸಹಕಾರಗಳಿಂದಾಗಿ ಉದ್ದೇಶವು ಈಡೇರಿತು. ತಾರೀಕು ೯-೪-೧೯೬೫ ರಂದು ಈ ಅನನ್ಯ ಶಿಷ್ಯ ಮಂಡಳಿಯು ಭಕ್ತಿ ಪುರಸ್ಸರವಾಗಿ ತನ್ನ ಕಾಣಿಕೆಯನ್ನು ಗುರು ಸನ್ನಿಧಿಯಲ್ಲಿ ಸಮರ್ಪಿಸಿತು

ಕಣ್ಣು ಕಿರಿದಾದರೂ ಕಾಣುವ ಹೊಲ ಹಿರಿದು ಅಣು ಕಿರಿದಾದರೂ ಅದರಲ್ಲಿ ಅಡಕವಾಗಿರುವ ಶಕ್ತಿ ಹಿರಿದು. ಅಂತೆಯೇ ಕಾಣಿಕೆಯು ಕಿರಿದಾದರೇನು, ಅದರ ಹಿಂದೆ ಅಡಗಿರುವ ಭಕ್ತಿ ಧರ್ಮ ಭಾವನೆಗಳು ಅತ್ಯಂತ ಹಿರಿದು. 'ನನ್ನ ಭಕ್ತನು ನನಗೆ ಭಕ್ತಿಯಿಂದ ಅದಾವ ಅಲ್ಪ ವಸ್ತುವನ್ನೇ ನೀಡಲಿ, ಅದನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ'—ಇದು ಗೀತಾಚಾರ್ಯನ ಅಮರೋಕ್ತಿ. ಇದರಂತೆಯೇ ಸುಮಾರು ೧೨ ಸಾವಿರ ರೂಪಾಯಿ ಬೆಲೆ ಬಾಳುವ ರಜತ ಮಂಟಪ ಮತ್ತು ರಜತ ಸಿಂಹಾಸನಗಳನ್ನು ಶ್ರೀ ಹಯಗ್ರೀವನ ಪೂಜನ ಮತ್ತು ಗುರು ವಂದನೆಕ್ಕಾಗಿ ಅರ್ಪಿಸಿದ ದೈವಜ್ಞ ಬ್ರಾಹ್ಮಣ ಸಮಾಜದ ಭಕ್ತಿ ಭಾವನೆಯು ಪ್ರಶಂಸನೀಯವಿದೆ

ಸಾಂಪತ್ತಿಕವಾಗಿ ಈ ಸಮಾಜವು ಇನ್ನೂ ಮುಂದುವರಿದಿದೆಯೆನ್ನುವುದು ಕಷ್ಟ. ಆದರೆ, ಲೋಕ ಕಲ್ಯಾಣಕಾರಕ ಕಾರ್ಯಗಳಲ್ಲಿ ಇತರರೊಡನೆ ಕೂಡಿ ಬಾಳುವ ಅಮರ ಸಂಸ್ಕಾರ ಇವರಲ್ಲಿದೆ. ವಿದ್ಯಾವಂತರಾಗಿ, ಸಾಮಾಜಿಕ ಕಾರ್ಯಕರ್ತರಾಗಿ ದುಡಿಯುತ್ತಿರುವವರೂ ಇದರಲ್ಲಿದ್ದಾರೆ. ಬೆಂಗಳೂರಿನ ಸಿಟಿ ಮೆಜಿಸ್ಟ್ರೇಟರಾದ ಶ್ರೀ ಜಿ. ಜಿ. ಸಜೆಕರ್‌ರವರು ಇವರಲ್ಲಿ ಒಬ್ಬರಾಗಿದ್ದು ಅವರು ಸಮರ್ಪಣಾ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಹಾಗೆಯೇ ಗೋವೆಯ ವಿಧಾನ ಸಭಾ ಅಧ್ಯಕ್ಷರಾದ ಶ್ರೀ ಪಿ. ಪಿ. ಶಿರೋಡ್ಕರ್ ಇವರು ಸಮಾಜದ ಪರವಾಗಿ ಸಮರ್ಪಣಾ ಕಾರ್ಯವನ್ನು ಮಾಡಿದ್ದರು.

ದೈವಜ್ಞ ಬ್ರಾಹ್ಮಣರು ತೋರಿದ ಈ ಭಕ್ತಿ ಅನ್ಯಾದೃಶವಾದುದು, ಸಮಾಜೋದ್ಧಾರಣಕ್ಕೆ ನೆರವಾಗುವಂತಹುದು. ಈ ಘಟನೆ ಉಡುಪಿಯ ಇತಿಹಾಸದಲ್ಲಿ ಸದಾ ಉಳಿಯುವಂತಹುದು, ಅಮರವಾದುದು. ಇನ್ನಿತರ ಸಮಾಜ ಬಾಂಧವರಿಗೂ ಪ್ರೇರೇಪಕವಾದುದು.

ಇಂತಹ ಅಪೂರ್ವ ಕಾರ್ಯ ಅಲ್ಪ ಸಂಖ್ಯಾಕರೂ ಅಲ್ಲಲ್ಲಿ ಹರಡಿ ಹೋಗಿರುವವರೂ ಆದ ದೈವಜ್ಞ ಬ್ರಾಹ್ಮಣ ಸಮಾಜದ ಸಮ್ಮಿಲನ ಪ್ರಯತ್ನದಿಂದಾಯಿತು. ಈ ಸಮ್ಮಿಲನ ಕಾರ್ಯದಲ್ಲಿ ಅನೇಕರು ಮಹತ್ವದ ಪಾತ್ರ ವಹಿಸಿದ್ದಾರೆ. ಶ್ರೀ ಎಸ್. ಎಲ್ ಶೇಟ್ ಅವರು ರಜತ ಸಿಂಹಾಸನ ಸಮಿತಿಯ ಅಧ್ಯಕ್ಷರಾಗಿ, ಶ್ರೀ ಕೆ. ಕೆ. ಆರ್ ಶೇಟ್ ಅವರು ಕಾರ್ಯದರ್ಶಿಯಾಗಿ, ಶ್ರೀ ಎನ್. ಲಕ್ಷ್ಮೀ ನಾರಾಯಣ ಶೇಟ್ ಕೋಶಾಧ್ಯಕ್ಷರಾಗಿ ಹಾಗೂ ಅನೇಕ ಮಹನೀಯರು ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವೆಲ್ಲರ ಏಕಮುಖ ಪ್ರಯತ್ನ ಸಫಲವಾಯಿತು. ಶ್ರೀ ಸೋದೆ ಮಠದ ಪರ್ಯಾಯ ಕಾಲದ ಸವಿ ನೆನಪೊಂದು ಸದಾಕಾಲ ಉಳಿಯುವಂತಾಯಿತು.

ಜಯಗ್ರೀವ ಹಯಗ್ರೀವ
ಜಯಗ್ರೀವೇತಿ ಯೋ ವದೇತ್
ಸತ್ಯ ನಿಸ್ಸರತೇ ವಾಣೀ
ಜಹ್ನು ಕನ್ಯಾ ಪ್ರವಾಹವತ್

ಬಿಚ್ಚು ಮಾತು

ರಾಜ್ಯ ಸರಕಾರಗಳ ಅಸಹಕಾರ

ಆಹಾರ ಧಾನ್ಯಗಳ ಕಾರ್ಪರೇಶನ್ನಿನ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಟಿ ಎ. ಪೈ ಅವರು ರಾಜಿನಾಮೆಯಿತ್ತು ಹೊರ ಬಂದರು ತನ್ನ ಪದವನ್ನವರು ಒಂದು ವರ್ಷದ ಮಟ್ಟಿಗ ಮಾತ್ರವೇ ಸ್ವೀಕರಿಸಿದ್ದು, ಈ ಅವಧಿ ಮುಗಿಯುತ್ತಲೇ ಅವರು ಬಿಟ್ಟು ಬಂದುದು ಸ್ವಾಭಾವಿಕ. ಆದರೂ, ಅವರು ತನ್ನ ಹೊಸ ಅನುಭವದಲ್ಲಿ ಸಂಪೂರ್ಣ ಆಶಾಭಂಗರಾಗಿಯೇ ಹೊರ ಬರುತಿದ್ದಾರ ಎಂಬುದು ವ್ಯಕ್ತವಾಗುವುದು ಪ್ರತಿಕೂಲ ವಾತಾವರಣವಿಲ್ಲವಾದರೆ, ಇನ್ನೂ ಕೆಲವು ಕಾಲ ಅಧಿಕಾರದಲ್ಲಿ ಮುಂದುವರಿಯುತಿದ್ದರೇನೋ ಅನ್ನಿಸುತ್ತಿದೆ.

ಭಾರತದಂತಹ ವಿಶಾಲ ರಾಷ್ಟ್ರದ ಮಿಗಿತೆ ಮತ್ತು ಕೊರತೆಯ ಪ್ರದೇಶಗಳ ನಡುವೆ ಧಾನ್ಯ ಪೂರಯ್ಕೆಯಲ್ಲಿ ಸಮರಸತೆಯನ್ನು ಸಾಧಿಸಲು, ಬೆಲೆಯೇರಿಕೆಯನ್ನು ತಡೆಯಲು ಪ್ರಯತ್ನಿಸಿದವರು ಶ್ರೀ ಪೈಗಳಿಗೂ ಮೊದಲೇ ಅನೇಕರಿದ್ದರು. ರಾಜ್ಯ ಸರಕಾರಗಳ ಆಹಾರ ಧಾನ್ಯ ಖರೀದಿ ಮತ್ತು ಪೂರೈಕ ನೀತಿಯಿಂದ ರೋಸಿ ಹೋಗಿಯೇ ಐದು ವರ್ಷಗಳಿಗೆ ಮೊದಲು ಕೇಂದ್ರ ಆಹಾರ ಸಚಿವರೊಬ್ಬರು ಅಧಿಕಾರ ತ್ಯಾಗ ಮಾಡಿದ್ದರು. ಈಗ ಜನ್ಮ ತಾಳಿರುವ ಆಹಾರಧಾನ್ಯ ಕಾರ್ಪರೇಶನ್ನಿನ ಅಧ್ಯಕ್ಷ ಸ್ಥಾನದ ಅನುಭವದಿಂದ ಶ್ರೀ ಪೈ 'ಕಾರ್ಪರೇಶನ್ನಿನ ಕಾರ್ಯಕಲಾಪಗಳಲ್ಲಿ ರಾಜ್ಯ ಸರಕಾರಗಳು ಹೃತ್ಪೂರ್ವಕ ಸಹಕಾರ ನೀಡುತ್ತಿಲ್ಲ' ಎಂದು ಹೇಳುತ್ತಾರೆ ಮಿಗಿತೆಯ ಒಂದು ರಾಜ್ಯದಲ್ಲಿ ಸಧಾ ಸಂಗ್ರಹಿಸಿ ಕೊರತೆಯ ರಾಜ್ಯಕ ಧಾನ್ಯ ಪೂರೈಸುವುದೇ ಕಾರ್ಪರೇಶನ್‌ನ ಕರ್ತವ್ಯವೊಂದು. ಆದರೆ, ರಾಜ್ಯ ಸರಕಾರಗಳ ಅಸಹಕಾರದಿಂದ ಇದು ಅಸಾಧ್ಯವಾದರೆ, ಕಾರ್ಪರೇಶನ್ ಹೇಗ ಕಾರ್ಯ ನಡೆಸ ಬೇಕು? ಅನಾವೃಷ್ಟಿಯ ಕಾರಣದಿಂದ ತನ್ನ ರಾಜ್ಯದಲ್ಲಿಯೂ ಆಹಾರದ ಕೊರತೆಯಾಗಬಹುದೆಂದು ಮಿಗಿತೆಯ ರಾಜ್ಯ ಸರಕಾರಗಳು ಕಲ್ಪಿಸ ಬಹುದು. ಆದ್ದರಿಂದರೂ ಆಹಾರಧಾನ್ಯ ಕಾರ್ಪರೇಶನ್ ಕಣ್ಣದ್ದು ಕುರುಡನಂತೆ ವರ್ತಿಸುವುದೆಂದು ಅವು ಹೇಳುವಷ್ಟು ಮುಂದುವರಿಯಲಾರವಷ್ಟೆ? ಬೃಹತ್ ಪ್ರಮಾಣದಲ್ಲಿ ಧಾನ್ಯಗಳ ವ್ಯವಹಾರ ನಡೆಸುವ ಕಾರ್ಪರೇಶನ್ ಮಿಗಿತೆ ರಾಜ್ಯಗಳ "ಕೊರತೆ"ಯನ್ನು ಪೂರಯ್ಸದಷ್ಟು ನಿರ್ದಯವಾಗಲಾರದು.

ಶ್ರೀ ಟಿ ಎ. ಪೈ

ಕಾರ್ಪರೇಶನ್ ಆಹಾರಧಾನ್ಯಗಳ ವ್ಯವಹಾರ ಮಾತ್ರ ಮಾಡಿದರೆ ಸಾಲದು. ಉತ್ಪಾದಕನಿಗೆ ನ್ಯಾಯ ಬೆಲೆ ಗೊತ್ತು ಮಾಡಬೇಕು, ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಬೇಕು, ರೈತನಿಗೆ ಸಾಲ ವ್ಯವಸ್ಥೆ ಮಾಡಬೇಕು, ಅಕ್ಕಿಯ ಮಿಲ್ಲುಗಳನ್ನು ತೆರೆಯಬೇಕು— ಇತ್ಯಾದಿ ಇತ್ಯಾದಿ. ಇವೆಲ್ಲವೂ ಉದ್ದೇಶಿತ: ಒಂದೇ ಗುರಿಯತ್ತ ನಡೆಯುವ ದಾರಿಗಳಾದರೂ ವ್ಯಾವಹಾರಿಕವಾಗಿ ಬೇರೆ ಬೇರೆಯವು. ಇವೆಲ್ಲವನ್ನೂ ಕಾರ್ಯರೂಪಕ್ಕೆ ತರಬೇಕಾದರೆ, ರಾಜ್ಯ ಸರಕಾರಗಳ ಸಂಪೂರ್ಣ ಸಹಕಾರ ಬೇಕಾಗುವುದು. 'ಬ್ರಿಟಿಷರ ಆಡಳಿತೆಯಲ್ಲಿ ಯಶಸ್ವೀ ಆಹಾರ ನೀತಿಯನ್ನು ಅನುಸರಿಸುವುದು ಸಾಧ್ಯವಾಯಿತು. ಆದರೆ, ಭಾಷೆಯ ತಳಹದಿಯಲ್ಲಿ ರಾಜ್ಯ ಪುನರ್ಘಟನೆಯಾದ ನಂತರ ಈ ನೀತಿ ದಿನದಿಂದ ದಿನಕ್ಕೆ ಗಡುಚಾಗುತ್ತ ಬರುತ್ತಿದೆ. ಎಂಬ ಟೀಕೆ ಸ್ವತಂತ್ರ ಭಾರತದ ಇಂದಿನ ಸ್ಥಿತಿಯ ಸತ್ಯದರ್ಶನ. ರಾಜಕೀಯ ಪ್ರಭಾವಗಳಿಂದಾಗಿ ರಾಜ್ಯ ಸರಕಾರಗಳು ತಮ್ಮದೇ ಆದ ಆಹಾರ ನೀತಿಯನ್ನು ಅನುಸರಿಸುತ್ತಿವೆ—ಇವು ಸಹ ಗೂ

(ಒಂಭತ್ತನೇ ಪುಟ ನೋಡಿರಿ)

ಸಾಹಿತ್ಯ ಮತ್ತು ಸಮಾಜ

(ಐದನೇ ಪುಟದಿಂದ)

ಆಗಿದೆ. "ಕಾವ್ಯ ಸಾಮಾಧಿಯಿಂ ಪರಂಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ ನಿಮಗಳ ತತ್ತ್ವಮಂ ಬಯಸಿ ಪೇಳಲೊಡರ್ಚಿದೆಂ" ಎಂದು ಹೇಳುವ ರುದ್ರಭಟ್ಟ ಕವಿಯ ಮಾತು ಕಾವ್ಯವು ಒಂದು ಸಮಾಧಿಯಾಗಿದೆಯೆನ್ನುವುದನ್ನು ಅರ್ಥೈಸುತ್ತದೆ. ಇದರಿಂದ ಸಾಹಿತ್ಯವು ಪಾರಮಾರ್ಥಿಕವಾಗಿದೆಯೆಂಬುದು ವಿದಿತವಾಗುತ್ತದೆ. ಆದರೆ ಸಾಹಿತ್ಯ ಕೇವಲ ಪಾರಮಾರ್ಥಿಕವಾಗಿರದೆ ಪ್ರಯೋಜಕಾರಿಯಾದ (Applied Literature) ಸಾಹಿತ್ಯವೂ ಆಗಿದೆ. ಸಾಹಿತ್ಯ ಕೇವಲ ರಸಿಕ ಮನೋಹಾರಿಯಾಗಿರದೆ ಮೆದುಳಿಗೆ ವಿಚಾರವನ್ನು, ಮನಸ್ಸಿಗೆ ಸಮಾಧಾನವನ್ನು ಕೊಡುವ ಸಾಧನವಾಗಿದೆ; ಜೀವನವನ್ನು ಸುಸಂಸ್ಕೃತಗೊಳಿಸುವ ಸಾಧನವಾಗಿದೆ; ಜೀವನ ಸಂಘರ್ಷದ ಮಾಧ್ಯಮವಾಗಿದೆ; ಭೂಮಾನಂದದೆಡೆಗೆ ಒಯ್ಯುವ ಮಾರ್ಗವೂ ಆಗಿದೆ.

ಸಾಹಿತ್ಯವು ಸಮಾಜದ ಪ್ರತಿಬಿಂಬ. ಸಮಾಜದ ಪರಿಸ್ಥಿತಿಗನುಗುಣವಾಗಿ ಸಾಹಿತ್ಯವು ರೂಪುಗೊಳ್ಳುತ್ತದೆ, ಸುಸಮೃದ್ಧವಾಗಿ ಬೆಳೆಯುತ್ತದೆ. ಸಮಾಜದಲ್ಲಿ ಶಾಂತಿ ಸಮೃದ್ಧಿಗಳು ಉತ್ತಮ ಸಾಹಿತ್ಯ ಸೃಷ್ಟಿಗೆ ಸಹಾಯವಾಗುತ್ತವೆ. ಜೀವನದ ವಿಕಾಸ, ಮನಸ್ಸಿನ ಪರಿಪಕ್ವತೆ, ಹೃದಯದ ವೈಶಾಲ್ಯದೊಂದಿಗೆ ಸಾಹಿತ್ಯವೂ ವಿಕಾಸಗೊಳ್ಳುತ್ತದೆ, ಪರಿಪಕ್ವವಾಗುತ್ತದೆ, ಘನತೆಯನ್ನು ಪಡೆಯುತ್ತದೆ. ಸಾಹಿತ್ಯವು ಸಮಾಜದ ಉತ್ಥಾನ-ಪತನಗಳಲ್ಲಿ; ಶಾಂತಿ ಪರಿವರ್ತನೆಗಳಲ್ಲಿ 'ಪೂರ್ಣ ಸಹಯೋಗವನ್ನೀಯುತ್ತದೆ.' ಜೀವನದಲ್ಲುಂಟಾದ ವಿಚಾರ ಶೀಲತೆ, ವೈಜ್ಞಾನಿಕ ದೃಷ್ಟಿ ಸಾಹಿತ್ಯದಲ್ಲಿಯೂ ಕ್ರಾಂತಿಯನ್ನುಂಟು ಮಾಡಿದುದೂ ಸಾಹಿತ್ಯದ ಪ್ರಭಾವದಿಂದ ಸಮಾಜದಲ್ಲಿ ಕ್ರಾಂತಿಯಾದುದೂ ಇತಿಹಾಸ ವಿಷಯವಾಗಿದೆ. ಮನುಷ್ಯನ ಹೆಚ್ಚಿನ ವಿಚಾರಗಳೆಲ್ಲವೂ ಪರಂಪರಾಗತವಾಗಿ ಬಂದುದು. ಪ್ರಗತಿಪರ ಸಾಹಿತ್ಯ ಎಂದುವರಿಯುತ್ತಿರುವ ಜನಾಂಗದ ಕುರುಹು. ಅಂತೆಯೇ ಸಮಾಜದ ಇಂದು ಪ್ರಗತಿಪಥದಲ್ಲಿರುವುದಾದರೆ ಅದು ಸಾಹಿತ್ಯದ ಕೊಡುಗೆಯೆಂಬುದನ್ನು ನೆನಪಿಕೊಳ್ಳಬೇಕು. ಇದರಿಂದ ಸಮಾಜದ ಮೇಲೆ ಸಾಹಿತ್ಯದ, ಸಾಹಿತ್ಯದ ಮೇಲೆ ಸಮಾಜದ ಪ್ರಭಾವವು ಸ್ಪಷ್ಟ ಮತ್ತು ಅನಿವಾರ್ಯವಾಗಿದೆ ಯೆಂಬುದನ್ನು ಮನಗಾಣಬಹುದು.

ಸಾಹಿತ್ಯವು ಆಧ್ಯಾತ್ಮಿಕತೆಯ ನೆಲೆಯೂ ಆಗಿದೆ. "ಸತ್ಯಂ, ಶಿವಂಸುಂದರಂ" ಎಂಬ ಸನಾತನ ತತ್ತ್ವತ್ರಯದ ಪ್ರತಿಪಾದನೆಯೇ ಸಾಹಿತ್ಯದ ಗುರಿ ಹಾಗೂ ಸತ್ಯ ಶಿವಂ ಸುಂದರ ಎಂಬೀ ತತ್ತ್ವಗಳನ್ನು ಪ್ರತಿಪಾದನೆಯ ಮಾರ್ಮಿಕತೆಯಲ್ಲಿಯೇ ಸಾಹಿತ್ಯದ ಸಫಲತೆಯು ನಿಹಿತವಾಗಿರುತ್ತದೆ. ನಿತ್ಯ ಜೀವನದಲ್ಲಿ ಗೋಚರವಾಗುವ ಸತ್ಯಕ್ಕೂ ಸಾಹಿತ್ಯದಲ್ಲಿ ಒಡಮೂಡುವ ಸತ್ಯಕ್ಕೂ ಮೌಲಿಕ ಅಂತರವಿದೆ. ಜೀವನದಲ್ಲಿ ಕಾಣಲಾಗದ ಸತ್ಯದ ಯಥಾರ್ಥ ಚಿತ್ರಣ ಸಾಹಿತ್ಯದಲ್ಲಿ ಪೂರ್ಣ ಯಥಾರ್ಥ ರೂಪವೆತ್ತು ಬರುತ್ತದಲ್ಲದೆ, ಜೀವನದ ಕಟು ಸತ್ಯವೂ ಸಾಹಿತ್ಯದಲ್ಲಿ ಕಲಾತ್ಮಕವಾಗಿ ರೂಪುಗೊಂಡಾಗ ಸುಲಭವೇದ್ಯದ ಪರಮೋದ್ದೇಶವಾಗಿರುವುದರಿಂದ, ವಸ್ತುವಾಗಿರುತ್ತದೆ. ಅಪೂರ್ಣವನ್ನು ಪೂರ್ಣ ಮಾಡುವುದೇ ಸಾಹಿತ್ಯದ ವಿನ ಯಥಾರ್ಥ ಚಿತ್ರಣ ಜೀವನ ವಿಕಾಸದಲ್ಲಿ ಒಂದು ಕೈ ದೀವಿಗೆಯಾಗಿದೆ. ಸಾಹಿತ್ಯದಿಂದ ಶಿವತತ್ತ್ವವನ್ನು ಬೇರ್ಪಡಿಸಿದಾಗ ಅದು ತನ್ನ ಮಹತ್ತ್ವವನ್ನು ಕಳೆದುಕೊಳ್ಳುತ್ತದೆ. ಸಾಹಿತ್ಯದಲ್ಲಿ ಶಿವತತ್ತ್ವವು ಲೋಕ ಕಲ್ಯಾಣದ ಪರ್ಯಾಯ ಶಬ್ದವಾಗಿದೆಯಾದ್ದರಿಂದ ಸಾಹಿತ್ಯವು ಲೋಕಕಲ್ಯಾಣಕಾರಿಯೆಂಬುದು ಸ್ಪಷ್ಟವಾಗುತ್ತದೆ. ಸಾಹಿತ್ಯದಲ್ಲಿ "ಲೋಕಕಲ್ಯಾಣಕಾರಿಯಾದ ಆದರ್ಶ ಚಿತ್ರಣ ಮೈವೆತ್ತಿ ಬರುವುದರಲ್ಲಿಯೇ ಅದರ ಸಾರ್ಥಕ್ಯವಿದೆ. ಸಾಹಿತ್ಯವನ್ನು ಅಮರವನ್ನಾಗಿ ಮಾಡುವ ಈ ಶಿವತತ್ತ್ವವು ಮನಸ್ಸಿಗೆ ಶಾಂತಿಯನ್ನೂ ತೃಪ್ತಿಯನ್ನೂ ನೀಡುವುದಲ್ಲದೆ ಲೋಕಮಂಗಲ ತತ್ತ್ವದಿಂದ ಕೂಡಿರುವುದರಿಂದ ಅದು ಸಹಾ ಮಾನವನನ್ನು ಉನ್ನಯನದ ಕಡೆಗೆ ಸಾಗುವಂತೆ ಪ್ರೇರಿಸುತ್ತದೆ. ಜೀವನಾನುಭವ ಮತ್ತು ಚಿಂತನೆಗಳ ರಸಪಾಕವುಂಟಾಗಿ ಜೀವನದೃಷ್ಟಿ ಒಡಮೂಡಿ ಬಂದಾಗಲೇ ಸಾಹಿತ್ಯದಲ್ಲಿ ಶಿವತತ್ತ್ವದ ಸಮಾವೇಶವಾಗುತ್ತದೆ. ಶಿವತತ್ತ್ವದಿಂದ ಶೂನ್ಯವಾದ ಸಾಹಿತ್ಯದಲ್ಲಿ ಸಮಾಜ ವಿಕಾಸದ ದೃಷ್ಟಿ ಇರಲಾರದು, ಅಂತಹ ಸಾಹಿತ್ಯದಿಂದ ಜೀವನ ಏನನ್ನೂ ಪಡೆಯಲಾರದು. ಸಾಹಿತ್ಯವು ಸೌಂದರ್ಯೋಪಾಸನೆಯ ಸಾಧನವೂ ಆಗಿದೆ. ಶರೀರದಲ್ಲಿ ಆತ್ಮವು ಹೇಗೋ ಹಾಗೆಯೇ ಸಾಹಿತ್ಯದಲ್ಲಿ ಭಾವನೆ. ಅನುಭವ ಮತ್ತು ಕಲ್ಪನೆಯ ಸಂಗಮ ಸುಂದರವಾಗಿ, ಕಲಾತ್ಮಕವಾಗಿ ವ್ಯಕ್ತವಾದಾಗ ಮನೋಹಾರಿಯಾಗುತ್ತದೆ, ಹೃದಯವೇದ್ಯವಾಗುತ್ತದೆ. ಭಾವನೆ ಮತ್ತು ಕಲೆ ಇವುಗಳ ಯೋಗದಿಂದ- ಸಮ್ಮಿಲನದಿಂದ ಸಾಹಿತ್ಯದಲ್ಲಿ ಉಂಟಾಗುವ ಸೌಂದರ್ಯ ನಿಜಕ್ಕೂ ಅನುಪಮವಾಗಿರುವುದರಿಂದ ಜೀವನದಲ್ಲಿ ಸೌಂದರ್ಯೋಪಾಸನೆ ಸುಲಭವಾಗುತ್ತದೆ. ಸತ್ಯಂ-ಶಿವಂ-ಸುಂದರಂ— ತತ್ತ್ವಗಳ ಪ್ರತಿಪಾದನೆಯೇ ಸಾಹಿತ್ಯದ ಪರಮೋದ್ದೇಶವಾಗಿರುವುದರಿಂದ, ಜೀವನದ ಸಾಕಲ್ಯತೆಗೆ ಸಾಹಿತ್ಯವೇ ಮೂಲ ಸಾಧನ. ಸಾಹಿತ್ಯದಲ್ಲಿಯೇ ಜೀವನ ಸಾಯುಜ್ಯ.

ಸಾಹಿತ್ಯದ ಉದ್ದೇಶ ಮಹತ್ತ್ವದ್ದಾಗಿದೆ; ಕಾರ್ಯ ಘನವಾಗಿದೆ. ಸಾಹಿತ್ಯವು ಸಾಮಾಜಿಕ ಜೀವನದ ವಿಶ್ಲೇಷಣೆಯನ್ನು ಮಾಡುವುದರ ಮೂಲಕ ಯುಕ್ತಾಯುಕ್ತಿಗಳನ್ನು ಪೃಥಕ್ಕರಿಸುತ್ತದೆ. ಸಮಾಜಕ್ಕೆ ತನ್ನ ಕುಂದುಕೊರತೆಗಳನ್ನು ಪ್ರತಿಬಿಂಬಿಸುವುದಲ್ಲದೆ. ಜೀವನದ ಗತಿ, ಉದ್ದೇಶಗಳನ್ನು ಸೂಚಿಸುತ್ತದೆ; ಜೀವನ ಸಾಫಲ್ಯತೆಯ ಮಾರ್ಗವನ್ನು ತೋರಿಸುತ್ತದೆ; ಜೀವನದ ಗಮ್ಯ ಸ್ಥಾನವನ್ನು ನಿರ್ದೇಶಿಸಿ, ಅಪೂರ್ಣತೆಯಿಂದ ಪೂರ್ಣತೆಗೆ, ಅನಿತ್ಯದಿಂದ ನಿತ್ಯದ ಕಡೆಗೆ ಮಾನವ ಜೀವನವನ್ನು ಒಯ್ಯುತ್ತದೆ ಸಾಹಿತ್ಯವು ಜೀವನ ಮಾರ್ಗದರ್ಶಕ ಮಾತ್ರವಲ್ಲದೆ, ಹಿತಚಿಂತಕವೂ ಅಹುದು; ಬೋಧಕವೂ ಅಹುದು. ಸಾಹಿತ್ಯವು ಜೀವನದ ಉಪದೇಶಕವೂ ಆಗಿದೆ. ಆದರೆ ಸಾಹಿತ್ಯದ ಉಪದೇಶ ಹಿತವಚನಲ್ಲಿದೆ; ಗುರುವಿನ ಉಪದೇಶ "ಧರ್ಮಂ ಚರ, ಸತ್ಯಂ ವದ" ಎಂಬ ಆಜ್ಞೆಯ ರೂಪದಲ್ಲಿರುತ್ತದೆ; ಅದು ವಿಧಿ. ಅದು ಅನುಲ್ಲಂಘನೀಯ. ಆದರೆ ಸಾಹಿತ್ಯವು ಉಪದೇಶಿಸುವುದು, ಹಿತಚಿಂತನೆ ಮಾಡುವುದು ಮಿತ್ರನ ಭಾಷೆಯಲ್ಲಿ. ಮಿತ್ರನಂತೆ ಸಾಹಿತ್ಯವು ಒಪ್ಪು ತಪ್ಪುಗಳ ವಿಮರ್ಶೆಗೈದು, ಯುಕ್ತಾಯುಕ್ತತೆಯನ್ನು ವಿವೇಚಿಸಿ, ಯೋಗ್ಯವಾದ ಕಾರ್ಯದಲ್ಲಿ ಸಲಹೆ ನೀಡುತ್ತದೆ; ಸಹಕರಿಸುತ್ತದೆ. ಸಾಹಿತ್ಯದ ಭಾಷೆ ಮಿತ್ರನ ಭಾಷೆ; ಅಂತಃಕರಣದ ಭಾಷೆ. ಅದು ಹೃದಯಕ್ಕೆ ನಿಕಟವರ್ತಿಯಾಗಿದೆ. ಆದ್ದರಿಂದ ಸಾಹಿತ್ಯವು ಜನರ ಅಥವಾ ಸಮಾಜದ ಆತ್ಮದೊಂದಿಗೆ, ಹೃದಯದೊಂದಿಗೆ ಸುಲಭವಾಗಿ ಐಕ್ಯಗೊಳ್ಳುತ್ತದೆ; ಸಮಾವೇಶಗೊಳ್ಳುತ್ತದೆ. ಆದ್ದರಿಂದ, ಸಾಹಿತ್ಯದ ಭಾಷೆಯು ಜೀವನದ ಗತಿಯನ್ನೇ ಹಿಡಿಯುವುದರಿಂದ, ಸಮಾಜ ಹೃದಯದೊಂದಿಗೆ, ಆತ್ಮದೊಂದಿಗೆ ಸಹಜವಾಗಿ ಸಂಗಮವಾಗುವುದರಿಂದ ಸಹಜಪೂರ್ಣವಾದ ಪ್ರತಿಕ್ರಿಯೆಯುಂಟಾಗಿ ಸಾಹಿತ್ಯದ ಉದ್ದೇಶ ಮತ್ತು ಕಾರ್ಯ ಅನಾಯಾಸವಾಗಿ, ಯಾಂತ್ರಿಕವಾಗಿ ನೆರವೇರುತ್ತದೆ. ಸಾಹಿತ್ಯ ಮತ್ತು ಸಾಮಾಜಿಕ ಜೀವನದ ಸಂಬಂಧ ಸತಿ-ಪತಿಯರ ಸಂಬಂಧ, ಸತಿಯ ಒಲವು—ನಿಲವು ಸಾಹಿತ್ಯದಲ್ಲಿ ಎದ್ದು ತೋರುತ್ತದೆ. ಉಪದೇಶ ಕಾರ್ಯದಲ್ಲಿ ಸಾಹಿತ್ಯವು ಸತಿಯ ಸ್ಥಾನದಲ್ಲಿದೆ. ಸಾಹಿ

ತ್ಯವು ಸತಿಯತೆರದಲ್ಲಿ ಅಪರೋಕ್ಷ
ಕಾರ್ಯವನ್ನು ನೆರವೇರಿಸುತ್ತದೆ.
ಯ ಮಾತಿನಲ್ಲಿ ಹೇಗೆ ಅರ್ಥವು ಸ
ವಾಗಿರುತ್ತದೋ ಅಂತೆಯೇ ಸಾಹಿತ್ಯ
ಯೂ ಅರ್ಥ ಸೂಚ್ಯವಾಗಿರುತ್ತದೆ.
ಹಿತ್ಯವು ಸಮಾಜದ ಕುಂದುಕೊರ
ನ್ನು ಕಾಂತಾ ಸಂಹಿತೆಯಿಂದ ಬ
ಸುರಸವಾಗಿ, ಸೂಚ್ಯವಾಗಿ, ಸು
ವಾಗಿ ಅರುಹುತ್ತದೆ; ಚಮತ್ಕಾರ
ತನ್ನ ಕಾರ್ಯವೆಸಗುತ್ತದೆ.

ಸಾಹಿತ್ಯವೂ ಸಮಾಜದಂತೆ ಪ್ರ
ಶೀಲ. ಸಮಾಜವು ಬೆಳೆದಂತೆ, ವಿ
ವಾದಂತೆ, ಮತ್ತು ಬದಲಾವಣೆ ಹೊ
ದಂತೆ ಸಾಹಿತ್ಯವೂ ಬದಲಾಗುತ್ತದೆ;
ಕಾಸಗೊಳ್ಳುತ್ತದೆ. ಸಾಹಿತ್ಯವು ತನ್ನ ಸ
ಕಾಲೀನ ಸಮಾಜದ, ಸಾಮಾಜಿಕ ಜ
ನದ ಸಮಸ್ಯೆಗಳ, ಲೋಪದೋಷ
ಆಶೆ- ಆಕಾಂಕ್ಷೆಗಳ, ಜೀವನದೃಷ್ಟಿ
ಸಮಗ್ರ ಚಿತ್ರಣವನ್ನೊದಗಿಸುತ್ತವೆ;
ಮಾಜಿಕ ಅಭಿರುಚಿಯನ್ನೂ ವ್ಯಕ್ತಪಡಿ
ತ್ತದೆ. ಸಾಹಿತ್ಯ ಮತ್ತು ಸಮಾಜ ಒ
ಕ್ಕೊಂದು ಪೂರಕ–ಕಾರಕಗಳಾಗಿವೆ.
ಹಿತ್ಯವು ಸಮಾಜದ ಅಭಿರುಚಿಗೆ ತಕ್ಕ
ಬದಲಾಗುವುದಾದರೂ ಅದು ಸಮಾ
ಅಡಿಯಾಳಾಗಬಾರದು. ಸಮಾಜದ
ಭಾವದಿಂದಾಗಿ ನಿತ್ಯ ನೂತನವಾಗು
ದಾದರೂ ಅದು ಚಿರಂತನ ಸತ್ಯವ
ಪ್ರತಿಪಾದಿಸುತ್ತದೆ; ಸನಾತನ ತತ್ತ್ವವ
ಬೋಧಿಸುತ್ತದೆ. ಸಮಾಜವೇ ಸಾಹಿತ್ಯ
ಸಾಮಗ್ರಿ: ಜೀವನ ಕೃತಿ
ಸಾಹಿತ್ಯದ ವಿಚಾರ; ಜೀವ
ತತ್ತ್ವವೇ ಸಾಹಿತ್ಯದ ತಿರುಳ
ಸಾಹಿತ್ಯದ ಹುಟ್ಟು ಸಮಾಜದಲ್ಲಿಯ
ವಿಕಾಸವೂ ಸಮಾಜದಿಂದಲೇ. ಕಾಯ
ಸೇವೆ, ಗುರಿ ಮತ್ತು ಉದ್ದೇಶ ಎಲ್ಲ
ಸಮಾಜಕ್ಕಾಗಿಯೇ, ಜೀವನದ ಪರಿಪ
ರ್ಣತೆಗಾಗಿಯೇ. ಸಾಹಿತ್ಯವು ಸಾಧ
ಶೋಧನೆ, ಬೋಧನೆ ಮತ್ತು ಸುಧಾರ
—ಈ ನಾಲ್ಕು ರೀತಿಯ ಕಾರ್ಯವನ
ಸಾಮಾಜಿಕ ಜೀವನಕ್ಕಾಗಿ ನೆರವೇರಿಸ
ತ್ತದೆ ಅಂತೆಯೇ ಸಮಾಜಕ್ಕೆ ಸಾಹಿತ್ಯ
ವೇ ಮಾರ್ಗದರ್ಶಕ; ಜೀವನದ ಕೈಪಿಡಿ
ಜೀವನ ದರ್ಶನದ ರನ್ನಗನ್ನಡಿ ಸಾಹಿತ್ಯ
ದಲ್ಲಿಯೇ ಸಮಾಜದ ಅಸ್ತಿತ್ವ; ಸಾಹಿತ್ಯ
ದಲ್ಲಿಯೇ ಪುರುಷಾರ್ಥ ಸಾರ್ಥಕ್ಯ ಸಾಹಿ
ತ್ಯದಿಂದಲೇ ಸಮಾಜದ ಉನ್ನತಿ ಪ್ರಗ
ತಿ, ಸಾಕಲ್ಯ —ಸಫಲತೆ. ಸಾಹಿತ್ಯದಲ್ಲಿ
ಯೇ ಜೀವನ ದರ್ಶನ; ಸಾಹಿತ್ಯದಿಂದಲೇ
ಪರಿಪೂರ್ಣತೆ. ಸಾಹಿತ್ಯವೇ ಸಮಾಜದ
ಜೀವಾಳ; ಸಾಹಿತ್ಯದಿಂದಲೇ ಭೂಮಾ
ನಂದ. ಸಾಹಿತ್ಯದಲ್ಲಿಯೇ ಸಮಾಜ ಪೋ
ಷಣೆ, ರಕ್ಷಣೆ; ಸಾಹಿತ್ಯವೇ ಬಾಳಬಟ್ಟೆ
ಯ ಪರಮ[illegible].

(ಕಲಾವೃಂದ, ಉಡುಪಿ ಇದರ ವಾರ್ಷಿಕೋತ್ಸವದ ಸಂದರ್ಭ ಜರಗಿದ ಕಾಲೇಜ್ ವಿಭಾಗದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಪುರಸ್ಕಾರ ಪಡೆದುದು)

ಪ್ರಕಾಶ ಮೇಚ್ & ಪ್ಲೈವುಡ್ ಫೇಕ್ಟರಿ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಕುಂದಾಪುರ.

1956ನೇ ಕಂಪೆನಿಗಳ ಕಾನೂನಿನ 640–ಬಿ(2) ಸೆಕ್ಷನ್ ಪ್ರಕಾರ ಪಾಲುದಾರರಿಗೆ ಕೊಡುವ ಜನರಲ್ ನೋಟೀಸು.

ಈಗಿರುವ ಮೆನೇಜಿಂಗ್ ಏಜೆಂಟ್ಸ್ ಮೆ। ವೆಸ್ಟರ್ನ್ ಇಂಡಿಯಾ ಏಜೆನ್ಸೀಸ್ ಪ್ರೈವೇಟ್ ಲಿಮಿಟೆಡ್ ಇವರ ಸ್ಥಾನದಲ್ಲಿ ಜ್ಯಾಂಟ್ ಮೆನೇಜಿಂಗ್ ಡೈರೆಕ್ಟರುಗಳನ್ನು ನೇಮಿಸುವ ಅವಕಾಶದ ಸಲುವಾಗಿ ಕಂಪೆನಿಯು ಕೇಂದ್ರ ಸರಕಾರಕ್ಕೆ ಸೆಕ್ಷನ್ 268ರಂತೆ ಕಂಪೆನಿಯ ಆರ್ಟಿಕಲ್ಸ್ ಆಫ್ ಎಸೋಸಿಯೇಶನ್ನಿನಲ್ಲಿ ಮಾಡಿದ ಬದಲಾವಣೆಯನ್ನು ಮಾನ್ಯ ಮಾಡುವಂತೆ ಅರ್ಜಿ ಸಲ್ಲಿಸುವುದೆಂದು ಈ ಮೂಲಕ ಜನರಲ್ ನೋಟೀಸು ಕೊಡಲಾಗಿದೆ.

(ಬೋರ್ಡಿನ ಹುಕುಂ ಪ್ರಕಾರ)

ಕುಂದಾಪುರ
28–12–65.

(ಸಹಿ) ಟಿ. ಸೋನ್ಸ್.
(ಸಹಿ) ಎಸ್. ಪಿ. ತೋಳಾರ್.
ಜ್ಯಾಂಟ್ ಮೆನೇಜಿಂಗ್ ಡೈರೆಕ್ಟರರು
(ಮೆನೇಜಿಂಗ್ ಏಜೆಂಟ್ಸ್)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦

ನಾಲಗೆಯಲ್ಲ ಹೃದಯ ಮಾತಾಡಬೇಕು

(ನಾಲ್ಕನೇ ಪುಟದಿಂದ)

"ಏನಾಯಿತು?"

'ನೋಡಿ, ಆವತ್ತಿನಿಂದ ಒಂದಕ್ಕಿಂತ ಹೆಚ್ಚು ಬಾರಿ ಅವರು ಹೇಳುತ್ತ ಬಂದಿದ್ದಾರೆ, ತಾನು ಪಕ್ಷಪಾತ ನೀತಿ ಅನುಸರಿಸಿಲ್ಲಾಂತ...'

"ಕಳ್ಳ ಯಾವಾಗಲಾದರೂ ಸತ್ಯ ಹೇಳ್ತಿದ್ದಿದೆಯೇನು?"

"ಹಾಗೆಲ್ಲಾ ಅನ್ನ ಬೇಡಿ...."

"ಅಲ್ವೇ, ನಿನಗೆ ಆ ವಿಲ್ಸನ್‌ರ ಮೇಲೆ ಯಾಕೆ ಇಷ್ಟು ಅನುತಾಪ?"

"ಯಾಕೆ ಅಂದ್ರೆ? ಅವರು ಕಾಮನ್ ವೆಲ್ತಿನ ರಾಣಿ ದೇಶದ ಪ್ರಧಾನಿಯಲ್ವೆ?"

"ಆದುದರಿಂದಲೇ ಅವರು ಪಕ್ಷಪಾತ ಮಾಡಬಾರದಾಗಿತ್ತು, ನೋಡು.."

"ಆದರೂ...ಮತ್ತೆ ನೋಡಿ, ನಮ್ಮ ರಾಣಿಯ ಪ್ರಧಾನಿ...'

'ಓ, ಹಾಗೆ....ಇನ್ನೂ ನಿನ್ನ ರಾಣಿ ಮೋಹ ಹೋಗಲಿಲ್ಲ....ಸರೀನ್ನು ಇಂದಿನ ದಿನ ಕುರುವಾದರೂ ಅನುಕಂಪ ತುಂಬಿರುವುದಾದರೆ, ನಾರೀ ಹೃದಯದಲ್ಲಿ ಮಾತ್ರ ವ್ಯವಹಾರ ಜ್ಞಾನ ಕಡಿಮೆಯಿರೋದೂ ಇದಕ್ಕೆ ಕಾರಣವಿರಬಹುದೂನ್ನು..,

"ರೀ, ಅನುಕಂಪವನ್ನು ದೂರ ಮಾಡುವ ವ್ಯವಹಾರ ಜ್ಞಾನ ನನಗೆ ಬೇಡರಿ...."

'ಇರಲಿ ಬಿಡು. ಆದ್ರೂ ನೋಡು, ಸಪ್ಟಂಬರ ಮೊದಲನೆ ದಿನ ಪಾಕ್ ಸೇನೆಯು ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ಭಾರತದ ಮೇಲೆ ಆಕ್ರಮಣ ಮಾಡಿದುದರ ಮೇಲೆ ತುಟಿ ಬಿಚ್ಚದ ವಿಲ್ಸನ್ ಸಪ್ಟಂಬರ ಒಂಭತ್ತರಂದು ಭಾರತ ಆತ್ಮರಕ್ಷಣೆಗಾಗಿ ಗಡಿ ದಾಟಿದಾಗ ಮಾತ್ರ ವಿಷಾದಿಸ ಬೇಕಾದರೆ ಇಲ್ಲಿ ನ್ಯಾಯವೆಲ್ಲಿ? ಸತ್ಯವೆಲ್ಲಿ? ಧರ್ಮವೆಲ್ಲಿ?

'ಏನೋ, ಭದ್ರತಾ ಮಂಡಳದ ಗೊತ್ತುವಳಿಯನ್ನು ಬೆಂಬಲಿಸಿದುದರಿಂದ ಹಾಗೆ ಮಾಡಬೇಕಾದ ಆಗತ್ಯವಿಲ್ಲವಂತೆ ನೋಡಿ...."

'ಮತ್ತೆ ಈ ಬಗ್ಗೆ ಯಾಕೆ ಬಾಯಿ ತೆರೆಯಬೇಕಿತ್ತು? ಭಾರತ—ಪಾಕಿಸ್ತಾನಗಳ ತಂಟೆಗನೇ ಬರದಿರಬಾರಿತ್ತು.' ಭದ್ರತಾ ಸಮಿತಿಯ ಜವಾಬುದಾರಿಗನೇ ಬಿಡಬೇಕಾಗಿತ್ತು..."

'ಅಂದ್ರೆ ನೀವಂತೂ ವಿಲ್ಸನ್ನರನ್ನು ಕ್ಷಮಿಸುವುದಿಲ್ಲ....'

'ನಾನು ಅಂತೇನು, ಇಡಿಯ ಭಾರತೀಯ ಜನತೆ ಅವರನ್ನು ಪಕ್ಷಪಾತಿ ಎಂದಿವೆ. ಮೊದಲು ಬೆಂಕಿ ಹಚ್ಚಿ ಮತ್ತೆ ನೀರಿಗಾಗಿ ಹಾರಾಡುವ ವಿಲ್ಸನ್ನರ ಅಭಿಪ್ರಾಯಕ್ಕೆ ಬ್ರಿಟನ್ನದ ಬುದ್ಧಿಜೀವಿಗಳೂ ವಿರೋಧಿಗಳಾಗಿರುವರು. ನೋಡೋಣ, ವಿಲ್ಸನ್ ಹೃದಯ ಮಾತಾಡಲಿ....'

'ಹ್ಞೂಂ, ಏನೂ ಕೂಡುವುದಿಲ್ಲ. ಬೆಳಿಗ್ಗೆ ಎಣಿಬಿದ್ದು ಭುಜ ಉಳುಕಿ ಹೋಗಿದೆ...'

'ಅಯ್ಯೋ, ಪಾಪವೇ ನಾನು ಏನೋ ಅಂತಿದ್ದೆ. ಆಯೊಡೇಕ್ಸ್ ತಿಕ್ಕುತ್ತೇನೆ....ಇಲ್ಲಿ ಬಾ..'

'ಪರವಾಗಿಲ್ಲ, ನೀವು...'

"ನಿನ್ನ ಹಾಗೆಯೇ ತಾನೆ ನಾನೂ..."

"ಹ್ಞ...."

"ಹ್ಞ... ಹ್ಞ...ಹ್ಞ..."

—ಗೋರಾ.

ರಾಜ್ಯ ಸರಕಾರಗಳ ಅಸಹಕಾರ

(ಏಳನೇ ಪುಟದಿಂದ)

ಆಹಾರಧಾನ್ಯ ಕಾರ್ಪರೇಶನ್ ನೀತಿಗೂ ಹೊಂದಾಣಿಕೆಯಿಲ್ಲ. ಹಾಗಾಗಿ ಕಾರ್ಪರೇಶನ್ ಒಂದು ಖಾಸಗಿ ಸಂಸ್ಥೆಯಂತೆಯೇ ಕಾರ್ಯ ಮಾಡುವ ದುರವಸ್ಥೆ ಬಂದಿದೆ. ರಾಜ್ಯ ಸಂಕಾರಗಳು ಎದುರಿಸಬೇಕಾಗಿರುವ ಆಹಾರ ಸಮಸ್ಯೆಯನ್ನು ಸರಳ ಗೊಳಿಸಲು ಸ್ಥಾಪಿತವಾದ ಕಾರ್ಪರೇಶನ್ನಿನೊಂದಿಗೆ ಅವುಗಳು ಸಹಕರಿಸದೆ ಹೋದರೆ ಹೇಗೆ? ಪೇಚಿನ ಪರಿಸ್ಥಿತಿಯಲ್ಲಿ ಕಾರ್ಪರೇಶನ್ ಹೇಗೆ ಕಾರ್ಯಮಗ್ನವಾಗಬೇಕು?

ಶ್ರೀ ಟಿ. ಎ. ಪೈಗಳು ಕಾರ್ಪರೇಶನಿನ ಮೊದಲ ಅಧ್ಯಕ್ಷರಾಗಿ ಕೆಲವೊಂದು ಕಟು ಅನುಭವಗಳನ್ನು ಕಂಡರು. ಇನ್ನು ಮುಂದೆ ಇವರ ಸ್ಥಾನಕ್ಕೆ ಬರಬಹುದಾದವರು ಯಥಾ ಯೋಗ್ಯವಾಗಿ ಕಾರ್ಯನಿರ್ವಹಿಸುವುದಕ್ಕೆ ತಕ್ಕ ಅವಕಾಶಗಳನ್ನು ಅಗತ್ಯಕಂಡರೆ, ಕಾಯದೆ ರೀತ್ಯಾ ಒದಗಿಸುವುದು ಅಗತ್ಯವಾಗಿದೆ. ಇಲ್ಲವಾದರೆ, ಕಾರ್ಪರೇಶನ್ ರಾಜ್ಯಸರಕಾರಗಳ ಗೊಂಬೆಯಾಟವನ್ನು ಕೈಕಟ್ಟಿ ನೋಡುತ್ತ ಕೂತುಕೊಳ್ಳ ಬೇಕಾಗುತ್ತದೆ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ನವವರ್ಷೀಯ ಸಮ್ಮಾನಿತರು

ಅಕೆಡೆಮಿ ಮತ್ತು ರೋಟರಿ ಕ್ಲಬ್ಬುಗಳು ೧೯೬೩ರ ಮೊದಲ ದಿನ ಭಾರತದ ನಾಲ್ಕು ಪುತ್ರರತ್ನಗಳನ್ನು ಸನ್ಮಾನಿಸಿದುವು.

ಕೃಷಿ ವಿಜ್ಞಾನದ ಪ್ರಾಧ್ಯಾಪಕರಾಗಿ ಸ್ನಾತಕೋತ್ತರ ಸಂಶೋಧನೆಯ ದಿಗ್ದರ್ಶಕರಾಗಿ ಸಂಶೋಧಕ ವೈಜ್ಞಾನಿಕರಾಗಿ, ಕೃಷಿ ಕಾಲೇಜಿನ ಪ್ರಿನ್ಸಿಪಾಲರಾಗಿ, ಸರಕಾರದ ನಾನಾ ಪದಗಳಲ್ಲಿದ್ದು ಅನುಭವ ಗಳಿಸಿದ ಅನುಭವ ಸಾಗರ, ಬೆಂಗಳೂರಿನ ಹೆಬ್ಬಾಳ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿಯಾಗಿರುವ ಡಾ| ಕೆ. ಸಿ. ನ್ಯಾಕ್. ಡಾ| ನ್ಯಾಕರು ಭಾರತದ ವಿಜ್ಞಾನಿ—ಆಡಳಿತೆದಾರರ ಸಾಲಿನಲ್ಲಿ ನಿಲ್ಲಬಲ್ಲ ಅಪ್ರತಿಮ ವ್ಯಕ್ತಿತ್ವ—ಸಾಧನೆಯುಳ್ಳವರು.

ಉದ್ದಿಮೆಯ ರಂಗದಲ್ಲಿ ಕ್ರಾಂತಿ ಸಾಧಿಸಿದ ಮಂಗಳೂರಿನ ಶ್ರೀ ಎಫ್. ಎಕ್ಸ್. ಡಿ. ಪಿಂಟೋ ಅವರು ನಮ್ಮ ದೇಶದ ಹಂಚು ತಯಾರಕರಲ್ಲಿ ತಮ್ಮದೇ ಸ್ಥಾನವನ್ನು ಪಡೆದಿದ್ದಾರೆ. ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ ನಂತರ ಶ್ರೀ ಪಿಂಟೋ ಅವರು ರಾಜಕಾರಣ ಮತ್ತು ಸಮಾಜದೊಡನೆ ನಿಕಟ ಸಂಪರ್ಕವನ್ನು ಇಟ್ಟು ಕೊಂಡಿದ್ದಾರೆ. ಎ.ಐ. ಸಿ. ಸಿ. ಎಂ. ಪಿ. ಸಿ. ಸಿ. ಮತ್ತು ಡಿ ಸಿ ಸಿ. ಗಳಲ್ಲಿ ಇವರ ಪಾತ್ರವೂ ಇದೆ. ಶೈಕ್ಷಣಿಕ ಸಂಸ್ಥೆಗಳೊಡನೆಯೂ ಸಂಪರ್ಕ ವಿರಿಸಿದ ಇವರು ವಿದೇಶಗಳಿಗೂ ಹಂಚು ಪೂರೈಸಿ, ಮಂಗಳೂರು ಹಂಚಿನ ಬೆಲೆಯೇನೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ನಮ್ಮ ಜಿಲ್ಲೆಯವರೇ ಆದ ಶ್ರೀ ಬೆನೆಗಲ್ ಶಿವರಾಯರು, ಭಾರತೀಯ ಪತ್ರಿಕೋದ್ಯಮದಲ್ಲಿ ಐವತ್ತು ವರ್ಷಗಳ ತುಂಬಿದ ಅನುಭವದ ನಿಧಿಯವರು. ಶ್ರೀಮತಿ ಅನ್ನಿ ಬೆಸೆಂಟರ 'ನ್ಯೂ ಇಂಡಿಯಾ'ದಿಂದ ಪತ್ರಿಕೋದ್ಯಮದಲ್ಲಿ ಪಾದಾರ್ಪಣ ಮಾಡಿದ ಶ್ರೀಯುತರು ಮದ್ರಾಸಿನ 'ದಿ ಹಿಂದೂ' ಆಂಗ್ಲ ದೈನಿಕದ ನವದೆಹಲಿಯ ಪ್ರತಿನಿಧಿಯಾಗಿದ್ದಾರೆ. ಭಾರತದ ಮಾತ್ರವಲ್ಲ, ಅಮೆರಿಕ, ಇಂಗ್ಲೆಂಡಿನ ಸುಪ್ರಸಿದ್ಧ ಪತ್ರಿಕೆಗಳಲ್ಲೂ ಶ್ರೀಯುತರ ಲೇಖನಗಳು ಆಗಾಗ ಬೆಳಕು ಕಾಣುತ್ತಿವೆ. ಮಜೂರ ಸಂಘಟನೆ, ರಾಜಕಾರಣ ಹಾಗೂ ಸಾಮಾಜಿಕ ರಂಗಗಳಲ್ಲಿಯೂ ಶ್ರೀ ಶಿವರಾಯರು ವಹಿಸಿದ ಪಾತ್ರ ಅವಿಸ್ಮರಣೀಯ.

ಕರ್ನಾಟಕ ಪ್ರಾದೇಶಿಕ ಇಂಜನಿಯರಿಂಗ್ ಕಾಲೇಜಿನ ಹುಟ್ಟಿಗೆ ದಿ| ಯು. ಶ್ರೀನಿವಾಸ ಮಲ್ಯರು ಕಾರಣವಾದರೆ, ಅದರ ಬೆಳವಣಿಗೆ ಮತ್ತು ಪ್ರಗತಿಗೆ ಪ್ರಿನ್ಸಿಪಲ್ ಡಾ| ಎ. ಎಸ್. ಅಡ್ಕೆಯವರೇ ಹೊಣೆ. ಹಿಂದಿನ ಬೊಂಬಾಯಿ ಸರಕಾರದ ಸೇವೆಯಲ್ಲಿ ಇಂಜನಿಯರ್ ಆಗಿದ್ದ ಶ್ರೀ ಅಡ್ಕೆಯವರು ರಾಜ್ಯ ಪುನರ್ಘಟನಾನಂತರ ಕರ್ನಾಟಕ ಸರಕಾರದ ಸೇವೆಗೆ ಬಂದರು. ಅಗಾಧ ಪರಿಶ್ರಮ, ಅಸಾಧಾರಣ ಮೇಧಾ ಶಕ್ತಿ ಮತ್ತು ಅನುಪಮ ಅನುಭವಗಳಿಸಿದ ಡಾ| ಅಡ್ಕೆಯವರು ನಮ್ಮ ರಾಜ್ಯದ ಇಂಜನಿಯರಿಂಗ್ ವಿಭಾಗದ ಬಹುದೊಡ್ಡ ಸಂಪತ್ತು.

ದಿ ವಿಜಯಾ ಬೇಂಕ್, ಲಿಮಿಟೆಡ್, ಬೈಂದೂರು.

ರಿಜಿಸ್ಟರ್ಡ್ ಆಫೀಸು:

ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3.

ಏಲಂ ನೋಟೀಸು.

ಈ ಕೆಳಗೆ ಹೆಸರುಗಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ-ವ-ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 22-1-66 ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 29-1-66 ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು,-ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ-ಯಾ-ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗ ಬಹುದಾದ ಸಕಲ ಖರ್ಚು-ವ-ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಜ್ರಾ ನಂಬರ	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ರೂ. ಪೈಸೆ.
		ಬಡ್ಡಿ ಸಮೇತ 31—12—65ರವರೆಗೆ
14/64	ಶ್ರೀ ರಾಮ ಮೋಗೇರ, ದುರ್ಗನ ಮಗ, ಜೋಗನ ಮನೆ, ಬೈಂದೂರು ಗ್ರಾಮ, P. O. ಪ್ಯೆಯೂಡಿ	69.55
108/64	ಶ್ರೀಮತಿ ಅಕ್ಕಣಿ ಶೆಡ್ತಿ, ಶ್ರೀ ನಾರಾಯಣ ಶೆಟ್ರ ಹೆಂಡತಿ, ಜಟ್ಟಿ ಶೆಟ್ರ ಮನೆ, ಶಿರೂರು ಗ್ರಾಮ P. O. ಶಿರೂರು (ದ. ಕ.)	59.55
398/64	ಶ್ರೀ ಕರ್‍ಯ್ಯಾ ಅಲ್ಲಿ ಸಾಹೇಬ, ಶ್ರೀ ಸುಲೇಮಾನ್ ಸಾಹೇಬರ ಮಗ ಹಡವಿನಕೋಣೆ, ಶಿರೂರು ಗ್ರಾಮ P. O. ಶಿರೂರು (ದ. ಕ.)	39.30
484/64	ಶ್ರೀ ಎಸ್. ಎ. ಮಹಾಬಲ ಶೆಟ್ಟಿ, ಜೂವ ಶ್ರೀ ಶಿವಪ್ಪ ಶೆಟ್ಟಿ, ಶಿರೂರು ಗ್ರಾಮ P. O. ಶಿರೂರು (ದ. ಕ.)	979.25
488/64	ಶ್ರೀ ಮೂಚ ಬಿಲ್ಲವ, ಶ್ರೀಮತಿ ದುರ್ಗಿ ಹೆಂಗ್ಸಿನ ಮಗ, ಗೋಳಿಬೇರು, ಬೈಂದೂರು ಗ್ರಾಮ P. O. ಬೈಂದೂರು (ದ. ಕ.)	74.00
489/64	ಶ್ರೀ ರಾಮಸ್ವಾಮಿ, ಶ್ರೀ ಚಿನ್ನಸ್ವಾಮಿಯ ಮಗ, ಜೋಗಿ ಮನೆಯಲ್ಲಿ ವಾಸ, ಪ್ಯೆಯೂಡಿ ಗ್ರಾಮ, P. O. ಪ್ಯೆಯೂಡಿ	112.50
490/64	ಶ್ರೀ ನಾಗ್ಯೆಯ ಶೆಟ್ಟಿ, ಶ್ರೀಮತಿ ದುರ್ಗಮ್ಮ ಶೆಡ್ತಿಯರ ಮಗ, ಗೋವಿಂದ ಶೆಟ್ರ ಮನೆ, P. O. ಶಿರೂರು (ದ. ಕ.)	66.45
504/64	ಶ್ರೀ ಬಾಲಯ್ಯ ಶೇರುಗಾರ, ಶ್ರೀ ವೆಂಕಟ್ರಮಣ ಶೇರುಗಾರನ ಮಗ, ಬಟ್ವಾಡಿ ಮನೆ, ಬೈಂದೂರು ಗ್ರಾಮ, P.O. ಬೈಂದೂರು(ದ.ಕ.)	50.60
518/64	ಶ್ರೀ ಸ್ಯಮನ್ ಡಿ' ಸೋಜ, ರುಜಾರಿಯೋ ಡಿ' ಸೋಜರ ಮಗ, ಗವರ್ನಮೆಂಟ್ ಫಿಶರೀಸ್ ಕ್ಯೂರಿಂಗ್ ಯಾರ್ಡ್. P.O. ತಾರಾಪತಿ (ದ.ಕ.) ಪಡುವರಿ ಗ್ರಾಮ, ಕುಂದಾಪುರ ತಾಲೂಕು	60.55
586/64	ಶ್ರೀ ಕಲ್ವಾಡಿ ಮಹಾಬಲ ಶೆಟ್ಟಿ, ಜೂವ ಶ್ರೀ ವೆಂಕಪ್ಪ ಶೆಟ್ಟಿ, P. O. ಬೈಂದೂರು (ದ. ಕ.)	238.20
558/64	ಶ್ರೀ ಟಿ. ಹಸನ್ ಸಾಹೇಬ, ಶ್ರೀ ಹಾಜಿ ಸಾಹೇಬರ ಮಗ, P. O. ತಾರಾಪತಿ, ಪಡುವರಿ ಗ್ರಾಮ, ಕುಂದಾಪುರ ತಾಲೂಕು.	102.65
561/64	ಶ್ರೀ ಜೊರೋಮ್ ಪಿಂಟೋ, ಸ್ಯಮನ್ ಪಿಂಟೋಅವರ ಮಗ, ಸೊನೆಗಾರಕೇರಿ, P. O. ಬೈಂದೂರು.	38.00
593/64	ಶ್ರೀ ಅಣ್ಣಪ್ಪ ಶೆಟ್ಟಿ, ಜೂವ ಸುಬ್ಬಯ್ಯ ಶೆಟ್ಟಿ, ನೆಲ್ಯಾಡಿ, ತಗ್ಗರ್ಸೆ ಗ್ರಾಮ, P. O. ತಗ್ಗರ್ಸೆ, ಕುಂದಾಪುರ ತಾಲೂಕು.	203.60
606/64	ಶ್ರೀ ದೇವಪ್ಪ ಶೇಟ್, ಶಿವಪ್ಪ ಶೇಟರ ಮಗ, ಯಡ್ತರೆ ಗ್ರಾಮ, P. O. ಬೈಂದೂರು (ದ ಕ.)	166.50
621/64	ಶ್ರೀ ಸಯ್ಯದ್ ಅಬ್ದುಲ್ ರಹಿಮಾನ್, ಶ್ರೀ ಹಸನ್ ಸಾಹೇಬರ ಮಗ, ಹಡವಿನ ಕೋಣೆ, ಶಿರೂರು ಗ್ರಾಮ, P. O. ಶಿರೂರು (ದ. ಕ.)	31.45
641/64	ಶ್ರೀ ರಾಮಸ್ವಾಮಿ, ಶ್ರೀ ಚಿನ್ನ ಸ್ವಾಮಿಯವರ ಮಗ, ಪ್ಯೆಯ್ಯಾಡಿ ಗ್ರಾಮದ ಜೋಗಿಮನೆಯಲ್ಲಿ ವಾಸ, P. O. ಪ್ಯೆಯ್ಯಾಡಿ, ಕುಂದಾಪುರ ತಾಲೂಕು.	40.90
697/64	ಶ್ರೀ ಗಂಡಿಹೊಳೆ ನಾಗಯ್ಯ ಶೆಟ್ಟಿ, ಜೂವ ವೆಂಕಪ್ಪ ಶೆಟ್ಟಿ, ಬಿಜೂರು ಗ್ರಾಮ, P. O. ಬಿಜೂರು (ದ. ಕ.) ಕುಂದಾಪುರ ತಾಲೂಕು.	26.65
4/65	ಶ್ರೀ ನೆಲ್ಯಾಡಿ ಮೂದಯ್ಯ ಶೆಟ್ಟಿ, ಜೂವ ಶ್ರೀ ಕುಪ್ಪಯ್ಯ ಶೆಟ್ಟಿ, ತಗ್ಗರ್ಸೆ ಗ್ರಾಮ, P. O. ಪ್ಯೆಯ್ಯಾಡಿ, ಕುಂದಾಪುರ ತಾಲೂಕು.	282.45
18/65	ಶ್ರೀ ಕೆ. ಜಿ. ಪ್ರಭಾಕರ ರಾವ್, ಶ್ರೀ ಕೆ. ಜಿ. ಅಚ್ಯುತರಾಯರ ಮಗ, ಕಂಬದ ಕೋಣೆ, P. O. ಕಂಬದ ಕೋಣೆ, ಕುಂದಾಪುರ ತಾಲೂಕು.	80.65
667/64	ಶ್ರೀ ನಾರಾಯಣ ಶೇರುಗಾರ, ಉಗ್ರಾಣಿ ತಿಮ್ಮಪ್ಪ ಶೇರುಗಾರನ ಮಗ, ಬಿಜೂರು ಗ್ರಾಮ, P. O. ಬಿಜೂರು, ಕುಂದಾಪುರ ತಾಲೂಕು.	88.00

ಆಫೀಸು: ಬೈಂದೂರು.
8-1-1966.

ಎ. ವಿಠಲ ಶೆಟ್ಟಿ,
ಮೆನೇಜರ್.

ಪ್ರಧಾನಿ ಶಾಸ್ತ್ರಿಗಳ ಸ್ಥಾನದಲ್ಲಿ ಹಂಗಾಮಿ ಪ್ರಧಾನಿಗಳಾಗಿ ಪ್ರತಿಜ್ಞಾ ವಚನ ಸ್ವೀಕರಿಸಿದ
ಗುಲ್ಜಾರಿಲಾಲ್ ನಂದಾ

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮಾಲುಕೋಟೆ, ಉಡುಪಿ

ಈ ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಕೆ. ಹೊನ್ನಯ್ಯ ಶೆಟ್ಟರನ್ನು ಈಗಿನ ಶರ್ತಗಳ ಪ್ರಕಾರವೇ ತಾ. 1-4-1966 ರಿಂದ 5 ವರ್ಷಗಳ ವರೆಗೆ ರೀ-ಎಪ್ಯೊಂಟ್‌ಮೆಂಟ್ ಮಾಡಿದ್ದನ್ನು ಮಂಜೂರು ಮಾಡುವಂತೆ 1956ನೇ ಇಸವಿಯ ಕಂಪೆನಿಗಳ ಕಾಯಿದೆ ಸೆಕ್ಶನ್ 640 B. ಅನುಸಾರವಾಗಿ ಕೇಂದ್ರ ಸರಕಾರಕ್ಕೆ ಅರ್ಜಿ ಸಲ್ಲಿಸಲಾಗುವುದು ಎಂದು ಕಂಪೆನಿಯ ಪಾಲುದಾರರಿಗೆ ಈ ಮೂಲಕ ತಿಳಿಸಲಾಗಿದೆ.

(ಬೋರ್ಡಿನ ಅನುಮತಿ ಮೇರೆಗೆ)

(ಸಹಿ) ಕೆ. ಎಚ್. ಶೆಟ್ಟಿ,
ಮೆನೇಜಿಂಗ್ ಡೈರೆಕ್ಟರ್.

ತಾ-21-12-1965.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 271 of 1965.

ಶ್ರೀನಿವಾಸ ಬಲ್ಲಾಳ-ಜನರಲ್ ಪವರ್ ಓಫ್ ಎಟೋರ್ನಿ ಹೋಲ್ಡರ್ C. ಮಾಧವ ಬಲ್ಲಾಳ —ವಾದಿ.

ಮತ್ತು

ಶ್ಯಾಮ ಸೆಟ್ಟಿ-ನಂದ್ರಪ್ಪ ಶೆಟ್ರ ಅಳಿಯ. ಕಾರ್ಕಳ ತಾಲೂಕು ನಿಂಜೂರು ಗ್ರಾಮದ ಪಡುಮನೆ —5ನೇ ಪ್ರತಿವಾದಿಯವರೊಳಗೆ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:-

1ರಿಂದ 4ರ ವರೇಗಿನ ಪ್ರತಿವಾದಿರು ತಮ್ಮ ಕುಟುಂಬಾರ್ಥವಾಗಿ ಸಹಾ ವಾದಿಯ ವರ್ಗ ಮೂಲಗೇಣಿಗೆ ಅನುಭವಿಸುವ ಅಸ್ತಿಯ ನಂತರದ ಪರಾಧೀನಗಾರನಾದ ನಿಮ್ಮನ್ನು ಕಕ್ಷಿಯಲ್ಲಿ ಸೇರಿಸಿ ನಿಮ್ಮ ಪರಾಧೀನದ ಉಜೂರು ತಿವಾಸ್ಕ ಡಿಕ್ರಿ ಕೇಳಿ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 17-1-1966ಕ್ಕೆ ಇಟ್ಟಿದೆ-ಉದಾಹರಿಸುವಂಥಾದಿದ್ದರೆ ಅದಿನ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನಮುಂದೆ ಹಾಜ್ರಾಗಿ ಪ್ಲೀಡು ಮಾಡಿಕೊಳ್ಳ ಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Rao
Advocate for Plaintiff.

Udipi, 31—12—1965.



ಕ್ಷಯರೋಗ ನಿಮಿತ್ತ ನೀವು ಏನಾದರೂ ಕೊಟ್ಟಿದ್ದೀರಾ? ಹತ್ತು ಪೈಸೆ ಕೊಟ್ಟು ಒಂದು ಟಿ ಬಿ ಮೊಹರನ್ನು ಪಡಕೊಳ್ಳಿರಿ. ಈ ಮೊಹರನ್ನು ನಿಮ್ಮ ಪತ್ರದ ಮೇಲೆ ಅಂಟಿಸಿರಿ. ಇದು ಕ್ಷಯರೋಗದಿಂದ ನರಳುವವನಿಗೆ ಒಂದು ನೇರ ಸಹಾಯವಾಗಿದೆ. ಚಾಲ್ತಿ ಕ್ಷಯರೋಗ ಮೊಹರು ಮಾರಾಟ ಚಳವಳವು ಜನವರಿ 26ರಂದು—ಪ್ರಜಾರಾಜ್ಯ ದಿನದಂದು ಮುಕ್ತಾಯವಾಗುತ್ತದೆ. ಆ ದಿನದೊಳಗಾಗಿಯೇ ಕ್ಷಯರೋಗ ಮೊಹರುಗಳನ್ನು ಪಡಕೊಳ್ಳಲು ಮರೆಯದಿರಿ.

17ನೇ ಕ್ಷಯರೋಗ ಮೊಹರು ಚಳವಳಕ್ಕಾಗಿ ಚಿತ್ರಗಾರರಿಂದ ನಕಾಶೆಗಳು ಅಪೇಕ್ಷಿಸಲ್ಪಟ್ಟಿವೆ. ವಿವರವಾದ ಫೋರ್ಮುಗಳಿಗಾಗಿ ದಿ ಟ್ಯುಬರ್‌ಕ್ಯುಲೋಸಿಸ್ ಎಸೋಶಿಯೇಶನ್ ಆಫ್ ಇಂಡಿಯಾ, ನ್ಯೂಡೆಲ್ಲಿ ಇವರಿಗೆ ಬರೆಯಿರಿ.

ಮೊಹರುಗಳು ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಮಂಗಳೂರು ಮತ್ತು ಅದರ ಬೇರೆ ಬೇರೆ ಏಜನ್ಸಿಗಳಲ್ಲಿ ದೊರೆಯುತ್ತವೆ.

16ನೇ ಕ್ಷಯರೋಗ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಏರ್ಪಡಿಸಲಾದುದು)

ಸ್ಥಳ ದಾನ:
Union Carbide India Ltd., Calcutta.

ರೈತ ಮುರುಗ

(ಎರಡನೇ ಪುಟದಿಂದ)

ಕುತೂಹಲದಿಂದಿದ್ದ ಮುರುಗನಿಗೆ ಮಾತಿನ ಗುರಿಯನ್ನು ಹಿಡಿಯಲಿಕ್ಕಾಗಲಿಲ್ಲ. ಆದು ಅಭಾಮಾನ್ಯವಾಗಿ ತಲಯೂರಿಯು ತನ್ನ ಗರ್ವವನ್ನು ಪ್ರದರ್ಶಿಸುವ ರೀತಿಯೆಂದವನು ಭಾವಿಸಿಕೊಂಡನು. ಸುದ್ದಿಯ ಗರ್ಭದಲ್ಲಿ ಸತ್ಯದಂಶವೂ ಇರಬಹುದೆಂಬ ಆಲೋಚನೆಯೂ ಅವನಿಗಾಗ ಬಂತು. ಮೂರು ವರ್ಷಗಳಿಂದ ಕಾಣದಿರುವ ಸ್ವಾಮಿಯನ್ನು ನೋಡಲು ಅವನು ಆತ್ತ ಕೋದನು.

ಮುರುಗನು ಗುಡಿಸಲು ಬಿಟ್ಟು ತನ್ನ ಧನಿಯನ್ನು ಕಾಣಲು ಹೋದಾಗ ಅವನ ಹೃದಯವು ಜೋರಾಗಿ ಬಡಿಯುತ್ತಿತ್ತು. ಅವನ ಕಣ್ಣುಗಳು ಭಯದಿಂದ ಅಲ್ಲದೆ ಸಂತೋಷದಿಂದಲೂ ತೀವ ಭರಿತವಾಗಿದ್ದುವು. ತನ್ನ ಸ್ವಾಮಿಯನ್ನು ಹೃತ್ಪೂರ್ವಕವಾಗಿ ಹಾಗೂ ನಿಷ್ಠೆಯಿಂದ ಸ್ವಾಗತಿಸುವ ಸಂಭ್ರಮಕ್ಕೆ ತಲೆಯೂರಿಯು ಆತಂಕವನ್ನು ತಂದೊಡ್ಡಿದ್ದನು.

ಸ್ವಲ್ಪ ದೂರದಲ್ಲೇ ಸ್ವಾಮಿಯನ್ನು ಮುರುಗನು ಕಂಡನು. ಅವರಿಬ್ಬರೂ ತೆಂಗಿನ ತೋಟಕ್ಕೆ ಒಟ್ಟಿಗೆ ಬಂದರು. ಇಬ್ಬರ ಹೃದಯವೂ ತುಂಬಿತ್ತು, ಮೌನ ಆವರಿಸಿತ್ತು.

"ನನ್ನ ಸ್ವಾಮಿಯು ದರ್ಶನದಿಂದಾಗಿ ಕಣ್ಣುಗಳು ಹರ್ಷಭಾಷ್ಪದಿಂದ ಒದ್ದೆಯಾಗಿವೆ. ಆದರೆ ಸ್ವಾಮಿಯು ಏಕೋ ಮೌನದಿಂದ ಅಲ್ಲದೆ ದುಃಖದಿಂದಿದ್ದಾರೆ," ಮೌನವನ್ನು ಮುರಿಯಲಿಕ್ಕಾಗಿ ಮುರುಗನು ಮಾತು ಆರಂಭಿಸಿದನು.

'ಯಾಕೆಂದರೆ, ಮುರುಗ, ನಾನಿನ್ನು ಮೇಲೆ ನಿನ್ನ ಸ್ವಾಮಿ ಇರುವದಿಲ್ಲ. ಇತರ ವಿಷಪೂರಿತ ಮಹತ್ವಾಕಾಂಕ್ಷೆಯಿಂದಾಗಿ ಮನೆಯಿಂದ ದೂರಕ್ಕೆ ಓಡಿಸಲ್ಪಟ್ಟಿರುವ ಕೇವಲ ಶಿಬಿರ-ಗುಮಾಸ್ತನಾಗಿದ್ದೇನೆ. ನೀನಿನ್ನು ನನ್ನ ಸಾಗುವಳಿದಾರನೂ ಅಲ್ಲ. ಇದೀಗ ನಮ್ಮ ಜಮೀನನ್ನೆಲ್ಲಾ ಪರಿಯಾ ಸ್ವಾಮಿಗೆ ಮಾರಿ ಬಿಟ್ಟಿದ್ದೇನೆ. ಮಾರಬೇಕಾಗಿದ್ದರೂ ಈ ತೋಟವನ್ನು ಇನ್ನೂ ಮಾರಿರುವದಿಲ್ಲ,"

ರಾಮು ತೋಟದತ್ತ ದೃಷ್ಟಿ ಹಾಯಿಸುತ್ತ ಕ್ಷಣಕಾಲ ಸುಮ್ಮಗಾದನು, ಮತ್ತೆ ಮುಂದರಿಸಿದನು, "ದೇವರ ದೃಷ್ಟಿಯಲ್ಲಿ, ಉತ್ತಮ ಹಕ್ಕಿನ ಪ್ರಕಾರ, ತೋಟವು ನಿನ್ನದೇ ಇದೆ. ನನಗಿಂತಲೂ ಹಿಂದಿನಿಂದ, ತಲೆಮಾರುಗಳಿಂದ ನೀನಿಲ್ಲೇ ಇರುವೆ. ಅದೊಮ್ಮೆ ಈ ನೆಲವು ಬರಿಯ ಬಂಜರು ಹಾಗೂ ಅನುಪಯುಕ್ತ ನೆಲವಾಗಿತ್ತು. ರಾತ್ರಿ ಹಗಲು ನಿನ್ನ ತಂದೆಯು ದುಡಿದು, ಉತ್ತಮ ಬೀಜಗಳನ್ನಾರಿಸಿ, ಇಲ್ಲಿ ನೆಟ್ಟು ಸಾಕಿದನು. ಸಸಿ ಮರವಾಗಿದೆ. ನಿನ್ನನ್ನು ನಿನ್ನ ತಾಯಿ ಕಾಪಾಡಿಕೊಂಡದ್ದಕ್ಕಿಂತಲೂ ಈ ತೋಟವನ್ನು ಅವನು ಚೆನ್ನಾಗಿ ಕಾಪಾಡಿಕೊಂಡಿದ್ದ. ಶ್ರೇಷ್ಠ ನ್ಯಾಯದ ದೃಷ್ಟಿಯಲ್ಲಿ ಇದೆಲ್ಲಾ ನಿನಗೆ ಸೇರಬೇಕು. ಆದರೆ ನರನು ನಿರ್ಬಲನಾಗಿರುವದರಿಂದ ತನ್ನದಲ್ಲದ ವಸ್ತುವನ್ನೂ ಹಿಂದಕ್ಕೆ ಕೊಡಲು ಹಣವನ್ನು ಇಚ್ಛಿಸುತ್ತಾನೆ. ಮುರುಗ, ನೀನೊಂದು ನಿಧಿಯನ್ನು ಕಾಪಾಡಿಕೊಂಡಿರುವೆಯೆಂದು ಹಳ್ಳಿಯವರು ಹೇಳುತ್ತಿದ್ದಾರೆ. ಅದನ್ನು ಕೇಳಿ ನನಗೆ ನಿನ್ನ ವಿಷಯದಲ್ಲಿ ಹೆಮ್ಮೆಯುಂಟಾಗಿದೆ. ಅದೆಷ್ಟು ಚಿಕ್ಕದಾಗಿದ್ದರೂ ಚಿಂತಿಲ್ಲ, ನನಗೆ ಕೊಟ್ಟು ಬಿಡು. ಇಂದೇ ಸಾಯಂಕಾಲದೊಳಗೆ ಈ ತೋಟವನ್ನು ನಿನಗೆ ಬಿಟ್ಟುಕೊಟ್ಟು, ಇದರ ಧನಿಯನ್ನಾಗಿ ಮಾಡುತ್ತೇನೆ."

ತನ್ನ ಸ್ಥಿತಿಯ ಸುಳಿವು, ಸ್ವಾಮಿಗೆ ಸಿಕ್ಕಿದುದರಿಂದ ಮುರುಗನು ಗೊಂದಲದಲ್ಲಿ ಬಿದ್ದನು. ಅದೂ ತನ್ನ ಕೈಯ್ಯಿಂದ ದೂರಕ್ಕೆ ಹೋಗುವುದನ್ನಾಲೋಚಿಸಿದಾಗ ಗೊಂದಲವು ಜಾಸ್ತಿಯಾಯಿತು.

"ಸ್ವಾಮಿ, ನಾನೇನೂ ಕೃತಘ್ನನಿರುವದಿಲ್ಲ. ಪ್ರಭು ನನ್ನನ್ನು ಪರೀಕ್ಷಿಸುವಂತಿದೆ. ಭೂಮಿಯನ್ನು ಉತ್ತಿರುವ ಬಡವನ ಬಳಿ ಬಂಡವಾಳವಿರಲು ಸಾಧ್ಯವೇ? ಅದು ಹಳ್ಳಿಯವರ ತಂಟೆಯು ಹಾಗೂ ಹೊಟ್ಟೆಕಿಚ್ಚಿನ ಮಾತಿದೆ. ಅದೆಲ್ಲ ನನ್ನ ನಾಶಕ್ಕಾಗಿ....'

"ಅಲ್ಲ, ಮುರುಗ, ನನ್ನನ್ನಿನ್ನೂ ನೀನು ತಿಳಿದುಕೊಂಡಿರುವದಿಲ್ಲ. ನಾನು ಕೊಳ್ಳೆ ಹೊಡೆದುಕೊಂಡು ಹೋಗಲು ಬಂದಿರುವದಿಲ್ಲ. ನನಗೆ ಸ್ವಲ್ಪವಾದರೂ ಚಿಂತಿಲ್ಲ, ಹಣ ಕೊಡು. ಹೆಸರು ಮಾತ್ರಕ್ಕೆ ಕ್ರಯ ಕೊಟ್ಟರೂ ಸಾಕು— ಈ ತೋಟವನ್ನು ನಿನಗ ಮಾರುತ್ತೇನೆ. ಮೊನ್ನಿ, ನೀನು ಮೂಕಳಂತೆ ನಿಂತಿದ್ದಿಯಲ್ಲಾ! ನಿನ್ನ ಧನಿಯ ಎದುರು ಸತ್ಯವನ್ನಾಡಲು ಹಿಂಜರಿಯುತ್ತಿಯೇನು? ನಿಮ್ಮ ಕಾರ್ಯತತ್ಪರತೆ ಹಾಗೂ ಮಿತವ್ಯಯ ಹೆಮ್ಮೆಯ ವಿಷಯವೇ ಸರಿ. ಇನ್ನೂರು ರೂಪಾಯಿ ಕೊಟ್ಟರೂ ಸ್ವೀಕರಿಸಲು ನಾನು ಸಿದ್ಧನಿದ್ದೇನೆ— ಈ ತೋಟವು ಅದರ ಮುಮ್ಮಡಿಯಷ್ಟು ಬೆಲೆ ಬಾಳುವಂತಹದ್ದು ಆಗಿದ್ದರೂ ಚಿಂತಿಲ್ಲ. ನೀನಾದರೂ ಮಾತಾಡ ಸದಿಲ್ಲವೇ, ಪೊನ್ನಿ?"

ಮುರುಗ ಪೊನ್ನಿಯ ಮುಖವನ್ನೂ ಪೊನ್ನಿ ಮುರುಗನ ಮುಖವನ್ನು ನೋಡುವದರಲ್ಲೇ ನಿರತರಾಗಿದ್ದರು. ನಿಜವನ್ನಾಡುವಂತೆ ಅವರ ಸಹಜ ಸ್ವಭಾವ ಬಲಾತ್ಕರಿಸುತ್ತಿತ್ತು. "ಉಳಿತಾಯ ಎಲ್ಲಾ ಇಲ್ಲಿದೆ, ಸ್ವಾಮಿಯವರು ತಾಗಿ ನಿಂತಿರುವ ಮರದ ಬುಡದಲ್ಲೇ, ಮಣ್ಣಿನ ಮಡಕೆಯಲ್ಲಿದೆ."ಇಬ್ಬರೂ ಒಮ್ಮೆಲೆ ಗಟ್ಟಿಯಾಗಿ ತಿಳಿಸಿದರು; ಮತ್ತು ಮುರುಗನು ಹೆಚ್ಚಿನ ಸ್ವಾತಂತ್ರ್ಯಪೂರ್ಣ ಸ್ವರದಲ್ಲಿ ಮುಂದರಿಸಿದನು. "ಹೊಳೆಯುವ ಬೆಳ್ಳಿಯ ಇನ್ನೂರು ರೂಪಾಯಿಗಳು ಅದರಲ್ಲಿವೆ. ನಿಜವಾದ ತಿಳುವಳಿಕೆಯಂತೆ ಅವೆಲ್ಲವೂ ನಿಮ್ಮವೇ ನಾಣ್ಯಗಳಿವೆ. ಸ್ವಾಮಿ, ಅಗತ್ಯದ ಸಮಯದಲ್ಲಿ ಅವೆಲ್ಲವನ್ನೂ ಸ್ವೀಕರಿಸಿಕೊಂಡು ಹೋಗಿರಿ. ಆದರೆ ಆಸ್ತಿಯ ಒಂದೆಕರೆ ನೆಲವನ್ನಾದರೂ ಮಾರಬೇಡಿರಿ. ತನ್ನ ಧನಿಗೆ ಆವಶ್ಯಕ ಕಾಲದಲ್ಲೂ ಮುರುಗನು ಉಪಯೋಗಕ್ಕೆ ಬಾರದಿದ್ದಲ್ಲಿ, ಏಳು ತಲೆಮಾರುಗಳಿಂದ ಉಪ್ಪು ತಿಂದಿರುವದರ ಪ್ರಯೋಜನವಾದರೂ ಏನು? 'ತಂದೆಯಿಂದ ಮಗನಿಗೆ, ಹೀಗೆ, ಏಳು ಸಲ ಬದಲಾಗಿರುವ ಈ ಭೂಮಿಯ ಒಂದೆಕರೆಯನ್ನೂ ಮಾರಬೇಡಿರಿ.'

"ಮುರುಗ, ಈ ಉತ್ತಮ ಮಾತುಗಳ ಸಮಯವೇ ಕಳೆದು ಹೋಗಿದೆ. ನಾನು ಮನೆಯನ್ನೂ ಮಾರಿಬಿಟ್ಟಿದ್ದೇನೆ. ಎಲ್ಲವೂ ಮುಗಿದಿದೆ. ಕನಿಷ್ಟ ಪಕ್ಷ ಈ ತೋಟವಾದರೂ ನಿನಗೆ ಸಿಕ್ಕಿದಲ್ಲಿ ನನಗೆ ಸಮಾಧಾನವಾಗುತ್ತದೆ. ಇದೆಲ್ಲಾ ನಿನ್ನ ತಂದೆಯ ಪ್ರಯತ್ನದ ಫಲ, ಅಂತೆಯೇ, ನಿನ್ನ ಸ್ವಂತವೇ ಇದೆ. ಇದಕ್ಕೆ ಹೊಂದಿಕೊಂಡಿರುವ ಸ್ವಲ್ಪ ಸ್ಥಳವನ್ನು ನನ್ನ ಬಹುಮಾನವೆಂದು ಇದಕ್ಕೆ ಸೇರಿಸುತ್ತೇನೆ. ಅದು ನಿನ್ನ ಪ್ರಾಮಾಣಿಕತನದ ದುಡಿತಕ್ಕೆ, ನಿಮಗೆ ಒಂದು ವರ್ಷಕ್ಕೆ ಸಾಕಾಗುವಷ್ಟು ಭತ್ತವನ್ನು ಕೊಡುತ್ತದೆ. ಈ ತೆಂಗಿನ ತೋಟವು ನಿನ್ನ ಆವಶ್ಯಕ ವಸ್ತುಗಳ ಪೂರೈಕೆ ಮಾಡುವದಲ್ಲದೆ, ತಿಂಗಳೊಂದಕ್ಕೆ ಹದಿನೈದು ರೂಪಾಯಿಗಳ ಉಳಿತಾಯವನ್ನೂ ಕೊಟ್ಟೀತು. ನಿನಗಿಷ್ಟವಿದ್ದಲ್ಲಿ, ನೀವಿಬ್ಬರೂ ಪವಿತ್ರ ಜೀವನವನ್ನು...."

"ಆದರೆ ಈ ಹಳ್ಳಿ...." ಮುರುಗನು ಮಧ್ಯೆ ಮಾತೆತ್ತಿದನು.

"ಹಳ್ಳಿಯತ್ತ ಮನಸ್ಸು ಕೊಡಬೇಡ. ಪ್ರಾಮಾಣಿಕತನದಿಂದಿದ್ದು ಯಾರ ವಿಷಯದಲ್ಲೂ ತಲೆ ಹಾಕದಿರು. ನೀನು ಸುರಕ್ಷಿತನಾಗಿ ಹಾಗೂ ಸಂತೋಷದಿಂದ ಇರಬಹುದು. ಇಂದೇ ನಾನು ಕರಾರು ಪತ್ರಕ್ಕೆ ಸಹಿ ಹಾಕುತ್ತೇನೆ. ಈಗ ನೀನು ದಾಖಲೆ ಕಛೇರಿಗೆ (Registration Office) ನನ್ನೊಂದಿಗೆ ಬಂದು ಬಿಡು. ನನ್ನ ಹೊಸ ಉದ್ಯೋಗಕ್ಕಾಗಿ ಇಪ್ಪತ್ತನಾಲ್ಕು ಘಂಟೆಗಳೊಳಗೆ ಹಿಂದಕ್ಕೆ ಹೋಗಬೇಕು. ಶಿಕ್ಷೆಗೊಳಪಟ್ಟಿರುವ ಖೈದಿಯ ಸಮಯದ ಹಾಗೆ ನನ್ನ ಐಶಸ್ಸಿಕ ಬದುಕು ಕಷ್ಟದ ಹಾಗೂ ಕ್ಷಣಿಕವಿದೆ. ಪೊನ್ನಿ ಮತ್ತು ಮುರುಗ ನೀವಿಬ್ಬರೂ ಪ್ರಾಮಾಣಿಕ, ಸರಳ, ಸ್ವಾತಂತ್ರ ಹಾಗೂ ಸಂತೋಷದ ಜೀವನವನ್ನು ನಡೆಸಿಕೊಂಡಿರಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನೀನು ಸಿಹಿಯಾಳವನ್ನು ಕುಡಿಯುವಾಗ ನನ್ನನ್ನು ಜ್ಞಾಪಕದಲ್ಲಿಟ್ಟುಕೊಳ್ಳು. ತಾಯಿಯವರಿದ್ದಾಗ, ಯಾವೊಂದೂ ಚಿಂತೆಯಿಲ್ಲದೆ ನಿನ್ನೊಂದಿಗೆ ನಾನು ಆಡುತ್ತಿದ್ದುದನ್ನೂ, ಕುಡಿಯುತ್ತಿದ್ದುದನ್ನೂ ಮರೆತು ಬಿಡಬೇಡ. ನಾನು ಕಲಿತವನಿರುವದರಿಂದ ಸಂಪಾದನೆಗಾಗಿ ಹಳ್ಳಿಯನ್ನು ಬಿಟ್ಟು ದೂರ ಹೋಗಬೇಕಾಗಿದೆ. ಸಮಾಜವು ತನ್ನ ಸುಸಂಸ್ಕೃತ ಮಕ್ಕಳನ್ನು ಲೇಖನಿಗೆ, ಮಸಿಗೆ ಹಾಗೂ ಕಾಗದಕ್ಕೆ ಗುಲಾಮರನ್ನಾಗಿ ಮಾಡುತ್ತದೆ. ಅಂತಹ ಹಲವರಲ್ಲಿ ನಾನು ಒಬ್ಬನು. ನಿನ್ನ ಸ್ವ-ಪರಿಶ್ರಮದಿಂದ ಈ ತೋಟವು ಇಂದು ಕಣ್ಮನಗಳನ್ನು ಸೆಳೆಯುತ್ತಲಿದೆ. ನಿನ್ನ ಸ್ವ-ಅಧಿಕಾರದಿಂದ ನೀನು ಸಂತೋಷ ಪಡುತ್ತಿರು. ಒಳ್ಳೆಯದು, ಇಡೀ ವ್ಯವಹಾರದಲ್ಲಿ ಸ್ವಲ್ಪವಾದರೂ ನ್ಯಾಯಪಡಗಿಕೊಂಡಿದೆ. ತ್ವರೆ ಮಾಡು, ಅಳದಿರು, ಮುರುಗ, ಇಪ್ಪತ್ತನಾಲ್ಕು ಘಂಟೆ ಮುಗಿಯುವದರೊಳಗೆ ನಾನು ಹೋಗಿ ಉದ್ಯೋಗಕ್ಕೆ ಸೇರಬೇಕು. ನನ್ನ ಸ್ವರದಲ್ಲಿ ಹಕವಾಗಿರುವ ವ್ಯಥೆ ಹಾಗೂ ಮುಖದ ಮೇಲಿರುವ ಆದರ ಚಂಚಲದ ನೋವಿನಿಂದಾಗಿ ನೀವು ನೊಂದುಕೊಳ್ಳಕೂಡದು. ಅದಕ್ಕೆ ಕಾರಣವಿದೆ. ನಾನೀಗ ಇಡೀ ಪ್ರಪಂಚದ ಕುರಿತು ಆಲೋಚಿಸುತ್ತಿದ್ದೇನೆ ಶೀಘ್ರ ಬಾ, ಮುರುಗ."

(ಮುಂದುವರಿಯುವುದು)

ಶ್ರೀ ಕೆ.ಕೆ. ಶೆಟ್ಟಿ ಎಂ.ಎಲ್.ಸಿ.,ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧ	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು–೧

ವರ್ಗ-ಊಳಿಗ

ಇತ್ಯಾದಿ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿ, ಫಾರ್ಮುಗಳು ದೊರೆಯುತ್ತವೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.



NAVAYUGA 13—1—1966
Registered with the Registrar of News Papers for India under No. R. N. 3540/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಸಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೩-೧-೬೬ರಿಂದ ೧೯-೧-೬೬ರ ವರೆಗೆ

೧. ಮೇಷ

ನಿಮ್ಮ ಉದ್ಯಮವಿಂದು ಸಾರ್ಥಕವಾಗಲಿದೆ. ನಿರೀಕ್ಷಿಸಿದಂತೆ ಹೆಚ್ಚಿನಂಶ ಪ್ರತಿಯೊಂದು ಕಾರ್ಯದಲ್ಲೂ ಗುರಿಯನ್ನು ಸೇರುವಿರಿ. ವ್ಯಾಪಾರದಲ್ಲಿ ಕೆಲವೊಮ್ಮೆ ನಷ್ಟ ಕಂಡುಬಂದರೂ ಮುಂದಕ್ಕು ಲಾಭಕ್ಕೆ ನಾಂದಿಯಾದೀತೆಂಬುದನ್ನು ಮರೆಯದಿರಿ. ಕೃಷಿ ಮತ್ತು ಭೂಸಂಬಂಧವಾದ ವ್ಯವಹಾರಗಳಲ್ಲಿ ಹೆಚ್ಚಿನ ಪ್ರಗತಿ ಲಾಭಗಳು ಪಡೆವ ನಿಮಗೆ ವಾರಾದಿಯ ೩ ದಿನಗಳು ತುಂಬ ಅನುಕೂಲವಾಗಿವೆ.

೨. ವೃಷಭ

ಆರೋಗ್ಯ ವಿಚಾರದಲ್ಲಿ ನೀವು ನಿಶ್ಚಿಂತರಿದ್ದರೂ ಆರ್ಥಿಕ ಬಿಕ್ಕಟ್ಟು ನಿಮ್ಮನ್ನು ಪೀಡಿಸಲಿದೆ. ಆಪ್ತಬಂಧುಗಳ ವಿರಹವುಂಟಾದೀತು. ರಾಜಕೀಯ ವ್ಯವಹಾರದ ನಿಮಿತ್ತ ಹೆಚ್ಚಿನ ನಷ್ಟಕ್ಕೆ ಗುರಿಯಾಗುವ ಸಂಭವವಿದೆ, ಜಾಗ್ರತರಾಗಿರಿ. ಶ್ರಮಜೀವಿಗಳೂ ಸೇವಕ ಜನತೆಗೂ ಈ ಕಾಲವು ಸ್ವಲ್ಪ ಕಷ್ಟದಾಯಿಯಾಗಿ ಪರಿಣಮಿಸಲಿದೆ. ತಾ. 14ರಿಂದ 18ರ ವರೆಗಿನ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

೩. ಮಿಥುನ

ಅನಿಷ್ಟಸ್ಥಾನವಾದ ಅಷ್ಟಮದಲ್ಲಿಂದು ಗ್ರಹತ್ರಯರ ಸಮಾಗಮವಾಗಿರುವುದು. ಸಾಲದ್ದಕ್ಕೆ ಗುರುವೂ ಕೂಡ ವ್ಯಯವನ್ನೈದಿಹನು ಅದ ಕಾರಣ ಇಂದು ನಾನಾತರದ ತೊಡಕು ತೊಂದರೆಗಳನ್ನು ನೀವು ಎದುರಿಸ ಬೇಕಾಗಿ ಬರಲಿದೆ. ಬಲೀಯರಾದ ಶತ್ರುಜನರಿಂದ ಧನಮಾನಗಳಿಗೆ ಹಾನಿ ಸಂಭವಿಸೀತು. ಗೃಹತಾಪತ್ರಯ ದೇಹಾಲಸ್ಯ ಆರ್ಥಿಕ ಬಿಕ್ಕಟ್ಟು ಇತ್ಯಾದಿಗಳಿಂದ ಸಂತಪ್ತರಾದ ನಿಮಗೆ ಕೆಲ ಮಟ್ಟಿಗೆ ಬಾಲ್ಯ ಸ್ನೇಹಿತರ ನೆರವು ದೊರಕೀತು. ವಾರಾಂತ್ಯದ ೩ ದಿನಗಳು ಸ್ವಲ್ಪ ಅನುಕೂಲವಾದಾವು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

೪. ಕರ್ಕಟ

ಕಳೆದ ವಾರಕ್ಕಿಂತ ಹೆಚ್ಚಿನ ಸೌಲಭ್ಯಗಳು ನಿಮಗೆ ದೊರೆಯಲಾರವಾದರೂ ಆರ್ಥಿಕ ಪರಿಸ್ಥಿತಿಯು ಸ್ವಲ್ಪ ಮಟ್ಟಿಗೆ ಸುಧಾರಿಸಲಿದೆ. ಗುರುಹಿರಿಯರ ನೆರವು ಸಾಕಷ್ಟು ಲಭಿಸಿದರೂ ಶತ್ರುಜನರ ಕಾಟದಿಂದ ಮುಕ್ತರಾಗಲಾರಿರಿ. ಗೃಹಕೃತ್ಯ ವಿಚಾರದಲ್ಲಿ ಮನಸ್ಸಿಗೆ ನೆಮ್ಮದಿಯಿರದು. ದಂಪತಿಗಳಲ್ಲಿ ವೈಮನಸ್ಸು ಹೆಚ್ಚಲಿದೆ. ವಿದ್ಯೋಪಜೀವಿ ನೌಕರಿ ಜನತೆಗೆ ಸದ್ಯದ ದಿನಗಳು ತುಂಬ ಅನುಕೂಲವಿರುವವು. ವಾರದ ಆದ್ಯಂತ ದಿನಗಳು ಇಷ್ಟಾರ್ಥವನ್ನು ಪೂರೈಸುವವು.

೫. ಸಿಂಹ

ಸಾಹಸಿಗಳಾದ ನಿಮಗಿಂದು ರಾಜಕೀಯ ರಂಗದಲ್ಲಿ ವಿಜಯವು ತೋರಿಬಂದರೂ ಇತರತ್ರ ಹೆಚ್ಚಿನಂಶ ಪರಾಭವವನ್ನೇ ಎದುರಿಸುವಿರಿ. ಏನೇ ಬಂದರೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ದುಡಿಮೆಗಿಂತಲೂ ಖರ್ಚು ಅಧಿಕವಾಗಿ ನಿಲ್ಲುವುದರಿಂದ ಹಣದ ಬಿಕ್ಕಟ್ಟು ತಪ್ಪಲಾರದು. ಗೃಹತಾಪತ್ರಯಗಳ ದೆಸೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದ ನಿಮಗೆ ತಾ. 14. 15. ಮಾತ್ರ ಸ್ವಲ್ಪ ಅನುಕೂಲವೆನಿಸೀತು.

೬. ಕನ್ಯಾ

ನಿಮ್ಮ ಅದೃಷ್ಟದ ಕದವಿಂದು ತೆರೆದಿಹುದೆಂದರೂ ತಪ್ಪಾಗದು. ಸದ್ಯ ನಿಮ್ಮ ಉದ್ಯೋಗ ವ್ಯವಹಾರಗಳು ಏನೊಂದೂ ಅಡೆತಡೆಗಳಿಲ್ಲದೆ ಗುರಿಯನ್ನು ಸೇರಲಿವೆ. ವ್ಯವಹಾರ ಚತುರರಾದ ನಿಮಗೆ ಬಂಧುಮಿತ್ರಾದಿಗಳ ನೆರವು ಸಾಕಷ್ಟಿದ್ದರೂ ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ಮಾತ್ರ ಪ್ರತಿಪಕ್ಷಿಗಳ ಕೈಮೇಲಾಗುವ ಸಂಭವವಿದೆ. ನೌಕರಿ ವರ್ಗದವರಿಗಿಂದು ಭಡತಿಯ ಯೋಗವಿಹುದು. ತಾ. 13. 16. 17. 18. ಈ ದಿನಗಳು ಸುಖಲಾಭದಾಯಿಗಳಾಗಿವೆ.

೭. ತುಲಾ

ಒಮ್ಮೆಲೇ ಕಣ್ಣುಕಟ್ಟಿ ಕಾಡಿಗೆ ಬಿಟ್ಟಂತಾಗಿಹುದಿಂದು ನಿಮ್ಮಯ ಪರಿಸ್ಥಿತಿ. ಬೆಳ್ಳಗಿದ್ದುದೆಲ್ಲಾ ಹಾಲೆಂದು ತಿಳಿದು ನೀವಿಂದು ಮೋಸ ಹೋಗಲಿರುವಿರಿ. ಯಾರನ್ನು ನೀವು ಆಪ್ತರೆಂದು ಎಣಿಸಿರುವಿರೋ ಅವರೇ ನಿಮ್ಮ ಮೇಲೆ ಎರಡೆಂಟೆಣಿಸಲಿರುವರು. ಹೆಚ್ಚಿಗೆ ಸೋದರ ವರ್ಗವೂ ಕೂಡ ನಿಮಗಿಂದು ವಕ್ರವಾಗಿಹುದು. ಆರೋಗ್ಯಕ್ಕೇನೂ ಹಾನಿಯಿಲ್ಲವಾದರೂ ಆರ್ಥಿಕಬಿಕ್ಕಟ್ಟಿನಿಂದಾಗಿ ಮನಸ್ಸಿಗೆ ಈಷತ್ತೂ ನೆಮ್ಮದಿಯಿರದು. ತಾ. 14. 15. 19. ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿ ಕಾಣಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ (ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

೮. ವೃಶ್ಚಿಕ

ನಿಮ್ಮ ದುಃಖದಾರಿದ್ರ್ಯಗಳಿಂದು ಅರುಣಕಿರಣವಂಕಂಡ ಹಿಮರಾಶಿಯಂತೆ ನಾಶವಾಗುವವು. ಬಹುದಿನದ ನಿಮ್ಮ ಸಂಕಲ್ಪಗಳು ಇಂದು ಕಾರ್ಯರೂಪಕ್ಕೆ ಬರಲಿವೆ. ಮೊಜದಲ್ಲಿ ಸ್ಥಾನಮಾನಗಳು ಲಭಿಸುವುದಲ್ಲದೆ ಕೋರ್ಟುಕಛೇರಿಗಳ ವ್ಯವಹಾರಗಳಲ್ಲೂ ರಾಜಕೀಯ ರಂಗದಲ್ಲೂ ನಿಮ್ಮ ಇಚ್ಛೆಯಂತೆ ಕಾರ್ಯ ಸಿದ್ಧಿಸಲಿವೆ. ನಿರಾಮಯರೂ ನಿಶ್ಚಿಂತರೂ ಆದ ನಿಮಗೆ ತಾ. 13. 16. 17. 18. ಈ ದಿನಗಳು ಸುಖಭೋಗ ದಾಯಕವನ್ನೀಯಲಿವೆ.

೯. ಧನು

ನಿಶ್ಚಿಂತೆಯಿಂದ ಕಾಲಕಳೆಯುತ್ತಿದ್ದ ನಿಮಗೆ ಇಂದು ಕೆಲವೊಂದು ಅಡ್ಡಿ ಆತಂಕಗಳು ಬರಲಿವೆ. ಕಫ ಪಿತ್ಥ ದೋಷದಿಂದಾಗಿ ಆರೋಗ್ಯ ಕೆಡಲಿದೆ ಮಾತ್ರವಲ್ಲ ಮನಸ್ಸಿಗೂ ನೆಮ್ಮದಿಯಿರದು. ಗುರುಹಿರಿಯರ ಕೂಡೆ ಮತ್ತು ಸ್ವಾಪ್ತ ಜನತೆಯೊಡನೆ ವಿನಾಕಾರಣ ವಾಕ್ಕಲಹವಾದೀತು. ಕೆಲವೊಮ್ಮೆ ಅನಿರೀಕ್ಷಿತ ಖರ್ಚುಗಳು ಪ್ರಾಪ್ತವಾಗಿ ನಿಮ್ಮನ್ನು ಬಿಕ್ಕಟ್ಟಿನಲ್ಲಿ ಸಿಲುಕಿಸಲಿವೆ. ಏನಾದರೂ ಧೈರ್ಯಗುಂದದ ನಿಮಗೆ ತಾ. 13. 14. 15. 19. ಈ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೧೦. ಮಕರ

ಕಳೆದ ವಾರಕ್ಕಿಂತ ಇಂದಿನ ದಿನಗಳು ಶ್ರೇಷ್ಠ ಉತ್ತಮವಾಗಿ ಕಾಣಿಸುವವು. ಖರ್ಚಿಗೆ ತಕ್ಕ ಆದಾಯ ವಿಲೋಪದಿಂದ ಹಣದ ಕೊರತೆ ಕಾಣಿಸದು. ಆದರೂ ಆರೋಗ್ಯದ ಮಟ್ಟಿಗೆ ನೀವಿಂದು ಬಲು ಜಾಗರೂಕರಾಗಿರುವುದೊಳ್ಳಿತು. ಪಿತ್ಥ ಪ್ರಕೋಪಕ್ಕೆ ಸಿಲುಕಲಿರುವಿರಿ. ರಾಜಕೀಯ ರಂಗಕ್ಕಿಂದು ಇಳಿಯದಿರುವುದೊಳ್ಳಿತು. ಪ್ರವಾಸವು ಸುಖಮಯವಾಗಲಾರದು. ವಾರದ ಆದ್ಯಂತ ದಿನಗಳನ್ನು ಬಿಟ್ಟು ಇತರ ದಿನಗಳು ಸ್ವಲ್ಪ ಅನುಕೂಲವಾಗಿಯೇ ಕಾಣಿಸಲಿದೆ.

೧೧. ಕುಂಭ

ಎಣ್ಣೆ ಬರುವಾಗ ಗಾಣ ಮುರಿಯಿತೆಂಬ ಗಾದೆಯಂತೆ ಸಿರಗಸಲವಾಗಿ ಸಾಗುತ್ತಿದ್ದ ನಿಮ್ಮ ಕಾರ್ಯಕಲಾಪಗಳು ಇಂದು ಒಂದೇ ಸಮ್ಮಗೇ ಸ್ಥಗಿತಗೊಳ್ಳಲಿವೆ. ಆಚಕಾಂಚನದಿಂದಾಗಿ ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬ ಕೆಡುವುದು. ವಿನಾಕಾರಣ ಸ್ವಜನರ ಕಡೆ ವಿರೋಧ ಕಟ್ಟಿಕೊಳ್ಳುವಿರಿ. ವಾತ ಪಿತ್ಥದೋಷದಿಂದಾಗಿ ನಿಮ್ಮ ಆರೋಗ್ಯವೂ ಸರಿಯಿರದು ವಿಶೇಷತಃ ರಾಜಕೀಯ ಕ್ಷೇತ್ರಗಳಲ್ಲಿ ನಷ್ಟ ಪರಾಜಯಗಳುಂಟಾಗಲಿವೆ. ತಾ. 17, 18, 19 ಸ್ವಲ್ಪ ಉತ್ತಮವೆನಿಸುವವು.

೧೨. ಮೀನ

ನೆರವರ ನೆರವು ನಿಮಗೆ ಲಭಿಸದಾದರೂ ಸ್ವಯಂ ಸಮರ್ಥರಾದ ನೀವು ಎಂತಹ ಮಹಾ ಕಾರ್ಯವನ್ನೂ ಸಾಧಿಸಲು ಶಕ್ತರಿರುವಿರಿ. ನಿಮ್ಮ ನಿರೀಕ್ಷೆಗೂ ಮಿಕ್ಕಿ ಫಲವು ಲಭಿಸುವುದು. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಧನ ಲಾಭವಾಗಲಿದೆ. ಕೃಷಿಕರಿಗೆ ಈ ಸಮಯವು ತುಂಬಾ ಅನುಕೂಲವಾಗಿಹುದು. ಉದ್ಯೋಗಿ ಜನತೆಗೆ ಸ್ಥಾನಚಲನೆಯ ಯೋಗವಿಹುದು. ನಿರಾಮಯರೂ ನಿಶ್ಚಿಂತರೂ ಆದ ನಿಮಗೆ ವಾರದ ಆದ್ಯಂತ ದಿನಗಳು ತುಂಬ ಸುಖ ಲಾಭದಾಯಿಗಳಾಗಿವೆ.

READ &
ADVERTISE IN
NAVAYUGA WEEKLY

Edited, printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೬೬

REPUBLIC DAY SPECIAL 1966

50 P



ಭವಿಷ್ಯತ್ತಿನಲ್ಲಿ ಭರವಸೆ ಕೊಡುವ ನಿಯತವಾದ ಉಳಿತಾಯ ಮಾತ್ರವೇ
ನಿಮ್ಮ ಬಾಳಿನ ಬಯಕೆಗಳನ್ನು ಪೂರಯಿಸುವಲ್ಲಿ ಹೆಚ್ಚು ಯಶಸ್ವಿಯಾಗಲು ಸಾಧ್ಯ.

ಕ್ಯುಮುಲೇಟಿವ್ ಠೇವಣಿ ಮೂಲಕ
ಹೆಚ್ಚು ಹೆಚ್ಚು ಉಳಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

200 ಕ್ಕೂ ಹೆಚ್ಚು ಶಾಖೆಗಳು... 70 ಕೋಟಿಗೂ ಮಿಕ್ಕಿದ ಸಾಧನಸಂಪತ್ತು

ಪ್ರಜಾರಾಜ್ಯ ಸಂಚಿಕೆ ೧೯೬೬
ಟೆಲಿಫೋನ್: 226
ಸಂಪುಟ ೪೫
ಸಂಚಿಕೆ ೨೦

ನವಯುಗ

ಸ್ಥಾಪಕರು:
ದಿ। ಎ. ಬಿ. ಶೆಟ್ಟರು
ಸಂಚಾಲಕ ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಸ್ಥಿರ ಪ್ರಜಾಪ್ರಭುತ್ವ-ಭಾರತ

ಭಾರತೀಯ ಪ್ರಜಾಸತ್ತೆಯ ಇತಿಹಾಸದಲ್ಲಿ ಕಳೆದ ಆರು ತಿಂಗಳುಗಳು ಅವಿಸ್ಮರಣೀಯ ದಿನಗಳು. ಶಾಂತಿ—ಸಮಾಧಾನ—ತಾಟಸ್ಥ್ಯ ನೀತಿ ಎಂದು ಸಾರುವ ಭಾರತವು ದುರ್ಬಲವಾಗಿದೆ, ಅದನ್ನು ಯಾರಾದರೂ ಎಂದು ಬೇಕಾದರೂ ಬಗ್ಗುಬಡಿಯಬಹುದು ಎಂದು ಅಚಲ ವಿಶ್ವಾಸ ಪಾಕಿಸ್ತಾನದ ಸರ್ವಾಧಿಕಾರಿಗಳಲ್ಲಿ ತುಂಬಿತ್ತು. ಅವು ಅಧಿಕ ಪ್ರಮಾಣದಲ್ಲಿ ಪೂರೈಸಿರುವ ಅತ್ಯಾಧುನಿಕ ಮಾದರಿಯ ಶಸ್ತ್ರಾಸ್ತ್ರಗಳು, ಸಮರ ವಿಮಾನಗಳು, ಪ್ಯಾಟನ್ ಟ್ಯಾಂಕ್‌ಗಳು ಅಜೇಯ್ಯವೆಂಬ ದೃಢ ವಿಶ್ವಾಸ ಅಮೆರಿಕೆ—ಬ್ರಿಟನ್‌ಗಳಲ್ಲಿತ್ತು. ಯಾವ ಸೈನಿಕ ಒಡಂಬಡಿಕೆಯಲ್ಲೂ ಸೇರದ ಏಕೈಕವಾಗಿ ನಿಂತ ಭಾರತವನ್ನು ಒಡೆದ ದರೂ ಕಾಶ್ಮೀರವನ್ನು ಕಬಳಿಸಬೇಕೆಂದು ಆಯ್ಯೂಬ್‌ಖಾನ್ ದಂಡಯಾತ್ರೆಗೆ ಹೊರಟ ಸಮಯದಲ್ಲಿ, ಎಲ್ಲರ ನಿರೀಕ್ಷೆಯನ್ನೂ ಸುಳ್ಳಾಗಿಸಿದ ಭಾರತೀಯ ವೀರ—ತಾನು ದುರ್ಬಲನಲ್ಲ, ಶಾಂತಿ ನೀತಿ ದೌರ್ಬಲ್ಯದ ದ್ಯೋತಕನಲ್ಲ ಎಂಬುದನ್ನು ಸಾರಿ ಹೇಳಿದ—ತನ್ನ ಪ್ರಾಣವನ್ನು ಕರ್ಮವನ್ನು ಮಾತೃಭೂಮಿಯ ಸಂರಕ್ಷಣೆಗಾಗಿ ಮುಡಿಪಿಟ್ಟ. ಪಕ್ಷ ಪಂಗಡ ತೊರೆದು ನಾವೆಲ್ಲರೊಂದಾಗಿ ಬಂದಿರುವ ಕುತ್ತು ಕಳೆಯಲು ಸಿದ್ಧನಾಗಿ ಎಮ್ಮನಸಿಸಿಂ ದುಡಿದು ಹೋರಾಡಿ ಯಶಗಳಿಸಿ ಭಾರತಮಾತೆಯ ಮುಕುಟಬಿಡದೆ ರಕ್ಷಿಸಿದ.

ಭಾರತೀಯ ಐಕ್ಯ, ಭಾರತೀಯ ಮಾತೃಭೂಮಿ ಪ್ರೇಮ, ಅನುಗಾಲವೂ ಉಳಿಯಲಿ. ಭಾರತೀಯ ವೀರ ಜವಾನ–ಕಿಸಾನರೆಲ್ಲರಲ್ಲೂ ವೀರ ತುಂಬಿ ಬರಲಿ

ಭಾರತದ ಮಿತ್ರ ಸೋವಿಯತ್ ಪ್ರಧಾನಿ ಕೋಸಿಗಿನ್‌ರವರ ಇಚ್ಛೆಯಂತೆ ಭಾರತ—ಪಾಕಿಸ್ತಾನಗಳ ನಡುವೆ ಸಾಮರಸ್ಯ ಏರ್ಪಡಲು ಸೂಕ್ತ ಮಾತುಕತೆ ನಡೆಸಲು ಪ್ರಧಾನಿ ಲಾಲಬಹದೂರ್ ಶಾಸ್ತ್ರಿ ತಾಷ್ಕೆಂಟಿಗೆ ತೆರಳಿದರು. ಜನವರಿಯ ಮೊದಲ ದಿನಗಳ ಕಲ್ಪನಾತೀತ ಚಳಿಯನ್ನೂ ರಾಷ್ಟ್ರ ಹಿತದೆದುರು ಅವರು ಕಡೆಗಣಿಸಿದರು. ಪಾಕ್ ಅಧ್ಯಕ್ಷ ಅಯ್ಯೂಬಖಾನರೊಂದಿಗೆ ಒಂದು ವಾರ ಬೇಕಷ್ಟು ಮಾತನಾಡಿದರು. ಯಾವ ವಿಷಯವಾಗಿಯೂ ಒಮ್ಮತವು ಅಸಾಧ್ಯವೆಂದು ಜಗತ್ತೇ ಸಂದೇಹಿಸುತಿದ್ದಾಗ, ಒಂದಲ್ಲ ಒಂಭತ್ತು ಸಂಗತಿಗಳಲ್ಲಿ ಹೊಂದಾಣಿಕೆಯ ಸೂತ್ರ ರಚನೆಯಾಯಿತು. ಕೋಸಿಗಿನ್‌ರನ್ನು ಸಾಕ್ಷಿಯಿರಿಸಿ ಇಬ್ಬರೂ ಒಪ್ಪಿಗೆಯ ಸಹಿ ಹಾಕಿದರು—ತಾಷ್ಕೆಂಟ್ ಘೋಷಣೆಯು ಹೊರಬಿತ್ತು. ಭಾರತ ಪಾಕ್ ತ್ವೇಷ ಶಮನಕ್ಕೆ ಇದು ನಾಂದಿಯೆನ್ನುವ ಅಭಿಪ್ರಾಯ ಎಲ್ಲೆಡೆಯೂ ವ್ಯಕ್ತವಾಯಿತು. ಶಾಂತಿ ಸಂಧಾನಕ್ಕೆ ತೆರಳಿದ ಶಾಸ್ತ್ರಿಯವರ ಮುತ್ಸದ್ದಿತನವನ್ನು ಕೊಂಡಾಡ ತೊಡಗಿದರು. ಆದರೆ, ಕೆಲವೇ ಕ್ಷಣದಲ್ಲಿ ಈ ಶಾಂತಿದೂತ, ಚತುರ ಸಂಧಾನಕಾರ ಲಾಲಬಹದ್ದೂರ್ ಶಾಸ್ತ್ರಿ ಲೋಕವನ್ನೇ ತ್ಯಜಿಸಿ ಹೋದರು—ಈ ಬರ ಸಿಡಿಲು ಭಾರತದ ಮೇಲೆ ಮಾತ್ರವಲ್ಲ ಇಡಿಯ ವಿಶ್ವದ ಮೇಲೆ ಬರೆಯೆಳೆಯಿತು. ತ್ಯಾಗ ಮತ್ತು ಸೇವೆಗಳಲ್ಲಿಯೇ ತೊಡಗಿದ್ದ ಶಾಸ್ತ್ರಿಯವರು ತಮ್ಮ ಬಲಿದಾನವನ್ನೂ ದೇಶಕ್ಕಾಗಿ ಮಾಡಿದರು. ದಿ। ಪ್ರಧಾನಿಯವರು ನಮ್ಮ ಅಣ್ಣ ಸರಳ, ಆದರೆ, ಗಂಭೀರ, ಅವರು ಏನನ್ನೂ ಬಯಸಿದವರಲ್ಲ, ಆದರೆ ಎಲ್ಲವೂ ಅವರನ್ನು ಅರಸಿಕೊಂಡೇ ಬಂದುವು 'ಭಾರತ ರತ್ನ'ದ ಸರ್ವೋಚ್ಚ ಬಿರುದು ಅವರನ್ನು ಅರಸಿಕೊಂಡು ಸ್ವರ್ಗಕ್ಕೂ ತೆರಳಿ, ಅವರನ್ನು ಅಲಂಕರಿಸಿತು. ಈ ಭಾರತ ರತ್ನದ ಆತ್ಮಕ್ಕೆ ಶಾಂತಿಯನ್ನು ಕೋರುವುದರೊಡನೆ ಅವರ ಚಿರಸ್ಮಾರಕ ತಾಷ್ಕೆಂಟ್ ಘೋಷಣೆ ನಮ್ಮಿಂದಾಗಿ ಅಜ್ಞಗೆ ಗುರಿಯಾಗದಂತೆ ಎಚ್ಚರಿರಬೇಡವೆ?

ಲಾಲ್‌ಬಹದೂರರ ಬಹದೂರ್ ಆತ್ಮದ ವಿಶ್ವರೂಪದ ಪರಿಚಯ ಪಡೆದ ನಾವು ಅದಕ್ಕೆ ಶ್ರದ್ಧಾಂಜಲಿಯರ್ಪಿಸೋಣ.

ಮುಂದಿನ ನಾಯಕನ ಆಯ್ಕೆಯ ಬಗ್ಗೆ ಊಹಾಪೋಹಗಳ ಆರಂಭ! ಎಲ್ಲೆಲ್ಲೂ ಕುತೂಹಲ—ಶ್ರೀಮತಿ ಇಂದಿರಾ ಗಾಂಧಿಗೆ ಪ್ರಚಂಡ ಬಹುಮತ. ಹಿಂದೆ ಶಾಸ್ತ್ರಿ ಆಯ್ಕೆ ಅವಿರೋಧ, ಇಂದು ಗಾಂಧಿ ಆಯ್ಕೆ ಚುನಾವಣೆಯಿಂದ—ಪ್ರಜಾಪ್ರಭುತ್ವಕ್ಕೆ ಒಪ್ಪುವ ರೀತಿಯಿಂದ. ಅಂದು ಅದೇ ಉತ್ತಮವಿತ್ತು, ಇಂದಿಗೆ ಇದೇ ಉತ್ತಮವಾಯಿತು. ೪೯ ವರ್ಷಕ್ಕೆ ಹತ್ತಿರದ ಇಂದಿರಾ ೪೯ ಕೋಟಿಗೆ ಹತ್ತಿರವಿರುವ ಭಾರತೀಯರ ಪ್ರಧಾನಿ—ಅತಿ ದೊಡ್ಡ ಪ್ರಜಾಪ್ರಭುತ್ವದ ಮಹಿಳಾ ಪ್ರಧಾನಿ. ಭಾರತವು ಸರ್ವ ಪ್ರಕಾರದಲ್ಲೂ ಪ್ರಜಾಸತ್ತಾತ್ಮಕ ರಾಷ್ಟ್ರ. ಜಾತಿ ಮತ — ಧರ್ಮ — ಸಂಪ್ರದಾಯ — ಲಿಂಗ — ಅಭಿಪ್ರಾಯ — ಯಾವ ಭೇದವೂ ಇಲ್ಲಿ ಇಲ್ಲ. ಒಂದಾಗಿ ದೇಶ ಹಿತಸಾಧನೆಗೆ ದುಡಿಯುವುದೊಂದೇ ನಮ್ಮೆಲ್ಲರ ಗುರಿ. ಈ ಗುರಿಯತ್ತ ಶ್ರೀಮತಿ ಗಾಂಧಿ ನಮ್ಮನ್ನು ಕರೆದೊಯ್ಯಬೇಕಾಗಿದೆ. ಮಹಾತ್ಮಾಜಿ, ಚಾಚಾಜಿ, ಶಾಸ್ತ್ರೀಜಿಯವರ ಗರಡಿಯಲ್ಲಿ ಪಳಗಿದ ಈ 'ಕಾಕೀಜಿ' ಅವರೆಲ್ಲರ ಸದ್ಗುಣಗಳನ್ನು ಬಲ್ಲವರು, ಅವರ ದಾರಿಯಲ್ಲಿ ನಡೆದು ಗುರಿಸೇರ ಬಲ್ಲವರು.

ಶ್ರೀಮತಿಯವರನ್ನು ಅಭಿನಂದಿಸುವುದು, ಜತೆಗೆ ಅವರ ಮೂಲಕ ನಮ್ಮ ಪ್ರಗತಿಗಾಗಿ ಪ್ರಾರ್ಥಿಸುವುದು ಅಗತ್ಯ.

ಭಾರತದ ಪ್ರಜಾಪ್ರಭುತ್ವ ಸ್ಥಿರವಾಗಿದೆ—
ಇದು ತನಕವದು ದೃಢ ಪಟ್ಟಿದೆ.
ಮುಂದೆಯೂ ಅದು ಅಚಲವೆನಿಸಲಿ.
ಭಾರತೀಯ ಪ್ರಜಾಸತ್ತೆ ಚಿರಾಯುವಾಗಲಿ.

ಅಭಿನಂದನೆ

ಈ 'ವಿಶೇಷ ಸಂಚಿಕೆ'ಯ ತಯಾರಿಯಲ್ಲಿ ಸಹಕರಿಸಿದ ನಿಮಗೆಲ್ಲರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು. ಈ ವಿಧದ ಸಹಕಾರ ಮುಂದೆಯೂ ಉಳಿಯಲಿ ಎಂದು ಪ್ರಾರ್ಥನೆಗಳು

ರೋಗವರಿಯದೆ ಮದ್ದೇಕೆ?

ಆಹಾರ ಸಮಸ್ಯಾ ಪರಿಹಾರದ ಕುರಿತು ಶ್ರೀ ಟಿ. ಎ. ಪೈಯವರ ಅನುಭವದಿಂದ ಹೊರಟ ಉದ್ಗಾರ



'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂಬ ನಮ್ಮ ನಾಡಿನಲ್ಲಿ ನಾವೆಲ್ಲರೂ ಕೃಷಿಯನ್ನೇ ಕಡೆಗಣಿಸಿದ್ದೇವೆ ಕೃಷಿಯನ್ನು ಅವಲಂಬಿಸುವುದು ಅತೀವ ಹೀನವೆಂಬ ದುರ್ಭಾವನೆ ನಮ್ಮಲ್ಲಿ ಬೇರೂರಿದೆ. ರೈತರಲ್ಲಿ ಆತ್ಮವಿಶ್ವಾಸವೇ ಉಳಿದಿಲ್ಲವೆಂಬ ದುರವಸ್ಥೆಯಿಂದಾಗ ತಲೆದೋರಿದೆ. ನಾವಿಂದು ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗುವ ಹೇರಾಸೆಯಿಟ್ಟು ಕೊಂಡಿದ್ದೇವೆ. ಇದು ಈಡೇರ ಬೇಕಾದರೆ, ನಮ್ಮ ಅಶಕ್ತತೆಗಳು, ದೌರ್ಬಲ್ಯಗಳು ದೂರವಾಗಬೇಕು.

ನಾವಿಂದು ಕಡಿಮೆಯಾದ ಆಹಾರವನ್ನು ಪರದೇಶಗಳಿಂದ ತರಿಸುತ್ತೇವೆ. ಇದರಿಂದ ನಮ್ಮ ಸಂಪತ್ತು ವಿದೇಶಗಳಿಗೆ ಹರಿದು ಹೋಗುತ್ತಿದೆ. ಹಾಗಿದ್ದರೂ ಉಪವಾಸ ಬೀಳುವ ಪ್ರಜೆಗಳಿಗೆ ಅನ್ನ ಪೂರೈಸಿ ಮಹೋಪಕಾರ ಮಾಡುತಿದ್ದೇವೆ ಎಂದು ಕೆಲವರು ಹೇಳುತ್ತಾರೆ. ಅವರೊಡನೆ ಇನ್ನು ಕೆಲವರು ಇದು ನಮ್ಮ ಆತ್ಮಾಭಿಮಾನಕ್ಕೆ ಕುಂದು ಎಂದು ಟೀಕಾಸ್ತ್ರ ಬಿಡುತ್ತಾರೆ. ಈ ಎರಡೂ ಪಂಗಡಗಳವರೂ ಒಂದು ದೊಡ್ಡ ತಪ್ಪು ಮಾಡುತ್ತಾರೆ. ವಿದೇಶಗಳಿಗೆ ಶರಣು ಹೋಗದೇನೇ ಆಹಾರದಲ್ಲಿ ನಾವು ಸ್ವಾವಲಂಬಿಗಳಾಗಬಹುದು ಎಂಬ ಸತ್ಯವನ್ನವರು ಕಂಡುಕೊಂಡಿರುವುದಿಲ್ಲ, ಇವರ ಕಲ್ಪನೆಯೂ ಅವರಿಗಿಲ್ಲ. ಆದರೆ, ನಾವಿಂದು ಮಾಡುವ ಕೆಲಸವೊಂದೇ! "ಹೆಚ್ಚು ಆಹಾರ ಬೆಳೆಯಿರಿ; ಸ್ವಾವಲಂಬನೆಯನ್ನು ಸಾಧಿಸಿರಿ" ಎಂದು ಘೋಷಿಸುತ್ತೇವೆ. ಆದರೆ, "ಹೇಗೆ" ಎಂಬತ್ತ ಘೋಷಕರ ಮನಸ್ಸು ಹರಿದಿದೆಯೇ ಎನ್ನುವುದು ಶಂಕೆ. ಪ್ರಾಮಾಣಿಕರಾಗಿ ದುಡಿಯುವ ವ್ಯಕ್ತಿಗಳು ನಮ್ಮಲ್ಲೆಷ್ಟು ಜನ ಇದ್ದಾರೆ?

ಕೃಷಿ ಸುಧಾರಣೆಯತ್ತ ಕೃಷಿ ಮಂತ್ರಿ ಶಾಖೆ ಗಮನ ಹರಿಸಿದೆ. ಕೃಷಿ ಉತ್ಪನ್ನವನ್ನು ಹೆಚ್ಚಿಸಬೇಕೆಂಬ ಗುರಿಯೂ ಕರಪತ್ರಗಳೂ ಅದಕ ಬಳಿಯಿವೆ. ಆದರೆ, ಇಷ್ಟರಿಂದಲೇ ಹೆಚ್ಚಳ ಸಾಧಿಸುವುದು ಸಾಧ್ಯವಿಲ್ಲ. ಈ ಇಲಾಖೆಯ ಅಧಿಕಾರಿಗಳು ಮತ್ತದರ ಕಾರ್ಯಕ್ರಮಗಳು ಯಾವ ಮೂಲೆಗೂ ಸಲ್ಲವು. ಇವುಗಳಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು;

ಆಹಾರದ ಪ್ರಶ್ನೆ ಜನತೆಯ ಪ್ರಶ್ನೆ. ಜನರ ಆಡಳಿತೆ ನಡೆಸುವ ಸರಕಾರ ಮತ್ತು ಜನತೆ—ಎರಡರ ಸಮ್ಮಿಲಿತ ಪ್ರಯತ್ನ—ಆಸಕ್ತಿಯುತ ಕಾರ್ಯಕ್ರಮಗಳಿಂದಲೇ ನಮ್ಮ ಈ ಜಟಿಲ ಪ್ರಶ್ನೆ ಪರಿಹಾರವಾಗಬಲ್ಲುದು. ನಮ್ಮ ಜನಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಜನವೃದ್ಧಿ ಮತ್ತು ಆಹಾರೋತ್ಪಾದನೆಗಳು ಇಂದಿನ ಗತಿಯಲ್ಲೇ ಮುಂದುವರಿದರೆ, ೧೯೭೦ರ ಹೊತ್ತಿನಷ್ಟು ಪರಿಸ್ಥಿತಿ ಇಂದಿಗಿಂತಲೂ ಭೀಕರವಾಗಬಹುದು.

(ಮೂವತ್ತೆರಡನೇ ಪುಟ ನೋಡಿರಿ)

Telegram : 'CORONET' MALPE. Telephone · MALPE 33, 34, 45

With best compliments from:

M. MADHVA RAJ, M. L. A.,

Proprietor :

CORONET CANNING COMPANY,

MALPE

&

KARNATAKA FISHERIES CORPN.,

MANGALORE.

Approved Contractors to the Government of India Department of Food, Army purchase organisation

AND

CANTEEN STORES DEPARTMENT (INDIA)

'ಖೀರಾ' ಉಕ್ಕಿನ ಫರ್ನಿಚರುಗಳು ನಿಮ್ಮ ಮನೆ-ಆಫೀಸುಗಳಿಗೆ ಒಂದು ಶೋಭೆ

ARROW *Steel* SOFA-CUM-BED
With chromium handle

ಇಬ್ಬಗೆಯ ಉಪಯೋಗಕ್ಕೆ
ಸೋಫಾ-ಕಂ-ಬೆಡ್



ಸೋಫಾವನ್ನು ರಾತ್ರಿಯಲ್ಲಿ ಬೆಡ್
ಆಗಿ ಉಪಯೋಗಿಸಬಹುದು



ARROW STEEL INDUSTRIES



ಫೋನ್ ರೆಸ್ಟ್

ಮನೆ, ಆಫೀಸು, ಆಸ್ಪತ್ರೆಗಳಿಗೆಲ್ಲಾ ಬೇಕಾಗುವ ಕಪಾಟು, ಕುರ್ಚಿ, ಮೇಜು, ಮೊದಲಾದ ಯಾವತ್ತೂ ಖೀರಾ ಉಕ್ಕಿನ ಫರ್ನಿಚರುಗಳು, ಉಪಕರಣಗಳು, ಚಿತ್ರದ ಸಾಹಿತ್ಯೋಪಕರಣಗಳು, ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ರೂಫ್ ಟ್ರಸ್ಸ್, ಉಕ್ಕಿನ ಕಿಟಕಿ ಬಾಗಿಲುಗಳು, ಮಕ್ಕಳಿಗಾಗಿ ನವೀನ 'ಬೇಬಿ ವಾಕರ್' ಇತ್ಯಾದಿಗಳಿಗೆ ವಿಚಾರಿಸಿರಿ.

ವೈವಿಧ್ಯತೆಯು ನಮ್ಮ ವೈಶಿಷ್ಟ್ಯ

Phone: 3788
Grams: "Shastrico"

ಸಂದರ್ಶಿಸಿರಿ:

ಶಾಸ್ತ್ರಿ ಅಂಡ್ ಕಂಪೆನಿ, ಹಂಪನಕಟ್ಟೆ, ಮಂಗಳೂರು-1

ನಮಗೀಗ ಆಂತರಿಕ 'ಕ್ರಾಂತಿ' ಬೇಕು

ಶ್ರೀ ಜಿ. ಆರ್. ಪಾಂಡೇಶ್ವರ್.

ಸ್ವಾತಂತ್ರ್ಯ ಪೂರ್ವದ ಕನಸುಗಳು ಸ್ವಾತಂತ್ರ್ಯೋತ್ತರ ಯುಗದಲ್ಲಿ ಬರಿಯ ಕನಸುಗಳಾಗಿಯೇ ಉಳಿಯುತ್ತಿವೆ. ಇದಕ್ಕೆ ಆಡಳಿತದ ಅವ್ಯವಸ್ಥೆಯೇ ಕಾರಣ. ದೇಶದ ಆಡಳಿತದಲ್ಲಿ ಕ್ರಾಂತಿಕಾರಕ ಸುಧಾರಣೆಗಳು ನಡೆಯದೆ ಹೋದರೆ, ನಮ್ಮ ಹಣವೆಲ್ಲ ಕೆಲವೇ ವ್ಯಕ್ತಿಗಳ ಭೋಗ-ವಿಲಾಸದ ಸಾಧನವಾಗುವುದಷ್ಟೇ ಹೊರತು, ಜನಸಾಮಾನ್ಯನಿಗೆ ಅದರ ಲಾಭ ತಿಲಾಂಶವೂ ದೊರೆಯುವುದಿಲ್ಲ.

For forms of Government
let fools contest
For, whatever is best
administered, is best—

ಎಂದು ಆಂಗ್ಲ ವಿಡಂಬನ ಕವಿ ಆಲೆಕ್ಸಾಂಡರ್ ಪೋಪ್ ಹೇಳಿದಂತೆ, ನಮಗೆ ಪ್ರಾಣಸತ್ವ ಮುಖ್ಯವೇ ಹೊರತು, ದೇಹದ ಅಲಂಕರಣ ಮುಖ್ಯವಲ್ಲ. ಪ್ರಾಣ ಇಲ್ಲದ ದೇಹಕ್ಕೆ ಏನು ತೊಡಿಸಿದರೇನು? ನಮ್ಮದು 'ಪ್ರಜಾರಾಜ್ಯ'; ಆದರಲ್ಲಿಯೂ, ಸರ್ವ ...ಮೀ ರಾಜ್ಯ (Welfare-state). ...ಯ ಪ್ರಬುದ್ಧ, ಪ್ರತಿವ್ಯಕ್ತಿಗೂ ಒಂದೊಂದು ಮತ. (Vote) ಇರುವ, ಸರ್ವ...ಗೂ ಸಮಾನಾವಕಾಶ ಇರುವ, ಹಾಗೂ ...ದರ ಮೂಲಕ ಸರ್ವರಿಗೂ ಸುಖಶಾಂತಿ ಸಮೃದ್ಧಿಗಳನ್ನುಂಟು ಮಾಡಿಕೊಡುವ ಸು...ರಾಜ್ಯ ನಿರ್ಮಾಣವೇ ನಮ್ಮ ಗುರಿ. ...ದನ್ನು ಸಾಧಿಸಲಿಕ್ಕೆ ಅಸಮರ್ಥವಾದ ಸರಕಾರ ಅಥವಾ ಮಂತ್ರಿಮಂಡಲ ಇದ್ದೇನು ಪ್ರಯೋಜನ? ಕಳೆದ ೧೬ ವರ್ಷ...ಳ ಅವಧಿಯಲ್ಲಿ ನಾವು ಸಾಧಿಸಿದ ಸುಖ ಶಾಂತಿ ಸಮೃದ್ಧಿಯ ಪ್ರಗತಿಯನ್ನು ಅಳೆದು ನೋಡಿದರೆ, ನಮಗೆ ಚಿಂತೆಯುಂಟಾಗದೇ ಇರದು. ಜನಾಂಗದ ಮೂಲಭೂತ ಆವಶ್ಯಕತೆಯಾಗಿರುವ ಅನ್ನ-ವಸ್ತ್ರದ ವಿಷಯದಲ್ಲಿಯೂ ಸಹ ನಾವಿನ್ನೂ ಪರಾವಲಂಬಿಗಳಾಗಿದ್ದೇವೆ! ವರ್ಷೇ ವರ್ಷೇ ನಮ್ಮಲ್ಲಿ ಪ್ರಜಾಭಿವೃದ್ಧಿ ಆಗುತ್ತಿದೆಯೇ ಹೊರತು, ಅದಕ್ಕನುಗುಣವಾಗಿ ಇತರ ಯಾವ ವಸ್ತು ಒಡವೆಗಳ ಅಭಿವೃದ್ಧಿಯೂ ನಡೆಯುತ್ತಲಿಲ್ಲ. ಇದು ತೀರ ನಾಚಿಕೆಗೇಡು! (1) ಕಳ್ಳಪೇಟೆ. (2) ಲಂಚರುಷವತ್ತು (3) ಜಾತಿ—ಒಳ ಜಾತೀಯತೆ (4) ನನ್ನ ಜಾತಿ ಮೇಲೆ—ಎಂಬ ದುರಹಂಕಾರ, (5) ಕಳ್ಳಭಟ್ಟಿ ಸರಾಯಿ ವಿತರಣ, (6) ಯೇನ ಕೇನ ಪ್ರಕಾರೇಣ ದ್ರವ್ಯಾಧಿಕಾರಗಳಿಸಬೇಕೆಂಬ ರಾಕ್ಷಸೀ ಆಕಾಂಕ್ಷೆ—ಇವೇ ಮೊದಲಾದ ಅನೈತಿಕತೆಗಳು ಅಭಿವೃದ್ಧಿಗೊಂಡಿವೆ. ದಿನೇ ದಿನೇ ಶಿಕ್ಷಣ ಪ್ರಸಾರ, ಧರ್ಮ ಪ್ರಸಾರ, ಕೈಗಾರಿಕೆ ಅಭಿವೃದ್ಧಿ ಮೊದಲಾದ ದೊಡ್ಡ ದೊಡ್ಡ ಹೆಸರಿನ ಅಡಿಯಲ್ಲಿ ಈ ಅನೈತಿಕತೆಯ ಆಸುರೀ ವೃತ್ತಿ ಹಬ್ಬುತ್ತಲೇ ಹೋಗಿದೆ. ಮೂರು ಯೋಜನೆಗಳ ಹೆಸರಿನಲ್ಲಿ ೨೦ ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಿಯೂ ನಾವು ಇನ್ನು ದರಿದ್ರತೆಯಲ್ಲೇ ಇದ್ದೇವೆ; "Mountain producing monse" (ಪರ್ವತ ಪ್ರಸವ) ಎಂಬ ಆಂಗ್ಲ ಗಾದೆಯಂತೆ, ಇಡೀ ಬೆಟ್ಟವನ್ನು ಅಗೆದು ನಾವು ಪಡೆದದ್ದೆಂದರೆ ಒಂದು ಪುಟ್ಟ ಇಲಿ ಮರಿ! ಸ್ವರಾಜ್ಯವನ್ನು ತಂದುಕೊಟ್ಟು, ಹಾಗೂ ಸರ್ವಸುಖದ ರಾಮರಾಜ್ಯವನ್ನು ಕಟ್ಟಬೇಕೆಂಬ ಸಂಕಲ್ಪವನ್ನಿಟ್ಟುಕೊಂಡಿದ್ದ ಗಾಂಧೀಜಿ ಈಗಿರುತ್ತಿದ್ದರೆ, "ಮಾಡಿದ ಗಣಪತಿ ಮಂಗನಾಯ್ತಲ್ಲಾ" ಎಂದು ಪಶ್ಚಾತ್ತಾಪ ಪಡುತ್ತಿದ್ದರು!

ಪ್ರತಿಯೊಂದು ರಾಜ್ಯ ಶಾಸನ ಸಭೆಯಲ್ಲೂ ಇಂದು ದ್ರವ್ಯಾಧಿಕಾರ ಲಾಲಸಿಗಳೇ ಕಾಂಗ್ರೆಸ್ಸಿನ ಹೆಸರಂಟಿಸಿಕೊಂಡು ಆರಿಸಿ, ಬಹುಮತ ಪಡೆದಿದ್ದಾರೆ. ಜಾತ್ಯಂಧರು, ಪರಜಾತಿ ದ್ವೇಷಿಗಳು ಮತ್ತು ಭೌತಿಕ ದ್ರವ್ಯ ಸುಖ ಲಂಪಟರು, ಮತದಾರರಲ್ಲಿ ಜಾತೀಯತೆ, ಪ್ರಾದೇಶೀಯತೆ, ಮೊದಲಾದ ಅರಾಷ್ಟ್ರೀಯ ಭಾವನೆಗಳನ್ನು ಹಬ್ಬಿಸಿ, "ನಿಮಗೆ ಅದನ್ನು ಮಾಡಿಸಿ ಕೊಡುತ್ತೇನೆ, ಇದನ್ನು ಮಾಡಿಸಿ ಕೊಡುತ್ತೇನೆ" ಎಂಬ "ಲಂಚಭಾವ" ಹುಟ್ಟಿಸಿ, ಮಧ್ಯಸ್ಥಿಕೆಗಾರರಾಗಿ ಬಹುಮತ ಪಡೆದು ಚುನಾವಣೆಯಲ್ಲಿ ಗೆಲ್ಲುತ್ತಾ ಅಲ್ಲಿ ಮತ್ತೆ ತಮ್ಮ ತಮ್ಮ ವೈಯಕ್ತಿಕ ಆಸ್ತಿಪಾಸ್ತಿ ವಿಲಾಸಗಳನ್ನು ಹೆಚ್ಚಿಸಿಕೊಂಡು, ಸರಕಾರದ ಹೆಸರಿನಲ್ಲಿ ವಿದೇಶ ಸಂಚಾರ ಮಾಡಿ, ಇಂದ್ರಲೋಕಕ್ಕೆ ಹೋಗಿ ಬಂದವರಂತೆ, ಹೆಮ್ಮೆಯಿಂದ ಕುಣಿದಾಡುತ್ತಾರೆ!! ಇಂತಹ ಪರಿಸ್ಥಿತಿಯೇ ನಮ್ಮ ದೇಶದ ಇಂದಿನ ಆಂತರಿಕ ಮತ್ತು ಬಾಹ್ಯ ದುಃಖ ದುಮ್ಮಾನಗಳಿಗೆ ಕಾರಣವಾಗಿದೆ. ಅದನ್ನು ಹೋಗಲಾಡಿಸಿ, ಜನತೆಯಲ್ಲಿ ನಿಜವಾದ ಪ್ರಜಾಸತ್ತೆಯ ಧೈರ್ಯ, ಸಾಹಸ, ಸತ್ಯಪ್ರೀತಿ ಮೊದಲಾದ ಉದಾತ್ತ ಭಾವನೆಗಳನ್ನುಂಟು ಮಾಡುವ ಮಹಾಕ್ರಾಂತಿ ನಮಗಿಂದು ಬೇಕಾಗಿದೆ. ಅಂತಹ ಕ್ರಾಂತ ದೃಷ್ಟಿಯ, ಕ್ರಾಂತ ಮನೋಭಾವದ ಮುಖಂಡರ ತಂಡದಿಂದಲೇ ನವರಾಷ್ಟ್ರ ನಿರ್ಮಾಣ ಸಾಧ್ಯ. ಹೇಗೆ, ಸ್ವರಾಜ್ಯ ಸಾಧನೆಯ ಹೋರಾಟದ ದಿನಗಳಲ್ಲಿ ಜೈಲು ಲಾಠಿ ಗೋಳೀ ಶಿಕ್ಷೆಗೂ ಹೆದರದೆ, ಸಮಾರ್ಪಣ ಬುದ್ಧಿಯಿಂದ ಹೋರಾಡಿದ ವೀರ

(ಮೂವತ್ತನೇ ಪುಟ ನೋಡಿರಿ)

MODERN GARAGE
UDIPI
With
Service Station
attached
Undertakes
Spray painting and
Overhauling of all
types of cars and trucks.
Body building &
Service of Benz vehicles
By technically qualified
staff and Benz expert.
Phone 65 / 234 Residence: 180

ಪ್ರಜಾರಾಜ್ಯ ದಿನದ ಶುಭಾಶಯಗಳು !
ಸುಂದರ ಮಂದಿರ! ಸುಖಕರ ವಾತಾವರಣ!



ಹೋಟೆಲ್
ಶಿವ ಪ್ರಸಾದ
ಕುಂದಾಪುರ, ದ. ಕ.
ಅತ್ಯಾಧುನಿಕ ಸಲಕರಣೆ - ಸೌಕರ್ಯಗಳಿಂದ ಕೂಡಿದ
ಊಟ, ಉಪಾಹಾರ ಮತ್ತು ವಸತಿ ಗೃಹ

ಸೌಂದರ್ಯದ ಅನುಭೂತಿಗೆ

ಮತ್ತು

ಅತ್ಯುತ್ತಮವಾದ ಕೋರಿಕೆಗೆ...

ಮೈಸೂರು ಸರಕಾರದ

ನೂರಕ್ಕೆ ನೂರರಷ್ಟು ಶುದ್ಧವಾದ

ಸಿಲ್ಕ್ ಸೀರೆಗಳನ್ನೇ ಆರಿಸಿಕೊಳ್ಳಿ

ಆಧುನಿಕ ಫ್ಯಾಶನ್ನಿನಲ್ಲಿ ಕಂಗೊಳಿಸಿರಿ—

ಅವು ನಯವಾಗಿಯೂ,
ಬಾಳಿಕೆಗೂ, ಶ್ರೇಷ್ಠತೆಗೂ
ಹೆಸರಾಗಿವೆ.

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು - 4

ಷೋರೂಮುಗಳು—

1 ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು.4.
2 ಗುಪ್ತ ಮಾರ್ಕೆಟ್, ಕೆಂಪೇಗೌಡ ರೋಡ್, ಬೆಂಗಳೂರು.9.
3 ಮೈಸೂರು ಸಿಲ್ಕ್ ಪ್ಯಾಲೇಸ್, ಲಜ್‌ಕಾರ್ನರ್, 92, ರಾಯಪೇಟಾ ಹೈರೋಡ್, ಮದರಾಸ್. 4.

ಡಾ। ಯಂ. ಯಸ್. ಎ. ಶರ್ಮಾ

ಗಾಂಧೀ ತತ್ವ ಪ್ರಚಾರ

ದೇಶ ಜನಹಿತ ಸಂಘಟನೆಯಲ್ಲಿ ಗಾಂಧೀ ತತ್ವಗಳ ಸ್ಥಾನ ಅಗ್ರಗಣ್ಯ. ಆದರೆ ಇಂದು ಗಾಂಧೀಜಿಯವರ ಹೆಸರಿನಲ್ಲಿ ಆಗುತ್ತಿರುವ ಅನ್ಯಾಯ—ಅನಾಚಾರಗಳಿಂದ ನೊಂದ ಲೇಖಕರು ಗಾಂಧೀ ತತ್ವಪ್ರಚಾರ ಕಾರ್ಯದಲ್ಲಿ ಹೊಸ ಪ್ರಾಣ ಪ್ರತಿಷ್ಠೆಯಾಗಬೇಕು ಎನ್ನುತ್ತಾರೆ. ಇದಕ್ಕಾಗಿಯೇ ಅವರು ಚತುರ್ದಶ ಸೂತ್ರಗಳನ್ನು ಗಾಂಧೀವಾದಿಗಳ ಮುಂದಿಟ್ಟಿದ್ದಾರೆ.



(1) ಶ್ರೀ ಗಾಂಧಿಜೀಯವರು "ರಾಮುಧುನ್" ಸಾರ್ವಜನಿಕ ಪ್ರಾರ್ಥನೆಯನ್ನು ಮಾಡದೆ ಯಾವ ಕರ್ತವ್ಯವನ್ನೂ ಪ್ರಾರಂಭಿಸುತ್ತಿರಲಿಲ್ಲ. ಅವರು ದೈವಿಕ ಬಲವನ್ನು ಅವಲಂಬಿಸಿಯೇ ಕರ್ತವ್ಯತತ್ಪರರಾಗುತ್ತಿದ್ದರು. ಇದನ್ನು ಮುಖ್ಯ ರಾಜಕಾರಣಿಗಳಿಂದ ಆರಂಭಿಸಿ ಅಲ್ಪ ಮಾನವನವರೆಗೂ ಅನುಕರಿಸುವಂತೆ ಮಾಡಬೇಕು.

(2) ಜಾತಿ, ಮತ, ಪಂಥ, ಪಕ್ಷ ಪಂಗಡಗಳೆಂಬ ಭೇದಗಳನ್ನು ಇಟ್ಟುಕೊಳ್ಳದೆ ಸರ್ವ ಚರಾಚರಗಳಿಗೂ ಸೃಷ್ಟಿಕರ್ತನೊಬ್ಬನೇ ದೇವರು, ಅವನೇ ಅನೇಕ ಹೆಸರುಗಳಿಂದ ಕರೆಯಲ್ಪಡುವುದಲ್ಲದೆ ಮತ ಭೇದಗಳು ಮಾನವ ನಿರ್ಮಿತವೆಂದೂ ನಾವೆಲ್ಲರೂ ಒಂದೇ ಭೂಮಿಯಲ್ಲಿ ಜನಿಸಿ ಅದರಲ್ಲಿ ಬೆಳೆದ ಅನ್ನವನ್ನು ತಿಂದು ಆ ಭೂಮಿಯಲ್ಲೇ ಅಂತ್ಯಕ್ಕೆ ಮಣ್ಣಾಗುವವರು ಎಂಬುದನ್ನೂ ಅರಿತುಕೊಂಡು ಅಣ್ಣ ತಮ್ಮಂದಿರಂತೆ ಪ್ರೀತಿಯಿಂದ ನಮ್ಮ ಜೀವನವನ್ನು ನಡೆಸುವಂತೆ ಜನತೆಯಲ್ಲಿ ಬೋಧಿಸಿ ಜಾತಿ, ಜಾತಿಗಳೊಳಗೆ ಇರುವ ವೈಮನಸ್ಸನ್ನು ತೊಡೆದು ಹಾಕಲು ಪ್ರಯತ್ನಿಸಬೇಕು.

3) ಗಾಂಧೀ ತತ್ವಾನುಯಾಯಿಗಳು ಬಡ ಜನರಲ್ಲಿ ಸಂಪರ್ಕವನ್ನು ಇಟ್ಟುಕೊಂಡು ಅವರ ಕಷ್ಟ ಸುಖಗಳನ್ನು ವಿಚಾರಿಸಿ ಅವರ ಮಟ್ಟದ ಸರಳ ಜೀವನವನ್ನು ಅನುಸರಿಸಿ ಬಡಜನರ ಸಂಕಷ್ಟ ನಿವಾರಣೆಗೆ ಪ್ರಯತ್ನಿಸಬೇಕು. ಬರಿ ಖಾದಿ ಒಟ್ಟೆ, ಖಾದಿ ಟೊಪ್ಪಿ ಧರಿಸಿದ್ದರಿಂದ ಗಾಂಧೀ ತತ್ವಾನುಯಾಯಿಗಳಾಗಲು ಸಾಧ್ಯವಿಲ್ಲವೆಂದು ಜನತೆಗೆ ಬೋಧಿಸಬೇಕು.

(4) ಸತ್ಯಾಗ್ರಹವೆಂದರೇನ? ಅಹಿಂಸಾ ಎಂದರೇನು? ಇವುಗಳನ್ನು ಜನತೆಗೆ ವಿವರಿಸಿ ಅದರ ಫಲಿತಾಂಶ ಒಳ್ಳೆಯದಾಗಬೇಕಾದರೆ ಅವುಗಳನ್ನು ಎಲ್ಲಿ, ಯಾವ ಸಂದರ್ಭದಲ್ಲಿ, ಯಾಕೆ, ಹೇಗೆ ಉಪಯೋಗಿಸಬೇಕು ಎಂಬುದನ್ನೂ ಗಾಂಧಿಜಿಯವರ ತತ್ವವನ್ನು ಅನುಸರಿಸಿ ಜನತೆಯಲ್ಲಿ ಪ್ರಚಾರ ಮಾಡಬೇಕು. ಪ್ರತಿ ವಿಷಯದಲ್ಲೂ ಸತ್ಯಾಗ್ರಹ, ಉಪವಾಸ ಮುಷ್ಕರಗಳನ್ನು ಕೈಗೊಳ್ಳದಂತೆ ಜನತೆಗೆ ಬೋಧಿಸಬೇಕು.

5) ಜನತೆ ಮತ್ತು ದೇಶದ ಗೌರವವೇ ತಮ್ಮ ಗೌರವವೆಂದು ಗ್ರಹಿಸಿ ತನ್ನ ಮೇಲೆ ಜನತೆ ತಪ್ಪುಗಳನ್ನು ಹೊರಿಸಿದರೆ, ಹಾಗಾದರೆ ತಾನು ಒಪ್ಪಿಕೊಂಡು ತಮ್ಮ ಸ್ಥಾನದಿಂದ ಹೊರಬರಬೇಕು. ತಪ್ಪುಗಳು ನಿರಾಧಾರಗಳೆಂದು ನಿಶ್ಚಯವಿದ್ದರೆ ನ್ಯಾಯ ಸ್ಥಾನದ ಮುಖಾಂತರ ತಾನು ತಪ್ಪಿತಸ್ಥನಲ್ಲವೆಂದು ರುಜುಪಡಿಸಿ ತನ್ನ ಸತ್ಯತೆಯನ್ನು ಶ್ರೀ ಕೃಷ್ಣ ಪರಮಾತ್ಮನು ಶ್ಯಮಂತಕಮಣಿಯ ವಿಷಯದಲ್ಲಿ ಬಂದ ಅಪವಾದವನ್ನು ಸರಿಪಡಿಸಿಕೊಂಡಂತೆ ಜನತೆಗೆ ತೋರಿಸುವ ಮನೋವೃತ್ತಿಯು ನಮ್ಮ ರಾಜಕಾರಣಿಗಳಲ್ಲಿ ಉಂಟಾಗುವಂತೆ ಮಾಡಬೇಕು.

6) ನಮ್ಮ ರಾಜಕಾರಣಿಗಳು ದೇಶದ ಮತ್ತು ಜನತೆಯ ಕಲ್ಯಾಣಕ್ಕಾಗಿ ಪಕ್ಷ ಭೇದಗಳನ್ನು ತೊರೆದು ತಮ್ಮ ಮಾತೇ ಮೇಲೆಂಬ ದುರಭಿಮಾನವನ್ನು ಬಿಟ್ಟು ಒಬ್ಬ ಅಲ್ಪ ಮಾನವನು ಕೊಟ್ಟ ಉತ್ತಮ ಸಲಹೆಗಳನ್ನು ಕೂಡ ಸ್ವೀಕರಿಸಿ ಜನತೆಯ ಕಲ್ಯಾಣವನ್ನೂ ಬಯಸುವಂತಹರಾಗುವಂತೆ ಮಾಡಬೇಕು.

7) ರಾಜಕಾರಣದಲ್ಲಿ ಪ್ರವೇಶಿಸಿದವರು ಸರ್ವದಾ ತಾನೆ ಅಸ್ಥಾನಾಧಿಪತಿಯಾಗಿದ್ದು ಎಲ್ಲರಿಗೂ ಶಾಸಕನಾಗಿರಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಬಿಟ್ಟು ಸ್ವಲ್ಪ ಕಾಲ ತಾನು ಸತ್ಯ ನಿಷ್ಠೆಯಿಂದ ಕರ್ತವ್ಯವನ್ನು ಮಾಡಿ ಅದನ್ನು ಮುಲ್ಪಂಕ್ತಿ

(ಇಪ್ಪತ್ತೆಂಟನೇ ಪುಟ ನೋಡಿರಿ)

ನಮ್ಮ ವಜ್ರಮಹೋತ್ಸವದ ವೆರುಷೆ:

ಕ್ಯೂಮ್ಯುಲೆಟಿವ್ ಡಿಪಾಸಿಟ್ ಯೋಜನೆ

ಅತ್ಯಾಕರ್ಷಕ ಬಡ್ಡಿ ದರ — ಸಾಲಿಯಾನ್ ಶೇಕಡಾ 7.54ರ ವರೇಗೆ.

ಈ ರೇವಣಿಗಳನ್ನು ತಿಂಗಳೊಂದರ ರೂಪಾಯಿ ಒಂದರಂತೆ ಅಥವಾ ಅದರಿಂದ ಗುಣಿಸಲ್ಪಡುವ ಯಾವುದೇ ಮೊತ್ತದ ಸಂಖ್ಯೆಯಲ್ಲಿ 12, 24, 36, 48 ಮತ್ತು 60 ತಿಂಗಳ ಅವಧಿಗಳಿಗೆ ಸ್ವೀಕರಿಸಲಾಗುವುದು.

ಈ ಉಳಿತಾಯ ಯೋಜನೆ ಮಾಸಿಕ ಆದಾಯದ ವೇತನ ಪಡೆಯುವವರಿಗೆ ವಿಶೇಷ ಅನುಕೂಲವಾಗಿದೆ. ಹೆಚ್ಚಿನ ವಿವರಗಳಿಗೆ ನಿಮಗೆ ಸಮೀಪವಿರುವ ನಮ್ಮ ಯಾವ ಶಾಖೆಯಲ್ಲಿಯೂ ವಿಚಾರಿಸ ಬಹುದು.

ಪ್ರತಿ ತಿಂಗಳಲ್ಲಿ ತೆರುವ ರೇವಣಿ	12 ತಿಂಗಳ	24 ತಿಂಗಳ	36 ತಿಂಗಳ	48 ತಿಂಗಳ	60 ತಿಂಗಳ
	ಅವಧಿಯ ಕೊನೆಯಲ್ಲಿ ಬಡ್ಡಿ ಸಮೇತ ಹಿಂದಕ್ಕೆ ಪಡೆಯುವ ಮೊತ್ತ				
ರೂಪಾಯಿ	ರೂಪಾಯಿ	ರೂಪಾಯಿ	ರೂಪಾಯಿ	ರೂಪಾಯಿ	ರೂಪಾಯಿ
10—00	123—50	255—00	395—00	545—00	71[illegible]—00
25—00	308—75	637—50	987—50	1,362—50	1,787—50
50—00	617—50	1,275—00	1,975—00	2,725—00	3,575—00
100—00	1,235—00	2,550—00	3,950—00	5,400—00	7,150—00
200—00	2,470—00	5,100—00	7,900—00	10,900—00	14,300—00

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿ.,

(ಸ್ಥಾಪನೆ. 1906)

ರಿಜಿಸ್ಟರ್ಡ್ ಆಫೀಸು: ಉಡುಪಿ

ಕ ರಾಮದಾಸ್ ನಾಯಕ್, ಎಂ ಎ., ಜನರಲ್ ಮೇನೇಜರ್

ಆಡಳಿತ ಆಫೀಸು: ಮಂಗಳೂರು.

ಶ್ರೀ ಶಿರ್ತಾಡಿ ವಿಲಿಯಂ ಪಿಂಟೋ

ಪ್ರಜಾಸತ್ತಾತ್ಮಕ ಸಮಾಜವಾದ

ದಿವಂಗತ ಪ್ರಧಾನಿಗಳಾದ ಪಂ. ಜವಾಹರಲಾಲರು ಮತ್ತು ಲಾಲ ಬಹದ್ದೂರ್ ಶಾಸ್ತ್ರಿಗಳು ಪ್ರಜಾಸತ್ತಾತ್ಮಕ ಸಮಾಜವಾದದಲ್ಲಿ ಅಚಲ ವಿಶ್ವಾಸವನ್ನಿಟ್ಟಿದ್ದರು, ಅದನ್ನು ಕಾರ್ಯಾಚರಣೆಯಲ್ಲಿ ತರುವುದರಲ್ಲಿಯೇ ತಮ್ಮ ಜೀವನವನ್ನು ತೇದರು. ಇವರು ಕಂಡ ಕನಸು ನನಸಾಗಬೇಕಾದರೆ, ದೇಶದ ಉದ್ಧಾರವಾಗಬೇಕಾದರೆ, ಜನತೆಯ ಪಾತ್ರವೂ ಸರಿಯಾಗಿ ನಿರ್ವಹಿತವಾಗಬೇಕು, ಜನ ಕಣ್ಣು ತೆರೆಯಬೇಕು.

ಲೇಖಕರು

●

ಮನುಷ್ಯ ಮನುಷ್ಯನನ್ನು ಹಿಡಿದು ತಿನ್ನುವ ಕಾಲವು ಒಂದಿತ್ತು. ಬಲಶಾಲಿಯು ನಿರ್ಬಲನನ್ನು ತನ್ನ ಗುಲಾಮನನ್ನಾಗಿಸಿಕೊಂಡು ಪಶುವಿಗಿಂತ ಕಡೆಯಾಗಿ ದುಡಿಸಿಕೊಳ್ಳುತ್ತಿದ್ದ ಕಾಲ ಕೂಡಾ ಒಂದಿತ್ತು. ಕೈಗಾರಿಕಾ ಕ್ರಾಂತಿ ಮತ್ತು ವಿಜ್ಞಾನದ ಪ್ರಗತಿಯಿಂದಾಗಿ ಮಾನವನ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳುಂಟಾದವು. ಆತನ ಭಾಗ್ಯಕ್ಕೆ ತುದಿ ಬುಡವೇ ಇಲ್ಲದಂತಾದರೂ ಕೈಗಾರಿಕಾ ಕ್ರಾಂತಿಯಿಂದಾಗಿ ಬಡವ—ಶ್ರೀಮಂತರೊಳಗೆ ಅಂತರ, ದಿನೇ ದಿನೇ ಹೆಚ್ಚುತ್ತಲಿದ್ದು, ಕೈಗೆ ಬಂದ ತುತ್ತು ಬಾಯಿಗೆ ಸಿಗುತ್ತಿಲ್ಲ ಎಂಬ ಸ್ಥಿತಿ ದೀನದಲಿತರಿಗೊದಗಿದೆ. ಕೈಗಾರಿಕಾ ಮಾಲಿಕರು 'ನಾವು ಬಂಡವಾಳ ಹಾಕಿದ್ದೇವೆ—ಲಾಭ ಪಡೆಯುತ್ತೇವೆ—ನಿಮಗೇನು ಮತ್ಸರ? ಕೂಲಿಗಾರರೂ ಕಾರ್ಮಿಕ ವರ್ಗದವರೂ, ಸರಿಯಾಗಿ ದುಡಿಯಲಿ, ಅವರು ಮಾಡಿದ ಪೂರ್ವ ಜನ್ಮದ ಕರ್ಮದ ಫಲದಿಂದಾಗಿ ಕಷ್ಟಪಡುತ್ತಿದ್ದಾರೆ—ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆಯೇ" ಎನ್ನುತ್ತಾರೆ.

ಆದರೆ ಮಾನವ ಬುದ್ಧಿಜೀವಿ. ತನ್ನ ಹೊಟ್ಟೆಗೆ ಬೆಂಕಿ ಬಿದ್ದಾಗ ಗೌರವಕ್ಕೆ ಚ್ಯುತಿ ಬಂದಾಗ ಆತ ಕೂಡಾ ಕೆರಳಿ ಸಿಂಹದಂತಾಗುತ್ತಾನೆ. ವಿಕಾಸ ಹಾಗೂ ಕ್ರಾಂತಿಯ ಮಾರ್ಗಗಳಲ್ಲಿ ಏಳುತ್ತಾ ಬೀಳುತ್ತಾ ಸಾಗುತ್ತಾನೆ. ಹುಟ್ಟಿನಿಂದ ಎಲ್ಲರೂ ಸ್ವತಂತ್ರರು ಮತ್ತು ಸಮಾನರು ಎಂಬ ಸತ್ಯವನ್ನು ಮನುಷ್ಯನು ಇಂದು ಕಂಡುಕೊಂಡಿದ್ದಾನೆ.

ಈ ಹಕ್ಕುಗಳ ಪ್ರತಿಪಾದನೆಗೆ ಹಲವರು ಜೀವ ಬಿಟ್ಟಿದ್ದಾರೆ. ಸೆರೆಮನೆಯಲ್ಲಿ ನರಳಿದ್ದಾರೆ. ಮನೆಮಾರನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಅಂತಹ ಶ್ರೇಷ್ಠ ವೀರಮಣಿಗಳಿಂದಾಗಿ ದೀನದಲಿತರಿಗೂ ಪ್ರಾಧಾನ್ಯ ಬಂದಿದೆ. ಗೌರವ ಸಹಾನುಭೂತಿ ಸಿಕ್ಕಿದೆ. ಇನ್ನು ಕೂಡಾ ಆ ಹಕ್ಕುಗಳ ಫಲ ಎಲ್ಲ ಬಡವರಿಗೆ ಸಿಗದಂತೆ ಮಾಡಲು ಸ್ಥಾಪಿತ ಹಿತಾಸಕ್ತಿಗಳು ಶಕ್ತಿ ಮೀರಿ ಒದ್ದಾಡುತ್ತಿವೆ.

ಪುರಾತನ ಕಾಲದಲ್ಲಿ ರಾಜಕೀಯದಲ್ಲಿ "ದೈವೀ ನಿಯಮದ ಕೈವಾಡದ" ಭಾವನೆ ತೊಲಗಿ ರಾಜ, ಪಾಳೆಗಾರ, ಸರ್ವಾಧಿಕಾರಿಗಳ ಅಧಿಕಾರ ಕೂಡಾ ಸ್ವಲ್ಪ ಕಾಲ ನಡೆದು—ಜನರು ಈ ಆಡಳಿತಗಳಿಂದ ರೋಸಿಗೆದ್ದು ಫ್ರಾನ್ಸಿನಲ್ಲಿ ೧೭೮೯ರಲ್ಲಿ ಮಹಾಕ್ರಾಂತಿ ನಡೆದು ಪ್ರಜಾಪ್ರಭುತ್ವದ ಉದಯವಾಯಿತು.

ಪ್ರಜಾಪ್ರಭುತ್ವ ಒಂದು ರಾಜಕೀಯ ತತ್ವ. ಆಳುವ ಕಲೆಯಾಗಿ, ರಾಜಕೀಯ ವಿಜ್ಞಾನವಾಗಿ ಆಧುನಿಕ ಜಗತ್ತಿನ ಮಾನ್ಯತೆ ಪಡೆದಿರುವ ಸೂತ್ರ. ಪ್ರಜೆಗಳು, ಪ್ರಜೆಗಳಿಗೋಸ್ಕರ, ತಮ್ಮಿಂದಲೇ ಸಾರ್ವತ್ರಿಕ ಚುನಾವಣೆಯಲ್ಲಿ ಆರಿಸಲ್ಪಟ್ಟ ಪ್ರತಿನಿಧಿಗಳ ಮೂಲಕ ರಾಜ್ಯಭಾರ ನಡೆಸುವುದೇ ಪ್ರಜಾಪ್ರಭುತ್ವ. ಆದರೆ ಜಗತ್ತಿನಲ್ಲಿ ಪ್ರಜಾಪ್ರಭುತ್ವ ಎಂಬ ಹೆಸರಿಗಾದಷ್ಟು ಅವಮಾನ ಇನ್ನೊಂದಕ್ಕಾಗಿರಲಿಕ್ಕಿಲ್ಲ. ಹಿಟ್ಲರ್, ಮುಸೊಲಿನಿಗಳು ಕೂಡಾ ತಮ್ಮ 'ಫ್ಯಾಸಿಸ್ಟ್', ಸರ್ವಾಧಿಕಾರವನ್ನು ಮೇಲ್ತರಗತಿಯ ಪ್ರಜಾಪ್ರಭುತ್ವ ಎಂದು ಬಣ್ಣಿಸಿದರು. ಅರ್ಜೆಂಟೈನಾದ ಹಿಂದಿನ ಸರ್ವಾಧಿಕಾರಿ ಪೆರಾನ್ ತನ್ನ ಆಳ್ವಿಕೆಯನ್ನ 'ನಿರ್ದೇಶಿತ ಪ್ರಜಾಪ್ರಭುತ್ವ" ಎಂದಿದ್ದರೆ, ಸೈನಿಕದೊರೆ ಫ್ರಾಂಕೋ 'ದೈವಿಕ ಪ್ರಜಾಪ್ರಭುತ್ವ" ಎಂದೂ, ಸ್ಟಾಲಿನ್ನನದು "ಸಂಪೂರ್ಣ ಪ್ರಜಾಸತ್ತಾತ್ಮ(ಕ) ಎಂದು ಸಮರ್ಥಿಸಿ ಕೊಂಡಿದ್ದಾ(ರೆ) ಅಯೂಬ್, ಸುಕರ್ನೋ, ಟಿಟೋ, ನಾಸೆರ್, ನೆವಿನ್, ಎಲ್ಲರೂ ತಾವು "(ಪ್ರ)ಜಾಪ್ರಭುತ್ವದ "ಆರಾಧಕ"ರೆಂದು ಹ(ೆಗ)ಳಿಗೆ ಕೊಚ್ಚಿಕೊಂಡಿದ್ದಾರೆ

ಸಮಾಜವಾದವು ಒಂದು ಆರ್ಥಿಕ ಸಿದ್ಧಾಂತ. ಸಮಾಜಕ್ಕೆ ಬಲವಾದ ಆಸ್ತಿ(ಭಾ)ರ ಹಾಕಿ ಜನರೊಳಗೆ ಅನ್ಯೋನ್ಯತೆ, ಸೋದರತೆ ಹುಟ್ಟಿಸಬಲ್ಲಂತಹ ವಿಸ್ಮ(ಯ)ಕಾರಕ ಸೂತ್ರ. ಯಾರು ಏನು ಬೇಕಾ(ದ)ರೂ ಮಾಡಿ ಹಣ ಆಸ್ತಿ ಸಂಪಾದಿಸಿ ಮ(ನ)ಬಂದಂತೆ ಅದನ್ನು ವಿನಿಯೋಗಿಸಬ(ಹು)ದು—ಎಂಬ—ಬಂಡವಾಳ ಶಾಹಿ '(ಲೆ)ಸೆಜ್‌ಫೇರ್"—ಆರ್ಥಿಕ ವ್ಯವಸ್ಥೆ(ಯ)

(ಇಪ್ಪತ್ತೇಳನೇ ಪುಟ ನೋಡಿರಿ)

ಪ್ರಜಾರಾಜ್ಯ ದಿನದ ಶುಭಾಶಯಗಳು.

ಶೆಣೈಯವರ

ಮಂಗಳೂರು ನಶ್ಯ

ಸುದೀರ್ಘವಾದ ಬಾಳಿಕೆಯು ಇದರ ಗುಣ.
ಸ್ವರ್ಣ ವರ್ಣಯುಕ್ತ ಹಾಗೂ
ಶಕ್ತಿದಾಯಕವಾದುದು.

Well-known for:

LONG STANDING QUALITY,
GOLDEN COLOUR & STRENGTH

SHENOY'S
Mangalore Snuff

Trade enquiries to Manufacturers—

M/s. H. VENKATRAYA SHENOY,
HALEANGADY, S. KANARA.

ಪ್ರಜಾರಾಜ್ಯ ದಿನದ ಶುಭಾಶಯಗಳು!

ಜಯಂತಿ
ಟೈಲ್ ಫೇಕ್ಟರಿ
ಕಲ್ಯಾಣಪುರ, ದ. ಕನ್ನಡ.

ಉತ್ತಮ ತರದ ಬೈಸನ್ ಬ್ರಾಂಡ್ ಹಂಚು
ತಯಾರಕರು

●

ಜಯಂತಿ ಟ್ರೇಡರ್ಸ್
ಪಾರ್ಟ್‌ನರ್ಸ್

With best compliments from:

JAYANTHI
TILE FACTORY
KALLIANPUR, S. K.

MANUFACTURERS OF
BISON BRAND MANGALORE TILES

●

JAYANTHI TRADERS
PARTNERS

ಸರಳ ವೈಜ್ಞಾನಿಕ ಲೇಖನ

ಭಾರತದಲ್ಲಿ ಅಣುಶಕ್ತಿಯ ಉತ್ಪಾದನೆ

ಇಂದು ಅಣುಶಕ್ತಿಯ ಬಗ್ಗೆ ವಿವಿಧ ಚರ್ಚೆ ನಡೆಯುತ್ತಿದೆ. ಭಾರತವೂ ಅಣುಶಕ್ತಿ ಯುಗದಲ್ಲಿ ಪಾದಾರ್ಪಣ ಮಾಡಿದೆ; ಆದರೆ, ಕ್ರಾಂತಿಕಾರಿ ಶಸ್ತ್ರಾಸ್ತ್ರಗಳ ಉತ್ಪಾದನೆಗಲ್ಲ; ಶಾಂತಿಕಾರಿ ಸಾಧನೆಗಾಗಿ. ಭಾರತದ ಅಣುಶಕ್ತಿ ಉತ್ಪಾದನಾ ಸಾಮರ್ಥ್ಯ ಉಳಿದ ಅಣುಶಕ್ತಿ ಹೊಂದಿದ ದೇಶಗಳಿಗಿಂತ ಬಹಳ ಕಡಿಮೆಯೇನೂ ಇರುವುದಿಲ್ಲ; ಇದು ಗಮನೀಯ.

ಪ್ರೊ| ಎಂ. ಎಸ್. ಎಸ್. ರಾವ್.

ಭಾರತದಲ್ಲಿ ಅಣುಶಕ್ತಿ ಮಂಡಳವೆಂಬುದು ಒಂದಿದೆ. ಅಣುಶಕ್ತಿಯ ಸಂಶೋಧನೆ, ಅವುಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳ ಶೋಧ ಹಾಗೂ ಸರ್ವೆ ಕಾರ್ಯ, ಅವುಗಳ ಶುದ್ಧೀಕರಣ ಇವೇ ಮೊದಲಾದುವು ಆ ಮಂಡಳದ ಉದ್ದೇಶಗಳಲ್ಲಿ ಹಲವು ಮುಖ್ಯವಾದುವು. ಆದರೆ ಅದರ ಕಾರ್ಯಕ್ರಮಗಳಲ್ಲಿ ಅಣ್ವಸ್ತ್ರಗಳ ಉತ್ಪಾದನೆಗೆ ಅವಕಾಶವಿಲ್ಲ. ಭಾರತವು ಯುದ್ಧ ಕಾರ್ಯೋದ್ದೇಶಗಳಿಗಾಗಿ ಅಣುಶಕ್ತಿಯ ಸಂಶೋಧನೆಗಳನ್ನು ಕೈಕೊಳ್ಳುವುದಿಲ್ಲವೆಂದು ಮೇಲಿಂದ ಮೇಲೆ ಸಾರಿ ಸಾರಿ ಹೇಳುತ್ತ ಬಂದಿದೆ. ಕೇವಲ ಶಾಂತಿಯುತ ಉದ್ದೇಶಗಳಿಗಾಗಿಯೇ ಅಣುಶಕ್ತಿಯನ್ನು ಉತ್ಪಾದಿಸಬೇಕೆಂಬುದು ಭಾರತದ ಹಂಬಲ ಮತ್ತು ಧ್ಯೇಯ.

ಏಷಿಯದ ಆಗ್ನೇಯ ರಾಷ್ಟ್ರಗಳ ಪೈಕಿ ಅಣುಶಕ್ತಿಯನ್ನು ಉತ್ಪಾದಿಸುವುದರಲ್ಲಿ ಭಾರತವೊಂದೇ ಮುಂದಿರುವ ರಾಷ್ಟ್ರ. ಈ ಅಣುಶಕ್ತಿಯ ಉತ್ಪಾದನಾ ರಂಗದಲ್ಲಿ ಭಾರತವು ಪಡೆದಿರುವ ಮಹತ್ವ ಸ್ಥಾನದಿಂದಾಗಿಯೇ, ಅದು ಅಮೆರಿಕದ ಅಂತರ ರಾಷ್ಟ್ರೀಯ ಅಣುಶಕ್ತಿ ಕೇಂದ್ರದ ಸದಸ್ಯತ್ವವನ್ನೂ ಪಡೆದಿದೆ. ಈ ಕೇಂದ್ರದ ಉದ್ದೇಶವಾದರೂ ಜಗತ್ತಿನಾದ್ಯಂತ ಶಾಂತಿ, ಆರೋಗ್ಯ ಮತ್ತು ಸಂಪತ್ಸಮೃದ್ಧಿಯನ್ನುಂಟುಮಾಡಲು, ಅಣುಶಕ್ತಿಯುತ್ಪಾದನೆಯ ಸತ್ಫಲಗಳನ್ನು ತೀವ್ರಗೊಳಿಸಿ ವಿಸ್ತರಿಸುವುದೇ ಆಗಿದೆ. ಭಾರತವು ಸಹಜವಾಗಿಯೇ ಇಂತಹ ಉದ್ದೇಶಗಳಲ್ಲಿ ಅಚಲ ವಿಶ್ವಾಸದಿಂದ ಹಾಗೂ ಕಾಯಾ, ವಾಚಾ, ಮನಸಾ ದುಡಿಯುವ ಸದಸ್ಯ ರಾಷ್ಟ್ರ.

ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ವಿಕಿರಣ ಹೊಂದುವ ಐಸೋಟೋಪುಗಳ ಉತ್ಪಾದನೆ, ಇವೆರಡೂ ಭಾರತದ ಅಣುಶಕ್ತಿಯ ಅಭಿವೃದ್ಧಿಯಲ್ಲಿ ಮಹತ್ವದ ಆಕಾಂಕ್ಷೆಗಳು. ಮೊಟ್ಟಮೊದಲಿಗೆ 1956ರಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಥಾಪಿತವಾದ 'ಅಣು ರಿಯಾಕ್ಟರ್' ಎಂಬ ಉತ್ಪಾದನಾ ಕೇಂದ್ರಕ್ಕೆ 'ಅಪ್ಸರಾ" ಎಂದು ಹೆಸರಿಡಲಾಯಿತು. ಅದರಿಂದ ಬೃಹತ್ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯೇನೂ ಒದಗುವುದಿಲ್ಲ. ಏಕೆಂದರೆ ಅದರ ಮುಖ್ಯ ಉದ್ದೇಶ ಅಣುಶಕ್ತಿಯುತ್ಪಾದಿಸುವ ಯಂತ್ರೋಪಕರಣಗಳೊಡನೆ ಕಾರ್ಯ ಮಾಡುವ ಕೆಲವು ಅವಕಾಶಗಳನ್ನು ಮತ್ತು ಅನುಭವವನ್ನು ನಮ್ಮ ತಜ್ಞ ಹಾಗೂ ಕುಶಲ ಕಾರ್ಮಿಕರಿಗೆ ಒದಗಿಸುವುದೇ ಆಗಿತ್ತು. ಈ ಕೇಂದ್ರದಲ್ಲಿ ಉತ್ಪಾದಿಸಲಾದ 'ಐಸೊಟೋಪುಗಳು" ವಿವಿಧ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಹಾಗೂ ವೈದ್ಯಕೀಯ ಜೀವಶಾಸ್ತ್ರ, ಕೃಷಿ ಮತ್ತು ಉದ್ದಿಮೆ ರಂಗಗಳಲ್ಲಿ ಕಾರ್ಯ ಮಾಡುವ ಸಂಶೋಧಕರಿಂದ ಅತ್ಯಂತ ಉಪಯುಕ್ತವಾದ ರೀತಿಯಲ್ಲಿ ಬಳಸಲ್ಪಡುತ್ತಿದೆ.

1961ರ ಜನೇವರಿ ತಿಂಗಳಲ್ಲಿ ಭಾರತದ ಎರಡನೆಯ 'ಅಣು ರಿಯಾಕ್ಟರ್' ಎಂಬ ಉತ್ಪಾದನಾ ಕೇಂದ್ರವು 'ಜೆರ್ಲಿನಾ' ಎಂಬ ಹೆಸರಿನಿಂದ ಪ್ರಾರಂಭವಾಯಿತು. 1961ರ ಜುಲೈ ತಿಂಗಳಲ್ಲಿ 'ಕೆನಡಾ—ಭಾರತ ರಿಯಾಕ್ಟರ್' ಎಂಬ ಮತ್ತೊಂದು ಕೇಂದ್ರವೂ ಅಸ್ತಿತ್ವಕ್ಕೆ ಬಂದಿತು. ಇದು ಕೆನಡ ಮತ್ತು ಭಾರತ ದೇಶಗಳ ಸಂಯುಕ್ತ ಸರಕಾರ ಹಾಗೂ ಸಾಹಸಗಳ ಪ್ರತಿಫಲವಾಗಿದೆ. ಜಗತ್ತಿನಲ್ಲಿ ಐಸೋಟೋಪುಗಳನ್ನು ತಯಾರಿಸುವ ಹಲವಾರು ದೊಡ್ಡ ಕೇಂದ್ರಗಳಲ್ಲಿ ಇದೂ ಒಂದಾಗಿದೆ. ಇಲ್ಲಿ ಇಂಜಿನಿಯರಿಂಗ್ ಮತ್ತು ಮುಂದೆ ಸ್ಥಾಪಿಸಬಹುದಾದ ಅಣುಶಕ್ತಿ ಚಾಲಿತ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ಬೇಕಾದ ನಕ್ಷೆ, ನಕಾಶೆ, ರೂಪರೇಷೆಗಳನ್ನು ನಿರ್ಧರಿಸಲು ಪೋಷಕವಾದ ಕೆಲವು ಪ್ರಯೋಗಗಳು ಮತ್ತು ಅಲ್ಲಿ ಬಳಸಲಾಗುವ ಕೆಲವು ವಸ್ತುಗಳನ್ನು ಪರೀಕ್ಷೆಗೆ ಒಳಪಡಿಸುವುದು ಮುಂತಾದ ಹಲವಾರು ಉದ್ದೇಶಗಳಿಂದ ಕಾರ್ಯಾರಂಭವಾಗಿದೆ.

1963ರ ಜುಲೈ ತಿಂಗಳಲ್ಲಿ ಹೊಸದಿಲ್ಲಿಯಲ್ಲಿ ಕೆಲವು ಕಠಿಣ ಹಾಗೂ ಭೀಕರವಾದ ರೋಗರುಜಿನಗಳನ್ನು ನಿವಾರಿಸಲು ಮತ್ತು ಗುಣಪಡಿಸಲು ಅಣುಶಕ್ತಿ ಚಾಲಿತ ಹೊಸ ಬಗೆಯ ಚಿಕಿತ್ಸಾಕ್ರಮಗಳನ್ನು ಪ್ರಾರಂಭಿಸಲು 'ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್" ಮೆಡಿಸಿನ್ ಅಂಡ್ ಅಲೈಡ್ ಸೈನ್ಸಸ್' ಎಂಬ ಒಂದು ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯಲ್ಲಿ ಈಗ ಕೆಲವು ಹೃದಯ ರೋಗ ಹಾಗೂ ಕ್ಯಾನ್ಸರ್ ರೋಗಗಳಿಗೆ (Hyper thyroidism, Intractable Cordiac and blood cancers)) ಚಿಕಿತ್ಸೆ ನೀಡಲಾಗುತ್ತಿದೆ. ಟ್ರಾಂಬೆಯಲ್ಲಿರುವ ಅಣುಶಕ್ತಿ ಮಂಡಳದ ಘಟಕವು ಆ ಕೇಂದ್ರಕ್ಕೆ ಕೆಲವು ವಿಶಿಷ್ಟ ಬಗೆಯ ಐಸೋಟೋಪುಗಳನ್ನು ಒದಗಿಸುತ್ತದೆ. ಕೆಲವು ಕ್ಲಿಷ್ಟ ಬಗೆಯ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲು ದಿಲ್ಲಿಯ ಸಫ್ದರ್‌ಗಂಜ್ ಆಸ್ಪತ್ರೆಯ ಮತ್ತೊಂದು ಘಟಕವು (Cobalt 60 Tele-therapy unit) ಮೇಲೆ ಹೇಳಿದ ಕೇಂದ್ರದೊಡನೆ ಸಹಕರಿಸಿ ಕಾರ್ಯ ಮಾಡುತ್ತದೆ. 'ರೇಡಿಯೋ ಆಕ್ಟಿವಿಟಿ' ಗುಣಗಳುಳ್ಳ ಕೆಲವು ಔಷಧಗಳನ್ನು, ಶರೀರವು ಒಮ್ಮೆಲೆ [illegible] ಸೆಳೆಯುವುದು, ನಿಯಂತ್ರಣ ಮೀರಿ ನಡುಗುವುದು ಮುಂತಾದ ಕೆಲವು ಕಠಿಣ ಹಾಗೂ ತೊಡಕಾದ ವಿಶಿಷ್ಟ ರೋಗಗಳ (Parkinsonism) ಚಿಕಿತ್ಸೆಗಾಗಿ ಬಳಸಲಾಗುತ್ತದೆ. ಅಷ್ಟೇ ಅಲ್ಲದೆ ಆ ಕೇಂದ್ರದಲ್ಲಿ ರಕ್ತಹೀನತೆ, ರಕ್ತದ ಘನ ಪರಿಮಾಣ ಮುಂತಾದ ಸಮಸ್ಯೆಗಳನ್ನು 'ರೇಡಿಯೋ ಐಸೋಟೋಪು"ಗಳ ಸಹಾಯದಿಂದ ಪರಿಶೀಲಿಸಲು ಉಚ್ಚಮಟ್ಟದ ಸಂಶೋಧನೆಗಳು ನಡೆಯುತ್ತಿವೆ.

ಇನ್ನು ದೇಶದ ವಿವಿಧ ಭಾಗಗಳಲ್ಲಿ ಅಣುಶಕ್ತಿ ಚಾಲಿತ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವುದು ಭಾರತದ ಮುಖ್ಯ ಉದ್ದೇಶವಾಗಿದೆ. ಮೊಟ್ಟಮೊದಲಿನ ಅಣುಶಕ್ತಿ ಚಾಲಿತ ವಿದ್ಯುತ್ ಉತ್ಪಾದನಾ ಕೇಂದ್ರವು ಮುಂಬೈಗೆ 62 ಮೈಲಿಗಳ ದೂರದಲ್ಲಿರುವ 'ತಾರಾಪೋರ" ಎಂಬ ಸ್ಥಳದಲ್ಲಿ ಸ್ಥಾಪಿತವಾಗುವುದಿದೆ. ಎರಡನೆಯ ಕೇಂದ್ರವು ರಾಜಸ್ಥಾನದಲ್ಲಿಯೂ, ಮೂರನೆಯ ಕೇಂದ್ರವು ಮದ್ರಾಸ್ ರಾಜ್ಯದಲ್ಲಿಯೂ ಸ್ಥಾಪನೆಯಾಗುವುದಕ್ಕೆ ಯೋಜನೆ ಹಾಗೂ ಸಿದ್ಧತೆಗಳು ಭರದಿಂದ ಸಾಗಿವೆ. ತಾರಾಪೋರ್ ವಿದ್ಯುತ್ ಕೇಂದ್ರಕ್ಕೆ 80 ಮಿಲಿಯನ್ ಡಾಲರುಗಳಷ್ಟು ವಿದೇಶ ವಿನಿಮಯ ಸಾಲವನ್ನು ಅಮೆರಿಕೆಯು ಒದಗಿಸಿದೆ. ಇದರ ಜತೆಗೆ ಪ್ರಾರಂಭಕ್ಕೆ ಬೇಕಾಗುವ ಯುರೇನಿಯಂ ಮತ್ತು ಉರುವಲಿನ ಖರ್ಚನ್ನು ಒದಗಿಸಲು ಅಮೆರಿಕೆಯು ಒಪ್ಪಿಕೊಂಡಿದೆ. ಈ ವಿದ್ಯುತ್ [illegible] ಕೋಟಿ ರೂಪಾಯಿಗಳಷ್ಟು, ಇಪ್ಪತ್ತು ತಿಂಗಳ ವರೆಗೆ ಈ ಕಾರ್ಯ ಪೂರೈಸಲ್ಪಡುತ್ತದೆ. ತಾರಾಪೋರ್ ಕೇಂದ್ರವನ್ನು ಪ್ರಾರಂಭಿಸಬೇಕೆಂಬ ಸೂಚನೆ ಬಂದಾಗ, ಅದರಿಂದ ಉತ್ಪಾದನಗೊಳ್ಳುವ ವಿದ್ಯುತ್ತಿನ ಯೂನಿಟ್ ದರವು ಜಲವಿದ್ಯುಚ್ಛಕ್ತಿ ಕೇಂದ್ರಗಳಿಂದ ಇಲ್ಲವೇ ಥರ್ಮಲ್ ಕೇಂದ್ರಗಳಿಂದ ಉತ್ಪಾದಿಸುವ ವಿದ್ಯುತ್ತಿನ ದರಕ್ಕಿಂತಲೂ ಬಹು ಹೆಚ್ಚಿನದಾಗಬಹುದೆಂದು ಕೆಲವು ತಜ್ಞರು ಅಭಿಪ್ರಾಯಪಟ್ಟು ಅದಕ್ಕೆ ಅಸಮ್ಮತಿ ವ್ಯಕ್ತಪಡಿಸಿದ್ದುಂಟು. ಆದರೆ ಈ ತೆರನಾದ ಅಂಜಿಕೆ ಅಥವಾ ನಿರಾಶಾ ಭಾವನೆಗಳು ಈಗ ದೂರಾಗಿ ಅಣುಶಕ್ತಿ ಚಾಲಿತ ವಿದ್ಯುತ್

(ಇಪ್ಪತ್ತಾರನೇ ಪುಟ ನೋಡಿರಿ)

ಫೋನು: 4203 ತಂತಿ: 'ಕೃಷಿ'

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘ

ನಿಯಮಿತ; ಮಂಗಳೂರು-3

'ಅಧಿಕ ಆಹಾರ ಉತ್ಪಾದನೆಗೆ':—

ಎಲ್ಲಾ ತರದ ವಿದ್ಯುತ್, ಡೀಸಿಲ್, ಚಿಮಿಣಿ ಎಣ್ಣೆ ಮತ್ತು ಪೆಟ್ರೋಲ್ ಚಾಲಿತ ಪಂಪು ಸೆಟ್ಟುಗಳು ಸಲಕರಣೆಗಳ ಜೊತೆಗೆ ನಮ್ಮಲ್ಲಿ ದೊರೆಯುವುದು. ಸಾಲ ಮತ್ತು ನಗದಿ ರೂಪದಲ್ಲಿ ಒದಗಿಸಲಾಗುವುದು. ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ.

ಟಿ. ಎ. ಪೈ
ಅಧ್ಯಕ್ಷ

ಬಿ. ನಾರಾಯಣ ನಾಯಕ್
ಉಪಾಧ್ಯಕ್ಷ

ಯಂ. ಜನಾರ್ದನ ರಾವ್
ಕಾರ್ಯದರ್ಶಿ

ಕನ್ನಡ ಸಾಹಿತ್ಯದಲ್ಲಿ ರಾಮಾಯಣಗಳು

ಪು. ನಾ. ಉಡುಪ, ಕೋಟೇ

"ತಿಣುಕಿದನು ಫಣಿರಾಯ ರಾಮಾಯಣದ ಭಾರದಲಿ" ಎಂದು ಉದ್ಗರಿಸಿ ಕುಮಾರವ್ಯಾಸ ಮಹಾಭಾರತ ರಚನೆಗೆ ಕೈ ಹಾಕಿದ. ರಾಮಾಯಣದ ಬಗೆಗೆ ನೂರಾರು ಕಾವ್ಯಗಳು ರಚಿತವಾಗಿವೆಯೆಂದರೆ, ಅದರ ಜನಪ್ರಿಯತೆ, ಜನಹಿತಸಾಧಕ ಗುಣಗಳ ಪರಿಚಯವಾಗುವುದು. ಕನ್ನಡದಲ್ಲಿಯೂ ಹಲವು 'ರಾಮಾಯಣ'ಗಳಿವೆ. ಅವುಗಳ ಅಲ್ಪ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಪ್ರಪಂಚದ ಕಾವ್ಯಗಳಲ್ಲೇ ವಾಲ್ಮೀಕಿ ರಾಮಾಯಣದ ಸ್ಥಾನವು ಹಿರಿದಾದುದು–ಅಸದೃಶವಾದುದು. ಜಗತ್ತಿನಲ್ಲೇ ಇದು ಆದಿಕಾವ್ಯ. ಆದುದರಿಂದಲೇ ಈ ಮಹಾ ಕಾವ್ಯವು ಇಂಗ್ಲಿಷ್, ಫ್ರೆಂಚ್, ಜರ್ಮನ್, ಇಟಾಲಿಯನ್, ಲ್ಯಾಟಿನ್, ರಶ್ಯನ್ ಮೊದಲಾದ ಪಾಶ್ಚಾತ್ಯ ಮಹಾ ಭಾಷೆಗಳಿಗೆ ಪರಿವರ್ತನಗೊಂಡಿದೆ. ಪಾಶ್ಚಾತ್ಯರ ಮಹಾ ಸಾಹಿತ್ಯ ಸಂಪತ್ತೆನಿಸಿದ ಹೋಮರನ ಇಲಿಯಡ್ ಮಹಾಕಾವ್ಯವೇ ರಾಮಾಯಣದ ಯಥಾ ನಕಲೆಂದು ಸಾಧಿಸುವವರು ಹಲವರಿದ್ದಾರೆ. ಇಲಿಯಡ್ ಕಾವ್ಯದ ಟ್ರಾಯ್ ಪಟ್ಟಣವೇ ನಮ್ಮ ರಾಮಾಯಣದ ಲಂಕೆ; ಸ್ಪಾರ್ಟಾ ನಗರವೇ ಅಯೋಧ್ಯೆ; ಮೆನೆಲಾಸನೇ ಶ್ರೀರಾಮ; ಪ್ಯಾರಿಸನು ಖಳನಾಯಕನಾದ ರಾವಣ. ಹೀಗಿದ್ದರೂ ಕಾವ್ಯ ಗುಣ ಮತ್ತು ನೀತಿ ಧರ್ಮಗಳ ಸೌಂದರ್ಯ ಸುವಾಸನೆಗಳು ಶ್ರೀಮದ್ರಾಮಾಯಣದಲ್ಲೇ ಅಧಿಕವೆಂದು ಹೇಳುತ್ತಾರೆ.

ಭರತ ಖಂಡದಲ್ಲಂತೂ ರಾಮಾಯಣಕ್ಕೆ ವೇದದಷ್ಟೇ ಪೂಜ್ಯತೆ ಮತ್ತು ಗೌರವ ಸಲ್ಲುತ್ತಿದೆ. ವೇದಗಳಲ್ಲಿ ಪ್ರತಿಪಾದಿಸಿರುವ ಪರಮ ಪುರುಷನೇ ದಶರಥ ರಾಮನಾಗಿಯೂ, ಪ್ರಚೇತಸನ ಮಗನಾದ ವಾಲ್ಮೀಕಿಯಿಂದ ವೇದಗಳೇ ಶ್ರೀಮದ್ರಾಮಾಯಣವಾಗಿಯೂ ಅವತರಿಸಿದುದೇ ಇದಕ್ಕೆ ಪ್ರಬಲ ಕಾರಣ. ರಾಮಾಯಣದ ಇಕ್ಷ್ವಾಕು, ದಶರಥ, ರಾಮರ ಹೆಸರು ಋಗ್ವೇದದಲ್ಲಿದೆ; ಸಮಗ್ರ ರಾಮಾಯಣದ ಕಥೆಯೇ ವೇದದಲ್ಲಿದೆಯೆಂದು ಕೆಲವರು ಹೇಳುತ್ತಾರೆ!

ಈ ಪುಣ್ಯ ಕಾವ್ಯವು ಭಾರತೀಯರ ಎಲ್ಲಾ ಪ್ರಮುಖ ಭಾಷೆಗಳಿಗೂ ಪರಿವರ್ತಿತವಾಗಿದೆ, ಹಿಂದಿಯಲ್ಲಿ ತುಲಸೀ ರಾಮಾಯಣ, ಬಂಗಾಳಿಯಲ್ಲಿ ಕೃತ್ತಿವಾಸನ ರಾಮಾಯಣ, ಮರಾಠಿಯಲ್ಲಿ ಶ್ರೀಧರ ರಾಮಾಯಣ, ತೆಲುಗಿನಲ್ಲಿ ರಂಗನಾಥ ಮತ್ತು ಭಾಸ್ಕರರ ರಾಮಾಯಣ, ತಮಿಳಿನಲ್ಲಿ ಕಂಬ ರಾಮಾಯಣವು ವಾಲ್ಮೀಕಿ ರಾಮಾಯಣದ ವಿವಿಧ ಮುಖಗಳೆನಿಸಿವೆ. ಕನ್ನಡದಲ್ಲಿ ಹಾಗೆಯೇ ಪಂಪರಾಮಾಯಣವು ಪಂಡಿತ ಮಾನ್ಯ ಗ್ರಂಥವಾಗಿದ್ದರೆ, ತೊರವೆ ರಾಮಾಯಣವು ಕನ್ನಡಿಗರ ಹೃನ್ಮಂದಿರದ ನಂದಾದೀಪವೆನ್ನಿಸಿದೆ!

ಹಿಂದುಗಳಿಗೆ ರಾಮಾಯಣವು ಪ್ರಾತಃಸ್ಮರಣೀಯ ಗ್ರಂಥ. ಅದಕ್ಕೆ ಶ್ರೀ ರಾಮ ಎಂಬ ಪದವೇ ಭಾರತೀಯರ ಸಾಹಿತ್ಯದಲ್ಲಿ ಅತ್ಯಂತ ರಮಣೀಯವಾದ ಮತ್ತು ಉದಾತ್ತವಾದ ಅರ್ಥವನ್ನು ಪಡೆದುದು ಮುಖ್ಯ ಕಾರಣ. ಶ್ರೀರಾಮನ ಯಶೋತುತ್ತೂರಿಯೆನಿಸಿದ ರಾಮತಾಪಿನೀ ಉಪನಿಷತ್ತೆಂಬುದಿದೆ. ವಾಲ್ಮೀಕಿಯೂ ತನ್ನ ಕಾವ್ಯದಲ್ಲಿ 'ರಾಮೋ ರಮಯತಾಂ ವರಃ' ಎಂದು ಪುನಃ ಪುನಃ ಉಚ್ಚರಿಸುತ್ತಿದ್ದುದೂ, 'ರಮಂತೇ ಯೋಗಿನೋ ಅಸ್ಮಿನ್ ರಾಮಃ" ಎಂಬ ಇನ್ನೊಂದು ಪ್ರಸಿದ್ಧವಾದ ವ್ಯುತ್ಪತ್ತಿಯೂ ರಾಮನಾಮವು ಜನರಿಗೆ ತಾರಕ ಮಂತ್ರವಾಗಲು ಇನ್ನೊಂದು ಕಾರಣ. ಇನ್ನು ಅಯನ ಶಬ್ದಕ್ಕೆ ಚರಿತ್ರೆ, ಗತಿ, ಸ್ಥಾನ ಎಂಬ ಅರ್ಥಗಳಿವೆ. ಹೀಗೆ ಅರ್ಥವತ್ತಾದ ಎರಡು ಪದಗಳನ್ನು ಸೇರಿಸಿ ಶ್ರೀ ರಾಮ ಚರಿತ್ರೆಗೆ ವಾಲ್ಮೀಕಿ ಮುನಿಯು ರಾಮಾಯಣವೆಂಬ ಸುಂದರವಾದ ನಾಮಕರಣವನ್ನು ಮಾಡಿದ್ದಾನೆ. ಇದನ್ನು ಸರ್ವರೂ ಪಠನ ಶ್ರವಣಾದಿಗಳಿಂದ ಪುರಸ್ಕರಿಸುತ್ತಿರುವುದನ್ನು ಕಂಡು ಸಂಸ್ಕೃತದಲ್ಲೇ ಅನೇಕ ರಾಮಾಯಣಗಳು ಜನ್ಮವೆತ್ತಿದವು. ಅನ್ಯಮತೀಯರೂ ಈ ಗ್ರಂಥದಿಂದ ಆಕೃಷ್ಟರಾಗಿ ತಾವೂ ಕೆಲವು ರಾಮಾಯಣಗಳನ್ನು ರಚಿಸಿದರು. ಬೌದ್ಧರಲ್ಲಿ ಪಾಳಿಭಾಷೆಯ ದಶರಥ ಜಾತಕವೂ, ಜೈನರಲ್ಲಿ ಪದ್ಮಪುರಾಣವೂ ರಚಿತವಾದವು. ಕಿ-ಕಿಯ-ಯಿ ಎಂಬ ಚೀನಿಯನು ಚೀನಿ ಭಾಷೆಗೂ, ಟಿಬೆಟ್ ದೇಶಿಯನೊಬ್ಬನು ತನ್ನ ಮಾತೃ ಭಾಷೆಯಲ್ಲೂ ರಾಮ ಚರಿತೆಯನ್ನು ಬರೆದಿದ್ದಾನೆ.

○ ○ ○ ○

ಸಂಸ್ಕೃತ ರಾಮಾಯಣವು ಇಂದಿನ ರೂಪವನ್ನು ಕ್ರಿ. ಶ. ಪು. ಎರಡನೆಯ ಶತಮಾನದಲ್ಲೇ ಪಡೆಯಿತೆನ್ನುತ್ತಾರೆ.

ಬಾನ ಬೆಳಕಿನಲ್ಲಿ

ಹೀಗೆ ಹಲವು ಭಾಷೆಗಳಲ್ಲಿ ರಾಮಾಯಣವು ಪರಿವರ್ತನೆ ಹೊಂದಿ ಜನತೆಯ ಹೃದಯದಲ್ಲಿ ನೆಲೆಸಿ ಜನಜೀವನವನ್ನು ರೂಪಿಸುತ್ತಿದ್ದಾಗ ಕನ್ನಡಿಗರು ಮುಸುಕೆಳೆದುಕೊಂಡು ನಿದ್ರಿಸಿದ್ದರೆ? ಅವರಿಗೂ ಶ್ರೀಮದ್ರಾಮಾಯಣವು ಆದರ್ಶ ಕಾವ್ಯವಾಗಿ ಕಾಣಿಸಲಿಲ್ಲವೆ? ಸು. ಎರಡು ಸಾವಿರ ವರ್ಷಕ್ಕಿಂತ ಪೂರ್ವದ ಸಾಹಿತ್ಯ ಪರಂಪರೆಯುಳ್ಳ ಕನ್ನಡಿಗರಿಗೆ ತಮ್ಮ ಸ್ವಭಾಷೆಯಲ್ಲಿ ರಾಮಾಯಣವನ್ನು ರಚಿಸಿಕೊಳ್ಳುವ ಆತುರವುಂಟಾಗಲಿಲ್ಲವೆ? ರಾಮಾಯಣದ ಪ್ರಮುಖ ನಾಯಕ ಸುಗ್ರೀವ ಹನುಮದಾದಿಗಳು ಕನ್ನಡಿಗರಲ್ಲವೆ? ಅವರು ಹನ್ನೆರಡನೆಯ ಶತಮಾನದ ವರೆಗೆ ಕನ್ನಡ ನುಡಿಯಲ್ಲಿ ಶ್ರೀಮದ್ರಾಮಾಯಣ ಕಾವ್ಯವನ್ನು ನಿರೀಕ್ಷಿಸುತ್ತಾ ಹಂಬಲಿಸುತ್ತಿರಬೇಕಾಗಿ ಇದ್ದಿರಬಹುದೆ? ಇದು ಸುತರಾಂ ಅಸಾಧ್ಯ. 'ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ' ಎಂದು ಕುಮಾರವ್ಯಾಸನು ಘೋಷಿಸಿದುದರ ಅರ್ಥವೇನು? ಆ ಕಾಲದಲ್ಲಿ ವಿಪುಲ ರಾಮಾಯಣಗಳು ಕನ್ನಡ ನುಡಿಯಲ್ಲಿದ್ದುವು ಎಂದಲ್ಲವೆ? ಈಗ ಅವು ಕಣ್ಣುಮುಚ್ಚಾಲೆ ಆಡುತ್ತಿವೆಯೆ? ಹೇಗೆಂದೂ ಇರಲಾರದು. ಕುಮಾರವ್ಯಾಸನು ಅನೃತವಾದಿಯಾಗಿ ಎಂದೂ ಇರಲಿಕ್ಕಿಲ್ಲ. ಆ ಪದ್ಯವು ಅನ್ಯಕರ್ತೃಕವಾಗಿ ಕಾಣಿಸುವುದೂ ಇಲ್ಲ. ಬಹುಶಃ ಕುಮಾರವ್ಯಾಸನ ಕಾಲಾನಂತರ ದುಷ್ಟರಿಂದ ಕನ್ನಡ ನಾಡಿನ ಮೇಲೆ ಮಾತ್ರವಲ್ಲದೆ, ಕನ್ನಡ ಸಾಹಿತ್ಯದ ಮೇಲೂ, ಅಸಂಖ್ಯ ದಾಳಿಗಳಾಗಿರಬೇಕು. ಆಗ ಕನ್ನಡಿಗರ ವಾಙ್ಮಯ ಸಂಪತ್ತೆನಿಸಿದ್ದ ಹಲವು ರಾಮಾಯಣಗಳು ಶತ್ರುಗಳಿಂದ ಜೀವಂತ ಸಮಾಧಿಗೊಳಿಸಲ್ಪಟ್ಟರಬೇಕು. ವಂಚಕನಾದ ಕಾಲನೇ, ನೀನೂ ಕನ್ನಡಿಗರ ಮೇಲೆ ನಿರ್ದಯನಾಗಬಹುದೆ?

ಇಂದು ಗೋಮಟೇಶ್ವರ ವಿಗ್ರಹ ಸ್ಥಾಪಕನೂ, ಗಂಗರ ಪ್ರಸಿದ್ಧ ದಳವಾಯಿಯೂ ಆಗಿದ್ದ ಚಾವುಂಡರಾಯನು ಜಿನಸೇನಾಚಾರ್ಯರ ಮತ್ತು ಗುಣಭದ್ರಾಚಾರ್ಯರ ಮಹಾಪುರಾಣದ ಆಧಾರದಿಂದ ಕ್ರಿ. ಶ. ೯೭೮ರಲ್ಲಿ ರಚಿಸಿದ ಚಾವುಂಡರಾಯ ಪುರಾಣವೇ ಇಂದಿನ ಮಟ್ಟಿಗೆ ಕನ್ನಡದಲ್ಲಿ ದೊರೆಯುವ ಮೊತ್ತ ಮೊದಲಿನ ರಾಮಾಯಣ ಗ್ರಂಥ! ಇದಕ್ಕಿಂತ ಪೂರ್ವದಲ್ಲಿ ಆದರೆ ಒಂಬತ್ತನೆಯ ಶತಮಾನದ ನೃಪತುಂಗನ ಕವಿರಾಜಮಾರ್ಗವೆಂಬ ಲಕ್ಷಣ ಗ್ರಂಥದ ದ್ವಿತೀಯ ಪರಿಚ್ಛೇದದ ೩೮ ಮತ್ತು ೪೦ನೆಯ ಪದ್ಯಗಳೂ, ಮೂರನೆಯ ಪರಿಚ್ಛೇದದ ೧೯೦ ಮತ್ತು ೧೯೩ನೆಯ ಪದ್ಯಗಳೂ ಯಾವುದೋ ಒಂದು ರಾಮಾಯಣದ್ದೆಂದು ತೋರುತ್ತದೆ. ಆದರೆ ಆ ರಾಮಾಯಣಗಳ ಕುರಿತು ಇಂದು ಏನೂ ಹೇಳುವಂತಿಲ್ಲ.

ಚಾವುಂಡರಾಯ ಪುರಾಣದ ಅನಂತರ ಸು. ೧೧೦೦ರಲ್ಲಿದ್ದ ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಅಥವಾ ಪಂಪರಾಮಾಯಣವೇ ಕನ್ನಡ ಸಾಹಿತ್ಯವನ್ನು ಅಲಂಕರಿಸಿದ ದ್ವಿತೀಯ ರಾಮಾಯಣ. ಇದು ಕಾಲದ ದೃಷ್ಟಿಯಿಂದ ಎರಡನೆಯದಾದರೂ ತೂಕದ ದೃಷ್ಟಿಯಿಂದ ಮೊದಲನೆಯದು. ಇದನ್ನು ಬರೆದ ನಾಗಚಂದ್ರನು ಉದ್ದಾಮ ಕವಿ! ಈತನು ಪಂಪ ಪೊನ್ನ ರನ್ನರಂತೆ ಎರಡು ಕಾವ್ಯಗಳನ್ನು

(ಇಪ್ಪತ್ತೈದನೇ ಪುಟ ನೋಡಿರಿ)

ಜಾಹೀರಾತು

ದಕ್ಷಿಣ ಕನ್ನಡ ವ ಇನ್ನಿತರ
ಮಹಾ ಮೈಸೂರು ಪ್ರಾಂತ್ಯದಲ್ಲಿರುವ
ಪ್ರೇಕ್ಷಣೀಯ ಸ್ಥಳ
ಸಂದರ್ಶನ ಮಾಡುವವರಿಗೆ
ಸಾರಿಗೆ ಸೌಕರ್ಯಕ್ಕಾಗಿ
ನಮ್ಮ ಬಸ್ಸುಗಳು ಸದಾ ಸಿದ್ಧವಿವೆ.

ದಿ. ಹನುಮಾನ್
ಟ್ರಾನ್ಸ್‌ಪೋರ್ಟ್ ಕಂಪೆನಿ ಪ್ರೈವೇಟ್ ಲಿಮಿಟೆಡ್
ಉಡುಪಿ, ದ. ಕ. ಜಿಲ್ಲೆ.

ಟೆಲಿಫೋನು:
ಮೆನೇಜಿಂಗ್ ಡೈರೆಕ್ಟರ್ 19
ಡೈರೆಕ್ಟರ್ ಇನ್ ಚಾರ್ಜ್ ಆಫ್ ವರ್ಕ್ಸ್ } 194

ಟೆಲಿಗ್ರಾಮ್:
"ಹನುಮಾನ್ ಕೊ"

ಶ್ರೀ ಸ. ನಾರಾಯಣ

ಅಜಂತಾ ಮತ್ತು ಎಲ್ಲೋರಾ

ಕಲೆಯ ಬೀಡು ಅಜಂತಾ ಮತ್ತು ಎಲ್ಲೋರಾಗಳ ಹೆಸರೇನೋ ಎಲ್ಲರಿಗೂ ಗೊತ್ತು. ಆದರೆ, ಕಲೆಯ ಸವಿ ನೋಡದವರಿಗೆ ಅದರ ಬಗ್ಗೆ ಏನು ಗೊತ್ತು? ಉಂಡವರ ಬಾಯಿಂದಾದರೂ ಕೇಳಿ, ನಾಲಗೆ ಚಪ್ಪರಿಸಿಕೊಳ್ಳ ಬಾರದೇಕೆ? ಹರಿವ ಸೀರಿಗೆ ದೊಡೆನಾಯಕದ ಅಪ್ಪಣೆ ಬೇಕೆ?

ಪ್ರಾಚೀನ ಭಾರತೀಯ ವರ್ಣಚಿತ್ರ ಕಲೆ ಮತ್ತು ವಾಸ್ತು ಶಿಲ್ಪ ಕಲೆಗೆ ಎರಡು ಮುಖ್ಯ ಕೇಂದ್ರಗಳು. ಆಧುನಿಕ ಯುಗದ ಕಲಾವಿದರ, ಪಾಶ್ಚಾತ್ಯ ಪಂಡಿತರ ಮೆಚ್ಚುಗೆಗೆ ಪಾತ್ರವಾದ ಎರಡು ಮುಖ್ಯ ಕಲಾ ಕೇಂದ್ರಗಳು—ಅಜಂತ ಮತ್ತು ಎಲ್ಲೋರ.

ಔರಂಗಾಬಾದಿಗೆ ಸಮೀಪದಲ್ಲಿರುವ ಬೆಟ್ಟದ ಶ್ರೇಣಿಗಳಲ್ಲಿ ಮನೋಹರ ರುದ್ರ ರಮಣೀಯ ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಈ ಗುಹೆಗಳು ಇವೆ. ಬೆಟ್ಟಗಳ ನೈರುತ್ಯ ದಿಕ್ಕಿಗೆ ಎಲ್ಲೋರವೂ ವಾಯುವ್ಯ ಮೂಲೆಯಲ್ಲಿ ಅಜಂತೆಯೂ ಇವೆ.

ಜನ ಸಂಚಾರವಿಲ್ಲದ ದಟ್ಟಡವಿಗಳಲ್ಲಿ ಮರೆಯಾಗಿದ್ದ ಈ ಕಲಾ ಮಂದಿರಗಳನ್ನು ಮೊದಲಿಗೆ ಕಂಡವರು ಕೆಲವು ನಿರಕ್ಷರ ಕುಕ್ಷಿಗಳಾದ, ಕಲೆಯ ಪರಿಚಯವಿಲ್ಲದ ದನ—ಕುರಿಗಳನ್ನು ಮೇಯಿಸಲು ಕಾಡಿಗೆ ಬಂದ ಹುಡುಗರು. ಅದು ವರೆಗೆ ಆಧುನಿಕ ಲೋಕಕ್ಕೆ ಪರಿಚಯವಿಲ್ಲದ ಆ ಕಲಾಮಯ ಮಂದಿರಗಳು ಕಲಾಪ್ರಿಯರ ತೌರು ಮನೆಗಳಾದುವು. ಪಾಶ್ಚಾತ್ಯ ವಸ್ತು ಸಂಶೋಧನಾ ಶಾಖೆಯವರು ನಡೆಸಿದ ಸಂಶೋಧನೆಗಳಿಂದ ಹಲವಾರು ಸಂಗತಿಗಳು ಬೆಳಕಿಗೆ ಬಂದವು. ಈ ಪುರಾತನ ಚಿತ್ರ ಶಿಲ್ಪ ಕಲಾ ಕೇಂದ್ರಗಳ ರಕ್ಷಣೆಗೆ, ಅಭಿವೃದ್ಧಿಗೆ ಸಂದರ್ಶಕರ ಅನುಕೂಲಕ್ಕೆ ಸರ್ಕಾರ ನಡೆಸಿರುವ ಪ್ರಯತ್ನ ಶ್ಲಾಘನೀಯ.

ಗಿರಿ ಶ್ರೇಣಿಯಲ್ಲಿ ಹುಟ್ಟಿದ ವಾಘೋರ ಎಂಬ ಹೊಳೆಯ ಇಕ್ಕೆಲಗಳಲ್ಲಿ ಕಾಣುವ ವನಶ್ರೀಯ ರಮ್ಯ ಸೌಂದರ್ಯ. ಇದೇ ಸ್ಥಳದಲ್ಲಿ ಮಾನವ ನಿರ್ಮಿತ ಕಲಾ ಸೌಂದರ್ಯಕ್ಕೆ ಸ್ಪರ್ಧೆ ನಡೆದು ಮಾನವನ ಮನಸ್ಸನ್ನು ಮೂಕಗೊಳಿಸುತ್ತದೆ. ಈ ಗುಡ್ಡಗಳಿಗೆ ಈಶಾನ್ಯದಲ್ಲಿ ಸುಮಾರು ಒಂದೂವರೆ ಸಾವಿರ ವರ್ಷಗಳ ಕೆಳಗೆ ವಿಧರ್ಭ ರಾಜ್ಯಕ್ಕೆ ಸೇರಿದ ಇಂದುಕಾಂತ ಎಂಬ ನಗರವಿತ್ತೆಂದು ಸಂಶೋಧಕರು, ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ಇಂದುಕಾಂತನಗರ ಮತ್ತು ಸುತ್ತ ಮುತ್ತಲ ಪ್ರದೇಶದಲ್ಲಿ ಬೌದ್ಧಮತ ಪ್ರಬಲವಾದಾಗ ಲೌಕಿಕ ಆಕರ್ಷಣೆಯಿಂದ ದೂರವಿರಲು ಆಶಿಸಿದ ವಿರಾಗಿಗಳು ಅಂದರೆ ಬೌದ್ಧ ಸನ್ಯಾಸಿಗಳು ಪ್ರಶಾಂತ ನೆಲೆಯಾದ ವಾಘೋರ ಹೊಳೆಯ ಎಡಬದಿಯ ಗುಹೆಗಳನ್ನು ತಮ್ಮ ಧ್ಯಾನಕ್ಕೆ— ವಾಸಕ್ಕೆ ಬಳಸಿ ಕೊಂಡರೆಂದು ತೋರುತ್ತದೆ. ಸನ್ಯಾಸಿಗಳ ಸಂಖ್ಯೆ ಅಧಿಕವಾದಂತೆ ಗುಹೆಗಳು ಬೆಳೆಯ ಬೇಕಾಯಿತು. ಪ್ರಕೃತಿಯಲ್ಲಿ ರೂಪುಗೊಂಡಿದ್ದ ಗುಹೆಗಳ ಸಂಖ್ಯೆ ಕಡಿಮೆಯಾದಾಗ ಸ್ಥಳದ ಆಕರ್ಷಣೆಗೆ, ಪ್ರಶಾಂತತೆಗೆ ಒಳಗಾಗಿ ಆಗಮಿಸಿದ ಬೌದ್ಧ ಸನ್ಯಾಸಿಗಳ ಸಂಖ್ಯೆ ಅಧಿಕವಾದಾಗ ಬಂಡೆಗಳನ್ನು ಕೊರೆದು ಗುಹೆಗಳನ್ನು ನಿರ್ಮಿಸಿದರೆಂದು ತೋರುತ್ತದೆ. ಬರಿಯ ಕಲ್ಲುಗುಡ್ಡಗಳ ಗುಹೆ ಏನು ಚನ್ನ! ಗುಹೆಗಳು ಸೌಂದರ್ಯದಿಂದ ಕೂಡಿದ್ದರೆ ಚೇತೋಹಾರಿ ಅಲ್ಲವೆ? ಅಲ್ಲದೆ ಭಾರತೀಯರ ಹೃದಯಗಳು ಕಲೆಗೆ ಮಾರುಹೋದ ಹೃದಯಗಳು, ತಮ್ಮ ಧಾರ್ಮಿಕ ಚಿಂತನೆ, ತಪಸ್ಸಿಗೆ ಅವರ ಹೃದಯ ಹಂಬಲಿಸಿದಂತೆ ಉನ್ನತ ಕಲಾಕೃತಿಗಳ ನಿರ್ಮಾಣದ ಕಡೆಗೂ ಅವರ ಗಮನ ಹರಿಯಿತು. ಹೀಗೆ ಅಜಂತೆಯಲ್ಲಿ ೨೯ ಗವಿಗಳು ಮಾನವರಿಂದ ಕೊರೆಯಲ್ಪಟ್ಟಿವೆ.

ದಕ್ಷಿಣಭಾರತದಲ್ಲಿ ಕ್ರಿ. ಪೂ. ಸು. ೨೦೦ರಿಂದ ಕ್ರಿ. ಶ. ಸು. ೮೦೦ರ ವರೆಗೆ ಅಂದರೆ ಸಾವಿರ ವರ್ಷಗಳ ಕಾಲ ಗುಹಾಶಿಲ್ಪರೂಪುಗೊಂಡಿತೆಂದು ಹೇಳಬಹುದು. ಹೀಗೆ ರೂಪುಗೊಂಡ ಗವಿಗಳು ಬೌದ್ಧ, ಜೈನ, ಶೈವ, ವೈಷ್ಣವ ಎಂದು ನಾಲ್ಕು ಬಗೆಯಾಗಿ ಆಯಾ ಧರ್ಮಗಳ ಹಿರಿಮೆಯನ್ನು ಎತ್ತಿ ಸಾರುತ್ತಿವೆ. ಇಂತಹ ಗವಿಗಳ ಸಾಲುಗಳು ಗ್ವಾಲಿಯರಿನ ಬಾಗ್, ಇಂದೂರಿನ ಉದಯಗಿರಿ, ಓಢ್ರದ ಉದಯಗಿರಿ, ಮುಂಬಯಿ ಪ್ರಾಂತ್ಯದ ಕನ್ಹೇರಿ, ಕಾರ್ಲಾ, ಭಾಜ, ನಾಸಿಕ, ಎಲಿಫೆಂಟಾ, ಎಲ್ಲೋರ, ಅಜಂತ, ಕರ್ನಾಟಕದ ಬಾದಾಮಿ ಈ ಸ್ಥಳಗಳಲ್ಲಿ ಕಾಣಬಹುದು. ಇವುಗಳಲ್ಲಿ ಬೌದ್ಧ ಗವಿಗಳೇ ಅತಿ ಪ್ರಾಚೀನವಾದುವು. ಎಂಬ ಅಂಶ ತಿಳಿದು ಬರುತ್ತದೆ. ಅಜಂತೆಯ ಗುಹೆಗಳಲ್ಲಿ ಕಾಣ ಬರುವ ಚಿತ್ರಗಳಲ್ಲಿ ಬೌದ್ಧ ಧರ್ಮ ಹಾಗೂ ಬುದ್ಧ ಮತ್ತು ಜಾತಕ ಕಥೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗಮನಿಸಿದಾಗ ಆ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಬೌದ್ಧ ಮತಕ್ಕೆ ವಿಶೇಷ ಪ್ರಾಶಸ್ತ್ಯವಿತ್ತು ಎಂಬ ವಿಷಯ ತಿಳಿದು ಬರುತ್ತದೆ.

ಭಾರತೀಯರಿಗೆ ಚಿತ್ರಕಲೆ ಹೊಸತಲ್ಲ ಎಂಬ ಸಂಗತಿ ಮಧ್ಯ ಪ್ರಾಂತದ ರಾಯಘಾಟ್ ಪ್ರದೇಶದ ಸಿಂಗನಪುರ ಗ್ರಾಮದ ಬಳಿ ಶಿಲಾಯುಗದ ಜನರು ಚಿತ್ರಿಸಿದ ಚಿತ್ರ ಮಾಲೆಗಳಿಂದ ತಿಳಿದು ಬರುತ್ತದೆ.

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

With Best Compliments from:

The United Trading Corporation & Workshop (Private) Limited,

Attavar, Nandigudde Road,

MANGALORE.

Dealers for

Hindustan Ambassador Cars.

ನೆಹರೂ ಜೀವನದ ಕೆಲವು ಘಟನೆಗಳು

ಸ್ವತಂತ್ರ ಭಾರತದ ಶಿಲ್ಪಿ ನೆಹರೂ ಇಂದಿಲ್ಲ. ಆದರೆ ಭಾರತೀಯರ ಪಾಲಿಗೆ ಅವರು ಅಮರರು. ಭಾರತೀಯರ ಜನ ಜೀವನದಲ್ಲಿ ಅವರು ಹಾಸುಹೊಕ್ಕಾಗಿ ಬೆರೆತು ಅಪಾರ ಜನಪ್ರಿಯತೆಗಳಿಸಿದ್ದ ನಾಯಕ. ಅವರು ರಾಜಕಾರಣಿ, ಸಾಹಿತಿ ಹಾಗೂ ಅಮೋಘ ಭಾಷಣಕಾರರು. ಜನ ನೆಹರೂರವರಿಗೆ ಮರುಳಾದಷ್ಟು ಇನ್ಯಾವ ನಾಯಕನಿಗೂ ಆಗಿಲ್ಲ. ಅವರ ಜೀವನದ ಕೆಲವು ಘಟನೆಗಳುಅವರ ಅಪ್ರತಿಮ ವ್ಯಕ್ತಿತ್ವಕ್ಕೆ ಸಾಕ್ಷಿ ಹೇಳುತ್ತಿವೆ. ಪ್ರಜಾರಾಜ್ಯದ ಈ ಸಂದರ್ಭ ಅಗಲಿದ ಮಹಾ ನಾಯಕನ ಜೀವನದಿಂದ ನಾವು ಸ್ಫೂರ್ತಿ ಪಡೆದು ಸಾಗಬೇಕಾಗಿದೆ. ಅವರ ಜೀವನದ ಕೆಲವು ಸ್ಮರಣೀಯ ಘಟನೆಗಳ ಉಲ್ಲೇಖ ಇಲ್ಲಿದೆ.

ಶ್ರೀ ತಿಮ್ಮುಂಜೆ ಪರಾರಿ, ಮುಂಬಯಿ.

ಚಾಚಾ ನೆಹರೂ ಅವರ ತಂದೆ ಪಂಡಿತ ಮೋತೀಲಾಲ ನೆಹರೂ ಅವರು ಬಹಳೇ ಆಡಂಬರ ಪ್ರಿಯ ಉತ್ಸಾಹೀ ಮನುಷ್ಯರಾಗಿದ್ದರು. ಅವರು ತನ್ನ ಮನೆ ಆನಂದ ಭವನದ ಪಕ್ಕದಲ್ಲೇ ಒಂದು ಸುಂದರ ಕೆರೆ ತೋಡಿಸಿದ್ದರು. ಚಾಚಾ ನೆಹರೂ ಅವರು ಇದೇ ಕೆರೆಯಲ್ಲಿ ಬಾಲ್ಯದಲ್ಲಿ ಸ್ನಾನ ಮಾಡುತ್ತ ಈಜಲು ಕಲಿತಿದ್ದರು.

ಆ ಸಮಯದಲ್ಲಿ ಅಲಹಾಬಾದಿನ ಹಿರಿಹಿರಿಯ ಮನುಷ್ಯರೆಲ್ಲಾ ಈ ಕೆರೆಯಲ್ಲಿ ಸ್ನಾನ ಮಾಡಲು ಬರುತ್ತಿದ್ದರು. ಇಂತವರಲ್ಲಿ ಸರ್ ತೇಜ ಬಹಾದುರ್ ಸಪ್ರೂ ಅವರೂ ಒಬ್ಬರು. ಅವರು ಕಾನೂನಿನ ಅತಿ ಹಿರಿಯ ಪಂಡಿತರಾಗಿದ್ದರು. ಹಾಗೂ, ಅಲಹಾಬಾದಿನ ಮಹಾ ವಕೀಲರಾಗಿದ್ದರು. ಜನತೆ ಅವರನ್ನು ಬಹಳ ಗೌರವದಿಂದ ಕಾಣುತ್ತಿತ್ತು ಹಾಗೂ ಪಂ. ಮೋತೀಲಾಲ ನೆಹರೂ ಅವರ ಘನಿಷ್ಟ ಮಿತ್ರರಾಗಿದ್ದರು.

ಸರ್ ಸಪ್ರೂ ಅವರಿಗೆ ಕೆರೆಯಲ್ಲಿ ಮೀಯುವ ಆಸೆಯೇನೋ ತುಂಬ ಇತ್ತು, ಆದರೆ ಈಜಲು ಬರುತ್ತಿದ್ದಿಲ್ಲ. ಅವರು ಆ ಕೆರೆಗೆ ಇಳಿಯಲು ಹೆದರುತ್ತಿದ್ದರು. ಆದುದರಿಂದ ಅವರು ಯಾವಾಗ ಬಂದರೂ ಕೆರೆಯ ಮೇಲಿನ ದಂಡೆಯಲ್ಲಿ ನಿಂತುಕೊಂಡೇ ಸ್ನಾನ ಮುಗಿಸುತ್ತಿದ್ದರು. ಒಂದು ದಿನ ಅವರು ಕೆರೆಯ ದಂಡೆಯಲ್ಲಿ ಕುಳಿತು ಕೆರೆಯೊಳಗೆ ಕಾಲನ್ನಿಳಿಬಿಟ್ಟು ಮೀಯುವ ಆಸೆಯ ಬಗ್ಗೆ ಯೋಚಿಸುತ್ತಾ ಇದ್ದರೋ ಏನೋ.

ಅಂದು ಎಳೆಯ ಜವಾಹರಲಾಲ ನೆಹರೂ ಕೂಡಾ ಕೆರೆಯಲ್ಲಿ ಈಜುತ್ತಾ ಸಂತೋಷ ಪಡುತ್ತಿದ್ದರು. ಎಲ್ಲಾ ಹುಡುಗರಂತೆ ಅವರೂ ಬಹಳ ಚಂಚಲರಾಗಿದ್ದರು. ಅವರು ಕೂಡಲೇ ಹಿಂದಿನಿಂದ ಈಜುತ್ತಾ ಬಂದು ಇಳಿ ಬಿಟ್ಟಿದ್ದ ಸಪ್ರೂ ಅವರ ಕಾಲನ್ನು ಹಿಡಿದು ಎಳೆದುಕೊಂಡು ಕೆರೆಯ ಮಧ್ಯಕ್ಕೆ ಹೋಗಿ ಬಿಟ್ಟಿದ್ದರು. ಗಾಬರಿಗೊಂಡ ಸಪ್ರೂ ಅವರು ಎರಡ ಮೂರು ಗುಟುಕು ನೀರು ಕುಡಿದು ಬಿಟ್ಟು 'ಸತ್ತೇ ಸತ್ತೇ' ಎಂದು ಕಿರುಚಿ ಕೊಂಡರು.

ತುಸು ಹೊತ್ತಿನಲ್ಲೆ ಸಪ್ರು ಅವರು ಸಾವಧಾನರಾದರು. ಗಾಬರಿ ಮಾಯವಾಯ್ತು. ಸರಿ ಮೇಲೆ ಬಂದ ತಕ್ಷಣ ಬಾಲಕ ಜವಾಹರರನ್ನು ಹಿಡಿದು ಅವರು ಗದರಿಸಲಾರಂಭಿಸಿದರು. ಆದರೆ ತುಂಟ ಜವಾಹರ ಬಿದ್ದು ಬಿದ್ದು ನಗುತ್ತಲೇ ಇದ್ದ.

o o o

ನೆಹರೂ ಅವರಿಗೆ ಪುಸ್ತಕಗಳ ಮೇಲೆ ತುಂಬ ಪ್ರೀತಿ ಇತ್ತು. ಆದರ ಅಭಿಮಾನಗಳೊಂದಿಗೆ ಅವರು ಪುಸ್ತಕವನ್ನು ಕಾಣುತಿದ್ದರು. ಆದರೆ ಅವರೆಂದೂ ಬೇರೆಯವರಿಂದ ಪುಸ್ತಕ ಬೇಡುತ್ತಿರಲಿಲ್ಲ. ತನ್ನ ಕಿಸೆಯಿಂದ ಹಣಕೊಟ್ಟು ಪುಸ್ತಕ ತೆಗೆದುಕೊಂಡು ಓದುತ್ತಿದ್ದರು. ಆನಂತರ ಜತನದಿಂದ ಅವುಗಳನ್ನು ಕಾಯ್ದಿಡುತ್ತಿದ್ದರು— ಹಾಗೂ ಸಮಯ ಸಿಕ್ಕಿದಾಗ ಅವನ್ನು ಪುನಃ ಪುನಃ ಓದುತಿದ್ದರು.

ಮೂವತ್ತಾರು ವರ್ಷಗಳ ಹಿಂದಿನದೊಂದು ಘಟನೆ. ಆಗ ನೆಹರೂ ಅವರು ಉ. ಪ್ರದೇಶದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ಒಮ್ಮೆ ಕಾಂಗ್ರೆಸಿನ ಯಾವುದೋ ಒಂದು ಕೆಲಸಕ್ಕಾಗಿ ಲಖನೌಗೆ ಹೋಗಿದ್ದಾಗ ಅವರು ಅಮೀನುದ್ದೌಲಾ ಪಾರ್ಕಿನಲ್ಲಿರುವ ತನ್ನ ಸಹಯೋಗಿ ಮತ್ತು ಮಿತ್ರ ಶ್ರೀಯುತ ಮೋಹನ್ ಲಾಲ್ ಸಕ್ಸೇನಾ ಅವರ ಮನೆಯಲ್ಲಿಳಿದಿದ್ದರು.

ಶ್ರೀ ಸಕ್ಸೇನಾ ಅವರೂ ಬಹುದೊಡ್ಡ ಪುಸ್ತಕ ಪ್ರೇಮಿಯಾಗಿದ್ದರು. ಆದರೆ ಅವರೆಂದೂ ಪುಸ್ತಕಗಳನ್ನು ಜೋಕೆಯಿಂದ ತೆಗೆದಿಡುತ್ತಿರಲಿಲ್ಲ. ಒಂದು ಕವಾಟಿನಲ್ಲಿ ಹೇಗೆ ಹೇಗೋ ಆ ಪುಸ್ತಕಗಳಿರುತ್ತಿದ್ದುವು. ಆದರತ್ತ ಸಕ್ಸೇನಾ ಅವರ ಗಮನವೆಂದೂ ಹರಿಯುತ್ತಿರಲಿಲ್ಲ. ಒಂದು ದಿನ ನೆಹರೂ ಅವರು ಆ ಕವಾಟಿನ ಬಾಗಿಲು ತೆರೆದರು— ಪುಸ್ತಕಗಳೆಲ್ಲಾ ಅಡ್ಡಾದಿಡ್ಡಿಯಾಗಿ ಬಿದ್ದಿದ್ದುವು. ಆದರಲ್ಲೂ ಒಂದ ಪುಸ್ತಕವಂತೂ ಕೊಳೆ ಧೂಳುಗಳಿಂದ ಮುಚ್ಚಿ ಹೋಗಿತ್ತು. ಅದರ ಅವಸ್ಥೆ ವಿಚಿತ್ರವಾಗಿತ್ತು.

ನೋಡಿದರೆ ಆ ಪುಸ್ತಕ ನೆಹರೂ ಅವರದೆ. ಎಂದೋ ಒಂದು ದಿನ ಸಕ್ಸೇನಾ ಅವರು ಓದಲಿಕ್ಕಾಗಿ ಜವಾಹರರಿಂದ ಕೇಳಿ ತಂದಿದ್ದರು. ಪುಸ್ತಕದ ಅವಸ್ಥೆಯನ್ನು ಕಂಡು ಚಾಚಾಜೀಗೆ ಬಹಳ ತಳಮಳವಾಯ್ತು. ಪುಸ್ತಕವನ್ನು ತೆಗೆದು ಒರೆಸಿ ಸ್ವಚ್ಛಮಾಡಿದರು. ಆನಂತರ ಕ್ರುದ್ಧ ಸ್ವರದಲ್ಲಿ—"ಮೋಹನ್, ಪುಸ್ತಕವೂ ಒಂದು ಜೀವಿತ ವಸ್ತು ಎಂಬುದು ನಿನಗೆ ಗೊತ್ತಿಲ್ಲವೇ? ಅದನ್ನು ಆದರ ಸಂಮಾನಗಳಿಂದ ಕಾಣಬೇಕೆಂದೂ ತಿಳಿಯದೇ? ಅನುಚಿತ—ತುಂಬ ಅನುಚಿತ ವ್ಯವಹಾರ" ಎಂದರು.

"ಹೌದು, ತಪ್ಪಾಯ್ತು." ಎಂದು ಮೋಹನ್‌ಲಾಲ್ ಸಕ್ಸೇನಾ ಅವರು ತಲೆ ಬಾಗಿಸಿದರು.

o o o o

ಪಂ. ಮೋತೀಲಾಲ್‌ನೆಹರೂ ಅವರು ತಿಂಗಳಿಗೆ ಸಾವಿರಾರು ರೂಪಾಯಿಗಳಸ್ನುತ್ತಿದ್ದರು. ಹಾಗೇ ನಾಳೆಯ ವಿಚಾರವಿಲ್ಲದೇ ಎಲ್ಲವನ್ನೂ ಖರ್ಚು ಮಾಡುತ್ತಿದ್ದರು. ಆದುದರಿಂದ ಜವಾಹರರ ಬಾಲ್ಯ ಬಹಳೇ ಆಡಂಬರದಲ್ಲಿಯೇ ವ್ಯತಿತವಾಯ್ತು. ಅತ್ಯುತ್ತಮ ಊಟ ತಿಂಡಿ ತಿನ್ನುತ್ತಿದ್ದರು. ಅತ್ಯುತ್ತಮ ಬಟ್ಟೆ ಬರೆ ಉಪಯೋಗಿಸುತ್ತಿದ್ದರು.

ಆದರೆ ತುಂಬು ಯೌವನದ ಸಮಯದಲ್ಲಿ ಜವಾಹರರು ದೇಶ ಸೇವೆಯ ದೀಕ್ಷೆ ತೊಟ್ಟು ಒಳ್ಳೆಯ ಊಟ ತಿಂಡಿ ಬಟ್ಟೆ ಬರೆ ಎಲ್ಲವನ್ನೂ ತ್ಯಜಿಸಿದರು. ಅವುಗಳೊಡನೆ ಪುನಃ ಎಂದೂ ಸಂಬಂಧ ಬೆಳೆಸಲಿಲ್ಲ. ಬರೀ ಸಾಮಾನ್ಯರಂತೆ ಊಟ ತಿಂಡಿ ಉಡುಗೆ ತೊಡುಗೆಗಳನ್ನುಪಯೋಗಿಸಲಾರಂಭಿಸಿದರು.

ಮೆಲ್ಲ ಮೆಲ್ಲಗೆ ಕಾಲ ಬದಲಾಗುತ್ತಾ ಹೋಯ್ತು. ಕ್ರಮೇಣ ದೇಶದ ಹಣ ವ್ಯರ್ಥವಾಗುವುದನ್ನು ಅವರಿಂದ ಸಹಿಸಲಾಗುತ್ತಿರಲಿಲ್ಲ. ಎಷ್ಟೋ ಸಲ ಬಂದ ಗೆಳೆಯರು ಅಥವಾ ಆಮಂತ್ರಿತರು ಹೊರಟು ಹೋದ ಕೂಡಲೇ ಅವರು ಕೈಯಾರೆ ದೀಪ ಆರಿಸಿ ಫೇನ್ (Fan) ನಿಲ್ಲಿಸುತ್ತಿದ್ದರು. ಏಕೆಂದರೆ ಅನಾವಶ್ಯಕವಾಗಿ ವಿದ್ಯುಚ್ಛಕ್ತಿ ಏಕೆ ವ್ಯಯವಾಗಬೇಕು ಎಂಬುದು ಅವರ ಭಾವವಾಗಿತ್ತು. "ಚಳಿಯ ಸಮಯದಲ್ಲಿ ಬೆಚ್ಚಗಿನ ಗಾಳಿ, ಬೇಸಿಗೆ ಕಾಲದಲ್ಲಿ ತಂಪು ಹವೆಯನ್ನು ಬೀಸುವ ಏರ್‌ಕಂಡೀಷನ್ ಯಂತ್ರವನ್ನು ತನ್ನ ಕೊಠಡಿಯಲ್ಲಿಡಬಾರದು'' ಎಂದು ಅವರು ಅನ್ನುತ್ತಿದ್ದರು ಎಂದು ಅವರ ಕೆಲಸದಾಳುಗಳೇ ಹೇಳುತ್ತಾರೆ. ಸೆಕೆಗಾಲದಲ್ಲಿ ರೂಮಿನೊಳಗೆ

(ಇಪ್ಪತ್ತ ಮೂರನೇ ಪುಟ ನೋಡಿರಿ)

"ಬಿಕ್ಕೊ" ಆಹಾರ ತಯಾರಿಕೆಗಳು ತೋಟ ತಾಜಾ ಮತ್ತು ಮಿತವ್ಯಯ

ಅತಿಥಿಗಳ
ಪ್ರಥಮ
ಸತ್ಕಾರಕ್ಕೆ
ಅತ್ಯನುಕೂಲ

BICCO ನಿಮ್ಮ
ಫಲಾಹಾರವನ್ನು
ರುಚಿಯಾಗ
ಮತ್ತು
ಆರೋಗ್ಯಕರವಾಗಿ
ಮಾಡುತ್ತದೆ

ಸ್ಕ್ವಾಶ್, ಸಿರಪ್, ಕ್ಯಾನ್ಡ್ ಫ್ರುಟ್ಸ್ ಸ್ಲಾಯಿಸೆಸ್, ಪಲ್ಪ್, ಜ್ಯೂಸ್, ಶುಂಠಿ ಮುರಬ್ಬ, ಉಪ್ಪಿನಕಾಯಿ, ಪೆಪ್ಪರ್‌ಮಿಠಾಯಿಗಳು ಇತ್ಯಾದಿ ಸಹ ದೊರೆಯುತ್ತವೆ.

ತಯಾರಕರು: ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂ. ಲಿಮಿಟೆಡ್

ತಂತಿ: ಬಿಕ್ಕೊ. ಕಾಪು, ದ. ಕ. ಫೋನ್: 29

ಮುದ್ದು ಗೆಳತಿ

೧

ಶ್ರೀ ಯನ್. ಕೃಷ್ಣ ಮುಕಾರಿ, ಮಂಗಳೂರು.

ಜೀವನದ ನಂದನದಿ ಹೃದಯ ತಿಳಿಗೊಳದಲ್ಲಿ
ಭಾವ ರಸವೊಸರು ತೆರೆ ಜುಳುಜುಳಿಸುತ
ಆದರ ಮಧ್ಯದಲಿ ಸ್ನೇಹ ಕಂಪಿನ ದಳವ
ಬಿರಿಯುತ್ತ ಬಂದಿರುವೆ! ಮುದ್ದು ಗೆಳತಿ! ॥ ೧ ॥

ತಮ ಮುತ್ತು! ಕಾರ್ ಅತ್ತು, ಸಿಡಿಲುಗಳು ಒತ್ತೊತ್ತಿ
ಗುಡುಗುಡಿಸೆ, ನಿನ್ನ ಮೆಲು ತೆಕ್ಕೆಯಲ್ಲಿ
ಮೌನ ವೀಣೆಯ ಮಿಡಿಟೆ, ಅವ್ಯಕ್ತರಾಗದಲಿ
ಜೋಗುಳಿಸಿ ತಟ್ಟುವೆಯ! ಮುದ್ದು ಗೆಳತಿ! ॥ ೨ ॥

ಆ ಶಿಶುವಿನಂದದಲಿ ಮೈಮರೆತು ಮಲಗಿರಲು
ಸ್ವಪ್ನ ಸಾಮ್ರಾಜ್ಯದಲಿ ವಿಹರಿಸಿರಲು,
ಮುಂಗುರುಳು ಫಾಳದಲಿ ಚಿನ್ನಾಟವಾಡಲದ—
ನವಿರಾಗಿ ಸರಿಸುವೆಯ! ಮುದ್ದು ಗೆಳತಿ! ॥ ೩ ॥

ದೀವಳಿಗೆ ಬಂತೆಂದು ಪ್ರೇಮದಾರದೊಳಿಳಿದು
ಸಾಲು ದೀಪಕೆ ಕಣ್ಣ ಕಿರಣ ಸುರಿದು!
ಕೆನ್ನೆ ಕುಂಕುಮವಿರಲು, ಮಂದಸ್ಮಿತದ ಬೆಳಕ
ಎತ್ತುತಿರುವೆಯ! ನನ್ನ ಮುದ್ದು ಗೆಳತಿ! ॥ ೪ ॥

ಮೇಲೆ ಚಂದ್ರಮ ತನ್ನ ಮೊಗತುಂಬ ನಗುತಿರಲು
ತಿರೆಯಲ್ಲಿ ಹಾಲು ಹೊಳೆ ಹರಿಯುತಿರಲು
ಚಂಟಿತನದಲಿ ನಿನ್ನ ಒಡೆಯೊಡನೆ ಚೆಲ್ಲಾಟ
ಆಡೆ, ಕೆನ್ನೆಗೆ ಪೆಟ್ಟೆ? ಮುದ್ದು ಗೆಳತಿ! ॥ ೫ ॥

ನಾ ಮಗುವಿನೋಲ್ ಹಟವಿ ಬಿಮ್ಮೆಂದು ಕುಳಿತಿರಲು
ತಾಯ್ ತೆರದಿಂ ಬಂದು ಮನವನವಂ!
'ಹಟ ಮಾಡದಿರು ಕಂದ!' ಎಂದ ಮಾತಿನ ಅಂದ
ನಾನೆಂತು ಮರೆತೇನು ಮುದ್ದು ಗೆಳತಿ! ॥ ೬ ॥

ಉದಯ ರಾಗದೊಳಿದ್ದು ಖಗ ಕುಲದ ಮಂಜುಳದ
ಸ್ವನದೊಡನೆ ಸ್ವರ ಬೆರಸಿ, ಹೊದಿಕೆ ಸರಿಸಿ
'ಏಳೇಳು ಬೆಳಕಾಯ್ತು!' ಎಂಬ ನುಡಿಗಳ ನೋಡಿ
ಕಿಬ್ಬೆಳಗೆ ಜೋಂದಿತ್ತು; ಮುದ್ದು ಗೆಳತಿ! ॥ ೭ ॥

ರಂಭೆ ಊರ್ವಶಿ ಸೊಟ್ಟ ನಿನ್ನೆದುರು ಬರಿ ಹುಲ್ಲು!
ಕವನ—ಕನ್ನಡಿಯೊಳಗೆ ಮಿಥ್ಯ ನೆರಳು!
ಒಲಿವ ಲತೆ ಕುಡಿಯಲ್ಲಿ ಹೂವಾಗಿ ನಲಿವ ನಿನ—
ಗೆಂತವರು ಸಮ ಹೇಳು! ಮುದ್ದು ಗೆಳತಿ! ॥ ೮ ॥

ನೀ ಭಾವ ಕನ್ನಿಕೆಯು ಎನ್ನ ಭಾವದ ಗೆಳತಿ
ಪ್ರಕೃತಿ ಸೌಂದರ್ಯವೇ ನಿನ್ನ ಕವರು!
ಕಡಲ ದಂಡೆಯ ಮಳಲ ನಿನ್ನ ಮೃದು ತೀಡಿಗಳು
ಹಂಸ ತಲ್ಪದ ಸೊಗವು! ಮುದ್ದು ಗೆಳತಿ! ॥ ೯ ॥

ನಿನ್ನ ಸರಸವ ಬಿಟ್ಟು ಭಾರ ಹೆಜ್ಜೆಯನಿಟ್ಟು
ನಾ ಸರಿಯೆ; ಮುಚ್ಚಿದ್ದ ಕದವ ತಟ್ಟಿ
ಗೆಜ್ಜೆ ಗೆಜ್ಜೆಯನಿಟ್ಟು, ನಗುವೊಳಣಕವ ನೆಟ್ಟು
ಮತ್ತೆ ನೀನೆದುರಿರುವೆ! ಮುದ್ದು ಗೆಳತಿ! ॥ ೧೦ ॥

In the tradition of the famous "CANARA" Springs now another excellent product:

'CANARA' BRAKE DRUMS

for all popular vehicles:

They are made from quality material, modern machines and with rigid quality control under watchful eyes of a modern laboratory. These drums matching the best of the International makes are made to suit Indian Road Conditions incorporating experience gained by lengthy practical road tests.

THE CANARA WORKSHOPS LIMITED

MANGALORE - 3.

ಸಾಹಿತ್ಯ ಸಂಬಂಧಿಕಗಳು

ಲಿಪಿಬದ್ಧವಾದುದೆಲ್ಲಾ ಸಾಹಿತ್ಯ; ಲಿಪಿಬದ್ಧಗೊಳಿಸಬಲ್ಲವ ಸಾಹಿತ್ಯಿಕ ನೆನಿಸುವ ಕಾಲ ಬಂತೇನೋ ಎನ್ನಿಸುತ್ತದೆ ಒಮ್ಮೊಮ್ಮೆ; ಅಗ ನಿರಾಶೆ ಕವಿಯುವುದೂ ಉಂಟು. ಹಳತಿನಿಂದ ಪೋಷಣೆಗೊಂಡು ಹೊಸತಿನಿಂದ ಶೋಭೆ ಪಡೆದು ನಮ್ಮ ಬರಹ ರೂಪುಗೊಳ್ಳಬೇಕು— ಅದೇ ಸಾಹಿತ್ಯ; ಅದಗನ್ನು ರೂಪಿಸುವವನೇ ಸಾಹಿತ್ಯಿಕ.

ಎರಡು ಬಗೆಗಳು

ಜನತೆಗೆ ಹಿತವನ್ನುಂಟು ಮಾಡುವ ಲೇಖನ ಸಮುದಾಯಕ್ಕೆಲ್ಲಾ "ಸಾಹಿತ್ಯ" ಎಂಬ ಸಾರ್ಥಕವಾದ ಹೆಸರು ಬಂದಿದೆ. "ಹಿತೇನ ಸಹಿತಂ ಸಾಹಿತ್ಯಂ" ಎಂದು ಆಲಂಕಾರಿಕರು ಹೇಳಿದ್ದಾರೆ. ಹೀಗೆ ದಿವ್ಯವಾದ ಉದ್ದೇಶದಿಂದ ಉತ್ತಮ ಸಂದೇಶಗಳನ್ನು ಜನ ಸಮುದಾಯಕ್ಕೆ ಒಪ್ಪಿಸುವ ಕೈಂಕರ್ಯವು ಸಾಹಿತ್ಯದ್ದು. ಇಂತಹ ಪೂಜ್ಯವಾದ ಸಾರಸ್ವತ ಸೇವೆಗೆ ಒಂದು ಬಗೆಯ ತಪಸ್ಸು ಬೇಕು; ತನ್ಮಯತೆ ಬೇಕು; ಕ್ರಿಯಾಶಕ್ತಿ ಬೇಕು; ಅಧ್ಯಯನ ಬೇಕು. ಲೋಕಾನುಭವ, ಆತ್ಮಾನುಭವಗಳೂ ಇರಬೇಕು.

ಇವೆಲ್ಲ ಯೋಗ್ಯತೆಯುಳ್ಳವರ ಕ್ರಿಯಾಶೀಲತೆಯಿಂದ ಉಂಟಾಗುವ ಗದ್ಯಪದ್ಯಾತ್ಮಕವಾದ ಒಟ್ಟು ಲೇಖನ ಸಮೂಹವು 'ಸಾಹಿತ್ಯ' ಎನಿಸುತ್ತದೆ. ಈ ಸಾಹಿತ್ಯದಲ್ಲಿ "ರಸಾತ್ಮಕ" ಎಂದೂ "ಬೋಧಾತ್ಮಕ" ಎಂದೂ ಭಾಗಗಳನ್ನು ನಾವು ಮಾಡಬಹುದು.

ಶ್ರುತಿ ಸ್ಮೃತಿ ಧರ್ಮ ಶಾಸ್ತ್ರಾದಿಗಳೂ, ಗ್ರಂಥ ನಿಬಂಧ ಚರಿತ್ರೆ ಉಪನ್ಯಾಸಾದಿಗಳೂ ಬೋಧಾತ್ಮಕವೆನಿಸುತ್ತವೆ. ಅವುಗಳಲ್ಲಿ ಕುತೂಹಲಕಾರಿಗಳಾದ ರಸ ರುಚಿಗಳು ಮುಖ್ಯವಲ್ಲ; ಆಯಾ ಬೋಧನೆಗಳು ವಾಚಕರ ಮನಸ್ಸಿಗೆ ಹತ್ತುವಂತೆ ಮಾಡುವ ಯುಕ್ತಿಯುಕ್ತವಾದ ಮಾತುಗಳೂ, ಪ್ರಮಾಣ ಪೂರ್ವಕವಾದ ಉದಾಹರಣೆಗಳನ್ನೀಯುವ ಚಾತುರ್ಯವೂ ಅವುಗಳಿಗಿದ್ದರೆ ಸಾಕು. ಅದರೊಂದಿಗೆ ಆಯಾ ವಿಷಯಗಳಲ್ಲಿ ಒಳ್ಳೆಯ ಅನುಭವವೂ, ಅದನ್ನು ಬಿಡಿ ಬಿಡಿಯಾಗಿ ತಿಳಿಯಪಡಿಸುವ ಉತ್ತಮ ನಿರೂಪಣ ಶೈಲಿಯೂ ಕೈಗೂಡಿತೆಂದರೆ ಬೋಧಾತ್ಮಕ ಸಾಹಿತ್ಯದಲ್ಲಿಯೂ ರಸವು ತಾನೇ ತಾನಾಗಿ ಒಸರಬಲ್ಲುದು. ಆದರೆ ಜನರನ್ನು ರಂಜಿಸಿ ಸಂತೋಷಗೊಳಿಸುವುದಕ್ಕಾಗಿ ಅವುಗಳ ನಿರ್ಮಾಣವಲ್ಲ. ಅವುಗಳು ಬೋಧನಾ ಶಕ್ತಿಯುಳ್ಳ ಗುರುಜನರಿಂದಲೇ ಬರೆಯಲ್ಪಡುತ್ತವೆ. ಆ ಬಗೆಯ ಗ್ರಂಥಗಳನ್ನೋದುವಾಗ, ಓದುಗರಿಗೆ ಆ ಗ್ರಂಥಕರ್ತನ ಮೇಲೆ ಗುರುಭಾವನೆಯು ಗೌರವವೂ ಹುಟ್ಟುತ್ತದೆಯೇ ಹೊರತು, ಅವನ ಹೃದಯದೊಂದಿಗೆ ಇವನ ಹೃದಯದ ಸಾಮರಸ್ಯವುಂಟಾಗಲಾರದು. ಅಂತೆಯೇ ಬೋಧಾತ್ಮಕ ಗ್ರಂಥಗಳ ಮೇಲೆ ಸಾರ್ವಜನಿಕರ ಆದರಣೆ ಬಹಳ ಕಡಿಮೆ. ಮಹಾಭಾರತದ ಕಥೆಯೊಳಗೆ ಜನರು ತೋರಿಸುವಷ್ಟು ಆದರಣೆಯನ್ನು ಅದರೊಳಗಿನ ಬೋಧಾತ್ಮಕವಾದ ಭಗವದ್ಗೀತೆಗೆ ಜನರು ತೋರಿಸುವುದಿಲ್ಲವೆಂಬುದನ್ನು ಇಲ್ಲಿ ನೆನೆಯಬಹುದು.

ರಸಾತ್ಮಕ ಸಾಹಿತ್ಯ

ಹೌದು. ರಸಾತ್ಮಕ ಸಾಹಿತ್ಯವನ್ನು ರಾಮಾಯಣ ಭಾರತಾದಿ ಪುರಾಣ ಕಥೆಗಳಿಂದಲೇ ನಾವು ಪ್ರಾರಂಭಿಸಬೇಕಾಗಿದೆ. ಆ ಬಗೆಯ ಪುರಾಣ ಕಥೆಗಳೂ, ಕಾದಂಬರಿಗಳೂ, ಕಾವ್ಯಗಳೂ, ನಾಟಕಗಳೂ, ಚರಿತ್ರೆ–ಜೀವನ ಚರಿತ್ರೆಗಳೂ ಮೊದಲಾದುವೆಲ್ಲಾ ರಸಾತ್ಮಕ ಸಾಹಿತ್ಯಕ್ಕೆ ಸೇರುತ್ತವೆ. ಆದರೆ ಬೋಧಾತ್ಮಕ ಲೇಖಕರು ಗುರುಸ್ಥಾನದಲ್ಲಿದ್ದು "ಹೀಗೆ ಮಾಡು, ಹಾಗೆ ಮಾಡು" ಎಂದು ಶಾಸನ ಮಾಡಿದರೆ, ರಸಾತ್ಮಕ ಲೇಖಕನು ಅದೇ ನೀತಿಗಳ ಕಥಾ ಪಾತ್ರಗಳನ್ನಾಡಿಸಿ ಅದೇ ನೀತಿ ಬೋಧೆಗಳನ್ನೇ ಹುಟ್ಟಿಸುತ್ತಾನೆ. ಇದೇ ರಸಾತ್ಮಕ ಸಾಹಿತಿಯ ವೈಶಿಷ್ಟ್ಯ. ಇದರಲ್ಲಿ ಬೋಧನೆಗಳೆಲ್ಲ ಹಿನ್ನೆಲೆಯಲ್ಲಿ ಅಡಗಿರುತ್ತವೆ. ಅವು ತನ್ನಂತಾನೇ ಓದುಗರ ಹೃದಯದೊಳಗೆ ಮೂಡಿಕೊಳ್ಳುತ್ತವೆ. ಮುನ್ನೆಲೆಯಲ್ಲಿರುವುವೆಲ್ಲವೂ ರಸ ಬುಗ್ಗೆಗಳೇ; ಕಾಲ್ಪನಿಕ ಕಥಾ ವೀಥಿಗಳೇ. ಓದುಗನು ಆಯಾ ಪಾತ್ರದ ಗುಣದೋಷಗಳನ್ನು ಸ್ವಾದಿಷ್ಟವಾಗಿ ಅನುಭವಿಸಿಕೊಳ್ಳುತ್ತ, ತನಗಿಷ್ಟವಾದ ಪಾತ್ರಗಳೊಂದಿಗೆ ಸಮರಸನಾಗುತ್ತ, ರೋಷದಿಂದ ಹಲ್ಲು ಕಚ್ಚುತ್ತ, ಕಣ್ಣೀರಿಳಿಸುತ್ತ, ನಗುತ್ತ, ಪಶ್ಚಾತ್ತಾಪ ಪಡುತ್ತ ಮೊತ್ತದಲ್ಲಿ ಅಡಿಗಡಿಗೂ ಆನಂದಿತನಾಗುತ್ತ ಓದುತ್ತಾನೆ. ಬೋಧಪ್ರದ ಗ್ರಂಥಗಳನ್ನು ಏನೋ ಒಂದು ನಿರ್ಬಂಧದಿಂದ ಓದಲೆಳಸಿದರೂ ರಸಾತ್ಮಕಗಳಷ್ಟು ಹೆಚ್ಚು ಓದಲಿಕ್ಕಾಗುವುದಿಲ್ಲ. ತಲೆ ನೋವು ಬಂದರೂ ಆಶ್ಚರ್ಯವಿಲ್ಲ.

ಓದುತ್ತಿದ್ದಂತೆ ಮನಸ್ಸಿಗೆ ರಂಜನೆಯೂ ಆಗುತ್ತಾ ಹೋಗುವುದರಿಂದಲೇ ಸಾಮಾನ್ಯವಾಗಿ ಪ್ರಪಂಚವು ಇಂತಹ ರಸಾತ್ಮಕ ಸಾಹಿತ್ಯವನ್ನೇ ಬಯಸಿಕೊಂಡಿದೆ. ಅಂತೆಯೇ ಅವುಗಳ ರಚನೆಗಳೂ ಬಹಳವಾಗಿ ಆಗುತ್ತಿವೆ.

ಆದರೆ ಈ ರಸಾತ್ಮಕ ರಚನೆಗಳು ಸುಲಭವೆ? ಎಲ್ಲರಿಗೂ ಸಾಧ್ಯವೆ? ಪ್ರಯತ್ನಿಸಿ ಕಲಿಯಬಹುದೆ?

ಕವಿತಾವಾಸನೆ

ಸಾಧ್ಯವಿಲ್ಲ. ಅದಕ್ಕೆ ಮೂಲದಲ್ಲಿ ಪೂರ್ವ ಜನ್ಮ ಸಂಬಂಧವಾದ "ಕವಿತಾವಾಸನೆ" ಇರಬೇಕು. ಒಂದೇ ಜನ್ಮದಲ್ಲಿ ಶ್ರುತ ಪಂಡಿತನಾಗಬಹುದು; ಬೋಧಕನಾಗಬಹುದು. ಅಭ್ಯಾಸದಿಂದ ಗ್ರಂಥ ರಚನೆಯ ಶಕ್ತಿಯನ್ನೂ ಪಡೆಯಬಹುದು. ಆದರೆ ಕವಿಯಾಗಲು ಸಾಧ್ಯವಿಲ್ಲ.

ಕವಿಯಾಗಬೇಕಾದರೆ ಪ್ರಾಚೀನ ಮಹಾ ಕವಿಗಳ ಮೇಲೆ ಭಕ್ತಿಯುಂಟಾಗಬೇಕು; ಸಮಕಾಲೀನ ಕವಿಗಳ ಮೇಲೆ ಪ್ರೇಮವೂ ಸಹಾನುಭೂತಿಯೂ ಬರಬೇಕು; ತಾನೂ ಕವಿಯಾಗಬೇಕೆಂಬ ಉತ್ಕಟಾಸಕ್ತಿಯೂ ಇರಬೇಕು. ಇಷ್ಟಿದ್ದವನು ಅನುಕರಣಶೀಲನಾಗಿ, ಬಲವಂತದ ಕವಿಯೆನಿಸಿಯಾನೇ ಹೊರತು, ಸ್ವತಂತ್ರ ಪ್ರತಿಭಾನ್ವಿತ ಕವಿಯಾಗಲಾರ. ಇವೆಲ್ಲ ಇದ್ದರೂ ಮೂಲದಲ್ಲಿ ತಿಳಿಸಿದಂತೆ "ಕವಿತಾವಾಸನೆ" ಇದ್ದರೇನೇ, ಅವನು ತನ್ನದೇ ಒಂದು ಮಾದರಿಯೆನಿಸುವಂತಹ ಸ್ವತಂತ್ರ ಪ್ರತಿಭಾನ್ವಿತ ಕವಿಯಾಗುತ್ತಾನೆ. ಒಂದೆರಡು ಅಥವಾ ಕೆಲವು ಜನ್ಮಗಳ ಅಭ್ಯಾಸವಾದ ಮೇಲೆಯೇ ಅವನು ಸಫಲನಾದ ಉತ್ತಮ ಕವಿಯಾಗಬಲ್ಲನು.

ಇಂತಹ ಕವಿತಾವಾಸನೆಗೆ ಕಾರಣವಾದ ಅಭ್ಯಾಸವು ತ್ರಿಕಾಲಗಳಲ್ಲಿಯೂ ನಡೆಯುತ್ತಾ ಇರುವುದೊಂದು ಪ್ರಕೃತಿ ಧರ್ಮವೇ ಆಗಿದೆ. ಪ್ರಕೃತಿಯೊಂದಿಗೆ ಬೆರೆತುಕೊಂಡಿರುವ ಮಾನವನು ತನ್ನ ಮೇಲಾಗುವ ಪರಿಣಾಮದ ಸುಖ ದುಃಖ ಅನುಭೂತಿಗಳನ್ನು ಇನ್ನೊಬ್ಬರೊಡನೆ ಹೇಳಿಕೊಂಡು ಅವರಲ್ಲಿ ತನ್ನದನ್ನು ಪ್ರತಿಬಿಂಬಿಸಲು ಪ್ರಯತ್ನ ಮಾಡುತ್ತಾನೆ. ಒಬ್ಬರು ಇನ್ನೊಬ್ಬರೊಡನೆ ಮಾತುಕತೆಯಾಡುವುದೆಂದರೆ ಹೆಚ್ಚಾಗಿ ಇಂತಹ ಬಗೆಯವೇ. ಇದೂ ಒಂದು ಬಗೆಯ ಕವಿತ್ವವೇ ಹೌದು.

ತಾನು ಕಂಡುದನ್ನು ಸುಂದರವಾದ ಕಲ್ಪನೆಯ ಬೆರಕೆಯಿಂದ ಕಲೆಯಾಗಿ ಚಿತ್ರಿಸಿ ಇತರರಿಗೆ ತೋರಿಸಿ ಅವರನ್ನು ಸಂತೋಷಗೊಳಿಸಲೆತ್ನಿಸುವ ಒಂದು ವಿಶಿಷ್ಟ ಬಗೆಯ ಜನತಾ ಜನಾರ್ದನನ ಸೇವೆಯೇ ಕೃತಿ ರಚನೆ. ಈ ಸೇವಾಭಾವನೆಯು ಕೌತುಕ ಎಲ್ಲಾ ಮಾನವರಲ್ಲಿಯೂ ಸುಪ್ತವಾಗಿರುತ್ತದೆ. ಚಿಕ್ಕ ಮಕ್ಕಳನ್ನು ನೋಡಿರಿ. ದೊಡ್ಡವರು ಮಾಡುವುದನ್ನು ನೋಡಿ ಅದರಂತೆ ತಾವೂ ಮಾಡಲೆಳಸುತ್ತಾರೆ; ನಾಯಿ, ಬೆಕ್ಕು, ಹಕ್ಕಿ, ಹೂವು, ಗಿಡ, ಮರಗಳನ್ನು ನೋಡಿ ಏನೇನೋ ಕಲ್ಪಿಸಿಕೊಂಡು ಸಂತೋಷಿಸುತ್ತಾರೆ ಮಕ್ಕಳು. ಅದು ಹಾಗೇಕಿರಬಾರದು? ಹೀಗೇಕಿದೆ? ಎಂದು ತಮ್ಮೊಳಗೇ ಕೇಳಿಕೊಳ್ಳುತ್ತಾರೆ. ಮಕ್ಕಳ ಬಾಯಿಯಿಂದ ಹೊರಡುವ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲು ದೊಡ್ಡವರಿಗೆ ಕೂಡಾ ಆಗುವುದಿಲ್ಲ. ಮಕ್ಕಳ ಜೀವನವೇ ಮೂಲ ಕಾವ್ಯವೆನ್ನಬಹುದು.

ಆದರೆ ಮಕ್ಕಳಲ್ಲಿಯೂ ಸಾಮಾನ್ಯ ಜನತೆಯಲ್ಲಿಯೂ ಅಡಗಿರುವ ಕವಿತ್ವಶಕ್ತಿ ಅಲ್ಪ ಪ್ರಮಾಣದ್ದು; ಇನ್ನೊಂದು ಜನ್ಮದಲ್ಲಿ ಹೆಚ್ಚಾಗತಕ್ಕಂಥಾದ್ದು. ಕೇವಲ ಮರೆಯುವಂಥಾದ್ದು; ನೀರಸವಾದದ್ದು. ಆದರೆ ಕವಿತಾವಾಸನೆ

(ಇಪ್ಪತ್ತೊಂದನೇ ಪುಟ ನೋಡಿರಿ)

WITH THE
BEST COMPLIMENTS
OF THE SEASON

From

JYOTHI TALKIES

MANGALORE

ಶ್ರೀ ಶಿವಶಂಕರ

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರ

ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಯನ್ನು ಆರಿಸಿ ಕಳಿಸುವುದಷ್ಟೇ ಪ್ರಜೆಗಳ ಕರ್ತವ್ಯವಲ್ಲ. ವಿಶುದ್ಧ ರಾಷ್ಟ್ರೀಯ ವಾದಿಗಳಾಗಿ ತಮ್ಮ ಪ್ರತಿನಿಧಿ ಸರಕಾರದ ವಾದಗಳು ಸರಿದಾರಿಯಲ್ಲೇ ರಾಷ್ಟ್ರೋಚಿತ ಪ್ರಜಾ ಸಮ್ಮತ ರೀತಿಯಲ್ಲೇ ನಡೆಯುವಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ. ಈ ಕರ್ತವ್ಯವನ್ನು ಪ್ರಜೆಗಳು ಪೂರೈಸಿದರೆ, ಪ್ರಜಾಸತ್ತೆ ನಿಜವಾಗಿ ಪ್ರಜಾಪ್ರಭುತ್ವವಾಗುವುದು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರವೇನೆಂದು ಯಾರಾದರೂ ನಮ್ಮ ಬಳಿ ಕೇಳಿದಲ್ಲಿ, ಕೇಳಿದವರಿಗೆ ಏನಾಗಿದೆಂದು ನಾವು ಅವರ ಮುಖವನ್ನೇ ಪಿಳಿಪಿಳಿ ನೋಡುತ್ತೇವಲ್ಲವೇ? ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರವಲ್ಲದೆ ಇನ್ನಾರ ಪಾತ್ರವಿರಲು ಸಾಧ್ಯವೆಂಬ ಆಲೋಚನೆಯಿಂದ ನಾವಿರುವದೇ ಅದಕ್ಕೆ ಕಾರಣ. ವಿವಾಹದಲ್ಲಿ ವರನ ಅಥವಾ ವಧುವಿನ ಪಾತ್ರವೇನೆಂದು ಕೇಳಿದರೆ ಹೇಗಾದೀತು? ವಧು ಹಾಗೂ ವರವಿಲ್ಲದಿದ್ದಲ್ಲಿ ಮದುವೆ ನಡೆಯಲು ಸಾಧ್ಯವೇನು? ಹಾಗೆನೇ ಪ್ರಜೆಗಳ ಪಾತ್ರವಿಲ್ಲದಿದ್ದಲ್ಲಿ ಪ್ರಜಾಪ್ರಭುತ್ವ ಇರಲು ಸಾಧ್ಯವೇನು? ಹೋಲಿಕೆಯ ದೃಷ್ಟಿಯಲ್ಲಿ ಹೀಗಿರಲು ಸಾಧ್ಯವಾದರೂ ನಾವು ನೈಜಲೋಕಕ್ಕೆ ಬರೋಣ.

ಅಭ್ಯರ್ಥಿಗಳಿಗೆ ಮತದಾನ ಮಾಡಿದೊಡನೆ ಪ್ರಜೆಗಳ ಪಾತ್ರ ಮುಗಿಯಿತೇನು? ಅಧಿಕ ಮತ ಗಿಟ್ಟಿಸಿಕೊಂಡವ ಪ್ರತಿನಿಧಿಯಾಗಿ ಹೋಗುತ್ತಾನೆ. ಅನಂತರ ಅವನಾರಂಭಿಸುತ್ತಾನೆ ತನ್ನ ಕಾರ್ಯಕ್ಕೆ. ಹೀಗೆ ಹಲವಾರು ರಂಗಗಳಿಂದ ಹಲವಾರು ಬಣ್ಣಗಳ ಪ್ರತಿನಿಧಿಗಳು ಬರುತ್ತಾರೆ. ಹೀಗೆ ಬಂದವರಿಗೆ ಮುಂದೆ ನಿಶ್ಚಿತ ಅವಧಿಯವರೆಗೆ ಅದೇನೂ ಭಯವಿಲ್ಲವೆಂಬ ಧೈರ್ಯವಿರುತ್ತದೆ. ಅದರಲ್ಲೂ ಅವರು ಆಳುವ ಪಕ್ಷಕ್ಕೆ ಸೇರಿದವರಾದರೆ ಮುಗಿಯಿತು. ಎದುರು ಪಕ್ಷದವರು ಕೂಡಾ ಅಷ್ಟೆ. ಅವರಿಗೆ ಕಣ್ಣಿರುವದು ಪ್ರಜೆಗಳ ಮತದ ಮೇಲೆ; ಪ್ರಜೆಗಳ ಹಿತ ಮುಂತಾದುವೆಲ್ಲಾ ಅನಂತರದ ವಿಷಯಗಳು. ಅಲಿಘಢ ಮುಸ್ಲಿಂ ಯುನಿವರ್ಸಿಟಿಯಲ್ಲಿ ನಡೆದ ಕೋಲಾಹಲದ ಸಮಯ ಇದನ್ನಲ್ಲವೇ ನಾವು ಕಂಡದ್ದು? ಅದರ ಅಕ್ಕ-ಪಕ್ಕ, ಸುತ್ತಮುತ್ತಲಿರುವವರಲ್ಲಿ ಮಹಮ್ಮದೀಯರ ಸಂಖ್ಯೆಯೇ ಜಾಸ್ತಿ. ವಿಶ್ವವಿದ್ಯಾಲಯದೊಳಗೆ ಜಗಳವೆದ್ದದ್ದೂ ಅವರ ನಡುವೆ; ಅದೂ ಮುಸ್ಲಿಮೇತರರನ್ನು ಹೇಗೆ ಕಾಣಬೇಕೆಂಬ ವಿಷಯದ ಮೇಲೆ, ಮುಸ್ಲಿಮೇತರರ ಮೇಲೆ ಹಲ್ಲೆ ನಡೆಸಿದವರೂ ಅವರೇ. ಹಾಗಿದ್ದರೂ ಅಲ್ಲಿಂದ ಆರಿಸಲ್ಪಟ್ಟಿರುವ ಪ್ರತಿನಿಧಿ ಹೇಳಿದ್ದೇನು? ಈ ಪ್ರತಿನಿಧಿಯಂತೂ ಆಳುವ ಪಕ್ಷಕ್ಕೆ ಸೇರಿದವರಲ್ಲ, ಎದುರು ಪಕ್ಷದವರಿದ್ದಾರೆ. ಅವರು ಮುಸ್ಲಿಮೇತರರ ಮೇಲೆ ಅಥವಾ ಸ್ಪಷ್ಟವಾಗಿ ಹೇಳುವದಿದ್ದಲ್ಲಿ ಹಿಂದೂಗಳೇ ಗಲಾಟೆಗೆ ಕಾರಣವೆಂದು ಹೇಳಿ ಅವರ ಮೇಲೆಯೇ ಹೊರೆಯನ್ನು ಹಾಕಿದರು. ಇದಕ್ಕೆ ಕಾರಣವೇನು? ಅವರಿಗೆ ಬೇಕಾಗಿರುವದು ನ್ಯಾಯ-ಅನ್ಯಾಯದ ಪ್ರಶ್ನೆಯಲ್ಲಿ, ಅವರಿಗೆ ಅಗತ್ಯವಿರುವದು ಅಲ್ಲಿಯ ಜನರ ಮತ. ಎದುರು ಪಕ್ಷಗಳವರಿಗ ಮಾತ್ರ ಈ ಜಾಡ್ಯ ತಗಲಿರುವದಲ್ಲ. ಅಧಿಕಾರ ರೂಢ ಪಕ್ಷದವರು ಇದಕ್ಕೆ ಅಪವಾದವಲ್ಲ.

ಧಾರ್ಮಿಕ-ವಿಶ್ವವಿಜೇತ ಸ್ವಾಮಿ ವಿವೇಕಾನಂದರಿಗೆ ಅದಕ್ಕೆ ಪ್ರಚೋದನೆಯನ್ನೀಡಿ, ವಾತ್ಸಲ್ಯಮಯೀ ಪವಿತ್ರ ಮಾತೃಭೂಮಿಯ ದರ್ಶನ ಮಾಡಿಸಿದ ನಿಸ್ವಾರ್ಥಿ ಹಾಗೂ ಅಚಲ ಬಂಡೆಗಲ್ಲು ಭಾರತದ ದಕ್ಷಿಣದ ತುದಿಯಲ್ಲಿದೆ. ನಿಶಾದೇವಿ ಮರೆಯಾಗಿ ಉಷಾದೇವಿ ಉದಯಿಸುವ ಮುಂಚೆಯೇ ಆ ವಿಶಾಲ ಪಾಷಾಣ ಹೃದಯದ ಮೇಲೆಯೇ ಶಿಲಾಬಂಡೆಯೊಂದು ಕಂಡು ಬರಲಿಲ್ಲವೇ? ಅಷ್ಟೇ ಅಲ್ಲ, ಸೂಜಿ ಮೊನೆಯೂರುವಷ್ಟೂ ಸ್ಥಳ ಬಿಟ್ಟುಕೊಡೆನೆಂದು ಕೌರವರು ಕೂಗಾಡಿದ ಧಾಟಿಯಲ್ಲಿ, ಶಿಲಾಬಂಡೆಯ ಹಿಂಬಾಲಕರು ವಿವೇಕಶೂನ್ಯರಾಗಿ ಸ್ವಾಮಿ ವಿವೇಕಾನಂದರ ಸ್ಮಾರಕಾರ್ಥವಾಗಿ ಅಲ್ಲೇನೂ ರಚಿಸಲು ಸ್ಥಳ ಬಿಟ್ಟು ಕೊಡಲಾರೆವೆಂದು ಕಾಲು ಕೆದರಿ ಜಗಳ ಕರೆದರು. ಕೇಂದ್ರದ ಮಂತ್ರಿ ಹುಮಾಯೂನ ಕಬೀರರಂಥಹವರೂ ಅವರಿಗೇನೇ 'ಶಹಭಾಸ್' ಎಂದು ಬಿಟ್ಟರು. ಕ್ರಿಶ್ಚಿಯನರ ಸಂಸ್ಥೆಗಳು, ಮುಸ್ಲಿಂಲೀಗು, ಕಮ್ಯೂನಿಸ್ಟ ಪಕ್ಷಗಳು ಅಲ್ಲದೆ ಅನೇಕ ಕಾಂಗ್ರೆಸಿಗರೂ ವಿವೇಕಾನಂದ ಬಂಗಾಲದಲ್ಲಿಯೇ ಇರಲಿ ಎಂದು ಬಿಟ್ಟರು ಯಾಕೆ?—ಈ ಕ್ರಿಸ್ತೀಯರ ಮತಗಳಿಗಾಗಿ ಬಡಿದಾಟವೇ ನಡೆದು ಹೋಯ್ತು. ಸರಕಾರವೇ ತೆಪ್ಪಗಾಯ್ತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಹಾಗೂ ಪ್ರಜಾಪ್ರತಿನಿಧಿಗಳ ಪಾತ್ರ ಇದೇ ಏನು?

ಕಳೆದ ವರ್ಷ ಇದೇ ಸಮಯ ತಮಿಳುನಾಡಿನಲ್ಲಿ ನಡೆದುದೇನು? ಅಬ್ಬಾ! ನಡೆದ ಪ್ರಾಣಹಾನಿಯೇ, ನಷ್ಟ-ಕಷ್ಟ, ಎಲ್ಲದಕ್ಕಿಂತಲೂ ರಾಷ್ಟ್ರೀಯ ಅಭಿಮಾನದ ಬುಡಕ್ಕನೇ ಇಟ್ಟ ಸುರಂಗ! ದ್ರಾವಿಡ ಮುನ್ನೇಟ್ರ ಕಳಗಂ, ಮುಸ್ಲಿಂಲೀಗು ಮತ್ತು ಸ್ವತಂತ್ರ ಪಾರ್ಟಿಯವರೊಂದಿಗೆ ಕಮ್ಯೂನಿಸ್ಟರು ಹಾಗೂ ಕೆಲ ಕಾಂಗ್ರೆಸಿಗರು ಸೇರಿಕೊಂಡು ನಡೆಸಿದ ಅಟ್ಟಹಾಸವನ್ನು ಕಂಡೂ ಕಾಂಗ್ರೆಸ್ ಸರಕಾರ ಮಂದಹಾಸ ಬೀರಿತ್ತು. ಕಾರಣ?—ಮತದ ಮೇಲಿನ ಮೋಹ.

ನಾಗಾಲೇಂಡಿನಲ್ಲಿ ನಡೆಯುತ್ತಿರುವ ನಗೆಗೇಡಿನ ನಾಟಕವಾದರೂ ಯಾವ ರೀತಿಯದ್ದು? ಬ್ರಿಟನಿನಿಂದ ಪಾದ್ರಿಯೊಬ್ಬ ಬಂದು ಬೀಡು ಬಿಡಬೇಕಾಗಿದೆ ಸಂಧಾನದ ಹೆಸರಿನಲ್ಲಿ, ಅವನಿಗೆ ಜಯಪ್ರಕಾಶ ನಾರಾಯಣರಂತಹವರಿಂದ ಜಯಜಯಕಾರವಾಗುತ್ತಿದೆ. ಹಾಗಾದರೆ ಎಲ್ಲಾ ನಾಗಾಗಳು ಸೇರಿ ಪ್ರತ್ಯೇಕ ನಾಗಾಲೇಂಡ್ ಕೇಳುತ್ತಿದ್ದಾರೆಯೇ? ಕಾಂಗ್ರೆಸ್ ಪಕ್ಷ ಹಾಗೂ ಸ್ವತಂತ್ರ ಪಾರ್ಟಿ ಅವರಿಗೇತಕ್ಕೆ ಅಷ್ಟು ಸಲುಗೆ ತೋರಿಸುತ್ತಿವೆ? ಚುನಾವಣೆಯ ಮೇಲೆಯೇ ಚಕ್ಷುಗಳಿರುವವರು ಇನ್ನೇನು ತಾನೇ ಮಾಡಿಯಾರು?

ಪಂಜಾಬಿ ಸುಬಾದ ಹಠಹದವೂ ಅಷ್ಟೇ. ಪಂಜಾಬ್ ಪ್ರಾಂತ್ಯ ಈಗಲೂ ಇಲ್ಲವೇ? ಪಾಕಿಸ್ತಾನದಲ್ಲಿರುವ ಪಂಜಾಬ್ ಪ್ರದೇಶವೂ ಈ ಪಂಜಾಬಿನೊಂದಿಗೆ ಸೇರಬೇಕೆಂದು ಯಾರಾದರೂ ಚಳುವಳಿ ನಡೆಸಿದಲ್ಲಿ ಅದಕ್ಕೆ ಅರ್ಥವಿದೆ ಎನ್ನಬಹುದು. ಇನ್ನಷ್ಟು ಚಿಕ್ಕದಾಗುತ್ತೇವೆನ್ನುವ ಕುಬ್ಜರ ಪರ ವಾದಿಸುವ ನ್ಯಾಯವಾದಿಗಳು ನಮ್ಮಲ್ಲಿದ್ದಾರೆ. ಇಲ್ಲಾ ಹಾಗೆಯೇ. ಸ್ವತಂತ್ರ ಹಾಗೂ ಕಮ್ಯೂನಿಸ್ಟ್ ಪಾರ್ಟಿಗಳು ಪ್ರತ್ಯೇಕ ಪಂಜಾಬಿ ಸುಬಾ ಆಗಬೇಕೆನ್ನುತ್ತಿವೆ. ಕಾಂಗ್ರೆಸ್ಸಿನ ಅವಸ್ಥೆ ಹೇಳತೀರದು. ಏನು ಮಾಡಬೇಕೆಂಬುದೇ ಅವರಿಗೆ ಗೊತ್ತಿಲ್ಲ. ಭಾರತೀಯ ಜನಸಂಘವೇನೋ ಬಹಳ ಧೈರ್ಯದಿಂದ ಪ್ರತ್ಯೇಕತಾ ಪಿಶಾಚಿಯ ತಲೆಗೆ ಪ್ರಹಾರ ಕೊಡುತ್ತಿದೆ.

ಹೀಗೆ ಭಾಷೆ, ಪ್ರಾಂತ್ಯ, ಮತ, ಪ್ರತ್ಯೇಕತೆ ಮುಂತಾದ ಹಲವಾರು ರಂಗಗಳಲ್ಲಿಳಿದು ಪ್ರಜೆಗಳ ಪಾತ್ರವೇನೆಂದು ನೋಡಬಹುದು. ಹಳೆಯ ತುಷ್ಟೀಕರಣ ನೀತಿಯನ್ನು ನಾವಿನ್ನು ತೊರೆದಿರುವದಿಲ್ಲ. ಅಲಿಘಡದಲ್ಲಿ ಮುಸ್ಲಿಮರ, ಕನ್ಯಾಕುಮಾರಿಯಲ್ಲಿ ಹಾಗೂ ನಾಗಾಲೇಂಡಿನಲ್ಲಿ ಕ್ರಿಸ್ತೀಯರ, ಪಂಜಾಬಿನಲ್ಲಿ ಅಕಾಲಿಗಳ ಮತ್ತು ತಮಿಳು ನಾಡಿನಲ್ಲಿ ಹಿಂದೀ-ವಿರೋಧಿಗಳ ಅಥವಾ ಆಂಗ್ಲ ಭಾಷಾರಾಧಾಕರ ಸಂಖ್ಯೆ ಅಗಣ್ಯವಿರುವದಿಲ್ಲ. ಹಲವೆಡೆಗಳಲ್ಲಿ ಅಧಿಕಾಂಶ ಅವರ ಸಂಖ್ಯೆ ಇರಲಿಕ್ಕಿಲ್ಲ. ಆದರೂ ನಿರ್ಲಕ್ಷಿಸಲ್ಪಡುವಂತಹದ್ದಲ್ಲ. ಹಾಗಿರುವಾಗ ಚುನಾವಣೆಯ ಮೇಲೆಯೇ ಗೃಧ್ರ ದೃಷ್ಟಿ ಇಟ್ಟುಕೊಂಡಿರುವ ರಾಜಕೀಯ ಪಕ್ಷಗಳು ಅಂತಹ ಸಂದರ್ಭಗಳನ್ನು ಸುಮ್ಮಗೆ ಬಿಟ್ಟಾವೆ? ಅದರಲ್ಲೂ ಅಲಿಘಡ ವಿಶ್ವ ವಿದ್ಯಾಲಯದ ಆಸುಪಾಸಿನಲ್ಲಿರುವವರು ಮಹಮ್ಮದೀಯರೆಂದರೆ ಕೇಳಬೇಕೇ? ಅಲ್ಲಿ ನಡೆದದ್ದು ವಿಶ್ವವಿದ್ಯಾಲಯದ ಅಧಿಕಾರಿಗಳ ನಡುವೆ ಘರ್ಷಣೆ. ಮೊಸರು ಕದ್ದು ತಿಂದು ಕೈಯನ್ನು ಮೇಕೆಯ ಮುಖಕ್ಕೆ ಸರಿ ಸವರಿ ಬಿಟ್ಟಂತೆ ಗಲಾಟೆ ಜೋರಾದರೂ ಪಾಪದ ಹಿಂದೂಗಳತ್ತ ಕೈ ತೋರಿಸಿಬಿಟ್ಟರು; ಮತೀಯ ಜ್ವಾಲೆ ಫಲಿಸಿತು. ನೈಜ ಪರಿಸ್ಥಿತಿಯತ್ತ ಅನ್ಯಾ ರಾಜಕೀಯ ಪಕ್ಷಗಳು ಅಷ್ಟು ಗಮನ ಕೊಡಲೇ ಇಲ್ಲ. ಇಂತಹದ್ದೇ ಪರಿಸ್ಥಿತಿ ಕನ್ಯಾಕುಮಾರಿಯಲ್ಲಿ ಕೂಡಾ. ನ್ಯಾಯ-ಅನ್ಯಾಯ, ಮಾನಾಪಮಾನದ ಪರಿವೆಯೂ ಅವುಗಳಿಗಿಲ್ಲ. ಅವುಗಳಿಗೆ ಬೇಕಾಗಿರುವದು ಕೇವಲ ಮತ, ಮತ, ಮತ. ಹೇಗಾದರೂ ತಮ್ಮ ಅಭ್ಯರ್ಥಿಗಳು ಆರಿಸಲ್ಪಡಬೇಕು; ದಿಲ್ಲಿ ಗದ್ದುಗೆಯನ್ನು ಹಿಡಿಯಬೇಕು. ಅದಕ್ಕಾಗಿ ಅದೆಷ್ಟು ಕೆಳಮಟ್ಟಕ್ಕೆ ಬರಲೂ ಸದಾ ಸಿದ್ಧ! ಈ ರೀತಿ ರಾಜಕೀಯ ರಾಡಿಯಲ್ಲಿ ರಾರಾಜಿಸುತ್ತಿರುವ ರಾಜಕೀಯ ಪುಢಾರಿಗಳಿಗೆ ಮತದಾನ ಮಾಡಿ ಕೈಕಟ್ಟಿ ಕುಳಿತು ಕೊಳ್ಳುವದೇ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರವೇನು? ಅಲ್ಲ, ಬೇರಿನ್ನೇನು ಮಾಡಲು ಸಾಧ್ಯ? ಒಂದು ಸಲ ಮತದಾನ ಮಾಡಿದೆವೆಂದರೆ ಮುಗಿಯಿತು ಕಥೆ; ಮತ್ತೆ ನಿಶ್ಚಿತ ಅವಧಿ ಮುಗಿಯುವ ತನಕ ಅದೇನೂ ಮಾಡಲೂ ಸಾಧ್ಯ ಇರುವದಿಲ್ಲ. ಎಲ್ಲವನ್ನೂ ಸಹಿಸಿ ನುಂಗಿ ನೀರು ಕುಡಿಯುತ್ತಿರಬೇಕು.

ಇದು ನಾಣ್ಯದ ಒಂದು ಮುಖವಿದೆ. ಅದಕ್ಕೆ ಇನ್ನೊಂದು ಮುಖವೂ ಇದೆ. ಇಲ್ಲಿ ಪ್ರಜಾಪ್ರತಿನಿಧಿಗಳತ್ತವೇ ಎಲ್ಲಾದಕ್ಕೂ ಪ್ರಜೆಗಳು ನೋಡುತ್ತ ಕಾಯುತ್ತಿರುವದಿಲ್ಲ. ಅವರು ಅದೆಂತಹ ಅಗ್ನಿಪರೀಕ್ಷೆಗೂ ಅಂಜುವದಿಲ್ಲ; ಅದನಿತೂ ಅಳು

(ಇಪ್ಪತ್ತನೇ ಪುಟ ನೋಡಿರಿ)

ಕೆ. ವೆಂಕಟ್ರಾಯಾಚಾರ್ಯ

ಪರ್ಯಾಯ ಮಹೋತ್ಸವ

(ಕೆಲವು ವಿಚಾರಗಳು)

ಉಡುಪಿಯ ಪರ್ಯಾಯೋತ್ಸವ ಆಕರ್ಷಣೀಯವಾದುದು, ಯಾತ್ರಾರ್ಥಿಗಳ ನಯನಾರಾಮವಾದುದು. ಈ ಹೆಸರಾಂತ ಉತ್ಸವದ ಬಗ್ಗೆ ಕೆಲವು ವಿಚಾರಗಳನ್ನು ನೀವು ಅವಶ್ಯ ತಿಳಿದುಕೊಳ್ಳಬೇಕು.

ಉಡುಪಿ ಕ್ಷೇತ್ರದಲ್ಲಿ ಶ್ರೀಕೃಷ್ಣ ಪೂಜೆಯ ಬಗ್ಗೆ ಅಷ್ಟಮಠಗಳ ಸ್ವಾಮಿಗಳ ಪರ್ಯಾಯ ಮಹೋತ್ಸವವು 2 ವರ್ಷಗಳಿಗೊಮ್ಮೆ ನೆರವೇರುತ್ತದೆ. ಈ ಬಗೆಗೆ ಇಲ್ಲಿ ಕೆಲವು ವಿಚಾರಗಳು ಸಂಕಲಿತವಾಗಿವೆ.

ಸ್ಥಳ—ನಾಮ—ವಿಚಾರ— ದಕ್ಷಿಣಾಪಥದಲ್ಲಿ 'ರಜತ ಪೀಠಪುರ'ವೆಂದು ಪ್ರಸಿದ್ಧವಾಗಿ ಈ ಉಡುಪಿ ಕ್ಷೇತ್ರವು ರಾರಾಜಿಸುತ್ತಿದೆ. ಮಂಗಳೂರಿಂದ ಉತ್ತರಕ್ಕೆ 37 ಮೈಲು ದೂರದಲ್ಲಿಯ ಪ್ರಾಕೃತಿಕ ಸೌಂದರ್ಯಾನ್ವಿತವಾದ ಈ ಪುಣ್ಯಕ್ಷೇತ್ರವು ಭಾರತೀಯರಿಗೆ ಮಾತ್ರವಲ್ಲ ವಿದೇಶೀಯರಿಗೂ ವಿದಿತವಾದುದೇ ಆಗಿದೆ: ಪಶ್ಚಿಮಕ್ಕೆ ಸಮುದ್ರ ತೀರದಲ್ಲಿ 'ಮಲ್ಪೆ' ಎಂಬಲ್ಲಿ ನೌಕಾ ನಿಲ್ದಾಣ (ಬಂದರು); ಈಶಾನ್ಯದಲ್ಲಿ 'ಮಣಿಪಾಲ'ವೆಂಬಲ್ಲಿ ಅನೇಕ ವಿದ್ಯಾಲಯಗಳು (ವೈದ್ಯಕೀಯ ಕಲಾ ಶಾಲಾದಿಗಳು); ದಕ್ಷಿಣಕ್ಕೆ 'ಉದಯಪುರ (ಉದ್ಯಾವರ)' ಹಾಗೂ ಉತ್ತರಕ್ಕೆ 'ಬಾರಕೂರ್' ಎಂಬ ಚಾರಿತ್ರಿಕ ಪ್ರಸಿದ್ಧಗಳಾದ ರಾಜಧಾನೀ ಸ್ಥಳಗಳೂ ಈ ಕ್ಷೇತ್ರಕ್ಕೆ ಅನನ್ಯಾಪಹವಾದ ಶೋಭೆಯನ್ನೂ ಪ್ರಾಶಸ್ತ್ಯತೆಯನ್ನೂ ಒದಗಿಸುತ್ತವೆಯೆಂಬುದು ನಮಗೆ ಸಂತೋಷಾಸ್ಪದವು!

ರಜತ ಪೀಠಪುರವೆಂಬ ಹೆಸರಿನ ನಿರುಕ್ತವು ಪೌರಾಣಿಕ ಕಥಾ ರೀತಿಯಲ್ಲಿ ಪ್ರಚಲಿತವಾಗಿದೆ. "ಉಡುಪಿ" ಯೆಂಬ ಹೆಸರಿನ ನಿರ್ವಚನದ ಬಗ್ಗೆ ಕೆಲವರು ಸಂಸ್ಕೃತ ಭಾಷಾ ರೀತಿಯಲ್ಲಿ ಹೇಳುವರು; "ಉಡುಪನ (ಚಂದ್ರನ) ತಪೋಭೂಮಿ" ಯೆಂದು! ಪರಂತು, 'ಉಡುಪು' ಎಂಬ ಶಬ್ದದ ಸಪ್ತಮೀ ವಿಭಕ್ತಿ ರೂಪವಾಗಿ 'ಉಡುಪಿನ' ಎಂದು ಕರ್ನಾಟಕ ಭಾಷೆಯ ಶಿಲಾಶಾಸನಗಳಲ್ಲೂ ಪ್ರಾಚೀನ ಪತ್ರಗಳಲ್ಲೂ ಹೇಳಿದುದರಿಂದಲೂ; 'ಒಡಿಪು' ಇತ್ಯಪಭ್ರಷ್ಟ (ತದ್ಭವ) ಭಾಷೆಯಲ್ಲಿ ಹೇಳುವುದೆಂಬ 'ಮಧ್ವವಿಜಯ' ಗ್ರಂಥಕಾರನಿಂದ ಬರೆಯಲ್ಪಟ್ಟ 'ಭಾವಪ್ರಕಾಶಿಕೆ'ಯಲ್ಲಿರುವುದರಿಂದಲೂ, ಈ ಕ್ಷೇತ್ರ—ಸ್ಥಳನಾಮಗಳು ಮೌಲಿಕವಾಗಿ ತೌಳವ ಪ್ರಾದೇಶಿಕ—ಭಾಷಾತ್ಮಕವೆಂದು ಸ್ಪಷ್ಟವಾಗಿ ಕಂಗೊಳಿಸುತ್ತವೆ.

ಇಲ್ಲಿರುವ ಪ್ರಾಚೀನತಮಗಳಾದ, ಅನಂತನಾಥ ಚಂದ್ರನಾಥಾಲಯಗಳು ಜೈನ ಮತೀಯಗಳಾಗಿವೆ. ಇವುಗಳ ಶಿಲ್ಪ ವೈಚಿತ್ರ್ಯ ಹಾಗೂ ಅನಂತನಾಥಾಲಯದ ಮುಂಗಡೆಯ ಮಾನಸ್ತಂಭವೂ 'ಇವೆರಡೂ ಜೈನಾಲಯ'ಗಳೆಂದು ನಿರ್ದೇಶಿಸುತ್ತವೆ. ಇವು ಕಾಲಕ್ರಮದಲ್ಲಿ ಶೈವ ದೇವಾಲಯಗಳಾಗಿ ಪರಿವರ್ತಿತಗಳಾಗಿ "ಅನಂತೇಶ್ವರ—ಚಂದ್ರೇಶ್ವರ"ಗಳೆಂಬ ಹೆಸರಿಂದಲೇ ಈಗಲೂ ಪ್ರಸಿದ್ಧಗಳಾಗಿವೆ; ಹಾಗೆಯೇ ಶ್ರೀ ಮಧ್ವಾಚಾರ್ಯರ ಜೀವನ ಕಾಲದ ಬಳಿಕ ಮಾಧ್ವ ದೇವಾಲಯಗಳೆಂದು ವ್ಯವಹೃತಗಳಾದುವೆಂದು ತಿಳಿಯುತ್ತವೆ (ಶ್ರೀ ವಾದಿರಾಜ ಸ್ವಾಮಿಗಳ 'ತೀರ್ಥ ಪ್ರಬಂಧ' ನೋಡಿರಿ). ಒಟ್ಟಿನಲ್ಲಿ, ಈ ಕ್ಷೇತ್ರದ—ದೇವಾಲಯಗಳ ನಾಮಗಳ ಪರ್ಯಾಯವು (ಪರಿವರ್ತನವು) ಕಾಲಾಂತರದಲ್ಲಿ ನಡೆದುದೆಂದು ಹೊಳೆಯುತ್ತದೆ.

ಶ್ರೀ ಮಧ್ವಾಚಾರ್ಯಾವತಾರ ವಿಚಾರ— ಉಡುಪಿ ಕ್ಷೇತ್ರದ ಅನತಿ ದೂರದ ಪಾಜಕ ಗ್ರಾಮದಲ್ಲಿ ವಾಯು ದೇವನು ಶ್ರೀ ಮಧ್ವಾಚಾರ್ಯ ರೂಪದಿಂದ ಅವತರಿಸಿ, ಆಸೇತು ಹಿಮಾಚಲ ಭಾರತದಲ್ಲಿ ಅನೇಕಶಃ ಸಂಚರಿಸಿ, 'ದ್ವೈತ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ'ನೆಂದು ಹೆಸರುಗೊಂಡು, ಆಸ್ತಿಕರಿಗೂ ಭಾವುಕರಿಗೂ ಉಪಕರಿಸಿದನೆಂದು ಪೌರಾಣಿಕರೂ ಚಾರಿತ್ರಿಕರೂ ಒಪ್ಪಿದ್ದಾರೆ. ಮಹಾತ್ಮರೆಲ್ಲರೂ ದೇವರ ಅವತಾರವೆಂದು ದೇಶ ವಿದೇಶಗಳಲ್ಲಿ ಪ್ರಾಚೀನಾರ್ವಾಚೀನ ಗ್ರಂಥಗಳಲ್ಲಿ ಹೇಳಲಾಗಿದೆ. ಉದಾಹರಣವಾಗಿ ಶ್ರೀರಾಮ ಭಕ್ತಾಗ್ರೇಸರನಾದ ಹನುಮಂತನೂ, ಶ್ರೀ ಕೃಷ್ಣ ಭಕ್ತಾಗ್ರೇಸರನಾದ ಭೀಮಸೇನನೂ, ಶ್ರೀ ವೇದವ್ಯಾಸ ಭಕ್ತಾಗ್ರೇಸರರಾದ ಶ್ರೀಮಧ್ವಾಚಾರ್ಯರೂ ವಾಯುದೇವನ ಅವತಾರಗಳೆಂದು ತಿಳಿಯಲಾಗಿದೆ.

ಶ್ರೀ ಮಧ್ವಾಚಾರ್ಯ ಜೀವನ ಕಾಲ ವಿಚಾರ

ಶ್ರೀ ಪೂರ್ಣಪ್ರಜ್ಞನೆಂದು, ಆನಂದ ತೀರ್ಥನೆಂದು ಹೆಸರಿಂದ ಶ್ರೀ ಮಧ್ವಾಚಾರ್ಯರು ಪ್ರಸಿದ್ಧರಾಗಿದ್ದಾರೆ. ಇವರ ಜೀವನ ಕಾಲವಿಚಾರ ಬೇರೆಡೆ ನನ್ನ ಲೇಖದಲ್ಲಿ ಬಂದಿದೆ. ಶಾಲಿವಾಹನ ಶಕ 1121ರಲ್ಲಿ (ಇಸವಿ 1199-1200) ಇವರು ಹುಟ್ಟಿ, ಶಾ. ಶ. 1200 (ಇಸ್ವಿ 1278-9)ರಲ್ಲಿ ನಿರ್ಯಾಣರಾದರೆಂದು (ಪುಣೆಯ ಡಾ. ಪಿ. ಕೆ. ಗೋಡೆಯವರ ಸಂಭಾವನಾ ಗ್ರಂಥ ಹಾಗೂ 'ಸಾಹಿತ್ಯದ ಹಿನ್ನೆಲೆ' ಯೆಂಬ ನನ್ನ ಗ್ರಂಥದಲ್ಲಿ ನೋಡಿರಿ).

ಉಡುಪಿ ಕ್ಷೇತ್ರದ ಅಷ್ಟ ಮಠಗಳಲ್ಲಿ ಒಂದಾದ ಪೇಜಾವರ ಮಠದ ಕೈಫಿಯತ್ತಿನಲ್ಲಿ ಶ್ರೀ ಮಧ್ವಾಚಾರ್ಯ ಜೀವನ ಕಾಲಾದಿ ವಿಚಾರವಿದೆ. (ಮದ್ರಾಸಿನ ಪ್ರಾಚೀನ ಹಸ್ತಾಕ್ಷರ ಗ್ರಂಥಾಲಯ. ಡಿ. 1827)-

ಶಾ.ಶ. 1121 (ಇ. 1199-1200) ಕಾಲಯುಕ್ತಾಕ್ಷಿ ಸಂವತ್ಸರದ ಮಾಘ ಶುಕ್ಲ ಸಪ್ತಮಿಯಂದು ಶ್ರೀ ಮಧ್ವಾಚಾರ್ಯರ ಅವತಾರವಾದುದು.

ಶಾ. ಶ. 1128 (ಇ. 1206-7) ಕ್ರೋಧನ ಪುಷ್ಯ ಶುದ್ಧ ಪಂಚಮಿಯಂದು ಇವರ ಉಪನಯನವಾದುದು.

ಶಾ. ಶ. 1130 (ಇ. 1208) ಪ್ರಭವ ವೈಶಾಖ ಶುದ್ಧ ತೃತೀಯೆಯಂದು ಸನ್ಯಾಸಾಶ್ರಮ ಸ್ವೀಕಾರವಾದುದು.

ಶಾ. ಶ. 1160 (ಇ.1238—9) ಹೇವಿಳಂಬಿ ಮಾಘ ಶುದ್ಧ ತೃತೀಯೆಯಂದು "ಉಡುಪಿ" ಕ್ಷೇತ್ರದಲ್ಲಿ ಶ್ರೀ ಕೃಷ್ಣನ ಪ್ರತಿಷ್ಠೆಯಾದುದು.

ಶಾ. ಶ. 1180 (ಇ. 1258) ಪಿಂಗಲ ವೈಶಾಖ ಶುದ್ಧ ಸಪ್ತಮಿಗೆ ಉಡುಪಿಯ 8 ಮಠಗಳ ಸ್ವಾಮಿಗಳಿಗೂ, ಉತ್ತರಾದಿ ಮಠದ ಪದ್ಮನಾಭ ತೀರ್ಥರಿಗೂ ಸನ್ಯಾಸಾಶ್ರಮ ದಾನವು.

ಶಾ. ಶ. 1200 (ಇ. 1278-9) ಈಶ್ವರ ಮಾಘ ಶುದ್ಧ ನವಮಿಗೆ ಶ್ರೀ ಮಧ್ವಾಚಾರ್ಯರ ನಿರ್ಯಾಣವೆಂದಿದೆ.

ಈ ಘಟನೆಗಳಲ್ಲಿ ಶ್ರೀ ಕೃಷ್ಣ ಪ್ರತಿಷ್ಠಾಪನೆಗೂ ಉಡುಪಿ ಅಷ್ಟಮಠಗಳ ಮೂಲ ಸ್ವಾಮಿಗಳಿಗೆ ಆಶ್ರಮದಾನಕ್ಕೂ ಇಪ್ಪತ್ತು ವರುಷಗಳ (ಶಾ. ಶ. 1160—1180 ಇಸವಿ 1238—9ರಿಂದ 1258ರ ತನಕ) ಅಂತರವಿದೆ. ಆದುದರಿಂದ ಈ ಮಧ್ಯದ ಕಾಲದಲ್ಲಿ ಶ್ರೀ ಮಧ್ವಾಚಾರ್ಯರೇ ಉಡುಪಿ ಕ್ಷೇತ್ರದಲ್ಲಿ ಶ್ರೀ ಕೃಷ್ಣ ಪೂಜೆಯನ್ನು ಮಾಡುತ್ತಿದ್ದರೆಂದು ಕಾಣುತ್ತದೆ. ಉಡುಪಿಯ ಅಷ್ಟಮಠಗಳಲ್ಲೊಂದಾದ ಸೋದಾ ಮಠದ ಮೂಲಸ್ವಾಮಿಯೂ, ತನ್ನ ತಮ್ಮನೂ ಆದ ವಿಷ್ಣುತೀರ್ಥರಿಗೆ ಹಾಗೂ ಉತ್ತರಾದಿ ಮಠದ ಪದ್ಮನಾಭ ತೀರ್ಥರಿಗೆ ಆಶ್ರಮದಾನಕ್ಕಿಂತ ಮೊದಲಲ್ಲೂ ಅನಂತರದಲ್ಲೂ ಶ್ರೀ ಮಧ್ವಾಚಾರ್ಯರಿಂದ ಹಲವು ಶಿಷ್ಯರಿಗೆ ಆಶ್ರಮದಾನವಾದುದೆಂದು ಶ್ರೀ ಮಧ್ವ ವಿಜಯ ಗ್ರಂಥದಿಂದ ತಿಳಿಯುವುದರಿಂದ ("ಅನಯೋಃ ಪ್ರಥಮೋ ಶಿಷ್ಯಾಃ ಚರಮೇ ಚಾಭವನ್ನಿಹ" ಮಧ್ವವಿ. 15—127), ಅಷ್ಟಮಠಗಳ ಸ್ವಾಮಿಗಳಿಗೂ ಉತ್ತರಾದಿ ಮಠದ ಸ್ವಾಮಿಗಳಿಗೂ ಒಮ್ಮೆಲೆ ಆಶ್ರಮದಾನವಾದುದೆಂಬ ಪ್ರಚಲಿತ ವಾರ್ತಾನುಸಾರ ಹಾಗೂ ಈ ಮೇಲೆ ಬರೆದ ಹಸ್ತಾಕ್ಷರ ಗ್ರಂಥಾನುಸಾರ ಹೇಳಿಕೆಯು ಇದರಿಂದಾಗಿ ಬಿಡಬಹುದು. ಈ ಮೇಲಿನ ಇಪ್ಪತ್ತು ವರ್ಷಗಳ ಅಂತರದಲ್ಲಿ ಶ್ರೀ ಮಧ್ವಾಚಾರ್ಯರೂ, ಅವರ ಕೆಲವು ಮಂದಿ ಶಿಷ್ಯರೂ (?) ಉಡುಪಿನ ಶ್ರೀ ಕೃಷ್ಣನ ಪೂಜಾಕ್ರಮವನ್ನು ನೆರವೇರಿಸುತ್ತಿದ್ದರೆಂದು ತಿಳಿಯಲಾಗುತ್ತದೆ. ಅಷ್ಟಮಠಗಳ ಸ್ವಾಮಿಗಳಲ್ಲಿ ಪ್ರತಿಯೊಬ್ಬರು ಪ್ರತ್ಯೇಕಶಃ ಎರಡು ವರ್ಷ ಶ್ರೀ ಕೃಷ್ಣಪೂಜೆಯನ್ನು ಪರ್ಯಾಯತಃ ಪೂರೈಸಿ, ಉಳಿದ ಹದಿನಾಲ್ಕು ವರ್ಷ ದ್ವೈತ ಸಿದ್ಧಾಂತ ಪ್ರಸಾರಣಕ್ಕೂ, ಶಿಷ್ಯಾನುಗ್ರಹಕ್ಕೂ, ಅರ್ಥಸಂಚಯನಕ್ಕೂ

(ಹತ್ತೊಂಭತ್ತನೇ ಪುಟ ನೋಡಿರಿ)

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 4774.
(ಮೈಸೂರು, ಮದ್ರಾಸು ಸಂಸ್ಥಾನಗಳಲ್ಲಿ 'ಸುವರ್ಣ ಪದಕ' ಪಡೆದಿರುವ ಹೆಸರಾಂತ ಸುವರ್ಣ ಗೃಹ)
ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್,
ಚಿನ್ನ ಮತ್ತು ವಜ್ರದ ವ್ಯಾಪಾರಿಗಳು, (ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು-1.
ತಾಜಾ ಎಂಟ್ವೆರ್ಪ್ ಬ್ಲೂಟೆಂಟ್ ವಜ್ರ, ಚಿನ್ನಾಭರಣ (14 ct.) ಮತ್ತು ವರ್ಗಕ್ಕೆ ಬೇಕಾದ
ಬೆಳ್ಳಿ ಸಾಮಾನುಗಳು ಸದಾ ಮಾರಾಟಕ್ಕೆ ಸಿದ್ಧವಾಗಿವೆ.
ಅವಿರತವಾಗಿ ಸುಮಾರು ೪೭ ವರ್ಷಗಳಿಂದ ಜನಸೇವೆ ಮಾಡುತ್ತಿರುವ ಪ್ರಪ್ರಥಮ ವಜ್ರ ವ್ಯಾಪಾರಿಗಳು
ಸ್ಥಾಪನೆ: 1919 ಮಾಲಿಕ: ಕೆ. ಕೆ. ಆರ್. ಶೇಟ್.

They're here!

The '1210' Series
TATA MERCEDES - BENZ VEHICLES

Authorised Dealers:

ARVIND MOTORS

BALMATTA ROAD, MANGALORE.

Telephone: 4762 Telegram: 'ARVIND'

ದಿ ಶಂಕರ್ ವಿಠಲ್ ಮೋಟಾರ್ ಕಂಪೆನಿ ಲಿಮಿಟೆಡ್

ಮಂಗಳೂರು

(ದಕ್ಷಿಣ ಕನ್ನಡ ಜಿಲ್ಲೆ)

ಹದಿನೇಳನೆಯ ಗಣರಾಜ್ಯ ದಿನದಂದು

ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ, ಪ್ರಯಾಣಿಕರಿಗೂ ಮತ್ತು ನಾಗರಿಕರಿಗೂ ಸಹ ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು ಸಂತೋಷಪಡುತ್ತೇವೆ.

THE SHANKER VITTAL MOTOR COMPANY LIMITED

MANGALORE

ಮನಸ್ಸು ಬ:

ಪರಮ ಪವಿತ್ರ ತೀರ್ಥಕ್ಷೇತ್ರ

ಆಧ್ಯಾತ್ಮಿಕತೆಯೊಡನೆ ಬಂಗಾರಕ್ಷೇತ್ರ

ಶ್ರೀ ಸುಬ್ರಹ್ಮಣ್ಯನ ದರ್ಶನ ಪಡೆಯದವರು ವಿರಳ, ಆತನ ಹೆಸರು ಕೇಳದವರು ಮತ್ತೂ ವಿರಳ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕುಮಾರ ಪರ್ವತದ ಪಾದತಲದಲ್ಲಿ ವಿರಾಜಿಸುವ ಈ ಕ್ಷೇತ್ರದ ಹಿಂದೆ ಪೌರಾಣಿಕತೆ ತುಂಬ ಅಡಗಿದೆ. ಇಲ್ಲಿ ವಾಸುಕಿಯು ಕುಮಾರ ಸ್ವಾಮಿಯ ಕಲಾಂಶಭೂತನಾಗಿ ನೆಲಸಿರುವನೆಂದು ಐತಿಹ್ಯ ಸಾರುತ್ತದೆ. ಆತನನ್ನೇ 'ಸುಬ್ರಹ್ಮಣ್ಯ" ಎಂದು ಕರೆಯುತ್ತಾರೆ.

• ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಅನುಗ್ರಹ ಅಪಾರ. ಆತನ ಕೃಪಾಕಟಾಕ್ಷದಿಂದಲೇ ಅಪಸ್ಮಾರ, ಚರ್ಮವ್ಯಾಧಿ ಮೊದಲಾದ ಭಯಾನಕ ರೋಗಗಳು ದೂರವಾಗುವುವು; ಇಲ್ಲಿನ ತೀರ್ಥದಲ್ಲಿ ಮಿಂದರೆ, ಪಾಪ ವಿಮೋಚನೆಯಾಗುವುದು—ಇವೆಲ್ಲ ಭಕ್ತ ಮಹಾನುಭಾವರ ಸ್ವಾನುಭವಗಳು: ಪರಶುರಾಮ, ಸಾಂಬ, ಅದಿತಿ ಮೊದಲಾದ ಪೌರಾಣಿಕ ಮಹಾ ವ್ಯಕ್ತಿಗಳು ತಾವು ಮಾಡಿದ ಪಾಪವನ್ನು ಕಳೆಯಲು ಶ್ರೀ ಸುಬ್ರಹ್ಮಣ್ಯ ದರ್ಶನ ಲಾಭ ಪಡೆದರು ಎಂದು ಶ್ರೀ ಕ್ಷೇತ್ರದ ಇತಿಹಾಸ ಸಾರುತ್ತದೆ.

ನಿಸರ್ಗದ ಮಡಿಲಲ್ಲಿ ಬೆಳೆದು ಬಂದಿರುವ ಸುಬ್ರಹ್ಮಣ್ಯ ಪ್ರಕೃತಿ ಪ್ರೇಮಿಗಳ ಆಡುಂಬೊಲವಾಗಬಹುದು; ಅಂತೆಯೇ ಭಕ್ತ ಸಮುದಾಯದ ಇಷ್ಟಾರ್ಥ ಸಿದ್ಧಿಯಾಗುವ ಪರಮ ಪಾವನ ಪುಣ್ಯ ಭೂಮಿ. ಅನೇಕರು ಶ್ರೀ ಕ್ಷೇತ್ರ ದರ್ಶನ ಮಾತ್ರದಿಂದಲೇ ನಿರೋಗಿಗಳಾದರು; ಕೆಲವರು ಮಂತ್ರಸಿದ್ಧಿ, ತಪಸ್ಸಿದ್ಧಿಯನ್ನು ಹೊಂದಿದರು; ಸ್ವಾಮಿಯ ಸೇವಾಫಲವಾಗಿ ಸಕಲಾಭೀಷ್ಟ ಸಿದ್ಧರಾಗಿರುವರು; ಶಾಪ ಪೀಡಿತರು ಶಾಪಮುಕ್ತರಾಗಿರುವರು. ಇಂತಹ ಹಲವು ನಿದರ್ಶನಗಳು ಇಂದಿಗೂ ಗೋಚರಿಸುತ್ತಿವೆ.

ದೇವಾಲಯದಲ್ಲಿ ನಾನಾ ಬಗೆಯ ಸೇವೆಗಳು ನಡೆಯುತ್ತವೆ. ವರ್ಷಾವಧಿ ಜಾತ್ರೆಯ ವೇಳೆ (ಚಂಪಾ ಷಷ್ಠಿ) ಮಾಡುವ ವಿಚಿತ್ರ ರೀತಿಯ 'ಮಡೆ ಸ್ನಾನ' (ಎಂಜಲೆಲೆಯ ಮೇಲೆ ಹೊರಳಾಡಿಕೊಂಡು ಹೋಗುವುದು) ವು ಒಂದು. ಸುಮಾರು ಒಂದು ಮೈಲು ದೂರದ ಮತ್ಸ್ಯತೀರ್ಥದಿಂದ ದರ್ಪಣತೀರ್ಥದ ವರೆಗೆ ಈ ವಿಚಿತ್ರ ಸೇವೆ ಮಾಡುವುದು ಅನನ್ಯ ಭಕ್ತಿಯ ಸಂಕೇತವಲ್ಲದೆ ಮತ್ತೇನು? ಇದೊಂದರಿಂದಲೇ ಶ್ರೀ ಕ್ಷೇತ್ರದ ಮಹಿಮಾತಿಶಯವನ್ನು ಊಹಿಸಿ ತಿಳಿದುಕೊಳ್ಳಬಹುದು.

ಶ್ರೀ ಸುಬ್ರಹ್ಮಣ್ಯನ ಮಹಿಮೆಯೊಂದಿಗೆ ಇನ್ನಿತರ ಪ್ರೇಕ್ಷಣೀಯ ಸ್ಥಳಗಳೂ ಇಲ್ಲಿವೆ. ದೇವಾಲಯದ ಪಕ್ಕದಲ್ಲೇ ತಲೆಯೆತ್ತಿ ನಿಂತಿದೆ ಏಳು ಹೆಡೆಯ ಹಾವಿನಂತಿರುವ ಬೃಹತ್ ಪರ್ವತಶ್ರೇಣಿ. ಇದು ಅರಣ್ಯಮಯ ಜತೆಗೆ ದುರ್ಗಮ. ಶ್ರೀ ಕುಮಾರ ಸ್ವಾಮಿಯು ನರಕಾಸುರ ಸಂಹಾರಕ್ಕಾಗಿ ಸೇನಾಧಿಪತ್ಯ ವಹಿಸಿದ ಉನ್ನತ ಪೀಠವಿದು. ಕುಮಾರ ಧಾರಾನದಿ ಇಲ್ಲಿಂದಲೇ ಹುಟ್ಟುತ್ತದೆ. ಕ್ಷೇತ್ರದ ಪುರಾಣಕ್ಕೆ ಸಂಬಂಧಿಸಿದ ಆದಿ ಸುಬ್ರಹ್ಮಣ್ಯ ಬಿಲದ್ವಾರ, ಕುಮಾರ ಧಾರೆ, ಮತ್ಸ್ಯತೀರ್ಥ, ದರ್ಪಣ ತೀರ್ಥ ಇತ್ಯಾದಿ ದೇವಳದ ಬಾಹ್ಯದಲ್ಲಿವೆ; ಒಳಗಡೆ ಭೈರವ, ಉಮಾ ಮಹೇಶ್ವರ, ಸಂಪುಟ ನರಸಿಂಹ ಹೊಸಳಿಗಮ್ಮ ದೇವರೂ ಇದ್ದಾರೆ.

ದೇವಾಲಯದಲ್ಲಿ ನಡೆಯುವ ಕಾಲಾವಧಿ ಉತ್ಸವಗಳು ವೈಭವದಿಂದ ನೆರವೇರುತ್ತವೆ. ಶೇಷವಾಹನ, ಅಶ್ವವಾಹನ, ಮಯೂರ ವಾಹನ ಪುಷ್ಪರಥ, ಬಂಡಿ, ಪಾಲಕಿಗಳಲ್ಲಿಯೂ ಅಲಂಕೃತ ರಥಗಳಲ್ಲಿಯೂ ಉತ್ಸವಗಳು ನಡೆಯುವುವು—ಇವು ನಯನ ಮನೋಹರ ಮಾತ್ರವಲ್ಲ; ಭಕ್ತಿ ಪ್ರೇರಕವೂ ಆಗಿರುವುವು. ಆದುದರಿಂದಲೇ ಶ್ರೀಕ್ಷೇತ್ರಸಂದರ್ಶಿಸುತ್ತಿರುವ ಯಾತ್ರಾರ್ಥಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತದೆ.

ಕ್ಷೇತ್ರದ ಪೌರಾಣಿಕ ಹಿನ್ನೆಲೆಯಿದ್ದ ಮಾತ್ರಕ್ಕೆ ಅದು ಹೆಸರು ಪಡೆಯುವುದ... ...ವಿಲ್ಲ; ವ್ಯಾವಹಾರಿಕ ಮತ್ತು ಸಾಮಾಜಿಕ ರಂಗದಲ್ಲಿಯೂ, ದೇಗುಲಗಳು ವಹಿಸುವ ಪಾತ್ರವನ್ನೂ ಅದು ಅವಲಂ...



ಭಕ್ತರ ಕಣ್ಣುಗಳಿಗೆ ತಂಪು ನೀಡುವ ಮಯೂರ ವಾಹನೋತ್ಸವ.



...ಕ್ತ ಜನರ ಸಹಾಯದಿಂದ ಕಟ್ಟಿಸಲಾದ ಛತ್ರಗಳ ಬೃಹತ್ ಶ್ರೇಣಿ.

ಅವಭೃಥೋತ್ಸವ. ಬಲಗ...
ಮೆನೇಜರ್ ಶ್ರೀ ಎಸ್...

ಪ್ರಜಾರಾಜ್ಯ ಸಂಚಿಕೆ, ೧೯೬೬

ನವಯುಗ

ಣ್ಣು ತಣಿಸುವ

- ಶ್ರೀ ಸುಬ್ರಹ್ಮಣ್ಯ

ತ್ರೆಯ ಸಮ್ಮೇಳನವಾದರೆ ಸಂತಾಗುವುದು.

ಸಿದೆ. ಆಧ್ಯಾತ್ಮಿಕ ಮತ್ತು ವ್ಯಾವಹಾರಿಕತೆಯ ಯಶಸ್ವೀ ಸಮ್ಮೇಳನದಿಂದ ಮಾತ್ರವೇ ಅವುಗಳ ಮಹಿಮೆ ಇಂದು ಬೆಳೆಯುವುದು ಸಾಧ್ಯ. ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಧರ್ಮದರ್ಶಿಗಳು ಈ ದಿಸೆಯಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದಾರೆ.

ಒಂದು ಕಾಲದಲ್ಲಿ ಸುಖಸಂಮೃದ್ಧಿಯಿಂದ ತುಂಬಿ ತುಳುಕಾಡುತ್ತಿದ್ದ ಶ್ರೀ ಕ್ಷೇತ್ರವು ದುರಾಡಳಿತೆ, ಅವ್ಯವಸ್ಥೆ, ರೋಗರುಜಿನ ಮೊದಲಾದುವುಗಳಿಂದ ದುಃಖದ ಬೀಡಾಯಿತು; ಮಲೆನಾಡಿನ ಕೊಂಪೆಯಾಯಿತು. ಆದರೆ, ಶ್ರೀ ಕ್ಷೇತ್ರದ ಮಹಿಮಾತಿಶಯದಿಂದಾಗಿ ಅದು ಮತ್ತೆ ಇಂದು ಜಾಗ್ರತವಾಗಿದೆ. ಕಳೆದ ಮೂವತ್ತು ವರ್ಷಗಳಿಂದ ದೇವಾಲಯದ ಜೀರ್ಣೋದ್ಧಾರದ ಕಾರ್ಯ ರಭಸದಿಂದ ನಾಗುತ್ತಿದೆ.

ಪ್ರತಿನಿತ್ಯ ಶ್ರೀ ಸ್ವಾಮಿಯ ದರ್ಶನ ಲಾಭಕ್ಕಾಗಿ ಬರುವ ಯಾತ್ರಿಕರಿಗೆ ಅವಶ್ಯಕ ಸೌಕರ್ಯವೊದಗಿಸುವುದು ಅಗತ್ಯವಾಗಿತ್ತು. ಇದಕ್ಕಾಗಿಯೋ ಅನೇಕ ಧರ್ಮಭೀರುಗಳ ಸಹಕಾರದಿಂದ ತಲೆಯೆತ್ತಿ ನಿಂತಿದೆ ಛತ್ರಗಳ ಸಾಲು. ಈಗ ಯಾತ್ರಿಗಳು ಯಾವ ಸಂಕೋಚವೂ ಇಲ್ಲದೆ ಈ ಛತ್ರಗಳಲ್ಲಿ ಉಳ ಕೊಳ್ಳುತ್ತಾರೆ. ಆದರೆ ಯಾತ್ರಿಕ ಸಂಖ್ಯೆ ಯೊಡನೆ ಛತ್ರಗಳ ವಿಸ್ತಾರವೂ ಹೆಚ್ಚುವುದು ಅಗತ್ಯವಾಗಿದೆ.

ಹಳೆಯ ದೇವಾಲಯದ ಜೀರ್ಣೋದ್ಧಾರದ ಕಾರ್ಯವು ಅತ್ಯಗತ್ಯವಾಗಿತ್ತು. ಆದಿ ಸುಬ್ರಹ್ಮಣ್ಯ ಗುಡಿಯ ಪುನಾರಚನೆಯಿಂದ ಇದು ಆರಂಭವಾಯಿತು. ಇಂದು ಈ ಗುಡಿಯು ಸುವ್ಯವಸ್ಥಿತವಾಗಿದೆ. ಹೋಗುವ ದಾರಿಯು ತೋಡಿಗೂ ಸಂಕ ಕಟ್ಟಲಾಗಿದೆ. ದೇವಾಲಯದ ಹೊರ-ಒಳ ನಾಯಗಳ ನೈಮರ್ಲ್ಯ, ವಾ

ವಿತ್ರ್ಯಗಳನ್ನು ಉಳಿಸಿಕೊಳ್ಳುವ ಸಾಹಸದಲ್ಲಿ ಧರ್ಮದರ್ಶಿಗಳು ಯಶಗಳಿಸಿದ್ದಾರೆ; ದೇಗುಲದ ಆಕರ್ಷಣೀಯತೆಯನ್ನು ಹೆಚ್ಚಿಸಿದ್ದಾರೆ. ಕಾಶಿಕಟ್ಟೆಯ ಪುನಾರಚನೆ, ಮತ್ಸ್ಯ ತೀರ್ಥದಿಂದ ದರ್ಪಣ ತೀರ್ಥದ ವರೆಗಿನ ಮಾರ್ಗವನ್ನು ಸುವಿಸ್ತೃತಗೊಳಿಸುವುದು, ಆಸ್ಪತ್ರೆಯ ಸ್ಥಾಪನೆ, ಶಾಲೆ, ಮತ್ತು ಹೈಸ್ಕೂಲುಗಳು—ಮೊದಲಾದುವು ಇತ್ತೀಚೆಗಿನ ವರ್ಷದಲ್ಲಿ ಆದ ಸುಧಾರಣೆಗಳು. ದೂರದೂರದ ಊರುಗಳಿಂದ ಬರುವ ಭಕ್ತರಿಗೆ ಹೆಚ್ಚಿನ ಅನುಕೂಲವೊದಗಿಸುವುದು ಅಗತ್ಯವಾಗಿದೆ. ಆದಕ್ಕೆಂದೇ ನಳ್ಳಿನೀರಿನ ಯೋಜನೆಯೊಂದು ಸಿದ್ಧವಾಗಿದೆ; ಕಾರ್ಯರೂಪಕ್ಕೆ ಬರುತ್ತಿದೆ.

ದೇವಾಲಯದ ಉತ್ಪಾದನೆಯನ್ನು ಹೆಚ್ಚಿಸುವುದರೊಡನೆ ದೇಶದ ಸಂಪತ್ತನ್ನೂ ಬೆಳೆಸುವ ಹೊಸ ಮಾರ್ಗವೊಂದನ್ನು ಧರ್ಮದರ್ಶಿಗಳು ಹಿಡಿದಿದ್ದಾರೆ. ದೇವಳದ ಹೆಸರಲ್ಲಿ ಜಮೀನನ್ನು ಕೊಂಡು ಅದರಲ್ಲಿ ಕೃಷಿಯನ್ನು ಬೆಳೆಸುವತ್ತ ಇವರು ಗಮನ ಹರಿಸಿದ್ದಾರೆ. ಕಂಗು—ಬಾಳೆ ಮೊದಲಾದುವುಗಳ ಎತ್ತರೆತ್ತರದ ತೋಟಗಳು ನಮ್ಮ ಕಣ್ಣನ್ನು ತಣಿಸುತ್ತವೆ. ಇವು ದೇಶಾಭಿವೃದ್ಧಿಯ ಸಾಧನಗಳೂ ಹೌದು—ಈ ಉಪಕ್ರಮವನ್ನು ಉಳಿದ ಮಠ—ದೇಗುಲಗಳೂ ಅನುಕರಿಸುವಂತಾದರೆ, ದೇಶಾಭಿವೃದ್ಧಿಯಲ್ಲಿ ಮಹತ್ವದ ಮೈಲುಗಲ್ಲೊಂದನ್ನು ಮುಟ್ಟಿದಂತಾಗುವುದು.

ಭಕ್ತ ದಾನಿಗಳ ನೆರವಿಂದ ದೇಗುಲದ ಆಸುಪಾಸಿನ ಅಭಿವೃದ್ಧಿ ಸಾಧಿತವಾದರೆ, ಸರಕಾರದ ಸಹಾಯದಿಂದ ನಾಡಿನ ಬೇರೆ ಬೇರೆಡೆಯಿಂದ ಬರುವ ಮಾರ್ಗಗಳ ಪುನಾರಚನೆಯು ಸಾಧ್ಯವಾಯಿತು. ಮಡಿಕೇರಿ—ಪುತ್ತೂರು-ಸುಬ್ರಹ್ಮಣ್ಯ, ಮಂಗಳೂರು-ಸುಬ್ರಹ್ಮಣ್ಯ-ಸಕಲೇಶ್‌ಪುರ—ಬಿಸಲೆ—ಸುಬ್ರಹ್ಮಣ್ಯ-ಹೀಗೆ ಈಗಿರುವ ಎಲ್ಲದಾರಿಗಳೂ ಸುವ್ಯವಸ್ಥಿತವಾಗಿವೆ. ಅಡ್ಡ ಬಂದಿರುವ ಹೊಳೆತೋಡುಗಳಿಗೆ ಲ್ಲಿ ಸಂಕವಾಗಿವೆ. ಯಾತ್ರಿಗಳ ಸುಖಪ್ರಯಾಣವಿಂದು ಸಾಧ್ಯವೆನಿಸಿದೆ. ಹಾಸನ—ಮಂಗಳೂರು ರೈಲ್ವೆ ದಾರಿಯು ಪೂರ್ಣಗೊಂಡಾಗಲೇ ಇಲ್ಲಿಗೆ ಎರಡು ಮೈಲು ದೂರದ ಕುಳುಕುಂದದಲ್ಲಿ ರೈಲ್ವೇ ನಿಲ್ದಾಣವಿರುವುದು. ಈ ಪ್ರಮುಖ ಮಾರ್ಗಗಳಲ್ಲದೆ, ಇನ್ನಿತರ ಕೆಲವು ಹೊಸ ಮಾರ್ಗಗಳ ರಚನೆಯತ್ತ ಸರಕಾರದ ಗಮನ ಸೆಳೆಯುವ ಪ್ರಯತ್ನ ನಡೆದಿವೆ. ಇವೆಲ್ಲವೂ ಯಶಸ್ವಿಯಾದ ನಂತರ ಅತಿ ಸಮೀಪದ ದಾರಿಯಲ್ಲೇ ಶ್ರೀ ಕ್ಷೇತ್ರವನ್ನು ಸೇರುವುದು ಸಾಧ್ಯ. ಈಗ ಇರುವ ಮಾರ್ಗಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬಸ್ಸುಗಳು ಓಡಾಡುತ್ತಿರುವುದರಿಂದ ಯಾತ್ರಿಕರು ತಾ



ಶ್ರೀ ಕ್ಷೇತ್ರದ ಬ್ರಹ್ಮರಥ. ಇದೀಗ ಜೀರ್ಣಾವಸ್ಥೆಯಲ್ಲಿದೆ.

ಾಲಯದ ಕಾರ್ಯದಕ್ಷ ನ್ನೂ ಕಾಣಬಹುದು.

ನಯುಗ



ಶ್ರೀ ಆದಿ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿ. ಹಿನ್ನೆಲೆಯಲ್ಲಿ ಪುನಾರಚಿತ ಗುಡಿಯಿದೆ.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ

ಕೆ. ಸುಬ್ರಹ್ಮಣ್ಯ ಗೌಡ,
ಬಿ. ಎ., ಎಲ್.ಎಲ್.ಬಿ., ಎಡ್ವೋಕೇಟ್,
ಪುತ್ತೂರು—ಚೇರ್‌ಮೆನ್.

ಪತ್ರಯ ಪಡಬೇಕಾಗಿ ಬರುವುದಿಲ್ಲ.

ಭಾರತವು ಅನೇಕ ಧರ್ಮವಂದಿಗರ ನೆಲೆವೀಡು. ಹಲವಾರು ಧರ್ಮ ಸಂಸ್ಥಾಪಕರು ಇಲ್ಲಿಯೇ ಹುಟ್ಟಿ, ಬೆಳೆದು ತಮ್ಮ ಜ್ಞಾನ ಪ್ರಕಾಶವನ್ನು ಲೋಕದಲ್ಲಿ ಬೀರಿದರು. ಆಂತರಿಕವಾಗಿ ಇವೆಲ್ಲವೂ ಒಂದೇ ಧರ್ಮ— ಭಾರತೀಯ ಧರ್ಮ. ಜಾತ್ಯತೀತ ರಾಷ್ಟ್ರದಲ್ಲಿ ಪ್ರತಿ ನಾಗರಿಕನಿಗೂ ಸರ್ವಧರ್ಮಗಳ ಸಾಮಾನ್ಯ ಪ್ರವೃತ್ತಿಗಳ ಅರಿವಿರಬೇಕು. ಇದಕ್ಕೆಂದೇ ಶ್ರೀ ಕ್ಷೇತ್ರದಲ್ಲಿ ಇತ್ತೀಚಿನ ಕೆಲವು ವರ್ಷಗಳಿಂದ ಕಿರುಷಷ್ಠಿ ಉತ್ಸವದ ವೇಳೆಯಲ್ಲಿ ಸರ್ವಧರ್ಮ ಸಮ್ಮೇಳನವೂ ನಡೆದು ಬರುತ್ತಿದೆ. ಭಕ್ತರ ಮನೋವಿಕಾಸಕ್ಕೆ ಇದು ನೆರವಾಗಿದೆ.

ದೇವಾಲಯದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರಿಗೆ ಮತ್ತು ಇತರ ದೇವರಿಗೆ ನಾನಾ

ಬಿ. ನಾರಾಯಣ ಶೇಕ, ವರ್ಗದಾರ,
ಸುಳ್ಯೋಡಿ ಹೌಸ್, ನಾವೂರು ಗ್ರಾಮ,
ಬಂಗಾಡಿ, ದ. ಕ.

ವಿಧದ ಸೇವೆಗಳನ್ನು ಭಕ್ತರು ತಮ್ಮ ಶಕ್ತಿಗನುಸಾರವಾಗಿ ನಡೆಸಬಹುದು. ಶ್ರೀ ಸನ್ನಿಧಿಯಲ್ಲಿ ಹಾಜರಿರಲು ಅಸಾಧ್ಯವೆನಿಸಿದರೆ, ಅನುಪಸ್ಥಿತಿಯಲ್ಲಿಯೂ ಸೇವೆಯನ್ನು ಸಲ್ಲಿಸಿ ಪ್ರಸಾದ ಕಳಿಸುವ ವ್ಯವಸ್ಥೆಯು ಇರುವುದು. ಇನ್ನು, ತಮ್ಮ ಹೆಸರಿನಲ್ಲಿ ಪ್ರತಿದಿನವೂ ಸೇವೆ ನಡೆಯಬೇಕೆಂದು ಭಕ್ತರು ಬಯಸುವುದಾದರೆ, ಅದಕ್ಕೆ ತಕ್ಕಂತೆ ಮೂಲ ಧನವನ್ನು ಠೇವಣಿಯಿಡುವ ಸೌಲಭ್ಯವಿದೆ. ಸರ್ವಪ್ರಕಾರದಲ್ಲೂ ಭಕ್ತ ಜನರ ಶಕ್ತಿ-ಸಾಮರ್ಥ್ಯ ಮತ್ತು ಇಚ್ಛೆಗಳನ್ನು ಹೊಂದಿಕೊಂಡು ಸೇವೆ ಮಾಡಿಸುವ ಅವಕಾಶವಿದೆ. ಈ ಸದವಕಾಶವನ್ನು ಭಕ್ತಬಾಂಧವರು ಕಳೆದುಕೊಳ್ಳಬಾರದು.

ಶ್ರೀ ಕ್ಷೇತ್ರದ ಧರ್ಮದರ್ಶಿಗಳ ಧ್ಯೇಯ ಬಹುಮುಖವಾದುದು. ಅವರ ಆಕೋತ್ತರಗಳೂ ಬಹು ವಿಧದವು. ಆಧ್ಯಾತ್ಮಿಕ ಹಿನ್ನಲೆಯಲ್ಲಿ ಲೌಕಿಕತೆಯನ್ನೂ ತೂಗಿಸಿಕೊಂಡು ಹೋಗುವ ಹೆಗ್ಗುರಿ ಅವರದ್ದು. ತೇರು ಬೀದಿಯಿಂದ ದೇಗುಲ ಪ್ರವೇಶಿಸುವಲ್ಲಿ ಶಾಶ್ವತ ಗೋಪುರ ರಚನೆಯಾಗಬೇಕು— ಇದರಿಂದ ದೇವಾಲಯದ

ಎಚ್. ಎನ್. ಎ. ಗೌಡ,
Retd. Dy. S. P.,
ಪುತ್ತೂರು, ಹಾಸನ ಜಿಲ್ಲಾ.

ಬಿ. ಬಾಲಕೃಷ್ಣ ರೈ, ತಾಲೂಕು ಬೋರ್ಡು
ಮೆಂಬರ್, ಉಪ್ಪಿನಂಗಡಿ, ದ. ಕ.

ಸೌಂದರ್ಯ ದ್ವಿಗುಣಿಸುವುದು. ಪಾವನ ಕುಮಾರ ಪರ್ವತಕ್ಕೆ ಹೋಗುವ ದಾರಿಯನ್ನು ಸರಿಗೊಳಿಸಬೇಕು. ಯಾತ್ರಿಕರ ಸಂಖ್ಯೆಗನುಸಾರವಾಗಿ ಧರ್ಮಛತ್ರಗಳ ನಿರ್ಮಾಣವು ಅಗತ್ಯ. ಅದೇ ರೀತಿಯಲ್ಲಿ ಯಾತ್ರಿಗಳಿಗೆ ಎಲ್ಲಾ ಬಗೆಯ ಸೌಕರ್ಯಗಳೂ ಒದಗುವಂತಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಮುಮ್ಮಡಿ ಕೃಷ್ಣರಾಜ ಒಡೆಯರಿಂದ ದಾನವಾಗಿ ನೀಡಲಾಗಿದ್ದ ಬ್ರಹ್ಮರಥವೀಗ ಜೀರ್ಣವಾಗಿದ್ದು ಅದರ ಸ್ಥಾನದಲ್ಲಿ ಹೊಸತೊಂದರ ನಿರ್ಮಾಣವಾಗಬೇಕು. ಈ ಎಲ್ಲಾ ಉದ್ದೇಶಗಳು ಕೈಗೂಡಬೇಕಾದರೆ, ಭಕ್ತ ಜನರ ಉದಾರ ನೆರವು ಬೇಕೇಬೇಕು.

ಭಕ್ತ ಜನ ಮನೋಭೀಷ್ಟಗಳನ್ನು ಸಿದ್ಧಿಸಿಕೊಡುವ ಶ್ರೀ ಸ[ುಬ್ರ]ಹ್ಮಣ್ಯನ ಕುಕ್ಕೆ ಸುಬ್ರಹ್ಮಣ್ಯ ಪುಣ್ಯಭೂಮಿ, ಪುರಾಣ ಸಂಕೀ[ರ್ಣ] ತಪೋಭೂಮಿ. ಧರ್ಮದರ್ಶಿಗಳ ಧ[...] ನಿಷ್ಠೆ, ದೇವಳದ ಮೆನೇಜರರ ದ[...] ಮತ್ತು ನೌಕರ ವರ್ಗದವರ ಕರ್ತವ್ಯ [ಪ]ರಿಪಾಲನಾ ಬುದ್ಧಿಗಳಿಂದ ದೇವಳ [...] ವೃದ್ಧಿಕಾರ್ಯ ತ್ವರಿತಗತಿಯಿಂದ ಸಾ[ಗು]ತ್ತಿದೆ. ಇವೆಲ್ಲರ ಉತ್ಸಾಹ ಬತ್ತಿಗೆ [...]ರು ದಾನದೆಣ್ಣೆ ಹೊಯ್ಯುತ್ತ ಬಂ[...] ಶ್ರೀ ಸುಬ್ರಹ್ಮಣ್ಯದ ಅಪಾರ ಕೃಪೆ[...]ಟಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಶ್ರೀ ಸುಬ್ರಹ್ಮಣ್ಯನ ದರ್ಶನಲಾ[ಭ]



ಡಿ. ಕೃಷ್ಣ ಹೆಬ್ಬಾರ್, ಟಿಂಬ[ರ್]
ಕಂಟ್ರಾಕ್ಟರ್. ಪುತ್ತೂರು ದ. ಕ.

ಡೆದು ಅನುಗ್ರಹೀತರಾಗಿರಿ; ನಿಮ್ಮ [...] ಕಲ್ಮಶವನ್ನು ತೊಳೆದುಕೊಳ್ಳಿರಿ. ಒಳ್ಳೆ[ಯ] ಕೆಲಸಗಳು ಧನಾಭಾವದಿಂದ ನಿಲ್ಲು[ವುದಿ]ಲ್ಲವೆಂಬ ಧರ್ಮಶೀಗಳ ವಿಶ್ವಾಸವ[ನ್ನು] ಉಳಿಸಿಕೊಡಿರಿ.

ನಿಸರ್ಗ ಸುಂದರ ಸುಬ್ರಹ್ಮಣ್ಯ ಕ್ಷೇತ್ರವನ[್ನು] ಸಂದರ್ಶಿಸಿ ಪುಣ್ಯಭಾಗಿಗಳಾಗಿರಿ

ಶ್ರೀ ಮಂಜುನಾಥ ಮೋಟಾರ್ ಸರ್ವಿಸ್,
ಉಡುಪಿ

ಮಂಗಳೂರು-ಉಡುಪಿ-ಮುಂಬಯಿ ಲಗ್ಸುರಿ ಟೂರಿಸ್ಟ್ ಸರ್ವಿಸ್

ಪ್ರತಿ ಆದಿತ್ಯವಾರ ಬೆಳಿಗ್ಗೆ ಮಂಗಳೂರಿನಿಂದ 6 ಗಂಟೆಗೆ ಹೊರಟು ಮೂಲ್ಕಿ, ಉಡುಪಿ, ಕುಂದಾಪುರ, ಶಿವಮೊಗ್ಗ, ಹರಿಹರ, ಬೆಳಗಾಂವಿಗಾಗಿ ಮರುದಿನ ಮುಂಬಯಿ ತಲಪುವುದು.

ಈ ಕೆಳಗಿನ ಸ್ಥಳಗಳಲ್ಲಿ ನಮ್ಮ ಬುಕ್ಕಿಂಗ್ ಏಜಂಟರಿಂದ ಟಿಕೆಟುಗಳನ್ನು ಪಡೆಯಬಹುದಾಗಿ ಅಪೇಕ್ಷಿಸುತ್ತೇವೆ.

ಮಂಗಳೂರು, ಮುಲ್ಕಿ ಕಿನ್ನಿಗೋಳಿ, ಪಡುಬಿದ್ರಿ
ಬೆಳ್ಮಣ್ಣು ಮುಂಡ್ಕೂರು, ಕಾಪ್ರು, ಮಂಚಕಲ್,
ಕಟಪಾಡಿ, ಉಡುಪಿ ಮತ್ತು ಕುಂದಾಪುರ

ಮುಂಬಯಿಯಿಂದ ಪ್ರತಿ ಬುಧವಾರ ಹೊರಟು, ಮರುದಿನ ಹಿಂದೆ ಬಂದು ತಲಪುತ್ತದೆ.

ಹೋಗುವಾಗಲೂ ಬರುವಾಗಲೂ ಬೆಳಗಾಂವಿನಲ್ಲಿ ಉಚಿತವಾಗಿ ಉಳಕೊಳ್ಳುವ ವ್ಯವಸ್ಥೆ ಇದೆ.

ಮುಂಬಯಿಯಿಂದ ಬರತಕ್ಕವರು ಈ ಕೆಳಗಿನ ವಿಳಾಸದಲ್ಲಿ ವ್ಯವಹರಿಸಬೇಕಾಗಿ ಅಪೇಕ್ಷಿಸುತ್ತೇವೆ.

ಶ್ರೀ ಕೃಷ್ಣ ಲಾಡ್ಜ್, ಲೆಮಿಂಗ್‌ಟನ್ ರೋಡ್, ಮುಂಬಯಿ
ಫೋನ್ : 353288

Sri Manjunatha Motor Service, UDIPI
Phone : 82

ಉಡುಪಿ ಮುನ್ಸಿಫ್ ಕೋರ್ಟಿನ[ಲ್ಲಿ]

O. S. No. 385/1

P. N. ಸದಾನಂದ ರಾವ್ ಕೂಡಾ-ವಾ[ದಿ]
ಮತ್ತು
ನೆಲ್ಲಿ ಡಿ'ಸೋಜ ಕೂಡಾ —ಪ್ರತಿವಾ[ದಿ]

5ನೆ ಪ್ರತಿವಾದಿ ಪೀಯೂಸ್ ಮಸ್ಕರೇ[ನ್ಹಸ್] —ಡೇನಿಯಲ್ ಯಾನೆ ದಣ್ಣು ಮಸ್ಕರೇ[ನ್ಹಸ್] ಮಗ—ಉಡ್ಪಿ ತಾಲ್ಕು ಶಿವಳ್ಳಿ ಗ್ರಾ[ಮ] ಪೆರಂಪಳ್ಳಿ—ಇವರಿಗೆ ಈ ಮೂಲ್ಕ [...] ಪಡಿಸುವದೇನಂದ್ರೆ—

ವಾದಿಗೆ ಪ್ರತಿವಾದಿರಿಂದ, ತಾ 20 1948ರಲ್ಲಾದ ಮೂಲಗೇಣಿ ಚೀಟು ಪ್ರ[...] ಬಾಕಿಯಿರುವ ಗೇಣಿ, ಬಡ್ಡಿ ವಗೈರೆಗೆ ಮ[...]ಡ ದಾವೆ ದಾಕ್ಲು ಮಾಡಿರುವದ್ರಿಂದ [...]ಟ್ಟು 5ನೆ ಪ್ರತಿವಾದಿಗೇನಾದರೂ ಆಕ್ಷೇ[ಪ]ಯಿರುವಲ್ಲಿ ಅದನ್ನು ತಾರೀಕು 17-2-1[...] ಬೆಳಿಗ್ಗೆ ಘಂಟೆ 11ಕ್ಕೆ ಹಾಜ್ರಾಗಿ ಜ್ಯಾ[...] ಮಾಡಿ ಕೊಳ್ಳದಿದ್ರೆ ಸದ್ರಿ ದಾವೆಯು [ಏಕ]ಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. N. Madhava R[ao]
Vakil for Plaintiff

ಉಡುಪಿ, 19-1-1966.

ಪರ್ಯಾಯ ಮಹೋತ್ಸವ

(ಹದಿನಾಲ್ಕನೇ ಪುಟದಿಂದ)

ದೇಶಾಂತರ ಸಂಚಾರಮಾಡುತ್ತಿರಬೇಕೆಂಬ ಶ್ರೀ ಮಧ್ವಾಚಾರ್ಯರೇ ಶಾಸನ ಮಾಡಿದ್ದಾರೆಂದು ಈ ಹಸ್ತಾಕ್ಷರ ಗ್ರಂಥದಲ್ಲಿ ಹೇಳಿದೆ. ಆದುದರಿಂದ ಶ್ರೀಮಧ್ವಾಚಾರ್ಯರ ಕಾಲದಿಂದಲೂ ಎರಡು ತಿಂಗಳು ಮಾತ್ರ ಪರ್ಯಾಯ ಪೂಜಾಕ್ರಮವಿದ್ದು, ಶ್ರೀ ವಾದಿರಾಜ ಸ್ವಾಮಿಗಳು ಪರ್ಯಾಯ ಕ್ರಮದಲ್ಲಿ ಎರಡು ವರ್ಷಾವಧಿ ಮಾಡಿದರೆಂಬ ಕೆಲವರ ಹೇಳಿಕೆಗೆ ಆಧಾರವಿಲ್ಲೆಂದು ತಿಳಿಯುತ್ತದೆ. (ಶ್ರೀ ಅಡ್ಡೆ ವೇದವ್ಯಾಸಾಚಾರ್ಯರು ಬರೆದ "ಶ್ರೀ ಮಧ್ವಾರಾಜ ಗುರುಸಾರ್ವಭೌಮರು' ಎಂಬ ಕರ್ಣಾಟಕ ಭಾಷಾತ್ಮಕ ಗ್ರಂಥದಲ್ಲಿ ಪುಟ 161—50ರಲ್ಲಿ ಈ ಹೇಳಿಕೆ ವಿವರಿಸಲಾಗಿದೆ.)

ಪರ್ಯಾಯ ಮಹೋತ್ಸವದ ವಿಚಾರ. ಉಡುಪಿ ಕ್ಷೇತ್ರದಲ್ಲಿ ಶ್ರೀಕೃಷ್ಣ ಪೂಜೆಗಾಗಿ ಸ್ವಾಮಿಗಳ ಪರ್ಯಾಯಮಹೋತ್ಸವದ ವಿಶೇಷವೇನೆಂದುಬರೆಯುವ ಮೊದಲು ಶ್ರೀ ಮಧ್ವಾಚಾರ್ಯಕೃತ ಕೃಷ್ಣ ಪ್ರತಿಷ್ಠಾಪನಾ ವಿಚಾರದ ಒಂದು ಚಿಜ್ಞಾನ ಉಲ್ಲೇಖಿಸುವುದು ಪ್ರಕೃತೋಚಿತವಿದೆ.

ಉಡುಪಿಯಲ್ಲಿ ಅನಂತನಾಥ— ಚಂದ್ರೇಶಾಲಯಗಳ ತುಸ ಉತ್ತರಕ್ಕೆ ಶ್ರೀ ಮಧ್ವ ಪ್ರತಿಷ್ಠಾಪಿತ ಶ್ರೀ ಕೃಷ್ಣ ದೇವಾಲಯವು ಕಂಗೊಳಿಸುತ್ತದೆ. ಈ ಶ್ರೀ ಕೃಷ್ಣ ಪ್ರತಿಮೆಯು (ಬಲರಾಮ ವಿಗ್ರಹವು) ಶ್ರೀ ಮಧ್ವಾಚಾರ್ಯರಿಗೆ—ತನಗೆ ಅಭಯ ದಾನವಿತ್ತ ಬಗ್ಗೆ-ಅದೊಬ್ಬ ನಾವಿಕನಿಂದ ಚಂದನದಲ್ಲಿ ಕೊಡಲ್ಪಟ್ಟಿದೆಂಬ ಪ್ರಚಲಿತ ಕಥೆಯಿದೆ. (ಶ್ರೀ ವಾದಿರಾಜ ಲಿಖಿತವಾದ ಕರ್ಣಾಟಭಾಷಾತ್ಮಕ ಪದ್ಯಗಳಲ್ಲಿ ಈ ಕತೆ ವಿಸ್ತಾರವಾಗಿ ಕೇಳಿಬರುತ್ತದೆ). ಪರಂತು, ಶ್ರೀ ಮಧ್ವ ವಿಜಯದಲ್ಲಿ ನಾವಿಕನು ಕೊಟ್ಟುದೆಂಬ ಸಂಗತಿ ಹೇಳಿಲ್ಲ (ಗೋಪಿಕಾಪ್ರಣಯಿನಃ ಶ್ರಿಯಃಪತೇಃ-9-41)(ಅಂತೆ,ಶ್ರೀ ಮಧ್ವರು ತಮಗೆ ದೊರಕಿದ ಬಲರಾಮ ವಿಗ್ರಹವನ್ನು'ವಡಭಾಂಡೇಶ್ವರಾಲಯ'ದಲ್ಲಿ ಸ್ಥಾಪಿಸಿದರೆಂದು ಉಡುಪಿ ಕ್ಷೇತ್ರ ಮಹಾತ್ಮ್ಯಗಳಲ್ಲಿ ಹೇಳುತ್ತದೆ. ಪರಂತು, ವಡಭಾಂಡೇಶ್ವರಾಲಯದ ಮುಂಗಡೆ ಕುಕ್ಕುಟ ಚಿಹ್ನಾಂಕಿತ ಧ್ವಜಸ್ತಂಭವಿದೆ; ಅಲ್ಲಿ ಸುಬ್ರಹ್ಮಣ್ಯನ ಪೂಜಾದಿಗಳು ನಡೆಯುತ್ತಿವೆಂದು ಬೇರೆ ಕೇಳುತ್ತದೆ.)

ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀ ಕೃಷ್ಣಪ್ರತಿಷ್ಠೆಯನ್ನು ಪೂರ್ವಾಭಿಮುಖವಾಗಿ ನಡೆಸಿದ್ದರು. ಅದಕ್ಕೆ ಇದಿರಾಗಿ "ಮಧ್ವಸರೋವರ"ವಿದೆ. ಶ್ರೀ ವಾದಿರಾಜ ಸ್ವಾಮಿಗಳ ಕಾಲದಲ್ಲಿ ಕನ್ನಡದ ಹರಿಭಕ್ತಶ್ರೇಸರನೂ ವಿಜಾತೀಯನೂ ಆದ ಕನಕದಾಸನು ಉಡುಪಿಗೆ ಬಂದನೆಂದೂ, ಅವನ ಭಕ್ತಿಸ್ತೋತ್ರದಿಂದ ಶ್ರೀ ಕೃಷ್ಣ ವಿಗ್ರಹವು ತಾನಾಗಿ ತಿರುಗಿ ಪಶ್ಚಿಮಾಭಿಮುಖವಾಗಿತ್ತೆಂದು ಹೇಳುತ್ತಾರೆ. ಪರಂತು, ವಾದಿರಾಜ ಸ್ವಾಮಿಗಳು ಕನಕದಾಸನಂತೆ ಇತರ ವಿಜಾತೀಯರಾದ ಕೃಷ್ಣಭಕ್ತರಿಗೂ ದೇವಾಲಯ ಪ್ರವೇಶ— ದೇವದರ್ಶನ— ಪ್ರದಕ್ಷಿಣಾದಿಗಳ ಅನುವಿಲ್ಲದುದರಿಂದ, ಆ ಸಲುವಾಗಿ ಶ್ರೀ ಕೃಷ್ಣಮೂರ್ತಿಯನ್ನು ಪಶ್ಚಿಮಾಭಿಮುಖವಾಗಿ ಪುನಃ ಪ್ರತಿಷ್ಠಾಪನೆಗೈಸಿದರೆಂಬುದು ಸಮಾದರಣೀಯವಾಗಿದೆ.

ಪರ್ಯಾಯ ಮಹೋತ್ಸವ, ಅಷ್ಟಮಠೀಯ ಸ್ವಾಮಿಗಳನ್ನು ಕುರಿತು ಶ್ರೀ ಕೃಷ್ಣನ "ಅಷ್ಟಮಹಿಷಿ"ಯರೆಂಬ ಉಲ್ಲೇಖನವು ಶಿಲಾಶಾಸನಗಳಲ್ಲಿದೆ. ಶ್ರೀ ಮಧ್ವವಿಜಯದಲ್ಲಿ ಅಷ್ಟಮಠಗಳ ಮೂಲಸ್ವಾಮಿಗಳ ಹೆಸರಿದೆ: "ವಶೀಕೃತ ಹೃಷೀಕಾಷ್ಟ ಜನನಾದ್ಯೈಕಮರ್ದಿನಃ"; ಇ. (15—128).

ಅನಂತೇಶ್ವರ- ಚಂದ್ರೇಶ್ವರ ದೇವಾಲಯಗಳ ಹೊರವಲಯದ ಅಂಗಳದಲ್ಲಿ ಸುತ್ತಲೂ ಪ್ರತ್ಯೇಕಶಃ ಅಷ್ಟಮಠಗಳು ಕಂಗೊಳಿಸುತ್ತವೆ. ಈ ಸ್ವಾಮಿಗಳಿಗೆ ಕಾಲಾಂತರದಲ್ಲಿ ಗ್ರಾಮಾಂತರಗಳಲ್ಲಿ ದತ್ತಿಗಳು ದೊರೆತುದರಿಂದ, ಆಯಾ ಗ್ರಾಮ ನಾಮಗಳಿಂದಲೇ ಈ ಅಷ್ಟಮಠಗಳ ಹೆಸರಿಕೆಯು ತೊಡಗಿದೆ: ಪಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶೀರೂರು, ಸೋದೆ, ಕಾಣಿಯೂರು ಪೇಜಾವರಗಳೆಂದು ಹೆಸರಿಕೆಯ ಗ್ರಾಮಗಳು ದ. ಕ. ಜಿಲ್ಲೆಯಲ್ಲಿವೆ (ಸೋದೆಯು ಉತ್ತರ ಕನ್ನಡ ಜಿಲ್ಲೆಯೆಂದು ಕಳೆದ ಶತಕದಿಂದ ವಿಭಾಗಗೊಂಡಿದೆ). ಉತ್ತರಾದಿ ಮಠದ ಮೂಲಸೀತಾರಾಮ ವಿಗ್ರಹ ಕೂಡಿ ಮೊದಲಲ್ಲಿ ಲೆಕ್ಕಿಸಿ, ಈ ಅಷ್ಟಮಠಗಳ ಮೂಲದೇವರ ಹೆಸರುಗಳು ಹೀಗಿವೆ: "ರಘೂಜಾ ಕಾಲೀಯಮರ್ಧನಾ ಸವಿಠ್ಠಲಾ ಸೂಕರಂ ನೃಸಿಂಹಂಚಾ ಅನ್ಯಂ ವಿಠ್ಠಲಮುಗಣಿತಮಹಿತಿಷ್ಟ್ಯೈಃ ಪೂಜಿತಾನ್ ಸಮಾಮಿಸದಾ."

ಶ್ರೀ ಮಧ್ವಾನು ಶಾಸನದ ಮೇರೆಗೆ ಪಲಿಮಾರು ಮೊದಲಾದ ಅಷ್ಟ ಮಠೀಯ ಸ್ವಾಮಿಗಳು ಉಡುಪಿ ಕ್ಷೇತ್ರದಲ್ಲಿ ಪರ್ಯಾಯ ಕ್ರಮದಿಂದ ಎರಡು ವರ್ಷಗಳ ಅವಧಿಯಲ್ಲಿ ಶ್ರೀ ಕೃಷ್ಣಪೂಜೆಯನ್ನು ನೆರವೇರಿಸುತ್ತಿದ್ದಾರೆ. ಪರ್ಯಾಯದ ಪೂರ್ವಸನ್ನಾಹಗಳು 1 ವರ್ಷಕ್ಕಿಂತ ಮುಂಚೆ ತೊಡಗುತ್ತವೆ; ಅವುಗಳಲ್ಲಿ ಮುಖ್ಯವಾಗ ನಾಲ್ಕು ವಿಷಯಗಳಿವು ಉಲ್ಲೇಖಾರ್ಹಗಳಾಗಿವೆ. ಪರ್ಯಾಯವು ಉತ್ತರಾಯಣ ಸಂಕ್ರಾಂತಿಯಾದ ಮೇಲೆ ನಾಲ್ಕನೆಯ ದಿನದಂದು ನಡೆಯುತ್ತದೆ. ಅಂದಿನಿಂದ ಎರಡು ವರ್ಷ ಅದೊಬ್ಬರು ಸ್ವಾಮಿಗಳೇ ಶ್ರೀ ಕೃಷ್ಣನ ಪೂಜೆ ನಡೆಸುತ್ತಾರೆ. ಆ ಮುಂದಿನ ವೃಶ್ಚಿಕ ಮಾಸದಲ್ಲಿ ಮುಂದಿನ ಸಲ ಪರ್ಯಾಯಕ್ಕೇಳಸುವವರು ಪೂರ್ವಸನ್ನಾಹವಾಗಿ ಪ್ರಥಮತಃ 'ಬಾಳೆ ಮುಹೂರ್ತ'ವೆಂದು ಬಾಳೆತೋಟ ಹಾಗೂ ತುಳಸಿ ತೋಟಗಳನ್ನು ಮಾಡಿಸುತ್ತಾರೆ. ಮತ್ತೆ ಮಕರಮಾಸದಲ್ಲಿ ಅಕ್ಕಿಯ ಸಂಗ್ರಹದ ಮುಹೂರ್ತ ನಡೆಯುತ್ತದೆ. ಮುಂದಿನ ಮಿಥುನ ಮಾಸದಲ್ಲಿ ಕಟ್ಟಿಗೆಯ ಸಂಗ್ರಹದ ಮುಹೂರ್ತವೂ, ಮತ್ತೆ ವೃಶ್ಚಿಕ ಮಾಸದಲ್ಲಿ ಭತ್ತದ ಸಂಗ್ರಹದ ಮುಹೂರ್ತವೂ ನೆರವೇರುತ್ತವೆ. ಅನಂತರ ಪರ್ಯಾಯಕ್ಕೆ ಸಿದ್ಧರಾಗುವ ಸ್ವಾಮಿಗಳು ತೀರ್ಥಯಾತ್ರೆ ಮಾಡಿ ಧನುರ್ಮಾಸದಲ್ಲಿ ಉಡುಪಿಗೆ ವಿಜಯ ಮಾಡುತ್ತಾರೆ. ಪರ್ಯಾಯ ದಿನದ ಬೆಳಗಿನ ಹೊತ್ತು ಶ್ರೀ ಮಧ್ವಾಚಾರ್ಯರು ನಿರ್ಮಿಸಿದ, ಉಡುಪಿಗೆ ಅನತಿ ದೂರದ 'ದಂಡತೀರ್ಥ"ದಲ್ಲಿ ಮಿಂದು, ಆಗಸೆಪುರದ ಜೋಡು ಕಟ್ಟೆಗೆ ಬಂದು ತಂಗುತ್ತಾರೆ. ಪರ್ಯಾಯ ಪೀಠಸ್ಥ ಸ್ವಾಮಿಗಳು ಹೊರತು ಇತರ ಸ್ವಾಮಿಗಳು ಕೂಡಿ ಹೋಗಿ ಅವರನ್ನು ಮೆರವಣಿಗೆಯಲ್ಲಿ ಉಡುಪಿಗೆ ಕರೆಯಿಸಿಕೊಂಡು, ದೇವ ಸಂದರ್ಶನಾದಿಗಳಾದ ಬಳಿಕ, ಶ್ರೀ ಮಧ್ವಾಚಾರ್ಯರ ಮೂಲ ಪೀಠಕ್ಕೆ ಸಾಗುತ್ತಾರೆ. ಆದಾಗಲೇ ಪರ್ಯಾಯ ಪೀಠಾಧಿರೂಢರಾಗಿದ್ದ ಸ್ವಾಮಿಗಳು ಆ ಪೀಠದಲ್ಲಿ ಮುಂದಿನ ಪರ್ಯಾಯಕ್ಕೇಳಸುವ ಸ್ವಾಮಿಗಳನ್ನು ಕೂರಿಸುತ್ತಾರೆ. ಮತ್ತೆ ಶ್ರೀಕೃಷ್ಣನ ಸಮ್ಮುಖಕ್ಕೆ ಒಯ್ದು ಅಕ್ಷಯ ಪಾತ್ರೆ ಹಾಗೂ ಕೃಷ್ಣದೇವಾಲಯದ ಬೀಗದ ಕೈಗಳನ್ನು ಭಾವೀ ಪರ್ಯಾಯ ಪೀಠಸ್ಥರಿಗೆ ಒಪ್ಪಿಸುತ್ತಾರೆ. ಹಿಂದಿನ ಪರ್ಯಾಯ ಪೀಠಸ್ಥ ಸ್ವಾಮಿಗಳನ್ನು ಮೆರವಣಿಗೆಯಿಂದ ಅವರ ಶ್ರೀಮಠಕ್ಕೆ ಕಳುಹುತ್ತಾರೆ.

ಪೂರ್ವ ಪರ್ಯಾಯ ಪೀಠಾಧಿರೂಢರ ಪರ್ಯಾಯ ಕಾಲದ ಕೊನೆಯ ದಿನದಲ್ಲೂ, ಭಾವೀ ಪರ್ಯಾಯ ಪೀಠಾಧಿರೂಢರ ತಮ್ಮ ಪರ್ಯಾಯ ಕಾಲದ ಮೊದಲ ದಿನದಲ್ಲೂ (ಎರಡು ದಿನಗಳಲ್ಲೂ) ಅನೇಕ ಸಹಸ್ರ ಜನರಿಗೆ ಶ್ರೀಕೃಷ್ಣನ ತೀರ್ಥ ಪ್ರಸಾದ ಹಾಗೂ ಅನ್ನಸಂತರ್ಪಣ ಮತ್ತು ದಾನದಕ್ಷಿಣೆಗಳು ಸಲ್ಲುತ್ತವೆ.

ಉಡುಪಿಯಲ್ಲಿ ಶ್ರೀಕೃಷ್ಣನಿಗೆ ಪ್ರತಿದಿನವೂ ಒಂಬತ್ತು ಪೂಜೆಗಳು ಸಲ್ಲುತ್ತಿವೆ. ನಿರ್ಮಾಲ್ಯ ವಿಸರ್ಜನ ಪೂಜೆ, ಉಷಃಕಾಲ ಪೂಜೆ,ಪಂಚಾಮೃತಾಭಿಷೇಕ ಪೂಜೆ, ಉದ್ವರ್ತನ ಪೂಜೆ,ತೀರ್ಥ ಪೂಜೆ,ಅಲಂಕಾರ ಪೂಜೆ, ಸನಕಾದಿ ಪೂಜೆ, ಮಹಾ ಪೂಜೆಗಳು ಮಧ್ಯಾಹ್ನಕ್ಕಿಂತ ಮೊದಲಲ್ಲೂ; ರಾತ್ರಿಗೆ ರಾತ್ರಿಪೂಜೆಯೂ ನೆರವೇರುತ್ತವೆ. ಹಸ್ತೆಯಲ್ಲಿ ಪ್ರತಿದಿನವೂ ಶ್ರೀ ಕೃಷ್ಣನಿಗೆ ಪ್ರತ್ಯೇಕರೂಪವು ಕಾಣುವಂತೆ ವಿವಿಧಾಲಂಕಾರ ಕರಣವೂ ಇಲ್ಲಿ ವಿಶಿಷ್ಟವಾಗಿದೆ. "ನವ ನವಪೂಜೆಯ ವಿವಿಧಾಲಂಕಾರವ ಸಹಸಿಸಿಕೊಳುತಿರುವ" ಎಂದು ಹರಿದಾಸರಲ್ಲೊಬ್ಬನಾದ ಶ್ರೀ ಕಮಲೇಶ ವಿಠ್ಠಲನ ಪದ್ಯದಲ್ಲಿ ಇದು ಸೂಚಿತವಾಗಿದೆ. ಉಡುಪಿಗೆ ಶ್ರೀ ಕೃಷ್ಣ ಭಕ್ತರು ದೇಶಾಂತರಗಳಿಂದ ಪ್ರತಿದಿನವೂ ಬರುತ್ತಿದ್ದು, ಪರ್ಯಾಯಪೀಠಾಧಿರೂಢ ಸ್ವಾಮಿಗಳ ಮೂಲಕ 'ಪೂರ್ಣಸಪ್ತರಾತ್ರಿ ಮಹೋತ್ಸವ' ಮೊದಲಾದ ವಿವಿಧ ಸೇವೆಗಳನ್ನು ಸಲ್ಲಿಸಲು, ಹಲವಾರು ರುಪಾಯಿಗಳನ್ನು ಕಾಣಿಕೆಗೊಡುತ್ತಾರೆ; ಧನ್ಯರಾಗುತ್ತಾರೆ.

ವಿ. ಸೂ. ಶ್ರೀ ಮಧ್ವಾಚಾರ್ಯರ ಜೀವನ ಚರಿತ ಹಾಗೂ ಗ್ರಂಥಾದಿಗಳ ಬಗ್ಗೆ ನೋಡತಕ್ಕ ಗ್ರಂಥಗಳು: ಶ್ರೀ ಸಿ. ಎಂ. ಪದ್ಮನಾಭಾಚಾರ್ಯರು ಬರೆದ ಆಂಗ್ಲ ಗ್ರಂಥ, ಶ್ರೀ ನಾ. ಶ್ರೀ. ರಾಜಪುರೋಹಿತರ ಕನ್ನಡ ಪುಸ್ತಕ, ಪೂನೆಯ ಶ್ರೀ ಆರ್. ಬಿ. ಅವಧಾನಿಯವರ ಮರಾಠಿ ಗ್ರಂಥ ಇತ್ಯಾದಿ.

"ದ್ವಾರಾವತೀಂ ಸಕಲಭಾಗ್ಯವತೀ ಮುಪೇಕ್ಷ್ಯ ।
ಗೋಪಾಲಬಾಲ ಲಲನಾಕರ ಪೂಜನಂ ಚ ॥
ವಾರ್ಧಿಂ ವಿಭೂಗ್ಯಹಮತೀತ್ಯ ಸ ಮಧ್ವನಾಥೋ ।
ಯತ್ರಾಪ್ತಿ, ತದ್ರಜತಪೀಠಪುರಂ ಗರೀಯಃ ॥"

ಪತ್ತೂರು ಭಟ್ಟ

With the Season's Greetings

To all our Patrons
& Well-wishers

From:—



K. VASUDEVA KINI
Proprietor
SHARADA INDUSTRIES
RICE, OIL, FLOUR & SAW MILLS
KATAPADI, S. KANARA.
Phone: 132.

ಶ್ರೀ ತಪ್ಪಲಸೆ ವಿಘ್ನೇಶ್ವರ ಶರ್ಮಾ

ದಾಸಶಿರೋಮಣಿ ಶ್ರೀ ಪುರಂದರದಾಸರು

ಹರಿದಾಸ ಶಿರೋಮಣಿ ಪುರಂದರರು ತನ್ನ ಭಕ್ತಿ ಸಾಧನೆಯಿಂದ ಭಗವಂತನ ಸಾಕ್ಷಾತ್ಕಾರ ಪೊಂದಿದವರು. ಅವರ ಭಕ್ತಿ ಭಾವನೆಯಲ್ಪಅಲ್ಪ ಪರಿಚಯದಿಂದಲೇ ಪುರಂದರ ಗುರುವಿನ ಅನನ್ಯ ವ್ಯಕ್ತಿತ್ವದ ಅರಿವಾಗುವುದು.

ಮಹಾತ್ಮರ ಜೀವನ ದೇಶಕ್ಕೆ ಮಾರ್ಗದರ್ಶನ ಮಾಡಿಕುತ್ತದೆ. ಆಗಾಗ ದೇಶದಲ್ಲಿ ಉದ್ಭವಿಸಿದ ಅನಿಷ್ಟ ಮುಖಗಳನ್ನು ತಿದ್ದುವುದಕ್ಕೂ ದೇಶಕ್ಕೆ ಬೇಕಾದ ಜ್ಞಾನದೀವಿಗೆಗಳನ್ನು ಬೆಳಗಿಸುವುದಕ್ಕೂ ಅದು ಸಹಾಯಕವಾಗುತ್ತದೆಂಬುದನ್ನು ತಿಳಿಯಬಹುದಾಗಿದೆ. ಇದಕ್ಕೆ ಹಿಂದಿನ ಅನೇಕ ಮಹನೀಯರ ದಿವ್ಯ ಜೀವನವೇ ಭವ್ಯ ಸಾಕ್ಷಿಯಾಗಿದೆ.

ಈ ಸಾಕ್ಷಿಗಳ ಮಾಲಿಕೆಯಲ್ಲಿ ಶ್ರೀ ಪುರಂದರದಾಸರೂ ಒಬ್ಬರು. ಅವರು ದಾಸ ಪಂಥವನ್ನು ಹೆಚ್ಚಾಗಿ ಬೆಳೆಸಿದವರು. ಈ ದಾಸ ಪಂಥ ಎಂದಿನಿಂದ ಬೆಳೆಯಿತೆಂಬುದು ತಿಳಿಯದಿದ್ದರೂ ಶ್ರೀ ಪುರಂದರ ದಾಸರೇ ಹೆಚ್ಚಾಗಿ ಬೆಳಸಿದವರಲ್ಲಿ ಮುಖ್ಯರೆಂದು ತಿಳಿಯಲಡ್ಡಿ ಇಲ್ಲ. ಶ್ರೀ ವ್ಯಾಸರಾಯರೇ ಶ್ರೀ ಪುರಂದರ ದಾಸರ ಬಗೆಗೆ ಹೇಳುವಾಗ "ದಾಸರೆಂದರೆ ಪುರಂದರ ದಾಸರಯ್ಯಾ" ಎಂದಿದ್ದಾರೆ. ಅಂದಾಗ ಇವರ ಶಕ್ತಿ ಪ್ರಭಾವ ಎಷ್ಟಿರಬಹುದು?

ಭಕ್ತಿ-ಜ್ಞಾನ-ವೈರಾಗ್ಯಗಳನ್ನು ವಿಕಾಸಗೊಳಿಸಿ ಸರ್ವಾರ್ಪಣಾ ಭಾವದಿಂದ ಭಗವಂತನಿಗೆ ಶರಣು ಹೋಗುವುದು, ಅವನನ್ನು ಅನೇಕ ನಾಮ-ರೂಪ ಕ್ರಿಯೆಗಳಿಂದ ಆರಾಧಿಸುವುದು, ಸ್ಮರಣ-ಕೀರ್ತನೆ-ಭಜನೆಗಳಿಂದ—ಭಕ್ತಿ ಭಾವದಿಂದ—ಹಾಡಿ—ನಲಿದಾಡಿ—ಕುಣಿದಾಡಿ-ಭಗವಂತನ ಸಾಕ್ಷಾತ್ಕಾರ ಪಡೆಯುವುದು ಇವು ದಾಸ ಪಂಥದ ಮುಖ್ಯ ತತ್ವಗಳಾಗಿವೆ. ಇವನ್ನು ಅನುಷ್ಠಾನದಲ್ಲಿ ತಂದು ಹೆಚ್ಚು ಪ್ರಚಾರಗೊಳಿಸಿದವರು ಶ್ರೀ ಪುರಂದರ ದಾಸರು.

ದಾಸರ ಊರು ಪುರಂದರ ಗಡ.ಅವರ ತಂದೆಯ ಹೆಸರು ವರದಪ್ಪ ನಾಯಕರೆಂದು. ದಾಸರ ಹಿಂದಿನ ಹೆಸರು ಶ್ರೀನಿವಾಸ ನಾಯಕರೆಂದಿದ್ದಿತು. ಅವರಿಗೆ ಸರಸ್ವತೀ ಬಾಯಿಯೆಂಬ ಹೆಂಡತಿ ಇದ್ದಳು. ರತ್ನಗಳ ವ್ಯಾಪಾರದಿಂದ ಅಪಾರ ಧನ ಸಂಪತ್ತು ಇದ್ದರೂ ತೀರಾ ಕೃಪಣರಾಗಿದ್ದರು.

ಒಮ್ಮೆ ಒಬ್ಬ ಮುದುಕರು ತಮ್ಮ ಮಗನ ಉಪನಯನಕ್ಕಾಗಿ ಧನ ಸಹಾಯ ಬೇಡಿದರು. ಆದರೆ ನಾಯಕರು "ಇಂದು ಇಲ್ಲ, ನಾಳೆ...." ಹೀಗೆಯೇ ಹೇಳಿ ಕಳಿಸುತ್ತಿದ್ದರು. ಇದನ್ನು ಬಹುದಿನಗಳ ವರೆಗೆ ನೋಡಿದ ಇವರ ಹೆಂಡತಿ ತನ್ನ ಮೂಗುತಿಯನ್ನೇ ಕೊಟ್ಟಳು. ಇದನ್ನು ತಿಳಿದ ನಾಯಕರು ತಮ್ಮ ಹೆಂಡತಿಯನ್ನು ದಂಡಿಸಿದಾಗ—ವಿಷ ಕುಡಿದು ಪ್ರಾಣಬಿಡಬೇಕೆಂದು ನಿಶ್ಚೈಸಿ ವಿಷದ ಬಟ್ಟಲು ಹಿಡಿದಾಗ ಅದರಲ್ಲಿ ಮೂಗುತಿ ಕಾಣಿಸಿತಂತೆ. ಇದು ನಾಯಕರಿಗೂ ತಿಳಿದಾಗ ಅವರಿಗೆ "ಇದು ದೇವರ ಮಾಯೆಯೇ ಸರಿ" ಎಂದು ಜ್ಞಾನೋದಯವಾಯಿತು. ಅಂದಿನಿಂದಲೇ ತಮ್ಮ ಎಲ್ಲ ವಿತ್ತ ಸೊತ್ತುಗಳನ್ನು ದೇವರಿಗೆ ಅರ್ಪಿಸಿ ದಾಸರಾದರು. ಅವರ ಊರು ಪುರಂದರಗಡವಾದುದರಿಂದ ಪುರಂದರದಾಸರೆಂಬ ಹೆಸರು ಖ್ಯಾತವಾಯಿತು.

ದಾಸರು ತಮ್ಮ ಕೀರ್ತನೆಗಳಲ್ಲಿ ತಮ್ಮದೇ ಬಾಳಬವಣೆಯಲ್ಲಿ ಕಂಡುಂಡ ಅನುಭವಗಳನ್ನು ಬೆಳೆಸಿದ್ದಾರೆ. ಹಣದ ದುರಾಶೆಯಿಂದ-ಹೆಂಡತಿ ಮಕ್ಕಳ ವ್ಯಾಮೋಹ ಇವುಗಳಿಂದ ವೃಥಾ ಜೀವನ ಕಳೆದೆನೆಂಬ ಭಾವದಿಂದ-"ಚಿತ್ತದೊಳು ಮನವಿಟ್ಟು ನಿನ್ನ ಉತ್ತಮ ನಾಮದ ಸ್ಮರಣೆಯ ಬಿಟ್ಟು ಮತ್ತನಾದೆ ಮತಿಗೆಟ್ಟು" ಎಂದು ಮರುಗುತ್ತಾರೆ. "ಲೊಟಿ ಲೊಟಿ ಸಂಸಾರದೊಳಗೆ ಸಿಲುಕಿ ನಾ। ವಿಠ್ಠಲ ನಿನ್ನ ಧ್ಯಾನವ ಮರೆತೆನಯ್ಯಾ" ಎಂದು ಕಳವಳ ಪಡುತ್ತಾರೆ. ತಮ್ಮ ಹಿಂದಿನ ದಿನಗಳಲ್ಲಿ ಅನ್ನದಾನ ಮಾಡಲಿಲ್ಲ, ಸ್ವರ್ಣದಾನ ಮಾಡಲಿಲ್ಲ ಎಂದು ಗೋಗರೆದು-"ಅನ್ಯಾಯ ಮಾಡಿ ಹರಿ ನಿನ್ನ ಮರೆಹೊಕ್ಕೆ" ಎಂದು ಸರ್ವಾರ್ಪಣಾ ಬುದ್ಧಿಯಿಂದ ಬೇಡಿಕೊಳ್ಳುತ್ತಾರೆ. ಕೊನೆಗೆ ತಮ್ಮ ಎಲ್ಲ ಅಪರಾಧಗಳ ನೆರವುಂಟಾಗಿ "ಸರ್ವಾಪರಾಧವ ಕ್ಷಮಿಸಯ್ಯಾ" ಎಂದು ಪ್ರಾರ್ಥಿಸುತ್ತಾರೆ.

ಪ್ರಪಂಚದಲ್ಲಿ ಶ್ರೀ ಹರಿಯನ್ನು ಬಿಟ್ಟು ಯಾರೂ ಗತಿಯಿಲ್ಲವೆಂದು ಅನ್ನಿಸಿದಾಗ—"ಯಾರಿದ್ದರೇನಯ್ಯಾ ನೀನಿಲ್ಲದೆನಗಿಲ್ಲ ಕಾರುಣ್ಯನಿಧಿ ಹರಿಯೇ ಕೈಯ ಬಿಡಬೇಡ" ಎಂದು ಹೇಳಿ ಪರಮಾತ್ಮ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಾರೆ. ಆದರೆ ಮೊದಲಿಗೆ ಪರಮಾತ್ಮ ದರ್ಶನವಾಗದಿರಲು "ಏಕೆ ನಿರ್ದಯನಾಗುವೆ, ರಂಗಯ್ಯ" ಎಂದು ಅಂಗಲಾಚಿ ಬೇಡಿಕೊಳ್ಳುವರು. "ನಾನೇನ ಮಾಡಿದೆನೋ ಕೃಷ್ಣಯ್ಯ ನೀ ನನ್ನ ಸಲಹಬೇಕು" ಎಂದು ಬೇಡಿದ್ದಲ್ಲದೇ ಕೊನೆಗೆ-"ಭಕ್ತ ವತ್ಸಲನೆಂಬ ಬಿರುದ ಪೊತ್ತ ಮೇಲೆ ಭಕ್ತರಾಧೀನನಾಗಿರ ಬೇಡವೇ" ಎಂದು ಕೇಳುವರು.

ಇಷ್ಟೆಲ್ಲ ಪ್ರಾರ್ಥಿಸಿದ ಮೇಲೆ ಬಹುಶಃ ಅವರಿಗೆ ಕನಸಿನಲ್ಲಿ ಹರಿಯ ದರ್ಶನವಾಗಿರಬೇಕು. ಆಗ ಅವರು—"ಕಂಡೆನಾ ಕನಸಿನಲಿ ಗೋವಿಂದನ" ಎಂದು ಹಾಡಿದ್ದಾರೆ. "ಕೃಷ್ಣ ಮೂರ್ತಿ ಕಣ್ಣ ಮುಂದೆ ನಿಂತಂತಿದೆ" ಎಂದು ಆನಂದದಿಂದ ಹಿಗ್ಗುತ್ತಾರೆ. "ಕಣ್ಣಿನೊಳಗೆ ನೋಡು—ಒಳಗಣ್ಣಿನಿಂದಲಿ ನೋಡು ಮೂಜಗ ದೊರೆಯ" ಎಂದು ಭಗವಂತನ ಸಾಕ್ಷಾತ್ಕಾರಕ್ಕಾಗಿ ಪರಿತಪಿಸಿ ಕೊನೆಗೆ ಅವರ ಸಾಧನೆ ಸಿದ್ಧಿಯಾಗಲು "ಬದುಕಿದೆನು ಬದುಕಿದೆನು, ಭವಹಿಂಗಿತು, ಪದುಮನಾಭನ ಪಾದದೊಲುಮೆ ಎನಗಾಯಿತು" ಎಂದು ಪರಮಾತ್ಮ ಸಾಕ್ಷಾತ್ಕಾರವನ್ನು ಹೇಳಿ "ನಿನ್ನ ನೋಡಿ ಧನ್ಯನಾದೆನೋ" ಎಂದು ತೃಪ್ತರಾಗುತ್ತಾರೆ.

ಪ್ರತಿಯೊಂದು ಪದ್ಯದಲ್ಲಿಯೂ ದಾಸರ ಜೀವನದ ಹಿನ್ನೆಲೆಯ ಸೂಕ್ಷ್ಮ ಚಿತ್ರ ನಮಗೆ ದೊರೆಯುತ್ತದೆ. ಆ ಪದ್ಯಗಳಲ್ಲಿ ಅವರ ಹೃದಯದಿಂದ ಹೊರ ಹೊಮ್ಮಿದವುಗಳಾದುದರಿಂದ ನಮ್ಮ ಹೃದಯಕ್ಕೆ ನೇರವಾಗಿ ಮುಟ್ಟುತ್ತವೆ. ಇದೇ ರೀತಿಯಾಗಿ ಅವರು ನಾಲ್ಕು ಲಕ್ಷದಷ್ಟು ಕೀರ್ತನೆಗಳನ್ನು ರಚಿಸಿದ್ದಾರೆಂದು ಹೇಳುತ್ತಾರೆ. ಅವುಗಳಲ್ಲಿ ಸಾವಿರ ಕೀರ್ತನೆಗಳು ಅಚ್ಚಾಗಿವೆಯೆಂದು ತಿಳಿಯಲಾಗಿದೆ.

ವೇದೋಪನಿಷತ್ತುಗಳ ಸಾರಸತ್ವಗಳನ್ನು ಪಡೆದ ಅವರ ಕೀರ್ತನೆಗಳಲ್ಲಿ ಇನ್ನೊಂದು ವೈಶಿಷ್ಟ್ಯವೆಂದರೆ ಎಲ್ಲರಿಗೂ ಹಿಡಿಸುವಂತಹ ರೀತಿ. ಅಂಥ ಸೊಗಸು ಸೌಂದರ್ಯಗಳನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಪ್ರಪಂಚದ ಎಲ್ಲ ವಸ್ತು ವ್ಯವಹಾರಗಳಲ್ಲೂ ಹರಿದರ್ಶನ ಮಾಡಿದ್ದರಿಂದ ಎಲ್ಲಕ್ಕೂ ಅದನ್ನೇ ಅನ್ವಯಿಸುತ್ತಾರೆ. ಡೊಂಗುರ ಹೊಯ್ಯುವವನನ್ನು ಕಂಡು—"ಹೊಯ್ಯೋ, ಡಂಗುರವ, ಜಗದಯ್ಯನಯ್ಯಾ, ಶ್ರೀ ಹರಿಯಿಲ್ಲದಿಲ್ಲವೆಂದು" ಹೇಳಿದರೆ ಗಂಟೆಯ ಶಬ್ದ ಕೇಳಿ "ತುಸು ಬಾರಿಸುತಿದೆ ಕೇಳಿ ಶ್ರೀ ಹರಿದಾಸರೆಲ್ಲ" ಎನ್ನುವರು, ಓಲೆಯ ಹಂಚುವನನ್ನು ಕಂಡು— "ಕಾಗದ ಬಂದಿದೆ, ನಮ್ಮ ಕಮಲನಾಭನದು" ಹೀಗೆ ಅನೇಕ ಬಗೆಯ ಕೀರ್ತನೆಗಳಿಂದ ನಮ್ಮ ಮನಸ್ಸು ಭಕ್ತಿ-ಜ್ಞಾನ-ವೈರಾಗ್ಯಗಳಿಂದ ವಿಕಾಸಗೊಳ್ಳುವಂತೆ ಮಾಡಿದ್ದಾರೆ. ತಾವು ಪಡೆದ ಅನುಭವ—ಆನಂದಗಳನ್ನು ಜಗಕ್ಕೆಲ್ಲ—ಜನಕ್ಕೆಲ್ಲ ನೀಡಿದ್ದಾರೆ.

ಪರಮಾತ್ಮನ ತತ್ವವನ್ನು ಸುಲಭವಾಗಿ ತಿಳಿಗನ್ನಡದಲ್ಲಿ ತಿಳಿಯುವಂತೆ ಶ್ರೀ ಪುರಂದರ ದಾಸರು ನಮಗೆ ಮಹದುಪಕಾರ ಮಾಡಿದ್ದಾರೆ. ಅವರ ದಾಸ ಸಾಹಿತ್ಯ ನಮ್ಮ ವಿವೇಕ—ವಿಚಾರದ ವಿಕಾಸಕ್ಕೆ ಅಮೂಲ್ಯ ಸಾಧನ ಸಾಹಿತ್ಯವೇ ಆಗಿದೆ.

(ಹದಿಮೂರನೇ ಪುಟದಿಂದ)

ಕುವದಿಲ್ಲ; ಮುಗುಳ್ನಗುತ್ತ ಮುಂದಾಗುತ್ತಾರೆ. ದೇಶದ ಜನತೆ ಮತ, ಭಾಷೆ, ಪ್ರಾಂತ್ಯ ವಗೈರೆ ಭಿನ್ನಬೇಧವನ್ನು ಸಂಪೂರ್ಣ ತೊರೆದು ಪ್ರಿಯಭಾರತ ಮಾತೆಯ ಜಯ ಜಯಕಾರಕ್ಕೆ ಒಕ್ಕೊರಲಿನಿಂದ ಒಂದಾಗಬೇಕು. ಜನತೆ ತನ್ನ ನಿರಾಟರೂಪದ ಪರಿಚಯವನ್ನು ಪ್ರಜಾಪ್ರತಿನಿಧಿಗಳಿಗೆ ಮಾಡಿಕೊಡಬೇಕು. ಧಗಧಗಿಸುತ್ತಿರುವ ರಾಷ್ಟ್ರೀಯತೆಯ ಮಹಾ ಯಜ್ಞ ಕುಂಡದ ಜಾಜ್ವಲ್ಯಮಾನ ಪವಿತ್ರಾಗ್ನಿಗಿಂತ ತಮ್ಮ ಹೃದಯಗೂಡಿನಲ್ಲಿರುವ ಮಿಣ್-ಮಿಣಿ ರಾಷ್ಟ್ರೀಯತೆಯ ಕಿಡಿ ಭಿನ್ನವಾಗಿರಲು ಸಾಧ್ಯವಿಲ್ಲವೆಂಬ ಸತ್ಯದ ಅರಿವು ದಿಲ್ಲೀಶ್ವರರಿಗಾಗಬೇಕು.

ಇದು ಪ್ರಜಾಪ್ರಭುತ್ವ. ಅಂದರೆ ಪ್ರಜೆಗಳು ಉಮೇದ್ವಾರರಲ್ಲಿ ಬಹುಮತ ಪಡೆದವರನ್ನು ಪ್ರತಿನಿಧಿಗಳೆಂದು ಚುನಾಯಿಸಿ ಆಡಳಿತ ಲಗಾಮುವನ್ನು ಹಿಡಿಯಲು ಅವರನ್ನು ಕಳುಹಿಸಿ ಬಿಟ್ಟು, ತಮ್ಮ ಕೆಲಸ ಅಲ್ಲಿಗೆ ಮುಗಿಯಿತೆಂದು ಸುಮ್ಮಗುಳಿಯುವದೇನು? ಪ್ರಜಾಪ್ರತಿನಿಧಿಗಳೇ ಎಲ್ಲಾ ಕೆಲಸ ಮಾಡುತ್ತಾರೆಂದು ಜನತೆ ಸುಮ್ಮನೆ ಇರುವದು ನ್ಯಾಯವೇನು? ಜನತಾ ಜನಾರ್ಧನ ತನ್ನ ವಿರಾಟರೂಪದ ದರ್ಶನ ಮಾಡಿಸದೇ ಉಳಿದರೆ ಜನತಾ ಪ್ರತಿನಿಧಿಗಳು ಪ್ರಜ್ಞಾವಂತರಾಗುತ್ತಿದ್ದರೇ? ಇಲ್ಲಿ ಸೂಚಿಸಿರುವ ಘಟನೆಗಳು ಕೇವಲ ಉದಾಹರಣೆಗಳು ಅಷ್ಟೇ. ಪ್ರತಿನಿಧಿಗಳೇ ಎಲ್ಲಾ ಮಾಡುತ್ತಾರೆಂದು ಜನತೆ ಸುಮ್ಮಗುಳಿಯುತ್ತಿದ್ದಲ್ಲಿ ಪ್ರವಾಹದ ದಿಕ್ಕೇ ಬದಲಾಗುತ್ತಿತ್ತು. ಆಲ್ಫಾಡದಲ್ಲಿ ಒಂದು ಹಿಂದೂ ಪಿಳ್ಳೆಯೂ ನೋಡಲಿಕ್ಕೆ ಸಿಗುತ್ತಿರಲಿಕ್ಕಿಲ್ಲ. ಕನ್ಯಾಕುಮಾರಿಯತ್ತ ತಪ್ಪಿಯೂ ಹಿಂದೂಗಳು ಕಾಲಿಡಲು ಸಾಧ್ಯ ಇರಲಿಲ್ಲ. ತಮಿಳು ನಾಡಿನಲ್ಲಿ ಎಚ್ಚರ ತಪ್ಪಿಯೂ ಹಿಂದಿ ಶಬ್ದವನ್ನಾಡುವಂತಿರಲಿಲ್ಲ. ನಾಗಾಲೆಂಡು ನಮ್ಮದೆಂದ ಕರ್ಣಾಟಕದವನೊಬ್ಬ ಕತ್ತೆತ್ತಿ ಹೇಳುವಂತಿರಲಿಲ್ಲ. ತುಟಿ ಕಚ್ಚಿಕೊಂಡೇ ಕಚ್ಛ್ ದು ಭಾರತೀಯರು ಹೇಳಬೇಕಾಗುತ್ತಿತ್ತು. ಪಂಜಾಬಿಗಳಲ್ಲದವರು ಪಂಜಾಬಿನಿಂದ ಪಲಾಯನ ಮಾಡಬೇಕಾಗುತ್ತಿತ್ತು.

ಉತ್ತಮ ಪ್ರತಿನಿಧಿಯನ್ನೇ ಆರಿಸಿಕಳುಹಿಸುವದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರಮುಖ ಪಾತ್ರವಿರುವಂತೆ ಪ್ರತಿಯೊಂದಕ್ಕೂ ಪ್ರತಿನಿಧಿಗಳ ಮುಖವನ್ನೇ ನೀಟಿಳನೆ ನೋಡುತ್ತ ಕುಳಿತುಕೊಳ್ಳುವದಕ್ಕಿಂತ ತಮ್ಮ ಪ್ರಭಾವದ ಪರಿಚಯವನ್ನು ಸಂದರ್ಭಕ್ಕನುಸಾರವಾಗಿ ಮಾಡಿಸಿಕೊಡುವದೂ ಪ್ರಜೆಗಳ ಪ್ರಮುಖ ಪಾತ್ರವಿದೆ, ಆದ್ಯ ಕರ್ತವ್ಯವಿದೆ.

ಇದೀಗ ಪ್ರಕಟವಾಗಿದೆ—

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎಸ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ......................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮ.ಆರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ:—

ನವಭಾರತ ಬುಕ್ ಡಿಪ್ಪೊ, ಪಾಲುಕೋಟೆ, ಉಡುಪಿ.

ಸಾಹಿತ್ಯ ಸಂಬಂಧಿಕಗಳು

(ಹನ್ನೆರಡನೇ ಪುಟದಿಂದ)

...ಳ್ಳುವರಲ್ಲಿ ಅದು ಮುಂದುವರಿಯುತ್ತ ಹೋಗುತ್ತದೆ. ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಕವಿತ್ವವು ಸೇರಿ ಸೇರಿದಂತೆ, ...ದರಿಂದಾಗುವ ಪರಿಣಾಮವೂ ಹೆಚ್ಚುತ್ತ ಹೋಗುತ್ತದೆ; ಬರೆದಿಡಲು ಯೋಗ್ಯವೆನಿಸುತ್ತದೆ, ನಾಲ್ಕು ಮಂದಿ ಓದಿ ಮೆಚ್ಚಿಕೊಳ್ಳಲೂ ತಕ್ಕುದಾಗುತ್ತದೆ. ಇಂತಹ ಕೃತಿಗಳೇ ಸಾಹಿತ್ಯ. ಹೀಗೆಯೇ ಸಾಗುತ್ತಿದೆ. ಸಾಹಿತ್ಯ ಪ್ರಪಂಚದ ಗತಿ.

ಪದ್ಯ ಗದ್ಯ ಸಾಹಿತ್ಯ

ಕವಿ, ಕವಿತೆ ಎಂದುದರಿಂದ ಇವಿಷ್ಟೂ ಪದ್ಯ ಕಾವ್ಯಗಳನ್ನಷ್ಟೇ ಗುರಿಯಿಟ್ಟುಕೊಂಡು ಹೇಳಿದುದೆಂದು ತಿಳಿಯಬಾರದು. ಕವಿತಾವಾಸನೆಯುಳ್ಳವನು ಕಾವ್ಯವನ್ನಷ್ಟೇ ಬರೆಯುವವನೆಂದೂ ಅರ್ಥವಲ್ಲ. ಕಾವ್ಯ ಬರೆಯುವವನೇ ಕವಿಯೆಂಬ ಮಾತು ಸ್ಥೂಲಾರ್ಥದಲ್ಲಿ ವಾಡಿಕೆಯಲ್ಲಿದ್ದರೂ ಕವಿ ಶಬ್ದದ ಅರ್ಥವು ಬಹು ದೊಡ್ಡದು. ಸಾಕ್ಷಾತ ಸೃಷ್ಟಿಕರ್ತ ಬ್ರಹ್ಮನಿಗೇ "ಕವಿ" ಎಂಬ ಹೆಸರುಂಟು. ಕವಿ ಮಾತ್ರ ಬ್ರಹ್ಮನಿಗಿಂತ ಏನು ಕಡಿಮೆ?" ರವಿ ಕಾಣದ್ದನ್ನು ಕವಿ ಕಾಣುವನು" ಎಂಬ ನಾಣ್ಣುಡಿ ಬೇರೆಯಿದೆ. ಅಂತೆಯೇ ಗದ್ಯ ಬರೆಯುವವನಿಗೂ ಕವಿತಾಶಕ್ತಿ ಬೇಕೇ ಬೇಕು. ಮಾತುಗಳಿಂದ ಒಂದು ಪುಟದಲ್ಲಿ ವಿವರಿಸಲಾಗುವಷ್ಟನ್ನು ಪದ್ಯ ಕವಿ ನಾಲ್ಕು ಸಾಲುಗಳಲ್ಲಿ ಹೇಳಿ ಬಿಡಬಲ್ಲನು. ಅದು ಅವನದೊಂದು ವಿಶಿಷ್ಟ ಸಾಮರ್ಥ್ಯ, ಚಾತುರ್ಯ. ಆದರೆ ಅದು ಎಲ್ಲ ಕವಿಗಳಿಂದಲೂ ಸಾಧ್ಯವಾಗುವಂಥದಲ್ಲ. ಅದನ್ನು ತಿಳಿಯದವರಿಗೆ ವ್ಯಾಖ್ಯಾನಿಸಿ ಹೇಳಲು ತಿಳಿದವರಾರಾದರೂ ಬೇಕಾಗುತ್ತದೆ. ಅದು ಸುಲಭಗ್ರಾಹ್ಯ ಪದ್ಯಗಳಾಗಿರಬೇಕಾದರೆ ಎಲ್ಲೋ ಒಬ್ಬಿಬ್ಬರು ಸರ್ವಜ್ಞನಂತೆ, ಪುರಂದರ ದಾಸರಂತೆ ಬೇಂದ್ರೆಯಂತೆ ಜನಪದ ಕವಿಗಳಾಗಿರಬೇಕು. ನಿರಕ್ಷರ ಕುಕ್ಷಿಗಳಾದ ಹೆಂಗುಸರ ಬಾಯಿಯಿಂದ ಹೊರಟ ರಸ ಬುಗ್ಗೆಗಳಂತಹ ಜನಪದ ಹಾಡುಗಳು ಸಾಮಾನ್ಯವಾದುವೇನಲ್ಲ. ಅವು ಅವರ ಪರಿಪಕ್ವವಾದ ಅನುಭವ ದ್ಯೋತಕವಾದುವು. ಈ ಅನುಭವದೊಂದಿಗೆ ವಿದ್ಯೆಯಿಂದೊದಗಿದ ಪಾಂಡಿತ್ಯವೂ ಸೇರಿದಾಗ ಅವನು ಉತ್ತಮ ಕವಿಯಾಗುತ್ತಾನೆ. ಇಲ್ಲಿಯೇ ಪಾಂಡಿತ್ಯ ಪ್ರದರ್ಶಕನೂ ಆಗುತ್ತಾನೆ. ಒಟ್ಟಿನ ಮೇಲೆ ಜನಾಕರ್ಷಣೀಯವಾದ ಪದ್ಯ ಕವಿಗಳು ಕಡಿಮೆ. ಅಂತೆಯೇ ಪದ್ಯ ಸಾಹಿತ್ಯದ ಮೇಲೆ ಸಾರ್ವಜನಿಕರ ಆದರವೂ ಕಡಿಮೆ. ಅದಕ್ಕೆ ಒಳ್ಳೆಯ ಕಂಠ ಸ್ವರವೂ ಬೇಕಾಗುತ್ತೆ. ಇಂಥ ಧ್ವನಿ ಮಾಧುರ್ಯತೆ ಎಲ್ಲರಿಗೂ ಇಲ್ಲವಲ್ಲ.

ಆದುದರಿಂದಲೇ ಎಲ್ಲರಿಗೂ ಸುಲಭವಾದ ಗದ್ಯ ಸಾಹಿತ್ಯವೇ ಹೆಚ್ಚುತ್ತ ಬಂತು. ಅದರ ರಚನೆಯೂ ಹೆಚ್ಚುತ್ತ ಬಂತು. ಇದು ಸಹಜ, ಮತ್ತು ಅನಿವಾರ್ಯ. ತಪ್ಪೆನ್ನುವಂತಿಲ್ಲ. ಹೀಗಾದುದರಿಂದ ಪದ್ಯ ಸಾಹಿತ್ಯವು ಅಳಿದು ಹೋಗುವುದೋ ಎಂದು ಯಾರೂ ಹೆದರಬೇಕಾಗಿಲ್ಲ. ಆದರ ಮಿತಿಯಲ್ಲಿ ಅದು ತನ್ನಿರುವಿಕೆಯನ್ನು ಉಳಿಸಿಕೊಂಡೇ ಬಂದಿತು. ಕಾಲಕ್ಕೆತಕ್ಕ ಹೊಸ ಮಾರ್ಪಾಟಿನೊಂದಿಗೆ ಸಾಗೀತು.

ಸರಿ, ನಾಲ್ಕು ಮಾತಿನಲ್ಲಿ ಹೇಳುವ ಕವಿತೆಗಿಂತ ಪುಟ ತುಂಬ ಬರೆಯಬೇಕಾಗುವ ಗದ್ಯ ಸಾಹಿತ್ಯವನ್ನು ಕವಿತೆಗಿಂತ ಕೆಳಗಿನ ಮಟ್ಟವೆಂದು ಹೇಳಲಾದೀತೇ ಎಂದಿಗೂ ಕೂಡದು. ನಾಲ್ಕು ಸಾಲುಗಳಲ್ಲಿ ತುಂಬಿಸುವಂಥದ್ದನ್ನು ಪುಟತುಂಬ ಬರೆಯಲಿಕ್ಕೂ ಕವಿತಾ ಶಕ್ತಿ ಬೇಕು. ಪದ್ಯಗಳಿಗೆ ಯತಿ, ಗಣ, ಪ್ರಾಸ ಮೊದಲಾದ ನಿಯಮಗಳಿರುವಂತೆಯೇ ವಾಚನೆಗೂ ತೂಕವಿದೆ, ಭಾರವಿದೆ, ಅರ್ಥವತ್ತಾದ ಶಬ್ದಗಳ ಹಣಿಕೆಯಿದೆ, ಶೈಲಿಯಿದೆ, ಪ್ರವಾಹಗತಿಯೂ ಇದೆ. ವ್ಯರ್ಥ ಪದಪುಂಜಗಳಿದ್ದರೆ ಗದ್ಯವೂ ಶುಷ್ಕವಾದೀತು.

ನಿಜವಾದ ಸಂಗತಿಗಳು

ಇತ್ತೀಚಿನ ವರ್ಷಗಳಲ್ಲಿ ಜನತೆಯಲ್ಲಿ ಕಾವ್ಯ ವಾಚನಾಸಕ್ತಿ ತಗ್ಗುತ್ತಾ ಬಂದು, ಗದ್ಯ ವಾಚನಾಸಕ್ತಿ ಹೆಚ್ಚುತ್ತಾ ಬರಲು ಕಾರಣ ಗದ್ಯವು ಸುಲಭ ಗ್ರಾಹ್ಯವಾದುದರಿಂದಲೇ. ಅಂತೆಯೇ ಉದ್ದಾಮ ಕವಿಗಳು ಕೂಡಾ ಗದ್ಯ ಸಾಹಿತ್ಯವನ್ನೇ ಹೆಚ್ಚಾಗಿ ಬೆಳೆಸಿದರು.

ಹೀಗೆ ರಸಾತ್ಮಕವಾದ ಲಲಿತ ಸಾಹಿತ್ಯವನ್ನು ರೂಪಿಸುವವರಿಗೆಲ್ಲಾ ಒಟ್ಟಾಗಿ "ಸಾಹಿತಿಗಳು" ಎನ್ನುತ್ತಾರಷ್ಟೆ? ಈ ಸಾಹಿತಿಗಳೆಲ್ಲರೂ ಅಷ್ಟಟ ಪ್ರತಿಭಾನ್ವಿತ ಸಾಹಿತಿಗಳಲ್ಲ; ಜೊಳ್ಳು ಸಾಹಿತಿಗಳೆಷ್ಟೋ ಮಂದಿ ಇದ್ದಾರೆ. ಈ ಜೊಳ್ಳಿನವರ ವಿವರಣೆಯನ್ನು ಪ್ರತ್ಯೇಕವಾಗಿ ಹೇಳುವುದರ ಬದಲಿಗೆ, ನಿಜವಾದ ಸಾಹಿತಿಗಳನ್ನಿಷ್ಟು ಪರಿಶೀಲಿಸಿದರೆ, ಇದಕ್ಕೆ ಹೊರತಾದವರೆಲ್ಲ ಜೊಳ್ಳಿನವರೆಂದೇ ಆಗುತ್ತದೆ.

ಸಾಹಿತಿಗಳು ಏತಕ್ಕಾಗಿ ಕೃತಿಗಳನ್ನು ರಚಿಸುತ್ತಾರೆ? ಹಣ ಸಂಪಾದಿಸಲಿಕ್ಕಾಗಿಯೊ? ಬರಿಯ ಹೊಗಳಿಕೆಗಾಗಿಯೋ? ಜನಹಿತಕ್ಕಾಗಿಯೊ? ಮತ್ತೇತಕ್ಕಾಗಿ?

ಜನಹಿತವು ಸಾಹಿತ್ಯದ ಉದ್ದೇಶವಾಗಿದ್ದರೂ, ಅದರಲ್ಲಿ ಅವನ ಹಿತವೂ ಅಡಗಿದೆ ಎಂಬುದನ್ನು ನೆನೆಯುವಾಗಲೇ ಮೇಲಿನ ಪ್ರಶ್ನೆಗಳೇಳುತ್ತವೆ. ಕವಿಗೆ ಸಾಹಿತ್ಯ ರಚನೆ ಪ್ರಕೃತಿ ಸಹಜವಾದ ಸ್ವಭಾವವೆಂದೂ ಮೇಲೆ ಸೂಚಿಸಲಾಗಿದೆ. ಅದು ಅವನ ಮಟ್ಟಿಗೆ ಪರಿಮಿತವಾಗಿದ್ದರೆ ಅಲ್ಲಿಗೇ ಬಿಡಬಹುದಿತ್ತು. ಆದರೆ ಸಾಹಿತ್ಯದ ಸುಷ್ಟ ದುಷ್ಟ ಪರಿಣಾಮ ಸಮಾಜದ ಮೇಲೆ ಆಗುವುದರಿಂದಲೇ, ಅದನ್ನು ಇಷ್ಟಿಷ್ಟು ವಿವರಿಸಬೇಕೆನಿಸುತ್ತದೆ.

ಹೊಗಳಿಕೆಯೂ ಹಣವೂ ಅವನ ಕೃತಿಯ ಯೋಗ್ಯತಾನುಸಾರವಾಗಿ ತನ್ನಂತೆ ಬರುವಂತಹದದರಿಂದ, ನಿಜವಾದ ಸಾಹಿತಿ ಅದಕ್ಕಾಗಿಯೇ ಬರೆಯುವನೆಂದು ಹೇಳಲಾಗುವುದಿಲ್ಲ. ಅವನು ತನ್ನ ಕೃತಿಯನ್ನು ಪ್ರಚಾರ ಪಡಿಸುವುದಕ್ಕಿಂತ ಎಷ್ಟೋ ವರ್ಷಗಳ ಪೂರ್ವದಿಂದಲೇ ಬರೆಯುವ ಅಭ್ಯಾಸವನ್ನಿಟ್ಟುಕೊಂಡಿರುತ್ತಾನೆ. ಎಷ್ಟೋ ಬರೆದು, ಎಷ್ಟೋ ಹರಿದು ಎಷ್ಟೋ ತಿದ್ದಿ, ಅಭ್ಯಾಸವು ಪಕ್ವ ಸ್ಥಿತಿಗೆ ಬಂದ ನಂತರವೇ ಅವನ ಕೃತಿ ಪ್ರಚಾರ ಯೋಗ್ಯವಾಗುತ್ತದಷ್ಟೇ. ಹಾಗೆಯೇ ಆಗಲೂ ಬೇಕು. ಹೀಗೆ ಪ್ರಚಾರವಾದರೂ ಎಷ್ಟೋ ಬಿಸಿಯೇಟುಗಳಿಗೆ ಗುರಿಯಾಗಿಯೇ ಅವನು ಚೆನ್ನಾಗಿ ಮಾಗಬೇಕಾಗುತ್ತದೆ. ಹೀಗೆ ಅವನು ಲೇಖನ ವ್ಯವಸಾಯದಲ್ಲಿ ಪಳಗಿದಂತೆ ನಾಲ್ಕು ಜನ ಸ್ನೇಹಿ ಒಪ್ಪಿಕೊಟ್ಟು ಪ್ರೋತ್ಸಾಹಪಡಿಸಿದಾಗಲೇ ಅವನಿಗೆ ಪ್ರಕಟಿಸುವ ಇಚ್ಛೆಯುಂಟಾಗುತ್ತದೆ. ಅದರೊಂದಿಗೆ ಹೊಗಳಿಕೆಯ ಬಯಕೆ ಇದ್ದರೂ ಇದ್ದೀತು. ಅಥವಾ "ಎಂತೆಂತಹ ಮಹಾ ಸಾಹಿತಿಗಳ ಮುಂದೆ ನನ್ನದೆಲ್ಲಿಯ ಕಸವೋ" ಎಂಬ ಶಂಕೆ ಬಂದರೂ ಬಂದೀತು—ಆತ್ಮ ವಿಶ್ವಾಸ ಪರಿಪಕ್ವವಾಗಿರದಿದ್ದರೆ.

ಹಣವೂ ಹಾಗೆಯೇ; ತನ್ನ ಕೃತಿಗೆ ಬೆಲೆ ಬಂದಾಗ ಅವನೂ ಅದರಲ್ಲಿ ಆಸೆಪಟ್ಟರೆ ತಪ್ಪಲ್ಲ. ಆದರೆ ಹಣಕ್ಕಾಗಿಯೇ ಗ್ರಂಥ ರಚನೆಮಾಡುವ ಹಾಗಿದ್ದರೆ, ಗ್ರಂಥ ರಚನೆಯೊಂದು ಹೊಟ್ಟೆ ಹೊರೆಯುವ ಉದ್ಯೋಗವೆನಿಸಬೇಕಿತ್ತು. ಪ್ರತಿಭಾವಂತರಿಗೆ ಈ ಉದ್ಯೋಗ ಸಹಜವಾಗಿಯೇ ಪ್ರಾಪ್ತವಾಗುವುದಾದರೂ, ನಮ್ಮ ದೇಶದಲ್ಲಿ ಹಾಗಾಗುವ ಸಂಭವ ಸದ್ಯಕ್ಕಿಲ್ಲ. ಪತ್ರಿಕೆಗಳೂ ಪುಸ್ತಕ ವ್ಯಾಪಾರವೂ ಉದ್ಯೋಗವೆನಿಸುವುವೇ ಹೊರತು, ಗ್ರಂಥ ರಚನೆಗೆ ಆ ಯೋಗ್ಯತೆ ಬಂದಿರುವಂತೆ ನಮ್ಮ ದೇಶದಲ್ಲಿ ಕಾಣಿಸುವುದಿಲ್ಲ. ಬಹುತರವಾಗಿ ಸಾಹಿತಿಗಳೆಲ್ಲಾ ಹೊಟ್ಟೆ ಹೊರೆಯುವ ಬೇರೊಂದು ಉದ್ಯೋಗದಲ್ಲೇ ಇರುತ್ತಾರೆ.

ಅಂತೆಯೇ ಸಾಹಿತ್ಯ ರಚನೆ ಸಾಹಿತಿಯ ಒಂದು ಚಟವೆನಿಸುತ್ತದೆ. ಅದು ಅಭ್ಯಾಸದಿಂದ ಪರಿಪಕ್ವವಾಗಿ ಆ ಮೇಲೆ ಪ್ರಕಟವಾದರೇನೇ ಚೆನ್ನು. ಆಗ ಅದರ ಗುಣರುಚಿಗಳಿಗೆ ತಕ್ಕ ಹಾಗೆ, ಅವನಿಗೆ ಹಣವೂ ಹೊಗಳಿಕೆಯೂ ಬರುತ್ತವೆಯೇ ಹೊರತು, ಹಣವೂ ಹೊಗಳಿಕೆಯೂ ಅವನ ಕೃತಿ ರಚನೆಗೆ ಕಾರಣಗಳೆನಿಸುವುದಿಲ್ಲ.

ಒತ್ತಾಯದ ಬರೆವಣಿಗೆ

ಹೀಗಿದ್ದೂ ಕೆಲವು ನಿಜವಾದ ಸಾಹಿತಿಗಳಿಂದ ಕೂಡ ಕೆಲವು ನೀರಸಗ್ರಂಥಗಳು ಬರುವುದುಂಟು ಅದಕ್ಕೆ ಪ್ರಕಾಶಕರೇ ಕಾರಣ ಎನ್ನಬಹುದು. ಕೆಲವಾರು ಉತ್ತಮ ಪುಸ್ತಕಗಳನ್ನು ಬರೆದು ಜನತೆಯ ಪ್ರೀತಿಗಳಿಸಿದ ಸಾಹಿತಿಗಳಿಂದಲೇ ಮತ್ತೆ ಮತ್ತೆ ಗ್ರಂಥಗಳನ್ನು ಕೋರುತ್ತಾರೆ ಪ್ರಕಾಶಕರು ಇಂಥ ವಿಷಯದ ಮೇಲೆ ಪುಸ್ತಕ ಬರೆದುಕೊಡಿ ಎಂತಲೂ ಕೇಳುತ್ತಾರೆ. ಇಂತಿಷ್ಟು ಪುಟಗಳಿರಬೇಕೆಂಬ ನಿರ್ಬಂಧವನ್ನು ಹಾಕುತ್ತಾರೆ. ಹೀಗೆ ಪ್ರತಿಫಲದ ಆಸೆ, ಕಟ್ಟು ನಿಟ್ಟು, ಒತ್ತಾಯಗಳಿಗೆ ಒಳಗಾಗಿ ಬರೆಯಲ್ಪಟ್ಟ ಗ್ರಂಥವು ಸಹಜ ಪ್ರೇರಣೆ

ಗೀತಾ
ಅಗರಬತ್ತಿಗಳು

ಮನಮೋಹಕ ಸುವಾಸನೆಯಿಂದ
ಮಿತವಾದ ಬೆಲೆಯಿಂದ
ಜನಪ್ರೀತವಾಗಿ
ಮನೆಮನೆಗಳಲ್ಲಿಯೂ ಸ್ವಾಗತ ಪಡೆದಿರುವ
ಅಗರಬತ್ತಿ

ಗೋಲ್ಡನ್ ಸ್ಟಾರ್ ಮೊದಲಾದ ವಿವಿಧ ಅಗರಬತ್ತಿಗಳು
ಎಲ್ಲೆಲ್ಲೂ ದೊರೆಯುತ್ತವೆ.

ಫೋನ್: 3875 ಗ್ರಾಮ್ಸ್: ಬ್ಲೂ ಸ್ಟಾರ್

ರಮೇಶ ಪರ್ಫ್ಯೂಮರಿ ವರ್ಕ್ಸ್ (ರಿ.)
ತಯಾರಕರು ಹಾಗೂ ಆಮದು ಮತ್ತು ರಫ್ತುಗಾರರು
ಕದ್ರಿ ಮಂಗಳೂರು-2 : : ಮೈಸೂರು ರಾಜ್ಯ.

ಯಿಂದ ಬರೆದ ಪುಸ್ತಕದ ಹಾಗಿದ್ದೀತೆ? ಇರಲು ಸಾಧ್ಯವಿಲ್ಲ.

ಜೇಸರತರಿಸುವ ವರ್ಣನೆಗಳೂ, ವರ್ಣನೆಗಳೇ ಇಲ್ಲದ ವರದಿಯಂಥವೂ, ವಿವು ಲಾಕ್ಷರಗಳಿಂದ ತುಂಬಿ ಕಣ್ಣಿಗೆ ಶ್ರಮ ವೀಯುವಂಥವೂ, ಹೆಚ್ಚು ಪುಟಗಳನ್ನು ತೋರಿಸಲು ಅಡಿಗಡಿಗೂ ಪ್ಯಾರಾ ಒಡೆದಿಟ್ಟಿರುವ ಪುಸ್ತಕಗಳೂ ಮೇಲೆ ಹೇಳಿದ ಏನೇನೋ ಒಂದು ಕೃತಕತೆಯನ್ನೇ ವಾಚಕರಲ್ಲಿ ಒಡಮೂಡಿಸಿಯಾವು.

ನಿಜವಾದ ಸಾಹಿತಿಯ ಸ್ವಭಾವವೆಂದರೆ, ತಾನು ಅನುಭವಿಸಿದ ಅನುಭೂತಿಗಳನ್ನು ತನ್ನಂತಿರುವ ಅನ್ಯರಿಗೂ ರೂಪಿಸಿ ಕೊಡುವುದೇ ಉದಾತ್ತವೂ ಸೂಕ್ಷ್ಮವೂ ಆದ ಈ ಉದ್ದೇಶವು ಎಲ್ಲರಿಗೂ ಇದೆಯೆಂದು ಮೇಲೆ ಸೂಚಿಸಲಾಗಿದ್ದರೂ, ಎಲ್ಲರಿಂದಲೂ ಆ ಉದ್ದೇಶವನ್ನು ಸಾಧಿಸಲು ಸಾಧ್ಯವಾದುದರಿಂದಲೇ ಆ ಉದ್ದೇಶವನ್ನು ಸಾಧಿಸಲು ಸಾಧ್ಯವಿಲ್ಲದ,ದರಿಂದಲೇ, ಸಾಹಿತಿಗಳು ರೂಪಿಸಿ ಕೊಟ್ಟದ್ದಕ್ಕೆ ಜನತೆ ಸ್ವಾಗತ ನೀಡುತ್ತದೆ.

ಸಾಹಿತಿ ಸ್ವಯಂ ಆನಂದದಿಂದ, ತನ್ನಂ ತಾನೇ ಪ್ರೋತ್ಸಾಹಿಸಿಕೊಂಡು ಕೃತಿರಚನೆ ಮಾಡಿ ಜನತೆಯ ಮುಂದಿಡಿಸಿದಾಗ, ಜನತೆ ಪ್ರೋತ್ಸಾಹಿಸಿದಾಗ, ಆದರಭಾವದಿಂದ ಕಂಡು ಕೊರತೆಗಳನ್ನು ಅವನಿಗೆ ತಿಳಿಸಿದಾಗ, ನಿಜವಾದ ಸಾಹಿತಿ ಅದರಿಂದ ನಿರುತ್ಸಾಹಿಯಾಗುವುದಿಲ್ಲ. ಕೋಪಗೊಳ್ಳುವುದೂ ಇಲ್ಲ. ಬದಲಾಗಿ ಇನ್ನಷ್ಟು ಕಳೆಗೊಳ್ಳುತ್ತಾನೆ.

ಹೀಗೆ ಸಾಹಿತಿ ಸ್ವಸಂತೋಷದಿಂದಲೇ ಕೃತಿ ರಚನೆ ಮಾಡುವನೆಂದಾಯಿತು. ಅದನ್ನು ಜನತೆಯ ಮುಂದಿಡುವುದಾದರೂ ಅವನ ಸ್ವಭಾವವೆಂದೂ ಹೇಳಿದ್ದಾಯಿತು. ಜನತೆಯೇ ಅವನನ್ನು ತಮ್ಮೆಡೆಗೆ ಎಳೆದುಕೊಳ್ಳುವುದೂ ತಪ್ಪಲ್ಲ. ಕೋಗಿಲೆ ಊರೊಳಗೇ ಹಾಡಿದಾಗ ನಾವೆಲ್ಲಾ ಅದನ್ನು ಕೇಳಿ ಆನಂದಿಸುತ್ತೇವೆ. ನಾವು ಆನಂದಿಸುತ್ತೇವೆಂಬುದಕ್ಕಾಗಿಯೇ ಅದು ತನ್ನ ಹಾಡಿನಲ್ಲಿ ಯಾವೊಂದು ಹೆಚ್ಚು ಕಡಮೆ ಮಾರ್ಪಾಡನ್ನೂ ಮಾಡುವುದಿಲ್ಲ. ಮಾಡಲು ಸಾಧ್ಯವೂ ಇಲ್ಲ. ಆದರೆ ಮಾನವರು ಪಕ್ಷಿಗಳಲ್ಲ. ಒಳ್ಳೆಯ ಮಾರ್ಪಾಡುಗಳನ್ನು ಮಾಡಿಕೊಳ್ಳಲು ತಕ್ಕ ಬುದ್ಧಿ ಅವರಿಗಿದೆ, ಅಂತೆಯೇ ಜನತೆಯಿಂದ ಹೆಚ್ಚಾಗಿ ಆಕರ್ಷಿಸಲ್ಪಡುವ ಸಾಹಿತಿಗಳು ಜನ್ಮಸಿದ್ಧಿಗೆ ಬೀಳದೆ ತಮ್ಮ ಸಹಜ ನೆಲೆಯಲ್ಲಿಯೇ ತಮ್ಮ ಮಹತ್ವವನ್ನು ಬೆಳೆಸಿಕೊಂಡು ಹೋಗಬೇಕು.

ಸಣ್ಣ ಕತೆಗಳು, ಪತ್ರಿಕೆಗಳು

ಈಗ ಮುದ್ರಾಲಯಗಳೂ, ಪತ್ರಿಕೆಗಳೂ, ಪ್ರಕಾಶನ ಸಂಸ್ಥೆಗಳೂ ಹೆಚ್ಚಾಗಿವೆ. ಅಂತೆಯೇ ಸಾಹಿತ್ಯದ ಓಘಕ್ಕೂ ಜೋರು ಬಂದಿದೆ. ವ್ಯಾಪಾರ ಸ್ವರೂಪವು ಮಾರ್ಪಟ್ಟಿದೆ. ಸ್ಪರ್ಧೆಯುಂಟಾಗಿದೆ. ವಾಚನಾಭಿರುಚಿ ಹೆಚ್ಚಿದೆ. ಪತ್ರಿಕೆಗಳೂ ಹೆಚ್ಚುತ್ತಿವೆ. ಸಣ್ಣ ಕತೆಗಳಿಲ್ಲದ ಪತ್ರಿಕೆಗಳೇ ಇಲ್ಲ. ಪತ್ರಿಕೆಯನ್ನು ವಾಗ ತುಸು ಹೇಳಿ ಬಿಡೋಣವೆನ್ನಿಸುತ್ತದೆ. ವಿವಿಧ ವಿಚಾರ ಧಾರೆಗಳಿರುವ ಪತ್ರಿಕೆಗಳಲ್ಲಿ ರಚನಾತ್ಮಕವಾದ ಸಣ್ಣ ಕತೆ ಒಂದಾದರೂ ಇಲ್ಲದೆ ಹೋದರೆ ಅದು ಶೋಭಿಸುವುದಿಲ್ಲ; ವಾಚಕರೂ ಕಡಮೆ ಯಾಗುತ್ತಾರೆಂದು ಪತ್ರಿಕೆಗಳೂ ಕಂಡು ಹಿಡಿದಿವೆ.

ಕ್ರಮವಾಗಿ ಹೊರಡಲೇಬೇಕೆಂಬ ನಿಯಮಕ್ಕೊಳಗಾದ ಪತ್ರಿಕೆಗಳು ತಮ್ಮ ಆಕರ್ಷಣ ಶಕ್ತಿಯಿಂದ ಎಲ್ಲ ಬಗೆಯ ಲೇಖಕರನ್ನೂ ಒಂದು ಬಗೆಯ ಒತ್ತಾಯಕ್ಕೆ ಒಳಪಡಿಸಿ ಬಿಡುತ್ತವೆ. ಅಸಲು ಈ ಇಪ್ಪತ್ತನೆಯ ಶತಮಾನದಲ್ಲಿ ಸಾಹಿತಿಗಳನ್ನು ಬೆಳಕಿಗೆ ತಂದು ತೋರಿಸುವುದೇ ಪತ್ರಿಕೆಗಳು ತಾನೆ?

ಪತ್ರಿಕೆಗಳಿಂದಾಗುವ ಅನಿರ್ವಚನೀಯವಾದ ಒತ್ತಾಯಕ್ಕೆ ಕಟ್ಟುಬಿದ್ದು ಕತೆಗಳನ್ನು ಬರೆದು ಬರೆದು, ಪತ್ರಿಕೆಗೆ ಕಳುಹಿಸುತ್ತಾರೆ. ಈ ಬಗೆಯ ಒತ್ತಾಯದ ಲೇಖನಗಳೂ, ಪ್ರಾರಂಭದ ರಚನೆಗಳೂ ಸುರಸವಾಗಿ ತುಂಬಿ ಬರುವುದು ಬಹಳ ಕಡಮೆ. ಓದಿ ಮೂಲೆಗೆ ಹಾಕುವಂತಹ ಪತ್ರಿಕೆಗಳಿಗೆ ಅಂತಹ ಕತೆಗಳೂ ಸಾಕಾಗುತ್ತವನ್ನಿ. ಕ್ರಮವಾಗಿ ಹೊರಡಲೇ ಬೇಕೆಂಬ ನಿಯಮಕ್ಕೊಳಗಾದ ಪತ್ರಿಕೆಗಳಿಗೆ ಅನೇಕ ನಿರ್ಬಂಧಗಳಿರುತ್ತವೆ. ಅವು ವಿಷಯ ವೈವಿಧ್ಯತೆಯನ್ನು ಕಾಪಾಡಿಕೊಳ್ಳಬೇಕು; ಇಂತಿಷ್ಟು ಪುಟಗಳಿರಬೇಕು. ಹೀಗಾಗಿ ಸಂಪಾದಕರು ನಿರ್ದಯರಾಗಿ ಕತ್ತರೀ ಪ್ರಯೋಗ ಮಾಡಬೇಕಾಗುತ್ತದೆ. ಸಾಹಿತಿ ಸ್ವತಂತ್ರನಾಗಿ ಬರೆಯುವಾಗ, ಆಗುವಷ್ಟು ದೊಡ್ಡ ಲೇಖನವು, ಪತ್ರಿಕೆಯ ನಿಯಮ ನಿಬಂಧಗಳ ಭಯದಿಂದ ರಸಭಟ್ಟಿಸಿಕೊಂಡು, ಗಿಡ್ಡಾಗಿಯೋ, ಅಥವಾ ವ್ಯರ್ಥ ಪ್ರಲಾಪದಿಂದ ಉದ್ದವಾಗಿಯೋ ಸಿದ್ಧವಾಗುತ್ತದೆ. ನೀರಸವೆಂದೂ ಸಪ್ಪೆಯೆಂದೂ ತಿಳಿದಿದ್ದರೂ, ಕಾಲಕಾಲಕ್ಕೆ ಪ್ರಕಟವಾಗಲೇ ಬೇಕಾದ ಪತ್ರಿಕೆಗೆ ಒಂದು ಕತೆಯಾಯಿತಲ್ಲ, ಎಂದು ಕೊಂಡು ಸಂಪಾದಕರು ಅದನ್ನು ಪ್ರಕಟಿಸಿಯೂ ಬಿಡುತ್ತಾರೆ

ಹೀಗೆಂದುದರಿಂದ ಪತ್ರಿಕೆಗಳನ್ನು ದೂರಿದುದಾಗಿ ಅರ್ಥವಲ್ಲ. ತಿರುಗಿ ಕೇಳಿದರೆ ಪತ್ರಿಕೆಗಳ ಉಪಕಾರವನ್ನೇ ಹೇಳುವುದಾಗಿ ತಿಳಿಯಬೇಕು. ಏಕೆಂದರೆ, ಪತ್ರಿಕೆಯಲ್ಲಿ ತನ್ನ ಕತೆ ಬಂದ ಕೂಡಲೇ ಲೇಖಕನ ಮುಖ ಇಷ್ಟಗಲವಾಗುತ್ತದೆ. ಅಂತೆಯೇ ಇದು ಲೇಖಕನಿಗೊಂದು ಪ್ರೋತ್ಸಾಹವಾಗುತ್ತದೆ. ಆದರೆ ಲೇಖಕನೇ ಆ ಕತೆಯ ಸಾರಾಸಾರತೆಯನ್ನು ಕುರಿತು, ತನಗೆ ತಾನೇ ವಿಮರ್ಶಿಸಿ ಕೊಳ್ಳುವವನಾದರೇನೇ, ಅವನಿಗೆ ಒಳ್ಳೆಯ ಭವಿಷ್ಯವುಂಟಾದೀತು.

ಅದು ಹೇಗಿದ್ದರೂ ಸಾಹಿತಿಗಳನ್ನು ಜನತೆಯ ಮುಂದೆ ತೋರಿಸುವ ಸಾಧನಗಳೇನೋ ಪತ್ರಿಕೆಗಳೇ ಆಗಿವೆ. ಪ್ರತಿಭೆ ಎಂಬ ಅಕ್ಷಯ ಪಾತ್ರವನ್ನು ಹೃದಯದಲ್ಲಿರಿಸಿಕೊಂಡಿರುವ ಕವಿ, ಸಣ್ಣದೊಂದು ಘಟನೆಯನ್ನು ಸುರಸ ಕತೆಯಾಗಿ ರೂಪಿಸಿದಾಗ, ಅದನ್ನು ಪ್ರಕಟಿಸುವ ಸುಲಭ ಸಾಧನಗಳಾಗಿ ಪತ್ರಿಕೆಗಳಿವೆ.

ಪತ್ರಿಕಾ ಕರ್ತರೂ ಪುಸ್ತಕ-ಪ್ರಕಾಶಕರೂ ಸಾಹಿತಿಗಳಿಗೆ ಪ್ರೋತ್ಸಾಹ ಕೊಡಬೇಕು ನಿಜ; ಒಂದು ವೇಳೆ ಅಂತಹ ಪ್ರೋತ್ಸಾಹಾದರಗಳಿಲ್ಲದಿದ್ದರೂ, ನಿಜವಾದ ಕವಿ ಸ್ವಯಂ ಪ್ರೋತ್ಸಾಹಿಯೇ ಆದುದರಿಂದ, ಅವನ ಕಾರ್ಯಕ್ಕೇನೂ ಬಾಧಕ ಬರುವುದಿಲ್ಲ. ಅಡವೀ ಹಕ್ಕಿಗಳಂತೆ ತಮ್ಮ ಕೃತಿಗಳನ್ನು ಬಹಿರಂಗ ಪಡಿಸಲು ಅವಕಾಶವಿಲ್ಲದೆ, ಅಡಗಿರುವ ಸಾಹಿತಿಗಳೂ ಎಷ್ಟೋ ಮಂದಿ ಇದ್ದಾರೆ. ಇದನ್ನು ಪತ್ರಿಕಾ ಕರ್ತರೂ, ಪ್ರಕಾಶಕರೂ ಜ್ಞಾಪಿಸಿ ಕೊಂಡಿರಬೇಕು ಹಾಗೆಯೇ ಅಡಗಿರುವ ಸಾಹಿತಿಗಳೂ ಶಂಕಿಸಿಕೊಂಡಿರಬಾರದು ನೀವು ಜನತೆಯ ಮುಂದೆ ಬಂದು ಪ್ರಕಾಶಿಸಲೆತ್ನಿಸಿರಿ. ಅದೇನೂ ತಪ್ಪಲ್ಲ. ಜನತೆಯೇ ನಿಮ್ಮನ್ನೆಳೆದುಕೊಂಡರೂ ತಪ್ಪೇನಿಲ್ಲ. ಬೆಳಕಿಗೂ ಕಣ್ಣಿಗೂ, ಪ್ರಪಂಚಕ್ಕೂ ಜನತೆಗೂ ಸಂಬಂಧವಿರುವಂತೆಯೇ, ಸಾಹಿತಿಗೂ ಜನತೆಗೂ ಸಂಬಂಧವುಂಟು. ಜನ ಜೀವನದ ಕನ್ನಡಿಯೇ ಕಲೆಯಾದುದರಿಂದ, ಜೀವನಕ್ಕಾಗಿ ಕಲೆ ಎಂಬ ತತ್ವದಲ್ಲಿ ಜನತೆ ಕಲೆಯಿಂದ ಪ್ರಯೋಜನವನ್ನು ಕಾಣುತ್ತದೆ. ಆದರೆ ಕವಿ-ಸಾಹಿತಿಗಳಿಗೆ ಕಲೆಗಾಗಿಯೆ ಇದೆ ಎನ್ನಬಹುದು.

ಹಳೆಯಸಾಹಿತ್ಯ

'ಇದೀಗ ವಿಜ್ಞಾನಯುಗ, ಇದಕ್ಕನುಗುಣವಾದ ಸಾಹಿತ್ಯವೇ ನಿಜವಾದ ಸಾಹಿತ್ಯ. ಹಿಂದಿನದೆಲ್ಲ ಅಜ್ಞಾನ ಮಯ; ಮೂಢಾತ್ಮಕ, ಅತಿಶಯದ್ಯೋತಕ, ಆಡಂಬರ ಯುಕ್ತ ಹೀಗೆಲ್ಲಾ ಏನೇನೋ ಇರುವ ಸಾಹಿತ್ಯ" ಎಂಬೊಂದು ತಾತ್ಸಾರ ಭಾವನೆ ಮೆಲ್ಲಮೆಲ್ಲನೆ ಹರಡುತ್ತಿದೆ. ಜನತೆಯಲ್ಲಿ ಮಾತ್ರವಲ್ಲ ಸಾಹಿತಿಗಳಲ್ಲಿಯೂ ಹರಡುತ್ತಿದೆ. ಇದು ಎಷ್ಟು ಮಾತ್ರಕ್ಕೂ ಶ್ರೇಯಸ್ಕರವಲ್ಲ. ಆಳವಾಗಿ ಅಭ್ಯಾಸವಿದ್ದರೆ ಅಂತಹ ಭಾವನೆಗೆ ಎಡೆಯಿಲ್ಲ. ಮುಖ್ಯವಾಗಿ ಹಿಂದಿನಕಾಲದ ಸಾಹಿತ್ಯದ ಅಭ್ಯಾಸಕ್ಕೆ ಸೌಕರ್ಯವಿಲ್ಲದೆ, ತಕ್ಕಷ್ಟು ಪ್ರಚಾರವಿಲ್ಲದೆ ತಾತ್ಸಾರ ಭಾವನೆಗೆ ಕಾರಣವಾಯಿತು. ಅದು ಕೇವಲ ಪಂಡಿತರ ಸೊತ್ತಾಯಿತು.

ನಿಜಕ್ಕೂ ಹಿಂದಿನಕಾಲದ ಸಾಹಿತ್ಯವು ಮಹತ್ವವಾದುದು ಪ್ರಾಚೀನ ಕಾಲದ ಚರಿತ್ರೆ ಅದಕ್ಕಿದೆ. ಪದ್ಯಕಾವ್ಯಗಳು, ಪದ್ಯ ಗದ್ಯಾತ್ಮಕವಾದ ಚಂಪೂ ಗ್ರಂಥಗಳು, ಕೀರ್ತನೆಗಳು, ಹಳ್ಳಿ ಹಾಡುಗಳು, ಜಾನಪದ ಗೀತಗಳು, ತ್ರಿಪದಿಗಳು, ಷಟ್ಪದಿಗಳು, ವಚನ ಮಾಣಿಗಳು, ಯಕ್ಷಗಾನ ... ಹೀಗೆಷ್ಟೋ ಇವೆ. ಎಲ್ಲವೂ ... ಘಟ್ಟ ... ಆಗಿವೆ. ಇಂತಹವುಗಳ ರಸ ಗ್ರಹಿಸಿ ... ಮಾಡುವ ಶಕ್ತಿಯನ್ನು ನಾವು ಕಳೆದ ಕೊಳ್ಳಬಹುದೆ? ಅದು ಕೇವಲ ಪಂಡಿತರ ಸೊತ್ತು ಮಾತ್ರವೇ ಆಗಬಹುದೆ?

ಹಳೆಯದೆಂದು ಮೂಲೆಗೆ ಹಾಕಿ ಬಿಡುವುದೂ, ಹಳೆಯ ಸಾಹಿತಿಗಳನ್ನೂ ಕವಿಗಳನ್ನೂ ಮರೆಯುವುದೂ, ಸಾಹಿತ್ಯದ ಬೆಳವಣಿಗೆಗೆ ಒಳ್ಳೆಯದಲ್ಲ. ಅವರ ಸ್ಮಾರಕಗಳನ್ನಾಚರಿಸುವುದರಿಂದಲೂ ಅವರ ಸಾಹಿತ್ಯವನ್ನು ಪ್ರಚಾರಿಸುವುದರಿಂದಲೂ ಸಾಹಿತ್ಯಕ್ಕೆ ಹೊಸ ಬಲವೂ ಹೊಸ ಬೆಳಕೂ ಬಂದೀತು. "ಅಪ್ಪ ಕಟ್ಟಿದ ಗುಡಿಗೆ ಮಗ ಕಳಸವಿಟ್ಟ" ಎಂಬ ಹಾಗೆ, ನಮ್ಮ ಸಾಹಿತ್ಯವು ಹಿಂದಿನವರ ಮೇಲಿನ ಕೃತಜ್ಞತಾಭಾವದಿಂದಲೇ ಪೋಷಣೆಗೊಂಡು ಆಧುನಿಕ ಬೋಧೆಯಿಂದ ಮೆರೆಯಬೇಕು.

ಆಧುನಿಕ ಸಮಾಜದಲ್ಲಿ ನಮ್ಮ ಹೊಸ ನೋಟವು ನಮಗೆ ಗೌರವ ತರುತ್ತದೆ. ಉತ್ತಮ ಕೋಟು, ಧರಿಸಿದ ವ್ಯಕ್ತಿಗೆ ಅಂಥಾ ಕೋಟಿಲ್ಲದವನಿಗಿಂತ ಹೆಚ್ಚಿನ ಗೌರವ ದೊರೆಯುತ್ತದೆ. ಹೊರ ಉಡಿಗೆಯಲ್ಲಿ ಏನಿದೆಯೆಂದು ಇಂದು ಪ್ರಶ್ನಿಸಲ್ಪಡುವುದಿಲ್ಲ; ಏಕೆಂದರೆ ಇಂದಿನ ಸಮಾಜವೇ ಹಾಗೆ!

—ಜಾನ್ಸನ

o o o

ಮೃತ್ಯು ಯಾವಾಗ ಬರುತ್ತದೆಂದು ಸ್ಪಷ್ಟವಿಲ್ಲದಿದ್ದರೂ ಅದು ಬಂದೇ ಬರುತ್ತದೆಂಬುದು ಖಚಿತವಿದ್ದೆ. ಆದ್ದರಿಂದ ಮೃತ್ಯು ಸಮೀಪದಲ್ಲೇ ಇದೆಯೆಂದು ತಿಳಿದು ವರ್ತಿಸುವವನು ಹೆಚ್ಚು ಸ್ವಾರ್ಥಿಯೂ, ಹೆಚ್ಚು ಪಾಪಿಯೂ ಆಗಿರಲಾರ.

o o o

ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಸುಳ್ಳಿನ ಗುಳಿಗೆಗಳಿಂದಲೇ ಉಸಿರು ಕಟ್ಟಿ ಸಾಯುತ್ತವೆ.

o o o

ತಮ್ಮ ಹಿರಿಯರ ಹಿನ್ನೆಲೆಯನ್ನು ಅರಿಯದ ಜನ ತಮ್ಮ ಮುಂದಿನವರ ಭವಿಷ್ಯವನ್ನು ನೋಡಲಾರರು.

Phone: 4394

ಅತ್ಯುತ್ತಮ ಕೈಮಗ್ಗದ ಮಂಗಳೂರು ಸೀರೆಗಳಿಗೆ

ಪೂರ್ಣಿಮಾ ಸ್ಟೋರ್ಸ್

ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ

ಪೊಪ್ಯುಲರ್ ಇನ್ಶೂರೆನ್ಸ್ ಕಟ್ಟಡ, ಮಂಗಳೂರು-1.

ಮೈಸೂರು ದಸರ ವಸ್ತು ಪ್ರದರ್ಶನದಲ್ಲಿ 1962, 1963, 1964ರಲ್ಲಿ ಬಂಗಾರದ ಪದಕ ಪಡೆದ ನಮ್ಮ ಪೂರ್ಣಿಮಾ ಮಂಗಳೂರು ಸೀರೆಗಳನ್ನೇ ಉಪಯೋಗಿಸಿರಿ.

ನೆಹರೂ ಜೀವನದ ಕೆಲವು ಘಟನೆಗಳು

(ಹತ್ತನೇ ಪುಟದಿಂದ)

ರವರ ಹಾಸಿಗೆ ಹಾಸಿದರೆ— ಬೇಡ ನ್ಯಾ ನಾನು ಹೊರಗೆ ಮಂಟಪದಲ್ಲಿ ಮ ಲಗುತ್ತೇನೆ. ಏಕೆ ಅನಾವಶ್ಯವಾಗಿ ಸ್ಥಾ ನ ಕಿರುಗಿಸಬೇಕು ಎನ್ನುತ್ತಿದ್ದರಂತೆ.

ಸಂಪೂರ್ಣವಾಗಿ ನಿರುಪಯುಕ್ತವೆನಿ ಸುವ ತನಕವೂ ಅವರು ತನ್ನ ವಸ್ತ್ರಗಳ ನ್ನೆಂದೂ ಎಸೆಯುತ್ತಿರಲಿಲ್ಲ.

೦ ೦ ೦

1940ರ ಜನವರಿ ತಿಂಗಳ ಒಂದು ದಿನ ಚಾಚಾ ನೆಹರೂ ಅವರು ಮೀರತ್ತಿನಿಂದ ಮುಜಾಫರ್‌ಪುರ, ಸಹರಾನ್‌ಪುರ ಮುಂ ತಾದ ಜಿಲ್ಲೆಗಳ ಪ್ರವಾಸಕ್ಕೆ ಹೊರಟಿದ್ದ ರು. ಮೋಟಾರು ಹೊರಟಿತು. ಜನವರಿ ತಿಂಗಳ ಚಳಿಯದು, ಮುಂಜಾನೆಯು ಹೊತ್ತು ಬೇರೆ. 'ಸುಂಯ್' ಎಂದು ಬೀ ಸುತ್ತಿರುವ ಹಿಮಗಾಳಿ. ಸ್ವೆಟ್ಟರನ್ನು ತೊ ಟ್ಟುಕೊಂಡಿದ್ದರೂ ನೆಹರೂ ಚಳಿಯಿಂದ ನಡುಗುತ್ತಿದ್ದರು. ಈ ಅವಸ್ಥೆಯಲ್ಲಿಯೇ ಜೊತೆಗಾರರೊಂದಿಗೆ ಜವಾಹರರ ಮೋ ಟಾರು ಮೀರತ್ತಿನಿಂದ ಹೊರಟು ಖಾತೇ ಲಿ ಎಂಬ ಹಳ್ಳಿಯನ್ನು ಬಂದು ಸೇರಿತು.

ಕೂಡಲೇ ಹಳ್ಳಿಯ ಜನರೆಲ್ಲ ಒಟ್ಟು ಗೂಡಿ 'ಚಾಚಾ ನೆಹರೂ ಜಿಂದಾಬಾದ್' ಎಂದು ಜಯಘೋಷ ಗೈಯುತ್ತಾ ಅವ ರನ್ನು ಮುತ್ತಿಕೊಂಡರು. ಅನಂತರ ಅವ ರೆಲ್ಲ ಒಟ್ಟು ಸೇರಿ ಹೂ ಹಾಳಾಗಬಾರ ದೆಂದು ನೀರು ಸಿಂಪಡಿಸಿದ್ದ ದೊಡ್ಡ ದೊ ಡ್ಡ ಹಾರಗಳನ್ನು ಪಂಡಿತ ನೆಹರೂ ಅವರಿ ಗೆ ತೊಡಿಸಿದರು ಮಾತ್ರವಲ್ಲ ಬಿಡಿ ಹೂಗ ಳನ್ನು ಅವರ ಮೇಲೆರಚುತ್ತಾ ಜಯ ಘೋಷ ಗೈಯಲಾರಂಭಿಸಿದರು. ಅವರಿ ದನ್ನೆಲ್ಲಾ ಪ್ರೀತಿಯಿಂದಲೇ ಮಾಡಿದ್ದ ರಾದರೂ ನೆಹರೂ ಅವರಿಗೆ ತುಂಬ ಸಂಕ ಟವಾಗುತಿತ್ತು. ಕೊನೆಗೆ ಅವರು ನಗು ತ್ತಾ ಜನರೊಡನೆ—"ಅರೇ! ನಿಮ್ಮ ಪ್ರೀ ತಿಯ ಧಾರೆಯಲ್ಲಿ ನಾನು ಅಡಿಯಿಂದ ಮುಡಿಯ ತನಕ ಒದ್ದೆಯಾಗಿ ಬಿಟ್ಟಿದ್ದೇ ನಲ್ಲಾ. ಅಲ್ಲಾ ನೀವು ಹೀಗೆ ಪ್ರೀತಿ ಮಾ ಡಿದರೆ—ಅದೂ ಇಂತಹ ಚಳಿಯಲ್ಲಿ, ನಾ ನಂತೂ ಸತ್ತೇ ಹೋಗುತ್ತೇನೆ" ಎಂದು ಬಿಟ್ಟರು.

ಪಾಪ, ಹಳ್ಳಿಗರಿಗೆ ಈಗ ತಮ್ಮ ತಪ್ಪಿ ನ ಅರಿವಾಯ್ತು. ಕೂಡಲೇ ಅವರು ಹೂ ಎಸೆಯುವುದನ್ನು ನಿಲ್ಲಿಸಿ ಕೊರಳಿನಿಂದ ಹಾರ ತೆಗೆದರು. ಅನಂತರ—"ಬಸ್ ಭಗ ವನ್ ಅಬ್ ಅಪ್ನಾ ಭಾಷಣ್ ಶುರು ಕೀಜೀಯೇ" (ಸರಿ ದೇವರೇ, ಇನ್ನು ನೀವು ಭಾಷಣ ಆರಂಭಿಸಿರಿ.) ಎಂದು ಪ್ರಾರ್ಥಿಸಿ ಕೊಂಡರಂತೆ.

(ಮೂಲ: ಜಹೂರ್ ಬಖ್ಶ್.)

ಕಲಾದೇವಿಗೆ...!

(ಶಾ॥ ವಿಕ್ರೀಡಿತಂ)

ಶ್ರೀನಾಟ್ಯೇಶ್ವರಿ ನಾದ ಲೋಲೆ ನಟರಿಂಗಾರಾಧ್ಯ ದೇವೀ ಸ್ವಯಂ
ಶ್ರೀರಾಗಾಭಿನಯಂಗಳಿಂದ ಸತತಂ ಸಂಪ್ರೀತೆ ಸನ್ಮಂಗಳೇ,
ಶ್ರೀಲೋಲೇ ರಸರಾಗ ರಂಜಿತಳೆ ನೀನಾನಂದ ಲಕ್ಷ್ಮೀ ಸ್ವಯಂ
ಶ್ರೀಕಾರಾವೃತೆ ಶ್ರೀಕಲಾಬ್ಧಿ ಕಮಲೇ ಕಾವ್ಯೇಶ್ವರೀ ಪಾಹಿಮಾಂ ॥ ೧ ॥

ಲಾವಣ್ಯೋಜ್ವಲಿ ಪೂರ್ಣ ಚಂದ್ರವದನೇ, ಜ್ಯೋತಿರ್ಮನೋಹಾಲೋಚನೇ,
ಕಾವ್ಯಾ ಭೂಷಣ ಭಾವ ವಸ್ತ್ರ ರಸಪುಷ್ಪಾಲಂಕೃತೇ ಶೋಭಿತೇ,
ಸದ್ಭಾವಾಭಿನಯೋಜ್ವಲಾಂಗಲಸಿತೇ, ಸತ್ಪ್ರೇಮ ಸಮ್ಮೋಹಿತೇ,
ಭಾವೋದ್ಯಾನ ಕಲಾವಿಹಾರ ಚತುರೇ, ಶ್ರೀನೀಲಕಂಠೇಶ್ವರಾ ॥ ೨ ॥

(ಮ॥ ವಿಕ್ರೀಡಿತಂ)

ರಸಮೇಂ ಭಾವಮದೇಂ ಮಹಾಭಿನಯಮೇಂ ಕಾವ್ಯಂಗಳುಂ ನಿನ್ನೊಳಂ
ಸ್ರೋತ ಸಿಂಗಾರದಿ ರಂಜಿಸುತ್ತಲಿರಲುಂ ಲೋಕಕ್ಕದೇ ಚೇತನಂ
ತೃಷೆಯಿಂದಂ ರಸಪಾನ ಗೈವ ರಸಿಕರ್ಗಾನಂದಮಂ ನೀಡುವೈ
ರಸವಾಣೀ ರಸನಾಗ್ರದೊಳ್ ನೆಲಸುನೀಂ ಶ್ರೀನೀಲಕಂಠೇಶ್ವರಾ ॥ ೩ ॥

(ಶಾ॥ ವಿಕ್ರೀಡಿತಂ)

ಗೀತಂ ವಾಙ್ಮಯವೆಲ್ಲ ನಿನ್ನೆದೆಯೊಳಂ ತುಂಬಿರ್ಪುದೈದುಗ್ಧದೋಲ್
ಗೀತಾಭ್ಯಾಸಿ ಕಲಾವಿನೋದಿಗಳಿಗಂ ನೀನೂಡುವೈ ಕ್ಷೀರಮಂ
ಮಾತೃಸ್ಥಾನದೆ ನಿನ್ನ ಗೌರವಿಸುತಂತಾಂ ಧನ್ಯರಾಗಿರ್ಪರೈ
ಮಾತೇ, ಹೇ, ಪ್ರತಿಭಾನ್ವಿತೇ, ಜಯ ನಮೋ ಶ್ರೀನೀಲಕಂಠೇಶ್ವರಾ ॥ ೪ ॥

ವಾಣೀ, ಬ್ರಹ್ಮನ ವಾಣಿ ಶಕ್ತಿ ಶಿವನಿಂಗಾ ವಿಷ್ಣುಗಂ ಮಾಯೆನೀಂ
ರಾಣೀ, ವಿಶ್ವದ ರಾಜ್ಞಿ ನೀನಿರದಿರಲ್ ಶೂನ್ಯಂ ಜಗಂ ನಿರ್ಬಲಂ
ನಿನ್ನಾನಾಮಗಳೇನನೇಕ ಮಿರಲೇಂ ನೀನೋರ್ವಳೇ ವಾಣಿತಾಂ
ನಿನ್ನಾ ಸ್ಥಾನಕೆ ಗೌರವಕ್ಕೆಣೆಯದೇಂ ಶ್ರೀನೀಲಕಂಠೇಶ್ವರಾ ॥ ೫ ॥

ಕೆ. ಎನ್. ಭಟ್, ಶಿರಾಡಿಪಾಲ್.

ಶ್ರೇಷ್ಠತೆಗೆ, ಭದ್ರತೆಗೆ ನೀರು ಹಾಯಿಸುವ



ಪಂಪು ಸೆಟ್ಟುಗಳು

ಎಂದರೆ "ಕಿರ್ಲೋಸ್ಕರ್" ಎಂಬುದು ಮನೆ ಮಾತಾಗಿದೆ.

ಏಕೆ ಬಲ್ಲಿರಾ ?

೧. ಯಂತ್ರದ ತೊಂದರೆ ಇರುವುದಿಲ್ಲ
೨. ಮೇಲ್ಮಟ್ಟದ ತಯಾರಿಕೆಯಿಂದ ಕೂಡಿರುತ್ತದೆ
೩. ನೀರು ಧಾರಾಕಾರವಾಗಿ ಉಪಯೋಗಿಸಬಹುದು

ನಿಮ್ಮ ಹತ್ತಿರದ ಡಿಸ್ಟ್ರಿಬ್ಯೂಟರ್ಸ್:

ಕರ್ಕೇರ ಸನ್ಸ್ & ಕೊ.,

ಮೈದಾನ್ ವೆಸ್ಟ್ ರೋಡ್,
ಮಂಗಳೂರು–೧. *Phone No.* 3967.

ತನ್ನ ತೃಪ್ತಿಗಾಗಿ ತಾನು ಊಟ ಮಾ ಡಬೇಕು. ಇತರರ ತೃಪ್ತಿಗಾಗಿ ತಾನು ಬಟ್ಟೆ ಉಡಬೇಕು.

—ಫ್ರಾಂಕ್ಲಿನ್.

೦ ೦ ೦

ಉತ್ತಮವಾದ ಉಡಿಗೆಗೆ ಮೂರು ಗು ಣಗಳಿರುತ್ತವೆ. ಉಡಲು ಅನುಕೂಲ, ಕೊಳ್ಳಲು ಕಡಿಮೆ ದರ ಮತ್ತು ನೋಡ ಲು ಸುಂದರ!

—ಬೋವೀ.

೦ ೦ ೦

ಸರಳ ಉಡುಪು ಸೌಂದರ್ಯಕ್ಕೆ ಹೆ ಚ್ಚು ಒಪ್ಪ ಕೊಡುತ್ತದೆ. ಸದ್ಗುಣವು ಸರ್ವ ಸುಂದರ ಆಭರಣವಾಗುತ್ತದೆ. ಸ ಭ್ಯತೆಯು ರಾಜ ಸಭೆಗೂ ಅರ್ಹತೆಯ ನ್ನೀಯುತ್ತದೆ.

—ಸೆವಿಲ್.

೦ ೦ ೦

ಉಡಿಗೆಯ ಬಗ್ಗೆ ಗಮನವೇ ಇಲ್ಲದಿ ರೋಣ, ಹಾಗೂ ಉಡುಗೆಯೇ ಜೀವನ ದ ಅಮೂಲ್ಯವೆಂದು ತಿಳಿಯೋಣ ಈ ಎ ರಡು ದೃಷ್ಟಿಯೂ ಕೂಡ ವೃದ್ಧಾಪ್ಯದ ಗೆರೆಗಳನ್ನು ಮುಖದಲ್ಲಿ ಹೆಚ್ಚಾಗಿಸಿ, ಸೌಂ ದರ್ಯದ ಅವನತಿಯನ್ನು ಎತ್ತಿ ಹೇಳು ವುವು.

—ಬ್ರೂಯೂರ್

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ
ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ, ರೂ. 1-50
ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಅಜಂತಾ ಮತ್ತು ಎಲ್ಲೋರಾ

(ಐಂಟತ್ತನೇ ಪುಟದಿಂದ)

ಅಜಂತೆಯ ಚಿತ್ರಕಾರರು ಕಲ್ಲಿನ ಗೋಡೆಗಳ ಮೇಲೆ ಬರೆದಿರುವ ಚಿತ್ರಗಳು ಅಂದವಾದ—ಅಪುರೂಪ ಚಿತ್ರಗಳು. ಚಿತ್ರಗಳಲ್ಲಿ ಭಾವಪೂರ್ಣತೆ ತುಂಬಿದೆ. ಚಿತ್ರದ ರೀತಿನೀತಿ ಹಾವಭಾವಗಳನ್ನು ರೂಪಿಸಿಕೊಂಡ ಚಿತ್ರಗಾರರು ಗೋಡೆಯ ಮೇಲೆ ರೂಪಿಸಿದಾಗ ಮತ್ತಷ್ಟು ತಿದ್ದದಂತೆ—ಅಂದ ಕೆಡದಂತೆ ಚಿತ್ರಿಸಿದ್ದಾರೆ. ಚಿತ್ರಗಳಲ್ಲಿ ಕಾಣುವುದು ಬರಿಯ ರೇಖೆ-ವರ್ಣಗಳಲ್ಲ. ಸಜೀವ ಸುಂದರ ಪ್ರಪಂಚ. ಗಿಡ, ಬಳ್ಳಿ, ವೃಕ್ಷ, ಪಕ್ಷಿ, ಹುಲ್ಲೆ, ಅಲಂಕೃತ ಮಂಟಪ, ಗೃಹ, ಮಹಾದ್ವಾರ, ಅರಮನೆ, ಸ್ತ್ರೀ, ಪುರುಷರ, ಮಕ್ಕಳ ಅನುಭವದ ಪ್ರತ್ಯಕ್ಷ ಲೋಕ. ಇವುಗಳೆಲ್ಲವುಗಳ ಜೊತೆಗೆ ದಯಾಪೂರ್ಣ, ಧ್ಯಾನಾಸಕ್ತ ಬುದ್ಧದೇವ. ಅಜಂತೆಯ ವರ್ಣಚಿತ್ರಗಳ ಮೂಲೆ-ಗುಹೆಗಳು ರಮ್ಯದೃಶ್ಯದ ತೆರ ಇದ್ದಂತೆ.

ಅಜಂತೆಯ ಚಿತ್ರಗಳಲ್ಲಿ ಕಾಣುವ ವ್ಯಕ್ತಿಗಳ ನೋಟ, ಭಾವಗಳು ಅಸದೃಶ. ಲೋಕದ ಕಷ್ಟವನ್ನು ಕಂಡ, ಮರುಗಿ, ಮೂರು ದೃಶ್ಯಗಳನ್ನು ಕಂಡು ಬುದ್ಧನಾಗಲು ಹೊರಟ ಸಿದ್ಧಾರ್ಥನ ಮನೋಭಾವ, ಕಣ್ಣಲ್ಲಿ ತುಂಬಿರುವ ಕರುಣೆ—ಕಾತುರತೆ ಬರಹಗಳಲ್ಲಿ ಮೂಡಿಸಲು ಸಾಧ್ಯವಿಲ್ಲ. ಆದರೆ ಆ ಕಲಾವಿದ ತನ್ನ ಕುಂಚದಿಂದ ಸಿದ್ಧಾರ್ಥನ ಹೃದಯವನ್ನೇ ಬಿಚ್ಚಿ ತೋರಿಸಿದ್ದಾನೆ, ಚಿತ್ರದಲ್ಲಿ.

ಅಜಂತೆಯ ಚಿತ್ರಗಳ ಪಟ್ಟಿಯಲ್ಲಿ ಕರ್ನಾಟಕದ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ದರ್ಬಾರು ಮತ್ತು ಇರಾನ್ ರಾಯಭಾರಿಯ ಭೇಟಿಯ ಚಿತ್ರವೂ ಕನ್ನಡಿಗನೂ ಮರೆಯಲಾಗದಂತಹ ಭವ್ಯ ಚಿತ್ರ. ಅಲ್ಲದೆ ಈ ಎಲ್ಲ ಚಿತ್ರಗಳ ಪೈಕಿ ಬುದ್ಧನನ್ನು ಭೇಟಿ ಮಾಡಲು ಹೊರಟ ಯಶೋಧರೆ ರಾಹುಲ ಇವರ ಚಿತ್ರ, ಪದ್ಮಪಾಣಿ ಇವರ ಚಿತ್ರ ಅಂದ ಕೆಡದ ಆನಂದ ನೀಡುವ ರಮ್ಯ ಚಿತ್ರಗಳು.

ಪ್ರಾಚೀನ ಪರಂಪರೆಯಲ್ಲಿ ಜನತೆಯ ಅಭಿರುಚಿ ಉಡುಗೆ, ತೊಡಗೆ ಅಲಂಕಾರ, ವ್ಯಕ್ತಿತ್ವ, ಅದರ ವೈಭವಯುತ ಜೀವನಗಳನ್ನು ಮತ್ತೊಮ್ಮೆ ನಾವಲ್ಲಿ ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಹಲಬಗೆಯ ಅಂದ ಚಂದದ ಅಲಂಕಾರಗಳನ್ನು ಇಂದು ಅಲ್ಲಿ ಕಾಣಬಲ್ಲೆವಷ್ಟೆ. ಆದರೆ ಇಂದು ಅವುಗಳನ್ನು ಅನುಸರಿಸುವುದು ಪ್ರಯೋಜಕರ ಎಂದು ಸಂಕೋಚವಿಲ್ಲದೆ ಹೇಳಬಹುದು.

ಅಜಂತೆಯಲ್ಲಿ ಬುದ್ಧನ ಜೀವನ, ಜಾತಕ ಕಥೆ ಮತ್ತು ಕಥೆಗಳನ್ನು ಅನುಸರಿಸಿ ಬರೆದ ಚಿತ್ರಗಳಿವೆ. ಎಲ್ಲ ಚಿತ್ರಗಳ ಕೇಂದ್ರ ಬುದ್ಧ. ಬುದ್ಧನ ಅಂತಃಕರಣ ಪೂರ್ಣ ಅಂತರಂಗ, ಧ್ಯಾನ, ಯೋಗ ಸ್ಥಿತಿಗಳ ಗತಿಯನ್ನೂ ಅರಿತ ಚತುರ ಚಿತ್ರಗಾರ ಅಂದವಾಗಿ ಚಿತ್ರಗಳನ್ನು ಬಿಡಿಸಿದ್ದಾನೆ.

ಶತಮಾನಗಳು ಗತಿಸಿಹೋದರೂ ತಮ್ಮ ಭವ್ಯತೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬದುಕಿರುವ ಅಜಂತೆಯ ಈ ವರ್ಣ ಚಿತ್ರಗಳು ಆಧುನಿಕ ಕಲಾಕೋವಿದರ ಪಂಡಿತರ ಕಲಾ ಶಕ್ತಿಗೆ ಸವಾಲು ಹಾಕಲೂ ಸಿದ್ಧವಿವೆ. ಲೋಕದ ಕಲ್ಲಿಗೆ ಇದ್ದು ಇಲ್ಲದೆ ಮರೆಯಾಗಿದ್ದ ಈ ಕೇಂದ್ರ ಭಾರತೀಯರ ಸಂಸ್ಕೃತಿ ಕಲೆಗಳ ಮೇಲೆ ಬೀರಿದ ಪ್ರಭಾವ ಅಲ್ಪವಲ್ಲ.

ಕಲಾ ಲೋಕದಲ್ಲಿ ವರ್ಣ ಚಿತ್ರಗಳ ದೆಸೆಯಿಂದ ಅಜಂತೆಗೆ ಪ್ರಾಮುಖ್ಯತೆ ಬಂದಿರುವಂತೆ ವಾಸ್ತು ಶಿಲ್ಪದಿಂದ ಎಲ್ಲೋರಕ್ಕೆ ಹಿರಿಮೆ ಒದಗಿಬಂದಿದೆ. ಎಲ್ಲೋರ ವೇರೂಳ,ಎಲ್ಲೂರುಎಂಬ ಹೆಸರಿನಿಂದಲೂ ಪರಿಚಿತ.

ಎಲ್ಲೋರದ ಗವಿಗಳು ದೇವಗಿರಿ ಕೋಟೆಯಿಂದ ಆರು ಮೈಲಿ ದೂರದಲ್ಲಿವೆ. ಎಲ್ಲೋರ ಗ್ರಾಮದ ಬಳಿ ಸುಮಾರು ೩೦೦ ಅಡಿ ಎತ್ತರವಾಗಿ ಪಶ್ಚಿಮಾಭಿಮುಖವಾಗಿ ಎದ್ದು ನಿಂತಿರುವ ಘಟ್ಟಗಳ ಹುಟ್ಟುಬಂಡೆಯಲ್ಲಿ ಸುಮಾರು ಒಂದೂವರೆ ಮೈಲಿ ಉದ್ದಕ್ಕೂ ೩೪ ಗವಿಗಳು ಕೊರೆಯಲ್ಪಟ್ಟಿವೆ. ಔರಂಗಾಬಾದಿನಿಂದ ಎಲ್ಲೋರದ ಗವಿಗಳ ವರೆಗೂ ಬಸ್ಸಿನಲ್ಲಿ ಬರಬಹುದು.

ಎಲ್ಲೋರದ ಗವಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ೧೨ ಗವಿಗಳು ಬೌದ್ಧ ಮತಕ್ಕೆ ಸೇರಿದಂತಹವು, ೧೭ ಗುಹೆಗಳು ಪೌರಾಣಿಕ ಸಂಗತಿಗಳಿಗೆ ಸಂಬಂಧಪಟ್ಟವು ಮತ್ತು ೫ ಜೈನ ಗವಿಗಳು. ಮೊದಲು ಬೌದ್ಧ ಗವಿಗಳು. ಅನಂತರ ಪೌರಾಣಿಕ ಗವಿಗಳು. ಕೊನೆಯದಾಗಿ ಜೈನ ಗವಿಗಳು ಕೊರೆಯಲ್ಪಟ್ಟಿರಬೇಕೆಂದು ಪಂಡಿತರ ಅಭಿಪ್ರಾಯ. ಕ್ರಿ.ಶ. ೬೦೦ರಿಂದ ೭೦೦ರ ವರೆಗೆ ಬೌದ್ಧ ಗವಿಗಳೂ, ೭೦೦ರಿಂದ ೮೦೦ರ ವರೆಗೆ ಪೌರಾಣಿಕ ಗವಿಗಳು, ಅನಂತರ ೮೦೦ರಿಂದ ೯೦೦ರ ವರೆಗೆ ಜೈನ ಗವಿಗಳನ್ನು ಕೊರೆದಂತೆ ತೋರುವುದೆಂದು ಸಂಶೋಧಕರ ಅಭಿಪ್ರಾಯ. ಎಲ್ಲೋರದ ಗವಿಗಳಿರುವ ತಾಲ್ಲೂಕಿಗೆ ಇಂದಿಗೂ ಕನ್ನಡ ತಹಸೀಲ್ ಎಂಬ ಹೆಸರಿದೆ. ಅಂದರೆ ಈ ಗುಹೆಗಳು ಆ ಕಾಲದಲ್ಲಿ ಕರ್ನಾಟಕದ ಮುಖ್ಯ ಅರಸು ಮನೆತನಗಳಾದ ಬಾದಾಮಿ ಚಾಲುಕ್ಯ, ಮಾನ್ಯಖೇಡದ ರಾಷ್ಟ್ರಕೂಟ ಅರಸರ ಕಾಲದಲ್ಲಿ ರೂಪುಗೊಂಡವೆಂದು ಹೇಳಲು ಆಧಾರ ದೊರೆಯುತ್ತದೆ. ಎಲ್ಲೋರದ ಜೈನ ಶಿಲ್ಪಕ್ಕೂ ಶ್ರವಣ ಬೆಳಗೊಳದ ಕಟ್ಟಡಗಳ ಶೈಲಿಗೂ ಸಾಮ್ಯವಿರುವುದು ಗಣನೀಯ ಸಂಗತಿ.

ಎಲ್ಲೋರದ ಬೌದ್ಧ ಗುಹೆಗಳು ಎಂದಿನಂತೆಯೇ ಬೌದ್ಧ ಧರ್ಮ ಮತ್ತು ಬುದ್ಧನ ಯೋಗ, ಜ್ಞಾನ, ಸಮಾಧಿಯ ಶಿಲ್ಪಗಳಿಂದ ಕೂಡಿವೆ. ಆದರೆ ಒಂದೊಂದು ಗುಹೆಯ ಶಿಲ್ಪ, ರಚನಾ ಶೈಲಿ, ಕುಸುರಿ ಕೆಲಸದಲ್ಲಿ ಅಂತರವಿದೆ. ಬೌದ್ಧ ಗವಿಗಳಲ್ಲಿ ಐದನೆಯ ಗವಿ ಬಹು ದೊಡ್ಡದು. ೧೧೭ ಅಡಿ ಉದ್ದ ೮ ಅಡಿ ಅಗಲ ಇರುವ ಈ ಗುಹೆ ವಿಹಾರಗಳಲ್ಲೆಲ್ಲಾ ಅತ್ಯಂತ ಹಿರಿದು. ಇದು ಧೇಡರ ಗವಿ ಎಂದು ಪರಿಚಿತ. ಈ ಗವಿ ಯತಿಗಳ ಮಹಾಸಭೆಯ ಕೇಂದ್ರ ಸ್ಥಾನವಾಗಿತ್ತೆಂದು ಊಹಿಸಬಹುದಾಗಿದೆ. ಹತ್ತನೆಯ ಗುಹೆ ವಿಶ್ವಕರ್ಮ ಗುಹೆ ಎಂಬ ಹೆಸರಿನಿಂದ ಅತಿ ಸುಂದರವಾಗಿ ರೂಪುಗೊಂಡಿದೆ.

ಪೌರಾಣಿಕ ಗವಿಗಳ ಪೈಕಿ ರಾವಣನ ಗವಿ ಎಲ್ಲ ಗವಿಗಳಿಗಿಂತಲೂ ಭಿನ್ನ ಸ್ವರೂಪ ತಾಳಿದೆ. ಇಲ್ಲಿಯ ಕೆತ್ತನೆಯ ಕೆಲಸ ಅನೋಘವಾಗಿದೆ. ಮಹಿಷಾಸುರ ವಧೆ, ಶಿವ ತಾಂಡವ ನೃತ್ಯ, ರಾವಣ ಕೈಲಾಸ ಎತ್ತುವುದು, ಭೈರವ ಮೂರ್ತಿ. ಮನೋಹರವಾಗಿವೆ. ಶಿವಪಾರ್ವತಿ ಚದುರಂಗ, ದುರ್ಗಿ, ಲಕ್ಷ್ಮಿ, ವರಾಹಾವತಾರ, ಚತುರ್ಭುಜ ವಿಷ್ಣು.ಬ್ರಾಹ್ಮಿ ಮಹೇಶ್ವರಿ, ವಾಹನ ಯುಕ್ತ ಸಪ್ತ ಮಾತ್ರಿಕೆಯರ ಶಿಲ್ಪಗಳು ಅಂದವಾಗಿವೆ. ದಶಾವತಾರದ ಗವಿಯಲ್ಲಿ ಉಮಾ ಮಹೇಶ್ವರ ವಿವಾಹ, ಲಿಂಗೋದ್ಭವ ಶಿವ, ಅನಂತಶಯನ, ಗಜಲಕ್ಷ್ಮಿ, ನರಸಿಂಹ, ವಾಮನ ಮೂರ್ತಿಗಳು ಅಂದವಾಗಿವೆ.

ಎಲ್ಲೋರದ ಗವಿಗಳ ಕೀರ್ತಿ ಕಳಶದಂತೆ ಹದಿನಾರನೆಯ ಕೈಲಾಸ ದೇವಾಲಯ ರಮನೀಯವಾಗಿದೆ. ಇದೊಂದು ವಿಚಿತ್ರ ವಾಸ್ತು ಶಿಲ್ಪಕ್ಕೆ ಮಾದರಿ. ಒಂದೇ ಬಂಡೆಯಿಂದ ದೇವಾಲಯದ ಸಮಸ್ತ ಮೂರ್ತಿಗಳನ್ನೂ—ಪ್ರಾಕಾರಾದಿಗಳನ್ನು ರೂಪಿಸಲಾಗಿದೆ. ಇದು ದ್ರಾವಿಡ ಶೈಲಿಯ ದೇವಾಲಯ; ಎರಡು ಅಂತಸ್ತುಗಳಿಂದ ಕೂಡಿದೆ. ೧೯೪ ಅಡಿ ಉದ್ದ, ೧೦೯ ಅಡಿ ಅಗಲ, ೯೬ ಅಡಿ ಎತ್ತರ ಶಿವಾಲಯವನ್ನು ಒಂದು ನೂರು ಅಡಿ ಆಳಕ್ಕೆ ಹೆಚ್ಚಿನ ಕಲ್ಲನ್ನು ಕೊರೆದು ನಿರ್ಮಿಸಿದ್ದಾರೆ. ದೇವಾಲಯದ ಮಹಾದ್ವಾರದ ಎರಡು ಕಡೆಗಳಲ್ಲಿ ಶಿವ ಲೀಲೆ,ದಶಾವತಾರ ಮತ್ತು ದಿಕ್ಪಾಲಕರಿಗೆ ಸಂಬಂಧಿಸಿದ ದೃಶ್ಯಗಳು ಕೆತ್ತಲ್ಪಟ್ಟಿವೆ. ಮಹಾದ್ವಾರದ ಎದುರಿನಲ್ಲಿ ೫೫ ಅಡಿ ಚದುರವುಳ್ಳ ೧೬ ಖಚಿತ ಕಂಬಗಳಿಂದ ಕೂಡಿದ ರಂಗ ಶಾಲೆ ಇದೆ. ದೇವಾಲಯದ ವಿಮಾನದಲ್ಲಿ ಕೆತ್ತಿರುವ ಶಿವ ಮತ್ತು ವಿಷ್ಣುವಿನ ಮೂರ್ತಿಗಳು ಮನೋಹರವಾಗಿದೆ. ಗಂಧರ್ವ ವ್ಯಕ್ತಿಗಳ ಮತ್ತು ದೇವಾಲಯದ ಹೊರವಲಯದಲ್ಲಿ ಕೆತ್ತಿರುವ ಪೌರಾಣಿಕ ಸಂಗತಿಗಳ ಶಿಲ್ಪಗಳು ಅಂದವಾಗಿವೆ.

ದೊಡ್ಡ ದೇವಾಲಯದಲ್ಲಿ ಆನೆಗಳ ಅನೇಕ ರೂಪಗಳು, ಸಿಂಹ ಮೊದಲಾದುವು, ನಂದಿಮಂಟಪ, ಮುಖ ಮಂಟಪದ ಬಳಿಯ ರಾಮಾಯಣದ ಕಥೆಯ ಕೆತ್ತನೆ, ರಾವಣ ಕೈಲಾಸ ಪರ್ವತ ಎತ್ತುವ ಚಿತ್ರ, ಪಾರ್ವತಿ ಶಿವನನ್ನು ಅಪ್ಪಿಕೊಳ್ಳುವುದು, ಯುದ್ಧಕ್ಕೆ ಹೊರಟ ಸೈನ್ಯ, ಈ ಮೂರ್ತಿಗಳು ದರ್ಶನೀಯವಾಗಿವೆ.

ದೇವಾಲಯದ ದಕ್ಷಿಣಭಾಗ ಉತ್ತರ ಭಾಗ ಮತ್ತು ಹಿಂಬದಿಯ ಕೈಸಾಲೆಗಳಲ್ಲಿ ಅನೇಕ ಅಂದವಾದ ವಿಗ್ರಹಗಳನ್ನೂ ಕೆತ್ತಿದ್ದಾರೆ. ಅನ್ನಪೂರ್ಣಾ ಹರಿಹರ,ಕಾಳಿಂಗ ಮರ್ಧನ, ಭೂವರಾಹ, ಗರುಡವಾಹನ, ತ್ರಿವಿಕ್ರಮ ನರಸಿಂಹ, ಶಿವ, ಅರ್ಧನಾರೀಶ್ವರ, ಶಿವ ಪಾರ್ವತಿ ಚದುರಂಗ, ನಾರದ ಸಂಗೀತ, ಶಿವಪಾರ್ವತಿ, ಉಮಾ ಮಹೇಶ್ವರ, ರಾವಣ ಯಜ್ಞ— ಒಂಬತ್ತು ತಲೆ ಅರ್ಪಿಸಿ ಹತ್ತನೆಯ ತಲೆ ಕಡಿಯಲು ಹೊರಟಾಗ ಶಿವ ಪ್ರತ್ಯಕ್ಷನಾಗುವ ದೃಶ್ಯ, ಕಾಲ ಭೈರವ, ಕಪಾಲ ಭೈರ ವ, ಗಂಗಾಧರಾ ಲಿಂಗೋದ್ಭವ, ... ಭದ್ರ, ಗಿರಿಜಾ ಕಲ್ಯಾಣ ಹೀಗೆ ... ರು ಶಿಲಾಮೂರ್ತಿಗಳು ಭವ್ಯ... ಮ್ಮ ಭಾವ ಭವ್ಯತೆಯನ್ನು ಮೆರೆಸು... ನಿಂತಿವೆ. ಒಂದೊಂದು ಶಿಲ್ಪವೂ ... ರಿಯ ಜಾಣ್ಮೆ ಕಲಾಕೌಶಲವನ್ನು ... ಸಾರುತ್ತದೆ.

ಕೈಲಾಸ ದೇವಾಲಯ ಎಲ್ಲೋ... ಗುಹೆಗಳ ಸಾಲಿನಲ್ಲಿ ಕಂಗೊಳಿಸುವ ಕಮೂತ್ರ ಭವ್ಯ- ಸುಂದರ ಶಿಲ್ಪ ಕ... ಮಂದಿರ, ಇದರ ರಚನೆ ಅ... ಅದ್ಭುತ. ಈ ದೇವಾಲಯ ಬಿಜಾ... ಜಿಲ್ಲೆಯ ಪಟ್ಟದಕಲ್ಲಿನಲ್ಲಿರುವ ಶಿವಾ... ಯವನ್ನು ಹೋಲುತ್ತಿರುವುದು ಮತ್ತೊಂ... ದು ವೈಶಿಷ್ಟ್ಯ. ಎರಡರ ಮಾದರಿ... ಒಂದೇ ಎಂದು ಹೇಳಬಹುದಾಗಿದೆ.

ಎಲ್ಲೋರದ ಕೈಲಾಸ ದೇವಾಲ... ದ ವಾಸ್ತು ಶಿಲ್ಪ ರಚನೆ ಪಲ್ಲವರ ಕಾ... ಪ್ರಾಚೀನ ದ್ರಾವಿಡ ಶೈಲಿಯ ಪ್ರತಿ... ವಾಗಿದೆ. ಕನ್ನಡ ದೇಶದ ಕೀರ್ತಿಯ... ಮೆರೆಸಿ, ಆದರ್ಶ ಪ್ರಭುಗಳಾಗಿ ಬಾ... ರಾಷ್ಟ್ರಕೂಟ ಅರಸು ಮನೆತನದ ಮೊ... ನೆಯ ಕೃಷ್ಣರಾಜ ಎಲ್ಲೋರದ ಕೈಲಾ... ದೇವಾಲಯವನ್ನು ಕೆತ್ತಿಸಿದ ಎಂಬ ಸಂ... ತಿಯನ್ನು ಇನ್ನೊಂದು ಗವಿಯಲ್ಲಿರುವ ಶಾ... ಸನ ತಿಳಿಸುತ್ತದೆ. ಇದು ಗಮನಾರ್ಹ ... ಗತಿಯಷ್ಟೇ ಅಲ್ಲ; ಹೆಮ್ಮೆಯ ಸಂಗತಿ.

ಎಲ್ಲೋರದ ಜೈನ ಗವಿಗಳಲ್ಲಿ ತೀರ್ಥಂ... ಕರರ ಭವ್ಯ ವಿಗ್ರಹಗಳು, ಜೈನ ಧರ್ಮ... ಕ್ಕೆ ಸಂಬಂಧಿಸಿದ ಶಿಲ್ಪಗಳೂ, ಕೆತ್ತನೆ... ಗಳೂ ಇವೆ. ಇಂದ್ರಾಣಿಯರ ವಿದ್ಯಾಧ... ಹಲವಾರು ಅಂದವಾದ ವಿಗ್ರಹಗಳ... ಕೈಲಾಸ ಮಂದಿರವನ್ನು ಹೋಲುವ ಚಿ... ಕೈಲಾಸ ಜೈನ ಗವಿಗಳಲ್ಲೆಲ್ಲಾ ಸುಂದ... ವಾದುದು. ಗೋಮಟೇಶ್ವರ, ಪಾರ್ಶ್ವನಾ... ಥ, ಮಹಾವೀರರ ಆಲಯಗಳು ಅಂ... ವಾಗಿ ರೂಪುಗೊಂಡಿವೆ. ಇಂದ್ರಸ... ಮತ್ತು ಜಗನ್ನಾಥ ಸಭೆ ಎಂಬ ಗವಿಗ... ಕೆತ್ತನೆ, ಸ್ವರೂಪ ಮನೋಹರವಾಗಿದೆ... ಹಲವಾರು ತೀರ್ಥಂಕರರ ಮೂರ್ತಿಗಳ... ಇಲ್ಲಿವೆ. ಜೈನ ಗವಿಗಳು ಗುಡ್ಡದ ಮೇ... ಬಂಡೆಯಲ್ಲಿ ಕೊರೆದ ೧೬ ಅಡಿ ಎತ್ತರ... ಪಾರ್ಶ್ವನಾಥ ಮೂರ್ತಿಯ ನೋಟ ಶ್ರವ... ಣಬೆಳಗೊಳದ ಗೋಮಟೇಶ್ವರನನ್ನು ನೆನಪಿಗೆ ತರುತ್ತದೆ.

ದಖನ್ನಿನಲ್ಲಿ ಬೆಳೆದ ವರ್ಣ, ಚಿತ್ರಕಲೆ, ಶಿಲ್ಪ ಕಲೆಗಳ ಕೇಂದ್ರವಾಗಿ ಮೆರೆದ ಅಜಂತೆ ಮತ್ತು ಎಲ್ಲೋರದ ಇತಿಹಾಸ-ವೈಭವ ಚಿರಸ್ಮರಣೀಯ. ಅಜಂತೆ ಮತ್ತು ಎಲ್ಲೋರಗಳು ಇಂದು ಕನ್ನಡ ನಾಡಿನಲ್ಲಿ... ಲ್ಲದೆ ನೆರೆಯ ರಾಜ್ಯಗಳಲ್ಲಿ ಇರಬಹುದು. ಆದರೆ ಈ ಕಲಾ ಕೇಂದ್ರಗಳು ಕನ್ನಡ ನಾಡಿನಲ್ಲಿದ್ದು, ಕನ್ನಡ ಜನತೆಯ—ಕಲಾವಿದರ ಭವ್ಯ ಕ್ಷೇತ್ರಗಳಾಗಿ ಮೆರೆದು, ಅರಸರ ಕೀರ್ತಿಯನ್ನು ಹೆಚ್ಚಿಸಿದ ಸ್ಥಳಗಳೆಂಬುದನ್ನು ಯಾರೂ ಮರೆಯುವಂತಿಲ್ಲ. ... ಮದ ಕಲೆಯ ಪ್ರತೀಕವಾಗಿ ಉಳಿದಿ... ಅಜಂತೆ ಮತ್ತು ಎಲ್ಲೋರದ ಹಿರಿಮೆಯನ್ನು ಅಂದರೆ ಕನ್ನಡಿಗರು ತಮ್ಮ ಗತ... ವೈಭವಯುತ ಭವ್ಯ ಕಲಾ ಶಕ್ತಿ ... ಮತ್ತೊಮ್ಮೆ ಸ್ಮರಿಸಿಕೊಂಡರೆ ಉಚಿತ... ಲ್ಲವೆ?

ಕನ್ನಡ ಸಾಹಿತ್ಯದಲ್ಲಿ ರಾಮಾಯಣಗಳು

ಎಚ್. ಶ್ರೀ ೧

(ಎಂಟನೇ ಪುಟದಿಂದ)

...ದಿದ್ದರೂ ರಾಮಾಯಣವೇ ಈತನಿಗೆ ...ರ ಯಶಸ್ಸನ್ನು ತಂದಿತು! ಈ ಕಾ...ದಿಂದಲೇ ಇವನು ಅಭಿನವ ಪಂಪ...ದನು. ಬೇಂದ್ರೆಯವರು ಹೇಳಿದಂತೆ, ...ತನ ಮಲ್ಲಿನಾಥ ಪುರಾಣವು ಹತ್ತೆಂಟು ...ಳಿನ ಹೂ; ರಾಮಾಯಣವು ಅಪಾರ ...ಯ ಸಾವಿರಕಂಬದ ಬಸದಿ!

ಪಂಪ ರಾಮಾಯಣವೊಂದು ಜೈನ ...ಮಾಯಣ. ಇದರಲ್ಲಿ ದೇಸಿ ಮತ್ತು ...ರ್ಗಗಳ ಸುಂದರ ಮಿಲನವುಂಟು. ರಸ...ಷ್ಟಿಯಿಂದ ಇದು ಅಗ್ರಗಣ್ಯ ಕಾವ್ಯ. ...ರಲ್ಲಿನ ಜೈನ ಸಂಪ್ರದಾಯಗಳೇ ಉ...ವರಿಗೆ ಅಷ್ಟು ಆಕರ್ಷಕವಾಗಿಲ್ಲ. ಇ...ಲ್ಲಿ ಶ್ರೀ ರಾಮನು ಧರ್ಮ ನಾಯಕ; ...ಣನು ವೀರ ನಾಯಕ. ಈತನೇ ರಾ...ವನನ್ನು ಕೊಂದವನು. ಸೀತೆ ಇದರಲ್ಲಿ ...ಮಿಜೆಯಲ್ಲಿ ಜನಕನ ಔರಸಪುತ್ರಿ. ...ರಾಮನ ತಾಯಿ ಅಪರಾಜಿತೆ; ಶತ್ರು...ನ ತಾಯಿ ಸುಪ್ರಭೆ; ಸುಮಿತ್ರೆಗೆ ಲ...ಣನೊಬ್ಬನೇ ಮಗ. ಈ ಕಾವ್ಯದಲ್ಲಿ ಭ...ನು ಭ್ರಾತೃ ಪ್ರೇಮವುಳ್ಳವನಲ್ಲ; ಮತ್ತೆ ...ವಣನು ಋಷಿ ಕುಲದವನಲ್ಲ; ಭೀಮ...ಕ್ಷಸನ ವಂಶದವನ್ನು. ವಾಲಿಸುಗ್ರೀವ...ಮದಾದಿಗಳು ಕಪಿಗಳಲ್ಲ; ಕಪಿಧ್ವ...ರು. ಇದರಲ್ಲಿ ಮಂಥರೆ, ತಾಟಕಿಯರ ...ಯೇ ಇಲ್ಲ; ವಾಲಿವಧೆಯ ಪ್ರಸಕ್ತಿ ...ಲ್ಲ. ಹನುಮಂತನು ಶ್ರೀ ರಾಮ...ಟನಲ್ಲ; ರಾವಣನ ತಂಗಿಯ ಅಳಿಯ...ನು ರಾವಣನ ದುಷ್ಕೃತ್ಯಕ್ಕೆ ಹೇಸಿ ...ಮನ ಪಕ್ಷ ಸೇರಿದವನು. ಇದರಲ್ಲಿ ...ಪ್ರತಿನಾಯಕನಾದ ರಾವಣನು ವಾಲ್ಮೀ...ಯ ರಾವಣನಂತಿಲ್ಲ. ಇವನು ರನ್ನನ ...ರವನಂತೆ ಅಭಿಮಾನಧನನು! ಇವನು ...ತಾಪಹರಣದ ದುರ್ನಡತೆಗಾಗಿ ಪಶ್ಚಾ...ಪ ಪಟ್ಟರೂ, ಸೀತೆಯನ್ನು ಹೇಡಿಯೂ ...ರಾಮನಿಗೆ ಒಪ್ಪಿಸುವ ಮನಸ್ಸು ಮಾ...ವುದಿಲ್ಲ. ರಾಮ ಲಕ್ಷ್ಮಣರನ್ನು ಯು...ರಂಗದಲ್ಲಿ ವಿರಥರನ್ನಾಗಿ ಮಾಡಿ ತಂ... ಸೀತೆಯನ್ನು ಅವರಿಗೊಪ್ಪಿಸುವುದ...ಗಿಯೇ ಯುದ್ಧವನ್ನು ಮುನ್ನಡೆಸು...ನೆ. ರನ್ನನ ದುರ್ಯೋಧನನಂತೆ ನಾ...ಚಂದ್ರನು ಪ್ರಭಾವಿತನಾಗಿದ್ದಾನೆ!

...ವಾಲ್ಮೀಕಿ ರಾಮಾಯಣದಲ್ಲಿ ವೀರ, ...ಣ, ವಿಪ್ರಲಂಭ ಶೃಂಗಾರಗಳಲ್ಲೊಂ...ರಸ ಪ್ರಧಾನವೆನ್ನುತ್ತಾರುಂಟು. ಈ ...ಮಾಯಣದಿಂದ ವಿಪ್ರಲಂಭ ಶೃಂಗಾರ...ವನ್ನು ಕಿತ್ತು ಆ ಸ್ಥಾನದಲ್ಲಿ ಶಾಂತ...ವನ್ನು ಹಚ್ಚಿದರೆ ಅವು ಪಂಪ ರಾಮಾ...ಣದ ಪ್ರಧಾನ ರಸಗಳಾಗುವುವು.

ಪಂಪ ರಾಮಾಯಣವು ವೈದರ್ಭೀ ರೀ...ತಿ ದ್ರಾಕ್ಷಾಪಾಕದ ಕಾವ್ಯ. ಇದರಲ್ಲಿ ...ವು ಅಪರೂಪ ಕನ್ನಡ ಪದಗಳು ಗೋ...ಚರಿಸುತ್ತವೆ; ಹತ್ತು ಸಂಸ್ಕೃತ ಪದಗಳ ...ಒಂದಕ್ಕೆ ಕನ್ನಡ ಪದಗಳ ಪ್ರಯೋಗ...ವೆ. ಪ್ರಾಯಶಃ ಇವು ವೃತ್ತಗಳಲ್ಲಿ ಸಂ...ಸ್ಕೃತ ಪದಗಳ ಹಾರಾಟವಿದ್ದರೆ, ಕಂದ...ಗಳಲ್ಲಿ ಕನ್ನಡ ಪದಗಳ ನಲಿದಾಟವಿ... ವಾಲ್ಮೀಕಿ ರಾಮಾಯಣದಂತೆ ಪಂಪ ರಾಮಾಯಣದಲ್ಲೂ ಶಬ್ದಾಲಂಕಾರಗಳು ಕಡಿಮೆ ಇದ್ದು, ಅರ್ಥಾಲಂಕಾರಗಳು ವಿಪುಲವಾಗಿವೆ. ಉಪಮೋತ್ಪ್ರೇಕ್ಷೆಗಳು ನಾಗಚಂದ್ರನ ಮುದ್ದಿನ ಅಲಂಕಾರಗಳು. ಚಂದ್ರನಖಿಯು 'ತಟಿಲ್ಲತೆವೊಲಾಕಾಶಕ್ಕೆ ನೆಗೆದು ಪಾರಿದಳಂ'ತೆ! ಚಿತ್ರವು 'ಪದ್ಮಪತ್ರದ ಜಲಬಿಂದುವಿನಂತೆ ಚಲಿತ ಮಾದುದಂ'ತೆ! ಕಂಬ ದ್ವೀಪದಲ್ಲಿ ಬಿದ್ದುಕೊಂಡ ರತ್ನಜಟಿಯು 'ಎರಕೆ ಮುರಿದ ಪಕ್ಕಿವೊಲಿರ್ದನಂ'ತೆ! ಉತ್ಪ್ರೇಕ್ಷೆಗಳು ಈ ಕಾವ್ಯದಲ್ಲಿ ಸೀತಿಬೋಧಕಗಳಾಗಿವೆ. (IX, ೭೫, ೧೦೨, ೧೫೧, ೧೮೮; XIV ೧೩೫). ನಾಗಚಂದ್ರನಿಗೆ ಅರ್ಥಾಂತರ ನ್ಯಾಸಾಲಂಕಾರದಲ್ಲಿ ತುಂಬಾ ಇಷ್ಟ; ಶ್ಲೇಷೆ, ದೃಷ್ಟಾಂತ, ಕಾವ್ಯಲಿಂಗ, ವಿಭಾವನಾದಿ ಪ್ರಸಿದ್ಧ ಅಲಂಕಾರಗಳೂ ಈ ಕಾವ್ಯದಲ್ಲಿ ಹಿತಮಿತವಾಗಿ ಬಂದಿವೆ.

ವ್ಯಾಕರಣ ದೃಷ್ಟಿಯಿಂದ ಈ ರಾಮಾಯಣವು ಪ್ರಾಯಶಃ ನಿರ್ದುಷ್ಟವಾಗಿದ್ದುದರಿಂದಲೇ ಕನ್ನಡದ ಪ್ರಸಿದ್ಧ ವೈಯಾಕರಣಿಗಳಾದ ಎರಡನೆಯ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕರು ತಮ್ಮ ವ್ಯಾಕರಣಗಳಲ್ಲಿ ಇವನ ಪದ್ಯಗಳನ್ನು ಲಕ್ಷ್ಯಗಳನ್ನಾಗಿ ಸಂಗ್ರಹಿಸಿರುವರು.

ಕುಮಾರ ವಾಲ್ಮೀಕಿಯ ತೊರವೆ ರಾಮಾಯಣವು (ಸು. ೧೫೦೦) ಬ್ರಾಹ್ಮಣ ಕವಿಗಳು ಬರೆದ ರಾಮಾಯಣಗಳಲ್ಲಿ ಮೊತ್ತಮೊದಲನೆಯದು. ಇದರ ಹಸ್ತಪ್ರತಿಗಳು ಕರ್ನಾಟಕದ ಪ್ರತಿ ಹಳ್ಳಿಯಲ್ಲೂ ದೊರೆಯುವುದರಿಂದಲೇ ಇದರ ಜನಪ್ರಿಯತೆಯನ್ನು ಊಹಿಸಲು ಸಾಧ್ಯವಿದೆ.

ಪಂಪನ ಉದಾತ್ತ ಕಾವ್ಯಗಳು ನಾಗಚಂದ್ರನನ್ನು ಅಭಿನವ ಪಂಪನನ್ನಾಗಿ ರೂಪಿಸಿದಂತೆ, ಕುಮಾರ ವ್ಯಾಸನ ಭಾರತವು ತೊರವೆಯ ನರಹರಿಯನ್ನು ಕುಮಾರ ವಾಲ್ಮೀಕಿಯಾಗುವಂತೆ ಪ್ರಚೋದಿಸಿತು! ಆದರೂ ಅಭಿನವ ಪಂಪ, ಕುಮಾರ ವಾಲ್ಮೀಕಿಗಳು ತಮ್ಮ ಆದರ್ಶ ವ್ಯಕ್ತಿಗಳ ನೆರಳಾಗಲಿಲ್ಲ; ಆಗಲು ಸಾಧ್ಯವಾಗಲಿಲ್ಲ!

ಕುಮಾರ ವಾಲ್ಮೀಕಿಯು ವಾಲ್ಮೀಕಿಯ ರಾಮಾಯಣದ ಆರು ಕಾಂಡಗಳನ್ನು ಮಾತ್ರ ಕನ್ನಡದಲ್ಲಿ ಭಾಮಿನಿಯ ಛಂದಸ್ಸಿನಲ್ಲಿ ಬಟ್ಟಿ ಇಳಿಸಿದ್ದಾನೆ; ಉತ್ತರ ಕಾಂಡವು ವಾಲ್ಮೀಕಿ ಕೃತವೆಂಬುದರಲ್ಲೇ ಅವನಿಗೆ ಸಂದೇಹ ತೋರಿರ ಬೇಕು. ಈ ಕವಿಯ ಕಥನ ಶೈಲಿಯಲ್ಲಿ ಓಟವೂ ಇದೆ; ಮಾಟವೂ ಇದೆ. ಇವನ ರಾಮಾಯಣದ ಯುದ್ಧಕಾಂಡವು ಉಳಿದ ಐದು ಕಾಂಡಗಳಷ್ಟು ಹಿರಿದಾಗಿರುವುದು ಕುತೂಹಲದಾಯಕವಾಗಿದೆ. ರಕ್ಕಸದಂಗಡಿ ಯುದ್ಧದಲ್ಲಿ ಸರ್ವ ಸತ್ವವನ್ನೂ ಕಳೆದು ಕೊಂಡ ಕನ್ನಡಿಗರನ್ನು ವೀರನರಸಿಂಹರನ್ನಾಗಿ ಪುನಃ ಪ್ರಚೋದಿಸುವುದು ಕವಿಯ ಉದ್ದೇಶವೆಂದು ತೋರುತ್ತದೆ. ಈತನ ರಾಮಾಯಣದಲ್ಲಿ ವಾಲ್ಮೀಕಿಯು ಬರೆಯದ—ಲಂಕೆಗೆ ಹಾರಿದ ಹನುಮನು ತೃಣಬಿಂದು ಮಹರ್ಷಿಯ ಸಂದರ್ಶನವನ್ನು ಮಾಡಿದ ವಿಚಾರವಿದೆ. ವಜ್ರಾಂಗ ಬಲಿಯಾದ ಹನುಮನನ್ನು ಇಂದ್ರಜಿತುವಿನ ಬ್ರಹ್ಮಾಸ್ತ್ರವೂ ಏನೂ ಮಾಡಲಾರದೇ ಹೋಯಿತೆಂದು ಕವಿಯು ವಾಚಕರನ್ನು ರೋಮಾಂಚನಗೊಳಿಸಿದ್ದಾನೆ! ಶ್ರೀರಾಮ ಭಕ್ತನ ಸಾಹಸವು ಇದರಲ್ಲಿ ಮುಗಿಲು ಮುಟ್ಟಿದೆ!

ಕುಮಾರ ವಾಲ್ಮೀಕಿಯ ರಾವಣನೂ ವಾಲ್ಮೀಕಿಯ ರಾವಣನಂತಿಲ್ಲ. ಅವನನ್ನು ಕವಿಯು ಮಹಂತ ವ್ಯಕ್ತಿಯಾಗಿ ಚಿತ್ರಿಸಿದ್ದಾನೆ. 'ರಘುನಾಥನು ಲಕ್ಷ್ಮೀವಲ್ಲಭನೆಂಬುದನ್ನು ಒಲ್ಲೆನು. ರಣಮುಖದಲ್ಲಿ ರಾವಣನ ಕೂಡುವುದೆ ತನಗೆ ಸಂಕಲ್ಪ' ಎನ್ನುತ್ತಾನೆ. ಇಂತಹ ರಾವಣನನ್ನು ಸಂಸ್ಕೃತ ರಾಮಾಯಣಗಳಲ್ಲಿ ಕಾಣಲಾರೆವು.

ಉತ್ತರ ರಾಮಾಯಣವನ್ನು ತಿರುಮಲೆ ವೈದ್ಯನು (ಸು. ೧೬೫೦) ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾನೆ. ಇದು ಸಂಸ್ಕೃತ ಉತ್ತರ ಕಾಂಡ ರಾಮಾಯಣದ ಕನ್ನಡ ಪದ್ಯ ರೂಪದ ಭಾಷಾಂತರ. ಇವನು ಕುಮಾರ ವಾಲ್ಮೀಕಿಯ ಹೆಸರನ್ನೂ ಹೇಳಿಲ್ಲ. ತೊರವೆ ರಾಮಾಯಣದಲ್ಲಿರುವ ಸಮಸ್ತ ಪದಗಳಲ್ಲಿರುವ ವ್ಯಾಕರಣ ದೋಷಗಳೂ ಪ್ರಾಸ ದೋಷಗಳೂ ಈ ಕಾವ್ಯದಲ್ಲಿ ಕಂಡುಬರುವುದಿಲ್ಲ. ಈತನ ಬಂಧವು ಸರಳ ಮತ್ತು ಉತ್ಕೃಷ್ಟವಾಗಿದೆ. ನಾರಾಯಣ ಕವಿಯ (ಸು. ೧೬೦೦) ಉತ್ತರ ರಾಮಕಥೆಯು ಭಾಮಿನೀ ಷಟ್ಪದಿಯ ಸುಂದರ ಕಾವ್ಯ. ಈ ಕಾವ್ಯದ ಕುರಿತು ಉಗ್ರಾಣ ಮಂಗೇಶರಾಯರು—"ಕುಮಾರ ವ್ಯಾಸ ಮತ್ತು ಕುಮಾರ ವಾಲ್ಮೀಕಿಯ ಸದ್ಗ್ರಂಥಗಳಿಗೆ ಸಾಟಿಯಲ್ಲೀ ಈ ಕಾವ್ಯಕ್ಕೂ ಸ್ಥಾನ ಕೊಡಬಹುದಾಗಿದೆ. ಮುಖ್ಯವಾಗಿ ವರ್ಣನಾ ವಿಭಾಗದಲ್ಲಿ ಆ ಕವಿಗಳನ್ನೂ ಈತನು ಮೀರಿಸಿರುವನು" ಎಂದಿದ್ದಾರೆ. ಇದರಲ್ಲಿ ಅಲ್ಲಲ್ಲಿ ಹೊರಲಾರದ ವಿಶೇಷಣಗಳ ಮೂಟೆಗಳು (೩೧-೧) "......ಧೂಮ್ರಾಕ್ಷ ಮೊದಲಾದ ಅಮಳ ದಾನವರು(೩೧-೧೧)"—ಮೊದಲಾದ ಕೆಲಕೆಲವು ಅಬದ್ಧ ಪ್ರಯೋಗಗಳೂ ಇವೆ.

ಅದ್ಭುತ ರಾಮಾಯಣವು ಪ ಲಾಲಿತ್ಯಕ್ಕೂ ಭಾಷಾ ಸರಳತೆಗೂ ಹೆಸರಾಂತ ಹಳೆಗನ್ನಡ ಗದ್ಯ ಗ್ರಂಥ. ಇದೊಂದು ಶಾಕ್ತೇಯ ರಾಮಾಯಣ; ಬರೆದವರು ನಂದಳಿಕೆ ಲಕ್ಷ್ಮೀನಾರಣಪ್ಪ(೧೮೭೪)ನವರು. ಈ ಕವಿಯ ವರ್ಣನಾಶಕ್ತಿ ಮತ್ತು ಕಲಾಕೌಶಲವು ಶ್ಲಾಘ್ಯವಾದುದು. ಕನ್ನಡ ಸಾಹಿತ್ಯದಲ್ಲಿ ಮೂಲಕ್ಕಿಂತ ಸರಸವಾದ ಗ್ರಂಥವು ಲಕ್ಷ್ಮೀಶನ ಜೈಮಿನಿ ಭಾರತವೊಂದೇ ಎಂದಿರುವಾಗ, ನಂದಳಿಕೆ ಕವಿಯ ಶ್ರೀರಾಮ ಪಟ್ಟಾಭಿಷೇಕ ಮತ್ತು ರಾಮಾಶ್ವಮೇಧ ಕಾವ್ಯಗಳು ಕಾವ್ಯ ದೃಷ್ಟಿಯಿಂದ ಮೂಲ ಗ್ರಂಥವನ್ನು ಮೀರಿರುವುದು ಪ್ರಶಂಸಾರ್ಹವಾದ ವಿಚಾರ. ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಮುದ್ದಣನು ಕಾಳಿದಾಸ ಮತ್ತು ಷೇಕ್ಸ್‌ಪಿಯರರಿಗಿಂತ ಕಡಿಮೆಯವನಲ್ಲ!

ದೇವ ಶಿಖಾಮಣಿ ಅಳಸಿಂಗರಾಚಾರ್ಯರ ಕನ್ನಡ ವಾಲ್ಮೀಕಿ ರಾಮಾಯಣದ ಸಂಪುಟಗಳು ಕನ್ನಡ ಸಾಹಿತ್ಯದ ಮೇರು ಕೃತಿಗಳು! ಕುವೆಂಪುರವರ ರಾಮಾಯಣ ದರ್ಶನ ಕಾವ್ಯವು ತನ್ನ ಅಂಗಾಂಗಗಳ ಸೌಂದರ್ಯದಿಂದ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ನೆನಪಿಗೆ ತರುತ್ತಿದೆ. ಕಾವ್ಯವು ಕಲಾಂಶದಿಂದ ಪೂರ್ಣಾಂಗತೆಯನ್ನು ಪಡೆದಿದೆ. ಇದರಲ್ಲಿ ಭರತನ ಮಾತೆ, ಮಾರೀಚನ ಅಂತರಂಗ, ವಾಲಿಯ ಕೊನೆ, ಧಾನ್ಯಮಾಲಿನಿಯ ಪಾತಿವ್ರತ್ಯ ಅನಲೆಯ ಭಕ್ತಿ ಸತ್ಯ ನಿಷ್ಠೆಗಳು, ಸ್ವಪ್ನ ದೇವಿ-ತಪೋಲಕ್ಷ್ಮಿಗಳ ಸಂಭಾಷಣೆ, ಮಹಾರಾತ್ರಿಯ ನೈವೇದ್ಯ ... ಪರಪಾರ ಸೋದರ ಕುಂಭಕರ್ಣ, ತ್ರಿಜಟೆಯ ತ್ಯಾಗ, ರಾಮ ಸೀತೆಯರ ಪುನರ್ಮಿಲನಗಳಲ್ಲೆಲ್ಲಾ ಒಂದು ಅನುಪಮ ಸೌಂದರ್ಯ ಸೃಷ್ಟಿಯಾಗಿದ್ದು ಅದರಿಂದ ಅವು ಪೂರ್ಣವಾಗಿವೆ. ಈ ಮಹಾಕಾವ್ಯ ವಿಶ್ವ ಸತ್ಯದ ವಿವಿಧ ಮುಖಗಳನ್ನು ಎತ್ತಿ ತೋರಿಸುತ್ತದೆ. ಜನಪ್ರಿಯ ರಾಮಾಯಣವೂ ಒಂದು ಸುಂದರ ರಾಮಾಯಣ.

ತೆರೆಯ ಮರೆಯಲ್ಲಿ

ಕುಮುದೇಂದುವು (ಸು. ೧೨೭೫) ಒಂದು ಜೈನ ರಾಮಾಯಣವನ್ನು ಬರೆದಿದ್ದಾನೆ. ಇದರಲ್ಲಿ ಎಲ್ಲಾ ವಿಧದ ಷಟ್ಪದಿಗಳಿವೆ. ಅಲ್ಲಲ್ಲಿ ಕೆಲವು ರಗಳೆಗಳೂ ಇವೆ. ಇವನ ಬಂಧ ಶಿಥಿಲವಾಗಿದ್ದು ...

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11–ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ—ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು= ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

ಭಾಗ ಮತ್ತು ಕಥಾ ಭಾಗಗಳು ಪಂಪ ರಾಮಾಯಣದಂತಿವೆ.

ಬತ್ತಲೇಶ್ವರನು (ಸು. ೧೪೫೦) ಒಂದು ರಾಮಾಯಣವನ್ನು ಬರೆದಿದ್ದಾನೆ. ಮೌಲಿಕ ರಾಮಾಯಣ (ಸು. ೧೬೦೦) ಮತ್ತು ವಿಟ್ಠಲನ (೧೭೫೧) ವರದ ವಿಟ್ಠಲ ರಾಮಾಯಣದಲ್ಲಿ ಮೂಲಕಾಸುರನ ವಿಜಯ ಮತ್ತು ಸಂಹಾರನಿದೆ. ಯೋಗೀಂದ್ರ ಕವಿಯದ್ದು (ಸು. ೧೬೫೦) ಕುಸುಮ ಷಟ್ಪದಿಯ ಉತ್ತರ ರಾಮಾಯಣವು ಉತ್ತರರಾಮ ಚರಿತೆ, ಅಧ್ಯಾತ್ಮ ರಾಮಾಯಣ, ರಾಮಾಯಣ ಕಥಾ ಕಲ್ಪವೃಕ್ಷವು ಮುಮ್ಮಡಿ ಕೃಷ್ಣರಾಜರಿಂದ (೧೭೯೪—೧೮೬೮) ಬರೆಯಲ್ಪಟ್ಟಿದೆ. ಇವುಗಳಲ್ಲಿ ಕೊನೆಯದು ರಾಮ ಕಥೆಗಳ ಸಂಗ್ರಹ. ಇದರಲ್ಲಿ ಶ್ರೀ ಮದ್ರಾಮಾಯಣ, ವಿಷ್ಣುಪುರಾಣ, ಪಾದ್ಮಪುರಾಣ, ಕೂರ್ಮಪುರಾಣ, ಅಧ್ಯಾತ್ಮರಾಮಾಯಣ, ಶಿವಧರ್ಮೋತ್ತರ ವಿಷ್ಣುಧರ್ಮೋತ್ತರ, ಜೈಮಿನ್ಯಾದಿ ಗ್ರಂಥಗಳಲ್ಲಿ ಹೇಳಿದ ರಾಮ ಕಥೆಯನ್ನು ಸಂಗ್ರಹಿಸಿ ಹೇಳಿದ್ದಾರೆ. ಮಾರ್ಕಂಡೇಯ ರಾಮಾಯಣವು ವಾರ್ಧಕ ಷಟ್ಪದಿಯಲ್ಲಿದ್ದು ತಿಮ್ಮರಸನು (ಸು. ೧೬೫೦) ಬರೆದನು. ನಿಜಗುಣಾರ್ಯನ (ಸು. ೧೬೫೦) ಅದ್ವೈತ ರಾಮಾಯಣವು ವಚನದಲ್ಲಿದ್ದು, ಇದರಲ್ಲಿ ರಾಮಾಯಣಕ್ಕೆ ಅದ್ವೈತ ಪರವಾದ ಗೂಢಾರ್ಥವನ್ನು ಹೇಳಿದೆ. ಅಧ್ಯಾತ್ಮ ರಾಮಾಯಣದ ಉತ್ತರ ಕಾಂಡದ ಕರ್ತೃ ಶಾಲ್ಯದ ಕೃಷ್ಣರಾಜ (೧೭೪೫). ಭಾಮಿನಿ ಷಟ್ಪದಿಯ ಆನಂದ ರಾಮಾಯಣವು ತಿಮ್ಮಮಾತ್ಯ (ಸು. ೧೭೫೦) ನದು. ಇದು ಸಪ್ತಕಾಂಡ ರಾಮಾಯಣ. ದಶಕಂಠ ರಾಮಾಯಣವನ್ನು (೧೭೫೦) ಬರೆದ ಕವಿಯಾರೋ ಗೊತ್ತಿಲ್ಲ. ಇದರಲ್ಲಿ ಕುಮಾರ ವಾಲ್ಮೀಕಿಯ ರಾಮಾಯಣದ ಯುದ್ಧಕಾಂಡದ ವ್ಯಾಖ್ಯಾನುವಾದವಿದೆ. ಶತಕಂಠ ರಾಮಾಯಣವನ್ನು (೧೯ನೆಯ ಶತಮಾನ) ಕಂ. ಟಿ. ಶ್ರೀನಿವಾಸರಾಯರು ಬರೆದರು. ಶಂಕರ ರಾಮಾಯಣವು (ಸು. ೧೭೦೦) ಭಾಮಿನಿ ಷಟ್ಪದಿಯಲ್ಲಿದೆ. ಹರಿದಾಸ ಕವಿಯ (೧೭೫೦) ಮೂಲ ಬಲರಾಮಾಯಣದಲ್ಲಿ ರಾವಣ ಕುಂಭಕರ್ಣರ ಮೂಲಬಲವನ್ನು ಶ್ರೀರಾಮನು ಸಂಹರಿಸಿದ ಕಥೆ ಹೇಳಿದೆ. ಅಚ್ಚಕನ್ನಡ ರಾಮಾಯಣವು ಕಾವ್ಯರೂಪವಾಗಿ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ (೧೮೩೦—೧೯೦೦) ಬರೆಯಲ್ಪಟ್ಟಿತು. ನ್ಯಾಸತಿ ಲಕ್ಷ್ಮೀನರಸಿಂಹನ (೧೮೬೦) ರಾಮಕಥಾರಂಡನವು ವೃತ್ತ, ಗೀತ, ಸೀಸಪದ್ಯ, ಕಂದಗಳ ಕಲಸು ಮೇಲೋಗರ. ದೇವಚಂದ್ರನ ರಾಮಕಥಾವತಾರವು (೧೭೭೦—೧೮೪೧) ಒಂದು ಚಂಪೂ ಕಾವ್ಯ. ರಾಮಚಂದ್ರ ಚಾರಿತ್ರವು ಸಾಂಗತ್ಯ ರಾಮಾಯಣ. ಇದರ ೧೬ ಸಂಧಿಗಳನ್ನು ಚಂದ್ರಶೇಖರ ಕವಿಯೂ, ೧೭ರಿಂದ ಮುಂದೆ ಪದ್ಮನಾಭನೂ (ಸು. ೧೭೫೦) ಬರೆದರು. ಲಿಂಗರಾಜರು (೧೮೩೩—೧೮೭೪) ವನವಾಸ ರಾಮಾಯಣ ಮತ್ತು ಭಾಮಿನಿ ಷಟ್ಪದಿಯಲ್ಲಿ ಕರ್ನಾಟಕ ರಾಮಾಯಣ ಸಂಗ್ರಹವನ್ನು ಬರೆದಿದ್ದಾರೆ. ವಾಸಿಷ್ಠ ರಾಮಾಯಣದ ಕವಿ ಬಾಗಲೂರು ರಾಮಸ್ವಾಮಿ (೧೯ನೆಯ ಶತಮಾನ)ಯವರು. ಇದೂ ವೃತ್ತ, ಷಟ್ಪದಿ, ಗೀತ, ವಚನಗಳ ಮಿಶ್ರಕಾವ್ಯ.

ಸುಬ್ರಹ್ಮಣ್ಯ ಕವಿ (ಸು ೧೭೫೦; ಯು ಹನುಮದ್ರಾಮಾಯಣವನ್ನು ಕಂದ ಪದ್ಯರೂಪದಲ್ಲಿ ಬರೆದಿದ್ದಾನೆ. ಕಂದ ಪದ್ಯಗಳನ್ನು ಇವನಂತೆ ಸುಲಭವಾಗಿ ಬರೆದವರು ಕನ್ನಡ ಸಾಹಿತ್ಯ ಪ್ರಪಂಚದಲ್ಲೇ ಇಲ್ಲ. ಆತ್ಮ ರಾಮಾಯಣ ಮತ್ತು ಹರಿ ಕಥಾ ರಾಮಾಯಣಗಳನ್ನು ಕಾರುಪಲ್ಲಿ ಶಿವರಾಮದಾಸರು (೧೮೯೩) ಬರೆದರು. ಗಳಗನಾಥರ (೧೮೬೯—೧೯೪೨) ಆನಂದ ರಾಮಾಯಣ ಮತ್ತು ತುಳಸೀ ರಾಮಾಯಣಗಳು ವಾಚಕರಿಗೆ ವಾಚನಾಭಿರುಚಿಯನ್ನು ಹೆಚ್ಚಿಸಿವೆ. ಕೆ. ರಾಮಸ್ವಾಮಿ ಅಯ್ಯಂಗಾರರ (೧೮೬೦-೧೯೩೫) ಕನ್ನಡ ಬಾಲರಾಮಾಯಣವೂ, ಎಂ. ಎನ್. ಕಾಮತರ (೧೮೮೩-೧೯೪೦) ಬಾಲಕರ ರಾಮಾಯಣವೂ, ಕೃಷ್ಣರಾಯರ (೧೮೫೦-೧೯೩೬) ಮತ್ತು ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರ ಮಠದವರ (೧೮೭೦-೧೯೫೩). ಅಲ್ಲದೆ ಮೈಸೂರು ಸೀತಾರಾಮ ಶಾಸ್ತ್ರಿಗಳ (೧೮೬೮—೧೯೩೩) ಬಾಲರಾಮಾಯಣವೂ ಮಕ್ಕಳಿಗಾಗಿ ಬರೆದದ್ದು. ಸಂಕ್ಷಿಪ್ತ ರಾಮಾಯಣ ಮತ್ತು ಶ್ರೀ ರಾಮ ಚರಿತ್ರೆಯನ್ನು ಸಜೀಪ ರಾಮಕೃಷ್ಣಯ್ಯನವರು (೧೮೪೩—೧೯೧೫) ಬರೆದರು. ನವಸೀತರಾಮಾಯಣವು ಮುಳಿಯ ತಿಮ್ಮಪ್ಪಯ್ಯ (೧೮೯೧—೧೯೫೦)ನವರ ಪದ್ಯ ಕಾವ್ಯ. ಐರೋಡಿ ಶಿವರಾಮಯ್ಯನವರ (೧೯೩೪) ಸಂಕ್ಷಿಪ್ತ ವಾಲ್ಮೀಕೀ ರಾಮಾಯಣವು ಸಂಸ್ಕೃತ ವಾಲ್ಮೀಕಿ ರಾಮಾಯಣದ ಸಾರ ಸಂಗ್ರಹ. ರಂಗನಾಥರಾಮಾಯಣವು ಕೆ. ರಾಮಸ್ವಾಮಿ ಅಯ್ಯಂಗಾರರ ಪದ್ಯಕಾವ್ಯ. ಸುಬೋಧ ರಾಮರಾಯರ ರಾಮಾಯಣ ಕಥಾಸಾರವು ಕನ್ನಡ ವಾಚಕ ಪ್ರಪಂಚಕ್ಕೆ ಆವರಿತ್ತ ಕೊಡುಗೆ. ರಾಮಾಯಣ ಸಂಗ್ರಹದ ಕರ್ತೃ ಗೋವಿಂದ ರಾಜ ಅಯ್ಯಂಗಾರರು (೧೯೩೬). ದತ್ತಾತ್ರೇಯ ಕೃಷ್ಣ ಭಾರದ್ವಾಜರ (೧೯೩೮) ಶ್ರೀ ತುಲಸೀ ರಾಮಾಯಣವು ಹಿಂದಿಯರಿಯದ ಕನ್ನಡಿಗರಿಗಾಗಿ ಬರೆದ ಗ್ರಂಥ. ಶ್ರೀಮದ್ವಾಲ್ಮೀಕಿ ರಾಮಾಯಣ ಸಂಗ್ರಹವನ್ನು ಭಾರತಿ ಸಂಪಂಗಿ ರಾಮಯ್ಯನವರು (೧೯೪೦) ಬರೆದರು. ಚಾಮರಾಜೋಕ್ತಿ ವಿಲಾಸ ರಾಮಾಯಣವು ಸಂಸ್ಕೃತ ವಾಲ್ಮೀಕಿ ರಾಮಾಯಣದ ಸುಂದರವಾದ ಕನ್ನಡ ಭಾಷಾಂತರ. ರಾಮಾಯಣಗಳೆಲ್ಲಾ 'ಯತೋ ಧರ್ಮಸ್ತತೋ ಜಯಃ' ಎಂಬುದನ್ನು ಸಾರುವುದಕ್ಕಾಗಿಯೇ ಜನ್ಮವೆತ್ತಿದುವು. ಇಂತಹ ಪರಮ ಧಾರ್ಮಿಕ ಗ್ರಂಥಗಳ ಅಸಂಖ್ಯತೆಯಿಂದ ಫಣಿರಾಯನು ತಿಣುಕಬಲ್ಲನೆ? ವೀರ ನಾರಾಯಣನ ಸದ್ಭಕ್ತನಾದ ಕುಮಾರ ವ್ಯಾಸನು ತನ್ನ ಭಾರತದಲ್ಲಿ ಈ ವಾಕ್ಯವೊಂದನ್ನು ಹೇಳ ಬಾರದಿತ್ತು!

ಭಾರತದಲ್ಲಿ ಅಣುಶಕ್ತಿಯ ಉತ್ಪಾದನೆ

(ಏಳನೇ ಪುಟದಿಂದ)

ಕೇಂದ್ರಗಳ ಯೂನಿಟ್ ದರವು ಇತರ ಮೂಲಗಳಿಂದ ಉತ್ಪಾದಿಸುವ ಯೂನಿಟ್ ದರಗಳಿಗಿಂತ ಹೆಚ್ಚೇನೂ ಆಗುವುದಿಲ್ಲವೆಂದು ನಿರ್ಧಾರಕ್ಕೆ ಬರಲಾಗಿದೆ. ಆ ಕೇಂದ್ರದಲ್ಲಿ ಅಣುವಿಕಿರಣ ಹೊಂದುವ ಕಚ್ಚಾ ಸಾಮಗ್ರಿಗಳು ಕ್ವಚಿತ್ತಾಗಿ ಅಥವಾ ಆಕಸ್ಮಾತ್ತಾಗಿ ಅಣ್ವಸ್ತ್ರಗಳ ಉತ್ಪಾದನೆಗೆ ದುರುಪಯೋಗವಾಗಬಾರದೆಂದು ನೋಡಿಕೊಳ್ಳಲು ಎಲ್ಲ ಮುಂಜಾಗರೂಕತೆಯ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಈ ತಾರಾಪೋರ್ ಕೇಂದ್ರವು ಭಾರತದ ಅಣುಶಕ್ತಿ ಮಂಡಳಿದ ಆಶ್ರಯದಲ್ಲಿ ನಡೆಯುತ್ತಿದ್ದು, 380,000 ಕಿಲೊ ವ್ಯಾಟುಗಳಷ್ಟು ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ. 1967ರ ವೇಳೆಗೆ ಇದು ಪೂರ್ತಿಯಾದಾಗ, ಅದು ಜಗತ್ತಿನಲ್ಲಿಯೇ ಎರಡು ಅತ್ಯಂತ ದೊಡ್ಡ ಅಣುಶಕ್ತಿ ಚಾಲಿತ ವಿದ್ಯುತ್ ಕೇಂದ್ರಗಳಲ್ಲಿ ಒಂದಾಗುತ್ತದೆ. ಈ ಕೇಂದ್ರದಿಂದ ಮಹಾರಾಷ್ಟ್ರ ಮತ್ತು ಗುಜರಾತ್ ಇವೆರಡೂ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ವಿದ್ಯುತ್ ಕೇಂದ್ರಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗುತ್ತದೆ. ಆ ಕೇಂದ್ರದಲ್ಲಿ 190,000 ಕಿಲೊ ವ್ಯಾಟುಗಳಷ್ಟು ಕುದಿಯುವ ನೀರಿನ, 2 ಟ್ಯಾಂಕುಗಳ ರೂಪದಲ್ಲಿ "ನ್ಯೂಕ್ಲಿಯರ್ ರಿಯಾಕ್ಟರ್"ಗಳಿದ್ದು, ಅದಕ್ಕೆ ಪೋಷಕವಾದ ವಿದ್ಯುತ್ ಉಪಕರಣಗಳು, ಭಾಷ್ಪೀಭವನಗೊಳಿಸುವ ವ್ಯವಸ್ಥೆ, ನಿರುಪಯೋಗ ವಸ್ತುಗಳ ವಿಸರ್ಜನೆ, ಮತ್ತು ಅಶುದ್ಧ ಹೊಂದದಿರುವಂತಹ ಸೌಕರ್ಯಗಳು ಇವೇ ಮೊದಲಾದುವು ಇರುತ್ತವೆ.



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರ ವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ
0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ರಖಂ ಪ್ರತಿಗಳಿಗೆ ವಿಚಾರಿಸಿರಿ.-
ನವಯುಗ ಪ್ರೆಸ್, ಉಡುಪಿ.

ಪ್ರಜಾಸತ್ತಾತ್ಮಕ ಸಮಾಜವಾದ

(ಆರನೇ ಪುಟದಿಂದ)

...ರ್ಥದಿಂದ ಹೊರಬಂದ ಇವುಗಳಿಗೆ ವಿರುದ್ಧವಾದ ಆರ್ಥಿಕ ಸಿದ್ಧಾಂತ ಸಮಾಜವಾದ. 'ಎಲ್ಲರೂ ಕೈಲಾದಷ್ಟು ದುಡಿಯಬೇಕು, ಹೊಟ್ಟೆ ಹಿಡಿದಷ್ಟು ಉಣ್ಣಬೇಕು' ಎಂಬ ಸಮಾನತೆಯ ದರ್ಶನ ಸಮಾಜವಾದ. ಯುದ್ಧಗಳು, ಉತ್ಪಾದನೆಯ ಯಾಂತ್ರೀಕರಣ, ಸಂಪತ್ತಿನ ಕೇಂದ್ರೀಕರಣ, ಸ್ವಾರ್ಥ, ಸ್ಪರ್ಧೆ, ಇವುಗಳಿಂದಾದ ಎಲ್ಲೆಲ್ಲೂ ಉಳ್ಳವರು, ಇಲ್ಲದವರು, ಶ್ರೀಮಂತರು, ಬಡವರು, ಮಾಲೀಕರು— ಕಾರ್ಮಿಕರು, ಭೂಸ್ವಾಮಿಗಳು— ಗೇಣಿಗಾರರು, ಸಾಹುಕಾರರು— ಸಾಲಗಾರರು— ಮುಂತಾಗಿ ಸಮಾಜವು ವರ್ಗಗಳ ಅಸಮಾನತೆಯಿಂದಾಗಿ ದಾರಿದ್ರ್ಯ ಬಡತನಗಳಿಗೆ ಬಲಿಯಾಗಿದೆ. ರಾಜ್ಯಾಧಿಕಾರವು ಬಂಡವಾಳಶಾಹಿಗಳಿಗೆ ಸಾಮ್ರಾಜ್ಯ ವಿಸ್ತರಣೆಗೆ ಉತ್ತೇಜಕವಾಗಿದೆ.

ಪ್ರಜಾಪ್ರಭುತ್ವ ಮತ್ತು ಸಮಾಜವಾದ ತತ್ವಗಳು ಕೆಲವರು ವಾದಿಸುವಂತೆ ಪರಸ್ಪರ ಮಾರಕ ಸಿದ್ಧಾಂತಗಳಲ್ಲ, ಪೂರಕಗಳು. ಪ್ರಜಾಪ್ರಭುತ್ವವು, ರಾಜ್ಯ ಮತ್ತು ವ್ಯಕ್ತಿ, ಪ್ರತಿನಿಧಿಗಳು ಮತ್ತು ಜನತೆ- ಇವರೀರ್ವರ ನಡುವಣ, ರಾಜಕೀಯ ಸಂಬಂಧಗಳು, ಮತ್ತು ಕಾಲ ಕಾಲಕ್ಕೂ ಜನತೆಯಲ್ಲಿ ಉದ್ಭವಿಸ ಬಹುದಾದ ರಾಜಕೀಯ ಭಿನ್ನಾಭಿಪ್ರಾಯಗಳನ್ನು ರಾಜ್ಯಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಇತಿಮಿತಿಗಳಿಗೊಳಪಟ್ಟ ಕಾನೂನು ಮತ್ತು ಜನಮತದನ್ವಯ ಶಾಂತಿಯುತವಾದ ಮಾರ್ಗಗಳಿಂದ ನಿಬಂಧನೆಗೊಳಿಸುವುದು, ಸಮಾಜವಾದವು ಸಮಾಜಕ್ಕೆ ಆವಶ್ಯಕವಾದ, ಅನ್ನ, ಬಟ್ಟೆ, ವಸತಿ, ವಿದ್ಯೆ, ಔಷಧಿಗಳನ್ನು ಪೂರೈಸಲು ಯೋಗ್ಯ ಕಾರ್ಯಕ್ರಮಗಳನ್ನು ಸರ್ಕಾರ ನಿರ್ವಹಿಸ ಬೇಕೆಂದೂ, ಅದಕ್ಕಾಗಿ ಉತ್ಪತ್ತಿಯ ಸಾಧನಗಳು ಮತ್ತು ನೈಸರ್ಗಿಕ ಸಂಪತ್ತುಗಳು, ಹಂಚುವಿಕೆಯ ಮತ್ತು ವಿನಿಮಯ ಸಾಧನಗಳು, ಖಾಸಗಿ ಬಂಡವಾಳ ಶಾಹಿ ವ್ಯವಸ್ಥೆಯ ರಾಷ್ಟ್ರೀಕರಣ ಹಾಗೂ ಸಾಮಾಜೀಕರಣ ಮಾಡುವ ಮೂಲಕ ಸಾರ್ವಜನಿಕವಾಗಿಯೇ ನಡೆಯಬೇಕೆಂಬ ಸಮಾನತೆಯ ಆರ್ಥಿಕ ಸಿದ್ಧಾಂತ, ಕಳೆದ ೪-೫ ಶತಮಾನಗಳಿಂದ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಸಿದ್ಧಾಂತಗಳ ಸಾಕ್ಷಾತ್ಕಾರಕ್ಕಾಗಿ ಸರ್ವ ಪ್ರಯತ್ನಗಳು ನಡೆಯುತ್ತಿದ್ದು, ಇಂದು ವಿಶ್ವವೇ ಹೊಸ ಸಮಾಜ ಸೃಷ್ಟಿಯಲ್ಲಿದೆ. ಅಮೇರಿಕಾ ಸ್ವತಂತ್ರ ಜನತ್ತಿನ 'ರಕ್ಷಣೆ'ಯ ಹೆಸರಿನಲ್ಲಿ ಬಂಡವಾಳ ಶಾಹಿ ಸಾಮ್ರಾಜ್ಯದ ವಿಸ್ತರಣೆ ಮತ್ತು ರಕ್ಷಣೆಯನ್ನೂ ಸಮಾಜದ ಪ್ರಗತಿಗೆ ಧಕ್ಕೆಯನ್ನು ತರುತ್ತಿದೆ. ರಶ್ಯಾ, ಚೀನಾ ಮತ್ತು ಪೂ. ಯುರೋಪಿನ ಕಮ್ಯೂನಿಸ್ಟ ರಾಷ್ಟ್ರಗಳು ತಮ್ಮ ರಕ್ಷಣೆ ಮತ್ತು ಸಮಾಜವಾದ ವಿಸ್ತರಣೆಯಲ್ಲಿ, ಪ್ರಜಾಪ್ರಭುತ್ವ ತತ್ವಗಳನ್ನು ಅಲ್ಲಗಳೆದು, ಸಮಾಜವಾದ, ಪ್ರಜಾಪ್ರಭುತ್ವಗಳ ವಿಕಾಸಕ್ಕೆ ಅಡ್ಡಿಯನ್ನುಂಟು ಮಾಡುತ್ತಿವೆ. ಈ ಜಾಗತಿಕ ಪರಿಸ್ಥಿತಿಯಲ್ಲಿ, ಭಾರತ ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದಿರುವುದು.

ಭಾರತದ ಚರಿತ್ರೆಯಲ್ಲಿ 'ಆವಡಿ ಕಾಂಗ್ರೆಸ್ ಅಧಿವೇಶನ' ಸುವರ್ಣಾಕ್ಷರಗಳಲ್ಲಿ ಬರೆಯ ಬೇಕಾದ ದಿನ. ಅದರಲ್ಲಿ ಸಮಾಜವಾದಿ ಮಾದರಿ ಸಮಾಜ ಸ್ಥಾಪನೆ ತಮ್ಮ ಗುರಿ ಎಂದು ಕಾಂಗ್ರೆಸ್ ಸಾರಿತು. ಭುವನೇಶ್ವರ ಅಧಿವೇಶನದಲ್ಲೂ ಇದೇ ತನ್ನ ಗುರಿ ಎಂದು ಮತ್ತೊಮ್ಮೆ ದೃಢಪಡಿಸಿತು. ಸ್ವಾತಂತ್ರ್ಯಾನಂತರದ ೧೮ ವರ್ಷಗಳಲ್ಲಿ ಜೀವ ವಿಮಾ ಕಂಪೆನಿಗಳು, ಕೋಲಾರದ ಚಿನ್ನದ ಗಣಿಗಳು, ವಿಮಾನ ಮಾರ್ಗಗಳು ರಾಷ್ಟ್ರೀಕೃತವಾಗಿವೆ. ರಾಷ್ಟ್ರದ ಅತ್ಯಾವಶ್ಯಕ ಸಂರಕ್ಷಕ ಉಪಕರಣಗಳನ್ನು ತಯಾರಿಸುವ ಕಾರಖಾನೆಗಳನ್ನು ಸರಕಾರವೇ ನಡೆಸುತ್ತಿವೆ.

ಭಾರತ ಸಮಾಜವಾದ ತತ್ವದ ಹೊರತು ಬದುಕದು ಎಂಬ ಸತ್ಯವನ್ನು ಮನಗಂಡೇ ಪಂ. ಜವಾಹರಲಾಲ್ ನೆಹರೂರವರೂ, ಲಾಲ್ ಬಹದೂರ ಶಾಸ್ತ್ರಿಗಳೂ ಈ ತತ್ವವನ್ನ ಅನುಷ್ಠಾನಕ್ಕೆ ತರಲು ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಭಾರತದ ಜನಸಂಖ್ಯೆಯಲ್ಲಿ ಅವಿದ್ಯಾವಂತ, ಹೊಟ್ಟೆಗೆ ಒಪ್ಪತ್ತು ಊಟಕ್ಕಿಲ್ಲದ, ನಿಲ್ಲಲು ವಸತಿಯಿಲ್ಲದ, ರೋಗರುಜಿಗಳಿಂದ ನರಳುವವರ ಸಂಖ್ಯೆ ಬಹುಭಾಗವಿದೆ. ಈ ಜನರ ಸಂಕಷ್ಟಗಳು ನಿವಾರಣೆಯಾಗದೆ ನಮಗೆ ಬಂದ ಸ್ವಾತಂತ್ರ್ಯ ಸಾರ್ಥಕವಾಗದು. ದೀನದಲಿತರು ಕೂಡಾ ಸ್ವಾತಂತ್ರ್ಯದ ಸವಿ ಉಣ್ಣಬೇಕಾದರೆ ಬಡವ ಶ್ರೀಮಂತರೊಳಗಿನ ಬೃಹತ್ ತಾರತಮ್ಯಗಳನ್ನೇ ಕಡಿಮೆಗೊಳಿಸಬೇಕಾದ ಸಾಧನವೇ ಸಮಾಜವಾದ. ಈ ೧೮ ವರ್ಷಗಳಲ್ಲಿ ಗಿರಣಿ ಮಾಲಿಕರು, ಕಂಟ್ರಾಕ್ಟುದಾರರು, ದಲ್ಲಾಳಿಗಳು, ಭ್ರಷ್ಟ ಅಧಿಕಾರಿಗಳ ಸಂಖ್ಯೆ ಮಿತಿ ಮೀರಿ ಬೆಳೆದು ಧನಕನಕ ಅವರ ಸೊತ್ತಾಗಿದ್ದು, ಬಡ ಬೋರೇ ಗೌಡ ಅವರ ಕಣ್ಣೆದುರಿನಲ್ಲಿ ನರಳಿ, ನರಳಿ ಸಾಯುವ ಸ್ಥಿತಿಯಲ್ಲಿದ್ದಾನೆ.

ಪ್ರಜಾಸತ್ತಾತ್ಮಕ ಸರಕಾರ ಉಳಿಯಬೇಕಾದರೆ ಈ ಆರ್ಥಿಕ ಸಾಮಾಜಿಕ ಭೇದಗಳು ನೆಲಸಮವಾಗಬೇಕು—ಸಮಾನತೆಯ ದೃಷ್ಟಿಯಲ್ಲಿ ಸರಕಾರ ಕ್ಷಿಪ್ರವಾಗಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಬೇಕು. ಶತಮಾನಗಳ ಪರಕೀಯರ ದಾಳಿ, ದಬ್ಬಾಳಿಕೆ ಶೋಷಣೆಗಳಿಗೆ ತುತ್ತಾಗಿ ಜಗತ್ತಿನಲ್ಲಿಯೇ ಅತ್ಯಂತ ಬಡವರ, ದರಿದ್ರರ, ಹಿಂದುಳಿದ ಭಾರತ ದೇಶವನ್ನು ನಾಗರಿಕ, ಆಧುನಿಕ, ಸಮೃದ್ಧ, ದೇಶವನ್ನಾಗಿ ಕಟ್ಟಬೇಕಾದರೆ ಕೆಲವು ತೀವ್ರ ಮೂಲಭೂತ ಆರ್ಥಿಕ ಸಾಮಾಜಿಕ ಬದಲಾವಣೆಗಳನ್ನು ಸಮಾಜವಾದಿ ತತ್ವದ ಅಸ್ತಿವಾರದ ಮೇಲೆ ಜ್ಯಾರಿಗೆ ತರಲೇಬೇಕು. ಬ್ರಿಟಿಷ್ ಸಾಮ್ರಾಜ್ಯಶಾಹಿ ಶೋಷಣೆಯಿಂದ ಮುಕ್ತವಾದಾಗ ತಮ್ಮ ಬಾಳು ಹಸನಾಗುವದೆಂದು ಕನಸು ಕಟ್ಟಿಕೊಂಡಿದ್ದ ಭಾರತದ ಕೋಟ್ಯನು ಕೋಟಿ ರೈತ, ಕಾರ್ಮಿಕ ಮತ್ತು ಸಾಮಾನ್ಯ ಜನರಿಗೆ ಅನಂತರದ ಆಡಳಿತೆಯಿಂದ ಆಶಾಭಂಗವಾಗುವದರಲ್ಲಿದೆ. ಸೇಕಡಾ ಒಂದರಷ್ಟು ಶ್ರೀಮಂತ ವರ್ಗ ರಾಷ್ಟ್ರೀಯ ಆದಾಯದ, ಸೇಕಡಾ ಇಪ್ಪತ್ತೈದರಷ್ಟು ಕಬಳಿಸುತ್ತಿದ್ದೆ.

ಇಪ್ಪತ್ತೇಳು ಕೋಟಿ ಜನ ಗ್ರಾಮೀಣ ರೈತ ಕುಟುಂಬಗಳ ಆದಾಯ ೩೫ ಪೈಸೆಗಳಿಗಿಂತಲೂ ಕಡಿಮೆಯಾಗಿದ್ದು ತಮ್ಮ ಕಷ್ಟಗಳಿಂದ ನಿರುತ್ಸಾಹಿಗಳಾಗಿ 'ನಮ್ಮ ಜೀವನದಲ್ಲಿ ಸಂತೋಷದ ದಿನ ಎಂದಿಗೂ ಬರಲಾರದು" ಎಂದು ಗೋಳಿಡುವ ಆರ್ತನಾದ ಕೇಳ ಸಿಗುತ್ತಿದೆ. ಈ ಬೇಧ ಕೊನೆಗಾಣದ ಪಕ್ಷದಲ್ಲಿ ದಿನದಿಂದ ದಿನಕ್ಕೆ ಶ್ರೀಮಂತರು ಕೋಟ್ಯಧಿಪತಿಗಳಾಗಿ, ಬಡವ ಇನ್ನೂ ಕಡು ಬಡವನಾಗುತ್ತಾ ಮುಂದುವರಿದಲ್ಲಿ ಸಾಮಾನ್ಯ ವರ್ಗದ ಜನತೆಗೆ ಪ್ರಜಾಸತ್ತೆಯಲ್ಲಿ ತಾತ್ಸಾರ, ಜಿಗುಪ್ಸೆ ಬಂದೀತು. ಈ ನಿರಾಶಾಭಾವನೆ, ಅಸಂತುಷ್ಟಿ, ಬಡಕೂಲಿಗಾರ ರೈತಾಪಿ ಜನರಲ್ಲಿ ಕ್ರಾಂತಿಕಾರಕ ಪಕ್ಷಗಳ ದವಡೆಗೆ ತಳ್ಳಿಬಿಟ್ಟೀತು. ಒಮ್ಮೆ ಭಾರತದ ಜನ ತನ್ನ ಹಕ್ಕುಗಳನ್ನು ತಿಳಿದು ನಿದ್ರೆಯಿಂದ ಎಚ್ಚತ್ತರೆ ಅವರನ್ನು ತಡೆಯುವ ಶಕ್ತಿ ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಹಿಮಾಲಯದ ವರೆಗೆ ಖಂಡಿತಕ್ಕೂ ಸಿಕ್ಕದು. ತಡೆಯಿರಿ! ಸುಧಾರಣೆಗಳನ್ನು ಮುಂದಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಮಂಡಿಸುತ್ತೇವೆ. ಸಿಲೆಕ್ಟ್ ಕಮಿಟಿಯ ರಿಪೋರ್ಟ್ ಕಾಯುತ್ತಿದ್ದೇವೆ ಎಂಬ ಆಶ್ವಾಸನೆಗಳು ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಏನೂ ಪ್ರಯೋಜನಕ್ಕೆ ಬರಲಿಕ್ಕಿಲ್ಲ. ಆದ್ದರಿಂದ ಮುಂದೆ ನಮ್ಮ ಪ್ರಜಾಪ್ರಭುತ್ವಕ್ಕೆ ಬರಬಹುದಾದ ಗಂಡಾಂತರದಿಂದ, ವಿನಾಶದಿಂದ, ಭಾರತವನ್ನು ತಪ್ಪಿಸಬಹುದಾದ ಸಂಜೀವಿನಿ ಪ್ರಜಾಸತ್ತಾತ್ಮಕ ಸಮಾಜವಾದ.

ಸಮಾಜವಾದೀ ಚಳವಳಿಯ ಯಶಸ್ಸಿಗಾಗಿ ದುಡಿಯುತಕ್ಕ ಯೋಧ, ಗೆಲುವಿನಿಂದ ಹಿಗ್ಗದೆ, ಸೋಲಿನಿಂದ ಕುಗ್ಗದೆ, ಜಯಾಪಜಯಗಳನ್ನು ಸಮದೃಷ್ಟಿಯಿಂದ ಕಂಡು ಸತ್ಯ, ದೃಢತೆ, ಸಂಯಮದಿಂದ ಕೂಡಿ ಸಮಾಜಕ್ಕಾಗಿ ದುಡಿದರೆ ಮಾತ್ರ ಸಮಾಜವಾದೀ ಮಾದರಿಯ ಸಮಾಜದ ಸ್ಥಾಪನೆಯಾಗಿ ಸಮಾಜೋನ್ನತಿಯಾಗುವದು. ಒಂದು ದೇಶವು ಉದ್ಧಾರವಾಗಿ ನೆಮ್ಮದಿಯಿಂದ ಬಾಳುವದರಲ್ಲಿ ಸಮಸ್ತ ಪ್ರಜೆಗಳಿಗೂ ಸಾಧ್ಯವಾದೀತು. ಸಮಾಜವಾದದಲ್ಲಿ ನಿಷ್ಠೆಯಿರುವ-ವಿಶ್ವಾಸವಿರುವ ಮುಖಂಡರನ್ನೇ ನಾವು ಆರಿಸಿ, ವಿಧಾನ ಸಭೆ— ಪಾರ್ಲಿಮೆಂಟುಗಳಿಗೆ ಕಳುಹಿಸಿ ಕೊಟ್ಟರೆ ಮಾತ್ರ ಪ್ರಜಾಸತ್ತಾತ್ಮಕ ಸಮಾಜವಾದ ಅತಿ ಬೇಗನೇ ಜ್ಯಾರಿಗೆ ಬರುವದು. ಇದರ ಬದಲು ಕೇವಲ ಬಾಯಿಯಲ್ಲಿ ಸಮಾಜವಾದ ಎಂದು ಕೂಗುವ ಕಪಟಿ ನಾಯಕರುಗಳಿಂದ ಬಡ ಜನತೆಯ ಏಳಿಗೆ, ಪುರೋಭಿವೃದ್ಧಿ ಎಂದಿಗೂ ಆಗದು. ಪ್ರಜೆಗಳು ಬರೇ ಬಾಯಲ್ಲಿ ಸಮಾಜವಾದ ಎಂದು ಮಾತನಾಡಿದರೆ ಪ್ರಯೋಜನವಿಲ್ಲ ಕಾರ್ಯದಲ್ಲಿ ಕೂಡಾ ಸರಕಾರ ಈ ದಿಸೆಯಲ್ಲಿ ತರಬಹುದಾದ ಸುಧಾರಣೆಗಳಿಗೆ ಸಂಪೂರ್ಣ ಬೆಂಬಲವಿತ್ತು ನಮ್ಮ ರಾಷ್ಟ್ರನಾಯಕರುಗಳ ಕನಸು ನನಸಾಗುವಂತೆ ಮಾಡಬೇಕು.

ಭಾರತ್ ಇಂಡಸ್ಟ್ರೀಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,

ಕಾಪು, ದ. ಕ.

ತಾ. 30—12—65ರಲ್ಲಿ ಜರಗಿದ ಕಂಪೆನಿಯ ವಾರ್ಷಿಕ ಮಹಾಸಭೆಯಲ್ಲಿ ಈ ಕೆಳಗಿನ ವಿಶೇಷ ಠರಾವು ಮಂಜೂರಾಗಿರುವುದೆಂಬುದನ್ನು ಈ ಮೂಲಕ ಜಾಹೀರು ಪಡಿಸಲಾಗಿದೆ.

ಕಂಪೆನಿಯ ಮೆನೇಜಿಂಗ್ ಏಜಂಟರಾಗಿದ್ದ ವಿವೇಕಾನಂದ ಕಮರ್ಶಿಯಲ್ ಕೊರ್ಪೊರೇಶನ್ ಪ್ರೈವೇಟ್ ಲಿಮಿಟೆಡ್ ಇವರು ತಾ. 15--8—65ರಿಂದ ರಾಜಿನಾಮೆ ಸಲ್ಲಿಸಿರುವ ಕಾರಣ ಕಂಪೆನಿಯ ಕಾರ್ಯಕಲಾಪಗಳನ್ನು ನಿರ್ವಹಿಸುವರೇ ಶ್ರೀ. ಕೆ. ಗೋವಿಂದ ಶೆಟ್ರವರನ್ನು ತಿಂಗಳೊಂದರ ರೂಪಾಯಿ 500/- ರ ವೇತನದಲ್ಲಿ 16—8—65ರಿಂದ ಐದು ವರುಷಗಳ ತನಕ ಮೆನೇಜಿಂಗ್ ಡೈರೆಕ್ಟರರನ್ನಾಗಿ ನೇಮಿಸಲಾಗಿದೆ.

ಈ ನೇಮಕದ ಮಂಜೂರಾತಿಗಾಗಿ ಕೇಂದ್ರ ಸರಕಾರಕ್ಕೆ ಕಂಪೆನಿಯಿಂದ ಅರ್ಜಿ ಮಾಡಲ್ಪಟ್ಟಿದೆ.

ಸಹಿ: ಕೆ. ಸಂಜೀವ ಶೆಟ್ಟಿ
ಚೇರ್‌ಮೆನ್.

ಗಾಂಧೀ ತತ್ವ ಪ್ರಚಾರ

(ಐದನೇ ಪುಟದಿಂದ)

ಯಂತೆ ಇಟ್ಟುಕೊಂಡು ನಡೆಸುವಂತೆ ತನ್ನ ಸ್ಥಾನವನ್ನು ಇತರರಿಗೆ ಬಿಟ್ಟುಕೊಡಬೇಕು. ತಾನು ತನ್ನ ಅಂತಿಮ ಜೀವಿತವನ್ನು ಗಾಂಧೀತತ್ವಾನುಯಾಯಿಯಾಗಿ ಪ್ರವಾದಿಯಂತೆ ಸರಳ ಜೀವನದಿಂದ ಜನತೆಯ ಹಿತ ಸಾಧನೆಯಲ್ಲಿ ಕಳೆಯಬೇಕು.

(8) ರಾಜಕಾರಣಿಗಳು ತಮ್ಮ ಪಕ್ಷದ ಹಿತದ ಮತ್ತು ತನ್ನ ಸ್ಥಾನದ ಮುಂದೆಯೂ ತನಗೇ ಸಿಗಬೇಕೆಂಬ ಸ್ವಾರ್ಥವನ್ನು ಇಟ್ಟುಕೊಳ್ಳದೆ ದೇಶದ ಮತ್ತು ಜನರ ಹಿತವನ್ನು ಮುಂದಿಟ್ಟುಕೊಂಡು ಸತ್ಯನ್ಯಾಯ ರೀತಿಯಿಂದ ದೇಶದ ಕಾನೂನುಗಳಿಗೆ ಒಳಪಟ್ಟು ದೇಶದ ಹಿತವನ್ನು ಬಯಸುವವರಾಗಬೇಕು. ಅವರ ಮುಂದಿನ ಸ್ಥಾನವನ್ನು ಅವರ ನಿಸ್ವಾರ್ಥ ಸೇವೆಯಿಂದಲೇ ಉಳಿಸಿಕೊಳ್ಳಬೇಕು.

(9) ರಾಜಕಾರಣಿಗಳು ದೇಶದಲ್ಲಿ ಜನರಿಗೆ ಒಪ್ಪಿಗೆಯಾಗುವಂತಹ ಮತ್ತು ಜನರಿಂದ ಅನುಷ್ಠಿಸಲು ಸಾಧ್ಯವಾಗುವಂತಹ ಕಾನೂನುಗಳನ್ನೆ ತರಬೇಕು. ಅವುಗಳನ್ನು ನೂರರಲ್ಲಿ ಒಬ ಜನರಾದರೂ ನಿಷ್ಠೆಯಿಂದ ಪಾಲಿಸುವಂತಾಗಬೇಕು. ಹಾಗಿಲ್ಲದಿದ್ದರೆ ತಂದ ಕಾನೂನುಗಳನ್ನು ಹಿಂತೆಗೆದುಕೊಳ್ಳುವ ಮನೋವೃತ್ತಿ ಉಳ್ಳವರಾಗಬೇಕು. ಅಲ್ಲದೆ ಕಾನೂನು ತಂದವರೇ ಅದನ್ನು ಮುರಿಯುವಂತಹರಾಗಬಾರದು.

(10) ರಾಜಕಾರಣಿಗಳು ಲೋಕಾಪವಾದಕ್ಕೆ ಹೆದರುವ ಮನೋವೃತ್ತಿ ಉಳ್ಳವರಾಗಿ ಮನಸ್ಸಿನಲ್ಲಿ ನೆನೆಸಿದ್ದನ್ನೇ ಬಾಯಲ್ಲಿ ಹೇಳಿ ಕರ್ತವ್ಯದಲ್ಲೂ ಒಂದೇ ರೀತಿ ಮಾಡಿ ತೋರಿಸುವ ಗುಣ ಉಳ್ಳವರಾಗಬೇಕು.

(11) ಆಹಾರ ವಸ್ತುಗಳ ಬೆಲೆ ಏರಿಕೆಯ ಈ ಸಮಯದಲ್ಲಿ ನಮ್ಮ ರಾಜಕಾರಣಿಗಳು ಜನರ ಮೇಲೆ ತಲಲಾರದ ತೆರಿಗೆಗಳನ್ನು ಹಾಕುವುದು ಮಾತ್ರವಲ್ಲದೆ ಪೋಸ್ಟಲ್ ರಿಜಿಸ್ಟ್ರೀ, ನ್ಯಾಯಾಂಗಕ್ಕೆ ಸಂಬಂಧಪಟ್ಟ ಚೀಟಿಗಳು ಮೊದಲಾದುವುಗಳ ಬೆಲೆಗಳನ್ನು ಆಗಾಗ್ಗೆ ಏರಿಸುವುದು ಗಾಂಧಿಜೀಯವರ ತತ್ವಕ್ಕೆ ಶುದ್ಧ ವಿರೋಧವಾಗಿದೆ. ಸರಕಾರವು ಜನರ ಹಿತಕ್ಕಾಗಿ ಇರುವುದಲ್ಲದೆ ಆಗಾಗ್ಗೆ ತೆರಿಗೆಗಳನ್ನು ಏರಿಸುತ್ತಾ ಜನರ ಮೇಲೆ ಕಾನೂನುಗಳ ಹೊರೆಗಳನ್ನು ಹಾಕುತ್ತಾ ಜನಜೀವನವನ್ನು ಕಷ್ಟಕ್ಕೆ ಗುರಿಪಡಿಸುವುದಕ್ಕಲ್ಲ—ಎಂಬುದನ್ನು ರಾಜಕಾರಣಿಗಳಿಗೆ ಅರಿವಾಗುವಂತೆ ಮಾಡಬೇಕು.

(12) ಜನರಿಂದ ಸಂಗ್ರಹಿಸಿದ ತೆರಿಗೆ ಮತ್ತು ಇತರ ರೂಪದಿಂದ ಸಂಗ್ರಹಿಸುವ ದೇಶದ ಹಣವನ್ನು ಉಚಿತ ರೀತಿಯಲ್ಲಿ ಬಳಸಬೇಕು. ಖಾದಿ ಟೋಪಿ, ಖಾದಿಬಟ್ಟೆಗಳನ್ನು ಧರಿಸಿಕೊಂಡು ಇದರಿಂದಾಗಿ ನಾವು ಗಾಂಧೀವಾದಿಗಳೆಂದು ಜನತೆಗೆ ತೋರಿಸುತ್ತಾ ಪ್ರಜಾಪ್ರಭುತ್ವದ ನೆವನದಿಂದ ತಾವು ಲೋಕ ಸೇವಾ ನಿರತರೆಂದು ತೋರಿಸುವುದಕ್ಕೋಸ್ಕರ, ದೇಶಾದ್ಯಂತ ಮತ್ತು ಹೊರ ದೇಶಗಳಿಗೂ, ದೇಶದ ಜನತೆಗೂ,ದೇಶಕ್ಕೂಏನೂ ಪ್ರಯೋಜನವಿಲ್ಲದ ಕಾರಣಗಳನ್ನು ಕಲ್ಪಿಸಿಕೊಂಡು ಸಂಚಾರ ಮಾಡಿ ತಮ್ಮ ಗೌರವ ಪ್ರದರ್ಶನ ಮಾಡುವುದು ನಿಲ್ಲಬೇಕು. ಕೋಟಿಗಟ್ಟಲೆ ಹಣವನ್ನು ಪಂಚವಾರ್ಷಿಕ ಯೋಜನೆಗಳ ಕಾರಣವನ್ನು ತೋರಿಸಿ ಕೊಟ್ಟು ಆ ಕರ್ತವ್ಯಕ್ಕಾಗಿ ತೆರೆಯುವ ಮತ್ತು ಕಲ್ಲು ಹಾಕುವ ಇತ್ಯಾದಿ ಸಂದರ್ಭಗಳನ್ನು ಕಲ್ಪಿಸಿಕೊಳ್ಳುವುದು ತಪ್ಪಬೇಕು. ಜನರ ಕಷ್ಟದ ಹಣವನ್ನು ತಮ್ಮ ಸ್ವಾರ್ಥಕ್ಕಾಗಿ ವೆಚ್ಚ ಮಾಡುವುದು, ಅದರೊಂದಿಗೆ ತೆರಲಾರದ ಹೊರಗಿನ ಸಾಲಗಳನ್ನು ಪಡೆಕೊಳ್ಳುವುದು ತಪ್ಪ. ದೇಶದ ಹಣ ದುರ್ವ್ಯಯವಾಗದಂತೆ ನೋಡಿಕೊಳ್ಳುವವರನ್ನು ರಾಜಕಾರಣಿಗಳನ್ನಾಗಿ ಮಾಡುವಂತೆ ಪ್ರಯತ್ನಿಸಬೇಕು.

(13) ಸರಕಾರವು ದೇಶದ ರಕ್ಷಣೆ, ಶಿಸ್ತು, ವಿದ್ಯೆ. ಆರೋಗ್ಯ, ಅಂಚೆ ಮೊದಲಾದ ಅತಿ ಮುಖ್ಯ ವಿಷಯಗಳನ್ನು ಮಾತ್ರ ತನ್ನ ವಶ ತೆಗೆದುಕೊಂಡು ಕರ್ತವ್ಯ ನಡೆಸಬೇಕಲ್ಲದೆ ಹೊರತು, ಜನರಿಗೆ ಸಂಬಂಧಪಟ್ಟ ದೇಶದ ಸರ್ವ ವ್ಯಾಪಾರಕ್ಕೂ ಸರಕಾರವೇ ಇಳಿದು ಜನರ ಉದ್ಯೋಗಗಳನ್ನು ತಾವು ಕಸಿದುಕೊಂಡು ಜನರಲ್ಲಿ ಮತ್ತು ಸರಕಾರಿ ನೌಕರರಲ್ಲಿ ಭ್ರಷ್ಟಾಚಾರಗಳನ್ನು ಹಬ್ಬುವ ಪ್ರಯೋಯ ತರಬಾರದು. ಜನರಿಂದಲೇ ಸ್ಪರ್ಧೆರೂಪದ ವ್ಯವಹಾರಗಳನ್ನು ಕಲ್ಪಿಸಿ ಜನರ ಜೀವನದ ವಸ್ತುಗಳ ಬೆಲೆಗಳನ್ನು ಕೆಳಕ್ಕೆ ಇಳಿಯುವಂತೆ ಮಾಡಿ ಜನಜೀವನವನ್ನು ಸುಗಮಗೊಳಿಸುವಂತೆ ಮಾಡಬೇಕು.

(14) ಈಗಿನ ಆಳುವ ಪಕ್ಷವಾದ ಕಾಂಗ್ರೆಸು ಮೇಲೆ ವಿವರಿಸಿದ ಗಾಂಧಿಜಿಯವರ ತತ್ವಗಳನ್ನು ಅಕ್ಷರಶಃ ನಡೆಸಿದರೆ ಮಾತ್ರ ಗಾಂಧಿಜಿಯವರ ಹೆಸರನ್ನು ಅವರ ಕರ್ತವ್ಯಗಳಲ್ಲಿ ಉಪಯೋಗಿಸಬೇಕು ಅದು ಸಾಧ್ಯವಿಲ್ಲವಾದರೆ ಗಾಂಧಿಜಿಯವರ ಹೆಸರನ್ನು ಉಪಯೋಗಿಸಕೂಡದು.

ಈ ಮೇಲೆ ವಿವರಿಸಿದ ಗಳತತ್ವಗ… ನಮ್ಮ ಗಾಂಧೀ ತತ್ವ ಪ್ರಚಾರ ಸ… ಯವರು ತಮ್ಮ ಪ್ರಬಲ ಪ್ರಚಾರ… ದೇಶದ ಜನತೆಯನ್ನೂ ನಮ್ಮ ರಾಜಕಾ… ಣಿ ಮುಖಂಡರನ್ನೂ ಜಾಗ್ರತೆಗೊಳ… ಗಾಂಧಿಜೀಯವರು ಕನಸು ಕಂಡ ರಾ… ರಾಜ್ಯ ಸ್ಥಾಪನೆಗಾಗಿ ಪ್ರಯತ್ನಿಸಬೇಕು. ಈಗಿನ ರಾಜಕಾರಣಿಗಳು ಇದಕ್ಕೆ ಪ… ಣೆಯದಿದ್ದಲ್ಲಿ ಗಾಂಧಿಜಿಯವರ ತತ್ವ… ದೆ ಸನಾತನ ತತ್ವವನ್ನು ಕೆಲವರಾದ… ಕಾಪಾಡಿಕೊಂಡು ಕಾಲವುಚಕ್ರ… ವಾಗ ಅದನ್ನು ಹೊರಗೆಡವಿ ದೇಶವನ್ನು ಉತ್ತಮ ರೀತಿಗೆ ಬರುವಂತೆ ಪ್ರಯತ್ನಿಸಬೇಕು— ಅಷ್ಟ… ವರೆಗೆ ನಿಷ್ಕಾಮವಂತ ಗಾಂಧೀ ತತ್ವಾನು… ಯಾಯಿಗಳನ್ನು ಕೂಡಿಸಿ ಪ್ರಚಾರ ಸಮಿತಿಯನ್ನು ಬಲಪಡಿಸಬೇಕು. ಬರೇ ಸಭೆ… ಳನ್ನು ಜಯಂತಿಗಳನ್ನು ಮಾಡಿದರೆ ಗಾಂಧಿಜೀಯವರಿಗೆ ತೃಪ್ತಿಯಾಗಲಾರದು. … ವರ ತತ್ವಗಳನ್ನು ನಿಷ್ಠೆಯಿಂದ ಅನು… ಸುವುದೇ ಅವರಿಗೆ ತೃಪ್ತಿ. ಆಡಂಭರ ಮನೋಭಾವದ ಕರ್ತವ್ಯಗಳಲ್ಲಿ ಅ… ರಿಗೆ ತೃಪ್ತಿ ಇಲ್ಲ. ಗಾಂಧಿಜೀಯವರು ಜೀವಂತರಿರುತ್ತಿದ್ದರೆ ಈಗ… ದೇಶದಲ್ಲಿ ನಡೆಯುವ ಈಗಿನ ರೀತಿಯ ದಂಡುಗಾರಿಕೆಯನ್ನು ತಪ್ಪಿಸಲು ತನ್ನ ಪ್ರಾಣವನ್ನು ಆರ್ಪಿಸುತ್ತಿದರು— ವಾ… ಪ್ರಾಣಾಹಿ ಪಾಂಡವ" ಎಂದು ಶ್ರೀಕೃಷ್ಣ ಪರಮಾತ್ಮನು ಹೇಳಿದಂತೆ ಗಾಂಧಿಜೀಯವರು ದೇಶದ ಪ್ರಾಣವೆ ಆಗಿದ್ದರು ಎಂಬುದನ್ನು ಎಲ್ಲರೂ ತಿಳಿಯತಕ್ಕದಾಗಿದೆ.

Phone: 3242 ಸ್ಥಾಪನೆ: 1947 Tel. GOLDKING
Res 3272

ತಾಜಾ ಬ್ಲ್ಯೂ ಯಾಗರ್
ವಜ್ರಗಳಿಗೂ ಮತ್ತು
ಅತ್ಯಾಧುನಿಕ ಫೇಶನಿನ
14 ct. ಚಿನ್ನಾಭರಣಗಳಿಗೂ,
ಬೆಳ್ಳಿಯ ಉಡುಗೊರೆ
ವಸ್ತುಗಳಿಗೂ
ಪ್ರಖ್ಯಾತಿಯಾದ



Prop: S. L. SHET

ಎಸ್. ಎಲ್. ಶೇಟ್
ಡಾಯಮಂಡ್ ಹೌಸ್
ಮನೆಯ ನಿತ್ಯೋಪಯೋಗದ ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ
ಮತ್ತು ಫೇನ್ಸಿ ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲ್ ಸೆಂಟರ್
ಮತ್ತು ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ
ಐಡಿಯಲ್ ಫೋಟೋ ಹೌಸ್
Phone: 3131
ಗೆವರ್ಟ್, ಆಗ್ಫಾ, ಕೋಡೆಕ್ ಮತ್ತು ಇಲ್‌ಫೋರ್ಡು
ಇವುಗಳ ಅಧಿಕೃತ ಡೀಲರ್ಸ್.
ಕಾರ್ನಾಡ್ ಸದಾಶಿವರಾವ್ ರೋಡ್, ಹಂಪನಕಟ್ಟಾ,
ಮಂಗಳೂರು–1.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಕೀರ್ತಿ ಶನಿ ಹಿಡಿದವನು ಉಪ್ಪು ಮಿಶ್ರಿತ ನೀರು ಕುಡಿದವನಂತೆ–ಕುಡಿ… ಷ್ಟೂ ಬಾಯಾರಿಕೆ ಹೆಚ್ಚು.

—ಎಬರ್ಟ್

ಂ ಂ ಂ ಂ

ಕೀರ್ತಿಯನ್ನು ದ್ವೇಷಿಸಿ ದೂರವಿಡುವವನು ಕ್ರಮಶಃ ಅದನ್ನು ಗಳಿಸಲು ಬೇಕಾದ ಯೋಗ್ಯತೆಯನ್ನೂ ಕಳೆದುಕೊಳ್ಳುವನು.

—ನೋಲೆ…

ಂ ಂ ಂ

ಅತ್ಯುತ್ತಮವಾದದನ್ನು ವ್ಯಕ್ತಿಯಿಂ… ಹೊರಗೆಳೆಯುವುದೇ ನಿಜವಾದ ವಿದ್ಯೆ. ಈ ದೃಷ್ಟಿಯಿಂದ ಮಾನವ ಕೋಟಿಗಿಂತ ಹಿರಿಯ ಪುಸ್ತಕ ಬೇರಿರಲಾರದು.

—ಗಾಂಧಿ

ಂ ಂ ಂ

ಹಿರಿಯರ ಮಮತೆಯ ಆಡಳಿತ, ಕಿರಿಯರ ವಿನೀತ ವಿನಯ ಇವುಗಳಿಂದ ಕೂಡಿದ ಕುಟುಂಬವನ್ನು ಸ್ವರ್ಗವೆನ್ನಬಹುದು.

ಬೇಕನ್.

ಂ ಂ ಂ

ತಿಳಿಗೇಡಿಯಾದ ವಿಶ್ವಾಸಪೋಷಕನಿಂದ ಆಗುವ ಕೇಡು ೨೦ ಜನ ಕಿಡಿಗೇಡಿಗಳಿಗಿಂತ ಹೆಚ್ಚು.

ಗ್ರೀಮ್.

ಂ ಂ ಂ

ತಾವು ದೊಡ್ಡ ತಪ್ಪು ಮಾಡಿ ಪಾರಾಗುವ ದೃಷ್ಟಿಯಿಂದ ಚಿಕ್ಕ ತಪ್ಪುಗಳನ್ನು ನಮ್ಮವೆಂದು ಒಪ್ಪಿಕೊಳ್ಳುತ್ತೇವೆ.

—ರೋಚವೌಲ್ಡ್.

ಕಾಣಿಯೂರು ಮಠದ
ಶ್ರೀಶ್ರೀ ವಿದ್ಯಾವಾರಿನಿಧಿ ತೀರ್ಥರ ಪರ್ಯಾಯ ಸಮಾರಂಭ

ಉತ್ಸಾಹಿ ಶ್ರೀಶ್ರೀಗಳವರಿಂದ ಸಮಾಜ ಹಿತ ಸಾಧನೆಯ ಆಶೆ ಸಫಲವಾಗುವ ನಿರೀಕ್ಷೆ

ಕಾಣಿಯೂರು ಮಠದ
ಶ್ರೀಶ್ರೀ ವಿದ್ಯಾವಾರಿನಿಧಿ ತೀರ್ಥರು

ಶ್ರೀಕೃಷ್ಣನ ಉಡುಪಿಯಲ್ಲಿ ಈ ತಿಂಗಳ ೧೮ನೆಯ ತಾರೀಕು ಪರ್ಯಾಯ ಸಮಾರಂಭ ನೆರವೇರಿತು. ಶ್ರೀಕೃಷ್ಣನ ಪೂಜಾದಿಗಳನ್ನು ಮಾಡುವ ಹೊಣೆಗಾರಿಕೆ ಒಂದು ಮಠದಿಂದ ಇನ್ನೊಂದು ಮಠವನ್ನು ಸೇರುವುದು ಪರ್ಯಾಯ, ಇದು ನಡೆಯುವುದು ಎರಡು ವರ್ಷಗಳಿಗೊಮ್ಮೆ. ಈ ಬಾರಿ ಶ್ರೀ ಸೋದೆ ಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು ತಮ್ಮ ಎರಡು ವರ್ಷಗಳ ಪರ್ಯಾಯಾವಧಿಯನ್ನು ನಿರಾತಂಕವಾಗಿ ಮುಕ್ತಾಯಗೊಳಿಸಿ ಶ್ರೀ ಕಾಣಿಯೂರು ಮಠದ ಶ್ರೀ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದಂಗಳವರಿಗೆ ಅಧಿಕಾರ ಒಪ್ಪಿಸಿದರು. ಈ ಸಮಾರಂಭದ ವೇಳೆ, ವಿಧ್ಯುಕ್ತ ಕಾರ್ಯಕ್ರಮಗಳೊಡನೆ ಧಾರ್ಮಿಕ ಮತ್ತು ಲೌಕಿಕ ಸಮಾವೇಶಗಳೂ ಸೇರಿದ್ದು, ಪರ್ಯಾಯಕ್ಕೆ ವಿಶೇಷ ಕಳೆಯನ್ನು ತಂದಿದ್ದುವು.

ಪ್ರಾತಃಕಾಲದಲ್ಲಿ ಜೋಡುಕಟ್ಟೆಯಿಂದ ರಥಬೀದಿಗೆ ಪರ್ಯಾಯ ಕೂತುಕೊಳ್ಳುವ ಸ್ವಾಮಿಯವರು ಅಷ್ಟಮಠದ ಶ್ರೀಪಾದಂಗಳವರೊಡನೆ ರಾಜ ವೈಭವೋಪೇತ ಮೆರವಣಿಗೆಯಲ್ಲಿ ಪಟ್ಟದ ನೃಸಿಂಹ ದೇವರನ್ನು ಮುಂದಿಟ್ಟುಕೊಂಡು ಬಂದರು. ಕನಕನ ಕಿಂಡಿಯಲ್ಲಿ ಶ್ರೀಕೃಷ್ಣ ದರ್ಶನ, ಅನಂತೇಶ್ವರ, ಚಂದ್ರೇಶ್ವರ ದರ್ಶನಾದಿಗಳನ್ನು ಮುಗಿಸಿ ಶ್ರೀಕೃಷ್ಣ ಮಠಕ್ಕೆ ಬರುವಾಗ ಅವರನ್ನು ನಿವೃತ್ತರಾಗುವ ಶ್ರೀ ಸೋದೆ ಶ್ರೀ ಶ್ರೀಯವರು ಸ್ವಾಗತಿಸಿ ಮಠದೊಳಗೆ ಕರೆದೊಯ್ದರು. ಅಲ್ಲಿ ವಿಧ್ಯುಕ್ತವಾಗಿ ಶ್ರೀ ಮಧ್ವಾಚಾರ್ಯರ ಸರ್ವಜ್ಞ ಪೀಠಾರೋಹಣ ಮಾಡಿ, ಬಡಗು ಮಾಳಿಗೆಯಲ್ಲಿ ಸರ್ವಾಧಿಕಾರವನ್ನು ಮುಂದಿನೆರಡು ವರ್ಷಗಳ ತನಕ ನಿರ್ವಹಿಸುವ ಹೊಣೆ ಹೊತ್ತು ಸಭಾ ಭವನಕ್ಕೆ ಬಂದರು.

ಶ್ರೀ ಮಠದ ರಾಜಾಂಗಣದಲ್ಲಿ ಸಭಾಂಗಣವು ನಿರ್ಮಿತವಾಗಿತ್ತು. ಈ ಸಭೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು ಉದ್ಘಾಟಿಸಿದರು.

'ಧರ್ಮ ಕೇಂದ್ರಗಳ ಅಧಿಪತಿಗಳು ಒಂದಾಗಿ ಧರ್ಮ ಸಂರಕ್ಷಣೆಯ ಭಾರವನ್ನು ಹೊರುವುದು ಅಗತ್ಯ. ಭಾರತೀಯರೆಲ್ಲರೂ ಭಾವೈಕ್ಯಹೊಂದುವುದರಿಂದಲೇ ಭಾರತದ ಐಕ್ಯ ಸಾಧ್ಯ. ಆದುದರಿಂದ ನಮ್ಮ ನಮ್ಮ ಧರ್ಮ ಸಂಪ್ರದಾಯಗಳನ್ನು ಬಿಡದೆ ವಿಶಾಲ ಮನೋಭಾವನೆಯಿಂದ ಒಗ್ಗಟ್ಟಾಗಿ ಬಾಳೋಣ. ಧರ್ಮ ಸಮನ್ವಯದಿಂದಲೇ ಜಗತ್ತಿಗೆ ಶಾಂತಿಯ ದಾರಿಯನ್ನು ತೋರೋಣ' ಎಂದು ಶ್ರೀ ಹೆಗ್ಗಡೆಯವರು ನುಡಿದರು.



ಶ್ರೀ ಡಿ ರತ್ನವರ್ಮ ಹೆಗ್ಡೆ

ಈ ಸಂದರ್ಭದಲ್ಲಿ ಪರ್ಯಾಯ ಕಾಣಿಯೂರು ಶ್ರೀ ಶ್ರೀಯವರು ಮಾತನಾಡುತ್ತ, 'ಮನಸ್ಸನ್ನು ಗುಣಶೀಲ ಕರ್ತವ್ಯಗಳಿಂದ ಹದಗೊಳಿಸಿ, ಆತ್ಮನನ್ನು ಬೆಳಗಿಸಿ, ದುಃಖ ಮುಕ್ತನಾಗುವುದೇ ಬದುಕು. ದಾರಿದ್ರ್ಯ, ಹಸಿವು ಮತ್ತು ಅಜ್ಞಾನಾಲಸ್ಯಗಳಿಂದ ಜಗತ್ತು ದೂರವಾಗಬೇಕು, ಈ ದಿಸೆಯಲ್ಲೇ ಅದು ಮುಂದುವರಿಯಬೇಕು. ಅಂತರಾತ್ಮನ ಸತ್‌ಪ್ರೇರಣೆಯಿಂದ ಮಾತ್ರ ಇದು ಸಾಧ್ಯ' ಎಂದು ಹೇಳಿ ಶ್ರೀ ರತ್ನವರ್ಮ ಹೆಗ್ಗಡೆಯವರ ಧಾರ್ಮಿಕ ಭಾವನೆಯನ್ನು ತಾನು ಮೆಚ್ಚುವೆನೆಂದರು. ಪರ್ಯಾಯದ ಶುಭಾವಸರದಲ್ಲಿ ಉಡುಪಿಯ ಕೀರ್ತಿಗೆ ಕಲಶಪ್ರಾಯರಾದ ಏಳ್ವರು ಸುಪುತ್ರರನ್ನು ಪ್ರಶಸ್ತಿಯಿತ್ತು ಗೌರವಿಸುವುದರ ಔಚಿತ್ಯವನ್ನೂ ಅವರು ವಿವರಿಸಿದರು.

ಅನಂತರ ಪರ್ಯಾಯ ನಿವೃತ್ತರಾದ ಶ್ರೀ ಸೋದೆ ಶ್ರೀ ಶ್ರೀಗಳವರು ತಮ್ಮ ಪರ್ಯಾಯಾವಧಿಯಲ್ಲಿ ನೆರವಾದ ಸಮಸ್ತರಿಗೂ ಕೃತಜ್ಞತೆಯರ್ಪಿಸಿ, ಏನಾದರೂ ನ್ಯೂನಾತಿರೇಕಗಳು ನಡೆದಿದ್ದರೆ, ಮನ್ನಿಸುವಂತೆ ಕೇಳಿಕೊಂಡರು. ಶ್ರೀ ಕಾಣಿಯೂರು ಶ್ರೀ ಶ್ರೀಯವರ ಕುರಿತು ಮಾತಾಡುತ್ತ ಶ್ರೀ ಶ್ರೀ ಯವರು ಅಪಾರ ಅನುಭವಿಗಳು, ಅವರ ಕಾಲವು ಸುಧಾರಣಾ ಪಥದಲ್ಲಿ ನಡೆಯಲಿ, ಯಾತ್ರಿಕರಿಗೆ ಹೆಚ್ಚಿನ ಸೌಲಭ್ಯ ದೊರಕಲಿ, ಯಶಸ್ವಿಯಾಗಿ ನೆರವೇರಲಿ ಎಂದು ಹಾರೈಸಿದರು.

ನ್ಯಾಯ ವೇದಾಂತದ ಪ್ರಾಧ್ಯಾಪಕರಾಗಿದ್ದ ಸರ್ವ ಶ್ರೇಷ್ಠ ಪಂಡಿತ ಶ್ರೀ ಪಡಮನ್ನೂರು ನಾರಾಯಣಾಚಾರ್ಯರಿಗೆ 'ಪಂಡಿತ ಚಕ್ರವರ್ತಿ', ದ್ವೈತ ವೇದಾಂತದ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಮಧ್ವಾಚಾರ್ಯರ ಸರ್ವ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿದ ಶ್ರೀ ಅಗ್ರಹಾರ ನಾರಾಯಣ ತಂತ್ರಿಯವರಿಗೆ 'ವೇದಾಂತ ವಾಚಸ್ಪತಿ', ತರ್ಕ ಪ್ರಾಧ್ಯಾಪಕರಾಗಿ ವಿದ್ವತ್ ಸಭೆಗಳಲ್ಲಿ ಅಗ್ರಮಾನ್ಯರಾದ ಶ್ರೀ ಸಗ್ರಿ ಹಯಗ್ರೀವಾಚಾರ್ಯರಿಗೆ "ತರ್ಕ ವಾಚಸ್ಪತಿ" ಎಂಬ ಪ್ರಶಸ್ತಿಗಳನ್ನು ನೀಡಲಾಯಿತು. ಅನಂತರ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನಿನ ರಿಜಿಸ್ಟ್ರಾರು ಪದ್ಮಶ್ರೀ ಡಾ| ಮಾಧವ ಪೈಯವರಿಗೆ 'ವಿದ್ಯಾಸಾಗರ' ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ "ಧರ್ಮವೀರ" ಮದ್ರಾಸಿನ ದಾಸಪ್ರಕಾಶದ ಶ್ರೀ ಕುತ್ತೆತ್ತೂರು ಸೀತಾರಾಮ ರಾಯರಿಗೆ 'ಹರಿ ಭಕ್ತ ಶಿರೋಮಣಿ', ಮೌನವಾಗಿ ಸೇವಾ ನಿರತರಾಗಿರುವ ಮಹಾಪ್ರಸಾದ ಕಡಂದಲೆ ಕೃಷ್ಣ ಭಟ್ಟರಿಗೆ "ಶ್ರೀ ಕೃಷ್ಣ ಸೇವಾ ಪರಾಯಣ" ಎಂಬ ಬಿರುದನ್ನೂ ನೀಡಲಾಯಿತು.

ಅನಂತರ ಡಾ| ಮಾಧವ ಪೈ ಮೊದಲಾದವರು ಮಾತನಾಡಿ ಭಕ್ತಿ ಮಾರ್ಗಕ್ಕೆ

ಡಾ| ಟಿ. ಮಾಧವ ಪೈ

ಜನತೆಯನ್ನು ಒಯ್ಯುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ರಾಜ್ಯ ಮತ್ತು ಕೇಂದ್ರ ಸರಕಾರಗಳ ಪರವಾಗಿ ಪಟ್ಟಿ ಕಾಣಿಕೆಗಳು ಪರ್ಯಾಯ ಶ್ರೀ ಶ್ರೀ ಯವರಿಗೆ ಅರ್ಪಿತವಾದ ಬಳಿಕ ಇತರರೂ ಅರ್ಪಿಸಿ

(ಮೂವತ್ತೊಂದನೇ ಪುಟ ನೋಡಿರಿ)

ಹೆಗ್ಗಾರ್ ಸಹಕಾರಿ ವ್ಯವಸಾಯಿಕ ಬೇಂಕ್ ಲಿಮಿಟೆಡ್ ಪರ್ಕಳ, ದ. ಕ.

ಈ ಬೇಂಕಿನ ಸ್ವಂತ ಹೊಸ ಕಟ್ಟಡದ ಉದ್ಘಾಟನೆಯು ತಾ. 24-1-66ರಂದು ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ ಇವರಿಂದ ಸೆಂಟ್ರಲ್ ಸಹಕಾರಿ ಬೇಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಇದೇ ಸಂದರ್ಭದಲ್ಲಿ ಬೇಂಕಿನ ಸ್ಥಾಪಕ ಪ್ರೆಸಿಡೆಂಟ್ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆರ ಭಾವಚಿತ್ರವನ್ನು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಎ. ಜೆ ಆಲ್ವೆಯವರು ಅನಾವರಣ ಗೈದರು.

ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರು ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರು, ಉಡುಪಿ ತಾಲೂಕಿನಲ್ಲಿ ಕಾಂಗ್ರೆಸ್ ಗಾಳಿ ಹರಡಿದವರಲ್ಲಿ ಒಬ್ಬರು. ಅಂದಿನಿಂದ ಅವರು ಕಾಂಗ್ರೆಸಿನ ಹಲವಾರು ಪದಗಳಲ್ಲಿದ್ದು ಹೊಸ ರಕ್ತದವರಿಗೆ ಪ್ರೇರಕ ಶಕ್ತಿಯಾಗಿ ಕಾಂಗ್ರೆಸ್ ತತ್ವಗಳನ್ನು ಕಟ್ಟುನಿಟ್ಟಾಗಿ ನಂಬುವ ಆಚರಿಸುವ ಶ್ರೀ ಹೆಗ್ಡೆಯವರು ಶಾನೊಬ್ಬ ವಿನೀತ ಕಾಂಗ್ರೆಸ್ ಸೇವಕ ಎನ್ನುತ್ತಾರೆ. ಅವರು ಯಾವ ಸ್ಥಾನಮಾನವನ್ನೂ ಬಯಸಿದವರಲ್ಲ. ಒಂದು ವೇಳೆ ಬಯಸುತ್ತಿದ್ದರೆ, ಉಚ್ಚ ಸ್ಥಾನವನ್ನೂ ಗಳಿಸುತ್ತಿದ್ದರು. ದೇಶದ ಪ್ರಜಾಪ್ರಭುತ್ವವನ್ನು ಉಳಿಸುವ ಹೊಣೆ ಹೊತ್ತ ಕಾಂಗ್ರೆಸ್ ಶಿಸ್ತು, ತ್ಯಾಗ ಸೇವೆಗಳ ಮೂಲಕ ಬೆಳೆಯಬೇಕೆನ್ನುವವರು ಇವರು. ಅಧಿಕಾರದ ಆಮಿಷದಿಂದ ಪ್ರಮತ್ತರಾದರೆ, ಶಾಸಕರು ಜನಹಿತವನ್ನು ಹೇಗೆ ಸಾಧಿಸಿಯಾರು ಎಂದು ಕೇಳುತ್ತಾರೆ ಇವರು. ಹಳ್ಳಿಯಿಂದ ಡಿಲ್ಲಿಗೆ ಆಡಳಿತಾ ವಿಧಾನ ಹೋಗಬೇಕು, ಡಿಲ್ಲಿಯಿಂದ ಹಳ್ಳಿಗಲ್ಲ—ಎನ್ನುವ ಇವರು ಬಾಪೂವಿನ ರಾಮರಾಜ್ಯ, ವಿನೋಬಾನ ಗ್ರಾಮರಾಜ್ಯ ಸ್ಥಾಪನೆ ಈ ವಿಧಾನದಿಂದಲೇ ಸಾಧ್ಯ ಎನ್ನುತ್ತಾರೆ.

ಹೆರ್ಗ ಗ್ರಾಮದ ಕೃಷಿ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಇವರು 'ಪ್ಯಾಕೇಜ್ ಸ್ಕೀಮ್'? ಮಂತ್ರದ ಬಗ್ಗೆ ತುಂಬ ಆಲೋಚಿಸುತ್ತಿದ್ದಾರೆ, ಆಲೋಚನೆಯನ್ನು ಕಾರ್ಯಗತ ಮಾಡುತ್ತಿದ್ದಾರೆ.

ನಮಗೀಗ ಆಂತರಿಕ 'ಕ್ರಾಂತಿ' ಬೇಕು

(ಮೂರನೇ ಪುಟದಿಂದ)

ರಿದ್ದರೋ ಹಾಗೆ,ನಮಗಿಂದು ಅಂಥಹ ವೀರರ ತಂಡಗಳು ಬೇಕಾಗಿವೆ. ಅವರ ಶಕ್ತಿಯನ್ನು ಬಲಿಸುವಂತೆ ಬರೆಯುವ, ಮತ್ತು ಬೆಂಬಲವನ್ನು ನೀಡುವ ಪತ್ರಿಕೋದ್ಯಮವು ಅವಶ್ಯವಾಗಿದೆ. ನಿಜವಾಗಿ ನೋಡಿದರೆ ನಮ್ಮ ಕಾರ್ಯವು ಸ್ವರಾಜ್ಯ ಬಂದ ಮೇಲೆಯೇ ಸುರುವಾಗಿದೆ. ಹೊಸ ರಾಷ್ಟ್ರವನ್ನು ರಚಿಸುವ ಅತ್ಯಂತ ಗುರುತರವಾದ ಆ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಾಮರ್ಥ್ಯನಂತರ ಸಂಖ್ಯೆ ತೀರ ವಿರಳವಾಗಿಬಿಟ್ಟಿದೆ. ಹಾಗಾಗಿ, ಯಾವ ಅಡೆತಡೆಯೂ ಇಲ್ಲದೆ, ಬೆಳೆಯನ್ನು ಮೇಯುವ ಕಳ್ಳದನಗಳಂತೆ, ಜನತೆಯ ದಾರಿದ್ರ್ಯ, ಅಜ್ಞಾನಗಳ ದುರ್ಲಾಭ ಪಡೆದು ಮೆರೆದಾಡುವ ಪುಢಾರಿಗಳ ತಂಡವೇ ಇಂದು ಪ್ರಭಲವಾಗಿಬಿಟ್ಟಿದೆ. 'ಕುರಿಯ ವೇಷದಿಂದ ತೋಳ ಕುರಿಮಂದೆಯ ಮುಕ್ಕಿತು'ಎಂಬಂತಾಗಿದೆ ನಮ್ಮ ಜನಾಂಗದ ಸ್ಥಿತಿ.

ಜಾಗತಿಕ ಬ್ಯಾಂಕಿನ ಭೂ ವ್ಯವಸಾಯ ನಿರೀಕ್ಷಣ ಮಂಡಳದವರು ಭಾರತಕ್ಕೆ ಬಂದು ಇಲ್ಲಿಯ ವಿವಿಧ ರಾಜ್ಯಗಳಲ್ಲಿ ಸಂಚಾರ ಮತ್ತು ಪರಿಶೀಲನೆ ಮಾಡಿ, "ವ್ಯವಸಾಯದ ಉತ್ಪತ್ತಿಯಲ್ಲಿ ಹೆಚ್ಚಳವಾಗದಿದ್ದುದಕ್ಕೆ ಅಧಿಕಾರಿ ವರ್ಗದ ಅಸ್ತವ್ಯಸ್ತ ಆಡಳಿತವೇ ಕಾರಣ" ಎಂಬ ವರ್ಣನವನ್ನು ಹೊರಗೆಡಹಿತು. ಸ ೧೫ ವರ್ಷಕಾಲ ನಮ್ಮ ಸರಕಾರಗಳು—ರಾಜ್ಯ ಮತ್ತು ಕೇಂದ್ರ-ಪರದೇಶಗಳಿಂದ ಪಡೆದ ಸಾಲವನ್ನು ಉಪಯೋಗಿಸಿದ ರೀತಿಗೆ ಇದೊಂದು ಸ್ಪಷ್ಟ ನಿದರ್ಶನ! ಇದನ್ನು ಕಂಡು ಅಮೇರಿಕದ ಅಧ್ಯಕ್ಷರಿಗೆ ವಿಸ್ಮಯವಾಯಿತು. ಭಾರತವು ಪ್ರತಿ ವರ್ಷವೂ "ಇನ್ನಷ್ಟು ಧಾನ್ಯಕೊಡಿ" ಎಂದು ಬೇಡುತ್ತಿರುವುದನ್ನು ಕಂಡು ಯಾರಿಗೆ ತಾನೇ ಆಶ್ಚರ್ಯವಾಗದು? ಪಡೆದ ಸಾಲವನ್ನು ಮೂಲಭೂತ ವಸ್ತುವಿನ ಹುಟ್ಟುವಳಿಗಾಗಿ ವೆಚ್ಚ ಮಾಡದೇ, ಅದರ ಹೆಸರಿನಲ್ಲಿ ಅಪಾರ ಹಣವನ್ನು ಸಿಕ್ಕ ಸಿಕ್ಕವಕ್ಕೆಲ್ಲ ಮುಕ್ಕುವಂತೆ ಮಾಡಿದ ಸರಕಾರದ ಆಡಳಿತ ಯಂತ್ರಕ್ಕೇನೆನ್ನಬೇಕು? ಹಿರಿಯ ಧುರೀಣರಾದ ಶ್ರೀ ರಾಜಗೋಪಾಲಾಚಾರಿ, ಕೃಪಲಾನಿ ಮೊದಲಾದವರು ಈ ಬಗೆಯ ದುಂದುಗಾರಿಕೆಯನ್ನು ಸಹಿಸಲಾರದೆ, "ಮೊದಲು ನೀವು ತೊಲಗಿರಿ" ಎಂದು ಈಗಿನ ಮಂತ್ರಿಮಂಡಳಗಳಿಗೆ ಆಹ್ವಾನ ನೀಡುತ್ತಿದ್ದಾರೆ. ಗಾಂಧಿಜಿಯವರು ಇಂಗ್ಲಿಷ್ ಸರಕಾರಕ್ಕೆ ಅದೇ ಮಾತನ್ನೇ—ನೀವು ತೊಲಗಿರಿ ಹೇಳಿದ್ದರಲ್ಲವೆ? ಆದರೆ, ಇಂದು ನಾನಾ ರೀತಿಯ ಸ್ವಾರ್ಥಸಾಧಕ ವ್ಯಕ್ತಿ—ಶಕ್ತಿಗಳು ಸಾಮಾನ್ಯ ಜನತೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು, ಬಹುಮತವನ್ನು ಪಡೆದು ಆಡಳಿತ ಯಂತ್ರವನ್ನೇ ತಮ್ಮ "ಖಾಸಗಿ ಸ್ವತ್ತು"ನಂತೆ ಉಪಯೋಗಿಸಿ ಕೊಳ್ಳುತ್ತಿವೆ. ಮೇಲೆ ಮಂತ್ರಿಯಿಂದ ಹಿಡಿದು ಕೆಳಗೆ ಗ್ರಾಮ ಪಂಚಾಯತದ ನೌಕರರ ವರೆಗೆ ಎಲ್ಲರೂ ಬಾಯಲ್ಲಿ ದೊಡ್ಡ ದೊಡ್ಡ ಮಾತಾಡುತ್ತ ಕೃತಿಯಲ್ಲಿ ದುಷ್ಟ ಸ್ವಾರ್ಥ ಸಾಧನೆಗಾಗಿ ಯಾವುದನ್ನು ಮಾಡಲೂ ಹೇಸುವುದಿಲ್ಲವಾಗಿದೆ.

ಇಂತಹ ಹೇಯ ಮುಖಂಡತ್ವವನ್ನು ಇದಿರಿಸಿ, ನವಸಮಾಜ ನಿರ್ಮಾಣ ಮಾಡಲು ಕಟಿಬದ್ಧವಾದ ಯುವಕ ವೀರರ ತಂಡಗಳು ಜಿಲ್ಲೆ ಜಿಲ್ಲೆಗೂ ಬೇಕಾಗಿದೆ. ಒಂದೆಡೆ ಸಾಮಾಜಿಕ ಸ್ನೇಹ—ಸಮಾನತೆಯ ಬಗ್ಗೆ ಪ್ರಚಂಡ ಚಳವಳಿಯನ್ನು ನಡೆಸುತ್ತ ಮತ್ತೊಂದೆಡೆ ನಿಜವಾದ ಪ್ರಜಾಸತ್ತೆಯ ರಾಜ್ಯಕೀಯ ಪರಿಜ್ಞಾನವನ್ನೂ, ಪೌರ ನೀತಿಯ ಉದಾತ್ತ ವಿಚಾರವನ್ನು ಪ್ರಚಾರ ಮಾಡುವ ಇಬ್ಬಗೆಯ ಕಾರ್ಯ ಕುಶಲರ ಆವಶ್ಯಕತೆ ಇಂದಿನ ಬಹುಮಹತ್ವದ ರಚನಾತ್ಮಕ ಕಾರ್ಯವಾಗಿದೆ. ಅದನ್ನು ಕೈಗೊಳ್ಳಲು ವಿಳಂಬಿಸಿದರೆ, ದೇಶದೊಳಗಿನ ಅಸಮಾಧಾನ ಮತ್ತು ಅಸಹಾಯಕ ಪರಿಸ್ಥಿತಿಯು ಬೆಳೆದು, ಅನಪೇಕ್ಷಿತವಾದ ಹಿಂಸಾಮಯ ಕ್ರಾಂತಿಗೆ ಎಡೆಯುಂಟಾಗುವುದು.

ಬರೆಯ ಮೇಲೆ ಬ

ವಿಧಿಯೆಳೆದ ಬರೆಯೆಮಗೆ
ಇದುವರೆಗೆ ಮಾಸಿಲ್ಲ
ಮತ್ತೊಂದು ಬರೆಯೀಗ ಎಳೆದ
ರಯ್ಯೊ!

ಶಾಂತಿ ದೂತನು ಅಗಲಿ
ವರುಷವೆರಡಾಗಿಲ್ಲ
ಶಾಂತಿಪ್ರಿಯ ನೀನೀಗ ಹೋದೆ
ಯಯ್ಯೊ!

ಉತ್ತರದಿ ಗಡಿ ನುಗ್ಗಿ
ವೈರಿ ಬಂದಿರಲಾಗ
ಮಿತ್ರ ಹಿತವಚನವನು ನೀನು
ಕೊಟ್ಟೆ!

ಸುತ್ತಮುತ್ತಲ ವೈರಿ
ಮೈತ್ರಿತ್ವ ಧಿಃಕ್ಕರಿಸಿ
ಸೆಣಸಾಡುತಿರಲಾಗ ಧೈರ್ಯಕೊಟ್ಟೆ!
ನೆಹರೂ ನಂತರದಮ್ಮ
ನಾಯಕನು ನೀನೆಂದು
ಹದಿನೆಂಟು ಮಾಸದಲೆ ತೋರಗೊಟ್ಟೆ!
ಕನಸುಮನಸಿನಲಿ ನಿನ್ನ
ನಂತರದಿಯಾರೆಂದು
ಯೋಚಿಸದ ತೆರದಲ್ಲಿ ಹೊರಟುಬಿಟ್ಟೆ!
ನಡೆ ಮುಂದೆ ನಡೆ ಮುಂದೆ
ಎಂದೆನುತ ನೀನೆಮ್ಮ
ಶಾಂತಿಪಥವನು ಬಳಸಿ ಮುಂದ
ಕೊಯ್ದೆ!

ಮುನ್ನಡೆದು ಮುನ್ನಡೆದು
ನೀನಿನ್ನ ದೇಹವನು
ಅನುದಿನವು ಸೃಜಿಸುತಲಿ ನಿಗ್ಗಿಕೊಯ್ದೆ!

—ಮಾಮಾ ಪನಾಸಕರ್.

ನಿಮ್ಮ ಮನೆಯ ನಿತ್ಯದ ಉಪಯೋಗಕ್ಕೆ—
ವಿಶೇಷ ಸಮಾರಂಭಗಳಿಗೆ ಅತ್ಯಗತ್ಯವುಳ್ಳ
ಎಲ್ಲ ಪಾತ್ರೆಗಳಿಗೆ—
ಬೆಳ್ಳಿ, ತಾಮ್ರ, ಕಂಚು, ಸ್ಟೈನ್‌ಲೆಸ್ ಸ್ಟೀಲ್
ಎಲ್ಲ ಪಾತ್ರೆಗಳಿಗೆ- ನಮ್ಮಲ್ಲಿಗೆ ಬನ್ನಿ.
ಐರೋಡಿ ರಾಧಾಕೃಷ್ಣ ಪೈ
ಪಾತ್ರೆ ವ್ಯಾಪಾರಿಗಳು
ರಥಬೀದಿ - - - ಉಡುಪಿ

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428
ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಕರ್ಣಾಟಕ ಇಂಡಸ್ಟ್ರೀಸ್
ಚಿಕ್ಕನಸಾಲ ರಸ್ತೆ
ಕುಂದಾಪುರ ದ. ಕ.

ಜೋಡೆತ್ತು ಮಾರ್ಕಿನ
ಮಂಗಳೂರು
ಹಂಚುಗಳನ್ನು
ಉಪಯೋಗಿಸಿರಿ.



ಪರ್ಯಾಯ ಸಮಾರಂಭ

(ಎಪ್ಪತ್ತೊಂಭತ್ತನೇ ಪುಟದಿಂದ)

ದರು. ಫಲಿಮಾರು ಮಠದ ಶ್ರೀಶ್ರೀ ರಘುವಲ್ಲಭ ತೀರ್ಥ ಶ್ರೀಗಳು ಸಮಾರೋಪ ಭಾಷಣ ಮಾಡಿದರು.

ಪರ್ಯಾಯ ನಿವೃತ್ತ ಶ್ರೀಶ್ರೀಯವರನ್ನು ಗೌರವದಿಂದ ಅವರ ಮಠಕ್ಕೆ ಕಳಿಸಿ ಕೊಡಲಾಯಿತು.

ಸಂಜೆ ಧಾರ್ಮಿಕ ಮಹಾ ಸಭೆಯು ಸೇರಿತು. ಶ್ರೀ ಅದಮಾರು ಮಠದ ಶ್ರೀಶ್ರೀ ವಿಬುಧೇಶ ತೀರ್ಥಶ್ರೀಪಾದಂಗಳವರು ಅಧ್ಯಕ್ಷತೆ ವಹಿಸಿದ್ದು ರಾಜ್ಯದ ಪಂಚಾಯತ್ ರಾಜ್ಯ ಅಭಿವೃದ್ಧಿ ಶಾಖೆಯ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ಉದ್ಘಾಟಿಸಿದರು.

ಸಚಿವರು ಮಾತನಾಡುತ್ತ, 'ಶ್ರೀ ಮಧ್ವಾಚಾರ್ಯರ ದ್ವೈತ ಸಿದ್ಧಾಂತವು ದರ್ಶನ ಪರಂಪರೆಯಲ್ಲಿ ಶ್ರೇಷ್ಠವಾದುದು. ಅವರ ದರ್ಶನ ಕೇಂದ್ರ ಉಡುಪಿ ಕರ್ನಾಟಕಕ್ಕೆ ಪವಿತ್ರವೂ ಪೂಜನೀಯವೂ ಆಗಿದೆ' ಎಂದು ಉದ್ಗರಿಸಿದರು. ಅವರು ಮುಂದುವರಿಯುತ್ತ, ಜನ ಸಾಮಾನ್ಯರನ್ನು ಧರ್ಮಬೋಧನ, ಸನ್ಮಾರ್ಗ ದರ್ಶನದ ಮೂಲಕ ಧರ್ಮ ಮಾರ್ಗದಲ್ಲಿ ನಡೆಸುವ ಹೊಣೆ ಮಠ—ದೇಗುಲಗಳವರದ್ದು. ಉತ್ತಮ ಮನಸ್ಸು, ಉತ್ತಮ ನಡತೆ ಮತ್ತು ಉತ್ತಮ ಕಾರ್ಯಾಚರಣೆ—ಇವು ಉತ್ಕೃಷ್ಟ ಜೀವನ ತತ್ವಗಳು. ಎಲ್ಲಾ ಧರ್ಮಗಳು ಬೋಧಿಸಿರುವುದು ಇದನ್ನೇ. ವಿಶ್ವಮಾನವ ಕಲ್ಯಾಣವು ಧರ್ಮದ ಗುರಿಯಾಗಬೇಕು. ಸರ್ವೇ ಜನಾಃ ಸುಖಿನೋ ಭವಂತು ಎನ್ನುವ ನಾವು ನಮ್ಮ ಹಿರಿಯರ ಪರಂಪರೆಯನ್ನು ಉಳಿಸಿಕೊಳ್ಳಬೇಕು—ಎಂದರು.

ಪರ್ಯಾಯ ಶ್ರೀಶ್ರೀಯವರು ಪ್ರಾಸ್ತಾವಿಕ ಭಾಷಣ ಮಾಡಿ, ಶ್ರೀಮಧ್ವಾಚಾರ್ಯರು ದ್ವೈತ ತತ್ವವನ್ನು ಕಂಡುಕೊಂಡು ಭಾರತದಲ್ಲಿ ಧರ್ಮ—ಸಂಸ್ಕೃತಿಗಳ ಪ್ರಚಾರ ಮಾಡಿದರು. ಅವರ ಶಿಷ್ಯ ಪರಂಪರೆಯೂ ಇದೇ ಕಾರ್ಯ ನಿರತವಾಗಿದೆ. ಜನತಾ ಕಲ್ಯಾಣ, ಶಾಂತಿ ಮತ್ತು ಸುವ್ಯವಸ್ಥೆಗಳಿಗೆ ಧರ್ಮ ಪ್ರಚಾರ ಅತ್ಯಗತ್ಯ ಎಂದರು. ಮಾನ್ಯ ಸಚಿವರಿಗೊಂದು ಮಾನಪತ್ರ ಸಮರ್ಪಿಸಿ, ಉಡುಪಿಯನ್ನು ಪ್ರವಾಸಿ ಕೇಂದ್ರವಾಗಿ ಘೋಷಿಸಿ ಯಾತ್ರಿಕರಿಗೆ ಸಕಲ ಸೌಕರ್ಯ ಒದಗುವಂತೆ ಮಾಡಬೇಕೆಂದು ಕೇಳಿಕೊಳ್ಳಲಾಯಿತು.

ಅನಂತರ ಪ್ರಿನ್ಸಿಪಲ್ ಕು. ಶಿ. ಹರಿದಾಸ ಭಟ್ಟರು ಧರ್ಮದ ಬಗ್ಗೆ ಮಾತನಾಡಿ, ಧರ್ಮದ ಬಗ್ಗೆ ಚರ್ಚೆ ಬಹುಕಾಲದಿಂದ ನಡೆಯುತ್ತ ಬಂದಿದ್ದರೂ ಇನ್ನೂ ಯಾರೂ ಗುರಿಮುಟ್ಟಿಲ್ಲ. ನಮ್ಮ ಭಾರತದಲ್ಲಿ ವ್ಯಕ್ತಿ ತನ್ನ ಅಭ್ಯುದಯ ಸಾಧನೆಯಲ್ಲಿ ತೊಡಗುವಾಗ ಸಮಾಜವನ್ನೂ ದೇಶವನ್ನೂ ಮರೆಯುತ್ತಾನೆ. ದೇಶ ಉಳಿಯಬೇಕಾದರೆ, ನಮ್ಮಲ್ಲಿ ಸಾಮರಸ ಚೇತನ ಮೂಡಬೇಕು. ನ್ಯಾಯದ ಬಗ್ಗೆ ನಿಷ್ಠುರವಾಗಿ ನುಡಿಯುವ ಗಂಡಸುತನವಿರಬೇಕು. ಸಮಾಜದ ಅಂಗಾಂಗದಲ್ಲಿ ಧರ್ಮ ಹುದುಗಿರಬೇಕು. ಆದರ್ಶದ ಹೆಗ್ಗಳಿಕೆಯಿಂದ ರೀತಿಯಲ್ಲಿ ಧರ್ಮ ಕಾರ್ಯಾಚರಣೆಯಲ್ಲಿ ಬರಬೇಕು ಎಂದರು.

ಶ್ರೀ ಸುರತ್ಕಲ್ಲು ವೆಂಕಟರಾಯಾಚಾರ್ಯರು ಮಾತನಾಡಿ ಭಕ್ತಿಯೇ ಸುಲಭ ಮಾರ್ಗವೆಂದು ಉಲ್ಲೇಖಿಸಿ ಧಾರ್ಮಿಕ ಸಭೆಗಳ ಪ್ರಯೋಜನವನ್ನು ವಿವರಿಸಿದರು.

ಅಧ್ಯಕ್ಷ ಶ್ರೀಶ್ರೀಯವರು ಭಾಷಣ ಮಾಡಿ, ಹಿಂದಿನ ಕಾಲದಲ್ಲಿ ಯತಿಗಳು ಧರ್ಮವನ್ನು ರಾಜದಂಡದ ಮೂಲಕ ಜನಕ್ಕೆ ಮುಟ್ಟಿಸುತಿದ್ದರು. ಆದರೆ, ಇಂದು ಇದು ಅಸಾಧ್ಯ ಎಂದು ಉದ್ಗರಿಸಿದರು.

ಪರ್ಯಾಯದ ದಿನವೇ 'ಸುಪ್ರಭಾತ'ವೆಂಬ ದೈನಂದಿನ ಕಾರ್ಯಕ್ರಮವೂ ಉದ್ಘಾಟಿತವಾಯಿತು. ಅಂದಿನಿಂದ ಪ್ರತಿದಿನವೂ ಪ್ರಭಾತದಲ್ಲಿ ಈ ಕಾರ್ಯಕ್ರಮವು ನಡೆಯ ತೊಡಗಿದೆ. ಶ್ರೀಮತಿ ಪಾಪಾ ಚೂಡಾಮಣಿ ಮತ್ತಿತರರ ಸಂಗೀತ ಕಾರ್ಯಕ್ರಮ ಮುಂಜಾವದಿಂದ ಸಂಜೆಯವರೆಗೆ ಕಾರ್ಯಕ್ರಮಗಳೊಂದಿಗೆ ಪರ್ಯಾಯದ ದಿನ ಭಕ್ತ ಜನರನ್ನು ಆಕರ್ಷಿಸಿತ್ತು.

ಶ್ರೀ ಕಾಣಿಯೂರು ಮಠದ ಶ್ರೀ ಶ್ರೀಯವರು ತುಂಬಿದ ಉತ್ಸಾಹಿಗಳು, ಸುಧಾರಣಾ ಪ್ರಿಯರು. ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ, ಧರ್ಮಪ್ರಚಾರಕ್ಕಾಗಿ, ಹಲವಾರು ಯೋಜನೆಗಳನ್ನು ಅವರು ಈಗಾಗಲೇ ಯೋಜಿಸಿದ್ದಾರೆ. ಅವನ್ನು ಕಾರ್ಯರೂಪಕ್ಕೂ ತರತೊಡಗಿದ್ದಾರೆ. ಶ್ರೀಕೃಷ್ಣ ಮಠದ ಆವರಣದಲ್ಲಿ ಹಣ್ಣುಕಾಯಿಯ ಅಂಗಡಿಯೊಂದು ಮಠದ ಕಡೆಯಿಂದಲೇ ತೆರೆಯಲಾಗಿದೆ. ಮಠದ ನೌಕರ ವರ್ಗದವರಿಗೆ ಸೂಕ್ತ ಕ್ರಮದಲ್ಲಿ ಆಧುನಿಕ ಪದ್ಧತಿಯಂತೆ ವೇತನ ನೀಡುವ ವ್ಯವಸ್ಥೆಯಾದಯೆಂದು ಕೇಳುತ್ತೇವೆ. ಶ್ರೀ ಮಠದಲ್ಲಿ ಪ್ರತಿನಿತ್ಯವೂ ಕೆಲವೊಂದು ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆಯೆಂದೂ ಇವುಗಳಲ್ಲಿ ಶ್ರೀ ಮಠದಲ್ಲಿ ಭೋಜನ ಸೌಲಭ್ಯ ಪಡೆಯುವವರು ಭಾಗವಹಿಸಬೇಕೆಂದೂ ಕೇಳಿ ಬರುತ್ತಿದೆ. ಈ ಮೊದಲ ಹಲವು ವರ್ಷಗಳಿಂದ ನಡೆದು ಬಂದಂತೆ ವಿದ್ಯಾರ್ಥಿಗಳಿಗೆ ಉಚಿತ ಭೋಜನ ವ್ಯವಸ್ಥೆಯನ್ನು ತಾನೂ ಮುಂದುವರಿಸುವುದಾಗಿ ಶ್ರೀ ಪರ್ಯಾಯ ಶ್ರೀ ಶ್ರೀಯವರು ಹೇಳಿದ್ದಾರೆ.

ಧರ್ಮ ಪ್ರಚಾರ, ವಿದ್ಯಾ ಪ್ರಚಾರ, ಭಕ್ತಿ ಮಾರ್ಗದ ಪ್ರಚಾರ—ಇವು ಇಂದು ನಮ್ಮ ವೈಚಾರಿಕ ಯುಗದ ಆವಶ್ಯಕತೆಗಳು. ಇವನ್ನು ಬಿಡದೆ ಸೂಕ್ತ ವಿಧಾನದಲ್ಲಿ ಆಧುನಿಕ ಮತ್ತು ಪ್ರಾಚೀನ ಸಂಪ್ರದಾಯಗಳ ಸಮನ್ವಯದೊಡನೆ ಪ್ರಚಲಿತ ಪರ್ಯಾಯಾವಧಿ ಯಶಗಳಿಸುವುದೆಂದು ಎಲ್ಲರೂ ಹಾರೈಸಿದ್ದಾರೆ.

ಮಣಿಪಾಲ ಆಸ್ಪತ್ರೆಯಲ್ಲಿ

ಶ್ರೀ ಆರೂರರ ಹೆಸರಿನಲ್ಲಿ ಬ್ಲಾಕ್

ಮಂಗಳೂರಿನ ದಿ ಶಂಕರ್ ವಿಟ್ಠಲ್ ಮೋಟಾರ್ ಕಂಪೆನಿ, ಲಿಮಿಟೆಡ್‌ನ ಡೈರೆಕ್ಟರರೂ ಕಂಪೆನಿಯ ಬಹುಮುಖದ ಅಭಿವೃದ್ಧಿ, ಬೆಳವಣಿಗೆಗಳಿಗೆ ಕಾರಣ ಪುರುಷರೂ ಆದವರು ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್ ಅವರು. ಶ್ರೀ ರಾಯರು ಕಂಪೆನಿಗೆ ಸಲ್ಲಿಸಿದ ಅತ್ಯಪೂರ್ವ ಸೇವೆಯ ನೆನಪಿಗಾಗಿ ಕಂಪೆನಿಯು ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ೪೦ ಹಾಸಿಗೆಗಳುಳ್ಳ ಒಂದು ಬ್ಲಾಕನ್ನು ೨೫ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿಕೊಟ್ಟರು. ಇದರ ಉದ್ಘಾಟನೆಯು ತಾ.೧೧ರಂದು ಆಹಾರ ಮಂತ್ರಿ ಶ್ರೀ ಬಿ.ಡಿ. ಜತ್ತಿಯವರಿಂದ ನಡೆಯಿತು.



ಶ್ರೀ ಎ. ಎಲ್. ಎನ್. ರಾವ್

ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನಿನ ಅಮೋಘ ಸಾಧನೆಗಳಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಒಂದು. ಈ ಕಾಲೇಜಿನ ಸ್ಥಾಪನೆಯಿಂದಾಗಿ ಬೃಹತ್ ಆಸ್ಪತ್ರೆಯೊಂದರ ಆವಶ್ಯಕತೆಯೂ ಹೆಚ್ಚಿ ಕಸ್ತೂರ್ಬಾ ಜನರಲ್ ಆಸ್ಪತ್ರೆಯು ತಲೆಯೆತ್ತಿತು.

೧೯೪೨ರಲ್ಲಿ ಸ್ಥಾಪಿತವಾದ ಎಕೆಡೆಮಿಯ ಪ್ರಾರಂಭದ ದಿನಗಳಲ್ಲಿ ಶ್ರೀ ಆರೂರರು ಅದರ ಉಪಾಧ್ಯಕ್ಷರಾಗಿದ್ದರು. ಖಾಸಗೀ ಕ್ಷೇತ್ರದ ಕೈವಾಡವನ್ನು ಸ್ವಾಗತಿಸುವ ಇವರು ಇದರಲ್ಲಿಯೇ ದುಡಿದರು. ಇಂದಿಗೂ ಎಕೆಡೆಮಿಯ ಆಧಾರ ಸ್ತಂಭಗಳಲ್ಲಿ ಇವರೂ ಒಬ್ಬರು.

"ಡಾ| ಪೈಯವರು ಖಾಸಗಿ ರಂಗದ ಅಚಲ ವಿಶ್ವಾಸಿಗಳು. ಸರಕಾರವು ಖಾಸಗಿ ರಂಗದ ಸಾಧನೆಯನ್ನು ಪ್ರೋತ್ಸಾಹಿಸಬೇಕೆನ್ನುವವರು. ಸರಕಾರವು ಈ ನಡುವೆ ಪ್ರವೇಶಿಸುತ್ತ ಬಂದರೆ, ರಂಗವು ಕೆಡುವುದು. ಸರಕಾರವು ತೀಕ್ಷ್ಣ ದೃಷ್ಟಿ ಹರಿಸುತ್ತ ಬಂದಲ್ಲಿ ಖಾಸಗಿ ರಂಗವು ಕುಂಠಿತವಾಗುವುದು. ಸ್ವಾತಂತ್ರ್ಯವು ತನ್ನ ಮಗುವಿಗೆ ತನ್ನ ವೆಚ್ಚದಲ್ಲಿ ಶಿಕ್ಷಣ ಕೊಡುವುದರಿಂದ ಹೆತ್ತವನನ್ನು ತಡೆಯಬಾರದು' ಎನ್ನುತ್ತಾರೆ ಶ್ರೀ ಆರೂರರು.

ಶ್ರೀಯುತರು ಇಂದು ಇಳಿವಯಸ್ಸಿನವರು; ಆದರೂ ಅವರ ಉದಾರತೆ, ಸೇವಾ ಭಾವನೆ, ಕರ್ತವ್ಯ ಬುದ್ಧಿಗಳು ಇಳಿದಿಲ್ಲ. ಎಳೆ ಹರೆಯದಲ್ಲಿಯೇ ಉಡುಪಿ ನಗರಸಭೆ, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡುಗಳ ಅಧ್ಯಕ್ಷರಾಗಿ ಜನತೆಯ ಕಷ್ಟ ಕಾರ್ಪಣ್ಯಗಳನ್ನು ಸರಿಯಾಗಿ ಕಂಡು ಕೊಂಡವರು ಇವರು. ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಅಜರಾಮರವಾಗಿ ಉಳಿಯುವ ಶ್ರೀ ಎ. ಎಲ್. ಎನ್. ರಾವ್ ಬ್ಲಾಕ್ ಶ್ರೀ ರಾಯರ ಸೇವಾಬುದ್ಧಿಯನ್ನೂ ಬ್ಲಾಕನ್ನು ಒದಗಿಸಿದ ಶಂಕರ ವಿಟ್ಠಲ್ ಕಂಪೆನಿಯ ಉದಾರತೆಯನ್ನೂ ಸದಾ ಪ್ರತಿನಿಧೀಕರಿಸುತ್ತದೆ.

ವಿಹಾರಕ್ಕಾಗಿ ವ್ಯವಹಾರಕ್ಕಾಗಿ ಉಡುಪಿಗೆ ಬಂದಾಗ
ಉಳಕೊಳ್ಳುವ ಚಿಂತೆ ಬೇಡ
ಏರ್ ಕಂಡಿಶನ್ಡ್ ಕೋಣೆಗಳಿಂದ ಸುಸಜ್ಜಿತವಾದ
ಅತ್ಯಾಧುನಿಕ ವಸತಿ ಗೃಹ
'ಕಲ್ಪನಾ ಲೋಜಿಂಗ್ ಹೌಸ್'



ನೀವೂ ನಿಮ್ಮ ಪರಿವಾರದವರೂ ಒಮ್ಮೆ ಬಂದರೆ ಎಂದೆಂದೂ
ನಮ್ಮ ಸಂದರ್ಶಕ ಮಿತ್ರರಾಗುವಿರಿ.
ಸತ್ಕಾರ ಸಮಾರಂಭ ವಿಹಾರ ಪ್ರವಾಸಿಗಳಿಗೆ, ಯಾತ್ರಾರ್ಥಿಗಳಿಗೆ
ಸಕಲ ವ್ಯವಸ್ಥೆಯ "ಟೂರಿಸ್ಟ್ ಹಾಲ್" ನಮ್ಮ ಇನ್ನೊಂದು ವೈಶಿಷ್ಟ್ಯ.
'ಕಲ್ಪನಾ'
ಊಟ, ಉಪಹಾರ ಮತ್ತು ವಸತಿಗೃಹ.
ಉಪೇಂದ್ರಬಾಗ್, ಉಡುಪಿ. ದ. ಕ.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ:-

ವರ್ಜಿನ್

ಕ್ರೂಡ್ ಆಯಿಲ್
ಪಂಪು ಸೆಟ್ಟುಗಳು...........

- 3. H. P.
- ಸುದೃಢವಾದ ರಚನೆ
- ಕ್ರೂಡ್ ಆಯಿಲಿನಿಂದಾಗಿ ಅತೀ ಕಡಿಮೆ ಖರ್ಚು
- ವರ್ಷ ಪರಿಯಂತ ಕಿರುಕುಳ ರಹಿತ ಸೇವೆ
- ಸುಲಭದಲ್ಲಿ ಒಯ್ಯಲು ಅನುಕೂಲವಾಗುವಂತೆ ನಾಲ್ಕು ಗಾಲಿಗಳ ಮೇಲೆ ಅಳವಡಿಸಲಾಗಿದೆ

++ ++ ++ ++ ++

ಧನ

ಇಲೆಕ್ಟ್ರಿಕ್ ಮೋಟಾರು ಮತ್ತು
ಪಂಪು ಸೆಟ್ಟುಗಳು

- ಸ್ಕ್ರೀನ್ ಪ್ರೊಟೆಕ್ಟೆಡ್ ಮೋಟಾರುಗಳು
- ಟೋಟಲಿ ಎನ್‌ಕ್ಲೋಸ್‌ಡ್ ಮೋಟಾರುಗಳು,
- ಇಬ್ಬಗೆಯ ವೇಗದ ಮೋಟಾರುಗಳು.

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿ

ಕಾರ್ಕಳ (ದ. ಕ.)

ರೋಗವರಿಯದೆ ಮದ್ದೇಕೆ? (ಒಂದನೇ ಪುಟದಿಂದ)

ನಮ್ಮ ರೈತರು ಇತರ ದೇಶಗಳ ರೈತರಿಗಿಂತ ಬುದ್ಧಿಶಕ್ತಿಯಲ್ಲಿ ಪರಿಶ್ರ ಪಟುತ್ವದಲ್ಲಿ ಕಡಿಮೆಯವರೇನೂ ಅಲ್ಲ. ಆದರೆ, ನಮ್ಮ ರೈತರಿಗೂ ವಿದೇ ರೈತರಿಗೂ ಅಜಗಜಾಂತರವಿದೆ. ಅವರ ಸಮಸ್ಯೆಗಳೂ ಭಿನ್ನ ಭಿನ್ನವಾಗಿ ನಾವಿಂದು ಮಾಡಬೇಕಾದ ಮೊತ್ತಮೊದಲ ಕೆಲಸವೆಂದರೆ, ರೈತನನ್ನು, ಭೂ ಯ ಮಗನನ್ನು ಗೌರವಿಸುವುದು; ಆತನ ಸಮಸ್ಯೆಗಳನ್ನು ಸಂಪೂರ್ಣವಾಗಿ ಅ ತುಕೊಂಡು ಅವನ್ನು ನಿಷ್ಠೆಯಿಂದ ಪರಿಹರಿಸಲು ಹಣಗುವುದು; ರೈತರಿಗೆ ಆರ್ಥಿ ನೆರವನ್ನು ಉದಾರವಾಗಿ ನೀಡಿ, ಅವರ ಕಾರ್ಯದಲ್ಲಿ ಉತ್ತೇಜನವನ್ನು ಕ ವುದು.

ಜೀವನಾವಶ್ಯಕವಾದ ಎಲ್ಲ ವಸ್ತುಗಳೂ ನ್ಯಾಯ ಬೆಲೆಗೆ ದೊರೆಯುವಂ ಮಾಡದೆ ಕೃಷಿ ಉತ್ಪನ್ನದ ಮೇಲೆ ಮಾತ್ರ ಬೆಲೆ ನಿಯಂತ್ರಣ ತರುವುದು ನ್ಯಾ ವಲ್ಲ. ಕೃಷಿಯೂ ಒಂದು ಉದ್ಯಮ, ಅದರಲ್ಲಿಯೂ ಆಸಕ್ತಿ—ವಿಶ್ವಾಸ ಬೆಳೆ ಬೇಕು. ಇದಕ್ಕಾಗಿ ಕೃಷಿಕನಿಗೂ ತನ್ನ ಉತ್ಪನ್ನಕ್ಕೆ ಯೋಗ್ಯ ಬೆಲೆ ದೊರೆಯುವಂತಾಗ ಬೇಕು.

ದೇಶದ ಆಹಾರ ಉತ್ಪಾದನಾ ಸಾಮರ್ಥ್ಯ ಎಲ್ಲ ರಾಜ್ಯಗಳಲ್ಲೂ ಸರಿಯಾ ಹಂಚಿರುವುದಿಲ್ಲ. ಮಿಗಿತೆಯ ರಾಜ್ಯಗಳು ಕೊರತೆಯ ರಾಜ್ಯಗಳಿಗೆ ಆಹಾರವನ್ನ ಪೂರಯ್ಸುವುದನ್ನು ತಮ್ಮ ಧರ್ಮವೆಂದು ತಿಳಿಯ ಬೇಕು. ಕೃಷಿಯ ಮತ ಕೃಷ್ಯುತ್ಪನ್ನಗಳ ಬಗ್ಗೆ ಕಾಗದದ ಮೇಲಿನ ಯಾವ ಯೋಜನೆಯೂ ಪ್ರಯೋಜ ವಿಲ್ಲ. ವಿಶಾಲ ದೇಶದಲ್ಲಿ ಯಾವುದೇ ಒಂದು ಯೋಜನೆಯೂ ಅನುಕೂಲ ಪ ಕಾರಿಯಾಗುವುದಿಲ್ಲ. ಕೃಷಿಕ್ಷೇತ್ರದಲ್ಲಿ ಕೃಷಿಕನ ಮೂಲಭೂತ ಸಮಸ್ಯೆಗ ಏನು ಎಂಬುದನ್ನು ಅರಿತುಕೊಂಡು ಅವುಗಳ ನಿವಾರಣೆಗಾಗಿ ಸೊಂಟಕಟ್ಟ ಬೇಕ

ನಾನು ಫುಡ್ ಕಾರ್ಪೊರೇಶನ್ನಿನ ಅಧ್ಯಕ್ಷನಾಗಿ ಕೃಷಿ ಸಮಸ್ಯೆಯ ಮೂಲ ಕುರಿತು ಮಾತಾಡಿದ್ದೇನೆ. ಈ ವಿಷಯದಲ್ಲಿ ಜನಜಾಗೃತಿಯನ್ನುಂಟು ಮಾ ಜನರಿಗೆ ಆಹಾರ ವಿಷಯವು ಬಹಳ ಮುಖ್ಯವಾಗಿದೆಯೆಂದು ಮಂದಟ್ಟು ಮಾ ದ್ದೇನೆ. ನಮ್ಮ ದೇಶದಲ್ಲಿ ದೇವರು ಇಂತಹ ಭೀಕರ ಆಹಾರ ಪರಿಸ್ಥಿತಿಯನ ನಿರ್ಮಿಸಿ ನಮ್ಮ ತಿಳಿವಿನ ಕಣ್ಣು ತೆರೆಸಿದ್ದಾನೆ. ಜನತೆ ಇನ್ನಾದರೂ ಮು ಬಂದು ಆಹಾರ ಸ್ವಾವಲಂಬನೆಯನ್ನು ಸಾಧಿಸಲಿ.

(ಶ್ರೀ ಟಿ. ಎ. ಪೈ ಅವರು ಉಡುಪಿಯಲ್ಲಿ ತಾ. ೯ರಂದು ಸತ್ಕಾರ ಸಮಾರಂಭದ ಮಾಡಿದ ಭಾಷಣದ ಆಧಾರದಿಂದ)

ಪ್ರಜಾರಾಜ್ಯ ದಿನದ ಶುಭಾಶಯಗಳು !

ಶ್ರೇಷ್ಠತೆಯ ಹೆಗ್ಗುರುತು—

ಉಡುಪಿ ಶ್ರೀ ಕೃಷ್ಣ ವಿಲಾಸ

ಕಾರವಾರ (ಉತ್ತರ ಕನ್ನಡ)

ವಿನಯಶೀಲ ಉಪಚಾರ
ಶುಚಿ_ರುಚಿ ಉಪಾಹಾರ

ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ.

ಕೆ. ಸಂಜೀವ ರಾವ್
ಪ್ರೊಪ್ರೈಟರ್.

ಪ್ರಥಮ ಬಹುಮಾನ ರೂ. 1,15,000 ಗೆಲ್ಲಿರಿ!!

ಇಂದೇ ನಿಮ್ಮ ಟಿಕೆಟ್ಟನ್ನು ಪಡೆಯಿರಿ!

	ಒಂದು ಟಿಕೆಟ್ಟಿಗೆ	ಡ್ರಾಯಿಂಗ್
1) ಬಾರಾಬತಿ ರ್‍ಯಾಪಲ್, ಕಟಕ್—	ರೂ. 1=00	13—2—66
2) ಕೆ. ಸಿ. ಚಾರಿಟೀಸ್ ಫಂಡ್, ಬರ್ದ್ವಾಂಪುರ—	ರೂ. 1=00	30—4—66
3) ಡಿ. ಬಿ. ಚಾರಿಟೀಸ್ ಫಂಡ್, ಕಲ್ಕತ್ತ—	ರೂ. 2=00	29—4—66

ಟಿಕೆಟ್ಟು ಬೇಕಾದವರು ಈ ಕೆಳಗಿನವರಿಗೆ ಹಣವನ್ನು M. O. ಮಾಡಿರಿ.
(ಪೋಸ್ಟೇಜ್ 0=15 ಸಹಿತ)

ಸಿ. ರಾಜಶೇಖರಯ್ಯ,
ಅಧಿಕೃತ ಟಿಕೆಟ್ ವಿತರಣೆಗಾರರು,
ಶಿವಬಾಗ್ ಕಾಂಪೌಂಡ್, ಶಿರಿಬೀಡು, ಉಡುಪಿ (ದ. ಕ.)

ಪ್ರಜಾರಾಜ್ಯ ದಿನದ ಶುಭಾಶಯಗಳು!

ರೋಯಲ್ ಮಹಾಲ್

ಉಡುಪಿ

ಮೇಲ್ದರಗತಿಯ ಪ್ರಪ್ರಥಮ
ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್,
ವ್ಯಾಪಾರಕರು

ROYAL MAHAL

Up-to-date Boarding & Lodging

UDIPI, S. K.

ಪ್ರಜಾಪ್ರಭುತ್ವದಿನದ ಶುಭಾಶಯಗಳು!

ಸೌಜನ್ಯ, ಸೌಲಭ್ಯ ಹಾಗೂ ಭದ್ರತೆಗಳ ಹೆಗ್ಗುರುತು—

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್,

(ಶೆಡ್ಯೂಲ್ಡ್ ಬ್ಯಾಂಕ್)



ವಿವಿಧ ಬ್ಯಾಂಕಿಂಗ್ ಸೌಕರ್ಯಗಳು:

ಕರೆ, ಚಿಕ್ಕ ವಾಯಿದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು.

ಬಡ್ಡಿ ಸೇಕಡಾ **8**ರ ವರೆಗೆ

ಚಲಾವಣಾ ಭಂಡವಾಳ ರೂ. **2.25** ಕೋಟಿಗೂ ಮಿಕ್ಕಿದೆ.

ಪ್ರಗತಿ ಪಥದಲ್ಲಿ ಮುಂದಡಿಯಿಡುತ್ತಿರುವ ನಾಯಕ್ ಬ್ಯಾಂಕ್ ಪ್ರತಿಯೊಬ್ಬರಿಗೂ

ಏಕಪ್ರಕಾರದ ಸೌಜನ್ಯದ ಸೇವೆ ಸಲ್ಲಿಸಲು ಸಿದ್ಧವಿದೆ.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಶಾಖಾ ಕಛೇರಿಯನ್ನು ಸಂದರ್ಶಿಸಿರಿ.

ನಮ್ಮ ಶಾಖಾ ಸಮುದಾಯ

ಮೈಸೂರು ರಾಜ್ಯದಲ್ಲಿ— ಉಡುಪಿ ಟೌನ್, ಮಂಗಳೂರು—ಬಂದರ್, ಮಂಗಳೂರು—ಹಂಪನಕಟ್ಟೆ, ಬೆಂಗಳೂರು, ಶಿವಮೊಗ್ಗಾ, ಬೇಲೂರು, ತುಮಕೂರು, ಕಟಪಾಡಿ, ಸುರತ್ಕಲ್, ಕುಣಿಗಲ್, ಕಿನ್ನಿಗೋಳಿ, ಶಂಕರಪುರ, ಹಳೆಯಂಗಡಿ, ಮುದರಂಗಡಿ, ಬೆಳ್ಳೆ, ಭದ್ರಾವತಿ, ನಾಗಮಂಗಲ, ಚಿಕ್ಕನಾಯಕನ ಹಳ್ಳಿ.

ಕೇರಳ ರಾಜ್ಯದಲ್ಲಿ— ಕಾಂಞಂಗಾಡ್, ನೀಲೇಶ್ವರ, ಕಾಸರಗೋಡ್.

THE PANGAL NAYAK BANK LTD.

(SCHEDULED BANK)

ESTD: 1920

Regd. Office: U D I P I, S. Kanara.

REGD. No. B. G. 176
LICENCE No. 31
Licensed to Post without Prepayment

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!

ಡೈರೆಕ್ಟರರ ಮಂಡಳಿ:—

1. ಶ್ರೀ. ಯಂ. ಸುಂದರ್‌ರಾಮ ಶೆಟ್ಟಿ, ಬೆಂಗಳೂರು (ಚೆಯರ್‌ಮೇನ್).
2. „ ಬಿ. ಮಂಜಯ್ಯ ಹೆಗ್ಡೆ, ಮಂಗಳೂರು.
3. „ ಕೆ. ಸುಂದರರಾಮ ಶೆಟ್ಟಿ, ಮಂಗಳೂರು.
4. „ ಬಿ. ರಾಜೀವ ಶೆಟ್ಟಿ, ಮಂಗಳೂರು.
5. „ ಕೆ. ಯಲ್. ಭಂಡಾರಿ, ಮೈಸೂರು.
6. „ ಕೆ. ಪಿ. ಭವಾನಿಶಂಕರ ಶೆಟ್ಟಿ, ಮಂಗಳೂರು.
7. ಶ್ರೀ ಡಿ. ರತ್ನವರ್ಮ ಹೆಗ್ಗಡೆ, ಧರ್ಮಸ್ಥಳ.
8. ಡಾ. ಕೆ. ವಿಠಲ ಶೆಟ್ಟಿ, ಕಾಪು.
9. ಡಾ. ಕೆ. ಬಾಲಪ್ಪ ಶೆಟ್ಟಿ, ಮಂಗಳೂರು.
10. ಶ್ರೀ ಬಿ. ಟಿ. ರವೀಂದ್ರನಾಥ ಪೂಂಜ, ಬೆಂಗಳೂರು.
11. „ ಬಿ. ಜಿ. ವೀರಣ್ಣ, ಬೆಂಗಳೂರು.
12. „ ಕೆ. ಸಿ. ಪುಟ್ಟಯ್ಯ, ದೊಡ್ಡಬಳ್ಳಾಪುರ.
13. „ ಯಚ್. ಟಿ. ಭಂಡಾರಿ, ಮುಂಬಾಯಿ.

ಆಡಿಟರ್—
ಶ್ರೀ ಪಿ. ಯಂ. ಹೆಗ್ಡೆ.

ಸೆಕ್ರೆಟರಿ—
ಶ್ರೀ ಪಿ. ಜಯರಾಮ ಶೆಟ್ಟಿ.

ಡೆಪ್ಯೂಟಿ ಸೆಕ್ರೆಟರಿ—
ಶ್ರೀ ಯಸ್. ವಿಠಲ ಶೆಟ್ಟಿ.

ನಮ್ಮ ಶಾಖೆಗಳು:—

ಮೈಸೂರು ರಾಜ್ಯದಲ್ಲಿ— ಬೆಂಗಳೂರು—ಕೆ. ಜಿ. ರೋಡ್, ಮಲ್ಲೇಶ್ವರಂ ಮತ್ತು ಅಲ್ಸೂರ್, ಮೈಸೂರು ಸಿಟಿ, ಚಾಮರಾಜನಗರ, ನಂಜನಗೂಡು, ಕೃಷ್ಣರಾಜಪೇಟೆ, ಕೊಳ್ಳೇಗಾಲ್, ಕೋಲಾರ, ದೊಡ್ಡಬಳ್ಳಾಪುರ, ನೆಲಮಂಗಲ, ಮದ್ದೂರ್, ಮಾಗಡಿ, ಮಲವಳ್ಳಿ, ಹುಬ್ಬಳ್ಳಿ, ಧಾರವಾಡ, ಗದಗ, ಕನಕಪುರ, ರಾಮನಗರಂ, ಚೆನ್ನಪಟ್ಣ, ಮೂಡಿಗೆರೆ, ಗೋಣಿಕೊಪ್ಪಲ್, ಮಡಿಕೇರಿ, ಪುತ್ತೂರು, ಕಾರ್ಕಳ, ಮಂಗಳೂರು-3— ಮಂಗಳೂರು ಸಿಟಿ, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಭಟ್ಕಳ ಮತ್ತು ಪಾಂಡವಪುರ.

ಕೇರಳ ರಾಜ್ಯದಲ್ಲಿ— ಕಾಸರಗೋಡು, ಕಾಂಞಂಗಾಡು, ತಾಳಿಪರಂಬ, ಕುತ್ತುಪರಂಬ, ತಲಿಚೇರಿ, ಕಲ್ಪೈ (ನ್ಯೂ ಮಾಹೆ), ಕಲ್ಲಿಕೋಟೆ-ಚಾಲಾಪುರಂ, ತೀರೂರು, ಮಂಜೇರಿ, ಮನ್ನಾರ್‌ಘಾಟ್, ಪೊನ್ನಾನಿ, ಪೆರಿಂತಲಮನ್ನ, ಕಲ್ಪೆಟ್ಟಾ, ಕೊಟ್ಟಾಕಲ್, ತ್ರಿಚೂರ್, ಎರ್ನಾಕುಳಂ, ಕೊಚ್ಚಿನ್-2 ಮತ್ತು ತ್ರಿಪುಣಿತ್ತುರೈ.

ಮಹಾರಾಷ್ಟ್ರ ರಾಜ್ಯದಲ್ಲಿ— ಪಾರ್ಸಿ ಬಜಾರ್ ಸ್ಟ್ರೀಟ್, ಮುಂಬಾಯಿ-1.

ಮದ್ರಾಸ್ ರಾಜ್ಯದಲ್ಲಿ— ಕೂನೂರು ಮತ್ತು ಕೋಟಗಿರಿ (ನೀಲಗಿರಿ ಜಿಲ್ಲೆ).

ಸದ್ಯದಲ್ಲಿಯೇ ನಮ್ಮ ಹೊಸ ಶಾಖೆಗಳನ್ನು ಮದ್ರಾಸು, ಕೊಯಮುತ್ತೂರ್, ಗಾಂದೇವಿ (ಮುಂಬಾಯಿ) ಇತ್ಯಾದಿ ಕಡೆಗಳಲ್ಲಿ ತೆರೆಯಲಿದ್ದೇವೆ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು— "ವಿಜಯಾ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3.

ಸ್ಥಾಪನೆ:- 1931
ಫೋನ್ ನಂಬ್ರ— 4640

Edited, Printed & Published by K. H. Shetty at the Navayuga Press, Udipi, S. India.

ನವಯುಗ

3—2—1966

lephone 226

NAVAYUGA

೧೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ತಾ. 18-1-66ರ ಸಂಚಿಕೆಯಿಂದ ಮುಂದುವರಿದುದು)

ಈ ವೊದಲು –

ಅಲವಂತಿಯ ರಾಮಚಂದ್ರ ರೈತಮುರುಗನ ಮನನೋಯಿಸಿ ಮದ್ರಾಸದಲ್ಲಿ ಓದಿದರೂ ಬಿ. ಎ. ಆಗಲಿಲ್ಲ. ಜಾನಕಿಯ ಪತಿಯಾಗಿ ಊರಿಗೆ ಮರಳಿದ. ಅಲ್ಲಿ ಸುಖದಿಂದ ಬಾಳುವ ಕನಸು ಕಂಡ. ಆತನ ಜಮೀನು ನೆರೆಯಲ್ಲಿ ಮುಳುಗಿ ಹೋಯಿತು. ಅತ್ತ ಮೀನಾಕ್ಷಿಯು ಅಗ್ರಹ ಬೆಳೆದಾಗ, ದ್ರಾರಿಗಾಣದ ರಾಮು ಕಡಪದ ಕಲೆಕ್ಟರ್ ಕೆಡ್ಲೆಲ್ಲರ ಬಳಿ ಶಿಬಿರ ಗುಮಾಸ್ತನಾದ. ದೊರೆಯುತಿದ್ದ ಅಲ್ಪ ವೇತನ, ವಚ್ಚದಲ್ಲಿ ಅತ್ತ ತೋರುತಿದ್ದ ಉದಾರತನ! ಜತೆಗೆ ಲಂಚಕ್ಕೆ ಕೈಯೊಡ್ಡ ಬೇಕೆಂಬ ಉಪದೇಶ! ಕಲೆಕ್ಟರರ ದುರ್ವರ್ತನೆಯಿಂದ ರಾಜಿನಾಮೆಗೆ ಪೂರ್ವಭಾವಿಯಾಗಿ ರಜೆ ಪಡೆದು ಊರಿಗೆ ಮರಳಿದ; ತನ್ನ ಆಸ್ತಿಪಾಸ್ತಿಗಳೆಲ್ಲವನ್ನೂ ಮಾರಿ ಬಿಡುವ ತಯಾರಿಗೆ ತೊಡಗಿದ.

ಮುಂದೆ—

ಆ ರೀತಿ ರಾಮು ಮುರುಗನೊಂದಿಗೆ ಮಾತನಾಡಿಕೊಂಡು ಇದ್ದಾಗ, ಅವನ ವ್ಯವಹಾರದ ಕುರಿತು, ಹಳ್ಳಿಯು ಆಲಸಿಯಾಗಿರಲಿಲ್ಲ. ಸ್ನಾನ-ಘಟ್ಟದಲ್ಲಿ ಬೆಳಗ್ಗೆ ಅಲವಂತಿಯ ಸ್ತ್ರೀಯರ ಬಾಯಿಗೆ ಪುರುಸೊತ್ತೇ ಇದ್ದಿಲ್ಲ.

ಬೇಸಿಗೆಯಲ್ಲಿ ಸೌಮ್ಯ ಪ್ರವಾಹವು ಸ್ಫಟಿಕದಂತೆ ಸ್ವಚ್ಛವಾಗಿಯೂ, ತಂಪಾಗಿಯೂ ಚೇತನದಾಯಕವೂ ಆಗಿದ್ದುಕೊಂಡು, ಬೇರಾವ ವಸ್ತುವು ಮಾಡದ ಹಾಗೆ, ನಾಲಗೆಗೆ ಸ್ವೇಚ್ಛೆಯನ್ನು ಕೊಡುತ್ತಿತ್ತು.

ದಕ್ಷಿಣ ಭಾರತದ ನದಿಗಳಲ್ಲಿ ಹೆಂಗಸರು ಅಧಿಕಾರ ನಡೆಸುತ್ತಾರೆ. ಮನೆಯಲ್ಲಿ ಹಾಗೂ ಗದ್ದೆಯಲ್ಲಿ ಗಂಡಸರು ಶಕ್ತಿಶಾಲಿಗಳಾಗಿದ್ದರೂ, ಪವಿತ್ರ ನದಿಯಲ್ಲಿ ಎಲ್ಲಿಯೂ ಇಲ್ಲ. ಇನ್ನೊಂದು ಸ್ಥಳದಲ್ಲಿ ಗಂಡಸರು ಶಾಂತವಾಗಿ ಸ್ನಾನಮಾಡಿ, ವೇಗದ ವೈಖರಿಗಳನ್ನು ಹೆಚ್ಚು ಕಡಿಮೆ ಮಾಡುತ್ತ ಮಂತ್ರಗಳನ್ನುಚ್ಚರಿಸಿ, ಕೆಲಸ ಮಾಡಲಿಕ್ಕಾಗಿ ಮನೆಯತ್ತ ಧಾವಿಸುತ್ತಿದ್ದರು. ಆದರೆ ಸ್ತ್ರೀಯರು ತಮ್ಮ ಆ ಪವಿತ್ರ ಸಮಯವನ್ನು ಪಾವನ ನದಿಯ ಜಲದಲ್ಲಿ ಕ್ರೀಡೆಯಾಡುತ್ತ, ಮಾತಿನಾಟವನ್ನಾಡುತ್ತ, ಸಂತೋಷದಿಂದ ಕಳೆಯುತ್ತಿದ್ದರು. ಆಗಿನ ಅವರ ಅಂದ ಹಾಗೂ ಮೋಹಕತೆಯನ್ನು ಕಾಗದದ ಮೇಲೆ ವರ್ಣಿಸಿದಲ್ಲಿ ಅದು ಅರ್ಥ ಸೂಚಿಸಲಾರದು.

"ನೀನು ಇತ್ತೀಚಿಗಿನ ಸುದ್ದಿಯನ್ನು ಕೇಳಿದ್ದಿಯೇನೇ?" ಎಂದೆಂದಿಗೂ ತರುಣ ಹೃದಯವಿದ್ದ ರಸಿಕ ಮಧ್ಯ ವಯಸ್ಸಿನ ಮಹಿಳೆಯ ಕಂಠ ಸ್ವರವು ಕೇಳಿ ಬಂತು. ಅವಳು ಸೌಕರ್ಯಕ್ಕೆ ಸರಿಯಾಗಿ ಮತ್ತು ಜಾಗ್ರತೆಯಿಂದ ಸ್ನಾನಕ್ಕೆ ಬಟ್ಟೆಯನ್ನು ಉಟ್ಟುಕೊಂಡಿದ್ದಳು. ಅವಳು ಕುತ್ತಿಗೆ ಮುಳುಗುವವರೆಗಿನ ನೀರಿನಲ್ಲಿ ಸ್ವೇಚ್ಛೆಯಿಂದ ಮುಳುಗು ಹಾಕುತ್ತಿದ್ದಳು. ಹರಿಯುತ್ತಿರುವ ನೀರಿನಲ್ಲಿ ಆಕೆಯ ಹೆಚ್ಚಿನ ವಿವಿಧ ವರ್ಣದ ಸೀರೆಯು ತೇಲುಗುರುತುಗಳನ್ನು ಉಂಟುಮಾಡುತ್ತಿತ್ತು. "ರಾಮು ತನ್ನ ಮನೆಯನ್ನು ಕೂಡಾ ತನ್ನ ಪೆರಿಯ ಸ್ವಾಮಿಗೆ ಮಾರಿದನಂತೆ."

"ಅವನ ಗದ್ದೆಯ ವಿಷಯವೇನಾಯಿತು?" ಇನ್ನೊಂದು ಸ್ವರ ಕೇಳಿ ಬಂತು. "ನನ್ನವರು ಅವನ ನೇಜಿಕಳವನ್ನು ಕೊಂಡುಕೊಳ್ಳಲು ಪರ್ಷ ವರ್ಷಗಳಿಂದ ಕಾಯುತ್ತಿದ್ದರು. ಹಲವಾರು ವರ್ಷಗಳಿಂದ ರಾಮುವಿನ ಮೇಲಾಗುತ್ತಿದ್ದ ಘಟನೆಗಳ ಗತಿಯನ್ನವರು, ಜಾಗ್ರತೆಯಿಂದ ವೀಕ್ಷಿಸಿಕೊಂಡು ಬಂದಿದ್ದಾರೆ."

"ಅವನೆಲ್ಲವನ್ನೂ ಪೆರಿಯಸ್ವಾಮಿ ಅಯ್ಯರ್‌ರಿಗೆ ಮಾರಿ ಬಿಟ್ಟಿದ್ದಾನೆ." ಅವಳು ಸಂಕ್ಷೇಪವಾಗಿ ಉತ್ತರ ಕೊಟ್ಟಳು.

"ಎಂತಹ ದುಃಖಕರ ಸಂಗತಿ! ನನ್ನವರು ಈಗ ಮನೆಯಲ್ಲೂ ಇಲ್ಲ. ಇದು ಬಹಳ ತಡವೇನು?"

"ಬಹಳ ತಡವಾಯಿತು. ಆದರಲ್ಲೂ ಕೆಟ್ಟ ಸುದ್ದಿಯೆಂದರೆ, ಚೆಂದದ ತೋಟವನ್ನು ಮುರುಗನಿಗೆ ಮಾರುವದಿದೆ. ಮುರುಗನು ಬಹಳ ಅದೃಷ್ಟಶಾಲಿ. ಅವನ ತಲೆ ಮಾತ್ರ ತಿರುಗಿ ಹೋದೀತು."

"ಪಳ್ಳಿ ಮತ್ತು ಪಡ್ಯಾಚಿಗಳಿಗೆ ಅದೃಷ್ಟದ ದಿನಗಳು ಮತ್ತು ಬ್ರಾಹ್ಮಣರಿಗೆ ಕೆಟ್ಟ ದಿನಗಳು ಬರುತ್ತಿವೆ. ನಿಜವಾಗಿ ಅದು ಮುರುಗನ ತಲೆಯನ್ನು ತಿರುಗಿಸಿ, ಇನ್ನೂ ಹೆಚ್ಚು ಸೊಕ್ಕನ್ನುಂಟು ಮಾಡೀತು. ಈಗಾಗಲೇ ಅನೇಕರು ಅವನ ಮೇಲೆ ಹೊಟ್ಟೆಕಿಚ್ಚುಪಡುತ್ತಿದ್ದಾರೆ. ಇನ್ನು ಮೇಲೆ ಅವನು ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಾನೆ. ಪಡ್ಯಾಚಿ- ಅಥವಾ ಪಳ್ಳಿಯು ಭೂಮಿಯನ್ನು ತನ್ನದನ್ನಾಗಿ ಮಾಡಿಕೊಳ್ಳಲು ಯಾಕೆ ಇಚ್ಛಿಸುತ್ತಾರೋ ಕಾಣೆ."

'ರಾಮುವಿನ ವ್ಯವಹಾರವನ್ನೆಲ್ಲ ಸೀತೆಯೇ ಇತ್ತ ಬರುತ್ತ ಇದ್ದಾಳೆ. ಳನ್ನೇ ಕೇಳೋಣ.' ಸತತ ಎಚ್ಚರಿಕೆ ದ ಇದ್ದು ಸೀತೆಯನ್ನು ಹಿಂಬಾಲಿ ದ್ದ ಮಧ್ಯ ವಯಸ್ಸಿನ ವನಿತೆ ಹೇಳ ನಿಜವಾಗಿ ಅವಳೂ ರಾಮುವನ್ನು ಸುತ್ತಿದ್ದಳು. ಅವಳು ಗುಪ್ತವಾಗಿ ಮುವಿನ ಪತ್ರಗಳನ್ನು ಬರೆಯುತ್ತಿ ಕೆಂದೂ, ರಾಮುವೂ ಅವಳಿಗೆ ಬರೆ ತ್ತಿದ್ದಾನೆಂದು ಜನರು ಆಡಿಕೊಳ್ ದ್ದಾರೆ.

ವಿನೋದಮಯವಾಗಿ ಈಜಾಡು ಅಂಗವಿನ್ಯಾಸದಿಂದ, ನೀರನ್ನು ಸೀ ಹೊರಕ್ಕೆ ಬಂದು, ಚತುರ ಅಭಿನಯ ದ, ವಿರಾಮದಿಂದ ಒದ್ದೆ ಹಾಗೂ ಜ ತ್ತಿದ್ದ ವಸ್ತ್ರವನ್ನು ಸಂಭಾಳಿಸಿಕೊಳ್ ದೋಷಾರೋಪಣೆಯನ್ನು ಆಕೆ ಮು ವರಿಸಿದಳು.

"ಯಾಕೆ, ಮೂರು ವಸ್ತುಗಳ ಬೀಳ್ಕೊಡುವ ದಿನದಂದು, ಅವರು ಸ್ಥಾನದಲ್ಲಿ ಕಲೆತು, ಹತ್ತಿರ ಹತ್ತಿ ಇದ್ದುಕೊಂಡು ಮಾತನಾಡಿಕೊಂಡ ರೆಂದು ವದಂತಿ ಹಬ್ಬಿದೆ. ದೇವಸ್ಥಾ ಎಣ್ಣೆ ದೀಪಗಳನ್ನು ಹಚ್ಚುವ ಶೂದ್ರ ಡುಗನು ಅವರು ಮಾತನಾಡಿಕೊಂಡ ದನ್ನು ನೋಡಿದ್ದಾನೆಂದು ಆಣೆ ಹೇಳುತ್ತಾನೆ"

"ಸದಾಚಾರಿಣಿ, ಉತ್ತಮಳು ಹಾ ದಯಾಮಯಿ ಬಡ ಸೀತೆಯ ಮೇಲೆ ನೇತಕ್ಕಾಗಿ ಯಾವಾಗಲೂ ಕತ್ತಿ ಯುತ್ತಿರುವದು?" ಅಂದಿನ ಗುಂಪಿ ಚಿಕ್ಕವಳದ್ದಾಕೆ ಪ್ರಶ್ನೆ ಹಾಕಿದಳು. ಸತಾಗಿ ಮದುವೆಯಾಗಿ ಅಲ್ಲಿಗೆ ಬಂದ ವರೆಲ್ಲರೂ ಮಧ್ಯ ವಯಸ್ಸಿನ ವನಿತೆಗೆ ದರುತ್ತಿದ್ದುದರಿಂದ ಯಾರೂ ತುಟಿ ಬಿ ಲ್ಲಿ.

"ಆದರೆ ಇದೆಲ್ಲಾ ಎರಡು ಶುದ್ಧ ಗೂ ನಿರಪರಾಧಿ ಜೀವಿಗಳ ವಿರುದ್ಧ ಬ್ಬುತ್ತಿರುವ ಚಾಡಿ. ರಾಮು ಮತ್ತು ಸಿ ಯರ ಶೀಲಗಳಲ್ಲಿ ಸಂಶಯವೇ ಇಲ್ಲ. ತೆಯ ಕುರಿತು ಈ ಏಳು ವರ್ಷಗಳಲ್ಲಿ ದೇ ಒಂದು ಕಥೆಯೂ ಹುಟ್ಟಿರುವದಿ "ನದಿ ದಡದಲ್ಲಿ ಅತಿ ಚಾಡಿಗೆ ಪ್ರೋ ಹ ಕೊಡದಿರುವ "ನದಿ-ಮಾತು"ಗಳಿ ಒಂದು ಮಿತಿ ಇದೆ ಎಂದು ಭಾವಿಸಿಕೊ ಡಿದ್ದಾರೆ. ವಿರುದ್ಧವಾಗಿ ಮಾತನಾಡಿದ

"ಏನಿದ್ದರೂ ಅವಳ ಅದೃಷ್ಟ ಈಗ ನ್ನಾಗಿದೆ. ಅವಳಿಗೊಬ್ಬ ಗಂಡು ಮಗ ದ್ದಾನೆ. ಅದುದರಿಂದ ಗಂಡನು ಮ

(ಹದಿನೈದನೇ ಪುಟ ನೋಡಿರಿ)

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6¼
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.



Telephone 226.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೧	೩—೨—೧೯೬೬	No. 21

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕ್ಯಾಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ನೇತಾಜಿ ಸುಭಾಷ್ಚಂದ್ರ ಭೋಸ್

ತಾ. 23—1—66ರಂದು ಇವರ 69ನೇ ಜನ್ಮ ದಿನೋತ್ಸವವು ದೇಶದ ನಾನಾ ಕಡೆಗಳಲ್ಲಿ ಆಚರಿಸಲ್ಪಟ್ಟಿತು.

ಹೊಸ ಪ್ರಧಾನಿ

ಪಂಡಿತ ಜವಾಹರಲಾಲರ ನಂತರ ಭಾರತದಲ್ಲಿ ನಾಯಕತ್ವದ ಬಗ್ಗೆ ಹೊಡೆದಾಟ ಪ್ರಾರಂಭವಾಗುವುದೆಂದು ನಂಬಿದ್ದ ಕೆಲವರಿಗೆ ಲಾಲ ಬಹದೂರರ ಅವಿರೋಧ ಆಯ್ಕೆಯು ವಿಸ್ಮಯವನ್ನುಂಟು ಮಾಡಿತ್ತು. ಅಧಿಕಾರಕ್ಕೇರುವಾಗ ಶಾಸ್ತ್ರಿಯವರ ಆಡಳಿತೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿದವರಿದ್ದರೂ, ತನ್ನ ದೃಢ ನಿಲುಮೆಯಿಂದ, ತ್ಯಾಗ ಭಾವನೆ, ಸೇವಾ ವೃತ್ತಿ ಮತ್ತು ಶಾಂತಿ ನಿಷ್ಠೆಯಿಂದ ಅವರು ಯಶಸ್ವೀ ಧುರೀಣರೆಂದು ಹೆಸರು ಪಡೆದರಲ್ಲದೆ, ಅತ್ಯಲ್ಪ ಕಾಲದಲ್ಲಿಯೇ ಹಿರಿಯ ಜಾಗತಿಕ ಮುತ್ಸದ್ಧಿಯೆನಿಸಿದರು-ಭಾರತ ಮಾತೆ ಧನ್ಯೆ! ಶಾಸ್ತ್ರಿಯವರ ನಿಲುಮೆಯ ದೃಢತೆಯು ಪಾಕ್-ಭಾರತ ಹೋರಾಟದ ವೇಳೆ ಮತ್ತದರ ಬಳಿಕ ನಡೆದ ಶಾಂತಿ ಸಂಧಾನದ ಮಾತುಕತೆಗಳ ಕಾಲ ಮತ್ತಷ್ಟು ಬೆಳಕಿಗೆ ಬಂತು. ದುರ್ದೈವದಿಂದ ತಾಷ್ಕೆಂಟಿನಲ್ಲಿಯೇ ಅವರು ಪರಂಧಾಮವನ್ನೈದಿದಾಗ, ಅವರ ಹಿರಿಮೆಯು ಮೇರುವಿನ ಮೇಲೇರಿತು-ಭಾರತ, ಶಾಂತಿಪ್ರಿಯ ಜಗತ್ತು ಬಡವಾಯಿತು. ಅತ್ಯಲ್ಪ ಕಾಲದಲ್ಲಿ, ದೇಶವನ್ನು ಕಾಡತೊಡಗಿದ ನೂರಾರು ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳನ್ನು ಎಲ್ಲರ ಸಹಕಾರದಿಂದ ಎಂಟೆದೆಯಿಂದ ಎದುರಿಸಿದ ಶಾಸ್ತ್ರಿ ಅಮರರಾದರು—ಪಾರಿಜಾತದ ಹೂವಾದರು. ಅವರ ಪವಿತ್ರಾತ್ಮ ನಮ್ಮಿಂದ ದೂರವಾಯಿತು. ಆದರೆ, ಆ ಆತ್ಮದ ಪ್ರೇರಣೆ ಮಾತ್ರ ಎಂದೆಂದಿಗೂ ನಮ್ಮ ಹೃದಯ ಮಂದಿರದಲ್ಲಿ ಉಳಿಯುವುದು.

ಮುಂದೆ ನಡೆಯಿತು, ನಾಯಕನ ಸ್ಥಾನಕ್ಕೆ ಚುನಾವಣೆ. ಮುರಾರ್ಜಿ ದೇಸಾಯಿಯವರು ಪ್ರಜಾಸತ್ತೆಯ ತತ್ವ ನಿಷ್ಠೆಯಿಂದ ಇಂದಿರಾ ಗಾಂಧಿಯವರನ್ನು ಎದುರಿಸಿದರು. ಪ್ರಚಂಡ ಬಹುಮತದ ಇಂದಿರಾಜಿಯವರ ವಿಜಯ ಜಾಗತಿಕ ಸ್ವಾಗತ ಪಡೆಯಿತು. ಮುರಾರ್ಜಿ ಭಾಯಿಯವರೂ ಇಂದಿರಾಜಿಗೆ ಆಡಳಿತೆಯಲ್ಲಿ ಸಂಪೂರ್ಣ ಸಹಕಾರ ನೀಡುವ ಆಶ್ವಾಸನೆ ನೀಡಿದರು. ಚುನಾವಣೆಯ ಮೂಲಕ ನಾಯಕನ ಆಯ್ಕೆ ನಡೆದುದರಿಂದ ಪ್ರಜಾಸತ್ತೆಗೆ ಕಳಂಕವೇನೂ ತಟ್ಟಿದಂತಾಗಲಿಲ್ಲ; ಬದಲಿಗೆ ಅದರ ಗೌರವ ಮತ್ತಷ್ಟು ಹೆಚ್ಚಿತೆನ್ನಲೇ ಬೇಕು. ನೂತನ ಪ್ರಧಾನಿಯಾಗಿ, ಭಾರತ ಗಣರಾಜ್ಯದ ಪ್ರಥಮ ಮಹಿಳಾ ಪ್ರಧಾನಿಯಾಗಿ, ಎಳೆ ಹರೆಯದ ಪ್ರಧಾನಿಯಾಗಿ ಅಧಿಕಾರ ವಹಿಸಿದ ಶ್ರೀಮತಿಯವರಿಗೆ ಹಾರ್ದಿಕ ಸ್ವಾಗತ ಸರ್ವತ್ರ ಲಭ್ಯವಾಗಿದೆ; ಇದು ಶುಭ ಸನ್ನಿವೇಶ.

ಜಗನ್ನಾಯಕ ಶಾಂತಿದೂತ ಜವಾಹರರ ಏಕ ಮಾತ್ರ ಪುತ್ರಿಯಾಗಿ, ಮಹಾತ್ಮಾ ಗಾಂಧಿಯವರ ಶಿಷ್ಯೆಯಾಗಿ, ಲಾಲ್ ಬಹದೂರರ ಅನುಯಾಯಿಯಾಗಿ ಬೆಳೆದು ಬಂದಿದ್ದ ಇಂದಿರಾಜಿ ಲಾಲಬಹದೂರರ ಉತ್ತರಾಧಿಕಾರಿಯಾಗಿ ಬಂದುದು ವೈಶಿಷ್ಟ್ಯ ಪೂರ್ಣವಾಗಿದೆ. ಶಾಂತಿ-ಅಹಿಂಸೆಗಳಲ್ಲಿ ಅಚಲ ವಿಶ್ವಾಸವಿಟ್ಟ ಇವರೆಲ್ಲರೂ ರಾಷ್ಟ್ರದ ಘನತೆ-ಗೌರವಗಳ ಪ್ರಶ್ನೆ ಬಂದಾಗ ಶಸ್ತ್ರವೆತ್ತುವುದಕ್ಕೆ ಹಿಂದೆ ಮುಂದೆ ನೋಡದವರು. ಇಂದಿನ ಭಾರತಕ್ಕೆ ಅಗತ್ಯವಿರುವುದಾದರೂ ಇದೇ ನೀತಿ. ಶ್ರೀಮತಿಯವರು ತಾಟಸ್ಥ್ಯ ನೀತಿಯನ್ನು ಮುಂದುವರಿಸಿಕೊಂಡು ಹೋಗುವ, ವಿಶ್ವ ಶಾಂತಿಗಾಗಿ ಶ್ರಮಿಸುವ, ರಾಷ್ಟ್ರ ರಾಷ್ಟ್ರಗಳ ವಿವಾದಗಳನ್ನು ಸೌಹಾರ್ದಯುತ ವಾತಾವರಣದಲ್ಲಿಯೇ ಬಗೆಹರಿಸಬೇಕೆನ್ನುವ ನಿರ್ಧಾರ ಮಾಡಿರುವರಾದರೂ ರಾಷ್ಟ್ರದ ಸಾರ್ವಭೌಮತೆ-ಸಮಗ್ರತೆಗಳಿಗೆ ಪರದೇಶೀಯರಿಂದ ತೊಂದರೆ ಬಂದಾಗ, ಶಕ್ತಿಯ ಪ್ರಯೋಗವನ್ನೂ ಮಾಡುವ ದೃಢ ನಿಲುಮೆಯವರು. ದೇಶವನ್ನು ಐಕ್ಯದಿಂದ ಸಮೃದ್ಧಿ ಪಥದತ್ತ ಒಯ್ಯುವ ತನ್ನ ಪೂರ್ವಾಧಿಕಾರಿಗಳ ನೀತಿಯನ್ನೇ ಇವರೂ ಮುಂದುವರಿಸುವರು—ಇದರಲ್ಲಿ ಸಂಶಯವಿಲ್ಲ.

ನೆಹರು—ಶಾಸ್ತ್ರಿಯವರು ಆಡಳಿತಾವಧಿಯಲ್ಲಿ ಭಾರತದ ವಿದೇಶ ನೀತಿಯ ಬಗ್ಗೆ ಕೆಲವರಲ್ಲಿ ಅಸಮಾಧಾನವೂ ಹುಟ್ಟಿತ್ತು. ಅದು ಅಸಫಲವಾಯ್ತೆಂದವರೂ ಇದ್ದರು. ಆದರೆ, ಶಾಸ್ತ್ರಿಯವರು ಅದನ್ನು ಸಫಲವಾಗಿಸಿದವರು. ಅಭಿವೃದ್ಧಿ ಪಥಗಾಮಿಯಾಗಿರುವ ಭಾರತದ ಗೌರವ-ಪ್ರತಿಷ್ಠೆಗಳು ಇಂದಿರಾಜಿಯವರ ಆಡಳಿತದಲ್ಲಿ ಮತ್ತಷ್ಟು ಹೆಚ್ಚುವುವು ಎಂದು ಹಾರೈಸಬಹುದು. ಇದರಿಂದಾಗಿಯೇ ರಾಷ್ಟ್ರಪುನಾರಚನೆಯ ಕಾರ್ಯ ಯಥಾಯೋಗ್ಯವಾಗಿ ಸಾಧಿತವಾಗುತ್ತದೆ. ಆಂತರಿಕವಾಗಿ ನೂತನ ಪ್ರಧಾನಿಗಳು ಎದುರಿಸಬೇಕಾದ ಸಮಸ್ಯೆಗಳು ಅನೇಕವಿವೆ. ಭೂತಾಕಾರ ತಳೆದಿರುವ ಆಹಾರ ಪೂರೈಕೆಯೊಡನೆ, ಆಹಾರ ಸ್ವಾವಲಂಬನದತ್ತ ದೇಶವನ್ನು ಒಯ್ಯುವ ಗಂಭೀರ ಪ್ರಶ್ನೆಗೆ ಅವರು ಉತ್ತರಿಸಬೇಕಾಗಿದೆ. ಶಾಸ್ತ್ರಿ ನಿರ್ಮಿಸಿ ಬಿಟ್ಟುಹೋಗಿರುವ ತಾಷ್ಕೆಂಟ್ ಘೋಷಣೆಯನ್ನು ತ್ರಿಕರಣ ಪೂರ್ವಕವಾಗಿ ಕಾರ್ಯರೂಪಕ್ಕೆ ತರುವುದು ಇವರ ಇನ್ನೊಂದು ಪ್ರಶ್ನೆ—ಈ ಎರಡರ ಬಗ್ಗೆಯೂ ಪ್ರಸ್ತಾಪಿಸಿ, ಇವನ್ನು ಸಾಧಿಸುವ ದೃಢ ನಿರ್ಧಾರ ಮಾಡಿದ್ದಾರೆ ಅವರು. ಸಧ್ಯಕ್ಕೆ ಪಾಕಿಸ್ತಾನದೊಡನೆ ಮಿತ್ರತ್ವದ ಸೂಚನೆಗಳು ಕಂಡು ಬರುತ್ತಿವೆ; ಆದರೆ, ಕೆಂಪು ಚೀನಾದ ಆಕ್ರಮಣ ನೀತಿ ಮಾತ್ರ ಹೆಚ್ಚುತ್ತಾ ಬರುತ್ತಿದೆ. ಹಾಗಾಗಿ ಸಂರಕ್ಷಣಾ ಸಿದ್ಧತೆಯತ್ತ ಕೂಡ ನಮ್ಮ ದೃಷ್ಟಿ ಹರಿಯುವುದು ಅತ್ಯಗತ್ಯ. ರಾಜಕೀಯ ಸ್ವಾತಂತ್ರ್ಯದೊಡನೆ ಆರ್ಥಿಕ ಸ್ವಾತಂತ್ರ್ಯವನ್ನೂ ಸಂಪೂರ್ಣ ಪಡೆಯುವ ನಮ್ಮ ಹೆಗ್ಗುರಿಯನ್ನು ಶ್ರೀಮತಿಯವರು ಸಾಧಿಸಬೇಕಾಗಿದೆ. ಅನನ್ಯ ಆಸಕ್ತಿ—ಶ್ರದ್ಧೆಯ, ಅದ್ವಿತೀಯ ದೇಶಪ್ರೇಮಿಯೆನಿಸಿದ ಇಂದಿರಾಜಿಯವರು ದೇಶವನ್ನು ಸರಿದಾರಿಯಲ್ಲಿ ಮುಂದುವರಿಸುವರು—ಇದು ಖಂಡಿತ. ಇದಕ್ಕೆ ಅಗತ್ಯವಾದ ಲೋಕಜ್ಞಾನ, ವ್ಯವಹಾರ ಜ್ಞಾನ, ರಾಜಕಾರಣ ಪಟುತ್ವ, ಅನುಭವ ಅವರಿಗಿದೆ. ಇವರ ಸದ್ಯದ ಆಡಳಿತೆ ೧೫ ತಿಂಗಳ ಅಲ್ಪ ಅವಧಿಯದಾದರೂ ಈ ವೇಳೆಯಲ್ಲಿ ಅವರು ಸಾಧಿಸುವ ಯಶಸ್ಸು ಅವರ ಮುಂದಿನ ಭಾಗ್ಯವನ್ನೂ ನಿರ್ಣಯಿಸುವುದು ಖಂಡಿತ.

ನೂತನ ಪ್ರಧಾನಿಗೆ ಶುಭ ಕೋರುತ್ತ ಅವರ ನಾಯಕತ್ವದಲ್ಲಿ ಭಾರತವು ತನ್ನ ಗುರಿಯತ್ತ ಕ್ಷಿಪ್ರಗತಿಯಿಂದ ಧಾವಿಸಲಿ.

ವಚನ ಸುಧೆ

ಷಡ್ ದೋಷಾ: ಪುರುಷೇಣೇಹ
ಹಾತವ್ಯಾ ಭೂತಿಮಿಚ್ಛತಾ
ನಿದ್ರಾ ತಂದ್ರಾ ಭಯಂಕ್ರೋಧ
ಆಲಸ್ಯಂ ದೀರ್ಘ ಸೂತ್ರತಾ||

ನಿದ್ರಾವಸ್ಥೆ, ತಂದ್ರಾವಸ್ಥೆ, ಭಯಾವಸ್ಥೆ, ಕ್ರೋಧಾವಸ್ಥೆ, ಆಲಸ್ಯಾವಸ್ಥೆ ಮತ್ತು (ಅಲ್ಪ ಸಮಯದಲ್ಲಾಗುವ ಕೆಲಸಕ್ಕೆ ಹೆಚ್ಚು ಸಮಯ ತೆಗೆಯುವುದು) ದೀರ್ಘ ಸೂತ್ರತೆ— ಈ ಆರು ದುರ್ಗುಣಗಳನ್ನು ಉನ್ನತಿಯನ್ನು ಬಯಸುವವನು ತ್ಯಜಿಸ ಬೇಕು.

ಡಾ|| ಬಾಬಾ

ಭಾರತದ ಅಣುಶಕ್ತಿ ಆಯೋಗದ ಅಧ್ಯಕ್ಷ ಡಾ| ಬಾಬಾ ಇನ್ನು ನಮಗಿಲ್ಲ. ಮೌಂಟ್ ಬ್ಲ್ಯಾಂಕ್‌ದ ಬಳಿ ಸಂಭವಿಸಿದ ವಿಮಾನ ದುರ್ಘಟನೆಯಲ್ಲಿ ಅವರು ಮೃತ್ಯು ಮುಖರಾದರು. ವಿಮಾನ ಕಾಂಚನಗಂಗಾದ ಹಾಗೂ ಯಾತ್ರಿಗಳ ಅವಶೇಷಗಳ ಶೋಧವೂ ಈಗ ನಡೆಯಲಾರದಂತಹ ವಿಷಮ ವಾತಾವರಣವಿಲ್ಲದೆ ಅಪಘಾತಕ್ಕೆ ಪ್ರತಿಕೂಲ ಹವಾಮಾನವೇ ಕಾರಣವಿರಬಹುದು. ೧೧೭ ಮಂದಿಯನ್ನು ಬಲಿತೆಗೆದುಕೊಂಡ ಈ ಮೌಂಟ್ ಬ್ಲ್ಯಾಂಕ್ ಅವೆಷ್ಟೋ ಪ್ರಭಾವಶಾಲಿ ಪುರುಷ-ಸ್ತ್ರೀಯರನ್ನು ಆಹುತಿ ತೆಗೆದುಕೊಂಡಿತು.

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ದೊಡ್ಡ ದೊಡ್ಡ ತಲೆಗಳೆಲ್ಲಾ ಉರುಳುತ್ತಿವೆ ಇನ್ನು..."

'ಇಲ್ಲಯ್ಯಾ, ನಾನು ಇನ್ನೂ ತಲೆಯೆತ್ತಿಯೇ ಇದ್ದೇನೆ..'

ಗೇಹ ರಾಜ್ಯದಲ್ಲಿ

ಹಸಿದ ಹೊಟ್ಟೆ ಜೀರ್ಣಿಸಿಕೊಂಡೀತು

'ಏ, ತುಸು ಇಲ್ಲಿ ಬಾಂದ್ರೆ...'

"ಯಾಕೇಂತ?'

"ಅಲ್ವೆ, ಅಲ್ಲೇ ನಿಂತುಕೊಂಡು ಯಾಕೇಂತಂದ್ರೆ, ನಾನು ಮಾಡೋದಾದ್ರೂ ಏನೂಂತ? ತುಸು ಹತ್ರಬಾ...."

'ಬರೋದಕ್ಕೆ ಏನೂ ಅಡ್ಡಿಯಿಲ್ಲ, ಆದ್ರೆ ..."

"ಆದ್ರೆ...ಏನಂತೆ?"

"ಅಂತೆಯೂ ಇಲ್ಲ,ಇಂತೆಯೂ ಇಲ್ಲ..'

'ಆದ್ರೆ ಚಿಂತೆ ಮಾತ್ರ ತಪ್ಪಲಿಲ್ಲ...."

"ಹೌದಪ್ಪ, ಚಿಂತೆಯಿರೋದು ನಿಮಗೊಬ್ಬರಿಗೆ ಮಾತ್ರ ...ಮತ್ತೆ ಊರಿಗೆ ಲೆಕ್ಚರ್ ಬಿಡ್ಲಿಕ್ಕೆ ಹೋಗ್ತಾರೆ...."

"ಏನೂಂತ? ಅದನ್ನೂ ಅಂದ್ಬಿಡು...."

'ಏಕೆ? ಬಿಟ್ರವರಿಗೆ ಗೊತ್ತಿಲ್ವೆ?'

'ಇಲ್ಲ....'

'ಅದೇ ಅಂದೆನಲ್ಲಾ....ನೀವು, ಗಂಡಸ್ರೆಲ್ಲಾ ಹೀಗೆಯೆ ..."

'ಹೇಗೆ?"

'ಹೇಗೇಂತ ಮತ್ತೆ ಕೇಳ್ತಾರೆ. ಬೇರ್ಯಾರದ್ದಾದ್ರೂ ಆಗ್ತಿದ್ರೆ ನಾಚಿಕೆಯಿಂದ ಮುಖ ಭೂಮಿಗಲ್ಲ, ಪಾತಾಳಕ್ಕೆ ಇಳೀತಿತ್ತು..."

'ಹೌದು, ಹೌದು ಹಿಂದಿನ ಕಾಲದಲ್ಲಿ ಹೆಂಗಸ್ರ ತಲೆ ತಗ್ಗಿರುತಿತ್ತು, ಈಗೇನೂ? ಎಲ್ಲಾ ತಿರುವು ಮುರುವೂನ್ನು ..."

"ಅದಲ್ರಿ, ನೋಡಿ, ಒಂದು ಮಾತು ಹೇಳ್ತೀನೆ. ಕೋಪಿಸ್ಕೋ ಬೇಡಿ .'

'ಅಲ್ವೆ, ನಾನು ಕೋಪಿಸ್ಕೊಂಡ್ರೂ ನಿನಗೇನಂತೆ?"

'ಏನು ಅಂದ್ರೆ...."

"ಏನು?"

"ಏನೂಂತ ನನಗೂ ಗೊತ್ತಿಲ್ಲ. ನೀವು ಕೋಪಿಸ್ಕೋದಿಲ್ಲಾಂತಂದ್ರೆ ಹೇಳ್ತೀನೆ..'

'ಅಯ್ತಪ್ಪ, ಏನದು?"

'ನೋಡಿ, ನೆಹ್ರೂ ಕಾಲ ಬಂತು, ಶಾಸ್ತ್ರಿ ಕಾಲ ಬಂತು—ಹಾಗೇ ಹೋಯ್ತಾನ್ನಿ...'

"ಹ್ಞಾಂ, ಇದ್ದದ್ದೇ ಒಂದಲ್ಲ ಒಂದು ದಿನ ಈ ಪ್ರಪಂಚ ಬಿಟ್ಟು ಹೋಗ್ಲೇ ಬೇಕೂನ್ನು...."

"ಅದು ಸರಿ. ಆದ್ರೆ ಕೇಳಿ, ಎಷ್ಟೋ ಜನ ಮಂತ್ರಿಬಂದ್ರು, ನಮ್ಮ ಮುಂದೆ ಲೆಕ್ಚರು ಬಿಟ್ರು, ಕರತಾಡನ ತಾವೇ ಹೊಡಸಿ ಕೊಂಡ್ರು. ದಿಲ್ಲಿಗೆ ಹೋದಕೂಡ್ಲೆ ಹಾಗೆ ಮಾಡ್ತೀನಿ, ಹೀಗೆ ಮಾಡ್ತೀನಿ ಅಂದ್ರು. ಆದ್ರೆ...."

'ಏನು? ಏನಂದುಬಿಡು....'

ಅಲ್ರಿ, ಲೆಕ್ಚರ್ ನಂತ್ರದ ಸುಸ್ವಾದ ಭೋಜನಕೂಟದ ರಸಪೂರ್ಣ ಮಾತುಕತೆಯ ವೇಳೆ ನಾವು ಅಂದದ್ದನ್ನೆಲ್ಲಾ ಮರೆತುಬಿಟ್ರು'

'ಹ್ಞಾಂ....'

"ಸಂಪಾದಿಸಿದ ಮಾನಪತ್ರಗಳು ಕಾರಿನಲ್ಲಿ ಅಲಂಕೃತವಾದರೂ ಅವನ್ನು ನೋಡುವಷ್ಟೂ ಅವಕಾಶ ಇವರಿಗಿಲ್ಲ, ಸಂಚಾರ—ಸಂಚಾರ—ಸಂಚಾರ....'

'ಸರಿಯೆನ್ನು. ಜನತೆಯ ಸುಖದುಃಖಗಳನ್ನು ತಿಳಿದುಕೊಳ್ಳುವುದಕ್ಕಾಗಿ ಅವರು ಸಂಚಾರ ಮಾಡ್ತಾರೇನ್ನು. ಮತ್ತೆ, ನೆನಪಿಡೋ ವಿಷಯ? ಅದರ ಸಂಗತಿಯೇ ಬೇರೆ ."

"ಏನು?"

"ಅವರು ಆಡೋ ಲೆಕ್ಚರ್ ವೇದಪಾಠ ಇದ್ದ ಹಾಗೆ. ಬರಿಯ ಒಂದು ಹತ್ತು ಹೆಸ್ರುಗಳು ಬದಲಾವಣೆಯಾಗುತ್ತೆ. ಇನ್ನು ತಲೆಯಲ್ಲಿ ನೂರಾರು ವಿಚಾರ ತುಂಬಿರುವಾಗ ಯಾರು ಯಾರ ಕೇಳಿಕೆ ಏನು ಏನೂಂತ ಹೇಗೆ ನೆನಪುಳಿಯಬೇಕು? ಅದರ ಜತೆಗೆ...."

"ಏನು?"

"ಕೇಳುವುದು ಯಾವುದೂ ಆಗುವುದಿಲ್ಲ. ಮಂತ್ರಿ ಮಾಗಧರು ಮೊದಲೇ ಎಲ್ಲಾ ತಯಾರ್ಮಾಡಿಟ್ಟಿರುತ್ತಾರೆ. ಅವರಲ್ಲಿ ಕತ್ತರಿ ಪ್ರಯೋಗ ಮಾಡುವವರೇ ಹೆಚ್ಚು. ಜನಬೇಕಂಡದ್ದನ್ನೆಲ್ಲಾ ಕೊಡೋಕೆ ಸಾಧ್ಯವಿಲ್ಲ. ಆದುದರಿಂದ ಎಲ್ಲರಿಗೂ ಪತ್ರ ಅರ್ಪಿಸುವುದು—ಆಗ ಯಾರಿಗೂ ಏನೂ ಹೇಳೋಕೆ ಸಾಧ್ಯವಿಲ್ಲ..."

"ಅಂದ್ರೆ?"

"ನೋಡು ಜನರ ನೂರರಲ್ಲಿ ಹತ್ತನ್ನು ಎಂ. ಪಿ.ಯೋ ಎಮ್ಮೆಲ್ಲೆಯೋ ಮುಂಡೆ ಇಡಬಹುದೂನ್ನು. ಅದ್ರಲ್ಲಿ ಒಂದು ಏನಾದರೂ ಆಗಬಹುದು. ಆದರೆ, ಅದಾಗಬೇಕಾಗಿದ್ದರೆ, ಜನ ಗೋಳಾಡಬೇಕಿಲ್ಲ. ಸರಕಾರದ ಅಧಿಕಾರಿಗಳೇ ಬರ್ತಾರೆ.... ಹೀಗೆ ಅರ್ಜಿ ಗುಜರಾಯಿಸೀಂತ ."

"ಅಂದ್ರೆ?"

"ನೋಡು ಅಂಚೆ ಸೌಕರ್ಯ ವಿಸ್ತರಿಸುವುದು ಸರಕಾರದ ನೀತಿ. ಏನು ಸುಧಾರಣೆ? ರಾಜ್ಯ ಹಳ್ಳಿ ಹಳ್ಳಿಯಲ್ಲಿ ಅಂಚೆ ಕಛೇರಿಗಳನ್ನು ತೆರೆದಾಯಿತು...."

"ಹೌದ್ರಿ, ಮತ್ತೇನು ಮಾಡದಿದ್ರೂ ನಿಮ್ಮ ಸಂಸಾರ ಅದೊಂದು ಮಾಡಿತ್ತು ..."

"ಅದೊಂದು? ಮತ್ತೆ ಶಾಲೆಗಳನ್ನು ಯಾರೇ ತೆರೆದದ್ದು?'

'ಹೌದ್ರಿ, ಅದೂ ಒಂದು; ಮೇಸ್ಟ್ರು ಇಲ್ಲದಿದ್ರೂ ಮತ್ತೆ ಶಾಲೆಯದೇನ್ನಿ..'

'ಮತ್ತೆ ಸಾರಿಗೆ ಸಂಪರ್ಕ?'

"ಹ್ಞಾಪ್ಪಿ. . ."

"ಹಾಗೆಯೇ ಉಳಿದದ್ದೂನ್ನು. ಈಗ ಇಲ್ಲಿ ಕೇಳು. ಬ್ರಾಂಚ್ ಆಫೀಸನ್ನು ಸಬ್ ಮಾಡೋದು. ಚಿಕ್ಕ ಚಿಕ್ಕ ಹಳ್ಳಿಯಲ್ಲೂ ಬ್ರಾಂಚ್ ತೆರೆಯೋದು, ಇತ್ಯಾದಿ ಇತ್ಯಾದಿಗಳು ಆಗಬೇಕು. ಅದಕ್ಕೇನು ಮಾಡೋದು? ಬರ್ತಾರೆ ನಮ್ಮ ಬಳಿ. ಹೇಳ್ತಾರೆ ಹೀಗೆ ಮಾಡಿ ೦ ತ... ಹಾ ಗೆ ಯೇ ಎಲ್ಲಾ..'

'ಅಂದ್ರೆ, ಪ್ರತಿ ವಿಭಾಗಕ್ಕೂ ಏನಾದರೂ ಕೆಲಸ ಬೇಕಾಗುತ್ತೆ. ಅದಕ್ಕಾಗಿ ಅವ್ರೇ ಬರ್ತಾರೆ....'

'ಏನಾದರೂ ಆಗಬೇಕಲ್ಲಾ ಸುಧಾರಣೆ? ಹೊಸ ಹೊಸ ನಾಲ್ಕು ಫೈಲು ತೆರೆಯದೆ ಹೋದರೆ ಮತ್ತೆ ಸುಧಾರಣೆಯೇನು?"

'ಅದೇನೇ ಇರ್ಲಿ. ನೋಡಿ ನೀವು, ಇದು ವರೆಗೆ ನಿಮ್ಮ ರಾಜ್ಯ. ಇನ್ನು ನಮ್ಮದು.'

"ಅಂದ್ರೆ...'

'ಅಂದ್ರ ಏನು? ನಮ್ಮ ಇಂದಿರಾಳ ಸರಕಾರ. ಇದರಲ್ಲಿ ನೀವು ಗಂಡಸರು ಮಾಡೋ ಮಾಮೂಲು ತಪ್ಪು ಖಂಡಿತಕ್ಕೂ ನಡೆಯೋದಿಲ್ಲ..."

"ಅಂದ್ರೆ...."

"ನೋಡಿ, ಸ್ವಾಭಾವಿಕವಾಗಿ, ಗಂಡಸರು ಬೇಜವಾಬ್ದಾರಿಗಳು. ನೂರಾರನ್ನು ತಲೆಯಲ್ಲಿ ತುಂಬಿಸಿ "ಸಿರ್‌ಗದಂ" ಆಗಿರುವವರಂತೆ ನಾಟಕವಾಡೋದ್ರಲ್ಲೇ ಅವರಿಗೆ ತೃಪ್ತಿ. ಮತ್ತೆ ಕೆಲಸ ಮಾಡೋದಕ್ಕೆ ಬಿಡುವೆಂಬುದೇ ಇಲ್ಲ. ನೋಡಿ, ನಮ್ಮೂರಿನ ಮೇಸ್ಟ್ರು ಅನ್ನುತಿದ್ರು ಕಲಿಯೋದ್ರಲ್ಲಿ ಹುಡುಗಿಯರೇ ಹುಷಾರು, ಅವರು ಮಾಡೋ ಕೆಲ್ಸದಲ್ಲೂ ನಾಜೂಕು....'

'ಅದು ಸರೀನ್ನು. ಅದನ್ನು ತಿಳಿದೇ ಈಗ ಸ್ತ್ರೀಯರಿಗೆ ಅಗ್ರ ಪ್ರಾಶಸ್ತ್ಯ ದೊರೆಯತೊಡಗಿದೆ. ಆದರೆ, ಒಂದು ಮಾತ್ರ ...."

"ಏನು?"

"ಯಾರೇ ಇರಲಿ, ಪ್ರಪಂಚದ ಬಗ್ಗೆ ಹೆಚ್ಚು ವಿಚಾರ ಮಾಡುವ ಪುರುಷನಿರಲಿ, ಸ್ತ್ರೀಯಿರಲಿ, ಕಾರ್ಯದಲ್ಲಿ ನಾಜೂಕು ಇಲ್ಲ. ಅವರು ಅನ್ಯಾಯದ ಬೀಜ ಬಿತ್ತುತ್ತಾರೆ..."

"ಯಾಕೆ ಹಾಗಂತೀರಿ?"

"ಯಾಕೇಂತ ಹೇಳಲಿ? ವ್ಯಕ್ತಿತ್ವದ ಹೆಸರಿನಲ್ಲಿ ಮಾನವ ಬಹಳ ದುರ್ಬಲನಾಗುತ್ತ ಬರುತ್ತಿದ್ದಾನೆ. ಚಿತ್ತವೃತ್ತಿ ಕಿಂಚಿತ್ ಕೆರಳಿತು ಅಂದರೆ ಮಾಡಬಾರದ ಅನ್ಯಾಯವನ್ನೂ ಮಾಡುತ್ತಾನೆ ...'

"ಅದೇ ನೋಡಿ, ಈಗ ಎಲ್ಲಿಡೆಯೂ 'ಸಿನೇಮಾ' ನಡೆಯುತ್ತಿದೆ...'

"ಅಂದ್ರೆ..."

"ಶಾಲೆ-ಕಾಲೇಜುಗಳಲ್ಲಿ, ಬೀದಿಬೀದಿಗಳಲ್ಲಿ, ಕೋರ್ಟು-ಕಛೇರಿಗಳಲ್ಲಿ, ಅಂಗಡಿ ಹೋಟೇಲುಗಳಲ್ಲಿ, ಹೆಚ್ಚೇನು ಮನೆಮನೆಯಲ್ಲಿ ಸಹ..."

"ನೀನು ಏನು ಹೇಳುತ್ತಿರುವೆ, ಗೊತ್ತು. ಇಂದಿನ ಯುವಕರು; ಬಾಲಕರು ಇಂತಹುದನ್ನೇ ಹೆಚ್ಚಾಗಿ ನೋಡುತ್ತಾರೆ. ಸಿನೆಮಾ—ನಾಟಕ ಮೊದಲಾದುವುಗಳು

(ಹದಿನಾರನೇ ಪುಟ ನೋಡಿರಿ)

ಹೆಚ್ಚು ಹಣ ಗಳಿಸುವುದು ಹೇಗೆ?

"ಹಣದಿಂದ ಹೆಚ್ಚು ಹಣ ಬರುತ್ತದೆ — ಅದರಿಂದ ಇನ್ನೂ ಹೆಚ್ಚು ಹಣ ಬರುತ್ತದೆ!"
ಅದು ಹೇಗೆಂದು ನೀವು ಆಶ್ಚರ್ಯಪಡಬಹುದು.
ನಿಮಗಾಗಿ ಇರುವ ಬ್ಯಾಂಕು ವಿಜಯಾ ಬ್ಯಾಂಕ್ ನೀವು ಹೆಚ್ಚು ಹಣ ಗಳಿಸಲು ಸಹಾಯಮಾಡಬಲ್ಲದು.

ವಿಜಯಾ ಬ್ಯಾಂಕ್
ನಿಮ್ಮ ಸೇವಿಂಗ್ಸ್ ಲೆಕ್ಕದ ಮೇಲೆ ಶೇ 4½ ಬಡ್ಡಿ
ನಿಮ್ಮ ಫಿಕ್ಸೆಡ್ ಡಿಪಾಜಿಟ್ಟುಗಳ ಮೇಲೆ ಶೇ 8ರ ವರೆಗೆ ಬಡ್ಡಿ ನೀಡುತ್ತದೆ
ಇಂದೇ ಉಳಿತಾಯ ಮಾಡಲು ಆರಂಭಿಸಿ
ವಿವರಗಳನ್ನು ನಿಮ್ಮ ಸಮೀಪದ ಶಾಖೆಯಿಂದ ಪಡೆಯಿರಿ.

ವಿಜಯಾ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಛೇರಿ "ವಿಜಯಾ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರಸ್ತೆ,
ಮಂಗಳೂರು 3

VB-KA-27

ಮೈಸೂರು,ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರರಾಜ್ಯಗಳಲ್ಲಿ 55 ಶಾಖೆಗಳು.
ಮೈಸೂರು ರಾಜ್ಯದಲ್ಲಿಯ ಶಾಖೆಗಳು:

ಬೆಂಗಳೂರು— 1. ಮಲ್ಲೇಶ್ವರಂ, 2. ಅಲ್ಸೂರು, 3. ಕೆಂಪೇ ಗೌಡ ರೋಡ್ * ಮಂಗಳೂರು— 1. ಲೈಟ್ ಹೌಸ್ ಹಿಲ್ ರೋಡ್, 2. ಹಂಪನಕಟ್ಟೆ * ಭಟ್ಕಳ * ಬ್ರಹ್ಮಾವರ * ಬೈಂದೂರು * ಚಾಮರಾಜನಗರ * ಚನ್ನಪಟ್ಣ * ಕುಂದಾಪುರ * ಧಾರವಾಡ * ದೊಡ್ಡಬಳ್ಳಾಪುರ * ಗದಗ * ಗೋಣಿಕೊಪ್ಪಲ * ಹುಬ್ಬಳ್ಳಿ * ಕಾರ್ಕಳ * ಕನಕಪುರ * ಕಾಪು * ಕೋಲಾರ * ಕೊಳ್ಳೆಗಾಲ್ * ಕೃಷ್ಣರಾಜಪೇಟೆ * ಮದ್ದೂರು * ಮಾಗಡಿ * ಮಲವಳ್ಳಿ * ಮಡಿಕೇರಿ * ಮೂಡಿಗೆರೆ * ಮೈಸೂರು * ನಂಜನಗೂಡು * ನೆಲಮಂಗಲ * ಪಾಂಡವಪುರ * ಪುತ್ತೂರು * ರಾಮನಗರ * ಉಡುಪಿ.

ಲಾಲ್ ಬಹದೂರ್ ಶಾಸ್ತ್ರಿ

ದಿ| ಪ್ರಧಾನಿ ಲಾಲ್ ಬಹದೂರ್ ಶಾಸ್ತ್ರಿ ಮತ್ತು ಸಮರ ಕಾಲದ ಅಪ್ರತಿಮ ನಾಯಕ, ತನ್ನ ೧೯ ತಿಂಗಳ ಅಧಿಕಾರಾವಧಿಯಲ್ಲಿ ಇಡಿಯ ಲೋಕಕ್ಕೆ ತನ್ನ ಅಮಾನುಷತ್ವದ ಪರಿಚಯ ಮಾಡಿಕೊಟ್ಟ ಧೀರ ನಮ್ಮ ದೇಶ ಸೇವಕ. ಅವರು ನಮ್ಮನ್ನಗಲಿ ಮತ್ತಷ್ಟು ಮಹಾತ್ಮರಾದರು; ಅವರನ್ನು ಕಳೆದುಕೊಂಡು ನಾವು ಮಾತ್ರ ಬಡವಾದೆವು.

ದಿವಂಗತ ಪ್ರಧಾನಿ ನೆಹರೂರವರ ನಚ್ಚಿನ—ಬಂಟ, ವಿಶ್ವಾಸಾರ್ಹ ಸಹೋದ್ಯೋಗಿಗಳಲ್ಲಿ ಲಾಲ್ ಬಹಾದೂರ್ ಶಾಸ್ತ್ರಿಗಳೂ ಒಬ್ಬರು. ತಮಗೆ ಅಸ್ವಸ್ಥತೆಯುಂಟಾದಾಗ ತಮ್ಮೊಂದಿಗೆ ಕಾರ್ಯದ ಹೊರೆಯನ್ನು ವಹಿಸಿಕೊಳ್ಳಲು ಸಮರ್ಥರಾದವರು ಯಾರೆಂಬುದನ್ನು ಹುಡುಕಲು ಪ್ರಯತ್ನಿಸಿದಾಗ ನೆಹರೂರವರ ಗಮನ ಶ್ರೀ ಶಾಸ್ತ್ರಿಗಳತ್ತ ಹರಿದಿದ್ದು ಸಹಜವೇ ಸರಿ.

ಶ್ರೀ ಲಾಲ್ ಬಹಾದೂರ್ ಅವರು ೧೯೫೨ರಿಂದ ನೆಹರೂ ಮಂತ್ರಿ ಮಂಡಲದಲ್ಲಿ ಒಂದೆ ಸಮನೆ ಸದಸ್ಯರಾಗಿದ್ದುಕೊಂಡು ಪ್ರಮುಖ ಪಾತ್ರ ವಹಿಸಿದ್ದರು. ಅವರು ಭಾರತ ಸರ್ಕಾರದ ಹಾಗೂ ಆಡಳಿತ ಪಕ್ಷವಾದ ಕಾಂಗ್ರೆಸ್ ಪಕ್ಷದ ಮಧ್ಯಸ್ಥಿಕೆಗಾರರಾಗಿ ತುಂಬಾ ಯಶಸ್ವಿ ಪಾತ್ರ ವಹಿಸಿದ್ದರು. ಸರ್ಕಾರದಲ್ಲೇ ಆಗಲಿ ಪರಿಹಾರ ಅಸಾಧ್ಯವೆಂದು ಪರಿಗಣಿಸಲ್ಪಟ್ಟ ಸಮಸ್ಯೆಗಳನ್ನು ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವ ಸಂದರ್ಭಗಳಲ್ಲಿ ನೆಹರೂ ಅವರೂ ಬಹುಮಟ್ಟಿಗೆ ಶಾಸ್ತ್ರಿಗಳನ್ನೇ ಅವಲಂಬಿಸಿದ್ದರು. ಭಾರತದ ಗೌರವಾನ್ವಿತ ನಾಯಕರೂ ಶಾಸ್ತ್ರಿಗಳ ಸಂಗಾತಿಗಳಲ್ಲಿ ಒಬ್ಬರೂ ಆಗಿದ್ದ ಪುರುಷೋತ್ತಮದಾಸ್ ಟಂಡನ್‌ರವರು ಶಾಸ್ತ್ರಿಗಳನ್ನು ಅತ್ಯಂತ ಕಠಿಣತಮ ಪರಿಸ್ಥಿತಿಗಳನ್ನು ಅತಿ ಸುಲಭವಾಗಿ ಎದುರಿಸಿ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ನಿಸ್ಸೀಮ ವ್ಯಕ್ತಿ ಎಂದು ಬಣ್ಣಿಸಿದ್ದಾರೆ. ಎರಡು ರಾಷ್ಟ್ರಗಳ ನಡುವೆ ಭೇದಾಭಿಪ್ರಾಯ ಬಂದೊದಗಿದಲ್ಲಿ, ಯಾವುದೇ ಒಂದು ರಾಜ್ಯದ ವಿಧಾನ ಮಂಡಲದ ನಾಯಕರನ್ನು ಆರಿಸುವ ವಿಷಯ ಬರಲಿ, ಕಾಶ್ಮೀರದಂತಹ ಅತಿ ಸೂಕ್ಷ್ಮದ ಸಮಸ್ಯೆ ಬಂದೊದಗಿರಲಿ, ಎಲ್ಲರಿಗೂ ಒಪ್ಪಿಗೆಯಾಗುವಂತಹ ಪರಿಹಾರವನ್ನು ಒದಗಿಸುವುದರಲ್ಲಿ ಅತಿ ಚತುರರು ಲಾಲ್ ಬಹಾದೂರ್ ಅವರು.

ಶಾಸ್ತ್ರಿಗಳ ಈ ಪಾತ್ರವು ಅವರಿಗೆ ಪಂಡಿತ ಗೋವಿಂದ ವಲ್ಲಭ ಪಂತರಿಂದ ಬಂದಿದ್ದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಏಕೆಂದರೆ ಶ್ರೀ ಶಾಸ್ತ್ರಿಗಳೂ ಪಂತರೂ ರಾಜಕೀಯ ಗರಡಿಯಲ್ಲಿ ಪಳಗಿದವರು. ಭಾರತದ ಅತ್ಯಂತ ದೊಡ್ಡ ರಾಜ್ಯದ ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳಾಗಿದ್ದ ಪಂಡಿತ ಪಂತರು ೧೯೫೧ರಲ್ಲಿ ಶ್ರೀ ಶಾಸ್ತ್ರಿಗಳನ್ನು ತಮ್ಮ ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಂಡರು. ಹಾಗೆ ನೇಮಕ ಮಾಡಿದಾಗ ಶಾಸ್ತ್ರಿಗಳು ವಿಶ್ವಾಸಾರ್ಹರೂ, ಕಷ್ಟಪಟ್ಟು ಕೆಲಸ ಮಾಡುವವರೂ, ಕರ್ತವ್ಯ ಪರಾಯಣರೂ ಎಂದು ಪಂಡಿತ ಪಂತರು ಹೇಳಿದ್ದುಂಟು.

ನೆಹರೂರವರ ಜೀವಿತದಲ್ಲಿ ಸಹಕರಿಸಿದ ಶಾಸ್ತ್ರಿಗಳು ಇದೇ ಗುಣವನ್ನು ಪ್ರದರ್ಶಿಸಿದ್ದರು.

ಜನ್ಮ

ಲಾಲ್ ಬಹಾದೂರ್‌ರವರು ೧೯೦೪ರಲ್ಲಿ ವಾರಣಾಸಿ ಜಿಲ್ಲೆಯ ಮೊಗಲಸರಾಯಿನಲ್ಲಿ ಜನಿಸಿದರು. ಅವರ ತಂದೆ, ಶ್ರೀ ಶಾರದ ಪ್ರಸಾದರು ಶಾಲಾ ಉಪಾಧ್ಯಾಯರು. ಅವರ ತಂದೆ ನಿಧನ ಹೊಂದಿದಾಗ ಲಾಲ್ ಬಹಾದೂರ್ ಕೇವಲ ಮಗು ಮಾತ್ರ. ಲಾಲ್ ಬಹಾದೂರ್ ಮತ್ತು ಅವರ ಇಬ್ಬರು ಸಹೋದರಿಯರು ಅವರ ಅಜ್ಜನ ಪೋಷಣೆಗೊಳಪಟ್ಟರು. ಅವರ ಅಜ್ಜ ಲಾಲ್ ಬಹಾದೂರರಿಗೆ ವಾರಣಾಸಿಯ ಹರಿಶ್ಚಂದ್ರ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿದರು. ತಮ್ಮ ಹದಿನೇಳನೆಯ ವರ್ಷದ ವರೆಗೆ ಲಾಲ್ ಬಹಾದೂರ್‌ರವರು ಈ ಶಾಲೆಯಲ್ಲಿಯೇ ವ್ಯಾಸಂಗ ಮಾಡಿದರು. ಆ ಸಮಯದಲ್ಲಿ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ತ್ಯಜಿಸಿ ಸತ್ಯಾಗ್ರಹವನ್ನು ಸೇರಬೇಕೆಂಬ ಗಾಂಧಿಜಿಯವರ ಕರೆಗೆ ಓಗೊಟ್ಟು ಶಾಸ್ತ್ರಿಗಳು ಶಾಲೆಗೆ ಶರಣು ಹೊಡೆದರು.

ಅವರು ಅಸಹಕಾರ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿ ಕಾರಾಗೃಹವನ್ನೂ ಸೇರಬೇಕಾಯಿತು.

೧೯೨೧ರಲ್ಲಿ ಕಾರಾಗೃಹದಿಂದ ಬಿಡುಗಡೆಗೊಂಡ ಲಾಲ್ ಬಹಾದೂರ್‌ರವರು ವಾರಣಾಸಿಯಲ್ಲಿ ಕಾಶಿ ವಿದ್ಯಾಪೀಠವನ್ನು ಸೇರಿ ಡಾ| ಭಗವಾನ್‌ದಾಸರ ಪ್ರಭಾವಕ್ಕೊಳಪಟ್ಟರು. ಕಾಶಿ ವಿದ್ಯಾಪೀಠದಲ್ಲಿ ಪದವೀಧರರಾಗಿ "ಶಾಸ್ತ್ರಿ" ಪದವಿ

(ಹನ್ನೆರಡನೇ ಪುಟ ನೋಡಿ)

ಮೆಟ್ರಿಕ್ ಪದ್ಧತಿಯನ್ನೇ ಉಪಯೋಗಿಸಿರಿ



ಮಧ್ಯಮ ಗತಿಯಲ್ಲಿ ನಡೆಯುವ ಮನುಷ್ಯನು
ಗಂಟೆಗೆ ಸಾಮಾನ್ಯ 5 ರಿಂದ 6 ಕಿಲೋಮೀಟರು ನಡೆಯುತ್ತಾನೆ

ಒಂದು ಮೈಲೆಂದರೆ ಎಷ್ಟು ಉದ್ದವೆಂದು ನಿಮಗೆ ಗೊತ್ತು. ಅಷ್ಟುದೂರ ನಡೆಯಲು ಎಷ್ಟು ಹೊತ್ತು ಬೇಕೆಂದೂ ನಿಮಗೆ ತಿಳಿದಿದೆ. ಇಲ್ಲೀಗ ಕಿಲೋಮೀಟರುಗಳ ಲೆಕ್ಕದಲ್ಲಿ ಸಮಯದ ಅಂದಾಜು ಕೊಟ್ಟಿದೆ. ಇದನ್ನು ನೆನಪಿನಲ್ಲಿಟ್ಟುಕೊಂಡರೆ ಕಿಲೋಮೀಟರುಗಳನ್ನು ಮೈಲಿಗೆ ಪರಿವರ್ತಿಸಬೇಕಾಗುವುದಿಲ್ಲ.

ಮೆಟ್ರಿಕ್ ಪದ್ಧತಿಯನ್ನೇ ಉಪಯೋಗಿಸಿರಿ. ಅದರಿಂದ ನಿಮಗೂ ದೇಶಕ್ಕೂ ಪ್ರಯೋಜನವಿದೆ

ಈಗ ಮೆಟ್ರಿಕ್ ತೂಕ ಮತ್ತು ಅಳತೆಗಳು ಮಾತ್ರ ನ್ಯಾಯಬದ್ಧವಾಗಿವೆ.

ನವಯುಗ ೩–೨–೧೯೬೬

ಕುಂದಾಪುರ ಕೊ- ಓಪರೇಟಿವ್ ಟೌನ್ ಬೇಂಕ್ ಲಿಮಿಟೆಡ್, ಕುಂದಾಪುರ. ದ. ಕ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಸಾಲಗಾರರು ಮೇಲ್ಕಾಣಿಸಿದ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡದೆ ಬಾಕಿಯಿರುವುದರಿಂದ ಸದ್ರಿಯವರಿಗೆ ಕ್ರಮ ಪ್ರಕಾರ ರಿಜಿಸ್ಟ್ರ ನೋಟೀಸು ಕೊಟ್ಟಲ್ಲಿ ಕೆಲವರು ನೋಟೀಸು ಪಡಕೊಂಡು ನಗಗಳನ್ನು ಇಷ್ಟರ ತನಕ ಬಿಡಿಸದಿರುವುದರಿಂದಲೂ ಮತ್ತು ಕೆಲವರಿಗೆ ಬಿಟ್ಟ ನೋಟೀಸು ವಾಪಾಸು ಬಂದಿರುವುದರಿಂದಲೂ ಸದ್ರಿಯವರಿಗೆ ಯಾ ಅವರು ಮೃತಪಟ್ಟಲ್ಲಿ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 11-2-66 ಶುಕ್ರವಾರ ಮಧ್ಯಾಹ್ನ 2 ಘಂಟೆಯೊಳಗೆ ಬಿಡಿಸದೇ ಇದ್ದಲ್ಲಿ ಅದೇ ದಿವಸ 3 ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದ ಆ ದಿನ ಏಲಂ ಮಾಡಲು ಅನಾನುಕೂಲವಾದಲ್ಲಿ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಹೊಸ್ತ ನೋಟೀಸು ಕೊಡದೇ ಬೇಂಕಿನ ಆಫೀಸಿನಲ್ಲಿ ಏಲಂ ಮಾಡಲಾಗುವುದು.

ಸಾಲದ ನಂಬ್ರ ಮತ್ತು ಸಾಲಕೊಟ್ಟ ತಾರೀಕು	ಮೆಂಬರ ನಂಬ್ರ ಹೆಸರು ಮತ್ತು ವಿಳಾಸ	ಮೊಬಲಗು
8542 15-10-63	1772 ಯು. ಸೀತಾರಾಮ ಸೇರಿಗಾರ್; ಯು. ಮಂಜುನಾಥ ಸೇರಿಗಾರರ ಮಗ. ಪೋಸ್ಟ್ ಉಪ್ಪಿನಕುದ್ರು.	25=00
8654 12-11-63	547. ಕೆ. ಬಚ್ಚ ತೋಟ; ವಿ. ಮಂಗಲ ತೋಟಿಯ ಮಗ, ಪಂಚಾಯತ್ ಆಫೀಸು ಕುಂದಾಪುರ	16=00
8757 16-12-63	874. ಕೆ. ಮರ್ತಪ್ಪ ನಾಯರ್; ಕೆ. ನಾರಾಯಣ ನಾಯರರ ಮಗ; ಪೋಸ್ಟ್ ಕಂಡ್ಲೂರು.	50=00
8784 2-1-64	1530 ಕೃಷ್ಣಯ್ಯ ಆಚಾರಿ, ಮೋನಯ್ಯ ಆಚಾರಿಯ ಮಗ, ಪೋಸ್ಟ್ ಕೋಡಿ, ಕುಂದಾಪುರ.	80=00
8842 18-1-64	1580 ಕೃಷ್ಣಯ್ಯ ಆಚಾರಿ. ಮೋನಯ್ಯ ಆಚಾರಿಯ ಮಗ ಪೋಸ್ಟ್ ಕೋಡಿ. ಕುಂದಾಪುರ.	50=00
8873 28-1-64	1832. ಕೆ. ನಂದಿಯಪ್ಪ ಶೆಟ್ಟಿ; ನಾಗಪ್ಪ ಶೆಟ್ಟರ ಅಳಿಯ ಪೋಸ್ಟ್ ಕೆದೂರು; ಬೊಗ್ಗಾಡಿ ಮನೆ.	75=00
8954 24-2-64	410 ಮಂಗಲ; ಸೋಮ ತೋಟಿಯ ಮಗ ವಾಚ್‌ಮೇನ್; ಮಹಾತ್ಮಗಾಂಧೀ ಪಾರ್ಕ. ಕುಂದಾಪುರ	50=00
8877 27-2-64	1477 ಎಚ್. ಚಂದ್ರಶೇಖರ ಶೆಟ್ಟಿ; ವೆಂಕಪ್ಪ ಶೆಟ್ಟರ ಅಳಿಯ, ಸೇಲ್ಸ್‌ಮೇನ್, ವೈಲಾಡಿ ಶಿವರಾಮ ಶೆಟ್ಟಿ ಕ್ಲೋತ್ ಮರ್ಚೆಂಟ್. ಕುಂದಾಪುರ ದ. ಕ.	35=00
9068 21-3-64	1010 ಶೇಕ್‌ಹಸನ್ ಸಾಹೇಬ್; ಶೇಕ್ ಮಿಯಾ ಸಾಹೇಬರ ಮಗ, ಲೇಂಡ್ ಎಕ್ವೈಸಿಶನ್ ಆಫೀಸು. ಕುಂದಾಪುರ ದ. ಕ.	11=00
9148 17-4-64	A. 428 ಪಾಂಡುರಂಗ ಖಾರ್ವಿ, ಓಮಯ್ಯ ಖಾರ್ವಿಯ ಮಗ, ಕೇಶವು ಡೆವಲಪ್‌ಮೆಂಟ್ ಆಫೀಸು, ಕುಂದಾಪುರ.	40=00
9197 4-5-64	1903 ಬೆಂಜಿಯೂ ಡಿಸೋಜ. ಬೆನ್‌ಮಿದಿ ಡಿಸೋಜರ ಮಗ; ವೆಟರ್ನರಿ ಆಸ್ಪತ್ರೆ. ಕುಂದಾಪುರ.	50=00
9232 13-5-64	1011 ಗೋವಿಂದಖಾರ್ವಿ. ಅಣ್ಣಪ್ಪ ಖಾರ್ವಿಯ ಮಗ. ಮದ್ದುಗುಡ್ಡೆ, ಕುಂದಾಪುರ.	18=00
9267 25-5-64	A. 257 ಪಾಸ್ಕಲ್ ಡಿಸೋಜ; ಲಾಡ್ರು ಡಿಸೋಜರ ಮಗ, ಚಿಕ್ಕನ ಸಾಲ ರಸ್ತೆ ಕುಂದಾಪುರ.	140=00
9277 26-5-64	1928 ರಘುರಾಮ ಶೆಟ್ಟಿ; ರಾಮಣ್ಣ ಶೆಟ್ಟರ ಮಗ. ಅಲ್ತಾರು ಮೇಲ್ಮನೆ. ಪೋಸ್ಟ್ ವಲ್ತೂರು.	150=00
9279 27-5-64	1924 ಶಿವರಾಮ ಶೆಟ್ಟಿ; ಸದಿಯಣ್ಣ ಶೆಟ್ರ ಅಳಿಯ, ಕಡಕರ್‌ಮನೆ ಪೋಸ್ಟ್ ಅಸಗಳ್ಳಿ.	65=00
9291 1-6-64	846 ರಾಮಕೃಷ್ಣ ಸೇರಿಗಾರ; ಸುಬ್ರಾಯ ಸೇರಿಗಾರರ ಮಗ. ಅಂಗಡಿಮನೆ, ಪೋಸ್ಟ್ ಉಪ್ಪಿನಕುದ್ರು.	85=00
9294 1-6-64	1266 ಎ. ಬೋಜ ಶೆಟ್ಟಿ. ಸುಬ್ಬಣ್ಣ ಶೆಟ್ರ ಮಗ. ಪೋಸ್ಟ್ ಕಾವಡಿ ಗ್ರಾಮ ಉಡುಪಿ ತಾಲೂಕು.	170=00
9813 4-6-64	1986 ಫ್ಲೋರಿನ್ ಬರೆಟ್ಟೊ ಮಿಂಗೆಲ್ ಬರೆಟ್ಟೊರ ಮಗಳು. ಚಿಕ್ಕನ್‌ಸಾಲ ರಸ್ತೆ. ಕುಂದಾಪುರ	30=00
9321 6-6-64	523 ಕೆ. ಬಿ. ಗೋವಿಂದ ಶೇರಿಗಾರ. ಕೆ. ಬಿ. ತಿಮ್ಮಪ್ಪನ ಮಗ ತಾಲೂಕು ಆಫೀಸು ಕುಂದಾಪುರ.	75=00
9340 10-6-64	1883 ಕೆ. ಶ್ರೀನಿವಾಸ ಸೇರಿಗಾರ, ರಾಮಯ್ಯ ಸೇರಿಗಾರರ ಮಗ. ಸಾಂತಾವರ. ಪೋಸ್ಟ್ ಕಂದಾವರ.	195=00
9349 10-6-64	1940 ನಾಗ ಕೆ. ಮೊಗವೀರ. ಕೃಷ್ಣ ಮೊಗವೀರರ ಮಗ, ಕೊಲ್ಲು ಮನೆ; ವಡೇರ ಹೋಬಳಿ. ಕುಂದಾಪುರ.	300=00
9358 13-6-64	467 ಕೃಷ್ಣಕಾರಂತ; ನಾಗಪ್ಪ ಕಾರಂತರ ಮಗ. ಪೋಸ್ಟ್ ನಾವುಂದ. ಕುಂದಾಪುರ.	160=00
9360 18-6-64	A. 950 ಕೋಟ ಕುಜ್ಞ ಹಮ್ಮದ್ ಸಾಹೇಬ. ಕೋಟಸಾಹೇಬರ ಮಗ. ಪೋಸ್ಟ್ ಕೋಡಿ, ಕುಂದಾಪುರ.	30=00
9369 15-6-64	20 ಎಸ್. ಸಂಜೀವ ಶೆಟ್ಟಿ; ಎಸ್. ಗೋವಿಂದ ಶೆಟ್ರ ಮಗ. ಪೋಸ್ಟ್ ಅಸಗಳ್ಳಿ. ಕುಂದಾಪುರ	22=00
9432 28-6-64	714 ಅಲ್‌ಪೋನ್ ರೆಬೆಲ್ಲೊ, ಜೋನ್ ರೆಬೆಲ್ಲೊರ ಮಗ ಉಪ್ಪಿನ ಕುದ್ರು ಪೋಸ್ಟ್, ಕುಂದಾಪುರ	70=00
9448 25-6-64	A. 643 ಜೋಸೆಫ್ ಬರೆಟ್ಟೊ; ಸಾಲ್‌ದಾರ್ ಬರೆಟ್ಟೊರ ಮಗ. ಅಜಂತ ಪ್ರೆಸ್. ಕುಂದಾಪುರ ಪೋಸ್ಟ್	200=00
9462 27-6-64	971 ಸೂರ ಮೊಗವೀರ; ಗೋವಿಂದ ಮೊಗವೀರರ ಮಗ, ಮದ್ದುಗುಡ್ಡೆ. ಕುಂದಾಪುರ.	30=00
9467 29-6-64	147 ಕೆ. ವಾಸುದೇವ ಪುರಾಣಿಕ, ಶ್ಯಾಮ್ ಪುರಾಣಿಕರ ಮಗ. ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆ, ವಡೇರ ಹೋಬಳಿ ಕುಂದಾಪುರ	120=00

ಕುಂದಾಪುರ,
ತಾ. 26-1-1966

ಸುಬ್ರಾಯ ಉಡ್ಪ. ಎಂ.
ಕಾರ್ಯದರ್ಶಿ.

ಏಳಿ ಏಳಿ

ಮಡಿದ ಯೋಧರ ಎಲುಬು ಪಾಂಚಜನ್ಯಗಳಾಗಿ
ಮೊಳಗುತಿವೆ, ಎದ್ದೇಳಿ, ಏಳಿ, ಏಳಿ
ಕಟ್ಟಿ ತೊಡೆಗಳನು ಏಳಿ ಏಳಿ || ೧ ||

ಬೆಂಕಿಯಲಿ ಮಿಂದವರು, ಕಡಲನ್ನೆ ಕುಡಿದವರು
ನಾವು ಬೆಟ್ಟವ ಬೆರಳಲೆತ್ತಿದವರು!
ಹಾವ ಹಾವುಗೆಯೆನಿಸಿ ಮೆಟ್ಟಿದವರು! ||

ದೇಹವದು ಹಳೆಯಂಗಿ, ಮೃತ್ಯುವೆಂಬುವ ದರ್ಜಿ,
ವೇಷಪಲ್ಲಟ ಮರಣ—ಇದ ಬಲ್ಲೆವು!
ದೇಶಕೊದಗದ ದೇಹವನ್ನೊಲ್ಲೆವು! || ೩ ||

ಪ್ರಾಣಗಳ ಪಣವಿಟ್ಟು ಪಗಡೆಯನ್ನಾಡೋಣ
ಗುಂಡುಗಳ ದಾಳಿಗಳ ಬಿಡದೆಸೆಯುತ;
ಭೀರುಗಳ ಹೆತ್ತಿಲ್ಲವೇ ಭಾರತ! ||

ಹಿಮಗಿರಿಯ ಜಯಭೇರಿಯಾಗಿಸುತ ಬಾರಿಸಿರಿ
ದಿಗ್ದಿಗಂತಗಳೆಲ್ಲ ಪಡಿನುಡಿಯಲಿ!
ವೈರಿಯೆದೆ ನಡುನಡುಗಿ ಸಿಡಿದೊಡೆಯಲಿ! || ೫ ||

ಉಳಿವು ಅಳಿವಿನ ಆಟವಾಡೋಣ ಬನ್ನಿರೌ
ರಣರಂಗವೇ ನಮ್ಮ ಕ್ರೀಡಾಂಗಣ!
ಬಂದಿಹುದು ನಮಗೆಲ್ಲ ಆಮಂತ್ರಣ! ||

ಕಾದಿಹುದು ರಣಕೇಳಿ, ಕರೆದಿಹಳು ರಣ ಕಾಳಿ
ಬೇಕಂತೆ ಶತ್ರುಗಳ ರುಂಡ ಮಾಲೆ
ಆಡೋಣ ಬನ್ನಿರೌ ರಕ್ತಲೀಲೆ! || ೭ ||

ವರ ಹಿಮಾಲಯ ಸಾಕ್ಷಿ, ಸುರಗಂಗೆಯೇ ಸಾಕ್ಷಿ
ನಿನ್ನಂಗದಂಗುಲವ ಕೇಳಗೊಡೆವು!
ಮಾತೆ ಅನ್ಯರ ನಿನ್ನನಾಳ ಬಿಡೆವು! ||

—ರಾಧಾಕೃಷ್ಣ ರಾವ್ ಯಂ., ಬಿ. ಎ. ಬಿ. ಟಿ.,
ಕಾಸರಗೋಡು.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ
ಬರೆದವರು
ಶ್ರೀ ಎಸ್. ಗೋಪೀಚಂದ ರಾವ್
ಪುಟಗಳು 126 ಬೆಲೆ. ರೂ. 1-50
ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.
ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ತೇದ ಶ್ರೀಚಂದನದ ತಿರುಳು

ತ್ಯಾಗಕ್ಕೆ ಬೇರೊಂದು ಹೆಸರು ಶ್ರೀ ಉಮೇಶರಾಯರು

[ಲೇಖಕರು : ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.]

ವಿಜಯೀ ವಿಶ್ವತಿರಂಗಾ ಪ್ಯಾರಾ
ಝಂಡಾ ಊಂಚಾ ರಹೇ ಹಮಾರಾ.

೦ ೦ ೦

ಮಾತೃ ಭೂಮಿ ಜನನಿ ನಿನ್ನ-ಚರಣ
ಸೇವೆ ಮಾಡುವ;
ಪರಮ ಹರುಷದಿಂದ ನಿನ್ನ— ಸುಖಕೆ
ಪ್ರಾಣ ನೀಡುವ!

ಭಾವನೆಯ ಉದ್ವೇಗದಿಂದ, ತುಂಬಿದ ಹೃದಯದಿಂದ, ಶಾಂತವೂ ವೀರವೂ ಮಿಶ್ರವಾದ ನೂತನ ರಸಾವೇಶದಿಂದ, ಪೌರುಷ ಪೂರ್ಣವಾದರೂ ಮಧುರ ಕಂಠದಿಂದ ಮೇಲಿನ ಹಾಡಿನ ಪಲ್ಲವಿಗಳು, ಮುಂಜಾವಿನಿಂದ ಸಂಜೆಯ ವರೆಗೆ ಪ್ರತಿ ದಿನವೆಂಬಂತೆ, ದಕ್ಷಿಣ ಕನ್ನಡ ಜಿಲ್ಲೆಯ, ವಿಶೇಷವಾಗಿ ಕಾಸರಗೋಡು ತಾಲೂಕಿನ ನಗರ ಗ್ರಾಮಗಳ ಬೀದಿ ಬಯಲುಗಳಲ್ಲಿ ೧೯೨೦ರ ಮೊದಲ್ಗೊಂಡು ೧೯೪೭ರ ತನಕ ನಿರಂತರ ನಿನದಿಸುತ್ತಿದ್ದುವು! ಧ್ವಜ ವಂದನ, ಮೆರವಣಿಗೆ, ಸಭೆ, ಪಿಕೆಟಿಂಗ್, ಸತ್ಯಾಗ್ರಹ, ಲಾಠಿ ಹೊಡೆತ, ಸೆರೆಮನೆ ಸಂಕಷ್ಟ—ಈ ಎಲ್ಲಾ ಸಂದರ್ಭಗಳಲ್ಲಿ ಯೂ ಮುನ್ನಿಂತು ಮೇಲಿನ ಪಲ್ಲವಿಯನ್ನು ಸ್ಫೂರ್ತಿಮಯವಾಗಿ ಹಾಡುತ್ತಿದ್ದವರು, ಕಷ್ಟ ನಿಷ್ಠುರಗಳನ್ನು ಜೀವನದುದ್ದಕ್ಕು ವಿಷಕಂಠನಂತೆ ನುಂಗಿಕೊಂಡು ಸಮ್ಮುಖದಿಂದಲೇ ಮುಂದ ಸಾಗುತ್ತಿದ್ದವರು, ಜನತೆಯನ್ನು ಸ್ವಾತಂತ್ರ್ಯದ ದೇಗುಲದ ಕಡೆಗೆ ಮುನ್ನಡಸಿದವರು—ಶ್ರೀ ಎಂ. ಉಮೇಶರಾಯರು! ತನ್ನ ಜೀವನದ ಪರಮ ಲಕ್ಷ್ಯ ಇಂದು ಪ್ರಾಪ್ತಿಯಾಯಿತು. ಭಾರತ ಭೂಮಿಗೆ, ಮಾತೃ ಭೂಮಿಗೆ ಸ್ವಾತಂತ್ರ್ಯ ಸಿಕ್ಕಿತು ಎಂಬ ಆತ್ಮ ತೃಪ್ತಿಯಿಂದ, ಇಂದು ಈ ಇಳಿ ವಯಸ್ಸಿನಲ್ಲಿ ಅನಾರೋಗ್ಯದಿಂದ ದೇಹ ದುರ್ಬಲವಾಗಿದ್ದರೂ, ತನ್ನ ತ್ಯಾಗದ ದುಡಿತದ ಫಲವಾಗಿಯೂ ಸ್ವಾತಂತ್ರ್ಯ ಪ್ರಾಪ್ತವಾದಾಗ ಸುಖ ಸುಪ್ಪತ್ತಿಗೆಯಿಂದ ದೂರವಾಗಿರುವುದು, ಮಾತ್ರವಲ್ಲದ ಮುಳ್ಳಿನ ಹಾಸಿಯಲ್ಲಿ ಮಲಗಿಕೊಂಡಿದ್ದರೂ ಹಸನ್ಮುಖಿಗಳಾಗಿಯೇ ಇದ್ದು—ಕಾಸರಗೋಡಿನ ತನ್ನ ಹಳೆಯ ನಿವಾಸದಲ್ಲಿ ಮೌನವಾಗೂ ಶಾಂತ ಜೀವನ ನಡೆಸುತ್ತಿರುವವರು ಶ್ರೀ ಮೂಡಬಿದ್ರೆ ಉಮೇಶರಾಯರು! ಎಂತಹ ಜೀವನದ ಆದರ್ಶ, ಅಪೂರ್ವ; ಎಂತಹ ತ್ಯಾಗಮಯ ಜೀವನ ದೃಷ್ಟಿ ಸಹಜವಾಗಿಯೂ ಭವ್ಯ ಹಾಗೂ ಅವಿಸ್ಮರಣೀಯ!

ಊರಿನ ಹಿರಿಯರನ್ನು ಗೌರವಿಸುವ ಸಂಪ್ರದಾಯ ಇಟ್ಟುಕೊಂಡಂತೆ, ಈ ವರ್ಷದ ಪಂಚಾಯತ್ ವರ್ಧಂತ್ಯುತ್ಸವದಂದು ಶ್ರೀ ಉಮೇಶರಾಯರನ್ನು ಆಮಂತ್ರಿಸಿ ಸತ್ಕರಿಸಬೇಕೆಂದು ನಮ್ಮ ಬದಿಯಡ್ಕ ಪಂಚಾಯತ್ ನಿರ್ಣಯ ಮಾಡಿತು. ಇತ್ತೀಚೆಗ ರಾಜಕೀಯ ಹಾಗೂ ಸಾರ್ವಜನಿಕ ಕಾರ್ಯಕಲಾಪಗಳಿಂದ ದೂರವಾಗಿ ವಿಶ್ರಾಂತ ಜೀವನವನ್ನು ಮಾಡುತ್ತಿರುವ ಅವರನ್ನು ಈ ಕಾರ್ಯಕ್ಕೆ ಒಪ್ಪಿಸುವ ಭಾರ ನನ್ನ ಮೇಲೆ ಬಿದ್ದಿತು. ನಿರ್ವಿಕಾರವಾದ ಯಾವುದೋ ವಾತ್ಸಲ್ಯ, ನನ್ನ ಕುರಿತು ಅವರಿಗೆ ಮೊದಲಿಂದಲೇ ಇತ್ತು ಎನ್ನುವ ಧೈರ್ಯದಿಂದ ಆ ರಾಯಭಾರ ಹೊತ್ತು ರಾಯರ ಮನೆಗೆ ಹೋದೆನು. ಒಳಗೆ ಮಂಚದ ಮೇಲೆ ಅವರು ಮಲಗಿದ್ದರೆಂದು ತೋರುತ್ತದೆ ಪುತ್ರರೊಬ್ಬರು ಹೊರಗೆ ಓದುತ್ತಿದ್ದರು. ಹಿರಿಯವನು ಒಳಹೋಗಿ ನಾನು ಬಂದ ವಿಷಯವನ್ನು ತಿಳಿಸಿದನು. ಅವರಿಗೆ ತ್ರಾಸ ಕೊಟ್ಟೆನೇ ಎಂಬ ಅಳುಕು ಒಮ್ಮೆ ಆಯಿತು. ಆದರೆ ಅದೇ ಹಸನ್ಮುಖದಿಂದ ನನ್ನನ್ನು ಅವರು ಸ್ವಾಗತಿಸಿದರು. ಕುಶಲ ಸಮಾಚಾರ ಕೇಳಿದರು. ವಯಸ್ಸು ಹಾಗೂ ಅನಾರೋಗ್ಯಗಳಿಂದ ಶರೀರ ದುರ್ಬಲವಾಗಿದ್ದರೂ ತುಂಬ ಹೊತ್ತು ಮಾತನಾಡಿದರು.

ಕೊನೆಗೆ ನಾನು ಬಂದ ವಿಷಯವನ್ನು ಪ್ರಸ್ತಾಪಿಸಿದೆನು:

'ನಮ್ಮ ಕರ್ತವ್ಯವೆಂಬ ದೃಷ್ಟಿಯಿಂದ ನಾವು ನಿಮ್ಮನ್ನು ಸತ್ಕರಿಸಲು ನಿರ್ಣಯಿಸಿದ್ದೇವೆ. ಶರೀರಕ್ಕೆ ತ್ರಾಸ ಆಗದಿದ್ದರೆ ದಯಮಾಡಿ ನೀವು ಸಂತೋಷದಿಂದ ಸಮ್ಮತಿ ಕೊಡಬೇಕು' ಎಂದು ಕೇಳಿಕೊಂಡೆನು"

"ಹಿಂದೆ ನಾನೇನೋ ಕೆಲಸ ಮಾಡಿದ್ದೇನೆ, ಜೀವನ ನಾಟಕದ ಆ ದೃಶ್ಯ ಮುಗಿದು ಹೋಯಿತಲ್ಲಾ! ಇಂದಿನದು ಈ ದೃಶ್ಯ. ನನ್ನ ಆ ಹಿಂದಿನ ಕೆಲಸಗಳನ್ನು ನೆನಪಿಟ್ಟು ನೀವು ನನ್ನನ್ನು ಗೌರವಿಸುತ್ತೀರೆಂದರೆ ಆಗಲಿ" ಎಂದರು. ಈ ಮಾತು ಹೇಳುವಾಗ ವಯಸ್ಸು ಅನಾರೋಗ್ಯಗಳಿಂದ ಕ್ಷೀಣಿಸಿದ್ದ ಕಂಠ ಧ್ವನಿ ಇನ್ನಷ್ಟು ಕುಂಠಿತವಾಗಿತ್ತು, ಆದರೆ ಅದೇ ನಗುಮೊಗದ ಕಾಂತಿ ಮಿನುಗುತ್ತಿತ್ತು.

ಶ್ರೀ ಉಮೇಶರಾಯರು ನೂರಕ್ಕೆ ನೂರು ಕಾಸರಗೋಡಿನವರು. ಅವರ ಹಿರಿಯರು ಮೂಡಬಿದಿರೆಯ ಚೌಟ ಮನೆತನದ ಕರಣಿಕರಾಗಿದ್ದರು. ಅವರ ದೊಡ್ಡ ತಂದೆ ಶ್ರೀ ಸುಬ್ಬರಾಯರು ಕಾಸರಗೋಡಿನಲ್ಲಿ ವಕೀಲ ವೃತ್ತಿ ಕೈಗೊಂಡಾಗ ಅವರ ಜೊತೆ ಇಲ್ಲಿ ಬಂದು ನೆಲಸಿದರು. ಶ್ರೀ ಉಮೇಶರಾಯರ ತಂದೆಯವರು ಇಲ್ಲಿ ಮುನ್ಸೀಫ್ ಕೋರ್ಟಿನಲ್ಲಿ ಅಮೀನರಾಗಿ ಉದ್ಯೋಗ ಪ್ರಾರಂಭಿಸಿ ಗುಮಾಸ್ತರಾಗಿ ನಿವೃತ್ತಿ ಹೊಂದಿದರು. ೧೮೯೮ನೇ ಅಕ್ಟೋಬರ ೨೫ರಂದು ಕಾಸರಗೋಡಿನಲ್ಲಿ ಜನಿಸಿದ ಶ್ರೀ ಉಮೇಶರಾಯರು ತನ್ನ ಜೀವನದ ಬಹು ಭಾಗವನ್ನು ಇಲ್ಲಿಯೇ ಸಾರ್ವಜನಿಕ ಸೇವೆಗೈದು—ದೇಶವನ್ನು ನಾಡ ಸೇವೆಗಾಗಿ ಸವೆಸಿದ್ದರೂ ಅವರ ಹೆಸರಿನ ಪ್ರಾರಂಭದ 'ಎಂ' ಮೂಡಬಿದಿರೆಯು ತನ್ನ ಹಿರಿಯರ ನೆಲೆಯ ದ್ಯೋತಕವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಾರಸ್ವತ ಸಮಾಜದವರು ಅವರು ಹಳ್ಳಿಯಲ್ಲಿ ಅಥವಾ ಡಿಲ್ಲಿಯಲ್ಲಿ ಎಲ್ಲಿಯೇ ನೆಲಸಿರಲಿ—ಅಭಿಮಾನಪೂರ್ವಕ ಮನೆತನದ ಹೆಸರನ್ನು ಇಟ್ಟುಕೊಳ್ಳುತ್ತಾರೆ. ಪುತ್ತೂರಲ್ಲಿದ್ದರೂ ಉಗ್ರಾಣರಾಗಿ, ಮಂಗಳೂರಲ್ಲಿದ್ದರೂ ಗುಲ್ವಾಡಿಯವರಾಗಿ, ಡಿಲ್ಲಿಯಲ್ಲಿದ್ದರೂ ಬೆನಗಲರಾಗಿ— ತಮ್ಮ ಹಿರಿಯರ ಹೆಸರನ್ನು ಮೆರೆಸುವ ಹೆಮ್ಮೆ ಅವರದು!

ಶ್ರೀ ಉಮೇಶರಾಯರ ಪ್ರಾಥಮಿಕ ವಿದ್ಯಾಭ್ಯಾಸ ಕಾಸರಗೋಡಿನಲ್ಲಿಯೇ ಆಯಿತು. ಒಂದು ವರ್ಷ ಕುಂದಾಪುರದಲ್ಲಿ ಶಾಲೆಗೆ ಹೋಗಿ ಮುಂದೆ 1911ರಿಂದ 1914ರ ತನಕ ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಹೈಸ್ಕೂಲಲ್ಲಿ ಓದಿದರು. ಹುಟ್ಟಿನಿಂದಲೇ ಕಷ್ಟ ಕಾರ್ಪಣ್ಯ ಬೆನ್ನಟ್ಟಿ ಬಂದಿತ್ತು. ಕಲಿಯುವುದರಲ್ಲಿ ಚುರುಕು ಇದ್ದುದರಿಂದ ಬಡ ವಿದ್ಯಾರ್ಥಿ ವೇತನವೊಂದು ದೊರಕಿತು. ಶ್ರೀಮಂತರಾದ ಸರ್ವ ಸಂಬಂಧಿಕರ ಮನೆಯಲ್ಲಿ ಊಟದ ವ್ಯವಸ್ಥೆಯಾಗಿತ್ತು. ಹಾಗೆ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ ಕಾಲೇಜನ್ನು ಸೇರಿದರು. ಹಿಂದಿನಂತೆ, ಬಡ ವಿದ್ಯಾರ್ಥಿ ವೇತನ, ಅಧ್ಯಾಪಕರ ನೆರವು ಅದರಲ್ಲೂ ಶ್ರೀ ಸುಜೀರ್ ಉಪಾಧ್ಯಾಯರೆಂಬ ಉದಾರಿಗಳಿಂದ ಉಪಾಧ್ಯಾಯರ ಆರ್ಥಿಕ ಸಹಾಯ, ಆ ಮೇಲೆ ಮಾವನವರಿಂದ ದೊರೆತ ಬೆಂಬಲ—ಇವೆಲ್ಲವುಗಳಿಂದ ಕಷ್ಟದಲ್ಲಾದರೂ ವಿದ್ಯಾಭ್ಯಾಸ ಮುಂದುವರಿಯಿತು. ಮುಂದೆ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಬಿ. ಎ. ತರಗತಿಯಲ್ಲಿ ಓದುತ್ತಿದ್ದಾಗ ಅವರಿಗೆ ಭಾಷಣಕ್ಕಾಗಿ ಒಂದು ಬಂಗಾರದ ಮೆಡಲು ಬಹುಮಾನವಾಗಿ ದೊರಕಿತ್ತು! ಆ ಕಾಲದಲ್ಲಿ ಶ್ರೀ ಉಮೇಶರಾಯರ ಜೀವನದಲ್ಲಿ ಗಾಢವಾದ ಪರಿಣಾಮವನ್ನುಂಟುಮಾಡಿದ ಒಂದು ಘಟನೆಯನ್ನವರು ಈ ರೀತಿ ಹೇಳಿದರು:

"ಆರ್ಥಿಕ ಕಷ್ಟದಿಂದ ಕಾಲೇಜು ವಿದ್ಯಾಭ್ಯಾಸ ಮುಂದುವರಿಸುವುದು ತೀರಾ ಅಸಾಧ್ಯವಾಗುತ್ತಿತ್ತು. ಕಾಲೇಜಿನಲ್ಲಿ ಒಂದು ವಿದ್ಯಾರ್ಥಿ ವೇತನ ಇತ್ತು. ಅದಕ್ಕೆ ನಾವು ಇಬ್ಬರು ಉಮೇದ್ವಾರರಿದ್ದೆವು. ಪ್ರಿನ್ಸಿಪಾಲರು ನಮ್ಮಿಬ್ಬರನ್ನು ಕರೆದು ಆ ವೇತನದ ಹಣವನ್ನು ಹಂಚಿ ಕೊಡುವುದಾಗಿ ಹೇಳಿದರು. ಆಗ ಪ್ರಿನ್ಸಿಪಾಲರೊಡನೆ ನಾನು ಹೇಳಿದೆ— 'ಸ್ವಾಮಿ, ಅರ್ಧ ಹಣ ಸಿಕ್ಕಿದರೂ ನನಗೆ ವಿದ್ಯಾಭ್ಯಾಸ ಮುಂದುವರಿಸುವುದು ಸಾಧ್ಯವಾಗದು. ನನ್ನ ಸಹಪಾಠಿ ಅದರ ಪೂರ್ಣ

(ಪತ್ತನೇ ಪುಟ ನೋಡಿರಿ)

ಹಣದ ಗಿಲಿ ಗಿಲಿ ನಿನಾದವು
ನಿಮಗೆ ಮೆಚ್ಚಿಗೆಯಿಲ್ಲವೇ ?



ಜೀವಮಾನದ ಮುಂದಿನ ದಿನಗಳಲ್ಲಿ ನೀವು ಸಂಪತ್ತಿನಲ್ಲಿರುವ ಕಲ್ಪನೆಯು ಎಷ್ಟೊಂದು ಆಹ್ಲಾದಕರವಾದುದು! ಇದಕ್ಕೆ ನೀವು ಮಾಡಬೇಕಾದದ್ದು ಉಳಿತಾಯದ ಯೋಜನೆ. ಪ್ರತೀ ತಿಂಗಳ ಆದಿಯಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿಸಿರಿ . . . ನಿಮ್ಮ ಮಿಗಿತಾಯವು ಬೆಳೆಯುತ್ತಿರುವುದನ್ನು ಅವಲೋಕಿಸಿರಿ ಕೆಲವು ವರ್ಷಗಳಲ್ಲಿ ನಿಮ್ಮ ಉಳಿತಾಯ ಸಂಕುಲದ ನಾದ ಮಾಧುರ್ಯದಿಂದ ರೋಮಾಂಚನಗೊಳ್ಳುವಿರಿ— ಕಾರಣ, ಸುಖಕರವಾದ ಜೀವನದ ಭರವಸೆಯನ್ನು ಅದು ಧ್ವನಿಸುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು:
200ಕ್ಕೂ ಮಿಕ್ಕಿ

ಚಲಾವಣಾ ನಿಧಿ:
ರೂ. 70 ಕೋಟಿಗೂ ಮಿಕ್ಕಿ.

ಅಮೆರಿಕದ ಪ್ರಮು

ಐದು ಮಾನವ ಸಹಿತ

ಅಮೆರಿಕ ೧೯೬೫ರಲ್ಲಿ ನಡೆಸಿದ ಗಗನ ಸಾಹಸಗಳಲ್ಲಿ ಮಾನವ ಸಹಿತವಾದ ಐದು ಗಗನ ಹಾರಾಟಗಳು ಮತ್ತು ಮ್ಯಾರಿನರ್—೪ರಿಂದ ಮಂಗಳ ಗ್ರಹದ ಸಮೀಪಾನ್ವೇಷಣೆ ಇವು ಬಹು ಮುಖ್ಯವಾದವು. ಈ ಹಿಂದೆ ಎಂದೂ ಒಂದೇ ವರ್ಷದಲ್ಲಿ ಐದು ಮಾನವಸಹಿತ ಹಾರಾಟಗಳು ನಡೆದಿಲ್ಲ.

ಇಬ್ಬರು ಮಾನವರಿಂದ ಕೂಡಿದ ಜೆಮಿನಿ ಗಗನಯಾನ ಬಹು ಯಶಸ್ವಿಯಾಗಿ, ೧೯೬೯ರಲ್ಲಿ ಚಂದ್ರನನ್ನು ತಲುಪಬೇಕೆಂಬ ಉದ್ದೇಶಕ್ಕೆ ಪೋಷಕವಾಗಿ ಬಹು ಮುಖ್ಯವಾದ ಗಗನ ತಂತ್ರವೊಂದನ್ನು ಗಳಿಸಿಕೊಟ್ಟಿತು.

ಚಂದ್ರಗ್ರಹ ಯಾತ್ರೆಗೆ ಸಂಬಧಿಸಿದ ಮಾನವ ಸಹಿತ ಹಾಗೂ ಮಾನವ ರಹಿತ ಹಾರಾಟಗಳಲ್ಲಿ ಅಮೆರಿಕ ಸೋವಿಯೆತ್ ರಷ್ಯಕ್ಕಿಂತ ಮುಂದಿದೆ ಎಂಬುದು ನಿಜ. ರಷ್ಯ ೧೯೬೫ರಲ್ಲಿ ಮಾನವ ಸಹಿತವಾದ ಒಂದು ಹಾರಾಟವನ್ನು ಮಾತ್ರ ನಡೆಸಿತು; ೧೯೬೪ರಲ್ಲಿ ನಡೆಸಿದುದರ ಎರಡರಷ್ಟು ಎಂದರೆ ೪೬ ಪ್ರಾಯೋಗಿಕ ಉಪಗ್ರಹಗಳನ್ನು ಹಾರಿಸಿತು. ಈ ಪ್ರಯತ್ನ ಪ್ರಾಯಶಃ ಚಂದ್ರನನ್ನು ಮುಟ್ಟಿದ, ಅವನಿಗೆ ಪ್ರದಕ್ಷಿಣೆ ಹಾಕಿ ಭೂಮಿಗೆ ಮರಳುವ ಉದ್ದೇಶಕ್ಕಿರಬಹುದು.

ಮಂಗಳನ ಮೇಲ್ಮೈ ಕೂಡಾ ಚಂದ್ರನಂತೆ ಜ್ವಾಲಾಮುಖಿಯ ಬಾಯಿಗಳಿಂದ ಕೂಡಿದೆಯೆಂದು ವಿಜ್ಞಾನಿಗಳು ಮ್ಯಾರಿನರ್ ತೆಗೆದ ಮಂಗಳನ ಛಾಯಾ ಚಿತ್ರಗಳಿಂದ ಲೆಖ್ಖ ಹಾಕಿದ್ದಾರೆ. ಇದನ್ನು ವ್ಯಾನ್ ಅಲೆನ್ ರೇಡಿಯೇಷನ್ ಪಟ್ಟಿಯ ಪತ್ತೆಯ ನಂತರದ ಅತಿಮುಖ್ಯವಾದ ಗಗನ ಶೋಧನೆ ಎನ್ನಬಹುದು.

ಮ್ಯಾರಿನರ್ ತೆಗೆದ ಮಂಗಳನ ೨೧ ಛಾಯಾ ಚಿತ್ರಗಳು ಆ ಗ್ರಹದ ಧ್ರುವದಿಂದ ಧ್ರುವದ ವರೆಗಿನ ಪ್ರದೇಶವನ್ನೆಲ್ಲ ಒಳಗೊಂಡಿವೆ. ಮಂಗಳನಿಗೆ ತೆಳುವಾದ ವಾತಾವರಣ ಇದೆಯೆಂಬ ಸಂಗತಿಯನ್ನು ಕೂಡ ಮ್ಯಾರಿನರ್ ಅನಿರೀಕ್ಷಿತವಾಗಿ ಪತ್ತೆ ಮಾಡಿತು. ತತ್ಫಲವಾಗಿ ರೇಡಿಯೇಷನ್ ಆಘಾತಕ್ಕೆ ಒಳಗಾದ ಈ ಗ್ರಹದಲ್ಲಿ ಜೀವವಿರಲಾರದೆಂಬ ಸಂಶಯ ಉತ್ಪನ್ನವಾಯಿತು. ಆದರೆ ಮಂಗಳನಲ್ಲಿ ಜೀವವಿರುವ ಅಥವಾ ಇಲ್ಲದಿರುವ ಪ್ರಶ್ನೆ ಇನ್ನು ಮುಂದಿನ ಗಗನಯಾನಗಳಿಂದ ಪರಿಹಾರವಾಗಬೇಕಾಗಿದೆ. ಮ್ಯಾರಿನರ್ ಮಂಗಳನ ಎಡೆಯಿಂದ ೧೫ ಕೋಟಿ ಮೈಲಿಗಳ ದೂರದಲ್ಲಿದ್ದ ಭೂಮಿಗೆ ಯಶಸ್ವಿಯಾಗಿ ಛಾಯಾಚಿತ್ರಗಳನ್ನು ಕಳಿಸಿಕೊಟ್ಟದ್ದು ಗಗನಯುಗದ ಅಸಮಾನ ತಾಂತ್ರಿಕ ಸಿದ್ಧಿಯೆನಿಸಿದೆ.

೧೯೬೪ರ ನವೆಂಬರ್ ೨೮ರಲ್ಲಿ ಹಾರಿಸಲ್ಪಟ್ಟ ಮ್ಯಾರಿನರ್—೪, ೧೯೬೫ರ ಜುಲೈ ೧೪ರಂದು ಮಂಗಳನನ್ನು ದಾಟಿಹೋಗುವವರೆಗೆ ೭ ತಿಂಗಳ ಅವಧಿಯಲ್ಲಿ ೩೨.೫ ಕೋಟಿ ಮೈಲಿಗಳನ್ನು ಕ್ರಮಿಸಿತು.

ಮಾರ್ಚ್, ಜೂನ್, ಆಗಸ್ಟ್ ಹಾಗೂ ಡಿಸಂಬರ್ ತಿಂಗಳುಗಳಲ್ಲಿ ೫ ಜೆಮಿನಿ ಹಾರಾಟಗಳು ನಡೆದವು. ಇವುಗಳಿಂದ ಕಕ್ಷೆಯಲ್ಲಿರುವ ಎರಡು ಯಾನಗಳನ್ನು ವಾಸ್ತವವಾಗಿ ಕೂಡಿಸುವ ಸಾಧನೆಯೊಂದನ್ನು ಬಿಟ್ಟು ಕಾರ್ಯಕ್ರಮದ ಉಳಿದ ಉದ್ದೇಶಗಳಲ್ಲಿ ಅರ್ಧದಷ್ಟು ಸಾಧಿತವಾಯಿತು.

೧೯೬೬ರಲ್ಲಿ ಇನ್ನೂ ಉಳಿದಿರುವ ಜೆಮಿನಿಯ ಐದು ಹಾರಾಟಗಳು ನಡೆಯಲಿವೆ. ಈ ಪ್ರಯತ್ನಗಳಲ್ಲಿ ಎಜಿನ ವಾಹನಗಳೊಂದಿಗೆ ಕೂಡಿಕೊಳ್ಳುವ, ನಿಕಟಾನುವರ್ತಿ ಹಾರಾಟವನ್ನು ಸಂಸ್ಕಾರಗೊಳಿಸುವ, ಚಂದ್ರಯಾತ್ರೆಯಲ್ಲಿ ಬಳಸಬೇಕಾಗುವ ಚಳಕಗಳ ಅನುಕರಣೆಗಳನ್ನೂ ನಡೆಸಲಾಗುವುದು.

ಅಮೆರಿಕದ ಚಂದ್ರಯಾತ್ರಿಕರ ಸುರಕ್ಷಿತ ಗಮನಾಗಮನಕ್ಕೆ ನಿಕಟಾನುವರ್ತಿ ಹಾರಾಟ ಹಾಗೂ ಕೂಡಿಕೆ ಅವಶ್ಯ. ಚಂದ್ರನ ಮೇಲ್ಮೈಯನ್ನು ಪರಿಶೀಲಿಸಿದ ಮೇಲೆ ಗಗನಯಾನಿಗಳು ಭೂಮಿಗೆ ಮರಳಲು ರಾಕೆಟ್ ಹಾರಿಸಿ ಚಂದ್ರನಿಗೆ ಪ್ರದಕ್ಷಿಣೆ ಹಾಕುತ್ತಿರುವ ಅಪಾಲೋ ಮಾತೃ ಯಾನಕ್ಕೆ ಚಂದ್ರಯಾತ್ರೆಯ ವಾಹನದಲ್ಲಿ ಹಿಂತಿರುಗಬೇಕು.

೧೯೬೫ರ ಜೆಮಿನಿ ಹಾರಾಟಗಳು ಈ ಪ್ರಥಮಗಳನ್ನು ಸಾಧಿಸಿದವು:—

—ಗಗನಯಾನದ ಕಕ್ಷೆಯ ಬದಲಾವಣೆ (ಮಾರ್ಚ್ ೨೩ನೇ ತಾರೀಕು ವರ್ಜಿಲ್ ಗ್ರಿಸ್ಸಂ ಮತ್ತು ಜಾನ್‌ಯಂಗ್ ಇದನ್ನು ಪ್ರಥಮತಃ ಸಾಧಿಸಿದರು. ಅನಂತರ ಈ ಚಳಕವನ್ನು ಅನಂತರದ ಎಲ್ಲಾ ಜೆಮಿನಿ ಹಾರಾಟಗಳಲ್ಲೂ ಪುನರಾವರ್ತಿಸಲಾಯಿತು.)

—ಚಾಲಕ ಬಂದೂಕದ ಸಹಾಯದಿಂದ ಹತೋಟಿಯಲ್ಲಿ, ಗಗನ "ಓಡಾಟ" (ಜೂನ್ ೩ರಿಂದ ೭ರ ವರೆಗಿನ ಜೆಮಿನಿ-೪ರ ಹಾರಾಟದಲ್ಲಿ ಎಡ್ವರ್ಡ್ ವೈಟ್ ಈ ಚಳಕವನ್ನು ನಡೆಸಿದರು.)

—ಚಂದ್ರನಲ್ಲಿ ಇಳಿದು ಭೂಮಿಗೆ ಮರಳಲು ಬೇಕಾಗುವಷ್ಟು ಅವಧಿಯ ಗಗನಯಾನವನ್ನು ಮಾನವರು ಸಹಿಸಿ, ಆ ಕಾಲದಲ್ಲಿ ಕಾರ್ಯ ನಿರ್ವಾಹ ಮಾಡಬಲ್ಲರೆಂಬ ಸಂಗತಿಯ ಸಮರ್ಥನೆ. (ಆಗಸ್ಟ್ ೨೧ರಿಂದ ೨೯ರ ವರೆಗೆ ಗಾರ್ಡನ್ ಕೂಪರ್ ಮತ್ತು ಚಾರ್ಲ್ಸ್ ಕಾನ್ರಾಡ್ ಜೆಮಿನಿ—೫ರಲ್ಲೂ, ಫ್ರಾಂಕ್ ಬೋರ್ಮನ್ ಮತ್ತು ಜೇಂಸ್ ಲೋವೆಲ್ ಡಿಸೆಂಬ ೪ರಿಂದ ೧೮ರ ವರೆಗೆ ಜೆಮಿನಿ—೭ರಲ್ಲೂ ರುಜುಪಡಿಸಿದರು.)

—ಗಗನದಲ್ಲಿರುವ ಯಾನವನ್ನು ದ ರದಿಂದ ಗುರುತಿಸಿ ಅದನ್ನು ಹಿಂಬಾಲಿ ಆದರ ಕೆಲವೇ ಅಡಿಗಳಷ್ಟು ಸಮೀಪ ಹೋಗುವುದು ಸಾಧ್ಯ. (ಜೆಮಿನಿ-೬ ಮತ್ತು ಜೆಮಿನಿ—೭ರ ಹಾರಾಟಗ ವಾಲ್ಟರ್ ಶಿರಾ ಮತ್ತು ಥಾಮಸ್ ಸ್ ಫರ್ಡ್‌ರಿಂದ ಡಿಸೆಂಬರ್ ೧೫ರಂದು).

ನಾಲ್ಕು ದಿನ, ಎಂಟು ದಿನ ಹಾಗ ಪ್ರಪಂಚ ದಾಖಲೆಯಾದ ೧೪ ದಿನಗ ಜೆಮಿನಿ ಹಾರಾಟಗಳಲ್ಲಿ ಮಾನವನ ಗ ನ ಹಾರಾಟದ ಒಟ್ಟಿನ ಅನುಭವಗಳ ಅಮೆರಿಕ ರಷ್ಯವನ್ನು ಬಹುವಾಗಿ ಮೀ ಸಿತು. ರಷ್ಯದ ಮಾನವ ಸಹಿತವಾದ ಎಲ್ಲಾ ಗಗನ ಹಾರಾಟಗಳ ಒಟ್ಟು ಅವ ೫೩೬ ಮಾನವ ಗಂಟೆಗಳಾದರೆ ಜೆಮಿನಿ—೭ರ ಸಾಂಥಿಗಳಾದ ಬೋರ್ಮನ್ ಮತ್ತು ಲೋವೆಲ್‌ರದು ೬೬೧ ಮಾನವ ಗಂ ಗಳು.

ಈ ವರ್ಷದಲ್ಲಿ ಅಮೆರಿಕ ಎರಡು ಸ ಇದು ವರೆಗೆ ಹಾರಿಸಲಾದ ರಾಕೆಟ್‌ಗ ಲ್ಲೆಲ್ಲ ಅತ್ಯಂತ ಬಲಿಷ್ಠವಾದ ೧೯೬೮ ರಕ್ಷಣಾ ಶಾಖೆಯ ಮಾನವ ಸಹಿತವಾ ಪ್ರಯೋಗ ಶಾಲೆಯನ್ನು ಕಕ್ಷೆಗೇರಿಸು ಸಲುವಾಗಿ ಸಿದ್ಧಪಡಿಸಲಾಗುತ್ತಿರುವ ಲಕ್ಷ ಪೌಂಡುಗಳ ಮಾಕುವ ಶಕ್ತಿ

ಜೆಮಿನಿ ೭ ಉಪಗ್ರಹದ ಚಾಲಕರು: ಜೇಮ್ಸ್ ಲೊವೆಲ್ ಮತ್ತು ಫ್ರಾಂಕ್ ಬರ್ಮನ್ (ಮೇಲ್ಗಡೆ)
ಜೆಮಿನಿ ೬ ರ ಚಾಲಕರು: ಟಾಂಸ್ಟಫರ್ಡ್ ಮತ್ತು ವೆಲ್ಲಿಸ್ಕಿರಾ.

ಜೆಮಿನಿ—೩ ಉಪಗ್ರಹದ ಗಗನ ಯಾತ್ರಿಗಳಾದ ಥಾಮಸ್ ಗ್ರಿಸಂ ಮತ್ತು ಜಾನ್‌ಯಂಗ್ (ಕುಳಿತಿರುವವರು) ಇವರೊಡನೆ

ಗಗನ ಸಾಧನೆಗಳು

...ಮಂಗಳನ ಅನ್ವೇಷಣೆ

ಟೈಟಾನ್ ೩–ಸಿ ರಾಕೆಟ್ ಎರಡನ್ನು ಹಾರಿಸಿತು.

ಜೂನ್ ೩ನೇ ತಾರೀಕು ನಡೆದ ಮೊದಲ ಹಾರಾಟದಲ್ಲಿ ಟೈಟಾನ್ ಪಂಪ್ಯಾರವಾಗಿ ಕೆಲಸ ಮಾಡಿತು. ಅಕ್ಟೋಬರ್ ಮಧ್ಯದಲ್ಲಿ ನಡೆದ ಎರಡನೆ ಹಾರಾಟದಲ್ಲಿ ಮೂರನೆ ಘಟ್ಟ ಯೋಜನೆಗನುಸಾರವಾಗಿ ಎಂಟು ಎಂಜಿನುಗಳನ್ನು ನಿಲ್ಲಿಸಿ ಮತ್ತೆ ಕಕ್ಷೆ ತಲುಪಿದ ಮೇಲೆ ಪುನರಾರಂಭಿಸುವ ಕಾರ್ಯವನ್ನು ನಿರ್ವಹಿಸದೆ ಹೋದುದರಿಂದ ಪೂರ್ಣ ಯಶಸ್ಸು ದೊರಕಲಿಲ್ಲ.

ಸ್ಯಾಟರ್ನ್—೧ ರಾಕೆಟ್ಟಿನ ಕಾರ್ಯಕ್ರಮ ಈ ವರ್ಷದಲ್ಲಿ ಮುಕ್ತಾಯವಾಯಿತು. ೪೫ ಟನ್ನುಗಳ ಅಪಾಲೋ ಯಾನವನ್ನು ಚಂದ್ರನಲ್ಲಿಗೆ ಕಳಿಸುವ ಸಲುವಾಗಿ ಸಿದ್ಧಪಡಿಸುತ್ತಿರುವ ದೈತ್ಯಾಕಾರದ ಸ್ಯಾಟರ್ನ್—೫ರ ಮೊದಲ ಆವೃತ್ತಿಯಾದ ೧೫ ಲಕ್ಷ ಪೌಂಡುಗಳ ನೂಕುವ ಶಕ್ತಿಯ ಈ ರಾಕೆಟ್ಟನ್ನು ಮೂರು ಸಾರಿ ಯಶಸ್ವಿಯಾಗಿ ಹಾರಿಸಲಾಯಿತು.

ಪ್ರತಿಯೊಂದು ಸಾರಿಯೂ ಸ್ಯಾಟರ್ನ್ ರಾಕೆಟ್ ದೈತ್ಯಾಕಾರದ ರೆಕ್ಕೆಗಳ ಪೆಗಾಸಸ್ ಉಪಗ್ರಹಗಳನ್ನು ಗಗನ ಧೂಳಿನಿಂದ ಗಗನಯಾನಗಳಿಗೆ ಆಗಬಹುದಾದ ಅಪಾಯಗಳ ಅಳತೆಗಾಗಿ ಕಕ್ಷೆಗೇರಿಸಿತು. ರೆಕ್ಕೆಯ, ಒಂದು ತುದಿಯಿಂದ ಇನ್ನೊಂದು ರೆಕ್ಕೆಯ ತುದಿಗೆ ೯೬ ಅಡಿಗಳಷ್ಟಿರುವ ದೈತ್ಯಾಕಾರದ ಈ ಉಪಗ್ರಹಗಳು ನಾಲ್ಕು ಮೋಟಾರುಗಳ ಸಾರಿಗೆ ವಿಮಾನಗಳಷ್ಟು ದೊಡ್ಡವು. ಕಕ್ಷೆಗೇರಿದ ಉಪಗ್ರಹಗಳಲ್ಲಿ ಇವೇ ಅತ್ಯಂತ ದೊಡ್ಡವು.

೧೯೬೧ರಲ್ಲಿ ಆರಂಭವಾದ ಸ್ಯಾಟರ್ನ್ ನಡೆದ ೧೦ ಉಡ್ಡಾವಣೆಗಳಲ್ಲೂ ಪರಿಪೂರ್ಣವಾದ ಯಶಸ್ಸನ್ನು ಗಳಿಸಿತು. ಅಮೆರಿಕದ ರಾಕೆಟ್ ಅಥವಾ ಬ್ಯಾಲಿಸ್ಟಿಕ್ ಕ್ಷಿಪಣಿಗಳಲ್ಲಿ ಒಂದು ಸಾರಿಯೂ ವಿಫಲವಾಗದ ರಾಕೆಟ್ ಇದೊಂದೇ. ಸ್ಯಾಟರ್ನ್ ಕಾರ್ಯಕ್ರಮದ ಮುಖ್ಯರಾದ ಡಾ|ವರ್ನರ್ ಬ್ರೌನ್ ಅವರು ವರ್ಷಾಂತ್ಯದಲ್ಲಿ ಗ್ರೀಸಿನಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡುತ್ತ, ಅಪಾಲೋ ಚಂದ್ರಕಾರ್ಯಕ್ರಮ ಶೇಕಡ ೫೦ರಷ್ಟು ಮುಗಿದಿದೆಯೆಂದೂ, ಪೂರ್ಣ ವೇಗದಲ್ಲಿ ಮುಂದುವರಿಯುತ್ತಿದೆಯೆಂದೂ ನುಡಿದರು.

೭೫ ಲಕ್ಷ ಪೌಂಡುಗಳ ನೂಕುವ ಶಕ್ತಿಯ ಸ್ಯಾಟರ್ನ್-೫ ಚಂದ್ರಯಾನದ ಯಶಸ್ವಿ ಪೂರ್ಣಾವಧಿ ಉಡ್ಡಾವಣೆಯೇ ಈ ಪ್ರಗತಿಗೆ ಸಾಕ್ಷಿ.

೧೯೬೫ರಲ್ಲಿ ಅಮೆರಿಕ ಸಾಧಿಸಿದ ಇತರ ಗಣನಾರ್ಹ ಸಾಧನೆಗಳು:—

ಮೊಟ್ಟ ಮೊದಲ ಬಾರಿಗೆ ಕಾರ್ಯನಿರ್ವಹ ಮಾಡುತ್ತಿರುವ ನ್ಯೂಕ್ಲಿಯರ್ ರಿಯಾಕ್ಟರ ಒಂದನ್ನು ಕಕ್ಷೆಗೇರಿಸಲಾಯಿತು. ಸೌರವ್ಯೂಹದ ಕೊನೆಯ ಅಂಚುಗಳಿಗೆ ಮಾನವನನ್ನು ಒಯ್ಯಬಲ್ಲ, ಸಂಪೂರ್ಣವಾಗಿ ನ್ಯೂಕ್ಲಿಯರ್ ಶಕ್ತಿಯಿಂದ ಕೆಲಸಮಾಡುವ ಯಾನಗಳ ರಚನೆಯ ಹಾದಿಯಲ್ಲಿ ಇದು ಮೊದಲ ಹೆಜ್ಜೆ.

—ಅರ್ಲಿ ಬರ್ಡ್ ಉಪಗ್ರಹದ ಕಕ್ಷಾಯಾತ್ರೆ ಪ್ರಪಂಚ ವ್ಯಾಪಕವಾದ ಉಪಗ್ರಹಗಳ ಮೂಲಕವಾದ ಸಂಪರ್ಕ ಸಾಧನ ವ್ಯವಸ್ಥೆಗೆ ಅಮೆರಿಕ ಹಾಗೂ ಇತರ ೪೪ ರಾಷ್ಟ್ರಗಳು ಕೈಗೊಂಡಿರುವ ಪ್ರಯತ್ನದಲ್ಲಿ ಮೊದಲನೆಯ ಹೆಜ್ಜೆ. ಅರ್ಲಿಬರ್ಡ್ ಉಪಗ್ರಹ ಅಟ್ಲಾಂಟಿಕ್ ಸಾಗರದ ಮೇಲೆ ೨೨,೩೦೦ ಮೈಲಿಗಳೆತ್ತರದಲ್ಲಿ ಒಂದೇ ನಿರ್ದಿಷ್ಟ ಸ್ಥಾನದಲ್ಲಿ ಸುತ್ತುತ್ತಿದೆ. ಈ ಉಪಗ್ರಹ ಅಟ್ಲಾಂಟಿಕ್ ಸಾಗರೋತ್ತರದ ಮೂಮೂಲಿ ಟೆಲಿವಿಷನ್ ಕಾರ್ಯಕ್ರಮಗಳನ್ನು ಟೆಲಿಫೋನು ಕರೆಗಳನ್ನೂ ಹಿಡಿದಾಡುತ್ತದೆ.

—ರೇಂಜರ್-೮ ಮತ್ತು ೯ ಉಪಗ್ರಹಗಳು ಮತ್ತಷ್ಟು ಚಂದ್ರನ ಸಮೀಪ ಚಿತ್ರಗಳನ್ನು ಒದಗಿಸಿವೆ. ರೇಂಜರ್ ಉಪಗ್ರಹ ಚಂದ್ರನಲ್ಲಿ ಬಿದ್ದುಹೋಗುವ ಕಡೆಯ ಘಳಿಗೆಯ ವರೆಗಿನ ಛಾಯಾಚಿತ್ರಗಳನ್ನು ಪ್ರಸರಿಸಲಾಯಿತು.

೧೯೬೫ರಲ್ಲಿ ರಾಷ್ಟ್ರೀಯ ವಾಯುಯಾನ ಹಾಗೂ ಗಗನಾಡಳಿತದವರು ನಡೆಸಿದ ೨೨ ದೊಡ್ಡ ಉಡ್ಡಾವಣೆಗಳಲ್ಲಿ ಮೂರು ಹೊರತು ಉಳಿದವೆಲ್ಲವೂ ಯಶಸ್ವಿಯಾದವೆಂದು ಹೇಳಲಾಗಿದೆ. ಜೆಮಿನಿ–೫ರ ಉಡ್ಡಾವಣೆಯ ರದ್ದು ಆಗಸ್ಟ್ ೩೦ಗಳನ್ನಲ್ಲಿ ಕಕ್ಷೆಗೇರದೆ ಹೋದ ಸೌರಾನ್ವೇಷಣೆಯ ಒಂದು ಉಪಗ್ರಹ, ಮಾರ್ಚ್ ೩೦ಗಳಲ್ಲಿ ವಿಫಲವಾದ ಅಟ್ಲಾಸ್ ಸೆಂಟಾರ್ ರಾಕೆಟ್ಟಿನ ಉಡ್ಡಾವಣೆ ಯತ್ನ-ಇವು ಅಯಶಸ್ವಿಯಾದ ಸಾಲಿನವು. ಆಗಸ್ಟ್ ೧೧ರಂದು ಹಾರಿಸಿದ ಎರಡನೇ ಅಟ್ಲಾಸ್ ಸೆಂಟಾರ್ ಶತಾಂಶ ಯಶಸ್ಸನ್ನು ಪಡೆಯಿತು. ಇದರಿಂದ ೧೯೬೬ರ ಆದಿಯಲ್ಲಿ ಉಪಕರಣಗಳಿಂದ ಸಜ್ಜಿತವಾದ ಸರ್ವೇಯರ್ ಗಗನಯಾನವೊಂದನ್ನು ಯಥಾಸ್ಥಿತಿಯಲ್ಲಿ ಚಂದ್ರನಲ್ಲಿ ಇಳಿಸಲು ಹಾದಿ ಶುದ್ಧವಾಯಿತು.



ಧೂಮಕೇತು ಸಂಶೋಧನೆಗಾಗಿ ಕಕ್ಷೆಯೇರಿಸಿದ ೩೦ ಮೀಟರ್ ವ್ಯಾಸವಿರುವ ಉಪಗ್ರಹ—ಪೆಗೋಸ್.

...ಾಲ್ಟರ್ ಷಿರಾ ಇವರು ವರ್ಜಿಲ್ ...ಕುರಿತು ಮಾತಾಡುತಿದ್ದಾರೆ.



ಅಂತರಿಕ್ಷದಲ್ಲಿ ಶಕ್ತಿ ಉತ್ಪಾದಿಸುವ ದುಡಿಯುವ ಕುದುರೆ— ಟೈಟನ್ ೩ ಸಿ ಉಪಗ್ರಹ

ಅಮೆರಿಕದ ಪ್ರಮ

ಐದು ಮಾನವ ಸಹಿ

ಅಮೆರಿಕ ೧೯೬೫ರಲ್ಲಿ ನಡೆಸಿದ ಗಗನ ಸಾಹಸಗಳಲ್ಲಿ ಮಾನವ ಸಹಿತವಾದ ಐದು ಗಗನ ಹಾರಾಟಗಳು ಮತ್ತು ಮ್ಯಾರಿನರ್—೪ರಿಂದ ಮಂಗಳ ಗ್ರಹದ ಸಮೀಪಾನ್ವೇಷಣೆ ಇವು ಬಹು ಮುಖ್ಯವಾದವು. ಈ ಹಿಂದೆ ಎಂದೂ ಒಂದೇ ವರ್ಷದಲ್ಲಿ ಐದು ಮಾನವಸಹಿತ ಹಾರಾಟಗಳು ನಡೆದಿಲ್ಲ

ಇಬ್ಬರು ಮಾನವರಿಂದ ಕೂಡಿದ ಜೆಮಿನಿ ಗಗನಯಾನ ಬಹು ಯಶಸ್ವಿಯಾಗಿ, ೧೯೭೦ರಲ್ಲಿ ಚಂದ್ರನನ್ನು ತಲುಪಬೇಕೆಂಬ ಉದ್ದೇಶಕ್ಕೆ ಪೋಷಕವಾಗಿ ಬಹು ಮುಖ್ಯವಾದ ಗಗನ ತಂತ್ರವೊಂದನ್ನು ಕಲಿಸಿಕೊಟ್ಟಿತು.

ಚಂದ್ರಗ್ರಹ ಯಾತ್ರೆಗೆ ಸಂಬಧಿಸಿದ ಮಾನವ ಸಹಿತ ಹಾಗೂ ಮಾನವ ರಹಿತ ಹಾರಾಟಗಳಲ್ಲಿ ಅಮೆರಿಕ ಸೋವಿಯತ್ ರಷ್ಯಕ್ಕಿಂತ ಮುಂದಿದೆ ಎಂಬುದು ನಿಜ ರಷ್ಯ ೧೯೬೫ರಲ್ಲಿ ಮಾನವ ಸಹಿತವಾದ ಒಂದು ಹಾರಾಟವನ್ನು ಮಾತ್ರ ನಡಸಿತು, ೧೯೬೪ರಲ್ಲಿ ನಡೆಸಿದುದರ ಎರಡರಷ್ಟು ಎಂದರೆ ೪೬ ಪ್ರಾಯೋಗಿಕ ಉಪಗ್ರಹಗಳನ್ನು ಹಾರಿಸಿತು, ಈ ಪ್ರಯತ್ನ ಪ್ರಾಯಶಃ ಚಂದ್ರನನ್ನು ಮುಟ್ಟಿದ, ಅವನಿಗೆ ಪ್ರದಕ್ಷಿಣೆ ಹಾಕಿ ಭೂಮಿಗೆ ಮರಳುವ ಉದ್ದೇಶಕ್ಕಿರಬಹುದು.

ಮಂಗಳನ ಮೇಲ್ಮೈ ಕೂಡಾ ಚಂದ್ರನಂತೆ ಜ್ವಾಲಾಮುಖಿಯ ಬಾಯಿಗಳಿಂದ ಕೂಡಿದೆಯೆಂದು ವಿಜ್ಞಾನಿಗಳು ಮ್ಯಾರಿನರ್ ತೆಗೆದ ಮಂಗಳನ ಛಾಯಾ ಚಿತ್ರಗಳಿಂದ ಲೆಖ್ಖ ಹಾಕಿದ್ದಾರೆ. ಇದನ್ನು ವ್ಯಾನ್ ಅಲೆನ್ ರೇಡಿಯೇಷನ್ ಪಟ್ಟಿಯ ಪತ್ತೆಯ ನಂತರದ ಅತಿಮುಖ್ಯವಾದ ಗಗನ ಶೋಧನ ಎನ್ನಬಹುದು.

ಮ್ಯಾರಿನರ್ ತೆಗೆದ ಮಂಗಳನ ೨೧ ಛಾಯಾ ಚಿತ್ರಗಳು ಆ ಗ್ರಹದ ಧ್ರುವದಿಂದ ಧ್ರುವದ ವರೆಗಿನ ಪ್ರದೇಶವನ್ನೆಲ್ಲ ಒಳಗೊಂಡಿವೆ. ಮಂಗಳನಿಗೆ ತೆಳುವಾದ ವಾತಾವರಣ ಇದೆಯೆಂಬ ಸಂಗತಿಯನ್ನು ಕೂಡ ಮ್ಯಾರಿನರ್ ಅನಿರೀಕ್ಷಿತವಾಗಿ ಪತ್ತೆ ಮಾಡಿತು ಕಶ್ಪಲವಾಗಿ ರೇಡಿಯೇಷನ್ ಆಘಾತಕ್ಕೆ ಒಳಗಾದ ಈ ಗ್ರಹದಲ್ಲಿ ಜೀವವಿರಲಾರದೆಂಬ ಸಂಶಯ ಉತ್ಪನ್ನವಾಯಿತು ಆದರೆ ಮಂಗಳನಲ್ಲಿ ಜೀವವಿರುವ ಅಥವಾ ಇಲ್ಲದಿರುವ ಪ್ರಶ್ನೆ ಇನ್ನು ಮುಂದಿನ ಗಗನಯಾನಗಳಿಂದ ಪರಿಹಾರವಾಗಬೇಕಾಗಿದೆ. ಮ್ಯಾರಿನರ್ ಮಂಗಳನ ಎಡೆಯಿಂದ ೧೩ ಕೋಟಿ ಮೈಲಿಗಳ ದೂರದಲ್ಲಿದ್ದ ಭೂಮಿಗ ಯಶಸ್ವಿಯಾಗಿ ಛಾಯಾಚಿತ್ರಗಳನ್ನು ಕಳಿಸಿಕೊಟ್ಟದ್ದು ಗಗನಯುಗದ ಅಸಮಾನ ತಾಂತ್ರಿಕ ಸಿದ್ಧಿಯೆನಿಸಿದ.

೧೯೬೪ರ ನವೆಂಬರ್ ೨೮ರಲ್ಲಿ ಹಾರಿಸಲ್ಪಟ್ಟ ಮ್ಯಾರಿನರ್–೪, ೧೯೬೫ರ ಜುಲೈ ೧೪ರಂದು ಮಂಗಳನನ್ನು ದಾಟಿಹೋಗುವವರೆಗೆ ೭ ತಿಂಗಳ ಅವಧಿಯಲ್ಲಿ ೩೨.೫ ಕೋಟಿ ಮೈಲಿಗಳನ್ನು ಕ್ರಮಿಸಿತು.

ಮಾರ್ಚ್, ಜೂನ್, ಆಗಸ್ಟ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ೫ ಜೆಮಿನಿ ಹಾರಾಟಗಳು ನಡೆದವು. ಇವುಗಳಿಂದ ಕಕ್ಷೆಯಲ್ಲಿರುವ ಎರಡು ಯಾನಗಳನ್ನು ವಾಸ್ತವವಾಗಿ ಕೂಡಿಸುವ ಸಾಧನೆಯೊಂದನ್ನು ಒಟ್ಟು ಕಾರ್ಯಕ್ರಮದ ಉಳಿದ ಉದ್ದೇಶಗಳಲ್ಲಿ ಅರ್ಧದಷ್ಟು ಸಾಧಿತವಾಯಿತು.

೧೯೬೬ರಲ್ಲಿ ಇನ್ನೂ ಉಳಿದಿರುವ ಜೆಮಿನಿಯ ಐದು ಹಾರಾಟಗಳು ನಡೆಯಲಿವೆ. ಈ ಪ್ರಯತ್ನಗಳಲ್ಲಿ ಎಜೆನ ವಾಹನಗಳೊಂದಿಗೆ ಕೂಡಿಕೊಳ್ಳುವ, ನಿಕಟಾನುವರ್ತಿ ಹಾರಾಟವನ್ನು ಪರಿಷ್ಕಾರಗೊಳಿಸುವ, ಚಂದ್ರಯಾತ್ರೆಯಲ್ಲಿ ಬಳಸಬೇಕಾಗುವ ಚಳಕಗಳ ಅನುಕರಣೆಗಳನ್ನೂ ನಡೆಸಲಾಗುವುದು

ಅಮೆರಿಕದ ಚಂದ್ರಯಾತ್ರಿಕರ ಸುರಕ್ಷಿತ ಗಮನಾಗಮನಕ್ಕೆ ನಿಕಟಾನುವರ್ತಿ ಹಾರಾಟ ಹಾಗೂ ಕೂಡಿಕೆ ಅವಶ್ಯ. ಚಂದ್ರನ ಮೇಲ್ಮೈಯನ್ನು ಪರಿಶೀಲಿಸಿದ ಮೇಲೆ ಗಗನಯಾನಿಗಳು ಭೂಮಿಗೆ ಮರಳಲು ರಾಕೆಟ್ ಹಾರಿಸಿ ಚಂದ್ರನಿಗೆ ಪ್ರದಕ್ಷಿಣೆ ಹಾಕುತ್ತಿರುವ ಅಪಾಲೋ ಮಾತೃ ಯಾನಕ್ಕೆ ಚಂದ್ರಯಾತ್ರೆಯ ವಾಹನದಲ್ಲಿ ಹಿಂತಿರುಗಬೇಕು.

೧೯೬೫ರ ಜೆಮಿನಿ ಹಾರಾಟಗಳು ಈ ಪ್ರಥಮಗಳನ್ನು ಸಾಧಿಸಿದವು:–

—ಗಗನಯಾನದ ಕಕ್ಷೆಯ ಬದಲಾವಣೆ (ಮಾರ್ಚ್ ೨೩ನೇ ತಾರೀಕು ವರ್ಜಿಲ್ ಗ್ರಿಸ್ಸಂ ಮತ್ತು ಜಾನ್ ಯಂಗ್ ಇದನ್ನು ಪ್ರಥಮತಃ ಸಾಧಿಸಿದರು. ಅನಂತರ ಈ ಚಳಕವನ್ನು ಅನಂತರದ ಎಲ್ಲಾ ಜೆಮಿನಿ ಹಾರಾಟಗಳಲ್ಲೂ ಪುನರಾವರ್ತಿಸಲಾಯಿತು.)

—ಚಾಲಕ ಬಂದೂಕದ ಸಹಾಯದಿಂದ ಹತೋಟಿಯಲ್ಲಿ, ಗಗನ ಓಡಾಟ' (ಜೂನ್ ೩ರಿಂದ ೭ರ ವರೆಗಿನ ಜೆಮಿನಿ–೪ರ ಹಾರಾಟದಲ್ಲಿ ಎಡ್ವರ್ಡ್ ವೈಟ್ ಈ ಚಳಕವನ್ನು ನಡೆಸಿದರು.)

—ಚಂದ್ರನಲ್ಲಿ ಇಳಿದು ಭೂಮಿಗೆ ಮರಳಲು ಬೇಕಾಗುವಷ್ಟು ಅವಧಿಯ ಗಗನಯಾನವನ್ನು ಮಾನವರು ಸಹಿಸಿ, ಆ ಕಾಲದಲ್ಲಿ ಕಾರ್ಯ ನಿರ್ವಹಿಸಬಲ್ಲರೆಂಬ ಸಂಗತಿಯ ಸಮರ್ಥನೆ. (ಆಗಸ್ಟ್ ೨೧ರಿಂದ ೨೯ರ ವರೆಗೆ ಗಾರ್ಡನ್ ಕೂಪರ್ ಮತ್ತು ಚಾರ್ಲ್ಸ್ ಕಾನ್ರಾಡ್ ಜೆ ನಿ—೫ರಲ್ಲೂ, ಫ್ರಾಂಕ್ ಬೋರ್ ಮತ್ತು ಜೇಮ್ಸ್ ಲೋವೆಲ್ ಡಿಸೆಂ ೪ರಿಂದ ೧೮ರ ವರೆಗೆ ಜೆಮಿನಿ—೭ರ ರುಜುಪಡಿಸಿದರು.)

—ಗಗನದಲ್ಲಿರುವ ಯಾನವನ್ನು ರದಿಂದ ಗುರುತಿಸಿ ಅದನ್ನು ಹಿಂಬಾ ಅದರ ಕೆಲವೇ ಅಡಿಗಳಷ್ಟು ಸಮೀಪ ಹೋಗುವುದು ಸಾಧ್ಯ. (ಜೆಮಿನಿ–೬ ಮತ್ತು ಜೆಮಿನಿ—೭ರ ಹಾರಾಟಗಳ ವಾಲ್ಟರ್ ಶಿರಾ ಮತ್ತು ಥಾಮಸ್ ಸ್ಟ ಫರ್ಡ್‌ರಿಂದ ಡಿಸೆಂಬರ್ ೧೫ರಂದು)

ನಾಲ್ಕು ದಿನ, ಎಂಟು ದಿನ ಹಾಗೂ ಪ್ರಪಂಚ ದಾಖಲೆಯಾದ ೧೪ ದಿನಗ ಜೆಮಿನಿ ಹಾರಾಟಗಳಲ್ಲಿ ಮಾನವನ ಗ ನ ಹಾರಾಟದ ಒಟ್ಟಿನ ಅನುಭವ ಅಮೆರಿಕ ರಷ್ಯವನ್ನು ಬಹುವಾಗಿ ಮೀ ಸಿತು. ರಷ್ಯದ ಮಾನವ ಸಹಿತವಾದ ಲ್ಲಾ ಗಗನ ಹಾರಾಟಗಳ ಒಟ್ಟು ಅವ ೫೦೭ ಮಾನವ ಗಂಟೆಗಳಾದರೆ ಜೆಮಿ ೭ರ ಸಾರಥಿಗಳಾದ ಬೋರ್ಮನ್ ಮತ್ತು ಲೋವೆಲ್‌ರದು ೬೬೧ ಮಾನವ ಗಂ ಗಳು.

ಈ ವರ್ಷದಲ್ಲಿ ಅಮೆರಿಕ ಎರಡು ಸ ಇದು ವರೆಗೆ ಹಾರಿಸಲಾದ ರಾಕೆಟ್‌ಗ ಳೆಲ್ಲ ಅತ್ಯಂತ ಬಲಿಷ್ಠವಾದ ೧೯೬೮ ರಕ್ಷಣಾ ಶಾಖೆಯ ಮಾನವ ಸಹಿತ ಪ್ರಯೋಗ ಶಾಲೆಯನ್ನು ಕಕ್ಷೆಗೇರಿಸ ಸಲುವಾಗಿ ಸಿದ್ಧಪಡಿಸಲಾಗುತ್ತಿರುವ ಲಕ್ಷ ಪೌಂಡುಗಳ ನೂಕುವ ಶಕ್ತಿ

ಜೆಮಿನಿ ೭ ಉಪಗ್ರಹದ ಚಾಲಕರು. ಜೇಮ್ಸ್ ಲೊವೆಲ್ ಮತ್ತು ಫ್ರಾಂಕ್ ಬರ್ಮನ್ (ಮೇಲ್ಗಡೆ)
ಜೆಮಿನಿ ೬ ರ ಚಾಲಕರು: ಟಾಂಸ್ಟಫರ್ಡ್ ಮತ್ತು ವೆಲ್ಲಿಸ್ಕಿರಾ.

ಜೆಮಿನಿ—೬ ಉಪಗ್ರಹದ ಗಗನ ಯಾತ್ರಿಗಳಾದ ಥಾಮಸ್ ಗ್ರಿಸಂ ಮತ್ತು ಜಾನ್‌ಯಂಗ್ (ಕುಳಿತಿರುವವರು) ಇವರೊಡನೆ

ಗಗನ ಸಾಧನೆಗಳು

– ಮಂಗಳನ ಅನ್ವೇಷಣೆ

ಟೈಟಾನ್ ೩—ಸಿ ರಾಕೆಟ್ ಎರಡನ್ನು ಹಾರಿಸಿತು.

ಜೂನ್ ೩ನೇ ತಾರೀಕು ನಡೆದ ಮೊದಲ ಹಾರಾಟದಲ್ಲಿ ಟೈಟಾನ್ ಪುರಸ್ಕಾರವಾಗಿ ಕೆಲಸ ಮಾಡಿತು. ಅಕ್ಟೋಬರ್ ಮಧ್ಯದಲ್ಲಿ ನಡೆದ ಎರಡನೆ ಹಾರಾಟದಲ್ಲಿ ಮೂರನೆ ಘಟ್ಟ ಯೋಜನೆಗನುಸಾರವಾಗಿ ಎಂಟು ಎಂಜಿನುಗಳನ್ನು ನಿಲ್ಲಿಸಿ ಮತ್ತೆ ಕಕ್ಷೆ ತಲುಪಿದ ಮೇಲೆ ಪುನರಾರಂಭಿಸುವ ಕಾರ್ಯವನ್ನು ನಿರ್ವಹಿಸದೆ ಹೋದುದರಿಂದ ಪೂರ್ಣ ಯಶಸ್ಸು ದೊರಕಲಿಲ್ಲ.

ಸ್ಯಾಟರ್ನ್—೧ ರಾಕೆಟ್ಟಿನ ಕಾರ್ಯಕ್ರಮ ಈ ವರ್ಷದಲ್ಲಿ ಮುಕ್ತಾಯವಾಯಿತು. ೪೫ ಟನ್ನುಗಳ ಅಪಾಲೋ ಯಾನವನ್ನು ಚಂದ್ರನಲ್ಲಿಗೆ ಕಳಿಸುವ ಸಲುವಾಗಿ ಸಿದ್ಧಪಡಿಸುತ್ತಿರುವ ದೈತ್ಯಾಕಾರದ ಸ್ಯಾಟರ್ನ್—೫ರ ಮೊದಲ ಆವೃತ್ತಿಯಾದ ೧೫ ಲಕ್ಷ ಪೌಂಡುಗಳ ನೂಕುವ ಶಕ್ತಿಯ ಈ ರಾಕೆಟ್ಟನ್ನು ಮೂರು ಸಾರಿ ಯಶಸ್ವಿಯಾಗಿ ಹಾರಿಸಲಾಯಿತು.

ಪ್ರತಿಯೊಂದು ಸಾರಿಯೂ ಸ್ಯಾಟರ್ನ್ ರಾಕೆಟ್ ದೈತ್ಯಾಕಾರದ ರೆಕ್ಕೆಗಳ ಪೆಗಾಸಸ್ ಉಪಗ್ರಹಗಳನ್ನು ಗಗನ ಧೂಳಿನಿಂದ ಗಗನ ಯಾನಗಳಿಗೆ ಆಗಬಹುದಾದ ಅಪಾಯಗಳ ಅಳತೆಗಾಗಿ ಕಕ್ಷೆಗೇರಿಸಿತು. ರೆಕ್ಕೆಯ ಒಂದು ತುದಿಯಿಂದ ಇನ್ನೊಂದು ರೆಕ್ಕೆಯ ತುದಿಗೆ ೯೬ ಅಡಿಗಳಿರುವ ದೈತ್ಯಾಕಾರದ ಈ ಉಪಗ್ರಹಗಳು ನಾಲ್ಕು ಮೋಟಾರುಗಳ ಸಾರಿಗೆ ವಿಮಾನಗಳಷ್ಟು ದೊಡ್ಡವು. ಕಕ್ಷೆಗೇರಿದ ಉಪಗ್ರಹಗಳಲ್ಲಿ ಇವೇ ಅತ್ಯಂತ ದೊಡ್ಡವು.

ಾಲ್ಟರ್ ಷಿರಾ ಇವರು ವರ್ಜಿಲ್ ಕುರಿತು ಮಾತಾಡುತಿದ್ದಾರೆ.

೧೯೬೧ರಲ್ಲಿ ಆರಂಭವಾದ ಸ್ಯಾಟರ್ನ್ ನಡೆದ ೧೦ ಉಡಾವಣೆಗಳಲ್ಲೂ ಪರಿಪೂರ್ಣವಾದ ಯಶಸ್ಸನ್ನು ಗಳಿಸಿತು. ಅಮೆರಿಕದ ರಾಕೆಟ್ ಅಥವಾ ಬ್ಯಾಲಿಸ್ಟಿಕ್ ಕ್ಷಿಪಣಿಗಳಲ್ಲಿ ಒಂದು ಸಾರಿಯೂ ವಿಫಲವಾಗದ ರಾಕೆಟ್ ಇದೊಂದೇ. ಸ್ಯಾಟರ್ನ್ ಕಾರ್ಯಕ್ರಮದ ಮುಖ್ಯರಾದ ಡಾ|ವರ್ನರ್ ಬ್ರೌನ್ ಅವರು ವರ್ಷಾಂತ್ಯದಲ್ಲಿ ಗ್ರೀಸಿನಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡುತ್ತ, ಅಪಾಲೋ ಚಂದ್ರಕಾರ್ಯಕ್ರಮ ಶೇಕಡ ೫೦ರಷ್ಟು ಮುಗಿದಿದೆಯೆಂದೂ, ಪೂರ್ಣ ವೇಗದಲ್ಲಿ ಮುಂದುವರಿಯುತ್ತಿದೆಯೆಂದೂ ನುಡಿದರು.

೭೫ ಲಕ್ಷ ಪೌಂಡುಗಳ ನೂಕುವ ಶಕ್ತಿಯ ಸ್ಯಾಟರ್ನ್ -೫ ಚಂದ್ರಯಾನದ ಯಶಸ್ವಿ ಪೂರ್ಣಾವಧಿ ಉಡಾವಣೆಯೇ ಈ ಪ್ರಗತಿಗೆ ಸಾಕ್ಷಿ.

೧೯೬೫ರಲ್ಲಿ ಅಮೆರಿಕ ಸಾಧಿಸಿದ ಇತರ ಗಣನಾರ್ಹ ಸಾಧನೆಗಳು:—

ಮೊಟ್ಟ ಮೊದಲ ಬಾರಿಗೆ ಕಾರ್ಯನಿರ್ವಾಹ ಮಾಡುತ್ತಿರುವ ನ್ಯೂಕ್ಲಿಯರ್ ರಿಯಾಕ್ಟರ ಒಂದನ್ನು ಕಕ್ಷೆಗೇರಿಸಲಾಯಿತು. ಸೌರವ್ಯೂಹದ ಕೊನೆಯ ಅಂಚುಗಳಿಗೆ ಮಾನವನನ್ನು ಒಯ್ಯಬಲ್ಲ, ಸಂಪೂರ್ಣವಾಗಿ ನ್ಯೂಕ್ಲಿಯರ್ ಶಕ್ತಿಯಿಂದ ಕೆಲಸಮಾಡುವ ಯಾನಗಳ ರಚನೆಯ ಹಾದಿಯಲ್ಲಿ ಇದು ಮೊದಲ ಹೆಜ್ಜೆ.

—ಅರ್ಲಿ ಬರ್ಡ್ ಉಪಗ್ರಹದ ಕಕ್ಷಾಯಾತ್ರೆ ಪ್ರಪಂಚ ವ್ಯಾಪಕವಾದ ಉಪಗ್ರಹಗಳ ಮೂಲಕವಾದ ಸಂಪರ್ಕ ಸಾಧಕ ವ್ಯವಸ್ಥೆಗೆ ಅಮೆರಿಕ ಹಾಗೂ ಇತರ ೪೪ ರಾಷ್ಟ್ರಗಳು ಕೈಗೊಂಡಿರುವ ಪ್ರಯತ್ನದಲ್ಲಿ ಮೊದಲನೆಯ ಹೆಜ್ಜೆ. ಅರ್ಲಿಬರ್ಡ್ ಉಪಗ್ರಹ ಅಟ್ಲಾಂಟಿಕ್ ಸಾಗರದ ಮೇಲೆ ೨೨,೩೦೦ ಮೈಲಿಗಳೆತ್ತರದಲ್ಲಿ ಒಂದೇ ನಿರ್ದಿಷ್ಟ ಸ್ಥಾನದಲ್ಲಿ ಸುತ್ತುತ್ತಿದೆ. ಈ ಉಪಗ್ರಹ ಅಟ್ಲಾಂಟಿಕ್ ಸಾಗರೋತ್ತರದ ಮಾಮೂಲಿ ಟೆಲಿವಿಷನ್ ಕಾರ್ಯಕ್ರಮಗಳನ್ನು ಟೆಲಿಫೋನು ಕರೆಗಳನ್ನೂ ಹಿಡಿದಾಡುತ್ತಿದೆ.

—ರೇಂಜರ್-೮ ಮತ್ತು ೯ ಉಪಗ್ರಹಗಳು ಮತ್ತಷ್ಟು ಚಂದ್ರನ ಸಮೀಪ ಚಿತ್ರಗಳನ್ನು ಒದಗಿಸಿವೆ. ರೇಂಜರ್ ಉಪಗ್ರಹ ಚಂದ್ರನಲ್ಲಿ ಬಿದ್ದುಹೋಗುವ ಕಡೆಯ ಘಳಿಗೆಯ ವರೆಗಿನ ಛಾಯಾಚಿತ್ರಗಳನ್ನು ಪ್ರಸರಿಸಲಾಯಿತು.

೧೯೬೫ರಲ್ಲಿ ರಾಷ್ಟ್ರೀಯ ವಾಯುಯಾನ ಹಾಗೂ ಗಗನಾಡಳಿತದವರು ನಡೆಸಿದ ೨೨ ದೊಡ್ಡ ಉಡಾವಣೆಗಳಲ್ಲಿ ಮೂರು ಹೊರತು ಉಳಿದವೆಲ್ಲವೂ ಯಶಸ್ವಿಯಾದವೆಂದು ಹೇಳಲಾಗಿದೆ. ಜೆಮಿನಿ—೫ರ ಉಡಾವಣೆಯ ರದ್ದು ಆಗಸ್ಟ್ ೩೦



ದ್ರವ್ಯಸಂಶೋಧನೆಗಾಗಿ ತಯಾರಿಸಿದ ೩೦ ಮೀಟರ್ ವ್ಯಾಸವಿರುವ ಉಪಗ್ರಹ—ಪೆಗೋಸ್.

ಗಳನ್ನಲ್ಲಿ ಕಕ್ಷೆಗೇರದ ಹೋದ ಸೌರಾನ್ವೇಷಣೆಯ ಒಂದು ಉಪಗ್ರಹ, ಮಾರ್ಚ್ ೩೦ ಗಳಲ್ಲಿ ವಿಫಲವಾದ ಅಟ್ಲಾಸ್ ಸೆಂಟಾರ್ ರಾಕೆಟ್ಟಿನ ಉಡಾವಣೆ ಯತ್ನ-ಇವು ಅಯಶಸ್ವಿಯಾದ ಪಾಲಿನವು. ಆಗಸ್ಟ್ ೧೧ರಂದು ಹಾರಿಸಿದ ಎರಡನೇ ಅಟ್ಲಾಸ್ ಸೆಂಟಾರ್ ಶತಶಃ ಯಶಸ್ಸನ್ನು ಪಡೆಯಿತು. ಇದರಿಂದ ೧೯೬೬ರ ಆದಿಯಲ್ಲಿ ಉಪಕರಣಗಳಿಂದ ಸಜ್ಜಿತವಾದ ಸರ್ವೇಯರ್ ಗಗನಯಾನವೊಂದನ್ನು ಯಥಾಸ್ಥಿತಿಯಲ್ಲಿ ಚಂದ್ರನಲ್ಲಿ ಇಳಿಸಲು ಹಾದಿ ಶುದ್ಧವಾಯಿತು.



ಅಂತರಿಕ್ಷದಲ್ಲಿ ಶಕ್ತಿ ಉತ್ಪಾದಿಸುವ; ದುಡಿಯುವ ಕುದುರೆ— ಟಿಟನ್ ೩. ಸಿ ಉಪಗ್ರಹ

ತ್ಯಾಗಕ್ಕೆ ಬೇರೊಂದು ಹೆಸರು ಶ್ರೀ ಉಮೇಶರಾಯರು

(ಏಳನೇ ಪುಟದಿಂದ)

ಪ್ರಯೋಜನ ಪಡೆಯಲಿ. ಅವನಿಗೇ ಕೊಟ್ಟು ಬಿಡಿರಿ." ಆ ಯೂರೋಪಿಯನ್ ಪ್ರಿನ್ಸಿಪಾಲರು ಆ ಮಾತಿನಿಂದ ತುಸು ಚಲಿತರಾದಂತೆ ಕಂಡಿತು. ಕೂಡಲೇ ನನ್ನನ್ನು ಕ್ಲಾಸಿಗೆ ಹೋಗಲು ಹೇಳಿದರು. ಸಂಜೆಗೆ ಒಂದು ಚೀಟಿ ಬರೆದು ನನ್ನ ಕೈಯ್ಯಲ್ಲಿತ್ತು ಶ್ರೀಮಂತರಾದ ಒಬ್ಬ ಸ್ವಜಾತಿ ಗೃಹಸ್ಥರನ್ನು ಕಾಣುವಂತೆ ತಿಳಿಸಿದರು. ಆ ಶ್ರೀಮಂತರ ಮನೆ ನನಗೆ ಗೊತ್ತಿರಲಿಲ್ಲ; ವಿಚಾರಿಸಿದಾಗ ಬಹಳ ದೂರ ಇತ್ತು. ಬೆಳಗ್ಗೆ ಹೊರಟವನು ಹಾದಿ ಕೇಳುತ್ತಾ ನಡೆದು ಬಹಳ ಹೊತ್ತಿನ ಮೇಲೆ ಅವರ ಮನೆ ಬಾಗಿಲು ಸೇರಿದೆ. ಒಳಗೆ ಮಾತನಾಡುತ್ತಿದ್ದವರು ಬಹು ಹೊತ್ತಾದ ಮೇಲೆ ನನ್ನನ್ನು ಮಾತನಾಡಿಸಿದರು. ನಾನು ಪ್ರಿನ್ಸಿಪಾಲರ ಚೀಟಿಯನ್ನು ಅವರಿಗಿತ್ತೆ. ಓದಿ ನೋಡಿ ಗಂಭೀರವಾಗಿ ಹೇಳಿದರು—"ನೀನು ಕಲಿಯಲು ಹುಷಾರಾಗಿದ್ದೀ ಎಂದು ಬಡ ವಿದ್ಯಾರ್ಥಿ ಎಂದೂ ಪ್ರಿನ್ಸಿಪಾಲರು ಬರೆಯುತ್ತಾರೆ. ಸರಿ, ನೀನು ಪ್ರತಿ ತಿಂಗಳೂ ಒಂದನೇ ತಾರೀಕಿಗೆ ಬರಬೇಕು. ಎಂಟಾಣೆಯಂತೆ ಕೊಡುತ್ತೇನೆ." ಎಂದು ಹೇಳಿ ಪ್ರಿನ್ಸಿಪಾಲರಿಗೆ ಕೊಡಲು ಒಂದು ಚೀಟಿ ಬರೆದಿತ್ತರು! ಆ ಚೀಟಿಯನ್ನು ಹಿಡಿದುಕೊಂಡು ಅವರ ಗೇಟು ದಾಟಿ ಬಂದವನಿಗೇ ಸಿಟ್ಟು ಸಂಕಟಗಳಿಂದ ತಾಳ್ಮೆ ತಪ್ಪಿ ಆ ಚೀಟಿಯನ್ನು ಹರಿದು ಬಿಸಾಡಿ ಬಿಟ್ಟೆನು! ಆ ಮೇಲೆ ದಾರಿಯುದ್ದಕ್ಕೂ ಅಳುತ್ತಾ ಬಂದೆ. ಮರುದಿನ ಪ್ರಿನ್ಸಿಪಾಲರಿಂದ ಜವಾನ ಬಂತು. ಅವರಿಗೆ ಕೊಟ್ಟಿದ್ದ ಕಾಗದ ಹರಿದು ಹಾಕಿ ಅಪರಾಧ ಮಾಡಿದ್ದೆ. ಪ್ರಿನ್ಸಿಪಾಲರ ಕೋಣೆಗೆ ಪ್ರವೇಶಿಸುತ್ತ ಗದ್ಗದಿತನಾಗಿದ್ದವನು ಚೆನ್ನಾಗಿ ಅತ್ತುಬಿಟ್ಟೆ. ವಿಷಯವನ್ನು ಅರಿಕೆ ಮಾಡಿದೆ. ಅದನ್ನು ಕೇಳಿ ಅವರು ನನ್ನನ್ನು ಕ್ಲಾಸಿಗೆ ಹೋಗು ಎಂದರು. ಕಾಲೇಜ್ ಫೀಸು ತೆರಲು ನನ್ನಿಂದ ಆಗುತ್ತಿರಲಿಲ್ಲ. ಕ್ಲಾಸಿಗೆ ಏಕೆ ಹೋಗಲಿ ಎಂದು ಚಿಂತಿಸುತ್ತಾ ಪ್ರಿನ್ಸಿಪಾಲರ ಮಾತಿನಂತೆ ಅವರ ಆದೇಶ ಪಾಲಿಸಿದೆ. ಸಂಜೆಗೆ ಗುಮಾಸ್ತರು ಚೀಟಿ ಕಳುಹಿಸಿದರು. ನಾನು ಫೀಸು ಕೊಡಲಿಲ್ಲವಲ್ಲಾ ಎಂದೆ. 'ಚಿಂತಿಸಬೇಡ, ಪ್ರಿನ್ಸಿಪಾಲರು ಏರ್ಪಾಡು ಮಾಡಿದ್ದಾರೆ ಚೆನ್ನಾಗಿ ಕಲಿ' ಎಂದರು!

"ಯೂರೋಪಿಯನರ ಇಂತಹ ನಡತೆಯ ಉನ್ನತಿಯ ವಿಚಾರ ನನ್ನ ವಕೀಲಿ ವೃತ್ತಿಯಲ್ಲಿಯೂ ಒಂದು ಮರೆಯಲಾರದ ಘಟನೆ ನಡೆದಿದೆ. ಕುಂಟಳೆ ಹತ್ತಿರ ಸೈನಿಕ ಶಿಬಿರ ಆಗಿತ್ತಷ್ಟೆ. ಅದರ ಒಳಗಿದ್ದ ಗೇರು ಮರದಿಂದ ಒಬ್ಬ ಹುಡುಗ ಗೇರು ಬೀಜ ಕೊಯ್ಯುತ್ತಿದ್ದುದನ್ನು ಸಾರ್ಜೆಂಟ್ ಒಬ್ಬ ನೋಡಿದ. ಆ ಯೂರೋಪಿಯನ್ ಸಾರ್ಜೆಂಟನನ್ನು ನೋಡಿ ಹುಡುಗ ಹೆದರಿ ಓಡ ತೊಡಗಿದ. ಓಡುತ್ತಿದ್ದವನನ್ನು ಹಿಡಿದು ಆತ ಊರ ಪಟೇಲರ ಕೈಗಿತ್ತ. ಪಟೇಲರು ಕ್ರಮ ಪ್ರಕಾರ ಪಿರ್ಯಾದು ಮಾಡಿ ಮೆಜಿಸ್ಟ್ರೇಟರಿಗೆ ಕಳುಹಿಸಿದರು. ಬಹುಕಾಲದ ಮೇಲೆ ಸಾರ್ಜೆಂಟನಿಗೆ ಸಾಕ್ಷಿಗೆ ಸಮನ್ಸು ಹೋಯಿತು. ಆತ ಹಾಜರಾದ. ಆದರೆ ಆತನಿಗೆ ಕೋರ್ಟಿನ ಸಮನ್ಸು ತನಗೆ ಏಕೆ ಬಂದಿದೆ ತಿಳಿಯದೆ ವಿಚಾರಿಸಿದನು. ಸಾರ್ಜೆಂಟನಿಗೆ ವಿಷಯ ತಿಳಿಸಲಾಯಿತು. ಅದನ್ನು ಕೇಳುತ್ತಿದ್ದಂತೆ ಆ ಕಡೆ ನಿಂತಿದ್ದ ಅಪರಾಧೀ ಬಾಲಕನನ್ನು ದಿಟ್ಟಿಸಿ ಸಾರ್ಜೆಂಟನ ಮುಖದಲ್ಲಿ ಸಂಕಟ ಉದ್ವೇಗಗಳು ಹೆಚ್ಚಿದುವು. ಈ ಹುಡುಗನಿಗೆ ಶಿಕ್ಷೆಯಾದೀತೇ ಎಂದು ಸಾರ್ಜೆಂಟ್ ಕೇಳಿದನು. ಈತನಿಗೆ ಶಿಕ್ಷೆ ವಿಧಿಸಿದರೆ ದೇವರು ತನ್ನನ್ನು ಶಿಕ್ಷಿಸಿಯಾನು ಎಂದು ಮಾರ್ಮಿಕವಾಗಿ ಕೋರ್ಟಿನಲ್ಲಿ ಹೇಳಿಕೆಯಿತ್ತನು. ಆ ಬಡ ಹುಡುಗನನ್ನು ಕೋರ್ಟು ಬಿಡುಗಡೆ ಮಾಡಿದ ಕೂಡಲೇ ಸಂತೋಷದಿಂದ ಅವನನ್ನು ತಬ್ಬಿ, ಆತನ ತಂದೆಯನ್ನೂ ಹುಡುಗನನ್ನೂ ತನ್ನ ವಾಹನದಲ್ಲಿ ಕೂತುಕೊಳ್ಳಿಸಿ ಅವರಿಗೆ ಬೇಕಾದಷ್ಟು ತಿಂಡಿ ತಿನಿಸಿ ಕೈಯಲ್ಲಿ ಹಣ ಕೊಟ್ಟು ಅವರ ಮನೆಗೆ ತಂದು ತಲುಪಿಸಿದನು. ಇಂತಹ ನಡತೆ—ನಮ್ಮ ಭಾರತೀಯರಲ್ಲಿ—ಇಡೀ ವಕಾಲತ್ತಿನ ಜೀವನದಲ್ಲಿ ಒಮ್ಮೆಯೂ ನಾನು ಕಂಡಿಲ್ಲ".

ಶ್ರೀ ಉಮೇಶರಾಯರು ಮಂಗಳೂರಲ್ಲಿ ಕಾಲೇಜ್ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಲ್ಲಿಯೇ ಎಂದರೆ ೧೯೧೧ರಿಂದ ೧೯೧೪ರ ವರೆಗೆ ಅವರಿಗೆ ರಾಜಕೀಯದಲ್ಲಿ ಆಸಕ್ತಿ ಒಡಮೂಡಿತು. ಅರವಿಂದ ಘೋಷರು ಬರೆದ ಲೇಖನಗಳನ್ನು ಓದಕೂಡದೆಂದು ಸರಕಾರ ಬಹಿಷ್ಕರಿಸಿತ್ತು. ಅಂತಹ ಲೇಖನಗಳನ್ನು ಇವರು ಬಿಡದೆ ಓದಿದರು. ಭಾರತದ ತರುಣರ ಧಮನಿಗಳಲ್ಲಿ ಹೊಸ ಚೈತನ್ಯದ ಪ್ರವಾಹವಾಗುತ್ತಿತ್ತು. ದೇಶ ಸೇವೆ ಮಾಡಲು ತ್ಯಾಗಕ್ಕೆ ಬಲಿದಾನಕ್ಕೆ ಜನತೆ ಸಿದ್ಧವಾಗ ಬೇಕಾಗಿತ್ತು; ಹೋಮ್‌ರೂಲ್ ಚಳವಳ ಪ್ರಾರಂಭವಾಯಿತು. ದೇಶಸೇವಾ ದೀಕ್ಷೆ ವಹಿಸಲು ಶ್ರೀ ಉಮೇಶರಾಯರೂ ಆಗಲೇ ನಿಶ್ಚಯ ಮಾಡಿದರು. ಆ ಬಗ್ಗೆ ಲಾ ನ್ನು ಕಲಿಯ ಬೇಕೆಂದು ನಿಶ್ಚಯಿಸಿ ಹೈಸ್ಕೂಲೊಂದರಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ತನ್ನ ಮಾವನ ಮೂಲಕ ತನಗೂ ಹೈಸ್ಕೂಲಲ್ಲಿ ಅಧ್ಯಾಪಕ ವೃತ್ತಿ ದೊರೆತರೂ ಅದಕ್ಕೆ ಸೇರದೆ 1918ರಲ್ಲಿ ಬೊಂಬಯಿಗೆ ತೆರಳಿದರು. ಒಂದು ವರ್ಷದ ಮೊದಲೇ ಅವರ ವಿವಾಹವೂ ಆಗಿತ್ತು. ಬಡತನ ಬೆನ್ನಟ್ಟುತ್ತಾ ಬಂದಿತ್ತು. ತನ್ನ ವಿದ್ಯಾಭ್ಯಾಸದ ವೆಚ್ಚಕ್ಕಾಗಿ ತನ್ನ ಕುಟುಂಬದ ಹಾಗೂ ತಾಯ್ತಂದೆಯರ ಪೋಷಣೆಗಾಗಿ ದುಡಿಯಲೂ ಬೇಕಾಗಿತ್ತು. ಅಲ್ಲಿನ ಒಂದು ಶಾಲೆಯಲ್ಲಿ ಅಧ್ಯಾಪಕ ವೃತ್ತಿಯನ್ನೂ, ಪ್ರೈವೆಟ್ ಟ್ಯೂಶನ್ನುಗಳನ್ನು ನಡೆಸಿಕೊಂಡು 'ಲಾ' ಕಲಿಯತೊಡಗಿದರು. ಬೊಂಬಯಿಯ ರಾಜಕೀಯ ವಾತಾವರಣ ಮಂಗಳೂರಿಗಿಂತ ಮುಂದುವರಿದಿತ್ತಾದ ಕಾರಣ, ಉಳಿದ ಎಲ್ಲಾ ಹೊತ್ತು ರಾಜಕೀಯ ಕೂಟ, ಚಟುವಟಿಕೆ, ಸಭೆಗಳಲ್ಲಿ ಕಾಲ ಕಳೆಯುತ್ತಿತ್ತು.

1918ರ ಬೊಂಬಯಿ ಕಾಂಗ್ರೆಸ್ ಅಧಿವೇಶನದಲ್ಲಿ ಶ್ರೀ ಉಮೇಶರಾಯರು ಬಂಗಾಳದ ಪ್ರತಿನಿಧಿಯಾಗಿ ಭಾಗವಹಿಸಿದರು. ವೇದಿಕೆಗೆ ತೀರಾ ಸಮೀಪದಲ್ಲಿಯೇ ಬಂಗಾಳದ ಪ್ರತಿನಿಧಿಗಳಿಗೆ ಸ್ಥಳಗೊತ್ತು ಮಾಡಿದುದರಿಂದ ಅಂದಿನ ರಾಷ್ಟ್ರದ ಮಹಾನಾಯಕರನ್ನು ಮುಖ್ಯವಾಗಿ ಲೋಕಮಾನ್ಯ ತಿಲಕರನ್ನು ಬಹಳ ಹತ್ತಿರದಿಂದ ನೋಡುವ ಹಾಗೂ ಕೇಳುವ ಭಾಗ್ಯ ಅವರಿಗೆ ದೊರಕಿತು. 1920ರ ಆಗಸ್ಟ್ 1ರಂದು ಲೋಕಮಾನ್ಯ ತಿಲಕರು ಕಣ್ಮರೆಯಾದಾಗ ಅವರ ಮೃತ ಶರೀರದ ಬೃಹತ್ ಮೆರವಣಿಗೆಯಲ್ಲಿ ಧೋ ಗರೆಯುವ ಮಳೆಗೆ ಒದ್ದೆಯಾಗುತ್ತಾ ಸಾಗಿದ್ದ ಸಹಸ್ರ ಸಂಖ್ಯಾಕ ಸ್ವಯಂ ಸೇವಕರ ಪಂಗಡದಲ್ಲಿ ಶ್ರೀ ಉಮೇಶರಾಯರೂ ಒಬ್ಬರಾಗಿದ್ದರು. ಮುಂದೆ ಅಸಹಕಾರ ಆಂದೋಲನ ಆರಂಭವಾಯಿತು. ತ್ಯಾಗಕ್ಕೆ ಬಲಿದಾನಕ್ಕೆ ರಾಷ್ಟ್ರ ಮಾತೆಯ ಕರೆ ಬಂದಿತು. ಕುಟುಂಬದ ಹಿರಿಯ ಮಗನಾಗಿ, ತನ್ನಿಂದಿರ ವಿದ್ಯಾಭ್ಯಾಸಕ್ಕೆ ನೆರವಾಗಬೇಕಾದ ಕರ್ತವ್ಯ, ಪ್ರಾಪ್ತವಯಸ್ಕೆಯಾಗಿದ್ದ ತಂಗಿಯ ವಿವಾಹದ ಹೊಣೆಗಾರಿಕೆ, ತಾನು ಉದ್ಯೋಗ ಮಾಡಿ, ಸಂಪಾದಿಸಿ, ಕುಟುಂಬದ ಭಾರ ಹೊರುವೆನೆಂಬ ಹತ್ತವರ ಹಂಬಲ ಇವೆಲ್ಲ ಸಮಸ್ಯೆಗಳು ಬೃಹದ್ರೂಪ ತಾಳಿ ಕಣ್ಣ ಮುಂದೆ ನಿಂತಿತ್ತು! ಒಂದು ದಿನ—ಅದು ಅವಿಸ್ಮರಣೀಯ ದಿನ—ಬೊಂಬಯಿಯಲ್ಲಿ ಮಹಾತ್ಮಾ ಗಾಂಧಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಿದ್ದರು. ರಾಷ್ಟ್ರಸೇವೆಗಾಗಿ ಸರ್ವತ್ಯಾಗಕ್ಕೆ ಸಿದ್ಧರಾದವರು ಎದ್ದು ನಿಲ್ಲಿರಿ ಎಂದು ಮಹಾತ್ಮರು ಸಾರಿದರು. ಶ್ರೀ ಉಮೇಶರಾಯರ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅವರು ಎದ್ದು ನಿಂತರು! ಅಷ್ಟು ದಿನಗಳ ಮಾನಸಿಕ ಹೋರಾಟ ಇಂತು ಕೊನೆಗೊಂಡಿತ್ತು. ಕೆಲವೇ ದಿನಗಳಲ್ಲಿ ಬೊಂಬಯಿಯಲ್ಲಿ ಕಾರ್ನಾಡು ಸದಾಶಿವರಾಯರ ಸಂದರ್ಶನವೂ ಆಯಿತು. ಮಂಗಳೂರಿಗೆ ಬಂದು ತನ್ನ ಜತೆಯಲ್ಲಿ ಕೆಲಸ ಮಾಡುವಂತೆ ಅವರು ಆದೇಶವಿತ್ತರು. 1921ರಲ್ಲಿ 'ಲಾ' ವಿದ್ಯಾಭ್ಯಾಸವನ್ನು ಹಾಗೆ ಅರ್ಧದಲ್ಲೇ ಬಿಟ್ಟು ಶ್ರೀ ಉಮೇಶರಾಯರು ಮಂಗಳೂರಿಗೆ ಬಂದು ನೆಲಸಿದರು.

1921ರಿಂದ 1927ರ ತನಕ ಮಂಗಳೂರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಶಾಲೆಯಾದ ತಿಲಕ ವಿದ್ಯಾಲಯದ ಮುಖ್ಯಾಧ್ಯಾಪಕರಾಗಿ ಶ್ರೀ ಉಮೇಶರಾಯರು ಕೆಲಸ ಮಾಡಿದರು. ಕಾರ್ನಾಡು ಸದಾಶಿವರಾಯರ ಬೆಂಬಲದಿಂದ ಸ್ಥಾಪಿತವಾದ ಸುಮಾರು 15 ರಾಷ್ಟ್ರೀಯ ಶಾಲೆಗಳು ಜಿಲ್ಲೆಯಾದ್ಯಂತ ನಡೆಯುತ್ತಿದ್ದುವು. ಕಾಂಗ್ರೆಸ್ ಸಮಿತಿಗಳ ಸಂಘಟನೆ, ಮೆರವಣಿಗೆ, ಸಭೆ, ರಾಷ್ಟ್ರೀಯ ಘೋಷಣೆ, ಜನತಾ ಸಂಪರ್ಕ, ಮದ್ಯದ ಅಂಗಡಿಯ ಪಿಕೆಟಿಂಗ್, ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ- ಇತ್ಯಾದಿ ಕೆಲಸಗಳು ಆ ವಿದ್ಯಾಲಯದ ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಪಾಠೇತರ ಚಟುವಟಿಕೆಗಳಾಗಿದ್ದುವು. ಇದರಿಂದಾಗಿ ಜನತೆಯಲ್ಲಿ ರಾಜಕೀಯ ಜಾಗೃತಿ ಉಂಟಾಗುತ್ತಿತ್ತು. ಇದೇ ಸಂದರ್ಭದಲ್ಲಿ 1922ಕ್ಕೆ ಕಾಸರಗೋಡಿನಲ್ಲಿಯೂ ಶ್ರೀ ಉಮೇಶ ರಾಯರಿಂದ ಒಂದು ರಾಷ್ಟ್ರೀಯ ಶಾಲೆ ಸ್ಥಾಪಿತವಾಯಿತು. ಮುಂದೆ ಎರಡು ವರ್ಷಗಳ ನಂತರ ಲಿಮಿಟೆಡ್ ಸಂಸ್ಥೆಯೊಂದನ್ನು ಖಾದಿ ಪ್ರಚಾರದ ಬಗ್ಗೆ ಶ್ರೀಯುತರು ಕಾಸರಗೋಡಿನಲ್ಲಿ ಕಟ್ಟಿದರು. 1922-23ರ ಸಾಲಿನಲ್ಲಿ ಜಿಲ್ಲೆ ಭಯಂಕರ ನೆರೆ ಹಾವಳಿಗೆ ತುತ್ತಾದಾಗ ಶ್ರೀ ಉಮೇಶ ರಾಯರು ನಿಧಿ ಕೂಡಿಸಲು ಬೊಂಬಾಯಿಗೆ ತೆರಳಿದರು. ಆ ಸಂದರ್ಭದಲ್ಲಿ ಬೊಂಬಯಿಯಲ್ಲಿ ಅವರಿಗೆ ದೊರಕಿದ ಬೆಂಬಲ ಅಭೂತ ಪೂರ್ವವಾಗಿತ್ತು. ಆ ಮೇಲೆ, ಹಳ್ಳಿ ಹಳ್ಳಿಗಳಿಗೆ ನೆರೆಪೀಡಿತರಿಗೆ ನೆರವು ನೀಡಲು ಹೋದಾಗ ಕಂಡ ದೃಶ್ಯಗಳು ಹೃದಯ ಸ್ಪರ್ಶಿಯಾಗಿದ್ದುವು. ಕೆಲ ಮಂದಿ ಶ್ರೀಮಂತರು ನಮ್ಮ ದೇಶದಲ್ಲಿ ಸುಖದ ಸೌಭಾಗ್ಯದಲ್ಲಿ ಮೆರೆಯುತ್ತಿದ್ದು, ಅಸಂಖ್ಯ ಬಡಜನತೆ ದುಃಖ ದಾರಿದ್ರ್ಯಗಳಿಂದ ತೊಳಲಾಡುತ್ತಿರುವ ಈ ವಿಷಮತೆ ಹಾಗೂ ದೇವಾಲಯಗಳ ಕೆರೆಗಳ ಸಾವಿರ ಸ್ಪೃಶ್ಯ ಹರಿಜನ ಬಂಧುಗಳನ್ನು ಬಂಗೊಡದೆ, ದೂರವಿರಿಸುತ್ತಿದ್ದ ಸಾಮಾಜಿಕ ಅನ್ಯಾಯ—ಇವುಗಳು ಶ್ರೀ ಉಮೇಶರಾಯರ ಜೀವನದಲ್ಲಿ ಹೆಚ್ಚಿನ ಪರಿಣಾಮವನ್ನುಂಟು ಮಾಡಿದ್ದುವು. ತಿಲಕ ವಿದ್ಯಾಲಯದ ಹಾಗೂ ಜಿಲ್ಲೆಯ ಸರ್ವ ಸಾರ್ವಜನಿಕ ಕಾರ್ಯಗಳಿಗೂ ಕಾರ್ನಾಡು ಸದಾಶಿವರಾಯರ ತ್ಯಾಗವೇ ಆಧಾರಸ್ತಂಭವಾಗಿತ್ತು. ಅವರ ಆ ಮಹಾ ತ್ಯಾಗದ ಘನ ವ್ಯಕ್ತಿತ್ವ ಅಖಿಲ ಭಾರತ ಮುಂದಾಳುಗಳ ಪ್ರಶಂಸೆಗೆ ಪಾತ್ರವಾದುದು ಮಾತ್ರವಲ್ಲದೆ, ಮಂಗಳೂರನ್ನು ಸಂದರ್ಶಿಸಿದ ಕವೀಂದ್ರ ರವೀಂದ್ರರೂ, ದೀನಬಂಧು ಆಂಡ್ರ್ಯೂಸರೂ ಅವರನ್ನು ಅವರ



ಸಂಸ್ಥೆಗಳನ್ನು ಮುಕ್ತಕಂಠದಿಂದ ಹೊಗಳಿದ್ದರು. ತಿಲಕ ವಿದ್ಯಾಲಯದಲ್ಲಿ ಹರಿಜನ ವಿದ್ಯಾರ್ಥಿಗಳೂ ಸವರ್ಣರ ಜತೆಯಲ್ಲಿ ಕಲೆತು ಕುಳಿತು ಓದಿ ಕಲಿಯುತ್ತಿದ್ದುದು ಮಾತ್ರವಲ್ಲದೆ, ಅಲ್ಲಿನ ಓರ್ವ ಹರಿಜನ ಅಧ್ಯಾಪಕರು ಕಾರ್ನಾಡು ಸದಾಶಿವರಾಯರ ಮನೆಯ ಅಡುಗೆ ಕೋಣೆಯಲ್ಲಿ ಎಲ್ಲರ ಜತೆಗೆ ಕುಳಿತು ಸಹಪಂಕ್ತಿ ಭೋಜನ ಮಾಡುತ್ತಿದ್ದರೆಂಬುದು ಆ ಕಾಲದಲ್ಲಿ ನಿಜವಾಗಿಯೂ ಒಂದು ಧೀರ ಹೆಜ್ಜೆಯೂ ಆಗಿತ್ತು!

ಶ್ರೀ ಉಮೇಶರಾಯರ ಮೇಲೆ ಆ ಸಂದರ್ಭದಲ್ಲಿ ಸೆಕ್ಷನ್ 144 ಎರಡು ಸಲ ಜಾರಿಯಾಗಿತ್ತು. ಬಂಧನವನ್ನು ಸಾಧ್ಯವಾದಷ್ಟು ತಪ್ಪಿಸಿ, ರಾಷ್ಟ್ರೀಯ ಚಳವಳಿಯನ್ನು ಮುಂದುವರಿಸುವ ಆ ಕಾಲದ ಧೋರಣೆಯಿದ್ದುದರಿಂದ ಸೆರೆಮನೆಗೆ ಅವರನ್ನು ಒಯ್ಯಲು ಅಸ್ಪದ ಆಗಲಿಲ್ಲ. ಮುಂದೆ 1927ರಲ್ಲಿ ರಾಷ್ಟ್ರದ ರಾಜಕೀಯ ಜೀವನದಲ್ಲಿ ಮಂದಗತಿ ಕಂಡು ಬಂತು. ರಾಷ್ಟ್ರೀಯ ಶಾಲೆಗಳು ಅಧೋಗತಿಗಿಳಿದುವು. ಹೈಸ್ಕೂಲಾಗಿದ್ದ ತಿಲಕ ವಿದ್ಯಾಲಯ ಹಾಯರ್ ಎಲಿಮೆಂಟರಿ ಶಾಲೆಯಾಯಿತು. ಆಗ, ಶ್ರೀ ಉಮೇಶರಾಯರು ಅರ್ಧದಲ್ಲಿ ನಿಲ್ಲಿಸಿದ್ದ ಲಾ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಲು ಮರಳಿ ಬೊಂಬಯಿಗೆ ತೆರಳಿದರು. ಹಿಂದಿನಿಂದಲೇ ಬಂದ ಆರ್ಥಿಕ ಸಮಸ್ಯೆಯನ್ನು ಇದಿರಿಸಬೇಕಾಗಿದ್ದುದರಿಂದ, ಒಂದು ಶಾಲೆಯಲ್ಲಿ ಅಧ್ಯಾಪಕ ವೃತ್ತಿ, ಪ್ರೈವೇಟ್ ಟ್ಯೂಶನುಗಳು—ಲಾ ಕಾಲೇಜ್ ವಿದ್ಯಾಭ್ಯಾಸ-ಈ ಮಧ್ಯೆ ಬಿಡುವಾದಾಗ ಸಮಾಜ ಸೇವೆ, ರಾತ್ರಿ ಶಾಲೆಗಳನ್ನು ನಡೆಸುವುದು, ಕೂಲಿಗಾರರ ಸಂಪರ್ಕ—ಇವೆಲ್ಲಗಳ ಜತೆಗೆ ಬೆಂಗಾವಲಾಗಿ ಸಿ. ಐ. ಡಿ.ಗಳ ಗರುಡ ದೃಷ್ಟಿ— ಹೀಗೆ ವಿಶ್ರಾಂತಿಯಿಲ್ಲದ, ವಿಶ್ರಾಂತಿ ಬಯಸದ ಅಂದಿನ ಆ ದಿನಗಳು ಕಳೆದುವು. ಅದೇ ಸಂದರ್ಭದಲ್ಲಿ ಬೊಂಬಯಿಯ ಲಕ್ಷಾಂತರ ಕೂಲಿಗಾರರ ಅಂಧಕಾರಾವೃತ ಜೀವನದ ಸಾಮಿಪ್ಯ ಪರಿಚಯ ಅವರಿಗೆ ಆಯಿತು.

1929ರಲ್ಲಿ 'ಲಾ' ಡಿಗ್ರಿ ಪಡೆದು ಶ್ರೀ ಉಮೇಶರಾಯರು ಕಾಸರಗೋಡಿನಲ್ಲಿ ಬಂದು ನೆಲಸಿದರು. ಮುಂದೆ 1962ರ ತನಕ ವಕೀಲಿ ವೃತ್ತಿ ನಡೆಸುತ್ತಾ ಬಂದರು. ಮಧ್ಯೆ ಆಗಾಗ ರಾಷ್ಟ್ರೀಯ ಕಾರ್ಯಕ್ಕಾಗಿ, ಮಾತೃಭೂಮಿಯ ಬಂಧವಿಮೋಚನೆಯ ಹೋರಾಟಕ್ಕಾಗಿ, ಒಮ್ಮೊಮ್ಮೆ ಉದ್ಯೋಗವನ್ನು ಬಿಟ್ಟು ಅಗ್ನಿಪರೀಕ್ಷೆಗೆ ಒಳಗಾಗ ಬೇಕಾಗಿತ್ತು. "ಯಾವ ಉದ್ದೇಶಕ್ಕಾಗಿ ನಾನು ಲಾ ವಿದ್ಯಾಭ್ಯಾಸ ಮಾಡಿದನೋ ಆ ಉದ್ದೇಶ—ರಾಷ್ಟ್ರೀಯ ಹೋರಾಟ-ಸ್ವರಾಜ್ಯ ಸಂಪಾದನೆ-ಈ ಧ್ಯೇಯವನ್ನು ನನ್ನ ಇಡೀ ವಕೀಲಿ ವೃತ್ತಿಯಲ್ಲಿ ನಾನು ಎಂದಿಗೂ ಮರೆತಿರಲಿಲ್ಲ. ನನ್ನ ಯೋಗ್ಯತೆಗಿಂತ ಹೆಚ್ಚಾಗಿ ವಕೀಲೀ ವೃತ್ತಿಯಲ್ಲಿ ನಾನು ಎಂದಿಗೂ ಏರಿಕಿಲ್ಲ. ನನ್ನ ಯೋಗ್ಯತೆಗಿಂತ ಹೆಚ್ಚಾಗಿ ವಕೀಲಿ ವೃತ್ತಿಯಲ್ಲಿ ನನಗೆ ಧನಕೀರ್ತಿ ಆ ಕಾಲದಲ್ಲಿ ಬಂದಿದ್ದರೂ ಆ ವೃತ್ತಿಯ ಮೋಹದ ಸುಳಿಯಲ್ಲಿ ನಾನು ಎಂದೂ ಸಿಲುಕಿಕೊಳ್ಳಲಿಲ್ಲ. ಉದ್ದೇಶ ಪೂರ್ವಕ ನಾನು ಆ ವೃತ್ತಿಯಲ್ಲಿ ಯಾರ ಮನಸ್ಸನ್ನೂ ನೋಯಿಸಿಲ್ಲ. ಸ್ವಾರ್ಥಕ್ಕಾಗಿ ನಾನು ವಕಾಲತ್ತನ್ನು ಮಾಡಿಲ್ಲವೆಂಬ ಆತ್ಮ ತೃಪ್ತಿ ನನಗಿದೆ. ಜನಪ್ರೀತಿ ಗಳಿಸಬೇಕೆಂದು ನಾನು ಎಂದಿಗೂ ಋಜು ಮಾರ್ಗದಿಂದ ವಿಚಲಿತನಾಗಲಿಲ್ಲ. ನನ್ನ ಜೀವಿತ ಕಾಲದಲ್ಲಿ ಜೀವಿತದ ಮಹದಾಶೆಯಾಗಿದ್ದ ಸ್ವರಾಜ್ಯದ ಸೂರ್ಯೋದಯವನ್ನು ಕಂಡೇನೆಂದು 1942—44ರ ನನ್ನ ದಿಗ್ಬಂಧನದ ಕಾಲದಲ್ಲಿಯೂ ನಾನು ಭಾವಿಸಿರಲಿಲ್ಲ. ಆದರೆ, ಎಷ್ಟೇ ಕಷ್ಟಕಾರ್ಪಣ್ಯಗಳಿಗೆ ತುತ್ತಾದರೂ, ನನ್ನ ಜೀವಮಾನದಲ್ಲಿ ಮಹಾತ್ಮಾಗಾಂಧಿಯವರ ಮುಂದಾಳುತನದಲ್ಲಿ ಸ್ವರಾಜ್ಯ ಪ್ರಾಪ್ತಿಯಾಯಿತು. ಎಂಬುದು ನನಗೆ ಪರಮಾವಧಿ ಸಂತೋಷವನ್ನು ಉಂಟುಮಾಡಿದೆ. ಈ ಕಾರ್ಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಇಲ್ಲದಿದ್ದರೂ ನನ್ನ ಪತ್ನಿ ನೆರವಾಗಿದ್ದಳು, ಒಮ್ಮೆ ಬಂದನಕ್ಕೂ ಒಳಗಾಗಿ ಸೆರೆಮನೆ ಸೇರಿದ್ದಳು. ನನ್ನ ಮಗ ಮೋಹನನು 1942ರ ಆಂದೋಲನ ಕಾಲದಲ್ಲಿ ಆರು ತಿಂಗಳ ಸೆರೆಮನೆ ಅನುಭವಿಸಿದನು, ಇವೆಲ್ಲವನ್ನೂ ನೆನೆದು ನಾನಿಂದು ಹೆಮ್ಮೆ ಪಡುತ್ತೇನೆ. —ಹೀಗೆ ಶ್ರೀ ಉಮೇಶರಾಯರು ಅಭಿಮಾನ ಪೂರ್ವಕ ಹೇಳಿ ಕೊಳ್ಳುತ್ತಾರೆ.

1930ರ ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಶ್ರೀ ಉಮೇಶರಾಯರ ಜೀವನದ ಸ್ಮರಣೀಯ ಘಟನೆಯೊಂದು ನಡೆಯಿತು. ಕಾರ್ನಾಡು ಸದಾಶಿವರಾಯರು ಉತ್ತರ ಕನ್ನಡದಲ್ಲಿ—ಅಂಕೋಲೆಯಲ್ಲಿ ಸತ್ಯಾಗ್ರಹ ಸಂಘಟಿಸಲು ತೆರಳಿದ್ದರು. ಮಂಗಳೂರಿನ ಮೊದಲನೆ ಸತ್ಯಾಗ್ರಹದ ದಳದ ನಾಯಕನಾಗಿ ಶ್ರೀ ಉಮೇಶರಾಯರು ಹೋಗಬೇಕಾಗಿತ್ತು. ಅವರ ಎರಡು ವರ್ಷದ ಮಗು ಕಠಿಣ ಕಾಯಿಲೆಗೆ ತುತ್ತಾಗಿತ್ತು. ಶ್ರೀ ಉಮೇಶರಾಯರು ಸತ್ಯಾಗ್ರಹಕ್ಕೆ ಹೊರಟೇ ಹೋದರು; ಆರು ತಿಂಗಳ ಕಠಿಣ ಸೆರೆಮನೆ ವಾಸ ವಿಧಿಸಲ್ಪಟ್ಟಿತು. ಮಂಗಳೂರಿಂದ ತಿರುಚಿನಾಪಳ್ಳಿ ಜೈಲಿಗೆ ಒಯ್ಯುವ ಸಂದರ್ಭ ಸೆರೆಮನೆ ಅಧಿಕಾರಿಗಳು ಅವರ ಹೆಂಡತಿ ಮತ್ತು ಮಗುವಿನ ಭೇಟಿಗೆ ಆಸ್ಪದ ಮಾಡಿಕೊಟ್ಟರು. ಬಾಳುವೆಯುದ್ದಕ್ಕೂ ಪತಿಯ ಜತೆಯಲ್ಲಿ ಅನುಭವಿಸಿದ ಕಷ್ಟಕಾರ್ಪಣ್ಯಗಳಿಂದ ಕ್ಷೀಣಳಾಗಿದ್ದ, ಕಂಬನಿ ತುಂಬಿದ್ದರೂ—ಧೀರಳಾಗಿ ಸೆರೆಮನೆ ಬಾಗಿಲ ಹೊರಗೆ ನಿಂತಿದ್ದ ಆ ತಾಯಿಯ ತೋಳುಗಳಲ್ಲಿ ಆ ಕ್ಷೀಣ ಶಿಶು ಕ್ಷೀಣ ದನಿಯಿಂದ ಕೂಗುತ್ತಿತ್ತು. ಕೆಲವೇ ದಿನಗಳಲ್ಲಿ ಆ ಮಗು ಕೊನೆಯುಸಿರು ಬಿಟ್ಟಿತೆಂಬ ಸುದ್ದಿಯೂ ಬಂತು! ಜೀವನದ ಅಂತಹ ಅಸಾಮಾನ್ಯ ಸಹಭಾಗಿಯಾದ ಅವರ ಪತ್ನಿಯು ೧೯೩೮ರಲ್ಲಿ ಇಹಲೋಕವನ್ನು ತ್ಯಜಿಸಿ ಹೋದರು! ಒಂದು ಪಾವನ ಜೀವನ ಹಾಗೆ ಪರಿಶುದ್ಧವಾದ ಸಮಾಪ್ತಿಗೊಂಡಿತು!

೧೯೩೦ರಿಂದ ೧೯೫೬ರ ವರೆಗೆ ಶ್ರೀ ಉಮೇಶರಾಯರು ಕಾಸರಗೋಡು ತಾಲೂಕು ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದರು. ಈ ಮಧ್ಯೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿಯೂ, ೧೯೩೮ರ ಸುಮಾರಿಗೆ ಮಂಗಳೂರಲ್ಲಿ ಶ್ರೀ ಪ್ರಕಾಶರ ಅಧ್ಯಕ್ಷತೆಯಿಂದ ಜರಗಿದ ರಾಜಕೀಯ ಸಮ್ಮೇಳನದ ಸಂಘಟಕರಾಗಿಯೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಸದಸ್ಯರಾಗಿಯೂ ಹಲವು ವರ್ಷ ಸೇವೆ ಸಲ್ಲಿಸಿದರು. ೧೯೩೮ರಲ್ಲಿ ಕಾಸರಗೋಡಿನಲ್ಲಿ ಶ್ರೀ ಉಮೇಶರಾಯರ ನೇತೃತ್ವದಿಂದ ಸ್ಥಾಪಿತವಾದ ನೇಕಾರರ ಸಹಕಾರ ಸಂಘವು ಇಂದು ದೊಡ್ಡ ಸಂಸ್ಥೆಯಾಗಿ ಮುಂದುವರಿಯುತ್ತಿರುವುದು ಅಭಿಮಾನಪಡತಕ್ಕದ್ದಿದೆ. ಜಿಲ್ಲಾ ಬೋರ್ಡು ಸದಸ್ಯರಾಗಿಯೂ, ಕೇರಳ ಶಾಸನ ಸಭಾಸದಸ್ಯರಾಗಿಯೂ, ಸೆನೆಟ್ ಮೆಂಬರಾಗಿಯೂ ಅವರು ಆಯ್ಕೆ ಹೊಂದಿದ್ದಾರೆ. ಪ್ರಾಂತ ವಿಭಜನೆಯ ನಂತರ ಕೇರಳದಲ್ಲಿ ನಡೆದ ಮೊದಲನೆಯ ಚುನಾವಣೆಯಲ್ಲಿ ಕರ್ನಾಟಕ ಸಮಿತಿಯ ಉಮೇದ್ವಾರರಾಗಿ ಶ್ರೀ ಉಮೇಶರಾಯರು ನಿಂತಾಗ ಅವರು ಅವಿರೋಧವಾಗಿ ಆಯ್ಕೆಗೊಂಡರೆಂಬುದು ಅವರ ಅಸಾಮಾನ್ಯ ಜನಪ್ರೀತಿಯನ್ನು ಎತ್ತಿ ತೋರಿಸುತ್ತದೆ!

೧೯೫೬ನೇ ನವಂಬರ ೧ನೇ ದಿನಾಂಕ ಕಾಸರಗೋಡಿನ ಕನ್ನಡಿಗರ ಪಾಲಿಗೆ ಕರಿದಿನ! ಪ್ರಾಂತ ಪುನರ್ವಿಭಜನೆಯ ಸಂದರ್ಭದಲ್ಲಿ ಮುಂದಾಳುಗಳತ್ತ ಭರವಸೆಗೆ ತಪ್ಪಿ ಇಡೀ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಅನ್ಯಾಯವಾಗಿ ಸೇರಿಸಲಾಯಿತು. ಅನ್ಯಾಯವು ಯಾರಿಂದಲೇ ಆಗಲಿ ಅದನ್ನು ಅನ್ಯಾಯವೆಂದು ಸಾರಿ ಪ್ರತಿಭಟಿಸುವ ಧೀರ ಹೋರಾಟಗಾರರಾದ ಶ್ರೀ ಎಂ. ಉಮೇಶರಾಯರು ಈ ಸಂದರ್ಭದಲ್ಲಿ ಹೋರಾಟಕ್ಕಿಳಿದರು! ಅವರ ಮುಂದಾಳುತನದಲ್ಲಿ ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿ ಸ್ಥಾಪಿತವಾಯಿತು. ಅವರ ಜತೆಯಲ್ಲಿ ಅನೇಕ ಕನ್ನಡಿಗ ಮುಂದಾಳುಗಳು ತಮ್ಮ ತಮ್ಮ ಪಕ್ಷಗಳಿಗೆ ರಾಜಿನಾಮೆಯಿತ್ತರು. ಸತ್ಯಾಗ್ರಹ ಪ್ರಾರಂಭವಾಯಿತು. ತನ್ನ ವಕೀಲಿ ಉದ್ಯೋಗಕ್ಕೂ ತಿಲಾಂಜಲಿಯಿತ್ತು ಅವರು ಸಮಿತಿ ಸಂಘಟನೆ ಮಾಡಿದರು. ದಿಲ್ಲಿ ವರೆಗೆ ಹೋಗಿ ಅಧಿಕಾರಿಗಳೊಡನೆ ದೂರಿತ್ತರು. ತನ್ನ ಅನಾರೋಗ್ಯವನ್ನೂ ಗಣಿಸದೆ ಆ ಇಳಿವಯಸ್ಸಿನಲ್ಲಿ ತರುಣರನ್ನು ನಾಚಿಸುವ ಉತ್ಸಾಹದಿಂದ ದುಡಿದು ಕನ್ನಡಿಗರ ಧೀರ ಕಲಿಯಾಗಿ ನಿಂತರು. ಅವರ ಅಂದಿನ ಆ ತ್ಯಾಗದ ಶಕ್ತಿಯೇ ಇಲ್ಲಿನ ಕನ್ನಡಿಗರಿಗೆ ಇಂದಿಗೂ ಸ್ಫೂರ್ತಿಯಾಗಿ ಬೆಂಗಾವಲಾಗಿ ಅವರನ್ನು ಹುರಿದುಂಬಿಸುತ್ತಿದೆ. ಮುಂದೆ ದೂರಕ್ಕೆ ನೆರೆ ರಾಷ್ಟ್ರಗಳಿಂದ ಗಂಡಾಂತರ ಸನ್ನಿಹಿತವಾಗಲು, ದೇಶ ನೌಕೆಯನ್ನು ಸುರಕ್ಷಿತ ರೀತಿ ಗೊಯ್ಯಲು ಕಾಂಗ್ರೆಸ್ ಸಂಸ್ಥೆಯೊಂದೇ ಸಮರ್ಥವೆಂದು ಮನಗಂಡು ಮರಳಿ ಕಾಂಗ್ರೆಸಿಗೆ ಸೇರಿ ಈಗಲೂ ಅದರ ಸದಸ್ಯರಾಗಿದ್ದಾರೆ.

ಶ್ರೀ ಉಮೇಶರಾಯರು ಬಾಳುವೆಯುದ್ದಕ್ಕೂ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದವರು. ಆದರೂ ದೇಶಕ್ಕಾಗಿ ಜನತೆಗಾಗಿ—ದುಃಖಿತರ ಗೋಳಿನ ನಿವಾರಣೆಗಾಗಿ ಧೀರ ಹೋರಾಟ ಹೂಡಿದರು; ಸೆರೆಮನೆಯ ಸಂಕಷ್ಟ ಸಾವಿರಗಳನ್ನು ಅನುಭವಿಸಿದರು. ಕಾಸರಗೋಡಿನಲ್ಲಿ ಮಾತ್ರವಲ್ಲ ಇಡೀ ಜಿಲ್ಲೆಯಲ್ಲಿ ತ್ಯಾಗಕ್ಕೆ ಬಲಿದಾನಕ್ಕೆ ಕಾರ್ನಾಡು ಸದಾಶಿವರಾಯರ ನಂತರ ಬೇರೊಂದು ಹೆಸರು ಹೇಳುವುದಿದ್ದರೆ ಶ್ರೀ ಉಮೇಶರಾಯರದು! ಕಾಸರಗೋಡಿನ ನೆಲ ಜಲ ವಾತಾವರಣವೆಲ್ಲವೂ ಅವರ ಪುಣ್ಯದಿಂದ ಪ್ರಭಾವಿತವಾಗಿದೆ; ಅವರ ಮಾರ್ಗದರ್ಶನದಿಂದ ಜನತೆ ಮುನ್ನಡೆದಿದೆ, ಪರದಾಸ್ಯದಿಂದ ಸ್ವಾತಂತ್ರ್ಯದೆಡೆಗೆ ತಮಸ್ಸಿನಿಂದ ಜ್ಯೋತಿಯ ಕಡೆಗೆ-ನಮ್ಮನ್ನು ಕೈ ಹಿಡಿದು ನಡೆಯಿಸಿದ ನೇತಾ ಶ್ರೀ ಉಮೇಶರಾಯರು! ಇಂದೂ ನಮ್ಮ ಮಧ್ಯೆ ಅವರು ತೇದ ಶ್ರೀ ಚಂದನದ ತಿರುಳಂತೆ—ಇದ್ದಾರೆ. ಶುಭ್ರ ಕೀರ್ತಿಯ ಕಂಪನ್ನೂ, ಉನ್ನತ ವ್ಯಕ್ತಿತ್ವದ ಪೆಂಪನ್ನೂ ಹರಡಿದ್ದಾರೆ.

ನಾಡು ಅವರನ್ನು ಮರೆತೀತೆ? ನಾವು ಎಂದೆಂದಿಗೂ ಮರೆಯಲಾರೆವು!

ಇಂದು ಅವರನ್ನು ಸತ್ಕರಿಸುವ—ಗೌರವಿಸುವ-ಪೂಜಿಸುವ ಭಾಗ್ಯ ನಮ್ಮದು!

ವಿಜಯೀ ವಿಶ್ವತಿ ರಂಗಾ ಪ್ಯಾರಾ
ಝುಂಡಾ ಊಂಚಾ ರಹೇ ಹಮಾರಾ

o o o

ಮಾತೃಭೂಮಿ ಜನನಿ ನಿನ್ನ ಚರಣ
ಸೇವೆ ಮಾಡುವ;
ಪರಮ ಹರುಷದಿಂದ ನಿನ್ನ ಸುಖಕೆ
ಪ್ರಾಣ ನೀಡುವ!

—ಈ ರಾಷ್ಟ್ರವಾಣಿ— ಕವಿವಾಣಿ, ಎಂದಿನ ವರೆಗೂ ನಮ್ಮ ಹೃದಯದಲ್ಲಿ ನಿನದಿಸುತ್ತಿರುವುದೋ ಅಂದಿನ ವರೆಗೂ ಶ್ರೀ ಉಮೇಶರಾಯರ ತ್ಯಾಗ ಜೀವನದ ನೆನಪು ಅಚ್ಚಳಿಯದೆ ಉಳಿಯುವುದು.

(ಪ್ರಜಾರಾಜ್ಯ ಸಂಚಿಕೆಗೆ ಬಂದುದು)

ತನ್ನ ಬಗೆಗೆ ತಾನು ಹೆಚ್ಚಾಗಿ ಅಂದುಕೊಳ್ಳುವವನಿಗೆ ಸ್ವಾಭಾವಿಕವಾಗಿ ಇತರರ ವಿಚಾರವಾಗಿ ಕೇಳುವ ಆಸಕ್ತಿ ಇರುವುದಿಲ್ಲ.

o o o

ಸರಿಯಾದ ವಿದ್ಯೆ ಪಡೆಯದವನನ್ನು ಮಾನವನೆಂದು ಕರೆಯುವುದು ಅಪಾರ್ಥವಾದೀತು. ಮಾನವೀಯ ಗುಣಗಳ ಮಾನವನು ಮಾತ್ರ ವಿದ್ಯಾವಂತನೆನಿಸುತ್ತಾನೆ.

o o o

ತನ್ನ ಮಾತೃಭಾಷೆಯನ್ನು ಸರಿಯಾಗಿ ಉಪಯೋಗಿಸುವ ಯೋಗ್ಯತೆ, ಗುಣನಡತೆಗಳಲ್ಲಿ ಸಭ್ಯತೆ, ತನ್ನ ಚಿಂತನೆ ಮತ್ತು ಕರ್ಮಗಳಲ್ಲಿಯ ಸಮರಸತೆ, ತನ್ನ ಚಿಂತನೆ ಮತ್ತು ಕರ್ಮಗಳಲ್ಲಿಯ ಸಮರಸತೆ, ಸತ್ಯನಿಷ್ಠ ಸುಂದರವಾದುವುಗಳ ತಿಳುವಳಿಕೆ, ಆಂತರಿಕ ಚಿಂತನೆ ಮತ್ತು ಹಿರಿತದಿಂದ ರೂಪುಗೊಂಡ ಸುಶೀಲತೆ ಇವು ಒಬ್ಬನು ವಿದ್ಯಾವಂತನೆನ್ನಲು ಇರುವ ಐದು ಅಳತೆ ಕೋಲುಗಳು.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ 1914 ಫೋನ್ ಸಂಖ್ಯೆ: 3428
ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಲಾಲ್ ಬಹದೂರ್ ಶಾಸ್ತ್ರಿ

(ಐದನೇ ಪುಟ ದಿಂದ)

ಯನ್ನು ಪಡೆದರು. ವ್ಯಾಸಂಗ ಮುಗಿದ ನಂತರ ಅವರು ಸಕ್ರಿಯ ರಾಜಕೀಯ ಕ್ಕಿಳಿದರು.

ತಮ್ಮ ೨೪ನೆಯ ವಯಸ್ಸಿನಲ್ಲಿ ಅವರು ಲಲಿತಾ ದೇವಿಯನ್ನು ವಿವಾಹವಾದರು; ಅವರಿಗೆ ನಾಲ್ವರು ಪುತ್ರರೂ, ಇಬ್ಬರು ಪುತ್ರಿಯರೂ ಇದ್ದಾರೆ.

ಶಾಸ್ತ್ರಿಗಳು ಕಾಂಗ್ರೆಸ್ ಪಕ್ಷವು ಬ್ರಿಟಿಷರ ಆಳ್ವಿಕೆಯ ವಿರುದ್ಧ ನಡೆಸಿರುವ ಎಲ್ಲ ಸತ್ಯಾಗ್ರಹ ಚಳವಳಿಗಳಲ್ಲಿಯೂ ಭಾಗವಹಿಸಿ ಏಳು ಬಾರಿ ಜೇಲಿಗೆ ಹೋಗಿದ್ದಾರೆ. ಒಟ್ಟು ಒಂಭತ್ತು ವರ್ಷಗಳ ಕಾಲ ಜೈಲಿನಲ್ಲಿದ್ದರು.

೧೯೩೭ರಲ್ಲಿ ಅವರು ಉತ್ತರ ಪ್ರದೇಶದ ವಿಧಾನ ಸಭೆಗೆ ಆಯ್ಕೆಯಾದರು; ಮತ್ತು ಮುಖ್ಯಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ನೇಮಕವಾದರು. ಅವರು ಅತಿ ಶೀಘ್ರವಾಗಿ ಗೃಹಾಡಳಿತ ಮತ್ತು ಸಾರಿಗೆ ಶಾಖೆಯ ಮಂತ್ರಿಗಳಾಗಿ ಬಡ್ತಿ ಪಡೆದರು. ಅವರು ಐದು ವರ್ಷಗಳ ಕಾಲ ಅದೇ ಶಾಖೆಯ ಮಂತ್ರಿಗಳಾಗಿದ್ದರು.

೧೯೫೨ರಲ್ಲಿ ಕಾಂಗ್ರೆಸ್ ಪಕ್ಷವು ಸ್ವತಂತ್ರ ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸಿತು. ಅಖಿಲ ಭಾರತ ಆಧಾರದ ಮೇಲೆ ಚುನಾವಣಾ ಚಳುವಳಿಯನ್ನು ವ್ಯವಸ್ಥೆಗೊಳಿಸುವಂತಹ ಸಮರ್ಥಶಾಲಿ ವ್ಯಕ್ತಿಯೊಬ್ಬನ ಶೋಧನೆ ನಡೆಯಿತು. ಆಗ ಕಾಂಗ್ರೆಸ್ ಪಕ್ಷದ ಮತ್ತು ಶ್ರೀ ನೆಹರೂರವರ ಆಯ್ಕೆ ಶಾಸ್ತ್ರಿಗಳೇ ಆಗಿತ್ತು. ಲಾಲ್ ಬಹಾದೂರ್ ಅವರು ಪಕ್ಷದ ಮಹಾ ಕಾರ್ಯದರ್ಶಿಗಳಾಗಿ ನೇಮಕವಾದರು ಮತ್ತು ಚುನಾವಣಾ ಚಳವಳಿಯ ಸೂತ್ರಧಾರರೂ ಆದರು.

ಲಾಲ್‌ಬಹಾದೂರ್ ಶಾಸ್ತ್ರಿಗಳ ಸಂಘಟನಾ ಸಾಮರ್ಥ್ಯ ಮತ್ತು ಅವಿಶ್ರಾಂತ ಪ್ರಯತ್ನಗಳ ಫಲವಾಗಿ ಕಾಂಗ್ರೆಸ್ ಪಕ್ಷವು ಅತ್ಯದ್ಭುತ ವಿಜಯ ಸಾಧಿಸಿತು.

ಹೊಸ ಪಾರ್ಲಿಮೆಂಟಿನಲ್ಲಿ ಶ್ರೀ ಶಾಸ್ತ್ರಿಗಳು ರಾಜ್ಯ ಸಭಾ ಸದಸ್ಯರಾದರು. ೧೯೫೨ರ ಮೇ ತಿಂಗಳಲ್ಲಿ ಅವರು ಕೇಂದ್ರ ಸಾರಿಗೆ ಮತ್ತು ರೈಲ್ವೆ ಮಂತ್ರಿಗಳಾಗಿ ನೇಮಕವಾದರು. ನಾಲ್ಕು ವರ್ಷಗಳ ನಂತರ, ಅರಿಯಲೂರಿನ ಸಮೀಪದಲ್ಲಿ ಸಂಭವಿಸಿದ ರೈಲ್ವೆ ಅಪಘಾತವೊಂದಕ್ಕೆ ತಾವು ರಾಜ್ಯಾಂಗದ ಪ್ರಕಾರ ಜವಾಬ್ದಾರರೆಂದು ಭಾವಿಸಿ ತಮ್ಮ ಮಂತ್ರಿ ಪದವಿಗೆ ರಾಜಿನಾಮೆಯಿತ್ತರು. (ಈ ಅಪಘಾತದಲ್ಲಿ 150 ಜನ ಪ್ರಯಾಣಿಕರು ಮೃತರಾಗಿದ್ದರು.) ಶಾಸ್ತ್ರಿಗಳ ಈ ದೃಢ ನಿರ್ಧಾರವನ್ನು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಅತ್ಯುಚ್ಚ ಪರಂಪರೆಗಳಿಗನುಗುಣವಾಗಿ ಕೈಗೊಳ್ಳಲಾಗಿದೆ ಎಂದು ಪಾರ್ಲಿಮೆಂಟ್ ಮತ್ತು ಇಡೀ ರಾಷ್ಟ್ರವೇ ಸಾರಿತು. ಆ ಸಮಯದಲ್ಲಿ ಪ್ರಧಾನ ಮಂತ್ರಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಲಾಲ್‌ಬಹದೂರ್‌ರವರು ಅತ್ಯಂತ ಪ್ರಾಮಾಣಿಕ ವ್ಯಕ್ತಿಗಳೆಂದು, ಉನ್ನತ ಆದರ್ಶಗಳಿಗೆ ಅಂಟಿಕೊಂಡಿರುವ ಮಹಾನ್ ವ್ಯಕ್ತಿಯೆಂದೂ ಹೇಳಿದ್ದರು.

ಆ ಸಮಯದಲ್ಲಿ ಶ್ರೀ ಲಾಲ್‌ಬಹಾದೂರ್ ಅವರು ತಮ್ಮ ಚರಿತ್ರದ ಶೀಲ ಸ್ವಭಾವದ ಒಂದು ಆದರ್ಶವನ್ನೇ ಪ್ರಕಟಪಡಿಸಿದರು. ಅವರು ನೋಡುವುದಕ್ಕೆ ಮೃದು ಸ್ವಭಾವದವರಂತೆ ಕಾಣುತ್ತಾರೆ! ಆದರೆ ಅವರದು ಕಟು ಸ್ವಭಾವ. ಅವರ ದೃಢ ಸಂಕಲ್ಪ ಅಚಲವಾದದ್ದು. ರೈಲ್ವೆ ಅಪಘಾತದ ಬಗ್ಗೆ ನಡೆದ ಎಂಡು ಗಂಟೆಗಳ ಚರ್ಚೆಗೆ ಉತ್ತರ ನೀಡುತ್ತಾ ಲಾಲ್ ಬಹಾದೂರ್ ಅವರು 'ನನ್ನ ಆಕಾರ ನೋಡಿ, ನನ್ನ ಮೃದು ಮಾತು ಕೇಳಿ, ಜನ ನಾನು ಮೃದು ಸ್ವಭಾವದವನು, ನಾನು ಅವರೊಂದಿಗೆ ಪಟ್ಟು ಹಿಡಿಯಲಾರೆ ಎಂದು ಭಾವಿಸಿರಬಹುದು. ನಾನು ದೈಹಿಕವಾಗ ಬಲಿಷ್ಠನಿಲ್ಲದೇ ಇರಬಹುದು, ಆದರೆ ನಾನು ಅಂತರಂಗವಾಗಿ ಅಷ್ಟೇನು ದುರ್ಬಲನಲ್ಲ' ಎಂದರು. ಮಂತ್ರಿ ಶಾಖೆಗೆ ತಿಲಾಂಜಲಿಯಿತ್ತ ಶಾಸ್ತ್ರಿಗಳು ಬಹುಕಾಲ ಸರ್ಕಾರದ ಹೊರಗೆ ಉಳಿಯಲಿಲ್ಲ. ೧೯೫೭ರಲ್ಲಿ ಅವರು ಲೋಕ ಸಭೆಗೆ ಪುನಃ ಆಯ್ಕೆಯಾದರು. ಅವರು ಸಾರಿಗೆ ಮತ್ತು ಸಂಪರ್ಕ ಶಾಖೆಯ ಮಂತ್ರಿಗಳಾದರು. ೧೯೫೮ರ ಮಾರ್ಚಿಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಶಾಖೆಯ ಮಂತ್ರಿಗಳಾಗಿ ನೇಮಕವಾದರು. ವಾಣಿಜ್ಯ ಶಾಖೆಯ ಮಂತ್ರಿಗಳಾಗಿದ್ದಾಗಲೆ ಅವರು ಕೃಷಿ-ಕೈಗಾರಿಕಾ ಸಮನ್ವಯ ಯೋಜನೆಯೊಂದನ್ನು ಸಿದ್ಧಪಡಿಸಿದರು. ಕೈಗಾರಿಕೆಯನ್ನು ವ್ಯವಸಾಯದೊಂದಿಗೆ ಸಂಬಂಧಗೊಳಿಸುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಯುವುದು ಸಾಧ್ಯವಿದೆ ಎಂದು ಅವರು ಭಾವಿಸಿದರೂ ೨೦—೩೦ ವರ್ಷಗಳ ಅವಧಿಯಲ್ಲಿ ಅವರು ಗ್ರಾಮೋದ್ಯೋಗಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನಾಗಿ ಪರಿವರ್ತಿಸಬೇಕೆಂದು ಅವರ ಅಪೇಕ್ಷೆಯಾಗಿತ್ತು.

ಪಂಡಿತ ಗೋವಿಂದ ವಲ್ಲಭ ಪಂತರ ನಿಧನಾ ನಂತರ ಲಾಲ್‌ಬಹಾದೂರ್ ಶಾಸ್ತ್ರಿಗಳು ೧೯೬೧ರ ಎಪ್ರಿಲ್ ೪ರಂದು ಗೃಹಾಡಳಿತ ಮಂತ್ರಿಗಳಾದರು. ಲಾಲ್ ಬಹಾದೂರ್‌ರವರು ಈಗ ನಿರ್ವಹಿಸಿದ ಕಾರ್ಯಗಳು ಅವರಿಗೆ ಅಪಾರ ಯಶಸ್ಸು ತಂದು ಕೊಟ್ಟವು.

ಅಸ್ಸಾಮಿನಲ್ಲಿ ಭಾಷಾ ವಿವಾದವನ್ನು ಬಗೆಹರಿಸುವಲ್ಲಿ ಅವರು ವಹಿಸಿದ ಪಾತ್ರ ಅದ್ಭುತವಾದದ್ದು. ದೀರ್ಘ ಕಾಲದ ವರೆಗೆ ಆ ರಾಜ್ಯದಲ್ಲಿ ಅಸ್ಸಾಮಿ ಮತ್ತು ಬಂಗಾಳಿಗಳ ನಡುವೆ ಮೈತ್ರಿ ಏರ್ಪಡುವಂತೆ ಮಾಡಿದ್ದು ಸಂಧಾನ ಚಾತುರ್ಯಕ್ಕೆ ಒಂದು ನಿದರ್ಶನ ಮಾತ್ರ.

ಭಾರತ ನೇಪಾಳಗಳ ನಡುವೆ ಇದ್ದ ಸಂಬಂಧಗಳು ಹದಗೆಡುತ್ತಿದ್ದ ಸಮಯವದು. ೧೯೬೩ರ ಮಾರ್ಚ ತಿಂಗಳಲ್ಲಿ ಶಾಸ್ತ್ರಿಗಳು ನೇಪಾಳ ಯಾತ್ರೆ ಕೈಗೊಂಡರು. ಸಂಧಾನ ಚತುರ ಶಾಸ್ತ್ರಿಗಳು ಎರಡೂ ದೇಶಗಳ ನಡುವೆ ಇದ್ದ ತಪ್ಪು ಅಭಿಪ್ರಾಯಗಳನ್ನು ತೊಲಗುವಂತೆ ಮಾಡಿದರು ಅಲ್ಲದೆ ಎರಡೂ ದೇಶಗಳ ನಡುವೆ ಮೈತ್ರಿ ಸಂಬಂಧಗಳು ಕುದುರುವಂತೆ ಮಾಡಿದರು.

ಕಾಮರಾಜ ಯೋಜನೆಯ ಪ್ರಕಾರ ಶಾಸ್ತ್ರಿಗಳು ೧೯೬೩ರ ಆಗಸ್ಟ್‌ನಲ್ಲಿ ಅಧಿಕಾರ ತ್ಯಜಿಸಿ ಕಾಂಗ್ರೆಸ್ ಪಕ್ಷದ ಸಂಘಟನಾ ಕಾರ್ಯದಲ್ಲಿ ನಿರತರಾದರು. ಆದರೆ ೧೯೬೪ರ ಜನವರಿ ೨೪ರಂದು ...ರು ಮತ್ತೆ ಶಾಖಾರಹಿತ ಮಂತ್ರಿಗಳ... ನೇಮಕವಾದರು.

ಮಂತ್ರಿ ಸಂಪುಟವನ್ನು ಸೇರಿದ ಕ...ಲೆ ಅವರು ಕಾಶ್ಮೀರದಲ್ಲಿ ಉದ್ಭವಿ... ಅತಿ ಸ್ಫೋಟಕಾರಿ ಸಮಸ್ಯೆ ಬಗೆಹರಿ... ಯತ್ನಿಸಬೇಕಾಯಿತು. ಹಜರತ್‌ಬಾ... ಮಸೀದಿಯಿಂದ ಪವಿತ್ರ ಅವಶೇಷದ ... ವಿನ ಪರಿಣಾಮವಾಗಿ ಜಟಿಲವಾಗಿದ್ದ... ಸಮಸ್ಯೆ ಶಾಸ್ತ್ರಿಗಳ ಬುದ್ಧಿವಂತಿಕೆಯ... ಣಾಮವಾಗಿ ಶಾಂತಿಯುತವಾಗಿ ಬ...ರಿಯಿತು.

ಜವಾಹರಲಾಲ್ ನೆಹರೂ ಅ... ನಿಧನ ಹೊಂದಿದಾಗ ರಾಷ್ಟ್ರದ ನಾ...ಕತ್ವದ ಭಾರ ಲಾಲ್‌ಬಹಾದೂರ್ ಶಾ...ಗಳಿಗೆ ಬಿದ್ದದು ಅಚ್ಚರಿಯೇನಲ್ಲ. ಅ... ೧೯೬೪ರ ಜೂನ್ ೯ರಂದು ಪ್ರಧಾನ ಮಂತ್ರಿಗಳಾಗಿ ಅಧಿಕಾರ ಸೂತ್ರಗಳ... ವಹಿಸಿಕೊಂಡರು.

ಭಾರತದಲ್ಲಿ ಶಾಸ್ತ್ರಿ ಯುಗ ಪ್ರಾರ...ವಾಯಿತೆನ್ನಬಹುದು. ಅವರ ನಾ...ತ್ವವನ್ನು ಇಡಿ ಜಗತ್ತು ಪ್ರಶಂಸಿಸಿ... ಭಾರತೀಯ ಪ್ರಜಾಪ್ರಭುತ್ವದ ಸು...ತೆಯ ಬಗ್ಗೆ ನೆಹರೂರವರಿಗಿದ್ದ 'ವಿಶಾ...ದ ಕುರುಹು ಎಂದು ಇಡಿ ಜಗತ್ತು ...ರಿತು.

ಶಾಸ್ತ್ರಿಗಳ ಹಿರಿಯ ಸಹೋದ್ಯೋ...ಳಬ್ಬರು ಹೇಳಿರುವಂತೆ "ಶಾಸ್ತ್ರಿಗಳ ಭ...ತವು ವಿಕಾಸಗೊಂಡಿದೆ ಎಂದು ಹೇ...ಹುದು. ೧೯ ತಿಂಗಳ ಕಾಲ ಅವರು ...ಸಿದ ಪ್ರಧಾನ ಮಂತ್ರಿಗಳ ಆಳ್ವಿಕೆ... ದೇಶಕ್ಕೆ ಸ್ಥಿರತೆ, ಬಲ ಮತ್ತು ಐಕ್ಯತೆ...ನ್ನು ತಂದು ಕೊಟ್ಟಿದೆ ಮತ್ತು ಜಗ...ರಾಷ್ಟ್ರಗಳಲ್ಲಿ ಶಾಂತಿ ಮತ್ತು ಸೌ...ರ್ದತೆಯನ್ನು ಸ್ಥಾಪಿಸುವ ನೆಹರೂ ಪ...ಪರೆಯನ್ನು ಮುಂದುವರಿಸಿಕೊಂಡು...ರುವ ಅವಕಾಶ ನೀಡಿದೆ ಭಾರತದ ...ತೆಗೆ ಪ್ರಗತಿ ಮತ್ತು ಅಭ್ಯುದಯ... ತಂದು ಕೊಟ್ಟಿದೆ.

ಪಾಕಿಸ್ತಾನದೊಂದಿಗೆ ಹೋರಾಟ...ರಂಭವಾದಾಗ ಮತ್ತೊಮ್ಮೆ ರಾಷ್ಟ್ರ... ಶಾಸ್ತ್ರಿಗಳ ಬೆಲೆ ಗೊತ್ತಾಯಿತು. ಅ... ಎಂತಹ ಧೀರೋದ್ಧಾತ್ತ ನಾಯಕರು...ದು ಗೊತ್ತಾಯಿತು.

ಆ ಹೋರಾಟದ ಕಠಿಣ ಸಮಯ... ಅವರು ರಾಷ್ಟ್ರಕ್ಕೆ ನೀಡಿದ ಮಾರ್ಗದ...ನ ಶತ್ರು ಮತ್ತು ಮಿತ್ರರಿಂದ ಏಕ ಪ್ರ...ರವಾಗಿ ಮೆಚ್ಚಿಗೆಗೆ ಪಾತ್ರವಾಯಿ... ಯುದ್ಧ ಸಮಯದಲ್ಲಿ ಅವರೊಬ್ಬರು ...ಹಾ ನಾಯಕರೆನಿಸಿಕೊಂಡರು. ಆದ...ಶಲೂ ಮಿಗಿಲಾಗಿ ಅವರೂ ತಾಷ್ಕೆಂ...ಲ್ಲಿ ಶಾಂತಿ ಪಥಾನ್ವೇಷಣೆಯಲ್ಲಿ ತೊ...ದಾಗ ಶ್ರೇಷ್ಠತಮ ನಾಯಕರಾಗಿ ...ಣಿಸಲ್ಪಟ್ಟರು. ಲಾಲ್‌ಬಹಾದೂರ್...ರು ಗೌರವ, ಪ್ರತಿಷ್ಠೆಗಳ ಮಹತ್ವ...ಗಳ ಪರಾಕಾಷ್ಠತೆಯನ್ನು ಮುಟ್ಟಿದ... ಮಯದಲ್ಲಿ ಕಾಲವಶರಾಗಿರುವುದು ...ದೈವ.

ಮಾತೃಭೂಮಿಗೆ ನಿಸ್ವಾರ್ಥತೆಯಿ... ಮತ್ತು ದಕ್ಷತೆಯಿಂದ ಸೇವೆಸಲ್ಲಿಸಿದ ... ರತಾಂಬೆಯ ಈ ಸುಪುತ್ರನ ನೆನಪು ...ಷ್ಟ್ರದಲ್ಲಿ ಚಿರಕಾಲ ಉಳಿಯುವುದು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 662/1965.

ಶಾಂತಿರಾಜ ಹೆಗ್ಡೆ —ವಾದಿ.

ಶಿದ್ದ ಮುದ್ದ್ಯ, ಗುಣಾವತಿ ಹೆಂಗ್ಸಿನ ಮಗ, ಕಾರ್ಕಳ ತಾಲ್ಕು ಪಣಪೀಲ ಗ್ರಾಮದ ಪುತ್ರೋದು ಎಂಬಲ್ಲಿರುವವ — ಪ್ರತಿವಾದಿ.

ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ,

ನೀವು ವಾದಿಗೆ ತಾರೀಕು 3-6-1960ರಲ್ಲು ರೂಪಾಯಿ 2920—00ಕ್ಕೆ ರಿಜಿಸ್ಟ್ರಿ ನಿಶಿ ಬರಕೊಟ್ಟ ತೋರಡವಿನ ಅಸಲು ಮತ್ತು ಬಾಕಿ ಬಡ್ಡಿ ಕೂಡಾ ರೂಪಾಯಿ 3381—86ಕ್ಕೆ ವಾದಿಯು ನಿಮ್ಮ ಮೇಲೆ ದಾಖಲ್ಲು ಮಾಡಿದ ಸದ್ರಿ ದಾವೆಯು ತಾರೀಕು 14-2-66ಕ್ಕೆ ನಿಮಗೆ ಆಖೈರ ನೋಟೀಸಿಗೆ ಇಟ್ಟಿದೆ. ನಿಮಗೆ ಆ ಕುರಿತು ಏನಾದರೂ ಆಕ್ಷೇಪ ಇದ್ರೆ ಸದ್ರಿ ದಿನ, ಬೆಳಿಗ್ಗೆ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Plaintiff.

Karkal, 25—1—66.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಹಸಿದ ಹೊಟ್ಟೆ
...ರ್ಣಿಸಿಕೊಂಡೀತು

(ನಾಲ್ಕನೇ ಪುಟದಿಂದ)

...ನ್ನೆಲೆಯಲ್ಲಿ ರಚಿತವಾಗಿವೆಯೆಂ ...ದೆ, ಅವುಗಳ ಕೀಳು ಅನುಕರ ...ಮಾತ್ರ ತೊಡಗುತ್ತಾರೆ..."

...ಲ್ಲಾ ಆದರೆ, ನಾವು ಎಲ್ಲಿ ನಡೆ ...ವೆ ಅಂತ..."

...ನ್ನು ಈಗ ಹೇಳಬೇಕಾದವಳು

...ಕ ನಾನೇ ಹೇಳಬೇಕು?'

...ಡು, ಆಗಲೇ ಅಂದೆ, ನಮ್ಮ ...ಸರಕಾರ, ಗಂಡಸರು ಮಾಡೋ ...ಡಯೋಲ್ಲಾಂತ...?

...ಕಾರವೇನೋ ನಮ್ಮದು. ಆದರೆ ...ಜನರು ಅವರೇ ನೋಡಿ.'

...ಗೆ ಬಾ..."

...ರ?"

...ಡು, ಸರಕಾರ ಬರುತ್ತದೆ.... ...ಡುತ್ತದೆ ನಿಜ. ಆದರೆ, ಅದು ...ಡಬಲ್ಲುದು? ಜನತೆಯು ತಾ ...ಡೆಯುತ್ತಿದೆಯೆಂದು ವಿವೇಚಿಸುವ ...ದಿಂದಲೂ ಏನು ಮಾಡುವುದೂ

...ನೋಡಿ, ಜನತೆಯನ್ನು ಜಾಗ್ರ ...ಸುವುದು ಯಾರು?"

...ರವರಿಂದಲೇ ಅವರವರ ಜಾಗೃ ...ಬೇಕು'—

...ಹ ಶಕ್ತಿ ಎಲ್ಲರಲ್ಲೂ ಇಲ್ಲದಿ

...ಕ್ತಿ ಹೊರಗಿನಿಂದ ಬರಬೇಕಾಗು ...ತ್ರ ದೇವರ ತಲೆಯೇರುವಾಗ ...ನ್ನು ಒಯ್ಯುತ್ತದೆ ತಾನೆ?"

...ರೆ ನೋಡಿ, ಇಂದು ನಮ್ಮ ದು ...ಯೊಂದೆ ಎಲ್ಲವೂ ವೃಷ್ಟಿ ಸಮ ...ಗಣಿಸುವವರೇ ಇಲ್ಲ....'

...ಕ್ಕೆ ಅನ್ನೋದು, ಜನ ನಾನು-ನ ...ನ್ನುವುದನ್ನು ಬಿಟ್ಟು ನಾವು-ನ ...ಎಂಬುದನ್ನು ಅರಿತುಕೊಳ್ಳದೆ ...ನಿಮ್ಮ ಇಂದಿರಾ ಕೂಡ ಏನೂ ...ರಳು...."

...ದ್ರೆ..."

...ತ್ತೇನೂ ಇಲ್ಲ. ಇಂದಿರಾಜಿ ಅನು ...ಕುಶಲೆ. ನೆಹರು ಶಾಸ್ತ್ರಿ ಬಿ ...ಸ್ತ್ರೀಯ ಭಾವನೆಯನ್ನು ಈಗ ...ಲ್ಲಳು ಎಲ್ಲರೂ ಅದಕ್ಕೆ ನೀರೆರೆ ...ಬೇಕು...."

...ಹೌದೂನ್ನಿ. ಆದರೆ ನೋಡಿ, ...ಲ್ಲಿ ತಾನು ಒಳ್ಳೆಯುವರಾಗಬೇ ...ಬ ಭಾವನೆಯಿರುವುದು ಸಹಜ

...ಯೇ. ತಾನು ಒಳ್ಳೆಯುವನಾಗ ...ಎಂಬ ಭಾವನೆ ಒಳ್ಳೆಯದು. ಇದು ...ಲ್ಲಿ ಉಳಿಯಬೇಕು, ಬೆಳೆಯಬೇ ...ರೆ, ಆದರ ಜತೆಗಿರುವ ಅವನು ...ಗಬೇಕು ಎಂಬ ಅವ್ಯಕ್ತ ಭಾ ...ತ್ರ ಬಹಳ ಕೆಟ್ಟದು...ಆಗ ಅದು ...ಚರವು ಸೀಮೆಯಾಗುತ್ತದೆ, ಅ ...— ಈರ್ಷ್ಯೆಯೆನಿಸುತ್ತದೆ. ಆಗ ...ದರೊಬ್ಬರ ಬಲಿದಾನ ಅತ್ಯಗತ್ಯ ...ದ.'

...ಹ್ಞಾಂ...ಇದೆಲ್ಲಾ ಏನೋ...ನ ...ರ್ಥವಾಗುವುದಿಲ್ಲ...."

"ಹಸಿದ ಹೊಟ್ಟೆ ಏನನ್ನೂ ಜೀರ್ಣಿಸಿಕೊಂಡೀತು'.

"ಹೌದು. ಆದರೆ, ಹಸಿವೆಯಿನ್ನೂ ಸರಿಯಿಲ್ಲ. ನಿಮ್ಮ ಮದ್ದು ಕುಡಿದು ಕುಡಿದು ಬಾಯಿ ರುಚಿಯೇ ಕೆಟ್ಟಿದೆ....'

"ಎಲ್ಲಿ ನೋಡೋಣ..."

'ಇಸ್ಸೀ...'

"ಇಲ್ಲವಲ್ಲಾ, ನನಗೇನೂ ಕೆಟ್ಟಂತೆನಿಸಲಿಲ್ಲ."

"ಹ್ಯಾಗೆ ಅನಿಸಬೇಕು? ಬನ್ನಿ, ನಿಮ್ಮೊಡನೆ ಮಾತಿಗೆ ಕೂತು ನಾನು ಏಳುವಂತಿಲ್ಲ....'

"ಅಂದ್ರೆ, ಊಟಕ್ಕೆ..."

"ಮತ್ತಿಲ್ಲಿಗೇಂದ್ರಿ? ಇವ್ರದ್ದೊಂದು ಸುರುವಾಯ್ತು....'

'ಆಗಲಪ್ಪಾ...ಇಂದೇನೋ ನಮ್ಮಗು....ನಾಳೆ..."

'ಏಕೆ?'

"ಏಕೂ ಇಲ್ಲ, ಯಾರದ್ದೋ ಏನೋ ಅಂತ.'

"ಪ್ರಪಂಚವೇ ಹಾಗೇನ್ನು ಯಾವುದು ಸ್ಥಿರ?"

"ಏನು ಅಷ್ಟೂ ಉದಾಸೀನ....'

'ಹ್ಞೂ...ಇದಾದರೆ ವೇದಾಂತ....'

'ಹುಚ್ಚು ಅನ್ನಲಿಲ್ಲವಲ್ಲಾ ಸದ್ಯ....'

"ಹ್ಞ....ಹ್ಞ....ಹ್ಞ...."

—ಗೋರಾ.

ಅಮೆರಿಕೆ — ಭಾರತಗಳ ನಡುವೆ ಸ್ನೇಹ ಸಂಬಂಧ ಬೆಳೆಯುತ್ತಿದೆ. ಅಮೆರಿಕನ್ ಕಾಂಗ್ರೆಸ್ಸಿನ ಸದಸ್ಯರು ಅಧಿಕ ಸಂಖ್ಯೆಯಲ್ಲಿ ಭಾರತಕ್ಕೆ ಭೇಟ್ಟಿ ಕೊಡುತಿದ್ದಾರೆ. ಮೇಲಿನ ಚಿತ್ರದಲ್ಲಿ ಅಂತಹ (ತೀರ ಬಲಗಡೆ) ಜಾನ್ ವಿ. ಟನೀ ಮತ್ತು ಅವರ ಜತೆ ಜೇಮ್ಸ್ ಸಿ. ಕಲವರರು ನವದೆಹಲಿಯಲ್ಲಿ ರಾಯಭಾರಿ ಚೆಸ್ಟರ್ ಬೌಲ್ಸರ ಮನೆಯಲ್ಲಿ ದಿಲ್ಲಿ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳನ್ನು ಭೇಟ್ಟಿಯಾದ ಚಿತ್ರ.

ಶ್ರೀ ಟಿ. ಎ. ಪೈಗಳಿಗೆ ಸಾರ್ವಜನಿಕ ಸತ್ಕಾರ

ಉಡುಪಿ ಜನವರಿ ೮:— ದೇಶದ ಆಹಾರ ರಂಗದಲ್ಲಿ ಸೇವೆಸಲ್ಲಿಸಿ ಇದೀಗ ತಮ್ಮ ಹಿಂದಿನ ಹುದ್ದೆಗೆ ಮರಳಿ ಬಂದಿರುವ ಶ್ರೀ ಟಿ. ಎ. ಪೈಗಳನ್ನು ಸತ್ಕರಿಸುವ ಸಮಾರಂಭವು ಕಳೆದ ತಾ. ೮ರಂದು ವಿಕ್ಟೋರಿಯಾ ಜ್ಯುಬಿಲೀ ಯೂನಿಯನ್ ಕ್ಲಬ್ಬಿನಲ್ಲಿ ಜರಗಿತು. ರಾಜ್ಯದ ಆಹಾರ ಮಂತ್ರಿ ಶ್ರೀ| ಬಿ. ಡಿ. ಜತ್ತಿಯವರು ಸಭಾಧ್ಯಕ್ಷತೆ ವಹಿಸಿದ್ದರು.

ಅತಿಥೇಯ ಸಮಿತಿಯ ಅಧ್ಯಕ್ಷ ಶ್ರೀ| ಮಧ್ವರಾಜ್, ಎಂ ಎಲ್. ಎ. ಇವರು ಸ್ವಾಗತಿಸಿದ ಬಳಿಕ ಇನ್ನೂರಕ್ಕೂ ಮಿಕ್ಕಿದ ಸಂಘ, ಸಂಸ್ಥೆ ಹಾಗೂ ಅಭಿಮಾನಿಗಳು ಶ್ರೀ| ಪೈಗಳಿಗೆ ತಮ್ಮ ಪ್ರೀತಿಯ ದ್ಯೋತಕವಾಗಿ ಹೂ ಮಾಲೆಯನ್ನರ್ಪಿಸಿದರು. ಶ್ರೀ| ಎ. ಜೆ. ಅಲ್ಸೆಯವರು ಸಂದೇಶವಾಚನ ಗೈದ ಬಳಿಕ ಡಾ| ಶಿವರಾಮ ಕಾರಂತ, ಶ್ರೀ| ಸೈಂಪಳ್ಳಿ ರಾಮರಾವ್, ಶ್ರೀ| ಎಸ್. ಧರ್ಮ ಸಾಮ್ರಾಜ್ಯ, ಎಂ. ಎಲ್. ಎ. ಹಾಗೂ ಶ್ರೀ| ಅರೂರ್ ಲಕ್ಷ್ಮೀ ನಾರಾಯಣ ರಾಯರು ಶ್ರೀ| ಪೈಗಳ ಗುಣಕಥನವನ್ನು ಮಾಡಿ, ಅವರಿಗೆ ಶುಭಾಕಾಂಕ್ಷೆಗಳನ್ನರ್ಪಿಸಿದರು.

ಉತ್ತರರೂಪವಾಗಿ ಶ್ರೀ ಪೈಗಳು ಮಾತನಾಡುತ್ತಾ ಜನರ ಪ್ರೀತ್ಯಾದರಗಳಿಗೆ ಕೃತಜ್ಞತೆ ಸೂಚಿಸಿ, ತನ್ನ ಒಂದು ವರ್ಷದ ಅನುಭವವನ್ನು ವಿವರಿಸಿ, ದೇಶದಲ್ಲಿ ಜನ ಒಂದಾಗಿ ಈ ಸಮಸ್ಯೆಯ ಪರಿಹಾರಕ್ಕೆ ದುಡಿದರೆ ಮಾತ್ರ ಪರಿಹಾರ ಸಾಧ್ಯವೆಂದೂ, ಮಿಗತೆಯ ರಾಜ್ಯಗಳು ಕೊರತೆ ರಾಜ್ಯಗಳ ನೆರವಿಗೆ ಬಂದು, ದುಡಿಯುವ ರೈತನಿಗೆ ಸರ್ವ ವಿಧದ ಸವಲತ್ತುಗಳು ಸಿಗಬೇಕಾಗಿವೆಯೆಂದೂ ನುಡಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ| ಜತ್ತಿಯವರು ಮಾತನಾಡುತ್ತಾ ಶ್ರೀ ಪೈಗಳ ಸಿಂಡಿಕೇಟ್ ಬ್ಯಾಂಕು ಕೃಷಿಕರಿಗೆ ಅಧಿಕ ನೆರವಿತ್ತ ಕ್ರಮವು ಬೇಂಕೆಂದು ಹೇಳಿ, ಶ್ರೀ| ಪೈಗಳ ಪ್ರತಿಭೆಯನ್ನು ಕೊಂಡಾಡಿದರು. ರಾಜ್ಯದ ಆಹಾರ ಸಮಸ್ಯೆಯು ಕಠಿಣತರವಾಗಿದೆಯೆಂದೂ, ಅದರೂ ಹೆಚ್ಚಿನ ಉತ್ಪಾದನೆಯ ಹಂಬಲ ಇರಿಸಿಕೊಂಡು ಕೊರತೆ ತುಂಬಾ ಬೇಕಾಗಿದೆಯೆಂದೂ ಅವರು ನುಡಿದರು.

ಸಮಾರಂಭದ ಪ್ರಾರಂಭದಲ್ಲಿ ಅತಿಥೇಯ ಸಮಿತಿ ಉಡುಪಿ ಚೇಂಬರ್ ಆಫ್ ಕಾಮರ್ಸ್ ತಾಲೂಕು ಡೆವಲಪ್‌ಮೆಂಟ್ ಬೋರ್ಡ್ ಹಾಗೂ ನಗರ ಸಭೆಗಳ ವತಿಯಿಂದ ಶ್ರೀ| ಪೈಗಳಿಗೆ ಅಭಿನಂದನಾ ಪತ್ರಗಳನ್ನು ಅರ್ಪಿಸಲಾಯಿತು.

ಅಂತ್ಯದಲ್ಲಿ ಶ್ರೀ| ಎ. ಜೆ. ಅಲ್ಸೆಯವರು ವಂದನಾರ್ಪಣೆ ಮಾಡಿದರು.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಎಲ್ಲೆಲ್ಲಿ ಏನೇನು?

ಉದಾರ ಸಹಾಯ

ಶಂಕರ್ ವಿಠಲ್ ಮೋಟಾರ್ ಕಂಪನಿ ಲಿಮಿಟೆಡ್ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳಿಂದ ತಾ. 31-12-1965ರಂದು ಈ ಕೆಳಗಿನಂತೆ ಧನಸಹಾಯವನ್ನು ಮಂಜೂರುಮಾಡಲಾಗಿದೆ.

ರಾಷ್ಟ್ರೀಯ ರಕ್ಷಣಾ ನಿಧಿಗೆ-ರೂ. 3000; ಪುತ್ತೂರು ವಿದ್ಯಾವರ್ಧಕ ಸಂಘಕ್ಕೆ—ರೂ. 2000; ಮೈಸೂರು ಯುನಿವರ್ಸಿಟಿಯ ಗೋಲ್ಡನ್‌ಜ್ಯುಬಿಲಿ ಫಂಡಿಗೆ-ರೂ. 2000; ಕುಂದಾಪುರ ಭಂಡಾರ್‌ಕಾರ್ಸ್ ಕೋಲೇಜಿಗೆ-ರೂ. 2,000, ಮಂಗಳೂರು ಕುಷ್ಠರೋಗ ನಿವಾರಣಾ ಸಂಘಕ್ಕೆ—ರೂ. 1,500; ಸ್ವಾಮಿ ಶ್ರದ್ಧಾನಂದ ಆಶ್ರಮಕ್ಕೆ-ರೂ. 1,500; ಆಗುಂಬೆ ಎಜುಕೇಶನಲ್ ಸೊಸೈಟಿಗೆ ರೂ. 500 ಉಡುಪಿ ಮುನಿಸಿಪಲ್ ಹೈಸ್ಕೂಲಿಗೆ—ರೂ. 1,500; ಡಾ| ಟಿ. ಎಮ್. ಎ. ಪೈಗಳ ಬೆನೆವಲೆಂಟ್ ಟ್ರಸ್ಟ್ ಫಂಡಿಗೆ-ರೂ. 6,000.

(ಇದರಲ್ಲಿ ಆರೂರು ಕಲ್ಯಾಣ ಮಂಟಪದ ಸುಮಾರು ರೂ. 40,000 ಮತ್ತು ಎ. ಎಲ್. ಎನ್. ರಾವ್ ಚೆರಿಟೇಬಲ್ ಟ್ರಸ್ಟಿನಿಂದ ಕೊಡಲಾದ ವಿದ್ಯಾರ್ಥಿ ವೇತನ ಮತ್ತು ದೇಣಿಗೆಗಳು ಸೇರಿಲ್ಲ.)

ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವ

ಕಳೆದ ತಾ. 24ರಂದು ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಕಾಲೇಜು ದಿನಾಚರಣೆಯು ವಿಜೃಂಭಣೆಯಿಂದ ಜರಗಿತು. ಪ್ರಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಆದ್ಯ ರಂಗಾಚಾರ್ಯ (ಶ್ರೀರಂಗ)ರನ್ನು ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರರು ಸ್ವಾಗತಿಸಿದ ಬಳಿಕ ಶುಭಕೋರಿ ಬಂದ ಸಂದೇಶಗಳನ್ನು ಶ್ರೀ ಕೆ. ಎಸ್. ಉಪಾಧ್ಯರು ಓದಿದರು. ಹಳೆಯ ವಿದ್ಯಾರ್ಥಿನಿ ಕುಮಾರಿ ಶೋಭಾ ಹೆಗ್ಡೆಯವರು ತಮ್ಮ ಹಳೆಯ ನೆನಪುಗಳನ್ನು ಸಭೆಯ ಮುಂದಿರಿಸಿದಾಗ ಕಾಲೇಜು ಸಂಘದ ಕಾರ್ಯದರ್ಶಿ ಶ್ರೀ ಸಚ್ಚಿದಾನಂದ ಶೆಟ್ಟರು ಅದಕ್ಕೆ ಉತ್ತರ ರೂಪವಾಗಿ ಮಾತನಾಡಿದರು. ಪ್ರಿನ್ಸಿಪಾಲರು ಕಾಲೇಜಿನ ವರದಿಯನ್ನೋದಿದರು. ಮುಖ್ಯ ಅತಿಥಿಗಳು ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆಗೈದ ಬಳಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಸಚ್ಚಿದಾನಂದ ಶೆಟ್ಟರು ವಂದನಾರ್ಪಣೆಗೈದರು. ರಾತ್ರಿ ವಿವಿಧ ವಿನೋದಾವಳಿ ಕಾರ್ಯಕ್ರಮವು ಜರಗಿತು.

ತಾ. 25ರಂದು ಕಾಲೇಜಿನ ಯೂನಿಯನ್ ದಿನಾಚರಣೆಯು ಜರಗಿತು. ಮುಖ್ಯ ಅತಿಥಿಗಳಾದ ಡಾ| ಎಚ್. ಕೆ. ರಂಗನಾಥ್‌ರನ್ನು ಪ್ರಿನ್ಸಿಪಾಲರು ಸ್ವಾಗತಿಸಿದ ಬಳಿಕ ಶ್ರೀ ಎನ್. ಎನ್. ಭಟ್ಟರು ಶುಭಕೋರಿ ಬಂದ ಸಂದೇಶಗಳನ್ನೋದಿದರು. ಕಾಲೇಜು ಸಂಘ ಈ ವರುಷದಲ್ಲಿ ಸಾಧಿಸಿದ ಪ್ರಗತಿಯ ವರದಿಯನ್ನು ಶ್ರೀ ಸಚ್ಚಿದಾನಂದ ಶೆಟ್ಟರು ಸಭೆಯ ಮುಂದಿರಿಸಿದರು. ಮುಖ್ಯ ಅತಿಥಿಗಳಿಂದ ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ ಬಹುಮಾನ ವಿತರಣೆಯಾಯಿತು. ಡಾ| ರಂಗನಾಥರು ತಮ್ಮ ಸ್ವಾರಸ್ಯಕರ ಭಾಷಣದಲ್ಲಿ ಪ್ರಸಾರ ನಾಟಕದ ಕುರಿತು ಮಾತನಾಡಿದರು. ಕೊನೆಯಲ್ಲಿ ಕುಮಾರಿ ಗೀತಾ ಪ್ರಭುರವರು ವಂದನಾರ್ಪಣೆಗೈದರು. ರಾತ್ರಿ ಮನರಂಜನಾ ಕಾರ್ಯಕ್ರಮಗಳು ಜರಗಿದವು.

ಹೊಸ ಸಹಕಾರಿ ಬೇಂಕಿನ ನೂತನ ಕಟ್ಟಡದ ಉದ್ಘಾಟನೆ

ಹೆರ್ಗ ಸಹಕಾರಿ ಬ್ಯಾಂಕಿನ ನೂತನ ಕಟ್ಟಡವನ್ನು, ಕಳೆದ ತಾ. 24 ರಂದು ಶ್ರೀ ಟಿ. ಎ. ಪೈಗಳು ಉದ್ಘಾಟಿಸುತ್ತಾ ಭತ್ತದ ಬೆಲೆ ನಿರ್ಧರಿಸುವಾಗ ರೈತನ ಜೀವನ ವೆಚ್ಚ ಮತ್ತು ಉತ್ಪಾದನಾ ವೆಚ್ಚ ಲಕ್ಷಿಸಬೇಕು ಎಂದು ನುಡಿದರು. ಮುಂದುವರಿಯುತ್ತಾ ಸ್ವಾವಲಂಬನೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಆರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರು ಸ್ವಾಗತಿಸಿ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಸಮಾರಂಭದ ಅಧ್ಯಕ್ಷತೆಯನ್ನು ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರು ವಹಿಸಿದ್ದರು. ಶ್ರೀ ಬಿ. ಸಂಜೀವ ಹೆಗ್ಡೆಯವರು ಸಂದೇಶಗಳನ್ನೋದಿದರು.

ಈ ಸಂದರ್ಭದಲ್ಲಿ ಶ್ರೀ ಎ. ಜೆ. ಅಲ್ಸೆಯವರು, ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಭಾವಚಿತ್ರ ಅನಾವರಣಗೈದು ಅವರ ಗುಣಗಾನ ಮಾಡಿದರು. ಬ್ಯಾಂಕಿನ ಕಾರ್ಯದರ್ಶಿಗಳು ಬ್ಯಾಂಕಿನ 80 ವರ್ಷಗಳ ಸಾಧನೆಯನ್ನು ವಿವರಿಸಿದರು. ಸಭಿಕರ ಪರವಾಗಿ ಶ್ರೀಗಳಾದ ಕೆ. ಶ್ರೀನಿವಾಸಾಚಾರ್ಯ, ಬಿ. ಶಾಮರಾಯ ಶೆಟ್ಟರು ಮಾತಾಡಿದರು. ಅಧ್ಯಕ್ಷರು ಮಾತನಾಡುತ್ತಾ ಸಹಕಾರಿ ಯೋಜನೆಯ ಪ್ರಯೋಜನವನ್ನು ರೈತರೆಲ್ಲ ಪಡೆಯಬೇಕೆಂದರು. ಕೊನೆಯಲ್ಲಿ ಶ್ರೀ ಕೆ. ಆನಂದ ಶೆಟ್ಟರು ವಂದನಾರ್ಪಣೆಗೈದರು.

ಕನ್ನಡ ಸಂಘ ವಾಸ್ಕೋಡಗಾಮ (ಗೋವಾ)

ಈ ಸಂಘದ ವಾರ್ಷಿಕೋತ್ಸವವು ತಾ. 8-1-66ರಂದು "ಜೋಶಿ" ಕಟ್ಟಡದಲ್ಲಿ ಶ್ರೀ ಬೋರ್ಕರ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಡಿ. ಆರ್. ಬೇಂದ್ರೆಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಜಿ. ಬಿ. ಕುಲಕರ್ಣಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಬೇಂದ್ರೆಯವರ ಮತ್ತು ಅಧ್ಯಕ್ಷರ ಸಂದರ್ಭೋಚಿತ ಭಾಷಣಗಳಾದುವು. ಕುಮಾರಿ ಕುಮುದಿನಿ-ಗುಣವಂತೆ ಮತ್ತು ಬಳಗದವರಿಂದ ನಾಟ್ಯ ಮತ್ತು ಸಂಗೀತ ಕಛೇರಿ ಸಂಘದ ಗೆಳೆಯರಿಂದ 'ಅಳಿಯ ದೇವರು' ಎಂಬ ನಾಟಕಾಭಿನಯಗಳಾದುವು. ಶ್ರೀ ಎನ್. ಸತ್ಯನಾರಾಯಣ ಧನ್ಯವಾದ ಸಮರ್ಪಿಸಿದರು.

ಉಡುಪಿಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆ

ಉಡುಪಿ ನಗರ ಸಭೆಯ ಆಶ್ರಯದಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಅಜ್ಜರಕಾಡು ಗಾಂಧೀ ಮೈದಾನಿನಲ್ಲಿ ಜರಗಿತು. ಪುರಾಧ್ಯಕ್ಷ ಶ್ರೀ ಪಿ ರಂಗನಾಥ ಶೆಣೈಯವರು ಧ್ವಜಾರೋಹಣ ಮಾಡಿದ ಬಳಿಕ ಶ್ರೀ ಕಾಣಿಯೂರು ಮಠಾಧೀಶರ ಕಡೆಯಿಂದ ಶಾಲಾ ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಲಾಯಿತು

ಸಂಜೆ ಶ್ರೀ ಯು. ಪುಂಡಲೀಕ ಶೆಣೈಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸುತ್ತಾ ಈ ಬಾರಿಯ ಉತ್ಸವದಲ್ಲಿ ಕಲಾಕಾರ ಶ್ರೀ ಗೋಕುಲ್‌ದಾಸ್ ಶೆಣೈ, ಬಾರ್ಕೂರು ಕಾರ್ಡಿ ಕೃಷಿ ಯೋಜಕ ಶ್ರೀ ರಾಮಚಂದ್ರ ರಾವ್ ಮತ್ತು ತುಳುನಾಡು ಸಂಶೋಧನಾತ್ಮಕ ಗ್ರಂಥಕರ್ತ ಶ್ರೀ ಗುರುರಾಜ ಭಟ್ಟ ಈ ಮೂವರಿಗೆ ಪ್ರಶಸ್ತಿಯನ್ನೀಯುವ ಹೊಸ ಪರಂಪರೆಯನ್ನು ಕೈಗೊಂಡಿದ್ದೇವೆ ಎಂದು ಹೇಳಿದರು.

ಉಡುಪಿ ಲಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಡಿ. ಜಿ. ದೇಶಪಾಂಡೆಯವರು ಹಾಗೂ ಡಾ| ವಿ. ಎಸ್. ಶೆಟ್ಟರು ಈ ಸಂದರ್ಭದಲ್ಲಿ ಮಾತನಾಡಿದರು. ಶ್ರೀ ಕು. ಶಿ. ಹರಿದಾಸ ಭಟ್ಟರು ಮೂವರು ಪ್ರತಿಭಾನ್ವಿತರಿಗೆ ಪ್ರಶಸ್ತಿ ವಿತರಣೆ ಮಾಡಿ ಅವರೆಲ್ಲರ ಪರಿಚಯ ಮಾಡಿಕೊಟ್ಟರು.

ಈ ಸಂದರ್ಭದಲ್ಲಿ ಏರ್ಪಡಿಸಿದ ಛದ್ಮವೇಷ ಸ್ಪರ್ಧೆಯಲ್ಲಿ ವಿವಿಧ ಪಂದ್ಯಾಟಗಳಲ್ಲಿ ವಿಜಯಿಗಳಾದವರಿಗೆ ಶ್ರೀ ಎ. ಜೆ. ಅಲ್ಸೆಯವರು ಬಹುಮಾನ ವಿತರಣೆಗೈದರು. ಅಧ್ಯಕ್ಷರು ಮಾತನಾಡಿದ ಬಳಿಕ ಶ್ರೀ ಕೆ. ಕೇಶವ ಕುಡುವರು ವಂದನಾರ್ಪಣೆಗೈದರು.

ತಾ. 27-1-66ರಂದು ಜರಗಿದ ಕಾರ್ಕಳದ ಸ್ವಾಮಿ ಇಲೆಕ್ಟ್ರಿಕಲ್ಸ್ ಇವರ ನೀಡಿದ ... ವರಿ ಪಂಪ್‌ಸೆಟ್ ವಿತರಣಾ ಸಮಾರಂಭ ಮತ್ತಿತರ ಸುದ್ದಿಗಳನ್ನು ಸ್ಥಳಾಭಾವದಿಂದ ಈ ಬಾರಿ ಪ್ರಕಟಿಸಲಿಕ್ಕಾಗಲಿಲ್ಲ. (ಸಂ.)

ಕಮ್ಯೂನಿಸ್ಟರ ಪುಂಡಾಟವನ್ನು ಅಡಗಿಸಿದ ಬಳಿಕ ದಕ್ಷಿಣ ವಿಯತನಾಮಿನಲ್ಲಿ ಗ್ರಾಮ ಜನತೆಯ ವೈದ್ಯಕೀಯ ಆವಶ್ಯಕತೆಗಳತ್ತ ವಿಶೇಷ ಗಮನ ನೀಡಬೇಕಾಗಿದೆ. ಕಾಲು ಕಟ್ಟಿ ಒಬ್ಬಾಕೆ ಬಾಲಿಕೆಯ ಸೇವೆಯನ್ನು ಇಲ್ಲಿ ವೈದ್ಯರು ಮಾಡುತ್ತಿರುವುದನ್ನು ಕಾಣಬಹುದು.

(ಮೂರನೇ ಪುಟದಿಂದ)

ಡಾ| ಬಾಬಾ ವಿಶ್ವ ವೈಜ್ಞಾನಿಕರ ಸಾಲಿನಲ್ಲಿ ನಿಂತವರು. ಭಾರತವು ಅಣುಶಕ್ತಿ ಯುಗದಲ್ಲಿ ಪಾದಾರ್ಪಣ ಮಾಡುವಂತೆ ಅಹರ್ನಿಶಿ ದುಡಿಯುತ್ತಿದ್ದ ನಿಷ್ಠಾವಂತ. "ಬಯಸುವುದಾದರೆ, ಭಾರತವೂ ಅಣುಬಾಂಬನ್ನು ತಯಾರಿಸಬಹುದು" ಎಂದು ಇತರರು ನಮ್ಮ ಬಗ್ಗೆ ಅನ್ನಬೇಕಾಗಿ ಬಂದ ಪರಿಸ್ಥಿತಿಯನ್ನು ಇಲ್ಲಿ ನಿರ್ಮಿಸಿದ ಕರ್ತೃಗಳು. ಆದರೆ, ದೇಶದ ನೀತಿಗನುಸಾರ ಅಣುಬಾಂಬಿನ ತಯಾರಿಯಲ್ಲಿ ಅನಾಸಕ್ತಿ ಹೊಂದಿದವರು. ಮಂತ್ರಿ ಪದವಿ ಕಾಲ ಬಳಿಗೆ ಬಂದರೂ ಅದನ್ನು ತಿರಸ್ಕರಿಸಿ ಸೀಮಿತ ಸೇವಾವಕಾಶದಲ್ಲೇ ಪರಿಪೂರ್ಣ ಸೇವೆ ಸಲ್ಲಿಸ ಬಯಸಿದವರು. ಇಂತಹ ಆಧುನಿಕ ಭಾರತದ ಮಹಾ ವಿಜ್ಞಾನಿ ಬಾಬಾ ಎಂದೂ ಬಂಗೊಡದ ಗುರಿ ಮುಟ್ಟಿದರು. ಅವರ ನಿಷ್ಕಳಂಕ ಸೇವೆಯನ್ನು ನೆನೆದು, ಅವರ ಆತ್ಮಕ್ಕೆ ಶಾಂತಿ ಕೋರೋಣ.



ಕ್ರೈತ್ರ ಮುರುಗ

(ಎರಡನೇ ಪುಟದಿಂದ)

ಹಿಂದಿನ ಹಾದಿಯಲ್ಲಿ ಹೋದರೂ ಅದೇ ರೂ ಆಕೆಗೆ ದೊಡ್ಡ ಪೆಟ್ಟು ಇರುವದಿಲ್ಲ. ಮಗನನ್ನು ನೋಡಿಕೊಂಡು ಆಕೆ ಸಂತೈಸಿಕೊಂಡಾಳು."

"ಅದೇನು ನನ್ನ ವಿಷಯವನ್ನು ನೀವು ಕಣ್ಣುಗಳಿಂದ ಸೂಚಿಸುತ್ತಾ, ಪಿಸಿ ಪಿಸಿ ಮಾತನಾಡುತ್ತಿರುವಿರಿ?" ಸೀರೆಯ ಅಂಚನ್ನು ಮುಟ್ಟಿದ ಸೀತೆ ಕೇಳಿದಳು.

"ಏನಿಲ್ಲ. ಅಂತಹ ಮಗನನ್ನು ಹಡೆದಿರುವ ನೀನು ಭಾಗ್ಯಶಾಲಿನಿ ಎಂದು ಮಾತಾಡುತ್ತಿದ್ದೇವೆ."

ಉಪಚಾರದ ಮಾತು-ಸೀತೆಯಲ್ಲಿ ಹೆಮ್ಮೆಯನ್ನು ಹುಟ್ಟಿಸಿತು. ಮಗುವನ್ನು ದಡದಲ್ಲಿ ಒಣ್ಣ ಮರಳಿನಲ್ಲಿ ಆಡಲು ಬಿಟ್ಟು, ಆಕೆ ತ್ವರೆಯಿಂದ ಸ್ನಾನಕ್ಕಿಳಿದಳು.

'ಆದರೂ ನೀನದೇತಕ್ಕೆಂದು ಭಿನ್ನವದನೆಯಾಗಿರುವೆ? ಅವಸರ ಪಡುತ್ತಿರುವೆಯೇತಕ್ಕೆ?' ತುಟಿಗಳ ನಡುವೆ ತುಂಟ ಮುಗುಳ್ನಗೆಯನ್ನು ಅಡಗಿಸಿಟ್ಟುಕೊಂಡು ಒಬ್ಬಳು ಕೇಳಿದಳು.

'ರಾಮು ಇಂದು ಅವನ ಪಿತ್ರಾರ್ಜಿತ ಆಸ್ತಿಯನ್ನೆಲ್ಲಾ ಮಾರಿ ಬಿಟ್ಟು ಈ ಹಳ್ಳಿಗೆ ಕೊನೆಯ ನಮಸ್ಕಾರ ಹಾಕಲಿದ್ದಾನೆ. ತನ್ನ ಒಬ್ಬ ನೆರೆಕರೆಯವನು, ಇನ್ನು ಹಿಂತಿರುಗಿ ಬರದೆ, ಮನೆಯನ್ನು ಬಿಟ್ಟು ಹೋಗುವಾಗ ಯಾರು ತಾನೇ ದುಃಖಪಡದೆ ಇರುತ್ತಾರೆ? ಅದರಲ್ಲೂ ರಾಮುವಿನಂತಹ ಚಲೋ, ನಮ್ರ, ಹಾಗೂ ಸಜ್ಜನರು ದೂರ ಹೋಗುವಾಗ?'

ಕುಹಕ ಸನ್ನೆಗಳಿಂದ ಹಾಗೂ ಬಂಗಾರದಲ್ಲಿ ಮಾಣಿಕ್ಯ ಇಟ್ಟಿರುವಂತೆ ಅರ್ಥಗಳನ್ನು ಅಡಗಿಸಿಟ್ಟು, ತನ್ನ ಧ್ವನಿಯ ಏರಿಳಿತಗಳಿಂದ, ಹಾವಭಾವಗಳಿಂದ, ಬಿರಿದ ತುಟಿಗಳಿಂದ ವಿಷ ಹೊರಬರುವಂತೆ, ಮಧ್ಯ ವಯಸ್ಸಿನ ವನಿತೆಯೋ ಉತ್ತರಕೊಟ್ಟಳು. ಆಕೆಗೆ ಕಳೆದು ಕೊಳ್ಳಲಿಕ್ಕೆ ಏನೂ ಇಲ್ಲದಿದ್ದುದರಿಂದ, ಆ ವಿಷಯದಲ್ಲಿ ಆಕೆ ಎಲ್ಲರಿಗಿಂತ ಮಿಗಿಲೆನಿಸಿಬಿಟ್ಟಿದ್ದಳು.

ಆ ವಿಷಯದ ಮೇಲೆ ಅನಿಶ್ಚಿತ ಮಾತುಕತೆಗಳನ್ನು ಉದ್ರೇಕಿಸಲು ಸೀತೆಗೆ ಮನಸ್ಸಿರಲಿಲ್ಲ. ತನ್ನದೇ ಆಲೋಚನೆಗಳಲ್ಲಿ ಆಕೆ ಆಸಕ್ತಳಾಗಿದ್ದುಕೊಂಡು, ಮೌನದಿಂದ ಬೇಗ ಬೇಗನೆ ಸ್ನಾನವನ್ನು ಮುಗಿಸಿದಳು. ಸ್ನಾನವಾದ ಕೂಡಲೇ ಮನೆಯತ್ತ ಹೊರಟಳು.

ರಾಮು ಆಗ ಮುರುಗನೊಂದಿಗೆ ತೋಟದಿಂದ ಹಿಂತಿರುಗಿ ಬರುತ್ತಿದ್ದನು. ದೇವರ ದಯೆಯಿಂದ ದಾರಿಯಲ್ಲೇ ಸೀತೆಗೆ ಅವನ ಭೇಟಿಯಾಯಿತು. ಮಾತಾಡಲಿಕ್ಕೆ ಅವಳು ಅದೆಷ್ಟು ಕಾತೊರೆಯುತ್ತಿದ್ದಳು! ತನ್ನ ಮೃದು ಹಾಗೂ ಕೋಮಲ ಕರಗಳಿಂದ ಇವನನ್ನು ಸ್ವಾಗತಿಸಲು ಅವಳದೆಷ್ಟು ಹಂಬಲಿಸಿಕೊಂಡಿದ್ದಳು! ಆದರೆ ಅವೆರಡನ್ನೂ ಸಂಪ್ರದಾಯ ನಿರ್ಬಂಧಿಸಿತ್ತು. ಅವರ ಕಣ್ಣುಗಳು ಮತ್ತು ಮನಸ್ಸುಗಳು ವಿಲನವಾಗಿ, ತಮಗೆ ಬೇಕಾದಂತೆ, ತಮ್ಮ ತಮ್ಮ ಭಾಷೆಯಲ್ಲಿ ಮಾತಾಡಿಕೊಂಡುವು. ಗೊಂಚಲಿನಿಂದ ಕೀಳಲ್ಪಡದಿರುವ ಬಾಳೆಯ ಹೂವಿನಂತೆ, ಹಾರಿಹೋಗುತ್ತಿದ್ದ ಶೀರೆಯನ್ನುಟ್ಟುಕೊಂಡಿದ್ದ ಸೀತೆ ಕಾಣುತ್ತಿದ್ದಳು. ರಾಮು ಪುನಃ ಪುನಃ ಆಕೆಯನ್ನು ಆದ್ಯಂತವಾಗಿ ನೋಡಿದನು. ಆಕೆಯ ಹೃದಯದಲ್ಲಿ ರಾಗರಂಜಿತ ನಿಷ್ಕಲ್ಮಷ ಪ್ರೀತಿಯ ಗುಳ್ಳೆಗಳು ಏಳುತ್ತಿವೆಯೆಂಬು ರಾಮು ಭಾವಿಸಿದನು.

ತನ್ನ ತಾಯಿಯ ಹೃದಯದ ತೃಪ್ತಿಗಾಗಿ ಸೀತೆಯ ಮಗನು ನಿಜವಾಗಿ ಹಾಗೂ ಚೆನ್ನಾಗಿ ರಾಮುವಿಗೆ ವಂದಿಸಿದನು. ಎಳೆಯ ತೋಳುಗಳನ್ನು ಮುಂದಕ್ಕೆ ಹಾಕಿ, ಅರ್ಥಶೂನ್ಯ ಆದರೂ ಅರ್ಥಭರಿತ ತನ್ನ ಬಾಲಿಶ ಮಾತುಗಳಿಂದ ಅಪರಿಚಿತನಿಗೆ ನಮಸ್ಕರಿಸಿದನು. ಅದು ತಾಯಿಯನ್ನು ಆನಂದಭರಿತಳನ್ನಾಗಿ ಮಾಡಿತು.

"ಮುರುಗ, ಅದು ಸೀತೆಯ ಹುಡುಗನೇನು?" ರಾಮು ಕೇಳಿದನು.

ವಿಚಾರಣೆಯ ಮಾತುಗಳು ಸೀತೆಯ ಕಿವಿಯ ಮೇಲೆ ಸಂಗೀತದೋಪಾದಿ ಬಿದ್ದುವು.

"ಹೌದು, ಸ್ವಾಮಿ. ಆಕೆಗೆ ಸಮಾಧಾನವನ್ನೀಯುಲಿರುವ ಮೂರು ವರ್ಷದ ಚಲೋ ಹುಡುಗನಿದ್ದಾನೆ. ಆಕೆಯ ಗಂಡ ಪುನಃ ಅದೇ ಹಳೆಯ ಕೆಟ್ಟ ಚಾಳಿಯ ಜೊಂಡದಲ್ಲಿ ಬಿದ್ದುಬಿಟ್ಟಿದ್ದಾನೆ. ಆಕೆಯ ಅತ್ತೆಯು ಸತ್ತುಹೋಗಿದ್ದಾಳೆ. ಈಗ ಈಕೆಯೇ ಮನೆಯ ಯಜಮಾನಿ."

ಇದೊಂದೂ ರಾಮುವಿನ ಕಿವಿಯ ಮೇಲೆ ಸರಿಯಾಗಿ ಬೀಳಲಿಲ್ಲ. ಮಗುವಿನೊಂದಿಗೆ ಚಲಿಸುತ್ತಿದ್ದ ದೇಹವನ್ನು ಅವನು ಪುನಃ ಪುನಃ ಪ್ರೀತಿಯಿಂದ ಹಾಗೂ ಬಿಡಲಾರದ ನೋಟದಿಂದ ಎವೆಯಿಕ್ಕದೆ ನೋಡುತ್ತಿದ್ದನು; ಬೇಕೆಂದೇ ತನ್ನನ್ನಾಕೆ ಕೂಡಿಕೊಳ್ಳಲೆಂದು ಅವನು ಹದವಾಗಿ ಹೆಜ್ಜೆ ಹಾಕುತ್ತಿದ್ದನು.

ತಲವಂತಿಗೆ ಕೊನೆಯ ನಮಸ್ಕಾರ ಮಾಡುವ ಸಮಯದಲ್ಲಾದರೂ ಧೈರ್ಯದಿಂದ ಮನೆಯಲ್ಲೇ ಸೀತೆಯನ್ನು ಕಾಣಬೇಕೆಂಬ ಆತ್ಮಾಶೆ ರಾಮುವನ್ನಾವರಿಸಿತ್ತು. ಸಂಪ್ರದಾಯ ಹಾಗೂ ಮರ್ಯಾದೆ ಮಡುವಿಗೆ ಬೀಳಲಿ. ಆಕೆಯ ಮನೆಯಲ್ಲಿ ಉಣ್ಣಬೇಕೆಂಬ ಆಶೆ ಅವನಿಗಾಯಿತು. ಕ್ಷಣಕಾಲದ ಪ್ರಚೋದನೆಯನ್ನು ಪುನಃ ಆಲೋಚಿಸಿದನು. ಮಧ್ಯಾಹ್ನದೂಟವನ್ನು ತಿಗೆದುಕೊಳ್ಳುವ ಮುಂಚೆಯೇ ಹಳ್ಳಿಯನ್ನು ಬಿಡಬೇಕೆಂದವನು ಮನಸ್ಸುಮಾಡಿಕೊಂಡಿದ್ದುದರಿಂದ ಬಾಯೊಂಕೆ ಆರದಿದ್ದರೂ, ಹಸಿವು ಶಾಂತವಾಗದಿದ್ದರೂ, ಸೀತೆಯ ಸ್ವಪ್ನದಲ್ಲಿ ಅವೆರಡನ್ನೂ ಅವನು ಮರೆತುಬಿಟ್ಟನು.

ರಾಮು ಅನೇಕ ಆಲೋಚನೆ ಹಾಗೂ ನೆನಪುಗಳಲ್ಲೇ ಆಸಕ್ತನಾಗಿದ್ದ. ದೇವಸ್ಥಾನದಲ್ಲಿ ದರ್ಶನ! ತಾನಿಡುತ್ತಿರುವ ಪ್ರತಿ ಒಂದು ಹೆಜ್ಜೆಯೂ 'ಹುಟ್ಟಿದ ಹಳ್ಳಿಗೆ ಕೊನೆಯ ನಮಸ್ಕಾರ' ಹೇಳುತ್ತಿರುವಂತೆ ಅವನಿಗೆ ಕೇಳಿ ಬರುತ್ತಿತ್ತು. ಕೊಳದ ಪಶ್ಚಿಮ ಭಾಗವನ್ನು ತಲಪಿದೊಡನೆ ಆ ತಂಪು ನೀರಿನಲ್ಲಿ ಕಾಲು ತೊಳೆದು, ಬೊಗಸೆ ತುಂಬ ತಲವಂತಿಯ ಜಲವನ್ನು ಕುಡಿದು, ಬೀಳ್ಕೊಡಗೆಯ ಕಾರ್ಯವನ್ನು ಮುಗಿಸಿದನು.

ಮೌನದಿಂದ ಮುರುಗನು ತನ್ನ ಒಡೆಯನನ್ನು ಅನುಸರಿಸುತ್ತಿದ್ದನು. ಅವನದೇ ಆದ ಕಲ್ಪನಾ ತರಂಗಗಳು ಅವನನ್ನು ಎದೆಲ್ಲಿಗೋ ಒಯ್ದಿದ್ದುವು. ತಾನು ಕನಸಿನ ಪ್ರಪಂಚದಲ್ಲಿರುವದೋ? ನಿಜ ಪ್ರಪಂಚದಲ್ಲಿರುವದೋ? — ಒಂದೂ ಅವನಿಗೆ ಗೊತ್ತಿದ್ದಿಲ್ಲ. ತಲವಂತಿಯವರೆಲ್ಲರೂ ಬಯಸುತ್ತಿದ್ದ ಚೆಂದದ ತೆಂಗಿನ ತೋಟ ತನ್ನದಾಗುವದೇ? ಅಸಾಧ್ಯ, ಅದೊಂದು ಹಗಲು ಕನಸು!

(ಮುಂದುವರಿಯುವುದು)

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

O. S. 567/1965

ವಾದಿ—ಕೃಷ್ಣಯ್ಯ ಗೋಟ.

ಪ್ರತಿವಾದಿ—ನಾರಾಯಣ ಹೆಬ್ಬಾರ.

ಕುಂದಾಪುರ ತಾಲ್ಕು ಕೋಟೇಶ್ವರ ಗ್ರಾಮದ ಕುಮ್ರಿಯಲ್ಲಿರುವ ಶೀತಾರಾಮ ಹೆಬ್ಬಾರ ಮಗ ನಾರಾಯಣ ಹೆಬ್ಬಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಪ್ರತಿವಾದಿಯಿಂದ ವಾದಿಗೆ ಬರತಕ್ಕ ಕಳೆದ ಕುಭಕೃತು, ಕೋಭಕೃತು ಮತ್ತು ಕ್ರೋಧಿ ಸಂವತ್ಸರಗಳ ಗೇಣಿ ವ ಬಡ್ಡಿ ಕೂಡಾ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆಯು 16-2-1966ಕ್ಕೆ ಮೇಲಿನ ಕೋರ್ಟಿನ ತನ್ಕಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಞಾಹೀರು ಮಾಡಿಕೊಳ್ಳತಕ್ಕದ್ದು ಎಂಬುದಾಗಿ ಈ ಮೂಲಕ ತಿಳಿಯಪಡಿಸಿಯದೆ.

(Sd.) G. V. Rithal
Advocate for Plff.

Kondapoor, Date 16-1-66

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 345/1965

ಸಂಜೀವ ಸೇಟ್— ವಾದಿ

ಮತ್ತು

ಶಶಿಧರ ಕೂಡಾ— ಪ್ರತಿವಾದಿರು

ಇವರೊಳಗೆ

ಉಡುಪಿ ತಾಲ್ಕು ಕಡೇಕಾರು ಗ್ರಾಮದಲ್ಲಿರುವ ಪಾಡಿಶಾಲ್ಯ ದಾಸಪ್ಪಯ್ಯನವರ ಮಕ್ಕಳು—ಪ್ರತಿವಾದಿರು 1. ಶಶಿಧರ. 2. ವಿಜಯ. 3 ಉಮಾದೇವಿ ಮತ್ತು ಸದ್ರಿ ದಾಸಪ್ಪಯ್ಯನವ್ರ ವಿಧವೆಯರು, 4 ನಾಗಮ್ಮ 5 ಲಕ್ಷ್ಮಮ್ಮ ಕೂಡಾ 5 ಜನರಿಗೆ—

ನೀವು ವಾದಿಗೆ ೦. ಸಿ೦ ತಾ. 23-3-61 ರಲ್ಲು ಬರಕೊಟ್ಟ ಈಡು ದಸ್ತಾವೇಜಿನ ಅಸಲು, ಬಡ್ಡಿ, ಕೂಡಾ ರುಪ್ಯಾ 3762—25ನ್ನು ಬರಮಾಡಿಕೊಳ್ಳುವರೇ ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 19-2-66ಕ್ಕೆ ತನ್ಕಿಗೆ ಯಿಟ್ಟಿರುವುದ್ರಿಂದಾ, ನಿಮ್ಮ ಉದಾಹರಣೆಯಿದ್ದಲ್ಲಿ ಆ ದಿವ್ಸ ಬೆಳಿಗ್ಗೆ ಗಂಟೆ 10 ಕ್ಕೆ ನೀವು ಈ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

B. S. Hegde
Vakil for Plff.

ಉಡುಪಿ, ತಾ. 24-1-1966

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 48/65.

C. ಮಂಜಯ್ಯ ಶೆಟ್ಟಿ —ವಾದಿ

ಮತ್ತು

ಬಿ. ಸೀತಾರಾಮ ಹೆಗ್ಡೆ —ಪ್ರತಿವಾದಿ.

ಯಿವರೊಳಗೆ—

B. ಸೀತಾರಾಮ ಹೆಗ್ಡೆ, S/o B. ಕೃಷ್ಣಯ್ಯ ಹೆಗ್ಡೆ, 410, ಜಯನಗರ, 1st Block. ಬೆಂಗಳೂರು-11.

ಮೇಲಿನ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ತಾ. 30-10-64ರಲ್ಲು ಉಡ್ಪಿ ಕಸ್ಬೆಯ ಬ್ರಹ್ಮಗಿರಿಯಲ್ಲಿರುವ, ಕಂಟ್ರಾಕ್ಟರ್ ಚಾತುವಿನ ಮಗ—ಕೆ. ಅನಂದನ್‌ರವರಿಂದ ರೂ. 325/-ನ್ನು ಸಾಲವಾಗಿ ಪಡಕೊಂಡು ಬರಕೊಟ್ಟ ಡಿ. ಪ್ರೋ. ನೋಟನ್ನು ಸದ್ರಿ ಅನಂದನ್‌ರವರು ತಾ. 16-11-64ರಲ್ಲು ವಾದಿ C. ಮಂಜಯ್ಯ ಶೆಟ್ರಿಗೆ ಟ್ರಾನ್ಸ್‌ಫರ್ ಮಾಡಿಕೊಟ್ಟು ಸದ್ರಿ ವಾದಿಯು ಸದ್ರಿ ಡಿ. ಪ್ರೋ. ನೋಟಿನ ಮೇಲೆ ಮಾಡಿದ ದಾವೆಯ ತನ್ಕಿ ಬಗ್ಗೆ ತಾ. 22-2-66ಕ್ಕೆ ಇಟ್ಟಿರುವುದರಿಂದ ಆ ಬಗ್ಗೆ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಆ ದಿವಸ ಪೂರ್ವಾಹ್ನ 11ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಂಗ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಪೆರ್ಣೋಡಿ ವಿಠಲ ಶೆಟ್ಟಿ,
ಬಿ.ಎ.ಎಲ್.ಎಲ್. ಬಿ.
ಎಡ್ವಕೇಟ್, ಉಡ್ಪಿ.

ಉಡ್ಪಿ, ತಾ. 25-1-66.

NAVAYUGA 3—2—1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನೆನಪಿನ ಚಿತ್ರಗಳು

ಕಾಲ ರೀತಿ - ಮಾನವ ನೀತಿ

'ಸ್ಫೂರ್ತಿ' ಬರೆದುದು

ಪಕ್ಕದ ಮನೆಯ ರೇಡಿಯೋ ಹಾಡುತ್ತಿದೆ. ಹಾಡು ಬಲು ಇಂಪಾಗಿ ರಸವತ್ತಾಗಿ ಅರ್ಥಗರ್ಭಿತವಾಗಿ ಕೇಳಿಸಿತು. ಯಾಕೆ? ಇನ್ನೂ ಇನ್ನೂ ಕೇಳೋಣವೆನ್ನಿಸಿತು.

o o o

ಧೃಢಕಾಯನಾದ ಆಧುನಿಕ ಯುವಕನೊಬ್ಬ ಭಾರವಾದ ಹೊರೆಯೊಂದನ್ನು ಹನ್ನೆರಡು ವರ್ಷಗಳ ಬಾಲಕನೋರ್ವನ ತಲೆಯ ಮೇಲೆ ಹೇರಿ ತಾನು ತುಟಿಯೆಡೆಯಿಂದ ಸಿಗರೇಟಿನ ಹೊಗೆಯುಗುಳುತ್ತಾ ಠೀವಿಯಿಂದ ನಡೆಯುತ್ತಿದ್ದಾನೆ. ಆ ಕೃಶ ಶರೀರದ ಬಾಲಕ ಭಾರವನ್ನು ತಡೆಯಲಾರದೆ ನಡುಗುವ ಹೆಜ್ಜೆಗಳನ್ನಿಡುತ್ತಾ ನಡೆಯುತ್ತಿದ್ದಾನೆ.

"ಬೇಗ ನಡೆಯೋ ಮೂರ್ಖ. ಬಸ್ಸು ತಪ್ಪೀತು." ಯುವಕ ಗದರಿಸುತ್ತಾನೆ, ಹುಡುಗ ಹೆದರಿ ಓಡಲಾರದೆ ಓಡುತ್ತಾನೆ. ಎಡವಿ ಬೀಳುತ್ತಾನೆ.

"ಅಯ್ಯೋ..." ಎಂಬ ಆರ್ತನಾದದೊಂದಿಗೆ "ಹಹ್ಹಹ್ಹಾ..." ಎನ್ನುವ ಹಲವು ಕಂಠಗಳ ನಗುವಿನ ಗದ್ದಲವೂ ಕೇಳಿಸಿತು. ಹುಡುಗನ ಅಳು ಹಲವರಿಗೆ ತಮಾಷೆ!

o o o

ವೇಗವಾಗಿ ಓಡುವ ಕಾರಿನಡಿಗೆ ನಾಯಿಯೊಂದು ಬಿದ್ದು ಬಲಿಯಾಯಿತು.

"ದರಿದ್ರದವು.... ಮಧ್ಯ ರಸ್ತೇಲಿ ಬಿದ್ದು ಸಾಯ್ತಾವೆ ಉಪದ್ರ." ಕಾರಿನೊಳಗೆ ಕುಳಿತ ಸುಂದರಿ ಗೊಣಗಿದಳು. ಪಕ್ಕದಲ್ಲೇ ಕುಳಿತ ಯುವಕ ನಸು ನಕ್ಕ.

"ಅಮ್ಮಾ.... ನಮ್ಮ ನಾಯಿ... ಊ್ಹೂ... ಊ್ಹೂ..." ಹುಡುಗಿಯೊಬ್ಬಳು ಸತ್ತ ನಾಯಿಯ ಬಳಿ ಬಂದು ಅಳ ತೊಡಗಿದಳು. ಸಭ್ಯರಂತೆ ಓಡಾಡುವ ಜನರಿಗೆ ನಗು ಬಂತು, ನಾಯಿಗಾಗಿ ಯಾರಾದರೂ ಅಳುತ್ತಾರೆಯೇ? ಅಯ್ಯೋ ಬೆಪ್ಪೆ!

o o o

ದೊಡ್ಡ ಮಹಡಿಯ ಮನೆಯೊಂದರಲ್ಲಿ ಔತಣ ಸಮಾರಂಭವೊಂದು ನಡೆದಿತ್ತು. ಹಸಿದ ಹುಚ್ಚನೊಬ್ಬ ತಲೆ ಕೆರೆದುಕೊಳ್ಳುತ್ತಾ ಎಂಜಲೆಲೆಗಾಗಿ ಕಾದಿದ್ದ. ಕಂಗೆಟ್ಟ ಭಿಕ್ಷುಕರ ತಂಡ ಇನ್ನೊಂದೆಡೆಯಲ್ಲಿ ನಿಂತು ಕತ್ತು ಚಾಚುತ್ತಿತ್ತು.

"ಎಲೆಗಳನ್ನೆಲ್ಲಾ ಹರಿಯುವ ನೀರಿನ ತೋಡಿಗೆ ಬಿಸಾಡಿ ಬಿಡು. ಇವು ಇನ್ನು ಜಗಳವಾಡ್ತವೆ." ಮನೆಯೊಡತಿ ಕೆಲಸದಾಕೆಗೆ ಅಪ್ಪಣೆ ಕೊಟ್ಟಳು.

"ಹೋಗ್ತೀರೋ.... ನಾಯಿಯನ್ನು ಬಿಡಲೋ...." ಒಡತಿ ಗರ್ಜಿಸಿದಳು.

"ಅಮ್ಮಾ.... ಹಸಿವೇ..."

ಪ್ರತ್ಯುತ್ತರವಾಗಿ ಧಡಾರನೇ ಬಾಗಿಲು ಮುಚ್ಚಿತ್ತು. ಕಿಲ ಕಿಲನೆ ನಗು ಒಳಗಿನಿಂದ ಕೇಳಿಸಿದಾಗ ನಿಟ್ಟುಸಿರುಗಳೊಂದಿಗೆ ಭಿಕ್ಷುಕರ ತಂಡ ಕಾಲೆಳೆದು ಕೊಂಡು ಮುಂದೆ ಸಾಗಿತು.

o o o

ಬಸ್ಸಿನಲ್ಲಿ ಮಹಿಳೆಯೊಬ್ಬಳು ಕೈಗೂಸನ್ನೆತ್ತಿಕೊಂಡು ನಿಂತಿದ್ದಳು. ಮಹಿಳೆಯರನೇಕರು ಕುತೂಹಲದಿಂದ ಆಕೆಯನ್ನು ದಿಟ್ಟಿಸುತ್ತಿದ್ದರು. ಮಹನೀಯರು ಹಲವರು ನೋಡಿಯೂ ನೋಡದವರಂತೆ ಮುಖ ತಿರುಗಿಸಿದರು. ಮೂವರು ಕುಳಿತುಕೊಳ್ಳುವ ಹೆಂಗಸರ ಸೀಟಿನಲ್ಲಿ ದಂಪತಿಗಳು ಆರಾಮವಾಗಿ ಒರಗಿ ಸರಸ ಸಲ್ಲಾಪಗೈಯುತಿದ್ದರು. ಬಸ್ಸು ವೇಗವಾಗಿ ಚಲಿಸುತ್ತಿತ್ತು. ಮಗುವಿನ ತಾಯಿ ನಿಂತೇ ಇದ್ದಳು. ಸ್ವಲ್ಪ ಮುಂದೆ ಹೋಗುವಷ್ಟರಲ್ಲೇ ಪುನಃ ನಿಂತಿತು. ನೂರೈವತ್ತು ಪೌಂಡುಗಳ ದಪ್ಪವಾದ ಹೆಂಗಸೊಬ್ಬಳು ಆಭರಣಗಳ ಹೊರೆಯನ್ನೇ ಹೇರಿಕೊಂಡು ಬಸ್ಸನ್ನೇರಿದಳು ಯುವಕನೋರ್ವ ಹಿಂತಿರುಗಿ ನೋಡಿ ತಟ್ಟನೆ ಎದ್ದು ನಿಂತ.

'ಓಹೋ....ನೀವಾ....ಕೂತ್ಕೊಳ್ಳಿ..'

ಆಕೆ ಕುಳಿತಳು. ಮಗುವನ್ನೆತ್ತಿಕೊಂಡು ನಿಂತ ತಾಯಿ ದಿಗ್ಭ್ರಮೆಗೊಂಡು ದಿಟ್ಟಿಸಿದಳು. ಕಂಡೆಕ್ಟರ್ ಪ್ರಮಾದವೇನೂ ಆಗಿಲ್ಲವೆಂಬಂತೆ ನಸುನಕ್ಕ.

o o o

ಸಣ್ಣ ಪೇಟೆಯಲ್ಲಿ ದೊಡ್ಡ ಸಭೆಯೊಂದು ಸೇರಿತ್ತು. ನೂರಾರು ಪುರುಷರೆಡೆಯಲ್ಲಿ ಹತ್ತಿಪ್ಪತ್ತು ಮಂದಿ ಮಹಿಳಾಮಣಿಯರೂ ಸಭೆಯನ್ನಲಂಕರಿಸಿದ್ದರು. ಭಾಷಣಗಳ ಸುರಿಮಳೆ ಬಿರುಸಾಗಿ ನಡೆದಿತ್ತು. ವಿಷಯ "ಮಹಿಳೆಯರ ಏಳಿಗೆ" ಯಾಕೆ? ಹೇಗೆ? ಎಂಬೆಲ್ಲ ವಿಚಾರಗಳಲ್ಲಿ ಸ್ಫೂರ್ತಿದಾಯಕವಾದ ವಾಕ್ಸರಣಿ, ಪುರುಷರ ಭಾಷಣಗಳೆಲ್ಲ ಮುಗಿದ ಮೇಲೆ ಕೊನೆಯದಾಗಿ ಒಬ್ಬಳು ಮಹಿಳೆ ಎದ್ದು ನಿಂತು ಭಾಷಣವನ್ನಾರಂಭಿಸಿದಳು. ಮಹಿಳೆಯರ ಏಳಿಗೆಯ ಕುರಿತು ಮಹಿಳೆಯರೇ ಮೌನ ತಾಳುವುದೆಂದರೆ ಹೇಗೆ ಎಂಬ ನಿರ್ಧಾರದಿಂದ ಎಂದು ನಿಂತಳೇನೋ!

ಕಿಸಕ್ಕನೆ ನಗು. ಗುಸು ಗುಸು ಮಾತು, ಕೇಳಲಾರಂಭಿಸಿತು.

ಸಣ್ಣ ಊರು; ಸಣ್ಣ ಜನಗಳ ದೊಡ್ಡ ಸಭೆ!

ಮಹಿಳೆಯ ಭಾಷಣ ಉತ್ಸಾಹ
ಉದ್ವೇಗದಿಂದ ಭರದಿಂದ ಸಾಗಿತ
ತ್ತೂರು ಚೆನ್ನಮ್ಮ, ಝಾನ್ಸಿರಾಣಿ,
ಯಿತ್ರಿ ಕಂತಿ, ಇವರೆಲ್ಲ ಯಾರು?
ಸ್ತ್ರೀಯರೆಲ್ಲಿ ಹಿಂದಿದ್ದಾರೆ?

ಸಭೆಯ ನಗು, ಕೋಲಾಹಲ
ಕ್ಷಣಕ್ಕೆ ಹೆಚ್ಚುತ್ತಿತ್ತು.

ನಮ್ಮ ತಾಯಿ, ಅಕ್ಕ-ತಂಗಿ ಇ
ರೂ ಸ್ತ್ರೀಯರೇ ಅಲ್ಲವೇ? ಸ್ತ್ರೀಯ
ಯಾಕೆ ತಾತ್ಸಾರ?

ನಗುವಿನ ಅಟ್ಟಹಾಸ ಸಭೆಯ
ಡುಗಿಸಿತು.

"ಅಬ್ಬ... ಅವಳ ಆವೇಶವೇ?
ಕ್ಷ..." ಸಭೆ ಪಿಸುಗುಟ್ಟಿತು!

"ಥೂ.... ಇದೆಂತಾ ನಾಚಿಕೆ?
ಗೆ ಯಾಕೆ ಭಾಷಣದ ಹುಚ್ಚು? ;
ಯೊಬ್ಬಳು ಪಕ್ಕದಲ್ಲಿ ಕುಳಿತವಳ
ಗೊಣಗಿದಳು.

ಸಭೆಯ ಗಲಾಟೆ ಎಲ್ಲೆ ಮೀ

ಭಾಷಣಗಾತಿ ನಸುನಗುತ್ತ
ಳಾ ವೃಂದದೆಡೆಗೆ ಬಂದಳು. ಮಹಿ
ಲ್ಲ ಕಿಂಪಡರಿದ ಮುಖದೊಂದಿಗೆ
ನ್ನೇ ದುರುಗುಟ್ಟಿಕೊಂಡು ನೋ
ದ್ದರು. ದೊಡ್ಡ ಅನ್ಯಾಯಿಯನ್ನು
ಡುವಂತೆ ಅವಳನ್ನೇ ಕ್ರೂರವಾಗಿ
ಸುತ್ತಿದ್ದರು.

ಭಾಷಣಕಾರ್ತಿಗೆ ವಿಸ್ಮಯ!

"ಮಹಿಳೆಯರ ಏಳಿಗೆ" ಬಹಳ
ಗಸಾಗಿ ನಡೆಯಿತು. ರಾಷ್ಟ್ರಗೀತೆ
ದಿಗೆ ಕಾರ್ಯಕ್ರಮ ಮುಗಿಯಿತು.
ಊರಿನವರಿಗೆ ದೊಡ್ಡ ವಿಚಾರ
ಕೊಂಡಾಗಲೂ ಸಣ್ಣತನವನ್ನೇ ಪ್ರ
ಸುವ ಅಭ್ಯಾಸ ಬಲವಾಗಿ ಬೇ
ಹೋಗಿತ್ತು.

o o o

ನೆನಪಿನ ಚಿತ್ರಗಳು ಅಲೆ ಅಲೆ
ತೇಲಿಬರುತ್ತಿರುವಂತೆಯೇ ಹಾಡು
ತು. ಆ ವರಿ ನ ನ್ನ ಕಿವಿಗ
"ಇದೇ ಇಂದಿನಾ ಕಾಲದ ರೀ
ಹೃದಯ ಹೀನಾ ಮಾನವ ನೀತಿ..
ನು ನಿಧಾನವಾಗಿ ಹಾಡಲಾರಂ
ಮನಸ್ಸು ತುಸು ಹಗುರವಾದಂತೆ
ಯವೂ ಶಾಂತವಾಯಿತು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭ
ವಿಷಯದ ಮೇಲೆ ಕೇಂದ್ರೀಕರಿಸ
ಗಳಲ್ಲಿಯೇ ತತ್ಪರವಾಗುವಂತೆ ಮಾಡುವ
ಬೆಲೆ: 0-19 ಪೈಸೆ.
0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು
ಯನ್ನು ಬುಕ್‌ಪೋಸ್ಟಿನಿಂದ ಕಳಿಸಲ
ರಿಸಿ ಪ್ರತಿಗಳಿಗೆ ವಿಚಾರಿಸಿ:-
ನವಯುಗ ಪ್ರೆಸ್, ಉಡು

Edited, Printed & Published by K. H. Shetty at the Navayuga Press, Udipi, S. India.

ನವಯುಗ

10-2-1966

NAVAYUGA

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವೊದಲು—

ಅಲವಂತಿಯ ರಾಮಚಂದ್ರ ತನ್ನ ರೈತ ಮುರುಗನ ಮನನೋಯಿಸಿ ಅಭ್ಯಾಸಕ್ಕೆಂದು ಮದ್ರಾಸಕ್ಕೆ ತೆರಳಿದರೂ ಅಲ್ಲಿಂದ ಜಾನಕಿಯ ಪತಿಯಾಗಿ ಊರಿಗೆ ಮರಳಿದ. ಶಿಸಾನನಾಗಿ ತೃಪ್ತ ಜೀವನ ಬಾಳಲು ಆಶಿಸುತಿದ್ದ ಅವನ ಬಯಕೆಯನ್ನು ಸೆರೆ ಮಣ್ಣುಪಾಲು ಮಾಡಿತು. ನೊಂದಾತ ಕಡಪದ ಕಲೆಕ್ಟರರ ಬಳಿ ಶಿಬಿರ ಗುಮಾಸ್ತನಾಗಿ ಸೇರಿದ. ಅಲ್ಲಿಯೂ ಆತ ಬಯಸಿದ ತೃಪ್ತಿ ಸಿಗಲಿಲ್ಲ. ನೊಂದ ರಾಮಚಂದ್ರ ಹಳ್ಳಿಗೆ ಬಂದು ತನ್ನ ಆಸ್ತಿ-ಪಾಸ್ತಿಯನ್ನೆಲ್ಲಾ ಮಾರಿ, ಅಲವಂತಿಗೆ ಕೊನೆಯ ನಮಸ್ಕಾರವಿತ್ತು, ಎಂದೆಂದಿಗೂ ನಗರವಾಸಿಯಾಗತೊಡಗಿದ.

ಮುಂದೆ—

ಗ್ರಾಮದ ಕೆರೆಯಲ್ಲಿ, ತನ್ನ ಕಾಲಿನಲ್ಲಿದ್ದ ಅಲವಂತಿಯ ಧೂಳನ್ನು ತೊಳೆದು ಬಿಟ್ಟಾಗ, ರಾಮುವಿನಲ್ಲಿ ಹೊಸ ಹುಟ್ಟಿನ ಹಾಗೂ ಹೊಸ ಯೋಚನೆಗಳ ಸಿಂಚನವಾದಂತಾಯಿತು. ಬಿಡುಗಡೆಯ ವಿಚಿತ್ರ ಅರಿವು ಅವನಿಗುಂಟಾಯಿತು. ಇನ್ನು ಮುಂದೆ ತನಗಾಗಿ ತಾನು ಬಾಳುವದಲ್ಲವೆಂದವನು ನಿಶ್ಚಯಿಸಿಕೊಂಡನು; ತಾನು ಜೀವಿಸುತ್ತಿರುವದು ಇಡಿ ಜಗತ್ತಿಗಾಗಿ ಎಂದವನು ಹೇಳಿ ಕೊಂಡನು. ಸನ್ಯಾಸೀ ಚೈತನ್ಯ—ಮೋಹ ರಹಿತ ಸೇವೆಯ ಹುಮ್ಮಸ್ಸು — ಅವನನ್ನಾವರಿಸಿತು. ಬುಗ್ಗೆ ನೀರು ಮತ್ತು ಮೂಲಿಕೆಗಳಿಂದ ಜೀವಿಸುತ್ತಿರುವ ವನವಾಸಿಯಂತೆ ಪ್ರಪಂಚಕ್ಕಾಗಿ ಪಾಡುಪಡಬೇಕೆಂದವನು ಮನಸ್ಸು ಮಾಡಿಕೊಂಡನು. ಅನಾವರ್ಣ್ಯ ಪುನರುಜ್ಜೀವನವು ಅವನ ಜೀವನವನ್ನು ಅಲುಗಾಡಿಸಿತು.

ಅವನಲ್ಲಿದ್ದ ಸಂಶಯಗಳು ಹಾಗೂ ಕಷ್ಟಗಳು ಹಾರಿ ಹೋದುವು. ಜೀವನದ ಹಾಗೂ ಸಾಹಿತ್ಯದ ವಿದ್ಯೆಯು ಬದಿಗೆ ಸರಿಯಿತು. ತಾನು ಸ್ವೀಕರಿಸಿ ಇರುವದಕ್ಕಿಂತಲೂ ನೂರು ಪಾಲನ್ನು ದಾನ ಮಾಡುವ ಸ್ಥಿತಿಗೆ ಅವನು ಬಂದನು. ಕೆಲ ನಿಕ್ಕ ಹೂಸ ಹೊಸ ಸಂತೋಷ ಹಾಗೂ ಅರ್ಥವಿದೆ, ಶಕ್ತಿ, ತೇಜಸ್ಸು ಮತ್ತು ಸ್ವಾಧೀನತೆಯನ್ನು ಕಳೆದುಕೊಂಡ ಸೂರ್ಯನು ಮುಳುಗಿದ ನಂತರ ಆಕಾಶದಲ್ಲಿ ನಕ್ಷತ್ರಗಳು ಕಾಣಿಸಿಕೊಳ್ಳುವಂತೆ ಅವನಲ್ಲಿ ಸತ್ಯವು ಹಲ ಚಿಕ್ಕ ಮುಖಗಳಿಂದ ಉದಯವಾಗುತ್ತಿತ್ತು. ಪ್ರವಾಹೀ ಬಾಳ ನೀರಿನಲ್ಲಿ ಸಿಂಪಳಿಯನ್ನು ಕಡಿದು ಹಾಕಿ ಮೇಲಕ್ಕೆ ಹಾರಿಸಲ್ಪಟ್ಟು ತನ್ನ ದೊಡ್ಡ ಲಂಗರು ಇರುವುದನ್ನು ಕೊನೆಗೆ ಅವನು ಕಂಡುಕೊಂಡನು.

ಮೀನಾಕ್ಷಿಯ ಮಾತುಗಳು ವಿಚಿತ್ರ ವಿಧದಲ್ಲಿ ಸತ್ಯವಾಗಿ ಕಂಡು—ಬಂದುವು. ಹಳ್ಳಿಯ ಬಂಧನವನ್ನು ಕಡಿದೊಗೆದಾಯಿತು. ಸ್ವಾಧೀನತೆಯ ತಿಳುವಿಗೆ ತಿಲಾಂಜಲಿ ಕೊಟ್ಟು ಬಿಟ್ಟಿದ್ದಾನೆ. ತಾಯಿಕಾಂಡದ ಸುತ್ತಲೂ ತೀವಭರಿತ, ಸ್ಥಾನಿಕ ಮಣ್ಣಿನಲ್ಲಿ ಗೋಳಿ ಮಂವು ಬೇರು ಬಿಡುವಂತೆ ಈಗವನು ಅಲವಂತಿಯಲ್ಲಿ ಚಿನ್ನನಾಗಿದ್ದ ಹುಡುಗನಿಂದ ಪ್ರಪಂಚದ ನಗರವಾಸಿಯಾಗಿ ಬಿಟ್ಟಿದ್ದಾನೆ.

ಭೂಮಿಯ ಮೇಲೆ ಒಳ್ಳೆಯದಾಗಿ ಹಾಗೂ ಚೆನ್ನಾಗಿ ಕೆಳಗಿಳಿದು ಬರುವ ಮಳೆಯ ಯಾತನಾಮಯ ಹುಟ್ಟು ಸಮುದ್ರದಲ್ಲಿದೆ. ಶ್ರಮದ ಯಾತನೆಯನ್ನು ರಾಮು, ವಿಧಿಯ ಬಿರುಗಾಳಿಯು ಬಂದು ಮಳೆಯನ್ನು ಹೊತ್ತುಕೊಂಡಿರುವ ಮೋಡಗಳನ್ನು ಪರ್ವತ, ಕಣಿವೆ, ಹಳ್ಳಿಪಟ್ಟಣಗಳ ನೆಲದ ಮೇಲೆ ಹಬ್ಬಿಸಿ ಬಿಟ್ಟು, ಎಲ್ಲೆಲ್ಲೂ ನವಜೀವನವನ್ನುಂಟು ಮಾಡುವದನ್ನು ಕಾಯುತ್ತಿದ್ದನು.

೦ ೦ ೦

ಕೇದಾರಿಯು ಕೇವಲ ತೃತೀಯ ಶ್ರೇಣಿಯಲ್ಲಿ ಬಿ. ಯಲ್. ನಲ್ಲಿ ಉತ್ತೀರ್ಣನಾದನು. ಆ ಸಮಯದಲ್ಲಿ ಅದೃಷ್ಟವು ಅವನನ್ನು ವಂಚಿಸಿತ್ತು. ಮೂರನೇ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರೂ, ಈಗ ಪ್ರಖ್ಯಾತರಾಗಿರುವ, ಮಾರ್ಕಂಡಂ ಅಯ್ಯರ್ ಹಾಗೂ ಇತರ ಕೆಲವರ ಉದಾಹರಣೆಗಳನ್ನಿತ್ತು ಅವನು ಬಡಾಯಿ ಕೊಚ್ಚಿಕೊಳ್ಳುತ್ತಿದ್ದನು. ಆದರೂ ಮನಸ್ಸಿಗೆ ಬಹಳವಾಗಿ ಹಚ್ಚಿಕೊಂಡಿದ್ದನು. ಲೇವಾದೇವಿ ಮಳಿಗೆಯಲ್ಲಿ [ಬೇಂಕು] ದೊಡ್ಡಗಂಟಿನಲ್ಲಿ, ಕಳೆದ ಜೀವನವನ್ನದು ಮರೆಯಿಸಿಬಿಡಬಹುದು. ಹಾಗೆ ಮಾರ್ಕಂಡಂರವರಿಗೆ ತಾನು ತೃತೀಯ ಶ್ರೇಣಿಯಲ್ಲಿ ತೇರ್ಗಡೆಹೊಂದಿದ್ದು ಜ್ಞಾಪಕ ಇದ್ದಿಲ್ಲ. ಅವರಿಗೆ ಕೇದಾರಿಯ ಜ್ಞಾಪಕವೂ ಅಷ್ಟಾಗಿ ಇದ್ದಿಲ್ಲ.

ಮಾರ್ಕಂಡಂ ಅಯ್ಯರವರ ಬಳಿ ಅವರದೇ ಆದ ಸ್ವಂತ ಕೆಲ ವಿನೋದದ ಮಾತುಗಳಿದ್ದುವು. ಅವು ಪದ್ಯರೂಪದಲ್ಲಾಗಲೀ, ತತ್ವ ಜ್ಞಾನದ ರೂಪದಲ್ಲಾಗಲೀ ಇದ್ದಿಲ್ಲ. ಕಾಯಿದೆಯಲ್ಲಿ ಜಯಪಡೆಯುವ ಉದ್ದೇಶಕ್ಕಾಗಿ ಅವು ತಕ್ಕವು ಹಾಗೂ ಯೋಗ್ಯವಾಗಿದ್ದುವು. ಅವರು ಯಾವಾಗಲೂ ವಾದಕಾಲದಲ್ಲಿ ಪ್ರೇಮದಿಂದ ಹಾಗೂ ಕಾರ್ಯಕರ್ತವ್ಯದಿಂದ ಪ್ರಾಮಾಣಿಕನಾಗಿರಲೂ ಬೇಡ ಹಾಗೆ ಅಪ್ರಾಮಾಣಿಕನಾಗಿಯೂ ಇರಬೇಡ, ಉದಾರಿಯಾಗಿರಲೂ ಬಾರದು ಹಾಗೆ ಕೃಪಣನಾಗಿಯೂ ಇರಬಾರದು. ಎಂದು, ಸ್ವರವನ್ನು ವ್ಯತ್ಯಾಸ ಮಾಡಿಕೊಂಡು, ಹೇಳುತ್ತ ಭಗವದ್ಗೀತೆಯಿಂದ ಕೆಲ ಶ್ಲೋಕಗಳನ್ನು ಸಹಾಯಕ್ಕಾಗಿ ತೆಗೆದುಕೊಂಡು ವಿವರಿಸುತ್ತಿದ್ದರು. ಆತ್ಮ ರಕ್ಷಣೆಗಾಗಿ ಹಾಗೆ ಹೇಳುತ್ತ

ಆಕಾಂಕ್ಷಿ ಕೇದಾರಿಯು ಅವರ ಕಾರ್ಯಾ
ಲಯದಲ್ಲಿ ಸೇರಲೆಂದು ಪ್ರಥಮ ಬಾ
ಬಂದಾಗ ಅವರು ಸಾಧ್ಯವಿಲ್ಲವೆಂದು ನ
ರಾತ್ಮಕವಾಗಿ ತಲೆಯನ್ನು ಅಲ್ಲಾಡಿ
ಬಿಟ್ಟರು.

ಆದರೆ ಕೇದಾರಿ ಅದಕ್ಕೆ ಭಯಪಡ
ಲ್ಲಿ. ನಿರ್ಲಜ್ಜೆ, ಮುಖಸ್ತುತಿ ಹಾಗೂ
ಯಪೂರ್ಣ ಸಂತೋಷಕರ ವಿಶ್ರಣ
ದಾಗಿ— ದೊಡ್ಡ ಮನುಷ್ಯರು
ಗ್ಗಿ ಶ ರ ಣಾ ಗ ತ ರಾ ಗುವ ವಿ
ಣದಿಂದಾಗಿ— ಅಯ್ಯರ್ ಕೂಡಾ ದ
ಮಯರಾದರು. ಸುಟ್ಟರಾದರೂ ಸ
ರ್ಥ ನೀತಿಯ ನಗಾರಿಯನ್ನು ಕೇದ
ಯು ಜೋರಾಗಿ ಬಡಿಯಬಹುದೆಂದ
ಸಿ, ತನ್ನ ಸಂಪ್ರದಾಯವನ್ನು ಬದಲಾ
ಸಿ, ಅವನಿಗೆ ತನ್ನಲ್ಲಿ ಉದ್ಯೋಗಾ
ಯಾಗಿರಲು ಅನುಮತಿ ಇತ್ತರು. ಕ
ಶಾಲೆಯಲ್ಲಿ ಬುದ್ಧಿವಂತರಾಗಿದ್ದು, ಮೊ
ಲ ಶ್ರೇಣಿಯ ಉತ್ತೀರ್ಣರಾಗುವ ಮ
ವರು, ಪ್ರಪಂಚದ ಪರೀಕ್ಷೆಗಳಲ್ಲಿ ಕೊ
ಯ ಶ್ರೇಣಿಯನ್ನು ಪಡೆಯುತ್ತಿದ್ದು
ಅಯ್ಯರರಿಗೆ ಗೊತ್ತಿದ್ದುದರಿಂದ ತ
ಕಾರ್ಯಾಲಯದಲ್ಲಿ ಪ್ರಥಮ ಶ್ರೇಣಿಯ
ಉತ್ತೀರ್ಣರಾಗುತ್ತಿದ್ದ ಬಿ. ಯಲ್. ಗ
ಮಾತ್ರ ಪ್ರವೇಶಕೊಡಬೇಕೆಂಬ ಹಿತ
ನಿಯಮ ಅವರದ್ದಿತ್ತು.

ಕೇದಾರಿಯು ಉದ್ಯೋಗದಲ್ಲಿ ಒಂ
ವರ್ಷವನ್ನು ಕಳೆದನು. ಆಶಾವಾದಿ ಹಾ
ಗೂ ಸಾಹಸದ ಗುಣದವನಾದರೂ ಅ
ನು ಜೀವನದಲ್ಲಿ ನಿರಾಶೆಯು ಕರಿನೆ
ನ್ನು ಕಾಣಲಾರಂಭಿಸಿದ್ದನು. ಅಂ
ವಿದ್ಯಾಲಯದ ಸಂಘಕ್ಕೆ ಅಧ್ಯಕ್ಷರನ್ನಾ
ಮಾರ್ಕಂಡಂರವರನ್ನು ಧೈರ್ಯದಿಂದ
ದಾರಿಯು ಸ್ವಾಗತಿಸಿದಾಗ, ಅವ
ಉಲ್ಲಾಸಿಗಳಾಗಿದ್ದು ಸಹವಾಸಪ್ರಿಯ
ಗಿದ್ದರು. ಆದರೆ ಅದೇ ಮಾರ್ಕಂಡಂರವ
ಶ್ರೇಷ್ಠನ್ಯಾಯಾಲಯದ ಜಾಕದೋ
ಬೇರ ಗುಣದವರಾಗಿ ಬಿಡುತ್ತಿದ್ದರ
ಕಾರ್ಯಾಲಯ ಮತ್ತು ನ್ಯಾಯಾಲಯದ
ಅವರ ಜೀವನವನ್ನು ಕಂಡವರು, ಅವ
ಜೀವನವನ್ನು ಇತರ ಸಮಯದಲ್ಲಿ
ರಿಡೆಗಳಲ್ಲಿ ಕಂಡವರು ಆಶ್ಚರ್ಯಪಡುತ್ತಿ
ರು. ಅವರು ನ್ಯಾಯಾಲಯದಲ್ಲಿ ಕಾ
ಮಗ್ನ ಹಾಗೂ ಗಂಭೀರರಾಗುತ್ತಿದ್ದ
ಅವರ ಮಾತು ಬಹಳ ಚುರುಕಾಗಿ
ಉಪಚಾರದ ಕ್ರಮವು ಉಗ್ರವಿರುತ್ತಿ
ವಿಶ್ವವಿದ್ಯಾಲಯವು ದಿಟ್ಟಿಸಿನೋಡಿ
ಮಧ್ಯಮ ತರಗತಿಯ ಗುಂಪಿನೊಂದಿ
ತನ್ನ ಕಾರ್ಯಾಲಯದಲ್ಲಿ ಆಹಾರಕ್ಕಾ
ಹಾಗೂ ಬಟ್ಟೆಬರೆಗಾಗಿ ಕತ್ತೆಯಂ
ತಾಳ್ಮೆಯಿಂದ ಇರುತ್ತಿದ್ದವರ ಗುಂ
ನೊಂದಿಗೆ ಅವರು ಕೇದಾರಿಯನ್ನು ಸೇ
ಬಿಟ್ಟಿದ್ದರು. ಇದೆಲ್ಲಾ ಕೇದಾರಿಯ ತಾ
ಣ್ಯದ ಸುಭಿಕ್ಷೆಯ ಹಾಗೂ ಆಶಾವಾ
ಸ್ವಭಾವ ವೃಕ್ಷದ ಬುಡಕ್ಕೆ ಕೊಡಲಿಯ
ಟನ್ನು ಕೊಟ್ಟಿತು.

ತನ್ನೊಡೆಯನ ಆಶ್ಚರ್ಯಕಾರೀ ದ್ವಿವಿ
ಗುಟವು ಅವನಿಗೆ ಒಗಟಾಗಿತ್ತು. ಕೇದಾ
ರಿಯು ಹೇಗಿದ್ದರೂ ದ್ವಿಮುಖೀ ಗು
ವನ್ನು ಒಪ್ಪಲು ಸಿದ್ಧನಿರಲಿಲ್ಲ.
ಅವನು ಗಂಭೀರನಾಗಿರುತ್ತಿದ್ದರೂ, ಅವ
ನ ಆಳವನ್ನು ಕಂಡು ಹಿಡಿಯಲು ಸಾಧ್ಯ
ವಾಗದೆ ಇರುತಿದ್ದರೂ, ಎಂದಿಗೂ

(ಹನ್ನೊಂದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	$5\frac{1}{2}$
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	$6\frac{1}{2}$
24 ತಿಂಗಳಿಂದ	36 ತಿಂಗಳ ಕೆಳಗೆ	$6\frac{1}{4}$
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	$7\frac{1}{4}$
60 ತಿಂಗಳಿಂದ	84 ತಿಂಗಳ ಕೆಳಗೆ	$7\frac{3}{4}$
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೨	೧೦—೨—೧೯೬೬	No. 22

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ನೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಸಂದಾಯಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಸ್ವಾಮಿ ಇಲೆಕ್ಟ್ರಿಕಲ್ಸ್, ಕಾರ್ಕಳ ಇವರು ತಾ. 27-1-66ರಂದು ಏರ್ಪಡಿಸಿದ ಸುಲಭ ಕಂತಿನ ಯೋಜನೆಯನ್ವಯ ಕೃಷಿಕರಿಗೆ ನೀರಾವರಿ ಪಂಪುಸೆಟ್ಟುಗಳ ವಿತರಣಾ ಸಮಾರಂಭದ ದೃಶ್ಯಗಳು. ಮೇಲಿನ ಚಿತ್ರದಲ್ಲಿ ಉದ್ಘಾಟಕರಾದ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡ, ಸಭಾಧ್ಯಕ್ಷ ಶ್ರೀ ಎನ್. ಎಂ. ಅದ್ಯಂತಾಯರೂ, ಬಾಲಕಿಯರು ಪ್ರಾರ್ಥನೆ ಮಾಡುತ್ತಿರುವುದನ್ನೂ ಕಾಣಬಹುದು.

ಕೆಳಗಿನ ಚಿತ್ರದಲ್ಲಿ ಶ್ರೀ ನಾಗೇಗೌಡರು ಭಾಷಣ ಮಾಡುತ್ತಿದ್ದಾರೆ. ಅವರ ಎಡದಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಡೆ ಮೊದಲಾದವರೂ ಬಲದಲ್ಲಿ ಕೆ. ಸತೀಂದ್ರ ಶೆಟ್ಟರೂ ಕುಳಿತಿದ್ದಾರೆ.

(ವಿವರಕ್ಕೆ ಬೇರೆ ಪುಟ ನೋಡಿರಿ)

ಸಂಹಾರ ಶಕ್ತಿ

ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ಎದುರಿಸಬೇಕಾಗಿ ಬಂದ ಬಹಿರಂಗ ಸಮಸ್ಯೆಗಳು ಎರಡು. ದಿ| ಪ್ರಧಾನ ಮಂತ್ರಿ ಶಾಸ್ತ್ರಿಯವರು ಸಹಿ ಹಾಕಿ ಬಿಟ್ಟು ಹೋದ ತಾಷ್ಕೆಂಟ್ ಘೋಷಣೆಯು ರಾಜಕೀಯ ಹುಟ್ಟಿದ ಸಮಸ್ಯೆಯಾದರೆ, ಕೇರಳದಲ್ಲಿ ಆಹಾರಾಭಾವದ ಸಮಸ್ಯೆ ರಾಜಕೀಯದೊಡನೆ ಮಾನವತೆಯ ಪ್ರಶ್ನೆಯನ್ನೂ ಒಳಗೊಂಡಿದೆ. ತಾಷ್ಕೆಂಟ್ ಘೋಷಣೆಯು ಭಾರತ–ಪಾಕಿಸ್ತಾನಗಳ ನಡುವಣ ಸಂಬಂಧವನ್ನು ತಿಳಿಗೊಳಿಸುವಲ್ಲಿ ಒಂದು ಮೈಲುಗಲ್ಲು ಮಾತ್ರ. ಹಾಗಿದ್ದೂ ೫, ಅಗಸ್ಟ್ ೧೯೬೫ರಂದು ತಾವಿದ್ದ ನೆಲೆಗಳಿಗೆ ಉಭಯ ದೇಶಗಳ ಸಶಸ್ತ್ರ ಪಡೆಗಳು ಮರಳುವುದರಿಂದ ಭಾರತವು ಆಯಕಟ್ಟಿನ ಹಾಜಿಪೀರ್ ಕಣಿವೆಯನ್ನು ತೆರವು ಮಾಡಬೇಕಾಗುತ್ತದೆ—ಮತ್ತು ಈ ಬಗ್ಗೆ ದೇಶದ ಕೆಲವೆಡೆ ಭಿನ್ನಾಭಿಪ್ರಾಯಗಳು ಎದ್ದಿವೆ. ನಾವು ಒಂದು ಮಾತನ್ನು ಮರೆಯುವಂತಿಲ್ಲ. ಭದ್ರತಾ ಸಮಿತಿಯು ತಂದ ಸಮರ ವಿರಾಮ ಗೊತ್ತುವಳಿಯನ್ನು ಭಾರತ–ಪಾಕಿಸ್ತಾನಗಳೆರಡೂ ಒಪ್ಪಿವೆ. ಅದರಲ್ಲಿಯೇ ಅಗಸ್ಟ್ ೫, ೧೯೬೫ರಂದಿದ್ದ ನೆಲೆಗಳಿಗೆ ಉಭಯ ಸೇನೆಗಳು ಮರಳಬೇಕು ಎಂದು ಕೇಳಿಕೊಳ್ಳಲಾಗಿತ್ತು. ಅಲ್ಲಿ ಉಳಿದಿದ್ದ ವಿವರಣೆ 'ಸೇನೆ' ಪದದ ಬಗ್ಗೆ ಅಕ್ರಮವಾಗಿ ಕಾಶ್ಮೀರವನ್ನು ನುಗ್ಗಿದ ಪಾಕ್ ಸಶಸ್ತ್ರಪಡೆಗಳೂ ಹಿಂದೆ ಹೋಗಬೇಕೆಂದು ಭಾರತದ ವಾದವಿತ್ತು. ತಾಷ್ಕೆಂಟಿನಲ್ಲಿ ನಡೆದ ಬಿಚ್ಚು ಮಾತುಕತೆಯ ವೇಳೆ, ಪಾಕಿಸ್ತಾನವು ಇದಕ್ಕೆ ಸಿದ್ಧವಿದೆಯೆಂದು ಮನವರಿಕೆಯಾದ ನಂತರವೇ ದಿ| ಶಾಸ್ತ್ರಿಯವರು ಘೋಷಣೆಗೆ ಸಹಿ ಮಾಡಿರುವರು ಎಂದು ತಿಳಿಯುತ್ತದೆ. ಹಾಗಿರುವಾಗ, ಈ ಸಂಬಂಧದಲ್ಲಿ ಅಲ್ಲಸಲ್ಲದ ಗೊಂದಲಗಳಲ್ಲಿ ತೊಡಗುವುದಕ್ಕಿಂತ, ಪಾಕಿಸ್ತಾನದ ವರ್ತನೆ ಯಾವ ದಾರಿ ಹಿಡಿಯುವುದೆಂದು ಕಾದು ನೋಡುವುದೇ ಸುಸಂಗತ. ತಾಷ್ಕೆಂಟ್ ಘೋಷಣೆಯನ್ನು ಕಾರ್ಯಗತಗೊಳಿಸುವುದರಲ್ಲಿಯೇ ಭಾರತದ ಕೀರ್ತಿಯಿದೆ. ಪಾಕಿಸ್ತಾನವು ವಚನ ಭಂಗ ಮಾಡಿದರೆ, ಆಗ ಅದುವೇ ಜಗತ್ತಿನ ಮುಂದೆ ಮತ್ತೊಮ್ಮೆ ತಲೆ ತಗ್ಗಿಸಬೇಕಾಗುತ್ತದೆ; ಸಂಧಾನದ ಬಾಗಿಲನ್ನು ಅದುವೇ ಮುಚ್ಚಿದಂತಾಗುತ್ತದೆ. ಮುಂದೆ, ಭಾರತವು ಜಗತ್ತಿನ ನೈತಿಕ ಬೆಂಬಲದಿಂದ ಆಕ್ರಮಣಕಾರರನ್ನು ಹೊರಗಟ್ಟಲು ಅನುಕೂಲವಾಗುತ್ತದೆ.

ದೇಶದಲ್ಲಿಯೇ ಆಹಾರದ ಪ್ರಶ್ನೆಯು ಭೀಮಾಕಾರ ತಾಳಿದ ವರ್ಷವಿದು. ಇದರ ಕಠೋರ ಪರಿಣಾಮ ಮೊದಲು ಸ್ಫೋಟವಾದುದು ಕೇರಳ ರಾಜ್ಯದಲ್ಲಿ. ಸದ್ಯ ಅಧ್ಯಕ್ಷರ ಆಳಿಕೆಯಲ್ಲಿರುವ ಈ ರಾಜ್ಯದ ಹೊಣೆಯನ್ನು ಕೇಂದ್ರವೇ ಹೊರುತ್ತದೆ. ದೊರೆಯುತ್ತಿದ್ದ ೧೬೦ ಔನ್ಸ್ ರೇಶನನ್ನು ೧೨೦ ಔನ್ಸುಗಳಿಗೆ ಇಲ್ಲಿ ಇಳಿಸಿದುದಕ್ಕೆ, ಕೇಂದ್ರಕ್ಕೆ ರಾಜ್ಯದ ಆಹಾರಾಭಾವದ ಗಂಭೀರ ಪರಿಸ್ಥಿತಿಯನ್ನು ಮನಗಾಣಿಸಿಕೊಡುವುದಕ್ಕೆ ಅಲ್ಲಿ 'ಕೇರಳ ಬಂದ್' ಆಯಿತು. ಬರಿಯ 'ಬಂದ್' ಮಾತ್ರ ಆಗುತ್ತಿದ್ದರೆ, ಚಿಂತೆಯಿರಲಿಲ್ಲ. ಆದರೆ, ಇಂದು ಹಿಂಸಾರೂಪಕ್ಕೂ ಇಳಿಯಿತು. ವಿತ್ತಸೊತ್ತುಗಳಿಗೆ ಹಾನಿಯೂ ಸಂಭವಿಸಿತು. ಲಾಠಿಪ್ರಹಾರಾದಿಗಳೂ ನಡೆಯಿತು. ಕೆಲವರು ಮುಷ್ಕರ ಪ್ರಿಯರ ಆಮರಣ ಉಪವಾಸವೂ ಆರಂಭವಾಯಿತು; ಕೆಲವರದ್ದು ಮುಕ್ತಾಯವೂ ಆಯಿತು. ಆಹಾರದ ಪ್ರಶ್ನೆ ತೀರ ಗಂಭೀರವಾದುದು—ಇದರಲ್ಲಿ ಎರಡು ಮಾತಿಲ್ಲ. ಈ ಬಗ್ಗೆ ಸರಕಾರ ತೀವ್ರ ಎಚ್ಚರಿಕೆ ವಹಿಸಬೇಕು—ಇದೂ ನಿಜವೇ. ಆದರೆ, ಕೇಂದ್ರವು ಈ ದಿಸೆಯಲ್ಲಿ ಏನೆಲ್ಲಾ ಮಾಡಬಹುದೋ ಅವೆಲ್ಲವನ್ನೂ ಮಾಡಿದೆ. 'ಕೇರಳ ಬಂದ್' ಚಳುವಳಿಯ ಹಿಂದಿನ ದಿನವೇ ಆಗ ತಾನೇ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಶ್ರೀಮತಿ ಗಾಂಧಿಯವರು ಇಳಿಸಿದ ರೇಶನಿಂಗನ್ನು ೨೦ ಔನ್ಸುಗಳಷ್ಟು ಏರಿಸುವುದಾಗಿ ಘೋಷಿಸಿದ್ದಾರೆ. ಆಂಧ್ರ—ಬಿಹಾರ ಮೊದಲಾದ ರಾಜ್ಯಗಳಿಂದ ಆಹಾರ ಧಾನ್ಯಗಳನ್ನು ಕೇರಳಕ್ಕೆ ಕಳಿಸುವ ವ್ಯವಸ್ಥೆ ಮಾಡಿದ್ದಾರೆ. ಎಂದರೆ, ರಾಜ್ಯದ 'ಗಂಭೀರ ಪರಿಸ್ಥಿತಿ'ಯ ಅರಿವು ಕೇಂದ್ರಕ್ಕೆ ಸಾಕಷ್ಟು ಆಗಿದೆಯೆನ್ನಲೇ ಬೇಕಾಗುತ್ತದೆ. ಇದೇ 'ಬಂದ್' ಪ್ರಿಯರ ಉದ್ದೇಶವಿದ್ದರೆ, ಅದು ಸಫಲವಾಗಿದೆ. ಹಾಗಿರುವಾಗ 'ಬಂದ್'ನ್ನು ಆಚರಿಸುವ ಅಗತ್ಯವೇ ಇರಲಿಲ್ಲ. ಒಂದು ವೇಳೆ ಇದ್ದಿದ್ದರೂ ಅದನ್ನು ಹಿಂಸಾವೃತ್ತಿಗೆ ಎಳೆಯಬೇಕಾಗಿರಲಿಲ್ಲ. ಅದನ್ನು ಇನ್ನೂ ಬೆಳೆಸುವುದರಲ್ಲಂತೂ ಅರ್ಥವೇ ಇರುವುದಿಲ್ಲ.

ಸರ್ವ ರೀತಿಯಲ್ಲೂ ದೇಶವಿಂದು ವಿಪನ್ನಾವಸ್ಥೆಯಲ್ಲಿದೆ. ನಮ್ಮ ಸಂಪತ್ಸಾಧನಗಳನ್ನು, ಉದ್ಯಮ–ದಂಧೆಗಳನ್ನು, ಕೃಷ್ಯುತ್ಪನ್ನಗಳನ್ನು, ಸೈನಿಕ ಶಕ್ತಿಯನ್ನು ಸರ್ವ ಪ್ರಕಾರೇಣ ಹೆಚ್ಚಿಸುವುದು ನಮ್ಮ ಕರ್ತವ್ಯ. ಚಳುವಳಿ; ಮುಷ್ಕರಗಳಲ್ಲಿ ನಾವು ತೊಡಗುವುದೆಂದರೆ, ಉತ್ಕರ್ಷದಿಂದ ಅಪಕರ್ಷದತ್ತ ಸರಿದಂತೆಯೇ. ವಿತ್ತ–ಸೊತ್ತುಗಳಿಗೆ ಹಾನಿ ತರುವುದೆಂದರೆ, ದೇಶದ ಸಂಪತ್ತನ್ನು ಪೋಲು ಮಾಡಿದಂತೆ, ಜನತೆಯ ನೈತಿಕ ಮಟ್ಟವನ್ನು ರಸಾತಳಕ್ಕೆ ಮೆಟ್ಟಿದಂತೆ. ಪ್ರಜಾಭಿಪ್ರಾಯ ಪ್ರಕಟಣೆಗೆ ಹಿಂಸಾಮಾರ್ಗವನ್ನನುಸರಿಸುವುದು ಪ್ರಜಾಪ್ರಭುತ್ವದ ಸುಲಕ್ಷಣವಲ್ಲ. ಮುಂದಿನ ವರ್ಷ ದೇಶದಲ್ಲಿ ನಾಲ್ಕನೆಯ ಬಾರಿಗೆ ಮಹಾ ಚುನಾವಣೆಗಳು ನಡೆಯಲಿವೆ. ಇದಕ್ಕೆ ತಕ್ಕಂತೆ ವಾತಾವರಣವನ್ನು ನಿರ್ಮಿಸಲು ರಾಜಕೀಯ ಕುಶಕ್ತಿಗಳು ದುಷ್ಟ ಪ್ರಯತ್ನ ಮಾಡುತ್ತಿರುವವೋ ಎಂಬ ಸಂದೇಹ ಮೂಡುತ್ತದೆ. ಹಿಂದಿನಿಂದಲೂ ಭಾರತದ ಸಮಸ್ಯಾರಾಜ್ಯವಾಗಿ ಉಳಿದಿರುವುದು ಕೇರಳ. ಅಲ್ಲಿ ಉಣ್ಣುವ ಬಾಯಿ ನೂರಾದರೆ, ಬೆಳೆಯು ಐವತ್ತು ಬಾಯಿಗೂ ಸಾಕಾಗದು. ಈ ವರ್ಷ ಇಡಿಯ ದೇಶವೇ ದುಃಸ್ಥಿತಿಗೆ ಗುರಿಯಾದುದರಿಂದ ಅಲ್ಲಿನ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಬೇಕಾಯಿತು. ಅವರ ಪಾಡು ಹೃದಯ ವಿದ್ರಾವಕ ನಿಜ; ಆದರೆ, ತಮ್ಮ ವಿದ್ರಾವಕ ಪರಿಸ್ಥಿತಿಯನ್ನು ಸುಧಾರಿಸುವತ್ತ ಅವರು ಗಮನ ಹರಿಸದೆ ಸಂಹಾರಶಾಸ್ತ್ರವನ್ನು ಹಿಡಿದುದು ಸರಿಯೆನ್ನುವಂತಿಲ್ಲ. ಡಾಂಗೆಯವರು "ಭಾರತ ಬಂದ್" ಚಳುವಳಿಯತ್ತ ಸಂದೇಶ ಮಾಡುವಷ್ಟು ಮುಂದುವರಿದಿದ್ದಾರೆ. "ಬಂದ್" ಆಚರಣೆಗೆ ಉಪಯೋಗಿಸುವ ಮಾನವ ಶಕ್ತಿಯ ಹತ್ತರಲ್ಲೊಂದು ಪಾಲು ಅಧಿಕೋತ್ಪಾದನೆಯ ಬಗ್ಗೆ ಉಪಯೋಗಿಸುವುದಾದರೆ, ಪರಿಸ್ಥಿತಿ ವಿಕೋಪದಿಂದ ದೂರಾಗಲಾರವೆ? ನಾಶಕ್ಕಿಂತ ನಿರ್ಮಾಣದತ್ತ ಲಕ್ಷ್ಯಹರಿಸುವುದು ಸೂಕ್ತವಲ್ಲವೆ?

ವಚನ ಸುಧೆ

ಕರ್ಮಣಾಂ ತು ಪ್ರಶಸ್ತಾನಾಂ
ಮನುಷ್ಠಾನಂ ಸುಖಾವಹಂ
ತೇಷಾಂ ಮೇವಾನನುಷ್ಠಾನಂ
ಪಶ್ಚಾತ್ತಾಪಕರಂ ಮತಮ್॥

ಒಳ್ಳೆಯ ಕೆಲಸಗಳನ್ನು ಮಾಡುತ್ತಿರುವುದರಿಂದ ಸುಖವು ದೊರೆಯುತ್ತದೆ. ಅವನ್ನು ಮಾಡದೆ ಹೋದರೆ, ಮುಂದೆ ಪಶ್ಚಾತ್ತಾಪ ಪಡಬೇಕಾಗುವುದು.

ಜೀವನ ವೆಚ್ಚ—ಭತ್ಯೆ

ಕೇಂದ್ರ ಸರಕಾರವು ತನ್ನ ನೌಕರರ ತುಟ್ಟಿಭತ್ಯೆಯನ್ನು ಹೇಗೂ ಘೋಷಿಸಿತು. ಇದರ ಪ್ರಮಾಣದ ಬಗ್ಗೆ ನೌಕರರಲ್ಲಿ ಅತೃಪ್ತಿಯಿರುವುದು ಸ್ವಾಭಾವಿಕ. ಈ ಬಗ್ಗೆ ಏನೂ ಹೇಳುವಂತಿಲ್ಲ. ಆದರೆ, ಎರಡನೆಯ ವೇತನ ಆಯೋಗದ ವರದಿ ಬಂದ ನಂತರದ ಕಳೆದ ಐದು ವರ್ಷಗಳಲ್ಲಿ ಕೇಂದ್ರವು ಆರು ಬಾರಿ ತುಟ್ಟಿ ಭತ್ಯೆಯನ್ನು ಪರಿಷ್ಕರಿಸಿತು. ಎಂ

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ



'ಅಮೇರಿಕೆಯಿಂದ ಇಪ್ಪತ್ತು ಲಕ್ಷ ಟನ್ ಗೋಧಿ, ಹತ್ತು ಲಕ್ಷ ಟನ್ ಜೋಳ ಬರುತ್ತಲಿದೆಯಂತೆ ..'

"ಕೇರಳ ಭೀಮನ ಹೊಟ್ಟೆಗೆ ಇದು ಕಹಿ ಮಜ್ಜಿಗೆಯಾದರೆ....."

ನಿಮಗೆ ಗೊತ್ತಿರಲಿ

ತಾಷ್ಕೆಂಟ್ ಘೋಷಣೆಯ ಪೂರ್ತಿ ಪಾಠ

ಭಾರತದ ಪ್ರಧಾನ ಮಂತ್ರಿಗಳೂ, ಪಾಕಿಸ್ತಾನದ ಅಧ್ಯಕ್ಷರೂ ತಾಷ್ಕೆಂಟಿನಲ್ಲಿ ಭೇಟಿಯಾಗಿ, ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಅಸ್ತಿತ್ವದಲ್ಲಿರುವ ಸಂಬಂಧಗಳನ್ನು ಚರ್ಚಿಸಿ, ತಮ್ಮ ದೇಶಗಳ ಮಧ್ಯೆ ಸಹಜ, ಶಾಂತಿಯುತ ಸಂಬಂಧಗಳನ್ನು ಪುನಃ ಸ್ಥಾಪಿಸಿಕೊಳ್ಳಲು, ತಮ್ಮ ಜನತೆಯ ಮಧ್ಯೆ ಪರಸ್ಪರ ತಿಳುವಳಿಕೆಯನ್ನೂ, ಮೈತ್ರಿ ಭಾವನೆಗಳನ್ನೂ ಬಲಗೊಳಿಸಲು ಶ್ರಮಿಸುವ ತಮ್ಮ ದೃಢ ಸಂಕಲ್ಪವನ್ನು, ಈ ಮೂಲಕ ಪ್ರಕಟಿಸುತ್ತಾರೆ. ಈ ಗುರಿ ಸಾಧನೆಯು ಭಾರತ ಮತ್ತು ಪಾಕಿಸ್ತಾನಗಳ ೬೦ ಕೋಟಿ ಜನರ ಹಿತದ ದೃಷ್ಟಿಯಿಂದ ಅತ್ಯಂತ ಮಹತ್ವದ್ದೆಂದು ಅವರು ಭಾವಿಸುತ್ತಾರೆ.

(೧)

ವಿಶ್ವ ಸಂಸ್ಥೆಯ ಪ್ರಣಾಳಿಕೆಯ ಮೇರೆಗೆ, ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಒಳ್ಳೆಯ ನೆರೆಯ-ಹೊರೆಯ ಸಂಬಂಧಗಳನ್ನು ನಿರ್ಮಿಸಲು, ಉಭಯ ಪಕ್ಷಗಳೂ ಸಾಧ್ಯವಿದ್ದ ಎಲ್ಲಾ ಪ್ರಯತ್ನಗಳನ್ನು ಮಾಡುವುದಾಗಿ ಭಾರತದ ಪ್ರಧಾನ ಮಂತ್ರಿಯವರೂ, ಪಾಕಿಸ್ತಾನದ ಅಧ್ಯಕ್ಷರೂ ಒಪ್ಪಿಕೊಂಡಿದ್ದಾರೆ. ಬಲಪ್ರಯೋಗವನ್ನು ತ್ಯಜಿಸಿ, ಶಾಂತಿಯುತ ಮಾರ್ಗಗಳ ಮೂಲಕ ವಿವಾದಗಳನ್ನು ಬಗೆಹರಿಸಿಕೊಳ್ಳಲು, ಈ ಪ್ರಣಾಳಿಕೆಯ ಮೇರೆಗೆ ತಮ್ಮ ಮೇಲಿರುವ ಹೊಣೆಗಾರಿಕೆಯನ್ನು ಅವರು ಪುನಃ ದೃಢೀಕರಿಸಿದ್ದಾರೆ. ತಮ್ಮ ಪ್ರದೇಶದಲ್ಲಿ ವಿಶೇಷತಃ ಭಾರತ— ಪಾಕಿಸ್ತಾನ್ ಉಪಖಂಡದಲ್ಲಿ ಶಾಂತಿಯ ಹಿತದೃಷ್ಟಿಯಿಂದ ಭಾರತ ಮತ್ತು ಪಾಕಿಸ್ತಾನ ದೇಶಗಳ ಜನತೆಯ ಹಿತದೃಷ್ಟಿಯಿಂದ ಎರಡೂ ದೇಶಗಳ ನಡುವೆ ಪ್ರಕ್ಷುಬ್ಧ ಪರಿಸ್ಥಿತಿ ಮುಂದುವರಿಯುವುದು ಕ್ಷೇಮಕರವಾಗಿಲ್ಲವೆಂದು ಅವರು ಭಾವಿಸುತ್ತಾರೆ. ಈ ಒಂದು ಹಿನ್ನೆಲೆಯಲ್ಲಿಯೇ ಅವರು ಜಮ್ಮು ಮತ್ತು ಕಾಶ್ಮೀರ ಸಮಸ್ಯೆಯನ್ನು ಚರ್ಚಿಸಿದರಲ್ಲದೆ ಪರಸ್ಪರ ನಿಲುವುಗಳನ್ನು ಮಂಡಿಸಿದರು.

(೨)

೧೯೬೬ ಫೆಬ್ರುವರಿ ೨೫ರೊಳಗಾಗಿ ಎರಡೂ ದೇಶಗಳು ತಮ್ಮ ಎಲ್ಲ ಸಶಸ್ತ್ರ ಸಿಬ್ಬಂದಿಯನ್ನು ೧೯೬೫ರ ಆಗಸ್ಟ್ ೫ಕ್ಕಿಂತ ಮುಂಚೆ ಅವು ಇದ್ದ ಸ್ಥಾನಗಳಿಗೆ ವಾಪಸು ಕರೆಸಿಕೊಳ್ಳಬೇಕೆಂದು, ಮತ್ತು ಎರಡೂ ಪಕ್ಷಗಳು ಕದನ ವಿರಾಮ ರೇಖೆಯ ಪ್ರದೇಶದಲ್ಲಿ ಕದನ ವಿರಾಮದ ಷರತ್ತುಗಳನ್ನು ಖಂಡಿತವಾಗಿ ಪಾಲಿಸಬೇಕೆಂದು ಭಾರತದ ಪ್ರಧಾನ ಮಂತ್ರಿಗಳೂ, ಪಾಕಿಸ್ತಾನದ ಅಧ್ಯಕ್ಷರೂ ಒಪ್ಪಿಕೊಂಡಿದ್ದಾರೆ.

(೩)

ಪರಸ್ಪರ ವ್ಯವಹಾರಗಳಲ್ಲಿ ಹಸ್ತಕ್ಷೇಪವನ್ನು ಪ್ರತಿಬಂಧಿಸುವ ತತ್ವದ ಮೇಲೆಯೇ ಭಾರತ ಮತ್ತು ಪಾಕಿಸ್ತಾನಗಳ ಸ್ನೇಹ ಸಂಬಂಧಗಳು ರೂಪುಗೊಳ್ಳಬೇಕೆಂದು ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷರೂ ಒಪ್ಪಿದ್ದಾರೆ.

(೪)

ಉಭಯ ಪಕ್ಷಗಳೂ ಪರಸ್ಪರ ವಿರುದ್ಧ ನಿರ್ದೇಶಿತ ಆದ ಪ್ರಚಾರಕ್ಕೆ ಉತ್ತೇಜನವನ್ನು ನೀಡುವುದಿಲ್ಲವೆಂದೂ, ಎರಡೂ ದೇಶಗಳ ಮಧ್ಯೆ ಸ್ನೇಹ ಸಂಬಂಧಗಳ ಸಂವರ್ಧನೆಗೆ ಸಹಾಯಕವಾಗಬಹುದಾದ ಪ್ರಚಾರಕ್ಕೆ ಪ್ರೋತ್ಸಾಹವನ್ನು ನೀಡುವುದಾಗಿಯೂ ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷರು ಒಪ್ಪಿದ್ದಾರೆ.

(೫)

ಪಾಕಿಸ್ತಾನದಲ್ಲಿದ್ದ ಭಾರತದ ಹೈಕಮಿಷನರರೂ ಭಾರತದಲ್ಲಿದ್ದ ಪಾಕಿಸ್ತಾನದ ಹೈಕಮಿಷನರರೂ ಪುನಃ ತಮ್ಮ ಮೊದಲಿನ ಸ್ಥಾನಗಳಿಗೆ ಹಿಂದಿರುಗುವರೆಂದೂ ಯಥಾಪೂರ್ವ ರಾಯಭಾರ ಸಂಬಂಧವನ್ನು ಸ್ಥಾಪಿಸಲಾಗುವುದೆಂದೂ ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷರೂ ಒಪ್ಪಿದ್ದಾರೆ. ರಾಯಭಾರ ಸಂಬಂಧಗಳನ್ನು ಕುರಿತಾದ ೧೯೬೧ನೆಯ ವರ್ಷದ ವಿಯೆನ್ನಾ ನಿಯಮಗಳನ್ನು ಉಭಯ ಸರ್ಕಾರಗಳು ಪಾಲಿಸುವುದಾಗಿ ಅವರು ಪ್ರಕಟಿಸಿದ್ದಾರೆ.

— ೬ —

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಈ ಮೊದಲಿದ್ದ ಆರ್ಥಿಕ ಹಾಗೂ ವಾಣಿಜ್ಯ ಸಂಬಂಧಗಳನ್ನೂ, ಸಾಧನ ಸಂಪರ್ಕ, ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನೂ ಪುನಃ ಸ್ಥಾಪಿಸಲು, ಹಾಗೂ ಭಾರತ— ಪಾಕಿಸ್ತಾನಗಳ ನಡುವೆ ಈಗಿರುವ ಒಪ್ಪಂದಗಳನ್ನು ಕಾರ್ಯಗತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಪರಿಶೀಲಿಸುವುದಾಗಿ ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷರು ಒಪ್ಪಿದ್ದಾರೆ

— ೭ —

ಯುದ್ಧ ಕೈದಿಗಳನ್ನು ಅವರ ದೇಶಗಳಿಗೆ ವಾಪಾಸು ಕಳಿಸುವ ಬಗ್ಗೆ ಅಗತ್ಯವಾದ ನಿರ್ದೇಶನಗಳನ್ನು ತಮ್ಮ ಅಧಿಕಾರಿಗಳಿಗೆ ನೀಡುವುದಾಗಿಯೂ ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷರು ಒಪ್ಪಿಕೊಂಡಿದ್ದಾರೆ.

— ೮ —

ನಿರಾಶ್ರಿತರ ಸಮಸ್ಯೆಗಳಿಗೆ ಮತ್ತು ಕಾನೂನು ಬದ್ಧವಲ್ಲದ ವಲಸೆಗಳನ್ನು ಪ್ರತಿಬಂಧಿಸಲು ಸಂಬಂಧಿಸಿದ ವಿಷಯಗಳ ಚರ್ಚೆಯನ್ನು ಎರಡೂ ದೇಶಗಳು ಮುಂದುವರಿಸುವುದೆಂದು, ಭಾರತದ ಪ್ರಧಾನಮಂತ್ರಿಗಳೂ, ಪಾಕಿಸ್ತಾನದ ಅಧ್ಯಕ್ಷರೂ ಒಪ್ಪಿದ್ದಾರೆ. ಜನರ ನಿರ್ಗಮನವನ್ನು ತಡೆಯಲು ಸೂಕ್ತವಾದ ಪರಿಸ್ಥಿತಿಯನ್ನು ಉಭಯ ಪಕ್ಷಗಳು ನಿರ್ಮಿಸುವುದೆಂದೂ ಕದನ ಪ್ರಸಂಗದಲ್ಲಿ ವಶಪಡಿಸಿಕೊಂಡಿರುವ ಆಸ್ತಿಪಾಸ್ತಿಗಳನ್ನು ಹಿಂತಿರುಗಿಸುವ ಪ್ರಶ್ನೆಯನ್ನು ಚರ್ಚಿಸಲು ಸಿದ್ಧವಿರುವುದಾಗಿಯೂ ಅವರು ಒಪ್ಪಿದ್ದಾರೆ.

(೯)

ಎರಡನೆ ದೇಶಗಳಿಗೂ ಪ್ರತ್ಯಕ್ಷ ಆಸಕ್ತಿಯುಳ್ಳ ವಿಷಯಗಳನ್ನು ಕುರಿತು ಅತ್ಯುನ್ನತ ಮಟ್ಟದಲ್ಲಿ ಮತ್ತು ಇತರ ಮಟ್ಟಗಳಲ್ಲಿ ಸಭೆ ಸೇರುವುದನ್ನು ಎರಡೂ ದೇಶಗಳು ಮುಂದುವರಿಸುವುವೆಂದು ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷರು ಒಪ್ಪಿದ್ದಾರೆ. ಈ ದಿಶೆಯಲ್ಲಿ ಕೈಗೊಳ್ಳಬೇಕಾದ ಕ್ರಮ ನಿರ್ಧರಿಸಲು, ತಮ್ಮ-ತಮ್ಮ ಸರ್ಕಾರಗಳಿಗೆ ವರದಿ ಮಾಡುವ ಭಾರತ – ಪಾಕಿಸ್ತಾನ ಜಂಟಿ ಸಂಸ್ಥೆಗಳನ್ನು ಸ್ಥಾಪಿಸುವ ಅಗತ್ಯವನ್ನು ಎರಡೂ ದೇಶಗಳು ಒಪ್ಪಿಕೊಂಡಿವೆ.

o o o

ಪರಸ್ಪರ ತೃಪ್ತಿಕರವಾದ ಪರಿಣಾಮವನ್ನು ನೀಡಿರುವ ಈಗಿನ ಸಭೆಯನ್ನು ಸೇರಿಸುವಲ್ಲಿ, ರಚನಾತ್ಮಕ, ಸ್ನೇಹಪೂರ್ಣ ಹಾಗೂ ಮಹತ್ತರ ಪಾತ್ರವನ್ನು ನಿರ್ವಹಿಸಿದ ಸೋವಿಯತ್ ಸರ್ಕಾರಕ್ಕೆ ಮತ್ತು ವೈಯಕ್ತಿಕವಾಗಿ ಸೋವಿಯತ್ ರಷ್ಯಾದ ಪ್ರಧಾನ ಮಂತ್ರಿಗಳಿಗೆ ತಮ್ಮ ಪ್ರಶಂಸೆಯನ್ನು ಹಾಗೂ ಕೃತಜ್ಞತೆಗಳನ್ನು, ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ. ತಮಗೆ ಆತ್ಮೀಯ ಸ್ವಾಗತ, ಸತ್ಕಾರವನ್ನು ಉದಾರವಾದ ಆತಿಥ್ಯವನ್ನು ನೀಡಿದ್ದಕ್ಕಾಗಿ ಅವರು, ಉಜ್ಬೇಕಿಸ್ತಾನ ಸರ್ಕಾರಕ್ಕೆ ಮತ್ತು ಜನತೆಗೆ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ಅವರು ಸೋವಿಯತ್ ರಷ್ಯಾದ ಪ್ರಧಾನ ಮಂತ್ರಿಗಳನ್ನು ಸ್ವಾಗತಿಸಿ ಈ ಘೋಷಣೆಗೆ ಸಾಕ್ಷ್ಯವನ್ನು ನೀಡಬೇಕೆಂದು ಕೋರಿದ್ದಾರೆ.

ಜಗತ್ತಿನಲ್ಲಿ ಎರಡೇ ಕುಟುಂಬಗಳು: ಇರುವವರು ಮತ್ತು ಇಲ್ಲದವರು.

o o o

ಜಗತ್ತಿನಲ್ಲಿ ಎಲ್ಲಾ ಶಬ್ದಗಳಿಗಿಂತ ಹೊಗಳಿಕೆಯ ಶಬ್ದವೇ ಕರ್ಣಾನಂದಕ

o o o

ಹೆಂಗಸರನ್ನು ಅವರ ಮುಖದೆದುರು ಹೊಗಳಬೇಕು; ಬುದ್ಧಿವಂತರನ್ನು ಅವರ ಬೆನ್ನಹಿಂದೆ ಹೊಗಳಬೇಕು.

o o o

ಬ್ರಾಹ್ಮಣನು ಪಾಪಿಗಾಗಿ ಪ್ರಾರ್ಥಿಸಿ ಪೂಜಿಸಬಹುದು. ಆದರೆ ಪಾಪಿ ತನಗಾಗಿ ತಾನು ಪ್ರಾರ್ಥಿಸಿ ಕೊಂಡಾಗಲೇ ಆತನ ಉದ್ಧಾರ

o o o

ಕೋಳಿಗಳ ತಪ್ಪಿನ ವಿಚಾರಣೆಯಲ್ಲಿ ನರಿಯು ನ್ಯಾಯಾಧೀಶನಾಗಿರಬಾರದು

o o o

ನಿಮಗೆ ಐವತ್ತು ಮಿತ್ರರಿದ್ದಾರೆಯೆ ಆದರೂ ಸಾಲದು! ನಿಮಗೆ ಒಬ್ಬನೇ ಶತ್ರುವಿದ್ದಾನೆಯೋ? ಆದರೂ ಅದು ಜಾಸ್ತಿಯಾಯಿತು.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಫೋನ್ 77 ಕುಂದಾಪುರ, ದ. ಕ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5% ನಿಂದ 8% ವರೆಗಿನ ಬಡ್ಡಿ ದರ

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಒಂದು ವಿವೇಚನೆ

ಬಾಳುವೆ ಶಾಪವಲ್ಲ, ವರ

ಬರೆದವರು: ರಾಜಗೋಪಾಲ ಪಿ. ಕೆ.

ಹೇಗೆ ನೆರಳಿಲ್ಲದೆ ಪ್ರಕಾಶವಿರಲಾರದೋ, ಹೊಗೆಯಿಲ್ಲದೆ ಬೆಂಕಿಯಿರಲಾರದೋ, ಇರುಳಿಲ್ಲದೆ ಹಗಲಿನ ಅಸ್ತಿತ್ವವಿರಲಾರದೋ, ಹಾಗೆಯೇ ಜೀವನದಲ್ಲಿ ದುಃಖವಿಲ್ಲದೆ ಸುಖವಿರಲಾರದು. "ಕಷ್ಟವಿಲ್ಲದೆ ಸುಖದ ಅರಿವು ಅಸಾಧ್ಯ." ಕಷ್ಟ-ನಷ್ಟ, ನೋವು-ದುಃಖಗಳನ್ನು ಅನುಭವಿಸದ ಬಾಳುವೆ ಬಾಳುವೆಯಲ್ಲ. ಗುಲಾಬಿಗೆ ಮುಳ್ಳಿದೆ ಎಂದು ದೂಷಿಸುವ, ಕ್ರೂರತೆ ಹುಡುಕುವ ಬುದ್ಧಿ ತ್ಯಾಜ್ಯವಾದ್ದು. ಬದಲಾಗಿ, ಆ ಮುಳ್ಳು ಸುಗಂಧಪೂರಿತ ಪುಷ್ಪವನ್ನು ಸೃಜಿಸಿದೆಯೆಂಬ ಒಳಿತನ್ನು ಕಂಡುಕೊಳ್ಳುವ ಮನೋಭಾವ ಅತ್ಯವಶ್ಯ. ಕೆಡುಕುಗಳಲ್ಲಿಯೂ ಗೌಣವೆನಿಸಿ ಸತ್-ಚಿತ್ ವಸ್ತುವನ್ನು ಕಂಡುಕೊಳ್ಳುವ ವಿಸ್ತೃತ ಮನೋರಂಗ ಆವಿರ್ಭೂತವಾಗಬೇಕು. ಜೀವನವು ಕಷ್ಟದಾಯಿನಿ ಎನ್ನುವುದರೊಂದಿಗೇನೇ ಅದು ಅಮಿತ ಆಹ್ಲಾದದಾಯಿನಿಯೂ ಆಗಿದೆ ಎಂಬುದನ್ನು ಎತ್ತಿ ಹಿಡಿಯುವ ತೆರೆದ ನಾಲಗೆ ಬೇಕು.

ಮಹಾತ್ಮಾ ಗಾಂಧೀಜಿಯವರು "ಕಷ್ಟದ ಜೀವನವೇ ಶಿಸ್ತನ್ನು ಕಲಿಸುವ ಶಾಲೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸುಖ; ದುಃಖ ಇವೆರಡೂ ಮಾನವತೆಯ ಪರಿಪೂರ್ಣತೆಗೆ ಅವಶ್ಯಕ ಸಾಧನಗಳು. ಇವೆರಡೂ ಮಾನವತೆಯ ಸಾಫಲ್ಯಕ್ಕೆ ಉತ್ತೇರಕಗಳು. ಒಂದು ಇನ್ನೊಂದಕ್ಕೆ ಪೂರಕ. ಜೀವನದಲ್ಲಿ ಕಷ್ಟ-ದುಃಖಗಳು ಬರುವುದು ನಮ್ಮನ್ನು ಶುದ್ಧಿ ಮಾಡಲು ವಿನಾ ಮುಳುಗಿಸಲು ಅಲ್ಲ. ನಮ್ಮ ಜೀವನವೆಂಬ ರೋಗಕ್ಕೆ "ದುಃಖವೇ ಒಂದು ಔಷಧಿ" ಎಂದು ಕೆಲವರ ಅಭಿಪ್ರಾಯ. ಈ ವಿಶ್ವದಲ್ಲಿ ಮಾನವನ ಅಸ್ತಿತ್ವ ಬಹಳ ಕ್ಲಿಷ್ಟದಾಯಕವಾಗಿದೆ. ಆದುದರಿಂದ ದುಃಖ ಸಂಕಟಗಳನ್ನೆದುರಿಸಿಯೇ ಸಹನೆಯಿಂದ ಈ ಜಗತ್ತಿನಲ್ಲಿ ಬಾಳಬೇಕು.

"ಜೀವನವು ಸದಾ ನೋವು ದುಃಖಗಳಿಂದ ತುಂಬಿದ ದೊಡ್ಡ ಸಾಗರ. ಆದರೆ ಆತ್ಮವಿಶ್ವಾಸ ಶ್ರದ್ಧೆ, ದೈವಭಕ್ತಿ ಸೇವಾ ಮಾರ್ಗಗಳಿಂದ ನಡೆದರೆ ವಿಷಯವು ಸುಗಮವಾಗುವುದು. ದುಃಖ ಸುಖವಾಗುವುದು. ವಿಷ ಅಮೃತವಾಗುವುದು." ಎಂದು ಡಾ|| ಕೋ. ಶಿ. ಕಾರಂತರು ಒಂದೆಡೆಯಲ್ಲಿ ಹೇಳಿದ್ದಾರೆ. "ದುಃಖ ಬಂದಾಗ ಕುಗ್ಗದ, ಸುಖ ಬಂದಾಗ ಹಿಗ್ಗದೆ ಯಾರು ಸಮಚಿತ್ತ ಸುಖಿಯಾಗಿದ್ದಾನೋ ಅವನೇ ಸ್ಥಿತಃಪ್ರಜ್ಞ" ಎಂದು ಶ್ರೀ ಕೃಷ್ಣನು ಗೀತೆಯಲ್ಲಿ ಅಭಿಪ್ರಾಯ ಪಡುತ್ತಾನೆ. ಎಲ್ಲಾ ಕಷ್ಟಗಳನ್ನ ಸಹನೆಯಿಂದ ಎದುರಿಸಿ ಅದನ್ನು ಸುಖವನ್ನಾಗಿಸುವುದು ನಮ್ಮ ಧರ್ಮ. ಕಷ್ಟ ಬಂದಾಗ ವಿಧಿಯನ್ನು ಹಳಿಯುವುದು ಈಗ ವಾಡಿಕೆಯಾಗಿಯೇ ಪರಿಣಮಿಸಿದೆ. ಆದರೆ ಅದೇ ವಿಧಿಯು ಸುಖವನ್ನಿತ್ತಾಗ ವಿಧಿಯನ್ನು ನೆನಸುವವರೆಷ್ಟು? ಸಹನೆಯ ಅಮೃತವನ್ನು ಸೇವಿಸಿದವನನ್ನು ಕಷ್ಟದ ಕಾಲಕೂಟ ವಿಷ ಮಾಡಲು ಅಶಕ್ತ. ಮಾನಸಿಕವಾಗಿ ಉತ್ತೇಜಿತರಾದ ಕಷ್ಟದನುಭವ ಮನುಷ್ಯನ ಸಹನಭಾವವನ್ನು ಊರ್ಜಿತಗೊಳಿಸುವುದು. ಈ ದೃಷ್ಟಿ ಕೋನದಿಂದ ನೋಡಿದರೆ ಜೀವನವು ಮಾನವನ ಅಧ್ಯಾಪಕನೆನಿಸುವುದು. ಹೀಗೆ ಜೀವನವನ್ನು ಕಹಿಬೇವೆನ್ನುವುದರ ಬದಲು ಅಮೃತವೆಂದೆಣಿಸಿ "ಕರುಣಾಳು ಬಾ ನೋವೆ" ಎಂದು ಯಾರೂ ಕಷ್ಟದ ಜೀವನವನ್ನು ಸ್ವಾಗತಿಸುವರೋ ಅವರು ಮಹಾತ್ಮರೆನಿಸುವರು.

ಸುಖ, ದುಃಖಗಳು ಕತ್ತಲೆ ಬೆಳಕುಗಳಂತೆ ಒಂದನ್ನೊಂದು ಅನುಸರಿಸುತ್ತವೆ. ಜೀವನವು ಭವ್ಯಸೌಧವಲ್ಲ. ಹಂಸತೂಲಿಕಾತಲ್ಪವಲ್ಲ, ಕಲ್ಲು ಮುಳ್ಳುಗಳ ಹಾಸಿಗೆ ಹಾಗೇನೇ ಪಥ. ಮಾನವ ಜೀವನವೆಂಬುದು ಸುಖ ದುಃಖವೆಂಬ ಪುಷ್ಪ ದ್ವಯಗಳ ಸುಂದರ ಸಮ್ಮಿಲನದಿಂದ ಶೋಭಿತವಾದ ಮನೋಹರ ಮಾಲೆ. ಒಂದು ಇಲ್ಲವಾದರೆ ಆ ಮಾಲೆ ಅಪೂರ್ಣ. ಎರಡೂ ಇದ್ದರೇನೇ ಆ ಸಿಹಿಕಹಿಗಳ ಅನುಭವದಿಂದ ನಮ್ಮ ಜೀವನದಲ್ಲಿ ಪೂರ್ಣತೆಯ ಸಿದ್ಧಿಯಾದೀತು. ತುಂಬು ಬಾಳುವೆ ನಮ್ಮದಾಗುವುದು.

"Living means not simply living." ಬದುಕು ಬದುಕೆನ್ನದಿರಿ; ಕೆಚ್ಚಿನಿಂದ ಬದುಕಿರಿ, ಧೈರ್ಯದಿಂದ ಬದುಕಿರಿ." ಎಂಬ ವೀರವಾಣಿ ಕ್ಷಣ ಕ್ಷಣವೂ ನಮ್ಮ ನರನಾಡಿಗಳಲ್ಲಿ ಓಡಾಡುತ್ತಿರಲಿ. ಜೀವನದಲ್ಲಿ ಸುಖ ದುಃಖದ ಬಗ್ಗೆ ವಿವೇಕಾನಂದರು ಹೀಗೆ ಹೇಳುತ್ತಾರೆ—"ಸುಖ ದುಃಖಗಳು ನಮ್ಮ ಆಳುಗಳೇ ಹೊರತು ನಾವು ಅವುಗಳ ಆಳುಗಳಲ್ಲ". ಬದುಕಿನ ಕುರಿತು ಡಿ. ವಿ. ಜಿ. ಅವರ "ಮಂಕು ತಿಮ್ಮನ ಕಗ್ಗ" ಅನೇಕ ತತ್ವಗಳನು ಸಾರುತ್ತದೆ. ಅದರಲ್ಲಿ—

"ಧರೆಯ ಬದುಕೇನದರ ಗುರಿಯೇನು
ಫಲವೇನು
ಬರಿ ಬಳಸು ಬಡಿದಾಟ ಬರಿ ಸುರಿ
ಭ್ರಮಣೆ.
ತಿರು ತಿರುಗಿ ಹೊಟ್ಟೆ ಹೊರಕೊಳುವ
ಮೃಗಖಗರಂತೆ
ನರನು ಸಾಧಿಪುದೇನು? ಮಂಕು
ತಿಮ್ಮ"

ಎಂಬ ಪದ್ಯ ಬಹಳ ಶಕ್ತಿಯುತವಾದುದು.

"ಬೆಳೆವುದೀ ಬರಿಯರಳಿ ಮರದಂತೆ
ನರ ಕೋಟಿ
ಸಲಿವನದರಲಿ ಬೊಮ್ಮ."

ಅರಳಿ ಮರದಂತೆ ನರಕೋಟಿ ಬೆಳೆಯುತ್ತಿದೆ. ಅಂತಹ ನರಕೋಟಿ ಜೀವನವನೊಂದು ಪರದೈಶ್ವರ್ಯವೆಂದು ಬಗೆಯಬೇಕು. ಜೀವನವಗೊಂದು ಕಲೆಯೆಂದು ತಿಳಿಯಬೇಕು. "ಹೊಸತನವೆ ಬಾಳು. ಹಳಸಿಕೆಯೆಲ್ಲ ಸಾವು." ಎಂಬ ಭಾವ ಮೂಡಬೇಕು." ಈ "ಲೋಕ ಕುರುಡು. ಇಲ್ಲಿ ಕಾಣುವವರು ಸ್ವಲ್ಪ ಬಲೆಯಿಂದ ಬಿಡಿಸಿಕೊಂಡ ಹಕ್ಕಿಯಂತೆ ಕೆಲವರು ಮಾತ್ರ ಸ್ವರ್ಗಕ್ಕೆ ಹೋಗಲು ಸಾಧ್ಯ" ("ಧರ್ಮ ಪದದಿಂದ") ಅಂತಹ ಕೆಲವರಲ್ಲಿ ನಾವೂ ಸೇರುವಂತೆ ಪ್ರಯತ್ನಿಸುವುದು ನಮ್ಮ ಕರ್ತವ್ಯವಾಗಿರಲಿ.

ಕೆಲವು ಜನರು ಬಾಳುವೆಯ ಸಂಕಟವನ್ನು ತಡೆಯಲಾರದೆ ಜೀವನವನ್ನೇ ಶಪಿಸಿ, ಜನ್ಮಕ್ಕೆ ಕಾರಣನಾದ ದೇವರನ್ನೇ ಹೂಷಿಸಿ ವೈರಾಗ್ಯ ಭಾವದಿಂದ, ನಿರಾಶೆಯ ಹೃದಯದಿಂದ ಜುಗುಪ್ಸೆಗೊಂಡು ದುಃಖದ ಮಡುವಿನಲ್ಲಿ ಮುಳುಗುತ್ತಾರೆ. ಎಂತಹ ಅಚಲ ಹೃದಯವವನಾದರೂ, ಈ ಜಗತ್ತನ್ನು ಒಮ್ಮೆಯಾದರೂ ನಿಂದಿಸದಿರಲಾರನು. ದುಃಖವೇ ಜೀವನದ ನಿತ್ಯ ಗಾಯತ್ರಿಯಾಗಿ ಕಷ್ಟದ ತೆರೆಗಳೇ ಜೀವನದುದ್ದಕ್ಕೂ ಅಪ್ಪಳಿಸಿದಾಗ ಜನಮನ ವಿರಕ್ತಿಗೊಳ್ಳುವುದು ಸಹಜ. ಆದರೆ ತಮ್ಮ ಮಾನವೀಯ ಅಸ್ತಿತ್ವದಲ್ಲಿ ಸ್ವಕರ್ಮವನ್ನು ಚಾಚೂ ತಪ್ಪದೆ ಪರಿಪಾಲಿಸಿದ ಯಾವನೂ ಈ ರೀತಿ ಅತೃಪ್ತನಾಗನು. "ಸೋಲ ಗೆಲವದಾರಿಗಿಲ್ಲ?" ಎಂಬ ಕವಿ ವಾಣಿ ಸತ್ಯ. ಮಾನವ ಜೀವನವು ದುಃಖ ಸುಖಗಳ ಮಧುರ ಸಮ್ಮಿಲಿತ ಅಪೂರ್ವ ಮಾಲೆ. ಆಶೆನಿರಾಶೆಗಳ ಭವ್ಯ ತಕ್ಕಡಿ. ನಾವು ನೋವುಗಳ ಸುಂದರ ನೌಕೆ. ಹೀಗ ಆಶೆ ನಿರಾಶೆ, ಸಾವು ನೋವು, ದುಃಖಗಳ ಪರಂಪರೆಯಲ್ಲಿ ತೂಗಾಡುತ್ತಿರುವ, ವೈವಿಧ್ಯ ಪೂರ್ಣತೆಯಿಂದ ತುಂಬಿ ತುಳುಕಾಡುತ್ತಿರುವ ಜಗತ್ತಿನ ವೈವಿಧ್ಯಗಳ ಅಂತರಾಳದಲ್ಲಿ ಪ್ರವಹಿಸುತ್ತಿರುವ ಏಕವನ್ನು ಯಾರು ಈಕ್ಷಿಸುವರೋ, ಈ ಜನ್ಮ ಮೃತ್ಯುಗಳ ವಿಶ್ವಪಾಶದಲ್ಲಿ ಯಾರು ಅನಂತಾತ್ಮನನ್ನು ಕಂಡುಕೊಳ್ಳುವರೋ, ಈ ಜಡವಾದ ಅಜ್ಞಾನಮಯವಾದ ಲೋಕರಂಗದಲ್ಲಿ ಅಕಲ್ಪನಾತೀತವಾದ ಪ್ರಕಾಶ ಪೂರ್ಣ ಜ್ಯೋತಿಯನ್ನು ಯಾರು ಕಾಣುವರೋ, ಅವರಿಗೆ ಮಾತ್ರ ಆ ಸಚ್ಚಿದಾನಂದ ಶಾಂತಿ ಲಭ್ಯವಾಗುವುದು.

ಮಾನವ ಜೀವನವೆಂಬ ನೌಕೆ ಎಡೆ ತಡೆಯಿಲ್ಲದೆ ಸಾಗಬೇಕಾದರೆ ಅದಕ್ಕೊಂದು ಸುಭದ್ರ ತಳಹದಿ ಆಗತ್ಯ. ಆ ತಳಹದಿಯನ್ನು ಭದ್ರಪಡಿಸಲು ಪ್ರಯತ್ನಿಸೋಣ.

"ಈ ವಿಶ್ವ ಒಂದು ಗಾಜಿನ ದರ್ಪಣ. ನಾವು ನಕ್ಕರೆ ಅದೂ ನಗುವುದು. ಅತ್ತರೆ ಅದೂ ಅಳುವುದು. ವಿಶ್ವವನ್ನು ಕೆಂಪು ಗಾಜಿನ ಮೂಲಕ ನೋಡಿದರೆ ಅದು ಕೆಂಪಾಗಿ ಕಾಣುವುದು. ಹೀಗ ಯಾವ ಬಣ್ಣದ ಗಾಜಿನ ಮೂಲಕ ನೋಡಿತೋ ಆ ಬಣ್ಣವಾಗಿ ಅದು ನಮಗೆ ಗೋಚರಿಸುವುದು." ಮಹಾತ್ಮರೆನಿಸಿಕೊಂಡವರು ಈ ಜಗತ್ತಿನಲ್ಲಿ ಬಾಳುತ್ತಾರೆ. ಅವರ ತತ್ವಯುಕ್ತಿಗಳೊಡನೆ ಅವರ ಸಂಪರ್ಕ ಇರುವುದಿಲ್ಲ. ಬದಲಾಗಿ ಅವರಿಂದ ಜಗತ್ತು ಸ್ವಚ್ಛವಾಗುವುದು. ಕಮಲ ದಳದ ಮೇಲಣ ನೀರ ಹನಿಯಂತೆ ಮಹಾತ್ಮರು ತಮ್ಮ ಜೀವನವನ್ನು ಕಳೆಯುತ್ತಾರೆ.

(ಎಂಟನೇ ಪುಟ ನೋಡಿರಿ)



ಜನತೆಯ ಸೌಕರ್ಯಕ್ಕಾಗಿ ಹೊಸ ಬಗೆಯ
ಸೇವಿಂಗ್ಸ್ ಬ್ಯಾಂಕ್ ಸೌಲಭ್ಯಗಳು

ಪ್ರಾಯಕ್ಕೆ ಬಾರದ ಮಕ್ಕಳು ಕೂಡಾ 12 ವರ್ಷಕ್ಕೆ ಮೇಲ್ಪಟ್ಟಿದ್ದರೆ ತಮ್ಮ ಹೆಸರಿನಲ್ಲಿಯೇ ಸೇವಿಂಗ್ಸ್ ಬ್ಯಾಂಕ್ ಖಾತೆಗಳನ್ನು ತೆರೆಯಬಹುದು.

ನೀವು ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ ಒಂದು ವರ್ಷದಲ್ಲಿ 150 ಬಾರಿ ಹಣವನ್ನು ತೆಗೆಯಬಹುದು.

ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ ಎಂದು ಬೇಕಾದರೂ ಎಷ್ಟು ಮೊತ್ತವನ್ನಾದರೂ ಯಾವುದೇ ಪೂರ್ವ ಸೂಚನೆಯಿಲ್ಲದೆ ಹಿಂದೆ ಪಡೆಯಬಹುದು.

ಸೇವಿಂಗ್ಸ್ ಬ್ಯಾಂಕ್ ಖಾತೆಯ ಮೇಲೆ ಅರ್ಧವಾರ್ಷಿಕ ಖರ್ಚು ವೆಚ್ಚಗಳನ್ನು ವಸೂಲು ಮಾಡಲಾಗುವುದಿಲ್ಲ.

ಸೇವಿಂಗ್ಸ್ ಖಾತೆಯ ಮೂಲಕ ಧರ್ಮಾರ್ಥವಾಗಿ ಹಣವನ್ನೂ ರವಾನಿಸಬಹುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಸೇವಿಂಗ್ಸ್ ಖಾತೆ ತೆರೆಯಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿವೆ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿದೆ.

..............ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ

ಒಂದು ವಿವೇಚನೆ

ಬಾಳುವೆ ಶಾಪವಲ್ಲ, ವರ

ಬರೆದವರು: ರಾಜಗೋಪಾಲ ಪಿ. ಕೆ.

ಹೇಗೆ ನೆರಳಿಲ್ಲದೆ ಪ್ರಕಾಶವಿರಲಾರದೋ, ಹೊಗೆಯಿಲ್ಲದೆ ಬೆಂಕಿಯಿರಲಾರದೋ, ಇರುಳಿಲ್ಲದೆ ಹಗಲಿನ ಅಸ್ತಿತ್ವವಿರಲಾರದೋ, ಹಾಗೆಯೇ ಜೀವನದಲ್ಲಿ ದುಃಖವಿಲ್ಲದೆ ಸುಖವಿರಲಾರದು. "ಕಷ್ಟವಿಲ್ಲದ ಸುಖದ ಅರಿವು ಅಸಾಧ್ಯ." ಕಷ್ಟ-ನಷ್ಟ, ನೋವು-ದುಃಖಗಳನ್ನು ಅನುಭವಿಸದ ಬಾಳುವೆ ಬಾಳುವೆಯಲ್ಲ. ಗುಲಾಬಿಗೆ ಮುಳ್ಳಿದೆಯೆಂದು ದೂಷಿಸುವ, ಕೊರತೆ ಹುಡುಕುವ ಬುದ್ಧಿ ತ್ಯಾಜ್ಯವಾದ್ದು. ಬದಲಾಗಿ, ಆ ಮುಳ್ಳು ಸುಗಂಧಪೂರಿತ ಪುಷ್ಪವನ್ನು ರಕ್ಷಿಸಿದೆಯೆಂಬ ಒಳಿತನ್ನು ಕಂಡುಕೊಳ್ಳುವ ಮನೋಭಾವ ಅತ್ಯವಶ್ಯ. ಕೆಡುಕುಗಳೆಲ್ಲವೂ ಗೌಣವೆನಿಸಿ ಸತ್-ಚಿತ್ ವಸ್ತುಗಳನ್ನು ಕಂಡುಕೊಳ್ಳುವ ವಿಸ್ತೃತ ಮನೋರಂಗ ಆವಿರ್ಭೂತವಾಗಬೇಕು. ಜೀವನವು ಕಷ್ಟದಾಯಿನಿ ಎನ್ನುವುದರೊಂದಿಗೇನೇ ಅದು ಅಮಿತ ಆಹ್ಲಾದದಾಯಿನಿಯೂ ಆಗಿದೆ ಎಂಬುದನ್ನು ಎತ್ತಿ ಹಿಡಿಯುವ ತೆರೆದ ನಾಲಗೆ ಬೇಕು.

ಮಹಾತ್ಮಾ ಗಾಂಧೀಜಿಯವರು "ಕಷ್ಟದ ಜೀವನವೇ ಶಿಸ್ತನ್ನು ಕಲಿಸುವ ಶಾಲೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸುಖ; ದುಃಖ ಇವೆರಡೂ ಮಾನವತೆಯ ಸಂಪೂರ್ಣತೆಗೆ ಅವಶ್ಯಕ ಸಾಧನಗಳು. ಇವೆರಡೂ ಮಾನವತೆಯ ಸಾಫಲ್ಯಕ್ಕೆ ಉತ್ಪ್ರೇರಕಗಳು. ಒಂದು ಇನ್ನೊಂದಕ್ಕೆ ಪೂರಕ. ಜೀವನದಲ್ಲಿ ಕಷ್ಟ-ದುಃಖಗಳು ಬರುವುದು ನಮ್ಮನ್ನು ಶುದ್ಧಿ ಮಾಡಲು ವಿನಾ ಮುಳುಗಿಸಲು ಅಲ್ಲ. ನಮ್ಮ ಜೀವನವೆಂಬ ರೋಗಕ್ಕೆ "ದುಃಖವೇ ಒಂದು ಔಷಧಿ" ಎಂದು ಕೆಲವರ ಅಭಿಪ್ರಾಯ. ಈ ವಿಶ್ವದಲ್ಲಿ ಮಾನವನ ಅಸ್ತಿತ್ವ ಬಹಳ ಕ್ಲಿಷ್ಟದಾಯಕವಾಗಿವೆ. ಆದುದರಿಂದ ದುಃಖ ಸಂಕಟಗಳನ್ನೆದುರಿಸಿಯೇ ಸಹನೆಯಿಂದ ಈ ಜಗತ್ತಿನಲ್ಲಿ ಬಾಳಬೇಕು.

"ಜೀವನವು ಸದಾ ನೋವು ದುಃಖಗಳಿಂದ ತುಂಬಿದ ದೊಡ್ಡ ಸಾಗರ. ಆದರೆ ಆತ್ಮವಿಶ್ವಾಸ ಶ್ರದ್ಧೆ, ದೈವಭಕ್ತಿ, ಸೇವಾ ಮಾರ್ಗಗಳಿಂದ ನಡೆದರೆ ವಿಷಯವು ಸುಗಮವಾಗುವುದು. ದುಃಖ ಸುಖವಾಗುವುದು. ವಿಷ ಅಮೃತವಾಗುವುದು." ಎಂದು ಡಾ| ಕೋ. ಶಿ. ಕಾರಂತರು ಒಂದೆಡೆಯಲ್ಲಿ ಹೇಳಿದ್ದಾರೆ. "ದುಃಖ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ ಯಾರು ಸಮಚಿತ್ತ ಸುಖಿಯಾಗಿದ್ದಾನೋ ಅವನೇ ಸ್ಥಿತಪ್ರಜ್ಞ" ಎಂದು ಶ್ರೀ ಕೃಷ್ಣನು ಗೀತೆಯಲ್ಲಿ ಅಭಿಪ್ರಾಯ ಪಡುತ್ತಾನೆ. ಎಲ್ಲಾ ಕಷ್ಟಗಳನ್ನು ಸಹನೆಯಿಂದ ಎದುರಿಸಿ ಅವನ್ನು ಸುಖವನ್ನಾಗಿಸುತ್ತದು ನಮ್ಮ ಧರ್ಮ. ಕಷ್ಟ ಬಂದಾಗ ಪಥಿಯನ್ನು ಹಳಿಯುವುದು ಈಗ ವಾಡಿಕೆಯಾಗಿ ಕಂಡುಬರುತ್ತಿದೆ. ಆದರೆ ಅದೇ ಸುಖ ಬಂದಾಗ ಪಥಿಯನ್ನು ನೆನೆಸುವವರಾರು? ಸಹನೆಯ ಅಮೃತವನ್ನು ಸೇವಿಸಿದವನನ್ನು ಕಷ್ಟದ ಕಾಲಕೂಟವೇನೂ ಮಾಡಲು ಅಶಕ್ತ. ಮಾನಸಿಕವಾಗಿ ಚೇತೋಹಾರಿಯಾದ ಕಷ್ಟದನುಭವ ಮನುಷ್ಯನ ಸಹನಭಾವವನ್ನು ಊರ್ಜಿತಗೊಳಿಸುವುದು. ಈ ದೃಷ್ಟಿಕೋನದಿಂದ ನೋಡಿದರೆ ಜೀವನವು ಮಾನವನ ಆಧ್ಯಾತ್ಮಿಕ ಪಕ್ವತೆಗೆ ನೆರವಾಗುವುದು. ಹೀಗೆ ಜೀವನವನ್ನು ಕಹಿಬೇವೆನ್ನುವುದರ ಬದಲು ಅಮೃತವೆಂದೆಣಿಸಿ "ಕರುಣಾಳು ಬಾ ನೋವೆ" ಎಂದು ಯಾರೂ ಕಷ್ಟದ ಜೀವನವನ್ನು ಸ್ವಾಗತಿಸುವರೋ ಅವರು ಮಹಾತ್ಮರೆನಿಸುವರು.

ಸುಖ, ದುಃಖಗಳು ಕತ್ತಲೆ ಬೆಳಕುಗಳಂತೆ ಒಂದನ್ನೊಂದು ಅನುಸರಿಸುತ್ತವೆ. ಜೀವನವು ಭವ್ಯಸೌಧವಲ್ಲ. ಹಂಸತೂಲಿಕಾತಲ್ಪವಲ್ಲ, ಕಲ್ಲು ಮುಳ್ಳುಗಳ ಹಾಸಿಗೆ ಹಾಗೇನೇ ಪಥ. ಮಾನವ ಜೀವನವೆಂಬುದು ಸುಖ ದುಃಖವೆಂಬ ಪುಷ್ಪ ದ್ವಯಗಳ ಸುಂದರ ಸಮ್ಮಿಲನದಿಂದ ಶೋಭಿತವಾದ ಮನೋಹರ ಮಾಲೆ. ಒಂದು ಇಲ್ಲವಾದರೆ ಆ ಮಾಲೆ ಅಪೂರ್ಣ. ಎರಡೂ ಇದ್ದರೇನೇ ಆ ಸಿಹಿಕಹಿಗಳ ಅನುಭವದಿಂದ ನಮ್ಮ ಜೀವನದಲ್ಲಿ ಪೂರ್ಣತೆಯ ಸಿದ್ಧಿಯಾದೀತು. ತುಂಬು ಬಾಳುವೆ ನಮ್ಮದಾಗುವುದು.

"Living means not simply living." ಬದುಕು ಬದುಕೆನ್ನದಿರಿ; ಕೆಚ್ಚಿನಿಂದ ಬದುಕಿರಿ, ಧೈರ್ಯದಿಂದ ಬದುಕಿರಿ." ಎಂಬ ವೀರವಾಣಿ ಕ್ಷಣ ಕ್ಷಣವೂ ನಮ್ಮ ನರನಾಡಿಗಳಲ್ಲಿ ಓಡಾಡುತ್ತಿರಲಿ. ಜೀವನದಲ್ಲಿ ಸುಖ ದುಃಖದ ಬಗ್ಗೆ ವಿವೇಕಾನಂದರು ಹೀಗೆ ಹೇಳುತ್ತಾರೆ—"ಸುಖ ದುಃಖಗಳು ನಮ್ಮ ಆಳುಗಳೇ ಹೊರತು ನಾವು ಅವುಗಳ ಆಳುಗಳಲ್ಲ". ಬದುಕಿನ ಕುರಿತು ಡಿ. ವಿ. ಜಿ. ಅವರ "ಮಂಕುತಿಮ್ಮನ ಕಗ್ಗ" ಅನೇಕ ತತ್ವಗಳನು ಸಾರುತ್ತದೆ. ಅದರಲ್ಲಿ—

"ಧರೆಯ ಬದುಕೇನದರ ಗುರಿಯೇನು ಫಲವೇನು
ಬರಿ ಬಳಸು ಬಡಿದಾಟ ಬರಿ ಸಂಭ್ರಮಣೆ.
ತಿರು ತಿರುಗಿ ಹೊಟ್ಟೆ ಹೊರಕೊಳುವ ಮೃಗಖಗರಂತೆ
ನರನು ಸಾಧಿಪುದೇನು? ಮಂಕುತಿಮ್ಮ"

ಎಂಬ ಪದ್ಯ ಬಹಳ ಶಕ್ತಿಯುತವಾದುದು.

"ಬೆಳೆವುದೀ ಪರಿಯರಳಿ ಮರದಂತೆ ನರ ಕೋಟಿ
ನಲಿವನದರಲಿ ಬೊಮ್ಮ."

ಅರಳಿ ಮರದಂತೆ ನರಕೋಟಿ ಬೆಳೆಯುತ್ತಿದೆ. ಅಂತಹ ನರಕೋಟಿ ಜೀವನವನೊಂದು ಪರಮೈಶ್ವರ್ಯವೆಂದು ಬಗೆಯಬೇಕು. ಜೀವನವಗೊಂದು ಕಲೆಯೆಂದು ತಿಳಿಯಬೇಕು. "ಹೊಸತನವೆ ಬಾಳು, ಹಳಸಿಕೆಯೆಲ್ಲ ಸಾವು." ಎಂಬ ಭಾವ ಮೂಡಬೇಕು." ಈ "ಲೋಕ ಕುರುಡು. ಇಲ್ಲಿ ಕಾಣುವವರು ಸ್ವಲ್ಪ ಬಲೆಯಿಂದ ಬಿಡಿಸಿಕೊಂಡ ಹಕ್ಕಿಯಂತೆ ಕೆಲವರು ಮಾತ್ರ ಸ್ವರ್ಗಕ್ಕೆ ಹೋಗಲು ಸಾಧ್ಯ" ("ಧರ್ಮ ಪದದಿಂದ") ಅಂತಹ ಕೆಲವರಲ್ಲಿ ನಾವೂ ಸೇರುವಂತೆ ಪ್ರಯತ್ನಿಸುವುದು ನಮ್ಮ ಕರ್ತವ್ಯವಾಗಿರಲಿ.

ಕೆಲವು ಜನರು ಬಾಳುವೆಯ ಸಂಕಟವನ್ನು ತಡೆಯಲಾರದೆ ಜೀವನವನ್ನೇ ಶಪಿಸಿ, ಜನ್ಮಕ್ಕೆ ಕಾರಣನಾದ ದೇವರನ್ನೇ ದೂಷಿಸಿ ವೈರಾಗ್ಯ ಭಾವದಿಂದ, ನಿರಾಶೆಯ ಹೃದಯದಿಂದ ಜುಗುಪ್ಸೆಗೊಂಡು ದುಃಖದ ಮಡುವಿನಲ್ಲಿ ಮುಳುಗುತ್ತಾರೆ. ಎಂತಹ ಅಚಲ ಹೃದಯದವನಾದರೂ, ಈ ಜಗತ್ತನ್ನು ಒಮ್ಮೆಯಾದರೂ ನಿಂದಿಸದಿರಲಾರನು. ದುಃಖವೇ ಜೀವನದ ನಿತ್ಯ ಗಾಯತ್ರಿಯಾಗಿ ಕಷ್ಟದ ತೆರೆಗಳೇ ಜೀವನದುದ್ದಕ್ಕೂ ಅಪ್ಪಳಿಸಿದಾಗ ಜನಮನ ವಿರಕ್ತಿಗೊಳ್ಳುವುದು ಸಹಜ. ಆದರೆ ತಮ್ಮ ಮಾನವೀಯ ಅಸ್ತಿತ್ವದಲ್ಲಿ ಸ್ವಧರ್ಮವನ್ನು ಚಾಚೂ ತಪ್ಪದೆ ಪರಿಪಾಲಿಸಿದ ಯಾವನೂ ಈ ರೀತಿ ಅತೃಪ್ತನಾಗನು. "ಸೋಲು ಗೆಲುವದಾರಿಗಿಲ್ಲ?" ಎಂಬ ಕವಿ ವಾಣಿ ಸತ್ಯ. ಮಾನವ ಜೀವನವು ದುಃಖ ಸುಖಗಳ ಮಧುರ ಸಮ್ಮಿಲಿತ ಅಪೂರ್ವ ಮಾಲೆ. ಆಶೆನಿರಾಶೆಗಳ ಭವ್ಯ ತಕ್ಕಡಿ. ಸಾವು ನೋವುಗಳ ಸುಂದರ ನೌಕೆ. ಹೀಗೆ ಆಶೆ ನಿರಾಶೆ, ಸಾವು ನೋವು, ದುಃಖಗಳ ಪರಂಪರೆಯಲ್ಲಿ ತೂಗಾಡುತ್ತಿರುವ, ವೈವಿಧ್ಯ ಪೂರ್ಣತೆಯಿಂದ ತುಂಬಿ ತುಳುಕಾಡುತ್ತಿರುವ ಜಗತ್ತಿನ ವೈವಿಧ್ಯಗಳ ಅಂತರಾಳದಲ್ಲಿ ಪ್ರವಹಿಸುತ್ತಿರುವ ಏಕವನ್ನು ಯಾರು ಈಕ್ಷಿಸುವರೋ, ಈ ಜನ್ಮ ಮೃತ್ಯುಗಳ ವಿಶ್ವಪಾಕದಲ್ಲಿ ಯಾರು ಅನಂತಾತ್ಮನನ್ನು ಕಂಡುಕೊಳ್ಳುವರೋ, ಈ ಜಡವಾದ ಅಜ್ಞಾನಮಯವಾದ ಲೋಕರಂಗದಲ್ಲಿ ಅಕಲ್ಪನಾತೀತವಾದ ಪ್ರಕಾಶ ಪೂರ್ಣ ಜ್ಯೋತಿಯನ್ನು ಯಾರು ಕಾಣುವರೋ, ಅವರಿಗೆ ಮಾತ್ರ ಆ ಸಚ್ಚಿದಾನಂದ ಶಾಂತಿ ಲಭ್ಯವಾಗುವುದು.

ಮಾನವ ಜೀವನವೆಂಬ ನೌಕೆ ಎಡೆತಡೆಯಿಲ್ಲದೆ ಸಾಗಬೇಕಾದರೆ ಅದಕ್ಕೊಂದು ಸುಭದ್ರ ತಳಹದಿ ಆಗತ್ಯ. ಆ ತಳಹದಿಯನ್ನು ಭದ್ರಪಡಿಸಲು ಪ್ರಯತ್ನಿಸೋಣ.

"ಈ ವಿಶ್ವ ಒಂದು ಗಾಜಿನ ದರ್ಪಣ. ನಾವು ನಕ್ಕರೆ ಅದೂ ನಗುವುದು; ಅತ್ತರೆ ಅದೂ ಅಳುವುದು. ವಿಶ್ವವನ್ನು ಕೆಂಪು ಗಾಜಿನ ಮೂಲಕ ನೋಡಿದರೆ ಅದು ಕೆಂಪಾಗಿ ಕಾಣುವುದು. ಹೀಗೆ ಯಾವ ಬಣ್ಣದ ಗಾಜಿನ ಮೂಲಕ ನೋಡಿತೋ ಆ ಬಣ್ಣವಾಗಿ ಅದು ನಮಗೆ ಗೋಚರಿಸುವುದು." ಮಹಾತ್ಮರೆನಿಸಿಕೊಂಡವರು ಈ ಜಗತ್ತಿನಲ್ಲಿ ಬಾಳುತ್ತಾರೆ. ಆದರೆ ಇಲ್ಲಿಯ ಕೊಳೆಗಳೊಡನೆ ಅವರ ಸಂಪರ್ಕ ಇರುವುದಿಲ್ಲ. ಬದಲಾಗಿ ಅವರಿಂದ ಜಗತ್ತು ಸ್ವಚ್ಛವಾಗುವುದು. ಕಮಲ ದಳದ ಮೇಲಣ ನೀರ ಹನಿಯಂತೆ ಮಹಾಪುರುಷರು ತಮ್ಮ ಜೀವನವನ್ನು ಕಳೆಯುತ್ತಾರೆ.

(ಎಂಟನೇ ಪುಟ ನೋಡಿರಿ)



ಜನತೆಯ ಸೌಕರ್ಯಕ್ಕಾಗಿ ಹೊಸ ಬಗೆಯ ಸೇವಿಂಗ್ಸ್ ಬ್ಯಾಂಕ್ ಸೌಲಭ್ಯಗಳು

ಪ್ರಾಯಕ್ಕೆ ಬಾರದ ಮಕ್ಕಳು ಕೂಡಾ 12 ವರ್ಷಕ್ಕೆ ಮೇಲ್ಪಟ್ಟಿದ್ದರೆ ತಮ್ಮ ಹೆಸರಿನಲ್ಲಿಯೇ ಸೇವಿಂಗ್ಸ್ ಬ್ಯಾಂಕ್ ಖಾತೆಗಳನ್ನು ತೆರೆಯಬಹುದು.

ನೀವು ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ ಒಂದು ವರ್ಷದಲ್ಲಿ 150 ಬಾರಿ ಹಣವನ್ನು ತೆಗೆಯಬಹುದು.

ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ ಎಂದು ಬೇಕಾದರೂ ಎಷ್ಟು ಮೊತ್ತವನ್ನಾದರೂ ಯಾವುದೇ ಪೂರ್ವ ಸೂಚನೆಯಿಲ್ಲದೆ ಹಿಂದೆ ಪಡೆಯಬಹುದು.

ಸೇವಿಂಗ್ಸ್ ಬ್ಯಾಂಕ್ ಖಾತೆಯ ಮೇಲೆ ಅರ್ಧವಾರ್ಷಿಕ ಖರ್ಚು ವೆಚ್ಚಗಳನ್ನು ವಸೂಲು ಮಾಡಲಾಗುವುದಿಲ್ಲ.

ಸೇವಿಂಗ್ಸ್ ಖಾತೆಯ ಮೂಲಕ ಧರ್ಮಾರ್ಥವಾಗಿ ಹಣವನ್ನೂ ರವಾನಿಸಬಹುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಸೇವಿಂಗ್ಸ್ ಖಾತೆ ತೆರೆಯಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿವೆ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿದೆ.

...............ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ

ಶೈಕ್ಷಣಿಕ ಕ್ಷೇತ್ರ

ಭಾರತ-ಅಮೆರಿಕೆಗಳ

ಇನೆಲ್ಲ ಪ್ರಾರಂಭವಾದದ್ದು ಬೆಂಗಳೂರಿನ ನೃತ್ಯಪ್ರದರ್ಶನವೊಂದರಿಂದಾಗಿ. ಆ ಪ್ರದರ್ಶನ ನೋಡ ಬಂದವರಲ್ಲಿ ಒಂದು ಅಮೆರಿಕನ್ ಕಾಲೇಜಿನ ಅಧ್ಯಕ್ಷನೂ ಇದ್ದನು ನರ್ತಕಿಯ ಬಣ್ಣಬಣ್ಣದ ಅಲಂಕಾರ ಮತ್ತು ಭಾರತದ ಶಾಸ್ತ್ರೀಯ ನೃತ್ಯದ ನಾನಾ ಭಾವ ಭಂಗಿಗಳನ್ನು ಕಂಡು ಅವನು ಅತ್ಯಂತ ಪ್ರಸನ್ನನಾದನು. ಪ್ರದರ್ಶನಾನಂತರ ಅವನು ನರ್ತಕಿಯನ್ನು ಕಂಡು ಮಾತನಾಡಿದನು. ಆಕೆ ಯೊಬ್ಬ ಕಾಲೇಜ್ ವಿದ್ಯಾರ್ಥಿನಿಯೆಂದು ಮನವರಿಕೆಯಾಯಿತು. ಆಗ, ಆಕೆಯ ಕಾಲೇಜನ್ನು ಸುತ್ತಾಡಿ ಬರಬೇಕು ಎನ್ನುವ ಯೋಜನೆ ಅಮೆರಿಕನ್ ಮಹಿಳಾ ಕಾಲೇಜ್ ಅಧ್ಯಕ್ಷನ ಮನಸ್ಸಿನಲ್ಲಿ ಮೂಡಿತು. ಭಾರತೀಯ ಕಾಲೇಜುಗಳಲ್ಲಿ ಯಾವ ರೀತಿ ಕೆಲಸ ಸಾಗುತ್ತಿದೆ? ಮಹಿಳಾ ಶಿಕ್ಷಣಕ್ಕಾಗಿ ಇಲ್ಲಿ ಯಾವ ಯಾವ ವ್ಯವಸ್ಥೆಗಳಿವೆ ಎಂಬುದನ್ನು ತಿಳಿಯುವ ತವಕ ಆತನಲ್ಲಿತ್ತು.

ಮರುದಿನವೇ ವರ್ಜೀನಿಯಾದ ಲಿಂಚ್‌ಬರ್ಗ್‌ನ ರೇಂಡೋಲ್ಫ್—ಮೆಕೋನ್ ಮಹಿಳಾ ಕಾಲೇಜಿನ ಅಧ್ಯಕ್ಷ ಡಾ|| ವಿಲಿಯಂ ಎಫ್. ಕ್ವಿಲಿಯನ್‌ರು ಬೆಂಗಳೂರಿನ ಮಹಾರಾಣಿ ಕಾಲೇಜಿಗೆ ಭೆಟ್ಟಿಯಿತ್ತರು. ಅಲ್ಲಿ ಪ್ರಿನ್ಸಿಪಲ್ ಶ್ರೀಮತಿ ಎಚ್. ಎಂ. ಪಾರ್ವತಮ್ಮ ಮತ್ತು ಇತರ ಪ್ರಾಧ್ಯಾಪಕರೊಡನೆ ಹಾಗೂ ವಿದ್ಯಾರ್ಥಿನಿಯರೊಡನೆ ಮಾತುಕತೆ ನಡೆಸಿದರು.

ಒಂದರ ಹಿಂದೆ ಮತ್ತೊಂದರಂತೆ ಘಟನೆಗಳು ನಡೆಯುತ್ತ ಹೋದುವು. ಒಂದು ವರ್ಷಾನಂತರ ಅವರ ಆಶಯದಿಂದ ಹಲವು ಅಮೆರಿಕನ್ ಮಹಿಳಾ ಕಾಲೇಜ್‌ಗಳ ಪ್ರಸಾರಕರ ಒಂದು ದಳ ಭಾರತಕ್ಕೆ ಆಗಮಿಸಿತು. ಇದರಿಂದಾಗಿ ೧೩ ಅಮೆರಿಕನ್ ಮಹಿಳಾ ಕಾಲೇಜ್ ಮತ್ತು ೬ ಭಾರತೀಯ ಮಹಿಳಾ ಕಾಲೇಜ್ (ಇವುಗಳಲ್ಲಿ ಬೆಂಗಳೂರಿನ ಮಹಾರಾಣಿ ಕಾಲೇಜ್ ಒಂದು) ಗಳ ಪ್ರಾಧ್ಯಾಪಕರ ನಡುವೆ ಒಂದು ವಿನಿಮಯ ಕಾರ್ಯಕ್ರಮ ಆರಂಭವಾಯಿತು.

ಕಳೆದ ವರ್ಷ ಈ ವಿನಿಮಯ ಕಾರ್ಯಕ್ರಮದ ಎರಡನೆಯ ವರ್ಷವಾಗಿತ್ತು. ಭಾರತದ ಎರಡು ಕಾಲೇಜುಗಳ ಪ್ರಿನ್ಸಿಪಾಲರು, ಶ್ರೀಮತಿ ಪಾರ್ವತಮ್ಮ ಮತ್ತು ಹೈದರಾಬಾದಿನ ಯುನಿವರ್ಸಿಟಿ ಕಾಲೇಜ್ ಫಾರ್ ವಿಮೆನ್‌ನ ಪ್ರಿನ್ಸಿಪಲ್ ಡಾ|| ಶ್ರೀಮತಿ ಶ್ರೀದೇವಿಯವರು, ಪ್ರಮುಖ ಅಮೆರಿಕನ್ ಮಹಿಳಾ ಕಾಲೇಜುಗಳಲ್ಲಿ ವ್ಯವಹೃತವಾಗಿರುವ ಶೈಕ್ಷಣಿಕ ಮತ್ತು ವ್ಯವಸ್ಥಾ ವಿಧಾನಗಳನ್ನು ಅಧ್ಯಯನ ಮಾಡಲು ಅಮೆರಿಕೆಯ ಸಂಚಾರ ಮಾಡಿದರು.

ತನ್ನ ಯಾತ್ರೆ ಮುಗಿಸಿ ಮಹಾರಾಣೀ ಕಾಲೇಜಿಗೆ ಮರಳಿದ ಬಳಿಕ ಶ್ರೀಮತಿ ಪಾರ್ವತಮ್ಮಾ ಹೀಗೆ ಅಭಿಪ್ರಾಯಪಟ್ಟರು: ಈ ಸಂಚಾರದಿಂದ ನನಗೆ ಅಮೆರಿಕನ್ ಜೀವನ ಪದ್ಧತಿಯ ಬಗ್ಗೆ ವಿಶೇಷ ಪರಿಚಯ ದೊರೆಯಿತು. ಅಮೆರಿಕನ್ ಕಾಲೇಜುಗಳ ನಿರೀಕ್ಷಣೆ ಮಾಡಿ ವಿಚಾರ ವಿನಿಮಯದ ವೇಳೆ, ಸ್ವದೇಶದ ವಿವಿಧ ಶಿಕ್ಷಣ ವಿಧಾನಗಳ ಮೂಲ್ಯಾಂಕನ ಮಾಡುವ ಅವಕಾಶ ಪ್ರಾಪ್ತವಾಯಿತು.

ಶ್ರೀಮತಿ ಪಾರ್ವತಮ್ಮನವರ ವಿಚಾರದಲ್ಲಿ ಹೊಸ ವಿಚಾರ ಮತ್ತು ವಿಧಾನಗಳನ್ನು ಒಂದುಗೂಡಿಸುವ ಉದ್ದೇಶದಿಂದ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸುವವರ ಶಿಕ್ಷಣ ಪ್ರಣಾಲಿಯ ಈ ಸೂಕ್ಷ್ಮ ಮತ್ತು ಆಲೋಚನಾತ್ಮಕ ಮೂಲ್ಯಾಂಕನವು ವಿನಿಮಯ ಕಾರ್ಯಕ್ರಮದಿಂದ ಪ್ರಾಪ್ತವಾಗುವ ಬಹಳ ದೊಡ್ಡ ಲಾಭ. ಅಮೆರಿಕನ್ ಮತ್ತು ಭಾರತೀಯ ಶಿಕ್ಷಾ ಪ್ರಣಾಲಿಗಳ ಶ್ರೇಷ್ಠತಮ ವಿಶಿಷ್ಟತೆಗಳ ಸಮಾಗಮವು ಅತ್ಯಂತ ಅಪೇಕ್ಷಣೀಯವೆನ್ನುತ್ತಾರೆ—ಶ್ರೀಮತಿಯವರು.

'ನಾನು ಅಮೆರಿಕದ ಪರೀಕ್ಷಾ ಪ್ರಣಾಲಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದೆನು. ಇಲ್ಲಿ ಆಂತರಿಕ ಮೂಲ್ಯಾಂಕನದ ನಿಯಮವನ್ನು ಪಾಲಿಸಲಾಗುತ್ತದೆ' ಎಂದರು ಪಾರ್ವತಮ್ಮ. ಒಂದು ವೇಳೆ ಅಮೆರಿಕನ್ ಶಿಕ್ಷಣ ಸಂಸ್ಥೆಗಳಲ್ಲಿ ಈ ಪ್ರಣಾಳಿಯು ಉತ್ತಮ ರೀತಿಯಲ್ಲಿ ಕಾರ್ಯಕೃತವಾಗುತ್ತಿರುವುದಾದರೂ ಭಾರತದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ, ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅತ್ಯಧಿಕವಿರುತ್ತದೆ, ಮತ್ತು ಒಂದು ಸಮಾನ ಮಾಪದಂಡವನ್ನು ಸ್ಥಿರಗೊಳಿಸುವ ಆವಶ್ಯಕತೆಯೂ ಇದೆ—ಅಮೆರಿಕನ್ ಪ್ರಣಾಲಿಯು ಬಹುಮಟ್ಟಿಗೆ ಉಪಯುಕ್ತವೆನಿಸಲಾರದು. ಹಾಗಿದ್ದರೂ ಶಿಕ್ಷಕರು ಬಾಹ್ಯ ಪರೀಕ್ಷೆಗಳಿಗೆ ಪೂರಕವಾಗಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಆಂತರಿಕ ಮೂಲ್ಯಾಂಕನ ಮಾಡಲು ಹೆಚ್ಚು ಪ್ರಯತ್ನ ಮಾಡಬೇಕು. ಭಾರತದ ಇಂದಿನ ಶಿಕ್ಷಣ ಪ್ರಣಾಲಿಯಲ್ಲಿ ಟ್ಯುಟೋರಿಯಲ್ ಪ್ರಣಾಲಿಯು ಅಧಿಕ ಉಪಯುಕ್ತವಾಗಬಲ್ಲುದು. ಏಕೆಂದರೆ, ಇದರಿಂದ ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ಅಧಿಕ ವೈಯಕ್ತಿಕ ಗಮನ ನೀಡುವುದು

ಇದರಿಂದ ಶಿಕ್ಷಣದ ಪ್ರ

ಭಾರತದಲ್ಲಿ ಅಮೆರಿಕೆಯ
ರೆಡ್ಡಿಕ್ ಭಾರತದ ಉಪರಾಷ್ಟ್ರ
ಭಾರತದಲ್ಲಿ ಅಮೆರಿಕನ್ ರಾಯಭಾ
ಹದಿನೈದು ವರ್ಷಗಳ ದೀರ್ಘ ಸೇ

ಸಾಧ್ಯವಾಗುವುದು-ಎನ್ನುತ್ತಾರೆ ಇವರು.

ಭಾರತೀಯ ಮಹಿಳಾ ವಿದ್ಯಾವಿದರು ಮಹಿಳಾ ಕಾಲೇಜುಗಳ ದೈನಿಕ ಜೀವನದ ವಿವಿಧ ವಿಚಾರಗಳಿಂದ ಅತ್ಯಂತ ಪ್ರಭಾವಿತರಾದರು. ಅಲ್ಪ ಕಾಲ ಉದ್ಯೋಗ ಮಾಡುತ್ತ ತಮ್ಮ ಕಾಲೇಜು ಶಿಕ್ಷಣವ



ಶ್ರೀಮತಿ ಎಚ್. ಎಂ. ಪಾರ್ವತಮ್ಮನವರ ಅಧ್ಯಕ್ಷತೆಯಲ್ಲಿ ಅವರ ಮಹಾರಾಣಿ ಕಾಲೇಜಿನಲ್ಲಿ ಅರ್ಥಶಾಸ್ತ್ರ ಕಲಿಸುವ ಶಿಕ್ಷಕರು ಸಮಾವೇಶಗೊಂಡಿದ್ದಾರೆ. ಬಲಗಡೆ ಬಾಲ್ಟಿಮೋರ್ ಕಾಲೇಜಿನ ಪ್ರೊ| ಡಾ|| ಎಫ್. ಜಿ. ರಿಯಾಸ್ ಕುಳಿತಿದ್ದಾರೆ. ಇವರು ಭಾರತ ಮತ್ತು ಅಮೆರಿಕನ್ ಕಾಲೇಜ್‌ಗಳ ವಿನಿಮಯ ಕಾರ್ಯಕ್ರಮದಂತೆ ಭಾರತಕ್ಕೆ ಬಂದಿದ್ದಾರೆ.



ಅಮೆರಿಕದ ಕೆಲವ ಕಾ
ಸಂದರ್ಶಿಸಿದ ಸಂದರ್ಭದ ಚಿತ್ರ
ಎಡದಿಂದ ಬಲಕ್ಕೆ ಶ್ರೀಮತಿಯರಾದ
ಕ್ಲೆಮೆಂಟ್ ಜೆ. ಜಬ್ಲೋಕಿ.

ವಿನಿಮಯ ಕಾರ್ಯಕ್ರಮ

ಷುವ ಸಾಧ್ಯತೆಯಿದೆ.

ಶನ್ನಿನ ಡೈರೆಕ್ಟರ್ ಡಾ| ಓಲಿವ್ ಸೇನರೊಡನೆ ಮಾತಾಡುತಿದ್ದಾರೆ. ಬಲ ಪಕ್ಕದಲ್ಲಿ ಕಾಣಬಹುದು. ಜನವರಿಯಲ್ಲಿ ನಿವೃತ್ತರಾದರು.

ನ್ನು ಪೂರ್ಣ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯೇ ಇಲ್ಲಿ ಹೆಚ್ಚು. ಇದಕ್ಕಾಗಿ ಕಾಲೇಜುಗಳಲ್ಲಿಯೂ ಅವರಿಗೆ ವಿಶೇಷ ವ್ಯವಸ್ಥೆಗಳಿವೆ. ಉದ್ಯೋಗಾವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸೂಚನೆ ಕೊಡುವ ಒಂದು ಸಂಪರ್ಕ ವಿಭಾಗವೂ ಕಾಲೇಜಿನಲ್ಲಿದೆ.

ಅಮೆರಿಕೆಯಲ್ಲಿ ವಿದ್ಯಾರ್ಥಿನಿಯರು ಸಾಮಾಜಿಕ ಮತ್ತು ರಾಜನೈತಿಕ ಕಾರ್ಯಗಳಲ್ಲಿ ಬಹಳ ಆಸಕ್ತಿ ವಹಿಸುತ್ತಾರೆ. ಅವರಲ್ಲಿ ಕೆಲವರು ಸ್ಥಾನೀಯ ನಾಗರಿಕ ಆಂದೋಲನಗಳಲ್ಲಿ ಸಕ್ರಿಯ ಭಾಗವಹಿಸುತ್ತಾರೆ.

ಕಾಲೇಜುಗಳಲ್ಲಿ ಸುಸಂಘಟಿತ ವಿದ್ಯಾರ್ಥಿ ಸರಕಾರಗಳು ಶಾಸನ ಸಂಬಂಧದ ಯೋಜನೆಗಳು ಮತ್ತು ವಿದ್ಯಾರ್ಥಿ ಸಮಸ್ಯೆಗಳನ್ನು ವಿಚಾರಿಸುತ್ತವೆ. ಕಾಲೇಜ್ ಜೀವನದಲ್ಲಿ ಅಶಾಂತತೆ ಮತ್ತು ಅಸಂತೋಷಗಳನ್ನು ಉತ್ಪನ್ನ ಮಾಡುವ ಅನೇಕ ಸಮಸ್ಯೆಗಳನ್ನು ಇವು ಬಿಡಿಸುತ್ತವೆ.

ವಿದ್ಯಾರ್ಥಿನಿ ನಿಲಯಗಳಲ್ಲಿ ವಿದ್ಯಾರ್ಥಿನಿಯರು ಸಾಮಾನ್ಯವಾಗಿ ನಾಲ್ಕು ನಾಲ್ಕರಾಗಿ ಇರುತ್ತಾರೆ. ಇವರು ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳಲು ಅನುಕೂಲವಾಗುವಂತೆ ಅಲ್ಲೇ ಪಾಕಶಾಲೆಯೂ ಇದೆ. ಇದರಿಂದಾಗಿಯೇ ಮುಂದವರು ಮನೆ ನಡೆಸುವಲ್ಲಿ ಸಶಕ್ತರಾಗುತ್ತಾರೆ. ಶ್ರೀಮತಿ ಪಾರ್ವತಮ್ಮ ಇದರಿಂದ ತುಂಬ ಪ್ರಸನ್ನರಾಗಿದ್ದಾರೆ.

ಅಮೆರಿಕನ್ ಜನತೆಯೊಡನೆಯೂ ಶ್ರೀಮತಿಯವರ ಸಂಪರ್ಕವಾಗಿತ್ತು. ಈ ಸಂಬಂಧದಲ್ಲಿ ಅವರು ಜನತೆಯ ಎರಡು ವೈಶಿಷ್ಟ್ಯಗಳನ್ನು ಎತ್ತಿ ತೋರಿಸುತ್ತಾರೆ. ಮೊದಲನೆಯದಾಗಿ, ಅಮೆರಿಕನರು ಪ್ರಗತಿ ಹೊಂದುವ ತೀವ್ರ ಆಕಾಂಕ್ಷೆಯುಳ್ಳವರು. ಎರಡನೆಯದಾಗಿ, ಅತಿಥಿಗಳನ್ನು ಮೈತ್ರಿಪೂರ್ಣ ವ್ಯವಹಾರದಿಂದ ತೃಪ್ತಿಗೊಳಿಸುವವರು. ಅವರೆನ್ನುತ್ತಾರೆ— ಅತಿಥಿಗಳಿಗೆ ಯುಕ್ತಿ ಮಾಡಿಸುವ ಮತ್ತು ಅಂತರಾಷ್ಟ್ರೀಯ ಸದ್ಭಾವನೆ ಬೆಳೆಸುವ ಉದ್ದೇಶದಿಂದ ತಮ್ಮ ಮನೆಗಳಲ್ಲಿ ಅವರ ಆತಿಥ್ಯಕ್ಕಾಗಿ ತಮ್ಮ ಸೇವೆಯನ್ನು ಸಮರ್ಪಣೆ ಮಾಡುವ ಪ್ರವೃತ್ತಿ ಅನೇಕ ಅಮೆರಿಕನ್ ಮಹಿಳೆಯರಲ್ಲಿದೆ. ಇವರಿಂದ ನಾನು ಪ್ರಭಾವಿತಳಾಗಿದ್ದೇನೆ.'

ವಿಜ್ಞಾನ ಕ್ಷೇತ್ರದಲ್ಲಿ ವಿಶಿಷ್ಟ ಅಧ್ಯಯನ ಮಾಡುವ ಮಹಿಳೆಯರ ಸಂಖ್ಯೆ ಇಲ್ಲಿ ಅಧಿಕವಿರುವುದಿಲ್ಲ; ಅವರು ಸ್ನಾತಕೋತ್ತರ ಅಧ್ಯಯನದಲ್ಲೂ ವಿಶೇಷ ಅಭಿರುಚಿ ತೋರಿಸುತ್ತಿಲ್ಲ. ಆದುದರಿಂದಲೇ ಮಹಿಳಾ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಅಧ್ಯಕ್ಷ ಪುರುಷರಾಗಿಯೇ ಇರುತ್ತಾನೆ. ಪ್ರಾಧ್ಯಾಪಕರಲ್ಲಿ ಕೂಡ ಪುರುಷರದ್ದೇ ಬಹುಮತವಿದೆ.

೧೯೬೫ರಲ್ಲಿ ವಿನಿಮಯ ಕಾರ್ಯಕ್ರಮದಂತೆ ಮಹಾರಾಣಿ ಕಾಲೇಜ್, ಬೆಂಗಳೂರಿನಲ್ಲಿ ಇಬ್ಬರು ಅಮೆರಿಕನ್ ಪ್ರೊಫೆಸರರು ಅಧ್ಯಾಪನ ಕಾರ್ಯಕ್ಕಾಗಿ ಬಂದಿದ್ದಾರೆ. ಇವರಿಬ್ಬರೂ ಪುರುಷರು. ಏಳು ಜನ ಭಾರತೀಯ ಶಿಕ್ಷಕರು ಅಮೆರಿಕೆಯ ಮಹಿಳಾ ಕಾಲೇಜುಗಳಲ್ಲಿ ಅಧ್ಯಾಪನ ಕಾರ್ಯಕ್ಕಾಗಿ ಅಮೆರಿಕಕ್ಕೆ ಹೋಗಲಿರುವರು.

ಸ್ಫಟಿಕ ಶಿಲೆಗೆ ಕೆತ್ತನೆ ಕೆಲಸ ಅರ್ಥ ಕೊಡುವಂತೆ ಮಾನವ ಆತ್ಮಕ್ಕೆ ವಿದ್ಯೆ ಅರ್ಥ ಕೊಡುತ್ತದೆ. ವಿದ್ಯೆಯ ಕೆತ್ತನೆ ಕೆಲಸದಿಂದಲೇ ಸಾಮಾನ್ಯ ಮಾನವನು ತತ್ವಜ್ಞಾನಿ, ಸನ್ಯಾಸಿ, ಧೀರ, ಯಾ ಸತ್ಪುರುಷನಾಗುತ್ತಾನೆ.

—ಎಡಿಸನ್.

ಮಾತನ್ನು ಶರೀರಕ್ಕೆ ಹೋಲಿಸಿದರೆ ಅದರ ಹಿನ್ನೆಲೆಯ ಚಿಂತನೆ, ಭಾವನೆಗಳೇ ಅದರ ಆತ್ಮವೆನ್ನಬಹುದು. ಅದನ್ನು ಕಾರ್ಯರೂಪದಲ್ಲಿ ಕಾಣುವುದೇ ಅದರ ಜೀವನ.

—ಸಿಮ್ಮನ್ಸ್.

ಮಳೆ ಬಿಸಿಲುಗಳ ಸಮ್ಮಿಶ್ರಣದಿಂದ ಗಿಡವು ಚಿಗುರಿ ಮೇಲೇಳುವಂತೆ ನಗು ಮತ್ತು ಅಳುಗಳ ಪರಿಪಾಕದಿಂದ ಪ್ರೇಮ ಬೆಳೆಯುತ್ತದೆ.

—ರಿಕ್ಟರ್.

ರು ಇತ್ತೀಚೆಗೆ ಭಾರತಕ್ಕೆ ಬಂದಾಗ ಶ್ರೀಮತಿ ಇಂದಿರಾ ಗಾಂಧಿಯವರನ್ನು ರಿಕದ ರಾಯಭಾರಿಯ ಪತ್ನಿ ಶ್ರೀಮತಿ ಚೆಸ್ಟರ್ ಬೌಲ್ಸ ಕೂಡ ಇರುವರು. ನ್ ಫೀಲ್ಡ್, ಬೌಲ್ಸ, ಇಂದಿರಾ ಗಾಂಧಿ, ಹೇರಿಸ್ ಬಿ. ಮೆಡೋನೆಲ್ ಮತ್ತು

ಉಳಿತಾಯಕ್ಕೆ ವಯಸ್ಸಿನ ನಿರ್ಬಂಧವೇನೂ ಇಲ್ಲ



ನಿಮಗಾಗಿರುವ ಬ್ಯಾಂಕು ವಿಜಯಾ ಬ್ಯಾಂಕ್
ನಿಮ್ಮ ಸೇವಿಂಗ್ಸ್ ಲೆಕ್ಕದಲ್ಲಿಡುವ ಹಣಕ್ಕೆ ಶೇ. 4½
ಮತ್ತು ಫಿಕ್ಸೆಡ್ ಡಿಪಾಸಿಟ್ಟುಗಳ ಮೇಲೆ ಶೇ. 8ರ
ವರೆಗೆ ಬಡ್ಡಿ ದೊರೆಯುವುದು
ಇಂದಿನಿಂದಲೇ ಹಣ ಉಳಿಸಿ
ನಿಮ್ಮ ಹತ್ತಿರದ ಶಾಖೆಯಲ್ಲಿ ವಿವರಗಳನ್ನು ಪಡೆಯಿರಿ:

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ 'ವಿಜಯಾ ಬ್ಯಾಂಕ್ ಬಿಲ್ಡಿಂಗ್'
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು-3

VB-25-K

ಮೈಸೂರು, ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ 55 ಶಾಖೆಗಳು.
ಮೈಸೂರು ರಾಜ್ಯದಲ್ಲಿಯ ಶಾಖೆಗಳು:

ಬೆಂಗಳೂರು— 1. ಮಲ್ಲೇಶ್ವರಂ 2. ಅಲ್ಸೂರು 3. ಕೆಂಪೇಗೌಡ ರೋಡ್ * ಮಂಗಳೂರು— 1. ಲೈಟ್ ಹೌಸ್ ಹಿಲ್ ರೋಡ್, 2. ಹಂಪನಕಟ್ಟೆ * ಭಟ್ಕಳ * ಬ್ರಹ್ಮಾವರ * ಬೈಂದೂರು * ಚಾಮರಾಜನಗರ * ಚನ್ನಪಟ್ಟಣ * ಕುಂದಾಪುರ * ಧಾರವಾಡ * ದೊಡ್ಡಬಳ್ಳಾಪುರ * ಗದಗ * ಗೋಣಿಕೊಪ್ಪಲ * ಹುಬ್ಬಳ್ಳಿ * ಕಾರ್ಕಳ * ಕನಕಪುರ * ಕಾಪು * ಕೋಲಾರ * ಕೊಳ್ಳೆಗಾಲ * ಕೃಷ್ಣರಾಜಪೇಟೆ * ಮದ್ದೂರು * ಮಾಗಡಿ * ಮುಲವಳ್ಳಿ * ಮಡಿಕೇರಿ * ಮೂಡಿಗೆರೆ * ಮೈಸೂರು * ನಂಜನಗೂಡು * ನೆಲಮಂಗಲ * ಪಾಂಡವಪುರ * ಪುತ್ತೂರು * ರಾಮನಗರ * ಉಡುಪಿ.

ಶೈಕ್ಷಣಿಕ ಕ್ಷೇತ್ರ

ಭಾರತ-ಅಮೆರಿಕೆಗಳ

ಇದರಿಂದ ಶಿಕ್ಷಣದ ಪ್ರ

ಇವೆಲ್ಲ ಪ್ರಾರಂಭವಾದದ್ದು ಬೆಂಗಳೂರಿನ ನೃತ್ಯಪ್ರದರ್ಶನವೊಂದರಿಂದಾಗಿ. ಆ ಪ್ರದರ್ಶನ ನೋಡ ಬಂದವರಲ್ಲಿ ಒಂದು ಅಮೆರಿಕನ್ ಕಾಲೇಜಿನ ಅಧ್ಯಕ್ಷನೂ ಇದ್ದನು ನರ್ತಕಿಯ ಬಣ್ಣಬಣ್ಣದ ಅಲಂಕಾರ ಮತ್ತು ಭಾರತದ ಶಾಸ್ತ್ರೀಯ ನೃತ್ಯದ ನಾನಾ ಭಾವ ಭಂಗಿಗಳನ್ನು ಕಂಡು ಅವನು ಅತ್ಯಂತ ಪ್ರಸನ್ನನಾದನ ಪ್ರದರ್ಶನಾನಂತರ ಅವನು ನರ್ತಕಿಯನ್ನು ಕಂಡು ಮಾತನಾಡಿದನು. ಆಕೆಯೊಬ್ಬ ಕಾಲೇಜ್ ವಿದ್ಯಾರ್ಥಿನಿಯೆಂದು ಮನವರಿಕೆಯಾಯಿತು ಆಗ, ಆಕೆಯ ಕಾಲೇಜನ್ನು ಸುತ್ತಾಡಿ ಬರಬೇಕು ಎನ್ನುವ ಯೋಚನೆ ಅಮೆರಿಕನ್ ಮಹಿಳಾ ಕಾಲೇಜ್ ಅಧ್ಯಕ್ಷನ ಮನಸ್ಸಿನಲ್ಲಿ ಮೂಡಿತು ಭಾರತೀಯ ಕಾಲೇಜುಗಳಲ್ಲಿ ಯಾವ ರೀತಿ ಕೆಲಸ ಸಾಗುತ್ತದೆ/ ಮಹಿಳಾ ಶಿಕ್ಷಣಕ್ಕಾಗಿ ಇಲ್ಲಿ ಯಾವ ಯಾವ ವ್ಯವಸ್ಥೆಗಳಿವೆ ಎಂಬುದನ್ನು ತಿಳಿಯುವ ತವಕ ಆತನಲ್ಲಿತ್ತು.

ಮರುದಿನವೇ ವರ್ಜೀನಿಯಾದ ಲಿಂಚ್‌ಬರ್ಗ್‌ನ ರೇಂಡೋಲ್ಫ್—ಮೆಕೋನ್ ಮಹಿಳಾ ಕಾಲೇಜಿನ ಅಧ್ಯಕ್ಷ ಡಾ. ವಿಲಿಯಂ ಎಫ್. ಕ್ವಿಲಿಯನ್‌ರು ಬೆಂಗಳೂರಿನ ಮಹಾರಾಣಿ ಕಾಲೇಜಿಗೆ ಭೆಟ್ಟಿಯಿತ್ತರು. ಅಲ್ಲಿ ಪ್ರಿನ್ಸಿಪಲ್ ಶ್ರೀಮತಿ ಎಚ್. ಎಂ. ಪಾರ್ವತಮ್ಮ ಮತ್ತು ಇತರ ಪ್ರಾಧ್ಯಾಪಕರೊಡನೆ ಹಾಗೂ ವಿದ್ಯಾರ್ಥಿನಿಯರೊಡನೆ ಮಾತುಕತೆ ನಡೆಸಿದರು.

ಒಂದರ ಹಿಂದೆ ಮತ್ತೊಂದರಂತೆ ಘಟನೆಗಳು ನಡೆಯುತ್ತ ಹೋದುವು. ಒಂದು ವರ್ಷಾನಂತರ ಅವರ ಆಶಯದಿಂದ ಹಲವು ಅಮೆರಿಕನ್ ಮಹಿಳಾ ಕಾಲೇಜ್‌ಗಳ ಪ್ರಸಾರಕರ ಒಂದು ದಳ ಭಾರತಕ್ಕೆ ಆಗಮಿಸಿತು ಇದರಿಂದಾಗಿ ೧೩ ಅಮೆರಿಕನ್ ಮಹಿಳಾ ಕಾಲೇಜ್ ಮತ್ತು ೬ ಭಾರತೀಯ ಮಹಿಳಾ ಕಾಲೇಜ್ (ಇವುಗಳಲ್ಲಿ ಬೆಂಗಳೂರಿನ ಮಹಾರಾಣಿ ಕಾಲೇಜ್ ಒಂದು) ಗಳ ಪ್ರಾಧ್ಯಾಪಕರ ನಡುವ ಒಂದು ವಿನಿಮಯ ಕಾರ್ಯಕ್ರಮ ಆರಂಭವಾಯಿತು.

ಕಳೆದ ವರ್ಷ ಈ ವಿನಿಮಯ ಕಾರ್ಯಕ್ರಮದ ಎರಡನೆಯ ವರ್ಷವಾಗಿತ್ತು ಭಾರತದ ಎರಡು ಕಾಲೇಜುಗಳ ಪ್ರಿನ್ಸಿಪಾಲರು, ಶ್ರೀಮತಿ ಪಾರ್ವತಮ್ಮ ಮತ್ತು ಹೈದರಾಬಾದಿನ ಯುನಿವರ್ಸಿಟಿ ಕಾಲೇಜ್ ಫಾರ್ ವಿಮೆನ್‌ನ ಪ್ರಿನ್ಸಿಪಲ್ ಡಾ| ಶ್ರೀಮತಿ ಶ್ರೀದೇವಿಯವರು, ಪ್ರಮುಖ ಅಮೆರಿಕನ್ ಮಹಿಳಾ ಕಾಲೇಜುಗಳಲ್ಲಿ ವ್ಯವಹೃತವಾಗಿರುವ ಶೈಕ್ಷಣಿಕ ಮತ್ತು ವ್ಯವಸ್ಥಾ ವಿಧಾನಗಳನ್ನು ಅಧ್ಯಯನ ಮಾಡಲು ಅಮೆರಿಕೆಯ ಸಂಚಾರ ಮಾಡಿದರು

ತನ್ನ ಯಾತ್ರೆ ಮುಗಿಸಿ ಮಹಾರಾಣೀ ಕಾಲೇಜಿಗೆ ಮರಳಿದ ಬಳಿಕ ಶ್ರೀಮತಿ ಪಾರ್ವತಮ್ಮಾ ಹೀಗೆ ಅಭಿಪ್ರಾಯಪಟ್ಟರು. ಈ ಸಂಚಾರದಿಂದ ನನಗೆ ಅಮೆರಿಕನ್ ಜೀವನ ಪದ್ಧತಿಯ ಬಗ್ಗೆ ವಿಶೇಷ ಪರಿಚಯ ದೊರಯಿತು. ಅಮೆರಿಕನ್ ಕಾಲೇಜುಗಳ ನಿರೀಕ್ಷಣೆ ಮಾಡಿ ವಿಚಾರ ವಿನಿಮಯದ ವೇಳೆ, ಸ್ವದೇಶದ ವಿವಿಧ ಶಿಕ್ಷಣ ವಿಧಾನಗಳ ಮೌಲ್ಯಾಂಕನ ಮಾಡುವ ಅವಕಾಶ ಪ್ರಾಪ್ತವಾಯಿತು

ಶ್ರೀಮತಿ ಪಾರ್ವತಮ್ಮನವರ ವಿಚಾರದಲ್ಲಿ ಹೊಸ ವಿಚಾರ ಮತ್ತು ವಿಧಾನಗಳನ್ನು ಒಂದುಗೂಡಿಸುವ ಉದ್ದೇಶದಿಂದ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸುವವರ ಶಿಕ್ಷಣ ಪ್ರಣಾಲಿಯ ಈ ಸೂಕ್ಷ್ಮ ಮತ್ತು ಆಲೋಚನಾತ್ಮಕ ಮೌಲ್ಯಾಂಕನವು ವಿನಿಮಯ ಕಾರ್ಯಕ್ರಮದಿಂದ ಪ್ರಾಪ್ತವಾಗುವ ಬಹಳ ದೊಡ್ಡ ಲಾಭ. ಅಮೆರಿಕನ್ ಮತ್ತು ಭಾರತೀಯ ಶಿಕ್ಷಣ ಪ್ರಣಾಲಿಗಳ ಶ್ರೇಷ್ಠತಮ ವಿಶಿಷ್ಟತೆಗಳ ಸಮಾಗಮವು ಅತ್ಯಂತ ಅಪೇಕ್ಷಣೀಯವೆನ್ನುತ್ತಾರೆ—ಶ್ರೀಮತಿಯವರು.

'ನಾನು ಅಮೆರಿಕದ ಪರೀಕ್ಷಾ ಪ್ರಣಾಲಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದೆನು. ಇಲ್ಲಿ ಆಂತರಿಕ ಮೌಲ್ಯಾಂಕನದ ನಿಯಮವನ್ನು ಪಾಲಿಸಲಾಗುತ್ತದೆ' ಎಂದರು ಪಾರ್ವತಮ್ಮ ಒಂದು ವೇಳೆ ಅಮೆರಿಕನ್ ಶಿಕ್ಷಣ ಸಂಸ್ಥೆಗಳಲ್ಲಿ ಈ ಪ್ರಣಾಳಿಯು ಉತ್ತಮ ರೀತಿಯಲ್ಲಿ ಕಾರ್ಯಕೃತವಾಗುತ್ತಿರುವುದಾದರೂ ಭಾರತದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ, ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅತ್ಯಧಿಕವಿರುತ್ತದೆ, ಮತ್ತು ಒಂದು ಸಮಾನ ಮಾಪದಂಡವನ್ನು ಸ್ಥಿರಗೊಳಿಸುವ ಆವಶ್ಯಕತೆಯೂ ಇದೆ—ಅಮೆರಿಕನ್ ಪ್ರಣಾಲಿಯು ಬಹುಮಟ್ಟಿಗೆ ಉಪಯುಕ್ತವೆನಿಸಲಾರದು. ಹಾಗಿದ್ದರೂ ಶಿಕ್ಷಕರು ಬಾಹ್ಯ ಪರೀಕ್ಷೆಗಳಿಗೆ ಪೂರಕವಾಗಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಆಂತರಿಕ ಮೌಲ್ಯಾಂಕನ ಮಾಡಲು ಹೆಚ್ಚು ಪ್ರಯತ್ನ ಮಾಡಬೇಕು. ಭಾರತದ ಇಂದಿನ ಶಿಕ್ಷಣ ಪ್ರಣಾಲಿಯಲ್ಲಿ ಟ್ಯುಟೋರಿಯಲ್ ಪ್ರಣಾಲಿಯು ಅಧಿಕ ಉಪಯುಕ್ತವಾಗಬಲ್ಲುದು. ಏಕೆಂದರೆ, ಇದರಿಂದ ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ಅಧಿಕ ವೈಯಕ್ತಿಕ ಗಮನ ನೀಡುವುದು ಸಾಧ್ಯವಾಗುವುದು ಎನ್ನುತ್ತಾರೆ ಇವರ

ಭಾರತೀಯ ಮಹಿಳಾ ವಿದ್ಯಾವಿದರು ಮಹಿಳಾ ಕಾಲೇಜುಗಳ ದೈನಿಕ ಜೀವನದ ವಿವಿಧ ವಿಚಾರಗಳಿಂದ ಅತ್ಯಂತ ಪ್ರಭಾವಿತರಾದರು. ಅಲ್ಪ ಕಾಲ ಉದ್ಯೋಗ ಮಾಡುತ್ತ ತಮ್ಮ ಕಾಲೇಜು ಶಿಕ್ಷಣವ

ಭಾರತದಲ್ಲಿ ಅಮೆರಿಕೆಯ
ರೆಡ್ಡಿ ಕ್ ಭಾರತದ ಉಪರಾಷ್ಟ್ರ
ಭಾರತದಲ್ಲಿ ಅಮೆರಿಕನ್ ರಾಯಭಾ
ಹದಿನೈದು ವರ್ಷಗಳ ದೀರ್ಘ ಸ



ಶ್ರೀಮತಿ ಎಚ್. ಎಂ. ಪಾರ್ವತಮ್ಮನವರ ಅಧ್ಯಕ್ಷತೆಯಲ್ಲಿ ಅವರ ಮಹಾರಾಣಿ ಕಾಲೇಜಿನಲ್ಲಿ ಅರ್ಥಶಾಸ್ತ್ರ ಕಲಿಸುವ ಶಿಕ್ಷಕರು ಸಮಾವೇಶಗೊಂಡಿದ್ದಾರೆ. ಬಲಗಡೆ ಬಾಲ್ಟಿಮೋರ್ ಕಾಲೇಜಿನ ಪ್ರೊ| ಡಾ| ಎಫ್ ಜಿ. ರಿಯೂಸ್ ಕುಳಿತಿದ್ದಾರೆ, ಇವರು ಭಾರತ ಮತ್ತು ಅಮೆರಿಕನ್ ಕಾಲೇಜ್‌ಗಳ ವಿನಿಮಯ ಕಾರ್ಯಕ್ರಮದಂತೆ ಭಾರತಕ್ಕೆ ಬಂದಿದ್ದಾರೆ.

ಅಮೆರಿಕದ ಕೆಲವು ಕಾ
ಸಂದರ್ಶಿಸಿದ ಸಂದರ್ಭದ ಚಿತ್ರ
ಎಡದಿಂದ ಬಲಕ್ಕೆ ಶ್ರೀಮತಿಯ
ಕ್ಲೆಮೆಂಟ್ ಜೆ. ಜಬ್ಲೋಕಿ

ನಿಮಯ ಕಾರ್ಯಕ್ರಮ

ಹುವ ಸಾಧ್ಯತೆಯಿದೆ.

ಕನ್ನಿನ ಡೈರೆಕ್ಟರ್ ಡಾ| ಓಲಿವ್
ಸನರೊಡನೆ ಮಾತಾಡುತಿದ್ದಾರೆ.
ಬಲ ಪಕ್ಕದಲ್ಲಿ ಕಾಣಬಹುದು.
ಜನವರಿಯಲ್ಲಿ ನಿವೃತ್ತರಾದರು.

ನ್ನು ಪೂರ್ಣ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯೇ ಇಲ್ಲಿ ಹೆಚ್ಚು. ಇದಕ್ಕಾಗಿ ಕಾಲೇಜುಗಳಲ್ಲಿಯೂ ಅವರಿಗೆ ವಿಶೇಷ ವ್ಯವಸ್ಥೆಗಳಿವೆ. ಉದ್ಯೋಗಾವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸೂಚನೆ ಕೊಡುವ ಒಂದು ಸಂಪರ್ಕ ವಿಭಾಗವೂ ಕಾಲೇಜಿನಲ್ಲಿದೆ.

ಅಮೆರಿಕೆಯಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಮತ್ತು ರಾಜನೈತಿಕ ಕಾರ್ಯಗಳಲ್ಲಿ ಬಹಳ ಆಸಕ್ತಿ ವಹಿಸುತ್ತಾರೆ. ಅವರಲ್ಲಿ ಕೆಲವರು ಸ್ಥಾನೀಯ ನಾಗರಿಕ ಆಂದೋಲನಗಳಲ್ಲಿ ಸಕ್ರಿಯ ಭಾಗವಹಿಸುತ್ತಾರೆ.

ಕಾಲೇಜುಗಳಲ್ಲಿ ಸುಸಂಘಟಿತ ವಿದ್ಯಾರ್ಥಿ ಸರಕಾರಗಳು ಶಾಸನ ಸಂಬಂಧದ ಯೋಜನೆಗಳು ಮತ್ತು ವಿದ್ಯಾರ್ಥಿ ಸಮಸ್ಯೆಗಳನ್ನು ವಿಚಾರಿಸುತ್ತವೆ. ಕಾಲೇಜ್ ಜೀವನದಲ್ಲಿ ಅಶಾಂತತೆ ಮತ್ತು ಅಸಂತೋಷಗಳನ್ನು ಉತ್ಪನ್ನ ಮಾಡುವ ಅನೇಕ ಸಮಸ್ಯೆಗಳನ್ನು ಇವು ಬಿಡಿಸುತ್ತವೆ.

ವಿದ್ಯಾರ್ಥಿನಿ ನಿಲಯಗಳಲ್ಲಿ ವಿದ್ಯಾರ್ಥಿನಿಯರು ಸಾಮಾನ್ಯವಾಗಿ ನಾಲ್ವ ನಾಲ್ವರಾಗಿ ಇರುತ್ತಾರೆ. ಇವರು ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳಲು ಅನುಕೂಲವಾಗುವಂತೆ ಅಲ್ಲೇ ಪಾಕಶಾಲೆಯೂ ಇದೆ. ಇದರಿಂದಾಗಿಯೇ ಮುಂದವರು ಮನೆ ನಡೆಸುವಲ್ಲಿ ಸಶಕ್ತರಾಗುತ್ತಾರೆ.ಶ್ರೀಮತಿ ಪಾರ್ವತಮ್ಮ ಇದರಿಂದ ತುಂಬ ಪ್ರಸನ್ನರಾಗಿದ್ದಾರೆ.

ಅಮೆರಿಕನ್ ಜನತೆಯೊಡನೆಯೂ ಶ್ರೀಮತಿಯವರ ಸಂಪರ್ಕವಾಗಿತ್ತು. ಈ ಸಂಬಂಧದಲ್ಲಿ ಅವರು ಜನತೆಯ ಎರಡು ವೈಶಿಷ್ಟ್ಯಗಳನ್ನು ಎತ್ತಿ ತೋರಿಸುತ್ತಾರೆ. ಮೊದಲನೆಯದಾಗಿ, ಅಮೆರಿಕನರು ಪ್ರಗತಿ ಹೊಂದುವ ತೀವ್ರ ಆಕಾಂಕ್ಷೆಯುಳ್ಳವರು. ಎರಡನೆಯದಾಗಿ, ಅತಿಥಿಗಳನ್ನು ಮೈತ್ರಿಪೂರ್ಣ ವ್ಯವಹಾರದಿಂದ ತೃಪ್ತಿಗೊಳಿಸುವವರು. ಅವರೆನ್ನುತ್ತಾರೆ— ಅತಿಥಿಗಳಿಗಿಯೂಕ್ತಿ ಮಾಡಿಸುವ ಮತ್ತು ಅಂತರಾಷ್ಟ್ರೀಯ ಸದ್ಭಾವನೆ ಬೆಳೆಸುವ ಉದ್ದೇಶದಿಂದ ತಮ್ಮ ಮನೆಗಳಲ್ಲಿ ಅವರ ಆತಿಥ್ಯಕ್ಕಾಗಿ ತಮ್ಮ ಸೇವೆಯನ್ನು ಸಮರ್ಪಣೆ ಮಾಡುವ ಪ್ರವೃತ್ತಿ ಅನೇಕ ಅಮೆರಿಕನ್ ಮಹಿಳೆಯರಲ್ಲಿದೆ. ಇದರಿಂದ ನಾನು ಪ್ರಭಾವಿತಳಾಗಿದ್ದೇನೆ.'

ವಿಜ್ಞಾನ ಕ್ಷೇತ್ರದಲ್ಲಿ ವಿಶಿಷ್ಟ ಅಧ್ಯಯನ ಮಾಡುವ ಮಹಿಳೆಯರ ಸಂಖ್ಯೆ ಇಲ್ಲಿ ಅಧಿಕವಿರುವುದಿಲ್ಲ; ಅವರು ಸ್ನಾತಕೋತ್ತರ ಅಧ್ಯಯನದಲ್ಲೂ ವಿಶೇಷ ಅಭಿರುಚಿ ತೋರಿಸುತ್ತಿಲ್ಲ. ಆದುದರಿಂದಲೇ ಮಹಿಳಾ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಅಧ್ಯಕ್ಷ ಪುರುಷರಾಗಿಯೇ ಇರುತ್ತಾನೆ. ಪ್ರಾಧ್ಯಾಪಕರಲ್ಲಿ ಕೂಡ ಪುರುಷರದ್ದೇ ಬಹುಮತವಿದೆ.

೧೯೬೭ರಲ್ಲಿ ವಿನಿಮಯ ಕಾರ್ಯಕ್ರಮದಂತೆ ಮಹಾರಾಣಿ ಕಾಲೇಜ್, ಬೆಂಗಳೂರಿನಲ್ಲಿ ಇಬ್ಬರು ಅಮೆರಿಕನ್ ಪ್ರೊಫೆಸರರು ಅಧ್ಯಾಪನ ಕಾರ್ಯಕ್ಕಾಗಿ ಬಂದಿದ್ದಾರೆ. ಇವರಿಬ್ಬರೂ ಪುರುಷರು. ಏಳು ಜನ ಭಾರತೀಯ ಶಿಕ್ಷಕರು ಅಮೆರಿಕೆಯ ಮಹಿಳಾ ಕಾಲೇಜುಗಳಲ್ಲಿ ಅಧ್ಯಾಪನ ಕಾರ್ಯಕ್ಕಾಗಿ ಅಮೆರಿಕಕ್ಕೆ ಹೋಗಲಿರುವರು.

ಸ್ಫಟಿಕ ಶಿಲೆಗೆ ಕೆತ್ತನೆ ಕೆಲಸ ಅರ್ಥ ಕೊಡುವಂತೆ ಮಾನವ ಆತ್ಮಕ್ಕೆ ವಿದ್ಯೆ ಅರ್ಥ ಕೊಡುತ್ತದೆ. ವಿದ್ಯೆಯ ಕೆತ್ತನೆ ಕೆಲಸದಿಂದಲೇ ಸಾಮಾನ್ಯ ಮಾನವನು ತತ್ವಜ್ಞಾನಿ, ಸನ್ಯಾಸಿ, ಧೀರ, ಯಾ ಸತ್ಪುರುಷನಾಗುತ್ತಾನೆ.

—ಎಡಿಸನ್.

ಮಾತನ್ನು ಶರೀರಕ್ಕೆ ಹೋಲಿಸಿದರೆ ಅದರ ಹಿನ್ನೆಲೆಯ ಚಿಂತನೆ, ಭಾವನೆಗಳೇ ಅದರ ಆತ್ಮವೆನ್ನಬಹುದು. ಅದನ್ನು ಕಾರ್ಯರೂಪದಲ್ಲಿ ಕಾಣುವುದೇ ಅದರ ಜೀವನ.

—ಸಿಮ್ಮನ್ಸ್.

ಮಳೆ ಬಿಸಿಲುಗಳ ಸಮ್ಮಿಶ್ರಣದಿಂದ ಗಿಡವು ಚಿಗುರಿ ಮೇಲೇಳುವಂತೆ ನಗು ಮತ್ತು ಅಳುಗಳ ಪರಿಪಾಕದಿಂದ ಪ್ರೇಮ ಬೆಳೆಯುತ್ತದೆ.

—ರಿಕ್ಟರ್.

ಉಳಿತಾಯಕ್ಕೆ ವಯಸ್ಸಿನ ನಿರ್ಬಂಧವೆಂದೂ ಇಲ್ಲ



ನಿಮಗಾಗಿರುವ ಬ್ಯಾಂಕು ವಿಜಯಾ ಬ್ಯಾಂಕ್
ನಿಮ್ಮ ಸೇವಿಂಗ್ಸ್ ಲೆಕ್ಕದಲ್ಲಿಡುವ ಹಣಕ್ಕೆ ಶೇ. 4½
ಮತ್ತು ಫಿಕ್ಸೆಡ್ ಡಿಪಾಸಿಟ್ಟುಗಳ ಮೇಲೆ ಶೇ. 8ರ
ವರೆಗೆ ಬಡ್ಡಿ ದೊರೆಯುವುದು
ಇಂದಿನಿಂದಲೇ ಹಣ ಉಳಿಸಿ
ನಿಮ್ಮ ಹತ್ತಿರದ ಶಾಖೆಯಲ್ಲಿ ವಿವರಗಳನ್ನು ಪಡೆಯಿರಿ:

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ 'ವಿಜಯಾ ಬ್ಯಾಂಕ್ ಬಿಲ್ಡಿಂಗ್'
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು-3

VB-25-4

ಮೈಸೂರು, ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ 55 ಶಾಖೆಗಳು.
ಮೈಸೂರು ರಾಜ್ಯದಲ್ಲಿಯ ಶಾಖೆಗಳು:
ಬೆಂಗಳೂರು— 1. ಮಲ್ಲೇಶ್ವರಂ 2. ಅಲ್ಸೂರು 3. ಕೆಂಪೇಗೌಡ ರೋಡ್ * ಮಂಗಳೂರು— 1. ಲೈಟ್ ಹೌಸ್ ಹಿಲ್ ರೋಡ್, 2. ಹಂಪನಕಟ್ಟೆ * ಭಟ್ಕಳ * ಬ್ರಹ್ಮಾವರ * ಬೈಂದೂರು * ಚಾಮರಾಜನಗರ * ಚನ್ನಪಟ್ಣ * ಕುಂದಾಪುರ * ಧಾರವಾಡ * ದೊಡ್ಡಬಳ್ಳಾಪುರ * ಗದಗ * ಗೋಣಿಕೊಪ್ಪಲ * ಹುಬ್ಬಳ್ಳಿ * ಕಾರ್ಕಳ * ಕನಕಪುರ * ಕಾಪು * ಕೋಲಾರ * ಕೊಳ್ಳೆಗಾಲ * ಕೃಷ್ಣರಾಜಪೇಟೆ * ಮದ್ದೂರು * ಮಾಗಡಿ * ಮುಲವಳ್ಳಿ * ಮಡಿಕೇರಿ * ಮೂಡಿಗೆರೆ * ಮೈಸೂರು * ನಂಜನಗೂಡು * ನೆಲಮಂಗಲ * ಪಾಂಡವಪುರ * ಪುತ್ತೂರು * ರಾಮನಗರ * ಉಡುಪಿ.

ರು ಇತ್ತೀಚೆಗೆ ಭಾರತಕ್ಕೆ ಬಂದಾಗ ಶ್ರೀಮತಿ ಇಂದಿರಾ ಗಾಂಧಿಯವರನ್ನು
ರಿಕದ ರಾಯಭಾರಿಯ ಪತ್ನಿ ಶ್ರೀಮತಿ ಚೆಸ್ಟರ್ ಬೌಲ್ಸ ಕೂಡ ಇರುವರು.
ರ್ ಫೀಲ್ಡ್, ಬೌಲ್ಸ್, ಇಂದಿರಾ ಗಾಂಧಿ, ಹೇರಿಸ್ ಬಿ. ಮೆಡೋವೆಲ್ ಮತ್ತು

ಚಾರುಚಯನ

ಒಂದು ಹೊಸ ಅಧ್ಯಾಯ

ತಾಷ್ಕೆಂಟ್ ಘೋಷಣೆ—ಭಾರತ ಪಾಕ್ ನಡುವಣ ಸಂಬಂಧ ಸುಧಾರಣೆಯ ಪ್ರತೀಕ–ಇದಕ್ಕೆ ಐತಿಹಾಸಿಕ ಮಹತ್ವ. ಜಟಿಲ ರಾಜಕಾರಣದ ಮೇಲೆ ವ್ಯವಹಾರ ಜ್ಞಾನದ ವಿಜಯ. ಭವಿಷ್ಯ ಶಾಂತಿಯ ಆಶಾವಾದ!

ದಿ| ಪ್ರಧಾನ ಮಂತ್ರಿ ಲಾಲ ಬಹದೂರರ ಬಲಿದಾನದೊಡನೆ ತಾಷ್ಕೆಂಟಿನ ಮಹತ್ವ ಮತ್ತಷ್ಟು. ಅವರು ಕೈಕೊಂಡ ಶಾಂತಿ ಪ್ರಯತ್ನಗಳ ಅಮರ ಸ್ಮಾರಕ ತಾಷ್ಕೆಂಟ್.

ಹೌದು,

ಆದರೆ? ನಮ್ಮ ಸಂಬಂಧ ಹೇಗಿತ್ತು? ಹೇಗಿದೆ? ಮುಂದೆ ಹೇಗಾಗಬೇಕು?

ನಮ್ಮ ಭಿನ್ನಾಭಿಪ್ರಾಯ ಎಂಡು ದಶಕಗಳಿಂದ ಬೆಳೆದು ಬಂದುದು. ಘೋಷಣೆಯಿಂದ ಇದು ದೂರವಾದೀತೆ? ಖಂಡಿತಕ್ಕೂ ಸಾಧ್ಯವಿಲ್ಲ.

ಮತ್ತೆ?

ಇದು, ಎರಡೂ ದೇಶಗಳ ಮಧ್ಯೆ ಆಸೆ-ಆಕಾಂಕ್ಷೆಗಳ ಸೇತುವೊಂದನ್ನು ನಿರ್ಮಿಸಿದೆ; ಹೊಸ ಅಧ್ಯಾಯವೊಂದನ್ನು ತೆರೆದಿದೆ. ಭಾರತ–ಪಾಕಿಸ್ತಾನಗಳ ನಡುವೆ ಶಾಂತಿ, ಸೌಹಾರ್ದ ಹಾಗೂ ಸಮೃದ್ಧಿಯ ಭಾವನೆಗಳನ್ನು ಬಲಗೊಳಿಸಿದೆ.

ಹೇದ? ಉದ್ಧಟ ಪಾಕಿಸ್ತಾನವು ತನ್ನ ನೀತಿಯನ್ನು ಬದಲಿಸಿ ಭಾರತದೊಡನೆ ಸ್ನೇಹಹಸ್ತ ನೀಡಲು ಮುಂದೆ ಬಂದಿತೆ? ಅಥವಾ ಭಾರತವೇ ಪಾಕಿನ ಬಗ್ಗೆ ದಯೆ ತೋರಿತೆ?

ಅಯ್ಯೂಬಖಾನರ ಅಂತರ್ಯ ಭಾರತದತ್ತ ಸ್ನೇಹ ವ್ಯಕ್ತಪಡಿಸಿದೆ.

ಮತ್ತೆ?

ಘೋಷಣೆಯ ಸೂತ್ರಗಳು ಭಾರತಕ್ಕೆ ತೀರ ಹಳೆಯವು. ೧೯೪೭ರಿಂದಲೂ ಭಾರತಕ್ಕೆ ತೀರ ಹಳೆಯವು. ೧೯೪೭ರಿಂದಲೂ ಭಾರತವು ಪಾಕ್ ನಾಯಕರ ಮುಂದೆ ಇಟ್ಟಿರುವಂತಹವು. ಉತ್ತಮ ನೆರೆಹೊರೆಯ ನಿರ್ಮಾಣಕ್ಕಾಗಿ 'ಯುದ್ಧವಿಲ್ಲ' ಅಥವಾ 'ಯುದ್ಧ ಬೇಡ' ಕರೆಗಳ ಮತ್ತೊಂದು ರೂಪವೇ 'ತಾಷ್ಕೆಂಟ್.'

ಶಕ್ತಿರೂಪ ಜವಾಹರ್ ೧೯೪೯ರ ಕೊನೆಯಲ್ಲಿ ಪಾಕ್ ನಾಯಕರಿಗೆ ಬರೆದಿದ್ದರು: ಭಾರತ ಮತ್ತು ಪಾಕಿಸ್ತಾನಗಳ ನಡುವಣ ಸಮಸ್ಯೆಗಳನ್ನು ಶಾಂತ ಮಾರ್ಗಗಳಿಂದ ಬಗೆಹರಿಸುವ ದೃಢ ಸಂಕಲ್ಪದ ಘೋಷಣೆ ಮಾಡಬೇಕು; ಆಗ ಎರಡೂ ದೇಶಗಳ ಜನತೆಯ ಸೇವೆ ಮಾಡಿದಂತಾಗುತ್ತದೆ; ಯುದ್ಧ ಭೀತಿಯನ್ನು ನಿವಾರಿಸಿದಂತಾಗುತ್ತದೆ; ಇಡಿಯ ವಿಶ್ವಕ್ಕೆ ಸೇವೆ ಮಾಡಿದಂತಾಗುತ್ತದೆ.....

ಲೋಕ ನಾಯಕ ಜವಾಹರರ ಈ ಅಭಿಪ್ರಾಯಕ್ಕೆ ಪುಷ್ಟಿ ದೊರೆತುದು ತಾಷ್ಕೆಂಟದಲ್ಲ.

೧೯೫೦ರಲ್ಲಿ ಭಾರತರತ್ನ ಜವಾಹರರು ಮತ್ತೊಂದು ಪತ್ರ ಬರೆದರು: ಯಾವ ಕಾರಣವೇ ಇರಲಿ, ಯುದ್ಧ ಮಾಡದೆ ಪರಸ್ಪರರ ಸಮಸ್ಯೆಗಳನ್ನು ಶಾಂತಿಯಿಂದ, ಸೌಹಾರ್ದದಿಂದ ಬಗೆಹರಿಸಿಕೊಳ್ಳಬೇಕು. ಸಮಸ್ಯೆಗಳು ಬೇಗನೆ ಬಗೆಹರಿಯದೆ ಉಳಿಯಬಹುದು; ಆದರೆ, ಅವುಗಳ ಪರಿಹಾರಕ್ಕೆ ಯುದ್ಧ ಹೂಡಬಾರದು. ಎರಡೂ ದೇಶಗಳು 'ಯುದ್ಧವಿಲ್ಲ' ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಅಪೇಕ್ಷಣೀಯ.

ಶಾಂತಿ ದೂತನ ಈ ವಿನಂತಿಯನ್ನು ಪಾಕಿಸ್ತಾನ ಕಟ್ಟ ಮೇಲೆ ಅರ್ಥ ಮಾಡಿಕೊಂಡಿತು.

ಲೋಕನಾಯಕ, ಶಾಂತಿದೂತ, ಭಾರತ ರತ್ನ ನಮ್ಮನ್ನಗಲಿ ಹೋದರು. ಲಾಲಬಹದೂರ್ ಅವರ ಉತ್ತರಾಧಿಕಾರಿಯಾಗಿ ಆಯ್ಕೆಯಾದರು.

ಹಳೆಯ ಸಮಸ್ಯೆಗಳು ಹೊಸ ರೂಪ ತಾಳುವುದನ್ನು ಕಂಡರು ಶಾಸ್ತ್ರಿ. ಪೂರ್ವಾಧಿಕಾರಿಯ ಹೆಜ್ಜೆಗಳಲ್ಲೇ ನಡೆದ ಶಾಸ್ತ್ರಿ ಮತ್ತೆ ಕರೆಯಿತ್ತರು: ಮತ್ತೆ ಸ್ನೇಹ-ಸೌಹಾರ್ದದ ಕರೆ,-ಪಾಕ್ ತಿರಸ್ಕಾರ. ಸ್ನೇಹಪರ ಮತ್ತು ಶಾಂತಿ ಸಂಬಂಧಗಳು ಮೂಡಿ ಬರುವ ಪ್ರಯತ್ನ-ಆದರೆ ಪೂರ್ಣ ವಿಫಲ.

ಸೊಕ್ಕಿದ ಪಾಕಿಸ್ತಾನಿ ನಾಯಕರು ಭಾರತದ ಹೃದಯವನ್ನರಿಯುವ ಪ್ರಯತ್ನ ಮಾಡಲಿಲ್ಲ. ರಕ್ತ ಸಿಂಚನದಿಂದಲೇ ಸಮಸ್ಯಾ ಪರಿಹಾರ ಮಾಡುವ ಹುಚ್ಚು ಧೈರ್ಯ ಅವರಿಗೆ–ಸೀಮೋಲ್ಲಂಘನ–ಯುದ್ಧ–ಯುದ್ಧ–ರಕ್ತದ ಓಕುಳಿ–ವಿಮಾನ–ಟ್ಯಾಂಕುಗಳೊಡನೆ ಮಾನವತೆಯ ಚೀತ್ಕಾರ.

ಆಗ ಕೇಳಿ ಬಂದಿತು ತಾಷ್ಕೆಂಟ್‌ನ ಹೆಸರು ಮೊತ್ತ ಮೊದಲಬಾರಿಗೆ. ಕೊಸಿಗಿನ್ ಕರೆಯಿತ್ತರು ಭಾರತ–ಪಾಕ್ ಅಗ್ರಣಿಗಳಿಗೆ.

ಬನ್ನಿ, ನಮ್ಮ ನೆಲದಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳಿ. ಶಾಂತಿಯ ದಾರಿ ಹಿಡಿಯುವ ದೃಢ ನಿರ್ಧಾರ ಮಾಡಿ.

ಭಾರತದ ಪುರಸ್ಕಾರ, ಪಾಕಿಸ್ತಾನದ ತಿರಸ್ಕಾರ - ಬಿತ್ತು ಕಸದ ಬುಟ್ಟಿಗೆ ಶಾಂತಿ ಪ್ರಯತ್ನದ ಓಂಕಾರ.

ಕಟ್ಟೆ ಮೇಲೆ ಬುದ್ಧಿ ಬಂತು—ಅಯ್ಯೂಬಖಾನ್ –ಭುಟ್ಟೊಗಳಿಗೆ.

ತಮ್ಮ ಬೇಳೆ ಯಾವ ದೇಶದ ನೀರಲ್ಲಿಯೂ ಬೇಯಲಿಲ್ಲ—ಅಷ್ಟು ಗಡುಚು! ಅವರ ಬೇಳೆ?

ಸೋವಿಯತ್ತಿನ ತಂಪು ನೀರಿನ ಗುಣ ಮೊದಲೇ ತಿಳಿದಿದೆ—ಆದರೂ ನೋಡುವ ಕಾತುರತೆ—ತಾಷ್ಕೆಂಟಿಗೆ ಪಾಕ್ ನಾಯಕರ ಪ್ರಯಾಣ.

ಜನವರಿ ೧೦, ೧೯೬೬. ರಾಮಲೀಲಾ ಮೈದಾನ. 'ಎರಡೂ ದೇಶಗಳು ಒಳ್ಳೆಯ ನೆರೆಹೊರೆಯವರಂತೆ ಬದುಕಬೇಕು. ಈ ಪ್ರತಿಜ್ಞೆ ನಮ್ಮಲ್ಲಿ ಬಹುಬೇಗನೆ ಮೂಡಬೇಕು. ಪ್ರಾಮಾಣಿಕ ಪ್ರಯತ್ನದಿಂದ ಪ್ರೇಮ—ಶಾಂತಿಗಳ ಹೊಸ ಅಧ್ಯಾಯವೊಂದನ್ನು ಪ್ರಾರಂಭಿಸಬಹುದು.

ಲಾಲ ಬಹದೂರರು ಭಾರತೀಯರಿಗೆ ನೀಡಿದ ಅಂತಿಮ ಸಂದೇಶವಿದೆ.

ಮರುದಿನ ತಾಷ್ಕೆಂಟಿಗೆ ಪ್ರಯಾಣ–ಬಳಸುದಾರಿಯಿಂದ–ಪಾಕ್ ವಾಯು ಪ್ರದೇಶವನ್ನು ಹಾದು ಹೋಗುವಂತಿರಲಿಲ್ಲ.

ತಾಷ್ಕೆಂಟಿನಲ್ಲಿ—

ಪ್ರಾಮಾಣಿಕ ಪ್ರಯತ್ನದಿಂದ ಪ್ರೇಮ–ಶಾಂತಿಯ ಹೊಸ ಅಧ್ಯಾಯ ಪ್ರಾರಂಭವಾಗುವುದು. ನಮ್ಮ ವಾದ ವಿವಾದಗಳನ್ನು ಶಾಂತ ಮಾರ್ಗದಿಂದ ಬಗೆಹರಿಸಿಕೊಳ್ಳಲು ನಾವು ಒಮ್ಮೆ ಮನಬಂದರೆ ಹಿಂಸೆಯನ್ನು ತ್ಯಜಿಸಿದರೆ, ಎರಡೂ ದೇಶಗಳ ಸಂಬಂಧವನ್ನು ಎರಡೂ ದೇಶಗಳ ನಾಗರಿಕರಿಗೆ ಲಾಭದಾಯಕವಾಗಿ ಮಾರ್ಪಡಿಸ ಬಹುದು—

ಭಾರತದ ಜನಸಾಮಾನ್ಯರ ಪ್ರಧಾನಿ ಶಾಸ್ತ್ರಿ ಸತ್ಯವಾದುದನ್ನೇ ಆಡಿದರು.

ಭಾರತವು ಮೊದಲೇ ನೀಡಿದ್ದ 'ಯುದ್ಧವಿಲ್ಲ' ಕೊಡುಗೆಯಾವುದು?

ಶಾಂತಿ ಸೌಹಾರ್ದದನ್ನು ಸ್ಥಾಪಿಸಲು ಗಡಿ ಸೇನೆಯ ವಾಪಸಾತಿ, ಪರಸ್ಪರ ಸಹಕಾರ ಮನೋಭಾವನೆ—

ತಾಷ್ಕೆಂಟಿನಲ್ಲಿ ನಡೆದ ಘೋಷಣೆಯೇನು?

ಎರಡೂ ದೇಶಗಳು ಒಳ್ಳೆಯ ನೆರೆಹೊರೆಯನ್ನು ನಿರ್ಮಿಸಲು ಪ್ರಯತ್ನ ಮಾಡುತ್ತವೆ. ಸಮಸ್ಯೆಗಳ ಪರಿಹಾರಕ್ಕೆ ಶಾಂತ ಮಾರ್ಗವನ್ನು ಮಾತ್ರ ಅನುಸರಿಸುತ್ತವೆ ಹಿಂಸೆಯನ್ನು ತ್ಯಜಿಸುತ್ತವೆ.

ದ್ವೇಷಪೂರ್ಣ ವಾತಾವರಣವನ್ನು ಮುಂದುವರಿಸಿಕೊಂಡು ಹೋಗುವುದರಿಂದ ಉಪಖಂಡದ ಜನತೆ ಮತ್ತು ಹಿತಾಸಕ್ತಿಗಳಿಗೆ ಧಕ್ಕೆಯಾಗುತ್ತದೆ.

ಕಬ್ಬಿಣವಾಗಿದ್ದ ಅಯ್ಯೂಬರನ್ನು ಬಗ್ಗಿಸಿದ ಶಾಸ್ತ್ರಿ ಪಾಕ್ ನಾಯಕರು ಒಪ್ಪಂದವನ್ನು ಅಕ್ಷರಶಃ ಪಾಲಿಸುವರು ಎಂದು ಮನವರಿಕೆಯಾದ ನಂತರವೇ ಅದಕ್ಕೆ ಸಹಿ ಹಾಕಿದರು—

ತನ್ನಂತೆಯೇ ಅಯ್ಯೂಬರೂ ಪ್ರಾಮಾಣಿಕ ಮನಸ್ಸಿನಿಂದ ಘೋಷಣೆಯನ್ನು ಒಪ್ಪಿದ್ದಾರೆ—ಇದು ಶಾಸ್ತ್ರಿಯವರ ಅಂತರಂಗವಾಗಿತ್ತು.

ಆದರೆ,

ಶಾಸ್ತ್ರಿಯವರ ಕಾಲ ತಾಷ್ಕೆಂಟಿನಿಂದಲೇ ಅವರನ್ನೊಯ್ದು. ತಾಷ್ಕೆಂಟ್ ವೀರ, ಭಾರತ ರತ್ನ ಅಸ್ತಂಗತನಾದ.

ಜಾಗತಿಕ ಸಂಕೀರ್ಣ ಪರಿಸ್ಥಿತಿ—ದ್ವೇಷಮಯ ವಾತಾವರಣ ದೂರೀಕರಣಕ್ಕೆ ತಾಷ್ಕೆಂಟ್ ಪ್ರೇರಕ ಶಕ್ತಿ..... ಇದು ವರೆಗಿನ ಅದರ ಕಾರ್ಯಸಾಧನೆಯನ್ನು ಕಾಣುವಾಗ ಅದು ಕಾಣುತ್ತದೆ ವ್ಯಕ್ತವಾಗಿ.

ತಾಷ್ಕೆಂಟ್ ಘೋಷಣೆ — ಭಾರತದ ಪಾಕ್-ನೀತಿಯ ಗಳಿಸಿದ ಪ್ರತಿಷ್ಠೆಯ ವಿಜಯ. ಕಟ್ಟುನಿಟ್ಟಾಗಿ ಅದನ್ನು ಕಾರ್ಯಕೃತಗೊಳಿಸುವುದೇ ಭಾರತ—ಪಾಕಿಸ್ತಾನಗಳ ಶಾಂತಿ ಪ್ರಯತ್ನ.

ಬಾಳುವೆ ಶಾಪವಲ್ಲ, ವರ

(ಐದನೇ ಪುಟದಿಂದ)

ಪ್ರತಿ ಸಲವೂ ಸೋಲನ್ನೇ ಅನುಭವಿಸುತ್ತಿರುವ ಮಾನವನಿಗೆ ಜಗತ್ತು "ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಬೇಡ" ಎಂಬ ಪಂಥಾವನ್ನೀಯುವುದಾದರೆ, ಎಲ್ಲಾ ಯತ್ನಗಳಲ್ಲೂ ಜಯಗಳಿಸದ ಮನುಷ್ಯನಿಗೆ "ಚೇಡನಂತೆ ಮುಂಳಿ ಯತ್ನವನ್ನು ಮಾಡು" ಎಂಬ ಸೂಚನೆಯನ್ನೂ ನೀಡಬಲ್ಲುದು. "ಜೀವನದಲ್ಲಿ ನೀನುಂಡ ಕಷ್ಟವನ್ನು ಇತರರ ಮುಂದೆ ಹೊಂಗೆಡಹಬೇಡ, ಅದರಿಂದಲಾಗಿ, ನಿನ್ನ ದುಃಖ ಪ್ರವರ್ಧಿತವಾಗುವುದು, ಆದರ ಅದಕ್ಕೆ ವ್ಯತಿರಿಕ್ತವಾಗಿ ಅನುಭವಿಸಿದ ಸುಖವನ್ನು ಪ್ರಸರಿಸುವುದರಿಂದ ಇಡೀ ಜಗತ್ತೇ ಆನಂದಿತವಾಗುವುದಲ್ಲದೆ ನಿಮ್ಮ ಆನಂದವೂ ದ್ವಿಗುಣಿತ ಭರದಿಂದ ಸಂವರ್ಧಿತವಾಗುವುದು' ಎಂದು ಓಂದಿ ಸಾಹಿತ್ಯ ಜಗತ್ತಿನ ವೀರ ರತ್ನರೊಬ್ಬರು ಹೇಳಿದ್ದಾರೆ.

"ಬಾಳುವೆ ಶಾಪವಲ್ಲ, ವರ" ಎಂಬ ಭಾವನೆ ನಮ್ಮ ಜನರಲ್ಲಿ ಮೂಡಬೇಕು. ಜೀವನದ ಸಾರ್ಥಕತೆ ಸಾಧಿಸಿದ ಕಾರ್ಯಗಳ ಮೇಲೆ ಹೊಂದಿಕೊಂಡಿದೆ. ಜನನ— ಮರಣಗಳು ಪ್ರಾಕೃತಿಕ ಕರ್ಮಗಳು, ಆದರೆ ಜೀವನ, ಈ ಎರಡು ಸಂಧಿಗಳ ಅಂತರದಲ್ಲಿರುವಂತಹದ್ದು. ಅದು ತನ್ನದೇ ಆದ ಒಂದು ವೈಶಿಷ್ಟ್ಯದಿಂದ ಕೂಡಿದೆ. ಹೊಟ್ಟೆಬಟ್ಟೆಗಳಿಗಾಗಿ ಜನತೆ ಪೇಚಾಡುತ್ತಿರುವ ಸಂದರ್ಭದಲ್ಲಿ ಮಾನವೀಯ ಕಾರ್ಯಾಚರಣೆಗೆ ಎಡೆ ಸಿಗುವುದು ದುರ್ಲಭ. ಆದರೆ ಬಾಳುವೆ ಸದುಪಯೋಗವಾಗಬೇಕೆಂದಿದ್ದರೆ ನಿಷ್ಪಾದಿತವಾಗತಕ್ಕ ಎಷ್ಟೋ ಕಾರ್ಯಗಳು ಉಳಿದಿವೆ. ಇಂತಹವುಗಳನ್ನು ಪೂರೈಸುವುದು ಜೀವನ ಪಂಥದಲ್ಲಿ ಮಾನವನ ಕರ್ತವ್ಯವೆಂದರೆ ಅತಿಶಯೋಕ್ತಿಯಾಗಲಾರದು. ಅಂತಹ ಕಾರ್ಯಗಳ ಪೂರೈಕೆಯಿಂದ ಬಾಳುವೆಯ ಸುಧಾಪಾನ ನಮ್ಮದಾಗಿ ಸಚ್ಚಿದಾನಂದ ಶಾಂತ ಮಾನವ ಜೀವನ ದೇವತೆಯ ಮುಕುಟಮಣಿಯಾಗಿ ರಾರಾಜಿಸುವುದು.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್,

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಎಲ್ಲೆಲ್ಲಿ ಏನೇನು?

ಎಂ. ಜಿ. ಯಂ. ಕಾಲೇಜ್ ವಾರ್ಷಿಕೋತ್ಸವ

ಉಡುಪಿ ಎಂ. ಜಿ. ಯಂ. ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವು ತಾ. 29ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀ ಟಿ. ರಮೇಶ ಪೈಗಳು ಸ್ವಾಗತಿಸುತ್ತಾ ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಕಾಲೇಜಿನ ಪ್ರಗತಿಪರ ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆ ಗೈದು ಮಾತನಾಡುತ್ತಾ, ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂಥ ಶಿಕ್ಷಣ ದೊರೆಯಬೇಕು ಎಂಬುದನ್ನು ಒತ್ತಿ ಹೇಳಿದರು ಮಾತ್ರವಲ್ಲದೇ, ಮಣಿಪಾಲ ಎಕಾಡೆಮಿಯವರು ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು.

ಕೊನೆಯಲ್ಲಿ ಯೂನಿಯನ್ ಕಾರ್ಯದರ್ಶಿ ಶ್ರೀ ಶೇಷಪ್ಪನವರು ಧನ್ಯವಾದ ಸಮರ್ಪಿಸಿದರು. ವಿದ್ಯಾರ್ಥಿಗಳ ಪ್ರತಿಭಟನೆಯಿಂದಾಗಿ ಮನೋರಂಜನಾ ಕಾರ್ಯಕ್ರಮಗಳು ನಡೆಯಲಿಲ್ಲ.

ಮುಂಚಿನ ದಿನ ಕಾಲೇಜ್ ಯೂನಿಯನ್ ದಿನಾಚರಣೆಯು ಡಾ| ಕೆ. ಬಿ. ರಾಮಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು.

ಬದಿಯಡ್ಕ ಪಂಚಾಯತ್ ವರ್ಧಂತ್ಯುತ್ಸವ

ಮೈಸೂರಿನ ವಿಧಾನ ಪರಿಷತ್ ಸದಸ್ಯ ಶ್ರೀ ಕೆ. ಆರ್. ಆಚಾರ್‌ರವರ ಅಧ್ಯಕ್ಷತೆಯಲ್ಲಿ, ಕಳೆದ ತಾ. 26ರಂದು ಬದಿಯಡ್ಕ ಹಿರಿಯ ಬುನಾದಿ ಶಾಲೆಯಲ್ಲಿ ಬದಿಯಡ್ಕ ಪಂಚಾಯತಿನ ದ್ವಿತೀಯ ವರ್ಧಂತ್ಯುತ್ಸವ ಮತ್ತು ಶ್ರೀ ಎಂ. ಉಮೇಶರಾಯರನ್ನು ಸನ್ಮಾನಿಸುವ ಸಮಾರಂಭವು ಜರಗಿತು.

ಆರಂಭದಲ್ಲಿ ಶ್ರೀ ಖಂಡಿಗೆ ಶ್ಯಾಮ್ ಭಟ್ಟರು ಸ್ವಾಗತಿಸಿದರು. ಶ್ರೀ ಪಿ. ಮಾಧವ ಭಟ್ಟರು ಸಂದೇಶಗಳನ್ನು ಓದಿದರು. ಈ ಸಂದರ್ಭದಲ್ಲಿ ಡಾ| ಪಿ. ಎಸ್. ಭಟ್, ಎಡ್ವಕೇಟ್ ಯು. ಪಿ. ಕುಣಿಕುಳ್ಳಾಯ, ಡಾ| ಕೆ. ಎ. ಶೆಟ್ಟಿ, ಶ್ರೀ ಬಿ. ಎಸ್. ಶಕ್ತಿಬಲ್ಲಾಯ, ಶ್ರೀ ದಾಮೋದರ ಅಗ್ನಿಹೋತ್ರಿಯ ಇವರು ಭಾಷಣ ಮಾಡಿದರು.

ಪಂಚಾಯತ್ ಅಧ್ಯಕ್ಷ ಶ್ರೀ ಕೆ. ಕೆ. ರೈಯವರು, ರಾಷ್ಟ್ರಕ್ಕಾಗಿ ತ್ಯಾಗ ಮಾಡಿ ಅಪೂರ್ವ ಸೇವೆ ಸಲ್ಲಿಸಿದ ಹಿರಿಯ ಸಾಮಾಜಿಕ ಕಾರ್ಯಕರ್ತ ಶ್ರೀ ಎಂ. ಉಮೇಶರಾಯರಿಗೆ ಪಂಚಾಯತಿನ ಪರವಾಗಿ ಮಾನಪತ್ರವನ್ನು ಒಪ್ಪಿಸಿದರು. ಶ್ರೀ ಉಮೇಶರಾಯರು ತಮ್ಮನ್ನು ಗೌರವಿಸಿದುದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಶ್ರೀ ಬಿ. ದೇವಪ್ಪ ಅಳ್ವರು ಸರ್ದಾರ್ ವಲ್ಲಭ ಭಾಯಿ ಪಟೇಲ್, ಕಾರ್ನಾಡು ಸದಾಶಿವ ರಾವ್‌ರವರ ಭಾವಚಿತ್ರಗಳನ್ನು ಅನಾವರಣ ಗೈದರು. ಶ್ರೀ ರಾಮಕೃಷ್ಣ ಬಲ್ಲಾಳರು ವರದಿಯನ್ನೋದಿದರು. ಕೊನೆಯಲ್ಲಿ ಶ್ರೀ ಶಂಕರನಾರಾಯಣ ಶರ್ಮರು ವಂದನಾರ್ಪಣೆ ಗೈದರು.

ಈ ಸಮಾರಂಭದ ಅಂಗವಾಗಿ ಬೆಳಿಗ್ಗೆ ಶ್ರೀ ಉಗ್ರಾಣ ಮಂಗೇಶ ರಾಯರ ಅಧ್ಯಕ್ಷತೆಯಲ್ಲಿ ಕವಿಸಮ್ಮೇಳನ ಜರಗಿತ್ತು.

ಮೂಲ್ಕಿ ರೈತರ ಸಭೆ

ಕಳೆದ ತಾ. 20ರಂದು ಶ್ರೀ ಇ. ಪಿ. ಫೆರ್ನಾಂಡಿಸ್‌ರವರ ಅಧ್ಯಕ್ಷತೆಯಲ್ಲಿ, ಉಪ್ಪಿನ ಪ್ರವಾಹಕ್ಕೀಡಾದ ಆಸುಪಾಸು ಗ್ರಾಮಗಳ ರೈತರ ಸಭೆಯೊಂದು ಮೂಲ್ಕಿ ಬಿಲ್ಲವ ಸಮಾಜದಲ್ಲಿ ಜರಗಿತು.

ಆರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಕೃಷ್ಯಾಭಿವೃದ್ಧಿ ಸಮಿತಿಯ ಕಾರ್ಯದರ್ಶಿ ಡಾ| ಸಂಜೀವನಾಥ್ ಐಕಳ್‌ರವರು ಮಾತನಾಡುತ್ತಾ ಈ ತೀವ್ರತರ ಬೇಸಾಯ ಯೋಜನೆಯ ಸಾರ ಸರಕಾರದಿಂದ ದೊರಕುವ ಯಾವತ್ತೂ ಸವಲತ್ತು, ಸಹಾಯ ಸಲಕರಣೆಗಳನ್ನು ಸಕಾಲದಲ್ಲಿ ರೈತರಿಗೆ ಒದಗಿಸುವಂತಾಗಬೇಕೆಂದು ಕೇಳಿದರು. ಶ್ರೀ ಪಕೀರಪ್ಪನವರು ರೈತರ ಪರವಾಗಿ ಮನವಿಯನ್ನರ್ಪಿಸಿದರು. ಮೊಗವೀರ ಸಂಘದ ಉಪಾಧ್ಯಕ್ಷ ಶ್ರೀ ಬೋಜ ಎಸ್. ಅಮೀನ್‌ರವರು ಮೀನು ವ್ಯವಸಾಯಗಾರರಿಗುಂಟಾದ ನಷ್ಟದ ಮನವಿಯನ್ನರ್ಪಿಸಿದರು. ಜಿಲ್ಲಾಧಿಕಾರಿಗಳು ಮಾತನಾಡುತ್ತಾ ರೈತರ ದುರವಸ್ಥೆಯನ್ನು ಕಣ್ಣಾರೆ ನೋಡಿ ತನಗುಂಟಾದ ವ್ಯಥೆಯನ್ನು ವ್ಯಕ್ತಪಡಿಸುತ್ತಾ, ಸರಕಾರದಿಂದ ಸಾಧ್ಯವಾದ ಸಹಾಯ ಒದಗಿಸಿ ಕೊಡುವುದಾಗಿ ಭರವಸೆಯಿತ್ತರು. ಬಳಿಕ ಶ್ರೀ ಕೆ. ಗೋಪಾಲಕೃಷ್ಣರವರು ವಂದನಾರ್ಪಣೆ ಗೈದರು.

ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘ

ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘದ ಕ್ರಿಯಾ ಸಮಿತಿಯ ಮತ್ತು ಇತರ ಪ್ರಮುಖ ಕೃಷಿಕ ಮುಂದಾಳುಗಳ ಸಭೆಯು ತಾ. 29-1-1966ರಂದು ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಶ್ರೀ ಯಂ. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಿ ಇದುವರೆಗೆ ನಡೆದ ನಿಧಿ ಸಂಗ್ರಹದ ಕುರಿತು ಸಮಾಲೋಚನೆ ನಡೆದು ಪ್ರತೀ ತಾಲೂಕಿನಿಂದ ವರದಿಯನ್ನು ಪಡೆಯಲಾಯಿತು.

ಮುಂದಿನ ಧನ ಸಂಗ್ರಹದ ಕುರಿತು ಸಮಾಲೋಚನೆ ನಡೆದು ಮೈಸೂರು ಭೂಸುಧಾರಣಾ ಕಾನೂನಿನ ನ್ಯಾಯತ್ವ ಮತ್ತು ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ರಿಟ್ ದಾವೆ ಹೂಡುವ ವೆಚ್ಚದ ಬಗ್ಗೆ ಪ್ರತಿಯೊಬ್ಬ ಪಟ್ಟಾದಾರರೂ ತಾವು ಕೊಡುವ ತೀರ್ವೆಯಷ್ಟೇ ಧನ ಸಹಾಯ ಮಾಡಬೇಕಾಗಿ ಕೋರುವ ನಿರ್ಣಯ ಮಾಡಲಾಯಿತು. ಮತ್ತು ಧನ ಸಂಗ್ರಹವನ್ನು ಕೂಡಲೇ ಮಾಡಿ 1966ನೇ ಇಸವಿ ಫೆಬ್ರವರಿ ತಿಂಗಳ ಅಖೈರಿನ ಒಳಗೆ ಸಂಘಕ್ಕೆ ಒದಗಿಸಿ ಕೊಡಬೇಕಾಗಿ ತಾಲೂಕು ಕಲೆಕ್ಷನ್ ಕಮಿಟಿಗಳನ್ನು ಎಲ್ಲಾ ಕೃಷಿಕ ಬಾಂಧವರನ್ನೂ, ಸಾರ್ವಜನಿಕರನ್ನೂ ಕೇಳಿಕೊಳ್ಳಲಾಯಿತು.

ರಿಟ್ ಪಿಟಿಷನಿನ ಕುರಿತು ಸಮಾಲೋಚನೆ ನಡೆದು ರಿಟ್ ಪಿಟಿಷನನ್ನು ದಾಖಲು ಮಾಡುವ ಬಗ್ಗೆ ಈ ಕೆಳಗಿನ ಮಹನೀಯರನ್ನೊಳಗೊಂಡ ಒಂದು ಕಮಿಟಿಯ ಆಯ್ಕೆ ಮಾಡಲಾಯಿತು. ಸರ್ವಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ-ಮಂಗಳೂರು, ಯಂ. ಡಿ. ಅಧಿಕಾರಿ-ವರಂಗ, ವಿಷ್ಣುಮೂರ್ತಿಭಟ್-ಹರಿಹರಪುರ (ಕೊಪ್ಪ ತಾಲ್ಲೂಕು) ಕೆ. ಸುಂದರರಾಮ ಶೆಟ್ಟಿ-ಮಂಗಳೂರು, ಕೊಟ್ಟಿಕಾರ್ ವರದರಾಯ ಪೈ-ಉಡುಪಿ, ಕೆ. ಬಿ. ಶಂಕರರಾಯರು-ಬಂಟ್ವಾಳ, ಬೋಳ ರಘುರಾಮ ಶೆಟ್ಟಿ-ಕಾರ್ಕಳ, (ಕನ್ವೀನರ್.)

ಸತ್ಕಾರ

ಉಡುಪಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹಿಂದೆ ಶಾಲಾ ಹಳೆ ವಿದ್ಯಾರ್ಥಿಯಾಗಿದ್ದು, ಕಳೆದ ಪಾಕಿಸ್ತಾನದ ಘರ್ಷಣೆಯಲ್ಲಿ ಯೋಧನಾಗಿ ಹೋರಾಡಿ ಅಂಗವಿಕಲರಾಗಿದ್ದ ಶ್ರೀ ದೇವದಾಸ ನಾಯಕ್ ಇವರನ್ನು ಸತ್ಕರಿಸುವ ಸಮಾರಂಭವು ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ದೇವದಾಸ ನಾಯ್ಕರು ಯುದ್ಧ ಭೂಮಿಯಲ್ಲಿನ ತಮ್ಮ ಅನುಭವ ಹೇಳಿದರು. ಶಾಲಾ ಅಧ್ಯಾಪಕ ಶ್ರೀ ಎಂ. ಆರ್. ಶೆಟ್ಟರು ಭಾಷಣ ಮಾಡಿದ ಬಳಿಕ, ಶ್ರೀ ವೆಂಕಣ್ಣನವರು ಧನ್ಯವಾದ ಸಮರ್ಪಿಸಿದರು.

ಸಂತಾಪ ಸೂಚಕ ಸಭೆ

ತಾ. 12.1.66ರಂದು ಗಂಗೊಳ್ಳಿಯ ತಮ್ಮ ಸ್ವಗೃಹದಲ್ಲಿ ದೈವಾಧೀನರಾದ ಹಟ್ಟಿಯಂಗಡಿ ಲಕ್ಷ್ಮೀನಾರಾಯಣ ಕಾಮತರ ಕುರಿತಾಗಿ ಸಂತಾಪ ಸೂಚಿಸಲು ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ಪ್ರಾಧ್ಯಾಪಕ ಮತ್ತು ವಿದ್ಯಾರ್ಥಿ ವೃಂದದವರು ತಾರೀಕು 18—1—66ರಂದು ಸಭೆ ಸೇರಿದರು. ಪ್ರೋ॥ ಟಿ. ಕೃಷ್ಣರಾವ್, ಪ್ರಿನ್ಸಿಪಾಲ್‌ರವರು ದಿವಂಗತರ ಗುಣಗಾನ ಮಾಡುತ್ತ "ಅವರು ತಮ್ಮ 90 ವರ್ಷಗಳ ತುಂಬು ಜೀವನದಿಂದ ಹಲವು ಸಂಸ್ಥೆಗಳ ಪೋಷಕರಾಗಿ ದುಡಿದು ಸಫಲ ಜೀವಿಯಾಗಿದ್ದಾರೆ. 1963ರಲ್ಲಿ ಕಾಲೇಜಿನ ಉದ್ಘಾಟನಾ ಸಮಾರಂಭದ ಅಧ್ಯಕ್ಷರಾಗಿದ್ದು ಕಾಲೇಜಿನ ಸ್ಥಾಪನೆಗೆ ಕಾರಣರಾದವರಲ್ಲಿ ಒಬ್ಬರಾಗಿದ್ದಾರೆಂದು" ಹೇಳಿ ಮೌನ ಪ್ರಾರ್ಥನೆ ಮಾಡಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ಶ್ರದ್ಧಾಂಜಲಿ

ಉಡುಪಿ ಪರ್ಯಾಯ ಮಹೋತ್ಸವದ ಅಂಗವಾಗಿ ಶ್ರೀ ಮಧನಂತೇಶ್ವರ ದೇವಸ್ಥಾನದ ಹೊರ ಪೌಳಿಯಲ್ಲಿ ಶ್ರೀ ಸೀತಾನದಿ ಗಣಪಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕಲಾ ಮಂಡಲ ಇವರು ಏರ್ಪಡಿಸಿದ ಯಕ್ಷಗಾನ ಕೂಟದಲ್ಲಿ ಲಾಲ್ ಬಹದೂರ್ ಶಾಸ್ತ್ರಿಯವರ ನಿಧನದ ಬಗ್ಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಶ್ರೀಗಳಾದ ಪಾ. ಲ. ನಾ. ಉಪಾಧ್ಯಾಯ, ಲಕ್ಷ್ಮೀ ಜನಾರ್ಧನ ಭಟ್, ಮೊದಲಾದವರು, ಈ ಸಂದರ್ಭದಲ್ಲಿ ಮಾತನಾಡಿದರು. ನಂತರ ಜರಗಿದ 'ರಾಜಸೂಯ' ಎಂಬ ಯಕ್ಷಗಾನ ಕೂಟದಲ್ಲಿ ಶ್ರೀಗಳಾದ ಕೆ. ನಾರಾಯಣ ಶೆಟ್ಟಿ (ಭಾಗವತಿಕೆ) ಎಂ. ಗೋವರ್ಧನ ರಾವ್ ಮತ್ತು ಸಗ್ರಿ ಕಿಟ್ಟಾಚಾರಿ (ಮೃದಂಗ) ಕೋಟೆ ಸುಬ್ಬರಾವ್, ಸೀತಾನದಿ ಗಣಪಯ್ಯ ಶೆಟ್ಟಿ ಲಕ್ಷ್ಮೀಜನಾರ್ಧನ ಭಟ್, ಪುಟ್ಟಣ್ಣ ಶೆಟ್ಟಿ, ಕೆ. ಶೇಖರ ಶೆಟ್ಟಿ, ಕೆ. ರಾಮ ಶೆಟ್ಟಿ ಇವರೇ ಮೊದಲಾದವರು ಭಾಗವಹಿಸಿದ್ದರು.

ಮಂಗಲೋತ್ಸವ

ಬುಡ್ನಾರು ಸ್ವತಂತ್ರ ಭಾರತ ಮಾತಾ ಭಜನಾ ಮಂದಿರದ ವಾರ್ಷಿಕೋತ್ಸವದ ಭಜನಾ ಮಂಗಲೋತ್ಸವವು ತಾ. 29-1-66ರಂದು ಜರಗಿತು. ಮಂಗಲಾಚರಣೆಯ ಬಳಿಕ ಶ್ರೀ ಬಿ. ಶಂಕರ ಶೆಟ್ಟರು ಧನ್ಯವಾದ ಅರ್ಪಿಸಿದರು.

ನೆಚ್ಚಿನ ಪ್ರಧಾನಿಯರಿಗೆ ಶ್ರದ್ಧಾಂಜಲಿ

ಕುಂದಾಪುರ, ಪ್ರಧಾನಿ ಲಾಲ್ ಬಹಾದೂರ್ ಶಾಸ್ತ್ರಿಯವರ ಆಕಸ್ಮಿಕ ನಿಧನದ ವಾರ್ತೆ ತಿಳಿದು, ಭಂಡಾರ್‌ಕಾರ್ಸ್ ಕಾಲೇಜಿನ ಪ್ರಾಧ್ಯಾಪಕ ಮತ್ತು ವಿದ್ಯಾರ್ಥಿ ವೃಂದದವರು ಸಭೆಸೇರಿ ಸಂತಾಪವನ್ನು ಸೂಚಿಸಿದರು. ಪ್ರಿನ್ಸಿಪಾಲ್ ಟಿ. ಕೃಷ್ಣರಾವ್‌ರವರು, "ನೆಚ್ಚಿನ ಪ್ರಧಾನಿ ಶಾಸ್ತ್ರಿಯವರು ದೇಶದ ರಕ್ಷಣೆಗಾಗಿ ಶ್ರಮಿಸುತ್ತ ಪ್ರಾಣಾರ್ಪಣೆ ಮಾಡಿದ ಶಾಂತಿದೂತ; ಅಂತಹ ಮಹಾತ್ಮರ ಅಗಲಿಕೆ ದೇಶಕ್ಕೆ ಆಕಸ್ಮಿಕ ಆಘಾತ"—ವೆಂದು ನುಡಿದು, ರಾಷ್ಟ್ರಧ್ವಜವನ್ನು ಅರ್ಧಕ್ಕೇರಿಸಿ, ಮೌನ ಪ್ರಾರ್ಥನೆಯನ್ನು ಮಾಡಿ ಶ್ರದ್ಧಾಂಜಲಿಯನ್ನರ್ಪಿಸಿದರು.

ಶ್ರದ್ಧಾಂಜಲಿ

ಮಣಿಪಾಲ, ೩. ೧೧-ಜನಪ್ರಿಯ ನಾಯಕರಾಗಿದ್ದ ಶ್ರೀ ಲಾಲ್ ಬಹಾದೂರ್ ಶಾಸ್ತ್ರಿಯವರಿಗೆ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಅಧ್ಯಕ್ಷರಾಗಿದ್ದ ಡಾ॥ ಶ್ರೀ ಟಿ. ಎ. ಪೈಯವರು ಶ್ರದ್ಧಾಂಜಲಿ ಅರ್ಪಿಸುತ್ತಾ ಅವರ ಅತ್ಯಂತ ಅನಿರೀಕ್ಷಿತ ನಿಧನದಿಂದುಂಟಾಗಿರುವ ಕೊರತೆಯನ್ನು ಇಡೀ ದೇಶ ಒಂದಾಗಿ ತುಂಬುತ್ತದೆಂದು ತಿಳಿಸಿದರು. ಅವರ ಮಹಾ ಧ್ಯೇಯಗಳನ್ನು ನಾವು ಅನುಸರಿಸ ಬೇಕೆಂದು ಅವರು ಕರೆಯಿತ್ತರು.

ಡಾ॥ ಟಿ. ಎಂ. ಎ. ಪೈಯವರು ಮಾತನಾಡಿ ಶ್ರೀ ಶಾಸ್ತ್ರಿಯವರು ಗಳಿಸಿದ ಹಿರಿಮೆ ಸದಾ ಕಾಲ ಉಳಿಯುತ್ತದೆಂದರು. ಉಚ್ಚ ಧ್ಯೇಯಗಳನ್ನು ಅವರು ಹೊಂದಿದ್ದರು. ನೆರೆಯ ರಾಷ್ಟ್ರದೊಂದಿಗೆ ದುಃಸ್ಥಿತಿಯನ್ನು ನೀಗಿಸುವ ಪ್ರಯತ್ನದಲ್ಲಿ ತಮ್ಮ ಜೀವವನ್ನು ತೆತ್ತರೆಂದು ಅವರು ತಿಳಿಸಿದರು. ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ನಡೆದ ಸಂತಾಪ ಸೂಚಕ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಕೃಷಿ ಅಭಿವೃದ್ಧಿಗೆ ಸ್ವಾಮಿ ಇಲೆಕ್ಟ್ರಿಕಲ್ಸ್‌ನ ನೆರವು

ಕಾರ್ಕಳ, ಜಿಲ್ಲಾಧಿಕಾರಿಗಳಾದ ಶ್ರೀ ಎಚ್. ಎಲ್. ನಾಗೇಗೌಡರು ಸ್ವಾಮಿ ಇಲೆಕ್ಟ್ರಿಕಲ್ಸ್, ಕಾರ್ಕಳ ಇವರು ಪ್ರಾರಂಭಿಸಿರುವ ಮೂರು ವರುಷಗಳ ವಾಯಿದೆಯ ಪಂಪು ವಿತರಣಾ ಯೋಜನೆಯನ್ನು ಸ್ಥಳೀಯ 'ನಾಯಕ್' ಹಾಲಿನಲ್ಲಿ ತಾ. 26-1-66ರಂದು ಕಾರ್ಕಳ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಎಸ್. ಮೋಹನದಾಸ್ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಉದ್ಘಾಟಿಸುತ್ತಾ, ಖಾಸಗಿ ಸಂಸ್ಥೆಗಳೂ ಕೃಷಿ ಅಭಿವೃದ್ಧಿಯಲ್ಲಿ ಸಾಧಿಸುವ ಪ್ರಗತಿ ಮಹತ್ತರವಾಗಿದೆ, ಸ್ವಾಮಿ ಇಲೆಕ್ಟ್ರಿಕಲ್ಸ್‌ನವರ ಈ ಯೋಜನೆಯು ರಾಷ್ಟ್ರದ ಏಳಿಗೆಯ ದೃಷ್ಟಿಯಿಂದ ಪ್ರಶಂಸನೀಯವೆಂದು ನುಡಿದರು. ಮುಂದುವರಿಯುತ್ತಾ ಅವರು ವಿಜಯಾ ಬ್ಯಾಂಕು ಈ ದೆಸೆಯಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು.

ಪ್ರಾರಂಭದಲ್ಲಿ ದಿವಂಗತ ಪ್ರಧಾನಿ ಶಾಸ್ತ್ರಿ, ಶ್ರೀ ಶ್ರೀನಿವಾಸ ಮಲ್ಯ, ಡಾ॥ ಹೋಮಿ ಭಾಭಾರವರ ನಿಧನದ ಬಗ್ಗೆ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಂಸ್ಥೆಯ ಸ್ವಾಮಿ ಇಲೆಕ್ಟ್ರಿಕಲ್ಸ್‌ನ ಪಾರ್ಟನರ್ ಶ್ರೀ ಕೆ. ಸತೀಶಚಂದ್ರ ಶೆಟ್ಟಿಯವರು ಅತಿಥಿಗಳನ್ನು ಸ್ವಾಗತಿಸುತ್ತಾ, ಸಂಸ್ಥೆಯ ಪ್ರಗತಿಪರ ವರದಿಯನ್ನೊಪ್ಪಿಸಿದರು ಮಾತ್ರವಲ್ಲದೆ ಈ ಯೋಜನೆಯು ರೈತರ ಅನುಕೂಲ, ಅಭಿವೃದ್ಧಿಗಾಗಿಯೇ ಸ್ಥಾಪಿಸಿರುವುದರಿಂದ ಅವರಿಗೇ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗುವುದು ಎಂದು ನುಡಿದರು. ಮುಂದುವರಿಯುತ್ತಾ ಅವರು ಈ ಯೋಜನೆಗೆ ಬೇಕಾದ ಆರ್ಥಿಕ ನೆರವನ್ನು ನೀಡಲು ಮುಂದೆ ಬಂದಿರುವ ವಿಜಯಾ ಬ್ಯಾಂಕಿಗೆ ಕೃತಜ್ಞತೆಗಳನ್ನರ್ಪಿಸಿದರು.

ದ. ಕ. ಜಿಲ್ಲಾ ಎಗ್ರಿಕಲ್ಚರಲ್ ಡೆಪ್ಯುಟಿ ಡೈರೆಕ್ಟರ್ ಶ್ರೀ ಎಚ್. ಎಸ್. ಕಾಮತರು ಕಂತು ಯೋಜನೆಯನ್ವಯ ಖರೀದಿಮಾಡಿದ ಕ್ಕ 28 ಪಂಪು ಸೆಟ್ಟುಗಳನ್ನು ರೈತರಿಗೆ ವಿತರಣೆ ಮಾಡುತ್ತಾ ಈ ಯೋಜನೆ ನಿಜಕ್ಕೂ ಸ್ವಾಗತಾರ್ಹವೆಂದು ನುಡಿದರು.

ವಿಜಯಾ ಬ್ಯಾಂಕಿನ ಡೈರೆಕ್ಟರ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ತಮ್ಮ ಭಾಷಣದಲ್ಲಿ 1931ರಲ್ಲಿ ಕೃಷಿಕರ ಏಳಿಗೆಗಾಗಿಯೇ ಸ್ಥಾಪಿಸಲ್ಪಟ್ಟ ವಿಜಯಾ ಬ್ಯಾಂಕು ಕೃಷಿ ಉದ್ದಿಮೆಯ ಪ್ರಗತಿಗೆ ನೀಡುತ್ತಿರುವ ಪ್ರೋತ್ಸಾಹಗಳನ್ನು ವಿವರಿಸಿದರು.

ಮೈಸೂರು ರಾಜ್ಯದ ತೋಟಗಾರಿಕೆ ಮತ್ತು ಕರಮೀಣಸು ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕೆ. ರಘು ಶೆಟ್ಟಿ, ಬೆಳ್ತಂಗಡಿ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಜಿ. ಎಸ್. ಭಿಡೆ ಮೊದಲಾದವರು ಈ ಸಂದರ್ಭದಲ್ಲಿ ಮಾತನಾಡಿ ಈ ನೂತನ ಸಾಹಸಕ್ಕೆ ಶುಭಕೋರಿದರು, ಕೊನೆಯಲ್ಲಿ ಭುವನೇಂದ್ರ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಭಂಡಾರಿಯವರು ವಂದನಾರ್ಪಣೆ ಗೈದರು.

"ಇನ್ನೆಲ್ಲಿ ಶಾಸ್ತ್ರೀಜಿ? ಇನ್ನೆಲ್ಲಿ ವೀರ ಪುತ್ರ?"

ಸಿಡಿಲೆರಗಿದಂತೆ ಕೇಳ,
ಬಂತೊಂದು ಸುದ್ದಿ,
ಭಾರತ ರತ್ನ ಶಾಸ್ತ್ರೀಜಿ,
ಶಾಂತಿದೂತ ಶಾಸ್ತ್ರೀಜಿ,
ಭಾಗ್ಯೋದಯದ ನಾಯಕ,
ತಾಯಿನಾಡ ರಕ್ಷಕ,
ತಾಯಿನಾಡ ಹೆಮ್ಮೆಯ,
ಪುತ್ರ ಶಾಸ್ತ್ರೀಜಿ,
ಇನ್ನಿಲ್ಲವಂತೆ ಎಮಗೆ
ಓಹ್ ಎಂಥಹ ಸುದ್ದಿ!
ತಲೆ ತಿರುಗಿದಂತಾಯಿತು,
ಕುಸಿದೆ ಕೂಡಲೇ ಭೂಮಿಗೆ,
ಅಯ್ಯೋ ಇನ್ನಿಲ್ಲವೇ ಶಾಸ್ತ್ರೀಜಿ?
ನಾವ್ ತಾಳಲಾರೆವು ದುಃಖವ,
ದುಃಖದ ಮಡಿಲಲ್ಲಿ,
ತೇಲುತ್ತಿರುವೆವ್ ನಾವ್,
ದಾರಿ ದೀಪವ ಕಾಣದೆ,
ಎಮ್ಮನು ಮುನ್ನಡೆಸುವ,
ನಾಯಕನ ಬಿಟ್ಟಿರಲಾರೆವು,
ಅಗಲಿದ ವೀರ ಪುತ್ರನ,
ನೆನಪು ಅಚ್ಚಳಿಯದೆ ಉಳಿದು,
ಎಮ್ಮನು ಅಧೀರರನ್ನಾಗಿ ಮಾಡಿಹುದು,
ಶಾಸ್ತ್ರೀಜಿ ಮತ್ತೆ ಮರಳಿ,
ಭುವಿಗೆ ಬರಲಾರಿರಾ ತಂದೆ?
ಓಹ್ ಎನ್ನಯ ಕರೆ,
ಮುಂದುವರಿಸಲು ಮುಷ್ಕರ ಹೂಡಿದೆ,
ಮನ ದುಃಖದ ಮಡುವಿನಲ್ಲಿ,
ಮುಳುಗಿ ದಿಕ್ಕು ಕಾಣದಾಗಿದೆ.
ಇನ್ನೆಲ್ಲಿ ಶಾಸ್ತ್ರೀಜಿ? ಇನ್ನೆಲ್ಲಿ ವೀರ ಪುತ್ರ?

ಕೆ. ಶ್ರೀದೇವಿ, ಬೆಂಗಳೂರು.

(ಮೂರನೇ ಪುಟದಿಂದ)

ಬಹುದು ಗಣನೀಯ. ಅಂದರೆ, ಜೀವನ ವೆಚ್ಚ ಸೂಚಿಯೂ ಏಕ ಪ್ರಕಾರವಾಗಿ ಏರುತ್ತಲೇ ಬರುತ್ತಿದೆ ಎಂದ ಹಾಗಾಯಿತು. ಕೇಂದ್ರ ಸರಕಾರದ ಈ ಕ್ರಮದಿಂದ ರಾಜ್ಯ ಸರಕಾರಗಳೂ ನಮ್ಮ ನೌಕರರ ತುಟ್ಟಿ ಭತ್ತೆಯನ್ನು ಏರಿಸಲೇ ಬೇಕಾಗುತ್ತದೆ. ಇಲ್ಲವಾದರೆ, ಅತೃಪ್ತ ನೌಕರರು ಚಳುವಳಿಯ ಬೆದರಿಕೆಯನ್ನು ಹಾಕದಿರರು. ಇಲ್ಲಿ ನಾವು ಒಂದು ಮಾತನ್ನು ಗಮನಿಸಬೇಕು. ಜೀವನ ವೆಚ್ಚದಲ್ಲಿ ಏರಿಕೆಯಾದಂತೆ ಭತ್ತೆಯನ್ನು ಹೆಚ್ಚಿಸುತ್ತ ಹೋಗುವುದು ಪ್ರಾಯಃ ಅವ್ಯಾವಹಾರಿಕವಾಗಬಹುದು. ಅದಕ್ಕೆಂದೇ ರಾಜ್ಯದ ಮುಖ್ಯ ಮಂತ್ರಿಗಳು ಇವನ್ನು ಸರಿದೂಗಿಸುವ ಇತರ ಕ್ರಮವರಿಯುವತ್ತ ದೃಷ್ಟಿ ಹರಿಸಿದ್ದರು. ಆ ಕ್ರಮ ಯಾವುದು? ಜೀವನ ವೆಚ್ಚ ಏರದಂತೆ ತಡೆಯುವುದು ಸಾಧ್ಯವಿಲ್ಲವೇ? ಇದು ಸದ್ಯ ಅಸಾಧ್ಯವೆಂದೇ ತೋರುತ್ತದೆ. ಇನ್ಯಾವ ವಿಧಾನವನ್ನು ಬಳಸಬೇಕು?—ಇದನ್ನು ಅಧಿಕಾರ ಸ್ಥಾನದಲ್ಲಿರುವವರು ಯೋಚಿಸಬೇಕು. ಇಂತಹ ವಿಧಾನವನ್ನು ಕಂಡು ಹಿಡಿಯುವರೆಂಬ ವಿಶ್ವಾಸ. ಸಾಲದ್ದಾದರೂ ಇತ್ತ ಗಮನ ಹರಿದಿದೆ—ಇದು ಸಂತೋಷ. ಮಿತ ಬೆಲೆಯಲ್ಲಿ ಜೀವನಾವಶ್ಯಕ ಪದಾರ್ಥಗಳು ನೌಕರರಿಗೆ ಮಾತ್ರವಲ್ಲ, ಎಲ್ಲ ನಾಗರಿಕರಿಗೂ ದೊರೆಯಬೇಕು—ಇದು ಹೇಗೆ ಸಾಧ್ಯ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ॥ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಕ್ರೈತ್ರ ಮುರುಗ

(ಎರಡನೇ ಪುಟದಿಂದ)

ಡು ಬಗೆಯುವನಾಗಿದ್ದಿಲ್ಲ. ಯಶದ ಪಾತಾಳದಲ್ಲಿ ಅವರು ಮುಖ್ಯಸ್ಥಾನವನ್ನು ಪಡೆದುಕೊಂಡಿದ್ದರು. ನ್ಯಾಯಾಲಯದಲ್ಲಿರುವಾಗ ಗಡಸುತನ ಅಥವಾ ಯಾವದಕ್ಕೂ ಹೇಸದವರಂತಿದ್ದಲ್ಲಿ, ಸಾಯಂಕಾಲ ಆಕರ್ಷಕ ಸುಹೃದ್ಭಾವದಿಂದ ಆ ಕೆಟ್ಟ ಶೋಭೆಯನ್ನು; ಅವರ ಉದ್ದ, ಸಪೂರ ಹಾಗೂ ಅತ್ಯಾಕರ್ಷಕ ಶರೀರವು ಮುಸುಕನ್ನು ಅಷ್ಟು ಸುಲಭವಾಗಿ ಬದಲಾಯಿಸಲು ಬಿಡದಿದ್ದರೂ, ಅವರು ತೊಡೆದು ಹಾಕುತ್ತಿದ್ದರು.

ಬಾಳಿನ ಎಲ್ಲಾ ಅಸಮಾನತೆಯನ್ನು ಸಮುದ್ರವು ಒರಸಿ ಬಿಡುತ್ತದೆ. 'ಮೆರಿನಾ' ಕಡಲು ಕರೆಯಲ್ಲಿ ಮಾರ್ಕಂಡಂರವರು ಉಲ್ಲಸಿ ಹಾಗೂ ವಿಲಾಸಿಯಾಗಿರುತ್ತಿದ್ದರು. ಅವರು ಕೇದಾರಿಯ ಬೆನ್ನು ತಟ್ಟುತ್ತಿದ್ದರು, ಕಿವಿ ಹಿಂಡುತ್ತಿದ್ದರು. ಅವರು ತಾಕ್ಕಿಯ ಕುರಿತು ಛೇಡಿಸುತ್ತ ಅವನ ಗಡ್ಡವಿಲ್ಲದ ಗದ್ದವನ್ನು ತಟ್ಟುತ್ತಿದ್ದರು! ಈ ಪ್ರೀತಿಯೆಲ್ಲಾ ನ್ಯಾಯಾಲಯದ ಹೊರಗೆ ಕಾಣಿಸಿ ಕೊಳ್ಳುತ್ತಿದ್ದುದರಿಂದ ಅವು ಕೇದಾರಿಯ ಗಿರಣಿಗ್ರಾಹಕಾಳನ್ನು ತರುತ್ತಿರಲಿಲ್ಲ. ಕೇದಾರಿಯು ದಿವಾಳಿ ತೆಗೆದ ಸಮಯವು ಕೋಕಿಲಂಳನ್ನು ಕಾಡುತ್ತಿತ್ತು.

ಯಶಸ್ಸಿನಂತೆ ಯಾವದೂ ಜಯಿಸುವುದಿಲ್ಲ ಎಂಬ ಗಾದೆಯಿಂದ ಚೈತನ್ಯ ತುಂಬಿಸಿಗೊಂಡಿದ್ದ ಕೇದಾರಿಗೆ, ಮೈಲಾಪುರದ ನಾಡುಬೀದಿಯಲ್ಲಿ ಒಳ್ಳೆ ಬಾಡಿಗೆಯ ಒಂದು ಚೊಕ್ಕ ಮನೆಯೂ ಕೋಕಿಲಂ ಇದ್ದುವು. ನಾಡುಬೀದಿಗೆ ಲಝ್‌ನ ಮುವ್ವತ್ತು ವರುಷಗಳ ಸಿರಿವಂತಿಕೆಯ ಸಂಪ್ರದಾಯವಾಗಲೀ ಕಪಾಲಿ ಚೌಕದಾವರಣದ ಆಧುನಿಕ ಶ್ರೀಮಂತಿಕೆಯ ಸೊಬಗಾಗಲೀ, ಇಲ್ಲ. ನಿರಾಶಾಪೂರ್ಣ ಜೀವಿಗಳಿರುವ ಮಂದವೇಲಿಯ ಹಾಗೆ ಮಲಿನಮಯವಾಗಿಯಾಗಲೀ, ಟರ್ನಾರ್ ಸ್ಥಳದ ಹಾಗೆ ಕೊಳಕಾಗಿಯಾಗಲೀ ಇಲ್ಲ. ಅದು ಕೇಂದ್ರ ಸ್ಥಾನದಲ್ಲಿದ್ದುಕೊಂಡು ಒಳ್ಳೆಯ ಸ್ಥಳವಿದೆ. ನಾಡು ಬೀದಿಯು ನಿಜವಾಗಿ ಸಪೂರವಾದ್ದಾದರೂ ಅದು ಕೊಳ್ಳದಾವರಣದ ಬಳಿ ಅಗಲವಾಗುತ್ತ ಬಂದು ಲಝನ್ನು ಸೇರುತ್ತದೆ.

ನಿಜವಾಗಿ ಅವನು ಉದ್ಯೋಗಾರ್ಥಿ ವರ್ಷವನ್ನು ಸಂತೋಷದಲ್ಲೇ ಕಳೆದಿದ್ದನು, ಅದು ಕೋಕಿಲಂಳೊಡನೆ ಕಳೆದ ಮೊದಲನೆಯ ವರ್ಷವೂ ಆಗಿತ್ತು. ಜೀವನದಲ್ಲಿ ಘಟಿಸುವ ಹಲವಾರು ಸಂಗತಿಗಳ ನಿಜವಾದ ಸೇವಾ ಕಾಲವೂ ಅದಾಗಿತ್ತು. ಆ ವಿಶ್ರಾಂತಿ ಹಾಗೂ ಸಂತೋಷದ ಕಾಲದಲ್ಲೂ ಅವನು ಕೆಲಸವನ್ನು ಕಡಿಮೆ ಮಾಡಿಕೊಂಡಿರಲಿಲ್ಲ. ಶ್ರೇಷ್ಠ ನ್ಯಾಯಾಲಯದ ನ್ಯಾಯವಾದಿ ಎಂದು ದಾಖಲೆಯಲ್ಲಿ ಹೆಸರು ಬರೆಸಿಕೊಂಡ ಮೇಲೆ, ತನ್ನ ಜೀವನದ ಪಂಚಾಂಗವನ್ನು ಚೆನ್ನಾಗಿ ಹಾಗೂ ಸರಿಯಾಗಿ ಹಾಕಲು ಅವನು ಇನ್ನೂ ಹೆಚ್ಚು ಪ್ರಯತ್ನಿಸಿದನು. ತನ್ನ ಮುಖಂಡರು ವಾದಿಸುತ್ತಿದ್ದ ಮುಖ್ಯ ವ್ಯಾಜ್ಯಗಳ ವೇಳೆಯಲ್ಲಿ ಅವನು ಅಲ್ಲೇ ಉಪಸ್ಥಿತನಿರುತ್ತಿದ್ದ. ಅವರು ಸೋಲುತ್ತಿದ್ದ ವ್ಯಾಜ್ಯಗಳಲ್ಲೂ ಅವನು ಗೆದ್ದು ಜಯದ ವಾತಾವರಣವನ್ನುಂಟು ಮಾಡುತ್ತಿದ್ದನು. ಆದರೂ ನ್ಯಾಯಾಲಯದ ಒಳಗೆ ಅವರು ಒಂದು ಒಳ್ಳೆಯ ಮುಗುಳ್ನಗೆಯನ್ನೂ ಬೀರುತ್ತಿದ್ದಿಲ್ಲ.

ಸದ್ಗುಣವು ಎಂದಾದರೂ ತನ್ನ ಬಹುಮಾನ ಪಡೆಯದೆ ಹೋಗುವದುಂಟೇ? ಹಲವಾರು ತಿಂಗಳು ಅವರೇನೂ ಲಕ್ಷ್ಮಿಪ್ರಸಾದವನ್ನು ಕೃಪೆ ಮಾಡದೆ ಇದ್ದುದರಿಂದ ಒಮ್ಮೆಲೇ ಉತ್ತಮ ಚೆಕ್ಕನ್ನು ಕೊಡಬಹುದೆಂದವನು ಭಾವಿಸಿಕೊಂಡಿದ್ದನು. ಒಂದು ವರ್ಷ ಕಳೆದು ಹೋಯಿತು. ಅವನ ಭಾವನೆ ಕೇವಲ ಭಾವನೆಯಾಗಿಯೇ ಉಳಿಯಿತು. ಅವರ ಕಕ್ಷಿಗಾರರಿಗೂ ಕೇದಾರಿಯ ಮುಂಬರುವಿಕೆಯನ್ನು ಕಂಡು ಹಾಗೂ ಧೈರ್ಯದ ಪರಿಚಯವಾಗಿ ಅವನತ್ತ ಮನಸ್ಸು ಎಳೆಯುತ್ತಿತ್ತು.

ಸಾಮಾನ್ಯವಾಗಿ ಮಾರ್ಕಂಡಂರಲ್ಲಿ ದಯಾಪೂರ್ಣ ಹಾಗೂ ಉದಾರ ಹೃದಯವಿತ್ತು. ಯುಕ್ತ ಸಂದರ್ಭದಲ್ಲಿ ಕೇದಾರಿಗೆ ಚೆನ್ನಾಗಿ ಸಹಾಯ ಮಾಡಬೇಕೆಂದು ಅವರು ಆಲೋಚನೆ ಮಾಡಿಕೊಂಡಿದ್ದರು. ಪ್ರಾರಂಭದ ಅನಿಶ್ಚಿತ ಉಪದ್ರವಮಯ ಕೆಲ ವರ್ಷಗಳನ್ನು ಕಳೆದು ಬಿಟ್ಟ ನಂತರ ಕಾಯಿದೆಯ ಜೀವನದಲ್ಲಿ ಯಾರೂ ಸೋಲುವದಿಲ್ಲವೆಂಬುದೇ ಅವರ ಎಣಿಕೆ. ಪ್ರಚಲಿತ ಪರಿಸ್ಥಿತಿಯಲ್ಲಿ ಕೇದಾರಿಗೆ ಸಹಾಯ ಮಾಡುವದೆಂದರೆ, ಅರ್ಥಗರ್ಭಿತ ಒಂದು ಬುದ್ಧಿವಾದವನ್ನು ಹೇಳುವದೆಂದವರು ಭಾವಿಸಿಕೊಂಡಿದ್ದರು.

ನ್ಯಾಯಾಲಯದ ಪುನರಾರಂಭವಾಗುವದಕ್ಕೆ ಒಂದು ವಾರವಿದ್ದಾಗ ಅವರಿಗೆ ಕೇದಾರಿಯು ಕಡಲು ಕರೆಯಲ್ಲಿ ಸಿಕ್ಕಿದನು. ನಮಸ್ಕಾರ ಪ್ರತಿ ನಮಸ್ಕಾರಗಳು ಮುಗಿದ ಮೇಲೆ ಅವರೇ ಮಾತಿಗಾರಂಭಿಸಿದರು. "ಕೇದಾರಿ, ಅಧೈರ್ಯ ಪಡದಿರು. ಮೊದಲ ಕಕ್ಷಿಗಾರನನ್ನು ಪಡೆಯಲು ನಾನು ಮೂರು ವರ್ಷ ಕಾದಿದ್ದೆನು. ಸಾಧನೆ ಬಿಡದಿರು. ನಿನ್ನ ಅಪ್ರತಿಮ ಸಾಹಸಕ್ಕೆ ಖಂಡಿತ ಯಶಸ್ಸು ದೊರಕುತ್ತದೆ. ಹಳ್ಳಿಯಲ್ಲಿರುವ ನಿನ್ನ ಸ್ನೇಹಿತರಿಗೆ ಬರೆ. ನನ್ನ ಹೆಸರನ್ನೂ, ಬೇಕಾದಲ್ಲಿ, ಉಪಯೋಗಿಸು. ನನ್ನ ಕಾರ್ಯಾಲಯದಲ್ಲಿ ಕೆಲಸಮಾಡುತ್ತಿರುವೆನೆಂದು ತಿಳಿಸು. ಸ್ವ—ಸಹಾಯವೇ ಮುಂದರಿಯಲಿರುವ ಉತ್ತಮ ಸಾಧನವಿದೆ. ನಾನು ಒದ್ದೆ ಮೂರು ವರ್ಷಗಳನ್ನು ಬೆರಳು ಕಚ್ಚಿಕೊಂಡು ಕಳೆದಿದ್ದೆ; ಈಗ ಯಶೋವಂತನೆಂದು ಕರೆಯಲ್ಪಡುತ್ತಿದ್ದೇನೆ."

ಉತ್ಸಾಹ ಭಂಗಗೊಂಡು ಅವನು ಮನೆಗೆ ಹಿಂತಿರುಗಿದನು. ಎಲ್ಲೆಲ್ಲೂ ಅವನಿಗೆ ತನ್ನಾಶೆಯ ಮರಣ ಸೂತಕ ಘಂಟಾನಾದ ಕೇಳಿ ಬರುತಿತ್ತು. ತನ್ನ ಪಾಲಿನ ವಿಷಯವನ್ನು ಸ್ಪಷ್ಟವಾಗಿ ಅವನಿಂದ ತಿಳಿದುಕೊಳ್ಳಲಿಕ್ಕಾಗಲಿಲ್ಲ.

"ನೀವೇಕಿಂದು ಈ ರೀತಿ ಖಿನ್ನ ವದನರಾಗಿದ್ದೀರೀಂದ್ರೆ?" ಕೋಕಿಲಂ ಕೇಳಿದಳು.

"ಏನಿಲ್ಲ, ನಿನ್ನ ಮಾವನನ್ನು ಕೇಳಿದೆಯೇನೇ?"

"ಯಾವದಕ್ಕಾಗಿ?"

"ಸಾಲ?"

'ಸಾಲದ ಮೇಲೆ ಸಾಲ! ಇಷ್ಟರವರೆಗೆ ಅವರಿಲ್ಲೇ ಇದ್ದರು. ನನ್ನ ಸ್ವರ ಹಾಗೂ ಭಾವವನ್ನು ಮುಂದಾಗಿಯೇ ತಿಳಿದುಕೊಂಡು ಹಿಂದಿನ ಸಾಲವನ್ನು ಒಂದು ವಾರದೊಳಗೆ ತೀರಿಸಬೇಕೆಂದವರು ಹೇಳಿದ್ದಾರೆ. ಹಾಗೂ ಇನ್ನುಮುಂದೆ ನಮಗೆ ಉಪಕಾರವನ್ನವರು ಮಾಡಲಾರರು."

'ಇಂತಹ ಕಷ್ಟದ ಪರಿಸ್ಥಿತಿಯಲ್ಲೂ ನಮಗಾರೂ ಸಹಾಯ ಮಾಡುವುದಿಲ್ಲ.' ಹಲುಬುತ್ತ ಹೇಳಿದನು.

"ಬೇಕಾದಾಗ ನಿಮಗೆ ಸಹಾಯ ಮಾಡಲು ಒಬ್ಬ ಸ್ನೇಹಿತರು ಒಬ್ಬರು ಇದ್ದರು. ಈ ಕೆಲವರ್ಷಗಳಿಂದ ನೀವವರನ್ನು ಲಕ್ಷ್ಯಮಾಡಿಯೇ ಇಲ್ಲ. ರಾಮುವಿಗೆ ನೀವು ಕೃತಘ್ನ........"

"ನಾನು ಅದೇ ಯೋಚಿಸುತ್ತಿದ್ದೇನೆ. ನೀನೂ ಅದೇ ವಿಷಯವನ್ನೆತ್ತಬೇಡ. ನ್ಯಾಯ ವಿದ್ಯಾಲಯವು ನನ್ನ ಹೃದಯವನ್ನು ಕಠಿಣವನ್ನಾಗಿ ಮಾಡಿದೆ. ಉದ್ಯೋಗವು ಅದನ್ನಿನ್ನು ಕಠಿಣವನ್ನಾಗಿ ಮಾಡುತ್ತಿದೆ. ಹೃದಯವು ಕಲ್ಲು ಅಥವಾ ಲೋಹ ರಚಿತವಾಗಿ ಬಿಡಬಹುದು. ನಮ್ಮ ದೊಡ್ಡದೊಡ್ಡ ನ್ಯಾಯವಾದಿಗಳು ಪಾಷಾಣ ಪ್ರತಿಮೆಗಳ ಹಾಗೆ ಇದ್ದಾರೆ. ನಮ್ಮ ಮುಂದಾಳು ನನ್ನನ್ನು ಜೀವಂತವಾಗಿ ಇರಲು ಕೇವಲ ಮಾತುಗಳಿಂದ ಸಲಹೆ ಕೊಡುತ್ತಿದ್ದಾರೆ."

"ಅನ್ಯಥಾ ಅವರೇತಕ್ಕೆ ವರ್ತಿಸುತ್ತಾರೆ? ನಿಮಗೆ ನಾನು ಈ ಹಿಂದೆಯೇ ಹೇಳಲಿಲ್ಲವೇನ್ರಿ? ಆದರೆ, ನೀವು ಅದೇನೇನೋ ಹೇಳುತ್ತಿದ್ದೀರಲ್ಲಾ? ನಿಮ್ಮನ್ನು ಬಹಳ ಹೊಗಳಿದರೆಂದೂ, ನಿಮ್ಮ ಬೆನ್ನು ತಟ್ಟಿದರೆಂದೂ, ಹೆಗಲ ಮೇಲೆ ಕೈ ಹಾಕಿದರೆಂದೂ, ಬಹಳ ಒಳ್ಳೆಯ ಹೃದಯ ಉಳ್ಳವರೆಂದೂ ಹೇಳುತ್ತಿದ್ದೀರಲ್ಲಾ! ಒಂದಲ್ಲ ಒಂದು ದಿನ ಬಹಳ ರೂಪಾಯಿಗಳ ಚೆಕ್ಕನ್ನು ತಂದು ಮಾದಲಿಸುತ್ತಿರುವ ನನ್ನ ಬಾಯಿಗೆ ತುರುಕಬಹುದೆಂದೆಣಿಸಿ ಕೊಂಡೀರಲ್ಲಾವೇಂದ್ರೆ!"

"ನಿಜ, ನಾನು ಹಾಗೆಯೇ ಎಣಿಸಿಕೊಂಡಿದ್ದೆ. ನಿಜವಾಗಿ ಅದು ಹುಚ್ಚುತನವೇ ಸರಿ. ತೃಪ್ತಿಯ ತಿಳಿವು ಇಲ್ಲದ ಈ ಸ್ವಾರ್ಥಿ ಪ್ರಪಂಚದಲ್ಲಿ ಎಲ್ಲರೂ ರಾಮುಗಳಿರುವುದಿಲ್ಲ. ನೀನು ಸರಿ, ಕೋಕಿಲಂ ನಮಗೆ ಯಾವದೂ ಬಹುಮಾನದಂತೆ ಬರುವದಿಲ್ಲ. ಮಡಿದದುದರ ಕೂಲಿಕೂಡಾ ಬಲವಂತಮಾಡದೇ ಇದ್ದ[illegible] ನನ್ನ ಮುಖಂಡರಿಗೆ ಬ[illegible] ಯ[illegible]ರಿಗೂ ಹೊಟ್ಟೆ ಇದೆ ಎನ್ನುವುದು ಗೊತ್ತಿಲ್ಲವೆಂದು ಕಾಣುತ್ತದೆ. ಅವರು 'ರೋಲ್ಸ್‌ರೋಯ್' ಕಾರಿಗೆ ತಿಂಗಳೊಂದಕ್ಕೆ ಮುನ್ನೂರು ರೂಪಾಯಿ ವೆಚ್ಚಮಾಡುತ್ತಾರಾದರೂ ಈ ಹಸಿದಿರುವ ಜೀವಂತ ಯಂತ್ರಕ್ಕೆ ಏನೂ ಕೊಡುವ ಮನಸ್ಸು ಮಾಡಿಲ್ಲ."

"ಅದು ಪ್ರಪಂಚದ ಪದ್ಧತಿ. ನಿಮಗಿಂತ ಕೀಳ್ಮಟ್ಟದಲ್ಲಿ ಇರುವವರ ಕುರಿತು ನೀವು ಎಂದಾದರೂ ಆಲೋಚನೆ ಮಾಡಿರುವಿರಾ?"

"ಹೌದು, ಕೋಕಿಲಂ, ಹೌದು. ಇದು ಚುಚ್ಚು ಮಾತು. ಆದರೆ ಇದಿಂದು ನನನಾಗಿಯೇ ಇದೆ. ರಾಮು ಹಾಗೂ ಅವನ ಅಪೂರ್ವ ಉದಾರತೆಯ ಕುರಿತು ನಾನು ಯೋಚನೆ ಮಾಡುತ್ತಿದ್ದೇನೆಯೇ? ಪಶ್ಚಾತ್ತಾಪವು ನನಗೆ ಶಾಂತಿಕೊಡಬಲ್ಲುದಾದಲ್ಲಿ ಇಂದಿನಿಂದಲೇ ನಾನು ಪ್ರಾರ್ಥಿಸುತ್ತೇನೆ, ಮತ್ತು..."

ಮಾತನ್ನವನು ಮುಗಿಸುವ ಮುಂಚೆಯೇ ಹತ್ತಿರಕ್ಕೆ ಬರುತ್ತಿದ್ದ ಪಾದ ಶಬ್ದಗಳು ಅವನ ಕಿವಿಯ ಮೇಲೆ ಬಿದ್ದುವು.

"ಯಾರೋ, ಒಬ್ಬರು ಬರುತ್ತಿದ್ದಾರೆ." ಕಿಟಕಿಯ ಮೂಲಕ ಇಣಿಕಿ ನೋಡಿದ ಕೋಕಿಲಂ ಸುದ್ದಿ ತಿಳಿಸಿ ಹಿಂದಕ್ಕೆ ಬಂದಳು.

"ಅವನು ಇಂದಿನ ಮೂರನೆಯ ಸಾಲಿಗನಾಗಿರದಿರಲೆಂದು ಆಶಿಸುತ್ತೇನೆ. ಏಳು ಮಲೆಗಳ ಮೇಲಿರುವ ತಿರುಪತಿಯ ವೆಂಕಟೇಶನು ಅವನನ್ನು ಮೊದಲನೆಯ ಕಕ್ಷಿಗಾರನನ್ನಾಗಿ ಮಾಡಲಿ." ಕೇದಾರಿಯು ತನ್ನ ಹೃದಯಾಂತರಾಳದಿಂದ ನಮ್ರನಾಗಿ ಪ್ರಾರ್ಥಿಸಿದನು.

"ಶ್ರೀ ಕೇದಾರಿ, ಬಿ. ಎ., ಬಿ. ಎಲ್., ಶ್ರೇಷ್ಠ ನ್ಯಾಯಾಲಯದ ನ್ಯಾಯವಾದಿಗಳು ಇದ್ದಾರೆಯೇ?'

"ಇದ್ದಾರೆ" ಕೇದಾರಿಯು ಬದಲ್ನುಡಿದನು.

"ಎಲ್ಲಿದ್ದಾರೆ? ನಾನವರನ್ನು ನೋಡಬೇಕಾಗಿದೆ."

"ನಾನೇ ಇದ್ದೇನೆ." ನಮ್ರತೆಯಿಂದ ಕೇದಾರಿಯು ಮರುನುಡಿದು, ಬೆತ್ತದಾಸನವನ್ನು ತಂದು, ಶ್ರೀಮಂತರಂತೆ ಕಾಣುತ್ತಿದ್ದ, ಅಪರಿಚಿತನನ್ನು ಆಸೀನನಾಗಲು ಕೇಳಿಕೊಂಡನು. ಪೆರಿಯ ಸ್ವಾಮಿಯವರಿಗೆ ತರುಣ ಕೇದಾರಿ, ಮದ್ರಾಸ್ ವಕೀಲನ, ಸರಳ ಆಶ್ರಯ ಸ್ಥಾನವನ್ನು ಕಂಡು ಆಶ್ಚರ್ಯವಾಯಿತು.

"ಅಲವಂತಿಯ ಶ್ರೀ ರಾಮಚಂದ್ರ, ನಿಮ್ಮ ಸ್ನೇಹಿತ ಹಾಗೂ ಓರಗೆಯವನು, ನನ್ನನ್ನಿಲ್ಲಿಗೆ ಕಳುಹಿಸಿದ್ದಾರೆ. ಪರಿಚಯ ಪತ್ರ ಇಲ್ಲಿದೆ."

"ಅಲವಂತಿಯ ರಾಮುವೇನು?'

"ಹೌದು."

"ರಾಮು ಈಗೆಲ್ಲಿದ್ದಾನೆ?"

"ಅವರೀಗ ಕಡಪದಲ್ಲಿ ಶಿಬಿರ-ಗುಮಾಸ್ತರಾಗಿದ್ದಾರೆ.'

'ಶಿಬಿರ-ಗುಮಸ್ತನಾಗಿ ಕಡಪದಲ್ಲಿ! ಪ್ರತಿಧ್ವನಿಯಂತಾಡಿದನು, ಕೇದಾರಿ.

"ತನ್ನೆಲ್ಲಾ ಆಸ್ತಿಯನ್ನು ಮಾರಲು ಕಳೆದ ವಾರ ಹಳ್ಳಿಗೆ ಬಂದಿದ್ದರು."



NAVAYUGA 10—2—1966
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

"ಎಲ್ಲಾ ಆಸ್ತಿಯನ್ನು ನೂರಿಯೋಯಿತು!' ಕಂಪಿಸುತ್ತಿದ್ದ ಸ್ವರದಿಂದ ಕೇದಾರಿ ಕೇಳಿದನು.

'ಹೌದು."

"ಈ ವಾರದಲ್ಲೇ ನಾನವನಿಗೆ ಬರೆದು ವಿಚಾರಿಸುತ್ತೇನೆ. ನಾವು ಭೇಟಿಯಾಗದೆ ಬಹಳ ದಿನಗಳಾಗಿವೆ." ಕಕ್ಷಿಗಾರನ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನುಂಟು ಮಾಡುವಂತಾಡಿ, ರಾಮುವಿನ ಆಲೋಚನೆಯನ್ನು ಭವಿಷ್ಯತ್ತಿಗೆ ತಳ್ಳಿಬಿಟ್ಟನು.

ತರುಣ ಪಕ್ಷಿಯು ತನ್ನ ಕೊಳ್ಳೆಯತ್ತ ನೋಡುವಂತೆ, ಕೇದಾರಿಯು ಕಕ್ಷಿಗಾರನನ್ನು ಉತ್ಸಾಹದಿಂದ ನೋಡಲಾರಂಭಿಸಿದನು. ಪೆರಿಯ ಸ್ವಾಮಿ ಅಯ್ಯಂಗ್ ಸುಲಭದ ಬೇಟೆಯಾಗಿರಲಿಲ್ಲ. ಅವನು ಬೊಜ್ಜು ಬೆಳೆಸಿಕೊಂಡಿರುವ ಸಂಪ್ರದಾಯ ಶರಣು ಶ್ರೀಮಂತ. ಒಂದು ನೋಟ ಮಾತ್ರದಿಂದಲೇ ಆ ಕೊಳ್ಳೆಯನ್ನು ಹಿಡಿದು ನುಂಗಿ, ಅರಗಿಸಿಕೊಳ್ಳಬೇಕೆಂಬ ಲವಲವಿಕೆ ಅವನಲ್ಲಿತ್ತು. ತನ್ನ ಚೀಲದಲ್ಲಿ ಘಣ ಘಣಿಸುವ ಚಿನ್ನದ ನಾಣ್ಯಗಳಿವೆಯೆಂದು ಅವನ ಕೊಬ್ಬು ಸಾರಿ ಹೇಳುತ್ತಿತ್ತು. ಅವನು ಬುದ್ಧಿವಂತನಿದ್ದನು; ಚೆನ್ನಾಗಿ ಅವನು ಮಾತಾಡಿದನು. ಪೆರಿಯ ಸ್ವಾಮಿಯ ಹೃದಯದ ಮೇಲೆ ತನ್ನ ಪ್ರಭಾವದ ಅಚ್ಚನ್ನು ಕೇದಾರಿ ಚೆನ್ನಾಗಿ ಒತ್ತಿ ಬಿಟ್ಟನು; ಕೇದಾರಿ ಗೆದ್ದನು. ಅವನು ಬಹಳ ಸಂತೋಷದಿಂದ ಸುರುಳಿಯಾಗಿದ್ದ ನೂರು ರೂಪಾಯಿಯ ನೋಟನ್ನು ಸ್ವೀಕರಿಸಿದನು. ಮಾರ್ಕಂಡೇಯರವರ ಹಾಗೆ ತಾನು ಮೊದಲ ಕಕ್ಷಿಗಾರನಿಗಾಗಿ ಮೂರು ವರ್ಷ ಕಾಯಬೇಕಾಗಿಲ್ಲವೆಂದು ಅವನು ಮನಸ್ಸಿನೊಳಗೆ ಹಿಗ್ಗಿ, ಗಂಟಲೊಳಗೆ ನಗುತ್ತಿದ್ದನು.

"ಈ ಮೊಕದ್ದಮೆಗೆ ಯಾರಾದರೂ ವಕೀಲರು ಬೇಕೆಂದು ನೀವು ಆಲೋಚಿಸುತ್ತಿರುವಿರಾ?

"ಇಲ್ಲ. ಈ ಸ್ಥಿತಿಯಲ್ಲಂತೂ ಅವರ ಅಗತ್ಯವೇ ಇಲ್ಲ." ಕೇದಾರಿಯು ಧೈರ್ಯದಿಂದ ಉತ್ತರವಿತ್ತನು.

ತರುಣನ ಶಕ್ತಿಯುತ ಬಯಕೆಗೆ ಪೆರಿಯ ಸ್ವಾಮಿ ಒಪ್ಪಿದರು. ನಮ್ರತೆ, ಉಪಕಾರ ಸ್ಮರಣೆಗಳನ್ನು ಪ್ರಕಟಿಸಲು ಧೈರ್ಯಪಡದಿದ್ದರೂ, ಅಲಂಕಾರದ ಹಾಗೂ ಸಂತೋಷದಾಯಕ ಮಾತುಗಳನ್ನಾಡಿ ಪೆರಿಯಸ್ವಾಮಿ ಅಯ್ಯಂಗಾರ್‌ನನ್ನು ಅವನು ಕಳುಹಿಸಿಕೊಟ್ಟನು.

ಹೆಜ್ಜೆಗಳ ಶಬ್ದ ಸತ್ತು, ಡೊಳ್ಳಿನ ದೇಹ ಮಾಯವಾದುದನ್ನು ಕಿಟಕಿಯಿಂದ ಕಂಡ ಕೇದಾರಿಯು ಅಡುಗೆಕೋಣೆಯತ್ತ ಧಾವಿಸಿದನು. ಅವಸರದಿಂದ ಓಡಿಬರುತ್ತಿದ್ದ ಕೋಕಿಲಂ ದಾರಿಯಲ್ಲೇ ಎದುರಾದಳು. ಕೇದಾರಿಯು ಆಗ ಕೂಗಿ ಹೇಳಲಾರಂಭಿಸಿದನು. "ಬಾ, ಕೋಕಿಲಂ, ಇಲ್ಲಿ ನೂರು ರೂಪಾಯಿಯ ನೋಡಿದೆ. ತೆರೆ ಈಗ ತೆರೆದಿದೆ. ನೂರು ರೂಪಾಯಿ! ಹತ್ತು ರೂಪಾಯಿಯ ಹತ್ತು ನೋಟುಗಳು! ಅಂದರೆ ಪ್ರಕಾಶಮಾನ ಬೆಳ್ಳಿಯ ನೂರು ರೂಪಾಯಿಗಳು! ಅಂದರೆ ಒಂದು ತಿಂಗಳ ಸಮಾಧಾನ! ನನ್ನ ಪ್ರಪ್ರಥಮ ಸಂಪಾದನೆ! ಇದು ಆಳದಲ್ಲಿ ದೊಂಕಿರುವ ಪ್ರಥಮ ಹರಳು ಕಲ್ಲು. ಇದೇನೂ ಸಣ್ಣದಲ್ಲ. ನನ್ನ ಖ್ಯಾತಿಯ ಗಾಳಿ ಬಹುದೂರದ ವರೆಗೆ ಹರಡಿಹೋಗಿ ಬಹುಮಂದಿಯನ್ನೂ ಬಹಳ ಹಣವನ್ನೂ ತರುತ್ತದೆ. ಆಗ ನೀನು, ಕೋಕಿಲಂ, ನನ್ನನ್ನು ಹೆಚ್ಚು ಹೆಚ್ಚು ಪ್ರೀತಿಸುತ್ತೀ, ಅಲ್ಲವೇನೇ?"

"ದಯವಿಟ್ಟು, ಸ್ವಾಮೀ, ರಾಮುವಿಗೊಂದು ಧನ್ಯವಾದ ಪತ್ರವನ್ನು ಬರೆಯಿರೀಂದ್ರೆ'.

"ಅಂದರೆ, ಸಂಭಾಷಣೆಯನ್ನು ನೀನು ಅಡಗಿನಿಂತು ಕೇಳಿರುವೆ. ಅದು ಬಹಳ ಕೆಟ್ಟ ಚಾಳಿ...."

"ಆದರೆ ಮೊದಲ ಕಕ್ಷಿಗಾರನಿಗಾಗಿ ಅಲ್ಲ-ದಯವಿಟ್ಟು ರಾಮುವಿಗೆ ಬರೆಯಿರಿ. ಅವರಿಂದಾಗಿ ತಾನೇ ಈ ಕಕ್ಷಿಗಾರ ಸಿಕ್ಕಿರುವದು? ಇಲ್ಲದಿದ್ದಲ್ಲಿ ಮೊದಲ ಕಕ್ಷಿಗಾರನಾಗಿ ಈ ಆಸಾಮಿ ಸಿಗುತ್ತಿರಲಿಲ್ಲ." ಧನ್ಯವಾದ ಹಾಗೂ ಸಂತೋಷವನ್ನು ಸೂಚಿಸುತ್ತಿರುವ ನೋಟವನ್ನು ಬೀರುತ್ತ ಕೋಕಿಲಂ ವಾದಿಸಿದಳು.

'ಸರಿ, ಸರಿ, ನಾನು ಬರೆಯುತ್ತೇನೆ. ನನ್ನ ಕರ್ತವ್ಯ ನನಗೆ ಚೆನ್ನಾಗಿ ಗೊತ್ತು. ನೀನು ನಾಲಗೆಗೆ ಸ್ವಲ್ಪ ಕಡಿವಾಣ ಹಾಕಿಕೊಳ್ಳಲಾರೆಯಾ? ಯಾವಾಗ ನೋಡಿದರೂ ರಾಮುವಿನ ಕುರಿತು ಬಡಬಡಿಸುತ್ತಿರುವೆ. ಬಡ ಮನುಷ್ಯ! ಅವನು ಆಸ್ತಿಯನ್ನೆಲ್ಲಾ ಮಾರಿಬಿಟ್ಟಿದ್ದಾನೆ. ಈಗ ಕೇವಲ ಶಿಬಿರ—ಗುಮಾಸ್ತನಾಗಿದ್ದಾನೆ. ಅಂದರೆ ತಿಂಗಳೊಂದಕ್ಕೆ ಇಪ್ಪತ್ತೈದು ರೂಪಾಯಿ; ಕೀಳ್ತರಗತಿಯ ಉದ್ಯೋಗ, ಹೀನ ಜೀವನ!"

ಕೇದಾರಿಯು ಸಮ್ಮತಿ ಸೂಚಕವಾಗಿ ಗೋಣಾಗಟ್ಟಿದನಾದರೂ, ಕೋಕಿಲಂಳ ವಿನಂತಿಯ ನಂತರ ಅವನ ಮನಸ್ಸು ನಿರ್ಬಲವಾಯಿತು. ಹೆಮ್ಮೆ ಹೆಡೆ ಎತ್ತಿ ಬುಸುಗುಟ್ಟಿತು. ಶ್ರೇಷ್ಠ ನ್ಯಾಯಾಲಯದ ನ್ಯಾಯವಾದಿಯೊಬ್ಬನು—ಕಿರಿ ಮಾರ್ಕಂಡಂ—ಶಿಬಿರ ಗುಮಾಸ್ತನೊಬ್ಬನಿಗೆ ಕಕ್ಷಿಗಾರರಿಗಾಗಿ ಪತ್ರ ಬರೆಯುವದೇ?

(ಮುಂದುವರಿಯುವುದು)

ವಿಚಿತ್ರ ಸತ್ಯವಿದು

ಕನಸಿನಲ್ಲೇ ಭಾಷೆ ಕಲಿಯಿರಿ

೧

ಅದೆಷ್ಟು ಹೆಚ್ಚು ಭಾಷೆಗಳನ್ನು ಕಲಿಯಬೇಕೆಂಬ ಆತುರ ಹೆಚ್ಚಿನವರಿಗಿದೆ. ಆದರೆ, ಅದಕ್ಕೆ ಬಿಡುವೆಲ್ಲಿ? ವ್ಯವಧಾನವೆಲ್ಲಿ? ಅದೆಂತಹ ವಿಪರೀತ ಪರಿಸ್ಥಿತಿಗಳೇ ಇರಲಿ, ಕಲಿಯ ಮನಸ್ಸಿದ್ದರೆ ಕನಸಿನಲ್ಲಾದರೂ ಭಾಷೆಯನ್ನು ಕಲಿಯಬಹುದು. ಇದು ಕಲ್ಪನೆಯ ಕನಸು ಎಂದು ತಿರಸ್ಕರಿಸಬೇಡಿ; ಯಥಾರ್ಥ ಸತ್ಯವಿದು. ಕನಸಿನಲ್ಲಿ ಭಾಷೆ ಕಲಿಯುವುದು ಸಾಧ್ಯವೆ?—ಈ ಬಗ್ಗೆ ಅನೇಕ ದೇಶಗಳ ನೂರಾರು ವಿಜ್ಞಾನಿಗಳು ಸಂಶೋಧನೆ—ಪ್ರಯೋಗಗಳಲ್ಲಿ ತಲ್ಲೀನರಾದರು ಕೆಲವರು ಅಲ್ಪಯಶಗಳಿಸಿದರು; ಆದರೆ, ಜೆಕೊಸ್ಲೊವಾಕಿಯಾದ ವಿಜ್ಞಾನಿಯ ಪ್ರಯೋಗವೊಂದು ಪೂರ್ಣ ಯಶಸ್ವಿಯಾಯಿತು. ಇದರನ್ವಯ ಉತ್ತರ ಬೊಹೇಮಿಯಾ ಪ್ರಾಂತ್ಯದ ಉಸ್ತಿನಾದ್ ಲಾಬೆನ್ ನಗರದಲ್ಲಿ ಮೊತ್ತಮೊದಲಿಗೆ ಕನಸಿನಲ್ಲಿ ಭಾಷೆ ಕಲಿಸುವ ಪ್ರಥಮ ಪಾಠ ಪ್ರಸಾರವಾಯಿತು.

ಉಸ್ತಿನಾದ್ ಲಾಬೆನ್ ನಗರದಲ್ಲೊಂದು ಬಾನುಲಿ ಕೇಂದ್ರವಿದೆ. ಈ ಕೇಂದ್ರವು ೭೦ ಸಾವಿರ ಮನೆ ಮತ್ತು ಕಚೇರಿಗಳೊಡನೆ ತಂತಿಯ ಮೂಲಕ ಸಂಬಂಧವಿರಿಸಿಕೊಂಡಿದೆ. ಇಡಿ ದಿನವೂ ಧ್ವನಿವರ್ಧಕವು ಸಂಗೀತ ಸುದ್ದಿಗಳನ್ನು ಪ್ರಸಾರ ಮಾಡುತ್ತದೆ. ಪ್ರತಿಮನೆಯಲ್ಲಿಯೂ ರೇಡಿಯೋ ಸೆಟ್ಟುಗಳು ಪ್ರತ್ಯೇಕವಾಗಿಯೇ ಇವೆ.

ಕನಸಿನಲ್ಲಿ ಭಾಷೆಯನ್ನು ಬೋಧಿಸುವ ವಿಧಾನವನ್ನು ಬರಿಯ ಹತ್ತೇ ಹತ್ತು ಪಾಠಗಳಲ್ಲಿ ವಿಂಗಡಿಸಲಾಗಿದೆ. ಐದು ತಿಂಗಳುಗಳಲ್ಲಿ ಇವನ್ನು ಕಲಿಸುತ್ತಾರೆ. ಪ್ರತಿ ಪಾಠವೂ ಹನ್ನೆರಡು ತಾಸುಗಳ ಕಾಲ, ಅಂದರೆ ರಾತ್ರೆ ಎಂಟು ಗಂಟೆಯಿಂದ ಬೆಳಗ್ಗೆ ಎಂಟು ಗಂಟೆಯ ವರೆಗೆ ನಡೆಯುತ್ತದೆ. ತಮ್ಮ ಕಾರ್ಯ ಸ್ಥಳಗಳಿಂದ ಮರಳಿ ಮನೆಗೆ ಬಂದನಂತರ ಯಾರಾದರೂ ಈ ಪಾಠಗಳನ್ನು ಕೇಳಬಹುದು.

ಮೊದಲ ಮೂರು ಗಂಟೆಯ ಪಾಠವನ್ನು ಕುಳಿತು ಕೇಳಿಕೊಳ್ಳಬೇಕು. ಈ ಸಮಯದಲ್ಲಿ ಅವರು ಧ್ವನಿಯಂತ್ರದ ಮೂಲಕ ೪೦೦ ಶಬ್ದಗಳನ್ನೂ ಅವುಗಳ ವಾಕ್ಯಾಂಶಗಳನ್ನೂ, ವ್ಯಾಕರಣ ಸೂತ್ರಗಳನ್ನೂ, ಉಚ್ಚಾರಣೆಯನ್ನೂ ಕಲಿಯುತ್ತಾರೆ. ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿರುವಾಗಲೇ, ಊಟ ಮಾಡುತ್ತಿರುವಾಗ ಕೂಡ, ಈ ಪಾಠ ಕ್ರಮಗಳನ್ನು ಕೇಳಬಹುದು. ಗದ್ದಲವಿಲ್ಲದ ಕೋಣೆಯಲ್ಲಿ ಲಕ್ಷ್ಯಪೂರ್ವಕ ಗಮನಹರಿಸುವುದು ಮಾತ್ರ ಅತ್ಯಗತ್ಯ.

ರಾತ್ರೆ ಹನ್ನೊಂದು ಗಂಟೆಗೆ ಸರಿಯಾಗಿ ಜೋಗುಳ ಹಾಡುತ್ತದೆ. ಆ ಮೇಲೆ ನಾಲ್ಕು ಗಂಟೆಗಳ ಕಾಲ ಶ್ರೋತೃ ವಿದ್ಯಾರ್ಥಿಗಳು ನಿದ್ರಿಸುತ್ತಿರುವಾಗ ಪಾಠ ಮತ್ತೆ ಮತ್ತೆ ಪ್ರಸಾರ ಮಾಡುತ್ತಾರೆ. ಈ ಪ್ರಸಾರದ ವೇಳೆ ನಿದ್ರಾಭಂಗವಾಗದಂತೆ, ಎಚ್ಚರಿಕೆ ವಹಿಸುತ್ತಾರೆ. ಅಂದರೆ ಜೋಗುಳದ ತಾನಗಳಂತೆ ತಗ್ಗುದನಿಯಲ್ಲಿ ಈ ಪ್ರಸಾರ ನಡೆಯುತ್ತದೆ. ರಾತ್ರೆ ಎರಡು ಗಂಟೆಗೆ ಹಿರಿದನಿಯಲ್ಲಿ ವಿದ್ಯಾರ್ಥಿಗಳನ್ನು ಎಬ್ಬಿಸುತ್ತದೆ. ಪಾಠದ ಸಿಂಹಾವಲೋಕನ ಬ ದು ತಾಸು ನಡೆಯುತ್ತದೆ. ತರುವಾಯ ಬೆಳಗ್ಗಿನ ಐದು ತಾಸಿನ ವರೆಗೆ ಶ್ರೋತೃಗಳು ಸುಖನಿದ್ರೆಯಲ್ಲಿ ಮೈಮರೆಯುತ್ತಾರೆ. ಐದು ತಾಸಿಗಾಗಲೇ ವಿದ್ಯಾರ್ಥಿಗಳು ಏಳುತ್ತಾರೆ. ಮತ್ತೆ ಮೂರು ತಾಸು ಅದೇ ಪಾಠದ ಪುನರಾವರ್ತನೆ ನಡೆಯುವುದು. ಎರಡು ವಾರದ ತರುವಾಯ ಮುಂದಿನ ಪಾಠವನ್ನು ಕಲಿಸುವ ವ್ಯವಸ್ಥೆಯಿದೆ. ಈ ಇರುಳು ಪಾಠದ ಅಮಲು ಎರಡು ವಾರಗಳ ವರೆಗೆ ಇಳಿಯುವುದೂ ಇಲ್ಲ.

ಈ ವಿಧಾನದಿಂದ ಬರಿಯ ಐ ತಿಂಗಳುಗಳಲ್ಲಿಯೇ ಶ್ರೋತೃಗಳು ಪ್ರೌ ಶಾಲಾ ಮಟ್ಟದ ಇಂಗ್ಲಿಷನ್ನು ಕಲಿ ತ್ತಾರೆ.

ಈ ಬಾನುಲಿ ಪ್ರಸಾರಕ್ಕೆ ಮೊದ ಪ್ರಾಯೋಗಿಕವಾಗಿ ೧೪ ಜನ ಸ್ವಯಂ ಚ್ಛುಗಳಿಗೆ ಟೇಪ್ ರೆಕೋರ್ಡ್ ಮೂ ಕನಸು ಪಾಠ ಕಲಿಸಲಾಯಿತು. ಇವ ೧೦ ಜನರು ದಕ್ಷತೆಯನ್ನು ಪಡೆದ ೧೦ನೆಯ ಪಾಠದ ತರುವಾಯ ಇಂಗ್ಲಿ ವಾರ್ತಾ ಪತ್ರಿಕೆಯನ್ನು ಅನಾಯಾಸ ಗಿ ಓದ ಬಲ್ಲವರಾದರು. ಇನ್ನೊಬ್ಬ ಎಂಬವರು ಎಲ್ಲರನ್ನೂ ಮೀರಿಸಿದನು. ತನನ್ನು ಬಾನುಲಿಯು ಕನಸು ಪಾಠ ಮಪ ಆಧ್ಯಾಪಕನನ್ನಾಗಿ ಸೇರಿಸಿಕೆ ಡಿತು.

ಕಲಿಯ ಬೇಕಾಗಿ ಬರುವ ಭಾಷೆ ನ್ನು ಕನಸಿನಲ್ಲಿಯೇ ಕಲಿಯುವಂತಾ ಅದೆಷ್ಟು ಚೆನ್ನ!

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗ

ಭಾರತದ ವೀರಾಂಗನೆಯರು	1—
ಬರಿದ ಮುಗುಳು	1—
ಅನುವಾದಿತ ಕತೆಗಳು	1—
ಪಂಚ ಸುಮನ	1—
ಮುತ್ತಿನ ಮಾಲೆ	1—
ಹೂ ಗೊಂಚಲು	1—
ಪಂಚಗಜ್ಜಾಯ	1—
ಏಕಾಂಕ ನಾಟಕಗಳು	1—
ಭಾರತದ ನಾಲ್ಕುಮುಖಗಳು	1—
ದೇಶ ವಿದೇಶದ ಮಹಾ ಜೀವಿಗಳು	1—
ಹೆಂಗುಸರ ಕತೆಗಳು	2—

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ವರ್ಗ-ಊಳಿಗ

ಇತ್ಯಾದಿ ಯಾವತ್ತೂ ತರದ
ಎಕೌಂಟ್ಸ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.

ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India,

ನವಯುಗ

11—1—1966

NAVAYUGA

೨೦

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ಆಲವಂತಿಯ ರಾಮಚಂದ್ರ ರೈತಮುರುಗನ ಮನಸೋಯಿಸಿ ಮದ್ರಾಸದಲ್ಲಿ ಓದಿದರೂ ಬಿ. ಎ. ನೂಡಲಾಗಲಿಲ್ಲ. ಜಾನಕೀ ಪತಿಯೊಗಿ ಊರಿಗೆ ಮರಳಿ ಮಣ್ಣಿನ ಮಗನಾಗಿ ಬದುಕ ಬಯಸಿದರೆ, ತಿಥಿಯ ಕೈವಾಡ ಇದಕ್ಕೆ ವ್ಯತಿರಿಕ್ತವಾಯ್ತು. ಜಮೀನು ನೆರೆಯಲ್ಲಿ ಮುಳುಗಿದಾಗ ಅತ್ತೆ ಮೀನಾಕ್ಷಿಯ ಆಗ್ರಹ ಹೆಚ್ಚಿದಾಗ ದಾರಿಗಾಣದೆ ಕಡಪದ ನಿವೃತ್ತ ಕಲೆಕ್ಟರ್ ಕೆಡೆಲ್ಲರ ಶಿಬಿರಗುಮಾಸ್ತನಾಗಿ ಸೇರಿಕೊಂಡ. ಕೆಡೆಲ್ಲರ ನಿಷ್ಠುರ ವರ್ತನೆಯಿಂದ ಮನನೊಂದ ರಾಮು ಊರಿಗೆ ಮರಳಿ ಆಸ್ತಿಪಾಸ್ತಿಗಳನ್ನು ಮಾರಿ ನಗದಿ ಹಣದೊಡನೆ ಕಡಪಕ್ಕೆ ಬಂದ.

ಅತ್ತ ರಾಮುವಿನ ಬಾಲ್ಯ ಗೆಳೆಯ ಕೇದಾರಿ ವಕೀಲನಾಗಿ ರಾಮುವಿನಿಂದಲೇ ಮೊದಲ ಗಿರಾಕಿಯನ್ನು ಪಡೆದ.

ಮುಂದೆ—

ಮೀನಾಕ್ಷಿಯ ಚುರುಕಾದ ವಾಕ್ಚಾತುರ್ಯವು ಪರಿಣಾಮವನ್ನುಂಟು ಮಾಡಿತು. ತನ್ನ ಹಲವಾರು ವರ್ಷಗಳ ಆಶೆಯ ಗುರಿಯನ್ನು ಒಂದೇ ದಿನ, ಸಾಯಂಕಾಲ ಕೋಪಪೂರ್ಣ ಮಾತಿನಿಂದ, ಮುಟ್ಟಿದಳು. ಆದರೆ ಆ ಉತ್ಸಾಹ ಹಾಗೂ ವಾಕ್ಚಾತುರ್ಯವು, ರಾಮುವು ಆಲವಂತಿಗೆ ಹೊರಟಂದಿನ ರಾತ್ರಿ, ಅವಳಿಗೆ ಚಳಿ ಜ್ವರವನ್ನು ತಂದಿತು. ಅದು ಒಂಭತ್ತನೇ ಬಾರಿಯ ದಾಳಿಯಾಗಿತ್ತಲ್ಲದೆ, ಅಪಾಯಕರವಾಗಿಯೂ ಇತ್ತು. ರಾಮು ಕಡಪಕ್ಕೆ ಹಿಂತಿರುಗಿ ಬಂದ ಮರುದಿನ ಅವಳು ತೀರಿ ಹೋದಳು. ಅಂತಹ ಭಯಾನಕ ಚಿತ್ತವಿಭ್ರಮ ಸ್ಥಿತಿಯಲ್ಲೂ ಆಕೆ ಆಕಾಂಕ್ಷೆ ಹಾಗೂ ಭವಿಷ್ಯತ್ತಿನ ಕುರಿತು ಬಡಬಡಿಸುತ್ತಿದ್ದಳು.

ಅವಳ ಮರಣಾನಂತರ ನಷ್ಟದ ಕುರಿತು ರಾಮು ಆಲೋಚಿಸಲು ಆರಂಭಿಸಿದನು. ಜಾನಕಿಗೆ ಕೂಡಾ ಹಾಗೆ ಆಗಿತ್ತು. ಆಧಾರವನ್ನು ತೆಗೆದು ಗಾಳಿಯಲ್ಲಿ ನೇತಾಡಲು ಬಿಟ್ಟಿರುವ ಬಳ್ಳಿಯಂತಾಗಿತ್ತು ರಾಮುವಿನ ಪರಿಸ್ಥಿತಿ. ಜಾನಕಿಯು ಒಟ್ಟಿಗಿರುತ್ತಿದ್ದರೂ ಅವರಿಬ್ಬರಲ್ಲೂ ಏಕಾಂತತೆಯ ಅನುಭವವಾಗುತ್ತಿತ್ತು.

ಭೂಮಿಯನ್ನು ಮಾರಿದುದರಿಂದ ಸಿಕ್ಕಿದ ಹಣದಿಂದ ಸಾಲ ತೀರಿಸಿದ್ದನು. ಉಳಿದ ಹಣ ಮೀನಾಕ್ಷಿಯ ಉತ್ತರ ಕ್ರಿಯೆಗಾಗಿ ಖರ್ಚಾಯಿತು. ಅವನ ನಿಸ್ಪೃಹತೆಯನ್ನು ಸಾವು ಉಜ್ಜಿ ಬಿಟ್ಟಿತು. ಆಕೆಯ ಉತ್ತರ ಕ್ರಿಯೆಯ ಹತ್ತು ದಿನಗಳ ತಿಥಿಗಳಿಗಾಗಿ ಅವನು ಧಾರಾಳವಾಗಿ ಖರ್ಚು ಮಾಡಿದನು. ಅನಿರೀಕ್ಷಿತ ಹಾಗೂ ತಕ್ಷಣ ಮರಣ ಪ್ರಾಪ್ತವಾದುದರಿಂದ ಆಕೆಯ ಸಾವಿಗೆಂದು ಮಿತವ್ಯಯದಿಂದ ಹಣವನ್ನು ಶೇಖರಿಸಿಟ್ಟಿರಲಿಲ್ಲ.

ಇಷ್ಟೆಲ್ಲಾ ಆಗುವಾಗ ರಾಮುವಿನ ಬಳಿ ಕೇವಲ ಮುನ್ನೂರು ರೂಪಾಯಿ-ಒಂದು ವರ್ಷದ ಸಂಬಳದಷ್ಟು — ಉಳಿದಿತ್ತು. ಮುಖ್ಯ ತಡೆಯೇ ಹೋದರೂ ಪುನಃ ಅವನು ಹಳ್ಳಿಗೆ ಹೋಗುವಂತಿರಲಿಲ್ಲ. ಉದ್ಯೋಗದಲ್ಲಿ ಮೂರು ವರ್ಷ ಕಳೆದಾಗಿದೆ, ಉದ್ಯೋಗವು ನಿರಾಮ ವೇತನವನ್ನು ಕೊಡುವಂತಹದ್ದು.

"ಇದ್ದುದರಲ್ಲೇ ಸಮಾಧಾನದಿಂದಿರು. ಅದುವೇ ದೈವೇಚ್ಛೆ. ಆಗುವದೆಲ್ಲವೂ ಒಳ್ಳೆಯದಕ್ಕೆ ಇದೆ. ಅವರ ಆಶೆಯಂತೆಯೇ ಎಲ್ಲವನ್ನೂ ಮಾಡಿದಾಗ ಅದನ್ನು ಅನುಭವಿಸಲು ಅವರೇ ಇಲ್ಲವಾಗಿದ್ದಾರೆ. ಇದು ದುಃಖ ಜನಕ ವಿಷಯ. ಅದೂ ದೈವೇಚ್ಛೆ ಇರಬಹುದು. ಅದಕ್ಕೆ ನಾವು ನಮ್ರತೆಯಿಂದ ತಲೆ ಬಗ್ಗಿಸ ಬೇಕಾಗುತ್ತದೆ. ಅವರ ಅಕಾಲಿಕ ಮರಣದಿಂದಾಗಿ ಅಗಲಿಕೆಯ ಅನುಭವವಾಗುತ್ತದೆ."

"ನನ್ನಿಂದ ಹೀಗೆ ಇರಲು ಸಾಧ್ಯ ಇಲ್ಲ. ನೀವು ಯಾವಾಗಲೂ ನನ್ನೊಂದಿಗೆ ಇದ್ದುಕೊಂಡು..." ಮಗುವಿನಂತೆ ಬಿಕ್ಕಿ ಬಿಕ್ಕಿ ಮರುಗಿದಳು, ಜಾನಕಿ.

ಜಿಲ್ಲಾಧಿಕಾರಿಯ ಬಳಿ ಇದನ್ನೆಲ್ಲಾ ವಿವರಿಸಿ ನನಗೆ ಶಿಬಿರ ಗುಮಾಸ್ತನ ಉದ್ಯೋಗವು ಸರಿಯಾಗುವುದಿಲ್ಲವೆಂದು ಹೇಳುತ್ತೇನೆ. ಹೌದು. ನಾನು ಎಂದೆಂದಿಗೂ ನಿನ್ನೊಡನೆಯೇ ಇರಬೇಕು, ಪ್ರಿಯೆ ಜಾನಕಿ...." ರಾಮು ಪ್ರೀತಿಯಿಂದ ಆಕೆಗೆ ಆಶ್ವಾಸನೆಯನ್ನಿತ್ತನು.

"ಇನ್ನು ಸಮಯವನ್ನು ಹಾಳು ಮಾಡದೆ ಜಿಲ್ಲಾಧಿಕಾರಿಯ ಬಳಿ ಬದಲಾವಣೆಗೆ ವಿನಂತಿಸಿಕೊಳ್ಳಿರಿ."

"ಸಂದೇಹ ಪಡದಿರು. ಇದನ್ನೆಲ್ಲಾ ಧೈರ್ಯದಿಂದ ಜಿಲ್ಲಾಧಿಕಾರಿಯ ಮುಂದಿಡುತ್ತೇನೆ. ನಾನಿನ್ನು ಮುಂದೆ ಶಿಬಿರ-ಗುಮಾಸ್ತನಿರುವದಿಲ್ಲ. ನನ್ನ ಮನಸ್ಸೇ ಆಜ್ಞೆ ಕೊಟ್ಟಿದೆ...."

"ಯಾರೋ ಬರುತ್ತಿದ್ದಾರೆ." ಜಾನಕಿ ತಿಳಿಸಿದಳು.

"ಅವನು ಜಿಲ್ಲಾಧಿಕಾರಿಯ ದಫೇದಾರ. ಆತ ನಮಗೆ ಅಪರಿಚಿತನಲ್ಲದಿದ್ದರೂ ಅವನು ಮನೆಗೆ ಬರುವದು ಮಾತ್ರ ಅಸಾಧಾರಣ ಸಂಗತಿ. ಇಷ್ಟು ದಿನ ನಾವು ಬಿಡುವಿನಲ್ಲಿದ್ದುದರಿಂದ ಜಿಲ್ಲಾಧಿಕಾರಿಗೆ ಸಹಜವಾಗಿ ನನ್ನ ಮೇಲೆ ಕೋಪ ಬಂದಿರಬಹುದು. ಹಾಗೇ ಕೊನೆಯ ಬಾರಿಯೆಂದು ಇವನನ್ನು ಕಳುಹಿಸಿರಬೇಕು. ಕೆಲಸಕ್ಕೆ ಸೇರಲು ಅಥವಾ..."

ದಫೇದಾರನೆಂದರೆ ಜಿಲ್ಲಾಧಿಕಾರಿಯ, ಪೂರ್ವ ಕಾಲದ ದೊಡ್ಡ ಹಡಗಿನಂತೆ ಬಿಳಿಯ ಉಡುಗೆಗಳಿಂದ ಮುಚ್ಚಲ್ಪಟ್ಟ ಹಾಗೂ ಪಟ್ಟಿ ಕಟ್ಟಿಕೊಂಡಿರುವ ... ಪೇದೆ. ಜಿಲ್ಲಾಧಿಕಾರಿಗಿಂತಲೂ ಅವನಿ... ಹೆಚ್ಚು ಸಲಾಂ ಸಿಗುತ್ತಿತ್ತು. ಅವನಿ... ದಿನದಲ್ಲಿ ಸ್ವಲ್ಪ ಸಮಯ ನಿಯಮಿ... ವ ಕೆಲಸ ಇರುತ್ತಿತ್ತು. ಉಳಿದ ಸಮ... ದಲ್ಲಿ ದೇವಸ್ಥಾನದ ಹೋರಿಯಂತೆ, ಎ... ರಿಂದಲೂ 'ಸಿಕ್ಕಿದಲ್ಲಿ ಆಹಾರವನ್ನು ತಿ... ದುಕೊಂಡು ತಿರುಗಾಡುತ್ತಿದ್ದನು. ಅವ... ಗೆ ತನ್ನ ಧನಿಯ ನಿರ್ಬಲತೆ ಹಾಗ... ದೋಷ ಚೆನ್ನಾಗಿ ಗೊತ್ತು. ಅವನ ಸಂ... ಳವೂ ಸಾಧಾರಣ ರಾಮುವಿನ ಸಂಬ... ಷ್ಟೇ ಆಗುತ್ತಿತ್ತು. ತನ್ನ ನ್ಯಾಯವಾದ ... ಬಳಕ್ಕಿಂತ ಮೂರು ಪಾಲಷ್ಟನ್ನು ಅವ... ಬಡರೈತರಿಂದ, ಕಂದಾಯ ಅಧಿಕಾರಿಗ... ದ ಮಾತ್ರವಲ್ಲದೆ ಉಪಜಿಲ್ಲಾಧಿಕಾರಿಗ... ದ ಗಿಟ್ಟಿಸಿ ಕೊಳ್ಳದಿದ್ದಲ್ಲಿ ತನ್ನ ಅಶಕ್ತತೆಗ... ಸ್ಕರ ಅವನು ಮೀಸೆ ಬೋಳಿಸಿಕೊಳ್ಳ... ದ್ದನು. ದೇವರ ಪಾಲು ಸಲ್ಲಿಸುವ ಮ... ಚೆ ಮೊದಲ ತೆಂಗಿನಕಾಯಿಯನ್ನು ... ರಿಗೆ ಸಲ್ಲಿಸ ಬೇಕೋ ಅವರ ಪೂಜ... ಅವನು.

ಆ ಪಟ್ಟಿಯ ಪೇದೆಯು ರಾಮುವಿ... ಕೈಗೊಂದು ಪತ್ರವನ್ನು ಕೊಟ್ಟು, ಬ... ಗಡೆ ಹೊಂದಿದ ಕೈಯನ್ನು ಖಾಲಿ ... ಯೊಳಗೆ ತುರುಕಿಸಿಕೊಂಡನು.

ಕಡಪ
ಆಗೋಸ್ಟ...

ಪ್ರಿಯ ಶ್ರೀ ರಾಮಚಂದ್ರ,

ನಿನಗಾಗಿರುವ ಇತ್ತೀಚೆಗಿನ ವಿಯೋ... ಗದ ಮೇಲೆ ನನ್ನ ಪ್ರಾಮಾಣಿಕ ಅನು... ಪವನ್ನು ಅರ್ಪಿಸಬಹುದೇ? ನಿನ್ನ ಮೇ... ಬೀಳುವ ಯಾವ ದುರದೃಷ್ಟವೂ ನ... ಹೆಂಡತಿಯ ಹಾಗೂ ನನ್ನ ಮೇಲೆ ... ಣಾಮವನ್ನುಂಟು ಮಾಡುತ್ತದೆ.

ಕ್ರಿಯೆಗಳೆಲ್ಲಾ ಮುಗಿದ ಮೇಲೆ ನ... ವನ್ನು ಕುರಿತು ಯೋಚಿಸುತ್ತ ಕಾಲಹ... ಣ ಮಾಡದೆ ಪುನಃ ಉದ್ಯೋಗಕ್ಕೆ ಸೇ... ಮೊದಲಿನಂತೆ ಜೀವನವನ್ನು ಸಾಗಿಸು... ರು. ನಿನಗೆ ಸಹಾಯ ಮಾಡಲಿಕ್ಕಾಗಿ, ನ... ಳೆ ಸಾಯಂಕಾಲದ ಚಹಕ್ಕೆ ನಿನ್ನ ಹ... ಡತಿಯನ್ನು ಹಾಗೂ ನಿನ್ನನ್ನು ಆಮಂತ್ರಿ... ಸಲು ಇಚ್ಛೆ ಪಡುತ್ತೇನೆ. ಇಂತಹ ಒಂ... ಖಾಸಗಿ ಕಾರ್ಯಕ್ರಮದಲ್ಲಿ ಭಾಗವ... ಸದಂತೆ ಮಾಡಲು ವಿಯೋಗವು ಬಹ... ಹತ್ತಿರದ್ದೆಂದು ನಾನು ಎಣಿಸುವದಿಲ್ಲ.

ನಿನ್ನ ಪ್ರಾಮಾಣಿಕ...
ಯಚ್. ಕಡೆಲ್.

"ಇದೊಂದು ಅಪೂರ್ವ ಗೌರವ, ಜಾ... ನಕಿ. ಜಿಲ್ಲಾಧಿಕಾರಿ ಹಾಗೂ ಅವನ ಪ... ನಮ್ಮನ್ನು ಚಹಾಕ್ಕೆ ಕರೆಯುತ್ತಿದ್ದ... ನೀನು ಬಾರದಿರಬಹುದು. ಆದರೆ ನಾನ... ಹೋಗಲೇ ಬೇಕು. ಪತ್ರವು ಅತ್ಯಂತ ಸ... ಜನ್ಯ ಹಾಗೂ ವಿನಯದಿಂದ ಬರೆಯಲ್ಪ... ಟ್ಟಿದೆ. ಯಾವ ಕಾರಣದಿಂದಲಾದರೂ ... ದನ್ನು ತಿರಸ್ಕರಿಸುವದು ಅಸಭ್ಯತನವಾ... ದೀತು."

"ನನ್ನ ತಾಯಿಯವರ ಮಾತುಗಳ... ಅವರೆಣಿಸಿರುವ ಸಮಯಕ್ಕಿಂತಲೂ ಮ... ಚೆಯೇ ಸತ್ಯವಾಗುತ್ತಿವೆ." ಪ್ರತಿ ಒಂ... ಕ್ಷಣ ತಾಯಿಯ ಮುಖವನ್ನೇ ನೋ... ಡುತ್ತಿದ್ದು, ಈಗಲೂ ಅವಳನ್ನೇ ಚಿತ್ರಿ... ಸಿಕೊಳ್ಳುತ್ತಿರುವ ಜಾನಕಿ ಉತ್ತರ ಕೊ... ಟ್ಟಳು.

(ಹನ್ನೊಂದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಥವಾ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಬಿಲ್ಲುಗಳನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ್ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಕಾರ್ಯನಿರತ
ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೩	೧೭—೨—೧೯೬೬	No. 23

ಸತ್ವಪರೀಕ್ಷೆಯ ವರ್ಷ

'ಈ ವರ್ಷ ನಾನು ನಿಮಗೆ ಸಂತೋಷದ ಮಾತುಗಳಿಗಿಂತ ದುಃಖದ ವಿಷಯಗಳನ್ನು ತಿಳಿಸಿ, ಅತ್ಯಧಿಕ ತ್ಯಾಗಕ್ಕೆ ಸಿದ್ಧರಾಗಬೇಕೆಂಬ ಕರೆಯನ್ನು ನೀಡುತಿದ್ದೇನೆ. ರಾಷ್ಟ್ರಗಳಿಗೆ ಈ ಬಗೆಯ ಪರೀಕ್ಷಾ ಸಂದರ್ಭಗಳು ಅಪರಿಚಿತವಿರುವುದಿಲ್ಲ ಎಂಬುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಪರೀಕ್ಷೆಯನ್ನು ದಿಟ್ಟತನದಿಂದ ಎದುರಿಸಿ ಪಾರಾಗುವ ಶಕ್ತಿವಂತ ರಾಷ್ಟ್ರವೇ ಇತಿಹಾಸದಲ್ಲಿ ಅಮರವಾಗಿ ಉಳಿಯಬಲ್ಲುದು. ಆದುದರಿಂದ ನಾವೆಲ್ಲರೂ ಒಂದಾಗಿ ಭವ್ಯ ಭವಿತವ್ಯದ ನಿರ್ಮಾಣಕ್ಕಾಗಿ ನಮ್ಮನ್ನು ಮೀಸಲಾಗಿಡಲು ಮುಂದೆ ಬರೋಣ.'—ಇದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜರು ಕಾಂಗ್ರೆಸ್ ಪಕ್ಷದ ೭೦ನೆಯ ವಾರ್ಷಿಕಾಧಿವೇಶನದಲ್ಲಿ ಕಾಂಗ್ರೆಸಿಗರಿಗಿತ್ತ ಕರೆ ಮಾತ್ರವಲ್ಲ ಪ್ರತಿಯೊಬ್ಬ ಭಾರತೀಯನಿಗೂ ನೀಡಿದ ಆಹ್ವಾನ.

ನಿಜವಾಗಿಯೂ ಗತಿಸಿದ ಒಂದು ವರ್ಷ ಭಾರತೀಯರ ಸತ್ವ ಪರೀಕ್ಷೆಯ ಕಾಲವಾಗಿತ್ತು; ೧೯೬೨ರಲ್ಲಿ ನಡೆದಿದ್ದ ಚೀನೀಯರ ಬೃಹತ್ ಪ್ರಮಾಣದ ಆಕ್ರಮಣದಿಂದ ಮತ್ತು ನಮ್ಮ ನೆಚ್ಚಿನ ಪ್ರಧಾನಿ ಜವಾಹರಲಾಲರ ನಿಧನದ ನೋವಿನಿಂದ ಚೇತರಿಸಿಕೊಳ್ಳುತ್ತಿರುವ ಹೊತ್ತಿನಲ್ಲಿಯೇ ನಮ್ಮ ನೆರೆಯ ಪಾಕಿಸ್ತಾನ ಕಚ್ಛ್–ರಣದಲ್ಲಿ ಕೀಟಲೆ ತೊಡಗಿಸಿತು. ಕಾಮನ್‌ವೆಲ್ತಿನ ರಾಣಿ ಬ್ರಿಟನ್ನಿನ ಮಾತನ್ನು ಮನ್ನಿಸಿ ಈ ದಾಂಧಲೆಯನ್ನು ಶಾಂತ ವಿಧಾನಗಳಿಂದ ಪರಿಹರಿಸಲು ಮುಂದಾಗುವಷ್ಟರಲ್ಲಿಯೇ ನಮ್ಮ ಅವಿಭಾಜ್ಯ ಅಂಗವಾದ ಜಮ್ಮು–ಕಾಶ್ಮೀರದೊಳಗೆ ಅಕ್ರಮವಾಗಿ ಸಶಸ್ತ್ರ ಬಂಡುಗಾರರನ್ನು ಹೊಗಿಸಿ ಆಕ್ರಮಣ ಮಾಡಲು ಪಾಕಿಸ್ತಾನ ಮುಂದಾಯಿತು. ನಮ್ಮ ಪವಿತ್ರ ನೆಲದ ಮೇಲಾದ ಈ ಆಕ್ರಮಣವನ್ನು ತಡೆಯುವುದಕ್ಕಾಗಿ ನಾವೂ ನಿರುಪಾಯರಾಗಿ ಮುಂದಾಗಲೇಬೇಕಾಯಿತು. ಇದರ ಪರಿಣಾಮವು ಭೀಷಣವೇ ಆಯಿತು. ನಮ್ಮ ವೀರ ಯೋಧರು ಪ್ರಾಣ ಪಣವಿಟ್ಟು ದೇಶ ರಕ್ಷಣೆ ಮಾಡಿದರು; ರಾಷ್ಟ್ರೀಯತೆಯಲ್ಲಿ ನಾವು ಮುಂದಾದೆವು; ನಮ್ಮ ಅಮರ ಶಕ್ತಿಯ ಪ್ರದರ್ಶನ ಮಾಡಿದೆವು; ಶತ್ರುಗಳನ್ನು ಅಟ್ಟಿದೆವು—ಇದರಿಂದಾಗಿಯೇ ನಮ್ಮ ಆರ್ಥಿಕ ಸ್ಥಿತಿಯು ಕೆಟ್ಟಿತು, ಅಭಿವೃದ್ಧಿ ಕಾರ್ಯಗಳು ಕುಂಠಿತವಾದುವು; ಆರ್ಥಿಕಾಭಿವೃದ್ಧಿಯ ಗತಿ ಮಂದವಾಗಲೇಬೇಕಾಯಿತು. ಇದೇ ಹೊತ್ತಿನಲ್ಲಿ ನಮ್ಮ ಮಿತ್ರ ರಾಷ್ಟ್ರಗಳು ನಮಗೆ ನೀಡುತಿದ್ದ ಹಲವು ಬಗೆಯ ನೆರವನ್ನು ನಿಲ್ಲಿಸಿದುವು. ವಿದೇಶೀ ವಿನಿಮಯವೂ ಕರಗಿ ಹೋಯಿತು. ಗಾಯದ ಮೇಲೆ ಬರೆ ಎಳೆದಂತೆ ದೇಶದಲ್ಲಿ ಮಳೆಯು ಕೈಕೊಟ್ಟುದರಿಂದ ತೀವ್ರವಾದ ಆಹಾರಾಭಾವ ತಲೆದೋರಿತು. ಹಸಿವೆಯಿಂದ ಮುಕ್ತರಾಗುವುದೇ ಕಠಿನವಾಗಿ ಕಂಡಿತು, ಜೀವನದ ವೆಚ್ಚವೂ ಏರಿತು—ಒಂದು ರೀತಿಯ ಅಭಾವ ಪರಿಸ್ಥಿತಿ ತಾಂಡವವಾಡಿತು. ಜನವರಿಯಲ್ಲಿ ಸೋವಿಯತ್ ಆಹ್ವಾನದಂತೆ ತಾಷ್ಕೆಂಟಿನಲ್ಲಿ ಪಾಕಿಸ್ತಾನದ ಅಧ್ಯಕ್ಷರನ್ನು ಭೆಟ್ಟಿ ಮಾಡ ಹೋದ ನಮ್ಮ ದೃಢ ನಿಲುಮೆಯ ಪ್ರಧಾನಿ ಶಾಸ್ತ್ರಿಯವರು ಶಾಂತಿ ಸಂದೇಶವನ್ನು ಲೋಕಕ್ಕೆ ನೀಡಿ ನಮ್ಮನ್ನಗಲಿ ಹೋದರು— ಹೀಗೆ ಒಂದಲ್ಲ ನೂರು ಬಗೆಯಲ್ಲಿ ನಮ್ಮ ಅಂತರಂಗ-ಬಹಿರಂಗ ಪರೀಕ್ಷೆಯ ಕಾಲವಿದು—ಆದರೂ ಭಾರತೀಯರು ಕಂಗೆಡಲಿಲ್ಲ, ದಿಟ್ಟತನದಿಂದಲೇ ಎದ್ದು ಬಂದ ದೈತ್ಯ ಸಮಸ್ಯೆಗಳನ್ನು ಎದುರಿಸಿದರು— ವಿಜಯ ಪಥಗಾಮಿಯಾದರು. ಎಂತಲೇ ಈ ವರ್ಷ ಪರೀಕ್ಷಾ ವರ್ಷವಾಗಿರುವಂತೆಯೇ ಭಾರತೀಯತೆಯ ಅಭಿಮಾನದ ವರ್ಷವೂ ಹೌದು.

ಕಾಂಗ್ರೆಸ್ಸು ಪ್ರಜಾಪ್ರಭುತ್ವದ ತಳಹದಿಯಲ್ಲಿ ಸಮಾಜವಾದಿ ರಾಷ್ಟ್ರ ಕಟ್ಟುವ ಇರಾದೆಯಿಂದಿದೆ. ೧೯೫೫ರಷ್ಟು ಹಿಂದೆಯೇ ಜವಾಹರಲಾಲರು ಸಮಾಜವಾದವೇ ಕಲ್ಯಾಣ ರಾಷ್ಟ್ರ ನಿರ್ಮಾಣಕ್ಕೆ ಕಾರಕ ಎಂದು ಸಾರಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ, ಅಂದರೆ ಆವಡಿ ಅಧಿವೇಶನಾ ನಂತರ ಕಾಂಗ್ರೆಸ್ಸು ಈ ಗುರಿಯತ್ತ ಧಾವಿಸಲು ಪ್ರಯತ್ನಿಸುತ್ತಿದೆ. ಹಲವಾರು ಸಮಸ್ಯೆಗಳು ಮುಂದೆ ಬಂದರೂ ಬಡವ ಮತ್ತು ಶ್ರೀಮಂತರ ನಡುವಣ ಆರ್ಥಿಕ ಅಸಮಾನತೆಯನ್ನು ದೂರ ಮಾಡಲು ಅದು ಪ್ರಯತ್ನಿಸುತ್ತಿದೆ. ಆದರೆ, ಬಡವರು ಮತ್ತಷ್ಟು ಬಡವರಾಗುತ್ತಾ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾ ಬರುತಿದ್ದಾರೆ ಎಂದು ದೂರು ಇದೆ. ಇದಕ್ಕೆ ಔದ್ಯಮಿಕರಂಗದ ಏಕಸ್ವಾಮ್ಯವೂ ಒಂದು ಕಾರಣವಾಗಿರಬೇಕು. ಜನಸಾಮಾನ್ಯರ ಜೀವನ ಮಟ್ಟವನ್ನು ಎತ್ತರಿಸುವಂತೆ, ಜೀವನಾವಶ್ಯಕ ಪದಾರ್ಥಗಳ ಉತ್ಪಾದನೆಗಿಂತ ಭೋಗವಿಲಾಸ ವಸ್ತುಗಳ ಉತ್ಪಾದನೆಯು ಬೆಳೆಯುತ್ತಿರುವುದೂ ಒಂದು ಕಾಣವಿರಬಹುದು. ಆವಶ್ಯಕ ಪದಾರ್ಥಗಳ ಬೆಲೆಯು ದಿನದಿಂದ ದಿನಕ್ಕೆ ಏರುವುದಕ್ಕೆ, ಜನಸಾಮಾನ್ಯರ ಪಾಡು ಗೋಳಾಗುವುದಕ್ಕೆ ಇದೇ ಮೂಲಹೇತು.

ಬರಿಯ ಗೊತ್ತುವಳಿಗಳಿಂದ ಇಂದು ಪ್ರಯೋಜನವಿಲ್ಲ. ಅನ್ನ, ಬಟ್ಟೆ, ಮನೆ ಮತ್ತು ವಿದ್ಯೆ—ಇವು ಪ್ರಜಾಪ್ರಭುತ್ವದಲ್ಲಿ ನಾಗರಿಕದ ಚತುರಂಗಗಳು. ಇವುಗಳಲ್ಲಿ ನಾವು ಕಾಣುವ ಪ್ರಗತಿಯೇ ನಿಜವಾದ ಪ್ರಗತಿ. ಈ ಪ್ರಾಥಮಿಕ ಆವಶ್ಯಕತೆಗಳನ್ನು ಪೂರೈಸುವಲ್ಲಿ ಅಧಿಕಾರಿ ಪಕ್ಷ ಕಾಳಜಿ ವಹಿಸಬೇಕು, ವಿವೇಕ ಶಕ್ತಿಶಾಲಿ ರಾಷ್ಟ್ರವನ್ನು ಅದು ಕಟ್ಟಬೇಕು. ಸ್ವಾವಲಂಬನೆಯಿಂದಲೇ ಇದು ಸಾಧ್ಯ. ಸರಕಾರವು ಎಚ್ಚರಿಕೆಯಿಂದ ನಡೆದಾಗ, ಜನತೆ ಪಕ್ಷ—ಸಂಘಗಳ ಭೇದ ತೊರೆದು ಒಂದಾಗಿ ದೇಶ ರಚನಾ ಕಾರ್ಯದಲ್ಲಿ ಸಹಕಾರ ನೀಡುವುದು. ತಾವು ಮಾಡಿದ ತ್ಯಾಗವು ಸದ್ವಿನಿಯೋಗವಾಗುವುದನ್ನು ಕಾಣುವಾಗ ಯಾರಿಗೆ ತಾನೇ ಆನಂದವಾಗದುಳಿಯದು? ಈ ದಿಸೆಯಲ್ಲಿ ಕಾಂಗ್ರೆಸ್ಸಿನ ಹೊಣೆಗಾರಿಕೆ ಹೆಚ್ಚಿನದು. ಇದು ತನ್ನ ಹೊಣೆಗಾರಿಕೆಯನ್ನು ಎಷ್ಟು ಸಫಲವಾಗಿ ನಿರ್ವಹಿಸುವುದೋ ಅಷ್ಟೇ ಹುಮ್ಮಸ್ಸು ಜನತೆಯಲ್ಲಿಯೂ ಮೂಡುವುದು.

ವಚನ ಸುಧೆ

ಬ್ರಾಹ್ಮಣಂ ಬ್ರಾಹ್ಮಣೋ ವೇದ
ಭರ್ತಾ ವೇದ ಸ್ತ್ರಿಯಂ ತಥಾ।
ಅಮಾತ್ಯಂ ನೃಪತಿರ್ವೇದ
ರಾಜಾ ರಾಜಾನಮೇವ ಚ॥

ಬ್ರಾಹ್ಮಣನನ್ನು ಬ್ರಾಹ್ಮಣನೂ ಸ್ತ್ರೀಯನ್ನು ಆಳಿಯ ಪತಿಯೂ ಮಂತ್ರಿಯನ್ನು ರಾಜನೂ ರಾಜನನ್ನು ರಾಜನೂ ತಿಳಿದಿರುತ್ತಾರೆ.

ಇದೂ ಸಮಸ್ಯೆ

ಅಮೇರಿಕನ್ ಅಧ್ಯಕ್ಷ ಶ್ರೀ ಜಾನ್ಸನ್ನರು ಆಕಸ್ಮಾತ್ತಾಗಿ ವಿಯತನಾಮಕ್ಕೆ ಭೆಟ್ಟಿ ಕೊಟ್ಟಾಗ ಹಳೆಯದಾದ ವಿಯತನಾಮದ ಸಮಸ್ಯೆಯು ರೂಪ ಬದಲಾಗಬಹುದೆಂಬ ಆಶೆಮಾಡಿತ್ತು. ಆದರೆ, ಅದಿಂದು ನಿರಾಶೆಯೇ ಆಗಿದೆ. ವಿಯತಕಾಂಗೊವನ್ನು ಸರ್ವರೀತಿಯಿಂದಲೂ ಎದುರಿಸುವ ದಕ್ಷಿಣವಿಯತನಾಮದ ನಿರ್ಧಾರವೇ ಮತ್ತಷ್ಟು ಪುಷ್ಟಿಯಾಗಿದೆ. ಅದೇನೇ ಇದ್ದರೂ ಈ ವಿವಾದವನ್ನು ಬಗೆಹರಿಸುವಲ್ಲಿ ಭಾರತದ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರ ಮಧ್ಯಸ್ಥಿಕೆಯನ್ನು ಅಪೇಕ್ಷಿಸಲಾಗಿದೆ ಎಂದು ವದಂತಿ ಇದೆ. ಭಾರತವು ಸ್ವಾತಂತ್ರ್ಯಗೊಂಡಂದಿನಿಂದ ಶಾಂತಿಪ್ರಿಯ ರಾಷ್ಟ್ರವಾಗಿಯೇ ಬೆಳೆದು ಬಂದಿದೆ. ವಿಶ್ವದ ಅನೇಕ ಕಡೆಗಳಲ್ಲಿ ಅದು ಶಾಂತಿ ಸ್ಥಾಪನೆಗೆ ಪ್ರಯತ್ನಿಸಿ ಜಯಶಾಲಿಯೂ ಆಗಿದೆ. ಉಭಯ ಪಕ್ಷಗಳೂ ಭಾರತದ ಸಹಾಯವನ್ನು ಪಡೆಯಲು ಬಯಸುವುದಾದರೆ, ಶಾಂತಿ ಸ್ಥಾಪನೆಯ ಈ ಮಹಾಕಾರ್ಯದಿಂದ ಭಾರತವು ದೂರ ಸರಿಯುವಂತಿಲ್ಲ. ಆದರೆ, ವಿಯತನಾಮದಲ್ಲಿ ನಿಜವಾಗಿಯೂ ಶಾಂತಿ ಉಭಯತರಿಗೂ ಬೇಕಾಗಿದೆಯೆ? ಇದು ಯಕ್ಷಪ್ರಶ್ನೆಯಂತಿದೆ.

ನರಸಣ್ಣನ ಸರಸ

"ಆಹಾರಮಂತ್ರಿ ಸುಬ್ರಹ್ಮಣ್ಯಂ ಮತ್ತೊಮ್ಮೆ ರಾಜೀನಾಮೆಯ ಬೆದರಿಕೆ ಹಾಕಿದರಂತೆ."
"ಇದಕ್ಕೂ ಆಹಾರಾಭಾವಕ್ಕೂ ಏನೇನೂ ಸಂಬಂಧವಿಲ್ಲ ಕಣಯ್ಯಾ...."

ವಿಜ್ಞಾನದ ಸಾಧನೆ

ಹೃದಯ ಕೆಟ್ಟಿತೆಂದು ಹೆದರಬೇಡಿ

ಹೃದ್ರೋಗದಿಂದ ಸಾಯಬಹುದಾದ ಮಾನವನಿಗೆ ಈ ವರ್ಷದ ಅಂತ್ಯದೊಳಗೆ, ಕೃತಕ ಹೃದಯದ ಸಹಾಯದಿಂದ ಅನಿರ್ದಿಷ್ಟ ಕಾಲದ ವರೆಗೆ ಜೀವಿಸುವ ಭರವಸೆ ಪಡೆಯಲು ಸಾಧ್ಯವಾಗಬಹುದು. ರೋಗಿಯ ದೇಹದೊಳಗೆ ಇರಿಸಲಾಗುವ ಈ ಕೃತಕ ಹೃದಯವು ಸ್ವಾಭಾವಿಕ ಹೃದಯದಂತೆ ಬಡಿದು ದೇಹಕ್ಕೆ ರಕ್ತವನು ಪೂರೈಸುವುದು. ಪ್ಲಾಸ್ಟಿಕ್‌ನಿಂದ ತಯಾರಿಸಿದ, ಗಾಳಿಯಿಂದ ಪ್ರಚೋದಿತವಾಗುವ ಹೃದಯ ನಳಿಗೆಯೊಂದರಿಂದ ಈ ಕಾರ್ಯ ಸಾಧ್ಯವಾಗುವುದೆಂದು ಹೂಸ್ಟನ್ನಿನ ಖ್ಯಾತ ಹೃದಯ ಶಸ್ತ್ರಕ್ರಿಯಾ ತಜ್ಞರಾದ ಡಾ| ಮೈಕೆಲ್ ಇ. ಡಿಬೇಕಿ ಅವರು ಕಳೆದ ವಾರ ನ್ಯೂಯಾರ್ಕ್ ಹಾರ್ಟ್ ಅಸೋಸಿಯೇಷನ್ನಿನ ೫೦ನೆಯ ವಾರ್ಷಿಕ ಸಭೆಯಲ್ಲಿ ತಿಳಿಸಿದರು.

ದ್ರಾಕ್ಷೆ ಹಣ್ಣಿಗಿಂತ ಸ್ವಲ್ಪ ದೊಡ್ಡದಾಗಿರುವ ಈ ಸಾಧನವು, ಮನುಷ್ಯನ ಸಮಗ್ರ ಹೃದಯಕ್ಕೆ ಬದಲಿ ಭಾಗವಾಗಲಾರದು. ಅದು ಹೆಚ್ಚು ಬಲಿಷ್ಠವಾಗಿರುವ ಎಡ ಭಾಗಕ್ಕೆ ಬದಲಿಯಾಗಿ ಸಹಾಯಕ ಪಂಪಿನಂತೆ ಕೆಲಸ ಮಾಡುವುದು.

"ಈ ವರ್ಷದ ಕೊನೆಯೊಳಗೆ ಇಂಥ ಒಂದು ಪಂಪನ್ನು ಮನುಷ್ಯ ದೇಹದೊಳಗೆ ಸೇರಿಸಲಾಗುವುದು" ಎಂದು ಡಾ| ಡಿಬೇಕೀ ಹೇಳಿದರು.

ಈ ಮನುಷ್ಯ ನಿರ್ಮಿತ ಸಾಧನವು, ಮನುಷ್ಯ ಹೃದಯಕ್ಕೆ ಪೂರ್ಣ ಬದಲಿ ಭಾಗವನ್ನು ಸಿದ್ಧಗೊಳಿಸಲು ಅಮೆರಿಕದಲ್ಲಿ ನಡೆಯುತ್ತಿರುವ ತೀವ್ರ ಪ್ರಯತ್ನದಲ್ಲಿ ಇತ್ತೀಚಿನ ಮುನ್ನಡೆಯಾಗಿರುತ್ತದೆ.

"ಹೃದಯಕ್ಕೆ ಪೂರ್ಣ ಬದಲಿ ಭಾಗವನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಈ ತಾತ್ಕಾಲಿಕವಾದ ಹೃದಯ ಸಹಾಯ ಸಾಧನಕ್ಕಿರುವ ಮಹತ್ವವನ್ನು ನಾವು ಸ್ಪಷ್ಟಪಡಿಸಿದ್ದೇವೆ" ಎಂದು ಡಾ| ಡಿಬೇಕೀ ನುಡಿದರು.

ಬೇಯ್ಲರ್ ವಿಶ್ವವಿದ್ಯಾನಿಲಯದ ಮೆಡಿಕಲ್ ಸ್ಕೂಲ್‌ನಲ್ಲಿ ಸಿದ್ಧಗೊಳಿಸಲಾಗಿರುವ ಈ ಹೊಸ ಸಾಧನವು, ದೇಹದ ಹೊರಗೆ ಇಡಲಾಗುವ ಒಂದು ಶಸ್ತ್ರವನ್ನು ಅವಲಂಬಿಸಿದೆಯಾದರೂ ಇದರಿಂದ ಅನೇಕ ರೋಗಿಗಳಿಗೆ ಸಹಾಯವಾಗಲಿದೆ ಎಂದವರು ಹೇಳಿದರು.

ಆದರೆ ವ್ಯಕ್ತಿಯ ರೋಗಗ್ರಸ್ತ ಹೃದಯವನ್ನು ತೆಗೆದು, ಅವನ ಇಡೀ ಜೀವಮಾನಕ್ಕೆ ಪ್ರಯೋಜನಕರವಾಗುವಂತೆ, ಹೊಸ ಕೃತಕ ಹೃದಯವನ್ನು ಇಡುವುದು ಈ ಪ್ರಯತ್ನದ ಗುರಿಯಾಗಿರುತ್ತದೆ. ಇಂಥ ಕೃತಕ ಹೃದಯವು ಸಂಪೂರ್ಣವಾಗಿ ಎದೆಗೂಡಿನ ಒಳಗೆ ಇರುವುದು, ಅದರೊಡನೆ ಚಿಕ್ಕ ಶಕ್ತಿಮೂಲ ಇರುವುದು, ಅಥವಾ ಪ್ರಾಯಶಃ ಅದು ದೇಹದ ವೈದ್ಯುತಿಕ ಅಥವಾ ರಾಸಾಯನಿಕ ಚೈತನ್ಯದಿಂದ ಶಕ್ತಿಯನ್ನು ಪಡೆಯುವುದು.

ಕಳೆದ ಐದು ವರ್ಷಗಳಲ್ಲಿ ಅಮೆರಿಕದಲ್ಲಿ ಕೃತಕ ಹೃದಯದ ತಯಾರಿಕೆಯ ಕಾರ್ಯದಲ್ಲಿ ಮುನ್ನಡೆಗಳಾಗುತ್ತಿವೆ, ಅನೇಕ ಸಂಶೋಧಕರು ಸ್ವತಂತ್ರ ಮಾರ್ಗಗಳನ್ನು ಅನುಸರಿಸಿ ಸಂಶೋಧನೆ ನಡೆಸುತ್ತಿದ್ದಾರೆ. ಬೇಯ್ಲರ್ ವಿಶ್ವವಿದ್ಯಾನಿಲಯದ ಗುಂಪಿನವರು, ವರ್ಮಂಟ್ ಇಲಿನಾಯ್ ಮತ್ತು ನಾರ್ತವೆಸ್ಟರ್ನ್ ವಿಶ್ವವಿದ್ಯಾನಿಲಯಗಳ ಗುಂಪಿನವರು, ಕ್ಲೀವ್‌ಲೆಂಡ್ ಕ್ಲಿನಿಕ್‌ನವರು, ಬ್ರೂಕ್ಲಿನ್‌ನ ಮೈಮನೈಡ್ಸ್ ಆಸ್ಪತ್ರೆಯವರು ಮತ್ತು ಕೆಂಟುಕಿಯ ಡಾರ್ಲಿನ್‌ನಲ್ಲಿರುವ ಯುನೈಟೆಡ್ ಸ್ಟೇಟ್ಸ್ ಮೆರಿನ್ ವರ್ಕರ್ಸ್ ಹಾಸ್ಪಿಟಲ್‌ನವರು ಇಂಥ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ.

ಶಸ್ತ್ರಕ್ರಿಯೆಯ ಅವಧಿಯಲ್ಲಿ ರೋಗಿಯ ತಟಸ್ಥ ಹೃದಯದ ಬದಲು ಕೆಲಸ ಮಾಡುವ ಹೃತ್-ಶ್ವಾಸಕೋಶ ಯಂತ್ರಗಳು, ಪ್ಲಾಸ್ಟಿಕ್ ಹೃತ್ಕವಾಟಗಳು ಮತ್ತು ರೋಗಿಯ ಹೃದಯದ ಲಯಬದ್ಧವಾದ ಹಾಗೂ ಸ್ವಾಭಾವಿಕ ಬಡಿತವನ್ನು ಮುಂದುವರಿಸಿಕೊಂಡು ಹೋಗಲು ಚರ್ಮದ ಅಡಿಯಲ್ಲಿ ನೆಲೆಗೊಳಿಸುವ ಬ್ಯಾಟರಿ ಪ್ರಚೋದಿತ "ಪೇಸ್ ಮೇಕರ್"ಗಳು ಮುಂತಾದ ಹಲವು ಮುನ್ನಡೆಗಳನ್ನು ಸಾಧಿಸಲಾಗಿದೆ.

ಸಾಧ್ಯವಾದಷ್ಟು ಬೇಗನೆ, ಪ್ರಾಯಶಃ ಐದರಿಂದ ಹತ್ತು ವರ್ಷಗಳೊಳಗೆ ಕೃತಕ ಹೃದಯವನ್ನು ಸಿದ್ಧಗೊಳಿಸುವ ಉದ್ದೇಶದಿಂದ ಕಳೆದ ವರ್ಷ, ಮೇರಿಲೆಂಡಿನ ಸಮೀಪದ ಬೆಥೆಸ್ಡಾದಲ್ಲಿರುವ ಫೆಡರಲ್ ಸರ್ಕಾರದ ನ್ಯಾಷನಲ್ ಹಾರ್ಟ್ ಇನ್ಸ್ಟಿಟ್ಯೂಟ್‌ನವರು ವಿವಿಧ ಕೇಂದ್ರಗಳ ಕಾರ್ಯಗಳನ್ನು ಸಮನ್ವಯಗೊಳಿಸುವ ಒಂದು ದೊಡ್ಡ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

ಪ್ರಾರಂಭದ ೩ಲಕ್ಷ ಡಾಲರುಗಳ ಬಡ್ಜೆಟಿನ ಹೆಚ್ಚಿನಂಶವನ್ನು ಪ್ರಗತಿಯ ಪರಿಶೀಲನೆಗೆ, ಯಾವ ವಿಭಾಗಗಳ[illegible] ಅಧಿಕ ಸಂಶೋಧನೆ ಅವಶ್ಯವೆಂಬ ದನ್ನು ನಿರ್ಧರಿಸಲು, ಯಾವ ರೀತಿಯ ರೋಗಿಗಳಿ[illegible] ಯಾವ ರೀತಿಯ ಕೃತಕ ಹೃದಯಗಳನ್ನು ಉಪಯೋಗಿಸಬಲ್ಲರೆಂಬುದನ್ನು ನಿರ್ಧರಿಸಲು ಮತ್ತು ಕೃತಕ ಹೃದಯದಿಂದ ಸಾರ್ವಜನಿಕ ಆರೋಗ್ಯದ ಮೇಲಾಗು[illegible] ಪರಿಣಾಮಗಳನ್ನು ಅಭ್ಯಸಿಸಲು ವಿ[illegible]ಗಿಸಲಾಯಿತು.

ಜುಲೈ ೧ರಿಂದ ಪ್ರಾರಂಭವಾಗ[illegible] ವರ್ಷಕ್ಕೆ ಅಧ್ಯಕ್ಷ ಜಾನ್ಸನ್ ಅವರು[illegible] ಗೊಳಿಸಿರುವ ಹೊಸ ಬಡ್ಜೆಟಿನಲ್ಲಿ ೩ಲಕ್ಷ ಡಾಲರುಗಳನ್ನು ಒದಗಿ[illegible]ದೆ. ಕೃತಕ ಹೃದಯಕ್ಕೆ ಸಂಬ[illegible] ಕಾರ್ಯವನ್ನು ಶೀಘ್ರವಾಗಿ ಮುನ್ನ[illegible] ಸಾಧ್ಯವೆಂದು ಅಧ್ಯಯನಗಳಿಂದ [illegible]ವಾದರೆ, ಕೃತಕ ಹೃದಯದ ಯೋ[illegible]ಯನ್ನು ತ್ವರಿತಗೊಳಿಸುವ ಅವಕಾ[illegible]ಡಲು ಈ ರೀತಿ ಅಧಿಕ ಹಣವನ್ನು [illegible]ಗಿಸಲಾಗಿದೆ.

ಡಾ| ಡಿಬೇಕಿ ಮತ್ತು ನ್ಯಾಷ[illegible] ಇನ್ಸ್ಟಿಟ್ಯೂಟ್ಸ್ ಆಫ್ ಹೆಲ್ತ್‌ನ ಪ[illegible]ಧಿಕಾರಿ ಡಾ| ಜೇಂಸ್ ಷಾ[illegible]ನ್ನೊಳಗೆ [illegible] ಶೀಸುವ[illegible]. ಈ [illegible]ಳಿಂದ ಕೃತಕ ಹೃದಯದ ತಯಾರಿ[illegible] ಕಾಲ ಖಚಿತವಾಗಿ ನಿರ್ಧಾರವಾಗು[illegible] ಮತ್ತು ಈ ಕಾರ್ಯಕ್ಕೆ ಪ್ರಚೋ[illegible] ದೊರೆಯುವುದು ಎಂದು ನಿರ[illegible]ಲಾಗಿದೆ.

ಅದೃಷ್ಟವಿದ್ದಂತಾಗಲಿ ಎಂದು [illegible]ಷ್ಟವನ್ನು ನಂಬಿ ಕೂರುವುದಕ್ಕಿಂತ [illegible]ನ ಗುಲಾಮಗಿರಿ ಬೇರಿಲ್ಲ. ಅದ[illegible] ನಮ್ಮ ಪ್ರಾರ್ಥನೆಗೆ ದೇವರು ಓಗೊ[illegible]ನೆಂಬ ನಂಬಿಕೆ ಹೆಚ್ಚು ಸುಖದಾಯ[illegible]

—ಎಪಿಕ್ಟ[illegible]

ಹನಿಯಾಗಿ ಒಸರುವ ಈ ಝರಿಯು
ಹರಿಯುವ ಮಹಾನದಿಯಾಗುವ ತನಕ
ಯಾರೊಬ್ಬರೂ ಆ ಹನಿಗಳನ್ನು ಲೆಕ್ಕಿಸಲಿಲ್ಲ.......

25 ಪೈಸೆಯ ಚಿಕ್ಕ ಪಾವಲಿಯನ್ನು ಯಾರು ಲೆಕ್ಕಿಸುವರು? ಎಷ್ಟೋ ಬಾರಿ ಅದು ಕಳೆದು ಹೋಗುವುದುಂಟು. ಒಂದು ದಿನ, ಹತ್ತು ವರ್ಷ ವಯಸ್ಸಿನ ಪುಟ್ಟ ಬಾಲುವು ಈ ಬಗ್ಗೆ ಏನಾದರೂ ಮಾಡಬೇಕೆಂದು ನಿಶ್ಚಯಿಸಿದನು. ತಾಯಿಯೊಡನೆ ಅವನು, ಉಳಿತಾಯಕ್ಕಾಗಿ ದಿನಾಲು 25 ಪೈಸೆ ಕೊಡಬೇಕೆಂದು ಕೇಳಿದನು. ಅವಳೊಪ್ಪಿದಳು. ಈ ರೀತಿ ಪುಟ್ಟ ಬಾಲುವು ನಮ್ಮ ಪಿಗ್ಮಿ ಠೇವಣಿ ಸಂಯೋಜನೆಯ ಅತೀ ಎಳೆಯ ಸದಸ್ಯನಾದನು. ಪ್ರತಿದಿನವೂ ನಮ್ಮ ಪಿಗ್ಮಿ ಠೇವಣಿಯ ಸಂಗ್ರಾಹಕನು ಅವನ ಮನೆಯನ್ನು ತಾನಾಗಿಯೇ ಸಂದರ್ಶಿಸಿ 25 ಪೈಸೆಯನ್ನು ಪಡೆಯುತ್ತಲಿದ್ದನು. ಏಳು ವರ್ಷಗಳು ಬಹು ಬೇಗನೇ ಉರುಳಿದುವು. ಬಾಲುವು ಈಗ ಚಿಕ್ಕವನಾಗಿ ಉಳಿದಿಲ್ಲ. ಹಾಗೆಯೇ ಅವನ 25 ಪೈಸೆ ಕೂಡಾ. ಅವುಗಳು ಅವನೊಂದಿಗೇ ಬೆಳೆದಿವೆ......700 ರೂಪಾಯಿಯ ದೊಡ್ಡ ಮೊತ್ತವಾಗಿದೆ. ಬಾಲುವು ಈಗ ಒಂದು ಹೊಸ ವಾಚು, ಒಂದು ಹೊಸ ಸ್ಯಾಕಲು ತೆಗೆದುಕೊಳ್ಳಬಹುದು— ಅಥವಾ ತನ್ನ ಕಾಲೇಜು ವಿದ್ಯಾಭ್ಯಾಸಕ್ಕೆ ಆ ಹಣವನ್ನು ಉಪಯೋಗಿಸಬಹುದು. ನೀವೆಲ್ಲ ಪುಟ್ಟ ಗೆಳೆಯರು ಅವನಂತೆಯೇ ಆಗುವಿರಿ ತಾನೇ?

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಶಾಖೆಗಳು:
200ಕ್ಕೂ ಮಿಕ್ಕಿವೆ

ಚಲಾವಣಾ ಸಂಪತ್ತು:
ರೂ. 85 ಕೋಟಿಗೂ ಮಿಕ್ಕಿದೆ

ನಮ್ಮಲ್ಲಿ ಖಾತೆ ತೆರೆಯಲು ನಿಮ್ಮಲ್ಲಿರುವ ಯಾವ ಮೊತ್ತವೂ ಚಿಕ್ಕದಲ್ಲ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು [illegible]ವವರು ದಯಮಾಡಿ ಎರಡೆರಡು ಪ್ರತಿಗ[illegible] ಕಳಿಸಬೇಕಾಗಿ ವಿನಂತಿ

ಸಂ.

ಭೀಷ್ಮದರ್ಶನ ಮತ್ತು ಗುರುದಕ್ಷಿಣೆ[illegible]ತಹ ಉತ್ತಮ ಕೃತಿಗಳನ್ನು ರಚಿಸಿದ [illegible] ಕಟ್ಟೆಯ ಶ್ರೀ ರಂಗನಾಥ ಸ್ವಾಮಿರಾವ ಶಾನಭೋಗರು ಬರೆದ ಪ್ರಾಣ-ಪ[illegible] ಪಟ್ಟಾಭಿಷೇಕ (ಬೆಲೆ ೭೫ ಪೈಸೆ) [illegible] ಶ್ರೀ ರಮೇಶ ಮಹಿಮಾಗುಚ್ಛ (ಬೆ[illegible] ಪೈಸೆ)ವನ್ನು ಧಾರವಾಡದ ಉದ್ಯೋಗ [illegible]ಶನದವರು ಪ್ರಕಟಿಸಿದ್ದಾರೆ.

[illegible] ಚರಿತ್ರೆ [illegible] ಸಾರಾಂಶವನ್ನು [illegible] ಪಟ್ಟಾಭಿ[illegible]ಕದಲ್ಲಿ [illegible] ಚಿತ್ರಿ[illegible]ರೆ. ವಾಸುದೇವನ ಬಾಲ್ಯ [illegible] ಹಾಗೂ ಸನ್ಯಾಸ ಸ್ವೀಕರಿಸಿದಾಗ ಮಧ್ವ[illegible] ಭಟ್ಟರೊಂದಿಗೆ ನಡೆಸಿದ ಸಂಭಾಷಣೆ[illegible]ನ್ನು ಹೃದಯಂಗಮವಾಗಿ ಬರೆದಿದ್ದಾರೆ. [illegible]ನೇಕ ಕಠಿಣ ಪ್ರಸಂಗಗಳನ್ನು ವಿಶಿಷ್ಟ[illegible] ಸುಲಭ ಶೈಲಿಯಲ್ಲಿ ರೂಪಿಸಿದ್ದಾರೆ. ವಿ[illegible] ಸಂದರ್ಭಗಳಲ್ಲಿ ಅಭಿನಯಿಸುವುದಕ್ಕೆ ಯೋ[illegible]ಗ್ಯವಾಗಿದೆ ಈ ನಾಟಕ.

ಶ್ರೀ ರಮೇಶ ಮಹಿಮಾಗುಚ್ಛದಲ್ಲಿ [illegible]ಹ್ಲಾದ ಚರಿತ್ರೆಯನ್ನು ಕಾವ್ಯರೂಪದಲ್ಲಿ [illegible]ಸಿದ್ದಾರೆ. ಇವರ ರಚನೆಯಲ್ಲಿ ಸಂಪ್ರ[illegible]ನುಸಾರವಾದ ವೈವಿಧ್ಯತೆ ಇದೆ. ಸಹಜತೆ[illegible]ದ ಪುಷ್ಪವಾಗಿದೆ. ಭಗವಂತನ ಸ್ಮರಣೆಗೆ [illegible]ವ್ಯವನ್ನು ಬಳಸಿಕೊಳ್ಳುವ ಈ ಪ್ರಯತ್ನ [illegible] ಶಂಸನೀಯವಾಗಿದೆ.

ಹರಟೆ

ಜಗಳ ಗಂಟಿಕೆಯ ಕುತೂಹಲ

ಬರೆದವರು: ಶ್ರೀ 'ನವಗಿರಿನಂದ'

'ಜಗಳ ಮಾಡಬಾರದು. ಎಲ್ಲರೂ ಒಬ್ಬರ ಮೇಲೊಬ್ಬರು ಪ್ರೀತಿಯಿಂದಿರಬೇಕು—ಅಣ್ಣ ತಮ್ಮಂದಿರ ಹಾಗೆ' ಅಂತ ಹಿರಿಯರು ಎಂದಿನಿಂದಲೋ ಹೇಳುತ್ತಲೇ ಇದ್ದಾರೆ; ಅದನ್ನು ಕೇಳಿಕೊಂಡೇ ಜಗಳ ಮಾಡಿಕೊಂಡಿದ್ದಾರೆ ಎಲ್ಲರೂ.

ಅಣ್ಣ ತಮ್ಮಂದಿರು ಜಗಳ ಮಾಡೋದಿಲ್ಲಾ ಅಂತ ಎಲ್ಲಿದೆ? ಎಂದೋ ರಾಮಾಯಣದ ಕಾಲದಲ್ಲಿ ಅಣ್ಣಾ-ತಮ್ಮಂದಿರ ಜಗಳ ತುಸು ಕಡಮೆ ಇತ್ತೋ ಏನೊ. ವಾಲಿ ಸುಗ್ರೀವರು, ರಾವಣ ಕುಂಭಕರ್ಣರು ಜಗಳ ಮಾಡಿ ಮಾಡಿ ಒಬ್ಬೊಬ್ಬರನ್ನು ಕೊಲ್ಲಲಿಲ್ಲವೆ? ಮಹಾಭಾರತದಲ್ಲಿಯಂತೂ ಕೇಳಲೇ ಬೇಡಿ, ಅಣ್ಣಾ-ತಮ್ಮಂದಿರ ಜಗಳದ್ದೇ ಕಥೆ.

ಆದರೂ ಹಿರಿಯರು ಹೇಳುತ್ತಲೇ ಇದ್ದಾರೆ ನೀತಿ.

'ಸುಳ್ಳಾಡ ಬಾರದು' ಅಂತ ಎಂದಿನಿಂದಲೋ ಹೇಳೋದಿಲ್ಲವೆ?—ಹಾಗೆ, ಅದನ್ನೂ ಕೇಳಿಕೊಂಡು, ಸುಳ್ಳನ್ನೂ ಬಾಯಿ ತುಂಬಾ ಆಡಿಕೊಂಡಿರುವುದಿಲ್ಲವೇ ನಾವು? ಆದರೆ ಒಂದು, ಸುಳ್ಳಿಗೆ ಸತ್ಯದ ಭಯ ಯಾವಾಗಲೂ ಇದ್ದೇ ಇರುತ್ತೆ. ತನ್ನದು ಸುಳ್ಳು ಅಂತ ಗೊತ್ತಾಗಿ ಬಿಟ್ಟರೆ ಕೆಟ್ಟ ಅವಮಾನ, ಶಿಕ್ಷೇ ಜೀವನದಲ್ಲಿದ್ದೂ ಸತ್ತ ಹಾಗೆ.

ಅಂತೆಯೇ ಸುಳ್ಳು ಯಾವಾಗಲೂ ಭಯದ ಮಧ್ಯದಲ್ಲೇ ಸುಳಿದಾಡಿಕೊಂಡಿರುತ್ತೆ. ಹಾಗಾದರೂ ಅದು ತನ್ನ ಪ್ರಭಾವ ಬೀರಿಕೊಂಡು, ಲೋಕ ವ್ಯವಹಾರಕ್ಕೆ ಅಗತ್ಯವೆನಿಸಿ ಚಿರಂಜೀವಿಯಾಗಿ ಇದ್ದೇ ಇದೆ ಅನ್ನುವಾಗ ಬಹಳ ಆಶ್ಚರ್ಯವಾಗುತ್ತೆ ಅದರ ಮಹಾಶಕ್ತಿಗೆ. ಅದೇನೂ ಹೊರಗೆ ಕಾಣುವ ಬಾಬಲ್ಲ; ಒಳಗೊಳಗೇ ಅಡಗಿಕೊಂಡು ಮಾಯಾ ರೂಪದಲ್ಲಿರುವಂಥಾದ್ದು—ದೇವರ ಹಾಗೆ. ಆದ್ದರಿಂದ ಅದಕ್ಕೆ ನಮಸ್ಕಾರ ಮಾಡಿ ಮೂಲೆಯಲ್ಲಿ ಕುಳ್ಳಿರಿಸಿ, ಪ್ರಸ್ತುತ 'ಜಗಳಕ್ಕೆ' ತಲೆ ಹಾಕೋಣ. ಏನಾಗುತ್ತೆ? ಸದ್ಯ ಈ ಲೇಖಕನ ಮೇಲೆ ಜಗಳಕ್ಕೆ ಬಾರದಿದ್ದರೆ ಸಾಕು ಯಾರಾದರೂ.

ಯಾಕೆ ಬಂದಾರೂ, ಏನು ತಪ್ಪಾಯಿತೂ ಅಂತ ಕೇಳುವಿರೇನೋ? ಗೊತ್ತಿಲ್ಲವೇ ನಿಮಗೆ? ನಿಮ್ಮ ಮನೆಯಲ್ಲಿ ನೀವು ನೋಡೋದಿಲ್ಲವೆ? ನಿಮಗೆ ಅಣ್ಣ ತಂಗಿ ತಮ್ಮ ಅಕ್ಕಂದಿರೆನಿಸುವ ಮಕ್ಕಳಿದ್ದಾರೆ ತಾನೆ? ಅಕ್ಕ ಕುರ್ಚಿಯಲ್ಲಿ ಕಾಲಿಳಿಬಿಟ್ಟು ಕುಳಿತುಕೊಂಡು ಓದುತ್ತಾ ಇದ್ದಾಳೆ ಅವಳ ಪಕ್ಕೆ. ಅವಳ ತಮ್ಮ ಅವಳಿಗಿದಿರಾಗಿ ಹಾದು ಹೋಗುವಾಗ ಅವನ ಗಾಳಿ ಅವಳ ಮೇಲೆ ತಾಗುತ್ತೆ. ಅಥವಾ ಅವಳ ಕಾಲಿಗೆ ಅವನ ಕಾಲು ಮುಟ್ಟಿದ ಹಾಗಾಗುತ್ತೆ. ಕೂಡಲೇ ಅಕ್ಕ ರೇಗಿ "ನೋಡಮ್ಮಾ ನನ್ನ ದೂಡ್ತಾನೇ!" ಎಂಬ ಕರ್ಕಶ ಕೊಂಕು ರಾಗ ತೆಗೆಯುತ್ತಾಳೆ. ಒಡನೇ



...ಒಡನೇ ತಮ್ಮ ಅವಳಿಗಿಂತ ಜೋರಾಗಿ—

ತಮ್ಮ ಅವಳಿಗಿಂತ ಜೋರಾಗಿ "ಯಾರೇ ನಿನ್ನ ದೂಡಿದ್ದು ಕತ್ತೆ!" ಎಂದು ಕಿರಿಚಿ ಕಣ್ಣು ತಿರುಗಿಸುತ್ತಾನೆ. "ನೀನೇ ಕತ್ತೆ" ಎಂದು ಅಕ್ಕ ಅವನಿಗೊಂದು ಗುದ್ದುತ್ತಾಳೆ, ಅಥವಾ ಚಿವುಟುತ್ತಾಳೆ. ತಮ್ಮ "ನೋಡಮ್ಮಾ!" ಎನ್ನುತ್ತ ಅವಳ ಕೂದಲೆಳೆಯುತ್ತಾನೆ. ಬಿಡಿ, ಆ ಮೇಲೆ ಬೇಕು ಬೇಕಾದ ಹಾಗೆ ನೀವೇ ಊಹಿಸಿಕೊಳ್ಳಬಹುದು.

ಆಗ ಮಧ್ಯಸ್ತ ಮಾಡಲು ತಾಯಿಯೋ ತಂದೆಯೋ ತಲೆ ಹಾಕುವುದು. ಅವರಿಗೂ ಮಗಳ ಮೇಲೆಯೋ ಮಗನ ಮೇಲೆಯೋ ಬೇರೆ ಬೇರೆ ಪಕ್ಷಪಾತದ ಹಾಗೆ ಇರುವುದು. ಆದರಿಂದ ಗಂಡಾ ಹೆಂಡಿರೊಳಗೆ ಕಿಡಿಮ ಬಂದು—ಮಕ್ಕಳೇನೋ ಜಗಳ ಮರೆತು ಮತ್ತೆ ಅವರಷ್ಟಕ್ಕೆ ಕಿಲಿ ಕಿಲಿ ನಗಾಡಿಕೊಂಡು ಆಡಿಕೊಂಡಿರುವಾಗ, ತಂದೆ ತಾಯಿಗಳು ಉತ್ತರ ದಕ್ಷಿಣ ಧ್ರುವಗಳಾಗಿ ಬಿಡುವುದೂ ಉಂಟು.

ಹೀಗೆ ಜಗಳಕ್ಕೆ ತಪ್ಪೂ ಗಿಪ್ಪೂ ಅಂತ ಒಂದು ಮಾಡಬೇಕೆಂದೇನೂ ಇಲ್ಲ. ತಪ್ಪು ಮಾಡಿದವರಂತೂ ಕೇಳುವುದೇನಿದೆ? ಅದು ನಿಜವಾದ ಬುದ್ಧಿವಂತರೊಳಗಿನ ಹೊಯ್ ಕಯ್ಯ ಆಗಿ ಹೋಗುತ್ತೆ. ಅದು ದೊಡ್ಡ ಸಂಗತಿ; ರಾಜಕೀಯ. ಅದನ್ನು ಕುರಿತು ಹಾಗೆ ಹೀಗೆ ಅಂತ ಹೇಳಬೇಕಾದರೆ ತಕ್ಕ ಅಧಿಕಾರಬೇಕು, ಪಾಂಡಿತ್ಯ ಬೇಕು, ಭಾರಿ ವ್ಯಕ್ತಿತ್ವ ಬೇಕು. ಆದಾವುದೂ ಇಲ್ಲದ ಈ ಲೇಖಕನಿಗೆ ಬೇಡಪ್ಪಾ ಆ ಗೊಡವೆ.

ಸುಮ್ಮನೆ ನಮ್ಮನಮ್ಮೊಳಗಿನ ಮಾತು. ಮಕ್ಕಳೆಂದರೆ ನಮ್ಮ ಮರಿಗಳು ತಾನೆ? ಮನುಷ್ಯರ ಮರಿಗಳು. ಇತರ ಮರಿಗಳನ್ನಿಟ್ಟು ನೋಡಬೇಕಾದರೆ, ನಾಯಿಗಳು ಒಂದಕ್ಕೊಂದು ಇದಿರಾದಾಗಕೋಪದಿಂದ ಗುರ್ಗುರಾಯಿಸಿಕೊಳ್ಳುತ್ತವೆ. ಹಾಗೆ

ನಾಯಿಗಳು ಒಂದಕ್ಕೊಂದು ಇದಿರಾದಾಗ—

ಯೇ ಇತರ ಪ್ರಾಣಿಗಳೂ ಸಹ, ಕೆಲವು ಬಾರಿ ಅಣ್ಣ ತಮ್ಮಂದಿರ ಹಾಗೆ ಒಗ್ಗಟ್ಟಾಗಿ ಪ್ರೀತಿಯಿಂದಿದ್ದರೂ, ಕೆಲವು ಬಾರಿ ತಮ್ಮ ಅಣ್ಣಂದಿರ ಹಾಗೆ ಜಗಳವಾಡಿಕೊಂಡು ಉರುಳಾಡುತ್ತವೆ. ಮಕ್ಕಳು ಸಹಾ ಅಷ್ಟೇ ತಾನೆ? ಬೇರೆಕಡೆಯಲ್ಲಿ ಅನ್ಯೋನ್ಯತೆಯಿಂದ ಕಾಣಿಸುವ ಮಕ್ಕಳು ಮನೆಯಲ್ಲಿ ಜಗಳ ಕೆರೆಯುತ್ತಾ ಇರುತ್ತಾರೆ.

ಅದಕ್ಕೆ ಮಕ್ಕಳಿಗೂ ಇತರ ಪ್ರಾಣಿಗಳಿಗೂ ವ್ಯತ್ಯಾಸವೇನೂ ಇಲ್ಲಾ ಅಂದದ್ದು ಮನುಷ್ಯರನ್ನೂ ಸಾಮಾನ್ಯ ಪ್ರಾಣಿಗಳ ಗುಂಪಿಗೆ ಸೇರಿಸಿ ಹೇಳಿದ್ದಕ್ಕೆ ಈ ಲೇಖಕನ ಮೇಲೆ ಕೋಪ ಮಾಡೀರಿ ಮತ್ತೆ! ಮನುಷ್ಯರು ಸಹಾ ಪ್ರಾಣಿ ವರ್ಗಕ್ಕೆ ಸೇರಿದವರೇ ಅಂತ ಶಾಸ್ತ್ರಜ್ಞರೇ ಹೇಳಿದ ಮಾತು. "ದ್ವಿಪಾದ ಪಶು" ಅಂತ. ಬುದ್ಧಿ ಶಕ್ತಿಯಿಲ್ಲದ ಮನುಷ್ಯನಿಗೂ ಮೃಗಕ್ಕೂ ಏನೂ ವ್ಯತ್ಯಾಸ ಇಲ್ಲವಂತೆ. ಅದು ನಿಜವಿರಬೇಕು ಅಂತ ಹುಚ್ಚರನ್ನು ನೋಡಿಯೂ, ಹುಚ್ಚಾಸ್ಪತ್ರೆಯ ಅನುಭವವುಳ್ಳವರನ್ನು ಕೇಳಿಯೂ ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳಲಾಗಿದೆ. ಅದೂ ಅಲ್ಲದೆ ಮತ್ತೊಂದು ಸಮಾಚಾರ ನಿಮಗೆ ಖಚಿತ ಗೊತ್ತಿರಬಹುದು. ನಿದ್ರೆ, ಆಹಾರ, ಪ್ರಜೋತ್ಪತ್ತಿಗಳನ್ನು ಇತರ ಪ್ರಾಣಿಗಳ ಹಾಗೆ ಮನುಷ್ಯರೂ ಮಾಡುತ್ತಾರಲ್ಲ?

ನಿಜ. ಮನುಷ್ಯರಿಗೆ ವಿಶೇಷವಾಗಿರುವುದು ಬುದ್ಧಿ. ಬುದ್ಧಿಯನ್ನು ಬೆಳೆಸಿಕೊಂಡು ಎಷ್ಟೇ ಹಾರಲಿ, ಬುದ್ಧಿಗೆ ರೆಕ್ಕೆ ಕಟ್ಟಿಕೊಂಡು ಚಂದ್ರ ಮಂಡಲವನ್ನಾದರೂ ದಾಟಲಿ. ಆದರೆ ಮೂಲ ಗುಣಗಳನ್ನು ಮಾತ್ರ ಬಿಟ್ಟವನಲ್ಲ, ಬಿಡಲಾರ ಮನುಷ್ಯ. ಬುದ್ಧಿಯನ್ನು ಬಿಟ್ಟರೆ ಮತ್ತೆ ಅವನಿಗೆ ಕೆಲಸವೂ ಇಲ್ಲವಷ್ಟೆ?

ಆ ಮೂಲ ಗುಣಗಳೊಂದಿಗೆ ಒಂದು ಪಸೆ ಅಂಟಿಕೊಂಡಿದೆಯಲ್ಲ, ಇನ್ನೊಬ್ಬನಿಗಿಂತ ಮೇಲೆ ತಾನಾಗಬೇಕೆಂಬ ಲಾಲಸೆಯ ಪಸೆ. ಇದನ್ನು ತೊಳೆದುಕೊಂಡವ ಎಲ್ಲೋ ಸಾವಿರಕ್ಕೊಬ್ಬನಿದ್ದಾನು; ಮಹಾ ಜ್ಞಾನಿ. ಅಂಥವರು ಎಲ್ಲಕ್ಕೂ ಅತೀತರಾಗಿ ನಿಂತು ಉಳಿದವರಿಗೆಲ್ಲ ಸದ್ಬುದ್ಧಿ ಹೇಳುತ್ತಾ ಇರುತ್ತಾರೆ. ಬೇಕಲ್ಲ ಅಂಥವರೂ. ಇಲ್ಲದಿದ್ದರೆ ಹೇಳಲಿಕ್ಕಾದರೂ ಬ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್.

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಶಂಬಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಎಂದೆಂದಿಗೂ

ತಾಷ್ಕೆಂಟ್ ವೀರ ಜ

ಲಾಲ್ ಬಹದ್ದೂರ್—

ತ್ಯಾಗ, ಸೇವೆ ಮತ್ತು ಮಾನವತೆಯ ಮತ್ತೊಂದು ರೂಪ ಲಾಲ್ ಬಹದ್ದೂರ್. ಆತ್ಮಾಭಿಮಾನ, ಸ್ವಗೌರವ ರಕ್ಷಣೆ, ಸ್ವದೇಶ ರಕ್ಷಣೆಯ ಪ್ರತಿರೂಪ ಲಾಲ್ ಬಹದ್ದೂರ್.

(ನಡೆಯುವ ಅಥವಾ ನಡೆಯದ) ಪ್ರತಿ ನಾಣ್ಯಕ್ಕೂ ಎರಡೆರಡು ಮುಖ, ಆದರೆ, ಅವೆರಡೂ ಬಹಿರಂಗ ಮಾನವನದು ಹಾಗಲ್ಲ, ಒಂದು ಅಂತರಂಗ, ಇನ್ನೊಂದು ಬಹಿರಂಗ,

ಅಂತರಂಗ ಮತ್ತು ಬಹಿರಂಗ ಶುದ್ಧಿಯಿಲ್ಲದಿದ್ದರೆ ಏನು ಪ್ರಯೋಜನ? ಉದಯ ಕಾಲದಲ್ಲೇಳಬಹುದು, ಚಳಿಯಲ್ಲಿ ಗಡಗಡನೆ ನಡುಗಬಹುದು, ಕೆರೆಯಲ್ಲಿ ಮುಳುಗಬಹುದು, ಮಂದಿರಕ್ಕೆ ಪ್ರದಕ್ಷಿಣೆ ಹಾಕಬಹುದು— ಇದು ಕಾಗೆಯ ಕೂಗಿನಂತೆ— ಮನದಲ್ಲಿ ಲೇಶ ಭಕುತಿ ಇಲ್ಲದ ಮೇಲೆ ಇವೆಲ್ಲ ಏಕೆ?

ಸೇವೆ ಮಾಡದೆನೇ ಸೇವಕರಾದವರು ಅನೇಕರು. ತ್ಯಾಗವಿಲ್ಲದೆ ಮಹಾತ್ಯಾಗಿಗಳೆನಿಸಿದವರೂ ಇದ್ದಾರೆ. ದಾನವರಾಗಿದ್ದೇ ಮಾನವತೆಯ ಕೈವಾರಿಯೆಂಬ ಪ್ರಶಂಸೆಗೆ ಪಾತ್ರರಾದವರು ತುಂಬ— ಆದರೆ ಇವೆಲ್ಲ ಗುಣಗಳು ಒಬ್ಬ ವ್ಯಕ್ತಿಯಲ್ಲಿ ಮೂಡಿ ಬರುವುದೆಂದರೆ ಸುಲಭವಲ್ಲ. ಇವುಗಳ ತ್ರಿವೇಣಿ ಲಾಲ್ ಬಹದೂರ್ ಸಾಮಾನ್ಯ ವ್ಯಕ್ತಿಯಲ್ಲ.

ಬಂಗಾರದ ತೊಟ್ಟಿಲಲ್ಲಿ ಹುಟ್ಟಿ ಬರಲಿಲ್ಲ, ವಿದೇಶಗಳಿಗೆ ತೆರಳಿ ಉಚ್ಚ ಶಿಕ್ಷಣವನ್ನು ಪಡೆದು ಬರಲಿಲ್ಲ, ಮಾತಿನ ಮೋಡಿಯಿಂದ ಎಲ್ಲರನ್ನೂ ಆಕರ್ಷಿಸುವ ಮಾಯಾಶಕ್ತಿಯ ಪರಿಚಯವಿಲ್ಲ.

ಆದರೆ, ಸದ್ಗುಣ, ಸದ್ಬುದ್ಧಿ, ಸದ್ವಿವೇಕ, ಸಚ್ಚರಿತೆ, ಸದಾಚಾರ... ಹೀಗೆ ಸತ್ ಪರಂಪರೆಯಿಂದಲೇ ವಾಮನನು ತ್ರಿವಿಕ್ರಮನಾದ— ಲಾಲ್ ಬಹದ್ದೂರ್ ಜಾಗತಿಕ ಮುತ್ಸದ್ಧಿಯೆನಿಸಿದ.

ಲಾಲ್ ಬಹದ್ದೂರ್— ಪಂಡಿತ ನೆಹರೂ ಅನಂತರ ಅವರ ಉತ್ತರಾಧಿಕಾರಿಯಾಗಿ ಆಯ್ಕೆಗೊಂಡುದೂ ಸೋಜಿಗ. ೪೫ ಕೋಟಿ (ದರಿದ್ರ) ಭಾರತೀಯರನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಪ್ರತಿಜ್ಞೆ ಸ್ವೀಕರಿಸಿದ ನಂತರ....

ಅನಂತರ ಅವರು ಬದುಕುಳಿದುದು ಬರಿಯ ಹತ್ತೊಂಬತ್ತು ತಿಂಗಳು...

ಈ ಅಲ್ಪಾವಧಿಯಲ್ಲಿ ಅವರು ತೋರಿದ ಸಾಹಸ— ಈ ವಾಮನ ಮೂರ್ತಿಯ ತ್ರಿವಿಕ್ರಮಾವತಾರವಲ್ಲದೆ ಮತ್ತೇನು?

ಆಂತರಿಕ ಸಮಸ್ಯೆಗಳು ಹತ್ತಾರು— ಅಧಿಕೃತ ಭಾಷೆಯ ಪ್ರಶ್ನೆ— ಗೊಂದಲ. ಕೇರಳದ ರಾಜಕೀಯ ಪತನದ ಪುನರುಚ್ಚಾರ— ನೆಮ್ಮದಿಯಿಲ್ಲ. ಆಹಾರದ ಅಭಾವ— ಹಾಹಾಕಾರ. ನಾಯಕಾಗ್ರಣಿಗಳ ಮೇಲೆ ಅಪಾದನೆಗಳ ಮಾಲೆ— ತಲೆಶೂಲೆ, ವಿದೇಶಿ ವಿನಿಮಯದ ಕೊರತೆ— ಕಳವಳ.......

ಮುಂದೆ, ದೇಶದ ಸ್ವಾತಂತ್ರ್ಯಕ್ಕೇನೇ ಧಕ್ಕೆ— ಇದು ಆತ್ಮಗೌರವದ ಪ್ರಶ್ನೆ......

ಹತ್ತಿಯಂತೆ ಮೃದು; ಅದೂ ಒತ್ತಿದೊಡನೆ ಕಠಿನವಾಗದುಳಿದೀತೆ?

ಶಾಸ್ತ್ರಿ ವೀರ ಸೈನಿಕರಾದರು; ಮಾತೃಭೂಮಿಯ ಗೌರವ ಪ್ರತಿಷ್ಠೆ ಸಾರ್ವಭೌಮತೆಯ ರಕ್ಷಣೆಯ ಕಂಕಣ ತೊಟ್ಟರು, ೪೫ ಕೋಟಿ ಭಾರತೀಯರು ಜೈ ಕಿಸಾನ, ಜೈ ಜವಾನ, ಜೈ ಹಿಂದ್ ಎಂದು ಉದ್ಘೋಷಿಸುತ್ತ ಅವರೊಂದಿಗೆ ದೇಶ ರಕ್ಷಣೆಯ ದೀಕ್ಷೆ ತೊಟ್ಟರು— ಭಾರತೀಯ ದೃಷ್ಟಿ

೧

೨



ಯ ಲಾ ರ ದ
ತ್ರಿಕ ಮುತ್ಸದ್ಧಿ – ಶಾಸ್ತ್ರಿ

ನಿರ್ಘಾರದ ಪ್ರತಿಧ್ವನಿ ಇಡಿಯ ವಿಶ್ವದಲ್ಲಿ ಹರಡಿತು—

ಯುದ್ಧ—ಪ್ರಾಣ ನಾಶ, ಸಂಪತ್ ನಾಶ-ನಾಶ....ಎಲ್ಲವೂ ನಾಶ-ಕೊನೆಗೆ ಸರ್ವ ನಾಶ....?

ನಮ್ಮ ದಾರಿ ಸತ್ಯದ ದಾರಿ-ಲಾಲ್ ಸತ್ಯ, ಧರ್ಮ ಮತ್ತು ಮಾನವತೆಯ ಪವಿತ್ರ ದಾರಿಯಲ್ಲಿ ನಮ್ಮನ್ನು ಒಯ್ದುರು ಕೊನೆಗೂ ಸತ್ಯಕ್ಕೆ ಗೆಲುವಾಯ್ತು.

ಯುದ್ಧದಲ್ಲಿ ಮನುಷ್ಯನು ಸಾಯುತ್ತಾನೆ,

ಸಂಪತ್ತು ಸೂರೆಯಾಗುತ್ತದೆ- ಆದರೆ, ಜೀವ ಹತ್ಯೆ ಮಾಡಿದವ ವಿಜಯಗಳಿಸಲಾರ.

ಸಾಯುವ ಹೆದರಿಕೆಯಿಂದ ಸುಮ್ಮನೆ ಕೈಕಟ್ಟಿ ಕುಳಿತಿರುವುದು ಹೇಡಿತನ-ಕಾಲು ಕೆರೆದು ಜಗಳಕ್ಕೆ ಕರೆಯುವಾಗ ಸುಮ್ಮನಿರುವುದೆಂತು?

ಲಾಲ್ ಬಹದ್ದೂರರ ವಿಜಯ ತಾಷ್ಕೆಂಟಿನ ಘೋಷಣೆಯೊಂದಿಗೆ ಸಮಾಪ್ತವಾಯ್ತು.

ಭಾರತ ಪಾಕಿಸ್ತಾನಗಳು ಒಮ್ಮತದ ಘೋಷಣೆ ಮಾಡಲಾರವು; ಎರಡು ದೇಶಗಳ ವರಿಷ್ಠರನ್ನು ಮುಖಾಮುಖಿಯಾಗಿಸಿದ ಕೋಸಿಗಿನ್‌ರ ಪ್ರಯತ್ನ ನೀರಲ್ಲಿ ಮಾಡಿದ ಹೋಮವಾಗುವುದು— ಎಂದು ಜಗತ್ತಿಗೆ ಜಗತ್ತೇ ನಿರೀಕ್ಷಿಸಿದಾಗ—

ಒಂದು ಸಂಜೆ ಒಂದಲ್ಲ, ಒಂಬತ್ತು ಅಂಶಗಳಲ್ಲಿ ಒಮ್ಮತವನ್ನು ಸಾಧ್ಯ ಮಾಡಿಯೂ ತನ್ನ ದೇಶದ ಪತಾಕೆಯೆತ್ತಿದ ಲಾಲ್ ಬಹದೂರರ ಅಂತರಂಗ ಸ್ವರೂಪ ಹೇಗಿತ್ತು!

"ತಾವೇಕೆ ಬಳಸುದಾರಿಯಲ್ಲಿ ನವದೆಹಲಿಗೆ ಮರಳುವಿರಿ? ನಮ್ಮಲ್ಲಿಂದಲೇ ಹಾದು ಹೋಗಿ. ಸಾಧ್ಯವೆನಿಸಿದರೆ, ನಮ್ಮೊಡನೆ ಚಹ ಸ್ವೀಕರಿಸುವ ಅವಕಾಶವನ್ನೂ ಮಾಡಿಕೊಳ್ಳಿ' ಎಂಬ ಮೈತ್ರಿಯ ಆಹ್ವಾನವನ್ನು ಅಧ್ಯಕ್ಷ ಆಯ್ಯೂಬರಿಂದ ಪಡೆಯಬೇಕಾದರೆ, ಸನ್ನಿವೇಶ ಎಲ್ಲಿಯವರೆಗೆ ಬಂದು ಮುಟ್ಟಬೇಕಿತ್ತು!

ಅದೇ ಅಯ್ಯೂಬಖಾನರ ಹೆಗಲು ಹತ್ತಿಯೇ ಶಾಸ್ತ್ರಿಯವರ ವಾಮನ ಮೂರ್ತಿ ಭಾರತದತ್ತ ಮರು ಪ್ರಯಾಣ ಮಾಡಬೇಕಾಗಿ ಬಂತು—ಇದು ಭಾರತದ ದುರದೃಷ್ಟ ಮಾತ್ರವಲ್ಲ—ಇಡಿಯ ವಿಶ್ವದ ದೌರ್ಭಾಗ್ಯ.

ಪಂಡಿತ ನೆಹರು ಮಹಾತ್ಮರ ರಾಜಕೀಯ ಶಿಷ್ಯರೆಂದು ಗೌರವ ಪಡೆದವರು. ಸ್ವಾತಂತ್ರ್ಯಕ್ಕೆ ಕಾಲು ಶತಮಾನ ಹಿಂದಿನಿಂದಲೇ ದೇಶಕ್ಕಾಗಿ ದುಡಿಯುತಿದ್ದ ನಾಯಕ ಶ್ರೇಣಿಯಲ್ಲಿ ಪರಿಗಣಿತರಾಗಿದ್ದರು. ಗಾಂಧಿ ಅನಂತರದ ಸ್ಥಾನ ಅಂದಿನಿಂದ ರಾಜಕೀಯದಲ್ಲಿ ನೆಹರುವಿಗಿತ್ತು. ಮೊದ

(ಒಂಭತ್ತನೇ ಪುಟ ನೋಡಿರಿ)

ಚಿತ್ರಗಳು

೧. ಪತಿಯೇ ಪರದೈವವೆಂದು ನಂಬಿ ನಡೆದ ಲಲಿತಾ ಸತಿಯಲ್ಲೇ ದೇವಿತನವನ್ನು ಕಾಣುವ ಲಾಲ ಬಹದೂರರ ದಾಂಪತ್ಯ ಜೀವನ ಆರ್ಥಿಕವಾಗಿ ಕೆಟ್ಟಿದ್ದರೂ ಮಿಕ್ಕೆಲ್ಲ ರೀತಿಯಿಂದ ಒಳ್ಳೆಯದಿತ್ತು. ವಿದೇಶಗಳ ಗಣ್ಯ ಅತಿಥಿಗಳು ಬರುವಾಗ ಈ ದಂಪತಿಗಳು ಅವರನ್ನು ಹೃತ್ಪೂರ್ವಕ ಸ್ವಾಗತಿಸುತಿದ್ದರು.

೨. ದಿ| ಪ್ರಧಾನಿ ಶಾಸ್ತ್ರಿಯವರ ಚಿತಾ ಭಸ್ಮಕುಂಭಗಳಿಗೆ ಅಮೇರಿಕೆಯ ರಾಯಭಾರಿ ಚೆಸ್ಟರ್ ಬೌಲ್ಸ್ ಮತ್ತು ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕ್ ಅಂತಿಮ ಗೌರವ ಸಲ್ಲಿಸಿದರು. ಇವರೊಡನೆ ಶ್ರೀಮತಿ ಬೌಲ್ಸರೂ ಕೂಡಿಕೊಂಡಿದ್ದರು.

೩. ದಿ| ಪ್ರಧಾನಿಯವರ ವಿಧವೆ ಲಲಿತಾ ಶಾಸ್ತ್ರಿ ಮತ್ತು ಪುತ್ರ ಹರಿಕೃಷ್ಣರಿಗೆ ಡೀನ್ ರಸ್ಕ್ ಲಾಲಬಹದ್ದೂರರ ನಿಧನದ ಬಗ್ಗೆ ಅಮೇರಿಕನ್ ಮಹಾ ಜನತೆಯ ಶೋಕ ಸಂತಾಪಗಳನ್ನು ವ್ಯಕ್ತಪಡಿಸಿದರು.

೪. ತಾಯಿ—ಮಗ — ೮೫ ವರ್ಷ ಪ್ರಾಯದ ರಾಮದುಲಾರಿ ದೇವಿ ತನ್ನ ಮಗನಿಗೆ ಯಶದೊರೆಯಲಿ ಎಂದು ಆಶೀರ್ವದಿಸಲು ಪಾಲಂ ನಿಲ್ದಾಣಕ್ಕೆ ತೆರಳಿದ್ದರು. ಆಕೆಯ ಆಶೀರ್ವಾದ ಸತ್ಯವಾಯಿತೇ; ಆದರೆ ತಾಷ್ಕೆಂಟದಲ್ಲಿ ಅವರ ಮಗ ಸದಾ ಅಮರನಾಗಿಯೇ ಉಳಿದ. ಅವರಂದಿದ್ದ 'ನನ್ನ ಮಗ ಸಾಯಲಾರ' ಎಂಬುದರ ವ್ಯಾಖ್ಯೆ ಇದೆಯೇ?

೩

೪

ಜಗಳ ಗಂಟಿಕೆಯ ಕುತೂಹಲ

(ಐದನೇ ಪುಟದಿಂದ)

ರೆಯಲಿಕ್ಕಾದರೂ ಯಾರಿಗೆ ಏನು ಗೊತ್ತಾಗುತಿತ್ತು? ಹೀಗೊಂದು ಬರೆಯಲು ಈ ಲೇಖಕನಿಗಾದರೂ ಸಾಧ್ಯವಿತ್ತೆ? ಅಂತೆಯೇ ಅಂಥ ಜ್ಞಾನಿಗಳಿಗೂ, ತತ್ವವೇತ್ತರಿಗೂ ಪ್ರತ್ಯೇಕ ನಮಸ್ಕಾರವಿರಲಿ.

ಅಂದ ಹಾಗೆ ಇಲ್ಲಿ ಹೀಗೆ ಬರೆಯುವುದು ಸಹಾ ನಿಮಗೆಲ್ಲಾ ಗೊತ್ತಿದ್ದದ್ದೇ ಆದ್ದರಿಂದ ಇದೂ ಒಂದು ಅಹಂಕಾರದ ಪ್ರಲಾಪವೇ ಆದೀತು. ಆದರೆ ಒಂದು ಸಂಗತಿ ಉಂಟು ನೋಡಿ. ಕೆಲವರಿಗೆ ಗೊತ್ತಿಲ್ಲದಿರಬಹುದು; ಕೆಲವರು ಗೊತ್ತಿದ್ದೂ ಮರೆತಿರಬಹುದು. ಅಂಥವರಿಂದಾದರೂ ತಮಗಿಂತ ಈ ಲೇಖಕ ಹೆಚ್ಚಿನವನೆಂಬ ಭಾವನೆ ಬಂದೀತಲ್ಲಾ ಎಂಬ ಆಸೆ, ಅಷ್ಟೆ. ಕ್ಷಮಿಸುತ್ತೀರಿ ತಾನೆ? ಒಂದು ವೇಳೆ ಕ್ಷಮಿಸದೇ ಇದ್ದರೆ—ಈ ಲೇಖಕನಿಗಿಂತ ಹೆಚ್ಚಿನವರು ತಾವೇ ಎಂಬ ಅಹಂಕಾರವಿದ್ದವರು, ಗುರ್ಗುರಾಯಿಸಿಕೊಂಡಾದರೂ ಇದ್ದರೆ, ಅದೂ ಸಂತೋಷವೇ; ಮೇಲೆ ಹಾರಿ ಬೀಳದಿದ್ದರೆ ಸಾಕು.

ಇನ್ನೊಂದು ಗುಟ್ಟು ಹೇಳಬೇಕೆ? ನಾವೆಲ್ಲರೂ ಜಗಳದ ಪ್ರಿಯರೇ; ಕದನಕುತೂಹಲಿಗಳೇ. ಮಕ್ಕಳಲ್ಲೇನೋ ಅದು ಅಕಾರಣವೆನಿಸೀತು—ಅದನ್ನು ನೋಡುವ ದೊಡ್ಡವರಿಗೆ. ಆದರೆ ದೊಡ್ಡವರಲ್ಲಿ ಜಗಳವಾದಾಗ ಮಾತ್ರ ಸಕಾರಣವೆನಿಸುತ್ತದೆ. ಅಂತೂ ಪ್ರಾಣಿಗಳಿಂದ ಹಿಡಿದು, ಮಕ್ಕಳಿಂದ ತೊಡಗಿ, ಹಿರಿಯರ ವರೆಗೂ, ದೊಡ್ಡ ದೊಡ್ಡ ರಾಜ ಮಹಾರಾಜರ ವರೆಗೂ ಜಗಳದ ಇಷ್ಟರೇ. ಸಣ್ಣ ಸಣ್ಣ ರಾಜರು ಜಗಳ ಮಾಡುವಾಗ ಮಹಾ ಮಹಾ ರಾಜರು ತಲೆ ಹಾಕಿ ಮಧ್ಯಸ್ಥ ಮಾಡಿ ತಾವು ಇನ್ನಷ್ಟು ದೊಡ್ಡವರೆನಿಸಿಕೊಳ್ಳುತ್ತಾರೆ. ಬೀದಿ ಜಗಳದಲ್ಲಿಯೂ ಹಾಗೇನೇ.

ಬೀದಿಯಲ್ಲಿಬ್ಬರು ಕೈಗೆ ಕೈ, ಕಾಲಿಗೆ ಕಾಲು, ಕಿವಿಗೆ ಕಿವಿ, ಹಲ್ಲಿಗೆ ಹಲ್ಲು ಅಂತ ಹೊಯ್ದಾಡಿಕೊಂಡಿರುತ್ತಾರೆ. ಇಬ್ಬರೂ ಅಭಿಮಾನ ಬಿಡರು, ಅಹಂಕಾರ ಬಿಡರು, ಆಗ ಇಬ್ಬರೂ, ಯಾರಾದರೂ ಮಧ್ಯಸ್ಥಕ್ಕೆ ಬರಲಾರರೇ ಅಂತ ಆಚೆ ಈಚೆ ನೋಡುತ್ತಿರುತ್ತಾರೆ. ಈ ಸಂದಿಯಲ್ಲಿ ಅವರಿಗಿಂತ ದೊಡ್ಡವನೆನಿಸಲು ಮಧ್ಯಸ್ಥನೊಬ್ಬ ನುಗ್ಗಿ ಇಬ್ಬರನ್ನೂ ದೂರ ದೂರ ಮಾಡುವಾಗ, ನಿಜವಾಗಿಯೂ ಸೋತು ಹೋದ ಜಗಳಗಂಟರಿಬ್ಬರೂ ತಾವೇನೂ ಸೋಲಲಿಲ್ಲವೆಂಬ ಹಾಗೆ ಹೆಚ್ಚೆಚ್ಚು ಹಾರುವ ಮೇಲಾಟ ನೋಡಬೇಕಾದ್ದು. ಅಂತಲೇ ಅದನ್ನು ನೋಡುತ್ತಾ ಇರುತ್ತಾರೆ ಬಹುತೇಕ ಜನ.

ಅಂತಲೇ ಅದನ್ನು ನೋಡುತ್ತಾ ಇರುತ್ತಾರೆ ಬಹುತೇಕ ಜನ.

ನೋಡುವುದಕ್ಕೆ ಜಗಳವು ಬಹಳ ಕುತೂಹಲಕಾರಿ, ತಮಾಷೆ, ಅನಿರ್ವಚನೀಯ ಆನಂದ. ತಾನು ಜಗಳಕ್ಕೆ ನುಗ್ಗಲು ಶಕ್ತಿಯಿಲ್ಲದೆ ಧೈರ್ಯವಿಲ್ಲದೆ ಇರುವವನಿಗೂ ಇನ್ನೊಬ್ಬರ ಜಗಳ ನೋಡುವುದರಲ್ಲಿ ಕೇಳುವುದರಲ್ಲಿ ಬಹಳ ಕುತೂಹಲ.

ಇದನ್ನೆಲ್ಲ ತಿಳಿದೇ ವ್ಯಾಸರು ಭಾರತ ಬರೆದರು. ವಾಲ್ಮೀಕಿ ರಾಮಾಯಣ ಬರೆದರು. ಎರಡೂ ಜಗಳಗಳ ಕಥೆ ತಾನೆ? ರಾಮಾಯಣದಲ್ಲಿಯ ರಾವಣ ಮರ್ದನದ ಜಗಳದ ಕಥೆ ಸಾಲದೆಂದು ಶತ ಕಂಠ ರಾವಣ, ಸಹಸ್ರಕಂಠ ರಾವಣರ ಕಥೆಗಳವೆ ಬೇಕಾದರೆ. ಇನ್ನೂ ಸಾವಿರಾರು ಪುರಾಣ ಪುರುಷೋತ್ತಮರ, ಸುರಾಸುರರ ಹೋರಾ ಹೋರಿಗಳೆಲ್ಲಾ ಸುರಸವಾದ ಕಥೆಗಳು. ಜನರಿಗೆ ಜಗಳಗಳ ಮೇಲೆ ಇಷ್ಟವಿಲ್ಲದಿದ್ದರೆ ಆ ಕಥೆಗಳೆಲ್ಲ ಬದುಕಿರುತ್ತಿದ್ದುವೆ?

ಸಾಮಾನ್ಯ ಹುಡುಗ ಪ್ರಾಯದವರೆಲ್ಲ ಮೆಚ್ಚುವುದು ಹೊಡೆದಾಟ ಬಡಿದಾಟಗಳ ಗೌಜಿಯಿರುವ ಸಿನಿಮಾಗಳನ್ನೇ. ಅಂಥವರೇ ಹೆಚ್ಚೆಚ್ಚು ಸಿನಿಮಾ ನೋಡುವವರಾದ್ದರಿಂದ ಹ್ಯಾಗೆ ಹ್ಯಾಗೋ ಕಥೆಯನ್ನು ತಿರುಗಿಸಿ ತಂದು ಜಗಳಾಟವನ್ನು ಸೇರಿಸಲೇ ಬೇಕು.

ಮನುಷ್ಯರಿಗೆ ಕದನ ಕುತೂಹಲ ಎಲ್ಲಿಯ ವರೆಗೆ ಉಂಟೆಂದರೆ, ಅದರಷ್ಟು ಉತ್ಸಾಹದ ಆಟ ಬೇರೆ ಯಾವುದೂ ಇಲ್ಲ, ಆಕರ್ಷಣೀಯ ಆಟ ಜಗಳಾಟವೇ. ಕೋಳಿ ಕಾಳಗ, ಗೂಳಿ ಕಾಳಗ, ಆಳುಗಳ ಕಾಳಗ, ಜಟ್ಟಿ ಮಲ್ಲಾಂಗಳ ಕಾಳಗ—ಇವೆಲ್ಲಾ ಭಾರೀ ಮನರಂಜನೆಯ ಆಟಗಳಾಗಿವೆ. ಅಂತಹ ಆಟಗಳಿಲ್ಲದಿದ್ದರೆ ವೀರ ಧೀರರಿಗೆ ಕೆಲಸವಿಲ್ಲ, ಅವರ ಮೆರೆದಾಟವಿಲ್ಲ; ಪುರಾಣ ಚರಿತ್ರೆಗಳೆಲ್ಲ ಮೂಲೆಪಾಲು.

ಈ ಬಗೆಯ ಮಾನವರ ಮನಸ್ತತ್ವಕ್ಕೆ ಸರಿಯಾಗಿ—ಪ್ರಜೆಗಳು ಆಹಾರಾಭಾವದಿಂದಲೋ, ಮತ್ತಾವುದರಿಂದಲೋ ದಂಗೆಗಿಂಗೆ ಏಳುವ ಹಾಗಿದ್ದಾಗ, ರಾಜನೇ ಹೊಸ ಜಗಳದಾಟಗಳನ್ನೆಬ್ಬಿಸಿ, ಆ ದೃಶ್ಯವನ್ನು ಅವರ ಮುಂದೆ ತೋರಿಸಿ, ಅದರ ಮೇಲೆ ಲಕ್ಷ್ಯ ಹರಿಯಿಸಿ ಬಿಟ್ಟರೆ ತೀರಿತು. ಕೊಲೆ ಪ್ರಾಣ ನಾಶ ನರಳಾಟಗಳೆಲ್ಲಾ ಒಂದು ಆಟದಂತಾಗಿ, ಪ್ರಜೆಗಳೂ ಆವೇಶಗೊಂಡು ಅದರಲ್ಲಿ ಮೈಮರೆತು ಬಿದ್ದು ಸಂತೋಷದಿಂದಲೇ ಸತ್ತು ಸತ್ತು ಕೂಡ ಹೋಗುತ್ತಾರೆ. ರೋಮ್ ಚರಿತ್ರೆಯಲ್ಲಿ ಹಾಗೆಲ್ಲಾ ಘೋರಾತಿಘೋರ ಆಟಗಳಾಗಿವೆಯಂತೆ.

ಹೀಗೆಲ್ಲಾ ಆಗಾಗ ಪ್ರಪಂಚದಲ್ಲಿ ನಡೆಯುತ್ತಾ ಇದ್ದರೂ, ಮಹನೀಯರು ಶಾಂತಿಪಾಠ ಮಾಡುತ್ತಿರುವುದರಿಂದಲೋ, ಮತ್ತೇನೋ ಭೀತಿಯಿಂದಲೋ ಎಂತಹ ಜಗಳಕ್ಕೂ ಒಂದು ಸತೋಟಿಯಂತ್ರ ಇದ್ದೇ ಇದೆ; ಬಂದೇ ಬರುತ್ತೆ. ಬರಲೇ ಬೇಕು. ಹಾಗಿಲ್ಲದಿರುತ್ತಿದ್ದರೆ ಯಾವಾಗಲೋ ಆಗಿ ಹೋಗುತಿತ್ತು ಸರ್ವನಾಶ.

ಬಹುಶಃ ಆಗಾಗ ಭೂಭಾರಹರಣಕ್ಕಾಗಿ ಈ ಕಲಹ ಪ್ರಿಯತೆಯ ಅಂಟನ್ನು ದೇವರು ಪ್ರಾಣಿಗಳಿಗೆ ಅಂಟಿಸಿರಬೇಕು. ದೊಡ್ಡ ಅನ್ಯಾಯದ ಕಲಹವನ್ನು ಮುರಿಯಲು ಕಲಹ ಮಾಡದೆ ಗತ್ಯಂತರವು ಇಲ್ಲ. ಹೇಗೆ ಕಲಹ ಮಾಡಬೇಕು, ಎಂಬುದಕ್ಕೆಲ್ಲ ಶಾಸ್ತ್ರವನ್ನೇ ಬರೆದಿಟ್ಟಿದ್ದಾರೆ. ಅದರಲ್ಲಿ ಎಷ್ಟೋ ತಂತ್ರಗಳಿವೆ, ವ್ಯೂಹಗಳಿವೆ. ಆ ಪ್ರಕಾರ ಮಾಡಿದ ಕಲಹಕ್ಕೇ ಧರ್ಮಯುದ್ಧ ಅನ್ನುವುದು, ಗಂಭೀರವಾದ ಹೆಸರು. ಧರ್ಮ-ಅಧರ್ಮಗಳ ನಡುವೆ ನಡೆಯುವಂಥಾದ್ದು. ಹೌದು, ಇಬ್ಬರೂ ಧರ್ಮಯುದ್ಧಕ್ಕಿಳಿದರೆ ಯುದ್ಧವೇ ಇರಲಾರದೆಂದು ಕಾಣುತ್ತದೆ. ಏನೋ?

ಒಟ್ಟಿನ ಮೇಲೆ ಕಲಹವು ನ್ಯಾಯದಂಡವನ್ನು ಹಿಡಿದುಕೊಂಡಿದ್ದರೇನೇ ಒಪ್ಪಿಯದಾದೀತು.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ



ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

(ಏಳನೇ ಪುಟದಿಂದ)

ಲೇ ಜನಮೆಚ್ಚುಗೆಯನ್ನು ಗಳಿಸಿದ ಅವರು ಪ್ರಧಾನ ಮಂತ್ರಿಯಾದುದು ಸ್ವಾಭಾವಿಕ.

ಆದರೆ ಶಾಸ್ತ್ರಿ? ಪ್ರಾದೇಶಿಕ ಕಾರ್ಯಕರ್ತರಾಗಿದ್ದ ಶಾಸ್ತ್ರಿಯವರು ಕೇಂದ್ರದ ಮಂತ್ರಿಯಾದ ಬಳಿಕ ಬೆಳಕಿಗೆ ಬಂದವರು. ರಾಷ್ಟ್ರದೊಳಗೆ ಚತುರ ಸಂಧಾನಕಾರರೆಂದು ಹೆಸರು ಪಡೆದಿದ್ದರಾದರೂ, ವಿದೇಶ ಸಂಚಾರವನ್ನು ವರ್ಷ ಮಾಡಿದವರಲ್ಲ. ಅವರ ಮೊತ್ತ ಮೊದಲ ವಿದೇಶ ಯಾತ್ರೆ ಪ್ರಾರಂಭವಾದುದು ಪ್ರಧಾನಿಯಾದ ಮೇಲೆ—ನೇಪಾಲದಿಂದ.

ಹಾಗಿದ್ದರೂ ಇಡಿಯ ಜಗತ್ತಿನ ಜನನಾಯಕರ ಮೆಚ್ಚುಗೆಯನ್ನು ಶಾಸ್ತ್ರಿ ಪಡೆದರು. ೧೮ ತಿಂಗಳುಗಳಲ್ಲಿ ಜನಸಾಮಾನ್ಯರ, ಮಾನವತೆಯ ನಾಯಕರಾಗಿ ಮೆರೆದರು. ಶಾಂತಿದೂತನ ಅಂತಿಮ ಸಾಧನೆ ಶಾಂತಿಯ ಸಂದೇಶವನ್ನು ಲೋಕಕ್ಕೆ ನೀಡಿತು. ಶಾಂತಿ ಸ್ಥಾಪನೆಯ ಅಡಿಗಲ್ಲನ್ನು ಹಾಕಿದ ಶಾಸ್ತ್ರಿ ಕಟ್ಟಿದ ಕಟ್ಟಡವನ್ನು ನಮಗೊಪ್ಪಿಸಿದ್ದಾರೆ.

ಇದರಲ್ಲಿ ನವು ಕುಂದು ಬಾರದು, ಶಾಸ್ತ್ರಿಜಿ ಘೋಷಣೆಯನ್ನು ಇದ್ದಕ್ಕಿದ್ದಂತೆ ಕಾರ್ಯರೂಪಕ್ಕೆ ತರುವುದು ನಮ್ಮ ಕೆಲಸ. ನಮ್ಮಿಂದಾಗಿ ಶಾಸ್ತ್ರಿಜೀ ಕಟ್ಟಡ ಬುಟ್ಟಿಗೆ ಬೀಳಬಾರದು; ಕಟ್ಟಮೇಲೂ ಬುದ್ಧಿ ಬಾರದೆ ಹೋದರೆ, ನಾವೇನು ಮಾಡಲು ಸಾಧ್ಯ?

1965–A YEAR OF PROGRESS FOR CANARA BANK

After providing for taxation and making the usual and necessary provisions, the net profit for the year 1965 amounts to Rs. 35.95 lakhs as against Rs. 34.65 lakhs for the previous year.

The Directors propose to transfer to Reserve Fund a sum of Rs. 7.25 lakhs as against Rs. 7 lakhs last year. The balance amount of Rs. 28.70 lakhs is proposed to be transfered to Special Reserve. The Directors are recommending maintenance of dividend (totaling Rs. 13.48 lakhs) at 5.56% on Preference Shares and at 15% on Equity Shares (both subject to deduction of tax at source) to be paid out of special reserve. (The new Shares issued towards the end of the year do not qualify for dividend for the year 1965). The balance thereafter in the Special Reserve will be subject to payment of Bonus to staff.

Further a sum of Rs. 10.40 lakhs is proposed to be transfered from Contingencies to Reserve Fund. With these transfers, the Reserve Fund (including share premium account of Rs. 23.80 lakhs) will stand at Rs 128.65 lakhs as against Rs. 108.50 lakhs last year. The paid up capital also stands higher at Rs. 1.25 crores against Rs. 1 crore last year.

During 1965, the Deposits of the Bank have risen to Rs. 98.98 crores from Rs. 88.24 crores last year thus recording an increase of 12.2 per cent. Advances registered a moderate increase and stood at Rs. 59.57 crores as against Rs. 58.59 crores last year. The investments of the Bank have gone up from Rs. 22.28 crores to Rs. 25.78 crores thus further strengthening the liquidity position.

ಎಲ್ಲೆಲ್ಲಿ ಏನೇನು?

ವಾರ್ಷಿಕೋತ್ಸವ

ಮಣಿಪಾಲ, ಫೆ. ೩— ಯಾರಿಗಾದರೂ ತಮ್ಮ ವೃತ್ತಿಯಲ್ಲಿ ಶೋಭಿಸಬೇಕಾದರೆ ಆ ವಿಷಯದಲ್ಲಿ ವಿಶೇಷ ಆಸಕ್ತಿ ಇರಬೇಕಾದುದು ಅಗತ್ಯವೆಂದು ಬೆಂಗಳೂರಿನ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪೆನಿಯ ಮುಖ್ಯಾಧಿಕಾರಿ ಶ್ರೀ ರವಿ ಎಲ್. ಕಿರ್ಲೋಸ್ಕರ್ ಇಂದಿಲ್ಲಿ ನುಡಿದರು. ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಒಂಭತ್ತನೆ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಾ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಆ ವೃತ್ತಿಯಲ್ಲಿ ಅಭಿರುಚಿ ಇಲ್ಲದೆ ಹೋದರೆ ಪ್ರಯೋಜನವಾಗದೆಂದರು.

ಇಲ್ಲಿ ಪಡೆಯುವ ಶಿಕ್ಷಣದಿಂದಾಗಿ ದೊರೆಯುವ ನೌಕರಿಯಲ್ಲಿ ಸಹಕಾರ ಮನೋಭಾವ ಹಾಗೂ ಕಲಿತು ಶ್ರಮಿಸುವ ದೃಷ್ಟಿ ಇದ್ದರೆ ಮಾತ್ರ ಒಳ್ಳೆಯದಾಗುತ್ತದೆಂದು ಸ್ಪಷ್ಟಪಡಿಸಿದರು.

ನಮ್ಮ ರಫ್ತು ವ್ಯಾಪಾರವನ್ನು ಹೆಚ್ಚಿಸಬೇಕೆಂದಾದರೆ ಇತರ ದೇಶಗಳ ವಸ್ತುಗಳೊಂದಿಗೆ ಸ್ಪರ್ಧಿಸಬಲ್ಲಂತಹ ಉತ್ತಮ ವಸ್ತುಗಳನ್ನು ರೂಪಿಸಬೇಕೆಂದರು.

ಇಲ್ಲಿ ಅದ್ಭುತ ಕೆಲಸ ಮಾಡಿರುವುದಕ್ಕಾಗಿ ಶ್ರೀ ಕಿರ್ಲೋಸ್ಕರ್ ಡಾ| ಟಿ. ಎಂ. ಎ. ಪೈಯವರಿಗೆ ಗೌರವ ಸೂಚಿಸಿದರು. ಇಂತಹ ಸಂಸ್ಥೆಯನ್ನು ನಡೆಸುವುದಕ್ಕಾಗಿ ಹೆತ್ತವರ ಸಹಕಾರ ತೆಗೆದುಕೊಳ್ಳುವುದರಲ್ಲಿ ಏನೂ ತಪ್ಪಿಲ್ಲವೆಂದರು. ಅಮೆರಿಕದಲ್ಲಿ ಎಲ್ಲ ಕಾಲೇಜುಗಳಿಗೂ ಅವುಗಳ ಹಳೇ ವಿದ್ಯಾರ್ಥಿಗಳ ಆರ್ಥಿಕ ಸಹಾಯ ಇದ್ದು, ಸ್ವಸಹಾಯ ಅತ್ಯುತ್ತಮವೆಂಬುದನ್ನು ತೋರಿಸುತ್ತದೆಂದರು.

ಶ್ರೀಮತಿ ಕಿರ್ಲೋಸ್ಕರ್‌ರವರು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು.

ಡಾ|| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣಮಾಡಿ ವಿದ್ಯಾರ್ಥಿಗಳು ಸದ್ಗುಣಗಳನ್ನೂ, ಕಾರ್ಯಪಟುತ್ವವನ್ನೂ ರೂಢಿಸಿಕೊಳ್ಳಬೇಕೆಂದು ಕರೆಯಿತ್ತರು.

ಪ್ರಿನ್ಸಿಪಲ್ ಶ್ರೀ ಪಿ. ವೆಂಕಟರಮಣ ಭಟ್ಟರವರು ವರದಿಯನ್ನೋದುತ್ತಾ ಈ ವರೆಗೆ ಈ ಕಾಲೇಜಿನಿಂದ ೩೫೦ ಇಂಜಿನಿಯರುಗಳು ತೇರ್ಗಡೆಯಾಗಿದ್ದಾರೆಂದೂ ಈಗ ೮೫೦ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆಂದೂ ಹೇಳಿದರು.

ಸುರತ್ಕಲ್ಲಿನ ಕರ್ನಾಟಕ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಲ್ ಡಾ| ಎ. ಎಸ್. ಅಡ್ಕೆಯವರು ಮಾತನಾಡಿ ಇಂಜಿನಿಯರಿಂಗ್ ಶಿಕ್ಷಣ ಕ್ರಮದಲ್ಲಿ ಮಾಡಬೇಕೆಂದಿರುವ ಬದಲಾವಣೆಗಳು ಇನ್ನೂ ಒಳ್ಳೆಯ ಇಂಜಿನಿಯರುಗಳನ್ನು ತಯಾರಿಸುತ್ತದೆಂದರು. ಪರೀಕ್ಷಾ ಪದ್ಧತಿಯನ್ನು ಸರಳಗೊಳಿಸಲಾಗುವುದಲ್ಲದೆ ಟ್ಯುಟೋರಿಯಲ್ ಕೆಲಸವನ್ನು ಪರಿಗಣಿಸಲಾಗುವುದೆಂದರು.

ಕಾಲೇಜು ಸಂಘದ ಕಾರ್ಯದರ್ಶಿ ಶ್ರೀ ಕೆ. ಎಸ್. ಕೆ. ವಾಸುದೇವ ರಾವ್‌ರವರು ವಂದನೆಗಳನ್ನು ಅರ್ಪಿಸಿದರು.

ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವ

ಉಡುಪಿ ಬೋರ್ಡ್ ಹಯರ್ ಸೆಕೆಂಡರಿ ಶಾಲೆಯ ವಾರ್ಷಿಕೋತ್ಸವವು ತಾ. ೬ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಮುಖ್ಯೋಪಾಧ್ಯಾಯ ಶ್ರೀ ಬಿ. ಎನ್. ಆಚಾರ್ಯರು ಸ್ವಾಗತಿಸಿ ಶಾಲೆಯ ಪ್ರಗತಿಪರ ವರದಿ ವಾಚನಮಾಡಿದರು. ಅಧ್ಯಕ್ಷ ಶ್ರೀ ಪೈಗಳು ವಿದ್ಯಾರ್ಥಿಗಳ ಮನೋಭಾವ ಬದಲಾಗಬೇಕೆಂದೂ ವಿದ್ಯಾರ್ಥಿಗಳು ಒಂದು ಗುರಿಯನ್ನಿಟ್ಟುಕೊಳ್ಳಬೇಕೆಂದೂ ದೇಶದ ಅಭಿವೃದ್ಧಿಗೆ ಇವು ಮುಖ್ಯವೆಂದೂ ಹೇಳಿ, ಶಾಲೆಯ ಅಭಿವೃದ್ಧಿಯನ್ನು ಕೊಂಡಾಡಿ ಬಹುಮಾನ ವಿತರಣೆ ಗೈದರು. ಅನಂತರ ವಿವಿಧ ವಿನೋದಾವಳಿಗಳಾದುವು. ಬೆಳಿಗ್ಗೆ ಶ್ರೀ ಪಿ. ರಂಗನಾಥ ಶೆಣೈಯವರು ಧ್ವಜಾರೋಹಣ ಮಾಡಿದ್ದರು.

ದುಃಖ ಸೂಚನೆ

ಬಂಟರ ಯಾನೆ ನಾಡವರ ಸಂಘ ಮುಂಬಯಿ ಈ ಸಂಘದ ವತಿಯಿಂದ ತಾ. 9-1-66ರಲ್ಲು ಜರಗಿದ ಸಭೆಯಲ್ಲಿ ದಿವಂಗತರುಗಳಾದ ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯ ಎಂ. ಪಿ., ಜನರಲ್ ಕೆ. ಎಸ್. ತಿಮ್ಮಯ್ಯ ಹಾಗೂ ಹೆಜ್ಮಾಡಿ ಊವಯ್ಯ ಶೆಟ್ಟಿಯವರುಗಳ ನಿಧನಕ್ಕಾಗಿ ದುಃಖ ಸೂಚಿಸಿ, ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು.

ಬಜ್ಪೆ ಶಾಖೆಗೆ ಬ್ಯಾಂಕ್ ಅಧ್ಯಕ್ಷರ ಭೇಟಿ

ತಾ. 9-2-66ರಂದು ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರಾದ ಪದ್ಮಶ್ರೀ ಡಾ| ಟಿ. ಎಮ್. ಎ. ಪೈಯವರು ಸದ್ರಿ ಬ್ಯಾಂಕಿನ ಬಜ್ಪೆ ಶಾಖೆಗೆ ಭೇಟಿಯನ್ನಿತ್ತರು. ಸ್ಥಳೀಯ ಮೆನೇಜರರಾದ ಶ್ರೀ ಜೆರೊಮ್ ಪಿಂಟೊರವರು ಹಾರಾರ್ಪಣೆ ಗೈದು ಅತಿಥಿಗಳನ್ನು ಸ್ವಾಗತಿಸಿದರು. ತರುವಾಯ ಜರಗಿದ ಸಾರ್ವಜನಿಕ ಕಾರ್ಯಕ್ರಮದಲ್ಲಿ ವಿವಿಧ ಮನೋರಂಜನಾ ಕಾರ್ಯಕ್ರಮಗಳಾದ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬ್ಯಾಂಕುಗಳಿಗೆ ಮತ್ತು ಸರಕಾರ, ವಾಣಿಜ್ಯೋದ್ಯಮ, ಶ್ರೀಮಂತ ಮತ್ತು ಬಡವ ವರ್ಗದವರೊಡನಿರುವ ಹೊಂದಿಕೆಯನ್ನು ವರ್ಣಿಸಿ ಪ್ರತಿಯೊಬ್ಬನಲ್ಲೂ ಉಳಿತಾಯದ ಮನೋಭಾವ ಬೆಳೆಯಬೇಕೆಂಬ ಹಿತವಚನವನ್ನಿತ್ತರು. ಲಘುಪಹಾರವಾದ ಬಳಿಕ ಶ್ರೀ ಸಾಲ್ವದೋರ್ ಮೊಂತೇರೊರವರು ವಂದನಾರ್ಪಣೆ ಗೈದರು.

ಕ್ರಿಶ್ಚಿಯನ್ ಹ್ಯಾಸ್ಕೂಲಿನ ವಾರ್ಷಿಕೋತ್ಸವ

ಉಡುಪಿ ತಾ. ೪, ಪ್ರಿನ್ಸಿಪಾಲ್ ಕೆ. ಪಿ. ಹರಿದಾಸ ಭಟ್ಟರು ಕ್ರಿಶ್ಚಿಯನ್ ಹ್ಯಾಸ್ಕೂಲಿನ ವಾರ್ಷಿಕೋತ್ಸವದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ವಿದ್ಯಾರ್ಥಿಗಳು ಧರ್ಮಭಾವನೆಯಿಂದ ಕೂಡಿದವರಾಗಿರಬೇಕೆಂದೂ ಹೆಚ್ಚು ಜನರು ಅಧ್ಯಾಪಕ ವೃತ್ತಿಗಾಗಿ ಮುಂದೆ ಬರಬೇಕೆಂದೂ ನುಡಿದರು.

ಪ್ರಾರಂಭದಲ್ಲಿ ಮುಖ್ಯೋಪಾಧ್ಯಾಯ ಶ್ರೀ ಎಲ್. ಡಿ. ಅಮ್ಮಣ್ಣರವರು ಸ್ವಾಗತಿಸಿ ಶಾಲಾ ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಬಹುಮಾನ ವಿತರಣೆ ಗೈದ ಬಳಿಕ ಹಳೆ ವಿದ್ಯಾರ್ಥಿ ಶ್ರೀ ಕೊಚ್ಚಿಕಾರ್ ಅನಂತಕೃಷ್ಣ ಪೈಗಳು ಸ್ವಸ್ತಿ ವಾಚನ ಗೈದರು. ಕೊನೆಯಲ್ಲಿ ಶ್ರೀ ಸಿ. ಬಿ. ಸಂಜೀವರಾಯರು ಧನ್ಯವಾದ ಸಮರ್ಪಿಸಿದರು. ತರುವಾಯ ವಿವಿಧ ಮನೋರಂಜನಾ ಕಾರ್ಯಕ್ರಮಗಳು ಜರಗಿದವು.

ಎಲ್ಲೂರು ಯುವಕ ಮಂಡಲದ ವಾರ್ಷಿಕೋತ್ಸವ.

ಸ್ಥಳೀಯ ಯುವಕ ಮಂಡಲದ ತೃತೀಯ ವಾರ್ಷಿಕೋತ್ಸವವು ತಾ. 23—1—66ರಂದು ನಡೆಯಿತು. ಪೂರ್ವಾಹ್ನ ಶ್ರೀ ವೈ. ಯಲ್. ಯನ್ ಜ್ಯೋತಿಷ್ಕರಿಂದ ಧ್ವಜವಂದನೆಯಾಗಿ ಪಂದ್ಯಾಟ ಸ್ಪರ್ಧೆಗಳು ನಡೆದವು. ಸಾಯಂಕಾಲದ ಸಮಾರಂಭದ ಅಧ್ಯಕ್ಷತೆಯನ್ನು ಉಡುಪಿ ಶ್ರೀ ಶೀರೂರು ಮಠಾಧೀಶರಾದ ಶ್ರೀ ಲಕ್ಷ್ಮೀ ಮನೋಜ್ಞ ತೀರ್ಥ ಶ್ರೀ ಪಾದಂಗಳವರು ವಹಿಸಿದ್ದರು. ಮಂಡಲದ ಅಧ್ಯಕ್ಷರಾದ ಶ್ರೀ ವೈ. ಶ್ರೀಪತಿ ಭಟ್ಟರವರು ಅತಿಥಿಗಳ ಪರಿಚಯ ಮಾಡಿದರು. ಗ್ರಾಮ ಪಂಚಾಯತ್ ಸಭಾಪತಿಗಳಾದ ಶ್ರೀ ಕಂಜಾರು ಕೃಷ್ಣಮೂರ್ತಿ ರಾಯರು ಸ್ವಾಗತಿಸಿದರು. ಶ್ರೀ ವೈ. ವಿ. ಗೋವಿಂದ ರಾಯರು ದಿವಂಗತ ಶಾಸ್ತ್ರಿಗಳವರಿಗೆ ಶ್ರದ್ಧಾಂಜಲಿಯರ್ಪಿಸುವ ಕವಿತೆಯನ್ನು ಹಾಡಿದರು. ಕಾರ್ಯದರ್ಶಿ ಶ್ರೀ ವೈ. ವಿ. ಸುಬ್ಬರಾಯರು ವರದಿಯನ್ನೂ ಗ್ರಾಮಸೇವಕ ಶ್ರೀ ಬಿ. ಕೆ. ಜಂಬಗಿಯವರು ಶುಭ ಸಂದೇಶಗಳನ್ನೂ ಓದಿದರು. ಶ್ರೀ ಸೈ. ಮಂಜುನಾಥನ್‌ರವರು ಬಹುಮಾನ ವಿತರಣೆ ಮಾಡಿದರು. ಮಂಡಲವು ನಡೆಸುತ್ತಿರುವ ಹಿಂದೀ ತರಗತಿಗಳ ಕುರಿತು ಮುಖ್ಯ ಶಿಕ್ಷಕ ಶ್ರೀ ವೈ. ಸುಬ್ರಾಯಭಟ್ಟರವರು ಮಾತಾಡಿದ ನಂತರ ಶ್ರೀ ಎ. ವರದರಾಜ ಬಲ್ಲಾಳರು ಹಿಂದೀ ತರಗತಿಗಳನ್ನು ಉದ್ಘಾಟಿಸಿದರು. ಶ್ರೀ ಎ. ಶ್ರೀನಿವಾಸ ಭಟ್ಟರವರು ಪುಸ್ತಕ ಭಂಡಾರವನ್ನು ಉದ್ಘಾಟಿಸಿದರು. ಶ್ರೀ ವೈ. ಯಲ್. ಎನ್. ಜ್ಯೋತಿಷ್ಕರವರು 101 ಪುಸ್ತಕಗಳನ್ನು ದಾನವಾಗಿ ನೀಡಿದರು. ಶ್ರೀ ವೈ. ವಾಸುದೇವ ಮೊಯಿಲಿಯವರು ಪುಸ್ತಕ ಭಂಡಾರದ ಸ್ಥಾಪನೆಗೆ ಸಹಾಯವಿತ್ತ ಮಹನೀಯರ ಯಾದಿಯನ್ನು ಓದಿದರು. ಅಧ್ಯಕ್ಷ ಮಂಡಲದ ಚಟುವಟಿಕೆಗಳನ್ನು ಪ್ರಶಂಸಿಸಿದ ತರುವಾಯ ಮಂಡಲದ ಉಪಾಧ್ಯಕ್ಷ ಶ್ರೀ ವೈ. ರಾಮಚಂದ್ರ ಭಟ್ಟರವರು ಧನ್ಯವಾದ ಸಮರ್ಪಿಸಿದರು.

ಚಂದಾದಾರರಲ್ಲಿ ವಿನಂತಿ.

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 45ನೆಯ ಹೊಸ ವರ್ಷಾರಂಭವಾಗಿದೆಯಷ್ಟೆ! ಈ ಅವಧಿಗೆ ಯಾ ಆನಂತರ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ತ್ವರೆಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇವೆ. ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು. ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ. ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕ್ರಮಶಃ ವಿ. ಪಿ. ಮಾಡಬೇಕಾಗುತ್ತದೆ. ಅದನ್ನು ದಯಮಾಡಿ ಸ್ವೀಕರಿಸುವಂತೆ ಕೇಳಿಕೊಳ್ಳುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ—ಸಂಪಾದಕ.

'ಸತ್ಯ ಸಾಯಿ ವಚನಾಮೃತ'

ಪ್ರತಿ ಮಾನವರೂ ಒಂದಲ್ಲ ಒಂದು ರೀತಿಯಿಂದ ಸುಖವನ್ನು ಆಶಿಸುತ್ತಾರೆ. ದುಃಖವನ್ನು ಯಾರೂ ಆಶಿಸುವುದಿಲ್ಲ. ಸುಖವೇ ಮಾನವನ ಸ್ವರೂಪ; ಶಾಂತವೇ ಮಾನವನ ಸ್ವಭಾವ; ಪ್ರೇಮವೇ ಮಾನವನ ತತ್ವ. ಈ ಪವಿತ್ರವಾದ ತ್ರಿಗುಣಗಳನ್ನು ಒಳಗೊಂಡಿರುವ ದಿವ್ಯಾತ್ಮ ಸ್ವರೂಪಿಯಾಗಿರುವುದೇ ಮಾನವತ್ವ.

o o o

ಧರ್ಮದ ಆಧಾರದಲ್ಲಿರುವ ಭಾರತ ದೇಶವೇ ಧರ್ಮಕ್ಕೆ ಆಧಾರ. ಆದ್ದರಿಂದಲೇ ಭಾರತ ದೇಶವೇ ಸಮಸ್ತ ಲೋಕಕ್ಕೆ ಮಾರ್ಗದರ್ಶಕವಾಗಿದೆ. ಈ ದೇಶವೇ ಲೋಕ ರಕ್ಷಣೆಗಾಗಿ ಕಷ್ಟಪಡುತ್ತಿದೆ.

o o o

ತನ್ನ ಸುಖ, ಸಂತೋಷ, ಸೌಭಾಗ್ಯ, ಆನಂದಗಳೇ ಪ್ರಾಮುಖ್ಯ ಎಂದು ಭಾವಿಸುವುದು ದಿವ್ಯತೆಯ ದುರ್ವಿನಿಯೋಗವಾಗಿದೆ. ಆತ್ಮ ತತ್ವವೇ ಮಾನವತ್ವ. ಸ್ವಸುಖವನ್ನು ಮಾತ್ರವೇ ಬಯಸುವುದು ಪಶುತ್ವ. ಇದನ್ನು ದೂರಮಾಡುವುದೇ ಧರ್ಮ. ಅದುದರಿಂದಲೇ ಭಾರತವೆಲ್ಲಾ ಇಂದು ಅಸ್ತವ್ಯಸ್ತವಾಗಿದೆ.

o o o

ಧರ್ಮವನ್ನು ತಿಳಿದು ದಿವ್ಯತ್ವವನ್ನು ಸ್ಥಾಪಿಸಿದರೆ, ಮಾನವತ್ವ ಬಂದಂತಾಗುವುದು. ಸುಖ, ಸೌಭಾಗ್ಯ, ಸಂಪತ್ತುಗಳನ್ನೇ ಬಯಸುತ್ತಾ ಹೋಗುವ ಅಸುರ ಸಂಪತ್ತು ಬೆಳೆಸಿದರ, ಮಾನವರೂ ದ್ವಿಪಾದ ಪಶುಗಳೇ ಸರಿ.

o o o

ಭೋಗ ಭಾಗ್ಯಗಳಲ್ಲೇ ಭದ್ರತೆ ಎಂದು ಗ್ರಹಿಸುವುದು ತಪ್ಪು. ಅದರಿಂದಲೇ ಮಾನವತ್ವವು ನಾಶವಾಗುವುದು. ತ್ಯಾಗವೇ ಭಾಗ್ಯ, ವೈರಾಗ್ಯವೇ ಭಾಗ್ಯ ಎಂದು ಭಾವಿಸಬೇಕು.

o o o

ಪಶುತ್ವವನ್ನು ಬಿಡಬೇಕು. ಹಿಂದಿನ ಕಾಲದಲ್ಲಿ ಯಜ್ಞ—ಯಾಗಾದಿಗಳಲ್ಲಿ ಪಶುಗಳನ್ನು ಬಲಿ ಕೊಡಬೇಕೆಂಬ ನಿಯಮವಿತ್ತೆಂದು ಜನರು ತಪ್ಪಾಗ ತಿಳಿದುಕೊಳ್ಳುತ್ತಾರೆ. ಯಜ್ಞ-ಯಾಗಾದಿಗಳಲ್ಲಿ ಪಶುತ್ವವನ್ನು ಬಲಿಕೊಡುತ್ತಿದ್ದರೇ ಹೊರತು ಪಶುಗಳನ್ನು ಅಲ್ಲ.

o o o

ಭೋಗ ಭಾಗ್ಯಗಳನ್ನು ನಂಬಿ ಫಲವಿಲ್ಲ. ಕಟ್ಟಕಡೆಗೆ ಯಾರಿಗೆ ಯಾರೂ ಇಲ್ಲ. ಆದ್ದರಿಂದ ಪವಿತ್ರವಾದ ಆತ್ಮ ಪ್ರಕಾಶವನ್ನು ಪಡೆಯಲು ಯತ್ನಿಸಬೇಕು. ಅದೇ ಧರ್ಮ.

o o o

ಅಂತರ್ಜಾತಿ ಸಂಬಂಧ ಬೇಕೆನ್ನುತ್ತಾರೆ. ಆದಕ್ಕಾಗಿ ಭಾರೀ ಹೋರಾಟ ನಡೆಯುತ್ತಿದೆ. ಅದರ ಹೆಸರಲ್ಲಿ ಬಹಳ ಅಕ್ರಮ, ಅನ್ಯಾಯ, ಅನಾಚಾರ ನಡೆಯುತ್ತದೆ. ನಿಜವಾಗಿ ಅಂತರ್ಜಾತಿ ಎಂದರೇನು? ಆತ್ಮನೇ ಅಂತರ್ ಜಾತಿ ಸಂಬಂಧ ಏರ್ಪಡಿಸುವಾತನು. ಆತ್ಮ ತತ್ವವೇ ಆದರ ಲಕ್ಷಣ.

o o o

ಮನಸ್ಸು, ಮಾತು, ಕಾರ್ಯ ಇವು ಮೂರು ಒಂದೇ ಆಗಿರುವುದು ಮಹಾತ್ಮನ ಲಕ್ಷಣ. ಇವು ಮೂರು ಬೇರೆ ಬೇರೆಯಾಗಿರುವುದೇ ದುರಾತ್ಮನ ಲಕ್ಷಣ.

o o o

ಪರಮಾತ್ಮನು ಯಾವುದರಲ್ಲಿಯೂ ಪ್ರವೇಶವಾಗುವುದಿಲ್ಲ. ಅವರವರ ಕರ್ಮಾನುಸಾರ ಅವರವರಿಗೆ ಫಲ ಸಿಗುವುದು. ಪರಮಾತ್ಮನು ಪ್ರತಿ ಒಂದಕ್ಕೂ 'ತಥಾಸ್ತು' 'ತಥಾಸ್ತು' ಎನ್ನುತ್ತಾನೆ. ಆತನು ಸದಾ ರಕ್ಷಿಸುವನಲ್ಲದೆ ಶಿಕ್ಷಿಸುವುದಿಲ್ಲ. ಆದರೆ, ಪೋಲೀಸನೊಬ್ಬ ರಕ್ಷಣೆಗಾಗಿ ಒಬ್ಬನನ್ನು ಶಿಕ್ಷಿಸುವಂತೆ ಭಗವಂತನೂ ಶಿಕ್ಷೆ ಕೊಡುವನು. ಆಯಾಯ ವ್ಯಕ್ತಿಯ ಕರ್ಮದ ಮೂಲಕವೇ ಶಿಕ್ಷೆಯನ್ನು ಕೊಡುವನಲ್ಲದೆ, ಅನ್ಯಥಾ ಅಲ್ಲ.

o o o

ಮಾನವರು ಸತ್ಕಾರ್ಯ ಮಾಡಬೇಕು. ಎಲ್ಲದರಲ್ಲಿಯೂ, ಎಲ್ಲರಲ್ಲಿಯೂ ಪರಮಾತ್ಮನು ಇದ್ದಾನೆಂದು ಭಾವಿಸಬೇಕು. ಪ್ರೇಮ ಭಾವವನ್ನಿಟ್ಟು ಬದುಕಬೇಕು. ಪರೋಪಕಾರ ಮಾಡುವ ದೀಕ್ಷೆಯನ್ನು ವಹಿಸಬೇಕು.

o o o

ಎಷ್ಟೋ ಮಂದಿ ಪುಟ್ಟಪರ್ತಿಗೆ ಬರುತ್ತಾರೆ. ಆದರೆ, ಧರ್ಮವನ್ನು ಆಚರಿಸುವುದಿಲ್ಲ. ಹಾಗೆ ಬಂದು ಹೋಗಿ ಫಲವೇನು? ಏನಾದರೂ ಪ್ರಯತ್ನ ಮಾಡಬೇಕು.

o o o

ದೊಡ್ಡ ಸಾಗರವನ್ನು ದಾಟಲು ಎರಡು ತುಂಡು ಮರಗಳನ್ನು ಜೋಡಿಸಿ ಮಾಡಿದ ಒಂದು ತೆಪ್ಪ ಸಾಕು. ದಟ್ಟಡವಿಯನ್ನು ಹಾದು ಹೋಗಲು ಸಣ್ಣದೊಂದು "ಟಾರ್ಚ್ ಲೈಟ್" ಸಾಕು. ಅದ್ರೀತಿಯಲ್ಲೇ ಸಂಸಾರಸಾಗರವನ್ನು ದಾಟಲು ಭಗವನ್ನಾಮ ಸ್ಮರಣವೊಂದೇ ಸಾಕು.

o o o

ದ್ರೌಪದಿ ಮಹಾ ಪತಿವ್ರತೆ ಎನ್ನುತ್ತೀವೆ. ಆದರೆ ಅವಳಿಗೆ 5 ಮಂದಿ ಪತಿಯರಿದ್ದರು. ಅವಳು ಪತಿವ್ರತೆ ಹೇಗೆ? ಪತಿವ್ರತೆಯ ಧರ್ಮ ಏನು? ಎಂಬ ಪ್ರಶ್ನೆ ಬರಬಹುದು. ಆಕೆ ಗಂಡಂದಿರ ಜೊತೆಗೆ ಪ್ರತಿಹೇಳದೆ, ಕಷ್ಟದಲ್ಲಿಯೂ ಅವರ ಸೇವೆ ಮಾಡುತ್ತಿದ್ದಳು. ಇದ್ದುದರಲ್ಲಿ ತೃಪ್ತಿಪಟ್ಟುಕೊಳ್ಳುತ್ತಿದ್ದಳು. ಅದುವೇ ಪತಿವ್ರತೆಯ ಧರ್ಮ.

o o o

(ಜನ್ಮದಿನದಂದು ಮಾಡಿದ ಭಾಷಣ ಸಂಗ್ರಹ)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-1

ಇದೋ ಅರ್ಪಿಸುವೆ ವಂದನೆ ಲಾಲ ಬಹುದ್ದೂರ!

೧

ಕಳುಹಿಸಿತು ತಾಷ್ಕೆಂಟು ದುಃಖ
ವಾರ್ತೆಯದೊಂದು,
ಧೀರ, ಗಂಭೀರ ನೆಚ್ಚಿನ ಪ್ರಧಾನಿ ಇಲ್ಲ
ಇನ್ನೆಂದು
ಮೇಘ ಮೊರೆತವಿಲ್ಲ ಬಂತೊಂದು
ಸಿಡಿಲು
ಮಿಂಚು ಮಿಂಚಿತು ಕ್ಷಣದಿ ಹೃದಯಕ
ಬಡಿದ
ಮಳೆ ನೀರೇ ಆಯಿತು,
ಕಣ್ಣೀರು ಹರಿದು!

೨

ಹಾ, ನಮ್ಮನ್ನಗಲಿದೆಯಾ ಕೆಚ್ಚೆದೆಯ
ನಾಯಕ
ಹಾ, ನಮ್ಮನ್ನಗಲಿದೆಯಾ ಚತುರ ರಾಜ
ಪರಿಪಾಲ
ಹಾ! ನಮ್ಮನ್ನಗಲಿದೆಯಾ ಹಿಂದು ವೀರ
ಹಾ! ನಮ್ಮನ್ನಗಲಿದೆಯಾ ಓ ಶಾಂತಿ
ಪ್ರಿಯ
ಆರೊಡನೆ ಪೇಳಲೀ
ಎನ್ನ ಮನದಳಲನ್ನು.

೩

ನಿನ್ನ ಕೊರಳಿಗೆ ಹಾಕಲೆಂದು ತಂದಿಹ
ಮಾ
ನೀ ಅದನು ನಗು ಮೊಗದಿ ಸ್ವೀಕರಿಸ
ಬಿಟ್ಟು
ಪವಡಿಸಿದೆ ಏಕೆ ಚಿರ ಶಾಂತ ನಿದ್ರೆಯ
ತೊಟ್ಟ
ಸಹಿಸಲಸದಳ ನಿನ್ನ ಈ ತೆರದ ನಿರ್ಗಮ
ಬಯಸಿದ್ದೆ ನಾ, ನಿನ್ನ
ನಗು ಮೊಗದ ಆಗಮನ.

೪

ಪಡೆದೆ ನೀ ಬಿರುದನ್ನು "ಭಾರತ ರತ್ನ"
ಬಡವ ನಾ ನೆನೆವೆನ್ನೆ ಅನುದಿನವು ನಿನ್ನ
ಪೋದೆ ನಮ್ಮೆಲ್ಲರನು ಬಿಟ್ಟು ಬಹುದೂರ
ಇದೊ, ಅರ್ಪಿಸುವೆ ವಂದನೆ ಲಾಲ
ಬಹುದ್ದೂರ
ಕರೆವುದುಚಿತವು
ನಿನ್ನ ಓ "ಕರ್ಮವೀರ."

—ಕೆ. ಪುಂಡರೀಕಾಕ್ಷ ಆಚಾರ್ಯ,
ಕಡಿಯಾಳಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S. 602/1965

R. ಶೀನಪ್ಪ ಶೆಟ್ಟಿ—ವಾದಿ,
ದೇಜು ಸೆಟ್ಟಿ ಸಹಾ—ಪ್ರತಿವಾದಿರು,

3. ಶ್ರೀ ಧರ್ಮ ಶೆಟ್ಟಿ, ನಾಗಮ್ಮ ಶೆಟ್ಟಿರ ಮಗ, ಕಾರ್ಕಳ ತಾಲ್ಲೂಕು ಜಾರ್ಕಳ ಗ್ರಾಮದ ಮುಂಡ್ಲಿ ಎಂಬಲ್ಲಿರುವವ, 3ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ನೀವು ಮತ್ತು ಮಿಕ್ಕ ಪ್ರತಿವಾದಿರು ವಾದಿವಳಗೆ ವ್ಯಾದೆ ಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಆಸ್ತಿಬಾಬ್ತು ವಾದಿಗೆ ನಿಂಮಿಂದ ಬಂದಕ್ಕ ವ್ಯಾದೆ ಗೇಣಿ ಗೇಣಿ ಬಡ್ಡಿ ಕೂಡಾ ರೂಪಾಯಿ 1964—38ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾ. 26—2—66ಕ್ಕೆ ನಿಮಗೆ ಅಕೃರದ ನೋಟೀಸಿಗೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plff.

ಕಾರ್ಕಳ, 12—2—66

ಕ್ರೈಸ್ತ ಮುರುಗ

(ಎರಡನೇ ಪುಟದಿಂದ)

"ದೇವರ ರೀತಿಗಳೆಲ್ಲಾ ಮನುಷ್ಯ ಬುದ್ಧಿಗೆ ನಿಲುಕದವುಗಳಿವೆ, ಪ್ರಿಯೆ ಜಾನಕಿ, ಪ್ರತಿಯೊಂದು ಹೆಜ್ಜೆಯನ್ನಿಡುವಾಗಲೂ ನಾವು ನಮ್ರತೆಯಿಂದ ಅವರಿಗೆ ಕೈ ಮುಗಿಯುತ್ತಿರುವ."

೦ ೦ ೦

[೫]

ಸನ್ಮಾನ್ಯ ಜಿ. ಕ್ರಾಯಗರು ಶ್ರೀಮತಿ ಕೆಡೆಲರ ಸಹೋದರರು. ದಕ್ಷಿಣ ಭಾರತದಲ್ಲಿ ಅವರು ಖ್ಯಾತ ಶಿಕ್ಷಣ ಶಾಸ್ತ್ರ ವಿಶಾರದರೆಂದು ಪರಿಗಣಿಸಲ್ಪಟ್ಟಿದ್ದರು. ತನ್ನ ಸಾಮರ್ಥ್ಯ ಹಾಗೂ ಜೀವನವನ್ನವರು ಆಂಗ್ಲೇಯ ವಿದ್ಯಾಭ್ಯಾಸ ಹಬ್ಬಿಸುವ ಸಲುವಾಗಿ ಮುಡುಪಾಗಿ ಇಟ್ಟಿದ್ದರು. ಸಾಧಾರಣ ಇಪ್ಪತ್ತೈದು ವರ್ಷಗಳಿಂದ ವರು ಮದ್ರಾಸ್ ಕ್ರಿಶ್ಚಿಯನ್ ಕೋಲೇಜಿನಲ್ಲಿ, ಮೇಲ್ತರಗತಿಗಳಿಗೆ, ಇಂಗ್ಲೀಷ್ ಹಾಗೂ ತತ್ವ ಶಾಸ್ತ್ರಗಳ ಉಪನ್ಯಾಸಕರಾಗಿದ್ದರು. ಅವರು ಬಹಳ ಕಠಿಣ ಶಿಸ್ತಿನವರು ಇದ್ದರೂ ಕನಿಕರವುಳ್ಳವರಿದ್ದು ಕಥೋಲಿಕ್ ಸ್ಕೊಚ್ ಮತಪ್ರಸಾರಕರಾಗಿದ್ದರು. ಅವರಲ್ಲಿ ವರ್ಣ ಪಕ್ಷಪಾತವಿದ್ದಿಲ್ಲ. ತನ್ನ ತಂಗಿಯನ್ನು ನೋಡಲು ಅವರು ಕಡಪಕ್ಕೆ ಬಂದಿದ್ದರು. ರಾಮುವನ್ನು ಆಮಂತ್ರಿಸಿರುವ ಚಹಾ ಕೂಟಕ್ಕೆ ಅವರೂ ಉಪಸ್ಥಿತರಾಗುವಂತಾಯಿತು.

"ಒಳ್ಳೆಯದು ಜೋರ್ಜ್, ಕಲಾ ಶಾಲೆಯಲ್ಲಿ ರಾಮಚಂದ್ರನು ಯಾವ ರೀತಿಯ ವಿದ್ಯಾರ್ಥಿಯಾಗಿದ್ದನು? ನೀನವನಿಗೆ ಒಳ್ಳೆಯ ಶಿಫಾರಸು ಪತ್ರವನ್ನು ಕೊಟ್ಟಿರುವೆಯಲ್ಲಾ, ಜ್ಞಾಪಕವಿದೆಯೇ?" ಕೆಡೆಲ್ ಕೇಳಿದರು. ಅವರ ಸ್ವರದಲ್ಲಿ, ಕ್ರಾಯಗರು ತನಗೆ ಜ್ಞಾಪಕ ಇಲ್ಲದಿರುವದಕ್ಕೆ ವಾನಿಸಬಹುದೆಂಬ, ಭರವಸೆ ಇತ್ತು.

"ಮುಚ್ಚುಮರೆ ಇಲ್ಲದೆ ಹೇಳುವದಾದರೆ ನನಗವನ ನೆನಪೇ ಇಲ್ಲ. ಎಲ್ಲಾ ಹುಡುಗರ ಜ್ಞಾಪಕ ಇರುತ್ತದೆಯೇ? ಕೆಲ ಉತ್ತಮ ವಿದ್ಯಾರ್ಥಿಗಳ ನೆನಪು ಮಾತ್ರ ಇರುತ್ತದೆ. ಬಹುಶಃ ಅವನು ಆ ಗುಂಪಿಗೆ ಸೇರಿದವನಲ್ಲದಿರಬಹುದು. ನಮ್ಮ ಕೊಂದರೆಗಳ ಕುರಿತು ನಿನಗೆ ಗೊತ್ತಿರಬಹುದು. ಸಾಧಾರಣ ಮುನ್ನೂರು ಸಂಖ್ಯೆ ಒಂದು ತರಗತಿಯಲ್ಲಿ ಇರುತ್ತದೆ. ಆದರ ತೀಕ್ಷ್ಣ ಬುದ್ಧಿಯ ಅಥವಾ ಮುಂಬರುವ ಇಲ್ಲವೇ ಅತ್ಯಂತ ಸಾಮಾಜಿಕ ವಿದ್ಯಾರ್ಥಿಗಳನ್ನು, ನಮ್ಮ ವಿಶ್ರಾಂತಿ ಕೋಣೆಗೆ ಬರುತ್ತಿದ್ದ ವಿದ್ಯಾರ್ಥಿಗಳನ್ನು ಮಾತ್ರ ಜ್ಞಾಪಕದಲ್ಲಿಟ್ಟುಕೊಳ್ಳಲು ಸಾಧ್ಯವಿರುತ್ತದೆ.' ಅವರು ಮಾತ್ರ ಜ್ಞಾಪಕದಲ್ಲಿರಲು ಯೋಗ್ಯರೆಂದು ನಿನಗೆ ಖಂಡಿತವಾಗಿದೆಯೇ?"

"ಇಲ್ಲ ಹಾಗೇನಿಲ್ಲ, ಆದಕ್ಕೆಲ್ಲಾ ಹೇಗೆ ಸಹಾಯ ಮಾಡಬಹುದು? ಅತಿ ಜಾಣಾಕ್ಷ ಹಾಗೂ ಮುಂದರಿದಿರುವ ವಿದ್ಯಾರ್ಥಿಗಳು ಶೀಲದಲ್ಲಿ ಹಿಂದಕ್ಕೆ ಬೀಳುತ್ತಾರೆಂದು ಗೊತ್ತಿದೆ. ಅವರಲ್ಲಿ ನಮ್ರತೆ ಹಾಗೂ ಸೌಜನ್ಯತೆ ಇರುವದೇ ಇಲ್ಲ. ರಾಮಚಂದ್ರನನ್ನು ನೋಡಿದಲ್ಲಿ, ಅವನ ಗುರುತು ಹಿಡಿದು, ನಾನು ನಿನಗೆ ಹೇಳಬಲ್ಲೆ."

"ಜೋರ್ಜ್, ನೀನವನಲ್ಲಿ ನಮ್ರತೆಯನ್ನು ಅಲ್ಲದೆ ದುರಭಿಮಾನ ಶೂನ್ಯ ಚೈತನ್ಯವನ್ನು ಕಾಣಬಹುದು. ನಮ್ಮಲ್ಲಿರುವ ಹಲವಾರು ಕ್ರಿಶ್ಚಿಯನರಿಗಿಂತ ಅವನು ಒಳ್ಳೆಯ ಕ್ರಿಶ್ಚಿಯನ್ ಇದ್ದಾನೆನ್ನಬಹುದು. ಅವನು ಸುಸಂಸ್ಕೃತ ಹಾಗೂ ಶಾಂತಸ್ವಭಾವದನಿದ್ದಾನೆ. ಹಚ್ಚೇಕೆ! ಇಲ್ಲಿ ಅವನು ಮೂರು ವರ್ಷಗಳಿಂದ ಶಿಬಿರ-ಗುಮಾಸ್ತನಾಗಿ ದುಡಿಯುತ್ತಿರುವದೇ ಅವನ ಯೋಗ್ಯತೆಯನ್ನು ತೋರಿಸುತ್ತದೆ." ಪ್ರೀತಿಯಿಂದ ಶ್ರೀಮತಿ ಕೆಡೆಲರು ಆಶ್ವಾಸನೆಯ ಮಾತುಗಳನ್ನಾಡಿದರು.

ಕೆಡೆಲರು ಬಹಳ ಜೋರಾಗಿ ನಗಾಡಿದರು. ಆಗ ದೂರದಲ್ಲಿ ರಾಮು ನಾಚಿಕೆಯಿಂದ ಮೆಲ್ಲನೆ ಬರುತ್ತಿರುವುದು ತೋರುತ್ತಿತ್ತು.

"ಹೋ! ಹೌದು." ಕ್ರಾಯಗ್ ಗಟ್ಟಿಯಾಗಿ ಹೇಳಿದರು. ಅವನು ನನಗೆ ಗೊತ್ತಿದೆ; ಚೆನ್ನಾಗಿ ಜ್ಞಾಪಕ ಇದೆ—ಒಂದೇ ಒಂದು ಘಟನೆಯಿಂದಾಗಿ ಅವನು ಪೇದೆಯಿಂದ ಮುಖ್ಯೋಪನ್ಯಾಸಕರ ವರೆಗೂ ಪರಿಚಿತನಾಗಿದ್ದ. ಅವನು ಒಮ್ಮೆ ಕಲಾ ಶಾಲೆಯ ಹಣ ಪಡಕೊಳ್ಳುವವನ ಬಳಿ ಹತ್ತು ರೂಪಾಯಿಗಳ ನೋಟುಗಳಿಗಾಗಿ ನೂರು ರೂಪಾಯಿಯ ಒಂದು ನೋಟನ್ನು ಕೊಟ್ಟನು. ಹಣ ಕೊಂಡುಕೊಳ್ಳುವವನು ಹತ್ತರ ಬದಲಿಗೆ ಐವತ್ತು ಹತ್ತರ ನೋಟುಗಳನ್ನು ಕೊಟ್ಟು ಬಿಟ್ಟನು. ಇವನೂ ಅದನ್ನು ಗಮನಿಸಿಲಿಲ್ಲ. ಸಂಜೆ ಹಣ ಲೆಕ್ಕ ಮಾಡುವಾಗ ತಪ್ಪು ಗೊತ್ತಾಯಿತು. ಆದರೆ ಯಾರಿಗೆ ಆ ಹಣ ಕೊಡಲ್ಪಟ್ಟಿದೆ ಎಂಬುದನ್ನು ಕಂಡು ಹಿಡಿಯಲಿಕ್ಕೆ ಆಗಲಿಲ್ಲ. ಮರುದಿನ ಹತ್ತು ಘಂಟೆಯ ಹೊತ್ತಿಗೆ ಇವನು ಕಾರ್ಯಾಲಯಕ್ಕೆ ಬಂದು ಜಾಸ್ತಿ ಬಂದಿದ್ದ ನಾನ್ನೂರು ರೂಪಾಯಿಗಳನ್ನು ಹಿಂದಕ್ಕೆ ಕೊಟ್ಟನು. ರಾತ್ರಿ ಹಣ ಲೆಕ್ಕ ಮಾಡುವಾಗ ಜಾಸ್ತಿ ಹಣ ಬಂದಿರುವದನ್ನು ಅವನು ಕಂಡುಕೊಂಡಿದ್ದ. ಎಲ್ಲರಿಗೂ ಸಂತೋಷವಾಯಿತು. ಆದರಲ್ಲೂ ಬಡ ಜವಾಬ್ದಾರಿಯ ಗುಮಾಸ್ತನಿಗೆ ಹೋದ ಜೀವ ಬಂದಂತಾಯಿತು—ಈಗ ಅದೆಲ್ಲಾ ಜ್ಞಾಪಕಕ್ಕೆ ಬರುತ್ತಿದೆ. ನಾನವನಿಗೆ ಗುಣದ ಮೇಲೆ ಒಳ್ಳೆಯ ಪ್ರಶಸ್ತಿ..."

"ಆದರೆ ನೀನದರಲ್ಲಿ ಅವನ ಮನೋಬಲದ ಕುರಿತು ಒಂದು ಶಬ್ದವನ್ನೂ ಬರೆದಿಲ್ಲ!" ಕೆಡೆಲ್ ಆಶ್ಚರ್ಯದಿಂದ ಕೇಳಿದರು.

"ಆದರ ಕುರಿತು ನನಗೇನೂ ಗೊತ್ತಿದ್ದಿಲ್ಲ. ಅವನು ನಾಚಿಗೆಪಟ್ಟುಕೊಳ್ಳುವವನಿದ್ದು ಯಾವಾಗಲೂ ಕೊನೆಯ ಆಸನದಲ್ಲಿ ಕೂತುಕೊಳ್ಳುತ್ತಿದ್ದನು. ಅವನು ನಮ್ಮ ಕಾರ್ಯಕಲಾಪಗಳಲ್ಲಾಗಲೀ, ಕಲಾ ಶಾಲೆಯ ಕಾರ್ಯಕ್ರಮಗಳಲ್ಲಾಗಲೀ ಭಾಗವಹಿಸುತ್ತಿರಲಿಲ್ಲ. ಅಲ್ಲದೆ ಬಿ. ಎ. ಯಲ್ಲಿ ಎರಡು ಬಾರಿ ಅನುತ್ತೀರ್ಣನಾಗಿರಬೇಕು" ಕೆಡೆಲರನ್ನು ತೃಪ್ತಿಪಡಿಸಲು, ಜ್ಞಾಪಿಸಿಕೊಳ್ಳುತ್ತ ಕ್ರಾಯಗ್ ತಿಳಿಸಿದರು. ಆಡಳಿತ ವಿಷಯದಲ್ಲಿ ಮರೆತು ಮಾಡಿದ ಒಂದು ಕಾರ್ಯದಿಂದಾಗಿ ಇಡಿ ಜಿಲ್ಲೆಯ ಕೆಲಸ ಕಾರ್ಯಗಳು ಅಸಹಾಯ ಸ್ಥಿತಿಯ ಅಸ್ತವ್ಯಸ್ಥಗೆ ಒಳಪಡುತ್ತವೆ ಎಂದು ಕೆಡೆಲರು ಯಾವಾಗಲೂ ಹೇಳುತ್ತಿದ್ದುದರ ಭಯದಿಂದ ಕ್ರಾಯಗ್ ಎಲ್ಲವನ್ನೂ ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದರು.

"ಅವನನ್ನು ಅರಿತುಕೊಳ್ಳಲು ಹಾಗೂ ಅಂತಹ ಯೋಗ್ಯ ಹುಡುಗನಿಗೆ ನೀವು ಬಿ. ಎ. ಪದವಿಯನ್ನು ಕೊಡಲಿಲ್ಲವಲ್ಲಾ ಎಂದು ಪರಿತಪಿಸಿಕೊಳ್ಳಲು ಈಗ ಒಂದು ಸಂದರ್ಭ ಸಿಕ್ಕಿದೆ. ಈ ಅವನು ಜೀವನ ಹಾಗೂ ರಾಜ್ಯ ಶಾಸ್ತ್ರದಲ್ಲಿ ಉತ್ತಮ ವಿದ್ಯಾರ್ಥಿ. ಅಲ್ಲದೆ ಅವನಿಗೆ ಸಾಹಿತ್ಯದ ರುಚಿಯೂ ಗೊತ್ತಿದೆ. ಅವನು ತೀರ ನಿರೀಕ್ಷಕನೂ ಸಭ್ಯ ವಿನೋದ ಸ್ವಭಾವದವನೂ ವಿಶಾಲ ಮನಸ್ಸಿನವನೂ ಇದ್ದಾನೆ." ಶ್ರೀಮತಿ ಕೆಡೆಲಳು ಆತುರದಿಂದ ಆಡುತ್ತ, ಗಂಡನನ್ನು ನೋಡಿದಳು. ಅವರು ಅವಳನ್ನು ನೋಡುತ್ತ, ನಗಾಡುತ್ತಿದ್ದರು—"ಹೆನ್ರಿ ಕೂಡಾ ಅವನೊಂದಿಗೆ ಭಾರತೀಯ ಪದ್ಧತಿಯ ಕುರಿತು ತರ್ಕಿಸುತ್ತಿರುತ್ತಾರೆ."

ಅಷ್ಟು ಹೊತ್ತಿನಲ್ಲಿ ರಾಮು ಕೂಟದಲ್ಲಿ ಸೇರಿಕೊಂಡನು. ಅವರೆಲ್ಲರೂ ಸೇರಿ ತನ್ನ ಕುರಿತೇ ಮಾತಾಡುತ್ತಿದ್ದಾರೆಂಬುದು ಅವನಿಗೆ ಗೊತ್ತಾಗಿದ್ದರೂ ಪ್ರವಾಹ ಎತ್ತ ಇದೆ ಎಂಬುದನ್ನವನಿಂದ ಕಂಡುಕೊಳ್ಳಲಿಕ್ಕಾಗಲಿಲ್ಲ. ಎದ್ದು ನಿಂತು ತನ್ನನ್ನು ಸ್ವಾಗತಿಸುತ್ತ ಕೈ ಕುಲುಕಿದ ಕ್ರಾಯಗರನ್ನು ಅಲ್ಲ ಕಂಡು ಅವನಿಗೆ ಆಶ್ಚರ್ಯವಾಯಿತು. ಕೈ ಕುಲುಕಿದಾಗ ಅವನು ನಾಚಿಕೆಯಿಂದ ಹೇಗೋ ಕೈ ಕೊಟ್ಟಿದ್ದನು. ತನ್ನ ಭಾವನು ಗುಮಾಸ್ತನೊಂದಿಗೆ ಅಷ್ಟು ಸೌಜನ್ಯ ಹಾಗೂ ಸಲುಗೆಯಿಂದ ವರ್ತಿಸುತ್ತಿರುವ ದೃಶ್ಯವು ಕಣ್ಣಿಗೆ ಕಾಣದಿರಲೆಂದು, ಕೆಡೆಲರು ಆಸನದಲ್ಲಿ ಬಿದ್ದುಕೊಂಡು, ಜೋರಾಗಿ ಸಿಗರೇಟಿನ ಹೊಗೆಯನ್ನು ಬಿಟ್ಟರು.

"ಶ್ರೀಯುತ ಕ್ರಾಯಗ್, ನನ್ನ ಹಳೆಯ ಗುರುಗಳು!"

"ಅಷ್ಟೇನೂ ಹಳೆಯವರಲ್ಲ, ರಾಮಚಂದ್ರ; ನೀನು ಕುಳಿತುಕೊಳ್ಳುವದಿಲ್ಲವೇ? ನಿಂತುಕೊಂಡೇ ಚಹಾ ಕುಡಿಯುತ್ತಿಯೇನು?'

"ಜಿಲ್ಲಾಧಿಕಾರಿಗಳಿಗೆ ನಿನ್ನ ಕುರಿತು ಈಗ ತಾನೇ ಹೇಳುತ್ತಿದ್ದೆ."

'ನನ್ನನ್ನು ನೆನಪಿನಲ್ಲಿಟ್ಟುಕೊಳ್ಳಲು, ನನ್ನ ಪರಿಚಯ ನಿಮಗಿಂಲಿಕ್ಕಿಲ್ಲ ಎಂಬ ಭಾವನೆ....'

"ಆದರೆ ಆ ಒಂದು ಘಟನೆಯು ಎಂದೆಂದಿಗೂ ನಿನ್ನ ಮುಖವನ್ನು ಮರೆಯದಂತೆ ಮಾಡಬಲ್ಲದು."

'ನೀವು ಆ ನೋಟಿನ ವಿಷಯ ಹೇಳುವದೇನು?"

"ಹೌದು."

"ಆದರಲ್ಲಿ ನೆನಪಿಡತಕ್ಕಂಥಹ ವಿಷಯವೇನಿದೆಂಬುದೇ ಆಶ್ಚರ್ಯದ ಸಂಗತಿ. ಅದು ಪ್ರಾಮಾಣಿಕತನದ ಲಕ್ಷಣ. ಭಾರತದಲ್ಲಿ ಹಾಗೆ ನಡೆದುಕೊಳ್ಳುವವರು ವಿರಳ ಎಂಬ ಅಭಿಪ್ರಾಯ ನಿಮ್ಮಲ್ಲಿದ್ದಲ್ಲಿ, ನೀವು ಇಡಿ ಜನಾಂಗಕ್ಕೆ ಅನ್ಯಾಯ ಬಗೆಯುತ್ತೀರೆನ್ನಬೇಕಾಗುತ್ತದೆ. ಆದರಂತೆ ಎಲ್ಲಾ ಹುಡುಗರು ವರ್ತಿಸುವದು....'

"ಆದರೆ, ರಾಮಚಂದ್ರ, ನನ್ನ ಅನುಭವ ಯಾವಾಗಲೂ ಹಾಗೆ ಇದ್ದಿಲ್ಲ.' ಕ್ರಾಯಗ್ ಅಭಿಪ್ರಾಯ ವ್ಯಕ್ತಪಡಿಸಿದರು.

"ನನ್ನ ಅನುಭವವು ಇನ್ನೂ ಹಾಳಿದೆ." ಕೆಡೆಲರು ಕಟುವಾಗಿ ಹೇಳಿದರು.

"ಯಾಕೆಂದರೆ, ಯೋಗ್ಯ ಗಂಡಸರಿಗೆ ಹಾಗೂ ಹುಡುಗರಿಗೆ ನೀವು ಪ್ರೋತ್ಸಾಹ ಕೊಡುವದೂ ಇಲ್ಲ, ಅಲ್ಲದೆ ಅವರ ಬಳಿ ಸ್ನೇಹದಿಂದ ಇರುವದೂ ಇಲ್ಲ ಕೇವಲ ಬುದ್ಧಿವಂತಿಕೆಗೆ ಮಾತ್ರ ಪ್ರೋತ್ಸಾಹ ನೀಡುತ್ತೀರಿ, ಅಲ್ಲದೆ ಸಾಹಸಿಗೆ ಗೌರವದ ಹೊರೆಯನ್ನು ಹೊರಿಸುತ್ತೀರಿ. ನೈತಿಕ ಪಥದಲ್ಲಿ ಹೆಜ್ಜೆ ಇಟ್ಟಿರುವ ವಿದ್ಯಾರ್ಥಿಗಳು ನಿರ್ಬಲರು ಮತ್ತು ಭಾವನಾ ಜೀವಿಗಳು ಅಥವಾ ಸೋಮಾರಿಗಳು ಮತ್ತು ಅಯೋಗ್ಯರೆಂದು ನೀವು ತೀರ್ಮಾನಿಸುತ್ತೀರಿ. ನಿಮ್ಮ ನಾಗರಿಕತೆ ನಿಮಗದನ್ನು ಕಲಿಸಿಕೊಟ್ಟಿದೆ. ಅದುವೇ ತಳದಿಂದ ಬಂದಿರುವ ದೋಷ. ಆಯುಧಗಳು ನೋಡಲು ಬಹಳ ನಾಜೂಕಾಗಿರಬಹುದು. ಆದರೆ ಅವುಗಳಲ್ಲಿರುವ ಶಕ್ತಿಯು ಅನೈತಿಕ ಮತ್ತು ಅಮಾನುಷ ಅಥವಾ ಅಪ್ರಮಾಣಿಕ....'

ಆಳುತ್ತಿರುವವರ ಜಾತಿಯವರಿದುರಿಗೆ ಸಾಮಾನ್ಯ ಸಂಗತಿಗಳನ್ನು ಸ್ಪಷ್ಟವಾಗಿ ತಿಳಿಸಲು ರಾಮುವಿಗೆ ಕಷ್ಟವಾಗುತ್ತಿತ್ತು. ತನ್ನ ರಾಷ್ಟ್ರೀಯತೆಯು ಕಸ್ತೂರಿ ಪರಿಮಳವನ್ನು ಆಳುತ್ತಿರುವ ಅನ್ಯ ಜಾತಿಯವರಿಗೆ ತಿಳಿಯಪಡಿಸಬೇಕು ಎಂಬುದೇ ರಾಮುವಿನ ಆಶೆ. ಆದುದರಿಂದ ಅವನು ಕ್ರಾಯಗ್ ಹಾಗೂ ಕೆಡೆಲರಿಗೆ ಜೋನ್‌ಸನ್‌ನಂತೆ ಮಾತಾಡಿ, ತನ್ನ ಸುಲಭ ಇಂಗ್ಲೀಷನ್ನು ಸ್ನೇಹಿತರಿಗಾಗಿ ಕಾದಿಂಪಿದನು.

'ಇದೊಂದು ಉತ್ತಮ ಉಪಹಾರೋಪಚಾರ. ಜೋರ್ಜ್, ನಾನು ಮೊದಲೇ ತಿಳಿಸಿದ್ದೆ. ಈ ವಿಷಯದ ಮೇಲೆ ಇದು ಭಾರದ ಅಂದರೆ ಗರಿ—ಭಾರದ ಸುತ್ತಿಗೆಯ ಪೆಟ್ಟು..." ಶ್ರೀಮತಿ ಕೆಡೆಲ್ ಮೆಚ್ಚುಗೆಯ ಮಾತುಗಳನ್ನಾಡಿದಳು.

'ಒಳ್ಳೆಯದು ರಾಮಚಂದ್ರ,' ಕ್ರಾಯಗರು ಕ್ಷಣಕಾಲ ಆಲೋಚನಾ ಮಗ್ನರಾಗಿ ಹೇಳಲಾರಂಭಿಸಿದರು. "ನೀನು ಸರಿ ಇರಬಹುದು. ಅರ್ಹತೆಯ ಮುನ್ನೂರು ಮಂದಿಯ ಗುಂಪಿನಲ್ಲಿ ಅಡಗಿಕೊಂಡು, ತಲೆಯನ್ನು ಮೇಲಕ್ಕೆ ಕಾಣಿಸದೆ, ಇದ್ದಲ್ಲಿ ನಾವದನ್ನು ಹೇಗೆ ಕಂಡುಕೊಳ್ಳಬಹುದು? ಆದಕ್ಕೆ ಸಮಯ ಹಾಗೂ ವಿರಾಮ....'

"ಹೌದು, ಎಲ್ಲಾ ಕ್ರಮಬದ್ಧ ಜೀವನದಲ್ಲಿರುವ ತೊಡಕು ಇದೊಂದು ಪ್ರಮಾಣ ಹುಟ್ಟುತ್ತಿವೆ. ಮುತ್ತುಗಳು ಬಹಳ ಆಳದಲ್ಲಿ ಅಡಗಿಕೊಂಡಿರುತ್ತವೆ."

(ಮುಂದುವರಿಯುವುದು)

NAVAYUGA 17—2—1966

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ವಿದ್ಯಾರ್ಥಿ ವಾಣಿ

ನಾಡಿನಾಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾತ್ರ

ಬರೆದವರು 'ಲಕ್ಷ್ಮೀಸುತ'

ಭಾರತವು ಹಳ್ಳಿಗಳಿಂದೊಡಗೂಡಿದ, ನೇಕಡಾ ಎಂಬತ್ತು ಕೃಷಿಕರನ್ನು ಒಳಗೊಂಡ ಪುಣ್ಯ ಭೂಮಿಯಾಗಿದೆ! ಅಂತಹ ಭೂಮಾತೆಯನ್ನು ರಕ್ಷಿಸುವುದಕ್ಕೋಸ್ಕರ ಇಂದು ಹಲವು ಸುಪುತ್ರರು ಭಾರತಾಂಬೆಯ ಪಾದಗಳಲ್ಲಿ ಪ್ರಾಣಾರ್ಪಣೆಯನ್ನು ಗೈದು ವೀರರೆನಿಸಿ ಕೊಂಡಿರುವರು. ಸತ್ಪುತ್ರರನ್ನು ಹಡೆದ ಭಾರತ ಮಾತೆಯ ಉದರ ಎಂದೆಂದಿಗೂ ಬತ್ತಿಹೋಗದು! ಸಮುದ್ರದ ತೆರೆಗಳಿಗೆ ಕೊರತೆಯಿರದಂತೆ ಭಾರತಮಾತೆಯ ಮಕ್ಕಳಾದ ನಮಗೆ ಅಂತಹ ಪೌರುಷಕ್ಕೂ ಉತ್ಸಾಹಕ್ಕೂ ಮಿತಿಯೇ ಇಲ್ಲ.

ದೇಶದ ಏಳಿಗೆಗಾಗಿ ಅಹೋರಾತ್ರಿ ಹೋರಾಡುತ್ತಿರುವ ಸೈನಿಕರಲ್ಲಿ ವೀರತನವು ನೆಲೆಗೊಳ್ಳಲು ಆ ದೇಶದ ಜನತೆ ಉತ್ತಮ ಗುಣಶೀಲವುಳ್ಳುದಾಗಿರುವುದಗತ್ಯ. ದೇಶದ ಜನತೆಯಲ್ಲಿ ಉತ್ಸಾಹ ಮೂಡಬೇಕಿದ್ದಲ್ಲಿ ಚಿಕ್ಕಂದಿನಿಂದಲೇ ಅವರಲ್ಲಿ ವೀರತನ ಚೈತನ್ಯವನ್ನು ತುಂಬಬೇಕು. ದೇಶಕ್ಕೆ ಕಷ್ಟ ಪ್ರಸಂಗಗಳು ಒದಗಿದಾಗ ಧೈರ್ಯದಿಂದ ಎದುರಿಸುವ ದಿಟ್ಟತನ ನಮ್ಮಲ್ಲಿರಬೇಕು. ಕಷ್ಟಕಾಲದಲ್ಲಿ ಸ್ಥೈರ್ಯದ ಪರೀಕ್ಷೆಯಾಗುವುದು. ಅಂತೆಯೇ ದೇಶವು ಬಿಕ್ಕಟ್ಟಿನಲ್ಲಿ ಸಿಲುಕಿದಾಗ ಆ ದೇಶದ ಸತ್ವಪರೀಕ್ಷೆ ನಡೆಯುವುದು.

'ಹನಿ ಕೂಡಿ ಹಳ್ಳ'ದಂತೆಯೆ ದೇಶದ ಪ್ರತಿಯೋರ್ವ ವ್ಯಕ್ತಿಯ ಕೂಡುವಿಕೆಯಿಂದುಂಟಾಗುವುದೇ ಜನತೆ. ಅಂತಹ ಜನತೆ ಉತ್ತಮವಾಗಿದ್ದರೆ ದೇಶ ಸಂಸ್ಕೃತಿ ಕಲೆಗಳಲ್ಲಿ ಮುಂದುವರಿದ ನಾಡು ಆಗುವುದರಲ್ಲಿ ಸಂದೇಹವಿಲ್ಲ. 'ಇಂದಿನ ಮಕ್ಕಳೆ ಮುಂದಿನ ಜನಾಂಗ'ವೆಂಬಂತೆ ಜನತೆ ಉತ್ತಮ ಗುಣಶೀಲವುಳ್ಳುದಾಗಿರಬೇಕಾದರೆ ಜನತೆಯನ್ನು ಪ್ರತಿನಿಧೀಕರಿಸುವ ವಿದ್ಯಾರ್ಥಿಗಳೂ ಉತ್ತಮ ನಡತೆಯುಳ್ಳವರಾಗಿರಬೇಕು.

ವಿದ್ಯಾರ್ಥಿಗಳ ಗುಣಶೀಲವನ್ನು ತಿದ್ದುವುದಕ್ಕಾಗಿ ಸರಕಾರವು ತರಬೇತಿಯನ್ನೀಯಲು ಪ್ರಯತ್ನಿಸುತ್ತಿದೆ. ಅದಕ್ಕಾಗಿಯೆ ಪ್ರತಿಯೊಂದು ಭಾರತೀಯ ವಿಶ್ವವಿದ್ಯಾಲಯಗಳಲ್ಲಿಯೂ ಶಾಲಾ ಕೇಂದ್ರಗಳಲ್ಲಿಯೂ ಎನ್. ಸಿ. ಸಿ.ಯನ್ನು ವ್ಯವಸ್ಥಾಪಿಸಿರುವರು. ತುರ್ತು ಪರಿಸ್ಥಿತಿಯಲ್ಲಿ ದೇಶ ರಕ್ಷಣೆಯನ್ನು ಮಾಡುವುದಕ್ಕೂ, ಯುವನದಲ್ಲಿಯೇ ದೇಶದ ರಕ್ಷೆಯ ಜಾಗೃತಿಯನ್ನು ತುಂಬಿ ಹರಿಯಿಸುವುದೇ ಮೊದಲಾದ ಉತ್ತಮ ಗುರಿಗಳನ್ನಿಟ್ಟುಕೊಂಡು ಸಾವಿರಾರು ರೂಪಾಯಿಗಳಷ್ಟು ಇಂದು ಸರಕಾರವು ವ್ಯಯಿಸುತ್ತಿದೆ. ಅದನ್ನು ಗಮನಿಸಬೇಕಾದುದು ವಿದ್ಯಾರ್ಥಿಯ ಕರ್ತವ್ಯ. ಸೈನಿಕ ಶಿಕ್ಷಣವು ವಿದ್ಯಾಭ್ಯಾಸದ ಒಂದು ಅಂಗವನ್ನಾಗಿಯೇ ಮಾಡಿರುವರು. ಸೈನಿಕ ಶಿಕ್ಷಣವನ್ನು ಹೊಂದುವುದು ದೇಶದ ಪ್ರಗತಿಯ ಮುನ್ನಡೆಯಲ್ಲಿ ಮೊದಲ ಹೆಜ್ಜೆಯಾಗಿರುವುದು.

ವಿದ್ಯಾರ್ಥಿಗಳು ರಾಜಕೀಯ ರಂಗಕ್ಕೆ ದುಮುಕುತ್ತಿರುವುದು ದೇಶ ರಕ್ಷೆಯ ದೃಷ್ಟಿಯಿಂದ ತೀರಾ ಅಹಿತಕರವೂ ನೀಚ ಕೆಲಸವೂ ಆಗಿರುವುದು. ಅಂತಹ ವಿದ್ಯಾರ್ಜನೆಯ ಕಾಲದಲ್ಲಿ ನೆಟ್ಟ ದೃಷ್ಟಿಯನ್ನಿಡಬೇಕಾದುದು ವಿದ್ಯಾರ್ಥಿಯಾದವನು ಗಮನಿಸಬೇಕಾದ ಕರ್ತವ್ಯ. ಅಂತೆಯೇ ಆತನ ಮನಸ್ಸು ಕಲ್ಮಶಗಳಿಂದ ಕೂಡಿರದೆ ಸ್ಪಟಿಕದಂತೆ ಸ್ವಚ್ಛವಾಗಿರುವುದೂ ಅತ್ಯಗತ್ಯ.

ಸ್ವತಂತ್ರ ಭಾರತವು ವಿದ್ಯಾಮಟ್ಟದಲ್ಲಿಯೂ ಆರ್ಥಿಕ ಸ್ಥಿತಿಯಲ್ಲಿಯೂ ಹಿಂದುಳಿದ ರಾಷ್ಟ್ರವಾಗಿರುವುದು. ವಿದ್ಯಾಮಟ್ಟದಲ್ಲಿ ಬಂದೊದಗಿದ ತೊಂದರೆಗಳು ಅನುಕರಣೆಯಿಂದಾಗಿದೆ. 'ಸ್ವಯಂ ಪ್ರೇರಣೆಯ ಕರ್ತವ್ಯವೇ ಕರ್ತವ್ಯ' ಎಂಬುದು ಹಿರಿಯರ ಮಾತು. ಅಂತೆಯೇ ಭಾರತವು ಪಾಶ್ಚಾತ್ಯ ದೇಶಗಳ ವಿದ್ಯಾ ಪ್ರಣಾಳಿಕೆಯ ಬದಲಾಗಿ ತಮ್ಮದೇ ಆದ ವಿದ್ಯಾ ಪ್ರಣಾಳಿಕೆಯನ್ನುಂಟು ಮಾಡಿ ಅದನ್ನು ಅನುಸರಿಸಿ ಅದರ ಮೂಲಕ ವಿದ್ಯಾರ್ಥಿಯ ಮನಸ್ಸನ್ನು ದೇಶ ರಕ್ಷಣೆಯ ಕಡೆಗೆ ಹಾಗೂ ದೇಶಾಭಿವೃದ್ಧಿಯ ಕಡೆಗೂ ಹರಿಯಿಸಲು ಸಾಧ್ಯವಿದೆ.

ಭಾರತವು ಕೃಷಿಯ ನೆಲೆಯಾಗಿದೆ! ಕೃಷಿಯೇ ರಾಷ್ಟ್ರದ ಬೆನ್ನೆಲುಬು ಎಂಬಂತೆ ಕೃಷಿಯಲ್ಲಿ ಪ್ರಗತಿಯನ್ನುಂಟು ಮಾಡಬೇಕಾದುದು ಕೃಷಿಕನ ಕರ್ತವ್ಯ. ಕೃಷಿಕನನ್ನು ಉತ್ಸಾಹಿಸಬೇಕಾದುದು ವಿದ್ಯಾರ್ಥಿಯ ಕರ್ತವ್ಯ. ಭಾರತವು ಇಂದು ಬಡವಾಗಿದೆ. ಇದಕ್ಕೆ ಮೂಲ ಕಾರಣ ಕೃಷಿಕರು ಆಧುನಿಕ ರೀತಿಯ ಕೃಷಿ ಸವಲತ್ತುಗಳನ್ನು ಸದುಪಯೋಗಗೊಳಿಸದಿರುವುದಾಗಿದೆ. ಕೃಷಿಕರಲ್ಲಿ ಅಡಗಿರುವ ಅಂಧ ವಿಶ್ವಾಸಗಳನ್ನು ನಿರ್ಮೂಲನಗೊಳಿಸಿ ಅವರನ್ನು ಬೋಧಿಸಿ ಆಧುನಿಕ ರೀತಿಯ ಗೊಬ್ಬರ ಮೊದಲಾದುಗಳನ್ನುಪಯೋಗಿಸುವಂತೆ ಪ್ರೇರೇಪಿಸಬೇಕು. 'ಹಳ್ಳಿಗಳ ಉದ್ಧಾರವೇ ದೇಶೋದ್ಧಾರ' ಎಂದು ಹಳ್ಳಿಗಳಲ್ಲಿ ಹೋಗಿ ಅಹೋ ರಾತ್ರಿ ಹೋರಾಡಬೇಕಾದುದು. ವಿದ್ಯಾರ್ಥಿಯ ಕರ್ತವ್ಯ. ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದೂ ವಿದ್ಯಾರ್ಥಿಯ ಕರ್ತವ್ಯ.

'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಮಂತ್ರವನ್ನು ಪಠಿಸುತ್ತಿರುವುದು ಆತನ ದಿನ ನಿತ್ಯದ ಕಾರ್ಯಗಳಲ್ಲೊಂದಾಗಿರಬೇಕು. 'ಮಾನವನೊಂದು ತಾನು ಎಂದು' ಎಂಬಂತೆ ಎಲ್ಲರೊಂದಿಗೂ ಕೂಡಿ ಸಹಬಾಳ್ವೆಯನ್ನುಂಟುಮಾಡುವವನಾಗಿರಬೇಕು. ದೇಶ ರಕ್ಷಣಾ ಕಾರ್ಯದಲ್ಲಿ ತನು ಮನ ಧನಗಳನ್ನು ತ್ಯಾಗ ಮಾಡುವ ತ್ಯಾಗಿಯೂ ಗಿರಬೇಕು.

ಐಕ್ಯವೊಂದೆ ಮಂತ್ರ,
ಐಕ್ಯದಿಂದ ಸ್ವತಂತ್ರ,
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ.

ಎಲ್ಲೆಲ್ಲೂ ಈ ಸೊಲ್ಲು ಕೇಳುತ್ತಿರಬೇಕು. ಇಂತೆಸಗಿದರೆ ದೇಶ ರಕ್ಷೆಯಾಗುವುದರಲ್ಲಿ ಅನುಮಾನವಿಲ್ಲ, ಭವ್ಯ ಭಾರತದ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ!

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಭಾರತದ ವೀರಾಂಗನೆಯರು	1—50
ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00

ಕಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಂಬನಿ

"ಕಾಲಾಯ ತಸ್ಮೈ ನಮಃ"

ಹೃದಯ ಕಂಪಿಸಿತು
ಭಯವು ಮುಸುಕಿತು
ಭಾರತಾಂಬೆಯ ಮಡಿಲ ಮಕ್ಕಳೊಳಗೆ
ಕಣ್ಣೀರ ಹೊಳೆ ಹರಿದು
ಅಶ್ರು ಧಾರೆಯು ಸುರಿದು
ಕಂಠಗದ್ಗದಿತವು ನನ್ನ ಮನದೊಳಗೆ ‖ ೧ ‖

ಹೀಗೇಕೆ ಆಗುತಿದೆ
ಭಾರತಾಂಬೆಯೆ ನಿನಗೆ
ನಾವೆಂತು ಸಹಿಸಲಿ ಈ ದುಃಖವನ್ನು
ಕಾಲದೇವನೆ ನಿನಗೆ
ಇನಿತಿಲ್ಲವೇ ಕರುಣೆ
ನಾವೆಂತು ಮರೆಯಲಿ ಈ ಶೋಕವನ್ನು ‖ ೨ ‖

ಒಂದೆಡೆಯಲಿ ಸಮರ
ಇಲ್ಲದಿರೆ ಆಹಾರ
ನಮ್ಮ ರಕ್ಷಕನೆಂದು ನೀನೊಪ್ಪಿಕೊಂಡೆ
ಕೋಟಿ ಮನಗಳನೊಲಿಸಿ
ವೀರ ಕವಚವ ತೊಡಿಸಿ
ನಮ್ಮನಿಲ್ಲಿಯೆ ತೊರೆದು ಮೃತ್ಯುವನಪ್ಪಿಕೊಂಡೆ ‖ ೩ ‖

ಶಾಂತಿ ದೇವನ ತವರು
ಶಾಸ್ತ್ರೀಜಿ ಅಗಲಿದರು
ಮತ್ತೆ ಮರುಕೊಳಿಸಿತು ದುಃಖದಾಷ
ಶ್ರೀ ಲಾಲಬಹದ್ದೂರ
ಭಾರತಾಂಬೆಯ ಶೂರ
ಕಾಲಾಯ ತಸ್ಮೈ ನಮಃ ನಶ್ವರ ದೇಹ ‖ ೪ ‖

ಶಾಸ್ತ್ರೀರದೊಳು ಸಮರ
ಕೊರೆಯುತಿದೆ ಆಹಾರ
ನಮ್ಮ ನೆಗಲಲು ನಿನಗೆ ಮನ ಹೇಗೆ ಬಂತು
ನಮ್ಮ ನೆಚ್ಚಿನ ಧೀರ
ಕೆಚ್ಚೆದೆಯ ಓ ವೀರ
ನೀನಲ್ಲದೇ ನಾವು ಜೀವಿಸುವುದೆಂತು ‖ ೫ ‖

ಮಾತೆ ಭಾರತಿಗಾಗಿ
ತಾಷ್ಕೆಂಟಿಗೆ ಹೋಗಿ
ಸಮರದಲಿ ಸಂಧಾನವನ್ನು ಗೈದಿ
ಅದರ ಮರುಕ್ಷಣದಿ
ಚಿರಶಾಂತಿಯನು ಹೊಂದಿ
ನಮ್ಮನೆಲ್ಲರ ಮರೆತು ವೀರ ಸ್ವರ್ಗಕೆ ನಡೆದೆ ‖ ೬ ‖

ಬಡತನದ ಬೇಗೆಯಲಿ
ಬಾಲ್ಯದಲಿ ತೊಳಲುತಲಿ
ಕಣ್ಣೀರ ಹೊಳೆಯಲ್ಲಿ ಕೈಗಳನು ತೊಳೆದೆ
ಆದರೂ ಬಹುದ್ದೂರ
ಭಾರತಾಂಬೆಯ ವೀರ
ಈ ನಲವತ್ತು ಕೋಟಿಗಳ ಒಂದಾತ್ಮವಾದೆ ‖ ೭ ‖

ಭಾರತದ ಮನೆ ಒಳಗೆ
ಜವಾಹರರ ಜೊತೆಗೆ
ನಿನ್ನ ಕಿರಣವೂ ಸಹ ಮೂಡಿ ಬಂತು
ನಿನ್ನ ಪ್ರತಿಮೆಯ ಬಳಿಗೆ
ಕೈ ಮುಗಿಯ ಬಂದೆನಗೆ
ಎನ್ನ ಹೃದಯದಿ ಕಂಬನಿ ಮಿಡಿಯುತಿತ್ತು ‖ ೮ ‖

ಬರೆದವರು— ಕುತ್ಯಾರುಗುತ್ತು
ರವೀಂದ್ರ ಶೆಟ್ಟಿ

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವ.

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=2
ಪ್ರೇಮ ವಿಜಯ	1=0
ಮುಂದಿನ ದೇವರು	0=2
ವ್ಯಭಿಚಾರಿಣಿ ಯಾರು?	1=0
ಹೆಂಡ್ತಿ ಗಂಡನಾದರೆ?	0=2
ಪುರುಷವಧು	0=2
ಸನ್ಯಾಸಿಯ ಸೋಗಿನಲ್ಲಿ!	0=7
ಸಂಶಯ ಪಿಶಾಚಿ	0=7
ಕುಶಲವ	0=5
ಚಿತ್ರಾಂಗದೆ	0=6

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೋ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

24—2—1966

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ಆಲವಂತಿಯ ರಾಮಚಂದ್ರ ತನ್ನ ರೈತ ಮುರುಗನ ಮನನೋಯಿಸಿ ಅಭ್ಯಾಸಕ್ಕೆಂದು ಮದ್ರಾಸಿಗೆ ತೆರಳಿದ್ದರೂ ಜಾನಕಿಯ ಪತಿಯಾಗಿ ಊರಿಗೆ ಮರಳಿದ. ಮಣ್ಣಿನ ಮಗನಾಗಿ ಜೀವನ ನಡೆಸಲು ಆಶಿಸುತಿದ್ದ ಅವನ ಬಯಕೆಯನ್ನು ನೆರೆ ಮಣ್ಣುಪಾಲು ಮಾಡಿತು. ನೊಂದ ಆತ ಕಡಪದ ಕಲೆಕ್ಟರರ ಬಳಿ ಶಿಬಿರ ಗುಮಾಸ್ತನಾದ. ಅಲ್ಲಿಯೂ ಆತ ಬಯಸಿದ ಶಾಂತಿ ಸಿಗಲಿಲ್ಲ. ಆತ ಊರಿಗೆ ಬಂದು ತನ್ನ ಗದ್ದೆಯನ್ನೆಲ್ಲಾ ಮಾರಿ ಆಲವಂತಿಗೆ ಕೊನೆಯ ನಮಸ್ಕಾರವಿತ್ತು ಎಂದೆಂದಿಗೂ ನಗರವಾಸಿಯಾಗತೊಡಗಿದ. ಮದ್ರಾಸದಲ್ಲಿ ರಾಮುವಿನ ಆತ್ಮ ಮಿತ್ರನಾಗಿದ್ದ ಕೇದಾರಿ ಈಗ ವಕೀಲನಾದ ಮೇಲೆ ರಾಮೂವನ್ನೇ ಮರೆತುಬಿಟ್ಟಿದ್ದ. ರಾಮು ಮತ್ತೆ ಕಡಪಕ್ಕೆ ಬಂದಾಗ ಕಲೆಕ್ಟರರ ಚಹಾದ ಆಹ್ವಾನದಿಂದ ಕಂಗಾಲಾದರೂ ಅನಿವಾರ್ಯವಾಗಿ ಅಲ್ಲಿಗೆ ತೆರಳಿದ. ಅಲ್ಲಿ ರಾಮುವಿನ ಗುರು, ಕೆಡೆಲರ ಭಾವ ಜಾರ್ಜ್ ಕೂಡ ಕೂಡಿದರು.

ಮುಂದೆ—

"ನೀನು ನಭಕ್ಕೆ ನೆಗೆಯುತ್ತಿರುವೆ. ನನಗಂತೂ ನೀನು ಇನ್ನೂ ಎತ್ತರಕ್ಕೆ ಹಾರುತ್ತಿರುವಂತೆ ಕಾಣುತ್ತದೆ" ರಾಮುವಿನ ಪುಂಡ ಅಲಂಕಾರದಿಂದ ತೊಂದರೆ ಪಟ್ಟುಕೊಂಡಂತಾದ ಕೆಡೆಲ್ ಆಶ್ಚರ್ಯದ ಮಾತುಗಳಿಗಾರಂಭಿಸಿದರು. ಶಿಬಿರ–ಗುಮಾಸ್ತರ ವಂಶಾನುಚರಿತೆಯಲ್ಲಿ ಈ ರೀತಿ ಮಾತಾಡಿದವರ್‍ಯಾರೂ ಇಲ್ಲ. ಪರ್ವತದಿಂದ ಹರಿದುಕೊಂಡು ಬರುವ ಪ್ರವಾಹದಲ್ಲಿರುವ ದೊರಗು ಹರಳುಕಲ್ಲುಗಳ ಹಾಗೆ ರಾಮುವಿನ ಮಾತುಗಳಿದ್ದವು. "ಒಬ್ಬ ಉಪಾಧ್ಯಾಯನು ತನ್ನ ವಿದ್ಯಾರ್ಥಿಯನ್ನು ಕಂಡಾಗ ಆಗುವ ದಾರುಣಸ್ಥಿತಿ ಈ ರೀತಿ ಇದೆ. ತಾವು ಕಂಡಿರುವ ಪುಸ್ತಕದ ಬದನೆಕಾಯಿಗಳನ್ನು ಇನ್ನೊಬ್ಬರ ಮುಂದಿಡಲು ಅವರು ಪ್ರಯತ್ನಿಸುತ್ತಾರೆ. ನಾವು ಸಾಮಾನ್ಯ ಸಂಗತಿಗಳ, ಆಳುತ್ತಿರುವವರ ಹಾಗೂ ಆಳಲ್ಪಡುತ್ತಿರುವವರ ಸಾಮಾಜಿಕ ಜೀವನದ ಕುರಿತು ಮಾತಾಡೋಣ. ಪೂರ್ವವು ಪೂರ್ವವೇ, ಪಶ್ಚಿಮವು ಪಶ್ಚಿಮವೇ. ಅದೆಷ್ಟು ನಿಜ. ಅದರ ಮೇಲೆ ವಿರೋಧ ಮಾತುಗಳು ಪ್ರಯೋಜನವೇ ಇಲ್ಲ. ಅದನ್ನು ಕಡಿಮೆಮಾಡಲು ವಾಕ್ಯಗಳನ್ನುದ್ಧರಿಸುವದೂ ಆಗತ್ಯವಿಲ್ಲ. ನೀನು ಇಲ್ಲಿ ನೋಡು, ನೀನು ರಾಮಚಂದ್ರ ಹಾಗೂ ಅವನ ಪತ್ನಿಗೆ ಆಮಂತ್ರಣವನ್ನು ಕೊಟ್ಟಿದ್ದೆ. ಅವನು ಒಬ್ಬನೇ ಬಂದಿದ್ದಾನೆ. ಅವಳನ್ನು ಕರೆದುಕೊಂಡು ಬರಲಿಕ್ಕೆ ಅವನಿಗೆ ಮನಸಿದ್ದಿರಬಹುದು ಆದರೆ ಆಕೆಯನ್ನು ಒಪ್ಪಿಸಲು ನಿಜವಾಗಿ ಅವನಿಂದ ಸಾಧ್ಯವಾಗಲಿಲ್ಲ. ಅಂತಹ ಎರಡು ಜೀವಗಳ ನಡುವೆ ಸಾಮಾಜಿಕ ಅಥವಾ ಮೈತ್ರಿಪೂರ್ಣ ಜೀವನ ಸಾಗಲು ಅದು ಹೇಗೆ ಸಾಧ್ಯ? ಒಂದೋ ನಾವು ಆಳುವವರಂತೆ ಆಳಬೇಕು. ಇಲ್ಲವೇ ಪೆಟ್ಟಿಗೆ ಹಾಗೂ ಗಂಟು ಮೂಟೆಗಳನ್ನು ಕಟ್ಟಿಕೊಂಡು ಹೊರಟ್ಹೋಗಬೇಕು."

"ಬೇಕಾಗಿಲ್ಲ ಎಷ್ಟು ಅತ್ಯಾವಶ್ಯಕವಿದ್ದರೂ ತೊಂದರೆಗಳನ್ನು ಒಂದೇ ಒಂದು ದಿನದಲ್ಲಿ ತೊಡೆದುಹಾಕಲು ಸಾಧ್ಯವಾಗುವುದಿಲ್ಲ. ಪುನಃ ಸಾಮಾಜಿಕ ವಿಷಯಗಳ ಮೇಲೂ ಇರುವ ನಮ್ಮ ದೃಷ್ಟಿಯಲ್ಲಿ ಆಧಾರಭೂತ ಭಿನ್ನತೆ ಕಂಡುಬರುತ್ತದೆ.' ರಾಮು ವಾದ ಹೂಡಿದನು.

"ಅದು ಹಳೆ ಹಳೆಯ ತಾತ್ವಿಕ ನೆವನ" ಹೆಚ್ಚು ಕಡಿಮೆ ಅಧಿಕಾರ ವಾಣಿಯಿಂದ ಕೆಡೆಲ್ ಗೇಲಿ ಮಾಡಿದರು.

ರಾಮುವಿನ ಮಾತಿನ ತೆರೆ ಬಹಳ ಮೇಲಕ್ಕೆದ್ದಿತು. ಅದಕ್ಕೆ ಕೆಡೆಲರ ಗೇಲಿ ಮಾತು ತಾಗಲಿಲ್ಲ. ಬದಲು ಕ್ರಾಯಗ್ ಹಾಗೂ ಶ್ರೀಮತಿ ಕೆಡೆಲರು ಕೇಳಲೆಂದು ಮಾತನ್ನು ಮುಂದರಿಸಿದನು,

"ನೀವು ನಮ್ಮ ಸಮಾಜ ರಚನೆಯ ಕುರಿತು ಜೋರಾಗಿ ಹೇಳುತ್ತೀರಿ, ಆದರೆ ಅದಕ್ಕೆ ಬೇಕಾಗುವಂತೆ ಜನತೆಗೆ ವಿದ್ಯಾಭ್ಯಾಸವನ್ನು ಕೊಡುವದಿಲ್ಲ. ಸ್ತ್ರೀ ವಿದ್ಯಾಭ್ಯಾಸವನ್ನು ನಾನೂ ಒಪ್ಪುತ್ತೇನೆ. ಇಂದಿನ ವರೆಗೂ ಒಂದಲ್ಲ ಇನ್ನೊಂದು ರೀತಿಯಲ್ಲಿ ನಮ್ಮಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಹಾಗೂ ಅನುಕೂಲತೆಗಳಿದ್ದುವು. ಕೆಲ ಅಕ್ಷರಗಳನ್ನಾಗಲೀ, ಪುಸ್ತಕದ ಪುಟಗಳನ್ನಾಗಲೀ, ಅವರ ಬಾಯೊಳಗೆ ತುರುಕಿಸಿದೊಡನೆ ವಿದ್ಯಾಭ್ಯಾಸ ಕೊಟ್ಟಂತಾಗುವದಿಲ್ಲ. ಬುಗ್ಗೆಯಲ್ಲಿ ಗುಳ್ಳೆ ಬರುತ್ತಿರುವ ನೀರು ಇರುವಂತೆ ನಮ್ಮ ನಾರಿಯರಲ್ಲಿ ನಿಸರ್ಗದತ್ತ ವಿದ್ಯೆ ಅಡಗಿಕೊಂಡಿದೆ."

'ನಿನ್ನ ಮಾತನ್ನೇ ತೆಗೆದುಕೊಂಡಲ್ಲಿ ಜನತೆ ಇನ್ನೂ ಪಕ್ವ ಸ್ಥಿತಿಗೆ ಬಂದಿರುವದಿಲ್ಲ. ಹಾಗಿರುವಾಗ ನೀವು ಪೂರ್ಣ ಪೌರಾಧಿಕಾರ ಅಥವಾ ಸ್ವರಾಜ್ಯದ ಆಶೆಯನ್ನು ಹೇಗೆ ಬೆಳೆಸಿಕೊಂಡಿದ್ದೀರಿ?" ಮಾತಿನ ಪ್ರವಾಹಕ್ಕೆ ತಡೆಯನ್ನು ಹಾಕಬೇಕೆಂದಾಲೋಚಿಸಿ ಕೆಡೆಲ್ ಪ್ರಶ್ನೆಯನ್ನು ಹಾಕಿದರು.

"ಪಕ್ವಸ್ಥಿತಿಗೆ ಬರಬೇಕಾದಲ್ಲಿ ಅವರಿಗೆ ಸ್ವರಾಜ್ಯ ಅತ್ಯಾವಶ್ಯಕ. ನೀರನ್ನು ಮುಟ್ಟದೆ ಯಾರಾದರೂ ಈಜು ಕಲಿಯಲು ಸಾಧ್ಯವಿದೆಯೇನು?"

. "ಅದು ಹಳೆ ಹಳೆಯ ರೂಪಕಾಲಂಕರವಿದೆ. ಅದನ್ನು ವಾದಕ್ಕೆ ಉಪಯೋಗಿಸಬಹುದೇ ವಿನಃ ಘನ ಹಾಗೂ ಕಷ್ಟತರವಿರುವ ಸರಕಾರಿ ಜ್ಞಾನ ಶಾಖೆಯಲ್ಲಿ ಉಪಯೋಗಿಸಲು ಒಳ್ಳೆಯದಿರುವುದಿಲ್ಲ ನೋಡು. ಜೋರ್ಜ್, ನಾನು ಹೇಗೆ ಕರುಣಾಳು ಜಿಲ್ಲಾಧಿಕಾರಿ ಇದ್ದೇನೆ. "ನನ್ನ ಶಿಬಿರ-ಗುಮಾಸ್ತನಿಗೆ ನಾನು ಹೇಗೆ ಮಾತಿನ ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ಕೊಟ್ಟಿದ್ದೇನೆ! ಯೋಗ್ಯ ಭಾರತೀಯರಿಗೆ ಅದು ಅತಿ ಹೆಚ್ಚು ನಾವು ಮಾಡಬಹುದಾದ ಕೆಲಸವಿದೆ. ಇನ್ನೂ, ರಾಮಚಂದ್ರನಂತಹ ಮನುಷ್ಯನೂ ಬಹು ನಾಚಿಕೆಯಿಂದ ಭೀರು ಆಗಿಯೇ ಇದ್ದಾನೆ. ನೈಸರ್ಗಿಕವಾಗಿ ನಾವೇ ಸ್ವಾತಂತ್ರ್ಯ ಹಾಗೂ ಸಮಾನತೆಗಳನ್ನು ಪಡೆದುಕೊಳ್ಳುವಂತೆ ಅವನು ತಾನಾಗಿ ಪಡೆದುಕೊಳ್ಳುವದಿಲ್ಲ."

"ನನ್ನ ಕಿವಿಯ ಮಟ್ಟಕ್ಕೆ ಸರಿಯಾಗಿ ನೀವು ಕೈಕೋವಿಯನ್ನಿಟ್ಟುಕೊಂಡು ಇರುವದನ್ನು ಹೇಗೆ ಮರೆಯಲು ಸಾಧ್ಯವಿದೆ? ಶ್ರೀ ಕ್ರಾಯಗ್, ನನ್ನ ವಿದ್ಯಾಭ್ಯಾಸವು ನನ್ನನ್ನು ಪೂರ್ವಜರ ವೃತ್ತಿಯಿಂದ ಬದಲಾಯಿಸಿದೆ. ಉಳುವಾಗ ಆಗುವ ಆನಂದವು—ಸಸ್ಯಗಳಿಗೆ ನೀರು ಬೇಕಾಗಿರುವಂತೆ—ನನಗೆ ನೈಸರ್ಗಿಕವಿದೆ. ನನ್ನ ವಂಶದಲ್ಲಿ ಇದು ವರೆಗೂ ಆಳಿದವರಾಗಲೀ, ಆಳಲ್ಪಟ್ಟವರಾಗಲೀ ಯಾರೂ ಇಲ್ಲ. ಆವರಡೂ ನನ್ನ ಹಾಗೆಯೇ ಆಲೋಚನಾಶಕ್ತಿಯುಳ್ಳ ವ್ಯಕ್ತಿಗಳಿಗೂ ಅಸ್ವಾಭಾವಿಕವಿವೆ. ವಿದ್ಯಾಲಯದ ಅಭ್ಯಾಸವು ನನ್ನ ಪೂರ್ವಜರ ಆಸ್ತಿಯನ್ನು ನುಂಗಿ ಬಿಟ್ಟಿತು. ನನ್ನನ್ನು ಆರ್ಥಿಕ ನಿರಾಶ್ರಿತನನ್ನಾಗಿ ಮಾಡಿಬಿಟ್ಟಿತು. ನನ್ನನ್ನದು ಗುಮಾಸ್ತಿಕೆಯ ಲೇಖನಿಯನ್ನೋಡಿಸಲು ಶಕ್ತನನ್ನಾಗಿ ಮಾತ್ರ ಮಾಡಿದೆ. ಆ ತಾಪತ್ರಯದ ಮಧ್ಯೆ ಶೆಲ್ಲಿ ಅಥವಾ ಷೇಕ್ಸ್‌ಪಿಯರ್‌ಗಳ ವಾಕ್ಯಗಳನ್ನುಲ್ಲೇಖಿಸಲು ಶಕ್ತನನ್ನಾಗಿ ಮಾಡಿದೆ. ಏನಿದ್ದರೂ ನಾನು ಬರಿಯ ಗುಲಾಮನಿದ್ದೇನೆ!

ರಾಮು ಧೈರ್ಯದಿಂದ ಸ್ವರವನ್ನು ಬದಲಾಯಿಸದೆ ಮುಂದರಿಸಿದನು.

"ವಿದ್ಯಾಭ್ಯಾಸದ ಸೂತ್ರಧಾರಿಗಳ ಕೈಗಳಲ್ಲಿ ಆ ತಪ್ಪಿನ ಕೀಲಿ ಇದೆ. ಅವರ ಮುಂದಾದರೋ ಒಂದೇ ಒಂದು ಗುರಿ ಇದೆ. ಅದು ತರುಣರನ್ನು ಸರಕಾರದ ಹಿಡಿತದಲ್ಲಿ, ಗುಮಾಸ್ತರನ್ನಾಗಿಟ್ಟು ಕೊಳ್ಳುವದಿದೆ. ವಿದ್ಯೆಯನ್ನು ಅದಕ್ಕೆ ಬೇಕಾದಂತೆ ಕೊಡಲಾಗುತ್ತಿದೆ. ಉತ್ತಮ ಗುಣಗಳನ್ನು ನಿರ್ಲಕ್ಷಿಸಲಾಗಿದೆ. ಪ್ರಕೃತಿ ಸಹಜವಾದ ತೋಡು ಸಂಪೂರ್ಣ ತಾರುಣ್ಯದ ನೆರೆಯ ನೀರನ್ನು ಮುಂದಕ್ಕೆ ಹರಿಯಲು ಬಿಡುವದಿಲ್ಲ. ಹಾಗಾಗಿ ನೀರು ಅಲ್ಲೇ ಕದಲದೆ ನಿಂತು ಉಳಿಯುತ್ತದೆ. ಭಾರತೀಯರ ಅಸಮಾಧಾನತೆಗೆ ಅದು ಕಾರಣವಿದೆ. ಕಾಲುವೆಯನ್ನು ಅಗಲ ಮಾಡಿ ಕದಲದೆ ನಿಂತಿರುವ ನೀರನ್ನು ತಡೆಯಿಲ್ಲದುದನ್ನಾಗಿ ಮಾಡಿರಿ. ಅದು ಕೆಳಗ ಹರಿದು ಭಾರತದ ಗದ್ದೆಗಳನ್ನು ಮಾತ್ರವಲ್ಲದೆ ಪೂರ್ಣ ಪ್ರಪಂಚದ ಗದ್ದೆಗಳನ್ನೂ ಫಲವತ್ತುಗೊಳಿಸುತ್ತದೆ.'

ಕೆಡೆಲರಿಗೆ ಕಹಿ ಮದ್ದನ್ನು ಕುಡಿದಂತಾಯಿತು. ಆದರೆ ಶ್ರೀಮತಿ ಕೆಡೆಲ್ ಮತ್ತು ಕ್ರಾಯಗ್ ಆಶ್ಚರ್ಯಚಕಿತರಾಗಿದ್ದರು. ಜಲಪ್ರವಾಹವನ್ನು ತಡೆಯುವ ಕಲ್ಲನ್ನು ಹಾರಿಸಲು ಆರಿಸಲ್ಪಟ್ಟಿರುವ ಯಂತ್ರ ಶಾಸ್ತ್ರ ವಿಶಾರದರು ತಾವಲ್ಲವೆಂ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ನೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪
++
ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++
ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಭಾಗದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.
ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

— ಮುಖಪತ್ರದಲ್ಲಿ: —

ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು, ದಕ್ಷಿಣ ವಿಯೆಟ್ನಾಮಿನಲ್ಲಿ ಎರಡನೆ ಬಾರಿ ರಾಯಭಾರಿಯಾಗಿ ಸೇವೆ ಸಲ್ಲಿಸುತ್ತಿರುವ ಹೆನ್ರಿ ಕೆಬೊಟ್ ಲೋಜ್‌ರವರೊಂದಿಗೆ ಮಾತುಕತೆ ನಡೆಸುತ್ತಿದ್ದಾಗಿನ ಚಿತ್ರ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೪	೨೪—೨—೧೯೬೬	No. 24

ಪುನರಾರಂಭ

ಕಳೆದ ಸಪ್ಟೆಂಬರ ತಿಂಗಳಲ್ಲಿ ಉದ್ಭವಿಸಿದ ಭಾರತ-ಪಾಕಿಸ್ತಾನ ಘರ್ಷಣೆಯ ದುಷ್ಪರಿಣಾಮವನ್ನು ನಾವೀಗ ಉಣ್ಣತೊಡಗಿದ್ದೇವೆ. ಕಾಲು ಕೆರೆದು ನಮ್ಮನ್ನು ಪಾಕಿಸ್ತಾನವು ಜಗಳಕ್ಕೆ ಕರೆದಾಗ ನಾವು ಸುಮ್ಮನಿರುವುದು ಸಾಧ್ಯವಾಗಲಿಲ್ಲ; ಯುದ್ಧವು ಹೇಗಿದ್ದರೂ ಯುದ್ಧವೇ. ನಮಗದರಿಂದಾದ ನಷ್ಟವೆಷ್ಟು ಎಂಬುದನ್ನು ಗಣಿಸುವುದು ಕಷ್ಟವೆಂದು ವಿತ್ತ ಮಂತ್ರಿಯವರು ಹೇಳಿದ್ದು ನಿಜ. ಯುದ್ಧದಲ್ಲಿ ಮನುಷ್ಯನು ಸಾಯುತ್ತಾನೆ, ಸಂಪತ್ಸಮೃದ್ಧವಾದ ದೇಶ ಮಣ್ಣುಪಾಲಾಗುತ್ತದೆ. ಇದರಿಂದ ಚೇತರಿಸಲು ಅನೇಕ ವರ್ಷಗಳೂ ಬೇಕಾಗಬಹುದು. ಆದರೆ, ನಾವು ಒಂದನ್ನು ಮರೆಯಬಾರದು. ನಮಗಿಂತ ಹೆಚ್ಚಿನ ನಷ್ಟ ಪಾಕಿಸ್ತಾನಕ್ಕಾಗಿದೆ. ಅದು ತತ್ತರಿಸಿ ಹೋಗಿದೆ, ಯಾವ ಬೆಲೆ ತೆತ್ತಾದರೂ ದೇಶದ ಸಮಗ್ರತೆಯನ್ನು ಸಾರ್ವಭೌಮತೆಯನ್ನು ಉಳಿಸಿಕೊಳ್ಳುವಲ್ಲಿ ಭಾರತೀಯರು ದೃಢಸಂಕಲ್ಪರು ಎಂಬುದನ್ನು ಲೋಕಕ್ಕೆ ನಾವು ತೋರಿಸಿ ಕೊಟ್ಟಿದ್ದೇವೆ. ಇದಕ್ಕಿಂತ ದೊಡ್ಡ ಸಾಹಸದ ಕತೆ ಯಾವುದಿದೆ?

ಘರ್ಷಣೆಯ ವೇಳೆ ಭಾರತ—ಪಾಕಿಸ್ತಾನಗಳಿಗೆ ಬರುತ್ತಿದ್ದ ಹಲವಾರು ನೆರವಿನ ಧಾರೆ ನಿಂತು ಹೋಯಿತು. ಮಿತ್ರ ರಾಷ್ಟ್ರಗಳಲ್ಲಿ ಕೆಲವು ಬಿಡುಗಡೆಗೊಳಿಸಿದ ನೆರವನ್ನೂ ಹಿಂತೆಗೆದು ಕೊಂಡುವು. ತಾವು ನೀಡುವ ನೆರವು ಘರ್ಷಣೆಯು ಮುಂದುವರಿಯುವುದಕ್ಕೆ ಮತ್ತಷ್ಟು ಸಹಾಯಕವಾಗಬಹುದು ಎಂದು ಇವು ಭಾವಿಸಿದುವು. ಅಂತೂ ಭದ್ರತಾ ಸಮಿತಿಯ ಸಮರ ವಿರಾಮ ಗೊತ್ತುವಳಿಯನ್ನು ಮನ್ನಿಸಿಯಾಯಿತು, ತಾಷ್ಕೆಂಟ್ ಘೋಷಣೆ ಹೊರಟಿತು. ಇನ್ನೇನು, ಇಷ್ಟರಲ್ಲೇ ಆಗಸ್ಟ್ ೫, ೧೯೬೫ರಂದಿದ್ದ ಹಂತವನ್ನು ನೆಲೆಗಳಿಗೆ ಉಭಯತರ ಸಶಸ್ತ್ರ ಪಡೆಗಳು ಮರಳಿವೆ; ಎರಡೂ ದೇಶಗಳ ಮಧ್ಯೆ ಸ್ಥಗಿತಗೊಂಡಿದ್ದ ಹಲವಾರು ಸಂಬಂಧಗಳು ಈಗಾಗಲೇ ಪ್ರಾರಂಭವಾಗಿವೆ. ಮುಂದಿನ ಮಾತುಕತೆಗಳಿಗೆ ತಕ್ಕ ವೇದಿಕೆ ಸಿದ್ಧಪಡಿಸುವ ತಯಾರಿಯೂ ನಡೆಯುತ್ತಿದೆ—ಅಂದರೆ, ಭಾರತ-ಪಾಕಿಸ್ತಾನಗಳ ಸಂಬಂಧ ಧಾರಾಳವಾಗಿ ಸುಧಾರಿಸುತ್ತಿದೆ. 'ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ' ಎಂಬ ತನ್ನ ನಿಲುವಿನಲ್ಲಿ ಯಾವ ಪರಿವರ್ತನೆಯನ್ನು ಮಾಡುವುದಕ್ಕೂ ಭಾರತ ಸಿದ್ಧವಿಲ್ಲ. ಇದನ್ನು ಅನೇಕ ಬಾರಿ ಜಗತ್ತಿಗೆ ಮನವರಿಕೆ ಮಾಡಿಕೊಡಲಾಗಿದೆ.

ಇರಲಿ. ಭಾರತವೀಗ ವಿದೇಶೀ ವಿನಿಮಯ ಕೊರತೆಯಿಂದ ನರಳುತ್ತಿದೆ. ಆಹಾರಾಭಾವದ ಪೀಡೆ ಕೋಲಾಹಲವೆಬ್ಬಿಸುತ್ತಿದೆ; ನಮ್ಮ ಉದ್ಯಮಗಳಿಗೆ ಅವಶ್ಯಕವಾದ ಕಚ್ಚಾ ಮಾಲುಗಳು ದೊರೆಯುತ್ತಿಲ್ಲ. ಉದ್ದಿಮೆಗಳ ಬೆಳವಣಿಗೆಯೂ ಕುಂಠಿತವಾಗ ಹತ್ತಿದೆ. ಇದರಿಂದಾಗಿ ಆರ್ಥಿಕವಾಗಿ ನಷ್ಟ ಸಂಭವಿಸ ತೊಡಗಿದೆ. ಆದುದರಿಂದ ನಮಗಿಂದು ಆಹಾರದಂತೆಯೇ ವಿದೇಶ ವಿನಿಮಯದ ಕೊರತೆ ಇದೆ. ಇದನ್ನು ನೀಗಿಸುವುದು ಅತ್ಯಗತ್ಯ. ಮೊದಲೇ ಮಂಜೂರಾಗಿದ್ದ ಅಮೆರಿಕನ್ ನೆರವು ಸಪ್ಟೆಂಬರ ತಿಂಗಳ ಘರ್ಷಣೆಯಿಂದಾಗಿ ನಮಗೆ ದೊರೆಯಲಿಲ್ಲ. ಅದರ ಗಂಭೀರ ಪರಿಣಾಮವೀಗ ಗೋಚರವಾಗಿದೆ. ಯುದ್ಧ ಕೊನೆಗೊಂಡ ನಂತರ ಭಾರತದ ಇರ್ವರು ಕ್ಯಾಬಿನೆಟ್ ಮಟ್ಟದ ಮಂತ್ರಿಗಳು ಅಮೆರಿಕಕ್ಕೆ ಬೆಟ್ಟಿಯಿತ್ತರು. ಇಬ್ಬರೊಡನೆಯೂ ಅಧ್ಯಕ್ಷ ಜಾನ್ಸನ್ ಮಾತುಕತೆ ನಡೆಸಿದರು. ಭಾರತದ ಪ್ರಧಾನಿಯನ್ನು ಕಾಣುವ ತಮ್ಮ ಆತುರವನ್ನು ಅವರು ವ್ಯಕ್ತಪಡಿಸಿದರು. ಅಂದರೆ, ಭಾರತಕ್ಕೆ ನೆರವು ನೀಡದಿರಲು ತಮಗೆ ಮನಸ್ಸಿಲ್ಲ; ಆದರೆ, ಭಾರತೀಯ ಪ್ರಧಾನಿಯೊಡನೆ ಸಮಾಲೋಚನೆ ಮಾತ್ರ ಅಗತ್ಯ. ಇದರ ಹಿಂದೆ ಬೇರೆಯೇ ಊಹಾಪೋಹಗಳೆಬ್ಬುವು; ಅಮೆರಿಕನ್ ನೆರವು ಪಡೆಯುವ ದೇಶಗಳು ಅಮೆರಿಕನ್ ನೀತಿಯನ್ನು ಒಪ್ಪುವವಾಗಿರಬೇಕು-ಎಂದು ಇದ್ದರೂ ಇರಬಹುದು. ಮೊದಲು ನಿರ್ಧರಿಸಿದಂತೆ ಫೆಬ್ರವರಿ ಪೂರ್ವಾರ್ಧದಲ್ಲಿ ಭಾರತೀಯ ಪ್ರಧಾನಿ ಅಮೆರಿಕಗೆ ಹೋಗಲಿದ್ದರು. ದುರ್ದೈವದಿಂದ ಶಾಸ್ತ್ರಿ ನಿಧನಗೊಂಡುದರಿಂದ ಅದು ಮುಂದಿನ ತಿಂಗಳ ಮಧ್ಯಾವಧಿಯಲ್ಲಿ ಆಗುವ ಸಂಭವವಿದೆ. ಪ್ರಧಾನಿಯವರ ಭೆಟ್ಟಿಯ ನಂತರವೇ ಯಾವುದೇ ನೆರವಿನ ಬಗ್ಗೆ ಅಂತಿಮ ನಿರ್ಧಾರವಾಗುವುದೆಂದು ಸ್ಪಷ್ಟವಾಗಿ ಗೊತ್ತಾಗಿತ್ತು. ಆದರೆ, ಶ್ರೀಮತಿ ಗಾಂಧಿ ಮತ್ತು ಜಾನ್ಸನ್ನರ ನಡುವೆ ಕೆಲವೊಂದು ಪತ್ರ ವ್ಯವಹಾರ ನಡೆಯಿತೆಂದೂ, ಭಾರತಕ್ಕೆ ನೀಡುವ ಸಾಮಾನ್ಯ ನೆರವಿಗೆ ತನ್ನ ಭೆಟ್ಟಿಯು ದಾರಿ ಕಾಯಬಾರದೆಂದೂ ಗಾಂಧಿಯವರು ಕೇಳಿಕೊಂಡಿದ್ದರೆಂದೂ ಗೊತ್ತಾಗಿದೆ.

ಜಾನ್ಸನ್ ಕಠಿನ ಪರಿಸ್ಥಿತಿಯಲ್ಲಿ ನಮಗೆ ಆಹಾರ ಪೂರೈಸಿದ್ದಾರೆ. ದೀರ್ಘಾವಧಿಯ ಒಡಂಬಡಿಕೆಯ ಬಗ್ಗೆ ಪರಿಶೀಲಿಸ ತೊಡಗಿದ್ದಾರೆ. ಮೊನ್ನೆ ಮೊನ್ನೆ ನಮ್ಮಲ್ಲಿಗೆ ಬಂದ ಉಪಾಧ್ಯಕ್ಷ ಹಂಫ್ರಿಯವರು ಪಯತನಾಮವೇ ಮೊದಲಾದ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ಮಾಡಿ, ಮರಳುವಾಗ ೧೦೦ಮಿಲಿಯ ಡಾಲರ್‌ಗಳ ಅಭಿವೃದ್ಧಿ ಸಾಲವನ್ನು ನೀಡುವುದಾಗಿ ಘೋಷಿಸಿದ್ದು ಎಲ್ಲೆಡೆಯಲ್ಲೂ ಸ್ವಾಗತಿಸಲ್ಪಟ್ಟಿದೆ. ಕುಂಟತೊಡಗುತ್ತಿರುವ ನಮ್ಮ ಉದ್ಯಮಗಳು ತುಸು ಚೇತರಿಸಿಕೊಳ್ಳುವಂತಾಗಿದೆ. ಇದರಿಂದ. ಅದೇನೇ ಇರಲಿ, ಮುಂದೆ ನೀಡಬಹುದಾದ ನೆರವು ಅದು ಡಾಲರ್ ರೂಪದಲ್ಲಿರಲಿ, ಸೈನಿಕ ಸಹಾಯದ ರೂಪದಲ್ಲಿರಲಿ, ಅನಿರ್ಬಂಧವಾದುದಾಗಿರಬೇಕು— ಇದು ಭಾರತದ ನೀತಿ. ನಿಶ್ಶರ್ತವಾಗಿ ನೀಡುವ ನೆರವನ್ನು ಭಾರತವು ಕೃತಜ್ಞನಾಗಿ ಚಿರಸ್ಮರಿಸುವುದು. ಅದುಳಿದು ಸಶರ್ತವಾಗಿಯೇ ಅಮೆರಿಕೆ ನೆರವು ನೀಡುವುದಾದರೆ, ಭಾರತವು ಅದನ್ನು ತಿರಸ್ಕರಿಸುವ ಸಂಭವವೇ ಹೆಚ್ಚು ಎಂಬುದನ್ನು ಅಮೆರಿಕನ್ನರೂ ಮನವರಿಕೆ ಮಾಡಿಕೊಂಡಿದ್ದಾರೆ. ಆದುದರಿಂದಲೇ ಇರಬೇಕು, ಇಂದಿರಾ ಗಾಂಧಿಯವರ ಅಮೆರಿಕನ್ ಸಂದರ್ಶನಕ್ಕೆ ಮೊದಲೇ ಅಮೆರಿಕನ್ ನೆರವು ಪುನರಾರಂಭಗೊಂಡರೂ ಗೊಳ್ಳಬಹುದೆಂದು ಹೇಳಲಾಗುತ್ತದೆ. ಹೀಗಾಯಿತೆಂದರೆ, ಭಾರತವು ಸರ್ವ ರೀತಿಯಿಂದಲೂ ವಿಜಯ ಗಳಿಸಿತೆಂದೇ ಹೇಳಬೇಕು.

ವಚನ ಸುಧೆ
ನ ಸ್ವಪ್ನೇನ ಜಯೇನ್ನಿದ್ರಾಂ
ನ ಕಾಮೇನ ಜಯೇತ್ ಸ್ತ್ರಿಯಃ
ನೇಂಧನೇನ ಜಯೇದಗ್ನಿಂ
ನ ಪಾನೇನ ಸುರಾಂ ಜಯೇತ್॥
ಮಲಗುತ್ತ ನಿದ್ರೆಯನ್ನು, ಭೋಗಿಸುತ್ತ ಸ್ತ್ರೀಯನ್ನು, ಕಟ್ಟಿಗೆಯಿಂದ ಬೆಂಕಿಯನ್ನು, ಕುಡಿತದಿಂದ ಮದಿರೆಯನ್ನು ಗೆಲ್ಲುವ ಸಾಹಸ ವ್ಯರ್ಥ

ಅವಜ್ಞೆ ಬೇಡ

ಇಂದು ಆಹಾರ ಮಂತ್ರಿ (ರಾಜ್ಯ)ಯಾಗಿರುವ ಜತ್ತಿಯವರು ಅರ್ಥ ಮಂತ್ರಿಯಾಗಿದ್ದಾಗ ರಾಜ್ಯ ಸರಕಾರಿ ನೌಕರರ ವೇತನವನ್ನು ಮದ್ರಾಸ್ ಸರಕಾರದ ನೌಕರರ ವೇತನ ಮಟ್ಟಕ್ಕೆ, ಕಡಿಮೆಯಿರುವಲ್ಲಿ ಎತ್ತರಿಸುವುದಾಗಿ ಹೇಳಿ ಆದಕ್ಕೊಂದು ಉಪಸಮಿತಿಯನ್ನೂ ಮಾಡಿ ಹೋಗಿದ್ದರು. ಆದರೆ, ಈ ಸಮಿತಿಯು ಈಗ ಜೀವಿತವಿದೆಯೇ, ಕಾರ್ಯಮಗ್ನವಾಗಿದೆಯೇ ಒಂದೂ ತಿಳಿಯುತ್ತಿಲ್ಲ. ಅನಂತರ ರಾಜ್ಯ ಸರಕಾರವು ತುಟ್ಟಿ ಭತ್ತೆಯನ್ನು ಕೇಂದ್ರದ ಮಟ್ಟಕ್ಕೆ ಏರಿಸಿತು. ಇದೀಗ ಕೇಂದ್ರದ ಭತ್ತೆಯು ತುಸು ಏರಿದ್ದು ರಾಜ್ಯ ಸರಕಾರವೂ ಏರಿಸಲೇ ಬೇಕಾಗುತ್ತದೆ. ಎನ್‌ಜಿಓಗಳು ಯುದ್ಧದ ವೇಳೆ ಚಳವಳಿಯನ್ನು ಮುಂದೂಡಿದುದು ಅವರ ಸುಪ್ರಜ್ಞೆಯನ್ನು ತೋರಿಸುತ್ತದೆ. ಇದೀಗ ಮತ್ತೆ ಅವರು ತಮ್ಮ ಬೇಡಿಕೆಗಳಿಗೆ ಜೀವದಾನ ಕೊಟ್ಟಿದ್ದಾರೆ. ಆದುದರಿಂದ ಅವಜ್ಞೆಯಿಂದ ಪರಿಸ್ಥಿತಿಯನ್ನು ಕೆಡಿಸಿಕೊಳ್ಳುವುದು ರಾಜ್ಯಸರಕಾರಕ್ಕೆ ಹಿತವೆನಿಸದು. ಆಗ ನೀಡಿದ್ದ ಭರವಸೆಯನ್ನಾದರೂ ಈಡೇರಿಸುವಲ್ಲಿ ಇನ್ನಾದರೂ ತಡಮಾಡಬಾರದು.

ನರಸಣ್ಣನ ಸರಸ



'ಊರಲ್ಲಿ ಬೆಂಕಿ ಪೊಟ್ಟಣ ಇಲ್ಲ, ಬ್ಯಾಟರಿ ಸೆಲ್ ಸಿಗೋದಿಲ್ಲ, ಬ್ಲೇಡು ಹುಡುಗ ಮಾಯ, ಸಿಗರೇಟೂ ಬೇಕಾದ್ದು ಆಗೋಲ್ಲ..'
'ಇದ್ದೆಲ್ಲಾ ಸಚೀಂದ್ರ ಚೌಧುರಿಯವರ್‌ಗೆ ಕೂಡ್ಲೆ ತಿಳ್ಸಿ ಬಿಡೋದುತ್ತಮವಲ್ವೆ?'

ಗೇಹ ರಾಜ್ಯದಲ್ಲಿ

ತೊಟ್ಟಿಲು ತೂಗಿದ ಕೈ....

"ಸ್ವಲ್ಪ ಇಲ್ಲಿ ಕೇಳ್ತೀರಾಂಡೆ....'

"ಕೇಳ್ತಾನೇ ಇದೇನಲ್ಲಾ...."

"ಅದು ಸರಿ, ಸ್ವಲ್ಪ ಕಿವಿ ಕೊಡ್ತೀರಾಂತ...."

"ಒಳ್ಳೇ ಪಚೀತಿಯಾಯ್ತಲ್ಲ ಇದು...."

"ಯಾಕೆ?"

"ಅಲ್ಲಾ, ಕೈಕೊಟ್ಟೀ ನಾನು ಸೋತು ಸುಣ್ಣವಾಗಿದ್ದೇನೆ. ಇನ್ನೂ ಕಿವಿಕೊಟ್ಟು ಬಿಟ್ರೆ..."

'ಹಾಗಲ್ರಿ, ನನಗ್ಯಾಕೆ ಬೇಕು ನಿಮ್ಮ ಕಿವೀಂತ?"

'ಯಾಕೆ ಬೇಕು? ಯಾಕೆ? ಯಾಕೆ?"

"ಅದನ್ನೇ ನಾನು ನಿಮ್ಮೊಡನೆ ಕೇಳ್ತಿರೋದು?"

"ಯಾಕೆ ಬೇಕೂಂತ ಬೇಕು ಅಂದವಳೇ ಅನ್ಬೇಕು...."

'....ಓ.... ಸರಿ, ನನಗೆ ಸ್ವಲ್ಪ ಮಾತಾಡ್ಲಿಕ್ಕಿತ್ತು....'

'ಇಷ್ಟು ಹೊತ್ತು ಮಾತಾಡ್ತಾನೇ ಇದ್ದೀಯಲ್ಲ?'

'ಅಯ್ಯೋ, ನಿಮ್ಮದೊಂದು... ಕೇಳಿ, ನಮ್ಮ ಸರಸು ಇದ್ದಾಳಲ್ಲಾ....'

"ಹೌದು ಹೌದು ಇದ್ದಾಳೆ...."

"ನೋಡಿ, ಆಕೆಯ ಮನೆಯಲ್ಲಿ ಅವಳದೆ ಏಕಚಕ್ರಾಧಿಪತ್ಯ...."

"ಹ್ಞೂ, ಇರಬಹುದು...."

"ಅದ್ರಿಂದ್ಲೆ ನೋಡಿ...."

"ಏನು?"

"ನೋಡಿ, ಗಂಡನ ಕಿವಿಯೂದಿ ಊದಿ ಅಣ್ಣ-ತಮ್ಮರ ನಡುವೆ ವಿಷದ ಬೀಜ ಬಿತ್ತಿದಳೂಂತ...."

"ಯಾರು ಹೇಳಿದರು?"

"ಯಾರು ಯಾಕೆ ಅನ್ಬೇಕು? ಊರಿಗೆ ಊರೇ ತಿಳಿದಿದೆ. ."

"ಇರಬಹುದೂನ್ನು..."

'ಅಲ್ಲ, ನನಗೆ ಮತ್ತೇನೂ ಇಲ್ಲ, ಎಂತಹ ಕಠೋರಾಂತ..."

'ಅದಕ್ಕೇ ನೋಡು ಹಿಂದಿನವ್ರು ಅಂದದ್ದು ಒಲಿದರೆ ನಾರಿ, ಮುನಿದರೆ ಮಾರಿ ಅಂತ..."

"ಅದು ಸರೀನ್ರಿ. ಆದರೂ ಯಾಕೆ ಬೇಕು ಹೆಂಗಸಿಗೆ ಪಾರುಪತ್ಯ?'

"ಯಾಕೆ ಬೇಕು ಅಂದ್ರೆ? ನೋಡು, ಈ ಪ್ರಪಂಚ ಹುಟ್ಟಿರೋದು, ಬೆಳೆದಿರೋದು ಇನ್ನು ಮುಂದೆ ಒಂದು ದಿನ ನಾಶವಾಗೋದು ಎಲ್ಲಾ ಹೆಂಗಸಿನಿಂದಲೇ ನೋಡು....'

"ಅಂದ್ರೆ?"

"ನಾರೀ ಸರ್ವಸ್ಯ ಕಾರಣಂ...."

'ಅಂದ್ರೆ ಎಲ್ಲದಕ್ಕೂ ಹೆಂಗಸೇ ಕಾರಣೀಭೂತಳು ಅಂತ ತಾನೆ?"

"ಹ್ಞೂ, ಆಕೆಯೂ ಒಂದು ಜೀವಂತ ಭೂತ. ಅದು ಹೇಗೆ ಒಲಿಯುತ್ತದೆ, ಹೇಗೆ ಮುನಿಯುತ್ತದೆ. ಎಂಬುದೊಂದು ಕಗ್ಗಂಟು...."

"ಯಾರಿಂದಲೂ ಹೇಳಲು ಸಾಧ್ಯವಿಲ್ಲ...."

"ಇಲ್ಲ, ಸೃಷ್ಟಿಕರ್ತ ಬ್ರಹ್ಮ ಸರಸ್ವತಿಯನ್ನು ನಿರ್ಮಿಸಿದ. ಆಕೆಯ ರೂಪ ಸೌಂದರ್ಯ ರಾಶಿಯನ್ನು ಕಂಡೊಡನೆಯೇ ಮೋಹಿತನಾದ. ನಾರಿ ಸರಸ್ವತಿ ಮಗಳಾಗಿದ್ದರೂ ಅಪ್ಪನನ್ನೇ ಒಲಿಸಿಕೊಂಡಳು. ಇಲ್ಲಿಂದ ಕಗ್ಗಂಟು ಪ್ರಾರಂಭವಾಗುತ್ತದೆ..."

"ತನ್ನ ಮಗಳೊಡನೆ ಯಾರಾದರೂ ಪ್ರಣಯ ಮಾಡುತ್ತಾರೇನು?"

"ಅಪ್ಪನೊಡನೆ ಮಾಡಬಹುದಾದರೆ, ಮಗಳೊಡನೆ ಮಾಡದೇನಂತೆ?"

"ನೀವು ಜಾರಿಸುವುದು ಬೇಡ, ಮೊದಲು ನಿಮ್ಮ ಬ್ರಹ್ಮನೇ ಮಗಳನ್ನು ಮೋಹಿಸಿದ್ದು. ಸರಸ್ವತಿಯಲ್ಲ...."

'ಯಾರು ಹೇಳಿದರು?'

'ಎಲ್ಲರೂ ಹೇಳುತ್ತಾರೆ..."

"ಆಯ್ತು, ನಿನ್ನ ಮಾತನ್ನೇ ಸದ್ಯ ಒಪ್ಪಿಕೊಳ್ಳುವ. ಆದರೆ, ಆತ ಯಾಕೆ ಮೋಹಿಸಿದ?"

'ಯಾಕೆ ಅಂದರೆ, ಸರಸ್ವತಿಯು ಅನುಪಮ ನಾರೀ ರತ್ನ; ಆಕೆಯು ಬರಿಯ ಹೆಣ್ಣಲ್ಲ, ಸೌಂದರ್ಯ ರಾಶಿಯಾಗಿದ್ದಳು...."

'ನೋಡು, ಬ್ರಹ್ಮ ಮೋಹಿಸಿದ್ದು ತನ್ನ ಮಗಳನ್ನಲ್ಲ. ಆಕೆಯ ಸೌಂದರ್ಯವನ್ನು. ಒಂದು ವೇಳೆ ಆಕೆ ಕುರೂಪಿಯಾಗಿದ್ದರೆ, ಕಂಡಿತಕ್ಕೂ ಆತ ಆಕೆಯನ್ನು ಮೋಹಿಸುವ ಸಾಹಸ ಮಾಡುತ್ತಿರಲಿಲ್ಲ....... '

' ಇಲ್ಲ .... '

" ಹಾಗಾದರೆ ಈಗ ಹೇಳು, ಮೋಹಿಸಿದ್ದು ಬ್ರಹ್ಮನೋ ಮೋಹಿಸುವಂತೆ ಮಾಡಿದ್ದು ಆಕೆಯ ಸೌಂದರ್ಯವೋ...."

" ಓ, ಬಾರಿ ಬುದ್ಧಿವಂತರು ಕಂಡ್ರಿ ನೀವು .... '

' ಯಾಕೆ? '

' ನನ್ನ ಹಗ್ಗಕ್ಕೆ ಉರುಳು ಹಾಕಿ ನನ್ನನ್ನೇ ಕಟ್ಟಿ ಬಿಟ್ರಲ್ಲಾಂತ .... '

"ಹಾಗೆಲ್ಲಾ ಉರುಳಿಗೆ ಸಿಕ್ಕಿ ಬೀಳುವಷ್ಟು ದುರ್ಬಲೆ ನೀನಲ್ಲಾಂತ ನನಗೆ ಗೊತ್ತಿಲ್ವೆ?

' ನಿಮಗೆಲ್ಲಾ ಗೊತ್ತು. ಪಾಪ, ಅಷ್ಟೂ ಹೆಂಡ್ತಿ ಮೇಲೆ ಅಭಿಮಾನ?"

' ಎಷ್ಟಾದರೂ ಕೈ ಹಿಡಿದವಳಲ್ಲವೇ?'

"ಹ್ಞೂ, ಹೌದು, ಆದ್ರೆ ಏನು ಮಾಡೋದು?"

"ಮಾಡೋದೇನು? ಒಂದು ಬಾರಿ ಕೈ ಹಿಡಿದ ಮೇಲೆ ಮತ್ತೆ...."

"ನಿಮ್ಮಾತಿನ ಅರ್ಥವಾಯ್ತು. ಆದ್ರೆ ನೋಡಿ, ಇದು ಸಾವಿತ್ರಿ ದ್ರೌಪದಿ ಸೀತೆಯರ ಯುಗವಲ್ಲ..."

"ನಿಜಕ್ಕೂ ಅಲ್ಲ. ಇಂದಿನದು ವೀಣಾ, ಶಕಿಲಾ, ಕಲ್ಪನಾ, ಸಾಧನಾ,.... ಹೀಗೆಲ್ಲಾ ಏನೇನೋ ಯಾರ್ಯಾರದೋ ಯುಗ..."

"ಸಾಕು ಬಿಡೀಂದ್ರೆ....ಸ್ಪೆಲ್ಲಿಂಗಿಗೆ ಮಹತ್ವ ಕೊಡೋ ಫರಂಗಿ ಭಾಷೆಯಲ್ಲಾದ್ರೂ ಅಂಕಿತ ನಾಮಗಳಿಗೆ ಅವುಗಳ ಬಂಧನದ ಬೇಡಿ ತೊಡಿಸುವುದಿಲ್ಲ. ಕರೆಯುವುದಕ್ಕೊಂದು ಹೆಸರು ಬೇಕು, ಅದು ಯಾವುದಾದರೇನು?"

"ಅದು ಸರೀನ್ನು. ಇಂಗ್ಲೆಂಡಿನ ದೊರೆಗಳ ಸಂಸಾರ ನೋಡು, ಅದರಲ್ಲಿಯೂ ಗಂಡು ಮಕ್ಕಳ ದುರದೃಷ್ಟ. ಜಾರ್ಜ್ ಮತ್ತು ಎಡ್ವರ್ಡರನ್ನು ಬಿಟ್ಟು ಬಿಟ್ರೆ ಬೇರೆಯವರು ಇಲ್ವೇ ಇಲ್ಲ."

"ಆದರೆ ನೋಡಿ, ಆರನೇ ಜಾರ್ಜರೊಡನೆ ಇವರ ವಿಶ್ವಖ್ಯಾತಿ ಮಣ್ಣುಗೂಡಿತು..."

"ಯಾಕೆ?'

"ಪಟ್ಟಕ್ಕೆ ಬಂದವಳು ರಾಣಿ. ಮುಂದೆ ಬರುವವಳು ರಾಣಿಯೇ ನೋಡಿ...."

'ಓ, ಹಾಗೆ.... ಜಗತ್ತಿನಲ್ಲೇ ಮಹಿಳೆಯರ ಮೇಲುಗೈ ಆಗಿದೆ; ಆಗುತ್ತ ಬರುತ್ತಿದೆ ಅನ್ನು..."

'ಮಹಿಳೆಯರಾದರೇನು, ಮಹನೀಯರಾದರೇನು? ಎಲ್ಲರೂ ದೇವರ ಮಕ್ಕಳು ತಾನೇ?"

"ಹೌದಪ್ಪ, ದೇವರ ಮಕ್ಕಳೇನೋ ಹೌದು. ಅದೆಲ್ಲಾ ಇರ್ಲಿ. ಏನೋ ಹೇಳ್ಬೇಕೂಂತಿದ್ದೆಯಲ್ಲಾ. ಏನದು?'

' ಮತ್ತೆಂಥದು? ಲೋಕದಲ್ಲಿ ಎಂಥೆಂತಹ ಹೆಂಗಸರಿದ್ದಾರೇಂತ? ,

" ಅದ್ರಲ್ಲಿ ವಿಶೇಷವೇನಂತೆ? ವಿಶೇಷ ಅಂದರೆ 'ನಾರೀ ಕಲಹಸ್ಯ ಕಾರಣಂ" ಎಂದು ತಿಳಿದೂ ತಿಳಿದೂ ನಾರಿಯರ ಬಲೆಯಲ್ಲಿ ಸಿಕ್ಕಿ ಬೀಳೋ ಗಂಡಸರ ಗೋಳು .... "

" ಹಾದಪ್ಪ, ಆದ್ರೆ ನೋಡಿ, ಒಳ್ಳೆಯವರೂ ಇರ್ಲಿಲ್ವೇ ? "

" ಇದ್ರೂನ್ನು. ಆದ್ರೆ ಇಂದಿನ ದಿನಗಳಲ್ಲಿ ಆದೂನು ಕಷ್ಟ .... "

" ಯಾಕೆ ?"

" ಯಾಕೆ ಅಂದ್ರೆ ಎಲ್ಲರೂ ತಮ್ಮನ್ನು ಬೇರೆಯವರೆಲ್ಲಾ 'ಹೆಚ್ಚಿನವಳು' ಎಂದು ತಿಳೀಬೇಕೂಂತ ಪ್ರಯತ್ನ ಮಾಡ್ತಾರೆ .... '

"ಅಂದ್ರೆ..."

'ನೋಡು, ನಿನ್ನನ್ನೇ ತೆಗೆದುಕೋ...."

'ಸರಿಯಪ್ಪ, ನಿಮಗೆ ಮತ್ತ್ಯಾರೂ ಸಿಗ್ಲಿಲ್ಲ."

'ನೋಡು, ಯಾರ್ಯಾರ ಬಗ್ಗೆ ನಾವು ಮಾತಾಡೋದು ಸರಿಯಾಗಿರೋದಿಲ್ಲ...'

'ನಾನು ಆಗುತ್ತೆ ಅಂದೆನೆ?"

'ಇಲ್ಲ, ಆದರೂ....'

'ಹ್ಞೂಂ...ಮತ್ತೆ...."

'ನೋಡು. ನೀನು ತುಂಬ ನನ್ನೊಡನೆ ಮಾತಾಡ್ತೀಯ? ಯಾಕೆ?"

'ಯಾಕೆ ಅಂದ್ರೆ, ನಿಮ್ಮೊಡನೆ ಮಾತಾಡೋದಕ್ಕೂ ನನಗೆ ಅಧಿಕಾರವಿಲ್ಲವೇನ?'

'ಅಧಿಕಾರದ ಪ್ರಶ್ನೆ ದೂರ ಇರ್ಲಿ...'

"ಯಾಕೆ?'

"ಅಧಿಕಾರ. . ಎಲ್ರಿಗೂ ಇದೆ, ಕಳ್ಳನಿಗೆ ಕದಿಯೋ ಅಧಿಕಾರವಿದ್ರೆ, ಪೋಲೀಸಿಗೆ ಹಿಡಿಯೋ ಅಧಿಕಾರಾನೂ ಇದೆ..

"ಅಯ್ತಪ್ಪ. ನಿಮ್ಮೊಡೊನೆ ಮಾ… ಡ್ತಾ ಕೂತ್ರೆ ಭಾರಿ....'

"ಹ್ಞೂಂ... ಮತ್ತೆ....'

'......ಮತ್ತೆ.... ಅಲ್ರಿ, ಗಂಡನೊ… ನೆ ಮಾತಾಡೋದು ತಪ್ಪೆ....?'

"ಅಲ್ಲ, ನೋಡು, ಗಂಡ-ಹೆಂಡಿ… ಪಸಂದಾಗಿದ್ದಾರೇಂತ ಎಲ್ರೂ ಅ… ದ್ದಾರೇನ್ನು. ಹೀಗೆಯೇ ನೋಡು, ಇನೆ… ಬ್ಬರು ನನ್ನನ್ನು ನೋಡಿ ತಲೆದೂಗ… ಕುಂತ ಎಲ್ರೂ ಬಯಸ್ತಾರೆ.... ಅದ… ಏನೇನೆಲ್ಲಾ ವೇಷ ಹಾಕ್ತಾರೆ.

"ಇರಬಹುದೂನ್ನಿ. ಆದ್ರೆ, ನಾನೇ… ಇಲ್ಲ...'

"ಇಲ್ಲ... ಇಲ್ಲ... ಪಾಪ, ಅಯ್ಯೋ..

"ಯಾಕೆ ಏನಾಯ್ತು?"

'ಆಗೋದೇನು? ಇವೆಲ್ಲವುಗಳ ಕೊ… ಯೆಲ್ಲೀಂತ?'

'ಕೊನೆಯೆಲ್ಲಿ? ಆರಂಭನಲ್ಲೇ ಕೊಯೂ ಆಗುತ್ತದೆ...'

'ಇದು ವೇದಾಂತವಾಯ್ತು...'

'ಹ್ಞೂಂ....ನೋಡಿ, ನಮ್ಮ ಇಂದಿ… ರಾಜ್ಯದಲ್ಲಿ ಏನು ಸುಧಾರಣೆಯಾದೀತ…

'ಯಾಕೀಗ, ಇಂದಿರಾಳ ನೆನಪಾ… ತೂಂತ?'

'ಅಲ್ಲ, ನಮ್ಮ ಸರಸು ಹೇಳಿದ್ರ… ಗಂಡನ ಹತ್ರ, ಇನ್ನು ನಮ್ಮ ರಾ… ಉಳುವವನದೇ ಹೊಲ, ಒಕ್ಕಲೇ … ಲೀಕ, ಹಾಗೆಯೇ ಹೆಂಡ್ತಿ ಹೇಳದ … ಗಂಡ ಕೇಳ್ಬೇಕು ಇಲ್ವಾದ್ರೆ....'

'ಇಲ್ವಾದ್ರೆ ಏನಂತೆ....'

'ಅದನ್ನು ಕೇಳೋದು ಬೇಡ....' ಗರ' ತಿಳಿಯಿತು ಬಿಡು .... ಆದ್ರೆ ನೋ… ಡು, ಇಂದಿರಾ ಬಂದಳೂಂತ ಧರ್ಮ… ರೆಯಾಗೋಲ್ಲ. ಜನ ಬೇರೆಯಾಗೋ… ಲ್ಲ. ಗತಾನುಗತಿಕ: ಲೋಕ: ಅಂತಾ… ಇಂದಿನ ಮನೋವೃತ್ತಿ ಬದಲಾಗ ಬೇಕ…

(ಹದಿಮೂರನೇ ಪುಟ ನೋಡಿರಿ)

ಕರ್ನಾಟಕ ಯಕ್ಷಗಾನ ನಾಟಕ ಸಭಾ

ಮಂಗಳೂರು

ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿದ ಕರ್ನಾಟಕ ಥಿಯೇಟರಿನಲ್ಲಿ

ತಾ. 10ರಿಂದ ಪ್ರತಿ ದಿನ ರಾತ್ರಿ 9-30ಕ್ಕೆ

ಪ್ರತಾಪ-ಜಯಂತಿ

ಎಂಬ ಪೌರಾಣಿಕ ಬ್ರಹ್ಮಾಂಡ ಪುರಾಣಾಂತರ್ಗತ ಕಥಾಭಾಗವನ್ನು ಅಭಿನಯಿಸುತ್ತಿರುವರು.

ಕಿಕ್ಕಿರಿದ ಜನಸಂದಣಿ!

ವಿಟ್ಲ ಬಾಬು ರಾಯರಿಂದ ಸೀನು ಸೀನರಿಗಳು

ಕತ್ತಲೆಯ ದಾರಿಯಲ್ಲಿ ಬೆಳಕು ತೋರಿದ

ವಿಶ್ವಮಾನ್ಯ ಭಾರತೀಯರು

ಬರೆದವರು

ಶ್ರೀ ಸ. ನಾರಾಯಣ

ಸುಸಂಸ್ಕೃತ ಸಂಪದ್ಭರಿತ ಭಾರತದ ಕೀರ್ತಿ ಇಂದು ನಿನ್ನೆಯದಲ್ಲ; ಅಜರಾಮರವಾಗಿ ಅನೂಚಾನವಾಗಿ ಬೆಳೆದು ಬಂದ ಧಾರ್ಮಿಕ, ನೈತಿಕ, ನಾಗರೀಕ, ಸಾಂಸ್ಕೃತಿಕ ಉನ್ನತ ಸಂಪ್ರದಾಯಗಳ ಪರಂಪರೆ ಪ್ರಾಚೀನವಾದುದು, ಸ್ಪಷ್ಟವಾದುದು. ಭಾರತದ ಮಹೋನ್ನತ ಕೀರ್ತಿ ಪರಂಪರೆಯನ್ನು ಲೋಕಕ್ಕೆ ಪರಿಚಯ ಮಾಡಿಕೊಡಲು ಹೊರಟ ಮಹಾನುಭಾವರು ಹಲವರು. ಅವರೆಲ್ಲರ ಸೇವೆ-ಸಾಧನೆಗಳಿಂದ ಭಾರತೀಯ ಸಂಸ್ಕೃತಿಗೆ ವಿಶಿಷ್ಟ ಸ್ವರೂಪ-ಕೀರ್ತಿ ಬಂದಿದೆಯಾದರೂ ಆ ಕಾರ್ಯದಲ್ಲಿ ಕೃತಕೃತ್ಯರಾದವರು ಕೆಲವೇ ಜನ. ಅವರಲ್ಲಿ ಮುಖ್ಯವಾಗಿ ಗಾಂಧಿ, ಠಾಕೂರ್, ಅರವಿಂದ ಮೊದಲಾದವರನ್ನು ಉದಾಹರಿಸಬಹುದು.

ಭಾರತಕ್ಕೆ ವಿಶ್ವಮಾನ್ಯತೆಯನ್ನು ಗಳಿಸಿಕೊಟ್ಟು ಭಾರತದ ಇತಿಹಾಸ, ಸಂಸ್ಕೃತಿಯ ಪರಂಪರೆಗೆ ವಿಶೇಷ ಸ್ಥಾನವನ್ನು ಗಳಿಸಿಕೊಟ್ಟ ಮಹಾಪುರುಷರು ಇಬ್ಬರು. ಮೊದಲನೆಯವರಾಗಿ ಸ್ವಾಮಿ ವಿವೇಕಾನಂದರು. ಎರಡನೆಯವರಾಗಿ ಪಂಡಿತ ಜವಹರಲಾಲ ನೆಹರೂರವರು. ಇಬ್ಬರೂ ಮಹಾ ಪುರುಷರಷ್ಟೇ ಅಲ್ಲ, ಯುಗಪುರುಷರು. ವಿಶ್ವಕಲ್ಯಾಣಕ್ಕಾಗಿ ಅವಿಶ್ರಾಂತವಾಗಿ ದುಡಿದು ತಮ್ಮ ಸೇವೆಯಿಂದ ವಿಶ್ವವನ್ನೇ ಬೆಂಗುಗೊಳಿಸಿ ಬಾಳಿ ಅಮರರಾದ ದಿವ್ಯ ವ್ಯಕ್ತಿಗಳು.

ಸ್ವಾಮಿ ವಿವೇಕಾನಂದರ ಹಾಗೂ ನೆಹರೂರವರ ಜೀವನ, ಧ್ಯೇಯ ಸಾಧನೆಗಳನ್ನು ಪರಿಚಯಮಾಡಿ ಕೊಡುವ ದೆಸೆಯಲ್ಲಿ ಈ ಕಿರು ಲೇಖನ ಒಂದು ಅಲ್ಪ ಪ್ರಯತ್ನ.

೧೮೬೩ನೇ ಜನವರಿ ೧೨ರಂದು ವಿಶ್ವನಾಥದತ್ತ ಮತ್ತು ಭುವನೇಶ್ವರಿ ದೇವಿಯವರ ಮಗನಾಗಿ ಜನ್ಮ ತಾಳಿದ ನರೇಂದ್ರನಾಥ ಸತ್ಕುಟುಂಬದಲ್ಲಿ ಜನಿಸಿದ ಕಾರಣ ಮತ್ತು ತಾಯಿಯ ಅಕ್ಕರೆಯ ಆರೈಕೆಯ ದೆಸೆಯಿಂದ ಧಾರ್ಮಿಕ ಭಾವನೆ, ದೈವಭಕ್ತಿ, ನ್ಯಾಯನಿಷ್ಠೆ, ಸಹೃದಯತೆ ಮೊದಲಾದ ಸದ್ಗುಣಗಳನ್ನು ಒಟ್ಟುಗೂಡಿಸಿಕೊಂಡು ಬೆಳೆದನು. ದೈವದತ್ತ ಸಂಸ್ಕಾರವೂ ಅವನಿಗಿತ್ತು.

ನರೇಂದ್ರ ಕಿರಿಯ ವಯಸ್ಸಿನಲ್ಲಿಯೇ ವ್ಯಕ್ತಪಡಿಸಿದ ಹಲವಾರು ಭಾವನೆಗಳು ಹಾಗೂ ಬಾಲ್ಯಾವಸ್ಥೆಗೆ ಮೀರಿದ ವಿವೇಕಪೂರ್ಣ ನಡೆವಳಿಕೆ ಲೀಲಾ ವಿಶೇಷಗಳೂ ಮಹಾ ಪುರುಷನೊಬ್ಬನ ಭವಿಷ್ಯತ್ ಚಿತ್ರವನ್ನು ಮೊದಲೇ ರೂಪಿಸಿದ್ದವು. ನರೇಂದ್ರ ಚಿಕ್ಕ ವಯಸ್ಸಿನಲ್ಲಿಯೇ ಕಷ್ಟನಷ್ಟಗಳಿಗೆ ಈಡಾಗದಿದ್ದರೂ, ಮನೆತನದವರು ನಡೆಸಿಕೊಂಡು ಬಂದಿದ್ದ ಪುರಾತನ ಧಾರ್ಮಿಕ ಸಂಪ್ರದಾಯ'ದಾನಾದಿಗಳ ಕಾರಣದಿಂದ ಮತ್ತು ಕಿರಿಯ ವಯಸ್ಸಿನಲ್ಲಿಯೇ ತಂದೆಯ ವಿಯೋಗದಿಂದ ಸಂಸಾರದ ಹೊಣೆಯನ್ನು ಹೊತ್ತು ಅಪಾರ ಕಷ್ಟನಷ್ಟಗಳನ್ನು ಅನುಭವಿಸ ಬೇಕಾಯಿತು. ಕಷ್ಟನಷ್ಟಗಳು ನರೇಂದ್ರನನ್ನು ಆದರ್ಶದ ಹಾದಿಯಲ್ಲಿ ದುಡಿಯಲು ಪ್ರೇರೇಪಿಸಿದವೇ ಹೊರತು ಹಿಂಜರಿಯುವ ಹೇಡಿಯನ್ನಾಗಿ ಮಾಡಲಿಲ್ಲ.

೧೮೮೯ನೇ ನವಂಬರ್ ೧೪ರಂದು ಮೋತೀಲಾಲ್ ಮತ್ತು ಸ್ವರೂಪ ರಾಣಿಯವರ ಪವಿತ್ರ ಗರ್ಭದಲ್ಲಿ ಜನಿಸಿ ಬಂದ ಜವಹರರು ಲಕ್ಷ್ಮೀಪುತ್ರರು. ಮೋತೀಲಾಲರು ಆಗರ್ಭ ಶ್ರೀಮಂತರಷ್ಟೇ ಅಲ್ಲ, ವೈಭವಯುಕ್ತ ಜೀವನವನ್ನು ನಡೆಸುತ್ತಿದ್ದ ವಿಖ್ಯಾತ ಭಾರತೀಯ ನ್ಯಾಯವಾದಿ. ಸಂಪೂರ್ಣ ಪಾಶ್ಚಾತ್ಯ ನಾಗರೀಕತೆ, ಅಭ್ಯಾಸ, ಸಂಸ್ಕೃತಿಗಳಿಗೆ ಮನಸೋತಿದ್ದ ಮೋತಿಲಾಲರು ಮಗನಿಗೆ ದೇಶೀಯ ಜೀವನದ ಸಂಪರ್ಕವನ್ನೇ ಪರಿಚಯಮಾಡಿ ಸಂಪೂರ್ಣ ಆಂಗ್ಲೇಯ ಶಿಕ್ಷಣ, ಸಂಸ್ಕೃತಿಗಳ ಪರಿಚಯ ಮಾಡಿಸಿದರು. ಶ್ರೀಮಂತ ಕುಟುಂಬದ ಏಕೈಕ ಪುತ್ರನಾಗಿದ್ದ ಜವಹರರು ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದು ಪಾಶ್ಚಾತ್ಯ ಸಂಸ್ಕೃತಿಗೆ ಪರವಶರಾಗಿದ್ದರು. ಕಿರಿಯ ವಯಸ್ಸಿನಲ್ಲಿ ಜವಹರರು ನಡೆಸಿದ ತುಂಟತನಗಳಿಗೂ ಲೆಕ್ಕವಿಲ್ಲ.

ಜವಹರರು ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಅಂದರೆ ೧೯೦೫ರಲ್ಲಿ ಲಂಡನ್ನಿಗೆ ತೆರಳಿ ಅಲ್ಲಿಯ ಹ್ಯಾರೋ ಮತ್ತು ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಏಳು ವರ್ಷಗಳ ನಂತರ ಭಾರತಕ್ಕೆ ಬ್ಯಾರಿಸ್ಟರಾಗಿ ಹಿಂತಿರುಗಿದರು. ಭಾರತದ ರಾಜಕೀಯ, ಸಾಮಾಜಿಕ ಜೀವನದ ಮೇಲೆ ವ್ಯಾಸಂಗ ಕಾಲದಲ್ಲಿಯೇ ಪ್ರಭಾವ ಬೀರಿತ್ತು. ಇದಕ್ಕೆ ಕಾರಣ ೧೯೦೮ರಲ್ಲಿ ಪಂಜಾಬಿನ ಸಿಂಹ ಲಾಲಾಲಜಪತರಾಯ ಮಾಡಿದ ಭಾಷಣ. ರಾಜಕೀಯ ರಂಗಕ್ಕೆ ತಂದೆಯೊಂದಿಗೆ ಅನಿಬೆಸೆಂಟರ ಹೋಂ ರೂಲ್ ಚಳವಳಿ ಮೂಲಕ ಭಾಗವಹಿಸಿದರು ಜವಹರ್.

ಜೀವನದ ನಾನಾ ಕ್ಷೇತ್ರಗಳಲ್ಲಿ ಅಸಹನೀಯ ವೇದನಗಳನ್ನು ಅನುಭವಿಸಿದ್ದ ನರೇಂದ್ರನಿಗೆ ವೇದಾಂತದ ಹುಚ್ಚು ಹಿಡಿಯಿತು. ದೇವರನ್ನು ಕಾಣಲು, ದೇವರನ್ನು ಕಂಡವರನ್ನೂ ಕಾಣಲು ತವಕಿಸಿ ಅಲೆಯುತ್ತಿದ್ದನು ನರೇಂದ್ರ. ಮನಸ್ಸಿಗೆ ಶಾಂತಿ ದೊರೆಯದೆ ಕಂಡ ಕಂಡವರನ್ನು ವೇದ, ವೇದಾಂತ, ದೇವರುಗಳ ಮೇಲೆ ಪ್ರಶ್ನೆಗಳ ಸುರಿಮಳೆ ಕರೆದು ಸದುತ್ತರ ದೊರೆಯದೆ ತೊಳಲಾಡುತ್ತಿದ್ದನು. ಕಾರ್ಗತ್ತಲ ಹಾದಿಯಲ್ಲಿ ನರೇಂದ್ರನಿಗೆ ತೇಜೋ ಪೂರ್ಣ ಜ್ಯೋತಿಯೊಂದರ ದರ್ಶನವಾಯಿತು. ಆ ಜ್ಯೋತಿಯ ದರ್ಶನಾನಂತರ ನರೇಂದ್ರ ಜೀವನದಲ್ಲಿ ವಿವೇಕ-ಆನಂದ ಎರಡನ್ನೂ ಪಡೆದು "ವಿವೇಕಾನಂದ"ನಾದನು, ನರೇಂದ್ರನನ್ನು ವ್ಯಕ್ತಿತ್ವದಿಂದ ದೇವತ್ವಕ್ಕೆ ಬದಲಿಸಿದ ಜ್ಯೋತಿ ಮತ್ತಾವುದೂ ಅಲ್ಲ-ಶ್ರೀ ರಾಮಕೃಷ್ಣ ಪರಮ ಹಂಸ ಮಹಾಯೋಗಿ.

ಆಧ್ಯಾತ್ಮಿಕ ಶಕ್ತಿಯ ಅಧಿದೇವತೆಯಂತಿದ್ದ ರಾಮಕೃಷ್ಣರ ದರ್ಶನ, ಸಹವಾಸ, ಅನುಗ್ರಹಗಳಿಂದ ವಿವೇಕಾನಂದರು ದಿವ್ಯ ಶಕ್ತಿಯನ್ನು ಪಡೆದ ಶಿಲಾಮೂರ್ತಿಯಂತೆ ಪ್ರಜ್ವಲಿಸಿದರು.

೧೯೧೬ನೆಯ ಇಸವಿ ಭಾರತೀಯ ಇತಿಹಾಸದಲ್ಲಿ ಚಿರಸ್ಮರಣೀಯವಾದ ವರ್ಷ. ತಮ್ಮ ಅಹಿಂಸಾತ್ಮಕ ಅಸದೃಶ ವಿವೇಕ ಪೂರ್ಣ ನಡವಳಿಕೆ, ಅನುಪಮ ಆದರ್ಶ ಗುಣಗಳಿಂದ ಭಾರತೀಯರ ಮನೋವಿಕಾಸಕ್ಕೆ ಕಾರಣರಾಗಿದ್ದ, ಭಾರತದ ಇತಿಹಾಸವನ್ನೇ ತಮ್ಮ ಅಹಿಂಸೆ, ಸತ್ಯ, ಧರ್ಮಗಳ ಮಹಾಸ್ತ್ರದಿಂದ ಬದಲಿಸಿದ ಪೂಜ್ಯ ಬಾಪೂಜಿಯವರು ಮೋತೀಲಾಲ ಮತ್ತು ಜವಹರರನ್ನು ತಮ್ಮೆಡೆಗೆ ಸೆಳೆದರು. ಬಾಪೂಜಿ ಜವಹರರನ್ನು ಬಹುದಿನಗಳಿಂದ ದೂರವಿದ್ದ ಮಗನನ್ನೂ ಮಾತೆ ಮಮತೆಯಿಂದ ಸ್ವಾಗತಿಸುವಂತೆ ತಮ್ಮ ಬಳಿಗೆ ಕರೆದು ಕೊಂಡರು. ಸಮಗ್ರ ಭಾರತದ ಸಮಕಾಲೀನ ಚಿತ್ರವನ್ನೂ ಜವಾಹರರಿಗೆ ತೋರಿಸಿದರು. ಅಂದೇ ಜವಹರರ ರಕ್ತದ ಕಣ ಕಣವೂ "ಭಾರತದ ಸೇವೆಗಾಗಿ ಬದುಕುತ್ತೇನೆ" ಎಂದು ಸಾರಿತು.

ಗಾಂಧೀಜಿಯವರ ಪ್ರಭಾವ ಪೂರ್ಣ ಸಹವಾಸದಲ್ಲಿ ಜವಹರರ ಆತ್ಮ ಅವರ ನಾಯಕತ್ವಕ್ಕೆ ತಲೆಬಾಗಿದುದು ಮಾತ್ರವಲ್ಲದೆ ಅವರನ್ನೂ ತಮ್ಮ ರಾಜಕೀಯ ರಂಗದ ಗುರು ಎಂದು ತ್ರಿಕರಣ ಪೂರ್ವಕವಾಗಿ ನಂಬಿಸಿತು. ಗಾಂಧೀಜಿಯವರು ಎಲ್ಲ ಸಾಧನೆಗಳ ಪರಿಚಯ ಮಾಡಿ ಕೊಟ್ಟರು.

ಶ್ರೀ ರಾಮಕೃಷ್ಣರದು ಆಧ್ಯಾತ್ಮಿಕ ರಂಗ. ಶಿಷ್ಯ ನರೇಂದ್ರನಿಗೆ ರಾಮಕೃಷ್ಣರು ವೇದಾಂತ ತತ್ವದ ಪೂರ್ಣ ಪರಿಚಯ ಮಾಡಿಕೊಟ್ಟು ಧರ್ಮ ಜಾಗ್ರತಿಗಾಗಿ ಕರೆ ಕೊಟ್ಟು "ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ವಿಶ್ವಕ್ಕೆ ಪರಿಚಯ ಮಾಡಿಸಿ, ಅದರ ಕೀರ್ತಿ ಪರಂಪರೆಯನ್ನು ಪ್ರಚುರಪಡಿಸು, ವಿಶ್ವ ಧರ್ಮಗಳಿಗೆ ಆಶ್ರಯವೀಯುವ ಕೇಂದ್ರ ಗೃಹವಾಗಲಿ ಭಾರತದ ವೇದಾಂತ ಶಕ್ತಿ. ವಿಶ್ವಕ್ಕೆ ವೇದಾಂತ ದರ್ಶನವೇ ನಿನ್ನ ಸೇವೆಯಾಗಲಿ" ಎಂದು ಹಾರೈಸಿದರು. ಗುರುವಿನ ಅಪ್ಪಣೆಯನ್ನು ಕಾರ್ಯರೂಪಕ್ಕೆ ತರಲು ಶಿಷ್ಯ ಕಂಕಣಬದ್ಧನಾದ.

ಗಾಂಧೀಜಿಯವರದು ರಾಜಕೀಯ ರಂಗ. ತಮ್ಮ ಆಪ್ತ ಶಿಷ್ಯ ಜವಹರಲಾಲರಿಗೆ ಸಮಗ್ರ ಭಾರತದ ಜರ್ಝರಿತ ದುಃಖಪೂರಿತ ಚಿತ್ರವನ್ನು ತೋರಿಸಿ "ಭಾರತ ಆಳರಸರ ಕಪಿಮುಷ್ಟಿಯಿಂದ ಬಿಡುಗಡೆಯಾಗದ ಹೊರತು, ಸಮೃದ್ಧವಾಗಲಾರದು. ಭಾರತದ ಪುನರ್ನಿರ್ಮಾಣ, ವೈಭವ, ಶಾಂತಿ, ಸಮೃದ್ಧಿಗಳಿಗೆ ಸ್ವಾತಂತ್ರ್ಯವೇ ಮೊದಲ ಹೆಜ್ಜೆ. ಅದಕ್ಕಾಗಿ ದುಡಿ, ಜನ ಜಾಗೃತಿಗಾಗಿ ದುಡಿ" ಎಂದು ಸಂದೇಶವಿತ್ತರು, ಗುರು ಶಿಷ್ಯರಿಬ್ಬರು ತಮ್ಮ ಅಸದೃಶ ನಿಷ್ಠಾಪೂರ್ಣ ಸೇವೆಯಿಂದ ಭಾರತೀಯರ ಗಮನವನ್ನು ತಮ್ಮೆಡೆಗೆ ಸೆಳೆದು ಜನತೆಯ ಮೆಚ್ಚಿನ ನಾಯಕರಾದರು.

(ಹನ್ನೆರಡನೆಯ ಪುಟ ನೋಡಿರಿ)

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಲಪ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ವರ್ಗ-ಊಳಿಗ

ಇತ್ಯಾದಿ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿ, ಫಾರ್ಮುಗಳು

ದೊರೆಯುತ್ತವೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

ಆರೋಗ್ಯ ಸಾಧನೆ

ಕುಷ್ಠರೋಗ ಅನುವಂಶಿಕವಲ್ಲ

ಭಾರತದಿಂದ ವೆನಿಜುವೇಲಾಕ್ಕೆ ಬಹಳ ದೂರವಿದ್ದೆ, ನಿಜ. ಆದರೆ ಈಗ ಕಾರಿಗಿರಿಯಲ್ಲಿ ಕೈಗೊಳ್ಳಲಾಗಿರುವ ಒಂದು ನೂತನ ಕುಷ್ಠ ಸಂಶೋಧನೆ ಕಾರ್ಯಕ್ರಮವು, ಭಿನ್ನ ಗೋಳಾರ್ಧಗಳಲ್ಲಿರುವ ಈ ಎರಡು ದೇಶಗಳನ್ನು ಸಮೀಪಕ್ಕೆ ತರುವ ಕೊಂಡಿಯಂತಾಗಿದೆ.

ವೆಲ್ಲೂರಿನಿಂದ ಹತ್ತು ಮೈಲುಗಳ ದೂರದಲ್ಲಿರುವ ಕಾರಿಗಿರಿ ಹತ್ತು ವರ್ಷಗಳ ಹಿಂದೆ, ಭಾರತದ ಅತ್ಯಂತ ಬಡ ಗ್ರಾಮಗಳಲ್ಲೊಂದಾಗಿತ್ತು. ಅದು ಉಗ್ರ ಸೆಖೆ ಮತ್ತು ಧೂಳು ತುಂಬಿದ್ದ, ದುರ್ಗಮವಾದ ಅಪರಿಚಿತವಾದ ಬಂಜರು ಸ್ಥಳವಾಗಿತ್ತು.

ಈಗಲೂ ಅದು ಬಂಜರು ಸ್ಥಳ. ಹವೆಯೂ ಮುಂಚಿನಂತೆ ತ್ರಾಸಕರವಾಗಿಯೇ ಇದೆ. ಆದರೆ ಒಂದು ದೊಡ್ಡ ವ್ಯತ್ಯಾಸ ಉಂಟಾಗಿದೆ. ಇಂದು ಅದು ಕುಷ್ಠ ಸಂಶೋಧನೆಯ ಕೇಂದ್ರವಾಗಿರುತ್ತದೆ. ನಾನಾ ದೇಶಗಳ ವೈದ್ಯ ವಿಜ್ಞಾನಿಗಳು ಈ ಘೋರ ರೋಗದ ಬಗೆಗೆ ತಿಳುವಳಿಕೆ ಪಡೆಯಲು ಈ ಕೇಂದ್ರಕ್ಕೆ ಬರುತ್ತಾರೆ.

ಶೈಫಲಿನ್ ಲೆಪ್ರಸಿ ರೀಸರ್ಚ್ ಸ್ಯಾನಿಟೋರಿಯಂ (ಎಸ್.ಎಲ್.ಆರ್.ಎಸ್) ಸಂಸ್ಥೆಯು, ಕಾರಿಗಿರಿಯಲ್ಲಿ ೨೫೦ ಎಕರೆಯ ಸ್ಥಳದ ಆವರಣದಲ್ಲಿದೆ. ಕುಷ್ಠರೋಗದ ಕಾರಣವನ್ನು ಪರಿಶೋಧಿಸುವುದು ಮತ್ತು ಚಿಕಿತ್ಸೆಯನ್ನು ಉತ್ತಮಗೊಳಿಸುವುದು; ಸುವ್ಯವಸ್ಥಿತ ಶಿಕ್ಷಣ ಕಾರ್ಯಕ್ರಮವನ್ನು ಸಿದ್ಧಗೊಳಿಸುವುದು ಮತ್ತು ಕುಷ್ಠ ಚಿಕಿತ್ಸೆಯ ಕಾರ್ಯವನ್ನು ಸಾಮಾನ್ಯ ವೈದ್ಯ ಶಿಕ್ಷಣದಲ್ಲಿ ಅಳವಡಿಸುವುದು— ಈ ಮೂರು ಗುರಿಗಳ ಸಾಧನೆಗಾಗಿ ಹತ್ತು ವರ್ಷಗಳ ಮುಂಚೆ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಕುಷ್ಠರೋಗವು ಪ್ರಪಂಚವ್ಯಾಪಿ. ಪ್ರಪಂಚದಲ್ಲಿ ಒಟ್ಟು ಒಂದು ಕೋಟಿ ಐವತ್ತು ಲಕ್ಷಕ್ಕಿಂತ ಹೆಚ್ಚು ಜನರು ಈ ರೋಗದಿಂದ ನರಳುತ್ತಿದ್ದಾರೆ; ಭಾರತವೊಂದರಲ್ಲೇ ೨೦ ಲಕ್ಷಕ್ಕಿಂತ ಹೆಚ್ಚು ರೋಗಿಗಳಿದ್ದಾರೆ. ಇತ್ತೀಚಿನ ವರೆಗೆ ಕುಷ್ಠರೋಗದ ಬಗೆಗೆ ವಿಶೇಷ ತಿಳುವಳಿಕೆ ಇರಲಿಲ್ಲ. ಆದುದರಿಂದ ಇದರ ಬಗೆಗೆ ಭಯ! ಅಧಿಕವಾಗಿತ್ತು.

೧೯೫೦ನೆಯ ದಶಕದ ಆದಿಯಲ್ಲಿ ಲಂಡನ್‌ನ ಮಿಷನ್ ಟು ಲೆಪರ್ಸಿನವರು ಮತ್ತು ನ್ಯೂಯಾರ್ಕಿನ ಅಮೆರಿಕನ್ ಲೆಪ್ರಸಿ ಮಿಷನ್ಸ್‌ನವರು, ಕುಷ್ಠರೋಗವು ಬಹು ಕಾಲದಿಂದ ನೆಲಸಿರುವ ದಕ್ಷಿಣ ಭಾಗದಲ್ಲಿ ಸಂಶೋಧನೆ ನಡೆಸಲು ಮತ್ತು ವೈದ್ಯಕೀಯ ಕಾರ್ಯಕರ್ತರನ್ನು ಸಿದ್ಧಗೊಳಿಸಲು ಒಂದು ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಿದರು. ಕುಷ್ಠ ಚಿಕಿತ್ಸಾ ಕಾರ್ಯವು ಸಮಗ್ರ ವೈದ್ಯಕೀಯ ಕಾರ್ಯಕ್ರಮದ ಅಂಗವಾಗಿಲ್ಲದಿದ್ದರೆ, ಪರಿಣಾಮಕಾರಿಯಾಗದು ಎಂಬುದನ್ನು ಸ್ಪಷ್ಟವಾಗಿ ಮನಗಾಣಲಾಗಿತ್ತು.

ವೆಲ್ಲೂರಿನಲ್ಲಿ ದೇಶದ ಸುಪ್ರಸಿದ್ಧ ವೈದ್ಯ ಸಂಸ್ಥೆಗಳಲ್ಲೊಂದಾಗಿರುವ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್ ಮತ್ತು ಹಾಸ್ಪಿಟಲ್ ಇರುವುದರಿಂದಾಗಿ, ಅದಕ್ಕೆ ಸಮೀಪದ ಸ್ಥಳವಾಗಿರುವ ಕಾರಿಗಿರಿಯನ್ನು ಈ ಕೇಂದ್ರದ ಸ್ಥಾಪನೆಗೆ ಆಯ್ಕೆ ಮಾಡಲಾಯಿತು.

ಅಮೆರಿಕದ ಲೆಪ್ರಸಿ ಮಿಷನ್ಸ್‌ನವರು ಕಟ್ಟಡಗಳ ನಿರ್ಮಾಣಕ್ಕೆ ಮತ್ತು ಉಪಕರಣಗಳ ಖರೀದಿಗೆ ೫,೫೦,೦೦೦ ಡಾಲರುಗಳನ್ನು ದಾನ ಮಾಡಿದರು. ೧೯೫೫ರಲ್ಲಿ ಶೈಫಲಿನ್ ಲೆಪ್ರಸಿ ರೀಸರ್ಚ್ ಸ್ಯಾನಿಟೋರಿಯಂ ಸ್ಥಾಪಿತವಾಯಿತು. ರೋಗಿಗೆ ಒಂದೇ ಸ್ಥಳದಲ್ಲಿ ವಿವಿಧ ರೀತಿಯ ವೈದ್ಯಕೀಯ ಪರಿಶೀಲನೆ ಹಾಗೂ ಆರೈಕೆ ದೊರೆಯುವುದು. ಇಲ್ಲಿಯ ಚಿಕಿತ್ಸೆಯ ವೈಶಿಷ್ಟ್ಯ. ನಿಪುಣರೊಬ್ಬರು ರೋಗಕ್ಕೆ ಚಿಕಿತ್ಸೆ ಮಾಡುವರು.

ನೇತ್ರ ವೈದ್ಯರೊಬ್ಬರು ರೋಗಿಯ ಕಣ್ಣಿನ ತೊಂದರೆಗಳಿಗೆ ಆರೈಕೆ ಮಾಡುವರು. ಪ್ಲಾಸ್ಟಿಕ್ ಸರ್ಜನರು ಆತನ ಮುಖದ ವಿರೂಪಗಳನ್ನು ಸರಿಪಡಿಸುವರು. ಚರ್ಮರೋಗ ತಜ್ಞರೊಬ್ಬರು ರೋಗಿಯ ಚರ್ಮಕ್ಕೆ ಚಿಕಿತ್ಸೆ ನಡೆಸುವರು.

ಕುಷ್ಠ ಸಂಶೋಧನೆ ಮತ್ತು ಸಾಮಾನ್ಯ ವೈದ್ಯ ಶುಶ್ರೂಷೆಯ ಸಂಯೋಜನೆಯನ್ನು ಕಾರಿಗಿರಿಯಲ್ಲಿ ಸಾಧಿಸಲಾಗಿದೆಯಷ್ಟೇ ಅಲ್ಲದೆ, ಅಲ್ಲಿ ಒಂದರ ಹೊಸ ರೀತಿಯ, ಗೃಹ ಚಿಕಿತ್ಸಾ ಕಾರ್ಯಕ್ರಮವನ್ನೂ ಪ್ರಾರಂಭಿಸಲಾಗಿದೆ. ಚಿಕಿತ್ಸೆ— ಹತೋಟಿ — ಪುನರ್ನಿವೇಶನಗಳಿರುವ ಸಂಯುಕ್ತ ಕಾರ್ಯಕ್ರಮವೊಂದರ ಮೇರೆಗೆ ವೈದ್ಯ ಕಾರ್ಯಕರ್ತರ ತಂಡಗಳನ್ನು ಗ್ರಾಮಗಳಲ್ಲಿ ಪರಿಶೀಲನೆಗಾಗಿ ಕಳುಹಿಸಲಾಗುತ್ತಿದೆ. ೪೦ ಚದರ ಮೈಲುಗಳ ವಿಸ್ತೀರ್ಣವಿರುವ ೩,೫೦,೦೦೦ ಜನಸಂಖ್ಯೆ ಇರುವ ಗುಡಿಯಾಟಂ ತಾಲೂಕಿನಲ್ಲಿ ಈಗ ಇಂಥ ಪರಿಶೀಲನೆ ನಡೆಸಲಾಗುತ್ತಿದೆ. ಸ್ವೀಡನ್ನಿನ ರೆಡ್‌ಕ್ರಾಸ್ ಈ ಯೋಜನೆಯಲ್ಲಿ ಸಹಕರಿಸುತ್ತಿದೆ.

೧೯೫೭ರಲ್ಲಿ ಒಂದು ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಭಾರತದ ವಿವಿಧ ರಾಜ್ಯಗಳಿಂದ, ಪ್ರಪಂಚ ಆರೋಗ್ಯ ಸಂಸ್ಥೆಯಿಂದ, ಅಮೆರಿಕನ್ ಲೆಪ್ರಸಿ ಮಿಷನ್ಸ್‌ಗಳಿಂದ, ದಿ ಮಿಷನ್ ಟು ಲೆಪರ್ಸಿನಿಂದ ಮತ್ತು ಸುಮಾರು ೩೦ ದೇಶಗಳಿಂದ ಜನರು ತರಬೇತಿ ಪಡೆಯಲು ಬಂದಿದ್ದಾರೆ. ಈ ತರಬೇತಿಯು ಭಾರತದಲ್ಲಿ ಮತ್ತು ಪ್ರಪಂಚದ ಅನೇಕ ಭಾಗಗಳಲ್ಲಿ ಕುಷ್ಠಚಿಕಿತ್ಸೆಗೆ ಸಂಬಂಧಿಸಿದ ವಿಚಾರ ಸರಣಿಯಲ್ಲಿ ಒಂದು ಕ್ರಾಂತಿಕಾರೀ ಪರಿವರ್ತನೆಯನ್ನು ಉಂಟುಮಾಡಿದೆ.

ದಕ್ಷಿಣ ಅಮೆರಿಕದ ವೆನಿಜುವೇಲಾದಲ್ಲಿ ಪಾನ-ಅಮೆರಿಕನ್ ಆರೋಗ್ಯ ಸಂಘದವರು ಕುಷ್ಠ ರೋಗಿಗಳಿಗಾಗಿ ಮತ್ತು ಈ ರೋಗದ ಚಿಕಿತ್ಸೆಯಲ್ಲಿ ನಿರತರಾಗಿರುವ ಕಾರ್ಯಕರ್ತರಿಗಾಗಿ ಒಂದು ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಕಾರಿಗಿರಿಯಲ್ಲಿ ತರಬೇತಿ ಪಡೆದ ವ್ಯಕ್ತಿಯೊಬ್ಬರು ಈ ಕಾರ್ಯಕ್ರಮವನ್ನು ಸಂಘಟಿಸಿದ್ದಾರೆ.

ವಿಶಾಲ ಭೂಖಂಡವಾಗಿರುವ ಆಫ್ರಿಕದ ಇಥಿಯೋಪಿಯದಲ್ಲಿ ಕುಷ್ಠ ಚಿಕಿತ್ಸೆಯನ್ನು ಸಂಘಟಿಸಲು ಅಖಿಲ ಆಫ್ರಿಕ ತರಬೇತಿ ಕೇಂದ್ರವೊಂದನ್ನು ನಿರ್ಮಿಸಲಾಗುತ್ತಿದೆ.

ಈ ಸಂಸ್ಥೆಗಳನ್ನು ಎಸ್.ಎಲ್.ಆರ್.ಎಸ್.ನ ಮಾದರಿಯಲ್ಲಿ, ನಿರ್ಮಿಸಲಾಗಿದೆ. ಇದು ಕಾರಿಗಿರಿಯ ಸ್ಯಾನಿಟೋರಿಯಂಗೆ ಒಂದು ಹೆಮ್ಮೆಯ ವಿಷಯ.

ಕಾರಿಗಿರಿಯಲ್ಲಿ ನಡೆಸಲಾಗಿರುವ ಅನೇಕ ಸಂಶೋಧಕ ಅಧ್ಯಯನಗಳಲ್ಲಿ ಒಂದು ಸಂಶೋಧನೆಯು ಎಲ್ಲೆಡೆಗಳ ಕುಷ್ಠ ರೋಗಿಗಳಿಗೆ ಬಹಳ ಮಹತ್ವವುಳ್ಳದ್ದಾಗಿದೆ. ನಡೆಯುವಾಗ ಉಂಟಾಗುವ ಒತ್ತಡದ ಪ್ರಸಾರವು ಏಕರೀತಿಯಾಗಿಲ್ಲದಿರುವದರಿಂದ, ನಿರ್ವೇದಿಯಾಗಿರುವ ಪಾದದಲ್ಲಿ ಹುಣ್ಣುಗಳು ಉಂಟಾಗುತ್ತವೆ ಎಂಬುದೇ ಈ ಸಂಶೋಧನೆ. ಇದನ್ನು 'ತಡೆಯಲು ಮೈಕ್ರೋಸೆಲ್ಲುಲರ್ ರಬ್ಬರ್ ಎಂಬ ಒಂದು ವಿಶೇಷ ರೀತಿಯ ಸ್ಪಂಜ್ ರಬ್ಬರಿನಿಂದ 'ಪಾದರಕ್ಷೆಯನ್ನು ತಯಾರಿಸಲಾಗಿದೆ. (ಈ ಸ್ಪಂಜ್ ರಬ್ಬರನ್ನು ಪಾದದ ವ್ರಣಗಳ ನಿರೋಧ ಮತ್ತು ಚಿಕಿತ್ಸೆಯ ಕಾರ್ಯಕ್ಕೆ ಉಪಯೋಗಿಸಲಾಗುತ್ತಿದೆ.) ಈ ಸರಳವೂ ಪರಿಣಾಮಕಾರಿಯೂ ಆಗಿರುವ ಸಾಧನವು ಕುಷ್ಠ ರೋಗಿಯ ನಿರ್ವೇದಿ ಪಾದದಲ್ಲಿ ವ್ರಣಗಳಾಗುವುದನ್ನು ಗಮನಾರ್ಹವಾಗಿ ತಡೆಗಟ್ಟಿದೆ.

ಮೈಕ್ರೋಸೆಲ್ಲುಲರ್ ರಬ್ಬರಿಗೆ ಇನ್ನೊಂದು ಉಪಯೋಗವೂ ಇದೆ. ಹಾರೆ, ನೇಗಿಲು, ಗುದ್ದಲಿ, ಬಡಗಿ ಕೆಲಸದ ಮತ್ತು ಇತರ ಉಪಕರಣಗಳ ಹಿಡಿಗಳಿಗೆ ಆವರಣವಾಗಿ ಉಪಯೋಗಿಸಲು ಇದು ಆದರ್ಶ ವಸ್ತು. ಇದರಿಂದಾಗಿ ರೋಗಿಗಳಿಗೆ ಹೆಚ್ಚು ಗಂಟೆಗಳ ವರೆಗೆ ಕೆಲಸ ಮಾಡಿದರೂ, ಕೈಯ ಚರ್ಮ ದಪ್ಪಕಟ್ಟುವುದಿಲ್ಲ ಅಥವಾ ಅಂಗೈಯಲ್ಲಿ ಗುಳ್ಳೆಗಳು ಉಂಟಾಗುವುದಿಲ್ಲ.

ಕುಷ್ಠ ರೋಗಿಯ ಪುನರ್ನಿವೇಶನವು ಎಸ್.ಎಲ್.ಆರ್.ಎಸ್. ಕಾರ್ಯಕ್ರಮದ ಇನ್ನೊಂದು ಮುಖ್ಯ ಗುರಿ. ಕುಷ್ಠ ರೋಗವು ಮುಖ್ಯವಾಗಿ ಒಂದು ಮಾನಸಿಕ ಸಮಸ್ಯೆ ಎಂಬ ವಿಷಯಕ್ಕೆ ಪ್ರಾಧಾನ್ಯ ಕೊಡಲಾಗಿದೆ. ಅನೇಕ ಸಂದರ್ಭಗಳಲ್ಲಿ ರೋಗಿಗೆ ಆತನ ಹಿಂದಿನ ಉದ್ಯೋಗಕ್ಕೆ ಮರಳಲು ಪ್ರೋತ್ಸಾಹ ಕೊಡಲಾಗು ದು. ಈ ಸಂಸ್ಥೆಯು ಚಾಪೆ ಹೆಣೆಯು ದು, ಪಾದರಕ್ಷೆಗಳ ತಯಾರಿಕೆ ಮುಂ ದ ಗುಡಿ ಕೈಗಾರಿಕೆಗಳಲ್ಲಿ ಕೆಲಸಪ್ರದ ಕೆಲವು ಅಂಗವಿಕಲರಿಗೆ ಸಹಾಯ ಮಾಡುತ್ತಿದೆ.

ಅಮೆರಿಕನ್ ಲೆಪ್ರಸಿ ಮಿಷನ್ಸ್‌ನ ಸಂಸ್ಥೆಯ ಸಂಶೋಧನ ಕಾರ್ಯ ಮತ್ತು ೧೫೦ ಬೆಡ್‌ಗಳ ಖರ್ಚಿನ ನಿ ಹಣದಲ್ಲಿ ಮತ್ತು ಸುಮಾರು ೩,೬೦೦ ಶಿಕ್ಷಾರ್ಥಿಗಳ ಚಿಕಿತ್ಸೆಗೆ ಬೇಕಾದ ವೆ ದ ನಿರ್ವಹಣದಲ್ಲಿ ಮತ್ತು ಸುಮಾರು ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದು ಸಂಸ್ಥೆಯ ಒಟ್ಟು ನಿರ್ವಹಣ ವೆಚ್ಚದಲ್ಲಿ ಸುಮಾರು ಅರ್ಧಾಂಶ. ಎ ಎಂ, ಮಿಶನ್ ಟು ಲೆಪರ್ಸ ಮತ್ತು ರಾ ಸರಕಾರದವರು ಜೊತೆಗೂಡಿ ಈ ಸ್ಯಾ ಟೋರಿಯಂನ್ನು ನಡೆಸುತ್ತಿದ್ದಾರೆ.

ಸ್ಯಾನಿಟೋರಿಯಂನ ಸೂಪರಿಂಟೆಂ ಟ್ ಡಾ| ಸಿ. ಕೆ. ಜಾಬ್ ಅವರು ಕು ರೋಗವನ್ನು ಅಂಗವಿಕಲತೆಗೆ ಅವಕಾ ವಿಲ್ಲದಂತೆ ಗುಣಪಡಿಸಬಹುದು ಎಂ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿ ದ್ದಾರೆ. ಇದು ಅನುವಂಶಿಕವಾಗಿ ಬರು ರೋಗವಲ್ಲ. ರೋಗಾಣುಗಳಿಂದ ಬರು ಸಂಪರ್ಕಜನ್ಯ ರೋಗ ಎಂದವರು ಹೇ ತ್ತಾರೆ. ಸುಮಾರು ಶೇಕಡಾ ಲಹಂಪ ರೋಗಿಗಳಲ್ಲಿ, ರೋಗವು ಅಂಟುರೋ ವಲ್ಲ. ಪ್ರಾರಂಭದಲ್ಲೇ ಪತ್ತೆಹಚ್ಚಿದ ಯೋಗ್ಯ ಚಿಕಿತ್ಸೆಯಿಂದ ಸಂಪೂರ್ಣ ಗು ಪಡೆಯಲು ಸಾಧ್ಯವಿದೆ.

ಡಾ| ಜಾಬ್ ಅವರು ೧೯೫೮ರಲ್ಲಿ ರಾ ಕ್‌ಫೆಲರ್ ಗ್ರ್ಯಾಂಟಿನ ಮೇರೆಗೆ ಅಮೆರಿ ಕ್ಕೆ ಹೋದರು. ಅಲ್ಲಿ ಅವರು ಆಸ್ಪತ್ರೆಗ ನ್ನು ಮತ್ತು ಚಿಕಿತ್ಸಾ ಸಂಸ್ಥೆಗಳನ್ನು ಸ ದರ್ಶಿಸಿದರು, ಕಾರಿಗಿರಿಯಲ್ಲಿ ನಡಸಲಾ ಗುತ್ತಿರುವ ಕುಷ್ಠ ಸಂಶೋಧನೆಯ ಬ ಗೆ ಉಪನ್ಯಾಸಗಳನ್ನು ಮಾಡಿದರು, ಕ ದ ವರ್ಷ ವಾಷಿಂಗ್ಟನ್ನಿನಲ್ಲಿ ಲಿಯೊನಾ ರ್ಡ್ ವುಡ್ ಮೆಮೋರಿಯಲ್‌ನವರು ಕು ಷ್ಠ ರೋಗದ ಬಗೆಗೆ ಏರ್ಪಡಿಸಿದ ಸಂ ಶೋಧನ ಗೋಷ್ಠಿಯಲ್ಲಿ ಒಂದು ಪ್ರಬಂ ಧವನ್ನು ಓದಿದರು.

ಲಿಯೋನಾರ್ಡ್ ವುಡ್ ಮೆಮೋರಿ ಯಲ್‌ನವರು ಮತ್ತು ವಾಷಿಂಗ್ಟನ್ನಿನಲ್ಲಿ ರುವ ಅಮೆರಿಕದ ಸಶಸ್ತ್ರ ಸೈನ್ಯಗಳ ಪೆ ಥಲಾಜ ಇನ್ಸ್ಟಿಟ್ಯೂಟನವರು ಕುಷ್ಠ ರೋ ಗಕ್ಕೆ ಸಂಬಂಧಿಸಿದಂತೆ ವಿಸ್ತೃತ ಸಂಶೋ ಧನೆಗೆ ನೆರವು ನೀಡುತಿದ್ದಾರೆ. "ಇದು ಮಾನವ ಕುಲಕ್ಕೆ ಒಂದು ದೊಡ್ಡ ಸೇವೆ, ನಮಗೆ ಒಂದು ಸ್ಫೂರ್ತಿಯ ಸೆಲೆ" ಎಂದ ವರು ಹೇಳಿದರು.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ರಖಂ ಪ್ರತಿಗಳಿಗೆ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಹಿಂದೂ ಸಂಘಟನೆಗೆ ನಾಂದಿ

ವಿಶ್ವ ಹಿಂದೂಗಳ ಸಂಗಮ-ವಿಶ್ವ ಹಿಂದೂ ಪರಿಷತ್ತು

(ಬರೆದು ಬಂದುದು)

ಕನ್ಯಾಕುಮಾರಿಯ ಕಡೆಯಂಚಿನಿಂದ ...ದು ಹಿಮಾಲಯದ ಹೊರ ಅಂಚಿನಲ್ಲಿ ...ವ ಹಿಂದೂಗಳು ಮಾತ್ರವಲ್ಲ, ಶಾರ...ಂತರಗಳಿಂದ ಅನ್ಯಾನ್ಯ ದೇಶಗಳಿಗೆ ವ...ಸಿ ಹೋಗಿ ಜೀವನ ನಡೆಸುತ್ತಿರುವ ಹಿಂದೂಗಳು ಮಾಘ ಅಮಾವಾಸ್ಯೆಯನ್ನೇ ಎ...ದು ನೋಡುತ್ತಿದ್ದರು. ಈ ಸಲದ ಮಾ... ಅಮಾವಾಸ್ಯೆಗೆ ವೈಶಿಷ್ಟ್ಯ ಇರಲು ಕಾರಣವೆಂದರೆ ಈ ಸಲದ ಕುಂಭ ಮೇಳವು ಹ...ರಡು ವರ್ಷಗಳಿಗೊಮ್ಮೆ ಪ್ರಯಾಗ ...ವಿತ್ರ ಕ್ಷೇತ್ರದಲ್ಲಿ ನಡೆಯುವ ಮಹಾ...ಕುಂಭ ಅಥವಾ ಪೂರ್ಣಕುಂಭ ಮೇಳ...ವಾಗಿತ್ತು. ಜ್ಯೋತಿಷ್ಯಶಾಸ್ತ್ರಜ್ಞರ ಭಿನ್ನ ...ನ್ನ ಅಭಿಪ್ರಾಯಗಳು ಪತ್ರಿಕೆಗಳಿಗೆ ...ಬಂಧಿತವಾಗಿದ್ದರೂ ಕ್ರಿ.ಶ. ೧೯೬೬ ...ಸಾಲಿನ ಕುಂಭ ಮೇಳದಲ್ಲಿ ಭಾಗವಹಿ...ಲು ಪ್ರಪಂಚದ ಮೂಲೆ ಮೂಲೆಗಳಿಂದ ...ಜನತಾ ಪ್ರವಾಹ ಹರಿದು ಬಂದಿತ್ತು. ...ಷ್ಟು ವರ್ಷದ ದಾಖಲೆಗಳನ್ನು ಮಾ...ಖಾಲು ಮಾಡಲಾಯಿತು. ಹಿಂದೆಂದೂ ...ಡೆಯದಿದ್ದ ಚಮತ್ಕಾರ ಈ ವರ್ಷ ನ...ಡೆಯಿತು. ಅದುವೇ ಅತ್ಯಧಿಕ ಜನಪ್ರವಾಹ, ಅತೀ ಕಮ್ಮಿ ನಷ್ಟ!

ಪವಿತ್ರ ಪ್ರಯಾಗ ಕ್ಷೇತ್ರದಲ್ಲಿ ಈ ನ... ನದಿಗಳ ತ್ರಿವೇಣಿ ಸಂಗಮ ಮಾತ್ರ ...ಡೆದುದಲ್ಲ, ಮತೀಯ ಸಂಗಮ ಕೂಡಾ ...ಡೆದುದೇ ವೈಶಿಷ್ಟ್ಯಪೂರ್ಣ ಮಹತ್ವದ ...ಸಂಗತಿ ಆಗಿತ್ತು (ನಡೆಯುವಿದೆ). ಹಲವಾರು ನೂರು ...ವರ್ಷಗಳ ಹಿಂದೆ ಹರ್ಷವ...ರ್ಧನ ಮಹಾರಾಜನು ಇಂತಹ ಮತೀಯ ಸಂಗಮಕ್ಕೆ ಏರ್ಪಾಡು ಮಾಡುತ್ತಿ...ದ್ದನಂತೆ. ಇದು ಸಾಧಾರಣ ವಿಷಯ ಇ...ರುವುದಿಲ್ಲ. ಒಂದು ಮತದವರನ್ನು ಕಂ...ಡೊಡನೆ ಇನ್ನೊಂದು ಮತದವರಿಗೆ ಅದೇ ...ಒಂದು ನಮೂನೆ ಆಗುತ್ತದೆ. ದ್ವೈತಿ, ಅದ್ವೈತಿ, ವಿಶಿಷ್ಟಾದ್ವೈತಿ, ಜೈನ, ಬೌದ್ಧ, ಸಿಖ್ಖ ಹಾಗೂ ಇನ್ನಾವುದಾ...ದರೂ ಒಂದು ಪಂಥದ ಆಚಾರ್ಯ ಸ್ವಾಮಿ...ಜಿಗಳು ಒಂದೆಡೆ ಒಂದೈದು ನಿಮಿಷ ...ಗುವದು ಸುಲಭ ಸಾಧ್ಯವೇನು? ...ರತದಲ್ಲಿರುವವರು ಕೂಡಿದರೂ ಅನ್ಯ ...ದೇಶಗಳಲ್ಲಿರುವವರು ಬರಬೇಕಲ್ಲ! ಸಂ...ಘಟಿಸಬಹುದು, ಬರಬಹುದು, ಆದರೆ ...ಕ್ಕಿಗೆ ಗಂಟೆ ಕಟ್ಟುವವರ್‍ಯಾರು? ಆ ಕಾ...ರ್ಯವೇ ನಡೆದದ್ದು ಈ ವರ್ಷ, ಪ್ರಯಾಗ ...ಕ್ಷೇತ್ರದಲ್ಲಿ. ಅವರೆಲ್ಲರೂ ವಿಶ್ವ ಹಿಂದೂ ಪರಿಷತ್ತಿನ ವೇದಿಕೆಯ ಮೇಲೆ ಒಂದಾ...ದರು.

ಪ್ರಯಾಗ ಪವಿತ್ರ ಕ್ಷೇತ್ರದಲ್ಲಿ ನಡೆದ ...ವಿಶ್ವ ಹಿಂದೂ ಪರಿಷತ್ತಿಗೆ ದೇಶದ ದಶ...ದಿಕ್ಕುಗಳಿಂದ ಸುಮಾರು ೨೫,೦೦೦ ಪ್ರ...ತಿನಿಧಿಗಳು ಆಗಮಿಸಿದ್ದರು. ಅನ್ಯ ರಾ...ಷ್ಟ್ರಗಳಿಂದ ಸಾಧಾರಣ ೨೫೦ ಪ್ರತಿನಿಧಿ...ಗಳು ಬಂದು ಭಾಗವಹಿಸಿದ್ದರು. ದ್ವಾರಕ...ದ ಹಾಗೂ ಪುರಿ ಜಗದ್ಗುರು ಶಂಕರಾ...ಚಾರ್ಯರು, ಪೇಜಾವರ ಮಠಾಧೀಶ ಸ್ವಾಮೀಜೀ, ಪ್ರಭುದತ್ತ ಬ್ರಹ್ಮಚಾರಿ, ಶ್ರೀಕ ಡೋಂಗ್ರೇಜಿ ಮಹಾರಾಜ್, ನಾಮಧಾರಿ ಸಿಖ್ಖ ಪಂಥದ ಜಗಜೀತ್ ಸಿಂಘ ಮಹಾರಾಜ್, ಮುಂತಾದ ಮತೀಯ ಪ್ರಮುಖರು ಬಂದಿದ್ದರಲ್ಲದೆ ಡಾ| ತುಳಸಿಗಿರಿ ರುದ್ರರಾಜ ಪಾಂಡೇಯ, ಡಾ| ಸೋಂಧಿ ಹಾಗೂ ಇತರ ಪರರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಉತ್ತರ ಪ್ರದೇಶ ಹಾಗೂ ಬಿಹಾರ್ ಪ್ರಾಂತ್ಯಗಳ ಪ್ರತಿನಿಧಿಗಳಿಗೆ ಒಂದೆಡೆ ಹಾಗೂ ಉಳಿದ ಪ್ರಾಂತ್ಯಗಳ ಪ್ರತಿನಿಧಿಗಳಿಗೆ ಬೇರೊಂದೆಡೆ ಶಿಬಿರಗಳಿಗೆ ಏರ್ಪಾಡು ಮಾಡಲಾಗಿತ್ತು. ಉತ್ತರ ಪ್ರದೇಶ ಹಾಗೂ ಬಿಹಾರ್ ಪ್ರಾಂತ್ಯದವರು ತಂಗಿದ್ದ ಡೇರಾ ನಗರಕ್ಕೆ ಪ್ರತಿಷ್ಠಾನಪುರವೆಂಬ ಹೆಸರು ಕೊಡಲಾಗಿತ್ತು. ಇದು ಸಂಗಮದ ಸಮೀಪ ಝೂಸಿ ಎಂಬಲ್ಲಿ. ಅನ್ಯಾನ್ಯ ಪ್ರದೇಶಗಳಿಗೆ ಕುಂಭ ಮೇಳದ ಪವಿತ್ರ ಸ್ನಾನಕ್ಕೆ ಆಗಮಿಸಿದ್ದ ಸನ್ಯಾಸಿಗಳು, ಮುನಿಗಳು ಇರುತ್ತಿದ್ದದ್ದು ಝೂಸಿಯಲ್ಲಿ. ಇತರ ಪ್ರಾಂತ್ಯಗಳವರು ಬೀಡು ಬಿಟ್ಟಿದ್ದ ಸ್ಥಳಕ್ಕೆ ಹರ್ಷವರ್ಧನ ನಗರವೆಂಬ ಹೆಸರಿಡಲಾಗಿತ್ತು. ಡೇರಾ ನಗರದೊಳಗೆ ಪ್ರವೇಶಿಸುವಲ್ಲೇ ದ್ವಾರದಲ್ಲಿ ದೊಡ್ಡಕ್ಷರಗಳಲ್ಲಿ ವಿಶ್ವ ಹಿಂದೂ ಪರಿಷತ್ತಿನ ಪ್ರತಿನಿಧಿಗಳಿಗೆ ತಂಗಲು ತಾಣ, ಹರ್ಷವರ್ಧನ ನಗರವೆಂದು ಬರೆದಿದ್ದರು. ದ್ವಾರದ ಎಡಪಕ್ಕದಲ್ಲಿ ಶಂಕರಾಚಾರ್ಯ ಕಾರ್ಯಾಲಯ. ನಮಗೇನು ಬೇಕಾದರೂ ಅಲ್ಲೇ ವಿಚಾರಿಸಿ ಒಳ ಪ್ರವೇಶಿಸಬೇಕು. ನೀವು ಪ್ರತಿನಿಧಿ ಪತ್ರವನ್ನು ತೋರಿಸಿ ಯಾವ ಪ್ರಾಂತ್ಯದವರೆಂದರೆ ಸಾಕು, ಒಡನೆ ನೀವೆಲ್ಲಿ ಉಳಕೊಳ್ಳಬೇಕೆಂಬುದರ ವಿವರಣೆ ಅಲ್ಲಿ ಸಿಗುತ್ತದೆ. ದ್ವಾರದತ್ತ ಕರೆದುಕೊಂಡು ಬರುವ ದಾರಿಯೇ ಮುಖ್ಯ ರಸ್ತೆ. ಅದರ ಇಕ್ಕೆಲಗಳಲ್ಲಿ ಹಲವಾರು ಚಿಕ್ಕ ಚಿಕ್ಕ ರಸ್ತೆಗಳಿವೆ. ಅವೆಲ್ಲವುಗಳಿಗೂ ಮಹಾಪುರುಷರ ಹೆಸರುಗಳೇ. ಚಿಕ್ಕ ಚಿಕ್ಕ ರಸ್ತೆಗಳ ಇಬ್ಬದಿಗಳಲ್ಲೂ ಚಿಕ್ಕ ಚಿಕ್ಕ ಡೇರೆಗಳು ಒಂದೊಂದು ಡೇರೆಯಲ್ಲಿ ಸಾಧಾರಣ ಹತ್ತು ಜನರು ಇರಬಹುದು. ನೀವು ತಮಿಳು ನಾಡಿನವರು ಅಥವಾ ಕರ್ನಾಟಕ ಪ್ರಾಂತ್ಯದವರಾದರೆ ಸರಿ, ನಿಮ್ಮನ್ನು ತುಕಾರಾಮ ಪಥಕ್ಕೆ ಹೋಗಲು ಹೇಳಲಾಗುತ್ತಿತ್ತು. (ಇತರ ಪಥಗಳಲ್ಲೂ ಕರ್ನಾಟಕದಿಂದ ಪ್ರತಿನಿಧಿಗಳು ತಂಗಿದರು) ಪ್ರತಿಯೊಂದು ಪಥದ ತುದಿಯಲ್ಲಿ ಒಬ್ಬ ಸ್ವಯಂ ಸೇವಕ ಇರುತ್ತಿದ್ದನು. ಅವನನ್ನು ಖಂಡ ಪ್ರಮುಖನೆನ್ನಲಾಗುತ್ತಿತ್ತು. ಆ ಸ್ವಯಂ ಸೇವಕನ ಬಳಿ ವಿಚಾರಿಸಿದಲ್ಲಿ ನೀವು ಯಾವ ಡೇರೆಯಲ್ಲಿರಬೇಕೆಂಬುದನ್ನಾತ ತಿಳಿಸುತ್ತಿದ್ದ. ಶಿಬಿರದ ಮೂರು ಬದಿಗಳಲ್ಲೂ ನಳ್ಳಿಗಳಿದ್ದು, ಕೈಕಾಲು ತೊಳೆದುಕೊಳ್ಳಲು ಸೌಕರ್ಯವಿತ್ತು. ಪಕ್ಕದಲ್ಲೇ ಖಾನಾವಳಿಗಳು. ಅನ್ನ ಸಿಗದ ಊರೆಂಬ ಭಯವೇ ಅಲ್ಲಿಲ್ಲ. ಏನು ಬೇಕಾದರೂ ಹಣ ಕೊಟ್ಟು ತೆಗೆದುಕೊಳ್ಳಬಹುದು. ಸಿಹಿ ಪದಾರ್ಥಗಳಂತೂ ಅಲ್ಲಿ ಸಾಮಾನ್ಯ ತಿಂಡಿಗಳಾಗಿದ್ದುವು. ಶಿಬಿರದ ಇಬ್ಬದಿಗಳಲ್ಲಿ ಸ್ನಾನ ಹಾಗೂ ಮಲ ಮೂತ್ರ ವಿಸರ್ಜನೆಗೆ ಸ್ಥಳಗಳಿದ್ದುವು. ಅಲ್ಲದೆ ಪ್ರತ್ಯೇಕವಾಗಿ ತನ್ನ ಕುಟುಂಬ ಪರಿವಾರದೊಂದಿಗೆ ಇರಬೇಕೆನ್ನುವವರಿಗೆ ಪ್ರತ್ಯೇಕ ಏರ್ಪಾಡು ಮಾಡಲಾಗಿತ್ತು. ಶಂಕರಾಚಾರ್ಯ ಕಾರ್ಯಾಲಯದಿಂದ ಧ್ವನಿವರ್ಧಕಗಳ ಮೂಲಕ ಪ್ರತಿನಿಧಿಗಳಿಗೆ ಆವಶ್ಯಕ ಸೂಚನೆಗಳನ್ನು ಕೊಡಲಾಗುತ್ತಿತ್ತು. ಇದೇ ಕಾರ್ಯಾಲಯದಲ್ಲಿ ದಿ. ೨೧ರ ರಾತ್ರಿ ಕರ್ನಾಟಕದ ಶ್ರೀ ಭದ್ರಗಿರಿ ಕೇಶವ ಪೈಗಳು ಹರಿಕಥೆ ಮಾಡಿ ಪ್ರತಿನಿಧಿಗಳೆಲ್ಲರ ಪ್ರಶಂಸೆಗಳಿಗೊಳಗಾಗಿದ್ದರು.

ಹರ್ಷವರ್ಧನ ನಗರ ಮತ್ತು ಪ್ರತಿಷ್ಠಾನಪುರದ ನಡುವೆ ವಿಶ್ವಹಿಂದೂ ಪರಿಷತ್ತಿನ ಕಾರ್ಯಕಲಾಪ ನಡೆಯುವ ಮಂಟಪವಿತ್ತು. ಗೋಪುರ ದಾಟಿ ಒಳ ಪ್ರವೇಶಿಸಿದ ನಮ್ಮನ್ನು ಆರ್ಶಿಸುತ್ತಿದ್ದದ್ದು ಧಾರ್ಮಿಕ ವಿಶ್ವ ವಿಜೇತ ಸ್ವಾಮಿ ವಿವೇಕಾನಂದರ ಭೀಮಮೂರ್ತಿ — ಜಗತ್ತಿಗೆನೇ ಹಿಂದೂತ್ವದ ವಿಷಯ ಸಾರುತ್ತಿರುವ ಭಂಗಿಯಲ್ಲಿ ಅಥವಾ ಹಿಂದೂ ದೇಶದ ಹಿಂದುಗಳಿಗೇನೇ ಹಿಂದೂತ್ವದ ಕುರಿತು ತಿಳಿಯಪಡಿಸಿ ಧರ್ಮ ಜಾಗ್ರತ ನಡೆಸುವ ರೀತಿಯಲ್ಲಿ ಅದರ ಪಕ್ಕದಲ್ಲಿ ವಿಶಾಲ ಮಂಟಪ — ಸಾಧಾರಣ ಇಪ್ಪತ್ತು ಸಹಸ್ರ ಪ್ರತಿನಿಧಿಗಳು ಕುಳಿತು ಕೊಳ್ಳಲು ಮಂಟಪದ ರೂಪ ಕಂಭವನ್ನು ನೋಡಿದರೂ ಸರಿ, ಅಲ್ಲಿ ಭಾರತದ ರಾಷ್ಟ್ರೀಯ ಮಹಾಪುರುಷರ ಮಂಗಲ ಚಿತ್ರ ಕಂಗೊಳಿಸುತಿತ್ತು. ಮಂಟಪದ ಆಕಾರಕ್ಕ ತಕ್ಕಂತೆ ವೇದಿಕೆಯ ಮೇಲೆ ಮಹಾನ್ ಆಚಾರ್ಯ ಸ್ವಾಮೀಜೀಗವರ್ರುಗಳು ಪ್ರಯಾಗದ ನಗರ ಸಭಾಧಿಪತಿ ನಗರ ವಿಶ್ವಹಿಂದೂ ಪರಿಷತ್ತಿನ ಅಧ್ಯಕ್ಷರು, ವಿಶ್ವಹಿಂದೂ ಪರಿಷತ್ತಿನ ಕಾರ್ಯದರ್ಶಿಯವರಲ್ಲದೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಘಚಾಲಕ ಶ್ರೀ ಮಾಧವ ಸದಾಶಿವ ರಾವ್ ಗೋಳ್ವಲ್ಕರವರು ಉಪಸ್ಥಿತರಿದ್ದರು. ಛಾಯಚಿತ್ರ ಪೇಡಿಕೆಗಾರರನ್ನು ತಡೆಯುವದು ಬಹಳ ಕಷ್ಟದ ಕೆಲಸವಾಗಿತ್ತು. ಮಂಟಪದಲ್ಲೇ ಮಾತೆಯರಿಗೆ ಅನ್ಯರಾಷ್ಟ್ರಗಳಿಂದ ಆಗಮಿಸಿದ್ದ ಪ್ರತಿನಿಧಿಗಳಿಗೆ ವಿಶೇಷ ಆಹ್ವಾನ ಮೇಲೆ ಬಂದಿದ್ದ ದೊಡ್ಡ ಜನರಿಗೆ ಹಾಗೂ ಪತ್ರಿಕೆ ಪ್ರತಿನಿಧಿಗೆ ವಿಶೇಷ ವಿಶಾಲಹು ಮಾಡಲಾಗಿತ್ತು.

(ಹತ್ತನೇ ಪುಟ ನೋಡಿರಿ)



ಸೌಭಾಗ್ಯಕ್ಕೆ ಆಹ್ವಾನ.

ಅನುದಿನವೂ ಹಣದ ಸದ್ವಿನಿಯೋಗವನ್ನು ಅರಿತು ಯೋಗ್ಯ ಉಳಿತಾಯ ಯೋಜನೆಗಳನ್ನು ಅನುಸರಿಸುವ ವಿವೇಕಶಾಲಿಗಳು ಧನಲಕ್ಷ್ಮಿಯ ಕೃಪೆಗೆ ಪಾತ್ರರಾಗುವರು. ಅಂತಹ ಧನ್ಯರು ಸೌಭಾಗ್ಯವನ್ನು ಧೈರ್ಯದಿಂದ ಆಹ್ವಾನಿಸಬಹುದು.

ಸಿಂಡಿಕೇಟಿನ ಈ ಕೆಳಗಿನ ಆಕರ್ಷಕ ಉಳಿತಾಯ ಯೋಜನೆಗಳ ಮೂಲಕ ಕ್ರಮವಾಗಿ ಹಣ ಉಳಿಸಿಕೊಂಡು ಬನ್ನಿರಿ.

ಸಿಗ್ಮ ಠೇವಣಿ, ಸೇವಿಂಗ್ಸ್ ಖಾತೆ, ಕ್ಯುಮುಲೇಟಿವ್ ರೇವಣಿ, ಖಾಯಂ ಠೇವಣಾತಿ, ಜೈಂಟ್ ಕೇಶ್ ಸರ್ಟಿಫಿಕೇಟುಗಳು.

ಖರ್ಚು ಮಾಡಿದಿರೆಂದರೆ ಅದು ಆ ಕ್ಷಣವಲ್ಲೇ ಮಾಯವಾಯಿತು. ಉಳಿಸಿದಿರೆಂದರೆ — ಆ ಮೊತ್ತ ಕಾಲದ ಜತೆಗೆ ಬೆಳೆಯುತ್ತಿರುತ್ತದೆ!

"ಉಳಿತಾಯಗಾರರ ಸನ್ಮಿತ್ರ"

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿವೆ.

ಚಲಾವಣಾ ಸಂಪತ್ತು: ರೂ. 85 ಕೋಟಿಗೂ ಮಿಕ್ಕಿದೆ.

ಭಾರತೀಯ...
ಜವಾಹರಲಾಲ...

೧

ಟಾಷ್ಕೆಂಟದ ನೆಲದಲ್ಲಿ ದುಷ್ಟತೆಯ ಮೇಲೆ ಸಜ್ಜನತೆಯು, ದಾನವತೆಯ ಮೇಲೆ ಮಾನವತೆಯು ಅಪೂರ್ವ, ಅತ್ಯದ್ಭುತ ವಿಜಯ ಗಳಿಸಿತು. ಪುಟ್ಟ ಗುಬ್ಬಚ್ಚಿಯು ದೊಡ್ಡ ಕಾಗೆಯನ್ನು ಹದಕ್ಕೆ ತಂದಿತು. ಜಗತ್ತು ಏನನ್ನು ನಿರೀಕ್ಷಿಸಿತ್ತೋ ಅದನ್ನು ಈ ಪುಟ್ಟ ಗುಬ್ಬಚ್ಚಿ ಆಗಗೊಡಲಿಲ್ಲ. ಇದೊಂದರಿಂದಾಗಿಯೇ ಟಾಷ್ಕೆಂಟ್ ಘೋಷಣೆಯು ಜಾಗತಿಕ ವ್ಯವಹಾರದಲ್ಲಿ, ಪಾಕ್—ಭಾರತ ಸಂಬಂಧ ಸುಧಾರಣೆಯಲ್ಲಿ ದೊಡ್ಡದೊಂದು ಮೈಲುಗಲ್ಲು.

ಲಾಲ್ ಬಹದೂರ್ ಶಾಸ್ತ್ರಿಯವರು ತನ್ನ ಅಲ್ಪಾವಧಿಯ ಅಧಿಕಾರ ಸ್ಥಾನದಲ್ಲಿದ್ದರೂ ದೇಶವು ಎದುರಿಸಬೇಕಾದ ಸಮಸ್ಯೆ—ಗಂಡಾಂತರಗಳ ವೇಳೆ ಅಂಜದೆ ಅಳುಕದೆ ದಿಟ್ಟತನದಿಂದ ದೃಢತೆಯಿಂದ ಅವುಗಳಿಗೆ ತಲೆಯೊಡ್ಡುವ ಎದೆಗಾರಿಕೆ ತೋರಿದರು – ಕಚ್ಛ ರಣದ ತಂಟೆ, ಪಾಕ್ ಆಕ್ರಮಣಗಳ ವೇಳೆ ಅವರ ನೀತಿ ಪ್ರಶಂಸನೀಯವಾಗಿತ್ತು—ಎಂತಲೇ ಈ ಪುಟ್ಟ ಗುಬ್ಬಚ್ಚಿ ದೇಶದ ಎಲ್ಲ ಪ್ರಜೆಗಳ ಹೃದವನ್ನು ಸೂರೆಗೊಂಡಿತು, ವಿದೇಶಗಳಲ್ಲಿ ಸಹ ಇವರ ಬಗ್ಗೆ, ಭಾರತೀಯ ಜನತೆಯ ಬಗ್ಗೆ ವಿಶ್ವಾಸ ಮೂಡಿಕೊಂಡಿತು—ಜಾಗತಿಕ ನಾಯಕತ್ವ ಅವರ ಪಾಲಿಗೆ ತಾನಾಗಿಯೇ ಬಂತು.

ಲಾಲ್ ಬಹದೂರ್ ಶಾಸ್ತ್ರಿ ಮೊದಲಿನ ಸಾರ್ವಜನಿಕ ಚುನಾವಣೆಯ ನಂತರವೇ ಇಡಿಯ ಭಾರತಕ್ಕೆ ಪರಿಚಿತರಾಗತೊಡಗಿದರು. ಮದ್ರಾಸದ ಬಳಿಯ ಅರಿಯಲೂರಲ್ಲಿ ನಡೆದ ರೇಲ್ವೇ ಅಪಘಾತವೊಂದರಲ್ಲಿ ನೂರಾರು ಜೀವ ಹತ್ಯೆಯ ಹೊಣೆಯನ್ನು ಘಟನಾತ್ಮಕವಾಗಿ ತಾವು ಹೊತ್ತುಕೊಂಡು ತಮ್ಮ ಮಂತ್ರಿಪದವಿಗೆ ರಾಜಿನಾಮೆಯಿತ್ತು ಹೊರಬಂದವರು ಇವರು. ನಮ್ಮವರಿಂದ ತಪ್ಪಾಗುವುದಕ್ಕೆ ನಾವು ಸರಿಯಿಲ್ಲದುದೇ ಕಾರಣವೆನ್ನುತ್ತಿದ್ದರು ಬಾಪೂಜಿ. ಅವರ ಈ ಮಾತಿನಲ್ಲಿ ಅಚಲ ವಿಶ್ವಾಸವಿದ್ದ ಲಾಲ್‌ಬಹದೂರ್ ಇದನ್ನೇ ಕಾರ್ಯರೂಪದಲ್ಲಿ ಮೂಡಿತೋರಿಸಿದರು ಈ ಬಗೆಯ ನೀತಿಯಿಂದಾಗಿ ಲಾಲ್ ಎಲ್ಲರ ಲಾಲ್ ಆಗತೊಡಗಿದರು.

ಪಂ। ಗೋವಿಂದ ವಲ್ಲಭ ಪಂತರ ನಿಧನಾನಂತರ ಗೃಹ ಶಾಖೆ ಶಾಸ್ತ್ರಿಗಳ ಕೈಗಳಿಗೆ ಬಂತು. ಭಾರತದಂತಹ ವಿಶಾಲ ವಿಭಿನ್ನ ರೀತಿ-ರಿವಾಜುಗಳ, ಮತಧರ್ಮಗಳ, ಸಮಸ್ಯೆಗಳ ತವರೂರಲ್ಲಿ ಗೃಹಶಾಖೆಯ ಆಡಳಿತೆಯೂ ಒಂದು ಸಮಸ್ಯೆಯೇ. ಆದರೂ ತಮ್ಮ ಅನುಭವ ಮತ್ತು ಆಡಳಿತ ಸಾಮರ್ಥ್ಯಗಳಿಂದ ಎದುರು ಬಂದ ಅನೇಕ ಸಮಸ್ಯೆಗಳನ್ನು ಯಶಸ್ವಿಯಾಗಿ ಎ

೨

೧ ಗ...
ಸ್ತ್ರಿಯವ...
ಕಾರ ಸ್ವೀ...
ಮೇರಿಕೆಯ...
ಲ್ಸ್ ಅ...
ಚಿತ್ರ ವಿ...

೨. ಅಧ್ಯ...
ರಿದ್ದಾಗ ಪ್ರ...
ಯಾಗಿದ್ದ...
ಗಣಿಗಳಲ್ಲಿ...
ಸ್ಪರರನ್ನು...
ಗುಬ್ಬಚ್ಚಿಯ...
ಕಂಡು ಕೊ...

೩. ಗ...
ನ್ ಕಾಂಗ್ರೆ...
ಭಾರತವನ್ನು...
ದಲ್ಲಿ ಪ್ರಧಾ...
ವಿಲ್ಲಯಂ ಎ...
ಲಾದವರೊ...

೪. ಅವ...
ಮಂಡಳದ (...
ಯರೂ) ಪ್ರ...
ಟ್ಟ ಮಾಡಿ...
ಪ್ರಜಾಸತ್ತೆಗ...
ಅಲ್ಲ ಬಿಟ್ಟು...

...ು ಗುಬ್ಬಚ್ಚಿ ...ಉತ್ತರಾಧಿಕಾರಿ

...ದುರು ಬಂದ ಅನೇಕ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸಿ ತಮ್ಮ ಎದೆಗಾರಿಕೆಯ ಪರಿಚಯವನ್ನು ಮಾಡಿ ಕೊಟ್ಟರು ಇವರು. ಪಕ್ಷದ ಬಲ ಸಂವರ್ಧನೆಗಾಗಿ ಆಯ್ಕೆಯಾದ ಹಿರಿಯ ನಾಯಕರಲ್ಲಿ ಇವರ ಹೆಸರೂ ಪರಿಗಣಿತವಾಯಿತು. ಪಕ್ಷದ ಸೇವೆಯಲ್ಲಿ ಸಿದ್ಧ ಹಸ್ತರಾಗಿರುವ ಶಾಸ್ತ್ರಿಯವರು ಆತ್ಮ ಸಂತೋಷದಿಂದಲೇ ರಾಜಿನಾಮೆಯಿತ್ತು ಹೊರಬಂದು ತ್ಯಾಗಬುದ್ಧಿಯನ್ನು ತೋರಿಸಿದರು. ಆ ಮೇಲೆ ಸರಕಾರದಲ್ಲಿ ಅವರ ಸೇವೆಯು ಅಗತ್ಯವೆನಿಸಿದಾಗ ಮತ್ತೆ ನೆಹರೂರ ಸಹಕಾರಿಯಾಗಲು ಮುಂದೆ ಬಂದರು.

ಲಾಲ್ ಬಹದ್ದೂರ್ ವಿದೇಶಗಳಲ್ಲಿ ಸಂಚಾರ ಮಾಡಿದುದು ಪ್ರಧಾನಿಯಾದ ಮೇಲೆಯೇ. ಉಪಮಂತ್ರಿ—ಪಾರ್ಲಿಮೆಂಟರಿ ಕಾರ್ಯದರ್ಶಿಯವರೂ ವಿದೇಶ ಸಂಚಾರ ಮಾಡುತ್ತಿರುವಾಗ ಈ ಸಂಗತಿ ಸೋಜಿಗದ್ದಾಗಬಹುದು. ಆದರೆ, ಇದು ನಿಜ. ನಾರಿಗೆ ಸಂಪರ್ಕ, ರೇಲ್ವೆ, ಗೃಹ ಮಂತ್ರಿ ಶಾಖೆ ಮೊದಲಾದುವುಗಳ ಮಂತ್ರಿಗಳು ಕಾರಣ ಮಾಡಿಕೊಂಡು ವಿದೇಶಗಳಿಗೆ ಹೊರಡಬೇಕಾಗುತ್ತದೆ; ಆದರೆ, ಶಾಸ್ತ್ರಿಯವರು ಕಾರಣವಿದ್ದರೆ ಮಾತ್ರ ಅದನ್ನು ಮುಂದೆ ಮಾಡುವವರು. ಇದರಿಂದಲೇ ಅವರ ವ್ಯಕ್ತಿತ್ವ, ಚಾರಿತ್ರ್ಯಗಳ ಉಜ್ವಲತೆ ವ್ಯಕ್ತವಾಗುವುದು.

ಹಾಗೆಂದು ದೇಶಕ್ಕೆ ಬಂದ ಯಾವ ಮಹನೀಯನನ್ನೂ ಶಾಸ್ತ್ರಿ ಭೆಟ್ಟಿಯಾಗದೆ ಉಳಿಯಲಿಲ್ಲ. ಇಂದು ಅಮೆರಿಕನ್ ಅಧ್ಯಕ್ಷರಾಗಿರುವ ಲಿಂಡನ್ ಬಿ. ಜಾನ್ಸನ್ ರವರು ಉಪಾಧ್ಯಕ್ಷರಾಗಿರುವಾಗ ಭಾರತ ಸಂದರ್ಶನ ಮಾಡಿದ್ದರು. ವಿದೇಶದ ಅನೇಕ ಮಹತ್ವದ ಸ್ಥಾನಾಪನ್ನರು ಬಂದಾಗ ಲಾಲ ಬಹದೂರ ಭೆಟ್ಟಿಯಾಗಿದ್ದರು. ಸೌಜನ್ಯ ಮೂರ್ತಿಯಾಗಿದ್ದ ಲಾಲ ಬಹದೂರರು ಅವರೆಲ್ಲರೊಡನೆ ದೇಶ ವಿದೇಶದ ಪರಿಸ್ಥಿತಿ-ಸಮಸ್ಯೆಗಳ ಬಗ್ಗೆ ವಿವೇಚಿಸಿದ್ದಾರೆ. ಆದುದರಿಂದಲೇ ಪ್ರಧಾನಿಯಾಗಿ ಅವರು ಆಯ್ಕೆಗೊಂಡೊಡನೆಯೇ ಎಲ್ಲೆಡೆಯೂ ಹಾರ್ದಿಕ ಸ್ವಾಗತ ದೊರೆಯಿತು. ಅವರ ಆಡಳಿತೆಯ ಅವಧಿಯು ಕಠಿನದಲ್ಲಿ ಕಠಿನತರವಾಗಿ ಪರಿಣಮಿಸಿತು ನಿಜ. ಆದರೆ ಎಲ್ಲ ದೇಶಗಳ ಮಂಪ್ರರೂ ಭಾರತದ ಸಹಕಾರದ ನೀತಿಯನ್ನು ಅದು ಜಿಸುಪರಿಸುತಿದ್ದ ಕಾರ್ಯವಿಧಾನವನ್ನು ಕಣ್ಣಿನಲ್ಲಿ ಎಣ್ಣೆಹಾಕಿ ನೋಡಿದರು, ಮಮೆಯಿಕ್ಕದೆ ಈಕ್ಷಿಸಿದರು; ಮೂಗಿಗೆ ಬೆರಳೇರಿಸಿದರು.

ಮುಂದೆ ತಾಷ್ಕೆಂಟದಲ್ಲಿ ಶಾಂತಿಯ ದೂತನಾಗಿ ಮಾತುಕತೆಯಾಡುತಿದ್ದ ವೇಳೆಯಲ್ಲಿ ಶಾಸ್ತ್ರಿ ಶತ್ರುವಿನ ಕೈ ಕುಲಿಕಿದರು; ಆತನ ಮನಸ್ಸಿನಲ್ಲಿ ಶತ್ರು ಭಾವನೆಯ ಕಲಂಕವನ್ನು ತೊಳೆದು ಹಾಕಿದರು. ಆ ದಾನವತೆಯನ್ನು ಮಾನವತೆಯಿಂದ ಗೆದ್ದರು ಮಾತ್ರವಲ್ಲ, ದಾನವತೆಯ ಹೃದಯದಲ್ಲಿ ಮಾನವತೆಯ ಪ್ರತಿಷ್ಠಾಪನೆ ಮಾಡಿದರು. ಇಂತಹ ಲಾಲ್‌ಬಹದೂರ್ ಶಾಸ್ತ್ರಿ ಶಾಂತಿದೂತನೆಂದು ಎಲ್ಲ ವಿದೇಶಗಳೂ ಗೌರವಿಸಿದುವು. ಸರ್ವಪ್ರಕಾರದಲ್ಲಿಯೂ ಅವರು ದಿವಂಗತ ಜವಾಹರಲಾಲರ ಯಶಸ್ವೀ ಉತ್ತರಾಧಿಕಾರಿಯಾದರು.

...ಗಳಲ್ಲಿ ಶಾ
...ಗಿ ಅಧಿ
...ದಲ್ಲಿ ಆ
...ರ್ ಬಾ
...ವಾಗಿ ನ

...ಪಾಧ್ಯಕ್ಷ
...ಮಂತ್ರಿ
...ಕ್ಕೆ ಮೇ,
...ಯೂ ಪರ
...ಕರಿಯ
...ಅಗದೇ

...ಮೇರಿಕ
...ಶಗಳು
...ಚಿತ್ರ
...ಪ್ರತಿನಿಧಿ
... ಮೊ
...ದ್ದಾರೆ.
...ಪ್ರತಿನಿಧಿ
...ಮಾದಿ
...ನ್ನು ಭೆ
...ದೊಡ್ಡ
... ಬಗ್ಗೆ
...ಯಿತು.

ವಿಶ್ವ ಹಿಂದೂಗಳ ಸಂಗಮ— ವಿಶ್ವ ಹಿಂದೂ ಪರಿಷತ್ತು

(ಏಳನೇ ಪುಟದಿಂದ)

ದಿನಾಂಕ ೨೨ರಂದು ಪ್ರಭಾತಕಾಲದಲ್ಲಿ ವಿಶ್ವಹಿಂದೂ ಪರಿಷತ್ತಿನ ಕಾರ್ಯಕ್ರಮಗಳು ಆರಂಭವಾದುವು. ಪ್ರಾರ್ಥನೆಯೊದ ಮೇಲೆ ದ್ವಾರಕಾ ಪೀಠಾಧೀಶಾ ಜಗದ್ಗುರು ಶ್ರೀ ಶಂಕರಾಚಾರ್ಯ, ದೇವಲಿ ಬಾಬಾ ಜೈನಮುನಿ, ಬೌದ್ಧ ಬಿಕ್ಕು, ಪೇಜಾವರ ಮಠಾಧೀಶ, ಶ್ರೀ ವಿಶ್ವೇಶ ತೀರ್ಥ, ಅಸ್ಸಾಮಿನ ಹೇಮಚಂದ್ರದೇವ್ ಗೋಸ್ವಾಮಿ, ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಂಪ್ರದಾಯದ ಶ್ರೀ ರಾಘವಾಚಾರ್ಯಜೀ, ಸಿಖ್ಖರ ನಾಮಧಾರಿ ಪಂಥ ಜಗಜೀತ್ ಸಿಂಘ ಮಹಾರಾಜ್ ಮುಂತಾದವರು ಪರಿಷತ್ತನ್ನು ಆಶೀರ್ವದಿಸಿ ಕಾರ್ಯಕಲಾಪಗಳು ನಡೆಯಲು ಶುಭವನ್ನು ಕೋರಿದರು. ವೇದ ಮಂತ್ರಪಠನದೊಂದಿಗೆ ಕಾರ್ಯಕ್ರಮ ಮುಂದರಿಯಿತು. ಪ್ರಯೋಗ ನಗರ ಸಭಾಧಿಪತಿ ಶ್ರೀ ಶ್ಯಾಮನಾಥ ಕಕ್ಕರ್‌ರವರು ಪ್ರತಿನಿಧಿಗಳಿಗೆ ಸ್ವಾಗತವನ್ನು ಬಯಸಿದರು. ಅನಂತರ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಮಹಾಮಂಡಲೇಶ್ವರಸ್ವಾಮಿ ಮಹೇಶಾನಂದ ಗಿರಿಯವರು ಸ್ವಾಗತ ಭಾಷಣ ಮಾಡಿದರು. ಪರಿಷತ್ತಿಗೆ, ಶುಭಕೋರಿ ತಾವು ಬರೆದಿದ್ದುದಕ್ಕೆ ಕ್ಷಮೆ ಕೇಳಿದೊಡ್ಡ ಜನರು ಕಳುಹಿಸಿದ್ದ ಸಂದೇಶಗಳನ್ನು ಓದಲಾಯಿತು. ಸಂಸ್ಕೃತ ಭಾಷೆಯಲ್ಲಿ ಬಂದಿದ್ದ ಸಂದೇಶಗಳನ್ನು ಡಾ| ಲೋಕೇಶ್ಚಂದ್ರರವರು ಓದಿದರು. ಆಂಗ್ಲ ಭಾಷೆಯಲ್ಲಿ ಬಂದಿದ್ದ ಸಂದೇಶಗಳನ್ನು ಮೈಸೂರಿನ ಮಾಜಿಮಂತ್ರಿ ಶ್ರೀ ಎ.ಜಿ. ರಾಮಚಂದ್ರರಾಯರು ಓದಿದರು. ಪ್ರಾಂತ್ಯದ ರಾಜ್ಯಪಾಲ ಶ್ರೀ ವಿಶ್ವನಾಥ ದಾಸರು ಉದ್ಘಾಟನಾ ಸಮಾರಂಭವನ್ನು ನಡೆಸಿದರು.

ಶ್ರೀ ಲಾಲಬಹದೂರ್ ಮುಂತಾದವರ ಮರಣದ ನಿಧನದ ಕುರಿತು ಸಂತಾಪಸೂಚಕ ನಿರ್ಣಯವನ್ನು ತಂದು ಎಲ್ಲರೂ ಎರಡು ನಿಮಿಷ ಕಾಲ ಮೌನವನ್ನಾಚರಿಸಿದರು.

ವಿಶ್ವಹಿಂದೂ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಶಿ. ಶಂ ಆಪ್ಟೆಯವರು ತಮ್ಮ ವರದಿಯನ್ನು ಸಮ್ಮೇಳನದ ಮುಂದೆ ಮಂಡಿಸಿದರು. ಪರಿಷತ್ತಿನ ಅಧ್ಯಕ್ಷ ಮದ್ರಾಸಿನ ರಾಜ್ಯಪಾಲ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಅಸ್ವಸ್ಥರಾದ ನಿಮಿತ್ತ ಬಾರಲಾಗದಿದ್ದುದಕ್ಕೆ ಕ್ಷಮೆ ಕೇಳಿ ಕಳುಹಿಸಿದ್ದ ಅಧ್ಯಕ್ಷ ಭಾಷಣವನ್ನು ಅಂದು ಓದಲಾಯಿತು.

ಪ್ರಸ್ತಾದ ಭಾಷಣವನ್ನು ಶ್ರೀ ಚಿನ್ಮಯಾನಂದ ಜೀಯವರು ಮಾಡಿದರು. ಅವರು ವಿಶ್ವಹಿಂದೂ ಪರಿಷತ್ತಿನ ಆವಶ್ಯಕತೆಯ ಕುರಿತು ತಿಳಿಸುತ್ತ 'ಇಂದು ಸಂಘಟಿತಶಕ್ತಿಯಿಂದಲೇ ಕೆಲಸ ಸಾಧ್ಯವಾದರೆ ಭಾರತದಲ್ಲಿ ವ್ಯಕ್ತಿಗತ ಪ್ರಭಾವವನ್ನು ಕಾಣ ಬಹುದು. ಪರದೇಶಗಳಲ್ಲಿ ಹಾಗಲ್ಲ. ಅಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಪ್ರಜೆಗಳಲ್ಲಿದೆ ಇಲ್ಲಿ ಇದರ ಕೊರತೆ ಬಹಳಷ್ಟಿದೆ. ಈ ದೇಶ ದೊಡ್ಡದೊಡ್ಡ ಮುಖಂಡರುಗಳಿಗೆ ಗೊತ್ತಾಗದಿದ್ದರೂ ತಮ್ಮಿಂದ ಏನೇನು ಮಾಡಲು ಸಾಧ್ಯವಾಗಲಿಕ್ಕಿಲ್ಲವೆಂದು ಅವರು ಸುಮ್ಮಗಿದ್ದಾರೆ. ಆದುದರಿಂದಲೇ ಇಲ್ಲಿಯ ಜನರಲ್ಲಿ ಗತವೈಭವದ ಜ್ಞಾಪಕ ಹುಟ್ಟಿಸಿ ಭವ್ಯ ಭವಿಷ್ಯದ ನಿರ್ಮಾಣಕ್ಕಾಗಿ ಪರಿಷತ್ತನ್ನು ಪ್ರಾರಂಭಿಸಲಾಗಿರುತ್ತದೆ. ಆದರ ಸಮ್ಮೇಳನಕ್ಕಾಗಿ ಕುಂಭಮೇಳದ ಶುಭಕಾಲವನ್ನೇ ನಿಶ್ಚಯಿಸಿಕೊಳ್ಳಲಾಗಿರುತ್ತದೆ. ಹಿಂದೆಯೂ ಇಂತಹ ಸಮ್ಮೇಳನಗಳು ನಡೆಯುತ್ತಿದ್ದುವು. ಆದರದು ಹನ್ನೆರಡು ವರ್ಷಗಳಿಗೊಮ್ಮೆ ಸೇರಿ ಭಾಷಣ ಬಿಗಿಯಲಿಕ್ಕಾಗಿ ಅಲ್ಲ. ಈ ರೀತಿ ಸೇರಿ ಎಲ್ಲೆಲ್ಲಿ ಧರ್ಮ ಜಾಗೃತಿಗೆ ಸ್ವಯಂ ಸೇವಕರ ಅವಶ್ಯಕತೆ ಇದೆಯೆಂಬುದರ ಕುರಿತು ಯೋಚಿಸಲಿಕ್ಕಾಗಿ; ಮತ್ತು ಅದರಂತೆ ಹಲವಾರು ಜನರನ್ನು ಕಳುಹಿಸಲಾಗುತ್ತಿತ್ತು. ಆದರೆ ಇಂದು ನಮ್ಮ ಸ್ಥಿತಿ ಹೇಗಿದೆ? ಪಾಶ್ಚಾತ್ಯ ರಾಷ್ಟ್ರಗಳು ಆರ್ಥಿಕ ಹಾಗೂ ರಾಜಕೀಯ ದೃಷ್ಟಿಯಲ್ಲಿ ಬಹಳಷ್ಟು ಮುಂದರಿದಿರಬಹುದು. ಆದರೆ ಧಾರ್ಮಿಕ ವಿಚಾರದಲ್ಲಿ ಬಹಳಷ್ಟು ಹಿಂದಕ್ಕಿದ್ದಾರೆ. ಅವರಿಂದೂ ಭಾರತದತ್ತನೇ ಆಶಾದೃಷ್ಟಿಯನ್ನು ಬೀರುತ್ತಿದ್ದಾರೆ"ಂದು ತಿಳಿಯಪಡಿಸಿದರು. ವಿಶ್ವ ಹಿಂದೂ ಪರಿಷತ್ತಿಗೆ ಸಂವಿಧಾನ ರಚಿಸಲು ಸ| ಶ್ರೀ ಚಿನ್ಮಯಾನಂದಜೀ; ಸಿ. ಬಿ. ಅಗರವಾಲಾ, ಎ. ಜಿ. ರಾಮಚಂದ್ರ ರಾವ್, ಶಿ. ಶಂ. ಆಪ್ಟೆ, ರಾಮ ಪ್ರಸಾದ ಮುಖರ್ಜಿ ಹಾಗೂ ಸುಗ್ಲ ಇರುವ ಸಮಿತಿಯ ನೇಮಕವಾಗಿದೆಯೆಂದೂ ಹೇಳಿದರು. ಈ ಸಂವಿಧಾನದ ಪ್ರಕಾರ ಇನ್ನು ಮುಂದೆ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕಲಾಪಗಳು ನಡೆಯುತ್ತವೆ. ಸಮಿತಿಯ ಆವಶ್ಯಕತೆ ಹಾಗೂ ವಿಶ್ವ ಹಿಂದೂ ಪರಿಷತ್ತಿನ ಕುರಿತು ಶ್ರೀ ಸಂತ ತುಕುಡೋಜೀ ಮಹಾರಾಜರು ಸ್ಪಷ್ಟಪಡಿಸಿದುದನ್ನೇ ಶ್ರೀ ಜಗಜೀತ್ ಸಿಂಘ ಮಹಾರಾಜ್‌ರವರು ಅನುಮೋದಿಸಿದರು.

(ಮುಂದುವರಿಯುವುದು)

ಲಾ ಕಾಲೇಜಿನ ವಾರ್ಷಿಕೋತ್ಸವ

ಉಡುಪಿ ಲಾ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವು ಮೈಸೂರು ಹೈಕೋರ್ಟ್ ನ್ಯಾಯಾಧೀಶ ಶ್ರೀ ಎ. ಆರ್. ಸೋಮನಾಥ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ತಾ. 19ರಂದು ಜರಗಿತು.

ಆರಂಭದಲ್ಲಿ ಏಕಡಮಿಯ ರಿಜಿಸ್ಟ್ರಾರರಾದ ಡಾ| ಟಿ.ಎಂ.ಎ. ಪೈಯವರು ಸ್ವಾಗತಿಸುತ್ತಾ ಏಕಡಮಿ ಸಂಸ್ಥೆಗಳ ಪರಿಚಯ ಮಾಡಿ, ಈ ಸಂಸ್ಥೆಗಳ ಬೆಳವಣಿಗೆಗೆ ಸಾರ್ವಜನಿಕರ ಉತ್ತೇಜನ ಕಾರಣವಾಗಿದೆಯೆಂದರು.

ಪ್ರೊ| ಎಚ್. ಸಿ. ಐತಾಳರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನು ಓದಿದರು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಡಿ. ಜಿ. ದೇಶಪಾಂಡೆಯವರು ಕಾಲೇಜಿನ ವರದಿಯನ್ನೊಪ್ಪಿಸುತ್ತಾ ಪರೀಕ್ಷೆಗಳಲ್ಲಿ ಈ ಕಾಲೇಜು ಉನ್ನತಮಟ್ಟದ ಫಲಿತಾಂಶವನ್ನು ಪಡೆದಿದೆಯೆಂದು ನುಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೃಷ್ಣನ ಊರಾದ ಉಡುಪಿಯಲ್ಲಿ ಇಂಥ ಸಂಸ್ಥೆಯು ತಲೆಯೆತ್ತುವಂತೆ ಮಾಡಿ, ಉದ್ಯೋಗದೊಂದಿಗೆ ಲಾ ಕಲಿಯಲು ಅವಕಾಶ ಕಲ್ಪಿಸಿಕೊಟ್ಟ ಏಕಾಡಮಿಯ ಮಹತ್ಸಾಧನೆಗೆ ಅಭಿನಂದನೆಯನ್ನು ಸಲ್ಲಿಸಿದರು. ಅಲ್ಲದೆ ಕಾಯಿದೆ, ಕಾನೂನುಗಳನ್ನು ಆಚರಣೆಗೆ ತರುವಾಗ ಯೋಗ್ಯ ಮಾರ್ಗದರ್ಶನ ನೀಡುವುದು ಹಾಗೂ ಕರ್ತವ್ಯ ಪಾಲನೆಮಾಡುವುದು ಲಾಯರುಗಳ ಕರ್ತವ್ಯವಾಗಿದೆಯೆಂದರು.

ಕಾಲೇಜ್ ಯೂನಿಯನ್ ಅಧ್ಯಕ್ಷ ಶ್ರೀ ಸಿ. ಎಂ. ಕೋರಾರವರು ಕಾಲೇಜು ಚಟುವಟಿಕೆಗಳನ್ನು ವಿವರಿಸಿದರು. ಕಾಲೇಜಿನ ಹಳೆ ವಿದ್ಯಾರ್ಥಿ ಶ್ರೀ ಪೆರೋಡಿ ವಿಶ್ವನಾಥ ಶೆಟ್ಟರು ಮಾಡಿದ ಸ್ವಸ್ತಿವಾಚನಕ್ಕೆ ಪ್ರೊ| ಜಿ. ಸಿ. ರೇಗೋರವರು ಉತ್ತರವಿತ್ತರು.

ವಿವಿಧ ಸ್ಪರ್ಧೆಗಳ ಬಹುಮಾನ ವಿಜೇತರಿಗೆ ಅಧ್ಯಕ್ಷರಿಂದ ಬಹುಮಾನ ವಿತರಣೆಯೊದ ಮೇಲೆ ಯೂನಿಯನ್ ಕಾರ್ಯದರ್ಶಿ ಶ್ರೀ ಕೆ. ಎಸ್. ರಿಚಾರ್ಡ್‌ರವರು ಧನ್ಯವಾದ ಸಮರ್ಪಣೆ ಮಾಡಿದರು. ಅನಂತರ ಮನರಂಜನಾ ಕಾರ್ಯಕ್ರಮಗಳಾದ ಮೇಲೆ ಸಮಾರಂಭವು ಮುಕ್ತಾಯವಾಯಿತು.

ಶಾಲಾ ಕಟ್ಟಡದ ಶಿಲಾನ್ಯಾಸ

ಶಿರ್ವಕೋಡು ಶ್ರೀ ದುರ್ಗಾಂಬಿಕಾ ಎಲಿಮೆಂಟರಿ ಶಾಲಾ ನವೀನ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮವು ಶ್ರೀ ವಿರಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಯಸ್. ಸಂಜೀವ ಶೆಟ್ಟರಿಂದ ನಡೆಯಿತು. ಮತ್ತು ಈ ಕಟ್ಟಡದ ಸಹಾಯಾರ್ಥವಾಗಿ ಯಾರು ಅತಿ ಹೆಚ್ಚು ಧನ ಸಹಾಯ ಮಾಡುತ್ತಾರೋ ಅವರಿಗಿಂತ ಕನಿಷ್ಟಪಕ್ಷ ಐದು ರೂಪಾಯಿಗಳನ್ನಾದರೂ ಹೆಚ್ಚು ಕೊಡುವುದಾಗಿ ವಾಗ್ದಾನ ಮಾಡಿದರು.

ಶ್ರೀಮತಿ ಸುಮತಿ ವಿ. ಹೆಗ್ಗಡೆಯವರು ದಿ| ಜವಾಹರಲಾಲ ನೆಹರುಗಳ ಭಾವ ಚಿತ್ರವನ್ನು ಅನಾವರಣ ಮಾಡಿದರು. ಅಲ್ಲದೆ ನವೀನ ಕಟ್ಟಡದ ಸಹಾಯಾರ್ಥವಾಗಿ ರೂ 501/=ನ್ನು ದಾನವಾಗಿತ್ತಿರುವರು. ಊರ ಮಹನೀಯರೆಲ್ಲರೂ ನವೀನ ಕಟ್ಟಡದ ಕೆಲಸದಲ್ಲಿ ಉತ್ಸಾಹದಿಂದ ದುಡಿಯುತ್ತಿರುವರು.

ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಯಸ್. ಯನ್. ಸೀತಾರಾಮ ಹೆಗ್ಡೆಯವರು ಎಲ್ಲರನ್ನು ಅಭಿನಂದಿಸುತ್ತ ಧನ್ಯವಾದ ಸಮರ್ಪಿಸಿದರು.

ತಾ. 15-2-1966ರಂದು ಶ್ರೀ ಪವ್ವು ಶೆಟ್ಟರು ದಿ| ಲಾಲ ಬಹದ್ದೂರ್ ಶಾಸ್ತ್ರಿಗಳ ಭಾವಚಿತ್ರವನ್ನು ಅನಾವರಣ ಮಾಡಿ, ಶಾಲಾ ನೂತನ ಕಟ್ಟಡಕ್ಕೆ ರೂ. 551/=ನ್ನು ಕೊಡುವುದಾಗಿ ವಾಗ್ದಾನ ಮಾಡಿದರು.

ವಾರ್ಷಿಕೋತ್ಸವ ಸಮಾರಂಭ

ಫೆಬ್ರವರಿ ೧೨—ಕಟಪಾಡಿ ಎಸ್.ವಿ.ಎಸ್. ಹೈಸ್ಕೂಲಿನ ಮತ್ತು ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಸಮಾರಂಭವು ಫೆಬ್ರವರಿ ತಾ. 12ರಂದು ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಡಾ| ಬಿ. ಬಿ. ರಾಜಪುರೋಹಿತರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಹೈಸ್ಕೂಲಿನ ಸುಪರಿಂಟೆಂಡೆಂಟರಾದ ಶ್ರೀ ಪಾಂಗಾಳ ರಾಮದಾಸ ನಾಯಕರು ಪ್ರತಿಭಾವಂತರೂ, ಸಾಹಿತಿಗಳೂ, ಚಿಕ್ಕ ಪ್ರಾಯದಲ್ಲೇ ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ಪಡೆದು ಉಚ್ಚ ವ್ಯಾಸಂಗಕ್ಕಾಗಿ ಅಮೇರಿಕಾಕ್ಕೆ ಮುಂದಿನ ವರ್ಷ ಹೋಗಲಿರುವ ಡಾ| ಬಿ. ಬಿ. ರಾಜಪುರೋಹಿತರನ್ನು ಶಾಲೆ ಹಾಗೂ ಹಳೆ ವಿದ್ಯಾರ್ಥಿ ಸಂಘದ ಪರವಾಗಿಯಿಂದ ಸ್ವಾಗತಿಸಿದರು. ಬಳಿಕ ಸಂದೇಶಗಳನ್ನು ಶ್ರೀ ಕೆ. ಪುಂಡಲೀಕ ಶೆಣೈಯವರು ಓದಿದರು.

ತದನಂತರ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಪಿ. ದಯಾನಂದ ನಾಯಕರು 1965-66ರ ಪ್ರಗತಿಪರ ವರದಿಯನ್ನೂ, ಶ್ರೀ ರಾಮಚಂದ್ರ ರಾವ್, ಬಿ. ಎ. ಅವರು ಹಳೆ ವಿದ್ಯಾರ್ಥಿ ಸಂಘದ ವರದಿಯನ್ನೂ ಓದಿದರು. ಬಳಿಕ ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಲೆಕ್ಚರರ್ ಶ್ರೀ ಕೆ. ರಮೇಶ ಕಾಮತ್ ಅವರು ಸ್ವಸ್ತಿವಾಚನ ಮಾಡುತ್ತಾ ರಜತೋತ್ಸವವನ್ನು ಕೆಲವೇ ವರ್ಷಗಳಲ್ಲಿ ಆಚರಿಸಲಿರುವ ಹೈಸ್ಕೂಲ್ ತುಂಬಾ ಆದರ್ಶವಾಗಿದೆಯೆಂದು ಸೂಚಿಸಿದರು.

ಅಧ್ಯಕ್ಷರು ತಮ್ಮ ವಿದ್ವತ್ ಪೂರ್ಣ ಭಾಷಣದಲ್ಲಿ ಜೀವನವು ದ್ವಂದ್ವಕಾರುಣ್ಯವೆಂದು ಪ್ರತಿಪಾದಿಸುತ್ತಾ, ಸಾಹಿತ್ಯ ಜೀವನಗಳ ಸಾಮರಸ್ಯವನ್ನು ವಿವೇಚಿಸಿ ಶಾಲೆಯ ಪ್ರಗತಿಗೆ ತೃಪ್ತಿಯನ್ನು ಸೂಚಿಸಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ಬಹುಮಾನ ವಿತರಣೆ ಮಾಡಿದರು. ಕೊನೆಯಲ್ಲಿ ಶ್ರೀ ಬಿ. ಯನ್. ಜೋಗಿತ್ತಾಯರು ಧನ್ಯವಾದಗಳನ್ನು ಸಮರ್ಪಿಸಿದರು. ವರ್ಧಂತ್ಯುತ್ಸವದ ಅಂಗವಾಗಿ ಜರಗಿದ ಚಿತ್ರಕಲಾ ಉತ್ಸವವನ್ನು ಶ್ರೀ ವಿರಲ ಶೆಣೈ ಉದ್ಘಾಟಿಸಿದ್ದರು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ 13-2-66ರಂದು 'ವಾಲಿ ವಧೆ' ಎಂಬ ಕಥಾಭಾಗದ ಯಕ್ಷಗಾನ ತಾಳ ಮದ್ದಳೆಯು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಶ್ರೀ ಕೆ. ಅಣ್ಣಯ್ಯ ಭಂಡಾರಿಗಳವರಿಂದ ವ್ಯವಸ್ಥೆಗೊಳಿಸಲ್ಪಟ್ಟ ಈ ಕಾರ್ಯಕ್ರಮದಲ್ಲಿ ಸರ್ವ ಶ್ರೀ ಕೇ. ವ. ಕೇಶವ, ಬಿ. ವಿ. ವಿನೋದ, ಪರಮೇಶ್ವರ ಭಟ್, ಕುಂಬ್ಳಾಜೆಯ ಮಾಸ್ತರ್ ಪಿ. ಜತ್ತಪ್ಪ ರೈ, ಕೆ. ಎ. ಭಂಡಾರಿ ಎಂ. ಶೀನಪ್ಪಗೌಡ, ಸಾಂತಪ್ಪ ರೈ, ಲಕ್ಷ್ಮಣ ಗೌಡ ಮುಂತಾದವರು ಭಾಗವಹಿಸಿದ್ದು, ಕೊನೆಯಲ್ಲಿ ವ್ಯವಸ್ಥಾಪಕರು ಧನ್ಯವಾದವಿತ್ತರು.

ಶಾಲಾ ವರ್ಧಂತಿ

ತಾ. 12-2-66ರಂದು ಬೆಳ್ತಂಗಡಿ ರೇಂಜಿನ ಶಾಲಾ ಪರೀಕ್ಷಾಧಿಕಾರಿ ಶ್ರೀ ಎಚ್. ಪಿ. ಗಡಿಯಾರ್‌ರವರ ಅಧ್ಯಕ್ಷತೆಯಲ್ಲಿ ಕಡಿರುದ್ಯಾವರ ಹಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ಜರಗಿತು. ಪ್ರಾತಃ ಶಾಲ ಬೆಟರ್‌ಮೆಂಟ್ ಕಮಿಟಿಯ ಅಧ್ಯಕ್ಷ ಶ್ರೀ ವಿ. ಎಲ್ಯಣ್ಣ ಗೌಡರು ಧ್ವಜಾರೋಹಣವನ್ನು ಮಾಡುತ್ತಾ ಕಾಣರ್ಪ ಶ್ರೀನಿವಾಸ ಪ್ರಭುಗಳು ರೂಪಾಯಿ 150/- ಖರ್ಚು ಮುಟ್ಟಿಸಿ ಶಾಲೆಗೆ ನೂತನವಾಗಿ ನಿರ್ಮಿಸಿಕೊಟ್ಟ ಧ್ವಜಸ್ತಂಭದ ಉದ್ಘಾಟನೆಯನ್ನು ನೆರವೇರಿಸಿ ಸದ್ರಿಯವರನ್ನು ಅಭಿನಂದಿಸಿದರು. ಮಹಾ ಸಭೆಯಲ್ಲಿ ಚೇರ್‌ಮೇನ್ ಶ್ರೀ ವೆಂಕಟಸುಬ್ಬರಾಯರು; ವಾಸುದೇವ ಎಳಚಿತ್ತಾಯರು; ಶ್ರೀ ಕೆ. ಎನ್. ಭಟ್ಟರವರು ವಿದ್ಯೆಯ ಮಹತ್ವ—ಹೆತ್ತವರ ಕರ್ತವ್ಯ, ಅಧ್ಯಾಪಕರ ಸೇವೆಯ ಕುರಿತು ಭಾಷಣ ಮಾಡಿದರು. ಬಹುಮಾನ ವಿತರಣೆಯೊದ ಬಳಿಕ ಶಾಲಾ ವರದಿವಾಚನ ಮುಖ್ಯೋಪಧ್ಯಾಯರು ಮಾಡಿದರು. ಸಭಾಧ್ಯಕ್ಷರ ಭಾಷಣ, ಧನ್ಯವಾದ, ನಾಟಕ ಪ್ರದರ್ಶನಗಳಾದವು. ಕೊನೆಯದಾಗಿ ಯುವಕ ಮಂಡಲದ ವತಿಯಿಂದ ಕೃಷ್ಣಸಂಧಾನ ಯಕ್ಷಗಾನ ಪ್ರದರ್ಶಿಸಲ್ಪಟ್ಟಿತು.

ಮನವಿ ಅರ್ಪಿಸಲು ನಿಯೋಗ

ಧಾರವಾಡ, M. S. R. T. C. ಸ್ಟಾಲ್ ಕಂಟ್ರಾಕ್ಟರ್ಸ್ ಅಸೋಸಿಯೇಶನ್ನಿನ ಕಾರ್ಯಕಾರಿಸಮಿತಿ ಸಭೆಯು ತಾ. 6-2-66ರಂದು ಹೋಟೆಲ್ ವೃಂದಾದಲ್ಲಿ ಸೇರಿ ಈಗಿನ ಕಂಟ್ರಾಕ್ಟ್ ಪದ್ಧತಿಯಲ್ಲಿರುವ ದೋಷಗಳನ್ನು ನಿವಾರಿಸಿಕೊಳ್ಳಲು ಶ್ರೀ ಯು. ವ್ಹಿ. ಆಚಾರ್ಯರ ನೇತೃತ್ವದಲ್ಲಿ ನಾಲ್ಕು ಜನರ ಒಂದು ನಿಯೋಗವು M. S. R. T. C. ಚೇರ್‌ಮನರನ್ನು ಪ್ರತ್ಯಕ್ಷ ಕಂಡು ತಮ್ಮ ಬೇಡಿಕೆಯ ಬಗ್ಗೆ ಮನವಿಯನ್ನು ಅರ್ಪಿಸಬೇಕೆಂದು ನಿರ್ಣಯವಾಯಿತು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. I. A. 598/1965.

O. S. No. 13/1965.

ಉಮೇಶ ಪ್ರಭು —ಅರ್ಜಿದಾರ.

1. ನರಸಿಂಹ ಭಟ್ಟ
2. ಸೀತಾ ಬಾಯಿ } ಕೂಡಾ ಎದ್ರಿರು.

1ನೇ ಎದ್ರಿ ನರಸಿಂಹ ಭಟ್ಟ, ಸರ್ವೋತ್ತಮ ಭಟ್ರ ಮಗ, ಬೆಳ್ತಂಗಡಿ ತಾಲ್ಕು, ಬೆಳ್ತಂಗಡಿ ಕಸಬಾ ಗ್ರಾಮದಲ್ಲಿರುವವರಿಗೆ—

ಕೋರ್ಟು ಮುಖಾಂತರ ತಿಳಿಸುವುದೇನೆಂದರೆ—

ಪ್ರಿಲಿಮಿನರಿ ಡಿಕ್ರಿ ಪ್ರಕಾರ ಅನುಸಾರವಾಗಿ ಫೈನಲ್ ಡಿಕ್ರಿ ಆಗುವಂತೆ ಅರ್ಜಿದಾರನು ಮಾಡಿದ ಅರ್ಜಿಯು ತಾ. 16-2-66ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಸದ್ರಿ ವಾಯಿದೆ ದಿನ ಬೆಳಿಗ್ಗೆ 11 ಗಂಟೆಗೆ ಸ್ವಂತ ಯಾ ವಕೀಲರ ದ್ವಾರ ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ತಕ್ಕದು.

ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷವಾಗಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುತ್ತದೆ.

N. J. KADAMBA
Advocate for Petitioner

READ &
ADVERTISE IN
NAVAYUGA WEEKLY

ವಿದ್ಯಾ ಸಮಸ್ಯೆ

ನಿಜವಾದ ಶಿಕ್ಷಣ ಯಾವುದು?

(ಲೇ:- ವಿನೋಬಾ)

ವಿದ್ಯಾರ್ಥಿಗಳ ಮುಂದೆ ಮಾತಾಡ ಲಿಕ್ಕೆ ನನಗೆ ಯಾವಾಗಲೂ ಆನಂದವಾಗುತ್ತದೆ. ಏನು ಮಾತಾಡಬೇಕು ಎಂದು ವಿಚಾರ ಕೂಡ ಮಾಡಬೇಕಾಗುವುದಿಲ್ಲ. ಮಕ್ಕಳನ್ನು ಕಂಡೊಡನೆ ತಾಯಿಯ ಹೃದಯದಲ್ಲಿ ಭಾವನೆಗಳು ಉಕ್ಕೇರುತ್ತವೆ. ಅದೇ ತರಹ ವಿದ್ಯಾರ್ಥಿಯರೊಡನೆ ನನ್ನ ಸಂಬಂಧವಿದೆ. ನಾನೂ ನಿಮ್ಮ ಜಾತಿಯವನೊಬ್ಬ. ಇಂದಿಗೂ ನಾನು ವಿದ್ಯಾರ್ಥಿಯೇ ಇದ್ದೇನೆ. ಕೆಲಸದ ಮಧ್ಯೆ ಒಂದೆರಡು ಕ್ಷಣ ದೊರೆತರೂ ಅಧ್ಯಯನದಲ್ಲಿ ಮಗ್ನನಾಗುತ್ತೇನೆ.

ನಾನು ನಿರಂತರ ಅಧ್ಯಯನಶೀಲನಾಗಿಯೇ ಇರುತ್ತಿರುವದರಿಂದ ನನ್ನ ಸ್ಮರಣ ಶಕ್ತಿಯು ಹಿಂದಿನಕ್ಕಿಂತ ಇಂದು ಹೆಚ್ಚು ತೇಜವಾಗಿದೆ. ಇಂದೂ ಒಂದೊಂದು ಶ್ಲೋಕ ಕಂಠಪಾಠ ಮಾಡಲಿಕ್ಕೆ ನನಗೆ ಎರಡೇ ಮಿನಿಟು ಸಾಕಾಗುತ್ತದೆ. ಇಳಿವಯಸ್ಸು ಆದಂತೆ ಸ್ಮರಣಶಕ್ತಿ ಕ್ಷೀಣವಾಗುತ್ತಾ ಹೋಗುತ್ತದೆ. ಎಂದು ಜನ ಅನ್ನುತ್ತಾರೆ. ಯಾವ ರೀತಿಯಲ್ಲಿ ಜೀವಿಸಬೇಕು ಎಂಬುದೇ ತಿಳಿಯದೆ ಸಿಕ್ಕಸಿಕ್ಕಂತೆ ಜೀವಿಸಿದರೆ ಮಾತ್ರ ಶರೀರಶಕ್ತಿಯೊಂದಿಗೆ ಬುದ್ಧಿಶಕ್ತಿಯೂ ಕ್ಷೀಣವಾಗುತ್ತಾ ಹೋಗುತ್ತದೆ. ವಿದ್ಯಾರ್ಥಿಗಳಿಗಂತೂ ಜೀವನಶಾಸ್ತ್ರ ಗೊತ್ತಿರಲೇ ಬೇಕು. ಮತ್ತು ಅದರಂತೆ ನಡೆದರೆ ಶರೀರಶಕ್ತಿ ಕ್ಷೀಣವಾದರೂ ಬುದ್ಧಿ ಶಕ್ತಿ ಬಲಗೊಳ್ಳುವದು.

ಅಧ್ಯಯನಕ್ಕೊಂದು ನಿಶ್ಚಿತ ಸಮಯವಿರಬೇಕು. ಇಂದಾದರೋ ವಿದ್ಯಾರ್ಥಿಗಳು ನಡುರಾತ್ರಿಯ ವರೆಗೂ ನಿದ್ದೆಗೆಡುತ್ತಾರೆ. ಅವರ ದೇಹ ದಣಿದಿರುತ್ತದೆ. ಕಣ್ಣುಗಳು ದಣಿದಿರುತ್ತವೆ. ಹೀಗಿದ್ದೂ ಅವರು ತಿಂದುಂಡು ರಾತ್ರಿ ಪುಸ್ತಕ ಕೈಗೆತ್ತಿಕೊಳ್ಳುತ್ತಾರೆ. ಕಣ್ಣು ತೂರುತ್ತಿರುತ್ತದೆ. ಈ ರೀತಿ ಮಲಗಿದ್ದಲ್ಲೇ ಅವರ ಅಧ್ಯಯನ ನಡೆದಿರುತ್ತದೆ.

ಇದರ ಪರಿಣಾಮವೇನಾಗುತ್ತದೆ ಗೊತ್ತೇ? ರಾತ್ರಿ ಕಲಿತದ್ದೆಲ್ಲ ಬೆಳಗ್ಗೆ ಏಳುವಷ್ಟರಲ್ಲಿ ಮರೆತು ಹೋಗಿರುತ್ತದೆ, ಪುಸ್ತಕವನ್ನೇನೋ ಓದಿರುತ್ತಾರೆ. ಆದರೆ ಏನು ಓದಿದವೆಂಬುದೇ ನೆನಪಿರುವದಿಲ್ಲ! ಹೀಗೆ ಮಾಡುವ ಬದಲು ರಾತ್ರಿ ಬೇಗ ಮಲಗಿ, ನಸುಕಿನಲ್ಲೇ ಎದ್ದು ಕಣ್ಣು ಮೋರೆ ತೊಳೆದು, ಸ್ವಸ್ಥಚಿತ್ತದಿಂದ, ಮುಂಜಾನೆಯ ಮಂಗಲ ವೇಳೆಯಲ್ಲಿ ಏಕಾಗ್ರ ಮನಸ್ಸಿನಿಂದ ಒಂದೇ ಗಂಟೆ ಓದಿದರೂ ಕೂಡ ರಾತ್ರಿ ೩ ಗಂಟೆ ಓದಿದಕ್ಕಿಂತ ಹೆಚ್ಚು ಬಂದು ಬಿಡುತ್ತದೆ. ಇಂದು ನನ್ನ ಯಾವತ್ತೂ ಅಧ್ಯಯನ ಇದೇ ರೀತಿ ಆಗಿದ್ದಿದೆ.

ನಾನು ರಾತ್ರಿ ೭ಗಂಟೆಗೆ ಮಲಗಿ ಮುಂಜಾನೆ ೩ಗಂಟೆಗೇ ಎದ್ದು ಧ್ಯಾನ ಅಧ್ಯಯನ ಮಾಡುತ್ತೇನೆ. ಇಷ್ಟೆಲ್ಲ ನಾನು ಯಾವಾಗ ಅಧ್ಯಯನ ಮಾಡಿದನೆಂಬುದು ಜಗತ್ತಿಗೆ ಗೊತ್ತೇ ಆಗುವದಿಲ್ಲ. ನೀವು ಮತ್ತು ನನ್ನ ಜಾತಿ ಒಂದೇ ಎಂದು ತೋರಿಸಲೋಸುಗುವೇ ಇದೆಲ್ಲ ಹೇಳುತ್ತಲಿದ್ದೇನೆ, ನೀವೂ ವಿದ್ಯಾರ್ಥಿ ನಾನೂ ವಿದ್ಯಾರ್ಥಿ ನೀವು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಿದರೆ ನಿಮ್ಮಿಂದ ಭಾರತದ ಪ್ರತಿಷ್ಠೆಯು ಬೆಳೆದೀತು.

ಚೀನದಲ್ಲಿ ಹೊಸ ಶಿಕ್ಷಣಪದ್ಧತಿಯೊಂದು ರೂಢವಾಗಿದೆ. ಅಲ್ಲಿ ಒಂದು ಹೊತ್ತು ಕಠಿಣ ಶರೀರಶ್ರಮ ಮತ್ತು ಒಂದು ಹೊತ್ತು ಮಾತ್ರ ಜ್ಞಾನಚರ್ಚೆ ನಡೆಯುತ್ತಿದೆ. ಈ ತರದ ಶಿಕ್ಷಣ ಪ್ರತಿಯೊಬ್ಬ ಹುಡುಗ ಹುಡುಗಿಯರೂ ಪಡೆಯಲೇಬೇಕಾಗುತ್ತದೆ. ಇದರಿಂದ ವರ್ಗಭೇದ ಎಂಬುದೇ ಇಲ್ಲದಂತಾಗುತ್ತದೆ.

ನಮ್ಮ ದೇಶಕ್ಕೇನೂ ಇದು ಹೊಸದಲ್ಲ. ಶ್ರೀ ಕೃಷ್ಣನೇ ಉದಾಹರಣೆ ಹಾಕಿಕೊಟ್ಟಿದ್ದಾನೆ. ಅವನು ಕುದುರೆಗಳನ್ನೂ ನಡೆಸುತ್ತಿದ್ದ. ಯುದ್ಧವನ್ನೂ ಮಾಡುತಿದ್ದ. ಆಕಳುಗಳನ್ನೂ ಹಿಂಡುತ್ತಿದ್ದ, ದನಗಳನ್ನೂ ಕಾಯುತ್ತಿದ್ದ, ಭಗವದ್ಗೀತೆಯನ್ನೂ ವಿವೇಚಿಸುತಿದ್ದ! ಅವನು ನಮಗೆ ಕರ್ಮಯೋಗ ಧ್ಯಾನಯೋಗಗಳ ಸಮನ್ವಯ ತೋರಿಸಿಕೊಟ್ಟಿದ್ದಾನೆ. ಹೀಗೆ ಮಾಡದೆ ಕೆಲವರು ಬರೇ ಓದುಬರೆಯುವ ಕೆಲಸ ಹಾಗೂ ಉಳಿದವರು ಬರೇ ದುಡಿಯುವ ಕೆಲಸ ಮಾಡುತ್ತಾ ಹೋದರೆ ಅವರು ರಾಹು ಮತ್ತು ಇವರು ಕೇತು ಆಗಿ ಬಿಡುತ್ತಾರೆ. ರಾಹು ಎಂದರೆ ಮುಂಡವಿಲ್ಲದ ರುಂಡ ಮಾತ್ರ. ಇಲ್ಲಿಯ ವಿದ್ಯಾರ್ಥಿಗಳಲ್ಲಿ ಬಹುಸಂಖ್ಯಾಕರು ರಾಹು ಆಗಿರುವರು ಮತ್ತು ಹೊಲದಲ್ಲಿ ದುಡಿಯುವ ರೈತರೆಲ್ಲ ಕೇತು ಅರ್ಥಾತ್ ರುಂಡವಿಲ್ಲದ ಮುಂಡ ಮಾತ್ರ ಅಂದರೆ ತಲೆಯಿಲ್ಲದೆ ಕೈಕಾಲುಗಳಿಂದಷ್ಟೇ ದುಡಿಯುವವರು.

ಓದಿ ಪರೀಕ್ಷೆ ಕೊಟ್ಟವರೆಲ್ಲ ನೌಕರಿಯ ಬೆನ್ನು ಹತ್ತುತ್ತಾರೆ. ಒಟ್ಟು ಸರಕಾರಿ ನೌಕರರಿರುವುದು ಹೆಚ್ಚೆಂದರೆ ೭೦ ಲಕ್ಷ. ಪ್ರಜೆಗಳಾದರೋ ೪೫ ಕೋಟಿ! ಇವರಲ್ಲಿ ೯ ಕೋಟಿ ಜನರಾದರೂ ಶಿಕ್ಷಣ ಪಡೆಯುತ್ತಿದ್ದಾರೆ. ಇವರಲ್ಲಿ ೭೦ ಲಕ್ಷ ಜನರಿಗೆ ಮಾತ್ರ ನೌಕರಿ ಸಿಕ್ಕೀತು. ಅರ್ಥಾತ್ ೧೫ ಜನ ಶಿಕ್ಷಿತರಲ್ಲಿ ಒಬ್ಬನಿಗೆ ಮಾತ್ರ ನೌಕರಿ! ೧೪ ಜನಕ್ಕೆ ನೌಕರಿ ಸಿಗಲಾರದು! ಅವರು ಎಷ್ಟೇ ಪರೀಕ್ಷೆ ಪಾಸಾಗಿದ್ದರೂ ಅಷ್ಟೇ. ಇದರ ಪರಿಣಾಮವೇನಾಗುತ್ತದೆ ಗೊತ್ತೇ? ನೌಕರಿ ಸಿಗದವರು ಮನೆಗೆ ಬರುತ್ತಾರೆ. ಮಳೆಯಲ್ಲಿ ಗದ್ದೆಯ ಕೆಲಸಕ್ಕೆ ಹೋದರೂ ದುಡಿಯುವ ರೂಢಿ ಇಲ್ಲದೆ ಕಾಯಿಲೆ ಬೀಳುತ್ತಾರೆ. ಇಲ್ಲವೇ ಪುಂಡಾಟಕ್ಕೆ ತೊಡಗುತ್ತಾರೆ.

ಸುಖ ಅಪೇಕ್ಷಿಸುವವರಿಗೆ ವಿದ್ಯೆ ಹೇಗೆ ದೊರೆತೀತು? ವಿದ್ಯೆ ಅಪೇಕ್ಷಿಸುವವರಿಗೆ ಸುಖ ಹೇಗೆ ದೊರೆತೀತು? ಆದರೆ ನಿಮಗಾದರೋ ಎರಡೂ ಬೇಕು! ಈ ರೀತಿ ಎಂದಾದರೂ ವಿದ್ಯೆ ದೊರೆತೀತೇ? ವಿದ್ಯೆ ಬೇಕಾದರೆ ನಸುಕಿನಲ್ಲೇ ಏಳಬೇಕು, ವ್ಯಾಯಾಮ ಮಾಡಬೇಕು, ಶರೀರ ಸಂಯಮ ಇಡಬೇಕು. ಇಂದ್ರಿಯಗಳನ್ನು ನಿಯಂತ್ರಿಸಬೇಕು! ಬುದ್ಧಿಯ ಮೇಲೆಯೂ ಹಿಡಿತ ಬೇಕು. ಎಂದು ಬೇಕಾದರೂ ನಿದ್ದೆಹೋಗುವ ಹಾಗೂ ಎಚ್ಚರವಾಗುವ ಶಕ್ತಿ ಗಳಿಸಬೇಕು.

ನೆಪೋಲಿಯನ್ನನು ರಣರಂಗದಲ್ಲಿ ಕೂಡ ಕ್ಷಣ ಹೊತ್ತು ಅವಕಾಶ ಸಿಕ್ಕಿದಾಗ ನಿದ್ದೆ ಹೋಗಿ ಐದೇ ನಿಮಿಷದಲ್ಲಿ ಎಚ್ಚರಾಗಿಬಿಡುತ್ತಿದ್ದನಂತೆ. ನಿದ್ದೆಯ ಮೇಲೆ ನಮ್ಮ ನಿಯಂತ್ರಣವಿಲ್ಲದಿದ್ದರೆ ಇನ್ನೇತರ ಮೇಲೂ ನಮ್ಮ ನಿಯಂತ್ರಣವಿರದು. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ನಿದ್ರೆಯನ್ನು ನಿಯಂತ್ರಣದಲ್ಲಿ ಇರಿಸಿಕೊಂಡಿರಬೇಕು. ಹಿಂದಿನ ಕಾಲದಲ್ಲಿ ನಮ್ಮಲ್ಲಿ ಇಂಥ ಆದರ್ಶ ವಿದ್ಯಾರ್ಥಿಗಳಿರುತ್ತಿದ್ದರು. ಅಂತೆಯೇ ಅಂದು ನಮ್ಮ ದೇಹವು ಉನ್ನತಿಯ ಶಿಖರದಲ್ಲಿತ್ತು.

—ಭೂದಾನ.

ನಿಮ್ಮ ಆಯ್ಕೆಗೆ ಯೋಗ್ಯ ಪುಸ್ತಕಗಳು

ಅನುರಾಗದ ಅಂಬುಜ	ಎನ್. ನರಸಿಂಹಯ್ಯ	2	00
ಇಲಿಯ ವೇಷದ ಹುಲಿ	,,	2	00
ಬಾಚಿಯ ಬೀರು	ವೈ. ಸು. ಶೇ.	2	00
ಮದುಮಗಳು ಯಾರು?	ಎನ್. ನರಸಿಂಹಯ್ಯ	2	50
ನರಕದ ಮನೆ	,,	2	50
ಅನುರಾಗ	ಇಂದಿರಾ ತನಯ	1	50
ಕುರುಬ ಸಾಕಿದ ಕುರಿ	ಎನ್. ನರಸಿಂಹಯ್ಯ	2	50
ಪ್ರೇಮ ಪಿಶಾಚಿ	,,	1	50
ಸೆರೆಮನೆಯಲ್ಲಿ ಶವ	,,	2	00
ಮಾಯಾವಿ ಮಾರ್ಜಾಲ	,,	2	00
ಹೆಣ್ಣುಗಳ ಕೊಂಪೆ	,,	2	25
ಶವವಿಲ್ಲದ ಸಮಾಧಿ	,,	2	00
ಮುತ್ತುಗದ ಹೂ	,,	2	25
ಅಮಾವಾಸ್ಯೆಯ ಅತಿಥಿ	,,	1	50
ಬೊಮ್ಮನ ಬುರುಡೆ	,,	2	25
ಚಂಚಲೆಯ ಚಪಲ	,,	2	00
ಹೆಬ್ಬುಲಿಯ ಹೆಜ್ಜಾಲ	,,	2	00
ಕಣ್ಣಿಲ್ಲದ ಕೊಲೆಗಾರ	,,	2	00
ರಾಗಿಣಿಯ ರಂಗಾಟ	,,	1	50
ಪ್ರೇಮವಿಲ್ಲದ ಪಕ್ಷಿ	,,	1	50
ಪ್ರತಿರೂಪದ ಪರಿಣಾಮ	,,	2	00
ಮಾಟಗಾತಿಯ ಮಗಳು	,,	3	00
ರೂಪವಿಲ್ಲದ ಭೂತ	,,	2	00
ಪತ್ತೇದಾರ ಮಧುಸೂದನ	,,	2	00
ಹೆಣ್ಣು ಹುಲಿಯ ಹಸಿವು	,,	2	50
ಬಚ್ಚಿಟ್ಟ ಭಾವಚಿತ್ರ	,,	2	00
ಕೊಲೆಯಾದ ಕೊಲೆಗಾರ	,,	2	00
ಜನ್ಮಾಂತ್ರಿಯಾ	ಎ. ಸ್. ಮೂರ್ತಿ	1	25
ಮನಿಯಾರ್ಡರ್	,,	0	75
ಜೀವನದ ಜೊತೆಗಾರ	ಶ್ರೀನಿವಾಸ ಉಡುಪ	3	00
ರೂಪಶ್ರೀ	ಅ. ನ. ಕೃ	2	00
ಪಂಕಜ	,,	2	00
ಭೂಮಿತಾಯಿ	,,	1	50
ಅಭಿಮಾನ	,,	2	00
ಮನೆತುಂಬಿದ ಹೆಣ್ಣು	ಕೃಷ್ಣಮೂರ್ತಿ ಪುರಾಣಿಕ	2	50
ಧರ್ಮದೀಕ್ಷೆ	ಶ್ರೀನಿವಾಸರಾವ್ ಕೊರಟಿ	1	75
ಹೇಮಲತೆ	ಕೃಷ್ಣಮೂರ್ತಿ ಪುರಾಣಿಕ	1	75
ವೇಷಧಾರಿ	,, ,, ,,	3	00
ಎರಡು ಹೆಣ್ಣು ಒಂದು ಗಂಡು	ತ. ರಾ. ಸು.	2	00
ಬೆಳಕಿನ ಬೀದಿ	,,	2	00
ಸರ್ಪ ಮತ್ಸರ	,,	2	00
ಮಿಯಾಮುಲ್ಲಾರ್	ಅ. ನ. ಕೃ.	2	50
ಹಾಲು ಕೆನೆ	ಕೃಷ್ಣಮೂರ್ತಿ ಪುರಾಣಿಕ	2	00
ನಿದ್ರಾ ತಾರೆ	ರಾಮರಾಜ	2	50
ಜಗನ್ನಾಥ	,,	2	50
ಭೀಮಕಾಯ	ಎಸ್. ಎಲ್. ಭೈರಪ್ಪ	2	50
ಕಡಲ ಧ್ವನಿ	ಜನದೇವ ನಾಯಕ	1	75
ಬಿಳಿಕೊಕ್ಕರೆ	ಗೌರೀಶ ಕಾಯ್ಕಿಣಿ	1	25
ನವರತ್ನ	ಬಿ. ಎಚ್. ಶ್ರೀಧರ	2	50
ಮಹಾತ್ಮ	ಜಿ. ಆರ್. ಹೆಗಡೆ	1	25
ವಾರದ ಹುಡುಗ	ನಿರಂಜನ	1	25
ದೆವ್ವದ ಕತೆಗಳು	ಗೋಪಾಲಕೃಷ್ಣ ಅಡಿಗ	0	50
ಮುಂದೇನು?	ದೇವುಡು	0	50

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಶ್ವಮಾನ್ಯ ಭಾರತೀಯರು

(ಐದನೆಯ ಪುಟದಿಂದ)

ವೇದಾಂತ ತತ್ವವನ್ನು ವಿದೇಶಗಳಿಗೆ ಸಾರಿ ವಿಶ್ವವನ್ನೇ ಬೆರಗುಗೊಳಿಸುವಂತಹ ಸದವಕಾಶವೊಂದು ವಿವೇಕಾನಂದರಿಗೆ ದೊರೆಯಿತು. ೧೮೯೩ರಲ್ಲಿ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಹಿಂದೂ ಧರ್ಮದ ಪ್ರತಿನಿಧಿಯಾಗಿ ಮದ್ರಾಸು ನಗರದ ಅಭಿಮಾನಿಗಳು ಕೂಡಿಸಿಕೊಟ್ಟ ಮಂಚಿಗೆ ಹಣದಿಂದ ಚಿಕಾಗೋ ನಗರ ತಲುಪಿದರು. ಕೈಯಲ್ಲಿ ಹಣವಿಲ್ಲದೆ, ಸಮ್ಮೇಳನದಲ್ಲಿ ಭಾಗವಹಿಸಲು ವಿಶೇಷ ಅಧಿಕೃತ ಆಹ್ವಾನವಿಲ್ಲದೆ, ವಿಹ್ವಲರಾದಾಗ ಅವರಿಗೆ ರೈಟ್‌ರವರ ರೂಪದಲ್ಲಿ ದೈವ ಸಹಾಯ ಒದಗಿತು. ಭಾರತೀಯನೆಂದು ನಿಕೃಷ್ಟ ಭಾವನೆಯಿಂದ ಸಮ್ಮೇಳನದ ಕೊನೆಯಲ್ಲಿ ಭಾಷಣಕ್ಕಾಗಿ ವಿವೇಕಾನಂದರಿಗೆ ಕೇವಲ ಕೆಲ ನಿಮಿಷಗಳನ್ನು ಕೊಡಲಾಗಿತ್ತು. ಅಮೇರಿಕಾದ ಸಹೋದರ ಸಹೋದರಿಯರೇ' ಎನ್ನುವ ಒಂದೇ ಸಾಲಿನಿಂದ ಪಾಶ್ಚಾತ್ಯ ಜನತೆಯ ಮನಸ್ಸನ್ನು ಒಲಿಸಿಕೊಂಡು ತಮ್ಮ ಪ್ರತಿಭಾ ಪಾಂಡಿತ್ಯಪೂರ್ಣ ವಾಕ್‌ವೈಖರಿಯಿಂದ ವಿಶ್ವವನ್ನು ತಲೆದೂಗುವಂತೆ ಮಾಡಿದರು. ಗುರು ವಹಿಸಿದ್ದ ಕಾರ್ಯದಲ್ಲಿ ಯಶಸ್ವಿಯಾಗಿ ಕೀರ್ತಿ ಭಾಜನರಾದರು ವಿವೇಕಾನಂದ.

ಗಾಂಧೀಜಿ ಅವರ ಮೆಚ್ಚಿನ ಶಿಷ್ಯ, ಒಡನಾಡಿ ಜವಹರಲಾಲರ ಮತ್ತು ಅವರ ನಿಸ್ಸೀಮ ರಾಷ್ಟ್ರಭಕ್ತ ಅನುಯಾಯಿಗಳ ಅವಿಶ್ರಾಂತ ದುಡಿಮೆಯ ಕಾರಣದಿಂದ ೧೯೪೭ನೇ ಆಗಸ್ಟ್ ೧೫ರಂದು ಭಾರತ ವಿಶ್ವದ ಉಳಿದ ಉನ್ನತ ರಾಷ್ಟ್ರಗಳ ಶ್ರೇಣಿಯಲ್ಲಿ 'ಸ್ವತಂತ್ರ ಭಾರತ'ವಾಗಿ ಮೆರೆಯಿತು. ಭಾರತ ಸ್ವಾತಂತ್ರ್ಯಕ್ಕಾಗಿ ಜವಹರರು ರಾಷ್ಟ್ರಕ್ಕೆ ಜನತೆಗೆ ಸಲ್ಲಿಸಿದ ಸೇವೆ, ಅರ್ಪಿಸಿದ ಬಲಿದಾನ, ಅನುಭವಿಸಿದ ಕಷ್ಟನಷ್ಟಗಳು ಅಲ್ಪವೂ ಅಲ್ಲ, ಮರೆಯುವಂತಹವೂ ಅಲ್ಲ, ರಾಷ್ಟ್ರೋದ್ಧಾರಕ್ಕಾಗಿ ಸಮಸ್ತ ಆಸ್ತಿಯನ್ನು ನಿಸ್ವಾರ್ಥ ಭಾವನೆಯಿಂದ ಭಾರತ ದೇವಿಯ ಮಡಿಲಿಗೆ ಅರ್ಪಿಸಿದ ಮಹಾತ್ಯಾಗ ಜೀವಿ ಜವಹರರು.

ಭಾರತೀಯರಲ್ಲಿ ಉಳಿದಿದ್ದ ಕೀಳು ಭಾವನೆ, ಮೂಢ ಸಂಪ್ರದಾಯ, ನಿಸ್ತೇಜ ಮನೋಭಾವ, ಕಪಟತನಗಳನ್ನು ಕಂಡ ವಿವೇಕಾನಂದರು ಕ್ಷುದ್ರರಾಗಿ ತಮ್ಮ ಸಿಂಹ ವಾಣಿಯಲ್ಲಿ ಘರ್ಜಿಸಿದರು— "ಏಳಿ. ಗುರಿ ಮುಟ್ಟುವ ವರೆಗೆ ನಿಲ್ಲದೆ ಹೋರಾಡಿ. ನಾನು ಭಾರತೀಯ. ಭಾರತೀಯರು ನನ್ನ ಸಹೋದರರು, ಮೂಢ ಭಾವನೆ-ಕಲ್ಪನೆಗಳನ್ನು ದೂರ ಮಾಡಿ ಭಾರತೀಯರಾಗಿ ಬಾಳಿ-ಆ ಸಮಸ್ತ ದೇವತೆಗಳನ್ನು ಮರೆತು ದೀನ, ದುರ್ಬಲ, ದಲಿತರೇ ದೇವರೆಂದು ಪೂಜಿಸಿ" ಎನ್ನುವ ಸಂದೇಶ ಸಾರಿದರು. ಅವರ ಒಂದೊಂದು ವಾಕ್ಯವೂ ಭಾರತೀಯನ ನರನಾಡಿಯಲ್ಲಿಯೂ "ಸ್ವಾಭಿಮಾನ, ಆತ್ಮ ಗೌರವ. ತೇಜಸ್ಸು, ಹೆಮ್ಮೆ, ಧೈರ್ಯ, ಸ್ಥೈರ್ಯ" ಗಳನ್ನು ಹೊಡೆದೆಬ್ಬಿಸುತ್ತದೆ. ನಮ್ಮ ಧರ್ಮವನ್ನೂ ಮರೆಯದೆ, ನಿಷ್ಕಪಟತನದಿಂದ, ಮಾನವರಾಗಿ ಅದರಲ್ಲಿಯೂ ಭಾರತೀಯರಾಗಿ ಬಾಳಿ ಎಂಬುದಕ್ಕಾಗಿಯೇ ತಮ್ಮ ಕಂಚಿನ ಕಂಠದಿಂದ 'ಎದ್ದೇಳು ಭಾರತೀಯ' ಎಂದು ಕರೆದರು. ಕನ್ಯಾಕುಮಾರಿಯ ಏಕ ಶಿಲೆಯ ಮೇಲೆ ಮೂರು ದಿನಗಳ ಕಾಲ ಕುಳಿತು, ತಪಸ್ಸು ಮಾಡಿ ಭವಿಷ್ಯತ್ ಭಾರತದ ಭವ್ಯ ಚಿತ್ರವನ್ನೂ ರೂಪಿಸಿಕೊಂಡು ಸಮಗ್ರ ಭಾರತವನ್ನು ಸುತ್ತಿ ಬದರಿ ಕೇದಾರದ ವರೆಗೆ ತಮ್ಮ ಪ್ರವಾಸ ಕಾಲದಲ್ಲಿ ಜನತೆಗೆ ವೀರ ಮಂತ್ರವನ್ನು ಉಪದೇಶಿಸಿ ಜನಜಾಗೃತಿಗೆ, ಧರ್ಮದ ಪುನರುದ್ಧಾರಕ್ಕೆ ಕರೆಯಿತ್ತರು ವೀರ ಸನ್ಯಾಸಿ ವಿವೇಕಾನಂದರು.

ಚಿಕ್ಕ ಸಂಸಾರವನ್ನು ತೊರೆದು ವಿಶ್ವ ಕುಟುಂಬಿಯಾದ ಜವಾಹರರು ವಿಶ್ವ ಪರ್ಯಟನೆಯನ್ನು ಮಾಡಿ ಮಾನವತೆಯ ಉದ್ಧಾರಕ್ಕೆ, ಲೋಕ ಶಾಂತಿಗೆ ವಿಶ್ವದ ಅಧಿನಾಯಕರ ಸಹಕಾರ ಬೇಡಿದರು. ಜವಹರರ ನಿಷ್ಕಪಟ ಸ್ವಭಾವ ಅನುಸರಿಸಿದ ತಾಟಸ್ಥ್ಯ, ಧೋರಣೆ, ವಿಶ್ವ ಸಹಕಾರ ಜೀವನದ ರೂಪರೇಷೆ, ವಿಶ್ವದ ಸುಖ, ಶಾಂತಿ, ಸಂಮೃದ್ಧಿಗಳಿಗಾಗಿ ಅನುಸರಿಸಿದ ಮಾರ್ಗ— ಈ ಕಾರಣಗಳಿಂದ ವಿಶ್ವದಲ್ಲಿ ಭಾರತಕ್ಕೆ ಪ್ರಾಧಾನ್ಯತೆ ದೊರೆತುದು ಮಾತ್ರವಲ್ಲ. ಭಾರತದ ವಿಶ್ವ ಶಾಂತಿ ಸಾಧನೆಯ ಏಕೈಕ ಆಧಾರ ಸ್ತಂಭವಾಯಿತು. ವಿಶ್ವ ರಾಜಕಾರಣ ವಲಯಗಳಲ್ಲಿ ಜವಹರರು ಆಗ್ರ ಶಾಂತಿದೂತರಾಗಿದ್ದರು. ತನಗಾಗಿ ತನ್ನ ರಾಷ್ಟ್ರಕ್ಕಾಗಿ ದುಡಿದ ಸಂಕುಚಿತ ಭಾವನೆಯ ಮುತ್ಸದ್ದಿತನದಲ್ಲಿ ಜವಹರರು ವಿಶ್ವವೇ ತನ್ನ ಕುಟುಂಬವೆಂದು ತಿಳಿದು ವಿಶ್ವದ ಶಾಂತಿಯನ್ನೇ ಬಯಸಿ ಅದಕ್ಕಾಗಿಯೇ ಅವಿಶ್ರಾಂತವಾಗಿ ದುಡಿದ 'ವಿಶ್ವ ಬಂಧು'

ವಿಶ್ವದ ಧರ್ಮ, ಅಧ್ಯಾತ್ಮಿಕ ಲೋಕದ ಮೇಲೆ ವಿಶೇಷ ಬೆಳಕು ಬೀರಿ, ಭಾರತೀಯ ವೇದಾಂತಕ್ಕೆ ಅಥವಾ ಅಧ್ಯಾತ್ಮಿಕ ಶಕ್ತಿಗೆ ಪ್ರಭಾವ ಪೂರ್ಣ ಪಾತ್ರವನ್ನಿತ್ತು ಮೆರೆದ ಸ್ವಾಮಿ ವಿವೇಕಾನಂದರು ೧೯೦೨ನೇ ಜುಲೈ ೪ರಂದು ಜೀವನ್ಮುಕ್ತರಾದರು.

ಭಾರತದ ಏಳಿಗೆ, ಸಂಪದ್ಭರಿತ ಸಮಾಜದ ನಿರೂಪಣೆ, ಭಾರತ ಮತ್ತು ಭಾರತೀಯರ ಶ್ರೇಯಸ್ಸನ್ನು ಮಾತ್ರವಲ್ಲದೆ ವಿಶ್ವ ಶಾಂತಿ, ಲೋಕದ ಅಹಿಂಸಾತ್ಮಕ ಸ್ನೇಹಪೂರ್ಣ ಸಹಜೀವನದ ಕನಸು ಕಾಯುತ್ತಿದ್ದ ಪಂಡಿತ ಜವಹರರು ೧೯೬೪ನೇ ಮೇ ೨೭ರಂದು ಅನಂತ ಶಾಂತಿಯಲ್ಲಿ ಲೀನರಾದರು.

ವೇದಾಂತ ರಂಗದ ಮೂಲಕ ವಿವೇಕಾನಂದರು, ರಾಜಕೀಯ ರಂಗದ ಮೂಲಕ ಜವಹರಲಾಲರು ಸಲ್ಲಿಸಿದ ಸೇವೆ, ಆಯಾ ಕ್ಷೇತ್ರಗಳಲ್ಲಿ ವಹಿಸಿದ ಪ್ರಮುಖ ಪಾತ್ರ, ಗಳಿಸಿ ಕೊಟ್ಟಿರುವ ಮಾನ್ಯತೆ ಹೆಮ್ಮೆಪಡುವಂತಹದು ಮಾತ್ರವಲ್ಲ, ಅಸದೃಶವಾದುದು. ಆ ಪುಣ್ಯ ಜೀವಿಗಳ ಜೀವನ, ಸೇವೆ ಪ್ರತಿಯೊಬ್ಬ ಸಾಧಕನ ಮಾರ್ಗಕ್ಕೆ ದಾರಿ ತೋರುವ ಕೈದೀವಿಗೆಗಳು.

ಅಮರನಾಥದ ಗುಹೆಯಲ್ಲಿ ವಿವೇಕಾನಂದ, ಜವಹರರಿಗೆ ಯುಗಪುರುಷರಿಗೆ ದೊರೆಯುವ ಅನುಭವ ದೊರೆಯಿತು. ಇಬ್ಬರ ಕ್ಷೇತ್ರ, ಅನುಸರಿಸಿದ ದಾರಿ ಭಿನ್ನವಾಗಿರಬಹುದು, ಆದರೆ ಅವರು ತಲುಪಿದ ಗುರಿ ಒಂದೇ ಆಗಿದೆ. 'ನದೀ ನಾಂ ಸಾಗರೋ ಗತಿಃ' ಅಲ್ಲವೆ?

ವಿವೇಕಾನಂದರನ್ನಾಗಲಿ, ಜವಹರರನ್ನಾಗಲಿ ಬಾಹ್ಯ ಚಕ್ಷುಗಳಿಂದ ಕಾಣುವಂತಿಲ್ಲ. ಅವರು ತಮ್ಮ ಕರ್ತವ್ಯವನ್ನು ಮುಗಿಸಿ ಅಮರರಾಗಿದ್ದಾರೆ. ಅವರ ಜೀವನ ಬೆಳದು ತೋರುವ ನಂದಾ ದೀವಿಗೆ. ಬೆಳಕಿಲ್ಲದ ಕತ್ತಲ ಹಾದಿಯಲ್ಲಿ ಸಾಗುವುದು ಕಷ್ಟ, ಆದರೆ ಬೆಳಕು ತೋರುವ ದಾರಿಯಲ್ಲಿ ಸಾಗಿದರೆ ಗುರಿಯನ್ನು ತಲುಪಬಹುದಷ್ಟೆ?

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್.

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— **ಸಂತೆಕಟ್ಟೆ, ಉಡುಪಿ.**

ಕಟ್ಟುವೆವು ಹೊಸತು ರಾ

ಶತಮಾನಗಳ ಬಯಕೆ
ಮತ್ತೆ ಹೊತ್ತಿಹ ಹರಕೆ
ಹಣ್ಣಾ ತಾನಾ ದತ್ತು ಭರತ ಮಾತೆ
ಬಿಳಿಯರಾಳ್ವಿಕೆ ತೊಲಗಿ
ಸ್ವಾತಂತ್ರ್ಯ ಶ್ರೀ ಬೆಳಗಿ
ನಾವಂದು ಹಾಡಿದೆವು ವಿಜಯ ಗೀತೆ

ಸ್ವಾತಂತ್ರ್ಯವನು ಪಡೆದು
ತನ್ನ ಮಕ್ಕಳು ಬಳೆದು
ಮುಂದಕಾಳಲಿ ಎಂದು ನೀ ಹರಸಿದೆ
ತುಂಡರಸುತನ ತೊಲಗಿ
ಗಣರಾಜ್ಯ ಬಂತೊದಗಿ
ತಾಯಿ ನಿನ್ನಯ ಹರಕೆಯದು ಫಲಿ

ಸ್ವಾತಂತ್ರ್ಯ ಬರೆ ಮತ್ತೆ
ಆಗಲು ಪ್ರಜಾಸತ್ತೆ
ಸಂತಸದಿ ನಿನ್ನ ಶ್ರೀಮುಖವ ಕಂಡು
ನಲಿದಾಡಿದೆವು ತಾಯೆ
ಗುಣಗಾನ ಮಾಡಿದೆವು
ಹಿಡಿದೆತ್ತಿ ಬಾವುಟವ ಹರ್ಷಗೊಂಡು

ಗಣರಾಜ್ಯ ಭಾರತದಿ
ಓಟನೊಂದರ ಬಲದಿ
ಹಣವಂತನಾಗಿಹನು ದೊಡ್ಡ ಮಂತ್ರಿ
ಅವನೆ ಶಾಸನಕಾರ
ಅದನವನು ಕುಬೇರ
ಮಿಡಿಯುತಿದೆ ಬಡ ಜನರ ಹೃದಯ
ತ

ಹೊಟ್ಟೆಗಿಲ್ಲದೆ ಅನ್ನ
ಜನತೆ ಪಡುತಿರೆ ಬನ್ನ
ಅಂದು ಪ್ರಧಾನಿ ಜವಹರನು ಆಳದ
ಪಾಕಿಚೀನಿಗಳಿಂದ
ಹೃದಯದಲಿ ಬಲು ನೊಂದ
ಶಾಸ್ತ್ರಿ ತಾನಿಂದು ಕೊನೆಯುಸಿರೆಳೆ

ದೈವ ತಳೆದಿರೆ ಮುನಿಸು
ಆಯ್ತು ತಿರುಕನ ಕನಸು
ಗಾಂಧಿ ಕನಸನು ಕಂಡ ರಾಮರಾಜ್ಯ
ಬಂದ ಕಷ್ಟವ ಹರಿಸು!
ಭುವನೇಶ್ವರಿಯೆ ಹರಸು
ಭಾರತದಿ ಕಟ್ಟುವೆವು ಹೊಸತು ರಾಜ

—ಶ್ರೀ ಎಸ್. ತಿರುಮಲೇಶ್ವರ ಭ
ವಿದ್ವಾ

ಫೇಶನ್ ಎಂಬುದು ದರ್ಶನ ವಿಜ್ಞಾ ಇದರಲ್ಲಿ ತಾನು ಹೇಗಿರಬೇಕೆಂಬು ಪ್ರಾಮುಖ್ಯವಲ್ಲ; ತಾನು ಹೇಗೆ ಕಾ ಕೊಳ್ಳಬೇಕೆಂಬುದು ಮುಖ್ಯ.

—ಟಿವಿ

○ ○ ○

ಅತೀ ಯೋಗ್ಯನೆಂದೆನಿಸಿಕೊಂಡ ಪಾಪಗಳನ್ನೆಲ್ಲಾ ಆತನ ಹಣೆಯಲ್ಲಿ ದುದಾದರೆ ಆತನು ಸದಾ ಹಣೆ ಮು ವಂತೆ ಟೋಪ್ಪಿ ಧರಿಸುತ್ತಿದ್ದನು.

—

○ ○ ○

ತಾನು ತಪ್ಪೇ ಮಾಡುವುದಿಲ್ಲವೆಂ ತೋರಿಸಿಕೊಳ್ಳುವವನು ಒಂದೋ ಗೇಡಿ ಇಲ್ಲವೇ ಕಪಟಿ, ಅಂಥಾವರ ಎಂದೂ ನಂಬಬಾರದು.

—ಜೂಪಟ್

ತೊಟ್ಟಿಲು ತೂಗಿದ ಕೈ....

(ನಾಲ್ಕನೇ ಪುಟದಿಂದ)

ದರೆ ನೂರಾರು ವರ್ಷಗಳೇ ಕಳೆಯ ಬೇಕಾದೀತು.'

"ಅಂದ್ರೆ ... "

"ಪುತ್ತೆಂಥದು ? ಯಾವ ಕಾಯಿದೆ ಯೇ ಬರ್ಲಿ, ಜನರ ಸಹಕಾರವಿಲ್ಲವಾದ್ರೆ ಏನು ಸಾಧಿಸೀತು ? "

" ಅದಿರ್ಲಿ. ಸದ್ಯ ಇಂದಿರಾಳ ಸರಕಾರ ದ ಬಗ್ಗೆ ನಿಮ್ಮ ಅಭಿಪ್ರಾಯ ? "

' ನನ್ನ ಅಭಿಪ್ರಾಯ? ಯಾಕೆ ? "

" ಎಷ್ಟಾದ್ರೂ ಆಕೆ ನಮ್ಮ ಸ್ತ್ರೀಜಾತಿಗೆ ಸೇರಿದವ್ಳು ...."

'ಹ್ಞಾ ಇದೇ ಅಭಿಮಾನ ಎಲ್ಲ ಹೆಂಗಸ್ರಲ್ಲೂ ಉಳಿದಿದ್ರೆ, ತಮ್ಮ ಗಂಡಂದಿರನ್ನು ಕುಮಾರ್ಗಕ್ಕೆ ಎಳೆಯೋ ಸಾಹಸ ಮಾಡುವುದಿಲ್ಲ...'

"ಅಂದ್ರೆ....'

'ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ನಡೆಯುತ್ತಿರೋ ದೇಶದ ಸಾಧನ ಸಂಪತ್ತು ಸದ್ವಿನಿಯೋಗವಾಗಬೇಕು; ಭೋಗ ವಿಲಾಸಗಳು ಕಡಿಮೆಯಾಗಬೇಕು. ಅದರೆ ಇದಕ್ಕೆ ಹೆಂಗಸೇ ಕುತ್ತಾರಪ್ರಾಯಗಳು ಎಂಬುದು ಅನುಭವ ವೇದ್ಯ..."

"ಸಾಕು ಬಿಡೀಂದ್ರೆ... ಹಾಗಿದ್ರೆ ಹೆಂಗಸ್ರನ್ನೆಲ್ಲಾ ತಲೆ ಕಡಿಸಿ ಬಿಡ್ಲಿ. ಎಂದಾದ್ರೂ ಸಾಯ್ಬೇಕು...'

"ಹಾಗಲ್ವೆ, ಸುಂಸುಮ್ನೆ ರೇಗಬೇಡ. ಬೇಸರಿಸಬೇಡ. ಸಾಮಾನ್ಯವಾಗಿ ಅದು-ಇದೂಂತ ಅನಾವಶ್ಯಕವಾಗಿ ಹಣದ ಚೀಲಕ್ಕೆ ಕತ್ತರಿ ಇಡುವವರು ಹೆಮ್ಮಕ್ಕಳೂಂದ. ಅಷ್ಟೆ."

'ಹೌದು,ಹೌದು ಗಂಡು ಮಕ್ಕಳು ಕಡಿಮೆಯಲ್ಲಿದ್ದಾರೆ..."

'ಈಗ ಅವ್ರೂ ಕಲ್ತು ಕೊಂಡಿದ್ದಾರೇನ್ನ. ಆದ್ರೆ ನೋಡು, ಮಕ್ಕಳ ಸ್ಕೂಲು ಮನೇಲಿ. ಮನೇ ಒಡ್ತಿ ಮಹದಿ...'

"ಹೀಗೆಲ್ಲಾ ಹೇಳಿಯೋ ಹೆಂಗಸನ್ನು ಹಿಂದೆ ತಳ್ಳಿರೋರು ನೀವೆಲ್ಲ..."

ಹ್ಞಾ...ಆಯ್ತು. ಅದ್ರ ಪ್ರಾಯಶ್ಚಿತ್ತವನ್ನು ಮಾಡೋಕಂದೇ ನಾತ್ರ ಇಂದಿರಾನ ಪ್ರಧಾನಿ ಮಾಡಿಕೊಂಡೆವು ತನ್ಮೂಲಕ ಹಲವಾರುಮಹಿಳೆಯರು ಮಂತ್ರಿಗಳಾದರು..."

"ಮಂತ್ರಿಯಾಗೋದೊಂದು ದೊಡ್ಡ ಕೆಲ್ಸ. ಅಲ್ಲಿ ಯಾವ ಗಳಿಗೆಯಲ್ಲಿ ಹೊರಓಡಿ ಬರಬೇಕಿತ್ತೋ ಏನೋ! ಅಂತಹ ಹುದ್ದೆಗೇರಿ ಸಾಧಿಸೋ ಮಾಕಾರ್ಯವೇನು?

"ಏನೂ ಇಲ್ವೆ? ಹಾಗಾದರೆ..."

"ಏನೂ ಇಲ್ಲ. ಮಹಿಳೆಗೆ ಮಾತಾಯಿಯಾಗಿ ಬಾಳೋದೇ ಮುಖ್ಯ. ಉಳಿದಿಲ್ಲ ಗೌಣ."

"ಹಾಗಾದರೆ, ಇಂದಿರಾ..."

"ಆಕೆ ಮಾತಾಯಿಯೋ ಅಲ್ಲವೆ?"

'ಇಲ್ಲಿಗೆ ಸರಿಯಾಯಿತು...."

"ಏನು?"

"ತೊಟ್ಟಿಲು ತೂಗಿದ ಕೈ ದೇಶವನ್ನು ಕಟ್ಟಬಲ್ಲದು."

"ಹ್ಞಾಂ, ನನಗೆ ಬೇಕಾದ್ದು ಸಿಕ್ಕಿತು. ಸಾಕು ಇನ್ನು, ಬನ್ನಿ..."

"ಹ್ಞಾ ಬಂದೇನ್ನು..."

—ಗೋರಾ.

ಹೈಸ್ಕೂಲ್ ವರ್ಧಂತಿ

ಹೆಜಮಾಡಿ: ಸ್ಥಳೀಯ ಬೋರ್ಡ್ ವಿವಿಧೋದ್ದೇಶ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 12-3-1966ರಂದು ಮೈಸೂರು ವಿಧಾನ ಸಭಾ ಸದಸ್ಯ ಶ್ರೀ S. ಧರ್ಮಸಾಮ್ರಾಜ್ಯ, ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಿತು. ಪೂರ್ವಾಹ್ನ ಜನಾಬ್ ಹಾಜೀ ಹುಸ್ಸೇನ್ ಇಬ್ರಾಹಿಂ, ಅವರು ರಾಷ್ಟ್ರಧ್ವಜವನ್ನು ಆರೋಹಿಸಿದರು. ತರುವಾಯ ಮಕ್ಕಳ ಛದ್ಮವೇಷ ಸ್ಪರ್ಧೆ ನಡೆದು ಉಪಾಹಾರವಾಯಿತು. ಅಪರಾಹ್ನ ಸಭಾ ಕಾರ್ಯಕ್ರಮವು ಪ್ರಾರಂಭಿಸಲ್ಪಟ್ಟು ಮಾನ್ಯ ಅಧ್ಯಕ್ಷರಿಗೆ ಮತ್ತು ಪ್ರಮುಖ ಅತಿಥಿಗಳಿಗೆ ಹಾರಾರ್ಪಣೆಯಾಗಿ ಶ್ರೀ ವೈ. ಕೆ. ಸಟ್ಟಿ, ವಿದ್ವಾನ್ ಅವರು ಸ್ವಾಗತ ಭಾಷಣವನ್ನು ಮಾಡುತ್ತಾ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಮುಖ್ಯೋಪಾಧ್ಯಾಯ ಶ್ರೀ ಜೆ. ಯಂ. ಸಟ್ಟಿ M.A., ಅವರು ಶಾಲೆಯ ಪ್ರಗತಿಪರವಾದ ವರದಿಯನ್ನು ಸಭೆಯ ಮುಂದಿಟ್ಟರು. ಶ್ರೀ ಬಿ. ಆರ್. ಭಟ್ಟರು ಶಾಲಾ ಹಿತೈಷಿಗಳಿಂದ ಬಂದ ಸಂದೇಶಗಳನ್ನು ಓದಿ ಹೇಳಿದರು. ಈ ಶಾಲೆಯ ಪ್ರಾಕ್ತನ ವಿದ್ಯಾರ್ಥಿ ಶ್ರೀ ಸುರೇಶ ಶೆಟ್ಟರು ಸ್ವಸ್ತಿವಾಚನ ಮಾಡುತ್ತಾ ಸವಿನೆನಪುಗಳನ್ನು ಸ್ಮರಿಸಿದರು.

ತರುವಾಯ ಸುಮಾರು ರೂಪಾಯಿ 700/- ರಷ್ಟರ ವೆಚ್ಚದಿಂದ ಜನಾಬ್ ಹಾಜಿ ಹುಸ್ಸೇನ್ ಇಬ್ರಾಹಿಂ ಅವರು ಶಾಲಾ ಮುಂಭಾಗದಲ್ಲಿ ಕಟ್ಟಿಸಿಕೊಟ್ಟ ಗೇಟನ್ನು ಶ್ರೀ ಯಂ. ಆರ್. ಎಚ್. ಪೂಂಜರವರು ಉದ್ಘಾಟಿಸಿದರು. ಶಾಲೆಯಲ್ಲಿ ಈ ಚಾಲ್ತಿ ವರ್ಷದಿಂದ ಆರಂಭಿಸಲ್ಪಟ್ಟ ಟೈಪ್ ರೈಟಿಂಗ್ ಕ್ಲಾಸನ್ನು ವಿಧಾನ ಸಭಾ ಸದಸ್ಯ ಶ್ರೀಮಾನ್ ಬಿ. ಭಾಸ್ಕರ ಸಟ್ಟರು ತೆರೆದರು. ಆ ಮೇಲೆ S.S.L.C. ಪರೀಕ್ಷೆಯಲ್ಲಿ ಅತ್ಯಧಿಕ ಗುಣಗಳನ್ನು ಗಳಿಸುವ ಮೂಲ್ಕಿ ವಲಯದ ಶಾಲೆಗಳಿಗೆ ಎಂದು ದಿ। ಯಂ. ರಾಮಕೃಷ್ಣ ಪೂಂಜರವರ ಸ್ಮಾರಕವಾಗಿ ಅವರ ಚಿರಂಜೀವಿಗಳು ಒದಗಿಸಿರುವ ಪರ್ಯಾಯ ಫಲಕದ ವಿತರಣೆಯನ್ನು ಕಳೆದ ಮೂರು ವರ್ಷಗಳಲ್ಲೂ ಅರ್ಹತೆಯನ್ನು ಹೊಂದಿರುವ ಈ ಶಾಲೆಗೆ (ಅದು ಖಾಯಂ ಆಗಿರುತ್ತದೆ) ವಿಧಾನ ಸಭಾ ಸದಸ್ಯರಾದ ಡಾ| ಸಂಜೀವನಾಥ ಐಕಳ್ ಅವರು ನೆರವೇರಿಸಿದರು. ಶಾಲೆಯ ಆಟ ಪಾಟಗಳಲ್ಲಿ ಅಭಿವೃದ್ಧಿಯನ್ನು ಹೊಂದಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶ್ರೀ ಬಿ. ಭಾಸ್ಕರ ಶೆಟ್ಟಿ, M. L. A. ಅವರು ಬಹುಮಾನ ವಿತರಣೆಯನ್ನು ಮಾಡಿದ ಮೇಲೆ ಮಾನ್ಯ ಅತಿಥಿಗಳು ಶಾಲಾ ಸರ್ವತೋಮುಖವಾದ ಅಭಿವೃದ್ಧಿಯನ್ನು ಶ್ಲಾಘಿಸಿ ಸಮಯೋಚಿತ ಮಾತನಾಡಿದ ತರುವಾಯ ಸಭಾಧ್ಯಕ್ಷರು ಶಾಲಾ ಪ್ರಗತಿ ಮತ್ತು ಚಟುವಟಿಕೆಗಳಿಗೆ ತನ್ನ ಮೆಚ್ಚುಗೆಯನ್ನು ಸೂಚಿಸಿ ಪ್ರಶಂಸನೀಯವಾದ ಭಾಷಣವಿತ್ತ ಮೇಲೆ ಬಾಲಕಿಯರಿಂದ ನೃತ್ಯ, ಕನ್ನಡ ಸಂಗೀತ ನಾಟಕ, ವಿದ್ಯಾರ್ಥಿಗಳ ಹಿಂದಿ, ಯಕ್ಷಗಾನ, ಪ್ರಹಸನ, ತುಳು ಸಾಮಾಜಿಕ ನಾಟಕ ಮತ್ತು ಹಳೇ ವಿದ್ಯಾರ್ಥಿಗಳ ನಾಟಕಾಭಿನಯಗಳು ನಡೆದು ಧನ್ಯವಾದ ಸಮರ್ಪಣೆ, ರಾಷ್ಟ್ರಗೀತೆಗಳೊಂದಿಗೆ ಅತ್ಯಂತ ಯಶಸ್ವಿಯಾಗಿ ಅಂದಿನ ಸಮಾರಂಭವು ಕೊನೆಗೊಂಡಿತು.

ಉಡುಪಿಗೆ ಪಂಡರೀ ಬಾಯಿಯವರ ನಾಟಕ ಮಂಡಳಿ

ಉಡುಪಿ ಸ್ಥಳೀಯ ಸಂಗೀತ ಸಭಾದ ವಿಶೇಷ ಸಭೆಯೊಂದು ಇತ್ತೀಚೆಗೆ ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರ ಹಿರಿತನದಲ್ಲಿ ಜರಗಿ ಇದೇ ಮಾರ್ಚ ತಿಂಗಳ ಮೊದಲ ವಾರದಲ್ಲಿ ಕನ್ನಡದ ಹೆಸರಾಂತ ಚಲಚಿತ್ರ ತಾರೆ ಶ್ರೀಮತಿ ಎಂ. ಪಂಡರೀ ಬಾಯಿಯವರ ನೇತೃತ್ವದಲ್ಲಿರುವ ಮದರಾಸಿನ ಶ್ರೀ ಕೃಷ್ಣ ಚೈತನ್ಯ ನಾಟಕ ಸಭಾ ಇವರ ಐದು ನಾಟಕಗಳನ್ನು ಉಡುಪಿಯಲ್ಲಿ ಏರ್ಪಡಿಸುವ ನಿರ್ಣಯ ಮಾಡಲಾಯಿತು. ಕಳೆದ ದಶಂಬರ ತಿಂಗಳಲ್ಲಿ ನಡೆಯಬೇಕಾಗಿದ್ದ ಮೇಲಿನ ಮಂಡಳಿಯ ನಾಟಕಗಳನ್ನು ಮಳೆ, ಗಾಳಿಯ ಪ್ರಯುಕ್ತ ಮುಂದೂಡಬೇಕಾಗಿ ಬಂದಿತ್ತು. ಇದೀಗ ಮಾರ್ಚ ತಾ. 1ರಿಂದ 5ರ ವರೆಗೆ 'ಶಾಂತಿ ನಿವಾಸ' ಮತ್ತು 'ಭಕ್ತ ಮೀರಾ' ಎಂಬ ಸಾಮಾಜಿಕ ಮತ್ತು ಚಾರಿತ್ರಿಕ ನಾಟಕಗಳನ್ನು ಉಡುಪಿಯ ವಿ. ಜಿ. ಯು. ಕ್ಲಬ್ಬಿನ ವಠಾರದಲ್ಲಿ ಜರಗಿಸುವ ನಿರ್ಣಯಮಾಡಲಾಯಿತು. ಕ್ಲಬ್ಬಿನ ವಠಾರದಲ್ಲಿ ವಿಶಾಲವಾದ ನೂತನ ರಂಗಮಂಟಪವನ್ನು ರಚಿಸಬೇಕೆಂದು ನಿರ್ಧರಿಸಲಾಯಿತು. ಮಾರ್ಚ ತಾ. 6ರಿಂದ 8ರ ವರೆಗೆ ಕುಂದಾಪುರದಲ್ಲಿ ಅಲ್ಲಿಯ ಮಿತ್ರ ಮಂಡಳಿಯ ಆಶ್ರಯದಲ್ಲಿ ಮೂರು ನಾಟಕಗಳನ್ನು ಜರಗಿಸಬೇಕೆನ್ನುವ ಗೊತ್ತುವಳಿ ಸಭೆಯಲ್ಲಿ ಸ್ವೀಕೃತವಾಯಿತು.

ಚಲಚಿತ್ರ ನಟ-ನಟಿಯರ ಈ ನಾಟಕ ತಂಡವು ಇದೇ ತಿಂಗಳ ತಾ. 28ರಂದು ಉಡುಪಿಗೆ ಆಗಮಿಸಲಿದ್ದು ಈ ತಂಡದಲ್ಲಿ ಪಂಡರೀ ಬಾಯಿ, ಮೈನಾವತಿ, ಕೆ. ಎಸ್. ಅಶ್ವಥ್, ಬಿ. ರಮಾದೇವಿ, ರಾಜಾಶಂಕರ್, ಕುಮಾರಿ ರಮಾ, ವಿ. ಆರ್. ಲಕ್ಷ್ಮೀದೇವಿ, ಕುಪ್ಪುರಾಜ್, ಈಶ್ವರಪ್ಪ, ಭಾಸ್ಕರ್, ರತ್ನಾಕರ್, ಬಿ. ಸರಳಾ, ಜಯಾ, ಬೆಂಗಳೂರು ನಾಗೇಶ್ ಮೊದಲಾದ ಸುಮಾರು 25ಕ್ಕೂ ಮಿಕ್ಕಿದ ಸಮರ್ಥ ಕಲಾವಿದರಿದ್ದಾರೆ.

ಹಳೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವ

ಉಡುಪಿ ಕಡಿಯಾಳಿ ಹಾ. ಎ. ಶಾಲಾ ಹಳೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಜೀವವಿಮಾ ಕೋರ್ಪರೇಶನಿನ ಡಿವಿಜನಲ್ ಮೆನೇಜರರಾದ ಶ್ರೀ ಪಿ. ಎಸ್. ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ತಾ. 13ರಂದು ಜರಗಿತು.

ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎಸ್. ಸದಾಶಿವ ರಾಯರು ವರದಿವಾಚನ ಮಾಡಿದರು. ಸಂಘದ ಚಟುವಟಿಕೆಗಳ ಕುರಿತು ಅಧ್ಯಕ್ಷರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶ್ರೀಮತಿ ಸುಶೀಲಾರಾಮಚಂದ್ರ ರಾವ್‌ರವರು ಬಹುಮಾನ ವಿತರಣೆ ಮಾಡಿದರು.

ಮನರಂಜನೆಯ ಕಾರ್ಯಕ್ರಮಗಳ ಕೊನೆಯಾಯ ಹಳೆ ವಿದ್ಯಾರ್ಥಿಗಳಿಂದ "ವಿಜಯನಗರದ ವೀರಪುತ್ರ" ಎಂಬ ಐತಿಹಾಸಿಕ ಸಂಗೀತ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಕಾರ್ಯದರ್ಶಿ ಶ್ರೀ ಎಸ್. ಸದಾಶಿವ ರಾಯರು ಧನ್ಯವಾದ ಅರ್ಪಿಸಿದರು.

ಮಹಾ ಸಭೆ

ಉಡುಪಿ ಕಡಿಯಾಳಿ ಹಾ. ಎ. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಮಹಾಧಿವೇಶನವು ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಸ್. ಸದಾಶಿವ ರಾಯರು ಸಂಘದ ವರದಿಯೊಪ್ಪಿಸಿದರು.

ಮುಂದಿನ ವರ್ಷಕ್ಕೆ 15 ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆರಿಸಿ ಬಳಿಕ ಶ್ರೀ ಕೆ. ಕೆ. ಪೈಗಳವರು ಸಂಘವು ಒಂದು ಮಾದರಿ ಹಳೆವಿದ್ಯಾರ್ಥಿ ಸಂಘವಾಗಿ ಮುಂದುವರಿಯುತ್ತಿರುವುದಕ್ಕೆ ಮೆಚ್ಚುಗೆಯನ್ನು ಸೂಚಿಸಿ ಹಳೆ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಉತ್ಸಾಹದಿಂದ ದುಡಿಯಬೇಕೆಂದು ಕರೆಯಿತ್ತರು. ದಿವಂಗತ ಲಾಲ ಬಹಾದೂರ್ ಶಾಸ್ತ್ರಿ ಮತ್ತು ಯು. ಎಸ್. ಮಲ್ಯರ ನಿಧನದ ಬಗ್ಗೆ ಸಂಘವು ಸಂತಾಪ ಸೂಚಕ ಠರಾವನ್ನು ಅಂಗೀಕರಿಸಿತು.

ಕಾರ್ಯದರ್ಶಿ ಶ್ರೀ ಎಸ್. ಸದಾಶಿವ ರಾಯರು ಧನ್ಯವಾದ ಸಮರ್ಪಿಸಿದರು.

ಬೇಕೆಂದು ತನ್ನ ಗೆಳೆಯನಿಗೆ ಮೋಸ ಮಾಡುವವನು ತನ್ನ ಸಂಬಂಧಿಕರಿಗೆ ಮಾತ್ರವಲ್ಲ; ತನ್ನ ದೇವರಿಗೂ ಮೋಸಮಾಡಬಲ್ಲ.

○ ○ ○

ಶಿಲುಬೆಗೇರಲು ಸಿದ್ಧವಿಲ್ಲದವನಿಗೆ ಶಿವನ ಕಿರೀಟವೆಲ್ಲಿ? ಮುಳ್ಳುದಾರಿಯ ತುಳಿಯಲಿಚ್ಛಿಸದವನಿಗೆ, ಪುಷ್ಪವೆಲ್ಲಿ? ನೋವು ಸಹಿಸಲು ಹಿಂಜರಿಯುವವನಿಗೆ ಜಯವೆಲ್ಲಿ ?

ಚಂದಾದಾರರಲ್ಲಿ ವಿನಂತಿ.

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 45ನೆಯ ಹೊಸ ವರ್ಷಾರಂಭವಾಗಿದೆಯಷ್ಟೆ! ಈ ಅವಧಿಗೆ ಯೂ ಆನಂತರ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇವೆ. ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ. ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕ್ರಮಶಃ ವಿ. ಪಿ. ಮಾಡಬೇಕಾಗುತ್ತದೆ. ಅದನ್ನು ದಯಮಾಡಿ ಸ್ವೀಕರಿಸುವಂತೆ ಕೇಳಿಕೊಳ್ಳುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ — ಸಂಪಾದಕ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

— "ದಾದಿ" —

೧

ಅಲೆ ಅಗ್ನಿಯ ಕುದಿಯ ಮೇಲೆ
ಹೋಮಿಸೆ ಕಂದ
ಕಾಷ್ಠದಿಂ ಒಣಗೊಣಗಿ
ಶುಷ್ಕಗೊಂಡಿರಲು;
ಭಾಷೆ, ಭರವಸೆ ನುಡಿಗಳೆಲ್ಲ ಪ್ರಪಾತದಲಿ
ಕುಸುಮಳಿಯದ್ಧಂತೆ ತಾ ಕೊಚ್ಚಿ
ಹೋಗಿರಲು.....

೨

ದೇಹ ಎಲುಬಿನ ಗೂಡು, ಅದರೊಳಗೆ
ಕಾನಿರುವೆ
ಎನುನ ಜೀವದ ನಾಡಿ ಮಿಡಿ
ಮಿಡಿಯುತಿರಲು,
ಮೋಹ ಹೃದಯದ ಮೋಹವನು
ತೊರೆದು, ನಾಡಾಡಿ
ತಾನೆನುತ ದಿಕ್ತಟದ ಕಡೆ
ನೋಡುತಿರಲು....

೩

ಶೂನ್ಯ ಕಣ್ಣಾಲಿಗಳು ನೋಟದಲಿ
ಶೂನ್ಯತಾ
ಭಾವವನು ಎಡೆಬಿಡದೆ ಹೊರ
ಸೂಸುತಿರಲು,
'ಕಾಣೆ ಚೈತನ್ಯವನು' ಎಂದು ನಿಟ್ಟುಸಿರು
ಜಡ
ಭಾವದಿಂ ತಣ್ಣನೆಯ ನೆಲೆ
ಕಾಣುತಿರಲು.

೪

ತುಟಿಗೊಂದು ತಿಳಿ ನಗೆಯು, ದೃಷ್ಟಿಯಲಿ
ಹೊಸ ಬೆಳಕು
ಹೃದಯ ಹಕ್ಕಿಯು ರೆಕ್ಕೆಯ ಪಡೆಯಿ
ತಂದು;
ನಟಿಯು ನಾಚಿಸೆ ಬಂದು; ಮಮತೆ
ಮೂರ್ತಿಯಿದೆಂಬ,
ದಾದಿ ಕುಲುಕುಲು ನಗುತ
ಬರುವುದನು ಕಂಡು.

೫

"ಏನು?" ಎನ್ನುವ ಮಾತು ಜೇನಿಗಿಂ
ಸವಿಯಿತ್ತು
ವೀಣೆಯೂ ಮಧುರ ಸ್ವರವನು
ನಾಚಿಸಿತ್ತು,
"ನಾನು" ಶಬ್ದಕೆ ಹೃದಯದುತ್ತರವ
ನಿತ್ತಿತ್ತು
ಕಣ್ಣೆವೆಯೊಳುದುರುತಿಶ್ರ ಮೌಲ್ಯ
ಮುತ್ತು!

೬

ನೆತ್ತಿ ಸೋಂಕಿದ ಬೆರಳು, ತೀಡೆ
ನಯದಿಂ ಕುರುಳು,
'ನಾನು ರೋಗಿ'ಯದೆಂಬ ಮಾತೆ
ಮರುಳು,
ಒತ್ತಿ ಹೇಳದ ಮಾತು, ಮನಸು
ಮನಸಿಗೆ ಗೊತ್ತು
ಏನಾದರೇನು ಆಕೆಯೊಳ ನಗೆಯೆ
ತಿರುಳು.
ಅದುವೆ ಪ್ರೇಮದ ಕರುಳು.

—ಶ್ರೀ ಎನ್. ಕೃಷ್ಣ ಮುಖಾರಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಕೆನರಾ ಬ್ಯಾಂಕಿನ
ಚಲಾವಣಾ ನಿಧಿ
ರೂ. 110 ಕೋಟಿಗಳಿಗೂ ಮಿಕ್ಕಿದೆ

31—12—1965ರಲ್ಲಿದ್ದಂತೆ

ಠೇವಣಾತಿಗಳು	...	ರೂ. 98.98	ಕೋಟಿಗಳು
ತೆತ್ತ ಪಾಲು ಭಂಡವಾಳ	....	ರೂ. 1.25	ಕೋಟಿಗಳು
ಕಾದಿಟ್ಟ ನಿಧಿ	....	ರೂ. 1.29	ಕೋಟಿಗಳು
ತೊಡಗಿಸಿದ ಭಂಡವಾಳ	....	ರೂ. 25.78	ಕೋಟಿಗಳು
ಮುಂಗಡಗಳು	....	ರೂ. 59.57	ಕೋಟಿಗಳು
ಚಲಾವಣಾ ನಿಧಿ	....	ರೂ. 111.04	ಕೋಟಿಗಳು
ನಿವ್ವಳ ಲಾಭ	....	ರೂ. 35.95	ಲಕ್ಷಗಳು

ಲೋಕದಾದ್ಯಂತ ಇರುವ 6 ಲಕ್ಷಕ್ಕಿಂತಲೂ ಮಿಕ್ಕಿದ ನಮ್ಮ ಗಿರಾಕಿಗಳ ಮಹಾ ವಿಶ್ವಾಸವೇ ಈ ಬ್ಯಾಂಕಿನ ಬೆಳವಣಿಗೆಗೆ ಕಾರಣ.

60 ವರ್ಷಗಳ ಸೇವೆಯಲ್ಲಿ
ತಾನು ಗಳಿಸಿದ ಅಪಾರ ಕೀರ್ತಿಯನ್ನು ಕಾಯ್ದುಕೊಳ್ಳುವುದಾಗಿಯೂ ಇನ್ನೂ ಹೆಚ್ಚಾಗಿ ಸೇವೆ ಸಲ್ಲಿಸುವುದಾಗಿಯೂ ಈ ಸಂದರ್ಭದಲ್ಲಿ ಕೆನರಾ ಬ್ಯಾಂಕು ಮತ್ತೊಮ್ಮೆ ಅಭಯ ನೀಡುತ್ತದೆ.

ಕೆನರಾ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ:
ಬೆಂಗಳೂರು

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು:
ಮಂಗಳೂರು

60 ವರ್ಷಗಳ ಸೇವೆ — ವಜ್ರ ಮಹೋತ್ಸವದ ವರ್ಷ

ಅಮೃತ ಬಿಂದು

ಆಹಾರ ಸೇವನೆಯ ರೀತಿ ನೀತಿಯ ಮೇಲೆ ಡಾಕ್ಟರರು ಮನುಷ್ಯನ ಆರೋಗ್ಯದ ಒಲವು ಸೆಲವುಗಳನ್ನು ಲೆಕ್ಕಿಸುತ್ತಾರೆ. ಅದರಂತೆ ಮನುಷ್ಯನ ಆಸೆ ಆಕಾಂಕ್ಷೆಗಳ ತಳಹದಿಯಲ್ಲಿ ಆತನ ಆತ್ಮದ ಪಕ್ವತೆಯನ್ನು ಬುದ್ಧಿವಂತರು ಅರಿಯುತ್ತಾರೆ.

o o o

ಭಯ ಮತ್ತು ಗಂಡಾಂತರದ ಸಮಯದಲ್ಲಿ ಮಾನವನೂ ಪ್ರಾಣಿಯೂ ಒಂದೇ ರೀತಿ ವ್ಯವಹರಿಸುತ್ತಾರೆ. ತಮಗೆ ಬೇಕಿರುವುದನ್ನು ಸಾಧಿಸುವುದರಲ್ಲಿಯೂ ಅವರಿಬ್ಬರ ಸ್ವಭಾವ ಒಂದೆ. ವ್ಯತ್ಯಾಸವಿಷ್ಟೆ; ಒಬ್ಬರದು ಮುಚ್ಚಿಕೊಂಡಿರುವ ಮುಷ್ಟಿಯಾದರೆ ಇನ್ನೊಬ್ಬರದು ನಗ್ನಮುಷ್ಟಿ.

o o o

ಎಷ್ಟೇ ಹಣವಿರಲಿ ಯಾವುದೇ ಅಧಿಕಾರವಿರಲಿ, ನಾವು ಅದನ್ನು ಸಂಪೂರ್ಣ ತೃಪ್ತಿಯಿಂದ ಅನುಭವಿಸುವುದೇ ಇಲ್ಲ. ಏಕೆಂದರೆ ಮನುಷ್ಯನ ಬಯಕೆಗಳಿಗೆ ಅಂತ್ಯವಿಲ್ಲ.

o o o

ಬಯಕೆಗಳು ಹೆಚ್ಚಾದಂತೆ ಅವುಗಳನ್ನು ಸಾಧಿಸುವ ಪ್ರಯತ್ನಗಳೂ ಹೆಚ್ಚಾಗುತ್ತವೆ. ಪ್ರಯತ್ನಗಳು ನಿಷ್ಫಲಗೊಂಡಾಗ ನಿರಾಸೆಯುತ್ಪನ್ನವಾಗುತ್ತದೆ. ನಿರಾಸೆಯಿಂದ ಜೀವನಕ್ಕೆ ಜಿಗುಪ್ಸೆ, ಅಶಾಂತಿ ಉಂಟಾಗುತ್ತದೆ.

o o o

ಭಗವಂತನ ಕೃಪಾಕಟಾಕ್ಷದಲ್ಲಿ ಅಪನಂಬಿಕೆ ಇರುವವನು ನಿರಾಸೆಪಡುತ್ತಾನೆ. ಏಕೆಂದರೆ ಸ್ವಾರ್ಥತೆಯ ಚಿಕ್ಕ ಕನ್ನಡಿಯಲ್ಲಿ ತನ್ನನ್ನು ತಾನು ನೋಡುವ ಆತನಿಗೆ ಭಗವಂತನ ಸರ್ವವ್ಯಾಪಕತ್ವದ ಅರಿವಿನ ಅಭಾವವಿದೆ.

o o o

ಜೀವನವೆಂಬ ಲಾಟರಿಯಲ್ಲಿ ಒಂದು ದುರಾದೃಷ್ಟಕ್ಕೆ ಹತ್ತು ಅದೃಷ್ಟಗಳಿವೆ. ಅತೃಪ್ತನಾದ ಸ್ವಾರ್ಥಪರನಿಗೆ ಮಾತ್ರ ಎಲ್ಲವೂ ದುರಾದೃಷ್ಟವಾಗಿ ಕಾಣುತ್ತದೆ.

o o o

ನಿಜವಾದ ಘನತೆ ಯಾವ ಸ್ಥಾನವ ಅಲಂಕರಿಸುವದರಿಂದಲೂ ಬರುವುದಿಲ್ಲ. ಯಾವ ಸ್ಥಾನ ಕೈಬಿಡುವುದರಿಂದಲೂ ಹೋಗುವುದಿಲ್ಲ.

o o o

ಸಣ್ಣ ವಿಚಾರಗಳಲ್ಲಿ ನಿರಾಸೆಗೊಂಡವನೇ ದೊಡ್ಡ ವಿಚಾರಗಳ ಮಹತ್ವನ್ನು ಅರಿಯಬಲ್ಲ.

o o o

ನಮ್ಮ ಜೀವನದ ಅಭಿಲಾಷೆಯೋಟ ಯೋಜನೆಗಳ ಸಮಾಧಿಯ ಮೇಲೆ ನಿಂತರಾಗಿ ನಿಂತು ಬುದ್ಧಿ ಕಲಿಯದ ವಿನಹ ಸುಖ ಸ್ವರ್ಗದ ಸೋಪಾನದ ಮೇಲೇರಲು ಸಾಧ್ಯವಿಲ್ಲ.

ಧಾರ್ಮಿಕ ಸಭೆ

ಎಡನೀರು ಶ್ರೀ ವಿಷ್ಣುಮಂಗಲ ದೇವಸ್ಥಾನದ ವಾರ್ಷಿಕ ಉತ್ಸವದ ಅಂಗವಾಗಿ ಜರಗಿದ ಧಾರ್ಮಿಕ ಸಭೆಯಲ್ಲಿ, ಫಲಿಮಾರು ಮಠಾಧೀಶರಾದ ಶ್ರೀ ರಘುವಲ್ಲಭ ತೀರ್ಥ ಶ್ರೀ ಪಾದಂಗಳವರು ಮಾತನಾಡುತ್ತಾ, ಧರ್ಮವು ನಮ್ಮನ್ನು ರಕ್ಷಿಸುತ್ತದೆ ಎಂದು ನುಡಿದರು.

ಪ್ರಾರಂಭದಲ್ಲಿ ಶ್ರೀ ಎಡನೀರು ಮಠಾಧೀಶರಾದ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು ಶುಭಾಶಂಸನೆಯನ್ನು ಮಾಡಿದರು. ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯರು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಗೋವಿಂದ ಶೆಟ್ಟಿಯವರು ವಂದನಾರ್ಪಣೆಗೈದರು. ಪೂರ್ವಾಹ್ನ ಶ್ರೀ ಮಠದಲ್ಲಿ ವಿಶ್ವಾಕ್ಷಿಯಾಗಿ ಉಷಃಪೂಜೆ, ಮಧ್ಯಾಹ್ನ ಮಹಾಪೂಜೆ ಮತ್ತು ವಿಷ್ಣುಮಂಗಲದಲ್ಲಿ ಶ್ರೀ ಭೂತ ಬಲಿಗಳಾದವು. ಅಪರಾಹ್ನ ನೀಲೇಶ್ವರದ ಶಂಕರ ಮರಾರು ಮತ್ತು ಪಾರ್ಟಿಯವರಿಂದ "ಕೇಳಿ ಕೊಟ್ಟು" ಕಾರ್ಯಕ್ರಮವಿತ್ತು. ಶ್ರೀ ಕೆ. ರಾಘವೇಂದ್ರ ರಾಯರ ಮುರಲೀವಾದನ ಕಚೇರಿಯು ನಡೆಯಿತು. ರಾತ್ರಿ ಕಾಸರಗೋಡಿನ ವಿವೇಕಾನಂದ ಕಲಾ ಸಂಘದವರ 'ಮೋಹಪಾಶ' ಎಂಬ ನಾಟಕ ಅಭಿನಯಿಸಲ್ಪಟ್ಟಿತ್ತು.

ರೈತ ಮುರುಗ

(ಎರಡನೇ ಪುಟದಿಂದ)

ದು ಅವರಿಬ್ಬರೂ ತಿಳಿದುಕೊಂಡಿದ್ದರು. ತಮ್ಮಲ್ಲೇನೂ ಅಧಿಕಾರ ಶಕ್ತಿ ಇಲ್ಲವೆಂಬುದು ಅವರಿಗೆ ಗೊತ್ತು. ಏನಿದ್ದರೂ ತಾನೊಬ್ಬ ಕಾರ್ಯಕರ್ತನೆಂಬುದು ಕ್ರಾಯಗರ ಅಭಿಪ್ರಾಯ. ಶ್ರೀಮತಿ ಕೆಡೆಲರು ತಾನು ಯಂತ್ರ ಶಾಸ್ತ್ರತಜ್ಞನ ಹೆಂಡತಿ ಇರುವಗಿಂದ ತಮ್ಮ ಇಲಾಖೆಗೆ ಸಂಬಂಧಿಸದ ಪ್ರಶ್ನೆಗಳನ್ನು ಕೇಳಲಿಕ್ಕಾಗಲಿಲ್ಲವೆಂದು ತಿಳಿದುಕೊಂಡರು.

ರಾಮು ತಾನು ಚಿಕ್ಕವನು ಹಾಗೂ ಅಶಕ್ತನೆಂದೂ, ತನ್ನ ಆದರ್ಶವಾದವು ಬಂಜರು ಭೂಮಿಯಲ್ಲಿ ಮಳೆ ಬೀಳುವ ಹಾಗೆಂದೂ ಭಾವಿಸಿಕೊಂಡನು. 'ಅಂದರೆ ಪ್ರಪಂಚವು ಆಳಲ್ಪಡುತ್ತದೆ ಮತ್ತು ಜಲಪ್ರಳಯವು ಬಂದಾಗ ಚಕಿತರಾಗಿ ಪಶ್ಚಾತ್ತಾಪವನ್ನ ನಾವು ಪ್ರಕಟಿಸುತ್ತೇವೆ. ನೆರೆಯ ನೀರು ಹೋದಂತೆ ಪಶ್ಚಾತ್ತಾಪವೂ ಹೋಗಿ ಬಿಡುತ್ತದೆ. ಪ್ರಪಂಚದ ಅತ್ಯುತ್ತಮ ಚೈತನ್ಯವನ್ನು ಬಂಧಿಸಿಡಲಿಕ್ಕಾಗಿ ಸೆರೆಮನೆಯನ್ನು ಕಟ್ಟುತ್ತೇವೆ. ಆದರೆ ಅದು ಇಲಿಗಳಿಗೆ ಅರಮನೆಯಾಗಿ ಬಿಡುತ್ತದೆ." ತನ್ನಷ್ಟಕ್ಕನೇ ಮೆಲ್ಲಗೆ ರಾಮು ಹೇಳಿಕೊಂಡನು.

ಕತ್ತಲೆ ಎಲ್ಲೆಲ್ಲೂ ತನ್ನ ಪರದೆಯನ್ನು ಬಿಡಿಸಿತು. ವಿಷಯದಿಂದ ವಿಷಯಕ್ಕೆ ಹಾರುತ್ತಿದ್ದ ಮಾತುಗಳಾದ ಮೇಲೆ ಮೌನದಿಂದ ಹಾಗೂ ಉಪೇಕ್ಷೆಯಿಂದ ಕೂಟದ ಮುಕ್ತಾಯವಾಯಿತು. ರಾಮುವನ್ನು ಒಂದೆಡೆ ವೈಯಕ್ತಿಕ, ಇನ್ನೊಂದೆಡೆ ಸರ್ವತೋಮುಖವಾದ ಇಬ್ಬಾಯಿಯ ದುಃಖವು ನುಂಗಿತ್ತು. ಆಲೋಚನಾ ಮಗ್ನನಾಗಿದ್ದ ರಾಮುವಿನ ಮನಸ್ಸು ಅದೆಲ್ಲಿದ್ದರೂ ದಾರಿಗೆ ಪರಿಚಿತವಾಗಿದ್ದ ಕಾಲುಗಳು ಅವನನ್ನು ಮನೆಗೆ ಕರೆದೊಯ್ದುವು.

"ಜಿಲ್ಲಾಧಿಕಾರಿಯವರನ್ನು ಕೇಳಿದಿರೇನೀಂದ್ರೆ?" ಜಾನಕಿಯು ಸ್ವಾಗತವಿತ್ತಳು.

"ಇಲ್ಲ ಸಮಯವು ಒಳ್ಳೆಯದಿರಲಿಲ್ಲ."

"ಹೋ! ಹಾಗಾದ್ರೆ ತಿಂಗಳಲ್ಲಿ ಇಪ್ಪತ್ತೈದು ದಿನ ನನ್ನನ್ನು ಒಬ್ಬಳನ್ನಾಗಿ ಬಿಟ್ಟು ನೀವು ಶಿಬಿರ-ಗುಮಾಸ್ತನಾಗಿ ಜೀವಿಸುತ್ತೀರಿ. ನಾನಿದನ್ನು ಹೇಗೆ ಸಹಿಸಿಕೊಳ್ಳಲಿ? ಕೃಪಾಕಟಾಕ್ಷವನ್ನು ಬೀಳಿಸಿಕೊಳ್ಳಲು ಚಹಾ ಮೇಜು ಉತ್ತಮವಿಲ್ಲದಿದ್ದಲ್ಲಿ, ಇನ್ನದ್ಯಾವ ಸಮಯವು ಶುಭಕರವಾಗಿರುತ್ತದೋ? ನಾ ಕಾಣೆ"

ಚಿಕ್ಕ ಮಗುವಿನಂತೆ ಜಾನಕಿಯು ದುಃಖದಿಂದ ಅತ್ತಳು.

ಅವಳನ್ನು ಸಂತೈಸಲು ರಾಮು ಪ್ರಯತ್ನಿಸಿದನು. 'ಇಲ್ಲ, ಜಾನಕಿ, ಅಳದಿರು. ಹೇಗಿದ್ದರೂ "ನಾಳೆ ಕಚೇರಿಯಲ್ಲಿ ಕೇಳುತ್ತೇನೆ. ಇಂಗ್ಲೀಷ್ ಜನರು ಚಹಾವನ್ನು ಅನುಗ್ರಹದೊಂದಿಗೆ ಬೆರೆಸುವದನ್ನು ಇಷ್ಟಪಡುವದಿಲ್ಲ. ನಾಳೆ ಕಚೇರಿಯಲ್ಲಿ ಖಂಡಿತ ಕೇಳುತ್ತೇನೆ.'

ಮರುದಿನ ಬೆಳಿಗ್ಗೆ ಅದೇ ಹಳೆಯ ಜವಾನನು ಒಂದು ಓಲೆಯನ್ನು ಹಿಡಿದುಕೊಂಡು, ಸಂತೋಷದಿಂದ ಹುಬ್ಬು ಹಾರಿಸುತ್ತ, ಬಂದು ನಿಂತನು. ಸಂತೋಷದಿಂದ ರಾಮು ಆ ಜವಾನನ ಕೈಗೆ ಒಂದು ರೂಪಾಯಿಯನ್ನು ಹಾಗೂ ತನ್ನ ಕೆಲ ಬಟ್ಟೆಗಳನ್ನು ಕೊಟ್ಟು, ಜಾನಕಿ ಇದ್ದಲ್ಲಿಗೆ ಓಡಿದನು. ಕಾಂಚಿಪುರದ ಬಳಿಯ ದೂಸಿ ಎಂಬಲ್ಲಿ ತನಗೆ ಉಪ-ತಾಲೂಕಧಿಕಾರಿಯ ಕೆಲಸ ಸಿಕ್ಕಿರುವ ಸಿಹಿ-ಸುದ್ದಿಯನ್ನು ಆದಷ್ಟು ಬೇಗನೆ ಜಾನಕಿಯ ಕಿವಿಯ ಮೇಲೆ ಹಾಕಬೇಕು. ಇನ್ನು ತಿಂಗಳೊಂದಕ್ಕೆ ನೂರೈವತ್ತು ರೂಪಾಯಿಗಳು ದೊರಕುತ್ತವೆ. ಇದೆಲ್ಲ ಬರಿಯ ಒಂದು ಹನಿ ಕಾಯಿಯ ಕಾರುಭಾರಿಂದ! ಕೆಡೆಲರ ಕಂದಾಯ ಮಂಡಲಿಗೆ ಸದಸ್ಯರಾಗಿ ಮದ್ರಾಸಿಗೆ ಹೋಗಬಹುದು, ಇದು ಅವರಿಬ್ಬರಿಗೂ ಸರಕಾರೀ ಜೀವನದಲ್ಲಿ ದೊರಕಿರುವ ಉತ್ತಮ ಉಚ್ಛ್ರಾಯ ಕಾಲ. ಕೆಡೆಲ್ ಹಾಗೂ ರಾಮು ಇಬ್ಬರೂ ತಾವು ಆ ಹುದ್ದೆಗೆ ಅರ್ಹರೆಂದು ತಿಳಿದು ಕೊಂಡಿದ್ದರು.

○ ○ ○

— ೨ —

ಅಲವಂತಿಯಲ್ಲೀಗ ಮುರುಗನು ಮಿರಾಸ್ದಾರ ಆಗಿದ್ದಾನೆ. ಮುರುಗನ ವಿಕಾಸವು ಹೋಲಿಕೆಯ ದೃಷ್ಟಿಯಲ್ಲಿ ಸಾವಧಾನವಾಗಿದ್ದರೂ ಅವನು ಕೇವಲ ಉಳುವವನಿಂದ ಗೇಣಿದಾರ, ಗೇಣಿದಾರನಿಂದ ಭೂಮಾಲಿಕನಾಗಿ ಇದ್ದಾನೆ. ಅದನ್ನು ಬರಿಯ ಅದೃಷ್ಟವೆಂದು ಹೇಳಲು ಬರುವದಿಲ್ಲ. ಅವನ ದುಡಿತದ ಫಲವದು. ಅವನ ಅದೃಷ್ಟದ ಬಾಗಿಲು ಹೆಚ್ಚು ಹೆಚ್ಚು ತೆರೆಯಲ್ಪಡುತ್ತಿದ್ದಂತೆ ಅವನಿಗೆ ಶತ್ರುಗಳೂ ಹೆಚ್ಚಲಾರಂಭಿಸಿದರು. ಅವನ ವಂಶದವರೂ ಅಲ್ಲದೆ ಜಮೀನ್ದಾರರೂ ಶತ್ರುಗಳ ಸಾಲಿನಲ್ಲಿ ಬೇಕಾದಷ್ಟಿದ್ದರು. ಆದರೂ ಮುರುಗನು ತಾಳ್ಮೆ ಮತ್ತು ನಮ್ರತೆಗಳನ್ನು ಬಿಟ್ಟು ಬಿಡಲಿಲ್ಲ.

ಅವನು ಹೊಸ ಪರಿಸ್ಥಿತಿಗೆ ಬಂದೊಡನೆ, ಅವನಿಗೆ ವಂದನೆಗಳನ್ನರ್ಪಿಸಿದವರಲ್ಲಿ ತೊಪ್ಪೈ ಮೊದಲಿನವನಾಗಿದ್ದನು, ಅವನ ನಿಷ್ಠೆಯನ್ನು ಕಂಡು ಕೃತಜ್ಞತಾ ಭಾವದಿಂದ ಹಾಗೂ ತನ್ನ ನವೀನ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವದಕ್ಕಾಗಿ ತೊಪ್ಪೈಯನ್ನು ತನ್ನ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಲು ತೆಗೆದುಕೊಂಡನು. ಅವನನ್ನು ಕೇವಲ ಸೇವಕನನ್ನಾಗಿ ತೆಗೆದುಕೊಳ್ಳದೆ, ಸ್ನೇಹಿತ ಹಾಗೂ ಬಲಗೈ ಬಂಟನನ್ನಾಗಿ ಸ್ವೀಕರಿಸಿದನು.

ಆದರಿಂದ ಪೊನ್ನಿಗೆ ಸಮಾಧಾನವಾಗಲಿಲ್ಲ. ಅವಳು ಅನೇಕ ಬಾರಿ ವಾದಿಸಿದಳು. ಅನಂತರ ಪ್ರಯೋಜನವಿಲ್ಲವೆಂದು ಕಂಡುಕೊಂಡಳು. ಆದರೂ ಪುನಃ ಪ್ರಯತ್ನಿಸಿದಳು. "ನಿಮ್ಮ ತತ್ವಗಳನ್ನು ನೀವೇ ತಲೆಕೆಳಗೆ ಮಾಡುತ್ತಿದ್ದೀರಲ್ಲಾಂದ್ರೆ! ಹೊಲದೊಡೆಯನೇ ನಿಜವಾದ ರೈತನಾಗಿರಬೇಕೆಂದು ಅಂದು ನೀವು ಹೇಳುತ್ತಿದ್ದೀರಿ. ಈಗ? ಅದರಲ್ಲೂ ತೊಪ್ಪೈಯು ಅವಿಚಾರಿ, ಎಚ್ಚರಗೆಟ್ಟವ ಹಾಗೂ ಅಪಕೀರ್ತಿ ಪಡೆದಿರುವ ತರುಣ. ಅವನಿಂದಾಗಿ ನಾವು ಈ ಗ್ರಾಮಕ್ಕೆ ವ್ಯಂಗಗಳಾಗಬೇಕಾದೀತು ತನ್ನ ಸಂಪಾದನೆಯನ್ನು ಹೆಂಡ ಕುಡಿಯುವದಕ್ಕನೆ.... ..."

"ಪೊನ್ನಿ, ನೀನು ಹೆಂಗಸಿನಂತೆಯೇ ಮಾತನಾಡುತ್ತಿರುವೆ. ನಿಜವಾಗಿ, ಈ ವಿಶಾಲ ಗದ್ದೆಯಲ್ಲಿ ಇಬ್ಬರಿಗೆ ಕೆಲಸವಿದೆ. ಹಾಗೆ ದುಡಿದಲ್ಲಿ ನಾಲ್ಕು ಪಾಲು ಹೆಚ್ಚು ಬೆಳೆ ಪಡೆಯಬಹುದು. ಒಬ್ಬನೆ ಅವಿಶ್ರಾಂತನಾಗಿ ಹಾಗೆ ದುಡಿದು ಇನ್ನೊಬ್ಬನನ್ನು ಬಿಟ್ಟು ಬಿಡುವದು ಸ್ವಾರ್ಥ. ಅದು ದೇವರಿಗೆ ಅಸಂತೋಷವನ್ನುಂಟು ಮಾಡೀತು. ಅವನು ಬಡಜೀವಿ, ಗಟ್ಟಿ ಮುಟ್ಟಾದ ದೇಹವಿದೆ. ನನ್ನ ಮೇಲೆ ಅವನಿಗೆ ನಿಷ್ಠೆ ಹಾಗೂ ಶ್ರದ್ಧೆ ಇದೆ. ಅವನನ್ನು ಹಳ್ಳಿಯವರು ಬೇಟೆ ಆಡುತ್ತಿದ್ದಾರೆ. ಅವನನ್ನು ಕಾಪಾಡುವದು ನಮ್ಮ ಕರ್ತವ್ಯವಿದೆ. ಅವನು ಬಡವನಿದ್ದಾನೆ. ಅವನಿಗೆ ಯಾರೂ ದಿಕ್ಕಿಲ್ಲ."

ಮುರುಗನು ತೊಡೆಯ ಮೇಲೆ ಹೊಡೆದುಕೊಂಡು, "ಪೊನ್ನಿ, ಅವನು ನನ್ನ ತಮ್ಮನಾಗಿರುತ್ತಿದ್ದಲ್ಲಿ, ಅವನನ್ನು ನೀನು ದೂರಕ್ಕೆ ಕಳುಹಿಸುತ್ತಿದ್ದಿಯೊ? ನನ್ನ ಜೀವಮಾನದಲ್ಲಿ—ಸ್ನೇಹಿತನಿರಲಿ, ವೈರಿ ಇರಲಿ—ಯಾವ ಅತಿಥಿಯನ್ನು ಬರಿಗೈಯಲ್ಲಿ ಕಳುಹಿಸಿಲ್ಲ. ಸಮಯ ಹೋದಂತೆ, ಪಟ್ಟಣದಲ್ಲಿ ತಾರುಣ್ಯವನ್ನು ಕಂಡಿರುವ, ತೊಪ್ಪೈಯೂ ಪಕ್ವವಾಗುತ್ತಾನೆ ಅವನ ಸದ್ಗುಣ ಹಾಗೂ ಕಲ್ಪಕ ಬುದ್ಧಿಯ ವಿಷಯಗಳ ಕುರಿತು ನಿನಗೇನೂ ಗೊತ್ತಿರುವದಿಲ್ಲ ಅವನು ಉತ್ಸಾಹಿ ತರುಣ ಅಲ್ಲದೆ ಕಲಿತಿರುವವನೂ ಇದ್ದಾನೆ. ನಮ್ಮ ನಾಶಕ್ಕಾಗಿ ಫಿತೂರಿ ನಡೆಸುತ್ತಿರುವ ದುಷ್ಟ ಸ್ವಭಾವದ ಶ್ರೀಮಂತರ ವಿರುದ್ಧ, ನಮಗೆ ಸರಕಾರವು ಸಹಾಯ ಮಾಡುವಂತೆ, ಅವನೇನಾದರೂ ಮಾಡಬಹುದು. ಅವನನ್ನು ದೈವವೇ ಇತ್ತ ಕಳುಹಿಸಿದೆ. ನಾವು ಅವನನ್ನು ತಿರಸ್ಕರಿಸಬಹುದೇ? ಅದೃಷ್ಟವನ್ನು ತಿರಸ್ಕರಿಸುವದು! ಇಲ್ಲ, ಎಂದಿಗೂ ಇಲ್ಲ. ಕರುಣೆ, ಸಂಗಾತಿ ಭಾವನೆ ಅಥವಾ ಸ್ವ ಕುತೂಹಲದಿಂದ ಹಾಗೆ ಮಾಡುವದಿಲ್ಲ." ಮುರುಗನು ಕ್ಷಣಕಾಲ ತಡೆದನು.

"ಪೊನ್ನಿ, ಮಕ್ಕಳ ಹಾಗೂ ಅಡುಗೆಯ ಕೆಲಸದತ್ತ ಗಮನ ಕೊಡು. ಈ ವ್ಯವಸಾಯದ ಕುರಿತೇನೂ ಚಿಂತಿಸಬೇಡ. ಒಳ್ಳೆಯ ಹಾಗೂ ದಯಾಮಯ ಒಡನಾಡಿಯ ಮೇಲೆ ತಪ್ಪಭಿಪ್ರಾಯಗಳನ್ನಿಟ್ಟುಕೊಂಡಿರಬೇಡ."

ಪೊನ್ನಿಯ ಬಾಯಿಯಿಂದ ಮಾತುಗಳೇ ಹೊರಡದಾದುವು. ಅವಳು ಮರು ಮಾತಾಡದೆ, ನಿಶ್ಶಬ್ದದಿಂದ, ತನ್ನ ಕೆಲಸಗಳತ್ತ ಗಮನ ಕೊಡಲು ಹೊರಟು ಹೋದಳು. ತೊಪ್ಪೈಯು ಆ ಕುಟುಂಬದ ಕ್ರಮಬದ್ಧ ಸದಸ್ಯ ಹಾಗೂ ಉತ್ಸಾಹದಾಯಿ ಶಕ್ತಿಯಾದನು.

ಮುರುಗನಿಗೆ ತನ್ನ ನಿಷ್ಠಾವಂತೆಯು ಇತ್ತಿದ್ದ ಬುದ್ಧಿವಾದ ಹಾಗೂ ಕೊಟ್ಟಿದ್ದ ಎಚ್ಚರಿಕೆಯ ಮಾತುಗಳು, ಹಲವಾರು ತಿಂಗಳು ಜ್ಞಾಪಕ ಇದ್ದುವು. ಕೈಗಾರಿಕೆ ಹಾಗೂ ಸರಳತನದ ದಾರಿಯಲ್ಲಿ ಅವನು ಮುನ್ನಡೆಯುತ್ತಿದ್ದರೂ, ಹೆಜ್ಜೆ ಇಡುತ್ತಿದ್ದಂತೆ ಅವನಿಗೆ ವಿಶ್ವಾಸ ಕಡಿಮೆಯಾಗಲಾರಂಭಿಸಿತು. ತೊಪ್ಪೈಯ ವರ್ಚಸ್ಸು ಹಾಗೂ ತತ್ವಗಳು ಶಕ್ತಿಯುತವಾಗಿದ್ದುವು ಈಗ ಹೆಚ್ಚು ಕಷ್ಟಪಡದೆನೇ ಮುರುಗನಿಗೆ ಯಥೇಷ್ಟ ಸಂಪಾದನ ಆಗುತ್ತಿತ್ತು. ಹೆಚ್ಚಿರುವ ಹಣವನ್ನೇ[illegible] ಮಾಡುವದೆಂಬುದು ಅವನಿಗೆ [illegible] ಬಂತು.

ಮುರುಗನಲ್ಲಿ ಕ್ರಮಶಃ ಬದಲಾವಣೆ ಕಂಡುಬರಲಾರಂಭಿಸಿತು. ಕೇವಲ ಸೊಂಟ ವಸ್ತ್ರದಲ್ಲಿದ್ದವನು ನಾಲ್ಕು ಮೊಳದ ಬಟ್ಟೆಯನ್ನುಡಲು ಆರಂಭಿಸಿದನು, ಅಲ್ಲಿಂದ ಎರಡು ಪದರಿನ ಪ್ಯಾದು ಧೋತಿಯನ್ನುಡಲು ಮೊದಲಾದನು. ಹಾಗೆ ಮೈಗೆ ಅಂಗಿಯೂ ಬಂತು; ತಲೆಗೆ ಮುಂಡಾಸು



ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

NAVAYUGA 24—2—1966

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಬಂತು. ಮನೆಯಲ್ಲಿ ತಂಗಳನ್ನದ ಬದಲು ಕಾಫಿ ಕಾಲಿಟ್ಟಿತು. ಹುಲ್ಲಿನ ಮನೆಯು ಹೆಂಚನ್ನು ಕಂಡಿತು. ಅಷ್ಟೆಲ್ಲಾ ಆದ ಮೇಲೆ ಅವುಗಳನ್ನು ಪ್ರದರ್ಶಿಸಲು ಆ ಹಳ್ಳಿ ಸಾಲದಾಯಿತು. ಹಳ್ಳಿಗೆ ಅವನ ಬಡ ಹುಟ್ಟಿನ ಕಥೆ ಗೊತ್ತಿದೆ.

ಮುರುಗನಲ್ಲಾಗುತ್ತಿದ್ದ ಬದಲಾವಣೆಯ ಅನುಭವವು ತೊಪ್ಪೈಗೆ ಆಯಿತು. ಅವನು ಅದಕ್ಕಾಗಿ ಕಾದುಕೊಂಡಿದ್ದನು. ಮೆಲ್ಲಮೆಲ್ಲನೆ ಮುರುಗನ ಜೀವನವು ಪಟ್ಟಣದ ವಾಸವನ್ನು ಆಶಿಸಲಾರಂಭಿಸಿತು. ಆದರೆ ಒಂದೆರಡು ದಿನಗಳಲ್ಲೇ ಹಳೆಯ ಸಂಸ್ಕಾರವನ್ನು ತೊಡೆದು ಹಾಕಲು ಸಾಧ್ಯವಿರಲಿಲ್ಲ. ಈಗ ಅವನು ಅಂಟಿಗಾಲಿಕ್ಕುತ್ತಿದ್ದ; ತೊಪ್ಪೈ ಅವನನ್ನು ಸರಿಮಾಡುತ್ತಿದ್ದನು. ತೆಂಗಿನಕಾಯಿಯ ಸಿಪ್ಪೆಗಳು ಕೊಳಕು ಹೊಂಡದಲ್ಲಿ ಒದ್ದೆಯಾಗುವಂತೆ, ಹಳ್ಳಿಯಲ್ಲೇ ಜೀವನವನ್ನು ಕಳೆಯುವ ಬದಲು, ಕೆಲವು ಬಾರಿ ಪಟ್ಟಣದತ್ತ ಹೋಗಿ ಬರಲು ಅವನಿಗೆ ಮನಸ್ಸಾಗುವಂತೆ ತೊಪ್ಪೈಯು ಮಾತನ್ನು ಮಂಡಿಸಿದನು. ಪಟ್ಟಣದ ಸ್ನೇಹಿತರನ್ನು ಕಂಡು ಬರುವಂತೆ ಅವನಲ್ಲಿ ಆಸೆ ಹುಟ್ಟಿಸಿದನು.

ಒಂದು ದಿನ ಮುರುಗನು ದಿನದ ಕೆಲಸವಾದ ಮೇಲೆ ಬೇಸರದಿಂದ ಕೂತುಕೊಂಡಿದ್ದನು. ಅದೇ ಸಮಯಕ್ಕಾಗಿ ಹೊಂಚು ಹಾಕುತ್ತಿದ್ದ ತೊಪ್ಪೈಯು ತನ್ನ ಚಾತುರ್ಯದಿಂದ ಚೀಲವನ್ನು ಬಿಚ್ಚಿದನು. 'ಮುರುಗ, ನಿನ್ನ ಜೀವನ ಹೇಗೆ ಸ್ಥಿರವಾಗಿ ಇಲ್ಲೇ ಕಳೆದು ಹೋಗುತ್ತಿದೆ! ಏನೋ ಸ್ವಲ್ಪ ಶೇಖರಿಸಿಟ್ಟುಕೊಂಡಿರುವುದನ್ನು ಭೋಗಿಸಲಿಕ್ಕೂ ಇಲ್ಲ. ಹಾರೆ ಅಥವಾ ಎತ್ತಿನ ಜೀವನವೂ, ಆದೂ ಬೇಡ, ನನ್ನ ಜೀವಮಾನಕ್ಕಿಂತಲೂ ಹೆಚ್ಚಿನ ಸಮಯವನ್ನು ನೀನು ಗದ್ದೆಯಲ್ಲೇ ಕಳೆದಿರುವೆ. ಈ ತುಕ್ಕು ಹಿಡಿದಿರುವ ಜೀವನದ ತುಕ್ಕನ್ನು ತೆಗೆದು ಬಣ್ಣವನ್ನೇತಕ್ಕೆ ಹಾಕಿಸಿಕೊಳ್ಳಬಾರದು? ಅದಕ್ಕಾಗಿ ಒಂದೆರಡು ತಿಂಗಳು ಪಟ್ಟಣದಲ್ಲಿ ವಾಸಮಾಡಿದ್ದು ಕೊಂಡು ಬರಬಹುದಲ್ಲ? ನಿನಗೆ ಅದು ಹೊರ ಪ್ರಪಂಚದ ಪರಿಚಯವನ್ನುಂಟು ಮಾಡೀತು. ನಿನ್ನ ಅಂಗಿ, ಮೇಲಂಗಿ ಹಾಗೂ ಹೊಸ ರೇಶ್ಮೆಯ ತೊಡಿಗೆಗಳೆಲ್ಲಾ, ಅಲ್ಲಿ ತೋಟದಲ್ಲಿ ತೆಂಗಿನ ನಾರು ಕೊಳೆಯುತ್ತಿರುವಂತೆ ಹಾಳಾಗುತ್ತಿದೆಯಲ್ಲಾ? ಗಾಳಿ ಹಾಗೂ ಸೂರ್ಯ ಪ್ರಕಾಶ ತಗಲದಿದ್ದರೆ ಅವೇತಕ್ಕಾದಾವು? ಅವುಗಳು ಬಿಳಿ ಇರುವೆಗಳ ಹೊಟ್ಟೆ ತುಂಬಿಸಬಹುದು, ಅಷ್ಟೇ."

'ನಿಜ, ತೊಪ್ಪೈ ನನ್ನ ಮನದಾಳವನ್ನು ನೀನು ಕಂಡು ಹಿಡಿದೆ. ಹೌದು, ಆ ರೇಶ್ಮೆಯ ತೊಡಿಗೆ ಜರತಾರಿಯಿಂದಾಗಿ ಇನ್ನಷ್ಟು ಚೆಂದವಾಗಿ ತೋರುತ್ತದೆ. ಅದು ಚೆಂದದ ಜ್ಯೋತಿ; ಅದು ಥಳಥಳಿಸುತ್ತಿದೆ..."

"ಆದರೆ ಅವುಗಳನ್ನು ಮರದ ಪೆಟ್ಟಿಗೆಯಲ್ಲಿ ಹಳೆ ಚಿಂದಿಗಳೊಂದಿಗೆ ಹಾಗೂ ಹೊಸ ಕ್ರಿಮಿಗಳೊಂದಿಗೆ ಇಟ್ಟಾಗ ಅಲ್ಲ. ನಿನ್ನಂತಹ ದೃಢಕಾಯವುಳ್ಳವನ ಮೈಯನ್ನು ಅಲಂಕರಿಸಿ, ಸೂರ್ಯ ಪ್ರಕಾಶವಿದ್ದು, ಗಾಳಿಯಲ್ಲಿ ಹಾರಾಡುತ್ತಿದ್ದಲ್ಲಿ ಮಾತ್ರ ಅದು ಥಳಥಳಿಸುತ್ತದೆ."

ಎಲ್ಲಾ ಮನುಷ್ಯರ, ಎಂತಹ ದೊರಗಾಗಿರುವ ಹಾಗೂ ಒರಟಾಗಿ ಇರುವ ಮನಸ್ಸಿನೊಳಗೂ ಆಕಾಶ ದ್ರವ್ಯ ಒಳ ಹೋಗುತ್ತದೆ. ಮುಖಸ್ತುತಿ ಮುರುಗನ ಮನಸ್ಸಿನೊಳಗೆ ಪ್ರವೇಶಿಸಿತು. ಆಗವನಿಗೆ ಆನಂದವಾಯಿತು. ಆನಂದದಿಂದ ನಗಾಡಿದನು.

ತಡೆತಡೆದಾದರೂ, ಉದ್ರೇಕಿಸಲ್ಪಟ್ಟ ಸ್ವರದಿಂದ, ಮುರುಗನು ಕೇಳಿದನು. "ಹಾಗಾದಲ್ಲಿ, ನೀನೇನನ್ನು ಸೂಚಿಸುತ್ತಿ ಮಿತ್ರ?"

"ಯಾಕೆ? ಕುಂಭಕೋಣಮಿನಲ್ಲಿ ನಿನ್ನ ಶ್ರೀಮಂತ ಹಾಗೂ ಗೆಲುವಿನ ಕಕ್ಕನ ಮಗನಿದ್ದಾನಲ್ಲಾ? ಅವನು ಹೇಗೂ ನಮ್ಮನ್ನು ಹಲವಾರು ಬಾರಿ ಆಮಂತ್ರಿಸಿದ್ದಾನೆ. ಈಗಾದರೂ ನಾವಲ್ಲಿಗೆ ಹೋಗಿ ಒಂದು ವಾರ ಇದ್ದು ಬರೋಣ."

ಮುರುಗನು ಒಪ್ಪಿಗೆಯನ್ನು ಸೂಚಿಸಲು ತಲೆಯಲ್ಲಾಡಿಸಿದನು. ತೊಪ್ಪೈಯು ಆನಂದದಿಂದ ಕೈಯನ್ನು ತಿಕ್ಕಿಕೊಂಡನು. ಮಗುವು ಆಟದ ಸಾಮಾಗ್ರಿ ಹಾಗೂ ತಿಂಡಿಗಾಗಿ ಮರುಗುವಂತೆ ಅವನು ಒಂದು ದಿನದ ಪಟ್ಟಣವಾಸಕ್ಕಾಗಿ ಹಲುಬುತ್ತಿದ್ದನು.

ಮುರುಗನ ಕಕ್ಕನ ಮಗನು ಸಾರಾಯಿ ಹಾಗೂ ಹೆಂಡದಂಗಡಿಯ ಗುತ್ತಿಗೆದಾರನಿದ್ದಾನೆ. ಹಳ್ಳಿಯ ಕಕ್ಕನ ಮಗನ ಹೊಸ ಶ್ರೀಮಂತಿಕೆಯ ಸುದ್ದಿ ಪಟ್ಟಣದ ಕಕ್ಕನ ಮಗನ ಕಿವಿಗೆ ಬಿದ್ದಿತ್ತು. ಅದ[...]
ರಿಂದವನು ಆತಿಥ್ಯವನ್ನೀಡಿದನು. ಮಾಂ[...]
ಮತ್ತು ಮದ್ಯದಿಂದ ದೊಡ್ಡ ಔತಣ[...]
ನ್ನೇ ಮುರುಗನಿಗಾಗಿ ಏರ್ಪಡಿಸಿದನು.

ತನ್ನ ಜೀವಮಾನದಲ್ಲಿ ಅದೇ ಮೊದ[...]
ಬಾರಿಗೆ ಆ ಮಾರ್ಮಿಕ ವಿಷಯವನ್ನ[...]
ಮುರುಗನು ಕುಡಿದನು. ಆಗವನಿಗೆ ಎ[...]
ಸಲು ಅಸಾಧ್ಯವಾದಂತಹ ಸಂತೋಷವಾ[...]
ಯಿತು. ಅವನ ಹಳ್ಳಿಯಲ್ಲಿ ಒಂದೇ ಒಂ[...]
ಹೆಂಡದಂಗಡಿಯೂ ಇಲ್ಲ. ಆದುದರಿಂ[...]
ಅವನು ಕುಡಿಯಲಿಕ್ಕಾಗಿ ಆಗಾಗ ಪ[...]
ಗೆ ಹೋಗಲು ಪ್ರಾರಂಭಿಸಿದನು. [...]
ಕ್ಕಾಗಿ ತಗಲುವ ದುಂದು ವೆಚ್ಚ ಹಾಗ[...]
ಪೊನ್ನಿಯು ತನ್ನನ್ನು ವಿರೋಧಿಸಿ ಆ[...]
ತ್ತಿರುವ ಮಾತುಗಳು ಮತ್ತು ಸುರಿಸು[...]
ರುವ ಕಣ್ಣೀರು ಅವನನ್ನು ತಡೆದು [...]
ಸಲು ಅಸಮರ್ಥವಾದುವು.

ಮುರುಗನ ಗದ್ದೆಗಳು ಈಗ ತೊಪ್ಪೆ[...]
ಯು ಒಳ್ಳೆಯ ಚಾತುರ್ಯದ ದುಡಿತ[...]
ದಾಗಿ ಸಾಧಾರಣ ಉತ್ಪತ್ತಿಗಿಂತಲೂ ಹ[...]
ಮ್ಮಡಿ ಜಾಸ್ತಿ ಕೊಡುತ್ತಿದ್ದುವು. ತೊಪ್ಪೆ[...]
ಯು ಹಗಲಿನಲ್ಲಿ ಪಿಶಾಚಿಯಂತ ಕೆಲ[...]
ಮಾಡುತ್ತಿದ್ದ, ರಾತ್ರಿಯಲ್ಲಿ ರಾಜಕುಮ[...]
ರನಂತೆ ಸಂತೋಷದಿಂದ ಜೀವಿಸುತ್ತಿ[...]
ಹೀಗೆ ಮೂರು ವರ್ಷಗಳ ಉದು[...]

(ಮುಂದುವರಿಯುವುದು)

ಜನನಾಯಕಿಗೆ ಶುಭಾಶಯ[...]

ನೆಹರುವ ಪುತ್ರಿ ಪ್ರಧಾನ ಮಂತ್ರಿ
ಇಂದಿರ ಗಾಂಧಿಯೆ ನಿನ್ನಾಯ್ಕೆ.
ದೇಶದ ಕಷ್ಟ ನೀಗುತಲಿಷ್ಟ
ಗಳಿಸುತ ಮೆರೆಸೈ ನೀ ನಾಡ್ನ.
ತಂದೆಯು ತಾತನು ತೋರಿದ ಮಾದರಿ,
ಸೇವೆಗೆ ಮುಡಿಪಿಡು ಕಾಲವನು
ಧ್ಯೇಯದ ಧೋರಣೆ ಗೆಂದೇಶಣವನು,
ತೊಡುನೀ ಕಾದಿವೆ ಕಷ್ಟಗಳು.
ಹಿಂದಿಯ ಗೊಂದಲ, ಗೋವೆಯ ಚಳ[...]
ಸುಭಾ ರಚನೆಯ ಬಿಡಿಸಿ ಬಿ[...]
ನಾಗಾ ಜಗಳವು, ಕಾರ್ಮಿಕ ಕಳವಳ[...]
ಚೀನಿಯ ಚೇಷ್ಟೆಯ ನಿಲಿಸಿ ಬಿ[...]
ಟಾಷ್ಕೆಂಟ್ ಮೈತ್ರಿ, ವಿದೇಶ ನೀತಿ
ಆಹಾರ ಕೊರತೆಯ ಪರಿಹರಿಸ[...]
ಜಾತ್ಯಾತೀತದ ತಾತ್ವಿಕ ದರ್ಶನ
ದೇಶದ ಒಳಗಡ ನೆಲೆಗೊಳಿಸು.
ಯೋಚಿಸಿ ಯೋಜನೆಮಾಡುವಯೋಧ[...]
ಳಾಗುತ ಮಂತ್ರಿಯ ಪದವೇರು[...]
ಹೆಣ್ಣೆಂಗೆನುವರ ಕಣ್ಣೆದುರಾಗಿದೆ
ಧನ್ಯತೆ ಜನಂನೀ ಗಳಿಸು.
ನುಡಿಯನ್ನಾಡುವ ಮೊದಲಿಗೆ ಮನ[...]
ದಂತ್ರಾಲೋಚಿಸಿ ಗುಣಾಗುಣ[...]
ಘೋಷಣೆಯಲ್ಲಿತಿ ಪೋಷಣೆ ಗೊಳಿಸ[...]
ಮೊನಿನಿ ಮಂತ್ರಿಣಿ ನೀಯೆನಿಸ[...]

—ಅಬ್ದುಲ್ ರಹಿಮಾ[...]
ಅರಸಳಿಕೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಯಾವತ್ತೂ ವಾಚನ ಭಂಡಾರಗಳಿಗೆ
ಯೋಗ್ಯವಾದ ನವೀನ ಪುಸ್ತಕಗಳು

ಭಾರತದ ವೀರಾಂಗನೆಯರು	1—50
ಬರದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ-ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00

ಕೆಟಲಾಗಿಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

3-3-1966

NAVAYUGA

೨೦

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಮೊದಲು.....

ಆಲವಂತಿಯ ರಾಮಚಂದ್ರ ಹಳ್ಳಿ ಬಿಟ್ಟು ಶಿಕ್ಷಣಕ್ಕೆಂದು ಮದ್ರಾಸಿಗೆ ತೆರಳಿ, ಅಲ್ಲಿಂದ ಪತ್ನಿ ಜಾನಕಿಯೊಡನೆ ಮರಳಿದ. ಮಣ್ಣಿನ ಮಗ ಮುರುಗನೆಷ್ಟು ಸಮಾಧಾನ ಪಡಿಸಿದರೂ ಪ್ರಕೃತಿಯ ವಿಕೋಪದಿಂದ ನೊಂದ ರಾಮಚಂದ್ರ ನಿಸ್ಸೂರಿ ಕಲೆಕ್ಟರ್ ಕೆಫೆಲರ ಬಳಿ ಶಿಬಿರ ಗುಮಾಸ್ತನಾದ. ಕೆಲಸಮಯಾನಂತರ ಊರಿಗೆ ಮರಳಿ ತನ್ನ ಆಸ್ತಿ ಪಾಸ್ತಿಯನ್ನು ಮಾರಿ ಸಾಲ ತೀರಿಸಿ ಕಡಪಕ್ಕೆ ಬಂದ. ಈತನ ಬಂದು ತೋಟ ಮುರುಗನ್ನೇ ಕೊಂಡು ಕೊಂಡ. ರಾಮಚಂದ್ರನ ಸೇವೆಯನ್ನು ಮೆಚ್ಚಿದ ಕೆಫೆಲರಿಂದಾಗಿ ಆತನಿಗೆ ಭಡ್ತಿ ದೊರೆಯಿತು. ಮದ್ರಾಸದಲ್ಲಿ ಆತನ ಗೆಳೆಯ ಕೇದಾರಿ ಕೋಕಿಲಂನೊಡನೆ ವಕೀಲನಾಗಿ ಸಂಸಾರ ಹೂಡಿದ್ದ.

ಮುಂದೆ.....

"ಸಂಗಾತಿ ಮುರುಗ" ಒಂದು ದಿನ ತೊಪ್ಪೆಯು ಗಟ್ಟಿಯಾಗಿ ಹೇಳಿದನು. "ನೀನು ಇತ್ತೀಚಿಗಿನ ಹೊಸ ಸುದ್ದಿಯನ್ನು ಕೇಳಿರುವೆಯೊ? ಸುಂಕ ಇಲಾಖೆಯ ಮುಖ್ಯಾಧಿಕಾರಿಯು ಇಲ್ಲಿ ಪಾಯ್‌ತೋಪಿನಲ್ಲಿ ಬಂದು ಡೇರೆಹೊಡೆಯುತ್ತಾನಂತೆ ಅವನು ಬರುವಾಗ ಅವನ ಹಿಂದುಗಡೆಯ ಕುದುರೆಗಳು, ಆಳುಗಳು ಹಾಗೂ ಸರಕಾರದ ವೈಭವವನ್ನು ಸೂಚಿಸುವ ವಸ್ತುಗಳು ಬರುತ್ತವೆ."

ತೊಪ್ಪೆಯು ಸ್ವಲ್ಪ ಹೊತ್ತು ಸುಮ್ಮಗಾದನು. ತೋಟದತ್ತ ನೋಟ ಬೀರುತ್ತ ಮುಂದರಿಸಿದನು. "ನಿನಗಾಗಿ ನಿಧಿ ಇಲ್ಲಿ ಬಿದ್ದುಕೊಂಡಿದೆ. ಭೂಮಿಯೊಳಗೆ ಹೂತು ಕೊಂಡು ಕೂಡಾ ಇಲ್ಲ; ಭೂಮಿಯ ಮೇಲೆ ನಿಂತುಕೊಂಡು ಇದೆ, ಹಾಗಾಗಿ ಅಗೆಯಲು ಪಿಕ್ಕಾಸು, ಹಾರೆಗಳು ಬೇಕಾಗಿಲ್ಲ. ಆದರೆ ಅದನ್ನು ಹೇಗೆ ಪಡೆದುಕೊಳ್ಳಬೇಕೆಂಬುದು ಮಾತ್ರ ನಿನಗೆ ಗೊತ್ತಿರಬೇಕು. ಇತಂಹ ಸಂದರ್ಭ ಪ್ರತಿಯೋರ್ವ ಮನುಷ್ಯನಿಗೆ ಬಾಳಿನಲ್ಲಿ ಒಮ್ಮೆ ಮಾತ್ರ ಬರುತ್ತದ.

'ಸಂಪತ್ತು ಹಾಗೂ ಪ್ರಶಂಸೆಗಳ ಪ್ರವಾಹವು ಹರಿದು ಹೋಗುವ ದೃಶ್ಯ ನನ್ನ ಕಣ್ಮುಂದೆ ಕುಣಿಯುತ್ತಿದೆ. ಅದಕ್ಕ ಬೇಕಾಗುವ ಯುಕ್ತಿಗಳು ನನಗೆ ಗೊತ್ತು. ನಿನ್ನನ್ನು ಶ್ರೀಮಂತನನ್ನಾಗಿ ಮಾಡಲು.... ....' ಪುನಃ ಅವನ ಮಾತಿನ ಪ್ರವಾಹ ನಿಂತಿತ್ತು. ಅವನು ತೆಂಗಿನಮರಗಳತ್ತ ಸ್ವಾರ್ಥ ಪೂರ್ಣ ಹಾಗೂ ದುರ್ಬಲ ನೋಟದಿಂದ ಎಡೆಯಿಕ್ಕದೆ ನೋಡುತ್ತಿದ್ದನು.

"ಭಾರಿ ಸರಿ! ತೊಪ್ಪೆ"ನ್ನಲ್ಲನೆ ಮುರುಗನು ಪ್ರಾರಂಭಿಸಿದನು. ಈಗವನ ಮೆದುಳು ಬದಲಾಗಿ, ಅವನು ಹೊಸ ಮನುಷ್ಯನಂತಾಗಿದ್ದಾನೆ. ಕುಡಿತವು ಅವನಲ್ಲಿ ಅಲಸಿಕೆಯ ಸಸಿಯನ್ನು ನೆಟ್ಟು ನೀರು ಹಾಕುತ್ತಿದೆ. "ನಾವು ಈಗಲೇ ಈ ಹಳ್ಳಿಯಲ್ಲಿ ಕುಪ್ರಖ್ಯಾತರಾಗಿದ್ದೇವೆ. ಪೆರಿಯ ಸ್ವಾಮಿ ಆಯ್ಯರ್ ಒಂದು ರಾತ್ರಿ ನಮಗೆ ಕಲ್ಲು ಹೊತ್ತು ಹಾಕಿಯಾರು, ಇಲ್ಲವೇ ಇಲ್ಲಿಂದ ಓಡಿಸಿಯಾರು."

"ಬಡವರ ಮೇಲೆ ಕಲ್ಲು ಹೊತ್ತು ಹಾಕುವದೇ ಶ್ರೀಮಂತರ ಕೆಲಸವಿದೆ. ಆದರಲ್ಲೂ ಆ ಬಡ ಜನರು ಶ್ರೀಮಂತರಾಗಲು ಹವಣಿಸಿದಲ್ಲಿ ಕಲ್ಲು ಹೊತ್ತು ಹಾಕಲು ಶ್ರೀಮಂತರು ಯಾವಾಗಲೂ ಕಾದಿರುತ್ತಾರೆ, ಅದು ಹೊಸ ಸುದ್ದಿಯೂ ಇರುವದಿಲ್ಲ; ಆಶ್ಚರ್ಯದ ಸಂಗತಿಯೂ ಇರುವದಿಲ್ಲ. ನೀನು ಈ ತೋಟವನ್ನು ಬೆಲೆಗೆ ತೆಗೆದುಕೊಂಡಾಗ ಮಾತ್ಸರ್ಯಮಯ ಕೋಪದ ಬಿರುಗಾಳಿ ಎಲ್ಲೆಲ್ಲೂ ಬೀಸುತ್ತಿತ್ತು."

ತೊಪ್ಪೆಯು ಅಲ್ಲಿಗೆ ನಿಲ್ಲಿಸಿ, ಧೃಡಸ್ವರದಿಂದ ಮುಂದರಿಸಿದನು. ಅಗವನ ಕಣ್ಣುಗಳಲ್ಲಿ ಬಂಗಾರಕ್ಕಾಗಿ ಆಲೋಚನೆ ಹಾಗೂ ಅತ್ಯಾಶೆಗಳ ಕಿಡಿಗಳು ಉದುರುತ್ತಿದ್ದವು. "ನನ್ನ ಮಾತುಗಳನ್ನು ಕೇಳಿದಲ್ಲಿ ಮೂರು ವರ್ಷಗಳೊಳಗೆ ಇಡೀ ಹಳ್ಳಿಯನ್ನು ಕ್ರಯಕ್ಕೆ ತೆಗೆದುಕೊಳ್ಳಬಹುದು, ಪೆರಿಯ ಸ್ವಾಮಿಗೀಗ ವ್ಯಾಜ್ಯದ ವೇದನೆ ಹೆಚ್ಚಾಗಿದೆ. ವಕೀಲರಿಗೆ ಹಾಗೂ ಅವರ ಗುಮಾಸ್ತರಿಗೂ ಹೊಟ್ಟೆ ಎಂಬಂತ್ತಾದ್ದು ಇದೆ. ನನಗೆ ಪಟ್ಟಣ ಜೀವನದ ವಿಷಯ ಗೊತ್ತಿದೆ"

"ವಿನಂತಿಗೆ ವಿರೋಧವಾಗಿ ತೀರ್ಪು ಕೊಟ್ಟುಬಿಟ್ಟಲ್ಲಿ, ಅವನ ಜಮೀನೆಲ್ಲವೂ ಒಂದು ಹಾಡಿಗಾಗಿ ಹೋಗಬಹುದು, ಅದೇ ಸಮಯದಲ್ಲಿ ನಾವು ಹಣ ಶೇಖರಿಸಿ ಇಟ್ಟುಕೊಂಡು ಸಿದ್ಧರಾಗಿದ್ದಲ್ಲಿ ಈ ಪ್ರಜಾ ಹಿಂಸಕರನ್ನು ರಫ್ತು ಮಾಡಬಹುದು. ಅಯ್ಯರವನನ್ನು ಮೊದಲು ರಫ್ತು ಮಾಡಿದಲ್ಲಿ, ನಂತರ ಉಳಿದ ಪ್ರಜಾಹಿಂಸಕರನ್ನು ಕಳುಹಿಸಬಹುದು."

"ಆದರೆ ತೊಪ್ಪೆ, ಶ್ರೀಮಂತನಾಗಲು ನೀನು ದೊಡ್ಡ ಬಂಡಾಯದ ಹಾಗೂ ಬಡಾಯಿಯ ಹಂಚಿಕೆಗಳ ಕುರಿತೀಕ್ಷಿ[…] ತ್ತಿರುವೆ. ಅವೆಲ್ಲವೂ ನನ್ನ ಬಡ ಮೆ[…]ನ ಬಳಿ ಬರಲಾರವು. ನನಗಂತೂ ಮ[…] ಸ್ಸಾಗಿ ಹೋಯಿತು. ಇದೇ ಹಳ್ಳಿಯ[…] ಕ್ರಯಕ್ಕೆ ಕೊಂಡುಕೊಳ್ಳುವುದು,' […] ಬಹಳ ಕಟ್ಟ ಹಾಗೂ ವಿಷಪೂರಿತ ಮ[…] ತ್ವಾಕಾಂಕ್ಷೆ ಇದೆ. ಅಲ್ಲದೆ ಅದು ಅಸಾ[…] ವೂ ಇದೆ."

"ಪ್ರಿಯ ಮುರುಗ, ಹೌದು, ನೀ[…] ವಯಸ್ಸಾದವನು ಹಾಗೂ ಇದೇ ಹಳ್ಳಿ[…] ವನಿರುವೆ, ಅಲ್ಲದೆ ಕಳೆದ ಭಾರಿ ನಿನ್ನ […] ಲೆ ದಾಳಿಮಾಡಿದ ಜ್ವರವು ನಿನ್ನ ನೈಸ[…] ಕ ಧೈರ್ಯ ಹಾಗೂ ವ್ಯವಹಾರಿಕ […] ದ್ಧಿಯ ಮೇಲೆ ಪ್ರಬಲ ಆಘಾತವನ್ನು[…] ಮಾಡಿದೆ. ಅದೆಲ್ಲವನ್ನೂ ನನಗೆ ಬಿ[…] ಕೊಡು, ಬೇಕಾದ ವ್ಯವಸ್ಥೆಯನ್ನು ನಾ[…] ಮಾಡುತ್ತೇನೆ. ಜಮೀನಿನ ಧನಿಗಳು ಕ[…] ದಲ್ಲಿರುವಾಗ ಅವುಗಳು ಇದ್ದರೂ ಅಷ್ಟೆ[…] ಇಲ್ಲದಿದ್ದರೂ ಅಷ್ಟೆ. ಈಗಂತೂ ಪೈಪೋ[…] ಯೂ ಇಲ್ಲ. ಅಗ್ರಹಾರದ ವಾತಾವರ[…] ವು ನಾರುತ್ತಿದೆ. ಈಗ ತನ್ನ ಒಂದಕ್ರೆ[…] ಮೀನನ್ನೂ ಉಳಿಸಿಕೊಳ್ಳುವ ಸಮರ್ಥ[…] ಯಾರೂ ಇರುವುದಿಲ್ಲ. ಮುಂಚೆ ಒಬ್ಬ[…] ದ್ದರು ಅವರೇ ನಿಮ್ಮ ಧನಿ, ದಯಾ[…] ರಾಮು. ಅವರನ್ನು ಈ ಹಳ್ಳಿಯು ಓ[…] ಬಿಟ್ಟಿದೆ. ಅಂತಹ ಹಳ್ಳಿಯು ದೇವರ […] ಷ್ಟಿಯಲ್ಲಿ ಶಿಕ್ಷೆಗೆ ಒಳಗಾಗಬೇಕು." […] ತ್ತುಸಾವಿರ ನಾಕು. ನೀನು ನನ್ನ ಮಾ[…] ನ್ನು ಕೇಳಿದಲ್ಲಿ ಅದನ್ನು ಮೂರು […] ರ್ಷದೊಳಗೆ ಒಟ್ಟು ಮಾಡಬಹುದು

"ಹತ್ತು ಸಾವಿರ ರೂಪಾಯಿಗಳ[…] ಹೇಗೆ ತೊಪ್ಪೆ? ತೆಂಗಿನಲೆಗಳು ಬಂ[…] ರದಲೆಗಳೇನು?"

"ಹಾಗೆಂದು ಹೇಳಲೂ ಬಹುದು. ಹಳ್ಳಿಯಲ್ಲಿ ಒಂದು ಹೆಂಡದಂಗಡಿ[…] ದ್ದು, ನೀನದನ್ನು ಲಾವಣಿ ಹಿಡಿದವ[…] ಗಿದ್ದಲ್ಲಿ ಹಾಗೆ ಇರುತ್ತಿದ್ದತ್ತು."

"ನಾನು, ಹೆಂಡದಂಗಡಿಯನ್ನು ಲಾ[…] ಣಿಗೆ ಹಿಡಿದವ—ಹೀನ ಕುಲದವ, ತೊ[…] ಪ್ಪೆ! ಜನರು ನಮ್ಮನ್ನು ಶಪಿ[…] ಯಾರು."

"ನಿಸರ್ಗ ತಾನಾಗಿ ಸಂತೋಷದಿಂ[…] ಕೊಡುತ್ತಿರುವ ಪದಾರ್ಥಗಳನ್ನು ಪ್ರ[…] ಮಾಣಿಕತನದಿಂದ ಮಾರಿ ಜೀವನ ನ[…] ಸುವದು ಹೀನ ಕಾರ್ಯವಲ್ಲ. ಪಟ್ಟಣಿಗರ[…]

(ಹದಿನೈದನೇ ಪುಟ ನೋಡಿರಿ)

8%	ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7½
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್	ಖಾತೆಯ ಮೇಲೆ		4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.



ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ., ಯವ[…]
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=2[…]
ಪ್ರೇಮ ವಿಜಯ	1=0[…]
ಮುಂದಿನ ದೇವರು	0=2[…]
ವ್ಯಭಿಚಾರಿಣಿ ಯಾರು?	1=0[…]
ಹಂತ್ತಿ ಗಂಡನಾದರೆ?	0=2[…]
ಪುರುಷವಧು	0=2[…]
ಸನ್ಯಾಸಿಯ ಸೋಗಿನಲ್ಲಿ	0=7[…]
ಸಂಶಯ ಪಿಶಾಚಿ	0=7[…]
ಲವಕುಶ	0=5[…]
ಚಿತ್ರಾಂಗದೆ	0=6[…]

ಪ್ರತಿಗಳು ಸಿಗುವ ಸ್ಥಳಗಳು.-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Telephone 226.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೫	೩—೩—೧೯೬೬	No. 25

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥವಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ದುಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

— ಮುಖಪತ್ರದಲ್ಲಿ: —

ಜನವರಿ ಆದಿ ಭಾಗದಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿಗಳೂ ಅಮೇರಿಕಾದ ಅಧ್ಯಕ್ಷ ಜಾನ್ಸನ್ನರ ಸಂಚಾರಿ ರಾಯಭಾರಿ ಎವೆರೆಲ್ ಹೆರಿಮನರೂ ವಿಯಟ್ನಾಮ್‌ನಲ್ಲಿ ಶಾಂತಿ ಸ್ಥಾಪನೆಯ ಕುರಿತು ಚರ್ಚಿಸುತ್ತಿರುವರು.

ವಿದೇಶೀ ನೆರವು

ಆಹಾರದ ಅಭಾವ ಮತ್ತು ಪಾಕಿಸ್ತಾನದೊಂದಿಗಿನ ಹೋರಾಟಗಳಿಂದಾಗಿ ನಮ್ಮ ಒಂದು ವರ್ಷದ ನಿರೀಕ್ಷೆಯೆಲ್ಲವೂ ಮಣ್ಣುಪಾಲಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಮೂರನೆಯ ಯೋಜನೆಯ ಕೊನೆಯ ವರ್ಷವೆಂಬುದು ಬಂಡವಳ ವಿನಿಯೋಗದಲ್ಲಿ, ವ್ಯಾಪಾರ ವಹಿವಾಟಿನಲ್ಲಿ ಮತ್ತು ವಿದೇಶೀಯ ಸಹಾಯದಲ್ಲಿ—ಹೀಗೆ ಪ್ರತಿರಂಗದಲ್ಲಿಯೂ ಹಿಂದೆ ಬಿದ್ದಿದೆ, ಉತ್ಪಾದನೆಯು ಕಡಿಮೆಯಾಗಿದೆ; ವೆಚ್ಚವು ಹೆಚ್ಚಿದೆ. ವಿದೇಶೀ ಸಹಾಯಗಳ ಅಭಾವದಿಂದಾಗಿ ನಮ್ಮ ಉದ್ದಿಮೆಗಳೂ ಕುಂಟತೊಡಗಿವೆ. ಆಂತರಿಕ ಸಮತೋಲವನ್ನು ಕಾಯ್ದುಕೊಳ್ಳುವುದಕ್ಕಾಗಿ ಕೊರತೆ ಧನದ ವಿನಿಯೋಗವೊಂದೇ ನೆರವಾಗುವಂತಾಯಿತು. ಇಷ್ಟರಿಂದಲೇ ಸಮಸ್ಯೆ ಬಗೆಹರಿಯಲಿಲ್ಲ. ಹೊರ ದೇಶಗಳೊಡನಿರುವ ನಮ್ಮ ವ್ಯಾಪಾರಕ್ಕೆ ಜೀವಕಳೆಯಿತ್ತು ವಿದೇಶ ವಿನಿಮಯವನ್ನು ನಾವು ಗಳಿಸದೆ ಹೋದರೆ, ಪರದೇಶಗಳಿಂದ ನಾವು ತರಿಸುವ ಆಹಾರ ಪದಾರ್ಥಗಳನ್ನೂ ಕೊಂಡುಕೊಳ್ಳುವ ಶಕ್ತಿ ನಮ್ಮಲ್ಲಿಲ್ಲವಾಗುವುದು.

ವಿದೇಶ ವಿನಿಮಯದ ವಿಷಮ ಪರಿಸ್ಥಿತಿಯಿಂದಾಗಿಯೇ ಪ್ರಧಾನಿ ಇಂದಿರಾ ಗಾಂಧಿಯವರು ಅಮೇರಿಕೆಗೆ ವಿನಂತಿಮಾಡಿಕೊಂಡದ್ದು: "ನನ್ನ ಬರುವಿಕೆಯನ್ನು ಕಾಯದೆ ನೆರವನ್ನು ಮುಂದೆಮಾಡಿ" ಎಂದು ಅವರ ಈ ಮನವಿಯನ್ನು ಜಾನ್ಸನ್ ಮನ್ನಿಸಿಯೂ ಮನ್ನಿಸಿದರು. ಆದರೆ, ಇಷ್ಟರಿಂದಲೇ ನಮ್ಮ ಕಷ್ಟ ದೂರವಾಯಿತೆಂದು ಅರ್ಥವಲ್ಲ. ಕಚ್ಚಾಮಾಲುಗಳ ಅಭಾವದಿಂದ ನರಳುತ್ತಿರುವ ನಮ್ಮ ಉದ್ಯಮಗಳು ಸ್ವಲ್ಪ ಚೇತರಿಸಿಕೊಳ್ಳುವಂತಾಯಿತು, ಅಷ್ಟೆ. ಅದೇನೆ ಇರಲಿ, ಈ ನಡುವೆ ನಮ್ಮ ದೇಶದಲ್ಲಿ ಒಂದು ಅಪಸ್ವರ ಏಳತೊಡಗಿದೆ. ಈ ಸ್ವರವನ್ನು ಕೆಲವು ವರ್ಷಗಳಿಗೆ ಮೊದಲು ಮೊತ್ತಮೊದಲು ಎಬ್ಬಿಸಿದವರು ಸ್ವತಂತ್ರ ಪಕ್ಷದ ನಾಯಕರು. ಇಂದಿನ ತೆರಿಗೆ ಪ್ರಮಾಣವನ್ನು ನೂರಕ್ಕೆ ಐವತ್ತರಷ್ಟು ಇಳಿಸಿದಲ್ಲಿ ತಾನೂ ತನ್ನ ಪಕ್ಷದವರೂ ಕಾಂಗ್ರೆಸ್ಸನ್ನು ಸೇರುವುದಾಗಿ ಹೇಳಿಕೊಳ್ಳುವ ರಾಜಾಜಿಯವರೇ ವಿದೇಶಗಳಿಂದ ಸಾಲ ತೆಗೆದುಕೊಳ್ಳುವುದನ್ನು ವಿರೋಧಿಸಿದ್ದಾರೆ. ದೇಶದ ಇತರ ರಾಜಕೀಯ ಪಕ್ಷಗಳು ಸ್ವದೇಶವನ್ನು ಒತ್ತೆಯಿಟ್ಟು ಕಾಂಗ್ರೆಸ್ ಸಾಲ ತೆಗೆದುಕೊಳ್ಳುತ್ತಿದೆ ಎಂದು ಬಹಿರಂಗವಾಗಿ ಘೋಷಿಸುತ್ತಾರೆ. ನೌಕರರ ಮಜೂರರ ವೇತನ ಹೆಚ್ಚಬೇಕು, ಜನಜೀವನ ಮಟ್ಟ ಸುಧಾರಿಸಬೇಕು, ಉದ್ದಿಮೆ ದಂಧೆಗಳು ಹೆಚ್ಚಬೇಕು, ಅಧಿಕೋತ್ಪಾದನೆ ಶಕ್ಯ ಅವಕಾಶಗಳು ದೊರೆಯಬೇಕು—ಇತ್ಯಾದಿ ಬೇಕುಗಳೊಡನೆ ಇನ್ನೂ ಎರಡು ಬೇಕುಗಳಿವೆ: ಮೊದಲನೆಯದಾಗಿ ತೆರಿಗೆಗಳು ಕಡಿಮೆಯಾಗಬೇಕು, ಇಲ್ಲವೇ ಅವನ್ನು ಕಿತ್ತು ಹಾಕಬೇಕು. ಮತ್ತು ವಿದೇಶೀ ನೆರವನ್ನು ಮಿತಗೊಳಿಸಬೇಕು ಅಥವಾ ನಿಲ್ಲಿಸಬೇಕು. ಇವೆಲ್ಲವೂ ವಿಲಕ್ಷಣ ಬೇಕುಗಳೆನ್ನಲೇ ಬೇಕಾಗುತ್ತದೆ.

ನಮ್ಮದು ಅನಭಿವೃದ್ಧ ದೇಶ, ಅಭಿವೃದ್ಧಿ ಪಥಗಾಮಿಯಾಗುತ್ತಿರುವ ದೇಶ. ಒಂದು ಅನಭಿವೃದ್ಧ ದೇಶವು ಅಭಿವೃದ್ಧಿಯನ್ನು ಸಾಧಿಸುವಾಗ ವಿದೇಶಗಳಿಂದ ಸಹಾಯವನ್ನೂ ಸಾಲವನ್ನೂ ಪಡೆಯುವುದು ಸ್ವಾಭಾವಿಕ. ಮನೆಕಟ್ಟುವುದಕ್ಕೆ ಜನಸಾಮಾನ್ಯರು ಸಾಲಮಾಡುವುದಿಲ್ಲವೇ, ಹಾಗೆ. ಈ ದಿಸೆಯಲ್ಲಿ ದಿ| ಜವಾಹರಲಾಲ ನೆಹರೂರವರು ಅನುಸರಿಸಿದ ನೀತಿಯನ್ನೇ ನಾವಿಂದಿಗೂ ಮುಂದುವರಿಸುತಿದ್ದೇವೆ. ನಮ್ಮ ದೇಶದ ಗೌರವ–ಘನತೆ–ಅಭಿಮಾನಗಳಿಗೆ ಕುಂದು ತರುವಂತಹ ರೀತಿಯಲ್ಲಿ ಯಾರ ನೆರವನ್ನು ನಾವು ಪಡೆಯುವುದಿಲ್ಲ. ದಿ| ಲಾಲಬಹದ್ದೂರರೂ ಈ ನೀತಿಯನ್ನೇ ಅನುಸರಿಸಿದರು; ಇಂದಿರಾ ಗಾಂಧಿಯವರೂ ಇದೇ ಅಭಿಪ್ರಾಯವನು ಸಮರ್ಥಿಸಿಕೊಂಡಿರುವರು. ಇನ್ನೂ ಒಂದು ಸಂಗತಿ, ವಿದೇಶಗಳಿಂದ ನಾವು ಸಾಲವನ್ನು ತೆಗೆದುಕೊಂಡಿದ್ದೇವೆ; ಮತ್ತು ಅದನ್ನು ಮರಳಿಸಿದ್ದೇವೆ. ಆದುದರಿಂದ ನಮ್ಮ ಮೇಲೆ ಅವುಗಳಿಗೆ ವಿಶ್ವಾಸವಿದೆ. ಇದೇ ವಿಶ್ವಾಸವನ್ನು ನಾವು ಮುಂದೆಯೂ ಉಳಿಸಿಕೊಳ್ಳಬೇಕು. ಸ್ವದೇಶದಲ್ಲಿ ಉಪಲಬ್ಧವಿರುವ ಮಿತ ಬಂಡವಾಳದಿಂದಲೇ ದೇಶವನ್ನು ಕಟ್ಟುವುದು ಕಷ್ಟ ಸಾಧ್ಯ. ಹಾಗಾಗಿ ವಿದೇಶೀ ನೆರವು ಸ್ವಾಗತಾರ್ಹವೇ. ಆದರೆ, ನಾವು ಎಲ್ಲಕ್ಕಿಂತ ಹೆಚ್ಚು ಗಮನಹರಿಸಬೇಕಾಗಿರುವ ಸಂಗತಿಯೆಂದರೆ, ನಮ್ಮ ವಿನಿಯೋಗ ಸದ್ವಿನಿಯೋಗವಾಗಬೇಕು; ಅಪವ್ಯಯ, ಅನಾವ್ರಯವಿಲ್ಲಬೇಕು; ಕೊರತೆ ಧನ ವಿನಿಯೋಗ ತಪ್ಪಿ, ಹಣದುಬ್ಬರ ಹೆಚ್ಚದಂತೆ ನೋಡಿಕೊಳ್ಳಬೇಕು. ಏಕೆಂದರೆ, ಈಗಿರುವ ಹಣದುಬ್ಬರವನ್ನು ಇಳಿಸಲು ನಮ್ಮ ರೂಪಾಯಿಯ ಮೌಲ್ಯವಿಚ್ಛೇದನವೊಂದೇ ಪರಿಹಾರ ಮಾರ್ಗವೆಂದು ಹೇಳುವವರ ಸಂಖ್ಯೆ ವಿದೇಶಗಳಲ್ಲೂ ಹೆಚ್ಚತೊಡಗಿದೆ.

ವೀರ ಸಾವರ್ಕರ

ಸ್ವಾತಂತ್ರ್ಯ ವೀರ ಸಾವರ್ಕರರು ದಕ್ಷಿಣ ಬೊಂಬಾಯಿಯಲ್ಲಿ ತನ್ನ ೮೩ನೆ ವಯಸ್ಸಿನಲ್ಲಿ ತಾ. ೨೬ರಂದು ದಿವಂಗತರಾದರು. ನನ್ನ ಜೀವನದ ಎಳೆ ಹರೆಯದಲ್ಲಿಯೇ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ದುಡಿದ ಈ ಕ್ರಾಂತಿಕಾರಿ ಯೋಧರು ಅನೇಕ ಪ್ರಕಾರದ ತ್ಯಾಗ, ಸೇವೆಗಳಿಗೆ ಹೆಸರಾಗಿದ್ದಾರೆ. ಕಳೆದೆರಡು ವರ್ಷಗಳಿಂದ ಅಸ್ವಾಸ್ಥ್ಯರಾಗಿದ್ದ ಇವರು ಮೂರು ವಾರಗಳ ತೀವ್ರ ವೇದನೆಯ ನಂತರ ಅಸುನೀಗಿದರು. ವೀರ ಸಾವರ್ಕರರ ಆತ್ಮ ಅತ್ಯಂತ ವೀರ; ಮನಸ್ಸು ಕೂಡ. ಅವರು ತನ್ನ ನಿಧನದ ನಂತರ ಉತ್ತರಕ್ರಿಯೆಯನ್ನು ಹೇಗೆ ಮಾಡಬೇಕು ಎಂದು ಬರೆದಿಟ್ಟಿದ್ದಾರೆ. ಸೋನಾಪುರದ ವಿದ್ಯುತ್ ಸ್ಮಶಾನದಲ್ಲಿ ಮೃತ ದೇಹವನ್ನು ದಹಿಸಬೇಕು—ಎಂಬ ಇಚ್ಛೆಯನ್ನು ವ್ಯಕ್ತಪಡಿಸಿದ ವೀರ ಸಾವರ್ಕರರು ಇಲ್ಲಿಯೂ ತನ್ನ ತ್ಯಾಗವೀರ್ಯವನ್ನು ತೋರಿದ್ದಾರೆ. ಈ ಸಂದರ್ಭದಲ್ಲಿ ಅವರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ, ಅವರ ವೀರಾತ್ಮಕ್ಕೆ ಚಿರಶಾಂತಿಯನ್ನು ಕೋರುವುದು ಪ್ರತಿ ಭಾರತೀಯನ ಕರ್ತವ್ಯ.

ವಚನ ಸುಧೆ

ಅವಿಸಂವಾದಕೋ ದಕ್ಷಃ
ಕೃತಜ್ಞೋ ಮತಿ ಮಾನ್ನೃಜುಃ
ಅಪಿಸಂಕ್ಷೀಣ ಕೋಶೋಽಪಿ
ಲಭತೇ ಪರಿವಾರಣಂ॥

ಪ್ರಾಮಾಣಿಕ, ಚತುರ, ಕೃತಜ್ಞ, ಬುದ್ಧಿವಂತ ಮತ್ತು ಸರಳನಾದ ರಾಜನ ಭಂಡಾರವು ಖಾಲಿಯಾಗಿ ಹೋದರೂ ಆತನು ಅನೇಕ ಸಹಾಯಕರನ್ನು ಪಡೆಯುತ್ತಾನೆ.

ಉಡುಪಿಯಲ್ಲಿ ಉಪಸಚಿವ ಶ್ರೀ ಎಚ್. ಆರ್. ಅಬ್ದುಲ್ ಗಫಾರ್‌ರವರು

ಉಡುಪಿ, ಫೆಬ್ರವರಿ 19: ಉಡುಪಿ ನಗರ ಸಭೆಯ ಆಶ್ರಯದಲ್ಲಿ ಜರಗಿದ ನಾಗರಿಕರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಅರ್ಥಿಕ ಉಪಸಚಿವ ಶ್ರೀ ಎಚ್. ಆರ್. ಅಬ್ದುಲ್ ಗಫಾರ್‌ರವರು ಉಳಿತಾಯ ಮಾಡುವ ಭಾವನೆ ಜನತೆಯಲ್ಲಿ ಮೂಡಿಬರಬೇಕೆಂದು ನುಡಿದರು. ಪ್ರಸ್ತುತ ಬೆಲೆಯೇರಿಕೆ ಜನರಲ್ಲಿ ಹಣ ಹೆಚ್ಚಿರುವುದೂ ಒಂದು ಕಾರಣವಾಗಿದೆಯೆಂದರಲ್ಲದೆ ಬೆಲೆಯೇರಿಕೆಯನ್ನು ತಡೆಯಬೇಕಿದ್ದರೆ ಉಳಿತಾಯ ಯೋಜನೆ ತೀವ್ರ ಅವಶ್ಯಕವಾಗಿದೆಯೆಂದರು.

ರಾಜ್ಯದ ಉಳಿತಾಯ ಯೋಜನಾಧಿಕಾರಿ ಶ್ರೀ ಕೆ. ಮಹಮ್ಮದ ಬ್ಯಾರಿಯವರು ಉಳಿತಾಯ ಯೋಜನೆಯ ಕುರಿತು ವಿವರಿಸಿದರು. ರಾಷ್ಟ್ರೀಯ ಉಳಿತಾಯದಿಂದ ರಾಷ್ಟ್ರಕಲ್ಯಾಣ ಮಾತ್ರವಲ್ಲದೆ ಜನತೆಯ ಆದಾಯವೂ ಹೆಚ್ಚುದೆಂದರು. ಆರಂಭದಲ್ಲಿ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿ, ರಾಜ್ಯದಲ್ಲಿ ಪ್ರಥಮ ಸ್ಥಾನವನ್ನು ಮಡಿಕೇರಿ ಪಡೆದಿದ್ದು ಉಡುಪಿಯು ಎರಡನೇ ಸ್ಥಾನವನ್ನು ಹೊಂದಲು ಇಲ್ಲಿನ ನಾಗರಿಕರು ಸಹಕರಿಸಬೇಕೆಂದು ಹೇಳಿದರು. ಕೊನೆಯಲ್ಲಿ ಶ್ರೀ ಎ. ಜೆ. ಅಲ್ಸೆಯವರಿಂದ ಧನ್ಯವಾದ ಸಮರ್ಪಣೆಯಾಯಿತು.

ನರಸಣ್ಣನ ಸರಸ



'ತೆರಿಗೆಗಳನ್ನು ಸೇ. ಐವತ್ತರಷ್ಟು ಇಳಿಸುತ್ತಾರಾದರೆ ಸ್ವತಂತ್ರ ಪಕ್ಷ ಕಾಂಗ್ರೆಸ್ಸಿಗೆ ಸೇರುವುದಂತೆ...'

'ಇದೇ ಭರವಸೆಯನ್ನು ರಾಜಾಜಿ ಕೊಟ್ಟರೆ, ಕಾಂಗ್ರೆಸ್ಸೇ ಏಕೆ ಸ್ವತಂತ್ರ ಪಕ್ಷದಲ್ಲಿ ವಿಲೀನವಾಗ ಬಾರದು?'

ಗೇಹರಾಜ್ಯದಲ್ಲಿ

ಪಡೆದಷ್ಟಲ್ಲದೆ ಬರುವುದೆ?

"ಕೇಳಿದ್ಯೇನೆ?"

"ಏನನ್ನ?"

"ಏನು ಹೇಳೋದು ನೋಡು, ಎಲ್ಲಾ ಪ್ರಾರಬ್ಧ ಕರ್ಮ...."

"ಅಲ್ರಿ, ನೀವು ಪ್ರಾರಬ್ಧ ಕರ್ಮಾಂತ ಬಡಬಡಿಸಿದರೆ ನಂಗೆ ಗೊತ್ತಾಗೋದಾದ್ರೂ ಹೇಗೆ? ಸುಮ್ಮ ಬಾಯ್ಬಿಟ್ಟು ನುಡೀರಿ. ಯಾರ ಕರ್ಮ, ಯಾಕೆ, ಏನಾಯ್ತು, ಎಲ್ಲಿ..."

"ಇದಕ್ಕೇ ಅನ್ನೋದು ಹೆಂಗಸ್ರು ನಾಲಿಗೇಂತ."

"ಏನಾಯ್ತು? ಯಾಕೆ ಅಷ್ಟೊಂದು ಸಿಡಾರ ಮಾಡ್ತೀರಿ?'

'ಅಲ್ಲೊ, ಮತ್ತೆ ಮಾಡಬೇಕಾದ್ದಾದ್ರೂ ಏನು? ಅವ್ರಿಗೆ ಹಾಲು ಮಾತ್ರ ಸಿಕ್ಕಿದ್ರೆ ಸಾಲದು, ಅದ್ರ ಮೇಲೆ..."

"ಹ್ಞಾಂ, ಹೇಳಿ ಹೇಳಿ... ಯಾಕೆ ಸುಂಸುಮ್ನೆ ದಾಕ್ಷಿಣ್ಯ?"

"ಆ ಯೆಮ್ಮೆ ಹುಟ್ಟಿದ್ದು, ಬೆಳೆದದ್ದು ಎಲ್ಲಿ? ಅದ್ರ ಉದ್ದಗಲ ದಪ್ಪಗಳು ಎಷ್ಟು, ಹಲ್ಲು ಎಷ್ಟು ಮೂಡಿವೆ, ಕೊಂಬಿನ ಉದ್ದ ಎಷ್ಟು... ಅದು ಯಾರ ಅಂಗಡಿಯ ಯಾವ ಹಿಂಡಿ ತಿನ್ನುತ್ತದೆ, ಯಾರ ಗದ್ದೆಯ ಪೈರನ್ನು ಕದ್ದು ತಿನ್ನುತ್ತದೆ...."

"ಸಾಕು ಬಿಡೀಂದ್ರೆ... ಏನೋ ಹಾಲಿಗೆ ಹೋಯ್ತೂನ್ನಿ. ಸುಖ ದುಃಖದ ಒಂದು ನಾಲ್ಕು ಮಾತಾಡಿದ್ರೆ ತಪ್ಪೇನು?"

"ಬರಿಯ-ಸುಖ ದುಃಖದಲ್ಲೇ ಮಾತು ನಿಂತ್ರೆ ಹಂಗಾಗಿಲ್ಲಾನು. ಆದ್ರೆ ಒಂದೊಮ್ಮೆ ಅದು ಮತ್ತೂ ಮುಂದುವರಿದು..."

"ಎಲ್ಲೋ ಅತ್ಯಪೂರ್ವಕ್ಕೆ ಒಂದೊಂದು ಬಾರಿ ಅನಾಹುತವಾಯ್ತೂಂತನ್ನಿ. ಆದ್ರೆ ಮನದಿಂದ್ಲೆ ಎಲ್ಲವನ್ನೂ ಅಳಿಯೋದು ಹೇಗೆ?'

"ನೋಡಮ್ಮ, ಬಲ್ಲವರು ಹೇಳ್ತಾರೆ....'

"ಅವ್ರೇ ಹೇಳದೆ ಇದ್ರೆ ಮತ್ತೆ ಹೇಳೋರಾದ್ರೂ ಯಾರು?"

'ಯಾರು? ಯಾರೂ ಇಲ್ದಿದ್ರೆ ಇದ್ದಾರಲ್ಲಾ...'

'ಯಾರು?'

"ಅಳದ ಊರಿನ ಗೌಡರು; ಹಾಳೂರ ಶುನಕಗಳು..."

"ಹ್ಞಾಂ... ಅರ್ಥವಾಯ್ತು ಬಿಡಿ. ಅದಿರ್ಲಿ..."

"ಇಲ್ಲಿ ಇಲ್ಲಿ, ಯಾರು ಬೇಡಾಂತಾರೆ?"

"ಸುರುವಾಯ್ತು..."

"ಏನು?"

"ಪ್ರಾರಬ್ಧ ಕರ್ಮ..."

"ಹೌದೇ, ಪುಣ್ಯಕ್ಕೆ ನೀನು ಹುಟ್ಟಿದಗಳಿಗೆ ಭಾರೀ ಒಳ್ಳೆದಿತ್ತು...."

"ಯಾಕೆ? ಏನಾಯ್ತು..."

"ಗಾಬರಿಯಾಗ ಬೇಡ. ಸದ್ಯ ಏನೂ ಆಗಿಲ್ಲಾನ್ನು. ಒಂದು ವೇಳೆ ಏನಾದ್ರೂ ಆಗಿದ್ರೂ...."

'ಆಗಿದ್ರೆ...'

"ಏನೂ ಆಗಿಲ್ಲ ಬಿಡು..."

"ಅಲ್ರಿ ಏನಾಯ್ತು?"

"ಏನೂ ಇಲ್ಲ. ಇಂದು ಬೆಳಿಗ್ಗೆ ಹೋಗೋವಾಗ ಆ ಕಮ್ತಿ ಕರೆದ. ಅವನತ್ತ ತಿರುಗುತ್ಲೇ ಬಸ್ಸಿನ ಅಡ್ಡದಿಂದ ಕಾರೊಂದು ಕರ್ರೆಂದು ಬ್ರೇಕು ಹಾಕಿ ನಿಂತಿತು. ಸುಮ ಹೆಚ್ಚುಕಡಿಮೆಯಾಗ್ತಿದ್ರೆ...."

"ಅಷ್ಟೇನೇಯೆ? ನೀವನ್ನೋವಾಗ ನಾನು ಏನೇನೋ ಅಂದುಕೊಂಡಿದ್ದೆ..."

"ಹೌದಪ್ಪ, ನನ್ನ ಎದೆ ನೋಡು, ಈಗ್ಲೂ ಜೋರಾಗಿ ಬಡಿಯುತ್ತಿದೆ.... ಹೇಗೆ? ನಿನಗೇನು, ಅಷ್ಟೇನೆಯೇ ಅಂತ ಸಮಾಧಾನಪಟ್ಟುಬಿಟ್ಟೆ...."

"ಅಲ್ರಿ, ಏನೂ ಅಪಾಯ ಆಗದೆ ಇರೋವಾಗ ಅಪಾಯದ ಕಲ್ಪನೆ ಹೇಗೆ ಬಂತ್ತದೆ?"

'ಅದೇ ಅಂದದ್ದು. ನಿನ್ನ ಪ್ರಾರಬ್ಧ ಕರ್ಮ ಒಳ್ಳೆಯದಿತ್ತು, ಜೀವಕ್ಕೆ ಬಂದಿರೋದು ಗಾಳಿಯಲ್ಲಿ ಹಾರಿಹೋಯ್ತೂಂತ...'

"ಹ್ಞಾಂ, ಅದು ಹೌದ್ರಿ.. ಅದ್ರೆ ನೋಡಿ ಎಲ್ಲಿಯಂತೆ ಅದು, ಗಾಣವೋ ಗಾನವೋ..."

'ಹ್ಞಾಂ....ಹೌದು ಘಾನಾದ ಅಧ್ಯಕ್ಷರು ಎನ್‌ಕ್ರೂಮಾರು ನಮ್ಮ ಪ್ರಧಾನಿ ಇಂದಿರಾ ಗಾಂಧಿಯವರನ್ನು ಹೊಸದಿಲ್ಲಿಯಲ್ಲಿ ಕಂಡು ಮಾತಾಡಿದರು...."

'ಸರೀನ್ನಿ. ಅವರಿಗೆ ಭಾರತದ ನಿಲುವನ್ನು, ಕಾಶ್ಮೀರ ಮತ್ತು ವಿಯತನಾಮ ನೀತಿಯನ್ನು ಸಂಪೂರ್ಣವಾಗಿ ವಿವರಿಸಲಾಯಿತಂತೆ. ಆದರೆ..."

– "ಆದರೆ ಏನಂತೆ?"

"ಏನೂಂತನ್ನೋದು? ಪಾಪ, ಅವರ ದೇಶದಲ್ಲಿ ಸೈನಿಕ ಕ್ರಾಂತಿಯಾಯ್ತಂತೆ, ಎನ್‌ಕ್ರೂಮಾರ ಪದಚ್ಯುತಿಯೂ ಆಯ್ತಂತೆ...."

"ಹ್ಞಾಂ....ಏನೆಂದೆ?"

"ನೋಡ್ರಿ ಇಲ್ಲಿ, ಪತ್ರಿಕೇಲಿ ದೊಡ್ಡ ಅಕ್ಷರಗಳಲ್ಲಿ ಬರೆದಿದೆಯಲ್ಲಾ.... ನೀವು ನೋಡ್ಲೇ ಇಲ್ವೆ'?

'ಅವಕಾಶವಾಗ್ಲಿಲ್ಲ... ಅಂತೂ ಎನ್‌ಕ್ರೂಮಾರ ಪ್ರಾರಬ್ಧ ಕರ್ಮ....ಎಂತಹ ದುರಂತರವಿದು?'

'ಅಲ್ರೀ ಎನ್‌ಕ್ರೂಮಾ ಸರ್ವಾಧಿಕಾರದತ್ತ ಒಲಿಯುತ್ತಿರುವರಂದೂ ಸೇನೆಯಲ್ಲಿ, ಜನತೆಯಲ್ಲಿ ಅತೃಪ್ತಿ ಮೂಡಿದೆಯೆಂದೂ ಈಗ ಹೇಳಲಾಗದಯಲ್ಲಾ....'

'ಈಗ ಏನು ಹೇಳಿದರೂ ನಡೆಯುತ್ತೀನ್ನು. ಆದ್ರೆ, ಈ ಕ್ರಾಂತಿಯ ಬಗ್ಗೆ ಎಳ್ಳಷ್ಟೂ ಸುಳಿವು ಎನ್‌ಕ್ರೂಮಾರಿಗ ಸಿಗಲಿಲ್ಲವೆಂತಾದ ಮೇಲೆ ಇದು ಪೂರ್ಣ ಪೂರ್ವನಿಯೋಜಿತವೇ ಇರಬೇಕು...'

'ಯಾಕೆ?'

'ಯಾಕ ಅಂದ್ರೆ? ಅಧ್ಯಕ್ಷ ಮಹಾಶಯರು ಬಹುದೂರದ ಸಂಚಾರ ಕ್ರಮದಲ್ಲಿ ತೊಡಗಿರುವಾಗಲೇ, ಇಂತಹ ಬಂಡಾಯ ನಡೆಯಬೇಕಾದರೆ, ಅಧ್ಯಕ್ಷರ ಸಂಚಾರಾವಧಿಯನ್ನೇ ಇವರು ಎದುರು ನೋಡುತ್ತಿರಬಹುದು...."

"ಇರಬಹುದೂನ್ನಿ. ಅಲ್ರಿ ಎನ್‌ಕ್ರೂಮಾ ಅಂದರೆ ಘಾನಾದಲ್ಲಿ ಬಹಳ ಹೆಸರು ವಾಸಿಯಾದವರು. ಭಾರತದಲ್ಲಿ ನೆಹರು ಇದ್ದ ಹಾಗೆ ಅನ್ನುತಿದ್ದರಲ್ಲಾ?"

'ಹೌದು....ಆದರೆ ನೋಡು, ಎನ್‌ಕ್ರೂಮಾ ಆರಂಭದಲ್ಲಿ ಪ್ರಜಾಸತ್ತೆಯ ಕೈವಾರಿಯಾಗಿಯೇ ಇದ್ದರು. ನೆಹರು ಮತ್ತು ಅವರಲ್ಲಿ ತುಂಬ ಮತ ಸಾಮ್ಯಗಳಿದ್ದುವೂನ್ನು. ಆದರೆ, ಪ್ರಾಯಃ ಜನತೆ ತನ್ನಲ್ಲಿಟ್ಟಿದ್ದ ವಿಶೇಷ ಗೌರವಾದರಗಳನ್ನು ಅವರು ದುರುಪಯೋಗಪಡಿಸಿಕೊಳ್ಳತೊಡಗಿರಬೇಕು."

"ಇದು ಹೇಗೆ ಗೊತ್ತು?'

"ಹೇಗೆ ಏನು? ಕೆಲವು ಸಮಯದಿಂದ ಅವರ ಕೊಲೆಯ ಬೆದರಿಕೆಗಳು ಕೇಳಿ ಬರತೊಡಗಿದ್ದುವಂತಲ್ಲಾ?"

"ಹ್ಞಾಂ...ಅಲ್ರಿ, ಗಳಿಸಿದ ಮನ್ನಣೆಯನ್ನು ಯಾಕವರು ಉಳಿಸಿಕೊಳ್ಳಲಿಲ್ಲ?"

'ಇದಕ್ಕೆ ನಾನೇನನ್ನಬೇಕಮ್ಮ? ಬಹುಶಃ 'ಎಳೆ ಹರೆಯದ' ಎನ್‌ಕ್ರೂಮಾರ ಆಶೆ ಆಕಾಂಕ್ಷೆಗಳು ಮಿತಿಮೀರಿದ್ದಿರಬಹುದು. ಏಕಪಕ್ಷೀಯವಾಗಿ ರಾಜ್ಯವನ್ನಾಗಿ ಘಾನಾವನ್ನು ಕಟ್ಟುವ ಅವರ ಪ್ರಯತ್ನ ಸರ್ವಾಧಿಕಾರಿ ಮನೋವೃತ್ತಿ— ಮೊದಲಾದುವುಗಳೇ ಅವರ ಪತನಕ್ಕೆ ನಾಂದಿಯಿಟ್ಟಿರಬೇಕು..."

"ಆದರೆ ನೋಡಿ ೧೮ ವರ್ಷ ಆಡಳಿತೆ ನಡೆಸಿದರೂ ನಮ್ಮ ಜವಾಹರಲಾಲರು ನಿಸ್ಪೃಹರಾಗಿಯೇ ಉಳಿದರಲ್ಲಾ...."

'ನೆಹರು ಎಂದರೆ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ, ಅವರೊಂದು ತೇಜಃ ಪುಂಜ; ಅತ್ಯಪೂರ್ವ ಶಕ್ತಿಯ ರೂಪ...."

'ಅದು ಹೌದೂನ್ನಿ...ಪಾಪ ನೋಡಿ, ಎನ್‌ಕ್ರೂಮಾರ ಅವಸ್ಥೆ..."

'ಏನಂತೆ? ಅವರು ನಗು ನಗುತ್ತ ಪೀಕಿಂಗಿಗೆ ಆಗಮಿಸಿದರಂತೆ, ವಿಮಾನ ನಿಲ್ದಾಣದಲ್ಲಿ ಅವರಿಗೆ ಸಂಭ್ರಮದ ಸ್ವಾಗತವಿತ್ತು ಚೀನೀ ಧುರೀಣರು ಬರಮಾಡಿಕೊಂಡರಂತೆ. ಅವರಿಗೆ ತಮ್ಮ ದೇಶದಲ್ಲಿ ಸೈನಿಕ ಕ್ರಾಂತಿ ಸಂಭವಿಸಿದ ಅರಿವೇ ಇರಲಿಲ್ಲವಂತೆ. ಸಂಗತಿ ತಿಳಿಸಿದಾಗ...."

"ಏನಾಯ್ತಂತೆ?'

"ಅದನ್ನೂ ಶಬ್ದಗಳಿಂದ ಬರೆಯಲಿಕ್ಕಾಗುತ್ತದೆಯೆ?"

"ಬೇಡ ಬಿಡು, ಅಂತೂ ಗರಿಬಿಟ್ಟು ಹಾರಾಡುತ್ತಿದ್ದ ಪಕ್ಷಿಯೊಂದು ಉರುಳಿತು ಅಂದಂತಾಯಿತು....'

'ಇನ್ನು ಅವರ ಅವಸ್ಥೆಯೇನೂಂತ?..'

'ಅವಸ್ಥೆ? ಅವರು ಶಾಶ್ವತವಾಗಿ ಚೀನಾದಲ್ಲಿಯೇ ನೆಲಸಬಹುದು; ತನ್ನ ಬೆಂಬಲಿಗರನ್ನು ಕಳೆದುಕೊಂಡು ಅವರು ಘಾನದಲ್ಲಿ ಹೇಗೆ ಬದುಕಿಯಾರು?'

'ಅಂದರೆ, ಆಫ್ರಿಕೆಯಲ್ಲೂ ಚೀನಿ ಚಂಚು ಪ್ರವೇಶಕ್ಕೆ ಮತ್ತೊಂದು ಎಡೆ ಆದಂತಾಯಿತು.'

'ಆದರೂ ಆಗ ಬಹುದು....'

'ಅಲ್ಲ, ಈಗೀಗ ಏನೇನೆಲ್ಲಾ ವಾರ್ತೆಗಳನ್ನು ಕೇಳುತಿದ್ದೇವೇಂತ?'

'ಏನು?'

'ನೋಡಿ, ಮೊನ್ನೆ ಕೆಲವು ದಿನಗಳಿಂದ ವಿಮಾನ ಅಪಘಡದ ಸುದ್ದಿಯೂಯಿತು. ಅಲ್ಲಿ ಇಲ್ಲಿ, ಎಲ್ಲೆಲ್ಲೂ ವಿಮಾನ ಅನಾಹುತ, ವಿಮಾನ ಕಾಣೆ... ಅದು ಇವತ್ತಿಗೂ ನಿಂತಿಲ್ಲ ಅನ್ನಿ. ಭಾರತದ ವಿಮಾನಗಳಿಗೆ ಈ ಸೀಕು ಯಾಕೆ ಬಡಿಯುತ್ತಲಿದೆಯೋ ನೋ...."

"ಸರೀನ್ನು...'

'ಈಗ ನೋಡಿ, ಸಿರಿಯಾದಲ್ಲಿ ಸೈನಿಕ ಬಂಡಾಯವಾಗಿ, ರಾಜಧಾನಿ... ತ್ವೇಷಮಯ ವಾತಾವರಣ ಮೊಳೆ... ಯ್ತು. ಇಂಡೋನೇಶ್ಯದ ಅಧ್ಯಕ್ಷ... ರ್ಣರ ಅರಮನೆಗೆ ಮುತ್ತಿಗೆ ಬಿತ್ತು... ಅವರ ಜೀವ ಉಳಿದಿದೆಯೋ, ... ಯೇ, ಅಥವಾ ಹಿಂದೊಮ್ಮೆ ಉಳಿ... ತ್ತು ಮತ್ತೆ ಸತ್ತು ಉಳಿದಂತಿದೆಯೋ... ವರೇ ಬಲ್ಲ...."

"ಹೌದೂನ್ನು. ಇವತ್ತು ಎನ್... ಮಾ ಪತನ...."

'ಇನ್ನು ನಾಳೆ?'

'ನೋಡಮ್ಮ, ಪ್ರಪಂಚ ಬಹ... ಶಾಲವಿದೆ. ಇದರಲ್ಲಿ ಎಷ್ಟು ರಾಷ್ಟ್ರ... ದೆ! ಒಂದಲ್ಲ ಒಂದು ಕಡೆ ಏನಾ... ಆಗುತ್ತೆ, ಇದರಲ್ಲಿ ವಿಶೇಷವೇನೂ... ಆದರೆ ಒಂದೇ ದುಃಖ'

'ಏನು?'

'ಹೀಗೆಲ್ಲಾ ಆಗಬಾರದು. ಆದರೆ ... ವೊಮ್ಮೆ ಆಗಬಾರದ್ದೂ ಆಗಿ ಹೋ... ದೆ...'

'ಅದು ಹೌದೂನ್ನಿ. ನೋಡಿ, ... ಲಲಿತಾ ಶಾಸ್ತ್ರಿಯವರ ಹಣೆ...'

'ಹ್ಞಾಂ.. ಹೌದಮ್ಮ...'

'ಹೇಳ್ತಾರೆ, ಆ ಕುಂಕುಮದ ಸ್ಥಾ... ನ್ನು ಚಂದನ ಆವರಿಸಿದಾಗ ಅವ... ಕಣ್ಣುವಾಗಲೇ ಅಳು ಬರುತ್ತೆ...'

'ಹ್ಞಾಂ. ಅವರ ಜೀವನದ ಸ್ವಪ್ನ... ಗಳು ಎರಡು. ಅವುಗಳಲ್ಲಿ ಒಂದನ್ನು... ವಗು ಪೂರೈಸಿದ; ಇನ್ನೊಂದನ್ನು ವ... ....'

'ಸರೀನ್ನಿ. ಪಡೆದವಷ್ಟಲ್ಲದೇ ಹೆಚ್ಚಿ... ಬರುವುದುಂಟೆ? ಎಲ್ಲಾ ಅವರವರ ... ಬ್ಧ ಕರ್ಮ...'

'ಹ್ಞಾಂ.. ಭಾಗ್ಯವೊಂದು ಸವ... ಕೈಯಲ್ಲಿನ ತಂಬಿಗೆಯ ಪ್ರಮಾಣ... ನೀರು ಸಿಗಬಹುದು ತಾನೆ? ಹೆಚ್ಚಿ... ಎಲ್ಲಿಂದ ಬರಬೇಕು?'

'ಬ್ರಹ್ಮಲಿಪಿ ಅನ್ನೋದು ತಪ್ಪೀತ...'

'ಅದೆಲ್ಲಾ ಇರ್ಲಿ. ಬ್ರಹ್ಮಲಿಪಿ... ನೋಕ ವಿಕ್ರಮಾದಿತ್ಯ ಹುಟ್ಟಿ ಬಂದ... ಬರಬಹುದು. ಆದರೆ ನನ್ನ ಮಾಮೂ...'

'ಹ್ಞಾಂ. ಅದು ಇದ್ದೇ ಇದೆ...'

'ಅಷ್ಟಾದ್ರೆ ಸರಿ; ಎಲ್ಲಿ, ತ.ಸಿ...'

'ಶ್ಶು...'

'ಅಯ್ಯೋ ನಿನ್ನ ಪ್ರಾರಬ್ಧ ಕರ್ಮ...'

'ನಿಮ್ಮದೂ ಅನ್ನಿ...'

'ಹೌದು, ಹೌದು, ಇಬ್ಬರದ್ದೂ...'

– ಗೋ...

'NAVAYUGA' Weekly in the list of periodica[ls] and Newspapers approv[ed] for use in Second[ary] Schools as per proceedi[ngs] Roc. No. 466 N/50 date[d] 2-12-1950 of the Direct[or] of Public Instructio[n] Madras.

ಹಿಂದೂ ಸಂಘಟನೆಗೆ ನಾಂದಿ

ವಿಶ್ವ ಹಿಂದೂಗಳ ಸಂಗಮ - ವಿಶ್ವ ಹಿಂದೂ ಪರಿಷತ್ತು

(ಬರೆದು ಬಂದುದು)

ವಿಶ್ವ ಹಿಂದೂ ಪರಿಷತ್ತಿನ ಈ ಸಮ್ಮೇಳನವು ಪ್ರೀತಿಯ ಉಡುಗೊರೆಯಾಗಿ ಹಿಂದೂ ವಿಶ್ವವೆಂಬ ಪುಸ್ತಕವನ್ನು ಪ್ರಕಟಿಸಿತ್ತು. ಅದರಲ್ಲಿ ವಿವಿಧ ವಿದ್ವಾಂಸರ ಅನೇಕ ಲೇಖನಗಳು ಹಾಗೂ ಹಲವಾರು ದೇವಸ್ಥಾನಗಳ ಮೂರ್ತಿಗಳ ಚಿತ್ರಗಳಿವೆ. ಲೇಖನಗಳು ಹಿಂದಿಯಲ್ಲೂ ಇವೆ, ಆಂಗ್ಲೇಯ ಭಾಷೆಯಲ್ಲೂ ಇವೆ. ಅದರ ಬೆಲೆ ಕೇವಲ ಮೂರು ರೂಪಾಯಿ. ಅದನ್ನು ಉದ್ಘಾಟಿಸಿದವರು ಬಿಹಾರಿನ ರಾಜ್ಯಪಾಲ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು. ಅವರು ತಮ್ಮ ಭಾಷಣದಲ್ಲಿ, ಈಗ ಭಾರತದಲ್ಲಿರುವದು ಧರ್ಮ ನಿರಪೇಕ್ಷ ಸರಕಾರ. ಅದರಲ್ಲಿ ಅವರವರಿಗೆ ಅವರವರ ಮತ-ಪದ್ಧತಿಗಳಂತೆ ಇರಲು ಹಕ್ಕು ಇದೆ. ಹಾಗಿದ್ದರೂ ಕೆಲವರು ಪಾಶ್ಚಾತ್ಯ ವ್ಯಾಮೋಹದ ಫಲವಾಗಿ ಅನ್ಯ ಮತಗಳಿಗೆ ಸೇರುವ ಅಭ್ಯಾಸವಿಂದು ಅಧಿಕವಾಗುತ್ತಿದೆ. ಅದನ್ನು ತಡೆಯಲಿಕ್ಕಾದರೂ ವಿಶ್ವ ಹಿಂದೂ ಪರಿಷತ್ತಿನ ಅವಶ್ಯಕತೆ ಇದೆಯೆಂದು ತಿಳಿಸಿದರು.

ವಿದೇಶಗಳಲ್ಲಿರುವ ಹಿಂದೂಗಳ ಸಮಸ್ಯೆಗಳು ಹಾಗೂ ಅವಶ್ಯಕತೆಗಳ ಕುರಿತು ಲಂಡನಿನ ಹಿಂದೂ ಕೇಂದ್ರದ ಅಧ್ಯಕ್ಷ ಶ್ರೀ ಸೋಂಧಿ, ಫಿಜಿ ದ್ವೀಪಗಳ ಆಚಾರ್ಯ ರಾಮನರೇಶ್, ನೇಪಾಳದ ಡಾ। ತುಳಸಿಗಿರಿ, ಬರ್ಮಾದ ಮಹೇಂದ್ರೋ, ಭಾರತ ಸೇವಾಶ್ರಮ ಸಂಘದ ಶ್ರೀ ಅದ್ವೈತಾನಂದ ಸ್ವಾಮೀಜೀ ಮತ್ತು ಅಸ್ಸಾಮಿನ ಶ್ರೀ ತೀರ್ಥಶರ್ಮರವರು ಮಾತಾಡಿದರು.

ತಮ್ಮ ಭಾಷಣದಲ್ಲಿ ಶ್ರೀ ಸೋಂಧಿಯವರು ಭಾರತದ ವ್ಯವಹಾರಿಕ ಭಾಷೆ ಯಾವದೆಂದು ಭಾರತದ ಪ್ರವಾಸ ಮಾಡಿ ಬಂದ ಬ್ರಿಟಿಷರು ಹಾಸ್ಯಕ್ಕಾಗಿ ಕೇಳುತ್ತಾರೆಂದು ಹೇಳಿದರು. ಭಾರತ ಸ್ವಾತಂತ್ರ್ಯ ಸಿಕ್ಕಿದ ಮೇಲೂ ಭಾರತದ ರಾಜಧಾನಿಯಲ್ಲೇ ಆಂಗ್ಲ ಭಾಷೆಯಲ್ಲಿರುವ ನಾಮಫಲಕಗಳ ಸಂಖ್ಯೆಗಳೇ ಬೆಳೆಯುತ್ತಿವೆಯಲ್ಲದೆ ವಿದೇಶೀಯರ ಶಾಲೆ-ಕಲಾಶಾಲೆಗಳಲ್ಲಿ ಭಾರತೀಯ ಬಾಲಕರು ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಕಲಿಯುತ್ತಿದ್ದಾರೆ. ಈ ಬಾಲಕರ ಮನಸ್ಸಿನಲ್ಲಿ ನಂತರದ ವಾತಾವರಣದ ಪರಿಸ್ಥಿತಿಯಿಂದಾಗಿ ಭಾರತೀಯತೆಯ ಮೇಲೆ ಅಭಿಮಾನ ಉಳಿಯಲು ಸಾಧ್ಯವೇನು? ಅಂದರೆ ನಮ್ಮ ಉಜ್ವಲ ಭವಿಷ್ಯವನ್ನು ನಾವೇ ಕೆಡಿಸಿಕೊಳ್ಳುತ್ತಿದ್ದೇವೆಂದವರು ತಿಳಿಯ ಪಡಿಸಿದರು.

ತನ್ನ ತಂದೆಯವರ ತಂದೆಯವರು ಫಿಜಿ ದ್ವೀಪಕ್ಕೆ ಕೂಲಿಯಾಗಿ ಹೋದಂದಿನಿಂದ ಅವರ ಕುಟುಂಬ ಫಿಜಿ ದ್ವೀಪದಲ್ಲೇ ವಾಸಮಾಡಿಕೊಂಡು ಬಂದಿರುವದಾಗಿ ಶ್ರೀ ರಾಮನರೇಶರು ತಿಳಿಸಿ, ಇಂದು ಪವಿತ್ರ ಪ್ರಯಾಗ ಕ್ಷೇತ್ರಕ್ಕೆ ಬಂದು ಇಲ್ಲಿಯ ಹಿಂದೂ ಬಾಂಧವರೊಡನೆ ಬೆರೆಯಲು ಕಾರಣವೆಂದರೆ ಇಲ್ಲಿಯ ಭಾರತದ ಮಹಾ ತಪಸ್ವಿಗಳ ಪುಣ್ಯ ಬಲದ ಪ್ರಭಾವವೆಂದವರು ಹೇಳಿ, ಹೀಗೆ ಹಲ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವಾರು ಕಾರಣಗಳಿಂದಾಗಿ ಪ್ರಪಂಚದ ದಶದಿಶೆಗಳಲ್ಲಿರುವ ಹಿಂದೂಗಳನ್ನು ಒಂದುಗೂಡಿಸುವದೇ ವಿಶ್ವ ಹಿಂದೂ ಪರಿಷತ್ತಿನ ಕಾರ್ಯವೆಂದು ನುಡಿದರು.

ಜಗತ್ತಿನಲ್ಲಿ ದೊಡ್ಡ ದೊಡ್ಡ ವಾದ-ಪ್ರತಿವಾದಗಳು ತಲೆಯೆತ್ತುತ್ತಿವೆ. ಸಾಮ್ಯವಾದ ಹಾಗೂ ಶೂನ್ಯವಾದಗಳು ತೀವ್ರ ಗತಿಯಲ್ಲಿ ತಲೆ ಎತ್ತಿದ್ದುವು. ಆದರೆ ಇಂದು ಅವುಗಳ ಪರಿಸ್ಥಿತಿ ಹೇಗಿದೆಂದು ಪ್ರತಿನಿಧಿಗಳನ್ನುದ್ದೇಶಿಸಿ ಕೇಳಿದ ಡಾ। ತುಳಸಿಗಿರಿಯವರು, ಅವು ಇಂದು ತಲೆ ಕೆಳಗಾಗಿ ಹೋಗಿವೆಯೆಂದು ಉತ್ತರವಿತ್ತುಕೊಂಡರು. ಅವರು ಮುಂದರಿದು, ಹಿಂದೂತ್ವದ ವಿಷಯ ಹಾಗಿರುವದಿಲ್ಲ. ಹಿಂದೂತ್ವಕ್ಕೆ ಉತ್ತಮ ಪಂಚಾಂಗವಿದೆ. ಅದರ ಆಧಾರದ ಮೇಲೆಯೇ ವಿಶ್ವ ಹಿಂದೂ ಪರಿಷತ್ತು ತಲೆಯೆತ್ತಬೇಕಾಗಿರುತ್ತದೆ. ಅದನ್ನರಿತುಕೊಂಡು ವಿಶ್ವದಲ್ಲಿರುವ ಹಿಂದೂಗಳೆಲ್ಲರೂ ಒಂದಾಗ ಬೇಕು. ನೇಪಾಳದಲ್ಲಿ ಆ ಕೆಲಸ ಆರಂಭವಾಗಿದ್ದು, ನೇಪಾಳವೊಂದು ಹಿಂದೂ ರಾಷ್ಟ್ರವೆಂಬುದನ್ನು ನಾವು ಜಗತ್ತಿಗೇ ತಿಳಿಯಪಡಿಸಿದ್ದೇವೆ. ಭಾರತವೂ ಪ್ರಬಲ ಹಿಂದೂ ರಾಷ್ಟ್ರವಾಗಿ ಬಾಳಬೇಕು. ಇಲ್ಲದಿದ್ದರೆ ಅದರ ಮೇಲೆ ಅದೆಂದೂ ಆಕ್ರಮಣ ತಪ್ಪದು ಮತ್ತು ಅನ್ಯರು ಆಕ್ರಮಣ ನಡೆಸುತ್ತಿದ್ದಾರೆಂದು ಘೋಷಿಸಿಕೊಳ್ಳುವದರಲ್ಲೇನು ಅರ್ಥ ಇರುವದಿಲ್ಲ. ನಿಜವಾಗಿ ಅನ್ಯರು ಆಕ್ರಮಣ ನಡೆಸುವದಕ್ಕಿಂದಲೂ ಭಾರತೀಯರೇ ಆಕ್ರಮಣ ನಡೆಸಿಕೊಳ್ಳುತ್ತಿದ್ದಾರೆನ್ನ ಬಹುದು. ಅದನ್ನು ತಿಳಿದುಕೊಂಡೇ ವಿಶ್ವದಲ್ಲಿರುವ ಹಿಂದೂಗಳ ಸಂಘಟನೆಗಾಗಿ ವಿಶ್ವ ಹಿಂದೂ ಪರಿಷತ್ತಿನ ಸ್ಥಾಪನೆಯಾಗಿದೆ. ವಿಶ್ವ ಹಿಂದೂ ಪರಿಷತ್ತು ಒಂದೆರಡು ಶಾಲೆಗಳನ್ನು ತೆರೆಯಬಹುದು, ನಾಲ್ಕಾರು ಪರದೇಶಗಳಿಗೆ ಕೆಲವು ಮತಪ್ರಚಾರಕರನ್ನು ಕಳುಹಿಸಬಹುದು. ಆದರೆ ಭಾರತ ಶಕ್ತಿಶಾಲಿ ಪ್ರಬಲ ಹಿಂದೂ ರಾಷ್ಟ್ರವಾಗಿರದಿದ್ದಲ್ಲಿ ಅನ್ಯ ರಾಷ್ಟ್ರಗಳು ನಮ್ಮ ಮತಪ್ರಚಾರಕರಿಗಿನಿತೂ ಮರ್ಯಾದೆ ಕೊಡಲಾರರು. ತನ್ನನ್ನು ತಾನೇ ರಕ್ಷಿಸಿಕೊಳ್ಳದ ರಾಷ್ಟ್ರ ಅನ್ಯ ರಾಷ್ಟ್ರವನ್ನು ರಕ್ಷಿಸುವದುಂಟೇ? ಯಾವದಕ್ಕೂ ರಾಷ್ಟ್ರದಲ್ಲಿ ಶಕ್ತಿ ಇರಬೇಕೆಂದು ಡಾ। ತುಳಸಿಗಿರಿ ತಮ್ಮ ಪ್ರಭಾವಿ ಭಾಷಣದಲ್ಲಿ ಹೇಳಿದರು.

ವಿಶ್ವಹಿಂದೂ ಪರಿಷತ್ತಿನ ಸಮ್ಮೇಳನಕ್ಕೆ ಅದ್ಯಾವ ಪ್ರತಿನಿಧಿಯನ್ನೂ ಹೋಗಲು ಬರ್ಮಾ ಸರಕಾರ ಬಿಡದಿದ್ದ ಕಾರಣ, ಭಾರತದಲ್ಲಿ ವಿದ್ಯಾರ್ಜನೆ ಮಾಡುತ್ತಿರುವ ಬರ್ಮಾದ ಶ್ರೀ ಮಹೇಂದ್ರೋ ಮಾತಾಡಬೇಕಾಯಿತು.

ಅನ್ಯ ದೇಶಗಳಲ್ಲಿರುವ ಹಿಂದೂಗಳಿಗೆ ಪುರೋಹಿತರುಗಳ ಅಭಾವವಿರುವ ಕಾರಣ ಅವರಿಗೆ ಬಹಳ ಕಷ್ಟವಾಗುತ್ತಿದ್ದೇ, ಅದನ್ನು ನಿವಾರಿಸಲು ವಿಶ್ವಹಿಂದೂ ಪರಿಷತ್ತು ಪ್ರಯತ್ನಿಸಬೇಕಾಗಿ ಶ್ರೀ ಅದ್ವೈತಾನಂದಜೀ ಸ್ವಾಮಿಯವರು ಕೇಳಿಕೊಂಡರು.

ಅದನ್ನೇ ಅನುಮೋದಿಸುತ್ತ ಶ್ರೀ ತೀರ್ಥರಾಜ ಶರ್ಮರವರು ನಾವು ಕೂರ್ಮ ಮನೋಭಾವನೆಯನ್ನು ಬಿಟ್ಟು ವಿರಾಟ ರೂಪವನ್ನು ತಾಳಬೇಕಾಗಿರುತ್ತದೆಂದು ಹೇಳಿದರು.

ಅದೇ ವೇದಿಕೆಯ ಮೇಲೆ ಅಂದು ರಾತ್ರಿ ಒಂಭತ್ತು ಘಂಟೆಗೆ ಶ್ರೀ ಸಂತ ತುಕಡೋಜಿ ಮಹಾರಾಜರವರ ಭಜನೆಯ ಕಾರ್ಯಕ್ರಮವು ನಡೆಯಿತು.

ಜನವರಿ ಇಪ್ಪತ್ತ ಮೂರರಂದು ಬೆಳಗ್ಗೆ ಒಂಭತ್ತು ಘಂಟೆಗೆ ಮಂಟಪ ಪ್ರತಿನಿಧಿಗಳಿಂದ ಕಳೆದು ಹೋಗಿ ಅನೇಕ ಪ್ರತಿನಿಧಿಗಳು ಹೊರಗೆಯೇ ನಿಲ್ಲಬೇಕಾಯಿತು. ಅಂದು ಹಿಂದೂ ಸಮಾಜದಲ್ಲಿ ಅನೇಕತೆಯಲ್ಲಿ ಏಕತೆಯೆಂಬ ವಿಷಯದ ಮೇಲೆ ಅಸ್ಸಾಮಿನ ಗೋಸ್ವಾಮಿಜೀ, ನೈಮಿಷಾರಣ್ಯದ ಶ್ರೀ ನಾರದಾನಂದರು, ರಾಯಪುರ ವಿವೇಕಾನಂದಾಶ್ರಮದ ಶ್ರೀ ಆತ್ಮಾನಂದ ಸ್ವಾಮೀಜೀ, ಶೃಂಗೇರಿ ಸ್ವಾಮೀಜೀಯವರ ದೂತರು ಹಾಗೂ ಅದ್ವೈತಾನಂದಜೀಯವರು ಭಾಷಣವಿತ್ತರು. ವಿಷಯ ಹಲವರ ಕುತೂಹಲ ಕೆರಳಿಸುವಂತಹದ್ದಿತ್ತು; ಕಾರಣವೆಂದರೆ ವೇದಿಕೆಯ ಮೇಲೆ ಅನ್ಯಾನ್ಯ ಮತಾನುಯಾಯಿಗಳ ಆಚಾರ್ಯ ಸ್ವಾಮೀಜೀಯವರು ಉಪಸ್ಥಿತರಿದ್ದು, ವಿಷಯ ಮಂಡನೆ ಮಾಡುತ್ತಾರೆಂಬುದಾಗಿತ್ತು.

ಭಾರತದಲ್ಲಿ ಹಲವಾರು ಮತೋಪಶಾಖೆಗಳಿವೆ. ಅವುಗಳ ಸಂಪ್ರದಾಯ ಹಾಗೂ ಪೂಜಾ ಪದ್ಧತಿಗಳಲ್ಲಿ ಏನಾದರೂ ವ್ಯತ್ಯಾಸ ಕಾಣಬಹುದು. ಹಾಗೆಂದೊಡನೆ ಅಲ್ಲಿ ಏಕತೆ ಇಲ್ಲವೆಂದಲ್ಲ; ಹಿಂದೂ ಧರ್ಮ ಒಂದು ಆಲದ ಮರದ ಹಾಗಿದೆ. ಅದರ ಶಾಖೆ-ಉಪಶಾಖೆಗಳೇ ಇನ್ನುಳಿದ ಮತ ಪಂಥಗಳು. ಈ ಮತಾನುಯಾಯಿಗಳು ಹಲವಾರು ವಿಷಯಗಳಲ್ಲಿ ಮುಖ ನೋಡಲಾರದಾದರೂ ಗೋಮಾತೆಯ ವಿಷಯದಲ್ಲಿ ಹಾಗಲ್ಲ. ಗೋರಕ್ಷಣೆ ಎಂದೊಡನೆ ಎಲ್ಲಾ ಮತ-ಪಂಥದವರು ಒಂದಾಗುತ್ತಾರೆ. ಹಾಗೆಯೇ ಇದೆ ಭಾರತಮಾತೆಯ ವಿಷಯದಲ್ಲೂ. ಅದ್ಯಾವ ಮತದವನೂ ಭಾರತಮಾತೆಯ ಮೇಲಿನ ಆಕ್ರಮಣವನ್ನು ಸಹಿಸಲಾರನೆಂದು ತಿಳಿಸಿದ ಶ್ರೀ ನಾರದಾ ಮುನಿಯವರು ಈ ತಳಹದಿಯ ಮೇಲೆ ವಿಶ್ವದಲ್ಲಿರುವ ಹಿಂದೂಗಳೆಲ್ಲರೂ ಒಂದಾಗಬೇಕೆಂದು ಕಳಕಳಿಯಿಂದ ವಿನಂತಿಸಿಕೊಂಡರು.

(ಹನ್ನೆರಡನೇ ಪುಟ ನೋಡಿ)

ಹನಿಯಾಗಿ ಒಸರುವ ಈ ಝರಿಯು
ಹರಿಯುವ ಮಹಾನದಿಯಾಗುವ ತನಕ
ಯಾರೊಬ್ಬರೂ ಆ ಹನಿಗಳನ್ನು ಲೆಕ್ಕಿಸಲಿಲ್ಲ.......

25 ಪೈಸೆಯ ಚಿಕ್ಕ ಪಾವಲಿಯನ್ನು ಯಾರು ಲೆಕ್ಕಿಸುವರು? ಎಷ್ಟೋ ಬಾರಿ ಅದು ಕಳೆದು ಹೋಗುವುದುಂಟು. ಒಂದು ದಿನ, ಹತ್ತು ವರ್ಷ ವಯಸ್ಸಿನ ಪುಟ್ಟ ಬಾಲುವು ಈ ಬಗ್ಗೆ ಏನಾದರೂ ಮಾಡಬೇಕೆಂದು ನಿಶ್ಚಯಿಸಿದನು. ತಾಯಿಯೊಡನೆ ಅವನು, ಉಳಿತಾಯಕ್ಕಾಗಿ ದಿನಾಲು 25 ಪೈಸೆ ಕೊಡಬೇಕೆಂದು ಕೇಳಿದನು. ಅವಳೊಪ್ಪಿದಳು. ಈ ರೀತಿ ಪುಟ್ಟ ಬಾಲುವು ನಮ್ಮ ಪಿಗ್ಮಿ ಠೇವಣಿ ಸಂಯೋಜನೆಯ ಅತೀ ಎಳೆಯ ಸದಸ್ಯನಾದನು. ಪ್ರತಿದಿನವೂ ನಮ್ಮ ಪಿಗ್ಮಿ ಠೇವಣಿಯ ಸಂಗ್ರಾಹಕನು ಅವನ ಮನೆಯನ್ನು ತಾನಾಗಿಯೇ ಸಂದರ್ಶಿಸಿ 25 ಪೈಸೆಯನ್ನು ಪಡೆಯುತ್ತಲಿದ್ದನು. ಏಳು ವರ್ಷಗಳು ಬಹು ಬೇಗನೇ ಉರುಳಿದುವು. ಬಾಲುವು ಈಗ ಚಿಕ್ಕವನಾಗಿ ಉಳಿದಿಲ್ಲ. ಹಾಗೆಯೇ ಅವನ 25 ಪೈಸೆ ಕೂಡಾ. ಅವುಗಳು ಅವನೊಂದಿಗೇ ಬೆಳೆದಿವೆ......700 ರೂಪಾಯಿಯ ದೊಡ್ಡ ಮೊತ್ತವಾಗಿದೆ. ಬಾಲುವು ಈಗ ಒಂದು ಹೊಸ ವಾಚು, ಒಂದು ಹೊಸ ಸ್ಯಾಕಲು ತೆಗೆದುಕೊಳ್ಳಬಹುದು— ಅಥವಾ ತನ್ನ ಕಾಲೇಜು ವಿದ್ಯಾಭ್ಯಾಸಕ್ಕೆ ಆ ಹಣವನ್ನು ಉಪಯೋಗಿಸಬಹುದು. ನೀವೆಲ್ಲ ಪುಟ್ಟ ಗೆಳೆಯರು ಅವನಂತೆಯೇ ಆಗುವಿರಿ ತಾನೇ?

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಶಾಖೆಗಳು: 200ಕ್ಕೂ ಮಿಕ್ಕಿವೆ

ಚಲಾವಣಾ ಸಂಪತ್ತು: ರೂ. 85 ಕೋಟಿಗೂ ಮಿಕ್ಕಿದೆ

ನಮ್ಮಲ್ಲಿ ಖಾತೆ ತೆರೆಯಲು ನಿಮ್ಮಲ್ಲಿರುವ ಯಾವ ಮೊತ್ತವೂ ಚಿಕ್ಕದಲ್ಲ.

ವಿಚಿತ್ರ ಸತ್ಯ

ಛೀ, ನಾಟಕವೆ? ಯಾರಿಗೆ ಬೇಕು?

"ಕೂಗಿ ಕರೆದರೂ ನಾಟಕ ನೋಡಲು ಬಾರದ ಜನರು, ಉರಿ ಬಿಸಿಲಿನಲ್ಲಿ ಕ್ಯೂನಿಂತಾದರೂ ಸಿನಿಮಾ ನೋಡಿ ಬರುತ್ತಾರೆ. ಚಿತ್ರ ಪ್ರಪಂಚವೆಂಬುದು ಬರೀ ಢೋಂಗಿ. ಅದರಲ್ಲಿ ಚಿತ್ರಗ್ರಾಹಕನ ಕೈಚಳಕದಿಂದ ಅಸಾಧ್ಯವೆಲ್ಲಾ ಸಾಧ್ಯದಂತೆ ಕಂಡು ಬರುತ್ತದೆ. ನಿಜವಾದ ಕಲೆಯನ್ನು ನಾವು ಕಾಣಬೇಕೆಂದರೆ ನಾಟಕಗಳಲ್ಲಿ ಮಾತ್ರ ಸಾಧ್ಯ. ಈ ದಿನ ತಾವೆಲ್ಲರೂ ಇಷ್ಟೊಂದು ಅಭಿಮಾನದಿಂದ ಈ ನಾಟಕವನ್ನು ನೋಡಲು ನೆರೆದಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ." ಎಂದು ನಾಟಕದ ಅಧ್ಯಕ್ಷತೆ ವಹಿಸಿದ್ದವರು ನುಡಿದರು. "ಈ ದಿನವೇ ಕೊನೆಯ ನಾಟಕವೆಂದು ಹೇಳಿದ್ದೆವು. ಆದರೆ ಜನರ ಒತ್ತಾಯದಿಂದ ಇನ್ನೂ ಕೆಲ ಪ್ರಯೋಗಗಳನ್ನು ಮುಗಿಸಿ ಮುಂದೆ ಹೊರಡುತ್ತೇವೆ" ಎಂದರು ಮಾಲೀಕರು. ಇಬ್ಬರ ಮಾತೂ ಸುಳ್ಳೇ! ನಾಟಕಕ್ಕೆ ಯಾರೂ ಅಭಿಮಾನದಿಂದ ಬಂದಿರಲಿಲ್ಲ. ಎಲ್ಲಾ ಪುಕ್ಕಟೆ ಪಾಸುಗಳ ಪ್ರಭಾವ! ಮಾಲೀಕರು ಹೇಳಿದ ಜನರ ಒತ್ತಾಯ ಅದಕ್ಕಿಂತ ಹಸಿ ಸುಳ್ಳು. ನಾಟಕಗಳಿಗೆ ಒತ್ತಾಯ ಪಡಿಸುವುದೂ ಉಂಟೇ?

ಇದು ನಮ್ಮ ದೇಶದ ನಾಟಕಗಳ ಕಥೆ. ನಮ್ಮಲ್ಲಿ ಇರುವ ನಾಟಕ ಸಂಸ್ಥೆಗಳೇ ಬೆರಳು ಮಡಚಿ ಎಣಿಸಬಹುದಾದಷ್ಟು. ಅವುಗಳು ನಡೆಯುತ್ತಿರುವ ರೀತಿಯೋ ದೇವರಿಗೇ ಪ್ರೀತಿ. ಅದರಲ್ಲಿನ ನಟನಟಿಯರು ಅಹನ್ಯಹನಿ ಕಾಲಕ್ಷೇಪ ಮಾಡುತ್ತಿರುತ್ತಾರೆ. ಮಾಸಲು ಪರದೆಗಳ ಎದುರಿನಲ್ಲಿ ಹಳೆ ಜರೀ ಕಿತ್ತು ಹೋದ ಉಡಿಗೆಗಳನ್ನು ಧರಿಸಿ ಪಾತ್ರಧಾರಿಯೊಬ್ಬ (ಅವನು ಮಹಾರಾಜ!) ಹೊಟ್ಟೆಯಲ್ಲಿ ಹಸಿವೆ ಕಾಡುತ್ತಿರುವಾಗ ಆಢ್ಯತೆಯನ್ನು ಬಿಂಬಿಸಲು ಯತ್ನಿಸಿದರೆ ಯಾರು ತಾನೆ ಮೆಚ್ಚಿಯಾರು? ಹೀಗಾದರೆ ಕಾದಾಡುವುದು ಹೇಗೆ? ಒಂದು ವೇಳೆ ಎಲ್ಲಾ ಚೆನ್ನಾಗಿದ್ದರೂ, ನಾಟಕದ ಸಂಸ್ಥೆಗೆ ನಾನ್ನೂರು ಮೀಟರು ಎಂಬಂತೆ ವಿದ್ಯುತ್ ಇಲಾಖೆ, ಪೌರ ಸಭೆ, ಅದೂ ಇದೂ ಎಲ್ಲಾ ಕಾಂಪ್ಲಿಮೆಂಟರಿಗಾಗಿ ನಾಯಿಯಂತೆ ಕಚ್ಚಾಡಿ ಮಾಲೀಕರನ್ನು ತಲೆಯೆತ್ತದಂತೆ ಮಾಡುತ್ತವೆ.

ನಮ್ಮ ದೇಶದ ಈ ಪರಿಸ್ಥಿತಿಯನ್ನು ನೋಡುವಾಗ 'ನಮ್ಮಲ್ಲಿ ಮಾತ್ರ ಹೀಗೆ, ಉಳಿದೆಡೆಗಳಲ್ಲಿ ಖಂಡಿತ ಹೀಗಿರುವುದಿಲ್ಲ' ಎಂದು ನಾವು ದೂರದ ಬೆಟ್ಟ ನುಣ್ಣಗೇ ಎಂದು ಭಾವಿಸುತ್ತೇವೆ. ಆದರೆ, ಹತ್ತಿರ ಹೋದರೆ ಹಡಹು ನಾತ' ಎನ್ನುವ ಪರಿಸ್ಥಿತಿಯೋ ಎಲ್ಲೂ.

ಪಶ್ಚಿಮ ಜರ್ಮನಿ ಇದು ವರೆಗೆ ತನ್ನನ್ನು ನಾಟಕಗಳ ದೇಶವೆಂದು ಹೇಳಿಕೊಳ್ಳುತ್ತಿತ್ತು. ಓಪೆರಾ ಥಿಯೇಟರುಗಳು ಮಾತ್ರವಲ್ಲದೆ, 'ಅಲ್ಲಿ ಒಟ್ಟು ೧೪೦ ರಂಗಮಂದಿರಗಳಿರುವುದೇ ಈ ತಿಳುವಳಿಕೆಗೆ ಕಾರಣ. ಇಷ್ಟಾದರೂ, ಅಲ್ಲಿನ ಜನರು ನಾಟಕ ಪ್ರವೃತ್ತಿಯವರಾಗಿಲ್ಲವೆಂದು ಈಚೆಗೆ ತಿಳಿದು ಬಂದು, ಎಲ್ಲರಿಗೂ ಅಚ್ಚರಿಯನ್ನುಂಟು ಮಾಡಿದೆ. ಇಷ್ಟಕ್ಕೆ ಜರ್ಮನಿ ಸಂಪದ್ಭರಿತ ರಾಷ್ಟ್ರ! ಮನರಂಜನೆಗಾಗಿ ವೆಚ್ಚ ಮಾಡಲು ಒಬ್ಬೊಬ್ಬನಿಗೂ ಬೇಕಾದ ಅವಕಾಶವಿದೆ. ಹಾಗಿದ್ದೂ ಅಲ್ಲಿನ ೩೩ ನಗರಗಳಲ್ಲಿ ನಾಟಕಗಳನ್ನು ವೀಕ್ಷಿಸುವವರ ಸಂಖ್ಯೆ ಹೆಚ್ಚಿದೆ. ಹಿಂದಿನಂತೆಯೇ ಇದೆ; ೪೯ ನಗರಗಳಲ್ಲಿ ಈ ಸಂಖ್ಯೆಯಂತೂ ಶೋಚನೀಯವಾಗಿ ಇಳಿಮುಖವಾಗಿದೆ.

ಈ ಪರಿಸ್ಥಿತಿಗೆ ಇಂತಹುದೇ ಕಾರಣಗಳಿರಬಹುದು ಎಂದು ಹೇಳುವುದು ಕಷ್ಟವೇ. ಅಯ್ಯೋ ಅವುಗಳಲ್ಲಿ ಹೊಸದೇನಿದೆ ಎಂತ ಹೋಗಬೇಕು? ಅದೇ ಹಳೆ ದೃಶ್ಯಗಳು; ವೈವಿಧ್ಯವಿಲ್ಲದ ಪ್ರದರ್ಶನ; ಒಂದೇ ಮಟ್ಟದ ಅಭಿನಯ ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ಯಾವನೋ ಅಥವಾ ಯಾವಳೋ ಸತ್ತುಹೋದ ನಟನನ್ನೋ ನಟಿಯನ್ನೋ ದಿಗ್ದರ್ಶಕನನ್ನೋ ನೆನೆಯುತ್ತಾ ಅವರು ಸತ್ತುಹೋದಮೇಲೆ ಏನಿದೆಯಪ್ಪ? ಅಂದೇ ನಾಟಕ ಅನ್ನೋದೂ ಸತ್ತು ಹೋಯಿತು ಎಂದು ಉದ್ಗಾರ ತೆಗೆಯುವುದುಂಟು; ಇದೆಲ್ಲಾ ಬರೀ ಒಣ ಬೂಟಾಟಿಕೆ, ನಾಟಕಕ್ಕೆ ಕಾಸು ಬಿಚ್ಚಲು ಮನಸಿಲ್ಲದಿದ್ದರೆ ಇದೆಲ್ಲಾ ತಾನಾಗಿಯೇ ಬರುತ್ತದೆ. ಮಕ್ಕಳನ್ನು ನೋಡಿಕೊಳ್ಳಲು ರಂಗಮಂದಿರಗಳಲ್ಲಿ ವ್ಯವಸ್ಥೆ ಮಾಡಿಲ್ಲದಿರುವಿಕೆ, ಕಾರುಗಳನ್ನು ನಿಲ್ಲಿಸಲು ಸ್ಥಳವಿಲ್ಲದಿರುವಿಕೆ, ನಾಟಕ ಮುಗಿದ ನಂತರ ಮನೆಗೆ ಹಿಂದಿರುಗುವಾಗ ವಾಹನ ಸೌಕರ್ಯವಿಲ್ಲದಿರುವಿಕೆ, ಹೆಚ್ಚಿನ ದುಡಿತ ಮುಂತಾದುವೆಲ್ಲಾ ಸೇರಿ ನಾಟಕಗಳು ದುಸ್ಥಿತಿಗಿಳಿಯುವಂತೆ ಮಾಡಿವೆಯೆಂದು ಹೇಳಿದರಾದರೂ ಒಪ್ಪಿಕೊಳ್ಳಬಹುದೋ, ಏನೋ.

ಒಟ್ಟನಲ್ಲಿ, ಜನರ ನಾಟಕದ ಬಗೆಗಿನ ವಿಮುಖ ಭಾವನೆಗೆ ಕಾರಣವೇನೆಂದು ಕಂಡು ಹಿಡಿಯಲು ಪಶ್ಚಿಮ ಜರ್ಮನಿಯ ಸುಮಾರು ೨೦೦೦ ರಸಿಕರಿಗೆ ಪ್ರಶ್ನೆ ಪತ್ರಿಕೆಗಳನ್ನು ಹಂಚಿ ಅಭಿಪ್ರಾಯಗಳನ್ನು ತಿಳಿದುಕೊಳ್ಳಲಾಯಿತು. ಜೀವನದ ನಾನಾ ರಂಗದಲ್ಲಿರುವವರೆಲ್ಲರನ್ನೂ ಅಭಿಪ್ರಾಯ ಕೇಳಿದಾಗ ಬಂದ ಉತ್ತರಗಳು ಜಾರನ್ನೂ ಬೆರಗುಗೊಳಿಸುವಂತಹವಾಗಿತ್ತು. ಈ ವರೆಗೂ ಜರ್ಮನ್ನರಿಗೆ ನಾಟಕವೆಂದರೆ ಜೀವ ಎಂದು ತಿಳಿದುಕೊಂಡಿದ್ದುದು ಅಪ್ಪಟ ಸುಳ್ಳು ಎಂದು ಫಲಿತಾಂಶಗಳು ಸಾರಿದವು. ಅದರಲ್ಲಿ, ಒಂದು ನಿರ್ದಿಷ್ಟ ಅವಧಿಯನ್ನು ಕೊಟ್ಟು, ಆ ಅವಧಿಯಲ್ಲಿ ನಾಟಕ ನೋಡಿದ್ದಾರೆಯೇ, ಇಲ್ಲವೇ ಎಂದು ಕೇಳಲಾಗಿತ್ತು. ಸೇಕಡಾ ೫೮ ಮಂದಿ ಆ ಅವಧಿಯಲ್ಲಿ ಒಂದೇ ಒಂದು ಬಾರಿಯೂ ನಾಟಕಗಳನ್ನು ನೋಡುವುದಂತಿರಲಿ, ನಾಟಕ ಮಂದಿರಗಳ ಕಡೆ ತಲೆಯಿಟ್ಟುಕೊಂಡು ಸಹಾ ಮಲಗುತ್ತಿರಲಿಲ್ಲವೆಂದು ತಿಳಿಸಿದ್ದಾರೆ. ಸೇಕಡಾ ಹದಿನೈದು ಮಂದಿ ತಾವು ಆ ಅವಧಿ ಹಾಗಿರಲಿ, ಎಂದೂ ನಾಟಕಗಳನ್ನು ನೋಡುವ ಇಚ್ಛೆಯನ್ನೇ ಹೊಂದಿರಲಿಲ್ಲವೆಂದು ಹೇಳಿದ್ದಾರೆ. ಹಳ್ಳಿಗಳಲ್ಲೂ ಈ ಸಮೀಕ್ಷೆಯನ್ನು ನಡೆಸಲಾಗಿತ್ತು. ಸಮೀಕ್ಷೆಯಿಂದ ಊರು ದೊಡ್ಡದಾದಷ್ಟೂ, ನಾಟಕದ ಅಭಿಮಾನಿಗಳ ಸಂಖ್ಯೆಯೂ ಹೆಚ್ಚುತ್ತದೆಯೆಂ ತಿಳಿದು ಬಂದಿತು.

ಉಳಿದ ಸೇ. ೪೨ ಜನರಲ್ಲಿ ಅರ್ಧಜನ ಎಂದಾದರೊಮ್ಮೆ ಟಿಕೇಟು ಇಲ್ಲವೆಂದರೆ ನಾಟಕಕ್ಕೆ ಹೋಗುವ ಪರಿಪಾಠವಿಟ್ಟುಕೊಂಡಿದ್ದಾರೆ. ಇನ್ನುಳಿದರ್ಧ ಮಂದಿ ಯಾವುದಾದರೊಂದು ನಾಟಕ ಸಂಸ್ಥೆಗೆ ಸದಸ್ಯರಾಗಿವುದರಿಂದಲೋ, ಬಿಟ್ಟಿ ಪಾಸು ಬಂದುದರಿಂದಲೋ ನಾಟಕ ನೋಡುತ್ತಾರೆ. ಜರ್ಮನಿಯ ಅದೃಷ್ಟವೋ ಎಂಬಂತೆ, ಅತಿ ಹೆಚ್ಚಿನ ನಾಟಕಾಭಿಮಾನಿಗಳು ಇನ್ನೂ ಪಶ್ಚಿಮ ಬರ್ಲಿನ್, ಹ್ಯಾಂಬರ್ಗ್, ಬ್ರೆಮನ್ ಮತ್ತು ಹೆಸ್ಸಿಯಾ ಸಂಸ್ಥಾನಗಳಲ್ಲಿದ್ದಾರೆ. ನಾಟಕಾಭಿಮಾನಿಗಳಲ್ಲಿ ಗಂಡಸರಿಗಿಂತ ಹೆಂಗಸರು ಹೆಚ್ಚಾಗಿರುವುದು ಮತ್ತೊಂದು ಗಮನೀಯ ಅಂಶ. ಅದಲ್ಲದೆ, ಹೋಗುವವರಲ್ಲಿ, ಮಧ್ಯಮ ವರ್ಗ ಹಾಗೂ ಕಡಿಮೆ ಸಂಪಾದನೆಯಿರುವವರೇ ಹೆಚ್ಚು.

ಅಂತೂ ಕಾಂಪ್ಲಿಮೆಂಟರಿ ಪಾಸಿಗಾಗಿ ಕಾದಿರದೆ, ಇನ್ಯಾವ ಮನರಂಜನೆಯೂ ದೊರಕದಿದ್ದರೆ ನಾಟಕ ನೋಡುವ ಎಂಬ ಅಲಕ್ಷ್ಯ ಭಾವನೆಯನ್ನು ಇಟ್ಟುಕೊಳ್ಳದೆ, ನಿಜವಾದ ನಾಟಕಾಭಿಮಾನವಿರುವ ವ್ಯಕ್ತಿ, ಪಶ್ಚಿಮ ಜರ್ಮನಿಯಲ್ಲಿ....ಇಲ್ಲವೇ ಇಲ್ಲವೋ ಏನೋ! ನಮ್ಮ ದೇಶದಲ್ಲಿ......?

ಅಮೃತ ಬಿಂದು

ಮುಖನೋಡಿ ಮಾತಾಡದ, ಕಣ್ಣು ನೋಡಿ ನುಡಿಯದವನು ಮೋಸಗಾರನೆಂಬ ಮಾತನ್ನು ನಂಬಬೇಡಿ. ಕಣ್ಣು ನೋಡಿಕೊಂಡೇ ಮೋಸಮಾಡುವ, ಮುಖ ದೃಷ್ಟಿಸಿಯೇ ಎದೆ ಗಿರಿಯುವ ಕಲೆ ಇಂದುಸಾಮಾನ್ಯವಾಗಿದೆ.

೦ ೦ ೦

ತಪ್ಪು ಮಾಡುವುದಕ್ಕೆ ಮೂಲಕಾರಣ ತಿಳುವಳಿಕೆಯ ಅಭಾವವಾಗಿದೆ. ಆದರೆ ಮಾಡಿದ ತಪ್ಪನ್ನು ಸಮರ್ಥಿಸುವುದು ಮೂರ್ಖತನದ ಲಕ್ಷಣವಾಗಿದೆ.

೦ ೦ ೦

ಎಲ್ಲಾ ತಪ್ಪುಗಳಿಗೆದುರಾಗಿ ಬಾಗಿಲು ಮುಚ್ಚಿ ಕೂರುವುದರಿಂದ ಸತ್ಯವೂ ಹೊರಗುಳಿಯಬೇಕಾದೀತು.

೦ ೦ ೦

ಅನಂತದ ಕಲ್ಪನೆ ಮತ್ತು ಚಿಂತನೆಯು ಐಹಿಕದ ನಶ್ವರತೆ ಮತ್ತು ನಿಷ್ಫಲತೆಯನ್ನು ಅರ್ಥಪೂರ್ಣವಾಗಿಸುವುದು.

೦ ೦ ೦

ಕೆಟ್ಟದ್ದನ್ನು ಮಾಡಿ ಗುಹೆಯಲ್ಲಿ ಅವಿತರೂ, ಆಕಾಶದಲ್ಲಿ ಹಾರಿದರೂ, ಸಮುದ್ರದ ಒಳ ಹೊಕ್ಕರೂ ಅದರ ದುಷ್ಪರಿಣಾಮವನ್ನ ತಪ್ಪಿಸಿಕೊಳ್ಳಲಾರ.

೦ ೦ ೦

ಕಾಯತಃ ಕೆಟ್ಟದೆಂದರೆ ಕೊಲೆ, ಕಳ್ಳತನ ವ್ಯಭಿಚಾರ ಇತ್ಯಾದಿ. ವಚನತಃ ಕೆಟ್ಟದೆಂದರೆ ಸುಳ್ಳು, ಅಪವಾದನೆ, ಕಳಪೆ ಮಾತು. ಮಾನಸಿಕ ಕೆಟ್ಟದೆಂದರೆ ದ್ವೇಷ, ಮೋಹ, ಸ್ವಾರ್ಥತೆ. ತ್ರಿಕರಣ ಶುದ್ಧಿ ಇಲ್ಲದವನಿಗೆ ಮೋಕ್ಷವಿಲ್ಲ.

೦ ೦ ೦

ಉತ್ಪ್ರೇಕ್ಷಿತವಾದ ಸತ್ಯವೂ ಕೂಡ ಸತ್ಯ ಕಳೆದುಕೊಳ್ಳುತ್ತದೆ.

೦ ೦ ೦

ಹೇಳಿ ಬುದ್ಧಿ ಕಲಿಸುವುದು ಅಸಾಧ್ಯ. ಮಾಡಿ ತೋರಿಸುವ ಉದಾಹರಣೆಯು ಮಾತಿಲ್ಲದೆ ಕಲಿಸುವುದು.

೦ ೦ ೦

ಯೌವನ ಕಾಲದ ಅತಿರೇಕಗಳು ವೃದ್ಧಾಪ್ಯದಲ್ಲಿ ಸುಸ್ತಿ ಬಡ್ಡಿಯಿಂದ ಮರುಪಾವತಿ ಮಾಡಬೇಕಾದ ಬ್ಯಾಂಕ್ ಡ್ರಾಫ್ಟುಗಳಂತೆ!

೦ ೦ ೦

ಉತ್ತಮ ಆರೋಗ್ಯವು ನಿರಂತರ ಸುಖದ ಸೋಪಾನ. ಶಾರೀರಿಕ ಪಂತ್ರಮವು ಉತ್ತಮ ಆರೋಗ್ಯದ ಅಡಿಗಲ್ಲು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಭಾರತದ ಚಿತ್ರಕಲಾ ವೈಭವ

ಮಹೋನ್ನತವಾಗಿಯೇ ಆರಂಭವಾಯ್ತು

ಬರೆದವರು

ಪ್ರೊ। ಜೆ. ಪಿ. ಗಂಗೂಲಿ.

ವೇದಕಾಲದಿಂದ ಆಧುನಿಕ ಕಾಲದ ವರೆಗಿನ ಭಾರತದ ಚಿತ್ರಕಲಾ ವೈಭವದ ಕುರಿತು ಆಕಾಶವಾಣಿ ದೆಹಲಿ ಕೇಂದ್ರದವರು ಆರು ವಿದ್ವತ್ ಪೂರ್ಣ ಭಾಷಣಗಳನ್ನು ಬಿತ್ತರಿಸಿದರು. ಪ್ರಥಮ ಭಾಷಣದಲ್ಲಿ ಪ್ರೊ। ಜೆ. ಪಿ. ಗಂಗೂಲಿಯವರು ಭಾರತದ ಚಿತ್ರಕಲೆಯ ಆರಂಭವನ್ನು ವಿವೇಚಿಸಿದ್ದಾರೆ. ಆ ಭಾಷಣದ ಕನ್ನಡ ಅನುವಾದವನ್ನು ಇಲ್ಲಿ ಕೊಡಲಾಗಿದೆ.

ಮಹೆಂಜೆದಾರೋ, ಚೆನ್ಹುದಾರೋ ಮತ್ತು ಹರಪ್ಪ ಸ್ಥಳಗಳಲ್ಲಿ ಸಿಂಧೂ ಕೊಳ್ಳದ ಸಂಸ್ಕೃತಿಯ ಬಗ್ಗೆ ನಡೆದಿರುವ ವಿಖ್ಯಾತ ಶೋಧನೆಯ ಕಾರಣವಾಗಿ ದೊರೆತಿರುವ ಸಾಮುಗ್ರಿಗಳಿಂದ ಭಾರತದ ಚಿತ್ರಕಲಾ ಪರಂಪರೆಗೆ ವಿಶಿಷ್ಟತೆಯನ್ನು ದೊರಕಿಸಿ ಕೊಟ್ಟಂತಾಗಿದೆ. ಭಾರತದ ಗಡಿಯಾಚೆ ಬೆಲೂಚಿಸ್ಥಾನದಲ್ಲಿಯ ನಾಲ್ ಪ್ರದೇಶದಲ್ಲಿ ದೊರೆತಿರುವ ಚಿತ್ರಕಲಾ ಮಡಿಕೆಗಳೂ, ಸಿಂಧೂ ಪ್ರದೇಶದಲ್ಲಿಯ ಸಿಂಧೂ ಕೊಳ್ಳದ ಶೋಧಿತ ಕೇಂದ್ರಗಳೂ ಭಾರತದ ಚಿತ್ರಕಲಾ ಪರಂಪರೆಯನ್ನು ಗುರುತಿಸುವ ಸಾಧನಗಳಾಗಿವೆ. ಈ ಇತಿಹಾಸಪೂರ್ವ ಕೇಂದ್ರಗಳಲ್ಲಿ ಅಧಿಕವಾಗಿ ದೊರೆತಿರುವ, ಚಿತ್ರಕಲೆಯಿಂದ ಕೂಡಿದ ಕುಂಬ ಮಡಿಕೆಗಳು, ಕ್ರಿಸ್ತ ಪೂರ್ವ ೩೦೦೦ದಿಂದ ಕ್ರಿಸ್ತ ಪೂರ್ವ ೨೫೦೦ರ ಕಾಲಕ್ಕೆ ಸೇರಿದವೆಂದು ಹೇಳಬಹುದು. ಚಿತ್ರಕಲೆಯನ್ನು ಅಭ್ಯಾಸ ಮಾಡುವವರಿಗೆ ಈ ಸಾಮುಗ್ರಿಗಳು ಆಶ್ಚರ್ಯಕರವಾದ ಅಂಶಗಳನ್ನು ನೀಡುತ್ತವೆ. ಆಗ್ಗೆ ಚಿತ್ರಕಲೆಯು ಉಚ್ಚ ಮಟ್ಟದಲ್ಲಿದ್ದಿತಲ್ಲದೇ ಕಲಾ ಸಂಪತ್ತಿನಿಂದ ಕೂಡಿದ್ದುದಾಗಿಯೂ, ಕಲ್ಪನಾಶಕ್ತಿ ಹಾಗೂ ನೈಜ ಭಾವನೆಯಲ್ಲಿ ಎಹತ್ತರ ಘಟ್ಟವನ್ನು ಮುಟ್ಟಿದ್ದುದಾಗಿಯೂ ತಿಳಿಯಬರುತ್ತದೆ. ವಿವಿಧ ರೂಪದ ಚಿತ್ರಗಳನ್ನು ಕಲ್ಪಿಸುವುದರಲ್ಲಿ ಹಾಗೂ ಹೊಸ ಹೊಸ ನಮೂನೆಗಳನ್ನು ರೂಪಿಸುವುದರಲ್ಲಿ ಕೌತುಕ ರೀತಿಯ ಮಟ್ಟವನ್ನು ಮುಟ್ಟಿದ್ದಿತು.

ಸಿಂಧೂಕೊಳ್ಳದ ಕಲಾ ಚತುರತೆ

ಹೇರಳವಾಗಿ ಮಣ್ಣಿನ ಪಾತ್ರೆಗಳ ಮೇಲೆ ಕಾಣುತ್ತಿದ್ದ ಚಿತ್ರಕಲೆಯನ್ನು ಸಾಮಾನ್ಯ ಚಿತ್ರಕಲೆಯೆಂದೇ ಹೇಳಬಹುದು. ಆದರ ಮೇದಶಿಲೆಯ ಮೊಹರುಗಳ ಮೇಲೆ ಅದ್ಭುತ ರೀತಿಯಲ್ಲಿ ಬೆಳಗುತ್ತಿದ್ದ ಹೋರಿ ಮುಂತಾದ ಪ್ರಾಣಿಗಳ ಸುಂದರ ಚಿತ್ರಗಳನ್ನು ಉಚ್ಚ ಶೈಲಿಯ ಚಿತ್ರ ಕಲಾಪಂಕ್ತಿಕೆ ಎಂದು ಹೇಳಬಹುದು.

ಈ ಚಿತ್ರಗಳಲ್ಲಿ ವಿವಿಧ ನಕ್ಷೆಗಳನ್ನು ಸುಂದರವಾದ ಮನಮೋಹಕವಾದ ದೃಶ್ಯಗಳನ್ನು, ಪ್ರಾಣಿಗಳನ್ನು ಕಾಣಬಹುದು. ಉದಾಹರಣೆಗೆ ತ್ರಾಸುಗಳು ಚದುರಂಗದ ಆಟದ ಮನೆಗಳು, ಚುಕ್ಕೆ ಸಾಲುಗಳು, ದುಂಡುದುಂಡಾದ ಸುತ್ತುಗಳು, ಗಿಡಮರಗಳು, ಎಲೆಗಳು, ಹಕ್ಕಿಗಳು, ನವಿಲುಗಳು, ಜಿಂಕೆ, ಆಡುಗಳು, ನರಿ, ಹುಲಿಗಳು ಮುಂತಾದವುಗಳ ಆಕರ್ಷಕ ಚಿತ್ರಗಳನ್ನು ನೈಜ ರೀತಿಯಲ್ಲಿ ಚಿತ್ರಿಸಿರುವುದನ್ನು ನೋಡಬಹುದು.

ಅಮೇರಿಕದ ಸಂಶೋಧಕ ಪಂಡಿತರೊಬ್ಬರು ವಿಮರ್ಶಾತ್ಮಕ ದೃಷ್ಟಿಯಿಂದ ಈ ಸಂಶೋಧನಾ ವಸ್ತುಗಳನ್ನು ಪರಿಶೀಲಿಸಿ, ಅವುಗಳ ರೂಪರಚನೆಯನ್ನು ವಿಂಗಡಿಸಿದ್ದಾರೆ. ಗಿಡಗಳ ಚಿತ್ರಮಾಲಿಕೆಯಲ್ಲಿ ನಮ್ಮ ಪುರಾತನ ವಟವೃಕ್ಷದ ಎಲೆ ಚಿತ್ರಣವು ರಂಜಕವಾಗಿದೆ. ಪ್ರಾಣಿಗಳ ಚಿತ್ರಮಾಲೆಯಲ್ಲಿ ಒಂಟಿ ಮತ್ತು ಗುಂಪಿನಲ್ಲಿರುವ ಜಿಂಕೆ, ದೃಷ್ಟಿ ಬೀರಿದ ಕಣ್ಣುಳ್ಳ ಹೋರಿಯ ಚಿತ್ರಗಳು ಆಕರ್ಷಿತವಾಗಿವೆ, ಹಾಗೆಯೇ ಒಂದು ಬಟ್ಟಲಲ್ಲಿ ಎರಡು ಮೀನುಗಳಿರುವಂತೆ ಕಾಣುವ ಚಿತ್ರವು ನೈಜ ಚಿತ್ರಕಲೆಗೆ ಸಾಕ್ಷಿಯಾಗಿದೆ. ಮುರಿದ ಮಣ್ಣಿನ ಪಾತ್ರೆಗಳ ಮೇಲೆ ಕಾಣುವ ಈ ಚಿತ್ರಗಳನ್ನು ಗಮನಿಸಿದರೆ ಆ ಕಾಲದ ಚಿತ್ರಕಾರರ ದೃಷ್ಟಿ ಎಷ್ಟು ಸೂಕ್ಷ್ಮವಾಗಿತ್ತೆಂದು ಗುರುತಿಸಬಹುದು, ಅಲ್ಲದೆ ಅವರ ಕಲಾ ನೈಪುಣ್ಯವನ್ನು ನಾವು ಮೆಚ್ಚಿಕೊಳ್ಳದ ಇರಲಾರೆವು.

ವೇದಕಾಲದಲ್ಲಿ ಚಿತ್ರಕಲೆ

ಸಿಂಧೂಕೊಳ್ಳದ ಕಲೆಯು ಮಾಯವಾಗುತ್ತಿದ್ದಂತೆ ಭಿನ್ನ ರೂಪದ ವೇದ ಕಾಲದ ಸಂಸ್ಕೃತಿಯು ರೂಪಗೊಂಡಿರುವುದನ್ನು ಕಾಣಬಹುದು. ವೇದಗಳ ಕಾಲದಲ್ಲಿ ಚಿತ್ರಕಲೆಯನ್ನು ವಿಶೇಷವಾಗಿ ಅಭ್ಯಾಸ ಮಾಡಲಾಗಿತ್ತೆಂದು ದೃಢೀಕರಿಸಲಾಗಿದೆ. ಚಿತ್ರಕಲೆಯ ಬಗ್ಗೆ ಸಾಹಿತ್ಯ ಆಧಾರವೊಂದನ್ನು ಋಗ್ವೇದದ ಮೊದಲ ಮಂಡಳದಲ್ಲಿ ಕಾಣಬಹುದು. ಅಗ್ನಿ ದೇವರನ್ನು ಕುರಿತು ಸ್ತುತಿಸಲಾದ ಶ್ಲೋಕದಲ್ಲಿ "ಅತಿ ಭಯಂಕರವಾಗಿ ಚಲಿಸುವ ಅಗ್ನಿ ದೇವನನ್ನು ಚರ್ಮದ ಮೇಲೆ ಅಚಲನಾಗಿ ಮಾಡುವೆನು" ಎಂದು ಕವಿ ವಾಣಿಯಲ್ಲಿ ಹೇಳಲಾಗಿದೆ. ಇದರ ನೇರವಾದ ಅರ್ಥ "ದೇವರ ಅಚಲ ರೂಪದ ಚಿತ್ರವನ್ನು ಚರ್ಮದ ಕಾಗದದ ಮೇಲೆ ಚಿತ್ರಿಸುತ್ತೇನೆ' ಎನ್ನುವುದೇ ಆಗಿದೆ. ಈಗಲೂ ಚರ್ಮದ ಕಾಗದದ ಮೇಲೆ ಚಿತ್ರಿತವಾಗಿರುವ ಅನೇಕ ಚಿತ್ರಗಳನ್ನು ಪರ್ಷಿಯಾ ಮತ್ತು ಮೊಗಲ ರೀತಿಯ ಚಿತ್ರಕಲೆಯಲ್ಲಿ ಕಾಣಬಹುದು. ಈ ಮಧ್ಯಕಾಲೀನ ಚಿತ್ರಕಲೆ, ವೇದಕಾಲದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದೆ ಎಂದು ಹೇಳಬಹುದು.

ವೇದಕಾಲದ ಚಿತ್ರಕಲೆಯ ಬಗ್ಗೆ ಆಶ್ಚರ್ಯಕರವಾದ ಆಧಾರವೊಂದು ಇಷಾನಿನ ಪ್ರಾಚೀನ ಕರಡು ಸಾಹಿತ್ಯದಲ್ಲಿ ಸಂಶೋಧನೆಯ ಮೂಲಕ ದೊರಕಿದೆ. ವೇದ ಕಾಲದ ಋಷಿಗಳಾದ ವಶಿಷ್ಠ, ಪತ್ನಿಯೊಡನೆ ಕುಳಿತಿರುವ ಮಹರ್ಷಿ ಅತ್ರೇಯ, ಪತ್ನಿಯೊಡನೆಯಿರುವ ಅಂಗೀರಸ ಋಷಿ, ಇವರ ಅಪರೂಪ ಚಿತ್ರಗಳು ಹಾಗೂ ಅವರನ್ನು ಗುರುತಿಸುವ ವಾಕ್ಯ ಬಂಧಗಳು, ಆ ಕರಡು ಸಾಹಿತ್ಯದ ಪ್ರತಿಯಲ್ಲಿ ಕಾಣಬಹುದು.

ವಶಿಷ್ಠರನ್ನು ಕುರಿತು ಎರಡು ಚಿತ್ರಗಳಿವೆ; ಒಂದು ಕುಳಿತಿರುವ ಭಾವದ ಚಿತ್ರ ಮತ್ತೊಂದು ನಡಿಗೆಯ ಭಾವದ ಚಿತ್ರ. ಇದರಿಂದ ವೇದಕಾಲದ ಚಿತ್ರಕಲೆಗಾರರು ಋಷಿಗಳ ಅನೇಕ ಭಾವ ಭಂಗಿಗಳ ಚಿತ್ರಗಳನ್ನು ಚಿತ್ರಿಸುವ ಅಭ್ಯಾಸಮಾಡಿದ್ದರೆಂಬುದು ತಿಳಿಯುತ್ತದೆ.

ಜೈನ ಕಲ್ಪಸೂತ್ರ ಎಂಬ ಕರಡು ಪ್ರಾಚೀನ ಸಾಹಿತ್ಯದಲ್ಲಿ ಕಾಣುವ ಎರಡು ಪ್ರಾಮುಖ್ಯ ಚಿತ್ರಗಳು ವೇದ ಕಾಲದ ಚಿತ್ರ ಕಲೆಯ ಪರಂಪರೆಯನ್ನು ಸಮರ್ಥಿಸುತ್ತವೆ. ಒಂದು ಸೂರ್ಯನ ಉದಯವನ್ನು ಸೂಚಿಸುವ ಚಿತ್ರ; ಮತ್ತೊಂದು ಬೆಂಕಿಯಿಂದ ಉರಿದುಕೊಂಡಿರುವ ಪರ್ವತದ ಚಿತ್ರ. ಡಾ। ಕುಮಾರಸ್ವಾಮಿಯವರು ಈ ಎರಡು ಚಿತ್ರಗಳನ್ನು ವೇದ ಕಾಲದ ಪರಂಪರೆಗೆ ಸೇರಿದವೆಂದು ಘೋಷಿಸಿದ್ದಾರೆ.

ಗುಪ್ತರ ಕಾಲದಲ್ಲಿ ವೇದ ಕಾಲದ ಚಿತ್ರಕಲೆ ಕಾಣದಿದ್ದರೂ, ಶಿಲೆಯ ಮೇಲೆ ವೇದ ಕಾಲದ ಚಿತ್ರಗಳನ್ನು ಹೋಲುವ ಅನೇಕ ಕೆತ್ತನೆಗಳನ್ನು ಬಿಡಿಸಿರುವುದನ್ನು ಕಾಣಬಹುದು.

ಬೌದ್ಧ-ಸಂಸ್ಕೃತಿಯ ಪ್ರಭಾವ

ಬೌದ್ಧ ಸಂಸ್ಕೃತಿಯ ಪ್ರಭಾವದಿಂದ ಭಾರತದ ಚಿತ್ರಕಲೆಯು ಮೂರನೆ ಘಟ್ಟವನ್ನು ಮುಟ್ಟಿತೆಂದು ಹೇಳಬಹುದು. ಗೌತಮ ಬುದ್ಧನು ಅಹಿಂಸೆಯನ್ನು ಉಪದೇಶಿಸುತ್ತಿರುವ ಭಂಗಿಯ ಚಿತ್ರವು ಈ ಚಿತ್ರಗಳ ಸಾಲಿಗೆ ಸೇರಿದವುಗಳಲ್ಲಿ ಪ್ರಮುಖವಾದುದು. ಅಜಂತಾದ ಗುಹೆಗಳಲ್ಲಿಯ ಗೋಡೆಗಳ ಮೇಲೆ ಚಿತ್ರಿತವಾಗಿರುವ ಚಿತ್ರಗಳು ಲೋಕ ಪ್ರಸಿದ್ಧವಾಗಿವೆ. ಅವನ್ನು ಕ್ರಿಸ್ತ ಪೂರ್ವ ಒಂದನೇ ಶತಮಾನ ಮತ್ತು ಕ್ರಿಸ್ತ ಶಕ ಏಳನೇ ಶತಮಾನದ ನಡುವಿನ ಕಾಲದಲ್ಲಿ ಚಿತ್ರಿಸಲಾಗಿದೆ. ಆದರೆ ಬೌದ್ಧರ ಚಿತ್ರ ಕಲೆಯು ಕ್ರಿಸ್ತ ಪೂರ್ವ ೬ನೇ ಶತಮಾನದಲ್ಲಿ ಬುದ್ಧನ ಜೀವಿತ ಕಾಲದಲ್ಲಿಯೇ ಪ್ರಾರಂಭವಾಗಿತ್ತು. ಬೌದ್ಧರ ಆದಿ ಗ್ರಂಥಗಳಲ್ಲೊಂದಾದ ದಿವ್ಯ ವದನದಲ್ಲಿ ಕಲಾತ್ಮಕವಾಗಿ ವಿವರಿಸಿರುವಂತೆ ಮಗಧ ದೇಶದ ರಾಜ ಬಿಂಬಸಾರನ ಆಸ್ಥಾನದ ಕಲೆಗಾರ ರಚಿಸಿದ ಬುದ್ಧನ ಚಿತ್ರವೇ ಬುದ್ಧನ ಪ್ರಥಮ ಭಾವಚಿತ್ರವಾಗಿದೆ.

ಸಿಂಧುವಿನ ಬಳಿಯ ರೊರುಕ ಪ್ರಾಂತ್ಯದ ರಾಜ ರುದ್ರಾಯಣ ಎಂಬುವನು ರಾಜ ಬಿಂಬಸಾರನಿಗೆ ಕೆಲವು ಅಮೂಲ್ಯ ವಸ್ತುಗಳನ್ನು ಉಡುಗೊರೆಯಾಗಿ ಕಳಿಸಿ ಕೊಟ್ಟನು. ಆಗ, ಬಿಂಬಸಾರನು ಪ್ರತಿಯಾಗಿ ರುದ್ರಾಯಣನಿಗೆ ಏನು ವಸ್ತುವನ್ನು ಕಳುಹಿಸಿಕೊಡಬೇಕೆಂದು ಬುದ್ಧನನ್ನು ಕೇಳಿದನು. ಅದಕ್ಕೆ ಉತ್ತರವಾಗಿ ಬುದ್ಧನು ತನ್ನ ಭಾವ ಚಿತ್ರವನ್ನು ನಾರಿನ ಬಟ್ಟೆಯ ಮೇಲೆ ಚಿತ್ರಿಸಿ ಉಡುಗೊರೆಯಾಗಿ ಕಳುಹಿಸಿ ಕೊಡಲು ಸಲಹೆ ಮಾಡಿದನು. ಅಂತೆಯೇ ರಾಜನು ತನ್ನ ಆಸ್ಥಾನದ ಚಿತ್ರ ಕಲೆಗಾರರನ್ನು ಕರೆಸಿ, ಬುದ್ಧನ ಭಾವಚಿತ್ರವನ್ನು ಅಮಿತ ಪ್ರಭೆಯಿಂದ ಅಪ್ಯತವುಳ್ಳ ರೀತಿಯಲ್ಲಿ ಚಿತ್ರಿಸಲು ಆಜ್ಞೆ ಮಾಡಿದನು. ಆದರೆ ಬುದ್ಧನ ದೇಹದಿಂದ ಕಣ್ಣು ಕುಕ್ಕುವ ಪ್ರಭೆಯು ಹೊರ ಸೂಸುತ್ತಿದ್ದು, ಕಲೆಗಾರರು ಚಿತ್ರವನ್ನು ಬಿಡಿಸಲು ಸಾಧ್ಯವಾಗದೆ ಹೋದರು. ಅನಂತರ ಗೋಡೆಯ ಮೇಲೆ ಬಿದ್ದ ಬಿಂಬದಿಂದ ಭಾವಚಿತ್ರವನ್ನು ಕಲೆಗಾರರು ರೂಪಿಸಿದರು. ಬುದ್ಧನ ಅನುಜ್ಞೆಯಂತೆ, ಆ ಭಾವ ಚಿತ್ರಕ್ಕೆ ಹೊಂದುಕೊಳ್ಳುವ ವರ್ಣಗಳನ್ನು ತುಂಬಿದರು. ಅದು ಪೂರ್ಣವಾದಾಗ, ತನ್ನ ತತ್ವಗಳ ಸಾರವನ್ನೊಳಗೊಂಡ ಕೆಲವು ಪದ್ಯಗಳನ್ನು ಬುದ್ಧನು ಆ ಭಾವಚಿತ್ರದ ಮೇಲೆ ಬರೆದನು. ಅನಂತರ ಆ ಭಾವಚಿತ್ರವನ್ನು ರೊರುಕ ಪ್ರಾಂತ್ಯದ ರಾಜನಿಗೆ ಕಳುಹಿಸಿಕೊಡಲಾಯಿತು. ರಾಜನು ರಾಜಮರ್ಯಾದೆಯಿಂದ ಆ ಭಾವಚಿತ್ರದ ಉದ್ಘಾಟನೆ ಸಮಾರಂಭ ನಡೆಸಿದನು. ಈ ಕಾಲದಲ್ಲಿಯೇ ಬೌದ್ಧ ಸನ್ಯಾಸಿಗಳ ಆಶ್ರಮಗಳಲ್ಲಿ ಆಕಾರ ಕೊಡುವ ಮತ್ತು ಆಶ್ರಮಗಳಲ್ಲಿ ಚಿತ್ರಗಳನ್ನು ಚಿತ್ರಿಸುವ ಅಭ್ಯಾಸ ಪ್ರಾರಂಭವಾಯಿತು. ಗೋಡೆಗಳ ಮೇಲೆ ಯಾವ ಯಾವ ಅಂಶಗಳನ್ನೊಳಗೊಂಡ ಚಿತ್ರಗಳನ್ನು ರೂಪಿಸಬೇಕು, ಯಾವ ಅಂಶಗಳನ್ನು ವರ್ಜಿಸಬೇಕು ಎಂಬುದನ್ನು ಬುದ್ಧನು ನಿರ್ದಿಷ್ಟ ನಿರೂಪಣೆಯನ್ನು ನೀಡಿದ್ದನು.

ಬುದ್ಧನ ಜೀವಿತ ಕಾಲದಲ್ಲಿಯೇ ನಾಲ್ಕು ಸ್ಪಷ್ಟ ರೀತಿಯ ಚಿತ್ರ ಕಲೆಗಳನ್ನು ವಿಂಗಡಿಸಲಾಗಿತ್ತು. ಅವುಗಳಾವುವೆಂದರೆ:- (1) ಸತ್ಯ ಅಥವಾ ಸಾತ್ವಿಕ, (ಆಧ್ಯಾತ್ಮಿಕ ಸ್ವರೂಪದ ಗಂಭೀರ ಚಿತ್ರಗಳು) (2) ವೈಣಿಕ, (ಗಾನಾಕೃತಿಗಳು). (3) ನಾಗರ (ನಗರಗಳ ಮತ್ತು ಲೌಕಿಕ ಚಿತ್ರಗಳು) ಮತ್ತು (4) ಮಿಶ್ರ, (ವಿವಿಧ ವಿಷಯಗಳಿಂದ ಕೂಡಿದ ಚಿತ್ರಗಳು)

'ನಾಗರ' ಚಿತ್ರ ಕಲೆಯ ಮುಖ್ಯ ಉದ್ದೇಶ, ಪ್ರೇಮ, ವಿಲಾಸ ಮತ್ತು ಭೋಗದ ವಿಷಯಗಳ ಶೃಂಗಾರವನ್ನು ನಿರೂಪಿಸುವುದೇ ಆಗಿತ್ತು.

ಬಿಂಬಸಾರನ ರಾಜಸ್ಥಾನದಲ್ಲಿ ಪ್ರದರ್ಶಿಸಲ್ಪಟ್ಟ ಚಿತ್ರ ಶಾಲೆಗೆ ಬೌದ್ಧ ಸನ್ಯಾಸಿಗಳು ಮತ್ತು ಸನ್ಯಾಸಿಯರು ಹೋಗಕೂಡದೆಂದು ಬುದ್ಧನು ನಿರ್ಬಂಧ ಮಾಡಿದ್ದನು. ಆ ಚಿತ್ರ ಶಾಲೆಯಲ್ಲಿ ಸಂಸಾರಿಕ ಹಾಗೂ ಶೃಂಗಾರ ಚಿತ್ರಗಳನ್ನು ಚಿತ್ರಿಸಿರುವುದೇ ಕಾರಣವಾಗಿದೆ. ಆದರೆ ಬೌದ್ಧ ವಿಹಾರಗಳಲ್ಲಿ ಶಿಸ್ತಿನ ಜೀವನ ನಡೆಸಿದ ಹಾಗೂ ಐಂದ್ರಿಕ ಸುಖಭೋಗಗಳನ್ನು ಪರಿತ್ಯಜಿಸಿದ ಭಿಕ್ಷುಗಳು ಮಾತ್ರ ಆ ಚಿತ್ರಶಾಲೆಗೆ ಹೋಗಲು ಅನುಮತಿ ಪಡೆದಿದ್ದರು.

ಅಜಂತಾ ಮತ್ತು ಭಾಗ ಗುಹೆಗಳಲ್ಲಿರುವಂತೆ ಬೌದ್ಧ ವಿಹಾರದ ಗುಹೆಗಳಲ್ಲಿ ಸಾತ್ವಿಕ ಭಾವದ ಗಂಭೀರ ಸ್ವರೂಪದ ಚಿತ್ರಗಳನ್ನು ಬಿಡಿಸಲಾಗಿತ್ತು.

ಇಂದಿಗೂ ಅಜಂತಾ ಗುಹೆಗಳ ಗೋಡೆಗಳು ವರ್ಣ ಮಾಧುರ್ಯದಿಂದ ಕೂಡಿದ ನೀರು ಬಣ್ಣಗಳಲ್ಲಿ ರೂಪಿಸಿದ ಚಿತ್ರಗಳಿಂದ ತುಂಬಿ ಬುದ್ಧನ ಜೀವನ ಮಾರ್ಗಗಳನ್ನು ಸಾರುತ್ತಿವೆ. ಆ ಚಿತ್ರಗಳು ಬುದ್ಧನು ಆಧ್ಯಾತ್ಮಿಕವಾಗಿ ಹೇಗೆ ಪೂರ್ಣ ವಿಕಾಸ ಹೊಂದಿದನು ಎಂಬುದನ್ನು ವಿವಿಧ ರೂಪದಲ್ಲಿ ಬಿಂಬಿಸುತ್ತಿವೆ. ಆ ಚಿತ್ರಗಳನ್ನು ವೀಕ್ಷಿಸುವುದೆಂದರೆ ಭಾರತದ ಚಿತ್ರ ಕಲೆಯ ಯಾವ ಕಾಲದಲ್ಲೂ ಕಾಣದಂತಹ ಆಧ್ಯಾತ್ಮಿಕ ಭಾವನೆಗಳನ್ನು ಆಸ್ವಾದಿಸಿದಂತಾಗುತ್ತದೆ.

ಶಿಕ್ಷಣ ಕ್ರಮದಲ್ಲಿ ಕ್ರಾಂತಿ

ಬೇಸಗೆಯ ಗೋಷ್ಠಿಯ ವಿಶೇಷ ಕ್ರಮ

ಜಗತ್ತಿನಲ್ಲಿ ಇದು ವರೆಗೆ ಇದ್ದ ಮತ್ತು ಈಗ ಇರುವ ವೈಜ್ಞಾನಿಕರಲ್ಲಿ ನೂರಕ್ಕೆ ತೊಂಭತ್ತರಷ್ಟು ಜನರು ನಮ್ಮ ಕಣ್ಣೆದುರಲ್ಲೇ ಇದ್ದಾರೆ—ಇದು ಆಶ್ಚರ್ಯಜನಕ ಸತ್ಯ—ಎಂದು ಹೇಳುತ್ತಾರೆ ವಿಶ್ವವಿದ್ಯಾಲಯ ಸಹಾಯ ಧನ ಆಯೋಗದ ಅಧ್ಯಕ್ಷ ಡಾ| ದೌಲತ್‌ಸಿಂಗ್ ಕೊಠಾರಿಯವರು. ಈ ಮಾತಿನ ಅರ್ಥವಿದು: ವಿಜ್ಞಾನವು ಇಂದಿನ ದಿನಗಳಲ್ಲಿ ವಾಯು ವೇಗದಲ್ಲಿ ಮುಂದುವರಿಯುತ್ತಿದೆ, ಇಂಥಹ ಪರಿಸ್ಥಿತಿ ಈ ಹಿಂದೆ ಇರಲಿಲ್ಲ. ಶಿಕ್ಷಣದಲ್ಲಿ ನಾವು ಹಿಂದುಳಿಯ ಬಾರದೆಂದಿದ್ದರೆ, ವಿಜ್ಞಾನ ರಂಗದಲ್ಲಾಗುತ್ತಿರುವ ತೀವ್ರ ಪ್ರಗತಿ ವಿಧಾನಗಳನ್ನೂ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕು; ಇದಕ್ಕಾಗಿ ಸುವ್ಯವಸ್ಥಿತ ಕ್ರಮಗಳನ್ನು ಕೈಗೊಳ್ಳಬೇಕು.

ವಿಜ್ಞಾನ ರಂಗದಲ್ಲಾಗುವ ಪ್ರತಿಯೊಂದು ಸಂಶೋಧನೆ ಮತ್ತು ಪ್ರಗತಿಗಳನ್ನು ಶಾಲೆ—ಕಾಲೇಜುಗಳ ಅಭ್ಯಾಸ ಪ್ರಣಾಳಿಕೆಯಲ್ಲಿ ಸೇರಿಸಿ ಕೊಳ್ಳುವುದು ನಿರರ್ಥಕ. ಕೆಲಿಫೋರ್ನಿಯಾದ ಡಾ| ಜೆ. ಆರ್ಥರ್ ಕೇಂಬಲ್ಲರು ಇದನ್ನು ಸಮರ್ಥಿಸುತ್ತ ಹೇಳುತ್ತಾರೆ. ವಿಸ್ತಾರ ಜ್ಞಾನ ಪಡೆಯುವುದನ್ನು ಮಾನವನು ಬಿಟ್ಟು ಬಿಡಬೇಕೆಂದು ವಿಜ್ಞಾನಿಯು ಅನುಭವ ಮಾಡಿಕೊಳ್ಳುತ್ತಾನೆ. ಏಕೆಂದರೆ ಯಾವನೊಬ್ಬನಿಗೂ ಎಲ್ಲ ಸಂಗತಿಗಳನ್ನು ನೆನಪಿಟ್ಟು ಕೊಳ್ಳುವಷ್ಟು ಸುವಿಸ್ತೃತ ಮೆದುಳಿರುವುದಿಲ್ಲ. ವಿಜ್ಞಾನದ ವಿದ್ಯಾರ್ಥಿಯು ಸಾಮಾನ್ಯ ಶೀರ್ಷಿಕೆಗಳಲ್ಲಿಯೇ ಈ ಎಲ್ಲವನ್ನೂ ಕಲಿತು ಕೊಂಡರೆ, ಆಗ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳ ಬಲ್ಲನು.

ವೈಜ್ಞಾನಿಕ ಜ್ಞಾನವನ್ನು ಒದಗಿಸುವಲ್ಲಿ ಮೇಲೆ ಹೇಳಿದ ವಿಧಾನವನ್ನು ಅನುಸರಿಸುವುದೆಂದರೆ, ಶಿಕ್ಷಣದ ಪರಂಪರಾಗತ ವಿಧಾನವನ್ನು ಬದಲಾಯಿಸುವುದು. ಅಮೆರಿಕೆಯಲ್ಲಿ ಕೆಲವು ವರ್ಷಗಳಿಂದ ಶಿಕ್ಷಣ ಕ್ರಮ ಪರಿವರ್ತನೆಯ ಕಾರ್ಯಕ್ರಮ ನಡೆದು ಬರುತ್ತಿದೆ. ಕಳೆದ ಕೆಲವು ವರ್ಷಗಳಿಂದ ಭಾರತದ ಮೇಲೆಯೂ ಅದರ ಪ್ರಭಾವ ಬೀಳತೊಡಗಿದೆ. ಗ್ರೀಷ್ಮಕಾಲೀನ ವಿಜ್ಞಾನಗೋಷ್ಠಿಗಳ ಸಹಾಯದಿಂದ ಅಮೆರಿಕೆಯಲ್ಲಿ ಮೊದಲಿಗೆ ಈ ಕ್ರಮ ವ್ಯವಹಾರಕ್ಕೆ ಬಂತು, ಈಗ ಭಾರತದಲ್ಲಿಯೂ ಇಂತಹ ಗೋಷ್ಠಿಗಳು ನಡೆಯತೊಡಗಿವೆ.

ಶಾಲೆ ಮತ್ತು ಕಾಲೇಜುಗಳಲ್ಲಿನ ವಿಜ್ಞಾನ, (ಭೌತಿಕ ವಿಜ್ಞಾನ, ರಸಾಯನ ಶಾಸ್ತ್ರ, ಜೀವವಿಜ್ಞಾನ) ಮತ್ತು ಗಣಿತಗಳ ಅಧ್ಯಾಪಕರಿಗೆ ಶಿಕ್ಷಣದ ಹೊಸ ಕ್ರಮಗಳನ್ನು ತಿಳಿಸುವುದಕ್ಕೆ ಪ್ರತಿ ವರ್ಷವೂ ಬೇಸಗೆಯಲ್ಲಿ ಗೋಷ್ಠಿಗಳು ನಡೆಯುತ್ತವೆ. ೧೯೬೩ರಲ್ಲಿ ಭಾರತದಲ್ಲಿ ಇಂತಹ ೪ ಗೋಷ್ಠಿಗಳು ನಡೆದಿದ್ದುವು. ಕಳೆದ ವರ್ಷದ ಬೇಸಗೆಯಲ್ಲಿ ೬೪ ಗೋಷ್ಠಿಗಳು ಏರ್ಪಟ್ಟಿದ್ದುವು.

ಭಾರತವು ಈ ಸಂಬಂಧದಲ್ಲಿ ಅಮೆರಿಕೆಯಿಂದ ಪರಿಪೂರ್ಣ ಲಾಭ ಪಡೆಯುತ್ತಿದೆ. ಅಮೆರಿಕೆಯ ಪ್ರೊಫೆಸರರೂ ಅಧ್ಯಾಪಕರೂ ವಿವಿಧ ರಾಜ್ಯಗಳಲ್ಲಿ ಸಲಹೆಗಾರರಾಗಿ ಭಾಗ ವಹಿಸುತ್ತಾರೆ. ಕಳೆದ ವರ್ಷ ೧೧೬ ಶಿಕ್ಷಣ ಸಂಸ್ಥೆಗಳ ೨೦೦ ವಿಜ್ಞಾನ ಅಧ್ಯಾಪಕರು ಬೇಸಗೆಯ ಗೋಷ್ಠಿಯಲ್ಲಿ ಪಾತ್ರ ವಹಿಸಿದ್ದರು. ಅಮೆರಿಕೆಯಲ್ಲಿ ತಯಾರಾದ ಪಾಠ್ಯ ಪುಸ್ತಕಗಳು ಮತ್ತು ಶಿಕ್ಷಣ ಸಂಬಂಧಿ ಉಪಕರಣಗಳು ವಿಪುಲ ಪ್ರಮಾಣದಲ್ಲಿ ಉಪಯೋಗಕ್ಕೆ ಬರತೊಡಗಿದ.

ಮಹತ್ವದ ವೈಜ್ಞಾನಿಕ ವಿಧಾನಗಳು, ಪ್ರಶಿಕ್ಷಣ ಮತ್ತು ಸಂಶೋಧನೆಯ ಪ್ರಕ್ರಿಯೆ, ಸರಿಯಾದ ತರ್ಕ— ಅಳತೆ, ಅವಲೋಕನೆಯ ಉಪಾಯ, ಮಾನ್ಯತೆಯನ್ನು ಪರಿಶೀಲಿಸುವ ವಿಧಾನ ಮತ್ತು ಸಿದ್ಧವಾದ ನಂತರವೇ ಸಿದ್ಧಾಂತವನ್ನು ಸ್ವೀಕರಿಸುವುದು— ಇವುಗಳಷ್ಟು ವೈಜ್ಞಾನಿಕ ಸುವಿಸ್ತೃತ ಪರಿಜ್ಞಾನವು ಅಗತ್ಯದ್ದಲ್ಲವೆಂದು ಮನಗಂಡು ಅಮೆರಿಕೆಯಲ್ಲಿ ಪಾಠ್ಯ ಪುಸ್ತಕಗಳನ್ನು ಸಿದ್ಧಗೊಳಿಸಲಾಗಿದೆ.

ಈ ಪುಸ್ತಕಗಳ ಅವಲೋಕನೆಗಾಗಿ ಒಂದು ಸಂದರ್ಭವನ್ನು ಉಲ್ಲೇಖಿಸಬಹುದು. ಬಯೊಲಾಜಿಕಲ್ ಸೈನ್ಸ್—ಎನ್ ಇನ್‌ಕ್ವಯರಿ ಇನ್ ಟು ಲೈಫ್— ಎಂಬುದೊಂದು ಪುಸ್ತಕದಲ್ಲಿ 'ಜೀವ ಜಂತುಗಳಿಂದ ಹುಟ್ಟುವ ಮಕ್ಕಳು —ಮರಿಗಳು ಪರಂಪರಾಪ್ರಾಪ್ತವೆಂಬಂತೆ ತಮ್ಮ ತಾಯ್ತಂದೆಯನ್ನು ಹೋಲುತ್ತವೆ. ಇದೇಕೆ ಹೀಗೆ? ಬೆಕ್ಕು ಬೆಕ್ಕಿನ ಮರಿಗಳಿಗೆ ಮಾತ್ರ ಜನ್ಮತೆತ್ತು ಮೊಲದ ಮರಿಯನ್ನು ಹುಟ್ಟಿಸಲಾರದ ಎಂತಹ ಶಕ್ತಿ ಜೀವ ವಿಜ್ಞಾನದಲ್ಲಿ ಅಡಗಿದೆ? ಈ ಪ್ರಶ್ನೆ ಹುಚ್ಚು ಪ್ರಶ್ನೆಯೆನಿಸಬಹುದು; ಆದರೆ ಇದಕ್ಕೆ ಸಮಾಧಾನಕಾರಕವಾದ ಉತ್ತರ ಯಾರು ಕೊಡಬಲ್ಲರು? ನಿಮ್ಮ ತಾಯ್ತಂದೆಯರ ಕಣ್ಣು ತಪ್ಪಿರಬಹುದು, ನಿಮ್ಮದು ತುಸು ಕಂದಿರಬಹುದು. ಈ ಅಂತರವೇಕಾಯಿತು?"

ಈ ಬಗೆಯ ಪುಸ್ತಕಗಳು ವಿಜ್ಞಾನ ಶಿಕ್ಷಕರಿಗೆ ನೂತನ ವಿಧಾನಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಗಿವೆ. ಬೇಸಗೆಯ ಗೋಷ್ಠಿಯಲ್ಲಿ ಉಪಯೋಗಿಸಲಾದ ಹಲವು ಪುಸ್ತಕಗಳು ಅಮೆರಿಕನ್ ಪ್ರಕಟಣೆಗಳು. ಕೆಲವು ಅಮೆರಿಕನ್ ಮೂಲದವಾದರೂ ಭಾರತೀಯ ಪ್ರಕಾಶಿತ. ಭಾರತ ಮತ್ತು ಅಮೆರಿಕೆಗಳ ಸಹಕಾರದಿಂದ ಈ ಪ್ರಕಟಣಾ ಕಾರ್ಯ ಆರಂಭವಾಗಿದೆ. ಬೇಸಗೆಯ ಗೋಷ್ಠಿಗಳಿಗೆ ಬೇಕಾಗುವ ಪುಸ್ತಕಗಳನ್ನಲ್ಲದೆ ಪ್ರಾಮಾಣಿಕ ಪುಸ್ತಕಗಳನ್ನೂ ಈ ಯೋಜನೆಯಂತೆ ಪ್ರಕಟಿಸುವ ಉದ್ದೇಶವೂ ಇದೆ. ಅಮೆರಿಕೆಯಲ್ಲಿ ದೊರೆಯುವ ಉತ್ತಮೋತ್ತಮ ಪ್ರಾಮಾಣಿಕ ಪುಸ್ತಕಗಳನ್ನು ಭಾರತೀಯ ವಿದ್ಯಾರ್ಥಿಗಳಿಗೆ ಕಡಿಮೆ ಬೆಲೆಯಲ್ಲಿ ಪೂರೈಸುವುದೇ ಎರಡನೆಯ ಗುರಿಯ ಉದ್ದೇಶ.

ಅಗ್ಗದರದ ಪಾಠ್ಯ ಪುಸ್ತಕಗಳ ಯೋ ನೆಯು ಅಮೆರಿಕೆಯ ಇನ್‌ಫಾರ್ಮೇಶ ಸರ್ವಿಸ್‌ನ ಮೂಲಕ ಭಾರತದ ಶಿಕ್ಷ ಮಂತ್ರಿ ಶಾಖೆಯ ಸರಕಾರದಿಂದ ಯುತ್ತಿದೆ. ಅಮೆರಿಕನ್ ಸರಕಾರವು ರತೀಯ ಮುದ್ರೆಯನ್ನು ಉಪಯೋಗಿ ವುದು ಮತ್ತು ಡಾಲರ್ ರೂಪದಲ್ಲಿ ಸ ಯ ನೀಡುವುದರಿಂದಲೇ ಬೆಲೆಯನ್ನು ಡಿಮೆ ಇಡುವುದು ಸಾಧ್ಯವಾಗಿದೆ

ಪಾಠ್ಯ ಪುಸ್ತಕ ಕೊಂಡುಕೊಳ್ಳ ಭಾರತೀಯನಿಗೆ ತುಂಬ ಉಳಿತಾಯ ಗುವುದು. ಅಮೇರಿಕೆಯಲ್ಲಿ ಅಚ್ಚಾದ ತ್ತಾದರ ಭಾರತೀಯ ಸಂಸ್ಕರಣಗಳ ಯಲ್ಲಿ ಬಹಳ ಅಂತರವಿದೆ ಉತ್ಪಾದ ವೆಚ್ಚದಲ್ಲಿ ಸೇಖಡಾ ೫೦ರಿಂದ ೭೦ರವ ವ್ಯತ್ಯಾಸ ಕಂಡು ಬರುತ್ತದೆ. ಆದರೆ ಯ ಅಂತರ ಇನ್ನೂ ಹೆಚ್ಚು. ಉದಾ ಣೆಗಾಗಿ ಮೇಲೆ ಹೇಳಿದ ಜೀವ ವಿಜ್ಞಾ ದ ೭೪೮ ಪುಟಗಳ ಪುಸ್ತಕದ ಬೆಲೆ ಅಮ ಕೆಯಲ್ಲಿ ಎಂಟು ಡಾಲರ್‌ಗಳು ಭಾರತದಲ್ಲಿ ಬರಿಯ ಎಂಟು ರೂಪಾ ಅಂದರೆ ಸುಮಾರು ಸೇ. ೨೦ ಮಾತ್ರ!

ವೈಶಾಖದ ಗೋಷ್ಠಿಗಳಲ್ಲಿ ಪಾ ಪುಸ್ತಕಗಳ ಈ ಅಲ್ಪ ಬೆಲೆಯನ್ನೂ ಕ್ಷಕರು ತಮ್ಮ ಕಿಸೆಯಿಂದ ತೆರ ಬೇ ಗಿರುವುದಿಲ್ಲ. ಭಾರತ ಸರಕಾರವು ಈ ಚ್ಚವನ್ನು ಹೊರುತ್ತದೆ. ಸ್ವಲ್ಪಾಂಶವ ಆರ್ಥಿಕ ಸಹಾಯದ ರೂಪದಲ್ಲಿ ಅಮೆ ಯೂ ಕೊಡುತ್ತದೆ. ಈ ಪುಸ್ತಕಗ ರತೀಯ ಸಂಸ್ಕರಣವು ಶಿಕ್ಷಣ ಸಂಬ ಸಂಶೋಧನೆ ಮತ್ತು ಪ್ರಶಿಕ್ಷಣ ಷ್ಟ್ರೀಯ ಪರಿಷತ್ತಿನ ಮೂಲಕ ಪ್ರ ತವಾಗಿದೆ. ಇದುವರೆಗೆ ಕೆಲವು ಪಾ ಪುಸ್ತಕಗಳ ಒಟ್ಟು ೬೩ ಸಾವಿರ ಪ್ರತಿಗ ಅಚ್ಚಾಗಿವೆ.

ದಿಲ್ಲಿಯ ಒಂದು ಪ್ರದರ್ಶಿನಿಯಲ್ಲಿ ವಿದ್ಯಾರ್ಥಿ - ವಿದ್ಯಾರ್ಥಿನಿಯರು ಅಗ್ಗ ಬೆಲೆಯ ಪುಸ್ತಕಗಳಲ್ಲಿ ಅತ್ಯಂತಾಸಕ್ತಿ ತೋರಿಸುತ್ತಿದ್ದಾರೆ.

ಏಶ್ಯನ್ ಸಾಕ್ಷರತಾ ಮೂರ್ತಿ

ಶ್ರೀಮತಿ ವೆಲ್ದಿ ಫಿಷರ್

ಶ್ರೀಮತಿ ವೆಲ್ದಿ ಎಚ್. ಫಿಷರ್‌ರವರು ತನ್ನ ಎಪ್ಪತ್ತನೆಯ ಜನ್ಮ ದಿನವನ್ನು ಆಚರಿಸಿದಾಗ 'ಓದುವ ಮತ್ತು ಓದಿಸುವ ಕಾರ್ಯವನ್ನು ಮುಂದುವರಿಸುವುದಕ್ಕಾಗಿ ನಾನು ಭಾರತಕ್ಕೆ ಮರಳುತಿದ್ದೇನೆ' ಎಂದು ಘೋಷಿಸಿದರು. ಶ್ರೀಮತಿಯವರು ಇಡಿಯ ಏಶ್ಯಾದಲ್ಲಿಯೇ ಸಾಕ್ಷರತೆಯ ಮೂರ್ತಿಯೆನ್ನಬಹುದು. ಲಖನವೂ ನಗರದಲ್ಲಿ ೧೯೫೩ರಲ್ಲಿ 'ಸಾಕ್ಷರತಾ ನಿಕೇತನ'ವನ್ನು ಸ್ಥಾಪಿಸಿದ್ದರು ಇವರು.

ಯಲು ವಿದ್ಯಾರ್ಥಿಗಳನ್ನು ಆರಿಸಿ ಕಳಿಸುವುದರೊಡನೆ ಅವರ ವೆಚ್ಚವನ್ನೂ ಕೊಡುತ್ತದೆ. ಭಾರತೀಯ ಉದ್ದಿಮೆದಾರರು ಕೂಡ ತಮ್ಮ ಶ್ರಮಿಕರ ರಾತ್ರಿ ಕಾಲೀನ ವರ್ಗಗಳ ವೆಚ್ಚವನ್ನು ತೆರಲು ಪ್ರಾರಂಭಿಸಿದ್ದಾರೆ. ಅಮೇರಿಕೆಯಿಂದ ಬರುವ ಸಹಾಯ ಧನದಿಂದಲೂ ಸಾಕ್ಷರತಾ ಗ್ರಾಮ ಬಲಗೊಂಡಿದೆ.

ನ್ಯೂಯಾರ್ಕಿನ ವಿಶ್ವ ಪ್ರದರ್ಶಿನಿಯ ಭಾರತೀಯ ಮಂಟಪದಲ್ಲಿ ತನ್ನ ಎಪ್ಪತ್ತನೆಯ ಜನ್ಮ ದಿನದ ಸಂದರ್ಭದಲ್ಲಿ ಶ್ರೀಮತಿ ವೆಲ್ದಿ ಫಿಷರ್ ರೊಟ್ಟಿ ಕತ್ತರಿಸುವಾಗ ಎಲ್ಲ ದೇಶದ ಮಕ್ಕಳು 'ಹೆಪ್ಪಿ ಬರ್ಥ್ ಡೇ' ಗೀತೆಯನ್ನು ಹಾಡಿದರು.

ನ್ಯೂಯಾರ್ಕ್‌ನಲ್ಲಿ ೧೯೬೪ರ ಕೊನೆಯಲ್ಲಿ ನಡೆದ ವಿಶ್ವ ಪ್ರದರ್ಶಿನಿಯ ಭಾರತೀಯ ಮಂಟಪದಲ್ಲಿ ಆಕೆಯ ಜನ್ಮದಿನವನ್ನು ಆಚರಿಸಿದಾಗ, ಏಶ್ಯನ್ ಮಕ್ಕಳು ಅವರಿಗೊಂದು ದೊಡ್ಡ ರೊಟ್ಟಿಯನ್ನು ಉಡುಗೊರೆಯಾಗಿ ಅರ್ಪಿಸಿದರು. ಇದನ್ನು ತುಂಡರಿಸುತ್ತ ಶ್ರೀಮತಿಯವರು ಹೇಳಿದರು, ಭಾರತವು ಹಲವು ಶತಮಾನಗಳಿಂದಲೂ ಕೋಲಾಹಲ ಮತ್ತು ದುರ್ಘಟನೆಗಳಿಂದ ಅಲ್ಲೋಲಕಲ್ಲೋಲವಾಗಿದೆ. ಇಂದಿಗೂ ಭಾರತವು ಸಂಕಟಮಯ ವಾತಾವರಣದಲ್ಲಿಯೇ ಮುಂದುವರಿಯುತ್ತಿದೆ. ಆದುದರಿಂದ ನಾವು ನಮ್ಮ ಕಾರ್ಯವನ್ನು ಮುಂದುವರಿಸುತ್ತಿರಲೇ ಬೇಕು; ಇದು ಹಿಂದಿನಕ್ಕಿಂತ ಇಂದು ಹೆಚ್ಚಾಗಿದೆ.

ಭಾರತೀಯ ಮಂಟಪದ ಅಧಿಕಾರಿ ಎ. ಎಸ್. ಸೇಠಿಯವರು ಏಶ್ಯಾದ ಕೋಟ್ಯಂತರ ಜನರನ್ನು ಓದು ಬರಹ ಬಲ್ಲವರಾಗಿ ಮಾಡುವುದೇ ತನ್ನ ಜೀವನದ ಉದ್ದೇಶವನ್ನಾಗಿ ಮಾಡಿಕೊಂಡ ಶ್ರೀಮತಿಯವರೊಡನೆ ಆಕೆಯ ಕಾರ್ಯವಿಧಾನದ ಬಗ್ಗೆ ಮಾತುಕತೆ ನಡೆಸಿದಾಗ, ಶ್ರೀಮತಿಯವರ ಕಣ್ಣುಗಳಲ್ಲಿ ನೀರೂರಿತು. ನಾನ್ ಚಾಂಗ್ (ಚೀನಾ) ದಲ್ಲಿ ಒಂದು ಶಾಲೆಯ ಸಂಸ್ಥಾಪಿಕೆ ಹಾಗೂ ನಿರ್ದೇಶಿಕೆಯಾಗಿ ಹತ್ತು ವರ್ಷ ಕಳೆದ ಬಳಿಕ ೧೯೨೦ರಲ್ಲಿ ಶ್ರೀಮತಿ ಫಿಷರ್ ಮೊತ್ತಮೊದಲಿಗೆ ಭಾರತಕ್ಕೆ ಬಂದರು. ಆಕೆಯ ಪತಿ ಕಲಕತ್ತೆಯ ಮೆಥೋಡಿಸ್ಟ್ ಬಿಷಪರಿದ್ದರು. ೧೯೩೮ರಲ್ಲಿ ಪತಿಯ ಮರಣಾನಂತರ ಶ್ರೀಮತಿಯವರು ಮಹಾತ್ಮಾ ಗಾಂಧಿಯವರನ್ನು ಬೆಟ್ಟಿಯಾದರು. ಭಾರತದ ಗ್ರಾಮೀಣ ಜನತೆಯ ಸ್ಥಿತಿಗತಿಗಳನ್ನು ಸುಧಾರಿಸಬೇಕೆಂದು ಮಹಾತ್ಮರು ಅವರಿಗೆ ಸಲಹೆ ನೀಡಿದರು.

ಇದನ್ನು ಸ್ವೀಕರಿಸಿದ ಫಿಷರ್ ಭಾರತ ಸರಕಾರ ಮತ್ತು ಅಮೇರಿಕನ್ ದಾನಿಗಳ ನೆರವಿನಿಂದ 'ಸಾಕ್ಷರತಾ ಗ್ರಾಮ'ವನ್ನು ಸ್ಥಾಪಿಸಿದರು. ಮೊದಲಲ್ಲಿ 'ಸಾಕ್ಷರತಾ ನಿಕೇತನ'ವೆಂದು ಕರೆಯುವ ಒಂದು ಕಟ್ಟಡ ಮಾತ್ರವಿತ್ತು. ಕಳೆದ ಕೆಲವು ವರ್ಷಗಳಲ್ಲಿ ಇದು ಕಟ್ಟಡಗಳು ಸುಮಾರು ೧೦ ಎಕ್ರೆಗಳಲ್ಲಿ ವಿಸ್ತರಿಸಿದುವು. ಈಗ ಇಲ್ಲಿ ಏಶ್ಯಾದ ಬೇರೆ ಬೇರೆ ದೇಶಗಳಿಂದ ಬರುವ ಪ್ರೌಢ ವ್ಯಕ್ತಿಗಳಿಗೆ ಸಾಕ್ಷರತಾ ಪ್ರಸಾರದ ಮೂಲವಿಧಿಗಳ ಬಗ್ಗೆ ಶಿಕ್ಷಣ ನೀಡಲಾಗುತ್ತಿದೆ.

ಇದುವರೆಗೆ ಭಾರತದ ಎಲ್ಲ ಭಾಷಾ ಪ್ರದೇಶಗಳ ೭,೦೦೦ಕ್ಕೂ ಹೆಚ್ಚಿನ ಶಿಕ್ಷಕರು ಸಾಕ್ಷರತಾ ಗ್ರಾಮದಲ್ಲಿ ಪ್ರಶಿಕ್ಷಣ ಪಡೆದಿದ್ದಾರೆ. ಇತರ ದೇಶಗಳಿಂದ ಬರುವ ಶಿಕ್ಷಕರಿಗೂ ಪ್ರಶಿಕ್ಷಣ ನೀಡುವ ಒಂದು ಅಂತಾರಾಷ್ಟ್ರೀಯ ಸಂಸ್ಥಾನವೂ ಇಗಿದೆ. ಈ ಪ್ರಶಿಕ್ಷಿತರು ತಮ್ಮ ದೇಶಗಳಿಗೆ ಮರಳಿ ಹೋದ ಬಳಿಕ ಅಶಿಕ್ಷಿತ ಹುಡುಗ-ಹುಡುಗಿಯರಿಗೆ ಶಿಕ್ಷಣವನ್ನು ಕೊಡುತ್ತಾರೆ.

ಜನತೆಯೂ ಸಂಘ ಸಂಸ್ಥೆಗಳೂ ತನ್ನ ಕಾರ್ಯದಲ್ಲಿ ಅಧಿಕಾಧಿಕ ಸಹಾಯ ನೀಡುತಿದ್ದಾರೆಂದು ಶ್ರೀಮತಿ ಫಿಷರ್ ಅಭಿಮಾನ ಪಡುತ್ತಾರೆ. ಉದಾಹರಣೆಗಾಗಿ ಈಗ ಭಾರತ ಸರಕಾರವು ಪ್ರಶಿಕ್ಷಣ ಪಡೆ

ಟ್ರೇಡ್ ಯೂನಿಯನ್ ಮತ್ತು ಜೋಪಾಸನಾ ಶಾಸನವು ಆಮೇರಿಕೆಯ ಕಾರ್ಮಿಕನ ದುಡಿತ ಮತ್ತು ಜೀವನ ಕ್ರಮದಲ್ಲಿ ಅದ್ಭುತ ಬದಲಾವಣೆಯನ್ನುಂಟುಮಾಡಿವೆ.

ಕಡಿಮೆ ತಿನ್ನುವುದು ಚಿಕಿತ್ಸೆಯಲ್ಲ -ಅದು ಕ್ಷಾಮದ ಪ್ರಮಾಣದೃಷ್ಟಾಂತ

ಜನತೆ ಗುಲ್ಲೆಬ್ಬಿಸಿ ಹಿಂಸೆಗೆ ತೊಡಗಿದ ನಂತರವೇ ಸರಕಾರವು ಚಿಕಿತ್ಸೆಗೆ ತೊಡಗಬೇಕೇ?

(ಶ್ರೀ ರಾಜಗೋಪಾಲಾಚಾರಿ)

ಆಹಾರವಲಯಗಳನ್ನು ರದ್ದುಗೊಳಿಸಬೇಕೆಂಬುದನ್ನೊತ್ತಿ ಹೇಳುತ್ತ, ದೇಶದಹಿರಿಯ ರಾಜಕಾರಣಿ ಹಾಗೂ ಮೇಧಾವಿ ಶ್ರೀ ಸಿ. ರಾಜಗೋಪಾಲಾಚಾರಿಯವರು "ಸ್ವರಾಜ್ಯ" ಪತ್ರಿಕೆಯ ಇದೇ ತಾ 12ರ ಸಂಚಿಕೆಯಲ್ಲಿ ಬರೆದ ಲೇಖನವು ವಿಚಾರವಂತರೆಲ್ಲರಿಗೂ ಮನನೀಯವಿದೆ. ಆ ಲೇಖನದ ಸಾರಾಂಶವನ್ನಿಲ್ಲಿ ಕೊಡುತಿದ್ದೇವೆ.

ಸಂಕಷ್ಟದಲ್ಲಿರುವವರು ಕೆರಳಿ ಹಿಂಸಾಕೃತ್ಯಗಳಿಗೂ ಅಕ್ರಮ ನಡತೆಗೂ ಹೊರಟ ನಂತರವೇ ಕೊಂಗ್ರೆಸ್ ಸರಕಾರವು ನ್ಯಾಯಮಾಡಲು ಮುಂದಾಗುತ್ತದೆ ಮತ್ತು ಅದನ್ನು ದೊಡ್ಡ ಗುಲ್ಲು ಮತ್ತು ಪ್ರಸಿದ್ಧಿಯಿತ್ತು ಮಾಡುತ್ತಿದೆ- ಎಂಬುದು ಶೋಚನೀಯವಿದೆ. ಇತ್ತೀಚೆಗಿನ ದೃಷ್ಟಾಂತವೆಂದರೆ— ಕೇರಳಕ್ಕೆ ಅಕ್ಕಿ ಸರಬರಾಯಿ.

ಈ ಮೊದಲು ಎಲ್ಲ ವಿಚಾರವಂತರು, ವಲಯಗಳನ್ನೂ ಕಟ್ಟುಗಳನ್ನೂ ರದ್ದುಗೊಳಿಸಬೇಕೆಂದು ಒತ್ತಾಯಿಸಿದರೂ ಸರಕಾರವು ಏನೂ ಮಾಡದೆ ಗಟ್ಟಿಯಾಗಿ ಕುಳಿತಿತ್ತು. ಈಗ, ಕೇರಳಕ್ಕೆ ಟನ್ನುಗಟ್ಟಲೆ ಅಕ್ಕಿ ಸಾಗಿಸುವ ಮತ್ತು ಇನ್ನೂ ಕಳಿಸಿಕೊಡುವ ವಚನವೀವ ದೊಡ್ಡ ಗುಲ್ಲು ಪ್ರಚುರಪಡಿಸಲ್ಪಡುತ್ತಿದೆ. ನಾವು ಇನ್ನೂ ಪಾಠ ಕಲಿಯಲಾರೆವೇ?

ಭಾರತದ ಉಳಿಕೆಯ ಪ್ರದೇಶಗಳಲ್ಲಿ ಧಾರಣೆಗಳನ್ನು ಒತ್ತಿಡಬೇಕೆಂಬ ಉಪಾಯವಾಗಿ ದೇಶದಲ್ಲೆಲ್ಲಿಯಾದರೂ ಅಭಾವದ ಪರಿಸ್ಥಿತಿಯನ್ನುಂಟು ಮಾಡುವುದು ಅಪಾಯಕರವಾಗಿದೆ. ಧಾರಣೆಗಳೇರಿದರೆ, ಅಭಾವದ ಪ್ರದೇಶಗಳಲ್ಲಿ ಕ್ಷಾಮವನ್ನೂ ಸಂಕಷ್ಟವನ್ನೂ ಉಂಟುಮಾಡಿ ಅವುಗಳನ್ನು ತಗ್ಗಿಸುವುದಲ್ಲ, ಇತರ ಉಪಾಯಗಳನ್ನು ಯೋಚಿಸಬೇಕು. ಭಾರತವು ಒಂದು ಅಖಂಡ ರಾಷ್ಟ್ರ. ಅದನ್ನು ಗಮನಿಸಿ, ತಕ್ಕಂತೆ ನಡಕೊಳ್ಳೋಣ ಬರಿಯ ಮಾತುಗಳಿಂದ ಪ್ರಯೋಜನವೇನು? ನಿರಾತಂಕವಾದ ಸಾಗಟಗಳಲ್ಲಿ ಆಸಕ್ತಿಯಿರುವ ಬೇಸಾಯಗಾರರು — ಅವರಲ್ಲಿ ಕೆಲವರು ಸರಕಾರದ ಕಣ್ಣು ತಪ್ಪಿಸಿ ಕಳ್ಳಾಟಿಕೆಯಿಂದ ಸಾಗಿಸಿದರು ಕೂಡ— ಪ್ರತಿಬಂಧಗಳನ್ನು ಹೇರಿ ಮಾನವ ನಿರ್ಮಿತ ಕ್ಷಾಮವನ್ನುಂಟು ಮಾಡಿ ಆಬಾಲಸ್ತ್ರೀ ವೃದ್ಧರಿಗೆಲ್ಲ ಹಸಿವಿನ ಸಂಕಷ್ಟಗಳನ್ನು ತಂದೊಡ್ಡುವ, ತುಂಬುಹೊಟ್ಟೆಯಲ್ಲಿ ರಾಜಕೀಯಗಳನ್ನು ಮಾಡುವವರ ಮೇಲೆ ಹಸಿದವರು ದ್ವೇಷ ತಾಳುವಂತಾಗುವ ಪರಿಸ್ಥಿತಿ ತಂದೊಡ್ಡಿದ ಸರಕಾರಕ್ಕಿಂತಲೂ ಹೆಚ್ಚಿನ ಸೇವೆ ಸಲ್ಲಿಸುವವರೆನ್ನತ್ತೇವೆ.

ನಿರಾತಂಕವಾದ ಆಹಾರ ಧಾನ್ಯಗಳ ಚಲನವು, ಶೋಷಕರಿಗೆ ಅನುಕೂಲವಲ್ಲ ಸ್ಪರ್ಧೆಯಿಂದ ಆಹಾರ ಧಾನ್ಯಗಳು ಸರಾಗವಾಗಿ ಸಾಗುತಿದ್ದು, ಧಾರಣೆಗಳು ಮಾರುಕಟ್ಟೆಯ ನಿಯಮಾನುಸಾರ ಸ್ಥಾಪನೆಯಾಗುತ್ತವೆ. ಈ ನಿಯಮದಲ್ಲಿ ಭಂಗವೆಸಗುಂಟಾಗುವಂತೆ ಮಾಡಬೇಕಾಗಿದೆ.

ಕೇರಳದ ಚಿತ್ರವು ಸಾರ್ವಜನಿಕ ಪ್ರದರ್ಶಕ ತೆರೆಯ ಮೇಲೆ ಬಿಂಬಿಸಿರಲು, ಈ ಕೆಳಗಿನ ಚಿಕಿತ್ಸೆಗಳನ್ನು ಸರಕಾರವು ಸೂಚಿಸುವುದು ನಿಷ್ಪ್ರಯೋಜಕರ.

1. ಪ್ರಜಾಸಂಖ್ಯೆ ಕಡಿಮೆ ಮಾಡುವುದು.
2. ಕಡಿಮೆ ತಿನ್ನುವುದು.
3. 500 ಮಿಲಿಯ ಜನರ ಆಹಾರ ಅಭ್ಯಾಸಗಳನ್ನು ಬದಲಾಯಿಸುವುದು.

ಇದು ಶಾಲಾ ಬಾಲಕರ ಲೆಕ್ಕ ವಿನಹ ರಾಜನೀತಿಯಲ್ಲ. ನಾವು, ಸುಲಭಸಾಧ್ಯವೆನಿಸುವ ಅಭ್ಯಾಸವನ್ನು ಕೂಡ ಬದಲಾಯಿಸುವುದಿಲ್ಲ. ಧೂಮ್ರಪಾನದಿಂದ ಕೇನ್ಸರ್ ವ್ಯಾಧಿಯುಂಟಾಗುವುದೆಂದೂ, ಕುಡಿಕತನದಿಂದ ಹೃದಯ ದೌರ್ಬಲ್ಯ ಉಂಟಾಗಬಹುದೆಂದೂ ತಿಳಿದಿದ್ದರೂ ಬುದ್ಧಿಜೀವಿಗಳು ಕೂಡಾ ಆ ಚಟಗಳನ್ನು ಬಿಟ್ಟುಬಿಡುವುದಿಲ್ಲ. ಜನಾಂಗದ ಸ್ಥಿತಿಗತಿಗಳನ್ನು ವ್ಯವಸ್ಥೆಗೊಳಿಸುವ ವಿಷಯದಲ್ಲಿ ಒಂದು ಮಂತ್ರಿಮಂಡಲದ ಮೇಲೆ ದೋಷಾರೋಪಣೆಯಿದ್ದ ಕಾಲದಲ್ಲಿ ನಾವು ನಮ್ಮ ಜನಸಂಖ್ಯೆ ಕಡಿಮೆಮಾಡಿಕೊಳ್ಳಬೇಕೆಂದರೆ ಸಲ್ಲದು. ನಾವು ಕಡಿಮೆ ತಿಂದು, ದೇಶದ ಆರ್ಥಿಕಾಭಿವೃದ್ಧಿಗೆ ಅವಶ್ಯವಿರುವಷ್ಟು ಶ್ರಮವನ್ನು ಕೊಡಲಾರೆವು.

ಈಗ ತಿನ್ನುವುದಕ್ಕಿಂತ ಕಡಿಮೆ ಆಹಾರ ಅಥವಾ ಅಪೌಷ್ಟಿಕ ಆಹಾರ ತಿಂದು ನಮ್ಮ ಜನತೆಯು ತನ್ನ ಖಾಸಗಿ ಅಥವಾ ರಾಷ್ಟ್ರೀಯ ಜೀವನದ ಯಾತನೆಗಳನ್ನೂ ಕಷ್ಟಕ್ಲೇಶಗಳನ್ನೂ ಸಮರ್ಥವಾಗಿ ಎದುರಿಸಲಾರದು.

ಒಂದು ಜನಾಂಗವು ಕಡಿಮೆ ಆಹಾರ ತಿನ್ನುವಂತೆ ಮಾಡಲ್ಪಡುವುದು. ಒಂದು ಚಿಕಿತ್ಸೆಯಲ್ಲ—ಅದು ಕ್ಷಾಮದ ದೃಷ್ಟಾಂತವಾಗಿರುತ್ತದೆ.

ಸರಕಾರವು, ಜನತೆಯು ಕೊಂಡುಕೊಳ್ಳುವ ಶಕ್ತಿ ಅಧಿಕವಾಗಿದೆ ಎಂದು ಹೇಳುತಿದ್ದ ಪ್ರೊ। ಬಿ. ಆರ್. ಶೆಣೈಯವರು ಅನೇಕ ವೇಳೆ ವಿವರಿಸಿರುವಂತೆ, ಜನತೆಯ ಆಹಾರ ಪ್ರಮಾಣವು ಆವಶ್ಯವಿರಬೇಕಾದಷ್ಟು ಇಲ್ಲದಿರುವ ಕಾರಣ, ಜನರ ಕೊಂಡುಕೊಳ್ಳುವ ಶಕ್ತಿಯಲ್ಲಿಯೂ ಪ್ರಗತಿಯಿಲ್ಲ.

ಆಹಾರ ತಜ್ಞರು ಏನೇ ಹೇಳಲಿ— ಜನತೆಯ ಆಹಾರ ಅಭ್ಯಾಸಗಳನ್ನು ಬದಲಾಯಿಸಿದ್ದೇ ಆದರೆ, ನಾವು ಡಾಕ್ಟರುಗಳ ಸೇವೆಯನ್ನೂ ಹೊಂದಲೇ ಬೇಕಾದೀತು. ಡಾಕ್ಟರುಗಳೇನೂ ಧರ್ಮಾರ್ಥ ಸೇವೆಯೊಪ್ಪಿಸಲು ಬರುವವರಲ್ಲ. ಇಂದು ತೆರಿಗೆಗಳೂ, ಅಧಿಕ ಧಾರಣೆಗಳೂ ಹೆಚ್ಚಾಗಿ ಬಡವರಿಂದಲೇ ಬರುತ್ತವೆ. ಇಂಥ ಬಡವರು ಕಡಿಮೆ ತಿನ್ನಬೇಕೆಂದೂ, ಜನಸಂಖ್ಯೆ ತಗ್ಗಿಸಬೇಕೆಂದೂ ಬೋಧಿಸಲ್ಪಡುತಿದ್ದಾರೆ. ಜನಸಂಖ್ಯೆಯ ಹತೋಟಿಯ ವಿಷಯವಾಗಿ ಮಾತಾಡುತ್ತಿರುವುದು —ಈ ಕಾಲದ ಆಹಾರ ಅಭಾವಕ್ಕಾಗಲಿ ಇನ್ನೂ ಎರಡು ದಶಕಗಳ ವರೆಗಿನ ಕಾಲದ ವರೆಗಾಗಲಿ—ತಕ್ಕ ಉತ್ತರವಲ್ಲ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

S. C. 230/1965.

P. ಸೀತಾರಾಮ ಶೆಟ್ಟಿ --ವಾದಿ.

ಈಶ್ವರ ಪೂಜಾರಿ ಕಿಟ್ಟು ಪೂಜಾರಿ ಮಗ– ಪುತ್ತೂರು ತಾಲ್ಕು ಪಡ್ನೂರು ಗ್ರಾಮದ ನೆಲಪಾಲು ಎಂಬಲ್ಲಿ —ಪ್ರತಿವಾದಿ.

ಇವರಿಗೆ

ಪ್ರತಿವಾದಿಯಿಂದ ವಾದಿಗೆ ಬರ ಬೇಕಾದ ಡಿಮಾಂಡ್ ಪ್ರೋನೋಟಿನ ರೂ. 212-81 ಕ್ಕೆ ದಾವಾ ಹೂಡಿ ಅದರ ಕೃಪೇತು ನೋಟೀಸಿನ ವ್ಯಾದೆ ತಾ. 9–3–1966ಕ್ಕೆ ಇಟ್ಟಿರುವದರಿಂದ ಆ ವ್ಯಾದಗೆ ಪ್ರತಿವಾದಿಯು ತನ್ನ ಆಕ್ಷೇಪಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದು. ಇದಕ್ಕೆ ತಪ್ಪಿದರೆ ಅವರನ್ನು ಶಿವಾಯಿ ಎಂತ ಮಾಡಿ ಈ ದಾವೆಯನ್ನು ಮುಂದಿನ ವನ್ಕಿಯಿಂದ ಯುಕ್ತ ಕಂಡಂತೆ ತೀರ್ಮಾನಿಸಲಾದೀತು, ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

B. L. N. Rai, *B.A.B.L.*
Advocate for Plaintiff.

ಪುತ್ತೂರು, ತಾ. 22–2–1966.

ಕರ್ನಾಟಕ ಯಕ್ಷಗಾನ ನಾಟಕ ಸಭಾ
ಮಂಗಳೂರು

ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿದ ಕರ್ನಾಟಕ ಥಿಯೇಟರಿನಲ್ಲಿ
ತಾ. 10ರಿಂದ ಪ್ರತಿ ದಿನ ರಾತ್ರಿ 9-30ಕ್ಕೆ

ಪ್ರತಾಪ-ಜಯಂತಿ

ಎಂಬ ಪೌರಾಣಿಕ ಬ್ರಹ್ಮಾಂಡ ಪುರಾಣಾಂತರ್ಗತ ಕಥಾಭಾಗವನ್ನು ಅಭಿನಯಿಸುತ್ತಿರುವರು.

ಕಿಕ್ಕಿರಿದ್ದ ಜನಸಂದಣಿ!

ವಿಟ್ಲ ಬಾಬು ರಾಯರಿಂದ ಸೀನು ಸೀನರಿಗಳು

ಬಹುಮಾನ ವಿತರಣೆ

ಮಣಿಪಾಲ, ಫೆ. ೨೦–ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಟಿ.ಎ. ಪೈಯವರು ನಿನ್ನೆ ಇಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜಿನ ವಾರ್ಷಿಕ ಕ್ರೀಡೋತ್ಸವದಲ್ಲಿ ಬಹುಮಾನಗಳನ್ನು ವಿತರಣೆ ಮಾಡುತ್ತಾ ದಕ್ಷಿಣ ಕನ್ನಡ ಜಿಲ್ಲೆಗೆ ಕ್ರೀಡೆಗಳಲ್ಲಿರುವ ಕೀರ್ತಿಯನ್ನು ಹೆಚ್ಚಿಸಿರುವ ಈ ಕಾಲೇಜಿನ ಪಾತ್ರವನ್ನು ಪ್ರಶಂಸಿಸಿದರು.

ಬಹುಮಾನ ವಿಜೇತರನ್ನೂ, ಇತರ ಸ್ಪರ್ಧಿಗಳನ್ನೂ ಅವರು ಅಭಿನಂದಿಸುತ್ತಾ ಇಂತಹ ಸ್ಪರ್ಧೆಗಳಲ್ಲಿ ಸೋಲುವುದು ಅಥವಾ ಗೆಲ್ಲುವುದು ಮುಖ್ಯವಲ್ಲವೆಂದೂ, ಭಾಗವಹಿಸುವ ಹುರುಪು ಮುಖ್ಯವೆಂದೂ ಹೇಳಿದರು.

ಶ್ರೀ ಬಿ. ಎಚ್. ರವೀಂದ್ರನಾಥ ಪೈಯವರು ವೈಯಕ್ತಿಕ ಛಾಂಪಿಯನ್ ಶಿಪ್ ಗಳಿಸಿದರು. ಡಾ। ಕೆ. ಕಿರೀಟಿಯವರು ಶ್ರೀ ಪೈಯವರು ಸ್ವಾಗತಿಸಿದ ಬಳಿಕ ಶ್ರೀ ಮುದ್ದಣ್ಣ ಶೆಟ್ಟಿಯವರು ವರದಿ ಓದಿದರು. ಶ್ರೀ ಕಿರಣ ಹೆಗ್ಡೆಯವರು ವಂದನಾರ್ಪಣೆ ಮಾಡಿದರು.

ಶಿವರಾತ್ರಿ ದಿನಾಚರಣೆ

ಕಡಂಬಲ, ಫೆ. 18:– ಸ್ಥಳೀಯ ಬೋ. ಹಾ. ಎ. ಶಾಲೆಯಲ್ಲಿ ತಾ. 18ರಂದು ಮಹಾ ಶಿವರಾತ್ರಿ ದಿನಾಚರಣೆಯನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಅಂದು ಮಧ್ಯಾಹ್ನ ಊರವರ ನೆರವಿನಿಂದ ಶಾಲಾ ಮಕ್ಕಳಿಗೆಲ್ಲಾ ಮೃಷ್ಟಾನ್ನ ಭೋಜನವನ್ನೂ ನೀಡಲಾಯಿತು. ರಾತ್ರಿ ಶ್ರೀ ಕೊಳಂಬೆ ಪುಟ್ಟಣ್ಣ ಗೌಡರಿಂದ ಕವಿತಾವಾಚನ ಮತ್ತು ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳಾದ ಶ್ರೀ ಚೊಕ್ಕಾಡಿ ಸೀತಾರಾಮಯ್ಯ, ಪೆರ್ಲ ಎಸ್. ಕೃಷ್ಣ ಭಟ್, ಕೆ. ಕೆ. ರೈ, ಪುಟ್ಟಣ್ಣ ಗೌಡ, ಮಾರೂರು ಮಂಜುನಾಥ ಭಂಡಾರಿ, ಅತ್ತಾವರ ನಾರಾಯಣ ಶೆಟ್ಟಿ, ಕೆ. ಜಗನ್ನಾಥ ಶೆಟ್ಟಿ ಮೊದಲಾದ ಕಲಾವಿದರ ಕೂಡುವಿಕೆಯಲ್ಲಿ "ವಿಭೀಷಣ ನೀತಿ–ಅಂಗದ ಸಂಧಾನ"ವೆಂಬ ಯಕ್ಷಗಾನ ತಾಳಮದ್ದಳೆಯೂ ಯಶಸ್ವಿಯಾಗಿ ಜರಗಿತು. ಹಾಡುಗಾರಿಕೆಯಲ್ಲಿ ಮೂಡಬಿದರೆಯ ಶ್ರೀ ಪುಂಡಲೀಕ ಶೆಣೈ ಮತ್ತು ಮೃದಂಗ ವಾದಕರಾಗಿ ಶ್ರೀ ಅಂತಯ್ಯ ಬಲಿಪರು ಭಾಗವಹಿಸಿದ್ದರು. ಕೊನೆಯಲ್ಲಿ ಶ್ರೀ ಕೆ. ನಾರಾಯಣ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಸಂಗೀತ ಮತ್ತು ಲಲಿತಕಲಾ ಶಾಲಾ ವಾರ್ಷಿಕೋತ್ಸವ

ಉಡುಪಿ, ಎಕಾಡಮಿಯ ಸಂಗೀತ ಹಾಗೂ ಲಲಿತಕಲಾ ಶಾಲೆಯ ಎಂಟನೆ ವಾರ್ಷಿಕೋತ್ಸವವು ಇಲ್ಲಿಯ ಡಾ। ಯು. ಸುಂದರರಾಮ ಪೈ ಸ್ಮಾರಕ ರಂಗಮಂಟಪದಲ್ಲಿ ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಎಕಾಡಮಿ ರಿಜಿಸ್ಟ್ರಾರರಾದ ಡಾ। ಟಿ. ಮೋಹನ ಪೈಗಳವರು ಸ್ವಾಗತ ಭಾಷಣ ಮಾಡುತ್ತಾ ಸಂಸ್ಥೆಯು ಸಾಧಿಸಿದ ಪ್ರಗತಿಯ ಅವಲೋಕನ ಮಾಡುವುದು ಈ ವಾರ್ಷಿಕೋತ್ಸವದ ಉದ್ದೇಶವಾಗಿದೆಯೆಂದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಶ್ರೀಧರ ಭಟ್ಟರು ಶಾಲಾ ವರದಿಯೊಪ್ಪಿಸಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಟಿ. ಎ. ಪೈಯವರು ಇಂದು ಜನ ಸಾಮಾನ್ಯರಲ್ಲಿ ಅಡಗಿದ ಸುಪ್ತ ಕಲಾ ಪ್ರತಿಭೆಗೆ ತಕ್ಕ ಪ್ರೋತ್ಸಾಹ ದೊರಕಬೇಕು. ಇದು ಕೇವಲ ಶ್ರೀಮಂತರಿಗೆ ಮಾತ್ರ ಮೀಸಲಾಗಿರುವ ವಿಷಯವಲ್ಲವೆಂದರು. ಹೆಚ್ಚು ಮಕ್ಕಳಿಗೆ ಸಂಗೀತ ನೃತ್ಯಗಳು ಒಂದು ಅರ್ಹತೆಯ ಸಾಧನವಾಗಿದೆ. ಮನುಷ್ಯನು ಸಮಸ್ಯೆಯನ್ನು ಎದುರಿಸುವುದಕ್ಕೂ ಮನಸ್ಸಿಗೆ ಉಲ್ಲಾಸ, ಶಕ್ತಿ ಚೈತನ್ಯ ನೀಡುವುದಕ್ಕೂ ಲಲಿತಕಲೆಗಳ ಆಸಕ್ತಿ ಅವಶ್ಯವೆಂದು ಹೇಳಿದರು. ಶ್ರೀ ಮರೋಳಿಯವರಿಂದ ಧನ್ಯವಾದ ಸಮರ್ಪಣೆಯಾದ ನಂತರ ಸಂಗೀತ, ನೃತ್ಯಾದಿ ಕಾರ್ಯಕ್ರಮಗಳು ಕಲಾಪೂರ್ಣವಾಗಿ ನಡೆದುವು.

READ &
ADVERTISE IN
NAVAYUGA WEEKLY

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಜನಪ್ರಿಯ ಕವಿ ಕೆ. ಎಸ್. ನರಸಿಂಹ ಸ್ವಾಮಿ— ಲೇಖಕರು: ಶ್ರೀ ಎಸ್. ದಿವಾಕರ. ಪ್ರಕಾಶಕರು: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ. ಪುಟಗಳು: ೧೯೯. ಬೆಲೆ ರೂ. ೨.

ಹೊಸಗನ್ನಡದ ವರಕವಿಗಳಲ್ಲಿ ಒಬ್ಬರಾದ ಕೆ. ಎಸ್. ನರಸಿಂಹಸ್ವಾಮಿಯವರ ಕಾವ್ಯರಸದ ಪರಿಚಯವನ್ನು ಮಾಡಿಕೊಡುವ ಉತ್ತಮ ಗ್ರಂಥವಿದು. ಒಬ್ಬ ಕವಿಯ ಎಲ್ಲ ಕೃತಿಗಳ ಸಮೀಚೀನ ಅವಲೋಕನ ಕನ್ನಡದಲ್ಲಿ ಅತ್ಯಪೂರ್ವ. ಇಂತಹ ದೃಷ್ಟಿಯಲ್ಲಿ ಈ ಕೃತಿಯು ನಿಜಕ್ಕೂ ಸ್ವಾಗತಾರ್ಹ; ಪ್ರಾಯೋಗಿಕ.

ಮೈಸೂರ ಮಲ್ಲಿಗೆಯಿಂದ ಕನ್ನಡದಲ್ಲಿ ಕಂಪಿನ ಘಮಳ ತುಂಬಿದ ಈ ಕವಿ ೧೯೪೦ರ ಸುಮಾರಿನಿಂದಲೇ ಕಾವ್ಯರಚನೆಯಲ್ಲಿ ತೊಡಗಿದ್ದಾರೆ. ಐರಾವತ, ದೀಪದ ಮಲ್ಲಿ, ಇರುವಂತಿಗೆ, ಉಂಗುರ, ಶಿಲಾಲತೆ, ಮನೆಯಿಂದ ಮನೆಗೆ, ಉಪವನ ಮೊದಲಾದುವು ಅವರ ಕವನ ಸಂಕಲನಗಳು. ಇವರ ಕವನಗಳು ಜನಜೀವನಕ್ಕೆ ಅತಿ ಹತ್ತಿರವು. ಗಂಡು, ಹೆಣ್ಣು, ಪ್ರೇಮ, ಸಂಸಾರ— ಇವೇ ಅವರು ಮುಟ್ಟಿ ತೋರಿಸುವ ವಸ್ತುಗಳು. ಶೃಂಗಾರದಂತೆಯೇ ಕರುಣೆಗೂ ಇವರಲ್ಲಿ ಸ್ಥಾನವಿದೆ. ಅಲ್ಲಲ್ಲಿ ವ್ಯಕ್ತಿಚಿತ್ರಣವು ಪುಟನಿಗೆದರೆ, ಹಾಸ್ಯವಿಡಂಬನೆಗಳಿಗೂ ಸ್ಥಾನವಿದೆ.

ಕನ್ನಡದಲ್ಲೇ ತೇರ್ಗಡೆಯಾಗದ—
ಪಂಡಿತ ಪುತ್ರರ ಪಡೆ ನಾವು||

ಎಂಬ ಹಿಂದಿನ ಕಾಲದ ಹುಡುಗರ ನುಡಿಯಲ್ಲಿ ಎಂತಹ ವಿಡಂಬನೆಯಿದೆ!

ಕನ್ನಡ ಮಾಧ್ಯಮವಾಗಲೆ ಬೇಕು
ಮೊದಲೀ ಕವಿಗಳಿಗೆ- ಕನ್ನಡ ಕವಿಗಳಿಗೆ||

ಎಂಬಲ್ಲಿ ವಿಡಂಬನೆಯೊಡನೆ ಕವಿಯ ದೇಶ ಭಾಷಾ ಪ್ರೇಮವೂ ವ್ಯಕ್ತವಾಗುತ್ತದೆ.

ಇಂತಹ ಹಲವಾರು ಉದ್ಧರಣಗಳ ಸಹಾಯದಿಂದ ಕೆ. ಎಸ್. ನ. ರವರ ಕೃತಿಗಳ ಅವಲೋಕನ ಮಾಡಿದ್ದಾರೆ ಶ್ರೀ ದಿವಾಕರರು. ಈ ಅವಲೋಕನವು ಉತ್ತಮವಿದೆ; ಸಾಮಂಜಸ್ಯ ಪೂರ್ಣವಿದೆ. ಶ್ರೀಯುತರ ಪರಿಶ್ರಮವು ಕನ್ನಡದಲ್ಲಿ ಈ ಬಗೆಯ ತುಲನಾತ್ಮಕ ಗ್ರಂಥಗಳ ಸೃಷ್ಟಿಬೀಜಕ್ಕೆ ನೀರು ಹೊಯ್ಯುವಂತಾಗಲಿ. ಬರಿಯ ಕಥೆ, ಕಾದಂಬರಿ, ಕವನಗಳನ್ನು ಓದಿಯೇ ತೃಪ್ತರಾಗುವ ಕನ್ನಡಿಗರು ಇಂತಹ ಗ್ರಂಥಾಧ್ಯಯನದಲ್ಲೂ ಆಸಕ್ತಿ ವಹಿಸಲಿ.

ಅನಂತವ್ರತ ಕಥೆ:—ಬರೆದವರು: ದಿ| ಮಯ್ಯವಟಿ ವೆಂಕಟರಮಣಯ್ಯ. ಪ್ರಕಾಶನ: ವಿಜಯ ಸಾಹಿತ್ಯ ಮಾಲೆ, ಸುರತ್ಕಲ್ಲು, ದ. ಕ. ಪುಟಗಳು: ೧೫. ಬೆಲೆ: ರೂ. ೦—೩೦.

ಹಿಂದೂ ವ್ರತಗಳಲ್ಲಿ ಅನಂತ ವ್ರತ ವಿಶಿಷ್ಟವಾದುದು. ಭಾದ್ರಪದ ಶುದ್ಧ ೧೪ ಕ್ಕೆ ಇದನ್ನು ಆಚರಿಸುತ್ತಾರೆ. ಏಳು ಹೆಡೆಯ ಅನಂತನನ್ನು ದರ್ಭೆಗಳಿಂದ ನಿರ್ಮಿಸಿ ಪೂಜಿಸಿ, ಕೈಗೆ ದೋರಕ (ದಾರ) ವನ್ನು ಕಟ್ಟುತ್ತಾರೆ. ಅನಂತರ ಕತೆ ಹೇಳುತ್ತಾರೆ. ಹಿಂದೂ ವ್ರತಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಹಿನ್ನೆಲೆಯಿದೆ. ಇವುಗಳ ಸತ್ಯಾಸತ್ಯತೆಯನ್ನು ವಿಮರ್ಶಿಸುವುದಕ್ಕಿಂತ ನಿಷ್ಠೆಯನ್ನು ಹೆಚ್ಚಿಸುವುದೇ ಈ ಹಿನ್ನೆಲೆಯ ಕಥೆಗಳ ಉದ್ದೇಶವೆಂದರೆ ಸರಿಯಾದೀತು.

ಪ್ರಕೃತ ಗ್ರಂಥದಲ್ಲಿ ೭೩ ಭಾಮಿನೀಷಟ್ಪದಿಗಳಿವೆ. ಪಾಂಡವರು ಕಾಮ್ಯಕವನದಲ್ಲಿದ್ದಾಗ ಶ್ರೀಕೃಷ್ಣನು ಧರ್ಮರಾಯನ ಬಯಕೆಯಂತೆ ಕಷ್ಟ ಪರಿಹಾರಕ್ಕಾಗಿ ಅನಂತವ್ರತವನ್ನು ಆಚರಿಸೆಂದು ಸಲಹೆಮಾಡಿ, ಅದರ ಆಚರಣೆಯಿಂದ ಸತ್ಫಲ ಪಡೆದವರ ಕಥೆಯನ್ನು ಹೇಳುತ್ತಾನೆ. ಸತ್ಯನಾರಾಯಣ ವ್ರತ'ದ ಕಥೆಯಂತೆಯೇ ಇದೂ ರೋಚಕವಿದೆ.

ಕಾವೇರಿ ಮಹಾತ್ಮ್ಯೆ, ವೆಂಕಟಗಿರಿ ಮಹಾತ್ಮ್ಯೆ ಎಂಬ ಷಟ್ಪದೀ ಕಾವ್ಯಗಳನ್ನು ಬರೆದ ಮಯ್ಯವಟಿಯವರು ಯಕ್ಷಗಾನ, ಹಾಡುಗಳನ್ನೂ ಬರೆದಿದ್ದಾರೆ. ಅನಂತ ವ್ರತ ಕಥೆಯ ಬಂಧವನ್ನು ನೋಡುವಾಗ ಇವರು ವಿದ್ವಾಂಸರೆಂದು ಗೊತ್ತಾಗುತ್ತದೆ:

ಸೊಲ್ಲಿಸದಿರೇನೇನ ಬರಿದೇ
ಪೊಳ್ಳತಲ್ಲೆಂತೆಂಬುದೆಂದಿಗು
ಸಲ್ಲಲಿತ ಭಕ್ತಿಯಲಿ ಪೂಜಿಸುವವರಿಗಿಷ್ಟವನು ||
ನಿಲ್ಲದೀವಾನಂತ ಸೂತ್ರವ
ವಲ್ಲಭನೆ ನಾಕಟ್ಟಿಕೊಂಡಿಹೆ
ಸುಳ್ಳನಾಡೆನು ಸತ್ಯವೀ ನುಡಿಯೆಂದಳಾ ಶೀಲೆ ||

ಛಂದಸ್ಸು ತಪ್ಪಿಲ್ಲ, ಷಟ್ಪದಿಯಲ್ಲಿ ಓಜವಿದೆ, ವೇಗವೂ ಇದೆ. ಶೈಲಿ, ಪಾಕಗಳು ಮೋಹಕವಾಗಿದೆ. 'ಸುಳ್ಳನಾಡೆನು' ಎಂದ ಮೇಲೆ 'ಸತ್ಯವೇ ನುಡಿ' ಎಂದು ಹೇಳುವುದು ಪುನರುಕ್ತಿಯಂತೆ ಕಂಡರೂ ಕ್ರೋಧಿತ ಪತಿಯನ್ನು ಸಮಾಧಾನ ಮಾಡಲು, ತನ್ನ ಅಭಿಪ್ರಾಯವನ್ನು ಸುಸ್ಪಷ್ಟಗೊಳಿಸಲು ಅತ್ಯಗತ್ಯವೇ ಇದೆ.

ಶ್ರೀ ಕೆ. ವೆಂಕಟರಾಯಾಚಾರ್ಯರು ಈ ಗ್ರಂಥವನ್ನು ಸಂಗ್ರಹಿಸಿ ಪ್ರಕಟಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಅವರ ಪ್ರಯತ್ನ ಸಾಹಸಗಳಿಗೆ ಕನ್ನಡಿಗರಿಂದ ಮನ್ನಣೆ ಸಿಗುವಂತಾಗಲಿ.

ಮಕ್ಕಳ ಕಹಳೆ: ಬರೆದವರು: 'ವನವಿಹಾರಿ" ಸಂಪಾದಕರು: ಬಿ. ಎಸ್. ಲಕ್ಷ್ಮಣ ಶರ್ಮಾ. ಪ್ರಕಾಶನ: ಸರಳ ಸಾಹಿತ್ಯ ಮತ್ತು ವಿಜ್ಞಾನ ಮಾಲೆ (?). ಪುಟಗಳು: ೪೪. ಬೆಲೆ: ರೂ. ೦—೬೫.

'ವನವಿಹಾರಿ' ಕಾವ್ಯ ನಾಮದಲ್ಲಿ ಶ್ರೀ ಬ. ನ. ಸುಂದರರಾಯರು ತಾವು ವಿದ್ಯಾರ್ಥಿಯಾಗಿರುವಾಗ ಬರೆದ, ಮತ್ತು ಮುಂದೆ ವಿದ್ಯಾರ್ಥಿಗಳಿಗಾಗಿಯೇ ಬರೆದ ೨೭ ಕವನಗಳು ಇಲ್ಲಿ ಬೆಳಕು ಕಂಡಿವೆ. ದೇಶಭಕ್ತಿ, ರಾಷ್ಟ್ರಾಭಿಮಾನ, ಪ್ರಕೃತಿ ಸೌಂದರ್ಯ, ನೀತಿಗಳಿಗೆ ಸಂಬಂಧಿಸಿದ ಕೆಲವು ಕವಿತೆಗಳೂ ಇಲ್ಲಿವೆ.

'ವೀರ ಕನ್ನಡಿಗರೇ ಓಡಿ ಬನ್ನಿ
ಧೀರ ಕುಲರಸಿಕರೇ ಓಡಿ ಬನ್ನಿ
ನಾಡಕರೆ ಬಂದಿಹುದು, ನಾಡಕರೆ ಬಂದಿಹುದು ||

ಇದು 'ಮಕ್ಕಳ ಕಹಳೆ'ಯ ಮೊದಲ ಗೀತೆ.

ಮಕ್ಕಳ ಮನಸ್ಸನ್ನು ಸೆಳೆಯಲು ಕವಿತೆಯಲ್ಲಿ ಸಂಗೀತವನ್ನು ಬೆರಸುವುದು ಉಪಯುಕ್ತವೇನೋ ಹೌದು. ಆದರೆ, ಪ್ರಾಸಲಯಗಳಿಗೆ ಮಕ್ಕಳ ನಾಲಗೆ ಹೊಂದಿಕೊಳ್ಳುವಷ್ಟು ಸಂಗೀತಕ್ಕೆ ಒಲಿಯಲಾರದು. ಈಗಾಗಲೇ ಕನ್ನಡದ ಲೇಖಕ ವರ್ಗದಲ್ಲಿ ಸೇರಿದ ಬ. ನ. ಸುಂದರರಾಯರು ಕವಿತೆ ಬರೆಯುವುದನ್ನು ಕುಸುದೂರ ಮಾಡಿದ್ದಾರೆಂದು ತೋರುತ್ತದೆ. ಶ್ರೀಯುತರ ಲೇಖನಿಯ ಕಸುಬಿನ ಪ್ರಯೋಜನ ಕನ್ನಡಿಗರಿಗೆ ಪರಿಪೂರ್ಣವಾಗಿ ಸಿಗುವಂತಾಗಲಿ.

— ಗೋರಾ.

ಚಂದಾದಾರರಲ್ಲಿ ವಿನಂತಿ.

ಕಳೆದ ಅಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 45ನೆಯ ಹೊಸ ವರ್ಷಾರಂಭವಾಗಿದೆಯಷ್ಟೆ! ಈ ಅವಧಿಗೆ ಯೂ ಅನಂತರ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇವೆ. ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು. ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ. ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕ್ರಮಶಃ ವಿ. ಪಿ. ಮಾಡಬೇಕಾಗುತ್ತದೆ. ಅದನ್ನು ದಯಮಾಡಿ ಸ್ವೀಕರಿಸುವಂತೆ ಕೇಳಿಕೊಳ್ಳುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ — ಸಂಪಾದಕ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. E. P. 103/65, O. S. 179/64.

ಕನುಲಮ್ಮ ಕೂಡಾ —ಅರ್ಜಿದಾರರು

ಎಚ್ಚಮ್ಮ, ರಾಘವ ಅಂಬ್ರಣಿತ್ತಾಯರ ವಿಧವೆ, ಬಂಟ್ವಾಳ ತಾಲ್ಲೂಕು ಪಿಲತ್ತಬೆಟ್ಟು ಗ್ರಾಮ ನಾಯಿನಾಡು ಎಂಬಲ್ಲಿ —ಎದ್ರಿ.

ಮಿಮಗೀಗ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಅರ್ಜಿದಾರರು ಮೇಲ್ಕಂಡ ಡಿಕ್ರಿ ಮೇಲೆ ನಡ್ಸಿದ ಮೇಲಿನ ಅಮ್ಲುಜಾರಿಯಲ್ಲಿ ತಮಗೆ ಬರ ಡಿಕ್ರಿ ಆವೇಜುಗಳ ವಸೂಲಿಬಗ್ಗೆ—ನೀವು ತಾರೀಕು 14-2-62ರಲ್ಲಿ ಪಿಲಾತಬೆಟ್ಟು ಗ್ರಾಮದ ಕೇಶವ ಭಟ್ಟರ ಮಗ ಕೃಷ್ಣ ಭಟ್ಟ ವಗೈರೆಯರಿಂದ ರೂ. 1400/ಕ್ಕೆ ಬೆಳ್ತಂಗಡಿ ಸ. ರಿ. ಆಫೀಸಿನ ರಿ. ನಂಬ್ರ 44/62ನೇಗೆ ಬಸ್ಸಿಕೊಂಡ ತೋರಿದು ದಸ್ತಾವೇಜಿನ ಹಕ್ಕನ್ನು ಜಪ್ತಿ ಪಡಿಸಿರುವುದರಿಂದ ನೀವು ಇನ್ನೊಂದು ಹುಕುಂ ಕೊಡುವ ತನಕ ಸದ್ರಿ ಅದನನ್ನು ಪರಸ್ವಾಧೀನ ವಗೈರೆ ಮಾಡಬಾರದಾಗಿ ಈ ಮೂಲಕ ನಿರ್ಬಂಧಿಸಲ್ಪಟ್ಟಿರುವುದಾಗಿ ತಿಳಿಸಿಯದೆ, ಸದ್ರಿ ಅಮ್ಲುಜಾರಿಯು ತಾ. 14-3-66ಕ್ಕೆ ನಿಂಮು ಹಾಜರಾತಿ ಬಗ್ಗೆ ಸಹ ಇರುವುದಾಗಿ ಈ ಮೂಲಕ ತಿಳಿಸೋಣಾಗಿದೆ.

(Sd.) B. Ishwara Bhat
Advocate for Plantiff.

ಬೆಳ್ತಂಗಡಿ, ತಾ. 22-2-66

ಇದೀಗ ಪ್ರಕಟವಾಗಿದೆ—

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎಸ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ............................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೋ, ಪಾಲುಕೋಟೆ, ಉಡುಪಿ.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಿಶ್ವ ಹಿಂದೂಗಳ ಸಂಗಮ—ವಿಶ್ವ ಹಿಂದೂ ಪರಿಷತ್ತು

(ಐದನೇ ಪುಟದಿಂದ)

ಹಿಂದೂ ಧರ್ಮವೇ ಭಾರತದ ರಾಷ್ಟ್ರ ಧರ್ಮವೆಂದು ಭಾರತ ಸರಕಾರ ಘೋಷಿಸ ಬೇಕೆಂದೂ, ಅದು ಘೋಷಿಸುವಂತೆ ವಿಶ್ವಹಿಂದೂ ಪರಿಷತ್ತು ಪ್ರಯತ್ನಿಸಬೇಕೆಂದು ಶ್ರೀ ಆತ್ಮಾನಂದ ಸ್ವಾಮೀಜೀಯವರು ತಿಳಿಸಿದರು. ಭಾರತ ಹಿಂದೂ ರಾಷ್ಟ್ರದಲ್ಲಿ ಅನ್ಯ ರಾಷ್ಟ್ರಗಳಿಂದ ಮತ ಪ್ರಸಾರಕ್ಕಾಗಿ ಇಲ್ಲಿಗೆ ಬರುವವರ ಸಂಖ್ಯೆ ಕಮ್ಮಿಯಾದೀತೆಂಬುದು ಅವರ ಅಭಿಪ್ರಾಯ.

ಹಿಂದೂತ್ವವೇ ಮೂಲ ಧರ್ಮವಿರುವ ಕಾರಣ ಅದರ ಪ್ರಚಾರ ಇಂದು ತೀವ್ರಗತಿಯಲ್ಲಿ ನಡೆಯ ಬೇಕೆಂದು ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯರ ಸಂದೇಶ ತಂದಿದ್ದ ಮಹನೀಯರು ಹೇಳಿದರು. ವಿಶ್ವಹಿಂದೂ ಪರಿಷತ್ತಿನ ಸಮ್ಮೇಳನದ ಕಾರ್ಯಕಲಾಪಗಳು ಮುಗಿದೊಡನೆ ಐರೋಪ್ಯ ದೇಶಗಳಿಗೂ ದಕ್ಷಿಣ ಆಫ್ರಿಕಾಕ್ಕೂ ಮತಪ್ರಚಾರಕ್ಕಾಗಿ ಹೋಗುತ್ತೇನೆಂದೂ ಅವರು ತಿಳಿಸಿದರು.

ಹಿಂದೂಧರ್ಮ ಬಹಳ ವಿಚಿತ್ರವಿದೆ ಅದೇನೆಂಬುದನ್ನು ಕಂಡುಕೊಳ್ಳುವದೂ ಕಷ್ಟದ ಕೆಲಸವಿದೆ. ಪರಮಾತ್ಮನನ್ನು ಪಡೆಯಲಿಕ್ಕೆ ಹೋಗಲು ಇದೇ ಒಂದು ದಾರಿಯೆಂದು ಕ್ರಿಸ್ತೀಯ ಹಾಗೂ ಇಸ್ಲಾಮ್ ಮತಗಳು ಹೇಳಿದಲ್ಲಿ, ಎಲ್ಲಾ ದಾರಿಗಳು ಪರಮಾತ್ಮಸತ್ವ ಒಯ್ಯುತ್ತವೆಂದು ಹಿಂದೂ ಧರ್ಮ ಹೇಳುತ್ತಿದೆ. ಈ ವಿಶಾಲ ಮನೋಭಾವನೆಯನ್ನು ಸಂಕುಚಿತ ಮನೋಭಾವನೆಯವರು ತಪ್ಪಾಗಿ ತಿಳಿದುಕೊಂಡು ಅದರ ಮೇಲೆ ಆಕ್ರಮಣ ನಡೆಸುತ್ತಿರುವದರಿಂದ ಹಿಂದೂ ಧರ್ಮ ಇಂದು ಸಂಕಷ್ಟದಲ್ಲಿ ಸಿಲುಕಿಕೊಂಡಿದೆ. ಹಾಗಿರುವದರಿಂದ ಭಿನ್ನ ಭಿನ್ನ ಭಾವನೆಗಳನ್ನಿಟ್ಟುಕೊಂಡಿರುವ ಎಲ್ಲಾ ಸ್ವಾಮೀಜೀಯವರು ಒಂದೇ ವೇದಿಕೆಯ ಮೇಲೆ ಒಂದೇ ಯೋಚನೆಯಿಂದ ಸೇರಿ ವಿಚಾರ ವಿನಿಮಯ ನಡೆಸಿ ಕಾರ್ಯ ಪ್ರವೃತ್ತರಾಗುವ ಕಾಲ ಒಂದು ಬಂದಿರುತ್ತದೆ. ಈ ಸ್ವಾಮೀಜೀಯವರೆಲ್ಲರನ್ನೂ ಒಂದುಗೂಡಿಸುವಂತಹ ಮಹಾನ್ ಕಾರ್ಯವನ್ನು ಮಾಡಲಿಕ್ಕಾಗಿಯೇ ಇದೆ ವಿಶ್ವಹಿಂದೂ ಪರಿಷತ್ತೆಂದು ಶ್ರೀ ಅದ್ವೈತಾನಂದರು ಅರುಹಿದರು.

ಕೊನೆಯಲ್ಲಿ ತುಕಡೋಜಿ ಮಹಾರಾಜರು ಸಮಸ್ಯೆ ಅವಶ್ಯಕತೆಗಳ ಕುರಿತು ತಿಳಿಯಪಡಿಸಿ ಅದಕ್ಕಾಗಿ ವಿಶ್ವಹಿಂದೂ ಪರಿಷತ್ತು ಅದೇನು ಮಾಡಲಿಕ್ಕಾಗಿ ಇದೆಯೆಂಬುದನ್ನು ವಿವರಿಸಿದರು. ಪ್ರಪಂಚದಲ್ಲಿ ನಿಜವಾಗಿರುವ ಒಂದೇ ಒಂದು ಧರ್ಮ, ಮಿಕ್ಕವೆಲ್ಲವೂ ಮತಗಳೆಂದು ಹೇಳಿದ ಸಂತರು ಆ ದೃಷ್ಟಿಯಿಂದ ಇಂದು ಎಲ್ಲರನ್ನೂ ಹಿಂದೂಗಳನ್ನಾಗಿ ಮಾಡಬೇಕಾಗಿದೆಂದರು. ಅದನ್ನು ಬಿಟ್ಟು ವೇದಿಕೆಯ ಮೇಲೆ ಸ್ವಾಮೀಜೀಯವರು ಭಾಷಣ ಬಿಗಿಯುತ್ತ ಹೋದಲ್ಲಿ ಅನ್ಯಮತ ಪ್ರಚಾರಕರು ತಮ್ಮ ಕೆಲಸ ಮುನ್ನಡೆಸುತ್ತಾ ಹೋಗುತ್ತಾರೆ. ಅದನ್ನು ತಡೆಗಟ್ಟಲು, ದೇಹದ ಅನೇಕಾನೇಕ ಅಂಗಗಳಂತಿವೆ ಭಾರತದ ಮತ-ಪಂಥಗಳೆಂಬುದನ್ನು ತಿಳಿದುಕೊಂಡು ನಾವೊಂದು ದೇಹದಂತೆ ಎದ್ದು ನಿಲ್ಲಬೇಕೆಂದವರು ಭಾರತೀಯರಿಗೆ ಕರೆ ಇತ್ತರು.

ಶಾಲೆಗಳಲ್ಲಿ ಸಂಸ್ಕೃತ ಭಾಷೆ ಕಡ್ಡಾಯ ವಿಷಯವಾಗಿರಬೇಕೆಂಬ ತೀರ್ಮಾನವೂ ಸಭೆಯ ಮುಂದಕ್ಕೆ ಬಂದು, ಎಲ್ಲರೂ ಅದಕ್ಕೆ ಒಪ್ಪಿಗೆಯನ್ನಿತ್ತು, ಅದಕ್ಕಾಗಿ ಪರಿಷತ್ ಪ್ರಯತ್ನಿಸಬೇಕೆಂದಾಯಿತು. ಅಲ್ಲದೆ ಪ್ರತಿವರ್ಷ ಭಾರತದ ಲೋಕ ಹಾಗೂ ರಾಜ್ಯ ಸಭೆಗಳ ಜಂಟಿ ಸಭೆಯಲ್ಲಿ ರಾಷ್ಟ್ರಾಧ್ಯಕ್ಷರು ಸಂಸ್ಕೃತ ಭಾಷೆಯಲ್ಲೇ ಭಾಷಣವೀಯಬೇಕೆಂಬ ತೀರ್ಮಾನವಾಯಿತು. ಈ ನಿರ್ಣಯಗಳ ಮೇಲೆ ನಾಗಪುರದ ಪ್ರಾಧ್ಯಾಪಕ ವೇರ್ಣೇಕರ್ ಹಾಗೂ ನೇಪಾಲದ ತ್ರಿಭುವನ ವಿಶ್ವವಿದ್ಯಾಲಯದ ಉಪ-ಕುಲಪತಿ ಶ್ರೀ ರುದ್ರರಾಜ ಪಾಂಡೇಯ ಮತ್ತು ಗುಜರಾಥಿನ ಶ್ರೀ ಕೇಶವ ಶಾಸ್ತ್ರೀಜಿಯವರು ಮಾತಾಡಿದರು.

ಮಧ್ಯಾಹ್ನ ಪ್ರತ್ಯೇಕ ಸಂಸ್ಕೃತ ಸಮ್ಮೇಳನವೂ ನಡೆಯಿತು. ಶ್ರೀಮೂರ್ಕರ್ ಹಾಗೂ ಶ್ರೀ ಪ್ರಭುದತ್ತ ಬ್ರಹ್ಮಚಾರಿಯವರು ಗೋವಧೆಯನ್ನೇತಕ್ಕೆ ನಿಷೇಧಿಸಬೇಕೆಂಬ ವಿಷಯ ತಿಳಿಯಪಡಿಸಿದರು.

ಹಿಂದೂ ಸಮಾಜದ ಸರ್ವ ಸಂಪ್ರದಾಯಸ್ಥರೆದುರು ಇರುವ ಮೂಲಭೂತ ಸಿದ್ಧಾಂತ ಹಾಗೂ ಆದರ್ಶವೆಂಬ ವಿಷಯದ ಮೇಲೆ ಜಗದ್ಗುರು ಮಾಧವಾಚಾರ್ಯಜೀ ಮಾತಾಡಿದರು. ಮಹಾರಾಷ್ಟ್ರದಲ್ಲಿರುವ ಮಸೂರಾಶ್ರಮದ ಬ್ರಹ್ಮಚಾರಿ ದತ್ತಮೂರ್ತಿ, ತ್ರಿಪುರದ ಮಹಾರಾಜ ಕುಮಾರ್ ಹಾಗೂ ಪುರಿಯ ಜಗದ್ಗುರು ಶ್ರೀ ಶಂಕರಾಚಾರ್ಯರವರು ಮುಗ್ಧ ಹಿಂದೂಗಳನ್ನು ಕ್ರಿಸ್ತೀಯ ಮತ ಪ್ರಸಾರಕರು ಹೇಗೆ ತಮ್ಮ ಬುಟ್ಟಿಯೊಳಗೆ ಹಾಕಿಕೊಂಡು ಭಾರತೀಯತೆಯ ಬುಡಕ್ಕೆ ಸುರಂಗ ಇಡುತ್ತಿದ್ದಾರೆಂಬುದನ್ನು ತಮ್ಮ ಅನುಭವ ಹಾಗೂ ಉದಾಹರಣೆಗಳ ಮೂಲಕ ತಿಳಿಸಿದರು. ಹೀಗೆ ಪತಿತರಾದರವನ್ನುದ್ಧರಿಸಲು ಹೇಗೆ ಸಾಧ್ಯವೆಂಬುದನ್ನು ಕಂಡುಕೊಳ್ಳಲು ಒಂದು ಸಭೆಯನ್ನು ರಚಿಸಲು ಪರಿಷತ್ತೂ ನಿರ್ಣಯಿಸಿತು. ಈ ಪತಿತರು ಮತಗೆಟ್ಟವರಾಗುವದಿಲ್ಲವೆಂದೂ ಅವರಿಗೆ ಪ್ರಾಯಶ್ಚಿತ್ತ ಮಾಡಿಸಿ ನಮ್ಮ ಸಾಲಿಗೇ ಸೇರಿಸಿಕೊಳ್ಳಬೇಕೆಂದು ಜಗದ್ಗುರು ಪುರಿ ಪೀಠಾಧೀಶ ಶಂಕರಾಚಾರ್ಯರವರು ತಿಳಿಸಿದರು.

ಅಂದು ರಾತ್ರಿ ಕಲ್ಕತ್ತದ ಪ್ರಾಚ್ಯವಾಣಿಯವರ 'ಭಾರತ ವಿವೇಕ'ವೆಂಬ ಸಂಸ್ಕೃತ ನಾಟಕದ ಪ್ರದರ್ಶನವಿತ್ತು. ಅದನ್ನು ಅಣಿಗೊಳಿಸಿದವರು ಡಾ। ರಾಮ ಚೌಧರಿಯವರು.

ಜನವರಿ ದಿನಾಂಕ ಇಪ್ಪತ್ತನಾಲ್ಕರಂದು ಬೆಳಗ್ಗೆ ಮಂಟಪ ಪ್ರನಿಧಿಗಳಿಂದ ತುಂಬಿಹೋಗಿತ್ತು. ಅದು ಹಿಂದೂ ಸಮಾಜದ ಗೌರವಪೂರ್ಣ ಪರಂಪರೆಯ ಕುರಿತು ಶ್ರೀ ತುಕಡೋಜಿ ಮಹರಾಜ್ ಹಾಗೂ ಶ್ರೀ ಚಿನ್ಮಯಾನಂದಜೀಯವರು ಮಾತಾಡಿದರು.

ವಿಶ್ವಹಿಂದೂ ಪರಿಷತ್ತೇಕೆ ಹೇಗೆ ನಿರ್ಮಾಣವಾಯಿತೆಂಬುದನ್ನು ಶ್ರೀ ಮಾಧವ ಸದಾಶಿವ ರಾವ್ ಗೋಳ್ವಲ್ಕರರವರು ಸ್ಪಷ್ಟಪಡಿಸಿದರು. ಹಲವಾರು ಮಹಾಪುರುಷರುಗಳ ಮಾಧವ ಅಮೃತ ವಚನವನ್ನು ಕೇಳಿರುವ ಪ್ರತಿನಿಧಿಗಳೆಲ್ಲರೂ ತಮ್ಮಲ್ಲಿದ್ದ ಭಿನ್ನಭಾವನೆಗಳನ್ನು ತೊಡೆದು ಹಾಕಿ, ಭುಜಕೊಟ್ಟು ಭುಜಕ್ಕೆ ಒಂದಾಗಿ ಹಿಂದೂ ಸಂಘಟನೆಗೆ ಮುಂದಾಗಲೇ ಬೇಕೆಂದು ಒತ್ತಿ ಹೇಳಿದರವರು.

ನಾವು ಅದೇನು ಮಾಡಬೇಕೆಂಬ ಸ್ವಷ್ಟ ಚಿತ್ರವನ್ನು ಕಣ್ಮುಂದೆ ನಿಲ್ಲಿಸಿ ಕೊಳ್ಳಲಿಕ್ಕಾಗಿ ಮಾತ್ರ ಇಂತಹ ಸಮ್ಮೇಳನದ ಅವಶ್ಯಕತೆ. ಕಾರ್ಯರಂಗವಿರುವ ಮಂಟಪದ ಹೊರಗೆ: ಇಂ
ಆಚಾರ್ಯ ಮಹಾಪುರುಷರು ಪ್ರ
ಧಿಗಳನ್ನು ಆಶೀರ್ವಾದ ಮಾಡಿದ್ದಾರೆ.
ತ್ಸಾಹ ಪಡೆ ಪ್ರತಿನಿಧಿಗಳು ವಿಶ್ವಹಿಂ
ಪರಿಷತ್ತಿನ ಕಾರ್ಯವನ್ನು ತ್ವರಿತಗತಿಯ
ಮುನ್ನಡೆಸಬೇಕೆಂದು ಸ್ವಾಮಿ ಚಿನ್ಮ
ನಂದಜೀಯವರು ಹೇಳಿದರು.

ಎಲ್ಲರಿಗೂ ಪರಿಷತ್ತಿನ ಕಾರ್ಯದ
ಶ್ರೀ ಶಿ. ಶಂ. ಆಪ್ಟೆಯವರು ಧನ್ಯವಾ
ಳನ್ನರ್ಪಿಸಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕ
ತ್ತದ ಮಾಜಿ ನ್ಯಾಯಾಧೀಶ ಶ್ರೀ ರಾ
ಪ್ರಸಾದ ಮುಖರ್ಜಿಯವರು ಪರಿಷತ್ತಿ
ಮ್ಮೇಳನ ಸಮಾಪ್ತವಾಯಿತು, ಅಂದರೆ
ರಿಷತ್ತಿನ ಕಾರ್ಯ ಆರಂಭವಾಯಿತೆಂದ
ವೆಂದು ನುಡಿದರು.

'ವಂದೇ ಮಾತರಂ' ಮುಕ್ತಾ
ದೊಂದಿಗೆ ವಿಶ್ವಹಿಂದೂ ಪರಿಷತ್ತಿನ ಪ್ರ
ಮ ಸಮ್ಮೇಳನ ಸಮಾಪ್ತವಾಯಿತು.

ಹನಿಗತೆ

ಬಾದಶಹ ಮತ್ತು ದರೋಡೆಖೋರ

ಒಮ್ಮೆ ಒಬ್ಬ ದರೋಡೆಖೋರನ
ಹಿಡಿದು ಸಿಕಂದರ ಬಾದಶಹನ ಎದು
ನಿಲ್ಲಿಸಲಾಯಿತು. ಸಿಕಂದರನು ಅವನ
ಕೇಳಿದ 'ನೀನು ಏನು ಕೆಲಸ ಮಾಡು
ಯ" ಎಂದ.

"ನೀವು ಮಾಡುವ ಕೆಲಸವನ್ನೇ
ನು ಮಾಡುತ್ತೇನೆ" ಎಂದು ದರೋ
ಖೋರ ಉತ್ತರಕೊಟ್ಟ.

ನಿನಗೂ ನನಗೂ ಎಲ್ಲಿಯ ಸಂಬಂ
ನಾನು ಬಾದಶಹನೆಂಬುದು ನಿನಗೆ
ತ್ತಿಲ್ಲವೇ?' ಎಂದು ಸಿಕಂದರನು ಪ್ರ
ಹಾಕಿದ.

ಆಗ ದರೋಡೆಖೋರ ಉತ್ತರ
ಟ್ಟ. 'ನೀವು ಮಾಡುವ ಕೆಲಸವ
ನಾನೂ ಮಾಡುತ್ತೇನೆ. ಆದರೆ ವ್ಯತ್ಯಾ
ವಿಷ್ಟೇ. ನೀವು ಕೆಲಸಮಾಡಿ ಪಾರಾ
ದ್ದೀರಿ. ನಾನು ಪಾರಾಗದೆ. ಸಿಕ್ಕುಬಿ
ದ್ದೇನೆ. ನಾನು ನೀವೂ ಇಬ್ಬರೂ ದರೋ
ಡೆಖೋರರೇ ಆದರೆ ನೀವು ದರೋ
ಮಾಡಿ ದಕ್ಕಿಸಿಕೊಂಡು ಜನರಮೇಲೆ
ಜ್ಯ ಆಳುತ್ತಿದ್ದೀರಿ. ಆದರೆ ನಾನು ದಕ್ಕಿ
ಕೊಳ್ಳದ್ದಕ್ಕೆ ನನ್ನನ್ನು ನಿಮ್ಮ ಮುಂದೆ
ದು ನಿಲ್ಲಿಸಿದ್ದಾರೆ. ಆದರೂ ನಿಮ್ಮ ಮ
ನನ್ನ ಯೋಗ್ಯತೆಯಲ್ಲಿ ಮಾತ್ರ ಒಂದಿಷ
ಅಂತರವಿಲ್ಲ' ಎಂದು.

ಈ ಯುಕ್ತಿ ವಾದವನ್ನು ಕೇಳಿ ಸಿ
ದರ ಬೆಪ್ಪಾದ. —ವಿನೋ

Statement about ownership and other particulars about Newspaper: NAVAYUGA

FORM IV (Rule 8)

1.	*Place of Publication*	...	UDIPI
2.	*Periodicity of its Publication*	...	WEEKLY
3.	*Printer's Name*	...	K. H. SHETTY
	Nationality	...	INDIAN
	Address	...	Palukote, Udipi (S. K.)
4.	*Publisher's Name*	...	K. H. SHETTY
	Nationality	...	INDIAN
	Address	...	Palukote, Udipi (S. K.)
5.	*Editor's Name*	...	K. H. SHETTY
	Nationality	...	INDIAN
	Address	...	Palukote, Udipi (S. K.)
6.	*Names and addresses of individuals who own the News-paper and partners or shareholders holding more than one percent of the total capital.*		K. H. SHETTY Palukote, Udipi (S. K.) (Prop.)

I, K. H. Shetty, hereby declare that the particulars given above are true to the best of my knowledge and belief.

(*Sd.*) K. H. SHETTY,
Signature of Publisher.

Date 2—3—1966.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಅಭಿವೃದ್ಧಿ ಪಥದಲ್ಲಿ

ಜಮ್ಮು ಮತ್ತು ಕಾಶ್ಮೀರ

ಕೈಗಾರಿಕೆಗಳ ಗಾಲಿ ತಿರುಗಿಸಲು, ಹಳ್ಳಿ ಮತ್ತು ಪಟ್ಟಣಗಳ ಮನೆಗಳಲ್ಲಿ ಬೆಳಕು ಬೀರಲು ಬೇಕಾದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಆಗತ್ಯವಾದ ಸಂಪನ್ಮೂಲಗಳು—ನೀರು, ಕಲ್ಲಿದ್ದಲು ಮತ್ತು ಲಿಗ್ನೈಟ್—ಜಮ್ಮು ಮತ್ತು ಕಾಶ್ಮೀರದಲ್ಲಿ ಹೇರಳವಾಗಿದೆ.

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಲವಿದ್ಯುತ್ ಉತ್ಪಾದನೆಯ ಮೊದಲನೆಯ ಹೆಜ್ಜೆಯನ್ನು ೧೯೦೮ರಲ್ಲಿ ಇಡಲಾಯಿತು. ಅಗ್ಗೆ ಮೋಹುರ ಎಂಬ ಸ್ಥಳದಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಯಂತ್ರವನ್ನು ಸ್ಥಾಪಿಸಲಾಯಿತು. ಪ್ರಾರಂಭದಲ್ಲಿ ೩,೨೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸಾಧ್ಯವಾಗಿದ್ದು, ೧೯೪೭—೪೮ರಲ್ಲಿ ೪,೦೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವಂತೆ ವ್ಯವಸ್ಥೆಗೊಳಿಸಲಾಯಿತು. ಆದರೆ ರಾಜ್ಯದಲ್ಲಿಯ ೪೦ ಲಕ್ಷ ಜನಸಂಖ್ಯೆಗೆ ಈ ಉತ್ಪಾದನಾ ಶಕ್ತಿ ಸಾಲದಾಯಿತು. ಆದ್ದರಿಂದ ಅದರ ಅಭಿವೃದ್ಧಿಯನ್ನು ಮಾಡಲು ಅನೇಕ ಪ್ರಯತ್ನಗಳನ್ನು ಮಾಡಲಾಯಿತು. ೧೯೫೫ನೇ ಜುಲೈ ತಿಂಗಳಲ್ಲಿ ೬೦೦೦ ಕಿಲೋ ವಿದ್ಯುಚ್ಛಕ್ತಿ ಉತ್ಪಾದಿಸುವ ಶಕ್ತಿಯುಳ್ಳ ಡೀಸಿ ಯಂತ್ರವೊಂದನ್ನು ಗಂದರ್‌ಬಾಲ್ ಎನ್ನುವ ಸ್ಥಳದಲ್ಲಿ ಸ್ಥಾಪಿಸಲಾಯಿತು. ಅನಂತರ ಅದನ್ನು ೯೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವಂತೆ ಅಭಿವೃದ್ಧಿಪಡಿಸಲಾಯಿತು. ಹಾಗೆಯೇ ಮೋಹುರ ವಿದ್ಯುತ್‌ಕೇಂದ್ರವನ್ನು ೬೦೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಹಾಗೆ ಕಾರ್ಯಕ್ರಮ ಕೈಗೊಳ್ಳಲಾಯಿತು.

ಆದರೂ ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿದ್ಯುಚ್ಛಕ್ತಿಯು ಸಾಲದೇ ಬಂದಿತು. ಗ್ರಾಮಾಂತರ ವಿದ್ಯುಚ್ಛಕ್ತಿ ಕಾರ್ಯಕ್ರಮಗಳ ಬೇಡಿಕೆಯು ಹೆಚ್ಚಿತು. ಈ ಕಾರಣಗಳಿಂದ ಅನೇಕ ಜಲ ವಿದ್ಯುತ್ ಮತ್ತು ಥರ್ಮಲ್ ವಿದ್ಯುತ್ ಉತ್ಪಾದನಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ರಾಜ್ಯದ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಲಾಲ್, ಛಿನಾನಿ, ನಿಛಹಾನ ಮುಂತಾದ ಪ್ರಮುಖ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಯೋಚಿಸಲಾಯಿತು. ಕೇಂದ್ರಗಳು ಕ್ರಮವಾಗಿ ೪೫,೦೦೦, ೧೫,೦೦೦ ಮತ್ತು ೧೦,೦೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿವೆ.

ಚೆನ್ನಾಯಿ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಕೇಂದ್ರದ ನೀರು ಮತ್ತು ವಿದ್ಯುತ್ ಉತ್ಪಾದನಾ ಮಂಡಲಿಯು ಮತ್ತು ಯೋಜನಾ ಆಯೋಗವು ಒಪ್ಪಿಗೆ ನೀಡಿದೆ. ಇದಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಹಂಗೇರಿಯಿಂದ ತರಿಸಿಕೊಳ್ಳಲಾಗುತ್ತಿದೆ. ನಿಛಹಾನ ಥರ್ಮಲ್ ವಿದ್ಯುತ್ ಕೇಂದ್ರವು ನಿಛಹಾನ ಪ್ರದೇಶದಲ್ಲಿಯ ಲಿಗ್ನೈಟ್‌ನ್ನು ೧೫೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಬಳಸಿಕೊಳ್ಳುತ್ತದೆ. ಕಾಲಕೋಟ್ ಥರ್ಮಲ್ ವಿದ್ಯುತ್ ಉತ್ಪಾದನಾ ಕೇಂದ್ರವು ೨೨,೫೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಿದೆ. ಅದರ ವಿದ್ಯುತ್‌ಗಾರದ ನಿರ್ಮಾಣ ಕಾರ್ಯ ನಡೆಯುತ್ತಿದೆಯಲ್ಲದೆ ಟ್ರಾನ್ಸ್‌ಮಿಷನ್ ಲೈನುಗಳನ್ನು ಹಾಕುವ ಕೆಲಸ ನಡೆದು ಮುಗಿಯುತ್ತಾ ಬಂದಿದೆ.

ಈ ಮೇಲೆ ತಿಳಿಸಿದ ವಿದ್ಯುತ್ ಉತ್ಪಾದನಾ ಕೇಂದ್ರಗಳ ಕಾರ್ಯಕ್ರಮದ ಜೊತೆಗೆ ರಾಜ್ಯ ಸರ್ಕಾರವು ಎರಡು ಹೊಸ ಪ್ರಮುಖ ವಿದ್ಯುತ್ ಉತ್ಪಾದನಾ ಕೇಂದ್ರಗಳ ನಿರ್ಮಾಣ ಕಾರ್ಯಕ್ರಮವನ್ನು ಕೈಗೊಂಡಿದೆ. ಅದರಲ್ಲಿ ಒಂದಾದ ಕೆಳಭಾಗದ ಜೇಲಂ ವಿದ್ಯುತ್ ಉತ್ಪಾದನಾ ಕೇಂದ್ರವು ೪೦,೦೦೦ ಕಿಲೋ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದಲ್ಲದೇ ಅದರ ನಿರ್ಮಾಣ ಕಾರ್ಯಕ್ಕೆ ೧೬ ಕೋಟಿ ರೂ.ಗಳ ವೆಚ್ಚ ತಗಲುವುದು. ಎರಡನೆಯದಾದ ಮೇಲ್ಭಾಗದ ಸಿಂಧೂ ವಿದ್ಯುತ್ ಉತ್ಪಾದನಾ ಕೇಂದ್ರದ ರಚನೆಯ ಕಾರ್ಯಕ್ರಮ ಈಗಾಗಲೇ ಆರಂಭವಾಗಿದೆ. ಈ ಕಾರ್ಯಕ್ರಮವು ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲನೆಯ ಹಂತದಲ್ಲಿ ಸಿಂಧ್ ನದಿಯ ನೀರನ್ನು ೭ ಮೈಲಿ ಉದ್ದದ ಗೊತ್ತಾದ ಮಾರ್ಗದಲ್ಲಿ ಹರಿಸುವಂತೆ ಏರ್ಪಡಿಸಿ, ಅನಂತರ ನಾಜವಾಲ್ ಎನ್ನುವ ಸ್ಥಳದಿಂದ ಅದನ್ನು ೫೨೫ ಅಡಿ ಕೆಳಗೆ ಧುಮುಕಿಸಲಾಗುವುದು. ಈ ಕಾರ್ಯಕ್ರಮ ಪೂರ್ತಿಯಾದಾಗ ೨೨½ ಮೆಗಾ ವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುವುದು. ಈ ಕೇಂದ್ರದ ಮೊದಲನೆಯ ಹಂತದ ಕಾರ್ಯಕ್ರಮವು ೧೯೬೬ನೇ ಎಪ್ರಿಲ್ ಹೊತ್ತಿಗೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

ಸದ್ಯದ ವಿದ್ಯುತ್ ಉತ್ಪಾದನಾ ಶಕ್ತಿಯನ್ನು ಅಧಿಕಗೊಳಿಸಲು ೮ ಡೀಸೆಲ್ ವಿದ್ಯುತ್ ಉತ್ಪಾದನಾ ಯಂತ್ರಗಳನ್ನು ಸ್ಥಾಪಿಸಲಾಗುತ್ತಿದೆ. ಪ್ರತಿಯೊಂದು ಯಂತ್ರವು ೬೦೦ ಕಿಲೋವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು. ಈ ಯಂತ್ರಗಳು ೧೯೬೬ರ ಜುಲೈ ಹೊತ್ತಿಗೆ ಸರಬರಾಜಾಗುವುದೆಂದು ನಿರೀಕ್ಷಿಸಲಾಗಿದೆ. ಈ ಕೇಂದ್ರಗಳಿಂದ ಉತ್ಪಾದಿಸುವ ವಿದ್ಯುಚ್ಛಕ್ತಿಯನ್ನು ಮೋಹರಾ-ಗಂದರ್‌ಬಾಲ್ ವಿದ್ಯುತ್ ಕೇಂದ್ರಕ್ಕೆ ಸಹಾ ಒಳಪಡಿಸಲಾಗುವುದು.

ವಿಷ್ಣು ದೇವಿ ಯಾತ್ರೆ

೧೯೬೫ನೇ ಇಸವಿಯಲ್ಲಿ ವಿಷ್ಣು ದೇವಿ ಯಾತ್ರಾ ಸ್ಥಳವು ಭಾರತದ ಎಲ್ಲಾ ಕಡೆಗಳಿಂದ ೧,೫೫,೩೬೭ ಜನ ಯಾತ್ರಿಕರನ್ನು ಆಕರ್ಷಿಸಿತ್ತು. ಈ ಸಲದ ಡಿಸೆಂಬರ್ ತಿಂಗಳಲ್ಲಿ ಎಂದೂ ಇಲ್ಲದಷ್ಟು ಯಾತ್ರಿಕರನ್ನು ಆಕರ್ಷಿಸಿದೆ. ಪ್ರತಿ ದಿನ ಸರಾಸರಿ ೧೫೦೦ ಜನ ಭೇಟಿ ನೀಡಿದ್ದರು.

ಮಿನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮ

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಮೀನು ಸಂಪತ್ತನ್ನು ಅಧಿಕಗೊಳಿಸಲು ಅನೇಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಕಣಿವೆಯಲ್ಲಿ ಹರಿಯುವ ಸಣ್ಣ ದೊಡ್ಡ ನದಿ ಹಳ್ಳಗಳಲ್ಲಿ ದೊರೆಯುವ ಟ್ರೋಟ್ ಎಂಬ ಜಾತಿಯ ಮೀನು ಬಹು ಕಾಲದಿಂದಲೂ ಪ್ರಸಿದ್ಧವಾಗಿದೆ. ರಜಾ ದಿನಗಳಲ್ಲಿ ಮೀನು ಹಿಡಿಯುವವರಿಗೆ ಈ ಸ್ಥಳಗಳು ಮನರಂಜನೆಯನ್ನು ನೀಡುತ್ತವೆ. ಆದರೆ ಈ ಮೀನುಗಳು ರಾಜ್ಯದ ಎಲ್ಲಾ ಜನರಿಗೂ ದೊರಕದ ವಸ್ತುವಾಗಿದೆ. ಈಗ ದೊರಕುವ ಮೀನೆಂದರೆ ಸಳ್ಳೆಯ ಬಗೆಯ ಮೀನು ಮಾತ್ರ. ಅವೂ ಹೆಚ್ಚಾಗಿ ಇತ್ತೀಚೆಗೆ ರಾಜ್ಯದಲ್ಲಿ ನಡೆದ ಅಭಿವೃದ್ಧಿ ಕಾರ್ಯಕ್ರಮದಿಂದ ಜನರ ಆದಾಯವೂ ಹೆಚ್ಚಾಗಿ ಮೀನಿನ ಬೇಡಿಕೆಯು ಹೆಚ್ಚಾಯಿತು. ಈ ಬೇಡಿಕೆಯನ್ನು ಪೂರೈಸಲು ರಾಜ್ಯ ಸರಕಾರವು ಶೀಘ್ರ ಕಾಲದಲ್ಲಿಯೇ ಅಧಿಕವಾಗಿ ಉತ್ಪತ್ತಿಯಾಗುವ ಹೊಸ ಬಗೆಯ "ಮಿರರ್ ಕಾರ್ಪ್" ಎನ್ನುವ ಮೀನನ್ನು ಆಮದು ಮಾಡಿಕೊಂಡಿದೆ. ಈ ಮೀನುಗಳನ್ನು ದಾಲ್, ಅಂಚಾರ್ ಸರೋವರಗಳಲ್ಲೂ ಮತ್ತು ಜೇಲಂ ನದಿಯಲ್ಲೂ ಅಭಿವೃದ್ಧಿಗೊಳಿಸಲಾಗುತ್ತಿದೆ. ಅಲ್ಲದ ರಾಜ್ಯ ಸರ್ಕಾರವು ಮೀನಿನ ಅಭಿವೃದ್ಧಿಗೋಸ್ಕರವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದರ ಪರಿಣಾಮವಾಗಿ ೨,೦೦,೦೦೦ ಮಣ ಮೀನು ರಾಜ್ಯದ ೩ನೇ ಯೋಜನೆ ಮುಗಿಯುವುದರೊಳಗಾಗಿ ಉತ್ಪತ್ತಿಯಾಗಲಿದೆ. ಎರಡನೇ ಯೋಜನೆಯ ಕಾಲದಲ್ಲಿ ೧.೧ ಲಕ್ಷ ಮಣ ಮೀನು ಮಾತ್ರ ದೊರೆಯುತ್ತಿತ್ತು.

ಮದ್ರಾಸ್ ಮಾಧ್ವ ಸಂಘದ ಅಧಿವೇಶನ

ಶ್ರೀ ಕೆ. ಸೀತಾರಾಮರಾಯರ ಸ್ವಗೃಹವಾದ ದಾಸಪ್ರಸಾದದಲ್ಲಿ, 31-1-66 ಮತ್ತು 1-2-66ರಲ್ಲಿ ಮಧ್ವನವಮೀ ಉತ್ಸವವು ವಿಶೇಷ ಸಮಾರಂಭದಿಂದ ಜರಗಿತು. ಈ ಎರಡು ದಿನಗಳಲ್ಲಿಯೂ ವೇದ ಶಾಸ್ತ್ರ ಪಾರಾಯಣ, ವಿಶೇಷ ಪೂಜಾ ಮತ್ತು ಬ್ರಾಹ್ಮಣ ಸುವಾಸಿನೀ ಸಮಾರಾಧನೆಗಳು ಜರಗಿದವು.

ತಾ. 31-1-66ರಲ್ಲು ಸಂಜೆ ಶ್ರೀ ಗುರುರಾಜಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಅನಿರೀಕ್ಷಿತವಾಗಿ ಮದ್ರಾಸಿಗೆ ಬಂದಿದ್ದ ಸಿಂಡಿಕೇಟ್ ಬೇಂಕಿನ ಸ್ಥಾಪಕ ಡಾ। ಟಿ. ಎಮ್. ಎ. ಪೈಗಳವರು, ಉಡುಪಿಯ ಸುಪ್ರಸಿದ್ಧ ವಕೀಲರಾದ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಮತ್ತು ಬೇಂಕಿನ ಇತರ ಡೈರೆಕ್ಟರುಗಳೂ ಸನ್ನಿಹಿತರಾಗಿದ್ದರು.

ಶ್ರೀ ಸಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ಮಧ್ವಮತದ ವೈಶಿಷ್ಟ್ಯವನ್ನು ಕುರಿತು ಭಾಷಣ ಮಾಡಿದರು.

ಡಾ। ಟಿ. ಎಮ್. ಎ. ಪೈಯವರು ತಮ್ಮ ಉತ್ತರದಲ್ಲಿ ಶ್ರೀ ಮಧ್ವಾಚಾರ್ಯರ ಗುಣಗಳನ್ನು ಹೊಗಳಿ ಶ್ರೀ ಸೀತಾರಾಮರಾಯರ ಉದಾರ ಗುಣಗಳ ವಿಷಯದಲ್ಲಿ ತನ್ನ ಅನುಭವವನ್ನು ತಿಳಿಸಿ ಈ ಸಂದರ್ಭದಲ್ಲಿ ಭಾಗವಹಿಸಿದ ತಾವೆಲ್ಲರೂ ಧನ್ಯರೆಂದು ಹೇಳಿದರು.

ಶ್ರೀ ಸುಸ್ವರಂ ಗೋಪಾಲಕೃಷ್ಣಾಚಾರ್ಯರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಮರುದಿನ ಸಂಜೆ ಶ್ರೀ ಪಿ. ಟಿ. ಲಕ್ಷ್ಮೀನಾರಾಯಣೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಭೆಯು ಜರಗಿತು. ಡಾ। ಎಚ್. ಎಲ್. ನಾರಾಯಣರಾಯರು ವಾಯುಸ್ತುತಿಯಲ್ಲಿನ ಕೆಲವು ಶ್ಲೋಕಗಳನ್ನು ಹಾಡಿದರು. ಶ್ರೀ ಕೆ. ನಾರಾಯಣ ದಾಸರು ಸಂಸ್ಕೃತದಲ್ಲಿ ಶ್ರೀ ಮಧ್ವಾಚಾರ್ಯರ ಮಹಿಮೆಗಳನ್ನು ವರ್ಣಿಸಿದರು. ಶ್ರೀ ಕಾಶೀ ಶ್ರೀ ಪಾದಾಚಾರ್ಯರು, ಶ್ರೀ ರಘೋತ್ತಮಾಚಾರ್ಯರು, ಶ್ರೀ ಮಾಗಡಿ ರಂಗನಾಥಾಚಾರ್ಯರು, ಶ್ರೀ ಪಾಂಡುರಂಗಿ ವೆಂಕೋಬಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಮೈಲಾಪುರ ಸಂಸ್ಕೃತ ಮಹಾಪಾಠ ಶಾಲೆಯ ಅಧ್ಯಕ್ಷರಾದ ಶ್ರೀ ಬಾಲಸುಬ್ರಹ್ಮಣ್ಯ ಶಾಸ್ತ್ರಿಗಳು ಮುಂತಾದವರು ಶ್ರೀ ಮಧ್ವ ಶಾಸ್ತ್ರದ ಹಿರಿಮೆಯನ್ನು ಕುರಿತು ಭಾಷಣ ಮಾಡಿದರು.

ಪ್ರಧಾನೋಪನ್ಯಾಸಕರಾದ ಶ್ರೀ ರಾಜಾ ಯಸ್. ಗುರುರಾಜಾಚಾರ್ಯರು ಸನಾತನ ಧರ್ಮವನ್ನು ಕುರಿತು ಭಾಷಣ ಮಾಡುತ್ತಾ ಭೌತಿಕ ವಿಜ್ಞಾನವು ಮಾನವನ ಅಧೋಗತಿಗೆ ಕಾರಣವೆಂದೂ "ವಿಜ್ಞಾನಂ ಬ್ರಹ್ಮ" ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ವಿಜ್ಞಾನವೇ ಉತ್ತಮ ವಿಜ್ಞಾನವೆಂದೂ, ಬ್ರಹ್ಮಜ್ಞಾನಕ್ಕೆ ಸಾಧನವಾದ ಶ್ರೀ ಮಧ್ವಾಚಾರ್ಯರ ಶಾಸ್ತ್ರವೇ ಉತ್ತಮ ವಿಜ್ಞಾನವೆಂದೂ ಸಮರ್ಥಿಸಿದರು.

ಅಧ್ಯಕ್ಷರು ಈ ಎಲ್ಲಾ ಉಪನ್ಯಾಸಗಳನ್ನೂ ಸಂಗ್ರಹಿಸಿ ಶ್ರೀ ಮಧ್ವಸಂಘದ ಆಧಾರ ಸ್ತಂಭರಾದ ಶ್ರೀ ಸೀತಾರಾಮರಾಯರ ಧರ್ಮಗಳ ವೈಶಿಷ್ಟ್ಯವನ್ನು ಹೊಗಳಿದರು.

ದೇಶ ವಿದೇಶದಿಂದ ಬಂದ ಪಂಡಿತರುಗಳಿಗೆ ಸಮುಚಿತ ಸಂಭಾವನೆಯನ್ನು ಕೊಟ್ಟ ಮೇಲೆ ಶ್ರೀ ರಘೋತ್ತಮಾಚಾರ್ಯರ ಧನ್ಯವಾದದೊಂದಿಗೆ ಅಂದಿನ ಸಭೆಯು ಮುಕ್ತಾಯವಾಯಿತು.

In the Court of the M. C. M. Belthangady.

O. S. No. 209/65.

Chidananda Ajri ... Plaintiff.

and

Jogi Gowda ... Defendant.

Notice

Please take notice that the plaintiff has filed a suit against you and the same stands posted to 15—3—1966 at 11 A. M. for your appearence either in person or through advocate, failing which you will be declared exparte and the case will be proceeded with in your absence.

By Order.

K. Chidananda,

Advocate.

Belthangady, 24-2-66.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. E. P. 104/65.

O. S. 637/64.

ರಘುರಾಮ ಶೆಟ್ಟಿ —ಅರ್ಜಿದಾರ.

ಅಕ್ಕು ಯಾನೆ ಜಾಕು ಹೆಂಗಸ್ಸು —ಎದ್ರಿ.

ಬೆಳ್ತಂಗಡಿ ತಾಲ್ಲೂಕು ಗುಂಡುರಿ ಗ್ರಾಮದ ಪೊಮಜೆ ಎಂಬಲ್ಲಿರುವ ದುಗ್ಗಮ್ಮನ ಮಗಳು ಅಕ್ಕು ಯಾನೆ ಜಾಕು ಹೆಂಗಸಿಗೆ—

ಮೇಲ್ಕಂಡ ಅಮಲ್ದಾರಿಯಲ್ಲಿ ಎದ್ರಿಗೆ ಕಾರ್ಕಳ ಮುನ್ಸಿಫ್ ಕೋರ್ಟಿನ O. S. 408/62 ನೇ ದಾವಾ ಲೆಕ್ಕದಲ್ಲಿ ಡಿಪೋಜಿಟಿನಲ್ಲಿರುವ ಹಣದಿಂದ ಎದ್ರಿಗೆ ಸಿಗತಕ್ಕ ಅವಳ ಪಕ್ಕಿನ ರೂ. 303=92ಕ್ಕೆ ಜಪ್ತಿಗೆ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಸದ್ರಿ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 8-3-66ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪಣೆ ಇದ್ದರೆ ಆ ದಿನ ಪೂರ್ವಾಹ್ನ 11ಕ್ಕೆ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ದ್ವಾರ ಹಾಜರಾಗತಕ್ಕದ್ದು. ತಪ್ಪಿದರೆ ಸದ್ರಿ ಅಮಲ್ದಾರಿಯಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತು.

(By Order of the Court)

(Sd.) N. J. Kadamba

Advocate for Petitioner.

ಬೆಳ್ತಂಗಡಿ, ತಾ. 24-2-66.

ಎಲ್ಲೆಲ್ಲಿ ಏನೇನು?

ಕೃಷಿ-ಪಂಚಾಯತ್ ರಾಜ್ಯ ಅಭಿವೃದ್ಧಿ ವಿಚಾರಗೋಷ್ಠಿ

ಮಂಗಳೂರು ತಾ. 13ರಂದು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ರಾಜ್ಯದ ನಗರ ಸಭಾಡಳಿತ ಮಂತ್ರಿ ಶ್ರೀ ಆರ್. ಎಂ. ಪಾಟೀಲರಿಂದ ಉದ್ಘಾಟಿಸಲ್ಪಟ್ಟ ಮಂಗಳೂರು ತಾಲೂಕು ಮಟ್ಟದ ಕೃಷಿ ಮತ್ತು ಪಂಚಾಯತ್ ಅಭಿವೃದ್ಧಿ ವಿಚಾರ ಗೋಷ್ಠಿಯು ಮರುದಿನ ಮುಕ್ತಾಯಗೊಂಡಿತು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಎಂ. ಎಲ್. ಸಿ. ಗಳಾದ ಶ್ರೀ ಎಸ್. ಮುಕುಂದ ರಾಯರು ವಹಿಸಿದ್ದು, ಮಂಗಳೂರು ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾಯರು ಸಮಾರೋಪ ಭಾಷಣ ಗೈದರು. ಬಹಿರಂಗಾಧಿವೇಶನದ ಅಧ್ಯಕ್ಷತೆಯನ್ನು ಮೈಸೂರಿನ 'ವಿಜಯ' ಪತ್ರಿಕೆ ಸಂಪಾದಕ ಶ್ರೀ ಎ. ರಾಮಣ್ಣ ಅವರು ವಹಿಸಿದ್ದರು.

ಉದ್ಘಾಟಕರಾದ ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ ರಾಷ್ಟ್ರ ಜನತೆಯ ಕಷ್ಟನಿವಾರಣೆಯಲ್ಲಿ ಪಂಚಾಯತುಗಳ ಮತ್ತು ತಾಲೂಕು ಅಭಿವೃದ್ಧಿಗೆ ಮಂಡಲಗಳ ಹೊಣೆ ಮಹತ್ವದ್ದು ಎಂದರು.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 568/65

ರಾಮಚಂದ್ರ ಸರಳಾಯ — ವಾದಿ.

ಮತ್ತು

B. K. ಗೋಪಾಲಕೃಷ್ಣ ಕೂಡಾ — ಪ್ರತಿವಾದಿರು.

2ನೇ ಪ್ರತಿವಾದಿ: ಬಂಟ್ವಾಳ ತಾಲೂಕು ಕೇಪು ಗ್ರಾಮದ ಉಗ್ರಾಣ ವೆಂಕಪ್ಪನವರ ಮಗ B. K. ನರಸಿಂಹನವರಿಗೆ—

ನಿಮ್ಮ ಮೇಲೆ ಕೂಡಾ ವಾದಿಯು ಮಾಡಿದ ಮೇಲಿನ ನಂಬ್ರವು ನಿಮ್ಮ ಜಾಮೀನಾತಿ ಬಗ್ಗೆ ಮತ್ತು ಅಕ್ಷೇಪಗಳದ್ದಲ್ಲಿ ತಿಳಿಸಲಿಕ್ಕೆ ತಾ. 7-3-1966ಕ್ಕೆ ವ್ಯಾದೆ ಇರುತ್ತದೆ. ಅದುದರಿಂದ ನೀವು ಆ ದಿವಸ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಖಾಜರಾಗಿ ಉದಾಹರಿಸಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಮುಮುವರಿಸಲಾದೀತೆಂತ ಈ ಮೂಲಕ ಕೋರ್ಟು ಹುಕ್ಕುಂ ಮೇರೆಗೆ ತಿಳಿಸೋಣಾಗಿಯದೆ.

(Sd.) K. T. Bhat,
ವಾದಿ ಕಡೆ ಎಡ್ವಕೇಟು
ಮೊಕ್ಕಾಂ ಪುತ್ತೂರು, ತಾ. 21-2-1966.

ಬೆಳ್ತಂಗಡಿ ಮುನ್ಸಿಫ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ

S. C. 142/65.

ಕೆ. ಆದಿರಾಜ ಶೆಟ್ಟಿ... ವಾದಿ

ಕೆ. ಶ್ರೀನಿವಾಸ ಹೆಗ್ಡೆ.... ಪ್ರತಿವಾದಿ.

ಬೆಳ್ತಂಗಡಿ ತಾಲೂಕು, ಪೆರಾಡಿ ಗ್ರಾಮದ, ಪೊಕ್ರೊಡಿ ಮನೆ ಎಂಬಲ್ಲಿರುವ ಚೆಲುವಯ್ಯ ಹೆಗ್ಡೆಯವರ ಮಗ ಕೆ. ಶ್ರೀನಿವಾಸ ಹೆಗ್ಡೆ—ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯು ನಿಮ್ಮ ಜಾಮೀನಾತಿ ಬಗ್ಗೆ ತಾರೀಕು 15—3—66ಕ್ಕೆ ಇಟ್ಟಿರುತ್ತದೆ. ಅದ್ದರಿಂದ ಪ್ರತಿವಾದಿಗೆ ತನ್ನ ಆಕ್ಷೇಪಗಳೇನಾದರೂ ಹೇಳುವುದಿದ್ದರೆ ಆ ದಿನ ಕೋರ್ಟು ಮುಂದೆ 11 ಗಂಟೆಗೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳುವುದು. ಇದಕ್ಕೆ ತಪ್ಪಿದಲ್ಲಿ ಪ್ರತಿವಾದಿಯನ್ನು ಶಿವ್ವಾ ಎಂತ ಮಾಡಿ ದಾವೆಯನ್ನು ಮುಂದಿನ ತನಿಖೆಯಿಂದ ತೀರ್ಮಾನಿಸಲಾಗುವುದು ಎಂತ ಈ ಕೋರ್ಟು ಹುಕುಂ ಪ್ರಕಾರ ಮಾಡಿಸಿಯದೆ.

M. J. Padivala
ವಾದಿಯ ಕಡೆ ಎಡ್ವಕೇಟು,
ಬೆಳ್ತಂಗಡಿ, 23-2-66

ಅಪೇಕ್ಷಿತವಾಗಿ ಸಭೆಗೆ ಆಗಮಿಸಿದ ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರು ಹೆಚ್ಚು ಭತ್ತ ಬೆಳೆಸಿದ ರೈತರಿಗೆ ಬಹುಮಾನವಿತ್ತರು.

ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ತಮ್ಮ ಭಾಷಣದಲ್ಲಿ 'ಆಹಾರ ಬೆಳೆಸುವ ರೈತನಿಗೆ ಉತ್ಸಾಹ ಬರಲು ತಕ್ಕ ಪ್ರತಿಫಲ ದೊರೆಯುವಂತಾದರೆ ಆತನು ಯಾವ ಗೋಷ್ಠಿ, ಶಿಬಿರಗಳಿಲ್ಲದೆಯೇ ಹೆಚ್ಚು ಉತ್ಪಾದಿಸುವನು' ಎಂದರು.

ಶ್ರೀ ಬಿ. ಎಂ. ಇದಿನಬ್ಬನವರು ಆರಂಭದಲ್ಲಿ ಶ್ರೀ ರಾಜೀವ ಭಂಡಾರಿಯವರ ಪರವಾಗಿ ಸ್ವಾಗತ ಭಾಷಣ ಮಾಡಿದ್ದರು.

ಆಯುರ್ವೇದ ಕಾಲೇಜಿನ ವಾರ್ಷಿಕೋತ್ಸವ

ಉಡುಪಿಯ ಆಯುರ್ವೇದ ಕಾಲೇಜಿನ ವಾರ್ಷಿಕೋತ್ಸವವು ತಾ. 19-2-66ರಂದು ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡಾ| ಸಿ. ಎಚ್. ಶಿವರಾಮನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಕಾಲೇಜಿನ ಪ್ರೊಫೆಸರ್ ಡಾ| ಗುರುರಾಜಾಚಾರ್ಯರು ಸ್ವಾಗತಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಡಾ| ವಿಜಯೇಂದ್ರ ಮೂರ್ತಿಯವರು ಕಾಲೇಜಿನ ವರದಿಯೊಪ್ಪಿಸಿದರು. ಕಾರ್ಯದರ್ಶಿ ಶ್ರೀ ಪಿ. ಮಂಜುನಾಥ ಹೆಗ್ಡೆಯವರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಯುರ್ವೇದವು ಪ್ರಾಚೀನ ಕಾಲದಲ್ಲಿ ಭಾರತೀಯ ಜನಜೀವನ, ಆರೋಗ್ಯ ರಕ್ಷಣೆಗೆ ಏಕೈಕ ವೈದ್ಯವಾಗಿತ್ತು. ಬೇರೆ ಬೇರೆ ದೇಶಗಳಿಂದ ಆಯುರ್ವೇದ ವಿದ್ಯಾಭ್ಯಾಸಕ್ಕಾಗಿ ಅನೇಕರು ನಮ್ಮಲ್ಲಿಗೆ ಬಂದಿದ್ದರು. ಆದರೆ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಪಾಶ್ಚಿಮಾತ್ಯ ವೈದ್ಯಪದ್ಧತಿಗೆ ಹೆಚ್ಚು ಪ್ರೋತ್ಸಾಹ ದೊರೆತು, ಆಯುರ್ವೇದವು ಕಡೆಗಣಿಸಲ್ಪಟ್ಟಿತು. ಮುಸ್ಲಿಮರ ಕಾಲದಲ್ಲೂ ಯುನಾನಿಗೆ ಪ್ರಾಶಸ್ತ್ಯ ದೊರಕಿತು. ಆಯುರ್ವೇದವು ತನ್ನ ಗತವೈಭವವನ್ನು ಹೊಂದುವಂತೆ ಹಾಗೂ ಯೋಗ್ಯ ಸಂಶೋಧನೆ ನಡೆಯುವಂತೆ ಸರಕಾರದ ಮತ್ತು ಸಾರ್ವಜನಿಕರ ನೆರವು ಅವಶ್ಯ. ರೋಗ ಪೀಡಿತರಾದವರನ್ನು ರೋಗ ಮುಕ್ತಗೊಳಿಸುವ ಉದ್ದೇಶವು ಒಂದೇ ಆದುದರಿಂದ ಪಾಶ್ಚಿಮಾತ್ಯ ಪೌರ್ವಾತ್ಯ ಭೇದಭಾವವಿಲ್ಲದೆ ನಾವೆಲ್ಲ ಒಂದೇ ಎಂದು ನುಡಿದರು.

ಆರಂಭಿಕ ಪ್ರಾಸ್ತಾವಿಕ ಭಾಷಣವು ಕಾಲೇಜು ಯೂನಿಯನ್ ಅಧ್ಯಕ್ಷ ಶ್ರೀ ಕೆ. ಎಸ್. ಕಾಳಪ್ಪ ಶೆಟ್ಟರಿಂದ ನಡೆಯಿತು. ಕೊನೆಯಲ್ಲಿ ಡಾ| ಕೆ. ಆರ್. ಭಾಗವತರಿಂದ ಧನ್ಯವಾದ ಸಮರ್ಪಣೆಯಾದ ಮೇಲೆ ಮನರಂಜನಾ ಕಾರ್ಯಕ್ರಮಗಳಾದುವು.

ವಾರ್ಷಿಕೋತ್ಸವ

ಮೂಡುಬೆಳ್ಳೆ, ಫೆಬ್ರವರಿ 21. ಸೈಂಟ್ ಲೋರೆನ್ಸ್ ಹೈಸ್ಕೂಲಿನ ವಾರ್ಷಿಕೋತ್ಸವವು ಮಂಗಳೂರಿನ ಬಿಷಪ್ ಗುರುಗಳಾದ ರೈಟ್ ರೆವರೆಂಡ್ ಡಾ| ಬೇಸಿಲ್ ಎಸ್. ಡಿ ಸೋಜರವರ ಘನ ಅಧ್ಯಕ್ಷತೆಯಲ್ಲಿ ಜರಗಿತು. ಸು ಮಾರು ಇಪ್ಪತ್ತೈದು ಸಾವಿರ ರೂಪಾಯಿ ವೆಚ್ಚ ಮಾಡಿ ಕಟ್ಟಿದ ಹೈಸ್ಕೂಲಿನ ವಿಜ್ಞಾನ ಮಂದಿರವನ್ನು ಅಧ್ಯಕ್ಷರು ಉದ್ಘಾಟಿಸುತ್ತಾ, ಶಾಲೆಯ ಪ್ರಗತಿಯನ್ನು ಮೆಚ್ಚಿ, ಸಾಧಿಸಿದ ಕೆಲಸವನ್ನು ಶ್ಲಾಘಿಸಿದರು. ಮೂರು ವರ್ಷಗಳಿಂದಲೂ ತಪ್ಪದೆ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶ ಬರುವಂತೆ ಪ್ರಯತ್ನಿಸಿದುದಕ್ಕಾಗಿ ಮುಖ್ಯ ಅಧ್ಯಾಪಕರನ್ನೂ, ಆಡಳಿತದಾರರನ್ನೂ, ಅಧ್ಯಾಪಕ ವೃಂದವನ್ನೂ ಅಭಿನಂದಿಸಿದರು. ವಿದ್ಯಾರ್ಥಿಗಳು ಶಿಸ್ತಿನ ಕಡೆಗೆ ಗಮನ ಹರಿಸಿ, ಉತ್ತಮ ಪ್ರಜೆಗಳಾಗಿ ತಮ್ಮ ಬಾಳನ್ನು ಸುಂದರವಾಗಿ ಬೆಳಗಿಸ ಬೇಕೆಂದೂ ಶಾಲೆಯನ್ನು ಹರಸಿದರು.

ಆರಂಭದಲ್ಲಿ ಶಾಲೆಯ ಕರೆಸ್ಪೋಂಡೆಂಟರಾದ ರೆ|ಫಾ| ಎ. ಎಫ್. ಡಿ'ಸೋಜಾರವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಬೆಳ್ಳೆ ಅನಂತಕೃಷ್ಣ ಸಾಮಗರು ಶಾಲೆಯ ಪ್ರಗತಿಪರ ವರದಿಯನ್ನು ಸಭೆಯ ಮುಂದಿರಿಸಿದರು.

ಶಾಲಾ ಹಸ್ತ ಪತ್ರಿಕೆಯಾದ "ಬಾಲವಾಣಿ"ಯ ವಾರ್ಷಿಕ ಸಂಚಿಕೆಯನ್ನು ರೆ| ಫಾ| ಜೋನ್ ಡೇಸರವರು ಉದ್ಘಾಟಿಸಿದರು. ಸಂದೇಶಗಳನ್ನು ಶ್ರೀ ನಿರಂಜನಾಚಾರ್ಯರು ಓದಿದರು. ಸ್ವಸ್ತಿವಾಚನವನ್ನು ಶ್ರೀ ಅಪ್ಪಿ ಶಾಮಕರು ಮಾಡಿದ ಬಳಿಕ ಅಧ್ಯಕ್ಷತ್ತರವನ್ನು ಶಾಲಾ ವಿದ್ಯಾರ್ಥಿ ನಾಯಕ ಶ್ರೀ ಶಿವ ಕೆ. ಸುವರ್ಣರು ಕೊಟ್ಟರು.

ಮನೋರಂಜನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೇಷ್ಠ ಮಟ್ಟದ ಅಭಿನಯವನ್ನು ನೀಡಿದವರಿಗೆ ಸ್ಥಳೀಯ ಜನಪ್ರಿಯ ಡಾಕ್ಟರ್ ರಮೇಶ್ ರಾವ್ ಕೊರಡ್ಕಲ್ಲರು ಬಹುಮಾನ ವಿತರಣೆ ಮಾಡಿದರು. ಶ್ರೀ ಮಜ್ಜೆ ವಾಸುದೇವ ಭಟ್ಟರು ಧನ್ಯವಾದಗಳನರ್ಪಿಸಿದರು.

ಆ ದಿನ ಪೂರ್ವಾಹ್ನ ಡಾ| ಆರ್. ಆರ್. ಕೊರಡ್ಕಲ್‌ರವರು ರಾಷ್ಟ್ರಧ್ವಜವನ್ನೇರಿಸಿ ಭಾಷಣವಿತ್ತರು. ಶಾಲಾ ವಿದ್ಯಾರ್ಥಿಗಳಿಗೆ ಸಿಹಿತಿಂಡಿಯನ್ನು ಸ್ಥಳೀಯ ಎಲ್. ಐ. ಸಿ. ಏಜಂಟರಾದ ಶ್ರೀ ರೋಬರ್ಟ್ ಆಳ್ವರು ಒದಗಿಸಿದ್ದರು.

ಕನ್ನಡ ಸಂಘ ವಾಸ್ಕೋ-ಡ-ಗಾಮಾ, (ಗೋವಾ)

ಮೇಲ್ಕಂಡ ಸಂಘದ ಆಶ್ರಯದಲ್ಲಿ ದಿನಾಂಕ 12-3-66ರಂದು ಸಂಗೀತ ರತ್ನ, ಪಂಡಿತ ಶ್ರೀ ಬಸವ ರಾಜ ರಾಜ ಗುರುರವರ ಹಿಂದೂಸ್ತಾನಿ ಗಾಯನವನ್ನೇರ್ಪಡಿಸಲಾಗಿತ್ತು. ಗಾಯನ ಸಭೆಗೆ ಊರಿನ ಗಣ್ಯ ವ್ಯಕ್ತಿಗಳು ಮತ್ತು ವಾಣಿಜ್ಯೋದ್ಯಮಿಗಳು ಆಗಮಿಸಿದ್ದರು.

ಡಾ| ಮಾಧವ ವೈ ವಿಜ್ಞಾನ ಮಂದಿರದ ಉದ್ಘಾಟನೆ

ಉಡುಪಿ ಎಂ. ಜಿ. ಎಂ. ಕಾಲೇಜಿನ ಡಾ| ಮಾಧವ ಪೈ ವಿಜ್ಞಾನ ಮಂದಿರವೆಂಬ ಹೊಸ ನಾಯನ್ಸ್ ಬ್ಲೋಕನ್ನು ತಾ. 25-2-66 ರಂದು ಮೈಸೂರಿನಲ್ಲಿರುವ ಸೆಂಟ್ರಲ್ ಫುಡ್ ಟೆಕ್ನೋಲೋಜಿಕಲ್ ರೀಸರ್ಚ್ ಇನ್‌ಸ್ಟಿಟ್ಯೂಟಿನ ಡೈರೆಕ್ಟರ್ ಡಾ| ಎಚ್. ಎ. ಬಿ. ಪರ್ಪಿಯವರು ಉದ್ಘಾಟಿಸುತ್ತಾ ವಿಜ್ಞಾನಕ್ಕೆ ಇಂದು ಮಹತ್ವದ ಪ್ರಾಶಸ್ತ್ಯವಿದೆಯೆಂದೂ ಬರೇ ಪರೀಕ್ಷೆಯಲ್ಲಿ ಪಾಸಾಗುವುದಕ್ಕಾಗಿ ವಿಜ್ಞಾನ ಪಾಠವನ್ನು ಓದಿ ಫಲವಿಲ್ಲವೆಂದೂ ಉಚಿತ ನಿಜವಾದ ಜ್ಞಾನವನ್ನು ಪಡೆದು ಅದನ್ನು ಉಪಯೋಗಿಸುವ ಪರಿಶ್ರಮ ಅತ್ಯಾವಶ್ಯಕವೆಂದೂ ಹೇಳಿ ಡಾ| ಮಾಧವ ಪೈಗಳು ವಿದ್ಯಾಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಕೊಂಡಾಡಿದರು. ಆರಂಭದಲ್ಲಿ ಕರೆಸ್ಪೋಂಡೆಂಟ್ ಶ್ರೀ ಟಿ. ಎ. ಪೈಯವರು ಸ್ವಾಗತಿಸಿ, ಕಾಲೇಜಿನ ಪೂರ್ವೇತಿಹಾಸವನ್ನು ವಿವರಿಸಿ ಉದ್ಘಾಟಕರ ಪರಿಚಯ ಮಾಡಿಕೊಟ್ಟರು. ಪ್ರಿನ್ಸಿಪಾಲ್ ಶ್ರೀ ಕೆ. ಎಸ್. ಹರಿದಾಸ ಭಟ್ಟರು ಸಂದೇಶಗಳನ್ನು ಓದಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜ್ ಟ್ರಸ್ಟಿನ ಅಧ್ಯಕ್ಷ ಶ್ರೀ ಎ. ಎಲ್. ಎನ್. ರಾಯರು ಕಾಲೇಜ್ ಸ್ಥಾಪನೆ ಮತ್ತು ಬೆಳವಣಿಗೆಗಾಗಿ ಡಾ| ಪೈಗಳು ಪಟ್ಟ ಪರಿಶ್ರಮವನ್ನು ಪ್ರಸ್ತಾಪಿಸಿ ಧನ್ಯವಾದಗಳನ್ನರ್ಪಿಸಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 126/1965

ಬಿ. ಕೆ. ಲಕ್ಷ್ಮೀನಾರಾಯಣ ರಾವ್ — ವಾದಿ.

ವೆಂಕಟ್ರಮಣ ಪಾಂಗಣ್ಣಾಯ-ಪದ್ಮನಾಭ ಪಾಂಗಣ್ಣಾಯರ ಮಗ, ಬೆಳ್ತಂಗಡಿ ತಾಲ್ಲೂಕು ಉಜಿರೆ ಗ್ರಾಮದ ಪೊದಿಂಬಿಲ ಎಂಬಲ್ಲಿರುವವ. — ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಗೆ ಪ್ರತಿವಾದಿಯಿಂದ ಬರತಕ್ಕ ಮೂಲಗೇಣಿ, ತೀರ್ವೆ, ಸೆಸ್ಸ್, ಸಜಾಗ್ರಾ ಯಿತ್ಯಾದಿ ಬಾಕಿ ಕುರಿತು ರೂ. 84-77ಕ್ಕೆ ಮಾಡಿದ ಮೇಲಿನ ದಾವೆಯು ತಾರೀಕು 17-3-1966ಕ್ಕೆ ತನಿಖೆಗೆಯಿಟ್ಟಿರುತ್ತದೆ. ಆ ಕುರಿತು ಆಕ್ಷೇಪಣೆ ಯಿದ್ದರೆ ಸದ್ರಿ ವ್ಯಾದೆದಿನ ಪೂರ್ವಾಹ್ನ ಗಂಟೆ 10ಕ್ಕೆ ನೀವು ಸ್ವತಹ ಯಾ ವಕೀಲರ ದ್ವಾರಾ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿವ್ವಾ ಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

By order of the Court.
B. K. Sooryanarayana Rao
Advocate of Plaintiff
ಬೆಳ್ತಂಗಡಿ, ತಾ. 24-2-1966

ಪುತ್ತೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟಿನಲ್ಲಿ

R. I. A. No. 2465/65.
O. S. No. 516/1953.

ಸರಸ್ವತಿ ಅಂಮ — ಅರ್ಜಿದಾರಳು.

Vs

ದೇವಕಿ ಅಂಮ ಕೂಡಾ — ಎದ್ರಿರು.

4ನೇ ಎದ್ರಿ— ನಾರಾಯಣ ಶಾಸ್ತ್ರಿ ರಾಮಕೃಷ್ಣ ಶಾಸ್ತ್ರಿಗಳ ಮಗ, ಬಂಟ್ವಾಳ ತಾಲೂಕು ಪಾಣಜೆ ಗ್ರಾಮದ ಮೂಡಂಬೈಲು ಎಂಬಲ್ಲಿ

ಮೇಲ್ಕಂಡ ಸಾಲಿನ ದಾವೆಯಲ್ಲಾದ ಡಿಕ್ರಿ ಮಿನಾ ಡಿಕ್ರಿ ವಿಧಿ ಮೇರೆಗೆ ದಾವಾ ಆಸ್ತಿಗಳಂನು ಹಿಸೆ ಪಿಂಗಡಿಸಿಕೊಡ ಬೇಕೆಂತ ಸದ್ರಿ ಅರ್ಜಿದಾರರು ಮಾಡಿದ ಮೇಲಿನ ಅರ್ಜಿಯು ನಿಂಮ ಹಾಜ್ರಾತಿ ಬಗ್ಗೆ ತಾ. 8-3-1966ಕ್ಕೆ ವ್ಯಾದೆಯಿರುವುದರಿಂದ, ನಿಮಗೆ ನಾದರೂ ಆಕ್ಷೇಪವಿದ್ದಲ್ಲಿ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಉದಾಹರಿಸಿಕೊಳ್ಳ ತಕ್ಕದೆಂತಲೂ ತಪ್ಪಿದರೆ ನಿಂಮನಲ್ಲಿ ಶಿವ್ವಾ ಮಾಡಿ ಮುಂದರಿಸಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

(Sd.) K. T. Bhat,
Advocate for Petr.
ಮೊಕ್ಕಾಂ ಪುತ್ತೂರು, ತಾ. 28-2-1966.



ರೈತ ಮುರುಗ

(ಎರಡನೇ ಪುಟದಿಂದ)

ಹಾಗೆ ಮಾಡುವದಿಲ್ಲವೇನು? ಹಣ ಮಾಡುವಾಗ ದೊಡ್ಡ ತತ್ವಗಳೆಲ್ಲ ನೀತಿ ಮಾರ್ಗದತ್ತ ಕಣ್ಣು ಹಾಯಿಸ ಕೂಡದು. ಬಡವರು ಯಾವಾಗಲೂ ಅದಕ್ಕೆ ವಿರುದ್ಧವಾಗಿರುವದರಿಂದಲೇ ಎಂದೆಂದಿಗೂ ಬಡವರಾಗಿಯೇ ಉಳಿದಿರುತ್ತಾರೆ. ನೈತಿಕ ದೃಷ್ಟಿಯಿಂದ ಅವರು ಎಷ್ಟು ಒಳ್ಳೆಯವರಿರುತ್ತಾರೋ, ಅವರು ಶ್ರೀಮಂತರ ಹೊಟ್ಟೆಗೆ ಅಷ್ಟೇ ಹಿತಕರವಾಗಿರುತ್ತಾರೆ. ನನ್ನ ಹಾಗೆ ನೀನು ಮದುವೆ ಮಾಡಿಕೊಳ್ಳದೆ ಉಳಿದವನಲ್ಲ. ಐದು ಮಕ್ಕಳ ಹೊಟ್ಟೆಯನ್ನು ನೀನು ತುಂಬಿಸಬೇಕು. ಅವುಗಳ ಯೋಗ ಕ್ಷೇಮಾದಿಗಳತ್ತ ಗಮನ ಕೊಡುತ್ತಿರಬೇಕು."

ತೊಪ್ಪೈಯು ಅದೃಷ್ಟದ ಹುಡುಗಿ ಹಾಗೂ ಚಿಕ್ಕ ಮಕ್ಕಳನ್ನು ಮುರುಗನ ಬಳಿಗೆ ಕರೆದು ಜಾಗರೂಕ ಸ್ವರದಿಂದ ಹೇಳಿದನು, "ಈ ಗಾಳಿಗೆ ವೈಯ್ಯಾರ್ಡಿ ನಿಂತಿರುವ, ತಾರುಣ್ಯದ, ಚೆನ್ನಾಗಿ ಬೆಳೆದಿರುವ, ಫಲ ತುಂಬಿರುವ ಮರಗಳತ್ತ ನೋಡು, ಮುರುಗ. ಈ ಲೋಹಯುಗದಲ್ಲಿ ಇವು ಮಾತ್ರ ಹಣದ ಮರಗಳಿವೆ, ನೀನವುಗಳನ್ನು ಅಲುಗಾಡಿಸಬೇಕಾಗಿಯೂ ಇಲ್ಲ. ಪ್ರತಿ ದಿನ ಮೆತ್ತಗೆ ಅವುಗಳನ್ನು ತಟ್ಟಿದರೆ ಸಾಕು. ಆಗ ಹಾಲು ಹಾಗೂ ಜೇನಿನಂತಹ ಭಂಗಾರವು ಹರಿದುಕೊಂಡು ಬರುತ್ತದೆ. ನೀನವುಗಳನ್ನು ಶೇಖರಿಸಿಡು. ನನ್ನ ಮಾತುಗಳನ್ನು ಕೇಳಿ ಅವುಗಳು ಕೂಡಾ ಒಪ್ಪಿಗೆಯಿಂದ 'ತಲೆಯಲ್ಲಾಡಿಸುತ್ತಿವೆ. ನಿನ್ನ ಮೇಲೆ ಅವುಗಳಿಗದೆಷ್ಟು ಪ್ರೀತಿ!"

"ತೊಪ್ಪೈ, ನಿನ್ನ ಹಾಡು ನನ್ನ ಮೆದುಳಿಗೆ ಮಸುಕನ್ನುಂಟು ಮಾಡಿದೆ. ನನಗಾಗಿ ಹಾಗೂ ಈ ಮಕ್ಕಳಿಗಾಗಿ ನೀನು ಸೂಚಿಸಿರುವ ಹಂಚಿಕೆಯು ಸ್ವಪ್ನವನ್ನು ನಾನು ಕಾಣುತ್ತಿದ್ದೇನೆ. ನಿನ್ನ ಮಾತಿನ ಸಾರಾಂಶ ಇಷ್ಟೇ ತಾನೆ? ಈ ಮೂನ್ನೂರು ಮರಗಳಿಂದ ನಾವು ಕಳ್ಳನ್ನು ಪಡೆಯಬಹುದು; ಈ ಹಳ್ಳಿಯಲ್ಲಿ ನಾವೊಂದು ಹೆಂಡದಂಗಡಿಯನ್ನು ಪಡೆದುಕೊಂಡಲ್ಲಿ..."

ಮುರುಗನು ಪ್ರೀತಿಯ ಚಿಕ್ಕ ಮಗುವಿನ ಬೆನ್ನು ತಟ್ಟುತ್ತ ಹೇಳಿದನು. ಆ ಮಕ್ಕಳ ಭಾವೀ ಜೀವನದ ಸುಖಕ್ಕಾಗಿ ತಾನು ಹಣ ಶೇಖರಿಸಬೇಕೆಂಬ ಧೃಢ ನಿಶ್ಚಯವನ್ನವನು ಮಾಡಿದನು. ವಾತ್ಸಲ್ಯದ ಅಂತಃಸ್ಫೂರ್ತಿಯು ಯಾವಾಗಲೂ ಲೂಟಿಯ ಮೂಲಕಾರಣವಿದೆ.

"ತಿಂಗಳೊಂದಕ್ಕೆ ಕಮ್ಮಿಯೆಂದರೆ ಐನ್ನೂರು ರೂಪಾಯಿ ಲಾಭವಾದರೂ ದೊರಕೀತು. ನಮ್ಮ ಹಳ್ಳಿ ಜನಭರಿತವಿದೆ. ಸುತ್ತಮುತ್ತ ಹಲವಾರು ಹಳ್ಳಿಗಳಿವೆ. ಸಾಧಾರಣ ಹತ್ತು ಮೈಲಿನೊಳಗೆ ಎಲ್ಲೂ ಕಳ್ಳಿನಂಗಡಿ ಇಲ್ಲ; ಐನೂರು ರೂಪಾಯಿಗಳು ನಿಶ್ಚಯ. ಅದು ಜಿಲ್ಲಾಧಿಕಾರಿಯ ಸಂಬಳವಿದೆ. ಮೂರು ವರ್ಷದೊಳಗೆ ಇಡೀ ಹಳ್ಳಿಯ ಸಂಪೂರ್ಣ ಧನಿಯಾಗಿ ಬಿಡಬಹುದು. ಆಗ ನಮ್ಮ ರೈತ ಬಾಂಧವರ, ಮಣ್ಣಿನ ಮಕ್ಕಳ, ಕಷ್ಟವನ್ನು ನೀನು ನೀಗಿಸಬಹುದು. ಈಗ ನಮ್ಮ ವರ್ಗದ ಹಳ್ಳಿಗಳು ಹಾಗೂ ಪಡ್ಡಾಚಿಗಳು ಈ ಸಿರಿವಂತರ ಕ್ರೂರ ದಬ್ಬಾಳಿಕೆಗೊಳಗಾಗಿದ್ದಾರೆ. ನಿನ್ನಲ್ಲಿ ನನಗೆ ವಿಶ್ವಾಸವಿದೆ ಮುರುಗ. ಅವನತ್ತ ನೋಡಿಯಾದರೂ ನಿರ್ಧಾರಕ್ಕೆ ಬಾ."

"ಆದರೆ ಆಗ ಬಡವರು ಕೂಡಾ ನಮ್ಮನ್ನು ಶಪಿಸಿಯಾರು," ಮುರುಗನು ಪುನಃ ಸಂಶಯವನ್ನು ವ್ಯಕ್ತ ಪಡಿಸಿದನು.

"ಅವರು ಹಾಗೆ ಮಾಡಬಹುದು. ಆಗ ಅವರು ತಮ್ಮ ಹಣದೊಂದಿಗೆ ಉಸಿರನ್ನೂ ಹಾಳು ಮಾಡಿಕೊಳ್ಳುತ್ತಾರೆ. ಆದರೆ ಶ್ರೀಮಂತಾನು 'ಕಿವುಡಂಗೆ ಕೂಡಾ ಬಡಜನರ ಕೂಗು ಕೇಳುವಂತೆ ಮಾಡಬಹುದು. ಶ್ರೀಮಂತನ ತಲೆ ಕೂದಲನ್ನೂ ಅದು ಸೋಂಕಲಾರದು. ಇದೆಲ್ಲಾ ನೀನು ಕಂಡಿರುವ ಜೀವನದ ಅನುಭವವೇ ಇದೆ. ಆದರ ಮೇಲೆ ನಾನ್ಯಾತಕ್ಕೆ ಭಾಷಣ ಕೊಡಲಿ? ನಿನಗೆ ಹೊಸತಾಗಿ ಏನನ್ನು ಕಲಿಸಬೇಕು? ಅಷ್ಟು ಮಾತ್ರವಲ್ಲ; ಯಾರು ನಿನ್ನನ್ನು ಶಪಿಸಬಹುದೆಂದು ಸಂದೇಹಪಡುತ್ತಿಯೋ ಅವರೇ ನಾಳೆ ನೀನು ಒಡೆಯನಾದಲ್ಲಿ ಬಹಳ ದಯಾಳು ಧನಿಯೆಂದು ಕೊಂಡಾಡುತ್ತಾರೆ. ಅದನ್ನು ನಾನು ಪ್ರಮಾಣ ಮಾಡಿ ಹೇಳಬಲ್ಲೆ."

ತನ್ನ ನಕ್ಷತ್ರಗಳ ಬಲದಿಂದ ಮುರುಗನನ್ನು ಗೇಣಿದಾರನನ್ನಾಗಿ ಮಾಡಿದ್ದ ಅದೃಷ್ಟದ ಹುಡುಗಿಯು, ಅವನ ವಿಶಾಲ ಭುಜಗಳ ಮೇಲೆ ಹಾರಿ ಕುಳಿತುಕೊಂಡು ಅವನ ಕೆನ್ನೆಯನ್ನು ಹಿಂದಿನಿಂದ ತಟ್ಟಿದಳು. ಮುರುಗನಿಗೆ ಸಂತೋಷದ ಮಿಂಚು ಹೊಡೆದಂತಾಯಿತು. ಅಂತಹ ಸಂತೋಷ ತಾರುಣ್ಯವನ್ನು ದಾಟಿರುವ ತಂದೆಗೆ ಮಾತ್ರ ಅನುಭವವಾಗುತ್ತದೆ.

"ಒಳ್ಳೇದು, ಒಳ್ಳೇದು, ತೊಪ್ಪೈ, ನಿನ್ನ ಬಳಿ ವಾದಿಸಲು ನಾನು ಸಮರ್ಥನಿರುವದಿಲ್ಲ. ನೀನು ನನಗಾಗಿ ಬಹಳ ಕಷ್ಟಪಟ್ಟಿರುವೆ. ಇನ್ನೂ ಹಾಗೆ ಆಗತ್ಯವಿರುವದನ್ನು ಮಾಡು. ನಾನಾದರೋ ಮುದುಕನಾಗುತ್ತ ಬಂದಿದ್ದೇನೆ; ಹಿಂದಿನ ತಲೆಮಾರಿಗೆ ಸೇರಿದವನಿದ್ದೇನೆ. ಎಲ್ಲವೂ ನಿನ್ನದೇ ಇದೆ. ನೀನು ನನ್ನ ತಮ್ಮನೇ ಸರಿ. ನಿನ್ನ ಪಾಲೂ ಇಲ್ಲಿದೆ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ."

ತೊಪ್ಪೈಯು ಕ್ರಿಯಾಶೀಲನಿರುವದರಿಂದ ಒಡನೆ ಸುರಾ ಇಲಾಖೆಯಧಿಕಾರಿಯನ್ನು ಕಾಣಲು ಹೊರಟನು. ಸಾಹೇಬರನ್ನು ವಶಪಡಿಸಲಿಕ್ಕೆಂದು ಮೊದಲ ಕಾಣಿಕೆಯಾಗಿ ತನ್ನೊಂದಿಗೆ ಹನ್ನೆರಡು ಸಿಹಿಯಾಳಗಳನ್ನು ಕೊಂಡೊಯ್ದನು.

ಅವನು ಹೋಗುತ್ತಿದ್ದಂತೆ, ಮುರುಗನ ಕಣ್ಮುಂದೆ ರಾಮುವಿನ ಚಿತ್ರ ಬಂದು ನಿಂತಿತು. ಅವರ ಮಾತುಗಳನ್ನೆಲ್ಲ ಮರೆಯಲ್ಲಿ ನಿಂತುಕೊಂಡು ಕೇಳಿದ್ದ ಪೊನ್ನಿಯು ಓಡಿ ಬಂದಳು. "ಇಂದು ಅದ್ಯಾಕೋ ನಮಗೆ ಬಹಳ ಕೆಟ್ಟದಿನವಿದೆ. ತೊಪ್ಪೈಯು ಅಪಶಕುನದ ನಕ್ಷತ್ರವಿದ್ದಾನೆ, ಧೂಮಕೇತು ಇದ್ದಾನೆ; ಸ್ವಾಮಿ. ಅವನಿಗೆ ಮದುವೆ ಆಗಿರುವದಿಲ್ಲ. ಅವನಿಗೇನೂ ಇಲ್ಲಿ ಗೂಟ ಹೊಡೆದಿರುವದಿಲ್ಲ. ಅವನ ನುಣ್ಣನೆಯ ಮಾತುಗಳಿಗೆ ಮರುಳಾಗಬೇಡಿ. ನಿಮಗೆ ಮಕ್ಕಳಿವೆ—ಇಬ್ಬರು ಹುಡುಗರು ಅಲ್ಲದೆ ಮುವ್ವರು ಹುಡುಗಿಯರಿದ್ದಾರೆ."

ಪುನಃ ಪೊನ್ನಿಯು ವಾದಿಸಿದಳು. "ಕಳ್ಳಿನಂಗಡಿಗಾಗಿ ಕೆಲಸಮಾಡಬೇಡಿ. ಬಿಟ್ಟುಬಿಟ್ಟು, ಆದನ್ನು ಗುತ್ತಿಗೆಗೆ ಪಡೆದುಕೊಳ್ಳಬೇಡಿ. ಕೆಲ ವಿಷಯಗಳಿಂದಾಗಿ ಹಳ್ಳಿಯವರು ನಮ್ಮನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದಾರೆ. ಇನ್ನು ಮೇಲೆ ಅವರು ನಿಮ್ಮನ್ನು ಕುಡುಕನೆಂದು ಬಹಿರಂಗವಾಗಿ ಕರೆಯುತ್ತಾರೆ. ನಿಮ್ಮ ಕಾಲಿಗೆ ಬೀಳುತ್ತೇನೆ, ದಮ್ಮಯ್ಯ, ಕೈಯ್ಯನ್ನು ಹಿಂದಕ್ಕೆಳೆದುಕೊಳ್ಳಿರಿ."

"ಮೂರ್ಖ ಪೊನ್ನಿ" ಮುರುಗನು ತಾತ್ಸಾರ ಹಾಗೂ ಧೈರ್ಯದಿಂದ ಬದಲಿತ್ತನು. "ನಾನು ಮದ್ಯದಂಗಡಿಗಾಗಿ ಏತಕ್ಕೆ ಕಷ್ಟ ಪಡುತ್ತಿದ್ದೇನೆಂದು ನಿನಗೆ ಗೊತ್ತಿರುವದಿಲ್ಲ —ನನಗೆ ಕುಡಿಯಲಿಕ್ಕಾಗಿ ನಾನು ಕಷ್ಟ ಪಡುವದೇನು? ನೀನು ಆಲೋಚಿಸಿರುವ ಹಾಗೆ ನಾನು ಕುಡುಕನಿರುವದಿಲ್ಲ. ಗದ್ದೆಯು ಈಗ ನಮ್ಮ ಶ್ರಮಕ್ಕೆ ಸರಿಯಾಗಿ ಪ್ರತಿಫಲವನ್ನು ಕೊಡುವದಿಲ್ಲ. ಬೇಸಾಯವು ಈಗ ಮೊದಲಿನ ಹಾಗೆ ಇಲ್ಲ. ಪಟ್ಟಣಿಗರು ಅದು ಹೇಗೆ ಹಣ ಮಾಡುತ್ತಿದ್ದಾರೆಂಬ ಕಲ್ಪನೆಯೂ ನಿನಗೆ ಇರುವದಿಲ್ಲ. ನಮ್ಮ ಹಳ್ಳಿಯಲ್ಲಿ ಒಂದು ಮಾದಕ ಪದಾರ್ಥಗಳಂಗಡಿತೆರೆಯಲ್ಪಟ್ಟಲ್ಲಿ ನಾನು ಸುಲಭವಾಗಿ ಆದನ್ನು ಗುತ್ತಿಗೆಗೆ ಪಡೆದುಕೊಳ್ಳಬಹುದು. ಅದಕ್ಕಾಗಿ ಸರಕಾರವು ಪ್ರಯತ್ನಿಸುತ್ತಿದೆ. ಪೊನ್ನಿ, ನಾನು ನಿನಗೆ ಹೇಳುತ್ತೇನೆ. ಆಗ ಪ್ರತಿಯೊಂದು ತೆಂಗಿನ ಮರಕ್ಕೆ ಅಷ್ಟೇ ಭಾರದ ಬಂಗಾರ ಬರುತ್ತದೆ. ಹಾಗೆ ಕೇವಲ ಮೂರು ವರ್ಷಗಳಲ್ಲಿ ಇಡೀ ಹಳ್ಳಿಯನ್ನೇ ನಾವು ಕ್ರಯಕ್ಕೆ ಪಡೆದುಕೊಳ್ಳಬಹುದು, ಈ ಬಡ ಜನಂಗೆಲ್ಲಾ ಆಗ ಸಹಾಯ ಮಾಡಲಿಕ್ಕಾಗುತ್ತದೆ."

ಮಾತುಗಳು ಪೊನ್ನಿಯ ಅಳುವನ್ನು ಕಡಿಮೆ ಮಾಡಲಿಲ್ಲ.

(ಮುಂದುವರಿಯುವುದು)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಧೂಮಪಾನದ ಸಹಚರಾದ
ಆನಂದಕ್ಕಾಗಿ
ಸೇದಿರಿ
ಎಸ್. ಆರ್.
ಬೀಡಿಗಳನ್ನು
ಎಲ್ಲಾ ಕಡೆಗಳಲ್ಲಿಯೂ
ದೊರಕುತ್ತದೆ
SR
REGD.
S.R. BEEDI WORKS
UDIPI, S.K.

NAVAYUGA 3—3—1966
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಇದೊಂದು ಶುದ್ಧ ಹರಟೆ

ಹಸಿವೆ ಹಿಂಗಿಸುವ ಗೊಬ್ಬರ

ದೇಶದಲ್ಲಿ ಕ್ಷಾಮ ತಲೆದೋರಿದೆ ಎಂಬುದನ್ನು ಆಹಾರ ಮಂತ್ರಿ ಸುಬ್ರಹ್ಮಣ್ಯಂ ಇಷ್ಟು ತಡವಾದರೂ ಕೊನೆಗೂ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಮದ್ರಾಸದಲ್ಲಿ ಸುದ್ದಿಗಾರರೊಡನೆ ಮಾತಾಡುತ್ತಿರುವಾಗಲೇ ಈ ಮಾತನ್ನು ಒಪ್ಪಿಕೊಂಡದ್ದು ಮಾತ್ರವಲ್ಲ; ತಮ್ಮ ಸಹೋದ್ಯೋಗಿಗಳಲ್ಲಿ ಹಿರಿಯರಲ್ಲಿ ಹಿರಿಯರು ಇಂತಹ ಬರಗಾಲವನ್ನು ಕಂಡಿಲ್ಲ (೭೦ ವರ್ಷ) ಎಂದೂ ಸ್ಪಷ್ಟಪಡಿಸಿರುವುದರಿಂದ ಹೆಚ್ಚಿನವರಿಗೆ ತುಸು ಸಮಾಧಾನವಾಗಿದೆ. ಏಕೆಂದರೆ ಮೊನ್ನೆ ಮೊನ್ನೆಯ ವರೆಗೂ ಆಹಾರದ ಅಭಾವವಿದೆ ನಿಜ, ಅದನ್ನು ಸಂಪೂರ್ಣ ಹತೋಟಿಯಲ್ಲಿ ಇಟ್ಟುಕೊಳ್ಳಲಾಗಿದೆ–ಸರಕಾರ ಸೂಕ್ತ ಕ್ರಮ ವಹಿಸಿದೆ—ಎಂದು ಮುಂತಾಗಿ ವರದಾಭಯ ಮುದ್ರೆ ಪ್ರದರ್ಶಿಸುತ್ತಿದ್ದ ಪೂಜ್ಯ ಮಂತ್ರಿವರ್ಯರು ತಮ್ಮ ಸ್ವರವನ್ನು ಬದಲಿಸಲು, ಅದು ಎಳ್ಳಿನಷ್ಟೇ ಇರಲಿ, ಕಾರಣವೇನು?

ಮತ್ತೇನೂ ಇಲ್ಲ, ಇತ್ತೀಚೆಗಿನ ಎರಡು ವರ್ಷಗಳಿಂದ ಪಾರ್ಲಿಮೆಂಟಿನಿಂದ ಹಿಡಿದು ಅನಧಿಕಲತ, ಪಡಖಾನೆಯವರಿಗೂ ವಿವಾದಾಸ್ಪದವಾದ ಸಮಸ್ಯೆ ಆಹಾರದ್ದು. ಅಂದಿನಿಂದಲೂ ಈ ಆಹಾರಾಸುರನನ್ನು ಗೆಲ್ಲಲು ಸುಬ್ರಹ್ಮಣ್ಯಂ ಸೊಂಟ ಕಟ್ಟುತ್ತಲೇ ಬಂದಿದ್ದಾರೆ. ತಾನು ಗೆಲ್ಲುತ್ತಲೇ ಬಂದಿದ್ದೇನೆ ಎಂದೂ ಅನ್ನುತ್ತಾರೆ. ಕೇರಳದ ರೇಶನಿಂಗ್ ಪ್ರಮಾಣ ಕಡಿಮೆ ಮಾಡಿದ್ದೂ ಬಿಟ್ಟರು; ಅದನ್ನು ತುಸುವಾದರೂ ಏರಿಸಲು ಇಂದಿರಮ್ಮ ಮನಸ್ಸು ಮಾಡಬೇಕಾಯಿತು. ಜಯಪುರ ಕಾಂಗ್ರೆಸ್ ಸಮ್ಮೇಳನದ ನಂತರ ಸುಬ್ರಹ್ಮಣ್ಯಂ ಸ್ವರ ತುಸು ಬದಲಾದಂತಿದೆ. ತಾತ್ಕಾಲಿಕವಾಗಿ ಅಲ್ಲಿ ಸುರಿದ ಮಳೆಯಲ್ಲಿ ನೆನೆದು ಶೀತವಾದುದರಿಂದ ಇರಲೂ ಬಹುದು. ಅಥವಾ ಸ್ವಪಕ್ಷೀಯರಿಂದಲೇ ತನ್ನ ನೀತಿಯ ಅನ್ಯಾಯ ಟೀಕೆಯನ್ನು ಕೇಳಿ ಅದರ ಗಾಳಿ ತಾಗಿರಲೂ ಬಹುದು.

ನನ್ನಾಕೆಗೆ ಮೇಲಿನೆರಡು ಕಾರಣಗಳಿಗಿಂತ ಇನ್ನೊಂದು ಕಾರಣವೇ ಸರಿಯೆನಿಸುತ್ತದಂತೆ. ಈ ಬಾರಿಯ ಪಾರ್ಲಿಮೆಂಟ್ ಅಧಿವೇಶನದ ಪ್ರಾರಂಭದಲ್ಲಿಯೇ ಸುಬ್ರಹ್ಮಣ್ಯಂ ರಾಜಿನಾಮೆ ನೀಡಲಿ ಎಂಬ ಬೇಡಿಕೆ ಸದಸ್ಯರಿಂದ ಬಂತು. ಈ ರೀತಿ ಕೇಳುವ ಅಧಿಕಾರ ಅವರಿಗೆ ಘಟನಾತ್ಮಕವಾಗಿ ಇದೆಯೋ ಇಲ್ಲವೇ ಎನ್ನುವುದು ಬೇರೆಯೇ ಪ್ರಶ್ನೆ. ಆಗ ಪ್ರಾಯಃ ಮಂತ್ರಿಗಳ ಅವಸ್ಥೆ ವಿಶ್ವಾಮಿತ್ರನದ್ದಾಗಿರಬಹುದು. ವಶಿಷ್ಠ ಹರಿಶ್ಚಂದ್ರ ಸತ್ಯವಂತನೆಂದಾಗ ಆತನು ಸತ್ಯದಿಂದ ವಿಚಲನಾದರೆ... ಮಾಂಸ ಭಕ್ಷಿಸಿ, ದಕ್ಷಿಣ ದಿಕ್ಕಿಗೆ ಯಾತ್ರೆ ಹೊರಡುವ ಪ್ರತಿಜ್ಞೆ ಮಾಡಿದಾಗ ವಿಶ್ವಾಮಿತ್ರ ಕಣ್ಣು, ಕಿವಿ, ಬಾಯಿ ಅರಳಿಸಿ ವಿಸ್ಮಿತನಾಗಿದ್ದನಷ್ಟೆ, ತನ್ನ ತಾನು ಮರೆತಿರಲೂ ಬಹುದು. ಇಂದ್ರ 'ಈಗ ನಿನ್ನ ಸರದಿ ವಿಶ್ವಾಮಿತ್ರ' ಎಂದು (ರಟ್ಟೆ ಹಿಡಿದು) ಅಲುಗಾಡಿಸಿದಾಗಲೇ ಆತನಿಗಾದುದು ಎಚ್ಚರ! ನಿರುಪಾಯನಾಗಿ ಆತ ಹರಿಶ್ಚಂದ್ರನ ಮುಂದೆ ತಲೆ ಬಾಗಿದ ಅನ್ನಿ. ನಮ್ಮ ಆಹಾರ ಮಂತ್ರಿಗಳು ಸಮಸ್ಯೆಯ ಮುಂದೆ ವಿವಶರಾಗಿ ಇಂದು ಬಾಗಿದ್ದಾರೆ —ಬರಗಾಲ, ದುರ್ಭಿಕ್ಷ ಕ್ಷಾಮವು ದೇಶವಿಡಿ ವ್ಯಾಪಿಸಿದೆ ಎಂದು ಸ್ಪಷ್ಟ ಮಾತುಗಳಿಂದ ಒಪ್ಪಿಕೊಂಡಿದ್ದಾರೆ.

ಇದರಿಂದ ನಾವೇನೂ ಹೆದರಬೇಕಾಗಿಲ್ಲ. ಆಹಾರವಿಲ್ಲದೆ ದೇಶದಲ್ಲಿ ಕೋಟಿಗಟ್ಟಲೆ ಜನರು ಸಾಯುತ್ತಾರೆ ಎಂದು ಅಮೆರಿಕೆಯ ಪತ್ರಿಕೆಗಳಲ್ಲಿ ಗಾಬರಿ ಹುಟ್ಟಿಸುವ ವರದಿಗಳನ್ನು ಸುಬ್ರಹ್ಮಣ್ಯಂ ಬಲವಾಗಿ ಖಂಡಿಸಿದ್ದಾರೆ. ಅನ್ನವಿಲ್ಲದ್ದರಿಂದ ದೇಶದಲ್ಲಿ ಯಾರೂ ಸಾಯುವುದಿಲ್ಲವೆಂದು ವರದಿತ್ತಿದ್ದಾರೆ. ೪೫ ಕೋಟಿ ಪ್ರಜೆಗಳಿರುವ ಭಾರತದಲ್ಲಿ ವರ್ಷದಲ್ಲಿ ಒಂದೆರಡು ಕೋಟಿ ಹಳೆಯ ಮುಖಗಳು ಮಾಯವಾಗಿ ಅದಕ್ಕಿಂತ ಬಹಳ ಹೆಚ್ಚಿನ ಹೊಸ ಮುಖಗಳು ಕಾಣಿಸಿಕೊಳ್ಳುತ್ತವೆ- ಇದು ನಮ್ಮ ಪರಂಪರೆ ಎಂಬುದು ಅಮೆರಿಕನ್ ವರದಿಗಾರರಿಗೆ ಹೇಗೆ ತಿಳಿಯ ಬೇಕು? ಅನ್ನಕೊಳ್ಳುವ ಶಕ್ತಿಯಿಲ್ಲದ ಭಾರತೀಯ ಕುಟುಂಬಗಳು ಬ್ರಿಟಿಷ್ ಆಡಳಿತೆಯ ಸುವರ್ಣಯುಗದಲ್ಲಿಯೂ ಧಾರಾಳವಾಗಿದ್ದವು–ಇಂದಿಗೂ ಅಂತವರದೇ ಒಂದು ಗುಂಪುಗಾರಿಕೆ ಹೆಚ್ಚುತ್ತಿದ್ದರೆ ಅದಕ್ಕೆ ಯಾರು ಹೊಣೆ? ಮೇಲಾಗಿ ಮಂತ್ರಿಮಾಗಧರು ಅಭಯ ಮುದ್ರೆಯನ್ನು ನಟಿಸುತ್ತಿರುವಾಗ ವರದಿಗಾರರು ಅದನ್ನು ಕಡೆಗಣಿಸುವುದು ಅನ್ಯಾಯವಲ್ಲವೆ?— ಇವೇ ಮೊದಲಾದ ಸತ್ ಪಾಠಗಳನ್ನು ವರದಿಗಾರರಿಗೆ ಕಲಿಸಲು ಒಂದು ಸೆಮಿನಾರ್ ಏರ್ಪಡಿಸುವುದು ಸೂಕ್ತವೇ ಅಲ್ಲವೇ ಎಂಬುದನ್ನು ಪರಿಶೀಲಿಸಲು ಉಪಸಮಿತಿಯೊಂದನ್ನು ರಚಿಸಿದಲ್ಲಿ ಕೆಲವರಿಗಾದರೂ ಅನ್ನ ಸಿಕ್ಕೀತು.

ಆಹಾರದ ಸಮಸ್ಯೆಯನ್ನು ಬಗೆಹರಿಸಲು ವೈಜ್ಞಾನಿಕ ತಂತ್ರ ವಿಧಾನಗಳನು ಬಳಸಬೇಕು —ಇದು ನೂರಕ್ಕೆ ಇನ್ನೂರರಷ್ಟು ಸತ್ಯ. ವಿದೇಶಗಳಲ್ಲಿ ವೈಜ್ಞಾನಿಕ ಸಾಧನಗಳನ್ನು ಉಪಯೋಗಿಸಿ ಭೂಮಿಯೊಡನೆ ಹೋರಾಡುತ್ತಾರೆ. ನಾವು ಅವರ ಅಂಧಾನುಕರಣೆಯನ್ನು ಮಾಡು-
ಕ್ಕಿಂತ ಹೊಚ್ಚ ಹೊಸ ವಿಧಾನವ
ನ್ನು ಅರಸಬೇಕು ಎನ್ನುತ್ತಾಳೆ, ನನ್ನ
ಅದೇನು ಎಂದು ತಿಳಿಯಲು ನೀವ
ತುರ ಪಡಬಹುದು ಆಕೆಯ ಮಾತನ
ಕೇಳಿ:

'ಸಂಗೀತದಿಂದ ಬೆಳೆಗಳು ನಳ
ಬೆಳೆದು ಹೆಚ್ಚು ಫಲನೀಡುವುವು ಎ
ದೀಗ ಸಿದ್ಧ ಸ್ವೀಕೃತ ಸಂಗತಿ.
ಮೇಲೆ ಸಂಗೀತದಲ್ಲಿ ಒಂದು ತರದ
ಜ್ಞಾತ ಗೊಬ್ಬರ' ವಿದೆ. (ಈ ಸಂಬ
ಇನ್ನೂ ಸಂಶೋಧನೆ ನಡೆದು ಗೊ
ಕ್ಕೊಂದು ಹೆಸರಿಡುವ ಪ್ರಯತ್ನ ನ
ಲಿ) ಎಂದ ಹಾಗಾಯಿತು. (ಇಲ್ಲ
ಅಧಿಕ ಬೆಳೆ ಎಂತು ಸಾಧ್ಯ?)
ಹುದೇ ಇನ್ನೊಂದು ಬಗೆಯ ಗೊ
ಬಳಕೆಯಿಂದ ಮಾನವನ ಹೊಟ್ಟೆ
ತುಂಬುವಂತಾದರೆ?

'ಬಹಳ ಚಲೋದಿಲ್ಲವೇ?' ಆ ಗೊ
ನ್ನು ತುಂಬಿಕೊಳ್ಳಲು ಬಾಯಿಗಿಂತ
ಯೇ ಉತ್ತಮ. ಕಿವಿ ಮಾಡುವಷ್ಟು
ಯಿ ಮಾಡುವುದಿಲ್ಲ. ಅಲ್ಲದೆ ಕಿವಿಗೆ
ಕಾದಷ್ಟು, ರುಚ್ಯಾಮಾಲಾ ಸಿಗುತ್ತ
ವಿಗೂ ಬಾಯಿಗೂ ಹೊಟ್ಟೆಗೂ ಪ
ಸಂಬಂಧವಿದೆ. ವಿನೋದ ಪ
ಮಾತನ್ನು ಕೇಳುವಾಗ ಬಾಯಿ
ತ್ತದೆ, ಹೊಟ್ಟೆಯಲ್ಲಿ ಹುಣ್ಣಾಗು
ವೆ? ಆದುದರಿಂದ ಲಭ್ಯವಿರುವ
ಮೂಲಗಳಿಂದ ಮಾನವನ ಹಸಿ
ನ್ನು ಹೋಗಲಾಡಿಸಬಲ್ಲ 'ಗೊ
ದೊರೆತೀತೆ ಎಂದು ನಮ್ಮ ವಿಜ್ಞಾನಿ
ಈಗಿಂದೀಗಲೇ ತುರುಸಿನ ಸಂಶೋ
ಮಾಡಬೇಕು. ಅಂದರೆ ೧೯೭೦ರ
ನಿಷ್ಕರ್ಷ ಹೊರಟೀತು. ಇದಕ್ಕೆ ನವ
ಜಕಾರಣಿಗಳ ಭಾಷಣಗಳನ್ನೇ ಕಚ್ಚಾ
ವಾಗಿ ಉಪಯೋಗಿಸಬಹುದು. ಏ
ರೆ ಅವರಾದರೆ ಬಿಟ್ಟಿಯಾಗಿ ಮಾತ
ಸಿದ್ಧರಿದ್ದಾರೆ ಸಂಸ್ಕಾರ ಕಾಡುಗಳ
ಅತಿ ಉದಾರರು?

ಹೇಗಿದೆ ಸಲಹೆ? ಅಂತಹುದೆ
ಗೊಬ್ಬರ ಇಂದೇ ಸಿಗಲಿ, ನಾಕರಂ
ಗಿಲಿನಿಂದ, ಭಜಿಪಪ್ಪಲಿ ಅಂತ
ವಣ್ಣನಿಗೆ ಕೈ ಮುಗಿಯುತ್ತೇನೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕ
ವಿಷಯದ ಮೇಲೆ ಕೇಂದ್ರೀಕರಿಸಿ ಸತ್
ಗಳಲ್ಲಿಯೇ ತತ್ಪರವಾಗುವಂತೆ ಮಾಡ
ಬೆಲೆ: 0-19 ಪೈಸೆ.
0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು
ಯನ್ನು ಬುಕ್‌ಪೋಸ್ಟಿನಿಂದ ಕಳಿಸಬ
ರಿಯ ಪ್ರತಿಗಳಿಗೆ ವಿಚಾರಿಸಿರಿ:-
ನವಯುಗ ಪ್ರೆಸ್, ಉಡು

Edited, Printed & Published by K. H. Shetty at the Navayuga Press, Udipi, S. India.

ನವಯುಗ

10—3—1966

೨೦ ಪೈಸ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಮೊದಲು —

ರಾಮಚಂದ್ರ ಎರಡು ಬಾರಿ ಪ್ರಯತ್ನಿಸಿದರೂ ಬಿ. ಎ. ಪದವಿ ಸಿಗಲಿಲ್ಲ. ಜಾನಕಿಯ ಕೈಹಿಡಿದು ಮಿತ್ರ ಕೇದಾರಿಯಿಂದ ದೂರವಾಗಿ ತನ್ನ ಆಲವಂಕಿಗೆ ಮರಳಿದ. ಅಪರ, ಆತನ ಜಮೀನು ನೆರೆಗಾಹುತಿಯಾಯಿತು. ರೈತ ಮುರುಗನ ಸಮಾಧಾನದಿಂದಲೂ ಪತೋಟಿಗೆ ಬಾರದೆ ಆತ ಕಡಪದ ಕಲೆಕ್ಟರ್ ಕೆಡಲರ ಬಳಿ ಶಿಬಿರ ಗುಮಾಸ್ತನಾದ. ಮೂರು ತಿಂಗಳುಗಳಿಗಿಂತ ಹೆಚ್ಚಾಗಿ ಯಾರೂ ಶಿಬಿರ ಗುಮಾಸ್ತರಾಗಿ ಅವರ ಬಳಿ ನಿಲ್ಲುತ್ತಿರಲಿಲ್ಲ. ರಾಮು ಒಂದು ದಿನ ನೊಂದ ಮನಸ್ಸಿನಿಂದ ತನ್ನ ಜಮೀನನ್ನು ಹಿರಿಯ ಸ್ವಾಮಿಗೂ ತೋಟವನ್ನು ಮುರುಗನಿಗೂ ಮಾರಿ ಸಾಲದಿಂದ ಕೈತೊಳೆದುಕೊಂಡ. ಆತನ ಸೇವೆಯಿಂದ ತೃಪ್ತರಾದ ಕೆಡೆಲ್ ಭಡ್ತಿ ನೀಡಿಸಿ ದೂಸಿಯ ಉಪತಾಲೂಕಧಿಕಾರಿಯನ್ನಾಗಿ ಮಾಡಿಸಿದರು. ಕೆಡೆಲರೂ ಕಂದಾಯ ಮಂಡಲದ ಮೊದಲ ಸದಸ್ಯರೆನಿಸಿದರು.

ಶ್ರೀಮಂತನಾಗುತ್ತ ಬಂದ ರೈತ ಮುರುಗ ಕುಡಿಯುವುದನ್ನು ಹೊಪ್ಪಿಲ್ಲಯಿಂದ ಕಲಿತುಕೊಂಡ.

ಕೇದಾರಿ ಕೋಕಿಲಂಳ ಕೈಹಿಡಿದು ಮದ್ರಾಸದಲ್ಲಿ ಉದಯೋನ್ಮುಖ ಕಿರಿಯ ವಕೀಲನೆನಿಸಿದ ಸುಪ್ರಸಿದ್ಧ ಲಾಯರ್ ಮಾರ್ಕಂಡಂರವರ ಇವನಿಗಿತ್ತು.

—ಮುಂದೆ.

ಅದೇ ಸಮಯಲ್ಲಿ ಅದೃಷ್ಟ ದೇವತೆಯು ಕೇದಾರಿಯ ಸಮೀಪಕ್ಕೆ ಸರಿದಿದ್ದಳು. ಒಂದು ದಿನ ಸಾಯಂಕಾಲ, ಎಂದಿನಂತೆ, ಕೋಕಿಲಂ ನಾಡು ಬೀದಿಯಲ್ಲಿದ್ದ ಮನೆಯ ಕಿಟಕಿ ಬಳಿ ನಿಂತುಕೊಂಡು ಗಂಡನ ಆಗಮನವನ್ನು ನಿರೀಕ್ಷಿಸುತ್ತಿದ್ದಳು. ಅಗ್ಗ, ಮನೆಯತ್ತ ಸದ್ದು ಮಾಡದೆ ಆದರೆ ಗಂಭೀರವಾಗಿ ಮಾರ್ಕಂಡಂ ಅಯ್ಯರವರ ಉತ್ತಮ ರೋಲ್ಸ್—ರೋಯ್ಸ್ ಕಾರು ಬರುತ್ತಿದ್ದುದನ್ನು ಆಕೆ ಕಂಡಳು. ಆಕೆಗೆ ಸಂತೋಷದ ಮಿಂಚು ಹೊಡೆದಂತಾಯಿತು. ಅವಳು ಕಿಟಕಿಯಲ್ಲಿ ಇನ್ನೂ ಚೆನ್ನಾಗಿ ಇಣಿಕಿ ನೋಡಿದಳು. ಅವಳು ನೋಡುತ್ತಿದ್ದಂತೆ, ಕೇದಾರಿಯು ಮನೆಯೆದುರಿನಲ್ಲಿ ಕಾರು ನಿಂತೊಡನೆ ಕೆಳಗಿಳಿದನು. ಕಾರಿನೊಳಗೆ ಇದ್ದವರಿಗೆ ಧನ್ಯವಾದ ಸಮರ್ಪಣೆಯ ಮಾತುಗಳನ್ನಾಡುತ್ತ, ಬೀಳ್ಕೊಡುವಿಕೆಯ ನೋಟವನ್ನು ಬೀರಿದನು. ಕಾರಿನ ಒಳಗಿದ್ದವರು ಅವುಗಳತ್ತ ಅರೆಮನಸ್ಕರಾಗಿದ್ದರು. ಆ ವ್ಯಕ್ತಿ ಬೇರೆ ಯಾರೂ ಇರದೆ 'ಪ್ರಖ್ಯಾತ ನ್ಯಾಯವಾದಿ'ಯೇ ಇರಬೇಕೆಂದು ಕೋಕಿಲಂ ಖಂಡಿತ ಮಾಡಿಕೊಂಡಿದ್ದಳು. ಅವಳ ಮನಸ್ಸನ್ನು ಕಾರು ಮರುಳುಗೊಳಿಸಿತ್ತು. ಅದೊಂದು ಸುಂದರ ವಸ್ತುವಲ್ಲವೇ?

ಒಂದು ಕಾರು ಹೋಗಲು ಮಾತ್ರ ಆ ಬೀದಿಯಲ್ಲಿ ಸ್ಥಳವಿರುವದು. ಆ ಬೀದಿಗೆ ಅಂತಹ ಘನತೆ ದೊರಕಿದುದು ಇದೇ ಪ್ರಥಮ ಬಾರಿ ಎನ್ನಬಹುದು. ಇನ್ನೂ ಅವನು ಕಾರಿನ ಬಳಿ, ಹಲಗೆಯ ಮೇಲೆ ಕಾಲಿಟ್ಟುಕೊಂಡು, ಕೃತಜ್ಞತಾಪೂರ್ವಕ ಅಗಲುವಿಕೆಯ ನೋಟವನ್ನು ಬೀರುತ್ತ, ಪ್ರತಿಕ್ರಿಯೆಗಾಗಿ—ಅನಿಷ್ಟ ಪಕ್ಷಿ ಹೋಗುವ ಮಾತನ್ನು ಕೇಳಲಿಕ್ಕಾಗಿ—ಕಾದು ನಿಂತಿದ್ದನು.

"ಇದು ಸಪೂರ ಕ್ರಿಕೆಟ್ಟಿನ ಬೀದಿ ಇದೆ. ಬಹುಶಃ ಇಲ್ಲಿ ಬಹಳ ಮಂದಿ ಕಿರಿಯ ನ್ಯಾಯವಾದಿಗಳಿದ್ದಾರೆಂದು ಕಾಣುತ್ತದೆ ...." ನಿಶ್ಚೇಷ್ಟೆಯಿಂದ ಮಾರ್ಕಂಡಂ ವಿವರಿಸಿದರು. ಹಿಂದೆ ತಾನು ಇದೇ ಬೀದಿಯಲ್ಲಿದ್ದ ಮನೆಯೊಂದರ ಭಾಗದಲ್ಲಿ, ಐದು ರೂಪಾಯಿ ಬಾಡಿಗೆ ಕೊಡುತ್ತ ಇದ್ದೆನೆಂಬುದು ಅವರ ಜ್ಞಾಪಕಕ್ಕೆ ಬರಲಿಲ್ಲ. ನಾಡು ಬೀದಿಯು ಅನೇಕ ಮಹಾವ್ಯಕ್ತಿಗಳಿಗೆ ಉಳಕೊಂಡಿರಲು ಸ್ಥಳಕೊಟ್ಟಿರುವಂತೆ ಕೊಳಚೆಗೂ ಆಶ್ರಯವನ್ನಿತ್ತಿದೆ.

"ಹೌದು ಸ್ವಾಮಿ, ಇಲ್ಲಿ ಇದು ಸಪೂರವಾಗಿದ್ದುಕೊಂಡು ಜನಜಂಗುಳಿಯಿಂದ ತುಂಬಿಹೋಗಿದೆ. ಮಹಾನ್ ವ್ಯಕ್ತಿಗಳ ಹಾಗೂ ನದಿಗಳ ಆರಂಭ ಹಾಗೆ ತಾನೆ ಇರುತ್ತದೆ. ಇದು ಕೂಡಾ ಉತ್ತಮ ರೀತಿ ರೀತಿಯಲ್ಲೇ ಕೊನೆಗೊಳ್ಳುತ್ತದೆ. ಈ ಬೀದಿಯು ಮುಂದರಿದು ಕೆರೆಯ ಚೌಕದ ಬಳಿ ಬಂದು, ಹಾಗೆ ನಿಮ್ಮ ಲಝ್ಮನತ್ತ ಬರುತ್ತದೆ." ಮಾತುಗಳಿಂದ ಹೊರಲಿಕ್ಕಾಗದಿದ್ದರೂ ಉದಾಹರಣೆ ಹಾಗೂ ಸೂಚನೆಗಳನ್ನು ತುಂಬಿಸಿ ಧೈರ್ಯದಿಂದ ಕೇದಾರಿ ಉತ್ತರಕೊಟ್ಟನು. ಧೈರ್ಯಶಾಲಿ ಹಾಗೂ ಉಪಾಯಗಾರರ ಜಾಣ್ಮೆಯ ಹೊಗಲುವಿಕೆಗೆ ಪ್ರತಿಕ್ರಿಯೆಯನ್ನು ತೋರಿಸಲು ಎಂದೂ ಮಾರ್ಕಂಡಂ ತಪ್ಪುತಿದ್ದಿಲ್ಲ.

ಈ ಸಪೂರ ಬಿದಿಯಲ್ಲಿ ತನ್ನ ವೈಭವಪೂರ್ಣ ಕಾರನ್ನು ತೆಗೆದುಕೊಂಡು ಬಂದು ತೋರಿಸಿದ ಅನುಗ್ರಹವು ಹೆಚ್ಚಾಯಿತೆಂದು ರಥಿಕನು ಭಾವಿಸಿದನು. ಇನ್ನು ಹೆಚ್ಚು ನಮ್ರತೆಗೆ ಎಡೆಕೊಡಬಾರದೆಂದು, ಹತೋಟಿಯಲ್ಲಿಟ್ಟುಕೊಂಡಿದ್ದ ಬಂಡಿಯ ಲಗಾಮನ್ನು ಮೆಲ್ಲಮೆಲ್ಲನೆ ಸಡಿಲಿಸಿ ಬಂಡಿ ಚಲಿಸುವಂತೆ ಮಾಡಿದರು. ದೊಡ್ಡ ಮನುಷ್ಯರು ತನಗೆ ತೋರಿಸಿದ ಗೆಳೆತನದ ತೃಪ್ತಿಯಿಂದ ಕೇದಾರಿಯೂ ತನ್ನ ಮನೆಯತ್ತ ಕಾಲಿಟ್ಟನು. ಸಂದಿಯಲ್ಲಿ ಬಂಡಿ ಓಡಿಹೋಯಿತು.

ಮುಗುಳ್ನಗೆ ಬೀರುತ್ತಾ ಕೋಕಿಲಂ ಕೇದಾರಿಗೆ ಸ್ವಾಗತಬಯಸಿದಳು. "ಕೋಕಿಲಂ, ಇಂದು ನೀನು ಕೂಡಾ ಮುಗುಳ್ನಗುತ್ತ ನನಗೆ ಸ್ವಾಗತವನ್ನೀಯುತ್ತಿರುವೆ" ಕೇದಾರಿಯು ಹೇಳಿದನು.

"ನಿಮ್ಮ ಹಿರಿಯರು ನಿಮ್ಮೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸುತ್ತಿರುವಂತೆ ಕಾಣುತ್ತಿದೆ. ಇದು ನನ್ನ ಅದೃಷ್ಟ...."

"ಹೌದು, ಹೌದು, ಸೋಲು ನನ್ನದಾಗುತ್ತಲಿದೆ! ಗೆಲುವು ನಿನ್ನದಿರುತ್ತದೆ! ಅದು ನಿಜವಾಗಿ ಸ್ತ್ರೀಸಹಜಸ್ವಭಾವವಿದೆ. ಸ್ತ್ರೀಜಾತಿಯು ಗಂಡಸರನ್ನು ಕೇವಲ ಸಂಬಳವಿಲ್ಲದ ಕೆಲಸಗಾರನನ್ನಾಗಿ ಮಾಡಿಕೊಂಡಿದೆ. ಪ್ರತಿಯಾಗಿ ಒಂದು ಮುಗುಳ್ನಗೆಯನ್ನೂ ಕೊಡುವುದಿಲ್ಲ! ಇದೆಲ್ಲಾ ನನಗೆ ಚೆನ್ನಾಗಿ ಗೊತ್ತಾಗಿದೆ."

"ನಿಮ್ಮ ಮನೆಬಾಗಿಲಿನ ಬಳಿಗೆ ಬಂದು ನಿಮ್ಮನ್ನು ಬಿಟ್ಟುಹೋಗುವ, ಇಂತಹ ಅಪೂರ್ವ ಕರುಣೆಗೆ ಕಾರಣವೇನೊಂದ್ರೆ?"

"ಪ್ರಶ್ನೆಯನ್ನೇತಕ್ಕೆ ಕೇಳುತ್ತಿರುವೆ ಇಂತಹ ಅಪೂರ್ವ ಕರುಣೆಗೆ ಕಾರಣವೇನೊಂದ್ರೆ?" "ಪ್ರಶ್ನೆಯನ್ನೇತಕ್ಕೆ ಕೇಳುತ್ತಿರುವೆ? ಇದೆಲ್ಲಾ ನಿನ್ನ ಒಳ್ಳೆಯ ನಕ್ಷತ್ರಗಳ ಬಲದಿಂದಾಗಿ ಎಂದು ನೀನೇ ಆಗ ಹೇಳಿರುವೆಯಲ್ಲವೇನೇ?"

"ಹಾಗಾದಲ್ಲಿ ಗುಟ್ಟನ್ನು ನೀವೇ ರಹಸ್ಯವಾಗಿಟ್ಟುಕೊಂಡು ಇದ್ದುಬಿಡಿ." ಕೋಕಿಲಂ ಕೋಪವನ್ನು ಪ್ರಕಟಿಸಿ, ಮುಖ ಮುರುಗಿಸಿ, ತನ್ನ ಕೆಲಸಕ್ಕೆ ಹೋದಳು.

"ಸಿಟ್ಟುಮಾಡಿಕೊಳ್ಳಬೇಡ, ಪ್ರಿಯೆ ಕೋಕಿಲಂ, ಅದು ನಿನ್ನ ರೂಪಕ್ಕೆ ಒಪ್ಪ ಕೊಡುತ್ತದೆ. ಆದರೂ ಕೋಪಿಸಿಕೊಳ್ಳಬೇಡ, ನನ್ನ ಮುಖಂಡರು ಒಂದು ಹೊಂಡದಲ್ಲಿ ಬಿದ್ದಿದ್ದರು. ಅದು ಮಾತಿನ ಹೊಂಡವೇನೋ ಸರಿ. ಅದರಿಂದ ನಾನವರನ್ನೆತ್ತಿದೆ. ನನ್ನ ಹಿರಿಯ ನ್ಯಾಯವಾದಿಗಳಿಗೆ ನ್ಯಾಯ ವ್ಯಾಜ್ಯದ ಸಂಸ್ಕೃತಿ ಬಿಟ್ಟರೆ ಬೇರೆ ಯಾವ ತರದ ಸಂಸ್ಕೃತಿಯೂ ಇಲ್ಲವೆಂಬುದು ನಿನಗೆ ಗೊತ್ತಿದೆ. ವಿದ್ಯಾಲಯದಲ್ಲಿ ಪಠ್ಯಪುಸ್ತಕಗಳಿಂದಾಗಿ ಅವರು ಒಂದಿಷ್ಟು ಗೌರವವನ್ನು ಕಾಪಾಡಿಕೊಂಡಿದ್ದರು. ಆ ಹುಳಕ್ಕೆ ಹರಳೆಲೆಯ ರುಚಿ ಗೊತ್ತಿಲ್ಲದೆ ಹಿಪ್ಪಲಿನೇರಳೆಲೆಯ ರುಚಿ ಗೊತ್ತಿರುವದಿಲ್ಲ. ಅನೇಕ ತರದ ಕಷ್ಟಗಳಿಂದ ಈಗಾಗ ನಾನವರನ್ನು ತಪ್ಪಿಸುತ್ತಿದ್ದೇನೆ. ಅದರಿಂದಾಗಿ ಅವರು ನನಗೆ ಹೆಚ್ಚು ಹೆಚ್ಚಾಗಿ ಗೆಳೆತನವನ್ನು ತೋರಿಸುತ್ತಿದ್ದಾರೆ. ಅವರ ಚಾಲಕ, ಗುಮಾಸ್ತರು, ಸ್ನೇಹಿತರು ಹಾಗೂ ಬಡಕುಟುಂಬದ ಹೋರಾಡುತ್ತಿರುವ ಕಿರಿಯರೆಲ್ಲರಿಗಿಂತಲೂ ನನ್ನನ್ನು ಹೆಚ್ಚು ಸ್ನೇಹದಿಂದ ಕಾಣುತ್ತಿದ್ದಾರೆ. ಉದಾಟಮನಸ್ಸುಳ್ಳವನಿಗೆ ವಿಜಯವು ಬಹು ಸ್ವಾಭಾವಿಕವಿದೆ. ಅವರ ಮನಸ್ಸಿಗೆ ಒಪ್ಪುವಂತೆ ನಾನೂ ಅಳವಡಿಸಿಕೊಳ್ಳಬೇಕಾಗುತ್ತದೆ. ನಾನವರನ್ನು ಸುತ್ತುಗಟ್ಟಿಕೊಂಡಿದ್ದು ಯಾರನ್ನೂ ಅವರ ಬಳಿ ಹೋಗಲು ಬಿಡುವುದಿಲ್ಲ. ಶಕ್ತಿಯೆ ಯೋಗ್ಯವಿದೆ. ಸಾಧುಸ್ವಭಾವದವನು ಬಾಳುವದು ಬಹಳ ಕಷ್ಟ. ನಾನೂ ಸಾಧು ಜೀವನವನ್ನು ನಡೆಸಲು ಬಹಳ ಪ್ರಯತ್ನಿಸಿದ್ದೆ. ಕೃತ್ರಿಮತೆ ಇಲ್ಲದೆ ಬಾಳುವುದು ಅಸಾಧ್ಯವೆಂಬುದನ್ನು ನಾನು ಕಂಡುಕೊಂಡಿದ್ದೇನೆ. ನನ್ನ ಜೀವನವೇ ಒಂದು ನಿಜವಾದ ಭಾಷ್ಯವಿದೆ. ನಾನು ಎರಡು ರೀತಿಯ ಜೀವನದ ರುಚಿಯನ್ನೂ ಕಂಡಿದ್ದೇನೆ.

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

—— ಮುಖಪತ್ರದಲ್ಲಿ: ——

ಒಂದು ಲಕ್ಷ ಕ್ಯೂಬನ್ ನಿರಾಶ್ರಿತರಲ್ಲಿ ಈ ಹುಡುಗಿಯೂ ಒಬ್ಬಳು. ತನ್ನ ಪ್ರೀತಿಯ ಗೊಂಬೆಯೊಡನೆ ಈ ಫ್ಲೋರಿಡಾದಲ್ಲಿ ಮೊತ್ತಮೊದಲಿಗೆ ಅಮೇರಿಕೆಯ ನೆಲದಲ್ಲಿ ಪಾದಾರ್ಪಣ ಮಾಡಿದಳು.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೬	೧೦—೩—೧೯೬೬	No. 26

ಮರಳಿ ಹೊರಟಲ್ಲಿಗೆ

ತಾಷ್ಕೆಂಟ್ ಘೋಷಣೆಯನ್ನು ಒಪ್ಪಿಕೊಂಡು, ಅದನ್ನು ಅಕ್ಷರಶಃ ಪಾಲಿಸುವುದಾಗಿ ಹೇಳಿಕೊಂಡು ಬಂದ ಪಾಕಿಸ್ತಾನದ ಅಂತರಂಗ ಲೋಕ ತಿಳಿದು ಕೊಂಡಿರುವಷ್ಟು ತಿಳಿಯಲಾಗಿಲ್ಲವೆಂದು ಇದೀಗ ಮತ್ತೊಮ್ಮೆ ಸ್ಪಷ್ಟವಾಗಿದೆ. ತಾಷ್ಕೆಂಟ್ ಘೋಷಣೆಯಲ್ಲಿ ಉಭಯ ದೇಶಗಳ ನಡುವೆ ಆರ್ಥಿಕ, ವ್ಯಾವಹಾರಿಕಾದಿ ಸಂಬಂಧಗಳನ್ನು ಮತ್ತೆ ಪ್ರಾರಂಭಿಸಲು ನಾನಾ ಮಟ್ಟದಲ್ಲಿ ಸಭೆ ಸೇರಲು ಉಭಯ ಪ್ರಧಾನಿಗಳೂ ಒಪ್ಪಿದ್ದರು. ಅದರಂತೆ ಮಂತ್ರಿ ಮಟ್ಟದ ಸಭೆಯೊಂದು ರಾವಲ್ಪಿಂಡಿಯಲ್ಲಿ ಮೊದಲನೆಯ ಬಾರಿಗೆ ನಡೆಯಿತು. ಈ ಸಭೆಯಲ್ಲಿ ಪಾಕಿಸ್ತಾನವು ವ್ಯಕ್ತಪಡಿಸಿದ ಅಭಿಪ್ರಾಯ ಮತ್ತು ಅದು ತಳೆದ ನಿಲುವುಗಳು ತಾಷ್ಕೆಂಟ್ ಘೋಷಣೆಗೆ ಅನುಗುಣವಾಗಿರಲಿಲ್ಲವೆಂದೇ ಹೇಳಬೇಕು. ಆದರೂ ಕೊನೆಗೆ ಹೊರಟ ಜಂಟಿ ಹೇಳಿಕೆಯು 'ಎರಡೂ ಕಡೆಯ ಮಾತುಕತೆಗಳಲ್ಲಿ ನಾಕಷ್ಟು ಪ್ರಗತಿ ಸಾಧಿಸಲಾಗಿದೆ. ಮತ್ತೊಮ್ಮೆ ಸಭೆ ಸೇರಲು ಒಪ್ಪಿಗೆಯಾಗಿದೆ' ಎಂದು ಹೊರಟಿದೆ. ಇದರಲ್ಲಿ ಮೊದಲನೆಯ ವಾಕ್ಯ ಬರಿಯ ಔಪಚಾರಿಕವಾದ ಎಂದನಿಸುವುದು ಸ್ವಾಭಾವಿಕ.

ರಾವಲ್ಪಿಂಡಿಯಲ್ಲಿ ಸೇರಿದ್ದ ಮಂತ್ರಿ ಮಟ್ಟದ ಸಭೆಯಲ್ಲಿ ಎರಡೂ ದೇಶಗಳ ವಿದೇಶ ಮಂತ್ರಿಗಳು ಭಾಗವಹಿಸಿದ್ದರು. ಇವರಿಗೆ ಸಹಾಯಕರಾಗಿ ಒಬ್ಬಿಬ್ಬರು ಮಂತ್ರಿಗಳೂ ಅಧಿಕಾರಿಗಳೂ ಇದ್ದರು. ಜಡ್. ಎ. ಭುಟ್ಟೋ ತಾಷ್ಕೆಂಟ್ ಘೋಷಣೆಯ ಬಗ್ಗೆ ವಿಶೇಷ ಮಹತ್ವ ನೀಡಿದಂತೆ ಹಿಂದೆಯೂ ಕಂಡು ಬಂದಿಲ್ಲ. ಅಧ್ಯಕ್ಷ ಅಯ್ಯೂಬಖಾನರ 'ಬಲಾತ್ಕಾರ'ದಿಂದಾಗಿಯೇ ಅವರು ತಾಷ್ಕೆಂಟದಲ್ಲ ತೆಪ್ಪಗೆ ಕುಳಿತಿರಬೇಕು. ಅಲ್ಲಿಂದ ಮರಳಿದ ಬಳಿಕ ಸ್ವದೇಶದಲ್ಲಿ ತಮ್ಮದೇ ಆದ ವಿವರಣೆ-ವ್ಯಾಖ್ಯಾನಗಳೊಂದಿಗೆ ತಾಷ್ಕೆಂಟ್ ಹೆಸರೆತ್ತುವ ಚಟ ಅವರದ್ದಾಯಿತು. ಇಷ್ಟರಿಂದಲೇ ಒಂದು ಮಾತು ಸುಸ್ಪಷ್ಟವಾಗುತ್ತದೆ: ತಾಷ್ಕೆಂಟ್ ಘೋಷಣೆಯಿಂದ ಅತೃಪ್ತರಾದ ಪ್ರಥಮ ಪಾಕಿಸ್ತಾನಿಯೆಂದರೆ ಭುಟ್ಟೋ ಮಹಾಶಯರು. ಅವರ ಈ ಬಗೆಯ ಅಸಮಾಧಾನ ಮಾತುಕತೆಯ ವೇಳೆ ತೀವ್ರ ಪರಿಣಾಮ ಬೀರಿತು. ಕಾಶ್ಮೀರದ ತಂಟೆಯ ಪರಿಹಾರದ ಮಾತನ್ನೇ ಅವರು ಮುಂದೆ ಮಾಡಿ ಮಾತಾಡಿದರೇ ಹೊರತು ಆರ್ಥಿಕಾದಿ ವ್ಯವಹಾರ ಪುನರ್‌ಸ್ಥಾಪನೆಯ ಬಗ್ಗೆ ತುಟಿ ಬಿಚ್ಚಲಿಲ್ಲ. ಈ ಒಂದು ಪ್ರಶ್ನೆ ಪರಿಹಾರಗೊಂಡರೆ ಉಳಿದ ಎಲ್ಲಾ ತಂಟೆಗಳು ತಾನಾಗಿಯೇ ಬಗೆ ಹರಿಯುವುವು—(ಅವರಂಗಜೇಬನ ಕುಲದವರಿರಬಹುದು) ಎಂದು ಎಲ್ಲವನ್ನೂ ಅವರು ಕಾಶ್ಮೀರದ ಕೊರಳಿಗೆ ಕಟ್ಟಿ ಬಿಡುವ ತಮ್ಮ ಹಳೆಯ ಹವ್ಯಾಸಕ್ಕೆ ಇಳಿದಾಗ, ಭಾರತದ ವಿದೇಶ ಮಂತ್ರಿ ಸರ್ದಾರ ಸ್ವರ್ಣ ಸಿಂಗರು ಸುಮ್ಮನಿರುವುದಕ್ಕಾಗುತ್ತದೆಯೆ? ಭಾರತದ ಕಾಶ್ಮೀರ ನೀತಿಯನ್ನು ಅವರು ಮತ್ತೆ ಭುಟ್ಟೋರಿಗೆ ತಿಳಿಸಲೇ ಬೇಕಾಯಿತು. ಇದು ಅವರಿಗೆ ಅಪ್ರಿಯವಲ್ಲದೆ ಮತ್ತೇನ್ನೇನು? ಕಾಶ್ಮೀರವು ಭಾರತದ ಒಂದು ರಾಜ್ಯ. ಅದರ ಮೇಲೆ ಭಾರತದ ಸಾರ್ವಭೌಮಾಧಿಕಾರವಿದೆ. ಇದನ್ನು ಪ್ರಶ್ನಿಸುವ ಅಧಿಕಾರ ಯಾರೊಬ್ಬನಿಗೂ ಇಲ್ಲ—ಇದನ್ನು ಭುಟ್ಟೋ ಎಂತು ಸಹಿಸಿಯಾರು? ಇಂದು ಭುಟ್ಟೋ ಪಾಕಿಸ್ತಾನದಲ್ಲಿ ಬದುಕಿ ಉಳಿದಿರುವುದಾದರೆ ಅದು ಅವರ 'ಕಾಶ್ಮೀರ ಪ್ರಶ್ನೆ'ಯಿಂದ. ಅದಿಲ್ಲವಾದರೆ, ಅವರೂ ಇಲ್ಲ ಎಂಬ ಸ್ಥಿತಿ ಅಲ್ಲಿದೆ. ಅಧ್ಯಕ್ಷ ಅಯೂಬರಿಗೂ ವಿದೇಶ ಮಂತ್ರಿ ಭುಟ್ಟೋರಿಗೂ ಹಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದೆಯೆಂದು ವ್ಯಕ್ತವಾಗಿದೆ. ಇದು ನಿಜವಾದರೆ, ಇಬ್ಬರಲ್ಲಿ ಯಾರಾದರೊಬ್ಬರ ಪದಚ್ಯುತಿ ಖಂಡಿತವೆಂಬಷ್ಟು ಸುದ್ದಿ ದಟ್ಟವಾಗಿದೆ. ಆದರೆ, ಅಯ್ಯೂಬರ ದಂಡಿನಾಳಿಕೆಯಿಂದ, ಅವರ ರಾಜಕೀಯ ಮಹತ್ವಾಕಾಂಕ್ಷೆಯಿಂದ ಭುಟ್ಟೋ ಇದುವರೆಗೆ ಉಳಿದಿದ್ದಾರೆ ಎಂಬುದನ್ನು ಮರೆಯಬಾರದು.

ತಾಷ್ಕೆಂಟ್ ಘೋಷಣೆಯು ಎಲ್ಲ ತಂಟೆಗಳನ್ನೂ ಸೌಹಾರ್ದಮಯವಾಗಿ ಬಗೆಹರಿಸಿಕೊಳ್ಳಬೇಕು, ಶಸ್ತ್ರಗಳನ್ನು ಹಿಡಿಯುವ ಗೋಜಿಗೆ ಹೋಗಬಾರದು—ಎಂದು ಕರೆಯಿತ್ತಿದೆ. ಕಾಶ್ಮೀರದ ಪ್ರಸ್ತಾಪವನ್ನು ಎತ್ತಬಾರದು ಎಂದೇನಿಲ್ಲ ನಿಜ, ಆದರೆ, ಅದರ ಸುತ್ತಮುತ್ತ ಮುಳ್ಳಿನ ಸಿಕ್ಕು ತುಂಬಿರುವಾಗ ಅವನ್ನು ದೂರೀಕರಿಸುವ ಪ್ರಯತ್ನ ಮೊದಲು ಮಾಡಬೇಕಾಗಿತ್ತು. ಪಾಕ್ ಕಾಶ್ಮೀರ ನೀತಿಯನ್ನು ಭಾರತವು ಒಪ್ಪಿಕೊಳ್ಳುವುದಾದರೆ ಇಷ್ಟೆಲ್ಲಾ ಹಗರಣ ನಡೆಯಬೇಕಾಗಿಯೇ ಇರಲಿಲ್ಲ. ಇತರ ಸಮಸ್ಯೆಯನ್ನು ಮೊತ್ತಮೊದಲು ದೂರೀಕರಿಸಿ, ಉಭಯ ದೇಶಗಳಲ್ಲೂ ದೃಢ ಸಂಬಂಧವನ್ನು ಬೆಳೆಸಿ ಮತ್ತೆ ಕಾಶ್ಮೀರದ ವಿಷಯದಲ್ಲೂ ಒಂದು ನಿರ್ಣಯಕ್ಕೆ ಬರುವುದು ಪಾಕಿಸ್ತಾನಕ್ಕೆ ಸಾಧ್ಯವಿದ್ದಿತ್ತೋ ಏನೋ....ಅದಲ್ಲಾ ಬಿಟ್ಟು ಮೊತ್ತಮೊದಲಿಗನೇ ಭುಟ್ಟೋ ಕಾಶ್ಮೀರವನ್ನೇ ಎತ್ತಿಕೊಂಡದ್ದು ಎಂದರೆ, ತಾಷ್ಕೆಂಟಿಗೆ ಮೊದಲು ಎಲ್ಲಿದ್ದರೋ ಅಲ್ಲಿಗೇ ಮತ್ತೆ ಮರಳಿದಂತಾಯಿತು. ತಾಷ್ಕೆಂಟ್ ಘೋಷಣೆಯ ಉದ್ದೇಶ ಇದೆಯೇ ಏನು? ಸಂಹಾರ್ದಮಯ ವಾತಾವರಣ ಇದರಿಂದುಂಟಾಗುವುದು ಸಾಧ್ಯವೇನು? ಅಧ್ಯಕ್ಷ ಅಯ್ಯೂಬಖಾನರು ಈ ಬಗ್ಗೆ ಹೆಚ್ಚು ಆಲೋಚನೆ ಮಾಡಬೇಕು. ಅವರು ಶಾಂತಿಯನ್ನು, ಮೈತ್ರಿಯನ್ನು ಬಯಸುವುದು ನಿಜವಾದರೆ, ಭುಟ್ಟೋ ಮಹಾಶಯರಿಗೆ ತುಸು ತಿಳಿ ಹೇಳಬೇಕು; ಇಲ್ಲವೇ ಅವರನ್ನು ಸಭೆಗಳಿಗೆ ಕಳಿಸುವುದನ್ನು ನಿಲ್ಲಿಸಬೇಕು.

ಎರಡೂ ಕಡೆಯಲ್ಲಿಯೂ ಹೃತ್ಪೂರ್ವಕವಾಗಿ ಘೋಷಣೆಯ ಅಂಶಗಳನ್ನು ಕಾರ್ಯಗತ ಮಾಡುವ ಪ್ರಯತ್ನ ನಡೆದರೆ ಮಾತ್ರ ಅದು ಸಾರ್ಥಕವಾದೀತು. ಅದು ಬಿಟ್ಟು ಭಾರತ ನೀರಿಗಿಳಿದಾಗ ಪಾಕ್ ಏರಿಗೆಳೆದರೆ ಏನು ಲಾಭ? ಜಗತ್ತು ಇದನ್ನು ತಿಳಿಯಬೇಕು.

ವಚನ ಸುಧೆ

ತಪೋ ಬಲಂ ತಾಪಸಾನಾಂ
ಬ್ರಹ್ಮ ಬ್ರಹ್ಮವಿದಾಂ ಬಲಂ।
ಹಿಂಸಾ ಬಲಮಸಾಧೂನಾಂ
ಕ್ಷಮಾ ಗುಣವತಾಂ ಬಲಂ ॥

ತಪಸ್ಸು ತಪಸ್ವಿಗಳಿಗೆ ಬಲ; ವೇದವು ವೇದಜ್ಞರಿಗೆ ಬಲ. ಹಿಂಸೆಯು ದುಷ್ಟರ ಶಕ್ತಿಯಾದರೆ, ಕ್ಷಮೆಯು ಗುಣವಂತರ ಅದ್ವಿತೀಯ ಶಕ್ತಿ.

ಬಂಡಿನ ಗಾಳಿ

ನಾಗಾ ಬಂಡುಗಾರರ ಗಾಳಿ ಮಿಜೋ ಗುಡ್ಡಗಾಡು ಪ್ರದೇಶಕ್ಕೂ ಬೀಸಿದುದು ರಾಷ್ಟ್ರ ಪುರುಷನ ಆರೋಗ್ಯಕ್ಕೆ ನೆಮ್ಮದಿಯನ್ನು ತರುವುದಿಲ್ಲ. ಮಿಜೋ ಬಂಡುಗಾರರು ಭಾರತ ಒಕ್ಕೂಟದಿಂದ ಹೊರಗೆ ಸ್ವತಂತ್ರ ರಾಜ್ಯವೊಂದನ್ನು ಬಯಸುತ್ತಾರೆ, ಸರಕಾರವನ್ನು ಪ್ರತಿಭಟಿಸುತ್ತಾರೆ. ಸಶಸ್ತ್ರವಾಗಿ ಹೋರಾಡುತ್ತಾರೆ. ವಿತ್ತ ಜೀವಿತಗಳಿಗೆ ನಷ್ಟವನ್ನುಂಟು ಮಾಡುತ್ತಾರೆ. ದೇಶದ ಸಮಗ್ರತೆಗೆ ಬಂದಿರುವ ಈ ಆಹ್ವಾನವನ್ನು ಭಾರತ ಸರಕಾರ ಸ್ವೀಕರಿಸಿದೆ, ಸೈನ್ಯದ ಮೂಲಕ ಬಂಡುಗಾರರ ಹಿಂಸಾಕೃತ್ಯಗಳನ್ನು ತಡೆಯುವುದಕ್ಕೆ ಹೊರಟಿದೆ; ಮತ್ತೆ ಯಾವ ಉಪಾಯಗಳೂ ಇಲ್ಲವೆಂದಾದ ಮೇಲೆ ಹೀಗೆ ಮಾಡದಿರಲು ಸಾಧ್ಯವಿದೆಯೆ? ನಾಗಾಲ್ಯಾಂಡಿನಂತೆಯೇ ಮಿಜೋ ಮೊದಲಾದ ಬೆರಳೆಣಿಕೆಯ ಗುಡ್ಡಗಾಡಿನ ಜಿಲ್ಲೆಗಳಿಗೆ ಸ್ವಾಯತ್ತ ಅಧಿಕಾರವನ್ನು ಕೊಡುವ ಇರಾದೆ ಇದೆ; ಆದರೆ ಅವು ಭಾರತ ಒಕ್ಕೂಟದಿಂದ ಹೊರಗುಳಿಯುವಂತಿಲ್ಲ. ಈ ಸಂಬಂಧದಲ್ಲಿ ಸರಕಾರವು ತೀವ್ರವಾಗಿ ಪರಿಶೀಲಿಸುತಿದ್ದು ಸದ್ಯದಲ್ಲಿಯೇ ಒಂದು ನಿರ್ಣಯಕ್ಕೆ ಬರಲಿದೆ.

ಪ್ರತ್ಯೇಕತಾ ಭಾವನೆ ಎಲ್ಲಿಯೇ ನೆಡೆಯಲಿ, ಅದನ್ನು ಹತ್ತಿಕ್ಕಲೇ ಬೇಕು. ಭಾರತ ಸರಕಾರ ರಾಜ್ಯದ ನೆರವಿನಿಂದ ಈ ಬಂಡಿನ ಪ್ರವೃತ್ತಿ ಸುತ್ತಮುತ್ತ ಹರಡದಂತೆ ಎಚ್ಚರಿಕೆ ವಹಿಸಿ ಮಿಜೋದಲ್ಲಿ ಎದ್ದ ಜ್ವಾಲೆಯನ್ನು ತಣಿಸಲಿ.

ನರಸಣ್ಣನ ಸರಸ



'ಉಳಿತಾಯದ ಮುಂಗಡ ಪತ್ರವನ್ನು ಮಂಡಿಸಿದ ಅರ್ಥಮಂತ್ರಿಗಳು ಆರ್ಥಿಕ ಪರಿಸ್ಥಿತಿ ಬಹಳ ಗಂಡಾಂತರ ಸ್ಥಿತಿಯಲ್ಲಿದೆ ಎಂದು ಲೆಕ್ಚರ್ ಬಿಟ್ರಂತೆ. ಇದರ ಅರ್ಥ ಏನೊಂತ ಆಗೋದಿಲ್ಲ...'

'ಗಂಡಾಂತರ ಪರಿಸ್ಥಿತಿ ಈ ಆರ್ಥಿಕ ವರ್ಷ ಮುಗಿಯೋವರೆಗೂ ಹಿಂತೆಗೆದುಕೊಳ್ಳುತ್ತದಿ ಬ್ಲಾಂಕ ಇರಬೇಕು, ಅಲ್ವೆ?'

ಗೇಹರಾಜ್ಯದಲ್ಲಿ

ನಾಟಕದ ಒಂದಂಕ ಮುಗಿಯಿತು

"ಅಂತೂ ನಾಟಕದ ಒಂದಂಕ ಮುಗಿಯಿತೂನ್ನು......"

"ಏನ್ರಿ ಇದು, ಬರಬರುತ್ತಲೇ ನಾಟಕ ನಾಟಕಾಂತ ಅರ್ಭಟಿಸುತ್ತಿದ್ದೀರಿ?...."

'ಅಲ್ವೇ, ನಾನನ್ನೋದೆಲ್ಲಾ ಅರ್ಭಟಿ ಆಗಿ ಹೋಯ್ತಲ್ವೇ ನಿನಗೆ?"

"ಹುಲಿ ಒದರೋದು ಅರ್ಭಟಿಯಲ್ವೆ?

"ಹೌದು, ಹೌದು, ಹುಲೀದು ಅರ್ಭಟಿ, ಸಿಂಹದ್ದು ಗರ್ಜನೆ.... ಅಂದ್ರೆ, ನೀನನ್ನೋ ಹಾಗೆ.... ನಾನು...."

'ಅಲ್ರಿ, ಸಿಂಹ... ಸಿಂಹ... ಅರ್ಭಟಿಯಾದ್ರೆ ಏನು? ಗರ್ಜನೆಯಾದ್ರೆ ಏನು?'

"ಪರಿಣಾಮದಲ್ಲಿ ಎರಡೂ ಒಂದೇ ಎನ್ನು....ಅಲ್ಲಾ, ನೀನು ಇದನ್ನೆಲ್ಲಾ ಎಲ್ಲಿ ಕಲಿತೆ ಅಂತ?'

"ಯಾವುದನ್ನ?"

'ಮತ್ಯಾವುದನ್ನ? ಹೀಗೆಲ್ಲಾ ಬೇರೆಯವರಿಗೆ ಹೆಸರಿಡೋದನ್ನ....'

"ಅಯ್ಯೋ,ನಾನ್ಯಾರಿಂಗೆ ಹೆಸ್ರು ಇಟ್ಟೆ?"

'ಮತ್ಯಾರಿಗೆ? ನನಗೆ....?

'ಓ, ಈಗ ಸಿಂಹ ಅಂದದ್ದು ಮನಸಿಗೆ ತಂದು ಕೊಂಡಿರಿ ಅಲ್ವೆ? ನೋಡಿ, ಎಲ್ಲಿಯೋ ಓದಿದ್ದ ನೆನಪು. ಉದ್ಯೋಗಿನಂ ಪುರುಷ ಸಿಂಹಯುಪೈತಿ ಲಕ್ಷ್ಮೀಃ..."

"ಓಹೋ, ಭಾರಿ ಮಾತು ಬಲ್ಲವಳಾಗಿ ಹೋಗಿ ಬಿಟ್ಟೆ. ಅದಿರ್ಲಿ, ನೀನೀಗಂದೋ ಮಾತಿನ ಅರ್ಥವೇನೂಂತಾದ್ರೂ ತಿಳ್ಕೊಂಡಿದ್ದೀಯ?"

'ಅದ್ರಡಿಯಲ್ಲೇ ಬರೆದಿತ್ತೂನ್ನಿ.... ಉದ್ಯೋಗಶೀಲನಾದ ಮನುಷ್ಯನೇ ಯಶಗಳಿಸುತ್ತಾನೇಂತ...."

'ಅಂತೂ ನನ್ನನ್ನು ಸಿಂಹ ಮಾಡಿದಿ. ಸದ್ಯ ಮತ್ಯಾವುದಾದರೂ ಪ್ರಾಣಿಯನ್ನಾಗಿ ಮಾಡಲಿಲ್ಲ..."

'ಸಿಂಹ ಯಾವುದಕ್ಕೆ ಕಡಮೆ? ಅಂದಕ್ಕೋ, ಅಲಂಕಾರಕ್ಕೋ, ಶೌರ್ಯಕ್ಕೋ, ಧೈರ್ಯಕ್ಕೋ?... ಅಂತಲೇ ಅದನ್ನು ಮೃಗರಾಜ, ವನರಾಜ ಅಂತ ಗೌರವಿಸುತ್ತಾರೆ ನೋಡಿ...."

"ಅದು ಸರೀನ್ನು, ಅದ್ರೆ ಬರಿಯ ಗೌರವದಿಂದ ಏನು ಲಾಭ?"

'ಯಾಕೆ ಇಲ್ಲ ...?"

"ಯಾಕೇಂತ ಅನ್ನಲಿ? ಬಸವಣ್ಣನವರ ವಚನವೊಂದಿದೆ ಕೇಳು....'

"ಹ್ಞೂಂ...."

'ಕಲ್ಲನಾಗರ ಕಂಡರೆ ಹಾಲ ನೆರೆಯೆಂಬರು, ನಿಜದ ನಾಗರ ಕಂಡರೆ ಕೊಲ್ಲೆಂಬರು..."

"ಜೀವನ್ನೋದು ನಿಜಾರಿ. ಯಾಕೆ ಹೀಗೆ?"

"ಯಾಕೆ ಅಂದ್ರೆ? ಉಂಬ ಜಂಗಮ ಬಂದರೆ ನಡೆಯೆಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರು....'

"ಹೌದು, ಇದೇ ಇಂದಿನ ಲೋಕದ ಸ್ಥಿತಿ....'

"ಅದನ್ನೇ ಬಸವಣ್ಣನವರು ಎತ್ತಿ ಹೇಳಿ ಖಂಡಿಸಿದರು.ಮತ್ತೆ ನೋಡು,ಈಯೆಲ್ಲಾ ಅನ್ಯಾಯ ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡಿಯ ಪ್ರಪಂಚದಲ್ಲಿಯೇ ನಡೆಯುತ್ತಿದೆ, ಇದೇ ಶೋಚನೀಯ....?

'ಅಂದರೆ?"

"ಅಂದರೆ ಏನು? ಸಮಾಜವಾದದಿಂದ ದೂರವಾಗುತ್ತ ಬರುತ್ತಿದೆ. ಶ್ರೀಮಂತ—ಬಡವರ ಮಧ್ಯದ ಅಂತರ ಕಡಿಮೆಯಾಗುತ್ತ ಬರುತ್ತಿದೆ. ರೂ. ೮೦ ಪಡೆಯುವವರ ವೇತನ ರೂ. ೫ ಹೆಚ್ಚಿದರೆ, ರೂ. ೨೧೦೦ ಪಡೆಯುವವರ ವೇತನ ರೂ. ೧೨೨ ಏರುತ್ತದೆ. ಮೊದಲೇ ಇದ್ದ ಅಸಮಾನತೆ ಮತ್ತೂ ಮತ್ತೂ ಹೆಚ್ಚುತ್ತಲೇ ಹೋಗುತ್ತದೆ...'

"ಅಂದ್ರೆ ಹೆಚ್ಚು ವೇತನ ಪಡೆಯುವವರು ಶಾಪಗ್ರಸ್ತರೂಂತಾಯ್ತು ....'

'ಹಾಗಲ್ಲವೇ. ಬೆಲೆಯೇರಿಕೆಯ ಭೀಕರ ಪರಿಣಾಮ ಬೀಳುವುದು ಮೊತ್ತಮೊದಲು ಅಲ್ಪವೇತನ ಪಡೆಯುವವರ ಮೇಲೆ ಅಧಿಕವೇತನದಾರರೂ ಕಷ್ಟಕ್ಕೆ ಒಳಗಾಗುತ್ತಾರೆ,ನಿಜ. ಆದರೆ, ಅವರು ತುಸು ಮಿತ ವ್ಯಯವನ್ನು ಸಾಧಿಸಬಹುದಲ್ಲವೆ?'

'ಅಂದರೆ? ತುಸು ವಿವರಿಸಿ ಹೇಳಿ....'

'ನೋಡು, ಇಂದಿನ ದಿನದಲ್ಲಿ ಪ್ರತಿಯೊಂದರ ಬೆಲೆಯೂ ಗಗನ ಮುಟ್ಟಿದೆ...'

'ಅದು ಸರೀನ್ನಿ...ನಮ್ಮ ದಯಾ ಬೊಬ್ಬೆ ಹೊಡೆಯುತ್ತಿದ್ದ...'

'ಹೌದು, ದಯಾನನ್ನೇ ತೆಗೆದುಕೋ. ಸುಲಕ್ಷಣವಾದ ಹೆಂಡ್ತಿ ಇದ್ದಾಳೆ, ಎರಡು ಮಕ್ಕಳಿವೆ. ತಂದ-ತಾಯಿ ಇದ್ದಾರೆ. ಒಬ್ಬ ತಂದೆಗೆ ಒಬ್ಬನೇ ಮಗನಾಗಿ ಹುಟ್ಟಿದಾಂತ ಬಚಾವಾದ ಅವನೀಗ ರೂ. ೮೦ + ೩೩೦ ವೇತನ ಪಡೆಯುತ್ತಾನೆ..."

'ಒಂದು ಮೂರು ಹೆಚ್ಚಾಗಿರಬೇಕೂನ್ನಿ..."

'ಇಲ್ಲ, ತಿಂಗಳಿಗೆ ೧೧೭ ರೂಪಾಯಿಯಾಯ್ತು. ಇದ್ರಲ್ಲಿ ಅವ ಈ ನಗರದಲ್ಲಿ ದಿನ ಹೇಗೆ ತಗೀಬೇಕೂಂತ?"

"ಸರೀನ್ನಿ. ಮೂವತ್ತೈದು ಮನೆ ಬಾಡಿಗೆ, ಐದು ಲೈಟಿಂಗ್, ಮೂವತ್ತು ಹಾಲಿಗ ಅಂದ್ರು ಅಲ್ಲಿಗೆ ಎಪ್ಪತ್ತು ಆಯ್ತು.ಉಳಿದ ನಲುವತ್ತಾರರಲ್ಲಿ ನಲುವತ್ತು ಕಲೋ ಅಕ್ಕೀನೇ ಬರೋಲ್ಲ, ಮತ್ತು ಬೇಯಿಸೋಕ ಒಟ್ಟಿಗೆ ಎಲ್ಲಿ ನಂಜಕೊಳ್ಳೋಕೆ ಉಪ್ಪು ಎಲ್ಲಿಂದ? ನಿತ್ಯ ಒಪ್ಪೊತ್ತಿನ ವ್ರತ ಬೇರೆ ......'

"ಹಾಗೆಯೇ ನೋಡು, ಪ್ರತಿಯೊಬ್ಬರದ್ದೂ. ಇಂತಹ ಸಂದರ್ಭದಲ್ಲಿ ಒಪ್ಪೊತ್ತು ಊಟ ಬಿಡೀಂತ ಕರೆಯಿತ್ರೆ ಏನು ಲಾಭ?

"ಅಲ್ರಿ ಒಪ್ಪೊತ್ತು ಊಟ ಮಾಡದೆ ಇರುವ ಕುಟುಂಬಗಳೂ ಇಲ್ಲವೇಂತ?"

'ಇಲ್ಲದ ಎಲ್ಲಿ ಹೋಗಿದ್ದಾರೆ? ಇದ್ದೇ ಇದ್ದಾರೇನ್ನು. ಅಂತಹರ ಸಂಖ್ಯೆ ನಿಜಕ್ಕೂ ಹೆಚ್ಚಾಗುತ್ತ ಬರುತ್ತಿದೇನ್ನು.."

"ಹೀಗಿರುವಾಗ, ಕಲವೇ ಜನರು ಆಡಂಬರ ಪ್ರದರ್ಶಿಸುವುದು ಯಾವ ನ್ಯಾಯಾಂತ?"

'ನ್ಯಾಯ ಅನ್ಯಾಯದ ಪ್ರಶ್ನೆ ದೂರವಿಡು. ಇದು ಲೋಕದ ಸ್ಥಿತಿ. ನಾವು ಒಂದು ತುತ್ತು ಅನ್ನವನ್ನು ಬಾಯಿತ್ತ ಒಯ್ಯಲು ಎತ್ತಿದಾಗ ಅದನ್ನು ನೂರಾರು ಕ್ಷುಧಿತ ನೇತ್ರಗಳು ನೋಡುತ್ತಿರುತ್ತವೆ. ಅವನ್ನು ವಂಚಿಸಿಯೇ ನಾವು ಉಣ್ಣುತಿದ್ದೇವೆಂದು ಅವರು ಭಾವಿಸಿರುವಂತೆ ಭಾಸವಾಗುತ್ತದೆ..'

'ಅದಕ್ಕೆ ಏನು ಮಾಡೋದು? ಅವರವರು ಪಡೆದು ಬಂದಿರೋದನ್ನ ಅವರವರು ಅನುಭವಿಸುತ್ತಾರೆ....'

'ಅದು ಬಂಡವಳವಾದವಾಯ್ತು. ಒಬ್ಬ ಬಡಕುಟುಂಬದಲ್ಲಿ ಜನಿಸಿದರೆ, ಅದು ಅವನ ತಪ್ಪೆ?'

'ಮತ್ಯಾರದ್ದು? ನೋಡಿ, ನಿಮ್ಮ ಮೈಸೂರು ಸರ್ಕಾರ ಹಾಗೆಯೇ ಹೇಳುತ್ತಿತ್ತು ಹುಟ್ಟನಿಂದ 'ಬ್ರಾಹ್ಮಣನಾದವರೆಲ್ಲಾ ಮುಂದುವರಿದ ಜಾತಿಯವರೂಂತ....'

"ಆದರೆ ನೋಡು, ಜನ್ಮದಿಂದ ಹೆಸರಿನಿಂದ ಒಬ್ಬನ ಗೊತ್ತುಗುರಿಯನ್ನು ನಿರ್ಧರಿಸುವುದು ತೀರ ಮೂರ್ಖತನ...."

'ಅಲ್ಲದೆ ಮತ್ತೇನು? ಅಮರನಾಲನೂ ಸತ್ತು ಹೋಗುತ್ತಾನೆ; ಬ್ರಾಹ್ಮಣನೂ ಕಟುಕನಾಗುತ್ತಾನೆ. ಅದಕ್ಕೆಂದೇ ಹುಂಡಿಯಯವಿಕೆಯನ್ನು ಅರ್ಥಿಕ ಮಾನದಂಡದಿಂದಲೇ ಅಳೆಯ ಬೇಕೆನ್ನುವುದು ..."

'ಆರ್ಥಿಕ ಮಾನದಂಡದಿಂದ ಅಳೆಯುವುದು ಹೇಗೆ? ಆದೂ ಈಗ ಮೂರ್ಖತನದ ಪರಮಾವಧಿಯಾಗಿಬಿಟ್ಟಿದೆ..."

"ಯಾಕೆ?"

'ಯಾಕೆ? ನಿನ್ನ ದಯಾನನ್ನು ಕೇಳು... ಅವನಿಗೆಲ್ಲಾ ಗೊತ್ತು. ಜಮೀನ್ದಾರರು ತಮ್ಮ ಮಕ್ಕಳ ರಕ್ಷಣೆಯನ್ನು ಹೆಂಡತಿಗೆ ಒಪ್ಪಿಸಿ ಆಕೆಯ ವಾರ್ಷಿಕ ಆದಾಯ ರೂ. ೫೦೦ಕ್ಕಿಂತ ಹೆಚ್ಚಿಲ್ಲ ಅಂತ ಘೋಷಿಸುತ್ತಾರೆ....'

"ಹಾಗೆ...ಅದು ಸರಿ.ಇವರು ಘೋಷಿಸುತ್ತಾರೆ, ಅಧಿಕಾರವುಳ್ಳವರು ಕಣ್ಣು ಮುಚ್ಚಿ ಒಪ್ಪಿಕೊಳ್ಳುತ್ತಾರೆ."

"ಎಲ್ಲಿಯ ವರೆಗೆ ಅಂದರೆ, ಹತ್ತು ಮಕ್ಕಳ ತಾಯಿಯೊಬ್ಬರು ದಿನವೊಂದರ ಒಂದು ರೂಪಾಯಿಯನ್ನೂ ಸಂಪಾದಿಸಿದೆ, ಹನ್ನೊಂದು ಹೊಟ್ಟೆಗಳನ್ನು ಸಾಕುತ್ತಾಳೆ, ಅವರಿಗೆ ಪುಸ್ತಕ ಪಾಟಿ ಒದಗಿಸುತ್ತಾಳೆ, ಬಟ್ಟೆ ಬರೆ ಹೊಲಿಸುತ್ತಾಳೆ.."

"ಅಲ್ರಿ, ನೀವು ಹೀಗೆಲ್ಲಾ ಅಂದ್ರೆ ನಾನು ಬಿಡೋದಿಲ್ಲ...."

"ಯಾಕೆ?"

ಮತ್ತೆ ನೀವು ತಾಯಂದಿರ ಮೇಲೆ ಏರಿ ಹೋಗ್ತೀರಲ್ಲಾ..."

"ಓ...."

'ಕೇಳಿ, ಉದಾರಿಗಳು ಅನ್ನ ಹಾಕ್ತಾರೆ, ಪುಸ್ತಕ ಒದಗಿಸ್ತಾರೆ... ಯಾಕೆ ಆಗಬಾರದು?'

"ನೋಡು, ಈ ಬಗೆಯ ಸಹಾಯವೂ ಒಂದು ಬಗೆಯ ಆದಾಯವೇ ಅಲ್ಲವೆ? ಅದನ್ನು ಘೋಷಿಸುವುದು ಬೇಡವೆ?"

'ನಿಮ್ಮದು ಬರಿಯ ಆದರ್ಶವಾಯ್ತು. ನೋಡಿ, ನಿಮಗೆ ಯಾರಾದರೂ ಕಾಫಿ ಕುಡಿಸ್ತಾರೇನ್ನಿ ಅದನ್ನೆಲ್ಲಾ ಲೆಕ್ಕ ಇಟ್ಟು ಕೊಂಡು ಆದಾಯದ ಲೆಕ್ಕಾಚಾರ ಮಾಡಿ...."

'ನೋಡು, ಅದಕ್ಕೇ ನಾನು ಯಾರ ಕಾಫೀನೂ ಕುಡಿಯೋದಿಲ್ಲ.'

"ಮತ್ತೆ ಸೇರ್ಸಿ. ಆದಕ್ಕೇ ಯಾರಿಗೂ ಕುಡಿಸೋದು ಇಲ್ಲಾಂತ...."

'ಕೊಡದ ಇದ್ದವರಿಗೆ ಕೊಳ್ಳುವ ಅಧಿಕಾರ ಎಲ್ಲಿದೆ?'

"ಅದೆಲ್ಲಾ ಆದರ್ಶದಲ್ಲಿ ನೋಡಿ, ಕ ನಡೆಯೋದೇನು? ಚಿಕ್ಕ ಮೀನು ಕೆ ದೊಡ್ಡ ಮೀನು ತೆಗೆದುಕೊಳ್ಳೋದು

'ಅಂದ್ರೆ?"

'ನೋಡಿ, ನಿಮ್ಮ ಮುಂಗಡ ಪತ್ರ ಲ್ಲಿ ಲಾಭ ಇಲ್ಲದ ಕಲಾಕರಣೆಯನ್ನು ದು ಹಾಕಿ 'ರಿಯಾಯಿತಿ' ತೋರಿಸೋ ಆದರ ಹಿಂದೆ ಲಾಭದಾಯಕವಾಗು ತೆ ಇತರತ್ರ ಕರ ಹೇರೋದು...'

'ಮತ್ತೆ ಅವು ಮಾಡಬೇಕಾದ್ದು ಏ ಆಯ—ವ್ಯಯಗಳ ಬಾಯನ್ನು ಸರಿಗ ಡಿಸದೆ ಉಪಾಯವಿಲ್ಲ ತಾನೆ?'

'ಅದು ಹೌದ್ರಿ.. ರಕ್ತ ಹೀರು ಕ್ಕೂ ಒಂದು ಮಿತಿ ಇರಬೇಕು, ದೇ ಲ್ಲಿನ ರಕ್ತವೆಲ್ಲವನ್ನೂ ಹೀರಿ ಬಿಟ್ರೆ, ತ್ತು ಇವ ಬದುಕುವುದಾದರೂ ಹೇಗೆ

'ಅಯ್ಯೋ ಇದೆಲ್ಲಾ ಏನೂಂತ?'

'ಯಾಕೆ, ಏನಾಯ್ತು ?'

'ಅಲ್ವೇ, ದೇಶಕ್ಕೋಸ್ಕರ ಸರ್ವ ಕ್ಕೂ ಸಿದ್ಧ ಅಂತ ಪ್ರತಿಜ್ಞೆ ಮಾಡುವ ಬದುಕಬೇಕೂಂತ ಆಸೆಪಟ್ರೆ....'

'ಸುರುವಾಯ್ತು.ಇವ್ರದ್ದೊಂದು... ಲ್ರಿ ಬದುಕಬೇಕು, ಅದ್ರೆ ದೇಶಕ್ಕಾಗಿ ದುಕ ಬೇಕು...."

'ದೇಶಕ್ಕಾಗಿ ಬದುಕುವುದು ತ್ಯಾಗ ಮಾಡಿ ಮಾಡಿ ಬಡಕಲಾಗಿ ದು ದಿನ ಜೀವತ್ಯಾಗಕ್ಕೂ ಸಿದ್ಧ ಗೋದು...."

"ಇದ್ದವರು ತ್ಯಾಗ ಮಾಡಿಯಾರು ಲ್ಲದವರು ಏನು ಮಾಡಿಯಾರು?

'ಇಲ್ಲದೆ ಇದ್ದವರನ್ನು ಇಲ್ಲಾಂತ ಗು ಹಾಕಿದವರನ್ನು ಕೇಳ್ತಾರೆ ಯಾ ಮನೆಯಿಲ್ಲದವನಿಗೆ ಮನೆಕರವಿಲ್ಲ, ದ್ಯೋಗವೇ ಇಲ್ಲದವನಿಗೆ ಉದ್ಯೋ ಕರವಿಲ್ಲ...'

'ಏನಿದ್ರೂ ಈ ತೆರಿಗೆ ಭಾರ ಯಾಯ್ತು...."

'ಎಲ್ಲರೂ ಸರಿಯಾಗಿ ಕರಕೊಡ ದನ್ನು ತಮ್ಮ ಕರ್ತವ್ಯವೆಂದು ತಿ ವರ್ತಿಸಿದರೆ....'

'ಅದ್ರೆ ಅಂತಹ ಪ್ರಜ್ಞೆ ಬರಬೇಕ

'ನಾ ಬಂದಿದ್ದೇನೆ ಅನ್ನೋ ಪ್ರಜ್ಞೆ ಗಿನ್ನೂ ಆಗಿಲ್ಲಾಂತಾದ ಮೇಲೆ...'

'ಹ್ಞೂಂ.... ಕೊನೆಗೂ ಬ್ರಹ್ಮಾ ಬಿಡೋಕ ಗುಬ್ಬಿ ಸಿಕ್ತು. ಆಗ್ಲಿ ಬೀ ಬರುತ್ತೇ ಅರಬಾಯಿಕೊಡುತ್ತಾ ಬಂದ ನೀವು. ಯಾಕೆ ಚರ್ಚೆ? ಹೋಗಿ ಬಾ ಟ್ಟೇಲಿ ಕೊಡವಾಣವಿದೆ, ಕೈ ಕಾಲು ಳ್ಕೊಂಡು ಬಂದು ಬಿಡಿ...'

'ಸದ್ಯ ಬಾವಿಗೀಗಿಲ್ಲ ಅನ್ನಲಿಲ್ಲ...'

'ತೂ ಸಾಕುಮಾಡಿ, ಬನ್ನೀಂದ್ರೆ

'ಅಯ್ಯಪ್ಪ ಮತ್ತೆ ಮಾಡೋದಾ ಏನು?'

'ಅಯ್ಯೋ ವೈರಾಗ್ಯವೆ!'

'ಹ್ಞ ಹ್ಞ... ಇದು ಬರಿಯ ವೈರಾ ವಲ್ಲ, ಉದರ ವೈರಾಗ್ಯ...,

'ಆದ್ರೆ ನೋಡಿ, ನಾಟಕದ ಒಂದ

'ಹ್ಞೂಂ....'

— ಸೊ

READ & ADVERTISE IN NAVAYUGA WEEKLY

ತಾಷ್ಕೆಂಟ್ ಘೋಷಣೆ

ಹಾಜಿಪೀರ್ ಕಣಿವೆಯನ್ನು ತೆರವು ಮಾಡಿದ್ದೇಕೆ?

ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಮಂತ್ರಿ ಶಾಖೆಯು ಜಾಹಿರಾತು ಮತ್ತು ದೃಕ್ಶ್ರಾವ್ಯ ಪ್ರಚಾರ ವಿಭಾಗದವರು, ಐತಿಹಾಸಿಕ ಮಹತ್ವದ ತಾಷ್ಕೆಂಟ್ ಘೋಷಣೆಯನ್ನು ಕುರಿತು, ಆಕರ್ಷಕ ಕಿರುಹೊತ್ತಿಗೆಯೊಂದನ್ನು ಪ್ರಕಟಿಸಿದ್ದಾರೆ. ಈ ಕಿರುಹೊತ್ತಿಗೆಯು ಪ್ರಶ್ನೋತ್ತರಗಳ ರೂಪದಲ್ಲಿದೆ. ಈ ಹೊತ್ತಿಗೆಯು, ಭಾರತವು, ಹಾಜೀಪೀರ್ ಮತ್ತು ಇತರ ಪ್ರದೇಶಗಳಿಂದ ತನ್ನ ಯೋಧರನ್ನು ವಾಪಸ್ ಕರೆಸಿಕೊಳ್ಳಲು ಏಕೆ ಒಪ್ಪಿಕೊಂಡಿತು? ಎಂಬುದನ್ನು ಸರಳ ಹಾಗೂ ಮನೋಜ್ಞ ರೀತಿಯಲ್ಲಿ ವಿವರಿಸುತ್ತದೆ ಈ ಕಿರುಹೊತ್ತಿಗೆಯಲ್ಲಿನ ಪ್ರಶ್ನೋತ್ತರಗಳನ್ನು ಇಲ್ಲಿ ಕೊಡಲಾಗಿದೆ.

ಪ್ರಶ್ನೆ:— ತಾಷ್ಕೆಂಟ್ ಘೋಷಣೆಯ ಮಹತ್ವವೇನು?

ಉತ್ತರ.-ಭಾರತ ಮತ್ತು ಪಾಕಿಸ್ತಾನಗಳು ಪರಸ್ಪರ ವಿವಾದಗಳ ಮತ್ತು ಭಿನ್ನಾಭಿಪ್ರಾಯಗಳ ನಿವಾರಣೆಗಾಗಿ ಬಲಪ್ರಯೋಗವನ್ನು ವರ್ಜಿಸಲು ಒಪ್ಪಿಕೊಂಡಿರುವುದು ತಾಷ್ಕೆಂಟ್ ಘೋಷಣೆಯ ಒಂದು ಮುಖ್ಯಾಂಶವಾಗಿದೆ. ಇನ್ನು ಮುಂದೆ ಎರಡೂ ರಾಷ್ಟ್ರಗಳ ನಡುವೆ ತಲೆದೋರಬಹುದಾದ ಯಾವುದೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಶಸ್ತ್ರಾಸ್ತ್ರಗಳ ಮೊರೆ ಹೋಗಬಾರದೆಂದು ಭಾರತ ...ಪಾಕಿಸ್ತಾನಗಳು ನಿರ್ಧರಿಸಿವೆ. ಇದರಿಂದಾಗಿ ನಿರ್ಮಾಣಗೊಳ್ಳುವ ಸಹಜ ಶಾಂತಿಯುತ ಮತ್ತು ಸಹಕಾರದ ವಾತಾವರಣದಲ್ಲಿ ಎರಡೂ ರಾಷ್ಟ್ರಗಳೂ ಅನೇಕ ಸಮಸ್ಯೆಗಳ ಪರಿಹಾರಕ್ಕಾಗಿ ತಮ್ಮ ಯತ್ನಗಳನ್ನು ಮುಂದುವರಿಸುವುದು.

ಭಾರತ ಮತ್ತು ಪಾಕಿಸ್ತಾನಗಳ ಸಂಬಂಧಗಳು ಕಳೆದ ೧೮ ವರ್ಷಗಳಿಂದಲೂ ತೃಪ್ತಿಕರವಾಗಿರಲಿಲ್ಲ. ಈ ಒಂದು ಹಿನ್ನೆಲೆಯಲ್ಲಿ ತಾಷ್ಕೆಂಟ್ ಘೋಷಣೆಯು ಒಂದು ಅತ್ಯಂತ ಮಹತ್ವಪೂರ್ಣ ಘಟನೆಯಾಗಿದೆ. ಈ ಘೋಷಣೆಯು ಭಾರತ ಪಾಕಿಸ್ತಾನಗಳ ಸಂಬಂಧಗಳಲ್ಲಿದ್ದ ಕಹಿಯನ್ನು ಬಹುಮಟ್ಟಿಗೆ ಕಡಿಮೆಮಾಡಿ ಎರಡೂ ರಾಷ್ಟ್ರಗಳ ಮಧ್ಯೆ, ಶಾಂತಿಯುತ ಹಾಗೂ ಸುಮಧುರ ಬಾಂಧವ್ಯವನ್ನು ರೂಪಿಸುತ್ತದೆ.

ತಾಷ್ಕೆಂಟ್ ಘೋಷಣೆಯು ಭಾರತ ಮತ್ತು ಪಾಕಿಸ್ತಾನಗಳ ಯಾವುದೇ ವಿಶಿಷ್ಟ ಸಮಸ್ಯೆಗಳನ್ನು, ವಿವಾದಗಳನ್ನು ಅಥವಾ ಮತಭೇದಗಳನ್ನು ಬಗೆಹರಿಸುವ ಉದ್ದೇಶ ಹೊಂದಿಲ್ಲ. ಈ ಘೋಷಣೆಯು ಭಾರತ ಮತ್ತು ಪಾಕಿಸ್ತಾನಗಳ ಪರಸ್ಪರ ನಿಲುವುಗಳನ್ನು ದೃಷ್ಟಿಕೋನಗಳನ್ನು ಕೈ ಬಿಡುವಂತೆಯೂ ಸೂಚಿಸುವುದಿಲ್ಲ. ಆದರೂ ಈ ಘೋಷಣೆ ಮಹತ್ವಪೂರ್ಣವಾಗಿದೆ, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಶಾಂತಿ ಪ್ರಧಾನವಾದ ಉತ್ತಮ ನೆರೆಹೊರೆಯ ಸಂಬಂಧಗಳ ಯುಗಾರಂಭವನ್ನು ಅದು ಸಾರುತ್ತದೆ. ಭಾರತದ ಉಪಖಂಡದಲ್ಲಿ, ಏಷ್ಯಾದಲ್ಲಿ ಅದರಂತೆ ಸಮಗ್ರ ವಿಶ್ವದಲ್ಲಿ ಶಾಂತಿ ತಾಷ್ಕೆಂಟ್ ಘೋಷಣೆ ಅಮೂಲ್ಯ ಕಾಣಿಕೆ ಸಲ್ಲಿಸಿದೆ. ಭಾರತವು ಪಾಕಿಸ್ತಾನದೊಂದಿಗೆ ಶಾಂತಿಯುತ ಸಂಬಂಧಗಳ ಸ್ಥಾಪನೆಗಾಗಿ ಕಳೆದ ಅನೇಕ ವರ್ಷಗಳಿಂದಲೂ ಯತ್ನಿಸುತ್ತ ಬಂದಿದೆ. ಪರಸ್ಪರ ಅಪನಂಬುಗೆ ಮತ್ತು ಸಂಶಯಗಳು ನಿವಾರಣೆಗೊಂಡು ಮೈತ್ರಿಯುತ ವಾತಾವರಣದಲ್ಲಿ ಎರಡೂ ರಾಷ್ಟ್ರಗಳ ನಡುವಣ ಸಂಬಂಧಗಳಿಗೆ ಹೊಸ ಅಡಿಪಾಯವನ್ನು ಹಾಕಲು ಇಂತಹ ಒಂದು ವಾತಾವರಣ ಅಗತ್ಯವೆಂದು ಭಾರತ ಪ್ರತಿವಾದಿಸುತ್ತ ಬಂದಿದೆ. ತಾಷ್ಕೆಂಟ್ ಘೋಷಣೆಯಿಂದಾಗಿ ಭಾರತದ ಈ ಉದ್ದೇಶವು ಕೈಗೂಡಿದಂತಾಗಿದೆ.

ಪ್ರಶ್ನೆ.— ಭಾರತದ ಪ್ರದೇಶದಲ್ಲಿ ಪುನಃ ಹೊಸ ಅತಿಕ್ರಮಣಗಳು ಸಂಭವಿಸದಂತೆ ತಡೆಯಲು ತಾಷ್ಕೆಂಟ್ ಘೋಷಣೆಯಲ್ಲಿ ಯಾವ ಆಶ್ವಾಸನ ನೀಡಲಾಗಿದೆ?

ಉತ್ತರ.— ತಾಷ್ಕೆಂಟ್ ಘೋಷಣೆಯಲ್ಲಿ ಭಾರತ ಮತ್ತು ಪಾಕಿಸ್ತಾನಗಳು, ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಕೈಹಾಕದಿರಲು ಒಪ್ಪಿಕೊಂಡಿವೆ. ಇದಲ್ಲದೆ ಯುದ್ಧ ವಿರಾಮ ರೇಖೆಯ ಪ್ರದೇಶದಲ್ಲಿ, ಯುದ್ಧ ವಿರಾಮ ಕುರಿತ ಷರತ್ತುಗಳನ್ನು ಖಂಡಿತ ಪಾಲಿಸುವುದಾಗಿ ಭರವಸೆ ನೀಡಿವೆ. ಈ ಘೋಷಣೆಯಿಂದ ಸಮಸ್ಯೆಗಳ ಪರಿಹಾರಕ್ಕಾಗಿ ಬಲಪ್ರಯೋಗ ತ್ಯಜಿಸುವ ಪ್ರಧಾನ ತತ್ತ್ವವು ಇನ್ನಷ್ಟು ಬಲಗೊಂಡಿದೆ. ಈ ರೀತಿ ಎರಡೂ ಪಕ್ಷಗಳು, ಸಶಸ್ತ್ರ ದಾಳಿಗಾರರೂ ಸೇರಿ ಯಾವುದೇ ಸಶಸ್ತ್ರ ಸಿಬ್ಬಂದಿಯನ್ನು ಕದನ ವಿರಾಮ ರೇಖೆಯ ಆಚೆಗೆ ಕಳುಹಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿವೆ. ಯಾವುದೇ ಬದಿಯಿಂದಲೇ ಆಗಲಿ ಸಶಸ್ತ್ರ ಸಿಬ್ಬಂದಿಯು ಕದನ ವಿರಾಮ ರೇಖೆಯನ್ನು ದಾಟಿದರೆ, ಕದನ ವಿರಾಮ ರೇಖೆಯ ಉಲ್ಲಂಘನೆಯಾಗುತ್ತದೆ. ಇದರಿಂದಾಗಿ ಒಬ್ಬರು ಮತ್ತೊಬ್ಬರ ಆಂತರಿಕ ವ್ಯವಹಾರಗಳಲ್ಲಿ ಕೈಹಾಕಿದಂತಾಗಿ, ಬಲಪ್ರಯೋಗಕ್ಕೆ ಆರಂಭವಾಗುತ್ತದೆ. ಇವೆಲ್ಲವೂ ತಾಷ್ಕೆಂಟ್ ಸ್ಫೂರ್ತಿಗೆ ಸಂಪೂರ್ಣ ವಿರುದ್ಧವಾಗಿವೆ.

ಪ್ರಶ್ನೆ:— ಭಾರತವು ಹಾಜಿಪೀರ್ ಮತ್ತು ಇತರ ಪ್ರದೇಶಗಳಿಂದ ತನ್ನ ಯೋಧರನ್ನು ಹಿಂತೆಗೆದುಕೊಳ್ಳುವುದಿಲ್ಲವೆಂದು ಅನೇಕ ಸಲ ಸಾರಿ ಸಾರಿ ಹೇಳಿದ್ದಾಗ್ಯೂ ಕೂಡ ಈ ಪ್ರದೇಶಗಳಲ್ಲಿದ್ದ ತನ್ನ ಸೇನೆಯನ್ನು ಆಗಸ್ಟ್ ೫ಕ್ಕಿಂತ ಮೊದಲನೆ ಸ್ಥಾನಗಳಿಗೆ ಹಿಂತೆಗೆದುಕೊಳ್ಳಲು ಏಕೆ ಒಪ್ಪಿಕೊಂಡಿತು?

ಉತ್ತರ.— ಕದನ ವಿರಾಮ ರೇಖೆಯ ಆಚೆಗೆ ಇರುವ ಹಾಜಿಪೀರ್ ಮತ್ತಿತರ ಪ್ರದೇಶಗಳಿಂದ ನಮ್ಮ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ವಿಚಾರದಲ್ಲಿ ಭಾರತ ಸರ್ಕಾರದ ನಿಲುವು ಏನಿದ್ದಿತೆಂಬುದನ್ನು ಪ್ರಧಾನ ಮಂತ್ರಿಗಳು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ೧೯೬೫ ಸೆಪ್ಟೆಂಬರ್ ೧೪ರಂದು ಬರೆದಿರುವ ಪತ್ರದಲ್ಲಿ ಸ್ಪಷ್ಟಗೊಳಿಸಿದ್ದಾರೆ. ಪಾರ್ಲಿಮೆಂಟಿನಲ್ಲಿಯೂ ಅವರು ಈ ವಿಷಯವಾಗಿ ಅನೇಕ ಸಲ ಹೇಳಿಕೆ ನೀಡಿದ್ದಾರೆ. ಅವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ಈ ರೀತಿ ಅಭಿಪ್ರಾಯಪಟ್ಟಿರುವರು. 'ಭಾರತ ಪಾಕಿಸ್ತಾನಗಳ ನಡುವೆ ನಡೆದಿರುವ ಯುದ್ಧ ನಿಲ್ಲಬೇಕು, ಕದನ ವಿರಾಮವು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಬೇಕು, ಆಗಲೇ ಮಾತುಕತೆ ಮತ್ತು ಚರ್ಚೆಗಳಿಗೆ ಆರಂಭ. ಈ ಮಧ್ಯೆ ನಮ್ಮ ಪ್ರದೇಶದಲ್ಲಿ ಯಾವುದೇ ಹೊಸ ಅತಿಕ್ರಮಣಗಳಿಗೆ ನಾವು ಅವಕಾಶಕೊಡಲಾರೆವು ಈಗಾಗಲೇ ನಡೆದ ಅತಿಕ್ರಮಣವನ್ನು ಹಿಮ್ಮೆಟ್ಟಿಸಲು ನಾವು ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ತಾವು ಆಕ್ಷೇಪ ಎತ್ತಕೂಡದು ಎಂಬುದನ್ನು ನಾನು ಈ ಮೂಲಕ ಸ್ಪಷ್ಟಗೊಳಿಸುತ್ತೇನೆ'

ಭಾರತವು ಹಾಜಿಪೀರ್ ಮತ್ತು ಇತರ ಪ್ರದೇಶಗಳನ್ನು ಮುಖ್ಯವಾಗಿ ಮಿಲಿಟರಿ ಕಾರಣಗಳಿಂದಾಗಿ ವಶಪಡಿಸಿಕೊಂಡಿತ್ತು. ಪಾಕ್ ಅತಿಕ್ರಮಣಕಾರರು ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರ್ ಪ್ರದೇಶದಿಂದ ಜಮ್ಮು—ಕಾಶ್ಮೀರವನ್ನು ಪ್ರವೇಶಿಸದಂತೆ ತಡೆಯಲು ಭಾರತವು ಈ ಠಾಣ್ಯಗಳನ್ನು ವಶಪಡಿಸಿಕೊಂಡಿತು. ತಾಷ್ಕೆಂಟ್ ಘೋಷಣೆಯಲ್ಲಿ ಇನ್ನು ಮುಂದೆ ಇಂತಹ ಅತಿಕ್ರಮಣಗಳು ನಡೆಯದಂತೆ ನೋಡಿಕೊಳ್ಳಲು ಹಾಗೂ ಸಶಸ್ತ್ರ ಅತಿಕ್ರಮಣಕಾರರೂ ಸೇರಿ ಎಲ್ಲ ಬಗೆಯ ಸಶಸ್ತ್ರ ಸಿಬಂದಿಯನ್ನು ಹಿಂತೆಗೆದುಕೊಳ್ಳಲು ಸೂಕ್ತ ಭರವಸೆ ನೀಡಲಾಗಿದೆ. ತಾಷ್ಕೆಂಟ್ ಘೋಷಣೆಯನ್ನು ಪ್ರಾಮಾಣಿಕ ರೀತಿಯಲ್ಲಿ ಆಚರಣೆಗೆ ತಂದರೆ ಇನ್ನು ಮುಂದೆ ಯಾವುದೇ ಅತಿಕ್ರಮಣಗಳಿಗೆ ಆಸ್ಪದ ದೊರೆಯಲಾರದೆಂದು ನಾವು ಆಶಿಸುತ್ತೇವೆ. ಈ ಘೋಷಣೆಯಿಂದ ಪ್ರಧಾನ ಮಂತ್ರಿಗಳು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಬಂದಿರುವ ಪತ್ರದಲ್ಲಿನ ಪೂರ್ವಭಾವಿ ಷರತ್ತುಗಳು ಸಂಪೂರ್ಣವಾಗಿ ಪೂರೈಸಲ್ಪಟ್ಟಿವೆ. ಈ ಷರತ್ತುಗಳು ಮತ್ತು ತಾಷ್ಕೆಂಟ್ ಘೋಷಣೆಯ ಎರಡನೆಯ ನಿಬಂಧನೆಯಿಂದಾಗುವ ಪ್ರಯೋಜನಗಳನ್ನು ಗಮನಿಸಿ ಈ ಘೋಷಣೆಯನ್ನು ಒಪ್ಪಿಕೊಳ್ಳಲಾಯಿತು.

ಪ್ರಶ್ನೆ:—ತಾಷ್ಕೆಂಟ್ ಘೋಷಣೆಯನ್ನು ಕುರಿತು ಭಾರತ ಮತ್ತು ಪಾಕಿಸ್ತಾನ ಈ ಎರಡೂ ದೇಶಗಳಲ್ಲಿಯೂ ಟೀಕೆಗಳು ಕೇಳಬರುತ್ತಿವೆ ಈ ಘೋಷಣೆಯ ಯಶಸ್ಸಿಗೆ

(ಹನ್ನೆರಡನೇ ಪುಟ ನೋಡಿರಿ)



ಮೊದಲ ಹೆಜ್ಜೆ

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಲು ನೀವಿಡುವ ಮೊದಲ ಹೆಜ್ಜೆ—ನಿಮ್ಮ ಪ್ರಥಮ ಪ್ರಯತ್ನ ಅತ್ಯಂತ ಪ್ರಾಮುಖ್ಯವಾದುದು. ಯಾಕೆಂದರೆ ಅದು ನಿಮಗೆ ಆರ್ಥಿಕ ಸುಸ್ಥಿರತೆ, ಸಾಮಾಜಿಕ ಯಶಸ್ಸುಗಳಿಗೆ ಹೊಸ ಅವಕಾಶವನ್ನು ಒದಗಿಸಿಕೊಟ್ಟು ಭವಿಷ್ಯತ್ತಿನ ಸುಖದತ್ತ ನಿಮ್ಮನ್ನು ಮುನ್ನಡೆಸುವುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿವೆ

ಚಲಾವಣಾ ನಿಧಿ: ರೂ. 85 ಕೋಟಿಗೂ ಮಿಕ್ಕಿದೆ

ಅನುಭವ

ಬೇಟೆಯ ಆಟ.

ಮಾಡಿದವರು: ಶ್ರೀ ಕೆ. ಆನಂದ, ವೇಣೂರು

ನಾನು ದೇಹದಲ್ಲಿ ಬಹಳ ಕ್ಷೀಣವಿದ್ದುದರಿಂದ ಗೆಳೆಯರು ನನ್ನನ್ನು ಹಾಸ್ಯ ಮಾಡುತ್ತಿದ್ದರು. ನನ್ನ ದೇಹ ಪ್ರಕೃತಿಯೇ ಕ್ಷೀಣ. ಆದರೆ ಹುರುಪು ಉಲ್ಲಾಸಗಳಿಗೇನೂ ಕೊರತೆಯಿರಲಿಲ್ಲ. ಅಲ್ಲದೆ ನಾನು ನಿರೋಗಿಯಾಗಿದ್ದೆನು. ನನ್ನ ಕೆಲ ಗೆಳೆಯರಿಗೆ ಮತ್ತು ನನಗೆ ಬೇಟೆಯ ಹುಚ್ಚು ಬಹಳ. ನಮಗೆ ಕೋವಿ ಹಿಡಿದು ಬೇಟೆಗೆ ಹೊರಡುವ ಹುಮ್ಮಸ್ಸು. ಗೆಳೆಯ ರೈಯವರಂತೂ ಬೇಟೆಯೆಂದರೆ ನೂರಾರು ಮೈಲೂ ನಡೆಯ ಬಲ್ಲರು. ಅವರಲ್ಲಿ ಜೋಡು ನಳಿಗೆಯ ತೋಟೆಯ ಕೋವಿಯೊಂದಿತ್ತು. ದಿನಕ್ಕೊಂದು ಬಾರಿಯಾದರೂ ಕೋವಿಯಿಂದ ಶಬ್ದವನ್ನು ಮಾಡುವುದು ಅಂದರೆ ಏನಾದರೊಂದು ಪ್ರಾಣಿಯನ್ನಾಗಲೀ ಹಕ್ಕಿಯನ್ನಾಗಲೀ ಹೊಡೆಯುವುದು ರೈಯವರ ಮನೋರಂಜನಾ ಕಾರ್ಯವಾಗಿತ್ತು. ಹೆಚ್ಚಾಗಿ ಅವರ ಗುರಿಯು ತಪ್ಪುತ್ತಿರಲಿಲ್ಲ.

ನನಗೂ ನನ್ನ ಕೆಲ ಮಿತ್ರರಿಗೂ ಮಿ॥ ರೈಯವರಷ್ಟಲ್ಲವಾದರೂ ಕೆಲ ಮಟ್ಟಿಗೆ ಬೇಟೆಯ ಮತ್ತು ಕೋವಿಗಳ ಬಗ್ಗೆ ಅಭಿರುಚಿಯಿತ್ತು. ಯಾರದೇ ಕೋವಿಯಾಗಲಿ, ಯಾವ ತರದ್ದೇ ಆಗಿರಲಿ ಅದನ್ನೊಮ್ಮೆ ಹಿಡಿದು, ಭಾರ ನೋಡಿ, ಗುರಿ ಹಿಡಿದು, ಕುದುರೆ ಎಳೆದು ಕ್ಲಿಕ್ ಒತ್ತುವುದೊಂದು ನಿತ್ಯರೂಢಿಯಾಗಿತ್ತು. ಅದೊಂದು ಹೆಮ್ಮೆಯ ವಿಷಯವಾಗಿತ್ತು. ನಮಗೂ ಕೋವಿಯ ಬಗ್ಗೆ ಮಾಹಿತಿ ಇದೆಯೆಂದು ಇತರರಿಗೆ ತಿಳಿಸುವ ಹಂಬಲದಿಂದಲೋ ಏನೋ ನಾವು ಹಾಗೆ ಕೋವಿಯನ್ನಾಗಲಿ, ರೈಫಲನ್ನಾಗಲಿ ಪರೀಕ್ಷಿಸುತ್ತಿದ್ದೆವು. ಹಾಗೆಂದು ನಾವು ಕೋವಿಯ ಮತ್ತು ಬೇಟೆಯ ಬಗ್ಗೆ ಏನೂ ಅರಿಯದ ಹೆಡ್ಡರಾಗಿರಲಿಲ್ಲ.

ಒಮ್ಮೆ ನಾವು ಕೆಲವು ಮಂದಿ ಗೆಳೆಯರು ಒಟ್ಟು ಸೇರಿದ್ದೆವು. ಮಿ॥ ರೈಯವರೂ ಇದ್ದರು. ಮಾತುಕತೆಯಾಡುವಾಗ ರೈಯವರು, "ಒಮ್ಮೆ ಬೇಟೆಗೆ ಹೋಗೋಣವೇ" ಎಂದರು. ಅದರ ಕುರಿತು ಚರ್ಚೆ ಮಾಡುತ್ತಾ ಇದ್ದಂತೆ ನನ್ನ ಗೆಳೆಯರು ನನ್ನ ವಿಷಯವಾಗಿ ಗೇಲಿ ಮಾಡಿದರು. "ಈ ಕಡ್ಡಿ ಪೈಲ್ವಾನನು ಬೇಟೆಗೆ ಬಂದರೆ ಕ್ರೂರ ಮೃಗಗಳಿಗ ಹೆದರಿ ಸತ್ತೇ ಹೋದಾನು. ಕಾಡಾನೆಯನ್ನು ನೋಡಿದರೆ ಈತನ ಹೃದಯ ಕ್ರಿಯೆ ಒಮ್ಮೆಯೇ ನಿಂತು ಹೋದೀತು. ಅನಂತರ ನಮಗೆ ಕಷ್ಟವಾದೀತು" ಎಂದು ಹೇಳಿದರು. ಬೇಟೆಗೆ ಹೋಗುವಾಗ ನನ್ನನ್ನು ಕರೆದೊಯ್ಯಬೇಕೆಂದು ರೈಯವರಿಗೆ ಮನಸ್ಸು. ಅವರು, "ನೋಡಿ ನಮ್ಮ ಆನಂದ ಇದ್ದರೆ ಒಳ್ಳೆಯದು. ಬೇಟೆಯ ಸಮಯದಲ್ಲಿ ಬೇಸರವಾದರೆ ತನ್ನ ಹಾಸ್ಯೋಕ್ತಿಗಳಿಂದ ನಕ್ಕು ನಗಿಸಿಯಾನು" ಎಂದರು. ನನಗೂ ನನ್ನ ಇತರ ಮಿತ್ರರಿಗಿಂತ ಈ ಹಿರಿಯ ಮಿತ್ರ ರೈಯವರ ಮೇಲೆ ಬಹಳ ಭರವಸೆ, ಹಾಗೂ ಗೌರವವಿತ್ತು. ಆದ್ದರಿಂದ ಅವರ ಮಾತಿಗೊಪ್ಪಿದೆ. ಗೆಳೆಯರ ಗೇಲಿಗೆ ಪಂಥಾಹ್ವಾನ ಕೊಟ್ಟೆ. ಬೇಟೆಯಾಡಲು ನಾನೂ ಹೊರಡುವ ಭರವಸೆ ನೀಡಿದೆ. ದಿನದ ನಿಶ್ಚಯವೂ ಆಯಿತು.

ಒಂದು ದಟ್ಟವಾದ ಮನೆಯ ಸಮೀಪವಿರುವ ಕಾಡಿಗೆ ಹೋಗುವುದೆಂದು ನಿಶ್ಚಯಿಸಿದೆವು. ಅಲ್ಲಿ ಆನೆ, ಹುಲಿ, ಹಂದಿ, ಮೊಲ, ಹಕ್ಕಿಗಳು ಧಾರಾಳವಿವೆಯೆಂದು ನಮಗೆ ತಿಳಿದಿತ್ತು. ಅಲ್ಲೇ ಸಮೀಪ ಮಿ॥ ರೈಯವರಿಗೆ ಸ್ವಲ್ಪ ಜಮೀನು ಇತ್ತು. ಅದನ್ನು ನೋಡಿಕೊಳ್ಳಲು ಬೇರೆ ರೈತರಿದ್ದರು. ಅವರಲ್ಲಿ ರಾಮಣ್ಣನೆಂಬವನು ಪ್ರಸಿದ್ಧನು. ವರ್ಷಕ್ಕೊಮ್ಮೆಯಾದರೂ ರೈಯವರು ಅಲ್ಲಿಗೆ ಹೋಗಿ ರಾಮಣ್ಣನಲ್ಲಿ ಬಿಡಾರ ಹೂಡಿ ಅವನೊಂದಿಗೆ ಬೇಟೆಯಾಡುವ ಕ್ರಮವಿತ್ತು. ಈ ಸಲವೂ ಇಂಥ ದಿನಗಳಲ್ಲಿ ಕೆಲ ಮಿತ್ರರನ್ನೊಳಗೊಂಡು ಬೇಟೆಗಾಗಿ ಬರುತ್ತೇನೆ. ಸರ್ವ ಸನ್ನಾಹವನ್ನೂ ನೀನು ಮಾಡಬೇಕು—ಎಂದು ರಾಮಣ್ಣನಿಗೆ ಹೇಳಿ ಕಳುಹಿಸಿದ್ದರು.

ನಿಶ್ಚಿತ ದಿನದಂದು ನಾವು ನಾಲ್ವರು ಸರ್ವಸಿದ್ಧತೆಯಿಂದ ಜೀಪಿನಲ್ಲಿ ಕುಳಿತು ರಾಮಣ್ಣನ ಮನೆಗೆ ಬಂದಿಳಿದೆವು. ತನ್ನ ಒಡೆಯ ಮತ್ತು ಅವರ ಗೆಳೆಯರು ಬರುತ್ತಾರೆಂದು ಸುದ್ದಿ ಕೇಳಿಯೇ ರಾಮಣ್ಣ ನಮಗೆ ತಂಗಲು ಒಳ್ಳೆಯ ವ್ಯವಸ್ಥೆ ಮಾಡಿದ್ದನು. ಜೀಪಿನಲ್ಲಿದ್ದ ನಮ್ಮ ಬೆಡ್ಡಿಂಗ್, ಸಾಮಾನುಗಳನ್ನು ಒಳಗಿರಿಸಿ ಯೋಗ್ಯ ಉಪಚಾರ ಮಾಡಿದನು. ಆ ದಿನ ಮಧ್ಯಾಹ್ನದ ಊಟ ಮುಗಿಸಿ ನಾವೆಲ್ಲರೂ ವಿಶ್ರಾಂತಿ ತೆಗೆದುಕೊಂಡೆವು. ಅಂದು ರಾತ್ರಿ ಹುಲಿಬೇಟೆಗೆ ಹೋಗುವುದೆಂದು ನಿಶ್ಚಯವಾಯಿತು. ಹಿಂದಿನ ದಿನ ಯಾರೋ ಒಬ್ಬ ರೈತನ 'ಎತ್ತೊಂದನ್ನು ಹುಲಿ ಹಿಡಿದಿತ್ತು. ಅದನ್ನು ಹೇಗಾದರೂ ಕೊಲ್ಲಬೇಕು—ಎಂಬ ಹುಮ್ಮಸ್ಸು ನಮ್ಮಲ್ಲಿತ್ತು.

ಹುಲಿ ಬೇಟೆಗಾಗಿ ಎತ್ತಿನ ಅವಶೇಷದ ಹತ್ತಿರದ ಮರವೊಂದರಲ್ಲಿ ಅಟ್ಟಳಿಗೆಯೊಂದನ್ನು ರಾಮಣ್ಣನ ಕಡೆಯವರು ರಚಿಸಿದ್ದರು. ಸ್ವಲ್ಪ ದೂರದಲ್ಲಿ ಇನ್ನೊಂದು ಅಟ್ಟಳಿಗೆ ಸಿದ್ಧವಾಗಿತ್ತು. ಹಿಂದಿನ ರಾತ್ರಿ ಅರ್ಧ ತಿಂದು ಉಳಿದ ಎತ್ತನ್ನು ಮುಗಿಸಲು ಈ ರಾತ್ರಿಯೂ ಹುಲಿ ಬಂದೇ ತೀರುತ್ತದೆಂದು ನಮ್ಮ ಭರವಸೆ. ನಮ್ಮ ಬೇಟೆಯ ಆಟ ಸುಗಮವಾಗಿ ಸಾಗುವಂತೆ ನಾವು ಹೋದ ಮುನ್ನಾದಿನವೇ ಆ ಎತ್ತನ್ನು ಹುಲಿ ಹಿಡಿಯಬೇಕೇ? ಇದರಿಂದ ನಮಗೇನೋ ಹಿಡಿಸಲಾರದ ಆನಂದವಾಗಿತ್ತು. ಆದರೆ ಆ ಬಡ ರೈತನ ನೊಗದ ಒಂದು ಬದಿಯೇ ಹುರಿದು ಹೋಗಿತ್ತು. "ನನ್ನ ಎತ್ತನ್ನು ಹಿಡಿದ ಹುಲಿಯನ್ನು ಹೇಗಾದರೂ ಕೊಂದು ಬಿಡಿ ಒಡೆಯರೆ" ಎಂದು ಅಂಗಲಾಚಿ ಹೇಳಿದ್ದ ಆ ರೈತ. "ಒಂದು ಕೈ ನೋಡಿಯೇ ಬಿಡುತ್ತೇವೆ" ಎಂದಿದ್ದೆವು ನಾವು.

ರಾತ್ರಿಯ ಊಟ ಮುಗಿಸಿ ನಾವು ನಾಲ್ಕು ಮಂದಿ ಮತ್ತು ರಾಮಣ್ಣನೂ ಅವನ ಒಬ್ಬ ಮಿತ್ರನೂ ಸೇರಿ ಎತ್ತಿನ ಅವಶೇಷದ ಬಳಿ ಬಂದೆವು. ದೀಪದ ಪ್ರಕಾಶದಲ್ಲಿ ನೋಡಲು ಎತ್ತಿನ ಹೊಟ್ಟೆಯನ್ನು ಹರಿದು ಮುಕ್ಕಿತ್ತು ಹುಲಿ. ಎತ್ತಿನ ಮೈಮೇಲೆಲ್ಲಾ ಪರಚಿದ ಗಾಯವಿತ್ತು. ಪುಷ್ಟಿಯಾಗಿದ್ದ ಎತ್ತಾಗಿದ್ದುದರಿಂದ ಕೆಲಹೊತ್ತು ಹುಲಿಯೊಡನೆ ಪ್ರತಿಭಟಿಸಿದ್ದಿರಬೇಕೆಂದು ನಾವು ಎಣಿಸಿದೆವು. ಆ ಸ್ಥಳದ ನೆಲದ ಮಣ್ಣು ಅಲ್ಲಲ್ಲಿ ಎದ್ದಹಾಗಿತ್ತು.

ನಾವು ನಾಲ್ಕು ಮಂದಿಯಲ್ಲಿ ನಾನು ಮತ್ತು ರೈಯವರು ರಾಮಣ್ಣನೊಂದಿಗೆ ಸತ್ತ ಎತ್ತಿನ ತೀರ ಸಮೀಪಕ್ಕೆ ಕಟ್ಟಿದ ಅಟ್ಟಳಿಗೆಯನ್ನೇರಿದೆವು. ಉಳಿದ ಮೂವರು ಸ್ವಲ್ಪ ದೂರದ ಅಟ್ಟಳಿಗೆಯನ್ನೇರಿದರು. ನಾವು ಒಬ್ಬರನ್ನೊಬ್ಬರು ನೋಡುವ ಸ್ಥಿತಿಯಲ್ಲಿಯೇ ಆ ಅಟ್ಟಳಿಗೆಯ ರಚನೆಯಾಗಿದ್ದಿತು. ಆದರೆ ಆಗ ರಾತ್ರಿಯಾಗಿದ್ದು ಕಾರ್ಗತ್ತಲೆ ಕವಿದಿದ್ದುದರಿಂದ ಕಣ್ಣು ಕುತ್ತಿದರೂ ಕಾಣುತ್ತಿರಲಿಲ್ಲ. ಆಗಾಗ ನಮ್ಮ ಹೆಡ್‌ಲೈಟನಿಂದ ಬೆಳಕನ್ನು ಹರಿಯಿಸುತ್ತಾ, ಸಿಗರೇಟು ಸೇದುತ್ತಾ ಮೌನವಾಗಿ ಕುಳಿತಿದ್ದೆವು. ಹುಲಿಯು ಬರವನ್ನೇ ನಿರೀಕ್ಷಿಸುತ್ತಿದ್ದೆವು. ನನ್ನ ಮತ್ತು ರೈಯವರ ಕೈಗಳಲ್ಲಿ ಬಾರ್ ಮಾಡಿದ ಜೋಡು ನಳಿಗೆಯ ಒಂದು ಕೋವಿ ಮತ್ತೊಂದು ರೈಫಲ್ ಇತ್ತು. ಇನ್ನೊಂದು ಅಟ್ಟಳಿಗೆಯಲ್ಲೂ ಹಾಗೆಯೇ ಇತ್ತೆನ್ನಬಹುದು.

ಸಾಧಾರಣ ರಾತ್ರಿ ಹನ್ನೊಂದು ಘಂಟೆಯ ವರೆಗೆ ಸಿಗರೇಟು ಸೇದುತ್ತಾ, ಹುಲಿಯ ಬರವನ್ನು ಕಾಯುತ್ತಾ, ತೂ ಸುತ್ತಾ ಕುಳಿತಿದ್ದೆವು. ಇದ್ದಕ್ಕಿದ್ದಂತೆ ನಮ್ಮ ತೂಕಡಿಕೆಯನ್ನು ಅಲ್ಲದೆ ಗಾ ವಾಗಿ ನಿದ್ರಿಸುತ್ತಿರುವವರನ್ನೂ ಎಚ್ಚ ವಷ್ಟು ಭಯಂಕರವಾದ ಘರ್ಜನೆಯೊಂ ದು ಹತ್ತಿರದಿಂದಲೇ ಕೇಳಿಸಿತು. "ಹು ಬರುತ್ತಿದೆ. ಹತ್ತಿರದಲ್ಲೇ ಇದೆ. ಜಾಗರಾಗಿರಿ" ಎಂದು ರಾಮಣ್ಣ ಹೇಳಿದ ಹುಲಿಯು ಪುನಃ ಘರ್ಜಿಸಿತು. ಇ ಕಾಡೆಲ್ಲ ನಡುಗುವಂತೆ ತೋರಿತು. ಆ ಘರ್ಜನೆಗೆ. ಈ ಹುಲಿಯ ಘರ್ಜನೆಯ ಪ್ರ ಧ್ವನಿಯೋ ಅಥವಾ ಅದರ ಜೊತೆಯ ರೆಯಾವುದೋ ಹುಲಿಯು ಕೂಗುವುದೆ ಎನ್ನುವ ಸಂದೇಹ ನಮ್ಮಲ್ಲುಂಟಾ ತು. ನಮ್ಮ ಸನಿಹದಲ್ಲೇ ಹುಲಿ ಕೂ ತ್ತಿದ್ದರೂ ಅದು ನಮ್ಮ ದೃಷ್ಟಿಗೆ ಬೀ ಲ್ಲ. ಬೀಳುವ ಸಂದರ್ಭವೂ ಅದಾಗಿ ಲ್ಲ. ಕಾರಣ ದಟ್ಟವಾದ ಕಾಡು ಹಾ ಕಾರಿರುಳು ಆಗಿನದಾಗಿತ್ತು. ಬರ ಬ ತ್ತಾ ಈ ಹುಲಿಯ ಘರ್ಜನೆಗೆ ಪ್ರತಿ ರ್ಜನೆಯು ಸ್ಪಷ್ಟವಾಗಿ ಕೇಳ ಬಂತು.

ರಾಮಣ್ಣ, "ಒಂದೇ ಹುಲಿಯಲ್ಲ. ರ ಜೋಡಿ ಇನ್ನೊಂದು ಬರುವ ಸೂ ಣೆಯಿದ" ಎಂದು ಹೇಳಿದನು. ಅವನ ಹೆ ನಿಜವಾಗಿತ್ತು. ಎರಡು ಘರ್ಜನೆಗ ನಮ್ಮ ಹತ್ತಿರದಿಂದಲೇ ಕೇಳಿಸುವಂ ಯಿತು. ಆದರೆ ಒಂದು ನಮ್ಮ ಹಿಂದಿ ದ; ಇನ್ನೊಂದು ಅದರ ವಿರುದ್ಧ ಸಿಂದ.

ಹುಲಿಯ ಪ್ರಥಮ ಘರ್ಜನೆಯ ಕೇಳಿದಾಗಲೇ ಗುಂಡಿಗೆಯಲ್ಲಿ ರಕ್ತ ರ ವಾಗಿ ಹರಿಯುವ ಅನುಭವ ನನ್ನ ಯಿತು. ಈಗ ಎರಡು ಹುಲಿಗಳವೆ ದು ತಿಳಿದಾಗ ಶರೀರವೆಲ್ಲ ಕಂಪಿಸಲು ರಂಭವಾಯಿತು. ಆದರೆ ನಿಶ್ಚಲವಾಗಿ ನಿರ್ವಿಕಾರದಿಂದ ಕುಳಿತುಕೊಂಡ ರೈಯನ್ನು ನೋಡಿ ಸ್ವಲ್ಪ ಧೈರ್ಯವನ್ನು ಮಾಡಿಕೊಂಡೆನೆಂದು ಹೇಳಬಹುದು. ರೈಯವರು ನನ್ನ ಕಾಲನ್ನೊಮ್ಮೆ ಮು ನೋಡಿದರು; ಅವರೇಕೆ ನನ್ನ ಕಾಲ ಮುಟ್ಟಿದರೆಂದು ನನಗಾಗ ತಿಳಿಯಲಿ ನನಗೆ ಹೆದರಿಕೆ ಯಾಗಿರಬಹುದೇ. ಹೆ ಕೆಯಾಗಿದ್ದರೆ ಕಾಲುಗಳು ಕಂಪಿಸು ರಿಂದಲೇ ದೃಢಮಾಡಿಕೊಳ್ಳಬಹುದೆಂ ಅನಂತರ ತಿಳಿಯಿತು. ನನ್ನ ಮಿತ್ರನೊ ನಿಗೆ ಅಟ್ಟಳಿಗೆಯಿಂದ ಬೀಳುವಂತಾ ತೆಂದು ಮತ್ತೆ ಹೇಳಿದನು.

ಹುಲಿಗಳೆರಡೂ ಹತ್ತಿರ ಬಂದುವು. ತ್ತ ಎತ್ತಿನ ಬಳಿಯಲ್ಲಿ ಸಂಧಿಸಿದುವು. ಮ್ಮೊಳಗಣ ಪ್ರೇಮವನ್ನು ಖಚಿತ ಪಡಿ ವುದಕೋಸ್ಕರವೋ ಏನೋ ಎರಡು ತ ತಮ್ಮ ಮುಖವನ್ನು ಮುದ್ದಿಸಿಕೊಳ್ಳು ತೆ ಮಾಡಿ ಒಂದರ ಮೈಯನ್ನು ಇನ್ನೊ ದು ನೆಕ್ಕುವಂತೆ ಮಾಡಿದುವು. ಆದರೆ ದನ್ನು ಸರಿಯಾದುದೆಂದು ನಾನು ಹೇ ಲಾರೆ. ಕಾರಣ ಆ ಹುಲಿಗಳ ಉರಿಯು ಕೆಂಡದಂತಹ ಕಣ್ಣುಗಳ ಚಲನೆಯಿಂ ಗಿ ನಾನು ಹೀಗೆ ಊಹಿಸಿದೆನು ಮಾತ್ರ.

ಎರಡೂ ಹುಲಿಗಳು ತಮ್ಮ ಪ್ರೇ ವಿನಿಮಯ ಮಾಡಿಕೊಂಡು ಹಿಂದಿನ ದಿ ತಿಂದುಳಿಸಿದ ಎತ್ತಿಗೆ ಬಾಯಿಹಾಕಿದು ಈಗ ನಮಗೆ ಸಂಧಿಗ್ಧವೆಯೊದಗಿತು. ಗ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವೈವಾಹಿತ ಜೀವನ

ವಿವಾಹ— ಅಮೃತ ಮಿಶ್ರಿತ ವಿಷವೆ?

ಬರೆದವರು— ಡಾ। ಫ. ಪಾವೆಕ್

ಪತಿ-ಪತ್ನಿಯರಲ್ಲಿ ರಾಜಿ ಮಾಡಲು ನ್ಯಾಯಾಲಯದ ಪ್ರಯತ್ನಗಳೆಲ್ಲ ವಿಫಲವಾದಾಗ ಮಾತ್ರವೇ ಚೆಕೊಸ್ಲೊವಾಕಿಯದಲ್ಲಿ ವಿವಾಹ ವಿಚ್ಛೇದ ಸಾಧ್ಯ. ನ್ಯಾಯಾಧೀಶರಲ್ಲೊಬ್ಬರು ವಿವಾಹಿತ ಜೀವನದ ಸಮಸ್ಯೆಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. —ಸಂ.

ಪಾರಿವಾರಿಕ ಸಮರಸವು ಬಹುಮಟ್ಟಿಗೆ ಶ್ರಮದ ತಗ್ಗುವರಿಯನ್ನೂ, ಮಿತವ್ಯಯವನ್ನೂ ಅವಲಂಬಿಸಿಕೊಂಡಿರುತ್ತದೆ. ಅಲ್ಪ ವಿಷಯವೆನಿಸುವ, ತಮ್ಮ ಮನೆಯ ಆರ್ಥಿಕ ನಿರ್ವಹಣೆಯ ಕುರಿತು ಭಾವೀ ದಂಪತಿಗಳು ಮದುವೆಗೆ ಮೊದಲೇ ಚರ್ಚೆ ನಡೆಸುವುದು ಹಿತಕರ. ಇಂತಹ ಅಭಿಪ್ರಾಯ ವಿನಿಮಯ ನಡೆಯದ ಕಾರಣ ಅನೇಕ ಜನ ಎಳೆಯ್ರ ದಂಪತಿಗಳು ವಿಚ್ಛೇದ ನ್ಯಾಯಾಲಯದಲ್ಲಿ ಹಾಜರಾಗುತ್ತಾರೆ. ಚೆಕೊಸ್ಲೊವಾಕಿಯದಲ್ಲಿ ಸಮಾಜವಾದೀ ಸಮಾಜವಿದೆಯಾದರೂ, ಪರಿವಾರದಲ್ಲಿಯೂ, ಹೊರಗಡೆಯೂ ಹಳೆಯ ಭಾವನೆಗಳು ಇನ್ನೂ ಕಂಡು ಬರುತ್ತಿವೆ.

ಸಮಾನತಾವಾದಿಗಳು

"ಪತ್ನಿಗೆ ಎಂದೂ ಹಣ ಕೊಡಕೂಡದೆಂದು ನನ್ನ ತಂದೆ ನನಗೆ ಹೇಳುತ್ತಿದ್ದರು. ಆದರೆ ಸ್ವತಃ ಅವರು ತಮ್ಮ ವೇತನವನ್ನೆಲ್ಲ ತಾಯಿಗೆ ಕೊಟ್ಟುಬಿಡುತ್ತಿದ್ದರು. ಆಕೆಯನ್ನೇ ಕೇಳಿ ಬೀರ್ ಸೇವನೆಗಾಗಿ ಅವರು ಹಣ ತೆಗೆದುಕೊಳ್ಳುತ್ತಿದ್ದರು. ಇದು ಸಮಾನತೆಯ ಯುಗ. ಆದ್ದರಿಂದ ನಾವು ಪ್ರತಿ—ಪ್ರತ್ನಿಯರು ಮನೆ ಬಾಡಿಗೆ, ಇತರ ಮನೆ ಖರ್ಚುಗಳನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದೆವು. ಮನೆಯಲ್ಲಿ ನಾನು ಉಪಾಹಾರ;ಊಟ ಮಾಡದಿದ್ದರೆ ಹೆಚ್ಚೇಕೆ ಹಣ ಕೊಡಬೇಕು?"—ಎಂದು ನನ್ನೊಡನೆ ವಾದಿಸಿದ ಪತಿಮಹಾಶಯನ ವೇತನವು ಆತನ ಪತ್ನಿಯ ಸಂಬಳದ ಎರಡರಷ್ಟಾಗಿತ್ತು.

"ನಿನಗೆ ನಾನೇನೂ ಕಡಮೆ ಮಾಡುವುದಿಲ್ಲ. ಖರ್ಚುಗಳನ್ನು ನಾವು ಹಂಚಿಕೊಳ್ಳೋಣ. ಅದರಿಂದ ನಾವು ಉಳಿತಾಯ ಮಾಡುವುದೂ ಸಾಧ್ಯ." -ಎಂದು ಪತ್ನಿಯು ಗಂಡನಿಗೆ ತಿಳಿಯ ಹೇಳು ಎಷ್ಟೋ ಪ್ರಯತ್ನ ಮಾಡಿದಳು.

"ಹೆಂಗಸಿನ ಕೈಗೆ ನಾನೆಂದೂ ಹಣ ಕೊಡುವುದಿಲ್ಲ"— ಎಂದೇ ಅವರು ಪದೇ ಪದೇ ಹೇಳುತ್ತಿದ್ದರು. ಪ್ರತಿಬಿಡಿ ಕಾಸಿಗೂ ಲೆಕ್ಕ ಕೊಡಬೇಕಾಗುತ್ತಿತ್ತು. ಈ ಬಗೆಯ ವರ್ತನೆಯು ನನಗೆ ಅಸಹನೀಯವೆನಿಸಿದಾಗ, 'ನಿಮಗೆ ಸಮಾನತೆ ಬೇಕಾದರೆ' ಹಾಗೆಯೇ ಆಗಲಿ. ಇನ್ನು ಮೇಲೆ ನಿಮ್ಮ ಬಟ್ಟೆಗಳನ್ನು ಒಗೆಯುವುದಕ್ಕೊ, ಸಾಬೂನಿಗೂ ನೀವು ಹಣ ಕೊಡಬೇಕು" ಎಂದು ನಾನು ಹೇಳಿದೆನು. ಒಗೆದ ಬಟ್ಟೆಗಳನ್ನು ತಾನು ಅರಹಾಕುವುದಾಗಿ ಆತನು ಹೇಳಿದರು. ನಾವು ಪರಸ್ಪರ ಒಪ್ಪುವುದು ಸಾಧ್ಯವಾಗಲಿಲ್ಲ—ಎಂದು ಪತ್ನಿಯು ವಾದಿಸಿದಳು.

ಕುಟುಂಬದ ಹಣಕಾಸಿಗೆ ಸಂಬಂಧಿಸಿದ ಈ ವಿಪರೀತ ವೈಚಿತ್ರ್ಯಗಳಿಗೆ, ದಂಪತಿಗಳು ತಮ್ಮ ಹಕ್ಕುಗಳ ಬಗ್ಗೆಯೂ, ಹೊಣೆಗಾರಿಕೆಗಳ ಬಗ್ಗೆಯೂ ತಪ್ಪು ವ್ಯಾಖ್ಯೆಗಳನ್ನು ನೀಡುವುದೇ ಕಾರಣವಾಗಿದೆ.

ಸ್ವಾರ್ಥ ಭಾವನೆಗಳುಳ್ಳ ಮಹಿಳೆಯರನ್ನೂ ಆಗಾಗ್ಗೆ ಕಾಣಬಹುದು. "ನಾನು ಕೆಲಸ ಮಾಡದೆ ಇದ್ದರೂ ನನ್ನ ಪೋಷಣೆ ನಿನ್ನ ಜವಾಬುದಾರಿ. ಆದುದರಿಂದ ನಾನು ಸಂಪಾದಿಸುವ ಹಣ ನನ್ನದು"—ಎಂದು ಅಂತಹ ಮಹಿಳೆಯು ವಾದಿಸುತ್ತಾಳೆ.

ಮಹಾ ಉದಾರಿಗಳು

"ಇಕೋ, ಇದು ನನ್ನ ಸಂಬಳ"ವೆನ್ನುತ್ತ ತಮ್ಮ ವೇತನವನ್ನೆಲ್ಲ ಹೆಂಡತಿಗೆ ಕೊಟ್ಟು "ನನ್ನ ಸಿಗರೇಟು, ಬೀರ್, ಉಪಾಹಾರಕ್ಕಾಗಿ ಸ್ವಲ್ಪ ಹಣ ಕೊಡು. ಮಿಕ್ಕದ್ದು ನೀನೇನಾದರೂ ಮಾಡು" ಎಂದು ಹೇಳುವ ಗಂಡಂದಿರು ಈ ವರ್ಗದವರು. ಇದು ಸರಿಯೆಂದು ನೀವೂ ಹೇಳಬಹುದು. ಆದರೆ ಪ್ರತಿಯೊಬ್ಬ ಪತ್ನಿಯೂ ಕುಶಲ ಗೃಹಿಣಿಯೆನ್ನಲಾಗದು. ತನ್ನ ಜೇಬಿಗೆ ತಕ್ಕಂತೆ ಕೊಳ್ಳುವ ಸಂಕಲ್ಪ ಪ್ರತಿ ಸತಿಯ ಮಣಿಗೂ ಇಂದು. ಉದಾಹರಣೆಗೆ ಹೇಳುವುದಾದರೆ, ತಿಂಗಳಿಗೆ ೩,೧೦೦ ಕ್ರೌನ್ (ಸುಮಾರು ೧,೪೦೦ ರೂಪಾಯಿ) ವರಮಾನದಿಂದ ಸಂಸಾರವನ್ನು ಚೆನ್ನಾಗಿ ನಿರ್ವಹಿಸಬಹುದೆಂದು ರಾಜಿ ಪಂಚಾಯತಿಯಲ್ಲಿ ಈರ್ವರು ಮಕ್ಕಳ ತಾಯಿಯೊಬ್ಬಳಿಗೆ ಎಷ್ಟು ಹೇಳಿದರೂ, ಆಕೆ ಅದನ್ನೊಪ್ಪಲಿಲ್ಲ. ಆಕೆಯ ಪತಿಯು ದುಂದುವೆಚ್ಚದ ಆಪಾದನೆ ಮಾಡಿದಾಗ, ಹಣವನ್ನು ಮೇಜಿನ ಮೇಲೆ ಎಸೆದು, "ಈಗ ಹೋಗಿ, ನಿಮ್ಮ ಅಡಿಗೆ ನೀವೇ ಮಾಡಿಕೊಳ್ಳಿ" ಎಂದು ಆಕೆ ಹೇಳಿಬಿಟ್ಟಳು.

ಲೆಕ್ಕಾಚಾರಗಾರರು

ಕೆಲವರಂತೂ ತುಂಬಾ ಲೆಕ್ಕಾಚಾರಸ್ಥರಾಗಿರುತ್ತಾರೆ. ಅವರಿಗೆ ಪತ್ನಿಯರ ಗೃಹಕಾರ್ಯ ನಿರ್ವಹಣೆಯಿಂದ ಏನೂ ತೃಪ್ತಿಯಾಗದು. ಆದುದರಿಂದಲೇ ಪತ್ನಿಗೆ ಅವರು ಪ್ರತಿದಿನವೂ ೧೦—೧೫ ಕ್ರೌನುಗಳನ್ನು ಕೊಡುತ್ತಾರೆ ಅಥವಾ ಪ್ರತಿ ಎಲ್ಲಾ ಖರ್ಚಿಗೂ ಅಷ್ಟಷ್ಟೇ ಹಣವನ್ನು ಕೊಡುತ್ತಿರುತ್ತಾರೆ. ಇದೂ ಅವರಿಗೆ ಸರಿಯೆನಿಸದು. ತಾವೇ ಪ್ರತಿ ವ್ಯವಹಾರವನ್ನೂ ಸ್ವತಃ ಮಾಡಲಾರಂಭಿಸುತ್ತಾರೆ.

ಒಂದು ವಿಚ್ಛೇದ ಮೊಕದ್ದಮೆಯಲ್ಲಿ ಪತಿಯು ರಶೀದಿ ಪುಸ್ತಕವನ್ನೂ, ದಿನಚರಿಯನ್ನೂ ನನ್ನ ಮುಂದಿಟ್ಟನು. ಅದರಲ್ಲಿ ನಿತ್ಯದ ಖರ್ಚುಗಳಲ್ಲಿ ಆತನು ತನ್ನ ಮತ್ತು ತನ್ನ ಪತ್ನಿಯ ಬೆಳಗಿನ ಉಪಹಾರ ಖರ್ಚುಗಳು, ಸಾಯಂಕಾಲದ ಪೇಟ ಖರ್ಚು, ಇತ್ಯಾದಿಗಳನ್ನು ಬರೆದಿಟ್ಟಿದ್ದನು. ಕಡೆಗೆ ಇದು ಯಾವುದೂ ಪ್ರಯೋಜನಕಾರಿಯಾಗಲಿಲ್ಲ. ಆತನು ಎಷ್ಟು ಲೆಕ್ಕಾಚಾರ ಮಾಡಿದರೂ, ಇಡೀ ಹಣಕಾಸಿನ ವ್ಯವಸ್ಥೆ ಕುಸಿಯಿತು. ಪತ್ನಿಯು ಲಕ್ಷ್ಯ ವಿಡಲೊಪ್ಪಲಿಲ್ಲ.

ಆದಿಕಾಲದ ವ್ಯವಸ್ಥೆ

ಕಿಡೆಯದಾಗ್ಯ, ಮಕ್ಕಳಿಲ್ಲದ ದಂಪತಿಗಳಿಬ್ಬರು ತಮ್ಮ ವರಮಾನವನ್ನು ಉಳಿಸುತ್ತಿದ್ದು, ಬೇಕಾದಾಗ ಅದನ್ನು ಖರ್ಚು ಮಾಡಲು ಸಿದ್ಧರಾಗಿದ್ದರು. ಇದು ತೃಪ್ತಿಕರವಾದ ವ್ಯವಸ್ಥೆಯೇ ಆಗಿತ್ತು. ಏಕೆಂದರೆ, ಅವರು ಭಾರಿ ಖರ್ಚುಗಳಿಗಾಗಿ ಉಳಿಸುತ್ತಿಲ್ಲ. ಅವರು ಮಿತವ್ಯಯಿಗಳಾಗುವಷ್ಟು ಕಾಲವೂ ಏನೂ ತೊಂದರೆ ಸಂಭವಿಸದು.

ಕೆಲವು ಪರಿವಾರಗಳಲ್ಲಿ ಲಕೋಟೆ ವ್ಯವಸ್ಥೆಯ ಕುಟುಂಬ ನಿರ್ವಹಣೆ ಕಂಡು ಬರುತ್ತದೆ. ಸಮಾನ ಮೊತ್ತಗಳನ್ನು ಅವರು ಲಕೋಟೆಗಳಲ್ಲಿ ಹಾಕಿಡುತ್ತಾರೆ. ಪ್ರತಿ ಲಕೋಟೆಯಲ್ಲೂ ವಾರದ ಖರ್ಚುಗಳನ್ನು ಸೇರಿಸಿಡಲಾಗುತ್ತದೆ.

"ನಮ್ಮ ಪರಿವಾರದಲ್ಲಿ ನಾಲ್ವರು ಇದ್ದೇವೆ. ನನ್ನ ಹೆಂಡತಿಯು ಇಬ್ಬರು ಮ

(ಹತ್ತನೇ ಪುಟ ನೋಡಿರಿ)



ಅಂತರಿಕ್ಷ ಯಾತ್ರೆಯಲ್ಲಿ ಅಮೆ

'ಅಪೊಲೋ' ಯೋಜನೆಯು

ಅಹೋರಾ

ಅಂತರಿಕ್ಷಯಾನವಿಂದು ತೀರ ಸಾಮಾನ್ಯವಾಗಿದೆ. ಭೂಮಿಯ ಸುತ್ತ ತಿರುವ ಅನೇಕ ಉಪಗ್ರಹಗಳ ಪ್ರಯೋಗ ಯಶಸ್ವಿಯಾಗಿವೆ. ಚಂದ್ರಗ್ರಹದತ್ತ, ಶುಕ್ರಗ್ರಹದತ್ತ ಉಪಗ್ರಹಗಳನ್ನು ಕಳಿಸುವ ಪ್ರಯತ್ನಗಳೂ ಸಫಲವಾಗಿವೆ. ರಶಿಯಾದ ಉಪಗ್ರಹವೊಂದು ಚಂದ್ರನ ಮೈಯಲ್ಲಿ ಇಳಿಯಿತು; ಅಮೆರಿಕೆಯದೊಂದು ಶುಕ್ರ ಲೋಕವನ್ನು ಸ್ಪರ್ಶಿಸಿತು—ಇದು ಹೊಚ್ಚ ಹೊಸ ಸುದ್ದಿಯಾಗುವ ಸಮಯ ಇನ್ನೂ ಹೆಚ್ಚು ದೂರವಿಲ್ಲ. ಆಗ ಅಂತಗ್ರ್ರಹ ಯಾತ್ರೆಯೂ ತೊಡಗಬಹುದೋ ಏನೋ!

ಚಂದ್ರನ ಮೈಮೇಲೆ ಇಳಿಯಲು ಅಮೆರಿಕೆಯು ಹಲವು ಪ್ರಯತ್ನಗಳನ್ನು ಮಾಡಿತು. ಅಂತರಿಕ್ಷದಲ್ಲಿ ಯಾನ ಬದಲಾಯಿಸುವ ಸಾಧ್ಯಾಸಾಧ್ಯತೆಯನ್ನದು ಪರಿಶೀಲಿಸಿತು. ಕೆಲವೊಂದು ಪ್ರಯತ್ನ ಳು ವಿಫಲವಾದುವಾದರೂ ಸಾಧಿಸಿದ ಗತಿ ತೃಪ್ತಿಕರವಾಗಿಯೇ ಇದೆ 'ಅಪ ಲೋ' ಯೋಜನೆಯಂತೆ ಚಂದ್ರನ ಮುಟ್ಟುವ ಸಾಹಸ ಅಮೆರಿಕನರದ ಈ ಉಪಗ್ರಹ ಯೋಜನೆಗೆ ಮರ್ಕ್ಯು ಜೆಮಿನಿ— ಕಾರ್ಯಕ್ರಮಗಳಲ್ಲಿ ಬ ದ ಯಂತ್ರ ಕೌಶಲವು ಸಾಲದು. ಉನ್ನ ಮಟ್ಟದ ಕೌಶಲವು ಬೇಕಾಗುವುದು. ಕ್ಷೇಪಣ ಸಮಯದಲ್ಲಿ ಭಾರಿ ಭಾರವನ ತಾಳಬಲ್ಲಂತಹ, ಚಂದ್ರಮನತ್ತ ನೆಗ ಬಲ್ಲ, ಚಂದ್ರನ ಮೈ ಮೇಲೆ ಸಿಥಾನ ಗಿ ಇಳಿಯಬಲ್ಲ ಮತ್ತು ಚಂದ್ರಮನಿಂ ಮತ್ತೆ ಹಾರಿಸಿ ಸಕುಶಲವಾಗಿ ಭೂಮ ಇಳಿಯ ಬಲ್ಲ ಉಪಗ್ರಹವೀಗ ಬೇ ಗಿದೆ.

ಚಂದ್ರಮನ ಮೈಮೇಲೆ ಇಳಿಯು ಕೆಂಬುದು ಈ ದಶಕದ ಮಾನವನ ಅ ಲಾಷೆ. ಇದನ್ನು ಸಾಧಿಸಲು ಸರಕ ಹಾಗೂ ಖಾಸಗಿ ಉದ್ದಿಮೆಗಳ ಸಹಕ ದಿಂದ ರಾಷ್ಟ್ರವ್ಯಾಪಿ ಪ್ರಯತ್ನ ಅಮೆ ಕೆಯಲ್ಲಿ ನಡೆಯುತ್ತಿದೆ. ಚಿಕ್ಕದೊಡ್ಡ ಮೂರು ೨೦ ಸಾವಿರ ಕಂಪೆನಿಗಳು ಇದ ಸಂಬಂಧಿಸಿದ ಕಂಟ್ರಾಕ್ಟನ್ನು ಪಡೆದಿ ಮೂರು ಲಕ್ಷ ಜನರು ಉಪಗ್ರಹ ಂಜ



'ಅಪೊಲೋ' ಯಾನದ ನಿಯಾಮಕ ಕಕ್ಷ ಮತ್ತು ವಿದ್ಯುದುತ್ಪಾದನಾ ಕಕ್ಷಗಳು. ಇವುಗಳ ಪರಿಶೀಲನೆ ಕೂಲಂಕಷವಾಗಿ ನಡೆಯಬೇಕಾಗಿದೆ.

ಮೂರು ಅಂತಸ್ತುಗ
ಮತ್ತ

...ಯ ಆಶಾದಾಯಕ ಪ್ರಯೋಗ

...ಗುವಂತೆ ಮೂರು ಲಕ್ಷ ಜನರು ...ಸುತ್ತಿದ್ದಾರೆ.

ಯಲ್ಲಿಯೇ ವೈಮನೆರೆಶಿದ್ದಾರೆ.

'ಅಪೊಲೊ' ಅಂತರಿಕ್ಷಯಾನವಿನ್ನೂ ನಿರ್ಮಾಣವಾಗಿಲ್ಲ. ೧೯೬೯ ಯಾ ೧೯೭೦ ರಲ್ಲಿ ಇದನ್ನು ಕೇಪ್ ಕೆನೆಡಿಯಲ್ಲಿ ಜೋಡಿಸಿಡಲಾಗುವುದು. ಇದು ಮಾನವನ ಪ್ರತಿಭೆ ಮತ್ತು ಕುಶಲತೆಯ ಅಮರ ಸ್ಮಾರಕವಾಗುವುದು. ಈ ಯಾನದಲ್ಲಿ ಮೂರು ಅಂತಸ್ತುಗಳಿರುವುವು. ನಿಯಾಮಕ ಕೊಠಡಿಯು ಉಳಿದವುಗಳಿಗಿಂತ ದೊಡ್ಡದಿದ್ದು ಇಲ್ಲಿ ಮೂರು ಜನ ಚಾಲಕರಿಗೆ ಅವಕಾಶವಿರುವುದು. ಭೂಮಿಯಿಂದ ಚಂದ್ರನನ್ನು ಮುಟ್ಟುವ ಮತ್ತು ಪೃಥ್ವಿಗೆ ಮರಳಿಬರುವ ಯಾತ್ರೆಯನ್ನು ಇಲ್ಲಿಂದಲೇ ಅವರು ನಿಯಂತ್ರಿಸುತ್ತಾರೆ. ಚಾಲನ ಅಥವಾ ವಿದ್ಯುದುತ್ಪಾದನ ಕಕ್ಷೆಯ ಮೂಲಕ ಯಾನ ಚಾಲಕರು ಅಂತರಿಕ್ಷಯಾನವನ್ನು ಚಂದ್ರನು ಹತ್ತಿರ ಬಂದಂತೆ ನಿಧಾನಿಸುವರು. ಮೂರನೆಯದು ಚಂದ್ರನ ಮೇಲೆ ಇಳಿಯುವ ಭಾಗ. ಇದೊಂದು ಚಿಕ್ಕ ದೋಣಿಯಂತಿರುವುದು.

ಮೂಲಯಾನವಾದ ನಿಯಾಮಕ ಕಕ್ಷವು ಚಂದ್ರನ ಮೇಲೆ ಇಳಿಯುವುದಿಲ್ಲ. ಆದರೆ, ಅದು ಚಂದ್ರನ ಸುತ್ತಲೂ ತಿರುಗುತ್ತಿರುವುದು. ಇಬ್ಬರು ಚಾಲಕರು ನೌಕಾ ಕಕ್ಷಕ್ಕೆ ಹೋಗುವರು; ಅದನ್ನು ಮೂಲಯಾನದಿಂದ ಪ್ರತ್ಯೇಕಿಸುವರು. ಈ ಯಾನಕಕ್ಷವು ಚಾಲಕರನ್ನು ಚಂದ್ರನ ಮೇಲೆ ಇಳಿಸುವುದು; ಅವರ ಕೆಲಸ ಮುಗಿದ ಬಳಿಕ ಮತ್ತೆ ಮೂಲಯಾನಕ್ಕೆ ಜೋಡಿಸಲ್ಪಡುವುದು. ಈ ಕಾರ್ಯದ ಸಾಧ್ಯಾಸಾಧ್ಯತೆಯ ಪರಿಶೀಲನೆಗಾಗಿಯೇ ಜೆಮಿನಿ-೭ ಉಪಗ್ರಹದಲ್ಲಿ ಅಂತರಿಕ್ಷದಲ್ಲಿ ಯಾನಗಳು ಒಂದರೊಡನೊಂದು ಸಂಧಿಸುವ ಕಾರ್ಯಕ್ರಮವನ್ನು ಸಾಧಿಸಲಾಯಿತು.

ಚಂದ್ರನತ್ತ ಕಳಿಸುವ ಮತ್ತು ಮರಳಿಸುವ ಯಾತ್ರೆಯಲ್ಲಿ ಅಮೆರಿಕೆ "ಸೆಟರ್ನ್-೫" ಎಂಬ ರಾಕೆಟನ್ನು ಉಪಯೋಗಿಸುವ ಹವಣಿಕೆಯಲ್ಲಿದೆ. ಸೆಟರ್ನ್-೫ ಮತ್ತು ಮೂರು ವಿಭಾಗಗಳುಳ್ಳ ಅಪೊಲೋ ಅಂತರಿಕ್ಷ ಯಾನಗಳ ಒಟ್ಟು ಭಾರ ಕೇಪ್ ಕೆನೆಡಿಯಿಂದ ಪ್ರಕ್ಷೇಪಣೆಯ ವೇಳೆ ಸುಮಾರು ಮೂರು ಸಾವಿರ ಟನ್‌ಗಳಷ್ಟಾಗುವುದು.

ಸೆಟರ್ನ್-೫ ಎಂಬುದೊಂದು ತ್ರಿಖಂಡಿ ರಾಕೆಟ್. ಇದರ ಮೊದಲ ಖಂಡದಲ್ಲಿ ಸುಮಾರು ೩,೦೦೦ ಟನ್ ಇಂಧನವಿದ್ದು ಇದು ಸುಮಾರು ೧೫೦ ಸೆಕುಂಡುಗಳಲ್ಲಿ ಉರಿದು ಹೋಗುವುದು; ಆಗ ಈ ಖಂಡವು ಮುರಿದುಬಿದ್ದು ಹೋಗುವುದು. ಎರಡನೆ ಮತ್ತು ಮೂರನೆಯ ಖಂಡಗಳು ಅಂತರಿಕ್ಷಯಾನವನ್ನು ಸುತ್ತಲೂ ತಿರುಗಿಸಲು ಕಕ್ಷೆಗೆ ಒಯ್ಯುವುವು; ಮುಂದೆ ೩½ ದಿನದಲ್ಲಿ ೪ ಲಕ್ಷ ಕಿಲೋ ಮೀಟರ್ ಯಾತ್ರೆಗಾಗಿ ಚಂದ್ರನನ್ನು ಮುಟ್ಟುವ ಮಾರ್ಗದಲ್ಲಿ ತಳ್ಳಿ ಬಿಡುವುವು.



'ಅಪೊಲೋ' ಯಾನ ಚಾಲಕರಿಗೆ ಸರಿಯಾದ ದಿಕ್ಕು ಮತ್ತು ಗತಿಯನ್ನು ತೋರಿಸುವ 'ಅಂತರಿಕ್ಷ ಗೋಲ'.

ಹಾರಾಟದ ಮೊದಲ ಹಂತಗಳಲ್ಲಿ ಅಂತರಿಕ್ಷಯಾತ್ರಿಗಳು ತಂತಿಗಳನ್ನು ಗಮನಿಸುವರು. ಯಾನದಲ್ಲಿರಿಸಿದ ಮಾರ್ಗನಿರ್ದೇಶಕ ಯಂತ್ರಗಳು ಮತ್ತು ಭೂಮಿಯಲ್ಲಿರುವ ಮಾರ್ಗಾನ್ವೇಷಿ ಕೇಂದ್ರಗಳಿಂದ ಹಾರಾಟದ ಉದ್ದೇಶಿತ ಮಾರ್ಗದಿಂದ ಎಷ್ಟು ದೂರವಿದೆ ಎಂಬುದನ್ನು ತಿಳಿದುಕೊಳ್ಳುವರು.

ಚಂದ್ರನಿಗೆ ಹತ್ತಿರ ಬಂದಂತೆ ಚಾಲಕರು ಯಾನದ ವೇಗವನ್ನು ನಿಧಾನಿಸಿ ಚಂದ್ರಮನ ಮೈಮೇಲೆ ಸುಮಾರು ೧೫೦ ಕಿಲೋ ಮೀಟರ್ ಎತ್ತರದಿಂದ ಕಕ್ಷೆಯಲ್ಲಿ ತಿರುಗುವಂತೆ ಮಾಡುವರು. ಇರ್ವರು ಚಾಲಕರು ನಿಯಾಮಕ ಕಕ್ಷದಿಂದ ಚಂದ್ರಾನುಸಂಧಾನ (ಯಾನ) ಕಕ್ಷಕ್ಕೆ ಬರುವರು. ಇದು ಚಂದ್ರನಲ್ಲಿ ಇಳಿಯುವುದು.

ಅನುಸಂಧಾನ ಕಕ್ಷವು ೧೬ ಕಿಲೋ ಮೀಟರ್ ಎತ್ತರವಿರುವಾಗ ಅದು ಪ್ರತಿ ತಾಸಿಗೆ ೬,೪೦೦ ಕಿಲೋ ಮೀಟರ್ ವೇಗದಲ್ಲಿ ಸಂಚಾರ ಮಾಡುತ್ತಿರಬಹುದು. ಮುಂದೆ ಅದು ನಿಧಾನವಾಗುತ್ತ ಬರುವುದು. ೯೦ ಮೀಟರ್ ಎತ್ತರದಲ್ಲಿ ಸುತ್ತುವರಿಯುವುದು. ಕಿಟಕಿಗಳ ಮೂಲಕ ಯಾತ್ರಿಗಳಿಗೆ ಚಂದ್ರನ ಮೈ ಸರಿಯಾಗಿ ಕಾಣಿಸುವುದು; ಎಲ್ಲಿ ಇಳಿಯಬಹುದೆಂದು ಆಗ ಅವರು ಗೊತ್ತು ಮಾಡುವರು.

ಯಾನವು ತಾಸಿಗೆ ೧೨ ಕಿಲೋ ಮೀಟರ್‌ಗಳಿಗಿಂತಲೂ ನಿಧಾನವಾಗಿ ಚಂದ್ರನಲ್ಲಿ ಇಳಿಯುವುದು. ಹಿಂದೆಯೇ ತಿಳಿಸಿದಂತೆ ಮೂಲಯಾನವು ಚಾಲಕಕಕ್ಷದಿಂದ ದೂರದಲ್ಲಿಯೇ ತಿರುಗುತ್ತಿರುವುದು.

ಅನಂತರ ಚಂದ್ರನಲ್ಲಿನ ಪರಿಸ್ಥಿತಿಗಳನ್ನು ಬೇರೆ ಬೇರೆಯಾಗಿ ಅಧ್ಯಯನ ಮಾಡುವರು, ಛಾಯಾ ಚಿತ್ರಗಳನ್ನು ತೆಗೆಯುವರು. ಅವರು ತಮ್ಮ ಸ್ಥಾನವನ್ನು ಬದಲಿಸುವರು. ತಮ್ಮ ಕಾರ್ಯವಾದ ಮೇಲೆ ಇವರಿಬ್ಬರ ಯಾನಗಳು ಒಂದಾಗಿ ಸೇರುವುವು. ಅವು "ನೌಕಾ ಕಕ್ಷ" ಕ್ಕೆ ಜೋಡಿಸಲ್ಪಡುವುವು, ಇದು ನೆಗೆದು ಮೂಲಯಾನಕ್ಕೆ ಸೇರುವುದು. ಚಾಲನ ಕಕ್ಷದಲ್ಲಿರುವ ಇಂಧನವನ್ನು ಉರಿಸಿಬಿಡುವಾಗ ಮೂವರೂ ಯಾತ್ರಿಕರನ್ನು ಕೂಡಿಕೊಂಡು ಯಾನವು ಭೂಮಿಯತ್ತ ಇಳಿಯತೊಡಗುವುದು.

"ಅಪೊಲೋ" ಗೊತ್ತು ಪಡಿಸಿದ ಸ್ಥಾನದಲ್ಲೇ ಭೂಮಿಯ ಮೇಲೆ ಇಳಿಯುವುದು. ಈಗ ಇದರ ಭಾರ ಸುಮಾರು ೪ ಟನ್ ಮಾತ್ರ. ಕೇಪ್ ಕೆನೆಡಿಯಲ್ಲಿ ಕಟ್ಟಲಾಗುತ್ತಿರುವ ವಿಶೇಷ ನಿಲ್ದಾಣವೊಂದರಿಂದ ಅಪೊಲೋವನ್ನು ಹಾರಿಸಲಾಗುವುದು.

ಭಯ ಮತ್ತು ನಾಚಿಕೆಗಳು ನಮಗೆ ನಮ್ಮ ಕರ್ತವ್ಯಗಳನ್ನು ಬೋಧಿಸುತ್ತವೆ. ಸದಾ ಹೊಗಳಲ್ಪಟ್ಟವನು ತನ್ನನ್ನು ತಾನೇ ಹೊಗಳಿಕೊಳ್ಳುವ ಆತ್ಮ ಸ್ತುತಿಗಾರನಾಗುತ್ತಾನೆ.

೦ ೦ ೦

ಭಗವಂತನ ಕೋಮಲ ಭಾವನೆಗಳು ರೂಪುಗೊಳ್ಳುವಾಗ ಹೂಗಳೆನಿಸುತ್ತವೆ. ಭಗವಂತನ ದಯಾಪೂರಿತ ಮುಗುಳು ನಗೆಯಂತಿರುವ ಹೂಗಳು ನಮ್ಮ ಸ್ವಾರ್ಥಿಕ ದೃಷ್ಟಿಗೆ ಬಲಿ ಕೊಡಬೇಕು.

...ಯೋಜನೆಯಲ್ಲಿ ಮೂವರು ಗಗನಯಾತ್ರಿಗಳನ್ನು ಚಂದ್ರನಲ್ಲಿ ಇಳಿಸಲು ...ರಿಕರಲು ೩ ಲಕ್ಷ ಜನರು ನಿರಂತರ ದುಡಿಯುತಿದ್ದಾರೆ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಮಧುರ ಚೆನ್ನ ಸಂಸ್ಮರಣೆ:— ಸಂಪಾದಕರು: ಶ್ರೀನಿವಾಸ ಹಾವನೂರ ಮತ್ತು ಪಾಂಡುರಂಗ ಕುಲಕರ್ಣಿ. (ಮುಂಬಯಿಯ ಕನ್ನಡ ಸಾಹಿತ್ಯ ಕೂಟದಿಂದ ಬೆಳಕು ಕಂಡುದು.) ಪ್ರಕಾಶನ: ಕೆ. ಎಚ್. ಕುಲಕರ್ಣಿ, ವಾಮನ ಕೇಣಿ ಹೌಸ್, ದೇವನಾರ್, ಮುಂಬಯಿ-೭೧. ಬೆಲೆ. ರೂ. ೦—೫೫.

ಕನ್ನಡದ ಕವಿ ಶರಣರೂ ಹಿರಿಯ ಸಾಧಕರೂ ಆದ ದಿ| ಮಧುರ ಚೆನ್ನರ ಸಂಸ್ಮರಣೆಯ ಒಂದು ರೂಪವಿದು. ಈ ಕೃತಿಯ ಮೊದಲಿಗೆ ಮಧುರ ಚೆನ್ನರ ಜೀವನ ಸಾಧನೆಯ ಸ್ಥೂಲ ನೋಟವಿದ್ದು ಇದನ್ನು ಬೇಂದ್ರೆ- ಮಾಳವಾಡ, ಸಿಂಪಿ ಲಿಂಗಣ್ಣ, ಅರ್ಚಿ, ದ. ಬಾ. ಮತ್ತು ಪಿ. ಎಸ್. ಕುಲಕರ್ಣಿ ತ್ರಯರ ಬರೆಹಗಳಿಂದ ಆಯ್ದ ತೋರಣ ನುಡಿಗಳಿಂದ ಸಂಗ್ರಹಿಸಲಾಗಿದೆ. ಎರಡನೆಯ ಭಾಗದಲ್ಲಿ ಮಧುರ ಚೆನ್ನರ ಗ್ರಂಥ-ಲೇಖನಗಳ ಸೂಚಿಯನ್ನು ಕೊಟ್ಟದ್ದು ದಿ| ಮಧುರ ಚೆನ್ನರ ವ್ಯಕ್ತಿತ್ವ ಮತ್ತು ಅನುಭಾವ ಪ್ರತಿಕ್ರಿಯೆಯನ್ನು ಸ್ಪಷ್ಟವಾಗಿ ತಿಳಿಸುವ ಒಂದು ಅಪೂರ್ವ ದೃಷ್ಟಾಂತ ಮೂರನೆಯ ಭಾಗದಲ್ಲಿದೆ. ನಾಲ್ಕನೆಯ ಭಾಗದಲ್ಲಿ ವಿನಾಯಕ, ಬೇಂದ್ರೆ ಮೊದಲಾದ ಕವಿಗಳು ಮಧುರ ಚೆನ್ನರಿಗೆ ಅರ್ಪಿಸಿದ ಕಾವ್ಯಾಂಜಲಿಗಳಿವೆ; ಮಧುರ ಚೆನ್ನರ ಒಂದು ಕವಿತೆಯೂ ಇದೆ.

ಸಾಧಕ ಜೀವಿಯಾಗಿದ್ದು ತಮ್ಮ ೫೦ನೆಯ ವಯಸ್ಸಿನಲ್ಲಿಯೇ ಇಹಲೋಕ ಯಾತ್ರೆ ಮುಗಿಸಿದ ಮಧುರ ಚೆನ್ನರ ಬಗ್ಗೆ ಕನ್ನಡಿಗರು ತಿಳಿಯಬೇಕಾದುದು ತುಂಬ ಇದೆ. ಈ ಪುಟ್ಟ ಸಂಸ್ಮರಣೆ ಬೃಹತ್ ಸಂಸ್ಮರಣಾ ಗ್ರಂಥ ನಿರ್ಮಾಣಕ್ಕೆ ನಾಂದಿಯೆನಿಸಿದರೆ, ಸಂಪಾದಕರ ಪರಿಶ್ರಮ, ಧ್ಯೇಯಗಳು ಸಿದ್ಧಿಸಿದಂತೆಯೇ.

ಈ ಪುಸ್ತಿಕೆಯ ಪ್ರತಿಗಳನ್ನು ಹುಬ್ಬಳ್ಳಿಯ ಸಾಹಿತ್ಯ ಭಂಡಾರ ಅಥವಾ ಚಡಚಣದ ಅರವಿಂದ ಗ್ರಂಥಮಾಲೆಯಿಂದ ಪಡೆದುಕೊಳ್ಳಬಹುದು.

ಸೂಕ್ತಿಮಂಜರಿ: — ಲೇಖಕರು ಕೆ| ವ| ಸೀತಾರಾಮ ಕೆದ್ಲಾಯ. ಪ್ರಕಾಶಕರು ಕೆ| ವ| ಸೀತಾರಾಮ ಕೆದ್ಲಾಯ, ಶಿಶಿಲ, ಅರಸಿನ ಮಕ್ಕಿ ದ. ಕ. ಬೆಲೆ: ರೂ 0=30.

ಹೆಸರೇ ಸೂಚಿಸುವಂತೆ ಇದು ಸೂಕ್ತಿ ಮಂಜರಿ. ಸಂಸ್ಕೃತದಲ್ಲಿ ನೀತಿ ಶತಕವೇ ಮೊದಲಾದ ಸೂಕ್ತಿ ಸಂಗ್ರಹವಿರುವಂತೆ ಕನ್ನಡದಲ್ಲಿ ಹಲವು ನೀತಿ ಬೋಧಕ ಶತಕಗಳಿವೆ. ಈ ಸೂಕ್ತಿ ಮಂಜರಿಯು ಇಂತಹ ಹೊಸ ಪ್ರಯತ್ನಗಳ ಇನ್ನೊಂದು ಮೈಲುಗಲ್ಲು. ಸ್ವಯಂ ಪರಿಪೂರ್ಣವಾದ ನೂರು ಕಂದ ಪದ್ಯಗಳು ಇಲ್ಲಿವೆ. ಪ್ರತಿಯೊಂದೂ ಒಂದೊಂದು ಸೂಕ್ತಿಯನ್ನು ಉಲ್ಲೇಖಿಸುತ್ತವೆ.

ಉದಾಹರಣೆಗಾಗಿ ಒಂದೆರಡನ್ನು ಎತ್ತಿ ತೋರಿಸಬಹುದು. ಸಜ್ಜನರ ಗುಣವನ್ನು ಕವಿ ಹೀಗೆ ಉಪಮೆಯಿತ್ತು ವರ್ಣಿಸಿದ್ದಾರೆ

ಮಲಿನತರ ವಸ್ತುಗಳ ಕ
ಶ್ಮಲ ಮಿಶ್ರಿತ ಜಲವ ಪೀರ್ದು, ಪಾದ
ಪಲತೆಗಳ್
ಫಲಸುಮಮಂ ತಳೆವಂತಿರೆ
ಕಲಂಕಮಂ ಗ್ರಹಿಸಿ ಗುಣವ ಸುಜ
ನರ್ ತೋರ್ಪರ್ ||

ದೇಹದ ಅನಿತ್ಯತೆಯನ್ನು ಹೀಗೆ ವರ್ಣಿಸಿದ್ದಾರೆ:

ಸುರಕಾರ್ಮುಖದಂತೆ, ಪಯೋ
ಧರದಾಕೃತಿಯಂತೆ, ಪೊಳೆವ ಸೌದಾ
ಮಿನಿವೊಲ್
ಪರಿವ ಜಲದ ಬೊಬ್ಬುಳಿವೊಲ್
ಧರಣಿಯ ಜೀವಿಗಳ ದೇಹರೂಪಮ
ನಿತ್ಯಂ||

ಮಾನವ ಸುಖ ಶಾಂತಿಯಿಂದ ಬದುಕಬೇಕಾದರೆ, "ನರಕುಲವೊಂದೆಂದರಿಯುತೆ, ಪರಿಭೇದವನೆಣಿಸದೆ, ನೀತಿ ತೋರಿಯುಡಿ ತನ್ನೊಳ್ ನಿರತಂ ಮೈತ್ರಿಯೊಳ್ ಇರಬೇಕು— ಇದು ಕವಿಯ ಇಂಗಿತ. ಹೀಗಾಗಬೇಕಾದಲ್ಲಿ ಸೂಕ್ತಿ ಮಂಜರಿಯ ಪ್ರಯೋಜನ ಪಡೆಯಬೇಕು.

ಇಂದಿನ ಕನ್ನಡ ನುಡಿಯಲ್ಲಿ ಪ್ರಚಾರದಲ್ಲಿರದ ಅನೇಕಾನೇಕ ಸಂಸ್ಕೃತ—ಕನ್ನಡ ಪದಗಳ ಪ್ರಯೋಗ ಇಲ್ಲಿದೆ. ಕೆಲವು ಕಠಿನ ಪದಗಳ ಅರ್ಥವನ್ನು ಕೊನೆಗೆ ಕೊಡಲಾಗಿದ್ದರೂ ಪಂಡಿತರಲ್ಲದವರು ಸ್ವತಂತ್ರವಾಗಿ ನೀತಿ ಮಂಜರಿಯನ್ನು ಜೀರ್ಣಿಸಿಕೊಳ್ಳುವುದು ತುಸು ಕಠಿನವೆಂದೇ ತೋರುತ್ತದೆ. ಆದರೆ, ಆಯ್ದುಕೊಂಡ ಛಂದಸ್ಸು ಮತ್ತು ಪ್ರತಿಪಾದ್ಯ ವಸ್ತುವಿಗೆ ಈ ಬಗೆಯ ಬಿಗಿತದ ಆವಶ್ಯಕತೆ ಇದೆಯೆಂದು ಒಪ್ಪುವುದಾದರೆ, ಶ್ರೀಯುತ ಕೆದ್ಲಾಯರು ಸಂಪೂರ್ಣ ಯಶಸ್ವಿಯಾಗಿದ್ದಾರೆ. ಭಾಷೆಯ ಮೇಲಣ ಅವರ ಹಿಡಿತ ಪ್ರಶಂಸನೀಯವಿದೆ. ಅವರ ಪ್ರತಿಯೊಂದು ಕಂದವೂ ಆನಂದದುಕ್ಕಂದವೆನಿಸಿದೆ.

Effusions: ಲೇಖಕರು: ದಾಮೋದರ ಬಾಳಿಗ. ಪ್ರಕಾಶಕರು: ನವನಿಧಿ ಕಾರ್ಯಾಲಯ, ರಥಬೀದಿ, ಮಂಗಳೂರು-೧. ಬೆಲೆ ರೂ. ೧—೫೫.

ಕನ್ನಡದ ಸುವಿಖ್ಯಾತ ಲೇಖಕರಲ್ಲಿ ಒಬ್ಬರಾದ ದಾಮೋದರ ಬಾಳಿಗರು ಇಂಗ್ಲಿಷ್ ಭಾಷೆಯಲ್ಲೂ ಉತ್ತಮ ಹಿಡಿತವುಳ್ಳವರು; ಈ ಭಾಷೆಯಲ್ಲೂ ರಚನೆಗಳನ್ನು ಮಾಡಬಲ್ಲವರು.

ನಮ್ಮ ಪವಿತ್ರ ಭಾರತದ ಭೂಮಿಯ ಮೇಲೆ ಪರಕೀಯರು ಮಾಡಿದ ಆಕ್ರಮಣದ ವೇಳೆಯಲ್ಲಿ ನಮ್ಮಲ್ಲಿ ರಾಷ್ಟ್ರಭಕ್ತಿ.... ರಾಷ್ಟ್ರಸೇವೆ ಮತ್ತು ವೀರಸಂಕಲ್ಪದ ಭಾವನೆಗಳನ್ನು ಜಾಗ್ರತೆಗೊಳಿಸುವ ವೀರವಾಣಿ ಸಾಹಿತ್ಯಕರ ಲೆಕ್ಕಣಿಕೆಯಿಂದ ಹೊರಡಬೇಕು. ಏಕೆಂದರೆ, ರಾಷ್ಟ್ರ ನಿರ್ಮಾಣದಲ್ಲಿ ಅವರದ್ದೂ ಪಾಲಿದ್ದೇ ಇದೆ. ಈ ಆಂಗ್ಲ ಪುಸ್ತಕದಲ್ಲಿ ಈ ವಿಧದ ಒಂಭತ್ತು ಕವನಗಳಿವೆ. ಕೊನೆಯಲ್ಲಿ ಕವಿತೆಗಳ ಮಧ್ಯದಲ್ಲಿ ಬಂದಿರುವ ಕೆಲವು ಶಬ್ದಗಳ ವಿವರಣೆಯನ್ನೂ ಕೊಟ್ಟಿದ್ದಾರೆ. ಲೇಖಕರು ಸಂದರ್ಭೋಚಿತವಾದ ಚಿತ್ರಗಳಿಂದ ವಿವಿಧ ವರ್ಣಗಳಿಂದ ಕೂಡಿ ಆಚ್ಛಾದ ಈ ಪುಸ್ತಕ ಸ್ವಾಗತಾರ್ಹವಾಗಿದೆ. ಇಂಗ್ಲಿಷ್ ಬಲ್ಲ ಭಾರತೀಯರಿಗೆ ಈ ಪುಸ್ತಕದ ಕವನಗಳು ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗೆ ಬದ್ಧ ಕಂಕಣರಾಗುವ ಪ್ರೇರಣೆ ನೀಡಿದರೆ, ವಿದೇಶೀಯರಿಗೆ ಭಾರತೀಯರ ದೃಢಸಂಕಲ್ಪವೇನೆಂಬುದನ್ನು ತಿಳಿಸುತ್ತದೆ.

The way of Chau En-lai: —ಬರೆದವರು: ದಾಮೋದರ ಬಾಳಿಗ, ಪ್ರಕಾಶಕರು: ನವನಿಧಿ ಕಾರ್ಯಾಲಯ, ಮಂಗಳೂರು-೧. ಬೆಲೆ: ರೂ. ೦—೬೦.

ಭಾಯಿ—ಭಾಯಿ ಎಂದು ಭಾರತದಲ್ಲಿ ಬಂಬಡಿ ಬಾರಿಸಿದ ಲಾಯ್ ಭಾಂತ್ಯಕ್ಕೆ ಎರಡು ಬಗೆಯ ಕತೆ ಎಲ್ಲರಿಗೂ ಗೊತ್ತು. ಶ್ರೀಯುತ ಬಾಳಿಗರು ಲಾಯ್ ನಡೆದ ದಾರಿಯನ್ನು ೧೪ ಪುಟ್ಟ ಆಂಗ್ಲ ಭಾಷಾ ಕವನಗಳ ಮೂಲಕ ಸಚಿತ್ರವಾಗಿ ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಇಂದಿನ ದಿನಗಳಲ್ಲಿ ಸತ್ಯ ಸಂಗತಿಯ ಪರಿಚಯ ಪ್ರತಿ ಭಾರತೀಯನಿಗೂ ಇರಬೇಕಾದುದರಿಂದ ಶಾಲೆಗಳಲ್ಲಿ ಎಳೆಯ ಮಕ್ಕಳ ಉಪಯೋಗಕ್ಕೆ ಬೇಕಾಗುವ ಈ ಕೃತಿ ನಿಜಕ್ಕೂ ಸ್ವಾಗತಾರ್ಹವಿದೆ.

Golgotha:—ಪ್ರಕಾಶಕರು: ನವನಿಧಿ ಕಾರ್ಯಾಲಯ, ಮಂಗಳೂರು-೧.

ಬೊಂಬಾಯಿಯಲ್ಲಿ ನಡೆದ ೩೮ನೆಯ ಅಂತಾರಾಷ್ಟ್ರೀಯ ಯೂಕರಿಸ್ಟಿಕ್ ಕಾಂಗ್ರೆಸಿನ ಸಮಯದಲ್ಲಿ ಸಿಂಡಿಕೇಟ್ ಬ್ಯಾಂಕ್, ಲಿ. ಇವರ ಸಹಾಯದಿಂದ ಈ ಪುಸ್ತಕ ಬೆಳಕಿಗೆ ಬಂದಿದೆ. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರು ಕನ್ನಡದಲ್ಲಿ ಮಾಡಿಸಿದ ಈ ಕಾವ್ಯವನ್ನು ದಾಮೋದರ ಬಾಳಿಗರು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಯೇಸುಕ್ರಿಸ್ತನ ಕೊನೆಯ ದಿನ ಜಾಗತಿಕದುರ್ದಿನ. ಶಾಂತಿ ದೂತ, ಮಾನವ ಹಿತಸಾಧಕ ಯೇಸು ಪಟ್ಟಬವಣೆಯನ್ನು ಕಣ್ಣು ಕಟ್ಟಿ ವರ್ಣಿಸುವ ಈ ಖಂಡ ಕಾವ್ಯ ದಿ| ಪೈಯವರ ಅನುಪಮ ಕೃತಿಗಳಲ್ಲಿ ಒಂದು. ಅದರ ಅನುವಾದದಿಂದ ಕನ್ನಡ ಸಾಹಿತ್ಯಕರ ಕೃತಿ ಶಕ್ತಿಯ ಪರಿಚಯವು ಆಂಗ್ಲ ಭಾಷಿಗಳಿಗೆ ಆಗುವುದರಲ್ಲಿ ಸಂದೇಹವಿಲ್ಲ.

ಶ್ರೀ ಬಾಳಿಗರ ಇಂಗ್ಲಿಷ್—ಕನ್ನಡ ಭಾಷೆಗಳ ಪ್ರಗಲ್ಭಪಾಂಡಿತ್ಯವನ್ನು ಈ ಅನೂದಿತ ಕೃತಿಯಿಂದಲೇ ನಾವು ತಿಳಿದುಕೊಳ್ಳಬಹುದು. ಶಕ್ತಿಪೂರ್ಣ, ಗಂಭೀರವಾದ ಭಾಷೆಯು ಪಾರಕರ ಹೃದಯವನ್ನು ಸೂರೆಗೊಳ್ಳುವುದು. ಶ್ರೀಯುತರ ಶ್ರಮ ಸಾರ್ಥಕವಾಗಿದೆ; ಕನ್ನಡದ ಕೆಚ್ಚಿನ ಪ್ರಜ್ಞೆ ಆಂಗ್ಲೇಯರಿಗೂ ಆಗುವಂತಾಗಿದೆ. ಈ ಅವಕಾಶವನ್ನು ಒದಗಿಸಿದ ಅನುವಾದಕರೂ ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿಗಳೂ ಕನ್ನಡಿಗರ ಕೃತಜ್ಞತೆಗೆ ಪಾತ್ರರು.

—ಗೋರಾ.

ವಿವಾಹ—ಅಮೃತ ಮಿಶ್ರಿತ ವಿಷವೆ?

(ಏಳನೇ ಪುಟದಿಂದ)

ಕ್ಕಳ ಪಾಲನೆಯಲ್ಲಿ ತೊಡಗಿರುವ ಕಾರಣ, ನಾನು ಮಾತ್ರವೇ ಸಂಪಾದಿಸುತ್ತಿದ್ದೇನೆ. ಸಮಯೋಚಿತವಾದ, ಯೋಜಿತ ವ್ಯವಸ್ಥೆಯಿಲ್ಲದ ನಿರ್ವಹಣೆ ಸುಲಭವಲ್ಲ. ಕೆಲವು ತಿಂಗಳುಗಳಲ್ಲಿ ಮಕ್ಕಳಿಗೊಂದು ಸ್ಕೂಟರ್ ತೆಗೆದುಕೊಳ್ಳಬೇಕು, ಪತ್ನಿಗೆ ಉಡುಪು ತೆಗೆದುಕೊಳ್ಳಬೇಕು. ನಾನೂ ಇನ್ನು ಕೆಲವು ತಿಂಗಳುಗಳಲ್ಲಿ ಕೋಟನ್ನು ದೊರಕಿಸಿಕೊಳ್ಳಬೇಕು. ಆದ್ದರಿಂದ ನಮ್ಮ ಪರಿವಾರದಲ್ಲಿ ಶಾಂತಿ ನೆಲಸಿದೆ. ಹಣದ ಸಲುವಾಗಿ ನಮ್ಮ ಮನೆಯಲ್ಲಿ ಎಂದೂ ಯಾರೂ ಜಗಳವಾಡುವ ಪ್ರಸಂಗವೇ ಇರದು."—ಎಂದು ಗೃಹಪತಿಯೂ ಬ್ಯಾಪ್ತನು ಹೇಳಿದರು.

ಈ ಪರಿವಾರಕ್ಕೆ ಹಣವೆಲ್ಲಿಂದ ಬರುತ್ತದೆಯೆಂಬುದನ್ನು ಬೇರೆ ವರ್ಗದ ದಂಪತಿಗಳು ಎಂದಿಗೂ ಅರಿಯರು.

ಕನ್ನಡಿಯನ್ನು ನೋಡಿ ನಮ್ಮ ಶಾರೀರಿಕ ಸೌಂದರ್ಯವನ್ನು ತಿದ್ದಿಕೊಳ್ಳುವಂತೆ ದೊಡ್ಡವರ ಜೀವನವನ್ನು ಅಭ್ಯಾಸಿಸಿ ನಮ್ಮನ್ನು ನಾವು ತಿದ್ದಿಕೊಳ್ಳಬೇಕು.

೦ ೦ ೦

ಇನ್ನೊಬ್ಬರ ಕಷ್ಟ ಸುಖಗಳನ್ನು ನೋಡಿ ಯಾರೊಬ್ಬರೂ ಅನುಭವಿಗಳಾಗುವುದಿಲ್ಲ. ಸ್ವತಃ ತಾವು ಅನುಭವಿಸಿದಾಗಲೇ ಅನುಭವ ಕುದುರುವುದು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1=50)
ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಬೇಟೆಯ ಆಟ

(ಆರನೇ ಪುಟದಿಂದ)

ದು ಹಾರಿಸಿ ಒಂದು ಹುಲಿಯನ್ನೇನೋ ಕೊಲ್ಲಬಹುದು. ಆಗ ಉಳಿದ ಹುಲಿ ಏನು ಅನಾಹುತ ಮಾಡುತ್ತದೋ ಎಂದು. ಅಥವಾ ಆ ಹುಲಿಗೆ-ಈ ಹುಲಿಗೆ ಎಂಬ ಭಾವನೆಗಳ ತಾಕಲಾಟದಿಂದ ಗುಂಡುತಾಗದೆ ಇದ್ದರೆ ಹುಲಿಗಳೆರಡೂ ನಮ್ಮ ಮೇಲಕ್ಕೆ ಎರಗಬಹುದೆಂಬ ಭಯಬೇರೆ. ನಿಶ್ಚಲ ಭಾವದಿಂದ ರೈಯವರು ಯೋಚಿಸುತ್ತಿದ್ದರು. ಅವರು ಈ ಮೊದಲು ಹಲವು ಹುಲಿಗಳ ಜೀವ ತೆಗೆದಿದ್ದರು. ಆದರೆ ಒಂದು ಹಕ್ಕಿಯನ್ನೂ ಕೊಲ್ಲದ ನಾನು ಈ ಬೇಟೆಯ ಹುಚ್ಚಿನಿಂದ ಬಂದು ಹುಲಿಯನ್ನು ಕೊಲ್ಲುವುದೆಂದರೇನು? ಇಂಗು ತಿಂದ ಮಂಗನಂತಾಗಿತ್ತು ನನ್ನ ಸ್ಥಿತಿ.

ಮಿ|| ರೈಯವರು ನನಗೆ ಪಿಸುಮಾತಿನಲ್ಲಿಯೇ ಧೈರ್ಯ ಹೇಳಿದರು. ತಾನು ಒಮ್ಮೆಲೇ ಬೆಳಕು ಹರಿಯಿಸುತ್ತೇನೆಂದೂ ಎಡಬದಿಯಿದ್ದ ಹುಲಿಗೆ ತಾನು ಗುಂಡು ಹಾಕುವನೆಂದೂ ಬಲಬದಿಯ ಹುಲಿಗೆ ನಾನು ಗುಂಡು ಹಾಕಬೇಕೆಂದೂ ತಿಳಿಸಿದರು. ಆಗಬಹುದೆಂದು ಹೇಳಿ ಇಲ್ಲದ ಧೈರ್ಯವನ್ನು ಬರಿಸಿಕೊಂಡ ನನ್ನ ಕೈಯಲ್ಲಿದ್ದ ಕೋವಿಯನ್ನು ಎತ್ತಿ ಹಿಡಿದು ಹುಲಿಯ ಕಣ್ಣಿನಿಂದ ಬರುವ ಪ್ರಕಾಶಕ್ಕೆ ಇದಿರಾಗಿ ಹಿಡಿದೆನು. ಜೋಡು ನಳಿಗೆಯ ತೋಟೆಯ ಕೋವಿಯಾದುದರಿಂದ ಅದರ ಎರಡೂ ಕುದುರೆಗಳನ್ನು ಎಳೆದು ನಿಲ್ಲಿಸಿದೆನು. ಹುಲಿಗಳ ಮೇಲೆ ಬೆಳಕು ಬೀಳುವುದನ್ನೇ ನಿರೀಕ್ಷಿಸುತ್ತಾ ಇದ್ದೆನು ಬೆಳಕೇನೋ ಹುಲಿಗಳ ಮೇಲೆ ಬಿತ್ತು. ನನ್ನ ಬೆರಳುಗಳೇ ನನ್ನೇ ಒತ್ತಿದುವು. ನನ್ನ ಕೋವಿಯ ಎರಡು ತೋಟೆಗಳೂ ಒಡೆದಿದ್ದುವು. ಆದರೆ ಅವು ಹುಲಿಗಳಿಗೆ ತಾಗುವ ಬದಲು ಮರಗಳ ಎಲೆಗಳನ್ನು ತೂತುಮಾಡಿಕೊಂಡು ದೂರ ಹೋಗಿದ್ದುವು. ಹೆದರಿಕೆಯಿಂದಾಗಿ ನನ್ನ ಕೋವಿಯಿಂದ ಗುಂಡು ಹಾರುವಾಗ ಕೋವಿಯ ತುದಿಯು ಮೇಲಕ್ಕೆತ್ತಿದಂತಾಯಿತು. ಆದರಿಂದಲೇ ಗುರಿತಪ್ಪಿದುದು.

ಆದರೆ ಮಿ|| ರೈಯವರ ರೈಫಲಿನ ಗುಂಡು ಸರಿಯಾಗಿ ಒಂದು ಹುಲಿಯ ನೆತ್ತಿಗ ಬಡಿಯಿತು. ಇಡೀ ಕಾಡೇ ನಡುಗುವಂತೆ ಘರ್ಜನೆಮಾಡಿ ಹಲವು ಸಲ ಅತ್ತಿತ್ತ ನೆಗೆದು ಪೆಟ್ಟಿನ ನೋವನ್ನು ಸಹಿಸಲಾರದೆ ಅಲ್ಲೇ ಧರೆಗೆ ಒರಗಿತು. ಸತ್ತ ಹುಲಿಯ ಜೋಡಿ ಹುಲಿಯು ಒಮ್ಮೆ ನಮ್ಮ ಗುಂಡಿನ ಶಬ್ದಗಳಿಗೆ ಹೆದರಿತು. ಕಿವಿಗಳನ್ನು ನೆಟ್ಟಗೆ ಮಾಡಿ. ಅತ್ತಿತ್ತ ನೋಡಿತು. ಬಹುಶಃ ನಮ್ಮ ಇರವು ಅದಕ್ಕೆ ತಿಳಿಯಲಿಲ್ಲವೆಂದು ಕಾಣುತ್ತದೆ. ಆದರಿಂದಾಗಿ ನೇರವಾಗಿ ಅತ್ತ ಓಡುವ ಆಲೋಚನೆ ಮಾಡಿದಂತೆ ತೋರಿತು. ಕೂಡಲೆ ಬಹಳ ತ್ವರಿತಗತಿಯಿಂದ ರೈಯವರು ಆ ಹುಲಿಗೂ ಒಂದು ಗುಂಡನ್ನೊಗೆದರು. ಮರ್ಮಸ್ಥಾನಕ್ಕೆ ಪೆಟ್ಟು ಬೀಳದುದರಿಂದಲೋ ಏನೋ ಹುಲಿಯು ಓಡಿಹೋಯಿತು. ಇದರಿಂದಾಗಿ ನಮಗೆ ಕೆಳಗಿಳಿಯುವ ಧೈರ್ಯಬರಲಿಲ್ಲ. ಪೆಟ್ಟಿನ ಹುಲಿಯು ಪುನಃ ಬಂದೀತೇ ಎಂಬ ಭಯದಿಂದ ನಿದ್ದೆ ಮಾಡದೆ ಕಾದು ಕುಳಿತೆವು ಸನಿಹದಿಂದಲೇ ಹುಲಿಯ ಗರ್ಜನೆಯು ಅಸ್ಪಷ್ಟವಾಗಿ ನರಳುವಂತೆ ಕೇಳ ಬರುತ್ತಿತ್ತು.

ಬೆಳಗಿನ ವರೆಗೆ ಮರದ ಅಟ್ಟಳಿಗೆಯಲ್ಲೇ ಇದ್ದ ನಾವು ಕೆಳಗಿಳಿದೆವು. ಬೇರೊಂದು ಅಟ್ಟಳಿಗೆಯಲ್ಲಿದ್ದವರೂ ಇಳಿದು ಬಂದರು. ಸತ್ತು ಬಿದ್ದಿದ್ದ ಹುಲಿಯನ್ನು ಮುಟ್ಟಿ ಮುಟ್ಟಿ ನೋಡಿದವು. ಹುಲಿಗಳ ಘರ್ಜನೆಗೆ ಮತ್ತು ಅವುಗಳ ಕಣ್ಣುಗಳ ಹೊಳಪಿಗೆ ನಮ್ಮ ಗೆಳೆಯರಾದ ಮನೋಹರ ಮತ್ತು ಮೋಹನ್ ಬಹಳ ಹೆದರಿದವರಂತೆ ಕಾಣುತ್ತಿತ್ತು. ಅಲ್ಲದೆ ನಿಜವಾಗಿ ಹೆದರಿದ್ದರಂತೆ, ನನ್ನನ್ನು ಗೇಲಿ ಮಾಡುತ್ತಿದ್ದವರೇ ಹೆದರಿದರೆಂದು ಕೇಳಿ ನನಗೆ ಬಹಳ ಸಂತೋಷವಾಯಿತು. ಅತ್ತ ಹೋದ ರಾಮಣ್ಣ ಓಡಿಬಂದು, "ಒಡೆಯಾ ಇನ್ನೊಂದು ಹುಲಿಯೂ ಸತ್ತು ಬಿದ್ದಿದೆ" ಎಂದನು. ನಾವೆಲ್ಲರೂ ಅಲ್ಲಿ ಹೋಗಿ ನೋಡಲು ಒಂದು ದಟ್ಟವಾದ ಪೊದರಿನ ಒಳಗೆ ಹೋಗಿ ಹುಲಿಯು ಪ್ರಾಣ ತೊರೆದಿತ್ತು; ಒಮ್ಮೆಲೇ ಎರಡು ಹುಲಿಗಳನ್ನು ಕೊಂದೆನಲ್ಲಾ ಎಂದು ಮಿ|| ರೈಯವರು ಮೀಸೆ ತಿರುಗಿಸಿದರೆ ಇಡೀ ಕಾಡಿನ ರಾಜರಾಣಿಯರಾಗಿದ್ದ ಈ ದಂಪತಿಗಳನ್ನು ಒಮ್ಮೆಲೇ ಪರಲೋಕಕ್ಕಟ್ಟಿದರಲ್ಲಾ ಎಂಬ ಖಿನ್ನತೆ ನನ್ನಲ್ಲುಂಟಾಯಿತು. ಅಂತೂ ನಾವು ಕೈಗೊಂಡ ಬೇಟೆಯ ಉದ್ದೇಶ ಸಫಲಗೊಂಡಿತಲ್ಲ ಎಂಬ ಸಂತೋಷ.

ಆ ದಿನ ಹಗಲೆಲ್ಲ ನಿದ್ದೆ ಮಾಡಿದೆವು. ನನಗೆ ಆ ಹಗಲಿನ ನಿದ್ದೆಯಲ್ಲೂ ಹುಲಿಗಳ ಕನಸೇ ಕಟ್ಟುತ್ತಿತ್ತು. ನನ್ನ ಗೆಳೆಯರಿಗೂ ಹಾಗೆಯೇ ಕನಸಾಗಿ ಹೆದರಿಕೆಯಾಗುತ್ತಿತ್ತಂತೆ. ಆದರೆ ಅನುಭವಿಯಾದ ರೈಯವರು ಮಾತ್ರ ನಿರ್ವಿಕಾರದಿಂದಲೇ ಇದ್ದರು.

ಆ ರಾತ್ರಿ ಕೂಡಾ ಮೊಲ, ಹಂದಿ, ಬರಿಂಕ ಇವೇ ಮೊದಲಾದ ಪ್ರಾಣಿಗಳನ್ನು ಬೇಟೆಯಾಡಬೇಕೆಂದು ನಿಶ್ಚಯಿಸಿದೆವು. ನಾವು ನಾಲ್ವರು ಗೆಳೆಯರೂ, ರಾಮಣ್ಣನೂ ಅವನ ಗೆಳೆಯ ಕೃಷ್ಣಪ್ಪನೂ ಹೀಗ ಆರು ಮಂದಿ ಪ್ರತಿಯೊಬ್ಬರೂ ಒಂದೊಂದು ಕೋವಿ ಮತ್ತು ಹೆಡ್ ಲೈಟ್ ಅಥವಾ ಟೋರ್ಚ್ ಹಿಡಿದುಕೊಂಡು ಕಾಡಿಗೆ ಹೊರಟೆವು. ಈ ದಿನ ಕೂಡಾ ಮೂರು ಮೂರು ಮಂದಿಯಂತೆ ಬೇರೆ ಬೇರೆಯಾಗಿ ಹೋದೆವು. ಹೋಗುವ ಮುನ್ನ ಎರಡು ಪಂಗಡಗಳೊಳಗೆ ಅನಾಹುತವಾಗದಂತೆ ಮುಂಜಾಗರೂಕತೆ ವಹಿಸಿಕೊಳ್ಳುವರೆ ಕೆಲವು ನಿಬಂಧನೆಗಳನ್ನು ರೈಯವರು ಹೇಳಿದರು.

ನಾನು, ಮಿ|| ರೈ ಮತ್ತು ರಾಮಣ್ಣ ಒಟ್ಟಿಗೆ ಹೋಗುತ್ತಿದ್ದೆವು. ಮುಂದಿನಿಂದ ದಾರಿ ತೋರಿಸುತ್ತಾ ರಾಮಣ್ಣ, ನಡುವೆ ನಾನು. ಹಿಂದಿನಿಂದ ಮಿ|| ರೈಯವರು ಇದ್ದರು. ಇಕ್ಕಟ್ಟಾದ ದಾರಿ ತಂಗಲೆಯಿಂದ ಮುಚ್ಚಿ ಹೋಗಿತ್ತು. ನಮ್ಮ ನಡಿಗೆಗೆ ತರಗೆಲೆಗಳು ಸದ್ದು ಮಾಡಿದರೂ ಸದ್ದಾಗದಂತೆ ನಡೆಯುತ್ತಿದ್ದೆವು. ಒಂದು ಕಡೆ ಯಾವುದೋ ಪ್ರಾಣಿಯ ಕಣ್ಣುಗಳು ಹೊಳೆಯುವಂತೆ ಕಂಡಿತು. ಹೆಡ್‌ಲೈಟಿನ ಬೆಳಕಿನಿಂದ ಅದು ಮೊಲ ಎಂದು ಗೊತ್ತಾಯಿತು. ರಾಮಣ್ಣ ಹೊಡೆದೇ ಬಿಟ್ಟನು. ಆದರೆ ಗುರಿ ತಪ್ಪಿ ಅದು ಓಡಿ ಹೋಯಿತು. ನಿರಾಶೆಯಿಂದ ಕ್ಷಣ ಹೊತ್ತು ಅಲ್ಲೇ ನಿಂತೆವು. ರಾಮಣ್ಣನ ಕಾಲಡಿ ಸರಸರ ಎಂದು ಸದ್ದಾಯಿತು. ಅವನ ಕಾಲಿಗೆ ತಣ್ಣನೆ ಏನೋ ತಾಗಿದಂತಾಯಿತಂತೆ. ಕೂಡಲೇ ಟೋರ್ಚ್ ಹಾಕಿ ನೋಡಲು ಒಂದು ಹಾವಿನ ಮೇಲೆ ಕಾಲಿಟ್ಟು ರಾಮಣ್ಣ ನಿಂತಿದ್ದಾನೆ. ನಮ್ಮೆಲ್ಲರ ಪ್ರಾಣ ಹಾರಿದಂತಾಯಿತು. ಟಣ್ಣನೆ ರಾಮಣ್ಣ ಹತ್ತು ಮಾರು ದೂರ ಹೋಗಿ ನಿಂತುಬಿಟ್ಟಿದ್ದನು. ನಮ್ಮನ್ನು ದೂರ ಸರಿಸರಿಯಲು ಹೇಳಿದನು. ಹಾವನ್ನು ಪರೀಕ್ಷಿಸುವಾಗ ಅದೊಂದು ಹೆಬ್ಬಾವು ಎಂದು ತಿಳಿದು ಬಂತು. ಪ್ರಾಣಿಗಳು ಬರುವ ದಾರಿಯಲ್ಲಿ ಉರುಳು ಹಾಕಿ ಕಾದಿತ್ತದು. ಏನೋ ಪುಣ್ಯದಿಂದ ರಾಮಣ್ಣನ ಕಾಲು ಹೆಬ್ಬಾವಿನ ಉರುಳಿಗೆ ಬಿದ್ದಿರಲಿಲ್ಲ. ಅದರ ಉರುಳಿನಲ್ಲಿ ಆನೆಯ ಕಾಲು ಬಿದ್ದರೂ ಎಳೆಯಲು ಆಗುವುದಿಲ್ಲವಂತೆ. ಹೇಗೋ ತಪ್ಪಿಸಿ ನಾವು ಬೇರೆಡೆ ಹೊರಟೆವು. ರಾಮಣ್ಣನ ಶರೀರವಿಡೀ ಗುದಗುಟ್ಟಿ ನಡುಗುವಂತೆ ಆ ಟೋರ್ಚ್‌ನ ಪ್ರಕಾಶದಲ್ಲಿ ನನಗೆ ಕಂಡು ಬಂತು.

ಅಂತೂ ಆ ದಿನ ಎರಡು ಮೊಲಗಳು ನಮಗೆ ಸಿಕ್ಕಿದುವು. ಒಂದನ್ನು ಮಿ|| ರೈಯವರೂ ಇನ್ನೊಂದನ್ನು ರಾಮಣ್ಣನೂ ಹೊಡೆದಿದ್ದನು. ಮನೋಹರನು ಒಂದು ಬರಿಂಕ ಎಂಬ ಪ್ರಾಣಿಯನ್ನು ಹೊಡೆದಿದ್ದನು. ನಾವು ಒಂದೆಡೆ ಎರಡೂ ಪಂಗಡದವರೂ ಸಂಧಿಸಿದೆವು. ಇನ್ನು ಒಂದೇ ಪಂಗಡವಾಗಿ ಸಾಗುವ ಎಂದು ಒಟ್ಟಿಗೆ ಹೋದೆವು.

ಅಲ್ಲೊಂದು ಕಡೆ ಸಾಧಾರಣ ಇಪ್ಪತ್ತು ಮಂದಿಗೆ ನಿಲ್ಲುವಷ್ಟು ಸಮತಟ್ಟಾದ ಸ್ಥಳವಿತ್ತು. ಅದಕ್ಕೆ ಸರಿಯಾಗಿ ಕಾಣುವಂತೆ ಒಂದು ಸಣ್ಣ ಮಳೆಗಾಲದಲ್ಲಿ ನೀರು ಹೋಗಿ ಆದಂತಹ ಓಣಿಯಿತ್ತು. ಆ ಓಣಿಯ ದಾರಿಯಾಗಿ ಹಂದಿಗಳು, ಜಿಂಕೆಗಳು, ಕಡವೆಗಳು ಬರುತ್ತವೆ ಎಂದು ರಾಮಣ್ಣ ಹೇಳಿದನು. ಹಾಗೆ ಅಲ್ಲಿಯೇ ಓಣಿಯ ಬಾಗಿಲನ್ನೇ ದಿಟ್ಟಿಸುತ್ತಾ ನಾವು ಕುಳಿತೆವು. ನಾವು ಕುಳಿತು ಸಾಧಾರಣ ಒಂದು ಗಂಟೆಯಾಗಿರಬಹುದು. ಆಗ ಕಿರಿಕಿರಿಯೆಂಬ ಶಬ್ದ ಓಣಿಯೊಳಗಿಂದ ಕೇಳಬಂತು. ರಾಮಣ್ಣನು ಏನೋ ಬಂತೆಂದು ಪಿಸುಗುಟ್ಟಿದನು. ಓಣಿಯ ಬಾಗಿಲಿನಿಂದ ಹೊರಟು ಐದಾರು ದೊಡ್ಡ ಹಂದಿಗಳೂ ಹತ್ತು ಹನ್ನೆರಡು ಮರಿಗಳೂ ಹೊರಟುವು. ನಮ್ಮ ಇರವು ಅವುಗಳಿಗೆ ವಾಸನೆಯ ಮೂಲಕ ಗೊತ್ತಾಯಿತೋ ಏನೋ! ಒಂದೇ ಸವನೆ ಓಡತೊಡಗಿದುವು. ನಾವೆಲ್ಲರೂ ಏಕಕಾಲದಲ್ಲಿ ವರಾಹಗಳ ಮೇಲೆ ಗುಂಡೆಸೆದೆವು. ಎಷ್ಟು ಗುಂಡುಗಳು ತಾಗಿದುವೋ ಎಷ್ಟು ನಷ್ಟವಾದುವೋ ಎಂದು ದೇವರಿಗೇ ಗೊತ್ತು!

ಒಂದರ್ಧ ಘಂಟೆ ತಡೆದು ರಾಮಣ್ಣನೂ ಅವನ ಗೆಳೆಯ ಕೃಷ್ಣಪ್ಪನೂ ತಮ್ಮ ಕೈಯಲ್ಲಿ ಕೋವಿ ಹಿಡಿದುಕೊಂಡು ಹಂದಿಗಳೇನಾದರೂ ಸತ್ತಿವೆಯೋ ಎಂದು ಹುಡುಕಲು ಹೊರಟರು. ಸ್ವಲ್ಪ ದೂರದಲ್ಲಿ ಒಂದು ಹಂದಿಯು ಸತ್ತು ಬಿದ್ದಿತ್ತು. ಅದರಿಂದಾಗಿ ಅವರಿಗೆ ಸಂತೋಷವಾಯಿತು. ಹಾಗಾಗಿ ಕೃಷ್ಣಪ್ಪನು ಬೆಳಕು ಬೀರಿ ಅತ್ತಿತ್ತ ಹೋಗಿ ನೋಡಿದನು. ಅಷ್ಟರಲ್ಲಿ ಎಲ್ಲಿಂದಲೋ ಪೆಟ್ಟು ತಾಗಿದ ಒಂದು ಹಂದಿಯು ಓಡಿ ಬಂದು ಕೃಷ್ಣಪ್ಪನನ್ನು ತನ್ನ ಕೋರೆ ದಾಡೆಯಿಂದ ದೂಡಿಬಿಟ್ಟು ಓಡಿ ಹೋಯಿತು. ಆತನ ಬೊಬ್ಬೆಯನ್ನು ಕೇಳಿದ ನಾವು ಅಲ್ಲಿಗೆ ಓಡಿ ಹೋಗಿ ನೋಡಲು ಕೃಷ್ಣಪ್ಪನು ನೆಲದಲ್ಲಿ ನಿಶ್ಚೇಷ್ಟಿತನಾಗಿ ಬಿದ್ದಿದ್ದನು. ಆತನ ತೊಡೆಯಲ್ಲಿ ಹಂದಿಯಿಂದಾಗಿ ಗಾಯವಾಗಿ ರಕ್ತದ ಓಕುಳಿಯೇ ಹೊರಟಿತ್ತು. ಕೂಡಲೇ ರಾಮಣ್ಣನು ಅತ್ತಿತ್ತ ಓಡಿ ಯಾವುದೋ ಸೊಪ್ಪನ್ನು ತಂದು ಕೈಯಲ್ಲಿ ಜಜ್ಜಿ ಅವನ ಗಾಯಕ್ಕೆ ಕಟ್ಟಿದನು. ಕೃಷ್ಣಪ್ಪನನ್ನು ಹೊತ್ತುಕೊಂಡು ಮನೆಗೆ ಬರಬೇಕಾದ ಪ್ರಸಂಗ ಬಂತು. ಆದರೆ ಅಲ್ಲಿನವರಿಗೆ ಈ

ಇನ್ನೊಂದು

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ವಿಠಾಳ, ಎಂ. ಬಿ. ಬಿ. ಎಸ್.

ನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಹಂದಿ ಸಿಕ್ಕಿದುದರಿಂದಾಗಿ ಬಹಳ ಸಂತೋಷವಾಯಿತು. ಸಸ್ಯಾಹಾರಿಗಳಾದ ನಾನು ಮತ್ತು ಮೋಹನ್ ಎಲ್ಲರ ಮನಸನ್ನು ನೋಯಿಸಬೇಕಾಯಿತು "ನೀವೇಕೆ ಬೇಟೆಗೆ ಬಂದುದು"? ಎಂದರು ಕೆಲವರು. "ಕೇವಲ ಮೋಜಿಗಾಗಿ" ಎಂದರೆ ಅವರು ನಂಬಬೇಕಲ್ಲ!

ಆ ದಿನ ರಾತ್ರಿ ಬೇಟೆಗೆ ಹೋಗಿ ನಮ್ಮ ಈ ಸಲದ ಕಾರ್ಯಕ್ರಮವನ್ನು ಕೊನೆಗೊಳಿಸುವುದೆಂದು ನಿರ್ಣಯಿಸಿದೆವು. ಹಗಲಿಡೀ ವಿಶ್ರಾಂತಿ ತೆಗೆದುಕೊಂಡೆವು. ಆ ರಾತ್ರಿ ರಾಮಣ್ಣನೊಂದಿಗೆ ನಾವು ನಾಲ್ವರು ಸನ್ನದ್ಧರಾಗಿ ಹೊರಟೆವು. ಬಹಳ ನಿಬಿಡವಾದ ಕಾಡು ಅದು ಅದೆಲ್ಲವೂ ಕತ್ತಲೆಗೆ ಕರಗಿದಂತೆ ಕಾಣುತ್ತಿತ್ತು. ಎಲ್ಲೆಡೆಯಿಂದಲೂ ಶಬ್ದ ತರಂಗಗಳನ್ನೇಳಿಸುವ ಜೀರುಂಡೆಗಳು; ನಮ್ಮ ಕಿವಿಯನ್ನು ತಮ್ಮ ತಾರಕ ಸ್ವರದಿಂದ ಗಡಬೆಕ್ಕುವಂತೆ ಮಾಡುತ್ತಿದ್ದುವು. ನಾವು ಮಾತ್ರ ಅತ್ತಿತ್ತ ಟೋರ್ಚಿನ ದೀಪ ಹಾಯಿಸುತ್ತಾ ಪ್ರಾಣಿಗಳ ಕಣ್ಣು ಹೊಳೆಯುವುದು ಕಂಡೀತೇ ಎಂದು ಈಕ್ಷಿಸುತ್ತಿದ್ದೆವು; ಮುಂದೆ ಮುಂದೆ ಸಾಗುತ್ತಿದ್ದೆವು. ನಾವು ಐವರೂ ಒಟ್ಟಿಗೆ ಇದ್ದೆವು.

ನಮ್ಮಿಂದ ಕೆಲವು ಮಾರು ದೂರದಲ್ಲಿ ಒಂದು ಮೊಲವು ಕುಣಿಯುತ್ತಿದ್ದಂತೆ ಕಂಡಿತು. ಇದಿರಿಗಿದ್ದ ರಾಮಣ್ಣ ಅದಕ್ಕೆ ಗುಂಡು ಹೊಡೆದನು. ಮೊಲ ಸಿಕ್ಕಲಿಲ್ಲ. ಪುನಃ ಮುಂದುವರಿದೆವು. ಅದೇ ಮೊಲ ಕಾಣಿಸಿತು. ನನ್ನ ಕೋವಿಯಿಂದ ಗುಂಡು ಹಾರಿಸಿದೆನು. ಮೊಲಕ್ಕೆ ನಾಟಲಿಲ್ಲ. ಅದು ಓಡಿದಂತೆ ಕಂಡಿತು. ಈ ಸಲವೂ ಅದೇ ಮೊಲ ಕಾಣಲಾಗ ಮಿ॥ ರೈಯವರು ಗುಂಡೆಸೆದರು. ಈ ಸಲವೂ ತಪ್ಪಿಸಿ ಓಡಿತು. ಎಲ ಕರ್ಮವೆ! ಇದೇನು ಹೀಗೆ, ನಾವು ಹೊರಟ ಗಳಿಗೆ ಕೆಟ್ಟದೆ? ಎಂದಣಿಸಿ ಸ್ವಲ್ಪ ಕಾಲ ಅಲ್ಲೇ ಕುಳಿತೆವು. ಆಗ ನಮ್ಮ ಸಮೀಪದಲ್ಲಿದ್ದ ದೊಡ್ಡದಾದ ಮರವೊಂದು ಗಡಗಡನ ಅಲುಗಾಡುವಂತೆ ಶಬ್ದ ಕೇಳಿಸಿತು. ಗಾಳಿಯೇನೂ ಬೀಸುತ್ತಿರಲಿಲ್ಲವಾದುದರಿಂದ ಕೇವಲ ಈ ಒಂದು ಮರ ಮಾತ್ರ ಹಂದಾಡುತ್ತಿತ್ತು. ನಮಗೆಲ್ಲರಿಗೂ ಆಶ್ಚರ್ಯವಾಯಿತು. ನಾವು ಅದೇನೆಂದು ಕೇಳಲು "ಅದೊಂದು ಪೀಡೆ ಅಥವಾ ಪಿಶಾಚಿ ನಮಗ ಮೊಲದ ರೂಪದಲ್ಲಿ ಬಂದು ತೊಂದರೆ ಕೊಟ್ಟಿತು. ಅದರಿಂದಲೇ ನಾವು ಮೂವರು ಹೊಡೆದರೂ ಅದು ಸಾಯಲೇ ಇಲ್ಲ. ಈಗ ನಾವು ಹೆದರುವುದಿಲ್ಲವೆಂದು ತಿಳಿದುದರಿಂದಲೋ ಏನೋ ಮರವನ್ನು ಅಲುಗಾಡಿಸಿ ಹೆದರಿಸುತ್ತದೆ" ಎಂದು ರಾಮಣ್ಣನು ಹೇಳಿದನು. ಪೀಡೆ, ಪಿಶಾಚಿ, ಭೂತಗಳನ್ನು ನಾನು ನೋಡಿರದಿದ್ದರೂ ಅದರ ಬಗ್ಗೆ ಕತೆ ಕೇಳಿದ್ದ ಮತ್ತು ಹೆದರಿದ್ದೆನು. ಅದರಿಂದಲೇ ನನ್ನ ಮೈಯಲ್ಲಿ ನಡುಕ ಉಂಟಾಯಿತು. ಉಳಿದವರಿಗೇನಾಯಿತೆಂದು ಆ ರಾತ್ರಿಯಲ್ಲಿ ನಾನು ನಿರೀಕ್ಷಿಸಲಿಲ್ಲ. ಕೂಡಲೇ ರಾಮಣ್ಣನು ಎದ್ದು ನಿಂತು ಗಟ್ಟಿಯಾಗಿ, "ನಿನಗೇನೂ ನಾವು ತೊಂದರೆ ಕೊಡುವುದಿಲ್ಲ. ಮೊಲದ ರೂಪದಲ್ಲಿ ಬಂದುದರಿಂದ ಮೊಲವೆಂದೇ ಭಾವಿಸಿ ಗುಂಡು ಹಾರಿಸಿದೆವು. ನೀನೂ ನಮಗೆ ಏನೂ ಉಪದ್ರವ ಮಾಡಬೇಡ. ಹಾಗೇನಾದರೂ ಮಾಡಿದೆಯೆಂದರೆ ನಾಳೆ ನಿನ್ನನ್ನು ಮಂತ್ರವಾದಿಯ ವಶ ಕೊಟ್ಟೇನು" ಎಂದು ಹೇಳಿದನು.

ಮರ ಅಲುಗುವುದೇನೋ ನಿಂತಿತು. ನನ್ನ ಮನ ಅಲುಗುವುದು ಮಾತ್ರ ನಿಲ್ಲಲಿಲ್ಲ ಇನ್ನು ರಾತ್ರಿಯ ತಿರುಗಾಟ ಸಾಕೆಂದು ನಾನು ಎಣಿಸಿದೆನು. ಎಲ್ಲರೂ ಅಲ್ಲಿಂದೆದ್ದು ಹೊರಟೆವು. ಆ ದಿನ ಎರಡು ಮೊಲಗಳ ಬೇಟೆಯಾಯಿತು. ಅಷ್ಟೇ ಸಾಕೆಂದು ರಾಮಣ್ಣನ ಮನೆಗೆ ಬಂದೆವು. ಮರುದಿನ ಅಲ್ಲಿಂದ ಊರಿಗೆ ಹೊರಟೆವು.

ಹಾಜಿಪೀರ್ ಕಣಿವೆಯನ್ನು ತೆರವು ಮಾಡಿದ್ದೇಕೆ?

(ಐದನೇ ಪುಟದಿಂದ)

ಕಾರಣವಾಗಬಲ್ಲ ಕ್ರಿಯಾಶೀಲ ಅಂಶಗಳು ಯಾವುವು ಎಂಬುದನ್ನು ಹೇಳಬಲ್ಲಿರಾ?

ಉತ್ತರ — ತಾಷ್ಕೆಂಟ್ ಘೋಷಣೆಯ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಕೆಲಮಟ್ಟಿಗೆ ಟೀಕೆ ಕೇಳಿಬಂದರೆ, ಅದು ಅನಿರೀಕ್ಷಿತವೇನೂ ಅಲ್ಲ. ತಾಷ್ಕೆಂಟ್ ಒಪ್ಪಂದದಂತಹ ಅಂತರಾಷ್ಟ್ರೀಯ ಒಪ್ಪಂದಗಳು ಎರಡೂ ಪಕ್ಷಗಳ ಎಲ್ಲಾ ನಿರೀಕ್ಷೆಗಳನ್ನು ಪೂರ್ಣಗೊಳಿಸಲಾರವು.

ಭಾರತ ಪಾಕಿಸ್ತಾನಗಳ ಈ ಮೊದಲಿನ ಸಂಬಂಧಗಳನ್ನು ಗಮನಿಸಿದಾಗ ಇಂತಹ ನಿರೀಕ್ಷೆ ಅಸಹಜವೆನಿಸುತ್ತದೆ. ಈ ರಡೂ ದೇಶಗಳು ಇತಿಹಾಸದ ಕವಲು ಹಾದಿಯಲ್ಲಿದ್ದವು. ಆಗ ಅವುಗಳ ಮುಂದೆ ಎಂದೇ ಎರಡು ಮಾರ್ಗಗಳಿದ್ದವು. ಒಂದನೆಯದು ಶಾಂತಿ ಮತ್ತು ಉತ್ತಮ ನೆರೆಹೊರೆ ಹಾಗೂ ಪರಸ್ಪರ ಸಹಜೀವನದ ಮಾರ್ಗ. ಈ ದೇಶಗಳ ಐತಿಹಾಸಿಕ ಮತ್ತು ಭೌಗೋಳಿಕ ಸನ್ನಿವೇಶಗಳಿಂದಾಗಿ ಇದು ಆತ್ಯವಶ್ಯ.

ಎರಡನೆಯದು ಪರಸ್ಪರ ಕಚ್ಚಾಟ ಹಾಗೂ ದ್ವೇಶಗಳಿಂದ ಉಪಖಂಡದ ಕೋಟ್ಯವಧಿ ಜನರನ್ನು ಸಂಕಷ್ಟಕ್ಕೀಡು ಮಾಡುವುದು.

ತಾಷ್ಕೆಂಟ್ ಘೋಷಣೆಯಲ್ಲಿ ಭಾರತ ಮತ್ತು ಪಾಕಿಸ್ತಾನಗಳು ಪರಸ್ಪರ ಹೋರಾಟವನ್ನು ಶಾಂತಿ ಪ್ರಧಾನವಾದ, ಹಾಗೂ ಒಳ್ಳೆಯ ನೆರೆಹೊರೆಯನ್ನು ನಿರ್ಮಿಸಲು ದೃಢ ಸಂಕಲ್ಪ ಮಾಡಿದೆ ಈ ವರೆವಿಗೂ ಎರಡೂ ದೇಶಗಳಲ್ಲಿ ಏರ್ಪಟ್ಟ ಅಪಾಯಕಾರಿಯಾದ ಪ್ರಕ್ಷುಬ್ಧ ವಾತಾವರಣ ನಿವಾರಣಗೊಂಡು, ಶಾಂತಿಯ ಶಕ್ತಿಗಳು ಪ್ರಬಲವಾಗುವುವು. ಎರಡೂ ರಾಷ್ಟ್ರಗಳು ತಮ್ಮ ಸಂಪನ್ಮೂಲಗಳನ್ನು ಶಾಂತಿಯುತ ಆರ್ಥಿಕ ಅಭಿವೃದ್ಧಿಗೆ ಬಳಸಿಕೊಳ್ಳಲು ಇದರಿಂದ ಅನುಕೂಲವಾಗುವುದು. ತಾಷ್ಕೆಂಟ್ ಘೋಷಣೆಯಲ್ಲಿ ಶಾಂತಿ ಪಾಲನೆಗಾಗಿ ನೀಡಿರುವ ಭರವಸೆಯಿಂದ ಎರಡೂ ರಾಷ್ಟ್ರಗಳ ಭದ್ರತೆ ಹೆಚ್ಚುವುದು. ಇವು ಘೋಷಣೆಯಲ್ಲಿನ ಕೆಲವು ಕ್ರಿಯಾಶೀಲ ಅಂಶಗಳು. ತಾಷ್ಕೆಂಟ್ ಸ್ಫೂರ್ತಿ ಈ ಎಲ್ಲಾ ಅಂಶಗಳಿಗಿಂತಲೂ ಮಹತ್ವದ್ದು ಯಾಕೆಂದರೆ ಅದು ಎರಡೂ ರಾಷ್ಟ್ರಗಳ ಸರ್ಕಾರಗಳಿಗೆ ಮತ್ತು ಜನರಿಗ ಸಹ ಜೀವನದ ಮಾರ್ಗದರ್ಶನ ಮಾಡಿದೆ.

ಪರಸ್ಪರ ಸಮಸ್ಯೆಗಳನ್ನು ಕುರಿತು ಚರ್ಚಿಸಲು, ಎರಡೂ ದೇಶಗಳ ಸರ್ಕಾರಗಳು ಪ್ರತಿನಿಧಿಗಳು ಶೃಂಗಮಟ್ಟದಲ್ಲಿ ಮತ್ತಿತರ ಮಟ್ಟಗಳಲ್ಲಿ ಸಭೆ ಸೇರಲು ಈ ಘೋಷಣೆಯು ಅವಕಾಶವನ್ನು ಕಲ್ಪಿಸಿದೆ. ಈ ದಿಶೆಯಲ್ಲಿ ಅಸ್ತಿತ್ವದಲ್ಲಿ ಬರುವ ಒಪ್ಪಂದಗಳಿಂದ ಭಾರತ ಪಾಕಿಸ್ತಾನಗಳ ಸಂಯುಕ್ತ ಸಂಸ್ಥೆಗಳು ಸ್ಥಾಪನೆಗೊಳ್ಳುವುವು. ಈ ಸಂಸ್ಥೆಗಳು ಪರಸ್ಪರ ಸಮಸ್ಯೆಗಳನ್ನು ಸಮಾಲೋಚನೆ ನಡೆಸಿದ ಬಳಿಕ ತಮ್ಮ ತಮ್ಮ ಸರ್ಕಾರಗಳಿಗೆ ವರದಿ ಸಲ್ಲಿಸುವುವು ಈ ರೀತಿ ತಾಷ್ಕೆಂಟ್ ಘೋಷಣೆಯು ಎರಡೂ ಪಕ್ಷಗಳ ನಡುವೆ ಶಾಂತಿಯುತ ವಾತಾವರಣದಲ್ಲಿ ಮಾತುಕತೆಗಳು ನಡೆಯಲು ಸೌಲಭ್ಯ ಕಲ್ಪಿಸಿದೆ. ಇಂತಹ ಒಂದು ವಾತಾವರಣದಲ್ಲಿಯೂ ಯಾವುದೇ ಒಪ್ಪಂದಗಳು ಸಾಧ್ಯವಾಗಬಲ್ಲವು.

ತಾಷ್ಕೆಂಟ್ ಘೋಷಣೆಯು ನಮ್ಮ ದೇಶದ ಗಡಿಗಳುದ್ದಕ್ಕೂ ಶಾಂತಿ ಸ್ಥಾಪನೆಯ ಆಶ್ವಾಸನೆ ನೀಡಿದೆ ದೇಶದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಆದರಂತೆ ಜಮ್ಮು ಮತ್ತು ಕಾಶ್ಮೀರದ ಕದನ ವಿರಾಮ ರೇಖೆಯ ಪ್ರದೇಶದಲ್ಲಿ ಶಾಂತಿ ನೆಲೆಗೊಳ್ಳುವುದು.

ಪ್ರಶ್ನೆ:- ತಾಷ್ಕೆಂಟ್ ಘೋಷಣೆಯಿಂದ ಕಾಶ್ಮೀರ ಸಂಬಂಧವಾದ ನಮ್ಮ ನಿಲುವಿನ ಮೇಲೆ ಯಾವ ಪರಿಣಾಮವಾಗುತ್ತದೆ?

ಉತ್ತರ:- ಎರಡೂ ಪಕ್ಷಗಳೂ ತಮ್ಮ ತಮ್ಮ ನಿಲುವುಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿವೆಯೆಂಬುದು ಘೋಷಣೆಯ ಮೊದಲನೆಯ ನಿಬಂಧನೆಯಿಂದ ತಿಳಿದುಬರುತ್ತದೆ. ಕಾಶ್ಮೀರ ಸಂಬಂಧವಾದ ನಮ್ಮ ನಿಲುವು ಮೊದಲಿನಂತೆಯೇ ಇದೆ. ಕಾಶ್ಮೀರವು ಭಾರತದ ಅವಿಭಾಜ್ಯ ಭಾಗವಾಗಿದೆ. ಕಾಶ್ಮೀರದ ಪರಮಾಧಿಕಾರವನ್ನು ಕುರಿತು ಯಾವುದೇ ಚರ್ಚೆ ಸಾಧ್ಯವಿಲ್ಲವೆಂಬ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಪ್ರಶ್ನೆ:- ತಾಷ್ಕೆಂಟ್ ಘೋಷಣೆಯ ಬಗ್ಗೆ ವಿಶ್ವದ ಬೃಹತ್ ರಾಷ್ಟ್ರಗಳ ಪ್ರತಿಕ್ರಿಯೆ ಏನು?

ಉತ್ತರ.- ಚೀನಾವೊಂದನ್ನು ಬಿಟ್ಟು ಇಡೀ ವಿಶ್ವವೇ ತಾಷ್ಕೆಂಟ್ ಘೋಷಣೆಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿದ. ತಾಷ್ಕೆಂಟ್ ಘೋಷಣೆಯು ರಾಜಕೀಯ ಮುತ್ಸದ್ದಿತನದ ದ್ಯೋತಕವೆಂದೂ ವಿಶ್ವ ಶಾಂತಿಗೆ ಮಹತ್ವದ ಕೊಡುಗೆಯೆಂದೂ ಪ್ರಶಂಶಿಸಿದೆ. ದಿವಂಗತ ಪ್ರಧಾನ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಾಣ್ಮೆ ಹಾಗೂ ಶಾಂತಿಪ್ರಿಯತೆಯನ್ನು ಸಮಗ್ರ ವಿಶ್ವವೇ ಕೊಂಡಾಡಿದೆ.

ಪ್ರಶ್ನೆ.— ತಾಷ್ಕೆಂಟ್ ಘೋಷಣೆಯು ಭಾರತದ ಮೂಲಭೂತ ಧೋರಣೆಗೆ ಅನುಗುಣವಾಗಿದೆಯೆ?

ಉತ್ತರ.— ತಾಷ್ಕೆಂಟ್ ಘೋಷಣೆಯು ಭಾರತ ಮೂಲಭೂತ ಧೋರಣೆಗೆ ಅನುಗುಣವಾಗಿವೆ. ಅಷ್ಟೇ ಅಲ್ಲ, ಅದು ವಿಶ್ವದ ಎಲ್ಲ ರಾಷ್ಟ್ರಗಳೊಂದಿಗೆ ಶಾಂತಿಯುತ ಸಹಜೀವನ ಹಾಗೂ ಉತ್ತಮ ನೆರೆಹೊರೆಯನ್ನು ನಿರ್ಮಿಸುವ ಭಾರತದ ಮೂಲಭೂತ ಕಾರ್ಯ ನೀತಿಯನ್ನು ಎತ್ತಿ ಹಿಡಿದಿದೆ.

ಭಾರತವು ಈ ಕಾರ್ಯ ನೀತಿಯ ಮೇರೆಗೆ ಆರಂಭದಿಂದಲೂ ಭಾರತ ಪಾಕಿಸ್ತಾನಗಳು ಪರಸ್ಪರ ವಿವಾದಗಳ ಪರಿಹಾರಕ್ಕಾಗಿ ಬಲಪ್ರಯೋಗವನ್ನು ತ್ಯಜಿಸುವ ಘೋಷಣೆ ಸಹಿ ಹಾಕಬೇಕೆಂದು ಒತ್ತಾಯ ಪಡಿಸುತ್ತಲೇ ಬಂದಿದೆ. ಪಾಕಿಸ್ತಾನದ ಜನರೊಂದಿಗೆ ಮೈತ್ರಿಯಿಂದ ಹಾಗೂ ಬಾಂಧವ್ಯದಿಂದ ಇರುವುದು ಭಾರತ ಸರ್ಕಾರದ ಹಾಗೂ ಜನತೆಯ ಹಿರಿಯ ಆಸೆಯಾಗಿದೆ. ಈ ಆಸೆ ಆಕಾಂಕ್ಷೆಗಳು ಮತ್ತು ಕಾರ್ಯನೀತಿಗಳ ಅನುಷ್ಠಾನಕ್ಕೆ ತಾಷ್ಕೆಂಟ್ ಘೋಷಣೆಯು ಭದ್ರವಾದ ಬುನಾದಿಯನ್ನು ಹಾಕಿದೆ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ. 0-19 ಪೈಸೆ.

0 30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ರಖಂ ಪ್ರತಿಗಳಿಗೆ ವಿಚಾರಿಸಿರಿ.-

ನವಯುಗ ಪ್ರೆಸ್, ಉಡುಪಿ.

ಎಲ್ಲೆಲ್ಲಿ ಏನೇನು?

ಸಾಹಿತ್ಯೋತ್ಸವ ಸಮಾರಂಭ

ಸುರತ್ಕಲ್:—ಸ್ಥಳೀಯ ವಿದ್ಯಾದಾಯಿನೀ ಹಯರ್ ಸೆಕೆಂಡರೀ ಶಾಲಾ ಸಾಹಿತ್ಯೋತ್ಸವ ಸಮಾರಂಭವು ತಾ. 23–2–66ರಂದು ಮುಖ್ಯೋಪಾಧ್ಯಾಯ ಶ್ರೀ ಯಂ. ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರಿನ ಸರಕಾರಿ ಕಾಲೇಜಿನ ಕನ್ನಡ ಲೆಕ್ಚರರಾದ ಶ್ರೀ ಚ. ಸುಂದರೇಶನ್ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರಾರ್ಥನೆಯಾದ ಬಳಿಕ, ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ವರಕವಿ ದ. ರಾ. ಬೇಂದ್ರೆಯವರ ಕೆಲವು ಹಾಡುಗಳನ್ನೂ, ಕವಿ ಮುದ್ದಣ್ಣನ ಕೃತಿಗಳನ್ನೂ ಸುಶ್ರಾವ್ಯವಾಗಿ ಹಾಡಿದರು. ಮುಖ್ಯ ಅತಿಥಿಗಳು ಸಾಹಿತ್ಯದ ವಿಚಾರವಾಗಿ ಗಂಭೀರ ಶೈಲಿಯಿಂದ ಭಾಷಣ ಮಾಡಿ, ಬೇಂದ್ರೆ, ಬಸವಣ್ಣ, ಭರ್ತೃಹರಿ ಮೊದಲಾದ ಖ್ಯಾತ ಕವಿಗಳ ಸುಂದರ ಚಿತ್ರಗಳನ್ನು ಸಭೆಯ ಮುಂದಿಟ್ಟರು. ಅನಂತರ ಶಾಲಾ ವಿದ್ಯಾರ್ಥಿಗಳು ತಾವು ಸ್ವತಃ ಬರೆದ ಕವನಗಳನ್ನು ಓದಿದರು. ಅಧ್ಯಕ್ಷರ ಭಾಷಣಾನಂತರ ರಾಷ್ಟ್ರಗೀತೆಯೊಂದಿಗೆ ಅಂದಿನ ಕಾರ್ಯಕ್ರಮವು ಮುಕ್ತಾಯವಾಯಿತು.

ರೋಟರಿ ಕ್ಲಬ್ಬಿನ ಸಭೆ

ಮಂಗಳೂರು, ರೊಟೇರಿಯನ್ ಶ್ರೀ ಕೆ. ಪಿ. ಕಸ್ತೂರಿಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. 24ರಂದು ಸೇರಿದ ರೋಟರೀ ಕ್ಲಬ್ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ಪದ್ಮಶ್ರೀ ಡಾ| ಟಿ. ಎಂ. ಎ. ಪೈಗಳು, ಆಹಾರ ಮತ್ತು ಶಿಕ್ಷಣವೇ ಇಂದು ನಮ್ಮ ಎರಡು ಪ್ರಬಲ ಸಮಸ್ಯೆಗಳು. ಇವುಗಳನ್ನು ಪರಿಹರಿಸದೆ ಯಾವ ಪ್ರಗತಿಯೂ ಅಸಾಧ್ಯ ಎಂದು ನುಡಿದು, ಸಮಾಜಸೇವಾ ಯೋಜನೆಯ ಅಂಗವಾಗಿ ವಿದ್ಯಾ ಪ್ರಸಾರ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಅವರು ರೋಟರೀ ಸದಸ್ಯರಿಗೆ ಕರೆ ನೀಡಿದರು.

ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಡಾ| ಎ. ಎ. ಬೈಲೂರು "ಮಾಹಿತಿ ಭಾಷಣ" ಮಾಡಿದರು. ಕೊನೆಯಲ್ಲಿ ರೊಟೇರಿಯನ್ ಎಂ. ಜೆ. ಕಾಮತ್ ಧನ್ಯವಾದ ಸಮರ್ಪಿಸಿದರು.

ಮಹಾ ಸಭೆ

ಉಡುಪಿ ಬೋರ್ಡ್ ಹಾ. ಎ. ಶಾಲಾ ಹಳೆ ವಿದ್ಯಾರ್ಥಿಗಳ ಸಂಘದ ಮಹಾ ಸಭೆಯು ಶಾಲಾ ಸಭಾ ಭವನದಲ್ಲಿ ಶ್ರೀ ಶ್ರೀಶ ಬಲ್ಲಾಳ ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತು. ಶಾಲಾ ಮೆನೇಜರ್ ಜಗನ್ನಾಥ ನಾಯಕರು ಸ್ವಾಗತಿಸಿದರು. ಮುಂದಿ ಹೊಸ ವರುಷಕ್ಕೆ ಚುನಾವಣೆಗಳು ನಡೆದು ಡಾ| ಮೋಹನದಾಸ ಪೈಗಳು ಅಧ್ಯಕ್ಷರಾಗಿಯೂ, ಶ್ರೀ ಶ್ರೀಶ ಬಲ್ಲಾಳರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ. ಕೃಷ್ಣಪ್ಪನವರು ಕಾರ್ಯದರ್ಶಿಯವರಾಗಿಯೂ, ಶ್ರೀ ರಮೇಶ ಕಾಮತ್ ಕೋಶಾಧಿಕಾರಿಗಳಾಗಿಯೂ, ಶ್ರೀ ಅರುಣ ಕುಮಾರ ಶೆಣೈ ವೆಂಕಟೇಶ ಪೈ, ದೇವದಾಸ ಶೆಣೈ, ಆನಂದ ಶೆಟ್ಟಿ, ರಮೇಶರಾವ್, ಶ್ರೀಪತಿ ಆಚಾರ್ಯ, ಬಾಲಕೃಷ್ಣ ಪಾಂಗಣ್ಣಾಯ, ಮೋಹನ ಪೈ, ಮುರಳೀಧರ ಬಲ್ಲಾಳ ಇವರು ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ ಚುನಾಯಿತರಾದರು. ಆದಷ್ಟು ಹೆಚ್ಚಿಗೆ ಸಂಘದ ಸದಸ್ಯರ ಸಂಖ್ಯೆ ಹೆಚ್ಚಾಗುವಂತೆ ಊರ ಪರವೂರ ಸದಸ್ಯರು ತಮಗೆ ತಿಳಿದ ಹಳೆ ವಿದ್ಯಾರ್ಥಿಗಳ ಹೆಸರು ವಿಳಾಸಗಳನ್ನು ಮುಖ್ಯೋಪಾಧ್ಯಾಯರಿಗೆ ಕೇಳಿಕೊಳ್ಳಲು ನಿರ್ಣಯಿಸಲಾಯಿತು. ಶಾಲಾ ಹಳೆವಿದ್ಯಾರ್ಥಿಗಳಿಂದ ಹಾಗೂ ಹಿತೈಷಿಗಳಿಂದ ರಚಿಸಲ್ಪಟ್ಟ ಆಲೋಕಸ್ತಂಭ ಹಾಗೂ ರೇಡಿಯೋವನ್ನು ಉದ್ಘಾಟಿಸಲು ಕಾರ್ಯಕ್ರಮ ನಿಶ್ಚಯಿಸಲು ಕಾರ್ಯಕಾರೀ ಸಮಿತಿಗೆ ಅಧಿಕಾರ ಕೊಡಲಾಯಿತು. ಅಧ್ಯಕ್ಷರ ಭಾಷಣ, ಲಘು ಉಪಹಾರದ ಬಳಿಕ ಕಾರ್ಯದರ್ಶಿಯವರು ಧನ್ಯವಾದ ಸಮರ್ಪಣೆ ಮಾಡಿದರು.

ಶಾಲಾ ವರ್ಧಂತ್ಯುತ್ಸವ

ಮಜೂರು, ಕರಂದಾಡಿ:—ಸ್ಥಳೀಯ ಶ್ರೀ ರಾಮ ಹಯರ್ ಎಲಿಮೆಂಟರೀ ಶಾಲೆಯ ವರ್ಧಂತ್ಯುತ್ಸವವು ತಾರೀಕು 26ರಂದು ಶ್ರೀ ಟಿ. ಎ. ಪೈ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಟಿ. ಕೃಷ್ಣ ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿ ಹಾರವನ್ನರ್ಪಿಸಿದರು. ಶ್ರೀ ಯು. ಹರಿದಾಸ್ ಭಟ್ ಇವರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವೈ ವಿ. ನಾರಾಯಣ ರಾಯರು ವರದಿವಾಚನ ಮಾಡಿದರು. ಡಾ| ಕೆ. ವಿಠ್ಠಲ ಸೆಟ್ಟರು ಬಹುಮಾನ ವಿತರಣೆ ಮಾಡಿದರು. ಕಾಪು ಮಹದೇವಿ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಪಿ. ನಾರಾಯಣ ರಾಯರು ಕವೀಂದ್ರ ರವೀಂದ್ರರ ಭಾವಚಿತ್ರವನ್ನೂ, ಶ್ರೀ ಎ. ಜಿ. ಅಲ್ಸೆಯವರು ದಿ| ಪ್ರಧಾನಿ ಶಾಸ್ತ್ರಿಗಳ ಭಾವಚಿತ್ರವನ್ನೂ ಅನಾವರಣ ಮಾಡಿದರು. ಮುಖ್ಯೋಪಾಧ್ಯಾಯರು ಧನ್ಯವಾದವಿತ್ತ ಬಳಿಕ ವಿದ್ಯಾರ್ಥಿ–ಅಧ್ಯಾಪಕರಿಂದ ಕನ್ನಡ ತುಳು ನಾಟಕಗಳು ಅಭಿನಯಿಸಲ್ಪಟ್ಟವು. ಪೂರ್ವಾಹ್ನ ಡಾ| ಯಂ. ಬಿ. ಶೆಟ್ಟರು ಧ್ವಜವನ್ನರಳಿಸಿದರು. ಸದ್ರಿ ಶಾಲಾ ಹಿಂದಿ ಶಿಕ್ಷಕ ಶ್ರೀ ಕೆ. ದಾಮೋದರ ಪಣಾಳರು ಶಾಲಾ ಮಕ್ಕಳಿಗೆ ಸಿಹಿ ತಿಂಡಿಯನ್ನು ಕೊಟ್ಟರು.

ಭಾರ ವಾಹನಗಳ ಸಂಚಾರ ನಿಷೇಧ

ಮಂಗಳೂರು, ಮಂಗಳೂರು ಬೈಂದೂರು ಕರಾವಳಿ ಮಾರ್ಗದಲ್ಲಿ ಉಡುಪಿಯಲ್ಲಿರುವ ಶಿವಳ್ಳಿ ಗ್ರಾಮದ ಕಲ್ಲಸಂಕ ಸೇತುವೆಯ ಮೇಲೆ ಭಾರವುಳ್ಳ ವಾಹನಗಳ ಸಂಚಾರವನ್ನು ತಾ. 26–2–'66ರಿಂದ ಮೂರು ತಿಂಗಳ ವರೆಗೆ ನಿಷೇಧಿಸಲಾಗಿದೆಯೆಂದು ದ. ಕ. ಜಿಲ್ಲಾ ಮೇಜಿಸ್ಟ್ರೇಟರಾದ ಶ್ರೀ ಎಚ್. ಎಲ್. ನಾಗೇ ಗೌಡರು ಆಜ್ಞೆ ಹೊರಡಿಸಿದ್ದಾರೆ.

ಬಿ. ಎ. ಯನ್. ಸಂಘದ ಕಾರ್ಯಕಾರಿ ಸಭೆ

ಮಂಗಳೂರು, ಸದ್ರಿ ಸಭೆ ತಾ. 27–2–66ರಂದು ಶ್ರೀ ಬಿ. ಮಂಜಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನಡೆದು ಸಂಘದ ಮತ್ತು ಉಪಭವನಗಳ ವರದಿಗಳು, ಲೆಕ್ಕಪತ್ರ ಮಂಜೂರು ಮಾಡಲ್ಪಟ್ಟವು. ಕುಂದಾಪುರದ ಪ್ರತಿನಿಧಿ ಶ್ರೀ ಜಿ. ಕುಶಲ ಹೆಗ್ಡೆಯವರು ವಿಸಂತಿಸಿಕೊಂಡಂತೆಯೂ ಅಲ್ಲಿ ಈ ಸಂಘದ ಧನ ಸಹಾಯ ಪಡೆದು, ಸಾರ್ವಜನಿಕರಿಂದ ನಂತಿಗೆ ಪಡೆದು, ಕಟ್ಟುತ್ತಿರುವ ಹೊಸ ಕಟ್ಟಡ ಭರದಿಂದ ಮುಂದುವರಿಯುತ್ತಿರುವುದರಿಂದಲೂ, ಈ ವರ್ಷದ ಮಹಾಸಭೆಯನ್ನು ತಾ. 30–4–66ರಲ್ಲು ಕುಂದಾಪುರದಲ್ಲಿ ಜರಗಿಸುವರೆ ನಿರ್ಣಯಿಸಲಾಯಿತು. ಸದ್ರಿ ಹೊಸ ಭವನದ ಉಪಯೋಗದ ಬಗ್ಗೆ ಮರದ ಸಾಮಾನುಗಳನ್ನು ಪಡಕೊಳ್ಳುವ ಬಗ್ಗೆ ಈ ಮೊದಲು ಸೆಂಕ್ಷನ್ ಮಾಡಿದ ಒಂದು ಸಾವಿರ ರೂಪಾಯಿಗೆ ಇನ್ನೊಂದು ಸಾವಿರ ರೂಪಾಯಿ ಮಂಜೂರು ಮಾಡಲಾಯಿತು. ಹೊಸತಾಗಿ ಸಂಘಕ್ಕೆ ನೇಮಿಸಲ್ಪಟ್ಟ ಶ್ರೀ ಬಿ. ಗಂಗಯ್ಯ ಶೆಟ್ರು ಉಪಭವನಗಳನ್ನು ಸಂದರ್ಶಿಸಿ, ಭವನಗಳ ಸರಿಯಾದ ಲೆಕ್ಕಪತ್ರಗಳನ್ನು ಇಡುವರೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ಸಂಘಕ್ಕೆ ಹೊಸ ಮೆಂಬರುಗಳನ್ನು ಸೇರಿಸಲಿಕ್ಕೆ ಅವರಿಗೆ ಅಧಿಕಾರ ಕೊಡಲಾಯಿತು.

ಉಡ್ಪಿ ಭವನದಲ್ಲಿ ಒಂದು ಹೊಸತಾದ ಹಾಲ್ ಕಟ್ಟುವರೆ ಶ್ರೀ ಕೆ. ಪಿ. ರಾಮಣ್ಣ ಸೆಟ್ರು ಧಾರಾಳ ಧನ ಸಹಾಯ ನೀಡುವರೆ ವಾಗ್ದಾನ ಮಾಡಿರುವುದಲ್ಲದೆ, ಕೆಲವು ಅಂಶ ಈ ಮೊದಲೇ ಕೊಟ್ಟಿರುವುದರಿಂದ, ಶ್ರೀ ಪಿ. ಯಸ್. ತಿಮ್ಮಪ್ಪ ಸೆಟ್ರು ಸೂಚಿಸಿದ ಮೇರೆಗೆ ಈ ಮೊದಲು ನೇಮಿಸಲ್ಪಟ್ಟ ಹೋಸ್ಟೆಲ್ ಆಕ್ಷನ್ ಕಮಿಟಿಯವರು ಉಡ್ಪಿಗೆ ಹೋಗಿ ಅಲ್ಲಿಯ ದಾನಿಗಳನ್ನು ಮತ್ತು ಭವನದ ಕಮಿಟಿಯವರನ್ನು ಕಂಡು, ಕೂಡ್ಲೆ ಈ ಕಟ್ಟಡದ ಕೆಲಸ ಪ್ರಾರಂಭಿಸಬೇಕೆಂದು ನಿಶ್ಚಯಿಸಲಾಯಿತು. ಸಂಘದ ಮೆಂಬರುಗಳ ಹೆಸರುಗಳನ್ನು ಕೂಲಂಕಷವಾಗಿ ಹೊಸ ರಿಜಿಸ್ಟ್ರಿಯಲ್ಲಿ ದಾಖ್ಲೆ ಮಾಡುವರೆ, ಶ್ರೀ ಪಿ. ಯಸ್. ತಿಮ್ಮಪ್ಪ ಶೆಟ್ರು ಸಹಕಾರ ನೀಡುವುದಾಗಿ ತಿಳಿಸಿದರು.

ಸುಳ್ಯ ತಾಲೂಕು

ಇದೀಗ ಸುಳ್ಯ ತಾಲೂಕು ರಚನೆಯಾಗಿದೆ. ಇದರಿಂದಾಗಿ ಆಸುಪಾಸಿನ ಅನೇಕ ಗ್ರಾಮಗಳಿಗೆ ತುಂಬಾ ಪ್ರಯೋಜನವಾಯಿತು. ಮಲೆನಾಡಿನ ಕನಸು ನನಸಾಯಿತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮಲೆನಾಡಿನಲ್ಲಿರುವ ಅನೇಕ ಗ್ರಾಮಗಳು ರಸ್ತೆಗಳು ಹಾಗೂ ಇನ್ನಿತರ ಕೆಲಸಗಳು ಅಭಿವೃದ್ಧಿಯಾಗಲಿಕ್ಕಿವೆ. ಸುಳ್ಯ ಮಂಗಳೂರು ಬೆಂಗಳೂರು ರಸ್ತೆಯ ಮಧ್ಯದಲ್ಲಿದ್ದು ಒಂದು ಕೇಂದ್ರ ಸ್ಥಳವಾಗಿರುತ್ತದೆ. ಮಲೆನಾಡಿನ ಸಂಪತ್ತಾದ ಅಡಿಕೆ ಕರಿಮೆಣಸು, ಏಲಕ್ಕಿ ಕಾಫಿ ಗೇರುಬೀಜ ವಗೈರೆ ವಸ್ತುಗಳು ಈ ಆಸುಪಾಸಿನ ಗ್ರಾಮಗಳ ಮುಖ್ಯ ಉತ್ಪತ್ತಿಯಾಗಿರುತ್ತದೆ. ಕೆಲವು ವಿಷಯಗಳಲ್ಲಿ ಇದು ಅಭಿವೃದ್ಧಿ ಹೊಂದಿದರೂ ಇನ್ನೂ ಹೆಚ್ಚಿನ ವಿಷಯಗಳಲ್ಲಿ ಅಭಿವೃದ್ಧಿ ಹೊಂದಲಿದೆ. ತಾಲೂಕಿನ ಕೇಂದ್ರ ಸ್ಥಳವಾದ ಸುಳ್ಯಕ್ಕೆ ಆಸುಪಾಸಿನ ಗ್ರಾಮಗಳಿಂದ ಬರಲು ಕೆಲವು ಕಡೆಗಳಲ್ಲಿ ಬಸ್ಸು ಚಲಾವಣೆ ಇಲ್ಲ. ಬೆಳ್ಳಾರೆ, ಕಲ್ಮಡ್ಕ, ಕುಕ್ಕೆ ಐದ್ಕ ಮೊದಲಾದ ಕಡೆಗಳಿಂದ ಸುಳ್ಯಕ್ಕೆ ಬರಲು ಯೋಗ್ಯ ರಸ್ತೆಗಳು ನಿರ್ಮಾಣವಾಗಿ ಬಸ್ಸು ಚಲಾವಣೆಯಾಗಬೇಕು. ಆದುದರಿಂದ ಕೂಡಲೇ ಹೆಚ್ಚಿನ ಕಾರ್ಯಗಳು ಕಾರ್ಯಗತವಾಗಿ ಈ ಮಲೆನಾಡು ತಾಲೂಕು ಮಾದರಿಯ ತಾಲೂಕಾಗಿ ಪರಿಣಮಿಸಲಿ ಎಂದು ಹಾರೈಸಬಹುದೇ?

ಐವರ್ನಾಡು. —ಎಸ್. ವಿ. ರಮಣ.

ಕಡ್ಡಾಯ ಸೈನಿಕ ಶಿಕ್ಷಣ

"ಪ್ರತಿಯೊಂದು ದೇಶಕ್ಕೆ ಒಮ್ಮೆಲೊಮ್ಮೆ ಗಂಡಾಂತರ ಪರಿಸ್ಥಿತಿ ಬಂದೇ ಬರುತ್ತದೆ. ಬರದೇ ಇರುವದಿಲ್ಲ." ಎಂಬಂತೆ ಸ್ವತಂತ್ರರಾದ ನಮಗೆ ಮೊದಲು ಗಂಡಾಂತರ ಬರಲೇ ಇಲ್ಲ. ಗಂಡಾಂತರ ಇಲ್ಲದ್ದರಿಂದ ನಾವು ಭಾರತೀಯರು, ಹೆಚ್ಚು ಆಲಸಿಗಳಾದೆವು. ನಾವು ನಾನೇ ಬಡಿದಾಡಹತ್ತಿದೆವು. ಹೆಚ್ಚು ನಿದ್ರಿಸ ಹತ್ತಿದವು. "ತೊಂದರೆಗಳೆಲ್ಲ ಒಳ್ಳೆಯದಕ್ಕೇನೇ" ಎಂಬಂತೆ, ನಾವು ನಿದ್ರಿಸುವಾಗ "ಭಾಯಿ ಭಾಯಿ" ಎಂದ ಚೀಣ, ಒಮ್ಮೆಲೇ ಧಾಳಿಯಿಟ್ಟಿತು. ಆಗ ನಮಗರಿವಾಯಿತು. ಚೀನದ ಕಾರಸ್ಥಾನ ಚೀಣ ಯುದ್ಧಕ್ಕೆ ಬಂದುದು ನಮಗೆ ಒಳ್ಳೆಯದಕ್ಕೇ ಎಂದೆ ಹೇಳಬಹುದು! ಏಕೆಂದರೆ– ಚೀಣ ಬಂದೊಡನೇ ಜನವೆಲ್ಲ ಒಕ್ಕಟ್ಟಾಯಿತು. ರಕ್ಷಣಾ ನಿಧಿಗೆಂದು ಜನ ಹಣ, ವಸ್ತು, ಒಡವೆ ಕೊಟ್ಟರು. ಆದರೂ ಅದು ಕಡಿಮೇನೇ ಆಯಿತು. ಅನಂತರ ಮೊನ್ನೆ ಪಾಕಿಸ್ತಾನ ಏರಿಬಂದಿತು. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ. ಅಷ್ಟೇ ಅಲ್ಲ, ಭಾರತದ ನಂದನವನ ಶಂಕರಾಚಾರ್ಯರ ಆರಾಧ್ಯ ದೇವತೆ ಇರುವುದೂ ಅಲ್ಲಿಯೇ. ಈಗ ಪಾಕ್ ಅಷ್ಟೇ ಅಲ್ಲ ಬೇರೆ ಹಿರಿಯ ದೇಶ ಬಂದರೂ ಎದುರಿಸೇವು, ಅವರ ಕತ್ತು ಹಿಚಕೇವು ಎಂಬ ಆತ್ಮಾಭಿಮಾನ ನಮ್ಮಲ್ಲಿದೆ. ಬರೇ ಅಭಿಮಾನದಿಂದ ಗೆಲ್ಲಲಾಗುವದಿಲ್ಲ. ಅದಕ್ಕೇ ರೂಢಿ ಬೇಕು ಕಸುವು ಬೇಕು. ಅಂದಾಗಲೇ ಭಾರತೀಯ ರಕ್ಷಣೆ ಸಾಧ್ಯ. ಅದಕ್ಕೆ ಸರಕಾರವು ಶಾಲೆ, ಕಾಲೇಜುಗಳಿಗೆ ಸೈನಿಕ ಶಿಕ್ಷಣ ಕೊಡಿಸಬೇಕು. ಸಧ್ಯ ಬಹಳಷ್ಟು ಕಾಲೇಜುಗಳಾಗ್ಲಿವೆ. ಅಲ್ಲದೇ ನವಯುವಕರು ಸೈನ್ಯದಲ್ಲಿ ಸೇರಿ, ತಾಯಿ ಭಾರತೀಯ ಋಣ ತೀರಿಸಲು ಮುಂದಾಗಬೇಕು. ಮನೆಗೊಬ್ಬನಿಗಾದರೂ ಸೈನಿಕ ಶಿಕ್ಷಣ ಅವಶ್ಯ.

ಕೆಲವು ಸಂಗ್ರಾಹ್ಯ ಪುಸ್ತಕಗಳು

ಆಯ್ದ ಜಾನಪದ ಗೀತೆಗಳು	ಕರಾಕೃ	1	00
ಬಾಳ ನಿಯಮ	ಡಿ. ವಿ. ರಾಘವೇಂದ್ರ	1	50
ಸಮಾಜ ಶಾಸ್ತ್ರಾಭ್ಯಾಸಗಳ ಬೋಧನೆ	ಎನ್. ಕೃಷ್ಣಪ್ಪ	4	50
ಒಡ್ಡಿದ ಉರುಳು	ಅ. ಗೌ. ಕಿನ್ನಿಗೋಳಿ	1	25
ಬೋಧನೆಯ ಸಾಮಾನ್ಯ ನಿಯಮಗಳು ಮತ್ತು ಬೋಧನಾ ಕ್ರಮ.	ಕೆ. ಎಸ್. ವೆಂಕಟ ಸುಬ್ಬನ್	2	50
ಕೆರೆಯ ನೀರನು ಕೆರೆಗೆ ಚೆಲ್ಲಿ ಮತ್ತು ಇತರ ಕತೆಗಳು	ಪಿ. ಲಂಕೇಶ್	2	50
ಲಿಯೊ ಟಾಲ್‌ಸ್ಟಾಯ್	ಆನಂದ	3	00
ಜನತೆಯ ನಡುವೆ	ಅನು: ನಿರಂಜನ	2	50
ಬಿಳಿಹಾಯಿ	ಅನು: ಕೆ. ಎಸ್ ಕೃಷ್ಣಮೂರ್ತಿ	2	00
ನನ್ನ ವಿಶ್ವ ವಿದ್ಯಾನಿಲಯ	ಅನು: ನಿರಂಜನ	2	00
ಚೆನ್ನಿಗ ಚೆಲುವಯ್ಯ	ಕರಾಕೃ	2	25
ಕುಲಹೋಯಿತು	ಶ್ಯಾಮಾ	2	75
ನನ್ನ ಬಾಲ್ಯ	ಅನು: ನಿರಂಜನ	1	75
ಬಸ್ ಕಂಡಕ್ಟರ್	ಕಾಮರಾಜ	2	50
ನಾಡ ಹಾಡುಗಳು	ಕರಾಕೃ	0	50
ಮದುವೆ ಮಾಡಿ ನೋಡು	ರಾಘಣ್ಣ	0	75
ನಾಯೋ ಎಮ್ಮೆ ನೀರು ತುಪ್ಪ	,,	0	75
ಸ್ವಾಮಿ ವಿವೇಕಾನಂದ	ಉ. ಕಾ. ಸುಬ್ಬರಾಯಾಚಾರ್	0	50
ಭಾರತದ ಇತಿಹಾಸ ಪಾಠಗಳು	ಅನು: ತ. ಸು. ಶಾಮರಾಯ	0	75
ಪುಟಾಣಿಗಳ ಪ್ರಪಂಚ	ಕೆ. ಎನ್. ತಂತ್ರಿ	0	60
ನುಡಿಮುತ್ತುಗಳು	ಎಂ. ವಿ. ಹೆಗ್ಡೆ	1	50
ವಿಚಿತ್ರ ಕಳ್ಳ ಪೇಟೆ	(ಸಂಕಲನ)	1	50

ಕರ್ನಾಟಕದ ಹಲವಾರು ಪ್ರಸಿದ್ಧ ಲೇಖಕರ
ನೂರಾರು ಬಗೆಯ ಪುಸ್ತಕಗಳು ದೊರೆಯುತ್ತವೆ

ಕೆಟಲಾಗಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

S. C. 823/1963

ವಾದಿ. ಚಿಕ್ಕಯ್ಯ ಸೆಟ್ಟಿ

ಪ್ರತಿವಾದಿರು. 1 ಹೆರಿಯಣ್ಣ ಸೆಟ್ಟಿ. ಅಬ್ಬಕ್ಕ ಸಡ್ತಿರ ಮಗ.

2 ರಘುರಾಮ ಸೆಟ್ಟಿ 1ನೇ ಪ್ರತಿವಾದಿ ಅಳಿಯ

1ನೇ ಪ್ರತಿವಾದಿ ಹಳನಾಡು ಗ್ರಾಮದ ಬಿಲ್ಲಾರ ಬೆಟ್ಟನಲ್ಲಿರುವವ 2 ನೇ ಪ್ರತಿವಾದಿ ಕರ್ಕುಂಜೆ ಗ್ರಾಮದ ನೇರ್ಲಕಟ್ಟೆಯಲ್ಲಿರುವವ.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸಿದ್ದು

ನೀವು ವಾದಿಗೆ ತಾ. 7—10—1962ರಲ್ಲಿ ರುಪಾಯಿ 400—00ಕ್ಕೆ ಬರಕೊಟ್ಟ ದಿವಾಂಡು ನೋಟಿನ ಅಸಲು ಬಡ್ಡಿ ಹಣಗಳ ಬಗ್ಗೆ ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ತಾ. 15—3—1966ಕ್ಕೆ ತಕ್ಕಗೆ ಯಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪ ಯಿದ್ದರೆ ಆ ದಿನ ಹಗಲು 11ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದು ಎಂಬ ಸಂಗ್ತಿ ತಿಳಿಸಿರುತ್ತದೆ.

(By Order of the Court)

Y. Tejappa Shetty
Advocate for Pltf.

Koondapoor, 27-2-1966

ಹಾಸ್ಟೆಲ್ ದಿನಾಚರಣೆ

ಮಣಿಪಾಲ,– ಇಂಜಿನಿಯರುಗಳಾಗುವವರಿಗಾಗಿ ಸಹಸ್ರಾರು ಅವಕಾಶಗಳು ಕಾಯುತ್ತಿದ್ದು, ಅವರೆಲ್ಲರೂ ದೇಶದ ಪ್ರಗತಿಗಾಗಿ ಅವುಗಳನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕೆಂದು ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರು ಮಣಿಪಾಲ ಇಂಜಿನಿಯರಿಂಗ್ ಕಾಲೇಜ್ ಹಾಸ್ಟೆಲ್ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು.

ಶ್ರೀ ಎಸ್. ಸಿ. ಗೋಯೆಲ್‌ರವರು ಎಲ್ಲರನ್ನೂ ಸ್ವಾಗತಿಸಿದ ಬಳಿಕ ವಾರ್ಡನ್ ಶ್ರೀ ವಿ. ಚಂದ್ರಶೇಖರ್‌ರವರು ವರದಿ ಓದಿದರು. ಪ್ರಿನ್ಸಿಪಲ್ ಶ್ರೀ ಪಿ. ವೆಂಕಟರಮಣ ಭಟ್, ಶ್ರೀ ಸಿ. ವಿ. ಅಪ್ಪಾಸ್ವಾಮಿ ಮತ್ತು ಶ್ರೀ ಜೆ. ಮುರಳೀಧರ್‌ರವರು ಮಾತನಾಡಿದರು.

ಕ್ರೀಡೋತ್ಸವ

ಮಣಿಪಾಲ, ಇಲ್ಲಿ ನಡೆದ ಮಣಿಪಾಲ ಇಂಜಿನಿಯರಿಂಗ್ ಕಾಲೇಜ್ ಕ್ರೀಡೋತ್ಸವದ ಅಧ್ಯಕ್ಷ ಭಾಷಣ ಮಾಡುತ್ತಾ ಮಂಗಳೂರಿನ ಕಸ್ತೂರಬಾ ಮೆಡಿಕಲ್ ಕಾಲೇಜಿನ ಡಾ| ಎಂ. ವಿ. ಶೆಟ್ಟಿಯವರು ಕ್ರೀಡೆಗಳಿಂದ ಸಿಗುವ ಶಿಸ್ತು ಕಡಿಮೆಯಾಗುತ್ತಿರುವ ಬಗ್ಗೆ ವಿಷಾದಿಸಿ, ಅದನ್ನು ಪುನಃ ಕಲಿತುಕೊಳ್ಳಬೇಕೆಂದು ಕ್ರೀಡಾಪಟುಗಳಿಗೆ ಕರೆಯಿತ್ತರು.

ಕ್ರೀಡಾ ಸಂಘದ ಅಧ್ಯಕ್ಷ ಶ್ರೀ ಜಿ. ಆರ್. ರೈಯವರು ಸ್ವಾಗತಿಸಿದ ನಂತರ ದೈಹಿಕ ಶಿಕ್ಷಣಾಧಿಕಾರಿ ಶ್ರೀ. ಕೆ. ಎಂ. ಬಲ್ಲಾಳ್‌ರವರು ವರದಿಯನ್ನೋದಿದರು. ಶ್ರೀ ಪಿ. ವೆಂಕಟರಮಣ ಭಟ್, ಶ್ರೀ ಬಿ. ವಿ. ಕೃಷ್ಣಮೂರ್ತಿ ಮತ್ತು ಶ್ರೀ ವಿ. ಚಂದ್ರಶೇಖರ್‌ರವರ ಮಾತನಾಡಿದರು.

ಶ್ರೀ ಎನ್. ಆರ್. ಗೋಪಾಲಕೃಷ್ಣನ್‌ರವರಿಗೆ ವೈಯಕ್ತಿಕ ಛಾಂಪಿಯನ್‌ಶಿಪ್ ಕೊಡಲಾಯಿತು. ಕಾರ್ಯದರ್ಶಿ ಶ್ರೀ ಬಿ. ಜಿ. ರಾಮಪ್ರಸಾದ್‌ರವರು ವಂದನೆಗಳನ್ನು ಅರ್ಪಿಸಿದರು.

ನಾಟ್ಯೋತ್ಸವದ ಉದ್ಘಾಟನಾ ಸಮಾರಂಭ

ಉಡುಪಿ, ಸಂಗೀತ ಸಭೆಯವರ ಆಶ್ರಯದಲ್ಲಿ ಪ್ರಾರಂಭವಾದ ಶ್ರೀಮತಿ ಪಂಡರೀಬಾಯಿಯವರ ನೇತೃತ್ವದಲ್ಲಿರುವ ಶ್ರೀ ಕೃಷ್ಣ ಚೈತನ್ಯ ನಾಟಕಸಭಾದವರು ಐದು ದಿನಗಳ ನಾಟ್ಯೋತ್ಸವವನ್ನು ಶ್ರೀ ಟಿ. ಎ. ಪೈಯವರು ತಾ. 1ರಂದು ಉದ್ಘಾಟಿಸಿದರು.

ಶ್ರೀ ಪೈಯವರು ತಮ್ಮ ಭಾಷಣದಲ್ಲಿ ಉಡುಪಿಯಲ್ಲಿ ಕಲೆಗೆ ಸಿಗುತ್ತಿರುವ ಪ್ರೋತ್ಸಾಹಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ಸಂಗೀತಸಭೆಯು ಹಾಗೂ ಅದರ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳ ನೇತೃತ್ವದಲ್ಲಿ 2–3 ವರ್ಷಗಳಿಂದ ಕಲಾಪೂರ್ಣ ಕಾರ್ಯಕ್ರಮಗಳು ನಡೆದಿವೆ ಎಂದರು. ಜನತಾ ಬೆಂಬಲದಿಂದಲೇ ಕಲೆ ಹಾಗೂ ಕಲಾವಿದರ ಪ್ರಗತಿ ಸಾಧ್ಯವೆಂದು ಅವರು ನುಡಿದರು. ನಮ್ಮ ಜಿಲ್ಲೆಯಲ್ಲಿ ನಾಟಕ ಕಲೆಗೆ ಪ್ರೋತ್ಸಾಹದೊರಕಬೇಕಾದ ಅವಶ್ಯಕತೆಗಳನ್ನು ಅವರು ವಿವರಿಸಿದರು.

ಶ್ರೀ ಪೈಗಳು ಮುಂದುವರಿಯುತ್ತಾ, ಶ್ರೀಮತಿ ಪಂಡರೀಬಾಯಿಯವರ ನೇತೃತ್ವದಲ್ಲಿ ಶ್ರೀ ಕೃಷ್ಣ ಚೈತನ್ಯ ನಾಟಕಸಭಾದವರು ನಾಟಕ ಕಲೆಯ ಪ್ರಸಾರಕ್ಕಾಗಿ ಈ ರೀತಿಯ ಸೇವೆ ಸಲ್ಲಿಸುತ್ತಿರುವುದು ಅಭಿನಂದನೀಯವೆಂದು ಹೇಳಿದರು. ಕೊನೆಯಲ್ಲಿ ಅವರು ಕಲಾವಿದರನ್ನು ಪ್ರೋತ್ಸಾಹಿಸಿ, ಅವರು ಮುಂದೆ ಬರುವಂತೆ ಮಾಡುವುದು ಮುಖ್ಯವೆಂದು ಹೇಳುತ್ತಾ ಕನ್ನಡ ನಾಟಕದ ಭವಿಷ್ಯವು ಉಜ್ವಲವಾಗಲೆಂದು ಹಾರೈಸಿದರು.

ಆರಂಭದಲ್ಲಿ ಸಂಗೀತ ಸಭೆಯ ಅಧ್ಯಕ್ಷರಾದ ಶ್ರೀ ಕೆ. ಕೆ. ಪೈಗಳು ಸ್ವಾಗತಿಸುತ್ತಾ ಸಂಘದ ಚಟುವಟಿಕೆಗಳನ್ನು ವಿವರಿಸಿದರು. ಕೊನೆಯಲ್ಲಿ ನಗರ ಸಭಾಧಿಪತಿ ಶ್ರೀ ಪಿ. ರಂಗನಾಥ ಶೆಣೈಯವರಿಂದ ಧನ್ಯವಾದ ಸಮರ್ಪಣೆಯಾಯಿತು.

Tender Notice

The Kalavar Service Co-operative Society Ltd.

P. O. Salvady.

Sealed tenders will be received by the undersigned up to 4 P. M. on 17—3—66 from the Regd. contractors for the construction of a godown at Kalavar at an estimated cost of Rs. 6,800-00. The E. M. D. of Rs. 340-00 has to be paid in cash to the Society. The Estimates and other particulars can be had from the Society Office up to 15—3—66.

The undersigned reserves the power to accept or reject any tender with or without assigning reasons.

K. Sanjiva Shetty,
President.

Kalavar, 6-3-66.

In the Court of the Munsif of Coondapoor.

O. S. No. 569/65

Between:

Subbanna Upadya ... Plaintiff,

and

Mahabala Hegde (Dead) and others ... Defendants.

To

Smt. Paddamma Shedthy daughter of Madamma Shedthy— (5th deft.) Kedur Village— Coondapoor Taluk.

Please take notice that the above suit filed by the plaintiff against the defendants for recovery of arrears of mulgeni rent stands posted to 26—3—66 at 11 A. M. before the above court. If you fail to appear on that day, and urge your defence, you will be declared Ex Parte and further orders will be passed.

(By Order)

Sd. K. Ramappayya, *B.A.,B.L.,*
Advocate for plaintiff.

Coondapoor, 5—3—1966.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No.27/65

ಹೇಮಲತಾ ಆರ್. ಶೆಟ್ಟಿ ಕೂಡಾ— ವಾದಿರು

ಮತ್ತು

ಅಂಬಾ ಹೆಗ್ಗಡ್ತಿ ಕೂಡಾ 13 ಜನ— ಪ್ರತಿವಾದಿರು

ಯಿವರೊಳಗೆ

ನೋಟೀಸ್

6ನೆ ಪ್ರತಿವಾದಿಳು— ವಿಲಾಸಿನಿ ಹೆಗ್ಗಡ್ತಿ–1 ನೇ ಪ್ರತಿವಾದಿಳು ಅಂಬಾ ಹೆಗ್ಗಡ್ತಿರ ಮಗಳು— ನ– ವಿಜಯಾ ಬ್ಯಾಂಕ್ ಮಂಗ್ಳೂರು—ಇದರ ಕ್ಲಾರ್ಕ್ ಜಿ. ರತ್ನಾಕರ ಶೆಟ್ರ ಹೆಂಡ್ತಿ. ಮಿಶ್ಯನ್ ಕಂಪೌಂಡ್. ಮಣ್ಣಗುಡ್ಡೆ ಮಂಗಳೂರು ಇಲ್ಲಿಯಿರುವವಳು.

ವಾದಿರು ಪಾಲಿನಗೋಸ್ಕರ ಮಾಡಿದ ಮೇಲ್ಕಂಡ ದಾವೆಯಲ್ಲಿ ಎರಡಾವರ್ತಿ ನೋಟೀಸು ಮಾಡ್ಸಿದರೂ ಸಿಕ್ಕದ ಕಾರಣ— ತಾರೀಕು 29–3–66ಕ್ಕೆ ಯಿಟ್ಟಿರುವ ನಂಬ್ರದಲ್ಲಿ ಆಕ್ಷೇಪ ವಗೈರೆ ಯಿದ್ರೆ ತಿಳಿಸಬೇಕು ಯಿಲ್ಲವಾದ್ರೆ ಏಕ ಪಕ್ಷವಾಗಿ ನಂಬ್ರ ತೀರ್ಮಾನಿಸಲಾಗುವದೆಂತ ಯಿ ಮಾಕೂಲ್ಲ ಕೋರ್ಟು ಹ್ಕುಂ ಪ್ರಕಾರ ತಿಳಿಸಿಯದೆ.

B. Yogishwara Holla,
B. A., LL. B.,
Advocate for Plaintiffs.

Udipi, 2-3-66.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 364/1965 in
O. S. No. 216/1964.

ಅಲಂಗಾರ್ ಚರ್ಚ್—ಮೂಡಬಿದ್ರಿ ಇದರ ಈಗಿನ ವಿಕಾರ್ ಮತ್ತು ಎಡ್ಮಿನಿಸ್ಟ್ರೇಟರ್ ವೆರಿ ರೆವರೆಂಡ್ ಫಾದರ್ ಫ್ರಾನ್ಸಿಸ್ ಗ್ರೇವಿಯರ್ ಡಿ'ಸೋಜ —ಅರ್ಜಿದಾರ

ಮತ್ತು

ಸಾಲ್ವೆದೋರ್ ಡಿ'ಸೋಜ ಕೂಡ—ಎದ್ರಿರು

2ನೇ ಎದ್ರಿ ಜೋಸೆಫ್ ಡಿ'ಸೋಜ, ಪಾವ್ಲ್ ಡಿ'ಸೋಜರ ಮಗ, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಮೂಡಿಗೆರಿ ತಾಲೂಕು, ಶಿವದುರ್ಗ ಎಸ್ಟೇಟಿನ ರೈಟರ್, ಪೋಸ್ಟ್ ಅಳನೂರ್ —ಇವರಿಗೆ ತಿಳಿಸುವುದೇನೆಂದ್ರೆ—

ಮೇಲಿನ ಅಮಲ್‌ಜ್ಯಾರಿಯಲ್ಲಿ ಅರ್ಜಿದಾರನು ಹಾಜ್ರು ಪಡಿಸಿದ ಏಲಂ ಇಸ್ತಿಹಾರಿನ ಕುರಿತು ನಿಮಗೆ ನೋಟೀಸು ಬಗ್ಗೆ ತಾರೀಕು 18–3–66ಕ್ಕೆ ಇಟ್ಟಿಯದೆ. ಸದ್ರಿ ದಿನ ಬೆಳಿಗ್ಗೆ 10½ ಘಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹ ಯಾ ವಕೀಲ ದ್ವಾರಾ ಹಾಜರಾಗಿ ಉದ್ಧಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ಸದ್ರಿ ಅಮಲ್‌ಜ್ಯಾರಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court.

Sd. Bola Raghurama Shetty,
Advocate for petitioner.

ಕಾರ್ಕಳ, ತಾರೀಕು 5–3–1966.

ಟೆಂಡರು ಪ್ರಕಟಣೆ

ಈ ಕೆಳಗೆ ಕಾಣಿಸಿದ ಕಾಮಗಾರಿಯ ಬಗ್ಗೆ ಶೀಲು ಮಾಡಿದ ಟೆಂಡರುಗಳನ್ನು ಕರೆಯಲಾಗಿದೆ. ಟೆಂಡರುಗಳನ್ನು ಈ ಕೆಳಗೆ ಸಹಿ ಮಾಡಿದವರು ಆಫೀಸಿನ ಸಮಯದಲ್ಲಿ ತಾರೀಕು 11—3—1966ರಿಂದ 15—3—1966ರ ವರೇಗಿನ ಸಂಜೆ 3 ಗಂಟೆಯ ವರೆಗೆ ಸ್ವೀಕರಿಸುವರು ಮತ್ತು ಅದೇ ದಿನ ಸಂಜೆ 4 ಗಂಟೆಗೆ ಹಾಜರಿದ್ದ ಟೆಂಡರುದಾರರ ಸಮಕ್ಷಮದಲ್ಲಿ ಪರಿಶೀಲಿಸಲಿರುವರು.

ಜಂಜಾಪ್ರ ನಂಬ್ರ	ಕಾಮಗಾರಿಯ ಹೆಸರು	ಅಂದಾಜು ಹಣ	ಠೇವಣಾತಿ	ಕೆಲಸ ಮುಗಿಸಬೇಕಾದ ಅವಧಿ
1	ಕಡೂರು ಗ್ರಾಮದ ಕಡೆಮೊಕ್ಕಿ ಕಾಲು ಸಂಕ ರಚನೆ.	1700—00	85—00	31—5—1966

ವಿ. ಸೂ:— ಹೆಚ್ಚಿಗೆ ಮಾಹಿತಿಗಾಗಿ ಪಂಚಾಯತು ಆಫೀಸಿನಲ್ಲಿ ಆಫೀಸು ಸಮಯದಲ್ಲಿ ವಿಚಾರಿಸಿರಿ.

K. Annappa Shetty
Chairman
Village Panchayat of Kadoor. S. K.

ದ. ಕ. ಜಿಲ್ಲಾ ಕುಂದಾಪುರ ತಾಲೂಕು ಬಸ್ರೂರು ಗ್ರಾಮದ ನಾಗಪ್ಪಯ್ಯ ಪುರಾಣಿಕರ ಮಗ ಬಿ. ವೆಂಕಟ್ರಮಣ ಪುರಾಣಿಕನಾದ ನಾನು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುದೇನೆಂದರೆ– ನಾನು 1965ನೇ ಇಸವಿ ಜೂನ್ 1ನೇ ತಾರೀಕಿನ ತನಕ ಕನ್ನಡದಲ್ಲಿ ದಸ್ಕತು ಮಾಡುತ್ತಿದ್ದು ಅನಂತ್ರ ಈಗ ನನ್ನ ದಸ್ಕತ್ತು ಇಂಗ್ಲೀಷಿನಲ್ಲಿ ಆಗಿರುತ್ತದೆ.

B. Venkatramana Puranik.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 405/1965
O. S. 67/63.

ದುಗ್ಗಿ ಹೆಗ್ಗಡ್ತಿ ಕೂಡಾ —ಅರ್ಜಿದಾರ್ರು.

ಮತ್ತು

ಶೀತ ಶೆಡ್ತಿ ಕೂಡಾ —ಎದ್ರಿರು.

4ನೇ ಎದ್ರಿ ಶ್ರೀಮತಿ ಪಾರಿಜ ಶೆಡ್ತಿ, ಶೀತ ಶೆಡ್ತಿರ ಮಗಳು, ಉಡುಪಿ ತಾಲೂಕು, ಆರೂರು ಗ್ರಾಮದ ಕುರ್ಡುಂಜೆ ಎಂಬಲ್ಲಿ ಕುರ್ಡುಂಜೆ ಮಹಾಬಲ ಶೆಟ್ರ ಒಟ್ಟಿಗಿರುವವರು—ಇವರಿಗೆ ತಿಳಿಸುವುದೇನೆಂದರೆ:—

ಮೇಲಿನ ಅಮಲ್‌ಜ್ಯಾರಿಯಲ್ಲಿ ಅರ್ಜಿದಾರರು ಹಾಜ್ರು ಪಡಿಸಿದ ಏಲಂ ಇಸ್ತಿಹಾರಿನ ಕುರಿತು ನಿಮಗೆ ನೋಟೀಸು ಬಗ್ಗೆ ತಾರೀಕು 25–3–1966ಕ್ಕೆ ಇಟ್ಟಿಯದೆ. ಸದ್ರಿ ದಿನ ಬೆಳಿಗ್ಗೆ 10½ ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀ[ಲ] ದ್ವಾರಾ ಹಾಜರಾಗಿ ಉದ್ಧಾಹರಿಸತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ಸ[ದ್ರಿ] ಅಮಲ್‌ಜ್ಯಾರಿ ಏಕಪ್ರಕಾರ ತೀರ್ಮಾನಿ[ಸ]ಲಾದೀತು.

By order of the Court.

Sd. Bola Raghurama Shett[y]
Advocate for petitioners.

ಕಾರ್ಕಳ, ತಾರೀಕು: 5–3–1966.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ ಕೋರ್ಟಿನಲ್ಲಿ

R. I. A. 44/196[6]
O. S. 654/196[4]

K. ನಾರಾಯಣ ಭಟ್ಟ —ಅರ್ಜಿದಾ[ರ]

ಮತ್ತು

K. ಸದಾನಂದ ಪ್ರಭು ಕೂಡಾ —ಎದ್ರಿರು

ಎದ್ರಿರು—1 K. ಸದಾನಂದ ಪ್ರಭು,
2 K. ವಾಸುದೇವ ಪ್ರಭು–ಕೂವೆಕೋ[ಡಿ] ಶ್ರೀನಿವಾಸ ಪ್ರಭುಗಳ ಮಕ್ಕಳು.

3 ಅಮ್ಮಣ್ಣಿ ಯಾನೆ ಪದ್ಮಾವತಿ ಸದ್ರಿ ಶ್ರೀನಿವಾಸ ಪ್ರಭುಗಳ ವಿಧವೆ.

1ನೇ ಎದ್ರಿಯು ಮಂಗಳೂರು ತಾಲೂಕು ಮಂಗಳೂರು ಶಹರಿನಲ್ಲಿಯೂ, 2ನೇ ಎದ್ರಿ ಬೋಳಂಬೆ ಶಹರಿನಲ್ಲಿ ವಾಟರ್ ಫೀಲ್ಡ್ ರೋ[ಡ್] ಡಿಸ ನಂ. 211ರಲ್ಲಿಯೂ, 3ನೇ ಎದ್ರಿ ಮ[ಂಗ]ಳೂರು ಸಿಟಿ ಗವರ್ನ್‌ಮೆಂಟ್ ಹೋಸ್ಪಿಟಲ್ ಕ್ವಾರ್ಟರ್ಸ್‌ನಲ್ಲಿಯೂ ಇರುವ—ಯಿವರಿಗೆ

ಮೇಲ್ಕಂಡ ದಾವೆಯಲ್ಲಾದ ಪ್ರಿಲಿಮಿನ[ರಿ] ಡಿಕ್ರಿ ವಿಧಿ ಮೇರೆಗೆ ಸ್ಥಿರಾಸ್ತಿ ಪಾಲು ಮಾಡುವರೆ ಫೈನಲ್ ಡಿಕ್ರಿ ಕೊಡಿಸ ಬೇಕೆಂದು ಸದ್ರಿ ಅರ್ಜಿದಾರರು ಮಾಡಿದ ಅರ್ಜಿಯು ತಾ. 15–3–1966ಕ್ಕೆ ವ್ಯಾದೆಯಿರುವುದರಿಂದ, ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಈ ದಿವಸ ಬೆಳಿಗ್ಗೆ 11ಗಂಟೆಗ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದ್ಧಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದ್ರೆ ನಿಂಮನ್ನು ಶಿವ್ಯಾಮಾಡಿ ತೀರ್ಮಾನಿಸಲಾಗುವುದೆಂತಲೂ, ಕೋರ್ಟು ಹ್ಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿದೆ.

(Sd.) N. Subramanyam
Advocate for Petn.

ಮೊಕ್ಕಾಂ ಪುತ್ತೂರು, ತಾ. 28–2–1966.

ಕ್ರೈತ್ರ ಮುರುಗ

(ಎರಡನೇ ಪುಟದಿಂದ)

ದ್ದೇನೆ...." ಕೋಕಿಲಳು ಇದನ್ನೆಲ್ಲಾ ನಂಬುವಂತೆ ಕೇದಾರಿಯು ಇನ್ನೂ ಬಹಳ ಹೇಳಬೇಕೆಂದಿದ್ದನು. ಆದರೆ ಮಧ್ಯದಲ್ಲೇ ಕೋಕಿಲ ಬಾಯಿ ಹಾಕಿದಳು.

"ನೀವು ಯಾವಾಗಲೂ ಕೆಟ್ಟತನ ಹಾಗೂ ದುರ್ಮಾರ್ಗವನ್ನು ಹೊಗಳುತ್ತೀರಿ. ನಮ್ಮನ್ನೊಂದು ದಿನ ಅದು ಉಪದ್ರವಮಯ ಜೀವನದತ್ತ ಒಯ್ದೀತು. ನಿಮ್ಮಗೆಳೆಯ ರಾಮು ಅವರ ಗುಣದ ಠೀರಾ ವ್ಯತಿರಿಕ್ತ ಗುಣ ನಿಮ್ಮಲ್ಲಿದೆ. ನೀವು ಯಾವಾಗಲೂ ಅವರನ್ನು...."

"ಆದುದರಿಂದಲೇ ನಾನೊಬ್ಬ ಉದಯಿಸುತ್ತಿರುವ ಕಿರಿಯ ವಕೀಲ, ಹಾಗೆ ಅವನೊಬ್ಬ ಎಲ್ಲರಿಗೂ ಗುಲಾಮನಾಗಿರುವ ಶಿಬಿರ ಗುಮಾಸ್ತನಾಗಿ ಇದ್ದಾನೆ. ಮಾತಿನ ಮಧ್ಯದಲ್ಲಿ ಒಂದು ವಿಷಯವನ್ನು ನಿನಗೆ ತಿಳಿಸಲು ಮರೆತು ಹೋದೆ. ಇದೀಗ ಕೆಲ ಸಮಯದ ಹಿಂದೆ ರಾಮುವನ್ನು ಮೆರೀನಾದಲ್ಲಿ ನಾನು ನೋಡಿದೆ. ಆವನು ಹಿಂದಿನ ಹಾಗೆಯೇ ಇದ್ದಾನೆ. ಉಡುಗೆ ತೊಡುಗೆಗಳಲ್ಲೂ ಬದಲಾವಣೆ ಇಲ್ಲ. ಇಪ್ಪತ್ತೈದು ರೂಪಾಯ್ಗಳ ಬಡ ಶಿಬಿರ ಗುಮಾಸ್ತನ ಹಾಗೆ ಅವನಿದ್ದಾನೆ. ಅವನಿಂದೇನು ಮಾಡಲಿಕ್ಕೆ ಸಾಧ್ಯವಿದೆ? ಅವನು ತನ್ನ ಆಸ್ತಿಯನ್ನು ಕೂಡಾ ಮಾರಿ ಬಿಟ್ಟು...."

"ನಿಮ್ಮಂತಹ ನೆಚ್ಚಿನ ಸ್ನೇಹಿತರಿಗೆ ಸಹಾಯ ಮಾಡಲಿಕ್ಕಾಗಿ—ಅವರೊಬ್ಬ ಹುಚ್ಚರು— ನೀವ್ಯಾತಕ್ಕಾಗಿ ಅವರನ್ನು ಮನೆಗೆ ಕರೆದುಕೊಂಡು ಬರಲಿಲ್ಲ? ಸಾಮಾನ್ಯ ಕೃತಜ್ಞತೆ...." ಕೋಕಿಲ ತನ್ನ ವಿರೋಧಾಭಿಪ್ರಾಯವನ್ನು ಸೂಚಿಸಿದಳು.

"ಸಾಮಾನ್ಯ ಕೃತಜ್ಞತೆ! ಆಗ ನಾನು ಘಂಟೆಗೆ ನಲ್ವತ್ತು ಮೈಲು ವೇಗದಲ್ಲಿ ಸಂಚರಿಸುತ್ತಿದ್ದೆ, ಅಲ್ಲದೆ ನನ್ನ ಮುಖಂಡರು ದಾರಿಹೋಕರನ್ನೆಲ್ಲ ತನ್ನ ವೈಭವ ಪೂರ್ಣ ಬಂಡಿಯಲ್ಲಿ ತುಂಬಿಸಿಕೊಳ್ಳಲಿ ಸಿದ್ಧರಿದ್ದರೇನೇ? ನನಗೆನೇ ಆ ಬಂಡಿಯಲ್ಲಿ ಜಾಗ ಸಿಗಬೇಕಾದರೆ ಅದು ಹೇಗೆ ಅವರಿಗೆ ಟೊಪ್ಪಿ ಹಾಕ ಬೇಕಾಯಿತು, ಬಣ್ಣನೆಯ ಮಾತುಗಳನ್ನಾಡಬೇಕಾಯಿತು! ಇಲ್ಲದಿದ್ದಲ್ಲಿ ಸುಮ್ಮಗೆ ಅವರು ಹಳ್ಳಿಯ ವರೆಗೆ ನನ್ನನ್ನು ಕರೆದುಕೊಂಡು ಹೋಗದು ಬಿಟ್ಟುಹೋಗುತ್ತಿದ್ದರೇನೇ? ಒಮ್ಮೆಯಾದರೂ ನಾನು ಕಾರಿನಿಂದಿಳಿಯುವನ್ನು ನೀನು ಕಂಡು ಸಂತೋಷ..."

"ನೀಳ್ರಿ ರಾಮು ಅವರನ್ನು ಕರೆದುಕೊಂಡು ಪಾದಾಚಾರಿಯಾಗಿ ಬರುತ್ತಿದ್ದರು ಕೂಡಾ ಇದಕ್ಕಿಂತ ಹೆಚ್ಚು ಸಂತೋಷವಾಗುತ್ತಿತ್ತು. ಆಂದಲ್ಲಿ ನೀವು ಅವರಿಗೆ ವಂದಿಸಲೂ ಇಲ್ಲ."

"ಅಲ್ಪ ವಿಷಯ!—ನೀನೆಂದಾದರೂ ಮೋಟಾರು ಕಾರಿನಲ್ಲಿ ಕೂತುಕೊಂಡು ಪ್ರಯಾಣ ಮಾಡುತ್ತಿದ್ದಲ್ಲಿ ಆ ರೀತಿ ಮಾತನಾಡುತ್ತಿರಲಿಲ್ಲ. ನಯವಾಗಿರುವ ಮಾರ್ಗದ ಮೇಲೆ ಕಾರು ಘಂಟೆಯೊಂದಕ್ಕೆ ನಲ್ವತ್ತು ಮೈಲು ವೇಗದಲ್ಲಿ ಓಡುತ್ತಿರುವಾಗ ಪಾದಾಚಾರಿಯೊಬ್ಬನಿಗೆ ವಂದಿಸಲು ಸಮಯ ಸಿಗುವದಿಲ್ಲ."

"ಕೂಡಲೇ ಕೆಳಗಾದರೂ ಇಳಿದು ಬಿಡಬಹುದಿತ್ತಲ್ಲಾಂದ್ರೆ?"

"ಓರ್ವ ಶಿಬಿರ-ಗುಮಾಸ್ತನಿಗೆ ವಂದಿಸಲು ಹೋಗಿ, ನೀನು ಹಾಗೂ ಈ ನಾಡು ಬೀದಿಯು, ನನ್ನನ್ನು ಆ ವಿಶಾಲ ಕಾರು ಮನೆ ಬಾಗಿಲಿಗೆ ತಂದು ಬಿಟ್ಟು ಹೋಗುವ ದೃಶ್ಯವನ್ನು ಕಾಣುವ ಸುಯೋಗವನ್ನು ತಪ್ಪಿಸಬೇಕಾಗಿತ್ತೇನೇ? ಇಲ್ಲ; ಇಲ್ಲ; ಇನ್ನೂ ನಾನಷ್ಟು ಹುಚ್ಚ ಅಥವಾ ಭಾವೋದ್ರೇಕಿ ಇರುವದಿಲ್ಲ."

"ನಿಮ್ಮ ಸ್ಥಾನದಲ್ಲಿ ನಾನಿರುತ್ತಿದ್ದಲ್ಲಿ, ಒಮ್ಮೆಲೆ ಕಾರಿನಿಂದ ದುಮುಕಿ ಅವರೆದುದು ಅಡ್ಡ ಬೀಳುತ್ತಿದೆ. ಆಲೋಚಿಸಿರಿ; ಅವರು ನಮಗೆ ಸಹಾಯ ಮಾಡದೆ ಇರುತ್ತಿದ್ದಲ್ಲಿ ನಾವೀಗ ಉಪವಾಸ ಸಾಯಬೇಕಾಗುತ್ತಿತ್ತು. ನೀವಾದರೂ....?

"ನಾನು ಇನ್ನೂ ಸಾಹಸಿಯಾಗಿದ್ದು ಜಯಶೀಲನಾಗುತ್ತಿದ್ದೆ. ಆಗ ಈ ರೀತಿ ತಲೆತಿನ್ನುವ ವಿಷಯಕ್ಕೆ ಆಸ್ಪದವೇ ಸಿಗುತ್ತಿದ್ದಿಲ್ಲ. ಒಬ್ಬನಿಂದ ಸಹಾಯ ಪಡೆದುಕೊಂಡರೆ ಮನಸ್ಸಿಗಾಗುವ ನೋವಿನ ಕುರಿತು ನಿನಗೇನೂ ಗೊತ್ತಿರುವದಿಲ್ಲ, ಕೋಕಿಲಾ. ಕೃತಘ್ನರಾಗುವದು ನಿಸರ್ಗ ನಿಯಮವಿದೆ. ಒಂದು ವ್ಯಕ್ತಿಯ ಅದೃಷ್ಟವನ್ನು ಮತ್ತೊಬ್ಬನಿಂದ ಬದಲಾಯಿಸಲು ಸಾಧ್ಯವೇ ಇರುವದಿಲ್ಲ. ಅದನ್ನು ಮರೆತು ಹುಚ್ಚು ವಿಕಾರಗಳಿಗೆ ಬಲಿಯಾದಲ್ಲಿ ಮತ್ತೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾದೀತು ಅವನು ಸಹಾಯಮಾಡಿದ; ಇವನು ನೆರವು ನೀಡಿದ.... ಇದೆಲ್ಲಾ ಕೇವಲ ಮಾಯೆ ಇದೆ. ಅವನು ಸಹಾಯ ಮಾಡದೆ ಇರುತ್ತಿದ್ದಲ್ಲಿ ಇನ್ನೊಬ್ಬ ರಾಮು ನನಗೆ ಸಿಗಬಹುದಿತ್ತು. ಬೆಟ್ಟದ ಮೇಲೆ ಬಿದ್ದ ನೀರು ದಾರಿಯಲ್ಲಿ ಅದೆಷ್ಟು ಬಂಡೆ, ಮರ ಹಾಗೂ ಇನ್ನಿತರ ಅನೇಕಾನೇಕ ಅಡೆತಡೆಗಳಿದ್ದರೂ ಲೆಕ್ಕಿಸದೆ ಬುಡಕ್ಕೆ ಬರುತ್ತದೆ; ಆ ನೀರಾದರೋ ತನ್ನದಾರಿ ಒಳ್ಳೆಯದಿದ್ದಲ್ಲಿ ಆ ಸ್ಥಳಕ್ಕೆ ಧನ್ಯವಾದ ಗಳನ್ನರ್ಪಿಸುತ್ತ ಸಮಯ ಕಳೆಯುವುದಿಲ್ಲ."

"ಇಂತಹ ಕ್ಷುಲ್ಲಕ ಹೇಯ ವಿಚಾರಗಳನ್ನು ನಿಮ್ಮ ಬಾಯಿಯಿಂದ ನಾನಿದುವರೆಗೂ ಕೇಳಿಲ್ಲ. ನಿಜ ಸಂಗತಿ ಎಂದರೆ, ನೀವು ಕೃತಘ್ನರಿದ್ದೀರಿ. ಭಯವು ನನ್ನನ್ನೀತ ಕ್ಕೆ..."

"ಕೃತಜ್ಞತೆಯು ಬಹಳ ನಿರ್ಬಲ ಗಂಟು ಇದೆ. ಅದು ಇಬ್ಬರಲ್ಲಿಯಾರಿಗೂ ಪ್ರಯೋಜನವಾಗುವದೂ ಇಲ್ಲ. ನೆಪೋಲಿಯನನುಕೂಡಾ ಇದನ್ನೇ ಬಾರಿಬಾರಿಗೂ ಹೇಳುತ್ತಿದ್ದ, ಅವನ ಕೊನೆಯ ಉಸಿರು ಕೂಡಾ ಅದಕ್ಕಾಗಿಯೇ ಉಪಯೋಗಿಸಲ್ಪಟ್ಟಿತು."

ಕೇದಾರಿಯು ತನಗೆ ಬೇಕಾದಂತೆ ಅಂಗವಿನ್ಯಾಸವನ್ನು ಬದಲಿಸಿ ಮಾತನ್ನು ಮುಂದರಿಸಿದನು.

"ಪ್ರಿಯ ಕೋಗಿಲಾ, ನೀನು ರಾಮುವಿನ ಹೆಣ್ಣುಚ್ಚು ಇರುವೆ. ಆದರೆ ಅವನಿಗಿಂತಲೂ ನೀನು ಕಾದಾಡುವದರಲ್ಲಿ ಹಾಗೂ ಗಲಾಟೆ ಮಾಡುವದರಲ್ಲಿ ಪಳಗಿರುವ ಕೈಯೇ ಸರಿ. ಮೀನಾಕ್ಷಿಯ ಸ್ವಭಾವ ನನ್ನ ಹಾಗೆ. ರಾಮುವಿನ ನಾಜೂಕು ಮನಸ್ಸಿನ ಕಲ್ಪನಾ ವಾದದಿಂದಾಗಿ, ಮದುವೆಗಿಂತ ಮುಂಚಿನ ನನ್ನ ಜೀವನವೂ ಕಷ್ಟಕ್ಕೊಳಪಟ್ಟಿತ್ತು, ಮದುವೆಯಾದ ನಂತರ ನನ್ನ ಜೀವನ ನನ್ನ ಕಿಳಿಗೇಡಿ ಠೀಕೆಯಿಂದಾಗಿ ಉಪದ್ರವಕ್ಕೊಳಪಟ್ಟಿದೆ. ನಮ್ಮ ಸನಾತನ ಗ್ರಂಥಗಳು ಸಾರುವಂತೆ ಜೀವನವು ಎಡೆಬಿಡದೆ ಅರ್ಪಿಸುವ ಒಂದು ಬಲಿ ಇದೆ. ಒಬ್ಬನು ಇನ್ನೊಬ್ಬನಿಂದಾಗಿ ಜೀವಿಸುತಾನೆ. ಕಪ್ಪೆಯಾಧಾರದ ಮೇಲೆ ಹಾವು ಬದುಕಿಕೊಂಡಿದೆ. ನೊಣಗಳ ಆಧಾರದ ಮೇಲೆ ಕಪ್ಪೆ ಬದುಕಿಕೊಂಡಿದೆ. ತಮ್ಮ ತಮ್ಮ ಮರಣದ ಕಲ್ಪನೆಯೇ ಅವುಗಳಿಗಿರುವದಿಲ್ಲ. ಅದುವೆ ಜೀವನದ ನಿಯಮವಿದೆ."

"ಈ ನಿಯಮಗಳಿಗೆಲ್ಲಾ ನೀವೇ ಒಂದು ದಿನ ತಿಲಾಂಜಲಿ ಕೊಡಲಿಕ್ಕಿದ್ದೀರಿ. ನಾನು ಕೇವಲ ಹೆಂಗಸಿದ್ದರೂ ಕೂಡಾ ಆ ಭಾವನೆಯು ನನ್ನಲ್ಲಿದೆ. ಈ ವಕೀಲರ ಪ್ರಪಂಚದ ಮೇಲ್ಗಡೆಯೂ ನಿಯಾಮಕ ದೇವರೊಬ್ಬರಿದ್ದಾರೆ. ರಾಮು ಪತ್ರ ಕೊಡದಿರುತ್ತಿದ್ದಲ್ಲಿ ನೀವು ಮೊದಲ ಕಕ್ಷಿಗಾರನನ್ನು ಇದುವರೆಗೂ ಪಡೆಯುವ ಹಾಗೆ ಇರಲಿಲ್ಲ. ಅದು ಕೂಡಾ ಎಷ್ಟು ದೊಡ್ಡ ಕಕ್ಷಿಗಾರ! ಪೆರಿಯ ಸ್ವಾಮಿಯ ವ್ಯಾಜ್ಯವು ನಿಮಗೆ ಸಿಗದಿರುತ್ತಿದ್ದಲ್ಲಿ ನಿಮ್ಮ 'ಆಶ್ರಯದಾತ'ನು ನಿಮ್ಮನ್ನು ಕಡೆಗಣ್ಣ ನೋಟದಿಂದಲೂ ನೋಡುತ್ತಿರಲಿಲ್ಲ. ರಾಮು ಇಲ್ಲದಿರುತ್ತಿದ್ದಲ್ಲ, ಸೋಪಾನದ ಪ್ರಥಮ ಹೆಜ್ಜೆ ಇಲ್ಲದೆ ಇರುತ್ತಿದ್ದಲ್ಲಿ, ನೀವು ಧೂಳಿನಲ್ಲಿ ಹೊರಳಾಡಿಕೊಂಡು..."

"ಅಲ್ಲದೆ, ರಾಮು ಇಲ್ಲದಿರುತ್ತಿದ್ದಲ್ಲಿ ನಿನ್ನನ್ನು ಮದುವೆಯಾಗುತ್ತಿರಲಿಲ್ಲ."

"ಅಲ್ಲದೆ, ಬೀದಿಯಲ್ಲಿ ಬೇಡಿಕೊಂಡು ಇರಬೇಕಾಗುತ್ತಿತ್ತು. ದೇವರು ನಿಮ್ಮನ್ನು ಕ್ಷಮಿಸಲಿ. ಅವರೆಲ್ಲಿಯಾದರೂ ತಂಗಿರಬಹುದೆಂದು ಅನುಮಾನವಿರುವಲ್ಲಿ ಹೋಗಿ ನಿವೇತನಕ್ಕೆ ಹುಡುಕ ಬಾರದು? ಕನಿಷ್ಠ ಪಕ್ಷ ನಿಮ್ಮನ್ನವರು ನೋಡಿದ್ದಾರೆಯೇ?"

"ಕ್ಷಣಕಾಲದೊಳಗೆ ಒಬ್ಬರನ್ನೊಬ್ಬರು ನಾವು ಗುರುತಿಸಿಕೊಂಡಿದ್ದೇವೆ. ಆದರೆ ಅಲ್ಲಿ ನಿಲ್ಲಲು ಸಾಧ್ಯವಿರಲಿಲ್ಲ. ತಪ್ಪು ಯಾರದ್ದೂ ಅಲ್ಲ. ಪ್ರಪಂಚವೇ ಹಾಗೆ, ಪ್ರಿಯ, ಹುಡುಗಿ ಕೋಕಿಲಾ," ಮಾತನ್ನವನು ಮುಂದರಿಸಿದವನು. ಪ್ರತಿಭಟಿಸದೆ ಇದ್ದ ಅವಳ ಕೈಯ್ಯನ್ನು ತನ್ನ ಕೈಯ್ಯಲ್ಲಿ ತೆಗೆದುಕೊಂಡು ಪ್ರೇಮದ ಚಿಹ್ನೆಗಾಗಿ ಮೆಲ್ಲಗೆ ಒತ್ತಲಾರಂಭಿಸಿದನು, "ನಿಜವಾಗಿ ನಾನು ನೀಚನಿರುವದಿಲ್ಲ. ಆಗಾಗ 'ನಾನೂ ರಾಮುವನ್ನು ಹೃದಯದಲ್ಲಿ ಪೂಜಿಸುತ್ತಿದ್ದೇನೆ. ಅವನಾದರೋ ಕೇವಲ ಶಿಬಿರ-ಗುಮಾಸ್ತನಿದ್ದಾನೆ. ನಾನು ಉದಯಿಸುತ್ತಿರುವ ವಕೀಲನಿದ್ದೇನೆ. ಸ್ನೇಹವು ಒಂದು ಸಮಾನತೆಯ ಹಲಗೆ ಇದೆ. ನೀನದನ್ನು ಎರಡು ಸರಿಸಮಾನವಿಲ್ಲದ ತಲೆಗಳ ಮೇಲೆ ಅಲ್ಲಾಡದಂತೆ ನಿಲ್ಲಿಸುವ ಹಾಗಿಲ್ಲ. ಅದು ಅತ್ತಿತ್ತ ಅಲುಗಾಡುತ್ತದೆ. ನಿಜ ಸಂಗತಿಗಳನ್ನು ಇದ್ದಕ್ಕಿದ್ದ ಹಾಗೆ ನೀನು ಕಂಡುಕೊಳ್ಳಬೇಕು. ಅದು ದೇವರ ನಿಯಮವಿದೆ. ನಿರ್ಬಲ ಕಲ್ಪನಾವಾದವು ಒರಟು ವಸ್ತು ಸ್ವಾತಂತ್ರ್ಯವಾದದಷ್ಟೇ ಪಾಪ ಕರವಿದೆ."

ಚೆಂದದ ಕೋಕಿಲಳ ಕೈಗಳನ್ನು ತಮಾಷೆಯಿಂದ ಹಿಡಿದುಕೊಂಡು ಅನುರಾಗದಿಂದ ಅಂಗಚೇಷ್ಟೆಮಾಡುತ್ತಾ ಹಾಗೂ ಚಿವುಟುತ್ತಾ ಮೆಲ್ಲನೆ ಸ್ವರ ಬದಲಾಯಿಸಿಕೊಂಡು ಮಾತನ್ನು ಮುಂದರಿಸಿದನು. "ಪ್ರಿಯ ಕೋಕಿಲಂ ಇವತ್ತು ರಾತ್ರಿಯ ಭಕ್ಷ್ಯದ ವಿವರಗಳನ್ನು ಹೇಳುವಿಯೇನೇ? ನೀರುಳ್ಳಿ ಪರಿಮಳ ಬರುತ್ತಿದೆ. ಬಹಳ ಯೋಚಿಸಿದ ದಿವಸ ಉತ್ತಮ ಆಹಾರ ಸಿಗುತ್ತದೆ. ತಟ್ಟೆಯು ಸಂತೋಷದಿಂದ ತುಂಬಿರುವಾಗ ನಾವಿಬ್ಬರೂ ಸೇರಿ ಅದರ ರುಚಿ ನೋಡೋಣ. ಅದನ್ನು ಚೆಲ್ಲಬೇಡ, ರಾಣಿ. ನಡುಕ ಅಥವಾ ಭಯದಿಂದ ಹಾಗೂ ಮನುಷ್ಯ ಮತ್ತು ವಸ್ತುಗಳನ್ನು ವಿಂಗಡಿಸುವ ದೃಷ್ಟಿಯಿಂದ ನೋಡುತ್ತಾ ಚೆಲ್ಲಬೇಡ." ತನ್ನಾತೆಯು ಧೃಢೀಕರಣಕ್ಕಾಗಿ ಎಂಬಂತೆ ಆಕೆಯ ಗಲ್ಲದ ಮೇಲೆ ಮೆಲ್ಲನೆ ಒಂದು ಮುತ್ತನೊತ್ತಿದನು. ಹಾಗೆ ಮುಂದರಿಸಿ ಗುಲಾಬಿ ದಳದಂತಿರುವ ಅವಳ ಅಧರಗಳಿಗೂ ಮುತ್ತಿನ ಮಳೆ ಸುರಿಸಿದನು. ಅದಕ್ಕಾಗಿ ಮುಂಗೋಪಿ ಸ್ತ್ರೀಯರ, ಅದರಲ್ಲೂ ಇಮ್ಮಡಿಯಾಗಿ ಪತ್ನಿಯರ ಮುಂದೆ ಧೀರ ಪುರುಷರು ಕೂಡಾ ಬಾಗಿಲು ಕಾಯುತ್ತಿರುತ್ತಾರೆ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914. ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ. ವಾರ್ಷಿಕ ಚಂದಾ ರೂ. ೧೦

NAVAYUGA 10—3—1966

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಗೌರವದ ಪ್ರತೀಕ

ಸೈನಿಕ ಶಾಲೆ – ಮಕ್ಕಳ ವ್ಯಕ್ತಿತ್ವ ವಿಕಾಸ ಕೇಂದ್ರ

ಲೇಖಕರು:- ಶ್ರೀ ಆರ್. ರಾಜಪ್ಪ ಶೆಟ್ಟಿ.

ಇಂದಿನ ಮಕ್ಕಳೇ ನಾಳಿನ ನಾಗರಿಕರು. ಅವರು ಸೂಕ್ತ ವಾತಾವರಣದಲ್ಲಿ, ಸೂಕ್ತ ರೀತಿಯಲ್ಲಿ ಬೆಳೆಯುವಂತೆ ನೋಡಿಕೊಳ್ಳುವುದೇ, ಭವಿಷ್ಯತ್ತಿಗಾಗಿ ನಾವು ತೊಡಗಿಸುವ ಅಮೂಲ್ಯ ಬಂಡವಾಳ. ಮಕ್ಕಳಿಗೆ ಶಿಕ್ಷಣ ನೀಡುವುದು, ಹಾಗೂ ವಿಶ್ವದ ಸಮಸ್ಯೆಗಳನ್ನು ಎದುರಿಸಲು ಸಮರ್ಥರಾಗುವಂತೆ ಅವರಿಗೆ ತರಬೇತಿ ಕೊಡುವುದು ಮಹತ್ವದ್ದಾಗಿದೆ. ಈ ಗುರಿ ಸಾಧನೆಯಲ್ಲಿ ಸೈನಿಕ ಶಾಲೆಗಳು ಪ್ರಧಾನ ಪಾತ್ರ ನಿರ್ವಹಿಸುತ್ತಿವೆ. ಪ್ರಶಂಸನೀಯ ರೀತಿಯಲ್ಲಿ ಕಾರ್ಯ ನಿರ್ವಹಿಸಿದ ಶ್ರೇಯಸ್ಸು ಅವುಗಳಿಗೆ ಸಲ್ಲುತ್ತದೆ. ಸೈನಿಕ ಶಾಲೆಗಳು, ಮಕ್ಕಳ ವ್ಯಕ್ತಿತ್ವದ ಸರ್ವತೋಮುಖ ವಿಕಾಸಕ್ಕಾಗಿ ಅಗತ್ಯವಾದ ಶಿಕ್ಷಣವನ್ನೂ, ತರಬೇತಿಯನ್ನೂ ನೀಡುತ್ತವೆ. ಇಲ್ಲಿ ತರಬೇತಿಯು ಕೇವಲ ಸಾಧನ ಸಾಮಗ್ರಿಗಳಿಗೆ ಮಾತ್ರ ಸೀಮಿತಗೊಂಡಿಲ್ಲ. ತರಬೇತಿಯ ಪಠ್ಯಕ್ರಮ ವಿಶಾಲವಾಗಿದ್ದು ವೈವಿಧ್ಯಪೂರ್ಣವಾಗಿದೆ.

—: ಶಾಲೆಗಳ ಉದ್ದೇಶ :—

ರಕ್ಷಣಾ ಬಲದಲ್ಲಿ ಅಧಿಕಾರ ಸ್ಥಾನಗಳನ್ನು ವಹಿಸಿಕೊಳ್ಳಲು ಅರ್ಹರಾದ ಯುವಜನರ ಅಗತ್ಯ ಎಂದಿಗಿಂತಲೂ ಈಗ ಹೆಚ್ಚಾಗಿದೆ. ಸೈನಿಕ ಶಾಲೆಗಳು ಈ ಅಗತ್ಯವನ್ನು ಪೂರೈಸುವುದಾಗಿಯೇ ಅಸ್ತಿತ್ವದಲ್ಲಿ ಬಂದಿವೆ. ಇಂದು ನಾವು ಅನೇಕ ರಾಜ್ಯಗಳಲ್ಲಿ ಸೈನಿಕ ಶಾಲೆಗಳ ಸ್ಥಾಪನೆಗೊಂಡಿರುವುದನ್ನು ಕಾಣಬಹುದು. ಈ ಸೈನಿಕ ಶಾಲೆಗಳು ನ್ಯಾಷನಲ್ ಡಿಫೆನ್ಸ್ ಅಕಾಡಮಿಯ ಪೂರಕ ಸಂಸ್ಥೆಗಳಾಗಿ ಸೇವೆ ಸಲ್ಲಿಸುತ್ತಿವೆ.

ಅಕಾಡಮಿಯ ವರ್ಗಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ಅಗತ್ಯವಾದ ಶೈಕ್ಷಣಿಕ ಹಾಗೂ ದೈಹಿಕ ತರಬೇತಿ ನೀಡುವುದು, ಹಾಗೂ ಜೀವನದ ವಿವಿಧ ರಂಗಗಳಲ್ಲಿ ಹೊಣೆಗಾರಿಕೆಯ ಸ್ಥಾನಗಳನ್ನು ವಹಿಸಿಕೊಳ್ಳಲು ಅವರನ್ನು ಸಜ್ಜುಗೊಳಿಸುವುದು, ಸೈನಿಕ ಶಾಲೆಗಳ ಮುಖ್ಯ ಗುರಿಯಾಗಿದೆ. ಈ ಶಾಲೆಗಳು ತಮ್ಮ ತರಬೇತಿ ಕಾರ್ಯಕ್ರಮದ ಮೂಲಕ, ಮಕ್ಕಳು ದೇಶಭಕ್ತಿ ಮತ್ತು ದೇಶ ಸೇವೆಯಂತಹ ಉದಾತ್ತ ಗುಣಗಳನ್ನು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳುತ್ತವೆ.

—: ಶಾಲೆಗಳ ನಿವೇಶನ :—

ದೇಶದಲ್ಲಿ ಇಂದು ಹದಿಮೂರು ಸೈನಿಕ ಶಾಲೆಗಳಿವೆ. ನಾಗಲ್ಯಾಂಡ್ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯಗಳನ್ನು ಬಿಟ್ಟರೆ, ಇನ್ನುಳಿದ ರಾಜ್ಯಗಳಲ್ಲಿ ಒಂದೊಂದು ಸೈನಿಕ ಶಾಲೆಗಳಿವೆ. ಪಂಜಾಬ್ ರಾಜ್ಯದಲ್ಲಿ ಮಾತ್ರ ಎರಡು ಸೈನಿಕ ಶಾಲೆಗಳಿವೆ ಅವುಗಳಲ್ಲಿ ಒಂದು ಕುಂಜಪುರದಲ್ಲಿಯೂ ಇನ್ನೊಂದು ಕಪೂರ್ಥಳಾದಲ್ಲಿಯೂ ಇದೆ.

ಮಹಾರಾಷ್ಟ್ರದ ಸಾತಾರಾ; ರಾಜಸ್ಥಾನದ ಚಿತ್ತೂರ್‌ಗಢ್; ಕೇರಳದ ತಿರುವನಂತಪುರ; ಆಂಧ್ರ ಪ್ರದೇಶದ ಕುರುಕೊಂಡ; ಒರಿಸ್ಸಾದ ಭುವನೇಶ್ವರ; ಪಶ್ಚಿಮ ಬಂಗಾಳದ ಪುರುಳಿಯ; ಬಿಹಾರದ ತಿಲೈಯಾ, ಮಧ್ಯಪ್ರದೇಶದ ರೇವಾ; ಗುಜರಾತಿನ ಬಾಲಚಂಡಿ; ಮತ್ತು ಮೈಸೂರಿನ ಬಿಜಾಪುರ; ಮದ್ರಾಸದ ಅಮರಾವತಿ ನಗರಗಳಲ್ಲಿ ಒಂದೊಂದು ಸೈನಿಕ ಶಾಲೆಗಳಿವೆ. ಉತ್ತರ ಪ್ರದೇಶದ ನೈನಿತಾಲ್‌ನಲ್ಲಿ ಒಂದು ಹಾಗೂ ಅಸ್ಸಾಂ ರಾಜ್ಯದಲ್ಲಿ ಒಂದು ಹೀಗೆ ಇನ್ನೆರಡು ಸೈನಿಕ ಶಾಲೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಸೈನಿಕ ಶಾಲೆಗಳಿರುವ ಸ್ಥಳಗಳು ಐತಿಹಾಸಿಕ ಮಹತ್ವದ ಸ್ಥಳಗಳಾಗಿದ್ದು ಪಟ್ಟಣದ ಸದ್ದು—ಗದ್ದಲದಿಂದ ದೂರದಲ್ಲಿರುವ ಪ್ರಶಾಂತ ಸ್ಥಳಗಳಾಗಿವೆ. ಸೈನಿಕ ಶಾಲೆಗಳಿರುವ ಈ ಸ್ಥಳಗಳನ್ನು ಸಂದರ್ಶಿಸ ಬಯಸುವವರಿಗೆ ಸಾಕಷ್ಟು ಸಾರಿಗೆ ಸೌಲಭ್ಯಗಳಿವೆ.

ಸೈನಿಕ ಶಾಲೆಗಳು ಮುಖ್ಯವಾಗಿ ವಸತಿ ಸೌಕರ್ಯವುಳ್ಳ ಶಾಲೆಗಳಾಗಿದ್ದು ಮಕ್ಕಳಿಗೆ ಮಿಲಿಟರಿ ಒಲವಿನ ಶಿಕ್ಷಣವನ್ನು ನೀಡುತ್ತವೆ. ಈ ಶಾಲೆಯಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಶಿಬಿರಗಳಲ್ಲಿ ವಾಸಿಸುತ್ತಾರೆ. ಪ್ರತಿಯೊಂದು ಶಿಬಿರಕ್ಕೂ ಓರ್ವ ಮುಖ್ಯಾಧಿಕಾರಿ ಇರುತ್ತಾರೆ. ಅನೇಕ ವಿದ್ಯಾರ್ಥಿಗಳು ಅವರಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುವರು. ವಿದ್ಯಾರ್ಥಿಗಳೇ ಈ ಸಹಾಯಕರನ್ನು ಆರಿಸುತ್ತಾರೆ.

—: ಪಠ್ಯಕ್ರಮ :—

ಮಕ್ಕಳು ವೈಯುಕ್ತಿ ಜೀವನದಲ್ಲಿ ಹಾಗೂ ಸಮಾಜ ಜೀವನದಲ್ಲಿ ಯಶಸ್ವಿಯಾಗುವಂತೆ ಅವರ ಜ್ಞಾನವನ್ನು ಹಾಗೂ ಕೌಶಲ್ಯವನ್ನು ವೃದ್ಧಿಗೊಳಿಸುವುದೇ ಪಠ್ಯಕ್ರಮದ ಮುಖ್ಯಗುರಿಯಾಗಿದೆ. ಪಠ್ಯಕ್ರಮ ವಿಶಾಲವಾಗಿದ್ದು, ಇಂಗ್ಲೀಷ್ ಸಾಹಿತ್ಯ, ಸಾಮಾನ್ಯ ವಿಜ್ಞಾನ, ಇತಿಹಾಸ, ಭೂಗೋಳ, ಸಂಸ್ಕೃತ, ವ್ಯವಹಾರ ಜ್ಞಾನ, ಕಲೆ ಮತ್ತು ಕುಶಲತೆ ಇವೇ ಮೊದಲಾದ ವಿಷಯಗಳನ್ನು ಕಲಿಸಲಾಗುತ್ತದೆ. ಇಂಗ್ಲೀಷ್ ಭಾಷೆಯು ಶಿಕ್ಷಣ ಮಾಧ್ಯಮವಾಗಿದ್ದು, ಹಿಂದಿ ಕಡ್ಡಾಯವಾಗಿ ಅಭ್ಯಸಿಸಬೇಕಾದ ಭಾಷೆಯಾಗಿದೆ. ಸೈನಿಕ ಶಾಲೆಗಳು, ಅಕಾಡಮಿಯ ಪ್ರವೇಶ ಪರೀಕ್ಷೆ ಹಾಗೂ ಕೇಂಬ್ರಿಜ್ ವಿಶ್ವ ವಿದ್ಯಾನಿಲಯದ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳಿಗೆ ತರಬೇತಿ ಕೊಡುತ್ತವೆ.

—: ಶಾಲೆಗಳಲ್ಲಿ ಜೀವನ: —

ವ್ಯಾಯಾಮ ಚಟುವಟಿಕೆಗಳೊಂದಿಗೆ ಮಕ್ಕಳ ದೈನಂದಿದ ಜೀವನ ಆರಂಭವಾಗುತ್ತದೆ. ಬೆಳಗಿನ ಉಪಹಾರವನ್ನು ಮುಗಿಸಿ ಶಾಲೆಗೆ ಹೋಗುವ ಮೊದಲು ಟ್ಯುಟೋರಿಯಲ್ ವರ್ಗಗಳಿಗೆ ಹಾಜರ್ ಆಗುತ್ತಾರೆ. ಒಂದು ಪಿರಿಯಡ್ ಮುಗಿದು ಮತ್ತೊಂದು ಪಿರಿಯಡ್ ಆರಂಭವಾಗಲು ಇರುವ ಅಲ್ಪಾವಧಿಯಲ್ಲಿ ಮಕ್ಕಳಿಗೆ ಹಾಲು, ಕಾಫಿ ಮುಂತಾದ ಪಾನೀಯಗಳನ್ನು ಕೊಡಲಾಗುತ್ತದೆ. ಮಧ್ಯಾಹ್ನದ ಊಟವಾದ ಬಳಿಕ ಅಲ್ಪಾವಧಿಯ ವರೆಗೆ ವಿಶ್ರಾಂತಿ. ಸಾಯಂಕಾಲ ಮತ್ತೆ ಟೀ ಒದಗಿಸಲಾಗುತ್ತದೆ. ಟೀ ಕುಡಿದ ನಂತರ ವಿದ್ಯಾರ್ಥಿಗಳು ಆಟ—ಪಾಟಗಳಲ್ಲಿ, ಎನ್. ಸಿ. ಸಿ. ಮತ್ತು ಕುದುರೆ ಸವಾರಿ ಇವೇ ಮೊದಲಾದ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ವಿದ್ಯಾರ್ಥಿಗಳು ಭೋಜನಕ್ಕೆ ಹೋಗುವ ಮೊದಲು ಅವರ ಅಭ್ಯಾಸಕ್ಕೂ ಸಾಕಷ್ಟು ಸಮಯವಿರುತ್ತದೆ.

ಭಾನುವಾರದ ದಿನಗಳಲ್ಲಿಯೂ ವಿದ್ಯಾರ್ಥಿಗಳು ಬಹುಬೇಗ ಏಳುತ್ತಾರೆ. ಅಂದು ಶಾಲೆಗಳಿಗೆ ರಜೆ ಇರುವುದಾದರೂ, ವಿದ್ಯಾರ್ಥಿಗಳು ಬಹುತೇಕ ಸಮಯವನ್ನು ಕ್ರೀಡೆ ಹಾಗೂ ತಮ್ಮ ಇತರ ಹವ್ಯಾಸಗಳಲ್ಲಿ ಕಳೆಯುತ್ತಾರೆ.

ಸಂಗೀತ, ನಾಟಕಗಳು; ತೋಟಗಾರಿಕೆ; ಮರದ ಕೆತ್ತನೆಯ ಕೆಲಸಗಳು; ಚಿತ್ರಕಲೆ, ಇವೇ ಮೊದಲಾದವು ಸೈನಿಕ ಶಾಲೆಗಳ ವಿದ್ಯಾರ್ಥಿಗಳ ಕೆಲವು ಹವ್ಯಾಸಗಳಾಗಿವೆ. ವಿದ್ಯಾರ್ಥಿಗಳು ಸೈನಿಕ ಶಾಲೆಗಳಲ್ಲಿ ಶಿಸ್ತು, ವಿಧೇಯತೆ, ಪ್ರಾಮಾಣಿಕತೆ ಇವೇ ಮೊದಲಾದ ಶ್ರೇಷ್ಠ ಗುಣಗಳನ್ನು ಕಲಿತುಕೊಳ್ಳುತ್ತಾರೆ.

—: ಆಡಳಿತ ನಿಯಮಗಳು :—

ಈಗ ಪ್ರತಿಯೊಂದು ಸೈನಿಕ ಶಾಲೆಯಲ್ಲಿ ೨೦೦ರಿಂದ ೩೦೦ ಮಂದಿ ವಿದ್ಯಾರ್ಥಿಗಳಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಯನ್ನು ೫೦೦ರ ವರೆಗೂ ಹೆಚ್ಚಿಸುವ ಉದ್ದೇಶವಿದೆ. ಸೈನಿಕ ಶಾಲೆಯಲ್ಲಿ ದೊರೆಯುವ ಸ್ಥಳಾವಕಾಶದಲ್ಲಿ ಶೇ. ೬೭ರಷ್ಟನ್ನು, ಶಾಲೆಯು ಯಾವ ರಾಜ್ಯದಲ್ಲಿದೆಯೋ ಆ ರಾಜ್ಯದ ವಿದ್ಯಾರ್ಥಿಗಳಿಗಾಗಿ ಮೀಸಲಿಡಿಸಲಾಗುತ್ತಿದೆ. ಇನ್ನುಳಿದ ಸ್ಥಳಾವಕಾಶಗಳನ್ನು ಇತರ ರಾಜ್ಯಗಳ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ. ಒಟ್ಟು ಸ್ಥಳಾವಕಾಶದಲ್ಲಿ ಶೇ. ೩೦ರಷ್ಟನ್ನು ರಕ್ಷಣಾ ಸಿಬ್ಬಂದಿಯವರ ಮಕ್ಕಳಿಗೆ ಕಾದಿರಿಸಲಾಗುತ್ತಿದೆ. ಈ ಶಾಲೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತಿ ತಿಂಗಳು ೨೦೦ ರೂ. ಗಳಷ್ಟು ವೆಚ್ಚ ತಗಲುತ್ತಿದೆ. ಅರ್ಹ ವಿದ್ಯಾರ್ಥಿಗಳಿಗೆ ಕೇಂದ್ರ ಸರಕಾರದವರೇ ವ್ಯಾಸಂಗ ವೇತನ ನೀಡಿ ಅವರ ಶೈಕ್ಷಣಿಕ ಪ್ರಗತಿಗೆ ನೆರವಾಗುತ್ತಿದ್ದಾರೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿವೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

17—3—1966



NAVAYUGA

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವೊದಲು—

ಆಲವಂತಿಯ ರಾಮಚಂದ್ರ ಶಿಕ್ಷಣಕ್ಕೆ ಶರಣು ಹೊಡೆದು ಹೆಂಡತಿ ಜಾನಕಿಯೊಡನೆ ಆಲವಂತಿಯಲ್ಲಿ ನೆಲಸ ಬಯಸಿದರೂ ಅದೃಷ್ಟ ಬಿಡಲಿಲ್ಲ. ಸರಿಯಿಂದ ಜಮೀನು ಬಳ ಕೊಂಡು ಹೋಗಲು ಕಡಪದ ಕಲೆಕ್ಟರರ ಕೆಡೆಲರ ಬಳಿ ಶಿಬಿರ ಗುಮಾಸ್ತನಾದ. ತನ್ನ ಆಸ್ತಿಪಾಸ್ತಿಗಳಿಂದ ಕೈ ತೊಳೆದು ಬಂದ ಆತನ ಮೇಲೆ ಕೆಡೆಲ್ ತೃಪ್ತರಾದರು. ಅವನಿಗೆ ದೂಸಿಯಲ್ಲಿ ಉಪತಾಲೂಕಾಧಿಕಾರಿಯಾಗಿ ಭಡ್ತಿ ದೊರೆಯಿತು.

ರಾಮಚಂದ್ರನ ರೈತನಾಗಿದ್ದ ಮುರುಗ ಆತನ ತೋಟವನ್ನು ಕೊಂಡುಕೊಂಡಿದ್ದ. ಶ್ರೀಮಂತನಾದ ಆತನಿಗೆ ತೊಪ್ಪೈಯ ಸ್ನೇಹ ದೊರಕಿ ಭೋಗ–ವಿಲಾಸದತ್ತ ಸರಿಯ ತೊಡಗಿದ.

ರಾಮಚಂದ್ರನ ಮಿತ್ರ ಕೇದಾರಿ ವಕೀಲನಾಗಿ ಕೋಕಿಲಂ ನೊಡನೆ ಮದ್ರಾಸದಲ್ಲೇ ಬಿಡಾರ ಹೂಡಿದ್ದ. ರಾಮಚಂದ್ರ ಕಂದಾಯಾಧಿಕಾರಿಯೊಡನೆ ಮಾತಾಡಲು ಮದ್ರಾಸಿಗೆ ತೆರಳಿದ್ದ.

ಮುಂದೆ—

ರಾಮು ಉಪತಾಲೂಕಧಿಕಾರಿಯಾಗಿರುವ ವರ್ತಮಾನ ಕೇದಾರಿಗೆ ಸಿಕ್ಕಿರಲಿಲ್ಲ. ಅವನು ತನ್ನ ಹೆಂಡತಿಯ ಹತ್ತಿರ ಇತ್ತ ವಿವರಣೆಯು ಅಂಶತಃ ತಪ್ಪಾಗಿತ್ತು. ರಾಮು ಇನ್ನೂ ಅಂದಚೆಂದದ ಬಟ್ಟೆಗಳನ್ನು ಹಾಕಿಕೊಳ್ಳದ ಶಿಬಿರ-ಗುಮಾಸ್ತನಾಗಿಯೇ ಇದ್ದಾನೆಂಬುದು ಅವನ ನಂಬಿಕೆ. ನವನಾಗರಿಕತೆಯ ನಾಮದಲ್ಲಿ ಗೊಂಬೆಗಳಂತೆ ಅವರು ವಸ್ತ್ರಧಾರಿಯಾಗಿರಲಿಲ್ಲವೆಂಬುದು ನಿಜ. ಆದರೆ ಶಿಬಿರ-ಗುಮಾಸ್ತನೆಂಬುದು ಸುಳ್ಳು. ಕೇದಾರಿಯು ಕಣ್ಣು ಸೆಳೆಯುವ ಮರಿನಾದಲ್ಲಿ ರಾಮುವನ್ನು ಕಂಡಾಗ ಅವನು ಮೇಲಧಿಕಾರಿಗಳನ್ನು ಕಾಣಲು ಹೋಗುತ್ತಿದ್ದನು. ಕೆಡೆಲರೀಗ ಮದ್ರಾಸಿನಲ್ಲಿದ್ದಾರೆ. ಅದೃಷ್ಟವಶಾತ್ ಅವರಿಗೆ ಕಂದಾಯ ಖಾತೆಯ ಸಲಹಾ ಮಂಡಳಿಯಲ್ಲಿ ಮೊದಲ ಸದಸ್ಯರಾಗುವ ಸಂದರ್ಭ ಸಿಕ್ಕಿದೆ.

ಕಂದಾಯ ಖಾತೆಯ ಸಲಹಾ ಮಂಡಳಿಯ ಕಾರ್ಯಾಲಯವು ಚೇಪಕ್ ಅರಮನೆಯಲ್ಲಿದೆ. ಅರಮನೆಯು ಸಮುದ್ರದತ್ತ ಮುಖಮಾಡಿ ನಿಂತುಕೊಂಡಿದೆ. ವೈಭವಪೂರ್ಣ ವಿಶ್ವವಿದ್ಯಾನಿಲಯದ ಕಟ್ಟೋಣಗಳು ಆ ಕಾರ್ಯಾಲಯದ ಬಳಿ ಇವೆ. ಇನ್ನೊಂದು ಬದಿಯಲ್ಲಿ ಸಂಕಾರಿ ಕಟ್ಟಡಗಳು ಗಂಭೀರವಾಗಿ ನಿಂತಿವೆ. ಅರಮನೆಯು ಕರ್ನಾಟಕ ನವಾಬನ ವಿಲಾಸಾಗಾರವಾಗಿತ್ತು. ಸುಶ್ರಾವ್ಯಗಾನನಾದ ಹಾಗೂ ಗೆಜ್ಜೆಯ ಝಣಝಣನಾದ ಕೇಳಿ ಬರುತ್ತಿದ್ದಲ್ಲಿಂದು ಲಕ್ಷಣ ಬರಹ ಯಂತ್ರಗಳ (ಟೈಪ್‌ರೈಟರುಗಳ) ಚಟಪಟ ಧ್ವನಿ ಹಾಗೂ ಚೆನ್ನಾಗಿ ದುಡಿದು ಬಳಲಿರುವ, ಬೆವರಿನಿಂದ ಒದ್ದೆಯಾಗಿರುವ, ಗುಮಾಸ್ತರುಗಳ ಅಸ್ಪಷ್ಟ ನಿಟ್ಟುಸಿರಿನ ಶಬ್ದ ಮಾತ್ರ ಕೇಳಿ ಬರುತ್ತಿದೆ. ಆದರೆ ಇದೆಲ್ಲಾ ಕೆಳಗಿನ ಭಾಗದಲ್ಲಿ ನಡೆಯುತ್ತಿರುವ ಕಥೆ. ವಿಶಾಲ ಮೆಟ್ಟಲುಗಳನ್ನು ಮೆಟ್ಟಿಕೊಂಡು, ಗಾಳಿನಂತೆ ಜಾರುತ್ತಿರುವ ಮೇಲ್ಭಾಗಕ್ಕೆ ಬಂದಲ್ಲಿ, ಶತಮಾನದಿಂದ ನಷ್ಟವಾಗಿರುವ ಸಂತೋಷದ ಅನುಭವ ಅಲ್ಲಿ ಆಗುತ್ತದೆ. ಈಗಲೂ ಈ ಶಿಲೆಯ ಗೋಡೆಗಳು ವೀಕ್ಷಕರಿಗೆ ತಮ್ಮ ಬಾಳ ಕಥೆಗಳನ್ನು ಹೇಳುತ್ತವೆ. ಅದರ ನಡುವೆ ಒಂದು ವಿಶಾಲವಿರುವ ಕೋಣೆಯಲ್ಲಿ, ಆಸನಗಳಿಂದ ಸುಸಜ್ಜಿತ ಆಗಿರುವ ಕೋಣೆಯಲ್ಲಿ, ಸಮುದ್ರದ ಮೇಲಣ ಗಾಳಿ ಸ್ವೇಚ್ಛೆಯಿಂದ ಒಳಗೆ ಬರುತ್ತಿರುವಲ್ಲಿ ಕೆಡೆಲರು ಒಂದು ಆರಾಮಾಸನದಲ್ಲಿ ಸಿಗರೇಟನ್ನು ಸೇದುತ್ತ ಕುಳಿತ್ತಿದ್ದಾರೆ. ಚಿಕ್ಕ ಮಕ್ಕಳು ಹರಳು ಕಲ್ಲುಗಳನ್ನು ಕೆರೆಯ ನೀರಿಗೆಸೆದಾಗ ಬರುತ್ತಿರುವ ತೆರೆಗಳನ್ನು ಸಂತೋಷದಿಂದ ಕಾಣುತ್ತಿರುವಂತೆ, ಕೆಡೆಲರು ಸಿಗರೇಟಿನ ಹೊಗೆಯನ್ನು ಸುರುಳಿ ಸುರುಳಿಯಾಗಿ ಮೇಲಕ್ಕೆ ಬಿಟ್ಟು ಅದರ ಚೆಂದವನ್ನು ನೋಡುತ್ತ ಮೈಮರೆತಿದ್ದರು. ಆದರೂ ಅವರು ತನ್ನ ಸ್ನೇಹಿತನ ಬರುವಿಕೆಯನ್ನು ಎದುರು ನೋಡುತ್ತಿದ್ದರು. ಆಗ ನಾಚಿಕೆಯಿಂದ ಮೆಲ್ಲಮೆಲ್ಲನೆ ಯಾರೋ ಮೇಲಕ್ಕೆ ಬರುತ್ತಿದ್ದ ಶಬ್ದವಾಯಿತು. ಆ ಶಬ್ದವು ರಾಮುವಿನ ಪದಧ್ವನಿಯೆಂಬುದು ಅವರಿಗೊಡನೆ ಗೊತ್ತಾಯಿತು.

"ಒಳಗೆ ಬಾ, ಶ್ರೀ ರಾಮಚಂದ್ರ." ಕುಳಿತಲ್ಲಿಂದಲೇ ಚಲಿಸದೆ ಕೆಡೆಲರು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಆಗಲೇ ಉಲ್ಲಾಸವನ್ನೀಯುವ ಸಾಯಂಕಾಲದ ಗಾಳಿ ಬೀಸಿತು.

"ದಯಮಾಡಿ ಆ ಆಸನವನ್ನು ತೆಗೆದುಕೋ, ಬೇಡ, ಬೇಡ, ಈ ಮೃದು ಆರಾಮಾಸನವನ್ನು ತೆಗೆದುಕೋ. ಅದರಲ್ಲಿ ನೀನು ಸರಿಯಾಗಿ ಕುಳಿತುಕೊಳ್ಳಬಹುದು. ನಾಚಿಕೆಪಟ್ಟುಕೊಳ್ಳಬೇಡ. ನೀನೀಗ ಶಿಬಿರ-ಗುಮಾಸ್ತನಿರುವದಿಲ್ಲ. ಅದರ ಬದಲು ಉಪ-ತಾಲೂಕಧಿಕಾರಿ ಇರುವೆ. ನನ್ನ ಎದುರಿಗೆ ಕುಳಿತುಕೊಳ್ಳುವ ಹಕ್ಕು ಅವನಿಗೆ ಇದೆ. ನಿನ್ನನ್ನು ಕಾಣಲು ನಾನು ಬಹಳ ಉತ್ಸಾಹಪಟ್ಟುಕೊಂಡಿದ್ದೆ, ದೂಸಿ-ಮಾಮಂದೂರು ಸರೋವರಕ್ಕೆ ಬೇಕಾಗಿರುವ ಚಿಲ್ಲರೆ ದುರಸ್ತಿಯ ಕುರಿತು ನೀನಿತ್ತಿರುವ ಹೇಳಿಕೆಯ ರೂಪದಲ್ಲಿ ಸರಕಾರದ ಜ್ಞಾನಶಾಖೆಯ ಮೇಲೆ ಬರೆದಿರುವ ಚಾತುರ್ಯಪೂರ್ಣ ಪ್ರಬಂಧವು ಕಂದಾಯ ಖಾತೆಯ ಮಂಡಳಿಯಲ್ಲಿ ಎಲ್ಲರ ಗಮನವನ್ನೂ ಸೆಳೆದಿದೆ. ಆ ಪ್ರಬಂಧದಲ್ಲಿ ಇರುವ ವಿಷಯ ಹಾಗೂ ಅದನ್ನು ಪ್ರತಿಪಾದಿಸಿರುವ ರೀತಿ ಬಹಳ ಚೆನ್ನಾಗಿದೆ."

"ನೀವು ಯಾವಾಗಲೂ ನನಗೆ ಕರುಣೆಯನ್ನು ತೋರಿಸುತ್ತಿದ್ದೀರಿ, ಸ್ವಾಮೀ!" ಪೇಚಿನಲ್ಲಿ ಸಿಕ್ಕಿರುವವರ ಸ್ವರದಲ್ಲಿ ರಾಮು ಹೇಳಿದನು.

"ಕೇವಲ ಒಂದು ಘಂಟೆಯ ಹಿಂದೆ ವಿಶ್ವವಿದ್ಯಾನಿಲಯದ ಸಹಾಯಕ-ಮುಖ್ಯಾಧಿಕಾರಿಯನ್ನು ನೋಡುವ ಸಂದರ್ಭ ಸಿಕ್ಕಿತು. ನೀನೆರಡು ಸಲ ಪ್ರಯತ್ನಿಸಿದಾಗಲೂ ಪದವಿಯನ್ನು ಕೊಡಲು ನಿರಾಕರಿಸಿದ ವಿಶ್ವವಿದ್ಯಾನಿಲಯದ ಮೇಲೆ ನಿಜವಾಗಿ ನನಗೇನೇನೋ ಅನಿಸುತ್ತದೆ. ನಿನ್ನ ವರದಿಯನ್ನು ವಿಶ್ವವಿದ್ಯಾನಿಲಯದ ಸಹಾಯಕ ಮುಖ್ಯಾಧಿಕಾರಿಯವರಿಗೂ ಪ್ರಾಂತ್ಯ ಪ್ರಮುಖರಿಗೂ ತೋರಿಸಿದೆ. ಅದು ಅವರನ್ನು ಸಂತೋಷಪಡಿಸಿತು. ಒಳ್ಳೇದು, ನಾವೀಗ ಕಠಿಣ ವಿಷಯಗಳ ಕುರಿತು ಮಾತಾಡೋಣ, ದೂಸಿಯಲ್ಲಿ ನೀನು ಪ್ರಶಂಸನೀಯ ಕಾರ್ಯಗಳನ್ನು ಮಾಡಿರುವೆ. ನಿನಗೆ ಉನ್ನತ ಸ್ಥಾನಕೊಟ್ಟು ನಾನು ಸರಿಯಾದ ಕೆಲಸವನ್ನು ಮಾಡಿದ್ದೇನೆ. ಭಾರತದಂತಹ ಕೃಷಿಯೇ ಪ್ರಧಾನವಾಗಿರುವ ದೇಶಗಳಿಗೆ "ವ್ಯವಸಾಯ ಸಂಬಂಧದ ಪುನಾರಚನಾ ಕಾರ್ಯಕ್ರಮವು ಅತ್ಯಾವಶ್ಯಕ"ವೆಂಬ ನಿನ್ನ ಅಭಿಪ್ರಾಯದ ಮೇಲೆ ನನಗೆ ವಿಶ್ವಾಸವಿದೆ...."

'ಶತಮಾನದಿಂದ ಬ್ರಿಟಿಷ್ ಸರಕಾರವು ಅದನ್ನೇ ನಿರ್ಲಕ್ಷಿಸಿ ಬಿಟ್ಟಿದೆ.'

"ಹೌದು. ನನಗೆ ಗೊತ್ತಿದೆ. ಅದನ್ನೀಗ ನಿನ್ನ ಪ್ರೇರೇಪಣೆಯಿಂದ ಸರಿಪಡಿಸಿಕೊಳ್ಳೋಣ. ಅದರ ಆರಂಭವನ್ನು ಮಾಡೋಣ." ಈ ರೀತಿ ಪ್ರಶಂಸನೆಯ ಮಾತುಗಳನ್ನಾಡದೆ ಕೆಡೆಲರಿಗೆ ಬೇರೆ ದಾರಿ ಇರಲಿಲ್ಲ. 'ಕೆರೆಯ ವಿಷಯ ಸ್ವಲ್ಪ ವಿವರಿಸು, ನನಗೆ ಗೊತ್ತಿರುವುದನ್ನು....'

ದೂಸಿಯು ಕುತೂಹಲವನ್ನು ಕೆರಳಿಸುವ ಒಂದು ಹಳ್ಳಿ. ದೂಸಿ ಮಾಮಂದೂರ್ ಸರೋವರದಿಂದ ಯಾವಾಗಲೂ ನೀರು ಹರಿಯುವಂತೆ ಕಾಲುವೆಗಳನ್ನು ತೋಡಿ ಅಲ್ಲಿಯವರು ಕೃಷಿಮಾಡುತ್ತಿದ್ದಾರೆ. ನೈಸರ್ಗಿಕವಾಗಿಯೇ ಆ ಹಳ್ಳಿ ಆದರ್ಶರೀತಿಯಲ್ಲಿ ಬೆಳೆದುಕೊಂಡಿದೆ. ಆ ಹಳ್ಳಿಯ ಮಧ್ಯದಲ್ಲಿ ಒಂದು ಚಿಕ್ಕ ಚೆಂದದ ಸಣ್ಣ ದೇವಸ್ಥಾನವಿದೆ. ರಸ್ತೆಗಳು ಅಲ್ಲಲ್ಲಿ ಒಡೆಕೊಂಡು ಆ ಹಳ್ಳಿಗೆ ಮತ್ತಷ್ಟು ಚೆಂದವನ್ನಿತ್ತಿವೆ. ಬಲಬದಿಯಲ್ಲಿ ಒಂದು ಸಣ್ಣ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ; ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರ್ಯಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೇರಿಕಾದಿಂದ ಹಡಗು ಮೂಲಕ ಬಂದ ಗೋಧಿಯನ್ನು ಮದ್ರಾಸ್ ನಾವಾಶಯದಲ್ಲಿ ನಾವಾಶಯ ಕೆಲಸಗಾರರು ಹಡಗದಿಂದ ಇಳಿಸುವುದರಲ್ಲಿ ತಲ್ಲೀನರಾಗಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೭	೧೭—೩—೧೯೬೬	No. 27

ವಚನ ಸುಧೆ

ಅಗ್ರೇ ಪ್ರಾಸ್ತಂ ತು ಪುರುಷಂ
ಕರ್ಮೋನ್ವೇತಿ ಸ್ವಯಂಕೃತಂ
ತಸ್ಮಾತ್ತು ಪುರುಷೋ ಯತ್ನಾದ್
ಧರ್ಮಂ ಸಂಚಿನುಯಾಚ್ಛನೈಃ ॥

ಚಿಂತೆಗೆ ಹಾಕಿದ ಮನುಷ್ಯನನ್ನು ಆತನು ಗೆಯ್ದ ಒಳಿತು-ಕೆಡುಕು ಕರ್ಮಗಳು ಮಾತ್ರ ಹಿಂಬಾಲಿಸುತ್ತವೆ. ಆದುದರಿಂದ ಮಾನವನು ಪ್ರಯತ್ನಪೂರ್ವಕ ಧರ್ಮ ಸಂಗ್ರಹ ಮಾಡಬೇಕು.

ಸುಕರ್ಣರ ಸುಸ್ಥಿತಿ

ಹಲವು ತೆರದ ಊಹಾಪೋಹಗಳಿಂದ ಕಲ್ಪನೆಯ ಮಹಡಿಯಲ್ಲಿ ವಿಹರಿಸುತ್ತಿದ್ದ ಲೋಕಕ್ಕೆ ಕೊನೆಗೂ ಇಂಡೋನೇಶ್ಯದ ಅಧ್ಯಕ್ಷ ಅಹಮದ್ ಸುಕರ್ಣರು ಸರಿಯಾದ ಉತ್ತರವಿತ್ತರು. 'ನಾನು ಗಟ್ಟಿಮುಟ್ಟಾಗಿಯೇ ಇದ್ದೇನೆ; ನನ್ನ ಅಧಿಕಾರವನ್ನು ಪ್ರಶ್ನಿಸುವ ಯಾವನೂ ಇಲ್ಲ' ಎಂದು ಗಂಭೀರವಾಗಿ ಉದ್ಗರಿಸಿದ್ದ ಈ ಅನಭಿಷಿಕ್ತ ದೊರೆ ಈಗಲೂ ಗಟ್ಟಿಮುಟ್ಟಾಗಿಯೇ ಇದ್ದಾರೆ; ಆದರೆ ತಮ್ಮ ರಕ್ಷಣೆಯ ಭಾರವನ್ನು ಲೆ| ಜ| ಸುಹ್ರಟೋರವರಿಗೆ ಒಪ್ಪಿಸಿದ್ದಾರೆ. ಈಗಲೂ ಅವರ ಅಧಿಕಾರವನ್ನು ಪ್ರಶ್ನಿಸುವ ಯಾವನೂ ಇಲ್ಲವಾದರೂ ತನ್ನ ಹೆಸರಿನಲ್ಲಿ ಅಧಿಕಾರ ಚಲಾಯಿಸುವ ಹಕ್ಕನ್ನು ಲೆ| ಜ| ಸುಹ್ರಟೋ ಅವರ ಕೈಗಳಿಗೊಪ್ಪಿಸಿ ತಾನು ಅರಮನೆಯಲ್ಲಿದ್ದುಕೊಂಡೇ ಇಂಡೋನೇಶ್ಯದ ಅಧ್ಯಕ್ಷರಾಗಿ ಉಳಿದಿದ್ದಾರೆ. ಅಂದರೆ, ನಾಮ ಮಾತ್ರ ಅಧ್ಯಕ್ಷರಾಗಿದ್ದಾರೆ. ಸುಕರ್ಣರು ಸಂಪೂರ್ಣ ಅಧಿಕಾರ ದಂಡನಾಯಕ ಸುಹ್ರಟೋರವರ ಕೈಯಲ್ಲಿ ಬಂದಿದೆ. ಈ ಬಗೆಯ ಸ್ಥಿತ್ಯಂತರ ಆರು ತಿಂಗಳುಗಳಿಗೆ ಮೊದಲೇ ನಡೆಯುವುದಿತ್ತು. ಆದರೆ ಇಂದು ಫಲಿಸಿತು.

ಇಂಡೋನೇಶ್ಯ ಕಳೆದ ಸುಮಾರು ಒಂದು ವರ್ಷದಿಂದ ಅಶಾಂತಿಯ ರಾಷ್ಟ್ರವಾಗಿಯೇ ಉಳಿದಿತ್ತು. ಅಂದಿನಿಂದಲೂ ಸುಕರ್ಣರ ಗದ್ದುಗೆ ಡೋಲಾಯಮಾನವಾಗಿಯೇ ಉಳಿದು ಬಂದಿತ್ತು. ಇಂಡೋನೇಶ್ಯವು ಸುಕರ್ಣರನ್ನು ನಂಬಿತ್ತು; ಅವರ ಮೂಲಕ ತನ್ನ ಆಶೆಗಳನ್ನು ಈಡೇರಿಸಬಹುದೆಂಬ ವಿಶ್ವಾಸ ಜನತೆಗಿತ್ತು. ಅವರನ್ನು ಆಜೀವ ಅಧ್ಯಕ್ಷರಾಗಿ ಆಯ್ಕೆ ಮಾಡಿ, ಇತಿಹಾಸದಲ್ಲಿ ವಿಲಕ್ಷಣ ದಾಖಲೆಯನ್ನೇ ಇಂಡೋನೇಶ್ಯನ್ನರು ಸ್ಥಾಪಿಸಿದ್ದರು. ಆದರೆ, ಸುಕರ್ಣರ ನಿರಂಕುಶ ಅಧಿಕಾರದಿಂದ ಜನತೆಯೇ ರೋಸಿ ಹೋಗಬೇಕಾದರೆ, ಆಡಳಿತೆಯ ಯಂತ್ರ ತೀರ ಕುಸಿದು ಬಿಟ್ಟಿತ್ತು ಎಂದು ಬೇರೆ ಹೇಳಬೇಕಾಗಿಲ್ಲ. ಸುಕರ್ಣ 'ಪತನ'ಕ್ಕೆ ಅವರಿಗಿಂತ ಹೆಚ್ಚಿನ ಕಾರಣ ಪುರುಷರಿದ್ದರೆ, ಅವರು ವಿದೇಶಾಂಗ ಸಚಿವರಾಗಿದ್ದ ಸುಬಾಂದ್ರಿಯೋ. ಕೆಂಪು ಚೀನಾ ಆಫ್ರೇಸ್ಯಾದಲ್ಲಿ ತನ್ನ ಪ್ರಭಾವವನ್ನು ಬೀರಿ ರಾಷ್ಟ್ರಗಳನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡಿತು; ಇದು ತಪ್ಪೆನ್ನಬರುವುದಿಲ್ಲ. ಸಣ್ಣ ಮೀನುಗಳನ್ನು ತಿಂದೇ ದೊಡ್ಡ ಮೀನುಗಳು ಬದುಕುವುದು ತಾನೆ? ಭಾರತವೂ ಪಂಚಶೀಲದ ಹೆಸರಿನಲ್ಲಿ ಚೀನೀಯ ಹಾವನ್ನು ಅಪ್ಪಿತು. ಆದರೆ, ಮುಂದೆ ಈ ಹಾವಿನ ಕುತಂತ್ರವು ಮನವರಿಕೆಯಾಯಿತು. ಇನ್ನು ನಾವು ಚೀನದ ಆಥವಾ ಮತ್ತಾರ ಬಲೆಗೂ ಬೀಳುವಂತಿಲ್ಲ.

ಅದೇ ರೀತಿ ಇಂಡೋನೇಶ್ಯವು ಮಲೇಸಾದೊಡನಿದ್ದ ತನ್ನ ವಿವಾದದ ವೇಳೆ ಚೀನಾವು ಬೆಂಬಲ ತನಗೆ ನೀಡಿದ್ದರಿಂದ ಚೀನಾವು ಹತ್ತಿರ ಹತ್ತಿರ ಹೋಯಿತು. ಕೆಂಪು ಚೀನಾ ಪರರು ಶಾಂತಿಯ ಸಿದ್ಧತೆಯಲ್ಲಿದ್ದರು. ಚೀನಾದ ಮಾತಿಗೆ ಮರುಳಾಗಿ ಸಂಯುಕ್ತ ರಾಷ್ಟ್ರಸಂಘದಿಂದಲೂ ಹೊರಬೀಳುವ ನಿರ್ಧಾರ ಇಂಡೋನೇಶ್ಯ ಮಾಡಿತು. ಭಾರತ—ಪಾಕ್ ಹೋರಾಟದ ವೇಳೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ನ್ಯಾಯಕ್ಕೆ ವಿರುದ್ಧವಾಗಿ ಪಾಕಿಸ್ತಾನಕ್ಕೆ ಸಹಾಯವಿತ್ತ ಏಕಮೇವ ರಾಷ್ಟ್ರ—ಎಂದರೆ ಇಂಡೋನೇಶ್ಯ. ಇದರಲ್ಲಿಯೂ ವಿದೇಶ ಮಂತ್ರಿ ಸುಬಾಂದ್ರಿಯೋರವರು ಚೀನಕ್ಕೆ ಅತಿ ಹತ್ತಿರದವರು. ಅವರ ವಿದೇಶ ನೀತಿಯೇ ಅಲ್ಲಿನ ಗೊಂದಲಕ್ಕೆ ಮೂಲಹೇತು. ಇತ್ತೀಚೆಗೆ ಅಲ್ಲ ವಿದ್ಯಾರ್ಥಿಗಳ ಪುಂಡಾಟಿಕೆ ಆರಂಭವಾಗಿದ್ದು ಇಲ್ಲಿಗೆ ಆದಕ್ಕೆ ಪೂರ್ಣ ವಿರಾಮ ಬಿತ್ತು ಎಂದು ಊಹಿಸಬಹುದು.

ಇದೀಗ ಸುಕರ್ಣ ಹೆಸರಿನಲ್ಲಿ ದಂಡನಾಯಕರು ಅಧಿಕಾರ ದಂಡವನ್ನು ತನ್ನ ವಶವಿರಿಸಿದ್ದಾರೆ. ಇಂಡೋನೇಶ್ಯದ ಕಮ್ಯುನಿಸ್ಟ್ ಪಕ್ಷಕ್ಕೆ ಪ್ರತಿಬಂಧ ಬಿದ್ದಿದೆ. ದಂಡನಾಳಿಕೆಯೇ ಒಂದು ರೀತಿಯಲ್ಲಿ ನಡೆಯತೊಡಗಿದೆ. ಸುಬಾಂದ್ರಿಯೋ ಮೇಲೆ ಅಸಮಾಧಾನ ಹೆಚ್ಚಿದೆ. ಅವರ ರಕ್ತವನ್ನು ಹೀರಬಯಸುವವರೇ ಒಂದು ತಂಡವಿದೆ. ಇಂಡೋನೇಶ್ಯದ ಈ ಬಗೆಯ ಪರಿಸ್ಥಿತಿ ಕೆಂಪು ಚೀನಾದ ಬೇಳೆ ಅಲ್ಲಿ ಬೇಯುವುದಿಲ್ಲ ಎಂಬುದನ್ನೀಗ ಸುಸ್ಪಷ್ಟವಾಗಿ ತೋರಿಸಿ ಕೊಟ್ಟಿದೆ. ಆಫ್ರಿಕದ ಘಾನಾದಲ್ಲಿ ನಡೆದ ಕಮ್ಯುನಿಜಂ ವಿರೋಧಿ ಸೈನಿಕ ಕ್ರಾಂತಿಯ ಹಿನ್ನಲೆಯಲ್ಲಿ ಇಂಡೋನೇಶ್ಯದ ಸ್ಥಿತ್ಯಂತರವನ್ನು ಕಾಣುವುದಾದರೆ, ಕಮ್ಯುನಿಜಂ ಪ್ರಸಾರಕ್ಕೆ ಆಫ್ರೇಸ್ಯಾದಲ್ಲಿ ಬಲವಾದ ವಿರೋಧವಿದೆಯೆಂದು ಗೊತ್ತಾಗುವುದು ಮಾತ್ರವಲ್ಲ, ಕೆಂಪು ಚೀನಾದ ಕುಹಕ ನೀತಿಯ ಸಂಪೂರ್ಣ ಪರಿಚಯ ಅವಕ್ಕೆ ಆಗುತ್ತಿದೆ ಎನ್ನಬೇಕು. ಇಂದು ಇಂಡೋನೇಶ್ಯದಲ್ಲಿ ನಡೆದುದು ಮತ್ತೆಲ್ಲಿಯಾದರೂ ನಡೆಯುವ ಸಂಭವವಿದ್ದರೆ, ಸದ್ಯಕ್ಕದು ಪಾಕಿಸ್ಥಾನದಲ್ಲಿ ಕೆಂಪು ಚೀನಾವನ್ನೇ ದೇವರೆಂದು ನಂಬುವ ವಿದೇಶಮಂತ್ರಿ ಭುಟ್ಟೋ ಸುಬಾಂದ್ರಿಯೋರ ನಿಕಟಮಿತ್ರರು. ಕೆಂಪು ಚೀನಾದೊಡನೆ ಇವರಿಬ್ಬರ ಆಲಿಂಗನವೂ ಗಾಢವಾದುದು. ಸುಬಾಂದ್ರಿಯೋ ಪ್ರಕರಣದಿಂದ ಭುಟ್ಟೋ ಪಾಠ ಕಲಿಯದೆ ಇರಲಾರರು. ತಾವೂ ಪತಿತರಾಗಿ, ದೇಶವನ್ನು ಪತಿತಗೊಳಿಸುವ ದುಸ್ಸಾಹಸಕ್ಕೆ ಅವರು ಇಳಿಯಲಾರರು.

ಸಮಸ್ಯಾ ರಾಜ್ಯ

ಕಷ್ಟಗಳು ಒಂದರ ಹಿಂದೆ ಒಂದೊಂದಾಗಿ ಬರುತ್ತವೆ ಎನ್ನುವುದು ನಿಜ. ಇಂದಿರಾ ಗಾಂಧಿಯವರು ಪ್ರಧಾನಿಯಾದ ಗಳಿಗೆಯಿಂದ ನಮ್ಮ ಮುಂದೆ ಒಂದರ ನಂತರ ಇನ್ನೊಂದು ಸಮಸ್ಯೆಯು ಮುಂದೆ ಬರುತ್ತಿದೆ. ನಮ್ಮದೀಗ ರಾಮರಾಜ್ಯವಲ್ಲ, ಸಮಸ್ಯಾ ರಾಜ್ಯವೆಂದರೆ, ಸರಿ ಹೋಗುವುದೋ ಏನೋ! ಮೊನ್ನೆ ಮೊನ್ನೆ ಮಿಜೋ ಗುಡ್ಡಗಾಡುಗಳ ಬಂಡಾಯವನ್ನು ಹತ್ತಿಕ್ಕುವುದು ಅಗತ್ಯವಾಯಿತು. ಕಲಕತ್ತೆಯಲ್ಲಿ—ಇಡಿಯ ಪಶ್ಚಿಮ ಬಂಗಾಳದಲ್ಲಿಯೇ—ಆಹಾರದ ಸಮಸ್ಯೆಯ ಭೀಕರತೆಯಿಂದಾಗಿ ಒಂದು ಬಗೆಯ ದೊಂಬಿ ನಡೆಯಿತು—ಅದನ್ನು ನಿಲ್ಲಿಸಲು ಹಲವು ನರಬಲಿಗಳನ್ನು ಕೊಡಬೇಕಾಯಿತು. ಫತೇಸಿಂಗರ ಜೀವವುಳಿಸಲು ಪಂಜಾಬಿ ಸುಭಾ ರಚನೆಗೆ ಒಪ್ಪಿಗೆ ನೀಡಿದರೆ, ಅದನ್ನು ವಿರೋಧಿಸುವವರಿಗೆ ಏನು ಸಮಾಧಾನ ಹೇಳಬೇಕೋ! ಕೇರಳದಲ್ಲಂತೂ ಪೂರಾ ನೆಮ್ಮದಿಯಿಲ್ಲ. ಇತರ ರಾಜ್ಯಗಳ ಆರೋಗ್ಯವೂ ಅಷ್ಟಕ್ಕಷ್ಟೆ. ಅಂತೂ ಇಂದಿರಾಜಿಯ ಹೊಣೆಗಾರಿಕೆ ಹೆಚ್ಚಿನದು; ಅಧಿಕಾರ ಎನ್ನುವುದು ಸುಪ್ಪತ್ತಿಗೆಯಲ್ಲ, ಶರಮಂಚವೆಂಬುದನ್ನು ಅರಿತ ಇಂದಿರಾ ಸಮರ್ಥರಾಗಿ ಮುಂದುವರೆಯುವರೆಂದು ವಿಶ್ವಾಸವಿಡಬೇಕು.

ಧನ್ಯವಾದ ಸಮರ್ಪಣೆ

ನಾನು ಇದೇ ತಿಂಗಳ ಪ್ರಥಮ ವಾರದಲ್ಲಿ ನವಯುಗದ ಪ್ರಚಾರಾರ್ಥವಾಗಿ ಸಂಚಾರ ಕೈಗೊಂಡಾಗ ಶೃಂಗೇರಿಯಲ್ಲಿ ಶ್ರೀ ಪ್ರೇಮಕುಮಾರ್ ಹೆಗ್ಡೆ, ಡಾ| ವಿಟ್ಟಲ್ ಶೆಟ್ಟಿ, ಬೀರೂರಲ್ಲಿ ಡಾ| ಎ. ಎಮ್. ಶೆಟ್ಟಿ, ಕಡೂರಲ್ಲಿ ಶ್ರೀ ಸಿ. ರಾಮಲಿಂಗಪ್ಪ, ಅಜ್ಜಂಪುರದಲ್ಲಿ ಶ್ರೀ ಎಸ್. ಸುಬ್ರಹ್ಮಣ್ಯ ಸೆಟ್ಟಿ ಇವರೇ ಮೊದಲಾದವರು ಸಹಕರಿಸಿ ಪ್ರೋತ್ಸಾಹಿಸಿದುದಕ್ಕಾಗಿ ಈ ಮೂಲಕ ಅವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ—ಸಂಪಾದಕ

ನರಸಣ್ಣನ ಸರಸ



"ಪಂಜಾಬಿ ಸುಭಾದ ನಂತರ ಬೇರೆ ರಾಜ್ಯ ರಚನೆಯಿಲ್ಲ..."

"ಹಾಗಿದ್ರೆ, ನಮಗೂ ಒಂದು ರಾಜ್ಯ ಕೊಟ್ಟು ಬಿಡಿ, ಅವರಿಗೂ ಒಂದು...."

ಮುಂದು

ಗೇಹರಾಜ್ಯದಲ್ಲಿ

ನಗೆಯು ಬರುತಿದೆ, ನನಗೆ...

"ಕೊನೆಗೂ ನಾನು ಹೇಳಿದಂತೇ ಆಯ್ತಲ್ಲ!"

"ಏನು?"

"ಏನೊಂದ್ರೆ? ಪಾಪ, ಏನೂ ತಿಳಿಯದವರ ಹಾಗೆ ಮಾತಾಡ್ತೀರಲ್ಲಾ?"

"ಅಲ್ವೆ, ವಿಷಯವೇನೊಂತ ತಿಳಿಸದೆ ಬರೇ ಆಯ್ತು—ಹೋಯ್ತೂಂತಂದ್ರೆ ಗೊತ್ತಾಗೋದಾದ್ರೂ ಹೇಗೇಂತ?"

"ಸರಿಯಪ್ಪ. ಸು ಅನ್ನುತ್ಲೇ ಸುಕುನುಂಡೆ ಅನ್ನುವ ಮಹಾ ಮೇಧಾವಿಗಳ ಬುದ್ಧಿಗೆ ವಿಷಯ ವೇದ್ಯವಾಗದೆ ಹೋದುದು ಜಗತ್ತಿನ ಅಷ್ಟಮ ಆಶ್ಚರ್ಯ ......"

"ಏ, ಏ.... ಇದೇನೊಂದೆ? ಇಂತಹ ಸಾಹಿತ್ಯಮಯ ಭಾಷೆಯಲ್ಲಿ ರಸ ಸರಸ್ವತಿ ಪ್ರಸವಿಸೋಕೆ ಆರಂಭ ಮಾಡಿದರೆ..'

"ಹ್ಞಾಂ.... ನೋಡಿ, ನಮ್ಮ ಕುವೆಂಪು ಇದ್ದಾರಲ್ಲಾ..."

"ಅಂದ್ರೆ ಸಂಮ್ಮಾನಿತ ಕವಿ ಕೆ. ವಿ. ಪುಟ್ಟಪ್ಪ..."

"ಅದೆಲ್ಲಾ ನನಗರಿಯುದು. ಆವರು ನಮ್ಮ ಕವಿಯಂತೂ ಹೌದು....

"ಅಲ್ವೆ, ನಿಮ್ಮ ಕವಿ ಅನ್ನೋ ವಿಶೇಷ ವಿಶೇಷಣದ ಅರ್ಥ..."

"ಮತ್ತೆ ನೀವೊಬ್ರು, ಓದಿದ್ದೀರಾ ಅವರ ಮಹಾಕೃತಿಗಳನ್ನ...."

"ಹ್ಞಾಂ..."

'ನೀವು ಓದಿರೋದು ಅಷ್ಟರಲ್ಲೇ ಇದೆ. ಅದ್ರೂ ನೋಡಿ, ಅವರ ಮಹಾಕಾದಂಬರಿ ಏಕಮೇವಾದ್ವಿತೀಯ-ಕಾನೂರು ಸುಬ್ಬಮ್ಮ ಹೆಗ್ಗಡಿತಿ. ಅಂದ್ರೆ ನಮ್ಮವರದ್ದೇ ಅನ್ನಿ."

"ನಮ್ಮವರದ್ದೇ...."

"ಮತ್ತ ನೋಡಿ, ಏಕಮೇವ ಮಹಾಕಾವ್ಯ ರಾಮಾಯಣ ದರ್ಶನಂನ- ವಸ್ತು ನಮಗೇನೇ ಸಂಬಂಧಿಸಿದ್ದು. ಅದ್ದರಿಂದ ಅವರು ನಮ್ಮ ಕವಿ. ಇನ್ನಾದರೂ ತಿಳಿಯಿತೆ?'

'ಅದು ಸರೀನ್ನು, ಜನತೆಯ ಹೃದಯವಂತ ವಂಕವಿ ಜನತೆಯ ಕವಿ. ಆದರಲ್ಲಿ ನಮ್ಮ—ನಿಮ್ಮ ಎಂಬ ಭೇದ...."

'ಹಾಗಲ್ರಿ, ನಮ್ಮ ಕವಿ ಅಂದ್ರೆ, ನಮ್ಮ ಮೇಲೆ, ಅಂದ್ರೆ, ನಾರಿಯರ ಮೇಲೆ ಅನುಕಂಪ ಇಟ್ಟು ಬರೆವ ಕವಿ...."

'ಓ....ಹಾಗೆ. ಅದ್ರ ದೇವಿ, ಹೆಚ್ಚಿನ ಕವಿಗಳು ಹಿಂದಿನಿಂದಲೂ ಹಂಗಸರ ಹಸರಲ್ಲೇ ಕಾವ್ಯಕ್ಕೆ ಕೊಡುತ್ತ ಬಂದಿದ್ದಾರೆ; ಮತ್ತ ನಾಯಿಕಯಿಲ್ಲದ ಹೋದರೆ ಏಕಾಕಿ ನಾಯಕ ಏನು ಮಾಡಿಯಾನು?"

'ಅದೆಲ್ಲಾ ನನಗೆ ಬೇಡ. ನೋಡಿ, ಕುವೆಂಪು ನಮ್ಮ ಕವಿ. ನಮ್ಮ ಬಗ್ಗೆ ತುಂಬ ಕನಿಕರ ತೋರಿಸಿದ್ದಾರೆ. ಊರ್ಮಿಳೆಗಾಗಿ ಅವರೆಷ್ಟು ಅತ್ತಿದ್ದಾರೆ? ಸೀತೆಗಾಗಿ ಮರುಗಿದ್ದಾರೆ....'

"ಹ್ಞಾ. ಇರಲಿ.... ಸರೀನ್ನು....'

"ಮತ್ತ ನೋಡಿ! ಮಾತೃ ಭಾಷೆಯಲ್ಲೇ ಶಿಕ್ಷಣ ಕೊಡಬೇಕು ಅಂತ ಹೇಳ್ತಾರೆ ಅವ್ರು; ಈ ಗತಿಗೋತ್ರ ಇಲ್ಲದ ಅಂಗ್ರೇಜಿಯಲ್ಲಿ ಕಲಿಯಲಾರದ ನಮ್ಮಂತಹರ ಜಂಬಲ ಅವರು. ಮತ್ತೆ ಕೇಳಿದ್ದೀರಲ್ಲಾ ಮೊನ್ನೆ...."

"ಬರಲಿ ನಿನ್ನ ಮುಖದಿಂದಲೇ....'

"ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಕಾರ್ಯಕ್ರಮಗಳೂ ಮೊನ್ನೆಯ ವರೆಗೆ ಅಂಗ್ರೇಜಿಯಲ್ಲೇ ನಡೆಯುವುದು ಸತ್ ಸಂಪ್ರದಾಯವಾಗಿತ್ತು. ಆದರೆ ನೋಡಿ, ನಮ್ಮ ವರಕವಿ ಅದನ್ನು ಸತ್ತ ಸಂಪ್ರದಾಯವಾಗಿಸಿದ ಧೀರ.'

"ಹೌದೂನ್ನು. ಪೇಪರಿನ್ನಲ್ಲಿ ಒದಿದ್ದೆ....

"ನಾನೂ ಓದಿದ್ದೆ ನೋಡಿ. ಇವತ್ತು ನಮ್ಮ ಕುಮೂನ ಪತ್ರ ಬಂದಿತ್ತು. ಅಕೆ ಬರೆದಿದ್ದಾಳೆ...."

"ಏನೊಂತ...."

"ಈ ಕವಿ ಹೊಕ್ಕಗಳಿಗೆಯಿಂದಲಾದ್ರೂ ವಿಶ್ವವಿದ್ಯಾಲಯದ ಹೆಸರು ಅನ್ವರ್ಥಕವಾಗಲೀಂತ...."

"ಆಗಲಿ, ಆಗಲಿ. ಯಾರು ಬೇಡಾಂತಾರೆ? "

"ಅಂದ್ರೆ.."

"ಅಂದ್ರೆ? ಅಂದ್ರೆ ಬಾರಿ ತೊಂದ್ರೆ..."

"ಯಾಕೇಂದ್ರೆ.."

"ಯಾಕಂದ್ರೆ, ಮೇಣ್ಯಾತಕ್ಕೆ? ಇರುವಂತಹ ಸಂಪ್ರದಾಯವನ್ನ ಬದಲಿಸುವ ಎದೆಗಾರಿಕೆ ಇರಬೇಕಲ್ಲಾ?

"ಅಲ್ಲಿ ಮೈಸೂರಿನಲ್ಲಿ ಕನ್ನಡ ಮಾಧ್ಯಮವಿದೆಯಲ್ಲಾ? ಮದ್ರಾಸದಲ್ಲಿ ತಮಿಳು...."

"ಏನೋ ಕನ್ನಡ ಮಾಧ್ಯಮವೂ ಇದೆ. ಆದರೆ, ಕನ್ನಡವೇ ಮಾಧ್ಯಮವಾಗಿಲ್ಲ ನೋಡು."

"ಹ್ಞಾಂ...."

"ಅಂತೂ ಕನ್ನಡ ಮಾಧ್ಯಮವಾಗಲೆ ಬೇಕು...."

'ಯಾರಿಗೆ?"

"ಮೊದಲು ನನಗೆ, ಮತ್ತೆ ನಿನಗೆ. ಆ ಮೇಲೆ ಉಳಿದವರೆಲ್ಲರಿಗೆ .."

"ಅಯ್ಯಪ್ಪ... ಅಲ್ರಿ, ಮಾಧ್ಯಮವನ್ನ ಬದಲಾಯಿಸೋಕೆ ಯಾಕೆ ಹಿಂದೆ ಮುಂದೆ ನೋಡ್ತಾರೇಂತ?"

"ಅದೇ ಅಂದನಲ್ಲಾ? ಅದೊಂದು ಕ್ರಾಂತಿ ಅಂತ ತಿಳಿದುಕೋ. ಕ್ರಾಂತಿಕಾರಿಗಳೇ ವಿಶ್ವವಿದ್ಯಾಲಯದಲ್ಲಿ ತುಂಬಿ ಹೋದರೆ ಆಗ ಆಗಿಯೇ ತೀರುತ್ತೆ.?

'ಅಂದ್ರ ರಾಜಕಾರಣಿಗಳ ಕೈಗೊಂಬೆಯಾಗ ಬೇಕೂಂತೀರಾ?"

"ಯಾಕೆ? ಕುವೆಂಪು ಆರಂಭ ಮಾಡಿಲ್ವೆ? ಆದ್ರೆ ಅವರ ಮುಂದಿನ ವಾಣಿಕ್ಕರ್ ..?'

'ಅವರ ಹೆಸರೆತ್ತ ಬೇಡಿ. ಕಾಸರಗೋಡನ್ನು ಕೇರಳಕ್ಕೆ ಬಲಿಕೊಟ್ಟು ..."

"ಹಾಗೆಲ್ಲಾ ಅನ್ನಬೇಡ. ಅವರು ಮಹಾ ವಿದ್ವಾಂಸರು..."

'ಇರಬಹುದು. ಎಂತಹ ವಿದ್ವಾಂಸರೇ ಇರಲಿ, ನಮ್ಮ ಹೊಟ್ಟೆಗೆ ಚೂರಿ ಹಾಕುವಾಗ ಯಾರಾದರೇನಂತೆ? ಮತ್ತೆ ಅಂತಹರು ಕನ್ನಡವನ್ನು ಯಾಕೆ ಎತ್ತಿ ಹಿಡಿಯುತ್ತಾರೆ?'

"ನೀನು ಭಾರಿ ಆವೇಶಮಯವಾಗಿದ್ದೀಂತ ತೋರುತ್ತೆ .. ಏನೇ ಇರಲಿ, ಒಂದು ಮಾತು ನಿಜ. ಸತ್ಯದ ಮೇಲೆ ಹೊದಿಸಿದ ಆವರಣ ಒಂದಲ್ಲ ಒಂದು ದಿನ ಕಳಚಿ ಹೋಗಿಯೇ ಹೋಗುತ್ತೆ; ಆಗ ಮಾತೃಭಾಷೆಯೇ ಮಾಧ್ಯಮವಾಗುತ್ತದೆ.... ಕಾಸರಗೋಡೂ ಕನ್ನಡಕ್ಕೆ ಬರುತ್ತೆ...."

'ಹ್ಞಾಂ... ಇದು ಆಶಾವಾದವಾಯ್ತಷ್ಟೇ...'

"ಮತ್ತೇನು? ಮನುಷ್ಯ ಮೊದಲಿಗೆ ಆಶಾವಾದಿಯಾಗಿರಬೇಕು...."

"ಹೌದೂನ್ನಿ.... ನಿಮ್ಮ ಫತೇ ಸಿಂಗರು ಕೊನೆಗೂ ಗೆದ್ದು ಬಿಟ್ರೂಂದ್ರೆ ಅಂದೆನಲ್ಲಾ...."

"ಯಾವಾಗ್ಲೇ? ನೀನು ಹಾಗಂದದ್ದು'

"ಅಯ್ಯೋ, ನಿಮ್ಮದೊಂದು ... ಕೊನೆಗೂ ನಾನಂದದ್ದೇ ನಿಜವಾಯ್ತು ಅಂದಿದ್ದೆನಲ್ಲಾ...'

"ಓ. . ಅದು. ಮೆಟ್ಟಲ್ಲಿ ಕಾಲಿಡೋಕೆ ಮೊದಲೇ ನನ್ನ ಕಿವಿದೆರೆಗೆ ಬಡಿದಿರೋದು'

'ಹೌದೇ ಅಲ್ವೇ ಅನ್ನಿ....'

"ಏನು?"

"ಸಂತರು ಗೆದ್ದು ಬಿಟ್ರಲ್ಲಾ?"

"ಹೇಗೆ "

"ತಾವು ಬಯಸಿದ ಪಂಜಾಬಿ ಸುಬಾವನ್ನು ಅವರು ಪಡೆಯುತ್ತಾರಲ್ಲಾ..."

"ಪಡೆದರೂ ಪಡೆಯಬಹುದು..."

"ಇನ್ನೂ ಸಂಶಯವೆ? ಕಾಂಗ್ರೆಸ್ ಇದನ್ನು ಒಪ್ಪಿರುವಾಗ..."

"ಸರಿ''ಕಾಂಗ್ರೇಸ್ ಒಪ್ಪಿದೆ. ಉಳಿದವರೂ ಸ್ವಾಗತಿಸಿದ್ದಾರೆ. ಆದ್ರೆ ಜನಸಂಘದವರು ಮಾತ್ರ ವಿರೋಧಿಸುತ್ತಾರೆ...."

"ಅದು ಇದ್ದದ್ದೇ ಅನ್ನಿ. ರಣ ಕಚ್ ಒಡಂಬಡಿಕೆಗೆ ಅವರು ವಿರೋಧವಿಲ್ಲಲ್ಲಾ ತಾಷ್ಕೆಂಟ್ ಘೋಷಣೆಗೆ ವಿರೋಧ ವ್ಯಕ್ತ ಪಡಿಸಲಿಲ್ವೆ?ಇವ್ರದ್ದೇನು ಮಹಾ? ಅಷ್ಟೂ ಅಲ್ಲದೆ ಅವರು ಅಖಂಡ ಭಾರತದ ಕನಸು ಕಾಣುತ್ತಿರುವವರಂತೆ....ಈ ರಾಜ್ಯ ವಿಭಾಗವು ಅವರಿಗೇನೇನೂ ಸಮಾಧಾನವಿಲ್ಲವಂತೆ...."

"ಇರಬಹುದು. ಫತೇಸಿಂಗರು ಸಂತೋಷದಿಂದ ಕಣ್ಣೀರು ಸುರಿಸಿದರೆ, ಯಜ್ಞದತ್ತ ಶರ್ಮಾರು ಉಪವಾಸಕ್ಕೆ ತೊಡಗಿದ್ದಾರೆ....'

'ಇದು ಮಾತ್ರ ಪೇಚಿನದ್ದು....ಅಲ್ರಿ, ಪಂಜಾಬಿ ಸುಬಾ ಅಂದ್ರೆ ಏನೊಂತ?"

"ಪಂಜಾಬಿ ಭಾಷೆಯಾಡುವ ರಾಜ್ಯ. ಅದು ಪ್ರತ್ಯೇಕವಾಗುವಾಗ ನಿಮ್ಮ ಕೇರಳಕ್ಕಿಂತ ತುಸು ದೊಡ್ಡದಾಗುವುದು. ಜನಸಂಖ್ಯೆ ಸುಮಾರು ಒಂದು ಕೋಟಿ.. "

'ಓಹೋ ಅಷ್ಟೇನೆಯೆ?"

"ಮತ್ತೆ ನೋಡು, ಪಂಜಾಬಿ ಒಂದು ಮಹತ್ವಪೂರ್ಣವಾದ ರಾಜ್ಯ. ಗಡಿ ರಾಜ್ಯ. ಅಲ್ಲಿ ಬಿಗಿಯಾದ—ದೃಢವಾದ ಆಡಳಿತೆಯಿರಲೇ ಬೇಕಾಗುತ್ತದೆ."

"ಹಾಗಿದ್ದರೆ, ಕಾಂಗ್ರೆಸ್ ಯಾಕೆ ಒಪ್ಪಿಕೊಂಡಿತು?'

'ಯಾಕೆ ಅಂದ್ರೆ? ಭಾಷಾವಾರು ತತ್ವದ ಮೇಲೆ ಕೇರಳ ರಾಜ್ಯವನ್ನು ಒಪ್ಪಿಕೊಂಡಂತೆಯೇ ಇದನ್ನೂ ಒಪ್ಪದೆ ಆಗುತ್ತೆಯೆ?'

"ಅಂದ್ರೆ, ಭಾಷೆಯ ತಳಹದಿಯಲ್ಲಿ ರಾಜ್ಯಗಳ ವಿಂಗಡಣೆಯ ತತ್ವವನ್ನು ಸ್ವೀಕರಿಸಿಯೇ ಕಾಂಗ್ರೆಸ್ ತಪ್ಪು ಮಾಡಿತು ಅನ್ನಿ...'

"ಹ್ಞಾಂ... ಹಾಗೆ ಬೇಕಾದರೂ ತಿಳಿದುಕೊ ."

"ಮತ್ತೆ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕೆನ್ನುತ್ತೀರಿ ನೀವು ..."

"ಅಯ್ಯೋ ಅದಕ್ಕೇನಂತೆ? ಬಹುಭಾಷಾ ರಾಜ್ಯಗಳಲ್ಲಿಯೂ ಶಿಕ್ಷಣ ಹೀಗೆಯೇ ಕೊಡುತ್ತಿರಲಿಲ್ಲವೆ?"

"ಹೌದ್ರಿ, ನನಗೊಂದು ಅನಿಸ್ತದೆ ."

"ಏನು?"

"ನೋಡಿ, ವಿಭಜನೆ ಒಂದು ಕುಟುಂಬದಲ್ಲಿ ಸಹಜವಾಗಿ ಬಂದುದು. ಅದರಿಂದ ಆದೆಷ್ಟು ಹಾನಿಯಾಗುತ್ತೆ ನೋಡುತ್ತಿದ್ದೇವೆ. ಮುಂದೆ ದೇಶವನ್ನೂ ವಿಭಜಿಸಿಕೊಂಡೆವು. ಈಗೀಗ ಇದ್ದುದನ್ನೇ ವಿಭಜಿಸ ತೊಡಗಿದ್ದೇವೆ. ಮತ್ತೂ ಒಂದು ತಮಾಷೆ ...ಏ"

"ಏನು?"

'ಸಹಕಾರಿ ಬೇಸಾಯವಿದೆ—ಸಹಕಾರಿ ವ್ಯವಹಾರ, ಸರಕಾರಿ ವ್ಯಾಪಾರ ಮೊದಲಾದ ಸಹಕಾರ ಆಂದೋಲನದ ಪುರಸ್ಕರ್ತರು ವಿಭಜನೆಯ ತತ್ವವನ್ನು ಎತ್ತಿ ಹಿಡಿಯುವುದನ್ನು ಕಂಡು ನಗೆಯು ಬರುತಿದೆ... ನನಗೆ...'

"ಹ್ಹ..ಹ್ಹ... ಒಳ್ಳೇ ನವ್ಯದಾಸರಾಯ್ತು..."

"ಸಾಕು ಬಿಡೀಂದ್ರೆ... ಮಾತಿಗೆ ಕೂತ್ರೆ....'

'ಹ್ಞಾಂ ನೀನನ್ನೋದ್ರಲ್ಲೂ ಸತ್ಯಾಂಶ ಇದೆ...'

'ಹೊರಡಿ ನೋಡೋಣ. ಇಗೊಳ್ಳಿ ಬಟ್ಟೆ...'

"ಅಂದ್ರೆ ಊಟದ ಮನೆಗೆ ತಾನೆ?"

"ಆ ಮೇಲೆ ಪಡಸಾಲೆಗೆ...."

"ಹಹ್ಹ...ಹ್ಹ...."

—ಗೋರಾ.

ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ

O. S. No. 21/1965.

ಡಾ| M. S. ಶೆಟ್ಟಿ ಸಹಾ —ವಾದಿರು

ಮತ್ತು

ಮನುವೆಲ ಡಿ'ಸೋಜ ಸಹಾ — ಪ್ರತಿವಾದಿರು.

ಇವರೊಳಗೆ

ಈ ಮೂಲಕ ಸದ್ರಿ ದಾವೆಯ 10ನೇ ಪ್ರತಿವಾದಿಳು ಆಲಿಸ್ ಡಿ'ಸೋಜ—ಮನ್ವೆಲ್ ಡಿ'ಸೋಜರ ಮಗಳು ವ ಅಪ್ಪಿ ರುಜಾರಿಯರ ಹೆಂಡ್ತಿ. ಮಂಗ್ಳೂರು ತಾಲ್ಕು ಮನ್ನಬೆಟ್ಟು ಗ್ರಾಮದ ನೂರುಕಾವೇರು ಎಂಬಲ್ಲಿರುತ್ತಾಳೆ, ಇವರಿಗೆ ತಿಳಿಸುವದೇನಂದ್ರೆ —

ವಾದಿರು ಮಾಡಿದ ಮೇಲಿನ ದಾವೆ ನಿನ್ನ ಹಾಜರಿ ಬಗ್ಗೆ ತಾರೀಖು 28-3-1966ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ ನೀವು ಸ್ವತಹ ಯಾ ವಕೀಲರ ದ್ವಾರಾ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಾರ ಸತ್ಕೃತದ್ದು. ತಪ್ಪಿದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಮೇಲಿನ ದಾವಾ ಯೇಕ ಪಕ್ಷವಾಗಿ ತೀರ್ಮಾನ ಸಲಾದೀತು.

By order of the Court.

N. M. Adyanthaya

Advocate for Plaintiffs.

Karkala, 12—3—1966.

ಜಾನಪದ ಸಾಹಿತ್ಯ

ಮರೆಯುವುದಕ್ಕೆ ಮೊದಲೆ ಕೂಡಿಸಬೇಕು

ಬರೆದವರು
ಶ್ರೀ ಸ. ನಾರಾಯಣ

ಒಂಬತ್ತನೆಯ ಶತಮಾನದಲ್ಲಿ ಕನ್ನಡ ನಾಡನ್ನಾಳಿದ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗ ತನ್ನ ಕವಿರಾಜ ಮಾರ್ಗ ಗ್ರಂಥದಲ್ಲಿ ಕನ್ನಡ ನಾಡಿನ ಜನತೆಯ ಘನತೆ, ಪಾಂಡಿತ್ಯವನ್ನು ವಿವರಿಸುತ್ತಾ—'ಕುರಿತು ಓದದೆಯುಂ ಕಾವ್ಯ ಪರಿಣಾತ ಮತಿಗಳ್' ಎಂದು ಹೇಳಿದ್ದಾನೆ. ಈ ಮಾತಿನಲ್ಲಿ ಉತ್ಪ್ರೇಕ್ಷೆ ಏನಿಲ್ಲ. ಕನ್ನಡ ಸಾಹಿತ್ಯಕ್ಕೆ ಪರಂಪರಾಗತವಾದ ಇತಿಹಾಸವಿದೆ. ಕವಿರಾಜ ಮಾರ್ಗದಿಂದ ಆರಂಭವಾಗಿ ಇಂದಿನವರೆಗೆ ಹಲವಾರು ಶ್ರೇಷ್ಠ ಮಟ್ಟದ ಕೃತಿಗಳು ಕಂಗೊಳಿಸಿ ನಿಂತಿವೆ. ಕನ್ನಡ ನಾಡ ಸಾಹಿತ್ಯ ಮಿಕ್ಕ ಯಾವ ಸಾಹಿತ್ಯಕ್ಕೂ ಕಡಿಮೆಯಿಲ್ಲ ಎಂಬುದನ್ನು ಹಲವಾರು ಗ್ರಂಥಗಳಿಂದ ಮನವರಿಕೆ ಮಾಡಿ ಕೊಳ್ಳ ಬಹುದು.

ಪಂಡಿತರಿಂದ ಪಂಡಿತರಿಗಾಗಿ- ದೊರೆಗಳಿಗಾಗಿ—ಅಕ್ಷರ ಬಲ್ಲವರಿಗಾಗಿ ಬರೆದ ಸಾಹಿತ್ಯ ಬೇರೆ. ಅಕ್ಷರ ಬಾರದ ನಿರಕ್ಷರ ಕುಕ್ಷಿಗಳಿಂದ ಜನ ಸಾಮಾನ್ಯರಿಗಾಗಿ ಸೃಷ್ಟಿಯಾದ ಸಾಹಿತ್ಯವೇ ಬೇರೆ. ಇದೇ ಜಾನಪದ ಸಾಹಿತ್ಯ.

ಪಂಡಿತರ ಸಾಹಿತ್ಯಕ್ಕೆ ಶಿಲಾಶಾಸನ, ತಾಮ್ರ ಶಾಸನ, ಓಲೆಗರಿಯ ಬರಹಗಳು ನಿದರ್ಶನ. ಇವೆಲ್ಲ ಪಂಡಿತರ ಸ್ವತ್ತು. ಆದರೆ ಜನಪದ ಸಾಹಿತ್ಯಕ್ಕೆ ಯಾವ ಬರಹವೂ ಇಲ್ಲ. ಯಾವ ಪುಣ್ಯಾತ್ಮರೂ ಬರೆದಿರಲಿಲ್ಲ. ಬರೆದಿಟ್ಟು ಬೆಳೆಸಬೇಕೆಂಬ ಆಸೆಯೂ ಇರಲಿಲ್ಲ, ಆಗತ್ಯವೂ ಇರಲಿಲ್ಲ. ಜನ ಸಾಮಾನ್ಯರಿಗಾಗಿ ರಚಿಸಲ್ಪಟ್ಟ ಈ ಸಾಹಿತ್ಯ ಅಥವಾ ಗೀತೆಗಳ ಪ್ರಸಾರ ಸಾಧನ ಓಲೆಗರಿ, ಪತ್ರಿಕೆ ರೇಡಿಯೋ ಅಲ್ಲ, ಬಾಯಿಯಿಂದ ಬಾಯಿ; ಕಿವಿಯಿಂದ ಕಿವಿ, ವೇದಗಳ ಕಾಲದಲ್ಲಿ ವೇದಗಳನ್ನು ಬರೆದಿಡದೆ ತಂದೆ ಮಕ್ಕಳಿಗೆ, ಗುರು ಶಿಷ್ಯರಿಗೆ ಉಪದೇಶಿಸುತ್ತಿದ್ದ ರೀತಿಯಲ್ಲಿ ಪ್ರಸಾರವಾಯಿತಷ್ಟೆ.

ಜನಪದ ಸಾಹಿತ್ಯವನ್ನು ಜನ ಸಾಮಾನ್ಯರ ಜೀವನದ ಪ್ರತಿಬಿಂಬ, ನಿರಕ್ಷರ ಕುಕ್ಷಿಗಳ ನಿರ್ಮಲಾಂತಃಕರಣದ ರನ್ನಗನ್ನಡಿ ಎಂದು ಧಾರಾಳವಾಗಿ ಹೇಳಬಹುದು. ಪಂಡಿತರ ಪ್ರತಿಭಾಪೂರ್ಣ ಸಾಹಿತ್ಯದಂತೆ ಶಬ್ದಾಲಂಕಾರಕ್ಕಾಗಲಿ, ಛಂದಸ್ಸಿಗಾಗಲಿ, ಕಲ್ಪನಾಶಕ್ತಿಗಾಗಲಿ ಅವಕಾಶವಿಲ್ಲ. ಆಡಂಬರವಿಲ್ಲದೆ ಬಳಸಿದ ಗ್ರಾಮ್ಯ ಪದಗಳೇ ಅವರ ವಾಕ್ ಲಹರಿಯ ಮೂಲ ಸಕ್ತಿ. ಜನಸಾಮಾನ್ಯರ ಬಾಳು, ಹೃದಯದಷ್ಟೇ ಸರಳ ಅವರ ಜಾನಪದ ಗೀತೆಗಳು.

ಜನಪದ ಗೀತ ರಚನಕಾರರು ಯಾವ ವಿಶ್ವವಿದ್ಯಾಲಯಗಳ ಪಧವೀಧರರೂಅಲ್ಲ. ನಿತ್ಯ ಜೀವನದ ಕಷ್ಟ ನಷ್ಟ ನೋವು ನಲಿವುಗಳನ್ನು ಅನುಭವಿಸುತ್ತಾ ಜೀವನಕ್ಕಾಗಿ ಬೆವರು ಸುರಿಸಿ ದುಡಿಯುವ ಕಷ್ಟಜೀವಿಗಳು ಗೀತೆಗಳ ಬರಹಗಾರರು. ಅಷ್ಟೇ ಅಲ್ಲ ಶಾಲೆ, ವಿದ್ಯೆ, ಪದ್ಯ, ವ್ಯಾಕರಣ-ಭಾಷಣಗಳ ಪರಿಚಯ ವಿಲ್ಲದ ನಿರಕ್ಷರಸ್ಥರು ಅವರು ಬರೆದುದು ಯಾವ ರಾಜ ಮಹಾರಾಜರಿಂದ ಪದವಿ ಪದಕಗಳನ್ನು ಪಡೆಯಲಿಕ್ಕಾಗಿಅಲ್ಲ. ಅಥವಾ ವಿಶ್ವ ವಿದ್ಯಾಲಯಗಳ ಪದವಿ-ಗೌರವ ಪ್ರಶಸ್ತಿಗಳನ್ನು ಪಡೆಯಲೂ ಅಲ್ಲ, ಪಂಡಿತರನ್ನು ಮೆಚ್ಚಿಸಲು ಮೊದಲೇ ಅಲ್ಲ. ಅವರ ಬಾಯಿಯಿಂದ ಮೂಡಿಬಂದ ಸಹಜಪದಗಳ ಸಾಲು ಸಾರವತ್ತಾಗಿ, ಸರಳವಾಗಿ, ಸುಂದರವಾಗಿ ಕೂಡಿವೆ. ತ್ರಿಪದಿಗಳ ಬಳಕೆಯೇ ಹೆಚ್ಚೆಂದು ಹೇಳಬಹುದು. ಹಲವಾರು ಗೀತೆಗಳ ಹೆಚ್ಚಳವನ್ನೂ ಗಮನಿಸುವಲ್ಲಿ ಯಾವ ಪಂಡಿತರು, ಕವಿಗಳ ಕಾವ್ಯಕ್ಕೂ ಕಡಿಮೆ ಇಲ್ಲವೆಂದು ಹೇಳಲಡ್ಡಿಯಿಲ್ಲ.

ಪ್ರಸಿದ್ಧಿ ಪಡೆದಿರುವ ಗ್ರಂಥಗಳ ಲೇಖಕರ ಹೆಸರನ್ನು ಹೇಳಲೂ ಬಹುದು. ಆದರೆ ಜಾನಪದ ಗೀತೆಗಳನ್ನು ರಚಿಸಿದವರು ಯಾರು? ಯಾರಿಂದ ಮೊದಲು ಬಳಕೆಗೆ ಬಂತು? ಎಂದು ಹೇಳುವುದು ಸಾಧ್ಯವಿಲ್ಲ. ಕಿವಿಯಿಂದ ಕಿವಿಗೆ, ಬಾಯಿಂದ ಬಾಯಿಗೆ ಸರಾಗವಾಗಿ ಹರಿದುಬಂದ ಈ ಮಧುರ ಗಾನ ಗಂಗೆ ನಿತ್ಯ ನಿರ್ಮಲೆಯಾಗಿ ಪ್ರವಹಿಸುತ್ತಿದ್ದಾಳೆ. ಪರಿಶುದ್ಧಳಾಗಿದ್ದಾಳೆ. ಗೀತೆ ರಚನೆ, ಗಾಯನ ನಿರ್ದಿಷ್ಟ ವರ್ಗದ ಸ್ವತ್ತಲ್ಲ ಎನ್ನುವುದಕ್ಕೆ ಜನಪದ ಸಾಹಿತ್ಯವೇ ಸಾಕ್ಷಿ. ಇಂದಿಗೂ ಹಳ್ಳಿಯ ಹೆಣ್ಣು ಮಕ್ಕಳು ಹೊಸ ಹಾಡುಗಳನ್ನೂ ಹೊಂದಿಸಿ ರಾಗವಾಗಿ ಹಾಡುವುದನ್ನು ಕೇಳಬಹುದು.

ಜನಪದ ಗೀತೆಗಳು ಹುಟ್ಟಿದುದ್ದು ಸುಖದ ನಲೆವೀಡಾದ ಅರಮನೆಗಳಲ್ಲಿ. ಜನಸಾಮಾನ್ಯರ ಮುರುಕು ಗುಡಿಸಲಲ್ಲಿ. ಜನ ಸಾಮಾನ್ಯರ ಮನ ರಂಜಿಸಲು ಮೂಡಿದ ಗೀತೆಗಳು ಸಾಕಷ್ಟು ಪ್ರಭಾವಯುತವಾಗಿ ಸತ್ವಯುತವಾಗಿ ಬೆಳೆದವು.

ಪಟ್ಟಣದ ವಿಲಾಸಿಗಳಿಗಿಂತಲೂ ಹಳ್ಳಿಗರಿಗೆ, ಹಳ್ಳಿಯ ಸಂಪರ್ಕ ಪಡೆದಿರುವ ಪಟ್ಟಣಿಗರಿಗೆ ಹಳ್ಳಿಗರ ಹೃದಯ ಗೀತೆಗಳೆಂದೆನಿಸಿದ ಜಾನಪದ ಗೀತೆಗಳ ಪ್ರಭಾವ ಸಂಬಂಧದ ಪರಿಚಯವಾಗುವುದು ಸಹಜ. ಹಳ್ಳಿಯ ಹೆಣ್ಣು ಮಕ್ಕಳ ಹೃದಯದಿಂದ ಹೊರ ಹೊಮ್ಮಿ ಬರುವ ಗೀತೆಗಳನ್ನು ಆಲಿಸಿ ಹರ್ಷಪಡಲು ತಾಳ್ಮೆಯೂ ಬೇಕು, ಸಹೃದಯತೆಯೂ ಬೇಕು, ಸಂಸ್ಕಾರವೂ ಬೇಕು.

ಗಾನ ಮಾಧುರ್ಯದ ಹಿರಿಮೆಯನ್ನು ಅರಿತವರು ಹಳ್ಳಿಗರು. ಆದರಲ್ಲಿಯೂ ಹಳ್ಳಿಯ ಹೆಣ್ಣು ಮಕ್ಕಳಿಗೆ ಹಾಡುಗಳನ್ನು ಹೇಳುವುದೆಂದರೆ ಎಲ್ಲಿಲ್ಲದ ಹಿಗ್ಗು. ಮಧುರ ಕಂಠದ ಒಂದು ಹೆಣ್ಣು ಮೊದಲು ಹಾಡುವುದು, ಅನಂತರ ಅವಳ ಸಂಗಡಿಗರು ಆಕೆಯು ಹಾಡಿದ ಹಾಡನ್ನೇ ಅನುಸರಿಸಿ ಹಾಡುವುದು ಚಿರಪರಿಚಿತ. ಹಾಡುಗಾರಿಕೆ ಗಂಡಸರಿಗಿಂತಲೂ ಹೆಂಗಸರಲ್ಲಿಯೇ ಬಳಕೆ ಹೆಚ್ಚು....ಗಂಡಸರು ಹಬ್ಬ, ಜಾತ್ರೆ, ಸುಗ್ಗಿ ಈ ಕಾಲಗಳಲ್ಲಿ ಕೋಲು ಹೊಯ್ಯುತ್ತಾ ಹಾಡುವುದು ಅಪರೂಪವೇನಲ್ಲ.

ಹಳ್ಳಿಯ ಹೆಣ್ಣು ಮಕ್ಕಳಿಗೆ ಹಾಡಲು ಇಂತಹ ಕಾಲ, ಇಂತಹ ಹಾಡು, ಇಷ್ಟೇ ವೇಳೆ ಎಂಬ ಮಿತಿ ಇಲ್ಲ. ಮನೆಯಲ್ಲಿ ಬೀಸುವಾಗ, ಕುಟ್ಟುವಾಗ, ತೋಟ ಗದ್ದೆಗಳಲ್ಲಿ ಕಳೆ ಕೀಳುವಾಗ, ಸಸಿ ನಾಟುವಾಗ ಹಾಡುವುದು ಸಾಮಾನ್ಯ. ಮದುವೆ ಮನೆಗಳಲ್ಲಿ ಹಾಡುಗಾರಿಕೆಯ ಸಂಭ್ರಮ ಮಿತಿ ಮೀರಿರುತ್ತದೆ. ಅದೂ ಸ್ಪೈ ಪೋಟಿಯ ಮೇಲೆ. ಮಗು ಮಲಗಿಸಿ ತೊಟ್ಟಿಲು ತೂಗುವಾಗ ಲಾಲಿ ಹೇಳುವುದರಿಂದ ಆರಂಭಿಸಿ ಬೆವರು ಸುರಿಸಿ ದುಡಿಯುವಾಗಲೂ ಗೀತೆಗಳನ್ನು ಹಾಡುತ್ತಾರೆ ಎನ್ನುವಾಗ ಆದರಲ್ಲಿ ಅವರಿಗಿರುವ ಅಭಿರುಚಿ, ಅಭಿಮಾನದ ವಿಷಯವಾಗಿ ವಿವರಿಸುವುದು ಅನಾವಶ್ಯಕ.

ಗೀತೆಗಳಲ್ಲಿ ಬಾರದ ವಿಷಯವೇ ಇಲ್ಲ. ಕಷ್ಟ, ಸುಖ, ಜನನ-ಮರಣ, ವಿರಹ-ಶೃಂಗಾರ, ಉಚ್ಚ-ನೀಚ ಮೊದಲಾದ ಕಲ್ಪನೆಗಳ ಕಥೆಗಳನ್ನು ಹೆಣೆದು ತಮ್ಮ ನಿತ್ಯದ ಬಳಕೆಯ ಭಾಷೆಯಲ್ಲಿಯೇ ಶ್ರೋತೃಗಳ ಮನ ಮುಟ್ಟುವಂತೆ ಹಾಡುಗಳ ಸೃಷ್ಟಿಕರ್ತರು ಹಳ್ಳಿಯ ಹಾಡುಗಾರರದು. ಬಡವ, ಶ್ರೀಮಂತ ಎನ್ನುವ ಭೇದವಿಲ್ಲದೆ ಎಲ್ಲರನ್ನು ಬಯಲಿಗೆಳೆಯುವ ಗೀತೆಗಳೂ ಇಲ್ಲದಿಲ್ಲ. ಪ್ರೀತಿ, ದಯೆ, ಧರ್ಮ-ನ್ಯಾಯ, ನೀತಿ ಉನ್ಮಾದ, ಅಹಂಕಾರ, ವಿಧಿಯ ಕೈವಾಡ, ಭಕ್ತಿ ಮೊದಲುಗೊಂಡು ಎಲ್ಲ ಬಗೆಯ ಬಾಳುವೆಯ ಪ್ರಾಕಾರಗಳು ಜಾನಪದ ಗೀತೆಗಳ ಸಾಮಗ್ರಿಗಳು. ಅವರ ನುಡಿಯಲ್ಲಿ ಕೊಂಕು, ಅಸಹ್ಯ ಇಲ್ಲ. ಅವರ ಗೀತೆಯ ನಾಯಕ ದೇವನೂ ಆಗಬಹುದು, ದೇವತೆಯೂ ಆಗಬಹುದು. ಜನ ಸಾಮಾನ್ಯವ್ಯಕ್ತಿಯೂ ಆಗಬಹುದು. ಯಾರಾದರೂ ಅವರಿಗೆ ಒಂದೇ. ಒಂದು ಬಗೆಯ ನಿಷ್ಕಪಟ, ಸರಳ ಭಾವವನ್ನೇ ಅನುಸರಿಸಿ ಸಾಗಿದ್ದಾರೆ. ಜಾನಪದ ಗೀತೆಗಳು ಜನರಲ್ಲಿ ಜನಪ್ರಿಯವಾದುದು ಅವುಗಳ ನಿರಾಡಂಬರ ಶೈಲಿ, ಸರಳ ಮಾರ್ದವತೆಯ ಕಾರಣದಿಂದ. ಜನತೆಯ ಬಹು ಬಗೆ

(ಹನ್ನೆರಡನೇ ಪುಟ ನೋಡಿರಿ)



ಧನೋ ರಕ್ಷತಿ ರಕ್ಷಿತಃ

ಹಣವನ್ನು ಉಳಿಸಿದವರನ್ನು ಹಣವು ಉಳಿಸುವುದು

ಅನವಶ್ಯಕವಾಗಿ ಖರ್ಚು ಮಾಡದೆ ಉಳಿಸಿದ ಹಣವನ್ನು ಕೂಡಿಡುವ ಅಭ್ಯಾಸವು ಸುಖಮಯ ಸಂಸಾರದ ಅಡಿಗಲ್ಲು. ನಿಮ್ಮ ಸಂಸಾರವು ಆದರ್ಶವಾಗಬೇಕೆಂಬ ಹೆಬ್ಬಯಕೆ ನಿಮಗಿದ್ದರೆ, ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮದೊಂದು ಖಾತೆಯನ್ನು ತೆರೆದು ಕ್ರಮವಾಗಿ ಕೂಡಿಡುವ ನಿಯಮವನ್ನು ಇಟ್ಟುಕೊಳ್ಳಿರಿ.

ಎಲ್ಲಾ ವರ್ಗದವರಿಗೂ ಅನುಕೂಲವಾಗಿರುವ
ಠೇವಣಾತಿ ಯೋಜನೆಗಳು

ಸೇವಿಂಗ್ಸ್, ಪಿಗ್ಮಿ, ಕ್ಯುಮುಲೇಟಿವ್,
ಕ್ಯುಮುಲೇಟಿವ್ ಏನ್ಯುಯಿಟಿ, ಖಾಯಂ ಠೇವಣಾತಿ

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿವೆ

ಚಲಾವಣಾ ನಿಧಿ: ರೂ. 85 ಕೋಟಿಗೂ ಮಿಕ್ಕಿದೆ

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. 8/1965.

ದಿ. ಜನರಲ್ ಇನ್ವೆಸ್ಟ್‌ಮೆಂಟ್ & ಕಮರ್ಶಿಯಲ್ ಕೊರ್ಪೊರೇಶನ್ ಪ್ರೈವೇಟ್ ಲಿಮಿಟೆಡ್ ಉಡುಪಿ ಇದರ ಮನೇಜಿಂಗ್ ಡೈರೆಕ್ಟರ್ T. ರಮೇಶ U. ಪೈ — — ವಾದಿ.

ಮತ್ತು

P. ಸುಂದರ ಕೊಡಾ — ಪ್ರತಿವಾದಿರು.

ಪ್ರತಿವಾದಿರು:

2) B. M. ಪರಂ ಶಿವಯ್ಯ— ಮುದ್ದಪ್ಪನವರ ಮಗ—ಕಂಟ್ರಾಕ್ಟರ್, ಸಾಗರ— ಶಿವಮೊಗ್ಗಾ ಡಿಸ್ಟ್ರಿಕ್ಟ್.

3) ಜೋಕಿಮ್ ಕುಂಞಾ— ಕ್ಸೇವಿಯರ ಕುಂಞಾರ ಮಗ—ಇದುವಾನಿ, ಸಾಗರ— ಶಿವಮೊಗ್ಗಾ ಡಿಸ್ಟ್ರಿಕ್ಟ್.

ಸದ್ರಿ 2 ಮತ್ತು 3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:

ವಾದಿಯು ಪ್ರತಿವಾದಿರ ಮೇಲೆ ಪ್ಲೈಂಟಿನಲ್ಲಿ ಕಾಣಿಸಿದ ಲೋರಿ M. Y. S. 4098ರ Hire purchase agreement ಪ್ರಕಾರ ಬರತಕ್ಕ Hire amount ಮತ್ತು ಲೋರಿ ಡಿಲಿವರಿ ವ ಇತರ ನಿವೃತ್ತಿಗಳನ್ನು ಕೇಳಿ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ನೋಟಿಸಿನ ಬಗ್ಗೆ ತಾರೀಕು 24-3-66ಕ್ಕೆ ಇಟ್ಟಿದೆ. ಆ ಕುರಿತು ನೀವೇನಾದರೂ ಉಜ್ರಹೇಳುವಂತಿದ್ದರೆ ಆ ದಿವಸ ಹಗಲು ಗಂಟೆ 11ಕ್ಕೆ ಸರಿಯಾಗಿ ಈ ಕೋರ್ಟು ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By order of the Court)

M. Damodhar Kamath,
Advocate for Plaintiff.

Udipi, Dated 9-3-1966.

ನಮ್ಮ ಬೆನ್ನೆಲುಬು

ಅಧಿಕ ಜನಕ್ಕೆ ಅಧಿಕ ಆಹಾರ

ಸೊಂಡೂರಿನಲ್ಲಿ ಹೆಚ್ಚು ಬೆಳೆಯುವ ಹೊಸ ಕಾರ್ಯಕ್ರಮ ಪ್ರತಿ ಗ್ರಾಮಕ್ಕೂ ಅನುಕರಣೀಯವಿದೆ.

ಬರೆದವರು:

ಶ್ರೀ ಎಂ. ವೈ. ಘೋರ್ಪಡೆ.

"ಹಸಿದವನ ಮುಂದೆ ಧರ್ಮದ ಮಾತು ವ್ಯರ್ಥ" ಎಂಬುದಾಗಿ ಮಹಾಜ್ಞಾನಿ ಮತ್ತು ವೇದಾಂತ ಗುರುಗಳಾದ ಶ್ರೀ ರಾಮಕೃಷ್ಣರು ವಿವೇಕಾನಂದರಿಗೆ ಒಮ್ಮೆ ಹೇಳಿದ್ದುಂಟು. ಆಹಾರ ಮೊದಲು ಅನಂತರ ಮಿಕ್ಕದ್ದು— ಈ ಮಾತು ಒಪ್ಪುವಂತಹುದು. ಹಸಿವು ಏನನ್ನೂ ಕಾಯಲಾರದು. ಇಂದು ಬಲಾಢ್ಯತೆ ಮತ್ತು ಸ್ವಾವಲಂಬನೆ ಎನ್ನುವ ಮಾತನ್ನು ಕೇಳುತ್ತಿದ್ದೇವೆ. ಆ ಮಾತಿನಲ್ಲಿ ಆಹಾರದಲ್ಲಿ ಪರಿಪೂರ್ಣತೆ ಪಡೆಯಬೇಕು ಎನ್ನುವ ಅರ್ಥ ಅಡಗಿದೆ.

ಹೀಗೆಂದ ಮಾತ್ರಕ್ಕೆ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಆಹಾರವನ್ನು ಆಮದು ಮಾಡಿಕೊಳ್ಳಬಾರದೆಂದಿಲ್ಲ; ನಾವು ಮನಸ್ಸು ಮಾಡಿದರೆ ರಾಷ್ಟ್ರೀಯ ಆಹಾರ ನೀತಿಯನ್ನು ರೂಪಿಸಿಕೊಂಡು ಅದರ ಕಾರ್ಯಾಚರಣೆಯ ಮೂಲಕ ಸಾಕಷ್ಟು ಆಹಾರವನ್ನು ಬೆಳೆದು, ಸಮಾನವಾಗಿ ಹಂಚಲೂ ಬಹುದು ಎಂಬುದನ್ನು ಮರೆಯಬಾರದು. ಸರಿಯಾದ ಹಂಚಿಕೆಯು ಕ್ರಮವು ಅಧಿಕ ಆಹಾರ ಉತ್ಪತ್ತಿ ಮಾಡುವ ಕಾರ್ಯದಷ್ಟೇ ಪ್ರಮುಖವಾದುದು.

ಸ್ವಾತಂತ್ರ್ಯದ ನಂತರ ನಮ್ಮ ಸಾಧನೆಯು ಮಹತ್ವಪೂರ್ಣವಾಗಿದ್ದರೂ, ಸಾಕಷ್ಟಾಗಿಲ್ಲ. ನಮ್ಮ ಆಹಾರ ಉತ್ಪತ್ತಿಯು ೫೧ರಿಂದ ೮೯ದಶಲಕ್ಷ ಟನ್ನುಗಳಷ್ಟು ಏರಿದೆ ಎಂಬುದೇನೋ ನಿಜ; ಆದರೆ ಪ್ರತಿಯೊಬ್ಬನಿಗೆ ಸಿಗುವ ಆಹಾರದ ಪ್ರಮಾಣದಲ್ಲಿ ಏರಿಕೆಯಾಗಿಲ್ಲ. ಏಕೆಂದರೆ ಪ್ರತಿ ವರ್ಷವೇ ೨||ಯಂತೆ ಜನ ಸಂಖ್ಯೆ ಬೆಳೆಯುತ್ತಿದೆ. ದೇಶದಲ್ಲಿ ವ್ಯವಸಾಯ ಉತ್ಪಾದನೆ ಮತ್ತು ಉತ್ಪಾದಕತೆ ಶೇ. ೩.೯೪ ಮತ್ತು ೧.೬೭ರಂತೆ ಕ್ರಮವಾಗಿ ಹೆಚ್ಚಾಗಿದೆ. ಮದ್ರಾಸ್ ರಾಜ್ಯದಲ್ಲಿ ಗ್ರಾಮಾಂತರ ವಿದ್ಯುಚ್ಛಕ್ತಿ, ನೀರಾವರಿ ಮತ್ತು ವ್ಯವಸಾಯ ಪದ್ಧತಿಯಲ್ಲಿ ರಸಾಯನಿಕ ಕ್ರಮವನ್ನು ಅನುಸರಿಸಿದ್ದರಿಂದ ಉತ್ಪಾದನೆ ಮತ್ತು ಉತ್ಪಾದಕತೆ ಕ್ರಮವಾಗಿ ಶೇ. ೬.೨ ಮತ್ತು ೩.೫ ರಷ್ಟು ಏರಿದೆ. ಅಧಿಕ ಭೂಮಿಯನ್ನು ವ್ಯವಸಾಯಕ್ಕೆ ಅನುಗೊಳಿಸಲು ಕಡಿಮೆ ಅವಕಾಶವಿರುವುದರಿಂದ ನಾಲ್ಕನೇ ಯೋಜನೆಯಲ್ಲಿ ವ್ಯವಸಾಯದ ಉತ್ಪಾದಕತೆಯನ್ನು ಶೇ. ೫ ರಿಂದ ಒಕ್ಕ ಏರಿಸಲು ನಿಗದಿ ಮಾಡಲಾಗಿದೆ. ಸಾಂದ್ರ ವ್ಯವಸಾಯ ಪದ್ಧತಿಯ ಮೂಲಕ ಅಧಿಕ ಆಹಾರವನ್ನು ಉತ್ಪತ್ತಿ ಮಾಡುವ ಮಾರ್ಗ ಮಾತ್ರ ನಮಗ ಉಳಿದಿರುವುದು. ನಮ್ಮ ಪ್ರಧಾನಿಗಳಾಗಿದ್ದ ಶ್ರೀ ಲಾಲ್‌ಬಹಾದ್ದೂರ್ ಶಾಸ್ತ್ರಿಯವರು ಹೇಳಿದಂತೆ "ಒಂದು ಕಾಳು ಬೆಳೆಯುವ ಕಡೆ, ಎರಡು ಕಾಳು ಬೆಳೆಯಬೇಕು". ಈ ನುಡಿಯನ್ನು ಸಾರ್ಥಕಗೊಳಿಸಬೇಕು. ಸ್ವಲ್ಪ ಕಾಲದಲ್ಲಿಯೇ ಅಧಿಕವನ್ನು ಸಾಧಿಸಿ ನಮ್ಮನ್ನಗಲಿದ ನಾಯಕನಿಗೆ, ನಾವು ಸಲ್ಲಿಸಬಹುದಾದ ಸ್ಮಾರಕವಾಗಿದೆ.

ಆಧುನಿಕ ಪದ್ಧತಿಯ ಅಗತ್ಯತೆ

ವ್ಯವಸಾಯ ಕ್ರಮವನ್ನು ಆಧುನಿಕಗೊಳಿಸಿ ಅದನ್ನು ಒಂದು ಕೈಗಾರಿಕೆಯಂದು ಪರಿಗಣಿಸಿದಾಗ ಮಾತ್ರ ಈ ಮೊದಲು ಎಲ್ಲಿ ಒಂದು ತೆನೆ ಬೆಳೆಯುತ್ತಿತ್ತೋ ಅಲ್ಲಿ ಈಗ ನಾಲ್ಕು ತೆನೆಗಳನ್ನು ಬೆಳೆಯಬಹುದು. ರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಇತ್ತೀಚೆಗೆ ನುಡಿದಂತೆ "ಭಾರತದ ರೈತನು ವಿಪುಲ ವ್ಯವಹಾರ ಜ್ಞಾನವನ್ನು ಹೊಂದಿದ್ದಾನೆ; ಆತನು ಹೊಸ ಭಾವನೆಗಳಿಗೆ ವಿರೋಧಿಯಲ್ಲ. ನಮ್ಮ ನಾಗರಿಕತೆಯ ಅಡಿಗಲ್ಲಾಗಿರುವ ರೈತನಿಗೆ ಆಧುನಿಕ ತಂತ್ರದ ಜ್ಞಾನವು ತಲುಪಬೇಕು. ಇದರ ಜೊತೆಗೆ ನನ್ನ ಇನ್ನೊಂದು ಮಾತೆಂದರೆ ರೈತನು ಸಾಂದ್ರ ವ್ಯವಸಾಯ ಮಾಡಿ ಲಾಭ ಪಡೆಯಬೇಕಾದರೆ, ಅವನಿಗೆ ಸುಧಾರಿಸಿದ ಬೀಜಗಳು, ಗೊಬ್ಬರ ಮತ್ತು ಕ್ರಿಮಿನಾಶಕಗಳೂ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಸರಬರಾಜಾಗಬೇಕು."

೧೯೫೦ ಮತ್ತು ೬೦ರ ಮಧ್ಯಂತರದಲ್ಲಿ ೫೦ರಿಂದ ೭೦ದಶಲಕ್ಷಗಳಷ್ಟು ಎಕರೆ ಭೂಮಿಯು ನೀರಾವರಿಗೆ ಒಳಪಟ್ಟಿತು. ನಾಲ್ಕನೇ ಯೋಜನೆಯಲ್ಲಿ ೧೦೦ ದಶಲಕ್ಷ ಎಕರೆ ಭೂಮಿಯು ನೀರಾವರಿಗೆ ಒಳಪಡಬಹುದೆಂದು ನಿರೀಕ್ಷಿಸಲಾಗಿದೆ. ಆದರೂ ಮೂರರಲ್ಲೆರಡಂಶ ಜಮೀನು ಮಳೆಯನ್ನೇ ನೆಚ್ಚಿಕೊಳ್ಳಬೇಕಾಗಿದೆ. ಭೂಮಿ ಮತ್ತು ನೀರಿನ ಮೇಲ್ವಿಚಾರಣೆಯು ಉತ್ತಮಗೊಳ್ಳುವುದು ಅಗತ್ಯವಿದೆ. ಈ ಕ್ರಮವನ್ನು ಯುದ್ಧಸಿದ್ಧತೆ ತಳಹದಿಯ ಮೇಲೆ ಜಾರಿಗೆ ತರಬೇಕು. ಪ್ರತಿಯೊಂದು ನೀರಾವರಿ ಕಾರ್ಯ ಯೋಜನೆಯನ್ನು ಸಂಪೂರ್ಣವಾಗಿ ಯೋಜಿಸಬೇಕಲ್ಲದೆ ವಿಚಕ್ಷಣೆಯಿಂದ ಕಾರ್ಯಗತಮಾಡಬೇಕು. ಹಾಗೆಯೇ ಎಷ್ಟು ವಿವಿಧ ಬಗೆಯ ಬೆಳೆಯನ್ನು ತೆಗೆಯಬಹುದು, ನೀರಾವರಿಯ ಕಾಲುವೆಯನ್ನು ತೋಡಬಹುದು, ಭೂಮಿಯನ್ನು ಹದಮಾಡಿ ರಚಿಸಬಹುದು ಹಾಗೂ ಸಕಾಲದಲ್ಲಿ ವ್ಯವಸಾಯ ಉತ್ಪಾದನಾ ಸರಕುಗಳನ್ನು ಸರಬರಾಜು ಮಾಡಬಹುದು- ಈ ಸಂದರ್ಭದಲ್ಲಿ ಆಡಳಿತ ಸಂಯೋಜನೆ ಬಹಳ ಮುಖ್ಯವಾದುದು. ನಮ್ಮ ಆಡಳಿತ ಯಂತ್ರದ ರಚನೆಯನ್ನು ಆಧುನಿಕಗೊಳಿಸಬೇಕಾಗಿದೆ. ರೈತನು ನಮ್ಮ ಎಣಿಕೆಯನ್ನು ಮೀರುತ್ತಿಲ್ಲ. ಅವನಿಗೆ ಸಲಕರಣೆಗಳನ್ನು ಕೊಟ್ಟು ಇತರ ಅವಕಾಶಗಳನ್ನು ಕಲ್ಪಿಸಿಕೊಟ್ಟರೆ ಪದಾರ್ಥಗಳನ್ನು ನಮಗೆ ಒದಗಿಸುವುದರಲ್ಲಿ ಸಂದೇಹವಿಲ್ಲ. ಸಹಕಾರ ಮತ್ತು ಪಂಚಾಯಿತಿ ರಾಜ್ಯದ ಆಂದೋಳನಗಳನ್ನು ಗ್ರಾಮಮಟ್ಟದಲ್ಲಿ ಸಂಘಟಿಸಬೇಕಾಗಿದೆ. ಗ್ರಾಮಾಂತರ ವ್ಯವಸಾಯ ಕ್ಷೇತ್ರದಲ್ಲಿ ಸಹಕಾರ ಮತ್ತು ಹಣಕಾಸಿನ ಅನುಕೂಲವನ್ನು ಮಾಡಿಕೊಡುವ ಕಾರ್ಯವನ್ನು ಪುನರ್ ವ್ಯವಸ್ಥೆಗೊಳಿಸಬೇಕು. ಸರ್ಕಾರದ ನೀತಿಯ ಮೂಲಕ ವ್ಯವಸಾಯ ಕ್ಷೇತ್ರದಲ್ಲಿ ಸರ್ಕಾರೀ ಮತ್ತು ಖಾಸಗಿ ಬಂಡವಾಳವನ್ನು ಹೆಚ್ಚು ಹೆಚ್ಚಾಗಿ ಹಂಚುವಂತೆ ವಾತಾರಣವನ್ನು ಕಲ್ಪಿಸುವುದು ಅಗತ್ಯ.

ಗೊಬ್ಬರದ ಮಹತ್ವ

೧೫ ವರ್ಷಗಳ ಕಾಲ ಯೋಜನೆಯನ್ನು ಕೈಗೊಂಡಿದ್ದರೂ ಗೊಬ್ಬರ ಮತ್ತು ಕ್ರಿಮಿನಾಶಕದಲ್ಲಿ ಕೊರತೆಯನ್ನು ಕಾಣುತ್ತಿದ್ದೇವೆ. ನಮಗೆ ಬೇಕಾದ ಗೊಬ್ಬರದ ಸರಬರಾಜಿನಲ್ಲಿ ಹತ್ತರಲ್ಲೊಂದು ಭಾಗ ಮಾತ್ರ ಈಗ ದೊರೆಯುತ್ತಿದೆ. ಆದರೆ ವ್ಯವಸಾಯ ಬೆಳೆಗ ಈ ಸರಬರಾಜಿನಲ್ಲಿ ಕೊಂಚ ಮಾತ್ರ ದೊರೆಯುತ್ತಿದೆ. ಇತ್ತೀಚೆಗೆ ಗೊಬ್ಬರವನ್ನು ವ್ಯವಸಾಯ ಬೆಳೆಗೆ ಅಗತ್ಯವಾದ ಪೂರಕವೆಂದು ನಾವು ಗಮನಿಸಿದ್ದೇವೆ. ನಮ್ಮ ಪೂರೈಕೆಗೆ ಬೇಕಾದಷ್ಟು ಗೊಬ್ಬರವನ್ನು ಕಂಪೋಸ್ಟ್ ಮೂಲಕ ತಯಾರಿಸಲು ಸಾಧ್ಯವಿದೆಯೆನ್ನುವ ಮಾತು ವಾಸ್ತವತೆಗೆ ದೂರವಾದುದು. ಸಾರಜನಕ, ರಂಜಕ ಮತ್ತು ಪೊಟಾಷ್ ಸತ್ವಗಳುಳ್ಳ ಗೊಬ್ಬರವನ್ನು ಮತ್ತು ಕ್ರಿಮಿನಾಶಕ ಪುಡಿಗಳನ್ನು ಸದ್ಯದ ಪೂರೈಕೆಗೋಸ್ಕರವಾಗಿ ವಿದೇಶದಿಂದ ಆಮದು ಮಾಡಿಕೊಳ್ಳಬೇಕು. ಆದ್ಯತೆಯ ಆಧಾರದಮೇಲೆ ದೇಶದಲ್ಲಿಯೇ ರಾಸಾಯನಿಕಗೊಬ್ಬರವನ್ನು ಉತ್ಪತ್ತಿ ಮಾಡಲು ಆರಂಭಿಸಬೇಕು. ಈಗಿನ ಲೆಕ್ಕದ ಪ್ರಕಾರ ವಿದೇಶದಿಂದ ಆಹಾರವನ್ನು ತರಿಸಲು ಸುಮಾರು ೭೦ ಕೋಟಿ ರೂ.ಗಳಷ್ಟು ವಿದೇಶೀ ವಿನಿಮಯ ಹಣ ಒಳಗಾಗಲಿದೆ. ಅದೇ ಹಣದಿಂದ ವರ್ಷ ಒಂದಕ್ಕೆ ಒಂದೊಂದು ಕಾರ್ಖಾನೆಯಿಂದಲೂ ಎರಡು ಲಕ್ಷ ಟನ್ ಸಾರಜನಕ ಗೊಬ್ಬರ ಉತ್ಪತ್ತಿ ಮಾಡುವ ಸಾಮರ್ಥ್ಯವುಳ್ಳ ನಾಲ್ಕು ಕಾರ್ಖಾನೆಗಳನ್ನು ಸ್ಥಾಪಿಸಲು ಸಾಧ್ಯವಿದೆ. ಆ ಮೂಲಕ ದೇಶದಲ್ಲಿಯೇ ಎಂಟು ದಶ ಲಕ್ಷ ಟನ್‌ಗಳಷ್ಟು ಹೆಚ್ಚಿಗೆ ಉತ್ಪತ್ತಿ ಮಾಡಲು ಸಾಧ್ಯವಿದೆ. ಆಹಾರದಲ್ಲಿ ಸ್ವಯಂಪರಿಪೂರ್ಣತೆಯನ್ನು ಪಡೆಯುವ ಕಾರ್ಯವನ್ನು [illegible]ದಂತಾಗುತ್ತದೆ.

ಜಪಾನ್ ದೇಶದಲ್ಲಿ ಮತ್ತು ಹಾಲೆಂಡಿನಲ್ಲಿ ಪ್ರತಿ ಎಕರೆಗೆ ಬಳಸುವ ಗೊಬ್ಬರದ ಅಂಶದಲ್ಲಿ ಕ್ರಮವಾಗಿ ನೂರರಲ್ಲಿ ಒಂದು ಭಾಗದಷ್ಟು ಭಾರತದಲ್ಲಿ ಬಳಸಲಾಗುತ್ತಿಲ್ಲ. ಗೊಬ್ಬರದ ಬೆಲೆ ವಿಶ್ವದ ಎಲ್ಲಾ ದೇಶಗಳಿಗಿಂತ ಭಾರತದಲ್ಲಿಯೇ ಹೆಚ್ಚು. ಭಾರತದ ರೈತನು ಅಭಿವೃದ್ಧಿ ಮನೋಭಾವವನ್ನು ಹೊಂದಿದ್ದಾನಲ್ಲದೇ ಖರ್ಚಿನ ಬಗ್ಗೆಯೂ ತಿಳಿವಳಿಕೆಯನ್ನು ಪಡೆದಿದ್ದಾನೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ಕನಿಷ್ಠ ಉತ್ಪತ್ತಿಯ ಬೆಲೆಯನ್ನು ರೈತನಿಗೆ ನಿಗದಿ ಮಾಡಿಕೊಡುವುದೂ ಅದರ ಬಗ್ಗೆ ದೇಶದ ನೀತಿಯನ್ನು ರೂಪಿಸುವುದೂ ಬಹಳ ಮುಖ್ಯವಾದ ಅಂಶವಾಗಿದೆ. ಅನಿರೀಕ್ಷಿತ ಕಾರಣಗಳಿಂದ ಬೆಳೆಯು ಬಾರದಿದ್ದರೆ ಅದಕ್ಕೆ ರಕ್ಷಣೆ ನೀಡುವ ಬೆಳೆಯ ವಿಮೆಯನ್ನು ಜಾರಿಗೆ ತರುವ ವಿಚಾರವು ಒಳ್ಳೆಯದೆನಿಸುತ್ತದೆ. ಇದರಿಂದ ರೈತನು ಆಧುನಿಕ ಪದ್ಧತಿಮೂಲಕ ಬೆಳೆಯನ್ನು ಬೆಳೆಯಲು ಪ್ರೋತ್ಸಾಹಿಸಿದಂತಾಗುತ್ತದೆ.

ಉತ್ತಮ ಬೀಜಗಳ ಉತ್ಪತ್ತಿ

ರಸಾಯನಿಕ ಗೊಬ್ಬರವನ್ನು ಉಪಯೋಗಿಸುವುದರಿಂದ ಮಿಶ್ರ ಜಾತಿಯ ಜೋಳ, ಸಜ್ಜೆ ಮತ್ತು 'ಮುಸುಕಿನ ಜೋಳ ಹಾಗೂ ಸುಧಾರಿಸಿದ ಗೋಧಿ ಮತ್ತು ಭತ್ತ ಅಧಿಕವಾಗಿ ಉತ್ಪತ್ತಿಯಾಗುವುದು ತಿಳಿದ ವಿಚಾರವೇ. ಅದರ ಈ ಸುಧಾರಿಸಿದ ಬೀಜಗಳನ್ನು ಅಧಿಕವಾಗಿ ಮತ್ತು ಶೀಘ್ರವಾಗಿ ಉತ್ಪತ್ತಿ ಮಾಡುವುದು ಅಗತ್ಯವಾಗಿದೆ. ಈ ಅಣು ಯುಗದಲ್ಲಿ ಗಿಡಗಳನ್ನು ಸುಧಾರಿಸುವ ಕಾರ್ಯದ ಮೂಲಕ ವ್ಯವಸಾಯ ಕ್ಷೇತ್ರದಲ್ಲಿ ಅದ್ಭುತ ಪರಿಣಾಮವನ್ನು ಕಾಣಬಹುದು. ದಹಲಿಯಲ್ಲಿರುವ ಪೂಸ ವ್ಯವಸಾಯ ಸಂಶೋಧನಾ ಕೇಂದ್ರವು ಉತ್ತಮವಾದ ಕಲಸವ

(ಐವತ್ತೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 5% ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.
ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ರಾವಲ್ಪಿಂಡಿಯ

ಮಂತ್ರಿ ಮಟ್ಟದ ಸಭೆ

ಶಾಂತಿಯನ್ನು ಎಲ್ಲರೂ ಬಯಸುತ್ತಾ ರಾಜಕಾರಣಿಗಳು ಮಾತ್ರ ಶಾಂತಿ ಧಕರಲ್ಲ. ರಾಜಕೀಯದಿಂದಲೇ ಶಾಂ ಸ್ಥಾಪನೆಯೂ ಸಾಧ್ಯವಿಲ್ಲ.

ಆರ್ಥಿಕ ಮತ್ತು ವಾಣಿಜ್ಯ ಸಂಬಂಧ ು ಅನಿರ್ಬಂಧ ಸಂಪರ್ಕ ಸಾಧನಗಳು, ಂಸ್ಕೃತಿಕ ಸೌಹಾರ್ದಗಳು ಶಾಂತಿ ಪನೆಗೆ ಪ್ರೇರಕ ಶಕ್ತಿಯೂಗುತ್ತವೆ ಷ್ಟ್ರ ರಾಷ್ಟ್ರಗಳಲ್ಲಿ ಸ್ನೇಹ ಸಂಬಂಧ ಳೆಯುವಂತೆ ಮಾಡುತ್ತವೆ.

ತಾಷ್ಕೆಂಟ್ ಘೋಷಣೆಯು ಹೇಳುವು ಇದನ್ನೇ. ರಾಜಕೀಯವಾಗಿ ಶಾಂತಿ ಲಸುವಂತೆ ಮಾಡಲು ಇತರ ರಂಗಗಳ ತುವೆ ಸಂಪರ್ಕ ಹೆಚ್ಚಿಸಬೇಕು— ದು.

ಭಾರತದ ಪ್ರಧಾನಿ ಮತ್ತು ಪಾಕಿಸ್ತಾ ನ ಅಧ್ಯಕ್ಷರು ಎರಡೂ ರಾಷ್ಟ್ರಗಳಲ್ಲಿ ಪ್ರವಾದ ಶಾಂತಿಯನ್ನು ಸ್ಥಾಪಿಸುವ ದ್ದೇಶದಿಂದ ಆರ್ಥಿಕ—ವಾಣಿಜ್ಯ ಸಂ ರ್ಕ ಸಂಬಂಧಗಳು- ಪರಸ್ಪರ ಸಾಂಸ್ಕೃ ಕ ಚಟುವಟಿಕೆಯ ವಿನಿಮಯ ಮಾಡಿ ಳ್ಳಲು ಒಪ್ಪಿಗೆ ನೀಡಿದ್ದಾರೆ, ತಾಷ್ಕೆಂ ಘೋಷಣೆಯಲ್ಲಿ.

ಘರ್ಷಣೆಯ ದಾರಿಯಲ್ಲಿ ಪರಸ್ಪರ ವೈ ಭಾವದಿಂದ ಅಧಃಪತನವನ್ನು ಸಾಧಿಸು ದು, ಶಾಂತಿಮಾರ್ಗದಲ್ಲಿ ಹೋಗಿ ಉತ್ತ ನೆರೆ ಹೊರೆಯನ್ನು ಪಡೆದು ಉತ್ಥಾನ ಹೊಂದುವುದು— ಯಾವುದು ಹಿತ?

ತಾಷ್ಕೆಂಟ್ ಘೋಷಣೆ ಮುರಿದ ಹಗ ನ್ನು ಮತ್ತೆ ಜೋಡಿಸುವ ಪ್ರಯತ್ನ ಡಿದೆ; ಗಂಟು ಹಾಕಿಯಲ್ಲ, ಹೊಸ ರಿಯ ಸಂಬಂಧದಿಂದ.

ನಮಗೇಕೆ ಶಾಂತಿಬೇಕು? ಭಾರತದ ಪಖಂಡದಲ್ಲಿ ಶಾಂತಿ ನೆಲಸಬೇಕು, ಕೆ? ಶಾಂತ ಮಾರ್ಗದ ಆರ್ಥಿಕಾಭಿ ದ್ಧಿ ಕಾರ್ಯಕ್ರಮಗಳನ್ನು ನಾವು ನೆರ ರಿಸಬೇಕು. ಇದಕ್ಕಾಗಿ, ನೇರ ವಾಣಿ ದಿಂದ ನಿರ್ಯಾತವನ್ನು ಹೆಚ್ಚಿಸಲಿಕ್ಕಾ ಬೇಕು, ಶಾಂತಿ.

ಪ್ರವಾಹ ನಿಯಂತ್ರಣ, ನೀರಿನ ಸ ಪಯೋಗ ಪ್ರಯತ್ನಗಳಲ್ಲಿ ಭಾರತ— ಕಿಸ್ತಾನಗಳು ಕೌಶಲ ಮತ್ತು ಜ್ಞಾ ನ್ನು ಹಂಚಿಕೊಳ್ಳುವಂತಾಗಲು ಂತಿ ಬೇಕು.

ಘರ್ಷಣೆಗೆ ಮೊದಲು ಭಾರತದ ಚಲ ಕ್ರಗಳಿಗೆ ಪಾಕಿಸ್ತಾನದಲ್ಲಿ ಬೇಡಿಕೆ ಹೆ ಚ್ಚಿಗಿತ್ತು. ಕ್ರೀಡೆ ಮೊದಲಾದ ಸಂಸ್ಕೃ ಸಂಬಂಧವೂ ಅಧಿಕವಾಗಿತ್ತು.

ಸಂಪರ್ಕದಿಂದ ವೈಷಮ್ಯವನ್ನು ತೊ ಯುವುದು ಸಾಧ್ಯ; ಅದು ದಿವ್ಯಾಷಧಿ.

ಪಾಕಿಸ್ತಾನಗಳ ಹುಟ್ಟಿನಿಂದಲೂ ಭಾ ಪಾಕಿಸ್ತಾನ ನಡುವೆ ಅನೇಕ , ವಾಣಿಜ್ಯ ಸಂಪರ್ಕ ವ್ಯವಸ್ಥೆ ಸಂ ಧದಲ್ಲಿ ಒಡಂಬಡಿಕೆ ನಡೆದಿದ್ದುವು. ಸ ದ್ರಯಾನದ ಬಗ್ಗೆಯೂ ಅನೇಕ ಪ್ರದಾಯಕ ಹಕ್ಕುಗಳನ್ನು ಪರಸ್ಪರ ಪಡೆದುಕೊಂಡಿವೆ. ಘರ್ಷಣೆಗೆ ಮೊದಲು ಈಯೆಲ್ಲಾ ಸಂಬಂಧಗಳು ಎರಡೂ ದೇಶಗಳಿಗೆ ತುಂಬ ಪ್ರಯೋಜನಕಾರಿಯಾಗಿದ್ದುವು. ತಾಷ್ಕೆಂಟ್ ಘೋಷಣೆಯ ಒಂದಂಶವಾದರೂ ಇದೇ. ಹಿಂದಿದ್ದ ಸಂಬಂಧಗಳನ್ನು ಮತ್ತೆ ಪ್ರಾರಂಭಿಸಿರಿ ಎಂಬುದು.

ಈಗ, ಎರಡೂ ದೇಶಗಳ ನಡುವೆ ವಿಮಾನ ಸಂಚಾರ ಮತ್ತೆ ಪ್ರಾರಂಭವಾಗಿದೆ. ಅಂಚೆ ಮತ್ತು ತಂತಿ ಸಂಪರ್ಕ ವ್ಯವಸ್ಥೆ ಸಹ ಪುನರಾರಂಭವಾಗಿದೆ. ಮೊದಲಿದ್ದ ವೈರಭಾವನೆ ಈಗ ಕುಸು ಕಡಿಮೆಯಾದಂತಿದೆ.

ತಾಷ್ಕೆಂಟ್ ಘೋಷಣೆಯ ವಿರುದ್ಧ ತುಟಿ ಬಿಚ್ಚುವವರಿಗೆ ಅಧ್ಯಕ್ಷ ಅಯ್ಯೂಬಖಾನರು ತೀವ್ರ ಎಚ್ಚರಿಕೆ ನೀಡಿದ್ದನ್ನೂ, ಭಾರತದ ಪಾರ್ಲಿಮೆಂಟು ತಾಷ್ಕೆಂಟ್ ಘೋಷಣೆಗೆ ಸಮ್ಮತಿಯಿತ್ತುದನ್ನೂ ನಾವು ಮರೆಯಲಾರೆವು.

ಘೋಷಣೆಯ ಬಗ್ಗೆ ಪ್ರಧಾನಿ ಇಂದಿರಾ ಗಾಂಧಿ ಘೋಷಿಸಿದ್ದಾರೆ: ನಮ್ಮ ನೆರೆ ಹೊರೆಯವರಲ್ಲಿ ಸ್ನೇಹ ಬಾಂಧವ್ಯವನ್ನು ಹೊಂದಲು ಮತ್ತು ಸಮಸ್ಯೆಗಳನ್ನು ಶಾಂತಿಯುತವಾಗಿ ಬಿಡಿಸಲು ನಾವು ಪ್ರಯತ್ನಿಸುತ್ತೇವೆ; ತಾಷ್ಕೆಂಟ್ ಘೋಷಣೆಯು ಈ ಭಾವನೆಗಳನ್ನು ಉತ್ತಮವಾಗಿ ಪ್ರತಿಬಿಂಬಿಸಿದೆ. ಈ ಘೋಷಣೆಯನ್ನು ಅಕ್ಷರಶಃ ಪಾಲಿಸುತ್ತೇವೆ.

ನಿಜ. ಭಾರತ ಪಾಲಿಸುವ ವಚನವಿತ್ತಿದೆ; ಪಾಲಿಸುತ್ತಿದೆ. ಆದರೆ, ಪಾಕಿಸ್ತಾನ?

ಮೊನ್ನೆ ಸೇರಿದ ಮಂತ್ರಿ ಮಟ್ಟದ ಸಭೆ ಇದಕ್ಕೆ ಸಮರ್ಪಕ ಉತ್ತರ ಕೊಡುವುದಿಲ್ಲ. ಆರ್ಥಿಕ—ವಾಣಿಜ್ಯ—ಸಾಂಸ್ಕೃತಿಕ ಕ್ಷೇತ್ರಗಳನ್ನು ಅಲ್ಲಿಗೇ ಬಿಟ್ಟುಕೊಟ್ಟು ಭುಟ್ಟೋ ನೇರಾಗಿ ಕಾಶ್ಮೀರದ ಮೇಲೆ ಕಣ್ಣಿಟ್ಟರು.

ಭಾರತ— ಪಾಕಿಸ್ತಾನಗಳ ಪ್ರತಿನಿಧಿ ಮಂಡಳಿಗಳು ಎತ್ತುವ ಯಾವ ಪ್ರಶ್ನೆಯನ್ನಾದರೂ ಚರ್ಚಿಸಲು ಇಬ್ಬರೂ ಸಮ್ಮತಿಸಿದ್ದರು.

ಭಾರತ, ಘರ್ಷಣೆಯ ವೇಳೆ ಪಾಕಿಸ್ತಾನ ವಶಪಡಿಸಿದ ಹಡಗ—ಸೊತ್ತುಗಳ ಪ್ರಸ್ತಾಪ ಎತ್ತಲು ಬಯಸಿತ್ತು.

ಆದರೆ, ಭುಟ್ಟೋ ಮೊತ್ತ ಮೊದಲಿಗೆ ಕಾಶ್ಮೀರವನ್ನು ಎತ್ತಿದರು.

ಮಾತು ಮತ್ತೆ ಮುಂದುವರಿಯಲಿಲ್ಲ. ಬದಲು, ಹಿಂದೆ ಸರಿಯಿತು.

ಉಭಯತರರ ಸೇನೆ ಆಗಸ್ಟ ೫, ೬೫ ರಂದಿದ್ದಲ್ಲಿಗೆ ಮರಳ ಬಂದಂತೆ, ಉಭಯ ರಾಷ್ಟ್ರಗಳ ಮಾತುಕತೆಯೂ ಅಲ್ಲಿಗೇ ಬಂದು ಮುಟ್ಟಿತು.

ಹಾಗಾದರೆ—?

ಈ ನಾಟಕವೆಲ್ಲ ಯಾಕೆ?

ನಾವು ನಾಟಕವಾಡುವುದಿಲ್ಲ. ದನದ ಚರ್ಮವನ್ನು ಹೊದ್ದುಕೊಂಡು ಹುಲ್ಲು ಮೇಯುವ ಪಾಕ್ ನಾಟಕ ಎಷ್ಟುದಿನ ನಡೆದೀತು?

ಎಲ್ಲರಿಗೂ ಗೊತ್ತಾಗಿದೆ, ಪಾಕಿನ ಅಂತರಾಳ. ಹೃದಯ ಪರಿವರ್ತನೆಯು ಅಂತಿಮಾಸ್ತ್ರ ತಾಷ್ಕೆಂಟೂ ನಿರುಪಯುಕ್ತವಾದರೆ....

ಆದರೆ ಮತ್ತೆ ಸಭೆ ಸೇರುವ ಬಗ್ಗೆ ಭುಟ್ಟೋ ಒಪ್ಪಿದ್ದಾರೆ— ಮುಂದಕ್ಕಾದರೂ ಅವರು ಹಿಡಿದ ತಪ್ಪುದಾರಿಯಲ್ಲಿ ಮುಂದುವರಿಯದಿರಲಿ. ತಾಷ್ಕೆಂಟ್ ಘೋಷಣೆಯ ಬುನಾದಿಯ ಮೇಲೆಯೇ ತನ್ನ ಮಾತುಕತೆಗಳನ್ನು ಕಟ್ಟಲಿ.

ಜಗತ್ತು ತಿಳಿಗೇಡಿಗಳಿಂದ ತುಂಬಿದೆ. ತಿಳಿಗೇಡಿಗಳನ್ನು ನೋಡಬಾರದೆಂದು ಬಯಸುವವನು ತನ್ನ ಕೋಣೆ ಬಿಟ್ಟು ಹೊರ ಹೋಗಬಾರದು ಮಾತ್ರವಲ್ಲ; ತಾನು ನೋಡುವ ಕನ್ನಡಿಯನ್ನೂ ಒಡೆದು ಹಾಕಬೇಕು.

o o o

ಜಗತ್ತಿನಲ್ಲಿ ಬುದ್ಧಿವಂತರಿಗಿಂತ ತಿಳಿಗೇಡಿಗಳೇ ಹೆಚ್ಚು. ಬುದ್ಧಿವಂತರಲ್ಲೂ ಬುದ್ಧಿಗಿಂತ ತಿಳಿಗೇಡಿತನವೇ ಹೆಚ್ಚು.

o o o

ತನ್ನನ್ನು ತಾನು ಗೆದ್ದು ತನ್ನ ಯಜಮಾನನಾಗಿರದ ಯಾವ ಮನುಷ್ಯನೂ ಸ್ವತಂತ್ರನೆನಿಸಲಾರ.



ಸಂಪನ್ನ
ಬಡತನದ ವಿರುದ್ಧ

ಭಾರತದಲ್ಲೂ ಈ ಬಗೆಯ ಹ
ಯಶಗಳಿಸಿದಂದೇ ಸ

ವಿದೇಶ ಮತ್ತು ಸ್ವದೇಶ ನೀತಿಯನ್ನು ಸಂಪೂರ್ಣ ಕಾರ್ಯಗತ ಮಾಡಲು ಅಮೇರಿಕೆ ಶಕ್ತಿಶಾಲಿಯಾಗಿಯೇ ಇದೆ ಎನ್ನುತ್ತಾರೆ ಅಧ್ಯಕ್ಷ ಜಾನ್ಸನ್.

ಅಮೇರಿಕೆಯಲ್ಲೂ ಬಡತನವಿತ್ತು; ಇಂದಿಗೂ ಇದೆ. ಜಗತ್ತಿನಲ್ಲೇ ಸಂಪನ್ನ ರಾಷ್ಟ್ರವೆನಿಸಿದ ಅಮೇರಿಕೆಯೂ ದಾರಿದ್ರ್ಯದೊಡನೆ ಹೋರಾಡಬೇಕಾಗಿದೆ. ಅಲ್ಲಿ ದಾರಿದ್ರ್ಯದೊಡನೆ ಅಧ್ಯಕ್ಷ ಜಾನ್ಸನ್ನರು ಹೇಗೆ ಹೋರಾಡುತಿದ್ದಾರೆ? ಅದರ ಪ್ರಗತಿ ಹೇಗಿದೆ? ಈ ಪ್ರಶ್ನೆಯನ್ನು ಭಾರತದ ಓರ್ವ ಸಾಮಾಜಿಕ ಕಾರ್ಯಕರ್ತ ಬರಿಯ ಒಂದೇ ಒಂದು ಮಾತಿನಲ್ಲಿ ಉತ್ತರಿಸಿದ: "ಆಶಾಪೂರ್ವಕ."

ಕೇಂದ್ರೀಯ ಸಮಾಜ ಕಲ್ಯಾಣ ಸಮಿತಿಯ ಒಬ್ಬ ಅಧಿಕಾರಿ ಶ್ರೀ ಎಂ. ಸುಬ್ಬಾರಾವ್‌ರವರ ಕಥನಾನುಸಾರ ಈಗ ನಡೆಯುತ್ತಿರುವ ಆಂದೋಲನವು ಅಮೇರಿಕನ್ ಜೀವನದಲ್ಲಿ ನಿರ್ಧನತೆಯ ಅಂತಿಮ ಚಿಹ್ನೆಯನ್ನು ಒರಸಿ ತೆಗೆಯುವ ಪ್ರಯತ್ನ. ಸುಮಾರು ನಾಲ್ಕು ತಿಂಗಳುಗಳ ಕಾಲ ಅಮೇರಿಕೆಯಲ್ಲಿ ಸಂಚಾರಮಾಡಿ ದೆಹಲಿಗೆ ಮರಳಿದ ಶ್ರೀ ರಾಯರ ಅಭಿಪ್ರಾಯ ಮೆಚ್ಚತಕ್ಕದ್ದು.

ಅಮೇರಿಕನ್ ಆಡಳಿತೆಯಲ್ಲಿ ಮಹಾನ್ ಸಮಾಜ ಕಟ್ಟುವ ಆದರ್ಶವಿದೆ. ಇದಕ್ಕೆ ೧೭೮.೫೦ ಕೋಟಿ ಡಾಲರ್‌ಗಳ ಒಂದು ಕಾರ್ಯಕ್ರಮವೇ ಮೂಲಾಧಾರ. ಈ ಕಾರ್ಯಕ್ರಮದಂತೆ ಪ್ರತಿವರ್ಷ ಮೂರು ಸಾವಿರ ಡಾಲರ್‌ಗಳಿಗಿಂತ ಕಡಿಮೆ ಆದಾಯವಿರುವ ಅಮೇರಿಕನ್ ಕುಟುಂಬಕ್ಕೆ ಸಹಾಯವನ್ನು ನೀಡಲಾಗುತ್ತದೆ. ಹಲವಾರು ಅಮೇರಿಕನ್ ಕುಟುಂಬಗಳು ಈ ಯೋಜನೆಯ ಲಾಭವನ್ನು ಪಡೆದುಕೊಳ್ಳುತ್ತಿವೆ.

ಶ್ರೀ ಸುಬ್ಬರಾಯರಿಗೆ, ಭಾರತೀಯ ಸಾಮಾಜಿಕ ಕಾರ್ಯಕರ್ತರಿಗೆ, ನಿರ್ಧನತಾ ವಿರೋಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕೆಲವು ಅವಕಾಶಗಳು ದೊರೆತವು. ಬಡತನದ ವಿರುದ್ಧ ಅಮೇರಿಕೆಯು ರೂಪಿಸಿರುವಂತಹ ಕಾರ್ಯಕ್ರಮಗಳನ್ನು ಉಚಿತ ಪರಿವರ್ತನೆಗಳೊಂದಿಗೆ ಭಾರತದಲ್ಲಿಯೂ ಕೈಗೊಳ್ಳುವುದು ಒಳ್ಳೆಯದು ಎಂದಿವರು ಒಂದು ಭೆಟ್ಟಿಯಲ್ಲಿ ಹೇಳಿದರು. ಜನರಿಗೆ ಪ್ರಶಿಕ್ಷಣ ಪಡೆಯುವ ವ್ಯವಸ್ಥೆ ಮಾಡುವುದು ಮತ್ತು ಓದುವುದನ್ನು ನಿಲ್ಲಿಸಿದವರಿಗೆ ಉದ್ಯೋಗವನ್ನು ಕೊಡಿಸುವುದು—ಈ ಕಾರ್ಯಗಳಲ್ಲೇ ಶ್ರೀ ರಾವ್ ಸದಾ ವ್ಯಸ್ತರಾಗಿರುತ್ತಾರೆ.

ಶ್ರೀ ಸುಬ್ಬರಾವ್ ೧೮ ಅನ್ಯ ಭಾರತೀಯ ಸಾಮಾಜಿಕ ಕಾರ್ಯಕರ್ತರೊಡನೆ, ಯುವಕ ನಾಯಕರು ಮತ್ತು ಸಾಮಾಜಿಕ ಕಾರ್ಯಕರ್ತರಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಕಾರ್ಯಕ್ರಮಗಳ ಪರಿಷತ್ತಿನಲ್ಲಿ ಅತಿಥಿಯಾಗಿ ಅಮೇರಿಕನ್ ಯಾತ್ರೆಯನ್ನು ಕೈಕೊಂಡಿದ್ದರು.

ಬರಿಯ ಒಂಭತ್ತು ವರ್ಷಗಳಿಗೆ ಮೊದಲು ಈ ಪರಿಷತ್ತಿನ ಸ್ಥಾಪನೆಯಾಯ್ತು. ಯುರೋಪ್, ಏಶಿಯಾ, ಆಫ್ರಿಕಾ ಮತ್ತು ದಕ್ಷಿಣ ಅಮೇರಿಕೆಯ ೨೦ ದೇಶಗಳ ೧೬೫ ವ್ಯಾವಸಾಯಿಕ ಮತ್ತು ಸ್ವಯಂ ಸೇವೀ ಸಮಾಜ ಸೇವಕರನ್ನು ಅಮೇರಿಕೆಯಲ್ಲಿ ಸ್ವಲ್ಪಕಾಲ ಅಧ್ಯಯನ ಮಾಡಲು, ಪರ್ಯವೇಕ್ಷಣ ಮತ್ತು ಕೆಲಸದ ಮೂಲಕ ಅನುಭವ ಪಡೆಯಲು ಆಮಂತ್ರಿಸಲಾಗಿತ್ತು.

ಅಮೇರಿಕೆಯಲ್ಲಿ ತನ್ನ ನಿವಾಸ ಕಾಲದ ಪೂರ್ವಾರ್ಧದಲ್ಲಿ ಶ್ರೀ ಸುಬ್ಬಾರಾಯರ ಅಧಿಕಾಂಶ ಸಮಯ ಔಪಚಾರಿಕ ಅಧ್ಯಯನ ಮಾಡುವುದರಲ್ಲಿ ಕಳೆಯಿತು. ಅವರು ಅಮೇರಿಕನ್ ಜೀವನದ ವಿಭಿನ್ನ ಸಮಸ್ಯೆಗಳನ್ನು ಮೊದಲು ಅಧ್ಯಯನ ಮಾಡಿದರು; ಮುಂದವರು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಸಮಾಜ ಕಲ್ಯಾಣ ಸಂಬಂಧಿ ಶಾಲೆಯಲ್ಲಿ ತನ್ನ ಮೆಚ್ಚಿನ ವಿಷಯ—ಸಾಮುದಾಯಿಕ ಜನ ಕಲ್ಯಾಣ ಕಾರ್ಯ— ಅಧ್ಯಯನ ಮಾಡಿದರು. ಕೊನೆಯ ೧೦ ವಾರಗಳನ್ನು ದಕ್ಷಿಣ ಫಿಲಡೆಲ್ಫಿಯಾದಲ್ಲಿ ಯುನೈಟೆಡ್ ಸೇ



ವಿಸ್ತಾ ಕಾರ್ಯಕ್ರಮದ ಅಧ್ಯಾಪಿಕೆ ಆಂದ್ರ್ಯೂ ಕೊಸ್ಟೆಲ್ಲೊ ಬಾಲಕನೊಬ್ಬನಿಗೆ ಗೋಲದ ಪರಿಚಯ ಮಾಡಿಕೊಡುತಿದ್ದಾಳೆ.



ಆರಂಭಶೂರ: ಮೂರು ವರ್ಷದ ಜಾ
ಇಗರ್ಜಿಯಲ್ಲಿ ಪ್ರಾರಂಭಿಕ ಜ್ಞಾನವನ್ನು
ತೆರೆಯುತ್ತಿರುವುದನ್ನು ಕಾಣಬಹುದು.
ಕಡಿಮೆ ಆದಾಯವುಳ್ಳವರ ಮಕ್ಕಳಿಗೂ ಶಿ
ಕ್ಷೌರ್ಯ ಆರಂಭದಲ್ಲೇ ನಿಲ್ಲಲಾರದು; ಅದು

ಷ್ಟ್ರದಲ್ಲೂ
ಪಸಿನ ಹೋರಾಟ

ಭವಾಗಿದೆ. ಇದರಲ್ಲಿ ನಾವು
ಣ ರಾಷ್ಟ್ರವಾಗುವುದು.

ವಸತಿ ಮತ್ತು ನಾಗರಿಕಾಭಿವೃದ್ಧಿ ಶಾಖೆಯ ಮಂತ್ರಿ ರಾಬರ್ಟ್ ಸಿ. ವೀವರ್ ಮೊತ್ತ ಮೊದಲ ನೀಗ್ರೋ ಕೆಬಿನೆಟ್ ಸಚಿವರು. ಇವರು ಅಧ್ಯಕ್ಷ ಜಾನ್ಸನ್ನರೊಡನೆ ಯೋಜನೆಯ ಬಗ್ಗೆ ಪರ್ಯಾಲೋಚನೆ ನಡೆಸುತಿದ್ದಾರೆ.

ಬರ್‌ಹುಡ್ ಎಸೋಸಿಯೇಶನ್‌ನಲ್ಲಿ ಕಳೆದರು.

ನೇಬರ್ ಹುಡ್ ಎಸೋಸಿಯೇಶನ್ ಒಂದು ಸಾಮಾಜಿಕ ಸೇವಾ ಸಂಸ್ಥೆ. ದೊಡ್ಡ ದೊಡ್ಡ ನಗರಗಳ ಕೊಳಕು ಪ್ರದೇಶದಲ್ಲಿ ಇದು ಸ್ಥಾಪಿತವಿರುತ್ತದೆ. ಆವಶ್ಯಕ ಸೌಕರ್ಯಗಳು ಇಲ್ಲದೆ ತೊಂದರೆಗೊಳಗಾಗುತ್ತಿರುವವರ ಜೀವನವನ್ನು ಸುಖಮಯ ಮಾಡುವುದಕ್ಕೆ ಇದು ಶ್ರಮಿಸುತ್ತದೆ. ಪ್ರಾರಂಭದಲ್ಲಿ ಈ ಸಂಸ್ಥೆಗಳು ಸರಕಾರೇತರ ಸಂಸ್ಥೆಗಳಾಗಿಯೇ ಹುಟ್ಟಿದುವು; ಆದರೆ, ಇಂದು ಇವುಗಳು ಸ್ಥಾನೀಯ ಮತ್ತು ಕೇಂದ್ರೀಯ ಸರಕಾರಗಳಿಂದ ತುಂಬ ಸಹಾಯ ಧನವನ್ನು ಪಡೆಯುತ್ತಿವೆ.



ದಕ್ಷಿಣ ಫಿಲಡೆಲ್ಫಿಯಾದಲ್ಲಿ ಶ್ರೀ ರಾಯರು ತಮ್ಮ ಜೀವನವನ್ನು ಉನ್ನತೀಕರಿಸಲು ಪ್ರಯತ್ನಶೀಲರಾಗಿರುವ ಅಧಿಕ ಸಂಖ್ಯಾಕ ನೀಗ್ರೋಗಳಿರುವ ಕ್ಷೇತ್ರವೊಂದರಲ್ಲಿ ಜನರಿಗೆ ಸಹಾಯ ನೀಡಿದರು. ಅಭಾವಗ್ರಸ್ತ ಜನರ ಮಕ್ಕಳನ್ನು ಶಾಲೆಯಲ್ಲಿ ಸೇರಿಸುವುದು ಇವರ ಆರಂಭದ ಕೆಲಸವಾಯ್ತು. ಮುಂದೆ, ಅದೇ ಸಮಯದಲ್ಲಿ ನೇಬರ್ ಹುಡ್ ಯುಥ್ ಕೋರ್ ಎಂಬ ಸಂಸ್ಥೆಯೂ ಅವರ ಸಮಕ್ಷದಲ್ಲಿ ಸ್ಥಾಪಿತವಾಯಿತು.

ಕಳೆದ ವಸಂತ ಕಾಲದಲ್ಲಿ ಶ್ರೀ ರಾಯರ ಸಾಮಾಜಿಕ ಕಾರ್ಯಕರ್ತರ ದಳವು ಅಮೆರಿಕೆಗೆ ತೆರಳಲು ಸಿದ್ಧವಾದಾಗ ರಾಯಭಾರಿ ಚೆಸ್ಟರ್ ಬೌಲ್ಸ್‌ರವರು ಅಂದಿದ್ದರು: 'ಯೋಗದಾನ ಮಾಡುವುದರೊಡನೆ ಅವಲೋಕನವನ್ನೂ ಮಾಡಬೇಕಾಗುವುದು.' ಶ್ರೀ ರಾವ್ ಈ ಎರಡು ಯೋಜನೆಗಳಲ್ಲೂ ಪ್ರಮುಖ ಪಾತ್ರ ವಹಿಸಿದ್ದರು.

"ಮಕ್ಕಳು ಶಾಲೆಯಲ್ಲಿ ಸೇರಿಕೊಳ್ಳುವುದಕ್ಕೆ ಮೊದಲು ಅವರ ಹೆತ್ತವರು ವಿರೋಧಿಸುತಿದ್ದರು. ಆಗ ಪ್ರಶಿಕ್ಷಣ ನೀಡುವ ಯೋಜನೆಯೇ ಅಸಫಲವಾಗುವುದೋ ಎಂದನಿಸುತ್ತಿತ್ತು. ಹಾಗಿದ್ದರೂ ವ್ಯಕ್ತಿಗತ ಪ್ರಯತ್ನಗಳ ಫಲ ಸ್ವರೂಪವಾಗಿ ತಾಯ್ತಂದೆಯವರಿಗೆ ತಿಳಿಯ ಹೇಳಿ ಕಾರ್ಯಕ್ರಮದ ಬಗ್ಗೆ ಸದ್ಭಾವನೆಯನ್ನು ಮೂಡಿಸಿ ಅವರ ಸಹಕಾರವನ್ನು ಪಡೆಯಲಾಯಿತು."-ಎನ್ನುತ್ತಾರೆ ಸುಬ್ಬರಾಯರು.

ಶ್ರೀ ರಾಯರು ದಕ್ಷಿಣ ಫಿಲಡೆಲ್ಫಿಯಾಕ್ಕೆ ಮರಳಿದಾಗ ಒಬ್ಬನೇ ಒಬ್ಬ ಹುಡುಗನೂ ಕಾರ್ಯಕ್ರಮದಿಂದ ದೂರವುಳಿದಿಲ್ಲ ಎಂದು ಅವರಿಗೆ ಸಂಪೂರ್ಣ ಮನವರಿಕೆಯಾಗಿತ್ತು.

ಶಿಕ್ಷಣ ಕಾರ್ಯಗಳಲ್ಲಿ ಸಹಾಯ ನೀಡುವುದು 'ಮಹಾನ್ ಸಮಾಜ'ಕ್ಕೆ ವಾಸ್ತವಿಕ ರೂಪಕೊಡುವ ಸಂಬಂಧದಲ್ಲಿ ಅಧ್ಯಕ್ಷ ಜಾನ್ಸನ್ನರ ಕಾರ್ಯಕ್ರಮದ ಒಂದು ಮುಖ್ಯ ಅಂಗ. ಇತ್ತೀಚೆಗೆ ಅವರೊಂದು ಕಾನೂನಿಗೆ ಸಹಿ ಹಾಕಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಸರಕಾರಿ ಶಾಲೆಗಳಿಗೆ ಕೇಂದ್ರ ಸರಕಾರದಿಂದ ಸಹಾಯ ಒದಗಿಸುವ ಸೌಲಭ್ಯ ಇತ್ತಿದ್ದಾರೆ. ಇದರ ವೆಚ್ಚ ೧೦೦ ಕೋಟಿ ಡಾಲರ್‌ಗಳು. ಈ ಮೊತ್ತದ ಬಹುಭಾಗ ಅಲ್ಪ ಆದಾಯದ ಕುಟುಂಬದ ಮಕ್ಕಳ ಶಿಕ್ಷಣ ಕಾರ್ಯಕ್ರಮಗಳಿಗೆ ವೆಚ್ಚವಾಗುವುದು.

ಬಡತನ ನಿವಾರಣಾ ಯೋಜನೆಯು ಶಿಕ್ಷಣ, ವೃತ್ತಿಪರ ಶಿಕ್ಷಣ ಮತ್ತು ಸಾಮುದಾಯಿಕ ಕಾರ್ಯ ಸಂಬಂಧದ ಹಲವಾರು ಕಾರ್ಯಕ್ರಮಗಳ ಮೂಲಕ ವ್ಯವಹಾರಕ್ಕೆ ಬರುತ್ತಿದೆ. ಪ್ರೌಢ ಶಿಕ್ಷಣ, ಉದ್ಯೋಗ ಶಿಕ್ಷಣ, ಅಭಾವ ಗ್ರಸ್ತ ಕುಟುಂಬಗಳ ಮಕ್ಕಳಿಗೆ ಶಾಲೆ ಸೇರುವುದಕ್ಕೆ ಮೊದಲು ತುಸು ಓದುಬರಹ ಕಲಿಸುವುದು, ಶಾಲೆಯ ಶಿಕ್ಷಣ ಬಿಟ್ಟ ಯುವಕರಿಗೆ ವೃತ್ತಿಪರ ಶಿಕ್ಷಣ ನೀಡುವುದು, ಮತ್ತು ಸಮಾಜ ಸೇವೆಯ ಕಾರ್ಯಕ್ರಮಗಳಲ್ಲಿ ಒಟ್ಟು ೧೪ ಲಕ್ಷ ಜನರು ಭಾಗ ವಹಿಸುತ್ತಿದ್ದಾರೆ.

ಬಡತನ ನಿರ್ಮೂಲನಾ ಯೋಜನೆಗಳು ೧೯೬೪ರ ಆರ್ಥಿಕ ಕಾನೂನಿಗೊಳಪಟ್ಟು ಕಾರ್ಯಾರಂಭವಾದುವು. ಅಧ್ಯಕ್ಷ ಜಾನ್ಸನ್ನರ ಸಲಹೆಯಂತೆ ಕಾಂಗ್ರೆಸ್ 'ಮಹಾನ್ ಸಮಾಜ' ಕಾರ್ಯಕ್ರಮದ ಒಂದಂಗವಾಗಿ ಬಡತನ ನಿವಾರಣಾ ಕಾರ್ಯವನ್ನೂ ಇಟ್ಟುಕೊಳ್ಳಲು ಅನುಮತಿಯಿತ್ತಿತು.

ಈ ಯೋಜನೆಯ ಪ್ರಕಾರ:—

ಸಾಂಸ್ಕೃತಿಕವಾಗಿ ಹಿಂದುಳಿದಿರುವ ಮಕ್ಕಳಿಗೆ ಬುನಾದಿ ಶಿಕ್ಷಣ ನೀಡಲು ೨೪೦೦ ಅನುದಾನಗಳ ರೂಪದಲ್ಲಿ ೮॥ ಕೋಟಿ ಡಾಲರ್ ವೆಚ್ಚವಾಗುತ್ತಿದೆ.

೧೬ ಸಾವಿರ ಯುವಕರು ೭೪ ಕೇಂದ್ರಗಳಲ್ಲಿ ವೃತ್ತಿಪರ ಶಿಕ್ಷಣ ಪಡೆಯುತ್ತಿದ್ದಾರೆ.

ನೇಬರ್‌ಹುಡ್ ಯೂಥ್ ಕೋರ್‌ನ ೧೩೦೦ ಯೋಜನೆಗಳಲ್ಲಿ ೬॥ ಲಕ್ಷ ಜನರು ಭಾಗವಹಿಸುತಿದ್ದಾರೆ.

೪೦ ರಾಜ್ಯಗಳಲ್ಲಿ ಬುನಾದಿ ಪ್ರೌಢಶಿಕ್ಷಣಕ್ಕಾಗಿ ೧॥ ಕೋಟಿ ಡಾಲರ್ ವೆಚ್ಚಮಾಡಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ವ್ಯಕ್ತಿ ಮತ್ತು ಸರಕಾರಿ ಸಮಿತಿಗಳಿಗೆ ೩೦। ಲಕ್ಷ ಡಾಲರ್‌ಗಳ ೧೬। ಸಾವಿರ ಸಾಲಗಳನ್ನು ನೀಡಲಾಗಿದೆ.

ಚಿಕ್ಕ ಉದ್ದಿಮೆದಾರರಿಗೆ ೮೦ ಲಕ್ಷ ಡಾಲರ್‌ಗಳ ೬೪೦ ಸಾಲಕೊಡಲಾಗಿದೆ.

... ನಗರಗಳಲ್ಲಿ ಚಿಕ್ಕ ಉದ್ದಿಮೆಗಳ ೩೧ ವಿಕಾಸ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

೧,೧೨೦ ಶಿಕ್ಷಣ ಸಂಸ್ಥೆಗಳಲ್ಲಿ ೧೧೦ ಸಾವಿರ ವಿದ್ಯಾರ್ಥಿಗಳಿಗೆ ಕೆಲಸದ ಮೂಲಕ ಅಧ್ಯಯನ ಮಾಡುವುದಕ್ಕಾಗಿ ೫೬೬ ಲಕ್ಷ ಡಾಲರ್‌ಗಳ ಸಹಾಯ ಕೊಡಲಾಗಿದೆ.

ಸಾಮುದಾಯಿಕ ಕಾರ್ಯಗಳಿಗಾಗಿ ೨೭ ಕೋಟಿ ಡಾಲರ್‌ಗಳ ೧೫೦೦ ಅನುದಾನಗಳು ಕೊಡಲ್ಪಟ್ಟಿವೆ

ಹೀಗೆ ಬಹುವಿಧದ ಕಾರ್ಯಕ್ರಮಗಳೊಂದಿಗೆ ಅಮೆರಿಕೆಯೂ ಬಡತನದೊಂದಿಗೆ ಹೋರಾಡುತ್ತಿದೆ. ನಮ್ಮ ದೇಶದಲ್ಲಿಯೂ ಇಂತಹ ಕೆಲವು ಕಾರ್ಯಕ್ರಮಗಳು ಚಿಕ್ಕ ಪ್ರಮಾಣದಲ್ಲಿ ಆರಂಭವಾಗಿವೆ. ದಾರಿದ್ರ್ಯ ನಿವಾರಣೆಯೇ ಕಲ್ಯಾಣ ರಾಷ್ಟ್ರದ ಗುರಿ. ಇದನ್ನು ಸಾಧಿಸುವುದಕ್ಕಾಗಿ ಎಲ್ಲರೂ ಬದ್ಧಕಂಕಣರಾಗಿ ಹೋರಾಡುವುದು ಅಗತ್ಯವಿದೆ.

ಹೂಗಳಿಲ್ಲದ ಜಗತ್ತು ನಗುವಿಲ್ಲದ ಮುಖದಂತೆ ನಿಸ್ತೇಜ; ಇಲ್ಲವೇ ಸ್ವಾಗತವಿಲ್ಲದ ಔತಣದಂತೆ ಅರ್ಥಹೀನ. ಆಕಾಶಕ್ಕೆ ನಕ್ಷತ್ರಗಳು ಹೂಗಳು ಹೇಗೋ ಭೂಮಿಗೆ ಹೂಗಳೇ ನಕ್ಷತ್ರಗಳು.

೦ ೦ ೦

ಕಾರಣವಿಲ್ಲದ ಸಿಟ್ಟು, ಲಾಭವಿಲ್ಲದ ಮಾತು, ಪ್ರಗತಿಯಿಲ್ಲದ ಬದಲಾವಣೆ, ಗುರಿಯಿಲ್ಲದ ಪ್ರಶ್ನೆ, ಆಗಂತುಕನಲ್ಲಿ ವಿಶ್ವಾಸ, ಶತ್ರುಗಳನ್ನು ಮಿತ್ರರೆಂದು ಭಾವಿಸುವ ಈ ಆರು ಗುಣಗಳಿರುವವನನ್ನು ತಿಳಿಗೇಡಿಯೆಂದು ಕರೆಯಬೇಕು.

೦ ೦ ೦

ಉನ್ನತ ಅಧಿಕಾರದಲ್ಲಿರುವ ತಿಳಿಗೇಡಿಯು ಬೆಟ್ಟದ ತುದಿಯಲ್ಲಿರುವ ಮನುಷ್ಯನಂತೆ. ಆತನಿಗೆ ಕೆಳಗಿರುವವರೆಲ್ಲಾ ಚಿಕ್ಕದಾಗಿ ತೋರಿದರೆ, ಕೆಳಗಿರುವವರಿಗೆ ಆತನು ಚಿಕ್ಕದಾಗಿ ತೋರುತ್ತಾನೆ.

ಅಭ್ಯಾಸ ಮಾಡುವುದಕ್ಕೆ ಮೊದಲು ...ಲ್ಲಿ ಅವನು ಇಗರ್ಜಿಯ ಬಾಗಿಲು ...ಟರ್' ಈತನಿಗೂ ಈತನಂತೆಯೇ ...ನೆರವಾಗುತ್ತಿದೆ. ಜೂಲಿಯಸ್‌ನ ಮುಟ್ಟಬೇಕು.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಸುವರ್ಣ ಸಂಪದಾ:— ಮೂಲ: ಶ್ರೀ ಮಾಲತಿ ಬಾಯಿ ದಾಂಡೇಕರ್. ಅನುವಾದ: ಮ. ನಾ. ಮಹಿಷಿ. ಪರಿಶೀಲನೆ: ಮ. ಗೋವಿಂದ ರಾವ್. ಪ್ರಕಟಣೆ: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: ೨೧೭. ಬೆಲೆ: ಸಾದಾ ಪ್ರತಿ ರೂ. ೩-೫೦. ಕ್ಯಾಲಿಕೋ ಪ್ರತಿ ರೂ. ೫-೫೦.

ನೆರೆಯ ರಾಜ್ಯ ಮಹಾರಾಷ್ಟ್ರದ ಸಾಹಿತ್ಯಿಕೆ ದಾಂಡೇಕರರ 'ಸಂಸಾರಾತ್ ಪಾದಾರ್ಪಣ' ಕಾದಂಬರಿಯನ್ನು 'ಸುವರ್ಣ ಸಂಪದಾ' ಎಂಬ ಹೆಸರಿನಲ್ಲಿ ಶ್ರೀಮತಿ ಮಹಿಷಿಯವರು ಕನ್ನಡಿಗರ ಮುಂದಿಟ್ಟಿದ್ದಾರೆ. ಕರ್ಮವೀರ ಸಾಪ್ತಾಹಿಕದಲ್ಲಿ ಇದೇ 'ಬಾಳ ಹೊಸ್ತಿಲಲ್ಲಿ' ಎಂದು ಬೆಳಕು ಕಂಡಿದ್ದರೂ, ಪುಸ್ತಕ ರೂಪದಲ್ಲಿ ಬರುವಾಗ ಬದಲಾದ ಹೆಸರು ಉಚಿತವೇ ಆಗಿದೆ. ಕನ್ಯೆಯರ ಸುವರ್ಣ ಸಂಪತ್ತೇನೆಂದು ಇದು ಕೂಲಂಕಷವಾಗಿ ವಿವೇಚಿಸುತ್ತದೆ.

ಇದೂ ಒಂದು ಕಾದಂಬರಿ; ಆದರೆ, ತೀರ ಲಘು ಕಾದಂಬರಿ. ಕಣ್ಣಮುಂದಿರುವ ಇಲ್ಲದಿರುವ ಬೇಕು ಬೇಡವಾದ ಸಮಸ್ಯೆಗಳನ್ನು ಎಳೆದು ತಂದು ಚರ್ಚಿಸುವ ಯಾವ ಪ್ರಯತ್ನವೂ ಇಲ್ಲಿ ಇಲ್ಲ. ಲೇಖಿಕೆಯರೇ ಹೇಳುವಂತೆ ಬಾಲ್ಯ—ಯೌವನಗಳ ಮಧ್ಯಂತರ ಪ್ರಾಯದಲ್ಲಿ ಕನ್ಯೆಯರು, ಕನ್ಯಾ ಪಿತೃಗಳು ಏನು ಮಾಡಬೇಕು— ಎಂಬ ಕರ್ತವ್ಯವನ್ನು ತಿಳಿಸಿ ಹೇಳುವುದರ ಕಾದಂಬರಿ ರೂಪ ಮಾತ್ರವಿದು. ಕನ್ಯೆ ಬಾಲ್ಯವನ್ನು ಕಳೆದು ಏರುಂಜವ್ವನಕ್ಕೆ ಕಾಲಿಡುವಾಗ, ಆಕೆಯಲ್ಲಿ ಸ್ವಾಭಾವಿಕವಾದ ಸ್ಥಿತ್ಯಂತರಗಳು ಕಾಣಿಸುತ್ತವೆ. ಆ ಸಮಯದಲ್ಲೇ ಆಕೆ ತನ್ನ ಭವಿಷ್ಯ ಜೀವನದ ಬಗ್ಗೆ ಆಶಾಗೋಪುರ ಕಟ್ಟತೊಡಗುತ್ತಾಳೆ. ಈ ಅವಧಿಯಲ್ಲಿ ಆಕೆ ಜಾರಿ ಬೀಳುವುದೂ ಉಂಟು. ಆದುದರಿಂದ ಆಕೆಯನ್ನು ಸರಿದಾರಿಯಲ್ಲಿ ಮುನ್ನಡೆಸುವ ಹೊಣೆಗಾರಿಕೆ ತಾಯ್ತಂದೆಯರದು; ನಡೆಯುವ ಕರ್ತವ್ಯ ಕನ್ಯೆಯದು. ಹೀಗೆ ಶೀಲ—ಚಾರಿತ್ರ್ಯಾದಿ ಪಾವಿತ್ರ್ಯದಿಂದಲೇ ಕನ್ಯೆ ತನ್ನ ಗುಣಧರ್ಮಗಳಿಗೆ ಹೊಂದಿಕೊಳ್ಳುವ ಪತಿಯನ್ನು ಆಯ್ದುಕೊಳ್ಳಬಲ್ಲಳು—ಆಗಲೇ ಅವರ ಜೀವನ—ಅದು ಬಡವರದ್ದಿರಬಹುದು—ಸುವರ್ಣ ಸಂಪತ್ತಾಗುವುದು.

ಈಯೆಲ್ಲ ವಿಚಾರವನ್ನು ಇಲ್ಲಿ ವಿವರಿಸಲಾಗಿದೆ—ವಿಚಾರ ಪ್ರಕಟಣೆಗೆಂದೇ 'ಸುವರ್ಣೆ'ಯ ಪಾತ್ರ ಸೃಷ್ಟಿಸಲಾಗಿದೆ. ಆಕೆಯ ಚರಿತ್ರೆ ಆದರ್ಶಪೂರ್ಣವಾದುದು. ಹಲವಾರು ಅಡೆತಡೆಗಳು ಎಡೆಹಾಯ್ದರೂ ಆಕೆ ಧೀರೆಯಾಗಿ ಬದುಕಿನಲ್ಲಿ ಯಶಗಳಿಸಿದಳು. ಚಂದ್ರ ಮೋಹನನಂತಹ ಕುಂಟನ ಬದುಕನ್ನು ಬಂಗಾರ ಮಾಡಿದಳು. ಸುವರ್ಣೆಯು ತನ್ನನ್ನೂ ತನ್ನ ಸಂಪರ್ಕಕ್ಕೆ ಬಂದವರನ್ನೂ ಸರಿದಾರಿಯಲ್ಲಿ ಒಯ್ಯಲು ಪ್ರೇರಕ ಶಕ್ತಿಯಾಗಿ ಪರಿಣಮಿಸಿದ್ದು ಆಕೆಯ ತಾಯಿ ಬರೆದಿಟ್ಟಿದ್ದ ಸೂಕ್ತಿ ಸಂಗ್ರಹದ ಎರಡು ಹೊತ್ತಗೆಗಳು. ಅವುಗಳು ಭಾರತೀಯ ನಾರಿಯ ಕೈದೀವಿಗೆಗಳು: 'ಮಳೆ ಹೇಗೆ ಅನಿವಾರ್ಯವೋ ಹಾಗೆಯೇ ಸಂಸಾರದಲ್ಲಿ ಮತಭೇದವೂ ಅನಿವಾರ್ಯ, ಅದನ್ನು ಸವಿಮಾತಿನಿಂದ ತಿಳಿವಳಿಕೆಯಿಂದ ಅಂತಃಕರಣದಿಂದ ಹಾಗೂ ಯುಕ್ತಿಯಿಂದ ಎಳವೆಯಲ್ಲೇ ಮುರಿದು ಬಿಡಬೇಕು..' ಇದು ಆ ಸೂಕ್ತಿಗಳಲ್ಲಿ ಒಂದು. ಇಂತಹ ಸತ್ಯಾನುಭವದ ಉಪದೇಶ ಎಷ್ಟು ಕನ್ಯೆಯರಿಗೆ ದೊರೆಯುತ್ತಿದೆ?

'ಸುವರ್ಣ ಸಂಪದಾ'—ಒಂದು ಅಮೂಲ್ಯ ಕೃತಿ. ತಾಯಂದಿರೂ ಕನ್ಯೆಯರೂ ಅವಶ್ಯ ಓದಿಕೊಳ್ಳಬೇಕಾದುದು. ಪುರುಷರೂ ಓದಿ ಸುವರ್ಣ ಸಂಸಾರ ಕೂಟದಲ್ಲಿ ನೆರವಾಗಬೇಕು. ಅನುವಾದಿಕೆಯರ ಭಾಷೆ ಸರಳವಾಗಿಯೂ ಲಲಿತವಾಗಿಯೂ ಇದೆ. ಕನ್ನಡ ಸಾಹಿತ್ಯಕ್ಕೆ ಇದೊಂದು ಅಮರ ಕಾಣಿಕೆ.

ಭಗವಾನ್ ಶ್ರೀ ಪದ್ಮಾನಂದ ಗುರೂಜಿಯವರು: ಪ್ರಕಾಶಕರು: ಶ್ರೀ ಪದ್ಮಾನಂದ ಗುರು ಸೇವಾ ಸಮಿತಿ, ನಂ. ೯, ೩ನೇ ಕ್ರಾಸ್, ಸ್ವಿಮ್ಮಿಂಗ್ ಪೂಲ್ ಎಕ್ಸ್‌ಟೆಂಷನ್, ಮಲ್ಲೇಶ್ವರಂ, ಬೆಂಗಳೂರು-೩. ಪುಟಗಳು: ೨೪, ಬೆಲೆ: ರೂ. ೦—೫೦.

ಕಾಸರಗೋಡು ತಾಲೂಕಿನ ಕುಂಬಡಾಜೆಯಲ್ಲಿ ಜನಿಸಿ ಎಳೆ ಹರೆಯದಲ್ಲೇ ಜ್ಞಾನ ಪಿಪಾಸುಗಳಾಗಿ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರರನ್ನು ಪ್ರಸನ್ನೀಕರಿಸಿದ ಶ್ರೀ ಪದ್ಮಾನಂದರು ತಮ್ಮ ತಪೋಬಲದಿಂದ ಅತ್ಯದ್ಭುತ ಪವಾಡಗಳನ್ನು ಮಾಡಿ ತೋರಿಸಿದ್ದಾರೆ— ಇವರ ಮೇಲೆ ಶಿಷ್ಯರು ಬರೆದ ಪ್ರಾರ್ಥನೆ ಕೀರ್ತನೆ, ಜೀವನ ಪರಿಚಯ, ಭಜನೆಗಳ ಸಂಗ್ರಹ ಈ ಪುಟ್ಟ ಪುಸ್ತಕ.

ಶ್ರೀ ಗುರು ಭಕ್ತರ ಉಪಯೋಗಕ್ಕೆ ಇದು ಸಹಕಾರಿಯಾಗಿದೆ. ಶಿಷ್ಯರ ಪ್ರಯತ್ನ ಸಫಲವಾಗಲಿ.

ದಾರಿದೀಪ: ಲೇಖಕರು: ಸಿಂಪತಿ. ಪ್ರಕಾಶಕರು: ವೀಣಾ ಪ್ರಕಾಶನ, ಕುಂಜಿಬೆಟ್ಟು, ಉಡುಪಿ. ಪುಟಗಳು: ೮೫. ಬೆಲೆ: ರೂ. ೧—೫೦.

"ಕಪಾಳ ಮೋಕ್ಷ" ಮತ್ತು "ಕೋಕಿಲವಾಣಿ" ಗಳಿಂದ ಕೃತಿ ಪ್ರಕಟಣೆಗೆ ಹೊರಟಿರುವ ಸಿಂಪತಿಯವರ ಮೂರನೆಯ ಕೃತಿ "ದಾರಿ ದೀಪ" ಮೂವತ್ತಾರು ನೀತಿಕತೆಗಳ ಸಂಕಲನ. ಇಲ್ಲಿ ಬೆಳಕು ಕಂಡಿರುವ ಎಲ್ಲವೂ ಕತೆಗಳೇ ಎನ್ನಬೇಕಾದರೆ ಕಥೆಯ ಲಕ್ಷಣವನ್ನು ತುಂಬ ವಿಸ್ತೃತಗೊಳಿಸಬೇಕಾಗುವುದು. ನೀತಿ ಬೋಧೆಯ ಪಾಠ ಮಾತ್ರ ಇಲ್ಲಿನ ಪ್ರತಿಕೃತಿಯಲ್ಲೂ ನಾವು ಕಾಣುತ್ತೇವೆ. ಲೇಖಕರು ತಾವೇ ಓದಿದ, ಅನುಭವಿಸಿದ ಜ್ಞಾನದ ಮೂಸೆಯನ್ನು ಇಲ್ಲಿ ಭಟ್ಟಿ ಇಳಿಸಿದ್ದಾರೆ. ಎಳೆಯ ಮಕ್ಕಳಿಗೆ ನೀತಿಯನ್ನು ತಿಳಿಹೇಳುವಲ್ಲಿ ಹಿರಿಯರಿಗೆ ಇದು ದಾರಿದೀಪವಾಗಬಹುದು. ಬಲಿತ ಬುದ್ಧಿಯ ಹುಡುಗ-ಹುಡುಗಿಯರು ಈ ದೀಪದ ಉಪಯೋಗವನ್ನು ಮಾಡಿಕೊಳ್ಳಬಹುದು.

ಇಂದಿನ ಶಿಕ್ಷಣ ಪದ್ಧತಿಯಲ್ಲಿ ನೀತಿ ಬೋಧೆಯು ಪಾಠ್ಯ ವಿಷಯವಾಗುವಂತಿಲ್ಲ. ಪಾಠ್ಯ ಗ್ರಂಥಗಳ ಓದಿನಿಂದಲೇ ಅಜೀರ್ಣಕ್ಕೆ ತುತ್ತಾಗುವ ಇಂದಿನ ವಿದ್ಯಾರ್ಥಿಗಳಿಂದ ಹೆಚ್ಚಿನ ಪಾಠೇತರ ಓದನ್ನು ನಿರೀಕ್ಷಿಸುವುದೂ ತಪ್ಪಾಗಬಹುದು. ಆದರೂ ಪಾಠ ಪ್ರವಚನಗಳ ವೇಳೆ ಅಧ್ಯಾಪಕರು ಸಂದರ್ಭಾನುಸಾರ ನೀತಿ ಬೋಧಕ ಕತೆಗಳನ್ನು ಹೇಳುವುದು ಸಹಜ. ಈ ಕೃತಿ ಇದಕ್ಕೂ ಅನುಕೂಲವಾಗಿದೆ. ಶಾಲೆಗಳೂ ವಿದ್ಯಾರ್ಥಿ—ಪಾಲಕರೂ ಅವಶ್ಯ ಸಂಗ್ರಹಿಸಬೇಕಾದ ದಾರಿದೀಪವಿದು.

ಗುಟುಕು—ಚುಟುಕು: ಲೇಖಕ: ಅಬ್ದುಲ್ ರಹಿಮಾನ್. ಪ್ರಕಾಶಕರು: ಜನತಾ ಪವರ್ ಪ್ರೆಸ್, ವಿಟ್ಲ, ದ. ಕ. ಪುಟಗಳು: ೨೯, ಬೆಲೆ: ರೂ. ೦—೪೦.

ಚಿಕ್ಕ ಮಕ್ಕಳ ವಯೋಮಾನಕ್ಕನುಗುಣವಾಗಿ ಮೊದಲಿನೆರಡು ತರಗತಿಯ ಮಕ್ಕಳಿಗೆ ಪ್ರಾಣಿ—ಪಕ್ಷಿಗಳ ಪರಿಚಯ, ಚುಟುಕದ ರೂಪದಲ್ಲಿ ಮಾಡಿಕೊಡುವ ಇಲ್ಲಿನ ಪ್ರಯತ್ನ. ಇದು ಯಶಸ್ವಿಯಾಗಿದೆ. ಇಲ್ಲಿ ೮೭ ಚುಟುಕದ ಗುಟುಕುಗಳಿವೆ. ದಾನದ ಬಗ್ಗೆ ಬರೆದ 'ಅನ್ನನೀಡು ದಾನ ನೀತಿಯಿಂದ ಮಾನ, ಪರರ ಮನವ, ತಿಳಿದ ಬಳಿಕ, ದೊರೆವುದಣ್ಣ ಸ್ಥಾನ!' ಸರಳವಿದ್ದರೂ ಮಾರ್ಮಿಕವಲ್ಲವೆ? ರೈತನ ಪರಿಚಯ ಹೀಗಿದೆ. 'ಕೆಲಸಗಾರ ಐತ, ಮಗನ ಮಡದಿ ಸಹಿತ, ಬಿಸಿಲು ಮಳೆಗೆ ಹೊಲದ ಒಳಗೆ ದುಡಿಯುತಾನೆ ರೈತ||' ರೈತನ ಅವಿಶ್ರಾಂತ ದುಡಿಮೆ ಹೀಗೆಯೇ ಇರಬೇಕು. ಕಬ್ಬು ನೋಡಿರಿ 'ನುಡಿಯು ವಾಗಕೊಳಲು ಊರ ಬಹುದು ಕೋಲು' ಹೀರುವಾಗ ನೀರು ಬರುತೆ ಯಾವುದೆಂದು ಹೇಳು'—ಒಗಟು ಚೆಂದಾಗಿಲ್ಲವೆ? ಮನ ಮುಟ್ಟುವಂತಿಲ್ಲವೆ!

ಪೇಟೆಗೆ ಹೋದತಾಯ್ತಂದೆಗಳು ಮಕ್ಕಳಿಗೆ ಮಿಠಾಯಿ ತಂದು ಕೊಡುವುದನ್ನು ಬಿಟ್ಟು ಇಂತಹ (ಚುಟುಕು) ಗುಟುಕುಗಳನ್ನು ತಂದು ನೀಡುವ ಅಭ್ಯಾಸ ಮಾಡಿದರೆ, ಮಕ್ಕಳ ಮಾನಸಿಕ-ದೈಹಿಕ ಆರೋಗ್ಯಕ್ಕೆ ನೆಮ್ಮದಿ— ಲೇಖಕರ ಈ ಆಶಯ ನ್ಯಾಯಸಂಗತವಾದುದು. ಅದನ್ನು ಕಾರ್ಯಗತಗೊಳಿಸುವಷ್ಟು ತಿಂಡಿ ಪ್ರಿಯತೆಯ ತ್ಯಾಗಕ್ಕೆ ಹೆತ್ತವರು ಸಿದ್ಧರಾಗುವರೆ? —ಗೋರಾ.

ನಿಸರ್ಗ ರಮಣಿ

ಹಸುರಿನ ಬಯಲಿನ ನಡುವಿಹ ದಿನ್ನೆಯ
ಹುಲ್ಲಲಿ ಕುಳಿತಿಹ ಚೆಲುವೆಯನು
ಕಾಣುತ, ನಲವಿಂ ಸಾರುತ, ಕೇಳಿದೆ,
ತುಂಬಿದ ಕನ್ನೆಯೆ ಹೆಸರೇನು?
ಸುತ್ತಲು ನೃತ್ಯದಿ ಮೈ ಮರೆಯುತಲಿ
ಪಚ್ಚೆಯ ಗಿಡಗಳು ನಿಂತಿರಲು,
ಅರಳಿದ ಸುಮಗಳ ಪರಿಮಳ ಮುತ್ತಿದ
ತಂಬೆಲರೊಲವಿಂ ಬೀಸಿರಲು
ಹಾಡುತಲಿದ್ದಳು ಕೋಮಲ ಕನ್ನೆ
ಕೇಳಿದೆ ಹೆಸರನು ಹೇಳೆಲೆ ಚೆನ್ನೆ!
ದೂರದ ನೀಲಿಮ ಬೆಟ್ಟದ ಮೇಗಡೆ
ನೇಸರು ಕಿರಣದ ಹುಡಿ ಎರಚಿ,
ಮೂಡುತಲಿರೆ, ಬಾನ್ವೆಣ್ಣಿನ ಕೆನ್ನೆಯ
ಕೆಂಪೇರುತಲಿದೆ ನಸು ನಾಚಿ!
ಸಿಂಗರಿಸಿದೆ ಆ ಮೂಡಣ ರಂಗ!
ಮೈ ಮರೆತಂತಿದೆ ಪರ್ವತ ಶೃಂಗ!
ತಂಗಾಳಿಗೆ ರೋಮಾಂಚನವಾಗಿದೆ!
ಮಲ್ಲಿಗೆಯರಳಿದೆ ಬಿಳುಪೇರಿ!
ಶೃಂಗಾರವೆ ಶೃಂಗಾರಕೆ ತೊಡಗಿದೆ!
ನಿಸರ್ಗ ರಮಣಿಯ ಬಳಿಸಾರಿ!
ಅವಳಿಗೆ ಒಂದೇ ಹಾಡುವ ಇಚ್ಛೆ!
ಖಗಕುಲ ಸಾರ್ಥಕ್ಯ ಆಕೆಯ ಮೆಚ್ಚೆ
ಭ್ರಮರವು ಹಾರುತ ವೈಣಿಕನಂತೆ
ಝೇಂಕರಿಸುತ್ತಿದೆ; ನೆಲದಲ್ಲಿ,
ವಿಕಸಿತ ಸುಮದಲಿ, ಹುಲ್ಲಿನ ಮೊನೆಯ
ಮಂಜಿನ ಹನಿಯಿದೆ ಮಿನುಗುತಲಿ!
ಹೆಜ್ಜೆಯ ಸರಿಸಲು ಮನಸೇ ಇಲ್ಲ!
ಹೃದಯ ಹಾಡು ನಾಲಗೆಗಿಲ್ಲ!
ಕಿಣಿಕಿಣಿ ಯುಲಿಯುವ ಕಿರು ಗೆಜ್ಜೆಗಳ
ಕೊರಳಲಿ ಕುಣಿಸುವ ಗೋವುಗಳ
ಹಿಂಬಾಲಿಸುತಿಹ ಗೋಪಾಲರ ಮನ—
ಮೋಹಕ ನಾದದ ಕೊಳಲುಗಳ—
ದನಿಯಲಿ ಹಾಡುತಲಿದ್ದಳು ಕನ್ನೆ!
ಕೇಳಿದೆ ಊರಾವುದು? ಓ! ಚೆನ್ನೆ!
ನಗುತಿಹ ತುಟಿಗಳ ಮೋಹಕ ಮುಖಗ
ಬಳುಕುವ ಕನ್ನೆಯರಲೊಲವಿಂದ
ಪಕ್ಕದ ತೊರೆಯಲಿ ನಲಿದಾಡುತಲಿರೆ
ಹರಿಯುತಲಿತ್ತು ಮೃತಾನಂದ!
ಅವುದು ನನ್ನನು ಸೆಳೆಯಲೆ ಇಲ್ಲ;
ಏಕೋ ಅರಿಯದು; ದೇವನೆ ಬಲ್ಲ!
'ಹಸುರಿನ ಬಯಲಿನ ದಿನ್ನೆಯ ಹುಲ್ಲಲಿ
ಹಾಡುತ ಕುಳಿತಿಹ ಓ ಚೆಲುವೆ
ನಿನ್ನಯ ಹೆಸರನು ಹೇಳುವೆಯಾ?' ಎ
ನುಡಿದಳು ನಗುತಲಿ 'ನಾ ಚೆಲುವೆ!'
ದನಿಯಲಿ ಒಲವೇ ಮೈವೆತ್ತಿತ್ತು!
ಕಣ್ಣಿಂದಿಳಿಯಿತು ಹರ್ಷದ ಮುತ್ತು

—ಶ್ರೀ ಎನ್. ಕೃಷ್ಣ ಮುಖಾರಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಅಹಿಂಸೆಯ ತಳಹದಿಯಲ್ಲಿ ನಿಂತ ಸ್ವರಾಜ್ಯದಲ್ಲಿ ಜನತೆಯು ತನ್ನ ಹಕ್ಕುಗಳನ್ನು ತಿಳಿಯದಿರಬಹುದು. ಬದಲು ಅದು ತನ್ನ ಕರ್ತವ್ಯಗಳನ್ನು ತಿಳಿದಿರುವುದು ಅವಶ್ಯಕ. ಕರ್ತವ್ಯ ನಿರ್ವಹಿಸುವವನಿಗೆ ಹಕ್ಕು ಬಾಧ್ಯತೆ ಬಂದೇ ಬರುತ್ತದೆ. ಕರ್ತವ್ಯದ ಮೂಲಕ ಬಂದ ಹಕ್ಕುದಾರಿಕೆಯೇ ನಿಜವಾದುದು.

o o o

ಸ್ವರಾಜ್ಯದಲ್ಲಿ ಧನಿಕರಿಗೆ ದೊರೆತಿರುವ ಜೀವನ ಸಾಮಾನ್ಯ ಸೌಲಭ್ಯಗಳು ಎಲ್ಲರಿಗೂ ಸಿಕ್ಕಬೇಕು. ಯಾವ ಸ್ವರಾಜ್ಯ ಎಲ್ಲರಿಗೂ ಈ ಸೌಕರ್ಯಗಳ ಆಶ್ವಾಸನೆ ನೀಡುವುದಿಲ್ಲವೋ ಅದು ಸ್ವರಾಜ್ಯವಲ್ಲ.

o o o

ನನ್ನ ಕಲ್ಪನೆಯ ಸ್ವರಾಜ್ಯದಲ್ಲಿ ಮತಧರ್ಮದ ಕಲ್ಪನೆಯ ಮೇಲೆ ಸ್ಥಿತವಾದ ಭೇದ ಭಾವನೆಯ ವರ್ತನೆಗೆ ಅವಕಾಶವಿರದು. ಆ ಸ್ವರಾಜ್ಯ ಬಡವರ ಪಿತ್ರಾರ್ಜಿತವೂ, ಅಲ್ಲ, ಶ್ರೀಮಂತರದೂ ಅಲ್ಲ. ಅದು ಎಲ್ಲರದಾಗಿರುವದು. ಅದರಲ್ಲಿ ಕುಂಟರು, ಕುರುಡರು, ಕೋಟ್ಯಾವಧಿ ಅನ್ನವಿಲ್ಲದ, ಅರಿವೆ ಇಲ್ಲದ ಶ್ರಮಜೀವಿಗಳೂ ಪೂರ್ಣ ಹಕ್ಕುಳ್ಳ ಪಾಲುಗಾರರು.

o o o

ನಾನು ಯಾವ ಸ್ವರಾಜ್ಯದ ಸ್ವಪ್ನವನ್ನು ಕಾಣುತ್ತಿರುವೆನೋ ಅದು ಬಡವರ ಸ್ವರಾಜ್ಯವಾಗುವುದು. ಅದರಲ್ಲಿ ರಾಜ ಮಹಾರಾಜರಿಗೂ, ಧನಿಕರಿಗೂ ದೊರೆಯುವಂತೆಯೇ ಜೀವನಾವಶ್ಯಕ ವಸ್ತುಗಳು ಎಲ್ಲರಿಗೂ ದೊರೆಯಬೇಕು. ಎಲ್ಲರಿಗೂ ಅರಮನೆ ಬೇಕೆಂದಲ್ಲ; ಸುಖಮಯ ಜೀವನದ ಆವಶ್ಯಕತೆಗಳು ಎಲ್ಲರಿಗೂ ಬೇಕು.

o o o

ಸಮಾಜಕ್ಕೆ ಉಪಯುಕ್ತವಾದ ಪ್ರತಿಯೊಂದು ಕಾರ್ಯವೂ—ಅದು ಕಸ ಗುಡಿಸುವುದಿರಲಿ, ಮಂತ್ರಿ ಪದವಿಯಲ್ಲಿ ಅಧಿಷ್ಠಿತನಾಗುವುದಿರಲಿ, ಎಲ್ಲವೂ ಸಮಾನ ಗೌರವ ಉಳ್ಳವುಗಳೆಂಬ ದೃಷ್ಟಿ ಮಾಡಬೇಕು.

o o o

ಹಿಂಸಾರಹಿತ ಸಮಾಜವೆಂದರೆ ಭಯರಹಿತ ಸಮಾಜ, ಪರಸ್ಪರ ಪ್ರೇಮದಿಂದ ಯುಕ್ತವಾದ ಸಮಾಜ. ಇಂಥಾ ಸಮಾಜದಲ್ಲಿ ತಿಕ್ಕಾಟ ಘರ್ಷಣೆ ಇರಲಾರವೆಂದಲ್ಲ. ಅವು ಉಂಟಾದರೂ ವಿಚಾರ ವಿನಿಮಯದಿಂದ ಪರಿಹರಿಸಿಕೊಳ್ಳುವ ತಾಳ್ಮೆ ಹೊಂದಿದ ಸಮಾಜ.

—ಬಾಪು.

ಅಧಿಕ ಜನಕ್ಕೆ ಅಧಿಕ ಆಹಾರ

(ಆರನೇ ಪುಟದಿಂದ)

ನ್ನು ನಡೆಸುತ್ತಿದೆ; ಸಿ. ಎಸ್. ಹೆಚ್. ೧ ಎನ್ನುವ ಮಿಶ್ರ ಜಾತಿಯ ಜೋಳವನ್ನು ರಸಾಯನಿಕ ಗೊಬ್ಬರವನ್ನು ಉಪಯೋಗಿಸಿದಾಗ ಒಂದು ಎಕರೆಯಲ್ಲಿ ಐನ್ನೂರು ಪೌಂಡುಗಳನ್ನು ಅಥವಾ ೩೫ ಕ್ವಿಂಟಾಲುಗಳಷ್ಟು ಆಹಾರವನ್ನು ಬೆಳೆಯಬಹುದು. ಆದರೆ ಸಾಮಾನ್ಯವಾದ ಜೋಳದ ಬೀಜವು ನೀಡುವ ಫಲಕ್ಕಿಂತ ೫ರಷ್ಟು ಹೆಚ್ಚಾಗಿ ಫಲವನ್ನು ಪಡೆಯಬಹುದು. ನನ್ನ ಹೊಲದಲ್ಲಿ ಕಳೆದ ವರ್ಷ ಮಿಶ್ರ ಜೋಳವನ್ನು ಬೆಳೆದಾಗ ಎಕರೆ ಒಂದಕ್ಕೆ ೩೬ ಕ್ವಿಂಟಾಲ್‌ನಷ್ಟು ಫಲ ಬಂದಿತು. ಇದಕ್ಕೆ ಬಾವಿಯ ನೀರನ್ನು ಮತ್ತು ರಸಾಯನಿಕ ಗೊಬ್ಬರವನ್ನು ಬಳಸಲಾಗಿದ್ದಿತು. ಸಿ. ಎಸ್. ಎಚ್.-೨ ಮಿಶ್ರ ಜೋಳವು ಸಿ. ಎಸ್. ಹೆಚ್.-೧ ಎನ್ನುವ ಜಾತಿಯ ಜೋಳಕ್ಕಿಂತ ಸುಮಾರು ಸೇ. ೨೦ರಿಂದ ೩೦ರ ವರೆಗೆ ಹೆಚ್ಚು ಫಲವನ್ನು ನೀಡುವುದು. ಮಿಶ್ರ ಜಾತಿ ತಾಯ್ ಚುಂಗ್ ಒಂದು ಎನ್ನುವ ಭತ್ತವು ಎಕರೆ ಒಂದಕ್ಕೆ ೫೦೦೦ದಿಂದ ೬೦೦೦ ಪೌಂಡುಗಳಷ್ಟು ಬೆಳೆಯನ್ನು ನೀಡಿತು. ರಸಾಯನಿಕ ಗೊಬ್ಬರ ಮತ್ತು ಬೆಳೆ ರಕ್ಷಣೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದಿತು. ಅದೇ ರೀತಿ ಮೆಕ್ಸಿಕೋ ಗೋದಿಯಾದ ಸೋನಾರ-೬೪ ಮತ್ತು ಲರ್ಮಾರೋಜೋ ಎಕರೆಯೊಂದಕ್ಕೆ ೬೦ರಿಂದ ೮೦ ಮಣಗಳಷ್ಟು ಫಲವನ್ನು ನೀಡಿತು.

ಸಾಂದ್ರ ಬೇಸಾಯದ ಮೂಲಕ ಆಹಾರ ಮಂತ್ರಿ ಶಾಖೆಯು ೩೨.೫ ದಶಲಕ್ಷ ಎಕರೆಗಳಿಂದ ೨೫.೫ ದಶಲಕ್ಷ ಟನ್ ಆಹಾರ ಅಧಿಕವಾಗಿ ಅಂದರೆ ೧೨.೫ ದಶಲಕ್ಷ ಎಕರೆಯಲ್ಲಿ ಭತ್ತವನ್ನೂ ೮ ದಶಲಕ್ಷ ಎಕರೆಯಲ್ಲಿ ಜೋಳ, ಸಜ್ಜೆ ಮತ್ತು ಮುಸುಗಿನಜೋಳವನ್ನು ಬೆಳೆಯಲು ನಿರ್ಧರಿಸಿದೆ. ಆದರೆ ಈ ಕಾರ್ಯ ಯೋಜನೆಯನ್ನು ನಡೆಸಲು ಒಳಸುವ ಅಧಿಕಾರ ತಂತ್ರವಾಗಲೀ ತಕ್ಕ ಪ್ರದೇಶಗಳಿಗೆ ಮತ್ತು ಅಲ್ಲಿ ಬೆಳೆಯುವ ಬೆಳೆಗೆ ಬೇಕಾದ ವಿರಳ ಸಾಮಾಗ್ರಿಗಳನ್ನು ಒಯ್ಯುವ ಕ್ರಮವಾಗಲೀ ಸ್ಪಷ್ಟವಾಗಿಲ್ಲ. ಆದರೆ ಈ ಕಾರ್ಯ ಕ್ರಮದ ಯಶಸ್ಸು ಪೂರ್ಣವಾಗಿ ತಂತ್ರ ವಿಧಾನವನ್ನೇ ಅವಲಂಬಿಸಿದೆ. ತಂತ್ರ ವಿಧಾನವು ಸರಿಯಾದರೆ ನಮ್ಮ ನಿರೀಕ್ಷೆಯ ಅಂಕಿ ಅಂಶದಂತೆ ಫಲವನ್ನು ಸಹಜವಾಗಿಯೇ ಪಡೆಯ ಬಹುದು.

ಮೈಸೂರು ರಾಜ್ಯದಲ್ಲಿ ಪ್ರಯೋಗ

ಮೈಸೂರು ರಾಜ್ಯದ ಬಳ್ಳಾರಿ ಜಿಲ್ಲೆಯ ಸಂಡೂರಿನ ಜನಪದಾಭಿವೃದ್ಧಿ ಕ್ಷೇತ್ರದಲ್ಲಿ ಮಿಶ್ರ ತಳಿ ಜೋಳವನ್ನು ಈ ಬೆಸಿಗೆಯಲ್ಲಿ ೫೦೦ ಎಕರೆ ಭೂಮಿಯಲ್ಲಿ ಬೆಳೆಯಲು ಒಂದು ಪ್ರಯೋಗ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಬಾವಿ ಮತ್ತು ಕೆರೆಯಿಂದ ನೀರನ್ನು ಪಡೆಯಲಾಗುವುದು. ಈ ಕಾರ್ಯಕ್ರಮಕ್ಕೆ ಅಗತ್ಯವಾದ ಬೀಜಗಳು, ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳನ್ನು, ಒಂದು ಎಕರೆಗೆ ೨೦೦ ರೂ. ತಗಲುವ ವೆಚ್ಚದಲ್ಲಿ ತಾಲೂಕಿನ ವ್ಯವಸಾಯ ಮಾರ್ಕೆಟ್ ಸಹಕಾರ ಸಂಘದ ಮೂಲಕ ಮುಂಚಿತವಾಗಿಯೇ ಕೊಳ್ಳಲಾಗಿದೆ. ನೀರಿನ ವ್ಯವಸ್ಥೆಯುಳ್ಳ ಆರಿಸಿದ ರೈತರಿಗೆ ಈ ವ್ಯವಸಾಯ ವಸ್ತುಗಳನ್ನು ನೇರವಾಗಿ ಸಾಲದ ರೂಪದಲ್ಲಿ ಕೊಡಲಾಗುವುದು. ರೈತರು ಸುಧಾರಿಸಿದ ವ್ಯವಸಾಯ ಪದ್ಧತಿಯನ್ನು ಅನುಸರಿಸಬೇಕಲ್ಲದೆ ತಾಲೂಕಿನ ಮಾರ್ಕೆಟಿಂಗ್ ಸೊಸೈಟಿಗೆ ಐದು ಕ್ವಿಂಟಾಲುಗಳನ್ನು, ಒಂದು ಕ್ವಿಂಟಾಲಿಗೆ ಸರ್ಕಾರದ ಬೆಲೆಯಾದ ರೂ. ೫೦ರಂತೆ ಕೊಡಬೇಕೆನ್ನುವ ಕರಾರಿಗೆ ಒಪ್ಪಲಿದ್ದಾರೆ. ಈ ಆಧಾರದ ಮೇಲೆ ಕಾರ್ಯರೂಪಕ್ಕೆ ಬರಲಿರುವ ಆಹಾರ ಮಂತ್ರಿ ಶಾಖೆಯ ಸಾಂದ್ರ ಬೇಸಾಯ ಯೋಜನೆ ಮೂಲಕ ಉತ್ಪತ್ತಿಯಾಗುವ ಆಹಾರದಲ್ಲಿ ೧೬ ದಶಲಕ್ಷ ಟನ್ನಿನಷ್ಟು ಆಹಾರವನ್ನು ಯೋಗ್ಯ ಬೆಲೆಯಲ್ಲಿ ಕೊಂಡು ಯೋಜಿತ ರೀತಿಯಲ್ಲಿ ವಿತರಣೆ ಮಾಡಲು ಸಾಧ್ಯವಾಗಬೇಕು ಅಂದರೆ ೬ ದಶಲಕ್ಷ ಟನ್ ಭತ್ತ ನಾಲ್ಕು ದಶಲಕ್ಷ ಟನ್ ಗೋದಿ ಮತ್ತು ಆರು ದಶಲಕ್ಷ ಟನ್ ಜೋಳ, ಸಜ್ಜೆ ಮತ್ತು ಮುಸುಗಿನ ಜೋಳ ಒದಗಬೇಕಾಗುತ್ತದೆ. ಈ ಕಾರ್ಯ ಯೋಜನೆ ಯಶಸ್ವಿಯಾಗಬೇಕಾದರೆ, ಬೇಸಾಯ ಮಾಡಲು ಬೇಕಾದ ವಸ್ತುಗಳು ಪ್ರತಿಯೊಂದು ಜನಪದಾಭಿವೃದ್ಧಿ ಕೇಂದ್ರಗಳಿಗೆ ಸರಿಯಾದ ಕಾಲದಲ್ಲಿ ತಲುಪುವಂತೆ ಏರ್ಪಾಡು ಮಾಡಬೇಕು. ವ್ಯವಸಾಯ ವಿಸ್ತರಣಾಧಿಕಾರಿಗಳು ಜನತೆ ಮತ್ತು ಸ್ಥಳೀಯ ಸಂಸ್ಥೆಗಳೊಡನೆ ಸಮಾಲೋಚನೆ ನಡೆಸಬೇಕಲ್ಲದೇ ತಾಂತ್ರಿಕ ಹಾಗೂ ಆಡಳಿತ ವ್ಯವಸ್ಥೆಯು ಸಹಾಯವನ್ನು ಒದಗಿಸಿಕೊಡಬೇಕಾಗುತ್ತದೆ.

ಕ್ರಮಬದ್ಧ ವಿತರಣೆ

ಯೋಗ್ಯ ಬೆಲೆಗೆ ಆಹಾರವನ್ನು ರೈತರಿಂದ ಪಡೆಯುವುದರಲ್ಲಿ ಯಾವ ತೊಂದರೆಯೂ ಉದ್ಭವಿಸುವದಿಲ್ಲ. ಸಂಡೂರಿನ ೫೦೦ ಎಕರೆ ವ್ಯವಸಾಯದ ಕಾರ್ಯಕ್ರಮದಿಂದ ರೈತರು ತಮಗೆ ನೀಡಿದ ವ್ಯವಸಾಯ ಉತ್ಪಾದನಾ ಸೌಲಭ್ಯಗಳಿಗಾಗಿ ೨,೫೦೦ ಕ್ವಿಂಟಾಲ್ ಆಹಾರವನ್ನು ಯೋಗ್ಯ ಬೆಲೆಗೆ ನಮಗೆ ಮಾರುತ್ತಾರೆ. ಬತ್ತಾಯದ ಮೂಲಕ ಪ್ರತಿಯೊಂದು ಕರ ಎಕರೆಯಿಂದ ಆಹಾರವನ್ನು ಗೊತ್ತಾದ ಪ್ರಮಾಣದಲ್ಲಿ ಪಡೆಯಬೇಕೆನ್ನುವ ಸರ್ಕಾರದ ಪ್ರಯತ್ನದಲ್ಲಿ ಸಂಡೂರ್ ತಾಲೂಕಿನಿಂದ ೨೮,೦೦೦ಎಕರೆಯ ಬೆಳೆದ ಜೋಳದ ಉತ್ಪಾದನೆಯಲ್ಲಿ ಸರ್ಕಾರಕ್ಕೆ ೨,೫೦೦ ಕ್ವಿಂಟಾಲುಗಳಷ್ಟು ಮಾತ್ರ ದೊರಯಲಿದೆ ಎನ್ನುವ ಅಂಶ ಕುತೂಹಲಕಾರಿಯಾಗಿದೆ. ಮುಂದಿನ ಜೂನ್ ತಿಂಗಳಲ್ಲಿ ವ್ಯವಸಾಯದ ಸೌಲಭ್ಯಗಳ ಮೂಲಕ ಆಹಾರ ಎನ್ನುವ ನಮ್ಮ ಈ ಕಾರ್ಯಕ್ರಮವನ್ನು ೫೦೦ ಎಕರೆಯಿಂದ ೫೦೦೦ಎಕರೆಗೆ ಹೆಚ್ಚಿಸಬೇಕೆಂದು ಉದ್ದೇಶಿಸಿದ್ದೇವೆ. ಆದರೆ ರಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳು ನಮಗೆ ಸಾಕಷ್ಟು ದೊರೆಯಬೇಕು. ಈ ಕಾರ್ಯಕ್ರಮಕ್ಕೆ ಬೇಕಾದ ಮಿಶ್ರತಳಿ ಬೀಜವನ್ನು ಈ ಬೇಸಿಗೆಯಲ್ಲಿ ಸಂಡೂರಿನ ೫೦ ಎಕರೆಗಳಿಗೆ ಉತ್ಪಾದಿಸಲಾಗುತ್ತಿದೆ. ರಾಷ್ಟ್ರೀಯ ಬೀಜಗಳ ಕಾರ್ಪೋರೇಷನ್ನಿನವರು ನಮಗೆ ಅಗತ್ಯವಾದ ಬೀಜಗಳನ್ನು ಕೊಟ್ಟಿರುವುದಲ್ಲದೆ ಅವುಗಳಿಂದ ಉತ್ಪತ್ತಿಯಾಗುವ ಬೀಜವನ್ನು ಶುದ್ಧೀಕರಿಸಿಕೊಡಲು ಒಪ್ಪಿದ್ದಾರೆ.

ಸ್ವಯಂ ಪರಿಪೂರ್ಣತೆಯನ್ನು ಪಡೆಯಬೇಕಾದರೆ, ಗ್ರಾಮಾಂತರ ವಿದ್ಯುಚ್ಛಕ್ತಿ ಹಾಗೂ ನೀರಾವರಿಗೋಸ್ಕರವಾಗಿ ಬಾವಿಗಳನ್ನು ತೋಡಿಸುವ ಕಾರ್ಯಕ್ರಮವನ್ನು ವಿಸ್ತಾರವಾಗಿ ಆದಷ್ಟು ಜಾಗ್ರತೆಯಾಗಿ ಯೋಜಿಸುವುದು ಅಗತ್ಯವಾಗಿದೆ. ಈ ಕಾರ್ಯಕ್ರಮವನ್ನು ಬ್ಲಾಕನ್ನು ಘಟಕವಾಗಿಟ್ಟುಕೊಂಡು ನಿರೂಪಿಸಬೇಕು. ಪ್ರತಿಯೊಂದು ಬ್ಲಾಕಿನಿಂದ ಹೆಚ್ಚು ಟ್ರ್ಯಾಕ್ಟರುಗಳು, ಬಾವಿ ನಿರ್ಮಾಣ ಮಾಡುವ ಯೂನಿಟ್ಟುಗಳು ಮತ್ತು ಇತರ ಉಪಕರಣಗಳನ್ನು ರೈತರಿಗೆ ಸಾಲದ ರೂಪದಲ್ಲಿ ನೀಡುವಂತ ವ್ಯವಸ್ಥೆ ಮಾಡಬೇಕು. ನಮ್ಮ ವಾತಾವರಣಕ್ಕೆ ಹೊಂದಿಕೊಳ್ಳತಕ್ಕಂತಹ ಸುಲಭವಾಗಿ ಉಪಯೋಗಿಸಲು ಅನುಕೂಲವಾದ ಉಪಕರಣಗಳು ಬೇಕಾಗಿವೆ. ಈ ವಿಚಾರವನ್ನು ಜಪಾನ್ ದೇಶದಿಂದ ನಾವು ಬೇಕಾದಷ್ಟು ಕಲಿಯಬಹುದು. ಏಕೆಂದರೆ ಅಮೇರಿಕಾ ಮತ್ತು ರಷ್ಯಾ ದೇಶಗಳಲ್ಲಿ ಯಾಂತ್ರಿಕ ವ್ಯವಸಾಯ ಕ್ರಮವನ್ನು ಕೈಗೊಂಡಿದ್ದರೂ ಆ ದೇಶಗಳಲ್ಲಿ ಎಕರೆಯೊಂದಕ್ಕೆ ಉತ್ಪತ್ತಿಯಾಗುವ ಬೆಳೆಗಿಂತ ಎರಡರಷ್ಟು ಬೆಳೆಯನ್ನು ಜಪಾನ್ ದೇಶದಲ್ಲಿ ಒಂದು ಎಕರೆಯಲ್ಲಿ ತೆಗೆಯುತ್ತಾರೆ, ಅಲ್ಲದೇ ಜಪಾನ್ ದೇಶದ ರೈತನು ಭಾರತದ ರೈತನಿಗಿಂತ ಕಡಿಮೆ ಪ್ರಮಾಣದ ಜಮೀನನ್ನು ಹೊಂದಿರುತ್ತಾನೆ.

(ಆಕಾಶವಾಣಿ ಸೌಜನ್ಯದಿಂದ)

ಕರ್ನಾಟಕ ಯಕ್ಷಗಾನ ನಾಟಕ ಸಭಾ

ಮಂಗಳೂರು

ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿರುವ ಕರ್ನಾಟಕ ಥಿಯೇಟರಿನಲ್ಲಿ

6—3—66ನೇ ಆದಿತ್ಯವಾರದಿಂದ ಪ್ರತೀ ರಾತ್ರಿ 9-30ಕ್ಕೆ

ವಿಟ್ಲ ಬಾಬು ರಾಯರ ವರ್ಣರಂಜಿತ ನವ್ಯ ಹಾಗೂ ಭವ್ಯ

ಸೀನು ಸಿನೇರಿಗಳಿಂದೊಡಗೂಡಿದ

ತಮ್ಮ ಅತ್ಯುತ್ತಮವೆನಿಸಿ ಜನಮೆಚ್ಚುಗೆ ಪಡೆದ

ಪುರಾಣ ಪ್ರಸಿದ್ಧ ಯಕ್ಷಗಾನ ನಾಟಕ

ಸತ್ಯ ಹರಿಶ್ಚಂದ್ರ

ಎಂಬ ಕಥಾಭಾಗವನ್ನು ಅಭಿನಯಿಸುವರು.

ನೀವೆಂದೂ ನೋಡದ ಕಣ್ಮನಾನಂದಕರ ಪ್ರದರ್ಶನ.

ಮಹಾ ಇತಿಹಾಸಜ್ಞ

ಡಾ|| ಬಿ. ಎ. ಸಾಲೇತೂರ

ಲೇಖಕರು:

ಶ್ರೀ ದಿಗಂಬರ ಜೋಶಿ, ಬೆಳಗಾವಿ.

ಮಹಾ ಇತಿಹಾಸಜ್ಞ ಡಾ|| ಭಾಸ್ಕರ ಆನಂದ ಸಾಲೆತೂರರು ಗತಿಸಿ ಎರಡು ವರ್ಷವಾದುವು. ಕನ್ನಡನಾಡಿನ ಇತಿಹಾಸಕಾರರಲ್ಲಿ ಅವರ ಹೆಸರು ಉಚ್ಚ ಮಟ್ಟದಲ್ಲಿದೆ. ಡಾ|| ಜದುನಾಥ ಸರಕಾರರಂಥವರಿಂದ ಮೆಚ್ಚುಗೆಯನ್ನು ಗಳಿಸಿದ ಸಾಲೇತೂರರನ್ನು ಕನ್ನಡನಾಡು ಮರೆಯುವುದು ಸಾಧ್ಯವೇ ಇಲ್ಲ. ತಮ್ಮ ಸಂಶೋಧನೆಗಳ ಮೂಲಕ ಕನ್ನಡಕ್ಕೆ ಅಪಾರವಾದ ಐತಿಹಾಸಿಕ ಸಂಪತ್ತನ್ನವರು ನೀಡಿದ್ದಾರೆ.

ಡಾ|| ಭಾಸ್ಕರ ಆನಂದ ಸಾಲೇತೂರರು ದಕ್ಷಿಣ ಕನ್ನಡ ಜಿಲ್ಲೆಯವರು; ಪುತ್ತೂರಿನ ಸಾಲೇತೂರ ಗ್ರಾಮದವರು. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿರುವಾಗಲೇ ಬಹುಜಾಣ ವಿದ್ಯಾರ್ಥಿಯೆಂಬ ಹೆಸರನ್ನವರು ಪಡೆದರು. ಮಂಗಳೂರಿನ ಸೇಂಟ ಎಲೋಸಿಯಸ್ ಕಾಲೇಜಿನಿಂದ ಬಿ. ಎ. ಪರೀಕ್ಷೆಯನ್ನು ಪ್ರಥಮ ವರ್ಗದಲ್ಲಿ ಪಾಸಾದರು. ಮುಂದೆ ಜಿಲ್ಲಾ ಬೋರ್ಡಿನ ಹೈಸ್ಕೂಲಿನಲ್ಲಿ ಶಿಕ್ಷಕನೆಂದು ಸೇರಿಕೊಂಡರು. ಅಂದಿನಿಂದಲೇ ಅವರು ಸಂಶೋಧನೆಯ ಕಡೆಗೆ ಮನಸ್ಸು ಹಾಕಿದರು.

ಪ್ರಸಿದ್ಧ ಇತಿಹಾಸಕಾರ ಫಾದರ ಹೇರಾಸ ಎಂಬವರ ಶಿಷ್ಯತ್ವವನ್ನು ಸಾಲೆತೂರರು ವಹಿಸಿದ್ದರು. ಬೊಂಬಾಯಿಯ ಸೇಂಟ ಝೇವಿಯರ್ಸ ಕಾಲೇಜಿನಿಂದ ಎಂ. ಎ. ಪರೀಕ್ಷೆಗೆ ಕಟ್ಟಿದರು. ಪ್ರಥಮ ವರ್ಗದಲ್ಲಿ ಪಾಸಾದರೆಂದು ಹೇಳುವುದೇ ಬೇಡ! ವಿಶೇಷ ಶಿಷ್ಯವೃತ್ತಿಯನ್ನು ಪಡೆದು ಲಂಡನ್ನಿಗೆ ಹೋದರು. ಡಾ|| ಬಾರ್ನೆಟ ಎಂಬವರ ಮಾರ್ಗದರ್ಶನದಲ್ಲಿ ಪಿ.ಎಚ್. ಡಿ. ಪದವಿಯನ್ನೂ ಪಡೆದರು; ಹಾಗೆಯೆ ಜರ್ಮನಿಯ ಗಿಸನ್ ವಿಶ್ವವಿದ್ಯಾನಿಲಯದ ಡಿ. ಎಲ್. ಪದವಿಯನ್ನೂ ಪಡೆದರು.

ಮರಳಿ ಬಂದನಂತರ ಪೂನಾದ ಸರ್ ಪರಶುರಾಮ ಭಾವೂ ಕಾಲೇಜ, ಡೆಕ್ಕನ್ ಕಾಲೇಜ, ಅಹಮದಾಬಾದಿನ ಸರಕಾರೀ ಕಾಲೇಜುಗಳಲ್ಲಿ ಇತಿಹಾಸದ ಪ್ರಾಧ್ಯಾಪಕರೆಂದು ಕೆಲಸ ಮಾಡಿದರು. ೧೯೫೨ರಲ್ಲಿ ಭಾರತ ಸರಕಾರವು ಅವರನ್ನು ದಿಲ್ಲಿಯ ನ್ಯಾಶನಲ್ ಆರ್ಚೀವ್ಸ ಡಾಯರೆಕ್ಟರರೆಂದು ನಿಯಮಿಸಿತು. ಅಲ್ಲಿಂದ ನಿವೃತ್ತರಾದ ಮೇಲೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿಯೂ, ಪ್ರಾಚ್ಯ ವಸ್ತು ಸಂಶೋಧನೆ ಶಾಖೆಯ ಡಾಯರೆಕ್ಟರರಾಗಿಯೂ ಕೆಲಸ ಮಾಡಿದರು.

ಇತಿಹಾಸ ಸಂಶೋಧನೆಯೇ ಡಾ|| ಸಾಲೇತೂರರ ಜೀವನದ ಉಸಿರಾಗಿತ್ತು. ಎಂ. ಎ. ಪರೀಕ್ಷೆಯ ಅಭ್ಯಾಸ ನಡೆಸಿದಾಗಲೆ ತುಳುನಾಡಿನ ಇತಿಹಾಸವನ್ನು ಸಂಶೋಧಿಸಿ ಪ್ರಕಟಿಸಿದರು. ಇಂದಿಗೂ ಇದೊಂದು ಪ್ರಮಾಣಭೂತ ಗ್ರಂಥವಾಗಿದೆ. ಲಂಡನ್ನಿನಲ್ಲಿ ಪಿ.ಎಚ್.ಡಿ.ಗೆ ಓದುತ್ತಿದ್ದಾಗ "ವಿಜಯ ನಗರದ ರಾಜಕೀಯ ಹಾಗೂ ಸಾಮಾಜಿಕ ಜೀವನ" ಎಂಬ ಮಹಾ ಪ್ರಬಂಧವನ್ನು ಬರೆದರು. ಅವರ ಹದಿನಾಲ್ಕು ಗ್ರಂಥಗಳು ಉಪಲಬ್ಧವಿವೆ. ತಾವು ಸ್ವತಃ ಸಂಶೋಧನೆ ನಡೆಸಿ ಸಂಪೂರ್ಣ ತಿಳಿದುಕೊಳ್ಳದೆ ಯಾವ ವಿಷಯದ ಬಗ್ಗೆಯೂ ಅವರು ಬರೆಯುತ್ತಿದ್ದಿಲ್ಲ. ವಿಜಯ ನಗರದ ಸ್ಥಾಪಕರಾದ ಹುಕ್ಕಬುಕ್ಕರು ಕನ್ನಡಿಗರೆಂಬುದನ್ನು ಅವರು ಸಿದ್ಧಮಾಡಿದರು. ಮುಂಬೈ ವರೆಗೆ ಕನ್ನಡನಾಡು ಹಬ್ಬಿತ್ತೆಂಬುದನ್ನೂ ಸಾಧಾರವಾಗಿ ತೋರಿಸಿ ಕೊಟ್ಟರು.

ಪಾಶ್ಚಾತ್ಯ ವಿದ್ವಾಂಸರೂ ಇವರ ಗ್ರಂಥಗಳನ್ನು ಬಹುವಾಗಿ ಗೌರವಿಸುತ್ತಾರೆ.

ಡಾ|| ಸಾಲೇತೂರರು ಗತಿಸಿ ಎರಡು ವರ್ಷವಾದರೂ ಅವರಿಗೊಂದು ಸ್ಮಾರಕ ಏರ್ಪಟ್ಟಿಲ್ಲ. ಕನ್ನಡಿಗರೆಲ್ಲ ತಮ್ಮ ಔದಾರ್ಯದಿಂದ ಅವರಿಗೊಂದು ಸ್ಮಾರಕ ರಚಿಸಿ ತಮ್ಮ ಭಕ್ತಿ ಗೌರವಗಳನ್ನು ಆ ಹಿರಿಯ ವಿದ್ವಾಂಸರಿಗೆ ಅರ್ಪಿಸಲೆಂದು ಹಾರೈಸುವ.

ಮರೆಯುವುದಕ್ಕೆ ಮೊದಲೆ ಕೂಡಿಸಬೇಕು

(ಐದನೇ ಪುಟದಿಂದ)

ಯ ಬಾಳುವೆಯನ್ನು ನಿರೂಪಿಸಿದುದರಿಂದ, ಬರಿದು ಬೆಳೆಯದ ಈ ಬೆಳೆ ನಶಿಸಲಾರಂಭಿಸಿದಾಗ ನಾಡಿನ ಹಲವಾರು ಜನ ಜಾನಪದ ಸಾಹಿತ್ಯದ ಅಭಿಮಾನಿಗಳು ಅತ್ತ ಕಡೆ ತಮ್ಮ ಒಲವು ಹರಿಸಿ ಅವುಗಳ ಸಂಗ್ರಹ ಕಾರ್ಯಕ್ಕೆ ಮನಸ್ಸು ಮಾಡಿದರು. ನವನಾಗರೀಕತೆಯ ಬೆಳಕು ಜನಸಾಮಾನ್ಯರ ಮೇಲೆ ಪ್ರಭಾವ ಬೀರಿದಾಗ, ರೇಡಿಯೋ, ಸಿನಿಮಾ, ಮೊದಲಾದ ವೈಜ್ಞಾನಿಕ ಕಲೆಯ ಬೆಳವಣಿಗೆ ಹೆಚ್ಚಾದಾಗ ಹಳ್ಳಿಗಳಲ್ಲಿಯೂ ಸಾಕಷ್ಟು ಮಾರ್ಪಾಟಾಯಿತು. ಹಳ್ಳಿಯ ಜನತೆಯ ಮೇಲೆ ಉಂಟಾದ ಮಾರ್ಪಾಟಿನಿಂದ ಅವರ ಬಾಳು ಬದಲಾಯಿತು. ಪರಂಪರಾಗತವಾಗಿ ಬೆಳೆದು ಬಂದಿದ್ದ ಅವರ ಹಾಡು (ಪದ) ಗಳ ಅಕ್ಕರೆ ಮರೆಯಾಗತೊಡಗಿತು. ಪುಣ್ಯಕ್ಕೆ ಇಂದೂ ಬದುಕಿರುವ ಕೆಲವು ವೃದ್ಧ ಮಹಿಳೆಯರಲ್ಲಿ ಆ ಒಲವಿದ್ದು ಕಲಿಯಬೇಕೆನ್ನುವ ಉತ್ಸಾಹಶಾಲಿಗಳು ಒಬ್ಬಿಬ್ಬರು ಇರುವುದರಿಂದ ಹಾಡುಗಳಿನ್ನೂ ನಾಮಾವಶೇಷವಾಗಿಲ್ಲ. ಹಲವಾರು ವರ್ಷಗಳಿಂದ ನೆನಪಿನಲ್ಲಿಟ್ಟುಕೊಂಡ ಹಾಡುಗಳನ್ನು ಹಾಡುವುದೆಂದರೆ ಅದು ಚಿಕ್ಕಾಸೇನಲ್ಲ. ಆದರೂ ನಮ್ಮ ಹಳ್ಳಿಗರಲ್ಲಿ ಮೊದಲಿದ್ದ ಸಂಪ್ರದಾಯ ಭಾವನೆಗಳು, ಉತ್ಸಾಹ ಇಂದು ಇಲ್ಲ. ನಮ್ಮ ಪಂಡಿತರ ಸಾಹಿತ್ಯದಂತೆಯೇ ಈ ಸಾಮರಸ ಸಾಹಿತ್ಯದಲ್ಲಿಯೂ ಆಗಾಧ ಶಕ್ತಿ ಅಡಗಿದೆ ಈ ಶಕ್ತಿ ಕಳೆಗುಂದುವ ಮೊದಲು ಸಂಗ್ರಹಿಸಿ ಇಟ್ಟುಕೊಂಡರೆ ನಮ್ಮ ಸಾಹಿತ್ಯದ ಶಕ್ತಿ ವೃದ್ಧಿಯಾಗುವುದರಲ್ಲಿ, ನಮ್ಮ ಸಾಹಿತ್ಯ ಸುಂದರವಾಗುವುದರಲ್ಲಿ ಸಂಶಯವಿಲ್ಲ.

ಜನಪದ ಗೀತೆಗಳ ಸಂಗ್ರಹಣ ಕಾರ್ಯದಲ್ಲಿ ಮೊಟ್ಟ ಮೊದಲಿಗೆ ಉತ್ಸಾಹಶಾಲಿ ಕಾರ್ಯೋನ್ಮುಖರಾದವರು ಡಾ|ಗದ್ಗೀರ್, ಶ್ರೀಮತಿ ಪುಟ್ಟ ಕೃಷ್ಣಮೂರ್ತಿ; ಮತ್ತು ಕರೀಂಖಾನ್ ಮುಂತಾದವರು ಇವರ ಸೇವೆ ಸ್ಮರಣೀಯ. ಅನಂತರ ಅವರ ಹಾದಿಯಲ್ಲಿ ನಡೆದು ಗೀತೆಗಳ ಸಂಶೋಧನೆ ಸಂಗ್ರಹಣಕಾರ್ಯದಲ್ಲಿ ಅವಿಶ್ರಾಂತವಾಗಿ ದುಡಿದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದವರು ಕ. ರಾ. ಕೃ. ಶ್ರೀಯುತರ ಸೇವೆ ಅನುಕರಣೀಯ, ಅಮೋಘ. ಕನ್ನಡ ಸಾಹಿತ್ಯ ಭಂಡಾರಕ್ಕೆ ಅವರು ಒದಗಿಸಿ ಕೊಟ್ಟಿರುವ ರತ್ನಗಳೆಂದರೆ ಜನಪದ ಗೀತೆಗಳ ಸಂಗ್ರಹವಾದ ಹಲವಾರು ಗ್ರಂಥಗಳೆಂದು ಧಾರಾಳವಾಗಿ ಹೇಳಬಹುದು. ಅವರ ಸೇವೆಯ ಸ್ಮರಣೆ ಸಮಯೋಚಿತ. ಅವರ ದುಡಿಮೆಯಿಂದ ಕನ್ನಡ ಜನಕೋಟಿಗೆ ಜನಪದ ಗೀತೆಗಳ ಸಂಗ್ರಹ ದೊರೆಯುವಂತಾಯಿತು. ನೂರಾರು ಗೀತೆಗಳನ್ನು ಸಂಗ್ರಹಿಸಿ, ಹತ್ತಾರು ಪುಸ್ತಕಗಳ ಮೂಲಕ ಬೆಳಕಿಗೆ ತಂದಿದ್ದಾರೆ ಅವರು. ಜನಪದ ಗೀತೆಗಳ ಸಂಗ್ರಹಣಾ ಕಾರ್ಯದಲ್ಲಿ ಕ. ರಾ. ಕೃ. ಅವರ ಪ್ರಯತ್ನ, ಆಯಾಸ, ಸಮಸ್ಯೆಗಳು ಅಲ್ಪವಲ್ಲ. ಆದರೆ ಅವರ ಸತತ ಶ್ರಮ, ಸಾಹಸದ ಫಲವಾಗಿ ಪ್ರಯತ್ನದಲ್ಲಿ ಯಶಸ್ಸು ಗಳಿಸಿದರು. ನಾಡಿನ ಮೂಲೆ ಮೂಲೆಯನ್ನು ತಿರುಗಿ ಹಲವಾರು ಸಮಸ್ಯೆಗಳನ್ನು ಎದುರಿಸಿ, ನಿಂದೆಗೆ ಗುರಿಯಾಗಿ, ಅನ್ನ, ನಿದ್ರೆ, ವಿಶ್ರಾಂತಿ ಮರೆತು ಅಪೂರ್ವ ಗೀತೆಗಳನ್ನು ಸಂಗ್ರಹಿಸಿ ನಾಡಿನ ಸಾಹಿತ್ಯಾಭಿಮಾನಿಗಳಿಗೆ ಹಂಚಿದ್ದಾರೆ. ಅವರೊಂದಿಗೆ ದುಡಿದ ಜಿ. ಶಂ. ಪರಮಶಿವಯ್ಯ ಮತ್ತು ಪಿ ಆರ್. ತಿಪ್ಪೇ ಸ್ವಾಮಿಯವರ ಸೇವೆಯೂ ಅಭಿನಂದನೀಯ. ಪ್ರಸಿದ್ಧ ಚಿತ್ರ ಶಿಲ್ಪಿ ತಿಪ್ಪೇಸ್ವಾಮಿಯವರು ಗೀತಗಳಿಗೆ ಹೊಂದುವಂತಹ ಅಪೂರ್ವ ಚಿತ್ರಗಳನ್ನು ಬರೆದು ಗೀತೆಗಳ ಕಳೆಯನ್ನು ಹೆಚ್ಚಿಸಿದ್ದಾರೆ.

ಜನಪದ ಗೀತೆಗಳ ಸಂಗ್ರಹಣ ಕಾರ್ಯ ಸುಲಭವಲ್ಲ. ಅದಕ್ಕೆ ಕ. ರಾ. ಕೃ. ರ ಮಾತುಗಳು, ಬರಹಗಳೇ ಸಾಕ್ಷಿ. ಈ ದಸೆಯಲ್ಲಿ ಸಾಕಷ್ಟು ದುಡಿಮೆ ನಡೆದಿದ್ದರೂ ಸಾಲದು. ಸರ್ಕಾರ ಸತ್ವಶಾಲಿ ಜನಪದ ಗೀತಗಳ ಸಂಗ್ರಹಣ ಕಾರ್ಯ ತ್ವರಿತದಿಂದ ನಡೆಯಬೇಕು. ಇದಕ್ಕೆ ಸರಾಸರಿ ಸಮಾಜ ಸಾಹಿತ್ಯಾಭಿಮಾನಿಗಳ ಸಹಕಾರ ಪ್ರೋತ್ಸಾಹ ಅಗತ್ಯ.

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

O. P. No. 3/1966.

1. ಯು. ಚಂದಪ್ಪ ಕರ್ಕೆರ,
2. ಯು. ಸಂಜೀವ ಮರಕಾರ,

ಮೊಂಣ್ಯ ಮರಕಾಲ್ತಿ ಮಕ್ಕಳು. ಉಡ್ಪಿ ತಾಲೂಕು ಉಪ್ಪೂರು ಗ್ರಾಮದ ತೆಂಕಬೆಟ್ಟುನಲ್ಲಿರುವವರು —ಅರ್ಜಿದಾರರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡ ಅರ್ಜಿದಾರರು ತಂಮ ತಾಯಿ ಮೃತ ಮೊಂಣ್ಯ ಮರಕಾಲ್ತಿಯ ಬಾಬ್ತು ಬರತಕ್ಕ ಅರ್ಜಿಯಲ್ಲಿ ವಿವರ್‍ಸಿದ ಸಾಲಗಳ ವಸೂಲಿ ಕುರಿತು 1ನೇ ಅರ್ಜಿದಾರನ ಹೆಸರಿಗೆ ವಾರೀಸು ಸರ್ಟಿಫೀಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 5-4-66ಕ್ಕೆ ತನಿಖೆಗೆ ಇಟ್ಟಿದೆ. ಆ ಕುರಿತು ಅಕ್ಷೇಪವಿದ್ದವರು ಆ ದಿವಸ ಬೆಳಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ದಲ್ಲಿ ಅವರ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲಾಗುವುದು.

By Order of Court

(*Sd.*) D. P. Kotiankar,

B. A., L. L. B.,

Advocate for Petitioners

ಉಡ್ಪಿ ದಿ. 8—3—66

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ., ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸ್ತ್ರೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=[illegible]
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಎಲ್ಲೆಲ್ಲಿ ಏನೇನು?

ಶ್ರೀ ಶಾರದಾ ಹೈಸ್ಕೂಲ್ ಕಟ್ಟಡದ ಉದ್ಘಾಟನೆ

ಮಂಗಳೂರು ಎಜ್ಯುಕೇಶನ್ ಸೊಸೈಟಿಯವರು ಸಾರ್ವಜನಿಕ ನೆರವಿನಿಂದ ಕಟ್ಟಿಸಿದ ಶ್ರೀ ಶಾರದಾ ಹೈಸ್ಕೂಲಿನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ತಾ. ೬ರಂದು ಡಾ| ಟಿ. ಎಂ. ಎ. ಪೈಯವರಿಂದ ನೆರವೇರಿತು.

ಆರಂಭದಲ್ಲಿ ಹೈಸ್ಕೂಲಿನ ಕರೆಸ್ಪೋಂಡೆಂಟರೂ, ಮನೇಜರರೂ ಆದ ಶ್ರೀ ಎನ್. ಕೇಶವ ಕುಡ್ವರಿಂದ ಸ್ವಾಗತ ಭಾಷಣವಾದ ಮೇಲೆ ಎಜ್ಯುಕೇಶನ್ ಸೊಸೈಟಿಯ ಕಾರ್ಯದರ್ಶಿ ಶ್ರೀ ಟಿ. ಎನ್. ಭಂಡಾರ್ಕಾರ್‌ರವರಿಂದ ವರದಿವಾಚನವಾಯಿತು.

ಡಾ| ಪೈಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಎಲ್ಲ ಮಕ್ಕಳೂ ಸರಕಾರದ ಧರ್ಮಾರ್ಥ ಶಿಕ್ಷಣ ಸವಲತ್ತುಗಳನ್ನು ಉಪಯೋಗಿಸಿ ವಿದ್ಯಾವಂತರಾಗಬೇಕೆಂದರು. ಬಳಿಕ ಮಂಗಳೂರು ನಗರ ಸಭಾಪತಿ ಶ್ರೀ ಜಿ. ಸೋಮಶೇಖರರಾಯರು ದೇಶದ ನಾಯಕರ ಭಾವ ಚಿತ್ರಗಳ ಅನಾವರಣಗೈದರು. ಅನಂತರ ಮಂಗಳೂರಿನ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಡಾ| ಪೈಯವರ ಭಾವಚಿತ್ರ ಅನಾವರಣ ಮಾಡಿ ಅವರ ಸೇವೆಗಳನ್ನು ಪ್ರಶಂಸಿಸಿದರು. ಸಭಿಕರಲ್ಲಿ ಸರ್ವ ಶ್ರೀ ಎನ್. ಉಪೇಂದ್ರ ನಾಯಕ್, ಎಂ. ಪಾಂಡುರಂಗ ರಾವ್, ಬಿ. ಜಗನ್ನಾಥ ಶೆಟ್ಟಿ ಮೊದಲಾದವರು ಭಾಷಣಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸರಕಾರವು ಒದಗಿಸುತ್ತಿರುವ ಸವಲತ್ತುಗಳನ್ನುಪಯೋಗಿಸಿ ಎಲ್ಲರೂ ವಿದ್ಯಾವಂತರಾಗಬೇಕೆಂದಲ್ಲದೆ ಮಾತೆ ಮಂಗಳೂರು ಎಜ್ಯುಕೇಶನ್ ಸೊಸೈಟಿಯವರ ಸಾಧನೆಗಳನ್ನು ಪ್ರಶಂಸಿಸಿದರು. ತರುವಾಯ ಕಟ್ಟಡದ ಕೆಲಸಗಾರರಿಗೆ ಪಾರಿತೋಷಕಗಳನ್ನು ಕೊಡಲಾಯಿತು. ಕೊನೆಯಲ್ಲಿ ಕಾರ್ಯದರ್ಶಿಗಳಿಂದ ಧನ್ಯವಾದ, ಶಾಲಾಮಕ್ಕಳಿಂದ ನೃತ್ಯ, ಹಾಗೂ ಲಘೂಪಹಾರಗಳೊಂದಿಗೆ ಸಮಾರಂಭವು ಕೊನೆಗೊಂಡಿತು. ರಾತ್ರಿ ವಿವಿಧ ವಿನೋದಾವಳಿಗಳಾದವು.

ವಾರ್ಷಿಕ ಜಾತ್ರೆ ಉತ್ಸವ.

ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಕೊಲ್ಲಿ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಇದೇ ತಾ. 23-3-66ನೇ ಬುಧವಾರದಿಂದ ತಾ. 29-3-66ನೆಯ ಮಂಗಳವಾರ ಪರ್ಯಂತ ವರ್ಷಾವಧಿ ಜಾತ್ರೆ ಉತ್ಸವಾದಿಗಳು ಜರಗಲಿದ್ದು ತಾ 28-3-66ನೇ ಸೋಮವಾರ ದರ್ಶನಬಲಿ, ರಥೋತ್ಸವಗಳು ನಡೆಯಲಿವೆ. ಈ ಸಂದರ್ಭದಲ್ಲಿ ಹರಿಕಥೆ, ಕೀರ್ತನೆ ಮುಂತಾದ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳು ಜರಗಲಿದ್ದು, ಭಕ್ತಾದಿಗಳಿಗೆ ಸ್ವಾಗತವಿದೆ ಎಂತ ಮೊಕ್ತೇಸರ ಕೂಡಬೆಟ್ಟು ವೆಂಕಟಸುಬ್ಬರಾಯರು ತಿಳಿಸಿದ್ದಾರೆ.

ಸ್ಮಾರಕ ಕಥಾಸ್ಪರ್ಧೆ

ಕಾಸರಗೋಡಿನ ಸುಪ್ರಸಿದ್ಧ ಸಾಹಿತಿಗಳಾಗಿದ್ದ ದಿ| ಕಾರ್ಯಪಳ್ಳಿ ರಾಮಕೃಷ್ಣ ಶೆಟ್ಟಿ ಸ್ಮಾರಕ ಕಥಾಸ್ಪರ್ಧೆಯೊಂದನ್ನು ನಡೆಸಲು ವಾಗ್ದೇವಿ ಪ್ರಕಾಶನ ನಿರ್ಧರಿಸಿದೆ. ಕಥೆಗಳಿಗೆ ಯಾವ ನಿರ್ಬಂಧವೂ ಇಲ್ಲ. ಕಥೆ ಕಳುಹಿಸುವವರು ರೂ. ೧-೦೦ ಸ್ಪರ್ಧಾ ಶುಲ್ಕದೊಡನೆ ತಾ. ೩೧-೩-೬೬ರೊಳಗೆ ಈ ಕೆಳಗಿನ ವಿಳಾಸಕ್ಕೆ ತಲಪುವಂತೆ ಕಳುಹಿಸಿಕೊಡಲು ವಿನಂತಿಸಲಾಗಿದೆ. ಕೆ. ಆರ್. ಸಾರಂಗ್; ಸಂಚಾಲಕ, ವಾಗ್ದೇವಿ ಪ್ರಕಾಶನ, ಕಾಸರಗೋಡು (ಕೇರಳ).

ನೂತನ ಬ್ರಹ್ಮರಥೋತ್ಸವ.

ಪರ್ಕಳ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಹೊಸ ಬ್ರಹ್ಮರಥ ಮತ್ತು ಶಿಬರೂರು ಗುತ್ತು ಮುದ್ದು ಶೆಟ್ಟಿ ಬೊಂಬಾಯಿ ಇವರಿಂದ ಧ್ವಜಸ್ತಂಭಕ್ಕೆ ತಾಮ್ರದ ಕವಚ ಹೊದಿಸಿದ ಉತ್ಸವದ ಉದ್ಘಾಟನೆಯು ಪದ್ಮಶ್ರೀ ಡಾ| ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರಿಂದ ತಾ. 7-3-66ರಂದು ನೆರವೇರಿತು. ಈ ಸಂದರ್ಭದಲ್ಲಿ ಬೊಂಬಾಯಿಯ ಶ್ರೀ ಶಿಬರೂರು ಗುತ್ತು ಮುದ್ದು ಸೆಟ್ರು ಮತ್ತು ಮೂಳೂರು ವಾಸು ಸೆಟ್ರು ಮುಖ್ಯ ಅಥಿತಿಗಳಾಗಿ ಬಂದಿದ್ದರು. ಪ್ರಾರಂಭದಲ್ಲಿ ಕೆ. ಶ್ರೀನಿವಾಸ ಜೋಯಿಸ್ಸರು ಎಲ್ಲರನ್ನೂ ಸ್ವಾಗತಿಸಿ ಇಂದಿನ ಉತ್ಸವಕ್ಕೆ ಕಾರಣಭೂತರಾದ ಎಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸಿದರು.

ಪರ್ಕಳದ ಸಂಘ ಸಂಸ್ಥೆಗಳ ಪರವಾಗಿ ಮುಖ್ಯ ಅಥಿತಿಗಳಿಗೆ ಗಂಧದ ಶ್ರೀ ಕೃಷ್ಣ ಮತ್ತು ಮಹಾ ಗಣಪತಿ ವಿಗ್ರಹಗಳನ್ನೂ ರಥ ಸಮಿತಿ ಅಧ್ಯಕ್ಷ ಪರ್ಕಳ ಗುರುರಾಜ ಜೋಯಿಸರಿಗೆ ಮಾನಪತ್ರವನ್ನೂ ಅರ್ಪಿಸಲಾಯಿತು. ಮುಖ್ಯ ಅತಿಥಿಗಳಾದ ಶ್ರೀ ಮುದ್ದು ಸೆಟ್ರು ದೇವಸ್ಥಾನಕ್ಕೆ ರೂ. 1001-00ನ್ನೂ ಉದ್ಘಾಟಕರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ರೂ 251-00ನ್ನು ಅರ್ಪಿಸಿದರು.

ಉದ್ಘಾಟಕರು ಮತ್ತು ಅಧ್ಯಕ್ಷರು ದೇವತಾ ಕಾರ್ಯದಿಂದ ಊರಿನ ಅಭಿವೃದ್ಧಿ ಮತ್ತು ಮುಂದಿನ ಜನಾಂಗಕ್ಕೆ ಮಾರ್ಗದರ್ಶನದ ವಿಚಾರವಾಗಿ ಮಾತಾಡಿ ಕಾರ್ಯಕರ್ತರ ಕಾರ್ಯಕ್ಕೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಅಂತ್ಯದಲ್ಲಿ ಪರ್ಕಳ ಶ್ರೀ ಶ್ರೀನಿವಾಸ ಕೆದಿಲಾಯರು ಧನ್ಯವಾದ ಸಮರ್ಪಿಸಿದರು. ನಂತರ ಏಳೆಂಟು ಸಾವಿರ ಜನರ ಸಮಕ್ಷಮದಲ್ಲಿ ಉದ್ಘಾಟಕರು ರಥ ಎಳೆಯುವ ಕಾರ್ಯವನ್ನು ನೆರವೇರಿಸಿದರು.

ಚಲಚಿತ್ರ ನಟನಟಿಯರಿಗೆ ಸನ್ಮಾನ

ಉಡುಪಿಯ ಸಂಗೀತ ಸಭೆಯವರ ಆಶ್ರಯದಲ್ಲಿ ಶ್ರೀಮತಿ ಪಂಡರಿಬಾಯಿಯವರ ನೇತೃತ್ವದಲ್ಲಿ ನಾಟಕ ಪ್ರದರ್ಶಿಸಲ್ಪಟ್ಟದ್ದು ತಾ. ೬ರಂದು ಸಂಜೆ ಕಲಾವಿದರನ್ನು ಸನ್ಮಾನಿಸುವ ಸಾರ್ವಜನಿಕ ಸಮಾರಂಭವು ನಗರ ಸಭಾಪತಿ ಶ್ರೀ ಟಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ವಿಕ್ಟೋರಿಯಾ ಜುಬಿಲಿ ಕ್ಲಬ್ಬಿನ ವಠಾರದಲ್ಲಿ ಜರಗಿತು.

ಆರಂಭದಲ್ಲಿ ಶ್ರೀ ಟಿ. ಆರ್. ಶೆಣೈಯವರು ಸ್ವಾಗತಿಸಿ, ನಟ ನಟಿಯರು ನಾಟಕವಾಡಿ ಕಲಾಭಿಮಾನಿಗಳಲ್ಲಿ ಹೊಸ ಚೈತನ್ಯ ಮೂಡಿಸಿದ್ದಾರೆಂದು ಹೇಳಿದರು. ಶ್ರೀ ಕೆ. ಎಸ್. ಅಶ್ವತ್ಥ್ ಹಾಗೂ ಶ್ರೀಮತಿ ಪಂಡರಿಬಾಯಿಯವರು ಆಕಸ್ಮಿಕವಾಗಿ ನಿಧನ ಹೊಂದಿದ ಕಲಾವಿದ ವೀರಭದ್ರಪ್ಪನವರ ವಿಷಯ ಮಾತನಾಡಿದರು. ಶ್ರೀಮತಿ ಪಂಡರಿಬಾಯಿಯವರು ತಮ್ಮ ಭಾಷಣದಲ್ಲಿ ಉಡುಪಿಯ ಕಲಾಭಿಮಾನಿಗಳು ತಮಗಿತ್ತ ಸಹಕಾರ, ಸ್ವಾಗತಗಳಿಂದ ಮತ್ತೊಮ್ಮೆ ಇಲ್ಲಿಗೆ ಬರಬೇಕೆನ್ನುವ ಆತ್ಮವಿಶ್ವಾಸ ತಮಗುಂಟಾಗಿದೆಯೆಂದರು. ಶ್ರೀ ಕೆ. ಎಸ್. ಅಶ್ವತ್ಥರವರು ಇಲ್ಲಿನ ಸುಸಂಸ್ಕೃತ ಜನರ ಬೆಂಬಲ, ಪ್ರೋತ್ಸಾಹಗಳಿಂದ ತಮ್ಮ ಹೃದಯ ತುಂಬಿಬಂದಿದೆಯೆಂದರು.

ಸಭಿಕರ ಪರವಾಗಿ ಶ್ರೀಗಳಾದ ಟಿ. ರಮೇಶ ಪೈ, ಡಾ| ಕೆ. ಎಲ್. ಪಿತಾಳ್, ಎ. ಜೆ. ಅಲ್ಸೆ, ಮತ್ತು ಪ್ರೊ| ಚಂದ್ರಶೇಖರ್‌ರವರು ಮಾತನಾಡಿದರು. ಶ್ರೀ ಪಿ. ಶೀನ ಶೆಟ್ಟರು ಕಲಾವಿದರ ಪರಿಚಯವನ್ನು ಪ್ರತ್ಯೇಕವಾಗಿ ಮಾಡಿಕೊಟ್ಟರು.

ಶ್ರೀ ಪಿ. ರಂಗನಾಥ ಶೆಣೈಯವರು ಮಾತನಾಡಿ ಧನ್ಯವಾದ ಸಮರ್ಪಿಸಿದರು.

ಸ್ವಾಮಿ ಆದಿದೇವಾನಂದರನ್ನು ಬೀಳ್ಕೊಡುವ ಸಮಾರಂಭ

ಮಂಗಳೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ಅಧ್ಯಕ್ಷರಾಗಿ ಕಳೆದ 15 ವರ್ಷಗಳಿಂದ ಅದರ ಅಭಿವೃದ್ಧಿಗಾಗಿ ಶ್ರಮಿಸಿ ಈಗ ಕಲ್ಕತ್ತಾದ ಬೇಲೂರು ಮಠದ ಕೋಶಾಧ್ಯಕ್ಷರಾಗಿ ತೆರಳುವ ಶ್ರೀ ಆದಿದೇವಾನಂದರನ್ನು ಬೀಳ್ಕೊಡಲು ಇದೇ ತಾ. ೬ರಂದು ಸಂಜೆ ಆಶ್ರಮದಲ್ಲಿ ಸಮಾರಂಭವೇರ್ಪಟ್ಟಿತ್ತು. ಇದೇ ಸಂದರ್ಭದಲ್ಲಿ ಅವರ ಜಾಗಕ್ಕೆ ನೇಮಿಸಲ್ಪಟ್ಟ ಸ್ವಾಮಿ ವಿಜ್ಞಾನಾನಂದರನ್ನು ಸ್ವಾಗತಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಡಾ| ಎಂ. ಪಿ. ಪೈಯವರು ವಹಿಸಿದ್ದರು. ಸರ್ವಶ್ರೀಗಳಾದ ಕೆ. ಆರ್. ಕೋಂಬಟ್, ಕೆ. ವಾಸುದೇವ ಕಾರಂತ್, ಉಡುಪಿಯ ಶೇಷಾಚಾರ್ ಮೊದಲಾದವರು ಮಾತನಾಡುತ್ತಾ ಸ್ವಾಮಿ ಆದಿದೇವಾನಂದರು ಆಶ್ರಮಕ್ಕೆ ಸಲ್ಲಿಸಿದ ಅನೇಕ ಸೇವೆಯನ್ನು ಶ್ಲಾಘಿಸಿದರು.

ಸ್ವಾಮಿ ಆದಿದೇವಾನಂದರು ತಮ್ಮ ಭಾಷಣದಲ್ಲಿ ಧಾರ್ಮಿಕ ಪ್ರಚಾರದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಹಾಗೂ, ಮಂಗಳೂರಿನ ಜನತೆ ಆಶ್ರಮದ ಬಗ್ಗೆ ಇಟ್ಟಿರುವ ಅಭಿಮಾನವನ್ನು ಮುಂದುವರಿಸಬೇಕೆಂದು ಹೇಳಿದರು.

ಡಾ| ಎಂ. ಪಿ. ಪೈಯವರು ಸ್ವಾಮಿ ಆದಿದೇವಾನಂದರ ವ್ಯಕ್ತಿತ್ವದಿಂದ ತಾವು ಪ್ರಭಾವಿತರಾದುದನ್ನು ವಿವರಿಸಿ, ಕೊನೆಯಲ್ಲಿ ಅವರಿಗೆ ಶುಭಕೋರಿದರು.

ಶ್ರೀ ಕೆ. ಅನಂತರಾವ್‌ರವರಿಂದ ವಂದನಾರ್ಪಣೆಯಾದ ಮೇಲೆ ಜಿಲ್ಲಾ ಪ್ರಚಾರಾಧಿಕಾರಿಗಳಿಂದ ಸ್ವಾಮಿ ವಿವೇಕಾನಂದರ ಜೀವನದ ಕುರಿತು ಚಲನಚಿತ್ರವೇರ್ಪಟ್ಟಿತು.

ಸೌಹಾರ್ದ ಸಮ್ಮೇಳನ

ಮಂಗಳೂರು ನಗರದ ಅತ್ತಾವರದಲ್ಲಿರುವ ಮೈಸೂರು ಸೌಹಾರ್ದ ಸಂಘದ ಆಶ್ರಯದಲ್ಲಿ ತಾ ೬ರಂದು ಪುರಭವನದಲ್ಲಿ ತೃತೀಯ ಸೌಹಾರ್ದ ಸಮ್ಮೇಳನವು ದ. ಕ. ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಚ್. ಎಂ. ಶ್ರೀನಿವಾಸರಾಯರಿಂದ ಸ್ವಾಗತ ಭಾಷಣವಾಯಿತು. ಪ್ರಧಾನ ಅತಿಥಿಗಳಲ್ಲೊಬ್ಬರಾದ ಶ್ರೀ ವಿ. ಎಸ್. ಕುಡ್ವಾರವರು ಭಾಷಣ ಮಾಡುತ್ತಾ ಸೌಹಾರ್ದ ಸಂಘವು ಮಾಡುತ್ತಿರುವ ಸಾಧನೆಗಳನ್ನು ಅಭಿನಂದಿಸಿ ನಗರದ ವಸತಿ ಸಮಸ್ಯೆಯ ಕುರಿತು ಪ್ರಸ್ತಾಪಿಸಿದರು. ಮಂಗಳೂರಿನ ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀ ವಿ. ರಾಮಯ್ಯನವರು ತಮ್ಮ ಭಾಷಣದಲ್ಲಿ ಸರಕಾರೀ ನೌಕರರ ಸಂಕಷ್ಟಗಳನ್ನು ವಿವರಿಸಿ, ಅವುಗಳ ಪರಿಹಾರದ ದೃಷ್ಟಿಯಲ್ಲಿ ಸಂಘವು ಸಲ್ಲಿಸುವ ಸೇವೆಯನ್ನು ಶ್ಲಾಘಿಸಿದರು.

ಜಿಲ್ಲಾಧಿಕಾರಿಗಳು ತಮ್ಮ ಅಧ್ಯಕ್ಷಭಾಷಣದಲ್ಲಿ ಈ ಸೌಹಾರ್ದ ಸಂಘವು ದೇಶದ ಹಿತದೃಷ್ಟಿಯಿಂದ ಭಾವೈಕ್ಯವನ್ನು ಸಾಧಿಸಲು ಯತ್ನಿಸುವುದು ಎಂದು ಹಾರೈಸಿ, ಇಲ್ಲಿರುವ ಜನರು ಅದಕ್ಕೆ ಸಹಕಾರ ನೀಡುವುದಗತ್ಯವೆಂದರು.

ಅಲ್ಲದೆ ಸಂಘದ ಕಟ್ಟಡಕ್ಕೆ ನಿವೇಶನವೊದಗಿಸುವ ಕುರಿತು ತಾವು ಪ್ರಯತ್ನಿಸುವುದಾಗಿ ಆಶ್ವಾಸನೆ ನೀಡಿದರು.

ಅನಂತರ 'ಲಕಿ ಡಿಪ್' ವಿಜೇತರಿಗೆ ಬಹುಮಾನ ವಿತರಣೆಯಾದ ಮೇಲೆ ಕಾರ್ಯದರ್ಶಿ ಎಚ್. ಎನ್. ಶ್ರೀನಿವಾಸಮೂರ್ತಿಯವರಿಂದ ಧನ್ಯವಾದ ಸಮರ್ಪಣೆಯಾಯಿತು. ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು.

ನಗರ ಸಭೆಗೆ ಸಚಿವ ಶ್ರೀ ಆರ್. ಎಂ. ಪಾಟೀಲರ ಸೂಚನೆ

ಮಂಗಳೂರು ನಗರ ಸಭೆಯವರು ಕಳೆದ ತಾ. 20ರಂದು ಸಚಿವ ಶ್ರೀ ಆರ್. ಎಂ. ಪಾಟೀಲರಿಗೆ ನಗರ ಸಭೆಯ ಅಭಿವೃದ್ಧಿ ಬಗ್ಗೆ ನೆರವಾಗಲು ಕೆಲವೊಂದು ಬೇಡಿಕೆಗಳ ಬಿನ್ನವತ್ತಳೆಯನ್ನರ್ಪಿಸಿದರು. ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾಯರು ಆರಂಭದಲ್ಲಿ ವಾಹನ ತೆರಿಗೆ ವಸೂಲಿ, ಆಸ್ತಿಗಳ ರಿಜಿಸ್ಟ್ರಿ, ರಸ್ತೆ ಅಗಲಗೊಳಿಸುವಿಕೆ ಮೊದಲಾದ ವಿಷಯವಾಗಿ ನಿವೇದಿಸಿಕೊಂಡುದಕ್ಕೆ ಉತ್ತರವಾಗಿ ಮಾನ್ಯ ಸಚಿವರು ಸಹಾನುಭೂತಿಪರವಾಗಿ ವಾಹನ ತೆರಿಗೆಯಲ್ಲಿ 30%; ಹಾಗೂ ರಿಜಿಸ್ಟ್ರಿಯಾಗುವಾಗ ರೂ. 2/- ದೊರೆಯುವಂತೆ ಪ್ರಯತ್ನಿಸುವುದಾಗಿ ಹೇಳಿದರು. ಅಲ್ಲದೆ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರಿಗೆ ಭೂಸ್ವಾಧೀನತೆಯ ಕಾರ್ಯ ತ್ವರೆಗೊಳಿಸಲು ಸೂಚಿಸಿದಕ್ಕೆ ಅವರ. ಆದಷ್ಟು ಶೀಘ್ರ ಪೂರೈಸುವ ಆಶ್ವಾಸನೆಯಿತ್ತರು.

ಒಕ್ಟ್ರಾಯ್ ತೆರಿಗೆ ವಿಧಿಸಲು ಸಭೆಯು ಸಮ್ಮತಿಸಿದುದಕ್ಕೆ "ಮೊದಲು ಅಧಿಕ ಪ್ರಮಾಣದಲ್ಲಿರುವ ಮನೆ ತೆರಿಗೆ ಕಮ್ಮಿಯಾಗಲಿ" ಎಂದು ಸಲಹೆಯಿತ್ತರು. ಒಳಚರಂಡಿ ಯೋಜನೆಯ ಕೆಲಸವೂ ಮುಂದುವರಿಸಲು ಏರ್ಪಾಡು ಮಾಡಲಾಗುವುದೆಂದೂ ಹೇಳಿದರು. ಹೌಸಿಂಗ್ ಬೋರ್ಡಿನ ನೆರವನ್ನು ಪಡೆದು ನಗರ ಸಭೆಯು ಕೆಲಸಗಾರರಿಗೆ ವಸತಿ ಸೌಕರ್ಯ ಒದಗಿಸಬೇಕೆಂದೂ ಹೇಳಿದರು. ಉಡುಪಿ, ಮಂಗಳೂರು, ಹುಬ್ಬಳ್ಳಿ, ಧಾರವಾಡಗಳೆಲ್ಲ ತೃಪ್ತಿಕರವಾಗಿ ಕಂದಾಯವಸೂಲಿ ಮಾಡಿದುದಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಸಿಂಡಿಕೇಟ್ ಬ್ಯಾಂಕಿನ ಮುನ್ನಡೆ

೧೯೬೫ರಲ್ಲಿಯೂ ಸಿಂಡಿಕೇಟ್ ಬ್ಯಾಂಕು ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ. ಕರ ಬೋನಸ್ ಮತ್ತಿತರ ಆವಶ್ಯಕ ಮಾಮಲೆಗಳಿಗೆ ಪ್ರತ್ಯೇಕಿಸಿ ಇಟ್ಟ ಬಳಿಕ ಅದು ೩೧ ಲಕ್ಷ ರೂಪಾಯಿಗಳ ನಿವ್ವಳ ಲಾಭ ಗಳಿಸಿದೆ. ಇದರಲ್ಲಿ ರೂ. ೧೫ ಲಕ್ಷವನ್ನು ಕಾಯ್ದಿಟ್ಟ ನಿಧಿಗೆ ಕೂಡಿಸಲು ಡೈರೆಕ್ಟರರು ನಿರ್ಧರಿಸಿ ಉಳಿದುದರಲ್ಲಿ ಈ ರೀತಿ ಡಿವಿಡೆಂಟ್ ಹಂಚುವ ಸೂಚನೆ ಯಿತ್ತಿದ್ದಾರೆ: ರೂ.೧೦೦ರ ಕ್ಯುಮುಲೇಟಿವ್ ಪ್ರಿಫರೆನ್ಸ್ ಶೇರುಗಳಿಗೆ ಸೇ. ೮.೫೭ರಂತೆ, ರೂ. ೧೦ರ ಕ್ಯುಮುಲೇಟಿವ್ ಪ್ರಿಫರೆನ್ಸ್ ಶೇರುಗಳಿಗೆ ಸೇ. ೭.೧೫ರಂತೆ ಮತ್ತು ಎ, ಬಿ, ಸಿ ವರ್ಗದ ಈಕ್ವಿಟಿ ಶೇರುಗಳಿಗೆ ಸೇ. ೨೦ರಂತೆ. ಈ ಡಿವಿಡೆಂಟ್ ದರಗಳು ಆದಾಯ ತೆರಿಗೆ ಕಡಿತಕ್ಕೊಳಪಟ್ಟಿವೆ- ಈ ದರಗಳು ಹಿಂದಿನ ವರ್ಷದಷ್ಟೇ ಇವೆ. ಒಟ್ಟು ಡಿವಿಡೆಂಟ್ ರೂ. ೧೬-೧೧ ಲಕ್ಷಗಳಾಗುತ್ತವೆ.

೩೧-೧೨-೬೫ರಂದು ಬ್ಯಾಂಕಿನ ತೆತ್ತ ಬಂಡವಾಳವು ರೂ. ೯೯.೭೩ ಲಕ್ಷಗಳಷ್ಟಿತ್ತು. (ಇದು ೧೯೬೪ರ ಕೊನೆಯಲ್ಲಿ ರೂ. ೯೩.೫೭ ಇತ್ತು). ಶೇರು ಪ್ರೀಮಿಯಂ ಸೇರಿ ಕಾಯ್ದಿಟ್ಟ ನಿಧಿಯು ರೂ. ೧ ಕೋಟಿಯಾಗಿದೆ (ಇದು ಹಿಂದಿನ ವರ್ಷದಲ್ಲಿ ರೂ. ೮೫ ಲಕ್ಷವಿತ್ತು) ಕಾಯ್ದಿಟ್ಟ ನಿಧಿಯು ತೆತ್ತ ಬಂಡವಾಳವನ್ನು ಮತ್ತೊಮ್ಮೆ ಮೀರಿದ ದಾಖಲೆಯನ್ನು ಬ್ಯಾಂಕು ಸ್ಥಾಪಿಸಿತು.

೧೯೬೪ರಲ್ಲಿ ರೂ. ೫೧.೪೫ ಕೋಟಿ ಠೇವಣಾತಿಯಿದ್ದರೆ ಅದು ಈ ವರ್ಷ ರೂ. ೫೯.೧೧ ಕೋಟಿಗಳಿಗೇರಿದೆ. ಕೊಟ್ಟಿರುವ ಸಾಲಗಳು ಹಿಂದಿನ ವರ್ಷ ರೂ. ೩೩.೪೮ ಕೋಟಿಯಿದ್ದರೆ ಈ ವರ್ಷ ರೂ. ೩೭.೨೫ ಕೋಟಿಗೇರಿದೆ. ೭.೪೭ ಲಕ್ಷ ಠೇವಣಿ ಖಾತೆಗಳು ೧೯೬೪ರಲ್ಲಿದ್ದರೆ ಅದು ೧೯೬೫ರಲ್ಲಿ ೮.೨೮ ಲಕ್ಷಗಳಿಗೂ ಸಾಲದ ಖಾತೆಗಳು ೧.೩೮ ಲಕ್ಷದಿಂದ ೧.೫೨ ಲಕ್ಷಕ್ಕೂ ಏರಿವೆ.

ಹೀಗೆ ಎಲ್ಲ ರಂಗಗಳಲ್ಲಿಯೂ ಸಿಂಡಿಕೇಟ್ ಬ್ಯಾಂಕು ಪ್ರಗತಿಯ ಮತ್ತೊಂದು ಮೈಲುಗಲ್ಲನ್ನು ಮುಟ್ಟಿದ್ದು ಅದರ ಜನಪ್ರಿಯತೆಯನ್ನು ಎತ್ತಿ ತೋರಿಸುತ್ತದೆ.

READ & ADVERTISE IN NAVAYUGA WEEKLY

ಭಾರತದ ಚಿತ್ರಕಲಾ ವೈಭವ

ಅಜಂತಾ ಮತ್ತು ಬಾಗ್ ಚಿತ್ರಕಲೆಯ ಶೈಲಿ

ಬರೆದವರು: ಶ್ರೀ ಅಶೋಕ ಮಿತ್ರ.

ವೇದಕಾಲದಿಂದ ಆಧುನಿಕ ಕಾಲದವರೆಗಿನ ಭಾರತದ ಚಿತ್ರ ಕಲಾ ವೈಭವ ಕುರಿತು ಆಕಾಶ ವಾಣಿ ದೆಹಲಿ ಕೇಂದ್ರದವರು ಆರು ವಿದ್ವತ್‌ಪೂರ್ಣ ಭಾಷಣಗಳನ್ನು ಬಿತ್ತರಿಸಿದರು. ಎರಡನೇ ಭಾಷಣದಲ್ಲಿ ಶ್ರೀ ಅಶೋಕ ಮಿತ್ರರವರು ಅಜಂತಾ ಮತ್ತು ಬಾಗ್‌ನಲ್ಲಿಯ ಅಸಮಾನ್ಯ ಸೌಂದರ್ಯ ಚಿತ್ರ ಕಲೆಯ ಶೈಲಿಯನ್ನು ಕುರಿತು ವಿವೇಚಿಸಿದ್ದಾರೆ. ಆ ಭಾಷಣದ ಸಾರಾಂಶದ ಕನ್ನಡ ಅನುವಾದವನ್ನು ಇಲ್ಲಿ ಕೊಡಲಾಗಿದೆ.

ಎಲ್ಲೋರ, ಕನ್ಹೇರಿ, ಭಾಜ, ವೆಡ್ಸ್, ಬಾಗ್, ಬಾದಾಮಿ, ಜುನ್ನಾರ್, ಎಲಿಫೆಂಟ್ಸ್, ಅಜಂತ— ಈ ಹೆಸರುಗಳ ಗುಹೆಗಳು ಯಾರನ್ನು ತಾನೇ ಮಂತ್ರ ಮುಗ್ಧರನ್ನಾಗಿ ಮಾಡುವುದಿಲ್ಲ? ಅವುಗಳನ್ನು ಸಂದರ್ಶಿಸುವುದೆಂದರೆ ನೂಯೊ ಲೋಕದಲ್ಲಿ ವಿಹರಿಸಿದಂತೆ. ವಿಶ್ವದ ಯಾವ ಭಾಗದಲ್ಲೂ ಕಾಣದ ಅಸಮಾನ್ಯ ಸೌಂದರ್ಯವನ್ನು ಈ ಗುಹೆಗಳಲ್ಲಿ ಆಸ್ವಾದಿಸಬಹುದು. ಅವುಗಳಲ್ಲಿ ಬಾಗ್ ಮತ್ತು ಅಜಂತಾ ಗುಹಾಂತರ್ದೇವಾಲಯಗಳು ಅತ್ಯಂತ ಹೊಳಪಿನ ವಜ್ರ ವೈಡೂರ್ಯಗಳಂತೆ.

ಅಜಂತಾ ಮತ್ತು ಬಾಗ್ ಗುಹೆಗಳಲ್ಲಿಯ ಅತ್ಯಂತ ಉತ್ತಮವಾದ ಚಿತ್ರಕಲೆಯು ಕ್ರಿಸ್ತ ಶಕ ೩ ಮತ್ತು ೭ನೇ ಶತಮಾನದೊಳಗೆ ಸೇರಿದ್ದುವೆಂದು ಹೇಳಲಾಗಿದೆ. ಅಲ್ಲಿಯ ಗೋಡೆಗಳ ಮೇಲಿರುವ ಚಿತ್ರಗಳು ಗೋಡೆಯ ಗಾರೆ ಒಣಗಿದ ಮೇಲೆ ಅಥವಾ ಗಾರೆ ಒಣಗುವ ಮುಂಚೆ ಬರೆದ ಚಿತ್ರಗಳೇ ಎಂಬುವುದರ ಬಗ್ಗೆ ಚಿತ್ರಕಲಾ ತಾಂತ್ರಿಕರು ವಾದ ನಡೆಸಿದ್ದಾರೆ.

ಗೋಡೆಗಳನ್ನು ಸರಿಪಡಿಸುವ ಕೆಲಸ ನಡೆಸಿದಾಗ, ಚಿತ್ರಗಳನ್ನು ಹದಮಾಡಿದ ಒಣಗಿದ ಪ್ಲಾಸ್ಟರ್ ಮೇಲೆ ಚಿತ್ರಿಸಿರುವುದು ಗೊತ್ತಾಗಿದೆ. ಕೆಲವು ಕಡೆ ಆ ಪ್ಲಾಸ್ಟರ್, ಮೊಟ್ಟೆಯ ಪದರದಷ್ಟು ತೆಳುವಾಗಿರುವುದು ಕಾಣಬಂದಿದೆ.

ಈಜಿಪ್ಟಿನ ಚಿತ್ರಕಾರರು ಮತ್ತು ಶಿಲ್ಪಿಗಳು ಯಾವ ರೀತಿ ಪೂರ್ಣ ಕೃತಿಯನ್ನು ರಚಿಸಲು ಬದ್ಧರಾಗಿದ್ದರೂ ಹಾಗೆಯೇ ಅಜಂತಾ ಚಿತ್ರಗಾರರು ಪೂರ್ಣ ಕೃತಿಯನ್ನು ರಚಿಸುವಲ್ಲಿ ನಿಷ್ಠೆಯನ್ನು ತೋರಿಸಿದ್ದಾರೆ. ಕೃತಿಯನ್ನು ಕಣ್ಣಿಗೆ ಕಾಣುವ ಹಾಗೆ ಪೂರ್ಣವಾಗಿ ಚಿತ್ರಿಸುವುದೇ ಅವರ ಗುರಿಯಾಗಿತ್ತು. ಅಪೂರ್ಣ ಕೃತಿಗೆ ಅವಕಾಶವಿರಲಿಲ್ಲ. ಮನುಷ್ಯನ ಎಲ್ಲಾ ಅಂಗಾಂಗಗಳು ಯಾವ ಕೋನದಲ್ಲಿ ನಿಂತರೆ ಪೂರ್ಣವಾಗಿ ಕಾಣುವುದೋ ಆ ಕೋನದಿಂದ ಚಿತ್ರಗಳನ್ನು ರಚಿಸುತ್ತಿದ್ದರು.

ಇದೇ ಕಾರಣವಾಗಿ ಇಡೀ ದೃಶ್ಯವನ್ನು ಸಮತಲಕ್ಷೇತ್ರದಲ್ಲಿ ಒಂದು ದೃಶ್ಯದ ಮೇಲುಭಾಗದಲ್ಲಿ ಮತ್ತೊಂದು ದೃಶ್ಯ ಬರುವ ಹಾಗೆ ಮಾಡಿಸುತ್ತಿದ್ದರು. ಹಿನ್ನೆಲೆ ದೃಶ್ಯವನ್ನು ಮೇಲು ಭಾಗದಲ್ಲೂ, ಅದರ ಕೆಳಗೆ ಮಧ್ಯಂತರ ದೃಶ್ಯವನ್ನೂ ಕಣ್ಣಿಗೆ ಎಟಕುವ ಹಾಗೆ ಅದರ ಕೆಳಬದಿಯಲ್ಲಿ ಮುಂಬಾಗಿನ ದೃಶ್ಯವನ್ನು ರಚಿಸುತ್ತಿದ್ದರು. ಮಧ್ಯಂತರದ ಕೃತಿಯ ಗಾತ್ರವನ್ನು ಮೂಲ ಕೃತಿಯ ಗಾತ್ರಕ್ಕಿಂತ ದೊಡ್ಡದಾಗಿ ರೂಪಿಸುತ್ತಿದ್ದರು. ಅತಿ ದೊಡ್ಡ ಆಕಾರದ ಬುದ್ಧನು ಕೈಯಲ್ಲಿ ಭಿಕ್ಷಾ ಪಾತ್ರೆಯನ್ನು ಹಿಡಿದುಕೊಂಡಿರುವ ಮತ್ತು ಚಿಕ್ಕ ಆಕಾರದ ತಾಯಿ ತನ್ನ ಮಗುವಿನೊಡನೆ ಭಿಕ್ಷೆ ನೀಡಲು ಹೊಸ್ತಿಲ ಬಳಿಗೆ ಸರಿಯುತ್ತಿರುವ ದೃಶ್ಯದ ಚಿತ್ರವನ್ನು ನೋಡಿದರೆ ಈ ರಚನೆಯ ಶೈಲಿಯು ತಿಳಿಯುತ್ತದೆ.

ಪೂರ್ವ ರಾಷ್ಟ್ರಗಳ ಶೈಲಿಯನ್ನೂ ಯೂರೋಪಿನ ಪ್ರಯೋಗಶೀಲ ಶೈಲಿಯನ್ನೂ ಸಮರಸಗೊಳಿಸಿ ಅಜಂತಾ ಕಲೆಗಾರನು ಚಿತ್ರಗಳನ್ನು ರಚಿಸಿ ತನ್ನ ಕಲಾ ಕೌಶಲ್ಯವನ್ನು ಪ್ರಕಟಿಸಿರುವುದು ವಿಶಿಷ್ಟವೆನಿಸಿದೆ. ಅಲ್ಲದೆ ವಿವಿಧ ದೃಷ್ಟಿಯ ತಂತ್ರವನ್ನು ಕಲೆಗಾರನು ಚಾತುರ್ಯತೆಯಿಂದ ಯಥೇಚ್ಛವಾಗಿ ಬಳಸಿರುವುದನ್ನು ಕಾಣಬಹುದು. ಈ ತಂತ್ರವನ್ನು ಬಳಸಿರುವುದಕ್ಕೆ ಎರಡು ಕಾರಣಗಳಿವೆ. ಒಂದೇ ಕಾಲದಲ್ಲಿ ಲೌಕಿಕ ಮತ್ತು ಅಲೌಕಿಕ ಹಾಗೂ ಪವಿತ್ರವಾದ ದೃಶ್ಯಗಳನ್ನು ಚಿತ್ರಿಸಬೇಕಾಗಿತ್ತು. ಅಲ್ಲದೆ ತೋರಿಕೆಗೆ ಕಾಣುವ ಹಾಗೂ ನೈಜವಾದ ಭಾವನೆಗಳನ್ನೂ ಒಂದೇ ಬಾರಿಗೆ ಸೃಷ್ಟಿಸಬೇಕಾಗಿತ್ತು. ಆದ್ದರಿಂದಲೇ ಸಾಂಚಿ ಮತ್ತು ಭಾರಹಟ್‌ನಲ್ಲಿ ಕಾಣಬರುವ ಶಾಸ್ತ್ರೀಯ ರೀತಿಯ ಚಿತ್ರ ಕಲೆಯ ಗೊತ್ತು ಗುರಿಗಳನ್ನು ಅಜಂತಾ ಕಲೆಗಾರನು ಮೀರಬೇಕಾಯಿತು.

ಗ್ರೀಕ್ ಚಿತ್ರ ಕಲೆಯ ಪ್ರಭಾವವು ಅಜಂತಾ ಕಲೆಗಾರನ ಮೇಲೆ ಬೀರಿರುವುದನ್ನು ಕಾಣಬಹುದು. ಜಾತಕ ಕಥೆಗಳ ಚಿತ್ರಣದಲ್ಲಿ ಈ ಪ್ರಭಾವದ ಗುರುತು ಚೆನ್ನಾಗಿ ರೂಪಗೊಂಡಿದೆ. ಆ ಚಿತ್ರಗಳಲ್ಲಿ ತೋರಿಕೆ ಭಾವವನ್ನಾಗಲಿ, ನೈಜ ಭಾವವನ್ನಾಗಲಿ ಕಾಣದ, ಅವುಗಳ ಮಧ್ಯಾಂತರದ ಭಾವವನ್ನು ಕಾಣುತ್ತೇವೆ. ಅಲ್ಲದೆ ಮೊನಚಾದ ತುದಿಗಳೂ ರೇಖಾ ರೂಪಗಳೂ ಅವನ ಎಲ್ಲಾ ಚಿತ್ರಗಳಲ್ಲಿ ಸ್ಪಷ್ಟವಾಗಿ ಮೂಡಿ ಬಂದಿವೆ.

ಅಜಂತಾ ಕಲೆಗಾರನು ಜೀವನದ ಎಲ್ಲಾ ಪ್ರಕಾರಗಳನ್ನು ವಿಶೇಷ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದನು. ಕುತೂಹಲತೆ, ವಿಶಾಲ ದೃಷ್ಟಿ, ಕಲಸದಲ್ಲಿ ಸೂಕ್ಷ್ಮ ರೀತಿಯ ಅವಲೋಕನ, ಅವನಲ್ಲಿ ಎದ್ದು ಕಾಣುತ್ತಿದ್ದವು. ನಿರ್ಜನ ಗುಹೆಗಳಲ್ಲಿ ತನ್ನ ಕುಂಚದಿಂದ ಅತಿ ಸುಂದರ, ಮನಮೋಹಕ ಚಿತ್ರಗಳನ್ನು ರಚಿಸುವುದರಲ್ಲಿ, ಆ ಚಿತ್ರಗಳಲ್ಲಿ ಸತ್ಯಸುಂದರ ಭಾವಗಳು ಯಥಾರ್ಥವಾಗಿ ಕಾಣುವಂತೆ ರೂಪಿಸುವುದರಲ್ಲಿ ಎತ್ತಿದ ಕೈಯನ್ನು ಪಡೆದಿದ್ದನು.

ಈ ಅಜರಾಮರ ಅಜಂತ ಚಿತ್ರ ಕಲೆಯನ್ನು ವೀಕ್ಷಿಸಿದಾಗ, ಕಲೆಗಾರನು ತಾತ್ವಿಕ ದೃಷ್ಟಿ ಮತ್ತು ಲೌಕಿಕ ಜೀವನದ ದೃಷ್ಟಿಗಳನ್ನು ಸಮನ್ವಯಗೊಳಿಸಲು ಯತ್ನಿಸಿದಂತೆ ಕಾಣುತ್ತದೆ. ಅಥವಾ ಸ್ವರ್ಗ ಭೂಮಿಗಳನ್ನು ಕೂಡಿಸಲು ತನ್ನದೇ ಆದ ರೀತಿಯಲ್ಲಿ ಕಲೆಗಾರನು ಪ್ರಯತ್ನಿಸಿದ್ದಾನೆ ಎಂದು ಹೇಳಬಹುದೇ?

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No. 570/1965.

Dr. J. M. ಲೋಬೊ —ವಾದಿ.

ಕ್ರಿಶ್ಚನ್ ಪಿಂಟೊ ಬಾಯಿ ಸಹಾ —ಪ್ರತಿವಾದಿರು.

2. ಅಂದ್ರು ಪಿಂಟೊ, 3. ಎಸ್ತು ಪಿಂಟೊ ಬಾಯಿ, 4. ಮಾರ್ಕ ಪಿಂಟೊ, 5. ಕರ್ಮಿನಾ ಪಿಂಟೊ ಬಾಯಿ, 6. ಗಾಬ್ರಿಯಲ ಪಿಂಟೊ—ಗಾಸ್ಪರ ಪಿಂಟೊರ ಮಕ್ಕಳು, ಮಂಗಳೂರು ತಾಲ್ಲೂಕು ತಾಳಿಪಾಡಿ ಗ್ರಾಮದ ತುಡಮ ಎಂಬಲ್ಲಿರುವವರು—

2ರಿಂದ 6ನೇ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ನೀವು ಮ ಮಿಕ್ಕ ಪ್ರತಿವಾದಿರು ವಾದಿಯ ಒಳಗೆ ಬಾಡಿಗೆಗೆ ಅನುಭವಿಸಿ ಬರುವ ಕಿನ್ನಿಗೋಳಿ ಪಂಚಾಯ್ತ Door No. K 2/30 ನೇ ಮನೆ ವಗೈರೆ ಸ್ವಾಧೀನಪಡಿಗೂ ಬಾಡಿಗೆ ಬಾಕಿಗೂ ವಾದಿಯು ದಾಖಲ್ಲು ಮಾಡಿದ ಸದ್ರಿ ದಾವೆಯು ತಾರೀಕು 30-3-1966ಕ್ಕೆ ನಿಮಗೆ ಅಕೈರ ನೋಟೀಸಿಗೆ ಇಟ್ಟಿದೆ. ಅಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂಪ್ರಕಾರ ನಿಮಗೆ ತಿಳಿಸಿಯದೆ.

K. S. Kamath.
ವಾದಿ ಕಡೆ ಎಡ್ವೊಕೇಟ್.

ಕಾರ್ಕಳ, 18-3-1966.

ಡಾ। ಪೈಗಳ ಅಧ್ಯಕ್ಷೀಯ ಸಂದರ್ಶನ

ಸಿಂಡಿಕೇಟ್ ಬ್ಯಾಂಕಿನ ಅಡಳಿತಾಧ್ಯಕ್ಷ ಡಾ। ಟಿ. ಎಂ. ಎ. ಪೈಯವರು ತಾ. 18ರಂದು ಉಡುಪಿಯ ಸ್ಥಳೀಯ ಶಾಖೆಗೆ ಸಂದರ್ಶನವಿತ್ತು, ಪರಿಶೀಲನೆ ನಡೆಸಿ ಸಿಬಂದಿಯ ಪರಿಚಯ ಮಾಡಿಕೊಂಡ ಬಳಿಕ ಸಿಬಂದಿ ಮತ್ತು ಅತಿಥಿಗಳನ್ನುದ್ದೇಶಿಸಿ ಭಾಷಣಮಾಡುತ್ತಾ ಬ್ಯಾಂಕು ಬೆಳೆದು ಬಂದ ಬಗೆಯನ್ನೂ ಅದು ಒದಗಿಸುತ್ತಿರುವ ಸೌಕರ್ಯ ಸವಲತ್ತುಗಳನ್ನೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಬ್ಯಾಂಕಿನ ಮಹತ್ವದ ಪಾತ್ರವನ್ನೂ ವಿವರಿಸಿ ಅದರ ಉಜ್ವಲ ಭವಿಷ್ಯಕ್ಕೆ ಸರ್ವರ ಸಹಕಾರ ಕೋರಿದರು. ಆರಂಭದಲ್ಲಿ ಸ್ಥಳೀಯ ಶಾಖೆಯ ಏಜನ್ಸಿಯ ಮೆನೇಜರ್ ಶ್ರೀ ಕೆ. ಪಿ. ಶೆಣೈಯವರು ಸ್ವಾಗತಿಸಿ ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

‘ಪೋಲಿಯೋ’ದಿಂದ ರಕ್ಷಣೆ

ಉಡುಪಿಯ ‘ರೋಟರಿ ಕ್ಲಬ್’ ಮತ್ತು ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯ ವತಿಯಿಂದ ೧೨ ವರ್ಷದೊಳಗಿನ ಮಕ್ಕಳಿಗೆ ಮಣಿಪಾಲದ ಆಸ್ಪತ್ರೆಯಲ್ಲಿ ‘ಪೋಲಿಯೋ’ದಿಂದ ರಕ್ಷಿಸಲು ಚಿಕಿತ್ಸೆ ನಡೆಸುವ ಏರ್ಪಾಡು ಮಾಡಲಾಗಿದೆ. ಆಸಕ್ತರು ಡಾ। ಶಿವರಾಮನ್, ಕಸ್ತೂರ್ಬಾ ಜನರಲ್ ಆಸ್ಪತ್ರೆ ಮಣಿಪಾಲ, ಇವರೊಡನೆ ವ್ಯವಹರಿಸಬೇಕೆಂದು ರೋಟರಿ ಕ್ಲಬ್‌ನ ‘ಕಮ್ಯೂನಿಟಿ ಸರ್ವಿಸ್’ನ ಚೇರ್‌ಮನ್ ಡಾ। ಕೆ. ಮೋಹನದಾಸ್ ಪೈಯವರು ತಿಳಿಸಿರುತ್ತಾರೆ.

ತೈಲಚಿತ್ರ ಅನಾವರಣ ಮಹೋತ್ಸವ

ಸಾಂತ್ಯರ್, ಮಾರ್ಚ 10. “ತನ್ನ ವಸ್ತುವನ್ನು ತಾನು ಅನುಭವಿಸುವುದು ಪ್ರಕೃತಿ; ಇನ್ನೊಬ್ಬರ ವಸ್ತುವನ್ನು ತಾನು ಕಸಿದುಕೊಳ್ಳುವುದ ವಿಕೃತಿ; ತನ್ನಲ್ಲಿರುವುದನ್ನು ಇನ್ನೊಬ್ಬರಿಗೆ ಹಂಚಿಕೊಡುವುದು ಸಂಸ್ಕೃತಿ; ಇ[...] ಭಾರತೀಯ ಸಂಸ್ಕೃತಿ; ಇದೇ ಸಮ[...] ಜದ ಏಳಿಗೆಯ ಮೂಲಕಾರಣ. ಇದ[...] ಶ್ರೀ ಕೃಷ್ಣ ಪರಮಾತ್ಮನು ಶ್ರೀ ಭಗವದ್ಗೀತೆಯಲ್ಲಿ— “ಏವಂ ಪ್ರವರ್ತಿತಂ ಚಕ್ರಂ” [...] ದು ಇಂತಹ ದಾನವನ್ನು ಯಜ್ಞಕ್ಕೆ ಹೋಲಿಸಿದ್ದಾನೆ. ಇಂದಿನ ಮೂವರು ಮಹಾದಾನಿಗಳು ಆ ರೀತಿ ತಮ್ಮಲ್ಲಿದ್ದುದನ್ನು ದಾನಮಾಡಿ ಇ[...] ರರಿಗೆ ದಾರಿ ದೀಪವಾಗಿದ್ದಾರೆ. ಅಂತಹ [...] ಪದಿಂದ ಪ್ರಕಾಶಗೊಂಡ ಈ ವಿದ್ಯಾಕ್ಷೇತ್ರ [...] ಸದಾಕಾಲ ಇನ್ನಷ್ಟು ಬೆಳಗುತಿರಲಿ!” ಎಂ[...] ಶ್ರೀಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ವಿದ್ಯಾದಾಯಿ ಹಯರ್ ಸೆಕೆಂಡರೀ ಶಾಲಾ ಕಲಾಮಂದಿರದಲ್ಲಿ ತಾ. 10ರಂದು ನಡೆದ ಹಿಂದೂ ವಿದ್ಯಾದಾಯಿನೀ ಸಂಘದ ಪ್ರಮುಖ ದಾತೃಗಳ ತೈಲಚಿತ್ರ ಅನಾವರಣದ ಅನುಗ್ರಹ ಭಾಷಣದಲ್ಲಿ ನುಡಿ[...] ಹರಸಿದರು.

ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಬಿ. ಪಿ. ಕೃಷ್ಣಯ್ಯ, ಇವ[...] ಸ್ವಾಗತ ಭಾಷಣ ಗೈದರು. ಶಾಲಾ [...] ಧ್ಯೋಪಾಧ್ಯಾಯ ಶ್ರೀ ಎಮ್. ವಾಸುದೇ[...] ರಾಯರು ಈ ವಿದ್ಯಾಸಂಸ್ಥೆಗೆ ಕೊಡುಗೈ ಬ[...] ಯಿಂದ ದಾನಮಾಡಿದ ಮಹಾದಾತೃಗಳಾಗಿ ಶ್ರೀ ಕೆ. ಸೀತಾರಾಮರಾವ್ “ದಾಸಪ್ರಕಾಶ” ಮದ್ರಾಸ್, ಶ್ರೀ ಡಾ। ಯು. ಎಲ್. ನಾರಾಯಣರಾವ್, ಮದ್ರಾಸ್, ದಿವಂಗತ ಪಿ. [...] ಮರಾವ್, ಪಣಂಬೂರು, ಈ ಮೂವರು [...] ಹನೀಯರ ಪರಿಚಯವನ್ನು ಸಂಗ್ರಹವಾಗಿ [...] ಳಿಸಿ, ಅವರ ತೈಲಚಿತ್ರಗಳನ್ನು ಅನಾವರಣಗೈಯುವಂತೆ, ಸಮಾರಂಭದ ಅಧ್ಯಕ್ಷ ಪ[...] ಶ್ರೀ ಡಾ। ಟಿ. ಎಮ್. ಎ. ಪೈ ಇವರನ್ನು ಕೇಳಿಕೊಂಡರು.

ಶ್ರೀ ಪೈಗಳು ಮೂವರು ದಾತೃಗಳ ತೈಲಚಿತ್ರವನ್ನು ಅನಾವರಣ ಮಾಡುತ್ತಾ ಭಾರತೀಯ ಸಂಸ್ಕೃತಿ ಇನ್ನೂ ನಾಶವಾಗಿಲ್ಲ; ತನ್ನಲ್ಲಿದ್ದುದನ್ನು ಇತರರಿಗೆ ದಾನಮಾಡುವುದು ತಂದೆ ತಾಯಿಗಳೇ ಮೊದಲಾದ ಹಿರಿಯರನ್ನು ಗೌರವಿಸುವುದು ಶತ್ರುವನ್ನೂ ಪ್ರೀತಿಸುವುದು— ಇದೇ ಭಾರತೀಯ ಸಂಸ್ಕೃತಿ. ಆ ತತ್ವದಿಂದಲೇ ನಾ[...] ಪಂಚಮಿಯ ಹಬ್ಬ ರೂಢಿಗೆ ಬಂದಿ[...] ತಮ್ಮನ್ನು ಕಚ್ಚಲು ಬರುವ ಹಾವಿ[...] ಹಾಲೆರೆದು ಪೂಜಿಸುವ ಗುಣ ಭಾರತೀಯರ ವಿಶೇಷಗುಣ. ಅದು ಕಾರಣವೇ ಗ[...] ಧೀಜಿ ಕೆಟ್ಟದನ್ನು ನೋಡಲಾರೆ, ಕೇಳಲಾರೆ, ಆಡಲಾರೆ ಎಂದು— ಮೂರು ಮಂಗಗಳ [...] ದಾದಾಹರಣೆಯಿಂದ ತಿಳಿಸಿದರು. ತನ[...] ಲ್ಲಿದ್ದುವನ್ನು ದಾನಮಾಡುವುದೇ ಸಫ[...] ಜೀವನದ ತಿರುಳು ವಿದ್ಯೆಗೋಸ್ಕರ [...] ವ್ಯಯಿಸಿದ ಹಣ ನಷ್ಟವಲ್ಲ. ರೈತನು [...] ದು ಕಾಳನ್ನು ಬಿತ್ತಿ ನೂರಾರು ಕಾ[...] ಗಳನ್ನು ಪಡೆಯುವಂತೆ, ವಿದ್ಯೆಗೋಸ್ಕರ ಕೊಟ್ಟ ಹಣ ನೂರರಷ್ಟು ಪ್ರತಿಫಲವನ್ನು ಕೊಡುತ್ತದೆ. ಇಲ್ಲಿ ಕಾಣುವ ಮೂವರು ಮಹನೀಯರೂ ಈ ವಿದ್ಯಾಸಂಸ್ಥೆಗೆ ದಾನಮಾಡಿ ಶಾಶ್ವತವಾದ ಹೆಸರನ್ನು ಪಡೆದಿದ್ದಾರೆ. ಅದರಿಂದ ಇತರರಿಗೆ ಮಾರ್ಗದರ್ಶಕರಾಗಿದ್ದಾರೆ. ಅಂತೆ ಈ ವಿದ್ಯಾಸಂಸ್ಥೆಯು ಇನ್ನಷ್ಟು ಅಭಿವೃದ್ಧಿ[...] ಡೆದು ಕಾಲೇಜು ಆಗಲಿ! ಎಂದರು.

ಕೊನೆಗೆ ಸಂಘದ ಕೋಶಾಧಿಕಾರಿಗಳಾದ ಶ್ರೀ ಪಿ. ಶ್ರೀನಿವಾಸರಾವ್, ಇವರು ಧನ್ಯವಾದಗಳನ್ನರ್ಪಿಸಲು ಶ್ರೀ ಮಧ್ವನಗರ ಶಾ[...] ಯಿಂದ ನೃತ್ಯ, ನಾಟಕ, ಇತ್ಯಾದಿ ಕಾರ್ಯಕ್ರಮಗಳು ನಡೆದು ರಾಷ್ಟ್ರಗೀತೆಯೊಂದಿಗೆ ಆಂದಿನ ಕಾರ್ಯಕ್ರಮವು ಮುಕ್ತಾಯವಾಯಿತು.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿ

ವಾರ್ಷಿಕ ಚಂದಾ ರೂ. ೧೦

ರೈತ ಮುರುಗ

(ಎರಡನೇ ಪುಟದಿಂದ)

ಕೆರೆ ಇದೆ. ದೂಸಿ ಮಾಮಂಡೂರ್ ಕೆರೆಯು ಒಂದು ನಿಸರ್ಗದತ್ತ ಕೆರೆಯು ಹಾಗೆ ಇದೆ.

ಉತ್ತರದಿಂದ ದಕ್ಷಿಣಕ್ಕೆ ಓಡುತಿದ್ದ ಎರಡು ದಿಣ್ಣೆಗಳ ಸರಪಳಿಯು ಸಾಧಾರ ಣ ನೂರು ಗಜಗಳ ನಂತರ ಒಂದಾಗಿ ಸೇರಿ ಸರೋವರದ ಆಕೃತಿಯನ್ನು ಹೊಂದಿದ್ದವು. ಆ ದೃಶ್ಯವನ್ನು ಕಂಡು ಮನಸೋತ ಒಬ್ಬ ಪಲ್ಲವ ರಾಜನು, ಆ ಎರಡು ದಿಣ್ಣೆಗಳಿಗೆ ನಡುವೆ ಬಲವಾದ ಕಟ್ಟೆಯನ್ನು ಹಾಕಿ, ಅವುಗಳನ್ನು ಕೂಡಿಸಿ, ಒಂದು ಕೃತಕ ಸರೋವರವನ್ನು ರಚಿಸಿದನು. ಅದು ಮುವತ್ತು ಚದರ ಮೈಲು ಭೂಮಿಯನ್ನು ಕೃಷಿ ಮಾಡಲು ಸಾಕಾಗುವಷ್ಟು ನೀರನ್ನೊದಗಿಸುತ್ತದೆ.

ಸೊಕ್ಕಿನಿಂದ ಆದರೂ ಗಂಭೀರವಾಗಿ ಹರಿಯುತ್ತಿರುವ ಪಾಲಾರು ನದಿಯು ಆ ಕೆರೆಗಿಂತ ಕೇವಲ ಮೂರು ಮೈಲು ದೂರದಲ್ಲಿ ಓಡುತ್ತಿದೆ. ಮಳೆಗಾಲದಲ್ಲಿ ಆ ನದಿಯು ಒಂದು ಕಾಲುವೆಯು ಕೆರೆಯನ್ನು ತುಂಬಿಸುತ್ತದೆ. ಅದರ ಲಾಭವನ್ನು ಅನುಭವಿಸುವದರಲ್ಲಿ ದೂಸಿಯು ಮೊದಲ ಹಳ್ಳಿ. ಹಾಗಿರುವದರಿಂದ ನಿಸ್ಸಾರ ವರ್ಷಗಳಲ್ಲೂ ಅಲ್ಲಿ ಒಳ್ಳೆಯ ಬೆಳೆ ಬರುತ್ತದೆ. ಹೆಚ್ಚು ಕಡಿಮೆ ಉತ್ತರ ಅರ್ಕಾಟಿನ ಎಲ್ಲಾ ಒಣ ಭೂಮಿಯಲ್ಲಿ ಅದು ಬಹು ಸಮೃದ್ಧ ಹಳ್ಳಿ. ಆದರೆ ಆ ಚಿರಸ್ಥಾಯಿ ಸಮೃದ್ಧತೆಯು ಒಂದು ಶರ್ತದ ಮೇಲೆ ಅವಲಂಬಿಸಿಕೊಂಡಿದೆ. ನದಿಯಿಂದ ಸರೋವರಕ್ಕೆ ನೀರನ್ನು ತರುವ ಕಾಲುವೆಯು ಬಹಳ ಉದ್ದವಿದೆ. ಸಮಯ ಸರಿ ಇಂತೆ ಅದರಲ್ಲಿ ಕಸರು, ರಾಡಿ ನಿಂತು ಅದು ಮುಚ್ಚಿ ಹೋಗುತ್ತದೆ. ಎಷ್ಟು ಪ್ರಯತ್ನಪಟ್ಟು ಅದನ್ನು ಸರಿಮಾಡಿದರೂ ಕೆಲವೇ ಸಮಯದೊಳಗೆ ಅದು ಮುಚ್ಚಲ್ಪಟ್ಟು, ಅದಕ್ಕೆ ಅನೇಕಾನೇಕ ಮುರಿಕಾಲುವೆಗಳು ಹುಟ್ಟಿ, ಸರೋವರಕ್ಕೆ ನೀರು ಹೋಗುವದಿಲ್ಲ.

ರಾಮು ದೂಸಿಗೆ ಉಪ-ತಾಲೂಕಧಿಕಾರಿಯಾಗಿ ಬಂದಾಗ ಅಲ್ಲಿಯ ಸ್ಥಿತಿ ಬಹಳ ಕರುಣಾಜನಕವಾಗಿತ್ತು. ಸಾಧಾರಣ ಇಪ್ಪತ್ತು ವರ್ಷಗಳ ಹಿಂದೆ ನೆರೆ ಬಂದಿದ್ದಾಗ ಪಾಲಾರ್ ದಡ ಮೀರಿ ಹರಿದು ಬಂದು ಆ ಕಾಲುವೆಯನ್ನು ಮರಳಿನಿಂದ ಮುಚ್ಚಿ ಬಿಟ್ಟಿತ್ತು. ಅದನ್ನು ಸರಿಪಡಿಸುವದು ಆ ಹಳ್ಳಿಯವರಿಂದ ಆಸುಪಾಸಿನ ಹಳ್ಳಿಯವರು ಸೇರಿದರು ಕೂಡಾ ಅಸಾಧ್ಯವಾಗಿತ್ತು.

ಹಳ್ಳಿಯ ಹಾಗೂ ಸರೋವರದ ಕುರಿತು ಕೆಡೆಲರಿಗೆ ಅನೇಕಾನೇಕ ವಿಷಯಗಳನ್ನು ರಾಮು ತಿಳಿಸಿದನು. ಅವುಗಳ ವಿವರಣೆ ಯು ರೂಪದಲ್ಲಿ ಇಂದಿದ್ದರೂ ಚೆನ್ನಾಗಿ ಮನವರಿಕೆಯಾಗಲು ಸಾಕಾಗುತಿತ್ತು. ಸ್ವಲ್ಪ ಸಮಯ ಸುಮ್ಮನಿದ್ದು ರಾಮು ಪುನಃ ಹುರಿದುಂಬಿಸುವ ಮಾತುಗಳನ್ನು ಮುಂದರಿಸಿದನು. 'ಆ ಹತ್ತು ಮೈಲುಗಳುದ್ದ ಕ್ಕೂ ತುಂಬಿರುವ ಹೂಳಿಯಗೆಯನ್ನು ತೆಗೆಯಲು ಒಂದು ಹಳ್ಳಿಯಿಂದಾಗಲೀ, ಅಕ್ಕ ಪಕ್ಕದ ಹಳ್ಳಿಗಳು ಕಲೆತಾಗ ಆಗಲೀ ಸಾಧ್ಯವಿರಲಿಲ್ಲ. ಎರಡು ದಶಕಗಳಿಂದ ಅಲ್ಲಿ ಬೀಡು ಬಿಟ್ಟಿರುವ ಬಡತನವು ಜನರಲ್ಲಿರುವ ಸಹಾಯಕ ಮನೋಭಾವನೆಯ ವೃಕ್ಷದ ಬುಡಕ್ಕೆ ಕೊಡಲಿ ಏಟನ್ನು ಹಾಕಿದೆ. ಅವರು ಜೀವಿಸುವದೇ ಕಷ್ಟವಾಗಿದೆ. ಪಂಗಡಗಳೊಳಗಣ ಜಗಳದಿಂದಾಗಿ ದೇವಸ್ಥಾನವೂ ಕೂಡಾ ಹಾಳುಬೀಳುತ್ತ ಬಂದಿದೆ. ಈ ಮುಖ್ಯ ಕೆಲಸವನ್ನು ಮಾಡಿ ಧಾನ್ಯ ಹಾಗೂ ತೃಪ್ತಿಯನ್ನು ಆ ಅಸಂತೋಷ ಜನತೆಗೆ ನೀಡುವದು ಸರಕಾರದ ಆದ್ಯ ಕರ್ತವ್ಯವಿದೆ."

"ಆದರೆ ರಾಮಚಂದ್ರ, ಇಂತಹ ಒಂದು ಪುಟ್ಟ ನೀರಾವರಿ ಕೆಲಸಕ್ಕಾಗಿ ಅದರಲ್ಲೂ ಒಂದೇ ಗುಂಪಿಗೆ ಸೇರಿರುವ ಹಳ್ಳಿಗೆ ಒಂದು ಲಕ್ಷವನ್ನು ಸರಕಾರವು ಹೇಗೆ ಕೊಟ್ಟೀತು? ಅದಕ್ಕೇನಾದರೂ ನ್ಯಾಯವಿದೆಯೇ? ಅದು ಅಸಾಧ್ಯವಿದೆ!" ಕೆಡೆಲ್ ಗಟ್ಟಿಯಾಗಿ ಹೇಳಿದರು.

"ಅದು ಸಾಧ್ಯವಾಗಲೇ ಬೇಕು. ಇಲ್ಲದಿದ್ದಲ್ಲಿ ಸರಕಾರವು ತನ್ನ ಮುಖ್ಯ ಕರ್ತವ್ಯ ಒಂದಕ್ಕೆದ್ರೋಹಬಗೆದಂತಾಗುತ್ತದೆ. ಆ ಊರುಗಳಲ್ಲಿ ಬಡತನ ಹಾಗೂ ರೋಗ ಬಡಬಾಗ್ನಿಯಂತೆ ಹಬ್ಬುತ್ತಿದೆ. ಯಾರಾದರೂ ಹಿಂದೂರಾಜನು ಅಲ್ಲಿರುತಿದ್ದಲ್ಲಿ ಆ ಕೆಲಸವನ್ನು ಯಾವಾಗಲೋ ಮಾಡಿ ಮುಗಿಸುತಿದ್ದ. ಕಳೆದ ಇಪ್ಪತ್ತು ವರ್ಷಗಳಿಂದ ದೂಸಿಯು ತನ್ನ ಉತ್ತಮ ಪುತ್ರರನ್ನು, ತನ್ನ ಸಂಸ್ಕೃತ ಪಂಡಿತರನ್ನು ಹಾಗೂ ಇತರ ಬುದ್ಧಿಜೀವಿಗಳನ್ನು ಕಳೆದು ಕೊಂಡಿದೆ. ಆಹಾರದ ಅಭಾವದಿಂದಾಗಿ ಅಲ್ಲಿಯ ಜನರು ಇತರ ಸಂಪನ್ನ ಸ್ಥಳಗಳಿಗೆ ಓಡಿಹೋಗುತಿದ್ದಾರೆ. ರೈತರು ದರೋಡೆಗಾರರಾಗುತ್ತಿದ್ದಾರೆ, ಒಬ್ಬರನ್ನೊಬ್ಬರು ಕೊಲ್ಲಲೂ ಹೇಸುವದಿಲ್ಲ, ಸ್ವಾರ್ಥಿಗಳ ಜಾತೀಯ ಗುಂಪುಗಳು ಹುಟ್ಟುತ್ತಿವೆ......'

"ಈ ಪ್ರಾಪಂಚಿಕ ವಿಷಯಗಳಿಗೂ ಸರೋವರಕ್ಕೂ ಏನು ಸಂಬಂಧ? ಈ ಎಲ್ಲ ವಿಷಯಗಳು ದೈನಂದಿನ ಜೀವನದಲ್ಲಿ ಘಟಿಸುವ ವಿಷಯಗಳೆಂದು ನೀನು ಯಾವಾಗಲೂ ಜಗಳವಾಡುತ್ತಿ...." ಕೆಡೆಲರು ಜೋರಾಗಿ ಕೂಗಿ ಹೇಳಿದರು.

"ಹೌದು. ಹೊಟ್ಟೆ ತುಂಬಿದಾಗ ಅವರು ತಮಾಷೆಗಾಗಿ ಜಗಳಾಡಿ ಅದರಿಂದ ಸಂತೋಷಪಡುತ್ತಾರೆ. ಆದರೆ ಅದೇ ಹೊಟ್ಟೆ ಖಾಲಿ ಇರುವಾಗ ಅವರು ನಿಜವಾಗಿ ಹಾಗೂ ಕೆಟ್ಟ ಮನಸ್ಸಿನಿಂದಲೇ ಜಗಳಾಡಿಕೊಳ್ಳುತ್ತಾರೆ. ಹಸಿದಿರುವ ಮನುಷ್ಯನು ಕಾಲುಕೆರೆದು ಜಗಳಕ್ಕೆ ಕರೆಯುವದು ಸ್ವಾಭಾವಿಕವಿದೆ. ಅವನಿಗೆ ಕಾರಣವೂ ಬೇಕಾಗಿಲ್ಲ. ಹಸಿದ ಹೊಟ್ಟೆಗಳಿಂದುತ್ಪನ್ನವಾಗುವ ಜಾತೀಯ ಜಗಳಗಳು ಯಾವ ವಿಧದಲ್ಲೂ ದೊಡ್ಡ ದೊಡ್ಡ ರಾಜ್ಯಗಳೊಳಗಿನ ರಣಕ್ಕಿಂತ ಕಮ್ಮಿ ಇರುವದಿಲ್ಲ. ಜನರಿಗೇನೂ ತಿನ್ನಲು ಸಿಗದಿರುವಾಗ ಒಬ್ಬರು ಇನ್ನೊಬ್ಬರನ್ನು ತಿನ್ನಲು ಪ್ರಯತ್ನಿಸುತ್ತಾರೆ. ನಿಜ. ಅದು ಅನಾಗರೀಕ ಪದ್ಧತಿ ಇರಬಹುದು ......"

ರಾಮು ಶ್ವಾಸ ತೆಗೆದುಕೊಳ್ಳಲು ತಡೆದನು. ಆಗ ಕೆಡೆಲರು ಮಧ್ಯದಲ್ಲೇ ಬಾಯಿ ಹಾಕಿದರು, "ಹೌದು, ರಾಮಚಂದ್ರ, ನೀನು ಸರಿ. ನೀನು ಸೌಮ್ಯಪಥದಲ್ಲಿ ಸಾಗುತ್ತಿರುವಂತೆಯೇ ಪೂರ್ಣ ಸಮಸ್ಯೆಯ ಮೇಲೆ ಹೊಸ ಬೆಳಕನ್ನು ಬೀರುತ್ತಿ."

'ವಿಷಯಗಳು ಅಲ್ಲಿಗೆ ವಿರಾಮ ಹೊಂದುವದಿಲ್ಲ. ಕೇವಲ ಇಪ್ಪತ್ತು ವರ್ಷಗಳ ಹಿಂದೆ ಆ ಹಳ್ಳಿಗೆ ಒಂದು ನಗರ ಪಾಲಕ ನಿಲಯವಾಗಲೀ ಉಪ ನ್ಯಾಯಾಧಿಕಾರಿಯ ನ್ಯಾಯಾಂಗಣದ ಅವಶ್ಯಕತೆಯಾಗಲೀ ಇದ್ದಿರಲಿಲ್ಲ. ಆದರೆ ಈಗ ಅವೆರಡಕ್ಕೂ ಹೆಚ್ಚು ಹೆಚ್ಚು ಕೆಲಸ ಬರುತ್ತಾ ಇದೆ. ಕೆಡುಕಿನ ಬೇರು ಅತಿ ಆಳಕ್ಕೆ ಇಳಿದು ಹೋಗಿದೆ. ಸರಕಾರದ ವೆಚ್ಚ ಹೆಚ್ಚುತ್ತ ಹೋಗುತ್ತಿದೆ. ಆ ವೆಚ್ಚವನ್ನು ಇತರರ ಮೇಲೆ ಹಂಚಬೇಕಾಗಿದೆ. ಮುಖ್ಯ ಜೀವನೋಪಾಯ ಇರುವ ನೇಗಿಲನ್ನು ಹಿಡಿಯುವ ಕೆಲಸವನ್ನು ಬಿಟ್ಟು ಹೆಚ್ಚು ಹೆಚ್ಚು ತರುಣರು ಬಂಜರು ಕಾಗದದ ಮೇಲೆ ಶಾಯಿ ಚೆಲ್ಲುವ ಹಾಗೂ ಕೆಂಪು ಲಾಡಿಯ ಕೆಲಸಕ್ಕಾಗಿ ಹಾತೊರೆಯುತ್ತಿದ್ದಾರೆ."

"ಹೌದು, ರಾಮಚಂದ್ರ. ನೀನು ಹೇಳುತ್ತಿರುವದರಲ್ಲಿ ಅರ್ಥವಿದೆ. ನೀನು ನಾಗರಿಕತೆಯ ಒಂದು ಮಗ್ಗುಲವನ್ನು ಮಾತ್ರ ಮುಟ್ಟಿತೋರಿಸಿದಿ. ನೀನು ಅದನ್ನು ಬದಲಾಯಿಸುವಂತಿಲ್ಲ." ಕೆಡೆಲ್ ಹೇಳಿದರು.

"ಅದು ಹಾಗೆ ಇರಬಹುದು, ನೋಡಿ ಒಬ್ಬನು ಒಂಬತ್ತು ಜನರ ಮೇಲೆ ಜೀವಿಸುತ್ತಾನೆ. ಸಮಾಧಾನ ಕೇವಲ ಕೆಲವರಿಗೆ, ಕಷ್ಟವಾದರೋ ಅನೇಕಾನೇಕ ಮಂದಿಗೆ! ನವನಾಗರಿಕತೆಯು ಕೇವಲ ಅಂಗಿ, ಮೇಲಂಗಿಗಳಲ್ಲಿ ಮೆರೆಯುತ್ತಿದೆ. ಆತ್ಮ ಅಲ್ಲದೆ ದೇಹವೂ ಹಸಿವಿನಿಂದ ನರಳುತ್ತಿದೆ; ಉಸಿರು ತಡೆಯುತ್ತಿದೆ; ನಾಡಿ ಬಡಿತ ಕ್ಷೀಣವಾಗುತ್ತಿದೆ, ಹೃದಯ ನೋಯುತ್ತಿದೆ. ಸರಳ ಜೀವನದ ಇತಿಶ್ರೀ ಆಗಿಹೋಗಿದೆ. ಶ್ರೇಷ್ಠ ಆಲೋಚನೆಗಳನ್ನು ಎಣಿಸಲೂ ಸಾಧ್ಯವಿಲ್ಲವಾಗಿದೆ. ನನ್ನ ಬಳಿ ಒಂದು ದನ ಇರುತ್ತಿದ್ದಲ್ಲಿ, ನಾನದರ ಹಾಲನ್ನು ನನ್ನ ಮಕ್ಕಳನ್ನು ಸಾಕುವದಕ್ಕೆ ಉಪಯೋಗಿಸದೆ, ಹಾಲನ್ನು ಮಾರಿ, ಹಣ ಮಾಡಿ, ಒಂದು ಅಂಗಿಯನ್ನು ತೆಗೆದುಕೊಳ್ಳುತ್ತಿದ್ದೆ. ಇಂತಹ ಉಷ್ಣ ಪ್ರದೇಶದಲ್ಲೂ ಅಂಗಿಗಾಗಿ ವೆಚ್ಚಮಾಡುತ್ತಿದ್ದೆ! ಅಥವಾ ಕೆಲವು ಬೆಗಡೆ ಅಲಂಕಾರ ಇಲ್ಲವೇ ಆಟದ ಸಾಮಾನಿಗಾಗಿ ಖರ್ಚು ಮಾಡುತ್ತಿದ್ದೆ!"

"ಆದರೆ, ರಾಮಚಂದ್ರ, ಇವೆಲ್ಲ ಚಿಕ್ಕ ಪುಟ್ಟ ತಪ್ಪುಗಳಿವೆ. ಇವೊಂದೂ ನಿನ್ನ ಹಳ್ಳಿಗೆ ನಾಶವನ್ನು ತರಲಿಕ್ಕಿಲ್ಲ. ತಪ್ಪು ನಿನ್ನಲ್ಲದಗಿಕೊಂಡಿದೆ. ನೀನು ಕಷ್ಟಪಟ್ಟು ದುಡಿಯುವದಿಲ್ಲ. ಗೊಬ್ಬರ ತಯಾರಿಸುವದಕ್ಕಾಗಿ ಅಥವಾ ಇನ್ನಿತರ ರೀತಿಯಲ್ಲಿ ಗದ್ದೆಯನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸದೆ. ಸಿಕ್ಕಿದ ಸಮಯವನ್ನು ಹರಟೆ ಹೊಡೆಯುವದರಲ್ಲಿ ಕಳೆಯುತ್ತಿ. ಹಾಗೆ ಕೆಡುಕು ಸಂಭವಿಸಿದಾಗ ಭಾರವನ್ನೆಲ್ಲಾ ಭಗವಂತನ ಮೇಲಾಗಲೀ ಪರಕೀಯ ಸರಕಾರದ ಮೇಲಾಗಲೀ ಹೊರಿಸಿ ಬಿಡುತ್ತಿ."

"ನಮ್ಮ ನಾಡಿನಲ್ಲೇ ನಾವು ಅಧಿಕಾರ ರಹಿತರಿದ್ದೇವೆ. ಇಂದು ಹಳ್ಳಿಯ ಪ್ಲೇನು ನಡೆಯುತ್ತಿದೆ? ಅತ್ತ ಸ್ವಲ್ಪ ಗಮನ ಕೊಡಿರಿ. ಸರಕಾರದ ಒಟ್ಟು ಬೆಳೆಯಿಂದ ಪ್ರತ್ಯಕ್ಷವಾಗಿ ಮೂರನೇ ಒಂದಂಶವನ್ನು ತೆಗೆದುಕೊಳ್ಳುತ್ತದೆ; ಸಕ್ಕರೆ, ಕಾಫಿ, ಚಿಮಿಣೆಣ್ಣೆ ಹಾಗೂ ಬಟ್ಟೆ ಮುಂತಾದ ನಾಗರಿಕತೆಯ ಅವಶ್ಯಕ ವಸ್ತುಗಳಿಗೆ ಇನ್ನೊಂದು ಮೂರನೇ ಒಂದಂಶವು ಹೋಗುತ್ತದೆ. ಮತ್ತೆ ಉಳಿದಪಾಲು ಹಳ್ಳಿಯಲ್ಲಿರುತ್ತದೆ— ಉಳಿದುದನ್ನು ನಾವು ಉಪ್ಪು ಮಾಡಬೇಕಾಗುತ್ತದೆ, ನವನಾಗರಿಕತೆಯು ಬಿರುಗಾಳಿ ಹಾಗೂ ಸರಕಾರದ ಜಲಪ್ರವಾಹ—ಇವುಗಳೆರಡರಿಂದಲೂ ದೂರ ನಮಗೆ ರಕ್ಷಣೆಬೇಕು. ನಾವು ಚೆನ್ನಾಗಿ ಸಾಕಲ್ಪಟ್ಟಿರುವದಿಲ್ಲ ಅನ್ನುವದು ಆಶ್ಚರ್ಯದ ಸಂಗತಿ ಅಲ್ಲ; ಅಲ್ಲದೆ ಜಮೀನು ಚೆನ್ನಾಗಿ ಬೆಳೆಕೊಡದಿರಬಹುದು. ಹಸಿದಿರುವ ಹೊಟ್ಟೆಯು ಮೆದುಳನ್ನು ಆಲೋಚಿಸಲು ಬಿಡುವದಿಲ್ಲ. ಅಂತಹ ಮೆದುಳುಗಳು ತಮ್ಮ ಭವಿಷ್ಯದ ಕುರಿತು ಯೋಗ್ಯ ಉಪಾಯಗಳನ್ನು ಕಂಡು ಹಿಡಿಯಲಾರವು, ಅಲ್ಲದೆ ಅಶಕ್ತವೂ ಇವೆ.'

"ಅದು ನಿಜ, ರಾಮಚಂದ್ರ ವ್ಯವಸಾಯವೇ ಮುಖ್ಯವಾಗಿರುವ ದೇಶಗಳಲ್ಲಿ ಸರಕಾರವು ನೀರಾವರಿಯತ್ತ ವಿಶೇಷ ಗಮನವನ್ನು ಕೊಡಬೇಕು. ಆದರೆ ಸಂಪ್ರದಾಯವು ಪೌರೇಯ ಇಲಾಖೆಯ ಕೆಲಸವನ್ನು ಬೇರೆ ವಿಧದಲ್ಲಿ ರೂಪಿಸಿದ್ದು; ಪದ್ಧತಿಗಳನ್ನು ಕಾಯುವದಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತದಲ್ಲದೆ ಬದಲಾಗುತ್ತಿರುವ ಅವಶ್ಯಕತೆಗಳಿಗೆ ಅನುಗುಣವಾಗಿ ಉತ್ಪನ್ನವಾಗುವ ಧೋರಣೆಗಳಿಗೆ ಅಲ್ಲ. ಎಳೆ

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶೀ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

NAVAYUGA 17—3—1966

Registered with the Registrar
of News Papers for India
under No. R. N. 3546/'57

REGD. No: B. G: 176
LICENCE No. 31
Licensed to Post without Prepayment

ತವು ಮೇಲಿಂದ ಅಥವಾ ನಿಮ್ಮಿಂದ-ಜನತೆಯಿಂದ—ಬರಬೇಕಾಗಿದೆ. ಆಗ ವಾತಾವರಣವು ಬದಲಾಗುತ್ತದೆ. ಒಬ್ಬ ಮನುಷ್ಯನು ಏನು ಮಾಡಿಯಾನು? ಕಂದಾಯ ಖಾತೆಯ ಹಿರಿಯ ಸದಸ್ಯನಾದರೂ ಏನು ಮಾಡಿಯಾನು? ನನ್ನ ದಿನದ ಕೆಲಸವನ್ನು ನಾನು ಮಾಡಿದ್ದೇನೆ. ಈಗ ತರುಣರು ತಮ್ಮ ಭುಜಬಲವನ್ನು ತೋರಿಸಬೇಕು." ದಯೊಳುವಿನಂತೆ ಕೆಡೆಲರು ನಗಾಡಿದರು.

"ಒಬ್ಬನೇ ಒಬ್ಬ ಮನುಷ್ಯನು ಕೂಡಾ ಬಹಳಷ್ಟು ಕಾರ್ಯಗಳನ್ನು ಮಾಡಬಹುದು. ಆದರೆ ಹಾಗೆ ಮಾಡಿದಲ್ಲಿ ಹಿರಿಯ ವ್ಯಕ್ತಿಗಳಿಗೆ ಮಾತ್ರ ಗೌರವವಿದೆ. ಒಬ್ಬನೇ ಒಬ್ಬನು ಉತ್ಸಾಹದಿಂದ ಮೊದಲ ಚಕ್ರವನ್ನು ಚಲಿಸುವಂತೆ ಮಾಡಿದರೆ ಸಾಕು. ಇತರವುಗಳು ಗರಗರನೆ ಉರುಳುತ್ತ, ಗಲಗಲ ಶಬ್ದಗೈಯ್ಯುತ ಹಿಂಬಾಲಿಸುತ್ತವೆ. ನೋಡಿರಿ. ಹಳ್ಳಿಯವರನ್ನು ದೇವಸ್ಥಾನದ ಪುನರುಜ್ಜೀವನದ ಕೆಲಸಕ್ಕಾಗಿ ನಾನು ಪ್ರೇರೇಪಿಸಿದ್ದೆ, ಒಂದು ದಿನ ಪೂರ್ಣ ಹಳ್ಳಿಯವರೆಲ್ಲರೂ ಕಲಿತು ಕೆಲಸ ಮಾಡುವಂತೆ ಮಾಡಿದೆ. ಅದಕ್ಕೆ ಪ್ರತಿಯಾಗಿ ಕೇವಲ ಊಟವನ್ನು ಮಾತ್ರ ನಾವು ಕೊಟ್ಟಿದ್ದೇವೆ. ನಮಗದಕ್ಕೆ ನೂರು ರೂಪಾಯಿ ಖರ್ಚಾಗಿದೆ. ಆದರೆ ಅದೇ ಕೆಲಸಕ್ಕೆ ಸಾರ್ವಜನಿಕ ಕೆಲಸದ ವಿಭಾಗದವರು ಸಾವಿರ ರೂಪಾಯಿಯ ಅಂದಾಜುಪತ್ರವನ್ನು ಮುಂದಿಡುತ್ತಿದ್ದರಲ್ಲದೆ, ಮೂರು ತಿಂಗಳ ಸಮಯವನ್ನೂ ಕೇಳುತ್ತಿದ್ದರು. ಬಂಟವಾಳ ಹಾಗೂ ಕಾರ್ಯಕ್ಕೆ ವಿರೋಧವಿದೆ, ಮಿರಾಸದಾರರಿಗೂ ಒಕ್ಕಲಿಗರಿಗೂ ವಿರೋಧವಿದೆ. ಈ ಇಬ್ಬರ ದ್ವೇಷದ ಮಧ್ಯೆ ನೆಲಬಣಗಿ ಯಾರಿಗೂ ಕರುಣೆಯನ್ನು ತೋರಿಸುವುದಿಲ್ಲ. ಸರೋವರದ ಸಮೀಪ ಒಂದೆಡೆಯಲ್ಲಿ ನೀರು ಸಿಗಬಹುದೆಂಬ ಕಲ್ಪನೆ ನನ್ನಲ್ಲುಂಟಾಯಿತು. ಒಡನೆ ಕಡಿಮೆ ಖರ್ಚಿನಲ್ಲಿ ಜನರನ್ನು ಸೇರಿಸಿ ಕೆಲಸಕ್ಕೆ ಪ್ರಾರಂಭಿಸಿದೆ. ಬೆಳೆಯನ್ನು ನಗಿಸಲು ಈಗಲೂ ಅಲ್ಲಿ ಬೇಕಾದಷ್ಟು ನೀರು ಸಿಗುತ್ತದೆ. ಹಾಗೆ ದಾರಿಯನ್ನು ತೋರಿಸುದರಿಂದ ಅವರೀಗ ದೊಡ್ಡ ಕಾಲುವೆಯನ್ನೇ ಕಡಿದಿದ್ದಾರೆ. ಅದೀಗ ಕೆಲ ಎಕ್ರೆ ಭೂಮಿಯ ಬಣ್ಣವನ್ನು ಬಗೆಹರಿಸಿದೆ. ಇನ್ನೊಂದು ಹಳ್ಳಿಯೂ ಅದೇ ನೀರಿನ ಮೇಲೆ ಕಣ್ಣು ಹಾಕಿದರೆ ಪುನಃ ತೊಂದರೆ ಪ್ರಾರಂಭವಾಗುತ್ತದೆ, ಒಳ ಜಗಳಗಳ ಆರಂಭವಾಗುತ್ತದೆ.

ಕೆಡೆಲರು ಕುತೂಹಲದಿಂದ ಕೇಳುತ್ತಿರುವದನ್ನು ಕಂಡ ರಾಮು ಮುಂದರಿಸಿದನು. "ಬಡತನವು ಅಕೃತ್ಯಗಳ ತಾಯಿ. ಹಿಂದಿನ ತಲೆಮಾರಿನ ರೈತರು ದರೋಡೆಗಾರರಾಗಿ ಬಿಟ್ಟಿದ್ದಾರೆ. ನೀವು ನನಗೆ ಸಹಕಾರದಿಂದ ಒಂದು ಲಕ್ಷ ರೂಪಾಯಿಯನ್ನು ಕರುಣಿಸಿದಲ್ಲಿ ಕೆಲಸವನ್ನು ನಾನು ಮುಂದರಿಸಿ, ಬರುವ ಮಳೆಗಾಲದಲ್ಲಿ ಸರೋವರವು ನೀರಿನಿಂದ ತುಂಬುವಂತೆ ಮಾಡುತ್ತೇನೆ. ಈಗ ಹಾಕಿದ ಒಂದು ಲಕ್ಷ ಭಂಡವಾಳವು ಒಂದು ವರ್ಷದಲ್ಲಿ ಮೂವತ್ತು ಲಕ್ಷ ಬೆಲೆ ಬಾಳುವಷ್ಟು ಧಾನ್ಯವನ್ನೂ, ದೇಶದಲ್ಲಿ ತೃಪ್ತಿಯನ್ನು ಕೊಡುತ್ತದೆ. ಒಂದು ಮಿಲಿಯದ ಕಾಲಂಶ ಜನರಲ್ಲಿ—ಸಾಧಾರಣ ಇಪ್ಪತ್ತೈದು ಹಳ್ಳಿಗಳಲ್ಲಿ—ಶಾಂತಿ ಹಾಗೂ ಸಸಮೃದ್ಧತೆಯು ಬೀಡು ಬಿಡುವಂತೆ ಮಾಡಬಲ್ಲೆ."

"ಶ್ರೀ ರಾಮಚಂದ್ರ, ಈ ಎಲ್ಲಾ ವಿಷಯಗಳನ್ನು ನನಗೆ ತಿಳಿಸಿ ಬಹಳ ಉಪಕಾರ ಮಾಡಿದೆ. ನಿನ್ನಲ್ಲಿರುವ ಅಭಿಪ್ರಾಯಗಳೇ ನನ್ನಲ್ಲೂ ಬಂದಿವೆ. ನಾವೀಗ ಹಣವನ್ನು ಸುರಿಸುತ್ತಿರುವದು ಕೇವಲ ಸುಖೋಪಭೋಗಿ ಕೆಲಸಗಳಿಗಾಗಿ. ಯಾರಾದರೂ ಕೆಲವರು ಪ್ರಪಂಚದ ಜನರಿಗೆಲ್ಲರಿಗೂ ಸಾಕಾಗುವಷ್ಟು ಧನಸ-ಧಾನ್ಯಗಳನ್ನು ಬೆಳೆಸಲೇ ಬೇಕು. ನೀನು ಈಗ ಹೊಸ ಬೆಳಕನ್ನು ತೋರಿಸಿದೆ. ಇಲ್ಲೀಗ ಪ್ರಾಂತ್ಯಾಧಿಕಾರಿಗಳಿರುತ್ತಿದ್ದಲ್ಲಿ ನಗರ ರಕ್ಷಕರಿಗಾಗಿ ಮೂರು ಲಕ್ಷ ರುಂದು ವೆಚ್ಚ ಮಾಡುವ ಬದಲು ನೀರಾವರಿ ಕೆಲಸಗಳಿಗಾಗಿ ಲಕ್ಷ ರೂಪಾಯಿ ಕೊಡಲು ಹಿಂಜರಿಯುತ್ತಿರಲಿಲ್ಲ. ರಾಮಚಂದ್ರ, ಈ ಕಾರ್ಯಕ್ಕಾಗಿ ನನ್ನಿಂದಾದಷ್ಟು ನಾನು ಪ್ರಯತ್ನಿಸುತ್ತೇನೆ. ನಿನಗಾಗಿ ಹಾಗೂ ಈ ಇಪ್ಪತ್ತೈದು ವರ್ಷಗಳಿಂದ ನಾನು ಉಪ್ಪನ್ನು ತಿಂದಿರುವ ನಾಡಿಗಾಗಿ ನನ್ನಿಂದಾದಷ್ಟು ಪ್ರಯತ್ನಿಸುತ್ತೇನೆ."

(ಮುಂದುವರಿಯುವುದು.)

ನಗು, ನೀನು ನೀನಗುತ್ತಿದ್ದರೆ...

ಒಬ್ಬ ತನ್ನ ಮಿತ್ರನನ್ನು ಆಶ್ಚರ್ಯದಿಂದ ನೋಡುತ್ತ ಪ್ರಶ್ನಿಸಿದ—"ಹಾಗಾದರೆ ನೀನು ನಿನ್ನ ಮಗಳ ಮದುವೆಯ ದಿನ ಮನೆಯಲ್ಲಿದ್ದಿರಲಿಲ್ಲವೇ? ಮತ್ತೆಲ್ಲಿ ಹೋಗಿದ್ದೆ?"

ಉತ್ತರ ಬಂತು— "ನನ್ನ ಅಳಿಯನಿಗಾಗಿ ಕೆಲಸ ಹುಡುಕಲು ಹೋಗಿದ್ದೆ."

o o o

ಡಾಕ್ಟರರೊಬ್ಬರು ತಮ್ಮ ಗೆಳೆಯನೊಂದಿಗೆ ವಾಕಿಂಗ್ ಹೊರಟಿದ್ದರು. ಅಕಸ್ಮಾತ್ ದೂರದಲ್ಲಿ ಬರುತ್ತಿದ್ದ ವ್ಯಕ್ತಿಯೊಬ್ಬನ ಮೇಲೆ ಅವರ ದೃಷ್ಟಿ ಬಿತ್ತು. ತತ್‌ಕ್ಷಣವೇ ಅವರು ತಮ್ಮ ಗೆಳೆಯನನ್ನೆಳೆದುಕೊಂಡೇ ಪಕ್ಕದ ಗಲ್ಲಿಯನ್ನು ಪ್ರವೇಶಿಸಿದರು. ಮಿತ್ರನು ಆಶ್ಚರ್ಯದಿಂದ ಪ್ರಶ್ನಿಸಿದ—"ಇದೇನು ಹೀಗೆ?"

ಡಾಕ್ಟರರೆಂದರು—"ಅಲ್ಲಿ ಬರುತ್ತಿದ್ದಾನಲ್ಲ; ಅವನ ಹೆಂಡತಿಗೆ ನಾನೊಮ್ಮೆ ಚಿಕಿತ್ಸೆ ಮಾಡಿದ್ದೆ. ಅಂದಿನಿಂದ ಆತನಿಗೆ ನನ ಮೇಲೆ ಎಲ್ಲಿಲ್ಲದ ಸಿಟ್ಟು."

"ಅದೇಕೆ? ಅವನ ಹೆಂಡತಿ ಸತ್ತು ಹೋದಳೇ?"

"ಇಲ್ಲ ಮಹಾರಾಯ! ಅದೇ ಈಗ ಫಜೀತಿಗಿಟ್ಟು ಕೊಂಡಿದೆ!"

o o o

ಯಜಮಾನಿ:— "ನೋಡು. ನೌಕರಿಗೆ ಇಟ್ಟುಕೊಳ್ಳುವ ಮೊದಲು ಒಂದು ವಿಷಯವನ್ನು ನಿನಗೆ ಸ್ಪಷ್ಟವಾಗಿ ತಿಳಿಸಿಬಿಡುತ್ತೇನೆ. ಕೆಲವು ದಿನ ಕೆಲಸ ಮಾಡಿ, ನೌಕರಿಯನ್ನು ಬಿಟ್ಟು ಓಡಿಹೋಗುವ ಜನರನ್ನು ಕಂಡರೆ ನನಗಾಗದು. ನೀನೂ ಸಹ ಕೆಲಸ ಕಲಿತು ನಾಲ್ಕಾರು ತಿಂಗಳುಗಳೊಳಗೆ ಓಡಿಹೋಗುವವನೋ ಹೇಗೆ? ಹೇಳಿ ಬಿಡು."

ನೌಕರ:— "ಈ ಬಗ್ಗೆ ನೀವೇನೂ ಚಿಂತಿಸಬೇಡಿರಿ. ಬಾರಿ ಬಾರಿಗೂ ಜಾಗ ಬದಲಿಸುವ ಅಭ್ಯಾಸವೇ ನನಗಿಲ್ಲ. ಏಳು ವರ್ಷಗಳಿಂದಲೂ ನಾನು ಒಂದೇ ಜಾಗದಲ್ಲಿದ್ದೆ."

ಯಜಮಾನಿ:—"ಎಲ್ಲಿ?"—ಉತ್ಸುಕತೆಯಿಂದ ಕೇಳಿದಳು.

ನೌಕರ:— "ಜೈಲಿನಲ್ಲಿ."

o o o

ಅಧ್ಯಾಪಕ:— "ರೈಲ್ವೇ ಲೈನಿನ ಮಧ್ಯದಲ್ಲಿ ಒಂದಿಷ್ಟು ಜಾಗವನ್ನೇಕೆ ಬಿಟ್ಟಿರುತ್ತಾರೆ?"

ರಮೇಶ:— "ಕಬ್ಬಿಣವನ್ನು ಉಳಿಸಲಿಕ್ಕಾಗಿ."

o o o

ಭೂಗೋಲದ ಶಿಕ್ಷಕ:— ಶಾಸ್ತ್ರೀಜಿಯವರ ಮೃತ್ಯುವಿನ ಸುದ್ದಿ ವಿದ್ಯುದ್ವೇಗದಿಂದ ಪ್ರಪಂಚದ ಮೂಲೆ ಮೂಲೆ ಗೊತ್ತಲುಪಿತು....'

ವಿದ್ಯಾರ್ಥಿ:—"ಆ ದಿನ ನೀವು ಪ್ರಪಂಚವು ಉರುಟಾಗಿದೆ ಎಂದು ಹೇಳಿದ್ದಿರಿ. ಹಾಗಾದರೆ ಅದರಲ್ಲಿ ಮೂಲೆಗಳು ಎಲ್ಲಿಂದ ಬಂದುವು?"

o o o

ಒಮ್ಮೆ ಇಬ್ಬರು ಸೈಕಲ್ಲಿನಿಂದ ಕೆಳಗೆ ಬಿದ್ದು ಕೈಕಾಲು ಮುರಿದು ಕೊಂಡರು. ಆ ದಿನವೇ ಅವರು— "ಸೈಕಲ್ ಬಿಡಲು ಚೆನ್ನಾಗಿ ಅಭ್ಯಾಸಮಾಡಿದ ಹೊರತು ನಾನಿನ್ನು ಸೈಕಲ್ . ಮುಟ್ಟುವುದಿಲ್ಲ" —ಎಂದು ಪ್ರತಿಜ್ಞೆ ಮಾಡಿದರು.

o o o

ಮೆಜಿಸ್ಟ್ರೇಟ್:— (ಅಪರಾಧಿಯೊಡನೆ) "ಮೂರು ವರ್ಷಗಳ ಕೆಳಗೆ ಕೂಡ ನೀನು ಇದೇ ರೀತಿ ಒಂದು ಓವರ್ ಕೋಟನ್ನು ಕದ್ದಿದ್ದಿ ಅಲ್ಲವೇ?"

ಅಪರಾಧಿ:— "ಹೌದು ಸ್ವಾಮಿ. ನೀವೇ ಹೇಳಿ; ಒಂದು ಓವರ್ ಕೋಟು ಮೂರು ವರ್ಷಗಳಿಗಿಂತಲೂ ಹೆಚ್ಚು ಬಾಳಿಕೆ ಬಂದೀತೇ?"

o o o

ಇತಿಹಾಸದ ಪಾಠ ನಡೆಯುತ್ತಿತ್ತು. ರಮೇಶ ನಿದ್ರಿಸುತ್ತಿರುವುದನ್ನು ಕಂಡು ಶಿಕ್ಷಕರು ದೊಡ್ಡ ದನಿಯಲ್ಲಿ ಕೂಗಿಕೊಂಡರು. — "ರಮೇಶ, ನೀನು ಎಷ್ಟು ಹೊತ್ತಿನಿಂದ ನಿದ್ದೆ ಮಾಡುತ್ತಿದ್ದೀಯೇ?"

ರಮೇಶ ಎಚ್ಚರಗೊಂಡು ಗಾಬರಿಯಿಂದ ಉತ್ತರಿಸಿದ—"ಗುಪ್ತರ ಸಾಮ್ರಾಜ್ಯವಂಶದಿಂದಲೂ..."

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

24—3—1966

NAVAYUGA

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವೊದಲು—

ರಾಮಚಂದ್ರ ಎರಡುಬಾರಿ ಪ್ರಯತ್ನಿಸಿದರೂ ಬಿ. ಎ. ಪದವಿ ದೊರೆಯಲಿಲ್ಲ. ಜಾನಕಿಯ ಕೈ ಹಿಡಿದು ಮಿತ್ರ ಕೇದಾರಿಯಿಂದ ದೂರವಾಗಿ ತನ್ನ ಆಲವಂತಿಗೆ ಮರಳಿದ. ಅತನ ಜಮೀನು ನೆರೆಗಾಹುತಿಯಾಯಿತು. ರೈತಮುರುಗನ ಸಮಾಧಾನದಿಂದಲೂ ಹತೋಟಿಗೆ ಬಾರದೆ ಆತ ಕಡಪದ ಕಲೆಕ್ಟರ್ ಕೆಡಲರಬಳಿ ಶಿಬಿರ ಗುಮಸ್ತನಾದ. ರಾಮು ಮುಂದೊಂದು ದಿನ ತನ್ನ ಗದ್ದೆ-ತೋಟಗಳನ್ನು ಮಾರಿ ಸಾಲದಿಂದ ಕೈ ತೊಳೆದುಕೊಂಡ. ಅತನ ಕಾರ್ಯದಕ್ಷತೆಯಿಂದ ತೃಪ್ತರಾದ ಕೆಡಲರ ಸಿಫಾರಸಿನಂತೆ ದೂಸಿಯ ಉಪತಾಲೂಕಧಿಕಾರಿಯಾದ ರಾಮು, ಕಂದಾಯಮಂಡಳದ ಹಿರಿಯ ಸದಸ್ಯರಾದರು, ಕೆಡಲರ್.

ರಾಮುವಿನಿಂದ ನಾಮಮಾತ್ರ ಬೆಲೆಗೆ ತೋಟವನ್ನು ಕೊಂಡುಕೊಂಡ ಮುರುಗನಿಗೆ ಕೊಪ್ಪ್ಯ ಗಂಟು ಬಿದ್ದ. ಶ್ರೀಮಂತನಾಗುತ್ತಾ ಬಂದಂತೆ ಮುರುಗ ಸಂಗಾತಿಯ ತಾಳಕ್ಕೆ ಕುಣಿದು ಕುಡಿಯುವುದನ್ನು ಕಲಿತು ಕೊಂಡ, ಸಾಲದ್ದಕ್ಕೆ ಕಳ್ಳಂಗಡಿಯನ್ನೂ ಇಟ್ಟ.

ಕೇದಾರಿ ಉದಯೋನ್ಮುಖ ವಕೀಲನಾದ. ಕೋಕಿಲಂಳೊಂದಿಗೆ ಮದ್ರಾಸದಲ್ಲೇ ಇದ್ದ. ಸುಪ್ರಸಿದ್ಧ ವಕೀಲ ಮಾರ್ಕಂಡಂರವರ ಬೆಂಬಲ ಇವನಿಗಿತ್ತು. ಗಂಡ-ಹೆಂಡಿರಲ್ಲಿ ಸಾಮಂಜಸ್ಯ ಮಾತ್ರ ಕಡಿಮೆಯಿತ್ತು. ಮುಂದೆ—

ಕೇದಾರಿಯು ತನ್ನದೇ ಆದ ವೈಶಿಷ್ಟ್ಯಪೂರ್ಣ ಬಾಳ ದಾರಿಯಲ್ಲಿ ಬಹಳ ಮುನ್ನಡೆದಿದ್ದನು. ಆ ಅನಿವಾರ್ಯತೆಗೆ ಅವನ ಉದ್ಯೋಗದ ಮುಂದಾಳುಗಳು ಕೂಡಾ ತಲೆ ತಗ್ಗಿಸ ಬೇಕಾಗಿತ್ತು. ಕೇದಾರಿ ಮತ್ತು ಮಾರ್ಕಂಡಂ ಆಯ್ಯರರು ತಮ್ಮ ವಾದ ಪ್ರತಿವಾದಗಳ ಮೈತ್ರಿಯು ಪ್ರಯೋಜನದ್ದೆಂದು ಕಂಡುಕೊಂಡಿದ್ದರು. ಅದು ಹಲವಾರು ಜನರಲ್ಲಿ ಹೊಟ್ಟೆಕಿಚ್ಚನ್ನುಂಟು ಮಾಡಿತ್ತು. ಪ್ರವಾಹ ಮಧ್ಯದಲ್ಲಿ ಒಣ ಬೈಹುಲ್ಲಿನ ದೊಡ್ಡ ರಾಶಿಯನ್ನು ಹಾಕಿದರೆ ನದಿಗೆ ಹೇಗಾಗಬಹುದೋ ಅದೇ ರೀತಿ ಆ ಹೊಟ್ಟೆಕಿಚ್ಚು ಜಯಶಾಲಿ ಜನರಿಗೆ ಏನು ತಾನೇ ಮಾಡೀತು? ಏನಾದರೂ ಇದ್ದಲ್ಲಿ—ಅವರು ಪ್ರವಾಹದ ವೇಗವನ್ನು ಸೂಚಿಸಲು ಉಪಯೋಗಕ್ಕೆ ಬರುತ್ತಿದ್ದರು.'

ಮಾರ್ಕಂಡಂರವರ ಮಹತ್ವಾಕಾಂಕ್ಷೆಯು ಎಲ್ಲೂ ಸಿಕ್ಕಿಕೊಳ್ಳುವಂತಹುದಲ್ಲ. ಅದು ತನ್ನ ಗುರಿಯನ್ನು ಗುಪ್ತ ರೀತಿಯಿಂದ ಮುಚ್ಚಿತ್ತು. ಆದರೆ ಕೇದಾರಿ ಹಾಗಿರಲಿಲ್ಲ. ಮಹತ್ವಾಕಾಂಕ್ಷೆಯು ಜಾತಿಗುಣವೆಂದೇ ಆವನು ನಂಬಿಕೊಂಡಿದ್ದನು. ಇತರರು ಮುಖವನ್ನು ಕಂಡೊಡನೆ ಅವರಿಗದು ತಿಳಿಯಬೇಕು ಎಂಬುದೇ ಅವನ ಆಸೆ. ಅವನ ಮೊದಲ ಶಿಕ್ಷಣವು ಎಣಿಕೆ ಹಾಗೂ ಅವಶ್ಯಕತೆಗಳಿಗೆ ಬರೆಕೊಟ್ಟಿತ್ತು. ತನ್ನ ಕಾಮನೆಗಳಿಗನುಗುಣವಾಗಿ ಅವನು ವರ್ತಿಸುತ್ತಿದ್ದನು. ಅವುಗಳ ಯೋಗ್ಯತೆಯತ್ತ ಗಮನ ಹರಿಸುತ್ತಿರಲಿಲ್ಲ. ಅವನ ಪ್ರಪಂಚವೂ ಅದಕ್ಕೆ ತಲೆ ಬಗ್ಗಿಸಿತ್ತು. ಉಪಕಾರ ಸ್ಮರಣಾರ್ಥವಾಗಿ ತಮ್ಮ ಸ್ವಲಾಭಕ್ಕೋಸ್ಕರ ಹೋರಾಡುತ್ತಿರುವ ಒಡನಾಡಿಗಳನ್ನು ಕಂಡು ಅವನು ಕೆಲವೊಮ್ಮೆ ಕೈ ಎತ್ತುತ್ತಿದ್ದನು. ಐದು ವರ್ಷ ನಾಡುಬೀದಿಯಲ್ಲೇ ಕಳೆದಾಗಿದೆ. ಈಗವನಿಗೆ ಬೇರೆಡೆಗೆ ಹೋಗುವ ಆಸೆ ಆಗಿದೆ. ಆದರೆ ಕೋಕಿಲಂ ಮಾತ್ರ ಅವನ ಮಹತ್ವಾಕಾಂಕ್ಷೆಯ ತಾಳಕ್ಕನುಗುಣವಾಗಿ ಹೆಜ್ಜೆಗಳನಿಡುತ್ತಿರಲಿಲ್ಲ. ಆ ರೀತಿಯ ಜೀವನಕ್ಕೆ ಅವಳು ಉತ್ತಮ ಪಾಲುಗಾರ್ತಿಯಾಗಿ ಇರಲಿಲ್ಲ. ಇತರ ಹಿಂದೂ ಹೆಂಗಸರಂತೆ ಗಂಡನಿಗೆ ಬೇಕಾದಂತೆ ಒಗ್ಗಿಸಿಕೊಳ್ಳುತ್ತ ಅವಳು ದಿನಕಳೆಯುತ್ತಿರಲಿಲ್ಲ; ಬದಲು ಧೈರ್ಯದಿಂದ ನ್ಯಾಯಕ್ಕಾಗಿಹೋರಾಡುತ್ತಿದ್ದಳು. ಅವನು ಕೂಡಾ ಅದಕ್ಕೆ ಮಹತ್ವವನ್ನೀಯುತ್ತಿರಲಿಲ್ಲ. ಒಬ್ಬ ಬಡ ಪಂಡಿತನ ಮಗಳು. ಇನ್ನೇನಾಗಿರಲು ಸಾಧ್ಯ? ಗ್ರಹಚಾರ ಬಲದಿಂದ ಒಂದು ನಕ್ಷತ್ರವನ್ನು ಮದುವೆಯಾಗಿದ್ದಾಳೆ!

ಕೋಕಿಲಂ ಪುನಃ ವಿರುದ್ಧ ಸ್ವರ ಎತ್ತಿದಳು. "ನೀವು ಸಂಪಾದಿಸುತ್ತಿರುವದನ್ನೆಲ್ಲಾ ಖರ್ಚುಮಾಡುತ್ತಿದ್ದೀರಿ. ಎರಡು ಹೆಣ್ಣು ಮಕ್ಕಳು ಮತ್ತು ಒಂದು ಗಂಡುಮಗು, ನಮಗೆ ಈ ಪ್ರಾಯದಲ್ಲಿ ಸ್ವಲ್ಪ ಶೇಖರಿಸಿಡಿರೆಂದು ಎಚ್ಚರಿಸಲಿಕ್ಕಾಗಿ ದೇವರು ...."

"ನಿನ್ನ ತತ್ವ ಹಾಗೂ ವಿಷಯಗಳಿಗಾಗಿ ನಾನು ಬದುಕಿ ಕೊಂಡಿದ್ದೇನೆ, ಪ್ರಿಯೆ ಕೋಕಿಲಂ. ದೇವರೇ ವಕೀಲರಾಗಿದ್ದಲ್ಲಿ, ಆದರಲ್ಲೂ ಲಾಭದಲ್ಲಿ ಕಿರಿಯವರಾಗಿದ್ದಲ್ಲಿ ನಮ್ಮ ಕಷ್ಟಗಳು ಅವರಿಗೆ ಅರ್ಥವಾಗುತ್ತಿದ್ದವು. ಅವರೂ ಅದೇರೀತಿ ವರ್ತಿಸಿ ಅದೇರೀತಿಯ ಬುದ್ಧಿವಾದವನ್ನು ಹೇಳಬಹುದು ಒಳ್ಳೆಯ ವಿಷಯಗಳ ಮೇಲೆ ಭಾಷಣ ಕೊಡುವದು ಬಹಳ ಸುಲಭ. ಆದರೆ ನನ್ನ ಉದ್ಯೋಗವಾತ್ರ ತೊಡಕಿನದ್ದು. ಇಲ್ಲಿಯಂಕದಂತೆ ಯಾವದಕ್ಕೂ ಜಯ ಸಿಗುವುದಿಲ್ಲ; ಕನಿಷ್ಟ ಪಕ್ಷ ಯಶವಂತರ ವೇಷವನ್ನಾದರೂ ಹಾಕಿಕೊಳ್ಳಬೇಕು. ಐನೂರು ಸಂಪಾದಿಸ ಬೇಕಾದಲ್ಲಿ ನೀನು ಸಾವಿರವನ್ನು ತೋರಿಸಬೇಕು. ಸಾವಿರವೆಂದು ತೋರಿಸಲಿಕ್ಕೆ ಕನಿಷ್ಟ ಪಕ್ಷ ಆರುನೂರನ್ನಾದರೂ ಖರ್ಚುಮಾಡಬೇಕು. ನೀನು ಗಣಿತದಲ್ಲಿ ಬುದ್ಧಿವಂತಳಿರುವದರಿಂದ—ಪ್ರಿಯೆ—ಎಷ್ಟು ನಷ್ಟವಾಯಿತೆಂದು ಹೇಳಬಿಡು. ನಿಮ್ಮಳ ನೂರು ರೂಪಾಯಿ ನಷ್ಟ ಅವುಗಳನ್ನೆಲ್ಲಾ ನನ್ನ ಮುಂದಾಳು ಮೂರುಸಾವಿರ ಸಂಪಾದಿಸುವಂತೆ ನೀನೂ ಸಂಪಾದಿಸಲು ಪ್ರಾರಂಭಿಸಿದೊಡನೆ ಸರಿಪಡಿಸಿಕೊಳ್ಳಬೇಕು."

"ಕೇವಲ ಮೂರುಸಾವಿರ! ಜನರಾಡಿಕೊಳ್ಳುತಿದ್ದಾರೆ, ಅವರು ಮುವತ್ತು ಸಾವಿರ ಸಂಪಾದಿಸುತಿದ್ದಾರೆಂದು."

"ಅದೆಲ್ಲ ಮೋಸ. ನ್ಯಾಯವಾದಿಯ ನಿಜವಾದ ಆದಾಯವು ಆತನ ಶವ ಸಂಸ್ಕಾರದ ದಿನದಂದು ಮಾತ್ರ ಗೊತ್ತಾಗುತ್ತದೆ. ಸ್ತ್ರೀಯರ ಪ್ರಣಯದ ರಹಸ್ಯಗಳಂತೆ ಅದೂ ಒಂದು ಗಂಡಸರ ರಹಸ್ಯ. ಅದನ್ನೊಬ್ಬರಿಗಿನ್ನೊಬ್ಬರು ತಿಳಿಸಲಾರರು. ಹೆಂಡತಿಯು ಗಂಡನಿಗೂ, ಗಂಡನು ಹೆಂಡತಿಗೂ ತಿಳಿಯಲಾರರು ಪ್ರಪಂಚವು ಕೇವಲ ರಂಗಭೂಮಿ. ಷೇಕ್ಸ್‌ಪಿಯರ್ ನಾಟಕಕಾರರ ಮಾತುಗಳು ಅದೆಷ್ಟು ಸತ್ಯ! ನಾವು ಮುಖಕ್ಕೆ ಬಣ್ಣವನ್ನೂ ಪಂಮುಳಭರಿತ ದೂಳನ್ನೂ ಹಚ್ಚಿಕೊಳ್ಳುತ್ತೇವೆ. ನಮ್ಮ ಹೃದಯಕ್ಕನೇ ಮೋಸಮಾಡಿಕೊಂಡು, ಪ್ರಕಾಶಮಾನ ದಿವಸದ ಚಿಟ್ಟೆಯಂತೆ, ನಾವೂ ಒಂದು ಅಥವಾ ಎರಡು ಘಂಟೆ ಕಾಲ ಕುಣಿಯುತ್ತೇವೆ. ಮೊದಲು ಸುತ್ತು ಮುಗಿಯುವ ಮುಂಚೆಯೇ ರೆಕ್ಕೆ ದಣಿಯುತ್ತದೆ. ಹಾಗೆ ಸಂತೋಷವನ್ನು ಅನುಭವಿಸುವ ಮೊದಲೇ ನಾವು ಸತ್ತು ಹೋಗುತ್ತೇವೆ."

"ನೀವು ಕೂಡಾ ತತ್ವಶಾಸ್ತ್ರದತ್ತ ಎಳೆದುಕೊಂಡು ಹೋಗುತ್ತೀರಾಂದ್ರೆ?"

"ಅದು ಕದ್ದು ನನ್ನ ಮೇಲೆ ಸವಾರಿ ಮಾಡುತ್ತಿದೆ. ನಾನದನ್ನು ಅಲುಗಾಡಿಸಿ ಮುಕ್ತನಾಗಬೇಕು; ಇಲ್ಲವೇ ಅದು ನನ್ನನ್ನು ದುಃಖದತ್ತ ಎಳೆದುಕೊಂಡು ಹೋಗಬೇಕು. ಪುಸ್ತಕಗಳು ಚಿಂತೆಯತ್ತ ಕೈ ತೋರಿಸುತ್ತವೆ. ಚಿಂತೆ ಎಂದರೆ ಕಲ್ಪನಾ ತರಂಗ. ಕಲ್ಪನಾತರಂಗವೆಂದರೆ ನಷ್ಟ. ಮಡಕೆಯು ಕುದಿಯುವದಿಲ್ಲ, ಪ್ರಿಯ ಕೋಕಿಲಂ, ಆಗ ನೀನು ನನ್ನ ಮೇಲೆ ಇನ್ನಷ್ಟು ಕೋಪಿಸಿಕೊಳ್ಳುತ್ತಿದ್ದೆ. ಒಮ್ಮೆ ನಾನೂ ಬೇರೆ ರೀತಿಯವನಿದ್ದ. ನಮ್ಮ ರಾಮು ಸ್ನೇಹಿತ, ತತ್ವದರ್ಶಕ ಮತ್ತು ಮಾರ್ಗದರ್ಶಕನಾಗಿದ್ದಾಗ, ನನ್ನ ಹೃದಯವು ನಿಷ್ಕಪಟಿಯಾಗಿದ್ದು ಬಡವರನ್ನು ಕಂಡೊಡನೆ ಕನಿಕರದಿಂದ ನೋಯುತ್ತಿತ್ತು. ಆದರೆ ಐದು ವರ್ಷದ ನ್ಯಾಯವಾದಿಯ ಜೀವನವು ಆ ಎಲ್ಲಾ ತತ್ವಗಳಿಗೆ ತಿಲಾಂಜಲಿಯನ್ನೀಯುವಂತೆ ಮಾಡಿದ. ಜೀವನವು ನಿರ್ದಯಿಯಾಗಿದ್ದರೂ ನಿಜ. ಇದನ್ನು ತಿಳಿದುಕೊಳ್ಳದಿರುವ ಮನುಷ್ಯ ಮುಳುಗಿ ಹೋಗುತ್ತಾನೆ. ಆತನ ಆಲಾಪನೆಗಳೆಲ್ಲಾ...."

"ಎಲ್ಲದಕ್ಕಿಂತಲೂ ರಕ್ಷಿಸಿಕೊಳ್ಳಲು ಗೊತ್ತಿರಬೇಕು. ಈಗ ನೋಡಿ ನಿಮ್ಮ ಮಕ್ಕಳು ಹಾಗೂ ನಾನು ಈ ರೀತಿ ಬಡತನದಲ್ಲಿ ಜೀವನವನ್ನು ಸಾಗಿಸುತ್ತ ಇರುವಾಗ ನಿಮ್ಮ ಕಷ್ಟಕ್ಕೆ ನೀವು ಅದು ಹೇಗೆ ದುಂದು ವೆಚ್ಚದಲ್ಲಿ ಲೀನರಾಗಿರುತ್ತೀರಿ?" ಕೋಕಿಲಂ ಕೇಳಿದಳು.

"ಅದಕ್ಕೆ ಸಹಾಯ ಮಾಡಲು ಸಾಧ್ಯವಿಲ್ಲ, ರಾಣಿ. ಯಾವಾತನು ರಂಗಮಂಟಪದ ಮೇಲೆ ಹೋಗುತ್ತಾನೋ, ಅವನು ಬತ್ತಲೆಯಾಗಿ ಹೋಗುವ ಸಾಹಸಕ್ಕೆ ಕೈ

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ, ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಬದಿ ಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

೬೩ ವರ್ಷ ಪ್ರಾಯದ ವಿಯತನಾಮಿ ರೈತನು ತನ್ನ ಅಮೆರಿಕನ್ ವೈದ್ಯರೊಡನೆ ಸರಸಸಲ್ಲಾಪದಲ್ಲಿ ತೊಡಗಿದ್ದಾನೆ. ಬೆನ್ನಲ್ಲಿ ಹುದುಗಿದ್ದ ಗುಂಡನ್ನು ಯಶಸ್ವಿಯಾಗಿ ಈ ವೈದ್ಯ ತೆಗೆದು ಈತನಿಗೆ ಜೀವದಾನ ಮಾಡಿದ್ದಾನೆ.

ನವಯುಗ

ಸಂಪುಟ ೪೫ | ಉಡುಪಿ | Vol. 45
ಸಂಚಿಕೆ ೨೮ | ೨೪—೩—೧೯೬೬ | No. 28

ಅತಿರೇಕಾಚರಣೆ

ಭಾರತದ ಕೆಚ್ಚಿನ ರಾಜ್ಯಗಳಲ್ಲೊಂದು ಪಂಜಾಬ. ದೇಶವು ಸ್ವತಂತ್ರಗೊಂಡಾಗ ಅದನ್ನು ವಿಭಜಿಸುವುದು ಅಗತ್ಯವಾಯಿತು. ಮತ್ತೆ ಈಗ ಪಂಜಾಬಿ ಸುಬಾವನ್ನು ಬೇಡುವವರ ಆತ್ಮ ತೃಪ್ತಿಗಾಗಿ ಪುನಃ ಒಡೆಯುವುದು ಅನಿವಾರ್ಯವಾಗಿ ಪರಿಣಮಿಸಿದೆ. ಸಂತ ಫತೇ ಸಿಂಗರು ಕಾಂಗ್ರೆಸ್ ಕಾರ್ಯಕಾರಿಣಿಯು ಹಾಗೂ ಸಂಸದೀಯ ಉಪಸಮಿತಿಯ ವರದಿಯನ್ನು ಕೇಳಿ ಆನಂದತುಂದಿಲರಾಗಿದ್ದಾರೆ. ಪಂಜಾಬಿಗಳ ಬಹುದಿನಗಳ ಬಯಕೆ ಪೂರ್ಣಗೊಳ್ಳುವ ಕಾಲ ಬಂದಿದೆಯೆಂದುದ್ಗರಿಸಿದ್ದಾರೆ. ಸಾಮೂಹಿಕವಾಗಿ ಎಲ್ಲ ರಾಜಕೀಯ ಧುರೀಣರೂ ಪಂಜಾಬಿ ವಿಭಜನೆಯನ್ನು ಸ್ವಾಗತಿಸಿದ್ದರೂ ಭಾರತೀಯ ಜನಸಂಘವು ವಿರೋಧಿಸುತ್ತದೆ. ಈ ಪಕ್ಷವು ಭಾಷಾವಾರು ವಿಂಗಡಣೆಯನ್ನೇ ಸಮ್ಮತಿಸುವುದಿಲ್ಲ, ಇರಲಿ.

ಪಂಜಾಬವನ್ನು ಒಡೆಯುವ ನಿರ್ಧಾರಕ್ಕಿಂತ, ಅದಾದ ಮೇಲೆ ಆ ಸಂಬಂಧದಲ್ಲಿ ನಡೆದ ಹಿಂಸಾಕೃತ್ಯಗಳು ಕೇಳುವುದಕ್ಕೂ ನೋಡುವುದಕ್ಕೂ ಭೀಕರವಾದುವು. ಪೂರ್ವದಲ್ಲಿ ಮಿಜೋ ಗುಡ್ಡಗಾಡು ಮತ್ತು ಬಂಗಾಲದ ಹಿಂಸಾಕೃತ್ಯಗಳ ಹಿನ್ನೆಲೆಯಲ್ಲಿ ಪಶ್ಚಿಮದ ಈ ಹಿಂಸಾಕಾಂಡ ಆರಂಭವಾಯಿತು. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ನಷ್ಟವನ್ನುಂಟು ಮಾಡಿದುದಲ್ಲದೆ ಮೂವರನ್ನು ಸಜೀವ ಸುಡುವ ದುಸ್ಸಾಹಸಕ್ಕೂ ಹಿಂಸಾಚಾರಿಗಳು ಮುಂದುವರಿದರು—ಮರಣಗೊಂಡವರೂ ಅನೇಕರು. ಇದು ಪ್ರಜಾಪ್ರಭುತ್ವಕ್ಕೆ ಶೋಭೆ ನೀಡುವುದಿಲ್ಲ, ಅದರ ಮುಖವನ್ನು ಲಜ್ಜಾವನತ ಮಾಡಿಯೇ ಮಾಡುತ್ತದೆ. ಹಿಂಸಾಚಾರಗಳಿಂದ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ, ಅದು ಮತ್ತಷ್ಟು ಹಿಂಸೆಗಳಿಗೇನೇ ಎಡೆ ಮಾಡಿಕೊಡುತ್ತದೆ ಎಂದು ಮಹಾತ್ಮಾ ಗಾಂಧಿಯವರು ತಿಳಿದು ತನ್ನ ಅಹಿಂಸಾತ್ಮಕ ಅಸಹಕಾರ ಆಂದೋಲನವನ್ನು ಜನತೆಯ ಮುಂದಿಟ್ಟರು. ಭಾರತೀಯರು ಈ ವಿನೂತನ ಅಸ್ತ್ರವನ್ನು ಸ್ವೀಕರಿಸಿ ಉತ್ತಮ ರೀತಿಯಲ್ಲೇ ಅದನ್ನು ಪ್ರಯೋಗಿಸಿದರು; ಯಶಗಳಿಸಿದರು. ಅಂತಹ ಭಾರತೀಯ ಅದ್ವಿತೀಯ ಪರಂಪರೆಯನ್ನು ನಾವು ಮುಂದುವರಿಸಬೇಡವೆ? ಪಂಜಾಬದ ಹಿಂಸಾಕಾಂಡವನ್ನು ಕೇಳಿದವರು ಅದು ಮಾನವತೆಯಲ್ಲ, ಗಾಂಧಿಯ ನಾಡಿಗೆ ಉಚಿತವಾದುದಲ್ಲ—ಎಂದು ಟೀಕಿಸಿಯೇ ಟೀಕಿಸಬೇಕಾಗುತ್ತದೆ. ರಾಜ್ಯದ ಶಾಂತಿ-ಸುವ್ಯವಸ್ಥೆ ಮತ್ತು ರಕ್ಷಣೆಗಾಗಿ ಸರಕಾರ ತೀವ್ರಕ್ರಮ ಕೈಗೊಳ್ಳುವುದೂ ಅನಿವಾರ್ಯವೇ. ಪುಂಡಾಟಿಕೆಯ ಕಿಡಿಗೇಡಿಗಳಿಗೆ ಇಡಿಯ ರಾಜ್ಯದ ವಿತ್ತ ಜೀವಿತಗಳಿಗೆ ಆಪತ್ತು ತಂದೊಡ್ಡಲು ಬಿಡುವುದು ಸಾಧ್ಯವಿಲ್ಲ: ಭಾವೋದ್ವೇಗ ಬಲಿತಾಗ ಮಾನವ ದಾನವನಾಗಿ ವರ್ತಿಸುವುದು ಸಹಜವಾದರೂ ಅಂತಹನ ಉಪಟಳದಿಂದ ಇತರರನ್ನು ರಕ್ಷಿಸದೆ ಹೋದರೆ ಅರಾಜಕತೆ ತಲೆದೋರುತ್ತದೆ. ಆದುದರಿಂದಲೇ ಪಂಜಾಬಿ ಸರಕಾರ ಈ ಬಗೆಯ ದಾನವರ ಮೇಲೆ ಎಲ್ಲೆಂದರಲ್ಲಿ ಗುಂಡು ಹಾರಿಸಿ ಬಿಡುವಂತೆ ಆಜ್ಞೆ ನೀಡಿದೆ—ಅನ್ಯಮಾರ್ಗವಿಲ್ಲ.

ಸಂಸತ್ತಿನ ವಿಭಿನ್ನ ಪಕ್ಷಗಳ ನಾಯಕರು ಒಂದಾಗಿ ಪಂಜಾಬದ ಉದ್ವೇಗಿಗಳಿಗೆ ಹಿಂಸಾಚರಣೆ ಕೈಗೊಳ್ಳದಂತೆ ವಿನಂತಿಸಿದ್ದಾರೆ. ಪ್ರಧಾನಿಯವರೂ ಸಂತ ಫತೇ ಸಿಂಗರೂ ಯಜ್ಞದತ್ತ ಶರ್ಮರನ್ನು ಉಪವಾಸತ್ಯಜಿಸುವಂತೆ ಕೇಳಿಕೊಂಡಿದ್ದಾರೆ. ಇತ್ತೀಚೆಗೆ ಬಂದಿರುವ ವರದಿಯಂತೆ ಶ್ರೀ ಶರ್ಮರು ಉಪವಾಸ ಮುಗಿಸದೆ ಹೋದರೆ, ಕೆಲವೇ ದಿನಗಳಲ್ಲಿ ಅವರು ಹುತಾತ್ಮರಾಗುವುದು ಖಂಡಿತ. ಆದುದರಿಂದ ನಾನಾ ರೀತಿಯಲ್ಲಿ ಅವರ ಮನವೊಲಿಸುವ ಯತ್ನ ಸಾಗುತ್ತಿದೆ. ಪಂಜಾಬಿ ಸುಬಾವು ವಿಭಜನಾ ಮನೋಭಾವದ ಕುರುಹಲ್ಲ, ಪಂಜಾಬಿ ಭಾಷೆಯನ್ನಾಡುವ ಹಿಂದೂ—ಸಿಕ್ಖ—ಮುಸಲ್ಮಾನ—ಕ್ರೈಸ್ತರೆಲ್ಲರೂ ಒಂದಾಗಿರುವ ರಾಜ್ಯ ಎಂಬ ವ್ಯಾಖ್ಯಾನ ಮಾಡಿದ್ದಾರೆ, ಸಂತ ಫತೇ ಸಿಂಗರು. ಈ ವ್ಯಾಖ್ಯೆಯಲ್ಲಿ ಅಡಗಿರುವ ಸದ್ಭಾವನೆ ಉಚ್ಚ ಮಟ್ಟದ್ದು—ಇದರಲ್ಲಿ ಅತಿಶಯೋಕ್ತಿಯಿದೆ ಎನ್ನುವವರೂ ಇದ್ದಾರೆ. ಆದರೆ, ಒಳಿತನ್ನು ಗ್ರಹಿಸಿ ಕಹಿಯನ್ನು ತ್ಯಜಿಸುವುದು ಮಾತ್ರ ಅತ್ಯಗತ್ಯ. ಪಂಜಾಬಿ ಸುಬಾ ರಚನೆಯ ಬಗ್ಗೆ ನಿರ್ಧಾರಕ್ಕೆ ಬಾರದೆ ಉಳಿದಿದ್ದರೆ, ಫತೇ ಸಿಂಗರ ಉಪವಾಸ ಇತ್ಯಾದಿಗಳು ನಡೆಯುತ್ತಿದ್ದುವು; ನಿರ್ಧಾರಕ್ಕೆ ಬಂದ ಮೇಲೆ ಇನ್ನೊಂದು ಪಕ್ಷದ ಆಗ್ರಹ—ಉಪಸಮಿತಿಯ ವರದಿ ಹೇಳುವಂತೆ, ಸರ್ವಸಮ್ಮತದ ಅಭಿಪ್ರಾಯಕ್ಕೆ ಬರುವುದು ಅಸಾಧ್ಯವಾದುದರಿಂದ ಈ ಅಭಿಪ್ರಾಯ—ಪಂಜಾಬಿ ಭಾಷೆಯಾಡುವ ಪಂಜಾಬಿ ಸುಬಾ ಹಿಂದಿ ಭಾಷೆಯಾಡುವ ಹರಿಯಾನಾ, ಗುಡ್ಡಗಾಡು ಪ್ರದೇಶಗಳನ್ನು ಹಿಮಾಚಲ ಪ್ರದೇಶಕ್ಕೆ ಸೇರಿಸುವುದು.

ಎಂತಹ ಪರಿಸ್ಥಿತಿ ಬಂದರೂ ಪಂಜಾಬಿ ವಿಭಜನೆಯನ್ನು ತಡೆಯುವುದು ಕಷ್ಟಸಾಧ್ಯ. ಕಲುಷಿತಗೊಂಡ ವಾತಾವರಣ ತಿಳಿಯಾಗುವಂತೆ ಮಾಡಬೇಕು. ಭಾಷೆಯ ತಳಹದಿಯ ರಾಜ್ಯ ನಿರ್ಮಾಣದ ತತ್ವವನ್ನು ಒಪ್ಪಿಕೊಂಡ ಕಾಂಗ್ರೆಸ್ಸು ಅದರಂತೆ ನಡೆಯುದು ಗತ್ಯಂತರವೂ ಇಲ್ಲ. ಆದುದರಿಂದ ಇದು ದೇಶೀಯಲ್ಲಿ ಮೂಡ ಬೇಕಾದ ಭಾವನೆಯು ದು. ಒಂದು ಪಂಜಾಬವಿರಲಿ, ಎರಡಿರಲಿ, ಅದು ನಮ್ಮ ಗಡಿಯ ರಾಜ್ಯ. ಇಲ್ಲಿ ಶಾಂತಿ—ಸುವ್ಯವಸ್ಥೆಗಳು ಭದ್ರವಾಗಿರಬೇಕು. ಇಲ್ಲವಾದರೆ, ರಾಷ್ಟ್ರ ಪುರುಷನ ಆರೋಗ್ಯಕ್ಕೆ ನೆಮ್ಮದಿಯಿಲ್ಲ, ಇದಕ್ಕಾಗಿ ಪ್ರತಿಯೊಬ್ಬ ನಾಗರಿಕನೂ ತನ್ನ ಪಾಲಿನ ಕರ್ತವ್ಯವನ್ನು ಅವಶ್ಯ ಮಾಡಲೇಬೇಕು. ಆಪತ್ತಿನಲ್ಲಿಯೂ ಸಂಯತ್ತನ್ನು ಕಾಣುವ ತಾಳ್ಮೆಯನ್ನು ರಾಷ್ಟ್ರ ಪ್ರೇಮಿಗಳು ವಹಿಸಬೇಕು. ಪ್ರಜಾಪ್ರಭುತ್ವ ನೀತಿಗೆ ಅಪಮಾನ ಮಾಡುವಂತಹ ಅತಿರೇಕಾಚರಣೆಗೆ ಯಾರೂ ಹೋಗಬಾರದು. ಹಿಂಸಾಚಾರಗಳು ಯಾವ ಕಾರಣಕ್ಕೇ ಆಗಲಿ ಆಗದಂತೆ ತೀವ್ರ ಎಚ್ಚರಿಕೆ ವಹಿಸಬೇಕು.

ಪ್ರಧಾನ ಮಂತ್ರಿ ಇದಿರಾಗಾಂಧಿಯವರು ಮೊತ್ತಮೊದಲಾಗಿ ವಿದೇಶಯಾತ್ರೆಯನ್ನು, ಪ್ರಧಾನಿಯಾಗಿ, ಕೈಕೊಂಡಿದ್ದು ಅಮೆರಿಕಗೆ ತೆರಳುವರು. ಭಾರತದ ಪ್ರಧಾನಿಯೊಡನೆ ಮಾತನಾಡುವ ಆತುರತೆ ಅಮೆರಿಕನ್ ಅಧ್ಯಕ್ಷರಿಗೆ ಬಹುಕಾಲದಿಂದ ಇತ್ತು. ದಿ। ಪ್ರಧಾನಿ ಶಾಸ್ತ್ರಿಯವರಿಗೆ ಇತ್ತ ಆಮಂತ್ರಣವನ್ನು ಅಧ್ಯಕ್ಷ ಜಾನ್ಸನ್ ಒಮ್ಮೆ ಮುಂದುದರಿಸಿದ್ದರು. ಮುಂದೆ ತಾಷ್ಕೆಂಟ್ ಮಾತುಕತೆಯ ನಂತರ ಜಾನ್ಸನ್ನರನ್ನು ಭೆಟ್ಟಿಯಾಗಲಿದ್ದರು, ಶಾಸ್ತ್ರಿ. ಆದರೆ, ಅವರು ಅಮರರಾದರು; ಅಧ್ಯಕ್ಷ ಜಾನ್ಸನ್ ಇಂದಿರಾ ಗಾಂಧಿಯವರಿಗೂ ಅದೇ ಆಮಂತ್ರಣವನ್ನಿತ್ತರು. ಅದರಂತೆ ಫೆಬ್ರವರಿಯಲ್ಲಿ ನಡೆಯಬೇಕಾಗಿದ್ದ ಈ ಸಂದರ್ಶನ ಈಗ ನಡೆಯುತ್ತಿದೆ. ಈ ವೇಳೆಯಲ್ಲಿ ಇಂದಿರಾ ಲಂಡನ್, ಪ್ಯಾರಿಸ್‌ಗಳಲ್ಲಿಯೂ ಅಲ್ಪ ಕಾಲ ಉಳಿಯುವ ನಿರೀಕ್ಷೆಯಿದೆ.

ಇಂದಿರಾ ಗಾಂಧಿಯವರ ಈ ಸಂದರ್ಶನದ ವೇಳೆ ಅವರಿಗೆ ಹಾರ್ದಿಕ ಸ್ವಾಗ

(ಹತ್ತನೇ ಪುಟ ನೋಡಿರಿ)

ವಚನ ಸುಧೆ

ನಿರರ್ಥಂ ಕಲಹಂ ಪ್ರಾಜ್ಞೋ
ವರ್ಜಯೇತ್ ಮೂಢ ಸೇವಿತಂ
ಕೀರ್ತಿಂ ಚ ಲಭತೇ ಲೋಕೇ
ನ ಚಾನರ್ಥೇನ ಯುಜ್ಯತೇ||

ನಿರರ್ಥಕ ಕಲಹವಾಡುವುದು ಮೂರ್ಖರ ಕೆಲಸ. ಬುದ್ಧಿವಂತರು ಈ ಚಟವನ್ನು ತ್ಯಜಿಸಬೇಕು. ಇದರಿಂದ ಲೋಕದಲ್ಲಿ ಯಶ ಲಭಿಸುತ್ತದೆ ಮತ್ತು ಅನರ್ಥಗಳನ್ನು ಎದುರಿಸುವ ಪ್ರಸಂಗವೇ ಬರುವುದಿಲ್ಲ.

ನರಸಣ್ಣನ ಸರಸ

'ಈ ವರ್ಷ ನಿಮ್ಮ ಕಾಲ ಇದ್ದಂತಿದೆ. ಸರಕಾರ ಧಾನ್ಯ ಎತ್ತುವಳಿಯ ಬೆಲೆಯೇರಿಸೋದಿಲ್ಲಾಂತ ಜಕ್ತಿ ಘೋಷಿಸಿದ್ದಾರ ನೋಡಿ....'

ಗೇಹ ರಾಜ್ಯದಲ್ಲಿ

ಆಳುವುದಕ್ಕಿಂತ ಆಳಿಸಿಕೊಳ್ಳೋದು......

"ಅಲ್ರಿ, ಇದೆಲ್ಲಾ ಏನೂಂತ?"

"ಯಾವುದು?"

"ಅಷ್ಟೂ ತಿಳಿಯೋದಿಲ್ವೇನು?"

"ತಿಳಿಯದೆ ಏನು? ಆದ್ರೂ ನಿನ್ನ ಮುಖದಿಂದಲೇ ತಿಳಿದ್ರೆ ಮತ್ತೆ ಸಂದೇಹಕ್ಕೆ ಎಡೇನೇ ಇರೋದಿಲ್ಲಾಂತ...."

"ಅಲ್ರಿ, ಈ ಜನಗಳು ಎಷ್ಟು ದುಷ್ಟರು?"

"ಯಾರು?"

'ಯಾರು ಅಂತೆ. ನೋಡಿ, ಮಿಜೋ ಗುಡ್ಡಗಾಡಿನ ಜನಗಳು, ಪಶ್ಚಿಮ ಬಂಗಾಲಿಗಳು, ಇನ್ನು, ಪಂಜಾಬಿಗಳು, ಮರಾಠಿಗರು, ಕೇರಳಿಗರು ಮತ್ತು..."

"ನಿನ್ನ ಪಟ್ಟಿ ಉದ್ದ ಇದೇಂತ ತೋರುತ್ತೆ. ಇರಲಿ. ೪೫ ಕೋಟಿ ಜನರು ೨೦ ರಾಜ್ಯಗಳಲ್ಲಿ ಹಂಚಿ ಹೋಗಿರುವಾಗ..."

"ಅಲ್ರಿ, ನೋಡಿ ಇದೆಲ್ಲಾ ಏನು ವಿಚಿತ್ರಾಂತ?"

"ಯಾವುದು?"

"ನಿಮ್ಮದ್ದೊಂದು. ವಿಷಯ ಗೊತ್ತಿದ್ದೂ ಗೊತ್ತಿದ್ದೂ ಮತ್ತೆ ಯಾವುದು, ಏನೂಂತ ನನ್ನನ್ನೇ ಕೇಳ್ತಿರೋದು..."

'ಇದ್ರಲ್ಲೇನು ತಪ್ಪೇ?"

ಇಲ್ಲಾ ಅಂದನಲ್ಲಾ, ಎಲ್ಲಾ ತಪ್ಪ ನನ್ನದು."

"ಯಾಕೆ?'

'ನೋಡಿ, ಶಾಲೆಯಲ್ಲಿ ಮೇಸ್ಟ್ರು ಕೇಳ್ತಿರ್ತಾರ ಮಕ್ಕಳನ್ನ....'

"ಹ್ಞೂಂ, ಸಾಗಲಿ ನಿನ್ನ...."

'ಮಧ್ವಾಚಾರ್ಯರು ಯಾರು? ಅಂತ. ಅದಕ್ಕೆ ಉತ್ತರ ಹೇಳ್ಬೇಕು ಉಳಿದವರು ಯಾಕೆ ಉತ್ತರ ಗೊತ್ತಿಲ್ವೆ ಅವರಿಗೆ?"

"ಇದು ಒಳ್ಳೆ ಕತೆಯಾಯ್ತಲ್ಲ? ಮುಂದೆ ಕುಳಿತಿರೋ ಶಿಷ್ಯೋತ್ತಮ ಎಷ್ಟನ್ನ ಅರಗಿಸಿಕೊಂಡಿದ್ದಾನೆಂಬುದನ್ನ ಅರಿತುಕೊಳ್ಳೋಕೆ ಕೇಳ್ತಿರ್ತಾರೇನ್ನು...."

"ಓ, ಹಾಗ. ಅಂದ್ರೆ ನನ್ನ ಪರೀಕ್ಷೆ ಮಾಡೋಕೆ ನಿಮ್ಮ ಆಟ...."

"ನಿನ್ನ ಪರೀಕ್ಷೆ? ಅದು ಎಂದೋ ಆಗಿಬಿಟ್ಟಿದೆ."

"ಯಾವಾಗ?"

"ನೋಡು, ಈಗ ನೀನು ಮೇಸ್ಟ್ರು ಮೇಸ್ಟ್ರಾಣಿಯೋ ಆದಿ. ನಾನು....'

'ಅಯ್ಯೋ, ಬಿಡೀಂದ್ರೆ...'

'ಅಲ್ವೆ ಮೇಸ್ಟ್ರಾದವ್ರು ಅಯ್ಯೋ ಬಿಡೀಂದ್ರೇಂತ ಕೂಗಾಡಿದ್ರು, ಶಾಲೆ ನಡಿಯೋದಾದ್ರೂ ಹೇಗೆ?

"ಹೌದ್ರಿ, ಎಲ್ಲ ಗೊತ್ತಿದೆ...."

"ಏನದು ನಿನಗೆಲ್ಲಾ ಗೊತ್ತಿರೋದು?'

"ಪಾಪದ ಹೆಣ್ಮಕ್ಕಳು ಇದ್ರೆ ಅವ್ರನ್ನ ಸತಾಯಿಸೋದು .."

"ಅಂದ್ರೆ?"

"ಅಂದ್ರೆ ಏನು? ನೋಡಿ, ನೀವು ನನ್ನನ್ನ ಗೋಳು ಹೊಯ್ಕೊಳ್ಳೋದಿಲ್ವೆ ಹಾಗೆ..."

'ಶಾಂತಂ ಪಾಪಂ ಶಾಂತಂ ಪಾಪಂ...'

'ಏಕೆ ಕಿವಿ ಮುಚ್ಚಿಕೊಂಡ್ರಿ?'

'ಮತ್ತೆ ಮಾಡೋದಾದ್ರೂ ಏನು?'

'ಯಾಕೆ? ಏನಾಯ್ತು?'

'ಇನ್ನು ಆಗ ಬೇಕಾದಾದ್ರೂ ಏನು?'

ಅಲ್ರಿ, ಏನು ವಿಷ್ಯಾಂತಾಂದ್ರೂ ಹೇಳೀಂದ್ರೆ....'

'ಇನ್ನು ಹೇಳೋಕೆ ಬಾಕಿಯಿರೋದಾದ್ರೂ ಏನು?'

'ಒಳ್ಳೆ ಪಜೀತಿಯಾಯ್ತಲ್ಲ ಇದು?'

'ಅದಕ್ಯಾದ್ರೂ ಮಾಡೋದೇನು?'

'ಏನೂ ಮಾಡಬೇಕಾಗಿಲ್ಲ ನೀವು. ಸದ್ಯ...'

'ಮಾಡಿ ಆಗ ಬೇಕಾದ್ದಾದ್ರೂ ಏನು?'

'ಅಲ್ರಿ, ಸ್ವಲ್ಪ ಇಲ್ಲಿ ಕೇಳೀಂದ್ರೆ....'

'ಕೇಳಿ ಆಗ ಬೇಕಾದ್ದು ಏನು?'

'ಹ್ಞೂಂ....ಸರಿ, ಏನೂ ಇಲ್ಲ; ಏನೂ ಇಲ್ಲ...'

"ಏನಿದ್ರೂ ಆಗೋದೇನು?"

"ಏನೂಆಗೋದಿಲ್ಲಾರೀ, ಆಗಲೆಬೇಕಾದ್ದೂ ಇನ್ನು ಏನೂ ಇಲ್ಲ.. ಆದ್ರೂ..."

"ಹಾಗ ಬಾ ಮತ್ತೆ... ಯಾವಾಗ್ಲೂ ಹೆಂಗಸ್ರೂಂತ ಅವರಿಗೆ ಸಲಿಗೆ ಕೊಟ್ರೆ, ಅಡಿಗೆ ಬಿದ್ರೂ ಮೇಲು ಅಂತಾರೆ. ಈಗ ಹೇಳು, ಇವತ್ತಾದ್ರೂ ನೀನು ಸೋತೆ, ನಾನು ಗದ್ದೆ ಅಲ್ವೆ?'

"ಅಲ್ರಿ, ನಮ್ಮಿಬ್ಬರಲ್ಲಿ ಯಾರು ಗೆದ್ರೆ ಏನು, ಯಾರು ಸೋತ್ರೆ ಏನು?"

"ಇದು ಒಳ್ಳೆ ಮಾತು. ಪಂಜಾಬಿಗಳು ಪಂಜಾಬದಲ್ಲಿದ್ದರೇನು, ಸುಬಾದಲ್ಲಿದ್ದರೇನೂಂತ ಕೇಳಿದ ಹಾಗೆ ಹೇಳ್ತಿಯಲ್ಲಾ?'

"ಹೌದು...'

"ಹೌದಂತೆ, ಮತ್ಯಾಕೆ ಪಂಜಾಬಿ ಸುಬಾ ಕೊಡ್ಲೇಬೇಂತ ಡಂಗುರ ಸಾರಿದ್ದು ....?"

'ಮತ್ತೆ ಮಾಡೋದಾದ್ರೂ ಏನು? ಬೇಕೂಂತ ಅಮರಣ ಉಪವಾಸ, ಆಗುವವರೆಗೆ, ಈಗ ಬೇಡಾಂತ ಉಪವಾಸ... ಹೀಗೆಲ್ಲಾ ಆದ್ರೆ ನಮ್ಮ ಇಂದಿರಮ್ಮ ಏನು ಮಾಡಬೇಕೂಂತ?"

"ನಾನು ಕೇಳೋದೂ ಅದನ್ನೇ. ಯಾಕೆ ಮಾಡಿದ್ರು ಸಂಬಾವನ್ನ...?"

"ಅಲ್ರಿ, ನೀವೇ ಅಂದಿದ್ದಿರಲ್ಲಾ, ಪಂಜಾಬಿ ಭಾಷೆಯ ರಾಜ್ಯ ನಿರ್ಮಾಣವು ಕಾಂಗ್ರೆಸ್ ನೀತಿಗೆ ಸರಿಯಾದದ್ದೂಂತ...'

'ಹೌದೇ, ರೀತಿ, ನೀತಿಯೆಲ್ಲಾ ಮನುಷ್ಯಮಾಡಿದ್ದು..ಮನುಷ್ಯನಿಗಾಗಿ. ಅದನ್ನು ಯಾವಾಗ ಬೇಕಾದರೂ ಬದಲಾಯಿಸುವ ಅಧಿಕಾರವಿಲ್ವೆ?"

"ಆದ್ರೂ ನೋಡಿ, ಅವು ಆಟದ ಬಯಲಿನ ಚೆಂಡಿನ ಹಾಗೆ ಅಥವಾ ಆಫೀಸಿನ ಅಪ್ರೆಂಟಿಸಿನ ಹಾಗೆ ಇರಬಾರದು ನೋಡಿ....'

"ನೋಡು, ನೀತಿಯೇನೇ ಹೇಳಿದ್ರೂ ನಿನ್ನ ಅಲ್ಲ, ನಮ್ಮ ಇಂದಿರಮ್ಮ ಗಡಿಬಿಡಿ ಮಾಡಬಾರದಿತ್ತು...."

"ಮಾಡದೆ ಇರುತಿದ್ದರೆ, ಆಗಲೂ ಇದೇ ಬಗೆಯ ಗೊಂದಲ ಏಳುತ್ತಿತ್ತು. ಉಪವಾಸ ನಡೆಯುತ್ತಿತ್ತು, ಪ್ರಾಣ ಹಾನಿಯೂ ಆಗುತ್ತಿತು."

'ಹ್ಞೂಂ....ಇದು ಸರಿಯೇ ಅನ್ನು. ಆದರೆ ಈಗ ಬಿರುಗಾಳಿಯೇ ಎದ್ದು ಬಿಟ್ಟಿತು ನೋಡು, ದೇಶದ ಮೂಲೆ ಮೂಲೆಗಳಲ್ಲಿ ಎದ್ದ ಈ ತೂಫಾನು ಹೇಗೆ ಶಾಂತವಾಗುವುದೋ ಗೊತ್ತಾಗೋದಿಲ್ಲ"

"ಶಾಂತವಾಗುವುದು? ಆಗದೆ ಏನಾಗುತ್ತೆ? ಆದರೆ, ಅದಕ್ಕಾಗಿ ಕೆಲವೊಮ್ಮೆ ದೊಡ್ಡ ತ್ಯಾಗ ಮಾಡ ಬೇಕಾಗುತ್ತೆ. ನೋಡಿ, ಮಿಜೋಗಳು ತಲೆ ಬಾಗಿದರೂನ್ನಿ. ಬಂಗಾಲದಲ್ಲಿ ಮುಖ್ಯಮಂತ್ರಿ ಸೇನರು ತಮ್ಮ ಆತ್ಮಾಭಿಮಾನದೊಡನೆಯೇ ಕುಸ್ತಿಯಾಡಬೇಕಾಗಿ ಬಂತು. ಪಂಜಾಬದಲ್ಲಿ ರಾಮ ಕಿಷನ್ ಬಂಡುಗಾರರನ್ನು ಗುಂಡಿಕ್ಕಿ ಕೊಲ್ಲಲು ಆಜ್ಞೆ ನೀಡಬೇಕಾಯಿತು ......"

"ಹೌದು... ಇದೆಲ್ಲಾ ನೋಡುವಾಗ ...."

"ಏನನ್ನಿಸುತ್ತದೆ?"

"ಮತ್ತೇನನ್ನಿಸೋದು? ಯಾರೋ ಹೇಳುತ್ತಿದ್ರು, ಶಾಲೆ ಕಲಿಸೋಕ್ಕಿಂತ ಕಲಿಯೋದೇ ಸುಲಭಾಂತ. ಹಾಗೆಯೇ...."

'ಆಳುವುದಕ್ಕಿಂತ ಆಳಿಸಿಕೊಳ್ಳೋದೇ ಒಳ್ಳೆಯದೂಂತ ಅಲ್ವೆ?"

"ಹ್ಞೂಂ... ಹಾಗೆಯೇ ಅನ್ನು ..."

"ಅದು ಸರೀನ್ನಿ. ರೀತಿ–ನೀತಿ–ಶಿಸ್ತು ಸಭ್ಯತಗಳಿಗೆ ಹೆಸರಾದ ಭಾರತೀಯ ಜನಸಂಘದ ಸದಸ್ಯರೇ ಸಭಾಧ್ಯಕ್ಷರ ಮುಖಕ್ಕೆ ಪಾದರಕ್ಷೆಯ ಪ್ರಹಾರ ಮಾಡಿದರು ಅಂದ್ರೆ ಇನ್ನುಳಿದವರ ಪಾಡೇನು?"

"ಹ್ಞೂಂ, ನೀನನ್ನೋದು ಮಧ್ಯ ಪ್ರದೇಶದ ವಿಧಾನ ಸಭೆಯ ಕಥೆ .."

"ಹೌದು ಹೌದು ... ಅದೇ. ನಮ್ಮ ಕಥೆಯೆಲ್ಲಾ ಭಾರಿ ಚಂದ. ಪ್ರಶ್ನೆ ಪತ್ರಿಕೆ ಬಹಿರಂಗವಾಗಿದೆ. ಅದರ ಪ್ರತಿ ನಮಗೆ ಸಿಗುವಾಗ ತಡವಾಯಿತು. ಆದುದರಿಂದ ಪರೀಕ್ಷೆ ರದ್ದು ಮಾಡಿ, ಮತ್ತೊಮ್ಮೆ ಮಾಡೀಂತ ಒಂದು ಪಕ್ಷ ವಾದಿಸಿದ್ರೆ, ಅದನ್ನ ಪ್ರತಿಭಟಿಸಿ ಇನ್ನೊಂದು ಸರಕಾರ ಯಾವ ಕ್ರಮ ಕೈಕೊಂಡ್ರೂ ಒಂದು ಪಕ್ಷ ಅತೃಪ್ತವಾಗುತ್ತೆ, ದೊಂಬಿ ಏಳುತ್ತೆ..."

"ಎಲ್ಲಾ ಕಡೆಯೂ ಇದೇ ರೋಗ...'

"ಅಲ್ರಿ, ನಮ್ಮ ದೇಶದ ಈ ದುಸ್ಥಿತಿ ದೂರವಾಗೋದೇ ಇಲ್ವೆ?"

"ಆಗದೆ ಉಂಟೆ?"

"ಯಾವಾಗ?"

"ನೋಡು, ಇಂತಹ ಭಿನ್ನತೆಯಿಂದಲೇ ನಮ್ಮ ಇತಿಹಾಸ ಬೆಳೆದು ಬಂದಿದೆ. ಆದರೂ ವಿಚಿತ್ರ ಅಂದರೆ, ಏಕ ಸಂಸ್ಕೃತಿಯಲ್ಲಿ ಬೆಳೆದು ಬಂದಿದ್ದೇವೆ...."

"ಅದು ಸರೀನ್ನಿ. ಈ ಬಗೆಯ ನಮ್ಮ ಚಟ ಕೊನೆಗೊಳ್ಳುವುದು ಸಾಧ್ಯವೇ ಇಲ್ಲವೇ?"

'ಆಗಲೇ ಬೇಕು; ಆಗಿಯೇ ಆಗುತ್ತದೆ.

"ಎಂದು?"

"ಎಂದು ಎಂದು ಇಂದು ಹೇಳುವುದು ಹೇಗೆ? ಕಳೆದು ಕೊಂಡ ಸ್ವಾತಂತ್ರ್ಯವನ್ನು ಮತ್ತೆ ಪಡೆಯ ಬೇಕಾದರೆ, ೧೦೦೦ ವರ್ಷಗಳು ಬೇಕಾದುವು ನಾವು ಅಂದು ಸ್ವಾತಂತ್ರ್ಯವನ್ನು ಮಾತ್ರ ಕಳೆದುಕೊಂಡಿದ್ದವು ಇಂದು ಮೂರು ಅಮೂಲ್ಯ ವಸ್ತುಗಳನ್ನು ಕಳೆದುಕೊಂಡಿದ್ದೇವೆ...."

"ಅವು ಯಾವುವು?"

"ಮೊದಲನೆಯದು ಶ್ರದ್ಧೆ, ಎರಡನೆಯದು ಪ್ರೇಮ ಮತ್ತು ಮೂರನೆಯದು ಶಾಂತಿ..."

"ಅಂದರೆ?"

'ಚಿಕ್ಕ ಮಕ್ಕಳಲ್ಲಿ ಹಿರಿಯನ ಬಗ್ಗೆ ಇರುವ ಶ್ರದ್ಧೆ. ಹೆಂಡತಿಯ ಕಣ್ಣುಗಳಲ್ಲಿ ಗಂಡನ ಬಗ್ಗಿನ ಪ್ರೇಮ, ಮನೆಯಲ್ಲಿನ ಶಾಂತಿ—ಇವು ಮೂರೂ ಒಂದಾದ ವಸ್ತು ಪ್ರಪಂಚದಲ್ಲಿ ಅತಿ ಸುಂದರ. ಈ ಮೂರು ಗುಣಗಳು ದೇಶದ ಜನಜನದಲ್ಲಿ ಮೂಡಿ ಬಂದರೆ, ಆಗಲೇ ದೇಶ ನಂದನವನ...."

"ಇದೆಲ್ಲಾ ಬರಿಯ ಕಲ್ಪನೆ ...'

'ಶಾಂತಿ—ಸಂಮೃದ್ಧಿಯನ್ನು ಕಲ್ಪನೆ ಎಂದು ಕರೆಯುವುದಾದರೆ, ಗುಲ್ಲುಗಲಭೆಗಳೂ ಬರೆಯ ಕಾಲ್ಪನಿಕವೇ....'

'ಒಂದು ವಿಷಯಾರೀ ಶಾಂತಿ-ಸುವ್ಯವಸ್ಥೆಗಳಿಗೆ ಭಗವಂತರುಅವರನ್ನು ಉಗ್ರವಾಗಿ ದಂಡಿಸಬೇಕು. ಹೀಗಾದರೆ, ಗೊಂದಲ ಕಡಿಮೆಯಾದೀತು....'

'ಇದೂ ಕಲ್ಪನೆಯೋ'

'ಏಕೆ?'

'ಏಕೆ ಎಂದರೆ, ನೀವು ನಿಮಗೆ ಬೇಕಾದಂತೆ ಓಡುತ್ತಾ ಬಂದು ನಾಳೆ ಎದ್ದು ಹೊರಟು ಹೋಗಿ. ಉಳಿದವರು ನಿಮ್ಮ ದಂಡಕ್ಕೆ ಹೆದರಿ ಈಗ ಸುಮ್ಮನಿರುತ್ತಾರೆ. ನೀವು ಮಾಡಿದ ಪಾಪದ ಫಲ ನಾಳೆಯವರು ಉಣ್ಣ ಬೇಕಾಗುವುದು. ವಿಲಾಸಿ ಸಾಮ್ರಾಟರ ಬೆನ್ನ ಹಿಂದೆಯೇ ಸಾಮ್ರಾಜ್ಯ ಅಳಿಸಿ ಹೋದಂತೆ....'

'ನೀವನ್ನುವುದರಲ್ಲಿಯೂ ಸತ್ಯಾಂಶವಿದೆಯೆನಿಸುತ್ತದೆ...ಅಂತೂ ನಮ್ಮ ಇಂದಿರಮ್ಮನ ಅದೃಷ್ಟ ಹೇಗಿದೆಯೋ...."

"ಅದೃಷ್ಟ ಚೆನ್ನಾಗಿಯೇ ಇದೆ. ಆದರೆ, ಅದನ್ನ ರೂಢಿಸಿಕೊಳ್ಳಬೇಕಾದರೆ ಭಾರೀ ಪೇಚಾಟವಾಗುತ್ತೆ....'

"ಅಲ್ರಿ, ನೀವೂ ಭವಿಷ್ಯ ಹೇಳೋಕೆ ಹೊರಟಿರೇನು?"

'ನಿಮ್ಮ ಇಂದಿರಾನ ಅಪ್ಪ ಭವಿಷ್ಯವಾದಿಗಳನ್ನ ನಂಬುತ್ತಿರಲಿಲ್ಲ. ಆತನ ಮಗಳೂ ಹಾಗೇನೇ ಇರಬೇಕು...."

"ಒಳ್ಳೆ ಆಲೋಚನೆ ನಿಮ್ಮದು...ನಿಮಗೇನು ಮಂಗ್ಯಾದೆಗಿಂಗ್ಯಾದೆ...."

'ಶ್ಶ್....ಹಾಗೆಲ್ಲಾ ಅನ್ನ ಬೇಡ್ವೇ, ನೆರೆಮನೆಯವರು ಕೇಳಿ ಬಿಟ್ರೆ, ಇದ್ದದ್ದೂ ಹೋಗ್ಬಿಡಬಹುದು....'

'ಹೋಗ್ಲಿ ಬಿಡಿ..."

'ಬೇಡ ಕಣೇ ಬೇಡ....'

'ಸಾಕಪ್ಪ, ಬನ್ನಿ....ಅನ್ನ ಆಕ್ಕಿಯಾಗಿದೆಯೋ ಏನೋ....'

'ಭಾರಿ ಚಲೋದಾಯ್ತು—"

'ಬೇಕಾದ್ರೆ ಮತ್ತೆ ಮಾತಾಡೋಣಂದ್ರೆ....ಹೊಟ್ಟೆ ಭಾರೀ ಹಸಿಯುತ್ತೆ ..'

'ಓ, ಈಗ ಗೊತ್ತಾಯ್ತು- ಏನು ಹೀಗೆಲ್ಲಾ ಅಣಕಲ್ಲು ಉರುಳುತ್ತೇಂತ..'

'ಅಲ್ರಿ ಈ ಹಸಿದ ಹೊಟ್ಟೆ ಹೊತ್ಕೊಂಡು....'

'ಸಾಕು .. ಸಾಕು...ಗೊತ್ತಾಯ್ತು ಅಂದನಲ್ಲ, ಬಂದೆ ...'

'ಬೇಗ ಬನ್ನೀಂದ್ರೆ...'

'ಬಾರೆಂದು ಕರೆದರೂ ಬಾರದಿರುವಷ್ಟು ...'

'ನಿಮ್ಮ ಕಾವ್ಯರಸ ಸವಿದು ಸಾಕಾಯ್ತು

'ಹಾಗಾದರೆ ಇನ್ನು....'

'ಹ್ಞೂಂ..."

—ಗೋರಾ.

ನಗು ನೀನು ನೀ, ನಗುತ್ತಿದ್ದರೆ...

ಒಬ್ಬ ಮುದಿ ನೌಕರ ಒಂದು ದಿನ ಕೆಲಸಕ್ಕೆ ಬರಲಿಲ್ಲ. ಮರುದಿನ ಬಂದ. ಆಗ ಅವನ ಮಾಲಿಕ ಸಿಟ್ಟಿನಿಂದ ಪ್ರಶ್ನಿಸಿದ— "ಮುದಿ ಗೂಬೆಯ ಸವಾರಿ ನಿನ್ನೆಯೆಲ್ಲ ಎಲ್ಲಿದ್ದಿತ್ತು?"

ನೌಕರ— "ನುರದ ಪೊಟರೆಯಲ್ಲಿ"

ಮಾಲಿಕ— "ಕತ್ತೆ!"

ನೌಕರ— "ಅಗಸನ ಬಳಿಯಲ್ಲಿ."

ಮಾಲಿಕ— "ಫಟಿಂಗ!"

ನೌಕರ— "ಅದು ಮಾತ್ರ ನನಗೆ ಗೊತ್ತಿಲ್ಲ."

○ ○ ○

ಒಬ್ಬ ಪೋಲೀಸ್ ಹುಡುಗನೊಡನೆ ಪ್ರಶ್ನಿಸಿದ— "ನಿನ್ನ ಮನೆಯೆಲ್ಲಿದೆ?"

ಹುಡುಗ— "ತೋಟದ ಎದುರು."

ಪೋಲೀಸ್— "ತೋಟವೆಲ್ಲಿದೆ?"

ಹುಡುಗ— "ನಮ್ಮ ಮನೆಯ ಎದುರು."

ಪೋಲೀಸ್ ತುಂಬಾ ಸಿಟ್ಟಿನಿಂದ ಪ್ರಶ್ನಿಸಿದ—"ಅವೆರಡೂ ಎಲ್ಲಿವೆಯೋ....?"

ಹುಡುಗ ಕಕ್ಕಾಬಿಕ್ಕಿಯಾಗಿ ಉತ್ತರಿಸಿದ— "ಎದುರು ಬದುರು"

○ ○ ○

ಆರ್ಯ ಸಮಾಜದ ಉಪದೇಶಕರೊಬ್ಬರಿಗೆ ತುಂಬಾ ಖಾರವಾದ ಉಪ್ಪಿನಕಾಯಿ ತಿನ್ನುವ ಅಭ್ಯಾಸ. ಉಪದೇಶ ನೀಡಲು ಸಂಚಾರಕ್ಕೆ ಹೊರಟಾಗಲೆಲ್ಲ ಅವರು ಖಾರವಾದ ಉಪ್ಪಿನ ಕಾಯಿಯನ್ನೂ ತಮ್ಮ ಜೊತೆಯಲ್ಲಿಯೇ ಕೊಂಡೊಯ್ಯುತ್ತಿದ್ದರು. ಒಂದು ದಿನ ಅವರು ಒಂದು ಹೋಟೆಲಿನಲ್ಲಿ ತಮ್ಮ ಉಪ್ಪಿನ ಕಾಯಿಯ ಡಬ್ಬಿಯನ್ನು ಎದುರಿಗಿಟ್ಟುಕೊಂಡು ಊಟಕ್ಕೆ ಕುಳಿತಿದ್ದರು. ಆಗ ಒಬ್ಬ ಅಪರಿಚಿತ ಅಲ್ಲಿಗೆ ಬಂದು ಅದೇ ಮೇಜಿನ ಇನ್ನೊಂದು ಬದಿಯಲ್ಲಿ ಕುಳಿತುಕೊಂಡು ಊಟಕ್ಕೆ ಪ್ರಾರಂಭಿಸಿದ. ಆತ ಒಂದು ಚೂರು ಉಪ್ಪಿನಕಾಯಿಯನ್ನೂ ಉಪದೇಶಕರಿಂದ ಬೇಡಿ ಪಡೆದ. ಉಪದೇಶಕರು ಕೊಟ್ಟ ಉಪ್ಪಿನಕಾಯಿಯ ಚೂರನ್ನು ಬಾಯಲ್ಲಿಟ್ಟನೋ ಇಲ್ಲವೋ ಅವನ ಕಣ್ಣು—ಮೂಗುಗಳಿಂದ ನೀರು ಸುರಿಯತೊಡಗಿತು. ಅದನ್ನು ಕಂಡು ಉಪದೇಶಕರಿಗೆ ತುಂಬಾ ತೃಪ್ತಿಯೂ ಯಿತು.

"ನೀವು ಒಬ್ಬ ಉಪದೇಶಕರಂತೆ ಕಾಣಿಸುತ್ತಿದ್ದೀರಿ"— ಆ ಅಪರಿಚಿತ ಪ್ರಶ್ನಿಸಿದ.

"ಹೌದು, ನಿಮ್ಮ ಊಹೆ ಸತ್ಯ."

"ನೀವು ನರಕದ ವಿಷಯವಾಗಿಯೂ ಉಪದೇಶಿಸುತ್ತೀರಾ?"

"ಹೌದು. ಅದನ್ನು ನಾನು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಆದುದರಿಂದ ನಾನು ಆಗಾಗ ನನ್ನ ಶ್ರೋತೃಗಳಿಗೆ ನರಕದ ಚಿತ್ರಹಿಂಸೆಯ ಬಗ್ಗೆ, ಅಲ್ಲಿನ ಘೋರ ಶಿಕ್ಷೆಗಳ ಬಗ್ಗೆ ಉಪದೇಶ ನೀಡುತ್ತೇನೆ."

"ನಾನೂ ಹಾಗೆಯೇ ಊಹಿಸಿದೆ. ಆದರೆ ಜೊತೆಯಲ್ಲಿ ನರಕದ ಸ್ಯಾಂಪಲ್ಲನ್ನೂ ತೆಗೆದುಕೊಂಡು ತಿರುಗುವ ಉಪದೇಶಕರನ್ನು ನಾನು ಕಾಣುತ್ತಿರುವುದು ಇದೇ ಮೊದಲು!"

○ ○ ○

ಸೇಠಜೀ ತಮ್ಮ ಅಂಗಡಿಗೆ ವಿಮೆ ಮಾಡುತ್ತಿದ್ದರು. ಆಗ ಅವರು ತಮ್ಮ ಏಜಂಟನೊಡನೆ ಪ್ರಶ್ನಿಸಿದರು— "ಒಂದು ವೇಳೆ ಇಂದೇ ನನ್ನ ಅಂಗಡಿಗೆ ಬೆಂಕಿ ಬಿದ್ದು, ಸಂಪೂರ್ಣ ಸುಟ್ಟು ಹೋದರೆ ನನಗೇನು ಸಿಗುವುದು?"

ಏಜಂಟರು ಸೇಠಜೀಯವರನ್ನೇ ಕ್ಷಣ ಕಾಲ ಎವೆಯಿಕ್ಕದೆ ನೋಡಿ ನುಡಿದರು— "ಐದು ವರ್ಷ!"

○ ○ ○

ಒಂದು ಔತಣಕೂಟ ನಡೆದಿತ್ತು. ಅಲ್ಲಿಗೆ ಒಬ್ಬ ಪ್ರೊಫೆಸರರೂ ಬಂದಿದ್ದರು. ಕೂಟ ಮುಗಿದನಂತರ ಅವರೆಂದರು— "ನಾನೊಬ್ಬ ಪ್ರೊಫೆಸರನೆಂದು ನಿಮಗೆಲ್ಲರಿಗೂ ಗೊತ್ತಿದೆ. ಅಲ್ಲದೆ ನೀವೆಲ್ಲರೂ ನನ್ನೊಡನೆ ವಿಧವಿಧದ ಪ್ರಶ್ನೆಗಳನ್ನು ಕೇಳ ಬಯಸುತ್ತಿರುವಿರೆಂಬುದನ್ನು ನಾನು ಬಲ್ಲೆ. ಈಗ ಮೊತ್ತ ಮೊದಲು ಯಾರು ಪ್ರಶ್ನಿಸುವಿರಿ?"

ಒಬ್ಬ ವ್ಯಕ್ತಿ ಎದ್ದುನಿಂತು ಪ್ರಶ್ನಿಸಿದ- "ಪ್ರೊಫೆಸರರೆಲ್ಲರೂ ಮರೆಯುವ ಸ್ವಭಾವದವರೆಂದು ಸಾಮಾನ್ಯವಾಗಿ ಜನರೆಲ್ಲರೂ ಅನ್ನುತ್ತಾರೆ, ಈ ಮಾತು ಸತ್ಯವೇ?"

ಪ್ರೊಫೆಸರರು ಸಿಟ್ಟಿನಿಂದ ಉತ್ತರಿಸಿದರು- "ಇದು ಶುದ್ಧ ಸುಳ್ಳು. ಪ್ರೊಫೆಸರರೆಲ್ಲರಿಗೂ ಚೆನ್ನಾಗಿ ಸ್ಮರಣ ಶಕ್ತಿಯಿರುತ್ತದೆ. ಅವರು ಯಾವಾಗಲೂ ಎಚ್ಚರ ತಪ್ಪುವುದೇ ಇಲ್ಲ. ನಾನು ಯಾರು, ಈಗ ಎಲ್ಲಿದ್ದೇನೆ, ಏನು ಮಾಡುತಿದ್ದೇನೆ, ಎಂಬುದೂ ಸಹ ನನಗೆ ಗೊತ್ತಿಲ್ಲವೆಂದೇ ನಿಮ್ಮ ಅಭಿಪ್ರಾಯವೇ ಹೇಗೆ? ಇಂದಿನ ಈ ಸಮಾರಂಭದಲ್ಲಿ ನಡೆದ ವಿಷಯಗಳನ್ನೆಲ್ಲ ನಾಳೆಯೇ ನಾನು ಸಂಪೂರ್ಣವಾಗಿ ಮರೆತು ಬಿಡುವೆನೆಂದು ನಿಮ್ಮ ಅಂಬೋಣವೇ? ಹೀಗೆ ನೀವೆಂದುಕೊಂಡಿದ್ದರೆ ಅದು ನಿಮ್ಮ ಭ್ರಮೆಯೇ ಸರಿ ಇರಲಿ, ಇನ್ನು ಯಾರು ಪ್ರಶ್ನಿಸುವವರು?

ಮತ್ತೊಬ್ಬ ವ್ಯಕ್ತಿ ಎದ್ದು ನಿಂತು ಪ್ರಶ್ನಿಸಿದ—"ಪ್ರೊಫೆಸರರೆಲ್ಲರೂ ಮರೆಯುವ ಸ್ವಭಾವದವರೆಂದು ಸಾಮಾನ್ಯವಾಗಿ ಜನರೆಲ್ಲರೂ ಅನ್ನುತ್ತಾರೆ, ಈ ಮಾತು ಸತ್ಯವೇ?"

ಪ್ರೊಫೆಸರರು ಉತ್ತರಿಸತೊಡಗಿದರು— "ಇಂದು ಯಾರಾದರೊಬ್ಬರು ಈ ಪ್ರಶ್ನೆಯನ್ನು ಮೊದಲಾಗಲೀ ಕಡೆಯಲ್ಲಾಗಲೀ ಕೇಳಿಯೇ ಕೇಳುತ್ತಾರೆಂದು ನನಗೆ ಗೊತ್ತೇ ಇದ್ದಿತ್ತು. ಇರಲಿ, ಇದು ಶುದ್ಧ ಸುಳ್ಳು ಪ್ರೊಫೆಸರರಿಗೆ ಬಹು ಚೆನ್ನಾಗಿ ಜ್ಞಾಪಕ ಶಕ್ತಿಯಿರುತ್ತದೆ...."

○ ○ ○

ರಶ್ಯಾದ ಪ್ರಸಿದ್ಧ ಸಾಹಿತಿ ಗೋರ್ಕಿಯು ಒಮ್ಮೆ ಒಂದು ಹಳ್ಳಿಗೆ ಹೋಗಿದ್ದ. ಅಲ್ಲಿ ಅವನನ್ನು ಗುರುತಿಸಬಲ್ಲ ಯಾವ ವ್ಯಕ್ತಿಯೂ ಇದ್ದಿರಲಿಲ್ಲ. ಅವನು ಆ ಹಳ್ಳಿಯನ್ನು ತಲುಪುವಾಗ ಕತ್ತಲಾಗಿ ಬಿಟ್ಟಿತ್ತು. ರಕ್ತವನ್ನೂ ಹೆಪ್ಪುಗಟ್ಟಿಸುವ ಚಳಿ ಬೇರೆ! ಹಗಲಿಡೀ ನಡೆದು ನಡೆದು ತುಂಬಾ ಬಳಲಿದ್ದ. ಹಸಿವು, ನೀರಡಿಕೆಗಳಿಂದ ಕಂಗಾಲಾಗಿದ್ದ. ಗೋರ್ಕಿ ಆಶ್ರಯಕ್ಕಾಗಿ ಒಂದು ಮನೆಯ ಎದುರು ನಿಂತು ಬಾಗಿಲು ಬಡಿದ. ಒಳಗಿನಿಂದ ಮನೆಯ ಯಜಮಾನ ನುಡಿದ— ಓಡು, ಇಲ್ಲಿಂದ! ಪ್ರಪಂಚದಲ್ಲಿರುವ ಮಾಕ್ಸಿಂ ಗೋರ್ಕಿಗೆಲ್ಲ ಆಶ್ರಯ ನೀಡುತ್ತೇನೆಂದು ನಾನೇನೂ ಹರಕೆಹೊತ್ತಿಲ್ಲ. ತಿಳಿಯಿತೇ?"

ಆ ಮೇಲೆ ಗೋರ್ಕಿ ಮತ್ತೊಂದು ಮನೆಯ ಬಾಗಿಲು ಬಡಿದ. ಅಲ್ಲಿ ಸಹಾ ಮೊದಲಿನಂತೆಯೇ ನಿರಾಶಾಜನಕವಾದ ಪ್ರತ್ಯುತ್ತರವೇ ದೊರಿಯಿತು. ರಾತ್ರಿಯನ್ನು ಬೀದಿಯಲ್ಲಿಯೇ ಕಳೆಯಬೇಕಾಗುತ್ತದೆಂದು ಅವನು ನಿಶ್ಚಯಿಸಿದ. ಆತ ಕೆಲಕಾಲ ಅಲ್ಲಿ ಇಲ್ಲಿ ಅಲೆದಾಡಿದ. ಮತ್ತೆ ಹಸಿವು- ನೀರಡಿಕೆಗಳು ಅವನನ್ನು ಬಹುವಾಗಿ ಬಾಧಿಸತೊಡಗಿದುದರಿಂದ ಕೊನೆಯ ಪ್ರಯತ್ನವೆಂದು ಆತ ಮತ್ತೊಂದು ಮನೆಯ ಎದುರು ನಿಂತು ಬಾಗಿಲುತಟ್ಟಿದ. ಆಗಲೂ ಆತ ಗೃಹಸ್ವಾಮಿಯ ಬೈಗಳನ್ನೇ ನಿರೀಕ್ಷಿಸಿ ಕೊಂಡಿದ್ದ. ಆದರೆ ಬಾಗಿಲಿನ ಪಕ್ಕದ ಕಿಟಕಿಯಿಂದ ಸುಂದರಿಯೊಬ್ಬಳು ಇಣಿಕಿ ನೋಡಿ ಮೆಲ್ಲನೆ ನುಡಿದಳು—" ಊಹುಂ! ಇಂದು ಬೇಡ. ಇವತ್ತು ನಮ್ಮ ಯಜಮಾನರು ಮನೆಯಲ್ಲಿಯೇ ಇದ್ದಾರೆ."

ನಿಮ್ಮ ಉಳಿತಾಯದ ವಿಧಾನವನ್ನು ಆರಿಸಿರಿ

ಪಿಗ್ಮಿ ಠೇವಣಿ	ದಿವಸಕ್ಕೆ 25 ಪೈಸೆಯಷ್ಟು ಕೂಡಾ ನೀವು ತೆರಬಹುದು. ಠೇವಣಿಯನ್ನು ಸಂಗ್ರಹಿಸಲು ನಮ್ಮ ಸಂಗ್ರಾಹಕರು ನಿಮ್ಮಲ್ಲಿಗೆ ಬರುವರು.
ಸೇವಿಂಗ್ಸ್ ಬೇಂಕ್	ನಿಮ್ಮ ಖಾತೆಯಲ್ಲಿರುವ ಹಣವು ಶೇಕಡಾ 4ರಂತೆ ಬಡ್ಡಿಯನ್ನು ಗಳಿಸುವುದು. ಹಣ ಹಿಂದೆ ಪಡೆಯುವ ಮೊತ್ತದ ಬಗ್ಗೆ ನಿರ್ಬಂಧವಿಲ್ಲ; ನೋಟೀಸು ಕೊಡಬೇಕಾಗಿಲ್ಲ.
ಸಂಚಯಿತ ಠೇವಣಾತಿ	ತಿಂಗಳ ಉಳಿತಾಯದ ಯೋಜನೆ ರೂ. 10/- ಅಥವಾ ಅದೇ ಗುಣಕದ ಹೆಚ್ಚಳದಿಂದ ಠೇವಣಿಯನ್ನು ಇಡಬಹುದು. ಒಂದರಿಂದ ಐದು ವರ್ಷಗಳ ಅವಧಿ.
ಸ್ಥಿರ ಠೇವಣಾತಿ	ಆಕರ್ಷಕ ಬಡ್ಡಿ ದರವನ್ನು ಕೊಡಲಾಗುವುದು. ಬಡ್ಡಿ ಪಾವತಿ ಅರ್ಧ ವರ್ಷಕ್ಕೊಮ್ಮೆ.
ಜ್ವೆಂಟ್ ಕೇಶ್ ಸರ್ಟಿಫಿಕೇಟುಗಳು	ರೂಪಾಯಿ 100/- ಮತ್ತು ರೂಪಾಯಿ 1,000/- ಗಳ ಪರಿಮಾಣದಲ್ಲಿ ಸಿಗುವುದು. ಐದು ವರ್ಷಗಳಲ್ಲಿ ಪೂರ್ಣತೆ— ಯಾವ ಸಮಯದಲ್ಲೂ ನಿಯತ ದರದಲ್ಲಿ ನಗದಿ ಮಾಡಬಹುದು.
ಮತ್ತು	ಇನ್ನೂ ಹಲವಾರು ಆಕರ್ಷಕ ಯೋಜನೆಗಳು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಶಾಖೆಗಳು: 200ಕ್ಕೂ ಮಿಕ್ಕಿವೆ.

ಚಲಾವಣಾ ನಿಧಿ: ರೂ. 85 ಕೋಟಿಗೂ ಮಿಕ್ಕಿದೆ.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ನಿ ಮ ಗ್

ವಿಜ್ಞಾನದ ಅದ್ಭ

ಜ್ಞಾನದಾಹದೊಡನೆ ಸಾಹಸ ಪ್ರವೃತ್ತಿ ಕೂ
ಮುಂದುವರಿಯುತ್ತಿರುವಾಗ ನಿರಾಶೆಯು
ಆಕಸ್ಮಿಕವಾ

ಅನನ್ಯ ಪರಿಶ್ರಮ, ಅಗಾಧ
ಅತ್ಯಾಧುನಿಕ ವೈಜ್ಞಾನಿಕ

ಇವರಾರು, ಹಾವಾಡಿಗರೋ ಡೊಂಬರೋ ಎಂದು ಕಂಗಾಲಾಗಬೇಡಿ. ಸಂಶೋಧನೆಗಾಗಿ ಈ ವೇಶ ಹಾಕಿಕೊಂಡ ಅಮೆರಿಕನ್ ವಿಜ್ಞಾನಿಗಳಿವರು. ಸಿಂಥೆಟಿಕ್ ರಬ್ಬರಿನ ಸ್ಥಿತಿಸ್ಥಾಪಕ ಗುಣವನ್ನು ಪರಿಶೀಲಿಸುವುದೇ ಇವರ ಉದ್ದೇಶ. ಅವರ ಬಳಿಯಿರುವುದು ಹಾವಲ್ಲ, ರಬ್ಬರ್. ಅಮೆರಿಕೆಯ ಯು. ಎಸ್. ರಬ್ಬರ್ ಕಂಪೆನಿಯ ಶೂನ್ಯ ಉಷ್ಣತೆಯ ಶೀತ ಕೊಠಡಿಯ ಹವೆಯನ್ನು ತಾಳಿಕೊಂಡು ಸಂಶೋಧನೆ ನಡೆಸಬೇಕಾದರೆ, ವಿಜ್ಞಾನಿಗಳು ಈ ವೇಶವನ್ನು ಹಾಕಬೇಕಾಗುವುದು. ಶೋಧನೆಯಲ್ಲಿ ಮೈಮರೆತ ಇವರು ತಮ್ಮನ್ನೂ ಅರಿಯರು, ತಮ್ಮವರನ್ನೂ ತಿಳಿಯರು. ಅಂತಹ ತಾದಾತ್ಮ್ಯ!



ಇದು ದೈತ್ಯ ವಿಮಾನ. ಚಂದ್ರನತ್ತ ಜಿಗಿಯಲಿರುವ
ದಕ್ಷಿಣದ ಕೇಪ್ ಕೆನ್ನೆಡಿಗೆ ಸಾಗಿಸುವ ಸಲುವಾಗಿಯೇ ನಿರ್ಮಿಸಲ
ವಿಮಾನಗಳ ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ಇಷ್ಟು ದೊ

ಈಕೆಯೊಬ್ಬಾಕೆ ಅಮೆರಿಕನ್ ಮಹಿಳೆ. ವಿಯತ್ನಾಮದ ಸಮರದಲ್ಲಿ ಬಂಧನಕ್ಕೆ ಗುರಿಯಾದವಳಲ್ಲ; ಕ್ಯೂಬದಲ್ಲಿ ಸಂಕಟಕ್ಕೆ ಸಿದ್ದವಳೂ ಅಲ್ಲ. ಈಕೆ ನ್ಯೂಜೆರ್ಸಿಯ ಬೆಂಡಿಕ್ಸ್ ಉದ್ಯಮ ಸಂಸ್ಥೆಯ ಇನ್ಸ್‌ಪೆಕ್ಟರ್. ಒಂದರ ಮೇಲೊಂದು ಬಿದ್ದಿರುವ ವಿದ್ಯುತ್ ಸರಿಗೆಗಳ ಮಾಲೆಯ ಮೂಲಕ ಏನೋ ಮಹಾಕಾರ್ಯ ಸಾಧಿಸಬೇಕಾಗಿದೆ, ಕಂಪೆನಿಗೆ. ಇದಕ್ಕಾಗಿ ಅದನ್ನು ಪರಿಶೀಲಿಸುವ ತನ್ನ ಕರ್ತವ್ಯ ಪಾಲನೆಯನ್ನು ಈಕೆ ಕಣ್ಣಲ್ಲಿ ಎಣ್ಣೆಯಿಟ್ಟು ಮಾಡುತ್ತಿದ್ದಾಳೆ. ಎಳ್ಳಷ್ಟು ಎಚ್ಚರ ತಪ್ಪಿದರೆ ಅಥವಾ ಕರ್ತವ್ಯದಲ್ಲಿ ಅಸಡ್ಡೆ ತೋರಿದರೆ, ಗಂಡಾಂತರವನ್ನು ಸ್ವಾಗತಿಸಿದಂತೆ ಎಂದು ಈಕೆಯು ಸರಿಯಾಗಿ ತಿಳಿದುಕೊಂಡಿದ್ದಾಳೆ.



ದೂರದ ವಸ್ತುವನ್ನು ಹತ್ತಿರದಲ್ಲಿರುವಂತೆ ಕಾಣುವ ಟೆಲಿಸ್ಕೋಪ್ ಇಂದು ಜನಸಾಧಾರಣವಾಗಿದೆ—ಮುಂದುವರಿದ ದೇಶಗಳಲ್ಲಿ. ಇಂದಿನ ಮಾನವ ಅಂತರ್ಗ್ರಹ ಯಾತ್ರೆಯಲ್ಲಿ ಆಸಕ್ತಿ ತೋರುತ್ತಿದ್ದಾನೆ. ಅಮೆರಿಕೆಯು ಹಾರಿಸಬಯಸುವ 'ಅಪೆಲ್ಲೊ' ಅಂತರಿಕ್ಷ ಯಾನದ ತಯಾರಿ ರಭಸದಿಂದ ಮುಂದುವರಿಯುತ್ತಿದೆ. ಅದರಲ್ಲಿಡಲು ಸೌರ ಟೆಲಿಸ್ಕೋಪೊಂದನ್ನು ತಯಾರಿಸಿದ್ದು ಇದು ಅದರ ಮಾದರಿ. ಈ ಟೆಲಿಸ್ಕೋಪಿನಿಂದ ಸೌರವ್ಯೂಹದ ಬಗ್ಗೆ ಇನ್ನೂ ಹೆಚ್ಚಿನ ಪರಿಜ್ಞಾನ ದೊರೆಯುವುದು ಸಾಧ್ಯವಾಗುವುದು.

...ಂತ್ರಿರಲಿ

...ಯು ಸಾಧನೆಗಳು

...ಂಶೋಧನೆಯ ಬಾಗಿಲು ತೆರೆಯುವುದು. ಅದರಲ್ಲಿ ...ನಲಿಗೆ ಕಂಡರೂ ಮರಳಿ ಯತ್ನ ಮಾಡಿದರೆ, ...ಸೊರೆಯುವುದು.

...ಆಸಕ್ತಿಯ ಪ್ರತೀಕವಾದ ಕೆಲವು ...ನ್ನು ನೀವೂ ತಿಳಿದುಕೊಳ್ಳಿರಿ.



...ಸಂಯುಕ್ತ ರಾಷ್ಟ್ರಗಳ ಉತ್ತರ ಭಾಗದಲ್ಲಿ ಕಾರಖಾನೆಯಿಂದ ...ಗಾತ್ರ ಪ್ರಚಲಿತ ವಿಮಾನ ಗಾತ್ರಕ್ಕಿಂತ ಐದು ಪಟ್ಟು ಹೆಚ್ಚಿದೆ. ...ಾದುದು ಚಿಕ್ಕ ವಿಷಯವಾಗಿರುವುದಿಲ್ಲ.

ಸದ್ಯದಲ್ಲೇ ಅಮೆರಿಕೆಯ ಮೂವರು ಅಂತರಿಕ್ಷ ಯಾತ್ರಿಗಳಿಂದ ಕೂಡಿದ ಅಪೊಲ್ಲೋ ಯಾನವನ್ನು ಚಂದ್ರನತ್ತ ಹಾರಿಸಲಿರುವರು ಅವರು ಚಂದ್ರನ ಮೈ ಮೇಲೆ ಇಳಿದು ಅಧ್ಯಯನವನ್ನು ಮಾಡುವರು. ಮೇಲಿನ ಚಿತ್ರದಲ್ಲಿ ವಿಜ್ಞಾನಿ—ಇಂಜನಿಯರರು ಅಪೊಲ್ಲೊ ಅಂತರಿಕ್ಷ ಯಾನಕ್ಕೆ ಉಷ್ಣ ಫಲಕವನ್ನು ಜೋಡಿಸುತಿದ್ದಾರೆ. ಈ ಫಲಕದಿಂದ ಯಾತ್ರಿಗಳು ಚಂದ್ರ ಲೋಕದಿಂದ ಮರಳಿ ಭೂಮಿಗಿಳಿಯುವಾಗ ಇಲ್ಲಿನ ಉಷ್ಣವನ್ನು ಸಹಿಸಿಕೊಳ್ಳುವಂತಾಗುವುದು.



ಮರ ಉರುಳಿಸುವ, ಎಳೆಯುವ ಹಗ್ಗವನ್ನು ನಾವೆಲ್ಲ ನೋಡಿದ್ದೇವೆ. ಅದು ಮಾನವಚಾಲಿತ; ಮಾನವ ಶಕ್ತಿಯ ಅವಲಂಬಿ. ಈಗ ಅಮೆರಿಕನ್ ವೈಜ್ಞಾನಿಕರು ಇಲೆಕ್ಟ್ರಾನ್ ಶಕ್ತಿಯನ್ನು ಬಳಸಿ ಮರವೆಳೆಯುವ 'ವೃಕ್ಷ ಕಂಪಕ'ವನ್ನು ರಚಿಸಿದ್ದಾರೆ. ಕೃಷಿ ಅಭ್ಯಾಸವನ್ನು ಸುಧಾರಿಸುವ ಉದ್ದೇಶಗಳಿಂದ ಅಮೆರಿಕನ್ ವಿಜ್ಞಾನಿಗಳು ಪರಿಶ್ರಮಿಸಿಯೇ ಈ ಕಂಪಕ ಮತ್ತು ಗಾಡಿಗಳನ್ನು ನಿರ್ಮಿಸಿದರು. ಮೇಲಿನ ಚಿತ್ರದಲ್ಲಿ ಇಂಜನಿಯರನೊಬ್ಬನು 'ವೃಕ್ಷಕಂಪಕ'ವನ್ನು ಬಳಸಿ ಮರವಲುಗಾಡಿಸುವುದನ್ನು ಕಾಣಬಹುದು.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಸಚಿತ್ರ ಜನಪ್ರಿಯ ವಿಜ್ಞಾನ — ಲೇಖಕರು: ಎಂ. ಡಿ. ಇಳಸೂರ, ಪ್ರಕಾಶಕರು: ಶ್ರೀ ಮಾರಿಕಾಂಬಾ ಪ್ರಕಾಶನ ವಿಭಾಗ, ಶಿರಸಿ, ಉತ್ತರ ಕನ್ನಡ, ಪುಟಗಳು. ೧೪೪, ಬೆಲೆ: ರೂ. ೨—೦೦.

ಶ್ರೀ ಮಾರಿಕಾಂಬಾ ಸಂಸ್ಥೆಯಿಂದ ಪುರಸ್ಕೃತವಾದ ಈ ವಿಜ್ಞಾನ ಸಂಬಂಧಿ ಪುಸ್ತಕ ಕನ್ನಡಕ್ಕೆ ಒಂದು ಅಮೂಲ್ಯ ಕೊಡುಗೆ. ಕಥೆ — ಕಾದಂಬರಿ ಇತ್ಯಾದಿ ಪ್ರಕಾಶಗೊಳ್ಳುವಂತೆ ವೈಜ್ಞಾನಿಕ ಗ್ರಂಥಗಳ ಬೆಳೆ ಕನ್ನಡದಲ್ಲಿ ಹುಲುಸಾಗಿರುವುದಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಲಲಿತವಹ ಕನ್ನಡದ ನುಡಿಯಲಿ ವೈಜ್ಞಾನಿಕ ಲೇಖಗಳನ್ನು ಬರೆಯುವವರ ಸಂಖ್ಯೆ ಕಡಿಮೆಯಿರುವುದರೊಡನೆ ಬರೆದ ಹಸ್ತಪ್ರತಿಗೆ ಮುದ್ರಣ ಶಾಲೆ ಕಾಣುವ ಸೌಭಾಗ್ಯವೊದಗಿಸುವವರ ಸಂಖ್ಯೆ ತೀರ ವಿರಳವಿರುವುದೇ ಪ್ರಬಲವೆನ್ನಬೇಕು. ಈ ಕೊರತೆಯನ್ನು ನಿವಾರಿಸಿದ ವಿಜ್ಞಾನಾಧ್ಯಾಪಕ ಇಳಸೂರರೂ ಶ್ರೀ ಮಾರಿಕಾಂಬಾ ದೇವಸ್ಥಾನದ ಆಡಳಿತದಾರರೂ ಕನ್ನಡಿಗರ ಕೃತಜ್ಞತೆಗೆ ಪಾತ್ರರು.

ಈ ಪುಸ್ತಕದಲ್ಲಿ ವಿಜ್ಞಾನಕ್ಕೆ, ಅದರ ಬೆಳವಣಿಗೆಗೆ ಸಂಬಧಿಸಿದ ೧೮ ಲೇಖಗಳು ಇವೆ. ೪೦ ಚಿತ್ರಗಳು ಉಚಿತವರಿತು ಇಲ್ಲಿ ವಾಚಕರ ನೆರವಿಗೆ ಸಿದ್ಧವಾಗಿ ನಿಂತಿವೆ. ಪ್ರಖ್ಯಾತ ಗಣಿತಜ್ಞ ರಾಮಾನುಜಂ, ಪ್ರಥಮ ಅಂತರಿಕ್ಷಯಾತ್ರಿ ಗಗಾರಿನ್ ಮೊದಲಾದವರ ಪರಿಚಯ, ನಿತ್ಯೋಪಯೋಗಿ ಲಿಂಬೆ, ಹಾಲು, ಜೇನು, ತರಕಾರಿಗಳ ವಿಜ್ಞಾನ, ಸಂಶೋಧನೆಯಿಂದ ಮಾನವನ ಕೈಗೆ ಬಂದಿರುವ ಇಲೆಕ್ಟ್ರಾನ್, ಲೇಸರ್‌ಗಳ ಇತಿಹಾಸಗಳೊಂದಿಗೆ ಇಂದಿನ ಮುಖ್ಯ ವಿಷಯವೆನಿಸಿದ ಅಂತರಿಕ್ಷಯಾತ್ರೆ—ಚಂದ್ರ ಗಮನ, ನಕ್ಷತ್ರ ಪ್ರಪಂಚ ಮೊದಲಾದ ರೋಚಕ ಸಂಗತಿಗಳು ಇಲ್ಲಿ ನಮ್ಮ ಕಣ್ಣಿಗೆ ಕಟ್ಟುವಂತೆ ವಿವರಿಸಲ್ಪಟ್ಟಿವೆ. ಸಂಶೋಧನೆಗಳು ಆಕಸ್ಮಿಕವಾಗಿಯೇ ನಡೆಯುತ್ತವೆ ಎಂಬ ಕಟು ಸತ್ಯದ ಅನುಭವ ನಮಗಾಗುತ್ತದೆ. ಪುಸ್ತಕದ ಕೊನೆಯಲ್ಲಿ ಅನುಬಂಧದ ರೂಪದಲ್ಲಿ ಪಾರಿಭಾಷಿಕ ಶಬ್ದಕೋಶವನ್ನೂ ಭಾರತೀಯ ವಿಜ್ಞಾನಿ ನಾರಳೀಕರ ಮೊದಲಾದವರ ಪರಿಚಯವನ್ನೂ ಲೇಖಕರು ಸಂದರ್ಭವರಿತು ಮಾಡಿಕೊಟ್ಟಿದ್ದಾರೆ.

ಈ ಪುಸ್ತಕದ ಹೆಸರು ಜನಪ್ರಿಯ ವಿಜ್ಞಾನ. ವಿಜ್ಞಾನವು ಜನಪ್ರಿಯವಾಗಬೇಕಾದರೆ, ಅದನ್ನು ಸರಳವಾಗಿ ಬೋಧಿಸಬೇಕಾಗುವುದು, ಸ್ಪಷ್ಟವಾಗಿ ವಿವರಿಸಬೇಕಾಗುವುದು. ಹೈಸ್ಕೂಲಿನಲ್ಲಿ ವಿಜ್ಞಾನವನ್ನು ಕಲಿಸುತ್ತಿರುವ ಶ್ರೀ ಇಳಸೂರರು ಈ ಎರಡರಲ್ಲೂ ಸಂಪೂರ್ಣ ಯಶಗಳಿಸಿದ್ದಾರೆ. ವಿಷಯ ವೈವಿಧ್ಯದೊಡನೆ ತಿಳಿಯಾದ ಭಾಷೆ, ಸರಳವಾದ ಶೈಲಿ, ಕೂಲಂಕಷ ವಿವೇಚನೆಗಳು ಪಾಠಕರನ್ನು ಮುಗ್ಧಗೊಳಿಸುತ್ತವೆ. ಜನಸಾಮಾನ್ಯರೂ ವಿಜ್ಞಾನದ ಆಗುಹೋಗುಗಳ ಸಾಮಾನ್ಯ ಪರಿಚಯವನ್ನು ಮಾಡಿಕೊಳ್ಳಬೇಕು—ಇದಕ್ಕಾಗಿ ಈ ಪುಸ್ತಕವನ್ನು ಸಂಗ್ರಹಿಸಬೇಕು. ವಿದ್ಯಾಲಯಗಳಲ್ಲಿ ಮಾತ್ರವಲ್ಲ, ಮನೆ ಮನೆಯಲ್ಲೂ ಇಂಥ ಬೇಕಾದ ಜನಪ್ರಿಯ ವಿಜ್ಞಾನವಿದು. ಶ್ರೀ ಇಳಸೂರರ ಈ ಕೃತಿ ಕನ್ನಡ ವೈಜ್ಞಾನಿಕ ಸಾಹಿತ್ಯದ ಆಶಾದೀಪ. ಮಾತೃ ಭಾಷೆಯಲ್ಲೇ ವಿಶ್ವವಿದ್ಯಾಲಯಗಳ

(ಒಂಭತ್ತನೇ ಪುಟ ನೋಡಿ)

ಮಹಾರಾಷ್ಟ್ರ ಹೋಟೇಲು ಉದ್ಯೋಗ ಸಭಾ

ಹೋಟೇಲು ಸದಾನಂದ್
ಕ್ರಾಫೋರ್ಡ್ ಮಾರ್ಕೆಟ್
ಮುಂಬಯಿ–8.

9, ಹಾಜ ಪಟೇಲ ಬಿಲ್ಡಿಂಗ್,
2ನೇ ಮಾಳಿಗೆ, ನಾಯ್ಗಾಂ ಕ್ರಾಸ್
ರೋಡು, ದಾದರ್, ಮುಂಬಯಿ–14.

ವಿನಂತಿ ಪತ್ರಿಕೆ

(ಬಿ. ಗೋಪಾಲ ಸೆಟ್ಟಿ.)

ಪ್ರಿಯ ಹೋಟೇಲು ಮಾಲಕ ಬಂಧುಗಳೇ,

ದೇಶದಲ್ಲಿಯ ಹಲವಾರುತರದ ಉದ್ಯೋಗಗಳ ಪಂಕ್ತಿಯಲ್ಲಿ ಹೋಟೇಲು ವ್ಯವಸಾಯವು ಐದನೇ ಸ್ಥಾನಗಳಿಸಿದೆ. ಅಲ್ಲದೆ ದೇಶದಾದ್ಯಂತ ಐದು ಲಕ್ಷದಷ್ಟು ಹೋಟೇಲು, ಹಲ್ವಾಯಿ ಹಾಗೂ ಆಹಾರ ಪಾನೀಯಗಳ ಇತರ ವರ್ತಕರಿದ್ದಾರೆ. ಕೋಟ್ಯಾಂತರ ಜನರಿರುವ ನಮ್ಮೀ ದೇಶದ ಶೇಕಡಾ 30ರಷ್ಟು ಜನರ ಜೀವನಾವಶ್ಯಕ ಸಾಮುಗ್ರಿಗಳ ಪೂರೈಕೆಯ ಸೇವೆಯು ಹೋಟೇಲುಗಳಿಂದಲೇ ಆಗುತ್ತದೆ. ಇಂತಿದ್ದರೂ ನಮ್ಮೀ ಉದ್ಯೋಗವು ಹಲವಾರು ತರದ ಅಡೆತಡೆಗಳಿಂದ ಪ್ರಗತಿ ಹೀನವಾಗಿಯೇ ಉಳಿಯಬೇಕಾಗಿದೆ. ಎಂಬುದು ತುಂಬಾ ಶೋಚನೀಯ.

ಮಹಾರಾಷ್ಟ್ರ ರಾಜ್ಯದಲ್ಲಿ ಹಾಗೂ ಅಖಿಲ ಭಾರತರಂಗದಲ್ಲಿ ಕೂಡಾ ಮಹಾರಾಷ್ಟ್ರ ರಾಜ್ಯ ಹೋಟೇಲ್ಸ್ ಫೆಡರೇಶನ್ ಅಲ್ಲದೆ ಅಲ್ ಇಂಡಿಯಾ ಹೋಟೆಲ್ಸ್, ಹಲ್ವಾಯೀ ಫೆಡರೇಶನ್ ತಮ್ಮ ಮುಂಬಯಿ ಪ್ರಧಾನ ಕಚೇರಿ, ದಿಲ್ಲಿ ಮತ್ತು ಜಯಪುರದ ಶಾಖೆಗಳ ಮೂಲಕ ಹೋಟೇಲು ವ್ಯವಸಾಯವನ್ನು ಪ್ರತಿನಿಧೀಕರಿಸುತ್ತದೇನೋ ನಿಜ. ಆದರೆ ಈ ಸಂಸ್ಥೆಗಳು ಯಾವುದೇ ತರದ ಹುರುಪಿಲ್ಲದೆ ಕಾರ್ಯವಹಿಸಿರುವ ಕಾರಣದಿಂದ ನಮ್ಮೀ ಉದ್ಯೋಗಕ್ಕೆ ಯಾವತ್ತು ತರದ ಸಹಕಾರ್ಯವಿತ್ತಿಲ್ಲ. ಇನ್ನಿತರ ಕೆಲವು ವ್ಯಕ್ತಿಗಳು ತಮ್ಮ ವಯ್ಯಕ್ತಿಕ ಲಾಭಗಳಿಸುವ ಆಶೆಯಿಂದ ಕೆಲವು ತರದ ನಾಮಾಂಕಿತ ಉದ್ಯೋಗ ಸಂಘಗಳನ್ನು ನಮ್ಮೀ ವ್ಯವಸಾಯದ ಹೆಸರಿನಿಂದ ಸ್ಥಾಪಿಸಿಕೊಂಡು ತಮ್ಮ ಜೇಬು ತುಂಬಿಸಿಕೊಂಡದ್ದೂ ಉಂಟು. ಇವೆಲ್ಲವುಗಳಿಂದ ನಮ್ಮ ಉದ್ಯೋಗದ ಪ್ರಗತಿ ಸಾಧನೆಯಾದೀತೆಂದು ಯಾರಾದರೂ ಎಣಿಸುವುದೂ ತಪ್ಪೇ. ಹೀಗೆ ಯೋಗ್ಯ ಮುಂದಾಳುತ್ವ ವ ಸಂಘಟನೆ ಇಲ್ಲದೆ ನಮ್ಮ ವ್ಯವಸಾಯ ಬಾಂಧವರಲ್ಲಿ ತಮ್ಮ ಕಾರ್ಯಸಾಧನೆಯ ವಿಷಯದಲ್ಲಿ ಒಂದು ತರದ ನಿರಾಶೆಯುತ್ಪಾದನೆಯಾಗಿದೆಯೆಂದರೂ ಸರಿಯೇ.

ಹೀಗಾಗಿ ನಮ್ಮ ಉದ್ಯೋಗದ ಪ್ರಗತಿಗಾಗಿ ನಮ್ಮದೇ ಆದ ಒಂದು ಸಂಸ್ಥೆಯನ್ನು ಸ್ಥಾಪಿಸುವುದು ಅತ್ಯಾವಶ್ಯಕವಾಗಿ ಕಂಡು ಬಂದಿದೆ. ಏಕೆಂದರೆ ನಮ್ಮ ಉದ್ಯೋಗಕ್ಕೆ ಸಂಬಂಧಿಸಿದ ಅಡ್ಡ ತೊಡರುಗಳು ನಮಗೆ ಸ್ವತಃ ಅರಿವಾಗುವಷ್ಟು ಇತರರಿಗೆ ಆಗುವುದಿಲ್ಲ. ಅಲ್ಲದೆ ಅದಕ್ಕೆ ಸಮಂಜಸವಾದ ಮಾರ್ಗದರ್ಶನ ನಮ್ಮವರಿಂದಲೇ ಆಗಿ ಒಕ್ಕಟ್ಟಿನಿಂದ ಮುಂದುವರಿದರೆ ನಮ್ಮ ಕಾರ್ಯಸಾಧನೆಯಾಗಲಿಕ್ಕೂ ಸಾಧ್ಯ. ಈ ಧ್ಯೇಯವನ್ನು ಮುಂದಿಟ್ಟುಕೊಂಡು ನಾವು ಈಗಾಗಲೇ ಒಂದೆರಡು ಹೆಜ್ಜೆ ಮುಂದಿಟ್ಟಿದ್ದೇವೆ ಅಲ್ಲದೆ ನಮ್ಮ ಉದ್ಯೋಗ ಬಂಧುಗಳು ಕೆಲವರು ತಮ್ಮ ಮನಃಪೂರ್ವಕ ಸಹಾಯ ನೀಡಿದ್ದಾರೆ ಕೂಡಾ. ನಮ್ಮೀ ವ್ಯವಸಾಯ ಬಾಂಧವರನ್ನೆಲ್ಲಾ ಒಗ್ಗೂಡಿಸಿ, ಐಕ್ಯಮತ್ಯದಿಂದ ನಮ್ಮ ಉದ್ಯೋಗಕ್ಕೆ ಹೊಂದಿರುವ ಸಂಕಷ್ಟಗಳನ್ನು ಅಧಿಕಾರಿಗಳ ಅವಗಾಹನೆಗೆ ತರುವ ಪ್ರಯತ್ನ ಸಾಧಿಸುತ್ತಿದ್ದಾರೆ. ಈಗಾಗಲೇ ನಾಲ್ಕು ಮೀಟಿಂಗುಗಳನ್ನು ಕರೆಯಲಾಗಿದೆ. ಸರ್ವಶ್ರೀ ಶಾಂತಾರಾಮ ಶೆಟ್ಟಿ, ಮೋಹನಲಾಲ ವ್ಯಾಸ, ಕೃಷ್ಣ ಶೆಟ್ಟಿ, ಹಾಜಿ ಅಬ್ದುಲಘನಿ, ಬಿ. ಗೋಪಾಲ ಶೆಟ್ಟಿ ಹುಸ್ಸೇನ ಇಬ್ರಾಹಿಮ್, ವೀರಪ್ಪ ಶೆಟ್ಟಿ, ಹಾಜಿ ಅಲ್ಲಾವುದ್ದೀನ ಮೂಮ್ಜಿ, ವಿ. ಆರ್. ಜಗ್ದೀಶಾರ್, ಮುಸ್ತಫಾ ಇರಾನಿ ಮತ್ತಿತರರ ಗಣ್ಯ ಮುದಾಳುತ್ವದಲ್ಲಿ ಈ ಮೀಟಿಂಗುಗಳನ್ನು ಕರೆಯಲಾಗಿತ್ತು.

ಈ ಕೆಳಗಿನ ಗೊತ್ತುವಳಿಗಳು ಕಳೆದ ಮೀಟಿಂಗುಗಳಿಂದ ಪರಿಣಮಿಸಿವೆ:

A. ಕನಿಷ್ಠ 500 ಆದರೂ ಹೋಟೇಲ್ಸ್\ ರೆಸ್ಟೋರೆಂಟು ಮಾಲಕರು, ಸಿಹಿತಿಂಡಿ ವರ್ತಕರು ಸದಸ್ಯತನ ಪಡೆಯುವುದು.

B. ಈ ಪ್ರತಿಯೊಬ್ಬ ಮೆಂಬರರಿಂದಲೂ ರೂಪಾಯಿ 100/–ದೇಣಿಗೆ ಒಂದು ತಿಂಗಳೊಳಗೆ ಪಡೆಯುವುದು.

C. ಹತ್ತರಿಂದ ಕಡಿಮೆ ಕೆಲಸಗಾರರಿರುವ ಹೋಟೇಲಿಗೆ ರೂಪಾಯಿ 15/–ಹತ್ತರಿಂದ ಮೇಲೆ ಕೆಲಸಗಾರರಿರುವಲ್ಲಿಂದ ರೂಪಾಯಿ 25/– ಸದಸ್ಯತನವೆಂದೂ ರೂಪಾಯಿ 5/– ಪ್ರವೇಶಧನವೆಂದೂ ನಿಶ್ಚಯ.

D. ಪ್ರತಿ ವಾರ ವಾರ್ಡುವಾರಾಗಿ ಮೀಟಿಂಗು ಕರೆದು ಪ್ರತಿ ವಾರ್ಡಿಗೆ ಐದು ಜನರಿರುವ ಕಮಿಟಿ ನೇಮಿಸಿ ಆ ಐದರಲ್ಲಿ ಒಬ್ಬರನ್ನು ಮುಖ್ಯ ಸಂಸ್ಥೆಯ ಪ್ರತಿನಿಧಿಯಾಗಿ ಆರಿಸುವುದು.

E. ಮುಂಬಯಿ ಕೋರ್ಪರೇಶನಿಗೆ ನಮ್ಮ ಪ್ರತಿನಿಧಿಯರನ್ನು ಕಳುಹಿಸುವರೆ ಬರುವ ಇಲೆಕ್ಷನಿನಲ್ಲಿ ಭಾಗವಹಿಸುವುದು ಮತ್ತು ಹೋಟೇಲು ಮಾಲಕರಲ್ಲಿ ರಾಜಕೀಯ ಜಾಗ್ರತೆಯನ್ನು ಉಂಟುಮಾಡುವುದು.

F. ಮುಖ್ಯ ಸಂಸ್ಥೆಯ ಕಾರ್ಯಕಾರೀ ಸಭೆಯ ಚುನಾವಣೆಯನ್ನು ಪ್ರತಿವರ್ಷ ಏರ್ಪಡಿಸುವುದು ಮತ್ತು ಚುನಾಯಿತರಾದ ಕಾರ್ಯಕರ್ತರು ಒಂದು ವರ್ಷ ಮಾತ್ರ ಕಾರ್ಯ ನಿರ್ವಹಿಸುವುದು. ಸಂಸ್ಥೆಯನ್ನು ಇಂಡಿಯನ್ ಟ್ರೇಡ್‌ಯೂನಿಯನಿನನ್ವಯ ರಿಜಿಸ್ತ್ರ ಮಾಡುವರೆ 7 ಜನರಿರುವ ಒಂದು ಕಮಿಟಿ ನೇಮಿಸುವುದು.

ತ್ವರಿತದ ಮುಖ್ಯ ಅವಶ್ಯಕಗಳು

1. ಎಲೆಕ್ಟ್ರಿಸಿಟಿ ಚಾರ್ಜು ವಾಣಿಜ್ಯಮೂಲ (Commercial Basis) ದಿಂದ ಉದ್ಯೋಗ ಮೂಲ (Industrial Basis)ಕ್ಕೆ ಬದಲಾಯಿಸುವಂತೆ ಮಾಡಿ ದರ ಕಡಿಮೆ ಮಾಡಿಸುವುದು.

2. ಗೋದಿ, ಅಕ್ಕಿ, ಮೈದ, ರವೆ, ಸೋಜಿ ಇತ್ಯಾದಿ ಧಾನ್ಯಗಳ ಕ್ರಮಬದ್ಧ ಸರಬರಾಯಿ ಮಾಡಿಸುವುದು.

3. ಸೋಡಾ, ಲೆಮನ್, ಕೋಕೋ ಕೋಲಾ, ರೋಜರ್ಸ್, ಗೋಲ್ಡ ಸ್ಪೋಟ್ ಮುಂತಾದ ಪ್ರಾಮುಖ್ಯ ಪಾನೀಯಗಳ ತಯಾರಕರ ದಿಟ್ಟತನದ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳುವರೇ ಗಿರಾಕಿ ವರ್ಗದವರಲ್ಲಿ ಈ ಪಾನೀಯಗಳ ಬಗ್ಗೆ ಆಸಕ್ತಿ ಕಡಿಮೆಯಾಗಿಸುವುದು. ಪ್ರಾಮುಖ್ಯ ಪಾನೀಯಗಳ ತಯಾರಕರೂ ಬರ್ಫ್ ತಯಾರಕರೂ ಉಷ್ಣಕಾಲದಲ್ಲಿ ಅತ್ಯಧಿಕ ಲಾಭಗಳಿಸುವ ಆಸೆಯಿಂದ ಕ್ರಯವನ್ನು ಎಷ್ಟೋಪಟ್ಟು ಏರಿಸುತ್ತಾರೆ. ಡಿಪೋಜಿಟ್ ಹೆಚ್ಚಿಸುತ್ತಾರೆ ಮತ್ತಿನ್ನಿತರ ಎಷ್ಟೋ ತರದ ತಗಾದೆ ಮುಂದೊಡ್ಡುತ್ತಾರೆ. ಇದನ್ನೆಲ್ಲ ಎದುರಿಸುವರೆ ನಮ್ಮ ಉದ್ಯೋಗವು ಲಸ್ಸಿ, ಶರಬತ್ ಇತ್ಯಾದಿ ಪಾನೀಯಗಳ ವಿತರಣೆ ಹೆಚ್ಚಿಸಿ ಮೇಲೆ ತಿಳಿಸಿದ ಪಾನೀಯಗಳಿಗೆ ಮಾರ್ಚ್ ತಿಂಗಳ ಒಳಗೆ ನಿಷೇಧಹಾಕಬೇಕು.

4. ನೀರು ಮತ್ತು ಕಸದ ತೆರಿಗೆಯನ್ನು ಕಡಿಮೆ ಮಾಡಿಸುವುದು. ಲೈಸನ್ಸ್ ಕಂಡಿಶನಿನ ಪ್ರತಿಯೊಂದು ಚಿಕ್ಕ ಉಲ್ಲಂಗನೆಗೂ ಕನಿಷ್ಟ ರೂ. 200/–ದಂಡವೆಂಗಿರುವ ಈಗಿನ ಕಾನೂನನ್ನು ರದ್ದು ಪಡಿಸುವುದು. ರೂ. 1–50ಕ್ಕಿಂತ ಮೇಲಿನ ಬಿಲ್ಲುಗಳ ಮೇಲೆ ಸೇಲ್ಸಟೇಕ್ಸ ಕೊಡುವಲ್ಲಿ ಪುನಃ ರೂ. 10,000/– ವ್ಯಾಪಾರದ ಮೇಲೆ ಸೇಲ್ಸಟೇಕ್ಸ ಕೊಡುವ ಕಾಯಿದೆಯನ್ನು ಬದಲಾಯಿಸುವುದು. ಪ್ರೊವಿಡೆಂಟ್‌ಫಂಡ್ ಕಾನೂನನ್ನು ರದ್ದು ಪಡಿಸುವಂತೆ ಅಧಿಕಾರಿಗಳ ಗಮನ ಎಳೆಯುವುದು. ಸಾಧ್ಯವಾಗದಲ್ಲಿ ಕೋರ್ಟುದ್ವಾರ ಪ್ರಯತ್ನಿಸುವುದು. ಹೋಟೇಲು ನಲವಾ ಸಮಿತಿಯಲ್ಲಿ ಪ್ರಾತಿನಿಧ್ಯಗಳಿಸುವುದು. ಮತ್ತು ಒಂದು ಕೋಪರೇಟಿವ್ ಕನ್ಸ್ಯೂಮರ್ಸ್ ಸೊಸೈಟಿ ಸ್ಥಾಪಿಸುವುದು.

ಇವೇ ಅಲ್ಲದೆ ಇನ್ನೆಷ್ಟೋ ಧ್ಯೇಯ ಧೋರಣೆಗಳನ್ನು ಮುಂದಿಟ್ಟುಕೊಂಡು ಮುಂದುವರಿಯಬೇಕಾಗಿದೆ. ಇವೆಲ್ಲವನ್ನೂ ಸಾಧಿಸಬೇಕಾದರೆ ತಮ್ಮೆಲ್ಲರ ತನು, ಮನ, ಧನ ಸಹಕಾರ ಅತ್ಯಾವಶ್ಯ ಒಗ್ಗಟ್ಟಿದ್ದರೆನೇ ಬಲವರ್ಧನೆಯಾಯಿತು. ತಮ್ಮೆಲ್ಲರ ಸಹಕಾರವಿದ್ದರೆನೇ ನಮ್ಮ ಸಂಸ್ಥೆ ಬಲವಾದೀತು ಮತ್ತು ಆ ಮೂಲಕ ನಮ್ಮ ಧ್ಯೇಯ ಸಾಧನೆಯಾದೀತು. ಸರಕಾರಕ್ಕೆ ನಮ್ಮ ಸಹಕಾರ ಇದ್ದದ್ದೆ ಅದರೂ ಸರಕಾರವೂ ನಮಗೆ ಮರುಸಹಾಯ ನೀಡಬೇಕೇಬೇಕು. ನಮ್ಮ ಉದ್ಯೋಗ ನಡೆಸುವುದಕ್ಕೆ ಅಗತ್ಯವಿರುವ ಅನುಕೂಲತೆಗಳನ್ನು ಸರಕಾರವೂ ನೀಡಬೇಕಾದದ್ದೇ ಏಕೆಂದರೆ ಸಾರ್ವಜನಿಕರಿಗೆ ಆಹಾರ ಪಾನೀಯಗಳನ್ನಿತ್ತು ನಾವೂ ಒಂದು ಮುಖ್ಯ ಸಾರ್ವಜನಿಕ ಸೇವೆಯ ಕಾರ್ಯವನ್ನು ಮಾಡುತ್ತಿದ್ದೇವೆ.

ನಮ್ಮ ಈ ಸಂಸ್ಥೆಗೆ ಯಾವ ತರದ ರಾಜಕೀಯ ಸಂಬಂಧಗಳಿಲ್ಲವೆಂಬುದನ್ನು ಮರೆಯದಿರಿ.

ಆಗಿಂದಾಗ್ಗೆ ಈ ತರದ ಕೈ ಪತ್ರಿಕೆಗಳನ್ನು ಹೊರಡಿಸುವದು ಮಾತ್ರವಲ್ಲದೆ ನಮ್ಮದೆ ಆದ "ಆಹಾರವಿಶ್ವ"ವೆಂಬ ಮಾಸಿಕವನ್ನು ಸ್ಥಾಪಿಸುವ ಯೋಜನೆಯೂ ಇದೆ.

ಕೊನೆಯದಾಗಿ ತಮ್ಮೆಲ್ಲರ ಮನಃಪೂರ್ವಕ ಸಹಕಾರವನ್ನು ಕೋರುತ್ತೇವೆ.

ಬಿ. ಗೋಪಾಲ ಶೆಟ್ಟಿ — ಸಂಘಟಣ ಕಾರ್ಯದರ್ಶಿ

ಶಾಂತರಾಮ ಶೆಟ್ಟಿ — ಮುಖ್ಯ ಸಂಘಟಕರು

ಸಂಘಟಕರು: ಸರ್ವಶ್ರೀ ವೀರಪ್ಪ ಶೆಟ್ಟಿ (ಬಯಿಕಲ್ಲಾ), ಹಾಜೀ ಅಬ್ದುಲ್ ಜಾನಿ ದಾವೂದ್ (ಪರೇಲ್), ಮೋಹನ್‌ಲಾಲ್ ವ್ಯಾಸ್ (ರೇಯ್ ರೋಡ್), ಹುಸ್ಸೇನ್ ಇಬ್ರಾಹಿಮ್ (ಬೋರಿ ಬಂದರ್).

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ರಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು: 126 ಬೆಲೆ: ರೂ. 1-50
ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು
ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಕೃತಿ ಪರಿಚಯ

(ಏಳನೇ ಪುಟದಿಂದ)

ಲ್ಲೂ ಶಿಕ್ಷಣ ದೊರೆಯಬೇಕು ಎಂಬ ವಾದಕ್ಕೆ ಬೆಂಬಲ ದೊರೆಯುವಂತಾಗಲು ಈ ಬಗೆಯ ಪುಸ್ತಕಗಳ ಸಂಖ್ಯೆ ಹೆಚ್ಚಬೇಕು. ತಮಗೆ ತಿಳಿದುದನ್ನು ಬಲ್ಲವರು ತಿಳಿಗನ್ನಡದಲ್ಲಿ ಜನತೆಯ ಮುಂದೆ ಇಡಲು ಹಿಂಜರಿಯದಿದ್ದರೆ, ಕನ್ನಡಿಗರ ಬಹು ದಿನದ ಬಯಕೆ ಶೀಘ್ರವಾಗಿ ಈಡೇರುವುದು.

ಪುಸ್ತಕಕ್ಕೆ ಉಪಯೋಗಿಸಿದ ಕಾಗದ, ಪಾಲಿಶ್ ಕಾಗದವಿದ್ದು. ಮುದ್ರಣ ಅತ್ಯಾಕರ್ಷಕವಿದೆ.

ಪ್ರಳಯಾನಲ—ಲೇಖಕರು ಮತ್ತು ಪ್ರಕಾಶಕರು: 'ಪದ್ಮೇಂದ್ರ'-ಬ್ರಹ್ಮಾವರಕರ್,105, ಎಸ್. ಎಸ್. ಐಯ್ಯಂಗಾರ್ ರಸ್ತೆ, ದೇವರಾಜನ್ ಕಾಂಪೌಂಡ್,ಶೇಷಾದ್ರಿಪುರಂ, ಬೆಂಗಳೂರು- ೨೦. ಪುಟಗಳು:೧೦೧. ಬೆಲೆ. ರೂ. ೧=೨೫.

ಶ್ರೀ ಪದ್ಮನಾಭ ಭಟ್ ಬ್ರಹ್ಮಾವರಕರು ಪೂರ್ವಪಾಕಿಸ್ತಾನದಲ್ಲಿ ಎರಡು ವರ್ಷಗಳಿಗೆ ಹಿಂದೆ ನಡೆದ ಜಾತೀಯ ಗಲಭೆಯ ಸಂಬಂಧದ ಟಿಪ್ಪಣಿಗಳನ್ನು ಆಧರಿಸಿ ಬರೆದ ಏಳು ಹೃದಯಸ್ಪರ್ಶಿ ಘಟನೆಗಳ ಸಂಕಲನವೇ ಈ ಪ್ರಳಯಾನಲ. ಪಾಕಿಸ್ತಾನವು ಇಸ್ಲಾಮನ್ನು ರಾಷ್ಟ್ರೀಯ ಧರ್ಮವನ್ನಾಗಿ ಸ್ವೀಕರಿಸಿದೆ. ಪಾಕಿಸ್ತಾನಿಗಳು ಅಲ್ಲಿ ಭಾರತೀಯರಿಗೆ, ಮುಖ್ಯವಾಗಿ ಹಿಂದೂಗಳಿಗೆ ವಿರುದ್ಧವಾಗಿ ಜಾತೀಯ ಗಲಭೆಗಳನ್ನು ತಮಗೆ ಬೇಕೆಂಬಾಗ ಎಬ್ಬಿಸುತ್ತಾರೆ. ಈ ದುರ್ಘಟನೆಗಳಿಂದ ಲಕ್ಷಾಂತರ ಹಿಂದೂ—ಕ್ರೈಸ್ತ ನಿರಾಶ್ರಿತರು ಭಾರತಕ್ಕೆ ನುಗ್ಗಿ ಬಂದಿದ್ದಾರೆ. ಇಂತಹ ನಿರಾಶ್ರಿತರ ಸಂಖ್ಯೆ ಅಗಣಿತವಿದ್ದುದರಿಂದಲೇ ದಿ| ಪ್ರಧಾನಿ ಜವಾಹರಲಾಲರು ಒಮ್ಮೆ ಮುಚ್ಚಿದ್ದ ಪುನರ್ವಸತಿಯ ಮಂತ್ರಿಯ ಶಾಖೆಯನ್ನು ಮತ್ತೆ ತೆರೆದು ಮಹಾವೀರ ತ್ಯಾಗಿಗಳನ್ನು ಮಂತ್ರಿಯಾಗಿ ನೇಮಿಸಿಕೊಂಡರೆಂಬುದು ಬಹಿರಂಗ ಸತ್ಯ.

'ಹಾಯ್, ಇನ್ನಿಲ್ಲ ಭೂದೇವ್' ಮತ್ತು 'ಅವನಲ್ಲ, ನಾವು ಹುಚ್ಚರು' ಎಂಬವು ವ್ಯಕ್ತಿಗಳಿಬ್ಬರ ಹೃದಯ ಸ್ಪರ್ಶಿ ಕರುಣಾಜನಕ ಚಿತ್ರಗಳು. 'ಹೆಣ್ಣಾಗಿ ಹುಟ್ಟಬಾರದಿತ್ತು', 'ಮಹಾ ಯಾತ್ರೆ' 'ದೇವದೂತನ ಪುನರವತಾರ'—ಪಾಕ್ ಮುಸಲ್ಮಾನರ ಹಿಂದೂ ದ್ವೇಷದ ಪರಮಾವಧಿಯನ್ನು ವರ್ಣಿಸುತ್ತವೆ. ಜೀವವುಳಿಸಲು ಓಡುತ್ತಿದ್ದ ಪತಿಪತ್ನಿಯರು ಪಾಕ್‌ನ ಮುಸಲ್ಮಾನ ಪ್ರತಿಕಾರಾಸ್ತ್ರಕ್ಕೆ ಗುರಿಯಾದ ದಾರುಣತೆ 'ಸಾವು ಕಂಡ ಒಂದು ರಾತ್ರಿ'ಯಲ್ಲಿ ಚಿತ್ರಿತವಾಗಿದ್ದರೆ, ಅರಬ ದೇಶದ ಶ್ರೀಮಂತರ ಭೋಗ ವಿಲಾಸಕ್ಕೆ ಬಲಾತ್ಕಾರಿಸಲಾಗುತ್ತಿರುವ ಪಾಕ್ ಹಿಂದೂ ನಾರಿಯರ ಕರಾಳ ದುರದೃಷ್ಟ 'ನಿರ್ಲಜ್ಜ ಜಗತ್ತಿ'ನಲ್ಲಿ ಕಾಣುತ್ತಿದೆ.

ಲೇಖಕರು ತನ್ನ ಕಥೆಗಳಿಗೆ ಆಧಾರವೆಂಬಂತೆ ರಾಜಕೀಯ ಮುಖಂಡರ ಹೇಳಿಕೆ, ಪತ್ರಿಕೆಗಳ ವರದಿಗಳನ್ನು ನೀಡುವ ೧೬ ಪುಟಗಳ ಪೀಠಿಕೆಯನ್ನು ಬರೆದಿದ್ದಾರೆ. ಸತ್ಯ ಘಟನೆಗಳನ್ನು ನಿರೂಪಿಸಲು ಕಾಲ್ಪನಿಕ ವ್ಯಕ್ತಿಗಳನ್ನು ಎಳೆದು ತಂದಿರುವುದಾಗಿ ಹೇಳಿದ್ದಾರೆ. ಇಲ್ಲಿನ ಕಥೆಗಳು ಯಥಾರ್ಥವೆಂದು ಓದಿದ ಯಾರಾದರೂ ಹೇಳಿಯೇ ಹೇಳುತ್ತಾರೆ. ಇದಕ್ಕೆಲ್ಲಾ ಕೊನೆಯೆಂದು? ಎಂದು ಯೋಚಿಸಿ ಸೂಕ್ತ ಪರಿಹಾರ ಹುಡುಕುವಲ್ಲಿ ಅವರೆಲ್ಲ ನೆರವಾದಾರೆ?

ಶ್ರೀ ಪದ್ಮೇಂದ್ರ ಅವರ ಕಥನ ಶೈಲಿಯಲ್ಲಿ ಚೈತನ್ಯ ತುಂಬಿದೆ; ಉಚಿತ ಮರಿತು ವೇಗವೂ ಸಾಧಿಸಿದೆ. ತನ್ನ ಹಿಂದಿನ ಕೃತಿಗಳಿಂದಲೇ ದೇಶ ಪ್ರೇಮವನ್ನು ಪ್ರಕಟಿಸಿದ ಇವರು ಇಂತಹ ನೂರು ಗ್ರಂಥ ಬರೆದು ಕನ್ನಡಿಗರಲ್ಲಿ ದೇಶಪ್ರೇಮ—ದೇವರ ಸೇವಯ ಬೀಜ ಬಿತ್ತಲಿ.

ಪುಸ್ತಕದ ಮುದ್ರಣ ಸಾಮಾನ್ಯ. ಅಲ್ಲಲ್ಲಿ ಅಚ್ಚಿನ ದೋಷಗಳು ತಲೆಯೆತ್ತಿ ನಿಂತಿವೆ. ಇದು ಅಪರಿಹಾರ್ಯವೇನೂ ಆಗಿರಲಾರದು.

ಗೋವಿಂದ ಹರಿ ಗೋವಿಂದ:

ರಚಯಿತರು: ದಾಮೋದರ ಬಾಳಿಗ. ಪುಟಗಳು: ೩೯. ಬೆಲೆ. ರೂ. ೧=೨೫. ಪ್ರಕಾಶಕರು: ನವಸಿಧಿ ಕಾರ್ಯಾಲಯ,ರಥ ಬೀದಿ, ಮಂಗಳೂರು—೧.

ರಾಷ್ಟ್ರಕವಿ—ಪಂಡಿತಪಕ್ಕಿ ಎಂ. ಗೋವಿಂದ ಪೈಯವರ ಸ್ಮರಣೆ ಚಿರಕಾಲ ಉಳಿಯುವಂತೆ ಸಾಹಿತ್ಯಕ್ಕೆ ಹೊಸತೆನಿಸುವ ಒಂದು ರೀತಿಯಲ್ಲಿ 'ಗೋವಿಂದ ಹರಿ ಗೋವಿಂದವನ್ನು ಶ್ರೀ ಬಾಳಿಗರು ಬರೆದಿದ್ದಾರೆ. ರಚಯಿತರು ಮೆಚ್ಚಿದ ಪೈಯವರ ವಿಚಾರಗಳನ್ನು ಎತ್ತಿ ಚುಟುಕಾಗಿ ಆಯ್ದ ಮೂವತ್ತೆರಡು ಸಂಕೀರ್ತನಗಳನ್ನು ರಚಿಸಿದ್ದಾರೆ. ಸಂಕೀರ್ತನಗಳಲ್ಲಿ ಬಂದ 'ವಿಚಾರ'ಗಳಿಗೆ ದಿ| ಪೈಯವರ ಕೃತಿಗಳ ಸಮರ್ಥನೆಯನ್ನು (ಇವುಗಳ ಸಂಖ್ಯೆ ೧೦೧) ಟಿಪ್ಪಣಿಯ ರೂಪದಲ್ಲಿ ನೀಡಿದ್ದಾರೆ.

ಉದಾಹರಣೆಗೆ

'ಕವಿತೆಗಡ ಮರುಕಂ' ಎಂಬುದನು
ಅರಿತಿರ್ದು
ಸುವಿಚಾರ ಸಿನ್ನೆದೆಯೊಳರಿಗಳಿಗೆ
ಉಲಿದಿರ್ದು
ಕವನ ರೂಪಂಬಡೆದ ನುಡಿಗೆಳತಿ
ಮೊಳಗೇರಿ
ಭವಧುರದ ಕರೆ ಸಾರುತಿದೆ ತವ
'ತುತೂರಿ॥'

ಗೋವಿಂದ ಹರಿ ಗೋವಿಂದ||

ಇಲ್ಲಿ 'ಕವಿತೆಗಡ ಮರುಕಂ' ಎಂಬುದಕ್ಕೆ ಗಿಳಿವಿಂಡು—ಪುಟ ೩೨. 'ಕವಿತಾವತಾರ' 'ಬನಿಯೊಂದು, ಬಿಕ್ಕೊಂದು—ಕವಿತೆಗಡ ಮರುಕಂ!' ಎಂದು ಟಿಪ್ಪಣಿ ಜೋಡಿಸಿದ್ದಾರೆ. ಇನ್ನಿತರ ಟಿಪ್ಪಣಿಗಳೂ ಇವೆ.

ದಿ| ಪೈಯವರ ಜೀವನಕ್ಕೆ ಸಂಬಂಧಿಸಿದ ಚಿತ್ರಗಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಬಣ್ಣದ ಅಚ್ಚು ಆಕರ್ಷಕನೆನಿಸಿದೆ. ಪಂಡಿತಪಕ್ಕಿಯ ಪಾಂಡಿತ್ಯದಲ್ಲಿ ಮುಳುಗಿ ಅದರ ರಸಹೀರಿ ಹಂಚಿದ ಶ್ರೀ ಬಾಳಿಗಾರ ಶ್ರಮ ಸಾರ್ಥಕವಾಗಿದೆ. ಗೋವಿಂದ ಪೈಯವರ ಸ್ಮರಣೆಗೆ ಈ ಕೃತಿಯೊಂದು ಮಾಧ್ಯಮವಾಗಿದೆ.

—ಗೋರಾ.

ಆಗತ್ಯಗಳಿಗಾಗಿ ಮೊತ್ತ

ಮಣಿಪಾಲ, ಮಾ. ೧೨-ಖಾಸಗಿ ವಿದ್ಯಾಸಂಸ್ಥೆಗಳು ಕಟ್ಟಡಗಳು ಮತ್ತು ಉಪಕರಣಗಳಿಗಾಗಿ ಸಮಾಧಾನಕರವಾದ ಮೊತ್ತವನ್ನು ತೆಗೆದುಕೊಳ್ಳುತ್ತಿದ್ದು, ಆ ಆಗತ್ಯಗಳು ಪೂರೈಸಿದ ನಂತರ ಆ ಮೊತ್ತವನ್ನು ರದ್ದು ಮಾಡಬಹುದಾಗಿದೆ ಎಂದು ಎಜುಕೇಶನ್ ಆಫ್ ಜನರಲ್ ಎಜುಕೇಶನ್‌ನ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ರಮೇಶ ಪೈಯವರು ಇಂದಿಲ್ಲಿ ನುಡಿದರು.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿಗೆ ಸೇರಿದ ಪ್ರಾಯೋಗಿಕ ವಿವಿಧೋದ್ದೇಶ ಶಾಲೆಯ ವಿದ್ಯಾರ್ಥಿಗಳನ್ನುದ್ದೇಶಿಸಿ ಅವರು ಮಾತನಾಡುತ್ತಾ, ಇತರ ಸಂಸ್ಥೆಗಳಂತೆ ಸೇರಿಸಿಕೊಳ್ಳಲು ವಿಶ್ವವಿದ್ಯಾನಿಲಯದ ಒಪ್ಪಿಗೆ ಇರುವಂತಹ ವಿದ್ಯಾರ್ಥಿಗಳನ್ನು ಮಾತ್ರ ಈ ಸಂಸ್ಥೆಗಳು ಸೇರಿಸಿಕೊಳ್ಳುತ್ತಿವೆ ಎಂದೂ, ಕನಿಷ್ಠ ದರ್ಜೆಯ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ ಎಂಬುದು ಸರಿಯಲ್ಲವೆಂದೂ ಸ್ಪಷ್ಟಪಡಿಸಿದರು. ಶ್ರೀ ಆರ್. ಎಲ್. ಅನಂತರಾಮಯ್ಯ ಮತ್ತು ಕುಮಾರಿ ವತ್ಸಲಾರವರು ಸಹ ಮಾತನಾಡಿದರು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ—'ಚೂಡಾಮಣಿ' ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ದಿನಾಂಕ 12-3-66ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ಜರಗಲ್ಪಟ್ಟಿತು. ಶ್ರೀ ಯನ್. ನಾರಾಯಣ ನಾಯಕ್ ಮಾಸ್ತರರವರ ವತಿಯಿಂದ ನಡೆಸಲ್ಪಟ್ಟ ಈ ಕಾರ್ಯಕ್ರಮದಲ್ಲಿ ಸರ್ವ ಶ್ರೀ ಕೇ. ವ. ಕೇಶವ, ಬಿ. ವಿ. ವಿನೋದ, ರಾಮಯ ಗೌಡ, ನಾರಾಯಣ ನಾಯಕ್, ಎಂ. ಶೀನಪ್ಪ ಗೌಡ, ಬಾಬು ರೈ, ಮಾಸ್ಟರ್ ಸಾಂತಪ್ಪ, ಬಿ. ಶ್ರೀಧರರೇ ಮುಂತಾದವರು ಭಾಗವಹಿಸಿದ್ದರು.

ವಾರ್ಷಿಕೋತ್ಸವ

ಉಡುಪಿಯ 'ಮೋಡರ್ನ್ ಸ್ಕೂಲ್ ಆಫ್ ಕಾಮರ್ಸ್' ಇದರ ವಾರ್ಷಿಕೋತ್ಸವವು ತಾ. 14ರಂದು ಕುಂದಾಪುರದ ಅಸಿಸ್ಟೆಂಟ್ ಕಮಿಷನರ್ ಶ್ರೀ ಜೆ. ಅಲೆಕ್ಸಾಂಡರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಟಿ. ಎ. ವಾಸುದೇವನ್‌ರವರು ಸ್ವಾಗತ ಭಾಷಣ ಮಾಡಿ ಶಾಲಾ ವರದಿಯೊಪ್ಪಿಸಿದರು. ತರುವಾಯ ಶ್ರೀ ಆಲ್ಬರ್ಟ್ ಡಿಸೋಜಾರವರು ಸಂದೇಶಗಳನ್ನು ಓದಿದರು. ಶಾಲಾ ಹಳೆವಿದ್ಯಾರ್ಥಿ ಶ್ರೀ ಬಿ. ಎಂ. ಪ್ರಭುಗಳವರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀ ಸುಂದರರಾಯರು ಉತ್ತರವಿತ್ತರು. ಶ್ರೀ ಎ. ಜೆ. ಅಲ್ಮೆಯವರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ಟಿ. ವಾಸುದೇವನ್‌ರವರನ್ನು ಇಂತಹ ಸಂಸ್ಥೆಯನ್ನು ಯೋಗ್ಯರೀತಿಯಲ್ಲಿ ನಡೆಸಿಕೊಂಡು ಬಂದುದಕ್ಕೆ ಅಭಿನಂದಿಸಿದರು. ಅಲ್ಲದೆ ಇಂದಿನ ಕಲಿತ ವಿದ್ಯಾರ್ಥಿಗಳು ತಮಗೆ ಪ್ರಿಯವಾದ ಉದ್ಯೋಗವನ್ನು ಆರಿಸಿಕೊಳ್ಳುವುದು ಪ್ರಾಮುಖ್ಯವಾದ ಸಂಗತಿಯಾಗಿದೆ. ತಮಗೆ ಆಸಕ್ತಿಯಿರುವ ನೌಕರಿಯನ್ನು ಆರಿಸುವುದರಿಂದ ಅವರಿಗೆ ಜೀವನದಲ್ಲಿ ಹೊಸ ಸ್ಫೂರ್ತಿ ಮೂಡಿಬರುವುದೆಂದು ಹೇಳಿದರು.

ಅನಂತರ ಮನರಂಜನಾ ಕಾರ್ಯಕ್ರಮಗಳಾದ ಮೇಲೆ ಶ್ರೀ ಎನ್. ಆರ್. ಬಲ್ಲಾಳರಿಂದ ಧನ್ಯವಾದ ಸಮರ್ಪಣೆಯಾಯಿತು.

ಪ್ರಬಂಧ ಸ್ಪರ್ಧೆ

ತಾಷ್ಕೆಂಟ್ ಘೋಷಣೆಯ ಮಹತ್ವವನ್ನು ಪ್ರಸಾರಗೊಳಿಸುವ ಸಲುವಾಗಿ ಕನ್ನಡ ಹಾಗೂ ಇಂಗ್ಲಿಷ್ ಈ ಎರಡು ಭಾಷೆಗಳಲ್ಲಿ "ತಾಷ್ಕೆಂಟ್ ಘೋಷಣೆ-ವಿಶ್ವಶಾಂತಿಗೆ ದೊರೆತ ವಿಜಯ" ಎಂಬ ವಿಷಯದ ಮೇಲೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ತಾಷ್ಕೆಂಟ್ ಘೋಷಣೆಯ ಮುಖ್ಯತ್ವ-ಮಹತ್ವಗಳನ್ನು ಪ್ರತಿಬಿಂಬಿಸುವಂತಾಗಿದ್ದು ಪ್ರಬಂಧದ ಉದ್ದ 1,300ರಿಂದ 1,500 ಪದಗಳೊಳಗೆ ಇರತಕ್ಕದ್ದು.

ಪ್ರಬಂಧಗಳು ಕಾಗದದ ಒಂದೆ ಮಗ್ಗುಲಲ್ಲಿ ಬರೆಯಲ್ಪಟ್ಟಿರ/ಟೈಪು ಮಾಡಲ್ಪಟ್ಟಿರಬೇಕು. ಪ್ರಬಂಧದ ಮೂರು ಪ್ರತಿಗಳನ್ನು ಪ್ರವೇಶ ಶುಲ್ಕ ರೂ. 1ರೊಂದಿಗೆ (ಪೋಸ್ಟಲ್ ಆರ್ಡರ್ ಮೂಲಕ) ಕಾರ್ಯದರ್ಶಿ, ವಿದ್ಯಾರ್ಥಿ-ಯುವಜನ ಸಭಾ ನಂ. 10, I ಬ್ಲಾಕ್, ರೈಲ್ವೆ ಲೈನ್ ರೋಡ್, ಕುಮಾರಪಾರ್ಕ್ ವೆಸ್ಟ್, ಬೆಂಗಳೂರು 20. ಇವರಿಗೆ 16ನೇ ಎಪ್ರಿಲ್ 1966ರ ಒಳಗೆ ತಲಪುವಂತೆ ಕಳುಹಿಸಿಕೊಡತಕ್ಕದ್ದು.

ಎರಡು ಭಾಷೆಗಳಿಗೂ ಪ್ರತ್ಯೇಕವಾಗಿ ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾದ ಮೂವರು ತೀರ್ಪುಗಾರರಿರುವರು.

ಎರಡು ಭಾಷೆಗಳಲ್ಲಿಯ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳು ಪ್ರತ್ಯೇಕವಾಗಿದ್ದು ಕ್ರಮವಾಗಿ ಅವುಗಳ ಮೌಲ್ಯ ರೂ. 50, ರೂ. 35, ರೂ. 15 ಆಗಿರುತ್ತವೆ. ಇವುಗಳಲ್ಲದೆ ಕೆಲವು ಸಮಾಧಾನ ಬಹುಮಾನಗಳನ್ನೂ ನೀಡಲಾಗುವುದು. ಬಹುಮಾನಗಳು, ಬಹುಮಾನಿತರೇ ಆಯ್ದು ಮಾಡುವ ಪುಸ್ತಕಗಳ ರೂಪದಲ್ಲಿ ನೀಡಲ್ಪಡುತ್ತವೆ.

ವಯೋಮಿತಿ: ೧೮ರಿಂದ ೩೦ ವರ್ಷದೊಳಗಿನ ಕರ್ನಾಟಕದ ಎಲ್ಲಾ ವಿದ್ಯಾರ್ಥಿಗಳೂ ಯುವಜನರೂ ಭಾಗವಹಿಸಬಹುದು.

ಬಹುಮಾನಿತ ಪ್ರಬಂಧಗಳು ವಿದ್ಯಾರ್ಥಿ-ಯುವಜನ ಸಭಾ ಸದ್ಯದಲ್ಲೇ ಹೊರ ತರಲಿರುವ ಸೋವೆನಿರ್‌ನಲ್ಲಿ ಪ್ರಕಟಿಸಲ್ಪಡಬಹುದು.

ಶ್ಯಾಮಸುಂದರ್ ಷರಾಫ್

ಪ್ರಧಾನ ಕಾರ್ಯದರ್ಶಿ

ತಾ. 18-3-1966, ಬೆಂಗಳೂರು

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77

ಕುಂದಾಪುರ, ದ. ಕ.



ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ ಸಂಸ್ಥಾನ
ಶ್ರೀ ಶ್ರೀಮದ್ ದ್ವಾರಕಾನಾಥ ತೀರ್ಥ

ಶ್ರೀಪಾದ ವಡೇರ ಸ್ವಾಮೀಜಿ

ಅವರ ಪೂಜ್ಯ ಸಮ್ಮುಖದಲ್ಲಿ

ಮಾನ್ಯ ಶ್ರೀ ಬಿ. ಆರ್. ಭಗತ್

(ಭಾರತ ಸರಕಾರದ ಹಣಕಾಸು ಸಚಿವ ಶಾಖೆಯ ಸ್ಟೇಟ್ ಸಚಿವ) ಅವರು

ಗೋವಾದಲ್ಲಿ ಕೆನರಾ ಬ್ಯಾಂಕಿನ
3 ನೇ ಶಾಖೆಯನ್ನು
ಮಡಗಾಂವಲ್ಲಿ

(ಮಡಗಾಂವ್‌ನ ಮುನಿಸಿಪಲ್ ಸ್ಕ್ವೇರ್‌ನಲ್ಲಿರುವ ಡಾ॥ ಆಂಟೋನಿಯೊ ದಾಸ್ ಬಿಲ್ಡಿಂಗ್ಸ್)

1966 ರ ಮಾರ್ಚ್ 19ರಂದು ಶನಿವಾರ ಸಂಜೆ 5-30ಕ್ಕೆ ಉದ್ಘಾಟಿಸಿದರು

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ : 1906)

ರಿಜಿಸ್ಟರ್ಡ್ ಆಫೀಸ್ : ಮಂಗಳೂರು
ಆಡಳಿತ ಕಛೇರಿ : ಬೆಂಗಳೂರು

110 ಕೋಟಿ ರೂ.ಗಳಿಗೂ ಹೆಚ್ಚಿನ ಸಂಪತ್ಸಾಧನಗಳು

ಭಾರತದ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲಿ ಈಗ 240 ಶಾಖೆಗಳು

ಪ್ರಪಂಚದಾದ್ಯಂತ ಪ್ರತಿನಿಧಿಗಳು

ಈಗಾಗಲೆ ಗೋವಾದಲ್ಲಿ ನಿಮ್ಮ ಸೇವೆಯಲ್ಲಿ ತೊಡಗಿರುವ ನಮ್ಮ 2 ಶಾಖೆಗಳು:

1. ಪಂಜಿಮ್
2. ವಾಸ್ಕೋಡಗಾಮ

ಉದ್ಘಾಟನಾ ಸಮಾರಂಭ

ಉಡುಪಿ, ತಾ. 20, ಮೋಡರ್ನ್ ಕಿರಿಯ ಬುನಾದಿ ಮತ್ತು ಹಾಯರ್ ಎಲಿಮೆಂಟರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ಮತ್ತು ಶಾಲೆಗೆ ಹಳೆವಿದ್ಯಾರ್ಥಿಗಳ ಮತ್ತು ಹಿತೈಷಿಗಳ ಸಹಕಾರದಿಂದ ಒದಗಿಸಲಾದ ಧ್ವಜಸ್ತಂಭ ಮತ್ತು ರೇಡಿಯೋಗಳ ಉದ್ಘಾಟನಾ ಸಮಾರಂಭವು ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಪ್ರಾರ್ಥನೆಯಾದ ಮೇಲೆ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಡಾ॥ ಕೆ. ಮೋಹನದಾಸ ಪೈಗಳು ಸ್ವಾಗತ ಭಾಷಣ ಮಾಡಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಕೆ. ಕೃಷ್ಣಪ್ಪನವರು ವರದಿವಾಚನ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಸಂದೇಶಗಳನ್ನು ಓದಿದರು. ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರು ಧ್ವಜಸ್ತಂಭವನ್ನು ಉದ್ಘಾಟಿಸಿ ಭಾಷಣಮಾಡುತ್ತ ಉಪಾಧ್ಯಾಯರ ಸ್ಥಾನಮಾನ ಬೆಳೆಯುವಂತೆ ಸರಕಾರ ಮತ್ತು ಜನತೆ ಸಹಕರಿಸಬೇಕೆಂದರು. ಎಲ್. ಐ. ಸಿ. ಯ ಡಿವಿಜನ್ ಮೆನೇಜರ್ ಶ್ರೀ ಪಿ. ಎಸ್. ರಾಮಚಂದ್ರರಾಯರು ರೇಡಿಯೋವನ್ನು ಉದ್ಘಾಟಿಸಿದ ಬಳಿಕ - ಶ್ರೀ ಜಿ. ವಿ. ಸಿದ್ಧೇಶ್ವರ ಅವರು ದಿ| ಲಾಲ್ ಬಹದ್ದೂರ್ ಶಾಸ್ತ್ರಿಯವರ ಭಾವಚಿತ್ರ ಅನಾವರಣಗೈದು ದಿ| ಶಾಸ್ತ್ರಿಯವರ ಜೀವನ ಘಟನೆ ಸಾಧನೆಗಳನ್ನು ವಿವರಿಸಿದರು. ಸಭಿಕರಲ್ಲಿ ಶ್ರೀ ಪಿ. ದೇವದಾಸ ಶೆಣೈ ಶ್ರೀ ರಫಿದ್ದೀನ್ ಸಾಹೇಬರು ಮಾತನಾಡಿದರು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯಕರು ಶಾಲೆಗೆ ಬೇಕಾದ ಆವಶ್ಯಕತೆಗಳನ್ನು ವಿವರಿಸಿ ಭಾಷಣ ಮಾಡಿದರು. ಸಭಾಧ್ಯಕ್ಷರ ಭಾಷಣದ ಬಳಿಕ ಶ್ರೀ ಶ್ರೀಶ ಬಳ್ಳಾಳರು ವಂದನೆಗಳನ್ನರ್ಪಿಸಿದರು.

(ಮೂರನೇ ಪುಟದಿಂದ)

ತಡೊಡನೆ ಹಲವಾರು ಪ್ರಶ್ನೆಗಳ ಸುರಿಮಳೆಯೂ ಆದೀತು. ಭಾರತ-ಪಾಕ್ ಘರ್ಷಣೆಯ ನಂತರ ಆಗುವ ಈ ಭೇಟಿಗೆ ಐತಿಹಾಸಿಕ ಮಹತ್ವವೂ ಇದೆ. ಕಮ್ಯುನಿಸ್ಟ್ ಚೀನಾದ ಪ್ರಭಾವದಿಂದ ಏಶ್ಯನ್ ದೇಶಗಳನ್ನು ಮುಕ್ತಗೊಳಿಸಿ, ಅವು ಸ್ವತಂತ್ರವಾಗಿ ಬೆಳೆದು ಬರುವಂತೆ ಮಾಡಬೇಕು —ಎಂಬ ಇಂದಿರೆಯ ಅಭಿಪ್ರಾಯದಲ್ಲಿ ಆಸಕ್ತ ಪಕ್ಷವಾದ ಅಮೇರಿಕೆ ಇಂದಿರೆಯಿಂದ ಅದರ ವ್ಯಾಖ್ಯೆಯನ್ನು ಬಯಸಬಹುದು. ಹಾಗೆಯೇ ಭಾರತ— ಅಮೆರಿಕ ಸಂಬಂಧ— ಮುಖ್ಯವಾಗಿ ಆರ್ಥಿಕದ ಬಗ್ಗೆ ಬಿಚ್ಚು ಮನಸ್ಸಿನ ಚರ್ಚೆ ನಡೆಯಬಹುದು. ವಿಯೆಟ್ನಾಮು ಪ್ರಶ್ನೆಯ ಮೇಲೆ ಅಭಿಪ್ರಾಯ ವಿನಿಮಯವಾಗಬಹುದು. ದೇಶದ ಆಹಾರ ಸಮಸ್ಯೆ. ಈ ಬಗ್ಗೆ ವಿದೇಶಗಳಲ್ಲಿ ಪ್ರಚಾರವಾದ ಅತಿವಾದ ಪ್ರಸಂಗಕ್ಕೆ ಬರಬಹುದು. ಅಮೆರಿಕನ್ ನೀತಿಗೆ ಭಾರತವು ಸಂಪೂರ್ಣಸಮ್ಮತವಿಲ್ಲ-ಆದರೆ, ಯಾವುದೇ ರಾಜಕಾರಣದ ಜಂಜಾಟಗಳಿಗೆಳೆಯುವಂತಹ, ಭಾರತಕ್ಕೆ ಅಪಮಾನವಾಗುವಂತಹ ಯಾವ ಕಾರ್ಯಕ್ಕೂ ಇಂದಿರೆ ಇಳಿಯುವುದಿಲ್ಲ. ಇದು ಖಂಡಿತ.

ಬೀಳ್ಕೊಡುಗೆ

ಉಡುಪಿ, ತಾ. 19, ಸ್ಥಳೀಯ ವಿಜಯಾ ಬೇಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ. ಬಿ. ರಘುರಾಮ ಹೆಗ್ಡೆ, ಬಿ. ಎ. ಇವರು ಬಡ್ತಿ ಹೊಂದಿ ರಾಮನಗರ ಶಾಖೆಗೆ ಅಸಿಸ್ಟೆಂಟ್ ಆಗಿ ಹೋಗುವ ಸಂದರ್ಭದಲ್ಲಿ ಇಲ್ಲಿಯ ಮೆನೇಜರ್ ಮತ್ತು ಇತರ ಸಿಬ್ಬಂಧಿಯರು ಶ್ರೀಯುತರಿಗೆಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಸ್ಥಳೀಯ ಶಾಖೆಯ ಮೆನೇಜರ್ ಶ್ರೀ. ಕೆ. ಶೀನಪ್ಪ ರೈಗಳು ಅವರ ಗುಣಗಾನವನ್ನು ಮಾಡಿದರು. ಬೇಂಕಿನ ಹಿಂದಿನ ಎಜೆಂಟ್ ಆಗಿದ್ದ ಶ್ರೀ ಪಿ. ಆರ್. ಕಾಮತರು ಶ್ರೀ ಹೆಗ್ಡೆಯವರ ದಕ್ಷತೆ ಸ್ವಯಂಪ್ರೇರಿತ ಕಾರ್ಯ ನಿರ್ವಹಣೆ ಇನ್ನಾದರ ಗುಣಗಳನ್ನು ಕೊಂಡಾಡಿ ಶುಭಕೋರಿದರಲ್ಲದೆ ಶ್ರೀಯುತರು ಈ ಸಂಸ್ಥೆಯಲ್ಲಿ ಒಬ್ಬ ನಿಪುಣ ಸಿಬ್ಬಂಧಿಯಾಗಿ ಹಿಂದೆರಡುವರುಷಗಳಲ್ಲೇ ಉಡುಪಿ ಶಾಖೆಗೇ ಮೆನೇಜರ್ ಆಗಿ ಬರುವಂತಾಗಲೆಂದರು. ಶ್ರೀ ಎಂ. ಎಸ್. ಲಿಮಿನರು ಧನ್ಯವಾದ ಅರ್ಪಣೆಗೈದರು.

ಬೀಳ್ಕೊಡುವ ಸಮಾರಂಭ

ಉಡುಪಿ ಮೋಡರ್ನ್ ಹಾ. ಎ. ಶಾಲಾ 7 ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವು ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ॥ ಎಂ. ಎಸ್. ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಉಡುಪಿ ಕ್ಷೇತ್ರದ ಕಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ಸುರೇಂದ್ರ ಆಚಾರ್ಯರು ಮಕ್ಕಳ ಹಸ್ತಪತ್ರಿಕೆ 'ಬಾಲಜ್ಯೋತಿ'ಯನ್ನು ಉದ್ಘಾಟಿಸಿದರು. ಮಕ್ಕಳು ಶಾಲೆಗೆ ಒದಗಿಸಿದ ನಾಮ ಫಲಕವನ್ನು ಶಾಲೆಗೆ ಹಸ್ತಾಂತರಿಸಿದರು. ಮಕ್ಕಳ ಭಾಷಣಗಳ ಬಳಿಕ ಅಧ್ಯಾಪಕರುಗಳಾದ ಶ್ರೀ ಕೃಷ್ಣಮೂರ್ತಿ ಐತಾಳರೂ, ರತ್ನಾಕರ ಅಡಿಗರೂ ಮಕ್ಕಳಿಗೆ ಹಿತವಚನಗಳನ್ನು ನುಡಿದರು. ಪರೀಕ್ಷಾಧಿಕಾರಿಗಳ ಮತ್ತು ಅಧ್ಯಕ್ಷರ ಭಾಷಣಗಳ ಬಳಿಕ, ಶಾಲಾ ಮುಖ್ಯೋಪಾಧ್ಯಾಯರು ಧನ್ಯವಾದ ಸಮರ್ಪಿಸಿದರು.

ಕೋಟಿ- ಚೆನ್ನಯ್ಯ ಬೈದೇರುಗಳ ಉತ್ಸವ

ಎಣ್ಣೂರು ಬೀಡು ಶ್ರೀ ಬೈದೇರುಗಳ ಆದಿ ಸ್ಥಳ, ಎಣ್ಣೂರು, ಆದಿ ಶ್ರೀ ಕೋಟಿ-ಚೆನ್ನಯ್ಯರೆಂಬ ಬೈದೇರುಗಳ ಉತ್ಸವವು ವಾಡಿಕೆಯಂತೆ ತಾ. 2-4-66ರಿಂದ 6-4-66ರ ತನಕ ನಡೆಯಲಿರುವುದರಿಂದ ಸರ್ವರೂ ಬಂದು ಸಹಕರಿಸಿ ಗಂಧ ಪ್ರಸಾದಗಳನ್ನು ಸ್ವೀಕರಿಸಬೇಕೆಂದೂ ಕಟ್ಟ ಬೀಡಿನ ಪಟೇಲ್ ಕೆ. ಬಿ. ವಿಟ್ಠಲ್ ರೈ ಇವರು ಅಪೇಕ್ಷಿಸುತ್ತಾರೆ.

<u>ನಿಮಗೆ ತಿಳಿದಿರಲಿ.</u>

ಕೋಳಿ ಸಾಕಣೆ

೮ ಅಡಿ ಉದ್ದ ೮ ಅಡಿ ಅಗಲದ ಕೋಣೆಯಲ್ಲಿ ೧೫ ಕೋಳಿಗಳನ್ನು ಸಾಕಬಹುದು. ಕೋಳಿ ಮೊಟ್ಟೆ ಹಾಕಲು ಹುಂಜ ಇರಬೇಕೆಂದಿಲ್ಲ. ೧೫ ಕೋಳಿಗಳಿದ್ದರೆ ದಿನಕ್ಕೆ ಸರಾಸರಿ ೫-೬ ಮೊಟ್ಟೆ ದೊರೆಯುತ್ತವೆ.

೧೫ ಕೋಳಿಗಳ ಗೊಬ್ಬರ ೧೨ ಸೆಂಟು ತರಕಾರಿ ತೋಟಕ್ಕೂ ೨೫ ಸೆಂಟು ಬತ್ತದ ಗದ್ದೆಗೂ ಸಾಕಾಗುತ್ತದೆ.

ಸುಧಾರಿತ ತಳಿಯ ಕೋಳಿಗಳು ಶೇಕಡ ೧೫೦ರಷ್ಟು ಹೆಚ್ಚು ಮೊಟ್ಟೆ ಇಡುತ್ತವೆ. ವಯಸ್ಸಾದಂತೆ ಮೊಟ್ಟೆ ಇಡುವುದು ಕಡಿಮೆಯಾಗುವುದರಿಂದ ಕೋಳಿಗಳನ್ನು ಬದಲಾಯಿಸುತ್ತಿರಬೇಕು.

ಸ್ಥಳ ಬದಲಾಯಿಸಿದರೆ ಮೊಟ್ಟೆ ಹಾಕುವ ಕೋಳಿ ಒಂದು ತಿಂಗಳ ವರೆಗೂ ಮೊಟ್ಟೆ ಹಾಕುವುದನ್ನು ನಿಲ್ಲಿಸುತ್ತದೆ.

ಕೋಳಿಗಳಿಗೆ ದಿನಕ್ಕೆ ೪-೫ ಔನ್ಸು ಮಾತ್ರ ಆಹಾರಬೇಕು. ಆದರೆ ಅವುಗಳಿಗೆ ಸದಾ ನೀರು ದೊರೆಯುವ ಏರ್ಪಾಡು ಮಾಡಬೇಕು.

ನಾಲ್ಕು ತಿಂಗಳಿಗೊಮ್ಮೆ ಕೋಳಿಗಳ ಮೈಮೇಲೆ ಗೆಮೆಕ್ಸಿನ್ ಪುಡಿ ಉದುರಿಸಬೇಕು. ಗೂಡುಗಳನ್ನು ಚೊಕ್ಕಟವಿಡಬೇಕು. ಆಗಾಗ್ಗೆ ಔಷಧಿ ಸಿಂಪಡಿಸಬೇಕು.

ಹಸುರು ಸೊಪ್ಪು ಕತ್ತರಿಸಿ ಹಾಕಿದರೆ ಆಹಾರಕ್ಕೆ ಉತ್ತಮ. ಕೋಳಿಗಳ ಗೂಡನ್ನು ಮನೆಯ ಹಿತ್ತಲಲ್ಲಿಯೇ ಕಟ್ಟಬಹುದು!

ರೈತ ಮುರುಗ

(ಎರಡನೇ ಪುಟದಿಂದ)

ಹಾಕುವದಿಲ್ಲ. ಒಬ್ಬ ಹುಚ್ಚನು ಕೂಡಾ ಕೋಡಂಗಿಯವನ ವೇಷದಲ್ಲಿರಬೇಕಾದ್ದಕ್ಕೆ ಅದಕ್ಕೆ ತಕ್ಕಂಥ ವೇಷವನ್ನು ಹಾಕಿಕೊಳ್ಳಲೇ ಬೇಕು. ಹಾಗೆ ನ್ಯಾಯವಾದಿಗೆ ಅವನ ಉಡುಪು ತೊಡಪುಗಳೇ ಅವನನ್ನು ಇತರರು ಗುರುತಿಸಿಕೊಳ್ಳುವಂತೆ ಮಾಡುವ ನೋಡಿ. ನಾಗರಿಕ ಜೀವನವು ಉಪಾಯದಿಂದ ಬಟ್ಟೆಬರೆಗಳನ್ನು ಧರಿಸಿಕೊಳ್ಳುವ ಆಟ. ಒಂದು ಹೆಜ್ಜೆಯು ಇನ್ನೊಂದಕ್ಕೆ ಮುಂದಡಿಯಾಗುತ್ತದೆ. ಚೆನ್ನಾಗಿ ವಸ್ತ್ರಗಳನ್ನು ಧರಿಸಿಕೊಂಡಿರುವ ನ್ಯಾಯವಾದಿಯು ಧೂಳುಮಯ ದಾರಿಯಲ್ಲಿ ನಡೆದುಕೊಂಡು ಹೋಗುವದು ಸರಿಯೆ? ಅವನಿಗೊಂದು ಕಾರು ಅತ್ಯಾವಶ್ಯಕ."

ಕೇದಾರಿಯು ತನ್ನ ಚಮತ್ಕಾರದ ಮಾತಿನ ಮಧ್ಯೆ ಮನಒಲಿಸುವಂಥ ಶಬ್ದಗಳನ್ನು ಧಾರಾಳವಾಗಿ ಉಪಯೋಗಿಸಿದ್ದನು. ತನ್ನ ಆಲೋಚನಾ ವ್ಯೂಹದಲ್ಲಿ ಕೋಕಿಲಂಳನ್ನು ಸೇರಿಸಿ ಬಿಡಲು ಅವನು ಹಂಚಿಕೆ ಹೂಡಿದ್ದನು. ಅವಳು ಕೇದಾರಿಯಿಂದ ಮೆಚ್ಚಿಸಲು ಸಾಧ್ಯವಿರುವ ನ್ಯಾಯಾಧೀಶೆ ಮುಂತಿದ್ದಳು.

"ಮೊದಲಿನಿಂದಲೂ ನಾನೊಂದು ಕಾರಿಗಾಗಿ ಯೋಚಿಸುತಿದ್ದೇನೆ, ಚಿನ್ನಾ. ಸಾರ್ವಜನಿಕ ಅಭಿಪ್ರಾಯವು ಬಲತ್ಕರಿಸುತ್ತದೆ. ನನ್ನ ಮಿತ್ರರೂ ಈ ಅವಿವೇಕದ ಕೆಲಸಕ್ಕೆ ನನ್ನನ್ನು ಹುರಿದುಂಬಿಸುತ್ತಿದ್ದಾರೆ. ಅವಸರದಲ್ಲಿ ನಾನು ಕೈ ಹಾಕಬೇಕು. ಇದ್ದಲ್ಲಿದ್ದಲ್ಲಿ ಕಣಿವೆಯಲ್ಲಿ ಬೀಳಬೇಕಾಗುತ್ತದೆ. ಜೀವನವು ಚಲಿಸುವಂತಹದ್ದು, ಬದಲಾಗುತ್ತಿರುವಂತಹದಿದೆ. ನನ್ನ ಉದ್ಯೋಗವೂ ಒಂದು ಓಟ. ಅದರಲ್ಲಿ ಕುದುರೆ ಸವಾರನು ಮೊಣಕಾಲೆಲುಬು ಅಥವಾ ಭುಜದೆಲುಬಿನತ್ತ ಕರುಣೆ ಕಾಣಿಸುವಂತಿಲ್ಲ. ಮೋಟಾರುಕಾರಿನ ದಲಾಲಿಗಳು ನನ್ನನ್ನು ಯಾವಾಗಲೂ ಮುತ್ತುತ್ತಿರುತ್ತಾರೆ. ಅವರು ನನ್ನನ್ನು ಹೊಗಳುತ್ತಾರೆ. ಅವರು ಕೊರವರ ಹಾಗೆ ಭವಿಷ್ಯನುಡಿಯುತ್ತಾರೆ ಪ್ರಾಮಾಣಿಕತನದಿಂದ ಅದೆಷ್ಟುಸಲ ನಾನವರಿಗೆ ಬೆನ್ನು ತೋರಿಸಲಿ? ಬಡಜೀವಿಗಳು ಅವರೂ ಬದುಕಬೇಕು. ಅದಕ್ಕಾಗಿ ಈ ಸಾಮಾನ್ಯ ಕೊಳ್ಳುಯಲ್ಲಿ ಅವರೂ ಪಾಲು ಪಡೆದುಕೊಳ್ಳಬೇಕು. ಗರ್ವ ಬಿಟ್ಟವಿಭಾವನೆ ನನ್ನಲ್ಲಿ ಬರುತ್ತಿದೆ. ನಾನೂ ಕಾರೊಂದನ್ನು ಪಡೆದುಕೊಳ್ಳಲೇಬೇಕು. ಕನಿಷ್ಟಪಕ್ಷ ಒಂದು ಫೋರ್ಡ್‌ಕಾರ್. ಅದು ಬಹಳ ಅಗ್ಗ ಹಾಗೂ ಪ್ರಯೋಜನಕಾರಿ...."

"ಒಂದು ಕಾರು, ಒಂದು ಮೋಟಾರ್ ಕಾರ್! ರಾಜಾ, ಅಸಾಧ್ಯ!" ಎದುರಿಸಲಾಗದಂತಹ ಹಾಗೂ ಚೆನ್ನಾಗಿ ಮನ ಒಲಿಸುವ ಶಬ್ದಾಡಂಬರಗಳಿಂದ ಮಾತಾಡಿ, ಕಾರನ್ನು ತೆಗೆದುಕೊಳ್ಳಲು ಕೋಕಿಲಂ ಒಪ್ಪುವಂತಾಗಬೇಕೆಂದು ಕೇದಾರಿಯು ಶ್ರಮವಹಿಸಿಕೊಂಡಿದ್ದನು. ಆ ವ ನು ಸ್ವಲ್ಪ ತಡೆದಾಗ ಕೋಕಿಲಂ ಗಟ್ಟಿಯಾಗಿ ಹೇಳಿದಳು. "ನಮ್ಮ ಮಕ್ಕಳ ಅತ್ಯಾವಶ್ಯಕ ವಸ್ತುಗಳಿಗೂ ನೀವು ಮಿತವ್ಯಯ ಮಾಡುತ್ತಿದ್ದೀರಿ. ನಾನು ಕೇವಲ ಹದಿನೈದು ರೂಪಾಯಿಗಳ ಸೀರೆಯನ್ನುಟ್ಟುಕೊಂಡಿದ್ದೇನೆ. ಇನ್ನೂ ನನಗೊಂದು ಜೊತೆ ವಜ್ರದೋಲೆಯನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಿರುವದಿಲ್ಲ. ನಾನಿಲ್ಲಿ ಉತ್ತಮ ದಿನಗಳನ್ನು ನಮ್ರತೆಯಿಂದ ಕಾಯುತ್ತಿರುವಾಗ ನೀವು ಕಾರಿನ ವಿಷಯ ಮಾತನಾಡುತ್ತಿದ್ದೀರಿ! ಅದು ಅಸಾಧ್ಯ...."

"ಮುದ್ದು, ನಿನ್ನನ್ನು ಸಮಾಧಾನಪಡಿಸಲು ಒಂದು ವಜ್ರದ ಬೆಂಡೋಲೆ ತೆಗೆದು ಕೊಳ್ಳುವದೆಂದರೂ ಅದು ಅರ್ಧ ಕಾರಿನ ಬೆಲೆಯಷ್ಟಾಗುತ್ತದೆ; ಮತ್ತು..."

"ಆದರೆ ಅದನ್ನುಳಿಸಿಕೊಳ್ಳಲು ಹಾಗೂ ಪ್ರಕಾಶಮಾನವಾಗಿರುವಂತೆ ನೋಡಿಕೊಳ್ಳಲು ಶುದ್ಧ ಮಾಡಿರುವ ಕಲ್ಲೆಣ್ಣೆಯ ಅವಶ್ಯಕತೆ ಇಲ್ಲ. ನಿಮ್ಮ ಕೈಹಿಡಿದಾಕೆ ಕೆಲಸದವಳಂತೆ ಕಾಣುತ್ತಿರುವಾಗ, ನೀವೊಂದು ಕಾರು ತೆಗೆದುಕೊಳ್ಳುತ್ತೇನೆಂದು ಹೇಳಿದಲ್ಲಿ ಬೇರೆಯವರೇನು ಎಣಿಸಿಕೊಂಡಾರು? ಗಂಡಸರಲ್ಲಿ ತಪ್ಪು ತುದಿಯಿಂದ ಆರಂಭಿಸುವಂತಹ ಜಾಣ್ಮೆ ಇದೆ. ಕಾರು ವ್ಯರ್ಥ."

"ಇಲ್ಲ ರಾಣಿ, ನಿನಗೆ ಗೊತ್ತಿಲ್ಲ. ಕಾರಿಂದೂ ವ್ಯರ್ಥವಾಗುವದಿಲ್ಲ. ಅದರ ಸಹಾಯದಿಂದ ನಾನು ಇಮ್ಮಡಿ ಸಂಪಾದಿಸಬಲ್ಲೆ. ಆದರೆ ನಿನ್ನ ಬೆಂಡೋಲೆಯಿಂದ ಅದು ಸಾಧ್ಯವೇ ಇಲ್ಲ. ಕಕ್ಷಿಗಾರ ಒರಟು ಜನರು ವಿನೋದ ವಿಹಾರಕ್ಕಾದರೂ ಕನಿಷ್ಟ ಪಕ್ಷ ಚೆನ್ನಾಗಿ ಹಣ ಸುರಿಯುತ್ತಾರೆ. ಸಮೃದ್ಧಿಯ ಸಂಜ್ಞೆಯಲ್ಲಿ ಅದು ನನ್ನ ವಿಜಯ ಪತಾಕೆ. ಸಮುದ್ರ ದಂಡೆಗೆ ನಾವಿಬ್ಬರೂ ಅದರಲ್ಲಿ ಕುಳಿತುಕೊಂಡು ಹೋಗಬಹುದು. ಆಗ ನ್ಯಾಯಾಧೀಶರು ಹಾಗೂ ಸೋವಕಾರಿಗಳು ಗುರುತು ಹಿಡಿದುಕೊಂಡು ನಮ್ಮ ಹೆಸರನ್ನು ಇತರ ಶ್ರೀಮಂತರ ಹಾಗೂ ದೊಡ್ಡ ಜನರ ಹೆಸರಿನೊಂದಿಗೆ ಸೇರಿಸಿಕೊಂಡು ಟಂ ಟಂ ಮಾಡುತ್ತ ಹೋಗುತ್ತಾರೆ."

"ಇರಲಿ. ಕೆಲತಿಂಗಳಲ್ಲಿ ನಿಮಗೇನೂ ಹಣಸಿಗದಿದ್ದಲ್ಲಿ?" ಕೋಕಿಲಂ ಕೇಳಿದಳು.

"ಬಡಜೀವಿ! ಪ್ರಪಂಚದನುಭವ ನಿನಗಿನಿತೂ ಇಲ್ಲ ಕಣೇ. ಬುದ್ಧಿಶಾಲಿ ರೈತನು ನೆಲವನ್ನುತ್ತು ಬೀಜವನ್ನು ಸಿದ್ಧಪಡಿಸಿಟ್ಟುಕೊಳ್ಳುತ್ತಾನೆ. ಸರ್ವಾಂತರ್ಯಾಮಿ ರಚನಾಕಾರನು ಸುಸಮಯದಲ್ಲೇ ಒಳ್ಳೆಯ ಮಳೆಯನ್ನು ಕೊಡುತ್ತಾನೆ. ತನ್ನ ಕರ್ತವ್ಯವನ್ನು ಮಾಡಿರುವ ರೈತ ಕೊನೆಯಲ್ಲಿ ಯೋಗ್ಯ ಪುರಸ್ಕಾರವನ್ನು ಪಡೆಯುತ್ತಾನೆ. ಮೋಟಾರು ಕಾರುಗಳಿರುವದು ಚಲನೆಗಾಗಿ ಮತ್ತು ಚಕ್ರಗಳಿರುವದು ಓಡಾಟಕ್ಕಾಗಿ ಕಾರನ್ನು ಪಡೆದುಕೊಂಡು, ಗಾಳಿಯಲ್ಲಿರುವ ಪಕ್ಷಿಗಳ ಹಾಗೆ ನಾಳೆಯ ಕುರಿತು ಬೇರೇನನ್ನೂ ಚಿಂತಿಸಬಾರದು. ದೇವರು ವೇಗವನ್ನು ಹೆಚ್ಚಿಸುತ್ತಾನೆ."

"ಈ ಅಲಂಕಾರಮಯ ಮಾತುಗಳು ನನಗೇನೂ ಅರ್ಥವಾಗುವುದಿಲ್ಲ. ನಿಮ್ಮ ಆಲೋಚನೆಯನ್ನು ನೀ ವು ಬ ದ ಲಾ ಯಿ ಸು ವು ದಿ ಲ್ಲ. ಅಲ್ಲದೆ ಪ್ರತಿ ಕ್ಷಣ ಹೊಸಬರ ಹಾಗೆ ಬೇ ರೊ ಬ್ಬ ಮ ನು ಷ್ಯರಂತೆ ತೋರುತ್ತಿದ್ದೀರಿ. ನಿಮ್ಮೊಡನೆ ವಾದ ಹೂಡಲು ನನ್ನಿಂದಸಾಧ್ಯವಿಲ್ಲ. ಆದರೆ ನಿಮ್ಮ ಜೀವನದಲ್ಲಿ ಪೂರ್ಣ ಅವಲಂಬಿಕೆ ನನಗಿದೆ. ಅದು ಮಿಥ್ಯೆ ಹಾಗೂ ಅಸಹಜ. ಇದಕ್ಕಿಂತಲೂ ನಿಶ್ಚಿತ ಸಂಬಳವುಳ್ಳ ಶಿರಿಗುಮಾಸ್ತನ ಪತ್ನಿಯಾಗಿರುವುದು ಎಷ್ಟೋ ಒಳ್ಳೆಯದು."

"ಹೌದು, ನನಗೊಪ್ಪಿಸದೆ ರಾಮು ನಿನ್ನ ಕೈಹಿಡಿಯುತ್ತಿದ್ದಲ್ಲಿ ಬಹಳ ಒಳ್ಳೆಯದಿತ್ತು. ಈ ವಿಷಯಗಳೆಲ್ಲಾ ನಿನ್ನ ರಕ್ತದಲ್ಲಿ ಬಡಪಂಡಿತನ ಪುತ್ರಿಯಲ್ಲವೆ ನೀನು? ನನ್ನ ಉಚ್ಚಪ್ರಯತ್ನಗಳೆಲ್ಲಾ ನಿನಗರ್ಥವಾಗಲಿಕ್ಕಿಲ್ಲ. ಫಲಿತಾಂಶವಾದರೂ ನನ್ನಲ್ಲಿ ತಪ್ಪಿಲ್ಲೆಂದು ತೋರಿಸಬಹುದು." ಕೋಪದಿಂದ ಕೇದಾರಿಯು ಹೇಳಿದನು.

ಕೇದಾರಿಯೊಡಿದ ನಿಂದನೀಯ ಮಾತುಗಳಿಂದ ಕೋಕಿಲಂಳ ಮನಸ್ಸಿಗೆ ಗಾಯವಾಯಿತು. ತನ್ನ ಗಂಡನನ್ನು ಆತನ ಕಾರ್ಯಾಲಯದಲ್ಲೇ ಬಿಟ್ಟು ಆಕೆ ದೈನಂದಿನ ಕಾರ್ಯಗಳತ್ತ ಗಮನಕೊಡಲು ಹೋದಳು.

ಕೇದಾರಿಯು ಯಾವ ಕಾರ್ಯದಲ್ಲೂ ಮಗ್ನನಾಗದೆ, ಒಬ್ಬಂಟಿಗನಾಗಿ ಸುಮ್ಮಗೆ ಕುಳಿತುಕೊಂಡನು. ಮರುದಿನದ ಕೆಲಸವನ್ನು ನೆನಪು ಮಾಡಿಕೊಡಲು, ಎದುರಿಗೆ ಇದ್ದ ರಾಶಿ ಕಾಗದವು ಅವನತ್ತ ನೋಡುತ್ತಿದ್ದವು. ಅವನು ಅತ್ತ ಗಮನ ಕೊಡದೆ, ಕೆಲ ಬೇಡದಿರುವ ಕಾಗದಗಳನ್ನು ತೆಗೆದುಕೊಂಡು ಚೂರು ಚೂರಾಗಿ ಹರಿಯಲಾರಂಭಿಸಿದನು. ಆಗ ಅಲ್ಲಿದ್ದ ಸೀಸ ಲೇಖನಿ ಅವನ ಮನಸ್ಸನ್ನು ಸೆಳೆಯಿತು. ಅದನ್ನು ಕೈಗೆ ತೆಗೆದುಕೊಂಡು ಕೊನೆಯವರೆಗೂ ಮೊನೆ ಮಾಡಿದನು. ಅವನ ಮನಸ್ಸು ಆಲೋಚನೆಗೆ ಆಶ್ರಯವನ್ನಿತ್ತಿತ್ತು. ಆಲೋಚನೆಗಳು ತೊಂದರೆಯಲ್ಲಿ ಸಿಲುಕಿದ್ದುವು. ಆಗೊಂದು ಅಪರಿಚಿತ ಸಂಶಯವು ಮುಖ ತೋರಿಸಿತು.

ಅಡುಗೆ ಕೋಣೆಯಿಂದ ಹಿತ್ತಾಳೆ, ಸೀಸದ ಪಾತ್ರೆಗಳಿಂದ ಜೋರಾಗಿ ಶಬ್ದ ಕೇಳಿ ಬರುತ್ತಿದ್ದುವು. ಸ್ತ್ರೀ ಜಾತಿಗೆ ಹಿಂದಿನಿಂದ ಹಾಗೂ ಸ್ವಾಭಾವಿಕವಾಗಿ ತಿಳಿದಿರುವ ಗುಪ್ತ ಭಾಷೆಯ ಮೂಲಕ ಕೋಕಿಲಂ ಅಸಂತೋಷವನ್ನು ತನ್ನ ಸ್ವಾಮಿಗೆ ತಿಳಿಸುತ್ತಿದ್ದಾಳೆಂಬುದು ಅವನಿಗೆ ಗೊತ್ತಾಯಿತು. ಆದ್ದರೂ ಅವನು ಗಮನ ಕೊಡಲಿಲ್ಲ. ಅವಳ ಸ್ವರದಂತೆ ಆ ಶಬ್ದವೂ ಅವನಿಗೆ ಬಹು ಪರಿಚಿತವಾದದ್ದಿತ್ತು.

ವಿಧಿಯೊಂದಿಗೆ ಏಕೆ ಪ್ರಯತ್ನಿಸಬಾರದು? ಸಣ್ಣ ವಿಷಯಗಳಾದಲ್ಲಿ ನಿರ್ಬಲತೆಯ ಲಕ್ಷಣವೆಂದು ಬಿಡಬಹುದು. ಆದರೆ ಆಧುನಿಕ ಜಗತ್ತಿನಲ್ಲಿ ಕಾರು ಒಂದು ಒಳ್ಳೆಯ ಭಾರದ ವಸ್ತು. ಕೇದಾರಿಯು ಕೆಲ ಕಾಗದ ಚೂರುಗಳ ಮೇಲೆ 'ಕಾರ್' ಎಂದೂ ಇನ್ನೂ ಕೆಲವು ಚೂರುಗಳ ಮೇಲೆ 'ಬೇಕು' ಎಂದೂ ಮತ್ತೆ ಕೆಲವು ಚೂರುಗಳ ಮೇಲೆ 'ಬೇಡ' ಎಂದೂ ಬರೆದನು. ಅವುಗಳನ್ನು ಚೆನ್ನಾಗಿ ಮಡಚಿ ಮೇಜಿನ ಮೇಲೆ ಹಾಕಿದನು. ಉತ್ಸಾಹದಿಂದ ಕಣ್ಣುಸ್ಪರ್ಧ ಮುಚ್ಚಿಕೊಂಡು, ಮೇಜಿನ ಮೇಲಿಂದ ಒಂದು ಮಡಚಿಟ್ಟಿದ್ದ ಅದೃಷ್ಟಪಟ್ಟಿಯನ್ನು ಆರಿಸಿ ತೆಗೆದನು.

ಆ ಸಣ್ಣ ಚಚ್ಚೌಕ ಕಾಗದ ಚೂರಿನ ಲ್ಲಿದ್ದ ಸೀಸದ ಬಾಡಿದ ಅಕ್ಷರಗಳು ಅವನನ್ನು ಕಂಡು ಮುಗುಳ್ನಕ್ಕುವು. ಕೇದಾರಿಯು ಒಡನೆ ಆ ಕಾಗದವನ್ನು ಮುದ್ದೆ ಮಾಡಿ ಮೂಲೆಗೆಸೆದನು. ಅಲ್ಲಿಂದೆದ್ದು ಊಟದ ಕೋಣೆಯತ್ತ ಕಾಲು ಹಾಕಿದನು. ಒಂದು ಪ್ರಿಯ ಮಾತಿನಿಂದಾಗಲೀ, ಕಾಗದ ಚೂರಿನಿಂದಾಗಲೀ ತನ್ನ ನಿಶ್ಚಯವು ಬದಲಾಗಲಾರದೆಂದು ಹೇಳುತ್ತ ಅವನು ಹೋದನು.

(ಮುಂದುವರಿಯುವುದು)

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

NAVAYUGA 24—3—1966
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ನಮ್ಮ ಸೈನ್ಯದ ಬೆನ್ನೆಲುಬು

ಕರ್ತವ್ಯ ದಕ್ಷ ಆರ್ಡಿನನ್ಸ್ ಕೋರ್

ಸೈನಿಕ ದಳವು ಹೋರಾಡುವುದಕ್ಕೆ ಸರ್ವ ವಿಧದಲ್ಲೂ ಸುಸಜ್ಜಿತವಾಗಿರಬೇಕು. ಒಂದು ಚಿಕ್ಕ ಸ್ಕ್ರೂನಿಂದ ಹಿಡಿದು ಫಿರಂಗಿಯ ವರೆಗೆ, ಚಿಕ್ಕ ಗುಂಡಿಯಿಂದ, ರಾಕ್ಷಸಾಕಾರದ ಟ್ಯಾಂಕಿನ ವರೆಗೆ ಸೈನ್ಯಕ್ಕೆ ಬೇರೆ ಬೇರೆ ತರದ ಆರು ಲಕ್ಷ ಸಾಮಾನುಗಳು ಬೇಕು. ಲಕ್ಷೋಪಲಕ್ಷ ಸಾಮಾನುಗಳಲ್ಲಿ ಪ್ರತಿಯೊಂದನ್ನೂ ಸೈನ್ಯ ದಳಕ್ಕೆ ಪೂರೈಸುವ ಹೊಣೆಯನ್ನು ಸೇನೆಯ ಆರ್ಡಿನನ್ಸ್ ದಳವು (ಸೈನಿಕ ಯುದ್ಧ ಸಾಮಗ್ರಿ ವಿಭಾಗದ ದಳ) ಹೊತ್ತಿದೆ. ಅದು ನಮ್ಮ ಸೈನ್ಯದ ಬೆನ್ನೆಲುಬು.

ಬಟ್ಟೆ ಬರೆ, ಶಸ್ತ್ರಾಸ್ತ್ರಗಳು, ಟ್ಯಾಂಕುಗಳು, ವಾಹನಗಳು, ಮದ್ದು ಅಲ್ಲದೆ, ಇನ್ನಿತರ ನಾನಾ ವಿಧದ ಸೂಕ್ಷ್ಮ ತಾಂತ್ರಿಕ ಸಲಕರಣೆಗಳು — ಇವುಗಳನ್ನು ಪೂರೈಸಿ ಸೈನ್ಯವನ್ನು ಸುಸಜ್ಜಿತವಾಗಿಡಬೇಕು. ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ ಯುದ್ಧರಂಗದಲ್ಲಿ ಒಬ್ಬ ಯೋಧನನ್ನು ನಿಲ್ಲಿಸಲು ೧೭ ಟನ್ ಯುದ್ಧ ಸಾಮಗ್ರಿಗಳು ಬೇಕಾದುವು. ಮತ್ತು ಅಲ್ಲಿ ಅವನನ್ನು ಕಾರ್ಯಾಚರಣೆಯಲ್ಲಿ ತೊಡಗಿಸಲು ಸುಮಾರು ೭೦ ಟನ್‌ಗಳಷ್ಟು ಸಾಮಗ್ರಿಗಳು ಅಗತ್ಯವಾದುವು ಎಂದು ಲೆಕ್ಕಾಚಾರ ಮಾಡಲಾಗಿದೆ.

ಈ ಅಸಂಖ್ಯಾತ ಯುದ್ಧ ಸಾಮಗ್ರಿಯನ್ನು ದೊರಕಿಸಲು, ಅವನ್ನು ಬೇಕು ಬೇಕಾದಾಗಲೆಲ್ಲ, ಸಿಗುವಂತೆ ಸುಸಂಬದ್ಧವಾಗಿ ಸಂಗ್ರಹಿಸಲು ಮತ್ತು ಜಾಗ್ರತೆಯಿಂದ ಸಾಗಿಸಲು ಉತ್ತಮ ಆಡಳಿತ, ಯಂತ್ರ ಸಾಮರ್ಥ್ಯ ಮತ್ತು ಹೆಚ್ಚಾಗಿ ಅಸಾಧಾರಣ ದೂರದೃಷ್ಟಿ ಬೇಕಾಗುತ್ತವೆ. ಮುಂಚಿತವಾಗಿಯೇ ಉತ್ಪಾದಕರ ಕಡೆಗೆ ಆದೇಶಗಳನ್ನು ಕಳಿಸುವುದಕ್ಕೆ, ಯೋಗ್ಯ ವೇಳೆಯಲ್ಲಿ, ಯೋಗ್ಯ ಸ್ಥಳದಲ್ಲಿ ಯೋಗ್ಯ ಸಾಮಗ್ರಿಗಳು ಸಿಗುವಂತೆ ಮಾಡುವುದಕ್ಕೆ ಶ್ರೇಷ್ಠ ದರ್ಜೆಯ ಯಥಾ ದೃಷ್ಟಿಯ ಯೋಜನ ಇರಬೇಕಾಗುತ್ತದೆ. ಹೀಗೆಂದ ಮಾತ್ರಕ್ಕೆ ಅನಿರೀಕ್ಷಿತ ಬದಲಾವಣೆಗೆ ಯುದ್ಧ ಸಾಮಗ್ರಿ ಪೂರೈಕೆ ದಳವು ಹೊಂದಿಕೊಳ್ಳುವುದಿಲ್ಲವೆಂದೇನೂ ಅಲ್ಲ. ಕಳೆದ ೧೯೦ ವರ್ಷದ ತನ್ನ ಜೀವಮಾನದಲ್ಲಿ ಈ ದಳವು ಆಗಾಗ್ಗೆ ಅನಿರೀಕ್ಷಿತ ಪ್ರಸಂಗಗಳನ್ನು ಯಶಸ್ವಿಯಾಗಿ ಎದುರಿಸಿದೆ. ಮುಂಚೂಣಿಯಲ್ಲಿರುವ ಸೈನಿಕರಿಗೆ ಆವಶ್ಯಕ ಸಾಮಗ್ರಿಯನ್ನು ಸಕಾಲದಲ್ಲಿ ಪೂರೈಸುವ ಭರವಸೆ ನೀಡಿ ಸಂದರ್ಭಕ್ಕೆ ತಕ್ಕಂತೆ ವರ್ತಿಸಿದೆ.

೧೭೭೫ ಎಪ್ರಿಲ್ ಒಂದು ಆಗಿನ ಕಾಲದ ಬಂಗಾಳ, ಮದ್ರಾಸ್ ಮತ್ತು ಮುಂಬೈ ಪ್ರಾಂತ್ಯಗಳಲ್ಲಿ ಮೂರು ಆರ್ಡಿನನ್ಸ್ ಮಂಡಲಿಗಳು ಸ್ಥಾಪಿತಗೊಂಡ ಮೇಲೆ, ಈ ಆರ್ಡಿನನ್ಸ್ ಕೋರ್ ಅಸ್ತಿತ್ವದಲ್ಲಿ ಬಂದಿತು. ೧೮೮೪ರಲ್ಲಿ ಮೊದಲಿನ ಮೂರು ಮಂಡಳಿಗಳು ವಿಲೀನಗೊಂಡು ಭಾರತೀಯ ಆರ್ಡಿನನ್ಸ್ ಶಾಖೆಯು ಒಬ್ಬ ಡೈರೆಕ್ಟರೇಟ್ ಜನರಲ್ಲನ ಅಧೀನದಲ್ಲಿ ತಲೆ ಎತ್ತಿತು. ೧೯೨೨ರಲ್ಲಿ ಈ ಶಾಖೆಯು ಮತ್ತೆ ಪುನರ್ರಚಿತವಾಗಿ ಭಾರತೀಯ ಸೈನಿಕ ಆರ್ಡಿನನ್ಸ್ ಶಾಖೆ ಎಂದು ನಾಮಕರಣ ಹೊಂದಿತು. ಈಗ ಈ ದಳದ ಕೇಂದ್ರ ಮತ್ತು ಡಿಪೋಗಳು ಸಿಕಂದರಾಬಾದಿನಲ್ಲಿವೆ. ದಳದ ಸ್ಕೂಲು ಜಬಲ್‌ಪುರದಲ್ಲಿದೆ. ಈ ಕೇಂದ್ರದಲ್ಲಿ ಪ್ರಾರಂಭಿಕ ಸೈನಿಕ ತರಬೇತಿಯನ್ನು ನೀಡಲಾಗುವುದು. ಆರ್ಡಿನನ್ಸ್ ಸ್ಕೂಲಿನಲ್ಲಿ ದಳಕ್ಕೆ ಭರತಿಯಾದವರಿಗೆಲ್ಲ ಯಂತ್ರೋಪಕರಣಗಳು, ಶಸ್ತ್ರಾಸ್ತ್ರಗಳು, ಮದ್ದುಗುಂಡು, ಸಿಗ್ನಲ್ಲುಗಳು, ವೈರ್‌ಲೆಸ್, ಇಂಜಿನೀಯರಿಂಗ್ ಮತ್ತಿತರ ವಿಶಿಷ್ಟ ವಿಷಯಗಳ ಬಗ್ಗೆ ತರಬೇತಿ ಕೊಡಲಾಗುವುದು.

ಈಗ ಜಬಲ್‌ಪುರದಲ್ಲಿ ಇರುವ ಸೈನಿಕ ಆರ್ಡಿನನ್ಸ್ ಶಾಲೆ ಮೊದಲು ೧೯೨೫ರಲ್ಲಿ ಕರ್ಕಿಯಲ್ಲಿ ಸ್ಥಾಪಿತವಾಯಿತು. ಆ ಮೇಲೆ ಅದನ್ನು ೧೯೩೯ರಲ್ಲಿ ಜಬಲ್‌ಪುರಕ್ಕೆ ಸ್ಥಳಾಂತರಿಸಲಾಯಿತು. ಏಷ್ಯಾದಲ್ಲಿಲ್ಲ ಬಹುಶಃ ಇಂತಹ ಶಾಲೆ ಇದೊಂದೆ. ಈ ಶಾಲೆ ಎಲ್ಲ ದಿಶೆಯಲ್ಲೂ ಮಹತ್ವಪೂರ್ಣ ಪ್ರಗತಿಯನ್ನು ಸಾಧಿಸಿದೆ. ಈಗ ಈ ಶಾಲೆಯಲ್ಲಿ ನಾಲ್ಕರಿಂದ ಮೂವತ್ತೆಂಟು ವಾರಗಳ ಅವಧಿಯ ಸುಮಾರು ೧೦೦ ವರ್ಗಗಳನ್ನು ನಡೆಸಲಾಗುತ್ತಿದೆ. ಆರ್ಡಿನನ್ಸ್ ಕೋರ್ ಪೂರೈಸುವ ಎಲ್ಲ ಬಗೆಯ ಉಪಕರಣಗಳನ್ನು ಬಳಸುವ ವಿಧಾನಗಳನ್ನು ಕುರಿತು ತರಬೇತಿ ನೀಡಲಾಗುತ್ತಿದೆ. ಈ ಶಾಲೆಯಲ್ಲಿ ತರಬೇತಿ ಪಡೆಯಲು ನೇಪಾಳ, ಬರ್ಮಾ, ಸಿಲೋನ್, ಇಂಡೋನೇಶ್ಯಾ ಮತ್ತು ನೈಜೀರಿಯಾ ದೇಶಗಳು ತಮ್ಮ ಅಧಿಕಾರಿಗಳನ್ನು ಕಳಿಸಿಕೊಟ್ಟಿವೆ.

ಸದ್ಯದ ತುರ್ತು ಪರಿಸ್ಥಿತಿಯ ಘೋಷಣೆಯನಂತರ ಶಾಲೆಯ ತರಬೇತಿ ಕಾರ್ಯಕ್ರಮದಲ್ಲಿ ಗಣನೀಯ ಬದಲಾವಣೆಗಳಾಗಿವೆ. ಹಿಮಾಲಯದ ಮುಂಚೂಣಿಯ ವಿಭಾಗದ ಯೋಧರಿಗೆ ಯುದ್ಧ ಸಾಮಗ್ರಿಗಳನ್ನೊದಗಿಸುವಲ್ಲಿ ಆರ್ಡಿನನ್ಸ್ ಅಧಿಕಾರಿಗಳು ಎದುರಿಸಬೇಕಾದ ಪ್ರಶ್ನೆಗಳಿಗೆ ಈ ಶಾಲೆಯು ಮಹತ್ವದ ಗಮನ ಕೊಟ್ಟಿದೆ. ಹಿಮಾಲಯದಲ್ಲಿಯ ಸಂಪರ್ಕ ಸಾಧನಗಳು, ಸುದೀರ್ಘ ಮಾರ್ಗಗಳು ಪೂರೈಸಬೇಕಾದ ಅಸಂಖ್ಯ ಸರಕುಗಳು ಪ್ರಾಕೃತಿಕ ಸ್ವರೂಪದ ಸಂಬಂಧದ ಸಂರಕ್ಷಣ ತೊಂದರೆಗಳು, ಎತ್ತರದ ಪ್ರದೇಶಗಳಲ್ಲಿ ಬೇಕಾಗುವ ವಿಶೇಷ ಬಗೆಯ ಉಪಕರಣಗಳು ಈ ಎಲ್ಲಾ ಪ್ರಶ್ನೆಗಳು ಶಾಲೆಯ ತರಬೇತಿ ಕಾರ್ಯಕ್ರಮವನ್ನು ವಿನೂತನಗೊಳಿಸುವಲ್ಲಿ ಪ್ರಭಾವ ಬೀರಿವೆ. ಪಠ್ಯ ಕ್ರಮದ ತರಬೇತಿಯೊಡನೆ ಸಮೀಪವರ್ತಿಯಾದ ಆರ್ಡಿನನ್ಸ್ ಕಾರ್ಖಾನೆಗಳಿಗೆ ಭೇಟಿಯಿತ್ತು, ಪ್ರತ್ಯಕ್ಷವಾಗಿ ಯುದ್ಧ ಸಾಮಗ್ರಿಗಳನ್ನು ಬಳಸುವ ವಿಧಾನವನ್ನು ಕಲಿಸಲಾಗುತ್ತಿದೆ. ತರಬೇತು ಹೊಂದುತ್ತಿರುವವರಿಗೆಲ್ಲ ಹೊಸ ಹೊಸ ಉಪಕರಣಗಳ ಬಗ್ಗೆ ಅತ್ಯಾಧುನಿಕ ಮಾಹಿತಿಯನ್ನು ಒದಗಿಸಲು ನಿರಂತರ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಿಕಂದರಾಬಾದಿನಲ್ಲಿಯ ಆರ್ಡಿನನ್ಸ್ ಕೋರ್ ಕೇಂದ್ರದಲ್ಲಿ ತರಬೇತಿ ಹೊಂದುವ ಎಲ್ಲರಿಗೂ ಮೂಲಭೂತ ಸೈನಿಕ ತರಬೇತಿಯನ್ನು ಕೊಡಲಾಗುವುದಲ್ಲದೆ, ಬಡಿಗತನ, ವಾಹನಗಳ ಚಾಲನ, ಬೂಟುಗಳ ರಿಪೇರಿ, ಹೊಲಿಗೆ ಮೊದಲಾದ ಸಹಾಯಕ ವೃತ್ತಿಗಳಲ್ಲಿಯೂ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಗಾಗಿ-ಬರುವವರಿಗೆ, ಪ್ರಾಯಶಃ ಈ ಉದ್ಯಮಗಳಲ್ಲಿ ಯಾವ ಅನುಭವವೂ ಇರದ ಕಾರಣ, ಹೊಸದಾಗಿಯೆ ತರಬೇತಿಯನ್ನು ಪ್ರಾರಂಭಿಸಬೇಕಾಗುತ್ತದೆ. ಹೀಗಾಗಿ ಈ ತರಬೇತಿಯು ವಯಸ್ಕರ ಶಿಕ್ಷಣದಲ್ಲಿ ಒಂದು ಪ್ರಯೋಗವೇ. ಸೈನಿಕ ದಳದ ಬೂಟುಗಳನ್ನು ರಿಪೇರಿ ಮಾಡುವುದಕ್ಕೆ ಆರ್ಡಿನನ್ಸ್ ಕೋರ್‌ದವರು ಉಪಯೋಗಿಸುವ ಬೂಟ್ ರಿಪೇರಿ ಯಂತ್ರೋಪಕರಣಗಳು ವಿಶೇಷ ಕುತೂಹಲಕಾರಿಯಾಗಿವೆ. ಚಲಿಸುವ ಟ್ರೇಲರ್‌ಗಳಿಗೆ ಈ ಬೂಟ್ ರಿಪೇರಿ ಯಂತ್ರಗಳನ್ನು ಜೋಡಿಸಲಾಗುವುದು. ಯುದ್ಧ ರಂಗದಲ್ಲಿ ಈ ರಿಪೇರಿಯಂತ್ರಗಳನ್ನು ಎತ್ತ ಬೇಕಾದತ್ತ ಒಯ್ಯಬಹುದು. ಈ ಟ್ರೇಲರುಗಳಲ್ಲಿ ರಿಪೇರಿಗೆ ಬೇಕಾಗುವ ಎಲ್ಲ ಸಾಧನ ಸೌಕರ್ಯಗಳನ್ನೂ ಒದಗಿಸಲಾಗಿದೆ.

ಈ ಆರ್ಡಿನನ್ಸ್ ಕೋರ್ ಎಂದೂ ನಿಷ್ಕ್ರಿಯವಾಗಿಲ್ಲ. ಹೋರಾಟದ ಸಂದರ್ಭಗಳಲ್ಲಿ ನಮ್ಮ ಯೋಧರಿಗೆ ಬಟ್ಟೆಬರೆಯ ಕೊರತೆಯಾಗದಂತೆ ಅವರ ಕೋವಿಗಳು ಸದಾ ಕಾರ್ಯಾಚರಣೆಯಲ್ಲಿ ತೊಡಗುವಂತೆ ಆರ್ಡಿನನ್ಸ್ ಕೋರ್ ಗಿರಿಗಳ ಮೇಲೆ ಕಣಿವೆಗಳ ಕೆಳಗೆ ಅತ್ಯಾವಶ್ಯಕ ಸಾಮಗ್ರಿಗಳನ್ನು ಸಾಗಿಸಲು ಸದಾ ಕಾರ್ಯಮಗ್ನವಾಗಿವೆ. ಶಾಂತಿ ಕಾಲದಲ್ಲಿ ಸಾಮಗ್ರಿಗಳ ಶೇಖರಣೆಯಲ್ಲಿ, ಹಾಗೂ ಅವುಗಳನ್ನು ಯುದ್ಧ ಸಿದ್ಧತೆಯಲ್ಲಿ ಇಡಲು ಅವಿಶ್ರಾಂತವಾಗಿ ಯತ್ನಿಸುತ್ತಿದೆ.

ಆರ್ಡಿನನ್ಸ್ ಎಂಬ ಪದದ ಶಬ್ದಶಃ ಅರ್ಥ ಫಿರಂಗಿದಳ ಎಂದಾಗುತ್ತದೆ. ಪ್ರಾಯಶಃ ಈ ದಳದ ಮೂಲ ಕಾರ್ಯ ಫಿರಂಗಿ ಮತ್ತು ಮದ್ದನ್ನು ಪೂರೈಸುವುದೇ ಆಗಿತ್ತು. ಆದರೆ, ಇಂದಿನಿಂದೀಚೆಗೆ ಬಹಳಷ್ಟು ಬದಲಾವಣೆಯಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

31—3—1966

NAVAYUGA

೨೦ ಪೈ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ರಾಮಚಂದ್ರ ಬಿ. ಎ. ಪಾಸು ಮಾಡಿದ ಊರಿಗೆ ವಿವಾಹಿತನಾಗಿ ಮರಳಿದ. ಅಲ್ಲಿ ಪ್ರಕೃತಿಯ ವಿಕೋಪದಿಂದ ನೊಂದು ಕಡಪದ ಕಲೆಕ್ಟರ್ ಕೆಡೆಲರಲ್ಲಿ ಶಿಬಿರಗುಮಾಸ್ತನಾದ. ಮುಂದೆ ಕೆಡೆಲ್ ಕಂದಾಯ ಮಂಡಳದ ಸದಸ್ಯರಾದರೆ ರಾಮು ದೂಸಿಯ ಉಪತಾಲೂಕಧಿಕಾರಿಯಾದ. ತನ್ನ ಪ್ರದೇಶದ ಅಭಿವೃದ್ಧಿ ಕಾರ್ಯದತ್ತ ಆತನ ತೀವ್ರಗಮನವಿತ್ತು.

ರಾಮುವಿನ ಒಕ್ಕಲು ಮುರುಗ ನಾಮಮಾತ್ರ ಬೆಲೆತೆತ್ತು ಆತನ ತೋಟವನ್ನು ಮಾಡಿಕೊಂಡಿದ್ದ. ಆದರೆ ಲಕ್ಷ್ಮಿಯೊಡನೆ ದುರ್ವ್ಯಸನಗಳೂ ಆತನಲ್ಲಿ ಮನೆ ಮಾಡಿದುವು. ತೊಪ್ಪೈ ಜೀವದ ಗೆಳೆಯನಾದ. ಇಬ್ಬರೂ ದೊಂಬಿಯೊಂದರಲ್ಲಿ ಬಂಧಿತರಾದರು.

ರಾಮುವಿನ ಮದ್ರಾಸಿನ ಮಿತ್ರ ಕೇದಾರಿ ಕೋಕಿಲಂನನ್ನು ಮದುವೆಯಾಗಿ ಉದಯೋನ್ಮುಖ ವಕೀಲನಾಗಿದ್ದ. ವಿಖ್ಯಾತ ವಕೀಲ ಮಾರ್ಕಂಡಂ ಬೆಂಬಲವೂ ಜತೆಗಿತ್ತು. ಕನಸು ಕಾಣುವುದರಲ್ಲಿ ಲೀನನಾಗಿದ್ದ ಕೇದಾರಿ.

ಮುಂದೆ—

[೩೧]

ಉಚ್ಛನ್ಯಾಯಾಲಯದ ಕಟ್ಟಡ,
ಮದ್ರಾಸು.

ಮುರುಗ ಮತ್ತು ತೊಪ್ಪೈ ಜಾಮೀನಿನ ಮೇಲೆ ಬಿಡುಗಡೆ,

ಕೇದಾರಿ.

ಕೇದಾರಿಯು ಕಳುಹಿಸಿದ ಈ ತಂತಿ ಸುದ್ದಿಯು ತಿರುಚಿನಾಪಳ್ಳಿಯ ಸ್ಥಾನೀಯ ನ್ಯಾಯವಾದಿಯವರಿಗೆ ತಲಪಿತು. ಕಾರಾಗೃಹದಲ್ಲಿದ್ದ ಮುರುಗನು ಈ ಸುದ್ದಿಯನ್ನು ಕೇಳಿದೊಡನೆ ಸಂತೋಷದಿಂದ ಹಿರಿಹಿಗ್ಗಿದ್ದನು. ಆದರೆ ತೊಪ್ಪೈಗೆ ಮಾತ್ರ ಸಂತೋಷವಾಗಲಿಲ್ಲ; ಅವನು ಖಿನ್ನವದನನಾದನು. ತನ್ನ ದುಃಖವನ್ನು ಪ್ರಕಟಿಸಲು ಅವನು ಮಾತು ತೆಗೆದನು. "ನಾವು ನ್ಯಾಯವಾದಿಯವಂದ್ದಲ್ಲಿಗೆಹೋಗಿ ಎಲ್ಲಾ ನಿಜಸಂಗತಿಯನ್ನು ತಿಳಿಸಿ ಬಿಡೋಣ. ಸತ್ಯ ಹಾಗೂ ನಿರ್ದೋಷತ್ವಗಳಿಗೆ ಈ ಪ್ರಪಂಚದಲ್ಲಿ ಜಯಸಿಗದಿದ್ದಲ್ಲಿ ಈ ನ್ಯಾಯವಾದಿಗಳಿಗೆ ಹಾಗೂ ಬ್ರಿಟಿಷ್ ರಾಜ್ಯಕ್ಕೆ ಧಿಕ್ಕಾರವಿರಲಿ! ಸದಾಚಾರಪೂರ್ಣ ಜೀವನವನ್ನು ನನ್ನಿಂದ ನಡೆಸಲು ಸಾಧ್ಯವಾಗದೆ ಹೋಗುತಿತ್ತು."

ಮಾತಾಡುತ್ತ ಅವನು ಮುರುಗನತ್ತ ನೋಡಿದನು, ಮುರುಗನು ಸುಮ್ಮಗೆ ಬಲಹೀನನಂತೆ ಇದ್ದನು. ಅದನ್ನು ಕಂಡು ತೊಪ್ಪೈ ಮಾತನ್ನು ಮುಂದುವರಿಸಿದನು. "ಮುರುಗ, ನಗು ಮುಖದಿಂದು ಇರಬೇಕು. ಯಾವುದೋ ಕೆಟ್ಟ ಗ್ರಹಚಾರದಿಂದಾಗಿ ಈ ಕಷ್ಟಗಳು ಬಂದೊದಗಿವೆ. ಪುನಃ ಮೊದಲಿನಂತೆ ನಾವು ಸ್ವತಂತ್ರರಾಗುತ್ತೇವೆ. ಈಗ ಅಲೆಯು ದಿಕ್ಕನ್ನು ಬದಲಾಯಿಸಿನಮಗೆ ಬೇಕಾದಂತೆ ಬರುತ್ತಿದೆ. ಅಂಧಕಾರ ಮತ್ತು ರಾತ್ರಿಯು ಕಳೆದು ಹೋಯಿತು. ಇದೆಲ್ಲಾ ನಮ್ಮ ವೈರಿಗಳ ಕೆಲಸ. ಪರಿಯ ಸ್ವಾಮಿಯನ್ನು ಸಂತೋಷಪಡಿಸಲು ನಗರರಕ್ಷಕರು ಹೂಡಿರುವ ಆಟವಿದೆ.

ಮುರುಗನು ತುಟಿಗಳನ್ನು ಅಲುಗಾಡಿಸದಿದ್ದರೂ ವಕೀಲರ ಮನೆಗೆ ಹೋಗಲು ಒಪ್ಪಿದನು, ಮನೆ ಚಿಕ್ಕದಾಗಿದ್ದರೂ ಅದು ಯಾವಾಗಲೂ ಕಾವೇರಿಯನ್ನು ನೋಡುತ್ತ ನಿಂತಿತ್ತು. ಕಾವೇರಿ ಈಗ ಬಹಳ ಶ್ರೀಮದ್ಗಾಂಭೀರ್ಯತೆಯಿಂದ ಪ್ರಸನ್ನ ವದನೆಯಾಗಿ ಕೆಂಪಗಾಗಿ ಹರಿಯುತ್ತಿದ್ದಳು. ಆಕೆಯೊಡನೆ ಐಕ್ಯವಾಗಲು ಪರ್ವತಗಳಿಂದಲೂ ನೀರು ಓಡೋಡಿ ಬರುತಿತ್ತು. ಆ ಮನೆ ನಾರಾಯಣಶಾಸ್ತ್ರಿಗಳಿಗೆ ತಮ್ಮ ಪೂರ್ವಜರಿಂದ ಬಂದದ್ದಿದೆ. ಆ ಮನೆಯನ್ನು ನೋಡಿದಾಕ್ಷಣ, ಅವರ ಹಿಂದಿನವರು ನಡೆಸಿದ್ದ ಉದಾರ ಕೃತ್ಯಗಳು ಕಣ್ಮುಂದೆ ಬಂದು ನಿಲ್ಲುತ್ತವೆ. ಆದರಂತೆಯೇ ಮನೆಯು ಕೂಡಾ ಸುದೃಢವದಿಂದ ಕಾವೇರಿದಡದಲ್ಲಿ ಕಟ್ಟಲ್ಪಟ್ಟಿದೆ. ಆ ಪಂಡಿತರ— ಮೀಮಾಂಸ, ವೇದಾಂತಗಳನ್ನು ತಿಳಿದುಕೊಂಡು ಪ್ರಖ್ಯಾತರಾಗಿದ್ದವರ—ವಂಶದಲ್ಲಿ ಮೊತ್ತಮೊದಲಿಗೆ ಅದಕ್ಕೆ ತಿಲಾಂಜಲಿಯನ್ನಿತ್ತು ಹಣಮಾಡುವ ಉದ್ಯೋಗಕ್ಕೆ ಕೈ ಹಾಕಿದವರೇ ಶಾಸ್ತ್ರಿಯವರು. ಸ್ವಾಭಾವಿಕವಾಗಿ ಅವರು ಹಿಂದೂನ್ಯಾಯ ಶಾಸ್ತ್ರದಲ್ಲಿ ಪಳಗಿದವರು. ಉತ್ತಮ ಸಂಸ್ಕೃತಿಯ ಗಾಳಿಯಲ್ಲೇ ಅವರು ಬೆಳೆದವರು. ತಳಕು ಬೆಳಕಿನ ಆಧುನಿಕ ಜೀವನದಾಟದಲ್ಲಿ ಓಡಾಡುವಾಗ ಅವರು ಹಿಂದೆ ಬೀಳುತ್ತಿದ್ದರು. ಅವರಿಗೆ ಪೌರೀಯ ಕೆಲಸಗಳಲ್ಲಿ ಉತ್ಸಾಹವಿತ್ತು. ಆದರೆ ಕೆಲ ಕಾರಣಗಳಿಂದಾಗಿ ಅದರಲ್ಲಿ ಭಾಗವಹಿಸಲಿಕ್ಕಾಗುತ್ತಿರಲಿಲ್ಲ. ಸಹ— ಉದ್ಯೋಗಿಗೆ ಆ ಕೆಲಸಗಳ ಮೇಲೆ ತೀವ್ರ ಅಸಮಾಧಾನವಿದ್ದ ಕಾರಣ ಅವರೂ ಅತ್ತ ಬೆನ್ನು ತಿರುಗಿಸಬೇಕಾಯಿತು. ಅವರಿಗೆ ಆ ಮನೆ ಮಾತ್ರ ಹಿರಿಯರಿಂದ ಬಂದಿತ್ತಲ್ಲದೆ ಬೇರಾವ ವಸ್ತುಗಳೂ ಕಲಿವ... ನಿಂದ ಬಂದಿರಲಿಲ್ಲ. ಮನೆಯಲ್ಲಿ ... ಯನ್ನುರಿಸುವದನ್ನು ತಪ್ಪಿಸಲು ಸಾ... ರಲಿಲ್ಲ. ಹಾಗಾಗಿ, ಬಲೆಯಲ್ಲಿ ಸಿಕ್ಕಿ... ಡವರ ಹಾಗೆ, ಅವರು ಪಾತಕ ಸಂ... ದ ವ್ಯಾಜ್ಯಗಳಲ್ಲಿ ಕೈಹಾಕಲ್ಲಾರಂ... ದರು.

ಶಾಸ್ತ್ರಿಯವರು ತಾರುಣ್ಯದ ಸ್ವಾ... ರ್ಯವನ್ನಿನ್ನೂ ಪೂರಾ ಕಳೆದು ಕೊಂ... ಲಿಲ್ಲ. ನೈಸರ್ಗಿಕ ಬ್ರಾಹ್ಮಣ ತೇಜಸ್ಸು... ವರ ಮುಖದಲ್ಲಿ ಅಲ್ಲಿ ಇಲ್ಲಿ ಇಣಿಕಿ... ಡುತ್ತಿತ್ತು. ಹಣೆಯ ಮೇಲಿದ್ದ ಪ... ಭಸ್ಮದ ಮೂರಂಗುಲಬಿಳಿಯ ಗೆರೆಗಳ... ದಕ್ಕೆ ಸಹಾಯವನ್ನು ಮಾಡುತ್ತಿದ್ದು... ಕೋಣೆಯು ಬಹಳ ಚಿಕ್ಕದಾಗಿದ್ದ... ಕಾಗದದ ಹಾಸಿಗೆಗಳಿಂದ, ಪುಸ್ತ... ರಾಶಿಗಳಿಂದ, ಗೃಹೋಪಕರಣ ಹಾ... ಚಿಂದಿಗಳಿಂದ ತುಂಬಿ ಹೋಗಿತ್ತು. ... ರ ಉದ್ಯೋಗಕ್ಕೆ ಅವು ನಿಸ್ಪ್ರಯೋ... ವಾಗಿದ್ದಂತೆ, ನೋಡಲು ಬಂದ ... ಅವು ಕಾರ್ಯಾಲಯದ ಕೋ... ಸ್ವಾಗತವನ್ನೀಯಲ ತಕ್ಕವ... ಇದ್ದುವು. ವಕೀಲರನ್ನು ನೋಡಿದೊ... ಮುರುಗನಿಗೆ ತೃಪ್ತಿ ಆಯಿತು. ಆ... ತೊಪ್ಪೈ ವಕೀಲರನ್ನೂ ಅವರ ಗೃಹ... ಪಕರಣಗಳನ್ನೂ ಅಧೈರ್ಯದ ನೋಟದಿ... ಕಂಡನು. ತನ್ನ ತಾರುಣ್ಯದ ದಿನಗ... ಅವನು ಹಲವಾರು ವಕೀಲರ ಕೊ... ಗಳನ್ನು ನೋಡಿದ್ದನು. ಅಲ್ಲದೆ, ಕು... ಕೋಣಮ್‌ನಲ್ಲಿ ಒಬ್ಬ ಪ್ರಖ್ಯಾತ ವಕಿ... ರಲ್ಲಿ ಅವನು ಕೆಲಸಕ್ಕೂ ಇದ್ದನು. ... ಗಾಗಿ ವಕೀಲರ ಕೋಣೆಗಳ ವೈಭ... ಪರಿಚಯ ಅವನಿಗಾಗಿತ್ತು.

"ಸ್ವಾಮಿ, ನಮ್ಮನ್ನು ಜಾಮೀ... ಮೇಲೆ ಬಿಡುಗಡೆಮಾಡಿಸಿದುದಕ್ಕೆ ನಿವ... ಕೃತಜ್ಞರಾಗಿದ್ದೇವೆ." ಮುರುಗನು ಅ... ಭಿಸಿದನು.

"ಮದ್ರಾಸಿನ ವಕೀಲರಿಗೆ ಕೃತಜ್ಞ... ಗಿರಿ. ಅವರು ಬಹಳ ಬುದ್ಧಿವಂತರು ... ಗೂ ವಿಜಯಸಿಂಹಾಸನವನ್ನೇರುತ್ತಿರ... ಚತುರ ತರುಣರಿದ್ದಾರೆ." ಶಾಂತವ... ಶಾಸ್ತ್ರಿಗಳು ಹೇಳಿದರು.

ಸ್ವಾಮಿ, ನಾವು ನಿರಪರಾಧಿ ... ಇರುವಂದ್ದೇವೆ. ನಗರ ರಕ್ಷಕನು ನಮ್ಮ... ತಪ್ಪಿ ಬಂಧಿಸಿದ್ದರು. ಗಲಾಟೆಗೂ ನಮ... ಏನೂ ಸಂಬಂಧವಿರುವದಿಲ್ಲ. ಮೂರನಿ...

(ಅನ್ನೊಂದನೇ ಪುಟ ನೋಡಿ)

ಶ್ರೀ ಕ. ಕೆ. ಶೆಟ್ಟಿ, ಎಂ.ಎಲ್.ಸಿ., ಯವ...
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=2
ಪ್ರೇಮ ವಿಜಯ	1=0
ಮುಂದಿನ ದೇವರು	0=2
ವ್ಯಭಿಚಾರಿಣಿ ಯಾರು?	1=0
ಹೆಂಡ್ತಿ ಗಂಡನಾದರೆ?	0=2
ಪುರುಷವಧು	0=2
ಸನ್ಯಾಸಿಯ ಸೋಗಿನಲ್ಲಿ!	0=7
ಸಂಶಯ ಪಿಶಾಚಿ	0=7
ಕುಶಲವ	0=6
ಚಿತ್ರಾಂಗನೆ	0=6

ಪ್ರತಿಗಳು ಸಿಗುವ ಸ್ಥಳಗಳು.—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6¼
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೨೯	೩೧—೩—೧೯೬೬	No. 29

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ನೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಒರಿಸ್ಸಾದ ಕಿಂಬುರು ಕಬ್ಬಿಣದ ಗಣಿಗಳಿಂದ ಅದಿರನ್ನು ವಿಶಾಖಪಟ್ಟಣ ರೇವಿಗೆ ಭಾರತೀಯ ರೇಲ್ವೆಯು ಸಾಗಿಸುತ್ತದೆ. ರೇಲ್ವೆಗಳ ಅಭಿವೃದ್ಧಿಗಾಗಿ ಅಮೇರಿಕೆಯು ೧೩೯ ಕೋಟಿ ರೂಪಾಯಿಗಳ ಸಹಾಯ ನೀಡಿದೆ.

ಸರ್ಪಚುಂಬನ

ಭಾರತದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಅಮೇರಿಕನ್ ಪ್ರವಾಸವನ್ನು ಕೈಗೊಂಡಿರುವ ಈ ಸಮಯದಲ್ಲೇ ಪಾಕಿಸ್ತಾನವು ಎಂದೂ ಇಲ್ಲದ ಉತ್ಸಾಹದಿಂದ ಕೆಂಪು ಚೀನಾದ ರಾಷ್ಟ್ರ ಪ್ರಮುಖ ಲೀ-ಶಾವೋ-ಚಿ ಮತ್ತು ವಿದೇಶ ಮಂತ್ರಿ ಮಾರ್ಶಲ್ ಚೆನ್-ಯಿ ರವರನ್ನು ಸ್ವಾಗತಿಸಿತು. ನಿರೀಕ್ಷಕರ ಅಭಿಪ್ರಾಯದಂತೆ, ೧೯೬೧ರಲ್ಲಿ ರಾಣಿ ಎಲಿಜಬೆತ್ ರವರಿಗೆ ನೀಡಿದಂತಹುದೇ ಸ್ವಾಗತವು ಈ ಕೆಂಪು ನಾಯಕದ್ವಯರಿಗೆ ದೊರೆಯಿತು. ಇವರಿಬ್ಬರಲ್ಲಿ ಚೀನೀಯ ರಾಷ್ಟ್ರ ಪ್ರಮುಖರು ಮೊತ್ತ ಮೊದಲಿಗೆ ಪಾಕಿಸ್ತಾನಕ್ಕೆ ಭೆಟ್ಟಿ ನೀಡುತ್ತಿರುವುದು. ಅವರೊಡನೆ ವಿದೇಶ ವ್ಯವಹಾರಗಳ ಸಚಿವ ಮಹೋದಯರೂ ಇರುವುದರಿಂದ ಈ ಭೆಟ್ಟಿಯು ಸಾಮಾನ್ಯದ್ದಲ್ಲವೆಂದು ಊಹಿಸಬಹುದು. ರಾಷ್ಟ್ರ-ರಾಷ್ಟ್ರಗಳ ರಾಜಕಾರಣಿಗಳ ವಿಚಾರ ವಿನಿಮಯ ಸ್ವಾಗತಾರ್ಹವಾದರೂ ಚೀನೀ—ಪಾಕ್ ನಾಯಕರ ಈ ಅಪೂರ್ವ ಮಿಲನದ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಲು ಭಾರತ ಕುತೂಹಲಿಯಾಗಿದೆ; ಅಂತೆಯೇ ರಶ್ಯವೂ.

ಪಾಕಿಸ್ತಾನದ ದೃಷ್ಟಿಯಿಂದ ನೋಡುವುದಾದರೆ, ಈ ಕೆಂಪು ನಾಯಕರ ಭೆಟ್ಟಿ ಅತ್ಯಂತ ಮಹತ್ವಪೂರ್ಣವಾದುದು. ಇವರನ್ನು ಸ್ವಾಗತಿಸುವ ಸಲುವಾಗಿ ಶಾಲೆಗಳಿಗೂ ಬಿಡುವನ್ನು ನೀಡಲಾಗಿತ್ತೆಂದು ತಿಳಿಯುತ್ತದೆ. ಇಷ್ಟು ಮಾತ್ರವಲ್ಲದೆ, ಸ್ವಾಗತದ ವೇಳೆ ಮೊಳಗಿದ ಜಯ ಘೋಷ, 'ಚೀನಾ ಜಿಂದಾಬಾದ್' ಎಂದು ಮಾತ್ರ. ಉರ್ದು ಪತ್ರಿಕೆಗಳು ಲೀಯವರ ಭಾವಚಿತ್ರವನ್ನು ಮೊದಲ ಪುಟಗಳಲ್ಲಿ ಮುದ್ರಿಸಿ ಈ ಭೆಟ್ಟಿಗೆ ಹೆಚ್ಚಿನ ಪ್ರಾಧಾನ್ಯವನ್ನೂ ನೀಡಿದಂತೆ ಭಾಸವಾಗುತ್ತದೆ. ಆದರೆ ನಿಜವಾಗಿಯೂ ಈ ಭೆಟ್ಟಿ—ಉಬ್ಬರದ ಸ್ವಾಗತಗಳ ಒಳಗುಟ್ಟೇನು? ಕೆಲವು ದಿನಗಳಿಗೆ ಮೊದಲು ಪಾಕಿಸ್ತಾನದಲ್ಲೊಂದು ಮಿಲಿಟರಿ ಪರೇಡ್ ನಡೆದಾಗ, ಅದರಲ್ಲಿ ಚೀನಾದಲ್ಲಿ ತಯಾರಾದ ಟ್ಯಾಂಕು ಮತ್ತು ವಿಮಾನಗಳನ್ನು ಪ್ರದರ್ಶಿಸಲಾಗಿತ್ತೆಂಬುದನ್ನು ಮರೆಯಬಾರದು. ಇದನ್ನೆಲ್ಲಾ ಅವಲೋಕಿಸುವಾಗ, ಪಾಕ್ ನಾಯಕರು ತಮ್ಮ ಉದ್ದೇಶ ಸಾಧನೆಗಾಗಿ ಭಾರೀ ನಾಟಕವಾಡುತ್ತಿರುವಂತೆ ತೋರುತ್ತದೆ. ಪಾಕ್ ಉದ್ದೇಶ, ಚೀನಾದೊಡನೆ ಮಿತ್ರತ್ವ ಸಾಧಿಸುವುದಲ್ಲ. ಅಮೇರಿಕೆ—ರಶ್ಯ—ಬ್ರಿಟನ್—ಭಾರತ—ಯಾರ ಗೆಳೆತನವೂ ಅದಕ್ಕೆ ಬೇಡ; ಅದು ಬಯಸುವುದು ಬರಿಯ ಕಾಶ್ಮೀರವನ್ನು ಮಾತ್ರ. ಪಸೆಯಿರುವಲ್ಲಿ ನಾಯಿ ನೆಕ್ಕುವಂತೆ, ತನ್ನ ಉದ್ದೇಶ ಸಾಧನೆಗೆ ಯಾರು ಯಾರನ್ನು ಹಿಡಿಯಬೇಕು, ಏನು ಮಾಡಬೇಕು ಎಂಬುದನ್ನು ಚಿಂತಿಸುವುದರಲ್ಲೇ ಪಾಕ್ ನಾಯಕರ ದಿನಗಳೆಯುತ್ತದೆ. ಅವರು ಒಬ್ಬೊಬ್ಬರ ಮುಂದೆ ಒಂದೊಂದು ವೇಶ ಹಾಕುತ್ತಾರೆ; ತಮ್ಮ ನಾಟಕವನ್ನು ಆಡಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾರೆ. ರಾಜಕೀಯ ಪೂರ್ವಗ್ರಹದಿಂದ ತುಂಬಿದ ರಾಷ್ಟ್ರಗಳು ಇವರ ಕುಣಿತಕ್ಕೆ ತಕ್ಕಂತೆ ತಾಳ ಹಾಕುತ್ತವೆ.

ಸೋವಿಯತ್ ರಷ್ಯಾವು ಭಾರತದ ಕಾಶ್ಮೀರ ನೀತಿಯನ್ನು ಮೊದಲಿನಿಂದಲೂ ಬೆಂಬಲಿಸುತ್ತ ಬಂದಿರುವ ಏಕೈಕ ರಾಷ್ಟ್ರ. ಕೆಲವು ಗಂಡಾಂತರ ಪರಿಸ್ಥಿತಿಯಲ್ಲಿ ಅದು ಭಾರತವನ್ನು ಉಳಿಸಿದೆ—ತನ್ನ ವೆಟೋ ಅಧಿಕಾರವನ್ನು ಉಪಯೋಗಿಸಿ ಈ ವರ್ಷದ ಆದಿಯಲ್ಲಿ ತಾಷ್ಕೆಂಟಿಗೆ ಕರೆಸಿ ಭಾರತ—ಪಾಕ್ ಪರಿಸ್ಪರ ಒಂದು ಒಡಂಬಡಿಕೆಗೆ ಬರುವಂತೆ ಮಾಡಿದೆ. ಈ ತಾಷ್ಕೆಂಟ್ ಘೋಷಣೆಯನ್ನು ಜಗತ್ತಿನ ಎಲ್ಲ ದೇಶಗಳೂ ಹೃತ್ಪೂರ್ವಕ ಸ್ವಾಗತಿಸಿವೆ. ಆದರೆ, ಘೋಷಣೆಗೆ ಸಹಿಹಾಕಿದ ಅಯ್ಯೂಬಖಾನರಿಗೇನೇ ಇಂದು ಅದರಲ್ಲಿ ಹೆಚ್ಚಿನ ಆಸಕ್ತಿಯಿಲ್ಲವೆಂಬುದು ದುರ್ದೈವ. ತಮ್ಮ ತಾಷ್ಕೆಂಟ್ ಸಂದರ್ಶನದ ವೇಳೆ ಅವರೊಂದು ಸತ್ಯವನ್ನು ಮನಗಂಡರು: ಭಾರತಕ್ಕೆ ರಶ್ಯದ ಬೆಂಬಲವು ರಕ್ಷಾಕವಚ. ಅದಿರುವ ತನಕ ಕಾಶ್ಮೀರದ ಬಲಿ ತೆಗೆದು ಕೊಳ್ಳುವುದು ಸಾಧ್ಯವಿಲ್ಲ. ಇದಕ್ಕಾಗಿ ಅಯ್ಯೂಬರು ಭುಟ್ಟೋ ಮಹಾಶಯರ ಕೈಗೊಂಬೆಯಂತೆ ನಡೆದು ಕೊಳ್ಳತೊಡಗಿದ್ದಾರೆ. ಆರಂಭದಲ್ಲಿ ತಾಷ್ಕೆಂಟ್ ಘೋಷಣೆಯನ್ನು ಪ್ರಶಂಸಿಸಿ, ಅದರ ವಿರೋಧಿಗಳಿಗೆ ಎಚ್ಚರಿಕೆಯನ್ನೂ ನೀಡಿದ ಈ ಮಹಾನುಭಾವರೀಗ 'ನಮ್ಮೆಲ್ಲ ಸಮಸ್ಯೆಗಳಿಗೂ ಕಾಶ್ಮೀರವೇ ಮೂಲ. ಅದರ ಇತ್ಯರ್ಥವಾಗದೆ ಮತ್ತಾವುದೂ ಬಗೆಹರಿಯುವುದಿಲ್ಲ,' ಎಂಬ ಭುಟ್ಟೋ ರಾಗವನ್ನು ಹಾಡಲಾರಂಭಿಸಿದ್ದಾರೆ. ಆದುದರಿಂದ ಅಯ್ಯೂಬ-ಭುಟ್ಟೋರ ಅಭಿಲಾಷೆ ಸೋವಿಯೆತ್ತನ್ನು ತಮ್ಮ ಬಗಲಿಗೆ ಹಾಕಿಕೊಳ್ಳುವುದು; ಅದರ ಕಾಶ್ಮೀರ ನಿಲುಮೆಯಲ್ಲಿ ಬದಲಾವಣೆಯನ್ನು ತರುವುದು. ಅದಕ್ಕಾಗಿ ಕೆಂಪು ಚೀನಾವನ್ನು ಹತ್ತಿರ ಹತ್ತಿರಕ್ಕೆ ಎಳೆದುಕೊಳ್ಳುವುದು—ರಶ್ಯವನ್ನು ಕೆರಳಿಸುವುದು. ಆದರೆ, ಈ ನಾಟಕದ ಅಭಿನಯದಲ್ಲಿ ಪಾಕ್ ನಾಯಕರು ತಾವು ಯಶಗಳಿಸುತ್ತೇವೆ ಎಂಬ ವಿಶ್ವಾಸವಿಟ್ಟಿದ್ದರೆ, ಅದು ಸುಳ್ಳಾಗುವುದು. ಕೆಂಪು ಚೀನಾದ ಸಾಮ್ರಾಜ್ಯವಾದವೆಂದು ಜಗಜ್ಜನಿತ. ಅತಿಥಿಯಾಗಿ ಬಂದ ಚೀನಾದ ನಾಯಕರು—ಸೈನಿಕರು ಒಡೆಯರಾಗುವುದೂ ಅಸಂಭವವಲ್ಲ. ಟಿಬೇಟಿನಲ್ಲಿ ಕೆಂಪಿನವರು ಮಾಡಿದ್ದೇನು? ಭಾರತದ ಮೇಲೆ ಮಾಡಿದ ಆಕ್ರಮಣದ ಒಳಗುಟ್ಟೇನು? ಅಂದು ಭಾರತ; ಇಂದು ಪಾಕಿಸ್ತಾನ. ಸುತ್ತಲೂ ಲತ್ತೆ ಕೊಡುವ ಶಕ್ತಿಯನ್ನು ಮುಂದಿಡುವ ಈ ಪಾಕ್ ನಾಯಕರ ಹುಚ್ಚಾಟದಿಂದ ದೃಢವಾಗಿರುವ ಸೋವಿಯತ್—ಭಾರತ ಸ್ನೇಹ ಸೌಧ ಕುಸಿಯಲಾರದು. ಈ ಬಗೆಯ ವಂಚನೆ— ವಿಶ್ವಾಸ ಘಾತದ ನಾಟಕಗಳು ೧೦-೧೯ನೆ ಶತಮಾನದ ರಾಜಕಾರಣಕ್ಕೆ ಬೇಕಾಗಿರಬಹುದು. ಇಂದಿಗೆ ಇವು ಅನಪೇಕ್ಷಣೀಯ ಮಾತ್ರವಲ್ಲ. ಅಪ ಫಲವೂ ಹೌದು. ಈ ನಡೆಯುತ್ತಿರುವುದು ಸರ್ಪಚುಂಬನ.

> **ವಚನ ಸುಧೆ**
>
> ಕಾಂತಾರೇ ವನದುರ್ಗೇಷು
> ಕೃಚ್ಛ್ರಾಸ್ವಾಪತ್ಸು ಸಂಭ್ರಮೇ
> ಉದ್ಯತೇಷು ಚ ಶಸ್ತ್ರೇಷು
> ನಾಸ್ತಿ ಸತ್ವವತಾಂ ಭಯಂ||
>
> ಕಾಡು, ದುರ್ಗಮ ಮಾರ್ಗ, ಕಠಿನ ಆಪತ್ತಿಯ ಸಮಯ, ಗಾಬರಿ ಮತ್ತು ತನ್ನ ಹೊಡೆಯಲು ಎತ್ತಿದ ಶಸ್ತ್ರಗಳ ಮುಂದೆ ಮನೋಬಲ ಸಂಪನ್ನನಾದವನು ಎಂದಿಗೂ ಹೆದರುವುದಿಲ್ಲ.

ಸಮಸ್ಯಾತ್ಮಕ ವ್ಯಕ್ತಿ

ನಾಗ ಶಾಂತಿ ನಿಯೋಗದ ಸದಸ್ಯರಾಗಿರುವ ಮೈಕೇಲ್ ಸ್ಕಾಟ್ ಸಮಸ್ಯಾತ್ಮಕ ವ್ಯಕ್ತಿಯೆಂಬುದು ಇತ್ತೀಚೆಗೆ ಪ್ರಕಟವಾಗಿತ್ತು; ಇದೀಗ ಅದು ಮತ್ತಷ್ಟು ದೃಢಪಟ್ಟಿದೆ. ಸ್ಕಾಟರು ಬಂಡುಗಾರ ನಾಗಾಗಳು ಆಚರಿಸಿದ 'ಸ್ವಾತಂತ್ರ್ಯ ದಿನ'ದ ಸಮಾರಂಭದಲ್ಲಿ ಈ ಮಹಾನುಭಾವ ಭಾಗವಹಿಸಿದ್ದರು—ಕಾರಣ? ಇದರ ಮೇಲೆ ಪ್ರಧಾನಿಯವರಿಗೊಂದು ಪತ್ರವನ್ನು ಬರೆದು 'ನಾಗಾರ ಸಮಸ್ಯೆ'ಯನ್ನು ಅಂತಾರಾಷ್ಟ್ರೀಯ ಪರಿಶೀಲನೆಗೆ ಒಪ್ಪಿಸಬೇಕೆಂಬ ಸಲಹೆಯೀಯುವಷ್ಟು ಮುಂದಾಗಿದ್ದಾರೆ. ಕ್ರೈಸ್ತ ಮಿಶನರಿಗಳ ನಾಟ್ಯರಂಗವಾದ ಈ ಗುಡ್ಡಗಾಡು ಪ್ರದೇಶದಲ್ಲಿ ತನ್ನದೇ ಆಧಿಪತ್ಯವನ್ನು ಸ್ಥಾಪಿಸುವ ಹಗ್ಗುರಿಯಿದೆಯೋ ಏನೋ! ನಾಗಾ ಪ್ರದೇಶವಿರಲಿ, ಮಿಜೋ ಇರಲಿ; ಅವೆಲ್ಲವೂ ಕಾಶ್ಮೀರದಂತೆಯೇ ಭಾರತದ ಅವಿಭಾಜ್ಯ ಅಂಗಗಳು. ಅವುಗಳ ಇತ್ಯರ್ಥ ಮಾಡಲು ಯಾವ ಪಂಡೇ

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ



"ಶರಾವತಿಯ ವಿದ್ಯುತ್ತಿನಿಂದ ನೀರಾವರಿ ಸೌಕರ್ಯ ಹಳ್ಳಿ ಹಳ್ಳಿಗೂ ದೊರೆಯುವಂತಾಗುತ್ತದೆ—ಅನ್ನುತ್ತಾರೆ....'

"ಅದಕ್ಕೆ ಇರಬೇಕು, ನಮ್ಮೂರಲ್ಲಿ ಹೊಸ ಕಂಬಗಳನ್ನು ಇನ್ನೊಂದೂರಿಗೆ ಒಯ್ಯುತ್ತಿರೋದು...."

ಗೇಹ ರಾಜ್ಯದಲ್ಲಿ

ರಾಜಿನಾಮೆ ಕೊಡಲಾರರು . . .

"ನೋಡಿಂದ್ರೆ..."

"ಏನನ್ನು?"

'ನೋಡಿ, ಇಲ್ಲಿ ಒಂದು ಭಾರೀ ಒಳ್ಳೆಯ ಪದವಿದೆ...."

"ಎಂತ ಪದವೇ ಅದು.."

"ನೀವೇ ನೋಡೀಂದ್ರೆ..."

"ನೀನೇ ಓದಿ ಹೇಳು. ನಾನು ಕೇಳ್ತಾನೇ ಇರ್ತೇನೆ...."

"ಹಾಗೆಲ್ಲಾ ಓದಿ ಹೇಳಿದ್ರೆ ರಸ ಕೆಟ್ಟು ಹೋದೀತು...'

"ಇಲ್ಲದ ರಸ ಕೆಡೋದೇನು ಬಂತು?"

"ಅಬ್ಬಾ ನೀವೇ? ಭಾರೀ ತಲವಾರಿನ ಪರೀಕ್ಷೆ ಅರಿತವ್ರು...."

'ಹಾಗಲ್ವೆ...."

'ಒಬ್ಬ ಇದ್ದನಂತೆ ನೋಡಿ..."

"ಹ್ಞೂಂ...."

"ಅವನಿಗೆ ತಲವಾರೆಂದರೆ ಪ್ರೀತಿಯಂತೆ ನೋಡಿ...."

"ಎಂಥದೇ ಪ್ರೀತಿಯನ್ನು ನೋಡೋದು..."

"ಸರಿಯೆನ್ನಿ.... ನೀವು ನನ್ನನ್ನ ಪ್ರೀತಿ ಮಾಡಿದಂತೇನೇ ಅವನೂ ತಲವಾರನ್ನ ಪ್ರೀತಿ ಮಾಡ್ತಿದ್ದನಂತೆ ನೋಡಿ..."

'ಆಯ್ತೋ ಆಯ್ತು... ನೋಡ್ತಾನೇ ಇದ್ದೇನೆ."

"ಅವನು ವಿಚಿತ್ರ ರೀತಿಯಿಂದ ತಲವಾರದ ಪರೀಕ್ಷೆ ಮಾಡ್ತಿದ್ದನಂತೆ ನೋಡಿ...."

"ಅಂದ್ರೆ, ತಂದವ್ರ ತಲೇನೇ ಕಡಿದು ಹಾಕಿ...."

"ಛೆ....ಛೆ...ಹಾಗಲ್ರಿ..."

"ಮತ್ತೆ?"

"ಅದನ್ನ ಮೂಸಿ ನೋಡಿ ಮೆಚ್ಚುಗೆಯಾದದ್ದಕ್ಕೆ ಅಪಾರ ಧನ ಕೊಡುತಿದ್ದನಂತೆ."

"ಹ್ಞೂಂ.... ಏನೋ ಅದ್ಭುತ ವಾಸನಾಶಕ್ತಿ ಇದ್ದಿರಬಹುದು...."

"ಮತ್ತೊಂದು ದಿನ ಒಬ್ಬಾತ ಒರೆಯೊಳಗೆ ಮೆಣಸಿನ ಹುಡಿ ಹಾಕಿ, ಸುರಗಿಯನ್ನು ತಂದನಂತೆ__"

"ಹ್ಞಾಂ...."

"ರಾಜ ತಲವಾರನ್ನು ಮೂಸಿದ್ದೇ ಮೂಸಿದ್ದು...."

"ಹ್ಞ ಹ್ಞ ಹ್ಞ ಹ್ಞ..."

"ಹೇಗಿದೆ ನೋಡಿ..."

"ಓಹೋ ಹೀಗೆ ತಲವಾರಿನ ಕಥೆ ಬಂದದ್ದು ಅಲ್ವೆ?"

"ಮತ್ತೆ ನಿಮ್ಮ ಬುದ್ಧಿಯನ್ನು ಏನೆನ್ನಬೇಕೂಂತ?'

"ಯಾಕೆ? ಏನಾಯ್ತು?"

"ಆಗೋದೇನು ಬಂತು? ರಸ ಸವಿಯುವುದಕ್ಕೆ ಮೊದಲೇ ಅದು ನೀರಸಾಂತ ತೀರ್ಮಾನ ಮಾಡೋವ್ರಿಗೂ ಆ ಸೀನಿಕವನಿಗೂ ಏನು ವ್ಯತ್ಯಾಸಾಂತ...'

'ಹ್ಞೂಂ.... ಅಂತೂ ನನ್ನದೇ ತಪ್ಪು ಅನ್ನು. ಸರಿ. ನಿನ್ನ ಕವಿರಾಜನ ಕೃತಿಯನ್ನಾದರೂ ಇತ್ತ ರವಾನಿಸು...."

"........."

"ಓ, ಭಾರಿ ಚಂದಯಿದೇನ್ನು..."

"ಏನು?"

"ಏನನ್ನೊದು? ನಿನ್ನನ್ನೇ ಗುರಿಯಿಟ್ಟು ಕೃತಿ ರಚಿಸಿರೋವಂತಿದೆ. ಕೇಳು: ದೋಸೆ ಮಾಡಲು ಬರದ ಹೋಲಿನ ಪಾಕೇಶಕಾವಲಿಯು ಬೈದ, ಹಿಟ್ಟೆನ್ನು ಬೈದ—ಗಿರಾಕಿ ಆಗಲೂ ಸುಮ್ಮನಿರದಿರಲು ನಾಲಿಗೆ ಸೊಟ್ಟೆ, ನಿನ್ನ ದೃಷ್ಟಿಯೇ ವಕ್ರ, ದುಡ್ಡು ಕೊಡಲಾರದವ ನೀನೆಂದು ಬೈದ; ...ತಡಿಯೋ ಅವಸರ ಮಾಡ್ಬೇಡ್ವೆ.... ಇನ್ನು ಸ್ವಲ್ಪ ಇರೋದು ತಾನೇ...."

'ಅದು ಬೇಡ್ರಿ.... ನೋಡಿ ಇಲ್ಲಿ ಓದಿ.'

'ಅದು ಬೇಡ. ಹಿಡಿದದ್ದನ್ನೇ ಪೂರ್ತಿ ಓದಬೇಕು....'

"ನಿಮ್ಮದೊಂದು ಹಠ...ಆಯ್ತಲ್ಲ, ಕೊಗೊಳ್ಳಿ..."

"ಹ್ಞೂಂ, ಕೇಳು, ನೀನೆಂದು ಬೈದ; ಹುಯ್ಯುತಿದ್ದ ದೋಸೆಗಳ ಹೊತ್ತಿಸಿದ, ಕೆಂಡಗಳ ಕೆದರಿ ಕಿಡಿ ಹಾರಿಸಿದ—ಆದರವ ಸಟ್ಟುಗವನೆಸೆದು ಕೆಲಸವ ಬಿಟ್ಟು ರಾಜಿನಾಮೆಯನ್ನು ಕೊಟ್ಟು ಹೋಗಲಾಲೋಚಿಸನು...ಹೌದೇನೇ...."

"ಏನೂಂದ್ರೆ..."

"ಭಾರೀ ಚಲೋದಿಲ್ವೆ?"

'ಏನು?"

"ಈ ಪದ ಸಾರ್ವಜನಿಕ ಸಭೆಯಲ್ಲಿ ಹಾಡೋಕೆ, ಓದೋಕೆ ಭಾರೀ ಚಲೋದಲ್ವೆ?!

"ನೋಡಿ, ನಾನೊಂದು ತೋರಿದ್ರೆ ನೀವೊಂದು ಓದಿದ್ರಿ.... ಮತ್ತೆ ಈಗ ನನ್ನ ಸತಾಯಿಸೋಕೆ ಸುರು ಮಾಡಿದ್ರಿ...."

'ಅಯ್ಯೋ ದೇವರೇ, ಇದೇನು ಗಂಗೆ-ಯಮುನೆ ಪ್ರಸನ್ನಳಾದಳು..."

"..............."

"ಏನಾಯ್ತೊಂದೆ.... ಏ, ಯಾಕೋ ಹೀಗೆಲ್ಲಾ........"

'...............'

"ಏನು ಬಾಯಿಗೂ ಬೀಗವುಂಟ್ರೆ.... ಇಲ್ಲಾಮ್ಮ, ಹಾಗೆಲ್ಲಾ ಮಾಡಬೇಡ.... ಏನಾಯ್ತೊಗ ಅಂತದ್ದು...!

'ಗೊತ್ತಾಯ್ತೂಂದ್ರೆ ನಿಮ್ಮದೆಲ್ಲಾ...'

"ಏನು, ಏನಾಯ್ತು?"

"ಇನ್ನುಆಗೋದೇನು? ಅಷ್ಟೂ ಅರಿಯದ ಮೊದ್ದಿಯೇನಲ್ಲ ನಾನು...."

'ಅಲ್ವೆ, ಈಗ ಆಗಿರೋದಾದ್ರೂ ಏನು? ನಿನ್ನ ಚಿತ್ತ ವ್ಯಸನಾಕುಲವಾಗುವಂತೆ ನಾನು ಅಂದದ್ದಾದರೂ ಏನು?'

'ಏನು ಏನು ಅಂತ ಅಂದವ್ರಿಗೆ ಮರ್ತ್ಹೋಯ್ತು ಪಾಪ....ಹೌದು, ಈ ಗಂಡಸ್ರ ಜಾತಿಯೇ ಹಾಗೆ...ಪಾಪದ ಹೆಂಡತಿ ಸಿಕ್ಕಿದ್ರೆ ಇಡೀ ದಿನ ಗೋಳು ಹೊಯ್ಸಿಕೊಳ್ಳೋದು....ಮದುವೆಯಾಗದೆ ಇದ್ರೇನೇ ಸುಖ; ಈ ಗಂಡಸ್ರ ಕೈಯಲ್ಲಿ ನವೆಯೋ ಕಷ್ಟ ತಪ್ಪುತ್ತದೆ...."

"ಹ್ಞೂಂ....ಏನಿದು ಕ್ರಾಂತೀಂತ...."

"ಕ್ರಾಂತಿಯಲ್ಲಿ ಸಂಕ್ರಾಂತಿ...."

"ಸಂಕ್ರಾಂತಿ! ಒಂದು ಕಳೆದು ಆಗಲೇ ಹದಿನೇಳು ದಿನ ಕಳೆಯಿತು. ಇನ್ನು ಒಂದೂವರೆ ವಾರದಲ್ಲಿ ಮತ್ತೆ ಬರುತ್ತೆ..."

'ಸದ್ಯ ಬರುತ್ತೇಂತಾಯ್ತಲ್ಲ?!

"ಏನು?"

"ಬುದ್ಧಿ...'

'ಯಾರಿಗೆ?"

'...ಮತ್ತ್ಯಾರಿಗೆ, ನಿಮಗೆ...'

'ಮತ್ತೆ ಏನೋ ಕ್ರಾಂತಿಯಾಗತೊಡಗಿದೆ....'

'ಹೌದ್ರಿ, ನೀವು ಹೀಗೆಲ್ಲಾ ಬಯ್ದ್ರೆ ನನ್ನಮನಸ್ಸು ಹೇಗೆ ಹದದಲ್ಲಿರುತ್ತೇಂತ...."

"ಅಲ್ವೆ, ಮುಖ ಸ್ವಲ್ಪ ಒರ್ಸಿಕೊಳ್ಳು.... ಬೇಡ, ಹ್ಞೂಂ.... ಹಾಗೆ.... ಈಗ ಹೇಳು, ನಾನು ಏನು ಬಯ್ದೆ...'

"ಮತ್ತೇನು? ನಿನ್ನನ್ನು ಬೊಟ್ಟಿಟ್ಟೇ ಈ ಪದ ಬರೆದಿದ್ದಾನೆ ಅಂದ್ರಲ್ಲಾ...."

'ಹೌದು, ಅಷ್ಟರಿಂದ್ಲೇ ಏನಾಯ್ತು.'

'ಮತ್ತೆ ದೋಸೆ ಮಾಡೋಕೆ ನನಗೆ ಬರೋದಿಲ್ಲಾ, ನಿಮಗೆ ಬಯ್ತೇನೆ ಅಂದ ಹಾಗಾಯ್ತು...ಮತ್ತೆ...ಮತ್ತೆ....'

'ಯಾಕೆ, ಅಯ್ಯೋ, ಏಕಮ್ಮ ಹೀಗೆಲ್ಲಾ ಕಣ್ಣೀರು ಸುರಿಸಿದ್ರೆ....ಛೆ....ಛೆ.... ಹಾಗೆಲ್ಲಾ ಮಾಡಬಾರದು ಎಲ್ಲಿ ನೋಡೋಣ ಹೀಗೆ ನೋಡೇ....'

"..............'

'ನೋಡೋ ಎಂದೆನಲ್ಲಾ ...... ಏನಾಯ್ತು?"

"ಅಲ್ರಿ, ನಿಮ್ಮೊಡನೆ ಡೈವರ್ಸ್ ಮಾಡಿಕೋಬೇಕೂಂತೀರಾಲ್ಲಾ..."

'ಅಯ್ಯೋ, ಹೀಗೆಲ್ಲಾ ಅತ್ತರೆ ಏನು ಲಾಭ, ಯಾರು ಹಾಗೆಂದವ್ರು?'

"ನೀವು...."

"ನಾನು?...ಯಾವಾಗ?"

"ಮತ್ಯಾವಾಗ? ಈಗ...?'

"ಇಲ್ಲಲ್ಲಾ..."

"ಹೇಳಿದವರಿಗೆ ಹೇಗೆ ನೆನಪಾಗಬೇಕೂಂತ?"

"ಇಲ್ವೆ, ನಾನು ಬರಿಯ ಕವಿತೆಯನ್ನು ಮಾತ್ರ ಓದಿದ್ದು...."

"ಸಾಲದೇ ಅಷ್ಟು?"

"ಅಯ್ಯಯ್ಯೋ, ಅಂಥಾದ್ದು ಏನಿದೆ ದ್ರಲ್ಲಿ?"

"ಇನ್ನು ಇರಬೇಕಾದ್ರೂ ಏನು?"

'ಸ್ವಲ್ಪ ಬಿಡಿಸಿ ಹೇಳೂಂದ್ರೆ....'

'ಕಟ್ಟಿ ಇಟ್ಟಿದ್ರೆತಾನೇ ಬಿಡಿಸೋದು?'

"ಒಳ್ಳೇಪಚೀತಿಯಾಯ್ತಲ್ಲ ಇದು?"

"ಪಚೀತಿ ನಿಮಗಲ್ಲ, ನನಗೆ..."

'ಅಯ್ಯೋ, ಏನಿದು ಹೇಳ್ತಾ ದ್ದೀಯ?"

"ಏನೂ ಅಂತೆ..."

'ಹೇಳಮ್ಮ, ಏನು ವಿಷಯ...."

'ರಾಜೀನಾಮೆ ಕೊಡಲೊಲ್ಲ ಅಂದ್ರಲ್ಲಾ...'

'ಓ, ಅದಕ್ಕಾಗಿ ಇಷ್ಟು ರಂಪಾಟವೆ?'

"ಮತ್ತೆ ಏನು ಹೇಳಬೇಕು?"

"ಅದೆಲ್ಲಾ ಕವಿತೆಯಲ್ಲೇ ಚಂದ, ಅದಕ್ಕಾಗಿ ರೇಗಿಕೊಳ್ಳೋದೇನೆ? ನನ್ನ ಚಿನ್ನವನ್ನ ನಾನೆಂದಾದ್ರೂ ರಾಜಿನಾಮೆ ಕೊಡು ಅಂದೇನೆ?"

'ಅನ್ನೋದು ಯಾಕೆ? ಅಂತಹ ಭಾವನೆ ಬಂದ್ರೆ ಸಾಕಲ್ಲ....'

"ಯಾಕೆ ಬರುತ್ತೆ..."

'ಮತ್ತೆ ನನ್ನನ್ನೇ ಬೊಟ್ಟು ಮಾಡಿ ಅಂದ್ರಲ್ಲಾ...'

"ಹೀಗೆಯೇ ತಮಾಷೆಗೆ ಅಂದೆನಷ್ಟೆ...'

"ಹೌದು, ನಿಮಗೆಲ್ಲಾ ತಮಾಷೆ, ಬೆಕ್ಕಿಗೆ ಆಟ; ಇಲಿಗೆ ಪ್ರಾಣ ಸಂಕಟ...."

'ಏನೋ ದೇವಿಯ ಚಿತ್ತ ಗರ್ವ ತುಂಬಿದೆ. ಗರ್ವ ತುಂಬಿದ ತಲೆಯಲ್ಲಿ ವಿವೇಕವಿರುವುದಿಲ್ಲ; ಗರ್ವದ ಗತಿ ಅಧನತಿ........"

"ಎಲ್ಲಾ ಆದರ್ಶ ಮಾತ್ರ..."

"ಇದ್ದರೂ ಇರಬಹುದು. ಆದರೂ ಅದು ಪೂರಾ ಸುಳ್ಳಲ್ಲ...ನಾನೊಂದು ಮಾತು ಹೇಳಲೇ?"

"ಹೇಳಿ, ಯಾರು ಬೇಡಾಂತಾರೆ?"

"ಒಂದಾಗಿರುವುದನ್ನು ಯಾರಿಂದಲೂ ಯಾವ ಕಾಲಕ್ಕೂ ಯಾವ ರೀತಿಯಿಂದಲೂ ಒಡೆಯಲು ಸಾಧ್ಯವಿಲ್ಲ..."

"ಸರಿ, ನಾನೂ ಹೇಳ್ತೇನೆ- ಜೋಡಿಸಲಾಗದುದನ್ನು ಲೋಕದಲ್ಲಿ ಏನು ಮಾಡಿದರೂ ಜೋಡಿಸಲು ಸಾಧ್ಯವಿಲ್ಲ..."

'ಈಗ ಹೇಳು, ನೀನು—ನಾನು ಯಾರಂದಂತೆ..."

"....ಹ್ಞ... ಏನಂದಿರಿ....ನೀವು...."

'ನಾನೂ ಅಂದದ್ದು ಅದನ್ನೇ. ಹಾಗಿರುವಾಗ ನೀನು ದುಃಖಿಸಬೇಕಾದ್ರೂ ಯಾಕೆ?'

'ಯಾಕೇಂದ್ರೆ...ನೋಡಿ, ನಿಮ್ಮ ಭಾವ ಬಂದಿದ್ದ; ನೋಡಿ ಅವ ಬರೆದು ಹಾಕಿರೋದು...'

(ಒಂಭತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 5½ ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.
ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಭಗವನ್ನಾಮ ಗಂಗಾಜಲವನ್ನು ಮನೆಮನೆಗೆ ಮುಟ್ಟಿಸಿದ

ದಾಸವರೇಣ್ಯ ಪುರಂದರರು

ಬರೆದವರು
ಶ್ರೀ ಸ. ನಾರಾಯಣ

ದಾಸ ಕೂಟದ ಆದ್ಯರೆಂದು ಕೀರ್ತಿ ಪಡೆದು ತಮ್ಮ ಅನುಪಮ ನಿಷ್ಕಾಮಪೂರ್ಣ ಸೇವೆಯಿಂದ ಕನ್ನಡ ನಾಡು ನುಡಿಗಳನ್ನು ಪುನೀತಗೊಳಿಸಿ, ಕರ್ನಾಟಕ ಸಂಗೀತದ ಆಚಾರ್ಯರೆಂದು ಅನ್ವರ್ಥ ನಾಮ ಪಡೆದ ಪುರಂದರ ದಾಸರ ಹೆಸರನ್ನು ಕೇಳದಿರುವವರೇ ವಿರಳ. ಕನ್ನಡ ನಾಡಿನ ಮನೆ ಮನೆಯಲ್ಲಿಯೂ ಪುರಂದರ ದಾಸರು ರಚಿಸಿದ ಕೀರ್ತನೆಗಳ ಮಧುರ ವಾಣಿ ಕೇಳಿ ಬರುತ್ತದೆ.

ತಮ್ಮ ಗುರುಗಳಾದ ವ್ಯಾಸ ತೀರ್ಥರಿಂದಲೇ 'ದಾಸರೆಂದರೆ ಪುರಂದರ ದಾಸರಯ್ಯ' ಎಂದು ಮುಕ್ತ ಕಂಠದಿಂದ ಹೊಗಳಿಸಿಕೊಂಡ ಮಹಾನುಭಾವರು ಪುರಂದರ ದಾಸರು. ಸಮಕಾಲೀನ ಹರಿದಾಸರ ಗುಂಪಿನಲ್ಲಿ ಹಿರಿಯರಾಗಿ ತಮ್ಮ ಆದರ್ಶ ಗಣನೀಯ, ದೈವಭಕ್ತಿ, ಸಮಾಜ ಸೇವೆಯಿಂದ ಸರ್ವಜನ ಪ್ರಿಯರಾದ ಮಹಾ ಮಹಿಮರು ಅವರು.

ಪುರಂದರ ದಾಸರನ್ನು ದಾಸ ಕೂಟದ ಆಧಾರ ಸ್ತಂಭವೆಂದು ಹೇಳಬಹುದು. ದಾಸ ಕೂಟದವರು ಎಂದರೆ ಆಧ್ಯಾತ್ಮಿಕ ಶಕ್ತಿಯನ್ನು ಹೊಂದಿ ಅದನ್ನು ಸಮಾಜಕ್ಕೆ ಬಿತ್ತರಿಸಿದ ಮಹಾಪುರುಷರು ಅಥವಾ ಆಧ್ಯಾತ್ಮಿಕ ವಿಷಯ ರೀತಿ-ನೀತಿಗಳನ್ನು ಕನ್ನಡ (ಪ್ರಾಕೃತ) ಭಾಷೆಯಲ್ಲಿ ರಸಭರಿತವಾಗಿ ಗದ್ಯ ಪದ್ಯ ರೂಪವಾಗಿ ಜನಸಾಮಾನ್ಯರಿಗೆ ಅರಿವಾಗುವಂತೆ ಬೋಧಿಸಿದ ಮಂಡಲದವರಿಗೆ 'ದಾಸ ಕೂಟ'ದವರೆಂದು ಹೆಸರು. ದಾಸ ಕೂಟದಂತೆ ಮತ್ತೊಂದು ವ್ಯಾಸ ಕೂಟವೂ ಉಂಟು. ಆಧ್ಯಾತ್ಮಿಕ ಹಿರಿಮೆಯನ್ನು ಗೀರ್ವಾಣ (ಸಂಸ್ಕೃತ) ಭಾಷೆಯಲ್ಲಿ ಶ್ಲೋಕ ರೂಪವಾಗಿ ಹೇಳಿದ ಪಂಡಿತರಿಗೆ ವ್ಯಾಸ ಕೂಟದವರೆಂದು ಹೆಸರು. ದಾಸ ಕೂಟದವರು ಆಸೆಯ ತೃಪ್ತಿಯಿಂದ ಒಬ್ಬ ಸಿರಿವಂತನನ್ನೋ, ಅರಸನನ್ನೋ ಹೊಗಳಿದವರಲ್ಲ. ಸಮಸ್ತ ಶಕ್ತಿಗಳ ಆಧಾರಭೂತನಾದ ಶ್ರೀ ಹರಿಯನ್ನು ಅನನ್ಯ ಭಕ್ತಿಯಿಂದ ಪೂಜಿಸಿ ದೃಢವಾಗಿ ನಂಬಿ ಅವನ ಹಿರಿಮೆಯನ್ನು ಜನತೆಗೆ ಸಾರಿದ ಮಹಾ ಬುದ್ಧಿವಂತರು.

ಪುರಂದರ ದಾಸರು ದಾಸ ಕೂಟದ ಆದ್ಯರಾಗಿ ಗಣನೀಯ ಸೇವೆಯನ್ನು ಸಲ್ಲಿಸುತ್ತಾರೆ. ಅವರ ಸೇವೆಯಿಂದ ಕನ್ನಡ ಸಾರಸ್ವತ ಲೋಕ ಶ್ರೀಮಂತವಾಗುತ್ತದೆ. ಹರಿಭಕ್ತಿಯ ಹೊಳೆ ತುಂಬಿ ಹರಿಯುತ್ತದೆ.

ಪುರಂದರ ದಾಸರು ಹುಟ್ಟಿನಿಂದಲೇ ಶ್ರೀ ಹರಿಯ ಸೇವೆಗೆ ನಿಂತ ಭಕ್ತರಲ್ಲ. ಅವರ ಜೀವನವೇ ಅವರನ್ನು ಮಹಾ ಪುರುಷರನ್ನಾಗಿ ಮಾಡುತ್ತದೆ. ಪುರಂದರ ದಾಸರು ಭಗವದ್ಭಕ್ತರಾದ ಸಂಗತಿಯೂ, ದಾಸ ದೀಕ್ಷೆ ಪಡೆದು ಸಮಾಜ ಸುಧಾರಕರಾದ ವಿಷಯವೂ ಸ್ವಾರಸ್ಯವಾಗಿಯೇ ಇದೆ.

ಪುರಂದರ ದಾಸರ ಪೂರ್ವಾಶ್ರಮ ನಾಮ ಶ್ರೀನಿವಾಸ ನಾಯಕರೆಂದು. ಅವರು ಪೂನಾ ಸಮೀಪದ ಪುರಂದರ ಗಡದಲ್ಲಿ ವರದಪ್ಪ ನಾಯಕ ಮತ್ತು ಲಕ್ಷ್ಮೀದೇವಿ ಇವರ ಮಗನಾಗಿ ಜನ್ಮ ತಾಳುತ್ತಾರೆ. ಅವರ ವಂಶಪಾರಂಪರ್ಯವಾಗಿ ಬಂದಿದ್ದ ಚಿನಿವಾರ ವೃತ್ತಿಯಲ್ಲಿ ನಾಯಕರ ಪೂರ್ವಿಕರು ಯಥೇಚ್ಛ ಹಣವನ್ನು ಗಳಿಸಿ ಇಟ್ಟಿರುತ್ತಾರೆ. ಸಂಪದ್ಭರಿತ ಕುಟುಂಬ ಅವರದು. ಶ್ರೀನಿವಾಸ ನಾಯಕರಿಗೆ ಅವರ ಹುಟ್ಟಿನೊಂದಿಗೇ ಜಿಪುಣತನ ಬೆಳೆದು ಬರುತ್ತದೆ. ನವಕೋಟಿ ನಾರಾಯಣ ಎಂದು ಕೀರ್ತಿ ಪಡೆದಿದ್ದ ಮಹಾನುಭಾವ ಭಿಕ್ಷೆ ಬೇಡಿದವನಿಗ ಬಿಡಿಗಾಸು ಕೊಡದಷ್ಟು ಲೋಭಿಯಾಗಿರುತ್ತಾನೆ. ಅವರ ಪತ್ನಿ ಸರಸ್ವತೀ ಬಾಯಿಗೆ ಹೆಂಗಸಿಗೆ ಸಹಜವಾದ ಅನುಕಂಪ, ದಯಾ ಹೃದಯ, ದಾನ ಮನೋಭಾವ ಇರುವುದಾದರೂ ಪತಿಯ ನಿರ್ಬಂಧದಲ್ಲಿ ಯಾವುದನ್ನೂ ಕೈಯೆತ್ತಿ ಕೊಡುವಂತಿರುವುದಿಲ್ಲ. ಭಗವಂತನೇ ಶ್ರೀನಿವಾಸ ನಾಯಕರ ಮನೆಯ ಬಾಗಿಲಿಗೆ ಭಿಕ್ಷೆ ಬೇಡಲು ಬರುತ್ತಾನೆ. ಶ್ರೀನಿವಾಸ ನಾಯಕರು ಕಪಟ ಬ್ರಾಹ್ಮಣನನ್ನು ದೂರಮಾಡುತ್ತಾನೆ. ಕಿಲುಬು ಕಾಸನ್ನೂ ಕೊಡದೆ ಬ್ರಾಹ್ಮಣ ನಾಯಕರ ಪತ್ನಿ ಸರಸ್ವತಿ ಬಾಯಿಯವರನ್ನು "ತಮ್ಮ ಮಗನ ಉಪನಯನಯನಕ್ಕಾಗಿ ಸಹಾಯ ಬೇಡಿ' ಅವರ ಮೂಗಿನ ಮೂಗುತಿಯನ್ನೇ ಪಡೆದು ಶ್ರೀನಿವಾಸ ನಾಯಕರಲ್ಲಿಗೆ ಬರುತ್ತಾನೆ. ಶ್ರೀನಿವಾಸ ನಾಯಕರು ಮನೆಗೆ ಬಂದು ಪತ್ನಿಯೊಂದಿಗೆ ಚರ್ಚಿಸಿ ಮೂಗುತಿಯಯನ್ನು ಕೇಳುತ್ತಾರೆ. ಸರಸ್ವತಿ ಬಾಯಿ ಅನ್ಯಮಾರ್ಗವಿಲ್ಲದೆ ವಿಷಪಾನ ಮಾಡಲು ಬಟ್ಟಲು ಎತ್ತಿದಾಗ ಮೂಗುತಿ ಗೋಚರವಾಗುತ್ತದೆ. ಶ್ರೀನಿವಾಸ ನಾಯಕರು ಭಗವಂತ ಸೃಷ್ಟಿಸಿದ ಪರೀಕ್ಷೆಯಲ್ಲಿ ಸಂಪೂರ್ಣವಾಗಿ ಪರಾಜಿತರಾಗಿ ಭಗವಂತನ ಹಿರಿಮೆಯನ್ನು ಅರಿತುಕೊಂಡು—ದೇವನ ಅಡಿದಾವರೆಗಳಿಗೆ ಮನಸ್ಸನ್ನು ಅರ್ಪಿಸುತ್ತಾರೆ.

ನವಕೋಟಿ ನಾರಾಯಣನೆಂದು ಬಿರುದು ಪಡೆದಿದ್ದ ಶ್ರೀನಿವಾಸ ನಾಯಕರು ತಮ್ಮ ಸಮಸ್ತ ಆಸ್ತಿಯನ್ನು ದುರ್ಬಲ, ದೀನ, ದಲಿತರಿಗೆ ಮುಕ್ತ ಹಸ್ತದಿಂದ ದಾನ ಮಾಡಿ ನಿರ್ಗತಿಕರಾಗುತ್ತಾರೆ. ಶ್ರೀನಿವಾಸ ನಾಯಕರ ಮನೋವಿಕಾಸ, ಅವರ ಜೀವನದಲ್ಲಾದ ಹಲವಾರು ಮಾರ್ಪಾಟುಗಳಿಗೆ ಅವರ ಧರ್ಮ ಪತ್ನಿ ಸರಸ್ವತೀ ಬಾಯಿ ಕಾರಣ ಎಂಬ ಅಂಶ ಗಮನಾರ್ಹ. ದಾಸರೇ ತಮ್ಮ ಕೀರ್ತನೆಯೊಂದರಲ್ಲಿ "ಆದದ್ದೆಲ್ಲ ಒಳಿತೇ ಆಯಿತು...... ದಂಡಿಗೆ ಬೆತ್ತ ಹಿಡಿಸಿದಳಯ್ಯ, ಹೆಂಡತಿ ಸಂತತಿ ಸಾವಿರವಾಗಲಿ" ಎಂದು ಕೊಂಡಾಡಿದ್ದಾರೆ; ಪುರಂದರಗಡದಿಂದ ನಿರ್ಗಮಿಸಿದ ಶ್ರೀನಿವಾಸ ನಾಯಕರು ಹಂಪೆಯಲ್ಲಿದ್ದ (ವಿಜಯನಗರ) ಶ್ರೀ ವ್ಯಾಸ ತೀರ್ಥರಲ್ಲಿಗೆ ಬಂದು ಶರಣಾಗತರಾಗುತ್ತಾರೆ.

ವ್ಯಾಸ ತೀರ್ಥರು ಶ್ರೀನಿವಾಸ ನಾಯಕರನ್ನು ಹರಸಿ ದಾಸ ದೀಕ್ಷೆಯನ್ನಿತ್ತು "ಪುರಂದರ ದಾಸ"ರೆಂದು ನಾಮಕರಣ ಮಾಡಿ "ಆಧ್ಯಾತ್ಮಿಕ ಶಕ್ತಿ, ಹಿರಿಮೆಗಳನ್ನೂ, ಶ್ರೀ ಹರಿಯ ಸೇವಾ ವಿಧಾನವನ್ನೂ ಜನತೆಗೆ ಬೋಧಿಸಿ" ಎಂದು ಅಪ್ಪಣೆ ಮಾಡುತ್ತಾರೆ. ಗುರುಗಳ ಆಜ್ಞೆಯಂತೆ ಮೋಕ್ಷ ಸಾಧನೆಗೆ ಅತಿ ಮುಖ್ಯವಾದ ಭಕ್ತಿ ಪಂಥವನ್ನು ಅನುಸರಿಸಿ ಪುರಂದರ ದಾಸರು ದೇಶಾಟನೆಗೆ ತೊಡಗುತ್ತಾರೆ.

ಕೋಟ್ಯಾಧೀಶ್ವರರಾಗಿದ್ದ ಶ್ರೀನಿವಾಸ ನಾಯಕರು ದೈವ ಸಂಕಲ್ಪ ಮತ್ತು ಪ್ರೇರಣೆಯಂತೆ ತಮ್ಮ ಸಮಸ್ತ ಆಸ್ತಿಯನ್ನು ಭಗವಂತನ ಚರಣಕ್ಕೆ ಅರ್ಪಿಸಿ ಕಡು ಬಡವರಾಗಿ ಪುರಂದರ ದಾಸರನ್ನು ಹೆಸರಿನಿಂದ ದಾಸ ವೃತ್ತಿಯಂತೆ ಭಿಕ್ಷೆ ಬೇಡುತ್ತಾರೆ. ಅಶಾಶ್ವತವಾದ ಐಹಿಕ ಸಿರಿ ಸಂಪನ್ನು ದೂರ ಮಾಡಿ ಶ್ರೀ ಹರಿಯ ಸೇವೆಗೆ, ಪ್ರಾಪ್ತಿಗೆ ಸಾಧನ ಸಂಪತ್ತಾದ ಭಕ್ತಿ ಎನ್ನುವ ಐಶ್ವರ್ಯ ಗಳಿಸಿದ ಪುರಂದರ ದಾಸರು ನಿಜವಾದ ಶ್ರೀಮಂತರಾಗುತ್ತಾರೆ.

ದಾಸ ದೀಕ್ಷೆ ಪಡೆದು ಲೋಕ ಸೇವೆಯ ಮೂಲಕ ಆತ್ಮತೃಪ್ತಿ ಪಡೆಯುವ ಆಸೆಯಿಂದ ಸಂಚಾರ ಕೈಗೊಳ್ಳಲು ನಿರ್ಧರಿಸಿದ ಪುರಂದರ ದಾಸರು ಕಾಲಲ್ಲಿ ಗೆಜ್ಜೆ, ಕೈಯಲ್ಲಿ ತಂಬೂರಿ, ಹೆಗಲಲ್ಲಿ ಜೋಳಿಗೆ, ಬಾಯಲ್ಲಿ ಶ್ರೀ ಹರಿಯ ಸಂಕೀರ್ತನೆ ಈ ಸ್ವರೂಪದಿಂದ ಮುಂದಡಿ ಇಡುತ್ತಾರೆ. ವಿಜಯನಗರದಿಂದ ಪ್ರಯಾಣ ಹೊರಟ ಪುರಂದರರು ತಿರುಪತಿ, ಉಡುಪಿ, ಪಂಡರಾಪುರ ಅದಿಯಾಗಿ ದಕ್ಷಿಣ ಭಾರತದ ಕ್ಷೇತ್ರಗಳನ್ನೆಲ್ಲಾ ಸಂದರ್ಶಿಸಿ ಭಗವದ್ಭಕ್ತಿಯನ್ನು ಪ್ರಚಾರ ಮಾಡುತ್ತಾರೆ.

ಮಧುರ ವೀಣಾ ವೇಣು ವಾದನವನ್ನು ಮೀರಿಸಿದ ಅವರ ಬಾಯಿ ಹಾಡುಗಾರಿಕೆಗೆ ಮನಸೋತ ಜನತೆ ಅವರ ಭಕ್ತಿ ಗೀತೆಗಳಿಗೆ ಭಾವ ಪರವಶರಾಗಿ ಅವರನ್ನು ಆದರಿಸಿ ಉಪಚರಿಸುತ್ತಿದ್ದರು. ಅವರ ಸೇವೆಯಿಂದ ಜನತೆ ಅಪಾರ ಶ್ರದ್ಧೆ ಭಕ್ತಿಗಳನ್ನು ಕಲಿಯುತ್ತಿದ್ದರು ಎಂಬುದು ಸತ್ಯಾಂಶ.

ಪುರಂದರ ದಾಸರು ನಿಸ್ಸೀಮ ದೈವ ಭಕ್ತರು. ಅದರಲ್ಲಿಯೂ 'ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ' ಎನ್ನುವ ಆತ್ಮಾರ್ಪಣಾ ಮನೋಭಾವದಿಂದ ಭಗವಂತನನ್ನು ನಂಬಿದ್ದ ಪರಮ ಭಾಗವತರು. ಭಗವದ್ಭಕ್ತಿಯ ಪ್ರಸಾರ, ಸಮಾಜ ವಿಡಂಬನೆ, ಲೋಕಾಚಾರದ ವಿಮರ್ಶೆ, ಜನತೆಗೆ ನೀಡುವ ಸಂದೇಶ, ಉಪದೇಶ ಮೊದಲಾದುವುಗಳಿಗೆ ಹೊಸ ಮಾರ್ಗವನ್ನೇ ಅನುಸರಿಸಿದರು ಪುರಂದರ ದಾಸರು. ಆ ಮಾರ್ಗವು ಮುಕ್ತವು

(ಎಂಟನೇ ಪುಟ ನೋಡಿರಿ)

ಚಿಕ್ಕಂದಿನಲ್ಲಿಯೇ ಉಳಿತಾಯದ ಮಹತ್ವವನ್ನು ಕಲಿಸಿರಿ



ಎಳೆಯ ಮಕ್ಕಳೇ ಪ್ರತಿಯೊಂದು ಮನೆಯಲ್ಲಿಯೂ ಸಂತೋಷವನ್ನು ಹಬ್ಬುವ ಚೆಲುವಕ್ಕಿಗಳು. ಅವರ ಆರೈಕೆ ಮಾಡಿ ಅವರಿಗೆ ಸಂತೋಷವನ್ನುಂಟು ಮಾಡುವುದರಲ್ಲಿಯೇ ನಮ್ಮ ಜವಾಬ್ದಾರಿಯು ಮುಗಿಯುವುದಿಲ್ಲ. ಅವರ ಭವಿಷ್ಯದ ಪೂರೈಕೆ ಮತ್ತು ಅವರಲ್ಲಿ ಒಳ್ಳೆಯ ಅಭ್ಯಾಸಗಳನ್ನು ರೂಢಿಸುವಿಕೆ—ಇವು ನಮ್ಮ ಪರಮ ಕರ್ತವ್ಯಗಳಾಗಿವೆ. ನಿಮ್ಮ ಮಗುವಿಗಾಗಿ, ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನಾಗಲೀ ಅಥವಾ ಕ್ಯುಮುಲೇಟಿವ್ ಡಿಪಾಸಿಟ್ ಖಾತೆಯನ್ನಾಗಲೀ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ತೆರೆದು ಚಿಕ್ಕ ವಯಸ್ಸಿನಲ್ಲಿಯೇ ಉಳಿತಾಯದ ಮಹತ್ವವನ್ನು ಅವರಲ್ಲಿ ಬಿಂಬಿಸಿರಿ.

ಸಿಂಡಿಕೇಟ್
ಬ್ಯಾಂಕ್
ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು:
ಮಣಿಪಾಲ

FAITHFUL SB FRIENDLY

ಆಕ್ರಮಣದ

೧

ಕೆಂಪು ಚೀನಾ ನಮ್ಮ ಉತ್ತರದ ಗಡಿಯಲ್ಲಿ ಸೇನಾ ಜಮಾವಣೆ ಮಾಡುತ್ತಿದೆ, ರಾಜಸ್ಥಾನ ಸೀಮೆಯಲ್ಲಿ ಪಾಕ್ ಸೇನೆ ಒಂದಾಗುತ್ತಿದೆ.

ಸೀಮಾ ರಾಜ್ಯ ಪಂಜಾಬವನ್ನು ವಿಭಜಿಸಲು, ಹಿರಿಯ ರಾಜ್ಯವನ್ನು ಎರಡು–ಮೂರು ಕಿರಿಯ ರಾಜ್ಯವನ್ನಾಗಿ ರೂಪಿಸಲು ಆಡಳಿತ ಪಕ್ಷ ಒಪ್ಪಿದೆ—ಉಳಿದವರೂ ಸೈಗುಟ್ಟಿದ್ದಾರೆ. ಮಾಡಬಹುದಾದ ಗುಲ್ಲು, ಗಲಭೆ, ಆಗಬಹುದಾದ ಗೋಲಿಬಾರು – ಅಶ್ರುವಾಯು ಪ್ರಯೋಗ—ವ್ಯತ್ಯಗಳು ಮುಗಿದ ಮೇಲೆ ಹಿಂಸಾತ್ಮಕ—ಅಹಿಂಸಾತ್ಮಕ ಸತ್ಯಾಗ್ರಹ—ದುರಾಗ್ರಹಗಳೆಲ್ಲವೂ ಶಾಂತಗತಿಗೆ ಬರತೊಡಗಿವೆ.

ಪೂರ್ವದಲ್ಲಿ ಮಿಜೋ ಗುಡ್ಡಗಾಡುಗಳಲ್ಲೂ ಅದೇ ಸ್ಥಿತಿಗತಿ. ಭಾರತದ ಒಕ್ಕೂಟದೊಳಗಡೆ ಉಳಿಯುವಂತೆ ಮಿಜೋಗಳಿಗೆ ಅಧಿಕ ಸ್ವಾಯತ್ತತೆ ನೀಡುವ ವಿಚಾರ ತೀವ್ರ ಪರಿಶೀಲನಾರ್ಹವಿದೆ—ನಾಗಾಲ್ಯಾಂಡ್‌ನಂತೆಯೇ ಮಿಜೋಲ್ಯಾಂಡ್ ನಿರ್ಮಾಣ ಬೇಕೇ ಬೇಕೆಂದು ಮಿಜೋಗಳು ಆಗ್ರಹ ಪಡುವುದಾದರೆ, ಅದನ್ನು ಅನುಗ್ರಹಿಸಲು ಸರಕಾರ ಸಿದ್ಧವಿದ್ದಂತಿದೆ. ಅದೇನೇ ಇದ್ದರೂ ಸೇನೆಯು ಹೊಕ್ಕುದರಿಂದ ಮಿಜೋ ಕೂಡ ಶಾಂತವಾಗಿದೆ.

ಒಮ್ಮೆಗೆ ಎಲ್ಲೆಲ್ಲೂ ಎದ್ದ ಗೊಂದಲ ತುಸು ನಮ್ಮದಿಗೆ ಇಳಿದಿದೆ. ಪ್ರಧಾನಿ ಇಂದಿರಾ ಸ್ವಲ್ಪ ನೆಮ್ಮದಿಯಿಂದಲೇ ಅಮೆರಿಕನ್ ಪ್ರಯಾಣಕ್ಕೆ ತೆರಳಿದ್ದಾರೆ—ಹೀಗಾದುದು ಸಂತೋಷ.

ಬ್ರಿಟನ್ನಿನ ಕೂಗು ಪ್ರಧಾನಿ ವಿಲ್ಸನ್, ಇದೇ ತಿಂಗಳಂದು ಅಲ್ಲಿ ಚುನಾವಣೆ ನಡೆಯಲಿದೆ; ಇದರಲ್ಲಿ ಗೆದ್ದು ಬರುತ್ತೇವೆ ಎಂಬ ಧೈರ್ಯವಿದ್ದರೂ ಅವರಿಗಿನ್ನೂ ಆತ್ಮವಿಶ್ವಾಸವಿದ್ದಂತಿಲ್ಲ— ಭಾರತ—ಪಾಕಿಸ್ತಾನಗಳಿಗೆ ಶಸ್ತ್ರಾಸ್ತ್ರ ಪೂರೈಕೆಯ ಲೈಸನ್ಸುಗಳನ್ನು ಮತ್ತೆ ನೀಡುವುದಾಗಿ ಘೋಷಿಸಿದ್ದಾರೆ. ಇದರಿಂದ ಯಾರಿಗೆ ಅಧಿಕ ಲಾಭ?

ಭಾರತಕ್ಕಿಂತ ಪಾಕಿಸ್ತಾನಕ್ಕೆ ಹೆಚ್ಚು ಎನ್ನುವವರು ಹೆಚ್ಚು. ಕಳೆದ ಸಪ್ಟಂಬರದಲ್ಲಿ ನಡೆದ ಘರ್ಷಣೆಯಿಂದ ನಷ್ಟವಾದ ಯುದ್ಧ ತಂತ್ರಸಾಧನಗಳ ಪುನಾರಚನೆ ಮಾಡಲು ಅನುಕೂಲವಾಗುವಂತೆ, ಪಾಕಿಸ್ತಾನಕ್ಕೆ ಸಹಾಯವಾಗುವಂತೆ, ಈ ಆಜ್ಞೆ ಹೊರಟಿದ ಯೆನ್ನುವುದನ್ನು ಪೂರ್ಣ ಅಲ್ಲಗಳೆಯುವುದು ಕಷ್ಟ. ಈ ಅಭಿಪ್ರಾಯಕ್ಕೆ ಪಾಕ್ ವರ್ತನೆ ಪುಟ ನೀಡುತ್ತಿದೆ.

ತಾಷ್ಕೆಂಟಿನ ಮಾತುಕತೆಗೆ ಮೊದಲು ಒಪ್ಪದಿದ್ದ ಅಯೂಬ ಖಾನ್ ಕೊನೆಯ ಗಳಿಗೆ ಯಲ್ಲಿ ಒಪ್ಪಿದರು. ಈ ಬಗೆಯ ಮಾತುಕತೆಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ಹೇಳುತಿದ್ದ ಈ ಮಹಾನುಭಾವರು ಮತ್ತೆ ಯಾಕೆ ತಾಷ್ಕೆಂಟಿಗೆ ಹೋದರು? ರಶ್ಯದ ಮನನೋಯಿಸಲು ಮನಸ್ಸಿಲ್ಲದೆ ಹಾಗೆ ಮಾಡಿದರಂತೆ—ಇದು ಇಂದಿನ ವ್ಯಾಖ್ಯಾನ!

ಭುಟ್ಟೋ—ಅಯ್ಯೂಬ ಖಾನರಿಬ್ಬರೂ ಹಾಡುವ ಹಾಡು ಒಂದೇ— ರಾಗ ಒಂದು ಇಸ್ಲಾಮಿ ಆದರೆ ಮತ್ತೊಂದು ಪಾಕಿಸ್ತಾನಿ ಅಷ್ಟೆ. ತಾಷ್ಕೆಂಟ್ ಘೋಷಣೆಯಲ್ಲಿ ಸ್ವೀಕೃತ ಸಾಂಸ್ಕೃತಿಕ-ಆರ್ಥಿಕ ಆದಿ ವಿನಿಮಯಗಳಿಗಿಂತ ಅವರಿಗೆ, ಕಾಶ್ಮೀರವೇ ಮುಖ್ಯ; ಅದೇ ಜೀವ. ತಾಷ್ಕೆಂಟ್ ಘೋಷಣೆ ಕಾಶ್ಮೀರದ ಬಗ್ಗೆ ಏನೂ ಹೇಳುವುದಿಲ್ಲವೆಂಬುದನ್ನು ಮರೆಯಬಾರದು. 'ಕಾಶ್ಮೀರವು ಭಾರತದ ಒಂದು ರಾಜ್ಯ'ವೆಂಬ ಸತ್ಯದ ತಳಹದಿಯಲ್ಲೇ ದಿ। ಪ್ರಧಾನಿ ಲಾಲಬಹದೂರ್ ಶಾಸ್ತ್ರಿಯವರು ಮಾತುಕತೆಯಲ್ಲಿ ಭಾಗವಹಿಸಿದ್ದರು. ಇದನ್ನು ರಶ್ಯಾಕ್ಕೆ, ಲೋಕಕ್ಕೆ ಅನೇಕ ಬಾರಿ ಸ್ಪಷ್ಟ ಪಡಿಸಲಾಗಿತ್ತು.

ಈಗ ಮತ್ತೆ ಕಾಣುತ್ತಿರುವುದು ಪಾಕಿಸ್ತಾನದ ರಣ ಸಿಪಾಯಿ. ಈಗಿನ ಪಾಕ್ ನಾಯಕರ ವರ್ತನೆ ತಾಷ್ಕೆಂಟ್ ನೀತಿಗೆ ವಿರುದ್ಧವಾಗಿದೆ ಎಂದು ಎಲ್ಲರಿಗೂ ಮನವರಿಕೆಯಾಗಿದೆ; ಅಂದರೆ, ತಾಷ್ಕೆಂಟ್ ಘೋಷಣೆಯನ್ನು ಪಾಕಿಸ್ತಾನ್ ಉಲ್ಲಂಘಿಸುತ್ತಿದೆ.

ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯ ಗೊತ್ತುವಳಿಯನ್ನು ಉಲ್ಲಂಘಿಸಿದ್ದ ಪಾಕಿಸ್ತಾನ ನೆಹರೂ—ಲಿಯಾಕತ್ ಒಡಂಬಡಿಕೆಗೆ ಹಸ್ತಾಕ್ಷರ ಹಾಕಿದ ಪಾಕ್ ನಾಯಕರು ಈಗ ತಾಷ್ಕೆಂಟಿಗೆ ಅಷ್ಟು ಬೆಲೆಯೇಕೆ ಕೊಡಬೇಕು?

ಅಂತೂ ಪಾಕ್ ನೀತಿ ಕಾಶ್ಮೀರವನ್ನು ನುಂಗುವುದು. ಇದಕ್ಕೆ ಭಾರತ ಒಪ್ಪುವುದಾದರೆ, ಮತ್ತೆ ಯಾವ ಗೊತ್ತುವಳಿಯೂ ಬೇಡ, ಮಧ್ಯಸ್ಥಿಕೆಯೂ ಬೇಡ. ಆದರೆ ಹೀಗಾಗುವುದು ಎಂದಿಗೂ ಸಾಧ್ಯವಿಲ್ಲ. ಜಮ್ಮು ಮತ್ತು ಕಾಶ್ಮೀರ ಭಾರತ ಒಕ್ಕೂಟದ ಒಂದು ರಾಜ್ಯ. ಅದರ ಮೇಲೆ ಇತರರಿಗೆ ಯಾರಿಗೂ ಅಧಿಕಾರವಿಲ್ಲ. ಭಾರತೀಯನ ಧಮನಿಗಳಲ್ಲಿ ರಕ್ತ ಹರಿಯುತ್ತಿರುವಾಗ, ಕಾಶ್ಮೀರವನ್ನು ತಿನ್ನುವುದಂತೂ ದೂರ, ಅದರೆಡೆಗೆ ಕಣ್ಣಿಟ್ಟು ನೋಡುವವರ ಕಣ್ಣುಗಳನ್ನು ಕೀಳಬೇಕು ಇದು ಭಾರತೀಯರ ಇಚ್ಛೆ. ಕಾಶ್ಮೀರದ ಮೇಲಣ ಭಾರತದ ಸಾರ್ವಭೌಮಾಧಿಕಾರದ ಮಧ್ಯೆ ತಾಷ್ಕೆಂಟ್ ಘೋಷಣೆ ಅಡ್ಡ ಬರಲಾರದು, ಬರಬಾರದು.

ಪಾಕ್ ನೀತಿ ಅನಿರೀಕ್ಷಿತವೇನಲ್ಲ. ತಾಷ್ಕೆಂಟ್ ಪ್ರಸ್ತಾಪ ಮೊತ್ತಮೊದಲಿಗೆ ಬಂದಾಗಲೇ ಈ ಬಗೆಯ ಊಹೆಯಿತ್ತು. ಆದರೆ, ಸಾರಿ ಕೊಂದರೆ ಪಾಪವಿಲ್ಲ-ಇದು ಭಾರತೀಯರ ನಂಬುಗೆ. ತನ್ನ ಅನೀತಿ ಕುನೀತಿಗಳನ್ನು ತಿದ್ದಿಕೊಳ್ಳಲು ಪಾಕಿಸ್ತಾನವು ಭಾರತದ ಸ್ವಾರ್ಥಕ್ಕಾಗಿ ಪುರಸ್ಕರಿ

ವನ್ನು ಅವಕಾಶಗಳನ್ನು ಭಾರತ ಪಾಕಿಸ್ತಾನಕ್ಕೆ ಒದಗಿಸಿದೆ. ಆದರೂ ನಡವಳಿಕೆಯಲ್ಲಿ ಯಾವ ಬದಲಾವಣೆಯನ್ನೂ ನಾವು ಕಾಣುವುದಿಲ್ಲ. ಭಾರತದ ನಾಯಕರ ಮನೋಭಾವದಲ್ಲಿ ಪರಿವರ್ತನೆಯನ್ನು ಬಯಸುವ ಅಯ್ಯೂಬಖಾನರು ತನ್ನ ಮನೋಭಾವವನ್ನು ಲಿಲಾಂಶ ಬದಲಾಯಿಸು, ದಕ್ಕೂ ಸಿದ್ಧರಿಲ್ಲದಿರುವುದು ಬಹಳ ಸೋಜಿಗವಲ್ಲವೆ? ಈ ಹಳೆಯ ಹಾಡಿಗೆ ಭಾರತೀಯರು ಕಿವಿಗೊಡುವುದಿಲ್ಲ.

ಪಾಕ್ ದುರ್ವರ್ತನೆಗೆ ತಕ್ಕ ಮದ್ದು ಕೊಡುವುದು ಅಗತ್ಯ. ಆದರೆ, ಮದ್ದಿಲ್ಲದ ಅದನ್ನು ಪಾಸಿ ಮಾಡುವ ಸಾಧ್ಯಾಸಾಧ್ಯತೆಗಳ ಬಗ್ಗೆ ವಿವೇಚಿಸಬೇಕಾಗಿದೆ. ಇದುವರೆಗಿನ ಅನುಭವದಂತೆ ಪಾಕಿನ ಕಾಶ್ಮೀರ ರೋಗ ಗುಣ ಹೊಂದದಷ್ಟು ಉಲ್ಬಣಗೊಂಡಿದೆ.

ಪಾಕಿಸ್ತಾನದ ನಿರ್ಮಾಣದೊಡನೆಯೆ ಪಾಕ್—ಭಾರತ ವಿರಸ ತಲೆದೋರಿದೆ ಅಂದಿನಿಂದ ಇಂದಿನವರೆಗೂ ಪಾಕ್ ನಿರಾಶ್ರಿತರು ಭಾರತಕ್ಕೆ ಬರುತಿದ್ದಾರೆ. ಈ ರಾಶ್ರಿತರಿಗೆ ಪುನರ್ವಸತಿಯನ್ನು ಸಂರಕ್ಷಣೆಯನ್ನು ಕೊಡುವುದು ಭಾರತ ತನ್ನ ಕರ್ತವ್ಯವೆಂದು ಭಾವಿಸಿದೆ. ಕ್ಯಾಬಾದಿಂದ ವಿಯಾಕನಾಮದಿಂದ ಬರುತ್ತಿರುವ ನಿರಾಶ್ರಿತರಂತೆಯೇ ನಿರಾಶ್ರಿತರ ಪ್ರವಾಹ ಭಾರತದ ಮೇಲೆ ಹರಿದಿತ್ತು.

೨

ಕಟು ಭೀಕರತೆ

೧

ನೈಷಮ್ಯ ಭಾವನೆಯನ್ನು ಭೂ ಲೋಕದಲ್ಲಿದ್ದಾರೆ!

ಪಾಕ್ ಆಕ್ರಮಣದ ವೇಳೆ, ಅದು ಾಡಿದ ಅನ್ಯಾಯದ ಬಾಂಬುದಾಳಿ, ುನೆ ಮೂರುಗಳ ಧ್ವಂಸ, ಆಸ್ತಿ ಪಾಸ್ತಿಗ ನಾಶಗಳಿಂದ ನೊಂದ, ಸಂಕಷ್ಟಕ್ಕೀ ಾದ ಭಾರತೀಯ ನಾಗರಿಕರ ಸಂರಕ್ಷಣೆ ು ಹೆಚ್ಚಿನ ಭಾರ ನನ್ನು ಮೇಲಿದೆ. ದಕ್ಷಿಣ ಯತನಾಮದಲ್ಲಿ ಉತ್ತರ ವಿಯತನಾ ುದ ನೀತಿಯನ್ನು ಖಂಡಿಸುವ ಅಮೆರಿಕ ಾಕ್ ಆಕ್ರಮಣ ಮಾಡಿದೆ ಯೆನ್ನಲು ುಂಬರುವುದಿಲ್ಲ. ಇದು ತೀರ ಸೋಜಿಗ.

ಇಲ್ಲಿ ವಿಯತನಾಮು— ಕ್ಯೂಬಾಗಳಿಗೆ ಂಬಂಧಿಸಿದ ಅಲ್ಲಿನ ನಾಗರಿಕ— ನಿರಾ ್ರಿತರ ದಾರುಣತೆಯನ್ನು ವ್ಯಕ್ತಪಡಿಸು ಕೆಲವು ಚಿತ್ರಗಳಿವೆ. ಇವೇ ಬಗೆಯ ಸ ುಸ್ಯೆಗಳನ್ನೇ ಭಾರತವೂ ಎದುರಿಸುತ್ತಿ — ಈ ಸತ್ಯವನ್ನು ಶಾಂತಿ ಪ್ರಿಯ ಜ ತ್ತು ಎಷ್ಟು ಬೇಗ ಅರ್ಥವಿಸಿ ಕೊಳ್ಳು ದೋ ಅಷ್ಟು ಕ್ಷಿಪ್ರದಲ್ಲಿ ಶಾಂತಿ ಸ್ಥಾಪ ಯಾಗುವುದು.

ಚಿತ್ರ-೧

ಉತ್ತರದ ವಿಯತನಾಮದ ಸೇನೆಯು ಕ್ಷಿಣವನ್ನು ಆಕ್ರಮಿಸಿತು, ನಾಗರಿಕರ ್ನ ಪೀಡಿಸಿತು, ಅವರ ವಿತ್ತ ಜೀವಿತಗಳ ಹಾನಿಯನ್ನು ತಂದಿತು. ಶಾಂತಿಪ್ರಿಯ ಮೆರಿಕೆ ದಾಕ್ಷಿಣಾತ್ಯರ ನೆರವಿಗೆ ಧಾವಿ ತ್ತಪ್ಪೆ! ಅದು ವಿಯತ ಕಾಂಗದ ಸೇನೆಗ ಳನ್ನು ಓಡಿಸಿತು— ಸಾವಿಗೀಡಾದವರ ಬಗ್ಗೆ ಯಾರೂ ಏನೂ ಮಾಡುವಂತಿಲ್ಲ ಆದರೆ ಗಾಯಗೊಂಡವರ ಸೇವೆ ಮಾಡಬಹುದ ಲ್ಲ! ಅವರಿಗೆ ವೈದ್ಯಕೀಯ ಸೇವೆ ಸಲ್ಲಿಸಬ ಹುದು ಚಿತ್ರದಲ್ಲಿ ನಾಲ್ಕು ವರ್ಷ ಪ್ರಾ ಯದ ಹಳ್ಳಿಯ ಹುಡುಗನೊಬ್ಬನಿಗೆ ಸೂ ಕ್ತ ಚಿಕಿತ್ಸೆಯನ್ನು ರಾಬರ್ಟ್ ಫಾಸ್ ನೀ ಡುತಿದ್ದಾರೆ. ಇದು ನಡೆದುದು ಸೈಗಾ ನಿಗೆ ಉತ್ತರದ ಚಿಕ್ಕದೊಂದು ಹಳ್ಳಿ ಪೋ ಡಾಟ್‌ನಲ್ಲಿ.

ಚಿತ್ರ-೨

ಕಮ್ಯೂನಿಸ್ಟ್ ಆಕ್ರಮಣದಿಂದ ದಕ್ಷಿಣ ವಿಯತನಾಮದಲ್ಲಿ ಸುರಕ್ಷಿತತೆಗೆ ಭಂಗ ಬಂದಿದೆ ಯಾವಕಾಲದಲ್ಲಿ ಎಲ್ಲಿ ಆಕ್ರಮಣ ಮಾಡುವರೋ ಊಹಿಸುವುದು ಅಸಾಧ್ಯ. ಆಕ್ರಮಣಕ್ಕಿಂತ ಆತ್ಮರಕ್ಷಣೆ ಕಷ್ಟಕರವಾದುದು ಅನೇಕ ಗಂಡಾಂತರಗಳನ್ನೂ ವಿಘ್ನಬಾಧೆಗಳನ್ನೂ ಗಮನಿಸದೆ ದಿಟ್ಟ ಅಮೆರಿಕನ್ ಸೈನಿಕನೊಬ್ಬ ಎರಡು ಮಕ್ಕಳನ್ನು ಹೊತ್ತು ಸುರಕ್ಷಿತ ಸ್ಥಾನದತ್ತ ಮುನ್ನಡೆಯುತಿದ್ದಾನೆ. ಮುಂದಿನ ಜನಾಂಗವಾದ ಇಂದಿನ ಮಕ್ಕಳನ್ನು ರಕ್ಷಿಸುವುದು ಆದ್ಯ ಕರ್ತವ್ಯವಲ್ಲವೆ?

ಚಿತ್ರ ೩

ಪಾಕ್—ಭಾರತ ಸಂಘರ್ಷಣೆಯ ವೇಳೆ ಪಾಕಿಸ್ತಾನವು ಭಾರತೀಯ ನಾಗರಿಕ ಪ್ರದೇಶಗಳ ಮೇಲೂ ಬಾಂಬು ದಾಳಿ ಮಾಡಿತು—ಅನ್ಯಾಯವಾಗಿ ಈ ದಾಳಿಗಳಿಂದ ಅದೆಷ್ಟು ಭಾರತೀಯ ಅಮೂಲ್ಯ ಪವಿತ್ರ ಪ್ರಾಣಗಳು ಹಾರಿ ಹೋಗಿಲ್ಲ? ಗುಜರಾತದ ಮುಖ್ಯಮಂತ್ರಿಗಳನ್ನು ಸಪತ್ನೀಕವಾಗಿ ಉರುಳಿಸುವಷ್ಟು ಪಾಕ್ ದುಷ್ಕೃತ್ಯ ಮುಂದುವರಿದಿತ್ತು. ವಿಯತ ಕಾಂಗೋ ಸೇನೆಯು ಸೈಗೋನಿನ ಬಳಿಯ ಹೋಟೆಲೊಂದರ ಮೇಲೆ ಬಾಂಬು ಸುರಿಸಿತು. ಆಗ ಸುಮಾರು ೧೪೦ಕ್ಕೂ ಮಿಕ್ಕಿದ ಹಿರಿಯ ಕಿರಿಯ ಪ್ರಜೆಗಳು ಸತ್ತರು ಇಲ್ಲವೇ ಗಾಯಗೊಂಡರು. ಗಾಯ ಪೀಡಿದ ಎಳೆಯ ಮಕ್ಕಳ ಗುಂಪೊಂದನ್ನು ನಾವಿಲ್ಲಿ ನೋಡ ಬಹುದು.

೩

೪

ಚಿತ್ರ—೪

ನಿರಾಶ್ರಿತರ ಸಮಸ್ಯೆಯೊಂದು ದೇಶದ ತಲೆ ತಿನ್ನುವ ಸಮಸ್ಯೆ. ಭಾರತದ ಹತ್ತು ಸಮಸ್ಯೆಗಳೊಡನೆ ಇದೂ ಹನ್ನೊಂದನೆಯದು. ಇದೇ ಬಗೆಯ ನಿರಾಶ್ರಿತರ ಪ್ರಶ್ನೆಯನ್ನು ಅಮೆರಿಕೆಯೂ ಎದುರಿಸಬೇಕಾಗಿತ್ತು. ಕ್ಯೂಬಾದಾ ನಿರಾಶ್ರಿತರ ರಕ್ಷಣೆಯನ್ನು ಅಮೆರಿಕೆ ಮಾಡಬೇಕಾಯಿತು. ಇಲ್ಲಿ ಇಂತಹ ನಿರಾಶಿತರ ತಂಡವೊಂದ ಸ್ವದೇಶಕ್ಕೆ ಹೊರಡಲು ಮಿಯಾಮಿ ವಿಮಾನ ನಿಲ್ದಾಣದಲ್ಲಿ ಸೇರುವುದನ್ನು ಕಾಣಬಹುದು.

ಈ ಚಿತ್ರಗಳು ದಾರುಣತೆಯನ್ನು ತೋರಿಸುತ್ತವೆ ನಿಜ. ಇದನ್ನು ಅಮೆರಿಕೆ ಮನಗಂಡಿದೆ; ವಿಯತ ಕಾಂಗದ ಆಕ್ರಮಣ ನೀತಿಯನ್ನು ಖಂಡಿಸಿ ದಕ್ಷಿಣವಿಯತನಾಮಕ್ಕೆ ಸಂಪೂರ್ಣ ನೆರವು ನೀಡುತ್ತಿದೆ. ಹೋರಾಟಕ್ಕೆ ಪ್ರಚೋದನೆಯನ್ನು, ನೀಡುತ್ತಿದೆ. ಆದರೆ, ಈ ಹೋರಾಟವು ಸರಿಯಲ್ಲವೆಂದದೀಗ ಅರಿತು ಕೊಂಡಂತಿದೆ. ಆದಕ್ಕೆಂದೇ ಭಾರತದ ಮಧ್ಯಸ್ಥಿಕೆಯನ್ನೂ ಅದು ಬಯಸುವಂತಿದೆ. ಅಂತಾರಾಷ್ಟ್ರೀಯ ಶಾಂತಿ ಸಮಿತಿಯ ಅಧ್ಯಕ್ಷ ರಾಷ್ಟ್ರ ಭಾರತವು ಅಮೆರಿಕದ ವಿಯತನಾಮ ನೀತಿಯನ್ನು ಒಪ್ಪುವುದಿಲ್ಲ. ಅಮೆರಿಕೆ ಹೋರಾಟವನ್ನು ನಿಲ್ಲಿಸಬೇಕು ಎನ್ನುತ್ತಿದೆ.

ಸದ್ಯ ಅಮೆರಿಕೆಯಲ್ಲಿ ಜಾನ್ಸನ್ ಇಂದಿರಾ ಗಾಂಧಿಯವರನ್ನು ಕಂಡಾಗ ಈ ಸಂಬಂಧದ ನೂತನ ಮುಂಡೆ ಬರಬಹುದು. ವಿಯತ ನಾಮುಗಲ್ಲಿ ಕಮ್ಯುನಿಸ್ಟ್ ಆಕ್ರಮಣವನ್ನು ಖಂಡಿಸುವ ಜಾನ್ಸನ್ ಭಾರತದ ಮೇಲಿನ ಚೀನೀಯ ಆಕ್ರಮಣವನ್ನು ಖಂಡಿಸಬೇಕು, ಪಾಕಿಸ್ತಾನದ ಅನ್ಯಾಯವನ್ನು ಮನವರಿಕೆ ಮಾಡಿಕೊಳ್ಳಬೇಕು

ಯಾರು ಏನೇ ಹೇಳಲಿ, ಮಾಡಲಿ, ನಾವು ಭಾರತೀಯರು ರಾಷ್ಟ್ರರಕ್ಷಾ ದೀಕ್ಷೆಯನ್ನು ತೊಟ್ಟಿದ್ದೇವೆ. ದೇಶದ ಗೌರವ, ಘನತೆ, ಸಾರ್ವಭೌಮತೆ, ಸಮಗ್ರತೆಗಳಿಗೆ ಎದುರಾಗುವ ಯಾವ ಬಂಡೆಯನ್ನೂ ಒಡೆಯುತ್ತೇವೆ, ಶಾಂತಿ— ಸಂಮೃದ್ಧಿ ಪಥದತ್ತ ಮುನುಗ್ಗುತ್ತೇವೆ— ಇದನ್ನು ಇಂದಿರಾಗಾಂಧಿ ಅರತೇ ಅಮೆರಿಕೆಗೆ ಹೊರಟಿದ್ದಾರೆ.

ಹನಿಗತೆ

ಸ್ವಲ್ಪದರಲ್ಲೂ ಸಮೃದ್ಧಿ!

ನಾಲ್ಕು ಜನ ಸಹೋದರರಿದ್ದರು. ಒಂದು ಚಿಕ್ಕ ಕೋಣೆಯಲ್ಲಿ ಹೇಗೋ ಹಾಸಿಕೊಂಡು ಮಲಗಿದ್ದರು ಹೆಚ್ಚಿನ ಸ್ಥಳವೇ ಇರಲಿಲ್ಲ. ಆದರೆ ಹೊರಗೆ ಜೋರಿನಿಂದ ಮಳೆ ಸುರಿಯತೊಡಗಿತು. ಆಗ ಹೊರಗೆ ಮಲಗಿದವರಿಬ್ಬರು ತಮಗೂ ಒಳಗೆ ಮಲಗಲು ಸ್ಥಳ ಕೊಡಿರೆಂದು ಬೇಡಿಕೊಂಡರು.

ಒಳಗೆ ಮಲಗಿದವರು ಹೇಳಿದರು: "ಸಹೋದರರೇ, ಮಲಗಿಕೊಳ್ಳಲಿಕ್ಕೆ ಇಲ್ಲಿ ಸ್ಥಳವೇ ಸಾಲದು, ಆದರೂ ಅಡ್ಡಿ ಇಲ್ಲ, ಬನ್ನಿರಿ. ಹೇಗೂ ಕಾಲು ಮುರಿದುಕೊಂಡು ಬಿದ್ದಿರೋಣ."

ಸ್ವಲ್ಪ ಹೊತ್ತು ಕಳೆಯುವಷ್ಟರಲ್ಲಿ ಇನ್ನು ಹತ್ತು ಜನ ಬಂದರು, ಮತ್ತು ಒಳಗೆ ಸ್ಥಳ ಕೇಳಿದರು.

ಒಳಗ ಮಲಗಿದವರು ಹೇಳಿದರು. "ಇಲ್ಲಿ ಮಲಗಲಿಕ್ಕಂತೂ ಸ್ಥಳವಿಲ್ಲ. ಆದರೂ ಅಡ್ಡಿ ಇಲ್ಲ, ಬನ್ನಿರಿ. ನಾವೆಲ್ಲರೂ ಕುಳಿತುಕೊಂಡೇ ರಾತ್ರಿ ಕಳೆಯೋಣ!"

ಇನ್ನಿಷ್ಟು ಹೊತ್ತಿನ ತರುವಾಯ ಮತ್ತೆ ಎಂಟು ಜನ ನಡುಗುತ್ತ ಬಂದರು. ಒಳಗೆ ಪ್ರವೇಶ ಕೇಳಿದರು. ಆಗ ಒಳಗಿನವರು ಹೇಳಿದರು. "ಸಹೋದರರೇ, ಒಳಗೆ ಕೊಡ್ರಲಿಕ್ಕೂ ಸ್ಥಳವಿಲ್ಲ. ಆದರೂ ಚಿಂತೆ ಇಲ್ಲ, ಬನ್ನಿರಿ ಎಲ್ಲರೂ ನಿಂತುಕೊಂಡೇ ರಾತ್ರಿ ಕಳೆಯೋಣ!"

ಇದೇ ಸರ್ವೋದಯ ಭಾವನೆ.

(ಭೂದಾನ)

ದಾಸವರೇಣ್ಯ ಪುರಂದರರು

(ಐದನೇ ಪುಟದಿಂದ)

ದೂ ಆಗಿರದೆ ಬಾಯಿ ಹಾಡುಗಾರಿಕೆಯೇ ಆಗಿದೆ. ಪ್ರತಿಯೊಂದಕ್ಕೂ ಒಂದೊಂದು ಕೀರ್ತನೆ ಅಥವಾ ದೇವರ ನಾಮವನ್ನು ರಚಿಸಿ ಅದರ ಮೂಲಕ ತಮ್ಮ ಮನೋಭಿಪ್ರಾಯ, ಭಾವನೆಗಳನ್ನು ಹೊರ ಚೆಲ್ಲಿದ್ದಾರೆ.

ಪುರಂದರ ದಾಸರಿಗೆ ಕಿರಿಯ ವಯಸ್ಸಿನಿಂದಲೇ ಸಂಗೀತ ಸಾಹಿತ್ಯಾದಿ ಲಲಿತ ಕಲೆಗಳಲ್ಲಿ ಅಪರಿಮಿತ ಅಭಿಮಾನ, ವಿಶ್ವಾಸ, ಅನುಭವ ಪಾಂಡಿತ್ಯಗಳು ಇದ್ದವೆಂದು ತೋರುತ್ತವೆ. ಇಲ್ಲವಾದಲ್ಲಿ ಗೀತೆಗಳ ಮೂಲಕ ಜನತೆಯ ಮನಸ್ಸನ್ನು ಪರಿವರ್ತಿಸಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ತಮ್ಮ ಕೀರ್ತನೆಯೊಂದರಲ್ಲಿ ಮೂರು ಲಕ್ಷ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಇದು ಆಶ್ಚರ್ಯಪಡುವ ಸಂಗತಿಯೇನಲ್ಲ.

ದೈವದತ್ತವಾದ ಅನುಭವ ಪಾಂಡಿತ್ಯ, ಜನ್ಮಜನ್ಮಗಳ ಸಂಸ್ಕಾರ, ದೈವಾನುಗ್ರಹ, ರಚನಾಶಕ್ತಿಯನ್ನು ಪಡೆದಿದ್ದ ಪುರಂದರ ದಾಸರು ಅಷ್ಟು ಕೀರ್ತನೆಗಳನ್ನು ರಚಿಸಿರುವುದರಲ್ಲಿ ಅತಿಶಯವೇನಿಲ್ಲ. ಅವರು ಕುಳಿತು ಯೋಚಿಸಿ ರಾಗ, ಪ್ರಾಸ, ತಾಳಗಳನ್ನು ಹೊಂದಿಸಬೇಕಿರಲಿಲ್ಲ. ಅವರ ಬಾಯಿಂದ ಹೊರಟ ಅನುಭವದ ವಾಣಿಯೇ ದೇವರ ನಾಮಗಳಾಗಿ ರೂಪುಗೊಂಡಿರುತ್ತಿದ್ದವು. ದುರಾದೃಷ್ಟದಿಂದ ಪುರಂದರ ದಾಸರ ಕೆಲವಾರು ಸಾವಿರ ಕೃತಿಗಳು ಮಾತ್ರ ಬೆಳಕಿಗೆ ಬಂದಿವೆ. ಈ ಬಗೆಯಲ್ಲಿ ಹೆಚ್ಚಿನ ಸಂಶೋಧನೆ ಅತ್ಯಗತ್ಯ.

ಪುರಂದರ ದಾಸರು ಕೇವಲ ದೇವರ ನಾಮಗಳನ್ನು ಮಾತ್ರ ರಚಿಸಿ ಬೆಳಕಿಗೆ ತರಲಿಲ್ಲ. ಉಗಾಭೋಗ ಮತ್ತು ಸುಳಾದಿಗಳನ್ನು ರಚಿಸಿ ಉಪಕಾರ ಮಾಡಿದ್ದಾರೆ. ಅವರ ಕೃತಿಗಳು 'ಪುರಂದರೋಪನಿಷತ್ತು' ಎನ್ನುವ ಹೆಸರಿನಿಂದ ವ್ಯಾಸತೀರ್ಥರಿಂದಲೇ ಪೂಜಿಸಲ್ಪಡುತ್ತಿದ್ದವು. ದಾಸರು ವರಕವಿಗಳು. ಅವರ ಕೀರ್ತನೆಗಳಲ್ಲಿ ಶಬ್ದ, ಅರ್ಥ, ಸಂಗೀತದ ತ್ರಿವೇಣಿ ಸಂಗಮದಂತೆ ಸಮ್ಮಿಳಿಸಿವೆ. ದಕ್ಷಿಣಾದಿ (ಕರ್ನಾಟಕ) ಸಂಗೀತ ಕ್ಷೇತ್ರಕ್ಕೆ ಪುರಂದರ ದಾಸರ ಸೇವೆ, ಕೊಡುಗೆ ಅಪಾರವಾದುದು. ಸಂಗೀತ ಸಾಮ್ರಾಟ ತ್ಯಾಗರಾಜರಿಗೆ ಸ್ಫೂರ್ತಿಯಿತ್ತುದು ಪುರಂದರರ ರಚನೆಗಳು ಎಂಬುದು ಮನನೀಯ ಸಂಗತಿ.

ಪುರಂದರದಾಸರು ಶ್ರೇಷ್ಠ ಭಕ್ತರು, ಶ್ರೀ ಹರಿಯ ದಾಸರು. ಅಷ್ಟು ಮಾತ್ರವೇ ಅಲ್ಲ ವರಕವಿ, ವೇದಾಂತಿ, ಸಮಾಜ ಸುಧಾರಕ, ಜ್ಞಾನಿ, ಮಾರ್ಗದರ್ಶಕ. ಅವರ ಪ್ರತಿ ಕೀರ್ತನೆಯಲ್ಲಿಯೂ ಅವರ ದೈವಧರ್ಮನಿಷ್ಠೆ, ಮಾರ್ಗದರ್ಶನ, ಅಪಾರ ಅನುಭವ, ಸಲಹೆ ಗೋಚರವಾಗುತ್ತದೆ. ದಾಸರು ದಾಕ್ಷಿಣ್ಯ ಪ್ರಕೃತಿಯವರಲ್ಲ ಮೇಲಾಗಿ ಅವರ ಬಳಿ ಅಹಂಕಾರ, ಡಾಂಭಿಕತನ ಸುಳಿಯವು. ಕಣ್ಣಿಗೆ ಕಂಡ ಕಪಟತನ, ಸ್ವಾರ್ಥತೆ, ಡಾಂಭಿಕತನಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವ ಎದೆಗಾರಿಕೆ ಅವರಲ್ಲಿದೆ. ಇದಕ್ಕೆ ನಮ್ಮವರು-ತಮ್ಮವರು ಎನ್ನುವ ಭೇದವಿಲ್ಲ, ಲೋಕದ ಡಾಂಭಿಕತನ, ಕಪಟತೆಗಳನ್ನು ಕಂಡು ತಾವೇ ನಕ್ಕು ಅದಕ್ಕಾಗಿಯೇ-"ನಗೆಯು ಬರುತಿದೆ" ಎಂದು ಹಾಡಿದ್ದಾರೆ.

ಸಮಕಾಲೀನ ಸಮಾಜದ ಆಗು ಹೋಗುಗಳು, ನಡತೆ—ಸ್ವಭಾವ, ಜನತೆಯ ಅಂಧ ಅಭಿಮಾನ, ಸ್ವಪ್ರತಿಷ್ಠೆ, ಅಹಂಕಾರ, ಡಾಂಭಿಕತನವನ್ನು ಕಂಡು ಮರುಗಿದ ಪುರಂದರದಾಸರು ಸಮಾಜದಲ್ಲಿ, ಜನತೆಯಲ್ಲಿ ಉಲ್ಬಣವಾಗಿ ಬೆಳೆದಿದ್ದ ಈ ರೋಗಗಳನ್ನು ತೊಡೆದು ಹಾಕಲು ಚಿಕಿತ್ಸಕರಾಗಿ ನಿಲ್ಲುತ್ತಾರೆ. ಶಕ್ತಿ ಮೀರಿ ಪ್ರಯತ್ನಿಸಿ ದುಡಿಯುತ್ತಾರೆ. ಅವರ ದುಡಿಮೆಗೆ ಫಲ ದೊರೆಯದೆ ಉಳಿಯಲಿಲ್ಲ.

ಭಗವಂತನನ್ನು ಕಂಡರೆ ಪುರಂದರ ದಾಸರಿಗೆ ಬಹು ಸಲುಗೆ ಅಷ್ಟೇ ಅಲ್ಲ ಬಹು ಆತ್ಮೀಯತೆಯೂ ಇದೆ. ಅವರ ಪಾಲಿನ ಸೃಷ್ಟಿಯ ಸಮಸ್ತ ಚೇತನವೂ ದೈವಾಂಶ. ಭಗವಂತನನ್ನು ಭಕ್ತನಂತೆ ಪೂಜಿಸಿದ್ದಾರೆ, ಗೆಳೆಯನಂತೆ ಆತ್ಮೀಯತೆಯಿಂದ ನೋಡಿಕೊಂಡಿದ್ದಾರೆ. ತಾಯಿಯಂತೆ ಅಕ್ಕರೆಯಿಂದ ಆರೈಕೆ ಮಾಡಿದ್ದಾರೆ, ಹೆಂಡತಿಯಂತೆ ಸೇವೆ ಮಾಡಿದ್ದಾರೆ, ಮಗನಂತೆ ಗೌರವದಿಂದ ವರ್ತಿಸಿದ್ದಾರೆ, ದಾಸನಂತೆ ನಿಷ್ಠೆಯಿಂದ ದುಡಿದಿದ್ದಾರೆ. ಅವರ ನಿಷ್ಠೆ ವೈಷ್ಣವ ಧರ್ಮದ ಕಡೆಗೆ ಇದೆ ಎಂದು ಹೇಳುವುದುಂಟು. ಆದರೆ ಅವರು ಅನ್ಯ ಧರ್ಮ ವಿರೋಧಿಯಲ್ಲ.

ಭಕ್ತರ ಮನೋಭಿಲಾಷೆಯಂತೆ ಭಗವಂತ ಹತ್ತು ರೂಪಗಳಲ್ಲಿ ಪ್ರಕಟವಾಗುತ್ತಾನೆ. ಪುರಂದರ ದಾಸರ ದೃಷ್ಟಿಯಲ್ಲಿ 'ಪುರಂದರ ವಿಠಲ'ನೇ ಅವರ ಆರಾಧನಾ ದೈವ. ಪರಮ ಪಾವನ ಮೂರ್ತಿ. ಶ್ರೀ ಕೃಷ್ಣನೂ ಅವನೇ, ನಾರಾಯಣನೂ ಅವನೇ. ನರಸಿಂಹ, ಶ್ರೀರಾಮ, ಶಂಕರನೂ ಅವನೇ ಆಗಿದ್ದಾನೆ. ಪುರಂದರ ದಾಸರ ದೇವರ ನಾಮ, ಉಗಾಭೋಗ ಸುಳಾದಿಗಳ ಅಂತ್ಯದಲ್ಲಿ 'ಪುರಂದರ ವಿಠಲ' ಎಂಬ ಅಂಕಿತವಿರುತ್ತದೆ. ಅಂದರೆ ಪುರಂದರ ದಾಸರಿಗೆ ಪ್ರೇರಣೆ ಮಾಡಿ ಅವರ ಮೂಲಕ ಕೆಲಸ ಮಾಡಿಸಿದವರು ಪುರಂದರ ವಿಠಲ. ಆದರಿಂದಲೇ ಪುರಂದರರ ಸಮಸ್ತವೂ ಅವರ ಆರಾಧ್ಯ ಮೂರ್ತಿಗೇ ಅರ್ಪಿತವಾಗಿದೆ.

ಜನರಲ್ಲಿ ದೈವ ಭಕ್ತಿ, ಸತ್ಯ ಧರ್ಮ, ನೈಜ ನೀತಿಯುತ ಜೀವನ ನಿಷ್ಠೆ ಅನುಷ್ಠಾನಕ್ಕೆ ಬರಬೇಕೆಂಬುದೇ ಪುರಂದರ ದಾಸರ ಉಪದೇಶದ ತಿರುಳು. ಜನತೆಯ ಮನಸ್ಸಿನ ಪರಿಣಾಮ ಬೀರಲೋಸಗ ಶಕ್ತಿ ಮೀರಿ ದುಡಿಯುತ್ತಾರೆ. ಅವರಿಗೆ ತಮ್ಮ ಸುಖ, ಶಾಂತಿ, ಸ್ವರ್ಗ ಪ್ರಾಪ್ತಿಯೇ ಮುಖ್ಯವಲ್ಲ ಜನತೆಯ ಉದ್ಧಾರ, ಅವರ ಕ್ಷೇಮ ಅತಿ ಮುಖ್ಯ. ಅವರ ಬೋಧನೆಯಲ್ಲಿ ನೈಜ ಸತ್ಯ ಅಡಗಿದೆ. [illegible]ಡಿಯನ್ನು ಅವರು ಬಡಿದೆಬ್ಬಿಸಲು ದುಡಿಮೆಯ ಮಾರ್ಗ ತೋರಿಸಿ 'ಈಸಬೇಕು ಇದ್ದು ಜೈಸಬೇಕು' ಎಂದು ಹಾಡಿದರು. ಪುರಂದರ ದಾಸರ ನರನಾಡಿಗಳಲ್ಲಿ ಮಾನವೀಯತೆಯ ಗುಣ ಹರಿದಾಡುತ್ತದೆ. ಅದಕ್ಕಾಗಿಯೇ 'ಮಾನವ ಜನ್ಮ ದೊಡ್ಡದು' ಎಂದು ಉಪದೇಶ ಮಾಡಿದರು. ಹುಟ್ಟಿದ ಮನುಷ್ಯನಿಗೆ ಸಾಯುವ ವರೆವಿಗೂ ಚಿಂತೆ ಬಿಟ್ಟುದೇ ಅಲ್ಲ. ಚಿಂತೆಯಿಂದ ದೂರವಾಗಲು— "ಪುರಂದರ ವಿಠಲನ ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ" ಎಂದು ಸುಲಭವಾದ ಮಾರ್ಗವನ್ನು ತೋರಿಸಿ ಕೊಟ್ಟರು.

ವ್ಯಾಸ ತೀರ್ಥರ ದಕ್ಷ ನೇತೃತ್ವದಲ್ಲಿ ಪುರಂದರದಾಸರು ನರಹರಿತೀರ್ಥ, ಶ್ರೀಪಾದರಾಯರಿಂದ ಬೆಳೆದು ಬಂದಿದ್ದ ದಾಸ ವಾಙ್ಮಯಕ್ಕೆ ಒಂದು ಸ್ಪಷ್ಟ ಸ್ವರೂಪವನ್ನು ಕೊಟ್ಟು ದಾಸ ವಾಙ್ಮಯದ, ಕನ್ನಡದ ಏಳಿಗೆಗೆ ಕಾರಣರಾದರು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶಿವಶರಣಶ್ರೇಷ್ಠರಿಂದ ನಡೆದ ಧಾರ್ಮಿಕ; ಮತೀಯ, ವಾಙ್ಮಯ ಸೇವೆಯ ಹಾದಿಯಲ್ಲಿಯೇ ಪುರಂದರದಾಸರು ಅವರ ಅನುಯಾಯಿಗಳು ಮತ್ತು ಸಮಕಾಲೀನರಿಂದ ವಿಶೇಷ ಬಗೆಯ ಅಸಾಮಾನ್ಯ ಸೇವೆ ಕನ್ನಡ-ನಾಡು ನುಡಿಗಳಿಗೆ ದೊರೆಯುತ್ತದೆ. ದಾಸ ವಾಙ್ಮಯದ ದೆಸೆಯಿಂದ ಕನ್ನಡ ಸಾಹಿತ್ಯ ಸಂಸ್ಕೃತಿಯ ಕಂಠಾಭರಣ ಒಂದು ಬೆಳಗುತ್ತದೆ.

ಪುರಂದರದಾಸರು ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ ೨೧ನೇ ಶನಿವಾರ ಡಿಸೆಂಬರ್ ೧೫೬೪ರಂದು ವನಪರ್ತಿಯಲ್ಲಿ ಜೀವನ್ಮುಕ್ತರಾದರು. ಅವರು ಗೀತೆ ರಚಿಸಿ, ಹಾಡಿ ನಲಿದಾಡಿದ ಮಂಟಪ 'ಪುರಂದರ ಮಂಟಪ' ಇಂದಿಗೂ ಹಂಪೆಯ ತುಂಗಭದ್ರಾ ತೀರದಲ್ಲಿದೆ. ದಾಸ ಶ್ರೇಷ್ಠ ಪುರಂದರರ ಅಸಾಮಾನ್ಯ ಸೇವೆಯಿಂದ ಕನ್ನಡನಾಡು-ನುಡಿ ಪುನೀತವಾಗಿದೆ. ಅವರ ಜೀವನ, ದರ್ಶನ, ಸೇವೆ ಮಾನವನ ಮನೋಬಿಕ್ಕ್ನಗಳಿಗೆ ದಾರಿದೀಪಗಳು.

ಲೈಫ್ ಇನ್ಶೂರೆನ್ಸ್ ಕೋರ್ಪರೇಷನ್ ಆಫ್ ಇಂಡಿಯಾ

(ಲೈಫ್ ಇನ್ಶೂರೆನ್ಸ್ ಕೋರ್ಪರೇಶನ್ ಆಕ್ಟ್, 1956ರ ಮೇರೆಗೆ ಸ್ಥಾಪಿತ)

ಎ. ಎಚ್. ಓ. ಯೂನಿಟ್: ಬೋಂಬೇ ಮ್ಯೂಚುವಲ್, ಯುನೈಟೆಡ್ ಇಂಡಿಯಾ ಬಿಲ್ಡಿಂಗ್, ಪಿ. ಬಿ. ನಂಬ್ರ 281, ಮದ್ರಾಸ್-1

ಡಬ್ಲ್ಯು. ಪಿ. ಪಿರೇರಾ, ಲ್ಯಾಂಡ್ ಹೋಲ್ಡರ್, ಅವರಾಲ್ ಕೊಪ್ಪಲ, ಅವರಾಲ್ ಪೋಸ್ಟ್, ವಯಾ ಪಜವೂಡಿ, ದ. ಕ. ಜಿಲ್ಲೆ ಇವರ ಜೀವದ ಮೇಲೆ ದಿ ಬೋಂಬೇ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿಯಿಂದ ನೀಡಲಾದ ನಂಬ್ರ 1,97,876ರ ಪಾಲಿಸಿಯು ಕಳೆದು ಹೋದ ಬಗ್ಗೆ ನೋಟೀಸು ಕೊಡಲಾಗಿದೆ. ಈ ತಾರೀಕಿನಿಂದ ಒಂದು ತಿಂಗಳೊಳಗಾಗಿ ಆಕ್ಷೇಪ ನಮಗೆ ಬಾರದೆ ಹೋದ ಪಕ್ಷದಲ್ಲಿ ಡುಪ್ಲಿಕೇಟ್ ಪಾಲಿಸಿಯನ್ನು ಕೊಡಲಾಗುವುದು.

ಕೆ. ಎಸ್. ರಾಮಮೂರ್ತಿ,
ಸೀನಿಯರ್ ಡಿವಿಜನಲ್ ಮೆನೇಜರ್

ಸ್ಥಾನ: ಮದ್ರಾಸ್,
ತಾರೀಕು 31-8-1966.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ. ಬಿ. ಬಿ. ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ರಾಜಿನಾಮೆ ಕೊಡಲಾರರು..

(ನಾಲ್ಕನೇ ಪುಟದಿಂದ)

'ಏನಂತೆ ಭಾವನಿಗೆ....ದೋಸೆ ಹೊಯ್ಯಲು ಬರದ ಮನೆಯೊಡತಿ ಕಾವಲಿಯು ಬೈದು...ಹಿಟ್ಟನ್ನು ಬೈದು...ಬಾವಿನೀರನ್ನೆ ಬೈದು. ಗಂಡನಾಗಲೂ ಸುಮ್ಮನಿರದಿರಲು ನಿಮ್ಮ ನಾಲಿಗೆ ಸೊಟ್ಟ, ನಿಮ್ಮ ಬಾಯು ರುಚಿ ಕೆಟ್ಟದೆ, ಬಟ್ಟೆಯು ದೋಸೆ ಹೀಗೆ ರುಚಿಯಾಗುವುದು ಎಂದು ಬೈದಳು...ದೋಸೆಗಳ ಕರಗಿಸಿ, ಕೊಳ್ಳಿಗಳ ಕೆದರಿ ಕಿಡಿ ಹಾರಿಸಿದಳು. ಆದರೂ ತನಗೆ ದೋಸೆ ಹೊಯ್ಯಲು ಬಾರದೆಂದು ತಪ್ಪೊಪ್ಪಿಕೊಳ್ಳಳು; ರಾಜಿನಾಮೆಯನೆಂದೂ ಕೊಡಳು... ಪಂಪ್ಪಾಗಿಲ್ವೆ, ತನ್ನ ಕಪಿತ್ವವನ್ನು ತೋರಿಸಿದ್ದಾನೆ ಸರಿಯಾಗೇ..."

"ಭಾವ—ಭಾವ ಒಂದೇ... ಎಷ್ಟಾಪ್ರು ಇಬ್ಬರೂ ಮಿಸೆ ಹೊತ್ತವ್ರು.... ಹಂಡಂದಿರನ್ನು ಕಾಲುಕಸಕ್ಕೆ ಸಮವೆಂದು ಕಾಣೋರು...."

"ನೋಡಮ್ಮ ಗಂಡ-ಹೆಂಡಿರ ಜಗಳವೆಲ್ಲಿ? ಹೀಗೇ ವಿನೋದಕ್ಕೇಂತ ಬರೆದರೆ...'

'ಅದೇ ಅಂದೆನಲ್ಲಾ..."

'ಈ ನಿಮ್ಮ ಅನುಭವ ವಾಲ್ಮೀಕಿಯಿಂದಾಗಿ ನಾವೆಲ್ಲ ಸೋತೆವು...."

ಇಲ್ಲವಮ್ಮ, ಸೋಲು ಎಂಬುದು ಸತ್ತು ಹೋಗಿದೆ. ಸತ್ತು ಹೋದ ವಿಚಾರಕ್ಕಿಂತ ಹೆಚ್ಚು ತಂಗಳು ಹುಚ್ಚು ಅರುಚಿಕರ ಆದದ್ದು ಮತ್ತೊಂದಿಲ್ಲ...."

'ಅದು ಸರೀನ್ನಿ...."

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 194/1965.

ದೂಮಪ್ಪ ಸೋಮಪ್ಪ —ವಾದಿ.

ಮತ್ತು

ದಿರ್ಮಣ ಪೂಜಾರಿ ಕೂಡಾ—ಪ್ರತಿವಾದಿರು.

ಸದ್ರಿ ವ್ಯಾಜ್ಯದ 4, 5, 7, 10 ಮತ್ತು 11ನೇ ಪ್ರತಿವಾದಿಂಗೆ ಈ ಮೂಲಕ ತಿಳಿಸುವುದೇನೆಂದರೆ

4. ಸುಂದರ ಪೂಜಾರಿ,

5. ಗೋಪಾಲ ಪೂಜಾರಿ,

7. ರತ್ನಮ್ಮ—

ಅಚ್ಚಪ್ಪ ಪೂಜಾರಿಯ ಮಕ್ಕಳು—

10. ಶಿವದೇವಿ ಅಮ್ಮ, ಧರ್ಮಪಾಲ ಶೆಟ್ರ ಹೆಂಡ್ತಿ

11. ರತ್ನಮ್ಮ ಶೃಂಗೇರಿ ನಾಗರಾಜಯ್ಯನ ಹೆಂಡ್ತಿ

4,5ನೇ ಪ್ರತಿವಾದಿರು—ಬೆಳ್ತಂಗಡಿ ತಾಲ್ಲೂಕು ಕೊಕಂಗಡಿ ಗ್ರಾಮದ ಪುಚ್ಚೆಲ್ಲೇಕ್ಕ. 7ನೇಯವಳು ಕೃಷ್ಣಪ್ಪ ಪೂಜಾರಿ ಹೆಂಡ್ತಿ, ಬೆಳ್ತಂಗಡಿ ತಾಲ್ಲೂಕು ಕಾಶಿಪಟ್ಣ ಗ್ರಾಮದ ಕೇಳ— 10,11ನೇಯವರು ಕಾರ್ಕಳ ತಾಲ್ಲೂಕು ಪ್ರಾಂತ್ಯ ಗ್ರಾಮದ ಮೂಡುಬಿದ್ರಿ ಎಂಬಲ್ಲಿ ಇರುವವರು.

ವಾದಿಯು ನೀವು ವಗೈರೆರ ಮೇಲೆ ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಖು 11–4–1966ಕ್ಕೆ ಇಟ್ಟಿರುವುದರಿಂದ ಅದ್ಕೆ ಸಂಬಂಧಿಸಿದೇನಾದರೂ ಆಕ್ಷೇಪಣೆಗಳಿದ್ದರೆ, ಸದ್ರಿ ದಿವಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಃ ಅ ವಕೀಲರ ದ್ವಾರಾ ಹಾಜರಾಗಿ ಇದಿರಿಸಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಾಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

By order of the Court.

(Sd.) B. Ishwara Bhat,
Advocate for Plaintiff.

ಬೆಳ್ತಂಗಡಿ, ತಾ. 24–3–66.

ಎಲ್ಲೆಲ್ಲಿ ಏನೇನು?

ವಾರ್ಷಿಕ ಮಹಾಸಭೆ

ದೇವಾಡಿಗರ ಸೇವಾ ಸಂಘ (ರಿ) ಉಡುಪಿ ಇದರ ವಾರ್ಷಿಕ ಮಹಾ ಸಭೆಯು ತಾ. 20–3–66ರಂದು ಶ್ರೀ ಕೆ. ಸಂಜೀವ ದೇವಾಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಕೇಶವ ದೇವಾಡಿಗರು ಸಭೆಗೆ ಮಂಗಳೂರು ಮತ್ತು ಕಾರ್ಕಳ ಸಂಘದ ವತಿಯಿಂದ ಆಗಮಿಸಿದ ಕಾರ್ಯಕರ್ತರುಗಳನ್ನು ಸಮಾಜ ಬಾಂಧವರನ್ನೂ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಯು. ಸುಂದರ ದೇವಾಡಿಗರು ಸಂದೇಶಗಳನ್ನು ಹಾಗೂ ಸಂಘದ ಏಳನೇ ವಾರ್ಷಿಕ ವರದಿಯನ್ನು ಓದಿ ಹೇಳಿದರು. 1966ನೇ ಇಸವಿಗೆ ಅಂತ್ಯವಾಗುವ ಒಂದು ವರ್ಷದ ಆಯವ್ಯಯ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿ ಅದು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು.

1966ನೇ ಇಸವಿಗೆ ಸಂಘದ ಆಡಳಿತೆಯನ್ನು ನೋಡುವಡೆ 18 ಜನರನ್ನೊಳಗೊಂಡ ಕಮಿಟಿಯನ್ನು ರಚಿಸಲಾಯಿತಲ್ಲದೆ ಅದೇ ಸಭೆಯಲ್ಲಿ ಅಧಿಕಾರ ವರ್ಗದ ಚುನಾವಣೆ ಕೂಡಾ ನಡೆದು, ಶ್ರೀಯುತರುಗಳಾದ ಕೆ. ಸಂಜೀವ ದೇವಾಡಿಗರು ಅಧ್ಯಕ್ಷರಾಗಿಯೂ, ಯು. ಸೋಮಯ್ಯ ದೇವಾಡಿಗರು ಉಪಾಧ್ಯಕ್ಷರಾಗಿಯೂ, ಯು. ಕೇಶವ ದೇವಾಡಿಗರು ಪ್ರಧಾನ ಕಾರ್ಯದರ್ಶಿಯಾಗಿಯೂ, ಕೆ. ಮಾಧವ ದೇವಾಡಿಗರು ಜತೆಕಾರ್ಯದರ್ಶಿಯಾಗಿಯೂ, ಮತ್ತು ಯು. ಸುಂದರ ದೇವಾಡಿಗರು ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟರು. ಮುಂದಿನ ವರ್ಷಕ್ಕೆ ಶ್ರೀ ಯು. ಕೆ. ಮಯ್ಯ, ಚಾರ್ಟರ್ಡ್ ಎಕೌಂಟೆಂಟ್, ಇವರನ್ನು ಲೆಖ್ಖಪರಿಶೋಧಕರನ್ನಾಗಿ ನೇಮಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಶ್ರೀ ಯು. ಜಯಾನಂದ ದೇವಾಡಿಗರು ಸಂಘದ ಪ್ರಗತಿಯನ್ನು ಪ್ರಶಂಸಿಸಿದರು. ಶ್ರೀಗಳಾದ ಕೆ. ಮಾಧವ ದೇವಾಡಿಗ, ಬಿ. ನಾರಾಯಣ ದೇವಾಡಿಗ ಮತ್ತು ಯು. ಸಂಜೀವ ದೇವಾಡಿಗರು ಸಂಘದ ಪ್ರಗತಿಗೆ ಸಮಾಜ ಬಾಂಧವರೆಲ್ಲರೂ ತಮ್ಮ ಸಂಪೂರ್ಣ ಸಹಕಾರವನ್ನು ಕೊಡುವಂತೆ ಕೇಳಿಕೊಂಡರು. ಅಧ್ಯಕ್ಷರ ಭಾಷಣದ ಬಳಿಕ ಲಘುಪಹಾರವಾಗಿ ಶ್ರೀ ಓಬು ದೇವಾಡಿಗ ಮತ್ತು ಕೆ. ರಾಮಸ್ವಾಮಿ ಪಾರ್ಟಿಯವರಿಂದ ಸೆಕ್ಸಫೋನ್ ವಾದನ ಕಛೇರಿ ಜರಗಿತು.

'ಮತ್ತೆ..."

'ಅಲ್ಲಾ, ನಾನು ಕೇಳ್ಸಿದ್ದನ್ನ ನೀವು ನೋಡ್ಲೇ ಇಲ್ಲಾಂದ್ರೆ....'

ಹ್ಞೂಂ.... ಅದೊಂದು ಹೀಗಿದ್ದೇ ಇರಬಹುದೂನ್ನ...'

'ಇಲ್ಲ, ಭಾರೀ ಚಂದ ಇದೆ....'

'ಅಯ್ಯಪ್ಪ... ಯ ಜ ಮಾ ನಿ ಕೆ ಯ ಮಾಡಲಾರದಾಫೀಸರನು ನೌಕರರ ಹೀಗಳೆದು ಮೇಲಿನವರನು ಹಿಂದೆ ಹಳಿದು, ಜನರನು ಜರೆದು ವರ್ಗ ಮಾಡಿಸಿಕೊಂಬ; ಕೆಲಸವನು ಬಿಡಲೊಪ್ಪನಾವನೇನೆಂದರೂ....'

'ಇಲ್ಲಿ ನೋಡಿ ಅಭಿನವ ವಾಲ್ಮೀಕಿ ಬಾವಾಜಿ ರಾಯರ ಕೃತಿ....'

"ಯಜಮಾನಿಕೆಯ ಮಾಡಲಾರದಾಯಜಮಾನ ಮಡದಿಯನು ಹೀಗಳೆದು ಅವಳಪ್ಪನನು ಹಳಿದು ಹಿಂದೆ ನೌಕರರಂಜರೆದು ಮನೆಬಿಟ್ಟು ಹೊರ ಹೋಪ; ಯಜಮಾನಿಕೆಯ ಪದವ ಬಿಡಲೊಪ್ಪ...'

'ಹೇಗಿದೆ? ಚೆನ್ನಾಗಿಲ್ಲವೆ?'

'ಇದೆಯೆನ್ನು. ಈಗಲಾದ್ರೂ ಸರಿಯಾಯ್ತಲ್ಲ?'

'ಸರಿಯೋ ತಪ್ಪೋ...ಅಂತೂ...'

'ನಿನ್ನ (ಅಣ್ಣಿರಾಯನಿಗೆ ತೃಪ್ತಿಯಾಯ್ತು....'

'ಆಗಲಿ. ಏನಾಯ್ತು?'

'ಈಗ ಆಗೋದೇನು? ಹೊಟ್ಟೆ ಮಾತ್ರ ಭಾರಿ ಹಸಿಯುತ್ತೆ...."

'ಅಡುಗೆ ಆಗ್ಲೇ ಆಗಿದೆ...."

'ಸರಿ...ತಂಬಿಗೆ ನೀರು...'

'ಅಲ್ಲೇ ಇದೆಯಲ್ಲಾ ಬಾಗಿಲ ಬಳಿ...'

'ಸರಿ......"

'ನಿಲ್ಲಿಲ್ಲೀಂದ್ರೆ....ಈವತ್ತು ನಾನೇ....'

'ಓಹೋ....ಭಾರೀ ಸಂತೋಷ....'

'ಶ್ಶೂ...'

—ಗೋರಾ.

ಉಡುಪಿ ತಾಲೂಕು ಸಹಕಾರಿ ಸಮ್ಮೇಳನ

ಉಡುಪಿ ತಾಲೂಕಿನ ಸಹಕಾರಿ ಸಮ್ಮೇಳನದ ಉದ್ಘಾಟನಾ ಸಮಾರಂಭವು ತಾ. 20ರಂದು ಶ್ರೀ ಎಸ್. ಧರ್ಮಸಾಮ್ರಾಜ್ಯ, ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ, ಶ್ರೀ ಟಿ. ಎ. ಪೈಯವರಿಂದ ನೆರವೇರಿತು.

ಶ್ರೀ ಎ. ಜೆ. ಆಲ್ಸೆಯವರು ಆರಂಭದಲ್ಲಿ ಸ್ವಾಗತಿಸುತ್ತಾ ಸಮ್ಮೇಳನದ ಉದ್ದೇಶವನ್ನು ವಿವರಿಸಿದರು. ಅನಂತರ ಶ್ರೀಯುತ ಪ್ರಭಾಕರ ರಾಯರು ಸಹಕಾರೀ ಚಳುವಳಿಯ ಸಂಸ್ಥಾಪಕರಾದ ಶ್ರೀ ಮೊಳಹಳ್ಳಿ ಶಿವರಾಯರ ಭಾವಚಿತ್ರವನ್ನು ಅನಾವರಣ ಮಾಡಿದರು. ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ. ನಾರಾಯಣ ನಾಯಕರು ಮಾತನಾಡುತ್ತಾ ರೈತರಿಗೆ ಸಹಕಾರೀ ಬ್ಯಾಂಕಿನ ಮೂಲಕ ನೀಡಲಾಗುತ್ತಿರುವ ಆರ್ಥಿಕ ನೆರವನ್ನು ವಿವರಿಸಿದರು.

ಶ್ರೀ ಟಿ. ಎ. ಪೈಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಅಧಿಕಾರಿಗಳು ಮತ್ತು ಸಹಳಾರಿಗಳು ಪರಸ್ಪರ ಸಹಕರಿಸಿ ಕಾರ್ಯವೆಸಗಿದರೆ ಮಾತ್ರ ಸಹಕಾರದಿಂದ ಜನರಿಗೆ ಪ್ರಯೋಜನಕರವಾದ ಸಾರ್ಥಕ ಕಾರ್ಯ ಮಾಡಬಲ್ಲೆವು ಎಂದು ಹೇಳಿದರು. ಅವರು ಮುಂದುವರಿಯುತ್ತಾ ಇಂಥ ಸಮ್ಮೇಳನಗಳ ವಿಚಾರಗೋಷ್ಠಿಗಳ ಮೂಲಕ ಬರುವ ನಿರ್ಧಾರವನ್ನು ನಾವು ಕಾರ್ಯರೂಪದಲ್ಲಿ ತರಬೇಕು. ಆದರೆ ಇಂದು ಈ ಸಮ್ಮೇಳನ, ವಿಚಾರಗೋಷ್ಠಿಗಳಲ್ಲೇ ಸಮಯವು ವ್ಯರ್ಥವಾದಂತೆ ಭಾಸವಾಗುತ್ತದೆ ಎಂದರು. ಅವರು ಕೃಷಿಕ್ಷೇತ್ರದ ವಿಷಯವಾಗಿ ಪ್ರಸ್ತಾಪಿಸಿ ಉತ್ತಮ ರೀತಿಯಲ್ಲಿ ಕೃಷಿಕಾರ್ಯ ಮಾಡಕಲ್ಕ ರೈತರಿಗೆ ಅವಶ್ಯ ಸಾಲವನ್ನು ಸಹಕಾರಿ ಸಂಸ್ಥೆಗಳ ಮೂಲಕ ದೊರಕಿಸಿಕೊಡಬೇಕೆಂದರು. ಅಲ್ಲದೆ ರೈತರ ಎಸೋಸಿಯೇಶನು ಮತ್ತು ರೈತರ ಸಹಕಾರಿ ಸಂಸ್ಥೆಗಳ ರಚನೆಯ ಅವಶ್ಯಕತೆಯನ್ನು ಒತ್ತಿಹೇಳಿ, ಕೊನೆಯ ಪಕ್ಷ ನಮ್ಮ ಜಿಲ್ಲೆಯಲ್ಲಾದರೂ ಸಹಕಾರ ಕ್ಷೇತ್ರದಲ್ಲಿ ನವೀನ ಹೆಜ್ಜೆಯ ಆದರ್ಶ ಸ್ಥಾಪಿಸಿ ಉತ್ತಮವಾದುದನ್ನೇ ಸ್ಥಾಪಿಸೋಣ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷರಾದ ಶ್ರೀ ಎಸ್. ಧರ್ಮಸಾಮ್ರಾಜ್ಯ, ಎಂ. ಎಲ್. ಎ. ಯವರು ಮಾತನಾಡುತ್ತಾ ಇಂದು ಈ ಸಂಸ್ಥೆಗೆ ಸೇರಿದವರ ಸಹಕಾರದಲ್ಲಿ ಅಸಹಕಾರ ಹೆಚ್ಚಿದುದರಿಂದಲೇ ಇಂಥ ಸಮ್ಮೇಳನಗಳು ಅವಶ್ಯಬೇಕು ತ್ತವೆಯೆಂದು ಹೇಳಿದರು. ಸುಧಾರಣೆಯಾಗಬೇಕಾದರೆ ನಿಷ್ಠೆ, ಪ್ರಾಮಾಣಿಕತನದಿಂದ ಸಹಕಾರೀ ತತ್ವವನ್ನು ಅಳವಡಿಸಿಕೊಳ್ಳುವುದು ಅವಶ್ಯವೆಂದು ನುಡಿದರು. ಅಲ್ಲದೆ ಅವರು ಗ್ರಾಮ ಸೇವಕರ ಕರ್ತವ್ಯವನ್ನು ವಿವರಿಸಿ ಸಹಕಾರೀ ಸಂಸ್ಥೆಗಳು ನೀಡುವ ಸಾಲ, ಸೌಲಭ್ಯಗಳು ಕೃಷಿಕನಿಗೆ ನೇರವಾಗಿ ದೊರೆಯಬೇಕು, ಸ್ವಾರ್ಥತ್ಯಾಗ ಮತ್ತು ಅಂತಃಕರಣ ಪೂರ್ವಕವಾದ ಕಾರ್ಯಾಚರಣೆ ಮಾತ್ರದಿಂದಲೇ ನಮ್ಮ ಜಿಲ್ಲೆಯನ್ನು ಉಳಿತಾಯದ ಜಿಲ್ಲೆಯನ್ನಾಗಿ ಮಾಡಲು ಸಾಧ್ಯವೆಂದರು. ಕೊನೆಯಲ್ಲಿ ಶ್ರೀ ಎ. ಜೆ. ಆಲ್ಸೆಯವರಿಂದ ಧನ್ಯವಾದ ಸಮರ್ಪಣೆಯಾಯಿತು.

ಅಂಚೆ-ತಂತಿ, ಟೆಲಿಫೋನ್ ನೌಕರರ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವ

ಉಡುಪಿಯ ಅಂಚೆ–ತಂತಿ ಮತ್ತು ಟೆಲಿಫೋನ್ ಇಲಾಖಾ ನೌಕರರ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವವು ತಾ. 20ರಂದು ಉಡುಪಿ ಸಬ್ ಕೋರ್ಟಿನ ಜಡ್ಜರಾದ ಜನಾಬ್ ಎಂ. ಎ. ಜಾಫರ್ ಅಲಿಖಾನ್‌ರವರ ಅಧ್ಯಕ್ಷತೆಯಲ್ಲಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಜರಗಿತು.

ಆರಂಭದಲ್ಲಿ ಉಡುಪಿ ಹೆಡ್ ಪೋಸ್ಟಾಫೀಸಿನ ಪೋಸ್ಟ್‌ಮಾಸ್ತರ್ ಶ್ರೀ ಜೆ. ಎಲ್. ಎಫ್. ಕ್ವೊಲೋರವರು ಸ್ವಾಗತಿಸಿದರು. ಟೆಲಿಫೋನ್ ಖಾತೆಯ ಇನ್ಸ್‌ಪೆಕ್ಟರರೂ, ರಿಕ್ರಿಯೇಶನ್ ಕ್ಲಬ್ಬಿನ ಕಾರ್ಯದರ್ಶಿಗಳೂ ಆದ ಶ್ರೀ ಕೃಷ್ಣಮೂರ್ತಿಯವರು ಕ್ಲಬ್ಬಿನ ಪ್ರಗತಿಪರ ವರದಿಯೊಪ್ಪಿಸಿದರು. ಶ್ರೀ ಎ. ಬಾಳಿಗಾರು, ಸೀನಿಯರ್ ಸುಪರಿಂಟೆಂಡೆಂಟ್ ಆಫ್ ಪೋಸ್ಟಾಫೀಸ್—ಇವರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು.

ಮುಖ್ಯ ಅತಿಥಿಗಳಾದ ಶ್ರೀಯುತ ಟಿ. ಎ. ಪೈಗಳವರು ತಮ್ಮ ಭಾಷಣದಲ್ಲಿ ಅಂಚೆ ಇಲಾಖೆಯವರ ಶ್ರದ್ಧಾನ್ವಿತ ಸೇವೆಯು ಜನತೆಯ ಕೃತಜ್ಞತೆಗೆ ಪಾತ್ರವಾಗಿದೆಯೆಂದರು. ಅಧ್ಯಕ್ಷರೂ ತಮ್ಮ ಭಾಷಣದಲ್ಲಿ ಅಂಚೆ–ತಂತಿ ಇಲಾಖೆಯವರು ತಮ್ಮ ಪ್ರಾಮಾಣಿಕವಾದ ಸೇವೆಯಿಂದ ಜನತೆಯ ಸದ್ಭಾವನೆ ಹಾಗೂ ಸ್ನೇಹಕ್ಕೆ ಪಾತ್ರರಾಗಿರುವರೆಂದು ಹೇಳಿದರು. ಶ್ರೀ ವ್ಹಿ. ಬಾಳಿಗಾರು ಅವರು ಮಾನ್ಯ ಅತಿಥಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾ ಜನತೆಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸಲು ತಮ್ಮಲ್ಲಿ ಸ್ಫೂರ್ತಿಯುಂಟಾಗಿದೆಯೆಂದರು. ಕೊನೆಯಲ್ಲಿ ಮನರಂಜನಾ ಕಾರ್ಯಕ್ರಮಗಳಾಗಿ, ಶ್ರೀ ಕೃಷ್ಣಮೂರ್ತಿಯವರ ವಂದನಾರ್ಪಣೆಗಳೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಕರ್ನಾಟಕ ಯಕ್ಷಗಾನ ನಾಟಕ ಸಭಾ
ಮಂಗಳೂರು

ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿರುವ ಕರ್ನಾಟಕ ಥಿಯೇಟರಿನಲ್ಲಿ

27–3–66ನೇ ಆದಿತ್ಯವಾರದಿಂದ ಪ್ರತೀ ರಾತ್ರಿ 9-30ಕ್ಕೆ

ವಿಟ್ಲ ಬಾಬು ರಾಯರ ವರ್ಣರಂಜಿತ ನವ್ಯ ಹಾಗೂ ಭವ್ಯ ಸೀನು ಸಿನೇರಿಗಳಿಂದೊಡಗೂಡಿದ

ತಮ್ಮ ಪುರಾಣ ಪ್ರಸಿದ್ಧ ಯಕ್ಷಗಾನ ನಾಟಕ

ಶಿವ ಪಂಚಾಕ್ಷರಿ ಮಹಿಮೆ

ಎಂಬ ಕಥಾಭಾಗವನ್ನು ಅಭಿನಯಿಸುವರು.

ನೀವೆಂದೂ ನೋಡದ ಕಣ್ಮನಾನಂದಕರ ಪ್ರದರ್ಶನ.

ಶ್ರೀ 'ರಾಷ್ಟ್ರಕವಿ' ಎಂ. ಗೋವಿಂದ ಪೈ ಜಯಂತಿ ಮತ್ತು ಪ್ರಾಚೀನ ವಸ್ತು ಸಂಗ್ರಹದ ಉದ್ಘಾಟನೆ

ಸುರತ್ಕಲ್ಲಿನ ವಿಜಯ ಸಾಹಿತ್ಯ ಮಾಲೆಯ ವತಿಯಿಂದ ತಾ. 23ರಲ್ಲು ಹೊಸಬೆಟ್ಟು ಗ್ರಾಮ ಸಂಘದಲ್ಲಿ ಇವೆರಡು ಸತ್ಕಾರ್ಯಗಳು ನಡೆದುವು. ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ (ಸಭಾಧ್ಯಕ್ಷರು), ಶ್ರೀ ಎಂ. ವಾಸುದೇವ ರಾವ್ (ಉದ್ಘಾಟಕರು), ಶ್ರೀ ಮುನಿಪಾಲ ರಾಜು ಮತ್ತು ಶ್ರೀ ಎಚ್. ಮನಮೋಹನ ಕಾಮತರು (ಭಾಷಣಕಾರರು) ಶ್ರೀ ಪೈಯವರ ಜೀವನ-ಕಾವ್ಯಗಳ ರಸಘಟ್ಟಗಳನ್ನೂ, ಪ್ರಾಚೀನ ಸಾಹಿತ್ಯ-ಚರಿತ್ರೆಗಳ ಆಧಾರಗಳ ಸಂಗ್ರಹ ರಕ್ಷಣಾದಿಗಳ ಬಗೆಗಳನ್ನೂ ವಿವರಿಸಿದರು. ಶ್ರೀ ಗಿರಿಧರ್ ಸಂದೇಶ ವಾಚನ ಮಾಡಿದರು. ಸಭಾದಿಯಲ್ಲಿ ಉದ್ದೇಶ ವಿವರಣಮೋದದ ಶ್ರೀ ಕೆ. ವೆಂಕಟರಾಯಾಚಾರ್ಯರು ಕೊನೆಗೆ ಧನ್ಯವಾದಗಳನ್ನು ಸೂಚಿಸಿದರು. ಸಾಸ್ಕೃತಿಕ ಕಾರ್ಯರೂಪದಲ್ಲಿ 'ಶ್ರೀ ಪುರಂದರ ದಾಸರು" ಎಂಬ ಹರಿಕೀರ್ತನೆಯು ಶ್ರೀ ಎಚ್. ಶ್ರೀಧರಾಚಾರ್ಯ ಮತ್ತು ಬಳಗದವರಿಂದ ಜರಗಿತು.

ಅನೇಕ ಶಿಲಾಶಾಸನಗಳು, ತಾಮ್ರ ಶಾಸನಗಳು, ತಾಳೆಯೋಲೆಗಳು, ಲೇಖೀರೂಪ ಪತ್ರ-ಗ್ರಂಥಗಳೂ, ಮುದ್ರಿತ ಪುಸ್ತಕಗಳು ಈ ಸಂಗ್ರಹದಲ್ಲಿ ಸೇರುತ್ತವೆ. ಈ ಬಗ್ಗೆ ಉದಾರಿಗಳಾದ ಮಹನೀಯರು ತಕ್ಕಂತೆ ಸಹಕಾರವೀಯಬೇಕೆಂದು ಶ್ರೀ ಕೆ. ವೆಂಕಟರಾಯಾಚಾರ್ಯರು ವಿನಂತಿಸುತ್ತಾರೆ.

ಸಹಕಾರೀ ಸಮ್ಮೇಳನದ ಸಮಾರೋಪ

ಉಡುಪಿ ತಾಲೂಕು ಸಹಕಾರೀ ಸಮ್ಮೇಳನದ ಸಮಾರೋಪ ಸಮಾರಂಭವು, ಉಡುಪಿಯಲ್ಲಿ, ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ಜರಗಿತು.

ರಾಜ್ಯ ಸಹಕಾರ ಶಾಖಾ ಕಾರ್ಯದರ್ಶಿ ಶ್ರೀ ಆರ್. ಭರಣಯ್ಯನವರು ಸಮಾರೋಪ ಭಾಷಣ ಮಾಡುತ್ತಾ, ನಾವು ಸಹಕಾರ ತತ್ವದಲ್ಲಿ ದುಡಿದರೆ ನಮಗೆ ಯಶಸ್ಸು ಖಂಡಿತವೆಂದು ನಿರ್ಧಾರಾತ್ಮಕವಾಗಿ ನುಡಿದರು. ಸಹಕಾರೀ ಸಂಘಗಳ ಕಾರ್ಯಗಳನ್ನು ಅವರು ವಿವರಿಸುತ್ತಾ ಬ್ಯಾಂಕು ಹಾಗೂ ಸಹಕಾರಿ ಸಂಘಗಳು ಸಂಯುಕ್ತವಾಗಿ ಅಭಿವೃದ್ಧಿ ಹಾಗೂ ಆಹಾರೋತ್ಪಾದನೆಯನ್ನು ಸಾಧಿಸಬೇಕೆಂದರು.

ಶ್ರೀಗಳಾದ ದೇವರಾವ್, ಆನಂದಕುಂದ ಹೆಗ್ಡೆ, ರಮೇಶರಾವ್, ವೆಂಕಟ್ರಮಣರಾವ್

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 23/1966

ಚಿಪು ಮಡಿವಾಳ—ವಾದಿ.

1 ರಾಮಚಂದ್ರ ಶೆಟ್ಟಿ, 2 ನರಸಿಂಹ ಶೆಟ್ಟಿ —ವೈಕುಂಠ ಶೆಟ್ಟಿರ ಮಕ್ಕಳು.

ಉಡುಪಿ ತಾಲ್ಲೂಕು ಕಳಿಮಾರು ಗ್ರಾಮದಲ್ಲಿರುವವರು — ಪ್ರತಿವಾದಿಯು.

ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ,

ನೀವು ವಾದಿಯುವಳಗೆ ಮೂಲಗೇಣಿ ಹಕ್ಕಿನಿಂದ ಅನುಭವಿಸಿಬರುವ ಕಲ್ಯಾರು ಗ್ರಾಮದ ಆಸ್ತಿ ಬಾಬ್ತು ವಾದಿಗೆ ನಿಮಿಂದ ಬರತಕ್ಕ ತಾ. 31—8—65ಕ್ಕೆ ಅಂತ್ಯವಾಗುವ ನಾಲ್ಕು ವರುಶಗಳ ಮೂಲಗೇಣಿ ಗೇಣಿ ಬಡ್ಡಿ ಕೂಡಾ ರೂಪಾಯಿ 98—48ಕ್ಕೆ ವಾದಿಯು ನಿಮ್ಮ ಮೇಲೆ ದಾಖಲ್ಲು ಮಾಡಿದ ಸದ್ರಿ ದಾವೆಯು ತಾ. 18-4-66ಕ್ಕೆ ನಿಮಗೆ ಆಕ್ಯರ ನೋಟೀಸಿಗೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ,

K. S. Kamath.

Advocate for Plaintiffs.

ಕಾರ್ಕಳ, 28—8—66

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಮೋತೀಲಾಲ್ ಜವಾಹರ್‌ಲಾಲ್ ನೆಹರು: ಮೂಲ: ಬಿ. ಆರ್. ನಂದಾ. ಅನುವಾದ: ಸಿದ್ಧವನ ಹಳ್ಳಿ ಕೃಷ್ಣಶರ್ಮ. ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: ೪೪೭. ಬೆಲೆ: ಸಾದಾ ಪ್ರತಿ: ರೂ. ೧೨; ಕೆಲಿಕೋ ಪ್ರತಿ: ರೂ. ೧೬; ಉತ್ಕೃಷ್ಟ ಪ್ರತಿ ರೂ. ೨೦.

ಭಾರತದ ಸ್ವಾತಂತ್ರ್ಯವು ಕಾಂಗ್ರೆಸ್ಸಿನ ಅರುವತ್ತು ವರ್ಷಗಳ ಹೋರಾಟದ

ಮತ್ತು ಮಹಾಬಲಶೆಟ್ಟರು ಕ್ಷೇತ್ರ ವಿತರಣ ಮತ್ತು ಅಭಿವೃದ್ಧಿ, ಸಂಘಗಳ ಆಡಳಿತ, ಸಹಕಾರ ಮತ್ತು ಸರಕಾರ, ಕೃಷಿ ಮತ್ತು ವಾಣಿಜ್ಯಗಳು, ಮೀನುಗಾರಿಕೆ ಮತ್ತು ಕೈಗಾರಿಕೆ, ಈ 5 ಪಂಗಡಗಳ ವರದಿಯನ್ನು ಕ್ರಮವಾಗಿ ಒಪ್ಪಿಸಿದರು. ಶ್ರೀ ಎ. ಜೆ. ಅಲ್ಸೆಯವರ ಈ ಎಲ್ಲ ವಿಷಯಗಳನ್ನು ಕೂಲಂಕುಷವಾಗಿ ವಿವರಿಸಿ, ಅದಕ್ಕೆ ಸೂಕ್ತಕ್ರಮ ಕೈಗೊಳ್ಳಲು ಉಪಸ್ಥಿತರಿದ್ದ ಅಧಿಕಾರಿಗಳಿಗೆ, ಇದು ಸಹಕಾರಿಯಾದೀತೆಂದು ನುಡಿದರು.

ಅಧ್ಯಕ್ಷರು ಮಾತನಾಡುತ್ತಾ, ಸಹಕಾರೀ ಕ್ಷೇತ್ರದ ಲೋಪದೋಷಗಳಿಗೆ ಸರಕಾರ ಮಾತ್ರ ಹೊಣೆಯಲ್ಲ. ಜನತೆಯ ಪಾಲಿನ ಹೊಣೆಗಾರಿಕೆಯೂ ಇದೆ. ಇದಕ್ಕಾಗಿ ಸರಕಾರ, ಸಹಕಾರ ಸಂಘ, ಜನತೆ ಮೂವರೂ ಒಂದೆನ್ನೊಂದು ಅರಿತುಕೊಂಡು ಕೆಲಸ ಸಾಧಿಸಬೇಕು. ಹಾಗಾದರೆ ಮಾತ್ರ ಯಶಸ್ಸು ಸಾಧ್ಯವೆಂದು ನುಡಿದರು

ಕೊನೆಯಲ್ಲಿ ಶ್ರೀ ಯು. ರಾಮರಾಯರು ವಂದನಾರ್ಪಣೆ ಗೈದರು. ರಾತ್ರಿ ನರಕದಿಂದ ಸ್ವರ್ಗಕ್ಕೆ ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ಕೋಟೆ ಸಹಕಾರಿ ವ್ಯವಸಾಯಿಕ ಬ್ಯಾಂಕಿನ ಉದ್ಘಾಟನೆ

ಕೋಟ ಸಹಕಾರಿ ವ್ಯವಸಾಯಿಕ ಬ್ಯಾಂಕಿನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಶ್ರೀ ಟಿ. ಎ. ಪೈಗಳಿಂದ, ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

ಶ್ರೀ ಟಿ. ಎ. ಪೈಗಳು ಉದ್ಘಾಟಿಸುತ್ತಾ, ಬ್ಯಾಂಕುಗಳು ಜನಜೀವನದಲ್ಲಿ ಸರ್ವತೋಮುಖ ಉತ್ತೇಜನ ನೀಡಬೇಕು, ಸರಕಾರವು ಸಹಕಾರ ಸಂಘಗಳ ಮೂಲಕ ಕೃಷಿರಂಗಕ್ಕೆ ಉತ್ತೇಜನ ನೀಡಬೇಕೆಂದು ನುಡಿದರು.

ಇದೇ ಸಂದರ್ಭದಲ್ಲಿ ಸಾಲಿಗ್ರಾಮದಲ್ಲಿ ಕೋಟ ಸಹಕಾರಿ ಬ್ಯಾಂಕಿನ ಚಿಲ್ಲರೆ ದಾಸ್ತಾನು ಮಳಿಗೆಯ ಶಂಕುಸ್ಥಾಪನೆ ಗೈದ, ಮೈಸೂರು ಸರಕಾರದ ಅಭಿವೃದ್ಧಿ ಕಾರ್ಯದರ್ಶಿ, ಶ್ರೀ ಆರ್. ಭರಣಯ್ಯನವರು ಮಾತನಾಡುತ್ತಾ, ನಾಡಿನ ಅಭಿವೃದ್ಧಿಗೆ ಈ ತೆರನ ಸಂಸ್ಥೆಗಳು ಮುಂದಾಗ ಬೇಕೆಂದು ನುಡಿದರು.

ಅಧ್ಯಕ್ಷರ ಭಾಷಣವಾದ ಬಳಿಕ, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಶ್ರೀಗಳಾದ ಎ. ಜೆ. ಅಲ್ಸೆ, ಕೆ. ಸೂರ್ಯನಾರಾಯಣ ಅಡಿಗ, ಬಿ. ನಾರಾಯಣ ನಾಯಕ್ ಮತ್ತು ಶ್ರೀ ಸರ್ಪಯ್ಯನವರು ಸಂಸ್ಥೆಗೆ ಶುಭಕೋರಿ ಭಾಷಣಮಾಡಿದರು.

ತೋನ್ಸೆ ವೆಂಕಪ್ಪ ಹೆಗ್ಡೆಯವರ ನಿಧನ

ಕಳೆದ ತಾ. 20ರಂದು, ಉಡುಪಿಯಲ್ಲಿ ವಕೀಲರಾಗಿದ್ದ ಶ್ರೀ ತೋನ್ಸೆ ವೆಂಕಪ್ಪ ಹೆಗ್ಡೆಯವರು ತಮ್ಮ 76ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಇವರು ಸಾಹಸಿಗಳಾಗಿದ್ದರಲ್ಲದೆ ಜನಾದರಣೆಗಳಿಸಿದ್ದರು. ಇವರಿಗೆ ಪತ್ನಿ ಮತ್ತು ನಾಲ್ಕು ಗಂಡು ಮಕ್ಕಳಿರುವರು. ಇವರು ಈಚೆಗೆ 8—10 ವರ್ಷಗಳಿಂದ ಅಸ್ವಸ್ಥರಿಂದಿದ್ದರು.

ಅನುಪಮ ಫಲ. ಈ ಹೋರಾಟದ ಉತ್ತರಾರ್ಧವು ಗಾಂಧೀ — ಜವಾಹರಲಾಲರ ಯುಗವಾದರೆ, ಪೂರ್ವಾರ್ಧವು ತಿಲಕ-ಗೋಖಲೆಯವರ ಯುಗವೆನ್ನಬಹುದೋ ಏನೋ. ಆದರೆ, ಹಿರಿಯ—ಕಿರಿಯ ನೆಹರುಗಳ ಕೈವಾಡ ಇಡಿಯ ಅವಧಿಯಲ್ಲಿದ್ದುದನ್ನು ಮರೆಯುವಂತಿಲ್ಲ. ತಂದೆಯು ಆರಂಭಿಸಿದ ಹೋರಾಟವನ್ನು ಮಗನೂ ಮುಂದುವರಿಸಿದನು. ಹೀಗಾಗಿ ಭಾರತದ ಸ್ವಾತಂತ್ರ್ಯ ಹೋರಾಟ, ಭಾರತೀಯ ಕಾಂಗ್ರೆಸ್‌ಗಳ ಇತಿಹಾಸವೂ ನೆಹರೂ ತಂದೆ ಮಕ್ಕಳ ಇತಿಹಾಸವೂ ಒಂದರೊಡನೊಂದು ಅನ್ಯೋನ್ಯ ಬೆರೆದಿವೆ; ಇದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಈ ಪುಸ್ತಕದ ಮೂಲ ಉದ್ದೇಶ, ಮೋತೀಲಾಲ ನೆಹರುರವರ ವೀರ ಜೀವನದ ಪರಿಚಯ ಮಾಡಿಕೊಡುವುದು. ಹಾಗಿದ್ದರೂ ತಂದೆಯ ಜೀವನದ ಮೇಲೆ ಮಗನೂ ಸಾಕಷ್ಟು ಪ್ರಭಾವವನ್ನು ಬೀರಿದ್ದರಿಂದ ಜವಾಹರರ ಆರಂಭಿಕ ಜೀವನವನ್ನೂ ಇಲ್ಲಿ ತರಲೇ ಬೇಕಾಗುತ್ತದೆ. ತಂದೆಯು ಮುಟ್ಟ ಬಯಸಿದ ಗುರಿಯನ್ನೇ ಮಗನೂ ಸಾಧಿಸ ಬಯಸಿದ್ದು ತನ್ನ—ತಂದೆಯ ದಾರಿ ಬೇರೆಯಾದಾಗ ಎದೆಗುಂದದೆ, ತಂದೆಯನ್ನು ತನ್ನತ್ತ ಸೆಳೆದುಕೊಂಡದ್ದು—ಮತ್ತೆಲ್ಲಿಯೂ ಸಿಗಲಾರದು, ಇಂತಹ ಉದಾಹರಣೆ.

ಮೋತಿಲಾಲರು ವಕೀಲಿಯಿಂದ ಶ್ರೀಮಂತರಾದರು; ಪಾಶ್ಚಾತ್ಯ ಸಂಸ್ಕೃತಿ ಪ್ರೇಮಿಗಳಾದರು. ಕಾಂಗ್ರೆಸ್ ಸ್ಥಾಪಿತವಾದಾಗ ಮಂದಗಾಮಿಯಾದರು. ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿ ಶಾಸನ ಸಭೆಯನ್ನು ಹೊಕ್ಕರು. ಸರಕಾರವನ್ನೂ ಸೋಲಿಸಿದರು. ಮಗ ತೀವ್ರಗಾಮಿಯಾದ; ಆದರೆ, ಗಾಂಧೀಜೀಯ ಪ್ರಭಾವದಿಂದ ಲಗಾಮು ಬಿತ್ತು ಅವನಿಗೆ. ದೇಶದ ಹಿತಕ್ಕಾಗಿ ತನ್ನ ದಾರಿಯಲ್ಲಿ ಹೋರಾಡುತಿದ್ದ ಮೋತೀಲಾಲರಿಗೆ ಅಡ್ಡ ಬರುತಿದ್ದುದು ಪುತ್ರ ವಾತ್ಸಲ್ಯವೊಂದೇ. ಇದರಿಂದಾಗಿಯೇ ಅವರು ಮಗನನ್ನು ಅವನ

(ಮೂರನೇ ಪುಟದಿಂದ)

ಶೀಯರ ಕೈವಾಡವೂ ಅನಗತ್ಯ. ಪಂಡಿತ ನೆಹರು ಕಾಶ್ಮೀರ ಪ್ರಶ್ನೆಯನ್ನು ಭದ್ರತಾ ಸಮಿತಿಗೆ ಒಯ್ದುದರ ಕಹಿ ಫಲವನ್ನು ನಾವು ಇನ್ನೆಷ್ಟು ವರ್ಷ ಉಣಬೇಕಾಗಿಗಿದೆಯೋ ಏನೋ ಯಾರು ಬಲ್ಲರು?

ಶಾಂತಿ ನಿಯೋಗದ ಮೂವರು ಸದಸ್ಯರಲ್ಲಿ ಜಯಪ್ರಕಾಶ ನಾರಾಯಣರು ಮೊದಲೇ ರಾಜಿಯಿತ್ತಿದ್ದಾರೆ. ಮುಂದೆ ಸ್ಕಾಟ್ ಮಹಾಶಯರು ಧ್ವನಿಯೆತ್ತದಂತೆ ಮಾಡುವುದು ಅಗತ್ಯವಾದುದರಿಂದ ಅವರ ಮೇಲೆ ಹೆಚ್ಚಿನ ನಿಗಾ ಇಡಬೇಕಾಗಿದೆ. ನಿಯೋಗದ ಇನ್ನೊಬ್ಬ ಸದಸ್ಯ ಚಾಲಿಹಾ ರಾಜೀಯಿತ್ತರೆ, ನಿಯೋಗ ತಾನಾಗಿಯೇ ರದ್ದಾಗುವುದು; ಸ್ಕಾಟರು ನಾಗಾರ ನಡುವೆ ಆಗ ಉಳಿಯಬೇಕಾದ ಅಗತ್ಯವೂ ಇರುವುದಿಲ್ಲ. - ಹೀಗೆ ಮಾಡದೆ ಹೋದರೆ, ಪ್ರತಿಬಂಧ ಹೇರುವ ಮೂಲಕವಾದರೂ ಸ್ಕಾಟರ ಚಟುವಟಿಕೆಗಳನ್ನು ನಿಯಂತ್ರಿಸದೆ ಹೋದರೆ ಗಂಡಾಂತರ ಖಂಡಿತ.

ದಾರಿಯಲ್ಲೇ ಬಾಪೂ ಮಾರ್ಗದರ್ಶನದಲ್ಲಿ ನಡೆಯಗೊಟ್ಟರು: ತಾನೂ ಆವಸ್ತು ತ್ಯಾಗಕ್ಕೆ ಸಿದ್ಧರಾದರು. ಮಗನ ಮೋಹದಿಂದಲೇ ಅವರು ಅನೇಕ ವೇಳೆ ತವ ದಾರಿಯನ್ನು ಬೇರೆ ಮಾಡಿದ್ದೂ ಉಂಟು. ಇದನ್ನು ಅವರ ದುರ್ಬಲತೆಯೆನ್ನುವವರು ಇರಬಹುದು; ಆದರೆ, ತನ್ನ ಏಕಮಾತ್ರ ಪುತ್ರನ ಮೇಲೆ ಮಮತೆಯಿರುವುದು ಸಹಜ; ಇಷ್ಟು ಮಾತ್ರವಲ್ಲದೆ, ಅವರ ಪುತ್ರ ಮೋಹದ ಪರಿಣಾಮ ರಮಣೀಯವೇ ಆಯಿತು ಮುಂದೆ ...

ಈ ಗ್ರಂಥವು ಸಾಕಷ್ಟು ಆಧಾರ-ಗದ ಪತ್ರಗಳ ಸಹಾಯದಿಂದ ರಚಿತ-ಗಿದೆ; ಅಧಿಕೃತವೆನಿಸಿದೆ. ದಿ। ಮೋತೀಲಾಲರ ಜೀವನದ ಸಂಪೂರ್ಣ ರೂರೇಷೆಯು ಇಲ್ಲಿದೆ. ಅವರ ದ್ವಂದ್ವಾ ವ್ಯ—ಆದರಿಂದ ಮುಕ್ತಿಯೆಲ್ಲವೂ ಸಮ ...ಕವಾಗಿಯೇ ವಿವೇಚಿಸಲ್ಪಟ್ಟಿವೆ. ಮೊ... ಲೇ ಹೇಳಿರುವಂತೆ ನೆಹರೂ—ಮನೆತ—ಕಾಂಗ್ರೆಸ್ಸಿನ ಇತಿಹಾಸಗಳು ಒಂ... ರೊಡನೊಂದು ಸಂಪೂರ್ಣ ಹೊಸೆ... ಕೊಂಡಿರುವುದರಿಂದ ಕೆಲವೆಡೆ ಪುನ... ಕ್ತಿಯು ಕಂಡು ಬಂದಂತೆ ಭಾಸವಾದರ... ಅದು ಅಪರಿಹಾರ್ಯವೆನ್ನಲೇಬೇಕು.

ಮೂಲ ಇಂಗ್ಲಿಷ್ ಗ್ರಂಥದ ಅ... ವಾದವನ್ನು ಸುಪ್ರಸಿದ್ಧ ಗಾಂಧೀ ಸಾ... ತ್ಯಾನುವಾದಕರಾದ ಸಿದ್ಧವನ ಹಳ್ಳಿ ... ಷ್ಣ ಶರ್ಮರು ಮಾಡಿದ್ದಾರೆ. ಶ್ರೀ ... ರ್ಮರ ಸ್ವಾಭಾವಿಕ ಭಾಷೆ ಮನ... ತೋಹಾರಿಯಾಗಿದೆ. ಕಠಿನ ಪದಗಳ ಕೆಲವನ್ನು ಆಯ್ದು ಅವಕ್ಕೆ ಟಿಪ್ಪಣಿ... ರೂಪದಲ್ಲಿ ಅರ್ಥವನ್ನು ಕೊಟ್ಟಿದ್ದಾ... ಪುಸ್ತಕದಲ್ಲಿರುವ ೧೩ ಚಿತ್ರಗಳು ಆಕ... ಣೆಯನ್ನು ಹೆಚ್ಚಿಸಿವೆ. ಉತ್ತಮವಾದ ... ಗದ, ಸ್ಪಷ್ಟವಾದ ಮುದ್ರಣ, ಆಕರ್ಷ... ರಕ್ಷಾಪತ್ರಗಳು ಪುಸ್ತಕದ ಮೌಲ್ಯ... ಹೊಂದಿಕೊಂಡೇ ಇವೆ. ಕನ್ನಡದಲ್ಲಿ ಇಂ... ಹ ಅಪೂರ್ವ ಗ್ರಂಥ ಕನ್ನಡ ಸಾಹಿ... ಭಂಡಾರಕ್ಕೆ ಅಮೂಲ್ಯ ಕಾಣಿಕೆ.

—ಗೋರ...

ವಿನಂತಿ

ಚಂದಾಹಣ ಬಾಕಿ ಇರುವವರ... ದಯಮಾಡಿ ಆದಷ್ಟು ತ್ವರ್ಯ ಕಳ... ಹಿಸಿ ಕೊಡುವಂತೆ ತಿರುಗೊವೆ... ವಿನಂತಿಸುತ್ತೇವೆ.

—ಮೆನೇಜರ...

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವ... ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=2...
ಪ್ರೇಮ ವಿಜಯ	1=0...
ಮುಂದಿನ ದೇವರು	0=2...
ವ್ಯಭಿಚಾರಿಣಿ ಯಾರು?	1=0...
ಹೆಂಡ್ತಿ ಗಂಡನಾದರೆ?	0=2...
ಪುರುಷವಧು	0=2...
ಸನ್ಯಾಸಿಯ ಸೋಗಿನಲ್ಲಿ!	0=7...
ಸಂಶಯ ಪಿಶಾಚಿ	0=7...
ಕುಶಲವ	0=5...
ಚಿತ್ರಾಂಗೆಪ್	0=6...

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಕ್ರೈತ ಮುರುಗ

(ಎರಡನೇ ಪುಟದಿಂದ)

ರು ನಮ್ಮ ಶತ್ರು. ಅವರೇ ಅದಕ್ಕೆಲ್ಲ ಯುಕ್ತಿ ಹೂಡಿ, ನಮ್ಮನ್ನು ಆ ಗಲಾಟೆಯಲ್ಲಿ ಭಾಗವಹಿಸಿದವರೆಂದು ತೋರಿಸಿಕೊಟ್ಟರು. ನಾವು ಮಾಡಿರುವ ಒಂದೇ ಒಂದು ತಪ್ಪೆಂದರೆ ಜಮೀನ್ದಾರರ ಹುಟ್ಟ, ಗುಲಾಮೀ ಜೀವನಕ್ಕೆ ತಿಲಾಂಜಲಿಯನ್ನಿತ್ತು ಸ್ವತಂತ್ರ ಜೀವನವನ್ನು ನಡೆಸಿದುದು ಮಾತ್ರ. ಸ್ವಾಮಿ, ನಮ್ಮನ್ನುಳಿಸಿ, ನಾವು ಎಂದೆಂದಿಗೂ ನಿಮಗೆ ಕೃತಜ್ಞರಾಗಿರುತ್ತೇವೆ. ಸ್ವಾಮಿ, ನೀವೇ ನಮ್ಮ ಪಾಲಿನ ದೇವರು." ಮುರುಗನು ತನ್ನ ಅಸಾಮಾನ್ಯ ರೀತಿಯ ಪರವಶತೆಯ ಸ್ವರದಲ್ಲಿ ಅಂಗಲಾಚಿ ಬೇಡಿಕೊಂಡನು.

ನ್ಯಾಯವಾದಿಯವರು ಮತ್ತೂ ಮೌನವಾಗಿರುವದನ್ನು ಕಂಡು ಅವನು ಪುನ: ಮಾತಿಗಾರಂಭಿಸಿದನು. "ನಾವು ನಿರಪರಾಧಿಗಳಿದ್ದೇವೆ. ನಿಜವಾದ ಗಲಾಟೆಗಾರರು ನಮ್ಮ ಕಳ್ಳನ ಗಿರಾಕಿಗಳು. ನಮ್ಮನ್ನು ಬೇಕೆಂದೇ ಬಂದಿಸಿದ್ದು. ನಾವು ಶ್ರೀಮಂತರಾಗುತ್ತಿದ್ದುದನ್ನು ಕಂಡು ಹಾಗೂ ಹೆಂಡದಂಗಡಿ ಇಟ್ಟುಕೊಂಡಿದ್ದುದರಿಂದ ಹಳ್ಳಿಯವರು ನಮ್ಮನ್ನು ದ್ವೇಷಿಸುತ್ತಿದ್ದರು. ಈ ಎಲ್ಲಾ ಉಪದ್ರಗಳ ಸೂತ್ರಧಾರಿಯೂ ಸ್ವಾಮಿ ಇದ್ದಾರೆ."

"ಆದರೆ ಪಿಂಚ್ಯದಿನ ನೀವು ಮುಖ್ಯ ಆಪರಾಧಿಗಳಿದ್ದೀರಿ. ಆ ಎಲ್ಲಾ ಗಲಾಟೆಗೆ ಮುಖ್ಯ ಕಾರಣ ನಿಮ್ಮ ಮೆದುಳಿದೆ." ಶಾಸ್ತ್ರಿಯವರು ಮೆಲ್ಲಗೆ ತಿಳಿಸಿದರು.

"ಸ್ವಾಮಿ, ನಮ್ಮ ಉದ್ದೇಶವಾದರೂ ಏನು? ತಮಗೆ ಲಾಭವಾದರೂ ಏನು?" ಮುರುಗನು ಧೈರ್ಯದಿಂದ ಕೇಳಿದನು.

ವಕೀಲರು ಹೇಳಲಾರಂಭಿಸಿದರು. 'ಬಡ ಪೆರಿಯಸ್ವಾಮಿ ಅಯ್ಯರರ ಕಣಜಕ್ಕೆ ಮತ್ತು ಹುಲ್ಲಿನ ಬಣವೆಗೆ ದೊಂಬಿಕಾರರು ಬೆಂಕಿ ಕೊಟ್ಟಿದ್ದಾರೆ. ಅವರಿಗಾಗಿರುವ ನಷ್ಟ ಹೇಳತೀರದು. ಗಲಾಟೆಯಾದರೋ ಸಣ್ಣ ಸಂಗ್ರಾಮದ ಹಾಗೆ ಮೂರು ಗಂಟೆಕಾಲ ನಡೆದಿತ್ತು. ಅವರ ಹಟ್ಟಿಯ ಗೋಡೆಗಳನ್ನು ನಾಶಮಾಡಿದ್ದಾರೆ. ಬ್ರಾಹ್ಮಣರು ವಾಸಿಸುವ ಬೀದಿಗಳೆಲ್ಲೆಲ್ಲ ಗಲಾಟೆ ನಡೆದಿತ್ತು. ಅವರ ಮನೆ ಹಂಚುಗಳನ್ನು ಹುಡಿಮಾಡಿದ್ದಾರೆ.'

"ಬೇರೆಯವರು ಮಾಡಿರಬಹುದು. ಅದರಲ್ಲಿ ನಮ್ಮ ಕೈವಾಡ ಒಂದಿನಿತೂ ಇಲ್ಲ. ನಮ್ಮ ಹೆಂಡದಂಗಡಿಯನ್ನೂ ಹಾಳುಮಾಡಿದ್ದಾರೆ. ನಮಗೂ ಬಹಳ ನಷ್ಟವಾಗಿದೆ. ನಮ್ಮ ಗುಡಿಸಲಿಗೆ ಬೆಂಕಿಕೊಟ್ಟಿದ್ದಾರೆ. ಮಡಕೆಗಳನ್ನೆಲ್ಲಾ ಚೂರು ಚೂರು ಮಾಡಿದ್ದಾರೆ." ತೊಪ್ಪೈ ವಿವರಿಸಿದನು.

"ಈ ಕಥೆಗೆ ನೀವೇ ಕಾರಣ ಪುರುಷರಿದ್ದೀರಿ. ಅವರಿಗೆ ನಷ್ಟವನ್ನುಂಟುಮಾಡಿ, ನಿಮಗನುಕೂಲವಾಗುವಂತೆ ಹಾಗೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ನೀವು ಹಾಗೆಲ್ಲಾ ಮಾಡಿಕೊಂಡಿದ್ದೀರಿ. ಒಳ್ಳೆದು, ಅವರ ಪಕ್ಷದಲ್ಲಿ ಹಲವಾರು ಮರ್ಯಾದಾ ಮನುಷ್ಯರು ಸಾಕ್ಷಿಗಿದ್ದಾರೆ. ಇಡಿ ಹಳ್ಳಿಯು ನಿಮಗೆ ವಿರುದ್ಧವಾಗಿದೆ. ಇದರಲ್ಲಿ ನಾನೇನೂ ಆಶೆಯನ್ನು ಕಾಣುವಂತಿಲ್ಲ— ಕೇವಲ ಒಂದೆರಡು ತಿಂಗಳೊಳಗೆ ವಿರಾಮ ಪಡೆಯಲು ತಯಾರಾಗಿರುವ ನಮ್ಮ ನ್ಯಾಯಾಧೀಶರು ಸಿಕ್ಕಿದಲ್ಲಿ ಮಾತ್ರ ನಿಮಗೆ ಜಯಸಿಗಬಹುದು. ಅದು ನಿಮ್ಮ ಅದೃಷ್ಟವನ್ನು ಅವಲಂಬಿಸಿಕೊಂಡಿದೆ. ನಾನು ನನ್ನ ಕರ್ತವ್ಯವನ್ನು ಮಾಡುತ್ತೇನೆ." ವಕೀಲರು ಹೇಳಿದರು.

ಅದೇ ಸಮಯದಲ್ಲಿ ಮುರುಗನ ಕಿವಿಯಲ್ಲಿ ತೊಪ್ಪೈಯು ಗುಟ್ಟಾಗಿ ಹೇಳಲಾರಂಭಿಸಿದನು. "ಈ ತರುಣ ವಕೀಲನು ಬಹಳ ಧಾರ್ಮಿಕ ಹಾಗೂ ಶಾಂತ ಸ್ವಭಾವದವನ ಹಾಗೆ ಕಾಣುತ್ತಾನೆ. ನಮ್ಮ ಕಷ್ಟಕರ ಪರಿಸ್ಥಿತಿಯಲ್ಲಿ ಇವನೇನೂ ಪ್ರಯೋಜನಕ್ಕೆ ಬೀಳಲಾರ. ನಮ್ಮ ಮದ್ರಾಸ್ ವಕೀಲರಿಗೆ ಹೇಳಿ ಕಳುಹಿಸೋಣವೇನು? ಹಣದತ್ತ ಈಗ ಗಮನ ಕೊಡಬಾರದು."

ಮುರುಗನು ಸಂಶಯ ಪಡುತ್ತಿರುವದನ್ನು ಕಂಡು ಅವನೇ ಧೈರ್ಯದಿಂದ ಕೇಳಿದನು. "ನಮ್ಮ ಮದ್ರಾಸ್ ವಕೀಲರನ್ನು ನಿಮ್ಮ ನೆರವಿಗೆ ಕರೆಸಲೇನು; ಸ್ವಾಮಿ?"

"ನಿಮ್ಮ ಮನಸ್ಸಿಗೆ ತೋರಿದಂತೆ ಮಾಡಿರಿ—ನಿಮ್ಮ ಬಳಿಯಲ್ಲಿ ಹಣವಿದ್ದಲ್ಲಿ. ನನ್ನದೇನೂ ಅಡ್ಡಿ ಇಲ್ಲ. ಬರುವ ತಿಂಗಳಲ್ಲಿ ವಿಚಾರಣೆಗಾರಂಭ ಆಗುತ್ತದೆ; ಸಿದ್ಧರಾಗಿರಿ.'

ಮುರುಗ ಮತ್ತು ತೊಪ್ಪೈ ವಕೀಲರಿಗೆ ನಮಸ್ಕರಿಸಿ ಹೊರಟರು. ಒಬ್ಬೊಬ್ಬರ ಮನಸ್ಸಿನಲ್ಲೂ ಅವರವರಿಗೆ ಸಂಬಂಧಪಟ್ಟ ನೂರಾರು ಸಂಶಯಗಳೂ ಕಷ್ಟಗಳೂ ತಮ್ಮ ತಮ್ಮಷ್ಟಕ್ಕೆ ಚರ್ಚೆ ಮಾಡುತ್ತಿದ್ದುವು.

"ತೊಪ್ಪೈ, ಈಗ, ತಡವಾಗಿ, ನಿನ್ನ ಆಲೋಚನೆಗಳೆಲ್ಲಾ ತಪ್ಪು ಹಾದಿಯಲ್ಲಿ ಹೋಗುತ್ತಿವೆ ಎಂಬುದು ನನಗೆ ಗೊತ್ತಾಗುತ್ತಿದೆ. ನಾವು ನಗರ ರಕ್ಷಕರಿಗೆ ಬಹಳಷ್ಟು ಲಂಚವನ್ನು ಕೊಟ್ಟಿದ್ದೆವು. ಅವರು ನಮ್ಮನ್ನು ಹಾಳು ಮಾಡಕೂಡದೆಂದು ಹಾಗೆ ಮಾಡಿದೆವು. ಆದರ ಫಲಿತಾಂಶವಾದರೂ ಏನು? ಚಿತ್ರಹಿಂಸೆ ಕಡಿಮೆ ಸಿಕ್ಕಿದರೂ ಕೂಡಾ ನಮಗೇನೂ ಒಳ್ಳೆಯದಾಗಲಿಲ್ಲ." ತೊಂದರೆಗೊಳಪಟ್ಟ ಸ್ವರದಿಂದ ಹೇಳುತ್ತಿದ್ದ ಮುರುಗನು, ಒಂದು ದೀರ್ಘ ನಿಟ್ಟುಸಿರನ್ನು ಬಿಟ್ಟು ಮುಂದರಿಸಿದನು.

"ಮೂರು ವರ್ಷಗಳ ಉಳಿತಾಯ! ನೀರಿನಂತೆ ಅವು ಬಂದುವು. ಗಾಳಿಯಂತೆ ಅವು ಹಾರಿ ಹೋದುವು. ಈ ನಮ್ಮ ನ್ಯಾಯವಾದಿಯವರು ಈಗಲೇ ಐನ್ನೂರು ರೂಪಾಯಿ ಕೇಳುತ್ತಿದ್ದಾರೆ. ಮದ್ರಾಸಿನ ವಕೀಲರನ್ನು ನೋಡಲು ಹೋದಾಗ, ಅವರು ಒಂದು ಸಾವಿರವಾದರೂ ಕೇಳಲಿಕ್ಕೆ ಸಾಕು. ನಮ್ಮನ್ನು ಹಿಚುಕಿ ಕೆಲತಾಸುಗಳೊಳಗೆ ಶ್ರೀಮಂತರಾಗಿ ಬಿಡಲು ಇಡಿ ಪ್ರಪಂಚವೇ ಪ್ರಯತ್ನಿಸುತ್ತಿದೆ. ನಿನ್ನ ಆಲೋಚನಾಶೂನ್ಯ ಹಂಚಿಕೆಗಳು ನಮ್ಮನ್ನು ಎಲ್ಲಿಗೆ ತಂದು ಬಿಟ್ಟವೆ! ನಿನ್ನ ಕಾಲಿನ ಪ್ರತಿಯೊಂದು ಹೆಜ್ಜೆಯ ಶಬ್ದಕ್ಕೆ ನಾನು ಬೆಚ್ಚಿಬೀಳುತ್ತಿದ್ದರೂ, ನೀನು ಕೇಳಿದ ದಕ್ಕೆಲ್ಲಾ 'ಇಲ್ಲ' ಎಂದು ಹೇಳಲಿಕ್ಕೆ ನನ್ನಿಂದಾಗಲಿಲ್ಲ. ಅದೇ ದೈವೇಚ್ಛೆ ಇರಬಹುದು. ಅದಕ್ಕೆ ನಾನು ತಲೆತಗ್ಗಿಸಲೇಬೇಕು. ಈಗ ಉಳಿದಿರುವ ಒಂದೇ ಒಂದು ದಾರಿಯೆಂದರೆ ತೆಂಗಿನತೋಟವನ್ನು ಮಾರಿ, ಹಣ ಒಟ್ಟುಮಾಡಿ, ವಿಮೋಚನೆಗಾಗಿ ಹೋರಾಡುವದು. ಬಡಪೊನ್ನಿ ಮತ್ತು ನನ್ನ ಪುಟ್ಟ ಮಕ್ಕಳು ಆಹಾರಕ್ಕಾಗಿ ಅದೇನು ಮಾಡುತ್ತಿದ್ದಾರೋ, ನನಗೆ ಗೊತ್ತಾಗುವದಿಲ್ಲ. ಅವರು ಹೀನ ಕೆಲಸಕ್ಕೆ ಅಥವಾ ಬೇಡಲು ಹೋಗಬೇಕು."

ಮುರುಗನ ದು:ಖದ ಕಟ್ಟೆ ಒಡೆಯಿತು. ಅವನು ಚಿಕ್ಕ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು.

"ನೀನು ಅಳುವುದನ್ನು ನೋಡುವಾಗ ನನ್ನ ಹೃದಯ ಒಡೆಯುತ್ತಿದೆ, ಮುರುಗ. ನಿನ್ನೊಂದಿಗೆ ನಾನೂ ಅಳಲಾರಂಭಿಸಿದಲ್ಲಿ ಏನನ್ನು ಸಾಧಿಸಿದಂತಾಗುತ್ತದೆ? ನಾನು ಕ್ರಿಯಾಶೀಲನಾಗಬೇಕು. ಇದು ನಮ್ಮನ್ನು ಪರೀಕ್ಷಿಸಲು ನಡೆದಿರುವ ದೈವಪರೀಕ್ಷೆ. ಇದು ನಮಗೆ ಬಹಳ ಕೆಟ್ಟ ಕಾಲ. ನಮ್ಮ ಜನ್ಮನಕ್ಷತ್ರದ ಸುತ್ತು ಶನಿಯು ಸುತ್ತುತ್ತಿದ್ದು ಎಲ್ಲೆಡೆಯಿಂದಲೂ ಹಾನಿಯನ್ನುಂಟುಮಾಡುತಿದ್ದಾನೆ. ಧರ್ಮಿಷ್ಠ ಶಾಸ್ತ್ರಿಯು ನಮ್ಮ ಜೀವನವನ್ನುಳಿಸುತ್ತಾನೆಂದು ನಂಬಿ ನಾವು ಸುಮ್ಮಗಿರುವದೊಳ್ಳೆಯದಲ್ಲ. ಅವನಲ್ಲಿ ಕ್ಷಾತ್ರತೇಜಸ್ಸಿಲ್ಲ. ನಮ್ಮನ್ನು ಜಾಮೀನಿನ ಮೇಲೆ ಬಿಡುಗಡೆಮಾಡಿಸಿದ ಮದ್ರಾಸ್ ವಕೀಲರಿಗೆ ಈ ಕೆಲಸವನ್ನು ಒಪ್ಪಿಸೋಣ. ನಮ್ಮ ಪಾಲಿಗವರು ಅದೃಷ್ಟವಂತರಿದ್ದಾರೆ. ಅವರ ಹೆಸರನ್ನು ಈ ಹಳ್ಳಿಯಲ್ಲಿ ಹಬ್ಬಿಸಿದ ಪೆರಿಯಸ್ವಾಮಿಗೆ ಧನ್ಯವಾದಗಳು. ಮದ್ರಾಸ್ ವಕೀಲರು ನಿನ್ನ ಧನಿ ರಾಮು ಅವರ ಒಳ್ಳೆಯ ಸ್ನೇಹಿತರೆಂದು ಹೇಳುವದನ್ನು ಕೇಳಿದ್ದೆ."

ಆಶೆ ಮತ್ತು ಹೆದರಿಕೆಯಿಂದ ನನ್ನ ತಲೆ ಸುತ್ತುತ್ತಿದೆ, ತೊಪ್ಪೈ. ಆ ದೊಡ್ಡ ನಗರವು ನಮ್ಮನ್ನು ಬೆದರಿಸುತ್ತಿದೆ. ನಾನು ಹಳ್ಳಿಯ ಇಲಿ. ನನ್ನನ್ನು ಈ ಪೇಚಿನಲ್ಲಿ ಸಿಲುಕಿಸಿರುವ ನೀನೇ ಈಗ ಹೊರಗೆ ತರಬೇಕು. ನಾನು ಪಕ್ಕದ ಹಳ್ಳಿಯ ಪ್ರಿದ್ದುಕೊಂಡು, ಖರ್ಚಿಗೆ ಬೇಕಾದ ಹಾಗೆ ಮಾರಲು ಅನುಮತಿ ಕೊಡುತ್ತೇನೆ. ನನ್ನ ಕಾಲುಗಳು ನಡುಗುತ್ತಿವೆ. ಈ ಪರಿಸ್ಥಿತಿಯಲ್ಲಿ ಅವು ನನ್ನನ್ನು ಮನೆಯವರೆಗೂ ಒಯ್ಯಲಾರವು. ನನ್ನ ಹೀಚತನಕ್ಕೆ ನಾನೇ ನಾಚಿಕೆಪಟ್ಟುಕೊಳ್ಳುವ ಹಾಗೆ ಆಯಿತು. ಪೊನ್ನಿ ಹಾಗೂ ನನ್ನ ಮಕ್ಕಳು ಸುರಕ್ಷಿತವಾಗಿರುವಂತೆ ಪ್ರಯತ್ನಿಸು. ಸೀತಾರಾಮರಲ್ಲಿ ಪ್ರಯತ್ನಿಸು. ಅವರು ಬಹಳ ಧನವಂತ ಹಾಗೂ ದಯಾಳು ಆತ್ಮ ಇದ್ದಾರೆ.

(ಮುಂದುವರಿಯುವುದು.)

ರಸದೂಟ

ಒಂದು ದಿನ ಮನೆ ಮುಂದೆ ।
ಹೂದೋಟದಾ ಹಿಂದೆ
ಕುಳಿತಿದ್ದೆ ಉಲ್ಲಾಸ ಭರಿತನಾಗಿ।
ವಿಧವಿಧದ ಸಂಭ್ರಮಕೆ ।
ಬೆಳಗಿನಾ ನೋಟಕ್ಕೆ
ಸೌಂದರ್ಯದೂಟಕ್ಕೆ ಸಿದ್ಧನಾಗಿ॥
ತಂಗಾಳಿ ಬೀಸಿತ್ತು ।
ಹೂ ಮೊಗ್ಗೆ ಅರಳಿತ್ತು ।
ಮಧುಕರಿಯ ಝೇಂಕಾರ ಕೇಳುತಿತ್ತು ।
ಹೂವಿಂದ ಹೂವಿಗೆ। ಮಕರಂದದೂಟಕ್ಕೆ
ಮರುಳಾಗಿ ಅತ್ತಿತ್ತ ಹಾರುತಿತ್ತು॥

— ೨ —

ಪಂಚಮದ ಸ್ವರದಿಂದ ।
ಸನಿಹದಾ ಕಾಡಿಂದ
ಕೋಗಿಲೆಯು ಕೂಕೂ ಎನ್ನುತಿತ್ತು.
ಕೋಳಿ ಕೋಕೋ ಎಂದು ।
ಬೆಳಗಾಯಿತೆಂದೆಂದು
ತಲೆಯೆತ್ತಿ ಹಿರಿಹಿಗ್ಗಿ ಕೂಗುತಿತ್ತು॥
ಹಸಿರು ಹುಲ್ಲಿನ ಮೇಲೆ ।
ಹಿಮದ ಹನಿಮುತ್ತುಗಳು
ನೇಸರೆಳೆ ಬೆಳಕಿಂಗೆ ಮಿನುಗುತಿತ್ತು ।
ಮಲ್ಲಿಗೆಯ ಹೂವಿಂದ ।
ಜಾಜಿ ಸಂಪಿಗೆಯಿಂದ
ಪರಿಮಳವು ಸುತ್ತಲೂ ಹರಡುತಿತ್ತು॥
ಸುಖ ದುಃಖ ದೇರಾಟ ।
ಬದುಕಿನಾ ಹೋರಾಟ
ದಲಿಜೆಂದ ಜನಕಿಲ್ಲಿ ಚೈತನ್ಯವಿಹುದು।
ಮುಂಜಾವಿನಾ ನೋಟ ।
ರಸಿಕಗದು ರಸದೂಟ
ನಿತ್ಯ ನವ ಚೇತನವ ನೀಡುತಿಹುದು॥

— ಕಾ. ಕ. ನಾ. ಭ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

NAVAYUGA 31—3—1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಜಾಗ್ರತೆ— ಜಾಗ್ರತೆ

ನಿಮಗೆ ತಿಳಿದಿರಲಿ

ಪಥಭ್ರಷ್ಟ ಚೀಣೀಯರು

ಚೀಣಾ ಸರಕಾರದ ತರಬೇತಿ ವ್ಯವಸ್ಥೆ ತೀರ ವಿಲಕ್ಷಣವಾಗಿದೆ. ಜನಸಾಮಾನ್ಯರು ಈ ವ್ಯವಸ್ಥೆಯಿಂದ ದಾರಿಗಾಣದಂತಾಗಿದ್ದಾರೆ. ಚೀಣಾದ ಹೊಸ ಮಾನುಷ್ಯನ ಸಂಬಂಧವಾದ ಕಲ್ಪನೆ ಮಸುಕಾಗತೊಡಗಿದೆ. ಅಲ್ಲಿ ಇಂದು ಶಿಕ್ಷಕರು ಶಿಕ್ಷಕರಾಗಿ ಉಳಿದಿಲ್ಲ. ವಿದ್ಯಾರ್ಥಿಗಳು ವಿದ್ಯಾರ್ಥಿಗಳಾಗಿಲ್ಲ. ವೈದ್ಯರು ವೈದ್ಯವೃತ್ತಿಯನ್ನು ಕೈಗೊಳ್ಳುವಂತಿಲ್ಲ. ಈ ಬಗೆಯ ಒಂದು ವಿಚಿತ್ರ ಸಮಾಜ ವ್ಯವಸ್ಥೆಯು ಅಲ್ಲಿನ ವಯೋವೃದ್ಧರನ್ನು ವಿಮಂಚನೆಗೆ ಈಡು ಮಾಡಿದೆ. ಚೀಣಾದ ಮುಂದಿನ ಪೀಳಿಗೆಯ ಗತಿ ಏನಾಗುವುದೋ ಎಂದು ಅವರು ಚಿಂತಿಸುತ್ತಿದ್ದಾರೆ.

ಪೀಕಿಂಗ್ ಸರಕಾರವು ಕೈಗೊಂಡಿರುವ ಹೊಸ ಕಾರ್ಯ ಯೋಜನೆಯೇ ಈ ಎಲ್ಲ ಭಯ ಭೀತಿಗಳಿಗೆ ಮೂಲ ಕಾರಣ. ಚೀಣೀಯರು ಅರ್ಥಮರ್ಥ ಬೇಸಾಯವನ್ನು ಕೈಗೊಳ್ಳಬೇಕಾಗಿದೆ. ಅರ್ಥಮರ್ಥ ಅಧ್ಯಯನವನ್ನು ಸಾಗಿಸಬೇಕಾಗಿದೆ. ಇದು ಪೀಕಿಂಗಿನ ವಿಲಕ್ಷಣ ರಾಜನೀತಿಯ ಫಲ.

ಚೀಣೀ ಯೂತ್ ಪತ್ರಿಕೆಯು ಈ ಹೊಸ ನಿಬಂಧನೆಗಳನ್ನು ಕುರಿತು ಲೇಖನವೊಂದನ್ನು ಪ್ರಕಟಿಸಿದೆ. ಇದರಲ್ಲಿ "ಈ ನಿಬಂಧನೆಗಳು ಹೊಸ ಬಗೆಯವಾಗಿದ್ದು, ಸಂಪ್ರದಾಯವಾದಿಗಳ ಮನಸ್ಸಿಗೆ ಹಿಡಿಸುತ್ತಿಲ್ಲ; ವರ್ಗ ಶತ್ರುಗಳು ಇವುಗಳನ್ನು ವಿರೋಧಿಸುತ್ತಿದ್ದಾರೆ. ಕ್ರಾಂತಿ ಮಾರ್ಗದಲ್ಲಿಯೇ ನಡೆಯಲು ನಿರ್ಧರಿಸಿದರೆ ದೃಢ ನಿರ್ಧಾರದಿಂದ ಆ ದಿಶೆಯಲ್ಲಿ ಮುಂದುವರಿಯಬೇಕು. ಯಾವುದೇ ತೊಂದರೆಗಳಿಗೆ ಅಂಜಬಾರದು" ಎಂದು ಅಭಿಪ್ರಾಯಪಟ್ಟಿದೆ.

ಚೀಣಾದಲ್ಲಿ ಸಮಾಜ ವ್ಯವಸ್ಥೆ ತಲೆಕೆಳಗಾಗಿದೆ. ಪಕ್ಷದ ಕಾರ್ಯಕರ್ತರು ಕಾರ್ಮಿಕರಾಗಿದ್ದಾರೆ. ವೈದ್ಯರು ಹೊಲಗದ್ದೆಗಳಲ್ಲಿ ಶ್ರಮಿಕರಾಗಿದ್ದಾರೆ. ವಿದ್ಯಾರ್ಥಿಗಳು ತಮ್ಮ ಅಧ್ಯಯನಕ್ಕೆ ಶರಣು ಹೊಡೆದು ಕಶ್ಮಲವನ್ನು ಸಾಗಿಸುವ ಕಾರ್ಯದಲ್ಲಿ ತೊಡಗಿದ್ದಾರೆಂದು ಪತ್ರಿಕೆಯು ಒಪ್ಪಿಕೊಂಡಿದೆ.

ಹಳೆಯ ಕಂದಾಚಾರಗಳನ್ನು ಬಿಟ್ಟು, ಹೊಸತನ್ನು ಅಂಗೀಕರಿಸಬೇಕೆಂದು ಅದು ಅಭಿಪ್ರಾಯಪಟ್ಟಿದೆ. ಬೇಸಾಯದ ಜೊತೆಗೆ ಶಿಕ್ಷಕ ವೃತ್ತಿಯನ್ನು ನಿರ್ವಹಿಸುವ ಶಿಕ್ಷಕರು, ವೈದ್ಯವೃತ್ತಿಯ ಜೊತೆಗೆ ಹೊಲ ಗದ್ದೆಗಳಲ್ಲಿ ದುಡಿಯುವ ವೈದ್ಯರು ಭವಿಷ್ಯತ್ತಿನ ಚೌಕಟ್ಟಿಗೆ ಹೊಂದಿಕೊಳ್ಳುವ ವ್ಯಕ್ತಿಗಳಾಗಿದ್ದಾರೆಂದು ಪತ್ರಿಕೆಯು ತಿಳಿಸಿದೆ

ಚೀಣಾದ ನವಮಾನವನು, ಅರ್ಥಮರ್ಥ ಶಿಕ್ಷಕನೂ—ರೈತನೂ, ವೈದ್ಯನೂ ಆಗಿದ್ದಾನೆ ಜನರಿಗೆ ಈ ಬಗೆಯ ವ್ಯವಸ್ಥೆ ಅಗತ್ಯವೆಂದು ಪೀಕಿಂಗ್ ಸರಕಾರ ಭಾವಿಸಿದೆ.

ಪೀಕಿಂಗಿನ ಈ ತರಬೇತಿ ಯೋಜನೆಯ ಇಂಗಿತ ಸ್ವಯಂ ಚೀಣೀಯರಿಗೆ ಅರ್ಥವಾಗಿಲ್ಲ, ಆದ್ದರಿಂದ ಈ ಯೋಜನೆಯ ಯಶಸ್ಸನ್ನು ಕಾದು ನೋಡಬೇಕಾಗಿದೆ.

ಚೀಣೀಯರ ಯುದ್ಧೋನ್ಮಾದ

ಚೀಣೀಯರ ಯುದ್ಧೋನ್ಮಾದದ ಹಿಂದೆ ಅಡಗಿರುವ ಉದ್ದೇಶವೇನು?

ಇತ್ತೀಚಿನ ದಿನಗಳಲ್ಲಿ ತಮ್ಮ ದೇಶದ ತುಂಬ ಸಮರ ಸದೃಶ ವಾತಾವರಣವನ್ನು ಚೀಣಾದ ಮುಖಂಡರು ನಿರ್ಮಿಸುತ್ತಿದ್ದಾರೆ. ಗಡಿ ಪ್ರದೇಶಗಳಿಗೆ ಸೈನಿಕ ಸಾಗಾಟ, ವಿಮಾನ ಧಾಳಿಗಾಗಿ ಮುಂಜಾಗ್ರತೆಯ ಕ್ರಮಗಳು ಎಂಬ ಸುದ್ದಿಯೊಂದಿಗೆ, ಮುಖ್ಯ ನಗರಗಳನ್ನು ತೆರವು ಮಾಡುವುದು, ವಿಶೇಷವಾಗಿ ದಕ್ಷಿಣ ಚೀಣದಲ್ಲಿ ಕಂದಕಗಳನ್ನು ತೋಡುವುದು, ಇವೇ ಮೊದಲಾದ ಕ್ರಮಗಳನ್ನು ಚೀಣಾ ಕೈಗೊಂಡಿದೆ.

ಚೀಣಾದಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಅಧಿಕವಾಗಿ ಪ್ರಸಾರಗೊಂಡ ಚೀಣಾದ ರಕ್ಷಣಾ ಮಂತ್ರಿ ಮಾರ್ಶಲ್‌ಲಿನ್ ಪಿಯೋ ಅವರು ಬರೆದ ಸುದೀರ್ಘ ಲೇಖನದಲ್ಲಿ, ಚೀಣೀಯರ ಯುದ್ಧೋನ್ಮಾದವು ಗಗನಕ್ಕೇರಿದುದು ಕಂಡುಬಂದಿದೆ. ಚೀಣಾದ ವಿದೇಶ ಧೋರಣೆಯನ್ನು ಪ್ರಾಮುಖ್ಯವಾಗಿ ಬಿಂಬಿಸುವುದೆಂದು ಹೇಳಲಾದ ಈ ಲೇಖನದ ಧ್ವನಿ ಆಕ್ರಮಣಕಾರೀ ಮನೋವೃತ್ತಿಯದೇ ಆಗಿದೆ. ಏಷ್ಯಾ ಆಫ್ರಿಕ ಮತ್ತು ಲ್ಯಾಟಿನ್ ಅಮೇರಿಕಾ ದೇಶಗಳನ್ನು "ಪ್ರಪಂಚದ ಗ್ರಾಮೀಣ ಪ್ರದೇಶಗಳು" ಎಂದು ಕರೆದು ಈ ದೇಶಗಳು ಒಟ್ಟುಗೂಡಿಕೊಂಡು ಜಗತ್ತಿನ ನಗರಗಳನ್ನು—ಅರ್ಥಾತ್ ಅಮೇರಿಕಾ ಸಂಯುಕ್ತ ಸಂಸ್ಥಾನವನ್ನು, ನಿರ್ನಾಮ ಮಾಡಬೇಕು ಎಂದು ಲಿನ್ ಪಿಯೋ ಅವರು ಬರೆದಿದ್ದಾರೆ ಚೀಣಾದಲ್ಲಿ ಇಂತಹ ಮಾತು ಕೇಳಿಬರುವುದು ಇದೇನು ಮೊದಲನೆಯ ಸಲವಲ್ಲ. "ಜಾಗ್ರತೆ—ಜಾಗ್ರತೆ" ಎಂಬ ಕರೆಯನ್ನು ಚೀಣಾದ ಮುಖಂಡರನೇಕರು ಇದಕ್ಕೂ ಮೊದಲು ಹಲವಾರು ಪ್ರಸಂಗಗಳಲ್ಲಿ ಕೊಟ್ಟಿದ್ದಾರೆ

ಜನತಾ ವಿಮೋಚನ ಸೈನ್ಯದ ಡೈರೆಕ್ಟರ್ ಶಿಪೊ ಹುವಾ ಅವರು "ಸಾಮ್ರಾಜ್ಯವಾದಿ ಅಮೇರಿಕನ್ನರು ಅನೇಕ ರಂಗಗಳಲ್ಲಿ ಅಣ್ವಸ್ತ್ರ ಮತ್ತು ಇತರ ಅಸ್ತ್ರಗಳಿಂದ ಭಾರೀ ಪ್ರಮಾಣದಲ್ಲಿ ಬೇಗನೆ ಪ್ರಾರಂಭಿಸಬಹುದಾದ ಆಕ್ರಮಣಕಾರೀ ಯುದ್ಧವನ್ನು ಎದುರಿಸಲು ನಾವು ಎಲ್ಲಾ ಸಿದ್ಧತೆಗಳನ್ನು ಮಾಡಬೇಕು. ಯುದ್ಧ ಸಿದ್ಧತೆಯ ತಳಹದಿಯ ಮೇಲೆ ನಮ್ಮ ಕಾರ್ಯಗಳು ರೂಪುಗೊಳ್ಳಬೇಕು" ಎಂದು ಕರೆ ಇತ್ತಿದ್ದಾರೆ.

ಈ ಬಗೆಯ ಸಮರೋನ್ಮಾದದ ವಾತಾವರಣವನ್ನು ಹಬ್ಬಿಸುವಲ್ಲಿ ಚೀಣಾದ ಉದ್ದೇಶಗಳಾದರೂ ಏನು? ಚೀಣಾದ ವ್ಯವಹಾರಗಳನ್ನು ಅರಿತ ತಜ್ಞರ ಮತದಂತೆ, ಮಾವೋರ ೧೬ ವರ್ಷದ ಆಳಿಕೆಯ "ಕ್ರಾಂತಿ ಅಥವಾ ವಿಮೋಚನೆ"ಯ ಚಳುವಳಿಯಲ್ಲಿ ಚೀಣಾದ ಜನತೆ ಉತ್ಸಾಹವನ್ನು ಕಳೆದುಕೊಂಡಿದೆ. ಕಾರಣ ಇಂತಹ ಉನ್ಮಾದದ ಮಾತುಗಳಿಂದ ಜನರ ಉತ್ಸಾಹವನ್ನು ಜೀವಂತವಿಡಲು ಚೀಣಾದ ಮುಖಂಡರು ಪ್ರಯತ್ನಿಸುತ್ತಿದ್ದಾರೆ.

ಕಳೆದ ಜೂನ್ ತಿಂಗಳಲ್ಲಿ ಪ್ರಾರಂಭವಾದ ಹಾಂಗ್‌ಕಾಂಗ್ ನಗರದ ವರದಿಯೊಂದರಂತೆ ಕ್ಯಾಂಟನ್ ಮತ್ತು ಇತರ ಮುಖ್ಯ ಪಟ್ಟಣಗಳಲ್ಲಿ ವಿಮಾನ ಧಾಳಿಯ ನಿರೋಧಕ ತೋಫುಗಳನ್ನು ಇಡಲಾಗಿದೆ, ಭಾರಿ ಪ್ರಮಾಣದ ನಾಗರಿಕ ರಕ್ಷಣಾ ಕ್ರಮದ ಚಟುವಟಿಕೆಗಳನ್ನು ಆರಂಭಿಸಲಾಗಿದೆ.

ಚೀಣಾದ ಈ ತರಬೇತಿ ಮತ್ತು ಮುಂಜಾಗ್ರತೆಯ ಕ್ರಮಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಚೀಣಾವು ಆಕ್ರಮಣಕಾರರೊಡನೆ ಯುದ್ಧಕ್ಕೆ ಅಣಿಯಾಗಿ ನಿಲ್ಲಬೇಕಾಗಿದೆ ಎಂಬುದೇ ಆಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ. ರೂ.ಎರಡು. ಉತ್ತಮ ಪ್ರತಿ.ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ.ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಅಮೃತ ಬಿಂದು

ಜೀವರಸವನ್ನು ಹೀರಿಕೊಂಡು ಶರೀರ ಬೆಳೆಯಬೇಕಾದರೆ ತಿಂದ ಆಹಾರ ಜೀರ್ಣವಾಗಬೇಕು. ಜ್ಞಾನ ವಿಕಸಿತವಾಗಬೇಕಾದರೆ ಓದಿದ್ದು ಚಿಂತನೆಯ ಕುಲುಮೆಯಲ್ಲಿ ಸಂಸ್ಕಾರ ಪಡೆಯಬೇಕು.

ೊ ೊ ೊ

ಮೇಲಿರುವವರ ಪಾದ ಪೂಜೆಮಾಡುವುದು, ಕೆಳಗಿರುವವರ ತಲೆ ತುಳಿಯುವುದು ಹೇಡಿಗಳ ಲಕ್ಷಣ.

ೊ ೊ ೊ

ಕೇಡಿನ ಮೂಲಕ, ಕ್ರೌರ್ಯದ, ಮೋಸದ ಮೂಲಕ ಸುಖಪ್ರಾಪ್ತಿ ಮಾಡಿಕೊಳ್ಳುವೆನೆಂದು ಪ್ರಯತ್ನಿಸುವವನ ಯತ್ನಕ್ಕೆ ನ್ಯಾಯ ದೇವತೆ ಅವಕಾಶ ನೀಡಳು.

ೊ ೊ ೊ

ಕುಹಕಿಯನ್ನು ಅಡಗಿಸಿಡುವ ಗುಹೆ ಈ ಪ್ರಪಂಚದಲ್ಲಿಲ್ಲ. ಯಾರಿಗೂ ಕಾಣದೆ ದುಷ್ಕೃತ್ಯ ಮಾಡಿದರೂ, ಅದಕ್ಕೊಬ್ಬ ಸಾಕ್ಷಿಯನ್ನು ನ್ಯಾಯದೇವತೆ ಸೃಷ್ಟಿಸಿಯೇ ಸೃಷ್ಟಿಸುತ್ತಾಳೆ. ದುಷ್ಕೃತ್ಯ ಮಾಡಿದವನಿಗೆ ಜಗತ್ತೇ ಕನ್ನಡಿಯಾಗಿ ಪರಿಣಮಿಸಿ ಹೆಜ್ಜೆ ಹೆಜ್ಜೆಗೆ ತನ್ನ ಪ್ರತಿಬಿಂಬ ನೋಡಿ ಆತನು ಕೊರಗುವಂತಾಗುತ್ತದೆ.

ೊ ೊ ೊ

ಒಬ್ಬನು ತತ್ವ ಜ್ಞಾನಿಯೋ, ಅರ್ಥಶಾಸ್ತ್ರಜ್ಞನೋ, ಪದವೀಧರನೋ ಯಾ ಕಲಾವಿದನೋ ಎಂಬುದು ಮುಖ್ಯವಲ್ಲ; ಆದರೆ ಆತನು ಸಂಸ್ಕೃತಿ ಪಡೆದ ಮಾನವನೋ ಎಂಬುದು ಮುಖ್ಯ.

Edited, Printed & Published by K. H. Shetty at the Navayuga Press, Udupi, S. India.

నవయుగ

7—4—1966

NAVAYUG

౧౦ పైస

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವೊದಲು—

ರಾಮಚಂದ್ರ ಪದವಿ ಪಡೆಯುವ ಆಶೆಯಿಂದ ಕೈತೊಳೆದುಕೊಂಡು ಜಾನಕಿ ಪತಿಯಾಗಿ ಮಿತ್ರ ಕೇದಾರಿಯನ್ನಗಲಿ ಊರಿಗೆ, ಅಲವಂತಿಗೆ ಮರಳಿದ. ಆದರೆ, ದುರ್ದೈವದಿಂದ ಆತನು ಶಿಬಿರ ಗುಮಾಸ್ತನಾದ; ಜಮೀನನ್ನು ಮಾರಿದ. ಅದೃಷ್ಟ ಅವನ ಕೈ ಹಿಡಿಯಿತು. ದೂಸಿಯ ಉಪ-ತಾಲೂಕಧಿಕಾರಿಯಾಗಿ ಭಡ್ತಿ ಹೊಂದಿದ. ಕೆಡೆಲರ ನೆರವಿನಿಂದ ಉಪ-ತಾಲೂಕಿನ ಅಭಿವೃದ್ಧಿಯನ್ನೇ ಚಿಂತಿಸುತಿದ್ದ. ಈಗಾತ ಒಂದು ಹೆಣ್ಣು ಮಗುವಿನ ತಂದೆ.

ರಾಮುವಿನ ಒಕ್ಕಲು ರೈತ ಮುರುಗನೀಗ ಶ್ರೀಮಂತನಾಗುತ್ತ ಬಂದ. ದುರ್ವ್ಯಸನಗಳಿಗೆ ಬಲಿಯಾದ. ತೊಪ್ಪೈ ಪ್ರೇರಿತನಾಗಿ ಅಡ್ಡದಾರಿ ಹಿಡಿದ. ಹಳ್ಳಿಯ ದೊಂಬಿಯೊಂದರಲ್ಲಿ ಆತನು ತೊಪ್ಪೈಯೊಡನೆ ಬಂಧಿತನಾದ.

ಕೇದಾರಿ ಉದಯೋನ್ಮುಖ ವಕೀಲ. ರಾಮಚಂದ್ರನ ನೆನಪು ಆತನಿಗೆ ಬಂದರೂ ಬಡ ಶಿಬಿರ ಗುಮಾಸ್ತನೆಂದು ತಿರಸ್ಕಾರ. ಪತ್ನಿ ಕೋಕಿಲಂನೊಂದಿಗೆ ಭವ್ಯ ಭವಿಷ್ಯದ ಕನಸು ಕಾಣುತ್ತಿದ್ದ.

ಮುಂದೆ—

— ೩೨ —

ರಾಮಚಂದ್ರನ ಆಲೋಚನೆಗಳನ್ನು, ಕಂದಾಯ ದೃಷ್ಟಿಯಲ್ಲಿ ಅದು ಹೇಗೆ ಪ್ರಯೋಜನಕಾರಿ, ಕೃಷಿ ಪ್ರಾಮುಖ್ಯವಾಗಿರುವ ದೇಶಕ್ಕೆ ಅದು ಹೇಗೆ ಉಪಯೋಗಕ್ಕೆ ಬರುತ್ತದೆ, ಬಡತನದಲ್ಲಿ ಬಳಲಿ ಬೆಂಡಾಗಿ ಕಂಗೆಟ್ಟು ಹಾದಿ ತಪ್ಪಿರುವವರನ್ನು ಪುನಃ ದಾರಿಗೆ ತರಲು ಅದು ಹೇಗೆ ದಾರಿದೀಪವಾಗುತ್ತದೆ, ಮುಂತಾದ ವಿಷಯಗಳನ್ನು ಕೆಡೆಲರು ಪ್ರಾಂತ್ಯಪಾಲರೆದುರಿಗಿಟ್ಟು ಅವರ ಮನ ಸೆಳೆದಿದ್ದರು. ಜನರಲ್ಲಿ ಅತೃಪ್ತಿಗೆ ಕಾರಣ ಅವರಲ್ಲಿರುವ ಆರ್ಥಿಕ ದುಃಸ್ಥಿತಿ ಎಂಬ ರಾಮುವಿನ ವಾದವನ್ನೇ ಅವರೂ ಉಪಯೋಗಿಸಿದ್ದರು.

ಒಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚು ಆಗುವಂತಹ ದೂಸಿ-ಮಾಮಂದೂರು ಸರೋವರದ ದುರುಸ್ತಿಯ ವಿಷಯ ಅಕ್ಕಪಕ್ಕದ ಹಳ್ಳಿಯವರಿಗೆ ಮೋಜಿಗೆ ವಿಷಯವಾಗಿತ್ತು. ರಾಮುವಿನ ಹೆಸರು ಇಡಿ ಜಿಲ್ಲೆಯಲ್ಲಿ ಮನೆಮಾತಾಗಿತ್ತು. ರಾಮುವು ಗ್ರಾಮೋದ್ಧಾರದ ಕೆಲಸಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟು, ನೀರಾವರಿಗಾಗಿ ಹೋರಾಡಿ, ಅತ್ತ ಸರಕಾರಕ್ಕೂ ಇತ್ತ ಜನತೆಗೂ ಅಚ್ಚುಮೆಚ್ಚಿನವನಾದನು.

ಕೆರೆಯ ದುರಸ್ತಿಗಾಗಿ ಎಲ್ಲಾ ತರದ ಜನರಲ್ಲೂ ಉತ್ಸಾಹ ಬರುವಂತೆ ಅವನು ಪ್ರೋತ್ಸಾಹಿಸಿದನು. ಅದರಲ್ಲಿ ಗುಡ್ಡಕಾಡುಗಳಲ್ಲಿ ಅವಿತುಕೊಂಡು ದರೋಡೆ ಮಾಡುತ್ತಿದ್ದವರೂ ಬಂದು ಸೇರಿದ್ದರು. ಅವರಿಂದಾಗಿ ಹೆಂಡದಂಗಡಿಗಳು ಮುಚ್ಚುವಂತಾಯಿತು. ಜನರು ಉತ್ತಮ ಅಭ್ಯಾಸ,ಸರಳ ಜೀವನವನ್ನು ನಡಿಸುವಂತೆ ಉದಾಹರಣೆಗಳ ಮೂಲಕ ಮತ್ತು ಕಾರ್ಯಗಳ ಮೂಲಕ ಹೇಳಿಕೊಟ್ಟು, ಅವನು ಪ್ರೋತ್ಸಾಹಿಸುತ್ತಿದ್ದನು. ಸ್ವತಃ ದಾರಿಯನ್ನು ತೋರಿಸುತ್ತಿದ್ದನು. ಬಡ ಜನರಲ್ಲೂ ಶೇಖರಣೆಯು ಹೇಗೆ ಸಾಧ್ಯ ಎಂಬುದನ್ನವನು ಕಲಿಸಿಕೊಟ್ಟನು. ಪ್ರಯತ್ನದ ಬಳಿಯಲ್ಲಿ ಮೊಗ್ಗೆಗಳನ್ನು ಕಂಡು ಅವನು ಆನಂದಪಡುತ್ತಿದ್ದನು. ಎಲ್ಲರೂ ಧನ್ಯವಾದದ ಮಳೆಯನ್ನೇ ಅವನ ಮೇಲೆ ಸುರಿಸುತ್ತಿದ್ದರು.

ಹೀಗಿದ್ದರೂ ಅವನ ಹೃದಯದೊಳಗೆ ದಣಿವು ಎಂಬ ಕ್ರಿಮಿ ಕೊರೆಯಲಾರಂಭಿಸಿತ್ತು. ಅವನಲ್ಲಿ ಬದಲಾವಣೆ ಹಾಗೂ ವಿಶ್ರಾಂತಿಗಾಗಿ ಆಶೆ ಹುಟ್ಟುವಂತೆ ಅದು ಪ್ರೇರೇಪಿಸುತ್ತಿತ್ತು.

"ನೀವು ಅದೇನೋ ಕನಸು ಕಾಣುತಿದ್ದೀರಿ, ರಾಜ್. ಇಲ್ಲಿ ಹಲವಾರು ಜನರ ಪೂರ್ವಿಕರ ಮನೆಯನ್ನಳಿಸಿಕೊಳ್ಳುವಂತಾಗಲೆಂದು, ಅಲ್ಲಿ ಅಲವಂತಿಯಲ್ಲಿ ನೀವೂ ಬಿಟ್ಟು ಬಂದಿರುವ ಪೂರ್ವಜರ ಮನೆ...."

'ಹಲವಾರು ದಿನಗಳ ನಂತರ ಇದೀಗ ನೀನು ಒಂದು ಉತ್ತಮ ವಿಷಯವನ್ನು ಎತ್ತಿದೆ, ಜಾನಕಿ. ನಿನ್ನ ಊಹನೆ ಸರಿ. ನಾನು ಅಲವಂತಿಯ ಕುರಿತು ಆಲೋಚಿಸುತ್ತಿದ್ದೆ. ಹಲವಾರು ಪರಿಸ್ಥಿತಿಗಳ ನಡುವೆ, ಸುಡುವ ಸೂರ್ಯನ ಕೆಳಗೆ, ದುಡಿಯುತ್ತ ಹಲವಾರು ವರ್ಷಗಳನ್ನು ನಾನು ಕಳೆದಿದ್ದೇನೆ. ಸ್ವಲ್ಪ ವಿಶ್ರಾಂತಿ, ಒಂದು ಚಿಕ್ಕ ಬದಲಾವಣೆ— ಅದು ನಮಗೆ ಹಿತವನ್ನುಂಟು ಮಾಡ ಬಲ್ಲುದು. ಅಲವಂತಿಯಲ್ಲಿ ನನ್ನ ಪೂರ್ವಜರಿಂದ ಬಂದಿದ್ದ ಒಂದು ಮನೆ ಹಾಗೂ ಆಸ್ತಿಯಲ್ಲಿ ಒಂದೆಕರೆ ನೆಲ ಇರುತ್ತಿದ್ದಲ್ಲಿ, ಅಲ್ಲಿ ಹೋಗಿ ನೆಲಸಿದಲ್ಲಿ, ನನ್ನ ದೇಹಕ್ಕೆ ಹಾಗೂ ಆತ್ಮಕ್ಕೆ ಅದೆಂತಹ ಮಾನಸಿಕ ಬದಲಾವಣೆ ಹಾಗೂ ಸುಖ ದೊರಕುತ್ತಿತ್ತು! ಒಂದು ತಿಂಗಳ ವಿಶ್ರಾಂತಿಗೆ ಅನುಮತಿ ಸಿಗುತ್ತಿದ್ದಲ್ಲಿ, ನಿನ್ನೊಂದಿಗೆ ಅಲ್ಲಿಗೆ ಹೋಗಿ, ನನ್ನ ತಾರುಣ್ಯದಲ್ಲಿ ಸ್ನೇಹದಿಂದ ಕಂಡಿರುವ ಕಾವೇರಿಯಲ್ಲಿ, ನಿನ್ನೊಂದಿಗೆ ಜಲಕ್ರೀಡೆ ಆಡುತ್ತ ಆ ಪವಿತ್ರ ನೀರಿನಲ್ಲಿ ಸಮಯ ಕಳೆಯ ಬಹುದಿತ್ತು. ಆ ಕಾವೇರಿಗೆ ಅದೆಂತಹದೋ ಮೋಹಗೊಳಿಸುವ ಗುಣ ಇದೆ. ಬೇರಿನ್ನಾವ ಹರಿಯುವ ನೀರೂ ಆ ಸಂತೋಷವನ್ನು ನನಗೆ ನೀಡಲಾರದು. ಜನ್ಮಕೊಟ್ಟಿರುವ ಪ್ರ... ಮಣ್ಣು ನಮಗದೆಷ್ಟು ಸುಖಕೊ... ಲ್ಲುದು! ಆದರೆ, ಅಯ್ಯೋ! ನಿಮ... ಸ್ತ್ರೀಯರಿಗೆ—ಕಿತ್ತು ನೆಡಲ್ಪಟ್ಟ ಜೀ... ದಿಂದಾಗಿ ಅದರ ನೆನಪುಳಿಯುವು... ರೂ ಹೇಗೆ?"

"ಉಪ-ತಾಲೂಕಧಿಕಾರಿಯ ಪ್ರಾ... ಖ್ಯತೆಯನ್ನು ಬಿಟ್ಟು ವಿಶ್ರಾಂತಿ!"

"ಮತ್ತು ಒಣಗಿರುವ ಈ ಚರ್ಮಕ್ಕೆ ನೀತ ಕಾವೇರಿಯಲ್ಲಿ ಸ್ನಾನ ಹಾಗೂ ... ಹದಿಂದ ತತ್ತರಿಸುತ್ತಿರುವ ಚೈತ... ಹುಟ್ಟಿದ ಸ್ಥಳದಲ್ಲಿಯ ನೀರು. ಅಷ್ಟ... ದೆಂತು ಸಾಧ್ಯ? ಅಕ್ಕರೆಯ ಅಲವ... ಅದೆಂತಹ ಸಿಹಿ ನೆನಪುಗಳನ್ನುಂಟು... ಡುತ್ತಿರುವೆ? ಅಂ, ನಮ್ಮ ನೆಚ್ಚಿನ ಸಿ... ಎಲ್ಲಿದ್ದಾಳೆ?" ರಾಮು ಆತುರದಿಂದ ... ದನು. ಈಗವನು ಒಂದು ಮಗು... ತಂದೆ.

"ಯಾವ ಸೀತಾಳನ್ನು ನೀವು ಕ... ತ್ತಿದ್ದೀರೀಂದ್ರೆ?" ತನ್ನ ಸ್ವಾಮಿಯ ... ತೋಷವನ್ನು ಹೆಚ್ಚಿಸಲು, ಮುಗುಳ... ತ್ತ, ಜಾನಕಿ ಕೇಳಿದಳು. "ನಮ್ಮ ಮ... ಮಗೆ ಸೀತಾ ಎಂದೇಕೆ ಹೆಸರಿಟ್ಟಿದ್ದಿ... ನಿಮ್ಮ ಗೆಳತಿ, ಅಲವಂತಿಯ ಸೀ... ಜ್ಞಾಪಕಾರ್ಥವಾಗಿ ಆ ಹೆಸರಿಟ್ಟಿ... ನೊಂದ್ರೆ?"

"ಅದೇ ಸಮಯದಲ್ಲಿ ಸೀತೆಯು ಅ... ಗಾಲಿಕ್ಕುತ್ತ ಅಲ್ಲಿಗೆ ಬಂದಳು. ಅ... ಹತ್ತಿರ ಬಂದೊಡನೆ ರಾಮು ಅವ... ತ್ತಿಕೊಂಡು ಆಲಂಗಿಸಿದನು, ಆಗಿನ ... ಹಾಗೆ ಮಗುವಿನತಂದೆಯಾಗಿರುವವ... ಮಾತ್ರ ಗೊತ್ತು.

"ಅದೊಂದು ನನ್ನ ಹೃದಯದ ಆಸೆ ಇತ್ತು. ಅಲವಂತಿಯ ಬಡ ಸಿ... ಅವಳು ನನಗೆ ಸಹೋದರಿ ಸಮಾನ... ವಳು. ಕೆಲ ವರ್ಷಗಳಿಂದ ನಮಗೆ ಅ... ಕುರಿತೇನೂ ಸುದ್ದಿಯೇ ಬಂದಿಲ್ಲವೇನ...

'ನೀವೇತಕ್ಕೆ ಅವಳಿಗೆ ಬರೆಯ ... ಮೊಂದ್ರೆ?"

"ಸಂಪ್ರದಾಯ ಅದರಲ್ಲಿ ತಪ್ಪು... ಣುತ್ತದೆ; ಆದರೆ ನೀನು ಬರೆಯಬಹ... ಕಣೇ, ಜಾನಕಿ."

"ನೀವು ಅಂದು ಕೇಳುತ್ತಿದ್ದಿರಲ... ಸೀತೆಗೆ ಒಬ್ಬ ಮಗನಿದ್ದಾನೆಂದೂ ಅ... ತನ್ನ ಭಾವೀ ಮಾವನನ್ನು ಕಂಡೊ... ಕೈಯ್ಯಾಡಿಸಿದನೆಂದೂ ಹೇಳುತ್ತಿ... ಲ್ಲಾ? ನನ್ನ ಮುದ್ದು ಸೀತಾ ಅವನಿ... ಹುಟ್ಟಿದವಳಂತಿದ್ದಾಳೆ. ನಾನು ಹ... ನಿಶ್ಚಯಿಸಿದ್ದೇನೆ. ನಿಜವಾಗಿ ಸೀತೆ... ಬಹಳ ಒಳ್ಳೆಯವಳು, ಆದರೆ ಅ... ಶ್ರೀಮಂತಳು ನಾವು ಬಡವರಿದ್ದೇನೆ.'

"ಅದು ಕಲ್ಪನೆ. ಅದಕ್ಕಾಗಿಯೂ... ನಾನು ಕಷ್ಟಪಟ್ಟು ಬೆವರು ಸುರಿಸಿ ಪಾದಿಸಿ ಶ್ರೀಮಂತನಾಗಬೇಕು."

"ಅಪ್ಪಾ, ಅಮ್ಮಾ ಏನು ಹೇಳುತ್ತಿರಿ?' ಕೈಗಳನ್ನು ಮೇಲಕ್ಕೆತ್ತಿ, ನ... ವನ್ನು ತಿರುಗಿಸುತ್ತ ಮಗಳು ವಿಚಾ... ದಳು.

"ಅವಳು ಹೇಳುತ್ತಿದ್ದದ್ದೇನೂ... ನಿನ್ನೊಡನೆ ಆಟವಾಡಲು ನ... ಹಳ್ಳಿಯಲ್ಲಿ ಒಬ್ಬ ಚಿಕ್ಕ ಹುಡ... ನಿದ್ದಾನೆಂದು." ರಾಮು ಹೇಳಿದನು.

(ಹದಿನೈದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಬದಿ ಯಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಯಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಇಂಡಿಯಾನಾ ವಿಶ್ವವಿದ್ಯಾಲಯದ ತಾಳವಾದಕ ಸ್ವಾನ್ ಗೇಜರು ಮದ್ರಾಸಿನ ಕರ್ನಾಟಕ ಸಂಗೀತ ಕಾಲೇಜಿನಲ್ಲಿ ಟಿ. ವಿ. ಗೋಪಾಲಕೃಷ್ಣನವರಿಂದ ಮೃದಂಗದ ಪರಿಚಯವನ್ನು ಮಾಡಿಕೊಳ್ಳುತ್ತಿದ್ದಾರೆ.

ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೩೦ | ೭—೪—೧೯೬೬ | No. 30

ಬೋಣ್ಣೆ ಹಿಡಿದ ಶರಣಾರ್ಥಿ

ಭಾರತದ ಪ್ರಧಾನ ಮಂತ್ರಿಯವರು ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ರಶ್ಯಗಳ ಸರಕಾರಿ ವರಿಷ್ಠರೊಡನೆ ಮಾತುಕತೆಗಳನ್ನು ನಡೆಸಲು ವಿದೇಶ ಯಾತ್ರೆ ಕೈಕೊಂಡು ಮರಳಿದರು. ಇದೇ ವೇಳೆಯಲ್ಲಿ ಚೀನೀಯ ಅಧ್ಯಕ್ಷ ಮತ್ತು ವಿದೇಶ ಮಂತ್ರಿಗಳು ಪಾಕಿಸ್ತಾನವನ್ನು ಸಂದರ್ಶಿಸಿ ಸ್ವದೇಶಕ್ಕೆ ಗಮನಿಸಿದರು. ಒಂದೇ ವಾರದಲ್ಲಿ ನಡೆದು ಹೋದ ಈ ಸಂಚಾರವು ಭಾರತದ ಬಗ್ಗೆ ಬಹಳ ಮಹತ್ವಪೂರ್ಣವಾಗಿದ್ದರೆ, ವಿಶ್ವದ ರಾಜಕಾರಣದಲ್ಲಿಯೂ ಸಾಕಷ್ಟು ಪರಿಣಾಮ ಬೀರಬಲ್ಲವು ಎಂಬುದು ಅಕ್ಷರಶಃ ಸತ್ಯ. ಇಂದಿರಾ ಗಾಂಧಿಯವರ ಭೆಟ್ಟಿಯು ಭಾರತದ ಆರ್ಥಿಕ ಮತ್ತು ಆಹಾರಿಕ ಸಮಸ್ಯೆಗಳ ಪರಿಹಾರಕ್ಕೆ ಸೂತ್ರಪಾತ ಮಾಡಬಲ್ಲುದಾದರೆ, ಕೆಂಪು ಚೀನೀ ವರಿಷ್ಠರ ಯಾತ್ರೆ ಭಾರತದ ಬಗ್ಗೆ ದುರಭಿಪ್ರಾಯವನ್ನು ಎತ್ತಿ ಹಿಡಿಯುವ ಪಾಕಿಸ್ತಾನಕ್ಕೆ ಒತ್ತಾಸೆ ನೀಡುತ್ತದೆ. ಶ್ರೀಮತಿ ಗಾಂಧಿಯವರು ಕೆಂಪು ಚೀನಾದಿಂದ ಭಾರತಕ್ಕಿರುವ ಆಕ್ರಮಣ ಭಯವನ್ನು ಪ್ರದರ್ಶಿಸಿದರೆ, ಶ್ರೀ ಶಾವ್ರೋಚಿಯವರು ತಮ್ಮ ರಾಷ್ಟ್ರದಿಂದ ಭಾರತ ಉಪಖಂಡಕ್ಕೆ ಆಕ್ರಮಣದ ಭೀತಿಯಿಲ್ಲವೆಂದು ಘಂಟಾಘೋಷವಾಗಿ ಸಾರಿದ್ದಾರೆ. ಪಾಕ್ ನಾಯಕರು ಇದನ್ನು ಧ್ವನಿವರ್ಧಕಗಳ ಮೂಲಕ ಜಗತ್ತಿನ ಮೂಲೆ ಮೂಲೆಗೂ ಹರಡುತಿದ್ದಾರೆ. ಇನ್ನು ಮುಂದೆ ಕೆಂಪು ಚೀನಾವು ಭಾರತದ ಮೇಲೆ ಆಕ್ರಮಣ ಮಾಡಬಹುದು ಅಥವಾ ಮಾಡದಿರಬಹುದು; ಆದರೆ, ಭಾರತವನ್ನು ಒಂದು ಬಾರಿ ಆಕ್ರಮಿಸಿ ಅದು ಗೆದ್ದ ವಿಶ್ವಾಸಘಾತವನ್ನು ಭಾರತವು ಎಂದಿಗೂ ಮರೆಯುವುದಿಲ್ಲ. ಅದರ ಯಾವ ಮಾತನ್ನೂ ನಂಬುತಿದ್ದ ಭಾರತವನ್ನು ನಂಬದಂತೆ ಮಾಡಿದುದು ಕೆಂಪು ಚೀನಾವೇ ಎಂಬುದು ಜಗಜ್ಜನಿತ. ಹಾಗಿರುವಾಗ, ಚೀನೀ ನಾಯಕರ ಈ ಹೇಳಿಕೆ—ಭರವಸೆಗಳ ಬಗ್ಗೆ ಭಾರತೀಯರಲ್ಲಿ ಯಾವ ವಿಶ್ವಾಸವೂ ಇಲ್ಲ. ಇದಕ್ಕೆ ಪುಟ ಕೊಡುವಂತೆ ಟಿಬೇಟಿನ ಗಡಿಯಲ್ಲಿ ಸೈನ್ಯದ ಚಲನವಲನಗಳನ್ನೂ ಅದು ಹೆಚ್ಚಿಸುತ್ತಲೇ ಬರುತ್ತಿದೆ. ಕೈಯಲ್ಲಿ ದೊಣ್ಣೆ ಹಿಡಿದ ಉನ್ಮತ್ತನು ಸತ್ಯವಾಣಿಯಾಡಿದರೂ ಅದನ್ನು ನಂಬುವವರು ವಿರಳ.

ಕೆಂಪು ಚೀನೀಯ ನಾಯಕರು ಭಾರತದ ಪ್ರಧಾನಿಯ ಬಗ್ಗೆ ಒಂದು ಮಾತು ಅಂದಿದ್ದಾರೆ, ತಾವು ತಮ್ಮ ದೇಶಕ್ಕೆ ತೆರಳುವುದಕ್ಕೆ ತುಸು ಮೊದಲು. ಪಂಡಿತ ಜವಾಹರಲಾಲರ ಮಗಳು ಇಂದಿರೆಯು ತನ್ನ ತಂದೆಯಂತೆಯೇ ಚೀನೀಯರನ್ನು ದ್ವೇಷಿಸುವುದು ಸ್ವಾಭಾವಿಕ. ಆಕೆಯು ಹಿಂದಿನ ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರೂ ನೆಹರುವಿನ ಚೀನೀ ವಿರೋಧಿ ನೀತಿಯನ್ನು ಮುಂದುವರಿಸಿದಂತೆ ಇಂದಿರೆಯೂ ಅದನ್ನೇ ಬಿಗಿಹಿಡಿಯುವುದು ಆಶ್ಚರ್ಯವಲ್ಲ. ಇಲ್ಲಿ ನಾವು ಜ್ಞಾಪಿಸಬೇಕಾದ ಒಂದು ಮಾತಿದೆ. ಜವಾಹರಲಾಲರು ಚೀನಾವನ್ನಾಗಲೀ ಅದರ ನಾಯಕರನ್ನಾಗಲೀ—ಪ್ರಜೆಗಳನ್ನು ದ್ವೇಷಿಸಿದ್ದೇ ಇಲ್ಲ— ದ್ವೇಷಿಸತೊಡಗಿದ್ದು ಯಾವಾಗ? ಪ್ರಧಾನಿ ಚೌ-ಎನ್-ಲಾಯಿಯನ್ನು ದಿಲ್ಲಿಗೆ ಬರಮಾಡಿಸಿ, ರಾಜೋಚಿತವಾಗಿ ಉಪಚರಿಸಿ, ಪಂಚಶೀಲ ತತ್ವಗಳಿಗೆ ಸಹಿ ಹಾಕಿಸಿದ್ದು ಅವರೇ ಅಲ್ಲವೆ? ಹಿಂದೀ-ಚೀನೀ ಭಾಯಿ ಭಾಯಿಯೆಂದು ಘೋಷಿಸಿ ಹೋದವರು ಶಾವ್ರೋಚೀಯ ಪ್ರಧಾನಿಯಲ್ಲವೆ? ಆದರೆ, ಪಂಚಶೀಲವನ್ನು ಮುರಿದು ನೆಹರುರವರ ಪ್ರಧಾನತನವಿರುವಾಗಲೇ ಭಾರತದ ಮೇಲೆ ಲಗ್ಗೆಯೇರಿ ಬಂದ ವಿಶ್ವಾಸ ಘಾತಿಗಳು ಚೀನೀಯ ನಾಯಕರೇ ಅಲ್ಲವೆ? ಕೊಲಂಬೊ ರಾಷ್ಟ್ರಗಳು ಮುಂದಿಟ್ಟ ಸಂಧಾನ ಸಲಹೆಗಳನ್ನು ಮೊದಲು ಸ್ವೀಕರಿಸಿದಂತೆ ಮಾಡಿ, ಮುಂದೆ ನಿರಾಕರಿಸಿದ ಮಹಾ ವಿಶ್ವಾಸಿಗಳು ಅವರೇ ಅಲ್ಲವೆ? ಭಾರತವು ಇಂದಿಗಾದರೂ ಈ ಸಲಹೆಗಳ ತಳಹದಿಯಲ್ಲಿ ಸಂಧಾನದ ಮಾತುಕತೆ ನಡೆಸಲು ಸಿದ್ಧವಿದೆ; ಆದರೆ, ಚೀನಾ? ಹೀಗಿರುವಾಗ ವಸ್ತು ಸ್ಥಿತಿಯನ್ನು ಮರೆಮಾಚಿ, ತಮ್ಮ ಉಡಾಪಿ ಕೊಚ್ಚಿಕೊಳ್ಳುತ್ತಿರುವ ಚೀನೀ ನಾಯಕರ ದಯನೀಯ ಸ್ಥಿತಿ ಕಂಡು ಅಳಬೇಕೋ ನಗಬೇಕೋ ತಿಳಿಯದು. ಅಂತೂ ಪಾಕಿಸ್ತಾನವನ್ನು ತಮ್ಮ ಮುಷ್ಟಿಯೊಳಗೆ ತಂದು ಕೊಂಡು ಏಶ್ಯಾದಲ್ಲಾದರೂ ತಲೆಯೆತ್ತಿ ಮೆರೆಯುವ ಹಂಬಲ ಮಾತ್ರ ಅವರಲ್ಲಿದೆ—ಇದು ಎಷ್ಟರವರೆಗೆ ಸಾಧ್ಯವೆನಿಸೀತೋ ಈಗಲೇ ಹೇಳಬಾರದು, ಏಕೆಂದರೆ, ಪಾಕಿಸ್ತಾನ ಚೀನೀ ನಾಯಕರನ್ನು ಬರಮಾಡಿಸಿದ ಉದ್ದೇಶವೇನು? ಭಾರತದ ಪ್ರಧಾನಿಯವರ ಸಂಚಾರಾವಧಿಯಲ್ಲಿ ಅದಕ್ಕೆ ಉಪಕಾರ—ಯಾ—ಸಹಾಯ ಸಲ್ಲಿಸುವಲ್ಲಿ ಅಮೆರಿಕೆ ಮೊದಲಾದುವು ಮುಂದಾಗಬಹುದು—ಆ ಸಮಯದಲ್ಲಿ ತನ್ನ ಕಪಟ ನೀತಿ ಕರಗಿ ಹೋದೀತು— ಅದಕ್ಕಾಗಿ ಒಂದು ರೀತಿಯಿಂದ ಮಹಾರಾಷ್ಟ್ರವನ್ನು ಬೆದರಿಸುವ ಕುಟಿಲ ನೀತಿಯ ಪ್ರದರ್ಶನ ಮಾತ್ರವಿದು. ಚೀನೀಯ ನಾಯಕರಿಗೆ ತಕ್ಕಂತಹ ಜಂಟಿ ಹೇಳಿಕೆಗೆ ಸಹಿ ಹಾಕಲು ಆಯ್ಯೂಬಖಾನರು ಮುಂದಾಗಲಿಲ್ಲ. ಮುಖ್ಯವಾಗಿ ಕಾಶ್ಮೀರದ ಬಗ್ಗೆ ತನ್ನ ನೀತಿಯನ್ನು ಚೀನಾದಿಂದದು ಸಮರ್ಥಿಸಿಕೊಂಡಿತು. ತನ್ನ ಮೇಲೆ ಆಕ್ರಮಣ ನಡೆದ ಪಕ್ಷದಲ್ಲಿ ಚೀನೀಯ ೬೫೦ ಮಿಲಿಯ ಪ್ರಜಾ ಜನರ ಬೆಂಬಲವನ್ನವರು ಸ್ವಾಗತಿಸಬಹುದಾದರೂ ಈ ವಿಷಯವನ್ನು ಜಂಟಿ ಹೇಳಿಕೆಯಲ್ಲಿ ಸೇರಿಸಲು ಒಪ್ಪಲಿಲ್ಲ. ಹೀಗೆ ಮಾಡುವುದರಿಂದ ಅಮೆರಿಕೆಯಲ್ಲಿ ಪಾಕಿಸ್ತಾನದ ಬಗ್ಗೆ ದುರಭಿಪ್ರಾಯ ಮೂಡುವುದೆಂದೂ ಆಗ ಅದರಿಂದ ಯಾವ ರೀತಿಯ ಲಾಭವನ್ನು ಮಾಡಿಕೊಳ್ಳುವುದು ಸಾಧ್ಯವಿಲ್ಲವೆಂದೂ ಅಯ್ಯೂಬರಿಗೆ ಗೊತ್ತು. ತಾನು ಕೆಂಪು ಚೀನಾವನ್ನೇ ನಂಬಿದರೆ, ಉಳಿದವರು ತನ್ನ ಕೈ ಬಿಡುವುದು ಖಂಡಿತವೆಂದೂ, ಅದೂ ಅಲ್ಲದೆ ತನಗೆ ತಕ್ಕಂತೆ ನೆರವು ನೀಡುವುದಕ್ಕೆ ಕೆಂಪು ಚೀನಾ ಸಿದ್ಧವಿಲ್ಲವೆಂದೂ ಅವರು ಈಗಾಗಲೇ ಕಂಡು ಕೊಂಡಿದ್ದಾರೆ. ಹಾಗಿರುವಾಗ ಅಯ್ಯೂಬರು ತೋರಿಸಿದ ಜಾಣ್ಮೆಯಿಂದ ಕೆಂಪು ನಾಯಕರೂ ತಮ್ಮ ಬೇಳೆ ಎಣಿಸಿರುವಷ್ಟು ಬೇಯಲಾರದು ಎಂದುಕೊಂಡರೆ ಅತ್ಯುಕ್ತಿಯಲ್ಲ.

ಒಂದು ಮಾತಂತೂ ನಿಜ. ಅಯ್ಯೂಬಖಾನರ ಈ ಕೆಂಪು ಸರ್ಪ ಚುಂಬನದ ಘಟನೆಯಿಂದ ಭಾರತಕ್ಕೆ ತುಂಬ ನೆರವಾಗುವುದು. ಭಾರತದ ಮಿತ್ರರಾಷ್ಟ್ರಗಳು ಭಾರತದ ಸತ್ಯವಾದಿತನವನ್ನೂ ಪಾಕಿಸ್ತಾನದ ಕುತಂತ್ರವಾದವನ್ನೂ ಕಣ್ಣಾರೆ ಕಾಣುವಂತಾಯಿತು. ಸಂರಕ್ಷಣೆಯತ್ತ ನಮ್ಮ ಗಮನವನ್ನು ಮೊತ್ತಮೊದಲಿಗೆ ಹರಿಸಿದ ಕೆಂಪು ಚೀನಾ-ಪಾಕಿಸ್ತಾನಗಳೇ ಈ ಕಾರ್ಯದಲ್ಲೂ ನಮಗೆ ನೆರವಾದುದು ಒಂದು ಬಗೆಯಿಂದ ಅಭಿನಂದನೀಯವೇ ಅಲ್ಲವೆ?

ವಚನ ಸುಧೆ

ಅಪಿಸಂವದನಂ ದಾನಂ
ಸಮಯ ಸ್ಯಾವ್ಯತಿಕ್ರಮಃ
ಆವರ್ತಯಂತಿ ಭೂತಾನಿ
ಸಮ್ಯಕ್ಪ್ರಣೀತಾ ಹಿತಾ ಚ ವಾಕ್||

ನಿರ್ವಂಚನೆ, ದಾನ, ಭಾಷಾಪರಿಪಾಲನೆ ಮತ್ತು ಉತ್ತಮ ರೀತಿಯಲ್ಲಿ ಹೇಳಿದ ಹಿತವಾದ— ಇವು ಎಲ್ಲರನ್ನೂ ತನ್ನವರನ್ನಾಗಿ ಮಾಡಿಕೊಳ್ಳುತ್ತವೆ.

ಇದು ಶೋಭೆಯಲ್ಲ

ಕೇಂದ್ರ ಸರಕಾರಕ್ಕೆ ತಲೆನೋವೆನಿಸಿದ್ದ ಬಸ್ತಾರದ ಪದಚ್ಯುತ ದೊರೆಯು ಆದಿವಾಸಿಗಳ ಸಂಗಡ ವ್ಯಕ್ತ್ಯವನ್ನೈದುದು ದುರಂತ ಘಟನೆಯೇನೋ ಹೌದು. ಈ ಸಂಬಂಧದಲ್ಲಿ ನ್ಯಾಯ ವಿಚಾರಣೆ ಮಾಡಲಾಗುವುದೆಂದು ಮಧ್ಯಪ್ರದೇಶ ಸರಕಾರವು ಘೋಷಿಸಿದ್ದೂ ನ್ಯಾಯೋಚಿತವೇ. ಈ ವಿಷಯದಲ್ಲಿ ಮಂತ್ರ್ಯರಿಂದಲೂ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

'ರಾಜ್ಯ ಸರಕಾರವು ನೇಮಿಸಲು ಯೋಚಿಸುತ್ತಿರುವ ವೇತನ ಆಯೋಗವು ನೇಮಿತವಾಗಿ, ಅದು ವರದಿಸಲ್ಲಿಸಿ, ಆ ವರದಿಯನ್ನು ಸರಕಾರ ಪರಿಶೀಲಿಸಿ ನಿರ್ಣಯಕ್ಕೆ ಬರುವಷ್ಟರಲ್ಲಿ ಇನ್ನೂ ಹೆಚ್ಚು ವೇತನ ನೀಡಲು ಸಮರ್ಥನಾಗುವುದೆಂಬ ವಿಶ್ವಾಸ...'

ಬಾಪೂಜಿ ಸಂಸ್ಮರಣೆಯಲ್ಲಿ—
ಗಾಂಧಿಯವರ ಭವಿಷ್ಯವಾಣಿ

ಸ್ವರಾಜ್ಯವು ಒಮ್ಮೆಲೇ ಇಲ್ಲವೇ ಎಷ್ಟೋ ವರ್ಷಗಳ ವರೆಗೆ ಬ್ರಿಟಿಷ್ ರಾಜ್ಯಕ್ಕಿಂತ ಒಳ್ಳೆಯದಾಗುವ ಸಂಭವವೇ ಇಲ್ಲ. ಸ್ವತಂತ್ರವಾದೊಡನೆ ಚುನಾವಣೆ ಪದ್ಧತಿಯಲ್ಲಿಯ ಯಾವತ್ತೂ ದೋಷಗಳು, ಅನ್ಯಾಯಗಳು, ಶ್ರೀಮಂತರ ಜುಲುಮೆ, ಸರಕಾರ ನಡೆಸುವವರ ಅನುಭವಹೀನತೆ, ಇವೆಲ್ಲ ನಮಗೆ ಗಂಟು ಬೀಳುವವು. ಈ ಜಂಝಾಟ ನಾವೇಕೆ ಕೊಂಡುಕೊಂಡೆವಪ್ಪಾ ಎಂದು ಜನತೆಗೆ ಅನಿಸಹತ್ತೀತು. ಜನರು ಸಿಟ್ಟುಸಿರು ಬಿಡುತ್ತ ಗತಗೋಷ್ಠಿಗಳ ನೆನಪು ಮಾಡುವರು— ಆಗ ಹೆಚ್ಚು ನ್ಯಾಯವಿತ್ತು. ಆಗಿನ ಸರಕಾರವು ಇಂದಿನದಕ್ಕಿಂತ ಒಳ್ಳೆಯದಿತ್ತು. ಶಾಂತಿ ಇತ್ತು. ಮತ್ತು ಅಧಿಕಾರಿಗಳಲ್ಲೂ ಸಹ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಪ್ರಾಮಾಣಿಕತನ ಇತ್ತು ಎಂದು ಹೇಳತೊಡಗುವರು. ಒಂದು ತರದಿಂದ ನಮ್ಮ ಹಣೆಗೆ ಹತ್ತಿದ ಅಪಮಾನ ಹಾಗೂ ಪರದ್ಧಾಸ್ಯದ ಕಲಂಕವನ್ನಷ್ಟು ತೊಳೆದುಕೊಂಡೆವಲ್ಲ! ಅದೊಂದೇ ಲಾಭ ಎಂದೂ ಅನಿಸಹತ್ತುವದು.

(ಹರಿಜನ ೨೪—೧—೧೯೩೭)

ಗಾಂಧಿಯವರು ಮುಕ್ತಾತ್ಮರು

(ಲೇ:— ವಿನೋಬಾ)

ಮಹಾಪುರುಷರು ಜೀವಂತರಿರುವಾಗ ಅವರ ಶಕ್ತಿಯು ಪರಿಮಿತವಾಗಿರುತ್ತದೆ. ಅವರು ದೇಹಮುಕ್ತರಾದ ತರುವಾಯ ಅವರ ಶಕ್ತಿಯು ಅಪರಿಮಿತವಾಗುತ್ತದೆ. ಕೆಲವರು ದೇಹಮುಕ್ತರಾದ ಮೇಲೆ ಅವ್ಯಕ್ತ ಶರೀರದಲ್ಲಿ ಸೂಕ್ಷ್ಮವಾದ ಲಿಂಗದೇಹ ರೂಪದಲ್ಲಿ ಉಳಿದು ಬಿಡುತ್ತಾರೆ ಮತ್ತು ಪುನರ್ಜನ್ಮ ಹೊಂದುತ್ತಾರೆ. ಆದರೆ ಗಾಂಧಿಯವರ ಪರಿಸ್ಥಿತಿ ಅಂಥದಲ್ಲ. ಗಾಂಧಿಯವರು ತಮ್ಮ ಕೊನೆಯ ಗಳಿಗೆಯಲ್ಲಿ ಭಗವಂತನನ್ನು ಸ್ಮರಿಸಿದರು. ಅವರು ಯಾವಜ್ಜೀವನ ಜಾಗೃತರಾಗಿಯೇ ಇದ್ದರು. ನಿರಂತರವೂ ಅವರದು ನಾಮಮಯ ಜೀವನವಾಗಿತ್ತು. ಪ್ರಾರ್ಥನೆಗೆ ಹೋದವರು ನಿಂತನಿಂತಲ್ಲೇ ಮುಕ್ತರಾದರು. ಅವರ ಜ್ಯೋತಿಯು ಪರಮಾತ್ಮನಲ್ಲಿ ಸಮ್ಮಿಲನವಾಯಿತು.

ಕೊನೆಯ ದಿನಗಳಲ್ಲಿ ಅವರ ಮನಸ್ಸಿಗೆ ತುಂಬಾ ವೇದನೆಯಾಗುತ್ತಿತ್ತು ಎಂದು ಕೆಲಜನ ತಿಳಿದಿದ್ದಾರೆ. ಆದರೆ ಅದೇನೂ ಒಳಗಿನ ವೇದನೆಯಾಗಿರಲಿಲ್ಲ. ನಮ್ಮ ಬಗ್ಗೆ ಅವರಿಗೆ ವೇದನೆಯಾಗುತ್ತಲಿತ್ತು. ಕೊನೆಗಾಲದಲ್ಲಿ ಅವರು ಸಹನ ಮಾಡಿದ ವೇದನೆಗಳೆಲ್ಲ ನಮ್ಮ ಸಲುವಾಗಿ ಇತ್ತು. ಆದರೆ ಇದರ ಮೇಲಿಂದ ಅವರ ವಾಸನೆ ಉಳಿದು ಹೋಗಿರಬಹುದು ಎಂದು ಭಾವಿಸುವುದು ತಪ್ಪು. ಅವರು ಎಂದೋ ವಾಸನೆಯನ್ನು ದಾಟಿ ಹೋಗಿದ್ದರು. ಕೊನೆಯಲ್ಲಿ ನಡೆದದ್ದು ಅವರ ಲೀಲೆ ಮಾತ್ರ. ಶ್ರೀಕೃಷ್ಣನ ಜೀವನದಲ್ಲೂ ಸಹ ಕೊನೆಕೊನೆಗೆ, ಬಾಹ್ಯ ಜೀವನದಲ್ಲಿ ವೇದನೆ ಇತ್ತು. ಯಾದವರಲ್ಲಿ ಪರಸ್ಪರ ನಡೆದಿದ್ದ ಕಲಹದ ದೆಸೆಯಿಂದ ಅವರಿಗೆ ವೇದನೆಯಾಗುತ್ತಿತ್ತು. ಅದು ಅವರ ಲೀಲೆಯಾಗಿತ್ತು. ಶ್ರೀ ಕೃಷ್ಣನ ಪ್ರಯಾಣಕಾಲದಲ್ಲಿ ಯಾದವರಲ್ಲಿದ್ದ ಪರಿಸ್ಥಿತಿಯೇ ಗಾಂಧಿಯವರ ಪ್ರಯಾಣದ ಸಮಯಕ್ಕೆ ಭಾರತದಲ್ಲೂ ಇತ್ತು. ಅಂದು ಶ್ರೀ ಕೃಷ್ಣನಿಗಾದ ಗತಿಯೇ ಇಂದು ಗಾಂಧಿಯವರದೂ ಆಯಿತು. ಗಾಂಧೀಜಿ ಶ್ರೀ ಕೃಷ್ಣನ ಭಕ್ತರಾಗಿದ್ದರು—ಗೀತೆಯ ಅನನ್ಯ ಭಕ್ತರಾಗಿದ್ದರು. ತಮ್ಮ ಪ್ರತಿಯೊಂದು ಕೃತಿಯನ್ನೂ ಗೀತೆಯ ಒರೆಗಲ್ಲಿಗೆ ಹಚ್ಚಿ ನೋಡುತ್ತಿದ್ದರು. ಆದ್ದರಿಂದ ಅವರು ಮುಕ್ತರೇ ಇದ್ದಾರೆ. ಮತ್ತು ಅವರ ಆಶೀರ್ವಾದವೆಂದರೆ ಪರಮಾತ್ಮನದೇ ಆಶೀರ್ವಾದ.

ಇಂಥಾ ದೇಶದ ಬಗ್ಗೆ ಕನಿಕರ ಅನಿಸುತ್ತದೆ

(ಖಲೀಲ ಜಿಬ್ರಾನ್)

ಎಲ್ಲಿ ಧರ್ಮವು ಕಡಿಮೆ ಇದ್ದು ರೂಢಿ ಮತ್ತು ಲೋಕ ಭ್ರಮೆಗಳೇ ಹೆಚ್ಚಿಗೆ ಇರುತ್ತವೆ.

ಎಲ್ಲಿಯ ಜನರು ತಮ್ಮಲ್ಲಿ ತಯಾರಾಗುವ ಬಟ್ಟೆಯನ್ನು ಉಪಯೋಗಿಸುವದಿಲ್ಲ, ಮತ್ತು ಪರದೇಶಗಳಲ್ಲಿ ಬೆಳೆಯುವ ಧಾನ್ಯದ ಮೇಲೆ ಜೀವಿಸುತ್ತಾರೆ.

ಎಲ್ಲಿ ಗೂಂಡಾ (ಪುಂಡ) ಜನರನ್ನು ವೀರರೆಂದು ಗೌರವಿಸಲಾಗುತ್ತದೆ.

ಎಲ್ಲಿಯ ಜನರು ಗತಕಾಲದಲ್ಲಿಯ ಪರಾಕ್ರಮದ ಗೀತೆಗಳನ್ನು ಅಭಿಮಾನ ಪೂರ್ವಕ ಹಾಡುತ್ತಾರೆ. ಮತ್ತು ದೇಶದ ತಲೆಯ ಮೇಲೆ ತೂಗಾಡುತ್ತಿರುವ ಕತ್ತಿಯ ಕಡೆಗೆ ದುರ್ಲಕ್ಷ ಮಾಡುತ್ತಾರೆ. ಮತ್ತು ಅದನ್ನು ಬದಿಗೆ ಸರಿಸಲು ಯಾವುದೇ ಪ್ರಯತ್ನ ಮಾಡುವದಿಲ್ಲ.

ಎಲ್ಲಿಯ ರಾಜಕೀಯ ಮುಖಂಡರು ನರಿಯಂಥ ಕಾರಸ್ಥಾನಿಗಳಾಗಿದ್ದಾರೆ. ಎಲ್ಲಿಯ ತತ್ವಜ್ಞಾನಿಗಳಿಗೆ ಜಾದೂಗಾರರಂತೆ ಇಂದ್ರಜಾಲ ಆಟಗಳನ್ನು ಮಾಡಿತೋರಿಸುವದರಲ್ಲೇ ಧನ್ಯತೆ ಅನಿಸುತ್ತದೆ. ಮತ್ತು ಎಲ್ಲಿಯ ಕಲಾಕಾರರು ವಾಸನಾವಿಕಾರಗಳನ್ನು ಉದ್ದೀಪಿಸುವ ಕೃತಿಗಳನ್ನು ಮಾಡಿ ತಮ್ಮ ಬೆನ್ನು ಚಪ್ಪರಿಸಿಕೊಳ್ಳುತ್ತಾರೆ.

ಯಾವ ರಾಷ್ಟ್ರವು ಭಿನ್ನ ಭಿನ್ನ ತುಂಡುಗಳಾಗಿ ವಿಭಾಗಿಸಲ್ಪಟ್ಟದೆ. ಮತ್ತು ಅಂಥ ಪ್ರತಿಯೊಂದು ವಿಭಾಗವು ತಾನೇ ಒಂದು ಸ್ವತಂತ್ರ ರಾಷ್ಟ್ರವಾಗಬೇಕೆಂದು ಯೋಚನೆ ಮಾಡುತ್ತದೆ.

ಅಂಥ ರಾಷ್ಟ್ರದ ಬಗ್ಗೆ ಕನಿಕರ ಅನಿಸುತ್ತದೆ.

(ಭೂದಾನ)

ಉಡುಪಿಯ ಬೆಳವಣಿಗೆಗೆ ನಾಂದಿ ಹಾಕಿಕೊಟ್ಟ
ದೂರದರ್ಶಿ ದಿ| ಟಿ. ಉಪೇಂದ್ರ ಅನಂತ ಪೈಗಳಿಂದ
ಸ್ಥಾಪಿತವಾದ

ಶ್ರೀ ರಾಮಕೃಷ್ಣ ಥಿಯೇಟರ್ ಲಿ.

ಉಡುಪಿ

(ಅಲಂಕಾರ್ ಮತ್ತು ಕಲ್ಪನಾ ಚಿತ್ರಮಂದಿರಗಳ ಮಾಲಕರು)

ಇವರು

ತಾ. 5—4—1966ರಂದು

ಪದ್ಮಶ್ರೀ ಶಿವಾಜಿಗಣೇಶನ್
ಇವರು ಮುಖ್ಯ ಅತಿಥಿಗಳಾಗಿ
ಪದ್ಮಶ್ರೀ ಡಾ| ಟಿ. ಎಂ. ಎ. ಪೈಗಳ
ಹಿರಿತನದಲ್ಲಿ ಆಚರಿಸುತ್ತಿರುವ

ರಜತ ಮಹೋತ್ಸವ ಸಮಾರಂಭಕ್ಕೆ

'ನವಯುಗ'ದ ಹಾರ್ದಿಕ ಶುಭಾಶಯಗಳು.

ಪದ್ಮಶ್ರೀ ದ್ವಯರ ಶುಭಾಶಂಸನ
ರಸಿಕ ಬಂಧುಗಳ ಹಿತಚಿಂತನೆಗಳಿಂದ
ಶ್ರೀ ರಾಮಕೃಷ್ಣ ಥಿಯೇಟರು
ಸಕಲ ಸಮೃದ್ಧಿ ಹೊಂದಿ ಬೆಳಗಿ ಬಾಳಲಿ.

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಪ್ರಗತಿಯ ದಾರಿಯಲ್ಲಿ

ದಿ ಪಾಂಗಾಳ ನಾಯಕ್ ಬ್ಯಾ
ಲಿ. ಇದರ ೧೯೬೫ನೆ ಇಸವಿಗೆ ಸಂ
ಸಿದ ೪೬ನೆಯ ವಾರ್ಷಿಕ ವರದಿ ವ
ಪರಿಶೋಧಿತ ಆಯ-ವ್ಯಯ, ೩
ಮೂಲಗಳ ಲೆಕ್ಕ ಪತ್ರಗಳು ಅತೀವ
ಪ್ತಿಕಾರಕವಿವೆ. ಕಳೆದ ವರ್ಷವಂ
ಬ್ಯಾಂಕಿಂಗ್ ವ್ಯವಹಾರ ರಂಗದ ವ
ಟ್ಟದ ಅವಧಿ; ಇದರಲ್ಲಿಯೂ ಉ
ಯೋಗ್ಯ ಸೇವೆ ಸಲ್ಲಿಸಿ ಬ್ಯಾಂಕು
೧೪ ಸಾವಿರದಷ್ಟು ನಿವ್ವಳ ಲಾಭ
ಗಳಿಸಿರುವುದು ಶ್ಲಾಘನೀಯ.

೧೯೬೫ರ ದಶಂಬರ ಕೊನೆ
ಬ್ಯಾಂಕಿನ ವ್ಯವಹಾರಕ್ಕೆ ಸಂಬಂ
ಅಂಕೆ—ಅಂಶಗಳನ್ನು ಗಮನಿಸಿ
ಬ್ಯಾಂಕಿನ ಪ್ರಗತಿಯ ಚಿತ್ರ ಕಣ್ಣೆ
ನಿಲ್ಲುತ್ತಿದೆ.

ಅಧಿಕೃತ ಬಂಡವಾಳ ರೂ. ೨೦
ಹೊರಡಿಸಿದ ಬಂಡವಾಳ ರೂ. ೧೦
ತೆತ್ತ ಬಂಡವಾಳ ರೂ. ೯.೯೮
ಕ್ಷೇಮ ನಿಧಿ ರೂ. ೩.೫೦
ಒಟ್ಟು ಠೇವಣಾತಿ ರೂ. ೨.೦೮ ಕೋ

ಒಟ್ಟು ಸಾಧನ ಸಂಪತ್ತು ರೂ. ೨
ಕೋಟಿಯಿದ್ದು ಇದರಲ್ಲಿ ರೂ. ೧
ಕೋಟಿ ಹೊರಗೆ ಕೊಟ್ಟ ಸಾಲ
ರೂ. ೫೫ ಲಕ್ಷದ ಸರಕಾರಿ ಅಥವಾ
ಕಾರಿ ಮಾನ್ಯತೆ ಪಡೆದ ಸಾಲ ಪತ್ರ
ಸೇರಿವೆ. ಹಿಂದಿನ ವರ್ಷಕ್ಕಿಂತ
ಮುಖ ಪ್ರಗತಿಯನ್ನು ಈ ಅಂಕೆ
ತೋರಿಸುತ್ತವೆ. ಮುಖ್ಯವಾಗಿ ಠೇ
ತಿಯು ಸೇ. ೧೪ರಷ್ಟು ಹೆಚ್ಚಿರುವುದ
ಮನೀಯ. ಠೇವಣಿಯ ಸೇ. ೭೫
ನಿರಖು ಠೇವಣಿಯಾಗಿಯೇ ಇರು
ಇನ್ನೊಂದು ವೈಶಿಷ್ಟ್ಯ. ಬ್ಯಾಂಕು
ವರ್ಷಾಂತ್ಯದಲ್ಲಿ ೨೧ ಶಾಖೆಗ
ಹೊಂದಿತ್ತು. ಮುಂದೆ ಕೆಲವು ಶಾ
ನ್ನು ತೆರೆಯಲು ಯೋಚಿಸುತ್ತಿರುವು
ಡೈರೆಕ್ಟರರ ವರದಿಯು ಹೇಳುತ್ತದೆ.

ಪಾಂಗಾಳ ನಾಯಕ್ ಬ್ಯಾಂಕಿನ
ಗಳಲ್ಲಿ ಹೆಚ್ಚಿನವು ಗ್ರಾಮೀಣ ಪ್ರದೆ
ಲ್ಲಿಯೇ ಇವೆ. ಬ್ಯಾಂಕಿಂಗ್ ವ್ಯವಹಾ
ಪರಿಚಯವನ್ನು ಗ್ರಾಮೀಣ ಜನ
ಮಾಡಿಕೊಡುವುದು, ಉಳಿತಾಯ
ಯನ್ನು ಹೆಚ್ಚಿಸುವುದು, ತನ್ಮೂಲಕ
ಶದ ಯೋಜನೆಗಳಿಗೆ ಬಂಡವಾಳ
ಯುವಂತೆ ಮಾಡುವುದು ವಾಣಿಜ್ಯ ಬ
ಕುಗಳ ಕರ್ತವ್ಯ. ಈ ದಿಸೆಯಲ್ಲಿ
ಗಾಳ ನಾಯಕ್ ಬ್ಯಾಂಕು ಮುಂದು
ದಿದೆ.

ವರದಿ ವರ್ಷದಲ್ಲಿ ಪಾಲುದಾ
ಹಂಚುವ ಡಿವಿಡೆಂಡ್ ಸೇ. ೫
ಇದು ಆದಾಯ ತೆರಿಗೆಗೊಳಪಟ್ಟದೆ.
ಘಾರ್ಘವಧಿಯ ಠೇವಣಿಗಳಿಗೆ ಸೇ. ೮
ಬಡ್ಡಿ ನೀಡುವಾಗ ಪಾಲುದಾರರಿಗೆ
ಸೆಯನಿಸಿದರೆ ಆಶ್ಚರ್ಯವಿಲ್ಲ. ಕೆಲವೇ
ರ್ಷಗಳ ಹಿಂದೆ ಶೆಡ್ಯೂಲ್ಡ್ ಬ್ಯಾಂ
ಇದು ನೌಕರರ ವೇತನಾದಿಗಳಿಗೆ ಹೆ
ವೆಚ್ಚ ಮಾಡಬೇಕಾಗಿ ಬಂದಿರುವುದರಿ
ಮುಂದಿನ ವರ್ಷಗಳಲ್ಲಿ ಈ ಕೊರತೆಯ
ದೂರವಾಗುವುದೆಂದು ನಂಬಬಹುದು.

ಒಟ್ಟಿನಲ್ಲಿ ಬ್ಯಾಂಕಿನ ಪ್ರಗತಿ ಆಶಾ
ಯಕವಿದೆ; ಅದರ ವ್ಯವಹಾರಗಳು ಸ
ದೃಢವಿವೆ.

ಅಭಿಪ್ರಾಯ

ತಮ್ಮ ಡೊಂಕು ತಮಗೆ ತಿಳಿಯದು

ಬರೆದವರು
ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ವರ್ತಮಾನ ಕಾಲದಲ್ಲಿ ಭಾರತ ದೇಶವು ವಿದೇಶೀ ಮಿಷನರಿಗಳಿಂದ ಆವೃತವಾಗುತ್ತಿರುವುದು ಕಂಡು ಬರುತ್ತಿದೆ. ಭಾರತ ಸರಕಾರದ ಜಾತ್ಯತೀತ ತತ್ವವು ಅವರಿಗೆ ಅತ್ಯಂತ ಸಹಾಯಕ ಸಾಧನವಾಗಿ ಪರಿಣಮಿಸಿದೆ. ಈ ಮಿಷನರಿಗಳು ದೇಶ ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿ, ಆಚಾರ ವಿಚಾರಗಳ ಮೇಲೆ ಮಸಿ ಬಳೆಯಲು ಅವಿಶ್ರಾಂತವಾಗಿ ದುಡಿಯುತಿದ್ದಾರೆ. ಈ ಕಾರ್ಯದಲ್ಲಿ ಇವರು ಅನೇಕ ಹಿಂದೂ ಪ್ರಮುಖರನ್ನು (ರಾಜಕೀಯ ಮುಖಂಡರನ್ನು ಮಾತ್ರ) ತಮ್ಮ ಬಾಲ ಬಡಕರನ್ನಾಗಿ ಮಾಡಿಕೊಂಡಿರುತ್ತಾರೆ.

ಕ್ರೈಸ್ತ ಮಿಷನರಿಗಳು ಭಾರತೀಯ ಜನಾಂಗವನ್ನು ವಿಶ್ವದ ಮುಂದೆ ಒಂದು ಅಸಭ್ಯ ಜನಾಂಗವೆಂದು ತೋರಿಸುವ ಪ್ರಯತ್ನದಲ್ಲಿ ಪ್ರತಿ ವರ್ಷ ಕೋಟಿಗಟ್ಟಲೆ ಹಣ ವೆಚ್ಚಮಾಡುತಿದ್ದಾರೆ. ಹಿಂದೂಗಳನ್ನು ಸಂಸ್ಕೃತಿ ಹೀನರೆಂದು ತೋರಿಸಲಿಕ್ಕಾಗಿ ಅನೇಕ ತರದ ವಾದಗಳನ್ನೂ ಅವರು ಜನರ ಮುಂದಿಡುತ್ತಾರೆ.

"ನೀವು ಹಿಂದೂಸ್ಥಾನಕ್ಕೆ ಏತಕ್ಕಾಗಿ ಬಂದಿರಿ?" ಎಂದು ಒಬ್ಬ ಪಾದ್ರಿಯನ್ನು ವಿಚಾರಿಸಿದರೆ 'ಈ ದೇಶದಲ್ಲಿ ಒಂದು ಧರ್ಮವೆಂಬುದಿಲ್ಲ! ಒಬ್ಬನೇ ದೇವರೆಂಬುದಿಲ್ಲ! ಇಲ್ಲಿಯ ಅಸಭ್ಯರನ್ನು ಸಭ್ಯರನ್ನಾಗಿ, ಜ್ಞಾನಿಗಳನ್ನಾಗಿ ಮಾಡಿ ಎಲ್ಲರಲ್ಲಿ ಸಮಾನತೆಯನ್ನು ಸ್ಥಾಪಿಸಲಿಕ್ಕೆ ನಾವಿಲ್ಲಿಗೆ ಬಂದಿರುತ್ತೇವೆ; ಇದಕ್ಕಾಗಿ ಸರ್ವಸ್ವ ತ್ಯಾಗ ಮಾಡಿ (ಇವರು ಯಾವುದನ್ನು ಬಿಟ್ಟಿದ್ದಿಲ್ಲ) ದುಡಿಯುತಿದ್ದೇವೆ-" ಎಂದು ಉತ್ತರ ಕೊಡುತ್ತಾರೆ. ವಿದೇಶೀ ಕ್ರೈಸ್ತ ಉಪದೇಶಕರ ಈ ಅಭಿಪ್ರಾಯದಂತೆ "ಹಿಂದೂಸ್ಥಾನದಲ್ಲಿರುವವರೆಲ್ಲರೂ ಅಸಭ್ಯರು, ಅವಿವೇಕಿಗಳು, ಉತ್ತಮ ರೀತಿಯ ಸಾಮಾಜಿಕ ಜೀವನದ ರೀತಿನೀತಿಗಳನ್ನು ಅರಿಯದವರೆಂದು" ತಿಳಿಯಬೇಕಾಗುತ್ತದೆ. ದೋಷಪೂರ್ಣ ಜನಾಂಗವನ್ನು ಸುಸಂಸ್ಕೃತವನ್ನಾಗಿ ಮಾಡಲಿಕ್ಕೆ ಇಲ್ಲಿಗೆ ಬಂದಿರುವ ಬರುತ್ತಿರುವ ಇವರ ಹೃದಯ ಮತ್ತು ಕೈಗಳು ಅತ್ಯಂತ ಪವಿತ್ರವಾಗಿವೆಯೇ? ಎಂಬ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ದೊರೆಕಲಾರದು. ಒಬ್ಬ ನಿಷ್ಠಾವಂತ ಕ್ರೈಸ್ತನಿಗೆ ಈ ಪ್ರಶ್ನೆ ಮಾಡಿದರೆ ಅವನು ನಾಚಿಕೆಯಿಂದ ತಲೆ ತಗ್ಗಿಸಬೇಕಾಗುವುದು. ಭಾರತೀಯ ಜನಾಂಗವನ್ನು ಅಸಭ್ಯ ಜನಾಂಗವೆಂದು ಜಗತ್ತಿಗೆ ತೋರಿಸಲಿಕ್ಕೆ ಅವರು ಹೋದಲ್ಲೆಲ್ಲಾ ನಿರಂತರ ಅಪಪ್ರಚಾರ ಮಾಡುತ್ತಿರುವರೇ ಹೊರತು, ತಮ್ಮ ಮತ ಸಂಪ್ರದಾಯದಲ್ಲಿ ಅವಿತುಕೊಂಡಿರುವ ನಾನಾ ರೀತಿಯ ವರ್ಣಭೇದ ಭಾವನೆಗಳನ್ನು, ಸಾಮ್ರಾಜ್ಯ ವಿಸ್ತರಣ ನೀತಿಯನ್ನು ತೊಡೆದು ಹಾಕಲಿಕ್ಕೆ ಪ್ರಯತ್ನ ಮಾಡುವುದಿಲ್ಲ. ಕಾಮಿನಿ-ಕಾಂಚನವಾದಿಗಳ ಬಲದಿಂದ ಹಿಂದೂಸ್ಥಾನದಲ್ಲಿ ಅಂದಿನಿಂದಲೂ ಮತಾಂತರ ಕಾರ್ಯವನ್ನು ನಡೆಸುತಿದ್ದಾರೆ. ಮಹಾತ್ಮಾ ಯೇಸು ಕ್ರಿಸ್ತನು ತನ್ನ ಜೀವಿತ ಕಾಲದಲ್ಲಿ ಹೇಳಿರುವ 'ಮೊದಲು ನಿಮ್ಮಲ್ಲಿರುವ ಕಲ್ಮಶದ ರಾಶಿಯನ್ನು ನಾಶ ಮಾಡಿರಿ! ಆ ಮೇಲೆ ಅನ್ಯರ ಕಣ್ಣಿನಲ್ಲಿರುವ ಸಾಸಿವೆ ಕಾಳನ್ನು ತೆಗೆಯಿರಿ' ಎಂಬ ಹಿತವಚನ ವರ್ತಮಾನ ಕಾಲದ ಕ್ರೈಸ್ತರಿಗೆ ನೆನಪಿದೆಯೇ? ತಮ್ಮಲ್ಲಿನ ನೂರಾರು ದೋಷಗಳನ್ನು ಬಚ್ಚಿಟ್ಟು ಹಿಂದೂಗಳಿಗೆ ಧರ್ಮಬೋಧನೆಯಿತ್ತು ಸಭ್ಯ ಜನಾಂಗವನ್ನಾಗಿ ಮಾಡಲಿಕ್ಕೆ ಈ ದೇಶಕ್ಕೆ ಬಂದಿದ್ದಾರೆ. ಇಂದಿಗೆ ಯೇಸುಕ್ರಿಸ್ತನ ಅಂದಿನ ಉಪದೇಶ ಭಾರತಕ್ಕೆ ಬೇಕಾಗಿದೆ; ಪರಂತು ಕ್ರೈಸ್ತ ಪಾದರಿಗಳ ಸ್ವಾರ್ಥ ಸಾಧನೆ, ಕುಟಿಲ ರಾಜಕಾರಣ, ಸಾಮಾಜಿಕ ಮತಾಂತರ ಮೊದಲಾದ ದುರ್ವ್ಯವಹಾರ ಈ ದೇಶದಿಂದ ಮೊದಲು ಉಚ್ಚಾಟನೆಯಾಗಬೇಕು. ಪಾಶ್ಚಾತ್ಯ ದೇಶಗಳಲ್ಲಿ ಹರಡಿಕೊಂಡಿರುವ ರಕ್ತದಾಹ ಸಾಮ್ರಾಜ್ಯ ಲಾಲಸೆ, ಭಂಡವಾಳ ಶೇಖರಣೆ, ಮೊದಲಾದ ರಾಕ್ಷಸೀ ಮಹತ್ವಾಕಾಂಕ್ಷೆ ಮತ್ತು ಮಾನವತಾ ವಿರೋಧಿ ಮನೋವೃತ್ತಿ ಹರಡಿಕೊಂಡಿರುವ ಜನಾಂಗದಲ್ಲಿ ಯೇಸುಕ್ರಿಸ್ತನ ತತ್ವವು ಮೊಟ್ಟಮೊದಲು ಪ್ರಚಾರವಾಗಬೇಕಿತ್ತು. ಹಿಂದೂಗಳಲ್ಲಿ ನೂರಾರು ಜಾತಿಭೇದ, ವರ್ಗಭೇದಗಳಿರುವುದರಿಂದ ಮತ್ತು ಅಸಂಖ್ಯಾತ ರೀತಿಯ ವಿಗ್ರಹಾರಾಧನೆಗಳು ರೂಢಿಯಲ್ಲಿರುವುದರಿಂದ ಹಿಂದೂಗಳನ್ನು ಅಸಭ್ಯ ಹಾಗೂ ಸಂಸ್ಕಾರ ಹೀನ ಜನಾಂಗವೆಂದು ಕ್ರೈಸ್ತ ಮಿಷನರಿಗಳು ಹೇಳುವುದಾದರೆ, ಈ ಎಲ್ಲಾ ದೋಷಗಳು ಹಿಂದೂಗಳಿಗಿಂತ ಅವರಲ್ಲಿಯೂ ಅತ್ಯಧಿಕವಾಗಿ ಬೇರುಬಿಟ್ಟಿದೆ ಎಂಬುದನ್ನು ನಾವು ನೂರಾರು ನಿದರ್ಶನಗಳಿಂದ ತಿಳಿಸುಕೊಳ್ಳ ಬಲ್ಲೆವು.

ಹದಿನೈದನೆಯ ಶತಮಾನದಲ್ಲಿ "ರೆವರೆಂಡ್ ಫಾದರ್ ದಿ ಯೋಗ್ ರೋಡ್ರಿಗ್ಸ್" ಮತ್ತು 'ಫಾದರ್ ಫ್ರಾನ್ಸಿಸ್ ಗ್ಜೇವಿಯರ್' ಈ ಇಬ್ಬರು ಪ್ರಭೃತಿಗಳು ಗೋವೆಯಲ್ಲಿ ಲಕ್ಷಾಂತರ ಹಿಂದೂಗಳನ್ನು ಧರ್ಮ ಭ್ರಷ್ಟರನ್ನಾಗಿ ಮಾಡಲಿಕ್ಕೆ ಪೋರ್ತುಗೀಸ್ ಸರಕಾರದ ಸಹಾಯದಿಂದ ನಡಿಸಿದ ಭಯಾನಕ ಅತ್ಯಾಚಾರವನ್ನು ಯಾರೂ ಮರೆಯುವಂತಿಲ್ಲ.

ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆಯೇ ಮೊದಲಾದ ಕೆಲವೊಂದು ಅಂಧ ರೂಢಿಗಳು ಹರಡಿಕೊಂಡಿರುವುದು ವಾಸ್ತವ. ಇಷ್ಟು ಮಾತ್ರಕ್ಕೆ ಹಿಂದೂಗಳು ಅಸಭ್ಯರು, ಧರ್ಮ ವಿಹೀನರು ಇತ್ಯಾದಿ ವಿವಿಧ ರೂಪದಲ್ಲಿ ಅವಹೇಳನೆಗೆ ಯೋಗ್ಯರೇ?' ಕ್ರೈಸ್ತ ಮಿಶನರಿಗಳು ಯಾವ ಕೆಲವೊಂದು ಕ್ಷುಲ್ಲಕ ದೋಷಗಳನ್ನು ಲೆಕ್ಕಕ್ಕೆ ಎತ್ತಿ ತೋರಿಸಿ ತಮ್ಮ ಸಭ್ಯತೆಯನ್ನು ಜಗತ್ತಿನಲ್ಲಿ ಪ್ರದರ್ಶಿಸುತ್ತಿದ್ದಾರೋ ಅವರು ಹಿಂದೂಗಳನ್ನು ಸಂಪೂರ್ಣ ದೋಷ ಮುಕ್ತರನ್ನಾಗಿ ಮಾಡಲು ಸಮರ್ಥರಾಗುವರೋ? ಎಂಬ ಪ್ರಶ್ನೆಗೆ ಕ್ರೈಸ್ತಮತ ಭೋದಕರಲ್ಲಿ ಒಬ್ಬರಾದರೂ ಧೈರ್ಯದಿಂದ ಉತ್ತರ ಕೊಡಲಾರರು. ಮಾನವ ಜಗತ್ತಿಗೆ ವಿಶ್ವಧರ್ಮದ ದಿವ್ಯ ಸಂದೇಶ ಮತ್ತು ಮಾನವತೆಯ ನಿಜತತ್ವವನ್ನು ಬೋಧಿಸುತ್ತಿರುವ ಕ್ರೈಸ್ತ ಜಗತ್ತಿನ ಸಭ್ಯತೆ ಹೇಗಿದೆ ಎಂಬುದನ್ನು ಕ್ರೈಸ್ತ ಪಾದ್ರಿಗಳೇ ಆಗಿರುವ 'ಪ್ರೊಫೆಸ್ಸಾರ್' ಎಂಬವರ ಅಭಿಪ್ರಾಯ ಈ ರೀತಿ ಇದೆ:

"In India our religion (Bible) now and never can take root. The events of Gallelio cannot be pushed aside; contrary to this the Indian wisdom will flow back upon Europe our produce a through change in and thiking and knowing'

"ಹಿಂದೂಸ್ಥಾನದಲ್ಲಿ ನಮ್ಮ ಮತದ (ಬೈಬಲಿನ) ಬೇರು ಈ ಕಾಲದಲ್ಲಿ ಮಾತ್ರವಲ್ಲ ಯಾವ ಕಾಲದಲ್ಲಿಯೂ ಗಟ್ಟಿಯಾಗಲಾರದು. ನಾವು 'ಗೆಲೇಲಿಯೊ'ರವರ ವಿಚಾರಗಳನ್ನು ಅವಹೇಳನೆ ಮಾಡಲು ಸಾಧ್ಯವಿಲ್ಲ; ಇದಕ್ಕೆ ಪ್ರತಿಯಾಗಿ ಭಾರತೀಯ ಸಭ್ಯತೆ ಯುರೋಪಿನ ಆದ್ಯಂತ ಪ್ರಸಾರವಾಗುವುದು. ಮತ್ತು ಅಲ್ಲಿನ (ಯುರೋಪಿನ) ಜ್ಞಾನ ಹಾಗೂ ವಿಚಾರಗಳನ್ನು ಸಂಪೂರ್ಣವಾಗಿ ಪರಿವರ್ತನೆಗೊಳಿಸುವುದು."

ಕರೆಯದೆ ಬಂದಿರುವ ವಿದೇಶೀ ಮಿಶನರಿಗಳು! ಹಿಂತಿರುಗುವುದೇ ಒಳ್ಳೆಯದು. ಅವರವರ ದೇಶಗಳಲ್ಲಿ ಅಂತರಂಗ ಹಾಗೂ ಬಾಹ್ಯವಾಗಿ ಹರಡಿಕೊಂಡಿರುವ ವರ್ಣಭೇದ, ಇನ್ನಿತರ ಅವ್ಯವಹಾರ ನೀತಿಯ ಕಡೆಗೆ ದೃಷ್ಟಿ ಹರಿಸಲಿ. ಜಾತೀಯ ವಿದ್ವೇಷ, ರಾಕ್ಷಸೀಯ ಮಹತ್ವಾಕಾಂಕ್ಷೆ, ಉಚ್ಚ-ನೀಚ ವರ್ಗಭೇದ ಶೋಷಣ ಮನೋವೃತ್ತಿ ತಮ್ಮ ರಾಷ್ಟ್ರಗಳಲ್ಲಿ ಎಷ್ಟು ವ್ಯಾಪಕವಾಗಿದ ಎಂಬುದನ್ನು ಆಗ ಚೆನ್ನಾಗಿ ಮುಂದಿಟ್ಟು ಮಾಡಿಕೊಳ್ಳಬಲ್ಲರು. ಪಂಜಾಬಕೇಸರಿ ಸ್ವ. ಲಾಲಾ ಲಜಪತ ರೈಯವರು ತನ್ನ 'Unheppy India' (ದುಃಖೀ ಭಾರತ) ಎಂಬ ಸುಪ್ರಸಿದ್ಧ ಗ್ರಂಥದಲ್ಲಿ ಉಲ್ಲೇಖಿಸಿರುವ ಒಂದೆರಡು ವಿಷಯಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇವೆ. ೧ ಹಬ್ಶಿಯವರು ಅಮೇರಿಕ ಚಂಡಾಲರು. ಅಲ್ಲಿಯ ಹಬ್ಶಿಯವರಲ್ಲಿ ಮತ್ತು ಹಿಂದೂಸ್ಥಾನದಲ್ಲಿರುವ ಹರಿಜನರಲ್ಲಿ ಅನೇಕರೀತಿಯ ಸಾಮ್ಯತೆ ಇದೆ; ಅಲ್ಲಿಯ ಸಾಮಾಜಿಕ ಸಮಸ್ಯೆಗೆ ಪರಿಹಾರೋಪಾಯ ... ಗೆ ಸರಿಹೋಲುತ್ತದೆ.

೨ ಕ್ರಿ. ಶ. ೧೯೩೪ರಲ್ಲಿ ಒಬ್ಬನು ತನ್ನ ಕೆಲಸದ ಆಳನ್ನು ಹೊಡೆದುದಕ್ಕಾಗಿ ಅತನನ್ನು 'ಕೆರೋಲಿನಾ'ದ ವರಿಷ್ಠ ನ್ಯಾಯಾಲಯದ ಮುಂದೆ ವಿಚಾರಣೆಗ ಒಳಪಡಿಸಿದಾಗ "ತನ್ನ ಸೇವಕನಿಗೆ ಮರಣದಂಡನೆಗಿಂತ ಕೆಳತರಗತಿಯ ಯಾವ ಶಿಕ್ಷೆಯನ್ನಾದರೂ ವಿಧಿಸಲಿಕ್ಕೆ ಯಜಮಾನನು ಹಕ್ಕುದಾರನಾಗಿರುತ್ತಾನೆ; ಯಜಮಾನ ಮತ್ತು ಸೇವಕ ಇವರೊಳಗೆ ಪರಸ್ಪರ ಪಿತಾಪುತ್ರರಂತಹ ಸಂಬಂಧವಿದೆಯೆಂಬ ಭಾವನೆಯನ್ನಿಟ್ಟುಕೊಳ್ಳುವುದು ಯೋಗ್ಯವಲ್ಲ' ಎಂದು ತೀರ್ಪಿತ್ತನವಿಶ್ವ, ಆರೋಪಿ

(ಹನ್ನೆರಡನೇ ಪುಟ ನೋಡಿರಿ)

ಭಾರತದ ರಾಜ ನಗರಿಯಲ್ಲಿ
ಇನ್ನೊಂದು ಶಾಖೆ.......

450, ಕತ್ರಾ ಕೋಬನ್,
ಚಾಂದನೀ ಚೌಕ್,
ದೆಹಲಿ

— ಎಂಬಲ್ಲಿ —

ನಮ್ಮ ಇನ್ನೊಂದು ಹೊಸ ಶಾಖೆಯು
ತಾರೀಕು 4 ಎಪ್ರಿಲ್, 1966ರಂದು
ತೆರೆಯಲ್ಪಟ್ಟಿರುವುದೆಂದು ತಿಳಿಸಲು
ನಾವು ತುಂಬಾ ಸಂತೋಷಪಡುತ್ತೇವೆ.

ದೆಹಲಿಯಲ್ಲಿ ನಮ್ಮ ಇತರ ಶಾಖೆಗಳು:

29 A/1, ಆಸಫ್ ಆಲಿ ರಸ್ತೆ, ನ್ಯೂ ಡೆಲ್ಲಿ.

5/65, ಅಜಮಲ್ ಖಾನ್ ರಸ್ತೆ, ಕೆರೋಲ್ ಬಾಗ್, ಡೆಲ್ಲಿ-5.

FAITHFUL · FRIENDLY · SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 85 ಕೋಟಿಗೂ ಮಿಕ್ಕಿ.

ವಿಶ್ವವ್ಯಾಪ್ತಿಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ.......

ಕಲಾರಾಧನೆ

ಕನ್ನಡದ ಶಿಲ್ಪ ಕಲೆ

ಬರೆದವರು

ಶ್ರೀ ಸ. ನಾರಾಯಣ

ಕನ್ನಡ ನಾಡು-ನುಡಿಗಳಿಗೆ ಪ್ರತ್ಯೇಕ ಸಂಸ್ಕೃತಿ, ಕೀರ್ತಿ, ವೈಭವಪೂರ್ಣ ವರ್ಚಸ್ಸು ಕಲೆಗಾರಿಕೆ ಅನೂಚಾನವಾಗಿ ಬೆಳೆದು—ಉಳಿದು ಬಂದಿದೆ. ಕನ್ನಡ ನಾಡನ್ನು ಕಟ್ಟಿ ಆಳಿದ ರಾಜಮನೆತನಗಳು ಹತ್ತಾರು. ಸಾಮ್ರಾಟರು ದೊರೆಗಳು ನೂರಾರು ಮಂದಿ. ಅವರಲ್ಲಿ ಅತಿಮುಖ್ಯ ರಾಜಮನೆತನಗಳು ಹಲವಾರು. ಆಳುಪರು, ನಳರು, ಸೇಂದ್ರಕರು, ಬಾಣರು, ಕದಂಬರು, ಪುನ್ನಾಲರು, ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ರಾಷ್ಟ್ರಕೂಟರು, ಯಾದವರು, ಅನೇಗೊಂದಿಯ ಅರಸರು, ಹೊಯ್ಸಳರು, ವಿಜಯನಗರದರಸರು, ಮೈಸೂರು ಅರಸರು ಅತಿ ಮುಖ್ಯರಾದವರು. ತಮ್ಮ ಆಳ್ವಿಕೆಯ ಅವಧಿಯಲ್ಲಿ ಕನ್ನಡದ ಕೀರ್ತಿಯನ್ನು ಭಾರತಕ್ಕೆ ಮಾತ್ರವಲ್ಲದೆ ವಿದೇಶಗಳಿಗೂ ಹರಡಿದ್ದಾರೆ ಆ ಕೀರ್ತಿಶಾಲಿ ಅರಸರು.

ಪ್ರತಿಯೊಂದು ರಾಜಮನೆತನದ ಆಡಳಿತದ ಅವಧಿಯಲ್ಲಿಯೂ ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, - ಕಲೆ ಹೊಸ ಶೋಭೆಯಿಂದಲೇ ಬೆಳಗಿವೆ. ಅಖಂಡ ಮಾನವ ಜನಾಂಗವೇ ಅವರ ಕಾರ್ಯ ಕುಶಲತೆ, ದಕ್ಷತೆ, ಕಲಾಪರಿಪೂರ್ಣತೆಗೆ ತಲೆಬಾಗಬೇಕು; ಜೀವಮಾನ ಪರ್ಯಂತ ಕೊಂಡಾಡಬೇಕು— ಅಂತಹ ಸ್ತುತ್ಯಾರ್ಹ ಕಾರ್ಯವನ್ನು ನಡೆಸಿದ್ದಾರೆ ಅಂದಿನ ನಮ್ಮ ಪೂರ್ವಿಕರು.

ಕನ್ನಡ ನಾಡನ್ನು ಆಳಿದ ಎಲ್ಲ ಅರಸರ ಅವರ ಮನೆತನಗಳ ಬಗೆಯೇ ಒಂದು ವಿಧವಾದರೆ ಹೊಯ್ಸಳ ಅರಸು ಮನೆತನದ ಅರಸರ ಕಲಾಪ್ರಿಯತೆ, ಸೇವೆಯೇ ವಿಶಿಷ್ಟ ಬಗೆಯದಾಗಿದೆ. ತಮ್ಮ ಅಮೋಘ ಕಲಾಸೇವೆಯಿಂದ ಕನ್ನಡದ ಧವಳಕೀರ್ತಿಯನ್ನು ವಿಶ್ವ ಮಂಡಲಕ್ಕೆ ಹರಡಿದ್ದಾರೆ ಹೊಯ್ಸಳ ದೊರೆಗಳು. ಎಲ್ಲ ದೊರೆಗಳಿಗಿಂತಲೂ ಹೊಯ್ಸಳೇಶ್ವರ ವಿಷ್ಣುವರ್ಧನ ಅವನ ಪಟ್ಟ ಮಹಿಷಿ ಶಾಂತಲಾ ದೇವಿ ಇಬ್ಬರೂ ಹೊಯ್ಸಳ ಅರಸು ಮನೆತನದ ಎರಡು ಕಣ್ಣುಗಳು. ನಮ್ಮ ವಿಶಿಷ್ಟ ಕಲಾಮಯ ಜೀವನ. ಧೀರೋದ್ಧಾತ ಬಾಳುವೆಯಿಂದ ಕನ್ನಡನಾಡಿನ ಹೆಮ್ಮೆಯ ಮಹಾವ್ಯಕ್ತಿಗಳಾಗಿಲ್ಲ ಶಕ್ತಿಗಳೇ ಆಗಿದ್ದಾರೆ.

ಶಶಕಪುರದಲ್ಲಿ ಸುದತ್ತಮುನಿಯ ಆಜ್ಞೆ, ಆಶೀರ್ವಾದ ಬಲದಿಂದ ಸಳವಾಸಂತಿಕಾ ದೇವಾಲಯದಲ್ಲಿ ಮಲೆತ ಹೆಬ್ಬುಲಿಯನ್ನು ಕೊಂದು ಹೊಯ್ಸಳ ಅರಸರ ಮೂಲಪುರುಷನಾಗುತ್ತಾನೆ. ಅವನ ಪರಂಪರೆಯಲ್ಲಿ ವಿನಿಯಾದಿತ್ಯ, ನೃಪಕಾಮ, ಬಲ್ಲಾಳ, ಉದಯಾದಿತ್ಯ, ಮೊದಲನೆಯ ನರಸಿಂಹ ಮೊದಲ್ಗೊಂಡು ಹಲವಾರು ರಾಜರು ಆಳುತ್ತಾರೆ. ಅವರ ರಾಜಧಾನಿ ಬೇಲೂರು ಮತ್ತು ದೋರಸಮುದ್ರ (ಹಳೇಬೀಡು). ಮೊದಲು ಚಾಲುಕ್ಯ ಚಕ್ರವರ್ತಿಗಳ ಮಹಾಮಂಡಲಾಧೀಶ್ವರರಾಗಿದ್ದ ಹೊಯ್ಸಳ ಅರಸರು ಸ್ವತಂತ್ರ ದೊರೆಗಳಾದುದು ವಿಷ್ಣುವರ್ಧನನ ಆಳ್ವಿಕೆಯ ಅವಧಿಯಲ್ಲಿ. ವಿಷ್ಣುವರ್ಧನ ತನ್ನ ವಿಭಿನ್ನ ಕಾರ್ಯಗಳಿಂದ ಹೊಯ್ಸಳ ಮನೆತನಕ್ಕೆ ಶಾಶ್ವತ ಕೀರ್ತಿ ತಂದು ಕೊಡುತ್ತಾನೆ. ಜೈನ ಧರ್ಮಾವಲಂಬಿಯಾಗಿದ್ದು ಶ್ರೀ ರಾಮಾನುಜಾಚಾರ್ಯರ ಪ್ರಭಾವ, ತೇಜಸ್ಸಿಗೆ ಪರವಶನಾಗಿ ತನ್ನ ಮಗಳ ಕಾಯಿಲೆಯ ನಿವಾರಣೆಯ ಕಾರಣದಿಂದ ಅವರ ಧರ್ಮ ಸ್ವೀಕರಿಸಿ ಶ್ರೀ ವೈಷ್ಣವ ದೀಕ್ಷೆ ಪಡೆದು ಬಿಟ್ಟಿದೇವ ಎನ್ನುವ ಹೆಸರಿನಿಂದ ವಿಷ್ಣುವರ್ಧನನಾಗಿ ಪ್ರವರ್ಧಮಾನಕ್ಕೆ ಬರುತ್ತಾನೆ.

ವಿಷ್ಣುವರ್ಧನನ ಧರ್ಮಪತ್ನಿ ಶಾಂತಲಾ ದೇವಿ ಜೈನ ಧರ್ಮೀಯಳು. ಆದರೆ ಅವಳ ಭಕ್ತಿ, ಶ್ರದ್ಧೆ, ಕಲಾಪ್ರಿಯತೆ ಲೋಕೋತ್ತರವಾದುದು. ಪಟ್ಟಮಹಿಷಿ ಜನಸಾಮಾನ್ಯಳಂತೆ ದೇವಾಲಯದಲ್ಲಿ ಭಕ್ತಿ ಭಾವದಿಂದ ದೇವರ ಮುಂದೆ ನರ್ತಿಸುತ್ತಿದ್ದಳು ಎಂದರೆ ಆಕೆಯ ಕಲಾತನ್ಮಯತೆಗೆ ಬೇರೆ ಸಾಕ್ಷಿಬೇಕೆ? ಶಾಂತಲಾ ದೇವಿಯ ರೂಪ ಕಲಾಪ್ರಿಯತೆ, ಅಭಿರುಚಿಯನ್ನೇ ಇಂದು ಹೊಯ್ಸಳನಾಡಿನ ಶಿಲ್ಪಕಲಾ ಸಂಪ್ರದಾಯದಲ್ಲಿ ಕಾಣುತ್ತಿರುವುದು.

ಹೊಯ್ಸಳೇಶ್ವರ ವಿಷ್ಣುವರ್ಧನನ ಆಳ್ವಿಕೆಯ ಅವಧಿಯಲ್ಲಿ ಶಿಲ್ಪ ಕಲಾ ಕುಸುಮಗಳಂತಿರುವ, ಕನ್ನಡಿಗರ ಕಲಾಪ್ರತಿಮೆಗೆ ಸಾಕ್ಷಿಯಾಗಿರುವ ಹಲವಾರು ದೇವಾಲಯಗಳು ನಿರ್ಮಾಣಗೊಂಡವು. ಅವನ ಕಾಲದಲ್ಲಿ ನಾಡು ವಿಸ್ತಾರವಾಗಿ ಜನತೆಯ ಬಾಳು ಉತ್ತಮಗೊಂಡಂತೆ, ಸಾಮ್ರಾಜ್ಯವಿಸ್ತಾರವಾದಂತೆ ಶಿಲ್ಪಕಲೆಯೂ ಅಗಾಧ ರೂಪವಾಗಿಯೇ ಬೆಳೆಯಿತು.

ದ್ರಾವಿಡ ದೇವಾಲಯಗಳ ನಿರ್ಮಾಣ, ಸಂಪ್ರದಾಯ ಶೈಲಿಯಲ್ಲಿ ಒಂದು ಚಾಲುಕ್ಯ ಸಂಪ್ರದಾಯ ಮತ್ತು ಹೊಯ್ಸಳ ಸಂಪ್ರದಾಯ ಎರಡು ವಿಧ, ಹೊಯ್ಸಳ ಅರಸರ ಆಳ್ವಿಕೆಯಲ್ಲಿ ಪ್ರತ್ಯೇಕವಾಗಿಯೇ ಶಿಲ್ಪಕಲಾ ಸಂಪ್ರದಾಯವೊಂದು ಬೆಳೆದು ಬಂತು. ಹೊಯ್ಸಳ ಶಿಲ್ಪಕಲಾ ಸಂಪ್ರದಾಯದಲ್ಲಿ ಅಪೂರ್ವ ಕಾಂತಿ, ತೇಜಸ್ಸು ಆಕರ್ಷಣೆಗೆ, ಅಲಂಕಾರ ವಿನ್ಯಾಸ ಜನಾದರಣೀಯವಾಗಿದೆ; ಲೋಕೋತ್ತರವಾಗಿರುವುದರೊಂದಿಗೆ ಕಲೆಯ ಅಗಾಧ ಶಕ್ತಿಯನ್ನು ಪ್ರದರ್ಶಿಸುತ್ತದೆ.

ಹಂಪೆಯ ದೇವಾಲಯಗಳಲ್ಲಿ ಶೃಂಗೇರಿಯ ವಿದ್ಯಾಶಂಕರ ದೇವಾಲಯದಲ್ಲಿ ಚಾಲುಕ್ಯ ಹೊಯ್ಸಳ ಎರಡು ಸಂಪ್ರದಾಯಗಳ ಛಾಯೆಯನ್ನೂ ಕಾಣಬಹುದು. ಕನ್ನಡ ನಾಡಿನಾದ್ಯಂತ ವ್ಯಾಪಿಸಿ ನಿಂತಿರುವ ಅಭೂತ ಪೂರ್ವ ದೇವಾಲಯಗಳನ್ನು ನೋಡಲು, ಕಲಾಕೃತಿಗಳನ್ನೂ ವೀಕ್ಷಿಸಲು ಎರಡು ಕಣ್ಣು ಒಂದು ಜೀವಮಾನ ಸಾಲದು ನಮಗೆ ಕಾಣುವುದು ಶಿಲಾಮೂರ್ತಿಗಳು, ಶಿಲ್ಪಕಲೆಯ ಪ್ರೌಢಿಮೆಯಲ್ಲ. ಕಲಾ ವೈವಿಧ್ಯಪೂರ್ಣ ಸಜೀವ ಕಲಾಕೃತಿಗಳು

ಧರ್ಮ ಪ್ರಧಾನವಾದ ದೇಶ ಭಾರತ. ಗಂಗ, ರಾಷ್ಟ್ರಕೂಟ, ಚಾಲುಕ್ಯ, ಚೋಳ, ಹೊಯ್ಸಳಾದಿ ಅರಸರ ಕಾಲದಲ್ಲಿ ಧ... ಶಾಶ್ವತವಾಗಿ ನೆಲೆಸಿದ್ದುದಲ್ಲದೆ ಧ... ಉಚ್ಛ್ರಾಯ ಸ್ಥಿತಿಯಲ್ಲಿತ್ತು. ನಾಡಿ... ಹಲವೆಡೆಗಳಲ್ಲಿ ಉನ್ನತ ಕಲಾಕೃತಿಗಳ... ಸುಂದರದೇವಾಲಯಗಳು ಕಾಣಸಿಕೊಂ...ವೆ. ಅವುಗಳಲ್ಲಿ ದೊಡ್ಡಗದ್ದವಳ್ಳಿ ಲಕ್ಷ್ಮಿ... ದೇವಾಲಯ, ಬೇಲೂರಿನ ಕೇಶವ, ಚ... ಚನ್ನಿಗರಾಯನ ದೇವಾಲಯ, ಹಳೇ...ಡಿನ (ಅಪೂರ್ಣ) ಹೊಯ್ಸಳೇಶ್ವರ ... ವಾಲಯ ಇಕ್ಕೇರಿಯ ಬ್ರಹ್ಮೇಶ್ವರ ... ವಾಲಯ, ನುಗ್ಗೇಹಳ್ಳಿಯ ಲಕ್ಷ್ಮೀನ...ಸಿಂಹಸ್ವಾಮಿ ದೇವಾಲಯ, ಸೋಮನಾ...ಪುರದ ಕೇಶವ ದೇವಾಲಯ ಪ್ರಮು...ವಾದುದು. ಇಲ್ಲಿನ ಮೂರ್ತಿಗಳೂ ಶಿ... ಶೈಲಿ ಲೋಕವಿಖ್ಯಾತವಾದುದು.

ಕನ್ನಡನಾಡಿನ ಶಿಲ್ಪಿಗಳ ಕಲಾಪ್ರ...ಮೆ ಜಗದ್ವಿಖ್ಯಾತವಾದುದು. ಶ್ರವಣ...ಳ್ಗೊಳದಲ್ಲಿದ್ದ ಕ್ರಿ. ಶ. ೭ನೆಯ ಶತ... ನದ ಪಲ್ಲವಾಚಾರಿ, ನಂತರದ ಎ... ಶತಮಾನಗಳಲ್ಲಿನ ಧನಪತ್ಯಾಚಾರಿ, ಗ...ಗಾಚಾರಿ, ಕಾಮ್ರಾಚಾರಿ, ವರ್ಧಮಾ...ಚಾರಿ ಮೊದಲಾದ ಶಿಲ್ಪಿಗಳ ಹೆಸರು ... ಸನಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ.

ಕೆತ್ತನೆಯ ಕೆಲಸದಲ್ಲಿ ನಯಗಾರಿ... ಮೂರ್ತಿಗಳ ಭಾವಪ್ರದರ್ಶನದಲ್ಲಿ ...ಲ್ಪಿಗಳ ಜಾಣ್ಮೆ ಅಚ್ಚರಿಪಡಿಸುವಂತ... ಒಂದಿಂಚು ಸ್ಥಳವನ್ನೂ ಶಿಲ್ಪಿ ಉಪಯೋ...ಗಿಸದೆ ಬಿಟ್ಟಿಲ್ಲ. ದೇವಾಲಯದ ಅ...ಯಿಂದ ಮುಡಿಯ ವರೆಗೆ ಕಲಾಕೃತಿ...ಳಿಂದಲೇ ಮುಚ್ಚಿಹೋಗಿರುತ್ತದೆ. ದೇ...ವಾಲಯಗಳ ಆವರಣವನ್ನು ಕೆತ್ತನೆಯ ಅಲಂಕಾರಗೊಳಿಸುವಲ್ಲಿ ಎರಡು ಬ... ಮೊದಲನೆಯದಾಗಿ ವ್ಯಾಘ್ರ ಪಂಕ್ತಿ, ಬ...ಯ ಸಾಲು ಮೊದಲಾದ ಚಿತ್ರಪಟ್ಟಿ... ಎರಡನೆಯದಾಗಿ ವಿಸ್ತಾರವಾದ ಮೂ...ರ್ತಿ ಚಿತ್ರಣ. ಮೋಹಿನಿ, ಮದನ... ವಿಗ್ರಹಗಳ ಅಪ್ರತಿಮ ಪ್ರತಿಮೆಗಳು. ...ದನ್ನು ದಕ್ಷಿಣ ಭಾರತದ ದೇವಾಲಯ...ಗಳಲ್ಲಿ ಅದರಲ್ಲಿಯೂ ಹೊಯ್ಸಳ ಶಿ... ಸಂಪ್ರದಾಯದ ದೇವಮಂದಿರಗಳಲ್ಲಿ ...ಶೇಷವಾಗಿ ಕಾಣಬಹುದು.

ಹೊಯ್ಸಳ ಅರಸರ ಕಾಲದಲ್ಲಿ ತಮ್ಮ... ಅಗಾಧ ಕಲಾ ಪಾಂಡಿತ್ಯದಿಂದ ಲೋ...ಕೋತ್ತರ ಮೂರ್ತಿಗಳನ್ನು ರಚಿಸಿದ ... ಸಂಖ್ಯಾತ ಶಿಲ್ಪಿ (ರೂವಾರಿ)ಗಳನ್ನು ...

(ಹನ್ನೊಂದನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ವಿಠಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ ರಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವ...

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=2...
ಪ್ರೇಮ ವಿಜಯ	1=0...
ಮುಂದಿನ ದೇವರು	0=2...
ವ್ಯಭಿಚಾರಿಣಿ ಯಾರು?	1=0...
ಹೆಂಡ್ತಿ ಗಂಡನಾದರೆ?	0=2...
ಪುರುಷವಧು	0=2...
ಸನ್ಯಾಸಿಯ ಸೋಗಿನಲ್ಲಿ!	0=7...
ಸಂಶಯ ಪಿಶಾಚಿ	0=7...
ಕುಶಲವ	0=5...
ಚಿತ್ರಾಂಗದೆ	0=6...

- ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೋ, ಉಡುಪಿ.

ನಾವು ಭಾರತೀಯರು

ಹಾಲನ್ನು ಹಾಲೆನ್ನಲು ಅಂಜುವುದಿಲ್ಲ

ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ತಮ್ಮ ವಿದೇಶ ಪ್ರವಾಸವನ್ನು ಮುಗಿಸಿ ಸಕುಶಲರಾಗಿ ಸ್ವದೇಶಕ್ಕೆ ಮರಳಿದರು. ಅವರು ಸಂದರ್ಶಿಸಿದ ನಾಲ್ಕು ಮಹಾರಾಷ್ಟ್ರಗಳಲ್ಲೂ ಹಾರ್ದಿಕ ಸ್ವಾಗತ ಅವರಿಗೆ ದೊರೆಯಿತು. ಪ್ರಾಯಃ ಒಂದೇ ಬಾರಿ, ಒಂದೇ ವಾರದಲ್ಲಿ ನಾಲ್ಕೂ ಮಹಾರಾಷ್ಟ್ರಗಳನ್ನು ಸುತ್ತಾಡಿದ ರಾಜಕಾರಣಿ ಮತ್ತಾರೂ ಇದ್ದಿರಲಾರರು. ಇದು ಇಂದಿರೆಯ ಹಿರಿಮೆ.

ಇಂದಿರಾ ಗಾಂಧಿ ಹೊರಟ ಗಳಿಗೆ ಶುಭವೇ ಇದ್ದಿರಬೇಕು. ಫ್ರಾನ್ಸ್, ವಾಶಿಂಗ್ಟನ್, ಲಂಡನ್, ಮೋಸ್ಕೋಗಳಲ್ಲಿ ಅವರಿಗೆ ದೊರೆತ ಸ್ವಾಗತ—ಆದರ ಸತ್ಕಾರಗಳೇ ಅದಕ್ಕೆ ಸಾಕ್ಷಿ. ಅಲ್ಲಿ ನಡೆದ ದೀರ್ಘ-ಹ್ರಸ್ವ ಮಾತುಕತೆಗಳೂ ಸೌಹಾರ್ದ ವಾತಾವರಣದಲ್ಲಿಯೇ ಪರಿಣಾಮಕಾರಿಯಾಗಿಯೇ ನಡೆದುವು.

ಫ್ರಾನ್ಸು ಭಾರತದ ಬಗೆಗೆ ಉದಾರತೆಯನ್ನು ತೋರಿಸಿದೆ. ಇದು ಪಾಕಿಸ್ತಾನ-ಚೀನೀಯರೊಂದಿಗೆ ಹಲವು ವಿಧದ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದೆ. ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ವ್ಯವಹಾರವೂ ಇಲ್ಲವೆಂದೇನಿಲ್ಲ. ಚೀನೀ ಆಕ್ರಮಣವನ್ನು ಕೆಚ್ಚೆದೆಯಿಂದ ಎದುರಿಸುವ ಭಾರತದ ದೃಢನಿಲುಮೆಯನ್ನದು ಮನ್ನಿಸುತ್ತದೆ. ಆದರೆ, ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ, ಅದರ ಮೇಲೆ ಪಾಕಿಸ್ತಾನಕ್ಕೆ ಸ್ವಲ್ಪವೂ ಅಧಿಕಾರವೂ ಇಲ್ಲ. ಎಂಬುದನ್ನು ಉಳಿದ ಪಾಶ್ಚಾತ್ಯರಂತೆಯೇ ಫ್ರಾನ್ಸೂ ಒಪ್ಪಿಕೊಳ್ಳಲು ಹಿಂದೆ ಮುಂದೆ ನೋಡುತ್ತದೆ. ದೇಶದ ಯೋಜನೆ— ಆಹಾರ ಸಮಸ್ಯೆ ಮೊದಲಾದುವುಗಳಿಗೂ ಫ್ರಾನ್ಸಿನ ಸಹಾಯದ ಭರವಸೆಯನ್ನು ಪಡೆದೇ ಇಂದಿರಾ ಮುಂದುವರಿದರು.

೦ ೦ ೦

ವಾಶಿಂಗ್ಟನ್ ಅಭೂತಪೂರ್ವವಾಗಿಯೇ ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ ಭಾರತದ ಪ್ರಧಾನಿಯನ್ನು ಸ್ವಾಗತಿಸಿತು. "ಪ್ರಜಾಸತ್ತಾತ್ಮಕ ಆಡಳಿತೆಯ ಯಶಸ್ವಿಗಾಗಿ ನಾವು ದಿವಾರಾತ್ರಿ ಹೋರಾಡುತ್ತೇವೆ— ಇದರಲ್ಲಿ ಯಶಗಳಿಸುವ ಆಶಯ ನಮ್ಮದು. ಒಂದು ವೇಳೆ ಭಾರತದಲ್ಲಿ ಈ ಶಾಸನ ಪದ್ಧತಿಯು ಅಯಶಸ್ವಿಯಾದರೆ ಅದು ಜಗತ್ತಿಗೆ ತುಂಬಲಾರದ ನಷ್ಟ" – ಇದು ಎಲ್ಲರ ಆಶಯ, ಅಭಿಪ್ರಾಯ. ಇದರಿಂದಲೇ ಜಾನ್ಸನ್ನರಿಗೆ ತಲೆತೂಗಿಕೆ. ಇಂದಿರೆ—ಜಾನ್ಸನ್ ಮಾತುಕತೆಯ ಪರಿಣಾಮದ ವಿವರಗಳು ಇನ್ನೂ ಸರಿಯಾಗಿ ತಿಳಿದಿಲ್ಲ. ಆದರೂ ಪಿ. ಎಲ್. ೪೮೦ ರಂತೆ ದೀರ್ಘಕಾಲದ ಆಹಾರದ ನೆರವು ದೊರೆಯುವ ಆಶ್ವಾಸನೆ ದೊರೆತಿದೆ 'ನಮ್ಮ ಕಾಲದಲ್ಲಿ ಭಾರತದಲ್ಲಿ ಆಹಾರದ ಅಭಾವವು ತಲೆದೋರ ಬಾರದು' ಎಂದ ಜಾನ್ಸನ್ ಈ ಬಗ್ಗೆ ಅಮೆರಿಕನ್ ಕಾಂಗ್ರೆಸ್ಸಿಗೆ ಮನವಿಯನ್ನೂ ಮಾಡಿದ್ದಾರೆ. ಒಂದು ಶಿಕ್ಷಣ ಪ್ರತಿಷ್ಠಾನವನ್ನು ಸ್ಥಾಪಿಸಿ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ—ಸಂಶೋಧಕಗಳನ್ನು ಉತ್ತೇಜಿಸುವ ಯೋಜನೆಯೊಂದನ್ನು ಜಾನ್ಸನ್ ಘೋಷಿಸಿದ್ದಾರೆ- ಇದು ಕಡಿಮೆ ಮಹತ್ವದವೇನೂ ಅಲ್ಲ.

ಆಹಾರದಂತೆಯೇ ನಮ್ಮ ಇನ್ನೊಂದು ಪ್ರಶ್ನೆ ಸಂರಕ್ಷಣೆಯದ್ದು. ನಮ್ಮ ರಕ್ಷಣೆಯು ನಮ್ಮ ಜವಾಬ್ದಾರಿ. ಇದನ್ನು ನಿರ್ವಹಿಸಲು ನಾವು ಪ್ರಯತ್ನ ಮಾಡುತ್ತಲೂ ಇದ್ದೇವೆ. ಈ ಸಂಬಂಧದಲ್ಲಿ ನಾವು ಸ್ವಾವಲಂಬಿಯಾಗಲು ಇನ್ನೂ ಕೆಲಕಾಲ ಬೇಕು. ಆದರೆ, ಈ ನಡುವೆ ಬಂದಿರುವ—ಬರಲಿರುವ ನಮ್ಮ ಸ್ವಾತಂತ್ರ್ಯಾಹ್ವಾನವನ್ನು ಎದುರಿಸಲು ನಮಗೆ ಮಿತ್ರ ರಾಷ್ಟ್ರಗಳ ನೆರವೂ ಅಗತ್ಯ.

ಕಳೆದ ಸಪ್ಟಂಬರದಲ್ಲಿ ನಡೆದ ಪಾಕ್-ಭಾರತ ಸಶಸ್ತ್ರ ಘರ್ಷಣೆಯ ಸಮಯ ಅಮೆರಿಕೆ ಭಾರತ—ಪಾಕಿಸ್ತಾನಗಳಿಗೆ ನೀಡುತ್ತಿದ್ದ ಆರ್ಥಿಕ ನೆರವನ್ನು ನಿಲ್ಲಿಸಿದೆ. ಇದರಿಂದಾಗಿ ಭಾರತದ ಔದ್ಯಮಿಕ ರಂಗದಲ್ಲಿಯೂ ಉತ್ಪಾದನೆ ಇಳಿಮುಖವಾಗಿದೆ. ಈ ನೆರವನ್ನು ಪುನಃ ಸ್ಥಾಪಿಸುವ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾದರೆ, ಉಭಯ ರಾಷ್ಟ್ರಗಳ ವರಿಷ್ಠರನ್ನೂ ಕಾಣಬೇಕೆಂದು ಜಾನ್ಸನ್ ಬಯಸಿದ್ದರು. ಅನಂತರ ದಸಂಬರ ತಿಂಗಳಲ್ಲಿ ಅಯ್ಯೂಬರನ್ನು ಭೆಟ್ಟಿ ಮಾಡಿದ್ದರು. ಭಾರತದ ಪ್ರಧಾನಿಯ ಅಭಿಪ್ರಾಯಗಳನ್ನು ಇದೀಗ ಅವರು ತಿಳಿದುಕೊಂಡಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಈ ಸಂಬಂಧದ ನಿರ್ಣಯ ಬರಬಹುದು.

೦ ೦ ೦

ಈ ಮಧ್ಯೆ ಅಪಸ್ವರವೊಂದೂ ಕೇಳುತ್ತಿದೆ. ಅಮೆರಿಕನ್ ಸಹಾಯ ಪಡೆಯಬೇಕಾದರೆ, ದೇಶಗಳು ಅಮೆರಿಕನ್ ನೀತಿಯನ್ನು ಒಪ್ಪಬೇಕು ಎಂಬ ಶರ್ತ ಹೇರುವ ಸಾಧ್ಯತೆಯೂ ಇದೆ. ಒಂದು ವೇಳೆ, ಈ ಶರ್ತದೊಡನೆ ಅಮೆರಿಕೆಯು ಭಾರತ—ಪಾಕಿಸ್ತಾನಗಳಿಗೆ ಮತ್ತೆ ನೆರವು ನೀಡಲು ಮುಂದೆ ಬಂದರೆ, ಆಗ ಯಾರ ವರ್ತನೆ ಹೇಗೆ? ಈ ಸಂಬಂಧದಲ್ಲಿ ಭಾರತದ ನೀತಿ ಹಿಂದಿನಿಂದಲೇ ದೃಢವಿದೆ. ಸಶರ್ತ ಸಹಾಯವನ್ನು ಭಾರತವೆಂದಿಗೂ ಪಡೆಯ ಬಯಸುವುದಿಲ್ಲ— ಇದು ನೆಹರೂ ನೀತಿ, ಶಾಸ್ತ್ರಿ ಮುಂದುವರಿಸಿಕೊಂಡು ಬಂದ ನೀತಿ, ಗಾಂಧಿಯೂ ಇದನ್ನು ಬಿಟ್ಟು ಕೊಡುವುದಿಲ್ಲ— ಏಕೆಂದರೆ, ಸಮಸ್ತ ಭಾರತೀಯರ ಗೌರವಕ್ಕೆ ಈಕೆ ಕುಂದು ತರುವುದಿಲ್ಲ. ಈ ಭಾರತದ ನಿಲುಮೆಯನ್ನು ರಾಯಭಾರಿ ಚೆಸ್ಟರ್ ಬೌಲ್ಸ್ ಹಿಂದೆಯೇ ಅರಿತಿದ್ದಾರೆ. ಅವರು ಬರೆದಿದ್ದಾರೆ— ಭಾರತಕ್ಕೆ ಕೊಡುವ ನೆರವು ನಿಶ್ಶರ್ತವಿರಬೇಕು. ಅಮೆರಿಕೆಯು ಭಾರತದ ಮಿತ್ರತ್ವವನ್ನು ಬಯಸುವುದಾದರೆ ಇದು ಅಗತ್ಯ. ಸಶರ್ತ ನೆರವನ್ನು ಭಾರತ ತಿರಸ್ಕರಿಸಿ, ತನ್ನ ಸಾಧನ ಸಂಪತ್ತಿನಿಂದಲೇ ಮುಂದುವರಿಯುವಷ್ಟು ಆತ್ಮ ವಿಶ್ವಾಸವಿಂದು ಭಾರತೀಯರಲ್ಲಿ ಮೂಡಿದೆ—ಇದು ನೂರಕ್ಕೆ ನೂರರಷ್ಟು ಸತ್ಯ.

ಆದರೆ, ಪಾಕಿಸ್ತಾನಕ್ಕೆ ತನ್ನ ನಿಲುಮೆಯೆಂಬುದಿಲ್ಲ. ಸದ್ಯಕ್ಕೆ ಅದರ ದೃಢ ನಿಲುಮೆಯೆಂದು ಕರೆಯಬಹುದಾದರೆ, ಕಾಶ್ಮೀರದ ಮೇಲಿರುವ ಅಪಾಂಗ ನೋಟ ಮಾತ್ರ. ಇದಕ್ಕಾಗಿ ಅದು ಬಂಡವಳಶಾಹಿಯ ಮಡಿಯನ್ನೂ ಹೋಗುತ್ತದೆ, ಸಮಾಜವಾದಿಗೆ ಶರಣು ಹೋಗುತ್ತದೆ; ಸಾಮ್ಯವಾದಿಯನ್ನೂ ಚುಂಬಿಸ ಹೋಗುತ್ತದೆ. ಕಾಶ್ಮೀರವನ್ನು ತನಗೆ ದಕ್ಕಿಸಿಕೊಟ್ಟವರಿಗೆ ಉಂಬಳಿಯನ್ನೂ ಅದು ಕೊಡಬಹುದು. ಈ ಇರಾದೆಯಿಂದಲೇ ಇರಬೇಕು, ತನ್ನದಲ್ಲದ ಕಾಶ್ಮೀರದ ಒಂದು ಭಾಗವನ್ನು ಕೆಂಪು ಚೀನಕ್ಕೆ ಕೊಟ್ಟು ಬಿಟ್ಟದ್ದು.

ಭಾರತದ ವಿರುದ್ಧ ಶಸ್ತ್ರಾಸ್ತ್ರಗಳನ್ನು ಎತ್ತುವುದಿಲ್ಲ ಎಂದು ಅಮೆರಿಕೆಯಿಂದ ಮಿಲಿಟರಿ ಸಹಾಯವನ್ನು ಅದು ಪಡೆದುದನ್ನೂ ಇತ್ತ ನಂಬಿಕೆಯನ್ನು ಕೆಡಿಸಿದ್ದನ್ನೂ ನಾವು ಮರೆಯಲಾರೆವು; ಅಮೆರಿಕೆಯೂ ಮರೆಯುವುದಿಲ್ಲ. ತಾನು ಭಾರತಕ್ಕಿತ್ತ ನಂಬುಗೆಯನ್ನು ಉಳಿಸಲಾಗಲಿಲ್ಲ ಎಂದೀಗ ಅಮೆರಿಕೆಯು ಮನಸ್ಸಿನಲ್ಲೇ ನೊಂದುಕೊಂಡಿದೆ. ಹಾಗೆಂದು ಪಾಕಿಸ್ತಾನವನ್ನು ಸಂಪೂರ್ಣ ಕೈ ಬಿಡುವುದೂ ಉತ್ತಮವಲ್ಲವೆಂದು ಅಮೆರಿಕೆ ನಂಬಿದೆ. ತಾನು ಹಾಕುವ ಯಾವುದೇ ಶರ್ತವನ್ನು ಒಪ್ಪಿಕೊಂಡು ಪಾಕಿಸ್ತಾನ ಆರ್ಥಿಕ ಅಥವಾ ಸೈನಿಕ ಸಹಾಯವನ್ನು ಪಡೆಯಲು ಉತ್ಸುಕವಿದೆ;—ಅದು ಯಾರು ಏನನ್ನು ಕೊಟ್ಟರೂ ತೆಗೆದು ಕೊಳ್ಳುವ ದಿವಾಳಿಕೋರನಂತಿದೆ— ಇದು ಅಮೆರಿಕೆಗೂ ಗೊತ್ತು. ಆದರೆ, ಅಧ್ಯಕ್ಷ ಜಾನ್ಸನ್ನರಿಗೆ ಪಾಕ್ ಮಾತಿನ ಮೇಲಿನ ವಿಶ್ವಾಸ ಹಾರಿಹೋಗಿದೆ. ಉಭಯ ದೇಶಗಳಿಗೂ ನೆರವು ಮುಂದುವರಿಸ ಬಯಸುವ ಅಮೆರಿಕೆಯು ಉಭಯತರರಿಗೂ ಗ್ರಾಹ್ಯವಾಗುವ ವಿಧಾನದಲ್ಲಿ ಅದನ್ನು ಮುಂದುವರಿಸಬೇಕಾಗಿದೆ.

ಹಾಗಾಗಿ ಉಭಯ ನಾಯಕರೊಡನೆ ತಂತಮ್ಮ ದೇಶಗಳ ನಿಲುಮೆಯನ್ನರಿತುಕೊಂಡ ಜಾನ್ಸನ್ ಹೊಸತೊಂದು ವಿಧಾನದಲ್ಲಿ ನೆರವನ್ನು ಘೋಷಿಸುವ ನಿರ್ಧಾರ ಮಾಡಿದರೆ, ಆಶ್ಚರ್ಯಪಡಬೇಕಾಗಿಲ್ಲ.

೦ ೦ ೦

ಜಾನ್ಸನ್—ಇಂದಿರಾ ಜಂಟಿ ಹೇಳಿಕೆಯು ತಾಷ್ಕೆಂಟ್ ಘೋಷಣೆಯನ್ನು ಸ್ವಾಗತಿಸಿದೆ. ಆಕ್ರಮಣವನ್ನೂ, ಸಶಸ್ತ್ರ ಹೋರಾಟವನ್ನೂ ವಿರೋಧಿಸಿದೆ. ಘೋಷಣೆಯನ್ನು ಒಂದೊಂದೇ ಹಂತದಲ್ಲಿ ಉಲ್ಲಂಘಿಸಲು ಮುಂದುವರಿಯುತ್ತಿರುವ ಪಾಕಿಸ್ತಾನದ ಕೃತ್ಯಕ್ಕೆ ಅಮೆರಿಕೆ ತನ್ನ ಉತ್ತರವನ್ನು ಈ ಮೂಲಕ ನೀಡಿದಂತಿದೆ.

೦ ೦ ೦

ಇಂದಿರಾ ವಿದೇಶಕ್ಕೆ ಹೋದಾಗ ಪಾಕ್ ಕೆಂಪು ಚೀನಾದ ನಾಯಕರನ್ನು ಅಪ್ಪಿಕೊಂಡಿತು. ಮನೆಗೆ ಬಂದ ಅತಿಥಿಗಳಿಗೆ ಅಬ್ಬರದ ಸ್ವಾಗತ ದೊರೆಯಿತು; ಅವಶ್ಯವೇ. ಪಾಕಿಸ್ತಾನದ ಕಾಶ್ಮೀರ ನೀತಿಯನ್ನು, ಅಲ್ಲಿ ಮತಗಣನೆಗೆ ಅವಕಾಶ ನೀಡಬೇಕೆಂಬ ವಾದವನ್ನು ಕೆಂಪು ನಾಯಕರು ತ್ರಿಕರಣಪೂರ್ವಕ ಮತ್ತೊಮ್ಮೆ ಬೆಂಬಲಿಸಿದರು. ತಮ್ಮಿಂದ ಭಾರತದ ಉಪಖಂಡಕ್ಕೆ ಗಂಡಾಂತರವಿದೆಯೆಂದು ದೃಢವಾಗಿ ನಂಬಿರುವ ಉಳಿದವರ ಅಜ್ಞಾನವು ನಿರಾಧಾರವೆಂದು ಮತ್ತೊಮ್ಮೆ ಸಾರಿದರು. ಅಮೆರಿಕೆಯು ನಿಮಗೆ ಕಮ್ಯೂನಿಸ್ಟ್ ಆಕ್ರಮಣದ ವಿರುದ್ಧ ಸೈನಿಕ ನೆರವು ನೀಡಿದ್ದಾದರೆ, ನಾವು ಪರಕೀಯರ ಆಕ್ರಮಣವನ್ನೆದುರಿಸಲು ಸೈನಿಕ ಸಹಾಯವನ್ನು ನೀಡುತ್ತೇವೆ— ಎಂದು ಇನ್ನೊಮ್ಮೆ ಭರವಸೆಯಿತ್ತರು......

ಇವೆಲ್ಲಾ ಬಣ್ಣದ ಮಾತುಗಳು ಕೆಂಪು ಚೀನಾದ ಸಾಮಾನ್ಯ ಭರವಸೆಗಳು. ಕೊಟ್ಟ ಭಾಷೆಯನ್ನು ಉಳಿಸದ ಪಾಕಿಸ್ತಾನಕ್ಕೆ ಕೆಂಪು ಚೀನಾದ ಈ ಪೊಳ್ಳು ಭರವಸೆಯಲ್ಲಿ ಇನ್ನೂ ನಂಬುಗೆಯಿದೆಯೋ, ಅಥವಾ ಇದ್ದಂತೆ ತೋರಿಸುವುದು ಮಾತ್ರವೋ......

ಕೆಂಪು ಚೀನಾವು ಪಾಕಿಸ್ತಾನಕ್ಕೆ ಈಗಾಗಲೇ ಎರಡು ಸ್ಕ್ವಾಡ್ರನ್ ಜೆಟ್ ವಿಮಾನಗಳನ್ನೂ ಇನ್ನೂರು ಕೆಂಪು ಚೀನಾ ತರಬೇತಿ ಹೊಂದಿದ ಪಾಕ್ ಪೈಲಟ್‌ಗಳನ್ನೂ ಹಿಂದಿನ ೧೦೦ ಮಧ್ಯಮ ವರ್ಗದ ಕೆಂಪು ಟ್ಯಾಂಕ್‌ಗಳನ್ನೂ ಬಳುವಳಿಯಾಗಿ ಅರ್ಪಿಸಿದೆ—ಎಂಬ ದಟ್ಟವಾದ ವದಂತಿ ಹರಡಿದೆ; ಇದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.



ವಿನಂತಿ

ಚಂದಾಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರಿತ ಕಳುಹಿಸಿ ಕೊಡುವಂತೆ ತಿರುಗೊಮ್ಮೆ ವಿನಂತಿಸುತ್ತೇವೆ.

—ಮೆನೇಜರ್

ಇಲ್ಲಿ ಎಲ್ಲರ ಗಮನ ನವದೆಹಲಿಯಲ್ಲಿ ಪಂಜಾ

ಫೆಬ್ರವರಿ ೧೬, ೧೭ರಂದು ಉಪಾಧ್ಯಕ್ಷ ಹ
ಅಧ್ಯಕ್ಷ ಜ

ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ತನ್ನ ಅಮೆರಿಕೆಯ ಸಂದರ್ಶನದಲ್ಲಿ ಸಫಲರಾದರು ಎಂಬುದು ಎಲ್ಲರ ಅಂಬೋಣ. ೫೦ ಕೋಟಿ ಭಾರತೀಯರ ಮಹಿಳಾ ಪ್ರಧಾನಿ ಜಗತ್ತಿನ ರಾಜಕಾರಣದಲ್ಲಿ ಮಹತ್ವದ ಪಾತ್ರ ವಹಿಸಬಲ್ಲವರು ಎಂತಲೇ 'ಇವರ ಪ್ರಭಾವ ಎಲ್ಲೆಡೆಯೂ ಹರಡಿದೆ. ಜಾನ್ಸನ್—ಇಂದಿರಾ ಮಾತುಕತೆಯ ಸಂಪೂರ್ಣ ವಿವರಗಳು ಕೈಸೇರಲು ಇನ್ನೂ ಕೆಲಕಾಲ ಬೇಕಾಗಬಹುದು. ಆದುದರಿಂದಲೇ ಒಂದು ಅಭಿಪ್ರಾಯ ಮೂಡಿ ಬಂದಿದೆ.

"ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಅಧ್ಯಕ್ಷ ಜಾನ್ಸನ್ನರಿಂದ ಸಹಾಯದ ಆಶ್ವಾಸನ ಪಡೆದಿರಬಹುದು; ಅಥವಾ ಪಡೆಯದಿರಬಹುದು. ಆದರೆ ಅವರು ಅಮೆರಿಕನ್ನರ ಹೃದಯಗಳನ್ನು ಸೂರೆಗೊಂಡಿದ್ದಾರೆ. ಅಮೆರಿಕೆಯ ಜನತೆಯ ಮೇಲೆ ಬಿದ್ದ ಈ ಪ್ರಭಾವವನ್ನು ಅಮೆರಿಕೆಯ ಯೂನ ಸರಕಾರವೂ ಅಲಕ್ಷಿಸಲಾರದು-ಅತ್ಯಂತ ಸ್ತ್ರೀ ಸಹಜವಾದ ಗುಣಗಳಿಂದ ಕೂಡಿದ ಈ ಮಹಿಳೆಯು ೫೦ಕೋಟಿ ಜನರ ಅಪಾರ ಭಾರ ಹೊತ್ತಿದ್ದಾರೆ.ಎಂಬ ವಿಚಾರವೇ ಅಮೆರಿಕನ್ನರನ್ನು ಪ್ರಭಾವಿತಗೊಳಿಸಿದೆ.ಇದು ಕಾಲಕ್ರಮದಲ್ಲಿ ಕಾಂಗ್ರೆಸ್ಸಿನ ಮೇಲೂ ಆಡಳಿತದ ಮೇಲೂ ಪ್ರಭಾವ ಬೀರದಿರದು. ಅಧ್ಯಕ್ಷ ಜಾನ್ಸನ್ನರು ತಮ್ಮ ಸಂಪ್ರದಾಯವನ್ನು ಮುರಿದು ಪ್ರಧಾನಿ ಗಾಂಧಿಯವರ ಬಿನ್ನಹದ ಮೇರೆಗೆ ಭಾರತದ ರಾಯಭಾರಿಗಳತ್ತ ಭೋಜನ ಕೂಟದಲ್ಲಿ ಭಾಗವಹಿಸಿದುದು ಇನ್ನೊಂದು ಕುತೂಹಲದ ವಿಷಯವಾಗಿದೆ."

ಮಾರ್ಚಿ ೨೮ ರಂದು ಪ್ರಾರಂಭವಾದ ಈ ಭೆಟ್ಟಿಯು ಇದಕ್ಕೆ ಮೊದಲೇ ನಡೆಯಬೇಕಾಗಿತ್ತು. ಅಮೆರಿಕನ್ ಉಪಾಧ್ಯಕ್ಷ ಹ್ಯೂಬರ್ಟ್ ಹಂಫ್ರಿಯವರು ಫೆಬ್ರವರಿ ಮಧ್ಯದಲ್ಲಿ ತನ್ನ ಏಶ್ಯನ್ ರಾಷ್ಟ್ರ ಸಂಚಾರದ ವೇಳೆ ಭಾರತಕ್ಕೂ ಬಂದು ಅಮೆರಿಕನ್ ಅಧ್ಯಕ್ಷರು ಭಾರತೀಯ ಪ್ರಧಾನಿಯವರನ್ನು ಭೆಟ್ಟಿಯಾಗಲು ಆತುರರಿರುವ ಬಗ್ಗೆ ತಿಳಿಸಿದ್ದರು. ಆ ಸಮಯದಲ್ಲೇ ಮುಂಗಡ ಪತ್ರದ ಅಧಿವೇಶನದ ವೇಳೆಯಾಗಿದ್ದರೂ ಶ್ರೀಮತಿ ಗಾಂಧಿಯವರು ಬಿಡುವು ಮಾಡಿಕೊಂಡು ವಿದೇಶಗಳಿಗೆ ಹೊರಡಲು ಮನ ಮಾಡಿದ್ದರು.

ಫೆಬ್ರವರಿ ೧೬ ಮತ್ತು ೧೭ರಲ್ಲಿ ಭಾರತವನ್ನು ಸಂದರ್ಶಿಸಿದ ಅಮೆರಿಕನ್ ಉಪಾಧ್ಯಕ್ಷರು ಈ ಮಾತುಕತೆಗೆ ಪಂಚಾಂಗವನ್ನು ಹಾಕಿ ಹೋಗಿದ್ದರು. ಅದರ ಮೇಲೆಯೇ ಈಗ ಇಂದಿರಾ—ಜಾನ್ಸನ್ ಮುಂದುವರಿದಿದ್ದಾರೆ.

ಹಂಫ್ರಿಯವರು ತಮ್ಮೆರಡು ದಿನಗಳ ದೆಹಲಿ ಕಾರ್ಯಕ್ರಮಗಳಲ್ಲಿ ವ್ಯಸ್ತರಿದ್ದರು. ಭಾರತದ ರಾಷ್ಟ್ರಪತಿ ರಾಧಾಕೃಷ್ಣನ್, ಪ್ರಧಾನಿ ಇಂದಿರಾ ಗಾಂಧಿ ಮತ್ತಿತರ ಮಂತ್ರಿಗಳು ಹಾಗೂ ಪಂಜಾಬ ರಾಜ್ಯದ ಗ್ರಾಮೀಣ ಪ್ರದೇಶವೊಂದನ್ನೂ ಸಂದರ್ಶಿಸಿದ್ದರು. ಈ ಮಾತುಕತೆಗಳು ಮುಖ್ಯವಾಗಿ ಭಾರತದ ಆರ್ಥಿಕ ಮತ್ತು ಆಹಾರಿಕ ಸವಾಲುಗಳಿಗೆ ಸಂಬಂಧಿಸಿದ್ದವು: ಕೃಷಿಕ ರಂಗಕ್ಕೆ ಹೆಚ್ಚಿನ ನಿಗಾವಿತ್ತು ಮುಂದಿರುವ ಸಂಕಟಗಳನ್ನು ಎದುರಿಸಲು ಭಾರತ ಸರಕಾರವು ರೂಪಿಸಿದ ಯೋಜನೆಗಳನ್ನು ಹಂಫ್ರಿಯವರು ಮೆಚ್ಚಿಕೊಂಡರು. ಭಾರತದ ಕಾರಖಾನೆಗಳು ತಮ್ಮ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ಆವಶ್ಯಕ ವಸ್ತುಗಳ ನಿರ್ಯಾತಕ್ಕಾಗಿ ಅಮೆರಿಕೆಯು ೧೦೦ ಮಿಲಿಯ ಡಾಲರ್ (ರೂ. ೭೫ ಕೋಟಿ)ಗಳ ಸಾಲ ನೀಡಲು ಸಿದ್ಧವಿದೆಯೆಂದು ಘೋಷಿಸಿದರು.

ತಾಷ್ಕೆಂಟ್ ಘೋಷಣೆಯನ್ನು ಬೆಂಬಲಿಸಿದ ಅಧ್ಯಕ್ಷ ಜಾನ್ಸನ್ನರ ಸದಾಶಯಗಳನ್ನು ಅವರು ತಿಳಿಸಿ "ಇದು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಶಾಂತಿ ಮತ್ತು ರಚನಾತ್ಮಕ ಪ್ರಗತಿಯ ಆರಂಭಕ್ಕೆ

೧

೨

ವಾಶಿಂಗ್‌ಟನ್ನಿನಲ್ಲಿ ಸೌಧ

...ಂಫ್ರಿಯವರು ಹಾಕಿದ ಪಂಚಾಂಗದ ಮೇಲೆ ...ಧ ಕಟ್ಟಿದರೆ?

ಭರವಸೆನೀಡುವುದು" ಎಂಬ ಆಶಯವನ್ನು ವ್ಯಕ್ತಪಡಿಸಿದ್ದರು. ಇಂದಿಗೆ ಹೊರಟ ಜಂಟಿ ಹೇಳಿಕೆಯಲ್ಲಿಯೂ ತಾಷ್ಕೆಂಟ್ ಘೋಷಣೆಯ ಬಗ್ಗೆ ಪ್ರಶಂಸಾಪರವಾದ ವಾಕ್ಯಗಳು ಉಳಿದು ಕೊಂಡಿವೆ.

ವಿಯತ್‌ನಾಮ ಪ್ರಶ್ನೆಯ ಬಗ್ಗೆ ಅಂದು ಹಂಫ್ರಿಯವರು ಭಾರತದ ಸಹಾಯವನ್ನು ಪ್ರತ್ಯಕ್ಷವಾಗಿ ಕೇಳಲಿಲ್ಲ; ಆದರೂ ವೈದ್ಯಕೀಯ ಮತ್ತು ತಾಂತ್ರಿಕ ನೆರವನ್ನು ಬಯಸಿದ್ದರು. ಆಗ ಪ್ರಧಾನಿಯವರು ಭಾರತದ ವಿಯತ್‌ನಾಮ ನೀತಿಯನ್ನು ಸ್ಪಷ್ಟವಾಗಿ ಉಚ್ಚರಿಸಿದ್ದು, ಈ ನೀತಿಯಲ್ಲಿ ಇಂದಿಗೂ ಏನೂ ಬದಲಾವಣೆಯೂ ಇಲ್ಲ.

'ಭಾರತದ ಅಭಿರುಚಿಗಳೊಡನೆ ಜಾಗತಿಕ ಘನವತೆ ಮತ್ತು ಶಾಂತಿಯ ಸಲ್ಲಕ್ಷಣಗಳನ್ನೂ ಹೊಂದಿರುವ ಅನುಗೃಹೀತ ಮಹಿಳೆ—ಇಂದಿರಾ ಗಾಂಧಿ' ಎಂದು ಹಂಫ್ರಿ ಅಂದು ಅಂದಿದ್ದರೆ, ಇಂದು ಎಲ್ಲ ಅಮೆರಿಕನ್ನರೂ ಅವರ ಸ್ವರದಲ್ಲಿ ಸ್ವರ ಕೂಡಿಸುತ್ತಾರೆ.

ಅಧ್ಯಕ್ಷ ಸರ್ವಪಲ್ಲಿ ರಾಧಾಕೃಷ್ಣನ್ನರ ಬಗ್ಗೆ ಮಾತಾಡುತ್ತ ಹಂಫ್ರಿ ಉದ್ಗರಿಸಿದ್ದರು: "ನಮ್ಮ ಕಾಲದ ನೈಜ ಮಹಾಪುರುಷನಾವೆಲ್ಲರೂ ಪ್ರಶಂಸಿಸಲೇ ಬೇಕಾದ ನಯ, ದೃಢತೆ, ನ್ಯಾಯ ಮತ್ತು ಉಚಿತತೆಗಳ ಆದರ್ಶಗುಣಗಳನ್ನಿವರು ಹೊಂದಿದ್ದಾರೆ."

ಹ್ಯೂಬರ್ಟ್ ಹಂಫ್ರಿಯವರು ಲುಧಿಯಾನಾಕ್ಕೆ ಭೆಟ್ಟಿಯಿತ್ತು ಗ್ರಾಮೀಣಾಭಿವೃದ್ಧಿಯ ಸ್ವರೂಪವನ್ನು ಕಣ್ಣುಗಳಿಂದಲೇ ಕಂಡರು. ಅಲ್ಲಿದ್ದ ಅಮೆರಿಕನ್ ಪೀಸ್ ಕಾರ್ಪ್ಸ್‌ನ ಸ್ವಯಂ ಸೇವಿಕೆಯನ್ನು ಸಂದರ್ಶಿಸಿದ್ದರು. ಜೇನ್ ವಿಲ್ಲಿಯಮ್ಸ್ ಎಂಬ ಸ್ವಯಂಸೇವಿಕೆಯು ಹಾಲಿಗಾಗಿ ಉತ್ತಮ ಜಾತಿಯ ಆಡುಗಳನ್ನು ಸಾಕುವ ಕುರಿತಾಗಿ ಗ್ರಾಮಸ್ಥರಿಗೆ ಸಹಾಯ ಮಾಡುತಿದ್ದಾಳೆ.

ಅನಂತರ ಹಂಫ್ರಿಯವರು ಒಂದು ಸಾರ್ವಜನಿಕ ಭಾಷಣಮಾಡಿ ಅದರಲ್ಲಿ ಅಮೆರಿಕೆಯ ಶಾಂತಿ ಪ್ರಿಯತೆಯನ್ನು ಸ್ಪಷ್ಟವಾದ ಶಬ್ದಗಳಲ್ಲಿ ಸಾರಿದ್ದರು.

'ಅಮೆರಿಕನ್ ಸರಕಾರವೂ ಜನತೆಯೂ ನಿಮ್ಮ ಕೃಷಿಯನ್ನು ಬಲಗೊಳಿಸಲು, ನಿಮ್ಮ ಆರೋಗ್ಯ ಮತ್ತು ಶಿಕ್ಷಣರಂಗಗಳನ್ನು ಬಿಗಿಗೊಳಿಸಲು ನಿಮ್ಮ ಸಹಯೋಗಿಗಳಾಗಿ ದುಡಿಯಲು ಸಿದ್ಧರಿದ್ದಾರೆ. ನಾವು ಪರಮ ಮಹತ್ವವುಳ್ಳ ಜನತೆಯಲ್ಲಿ ಅಭಿರುಚಿ ಹೊಂದಿದ್ದೇವೆ, ಜನತೆಯ ಗೌರವದಲ್ಲಿ ಆಸಕ್ತಿ ತೋರುತ್ತೇವೆ.

"ಶಾಂತಿಯು ಬರಿಯ ಮಾತಿಗೆ ಮಾತ್ರ ತಕ್ಕುದಲ್ಲ—ಅದು ಕಾರ್ಯರೂಪಕ್ಕೆ ತರಲು ತಕ್ಕುದಾದ ವಸ್ತು—ಶಾಂತಿಯೇ ಸಂವರ್ಧನೆ.

'ಬೀಜದ ಯೋಜನೆಯು ಶಾಂತಿ, ಬಾವಿ ತೋಡುವುದು ಶಾಂತಿ, ಮಣ್ಣಿಗೆ ನೀರುಣಿಸುವುದು ಶಾಂತಿ, ಮಕ್ಕಳಿಗೆ ಶಿಕ್ಷಣವನ್ನೊದಗಿಸುವುದು ಶಾಂತಿ; ಅಸ್ವಸ್ಥನಿಗೆ ಆರೋಗ್ಯಲಾಭ ನೀಡುವುದು ಶಾಂತಿ. ಶಾಂತಿಗೆ ನಾವು ಮಾಡಿಕೊಂಡಿರುವ ವ್ಯಾಖ್ಯೆ ಇದು.

"ಶಾಂತಿಯು ಬರಿಯ ಶಬ್ದಾಡಂಬರವಲ್ಲ; ರೇಡಿಯೋವಿನಲ್ಲಿ ಘೋಷಿಸುವ ವಸ್ತುವಲ್ಲ; ಜನತೆಯ ಒಳಿತಿಗಾಗಿ ಒಳ್ಳೆಯ ಕೆಲಸ ಮಾಡುವುದೇ ಶಾಂತಿ. ನಾವೆಲ್ಲರೂ ಬಯಸುವ ಶಾಂತಿಯಿದೇ. ಅಮೆರಿಕೆಯಿಂದ ಭಾರತಕ್ಕೆ ನಾನು ತಂದಿರುವ ಸಂದೇಶವೂ ಇದೇ'.

ಇದೇ ಶಾಂತಿ ಸಂದೇಶವನ್ನು ಪ್ರಧಾನಿ ಇಂದಿರಾ ಗಾಂಧಿಯವರು ಈಗ ಅಮೆರಿಕನ್ ಜನತೆಗೆ ಇತ್ತಿದ್ದಾರೆ. ಈ ಸಂದರ್ಶನದ ಪರಿಣಾಮ ಉಭಯತರರಿಗೂ ಶುಭಕಾರಿಯಾಗುವುದೆಂದು ಆಶಿಸೋಣ.

ಚಿತ್ರಗಳು

೧. ಹಂಫ್ರಿಯವರು ಆಹಾರ ಮಂತ್ರಿ ಸುಬ್ರಹ್ಮಣ್ಯರೊಡನೆ. ಎಡದಿಂದ ಅರ್ಥಮಂತ್ರಿ ಸಚೀಂದ್ರ ಚೌಧುರಿ ಮತ್ತು ಆಹಾರ ಶಾಖೆಯ ರಾಜ್ಯ ಮಂತ್ರಿ ಪಿ. ಗೋವಿಂದ ಮೆನನ್ನರನ್ನೂ ನೋಡಬಹುದು.

೨. ಅಮೆರಿಕನ್ ಪೀಸ್ ಕಾರ್ಪ್ಸ್ ಸೇವಿಕೆ ಜೇನ್ ವಿಲ್ಲಿಯಮ್ಸ್‌ರನ್ನು ಕಂಡರು ಹಂಫ್ರಿ. ಈಕೆ ಲುಧಿಯಾನಾದ ಬಳಿಯ ಹಳ್ಳಿಯಲ್ಲಿ ಹಾಲಿಗಾಗಿ ಆಡು ಸಾಕುವ ಸಂಬಂಧದಲ್ಲಿ ನೆರವೀಯುತ್ತಿದ್ದಾಳೆ.

೩. ಯೋಜನಾಮಂತ್ರಿ ಅಶೋಕ ಮೆಹತಾರನ್ನು ಹಂಫ್ರಿ ಕೈಕುಲುಕಿ, ಭಾರತ ಸರಕಾರವು ಆಹಾರೋತ್ಪಾದನೆಗೆ ರೂಪಿಸಿದ ಯೋಜನೆಗೆ ತೃಪ್ತಿಯನ್ನು ವ್ಯಕ್ತ ಪಡಿಸಿದರು.



ಅಮೃತ ಬಿಂದು

ಹದವರಿತು ದುಃಖಿಸುವುದು ವ್ಯಕ್ತನಾದವನಿಗೆ ಸಲ್ಲಬೇಕಾದ ಹಕ್ಕು; ಮಿತಿಮೀರಿ ದುಃಖಿಸುವುದು ಜೀವಂತವಿರುವವನಿಗೆ ಕುತ್ತು.

o o o

ಸಭ್ಯತೆಯನ್ನು ಬಿತ್ತುವವನು ಗೆಳೆತನವನ್ನು ಕುಯ್ಯುತ್ತಾನೆ. ದಯೆಯನ್ನು ನೆಡುವವನು ಪ್ರೇಮವನ್ನು ಸಂಗ್ರಹಿಸುತ್ತಾನೆ. ಜ್ಞಾನದ ದಾಹ ಹುಟ್ಟಿಸುವವನು ಕೃತಜ್ಞತೆಯನ್ನು ಪಡೆಯುತ್ತಾನೆ.

o o o

ಎಷ್ಟು ಕೊಡುತ್ತಾನೆಂಬುದಕ್ಕಿಂತ ಹೇಗೆ ಕೊಡುತ್ತಾನೆಂಬುದು ಮನುಷ್ಯನ ಯೋಗ್ಯತೆಯನ್ನಳೆಯ ಬಲ್ಲುದು.

o o o

ಶತ್ರುವಿಗೆ ಕ್ಷಮೆ, ವಿರೋಧಿಗೆ ಸಹನೆ, ಗೆಳೆಯನಿಗೆ ಮಮತೆ, ಮಕ್ಕಳಿಗೆ ಉತ್ತಮ ಆದರ್ಶ, ತಂದೆಗೆ ಗೌರವ, ತಾಯಿಗೆ ಹೆಮ್ಮೆ ಪಡಬಲ್ಲ ಶೀಲಗಳನ್ನು ಕೊಡಬಲ್ಲವನು ನಿಜವಾದ ಮನುಷ್ಯನೆನಿಸುವನು.

o o o

ಬರೆಯಲು ಯೋಗ್ಯವಾದಂಥಾದ್ದನ್ನು ಮಾಡುವುದು, ಓದಬೇಕಾದಂಥಾದ್ದನ್ನು ಬರೆಯುವದು, ಜಗತ್ತು ಸುಖಮಯವಾಗುವಂತೆ ಬಾಳುವುದು ಘನತೆ ಎನಿಸುತ್ತದೆ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ-ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಹುತಾತ್ಮರು— ಲೇಖಕರು: ಶ್ರೀ ಶಿವಮುಂಜೆ ಪರಾರಿ. ಪ್ರಕಾಶಕರು: ಎಸ್. ಎಂ. ಶೆಟ್ಟಿ ಶಿವಮುಂಜೆ ಪರಾರಿ, ೬೫೪/೧ ಕೌಳೀ ಬಿಲ್ಡಿಂಗ್, ಕಾಶೀನಾಥ ಧುರು ರೋಡ್, ಮುಂಬಯಿ-೨೮. ಪುಟಗಳು: ೮೧. ಬೆಲೆ. ರೂ. ೧-೨೫.

ಭಾರತ ಸ್ವಾತಂತ್ರ್ಯ ಸಂಗ್ರಾಮದ ವೇಳೆ ಸಶಸ್ತ್ರ ಕ್ರಾಂತಿಯ ಪುರಸ್ಕರ್ತರಾಗಿ, ದೇಶಕ್ಕೋಸ್ಕರ, ಸ್ವರಾಜ್ಯಕ್ಕೋಸ್ಕರ ತಮ್ಮ ಪ್ರಾಣವನ್ನು ತೃಣ ಸಮಾನ ಕಂಡು ಮೃತ್ಯುವನ್ನಪ್ಪಿದ ಐವರು ಹುತಾತ್ಮರ ವೀರ ಕಥಾ ಸಂಗ್ರಹವಿದು. ಪಂ. ರಾಮ ಪ್ರಸಾದ್ ಬಿಸ್ಮಿಲ್, ಅಶ್ಫಾಕ್ ಉಲ್ಲಾ ಖಾನ್, ಭಗತ್ ಸಿಂಹ, ಚಂದ್ರಶೇಖರ 'ಆಜಾದ್' ಮದನ್‌ಲಾಲ್ 'ಧೀಂಗ್ರಾ' ಈ ಐವರು ಹುತಾತ್ಮರ ಪರಿಚಯವನ್ನು ಕನ್ನಡಿಗರಿಗೆ ಶ್ರೀ ಶಿವಮುಂಜೆ ಪರಾರಿಯವರು ಮಾಡಿಕೊಟ್ಟಿದ್ದಾರೆ. ಮೊದಲ ಮೂರನ್ನು ಹಿಂದಿಯಿಂದಲೂ ನಾಲ್ಕನೆಯದನ್ನು ಗುಜರಾತಿಯಿಂದಲೂ ಅನುವಾದಿಸಿದ ಶ್ರೀಯುತರು ಐದನೆಯದು 'ಸ್ವಬರಹ'ವೆಂದು ಹೇಳುತ್ತಾರೆ.

ವೀರಸಾವರ್ಕರರು ಮುನ್ನುಡಿಯಲ್ಲಿ ಬರೆಯುವಂತೆ, ದೇಶಕ್ಕೆ ಸ್ವಾತಂತ್ರ್ಯ ದೊರೆಯಲು ಅಹಿಂಸಾತ್ಮಕ ಚಳವಳಿಯೊಂದೇ ಕಾರಣವಲ್ಲ. ಶತಮಾನಕ್ಕೆ ಮೊದಲೇ ಸಶಸ್ತ್ರ ಬಂಡಾಯವೆದ್ದಿತ್ತು; ಆಗಿಂದಾಗ್ಗೆ ಅದು ಕೆರಳುತ್ತಲೂ ಇತ್ತು. ಕ್ರಾಂತಿಕಾರಿಗಳು—ಅಹಿಂಸಾವಾದಿಗಳು, ತೀವ್ರಗಾಮಿಗಳು ಮಂದಗಾಮಿಗಳು—ಹೀಗೆ ಎಲ್ಲರ ಎಲ್ಲ ವಿಧದ ಹೋರಾಟದ ಪರಿಣಾಮವೇ ನಾವು ಪಡೆದ ಸ್ವಾತಂತ್ರ್ಯ. ಸ್ವಾತಂತ್ರ್ಯದ ಸವಿಯುಣ್ಣುವ ನಾವು ಎಲ್ಲರ ನೆನಪನ್ನೂ ಮಾಡಿಕೊಳ್ಳಬೇಕು. ಸತ್ಯವನ್ನು ಮರೆಮಾಚುವುದು ನ್ಯಾಯವಲ್ಲ, ಧರ್ಮವಲ್ಲ. ಈ ದೃಷ್ಟಿಯಿಂದ ಈ ಗ್ರಂಥವು ಅತ್ಯುಪಯುಕ್ತವಾಗಿದೆ.

ಶ್ರೀ ಶಿವಮುಂಜೆಯವರ ಅನುವಾದದ ಭಾಷೆ ಪಳಗುತ್ತ ಬರುತ್ತಿರುವುದು ಸಂತೋಷ. ಇದರದೇ ಪ್ರಭಾವ 'ಸ್ವ ಬರಹ'ದಲ್ಲಿಯೂ ಬೀಳುವುದೂ ಸಹಜ. ಆದರೂ ಕನ್ನಡತನವನ್ನು ಉಳಿಸುವ ಪ್ರಯತ್ನ ಮಾಡಿದ್ದಾರೆ; ಯಶಸ್ಸು ಪಡೆದಿದ್ದಾರೆ. ಹಾಳು ಕಾಗದ, ಸುಂದರ ಮುದ್ರಣ, ಅರ್ಥಗರ್ಭಿತ ಮುಖಪತ್ರಗಳು ಪುಸ್ತಕಕ್ಕೆ ಮೆರಗಿತ್ತಿವೆ. "ಹುತಾತ್ಮರು" ಒಂದು ಸ್ವಾಗತಾರ್ಹ ಕೃತಿ. ಸ್ವಾತಂತ್ರ್ಯಕ್ಕೆ ಬಂದಿರುವ ಶತ್ರುಗಳ ಆಹ್ವಾನವನ್ನೆದುರಿಸಬೇಕಾದ ಈ ಸಂದರ್ಭದಲ್ಲಿ ಕನ್ನಡಿಗರ ಕೆಚ್ಚನ್ನು ಕೆರಳಿಸಲು, ದೇಶಕ್ಕಾಗಿ ಹೋರಾಡಲು, ಅವಶ್ಯ ಕಂಡರೆ, ವೀರ ಮರಣವನ್ನಪ್ಪಲು ಸೂಕ್ತ ಪ್ರೇರೇಪಣೆ ನೀಡುವಲ್ಲಿ ತುಂಬ ಸಹಕಾರಿಯಾಗಬಲ್ಲುದು.

ಬೃಂದಾವನ:— ಸಂಪಾದಕರು: ರಾಘವೇಂದ್ರ ಕಟ್ಟಿ. ಪ್ರಕಾಶಕರು: ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ) ಪುಟಗಳು: ೪೪. ಬೆಲೆ ರೂ: ೧.

ಸಾಹಿತ್ಯ ಸಂಘವು ಪ್ರಕಟಿಸಿದ ಈ ಕವಿತಾ ಸಂಕಲನದಲ್ಲಿ ೨೪ ಹಿರಿಯ—ಕಿರಿಯ ಸಾಹಿತ್ಯಿಕರ ವಿವಿಧ ಕೃತಿಗಳಿವೆ. ಆದಿಕವಿಯಿಂದ ವೀರಗೀತೆಯ ತನಕ ಕವಿಗಳ ಲೇಖನಿ ಹರಿದಿದೆ. ಛಂದೋ ಬದ್ಧ, ಮುಕ್ತಛಂದ, ನವ್ಯ ಭಾವಗೀತೆಗಳ ಪ್ರಕಾರಗಳೂ ಇಲ್ಲಿವೆ.

ನಾಡಿನ ಗಡಿಯಲ್ಲಿ ನಮ್ಮದೆ ಗುಡಿಯಲಿ

ನಡೆಯಲಿ, ನುಡಿಯಲಿ ವೀರಧ್ವನಿ

ಎಂದು ಹೇಳುವ ಕಣವಿಯವರು ಬರಿಯ 'ವೀರಧ್ವನಿ ನುಡಿದರೆ ಸಾಲದು, ಸ್ವಾರ್ಥದ ಸೀರುಪನಿಯೂ ಅಡಗಲಿ ಎಂದು ಕರೆಯೊಯುತ್ತಾರೆ.

ಧೀರನಾಗು, ವೀರನಾಗು
ಆಗಲಿ ಸೂರ್ಯೋದಯ
ನಿಲ್ಲು ನೀನು ನಿರ್ಭಯ||

ಎಂದು ರಾಘವೇಂದ್ರ ಕಟ್ಟಿಯವರು 'ಉತ್ತರಾಯಣ'ದಲ್ಲಿ ಸಾರುತ್ತಾರೆ

'ಶಿವಲೆಂಕರ' ಯುಗಾದಿಯು ನಮ್ಮ ದೀನತೆಯನ್ನೂ ಅಸಹಾಯತೆಯನ್ನೂ ಕೊನೆಗೆ ಭರವಸೆಯನ್ನೂ ಪ್ರದರ್ಶಿಸುತ್ತದೆ.

ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ|

ನಾವು ಸಮ ನಿಮಗೆಂದು ನುಡಿವ ಬಲವಿಲ್ಲ||

ಂ ಂ ಂ

ಹಲವು ಯೋಜನೆಗಳನು ರೂಪಿಸುವ ಭರದಲ್ಲಿ

ಆಯ್ತು ಬಡ ಭಾರತಿಗೆ ಮೈತುಂಬ ಸಾಲ.

ಂ ಂ ಂ

ಸ್ವಾರ್ಥಲಾಲಸೆ ಜಾತಿ ಮತ್ಸರದ ಕಡೆ ಚಿಗುರ

ಅರೆದು ಬೇವನು ಮಾಡಿ ಕುಡಿವರುಷ ವರುಷ;

ಆಗ ತರುವುದು ನೋಡು ಯುಗಾದಿ ತನ್ನ ಜೊತೆ

ನಾಡಿಂಗೆ ನವನಲಿವು ಸಂತೋಷ ಹರುಷ||

ಜಿ. ಎಸ್. ಶಿವರುದ್ರಪ್ಪನವರ 'ಆಧಿಕವಿಗೆ'ಯಲ್ಲಿ ಭಾವದೊಡನೆ ನವ್ಯತೆಯೂ ತಲೆಯಿಣಿಕಿದಂತೆ ಭಾಸವಾಗುತ್ತದೆ. 'ಮೋಸದ್ರೋಹಗಳಿಗೆ ಅವೇದ್ಯವಾದುದಿಲ್ಲ' ಅಭೇದ್ಯವಾದುದಿಲ್ಲ, ಎಂಬ ಕಟ್ಟನುಭವ ವಿನಾಯಕರದು (ದೇವಗಿರಿಯಕೋಟೆ) ಬಿ. ಎಚ್. ಶ್ರೀಧರರ ದೃಷ್ಟಿಯಲ್ಲದ ಸೃಷ್ಟಿ ಸತ್ಯ ದರ್ಶನದ ಕೃತಿ.

ಲೆಕ್ಕವೆ ಇಲ್ಲದ ಅಲ್ಲಗ ಸಲ್ಲದ
ನುಡಿಗಳ ನೆನಪಿಡಲೇತಕ್ಕೆ?
ಸಾಸಿರದೊಳಗೊಂದೊಂದೆ ಸೂಳ್ನುಡಿ
ಭಾವಾಕಾಶದಿ ಧ್ರುವಚಿಕ್ಕೆ||

ಇದು ಬಿ. ಎ. ಸನದಿಯವರ ಪ್ರಾತಿವಾದ್ಯ. ಈಶ್ವರೀ ತನಯರು 'ವೀರಯೋಧ ಅಭಿಮನ್ಯು ಕೊಡಲಿ ನಮಗೆ ಕೆಚ್ಚನ್ನು ಎಂದು ಹಾರೈಸಿ ವೀರಗೀತೆ ನುಡಿಸಿದ್ದಾರೆ.

ಹೀಗೆಯೇ ಇಲ್ಲಿನ ಕವನಗಳಲ್ಲಿ ಹೆಚ್ಚಿನವು ಉಪಾದೇಯವಾಗಿಯೇ ಇವೆ, ಸೊಗಸಾಗಿವೆ. ಬೃಂದಾವನದಲ್ಲಿ ವಂಶೀಧರ ಊದಿದ್ದೇ ಗೀತೆಯಾಗುತ್ತದೆ. ಅದನ್ನು ಕೇಳಲು ಸುರ ನರ ನಾರಿಯಾದಿಯಾಗಿ ಎಲ್ಲರೂ ಸೇರುತ್ತಿದ್ದರಂತೆ. ಯಮುನಾ ನದಿಯೂ ತನ್ನ ಹರಿವನ್ನು ತಡೆಯುತ್ತಿತ್ತಂತೆ. ಶ್ರೀ ರಾಘವೇಂದ್ರ ಕಟ್ಟಿಯವರು ಸಂಪಾದಿಸಿದ ಈ ಕವನ ಸಂಕಲನವೂ ಒಂದು ಬೃಂದಾವನ. ಇಲ್ಲಿನ ಕವಿಗಳ ಕೃತಿ ವಂಶೀನಾದದಂತೆಯೇ ಹೃದಯ ಸ್ಪರ್ಶಿಯಾಗಿವೆ. ವಿಷಯ ವೈವಿಧ್ಯ, ಸರಳಶೈಲಿ, ತಿಳಿಭಾಷೆ, ಆಕರ್ಷಕ ಮುದ್ರಣ, ಸಂಪಾದಕೀಯ (ಕೃತಿ ವಿವೇಚನ) ಇವು ಪುಸ್ತಕಕ್ಕೆ ಕಲಶಪ್ರಾಯವಾಗಿವೆ.

ಸರಸ-ವಿರಸ.—ಬರೆದವರು: ಕೆ. ಜೆ. ಶೆಟ್ಟಿ. ಪ್ರಕಾಶಕರು: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ. ಪುಟಗಳು: ೬೧. ಬೆಲೆ. ರೂ. ೧.

ತಮ್ಮ ಬರೆಹ—ಕೃತಿಗಳಿಂದ ಈಗಾಗಲೇ ಬೆಳಕಿಗೆ ಬಂದಿರುವ ಅಧ್ಯಾಪಕ ಶೆಟ್ಟರು ತಮ್ಮ ಒಂಬತ್ತು 'ಸಿಹಿ—ಕಹಿ ಸವಿ ಸಾನ್ನಿಧ್ಯ"ವನ್ನು ಇಲ್ಲಿ ಸಂಗ್ರಹಿಸಿದ್ದಾರೆ. ಜೀವನವು ಸರಸ—ವಿರಸಗಳ ಸನ್ನಿಧಾನ. ಅವುಗಳ ಬಗ್ಗೆ ಆಳವಾಗಿ ಯೋಚಿಸುವ, ಯೋಚಿಸಿದ್ದನ್ನು ಲೆಕ್ಕಣಿಕೆಯ ಮೂಲಕ ಇಳಿಸುವ ಕಲೆ ಶ್ರೀ ಶೆಟ್ಟರಿಗೆ ಸಿದ್ಧಿಸಿದೆ. ಇದಕ್ಕೆ ಈ ಕೃತಿಯೇ ಸಾಕ್ಷಿ.

'ಗಡಿಬಿಡಿ ಮೇಷ್ಟ್ರು'- ಅಧ್ಯಾಪಕರ ದಯನೀಯ ಸ್ಥಿತಿಯನ್ನೂ, ಏಕೋಪಾಧ್ಯಾಯ ಶಾಲೆಗಳ ದುರವಸ್ಥೆಯನ್ನೂ ನಮ್ಮ ಕಣ್ಣಿಗೆ ಕಟ್ಟಿಸುವುದು ಇದಕ್ಕೆ ಸಮಾಜಕ್ಕಿಂತ ಸರಕಾರವೇ ಹೊಣೆಯೆಂಬುದನ್ನು ಮರೆಯುವುದು ಸಾಧ್ಯವೆ? ಊಟಕ್ಕಿಲ್ಲದ ಉಪ್ಪಿನಕಾಯಿ, ನ್ಯಾಯದ ತಕ್ಕಡಿ, ಸಮ್ಮೂರಿಗೂ ಎಲೆಟ್ರಿ ಬಂತು. ಈ ಮಧ್ಯಮವಂತರು ಜನ ಜೀವನದ ಒಂದೊಂದು ಚಿತ್ರವನ್ನು ಸುಂದರವಾಗಿ ನಮ್ಮ ಮುಂದಿಡುತ್ತವೆ. 'ತಪ್ಪು ಮಾಡಲು ಲೋಕವೇ ಕಲಿಸುತ್ತದೆ.'—ಇದು ಇಂದಿನ ಪರಿಸ್ಥಿತಿ. ಕೆಲವರ ನಿರ್ದಯತೆಯಿಂದಾಗಿ ಯಾರೂ ಯಾರನ್ನು ನಂಬದಂತಾಗುತ್ತದೆ, "ಪಂಚಾಯತ್ ರಾಜ್ಯದಲ್ಲಿ" ನಡೆಯುವ ದರ್ಬಾರ ಸತ್ಯಕ್ಕಿಂತ ದೂರವಿಲ್ಲ "ಸಾಯಲು ಹೊರಟಾಗ..." ಇಲ್ಲಿ ಹಾಸ್ಯದೊಡನೆ ವ್ಯಂಗ್ಯ ತಲೆಹಾಕಿದೆ. ಹಳೆಯದಾದರೂ ಹೊಸರೀತಿಯಲ್ಲಿ "ಹಾಗಿದ ನೋವು" ವಸ್ತು ಸ್ಥಿತಿಯನ್ನು ತೋರಿಸುತ್ತದೆ.

ಲೇಖಕರ ಭಾಷೆ ತಿಳಿಯಿದೆ; ಶುದ್ಧವಿದೆ. ಪ್ರತಿ ಕೃತಿಯಲ್ಲಯೂ ಶ್ರೀ ಶೆಟ್ಟರು ತಮ್ಮ ಲೋಕೋಕ್ತಿಯ ಭಂಡಾರವನ್ನು ಪೋಲುಬಿಟ್ಟಿದ್ದಾರೆ, ಪ್ರತಿಪಾದ್ಯವನ್ನು ಸ್ಪಷ್ಟವಾಗಿ ಪ್ರತಿಪಾದಿಸುವುದಕ್ಕೆ ಇದರಿಂದ ತುಂಬ ಸಹಕಾರಿಯಾಗಿದೆ- ಅರ್ಥವುಳ್ಳುಗಿದವನಿಗೆ ಚಳಯೇನು? ಹಣವಂತರ ಕುಲಕ್ಕೆಲ್ಲಾ ಒಂದೇ ಕೂಡುಕಟ್ಟು, ಹಣವಂತರನ್ನು ರೋಗವೂತಾನಾಗಿ ಹುಡುಕಿಕೊಂಡು ಬರುವುದು, ಇತ್ಯಾದಿ "ಗೇಟಿನ ಬಾಗಿಲು ತೆರೆದೇ ಇದ್ದರೆ ರಾಜನ ಮನೆಯಾದರೇನು? ಬೀದಿನಾಯಿಯೂ ಒಳನುಗ್ಗುತ್ತದೆ. ಸರಾಗವಾಗಿ,' ಇದು ನಮ್ಮ ಪ್ರಜಾಪ್ರಭುತ್ವಕ್ಕೆ ಸರಿಯಾಗಿ ಅನ್ವಯಿಸುವುದಿಲ್ಲವೆ? ಮಧ್ಯ ನಿಷೇದ ಮಸೂದೆಯನ್ನು ತೆಗೆದುಹಾಕಲು ನಮ್ಮ ಸರಕಾರ ಕಷ್ಟ ಪಡುವಂತೆ....? ತೂಗುಯ್ಯಾಲೆಯ ನೀತಿಗೆ ಆಧುನಿಕ ಉಪಮೆ ಚೆನ್ನಾಗಿದೆ 'ನೀರಿಂದ ಮೇಲೆ ಬಿದ್ದ ಮೀನಿನಂತ....' ಮೊದಲಾದ ಪ್ರಸಿದ್ಧ ಉಪಮೆಗಳೂ ಇಲ್ಲಿವೆ. 'ಮೂಗೇ ಇಲ್ಲದವಳಿಗೆ ನತ್ತು ಬೇಕೆ?"—ಎಂತಹ ವಿಡಂಬನೆ...!

ಶ್ರೀ ಶೆಟ್ಟರ "ಸರಸ—ವಿರಸ"ದ ಬರೆಹಗಳಲ್ಲಿ ಹೆಚ್ಚಿನವು ಪ್ರಬಂಧ ಮಾದರಿಯವು ಎನ್ನಬಹುದು. ಜೀವನದಲ್ಲಿ ತಾವು ಕಂಡಂತ ಕಟು ಸತ್ಯಾನುಭವವನ್ನು ತಮ್ಮ ಸುಲಲಿತ ಸುಂದರ ನುಡಿಗಟ್ಟಿನ ಚೌಕಟ್ಟಿನಲ್ಲಿ ಮುಂದಿಟ್ಟಿದ್ದಾರೆ. ಅಂದವಾದ ತಪ್ಪಿಲ್ಲದ ಮುದ್ರಣವೂ ಮನಮೆಚ್ಚುತ್ತದೆ. ಶ್ರೀ ಅ| ಗಾ| ಕಿನ್ನಿಗೋಳಿಯವರು ಮುನ್ನುಡಿಯಲ್ಲಿ ಬರೆದಿದ್ದಾರೆ—"ಇಲ್ಲಿಯ ಬರೆಹಗಳೆಲ್ಲ ನವುರಾದ ಹಾಸ್ಯದ ಹನಿ ಜಿನುಗಿವೆ...." ಇದು ನೂರಕ್ಕೆ ನೂರರಷ್ಟು ಸತ್ಯ.

—ಗೋರಾ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಕನ್ನಡದ ಶಿಲ್ಪ ಕಲೆ

(ಆರನೇ ಪುಟದಿಂದ)

ಣಬಹುದು. ಶಿಲ್ಪಿಗಳು ಕೃತಿಗಳ ಅಡಿಯಲ್ಲಿ ಜಾಲಾಂಧ್ರ-ಪೀಠಗಳ ಅಡಿಯಲ್ಲಿ ತಮ್ಮ ಹೆಸರನ್ನು ಕೆತ್ತಿದ್ದಾರೆ. ಮತ್ತೆ ಕೆಲವರು ತಮ್ಮ ಹೆಸರಿನ ಮೊದಲಿನ ಅಕ್ಷರ ಅಥವಾ ಕೆಲವು ಸಂಕೇತಗಳನ್ನು ಮಾತ್ರ ರೂಪಿಸಿದ್ದಾರೆ. ಶಿಲ್ಪಿಗಳ ಪೈಕಿ— ದಾಸೋಜ, ಚಾವಣ, ಮಲ್ಲಿತಮ್ಮ, ಗದುಗಿನ ನಾಗೋಜ, ನವರಂಗ ಶಿಲ್ಪದ ಚಿಕ್ಕಹಂಪ, ಮಲ್ಲೋಜ, ಮೊದಲಾದವರು ವಿಷ್ಣುವರ್ಧನನ ಆಸ್ಥಾನ ಶಿಲ್ಪಿಗಳಾಗಿದ್ದು, ಬಿರುದುಗಳನ್ನು ಪಡೆದಿದ್ದರು.

ಹೊಯ್ಸಳೇಶ್ವರ ದೇವಾಲಯದಲ್ಲಿ 'ಮಾಬ'—'ಮಾ' ಎಂಬ ಅಂಕಿತವನ್ನು ಮಾತ್ರ ಕಾಣಬಹುದು. ಅರಳಗುಪ್ಪೆ ಕೇಶವ ದೇವಾಲಯದ ೨೭ ಶಿಲ್ಪಿಗಳಲ್ಲಿ ೧೨ ಶಿಲ್ಪಿಗಳ ಅಡಿಯಲ್ಲಿ 'ಹೋ' ಎಂದಿದೆ. ಅದು ಹೋನೋಜ ಎಂಬ ಶಿಲ್ಪಿಯ ಸಂಕೇತಾಕ್ಷರ.

ಮಲ್ಲಿತಮ್ಮ ಜಗದ್ವಿಖ್ಯಾತ ರೂವಾರಿ. ಇವನ ಕೀರ್ತಿ ಕಲಾಶಕ್ತಿಗೆ ಮಿತಿಯೇ ಇಲ್ಲ. ತರೀಕೆರೆ ತಾಲ್ಲೋಕು ಅಮೃತಾಪುರದ ಅಮೃತೇಶ್ವರ ದೇವಾಲಯದ ಭುವನೇಶ್ವರಿ (ಕ್ರಿ. ಶ. ೧೧೯೬) ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ (ಕ್ರಿ. ಶ. ೧೨೪೯) ಮಂಡ್ಯ ಜಿಲ್ಲೆ ಗೋವಿಂದನ ಹಳ್ಳಿ ಪಂಚಲಿಂಗ, ಹಾಸನ ಜಿಲ್ಲೆ ಜಾವಗಲ್ಲು, ಲಕ್ಷ್ಮೀನರಸಿಂಹ, ಹಾರನಹಳ್ಳಿ ಕೇಶವ ದೇವಾಲಯ (ಕ್ರಿ. ಶ. ೧೨೩೪) ಸೋಮನಾಥಪುರದ ಕೇಶವ ದೇವಾಲಯ (ಕ್ರಿ. ಶ. ೧೨೬೮) ಈ ಶಿಲ್ಪಿಯ ಶಿಲ್ಪ ಕಲಾಚಾತುರ್ಯಕ್ಕೆ ಮೇಲ್ಕಂಡ ದೇವಾಲಯಗಳ ಅಮೋಘ ಕಲಾಕೃತಿಗಳು ಪ್ರತ್ಯಕ್ಷ ಸಾಕ್ಷಿಗಳಾಗಿವೆ.

ಬಲ್ಲಣ್ಣ, ಭೋಜಣ್ಣ ಚವುಗ, ದೇವೋಜ, ಕೇದಾರೋಜ, ಕಾಳಿದಾಸಿ ಮೊದಲಾದ ಶಿಲ್ಪಿಗಳು ತಮ್ಮ ಕಲಾಶಕ್ತಿಯನ್ನು ಬೀರಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಶಿಲ್ಪಿಗಳ ಹೆಸರು ಉಳಿದು ಹೋಗಿದೆ. ಆದರೆ ಕನ್ನಡನಾಡಿನಲ್ಲಿ ತಮ್ಮ ಅಗಾಧ ಕಲಾಶಕ್ತಿಯಿಂದ ನಾಡಿನ ಕೀರ್ತಿಯನ್ನೇ ಉಜ್ವಲಗೊಳಿಸಿದ ಶಿಲ್ಪಿಗಳು ಲೋಕವಂದಿತರು. ಹೊಯ್ಸಳ ಸಂಪ್ರದಾಯ, ಶಿಲ್ಪ ಕಲೆ ಅಂದಿನ ಅರಸರ ಕಲಾವಿದರ (ರೂವಾರಿ) ಕಲಾಶಕ್ತಿಯ ಪ್ರತೀಕವಾಗಿಯೇ ಉಳಿದಿವೆ.

ಹೊಯ್ಸಳರ ಶಿಲ್ಪ ಕಲೆಯಂತೆ ನಾಡಿನ ಇತರೆಡೆಗಳಲ್ಲಿ ಹಲಬಗೆಯ ಮಾದರಿಯ ದೇವಾಲಯಗಳು, ಶಿಲಾಕೃತಿಗಳು ಅಮೋಘ ಕಲಾಕೃತಿಗಳಾಗಿಯೇ ಮೆರೆದಿವೆ. ಚಾಲುಕ್ಯ ಸಂಪ್ರದಾಯವೂ ಸಾಕಷ್ಟು ಪ್ರಭಾವಬೀರದಿಲ್ಲ. ಚಾವುಂಡರಾಯನಿಂದ ರೂಪಿಸಲ್ಪಟ್ಟ ಅಂಖಿತ ಏಕಶಿಲೆಯ ಗೋಮಟೇಶ್ವರ ಮೂರ್ತಿ ಲೋಕವಿಖ್ಯಾತ ಏಕೈಕ ಮಹಾಕೃತಿ. ಅಂದಿನ ಶಿಲ್ಪಿಗಳಿಗೆ ಕಲ್ಲು ಮೇಣಕ್ಕಿಂತಲೂ ಮೃದುವಾಗಿದೆ. ಶಿಲ್ಪಶಾಸ್ತ್ರಕ್ಕನುಸಾರವಾಗಿ ಒಂದು ಕೃತಿಗೂ ಲೋಪ ಬಾರದಂತೆ ಶಿಲೆಯಲ್ಲಿ ಕಲೆಯ ರಸ ಸುರಿದು ಜೀವಂತ ಕಲಾಕೃತಿಗಳನ್ನಾಗಿಯೇ ರೂಪಿಸಿದ್ದಾರೆ ಶಿಲ್ಪಿಗಳು.

ತಲಕಾಡಿನ ದೇವಾಲಯಗಳು ಕೆಳದಿ, ಇಕ್ಕೇರಿಯ ಭವ್ಯ ದೇವಮಂದಿರಗಳು ಅಮೋಘ ಕಲಾಪ್ರತೀಕವಾದ ವಿಜಯನಗರದರಸರ ಹಿರಿಯತನಕ್ಕೆ ಸಾಕ್ಷಿಯಾಗಿ ಶತ್ರುಗಳ ಹೊಡೆತಕ್ಕೆ ನುಗ್ಗಾಗಿ ನಿಂತಿರುವ ಹಂಪೆಯ ದೇವಾಲಯಗಳು ವಿಷ್ಣುವರ್ಧನನ ಸೋದರ ಉದಯಾದಿತ್ಯನಿಂದ ನಿರ್ಮಿಸಲ್ಪಟ್ಟ ಶ್ರೀರಂಗಪಟ್ಟಣದ ಶ್ರೀ ರಂಗನಾಥ ದೇವಾಲಯ, ನಂಜನಗೂಡಿನ ಶ್ರೀ ರಂಗೇಶ್ವರ ದೇವಾಲಯ ಬಾದಾಮಿಯ ದೇವಮಂದಿರಗಳೂ ವಿಜಾಪುರದ ಗೋಲುಗುಮ್ಮಟದ ಆದಿಯಾಗಿ ಹಲವಾರು ಪ್ರಮುಖ ಸ್ಥಳಗಳು ಭವ್ಯ ಕಲಾಕೃತಿಗಳು ಯಾವ ಹಿರಿಯ ಕಲಾರೂಪಿಗೂ ಕಡಿಮೆ ಇಲ್ಲ.

ಜನ ಕೋಟಿಯ ಮನಸೆಳೆದು, ವಿಶ್ವವಿಖ್ಯಾತ ಸ್ಥಳಗಳೆಂದೆನಿಸಿಕೊಂಡು ಕೀರ್ತಿಯ ತುದಿಯಲ್ಲಿ ಮೆರೆದಾಡುವ ಅಜಂತಾ ಮತ್ತು ಎಲ್ಲೋರ ಗುಹಾಂತರ ದೇವಾಲಯಗಳು ಕನ್ನಡಿಗರ ಕಲಾ ಕುಶಲತೆಯ ಸಾಕ್ಷಿ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಕನ್ನಡ ನಾಡಿನಲ್ಲಿ ಕಲೆ, ಪಾಂಡಿತ್ಯ, ವಿಜ್ಞಾನ ಪ್ರತಿಭೆಗೆ ಬರಗಾಲವಿಲ್ಲ. ಆದರೆ ಅದರ ಉಪಯೋಗ, ಪ್ರಯೋಜನ ಸಾಕಷ್ಟು ಪ್ರಗತಿಯಲ್ಲಿಲ್ಲ. ಶ್ರೇಷ್ಠ ಕಲೆ, ಕಲಾವಿದ ಯಾವ ನಾಡಿನವನಾಗಿರಲಿ, ಯಾವ ಮತೀಯನಾಗಿರಲಿ, ಯಾವ ರಾಷ್ಟ್ರದವನಾಗಿರಲಿ ಲೋಕವಂದಿತ. ಅಂತಹ ಕಲೆ ಕಲಾವಿದ ನಮ್ಮ ತಮ್ಮವನೆಂದು ಜಗಳ ಮಾಡುವುದು ನಾಗರೀ ಜನಾಂಗದ ಲಕ್ಷಣವಲ್ಲ.

ಕಲೆಯಲ್ಲಿ ನವ ಸೃಷ್ಟಿಯಾಗದಿದ್ದರೂ ಚಿಂತೆ ಇಲ್ಲ. ಅಂದು ಮಾಡಿ ತನ್ನ ಹಿರಿಮೆಯಿಂದ ಶಾಂತಿದಾಯಿನಿಯಾದ ಉನ್ನತ ಕಲೆಯನ್ನೂ ಪರಂಪರೆಯಿಂದ ಬಂದಿರುವಂತೆಯೇ ಬೆಳೆಸಿ, ಉಳಿಸಿ, ಪೋಷಿಸುವ ಯೋಜನೆ ಮಾಡಬೇಕು. ಇಂದು ಹುಟ್ಟಿದ ಮಾನವ ನಾಳೆ ಕೊನೆಯುಸಿರು ಎಳೆಯಬಹುದು. ಆದರೆ ಸೃಷ್ಟಿಯ ಆದಿಯಿಂದಲೇ ಜೊತೆಗೂಡಿ ಬಂದ ಉನ್ನತ ಕಲೆ ಅವಿನಾಶಿ— ಆಗ ಮಾತ್ರವೇ ಅಲ್ಲ ಅಂತ್ಯವೇ ಇಲ್ಲದ ರಸ ವಾಹಿನಿ ಎಂದು ಹೇಳುವುದರಲ್ಲಿ ಸತ್ಯಾಂಶವಿದೆಯಷ್ಟೆ!

ಚಿತ್ರಕಥೆ.

ದಿ ಲೊಂಗೆಸ್ಟ್ ಡೇ

ಬರೆದವರು:

ಶ್ರೀ ಮಾಮಾಪನಾಪಕರ್

ಒಬ್ಬ ಸೇನಾಧಿಕಾರಿಯ ಅಲ್ಪ ತಪ್ಪಿನ ಪರಿಣಾಮವಾಗಿ ಇಡಿ ದ್ವಿತೀಯ ಮಹಾಯುದ್ಧದ ಗತಿಯೇ ಬದಲಾದುದನ್ನು ಟ್ವೆಂಟಿಯತ್ ಸೆಂಚುರಿ ಫಾಕ್ಸ್ ಅವರು "ದಿ ಲೊಂಗೆಸ್ಟ್ ಡೇ" ಎಂಬ ಚಿತ್ರದಲ್ಲಿ ಬಹಳ ಪರಿಣಾಮಕಾರಿಯಾಗಿ, ನೈಜತೆಗಳಿಂದ ಕೂಡಿದ ದೃಶ್ಯಗಳಿಂದ ತಯಾರಿಸಿದ್ದಾರೆ.

ಹಿಟ್ಲರನು ಯೂರೋಪಿನ ರಾಷ್ಟ್ರಗಳನ್ನೆಲ್ಲ ವಶಪಡಿಸಿಕೊಂಡರೂ ಮಿತ್ರ ರಾಷ್ಟ್ರಗಳಿಗೆ ಅವನನ್ನು ಸೋಲಿಸುವುದಕ್ಕೆ ಉಪಾಯವೇ ತೋರುತ್ತಿರಲಿಲ್ಲ. ಅದಕ್ಕೆ ಸರಿಯಾಗಿ ಜರ್ಮನ್ ಪಹರೆಯು ಎಲ್ಲಾ ಕಡೆಗಳಲ್ಲಿ ಬಲವಾಗಿತ್ತು. ಹಿಟ್ಲರನು ಎಲ್ಲಾ ಕಡೆಗಳಲ್ಲಿಯೂ ಸುರಂಗ, ತೋಫು, ಮತ್ತು ಸರೋವರಗಳಂತಹ ಯುದ್ಧ ಕಾರ್ಯಗಳಿಗೆ ಬೇಕಾದ ಆವಶ್ಯಕತೆಗಳನ್ನು ಮೊದಲೇ ತಯಾರಿಸಿದ್ದನು. ಇದರಿಂದ ಮಿತ್ರ ರಾಷ್ಟ್ರಗಳು ಕಂಗೆಟ್ಟು ಹೋಗಿದ್ದುವು. ಆಗಲೇ ದ್ವಿತೀಯ ಮಹಾಯುದ್ಧ ಪ್ರಾರಂಭವಾಗಿ ೫ ವರ್ಷಗಳಾಗಿದ್ದುವು (೧೯೪೪).

ಹಿಟ್ಲರನು ವಶಪಡಿಸಿ ಕೊಂಡ ಯೂರೋಪಿನ ದೇಶಗಳನ್ನು ಕಾಯಲು ಎಲ್ಲರಿಂದಲೂ ಹೊಗಳಲ್ಪಟ್ಟ ರೊಮೆಲನು ರಕ್ಷಣಾ ದಳಗಳ ಸೇನಾಧಿಪತಿಯಾಗಿದ್ದನು. ಎಲ್ಲಕ್ಕಿಂತಲೂ ಹೆಚ್ಚಾಗಿ ಫ್ರಾನ್ಸಿನಲ್ಲಿ ರಕ್ಷಣಾ ಕಾರ್ಯಗಳು ಬಲವಾಗಿದ್ದುವು. ಕಾರಣವೇನೆಂದರೆ ಮಿತ್ರ ರಾಷ್ಟ್ರಗಳ ಕೇಂದ್ರವಾದ ಇಂಗ್ಲೆಂಡಿಗೂ ಫ್ರಾನ್ಸಿಗೂ ಬರೇ ೨೦—೩೦ ಮೈಲುಗಳ ಅಂತರವಿತ್ತು.

ಜರ್ಮನ್ ಸೈನಿಕರಿಗೆ ಮಿತ್ರರಾಷ್ಟ್ರ ವಿಮಾನಗಳ ಸದ್ದು ಕೇಳಿ ಕೇಳಿ ಬೇಸರ ಹಿಡಿದುಹೋಗಿತ್ತು. ಫ್ರಾನ್ಸಿಗೆ ಹಡಗಿನಲ್ಲಿ ಸೈನಿಕರನ್ನು ಕಳುಹಿಸುವುದೆಂದರೆ ಅಸಾಧ್ಯವಾದ ಮಾತು. ಆದರೆ ಹಿಟ್ಲರನು ಹೆಚ್ಚಿನ ವಿಮಾನಗಳನ್ನು ಪಶ್ಚಿಮದೊಂದಿಗೆ ಯುದ್ಧಕ್ಕೆ ಕಳುಹಿಸಿ ಕೆಲವೇ ವಿಮಾನಗಳನ್ನು ಫ್ರಾನ್ಸಿನಲ್ಲಿರಿಸಿದ್ದನು.

ಇದೇ ವೇಳೆಯಲ್ಲಿ ೧೯೪೪ನೇ ಜೂನ್ ೪ರಂದು ಸೇನಾಧಿಕಾರಿ ರೊಮೆಲನು ರಜೆಯಲ್ಲಿ ತನ್ನ ಊರಿಗೆ ಹೋದನು. ಜೂನ್ ೬ರಂದು ಆತನ ಪತ್ನಿಯ ಹುಟ್ಟು ಹಬ್ಬವಾಗಿತ್ತು.

ಇಂಥ ಸುಸಮಯವು ಮಿತ್ರರಾಷ್ಟ್ರಗಳಿಗೆ ಇನ್ನೆಂದೂ ಸಿಕ್ಕುತ್ತಿರಲಿಲ್ಲ. ಮಿತ್ರ ರಾಷ್ಟ್ರಗಳು ಅವಸರದ ಸಭೆ ಸೇರಿ ಜನರಲ್ ಐಸೆನ್‌ಹೋವರರ ನಾಯಕತ್ವದಲ್ಲಿ ಫ್ರಾನ್ಸನ್ನು ಪ್ರವೇಶಿಸುವ ನಿರ್ಧಾರವನ್ನು ತಳೆದರು. ಎಷ್ಟೋ ಕಾಲದಿಂದ ಕೆಲಸವಿಲ್ಲದೆ ನಿಂತಿದ್ದ ಸಾವಿರಾರು ಹಡಗುಗಳೂ, ಲೆಂಕ್ಕೂ ಮಿಕ್ಕಿದ ವಿಮಾನಗಳೂ ಸಾವಿರಾರು ಸೈನಿಕರೊಡನೆ ಜೂನ್ ೬ನೇ ಮಧ್ಯರಾತ್ರಿ ಫ್ರಾನ್ಸಿನೆಡೆಗೆ ಹೊರಟವು. ಇದಕ್ಕೆ ಸರಿಯಾಗಿ ಹವೆಯೂ ಉತ್ತಮವಾಗಿತ್ತು.

ಹಡಗುಗಳು ಚಿಕ್ಕ ದೋಣಿಗಳಲ್ಲೂ ಸೈನಿಕರನ್ನು ತುಂಬಿಸಿ ಫ್ರಾನ್ಸಿನ ಕರಾವಳಿಗೆ ಬಂದುವು. ಜರ್ಮನರು ತಡವಾಗಿ ಕಂಡರೂ ಯುದ್ಧವನ್ನು ಪ್ರಾರಂಭಿಸಿದರು. ಅನೇಕ ಮಿತ್ರರಾಷ್ಟ್ರಗಳ ಹಡಗುಗಳು ನಾಶವಾಗಿ ಅವರು ನಿಸ್ಸಹಾಯ ಪರಿಸ್ಥಿತಿಯಲ್ಲಿದ್ದಾಗ ಇದುವರೆಗೆ ಸುಮ್ಮನಿದ್ದ ಫ್ರಾನ್ಸಿನ ಜನತೆಯು ಅವರಿಗೆ ಸಹಕಾರವನ್ನು ನೀಡಿತು.

ಮಿತ್ರ ರಾಷ್ಟ್ರಗಳು ಜೂನ್ ೬ರಂದು ಫ್ರಾನ್ಸಿನಲ್ಲಿದ್ದ ಜರ್ಮನ್ ಸೈನಿಕರನ್ನು ಭೇದಿಸಿ ದ್ವಿತೀಯ ಮಹಾಯುದ್ಧದ ಮುಖವನ್ನು ತಿರುಗಿಸಿದುದರಿಂದ ಆ ದಿನವನ್ನು "ಲೊಂಗೆಸ್ಟ್ ಡೇ" (ದೀರ್ಘ ದಿನ) ಎಂದು ಕರೆಯಲಾಗಿದೆ.

ಈ ಚಿತ್ರವು ಬಹಳ ಪರಿಣಾಮಕಾರಿಯಾಗಲು ೪೨ ಅಂತರ್‌ರಾಷ್ಟ್ರೀಯ ನಟನಟಿಯರುಗಳನ್ನು ಆರಿಸಿ ಅವರ ಸಹಕಾರದಿಂದ ಚಿತ್ರದಲ್ಲಿ ನೈಜತೆಯನ್ನು ತುಂಬಿಸಿದ್ದಾರೆ. ಆದುದರಿಂದ ಈ ಚಿತ್ರವು ಹಲವು ಬಹುಮಾನಗಳನ್ನು ಪಡೆಯಲು ಸಮರ್ಥವಾಯಿತು.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗವ್ಯಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,

ಉಡುಪಿ.

ತನ್ನ ಡೊಂಕು ತನಗೆ ತಿಳಿಯದು

(ಐದನೇ ಪುಟದಿಂದ)

ಯನ್ನು ನಿರ್ದೋಷಿಯೆಂದು ಬಿಡುಗಡೆ ಮಾಡಿತು.

೩. ಮುಖ್ಯ ನ್ಯಾಯಾಧೀಶ "ರಫಿ" ತನ್ನ ತೀರ್ಪಿನಲ್ಲಿ ಯಜಮಾನನಿಗೆ ಸೇವಕನ ಮೂಲಕ ಲಾಭ ದೊರಕ ತಕ್ಕದ್ದು; ಸೇವಕರ ಮೇಲೆ ಆತನಿಗಿರುವ ಅಧಿಕಾರ ಸುರಕ್ಷಿತವಿರಬೇಕು. ಸೇವಕನಿಗೆ, ತನಗಾಗಿ ಅಥವಾ ತನ್ನ ಸಂಗಾತಿಗಾಗಿ ಯಾವ ವಸ್ತುವನ್ನಾದರೂ ಸಂಗ್ರಹಿಸಿಡುವ ಅಧಿಕಾರವಿಲ್ಲ. ಇತರರಿಗೆ ಲಾಭ ದೊರಕುವ ರೀತಿಯಲ್ಲಿಯೇ ನಿರಂತರ ದುಡಿಯುತ್ತಿರುವುದೇ ಆತನ ಕರ್ತವ್ಯ. ತನ್ನ ಬಗ್ಗೆ ಯಾವ ಅಭಿಲಾಷೆಯನ್ನೂ ಆತನು ಇಟ್ಟುಕೊಳ್ಳಕೂಡದು. ಯಜಮಾನನಿಗೆ ತನ್ನ ಸೇವಕನ ಶರೀರದ ಮೇಲೆ ಸಹ ಸಂಪೂರ್ಣ ನಿಯಂತ್ರಣವಿರತಕ್ಕದ್ದು. ಸೇವಕನನ್ನು ತನ್ನಧೀನದಲ್ಲಿರಿಸಿಕೊಳ್ಳಲಿಕ್ಕೆ ನಿರ್ವಿಘ್ನವಾದ ಅಧಿಕಾರ ಯಜಮಾನನಿಗಿದೆ, ಈ ಅಧಿಕಾರವನ್ನು ಪ್ರಶ್ನಿಸುವ ಹಕ್ಕು ಯಾರೊಬ್ಬರಿಗೂ ಇರುವುದಿಲ್ಲ." ಎಂಬುವುದಾಗಿ ವಿಧಿಸಿರುತ್ತಾರೆ. ಹಬ್ಶಿ ಜನಾಂಗದ ಮೇಲೆ ಆಗುತ್ತಿರುವ ವರ್ಣನಾತೀತ ಅತ್ಯಾಚಾರ ಭಾರತ ದೇಶದಲ್ಲಿ ಯಾವ ಜನಾಂಗದ ಮೇಲೂ ಆಗಿರುವುದಿಲ್ಲವೆಂಬುದು ಮೇಲಿನ ವಿವರಣೆಗಳಿಂದ ಸ್ಪಷ್ಟವಾಗುವುದಿಲ್ಲವೇ? ಇಲ್ಲಿಯ ಹರಿಜನರನ್ನು ಹಿಂದೂ ಸಮಾಜವು ದೂರ ವಿರಿಸಿತ್ತಾದರೂ ಲೋಕಕ್ಕೆ ಸಭ್ಯತೆಯ ಪಾಠ ಹೇಳುತ್ತಿರುವ ಕ್ರೈಸ್ತ ಸಮಾಜ ಹಬ್ಶಿಯವರ ಮೇಲೆಸಗುತ್ತಿರುವ ಅಮಾನುಷಿಕ ಅತ್ಯಾಚಾರವನ್ನು ಆಂಗ್ಲೋ ಇಂಡಿಯನ್ನರೂ, ಕ್ರೈಸ್ತ ಮಿಷನರಿಗಳೂ ಅಡಗಿಸಿಟ್ಟಿರುವುದು ಪರಮಾಶ್ಚರ್ಯ.

೪. ಕ್ರಿ. ಶ. ೧೭೩೨ ಮತ್ತು ೧೮೩೪ರ ಮಧ್ಯದಲ್ಲಿ "ಡೆಲಾವೇಯರ್" ಮತ್ತು "ಮೇರೀಲೇಂಡ್" "ವರ್ಜಿನಿಯಾ", "ಕ್ಯೆಂಟ್" ನಗರಗಳ ಸೀಮಾ ಪ್ರದೇಶಗಳಲ್ಲಿರುವ ಹಬ್ಶಿಯರಿಗೆ ಮತಾಧಿಕಾರವನ್ನು ನಿರಾಕರಿಸಲಾಯಿತು. ಕ್ರಿ. ಶ. ೧೮೩೫ರಲ್ಲಿ "ಕೆರೋಲಿನಾ" ನಗರದಲ್ಲಿಯೂ ಇವರಿಗೆ ಮತಾಧಿಕಾರ ದೊರಕದಂತಾಯಿತು. ಕೆಲವು ನಗರಗಳಲ್ಲಿ ಹಬ್ಶಿಯವರು ಹೊಗೆಸೊಪ್ಪು, ಔಷಧಿ ಮತ್ತು ತಲೆ ಮೇಲೆ ಹೊತ್ತುಕೊಂಡು ದೈನಂದಿನ ಸಾಮಾಗ್ರಿಗಳನ್ನು ಮಾರಬಾರದೆಂಬ ಕಠೋರ ಶಾಸನವನ್ನು ಅಮೇರಿಕನರು ವಿಧಿಸಿದ್ದರು. ಇಂತಹ ಸಾಮಾಜಿಕ ಬಹಿಷ್ಕಾರ ಪ್ರಯೋಗದಿಂದ "ದಕ್ಷಿಣ-ಅಮೇರಿಕ ಸಂಸ್ಥಾನಗಳಲ್ಲಿ ಕ್ರೋಧಾಗ್ನಿ ಪ್ರಬಲಗೊಂಡು ಶ್ವೇತ ವರ್ಣೀಯ ಮತ್ತು ಕರಿ ಜನಾಂಗದವರೊಳಗೆ ಶಾಶ್ವತವಾದ ಘರ್ಷಣೆ ಮತ್ತು ಭಿನ್ನತೆ ನೆಲೆನಿಂತಿತು." ಎಂಬುದಾಗಿ "ಮಿಸ್ಟರ್ ಉಷರ್" ಎಂಬವರು ತನ್ನ "ಅಮೇರಿಕನ್ ಜನಾಂಗದ ಉತ್ಥಾನ" ಎಂಬ ಗ್ರಂಥದಲ್ಲಿ ವಿವರಿಸಿರುತ್ತಾರೆ.

ಕ್ರಿ. ಶ. ೧೮೬೫ ಹಬ್ಶಿಯವರಿಗೆ ಉಳಕೊಳ್ಳಲು ವಸತಿ ದೊರಕದಂತೆ ಮಾಡಿ ನಗರದಿಂದ ಬಹಳ ದೂರ ಗುಡಿಸಲಿನಲ್ಲಿದ್ದುಕೊಂಡು ಯಾವಾಗಲೂ ಕೂಲಿ ಆಳುಗಳಾಗಿ ದುಡಿಯುತ್ತಿರುವಂತೆ ವಿಧಿಸಲಾಯಿತು. ಕ್ರಿ. ಶ. ೧೯೧೦ರಲ್ಲಿ ಅಮೇರಿಕದ ೫೨ ರಾಷ್ಟ್ರಗಳ ಪೈಕಿ ೨೮ರಲ್ಲಿ 'ಶ್ವೇತ ವರ್ಣೀಯರೊಡನೆ ಹಬ್ಶಿ ಜನರು ಅಂತರ್ಜಾತೀಯ ವಿವಾಹ ಮಾಡಿಕೊಳ್ಳಕೂಡದು' ಎಂಬ ಒಂದು ಶಾಸನ ಜ್ಯಾರಿಯಾಯಿತು. ಈ ಕಾನೂನು ಉಲ್ಲಂಘಿಸಿದವರಿಗೆ ೧ ರಿಂದ ೧೦ ವರ್ಷಗಳ ತನಕ ಕಠಿಣ ದಂಡನೆ ವಿಧಿಸತಕ್ಕದ್ದೆಂದು ಶಾಸನದಲ್ಲಿ ನಮೂದಿಸಲಾಯಿತು. ಆಫ್ರಿಕದಲ್ಲಿಯೂ ಇಂತಹ ಸಾಮಾಜಿಕ ವಿಭಿನ್ನತೆ ವ್ಯಾಪಿಸಿಕೊಂಡಿದೆ. ಶ್ವೇತವರ್ಣೀಯ ಸಭ್ಯ(!) ಕ್ರೈಸ್ತ ಜನಾಂಗ ಹಬ್ಶಿಯವರ ಮೇಲೆ ಎಂತೆಂತಹ ಅಮಾನುಷಿಕ ಅತ್ಯಾಚಾರ ಎಸಗಿರುತ್ತದೆಂಬುದನ್ನು ನಾವು ಸುಪ್ರಸಿದ್ಧ ಇತಿಹಾಸ ತಜ್ಞ "ಮಿ. ಎ. ಸೀಗ್‌ಫ್ರೀಡ್" ಎಂಬವರು ಬರೆದಿರುವ "ಅಮೇರಿಕಾ ಕಮ್ಸ್ ಆಫ್ ಏಜ್" ಎಂಬ ಗ್ರಂಥದ "ಜೋನಾಥನ್ ಕೇಂಬ್ ೧೯೨೭" ಎಂಬ ಅಧ್ಯಾಯದ ೯೯ನೆಯ ಪುಟದಲ್ಲಿ ನೋಡಿದರೆ ವಿಸ್ತಾರವಾಗಿ ಕಂಡುಬರುತ್ತದೆ. ಇಂತಹ ಅತ್ಯಂತ ಕ್ರೂರವಾದ ಸಾಮಾಜಿಕ ಅತ್ಯಾಚಾರಗಳು ಭಾರತದಲ್ಲಿ ಎಂದಿಗೂ ಆಗಿರುವುದಿಲ್ಲ.

ಭಾರತೀಯ ಸಂಸ್ಕೃತಿ ತನ್ನವರನ್ನು ಮಾತ್ರವಲ್ಲ; ವಿದೇಶಿಯರನ್ನು ಸಹ ತನ್ನವರನ್ನಾಗಿ ಮಾಡಿಕೊಳ್ಳಲು ಸದಾ ಯತ್ನಿಸುತ್ತಿರುವುದು. ಫಾರ್ಸಿಯವರು ಈರಾನ್ ದೇಶದಿಂದ ಇಲ್ಲಿಗೆ ವಲಸೆ ಬಂದರು ಭಾರತ ದೇಶ ಅವರನ್ನು ತನ್ನವರೊಂದಿಗೆ ಸಮ್ಮಿಳಿತಗೊಳಿಸಿತು. ಯೂನಾನೀ, ತಾತಾರಿ ವಂಶೀಯರು ಇಲ್ಲಿ ಬಂದು ಈ ದೇಶದವರೊಡನೆ ತಾದಾತ್ಮ್ಯ ಹೊಂದಿದರು. ಇನ್ನೆಷ್ಟೋ ಜನಾಂಗಗಳು ಇಲ್ಲಿಗೆ ಬಂದು ನೀರು ಹಾಲನ್ನೂ ಸೇರಿದಂತೆ ಸೇರಿಕೊಂಡು ಇಲ್ಲಿಯ ನಾಗರಿಕರಾದರು. ಆದರೆ ಹಿಂದೂಸ್ಥಾನಕ್ಕೆ ಬಂದಿರುವ ಕ್ರೈಸ್ತಮಿಶನರಿಗಳು ಭಾರತೀಯರನ್ನು ತಮ್ಮ ಮತಕ್ಕೆ ಮತಾಂತರಗೊಳಿಸಿ ತಮ್ಮ ದೇಶದ ಆಚಾರ, ವಿಚಾರ, ವೇಶಭೂಷಣಗಳಿಂದ ಇತರ ನಾನಾರೀತಿಯ ಕುಹಕೋಪಾಯಗಳಿಂದ ಭಾರತದ ಪರಮೋತ್ಕೃಷ್ಟ ಸಂಸ್ಕೃತಿಯನ್ನೂ ನಾಶಮಾಡಿ ಅಲ್ಲಲ್ಲಿ ರಾಜಕೀಯ ಅಶಾಂತಿಯನ್ನು ಹರಡಿ ಹಿಂದೂದೇಶವನ್ನೂ ಕ್ರೈಸ್ತದೇಶವನ್ನಾಗಿಮಾಡಲಿಕ್ಕೆ ಯತ್ನಿಸುತ್ತಾರೆಯೇ ಹೊರತು ಇಲ್ಲಿಯ ಸನಾತನಧರ್ಮ—ಸಂಸ್ಕೃತಿಯ ಹಿರಿಮೆಯನ್ನು ಕಂಡುಕೊಳ್ಳಲು ಸ್ವಲ್ಪವೂ ಪ್ರಯತ್ನಿಸುವುದಿಲ್ಲ. ಇಂತಹ ವಿಚಾರ ಸಂಕೀರ್ಣತೆಯುಳ್ಳ ಒಂದು ಜನಾಂಗಕ್ಕೆ ಸಭ್ಯತೆಯನ್ನೂ ಬೋಧಿಸಲಿಕ್ಕೆ ಅರ್ಹತೆ ಇರುವುದೇ?



ಸತ್ಯದ ಕೆಲವೊಂದು ಅಂಶವನ್ನಾದರೂ ಅರಿತುಕೊಂಡು ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಯತ್ನಿಸಬೇಕು. ಜೀವನದ ನಿಗೂಢ ರಹಸ್ಯವನ್ನು ಭೇದಿಸಲು ನಿರರ್ಥಕವಾಗಿ ಶ್ರಮಿಸುವುದಕ್ಕಿಂತ ಹೀಗೆ ಮಾಡುವುದು ಎಷ್ಟೋ ಲೇಸು.

೦ ೦

ಸುಖ-ದುಃಖಗಳಿಗೆ ಬೇರೆ ಬೇರೆ ಕಾಲವಿದ್ದಂತೆಯೇ ದುಡಿಮೆಗೂ ವಿರಾಮಕ್ಕೂ ಬೇರೆ ಬೇರೆ ಕಾಲವಿದೆ. ಇಂದು ನಮ್ಮ ಮುಂದಿರುವುದು ದುಡಿಮೆಯ ಕಾಲ. ನಮ್ಮ ಇಂದಿನ ಜನಾಂಗಕ್ಕೆ ಕಠಿಣ ಪರಿಶ್ರಮದ ದೀಕ್ಷೆ ಅನಿವಾರ್ಯವಾಗಿದೆ.

೦ ೦

ದುಡಿಮೆ......ದುಡಿಮೆ .... ದುಡಿಮೆ. ನನಗೆ ಇಂದು ಬೇಕಾದುದು ಇವಷ್ಟೇ. ಗುರಿ ಸಾಧಿಸುವುದೇ ನನ್ನ ಉತ್ಕಟ ಆಕಾಂಕ್ಷೆ. ಯೋಧರಂತೆ, ಸತ್ಯ ಪ್ರಮಾದಿಗಳಂತ ಕರ್ತವ್ಯ ನಿಷ್ಠರಾದ ಜನ ನನಗೆ ಬೇಕು. ಯಾವುದೇ ದುಷ್ಟ ಶಕ್ತಿಗೂ ಮಣಿಯದೇ ತಮಗ ಸರಿಯೆಂದು ತೋರಿದ್ದನ್ನು ಸಾಧಿಸಲು ಹೋರಾಡುವವರೇ ನನಗೆ ಅತ್ಯಂತ ಪ್ರಿಯರು.

೦೦

ಹಿಂಸಾ ಮಾರ್ಗ ಅತ್ಯಂತ ಅಪಾಯಕಾರಿ. ಹಿಂಸೆ ಇರುವೆಡೆಯಲ್ಲಿ ಎಂದೆಂದೂ ಸ್ವಾತಂತ್ರ್ಯ ತಲೆಯೆತ್ತುವುದಿಲ್ಲವೆಂದೇ ನನ್ನ ಅಭಿಮತ. ಹಿಂಸೆ—ದ್ವೇಷಗಳಿಂದ ಕೇವಲ ಹಿಂಸಾದ್ವೇಷಗಳೇ ಜನಿಸುತ್ತವೆ. ಸುದೀರ್ಘವಾದ ಇತಿಹಾಸದಿಂದ ಮಾನವ ಜನಾಂಗವನ್ನೇ ವಿಧ್ವಂಸಗೊಳಿಸಿದ ಕಳೆದ ಎರಡು ವಿಶ್ವ ಸಮರಗಳಿಂದ ನಾವು ಈ ಪಾಠ ಕಲಿತಿದ್ದೇವೆ.

೦ ೦

ಮುಂದೆ ಸಂಭವಿಸಬಹುದಾದ ಯಾವುದೇ ವಿಶ್ವ ಸಮರವು, ಮಾನವ ಜನಾಂಗವು ಈ ಮೊದಲು ಎಂದೂ ಅನುಭವಿಸದಂತಹ ಭೀಕರ ವಿಪತ್ತನ್ನು ತರುತ್ತದೆ. ಇಂತಹ ಸಮರ ನಡೆದರೆ ಭಾರತವಾಗಲಿ ಅಥವಾ ವಿಶ್ವದ ಇತರ ಯಾವುದೇ ದೇಶವಾಗಲಿ ಅದರಿಂದ ಪಾರಾಗುವುದೆಂದು ಭಾವಿಸಬೇಡಿ. ಸಮರದ ಮೂಲವು ಜನರ ಮನಸ್ಸಿನಲ್ಲಿಯೇ ಇರುವುದು. ಇದೇ ಅಂತಿಮ ವಿಶ್ಲೇಷಣ.

—ನೆಹರು.

NOTICE

In the Court of the District Judge of Mangalore, South Kanara.

A. S. No. 47 of 1965.

Between.

Chandamma Shedthi and others — Appellants.

And

Manjamma Shedthi and others — Respondents.

To

19. Subbanna Shetty, S/o Subbakke Shedthi, Residing at Molahalli village, Coondapur Taluk, S. K.

The abovenamed Appellants have filed above Appeal against the Decree and Judgement of the Subordinate Judge of Mangalore, South Kanara, in O. S. No. 190/1950 dated 22—1—1952, and therefore take notice that the said Appeal is posted for your appearance on the 15th April 1966 in the above court failing which it will be heard and decided in your absence.

(By Order of the Court)

K. Rajaram Hegde,
Advocate for Appellants.

Mangalore, 25-3-1966.

READ & ADVERTISE IN NAVAYUGA WEEKLY

ಬೈಲೂರು ಯಂ. ಯಂ. ಶಾಲೆ ಮತ್ತು ಹಳೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವ

ಬೈಲೂರು, ತಾ. 27-3-66 ರಂದು ಪೂರ್ವಾಹ್ನ ಶ್ರೀ ಆರ್. ಎಸ್. ಭಟ್ ಮತ್ತು ಸಹೋದರರು ಉದಾರವಾಗಿ ದಾನಮಾಡಿದ "ದಿ|ಮಾರ್ಥೆ ಸತ್ಯಭಾಮಾ ಸ್ಮಾರಕ" ಅಶೋಕ ಸ್ತಂಭದ ಉದ್ಘಾಟನೆಯು ಶ್ರೀ ಕೆ. ಸಿ. ನಾರಾಯಣ ತಂತ್ರಿ ಇವರಿಂದ ನೆರವೇರಿಸಲ್ಪಟ್ಟಿತು.

ಸಾಯಂಕಾಲ ಶ್ರೀ ಎ. ಜೆ. ಅಲ್ಸೆ ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಬಿ. ಎಲ್. ಆಚಾರ್ ಇವರು ಸ್ವಾಗತ ಭಾಷಣಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಗ್ಲೇಡ್ಸನ್ ಜತ್ತನ್ನರು ಶಾಲಾ ವರದಿವಾಚನ ಮಾಡಿದರು. ಹಳೇವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀಗೋಡ್ವಿನ್ ಕೊಟ್ಯನ್ನರಿಂದ ಸಂಘದ ವರದಿಯು ಓದಲ್ಪಟ್ಟಿತು. ಶ್ರೀ ಭುಜಂಗಶೆಟ್ಟರು ಸ್ವಸ್ತಿವಾಚನಮಾಡಿದರು. ಶ್ರೀ ಬಿ. ಕಾಳಪ್ಪ ಶೆಟ್ಟಿ (ತಾಲೂಕು ಬೋರ್ಡು ಮೆಂಬರ್) ಇವರು ಬಹುಮಾನ ವಿತರಣೆ ಮಾಡಿದರು. ಶ್ರೀ ಎ. ಜೆ. ಅಲ್ಸೆ ಇವರು ತಮ್ಮ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತಾ ಶಾಲೆಗೆ ಊರವರ ಸಹಕಾರದ ಕುರಿತು ತಿಳಿಸಿದರು. ವಿವಿಧ ವಿನೋದಾವಳಿಗಳ ತರುವಾಯ ಶಾಲಾಬಾಲಕ ಬಾಲಕಿಯರಿಂದ ಸತ್ಯವಾನ್ ಸಾವಿತ್ರಿಎಂಬ ಪೌರಾಣಿಕ ನಾಟಕವೂ ಹಳೇವಿದ್ಯಾರ್ಥಿಗಳಿಂದ "ದೇವದಾಸಿ" ಎಂಬ ಸಾಮಾಜಿಕ ನಾಟಕವೂ ಅಭಿನಯಿಸಲ್ಪಟ್ಟಿತು. ಸಂಘದ ಕಾರ್ಯದರ್ಶಿ ಶ್ರೀ ಗೋಡ್ವಿನ್ ಕೋಟ್ಯನ್ನರಿಂದ ಧನ್ಯವಾದ ಸಮರ್ಪಿಸಲ್ಪಟ್ಟಿತು.

ವಾರ್ಷಿಕ ಮಹಾಸಭೆ

ಎಲ್ಲೂರು ಸ್ಥಳೀಯ ಯುವಕ ಮಂಡಲದ ವಾರ್ಷಿಕ ಮಹಾಸಭೆಯು ಸ್ಥಳೀಯ ಸಮಾಜ ಮಂದಿರದಲ್ಲಿ ಮಂಡಲದ ಅಧ್ಯಕ್ಷ ಶ್ರೀ ವೈ. ಶ್ರೀಪತಿಭಟ್ರವರ ಅಧ್ಯಕ್ಷತೆಯಲ್ಲಿ ಜರಗಿತು. ನೂತನ ವರ್ಷಕ್ಕೆ ಶ್ರೀ ವೈ. ರಾಮಚಂದ್ರಭಟ್ಅವರು ಅಧ್ಯಕ್ಷರಾಗಿಯೂ, ಶ್ರೀ ವೈ. ಶ್ರೀಪತಿಭಟ್ರವರು ಉಪಾಧ್ಯಕ್ಷರಾಗಿಯೂ, ಶ್ರೀ ವೈ. ಸುಬ್ರಾಯಭಟ್ರವರು ಕಾರ್ಯದರ್ಶಿಗಳಾಗಿಯೂ, ಶ್ರೀ ಕೃಷ್ಣಮೂರ್ತಿ ಉಡುಪರು ಸಹಕಾರ್ಯದರ್ಶಿಗಳಾಗಿಯೂ, ಶ್ರೀ ವೈ. ವಾಸುದೇವ ಮೊಯಿಲಿಯವರು ಕೋಶಾಧಿಕಾರಿಗಳಾಗಿಯೂ, ಶ್ರೀ ವೈ. ವಿ. ಸುಬ್ಬರಾವ್ ರವರು ಗ್ರಂಥಾಲಯದ ಅಧಿಕಾರಿಗಳಾಗಿಯೂ ಶ್ರೀ ವೈ. ಜಗದೀಶರಾವ್ರವರು ಸಾಂಸ್ಕೃತಿಕ ಚಟುವಟಿಕೆ ಸಮಿತಿಯ ನಾಯಕರಾಗಿಯೂ ಶ್ರೀ ಎ. ವಿಶ್ವನಾಥರಾವ್ರವರು ಆಟೋಟ ಸಮಿತಿಯ ನಾಯಕರಾಗಿಯೂ, ಶ್ರೀ ವೈ. ಆನಂದಶೆಟ್ಟರವರು ವ್ಯವಸಾಯಾಭಿವೃದ್ಧಿ ಸಮಿತಿಯನಾಯಕರಾಗಿಯೂ ಇರುವ ಕಾರ್ಯದರ್ಶಿ ಸಮಿತಿಯನ್ನೂ ಸರ್ವಾನುಮತಿಯಿಂದ ಆರಿಸಲಾಯಿತು.

ಶ್ರೀ ವೈ. ವಿ. ರತ್ನಾಕರರಾವ್ ಮತ್ತು ಶ್ರೀ ವೈ. ವಿಠಲಭಟ್ರವರು ಲೆಕ್ಕ ಪರಿಶೋಧಕರಾಗಿಯೂ, ಶ್ರೀ ಎಸ್. ನಾರಾಯಣಉಡುಪ ಮತ್ತು ಶ್ರೀ. ರಾಮಕೃಷ್ಣಮಂಜಿತ್ತಾಯರ ಸಲಹೆಗಾರರಾಗಿಯೂ ಆಯ್ಕೆಗೊಂಡರು.

ಹೋಟೆಲ್ ದ್ವಾರಕಾದ ಉದ್ಘಾಟನೆ

ಹೈದರಾಬಾದಿನ ರಾಜಭವನ ರಸ್ತೆಯಲ್ಲಿ ಅತ್ಯಾಧುನಿಕ ಸೌಕರ್ಯಗಳುಳ್ಳ ಹೊಟೇಲ್ ದ್ವಾರಕಾ ಎಂಬ ಐದು ಅಂತಸ್ತುಗಳ ಕಟ್ಟಡವು ಆಂಧ್ರ ಪ್ರದೇಶ್ ಸರಕಾರದ ಮುಖ್ಯಮಂತ್ರಿ ಶ್ರೀ ಕೆ. ಬ್ರಹ್ಮಾನಂದ ರೆಡ್ಡಿ ಇವರಿಂದ ಮಾರ್ಚ 23ರಂದು ಉದ್ಘಾಟಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರು ವಹಿಸಿದ್ದರು. ಈ ನೂತನ ಹಾಗೂ ಆತ್ಯಾಕರ್ಷಕ ಕಟ್ಟಡವು ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಎಸಂಬ್ಲಿ ಸಭಾಸದನಗಳು ಸೆಕ್ರಿಟೇರಿಯೇಟ್, ಗಾಂಧೀ ಭವನ್, ಮಂತ್ರಿಗಳ ನಿವಾಸ ಸ್ಥಾನಗಳು, ರೈಲ್ವೇನಿಲ್ದಾಣ ಮತ್ತು ಪ್ರಮುಖ ವ್ಯಾಪಾರ ವಾಣಿಜ್ಯ ಕೇಂದ್ರಗಳಿಗೆಲ್ಲಾ ಅತೀ ಸಮೀಪವಿದ್ದು, ಆತ್ಯಂತ ಕೇಂದ್ರ ಸ್ಥಾನದಲ್ಲಿದೆ. ಇದರಲ್ಲಿ 200 ಜನರಿಗೆ ವಸತಿ ಸೌಕರ್ಯವಿದೆ. ಈ ಹೊಟೆಲ್ ದ್ವಾರಕಾದ ಮಾಲಕರು ದಕ್ಷಿಣ ಕನ್ನಡದ ಬೆಳ್ಮಣ್ಣು ವಿನ ಸಾಹಸಿಗಳಾದ ಶ್ರೀಗಳಾದ ಬಿ. ಸೀತಾರಾಮ ರಾವ್, ಬಿ. ಪುರುಷೋತ್ತಮ ರಾವ್, ಬಿ. ಮೋಹನ್ ರಾವ್, ಇವರು ಎಂಬುದು ಅಭಿಮಾನದ ವಿಚಾರವಾಗಿದೆ.

ಧಾನ್ಯವನ್ನು ಇಳಿಸಿ ಸಾಗಿಸು ಕಾರ್ಯಕ್ಕೆ ಅಮೆರಿಕದ ಬಂದರು ತಜ್ಞರ ನೆರವು

ಅಮೆರಿಕ ಹಾಗೂ ಇತರ ರಾಷ್ಟ್ರಗಳಿಂದ ದೊಡ್ಡ ಪ್ರಮಾಣದಲ್ಲಿ ಬರಲಿರುವ ಧಾನ್ಯವನ್ನು ಶೀಘ್ರಗತಿಯಿಂದ ಇಳಿಸಿ ಸಾಗಿಸುವ ಕಾರ್ಯದಲ್ಲಿ ಭಾರತದ ಬಂದರುಗಳ ಸಾಮರ್ಥ್ಯವನ್ನು ಹೆಚ್ಚಿಸಲು ನೆರವು ನೀಡುವ ಸಲುವಾಗಿ ಬಂದರುಗಳ ಕಾರ್ಯನಿರ್ವಾಹದಲ್ಲಿ ತಜ್ಞರಾದ ಅಮೆರಿಕನ್ನರೊಬ್ಬರು ಭಾರತಕ್ಕೆ ಬರಲಿದ್ದಾರೆ. ಬಹು ಶೀಘ್ರದಲ್ಲಿಯೇ ಭಾರತಕ್ಕೆ ಬರಲಿರುವ ಧಾನ್ಯದ ಪ್ರಮಾಣ ತಿಂಗಳೊಂದಕ್ಕೆ ಹತ್ತು ಲಕ್ಷ ಟನ್ನುಗಳಿಗೆ ಏರುವುದೆಂದು ಅಂದಾಜು ಮಾಡಲಾಗಿದೆ.

ನೌಕಾ ಸಾರಿಗೆಯಲ್ಲಿ ಅನುಭವ ಪಡೆದವರೂ, ದಕ್ಷಿಣ ಕೆರೋಲಿನ ರಾಜ್ಯದ ಬಂದರುಗಳ ಮೇಲ್ವಿಚಾರಕ ಸಂಸ್ಥೆಯ ಜನರಲ್ ಆಪರೇಷನ್ಸ್ ಮ್ಯಾನೇಜರರೂ ಆದ ದಕ್ಷಿಣ ಕೆರೋಲಿನಾದ ಚಾರ್ಲ್ಸ್ಟನ್ನಿನ ಜಾನ್ ಪಿ. ಕ್ವೇಲಿ ಅವರು ಭಾರತದ ಬಂದರುಗಳಲ್ಲಿರುವ ಧಾನ್ಯವನ್ನು ಇಳಿಸುವ ಹಾಗೂ ಸಾಗಿಸುವ ವ್ಯವಸ್ಥೆಗಳನ್ನು ವಿಸ್ತರಿಸುವುದಕ್ಕೂ ಉತ್ತಮ ಪಡಿಸುವುದಕ್ಕೂ ಭಾರತದ ಸರಕಾರ ಅಧಿಕಾರಿಗಳಿಗೂ ತಾಂತ್ರಿಕ ಸಿಬ್ಬಂದಿಯವರಿಗೂ ನೆರವು ನೀಡುವರು. ಇದರಿಂದ ಭಾರಿ ಪ್ರಮಾಣದ ಧಾನ್ಯದ ಆಮದನ್ನು ಗ್ರಹಿಸಲು ಭಾರತದ ಬಂದರುಗಳಿಗೆ ಸಾಧ್ಯವಾಗುವುದು.

ಕಳೆದ ಕೆಲವು ತಿಂಗಳುಗಳಲ್ಲಿ ಭಾರತದ ಬಂದರುಗಳಿಗೆ ಬಂದ ಅಮೆರಿಕದ ಧಾನ್ಯದ ಪ್ರಮಾಣ ದ್ವಿಗುಣವಾಗಿದೆ—ಡಿಸೆಂಬರ್ ತಿಂಗಳಿನಲ್ಲಿ ಬಂದ ಆಮದು ೫ ಲಕ್ಷ ಟನ್ನುಗಳಾದರೆ ಏಪ್ರಿಲಿನಲ್ಲಿ ೧೦ ಲಕ್ಷ ಟನ್ ಬರುವುದೆಂದು ಅಂದಾಜು ಮಾಡಲಾಗಿದೆ. ಪ್ರಪಂಚ ಆಹಾರ ಕಾರ್ಯಕ್ರಮದ ಆಶ್ರಯದಲ್ಲಿ ದೊಡ್ಡದೊಂದು ಹಡಗಿನಲ್ಲಿ ೫೪,೦೦೦ ಟನ್ ಧಾನ್ಯ ಬರುತ್ತಿದ್ದರೆ, ಕೆನಡಾ ಹಾಗೂ ಇತರ ರಾಷ್ಟ್ರಗಳಿಂದ ೮೧೨,೦೦೦ ಟನ್ ಬರಲಿದೆ.

ಬಂದರುಗಳ ಕಾರ್ಯನಿರ್ವಾಹದಲ್ಲಿ ಬಹು ಅನುಭವ ಪಡೆದವರಲ್ಲಿ ಒಬ್ಬರಾದ ಕ್ವೇಲಿ ಅವರು ಅಮೆರಿಕದ ಬಂದರು ಸಂಸ್ಥೆಗಳ ಸಂಘದ ಬಂದರು ಕಾರ್ಯನಿರ್ವಾಹಕ್ಕೆ ಸಂಬಂಧಿಸಿದ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಬಂದರು ಸಂಸ್ಥೆಗಳ ಸಂಘದಲ್ಲಿ, ಉತ್ತರ ಹಾಗೂ ದಕ್ಷಿಣ ಅಮೆರಿಕ ಮತ್ತು ಕೆನಡದ ಬಹುಪಾಲು ಬಂದರುಗಳು ಪ್ರಾತಿನಿಧ್ಯ ಪಡೆದಿವೆ.

ಅಭಿಪ್ರಾಯ

ಬಿ. ಡಿ. ಓ. ಗಳು ಕ್ಷೇತ್ರಾಭಿವೃದ್ಧಿ ಇಲಾಖೆಯೇ ಹೋಗಬೇಕು

ಬಡರೈತನ ಹಣದ ಸುಲಿಗೆಯ ಖಾತೆ

ನಮ್ಮ ಕಾಂಗ್ರೆಸ್ ಸರಕಾರ ಬಂದ ನಂತರ ರೂಪುಗೊಂಡ ಹೊಸ ಇಲಾಖೆಗಳಲ್ಲಿ ಕ್ಷೇತ್ರಾಭಿವೃದ್ಧಿ ಶಾಖೆ ಒಂದು. ಈ ಇಲಾಖೆಗೆ ಒಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿ ಮತ್ತು ಅವರಿಗೆ ಸಂಬಂಧಿಸಿ ಹಲವಾರು ನೌಕರರು, ಒಂದೊಂದು ಜೀಪು ಇತ್ಯಾದಿ. ಈ ಇಲಾಖೆ ಯಾವ ಕ್ಷೇತ್ರ ಅಭಿವೃದ್ಧಿ ಮಾಡಿದೆಯೋ ದೇವರೇ ಬಲ್ಲ. ಇಲಾಖೆಯ ಹೆಸರಿನಲ್ಲಿ ಕೆಲವರು ತಮ್ಮ ಸಂಸಾರ ಕ್ಷೇತ್ರ ಅಭಿವೃದ್ಧಿ ಮಾಡಿಕೊಂಡಿರುವರು.

ಆಚಾರ್ಯ ವಿನೋಬಾರವರು ಈ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಸಾರ್ವಜನಿಕ ಹಣದ ಪೋಲುಗಾರಿಕೆಗಿರುವವರು, ಅವರಿಂದ ಯಾವುದೇ ಉಪಯುಕ್ತ ಕೆಲಸ ಆಗುತ್ತಿಲ್ಲ ಎಂಬ ಅಭಿಪ್ರಾಯ ಪಟ್ಟಿರುವರು. ಕ್ಷೇತ್ರಾಭಿವೃದ್ಧಿ ಇಲಾಖೆಯ ವಿಚಾರದಲ್ಲಿ ಬೀಹಾರಿನಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಗಿ ಅಲ್ಲಿಯ ಮುಖ್ಯಮಂತ್ರಿಗಳು ಇಲಾಖೆಯ ವಿರೋಧಿಸಿದರೂ ಕೇಂದ್ರ ಸರಕಾರದ ಒತ್ತಾಯದಿಂದ ಈ ಇಲಾಖೆಗೆ ತಿಲಾಂಜಲಿ ಬಿದ್ದಿದೆ. ಅಲ್ಲಿ ಬಿ. ಡಿ. ಓ.ಗಳ ಹಾಗೂ ಅವರ ಖಾತೆಯ ಇತಿಶ್ರೀಯಾಗುತ್ತಿದೆ.

ಇತ್ತಲಾಗಿ ಬ್ಲಾಕ್ ಡೆವಲಪ್‌ಮೆಂಟ್ ಖಾತೆ ನಿಷ್ಪ್ರಯೋಜಕವೆಂಬ ಅಭಿಪ್ರಾಯ ಹಲವು ರಾಜ್ಯಗಳಲ್ಲಿ ತಲೆದೋರಿದೆ. ಮೈಸೂರು ಶಾಸನ ಸಭೆಯಲ್ಲೂ ಈ ವಿಚಾರ ಪ್ರತಿ ಧ್ವನಿತವಾಗಿದೆ. ಆದರೆ ನಮ್ಮ ಸರಕಾರ "ಮಹಿಷಾಸುರ" (ನಿಧಾನ) ಸರಕಾರವಾಗಿರುವುದರಿಂದ ಬಿ. ಡಿ. ಓ.ಗಳು ಹಳ್ಳಿ ಹಳ್ಳಿಗಳಲ್ಲಿ ತಮ್ಮ ಜೀಪ್ ಪ್ರಯಾಣದಿಂದ ಧೂಳೆಬ್ಬಿಸುತ್ತಾ ಇನ್ನೂ ತಿರುಗುತ್ತಿದ್ದಾರೆ.

ಇತ್ತಿತ್ತ ಬಿ. ಡಿ. ಓ.ಗಳು ಮಂತ್ರಿಮಾಗದರು ಬಂದಾಗ ಚಪ್ಪರ, ಔತಣ ಏರ್ಪಾಡು ಮಾಡುವ ಕೆಲಸ ಮಾತ್ರ ಮಾಡುತ್ತಾರೆ.

ಬಿ. ಡಿ. ಓ. ಗಳು ಎಲ್ಲ ಕೆಲಸ ಮಾಡಬೇಕಾದವರಂತೆ. ಕೃಷಿ ಅಭಿವೃದ್ಧಿ, ನೀರಾವರಿ ಯೋಜನೆ, ರಸ್ತೆ ಇತ್ಯಾದಿ ದುರಸ್ತಿ ಎಲ್ಲ ಅಭಿವೃದ್ಧಿ ಕೆಲಸಗಳಿಗೂ ಜವಾಬ್ದಾರರಂತೆ. ಮಾತ್ರವಲ್ಲ ಅವರಿಗೆ ಇನ್ನೂ ಹಲವು ವಿಶೇಷ ಜವಾಬ್ದಾರಿಗಳೂ ಇವೆ. ಹೀಗಾಗಿ ಅವನು "ಜಾಕ್ ಆಫ್ ಆಲ್ ಟ್ರೇಡ್" ಆಗಿ "ಮಾಸ್ಟರ್ ಆಫ್ ನನ್" ಆಗಿದ್ದಾನೆ.

ಈ ಇಲಾಖೆಗಾಗಿ ಲಕ್ಷಗಟ್ಟಲೆ ವೆಚ್ಚವಾಗುತ್ತಿದೆ. ಇವರ ವಾಹನಗಳು ಸದಾ ಓಡುತ್ತಿರುತ್ತವೆ. ಆದರೆ ಯಾರ ಪುರುಷಾರ್ಥಕ್ಕಾಗಿ? ಆದ್ದರಿಂದ ಈ ಇಲಾಖೆ ಸಂಪೂರ್ಣ ತೆಗೆದು ಹಾಕಲ್ಪಡಬೇಕಾದುದು ಅಗತ್ಯವಿದೆ. ಬೀಹಾರಿನ ಉದಾಹರಣೆಯನ್ನು ಮೈಸೂರು ಅನುಸರಿಸುವುದೇ?

'X'.

ಸಾರ್ವಜನಿಕರ ಅನುಕೂಲತೆಗಾಗಿ

ನಗರದ ಹಂಪನಕಟ್ಟೆ ಕೇಂದ್ರದಲ್ಲಿ

ತಾ. 28-3-66ರಂದು

'ಶೆಟ್ಟಿ ಐಸ್‌ಕ್ರೀಮ್' ಮತ್ತು 'ಮಿಲ್ಕ್ ಬಾರ್'

ವಿಭಾಗವು

ದ. ಕ. ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರವರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಂದ ಉದ್ಘಾಟಿಸಲ್ಪಟ್ಟಿದೆ.

ಸರ್ವರ ಪ್ರೋತ್ಸಾಹವನ್ನು ಕೋರಲಾಗಿದೆ.

ಆರ್. ಪಿ. ಶೆಟ್ಟಿ
ಪ್ರೊಪ್ರೈಟರ್.

ಚಂದಾದಾರರಲ್ಲಿ ವಿನಂತಿ.

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 45ನೆಯ ಹೊಸ ವರ್ಷಾರಂಭವಾಗಿದೆಯಷ್ಟೆ! ಈ ಅವಧಿಗೆ ಯಾ ಅನಂತರ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇವೆ. ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ. ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕ್ರಮಶಃ ವಿ. ಪಿ. ಮಾಡಬೇಕಾಗುತ್ತದೆ. ಅದನ್ನು ದಯಮಾಡಿ ಸ್ವೀಕರಿಸುವಂತೆ ಕೇಳಿಕೊಳ್ಳುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ—ಸಂಪಾದಕ

(ಮೂರನೇ ಪುಟದಿಂದ)

ಇನ್ನೇನೂ ಮಾಡುವುದು ಸಾಧ್ಯವಿಲ್ಲ; ಇದೂ ಒಪ್ಪತಕ್ಕ ಮಾತು. ಆದರೆ, ಜವಾಬ್ದಾರಿ ಹೊಂದಿದ ಲೋಕ ಸಭಾ ಸದಸ್ಯರಲ್ಲಿ ಕೆಲವರಿಗೆ ಇದರಿಂದ ಸಮಾಧಾನವಾಗದೆ ಹಲವಾರು ನಿಲುವಳಿ ಸೂಚನೆಗಳನ್ನು ತಂದುದೂ, ಅವು ವ್ಯರ್ಥಗೊಳಿಸದಾಗ, ಲೋಕಸಭೆಯ ಕಾರ್ಯಕಲಾಪಕ್ಕೆ ಭಂಗ ತಂದೊಡ್ಡುದುದೂ ಅಧ್ಯಕ್ಷರ ಸಲಹೆ- ನಿರ್ಣಯಗಳನ್ನು ಉಲ್ಲಂಘಿಸಿದುದೂ ಹೊಣೆಗೆಟ್ಟ ದುರಂತಗಳೆನ್ನದೆ ಅನ್ಯ ವಿಧಿಯಿಲ್ಲ. ಭಾರತೀಯ ಲೋಕ ಸಭೆಯು ಇತಿಹಾಸದಲ್ಲಿಯೇ ಮೊತ್ತ ಮೊದಲ ಬಾರಿಗೆ ಸಭೆಯನ್ನು ಕೊನೆಗೊಳಿಸಬೇಕಾಗಿ ಬಂದುದು ದುರ್ದೈವವೇ ಸರಿ. ಮರುದಿನ ನಡೆದ ಪಕ್ಷದ ನಾಯಕರ ಸಭೆಯೂ ಕೂಡ ವ್ಯರ್ಥವಾಗಿ ಪರಿಣಮಿಸಿದುದು ಇನ್ನೂ ಶೋಚನೀಯ. ಇದೇ ರೀತಿಯಲ್ಲಿ ನಮ್ಮ ಪ್ರತಿನಿಧಿಗಳ ವರ್ತನೆಯು ಮುಂದುವರಿದರೆ, ಅದು ಪ್ರಜಾಪ್ರಭುತ್ವಕ್ಕೆ ಶೋಭೆ ತರುವುದರ ಬದಲು ಮಸಿ ಬಳಿಯುವುದು. ಅಧ್ಯಕ್ಷರು ಸಭಾ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವುದೂ ದೊಡ್ಡ ಸಮಸ್ಯೆಯಾಗುವುದು. ಆದುದರಿಂದ ಇಂತಹ ಕಹಿ ಪ್ರಸಂಗಗಳು ಇನ್ನು ಮುಂದೆ ನಡೆಯದಂತೆ ತಕ್ಕ ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ, ಒಂದಲ್ಲ ಒಂದು ದಿನ ಗಂಡಾಂತರ ಖಂಡಿತ. ಹೀಗಾಗಗೊಡಬಾರದು; ಪ್ರಜಾಪ್ರಭುತ್ವ ಭಾರತದಲ್ಲಿ ಉಳಿಯಬೇಕು; ಯಶಸ್ವಿಯಾಗಬೇಕು; ಇತರರಿಗೆ ಆದರ್ಶಪ್ರಾಯವಾಗಬೇಕು.

Notice.

In the Court of the Munsiff cum Magistrate Belthangady.

H. G. Date 16—4—66.

R. E. A. No. 210/65
in R. E. P. No. 64/65

Bogra Poojary— Claim Petitioner
and
Jinnappa Poojary & others— Respondents.

To
The 1st Respondent,
Jinnappa Poojary,
S/o Thimmalu Hengsu.
Residing at Bandarkottige in Kukkala village, Belthangady Taluk.

Please take notice that the above named claim-petitioner has filed a claim-petition in R. E. P. No. 64/65 which is posted to 16-4-66 for your appearence and file objections it any on which date if you fail to appear the petition will be heard ex-parte and the orders will be passed.

Please take notice,
By the order of Court,
K. Chidananda
Advocate.
Belthangady, 26—3—66.

ಎಲ್ಲೆಲ್ಲಿ ಏನೇನು?

ಗ್ರಂಥೋದ್ಘಾಟನೆ

ಉಜಿರೆ— ಇಲ್ಲಿ ತಾ. 26-3-66 ರಂದು ಅಭಿನಯ ವಿಭೂಷಣ, ನಾಟ್ಯಕಲಾ ವಿಶಾರದ ಶ್ರೀ ಎಂ. ರಂಗನಾಥ ಭಟ್ಟರ ಅಪೂರ್ವವಾದ ಕಲಾರಾಧನೆ, ಎಂಬ ಕಲಾಜೀವನ ಪರಿಚಯ ಗ್ರಂಥವನ್ನು ಶ್ರೀ ಜಿ. ಎಸ್. ಭಿಡೆ ಅವರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಎಚ್. ಬೆಟಗೆರೂರ್ ಅಸಿಸ್ಟೆಂಟ್ ಕಮಿಶನರ್ ಪುತ್ತೂರು, ಅವರು ಉದ್ಘಾಟಿಸಿದರು.

ಶ್ರೀ ಕೆ. ವಿ. ರಾಯರ ಸ್ವಾಗತ ಭಾಷಣವಾದ ಬಳಿಕ ಮಾನ್ಯ ಅಸಿಸ್ಟೆಂಟ್ ಕಮಿಶನರ್ ಅವರು ಉದ್ಬೋಧಕವಾದ ಭಾಷಣ ಮಾಡಿದರು. ಶ್ರೀ ಪಂಡಿತ್ ಸುಬ್ರಾಯ ಶರ್ಮ, ಶ್ರೀ ಶಿರಾಡಿಪಾಲ್, ಯು. ವಿನಾಯಕ, ಡಾ| ಪ್ರಭು, ಮಿ. ನಾಯುಡು, ಶ್ರೀ ಆತ್ಮಾರಾಮ ಭಿಡೆ ಮೊದಲಾದವರ ಭಾಷಣವಾದ ಬಳಿಕ ಶ್ರೀಮತಿ ಕೃಷ್ಣಾಬಾಯಿ ಸಂಜೀವರಾವ್, ಬೊಂಬಾಯಿ ಅವರು ಶ್ರೀ ರಂಗನಾಥ ಭಟ್ಟರಿಗೆ ತಮ್ಮ ಅಲ್ಪಕಾಣಿಕೆಯೆಂದು ಕಳುಹಿಸಿಕೊಟ್ಟ ರೂಪಾಯಿ ಐದು ನೂರನ್ನು ಶ್ರೀ ಎನ್. ಪಿ. ಮುರಾಯರ್, ಜಯಪ್ರಿಂಟರ್ಸ್, ಮೂಡಬಿದ್ರೆ ಇವರು ಪೂಜ್ಯ ಭಟ್ಟರಿಗೆ ಅರ್ಪಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ ಕಲಾರಾಧನೆಯ ವಿತರಣೆಯೊಂದಿಗೆ ಸಮಾರಂಭವು ಸಂಭ್ರಮದೊಡನೆ ಮುಕ್ತಾಯಗೊಂಡಿತು.

ಮಂಗಳೂರಲ್ಲಿ ಶೆಟ್ಟಿ ಐಸ್ ಕ್ರೀಮ್

ಕಳೆದ ತಾ. 28ರಂದು, ಶ್ರೀ ಕೆ. ಎಸ್. ಎನ್. ಅಡಿಗರಿಂದ, ಶೆಟ್ಟಿ ಐಸ್ ಕ್ರೀಮ್ ಮತ್ತು ಕ್ಷೀರ ಕೇಂದ್ರವು ಮಂಗಳೂರು ನಗರದ ಕೇಂದ್ರವಾದ ಹಂಪನಕಟ್ಟೆಯಲ್ಲಿ, ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇ ಗೌಡರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು.

ಪ್ರಾರಂಭದಲ್ಲಿ ಸಂಸ್ಥೆಯ ಮಾಲಕರಾದ ಶ್ರೀ ಆರ್. ಪಿ. ಶೆಟ್ಟರ ಪರವಾಗಿ ಶ್ರೀ ಎ. ವಿ. ಮಯ್ಯರು ಸ್ವಾಗತಿಸಿ ಶುಭಕೋರಿ ಬಂದ ಸಂದೇಶಗಳನ್ನೋದಿದರು. ಶ್ರೀ ಅಡಿಗರು ಉದ್ಘಾಟಿಸಿದ ಬಳಿಕ ಅಧ್ಯಕ್ಷರು ಮಾತಾಡುತ್ತಾ ಸಂಸ್ಥೆಗೆ ಶುಭಕೋರಿದರು. ಕೊನೆಯಲ್ಲಿ ಶ್ರೀ ಮಯ್ಯನವರು ಧನ್ಯವಾದ ಸಮರ್ಪಣೆಗೈದರು.

ಪಂಚಾಯತ್ ಕೃಷಿ ಉತ್ಪಾದನಾ ವಿಚಾರ ಗೋಷ್ಠಿ

ಶ್ರೀ ಟಿ. ಎ. ಪೈಗಳು ಕಳೆದ ತಾ. 27 ರಂದು, ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಆಶ್ರಯದಲ್ಲಿ ಬ್ರಹ್ಮಾವರ ಬ್ಲೋಕಿನ ಮಡಿ ಫಾರ್ಮಿನಲ್ಲಿ ಜರಗಿದ ಪಂಚಾಯತು ಕೃಷಿ ಯೋಜನೆ ಮತ್ತು ಪಂಚಾಯತು ರಾಜ್ಯ ಆಡಳಿತೆಯ ತಾಲೂಕು ಮಟ್ಟದ ವಿಚಾರ ಗೋಷ್ಠಿಯನ್ನು, ಕೃಷಿ ಇಲಾಖಾ ಡೆಪ್ಯುಟಿ ಡೈರೆಕ್ಟರ್ ಶ್ರೀ ಜಿ. ಎ. ಬಿ. ನಾಯ್ಡುರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಆರಂಭದಲ್ಲಿ ಉಡುಪಿ ತಾಲೂಕು ಬೋರ್ಡು ಸದಸ್ಯ ಶ್ರೀ ಆನಂದ ಕುಂದ ಹೆಗ್ಡೆಯವರು, ತಾಲೂಕು ಬೋರ್ಡಿನ ಉಪಾಧ್ಯಕ್ಷ ಡಾ. ಯು. ಕೆ. ಆಚಾರ್ಯರು ಪ್ರಾಸ್ತಾವಿಕ ಭಾಷಣ ಮಾಡಿದ ಬಳಿಕ, ಸ್ವಾಗತಿಸಿದರು. ತಾಲೂಕುಬೋರ್ಡಿನ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಪಿ. ಕೊರಗಪ್ಪನವರು ತಾಲೂಕಿನ 73 ಪಂಚಾಯತು ಹಾಗೂ 61 ಸೇವಾ ಸಹಕಾರಿಗಳ ಮೂಲಕ ಕೃಷಿ ಕ್ಷೇತ್ರದಲ್ಲಿ ಪ್ರಗತಿಗಳನ್ನು ವಿವರಿಸಿ. ಹಿಂದಿಗಿಂತ ಇಂದಿನ ಕೃಷಿಕರು ವಿಶೇಷ ಆಸಕ್ತಿಯಿಂದ ದುಡಿಯುತ್ತಿದ್ದಾರೆಂದು ತಿಳಿಸಿದರು.

ಶ್ರೀ ಪೈಗಳು ಉದ್ಘಾಟಿಸುತ್ತಾ, ಕಡಿಮೆ ದರದಲ್ಲಿ ಅಕ್ಕಿ ದೊರೆಯಬೇಕೆನ್ನುವ ಜನತೆ, ರೈತನು ಬದುಕುವ ಮಾರ್ಗದ ಕುರಿತೂ ಚಿಂತಿಸಬೇಕು, ಎಲ್ಲಾ ನಿಟ್ಟಿನಿಂದಲೂ ರೈತನ ಸ್ಥಿತಿಗತಿಗಳನ್ನು ನೋಡಿದರೆ, ಶೋಷಣೆಗೆ ಗುರಿಯಾಗಿರುವುದು ಗದ್ದೆಯಲ್ಲಿ ದುಡಿಯುತಕ್ಕ ರೈತನು ಮಾತ್ರ ಎಂಬುದಾಗಿ ಹೇಳಿದರು. ಮುಂದುವರಿಯುತ್ತಾ ಅವರು ಕೃಷಿ ಸಮಸ್ಯೆ ನಿವಾರಣೆಗೆ ಸರಕಾರದ ಪರಿಹಾರಗಳಿಗಿಂತ ರೈತರ ಅನುಭವ ಹಾಗೂ ಅಭಿಪ್ರಾಯಗಳನ್ನೂ ನಾವು ಪಡೆಯುವುದು ಮುಖ್ಯವೆಂದು ನುಡಿದರು ಮಾತ್ರವಲ್ಲದೆ, ಗ್ರಾಮೀಣ ಮಟ್ಟದಲ್ಲಿ ಅಧಿಕ ಉತ್ಪಾದನೆ ಕುರಿತು ನಾವೆಲ್ಲರೂ ರೈತರನ್ನು ಬೆಂಬಲಿಸುತ್ತಾ ದುಡಿಯಬೇಕೆಂದು ಒತ್ತಿ ಹೇಳಿದರು.

ಅಧ್ಯಕ್ಷರು ಮಾತನಾಡುತ್ತಾ ರೈತರು ನವೀನ ಪದ್ಧತಿಗಳನ್ನು ಅರಿತುಕೊಂಡು ದುಡಿದರೆ ಹೆಚ್ಚು ಆಹಾರ ಉತ್ಪಾದನೆ ಸಾಧ್ಯವೆಂದರು.

ಪ್ರಶಾಂತಿ ಸಮಿತಿಯ ಸ್ಥಾಪನೆ.

ಜಿಲ್ಲೆಯ ಸತ್ಯಸಾಯಿ ಭಕ್ತರ ಸಭೆಯೊಂದು ಕಳೆದ ತಾ. 21ರಂದು ಅಳಿಕೆ ಸತ್ಯಸಾಯಿ ವಿಹಾರದ ನೆಹರೂ ಸಭಾ ಭವನದಲ್ಲಿ ಪುತ್ತೂರಿನ ಡಾ| ಸತ್ಯಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಕನ್ವೀನರರಾದ ಶ್ರೀ ಯಮ್. ನಾರಾಯಣಭಟ್ಟರು ಸಭೆಯ ಉದ್ದೇಶವನ್ನು ನಿರೂಪಿಸಿ ಅತಿಥಿಗಳನ್ನು ಸ್ವಾಗತಿಸಿದರು. ಆ ಮೇಲೆ ಬಹಳಷ್ಟು ವಿಚಾರ ವಿಮರ್ಶೆಗಳಾಗಿ ತಾತ್ಪೂರ್ತಿಕವಾಗಿ ಪ್ರಶಾಂತಿ ಸಮಿತಿ ಎಂಬುದಾಗಿ ಕರೆಯಲ್ಪಡುವ ಒಂದು ಸಮಿತಿಯನ್ನು ರಚಿಸಿ ಅದಕ್ಕೆ ಘಟನೆಯೊಂದನ್ನು ರೂಪಿಸಿ ಸಮಿತಿಯ ಕಾರ್ಯಕ್ರಮವನ್ನು ನಿರ್ವಹಿಸಿಕೊಂಡು ಹೋಗುವರೆ, ಆಡಳಿತ ಸಮಿತಿಯೊಂದನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಮುಡಿಯೂರು ನಾರಾಯಣ ಭಟ್ಟರನ್ನೂ, ಉಪಾಧ್ಯಕ್ಷರಾಗಿ ಪುತ್ತೂರಿನ ಶ್ರೀ ಬಿ. ಪ್ರಭಾಕರರಾಯರನ್ನೂ ಕಾರ್ಯದರ್ಶಿಯಾಗಿ ಬಿ. ನಾರಾಯಣ ರಾಯರನ್ನೂ, ಜತೆ ಕಾರ್ಯದರ್ಶಿಯಾಗಿ ಮಂಗಳೂರಿನ ಯಸ್. ವೆಂಕಟ್ರಮಣರಾಯರನ್ನೂ ಕೋಶಾಧಿಕಾರಿಯಾಗಿ ಶ್ರೀ ಮೂಡೆಕಟ್ಟೆ ಈಶ್ವರಭಟ್ಟರನ್ನೂ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸರ್ವ ಶ್ರೀ ಪೈಲೂರು ಲಕ್ಷ್ಮೀನಾರಾಯಣರಾವ್, ಪುತ್ತೂರಿನ ಹನುಮಂತ ಮಲ್ಯನು, ಚೊಕ್ಕಾಡಿಯ ಕಲ್ಲಾರು ವೆಂಕಟ್ರಮಣಯ್ಯರು, ಸುಳ್ಯದ ನಾರಾಯಣ ರೈಗಳು, ಬಂಟ್ವಾಳದ ಲಕ್ಷ್ಮೀನಾರಾಯಣ ಹೊಳ್ಳರು, ಮಂಗಳೂರಿನ ಶ್ರೀಧರ ಆಚಾರ್ಯರು, ಮತ್ತು ಪುತ್ತೂರಿನ ಮಹಾಬಲ ಶೆಟ್ರು ಇವರುಗಳನ್ನು ಆರಿಸಲಾಯಿತು. ಭಜನಾ ಕಾರ್ಯಕ್ರಮದ ನಂತರ ಸಭೆಯು ಮುಕ್ತಾಯವಾಯಿತು.

ಬೀಳ್ಕೊಳ್ಳುವ ಸಮಾರಂಭ

ಸುರತ್ಕಲ್:— ತಾ. 28.3.1966 ಸ್ಥಳೀಯ ವಿದ್ಯಾದಾಯಿನೀ ಹೈಯರ್ ಸೆಕೆಂಡರೀ ಶಾಲೆಯಲ್ಲಿ ಕಳೆದ ೨೦ವರ್ಷಗಳಿಂದಲೂ ಸಂಸ್ಕೃತ ಪಂಡಿತರಾಗಿದ್ದು ಈಗ ನಿವೃತ್ತರಾಗಲಿರುವ ಶ್ರೀ ಸಿ. ವ್ಯಾಸಕೃಷ್ಣಾಚಾರ್ಯರನ್ನು ಬೀಳ್ಕೊಳ್ಳುವ ಸಮಾರಂಭವು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯಂ. ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಶ್ರೀ ಪಿ. ಯಸ್. ಮಧ್ಯಸ್ಥರು ವಿದಾಯಕೂಟದ ಉದ್ದೇಶವನ್ನು ತಿಳಿಸಲು, ಶ್ರೀ ಪದ್ಮನಾಭ ಸೋಮಯಾಜಿ, ಶ್ರೀ ಐ. ಸುಬ್ಬರಾವ್, ಶ್ರೀ ಯಂ. ಶಂಕರನಾರಾಯಣಯ್ಯ— ಇವರು ಅತಿಥಿಗಳ ಗುಣ ಕಥನ ಗೈದರು. ವಿದ್ಯಾರ್ಥಿಗಳ ಕಡೆಯಿಂದ ಶ್ರೀ ಗಣಪತಿ ಮಯ್ಯ, ಸುರೇಶ ಕಾಮತ್ ಮೊದಲಾದವರು ಮಾತನಾಡಲು ವಿದ್ಯಾರ್ಥಿ ನಾಯಕ ಶ್ರೀ ಭೋಜ ಬಂಗೇರನು ವಿದ್ಯಾರ್ಥಿಗಳ ಪರವಾಗಿ ಗುರುಕಾಣಿಕೆಯನ್ನರ್ಪಿಸಿದನು. ಅಥಿತಿಗಳಾದ ಶ್ರೀ ಸಿ. ವಿ. ಆಚಾರ್ಯರು ತಮ್ಮ ಜೀವನ ಸ್ಮೃತಿಗಳನ್ನರುಹಿ ತಮ್ಮನ್ನು ಈ ರೀತಿ ಸತ್ಕರಿಸಿದ್ದಕ್ಕಾಗಿ ಕೃತಜ್ಞತೆಯನ್ನರ್ಪಿಸುತ್ತ— "ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂಚ ಸಾಧಯೇತ್" ಎಂಬ ಸುಭಾಷಿತದಂತೆ ಒಂದು ಕ್ಷಣವನ್ನಾದರೂ ಹಾಳುಮಾಡದೆ ವಿದ್ಯೆಯನ್ನು ಕಲಿತು ಪರಿಪೂರ್ಣ ವಿದ್ಯಾವಂತರಾಗಿರಿ" ಎಂದು ಹರಸಿದರು. ಅಧ್ಯಕ್ಷರು ಅತಿಥಿಗಳ ಗುಣ ಕಥನ ಗೈದು "ಅವರ ನಿವೃತ್ತ ಜೀವನವು ಸುಖಮಯವಾಗಲಿ" ಎಂದು ಹಾರೈಸಿದರು.

ವಿಜಯಾ ಬ್ಯಾಂಕಿನ ಹೊಸ ಡೈರೆಕ್ಟರರಾಗಿ ಶ್ರೀ ಕೆ. ಪಿ. ಮಾಧವನ್ ನಾಯರ್

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮಾಜಿ ಪ್ರಧಾನ ಕಾರ್ಯದರ್ಶಿಗಳೂ, ಕೇರಳ ಪ್ರದೇಶದ ಕಾಂಗ್ರೆಸ್ ಕಮಿಟಿಯ ಮಾಜಿ ಅಧ್ಯಕ್ಷರೂ ಆದ ಶ್ರೀ ಕೆ. ಪಿ. ಮಾಧವನ್ ನಾಯರ್ ಇವರು ತಾ. 27-3-66 ರಿಂದ ವಿಜಯಾ ಬ್ಯಾಂಕ್ ಲಿಮಿಟೆಡ್ ಮಂಗಳೂರು ಇದರ ಡೈರೆಕ್ಟರ್ ಮಂಡಳಿಗೆ ಸೇರಿರುತ್ತಾರೆ.

ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ನಿರ್ಮಿಸಿದ ನಾಲ್ಕು ಯಂತ್ರ ಸಜ್ಜಿತ ಮೀನುಗಾರಿಕೆ ನೌಕೆ.

ಮಹಾಮೈಸೂರು ಬೋಟ್ ಬಿಲ್ಡಿಂಗ್ ಎಸೋಸಿಯೇಶನಿನವರು ಕಟ್ಟಿಸಿದ 32 ಫೀಟ್ ಉದ್ದದ 45 ಅಶ್ವ ಶಕ್ತಿಯ 4 ದೊಡ್ಡ ಬೋಟುಗಳನ್ನು ಫಿಶರೀಸ್ ಇಲಾಖೆಯವರಿಗೆ ಸ್ಥಳೀಯ ಅಧಿಕಾರಿಗಳಾದ ಶ್ರೀ ಜಡೆ ಇವರ ಹಸ್ತಗತ ಮಾಡುವ ಸಮಾರಂಭಕ್ಕೆ ಜಿಲ್ಲಾ ಕಾಂಗ್ರೇಸ್ಸು ಸಮಿತಿ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ. ಎಂ. ಎಲ್. ಸಿ. ಇವರು ಅಧ್ಯಕ್ಷತೆ ವಹಿಸಿ ಸಂದರ್ಭೋಚಿತ ಭಾಷಣ ಮಾಡಿ ಈ ಬೋಟುಗಳನ್ನು ಕಟ್ಟಿದ ಶ್ರೀ ಜೆ. ಪುರುಷೋತ್ತಮರು ಇನ್ನೂ ಹೆಚ್ಚು ಬೋಟುಗಳನ್ನು ಅತ್ಯಂತ ಸುಲಭದರದಲ್ಲಿ ತಯಾರಿಸಿ ಮೀನುಗಾರಿಕೆ ವ್ಯವಸಾಯವು ಅಭಿವೃದ್ಧಿ ಹೊಂದಿ ದೇಶದ ಆಹಾರದ ಕುಟ್ಟನಿವಾರಣೆಗೆ ಸಹಾಯವಾಗಲಿ ಎಂದು ಆಶಿಸಿದರು. ನಿಯಮಿತ ದಿವಸಕ್ಕಿಂತಲೂ ಒಂದೆರಡು ವಾರಗಳ ಮುಂಚೆಯೇ ತಯಾರಿಸಿ ಕೊಡಲು ಶ್ರಮವಹಿಸಿದ ಎಲ್ಲಾ ಕೆಲಸಗಾರರಿಗೆ ಅಧ್ಯಕ್ಷರ ಹಸ್ತದಿಂದ ಬಹುಮಾನ ವಿತರಣೆ ನಡೆಯಿತು. ಸಮಾರಂಭಕ್ಕೆ ಫಿಶರೀಸ್ ಇಲಾಖೆಯ ಅಧಿಕಾರಿಗಳು ಉಪಸ್ಥಿತರಾಗಿದ್ದರು. ಎಸೋಸಿಯೇಶನಿನ ಅಧ್ಯಕ್ಷ ಶ್ರೀ ರಾಮಚಂದ್ರನವರು ಅಧ್ಯಕ್ಷರನ್ನು ಸ್ವಾಗತಿಸಿ, ಕೊನೆಗೆ ಶ್ರೀ ಎಚ್. ಕೆ. ತಿಂಗಳಾಯರು ವಂದನಾರ್ಪಣೆಗೈದರು.

ಕರ್ನಾಟಕ ಯಕ್ಷಗಾನ ನಾಟಕ ಸಭಾ
ಮಂಗಳೂರು
ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿರುವ ಕರ್ನಾಟಕ ಥಿಯೇಟರಿನಲ್ಲಿ
2—4—66ನೇ ಶನಿವಾರದಿಂದ ಪ್ರತೀ ರಾತ್ರಿ 9-30ಕ್ಕೆ
ತಮ್ಮ ಪುರಾಣ ಪ್ರಸಿದ್ಧ ಯಕ್ಷಗಾನ ನಾಟಕ
ಲಂಕಾ ದಹನ
ಎಂಬ ಕಥಾಭಾಗವನ್ನು ಅಭಿನಯಿಸುವರು.
ವಿಟ್ಲ ಬಾಬು ರಾಯರ ವರ್ಣರಂಜಿತ ನವ್ಯ ಹಾಗೂ ಭವ್ಯ
ಸೀನು ಸೀನರಿಗಳು
ನೀವೆಂದೂ ನೋಡದ ಕಣ್ಮನಾನಂದಕರ ಪ್ರದರ್ಶನ.

ಕ್ಷೈತ್ರ ಮುರುಗ

(ಎರಡನೇ ಪುಟದಿಂದ)

ಜಾನಕಿಯು ಮೌನವಾಗಿದ್ದಳು.

"ಬಡ ಸೀತಾ! ಆಕೆಯ ಹೆಸರನ್ನು ಜ್ಞಾಪಿಸಿಕೊಂಡೊಡನೆ ನನ್ನ ಮನಪರದೆಯ ಮೇಲೆ ಆಲೋಚನೆಯ ನೆರಳುಗಳು ಬೀಳುತ್ತವೆ. ನಾನು ಆಕೆಗೊಮ್ಮೆ ಚಿಕ್ಕ ಸಹಾಯವನ್ನು ಮಾಡಿದ್ದೆ. ಅದು ಅವಳ ಬಾಳ ತೆರೆಯನ್ನು ಬದಲಿಸಿತ್ತು. ಅದರದು ಬಹುಕಾಲ ಉಳಿಯಲಿಕ್ಕಿಲ್ಲವೆ-ಮ ಮುರುಗನು ಹೇಳುತ್ತಿದ್ದ." ರಾಮು ಕ್ಷೀಣ ಸ್ವರದಲ್ಲಿ ಆಲೋಚನಾಮಗ್ನನಾಗಿ ಹೇಳಿದ.

"ಮುರುಗ! ಅವನ ವಿಷಯ ನಿಮಗೇನಾದರೂ ವರ್ತಮಾನವಿದೆಯೇ? ಈಗವನು ದೊಡ್ಡ ವಿೂರಾಸ್ದಾರನಾಗಿರಬಹುದು. ಪೊನ್ನಿಯು ಪಳ್ಳಿ ಮತ್ತು ಪಡ್ಯಾಚಿಗಳ ಮಧ್ಯೆ ಶ್ರೀಮಂತಳಿರುವಂತೆ ಆದರ್ಶ ರಮಣಿಯೂ ಆಗಿ ಇರಬಹುದು."

"ಲಕ್ಷ್ಮಿಯನ್ನು—ಸಂಪತ್ತಿನ ದೇವತೆಯನ್ನು—ಕೂಡಾ ಸ್ತ್ರೀಯರನ್ನು ಒಲಿಸಿಕೊಳ್ಳುವಂತೆ ಒಲಿಸಿಕೊಳ್ಳುವದು ಬಹಳ ಕಷ್ಟ. ಅದು ನಿನಗೆ ಚೆನ್ನಾಗಿ ಗೊತ್ತು. ನಾರಿಯರನ್ನು ತೃಪ್ತಿಪಡಿಸುವುದೇ ಕಷ್ಟದ ಕಾರ್ಯ, ಇನ್ನು ದೇವಿಯರುಗಳ ವಿಷಯ ಹೇಳಬೇಕೇನು? ಹಾಗಲ್ಲವೇನೇ ರಾಣಿ? ಬಡವನಾಗಿದ್ದಾಗ ಮುರುಗನು ಗುಣವಂತನಾಗಿದ್ದನು. ಆದರೆ ಶ್ರೀಮಂತ ಮುರುಗನು ಬೇರೇನಾದರೂ ಆಗಿರಬಹುದು. ಹಣವೂ ಅವರ ತಾಯಿ ತಂದೆ ಇರುವ ಮಹತ್ವಾಕಾಂಕ್ಷೆಯಂತೆ ಎರಡು ಮುಖ ಉಳ್ಳದ್ದಿದೆ. ಅದು ಬೆಂಕಿಯ ಹಾಗೆ ಒಳ್ಳೆಯದೂ ಇದೆ, ಕೆಡಕೂ ಇದೆ. ಅದು ಉಪಯೋಗಿಸುವವರನ್ನು ಹೊಂದಿಕೊಂಡಿದೆ. ಅನ್ಯರಿಗೆ ನಾನೇತಕ್ಕೆ ತತ್ವದರ್ಶನ ಮಾಡಲಿ? ಕೇದಾರಿ ಬುದ್ಧಿ ಕಲಿಸಿದ ಮೇಲೆ ನಾನು ಆ ಗೊಡವೆಗೆ ಹೋಗುವದನ್ನು ಬಿಟ್ಟುಬಿಟ್ಟಿದ್ದೇನೆ."

ಕೇದಾರಿಯ ಹೆಸರು ಬಂದೊಡನೆ ಮೋಡಿ ನಡೆದಂತೆ ಅವರಿಬ್ಬರ ದೃಷ್ಟಿಯು ಕೂಡಿತು. ಒಬ್ಬೊಬ್ಬರಾಗಿರುವಾಗ ಕೇದಾರಿಯ ಹೆಸರನ್ನವರು ಜ್ಞಾಪಿಸಿಕೊಳ್ಳುತ್ತಿದ್ದರಾದರೂ ಮಾತುಕತೆಯ ಮಧ್ಯೆ ಅವನ ಹೆಸರು ಇತ್ತೀಚೆಗೆ ಬಂದಿರಲಿಲ್ಲ.

"ನಾವೇತಕ್ಕೆ ಮದ್ರಾಸಿಗೆ ಹೋಗಿ, ಒಂದು ವಾರ ಕಳೆದು ಬರಬಾರದು? ನಿಮಗೆ ಬದಲಾವಣೆ ಹಾಗೂ ವಿಶ್ರಾಂತಿ ಅಗತ್ಯವಾಗಿ ಬೇಕಾಗಿದೆ." ಕೇದಾರಿಯ ಹೆಸರು ಕೇಳಿದೊಡನೆ ಜಾನಕಿಗೆ ಮದ್ರಾಸಿನ ಜ್ಞಾಪಕವಾಗಿ, ಆ ರೀತಿ ಹೇಳಿದಳು.

"ಒಂದು ವರ್ಷದಲ್ಲಿ ಮುದ್ದು ಸೀತಾಳ ಉಜ್ವಲ ಭವಿಷ್ಯತ್ತಿಗಾಗಿ ಕೂಡಿಸಿಟ್ಟಿರುವದನ್ನು ನಮ್ಮ ಸುಖಕ್ಕಾಗಿ ಮದ್ರಾಸಿಗೆ ಹೋಗಿ ಒಂದು ವಾರವಿದ್ದು ಖರ್ಚು ಮಾಡಿ ಬರುವದು ಸರಿಯೇ? ಮದ್ರಾಸಿನಲ್ಲಿ ತಂಗುವದಾದರೂ ಎಲ್ಲಿ? ಸಂಬಂಧಿಕರಾರೂ ಇಲ್ಲ—ಬಡ ಮನುಷ್ಯನಿಗೆ; ಉಪ-ತಾಲೂಕಧಿಕಾರಿಗೆ. ಇಲ್ಲಿ ದೂಸಿಯಲ್ಲಿ ಚಿಕ್ಕ ದೇವತೆಯಾಗಿದ್ದರು ಕೂಡಾ ಮದ್ರಾಸಿಗೆ ಹೋದರೆ, ಅಲ್ಲಿ ಕಡಲು ಕರೆಯ ಮಳಲ ರಾಶಿಯಲ್ಲಿನ ಕೇವಲ ಒಂದು ಹರಳು ಮಾತ್ರ....'

"ಯಾಕೇಂದ್ರೆ? ಅಲ್ಲಿ ನಮ್ಮ ಕೇದಾರಿ ಇದ್ದಾರಲ್ಲಾ?" ಮಧ್ಯದಲ್ಲೇ ಜಾನಕಿ ಕೇಳಿದಳು.

"ಓಹ್ಹೊ! ಸರಿ. ಅವನು ನಿನ್ನ ಸಂಬಂಧಿಕನೆಂಬುದು ನನಗೆ ಜ್ಞಾಪಕ ಆಗಲಿಲ್ಲ. ಆದರೂ ಈಗ ನಿನ್ನನ್ನವನು ಗುರುತಿಸಿಯಾನೇ? ಅವನೀಗ ಉದಯೋನ್ಮುಖ ನ್ಯಾಯವಾದಿ, ತಿಂಗಳೊಂದಕ್ಕೆ ಸಾವಿರಗಟ್ಟಳೆ ಸಂಪಾದಿಸುವವನು. ಬಹುಶಃ ಈಗಾಗಲೇ ಅವನು ಸ್ವಂತ ಕಾರನ್ನು ತೆಗೆದುಕೊಂಡಿರಬಹುದು. ಒಮ್ಮೆ ನನ್ನ ಪರಿಚಯ ಅವನಿಗಾಗಲಿಲ್ಲ. ಆದರೆ, ನಿನ್ನ ಆಕರ್ಷಕ ರೂಪದ ಪರಿಣಾಮ ಬೇರೆಯೇ ಆಗಬಹುದು. ಆದರೆ ಅದರ ಪರೀಕ್ಷೆಗೆ ನಾನು ಸಂದರ್ಭ ಕೊಡಕೂಡದು. ಮದ್ರಾಸ್! ಅದೊಂದು ಹಿರಿಯ ಬೇತಾಳನಂತೆ ಬೆಳೆದು ನಿಂತಿರುವ, ಹಂಚಿ ಹೋಗಿರುವ, ಬಡ, ಹೇಸಿಗೆಯ ಸ್ಥಳವಿದೆ."

ರಾಮು ಸ್ವರ ಹಾಗೂ ವಿಷಯವನ್ನು ಬದಲಾಯಿಸಿ ಪುನಃ ಮಾತು ಮುಂದರಿಸಿದನು. "ಜಾನಕಿ, ನಿನ್ನ ಎಳೆಯ ಮನಸ್ಸು ಅದೆಷ್ಟು ಧರ್ಮಕ್ಕೆ ಎಡೆಕೊಟ್ಟಿದೆ? ನಾವು ಪಳನಿ ಪರ್ವತಕ್ಕೆ ಹೋಗಿ ಸರ್ವಶಕ್ತ ಸುಬ್ರಮಣ್ಯ ದೇವರ ದರ್ಶನ ಮಾಡಿಕೊಂಡು ಬರೋಣ. ನಾನು ಹತ್ತು ವರ್ಷ ವಯಸ್ಸಿನ ಬಾಲಕನಾಗಿದ್ದಾಗ ತಾಯಿಯವರು ಹೇಳಿದ್ದ ಹರಕೆ ಇನ್ನೂ ಹಾಗೆಯೇ ಇದೆ. ಅದನ್ನು ಮುಗಿಸಿಕೊಂಡು ಹಾಗೆಯೇ ಮಧುರಾ, ರಾಮೇಶ್ವರಗಳನ್ನು ನೋಡಿಕೊಂಡು, ಒಂದು ತಿಂಗಳಲ್ಲಿ ಹಿಂತಿರುಗೋಣ. ಹಾಗೆ ಮಾಡಿದಲ್ಲಿ ಹಣವೂ ಒಳ್ಳೆಯ ರೀತಿಯಲ್ಲಿ ಖರ್ಚಾದ ಹಾಗೆ ಆಗುತ್ತದೆ."

'ನಮ್ಮ ಸೀತಾಳಿಗೆ ಒಬ್ಬ ತಮ್ಮ ಹುಟ್ಟಿದನೆಂದರೆ ಆಗ ಒಳ್ಳೆಯ ರೀತಿಯಲ್ಲಿ ಖರ್ಚಾದಂತೆಯೇ ಸರಿ. ನಿಜ!' ಮಾತಾಡುತ್ತಿದ್ದಂತೆಯೇ ಸೀತಾಳನ್ನೆತ್ತಿಕೊಂಡು ಆಲಂಗಿಸಿ ಮುತ್ತು ಕೊಡುತ್ತ ಜಾನಕಿ ಹೇಳಿದಳು.

ತಾಯಿಯ ಮನಸ್ಸು ಗಂಡು ಮಗುವಿಗಾಗಿ ಇಷ್ಟಪಟ್ಟಾಗ ಆಕೆಯಲ್ಲಿ ಸಂತೋಷವೂ ಆಶೆಯೂ ಏಕಕಾಲದಲ್ಲುಂಟಾದುವು.

— ೩೩ —

ದೊಂಬಿಯಿಂದಾಗಿ ಆಲವಂತಿಯಲ್ಲಿ ಅಲ್ಲಲ್ಲಿ ನಗರ-ರಕ್ಷಕರು ತಿರುಗಾಡುತ್ತಿದ್ದುದರಿಂದ ಜನರು ಭಯಪಟ್ಟಿರುವರಂತಿದ್ದರು. ನದಿ ದಡದಲ್ಲೂ ನಾರಿಯರು ಒಂದಾಗಿ ಕಲೆತು ಮುಂಚಿನ ಹಾಗೆ ಹರಟೆ ಹೊಡೆಯುತ್ತಿದ್ದಿಲ್ಲ. ಅಲ್ಲಲ್ಲಿ ಅವರವರಷ್ಟಕ್ಕೇ ಅವರು ಸ್ನಾನಮಾಡಿಕೊಂಡು ಶಬ್ದ ಮಾಡದೆ ಒಬ್ಬರತ್ತ ಒಬ್ಬರು ದೃಷ್ಟಿ ಹಾಯಿಸುತ್ತ ಹೋಗುತ್ತಿದ್ದರು.

ಮೊದಲೇ ಪೊನ್ನಿಯ ದೃಢತೆ ಬಹಳ ನಿಶ್ಶಕ್ತವಾಗಿತ್ತು. ಈ ಘಟನೆ ನಡೆದ ಬಳಿಕ ಅವಳು ಹೆದರಿ ಹಿಡಿಯಾಗಿ ಹೋಗಿದ್ದಳು. ತನ್ನ ಬಾಳ ಸಂಜೆಯಲ್ಲಿ ಈ ರೀತಿ ಘಟಿಸ ಬಹುದೆಂಬುದರ ಕಲ್ಪನೆಯೂ ಅವಳಲ್ಲಿದ್ದಿರಲಿಲ್ಲ. ಆಕೆಯ ಮೊದಲ ಮಗ ಹಾಗೂ ಅನಂತರದ ಹುಡುಗಿ "ತಂದೆ ಎಲ್ಲಿ" ಎಂದು ಅಂಜುತ್ತ ಕೂಗುತ್ತಿದ್ದರು. ತಾಯಿಯ ಮುಖವನ್ನು ಕಂಡು, ಏನೋ ಘಟಿಸಿದೆ ಎಂದು ಮಾತ್ರ ಅವರು ತಿಳಿದು ಕೊಂಡಿದ್ದರು. ಆಕೆಯ ಕಣ್ಣಿಂದ ಅಶ್ರುಧಾರೆ ಸರಾಗವಾಗಿ ಹರಿಯುತ್ತಿತ್ತು. ಮಕ್ಕಳು ಮರುಗುವದನ್ನು ನೋಡಿ ಅವುಗಳನ್ನು ತೃಪ್ತಿಪಡಿಸುವ ಸಲುವಾಗಿ ತನ್ನನ್ನು ತಾನೇ ಸಂತೈಸಿಕೊಳ್ಳಲು, ಪ್ರಯತ್ನಿಸುತ್ತಿದ್ದಳು.

ಮುರುಗನನ್ನು ಹಿಡಿದು ಕಾರಾಗೃಹಕ್ಕೆ ಕೊಂಡೊಯ್ದನಂತರ ಒಂದು ಹಗಲು ಒಂದು ರಾತ್ರಿಯನ್ನು ಆಕೆ ತೆಂಗಿನ ತೋಟದಲ್ಲೇ ಕಳೆದಿದ್ದಳು. ಅಲ್ಲಿಯ ನೀರವತೆ ಅವಳನ್ನು ಭಯಪಡಿಸುತ್ತಿತ್ತು. ಆ ಸಂದರ್ಭದಲ್ಲಿ ತನಗೆ ಸಹಾಯಕರಾಗುವ ಸಂಬಂಧಿಕರ ಹೆಸರುಗಳನ್ನು ಜ್ಞಾಪಿಸಿಕೊಂಡಳು. ಕೆಲ ಹೆಸರುಗಳು ಜ್ಞಾಪಕಕ್ಕೆ ಬಂದರೂ ಆ ಸಮಯದಲ್ಲಾರೂ ಆಕೆಗೆ ಸಹಾಯ ನೀಡಲು ಒಪ್ಪಲಿಲ್ಲ. ಕಡೆಗೆ ಸೀತಾಳ ಜ್ಞಾಪಕ ಬಂತು. ಹಾಗೆಯೇ ಆಕೆಯ್ನ್ನು ಮನೆಯ ಮಾಡಿನಡಿಯಲ್ಲಿ ರಕ್ಷಣೆ ಪಡೆಯಲಾಕ ನಿಶ್ಚಯಿಸಿಕೊಂಡಳು.

ದೇವತಾಮಾನವ ರಾಮುವಿನ ಪ್ರೀತಿಯ ಒಕ್ಕಲಿನವನಾಗಿದ್ದ ಮುರುಗನ ಪತ್ನಿ ಪೊನ್ನಿಯ ಕುರಿತು ಸೀತೆಯೂ ಯೋಚಿಸಿಕೊಂಡಿದ್ದಳು. ಪೊನ್ನಿಯು ಅತ್ಯಂತ ಭೀಕರ ತಾಪತ್ರಯದ ಸಮಯ ಧೈರ್ಯ ಹಾಗೂ ಆಶ್ರಯದ ಮಾತನ್ನು ಕಳುಹಿಸ್ಲಲು ಸೀತೆಯು ಆಲೋಚಿಸಿದಳು. ಕತ್ತಲೆ ಓಡಿಹೋಗುವ ಮುಂಚೆಯೇ ಮಾತನ್ನು ಕಳುಹಿದಳು. ಪೊನ್ನಿಯು ಹಾರ್ದಿಕವಾಗಿ ಆಹ್ವಾನವನ್ನು ಸ್ವೀಕರಿಸಿದಳು.

ಹಾಗೆಯೇ ಕೆಲ ದಿನಗಳು ಕಳೆದು ಹೋದುವು. ಆದರೂ ಆಲವಂತಿಯನ್ನು ಆವರಿಸಿರುವ ಮಬ್ಬು ಇನ್ನೂ ಹೋಗಿರಲಿಲ್ಲ. ಹಳ್ಳಿಯ ಜೀವನದಲ್ಲಿ ಅಂತಹ ಘಟನೆಗಳು ಬಹಳ ಅಪರೂಪ. ಹವೆಯೂ ಬಹಳ ಬಿಸಿಯಾಗಿತ್ತು. ತುಂಬಿ ಹರಿಯುತ್ತಿದ್ದ ಕಾವೇರಿ ಕೂಡಾ ಮಂದವಾಗಿ, ಕೆಳಗೆ ಹರಿಯಲು ಹೆದರುವವಳಂತೆ, ಕಾಣುತ್ತಿದ್ದಳು.

ಆದರೆ ಒಂದು ಸಾಯಂಕಾಲ ಇದ್ದಕ್ಕಿದ್ದಂತೆ ಆಲವಂತಿಯ ಪರಿಸ್ಥಿತಿಯನ್ನು ನಿಸರ್ಗವು ಬದಲಾಯಿಸಿ ಬಿಟ್ಟಿತು. ಆಕಾಶವು ಕಪ್ಪಾಗುತ್ತ ಬಂತು. ದೂರದಲ್ಲಿ ಮಿಂಚುಗಳು ಹೊಳೆದುವು. ಗುಡುಗುಗಳು ಆರ್ಭಟಿಸಿದುವು—ಮೋಡಗಳೊಡೆದು ನೀರು ಕೆಳಗೆ ಬೀಳಲಾರಂಭಿಸಿತು. ಮರುದಿನ ಬೆಳಗ್ಗೆ ಕಾವೇರಿಯ ಮೈ ತುಂಬಿತ್ತು. ಅಶ್ವತ್ಥ ಮರದ ಗೆಲ್ಲುಗಳಲ್ಲಿ ತಂಗಿದ್ದ ಹಕ್ಕಿಗಳು ತಮ್ಮ ಕೊರಳ ಪರಿಚಯವನ್ನು ಜನತೆಗೆ ಮಾಡಿಸುತ್ತಿದ್ದುವು. ಮನೆಯ ಮಾಡಿನಿಂದ ಮನೆಯ ಮಾಡಿಗೆ ಹಾರುತ್ತ ಕಾಗೆಯು ಪುನಃ ತನ್ನ ದೈನಂದಿನ ಲೋಕ ಸ್ವೈರ್ಕ್ಯದ ಕಾರ್ಯವನ್ನು ಮಾಡುತ್ತಿತ್ತು. ಹಸುಗಳು ಸಂತೋಷದಿಂದ ಮೇಯಲಾರಂಭಿಸಿದುವು. ಎಲ್ಲೆಲ್ಲೂ ಹಸುರು ಮೆರೆಯುತ್ತಿತ್ತು. ಒಂದು ರಾತ್ರಿಯು ನಿಸರ್ಗದಲ್ಲಿ ಬಹಳ ಬದಲಾವಣೆಯನ್ನುಂಟು ಮಾಡಿ ಸಂತೋಷ, ಸುಖ ಹಾಗೂ ಶಾಂತಿಯ ಧ್ವಜವನ್ನು ನೆಟ್ಟಿತು. ಹಿಂದಿನ ಘೋರ ಘಟನೆಗಳು ಮರೆಯಲ್ಪಟ್ಟು ಆಲವಂತಿಯಲ್ಲಿ ನಮ್ಮ ಚೈತನ್ಯದ ಸಿಂಚನವಾಯಿತು.

(ಮುಂದುವರಿಯುವುದು)

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

NAVAYUGA 7—4—1966

Registered with the Registrar
of News Papers for India
under No. R. N. 3546/'57

REGD. No. B. ೮. 176
LICENCE No. 31
Licensed to Post without Prepayment

ಆರ್ಥಿಕ ವಿವೇಚನೆ

ಆರ್ಥಿಕ ಸಹಾಯದ ನೈಜಸ್ವರೂಪ

ಬರೆದವರು
"ಆರ್ಥಿಕೇಯ"

ವಿಕಾಸಶೀಲ ದೇಶಗಳ ಆರ್ಥಿಕ ಸ್ವಾತಂತ್ರ್ಯ ಸಂಘರ್ಷದ ಮೇಲೆ ವಿದೇಶೀ ಸಹಾಯಗಳ ಸ್ವರೂಪದ ಗಹನ ಪ್ರಭಾವವುಂಟಾಗುತ್ತದೆ. ಏಕೆಂದರೆ, ವಿದೇಶೀ ಸಹಾಯವಿಲ್ಲದೆ, ಆವಶ್ಯಕ—ಯಂತ್ರಗಳೂ ಪ್ರಾವಿಧಿಕ ಸೇವೆಗಳೂ ಲಭಿಸಲಾರವು.

ವಿಕಾಸಶೀಲ ದೇಶಗಳು ತಮ್ಮ ನಿರ್ಯಾತವನ್ನು ಹೆಚ್ಚಿಸಿಕೊಂಡು ವಿದೇಶೀ ವಿನಿಮಯವನ್ನು ದೊರಕಿಸಿಕೊಳ್ಳುವುದು ಸಾಧ್ಯವಿದಯಾದರೂ, ಪಾಶ್ಚಾತ್ಯಗುತ್ತಿಗೆ ವ್ಯಾಪಾರಿಗಳು ಬೆಲೆಗಳಲ್ಲಿ ಉಂಟುಮಾಡಿದ ಏರಿಳಿತಗಳ ಕಾರಣ, ೧೯೫೦ರಿಂದ ೧೯೬೩ರವರೆಗೆ ವಿಕಾಸಶೀಲ ದೇಶಗಳ ನಿರ್ಯಾತದ ಪರಿಣಾಮದ ವೃದ್ಧಿಯು ಸೇಕಡಾ ೩೦ರಷ್ಟು ಆಗಿದ್ದರೂ ವರಮಾನದಲ್ಲಿ ಕೇವಲ ಸೇಕಡಾ ೪ರಷ್ಟೇ ವೃದ್ಧಿಯಾಗಿದೆ. (ಪ್ರಪಂಚ ಸಂಸ್ಥೆಯ ಮಾಸಿಕ ಅಂಕಿಅಂಶ ಪ್ರಕಟನೆ — ಮಾರ್ಚ್ ೧೯೬೫). ಇದರಿಂದ ವಿಕಾಸಶೀಲ ದೇಶಗಳಿಗೆ ವರ್ಷಕ್ಕೆ ೧೫೦ಕೋಟಿ ಡಾಲರ್‌ಗಳಷ್ಟು ನಷ್ಟವಾಗಿದೆ. ವ್ಯಾಪಾರ ಅಸಂತುಲಿತವಾಗಿದೆ.

ಪಶ್ಚಿಮ ದೇಶಗಳ ಸಹಾಯ

ವಿದೇಶೀ ಬಂಡವಾಳ ನಿಯಂತ್ರಣದಿಂದ ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಪಶ್ಚಾತ್ಯ ಅರ್ಥಶಾಸ್ತ್ರಜ್ಞರೂ ಒಪ್ಪುತ್ತಾರೆ. ವಿಕಾಸಶೀಲ ದೇಶಗಳಲ್ಲಿ ಅಮೆರಿಕದ ಬಂಡವಾಳಿಗರು ಪ್ರತಿವರ್ಷವೂ ೩೦ಕೋಟಿ ಡಾಲರುಗಳ ಬಂಡವಾಳವನ್ನು ತೊಡಗಿಸಿ, ಲಾಭದ ಮೂಲಕವೂ, ಪಾಲುಗಳ ಮೇಲಿನ ಲಾಭಾಂಶದ ಮೂಲಕವೂ ೧೫೦ ರಿಂದ ೨೦೦ ಕೋಟಿ ಡಾಲರುಗಳನ್ನು ವಾಪಸು ಪಡೆಯುತ್ತಾರೆಂದು "ಪ್ರಚಲಿತ ವ್ಯವಹಾರ ಸಮೀಕ್ಷೆ" ಎಂಬ ವಾಷಿಂಗ್ಟನ್ ವರದಿಯು ತಿಳಿಸುತ್ತದೆ.

ವಿಕಾಸಶೀಲ ದೇಶಗಳಿಗೆ ಪ್ರತಿವರ್ಷವೂ ೬೦ಕೋಟಿ ಡಾಲರುಗಳಷ್ಟು ಪಾಶ್ಚಾತ್ಯ ಸಹಾಯ ಲಭಿಸುತ್ತದೆಯಾದರೂ ಅವುಗಳಿಂದ ಆರ್ಥಿಕ ವಿಕಾಸ ಮಾತ್ರ ಏನೇನೂ ಆಗುತ್ತಿಲ್ಲ. ಅದಕ್ಕೆ ಕಾರಣವಿಷ್ಟೆ. ಈ ಸಾಲಗಳ ಮೇಲೆ ಪ್ರತಿವರ್ಷವೂ ೨೦ಕೋಟಿ ಡಾಲರ್ ಹಣವನ್ನು ಮರಳಿ ಕೊಡಬೇಕಾಗುತ್ತದೆ. ಅದಕ್ಕೆ ಅಸಂತುಲಿತ ವ್ಯಾಪಾರದಿಂದ ಆಗುವ ಹಾನಿಯನ್ನೂ, ಲಾಭಗಳ ಮೂಲಕ ಹೋಗುವ ಹಣವನ್ನೂ ಸಹ ಕೂಡಿಸಿದರೆ, ವಿಕಾಸಶೀಲ ದೇಶಗಳಿಂದ ಹೋಗುವ ಹಣವು ಸಹಾಯವಾಗಿ ದೊರೆಯುವ ಹಣದಷ್ಟೇ ಆಗುತ್ತದೆ. ಎಂದರೆ ಪಾಶ್ಚಾತ್ಯ ದೇಶಗಳು ಒಂದು ಕೈಯಲ್ಲಿ ಕೊಟ್ಟಂತೆ ತೋರಿಸಿ, ಇನ್ನೊಂದು ಕೈಯಲ್ಲಿ ವಾಪಸು ತೆಗೆದುಕೊಳ್ಳುತ್ತವೆ. ಈ ರೀತಿ ಸಾಲ, ಬಡ್ಡಿ ಮುಂತಾದ ತೀರಿಕೆಗಳಿಗಾಗಿ ಉನ್ನತ ದೇಶಗಳು ವಿಕಾಸಶೀಲ ದೇಶಗಳಿಗೆ ಸಾಲ ಕೊಡುತ್ತಾ, ಸ್ವತಃ ತಮಗೇ ಸಹಾಯ ಮಾಡಿಕೊಳ್ಳುತ್ತವೆ. ಇದರ ಪರಿಣಾಮವಾಗಿ ವಿಕಾಸಶೀಲ ದೇಶಗಳ ಮೇಲೆ ಸಾಲದ ಹೊರೆ ಹೆಚ್ಚುತ್ತದೆ.

ಇದರಿಂದ ಕ್ರಮೇಣ ವಿಕಾಸಶೀಲ ದೇಶಗಳ ಋಣಭಾರ ಸಹನೆಯ ಶಕ್ತಿಯು ಇಲ್ಲದಂತಾಗುವುದೆಂದು ಅಮೆರಿಕದ ಪ್ರಪಂಚ ಬ್ಯಾಂಕ್ ಡೈರೆಕ್ಟರರಲ್ಲೊಬ್ಬರಾದ ಎಸ್ಕೋಟ್ ರೀಡ್‌ರವರಿಗೆ ಚಿಂತೆಯಾಗಿದೆ. ಪ್ರಪಂಚ ಬ್ಯಾಂಕಿನ ಭವಿಷ್ಯದ ಕುರಿತು ಒಂದು ಲೇಖನ ಬರೆಯುತ್ತ, 'ಬಡ' ದೇಶಗಳು ಪ್ರಪಂಚ ಬ್ಯಾಂಕಿನಿಂದ ಸಾಲವಾಗಿ ಪಡೆಯುತ್ತಿರುವ ಹಣಕ್ಕಿಂತಲೂ ಹೆಚ್ಚು ವಾಪಾಸು ಕೊಡುತ್ತವೆಯೆಂದು ಅವರು ತಿಳಿಸಿದ್ದಾರೆ. ಉದಾಹರಣೆಗೆ ಭಾರತ ದೇಶವು ೧೯೬೪ ರಲ್ಲಿ ಸಾಲವಾಗಿ ಪಡೆದುದಕ್ಕಿಂತಲೂ ೪.೨ ಕೋಟಿ ಡಾಲರು ಹೆಚ್ಚು ಹಣವನ್ನು ವಾಪಾಸುಕೊಟ್ಟಿದೆ.

ಪಾಶ್ಚಾತ್ಯ ದೇಶಗಳ ಸಹಾಯದಿಂದ ಸ್ವತಂತ್ರ ಆರ್ಥಿಕ ವಿಕಾಸಕ್ಕೆ ಏನೂ ಪ್ರಯೋಜನವಾಗಲಾರದು. ಏಕೆಂದರೆ ಭಾರೀ ಬುನಾದಿ ಕೈಗಾರಿಕೆಗಳಿಗೆ ಯಾವ ಬಗೆಯ ಸಹಾಯವೂ ಲಭಿಸುವುದಿಲ್ಲ. ರಾಜಕೀಯ ಕರಾರುಗಳು ಇಲ್ಲದೆ, ಅಥವಾ ಪಾಶ್ಚಾತ್ಯ ಸೈನಿಕ ಯೋಜನೆಗಳಲ್ಲಿ ಸೇರಿದ ಸೈನಿಕೀಕರಣವಲ್ಲದಿದ್ದರೂ ಕೂಡಾ, ಈ ಸಹಾಯವು ಯಾವ ವಿಧವಾದ ರಾಷ್ಟ್ರೀಯ ಹಿತಸಾಧನೆಯ ಉದ್ದೇಶಕ್ಕೂ ಸಂಬಂಧ ಹೊಂದಿರದು. ಈ ಸಹಾಯದ ಆಧಾರದಿಂದಲೇ ವಿಕಾಸಶೀಲ ದೇಶಗಳು ತಮ್ಮ ಯೋಜನೆಗಳನ್ನು ಕಡಿತ ಮಾಡಬೇಕಾಗುತ್ತದೆ; ತಮ್ಮ ಸಾಮಾಜಿಕ ಸುಧಾರಣೆಗಳನ್ನು ಮುಂದೂಡಬೇಕಾಗುತ್ತದೆ.

ಸಮಾಜವಾದೀ ಸಹಾಯ

ಈ ಪರಿಸ್ಥಿತಿಯಲ್ಲಿ ಸಮಾಜವಾದೀ ದೇಶಗಳಿಂದ ದೊರೆಯಬಹುದಾದ ಸಹಾಯವು ವಿಕಾಸಶೀಲ ದೇಶಗಳಿಗೆ ತುಂಬ ಬೆಂಬಲವಾಗಿರುತ್ತದೆ. ಒಂದು ಕಡೆ ಸಮಾಜವಾದೀ ದೇಶಗಳು, ನಾಡಿನ ಔದ್ಯೋಗೀಕರಣಕ್ಕೆ ಬೇಕಾಗುವ ಯಂತ್ರಗಳನ್ನೂ, ಸಂಯಂತ್ರಗಳನ್ನೂ ಒದಗಿಸಬಲ್ಲುವು. ಅವು ಕೊಡುವ ದೀರ್ಘಾವಧಿಯ ಸಾಲಕ್ಕೆ ಬಡ್ಡಿಯೂ ಸಹ ತುಂಬ ಕಡಮೆ. ಈ ಸಾಲವನ್ನು ವಿದೇಶೀ ವಿನಿಮಯ ನಾಣ್ಯರೂಪದಲ್ಲಿ ಹಿಂದಿರುಗಿಸಬೇಕಾಗಿಲ್ಲ. ನಾಡಿನ ಸರಕುಗಳನ್ನು, ಒಮ್ಮೊಮ್ಮೆ ಸಮಾಜವಾದೀ ದೇಶಗಳು ಸ್ಥಾಪಿಸಿದ ಕಾರಖಾನೆಗಳ ಸರಕುಗಳನ್ನೇ, ಕೊಡುವುದರ ಮೂಲಕ ಸಾಲ ತೀರಿಸಬಹುದು. ಸಮಾಜವಾದೀ ದೇಶಗಳಿಂದ ಇದುವರೆಗೆ ಇಂತಹ ಸಾಲ ೪೦ಕೋಟಿ ಡಾಲರುಗಳಷ್ಟು ದೊರೆತಿದ್ದು, ಅವುಗಳಿಂದ ವಿಕಾಸಶೀಲ ದೇಶಗಳಲ್ಲಿ ೧,೨೦೦ಕ್ಕಿಂತಲೂ ಹೆಚ್ಚು ವಿಕಾಸ ಯೋಜನೆಗಳನ್ನು ನೆರವೇರಿಸಲಾಗಿದೆ.

ಇವೇ ಕಾರಣಗಳಿಂದ ಸಮಾಜವಾದೀ ದೇಶಗಳ ವಿದೇಶ ವ್ಯಾಪಾರದಲ್ಲಿ ಒಟ್ಟು ಸೇಕಡಾ ೨.೫ರಷ್ಟು ವೃದ್ಧಿಯಾಗಿದ್ದರೂ, ವಿಕಾಸಶೀಲ ದೇಶಗಳೊಡನೆಯ ವ್ಯಾಪಾರದಲ್ಲಿ ೬.೨ ರಷ್ಟು ವೃದ್ಧಿಯಾಗಿದೆ. ವಿಕಾಸಶೀಲ ದೇಶಗಳಿಗೆ ಸಮಾಜವಾದೀ ದೇಶಗಳಿಂದ ದೊರೆಯುವ ಸಹಾಯದಲ್ಲಿ ಸೇಕಡಾ ೮೦—೮೫ ಪಾಲು ಯಂತ್ರ ಸರಂಜಾಮುಗಳ ರೂಪದಲ್ಲಿರುತ್ತದೆ. ಸಮಾಜವಾದೀ ದೇಶಗಳು ಕೇವಲ ಕಚ್ಚಾ ಪದಾರ್ಥಗಳನ್ನು ಮಾತ್ರವಲ್ಲದೆ, ನಿರ್ಮಿತ ಮತ್ತು ಅರ್ಧ - ನಿರ್ಮಿತ ಸರಕುಗಳನ್ನು ಸಹ ವಿಕಾಸಶೀಲ ದೇಶಗಳಿಂದ ಕೊಂಡುಕೊಳ್ಳುತ್ತವೆ. ಉದಾಹರಣೆಗೆ ಸೋವಿಯತ್ — ರಷ್ಯ, ಚೆಕೊಸ್ಲೊವಾಕಿಯ, ಇತ್ಯಾದಿ ದೇಶಗಳು ಬಟ್ಟೆ, ಪಾದರಕ್ಷೆಗಳು, ವಿದ್ಯುತ್— ಯಂತ್ರಗಳು, ಭಾರೀ ಯಂತ್ರಗಳು, ಇತ್ಯಾದಿಗಳನ್ನೂ ಕೊಳ್ಳುತ್ತವೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75ಇಂಗ್ಲಿಷ್‌ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 807/1965

ನಿಕ್ಲಾಂವು ಸೋಜ—ವಾದಿ
ಮತ್ತು
ಇನಾಸ ಡಿ| ಸೋಜ ಕೂಡಾ— ಪ್ರತಿವಾದಿರು
ಇವರೊಳಗೆ

ಸದ್ರಿದಾವೆಯ 1ನೇ ಪ್ರತಿವಾದಿ ಇನಾಸ ಡಿ|ಸೋಜ—ಅಂತೋನಿ ಡಿ' ಸೋಜ್ರ ಮಗ, ಕಾರ್ಕಳ ತಾಲ್ಕು ನಿಂಜೂರು ಗ್ರಾಮದ ಮೇಲ್ಮನೆಯಲ್ಲಿರುವವರು, Post ನಿಂಜೂರು ಇವರಿಗೆ ಈ ಮೂಲಕ ತಿಳಿಸುವದೇನಂದರೆ,

ವಾದಿ ನೀವು ಕೂಡಾ 2ಜನರ ಮೇಲೆ ಮಾಡಿದ ಮೇಲಿನ ದಾವಾ ನಿಂಮ ಹಾಜರಿ ಬಗ್ಗೆ ತಾರೀಕು 1—6—1966 ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10-90 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಂಮ್ಮನ್ನು ಗೈರ್ವ್ಯಾ ಮಾಡಿ ಸದ್ರಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

N. M. Adyanthaya
Advocate for Plaintiff.

Karkala, 27—3—1966.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi. S. India.

ನವಯುಗ

14—4—1966

NAVAYUGA

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ರಾಮಚಂದ್ರ ಬಿ. ಎ ಪಾಸಾಗದೆ ಊರಿಗೆ ನಿರಾಶನಾಗಿ ಮರಳಿದ. ಅಲ್ಲಿ ಪ್ರಕೃತಿ ವಿಕೋಪದಿಂದ ನೊಂದು, ಆಡಪದ ಕಲೆಕ್ಟರ್ ಕೆಡಲರ ಶಿಬಿರ ಗುಮಾಸ್ತನಾದ. ಮುಂದೆ ಕೆಡೆಲ್ ಕಂದಾಯ ಮಂಡಳದ ಹಿರಿಯ ಸದಸ್ಯರಾದರೆ, ರಾಮು ದೂಸಿಯ ಉಪತಾಲೂಕು ಅಧಿಕಾರಿಯಾದ. ತನ್ನ ಕ್ಷೇತ್ರದ ಅಭಿವೃದ್ಧಿಯತ್ತ ಅತನ ತೀವ್ರ ಗಮನವಿತ್ತು.

ರಾಮುವಿನ ಒಕ್ಕಲು ಮುರುಗ ನಾನು ಮಾತ್ರ ಬೆಳೆತೆತ್ತು ಅತನ ತೋಟವನ್ನು ಕೊಂಡಿದ್ದ. ತೊಪ್ಪೈಯ ಗೆಳೆತನದಿಂದ ಸಂಪತ್ತಿನೊಡನೆ ದುವ್ಯಸನಗಳು ಅತನಲ್ಲಿ ಮನೆ ಮಾಡಿದವು. ದೊಂಬಿಯೊಂದರಲ್ಲಿ ಅವರಿಬ್ಬರೂ ಬಂಧಿತರಾದರು.

ರಾಮುವಿನ ಮಿತ್ರ ಕೇನಾರಿ ಕೋಕಿಲಂಳನ್ನು ಮದುವೆಯಾಗಿ ಉದಯೋನ್ಮುಖ ವಕೀಲನಾದ. ಅತನನ್ನೇ ತಮ್ಮ ಪರವಾಗಿ ತೊಪ್ಪೈ ವಾದಿಸಲು ನೇಮಿಸಿದನು. ಬಿಡುಗಡೆಯ ಆಸೆಯೂ ಇತ್ತು.

ಮುಂದೆ—

— ೩೩ —

ನದಿ ದಡದಲ್ಲಿ ಹಿಂದಿನಂತೆ ಹೆಂಗಳೆಯರು ಸೇರಿ ಹರಟೆ ಹೊಡೆಯಲು ಆರಂಭಿಸಿದರು. ಒಂದು ತಿಂಗಳಿನಿಂದ ನಾಲಗೆಗಳು ಹೂಡಿದ್ದ ಮುಷ್ಕರ ಅಂದು ಮುಕ್ತಾಯವಾಯಿತು. ಅಬ್ಬಾ! ಅದೆಷ್ಟು ಬಚ್ಚಿಟ್ಟದ್ದ ಮಾತುಗಳು ಅಂದು ಹೊರ ಬಂದುವು! ನೀರಿನೊಂದಿಗೆ ನಾರಿಯರೂ, ಜವ್ವನೆಯರೊಂದಿಗೆ ಜಲವೂ ಕ್ರೀಡಿಸುತ್ತಿದ್ದುವು.

"ಬಡ ಪೆರಿಯ ಸ್ವಾಮಿ, ಲೋಭಿಯಿದ್ದರೂ ಕೂಡಾ, ಈ ಹಳ್ಳಿಯಲ್ಲಿ ಅವನೇ ಶ್ರೀಮಂತನಿದ್ದನೆ." ನಮ್ಮ ವಂಶದಲ್ಲಿ ಅವನು ಕುಲೀನನಿದ್ದಾನೆ. ನದಿಯಲ್ಲಿ ಇನ್ನೂ ಮುಳುಗದಿದ್ದರೂ ಕಾಲನ್ನು ಒದ್ದೆಮಾಡಿಕೊಂಡಿದ್ದಾಕೆ ಹೇಳಿದಳು.

"ನಿನಗೂ ನನಗೂ ಹಾಗೂ ಬಡ ಜನರಿಗೆ ಅವನು ಕೃಪಣನಂತೆ ಕಂಡು ಬಂದರೂ ವಕೀಲರಿಗೆ, ವೈದ್ಯರಿಗೆ, ಮಂತ್ರವಾದಿಗಳಿಗೆ ಹಾಗೂ ಭವಿಷ್ಯ ನುಡಿಯುವವರಿಗೆ ಅವನು ಕರ್ಣನಿದ್ದಾನೆ." ಮಧ್ಯವಯಸ್ಸಿನಾಕೆ ಎದುರುತ್ತರವಿತ್ತಳು.

"ಅಲ್ಲದೆ ಬೇಕಾದಾಗ ತನ್ನನ್ನು ಪ್ರೀತಿಸುವ ಪ್ರೇಯಸಿಗೆ ಕೂಡಾ." ಮೊದಲು ಮಾತನಾಡಿದವಳತ್ತ ಕುಹಕ ದೃಷ್ಟಿಯನ್ನು ಬೀರುತ್ತ ಒಬ್ಬಳು ಅರ್ಥ ಮಾತನ್ನಾಡಿದಳು.

"ತಾಯಿಯವರು ಹೇಳುತ್ತಿದ್ದ ಒಂದು ಮಾತು ಇನ್ನೂ ಜ್ಞಾಪಕದಲ್ಲಿದೆ. ಪರಿಯ ಸ್ವಾಮಿ ಹುಟ್ಟಿದಾಗ ಅವನು ಕುಟುಂಬವನ್ನು ನಾಶಮಾಡುತ್ತಾನೆಂದೂ ಅವನ ಆಸ್ತಿಯನ್ನು ಎದುರು ಮನೆಯವರು ಹೊಡೆದು ಹಾಕುತ್ತಾರೆಂದೂ ನನ್ನ ತಂದೆಯವರು ಭವಿಷ್ಯ ನುಡಿದಿದ್ದಾರಂತೆ. ಭವಿಷ್ಯತ್ತು ಅದೆಷ್ಟು ಸತ್ಯ ಎಂಬುದು ಈಗ ಗೊತ್ತಾಗುತ್ತಿದೆ ಕೇವಲ ಐದು ವರ್ಷಗಳ ಹಿಂದೆ ಎಲ್ಲರಿಂದಲೂ ತ್ಯಜಿಸಲ್ಪಟ್ಟದ್ದ ಸೀತಾ ಇಂದು ಆಲವಂತಿಯಲ್ಲಿ ರಾಣಿಯ ಹಾಗೆ ಮೆರೆಯುತ್ತಿದ್ದಾಳೆ! ಅಂದು ಇದರ ಕಲ್ಪನೆ ಯಾರಿಗಾದರೂ ಇತ್ತೇನು? ಇತ್ತೀಚೆಗಿನ ಹೊಸ ವರ್ತಮಾನ ನೀವು ಕೇಳಿದ್ದೀರಾ?" ಭವಿಷ್ಯ ನುಡಿಯುವವನ ಮಗಳು ಹೇಳಿದಳು. ಅವನಿಗೆ ಅವಳೊಬ್ಬಳೇ ಒಬ್ಬಳು ಮಗಳು. ಆಕೆ ತನ್ನ ಹತ್ತನೇ ವರ್ಷದಲ್ಲಿ ವಿಧವೆಯಾದಳು.

ಆಕೆ ಸ್ವಲ್ಪ ತಡೆದು ಸುತ್ತ ದೃಷ್ಟಿ ಹಾಯಿಸಿ ಮಾತನ್ನು ಮುಂದರಿಸಿದಳು. "ಆಕೆಗೆ ಒಂದು ಲಕ್ಷ ರೂಪಾಯಿಯ ನಿಧಿ ದೊರಕಿದೆಯಂತೆ!"

"ಹೇಗೆ? ಹೇಗೆ?" ಎಲ್ಲರೂ ಒಮ್ಮೆಲೇ ಕೇಳಿದರು. "ಅವಳು ತನ್ನ ಮನೆಯ ಒಂದೊಂದೇ ಭಾಗವನ್ನು ಬೀಳಿಸುತ್ತ ಬರುತ್ತಿದ್ದಾಳೆ; ನಿಜವಾಗಿ ನಿಧಿಯನ್ನು ಕಂಡು ಹಿಡಿಯಲು ಅಲ್ಲಿ ಇಲ್ಲಿ ಅಗೆಯಲಿಕ್ಕಾಗಿ ಹಾಗೆ ಮಾಡುತ್ತಿರಬಹುದು."

"ಅಲ್ಲ, ಅಲ್ಲ, ಹಾಗಲ್ಲ. ವಿಧಿಯು ವಿಚಿತ್ರವಿದೆ. ಸೀತೆಯ ಗಂಡನು ಕುಂಭಕೋಣದಲ್ಲಿ ಚೆಂದದ ಶ್ರೀಮಂತ ನಟಿಯೋರ್ವಳೊಂದಿಗೆ ವಾಸಿಸುತ್ತ ಇದ್ದದ್ದು ನಿಮಗೆ ಗೊತ್ತಿದೆ ತಾನೇ? ಆಕೆ ಹದಿನೈದು ದಿನಗಳ ಹಿಂದೆ ಸತ್ತುಹೋದಳು. ಸತ್ತುಹೋಗುವಾಗ, ಸೀತೆಗೆ ಅನ್ಯಾಯ ಮಾಡಿರುವೆನೆಂದು ಭಾವಿಸಿ, ತನ್ನೆಲ್ಲಾ ಆಸ್ತಿಪಾಸ್ತಿಗಳನ್ನು ಈಕೆಗೆ ಬಿಟ್ಟು ಹೋಗಿದ್ದಾಳೆ. ಇದೊಂದು ಆಶ್ಚರ್ಯಕರ ಸಂಗತಿಯಾದರೂ ಸತ್ಯವಿದೆ. ಒಮ್ಮೆ ನಮ್ಮೆಲ್ಲರಿಂದಲೂ ತಿರಸ್ಕರಿಸಲ್ಪಟ್ಟದ್ದ ಸೀತಾ, ಈಗ ಆದೆಂತಹ ಅದೃಷ್ಟಶಾಲಿನಿಯಾಗಿದ್ದಾಳೆ. ಈಗ ಅವಳು ಆಲವಂತಿಯ ಅರಸಿ ಇದ್ದಾಳೆ. ನನ್ನ ತಂದೆಯಾಡಿರುವ ಭವಿಷ್ಯವಾಣಿ ಫಲಿಸಿತು."

"ಇಡಿ ಕಥೆಯು ಅರ್ಥಂಬರ್ಧ ಅಲ್ಲದೆ ಅಸಂಭವನೀಯವಿದೆ. ಸಂಸಾರ ನಡೆಸಲು ಇಷ್ಟಪಡುತ್ತಿರುವ ಸ್ತ್ರೀಯರ ಎಂದಾದರೂ ಕುಣಿಯುವ ಹುಡುಗರ ಕಾದೃಷ್ಟಿಯನ್ನು ಬೀರುವದಿಲ್ಲ ದರೂ ಉಂಟೇ? ನೀತಿಬೋಧಕ ಕಥೆಗಳಲ್ಲಿ ಆಗಲೀ, ಇತರ ಧಾರ್ಮಿಕ ಕಥೆಗಳಲ್ಲಾಗಲೀ ಅಂತಹ ವಿಷಯ ಅದೆಲ್ಲಿಯೂ ಬರುವದಿಲ್ಲ." ಮಧ್ಯವಯಸ್ಸಿನ ವನಿ ಗಟ್ಟಿಯಾಗಿ ಹೇಳಿದಳು. ಪೆರಿಯ ಸ್ವಾಮಿಯ ಪತನ ಹಾಗೂ ಅನಿರೀಕ್ಷಿತವಾ ಸೀತೆಯ ಭಾಗ್ಯಗುಡಿಯ ಬಾಗಿಲು ತೆ ಯಲ್ಪಟ್ಟುದುದರಿಂದ ಅವಳ ಕುಹಕ ಡಿಗಳು ಜಾಸ್ತಿಯಾಗಿದ್ದುವು. ಈಗ ಅ ನಿರುತ್ಸಾಹಿಯಾಗಿದ್ದಾಳೆ. ಹರಿಯುವ ದಿಯ ಚಪಲತೆ ಈಗ ಆಕೆಯಲ್ಲಿಲ್ಲ.

"ಅವಳೀಗ ಮುರುಗನ ಜಮೀನನ್ನು ಕ್ರಯಕ್ಕೆ ತೆಗೆದುಕೊಳ್ಳಲಿಕ್ಕೆ ಸಿದ್ಧಳಾದ್ದಾಳೆಂಬ ಸುದ್ದಿ ಬೆಳೆದಿದೆ. ತೊಪ್ಪೈಯು ಇಲ್ಲೇ ಇದ್ದಾನೆ. ಆ ನೀಚನನ ಕಾರಾಗೃಹದಲ್ಲಿಡಬೇಕಾಗಿತ್ತು. ನಮ ಪತನದ ಮೂಲ ಕಾರಣವೇ ಅವನಿದ ನೆ. ಪೆರಿಯ ಸ್ವಾಮಿಯವರು ಅವನನ ನ್ಯಾಯ ವಿಚಾರಣೆಗೊಳಪಡಿಸದೆ ಸೆರೆಮನೆಗೆ ಕಳುಹಿಸಬೇಕೆಂದಿದ್ದರು. ಪ ಪ! ಈಗ ಅವರೂ ತೊಪ್ಪೈಯ ಹಾ ಮನೆ ಇಲ್ಲದವರಾಗಿದ್ದಾರೆ. ಒಮ್ಮೆ ತ ವ್ಯವಸಾಯಗಾರನಾಗಿದ್ದ ತೊಪ್ಪೈಯೊ ದಿಗೆ ಅವರೂ ಸಂಗಾತಿಯಾಗಿ ಕಾರಾಗ ಹದಲ್ಲಿರಬೇಕಾದೀತು." ಪ್ರಾಮಣಿ ಕೊಬ್ಬಳು ಹೇಳಿದಳು.

"ಬಡ ಮನುಷ್ಯ. ನಿಜ! ಈಗಿನ ನ ಯಾಂಗಣವು ಎಲ್ಲರಿಗೂ ಹಾನಿಕರ ಯ ರ ಆಸ್ತಿಯನ್ನೋ ತೆಗೆದು ಇನ್ನೊಬ್ಬನಿ ಇನ್ನೊಬ್ಬನದು ಮತ್ತೊಬ್ಬನಿಗೆ, ಹ ಹೇಗೆ ದೊರಕುತ್ತದೆ! ಕೆಲ ವರ್ಷಗಳ ಹಿ ದೆ ಒಬ್ಬ ನ್ಯಾಯವಾದಿಗೆ ಗುಮಾಸ್ತನಾ ದ್ದು; ತನ್ನಲ್ಲಿ ಬಿಟ್ಟದ್ದ ಹಣವನ್ನು ತಿ ದುಹಾಕಿದನೆಂದು, ಕೆಲಸದಿಂದ ತೆಗೆದ ಹಾಕಲ್ಪಟ್ಟಿರುವವನ ಹೆಂಡತಿ ತತ್ವಗ ನ್ನಾಡಿದಳು.

ಇನ್ನು ಮುಂದೆ ನಮ್ಮ ಹಳ್ಳಿಗೆ ಗೌ ವ ಇಲ್ಲ. ಇನ್ನು ಅದು ಒರ್ವ ಮಹಿಳೆ ದರಲ್ಲೂ ವಿಧವೆಯಿಂದ ಆಳಲ್ಪಡುತ್ತದ ಹಳ್ಳಿಗೂ ವೈಧವ್ಯ ತಗಲಿದಂತೆಯೇ ಸರಿ ನಮ್ಮ ನಮ್ಮ ಗಂಡಂದಿರ ಬಳಿ ಉಳಿದಿ ವ ಅಲ್ಪಸ್ವಲ್ಪ ಆಸ್ತಿಯನ್ನು ಪಳ್ಳಿಗ ಗೋ ಪಠ್ಯಾಚಿಗಳಿಗೋ ಮಾರಿ ಬಿಟ್ಟು ಪಟ್ಟಣಕ್ಕೆ ಹೋಗುವಂತೆ ಹೇಳುವ ಸಮ ಯವೀಗ ಬಂದೊದಗಿದೆ." ಸೀತೆಯ ಮೇ ಲೆ ನಂಜುಕಾರುತ್ತಿದ್ದ ಮಧ್ಯವಯಸ್ಕ ನಾಕ ಜೋರಾಗಿ ಹೇಳಿದಳು.

"ಇಲ್ಲ, ಇಲ್ಲ, ಸೀತೆಯು ಧಾರ್ಮಿಕಳೆ ಹಾಗೂ ಒಳ್ಳೆಯ ಹೃದಯದವಳು. ಪ ಯ ಸ್ವಾಮಿ ಲೋಭಿ, ಅವನು ತನ್ನ ಹೊ ಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದ. ಅಲ್ಲ ತನ್ನ ಮಕ್ಕಳ ಹೊಟ್ಟೆಯನ್ನು ತುಂಬಿಸ ತ್ತಿದ್ದ. ಅದು ಬಿಟ್ಟು ಒಂದೇ ಒಂದು ಒಳ್ಳೆಯ ಕಾರ್ಯವನ್ನು ಮಾಡಿಲ್ಲ. ಈ ಯಾದರೋ ಹಳ್ಳಿಯ ಉದ್ಧಾರಕ್ಕಾಗಿ ಕ ಲವಾರು ಕಾರ್ಯಗಳನ್ನುಮಾಡಬಹುದು ಓ! ಅವಳಲ್ಲಿ ತನ್ನ ಸುಪುತ್ರನೊಂದಿಗೆ ತ್ತ ಕಡೆಯೇ ಬರುತ್ತಿದ್ದಾಳೆ. ಅವಳನ್ನೆ ಕೇಳೋಣ. ಗೆಳತಿಯರೇ ಅತ್ತನೋಡಿರಿ

(ಹನ್ನೊಂದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6¼
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7¾
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್	ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.



Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೩೧ | ೧೪—೪—೧೯೬೬ | No. 31

ಮುಖಪತ್ರದಲ್ಲಿ:

ಪೂನಾದಿಂದ ೪೫ ಮೈಲು ದಕ್ಷಿಣದ ಅಂಬೊವ್ಡಾ ಗ್ರಾಮದಲ್ಲಿನ ರೈತ ರಘುನಾಥ ಜೆಡೆಯವರು ಅಮೆರಿಕೆಯ ಪೀಸ್ ಕೋರ್‍ಸ್‌ನ ಸ್ವಯಂ ಸೇವಕ ಜೇನ್ ವಿಲ್ಸನ್ನರ ಮಾರ್ಗದರ್ಶನದಿಂದ ಜೋಳದ ವ್ಯವಸಾಯ ಮಾಡಿದರು. ಈ ಜೋಳದ ಗಿಡಗಳು ೧೨ ಅಡಿ ಉದ್ದವಿದ್ದು ಒಂದಕ್ಕೆ ಮೂರು ತೆನೆಗಳನ್ನು ಪಡೆದಿವೆ. ರಘುನಾಥರ ಮಾದರಿಯನ್ನು ಉಳಿದ ರೈತರೂ ಅನುಸರಿಸಿದಲ್ಲಿ ನಮ್ಮ ಆಹಾರದ ಅಭಾವ ನೀಗುವುದರಲ್ಲಿ ಸಂದೇಹ ಇದೆಯೆ?

ಧರ್ಮ ಮತ್ತು ಅರ್ಥ

ಕರ್ನಾಟಕ ವಿಧಾನ ಸಭೆಯಲ್ಲಿ ಮಹತ್ವಪೂರ್ಣವಾದ ಒಂದು ಗೊತ್ತುವಳಿಯು ಸ್ವೀಕಾರವಾಯ್ತು; ಅವಿರೋಧವಾಗಿ. ಗೋವೆಯ ಸಂಬಂಧದಲ್ಲಿ ರಾಜ್ಯದ ನೀತಿಯನ್ನು ಪ್ರತಿಬಿಂಬಿಸುವ ಒಂದು ಗೊತ್ತುವಳಿಯು ಹಿಂದೊಮ್ಮೆ ಇದೇ ರೀತಿಯಲ್ಲಿ ಸ್ವೀಕೃತವಾಗಿತ್ತು. ಇಂತಹುದೇ ಒಂದೊಂದು ಕಾರ್ಯ ನಮ್ಮ ವಿಧಾನ ಸಭೆಯಲ್ಲಿ ಅಪರೂಪಕ್ಕಾದರೂ ಆಗುತ್ತದೆ; ಇದು ಸಂತೋಷಕರ. ಸಮಾರು ೧೨೦ ಕೋಟಿ ರೂಪಾಯಿ ವೆಚ್ಚ ಬರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಪೂರ್ಣ ಖರ್ಚನ್ನು ಕೇಂದ್ರ ಸರಕಾರವೇ ವಹಿಸಿಕೊಂಡು ಆದಷ್ಟು ತ್ವರಿತವಾಗಿ ಅದನ್ನು ಪೂರ್ಣಗೊಳಿಸುವಂತೆ ಕೇಂದ್ರವನ್ನು ಕೇಳಿಕೊಳ್ಳುವುದೇ ಗೊತ್ತುವಳಿಯ ಉದ್ದೇಶ. ರಾಜ್ಯದ ದೃಷ್ಟಿಯಿಂದ ಈ ಗೊತ್ತುವಳಿಯು ಅತ್ಯಂತ ಮಹತ್ವಪೂರ್ಣವಾದುದು; ಮತ್ತು ಗಂಭೀರವಾದುದು.

ಬಹು ವೆಚ್ಚದ ಯೋಜನೆ ಕೃಷ್ಣಾ. ಇದನ್ನು ರಾಜ್ಯ ಸರಕಾರವೇ ಕೈಗೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ, ನಾಲ್ಕನೆಯ ಯೋಜನೆಯಲ್ಲಿ ನೀರಾವರಿಗಾಗಿ ಮೀಸಲಿಟ್ಟ ಮೊತ್ತ ರೂ. ೮೦ ಕೋಟಿಯಿದ್ದರೂ ಪ್ರಥಮ ವರ್ಷದ ವೆಚ್ಚಕ್ಕೆ ದೊರೆಯುವುದು ಬರಿಯ ಐದು ಕೋಟಿ ಮಾತ್ರ. ಈ ಹಣದಿಂದ ಕೃಷ್ಣಾ ನದಿಯ ಬೃಹತ್ ಯೋಜನೆಯನ್ನು ರಾಜ್ಯ ಆರಂಭಿಸುವುದು ಹೇಗೆ? ಒಂದು ವೇಳೆ ಇತರ ರಾಜ್ಯಗಳಿಗೆ ಕೇಂದ್ರವು ನೆರವು ನೀಡಿದಂತೆಯೇ ನಮಗೂ ಸಹಾಯ ಮಾಡಬಹುದು; ವಿಪುಲ ಪ್ರಮಾಣದ ಸಹಾಯವೇ ನಮಗಿಂದು ಬೇಕಾಗಿದೆ. ಏಕೆಂದರೆ, ನೀರಾವರಿಯ ಯೋಜನೆಗಳನ್ನು ಕೇಂದ್ರವು ಕೈಗೊಳ್ಳುವ ನೀತಿಯನ್ನು ಇಟ್ಟುಕೊಂಡಿಲ್ಲ. (ರಾಜಸ್ಥಾನದ ಯೋಜನೆ ಮಾತ್ರ ಇದಕ್ಕೆ ಅಪವಾದ) ಹಾಗಿದ್ದರೂ ದೊಡ್ಡ ದೊಡ್ಡ ಯೋಜನೆಗಳಿಗೆ ಅದು ನೆರವು ನೀಡುತ್ತದೆ. ನಮಗಿಂದು ಬೇಕಾಗಿರುವುದೂ ಅದೇ. ಅವಿರೋಧವಾಗಿಯೇ ಸ್ವೀಕರಿಸಿದ ಗೊತ್ತುವಳಿಯಿಂದ ಈ ಯೋಜನೆಯ ಅಗತ್ಯ ಮತ್ತು ಇದರ ಮೇಲೆ ಕನ್ನಡಿಗರಿಗಿರುವ ಆಸಕ್ತಿ — ಕಳಕಳಿಗಳನ್ನು ಕೇಂದ್ರವು ಸಂಪೂರ್ಣ ಅರಿತುಕೊಳ್ಳುವಂತಾಗುವುದು. ರಾಜ್ಯ ಸರಕಾರಕ್ಕೆ ಯೋಜನೆಯನ್ನಲ್ಲವಾದರೂ ಹಣವನ್ನಾದರೂ ಕೇಂದ್ರದಿಂದ ಪಡೆದುಕೊಳ್ಳಲು ಇದು ಒತ್ತಾಯ ಪಡಿಸುವುದು; ಅದರ ಮಾತಿಗೆ ತೂಕ ಭಾರ ಕೊಡುವುದು. ರಾಜ್ಯದ ಹಿತ ದೃಷ್ಟಿಯಿಂದ ಕೃಷ್ಣಾ ಮೇಲ್ದಂಡೆಯ ಯೋಜನೆಯು ಅಗತ್ಯವಾಗಿ ಬೇಕು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನೀರಾವರಿ ಸೌಕರ್ಯವನ್ನು ಒದಗಿಸಿ, ಬರಗಾಲವನ್ನು ಓಡಿಸಲು ಇದು ತಾರಕ ಮಂತ್ರವೂ ಹೌದು. ಆವಶ್ಯಕತೆ, ಗಾತ್ರ ಮತ್ತು ರಾಜ್ಯದ ಕಳಕಳಿಗಳಿಂದ ಈ ಯೋಜನೆಯನ್ನು ಕೇಂದ್ರವೇ ವಹಿಸಿಕೊಳ್ಳಬೇಕೆಂದು ನಾವು ಆಗ್ರಹ ಪಡಿಸುವುದಿಲ್ಲ; ಏಕೆಂದರೆ, ಹೀಗೆ ಮಾಡಿದರೆ, ನಾಳೆ ಉಳಿದ ರಾಜ್ಯಗಳಿಂದಲೂ ಇದೇ ತರಹದ ಬೇಡಿಕೆಗಳು ಮುಂದೆ ಬರಬಹುದು—ಆಗ ಎಲ್ಲವೂ ಕಲಸುಮೇಲೋಗರವಾಗುವುದು. ಆದರೆ, ೧೨೦ ಕೋಟಿ ವೆಚ್ಚವನ್ನು ಮಾಡಲು ರಾಜ್ಯ ಸರಕಾರದ ಹಣಕಾಸಿನ ಸ್ಥಿತಿಗತಿಗಳು ಎಡೆ ಮಾಡುವುದಿಲ್ಲ; ಮಾಡುವುದು ಸಾಧ್ಯವೂ ಇಲ್ಲ. ಆದುದರಿಂದ ಮದ್ರಾಸ್, ಆಂಧ್ರ ಮೊದಲಾದ ಇತರ ರಾಜ್ಯಗಳಿಗೆ ಕೊಡಮಾಡಿದಂತೆ ಸಹಾಯವನ್ನಾದರೂ ಧಾರಾಳ ಪ್ರಮಾಣದಲ್ಲಿ ಕೇಂದ್ರ ಯಾಕೆ ಮಾಡಬಾರದು? ಇದನ್ನು ಕೇಂದ್ರ ಪರಿಶೀಲಿಸಬೇಕು.

ಯೋಜನಾ ಮಂತ್ರಿಗಳಾದ ಅಶೋಕ ಮೆಹತಾರ ಅಭಿಪ್ರಾಯದಲ್ಲಿ ರಾಜ್ಯದ ಯೋಜನಾ ಪ್ರಗತಿ, ಹಣಕಾಸಿನ ಸ್ಥಿತಿಗತಿ, ವೆಚ್ಚದ ಇತಿಮಿತಿ—ಮೊದಲಾದುವು ತುಂಬ ಶೋಚನೀಯವಾಗಿವೆ. ರಾಜ್ಯ ಸರಕಾರ ಯೋಜನೆಗಳಿಗಾಗಿ ತನ್ನ ಪಾಲಿನ ಹಣವನ್ನು ಪೂರೈಸದಿರುವುದು, ಸರಕಾರಿ ವೆಚ್ಚದ ಮೇಲೆ ಸಡಿಲು ಹಿಡಿತ—ಇದರ ಮೇಲೆ ಲೆಕ್ಕಪತ್ರ ಪರಿಶೋಧಕರ ಆಕ್ಷೇಪಗಳು—ಸುತ್ತಲೂ ಹಣ ಸೋರಿ ಹೋಗುತ್ತಿದೆ ಎಂಬ ದೂರುಗಳು! ಇಂತಹ ಕಲ್ಪನೆ ಪ್ರತಿ ರಾಜ್ಯ ವಾಸಿಗೂ ಆಗುತ್ತಿದೆ—ಕೇಂದ್ರಕ್ಕೆ ಆಗದೆ ಉಳಿದೀತೆ? ಆದುದರಿಂದಲೇ ಮೆಹತಾ ನಿಷ್ಠುರರಾಗಿಯೇ ಅಂದಿದ್ದರು—ಈ ಮಾತುಗಳನ್ನು. ರಾಜ್ಯದ ಹಣಕಾಸಿನ ವ್ಯವಸ್ಥೆಯೇ ಡೋಲಾಯಮಾನವೂ ಆಕ್ಷೇಪಕಾರಕವೂ ಇದ್ದರೆ, ಕೇಂದ್ರವು ಸಹಾಯ ಮಾಡುವುದು ತುಂಬ ತೊಂದರೆದಾಯಕವಾಗುವುದು. ಈ ಬಗೆಯ ವರದಿಗಳನ್ನು ಬಗಲಲ್ಲಿಟ್ಟುಕೊಂಡು, ಕೇಂದ್ರದ ನೆರವನ್ನು ಕೇಳುವುದಕ್ಕೂ ರಾಜ್ಯಕ್ಕೆ ಸಂಕೋಚವಾಗುವುದು. ಆದುದರಿಂದ ನಾವು ಮಾಡಬೇಕಾದ ಮೊದಲ ಕೆಲಸ – ಆರ್ಥಿಕ ಧೋರಣೆ—ವೆಚ್ಚಗಳಲ್ಲಿ ಬಿಗಿತವನ್ನು ತರುವುದು—ಆಡಿಟ್ ಆಕ್ಷೇಪಗಳಿಗೆ ಎಡೆಯಿಲ್ಲದಂತೆ ನೋಡುವುದು—ಆಗ, ನಮಗೂ ನೈತಿಕ ಧೈರ್ಯ ಬರುತ್ತದೆ; ನಮ್ಮ ಕರ್ತವ್ಯವನ್ನು ನಾವು ಪಾಲಿಸುವಾಗ ಕೇಂದ್ರಕ್ಕೂ ಹಾಗೆ ಮಾಡಲೇ ಬೇಕಾಗುತ್ತದೆ. ಕೃಷ್ಣಾ ಯೋಜನೆಗೆ ಸಹಾಯ ದೊರಕಿಸುವಲ್ಲಿ ರಾಜ್ಯ ಯಶಗಳಿಸಲಿ; ಹಣ ಸೋರಿ ಹೋಗದಂತೆ ಎಚ್ಚರಿಕೆಯಿರಲಿ.

ಶಕ್ತಿ ಸಾಮರ್ಥ್ಯ ಹೆಚ್ಚಲಿ

ಪ್ರಧಾನಿ ಇಂದಿರಾ ಗಾಂಧಿ—ಮತ್ತು ಸೋವಿಯತ್ ಪ್ರಧಾನಿ ಕೋಸಿಗಿನ್‌ರ ನಡುವೆ ನಡೆದ ಅಲ್ಪಾವಧಿಯ ಮಾತುಕತೆಗಳಲ್ಲಿ ಕೆಲವು ಸತ್ಯ ಸಂಗತಿಗಳು ಬೆಳಕಿಗೆ ಬಂದಿವೆ. ದಿ| ಪ್ರಧಾನಿ ಶಾಸ್ತ್ರಿಯವರು ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಪಾಕಿಸ್ತಾನವು ಬಲಪ್ರಯೋಗ ಮಾಡುವುದಿಲ್ಲವೆಂಬುದನ್ನು ಸಂದೇಹ ದೃಷ್ಟಿಯಿಂದ ಕಂಡಿದ್ದರಂತೆ. ಬರಿಯ ಶಾಸ್ತ್ರಿಗಳಲ್ಲ, ಸಕಲ ಭಾರತೀಯರೂ ಪಾಕಿಸ್ತಾನದ ಕುರುಡು ಕಾಶ್ಮೀರ ನೀತಿಯಿರುವ ತನಕ ಅದು ಬಲ ಪ್ರಯೋಗ ಮಾಡುವುದಿಲ್ಲವೆಂದು ಹೇಳುವುದಿಲ್ಲ. ಪಾಕ್ ನಾಯಕರ ಇತ್ತೀಚೆಗಿನ ವರ್ತನೆ ಮತ್ತಷ್ಟು ಸ್ಫುಟವಾಗುತ್ತಿದೆ. ತಾಷ್ಕೆಂಟ್ ಘೋಷಣೆ ಅವರಿಗೆ ಬೇಡ; ಅವರಿಗೆ ಬೇಕು—ಕಾಶ್ಮೀರ. ಹಾಗಾಗಿ ಪಾಕ್ ಬಲಪ್ರಯೋಗ ಮಾಡುವುದಿಲ್ಲವೆಂದು ನಂಬುವುದು ಸಾಧ್ಯವೇ ಇಲ್ಲ. ಆದುದರಿಂದ, ಪಾಕ್ ತೋರುವ ಶಕ್ತಿ ಪ್ರದರ್ಶನದ ಹೆದರಿಕೆ ಬೆದರಿಕೆಗಳಿಂದ ಭಾರತ ಕಂಗೆಡದೆ ಶಾಂತಿಯಿಂದಿರಬೇಕು—ಇದು ಕೇಳಿಕೆ. ಪಾಕಿಸ್ತಾನ—ಕೆಂಪು ಚೀನಾಗಳಿಂದ ಭಾರತಕ್ಕೆ ಅಪಾಯ ತಟ್ಟಿದರೆ ರಷ್ಯ ಸುಮ್ಮನುಳಿಯುವುದಿಲ್ಲ—ಇದು ಭರವಸೆ.

ಏನೇ ಇರಲಿ, ಪಾಕ್ ಬಣ್ಣ ಹಿಂದೆಯೇ ಪೂರಾ ಬಯಲಾಗಿದೆ. ಆದುದರಿಂದ ಆಂತರಿಕ ಭದ್ರತೆ-ಶಾಂತಿಗಳನ್ನು ಕಾಪಾಡಿಕೊಂಡು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಬೇಕು—ಹೀಗಾದರೆ ಮಾತ್ರ ನಮ್ಮನ್ನು ಕೆಣಕಲು ಯಾರೊಬ್ಬರೂ ಬರುವುದಿಲ್ಲ. ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಕೆಲವು ದಿನಗಳಿಗೆ ಮೊದಲು ಮಾಡಿದ ಇದೇ ಮಾದರಿಯ ಉದ್ಗಾರ ಅಕ್ಷರಶಃ ಸತ್ಯವಾದುದು.

ವಚನ ಸುಧೆ

ಅರ್ಥಸಿದ್ಧಿಂ ಪರಾಮಿಚ್ಛನ್
ಧರ್ಮಮೇವಾದಿತಶ್ಚರೇತ್॥
ನಹಿ ಧರ್ಮಾದಪೈತ್ಯರ್ಥಃ
ಸ್ವರ್ಗಲೋಕಾದಿವಾಮೃತಮ್॥

ಅರ್ಥದಲ್ಲಿ ಪರಿಪೂರ್ಣ ಸಿದ್ಧಿಯನ್ನು ಬಯಸುವವನು ಮೊದಲು ಧರ್ಮಾಚರಣೆಯಲ್ಲಿ ತೊಡಗಬೇಕು. ಸ್ವರ್ಗವನ್ನು ಬಿಟ್ಟು ಅಮೃತವಿರುವುದಿಲ್ಲ; ಧರ್ಮವನ್ನು ಅಗಲಿ ಅರ್ಥವಿರುವುದಿಲ್ಲ.

ನರಸಣ್ಣನ ಸರಸ



"ವಿಶಾಲ ಮೈಸೂರನ್ನು ಒಡೆದು ಮೈಸೂರು ಮತ್ತು ಕರ್ನಾಟಕವೆಂಬ ಎರಡು ಪ್ರತ್ಯೇಕ ರಾಜ್ಯಗಳನ್ನು ಮಾಡಬೇಕು ಎಂಬ ಬೇಡಿಕೆ ಮತ್ತೆ ಬಂದಿದೆ."

"ಯಾಕಾಗಬಾರದು? ಪಂಜಾಬ ವಿಭಜನೆಯಾಗುವುದಿಲ್ಲವೆ?"

ಗೇಹೆರಾಜ್ಯದಲ್ಲಿ

ಸ್ತ್ರೀ ಬುದ್ಧಿಃ ಪ್ರಳಯಾಂತಕಾಃ

"ನೋಡಿದ್ರ್ಯಾ....?"

"ಏನನ್ನ?"

'ನೋಡಿ, ಹೆಂಗಸ್ರು ಬುದ್ಧಿ ಮೊಣಕಾಲ ಕೆಳಗೆ ಅಂತ ಗೇಲಿ ಹೊಡಿಯೋತಿದ್ರಲ್ಲಾ?"

'ಅದ್ರಲ್ಲೇನ್ಲೇವಿಶೇಷ? ಗೇಲಿ ಮಾಡ್ಲಿ, ಮಾಡದೆ ಉಳೀಲಿ, ಪರಿಣಾಮ ಯಾವಾಗ್ಲೂ ಒಂದೇ ಅಲ್ವೆ?"

"ಅಂದ್ರೆ ಹೆಂಗಸ್ರು ಬುದ್ಧಿ ಯಾವಾಗ್ಲೂ ಯಾವ ಕಾಲಕ್ಕೂ ಮೊಣಕಾಲ ಕೆಳ್ಗೇ ಅನ್ನೋದೇ ನಿಮ್ಮ ಸಿದ್ಧಾಂತವಾಯ್ತು....'

"ನನ್ನ ಸಿದ್ಧಾಂತವೇನು ಬಂತೆ? ಇದನ್ನ ಎಷ್ಟೋ ಶತಕಗಳ ಹಿಂದೇನೇ ಹೇಳಿದ್ದಾರೆ. ಅಷ್ಟು ಮಾತ್ರವಲ್ಲ..."

'ಇನ್ನೂ ಏನಂದಿದ್ದಾರೆ ನಿಮ್ಮ ಮುನಿಪುಂಗವ್ರು....'

"ಹ್ಞೂಂ, ಪರ್ವಾಗಿಲ್ವೇ ನೀನು....'

"ಯಾಕೆ? ಏನಾಯ್ತು?'

"ಆಗೋದೇನು, ಏನೂ ಇಲ್ಲಾನ್ನು...'

"ನನ್ನಲ್ಲಿ ಅನ್ನೋಕೂ ವಿನಮೋಷ ಎಣಿಸಬೇಕೇನು?'

'ಅಯ್ಯೋ, ಒಳ್ಳೆ ಕತೆಯಾಯ್ತಲ್ಲ ಇದು?"

"ಯಾಕೆ?"

'ಅಲ್ಲ, ಎಲ್ಲಾ ಬಿಟ್ಟ ಮಗ ಭಂಗಿನೆಟ್ಟ ಅಂತಾಯ್ತಲ್ಲಾಂತ....'

"ಯಾಕೆ? ಅಂಥದ್ದೇನಾಯ್ತೀಗ?"

"ಇನ್ನು ಆಗಲಿಕ್ಕೆ ಉಳಿದಿರೋದಾದ್ರೂ ಏನು?"

"ಯಾಕೆ, ಯಾಕೇಂದ್ರೆ..."

"ಮತ್ತು ನನ್ನ ಮೇಲೇನೇ ವಿಶ್ವಾಸ ಇಲ್ಲಾಂತ ಸಾಧನೆ ಮಾಡ್ಲಿಕ್ಕೆ ಹೊರಟ್ರೆ..."

"ಯಾರು? ಯಾರಿಗಂತೆ?"

"ಯಾರಿಗೆ?'

"ಯಾರಿಗೇಂದ್ರೆ?'

'ಅದೇ ನಾನೂ ಕೇಳ್ತಿರೋದು. ಕೈಹಿಡಿದವಳೇ ಗಂಡನಲ್ಲಿ ವಿಶ್ವಾಸ ಕಳೆದುಕೊಂಡ್ರೆ ಮತ್ತೆ ಯಾರು ಯಾಕೆ ಇಡ್ಬೇಕು?'

'ಏನ್ರೀ ಇದು? ಒಂದೇ ಬಾಯಲ್ಲಿ ಏನೇನೆಲ್ಲಾ ಮಾತಾಡ್ತೀರಿ?"

"ಮತ್ತೆ ಮಾಡೋದಾದ್ರು ಏನೂಂತ?'

"ಏನಾಯ್ತೀಗ?"

"ಇನ್ನು ಆಗ ಬೇಕಾದ್ದಾದರೂ ಏನಿದೆ? ಅಗ್ನಿ ಸಾಕ್ಷಿಯಾಗಿ ಹೆಂಡತಿ ಅಂದುಕೊಳ್ಳೋ ಅಧಿಕಾರ ಹೊಂದಿದವ್ರು ಗಂಡನನ್ನು ಅಪನಂಬಿಕೆಗೆ ಅರ್ಹನಾದವ ಎನ್ನೋ ಸಾಹಸ ತೋರ್ಸಿದ್ರೆ ಮತ್ಯಾಕೆ ಈ ಗಂಡಸ್ತನಾಂತ...."

'ಏನು,ಗಂಡಸ್ತನಕ್ಕೂ ರಾಜಿನಾಮೆ ನೀಡ್ತೀರೇನು?'

"ನೋಡು, ಮನೆಗೆ ಬೆಂಕಿ ಹಚ್ಚೋಳು ನೀನು; ಮತ್ತೆ ಬೆಂಕಿ ಬಿತ್ತೂಂತ ಕೂಗಾಡೋಳೂ ನೀನೇ..."

"ಅದೆಲ್ಲಾ ಇರ್ಲಿ. ಇಷ್ಟೆಲ್ಲಾ ಲೆಕ್ಚರ್ ಬಿಡೋಕೆ ಆದದ್ದಾದ್ರೂ ಏನು?'

'ಆದದ್ದು? ಆದದ್ದೇನು? ಅಂತೂ ಸ್ತ್ರೀ ಬುದ್ಧಿಃ ಪ್ರಳಯಾಂತಕಾಃ ಎನ್ನೋ ಮಾತು ನಿಜವಾಂತಾಯ್ತು..."

'ಹೌದಪ್ಪ, ಸ್ತ್ರೀ ಬುದ್ಧಿ ಪ್ರಳಯ ಕರ್ತೆ; ಪುರುಷ ಬುದ್ಧಿ ಮತ್ತೇನು ಸೃಷ್ಟಿ ಮಾಡುತ್ತೆ? ಅನ್ನುತ್ತಾರೆ..."

'ಹ್ಞೂ ಹೇಳಿ ಬಿಡು, ಬಾಯಿಗೆ ಬಂದ ಹಾಗೇಂತ....'

'ಬಾಯಿಗೆ ಬಂದ ಹಾಗೆ ಅಲ್ಲ; ನಾಲಿಗೆ ತಿರುಗಿದ ಹಾಗೆ....'

"ಆಗ್ಲಿ, ಅಷ್ಟೇ ತಾನೆ?'

"ಅಲ್ಲ, ಇನ್ನೂ ಇದೆ...."

"ಹ್ಞೂಂ, ಹೇಳಿ ಬಿಡು...."

"..............."

'ಅಬ್ಬಾ ಕೆಂಡ ಸಂಪಿಗೆಯೆ? ಈ ಕಾಲದಲ್ಲಿ ಇಂತಹ ಕೆಂಡ ಸಂಪಿಗೆಯನ್ನು ನಾನು ಕಂಡದ್ದೇ ಇಲ್ಲ...."

"ಅದಕ್ಕೇ ಈಗ ಕಾಣೇಂತ ಬಂದಿರೋದು..."

'ಓ, ಜೆಂಗುಲಾಬಿ...'

"ಜೆಂಗುಲಾಬಿಯೂ ಅಲ್ಲ, ಮಲ್ಲಿಗೆಯೂ ಅಲ್ಲ...."

"ಹಾಗಾದರೆ, ಸೇವಂತಿಗೆ..."

'ಒಂದಕ್ಕೆ ಐದು ಪೈಸೆ....'

"ಅಷ್ಟೂ ಆಗ್ಲಾನೆ?"

"ಮತ್ತೆ ಕಾಟಿಗೆ ಯಾರು ಬೆಲೆ ಕೊಡ್ತಾರೇಂತ..."

ಓ, ಹಾಗೆ....ಅದೆಲ್ಲಾ ನಮಗೆ ಬೇಡ.

'ನನಗೂ ಬೇಡ....'

"ಮತ್ಯಾರಿಗೆ ಬೇಕು?'

'ಬೇಕಾದವ್ರು ಹುಡುಕಿಕೊಂಡು ಹೋಗ್ತಾರೆ. ನಮಗೆ ನಿಮಗೆ ಅದ್ರ ಚಿಂತೆಯಾತಕ್ಕೆ?'

'ಅಷ್ಟು ಇದ್ರೆ ಸರಿ. ಸದ್ಯ ಹೇಳ್ತೀರಿಯಾ? ಕತೆಯಾದ್ರೂ ಏನೂಂತ?'

'ಕತೆ? ಕತೆಕತೆ ಕಾರಣ, ಮುತ್ತಿನ ತೋರಣ, ತೊಡುವಾಭರಣ, ನಂಗಿಳ ದಿಬ್ಬಣ...."

'ಅಲ್ವೆ? ಮುತ್ತಿನ್ನ ತೋರಣದ ನಡುವೆ ನಂಗಿಳ ದಿಬ್ಬಣ ಬಂದ್ರೆ ಹೇಗೇಂತ?'

'ಅಯ್ಯೋ, ಅಷ್ಟೂ ತಿಳಿಯೋದಿಲ್ವೆ?'

'ಒಳ್ಳೆ ಪಚೀತಿಯಾಯ್ತಲ್ಲಾ ಇದು?'

'ಯಾವುದು?'

'ಯಾವುದೂ ಇಲ್ಲ....'

"ಮತ್ತೆ?"

"ಮತ್ತೆ ಕತ್ತೆಗಳ ಮೆರವಣಿಗೆ ಹೊರಡುತ್ತೆ"

"ಏನಂತೆ? ನಮ್ಮ ಕತ್ತೆಯೂ..."

"ಕತ್ತೆಯಾಂದ್ದಾದರೇನಂತೆ.....ಕತ್ತೆಯಾದ್ರೆ ಸಾಕು..."

"ಹ್ಞೂಂ, ನೋಡ್ರಿ ಮಹಾರಾಷ್ಟ್ರದಲ್ಲಿ ಎನ್'ಜೀವೋಗಳು ಬೂಟ್'ಪಾಲಿಷ್ ಮಾಡೋಕೆ ಹೊರಟಿದ್ದಾರಂತೆ.."

'ಹ್ಞೂಂ'

'ಗಗನಕ್ಕೇರೋ ಬೆಲೆ, ಪಾತಾಳದಲ್ಲಿರೋ ವೇತನಗಳ ಮಧ್ಯೆ ಏಣಿಯಿಡೋಕೆ ಈ ಸಾಹಸವಂತೆ...'

'ಪರ್ವಾಗಿಲ್ಲ. ಸುಮ್ಮ ಸುಮ್ಮನೆ ಇಂಕ್ವಿಲಾಬ್ ಜಿಂದಾಬಾದ್......., ಬೇಕೇ ಬೇಕು.....ಧಿಕ್ಕಾರ...ಧಿಕ್ಕಾರ ಅಂತ ಅರ್ಭಟಿಸಿ ತೆಗೆಯೋ ಮೆರವಣಿಗೆಗಿಂತ ಇದು ನೂರುಪಟ್ಟು ಸುಂದರವಲ್ವೆ?"

"ಹ್ಞೂಂ...ಒಂದು ಶಂಕಾ...."

"ಜಿಲ್ಟ್, ಪೇಂಟ್—ಬೂಟು ಹಾಕಿಕೊಂಡು ನಡುರಸ್ತೆಯಲ್ಲಿ ಫೋಜ ಕೊಡೋವಂತವ್ರಿಗೆ ಬೂಟ್'ಪಾಲಿಷ್ ಮಾಡುವುದ್ರಿಂದ ಏನು ಕಡಿಮೆಯಾಗುತ್ತೆ?"

'ಏನೂ ಇಲ್ಲಾಂತೀರಾ?"

"ಬೂಟ್ ಪಾಲಿಷ್ ಆದ್ರೆ ಏನು? ಕೂದಲು ಪಾಲಿಷ್ ಆದ್ರೆ ಏನು? ಎರಡೂ ಒಂದೇ. ತಮ್ಮ ಪ್ರತಿಭಟನೆ—ಅಸಂತೋಷವನ್ನು ಪ್ರಕಟ ಪಡಿಸುವ ಸಾಧನ ತಾನೆ? ಗುಲ್ಲು-ಗಲಭೆಯೆಬ್ಬಿಸಿ ಭಾಷಣ ಬಿಗಿದು; ಸಿಕ್ಕಿದವ್ರಿಗೆ ನಾಲ್ಕು ಬಯ್ದು ಬಿಟ್ರೆ ಯಾರಿಗೆ ಲಾಭ? ನೀನೇ ಹೇಳು, ಬೂಟ್ ಪಾಲಿಷ್‌ನಿಂದ ಸಂಪೂರ್ಣ ಅಹಿಂಸಾ ವಿಧಾನದಿಂದ ತೀವ್ರ ಪ್ರತಿಭಟನೆ—ಮತಪ್ರದರ್ಶನ ನಡೆಸಿದ ಹಾಗೂ ಆಯ್ತು; ಆದಾಯವೂ ಹೆಚ್ಚಿತು...."

'ಅದೇನೋ ಸರಿ, ಆದರೆ, ಈ ರಾಜಾ ಬೂಟ್ ಪಾಲಿಶರಿಂದಾಗ ಲೆಂಕರು ಉಪವಾಸ ಬೀಳಬೇಕಾಗಿ ಬಂದರೆ....?

'ಅವರವರ ರೊಟ್ಟಿಯನ್ನು ದೇವ್ರು ಕೊಟ್ಟೇ ಇದ್ದಾರೇನ್ನು...'

'ಇದೂ ಒಂದು ಸಮಾಧಾನವೆ?'

'ಅಲ್ಲದೆ ಮತ್ತಿನ್ನೇನಂತೆ?'

'ಹ್ಞೂಂ, ನೋಡಿ, ನೀವು ಹೇಳ್ತೀರಿ, ಸ್ತ್ರೀ ಬುದ್ಧಿ ಪ್ರಳಯ' ಮಾಡುತ್ತೆ; ಪುರುಷ ಬುದ್ಧಿ ಸೃಷ್ಟಿ ಮಾಡುತ್ತೇಂತ...."

'ಹ್ಞೂಂ...."

ಅದ್ರೆ ನೋಡಿ, ನಮ್ಮ ಇಂದಿರಾ ಗಾಂಧಿ ಪ್ಯಾರಿಸ್, ವಾಶಿಂಗ್‌ಟನ್, ಲಂಡನ್ ಮತ್ತು ಮಾಸ್ಕೋಗಳಿಗೆ ಭೇಟಿಯಿತ್ತು ಯಶಸ್ವಿಯಾಗಿ ಮರಳಿ ಬಂದರು, ಸರ್ವಮುಖಗಳಲ್ಲಿಯೂ ಅವರ ಈ ಯಾತ್ರೆ ಸಂಪೂರ್ಣ ಫಲಪ್ರದ ಅಂದ ಪ್ರಶಂಸಿಸಲ್ಪಟ್ಟಿತು..."

"ಹ್ಞೂಂ...'

'ಆದರೆ ನೋಡಿ, ನಿಮ್ಮ ನಂದಾ ಬಸ್ತಾರದ ಗೊಂದಲದ ಎಲ್ಲಾ ಹೊಣೆಯನ್ನು ಸತ್ತ ಮಾಜಿ ಮಹಾರಾಜರ ಮೇಲೆ ಆರೋಪಿಸಿದರು.'

"ಹ್ಞೂಂ..."

'ನೋಡೋಣ, ಈಗ ಹೇಳಿ, ಯಾರ ಬುದ್ಧಿ ಪ್ರಳಯಾಂತಕಾಂತ...'

'ನೋಡಮ್ಮಾ, ಕೋಪಿಸಿಕೊಳ್ಳದಿದ್ರೆ ಒಂದು ಮಾತು ಹೇಳ್ತೀನೆ_'

"ಏನೋ ಹೊಸ ಅಸ್ತ್ರ ಇದೇಂತತೋರುತ್ತೆ, ಬತ್ತಳಿಕೆಯಲ್ಲಿ..."

"ಇದ್ರೂ ಇರಬಹುದೂನ್ನು...ಮೊದ್ಲು ಹೇಳು,ಕೋಪ ತಂದ್ಕೋತೀಯೊ ಇಲ್ಲ...'

"ಕೋಪ, ಯಾಕೆ ಮಾಡಕೋಬೇಕು?"

"ಅದು ನನ್ಗೆ ಗೊತ್ತು. ಬೂಟ್ ಪಾಲಿಷ್ ಮಾಡೋ ಎನ್'ಜಿವೋಗಳ ಹೆಂಡಂಗ್ರು ಕೋಪಿಸ್ಕೋಲ್ಲಿಲ್ಲ, ಇನ್ಕಿಲಾಬ್ ಜಿಂ

(ಒಂಬತ್ತನೇ ಪುಟ ನೋಡಿರಿ)

ಪ್ರಗತಿ ಪಥದಲ್ಲಿ ಸಿಂಡಿಕೇಟ್ ಬ್ಯಾಂಕು.......

1965ರ ಮೈಲುಗಲ್ಲುಗಳು

	1964 ರೂ.	1965 ರೂ.
ಪಾವತಿಯಾದ ಭಂಡವಲು (ಮುಂಗಡ ಕರೆಯಲ್ಪಟ್ಟ ಅಂಶಗಳು ಒಳಗೊಂಡಿವೆ)	93,57,904	99,72,556
ಕಾದಿಟ್ಟ ನಿಧಿ (ಶೇರ್ ಪ್ರೀಮಿಯಂ ಒಳಗೊಂಡಿವೆ)	85,00,000	1,00,00,000
ಠೇವಣಿಗಳು	51,45,38,335	59,11,12,449
ಕೊಟ್ಟ ಸಾಲಗಳು ಮತ್ತು ಖರೀದಿ ಪತ್ರಗಳು ಪಟಾಯಿಸಿದ್ದು	33,48,03,373	37,25,37,620
ಪಾಲುಗಾರರ ಲಾಭಾಂಶ	13,58,350	16,11,639
ಠೇವಣಿ ಇಟ್ಟವರ ಮತ್ತು ಹಣ ಪಡೆದವರ ಖಾತೆಗಳು	7,85,127	9,80,766
ಶಾಖೆಗಳು	203	204
ಶಿಬಂದಿ ಸಂಖ್ಯೆ	2,983	3,179
ಪಾಲುಗಾರರು	4,769	4,876

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

............ವಿಶ್ವದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ

ಸಾಹಿತ್ಯ ರಂಗ

ಮಹಿಮಾವಂತ ದಾಸಸಾಹಿತ್ಯ

ಜನಭಾಷೆಯಲ್ಲಿ ಜನರಿಗೆ ಧರ್ಮಸಾರವನ್ನು ತಿಳಿಸಿ ದ್ವೈತ ಮತ ಪ್ರಚಾರದಲ್ಲಿ ಯಶಸ್ವಿಯಾದ ದಾಸರ ಕೃತಿಗಳು ಮಹೋನ್ನತವಾಗಿವೆ.

ಬರೆದವರು : ಶ್ರೀ ಸ. ನಾರಾಯಣ.

ಕನ್ನಡ ವಾಙ್ಮಯ ಕ್ಷೇತ್ರದಲ್ಲಿ ದಾಸ ಸಾಹಿತ್ಯದ ಪಾತ್ರ ಹಿರಿದು. ದಾಸ ಸಾಹಿತ್ಯ ಹರಿದಾಸರಿಂದ ರೂಪುಗೊಂಡು ಜನ ಮನದ ಕೊಳೆಯನ್ನು ಕಳೆಯಲು ಅನುವಾದ ಪಾವನ ಗಂಗೆ. ಈ ಸಾಹಿತ್ಯ ಸುಂದರ; ಅಷ್ಟೇ ಸರಳ-ಶಕ್ತಿಪೂರ್ಣ. ಹರಿದಾಸರುಗಳು ಶ್ರೀ ಹರಿಯ ಕೀರ್ತನೆಗೆ, ಧರ್ಮತತ್ವ ಪ್ರತಿಪಾದನೆಗೆ ಬಳಸಿಕೊಂಡು ಬೆಳೆಸಿದ ಅಮೂಲ್ಯ ಸಾಹಿತ್ಯ—ದಾಸ ಸಾಹಿತ್ಯ.

ಮೂಲತಃ ಸಂಸ್ಕೃತ ಭಾಷೆಗೆ ಮಾರುಹೋಗಿ ಸಂಸ್ಕೃತ ಭಾಷೆಯಲ್ಲಿಯೇ ಕೃತಿಗಳನ್ನು ರಚಿಸಿ ಆ ಭಾಷೆಯ ಮೂಲಕವೇ ಜ್ಞಾನ ಪ್ರಸಾರಕ್ಕೆ ಕೈಹಾಕಿದ ಮಹಿಮರು ವ್ಯಾಸ ಕೂಟದವರು ಎಂಬ ಹೆಸರಿನಿಂದ ಕೀರ್ತಿ ಪಡೆದರು. ಜನಸಾಮಾನ್ಯರಿಗೂ ಧರ್ಮ ಸಂದೇಶ ಸಾರಲು ಮತ್ತು ಭಗವಂತನ ಮಹಿಮೆಯನ್ನು ತಿಳಿಸಲು ಭಕ್ತರು ನಾಡ ಭಾಷೆಯನ್ನೇ ಬಳಸಿಕೊಂಡು ಆ ಭಾಷೆಯ ಮೂಲಕವೇ ಜನಮನ ಮುಟ್ಟುವಂತೆ ಮನದ ಭಕ್ತಿ, ಜ್ಞಾನ, ವೈರಾಗ್ಯಗಳ ಸಂಗತಿಯನ್ನು ತಿಳಿಸಿದರು. 'ಇವರು ದಾಸ ಕೂಟದವರು ಎಂಬ ಹೆಸರಿಗೆ ಪಾತ್ರರಾದರು. ದಾಸ ಕೂಟದ ಸದಸ್ಯರ ಸಂಖ್ಯೆ, ದಾಸ ಸಾಹಿತ್ಯದ ಹಿರಿಮೆ ಹಿರಿದು.

ಕಾವೇರಿಯಿಂದ ಗೋದಾವರಿಯ ವರೆಗೆ ವ್ಯಾಪಿಸಿದ ಕನ್ನಡ ನಾಡಿನ ಇತಿಹಾಸ ಹಿರಿಮೆ ವಿಶೇಷವಾದುದು. ಸಂತರ, ಜ್ಞಾನಿಗಳ, ದಾರ್ಶನಿಕರ ಕವಿಗಳ— ಕವಿಗಳ ಕಲಿಗಳ ನಾಡಾಗಿ ಮೆರೆದ ಕರ್ನಾಟಕದ ಚರಿತ್ರೆ ಸ್ಮರಣೆಗೆ ಯೋಗ್ಯ. ಜನ ಜೀವನ, ಧಾರ್ಮಿಕ ಜೀವನಗಳಲ್ಲಿ ಏರುಪೇರಾದಾಗ ಜನತೆಯ ಮನಸ್ಸು ಜ್ಞಾನ ಮಾರ್ಗವನ್ನುಬಿಟ್ಟು ಅನ್ಯಮಾರ್ಗವನ್ನು ಅನುಸರಿಸಿದಾಗ ಮಹಿಮಾ ಪೂರ್ಣ ವ್ಯಕ್ತಿಗಳು ಬೆಳಕಿಗೆ ಬಂದು ತಮ್ಮ ಕೆಲಸವನ್ನು ನಿಷ್ಠೆಯಿಂದ ನಡೆಸಿದ್ದಾರೆ.

ಕನ್ನಡ ನಾಡಿನಲ್ಲಿ ಸಮಾಜ ವಿಕಾಸಕ್ಕೆ—ಸಮಾಜದ ಉನ್ನತಿಗೆ, ಧರ್ಮದ ಏಳಿಗೆಗೆ, ಜನತೆಯ ಅಂಧ ಶ್ರದ್ಧೆಯನ್ನು—ಮೂಢತನವನ್ನು ಕಳೆಯಲು ಪ್ರಯತ್ನಿಸಿದವರು ಮೊದಲಿಗೆ ಶಿವಶರಣರು. ಆ ನಂತರ ಹರಿದಾಸ ಸಂಘದವರು.

ಸಮಾಜದ ಉನ್ನತಿಗೆ, ಮಾರ್ಪಾಡಿಗೆ ಜನಮನೋವಿಕಾಸ ಮೊದಲ ಮೆಟ್ಟಲು ಜನಮನದ ಕೊಳೆ ಕಳೆದು ಜನತೆಯನ್ನು ಜ್ಞಾನಿಗಳನ್ನಾಗಿ, ಭಕ್ತರನ್ನಾಗಿ, ಸಭ್ಯರನ್ನಾಗಿ, ಸುಸಂಸ್ಕೃತರನ್ನಾಗಿ ಮಾಡಲು ವಿಶೇಷ ಶ್ರಮ ವಹಿಸಿದ ಶಿವಶರಣರಿಗೆ ಮತ್ತು ಹರಿದಾಸರಿಗೆ ನಾಡಿನ ಹಿರಿಮೆಯ—ಕೀರ್ತಿಯ ಬಹುಪಾಲು ಸಲ್ಲುತ್ತದೆ.

ಹರಿದಾಸರ ಮತ್ತು ದಾಸ ಸಾಹಿತ್ಯದ ಪರಿಚಯ ನಮಗಾಗುವುದು ಕ್ರಿ. ಶ. ೧೩ನೆಯ ಶತಮಾನದಿಂದ ಇತ್ತೀಚೆಗೆ. ಅದಕ್ಕೂ ಅದಕ್ಕೆ ಪೂರ್ವದಲ್ಲಿ ದಾಸರಾಗಲಿ ದಾಸಸಾಹಿತ್ಯವಾಗಲಿ ಇರಲಿಲ್ಲ ಎಂದು ಹೇಳುವಂತಿಲ್ಲ. ಹರಿದಾಸರಾಗಿದ್ದ-೯ನೆಯ ಶತಮಾನದಲ್ಲಿದ್ದ ಅಚಲಾನಂದ ದಾಸರೇ ದಾಸಸಾಹಿತ್ಯದ ಆದ್ಯ ಪ್ರವರ್ತಕರು ಎಂಬ ನಂಬಿಕೆಯಿದೆ. ಹರಿದಾಸ ಸಾಹಿತ್ಯಕ್ಕೆ ಸ್ಪಷ್ಟ ಸ್ವರೂಪ ಬಂದುದು ಶ್ರೀ ವ್ಯಾಸತೀರ್ಥರ ಕಾಲದಲ್ಲಿ ಅನಂತರ ಅವರ ಶಿಷ್ಯರ ದಿನಗಳಲ್ಲಿ.

ಇಂದು ನಮಗುಳಿದಿರುವ ಕರ್ನಾಟಕ ಪ್ರಾಚೀನ ಕರ್ನಾಟಕದ ಅರ್ಧಾಂಶ ಮಾತ್ರ. ಹಿಂದಿನ ಕರ್ನಾಟಕದ ಕಲ್ಪನೆ, ಸ್ಥಾನ, ಮಾನ, ವಿಸ್ತೀರ್ಣ, ವೈಭವ ಹಿರಿದು. ಕರ್ನಾಟಕ ಕಾಲಕಾಲಕ್ಕೆ ತಕ್ಕಹಾಗೆ 'ಮಹಾರಾಷ್ಟ್ರ, ಕರ್ನಾಟಕ, ರಟ್ಟಪಾಡಿ, ಅಶ್ಮಕ ಮುಳುಕ, ಕುಂತಳ, ಬನವಾಸಿ' ಎಂಬ ಮೊದಲಾದ ಹೆಸರುಗಳಿಂದ ಮೆರೆದಿತ್ತು.

ಹಿರಿಯ ಕಿರಿಯ ಕವಿಗಳ ಕೃತಿ ರತ್ನಗಳ ಪುಟ್ಟದಲ್ಲಿ ಸಮಗಾಗಿ ತಲೆ ಎತ್ತಿ ಮೆರೆಯ ಬಲ್ಲಂತಹುದು. ಹರಿದಾಸ ಸಾಹಿತ್ಯ ಕನ್ನಡ ವಾಙ್ಮಯ ಕ್ಷೇತ್ರಕ್ಕೆ ಒಬ್ಬರೇ ರಚಿಸಿ ಅರ್ಪಿಸಿದುದಲ್ಲ. 'ದಾಸ ಸಾಹಿತ್ಯ'; ಅದರಲ್ಲಿ ಹಲವಾರು ಜನರ ಶ್ರಮ-ಸೇವೆ ಸೇರಿದೆ. ದಾಸ ಸಾಹಿತ್ಯ ಹಿರಿದಾಗಿ ಬೆಳೆದುದು— ಮೆರೆದುದು ವಿಜಯನಗರದರಸರ ಆಳ್ವಿಕೆಯ ಕಾಲದಲ್ಲಿ. ವಿವಿಧ ಮತ ಪಂಥಗಳ—ಧರ್ಮತತ್ವಗಳ ಸಂಘರ್ಷಣೆಯಲ್ಲಿ ಜನತೆಯ ಮನಸ್ಸು ದೇವರನ್ನೇ ಮರೆಯುವಂತಹ ಸಂದರ್ಭ ಒದಗಿದಾಗ ದಾಸವರ್ಯರು ತಮ್ಮ ಕೃತಿಗಳ ಮೂಲಕ ಜನತೆಗೆ ದೇವರ ಹಿರಿಮೆಯನ್ನು ಪುನಃ ಸಂಜಯ ಮಾಡಿಕೊಟ್ಟು ಜಾಗೃತಿಯನ್ನು ಉಂಟು ಮಾಡಿದರು. ದಾಸ ಸಾಹಿತ್ಯದಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಭಾವಗಳ ವಾಹಿನಿ ಹರಿದಿದೆ.

೧೩ನೆಯ ಶತಮಾನದಲ್ಲಿ ಮಧ್ವಾಚಾರ್ಯರು ತಮ್ಮ ದ್ವೈತ ಸಿದ್ಧಾಂತವನ್ನು ಮುಂಡಿಸಿ ನಾಡಿನಲ್ಲಿ ಹೊಸ ಪರಂಪರೆಯನ್ನು ಆರಂಭಿಸಿದರು. ಅವರ ಸಿದ್ಧಾಂತ ಬಹು ಬೇಗ ಜನಮನದ ಮೇಲೆ ಪರಿಣಾಮ ಬೀರಿತು. ಶ್ರೀ ಮಧ್ವಾಚಾರ್ಯರ ದ್ವೈತ ಸಿದ್ಧಾಂತದ ಮೂಲ ತತ್ವಗಳಿಗೆ ಮಾರು ಹೋದ ಕೆಲವು ಪ್ರತಿಭಾವಂತ ಮೇಧಾವಿ-ಜ್ಞಾನಿಗಳು ಮಧ್ವ ಸಿದ್ಧಾಂತದ ಸಾರಾಂಶವನ್ನು ಗೀರ್ವಾಣ ಭಾಷೆಯಲ್ಲಿ ಭಾರದವರಿಗೆ ಹೇಳಲು ಯತ್ನಿಸದೆ, ನಾಡ ಜನತೆಗೆ ತಾಯ್ನುಡಿಯಾದ ಕನ್ನಡದಲ್ಲಿ ಸರಳವಾಗಿ ತಮ್ಮ ಪದ್ಯಗಳ ಮೂಲಕ ಬೋಧಿಸಲು ಆರಂಭಿಸಿದರು. ಈ ಪರಂಪರೆ ವಿಶೇಷವಾಗಿ ಬೆಳೆದು ದಾಸ ಕೂಟದ ಸದಸ್ಯರ ಸಂಖ್ಯೆ ಹೆಚ್ಚಿದಂತೆಯೇ ದಾಸ ಸಾಹಿತ್ಯದ ಮೌಲ್ಯವೂ ಒಂದಕ್ಕೆ ಹತ್ತಾಗಿ ಬೆಳೆಯಿತು.

ಅಚಲಾನಂದ ದಾಸರೇ ದಾಸ ಸಾಹಿತ್ಯದ ಆದ್ಯ ಪ್ರವರ್ತಕರು ಎಂದು ಹೇಳುವಂತೆಯೇ ಮತ್ತೊಬ್ಬರ ಬಗೆಗೂ ಅದೇ ಬಗೆಯ ಅಭಿಪ್ರಾಯವಿದೆ. ಅವರು ನರಹರಿತೀರ್ಥರು. ಕಳಿಂಗ ರಾಜ್ಯದ ಅಧಿಪತಿಯಾಗಿದ್ದು ಕಾರಣಾಂತರದಿಂದ ವೈರಾಗ್ಯ ತಾಳಿ ಹರಿದಾಸರಾದರು— ದಾಸ ವಾಙ್ಮಯದ ಸೃಷ್ಟಿಕರ್ತರಾದರು ಎಂಬ ಅಭಿಪ್ರಾಯವಿದೆ. ಈ ಬಗ್ಗೆ ಕೂಲಂಕಷವಾಗಿ ಸಂಶೋಧನೆ ನಡೆಯಿಸಿ ಸ್ಪಷ್ಟ ಅಭಿಪ್ರಾಯ ಕೊಡಬೇಕಾದವರು ಪಂಡಿತರು—ಸಂಶೋಧಕರು.

ಕ್ರಿ. ಶ. ೧೪೫೦ರಲ್ಲಿದ್ದ ಶ್ರೀ ಪಾದರಾಯರ ಕಾಲದಿಂದ ದಾಸಸಾಹಿತ್ಯದಸ್ವರೂಪ ಸುಂದರವಾಗಿ ರೂಪಗೊಳ್ಳುತ್ತದೆ. ಶ್ರೀ ಪಾದರಾಯರು ಕೋಲಾರ ಜಿಲ್ಲೆಯ ಮುಳುಬಾಗಿಲು ಮಠದ ಅಧಿಪತಿಗಳಾಗಿದ್ದವರು. ಇವರಿಗೆ ಮೊದಲಿಗೆಶ್ರೀ ಲಕ್ಷ್ಮೀ ನಾರಾಯಣ ಮುನಿಗಳೆಂದು ಕರೆಯುತ್ತಿದ್ದರಂತೆ. ಇವರ ಶಿಷ್ಯರೇ ಇತಿಹಾಸ ಪ್ರಸಿದ್ಧ ವ್ಯಕ್ತಿಗಳಾಗಿದ್ದ ವ್ಯಾಸತೀರ್ಥರು. (ಶ್ರೀ ವ್ಯಾಸರಾಜ ಯತಿವರ್ಯರು).

ಶ್ರೀ ವ್ಯಾಸರಾಜ ಯತಿವರ್ಯರು ಕರ್ನಾಟಕ ಕೀರ್ತಿ ಕಳಸದಂತೆ ಮೆರೆದವಿಜಯನಗರ ಸಾಮ್ರಾಜ್ಯದಲ್ಲಿ ಮೂವರು ಅರಸರ ಆಳ್ವಿಕೆಯ ಕಾಲದಲ್ಲಿ ಇದ್ದವರು. ಸಾಳ್ವ ಇಮ್ಮಡಿ ನರಸಿಂಹ,ನರಸನಾಯಕ ನರಸಿಂಹ ಮತ್ತು ಶ್ರೀ ಕೃಷ್ಣದೇವರಾಯ ಇವರೇ ಆ ಮೂವರು ಅರಸರು.ವ್ಯಾಸ ರಾಜರು ಒಮ್ಮೆ ಅರಸನಿಗೆ ಬಂದಿದ್ದ ವಿಪತ್ತನ್ನು ಪರಿಹರಿಸುವುದಕ್ಕಾಗಿ ತಾವೇ ಸಿಂಹಾಸನವನ್ನೇರಿ ಕಂಟಕದಿಂದ ರಾಜ್ಯವನ್ನೂ ರಾಜನನ್ನೂ ಪಾರುಮಾಡಿದರಂತೆ.

ಶ್ರೀ ವ್ಯಾಸರಾಜರು ಕನ್ನಡ ಸಂಸ್ಕೃತ ಎರಡು ಭಾಷೆಗಳಲ್ಲಿಯೂ ಅದ್ವಿತೀಯ ಪಂಡಿತರು. ಇವರು ಶ್ರೀ ಕೃಷ್ಣ ಎಂಬ ಅಂಕಿತದಲ್ಲಿ ಹಲವು ಶ್ರೇಷ್ಠ ಮಟ್ಟದ ಕೀರ್ತನೆಗಳನ್ನು ರಚಿಸಿದ್ದಾರೆ. ಮೇಲಾಗಿ ಸಂಸ್ಕೃತದಲ್ಲಿಯೂ ಉತ್ಕೃಷ್ಟ ಗ್ರಂಥಗಳನ್ನು ರಚಿಸಿದ್ದಾರೆ. ಅವರದು ಹಿರಿಯ ಬಾಳು— ಹಿರಿಯ ಸೇವೆ.

ಶ್ರೀ ವ್ಯಾಸರಾಜರು, ಶ್ರೀ ವಿಜಯೀಂದ್ರರು, ಶ್ರೀ ವಾದಿರಾಜರು, ಪುರಂದರ ದಾಸರು ಮತ್ತು ಕನಕದಾಸರು ಮೊದಲಾಗಿ ಅನೇಕ ಹೆಸರಾಂತ ಹರಿದಾಸರಿಗೆ ಗುರುಗಳು. ಶ್ರೀ ವ್ಯಾಸರಾಜರು ಇವರೆಲ್ಲರನ್ನು ಶಿಷ್ಯರನ್ನಾಗಿ ಸ್ವೀಕರಿಸಿ, ತತ್ತ್ವೋಪದೇಶ ಮಾಡಿ ಅವರವರಿಗೆ ತಕ್ಕ ಕೆಲಸಗಳನ್ನು ನಿರ್ವೇಳಿಸಿದರು ಗುರುಗಳ ಅಪ್ಪಣೆಯ ಮೇರೆಗೆ ಶಿಷ್ಯರು ಜ್ಞಾನ ಜ್ಯೋತಿಯನ್ನು ಹಿಡಿದು ನಾಡಿನ ಮೂಲೆ ಮೂಲೆಗೂ ಹೋಗಿ ಬೆಳಗಿಸಿದರು.

ಶ್ರೀ ವ್ಯಾಸರಾಜರು ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತಸಿದ್ಧಾಂತವನ್ನು ತಮ್ಮ ಒಂದೇ ಶ್ಲೋಕದಲ್ಲ ಸಂಗ್ರಹಿಸಿದ್ದಾರೆ—ಶ್ರೀಮನ್ ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ವತೋ ಭೇದೋ ಜೀವಗಣ ಹರೇರನುಚರಾನೀಚೋಚ್ಚ ಭಾವಂಗತಾಃ ಮುಕ್ತಿರ್ನೈಜ ಸುಖಾನು ಭೂತಿರಮಲಾ ಭಕ್ತಿಶ್ಚತತ್ ಸಾಧನಂ ಅಕ್ಷಾದಿತ್ರಿತಯಂ ಪ್ರಮಾಣ ಮಖಿಲಾ ಮ್ನಾಯೈಃವೇದ್ಯೋ ಹರಿಃ||

ಪುರಂದರ ದಾಸರ ಪರಿಚಯವೇ ಇಲ್ಲದ ಕನ್ನಡಿಗನೇ ಇಲ್ಲ. ಪರಮ ಲೋ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 55 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 5½ರಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು
ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಚತುರ್ಮಹಾರಾಷ್ಟ್ರಗಳಲ್ಲಿ ಭಾರತ

ಪ್ರಧಾನಿ ಇಂದಿರಾ ಗಾಂಧಿಯವರು ನಾಲ್ಕು ಮಹಾರಾಷ್ಟ್ರಗಳ ವರಿಷ್ಠರನ್ನು ಕಂಡರು; ಮಾತುಕತೆ ನಡೆಸಿದರು. ಮುಖ್ಯವಾಗಿ ಆರ್ಥಿಕ ಮತ್ತು ಆಹಾರದ ಸಮಸ್ಯೆಗಳೇ ಚರ್ಚಿಸಲ್ಪಟ್ಟವು. ಎಲ್ಲರೂ ತಮ್ಮಿಂದ ಯಾವ ಬಗೆಯ ನೆರವು ನೀಡುವುದು ಸಾಧ್ಯವೆಂದು ಪರಿಶೀಲಿಸಿ ಅದನ್ನು ಒದಗಿಸುವ ಭರವಸೆಯಿತ್ತರು. ಈ ದಿಸೆಯಲ್ಲಿ ಇಂದಿರಾ ಗಾಂಧಿಯ ಮಹಾರಾಷ್ಟ್ರ ಸಂದರ್ಶನ ಸಾಮಾನ್ಯವಾಗಿ ಸಫಲವಾಯ್ತು.

ಆದರೆ, ಪ್ರಧಾನಿಯವರ ವಿದೇಶ ಸಂಚಾರದ ಮೂಲೋದ್ದೇಶ ಯಾವುದು? ವಿದೇಶೀ ನೆರವನ್ನು ಪಡೆಯುವುದೆ? ಅಥವಾ ಮತ್ತೇನಾದರು ಇದೆಯೆ? ದಿ| ಪ್ರಧಾನಿ ಶಾಸ್ತ್ರಿಯವರು ವಾಶಿಂಗ್'ಟನ್ನಿಗೆ ಹೋಗಲಿದ್ದರು. ಅವರು ಇನ್ನಿಲ್ಲವಾದುದರಿಂದ ಅದರ ಬದಲು ಇಂದಿರಾ ಹೋಗಬೇಕಾಯಿತೆ? ಆನುಷಂಗಿಕವಾಗಿ ಉಳಿದ ಮೂರೂ ರಾಷ್ಟ್ರಗಳನ್ನು ಅವರು ಸಂದರ್ಶಿಸಿದರೆ? ಇದ್ದರೂ ಇರಬಹುದು. ಆದರೆ, ಇವಾವುವೂ ಪ್ರಮುಖವೆನ್ನುವಷ್ಟು ಮಹತ್ವಪೂರ್ಣ ಕಾರಣವಾಗಲಾರವು. ತಮ್ಮ ಯಾತ್ರೆಯ ಕಾರಣವನ್ನು ಶ್ರೀಮತಿಯವರೇ ಹೊರಡುವುದಕ್ಕೆ ಮೊದಲು ತಿಳಿಸಿದ್ದಾರೆ: "ಸಹಾಯಕ್ಕಿಂತಲೂ ಮಿಗಿಲಾಗಿ ಸಹಾನುಭೂತಿಯನ್ನು ಗಳಿಸುವುದು." ಇದರ ಯಶದ ಬಗ್ಗೆಯೂ ಊಹಾಪೋಹಕ್ಕಿಂತ ಅವರ ಉದ್ಗಾರವೇ ಉತ್ತಮ ಸಾಕ್ಷಿ, "ನನ್ನ ವಿದೇಶ ಸಂಚಾರದಿಂದ ನನಗೆ ತೃಪ್ತಿಯಾಗಿದೆ. ಭಾರತವನ್ನು ವಿದೇಶಗಳು ಹೆಚ್ಚು ಸ್ಪಷ್ಟವಾಗಿ ತಿಳಿದುಕೊಳ್ಳ ತೊಡಗಿವೆ"— ಇದಕ್ಕಿಂತ ದೊಡ್ಡ ಸಾಧನೆಯೇನು?

೦ ೦ ೦

ಮಹಾರಾಷ್ಟ್ರಗಳಲ್ಲಿ ಫ್ರಾನ್ಸು ಒಂದು. ಇದರ ಅಧ್ಯಕ್ಷ ಡಿ' ಗಾಲೆಯವರು ಅಧಿಕಾರಕ್ಕೆ ಬಂದ ಬಳಿಕ ಅಲ್ಲಿ ಸ್ಥಾಯಿ ಸರಕಾರವುಳಿದಿದೆ. ಮುಖ್ಯವಾಗಿ ಸೈನಿಕ ಅಧಿಕಾರಿಯಾಗಿದ್ದ ಡಿ' ಗಾಲೆ ಸೈನಿಕರಲ್ಲಿ ಆಸಕ್ತರಿರುವುದು ಸ್ವಾಭಾವಿಕ. ಹಾಗಾಗಿ ಪಾಕ್ ಅಧ್ಯಕ್ಷ ಜನರಲ್ ಅಯ್ಯೂಬಖಾನರೊಡನೆ ಅವರ ಸಂಪರ್ಕ ತುಸು ದೃಢವೇ ಇರುವುದು. ಅತ್ತ ಕೆಂಪು ಚೀನಾಕ್ಕೆ ಕೂಡ ಸೈನಿಕೋಪಕರಣಗಳನ್ನು ಮಾರುವುದಕ್ಕೂ ಅವರು ಹಿಂಜರಿಯುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಡಿ'ಗಾಲೆಯವರು ಸೀಟೋ ಮೊದಲಾದ ಸೈನಿಕ ಒಡಂಬಡಿಕೆಗಳಿಂದ ಹಿಂದೆ ಸರಿದಿದ್ದಾರೆ. ಇದರ ಕಾರಣವೇನೆಂಬುದು ಇನ್ನೂ ಸರಿಯಾಗಿ ತಿಳಿದಿಲ್ಲ. ಇಂತಹ ಸೈನಿಕ ಒಡಂಬಡಿಕೆಗಳ ಸದಸ್ಯ ರಾಷ್ಟ್ರಗಳಲ್ಲಿ ಪಾಕಿಸ್ತಾನವೂ ಒಂದು. ಅದು ಭಾರತದ ಮೇಲೆ ಆಕ್ರಮಣ ನಡೆಸಿ ಹೋರಾಡಿದಾಗ, ತನ್ನ ಶಸ್ತ್ರಾಸ್ತ್ರಗಳೆಲ್ಲ ನಷ್ಟವಾದಾಗ, ಅದು ಈ ಬಡಬಂಡಿಕೆಗಳಿಗೆ ಸೇರಿದ ಮಿತ್ರರಾಷ್ಟ್ರಗಳಿಗೆ ಮೊರೆಯಿಟ್ಟುದನ್ನು ಯಾರು ತಾನೇ ಮರೆತಾರು? ಆದುದರಿಂದ, ಡಿ. ಗಾಲೆಯವರ ಈ ಕೃತಿಯಲ್ಲಿ ಭಾರತವು ಪ್ರತ್ಯಕ್ಷವಾಗಿಯಲ್ಲ, ಪರೋಕ್ಷವಾಗಿ ತುಸು ಆಸಕ್ತಿವಹಿಸಿದರೆ ತಪ್ಪೇನಲ್ಲ.

ಈ ವಿಷಯದಲ್ಲಿ ಹೆಚ್ಚಿನ ತಿಳುವಳಿಕೆ ಪಡೆದಿರಬಹುದು, ಇಂದಿರಾಗಾಂಧಿ. ಜತೆಗೆ ಭಾರತದ ಸದ್ಯದ ಸಮಸ್ಯೆಗಳ ಪರಿಹಾರಕ್ಕೂ ಲಭ್ಯ ನೆರವೀಯುವ ಭರವಸೆಯೂ ಬಂದಿರಬಹುದು. ಪ್ಯಾರಿಸ್ ಇಂದಿರೆಯು ಶಿಕ್ಷಣ ಪಡೆದ ನೆಲ. ಆಕೆಗೆ ಅಲ್ಲಿ ಅಭೂತ ಸ್ವಾಗತವೂ ದೊರೆಯಿತು.

೦ ೦ ೦

ಅಧ್ಯಕ್ಷ ಲಿಂಡನ್ ಬಿ. ಜಾನ್ಸನ್ ಇಂದಿರಾಗಾಂಧಿಯವರೊಡನೆ ಆಡಿದ ಮಾತುಕತೆಗಳಿಂದ ತುಂಬ ಪ್ರಭಾವಿತರಾಗಿದ್ದಾರೆ. ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ, ಶಾಂತಿ ಪ್ರಿಯ ರಾಷ್ಟ್ರ ಭಾರತದ ಸಮಸ್ಯೆಗಳು ತನ್ನ ಸಮಸ್ಯೆಯನ್ನುವಷ್ಟು ಅವರು ಮುಂದುವರಿದಿದ್ದಾರೆ. ತನ್ನ ನೀತಿಯನ್ನು ಯಾರೊಬ್ಬರನ್ನಾದರೂ ಮೆಚ್ಚಿಸುವುದಕ್ಕಾಗಿಯೇ ಬದಲಿಸುವಷ್ಟು ದುರ್ಬಲ ಭಾರತವೂ ಅಲ್ಲ, ಭಾರತೀಯರೂ ಅಲ್ಲವೆಂಬುದನ್ನು ಜಾನ್ಸನ್ ಈಗ ಸುಸ್ಪಷ್ಟವಾಗಿ ಅರಿತುಕೊಂಡಿದ್ದಾರೆ. ಭಾರತ— ಪಾಕಿಸ್ತಾನ ಹೋರಾಟದ ವೇಳೆ ಉಭಯ ರಾಷ್ಟ್ರಗಳ ನಡುವೆ ಬಿದ್ದ ಧೂಳನ್ನು ಜಾಡಿಸುವಲ್ಲಿ ಇಂದಿರಾ ಸಂಪೂರ್ಣ ಯಶಗಳಿಸಿದ್ದಾರೆ. ಇಂದು ಭಾರತದ ಬಗ್ಗೆ, ಅದರ ನೀತಿಗಳ ಬಗ್ಗೆ ಅದರ ನಾಯಕರ ಬಗ್ಗೆ ಸರಿಯಾದ ತಿಳುವಳಿಕೆ ಜಾನ್ಸನ್ನರಿಗಾಗಿದೆ.

ಆದರೆ, ಒಂದು ತಾಪತ್ರಯದ ಸಂಗತಿ. ಅಮೆರಿಕನ್ ರಾಜಕಾರಣವು ಆಕ್ರಮಣಕಾರ ಪಾಕಿಸ್ತಾನವನ್ನೂ ಆಕ್ರಮಣ ಪೀಡಿತ ಭಾರತವನ್ನೂ ಒಂದೇ ತ್ರಾಸಿನಲ್ಲಿ ತೂಗುವ ನೀತಿಯನ್ನು ಬಹಳ ಹಿಂದೆಯೇ ಅನುಸರಿಸಿ ತಪ್ಪು ಮಾಡಿದೆ. ತನ್ನ ಹಿಂದಿನವರು ಸಂಬದ್ಧನೀತಿಯನ್ನು ಏಕಾಏಕಿಯಾಗಿ ಬದಲಾಯಿಸುವಷ್ಟು ಧೈರ್ಯವಂತರು ಜಾನ್ಸನ್ನರೆ? ತಾನಾಗಿ ಹೊಸ ಹೆಜ್ಜೆಯಿಡುವಷ್ಟು ಇವರು ಪುರೋಗಾಮಿಯಲ್ಲವೆಂದೇ ಹೇಳಬೇಕು.

ಹೊನಲುಲುವಿನಲ್ಲಿ ಜಾನ್ಸನ್

೧

ಚಿತ್ರ ೧

ಅಧ್ಯಕ್ಷ ಜಾನ್ಸನ್, ಆಕಸ್ಮಿಕವಾಗಿಯೇ ಹವಾಯಿಗೆ ಭೇಟಿಯಿತ್ತರು. ಹೊನೊಲುಲುವಿನಲ್ಲಿ ದಕ್ಷಿಣ ವಿಯತನಾಮದ ಅಧ್ಯಕ್ಷ ಎನ್ ಗೂಯೆನ್ ವಾನ್ ಥೀಯೂ (ಎಡ) ಮತ್ತು ಪ್ರಧಾನಮಂತ್ರಿ ಎನ್'ಗೂಯೆನ್ ಕಾವೊಕೀಯವರೊಡನೆ ಅವರು ಮಾತನಾಡುತ್ತಿದ್ದಾಗ ತೆಗದ ಚಿತ್ರವಿದು. ಎರಡು ದಿನಗಳ ತನಕ ಸಮ್ಮೇಳನ ಸೇರಿದ ಇವರು ದಕ್ಷಿಣ ವಿಯತನಾಮದ ಇಂದಿನ ಪರಿಸ್ಥಿತಿಯಲ್ಲಿ ಆಕ್ರಮಣವನ್ನು ಬಲವಾಗಿ ಎದುರಿಸುವ, ಸಾಮಾಜಿಕ ಕ್ರಾಂತಿಗಾಗಿ ಹೋರಾಡುವ, ಸ್ವತಂತ್ರ ಸ್ವಸರಕಾರದ ಗುರಿಯನ್ನು ಮುಟ್ಟುವ ಹಸಿವೆಯನ್ನು ಹೊಡೆದೋಡಿಸುವ ರೋಗಗಳನ್ನು ದೂರವಾಡುವ; ಶಾಂತಿಗಾಗಿ ಯಾವತ್ತೂ ಪ್ರಯತ್ನಿಸುವ ತಮ್ಮ ಪ್ರತಿಜ್ಞೆಗಳನ್ನು ಮತ್ತೊಮ್ಮೆ ದೃಢೀಕರಿಸಿದರು.

ಚಿತ್ರ ೨

ದಕ್ಷಿಣವಿಯತನಾಮದ ನಾಯಕರೊಡನೆ ಮಾತಾಡಿದ ನಂತರ ಅಧ್ಯಕ್ಷ ಲಿಂಡನ್ ಬಿ. ಜಾನ್ಸನ್ ಅಮೆರಿಕೆಗೆ ಮರಳಿದರು. ಉಪಾಧ್ಯಕ್ಷ ಹೂಬರ್ಟ್ ಹಂಫ್ರಿಯವರನ್ನು (ಎಡ) ಏಶ್ಯನ್ ರಾಷ್ಟ್ರಗಳಿಗೆ ಕಳಿಸಿಕೊಡುವ ನಿರ್ಧಾರವು ಹವಾಯಿ ಸಮ್ಮೇಳನದ ವೇಳೆ ಆಗಿತ್ತು. ಅಧ್ಯಕ್ಷ— ಉಪಾಧ್ಯಕ್ಷರಿಬ್ಬರೂ ಲಾಸ್ ಎಂಜಲಿಸ್ ವಿಮಾನ ನಿಲ್ದಾಣದಲ್ಲಿ ಅಧ್ಯಕ್ಷ ವಿಮಾನದಲ್ಲಿ ಅಮೆರಿಕದ ಸಚಿವ ಸಂಪುಟವನ್ನೂ ಶ್ವೇತಭವನದ ಅಧಿಕಾರಿಗಳನ್ನೂ ಭೆಟ್ಟಿಯಾದರು: ಅಧ್ಯಕ್ಷರು ವಾಷಿಂಗ್'ಟನ್ನಿನ

೨

೩

ರ ಸಹೃದಯತೆಯ ವಿಶ್ವದರ್ಶನ

ಹಾಗಾಗಿ ತೊಡಕಿನಲ್ಲಿವರು ಬಿದ್ದಿದ್ದಾರೆ. ಆದರೂ ಒಂದು ತೃಪ್ತಿ. ಭಾರತದ ಕಾಶ್ಮೀರ ನೀತಿಯಲ್ಲಿ ಅರ್ಥವಿದೆಯೆಂಬುದನ್ನು ಅವರು ತಿಳಿದುಕೊಂಡಿದ್ದಾರೆ; ಅದನ್ನು ಬಹಿರಂಗ ಪಡಿಸುವಲ್ಲಿ ಮಾತ್ರ ಮೀನಮೇಷನೆಣಿಸುತಿದ್ದಾರೆ. ಒಂದು ದಿನ ಬಂದೀತು; ಸತ್ಯವನ್ನು ಸದಾಕಾಲ ಮುಚ್ಚಿಡುವುದು ಸಾಧ್ಯವಿಲ್ಲ. ಆಗ ಭಾರತದ ಕಾಶ್ಮೀರ ನೀತಿಯನ್ನು ಅಮೇರಿಕೆಯೂ ಬೆಂಬಲಿಸೀತು. ನಾವು ಭಾರತೀಯರು—ಆದುದರಿಂದಲೇ ಈ ಬಗೆಯ ಆಶಾವಾದ.

೦ ೦ ೦

ಇಂದಿರೆ ಲಂಡನ್ನಿಗೆ ಬರುವಷ್ಟರಲ್ಲಿ ಪ್ರಧಾನಿ ವಿಲ್ಸನ್ ಗೆಲವಿನಲ್ಲಿದ್ದರು. ಕಳೆದ ಸುಮಾರು ಎರಡು ವರ್ಷಗಳಲ್ಲಿ ಬರಿಯ ನಾಲ್ಕು—ಎರಡು ಬಹುಮತದ ಬಲದಿಂದ ಅಧಿಕಾರದ ಸೂತ್ರಧಾರಿ ಇದ್ದೂ ಸತ್ತಂತೆ, ಸೋತುಸುಣ್ಣವಾದ ವಿಲ್ಸನ್ನರಂತಹ ಪ್ರಧಾನಿ ಪ್ರಾಯಃ ಯಾರೂ ಇರಲಾರರು. ಈ ಪಕ್ಷಪಾತದಿಂದ ಮುಕ್ತರಾಗುವ ಸಲುವಾಗಿಯೇ ಸಾರ್ವತ್ರಿಕ ಚುನಾವಣೆಯನ್ನು ಎದುರಿಸುವ ಕೆಚ್ಚನ್ನು ಅವರು ತೋರಿದರು. ಇದರಲ್ಲಿ ಸಂಪೂರ್ಣ ಯಶಗಳಿಸಿದ ಆನಂದೋನ್ಮಾದದಲ್ಲಿಯೇ ವಿಲ್ಸನ್ ಇಂದಿರೆಯನ್ನು ಸ್ವಾಗತಿಸಿದರು. ಮತ್ತೆ ಐದು ವರ್ಷಗಳ ಕಾಲ ಪ್ರಧಾನಿಯಾಗುವ ಅವಕಾಶ ವಿಲ್ಸನ್ನರಿಗೆ ಒದಗಿದುದರಿಂದ ಈಗ ನಡೆದ ಮಾತುಕತೆ ಆದ ವಿಚಾರ ವಿನಿಮಯ ಆನಂದೋನ್ಮಾದದಲ್ಲಿ ಮರೆಯಾಗದೆ ಹೋದರೆ, ಭಾರತದ ಪುಣ್ಯವೆಂದೇ ಹೇಳಬೇಕು.

ಬ್ರಿಟನ್ ಕಾಮನ್‌ವೆಲ್ತಿನ ರಾಣಿ. ಪಾಕಿಸ್ತಾನ--ಭಾರತ ಇವೆರಡೂ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರಗಳು. ಇವೆರಡರ ನಡುವೆ ಕಛ್-ರಣದಲ್ಲಿ ಉಂಟಾದ ಘರ್ಷಣೆಯನ್ನು ಮಧ್ಯಸ್ತಿಕೆಯಿಂದ ಪರಿಹರಿಸಿದೆನೆಂಬ ಅಭಿಮಾನ ಅದಕ್ಕೆ. ಇಂತಹ ಪರಿಹಾರಕ್ಕೆ ಒಪ್ಪಿದ ಭಾರತದ ಪ್ರಧಾನಿ ಶಾಸ್ತ್ರಿಯವರು ಬಲು ಟೀಕೆಗೆ ಗುರಿಯಾದರು. ಅದೇನೇ ಇರಲಿ, ನಿಯೋಜಿತ ಪರಿಹಾರ ಸಮಿತಿಯು ಈ ಬಗ್ಗೆ ಶೀಘ್ರದಲ್ಲಿ ನಿರ್ಣಯ ಕೈಗೊಳ್ಳುವುದೆಂದೂ ನ್ಯಾಯದಾನ ಮಾಡುವುದೆಂದೂ ಆಶಿಸೋಣ.

ಭಾರತ-ಪಾಕಿಸ್ತಾನಗಳ ಬೃಹತ್ ಹೋರಾಟಕ್ಕೆ ಮೊದಲು ಬ್ರಿಟನ್ ಎರಡೂ ದೇಶಗಳಿಗೆ ಶಸ್ತ್ರಾಸ್ತ್ರಗಳ ಸರಬರಾಜಿಗೆ ಅಗತ್ಯವುಳ್ಳ ಲೈಸನ್ಸ್ ನೀಡುತಿತ್ತು. ಘರ್ಷಣೆಯ ವೇಳೆ ಅದು ಇದನ್ನು ನಿಲ್ಲಿಸಿತ್ತು. ಇದೇನೂ ದೊಡ್ಡದಲ್ಲ. ಅಮೆರಿಕೆಯೂ ಕೂಡಾ ಮಾಡಿತ್ತು. ಆದರೆ, ಆ ಸಮಯದಲ್ಲಿ ಎಲ್ಲಕ್ಕಿಂತ ದೊಡ್ಡ ತಪ್ಪನ್ನು ಬ್ರಿಟನ್ ಮಾಡಿತ್ತು. ಪ್ರಧಾನಿ ವಿಲ್ಸನ್ನರು ಭಾರತವು ಪಾಕಿಸ್ತಾನದ ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ನುಗ್ಗಿದೆ ಎಂದು ಉದ್ಗರಿಸಿದರು, ಇದು ದೊಡ್ಡ ಮಿಥ್ಯಾಪವಾದ. ವಸ್ತುಸ್ಥಿತಿಯನ್ನು ಅರಿತುಕೊಳ್ಳದೆ ಮಾಡಿದ ಆರೋಪ. ಪಾಕಿಸ್ತಾನವೇ ಅಂತಾರಾಷ್ಟ್ರೀಯ ಎಲ್ಲೆಯನ್ನು ಮೀರಿ ಭಾರತದ ಮೇಲೆ ಮೊದಲು ಆಕ್ರಮಣ ನಡೆಸಿದ್ದನ್ನು ಮರೆಮಾಜಿ, ಅನಂತರ ಆತ್ಮ ರಕ್ಷಣೆಗಾಗಿ ಭಾರತವು ಕೈಕೊಂಡ ಕ್ರಮವನ್ನು ಟೀಕಿಸಿ, ಅದರ ಮೇಲೆ ಆರೋಪ ಹೊರಿಸುವುದು ಸಣ್ಣ ಅಪರಾಧವಲ್ಲ. ಹಾಗಾಗಿಯೇ ಭಾರತೀಯರಲ್ಲಿ ಬ್ರಿಟನ್ನದ ಬಗ್ಗೆ ತೀವ್ರ ಅಸಮಾಧಾನ ಹುಟ್ಟಿತ್ತು. ಇದನ್ನರಿತ ವಿಲ್ಸನ್ ತಮ್ಮ ತಪ್ಪಿನ ಮೇಲೆ ಒಪ್ಪವಿಡುವ ಪ್ರಯತ್ನ ಮಾಡಿದರು; ತಾನು ನಿರಪರಾಧಿಯೆಂದು ಸಾಧಿಸಲೆಳಸಿದರು. ಏನು ಮಾಡಿದರೂ ತಪ್ಪು ತಪ್ಪೇ, ಹಾಲು ಹಾಲೇ; ನೀರು ನೀರೇ— ಹಂಸಗಳ ನಡುವೆ.

ಈ ಅಸಮಾಧಾನ— ಅಪರಿಚಯಗಳ ಹಿನ್ನೆಲೆಯಲ್ಲಿ, ಭಾರತೀಯ ಸಮಸ್ಯೆಗಳ ಮುನ್ನೆಲೆಯಲ್ಲಿ ಉಭಯ ಪ್ರಧಾನಿಗಳು ಮಾತನಾಡಿದರು. ಆನಂದೋಲ್ಲಸಿತ ವಿಲ್ಸನ್ ಇಂದಿರೆಯರ ನಡುವಣ ಈ ಮಾತುಕತೆಗಳು ಸಫಲವಾದಾವು; ಕೂಲಿಗಾರ ಪಕ್ಷದ ಸರಕಾರ ಈ ಬಾರಿ ಭಾರತದ ಸಮಸ್ಯೆಗಳನ್ನು ಸರಿಯಾಗಿ ಅರ್ಥವಿಸಿಕೊಂಡೀತು.

೦ ೦ ೦ ೦

ಸೋವಿಯತ್ ಯಾತ್ರೆಯಲ್ಲಿ ಮಹೋದ್ದೇಶವೇನೂ ಇಂದಿರೆ ಇಟ್ಟುಕೊಂಡಿರಲಾರರು. ಅದರ ನೇತೃತ್ವದಲ್ಲಿ ನಡೆದ ತಾಷ್ಕೆಂಟ್ ಘೋಷಣೆಯನ್ನು ಹಂತ ಹಂತವಾಗಿಯೇ ಮುರಿಯುವುದರಲ್ಲಿ ಅಯ್ಯೂಬ್-ಭುಟ್ಟೋ ಮುಂದುವರಿದಿದ್ದಾರೆ. ಘೋಷಣೆಯಲ್ಲಿ ಏನೇ ಇದ್ದರೂ 'ನಮ್ಮ ಭಿನ್ನಾಭಿಪ್ರಾಯಕ್ಕೆ, ಆಪತ್ತಿಗೆ ಕಾಶ್ಮೀರವೇ ಹೇತು. ಅದರ ಪರಿಹಾರ ನಮಗೆಬೇಕು' ಎಂದು ಗುಡುಗುತ್ತಾರೆ ಅವರು ನಡುವೆ ತಮ್ಮ ದಡಿಗಂಟಲೊಂದೇ ಸಾಲದ್ದಕ್ಕೆ ಚೀನೀಯ ನಾಯಕಾಗ್ರಣಿಗಳನ್ನೂ ಕಣಕ್ಕೆ ಎಳೆತಂದಿದ್ದಾರೆ. ಪಾಕಿಸ್ತಾನದ ನಡಾವಳಿಯನ್ನು ತಾಷ್ಕೆಂಟ್ ಘೋಷಣೆಯನ್ನು ಅದು ಮೀರುತ್ತಿರುವುದನ್ನೂ ಭಾರತವು ಸೋವಿಯತ್ತಿಗೆ ತಿಳಿಸುತ್ತಲೇ ಬರುತ್ತಿದೆ. ಪ್ರಚಲಿತ ಭೇಟಿಯು ಈ ದೆಸೆಯಲ್ಲೊಂದು ಮೈಲುಗಲ್ಲು. ಘೋಷಣೆಯನ್ನು ಪಾಕಿಸ್ತಾನ ಸಂಪೂರ್ಣ ಅವಹೇಳನೆ ಮಾಡಿದರೆ, ಮುಂದೆ?

ಮುಂದೆ...ಅಷ್ಟು ಮುಂದೆ ನಾವು ಹೋಗಬೇಕಾಗಿಲ್ಲ. ಏಕೆಂದರೆ, ಸಮಸ್ಯಾ ಪರಿಹಾರಕ್ಕೆ ಶಸ್ತ್ರ ಹೋರಾಟವೇ ಸಹಾಯವೆಂದು ಪಾಕ್ ಬಲವಾಗಿ ನಂಬಿಯೇ ಸಪ್ಟಂಬರದ ಹೋರಾಟ ನಡೆಸಿತ್ತು; ಶಾಂತಿಯನ್ನೇ ನಂಬಿದ ಭಾರತ ಆ ಆಕ್ರಮಣವನ್ನು ಎದುರಿಸಿ, ಹುಡಿಗುಟ್ಟಿತ್ತು. ಮುಂದೆ ಪಾಕಿಸ್ತಾನವು ಶಸ್ತ್ರಗಳನ್ನೇ ನಂಬಿ ಮುಂದುವರಿಯುವುದಾದರೆ, ಭಾರತವನ್ನೂ ರಣಕಣಕ್ಕೆ ಎಳೆಯುವುದಾದರೆ, ಯಾರಿಂದ ಏನು ಮಾಡಲು ಸಾಧ್ಯ? ಭಗವಂತ ಕರುಣಿಸಿದರೆ ಇಂತಹ ಪರಿಸ್ಥಿತಿ ಬರಲಾರದು; ಬರಬಾರದು; ಬಂದರೆ ಮಾತ್ರ ವೀರ ಭಾರತೀಯರು ಅಂಜಬಾರದು.

...ಧ್ಯಕ್ಷರು ಸೈಗನ್
...ನೊಲುಲುವಿನಲ್ಲಿದ್ದ ದ
...ನಾಯಕರನ್ನು ಕೂ
...ಟರು.

ಪ್ರ ೪

...ದ ಆರ್ಥಿಕ ಮತ್ತು
...ನ್ನು ಚರ್ಚಿಸಲು ಅಮ
...ಣ ವಿಯತ್ನಾಮದ
ಹೊನೊಲುಲುವಿನಲ್ಲಿ
...ಅವರು ದಕ್ಷಿಣ ವಿಯ
...ದ ಕಮ್ಯೂನಿಸ್ಟ್ ಆಕ್ರ
...ತಗೊಳಿಸುವ ಮತ್ತು
...ನ್ನು ಉನ್ನತೀಕರಿಸು
ಚರ್ಚಿಸಿದರು. ಚಿತ್ರ
...ಡುತ್ತಿರುವವರು ಅ
...ರ ಪಕ್ಷದಲ್ಲಿ ದಕ್ಷಿಣ
...ಕ್ಷ ಮತ್ತು ಪ್ರಧಾನ
...ದವರಲ್ಲಿ ಉಭಯ
...ರೋಗ್ಯ ಮತ್ತು ಕೃಷಿ
...ರು ಇದ್ದಾರೆ.

ಹೊನೊಲುಲು ಸಮ್ಮೇಳನದ ನಿರ್ಧಾರದಂತೆ ಭಾರತವನ್ನೂ ಸಂದರ್ಶಿಸಿದ ಉಪಾಧ್ಯಕ್ಷ ಹಂಫ್ರಿ ಅವರನ್ನು ಲುಧಿಯಾನದ ಹಿರಿಯ ರೈತನೊಬ್ಬ ಹೃತ್ಪೂರ್ವಕ ಸ್ವಾಗತಿಸಿದ ಹೃದಯಸ್ಪರ್ಶಿ ಸನ್ನಿವೇಶ.

ಮಹಿಮಾವಂತ ದಾಸಸಾಹಿತ್ಯ

(ಐದನೇ ಪುಟದಿಂದ)

ಭಿ ಶ್ರೀನಿವಾಸ ನಾಯಕ ಪುರಂದರದಾಸರಾದ ಕಥೆ ಎಲ್ಲರಿಗೂ ಪರಿಚಿತ. ಇವರ ರಚನೆಗಳ ಅಂತ್ಯದಲ್ಲಿ 'ಪುರಂದರ ವಿಠಲ' ಎಂಬ ಅಂಕಿತವಿರುತ್ತದೆ. ಪದ, ಸುಳಾದಿ ಉಗಾಭೋಗಗಳನ್ನು ಅಧಿಕ ಸಂಖ್ಯೆಯಲ್ಲಿ ರಚಿಸಿದ್ದಾರೆ. ತಮ್ಮ ಕೃತಿಗಳ ಸಂಖ್ಯೆ ೪,೭೫,೦೦೦ಎಂದು ದಾಸರೇ ಹೆಮ್ಮೆಯಿಂದ ತಮ್ಮ ಪದ್ಯದಲ್ಲಿ ಹೇಳಿಕೊಂಡಿದ್ದಾರೆ. ಪುರಂದರದಾಸರು ದಾಸಕೂಟದ ಹಿರಿಯ ಸದಸ್ಯರಾಗಿ, ಶ್ರೇಷ್ಠ ಮಟ್ಟದ ರಚನೆಕಾರರಾಗಿ ಮಾತ್ರವೇ ಉಳಿಯಲಿಲ್ಲ. ಕರ್ನಾಟಕ ಸಂಗೀತದ ಪ್ರವರ್ತಕರಾದರು. ಕರ್ನಾಟಕ ಸಂಗೀತದ 'ಅನಭಿಷಿಕ್ತ ಚಕ್ರವರ್ತಿ' ಎಂದು ಧಾರಾಳವಾಗಿ ಹೇಳಬಹುದು. ಗಾನಯೋಗಿ ತ್ಯಾಗರಾಜರೋ ಪುರಂದರ ದಾಸರನ್ನು ಭಕ್ತಿಯಿಂದ ನೇರಿಸುವುದನ್ನು ಇಲ್ಲಿ ಪ್ರಸ್ತಾಪಿಸ ಬಹುದಾಗಿದೆ. ದಾಸ ಸಾಹಿತ್ಯದಲ್ಲಿ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಪುರಂದರ ದಾಸರ ಸಾಧನ ಬಹುದೊಡ್ಡದು. ಇವರ ರಚನೆಗಳನ್ನು "ಪುರಂದರೋಪನಿಷತ್ತು' ಎಂದು ವ್ಯಾಸತೀರ್ಥರೇ ಕೊಂಡಾಡಿದ್ದಾರೆ. ಗುರುವಿನಿಂದಲೇ "ದಾಸರೆಂದರೆ ಪುರಂದರ ದಾಸರಯ್ಯ" ಎಂದು ಹೊಗಳಿಸಿ ಕೊಂಡವರು ಪುರಂದರ ದಾಸರು.

ಪುರಂದರ ದಾಸರ ಮಾರ್ಗವನ್ನೇ ಅನುಸರಿಸಿ ಅವರ ಮಕ್ಕಳು ಸಹಃ ವಿಶೇಷವಾಗಿ ಕೃತಿಗಳನ್ನು ರಚಿಸಿದ್ದಾರೆ. ಉಡುಪಿಯ ಸೋದೆ ಮಠದ ಪೀಠಾಧೀಶರಾಗಿದ್ದ ವಾದಿರಾಜ ಯತಿಗಳು ಪುರಂದರ ದಾಸರ ಸಮಕಾಲೀನರು. ಇವರು ಗುರು ವ್ಯಾಸತೀರ್ಥರ ಆಣತಿಯಂತೆ ದಾಸ ಮತ್ತು ವ್ಯಾಸ ಕೂಟಗಳೆರಡಕ್ಕೂ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ.

ಕಾಗಿನೆಲೆಯ ಆದಿಕೇಶವನ ಅಂತರಂಗದ ಭಕ್ತರಾದ ಕನಕದಾಸರು ಪುರಂದರ ದಾಸರಂತೆಯೇ ಜೀವನದಲ್ಲಿ ವೈರಾಗ್ಯ ತಾಳಿ ಗುರುಗಳಿಂದ ಅನುಗ್ರಹಿತರಾಗಿ ಅಮೂಲ್ಯ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ. ಅವರ ಭಕ್ತಿಭಾವ, ಜ್ಞಾನದ ಮಟ್ಟ ಬಹು ಮೇಲ್ಮಟ್ಟದ್ದು. ರಾಮಧ್ಯಾನ ಚರಿತ್ರೆ, ನಳ ಚರಿತ್ರೆ, ಮೋಹನತರಂಗಿಣಿ, ಹರಿಭಕ್ತಿ ಸಾರ ಮೇಲಾಗಿ ದೇವರನಾಮಗಳು ಮತ್ತು ಕನಕನ ಮುಂಡಿಗೆ ಎಂಬ ಒಗಟಿನ ಪದ್ಯಗಳು ನಾಡಿನ ಜನತೆಗೆ ಚಿರಪರಿಚಿತ. ಇವರೆಲ್ಲ ಬರಹಗಳಲ್ಲಿಯೂ "ಕಾಗಿನೆಲೆ ಆದಿಕೇಶವ" ಎಂಬ ಅಂಕಿತವಿದೆ.

ರಾಘವೇಂದ್ರ ಯತಿಗಳು ವೇಣುಗೋಪಾಲ ಎಂಬ ಅಂಕಿತದಿಂದ ಹಲವು ಶ್ರೇಷ್ಠ ಮಟ್ಟದ ಕೀರ್ತನೆಗಳನ್ನು ರಚಿಸಿದ್ದಾರೆ. ಅವರು ಸಂಸ್ಕೃತ ಭಾಷೆಯಲ್ಲಿಯೂ ಹಲವು ಭಕ್ತಿ ಪ್ರಧಾನ ಗ್ರಂಥಗಳನ್ನು ರಚಿಸಿದ್ದಾರೆ.

ದಾಸಕೂಟದಲ್ಲಿ ಹಿರಿಮೆಯ ಸ್ಥಾನವನ್ನು ಪಡೆದ ಮತ್ತೊಬ್ಬರು ಜಗನ್ನಾಥ ದಾಸರು. 'ಕನ್ನಡ ಭಾಷೆಯಲ್ಲಿ ಸಂಭಾಷಿಸಿದರೂ ಮೈಲಿಗೆಯಾಗುವುದು' ಎಂಬ ಭಾವನೆ ಇಟ್ಟುಕೊಂಡಿರಲಿ ಈ ದಾಸವರ್ಯರು ಭಗವಂತನ ಪರೀಕ್ಷೆಯೊಂದರಲ್ಲಿ ಸೋತು, ಶರಣಾಗತರಾಗಿ ಕೊನೆಗೆ ಕನ್ನಡದಲ್ಲಿ ಅಧಿಕ ಸಂಖ್ಯೆಯ ಅಮೂಲ್ಯ ಕೃತಿಗಳನ್ನು ರಚಿಸಿದ್ದಾರೆ. ಅವರ ಜ್ಞಾನ-ಪಾಂಡಿತ್ಯ, ಪ್ರತಿಭೆಗಳಿಗೆ ಹರಿಕಥಾಮೃತ ಸಾರ ಒಂದು ಸ್ಪಷ್ಟ ನಿದರ್ಶನ.

ದಾಸ ಪರಂಪರೆಯಲ್ಲಿ ಹಿರಿಯರಾಗಿ ಮೆರೆದ ವಿಜಯದಾಸರು, ಗೋಪಾಲದಾಸರು, ಮೋಹನದಾಸರು, ಪ್ರಾಣೇಶದಾಸರು, ಮಹಿಪತಿ ದಾಸರು ಪ್ರಸನ್ನ ವೆಂಕಟದಾಸರು ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿ ದಾಸ ಕೂಟದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಇವರ ಸೇವೆಯಿಂದ ದಾಸ ಸಾಹಿತ್ಯ ವಿನೂತನವಾಗಿ ಶೋಭಿಸಿದೆ. ಲೋಕೋತ್ತರ ಪ್ರತಿಗಳಾಗಿ ಉಳಿಯ ಬಲ್ಲಂತಹ ಕೃತಿಗಳನ್ನು ದಾಸ ಕೂಟದ ಸದಸ್ಯರು ರಚಿಸಿ ದಾಸ ವಾಙ್ಮಯವನ್ನು ಬಲಗೊಳಿಸಿದ್ದಾರೆ. ತಮ್ಮದೇ ಆದ ವಿಶಿಷ್ಟ ಸ್ಥಾನವಿದೆ ಕನ್ನಡ ನಾಡಿನಲ್ಲಿ: ದಾಸ ಸಾಹಿತ್ಯಕ್ಕೆ ದಾಸ ಕೂಟದವರಿಗೆ.

ಸಂಸ್ಕೃತ ಜ್ಞಾನವಿಲ್ಲದ ನಿರಕ್ಷರಕುಕ್ಷಿಯೂ ಧರ್ಮ ಸಿದ್ಧಾಂತದ ತತ್ವಗಳನ್ನು ತಿಳಿಯಲು, ಮನ ಮಾಡಿಕೊಳ್ಳಲು, ಆಚರಿಸಲು ಅನುಕೂಲವಾಯಿತು. ದಾಸಸಾಹಿತ್ಯದಲ್ಲಿರುವ ಒಂದೊಂದು ಕೃತಿಯೂ ಭಕ್ತಿ ಪರವಶತೆಯಿಂದ ಹೃದಯಾಂತರಾಳದಿಂದ ಮೂಡಿಬಂದುವಾಗಿವೆ. ಮಾನವನ ಮನೋವಿಕಾಸಕ್ಕೆ ಸಮಾಜದ ಪುನರುದ್ಧಾರಕ್ಕೆ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಹಾದಿತೋರುವ ಕೈದೀವಿಗೆ ದಾಸ ಸಾಹಿತ್ಯ.

ದಾಸ ಸಾಹಿತ್ಯ, ಶರಣ ಸಾಹಿತ್ಯ ಮತೀಯ ವಾದದಲ್ಲಿ ಬೆಳೆದುವು—ಇದೇ ಹಾದಿ ಹಿಡಿದವು ಎಂಬ ವಾದ ಅರ್ಥಹೀನ. ಹರಿದಾಸರಾಗಲಿ, ಶಿವಶರಣರಾಗಲಿ ತಮ್ಮ ಕೃತಿಗಳಲ್ಲಿ ಎಲ್ಲಿಯನೂ ಗೊತ್ತು ಹಿಡಿಸಿಕೊಂಡು ಸೇವೆಗೆ ಕೈ ಹಾಕಿಲ್ಲ. ಅವರ ಆದರ್ಶ ಅಲ್ಪದೃಷ್ಟಿಯದಲ್ಲ-ವಿಶಾಲವಾದುದು. ಅವರ ಗುರಿ ಜನತೆಯ ಉದ್ಧಾರ. ಸಮಾಜೋದ್ಧಾರ. ಲೋಕಕ್ಷೇಮ ಶಾಂತಿ ಹಿರಿಮೆಯ ಹಿರಿಯ ಸಾಹಿತ್ಯದಲ್ಲಿ ಅಲ್ಪತನಕ್ಕೆ ಅವಕಾಶ ಉಂಟೆ?

ಅವನ ಬಾಳನ್ನು ರೂಪಿಸಿಕೊಳ್ಳುವ ಶಿಲ್ಪಿ ಅವನೇ ಎಂಬುದು ಸ್ಪಷ್ಟ. ಅವನವನ ಬಾಳಿನ ಭವ್ಯತೆಗೆ, ವೈಭವಕ್ಕೆ ಅವನವನೇ ಕಾರಣ. ಸಂಸ್ಕೃತಿ. ಸಾಹಿತ್ಯ ಜ್ಞಾನ-ವಿಜ್ಞಾನ, ಭಕ್ತಿ ಎಲ್ಲವೂ ಸಹಕಾರಂಗಳು. ಈ ಅರಿವು ಜನ ಮನದಲ್ಲಿ ಮೂಡಿ ಬರಬೇಕಷ್ಟೆ!

ಉತ್ತಮ ಸಾಹಿತ್ಯ ಆದರ್ಶ ಜನ ಜೀವನದ—ಕೈಗನ್ನಡಿ. ಕನ್ನಡಿಯ ಕೆಲಸ ಇದ್ದ ರೂಪವನ್ನು ತೋರಿಸುವುದಷ್ಟೆ? ನಮ್ಮ ಮುಖ ವಿಲಕ್ಷಣವಾಗಿದ್ದರೆ, ನಾವು ಕುರೂಪಿಗಳಾಗಿದ್ದರೆ ಕನ್ನಡಿಯ ತಪ್ಪೆ? ದಾಸರು ಹೇಳಿದುದಷ್ಟೇ. ಶಿವಶರಣರು ಹೇಳಿದುದೂ ಅಷ್ಟೇ. ಕಾಲ, ರೀತಿ, ಶೈಲಿ, ಸಮಯ ಬೇರೆಯಾಗಿರಬಹುದಷ್ಟೆ. ಸತ್ಯ-ಧರ್ಮ-ಶಾಂತಿ ನೀತಿ ನಿಯಮಗಳು ಎಲ್ಲ ಕಾಲಕ್ಕೂ ಒಂದೇ.

ಶರಣ ಸಾಹಿತ್ಯದ—ದಾಸ ಸಾಹಿತ್ಯದ ಅಷ್ಟೇ ಏಕೆ ಸರ್ವ ಸಾಹಿತ್ಯದ ಅಂತರಂಗದ ಸತ್ಯ, ಸೌಂದರ್ಯ, ಶಕ್ತಿಗಳನ್ನು ಅರಿಯುವ ಮನಸ್ಸು ಬೇಕು. ಅಳೆಯುವ ಸಾಹಸ ಅನಗತ್ಯ. ಸಾಹಿತ್ಯಾಭ್ಯಾಸದಿಂದ ಆಗುವ ಲಾಭ ನಮಗೆ. ಸಾಹಿತ್ಯವನ್ನು ದೂರಮಾಡಿದರೆ ನಷ್ಟನಮಗೆ—ಸಾಹಿತ್ಯಕ್ಕಲ್ಲ.

ಕಾಗೆಯೊಡನೆ……

ಅಯ್ಯೋ! ಮುದ್ದಿನ ಕಾಗೆ ಏಕೆ ಕೂಗುವೆ
ಹಾಗೆ?
ತಾಳಲಾರೆಯ ನಿನ್ನ ಮನದ ಬೇಗೆ?
ಸುಯ್ಯುಡುವ ನಿನ್ನುಸಿರು ಸುಡದೆ ನನ್ನಯ
ಬಸಿರು?
'ತಾಳಿ ಬಾಳ್ಳೆ' ನಾನು ನಿನ್ನ ಹಾಗೆ!
॥ ೧ ॥

ಹಾಡಿದರು ಬಲ್ಲವರು: ಬನವು
ಸಿಂಗರಿಸಿರಲು,
ಕಾಗೆ ಕೋಗಿಲೆ ಕೃಷ್ಣ ಎರಡು ಒಂದೆ!
ಮೋಡಿಯೇನೈ ಪಿಕಕೆ? ನಯ್ಯಿಹುದೆ
ವಾಯಸಕೆ?
ಜಗವೆ ತಳ್ಳಿತು ಕಂಠ ಬರಡು ಎಂದೆ?
॥ ೨ ॥

ವಿಶ್ವ ವೈವಿಧ್ಯಮಯ, ಅದರೊಳಗೆ ನೀ
ಬದಲೆ?
ಬಣ್ಣದೊಳಲಂಪೇಕೆ? ಕಂಠದಿಂಪು?
ವಿಷ ಮೋಹಕತೆ ತರಿಸೆ ಹೊಸ ಆಸೆ
ಉದಿಸೀತೇ?
ಗುಣಗಣ್ಯನೆನುತಿಹೆರದೇನು ಪೆಂಪು?
॥ ೩ ॥

ಕತ್ತುರಿಯು ಕರಿದಂತೆ, ಕಣ್ಣುಪ್ಪು ಬೇಕಂತೆ
ಮೊಗಕೆ ತೇಜವನೀಯಲೊಪ್ಪುವಂತೆ!
ಕತ್ತಲೆಯು ಇಲ್ಲದಿರೆ ಬೆಳಕಿಗಂದವು
ಉಂಟೆ?
ಬಗಲೊಳೇ ಕೈಮತ್ತೆ ಕರಿ ಬಿಳಿಯ
ಚಿಂತೆ? ॥ ೪ ॥

ಕಲ್ಲು ಕರಿದಾಗಿಹುದು ಇಲ್ಲವೆನುವರೆದೇವ?
ಮೆಲ್ಲನೆ ಕರಜೋಡಿ ಬೇಡಿಕೊಳಲೆ?
ಬಿಳಿಯ ಹಿನ್ನೆಲೆಯಲ್ಲಿ ಹೊಳೆವ
ಕಪ್ಪಿನ ಕಣ್ಣ
ನಲ್ಲೆ ಮುಂದಡಿಯಿಡಲು
"ಒಲ್ಲೆ"ನುವರೆ? ॥ ೫ ॥

ಎಲ್ಲ ಸುಟ್ಟರು ಉಳಿಯಿತೊಂದೆ
ಕಪ್ಪಿನ ಬಣ್ಣ,
'ಎಲ್ಲವನು ಮಸಿ ನುಂಗಿತೆಂಬ'
ನುಡಿಯ
ಒಳಿತ ಕಾಣದೆ ಏಕೆ ಕೆಡುಕಿಗದ
ಹೋಲಿಸರು?
ಹಲರೆನಲಿ ಕಾಗೆ ನೀನದ
ಮರೆತು ಬಿಡೆಯ? ॥ ೬ ॥

"ಕಸದಲ್ಲಿ ರಸಕಾಂಬ"
ಹೊಸ ರಸಿಕ ನೀನೆಂಬೆ,
ಇನ್ನೆಂತು ರಾಗ ಲಯ
ತಿಳಿಯದಿಹುದು?
ಉಷೆಯೊಳೇಳುತ ಉದಯ
ರಾಗದೊಳಗೆಬ್ಬಿಸುವ
ನಿನ್ನ ಕೃತಿಗಳನೆಂತು ಮರೆಯ
ಬಹುದು? ॥ ೭ ॥

ಕೋಗಿಲೆಯ ಕವಿಗಾಗಿ, ಕಾಗೆ
ನೀನೆಮಗಾಗಿ,
'ಕೂಳು' ಬಿದ್ದಿದೆ ನೋಡು
ಸುತ್ತಲೆಲ್ಲ!
ಹಾಗೆ ಕೂಗುವೆಯೇಕೆ? ಹೊಸ ರಾಗ
ಬರ ಬೇಕೆ?
ಹಾಳು ಸಾಯಲಿ!
ಹೊತ್ತು ಕಂತಿಲ್ಲ! ॥ ೮ ॥

—ಶ್ರೀ ಯನ್. ಕೃಷ್ಣಮುರಾರಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ಪ್ರಕಾಶ ಮ್ಯಾಚ್ ಮತ್ತು ಪ್ಲೈವುಡ್ ಫೇಕ್ಟರಿ ಲಿಮಿಟೆಡ್,
ರಜಿಸ್ಟರ್ಡ್ ಆಫೀಸು : ಕುಂದಾಪುರ.

ಎಲ್ಲಾ ಪಾಲುದಾರರಿಗೆ ಈ ಮೂಲಕ ತಿಳಿಸೋಣಾಗುವುದೇನೆಂದರೆ—

ಶ್ರೀ॥ ತಿಯೊದೋರ್ ಸೋನ್ಸ್ ಮತ್ತು ಶ್ರೀ॥ ಎಸ್. ಪ್ರಭಾಕರ ತೋಳಾರ್ ಇವರನ್ನು ಕಂಪೆನಿಯ ಜತೆ ಮೆನೇಜಿಂಗ್ ಡೈರೆಕ್ಟರುಗಳನ್ನಾಗಿ 1-4-1966ರಿಂದ 5 ವರುಷಗಳ ಅವಧಿಯ ಮೇರೆಗೆ ನೇಮಕ ಮಾಡುವರೆ ಇಂಡಿಯನ್ ಕಂಪೆನೀಸ ಏಕ್ಟಿನ 269ನೇ ಸೆಕ್ಷನಿನಂತೆ ಕಂಪೆನಿಯು ಕೇಂದ್ರ ಸರಕಾರಕ್ಕೆ ಅರ್ಜಿ ಮಾಡುವುದು. 1956ನೇ ಕಂಪೆನಿಗಳ ಏಕ್ಟಿನ 349ರಿಂದ 351ನೇ ಸೆಕ್ಷನುಗಳಲ್ಲಿ ನಮೂದಿಸಿದ ಎಣಿಕೆಯಲ್ಲಿ ಕಂಪೆನಿಯ ನಿವ್ವಳ ಲಾಭದ ಪ್ರಥಮ 10 ಲಕ್ಷದಲ್ಲಿ 10% ಕಮಿಶನ್ ದರದಲ್ಲಿ (ಪ್ರತಿಯೊಬ್ಬ ಜತೆ ಮೆನೇಜಿಂಗ್ ಡೈರೆಕ್ಟರರಿಗೆ ಅರ್ಧಾಂಶದಂತೆ) ಮತ್ತು ಆ 10 ಲಕ್ಷದ ಮೇಲೆ 4% ಕಮಿಶನಿನಂತೆ ವರ್ಷಕ್ಕೆ ರೂ. 6400ಕ್ಕೆ ಕಡಿಮೆಯಾಗದ ವೇತನ ಕೊಡಲಾಗುವುದು. ಇದನ್ನು ಪ್ರತಿಯೊಬ್ಬ ಮೆನೇಜಿಂಗ್ ಡೈರೆಕ್ಟರರಿಗೆ, ಪ್ರತಿ ತಿಂಗಳಿಗೆ ರೂ. 225ರಂತೆ ಕೊಡಲಾಗುವುದಲ್ಲದೆ, ತಾ. 31-3-66ರಲ್ಲಿ ಜರಗಿದ ಡೈರೆಕ್ಟರರ ಸಭೆಯಲ್ಲಿ ನೇಮಕ ಮಾಡಿದ ಶರ್ತದಂತೆ ಸಿಟ್ಟಿಂಗ್ ಫೀಸು ಸಹಾ ಪಡೆಯಲು ಅವರು ಅರ್ಹರಾಗುತ್ತಾರೆ.

ಬೋರ್ಡಿನ ಅನುಮತಿ ಮೇರೆಗೆ,

ಕುಂದಾಪುರ
31-3-66

Sd/ Th. Soans.
Sd/ S. P. Tholar.
Directors.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ
ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಸ್ತ್ರೀ ಬುದ್ಧಿ: ಪ್ರಳಯಾಂತಕಾ:

(ನಾಲ್ಕನೇ ಪುಟದಿಂದ)

ಬಾಬಿನ ಹಿರಿಯ ಗೃಹಸ್ಥರ ಗೃಹಿಣಿ ರೂ ಕೋಪ ಮಾಡೋದಿಲ್ಲ; ಹಾಗಿರು ಗ ನನ್ನಂತಹ ಬಡ..."

"ಶ್ಶ್... ಹಾಗೆಲ್ಲಾ ಅನ್ನಬಾರದು...'

"ಏಕೆ? ನಾನು..."

'ನೋಡಿ, ಊರವರು ನಮ್ಮನ್ನು ಬಡ ಅನ್ನಬಹುದು; ಆದರೆ, ನಾವು ಸಿರಿ ಂತರೇ. ನಮ್ಮಲ್ಲಿರುವುದಕ್ಕಿಂತ ಹೆಚ್ಚು ಕೆಲವರಲ್ಲಿ ಇರಬಹುದು, ಆದ್ರೆ...'

'ಹ್ಞಾಂ ..'

'ಮತ್ತೆ ನೋಡಿ, ಗುಡ್ಡಕ್ಕ ಗುಡ್ಡ ಅ ನೇ ಅಲ್ಲವೆ? ಇನ್ನೆಲ್ಲರ ಸಿರಿವಂತಿಕೆ ಎ ವರೆಗೆ ಸಾಕು?'

'ನೀನನ್ನೋ ಹಾಗೆ ದೊಡ್ಡವ ಅಂದ್ರೆ ಬ್ಬನೇ ಅಂತ ...'

'ಮತ್ತೆಂಥದಂತೆ? ಅಂದ್ರಿದ ನೆಪ್ಪಿಡಿ-ನೀ ಅಂದ್ರಿ, ಇವರವರ ರೊಟ್ಟಿ ದ್ಹೊರೆ ತ್ತೇಂತ. 'ಮತ್ತೇನಂತೆ ಚಿಂತೆ?'

'ರೊಟ್ಟಿದ್ಹೊರೆತರಿ ಇಂದಿಗಾಯ್ತು ನಾ ಚಿಂತೆ ಬೇಡವೆ?'

'ಉಳಿತಾಯ ಯೋಜನೆಯ ಪ್ರಚಾರ ರ್ಯ ಮಾಡೋಕೆ ಆರಂಭಿಸಿದರೇನು?'

'ಯಾಕೆ?"

'ಇರುವೆಗಳಿಗೂ ನಾಳೆಯ ಚಿಂತೆ ಇವೆ ಮಗೆ ಬೇಡವೆ, ಅದಕ್ಕಾಗಿ ಉಳಿಸಿ ಅ ತ್ತಾರೆ. ಅವರು. ಹಾಗೆಯೇ'

'ದೊರೆಯುತಿದ್ರೆ ಆದೂ ಆಗಬಹುದಿ . ಆದರೆ, ಸಂಪಾದನೆ ಮಾಡೋದು ರ್ಚಿಗೇ ಸಾಲದೆ ಹೋದಾಗ ನೀವೇ ಉಳಿಸುತ್ತೀರೀಂತ ಯಾರಾದ್ರೂ ಕೇ ದ್ರೆ ಏನುತ್ತರ ಕೊಡೋದು?'

'ಅದೆಲ್ಲಾ ಬ್ಯಾಡ್ರಿ ...'

"ಬ್ಯಾಟ್ರೆ ನೆಲ್ಲೇ ಸಿಗೋದಿಲ್ಲಾ...."

'ಹ್ಞಾ, ಒಂದಕ್ಕೆ ಒಂದೂಕಾಲು ರೂ ಯಿ ಕೊಟ್ರೆ, ಒಬ್ಬನಿಗೆ ಎರಡು ಡ್ತಾರಂತೆ...'

"ಅಯ್ಯೋ ಮಾರಾಯ್ತಿ, ತರಬಹುದಿ ಲ್ಲಾ?"

'ಹ್ಞಾಂ . ಆದ್ರೆ ನೋಡಿ ಎರಡೂ ರೂಪಾಯಿ ತೆತ್ತು ಬ್ಯಾಟ್ರಿಯಾಕೆ ಬೇಕೂಂತ ..'

'ಒಂದು ಕಾಲ್ದಲ್ಲಿ ಲಗ್ಸುರಿ. ಆದ್ರೆ ಇಂ ಜೀವನದಲ್ಲಿ ಅದು "ಎಸೆಂಶಿಯಲ್ ಬಿಟ್ಟಿದೆಯಲ್ಲಾ...."

'ಅದೆಲ್ಲಾ ಏನೂಂತ? ಒಬ್ಬೊಬ್ಬರಿಗೆ ದೊಂದು ಲಗ್ಸುರಿ ಆಗುತ್ತೆ, ಎಸೆಂಶಿ ಲೂ ಆಗುತ್ತೆ. ಯಾರ್‍ಯಾರಿಗೆ ಯಾವ್ಯಾ ದ್ದು ಬೇಕ್ಕೋ ಬೇಕೂಂತ ಭಗವಂತ ಳಿದ್ದಾನೆ ನೋಡಿ"

'ಹ್ಞಾ ಸರಿಯೇ. ಏಸುಕ್ರಿಸ್ತನೂ ಹೇ ದ್ದನೆ. ಸಾವಿರ ರೂಪಾಯಿಯ ಅಪ್ರಸ ನನ್ನಿನ ದಾನಕ್ಕಿಂತ ಪೂರ್ಣಮನ ನ್ನ ಪೈಸೆ ದಾನವೇ ದೊಡ್ಡದೆಂತ...'

'... ... ಆದ್ರೆ. ಈಗ ಮಾತು ಎಲ್ಲಿಂದ ಎಲ್ಲಿಗೆ ಹೋ ಯ್ತೂಂತ...'

'ನಂಗೊತ್ತಿಲ್ಲಪ್ಪ .'

'ಏನೋ ಬಾಣ ಎತ್ತೋಕೆ ತಯಾರಿ ಮಾಡ್ತಾ ಇದ್ರಿ ...'

'ಹ್ಞಾಂ .. ನಿನ್ನ ಮಾತಿನ ಅರ್ಥ ವಿವ ರಣೆಗೇಂತ ಅಲ್ವೆ?"

"ಯಾರಿಗ್ಗೊತ್ತು?'

'ನೋಡು. ಪುರಂದರರನ್ನು ಒಮ್ಮೆ ಕೆಲ ವು ತುರುಕರು ಅಡ್ಡಕಟ್ಟಿ ಕೊಲ್ಲೋಕೆ ಹೊರಟ್ರಂತೆ. ಆಗ ಅವ್ರು ಹಾಡಿದ್ರಂತೆ . ತುರುಕರು ಇದ್ದರೆ ಉಣಬಹುದಣ್ಣಾ, ತುರುಕರು ಇದ್ದರೆ ತಿನಬಹುದಣ್ಣಾ ...'

"ಹ್ಞಾಂ .."

'ಹಾಗೆಲ್ಲಾ ಬಾಯ್ಬಿಟ್ಟೇಟ, ತುರು ಕರು ಸಂತೋಷದಿಂದ ಅವರಿಗೆ ನಮಸ್ಕ ರಿಸಿ ಕಳಿಸಿಕೊಟ್ರಂತೆ ..'

'ಎಷ್ಟೆಂದ್ರೂ ಅವರು ದಾಸರಲ್ವೆ?"

"ಹಾಗೆಯೇ ನೋಡು ನಿನ್ನ ಕಥೆ ..'

"ನನ್ನದೆಂತಹ ಕಥೆ?'

'ಸ್ತ್ರೀ ಬುದ್ಧಿ: ಪ್ರಳಯಾಂತಕಾ:— ಅಂದ್ರೆ ಸ್ತ್ರೀ ಬುದ್ಧಿಯು ಪ್ರಳಯವನ್ನು ಮಾಡುತ್ತದೆ ಅಂತ ."

"ಹ್ಞಾಂ .. ಹೇಗೇಂತೆ?"

"ಪ್ರಳಯ + ಅಂತಕಾ... ಅಂತ ಮಾ ಡುವವಳು ಅಂತಕಾ. ಪ್ರಳಯವನ್ನು ಅಂ ತ ಮಾಡುವವಳೇ ಪ್ರಳಯಾಂತಕಾ".

ಸರೀರಿ, ನಮ್ಮ ಇಂದಿರೆಯನ್ನು ನೋ ಡಿಯೇ ಹೀಗೆ ಹೇಳಿರಬಹುದು ."

'ಹೇಳದೆ ಇದ್ರೂ ಹೇಳೋಕೆ ತೊಡಗ ಬಹುದು ."

"ಏನು, ಭಾರಿ ನೋಡ್ತಾ ಇದ್ದೀರಿ?"

'ದೇವ್ರು ಕಣ್ಣು ಕೊಟ್ಟಿದ್ದಾನೆ, ನೋ ಡ್ತೇನೆ .."

'ಹ್ಞಾಂ .., ಹಾಗೆಲ್ಲಾ ನೋಡ್ಬೇ ಡೀಂದ್ರೆ ...'

"ಇಲ್ಲ ಇಲ್ಲ ಹೀಗೆ ನೋಡ್ತೇನೆ. ಆ ಗಿದೆ?

"ಅಯ್ಯೋ ..'

'ಶ್ಶ್ .."

—ಗೋರಾ.

ಎಲ್ಲೆಲ್ಲಿ ಏನೇನು?

ರಾಮಕೃಷ್ಣ ಥಿಯೇಟರಿನ ರಜತೋತ್ಸವ

ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನ ರಜತೋತ್ಸವ ಸಮಾರಂಭವು ಪದ್ಮಶ್ರೀ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಕಲ್ಪನಾ ಥಿಯೇಟರಿನಲ್ಲಿ ತಾ. 5ರಂದು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಸುಪ್ರಸಿದ್ಧ ನಟ ಪದ್ಮಶ್ರೀ ಶಿವಾಜಿ ಗಣೇಶನ್ ರವರು ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರಾರಂಭದಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀ ಪಾಂಗಾಳ ವೆಂಕಟೇಶನಾಯಕರು ಪ್ರಾಸ್ತಾವಿಕ ಭಾಷಣಮಾಡಿ ಮಾನ್ಯ ಅತಿಥಿಗಳಿಗೆ ಹಾರವನ್ನರ್ಪಿಸಿದರು. ಹಲವಾರು ಸಂಘ ಸಂಸ್ಥೆಗಳಿಂದಲೂ ಅತಿಥಿಗಳಿಗೆ ಹಾರಾರ್ಪಣೆಯಾಯಿತು ಬಳಿಕ ಶ್ರೀ ಟಿ. ರಮೇಶ ಪೈಗಳು ಸ್ವಾಗತಿಸುತ್ತಾ, ಶ್ರೀ ಶಿವಾಜಿ ಗಣೇಶನ್ ರವರ ಪ್ರತಿಭೆ, ಕಲಾರಂಗದಲ್ಲಿ ಅವರು ಸಲ್ಲಿಸಿದ ಸೇವೆಯನ್ನು ಪ್ರಶಂಶಿಸಿದರು ಥಿಯೇಟರಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ಜಿ ಅರ್ಸೆಯವರು ಸಂಸ್ಥೆಯ ವರದಿಯೊಪ್ಪಿಸಿದರು ತರುವಾಯ ಶುಭಕೋರಿಬಂದಸಂದೇಶಗಳನೋದಿದರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡಾ| ಸಿ. ಎಚ್. ಶಿವರಾಮ ಶಾಸ್ತ್ರಿ ವರು ಚಲಚ್ಚಿತ್ರೋದ್ಯಮದ ಇತಿಹಾಸ, ಮತ್ತು 25 ವರುಷಗಳಿಂದ ಈಸಂಸ್ಥೆ ಸಲ್ಲಿಸಿದ ಸೇವೆಯನ್ನು ವಿವರಿಸಿದರು ಶ್ರೀ ಪಿ. ಶ್ರೀಪತಿ ಆಚಾರ್ಯರು ಭಾಷಣ ಮಾಡುತ್ತಾ ರಾಮಕೃಷ್ಣ ಥಿಯೇಟರಿನ ಆರಂಭದ ದಿನಗಳನ್ನು ಸ್ಮರಣೆಗೆ ತಂದು ಸ್ಥಾಪಕರ ಪರಿಶ್ರಮವನ್ನು ವಿವರಿಸಿದರು ಹಾಗೂ ಶಿವಾಜಿ ಗಣೇಶನ್‌ರವರ ಕಲಾಸೇವೆ ಸತತವಾಗಿ ಜರಗಲೆಂದು ಹಾರೈಸಿದರು.

ಅಧ್ಯಕ್ಷರು ಮಾತನಾಡುತ್ತಾ ಶ್ರೀ ಶಿವಾಜಿ ಗಣೇಶನ್‌ರವರ ಹುಟ್ಟು ಪ್ರತಿಭೆಯನ್ನು ಶ್ಲಾಘಿಸಿ, ಸಂಸ್ಥೆಗೆ ಶುಭಕೋರಿದರು ಅತಿಥಿಗಳು ಈ ಸಮಾರಂಭದಲ್ಲಿ ತನಗೆ ಭಾಗವಹಿಸುವಂತಾದುದಕ್ಕೆ ಸಂತೋಷ ವ್ಯಕ್ತಪಡಿಸಿ, ಸಂಸ್ಥೆಯ 25 ವರುಷಗಳ ಸೇವೆಯನ್ನು ಶ್ಲಾಘಿಸಿದರು, ಮುಂದುವರಿಯುತ್ತಾ ಅವರು ತಾನು ತಮಿಳು ಚಿತ್ರಗಳಲ್ಲಿ ಮಾತ್ರ ಕಾಣಿಸಿಕೊಳ್ಳುವುದಾದರೂ, ತನಗೆ ತಮಿಳು ಮಾತ್ರ ಗೊತ್ತಿರುವುದಾದರೂ, ತಾನು "ಶುದ್ಧ ಭಾರತೀಯ" ನೆಂದು ಹೇಳಿದರು

ಕೊನೆಯಲ್ಲಿ ಥಿಯೇಟರಿನ ಜತೆ ಮೆನೇಜಿಂಗ್ ಡೈರೆಕ್ಟರ್ ಶ್ರೀ ಪಿ. ಶೀನ ಶೆಟ್ಟಿ ರು ವಂದನಾರ್ಪಣೆ ಗೈದರು. ರಾತ್ರಿ ಮೆಡಿಕಲ್ ರಿಲೀಫ್ ಸೊಸೈಟಿಯ ಸಹಾಯಾರ್ಥವಾಗಿ ಶ್ರೀ ಶಿವಾಜಿ ಗಣೇಶನ್‌ರವರಿಂದ ಪ್ರಧಾನ ಭೂಮಿಕೆಯಲ್ಲಿರುವ "ಮೋಟಾರ್ ಸುಂದರಂ ಪಿಳ್ಳೆ" ಎನ್ನುವ ತಮಿಳುಚಿತ್ರ ಪ್ರದರ್ಶನವಾಯಿತು. ಶ್ರೀ ಶಿವಾಜಿ ಗಣೇಶನ್‌ರವರು ಸಂಗ್ರಹವಾದ ರೂ 3000ವನ್ನು ಡಾ| ಮಾಧವ ಪೈಗಳವರಿಗೆ ನೀಡಿದರು

ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳ ಸತ್ಕಾರ ಸಭೆ

ಈ ಜಿಲ್ಲೆ ಮಾತ್ರವಲ್ಲ ಕನ್ನಡದಲ್ಲಿ ಪುರಾಣಪ್ರವಚನ ಹಾಗೂ ಯಕ್ಷಗಾನ ಕೂಟದ ಅರ್ಥ ವಿವರಣಗಳಲ್ಲಿ ಅದ್ವಿತೀಯರಾದ ಶ್ರೀ ಕೆ ಶಂಕರನಾರಾಯಣ ಶಾಸ್ತ್ರೀ ಪೊಳಲಿ, ಅವರಿಗೆ ಸನ್ಮಾನ ಪತ್ರ ಹಾಗೂ ನಿಧಿಸಮರ್ಪಣಗಳು (ರೂ. 501—00) ತಾ. 4ರ ರಾತ್ರಿ ಸುರತ್ಕಲ್ಲು ಕೇಂದ್ರದ ಕಲಾಭಿಮಾನಿಗಳ ಸಹಕಾರದಿಂದ ನಡೆಯಿತು ಶ್ರೀ ಉಡುಪಿ ಸೀತಾರಾಮಾಚಾರ್ಯರು ಸಭಾಧ್ಯಕ್ಷರಾಗಿದ್ದರು. ಕೃಷ್ಣಾಪುರ ಕಾಯಿಯಲ್ಲಿ ಕೂಡ್ಲು ಮೇಳದ ಬಯಲಾಟದ ರಂಗಮಂಟಪದಲ್ಲಿ ಈ ಸತ್ಕಾರ ನಡೆಯಿತು. ಪ್ರಾರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಶ್ರೀ ಎಚ್. ಗಿರಿಧರ್ ಸಂದೇಶಗಳನ್ನು ವಾಚಿಸಿದರು. ಶ್ರೀ ಕೆ. ವೆಂಕಟರಾಜಾಚಾರ್ಯರು ಸನ್ಮಾನ ಪತ್ರವೋದಿದ್ದರು ಅಧ್ಯಕ್ಷರ ಹಸ್ತದಿಂದ ಶ್ರೀ ಶಾಸ್ತ್ರಿಗಳಿಗೆ ಅದು ಒಪ್ಪಿಸಲಾಯಿತು. ಊರ ಪರವೂರ ಮಾಹನೀಯರ ಉದಾರಾಶ್ರಯ ಹಾಗೂ ಕೂಡ್ಲು ಮೇಳದವರ ಸಹಕಾರದಿಂದ ಈ ಸತ್ಕಾರ ಸಭೆ ಯಶಸ್ವಿಯಾಗಿ ಜರಗಿದೆಂದು ಸನ್ಮಾನ ಸಮಿತಿಯವರು ತಿಳಿಸುತ್ತಾರೆ.

ಶಾಲಾ ರಜತ ಮಹೋತ್ಸವದ ಆಚರಣೆ

ಬಾರಕೂರು ಮೇರಿ ನೋಲ್ ಹಾಯರ್ ಎಲಿಮೆಂಟರಿ ಶಾಲೆಯ ರಜತಮಹೋತ್ಸವ ಹಾಗೂ ವರ್ಧಂತ್ಯುತ್ಸವವು ಏ. 30ರಲ್ಲಿ ಮಂಗಳೂರು ದಿಯೊಸಜಿನ ಬಿಶಪ್‌ರಾದ ಡಾ| ಬಿ ಎಸ್ ಡಿ'ಸೋಜರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಶಾಲಾ ಮೆನೇಜರ್ ರೆ. ಫಾ ಎ. ರೋಜಾರಿಯೊರವರು ಸ್ವಾಗತ ಭಾಷಣಮಾಡಿದ ತರುವಾಯ 25 ವರ್ಷಗಳ ವರದಿ ಓದಲಾಯಿತು. ಹಳೆ ವಿದ್ಯಾರ್ಥಿ ಶ್ರೀ ಆರ್ಥರ್ ಡಿ'ಸೋಜರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರಿಂದ ಬಹುಮಾನ ವಿತರಣೆಯಾದ ಬಳಿಕ ಸಂದೇಶಗಳು ಓದಲ್ಪಟ್ಟವು.

ನಿಯೋಜಿತ ಭಾಷಣಕಾರರಾದ ಡಾ| ಎ. ಶೇಷಗಿರಿರಾಯರು ಶಾಲಾ ಪ್ರಗತಿಯ ವಿಚಾರದಲ್ಲಿ ಮೆಚ್ಚಿಗೆ ವ್ಯಕ್ತಪಡಿಸಿ ಈ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ವರ್ಗಗಳನ್ನು ತೆರೆಯಬೇಕೆಂದರು. ಶ್ರೀ ಶಿವರಾಮ ವಿಲ್ಲಿಯಂ ಮಂಟೋರರವರು ಭಾಷಣ ಮಾಡುತ್ತ ಸಮಾಜವಾದ ಮಾದರಿಯ ಸರಕಾರದ ಕೈ ಕೆಳಗೆ ಬಡವಿದ್ಯಾರ್ಥಿಗಳಿಗೆ ಎಂತಹ ಸವಲತ್ತುಗಳು ಸಿಗುತ್ತವೆಂದು ವಿವರಿಸಿ ಬಡ ವಿದ್ಯಾರ್ಥಿಗಳು ದಿವಂಗತ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಆದರ್ಶವನ್ನು ತಮ್ಮ ಜೀವನದಲ್ಲಿ ಜ್ಯಾರಿಗೆ ತರುವುದು ಬಲು ಅಗತ್ಯವೆಂದರು

ಪೂಜ್ಯ ಬಿಷಪ್ ಸ್ವಾಮಿಯವರು ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಪರೀಕ್ಷೆಗಳನ್ನು ಪಾಸು ಮಾಡಿದ ಮಾತ್ರಕ್ಕೆ ಒಬ್ಬ ವ್ಯಕ್ತಿ ವಿದ್ಯಾವಂತನೆಂದು ಹೇಳಿಸಿಕೊಳ್ಳಬೇಕಾದರೆ ಆ ವ್ಯಕ್ತಿಯಲ್ಲಿ ಶಿಸ್ತು, ಸಂಯಮ, ಪರೋಪಕಾರ ಸಮಾಜ ಸೇವೆ, ವಿನಯ ಶೀಲತೆ ಮೊದಲಾದ ಗುಣಗಳು ರಕ್ತಗತವಾಗಿ ಪ್ರತಿಬಿಂಬಿಸಬೇಕಾದುದರಿಂದ ವಿದ್ಯಾರ್ಥಿಗಳು ಅಂತಹ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ನುಡಿದರು. ಮನರಂಜನಾ ಕಾರ್ಯಕ್ರಮಗಳಾದ ಬಳಿಕ ಧನ್ಯವಾದ ಸಮರ್ಪಣೆಯಾಗಿ ಕಾರ್ಯವು ಕೊನೆಗೊಂಡಿತು.

ಕಾರ್ಯಕ್ರಮದ ಅಂಗವಾಗಿ ಪೂಜ್ಯ ರೆ. ಫಾ ಬರ್ನಾಡ್ ಡಿ'ಸೋಜರಿಂದ ರಾಷ್ಟ್ರ ಧ್ವಜವು ಅರಳಿಸಲ್ಪಟ್ಟಿತು. ಛದ್ಮವೇಷ ಪ್ರದರ್ಶನವಾದೊಡನೆ ಶ್ರೀ ಎಂಟನಿ ರೋಡ್ರಿಗಸ್ ಬಾರಕೂರು ಇವರಿಂದ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಹಂಚಲ್ಪಟ್ಟಿತ್ತು.

ಕರ್ನಾಟಕ ಯಕ್ಷಗಾನ ನಾಟಕ ಸಭಾ
ಮಂಗಳೂರು
ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿರುವ ಕರ್ನಾಟಕ ಥಿಯೇಟರಿನಲ್ಲಿ
8—4—66ರಿಂದ ಪ್ರತೀ ರಾತ್ರಿ 9-30ಕ್ಕೆ
ತಮ್ಮ ಪುರಾಣ ಪ್ರಸಿದ್ಧ ಯಕ್ಷಗಾನ ನಾಟಕ
ದಾನಶೂರ ಕರ್ಣ
ರನ್ನನ ಗದಾ ಯುದ್ಧ
ಎಂಬ ಕಥಾಭಾಗವನ್ನು ಅಭಿನಯಿಸುವರು
ವಿಟ್ಲ ಬಾಬು ರಾಯರ ವರ್ಣರಂಜಿತ ನವ್ಯ ಹಾಗೂ ಭವ್ಯ
ಸೀನು ಸೀನೇರಿಗಳು
ನೀವೆಂದೂ ನೋಡದ ಕಣ್ಮನಾನಂದಕರ ಪ್ರದರ್ಶನ.

ಶ್ರೀ ರಾಮನವಮೀ ಸಮಾರಂಭ.

ಸುರತ್ಕಲ್ಲು ಕೇಂದ್ರದ ಹೊಸಬೆಟ್ಟು ಗ್ರಾಮ ಸಂಘದಲ್ಲಿ ತಾ. 30ರ ರಾತ್ರಿ ಗೆಳೆಯರ ಸಹಕಾರದಿಂದ ಶ್ರೀ ಕೆ. ವೆಂಕಟರಾಯಾಚಾರ್ಯರ ಮುಂದಾಳ್ತನದಲ್ಲಿ "ವಿಭೀಷಣ ಶರಣಾಗತಿ" ಎಂಬ ಯಕ್ಷಗಾನ ಕೂಟವು ಜರಗಿತು. "ಸಕ್ಳ ದೇವ ಪ್ರಸನ್ನಾಯ" ಎಂಬ ಶ್ರೀರಾಮನ ಮಾತಿನಲ್ಲಿ ಆತನು ಸರ್ವ ಭೂತಗಳಿಗಿಂತ ಮೇಲೂ ಹಾಗೂ ದಿವ್ಯತೆಯುಳ್ಳವನೆಂದು ತಿಳಿಯುತ್ತದೆಂದು ಪರಿಚಯದಲ್ಲಿ ಶ್ರೀ ಕೆ. ವೆಂಕಟಾಚಾರ್ಯರು ಹೇಳಿದರು. ಶ್ರೀ ಪಿ. ಪಿ. ಉಪಾಧ್ಯಾಯ (ರಾವಣ), ಬಿ. ರಾಮನಾಥ ರಾವ್ (ವಿಭೀಷಣ), ಎಂ. ಅಚ್ಯುತ ರಾವ್ (ಇಂದ್ರಜಿತು), ಎಂ. ವಿಠಲ್ ಶೆಟ್ಟಿ (ಹನುಮಂತ), ಎಂ. ಉಮೇಶ ರಾವ್ (ಸುಗ್ರೀವ), ಕೆ. ವಿ. ಆಚಾರ್ಯ. (ರಾಮ) ಪಾತ್ರಧಾರಿಗಳಾಗಿ ಸಹಕರಿಸಿದ್ದರು. ಶ್ರೀ ಪಿ. ರತ್ನಾಕರ ರಾವ್ ಮತ್ತು ಎಚ್. ವೆಂಕಟ್ರಾವ್ ಹಿಮ್ಮೇಳದವರಾಗಿದ್ದರು.

ಶ್ರೀ ಭದ್ರಗಿರಿ ಕೇಶವದಾಸರಿಗೆ ಪ್ರಶಸ್ತಿ ಸನ್ಮಾನ

ನವದೆಹಲಿ, ಎಪ್ರಿಲ್ 5, ಇಲ್ಲಿನ ಸಾನಕಪುರ ಬಡಾವಣೆಯಲ್ಲಿ ಶ್ರೀ ಶಿವಾನಂದ ದಿವ್ಯ ನಾಮ ಸಂಕೀರ್ತನ ಮಂಡಳಿ ಮತ್ತು ವಲ್ಲಿಮಲೈ ಶ್ರೀ ಸಚ್ಚಿದಾನಂದ ತಿರುಪ್ಪುಗಳ್ ಸಭೆಯು ಶ್ರೀ ಭದ್ರಗಿರಿ ಕೇಶವದಾಸ್‌ರವರಿಂದ ಇಂಗ್ಲಿಷ್ ಭಾಷೆಯಲ್ಲಿ ಏರ್ಪಡಿಸಿದ್ದ 'ಶ್ರೀಮದ್ರಾಮಾಯಣ' ಕೀರ್ತನ ಮಾಲೆಯ ಮಂಗಳ ಸಮಾರಂಭವು ಮಾರ್ಚ್ ತಾ. 27ರಂದು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಪ್ರಾರಂಭದಲ್ಲಿ ಶ್ರೀ ಕೇಶವದಾಸರಿಂದ "ಶ್ರೀ ರಾಮ ಪಟ್ಟಾಭಿಷೇಕ" ಕೀರ್ತನೆಯಾದ ಬಳಿಕ ಅನೇಕ ಸಂಘಸಂಸ್ಥೆಗಳೂ ಹಿರಿಯರೂ ದಾಸರಿಗೆ ಪುಷ್ಪಹಾರಗಳನ್ನರ್ಪಿಸಿದರು. ಶ್ರೀ ಕುಪ್ಪುಸ್ವಾಮಿಯವರು ಭಾಷಣಮಾಡುತ್ತಾ ಶ್ರೀ ಕೇಶವದಾಸರ ಆತ್ಮಶಕ್ತಿಯನ್ನು ಸ್ತುತಿಸಿದರು. ಈ ಸಂದರ್ಭದಲ್ಲಿ "ದಾಸ ಭಾಸ್ಕರ-ಕೀರ್ತನಸಾಗರ" ಎಂಬ ಪ್ರಶಸ್ತಿಯಿಂದೊಡಗೂಡಿದ ಪತ್ರಿಕೆಯನ್ನು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸುಪ್ರೀಂ ಕೋರ್ಟಿನ ನ್ಯಾಯಾಧೀಶ ಶ್ರೀ ಕೆ. ಸುಬ್ಬರಾಯರು ಶ್ರೀ ಕೇಶವ ದಾಸರಿಗೆ ನೀಡಿದರು. ಶ್ರೀ ಜಿ. ವೆಂಕಟ ಸುಬ್ರಹ್ಮಣ್ಯಂರವರು ಕೃತಜ್ಞತೆಯನ್ನು ಸಲ್ಲಿಸಿದರು; ಶ್ರೀ ಎಸ್. ರಾಮಚಂದ್ರನ್ ವಂದನಾರ್ಪಣೆ ಗೈದರು.

ಶ್ರೀ ನರಸಿಂಹ ಜಯಂತಿ ಮಹೋತ್ಸವ

ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಈ ವರ್ಷ ತಾ. 3-5-66 ರಿಂದ 6—5—66ರ ವರೆಗೆ ಜರಗಲಿರುವುದೆಂದೂ ಸರ್ವರೂ ಆಗಮಿಸಿ ತೀರ್ಥ ಪ್ರಸಾದ ಮೊದಲಾದುವನ್ನು ಸ್ವೀಕರಿಸಿ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಸಿಂಡಿಕೇಟ್ ಬ್ಯಾಂಕ್, ಲಿ.

ಇದರ ಚಾಂದನೀ ಚೌಕ್ ಶಾಖೆಯು ಎಪ್ರಿಲ್ 4ರಂದು ಡೆಲ್ಲಿಯಲ್ಲಿ ಈ ಕೆಳಗಿನ ವಿಳಾಸದಲ್ಲಿ ತೆರೆಯಲ್ಪಟ್ಟಿದೆ. 450, ಕತ್ರಾ ಕೋಟನ್, ಟೌನ್ ಹಾಲಿನ ಸಮೀಪ, ಪೋಸ್ಟ್ ಬಾಕ್ಸ್ ನಂ. 1418, ಡೆಲ್ಲಿ-6.

ಸಿಂಡಿಕೇಟ್ ಬ್ಯಾಂಕಿಗೆ ಈಗ ಈ ಕೆಳಗಿನಂತೆ ಡೆಲ್ಲಿಯಲ್ಲಿ ಮೂರು ಶಾಖೆಗಳಾದುವು. 1) ಆಸಫ್ ಅಲಿ ರಸ್ತೆ, ನ್ಯೂ ಡೆಲ್ಲಿ. 2) ಕರೋಲ್ ಬಾಗ್, ಸಂಪೂರ್ಣ ಮಹಿಳಾ ಶಾಖೆ. 3) ಚಾಂದನೀ ಚೌಕ್.

ಸಿಂಡಿಕೇಟ್ ಬ್ಯಾಂಕಿಗೆ ಈಗ ಒಟ್ಟು 207 ಶಾಖೆಗಳಿವೆ. ಇನ್ನೊಂದು ಶಾಖೆಯು ಪಾಣವಿಲಾಸ್ ಮೊಹಲ್ಲಾ, ಮೈಸೂರು ಇಲ್ಲಿ ಎಪ್ರಿಲ್ 13ರಂದು ತೆರೆಯಲ್ಪಡಲಿದೆ. ಇದು ಸಂಪೂರ್ಣ ಮಹಿಳಾ ಶಾಖೆಯಾಗಿದೆ.

ಅಂಬ್ಲಪಾಡಿ ಶಂಭು ಶೆಟ್ಟರ ನಿಧನ

ಅಂಬ್ಲಪಾಡಿ ವಾರ್ಡಿನಿಂದ ಚುನಾಯಿಸಲ್ಪಟ್ಟು ಉಡುಪಿ ನಗರ ಸಭೆಯ ಕೌನ್ಸಿಲರಾಗಿ ಕೆಲವು ವರ್ಷ ಕಾಲ ದಕ್ಷ ಸೇವೆ ಸಲ್ಲಿಸಿದ್ದ ಶ್ರೀ ಅಂಬ್ಲಪಾಡಿ ಶಂಭು ಶೆಟ್ಟರು ಇತ್ತೀಚೆಗೆ ಕೆಲ ಸಮಯದಿಂದ ಅನಾರೋಗ್ಯದಿಂದಿದ್ದು ತಮ್ಮ 66ನೇ ವರ್ಷದಲ್ಲಿ ತಾ. 6-1-66 ರಂದು ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ. ದಿವಂಗತರಿಗೆ ಪತ್ನಿ, ಮೂರು ಹೆಣ್ಣು ಮತ್ತು ಮೂರು ಗಂಡು ಮಕ್ಕಳಿರುವರು.

ಉಪನ್ಯಾಸ

ಕನ್ನಡದ ಖ್ಯಾತ ಬರಹಗಾರರೂ ಅಧ್ಯಾತ್ಮಿಕ ಕ್ಷೇತ್ರದಲ್ಲಿ ವಿಶೇಷ ಅನುಭವ ಪಡೆದವರೂ, 'ಸನಾತನ ಸಾರಥಿ'ಯ ಸಂಪಾದಕರೂ ಆದ ಶ್ರೀ ನಾ. ಕಸ್ತೂರಿಯವರು ಇದೇ ಎಪ್ರಿಲ್ 6ರಂದು ಲೋಕ ಸೇವಾ ವೃಂದಕ್ಕೆ ಆಗಮಿಸಿ, ಭಗವಾನ್ ಶ್ರೀ ಸತ್ಯಸಾಯಿಬಾಬಾರವರ ಕುರಿತಾಗಿ ಉಪನ್ಯಾಸವಿತ್ತರು. ಶ್ರೀಯುತರು ತನ್ನ ಭಾಷಣದಲ್ಲಿ "ಸ್ವಾಮಿಯ ಪ್ರೇಮವನ್ನು ಎಲ್ಲರೂ ನೋಡಿದ್ದಾರೆ. ತಾನು ಲೋಕದ ಉದ್ಧಾರಕ್ಕಾಗಿ ಭಕ್ತರ ಕರೆಗೆ ಓಗೊಟ್ಟು ಬಂದಿದ್ದೇನೆ" ಎಂದು ತನ್ನ 20 ವರ್ಷದ ಪ್ರಾಯದಲ್ಲೇ ಸಾರಿದ್ದರು. ಅವರು ರಾಮ ನಾಮ, ಸಂಧ್ಯಾವಂದನೆ, ತಾಯಿ ತಂದೆಯರ ಶುಶ್ರೂಷೆ ಮಾಡು ಅನ್ನುತ್ತಾರೆ. ಬ್ರಾಹ್ಮಣ ಕೆಟ್ಟುದರಿಂದಲೇ ಇತರ ಎಲ್ಲವೂ ಕೆಟ್ಟಿತೆಂದು ಹೇಳಿ, ವೇದ ಶಾಸ್ತ್ರ ಪಂಡಿತರನ್ನು ತಿದ್ದಿ, ಅವರಿಂದ ಹೇಗೆ ಕೆಲಸ ಮಾಡಿಸುತ್ತಾರೆ ಮತ್ತು ಹೇಗೆ ಜನಹಿತಕ್ಕಾಗಿ ದುಡಿಯುತ್ತಾರೆ ಎಂಬುದನ್ನು ವಿವಿಧ ಉದಾಹರಣೆಗಳ ಮೂಲಕ ಮನಮುಟ್ಟುವಂತೆ ವಿವರಿಸಿದರು. ಆರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ಎಂ. ನಾರಾಯಣ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿಯವರಿಂದ ವಂದನಾರ್ಪಣೆ ನಡೆಯಿತು.

ರಾಮನವಮೀ ಉತ್ಸವ

ಪರ್ಕಳ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ 12 ದಿನದ ನಗರ ಭಜನೆಯೂ ಕಡೇ ದಿನ ರಾಮನವಮೀ ಗುರುವಾರ ಭಜನೆ ಮಂಗಳವೂ, ರಂಗಪೂಜಾ ಮಹೋತ್ಸವವೂ ವಿಜೃಂಭಣೆಯಿಂದ ನಡೆಯಿತು.

ವರ್ಧಂತ್ಯುತ್ಸವ ಸಮಾರಂಭ

ಉಡುಪಿ ಪ್ರೊಗ್ರೆಸಿವ್ ಕಮರ್ಶಿಯಲ್ ಎಂಡ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಇದರ ವಾರ್ಷಿಕೋತ್ಸವ ಸಮಾರಂಭವು ತಾ. 8ರಂದು ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನ ಮಹಾಡದಲ್ಲಿ ಸಿಂಡಿಕೇಟ್ ಬ್ಯಾಂಕಿನ ಚೀಫ್ ಆಫೀಸರ್-ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಲ್. ಕೆ. ಕಾರಂತರು ಸ್ವಾಗತಿಸಿದ ಬಳಿಕ ಪ್ರಿನ್ಸಿಪಾಲ್ ಶ್ರೀ ಬಿ. ಅಪ್ಪಾಜಿರಾಯರು ಸಂಸ್ಥೆಯ ಪ್ರಗತಿಪರ ವರದಿಯನ್ನೋದಿದರು. ಅಧ್ಯಕ್ಷರು ಪಾರಿತೋಷಕ ವಿತರಣೆ ಮಾಡಿದ ಬಳಿಕ ಎಲ್. ಐ. ಸಿ.ಯ ಶ್ರೀ ಎಸ್. ಸದಾಶಿವ ರಾಯರು ಸ್ತುತಿ ವಾಚನ ಗೈದರು. ಶ್ರೀ ಪೈಗಳು ಅಧ್ಯಕ್ಷ ಭಾಷಣ ಮಾಡುತ್ತಾ ಮೇಲಧಿಕಾರಿಗಳಿಗೂ ಕೆಲವೊಂದು ಸಂದರ್ಭಗಳಲ್ಲಿ ಕಮರ್ಶಿಯಲ್ ಶಿಕ್ಷಣ ಅಗತ್ಯವಿದೆಯೆಂದೂ ವಿದ್ಯಾರ್ಥಿಗಳು ಕಮರ್ಶಿಯಲ್ ಶಿಕ್ಷಣ ಪಡೆಯುವಾಗಲೇ ಶಿಸ್ತು, ಪ್ರಾಮಾಣಿಕತನ ಮೊದಲಾದ ಗುಣಗಳನ್ನು ಕಲಿಯುವಂತಾಗಬೇಕೆಂದೂ ಹೇಳಿದರು. ಶ್ರೀ ಐತಾಳರು ಧನ್ಯವಾದವನ್ನರ್ಪಿಸಿದ ಬಳಿಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ನಾಟಕಾಭಿನಯ ನಾಯಿತು.

ತಿದ್ದುಪಡಿ— ಕಳೆದ ಸಂಚಿಕೆಯ ಹನ್ನೊಂದನೆ ಪುಟದಲ್ಲಿ ಪ್ರಕಟವಾದ ಚಿತ್ರಕಥೆ—ದಿ ಲೋಂಗೆಸ್ಟ್ ಡೇ ಇದನ್ನು ಬರೆದವರು ಶ್ರೀ ನೂಮೂಪನಾಸಿಕರ್ ಎಂದು ತಪ್ಪಾಗಿ ಪ್ರಕಟವಾಗಿದೆ. ಇದು ಶ್ರೀ ಕೆ. ಎಸ್. ಪುರಾಣಿಕ ಎಂದಾಗಬೇಕು. (ಸಂ ಸ.)

ಉಡ್ಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

O. S. 28/1965.

ದಿ. ಜನರಲ್ ಯಿನ್ವೆಸ್ಟಮೆಂಟ್ & ಕಮರ್ಶಿಯಲ್ ಕೋರ್ಪೊರೇಶನ್ ಪ್ರಾಯ್ವೇಟ್ ಲಿಮಿಟೆಡ್ ಉಡ್ಪಿ ಯಿದ್ರ ಮೆನೇಜಿಂಗ್ ಡೈರೆಕ್ಟರ್ T. ರಮೇಶ U. ಪೈ.

—ವಾದಿ

ಮತ್ತು

D. ಶಿವಣ್ಣ ಕೂಡ —ಪ್ರತಿವಾದಿರು.

ಇವರೊಳಗೆ

3ನೇ ಪ್ರತಿವಾದಿ. K. Sarvotham Pai -Son of Venkatesh Pai -residing in Shimoga Town.

ಸದ್ರಿ 3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ವಾದಿ ಕೋರ್ಪೊರೇಶನಿಗೆ 1ನೇ ಪ್ರತಿವಾದಿಯು ತಾ. 1—10—1964ರಲ್ಲಿ ಬರೆಕೊಟ್ಟ Hire purchase agreement ಪ್ರಕಾರ ಪ್ಲೈಂಟಿನಲ್ಲಿ ಕಾಣ್ಸಿದಂತೆ Hire amount, ಯಿನ್ಶೂರೆನ್ಸ್, ಪ್ರೀಮಿಯಮ್ ಮತ್ತು ಯಿತರ ನಿವೃತ್ತಿಗಳನ್ನು ಕೇಳಿ ವಗೈರೆ ಪ್ರತಿವಾದಿರ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ. 14—4—66ಕ್ಕೆ ನಿಂದು ನೋಟೀಸು ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಆ ದಿವ್ಸ ಹಗಲು ಗಂಟೆ 11 ಕ್ಕೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಹಾಹೀರು ಮಾಡಿಕೊಳ್ಳತಕ್ಕದ್ದು.

(By Order of the Court)

M. Damodar Kamath
Advocate for Plaintiff.

Udipi, S. K. Date 1-4-66

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಉಡ್ಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 220/1965.

ಸಿಂಡಿಕೇಟ್ ಬೇಂಕ್ ಲಿಮಿಟೆಡ್ ಮಣಿಪಾಲ—ಯಿದ್ರ ರಿಕವರಿ ಆಫೀಸರ M. S. ಭಂಡಾರಿ —ವಾದಿ,

ಮತ್ತು

ಪಂಡಿತ್ ಹೀರಾಲಾಲ್ ಕೂಡಾ - ಪ್ರತಿವಾದಿರು,

ಇವರೊಳಗೆ

2ನೇ ಪ್ರತಿವಾದಿ:— Sardar Dalip Singh son of Lal Singh, Motor Machanic Coondapur Kasba.

ಸದ್ರಿ 2ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ತಾರೀಕು 31-10-64ರಲ್ಲಿ ಪ್ರತಿವಾದಿರು ವಾದಿ ಬೇಂಕಿಗೆ ರೂಪ್ಯಾ 1800/-ಕ್ಕೆ ಬರೆಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ಅಸಲು ಬಡ್ಡಿ, ವಗೈರೆ ಪ್ಲೈಂಟಿನಲ್ಲಿ ಕಾಣ್ಸಿದ ಐವೇಜು ಕೇಳಿ ವಾದಿಯು ದಾಖಲ್ಮಾಡಿದ ಮೇಲ್ಕಂಡ ದಾವೆಯು ತಾ. 16-4-66ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದ್ದಿದ್ದರೆ ಆ ದಿವ್ಸ ಹಗಲು 10 ಗಂಟೆಗೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಹಾಹೀರು ಮಾಡಿಕೊಳ್ಳತಕ್ಕದ್ದು.

(By order of the Court.)

M. Damodhar Kamath,
Advocate for Plff.

Udipi, Dated 1-4-1966.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00

ಕೆಟಲಾಗ್ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕ್ರೂರ ಮುರುಗ

(ಎರಡನೇ ಪುಟದಿಂದ)

ಇಂದವಳು ಬಹಳ ಧರ್ಮಿಷ್ಟಳಂತೆ ತೋರಿಸುತ್ತಿದ್ದಾರೆ ಬಡವರನ್ನು ಕಂಡೊಡನೆ ಅವಳ ಹೃದಯ ಕಷ್ಟಪಡುತ್ತದೆ. ಕೆಟ್ಟ ಹಾಗೂ ಕುಹಕ ಅಲ್ಲಸಲ್ಲದ ಮಾತುಗಳನ್ನಾಡಿ ನಾವಾಕೆಯ ಮನಸ್ಸಿಗೆ ಗಾಯಮಾಡದಿರೋಣ." ಯಾವಾಗಲೂ ಸೀತೆಯ ಪಕ್ಷಪಾತಿಯಾಗಿದ್ದಾಕೆ ಉತ್ತರಕೊಟ್ಟಳು.

ಮಧ್ಯವಯಸ್ಸಿನಾಕೆ ಮೂರು ಬಾರಿ ಸೀನು ಬರಿಸಿಕೊಂಡು, ತನ್ನಷ್ಟಕ್ಕೆ ತಾನೇ ಶೀತಕ್ಕೆ ಹಿಡಿ ಶಾಪ ಹಾಕಿಕೊಂಡು ನದಿಬಿಟ್ಟು ಹೊರಟುಹೋದಳು.

ನದಿಯತ್ತ ಬರುತ್ತಿದ್ದ ಸೀತೆ, ದಿನಾಲೂ ತನ್ನ ಪ್ರಾಣವನ್ನು ಹಿಂಡುತ್ತಿದ್ದಾಕೆ ಇಂದು ನದಿಯನ್ನು ಬಿಟ್ಟು ಬೇಗ ಹೋಗುವದನ್ನು ಕಂಡಳು. ಆಕೆಯ ಮಗನು ಅತ್ತ ಇತ್ತ ಧಾವಿಸುತ್ತ, ಕಡ್ಡಿಗಳನ್ನು, ಚಿಪ್ಪುಗಳನ್ನು ಮತ್ತು ಕಲ್ಲು ಹರಳುಗಳನ್ನು ಹೆಕ್ಕಿ ರಾಶಿ ಮಾಡುತ್ತ, ಸಮುದ್ರದ ಹೊಯಿಗೆ ಮೇಲೆ ತನ್ನ ಪಾದದ ಅಚ್ಚನ್ನೊತ್ತಲು ಪ್ರಯತ್ನಿಸುತ್ತಿದ್ದನು. ಯಾವ ಆಲೋಚನೆಯೂ ಇಲ್ಲದೆ ಬಾಲಕ ಸಹಜವಾದ ಗುಣಗಳಿಂದ ಅವನು ಓಡಿಯಾಡುತ್ತಿದ್ದನು. ತನ್ನ ವೈಧವ್ಯದ ಕಾಲದಲ್ಲಿ ಉತ್ತಮ ತರಗತಿಯ ಸ್ತ್ರೀಯರು ಧರಿಸುತ್ತಿದ್ದಂತಹ ರೇಶ್ಮೆಯ ಸೀರೆಯನ್ನಾಕೆ ಉಟ್ಟುಕೊಂಡಿದ್ದಳು. ಆಕೆಯ ಸನ್ಯಾಸಿನಿ ಮನೋಗುಣಕ್ಕೆ ಅದು ಬಹಳ ಒಪ್ಪುತ್ತಿತ್ತು.

"ಬಾ ಇತ್ತ ಸೀತಾ, ನಿನಗೊಂದು ದೊಡ್ಡ ನಿಧಿ ಸಿಕ್ಕಿದೆಂದು ಹರಡಿರುವ ಸುದ್ದಿ ನಿಜವೇ? ನಮಗೂ ಪಾಲು ಕೊಡುತ್ತೀಯೇನೇ?" ಎಲ್ಲರೂ ಅವಳಿಗೆ ಮುತ್ತಿಗೆ ಹಾಕುತ್ತ ಕೇಳಿದರು.

"ಕೊಡುತ್ತೇನೆ, ಬಹಳ ಸಂತೋಷದಿಂದ. ಸಾರ್ವಜನಿಕ ಉಪಯೋಗಕ್ಕಾಗಿ ಅದನ್ನು ನಾನು ಉಪಯೋಗಿಸಿಕೊಳ್ಳುತ್ತೇನೆ. ಹಾಳು ಬಿದ್ದಿರುವ ನಮ್ಮ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಹಾಗೂ ಕೆರೆಯನ್ನು ಸಂಪಡಿಸಲಿಕ್ಕೆ ಈಗಾಗಲೇ ಒಂದಂಶವನ್ನು ತೆಗೆದಿಟ್ಟದ್ದೇನೆ. ನಾನು ಲೋಭಿ ಇರುವದಿಲ್ಲ. ಚಿಕ್ಕಪುಟ್ಟ ಜಮೀನು ಇರುವವರಿಗೆ ನೀರು ಸಿಗುವಂತೆ ಮುಖ್ಯವಾಗಿ ನೋಡಿಕೊಳ್ಳುತ್ತೇನೆ. ನೀವ್ಯಾರೂ ನನಗೆ ಅಡ್ಡಿ ಬರದಿದ್ದಲ್ಲಿ, ಬಡ ಜನರಿಗಾಗಿ ದುಡಿಯುತ್ತೇನೆ. ನಮ್ಮ ಹುಡುಗ-ಹುಡುಗಿಯರಿಗಾಗಿ ಒಂದು ಶಾಲೆಯನ್ನು ಕಟ್ಟಿಸಬೇಕೆಂದಿದ್ದೇನೆ. ನೀವೆಲ್ಲರೂ ನೆರವು ನೀಡಬೇಕು. ಈ ಹಳ್ಳಿಯು ಬಹಳ ಸುಧಾರಣೆಯಾಗಬೇಕು. ಆದರೆ ಒಳ್ಳೆಯ ಜನರು, ಬುದ್ಧಿಶಾಲಿಗಳು ಹಳ್ಳಿಯನ್ನಾಗಲೇ ಬಿಟ್ಟು ಹೋಗಿದ್ದಾರೆ. ಕೇವಲ ಅಶಕ್ತರೂ ಸೋಮಾರಿಗಳೂ ಮಾತ್ರ ಉಳಿದಿದ್ದಾರೆ." ಕ್ಷಣಕಾಲ ಸೀತೆ ಮೌನ ತಾಳಿದಳು.

"ರಾಮು ಒಳ್ಳೆಯ ಆಸ್ತಿಯುಳ್ಳವನಾಗಿದ್ದರು. ಮಿತಿಮೀರಿದ ಬಡ್ಡಿ ತೆಗೆದುಕೊಳ್ಳುವ ಪೆಂಯ ಸ್ವಾಮಿಯು ಅವರ ಜಮೀನುಗಳನ್ನೆಲ್ಲಾ ವಶಪಡಿಸಿಕೊಂಡು, "ಅವರು ಊರು ಬಿಟ್ಟು ಹೋಗುವಂತೆ ಮಾಡಿ ಓಡಿಸಿ ಬಿಟ್ಟರು." ಸೀತೆಯ ಮನಸ್ಸನ್ನು ತಿಳಿದುಕೊಂಡಿದ್ದಾಕೆ ಅವಳನ್ನು ಸಂತೋಷಪಡಿಸಲಿಕ್ಕಾಗಿ ಹೇಳಿದಳು.

"ಅದಕ್ಕೆ ಸರಿಯಾಗಿ ಅವರಿಗೆ ಒಳ್ಳೆಯ ಶಿಕ್ಷೆ ದೊರಕಿದೆ. ಈಗ ಮಾನವರೂ ದೇವರೂ ಅವರಿಗೆ ವಿರುದ್ಧವಾಗಿದ್ದಾರೆ. ಬಡಪಾಯಿ ಮನುಷ್ಯ!" ಇನ್ನೊಬ್ಬಳು ಧ್ವನಿಗೂಡಿಸಿದಳು.

'ಸೀತಾ, ನಿನಗೆ ರಾಮುವಿನವರ ಇತ್ತೀಚಿಗಿನ ಏನಾದರೂ ಸುದ್ದಿ ಇದೆಯೇ? ಅವರೀಗ ಎಲ್ಲಿದ್ದಾರೆ, ಏನಾಗಿದ್ದಾರೆ? ಜಾನಕಿಯೂ ಒಳ್ಳೆಯ ಹುಡುಗಿ ಇದ್ದಾಳೆ.' ಒಬ್ಬಳು ವಿಚಾರಿಸಿದಳು.

"ಹೌದು. ಮದ್ರಾಸಿನಲ್ಲಿ ಯಂತ್ರ ವಿದ್ಯಾವಿಶಾರದನಾಗಿ ಕೆಲಸದಲ್ಲಿರುವ ನನ್ನ ಸಹೋದರನು—ಅವರೀಗ ಒಳ್ಳೆಯ ಅಧಿಕಾರದ ಕೆಲಸದಲ್ಲಿರುವರಲ್ಲದೆ ಪ್ರಖ್ಯಾತರಾಗಿರುವದಾಗಿಯೂ, ತಿಳಿಸಿದ್ದಾನೆ. ಅವರೀಗ ಕಾಂಚಿಪುರಮಿನಲ್ಲಿ ಉಪ ತಾಲೂಕಧಿಕಾರಿಯಾಗಿದ್ದಾರಂತೆ. ಜಾನಕಿಗೆ ಮೂರು ವರ್ಷ ಪ್ರಾಯದ ಹೆಣ್ಣು ಮಗು ಒಂದು ಇದೆಯಂತೆ."

ಸೀತೆಯು ಮಮತೆಯಿಂದ ಮಗನತ್ತ ನೋಡಿದಳು.

'ನೀವೇನು ಹೇಳುತ್ತಿರುವದನ್ಮ್ಮಾ? ಮಗು ಕೇಳಿತು.

'ಒಂದು ಸಣ್ಣ ಹುಡುಗಿ ಇದೆಯಂತೆ, ಅದನ್ನು ನೀನು ಮದುವೆ ಮಾಡಿಕೊಳ್ಳುತ್ತೀಯಾ?" ಒಂದು ಸ್ವರ ಕೇಳಿ ಬಂತು.

"ಖಂಡಿತ, ಅವಳು ನನ್ನಷ್ಟು ಅಂದವಿದ್ದು; ನನ್ನ ಹಾಗೆ ಶ್ರೀಮಂತಳಾಗಿ ಇದ್ದರೆ ಖಂಡಿತವಾಗಿ ಮಾಡಿಕೊಳ್ಳುತ್ತೇನೆ.' ಒಯ್ಯಾರದಿಂದ ಹುಡುಗನು ಹೇಳಿದನು. ಆಗಲೇ ಕರುವೊಂದು ನೀರು ಕುಡಿಯಲಿಕ್ಕಾಗಿ ಅಲ್ಲಿಗೆ ಬಂತು. ಅದನ್ನು ಓಡಿಸಿಕೊಂಡು ಹುಡುಗನತ್ತ ಓಡಿದನು.

"ಸೀತೆ, ಈಗಾಗಲೇ ರಾಣಿಯ ಹಾಗೆ ಮಾತಾಡಲು ಕಲಿತುಕೊಂಡಿದ್ದಾಳೆ. ಅವಳ ಹೃದಯದಲ್ಲಿ ರಾಮುವಿಗಿನ್ನೂ ಸ್ಥಾನವಿದೆ. ಅದರಲ್ಲಿ ಸ್ವಲ್ಪ ಭಾಗವನ್ನು "ಜಾನಕಿಯು ಕಾದಿರಿಸಿಕೊಂಡಿದ್ದಾಳೆ. ಹುಡುಗನ ಕುರಿತು ಹೆಚ್ಚು ಹೇಳಬೇಕಾಗಿಲ್ಲ. ಈ ಚಂಚಲ ಪ್ರಪಂಚದಲ್ಲಿ ಯಾರೂ ಬಹಳಕಾಲ ಶ್ರೀಮಂತರಾಗಿಯೇ ಅಥವಾ ಬಡವರಾಗಿಯೇ ಇರುವುದಿಲ್ಲ. ಅದೃಷ್ಟದ ಚಕ್ರ ಸುತ್ತುತ್ತಾ ಇರುತ್ತದೆ." ಮಧ್ಯವಯಸ್ಸಿನ ವನಿತೆಯ ಶಿಷ್ಯೆಯೊಬ್ಬಳು ಗಟ್ಟಿಯಾಗಿ ಹೇಳಿದಳು.

ತನಗಿಂತ ಕಿರಿಯವಳೊಬ್ಬಳನ್ನು ಮಧ್ಯವಯಸ್ಸಿನ ವನಿತೆಯು ತನ್ನ ಸೇವಕಿಯನ್ನಾಗಿ ಆರಿಸಿಕೊಂಡಿದ್ದಳು; ಆಕೆಯು ಪ್ರಾಯದಲ್ಲಿ ಚಿಕ್ಕವಳಾಗಿದ್ದರೂ ಚಂದದಲ್ಲಿ ಏನೂ ಪ್ರಯೋಜನವಿಲ್ಲ. ತನ್ನ ಧುರುಣೀಯು ಇಲ್ಲದಿದ್ದಾಗಸೇವಕಿಯೇ ಮುಂದಕ್ಕೆ ಬಂದು ಆಕೆಯ ಕೆಲಸವನ್ನು ಮುಗಿಸುತಿದ್ದಳು.

ಸ್ವಲ್ಪ ದೂರದಲ್ಲಿ ಒಂದು ಚಿಕ್ಕ ಗುಂಪು ಸೀತಾಳ ಮೇಲೆ ಟೀಕೆ ಮಾಡುತಿತ್ತು. ಅವರ ಮಾತು ಸೀತೆಯ ಕಿವಿಗಳ ಮೇಲೆ ಬಂದು ಬೀಳುತ್ತಿದ್ದುವು. ಆದರಿಂದ ಚುಚ್ಚುಮಾತಿನ ಪ್ರವಾಹ ಎತ್ತ ಹರಿಯುತ್ತಿದೆ ಎಂಬುದುಆಕೆಗೆ ಗೊತ್ತಾಗುತ್ತಿತ್ತು. ಆದರೆ ಆಕೆ ಅತ್ತ ಗಮನ ಕೊಡಲಿಲ್ಲ. ಆಕೆಯ ಮನಸ್ಸು ಪ್ರಯೋಜನಕಾರೀ ಕೆಲಸಗಳ ಕುರಿತು ಆಲೋಚಿಸುಇತ್ತು. ಅವಳು ಶತ್ರುಗಳನ್ನೂ ಹಗೆತನದ ದೃಷ್ಟಿಯಿಂದ ಕಾಣುತ್ತಿದ್ದಿಲ್ಲ. ತನಗೆ ರಾಮು ಹಾಗೂ ಜಾನಕಿಯವರಂತಹ ಗೆಳೆಯರು ಸಿಕ್ಕಿದಲ್ಲಿ ಆಲವಂತಿಯನ್ನು ಭೂಕೈಲಾಸವನ್ನಾಗಿ ಮಾರ್ಪಡಿಸಬಹುದಿತ್ತೆಂದಾಕೆ ಆಲೋಚಿಸುತಿದ್ದಳು.

— ೩೪ —

ತಿರುಚಿನಾಪಳ್ಳಿಯಲ್ಲಿ ನ್ಯಾಯವಿಚಾರಣೆಗಾರಂಭವಾದ ಒಡನೆ, ಆಲವಂತಿಯಲ್ಲಿ ನದಿಯ ಸೊಬಗು ಕಮ್ಮಿಯಾಯಿತು. ಪಳ್ಳಿ, ಪಡ್ಯಾಚಿ, ಪರಿಯಾ ಮತ್ತು ಬ್ರಾಹ್ಮಣ ಹೀಗೇ ಬಂಧಿಸಲ್ಪಟ್ಟಿರುವ ಮೂವತ್ತು ಮಂದಿಗಳೊಂದಿಗೆ ಮುರುಗ ಮತ್ತು ತೊಪ್ಪೈಯರನ್ನು ಆರೋಪಿಗಳನ್ನು ನಿಲ್ಲಿಸುವ ಸ್ಥಳದಲ್ಲಿ, ನ್ಯಾಯಾಲಯದಲ್ಲಿ, ನಿಲ್ಲಿಸಿದ್ದರು. ತನ್ನ ಹಳೆಯ ಹಗೆಯನ್ನು ತೀರಿಸಿಕೊಳ್ಳಲು ಪೆಂಯ ಸ್ವಾಮಿ ಹೂಡಿದ್ದ ಕೊನೆಯ ಆಟವದು. ಅವರಲ್ಲಿ ಶ್ರೀಮಂತಿಕೆಯ ಕೊನೆಯ ಕಿಡಿ ಪ್ರಜ್ವಲಿಸಿದೆ.

ನ್ಯಾಯಾಂಗಣವು ಹಲವಾರು ತರದ ಜನರಿಂದ ಕಿಕ್ಕಿರಿದಿತ್ತು. ಎತ್ತರದಲ್ಲಿ ಗಂಭೀರವಾಗಿ ಕುಳಿತುಕೊಂಡಿದ್ದ ದೊಡ್ಡ ಮನುಷ್ಯರ ಬಳಿ ನವನಾಗರಿಕತೆಯ ರೋಗಕ್ಕೆ ಹಾಗೂ ಕ್ರಮಬದ್ಧ ಎನಿಸಿಕೊಳ್ಳುವ ಸಮಾಜದ ಅಕೃತ್ಯಗಳಿಗೆ ಮದ್ದನ್ನು ಹಾಗೂ ಕ್ಷಮೆಯನ್ನು ಬೇಡುತ್ತ ಸಮ ವಯಸ್ಸಿನವರು ಕಾದು ನಿಂತಿದ್ದರು. ಶ್ರೀ ಟರ್ನರ್, ಎಮ್. ಎ.,ಐ.ಸಿ.ಎಸ್., ಅವರು ಜಿಲ್ಲಾ ಹಾಗೂ ಅಧಿವೇಶನಗಳ ನ್ಯಾಯಾಧೀಶರು. ಅವರು ನೋಡಲು ಶಾಂತ ಸ್ವಭಾವದವರಂತೆ ಹಾಗೂ ನ್ಯಾಯ ವಿಚಾರಣೆಯಲ್ಲಿ ಪಳಗಿದ ಕೈಯಂತೆ ಕಾಣುತ್ತಿದ್ದರು.

ಗೋಡೆಯ ಹಿಂದುಗಡೆ ಅಡಗಿಕೊಂಡು ದಣಿದಿರುವ ಹಾಗೂ ಅರೆ ನಿದ್ರೆ ಮಾಡುತ್ತಿರುವ ವ್ಯಕ್ತಿ ಒಂದಿದೆ ಎನ್ನುವದು ಪಂಕವನ್ನು ನೋಡಿದವರಿಗೆ ಮಾತ್ರ ಗೊತ್ತಾಗುತ್ತಿತ್ತು. ಆದರಿಂದ ಬರುತ್ತಿದ್ದ ಗಾಳಿಯು ನೊಣಗಳನ್ನೋಡಿಸಲು ಹಾಗೂ ನ್ಯಾಯಾಧೀಶರ ಬೂದು ಬಣ್ಣದ ಮೀಸೆಯನ್ನು ನೆಟ್ಟಗೆ ನಿಲ್ಲಿಸಲು ಸಾಕಾಗುತ್ತಿತ್ತು. ಪಂಕವನ್ನೆಳೆಯುತ್ತಿದ್ದವನು ಅರೆ ನಿದ್ದೆಯಿಂದೆಚ್ಚತ್ತು ಎಳೆಯಲು ಆರಂಭಿಸಿದೊಡನೆ ನ್ಯಾಯಾಧೀಶರ ಬೆಳ್ಳಿ ಬಣ್ಣದ ತಲೆ ಕೂದಲು ಎದ್ದುನಿಂತು ನ್ಯಾಯಾಂಗಣದತ್ತ ನೋಡಲಾರಂಭಿಸಿತು. ಅದು ಯಾವ ದಿಕ್ಕಿನಿಂದ ಗಾಳಿ ಬೀಸಿದ್ದು ಎಂಬುದನ್ನು ಸೂಚಿಸುತ್ತಿತ್ತು. ಆದರೆ ಟರ್ನರರ ಗಮನ ಅತ್ತ ಇದ್ದಿರಲಿಲ್ಲ. ಅವರು ಆಶ್ಚರ್ಯದಿಂದ ಅಸಾಮಾನ್ಯ ರೀತಿಯಲ್ಲಿ ಕಲೆತಿರುವ ಗುಂಪನ್ನು ನೋಡುತ್ತಿದ್ದರು. ಬಣ್ಣ ಬಣ್ಣದ ಹಲವಾರು ನಮೂನೆಯ ಜನರನ್ನು ಕಂಡಾಗ ಅವರಿಗೆ ವ್ಯಸನ ಉಂಟಾಯಿತು. ದೊಂಬಿಯು ಈ ಮೊಕದ್ದಮೆಯು ಕುತೂಹಲವನ್ನು ಕೆರಳಿಸಿರುವ ಮೊಕದ್ದಮೆ ಎಂಬುದನ್ನವರು ತಿಳಿದುಕೊಂಡು, ಅಸಂತೋಷದಿಂದ ತನ್ನ ಅಗಲದ ಮೆತ್ತನೆಯ ಆಸನದಲ್ಲಿ ಒರಗಿಕೊಂಡರು. ಅವರ ನಯವಾದ ಹಣೆಯ ಮೇಲೆ ಸ್ಪಷ್ಟವಾಗಿ ಗೆರೆಗಳು ಕಂಡು ಬಂದುವು; ಕನ್ನಡಿಯು ಗಟ್ಟಿಯಾಗಿ ಮೂಗನ್ನು ಹಿಡಿದುಕೊಂಡು ಗುಂಪನ್ನು ಕಾಣಲು ಅವರಿಗೆ ಸಹಾಯ ಮಾಡುತ್ತಿತ್ತು. ನ್ಯಾಯಾಧೀಶರಿಗೆ ಒಪ್ಪುವಂತೆ ಅವರು ಆಸೀನರಾಗಿದ್ದರು; ಅದು ಶ್ರದ್ಧೆಯಿಂದ ವಾದಿಸುವುದರಲ್ಲಿ ಉತ್ಸಾಹವನ್ನು ತುಂಬುತ್ತಿತ್ತು.

(ಮುಂದುವರಿಯುವುದು)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಫೋನ್: 77

ಕುಂದಾಪುರ, ದ. ಕ.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=50

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೋ, ಉಡುಪಿ.

NAVAYUGA 14—4—1966

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಭಾರತದ ಗೌರವ ಭಾಗ ೨:— ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ. ಪುಟಗಳು: ೧೪೦. ಬೆಲೆ. ರೂ. ೨. ೫೫

ಭಾರತದಲ್ಲಿ ಹುಟ್ಟಿಬೆಳೆದು ಭಾರತದ, ಭಾರತೀಯರ ಉನ್ನತಿಗಾಗಿ ದುಡಿದು ಅಮರರಾದ ಮಹಾ ಪುರುಷರ ಜೀವನ ಸಂಗ್ರಹದ ಎರಡನೆಯ ಭಾಗವಿದು. ಜೀವನವನ್ನು ಹಿರಿದಾಗಿ ಸಂಗ್ರಹಿಸುವುದಕ್ಕಿಂತ ಕಿರಿದಾಗಿ ಸಂಗ್ರಹಿಸುವುದು ಕಷ್ಟ. ಆದರೆ ಇಲ್ಲಿ ೨೧ ಮಹಾತ್ಮರ ಜೀವನವನ್ನು ಬೇರೆ ಬೇರೆ ಲೇಖಕರು ಪರಿಚಯ ಮಾಡಿಕೊಟ್ಟಿದ್ದಾರೆ, ಚುಟುಕಿನಲ್ಲಿ. ಹೇಳಲೇ ಬೇಕಾದುವನ್ನು ಬಿಡದೆ ಇರುವ ಅವಕಾಶದಲ್ಲಿ ಹೇಳಬಹುದಾದಷ್ಟನ್ನು ಲೇಖಕ ಬಂಧುಗಳು ಓರಣವಾಗಿ ಹೇಳಿದ್ದಾರೆ, ಇದು ಶ್ಲಾಘನೀಯ.

ಇಲ್ಲಿನ ಮಹಾಪುರುಷರೆಲ್ಲ ಸು. ೧೧ ರಿಂದ ೧೬ನೆ ಶತಮಾನಕ್ಕೆ ಸೇರಿದವರು. ಮತ ಪ್ರವರ್ತಕರು, ಕವಿಗಳು, ಸನ್ಯಾಸಿ-ಭಕ್ತರು, ದಾಸವರ್ಯರು, ರಾಜ-ಮಹಾರಾಜರು—ಹೀಗೆ ಎಲ್ಲ ಬಗೆಯ ಹಿರಿಯರೂ ಇಲ್ಲಿ ಸೇರಿದ್ದಾರೆ. ಕನ್ನಡದ ಬಸವಣ್ಣ, ಮಧ್ವಾಚಾರ್ಯ, ವಿದ್ಯಾರಣ್ಯ, ಕೃಷ್ಣದೇವರಾಯ ಮತ್ತು ಪುರಂದರ ದಾಸರ ಜೀವನ ಚರಿತ್ರೆ ಇಲ್ಲಿದೆ. ಇಲ್ಲಿನ ಪರಿಚಯವನ್ನು ಆಯಾ ಕ್ಷೇತ್ರದಲ್ಲಿ ವಿಶೇಷ ಅಧ್ಯಯನ ಮಾಡಿದವರೇ ಮಾಡಿಕೊಟ್ಟಿದ್ದಾರೆ. ಹಾಗಾಗಿ ಈ ಪರಿಚಯವು ಸಾಧುವಾದುದೆಂದು ಬೇರೆ ಹೇಳಬೇಕಿಲ್ಲ.

ಈ ಪುಸ್ತಕವು ಹಿರಿಯರಿಗಿಂತಲೂ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯೋಗಿಯಾಗಬಲ್ಲುದು. ಇಂದಿನ ವಿದ್ಯಾರ್ಥಿಗಳು ತಮ್ಮ ಪೂರ್ವಜರ ಪರಿಚಯವನ್ನು ಪಡೆದು ಕಲವಾದರೂ ಸದ್ಗುಣಗಳನ್ನು ಗಳಿಸಿಕೊಂಡಲ್ಲಿ ಮುಂದಿನ ಭಾರತವು ಕೆಚ್ಚುಗಲಿಗಳಿಂದಲೂ ಸುಸಂಸ್ಕೃತದಿಂದಲೂ ತುಂಬುವುದು ಸುಸಂಸ್ಕೃತ ಜನಾಂಗದಿಂದಲೇ ಭಾರತದ ಗೌರವ ವರ್ಧನೆ. ಇದಕ್ಕೆ ಈ 'ಭಾರತದ ಗೌರವ' ಅವಶ್ಯ ಮಾರ್ಗದರ್ಶಿಯಾಗಿದೆ. ಸುಂದರವಾದ ಮುದ್ರಣವು ಆಕರ್ಷಕವಿದೆ.

ಸ್ವಾತಂತ್ರ್ಯ ಹೋರಾಟ-ಕೊಡಗಿನ ಕಥೆ-

ಲೇಖಕರು: ಬಿ. ಡಿ. ಗಣಪತಿ. (ಪ್ರಕಾಶಕರು:?) ಪುಸ್ತಕ ದೊರೆಯುವ ಸ್ಥಳ: "ಕೊಡಗು" ಪ್ರೆಸ್, ಮಡಿಕೇರಿ, ಪುಟಗಳು: ೧೦೬. ಬೆಲೆ. ರೂ. ೫.

ದೇಶದಲ್ಲಿ ಸ್ವಾತಂತ್ರ್ಯಲಾಲಸೆ ಹೆಚ್ಚಿ ಹೋರಾಟವು ಸಶಸ್ತ್ರವಾಗಿಯೂ ನಿಶ್ಶಸ್ತ್ರವಾಗಿಯೂ ನಡೆಯತೊಡಗಿತು. ಬ್ರಿಟಿಷ ಚೀಫ್ ಕಮಿಷನರರ ಆಡಳಿತೆಯಲ್ಲಿದ್ದ ಪ್ರದೇಶ ಕೊಡಗಿನಲ್ಲಿಯೂ ಈ ಲಾಲಸೆ - ಹೋರಾಟಗಳು ತುಸು ತಡವಾಗಿಯಾದರೂ ಆರಂಭವಾದುವು. ಮುಖ್ಯವಾಗಿ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಹೂಡಿದ ಅಹಿಂಸಾತ್ಮಕ ಹೋರಾಟವೇ ಕೊಡಗಿನಲ್ಲಿ ನಡೆದಿತ್ತು; ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವುದರಲ್ಲಿ ಕೊಡಗೂ ತನ್ನ ಸೇವೆಯನ್ನು ಸಲ್ಲಿಸಿತು.

ಕೊಡಗಿನ ವೀರ ಜನತೆಯ ಸ್ವಾತಂತ್ರ್ಯ ಹೋರಾಟದ ಸುಮಾರು ಮೂವತ್ತು ವರ್ಷಗಳ ಪರಿಚಯವನ್ನು ನಾವೀ ಪುಸ್ತಕದಲ್ಲಿ ಕಾಣಬಹುದು. ಕೆಲವು ದೇಶ ಸೇವಕರ ಭಾವ ಚಿತ್ರಗಳನ್ನೂ ನಾವಿಲ್ಲಿ ನೋಡುತ್ತೇವೆ. ನಗರ—ಗ್ರಾಮಾಂತರ ಪ್ರದೇಶಗಳಲ್ಲಿ ನಡೆದಿದ್ದ ಅಸಹಕಾರ ಆಂದೋಲನ, ಸತ್ಯಾಗ್ರಹ ಚಳವಳಿ ಮೊದಲಾದುವುಗಳ ವರ್ಣನೆಯನ್ನು ಇದ್ದಕ್ಕಿದ್ದಂತೆ, ಅದರಲ್ಲಿ ಭಾಗವಹಿಸಿದ ಹಲವರ ಹೆಸರುಗಳೊಂದಿಗೆ, ಲೇಖಕರು ನಮ್ಮ ಮುಂದೆ ಇಟ್ಟಿದ್ದಾರೆ. ಶ್ರೀ ಗಣಪತಿಯವರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗ ವಹಿಸಿದವರು-ಸ್ವಾತಂತ್ರ್ಯದ ಕಹಳೆಯೂದಿದ 'ಕೊಡಗು' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿ ಸೆರೆಮನೆ ವಾಸವನ್ನೂ ಪಡೆದವರು. ಆದುದರಿಂದಲೇ ಇದೊಂದು ಪ್ರತ್ಯಕ್ಷದರ್ಶಿಕೆಯಂತೆಯೇ ಇದೆ.

ಪುಸ್ತಕಕ್ಕೆ ಪೂರಕವಾಗುವಂತೆ ಭಾರತದ ಸ್ವಾತಂತ್ರ್ಯ ಹೋರಾಟದ ಸಂಕ್ಷಿಪ್ತ ಪರಿಚಯವನ್ನು ಲೇಖಕರು ಮಾಡಿಕೊಟ್ಟಿದ್ದಾರೆ. ಕೊನೆಯ "ಹುತಾತ್ಮರನ್ನು ನೆನೆದು' ಎಂಬುದೊಂದು ಬರೆಹ ಮಹಾತ್ಮಾ ಗಾಂಧಿಯವರ ಬಲಿದಾನವನ್ನೂ ನಿರೂಪಿಸುತ್ತದೆ. ದೇಶಕ್ಕಾಗಿ ಅವರು ಮಾಡಿದ ತಪಸ್ಸು, ತ್ಯಾಗ, ಸೇವೆಗಳಿಗಾಗಿ ನಾವು—ಭಾರತೀಯರು ನೀಡಿದ ಉಡುಗೊರೆ....? ಪುಸ್ತಕಕ್ಕೆ ಬಳಸಿದ ಕಾಗದ—ಕ್ಯಾಲಿಕೋ ರಕ್ಷಾಪತ್ರಗಳು ಉತ್ತಮವಿವೆ.

ಕಾಂಗ್ರೆಸ್ ಸಂಸ್ಥೆ ಮಾಡಬೇಕಾಗಿದ್ದ ಕೆಲಸವನ್ನು ಅದು ಮಾಡದೆ ಮೌನವಾಗಿದ್ದುದರಿಂದ ತಾನೇ ಸಾಹಸಕ್ಕೆ ಕೈ ಹಾಕಿದುದಾಗಿಯೂ ಅನೇಕರ ಭಾವ ಚಿತ್ರಗಳನ್ನು ಕೊಡಲಾಗದುದಕ್ಕೆ "ಅವರೇ" ಕಾರಣರೆಂದೂ ಲೇಖಕರು ಹೇಳುತ್ತಾರೆ. ಈ ಸ್ಥಿತಿ ದಯನೀಯವೇ ಸರಿ. ಆದರೂ ಬಿದಾವ ಅಡೆ ತಡೆ;ಅಡ್ಡಿ ಆತಂಕಗಳಿದ್ದರೂ, ಕೊಡಗಿನ ಸ್ವಾತಂತ್ರ್ಯ ಹೋರಾಟದ ಕಥೆ ಲುಪ್ತ ಪ್ರಾಯವಾಗುವುದಕ್ಕೆ ಮೊದಲೇ ಸಂಗ್ರಹಿಸಿದ ಶ್ರೀ ಬಿ. ಡಿ. ಗಣಪತಿಯವರು ಅಭಿನಂದನಾರ್ಹರು. ಅವರ ಈ ಸಾಹಸವು ಇತರರಿಗೆ ಪ್ರೇರಕ ಶಕ್ತಿಯಾಯಿತೆಂದರೆ, ಅವರ ಸದುದ್ದೇಶ ಸಿದ್ಧಿಸಿದಂತೆಯೇ. ಹಾಗಾಗಲಿ. —ಗೋರಾ.

ನಿಮಗೂ ಗೊತ್ತಿರಲಿ

ಕೆಂಪು ಚೀನಾದ ವಿಚಿತ್ರ ವೀರರು

ಕೆಲವರನ್ನು ಆದರ್ಶ ವ್ಯಕ್ತಿಗಳೆಂದು ಹೊಗಳಿ, ಅವರನ್ನು ಜನರು ಹಿಂಬಾಲಿಸುವಂತೆ ಚೀಣಾದಲ್ಲಿ ಪ್ರತಿದಿನ ಒತ್ತಾಯದ ಆಜ್ಞೆಗಳನ್ನು ನೀಡಲಾಗುತ್ತಿದೆ. ಇಂದು ಒಬ್ಬ ಆದರ್ಶ ವ್ಯಕ್ತಿಯ ಹೆಸರನ್ನು ಸೂಚಿಸಿದ್ದರೆ, ಮಾರನೆ ದಿನ ಮತ್ತೊಬ್ಬನ ಆದರ್ಶಗಳನ್ನು ಹಿಂಬಾಲಿಸಲು ಕರೆ ಬರುವುದು. ಉದಾಹರಣೆಗೆ ಮೂರು ಶಸ್ತ್ರಾಸ್ತ್ರ ದಳಗಳ ಸೈನಿಕರು ಮಾಷಿಯನ್—ಟೆ ಎಂಬವನನ್ನು ಆದರ್ಶವಾದಿಯಾಗಿದ್ದುಕೊಳ್ಳಲು ಜನತಾ ವಿಮೋಚನಾ ಸೇನೆಯು ನೀಡಿದ ಆಜ್ಞೆಯು ಹೊರಟಿದ್ದ ಮರುಗಳಿಗೆಯಲ್ಲೇ ಜನತಾ ವಿಮೋಚನಾ ಸೇನೆಯ ಸಾಮಾನ್ಯ ರಾಜಕೀಯ ವಿಭಾಗವು ಮತ್ತೊಂದು ಆಜ್ಞೆಯನ್ನು ಹೊರಡಿಸಿ ಬೈವೊಯು—ಲು ಎಂಬುವನ ಆದರ್ಶದಿಂದ ಅನೇಕ ಮಹತ್ವ ವಿಚಾರಗಳನ್ನು ಕಲಿಯಬೇಕೆಂದು ಒತ್ತಾಯ ಮಾಡಿದೆ.

ಕಮ್ಯೂನಿಸ್ಟ್ ಪಕ್ಷದ ಆದರ್ಶ ಸದಸ್ಯನೆಂದೂ ಮಾವೊತ್ಸೆ ತುಂಗ್‌ನ ಉತ್ಸುಕತೆಯ ಹಿಂಬಾಲಕನೆಂದೂ ಬೈವೋನನ್ನು ಹೊಗಳಲಾಗಿದೆ. ಪಕ್ಷಗಳ ಕಾರ್ಯದರ್ಶಿಗಳಿಗೆ ಅವನು ಉತ್ತಮ ಆದರ್ಶವಾಗಿದ್ದಾನೆಂದೂ ಯುದ್ಧದ ಎಲ್ಲಾ ವಿಭಾಗದ ಅಧಿಕಾರಿಗಳಿಗೆ ಉತ್ತಮ ಉದಾಹರಣೆಯಾಗಿದ್ದಾನೆಂದೂ ಪ್ರಶಂಸಿಸಲಾಗಿದೆ.

ಈ ಹೊಸ ಆದರ್ಶ ವ್ಯಕ್ತಿಯು ಲಾನ್ ಕಾವೋ ವಿಭಾಗದ ಪಕ್ಷದ ಕಾರ್ಯದರ್ಶಿಯಾಗಿದ್ದನೆಂದೂ ನೈಸರ್ಗಿಕ ವಿಪತ್ತುಗಳನ್ನು ಎದುರಿಸುವಲ್ಲಿ ತನ್ನ ಜೀವನವನ್ನೇ ಮುಡಿಪಾಗಿಟ್ಟನೆಂದೂ ಹೇಳಲಾಗಿದೆ. ಆದರೆ ವಾಸ್ತವ ಸಂಗತಿಯೇ ಬೇರೆ. ಅವನು ೪೨ನೇ ವಯಸ್ಸಿನಲ್ಲಿ ಪಿತ್ತ ಜನಕಾಂಗ ಸಂಬಂಧದ ಕಾಹಿಲೆಯಿಂದ ಔಷಧೋಪಚಾರಗಳಿಗೆ ಹಣವಿಲ್ಲದೆ ೧೯೬೪ನೇ ಮೇ ೧೪ರಂದು ಮರಣ ಹೊಂದಿದನು.

ಕೆಲವು ವ್ಯಕ್ತಿಗಳ ಕಲ್ಪಿತ ಆದರ್ಶಗಳನ್ನು ಪ್ರಚಾರ ಮಾಡುವ ಮೂಲಕ ತಮ್ಮ ಪಕ್ಷವನ್ನು ದೃಢಪಡಿಸಿಕೊಳ್ಳಲು ವಿಚಿತ್ರ ರೀತಿಯಲ್ಲಿ ಆಡಳಿತದ ನಾಯಕರು ಯತ್ನಿಸುತ್ತಿದ್ದಾರೆ. ಎರಡು ವರ್ಷಗಳ ಹಿಂದೆ ಮರಣ ಹೊಂದಿದ ವ್ಯಕ್ತಿಯನ್ನು ಇಂದು ದೇಶದ ಆದರ್ಶ ವ್ಯಕ್ತಿಯೆಂದು ಹೊಗಳಿ ಹಾಡುತ್ತಿರುವುದು ಅಭೇದ್ಯ ಸಂಗತಿ.

ದೇಶದ ಆದರ್ಶ ವ್ಯಕ್ತಿಗಳೆಂದು ಹೊಗಳಿಸಿಕೊಂಡಿರುವ ಲೆಫೆಂಗ್, ವಾಂಗ್ ಜೈ ಮತ್ತು ಜೈ ವೊ ಮುಂತಾದವರು ಹೊಗಳಿಸಿಕೊಳ್ಳುವ ಕಾಲಕ್ಕೆ ಅವರಾರು ಬದುಕಿಲ್ಲದ ಸಂಗತಿ ತಿಳಿದು ಬಂದಿದೆ. ಮಾಷಿಯನ್—ಟೆ ಎಂಬವನು ಮಾತ್ರ ಬದುಕಿರುವುದಾದರೂ; ಆಸ್ಪತ್ರೆಯಲ್ಲಿ ಸಾವಿನ ದವಡೆಯಲ್ಲಿದ್ದಾನೆ.

ಮಾಷಿಯನ್—ಟೆ ಯು ೧೯೬೫ರಲ್ಲಿ ರಾಷ್ಟ್ರೀಯ ವಾದಿಗಳ ವಿರುದ್ಧ ನಡೆಸಿದ ಹೋರಾಟದಲ್ಲಿ ತಲೆಗೆ ಏಟು ತಿಂದು ಮೂರ್ಛೆ ಹೋದನೆಂದೂ ಪ್ರಸಿದ್ಧ ವೈದ್ಯ ತಂಡದವರು ನಡೆಸಿದ ಶಸ್ತ್ರ ಚಿಕಿತ್ಸೆಯಿಂದ ಎಚ್ಚರಗೊಂಡನೆಂದೂ ಹೇಳಲಾಗಿದೆ. 'ಪೂರ್ವವು ಕೆಂಪಾಗಿದೆ" ಎನ್ನುವ ಕ್ರಾಂತಿಯ ಕವನವನ್ನು ಮೂರ್ಛೆಯಿಂದ ಎಚ್ಚರಗೊಂಡ ನಂತರ ಹಾಡಿದನೆಂದೂ,ಅಧ್ಯಕ್ಷ ಮಾವೋನ ಕೃತಿಗಳನ್ನು ಓದಿದನೆಂದೂ 'ಲಿಬರೇಷನ್ ಡೈಲಿ' ಪತ್ರಿಕೆಯು ವರದಿ ಮಾಡಿದೆ.

ಮಾವೋನ ಕೃತಿಗಳನ್ನು ಓದಿದ್ದರಿಂದ ಮಾಷಿಯನ್-ಟೆಯ ತಲೆಯಲ್ಲಿ ಮಾವೋನ ವಿಚಾರ ಧಾರೆಗಳು ಹುಚ್ಚು ಹಿಡಿಸಿದ್ದವು. ಮೂರ್ಛೆಯಿಂದ ,ಎಚ್ಚರಗೊಂಡ ಮಾಷಿಯನ್-ಟೆ ಯು ಅದೇ ವಿಚಾರಗಳನ್ನು ವಟಗುಟ್ಟುತ್ತಿದ್ದನು ಎಂಬುದಾಗಿ ವಿವರಿಸಲಾಗಿದೆ.

ಈ ಎಲ್ಲಾ ಚೀಣಾದ 'ವೀರರು' ದಿನಚರಿಯ ಪುಸ್ತಕವನ್ನಿಟ್ಟುಕೊಂಡಿದ್ದರೆಂಬುದು ಗಮನೀಯವಾದುದು. ಅವರು ಸತ್ತ ಮೇಲೆ ಆ ಪುಸ್ತಕಗಳನ್ನು ತೆರೆದು ನೋಡಿದಾಗ, ಅವರ ನಿತ್ಯ ಜೀವನದ ಬಗ್ಗೆ ಯಾವ ಅಂಶವೂ ಕಂಡು ಬಂದಿಲ್ಲ. ಅದರಲ್ಲಿ ರಾಜಕೀಯ ಘೋಷಣೆಗಳು ಮತ್ತು ಪಕ್ಷದ ಪ್ರಚಾರಗಳನ್ನು ಮಾತ್ರ ಬರೆಯಲಾಗಿದ್ದಿತು. ಅದನ್ನು ಓದಿದರೆ, ಚೀಣಾದ ರಾಜಕೀಯ ಪ್ರಸಂಗಗಳನ್ನು ಕ್ರಮವಾಗಿ ಗುರುತಿಸಿರುವುದನ್ನು ಕಾಣಬಹುದು.

ಈ "ವೀರರು' ಅನುಮಾನಾಸ್ಪದ ಸನ್ನಿವೇಶಗಳಿಂದ ಸಾವನ್ನು ಅಪ್ಪಿರುವುದರಿಂದ ಅವುಗಳನ್ನು ಜನರಿಂದ ಮುಚ್ಚಲು ಈ 'ವೀರರನ್ನು' ಹೊಗಳುವ ಕಾರ್ಯಕ್ರಮ ಕೈಗೊಳ್ಳಲಾಗಿದೆಯೆಂಬುದು ಸ್ಪಷ್ಟವಾಗಿದೆ.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

21—4—1966

೧೦

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಮೊದಲು

ರಾಮಚಂದ್ರ ಪದವಿ ಪಡೆಯಲು ಅಸಮರ್ಥನಾಗಿ ಜಾನಕಿಯ ಪತಿಯಾಗಿ ಮಿತ್ರ ಕೇದಾರಿಯನ್ನಗಲಿ ಬಲವಂತಿಗೆ ತೆರಳಿದ. ಅದರ ದುರ್ದೈವದಿಂದ ಆತ ಶಿಬಿರ ಗುಮಾಸ್ತನಾದ; ಜಮೀನನ್ನು ಮಾರಿದ. ಅದೃಷ್ಟ ಬಲದಿಂದ ದೊಡ್ಡ ಉಪತಾಲೂಕಧಿಕಾರಿಯಾಗಿ ಭಡ್ತಿ ಹೊಂದಿದ ಕೆಡೆಲರ ನೆರವಿನಿಂದ ತನ್ನ ಕರ್ತವ್ಯ ಪಾಲಿಸುತಿದ್ದ.

ರಾಮುವಿನ ಒಕ್ಕಲು ಮುರುಗ ಶ್ರೀಮಂತನಾದ, ದುರ್ವ್ಯಸನಗಳಿಗೆ ಬಲಿಯಾದ, ಕೊಪ್ಪ ಮತ್ತಾತ ದೊಂಬಿಯೊಂದರಲ್ಲಿ ಬಂಧಿತರಾದರು.

ಕೇದಾರಿ ಉದಯೋನ್ಮುಖ ವಕೀಲನಾದ. ಕೋಕಿಲಂ ಹೆಂಡತಿ. ರಾಮಚಂದ್ರನ ನೆನಪು ಬಂದಾಗ ಆತ ಶಿಬಿರಗುಮಾಸ್ತನೆಂದು ತಿರಸ್ಕಾರ. ಮುರುಗನ ಪರವಾಗಿ ವಾದಿಸುವ ಕಾರ್ಯ ಈತನ ಕೈಸೇರಿತು. ಸಕಲ ಸಿದ್ಧತೆಯಿಂದಾತ ನ್ಯಾಯಾಲಯದತ್ತ ಹೊರಟಿದ್ದ.

ಮುಂದೆ—

ಶ್ರೀ ಟರ್ನರ್ ಅವರು ಕೇಂಬ್ರಿಡ್ಜಿನಲ್ಲಿ ಪ್ರಸಿದ್ಧ ವಿದ್ಯಾರ್ಥಿಯಾಗಿದ್ದರು. ಅವರು ಉದ್ದೇಶಪೂರ್ವಕವಾಗಿ ಭಾರತೀಯ ಪೌರ ಉದ್ಯೋಗ ಖಾತೆಯ ಮಾಹಿತಿ ಪಡೆದುಕೊಂಡು ಕೆಲಸಕ್ಕೆ ಸೇರಿದ್ದರು. ತಲೆಮಾರುಗಳಿಂದ ಸಾಹಿತ್ಯ ಉಪಾಸನೆಯ ಕಾರ್ಯ ಅವರಲ್ಲಿ ನಡೆದಿತ್ತು. ಅವರ ತಂದೆ 'ಹಣವನ್ನು ಹೇಗೆ ಮಾಡುವದು' ಮತ್ತು 'ಓದಿನಲ್ಲಿ ಹೇಗೆ ಸುಖಪಡುವದು' ಎಂಬ ಎರಡು ಪುಸ್ತಕಗಳನ್ನು ಬರೆದಿದ್ದರು. ಅವುಗಳು ಉತ್ತಮ ಪುಸ್ತಕಗಳಾದರೂ, ಅವುಗಳ ಪ್ರಚಾರಕಾರ್ಯ ಸರಿಯಾಗಿ ನಡೆಯದೆ ಇದ್ದುದರಿಂದ ಹೊರ ಜಗತ್ತಿಗೆ ಅವುಗಳ ಪರಿಚಯ ಅಷ್ಟಾಗಿ ಆಗಲಿಲ್ಲ.

ಡಿಕ್ಕನ್ಸಿಯ ಕಾಲದ ಉಜ್ವಲ ದಿನಗಳು ಅವರ ಮನಸೆಳೆದಿದ್ದರೂ, ಓದಿ ಮುಗಿಸಿದ ಮೇಲೆ, ಆ ದಿನಗಳು ಅವರನ್ನು ಅಧ್ಯಾಪ ಉದ್ಯೋಗಕ್ಕೂ ಪ್ರೇರೇಪಿಸಲಿಲ್ಲ. ಅಲ್ಲದೆ ಉತ್ಸಾಹವನ್ನೂ ಉಂಟುಮಾಡಲಿಲ್ಲ, ಅವರ ಸ್ವಭಾವ ಗುಣಕ್ಕೆ ಅದು ಸರಿಯಾಗಿ ಇರಲಿಲ್ಲ. ಹಾಗಾಗಿ ಅವರು ತನ್ನ ಎರಡನೆಯ ಪ್ರೀತಿಯ ವಿಷಯದತ್ತ ಗಮನ ಹರಿಸಿದರು. ಅವರು ಮೆಕಾಲೆಯ ಪುಸ್ತಕಗಳನ್ನು ಓದಿದ್ದರು. ಆದರಿಂದ ಪೂರ್ವ ದೇಶದ ಜನರನ್ನು ಕಾಣಬೇಕೆಂಬ ಲವಲವಿಕೆ ಅವರಲ್ಲುಂಟಾಗಿತ್ತು; ಅದರಿಂದಾಗಿ ಅವರು ಮತ ಪ್ರಸಾರಕರಾಗಿ ಹಿಂದೂಸ್ಥಾನದ ಅಥವಾ ಚೀನಾದ ಮುಗ್ಧ ಜನತೆಯ ಮಧ್ಯೆ ಜೀವನವನ್ನು ಕಳೆಯಬೇಕಾಗುತ್ತಿತ್ತು. "ಹಣವನ್ನು ಹೇಗೆ ಮಾಡುವದು" ಪುಸ್ತಕವನ್ನು ರಚಿಸಿದ್ದ ಅವರ ತಂದೆಯವರು ಮಗನ ಆ ಹುಚ್ಚಾಟಗಳಿಗೆ ಪ್ರೋತ್ಸಾಹ ನೀಡದೆ 'ರಾಜ್ಯದ ಪೌರೇಯ ಇಲಾಖೆ'ಯಲ್ಲಿ ಮಗನು ಸೇರುವಂತೆ ಪ್ರಯತ್ನಿಸಿದರು. ಒಪ್ಪಂದವೆಂಬಂತೆ ಅವರು ಭಾರತದ ಪೌರ ಉದ್ಯೋಗ ಖಾತೆಯಲ್ಲಿ ಸೇರಿ ಕೊಂಡರು. ಆ ಖಾತೆಯಲ್ಲಿ ದೊರಕುತ್ತಿದ್ದ ಸಂಬಳವು ಅವರ ತಂದೆಯವರ ಮನಸ್ಸನ್ನು ಸೆಳೆಯಿತು. ಅದು ತಂದೆಯ ಮಾತನ್ನು ಮಕ್ಕಳು ಕೇಳುವ ಕಾಲವಿತ್ತು.

ಮೆಕಾಲೆಯ ಕೈಯಿಂದಲೂ ಹೊಗಳಿಕೆಯ ಬರಹಗಳನ್ನು ಬರೆಯಿಸಿ ಕೊಂಡಿದ್ದ ಕೊರೊಮಂಡಲ ಕರಾವಳಿಯಲ್ಲಿ ಕೆಲಸಕ್ಕೆ ಸೇರಲು ಅವರು ಇಷ್ಟಪಟ್ಟಿದ್ದರು. ಮೆಕಾಲೆಯ ಹೊಗಳಿಕೆ ಮಾತ್ರವಲ್ಲದೆ ಅಲ್ಲಿಯ ಜನರಿಗೆ ಗಣಿತಶಾಸ್ತ್ರದ ಮೇಲಿದ್ದ ಅನುಭವವೂ ಅವರ ಮನಸ್ಸನ್ನು ಸೆಳೆದಿತ್ತು. ಪರೀಕ್ಷೆಯ ಫಲಿತಾಂಶಗಳು ವಿದ್ಯಾರ್ಥಿಗಳ ಅಭಿರುಚಿಯ ಸೂಚಿಯಲ್ಲದಿದ್ದಲ್ಲಿ ಟರ್ನರರಿಗೆ ನಿಜವಾಗಿ ಗಣಿತದ ಮೇಲೆ ಅಭಿಮಾನವಿತ್ತು.

ಹಾಗೆಯೇ ಶ್ರೀ ಟರ್ನರ್ ತನ್ನ ಉದ್ಯೋಗದಲ್ಲಿ ಮೂರು ವರ್ಷಗಳನ್ನು ಕಳೆಯುವ ಮೊದಲೇ ಸೆಂಗಲ್ ಪೇಟೆ ಉತ್ತರ ಆರ್ಕಾಟು ಜಿಲ್ಲೆಗಳಲ್ಲಿ ಭಯಂಕರ ಕ್ಷಾಮ ಬಂತು. ಆಗಿನ ಭಾರತೀಯರ ಪರಿಸ್ಥಿತಿಯ ಮೇಲೆ ಅವರಿಗಿದ್ದ ಅನುತಾಪ, ಅಲ್ಲದೆ ಬಡವರ ಮೇಲಿದ್ದ ಕರುಣೆಯ ವಿಷಯ ಸರಕಾರಕ್ಕೆ ತಿಳಿದಿದ್ದುದರಿಂದ ಅವರನ್ನೇ ಕ್ಷಾಮಪೀಡಿತ ಸ್ಥಳಗಳಲ್ಲಿ ಸಹಾಯ ನೀಡಲು ಮುಖ್ಯಸ್ಥರನ್ನಾಗಿ ಕಳುಹಿಸಿದರು. ಅವರು ವೈಯುಕ್ತಿಕ ಉತ್ಸಾಹದಿಂದ ಕಷ್ಟಪಟ್ಟು, ಕ್ಷಾಮದೊಂದಿಗೆ ಹೋರಾಡುತ್ತಿದ್ದವರೊಂದಿಗೆ ಸೇರಿ, ತಾನೂ ಕಷ್ಟದ ಅನುಭವವನ್ನು ಪಡೆದುಕೊಂಡರು. ಆ ಅನುಭವದಿಂದ ದೇವರೆದುರಿಗೆ ಎಲ್ಲಾ ಮಾನವರು — ಕಪ್ಪು, ಬೂದು ಅಥವಾ ಬಿಳಿ — ಒಂದೇ ಎಂಬ ತತ್ವದ ಅರ್ಥ ಅವರಿಗಾಯಿತು. ವರ್ಣ ಅಥವಾ ಪಂಗಡಗಳ ದುರಭಿಮಾನವು ಕಳ್ಳತನದಿಂದ ಮನುಷ್ಯರ ಮನಸ್ಸನ್ನು ಕಲುಷಿತಗೊಳಿಸಿವೆ ಎಂಬುದನ್ನವರು ತಿಳಿದುಕೊಂಡರು.

ಬರಗಾಲ ವಿವರಣಾ ಸಮಯದಲ್ಲಿ, ಸರೋವರದ ಕಟ್ಟೆಯ ಮೇಲಿಂದ ಓಡುವಂತೆ ಒಂದು ರಸ್ತೆಯನ್ನು ಮಾಡಿಸಿದರು. ಮಾರ್ಗಮಾಡಲು ಸರೋವರದಿಂದ ಮಣ್ಣನ್ನು ಅಗೆದುದರಿಂದ ಸರೋವರವು ಆಳವಾಯಿತು. ಮಾರ್ಗಮಾಡಲಿಕ್ಕಾಗಿ ಕಟ್ಟೆಯನ್ನು ವಿಶಾಲಗೊಳಿಸಿದುದರಿಂದ ಕಟ್ಟೆಯು ಭದ್ರವಾಯಿತು; ಹಳ್ಳಿಗೆ ರಸ್ತೆಯೂ ಆಯಿತು. ಹೀಗೆ ಒಂದೇ ಪೆಟ್ಟಿಗೆ ಮೂರು ಹಕ್ಕಿಗಳು ಬುಟ್ಟಿಯಲ್ಲಿ ಬಿದ್ದುವು. ಕೆಲಸವಿಲ್ಲದೆ ತತ್ತರಿಸುತ್ತಿದ್ದ ಜನರಿಗೆ ಕೆಲಸವೂ ಸಿಕ್ಕಿದಂತಾಯಿತು. ಟರ್ನರನ ಆಲೋಚನೆಗಳನ್ನು ಮಾತ್ರ ಕೊಡುತ್ತಿದ್ದುದಲ್ಲದೆ ಸ... ಕ್ಷ ಕೆಲಸದಲ್ಲಿ ಗಮನಕೊಟ್ಟಿದ್ದರು.

ಶ್ರಮಿಕರ ಆ ಗುಂಪಿನಲ್ಲಿ ಹದಿನೇಳು ವರ್ಷ ಪ್ರಾಯದ ಓರ್ವ ಚೆಲುವೆ ಯುವತಿ ಇದ್ದಳು. ಗೊಲ್ಲರ ಹುಡುಗಿಯರ ಚೆ... ದ ಪ್ರಪಂಚಕ್ಕೇನೇ ಗೊತ್ತಿದೆ. ಅವಳ ಅ... ದದ ಕುರಿತು ಎಷ್ಟು ಹೊಗಳಿದರೂ ಸಾಲದು. ಮೋಡ ಮುಸುಕಿರುವ ಆಕಾಶದಲ್ಲಿ ಮಿಂಚು ಚಲಿಸುವಂತೆ, ಆ ಗುಂಪಿನ ನಡುವೆ ಆಕೆ ಚಲಿಸುತ್ತಿದ್ದಳು. ಬಯಲಿನಲ್ಲಿ ಇರುವ ಸಾಮಾನ್ಯ ಹುಲ್ಲಿನ ಮಧ್ಯೆ ತುಂಬೆಯ ಹೂ ಎದ್ದು ಕಾಣುವಂತೆ, ... ವರೆಲ್ಲರ ನಡುವೆ ಆಕೆ ಸ್ಪಷ್ಟವಾಗಿ, ಸ... ಕೋಮಲೆಯಾಗಿ ಕಂಡು ಬರುತ್ತಿದ್ದಳು. ಬುಟ್ಟಿಯಲ್ಲಿ ಮಣ್ಣನ್ನು ಹೊತ್ತುಕೊಂಡು, ಎಲ್ಲರತ್ತವೂ ನಗುವನ್ನು ಬೀರುತ್ತ, ... ರೋವರದ ಕಟ್ಟೆಗೆ ಮಣ್ಣನ್ನು ಹೊರುತ್ತಿದ್ದಾಗ, ಆ ಕೆಲಸಕ್ಕಾಗಿಯೇ ಹುಟ್ಟಿರುವಳೋ ಎಂಬಂತಿದ್ದಳು.

ಸರೋವರದ ದಂಡೆಯ ಮೇಲೆ, ಗೋಳಿ ಮರವೊಂದರ ನೆರಳಿನಲ್ಲಿ ಟರ್ನರ್ ಕುಳಿತುಕೊಂಡಿದ್ದರು. ಆ ಯುವತಿ ಅತ್ತ ಬಂದೊಡನೆ ಅವರ ದೃಷ್ಟಿ ಅಲ್ಲಿಂದ ಬೇರೆಡೆಗೆ ಚಲಿಸದೆ ಹೋಯಿತು. ಪ್ರಯತ್ನಪೂರ್ವಕ ದೃಷ್ಟಿಯನ್ನು ಬೇರೆಡೆಗೆ ಬದಲಾಯಿಸಿ, ತನ್ನ ಕೇಂಟಬ್ ನಾಗರಿಕತೆ ಮತ್ತು ಆಳುತ್ತಿರುವವರ ವರ್ಣದ ಕುರಿತು ಆಲೋಚಿಸ ತೊಡಗಿದರು. ಒಂದು ಮಂಜಿನ ಚೂರು ಇನ್ನೊಂದರೊಟ್ಟಿಗೆ ಸೇರಲು ತವಕ ಪಡುವಂತೆ, ಮಿಲನವಾಗದಿರುವ ಅವರ ಪ್ರೇಮ ತನ್ನ ಜೊತೆಗಾತಿಯನ್ನು ಸೇರಲು ತವಕ ಪಡಲಾರಂಭಿಸಿತು. ಪಕ್ಕದಲ್ಲಿದ್ದ ಹುಲ್ಲಿನ ಗಂಗಳು ಸಮ್ಮತಿ ಸೂಚನೆಗಾಗಿ ಗಾಳಿಯ ಸಹಾಯವನ್ನು ಎದುರು ನೋಡುತ್ತಿದ್ದುವು.

ಬರ ಪೀಡಿತ ಚಂದವು ನಾಗರಿಕ ತರುಣನಲ್ಲಿ ಪ್ರಬಲ ಪ್ರಣಯವನ್ನು ಪ್ರಚೋದಿಸುತ್ತದೆ. ವರ್ಣಭೇದ, ರಾಷ್ಟ್ರೀಯ ವಿವಿಧತೆ, ಗೌರವ, ಸ್ಥಿತಿಗತಿಗಳ ಮೇಲೆ ಪ್ರೇಮವು ಸೇತುವೆಯನ್ನು ಕಟ್ಟುತ್ತದೆ.

ಹದಿನೇಳನೆ ಶತಮಾನದಲ್ಲಿ ಪ್ರಬಲರಾಗಿದ್ದ ನಾಯಕರ ಕುಟುಂಬಕ್ಕೆ ಸೇರಿದ್ದವಳಿದ್ದಳು ಆ ತರುಣಿ. ಆಕೆಯ ಹಣದ ಚೀಲ ಬರಿದಾಗಿದ್ದರೂ, ಆಕೆ ನಿಸರ್ಗದತ್ತ ಬಹುಮಾನದ ಭಂಡವಾಳದೊಡತಿ. ರಾಣಿಗಳ ಮುಖದಂತೆ ಆಕೆಯ ಮುಖವಿತ್ತು. ಅವಳ ಬಣ್ಣದ ಜನರನ್ನು ಸ್ಪೇನಿನಲ್ಲಿ ಕಾಣಬಹುದು. ಆಕೆಯ ಇಷ್ಟೆ ಬಣ್ಣವು ದೇಹವನ್ನು ಬಂಗಾರದಿಂದ ಮಾಡಲ್ಪಟ್ಟಿದ್ದೆಂದು ಟರ್ನರ್ ಭಾವಿಸುವಂತೆ ಭ್ರಮೆಯನ್ನುಂಟುಮಾಡಿತು. ಹೇಗೂ ಅವಳನ್ನು ಮದುವೆಮಾಡಿಕೊಂಡು ಪ್ರೇಮಪಕ್ಷಿಗೆ ಜೊತೆ ಹಕ್ಕಿಯನ್ನು ಹಿಡಿದುಕೊಟ್ಟರು. ಆದರಿಂದ ಅವರ ಜಾತಿಯವರ ವಿರೋಧವನ್ನು ಸಹಿಸಿಕೊಳ್ಳಬೇಕಾಯಿತು.

ತನ್ನ ಉದ್ಯೋಗ ಹಾಗೂ ಹೆಂಡತಿಯಲ್ಲಿ ಅವರು ಗಾಢವಾಗಿ ಲೀನವಾಗಿದ್ದರು. ಅವಳಿಗೆ ಓದು ಬರಹವನ್ನು ಕಲಿಸಿದರು. ತಾನು ಇಚ್ಛಾಪೂರ್ತಿಯವಸ್ತುವೆಂಬುದನ್ನಾಗಿ ತೋರಿಸಿಕೊಟ್ಟಳು. ಆಕೆಯ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	$5\frac{1}{2}$
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	$6\frac{1}{2}$
24 ತಿಂಗಳಿಂದ	36 ತಿಂಗಳ ಕೆಳಗೆ	....	$6\frac{3}{4}$
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	$7\frac{1}{4}$
60 ತಿಂಗಳಿಂದ	84 ತಿಂಗಳ ಕೆಳಗೆ	....	$7\frac{3}{4}$
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್	ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೩೨	೨೧—೪—೧೯೬೬	No. 32

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ್ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮಡಿಕೆ ತಯಾರಿಯ ತರಬೇತಿ ಕೇಂದ್ರವೊಂದರ ದೃಶ್ಯ.

ಉತ್ತಮ ನೆರೆಹೊರೆ

ನೇಪಾಳದ ಪ್ರಧಾನ ಮಂತ್ರಿ ಸೂರ್ಯ ಬಹದ್ದೂರ್ ಥಾಪಾ ಅವರು ಭಾರತವನ್ನು ಸಂದರ್ಶಿಸಿದರು. ಈ ಭೇಟಿಯು ಬರಿಯ ಸೌಹಾರ್ದಪ್ರದ ಮಾತ್ರವೆಂದು ಶ್ರೀ ಥಾಪಾರೇ ಹೇಳಿದ್ದಾರೆ. ಏಕೆಂದರೆ, ಭಾರತ ಮತ್ತು ನೇಪಾಳಗಳ ನಡುವೆ ಹೇಳಿಕೊಳ್ಳಬಹುದಾದ ಯಾವುದೇ ಗಂಭೀರ ಸಮಸ್ಯೆಗಳಿಲ್ಲ. ತಮ್ಮ ಸಂದರ್ಶನದಿಂದ ಮೊದಲೇ ಇರುವ ಸಂಬಂಧವನ್ನು ಮತ್ತಷ್ಟು ದೃಢಗೊಳಿಸಿ ಥಾಪಾರು ತೆರಳಿದರು; ಭೇಟಿ ಮತ್ತು ಮಾತುಕತೆಗಳು ಮುಕ್ತ ಮನಸ್ಸಿನವಾಗಿದ್ದು ತೃಪ್ತಿಕರವಾಗಿದ್ದುವೆಂಬುದು ಜಂಟಿ ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಉತ್ತರ ಗಡಿಯಲ್ಲಿರುವ ಈ ಪುಟ್ಟ ಪರ್ವತರಾಜ್ಯ ನೇಪಾಳದೊಡನೆ ನಾವು ನಿಕಟ ಸಂಪರ್ಕವನ್ನಿಟ್ಟುಕೊಳ್ಳುತ್ತ ಬಂದಿದ್ದೇವೆ. ಚೀನೀಯರ ಆಕ್ರಮಣದ ಬೆದರಿಕೆ ಬಂದ ಮೇಲೆ ಈ ಸಂಪರ್ಕ ಇನ್ನೂ ಬಿಗಿಗೊಳ್ಳುತ್ತ ಬಂದಿದೆ. ಕೆಂಪು ಚೀನಾದ ಆಕ್ರಮಣ ನೀತಿ ಬರಿಯ ಭಾರತಕ್ಕೆ ಮಾತ್ರವಲ್ಲ, ನೇಪಾಳಕ್ಕೂ ಪಾಕಿಸ್ತಾನಕ್ಕೂ ಮೃತ್ಯು ಸಮಾನವಾದುದು. ಇದರೊಡನೆ ಹೋರಾಡುವುದರಲ್ಲಿ ಪಾಕಿಸ್ತಾನ ಸೇರದೆ-ಅದನ್ನೇ ಅಪ್ಪಿಕೊಳ್ಳಲು ಮುಂದಾಗಿದೆ. ಹಾಗಿದ್ದರೂ ಭಾರತ ಮತ್ತು ನೇಪಾಳಗಳು ಆಕ್ರಮಣವನ್ನೆದುರಿಸುವಲ್ಲಿ ದೃಢ ನಿಲುವು ವಹಿಸಬೇಕಾಗಿದೆ.

ಇಬ್ಬರು ಪ್ರಧಾನ ಮಂತ್ರಿಗಳು ಕೆಂಪು ಚೀನಾದ ಆಕ್ರಮಣ ಭೀತಿಯನ್ನೇನೂ ಪ್ರಸ್ತಾಪಿಸಲಿಲ್ಲ. ಏಕೆಂದರೆ, ಅದು ಎಲ್ಲರಿಗೂ ಗೊತ್ತಿರುವ ಸಂಗತಿ. ಚೀನೀಯ ಸೇನೆಗಳ ತುಕಡಿಗಳು ಭೂತಾನ—ಸಿಕ್ಕಿಂ ಗಡಿಯಲ್ಲಿ ಅತ್ತಿಂದಿತ್ತ ಸಂಚಾರ ಮಾಡುತ್ತಿರುವುದು ಲೋಕಕ್ಕೆ ತಿಳಿದಿದೆ. ನೇಪಾಳದ ಗಡಿಯಲ್ಲಿ ಚೀನವು ಹೆಚ್ಚಿನ ಬೆದರಿಕೆಯನ್ನು ಹಾಕಿಯೂ ಇಲ್ಲ. ಹಾಗಿದ್ದರೂ ಭಾರತವನ್ನೇ ಗಬಳಿಸ ಬಯಸುವ ಕೆಂಪು ಚೀನಾ ನೇಪಾಳ— ಪಾಕಿಸ್ತಾನಗಳನ್ನು ಬಿಡುವುದುಂಟೆ? ತಿಮಿಂಗಿಲ ನ್ಯಾಯವಲ್ಲವೆ? ಆದುದರಿಂದಲೇ ವಿದೇಶೀ ಮಿತ್ರರು ಹೇಳುವಂತೆ ಕೆಂಪು ಚೀನಾ ಬರಿಯ ಭಾರತದ ಶತ್ರುವಲ್ಲ; ಭಾರತ ಉಪಖಂಡದ ಪರಮ ಶತ್ರು. ಇದನ್ನು ನೆನಪಿಸಿಕೊಂಡಷ್ಟು ಶೀಘ್ರವಾಗಿ ದೇಶ ಉಳಿಯಬಲ್ಲುದು. ಅಂತಾರಾಷ್ಟ್ರೀಯ ತಂಟೆಗಳ ಪರಿಹಾರಕ್ಕೆ ಬಲಪ್ರಯೋಗ ಮಾಡದೆ ಶಾಂತಿಯುತ ವಿಧಾನಗಳನ್ನು ಅನುಸರಿಸಬೇಕೆಂಬ ವಿಚಾರದಲ್ಲಿ ಗಾಂಧೀ-ಥಾಪಾರು ತಮ್ಮ ವಿಶ್ವಾಸವನ್ನು ವ್ಯಕ್ತ ಪಡಿಸಿದರು. ಶಾಂತಿಯುತ ಸಹಜೀವನ, ತಾಟಸ್ಥ್ಯ ನೀತಿ ಮತ್ತು ಅಂತಾರಾಷ್ಟ್ರೀಯ ಸಹಕಾರ ಮೊದಲಾದ ತತ್ವಗಳಿಗಾಗಿ ಸರ್ವ ಸಮರ್ಪಣ ಭಾವದಿಂದ ಸೇವೆ ಸಲ್ಲಿಸಲು ಇಬ್ಬರೂ ಒಪ್ಪಿದ್ದಾರೆ. ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲು ಅವಕಾಶವಿರಬಾರದು, ಅವುಗಳ ಸ್ವಾತಂತ್ರ್ಯ ಹಾಗೂ ಸಾರ್ವಭೌಮತ್ವಗಳನ್ನು ಸಂರಕ್ಷಿಸಬೇಕೆಂಬ ಸಂಯುಕ್ತ ರಾಷ್ಟ್ರಸಂಘದ ಘೋಷಣೆಯನ್ನು ಇವರು ಮತ್ತೊಮ್ಮೆ ಅನುಮೋದಿಸಿದರು. ತಾಷ್ಕೆಂಟ್ ಘೋಷಣೆಯನ್ನು ಭಾರತವು ಪರಿಪಾಲಿಸುತ್ತಿರುವುದನ್ನೂ ಮುಂದೆಯೂ ಅದಕ್ಕೆ ಅಂಟಿಕೊಂಡಿರಲು ದೃಢ ನಿರ್ಧಾರ ತಳೆದಿರುವುದನ್ನೂ ಕಂಡು ಥಾಪಾರೇ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ವಿಯತನಾಮ- ಸಂಪೂರ್ಣ ನಿಶ್ಶಸ್ತ್ರೀಕರಣ ಮೊದಲಾದುವುಗಳ ಬಗ್ಗೆಯೂ ಮಾತುಕತೆ ನಡೆಯಿತು. ವ್ಯಾಪಾರ ಮತ್ತು ಆರ್ಥಿಕ ಅಭಿವೃದ್ಧಿಯ ಸಂಬಂಧದಲ್ಲಿ ಸಂ. ರಾ. ಸಂಸ್ಥೆಯು ಅಂಗೀಕರಿಸಿದ ಗೊತ್ತುವಳಿಯನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಇಬ್ಬರು ಪ್ರಧಾನಿಗಳೂ ಒಪ್ಪಿದರು; ಮಾತ್ರವಲ್ಲ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜೀವನಮಟ್ಟವು ಅಜಗಜಾಂತರವಾಗುತ್ತಿರುವುದಕ್ಕೆ ವ್ಯಸನ ವ್ಯಕ್ತಪಡಿಸಿದರು.

ಜಂಟಿ ಹೇಳಿಕೆಯ ಎಲ್ಲ ಅಂಶಗಳೂ ಭಾರತಕ್ಕೆ ಉಪಯುಕ್ತವೇ ಆಗಿರುವುದು ಗಮನೀಯವಿದೆ. ಪಾಕಿಸ್ತಾನದ ಆಕ್ರಮಣ, ಕೆಂಪು ಚೀನಾದ ಭೀಕರ ಬೆದರಿಕೆಗಳ ಸಂಬಂಧ ನೇರವಾಗಿ ಬಂದಿರುವುದಿಲ್ಲವಾದರೂ ಶಾಂತಿಯುತ ಸಹ ಅಸ್ತಿತ್ವದ ನೀತಿಯ ಪುನರುಚ್ಚಾರ, ವಿವಾದ ಪರಿಹಾರಕ್ಕೆ ಶಸ್ತ್ರ ಪ್ರಯೋಗ ನಿಷೇಧ ಹಾಗೂ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪಕ್ಕೆ ವಿರೋಧ, ಭಾರತವು ತಾಷ್ಕೆಂಟ್ ಘೋಷಣೆಯನ್ನು ಪರಿಪಾಲಿಸುತ್ತಿರುವ ವಿಧಾನಕ್ಕೆ ಮೆಚ್ಚುಗೆ—ಇವುಗಳಿಂದ ನೇಪಾಳದ ಪ್ರಧಾನಿ ಭಾರತಕ್ಕೆ ತೀರ ಹತ್ತಿರವಾದ ಅಭಿಪ್ರಾಯವುಳ್ಳವರು ಎನ್ನಲು ಅಡ್ಡಿಯಿಲ್ಲ. ನೇಪಾಳಕ್ಕೆ ಭಾರತವು ಹಿಂದೆಯೂ ಸಹಾಯವನ್ನು ನೀಡಿದೆ; ಮುಂದೆಯೂ ನೀಡಲಿದೆ. ತನ್ನ ತೃತೀಯ ಯೋಜನೆಯ ವೇಳೆ ಭಾರತವು ನೇಪಾಳಕ್ಕೆ ನೀಡಿದ್ದ ಸಹಾಯಕ್ಕೆ ಥಾಪಾ ಸಂತೋಷವನ್ನು ವ್ಯಕ್ತಪಡಿಸಿ, ಭಾರತಕ್ಕೆ ಅಭಿನಂದನೆಗಳನ್ನು ಅರ್ಪಿಸಿದರು. ನಾಲ್ಕನೆಯ ಯೋಜನಾವಧಿಯಲ್ಲಿಯೂ ನೆರವು ನೀಡುವ ಆಶ್ವಾಸನವನ್ನು ಇಂದಿರಾ ಗಾಂಧಿ ಇತ್ತರು. ಶ್ರೀಮತಿ ಗಾಂಧಿಯವರು ಹೇಳುವಂತೆ ಭಾರತಕ್ಕಿಂದು ಸಾಂಪತ್ತಿಕ ಸಹಾಯಕ್ಕಿಂತಲೂ ಮಾನಸಿಕ ಸಹಾಯ ಅಗತ್ಯವಿದೆ. ಭಾರತವನ್ನು ತಪ್ಪು ತಿಳಿದುಕೊಂಡವರು ನಮ್ಮ ಅಚಲ ನಿಲುವನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳುವಂತೆ ಮಾಡುವುದು ಅಗತ್ಯ. ಸದ್ಭಾವನೆಯು ನಮ್ಮಿಂದಿನ ಪರಮಾವಶ್ಯಕತೆ. ನೇಪಾಳ—ಭಾರತೀಯ ಪ್ರಧಾನಿಗಳ ಮಾತುಕತೆಗಳು ಇದಕ್ಕೆ ಸಹಾಯಕವಾಗಿವೆ. ಮುಂದೆ ಇವು ಬೆಳೆದು ಬರಬಹುದಾದ ಅವಕಾಶಗಳೂ ಸಾಕಷ್ಟಿವೆ.

ವಚನ ಸುಧೆ

ಸರ್ಪಶ್ಚಾಗ್ನಿಶ್ಚ ಸಿಂಹಶ್ಚ
ಕುಲಪುತ್ರಶ್ಚ ಭಾರತ
ನಾವಜ್ಞೇಯಾ ಮನುಷ್ಯೇಣ
ಸರ್ವೇ ಹ್ಯೇತೇಽತಿ ತೇಜಸಃ ॥

ಸರ್ಪ, ಅಗ್ನಿ, ಸಿಂಹ ಮತ್ತು ಕುಲದಲ್ಲಿ ಜನಿಸಿದ ಮಗು— ಇವುಗಳನ್ನು ಯಾವ ಕಾಲಕ್ಕೂ ಅನಾದರದಿಂದ ನೋಡಬಾರದು. ಏಕೆಂದರೆ ಇವು ತೀವ್ರ ತೇಜಸ್ವಿಯಾಗಿರುತ್ತವೆ.

ಯುವ ಜನಾಂಗಕ್ಕೆ ಆಹ್ವಾನ

ವಿದೇಶೀ ವಿನಿಮಯಗಳ ಕೊರತೆ ನಮ್ಮ ತಲೆ ತಿನ್ನುತ್ತಿದೆ. ಪಾಕಿಸ್ತಾನವು ನಮ್ಮ ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ಅಕ್ರಮವಾಗಿ ಮಾಡಿದ ಆಕ್ರಮಣವನ್ನು ನಾವು, ಭಾರತೀಯರು ಎದುರಿಸಿ ಪಾಕ್ ಸೇನಾನೆಲೆಗಳನ್ನು ತಡೆಯಲು ಮಾಡಿದ ನ್ಯಾಯೋಚಿತ ಸೀಮೋಲ್ಲಂಘನದಿಂದ ರೊಚ್ಚಿಗೆದ್ದ ವಿದೇಶೀ ಮಿತ್ರರು ನೆರವಿನ ದಾರಿಯನ್ನು ತಡೆದುದರಿಂದ ಈ ಪರಿಸ್ಥಿತಿ ತಲೆದೋರಿದೆ. ಇದರಿಂದ ನಮ್ಮ ಅನೇಕ ಉದ್ದಿಮೆಗಳು ಕುಂಟುತ್ತಿವೆ; ಕುಂಟತೊಡಗಿವೆ. ಉದಾಹರಣೆಗಾಗಿ ಎಚ್. ಎಂ. ಟಿ. ಕಾರ್ಖಾನೆಯನ್ನೇ ತೆಗೆದುಕೊಳ್ಳಬಹುದು. ಎಚ್. ಎಂ. ಟಿ. ಗಡಿಯಾರಗಳಿಗಿಂದು ವಿದೇಶೀ ಮಾರುಕಟ್ಟೆಯೂ ಇದೆ. ದೇಶದಲ್ಲೂ ಬೇಡಿಕೆಯಿದೆ. ಆದರೆ, ವಿದೇಶಗಳಿಂದ ಬರಬೇಕಾದ ಬಿಡಿ ಭಾಗಗಳಿಲ್ಲದೆ ತಯಾರಿಯೇ ನಡೆಯುತ್ತಿಲ್ಲವೆನ್ನಬಹುದು. ಪ್ರತಿದಿನ ಒಂದು ಸಾವಿರ ಗಡಿಯಾರಗಳು ಹಿಂದೆ ತಯಾರಾಗುತ್ತಿದ್ದರೆ, ಇಂದು ಒಂದು ನೂರೂ ಇಲ್ಲ. ಹೀಗೆಯೇ ನಡೆದರೆ ಪರಿಸ್ಥಿತಿ ಪೂರಾ ಬಿಗಡಾಯಿಸುವುದು. ಉದ್ದಿಮೆಗಳು ನಷ್ಟಪ್ರದವಾಗುವುದರೊಡನೆ ವ್ಯಾಪಾರ—ವಿದೇಶೀ ವಿನಿಮಯ ಸಂಪಾದನೆಯೂ ಕುಂಠಿತವಾಗುತ್ತದೆ. ಇದಕ್ಕೇನು ಪರಿಹಾರ? ನಮ್ಮ ಬೃಹತ್ ರಾಷ್ಟ್ರ ತನ್ನ ಅವಶ್ಯಕತೆಗಳನ್ನು ತಾನೇ ಉತ್ಪಾದಿಸುವಂತೆ ಮಾಡುವುದು ಒಂದೇ, ತನ್ನ ಕಾಲ ಮೇಲೆ ತಾನು ನಿಲ್ಲುವುದೊಂದೇ. ಈ ದಿಸೆಯಲ್ಲಿ ನಮ್ಮ ಯುವ ವಿಜ್ಞಾನಿ—ತಂತ್ರಜ್ಞರ ಪಾತ್ರ ಬಹಳ ಹಿರಿದು. ಸದ್ಯ ಬಂದ ವಿಗಟ ಸ್ಥಿತಿಯನ್ನು ನಿವಾರಿಸಲು ಸರಕಾರವೇ ಗಮನಕೊಡಬೇಕಾಗುತ್ತದೆ. ಆದರೊಡನೆಯೇ ಸ್ವಾವಲಂಬನೆಯ ಸಾಧನೆಗೆ ದೇಶೀಯರು ತಮ್ಮ ಕರ್ತವ್ಯ ಪಾಲನೆಯಲ್ಲಿ ನಿರತರಾಗಬೇಕು—ಇದು ನಮ್ಮ ಯುವ ಜನಾಂಗಕ್ಕೊಂದು ಆಹ್ವಾನ.

ನರಸಣ್ಣನ ಸರಸ



'ಭಾರತಕ್ಕೆ ನೀಡಿದ ಸಾಲವನ್ನು ಕೆನಡಾ ಮಾಫಿ ಮಾಡಿತಂತೆ, ನಾನೂ ಬಡವ; ನೀವು ಕೂಡಾ....'

ನಮ್ಮ ಅಗತ್ಯಕ್ಕೆ

ಭಾರತಕ್ಕೊಂದು ರಾಷ್ಟ್ರೀಯ ಪಂಚಾಂಗ

ಮಾರ್ಚ್ ೨೨, ೧೯೬೬ಕ್ಕೆ ರಾಷ್ಟ್ರೀಯ ಪಂಚಾಂಗವು ತನ್ನ ೧೦ ನೇ ವರ್ಷಕ್ಕೆ ಕಾಲಿಟ್ಟಿತು. ಪಂಚಾಂಗಗಳು ಶುದ್ಧ ಮತ್ತು ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟು ದೇಶದಲ್ಲಿ ಏಕರೀತಿಯ ಪಂಚಾಂಗವನ್ನು ಅನುಸರಿಸಬೇಕೆಂದೇ ರಾಷ್ಟ್ರೀಯ ಪಂಚಾಂಗದ ಉದ್ದೇಶ. ಈ ರಾಷ್ಟ್ರೀಯ ಪಂಚಾಂಗದ ಹಿನ್ನೆಲೆ ಮತ್ತು ಆಗತ್ಯತೆಯನ್ನು ಕುರಿತು ಈ ಲೇಖನದಲ್ಲಿ ವಿವೇಚಿಸಲಾಗಿದೆ.

ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಅನೇಕ ಪಂಚಾಂಗ ಪದ್ಧತಿಗಳಿವೆ. ಪ್ರಪಂಚದ ಇನ್ನಾವಭಾಗದಲ್ಲಿಯೂ ಪಂಚಾಂಗ ಕ್ರಮದಲ್ಲಿ ಇಷ್ಟು ವಿವಿಧತೆಯನ್ನು ಕಾಣಲಾರೆವು. ಈ ಪಂಚಾಂಗಗಳ ವರ್ಷಾರಂಭ ಹಾಗೂ ಕೆಲವು ಸಲ ತಿಥಿ, ನಕ್ಷತ್ರಾದಿಗಳಲ್ಲಿಯೂ ಬಹಳ ವ್ಯತ್ಯಾಸವು ಕಂಡು ಬರುತ್ತವೆ. ಈ ಭಿನ್ನತೆಗಳನ್ನು ದೋಷಗಳನ್ನೂ ನಿವಾರಿಸಲು ಕಳೆದ ಎಪ್ಪತ್ತು ವರ್ಷಗಳಿಂದ ಅಲ್ಲೊಂದು ಇಲ್ಲೊಂದು ಸುಧಾರಣೆಯ ಪ್ರಯತ್ನಗಳು ನಡೆದಿವೆ. ಈ ಸುಧಾರಣೆಗಳ ಫಲವಾಗಿ ಅನೇಕ ಪಂಚಾಂಗಗಳು ತಿಥಿ ನಕ್ಷತ್ರಾದಿಗಳ ಕಾಲವನ್ನು ಸರಿಯಾಗಿ ಕೊಡುತ್ತಿವೆ. ಆದರೆ ಈ ಸುಧಾರಕರು ಪ್ರಾಂತೀಯ ಪಂಚಾಂಗದ ಸುಧಾರಣೆ ಮಾಡುವಲ್ಲಿ ತೃಪ್ತಿ ಪಟ್ಟರಲ್ಲದೆ ದೇಶಕ್ಕೆಲ್ಲ ಅನ್ವಯಿಸುವಂತೆ ಸ್ವೀಕರಿಸಲು ಯೋಗ್ಯವಾದ ಒಂದು ಪಂಚಾಂಗ ತಯಾರಿಸಿ ಕೊಡಲು ಅಸಮರ್ಥರಾದರು.

ಇದನ್ನರಿತು, ಭಾರತ ಸರಕಾರವು, ಪಂಚಾಂಗ ಪದ್ಧತಿಗಳಲ್ಲಿ ಏಕತೆಯನ್ನುಂಟು ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಂಡಿತು. ಅಂತೆಯೇ ೧೯೫೨ನೇ ನವೆಂಬರ್ ತಿಂಗಳಲ್ಲಿ "ಪಂಚಾಂಗ ಸುಧಾರಣಾ ಸಮಿತಿ"ಯನ್ನು ನೇಮಿಸಿತು. ದಿವಂಗತ ಪ್ರೊಫೆಸರ್ ಮೇಘನಾದ ಸಾಹರವರು ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಮಿತಿಯು ದೇಶಕ್ಕೆಲ್ಲ ಒಂದೇ ರೀತಿಯ ವ್ಯವಹಾರ ಪಂಚಾಂಗವಿರಬೇಕೆಂದೂ, ವಿಷುವ ವರ್ಷವನ್ನು ವರ್ಷ ಪ್ರಮಾಣವಾಗಿ ತೆಗೆದುಕೊಂಡು ಶಾಸ್ತ್ರೀಯ ರೀತಿಯಲ್ಲಿ ಧಾರ್ಮಿಕ ವ್ಯವಹಾರಗಳು ಅದಕ್ಕೆ ಹೊಂದಿಕೊಳ್ಳುವಂತೆ ಮಾಡಬೇಕೆಂಬುದಾಗಿಯೂ ೧೯೫೫ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು.

ಪಂಚಾಂಗದಿಂದ ಉಪಯೋಗಗಳು

ಪಂಚಾಂಗವು ಎರಡು ವಿಶಿಷ್ಟ ಪ್ರಯೋಜನಗಳನ್ನು ಸಾಧಿಸುತ್ತದೆ. ಮೊದಲನೆದಾಗಿ ಲೆಕ್ಕಪತ್ರ ಪಾವತಿಗಳು ದಾಖಲು ಇತ್ಯಾದಿ ಲೌಕಿಕ ವ್ಯವಹಾರಗಳಲ್ಲಿ ದಿನ ನಿರ್ಣಯ ಗಣನೆಗೆ ಸಾಧನವಾದ ಕಾಲ ನಿಯಮವನ್ನು ಸೂಚಿಸುತ್ತದೆ. ಎರಡನೆದಾಗಿ ಧಾರ್ಮಿಕ ಮತ್ತು ಸಾಮಾಜಿಕ ಪ್ರಯೋಜನಗಳಿಗಾಗಿ ತಿಥಿ ನಕ್ಷತ್ರಾದಿಗಳನ್ನು ಹೊಂದಿಕೊಂಡಿರುವ ವ್ರತ ಶ್ರಾದ್ಧಾದಿ ದಿನಗಳೂ, ವಿವಾಹೋಪನಯನ ಮೊದಲಾದ ಶುಭ ಕಾರ್ಯಗಳಿಗೆ ಮುಹೂರ್ತಗಳೂ ಯಾವಾಗ ಆಚರಿಸಬೇಕೆಂಬಿತ್ಯಾದಿ ವಿಷಯಗಳನ್ನು ಸೂಚಿಸುತ್ತದೆ.

ವಿವಿಧ ಪಂಚಾಂಗಗಳು

ಲೌಕಿಕ ವ್ಯವಹಾರಾದಿಗಳಲ್ಲಿ ನಮ್ಮ ದೇಶೀಯ ಪಂಚಾಂಗಗಳ ವಿವಿಧತೆಯು ಅನೇಕವಿದೆ. ಕೆಲವು ಪಂಚಾಂಗಗಳು ಸೌರಮಾನ ರೀತಿಯಲ್ಲಿಯೂ, ಕೆಲವು ಚಾಂದ್ರಮಾನ ಪ್ರಕಾರವಾಗಿಯೂ ಬಳಕೆಯಲ್ಲಿವೆ. ಸೌರಮಾನವು ಸೂರ್ಯನ ಮೇಷಾದಿ ರಾಶಿ ಸಂಕ್ರಮಣದ ಆಧಾರದಿಂದ ಗಣಿಸಲ್ಪಡುತ್ತದೆ; ಇದು ಸೌರಮಾನ ಪಂಚಾಂಗ. ಅದರಂತೆ ಬೇರೆ ಕೆಲವು ಪಂಚಾಂಗಗಳು (ಅದೇ ಸೌರಮಾನಗಳುಳ್ಳ) ಚೈತ್ರಾದಿ ಚಾಂದ್ರಮಾನಗಳಿಂದ ಗಣಿಸಲ್ಪಡುತ್ತವೆ. ಇದಕ್ಕೆ ಚಾಂದ್ರ—ಸೌರ ಅಥವಾ ಚಾಂದ್ರಮಾನ ಪಂಚಾಂಗವೆಂದು ಹೇಳುವರು. ಸೌರಮಾನ ರೀತಿಯಲ್ಲಿಯೂ ಪ್ರಾಂತ ಪ್ರಾಂತಗಳಲ್ಲಿ ಬಹಳ ವ್ಯತ್ಯಾಸವಿದೆ. ಗಣಿತ ಪದ್ಧತಿಯ ವ್ಯತ್ಯಾಸದ ಮೂಲಕ ಮಾಸಾರಂಭವು ಕೆಲವು ಸಲ ಒಂದೆರಡು ದಿನಗಳಷ್ಟು ಹಿಂದು ಮುಂದಾಗುವುದೂ ಉಂಟು; ಸೌರ ಮಾಸದ ಹೆಸರುಗಳಲ್ಲಿಯೂ ಈ ರೀತಿಯ ವ್ಯತ್ಯಾಸವು ಕಂಡು ಬರುತ್ತದೆ. ಸೇಗೆಂದರೆ ಭಾರತದ ಪೂರ್ವ ಪ್ರಾಂತ್ಯದಲ್ಲಿ ವೈಶಾಖವೆಂದು ಹೇಳುವ ಮಾಸವನ್ನು ದಕ್ಷಿಣ ಪ್ರಾಂತದಲ್ಲಿ (ಮದ್ರಾಸ್ ವಗೈರೆ) ಎಂದೂ ಇನ್ನು ಕೆಲವು ಕಡೆಗಳಲ್ಲಿ ಮೇಷವೆಂದೂ ಕೆಲವೆಡೆ ಬಹಾಗ್ ಎಂದೂ ಕರೆಯುತ್ತಾರೆ. ಇದರಂತೆ ಚಾಂದ್ರಮಾನ ಕ್ರಮದಲ್ಲಿಯೂ ಒಂದೇ ರೀತಿಯಿಲ್ಲ. ಕೆಲವರು ಅಮಾವಾಸ್ಯಾಂತ ಪದ್ಧತಿಯನ್ನೂ ಕೆಲವರು ಪೂರ್ಣಿಮಾಂತ ಪದ್ಧತಿಯನ್ನೂ ಆಚರಿಸುತ್ತಾರೆ. ಇನ್ನು ವರ್ಷಾರಂಭ ಕ್ರಮದಲ್ಲೂ ಕೆಲವೆಡೆ ವ್ಯತ್ಯಾಸವಿದೆ. ಕೆಲವರು ಸೌರ ವೈಶಾಖದಿಂದ ವರ್ಷಾರಂಭವನ್ನು ಮಾಡುತ್ತಾರೆ. ಮತ್ತೆ ಕೆಲವರು ಸೌರ ಭಾದ್ರದಿಂದ ವರ್ಷಾರಂಭವನ್ನು ಮಾಡುತ್ತಾರೆ. ಚಾಂದ್ರಮಾನ ಪದ್ಧತಿ ಮಾತ್ರ ರೂಢವಾಗಿರುವ ದೇಶಗಳಲ್ಲೂ ಚಾಂದ್ರ ಚೈತ್ರ, ಚಾಂದ್ರ ಆಷಾಢ ಮತ್ತು ಚಾಂದ್ರ ಕಾರ್ತಿಕದಿಂದ ರೂಢವಾಗಿರುವ ದೇಶಗಳಲ್ಲೂ ಚಾಂದ್ರ ಕಾರ್ತಿಕದಿಂದ ವರ್ಷಾರಂಭ ಮಾಡುವವರಲ್ಲದೆ ಶಕಗಳಲ್ಲೂ ಈ ವ್ಯತ್ಯಾಸಗಳಿಗೆ ಕಡಿಮೆಯಿಲ್ಲ. ಇವುಗಳ ಪರಿಣಾಮವಾಗಿ ದೇಶದಲ್ಲಿಂದು ಮೂವತ್ತಕ್ಕಿಂತ ಹೆಚ್ಚು ಪಂಚಾಂಗ ಪದ್ಧತಿಗಳಿವೆ. ಭಾರತದ ರಾಜಕೀಯ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಈ ರೀತಿ ವಿವಿಧತೆಯು ಸ್ವಾಭಾವಿಕವಾಗಿದೆ. ಮತ್ತು ಇದರ ಹಿಂದೆ ಭಾರತದಲ್ಲಿ ರಾಜಕೀಯದ ಅನೈಕ್ಯವಿತ್ತೆಂಬುದನ್ನು ಸ್ವಲ್ಪ ಮಟ್ಟಿಗಾದರೂ ಸೂಚಿಸುತ್ತದೆ.

ಪಂಚಾಂಗದಲ್ಲಿ ಧಾರ್ಮಿಕ ಉದ್ದೇಶ

ಇನ್ನು ಪಂಚಾಂಗದಲ್ಲಿಯ ಧಾರ್ಮಿಕ ಉದ್ದೇಶವನ್ನು ತೆಗೆದುಕೊಳ್ಳೋಣ. ಧ[illegible] ರ್ಮಕಾರ್ಯಗಳೆಲ್ಲವೂ ತಿಥಿ, ನಕ್ಷತ್ರ[illegible] ಳನ್ನು ಹೊಂದಿಕೊಂಡಿವೆ. ನಮ್ಮ ದೇಶಿ[illegible] ಯ ಪಂಚಾಂಗಗಳಲ್ಲಿಯ ತಿಥ್ಯಾದಿ ಕಾ[illegible] ಗಣನೆಯು ಬಹಳ ತಪ್ಪಾಗಿದೆ. ಕೆಲ[illegible] ಸಲ ಈ ತಿಥ್ಯಾದಿಗಳ ಸಮಾಪ್ತಿ ಕಾಲದ[illegible] ಆರು ಘಂಟೆಯಷ್ಟರ ವ್ಯತ್ಯಾಸವು ಕಂ[illegible] ಬರುತ್ತದೆ. ಇದಕ್ಕೆ ಆ ಪಂಚಾಂಗ ಕರ್ತ[illegible] ರು ಸೂರ್ಯ ಸಿದ್ಧಾಂತದ ಕ್ರಿ. ಶ. ೪೦[illegible] ಸೂತ್ರವನ್ನು ಆಧಾರವನ್ನಾಗಿ ಸ್ವೀಕರಿ[illegible] ದುದೆ ಕಾರಣವಾಗಿದೆ. (ಸುಮಾರು ಕ್ರಿ. ಶ. ೧೦೦೦ದ ಮಯಾಸುರ ಸೂರ್ಯ[illegible] ದ್ಧಾಂತವು ಮುಂಜಾಲನ ಕಾಲದ ನಂ[illegible] ರ ಪೌರಾಣಿಕ ರೀತಿಯಿಂದ ಯಾರೋ [illegible] ಸ್ತ್ರೀಜಿಗೆ ತಯಾರಿಸಿದ್ದಾಗಿರುತ್ತದೆ) [illegible] ತ್ಯಾಧುನಿಕ ಯಂತ್ರೋಪಕರಣಗಳಿಂ[illegible] ಸಿದ್ಧವಾದ ಯಾವುದೊಂದು ಸಂಸ್ಕಾರ[illegible] ನ್ನೂ ಸೂರ್ಯಸಿದ್ಧಾಂತದ ಸೂತ್ರಗಳ[illegible] ಅಳವಡಿಸಿಕೊಳ್ಳದ ಕಾರಣ ಅದು ಇಂದ[illegible] ದೃಕ್ ಪ್ರತ್ಯಯಕ್ಕೆ ಸರಿ ಬರುವುದಿಲ್ಲ[illegible] ಪ್ರಾಚೀನ ಸಿದ್ಧಾಂತಕಾರರು ಸೂರ್ಯ[illegible] ಮತ್ತು ಚಂದ್ರ (ಮತ್ತು ಇತರ ಎಲ್ಲ ಗ್ರ[illegible] ಹರ) ಮೂಲಾಂಕದಲ್ಲೆ ತಪ್ಪಿರುವರೆಂ[illegible] ಸಂಗತಿಯು ಈಗ ಕಂಡು ಬಂದಿದೆ. ಆ[illegible] ದರೆ ಸೂರ್ಯನ ಮಧ್ಯದಲ್ಲಿ ೧೫ ಕ[illegible] ಹೆಚ್ಚಾಗಿಯೂ ಚಂದ್ರನಲ್ಲಿ ಒಂದು[illegible] ಭಾಗ, ೧೬° ಕಲೆ ಕಮ್ಮಿಯಾಗಿಯೂ[illegible] ಇರುವ ವ್ಯತ್ಯಾಸವು ಭಾರತೀಯ ಖಗೋ[illegible] ಲಜ್ಞರ (ಪ್ರಾಚೀನ ಸಿದ್ಧಾಂತಕಾರರ) [illegible] ದ್ಧಾಂತಗಳು ಇಂದಿಗೆ ಅಪೂರ್ಣವೂ [illegible] ಶುದ್ಧವೂ ಆಗಿದೆ. ಉದಾಹರಣೆಗಾಗಿ ಚ[illegible] ದ್ರನ ಗಣಿತವನ್ನು ತೆಗೆದುಕೊಳ್ಳೋಣ[illegible] ಸೂರ್ಯ ಸಿದ್ಧಾಂತವು ಮಧ್ಯಮ ಚಂ[illegible] ನಿಗೆ ಒಂದೇ ಒಂದು ಸಂಸ್ಕಾ[illegible] ವನ್ನು ಹೇಳುತ್ತದೆ. ಭಾರತದ ಈಚೆ[illegible] ಖಗೋಲಜ್ಞರಾದ ಮುಂಜಾಲ (ಕ್ರಿ. ಶ[illegible] ೯೩೨) ಶ್ರೀಪತಿ (ಕ್ರಿ. ಶ. ೧೦೩೯, ಭಾಸ[illegible] ರಾಚಾರ್ಯ (ಕ್ರಿ. ಶ. ೧೧೫೦) ಮೊ[illegible] ಲಾದವರು ಚಂದ್ರನ ಗಣಿತದಲ್ಲಿ ಎರಡ[illegible] ಮೂರು ಸಂಸ್ಕಾರಗಳನ್ನು ಕಂಡು ಕೊ[illegible] ಡರೂ ನಮ್ಮ ಪ್ರಾಚೀನ ಪದ್ಧತಿಯ ಪ[illegible] ಚಾಂಗ ಕರ್ತರು ಆ ವ್ಯತ್ಯಾಸಗಳನ್ನ[illegible] ಗಮನಕ್ಕೇ ತಾರದಿದುದ್ದು ಶೋಚನೀಯ[illegible] ಅದನ್ನು ಗಮನಕ್ಕೆ ತರುತ್ತಿದ್ದರೆ, ಚಂದ್ರ[illegible] ಗಣಿತದಲ್ಲಿ ಹೆಚ್ಚು ಸರಿಯಾದ ಪ್ರತಿಫ[illegible] ದೊರೆಯುತಿತ್ತು. ಅಲ್ಲದೆ ಚಂದ್ರನಿ[illegible] ಲೆಕ್ಕ ಮಾಡತಕ್ಕ ತಿಥಿ, ನಕ್ಷತ್ರಗಳ[illegible] ಯೂ ಹೆಚ್ಚು ಸರಿಯಾದ ಪ್ರತಿಫಲ[illegible] ಕಂಡುಬರುತ್ತಿತ್ತು.

ನಮ್ಮ ದೇಶೀಯ (ಪ್ರಾಚೀನ ಗಣಿ[illegible] ಪದ್ಧತಿಯ) ಪಂಚಾಂಗಗಳ ಪ್ರಾಮುಖ[illegible] ದೋಷವೆಂದರೆ ಸೌರವರ್ಷ ಪ್ರಮಾಣ[illegible] ನ್ನು ತಪ್ಪಾಗಿ ತಿಳಿದುಕೊಂಡಿರುವುದಾ[illegible] ದೆ. ಈ ಪಂಚಾಂಗಗಳ ಪ್ರಕಾರ ಒಂದ[illegible] ಸೌರವರ್ಷಕ್ಕೆ ೩೬೫ ದಿನ, ೬ ಗಂಟೆ[illegible] ೧೨.೬ ಮಿನಿಟುಗಳಾದರೆ ನಿಜವಾ[illegible] ಸಾಂಪಾತಿಕ ಸೌರವರ್ಷ ಪ್ರಮಾಣ[illegible]

(ಒಂಭತ್ತನೇ ಪುಟ ನೋಡಿರಿ)

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್.ಇ.ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂಮೀಟರ್ ಸ್ಟಾರ್ಟರುಗಳು.........
ಭಾರತದ ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—
ಸ್ವಾಮಿ ಇಲೆಕ್ಟ್ರಿಕಲ್ಸ್,
ರಿ. ಆಫೀಸು: ಕಾರ್ಕಳ, ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1

ವಿವೇಚನೆ

ಆಚಾರ್ಯ ದೇವೋ ಭವ

ಬರೆದವರು
ಶ್ರೀ ಸ. ನಾರಾಯಣ, ಚಿತ್ರದುರ್ಗ

ಪರಂಪರಾಗತ ಭಾರತೀಯ ಸುಸಂಸ್ಕೃತ ಸುಂದರ ಶ್ರೇಣಿಯಲ್ಲಿ ಆಚಾರ್ಯ ಅಥವಾ ಗುರುವಿಗೆ ದೊರೆತಿರುವ ಸ್ಥಾನ ಮಹೋನ್ನತವಾದುದು. ಆಚಾರ್ಯ ಎನ್ನುವ ಪದ ಯಾವುದೋ ಒಂದು ಜನಾಂಗದ, ಪಂಗಡದ ಜನತೆಯ ಮುಂದೆ ಸೂಚಿಸಲ್ಪಡುವ ಪದವಷ್ಟೇ ಅಲ್ಲ, ಆಚಾರ್ಯ ಎನ್ನುವ ಪದದ ಅರ್ಥ ವ್ಯಾಪ್ತಿ ಹಿರಿದು. ಅಷ್ಟೇ ಪವಿತ್ರವಾದುದು. ಆಚಾರ್ಯ ಎಂದರೆ ನೇಮ ನಿಷ್ಠೆ ಉಳ್ಳವನು ಎಂದಷ್ಟೇ ಅರ್ಥವಲ್ಲ. ಅವನು ಸರ್ವಜ್ಞ. ಬ್ರಹ್ಮ ಬರಹವನ್ನು ಬದಲಿಸಬಲ್ಲ ಶಕ್ತಿವಂತ. ಅವನ ತೇಜಸ್ಸು, ತಪೋಶಕ್ತಿ ಅಳತೆಗೆ ನಿಲುಕದಷ್ಟು. ಆಚಾರ್ಯನನ್ನೇ ಗುರುವೆಂದೂ ಕರೆಯುವ ವಾಡಿಕೆ. ಹೆಸರು ಬೇರೆಯಾದರೇನು ಶಕ್ತಿ ಒಂದೇ. ಆ ಶಕ್ತಿಯ ಸತ್ವವನ್ನರಿತೇ ಹಿರಿಯರು 'ಆಚಾರ್ಯ ದೇವೋಭವ ಎಂದರು.

ಗುರು ಬ್ರಹ್ಮ ಗುರು ವಿಷ್ಣುಃ
ಗುರುದೇವೋ ಮಹೇಶ್ವರಃ
ಗುರು ಸಾಕ್ಷಾತ್ ಪರಬ್ರಹ್ಮ
ತಸ್ಮೈ ಶ್ರೀ ಗುರವೇ ನಮಃ||

—ಎಂದು ಗುರುವನ್ನು ಭಕ್ತಿಯಿಂದ ಸ್ತೋತ್ರ ಮಾಡುತ್ತೇವೆ. (ಈಗ ಕಡಿಮೆ) ಗುರು ಅಥವಾ ಆಚಾರ್ಯ ಅಗಾಧ ಶಕ್ತಿ ಸ್ವರೂಪಿ ಅದಕ್ಕೆ ಈ ಶ್ಲೋಕ ನಿದರ್ಶನ. ಬ್ರಹ್ಮ ವಿಷ್ಣು ಮಹೇಶ್ವರ ರೂಪಿಯಾಗಿ ಸಕಲ ದೇವತೆಗಳನ್ನು ಗುರುವಿನಲ್ಲೇ ಕಾಣಬಹುದು. ತ್ರಿಮೂರ್ತಿಗಳ ಸ್ವರೂಪವೇ ಗುರು. ಅಂದ ಮೇಲೆ ಗುರುವಿನ ಪೂಜ್ಯತೆಗೆ, ಘನತೆಗೆ, ಶಕ್ತಿಗೆ ಮೊದಲೆಲ್ಲಿ?

ಅಜ್ಞಾನದ ಅಂಧಕಾರದಲ್ಲಿ ತೊಳಲುವ ಮಾನವನನ್ನು ಜ್ಞಾನದ ಬೆಳಕಿನಲ್ಲಿ ಕೈಹಿಡಿದು ದಡ ಮುಟ್ಟಿಸುವವನು ಗುರು. ಸ್ವಾರ್ಥವಿಲ್ಲದ, ನಿಷ್ಕಲಂಕ ಮನೋಭಾವದ ಸೇವೆ ಈತನದು. ಪುರಾಣೇತಿಹಾಸ ಸಂಗತಿಗಳಲ್ಲಿಯೂ ಗುರುವಿನ ಸಂಗತಿ ಬರುತ್ತದೆ. ಗುರು ಒಂದು ವಿಧದಲ್ಲಿ ಸೂತ್ರಧಾರ. ವ್ಯಕ್ತಿಯ ಆಗುಹೋಗುಗಳನ್ನು ಜೀವನದ ಸ್ಪಷ್ಟ ರೂಪರೇಷೆಗಳನ್ನು ನಿರೂಪಿಸುವ ಕುಶಲ ರೂವಾರಿ.

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' — ಎಂದರು ಪುರಂದರದಾಸರು. ಬರಿಯ ಮುಕ್ತಿ ಪಡೆಯುವುದಕ್ಕೇ ಏನು ಮನುಷ್ಯನಾಗಿ ಬಾಳುವುದಕ್ಕೂ ಗುರುವಿನ ಅನುಗ್ರಹ ಅವಶ್ಯಕ. ನಮಗೆ ಹೆತ್ತ ತಂದೆ-ತಾಯಿಗಳು ದೊಡ್ಡವರು. ಅವರು ಪ್ರತ್ಯಕ್ಷ ದೇವರುಗಳು. ಇನ್ನು ದೇವರುಗಳಂತೂ ಮುಟ್ಟಲು ನಿಲುಕದ ಸ್ಥಾನದಲ್ಲಿರುವಂತಹವರು ಈ ಗುರು? ದೇವರಿಗೆ ದೇವರ ಸ್ಥಾನದಲ್ಲಿರುವ ಮಹಾ ಮಹಿಮ.

ಬರಿಯ ಶಾಲೆಯಲ್ಲಿ ನಾಲ್ಕು ಅಕ್ಷರ ಕಲಿಸಿದ ಉಪಾಧ್ಯಾಯರೊಬ್ಬರೇ ಗುರುವಲ್ಲ. ಜೀವನದಲ್ಲಿ ನಮ್ಮ ಬಾಳಿಗೆ ಬೆಳಕು ಬೀರಿದ ಪ್ರತಿ ವ್ಯಕ್ತಿಯೂ, ಪ್ರತಿ ವಸ್ತುವೂ ಗುರು. "ವರ್ಣ ಮಾತ್ರಂ ಕಲಿಸಿದಾತಂ ಗುರು"—ಎಂದರು ಆರ್ಯರು. ಸದ್ವಿದ್ಯೆಗೂ ಗುರು ಉಂಟು, ದುರ್ವಿದ್ಯೆಗೂ ಗುರು ಉಂಟು. ಗುರುವಿನ ಬೋಧನೆ ಇಲ್ಲದೆ, ಅನುಗ್ರಹವಿಲ್ಲದೆ, ಶಿಕ್ಷಣವಿಲ್ಲದೆ ಯಾವ ವಿದ್ಯೆಯೂ ಫಲಿಸದು. ವಿದ್ಯೆ ಕಳ್ಳ ಕದಿಯದ, ಯಾವ ಪ್ರಳಯಕ್ಕೂ ಕರಗದ ಬಹು ದೊಡ್ಡ ನಿಧಿ. ಅದರ ಸಂರಕ್ಷಕ ಮತ್ತು ದಾನಿ ಗುರು.

"ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು"— ಎಂದರು ಕನ್ನಡ ಕವಿವರ್ಯರು. ತಾಯಿಯೇ ಮೊದಲ ಗುರು, ಅನಂತರ ತಂದೆ. ಮುಂದೆ ವಿದ್ಯೆ ಕಲಿಸುವ ಉಪಾಧ್ಯಾಯರು, ಗೆಳೆಯರು, ಹೀಗೇ ಸಾಗುತ್ತದೆ ಗುರುಗಳ ಪರಂಪರೆ. ಈ ಎಲ್ಲ ಗುರುಗಳನ್ನು ಮೀರಿಸಿದ ಒಬ್ಬ ಗುರು ಉಂಟು. ಜೀವನ ಎನ್ನುವ ಗುರು ಲೋಕಜ್ಞಾನವನ್ನೇ ಕಲಿಸುತ್ತಾನೆ. ಅವನ ಪಾಂಡಿತ್ಯ, ಜ್ಞಾನ ಹಿರಿದು. ನಮ್ಮ ಜೀವನ-ಅನುಭವವೇ ಮಹಾ ಗುರು. ನಮಗೆ ಗುರುಗಳಾಗಲು ವ್ಯಕ್ತಿಯೇ ಆಗಿರಬೇಕೆಂಬ ನಿಬಂಧನೆ ಇಲ್ಲ. ಜಗತ್ತಿನ ಚರಾಚರ ವಸ್ತುವೂ ಗುರುವಾಗಬಹುದು. ಇದಕ್ಕೆ ಉದಾಹರಣೆಗಳು ಇಲ್ಲದಿಲ್ಲ. "ಮಕ್ಕಳ ಸ್ಕೂಲು ಮನೇಲಲ್ವೆ" ಎಂದು ಪ್ರಶ್ನಿಸಿದರು ದಿ. ಕೈಲಾಸಂ. ಮನೆ ಮೊದಲ ಶಾಲೆ. ಆ ಶಾಲೆಯ ಗುರು ತಾಯಿ. ಆಳುವುದನ್ನು, ಆಡುವುದನ್ನು ಕಲಿಸುವವಳು ತಾಯಿ, ಆ ತಾಯಿ ಜೀವನದಲ್ಲಿ ಮೊದಲ ಗುರು. ಗುರುವಿಗೆ ಗುರು ತಾಯಿ. ಅದಕ್ಕೇ ನಮ್ಮ ಹಿರಿಯರು ಹೇಳಿದುದು - "ನ ಮಾತ್ರಾ ಪರ ದೇವತಾ" ಎಂದು. ವೇದ ಪುರಾಣ ಇತಿಹಾಸಾದಿಗಳು ಹೇಳಿದ ಸತ್ಯಸಂಗತಿಯನ್ನು ಅರ್ಥಮಾಡಿಕೊಳ್ಳುವ, ಅನುಸರಿಸುವ ಬುದ್ಧಿ ಬೇಕು.

ನಮ್ಮ, ನಿಮ್ಮ ಜೀವನದಲ್ಲಿ ಬರುವ ಗುರುಗಳ ಸಂಖ್ಯೆ ಎಣಿಕೆಗೆ ನಿಲುಕದಷ್ಟು ಇರಲೂ ಬಹುದು. ಇದು ಮಾನವ ಸಮಾಜದಲ್ಲಿ ಸಹಜ ದೇವತೆಗಳಿಗೂ ಒಬ್ಬ ಗುರು—ಬೃಹಸ್ಪತಿ. ರಾಕ್ಷಸರಿಗೂ ಒಬ್ಬ ಗುರು—ಶುಕ್ರಾಚಾರ್ಯ. ಇನ್ನು ನಮ್ಮ ಪುರಾಣ, ಇತಿಹಾಸಗಳಲ್ಲಿ ಆದಿಯಿಂದ ಅಂತ್ಯದ ವರೆಗೆ ಬರುವ ಗುರುಗಳ ಸಂಖ್ಯೆಯಂತೂ ಅಪರಿಮಿತ. ಸದ್ವಿದ್ಯೆಯಲ್ಲಿ ಕಲಿತು ಗುರುವಿನ ಕೀರ್ತಿಯನ್ನು ಮೆರೆಸಿದ ಶಿಷ್ಯರೂ ಉಂಟು. ವಿದ್ಯೆ ಕಲಿತು ಗುರುವಿಗೆ ತಿರುಮಂತ್ರ ಹಾಕಿದ ಶಿಷ್ಯರೂ ಉಂಟು.

ಅನುಭವಿಗಳ ಅಭಿಪ್ರಾಯದ ಪ್ರಕಾರ ಇರುವ ಅರವತ್ನಾಲ್ಕು ವಿದ್ಯೆಗಳನ್ನು ಕಲಿಸಲು ಗುರುಗಳು ಇದ್ದೇ ತೀರಬೇಕು—ಶಿಷ್ಯರಿರುವಾಗ, ಶಿಷ್ಯರಿಗೆ ವಿದ್ಯೆಯನ್ನು ಬೋಧಿಸುವ ಮುಂಚೆ ಗುರು ವಿದ್ಯೆಯಲ್ಲಿ ಪೂರ್ಣ ಪಾಂಡಿತ್ಯ ಪಡೆದಿರಲೇ ಬೇಕು. ಪರಿಪೂರ್ಣತೆಯನ್ನು ಪಡೆಯದ ಹೊರತು ಗುರು ಎನ್ನಿಸಿಕೊಳ್ಳಲು ಸಾಧ್ಯವೆ?

ವೇದಗಳ ಕಾಲದಿಂದಲೂ ಭಾರತೀಯರು ಗುರುಗಳ ಸ್ಥಾನಕ್ಕೆ ಕೊಟ್ಟ ಬೆಲೆ ಮಹತ್ತರವಾದುದು ಜ್ಞಾನಾರ್ಜನೆಗೆ ಮೊದಲ ಮೆಟ್ಟಿಲು ವಿದ್ಯೆ. ವಿದ್ಯಾಜ್ಞಾನಗಳನ್ನು ಬೋಧಿಸುವ—ಅನುಗ್ರಹಿಸುವ ಅಪೂರ್ವ ವ್ಯಕ್ತಿ ಗುರು.

ವಿದ್ಯಾಕ್ಷೇತ್ರಕ್ಕೆ ಮಾತ್ರ ಗುರುವಿನ ಪಾತ್ರ ಮೀಸಲಾಗಿಲ್ಲ. ಆಚಾರ್ಯ (ಗುರು) ಅನುಭವಿ-ಪಂಡಿತ—ಕಲಿತವನು—ಕಲಿಸುವವನು. ಅವನು ಕಲ್ಪನೆಗೆ ನಿಲುಕದ ವ್ಯಕ್ತಿ. ಶ್ರೀ ರಾಮನಿಗೆ ವಶಿಷ್ಠ ವಿಶ್ವಾಮಿತ್ರರು ಗುರುಗಳು. ಯುಧಿಷ್ಠಿರನಿಗೆ ಭೀಷ್ಮಾಚಾರ್ಯರು ರಾಜಕೀಯ ಗುರುಗಳು. ಕೌರವ ಪಾಂಡವರಿಗೆ ದ್ರೋಣಾಚಾರ್ಯರು ಶಸ್ತ್ರವಿದ್ಯಾ ಗುರುಗಳು, ಅರ್ಜುನನಿಗೆ ಒಂದು ಮೋಹದ ಪ್ರವರವನ್ನು ಬಿಡಿಸಲು ಶ್ರೀಕೃಷ್ಣನೇ ಗುರುವಾಗಿ ನಿಲ್ಲಬೇಕಾಯಿತು. ಚಂದ್ರಗುಪ್ತ ಮೌರ್ಯನಿಗೆ ಚಾಣಕ್ಯ, ಶಿವಾಜಿಗೆ ರಾಮದಾಸರು, ಹಕ್ಕಬುಕ್ಕರಿಗೆ ವಿದ್ಯಾರಣ್ಯರು, ವಿವೇಕಾನಂದರಿಗೆ ರಾಮಕೃಷ್ಣ ಪರಮಹಂಸರು, ನೆಹರುರವರಿಗೆ ಗಾಂಧೀಜಿ ಗುರುಗಳಾಗಿದ್ದು ಅವರ ಜೀವನದ ಗತಿಯನ್ನೇ ಬದಲಿಸಿ ಬೆಳಕಿಗೆ ತಂದರು.

ಅಗಾಧ ಶಕ್ತಿ ಸ್ವರೂಪಗಳ ಸಾಕಾರ ಮೂರ್ತಿಯಾದ ಗುರು ಶಿಷ್ಯನ ಬಾಳನ್ನು ಬೆಳಗಿಸಬಲ್ಲ ಅದೆಷ್ಟು ಜನ ಆದರ್ಶ ಗುರುಗಳೋ? ಏಕಲವ್ಯನಂತಹ ಆದರ್ಶ ಶಿಷ್ಯರು ಎಷ್ಟು ಮಂದಿಯೋ? ಬಾಳುವೆಯ ಎಷ್ಟು ಬಗೆಯ ಕ್ಷೇತ್ರಗಳಲ್ಲಿಯಾಗಲಿ, ಉನ್ನತ ವ್ಯಕ್ತಿತ್ವದ ಗುರುಗಳಾಗಲಿ, ಆದರ್ಶ ಶಿಷ್ಯರಾಗಲಿ ದೊರೆಯುವುದು ದುರ್ಲಭ.

ಇಂದು ವಿಶ್ವದ ಹಿರಿಯ ಪ್ರಜಾಪ್ರಭುತ್ವದ ರಾಷ್ಟ್ರವಾದ ಭಾರತದ ರಾಷ್ಟ್ರಾಧ್ಯಕ್ಷರ ಸ್ಥಾನದಲ್ಲಿರುವವರು ಓರ್ವ ಉಪಾಧ್ಯಾಯರು. ಮೇಲಾಗಿ ವಿಶ್ವವೇದಾಂತ ಜ್ಞಾನಗಳನ್ನು ಹಸ್ತಗತ ಮಾಡಿಕೊಂಡ ಮಹಾ ವ್ಯಕ್ತಿ. ಈ ಒಂದು ಉದಾಹರಣೆಯಿಂದಲೇ ಭಾರತೀಯರ ಸಂಸ್ಕಾರ, ಸಂಸ್ಕೃತಿಗಳನ್ನು ಅರಿಯಬಹುದಾಗಿದೆ.

ಜ್ಞಾನ ದರ್ಶನಕ್ಕೆ, ಲೋಕದರ್ಶನಕ್ಕೆ, ಆತ್ಮದರ್ಶನಕ್ಕೆ, ಸ್ವಸ್ವರೂಪ ದರ್ಶನಕ್ಕೆ ಗುರುವಿನ ಅನುಗ್ರಹ ಅವಶ್ಯಕ. ಗುರುವಿನ ಗಣನೀಯ ಸ್ಥಾನಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ—"ಸಾಮ್ರಾಜ್ಯದ ಮಹಾವ್ಯಕ್ತಿ ಎನಿಸಿಕೊಂಡು, ಅಗ್ರ ಸ್ಥಾನದಲ್ಲಿ ಕುಳಿತುಕೊಂಡು ರಾಜ್ಯಭಾರ ನಡೆಸುವ ಸಾಮ್ರಾಟ, ಯಾರಿಗೂ ಮಣಿಸದ ತನ್ನ ತಲೆಯನ್ನು ಸರ್ವಸಂಗ ಪರಿತ್ಯಾಗಿ ಸನ್ಯಾಸಿಗೆ ಬಾಗಿಸುತ್ತಾನೆ."

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 56 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.
ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪ್ರಭೂಸ್
ಬಾಲಾಮೃತ
ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್
ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ
ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ
ತಯಾರಿಸಿ ಒದಗಿಸುತ್ತಿರುವೆವು.
ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—
ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.
ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಚಾರು ಚಯನ

ಅರಾಷ್ಟ್ರೀಯತೆಗೊಂದು

ಭಾರತದ ಒಕ್ಕೂಟದಿಂದ ಹೊರಗುಳಿಯುವ ಅರಾಷ್ಟ್ರೀಯ ಭಾವನೆ ತುಂಬಿ ತುಳುಕಾಡುವ ಬಂಡುಗಾರ ನಾಗಾರ ನಾಯಕರು ಪ್ರಧಾನಿ ಇಂದಿರಾ ಗಾಂಧಿಯವರನ್ನು ಭೆಟ್ಟಿಯಾದರು. ಉಭಯತರರ ನಡುವೆ ಮಾತುಕತೆ ನಡೆಯಿತು. ಈ ಮಾತುಕತೆಗಳ ಕಾಲಕ್ಕೆ ಅವರಿಬ್ಬರಲ್ಲದೆ ಮೂರನೆಯನಾವನೂ ಉಪಸ್ಥಿತನಿರಲಿಲ್ಲ. ಇದುವರೆಗಿನ ಮಾತುಕತೆಗಳು ನಾಗಾ ಶಾಂತಿ ನಿಯೋಗದ ಮುಂದೆ ನಡೆಯುತಿದ್ದುವು. ಸದ್ಯ ಪ್ರಧಾನಿ ಇಂದಿರಾಗಾಂಧಿಯವರು ನಾಗಾ ಸಮಸ್ಯೆಗೆ ಪರಿಹಾರವನ್ನು ಸರ್ವಸಮ್ಮತವಾದ ವಿಧಾನದಲ್ಲಿ ಕಂಡು ಹಿಡಿಯಲು ಉತ್ಸುಕರಾಗಿರುವರಾದರೂ ಪ್ರತ್ಯೇಕ ನಾಗಾ ಪ್ರಜಾರಾಜ್ಯವನ್ನು ಒಪ್ಪಲು ಸಿದ್ಧರಿಲ್ಲ. ಯಾವುದೇ ವ್ಯವಸ್ಥೆಯು ಭಾರತೀಯ ಒಕ್ಕೂಟದ ಎಲ್ಲೆಯೊಳಗೆ ನಡೆಯಬೇಕು—ಇದು ಸಮಸ್ತರ ಅಭಿಲಾಷೆ.

ಬಂಡುಗಾರ ನಾಗಾರ ಚಟುವಟಿಕೆಗಳನ್ನು, ಅರಾಷ್ಟ್ರೀಯ ಕೃತಿಗಳನ್ನು ಕಠೋರವಾಗಿಯೇ ಎದುರಿಸಬೇಕು. ವಿರೋಧಿಗಳ ಕುಕಾರ್ಯವನ್ನು ಮಿಲಿಟರಿ ಬಲದಿಂದಲೇ ಸ್ತಿಮಿತಕ್ಕೆ ತರಬೇಕಾಯಿತು. ಭಾರತದ ಗಣರಾಜ್ಯದಿಂದ ಹೊರಗುಳಿಯುವ ಆಶಯವು ತುಂಬ ಘಾತುಕವಾದುದು. ಇದನ್ನು ಚಿಗುರಿನಲ್ಲಿಯೇ ಚಿವುಟಿ ತೆಗೆಯಬೇಕು. ಆದರೆ, ಈ ಹೇಯ ಭಾವನೆ ಬಂಡುಗಾರ ನಾಗಾರಲ್ಲಿ ಬಹು ಆಳಕ್ಕೆ ಬೇರು ಬಿಟ್ಟಂತೆ ಭಾಸವಾಗುತ್ತದೆ. ಅವರು ತಮ್ಮದೇ ಆದ ನಾಗಾಲ್ಯಾಂಡ್ ಗಣರಾಜ್ಯವಿದೆಯೆಂದೂ ತಮ್ಮ ನಾಯಕ ಕುಪಟೊ ಸುಖಾಯಿ ಅದರ ಮಂತ್ರಿಯೆಂದೂ ಹೇಳುತ್ತಾರೆ. ಇಂದಿರಾ-ಸುಖಾಯಿ ಮಾತುಕತೆಗಳ ನಂತರ ನಾಗಾರ ಕಡೆಯ ಒಂದು ಪ್ರಕಟಣೆಯಲ್ಲಿ ಈ ಅಂಶವನ್ನು ಎತ್ತಿ ಹೇಳಿದ್ದಾರೆ. ಇದು ಅರಾಷ್ಟ್ರೀಯವಲ್ಲವೇನು? ಭಾರತದ ಸಂವಿಧಾನದ ಚೌಕಟ್ಟಿನೊಳಗಡೆಯೇ ನಾಗಾಲ್ಯಾಂಡ್ ಸ್ವತಂತ್ರ ಗಣರಾಜ್ಯವಾಗುವುದೆಂತು? ಇಂತಹ ನಿಂದ್ಯ ಚಟುವಟಿಕೆಗಳು ಭಾರತಕ್ಕೆ ಅಪಮಾನಾಸ್ಪದವೇ ಸರಿ.

ಇಂದಿರಾ—ಸುಖಾಯಿ ನಡುವಣ ಚರ್ಚೆ ಇಬ್ಬರಿಗೂ ಸುಖನೀಡದಾಯಿತು. ನಾವು ನಮ್ಮ ರಾಗವನ್ನು ಹಾಡಿದೆವು, ಸಂವಿಧಾನದೊಳಗಡೆಯೇ ನಾಗಾರ ಹಿತಸಾಧನೆಗೆ ಅನುಕೂಲವಾಗುವಂತಹ ಒಂದು ವ್ಯವಸ್ಥೆ ಮಾಡುವ ನಮ್ಮ ವಿಚಾರವನ್ನೇ ಮತ್ತೆ ಮುಂದೆ ಮಾಡಿದೆವು—ನಾಗಾ ನಾಯಕರು ಹಿಡಿದ ತನ್ನ ಪಟ್ಟು ಬಿಡಲಿಲ್ಲ. ಒಂದು ಹೆಜ್ಜೆಯನ್ನೂ ಮುಂದಿಡದೆ ಮಾತುಕತೆ ಇದ್ದಲ್ಲಿಯೇ ಮುಂದುವರಿಯಿತು. ಆದರೂ ಒಂದು ಸಾಧನೆ— ಉಭಯ ಪಕ್ಷಗಳ ನಡುವಿದ್ದ ಹಲವು ಬಿನ್ನಾಭಿಪ್ರಾಯಗಳು ಮಾತ್ರ ಮಾಯವಾದುವು—ಇಷ್ಟೂ ಆಗದಿದ್ದರೆ ಮತ್ತೆ? ಇಂದಿರಾ ತನ್ನ ವಾದ್ಯವನ್ನು ಊದಿ ನೀವು ಕೇಳಿರಿ, ಚಾರಿಸಿರಿ ಮತ್ತೆ ಚೆನ್ನಾಗಿದೆಯೋ ಹೇಳಿರಿ ಎಂದರು. ಸುಖಾಯಿ ಕೇಳೋಣ, ವಿಚಾರಿಸೋಣ, ಹೇಳೋಣ, ಜತೆಗೆ ನನ್ನ ರಾಗವನ್ನೂ ಆಕರ್ಷಿಸೋಣಾಗಲಿ ಅಂದರು.

ಮುಂದಿನ ಮಾತುಕತೆಯ ಬಾಗಿಲು ತೆರೆದೇ ಇದೆ. ಇಂದಿರಾ ಅಲ್ಲವಾದರೂ ಉಳಿದ ಮಂತ್ರಿಗಳು ಇದರಲ್ಲಿ ಭಾಗವಹಿಸಬಹುದು.

ನಾಗಾ ಬಂಡುಗಾರರ ಪ್ರಶ್ನೆಯನ್ನು ಆದಷ್ಟು ಬೇಗನೇ ನಾವು ಇತ್ಯರ್ಥಗೊಳಿಸಬೇಕು. ಕುಂಬಳಕಾಯಿಯು ಕೊಳೆಯುವುದಕ್ಕೆ ಪ್ರಾರಂಭವಾಗಿದೆ, ಅದನ್ನು ಇನ್ನೂ ನಾರುವುದಕ್ಕೆ ಬಿಟ್ಟರೆ ಅದರ ಪರಿಣಾಮ ಎಂದಿಗೂ ನೆಟ್ಟಗಾಗುವುದಿಲ್ಲ. ಅರಾಷ್ಟ್ರೀಯತೆ, ಪುಂಡಾಟಿಕೆಗಳು ಸೋಂಕು ರೋಗಗಳು. ಇವನ್ನು ಎಳೆಯಲ್ಲಿಯೇ ಕೊನೆಗೊಳಿಸದೆ ಹೋದರೆ, ಈ ಹಾವಳಿ ಇಡಿಯ ದೇಶದಲ್ಲಿ ಹರಡೀತು. ಭಾರತವು ಮತ್ತೆ ಛಿನ್ನ ವಿಚ್ಛಿನ್ನವಾಗಿ ಹೋಗಲು ಆರಂಭವಾದೀತು — ಬಾಹ್ಯ ಆಕ್ರಮಣಗಳ ಭೀತಿ ಸದಾವಿರುವ ನಾವು ಆಂತರಿಕವಾಗಿ ಶಾಂತಿಯನ್ನು ಉಳಿಸಬೇಕು, ನಾಗಾ ಸಮಸ್ಯೆಯನ್ನು ಬಲು ಬೇಗನೇ ನಿವಾರಿಸಬೇಕು. ಬರಿಯ ನಾಗಾಲ್ಯಾಂಡಿನಿಂದ ನಾಗಾರ ಒಂದು ಪಕ್ಷ ತೃಪ್ತಿ ಪಡೆದಂತೆ ಭಾಸವಾಗುವುದಿಲ್ಲ. ಭಾರತ ಸರಕಾರದ ಮುಂದೆ ಈಗ ಇರುವ ಆಯ್ಕೆ ಒಂದೇ: ನಾಗಾ ಬಂಡುಗಾರರು ಶಾಂತಿ ಮುಂಡಿ ಬಾಗದಿದ್ದರೆ ಶಕ್ತಿಯ ಮೂಲಕವಾದರೂ ಬಾಗುವಂತೆ ಮಾಡಲೇ ಬೇಕು. ಹಲವು ವರ್ಷಗಳ ಶಾಂತಿಯ ಮಾತು ಮತ್ತಷ್ಟು ಅಶಾಂತಿಗೇ ಹೇತುವಾಗುತ್ತಿದೆಯೆಂಬುದನ್ನು ನಾವು ಮರೆಯುವುದು ಹೇಗೆ ಸಾಧ್ಯ?

o o o

ಇಂದು ಸಮಸ್ಯಾತ್ಮಕ ವ್ಯಕ್ತಿಯೊಬ್ಬ ಸಮಸ್ತ ಭಾರತೀಯರ ತಲೆ ತಿನ್ನತೊಡಗಿದ್ದಾನೆ. ಅವನೇ ನಾಗಾಗುಡ್ಡಗಾಡುಗಳಲ್ಲಿನ ಪಾದ್ರಿ ಮೈಕೇಲ್ ಸ್ಕಾಟ್. ಇವರು ನಾಗಾ ಶಾಂತಿ ನಿಯೋಗದ ಒರ್ವ ಸದಸ್ಯರೂ ಹೌದು. ನಾಗಾಸಮಸ್ಯೆಗೆ ಒಗ್ಗರಣೆ ಹಾಕುತ್ತಿರುವ ಕ್ರೈಸ್ತ ಪಾದ್ರಿಯೆಂ

ಮಾಜಿ ಅಧ್ಯಕ್ಷ ಐಸೆನ್‌ಹೋವರ್ ಅವರು ... ಲಿಂಕನ್ ಪ್ರತಿನಿಧಿ ಅರ್ಥರ್ ... ನಗರ ಕೂಟ ಕಾರ್ಯಕ್ರಮದ ... ಮತ್ತು ತನ್ಮಯತೆ ದಂಗುಬಡಿ

| ಎಳೆಯಳ ಹೇರಾಸೆ

ಹದಿನ್ನಾರು ವರ್ಷದ ಕುರುಡಿ ಜೇನ್‌ಮಿಕ್ ಐವರ್‌ಗೆ ಸಾರ್ವಜನಿಕ ಕಾರ್ಯಗಳಲ್ಲಿ ಆಸಕ್ತಿ. ಬ್ರೈಲ್ ಲಿಪಿಯನ್ನು ಸರಾಗವಾಗಿ ಓದಬಲ್ಲ ಈಕೆ ರೆಡ್‌ಕ್ರಾಸ್‌ನ ಸ್ವಯಂ ಸೇವಿಕೆಯಾಗಿದ್ದಾಳೆ. ಮಾನವತೆಯ ಸೇವೆಯನ್ನೇ ಮುಖ್ಯವಾಗಿಟ್ಟುಕೊಂಡು ಬದುಕುವ ಈ ಎಳೆ ಹುಡುಗಿಯ ಆಶೆ ಫಲಿಸದಿದ್ದೀತೆ?

ಮಹಿಮಾವಂತರು

ಜೆಮಿನಿ—೭ರ ಗಗನಯಾತ್ರಿಗಳಾದ ಜೇಮ್ಸ್ ಲೋವೆಲ್ ಮತ್ತು ಫ್ರಾಂ... ಯಾತ್ರಿಗಳಾದ ಟಾಮ್ ಸ್ಟಫರ್ಡ್ ಮತ್ತು ವಾಲ್ಲಿ ಸ್ಕೀರಾ (ಬಲ) ಕೇಪ್ ಕೆನೆಡಿ ಎರಡು ಉಪಗ್ರಹಗಳು ಆಕಾಶಯಾನದ ಕಾರ್ಯಕ್ರಮಗಳಲ್ಲಿ ಮಹತ್ವಪೂರ್ಣವಾಗಿ

ಡಿವಾಣವಿರಲಿ

ದು ಇವರನ್ನು ಕರೆಯುವವರೂ ಇದ್ದಾರೆ. ಇದರಲ್ಲಿ ಪೂರ್ಣವಲ್ಲವಾದರೂ ಸ್ವಲ್ಪ ಸತ್ಯಾಂಶ ಇದ್ದೇ ತೀರಬೇಕು. ಏಕೆಂದರೆ, ಪರ್ವತದ ಗುಡ್ಡ ಕಾಡುಗಳಲ್ಲಿ ಈ ಪಾದ್ರಿ ಮತಾಂತರಗೊಳಿಸುತ್ತ ಕ್ರೈಸ್ತರ ಸಂಖ್ಯೆಯನ್ನು ಬೆಳೆಸುತ್ತ ಇದ್ದಾರೆ; ಇದಕ್ಕಾಗಿ ಅವರಿಗೆ ವಿದೇಶಗಳಿಂದ ಆರ್ಥಿಕ ನೆರವೂ ಲಭಿಸುವುದಾಗಿ ಹೇಳುತ್ತಾರೆ; ಇದ್ದರೂ ಇರಬಹುದು. ಸ್ಕಾಟರ ಮತಪ್ರಚಾರದ ಕಾರ್ಯವನ್ನು ರಾಷ್ಟ್ರೀಯವೆಂದು

ರಾಷ್ಟ್ರಸಂಘದಲ್ಲಿ ಅವೆ ರ ಸಂಗಡ 'ಜಾಗತಿಕ . ಈ ಅಪೂರ್ವ ಆಸಕ್ತಿ

(ಎಡ) ಮತ್ತು ಜೆಮಿನಿ—೬ರ ಗಳ ಮಧ್ಯಂತರದಲ್ಲಿ ಹಾರಿಸಿದ ಈ

ಹೇಳುವುದು ಸಾಧ್ಯವೆ? ನಮ್ಮದು ಜಾತ್ಯತೀತ ಅಥವಾ ಧರ್ಮನಿರಪೇಕ್ಷ ರಾಷ್ಟ್ರ. ಧಾರ್ಮಿಕ ಸ್ವಾತಂತ್ರ್ಯವನ್ನು ನಾವು ಎಲ್ಲರಿಗೂ ಕೊಡಮಾಡಿದ್ದೇವೆ. ನಾಗಾರ ನಿಷ್ಠೆ ಯೇಸುಕ್ರಿಸ್ತನಲ್ಲಿ ಇರುವುದಾದರೆ ಅವರು ಕ್ರೈಸ್ತರಾಗಲಿ. (ಇಲ್ಲಿ ಹಿಂದು ನಾಯಕರ ಕರ್ತವ್ಯ ತುಂಬ ಇದೆ. ಕ್ರೈಸ್ತ ಮಿಶನರಿಗಳು ಮಾಡುವ ಮತ ಪ್ರಚಾರವನ್ನು ಮೆಚ್ಚದವರು ತಮ್ಮ ಮತಪ್ರಚಾರವನ್ನು ಹೇಗೆ ಮಾಡುತಿದ್ದಾರೆಂದು ಯೋಚಿಸುತ್ತಾರೆಯೆ?)

ಇಂದು ಸ್ಕಾಟರ ಮೇಲಿನ ಆರೋಪ ಕ್ರೈಸ್ತ-ಹಿಂದುಗಳದ್ದಲ್ಲ; ಅರಾಷ್ಟ್ರೀಯ ರಾಷ್ಟ್ರೀಯವಾದುದು. ನಾಗಾ ಸಮಸ್ಯೆಯ ರಾಷ್ಟ್ರೀಯದಿಂದ ಅಂತಾರಾಷ್ಟ್ರೀಯ ರಂಗಕ್ಕೆಳೆದುಕೊಂಡು ಹೋದರು. ಮೈಕೇಲ್ ಸ್ಕಾಟ್ ಹಲವು ವಿದೇಶೀ ಪತ್ರಿಕೆಗಳಿಗೆ ಬರೆದು ತನ್ನ ಈ ಆಶಯವನ್ನು ವ್ಯಕ್ತಪಡಿಸಿದ್ದಾರೆ. ನಾಗಾ ರಾಜ್ಯ ಭಾರತದ ಒಂದು ರಾಜ್ಯವಿದ್ದು ನಾಗಾ ಜನರು ಭಾರತೀಯ ಜನ ಕೋಟಿಯ ಒಂದು ಅಂಶ. ಹಾಗಿರುವಾಗ ಈ ಆಂತರಿಕ ಸಮಸ್ಯೆಗೆ ಅಂತಾರಾಷ್ಟ್ರೀಯ ರೂಪ ಬಳೆದು ತಮ್ಮ ಕುರುಚಿಯನ್ನು ಸಾಧಿಸುವ ಇರಾದೆ ಸ್ಕಾಟರಲ್ಲಿದ್ದಿರಬಹುದು. ಅವರ ಈ ಕೃತಿಯಿಂದ ಭಾರತೀಯರಿಗೆ ತುಂಬ ಅಸಮಾಧಾನವಾಗಿದೆ. ಇದರ ಫಲಶ್ರುತಿ ಲೋಕ ಸಭೆಯಲ್ಲಿಯೂ ಕೇಳಿ ಬಂತು. ಅರಾಷ್ಟ್ರೀಯ ಕೃತಿಯನ್ನು ತಾನು ಗೆಯ್ದಿರುವೆನೆಂದು ಸ್ಕಾಟರಿಗೆ ಅನಿ



ಮಹತ್ವದ ಸಾಧನೆ

ಹಾರುತ್ತಿರುವ ಉಪಗ್ರಹ ಜೆಮಿನಿ—೬. ಹಿನ್ನೆಲೆಯಲ್ಲಿರುವುದು ಜೆಮಿನಿ—೭. ಈ ಉಪಗ್ರಹಗಳ ಗಗನಯಾತ್ರಿಕರು ಅಂತರ್ಗ್ರಹ ಯಾತ್ರೆಯ ನಿಕಟ ಸಾಧ್ಯತೆಯನ್ನು ಕಂಡುಕೊಂಡರು.

ಸಿದೆಯೆಂದೂ ಈಗ ಗೊತ್ತಾಗಿದೆ. ತನ್ನ ಕೃತಿಗಳ ಪರಿಣಾಮವನ್ನು ಗಮನಿಸದೆ ಸ್ಕಾಟರು ಈ ರೀತಿ ಗೆಯ್ದಿರುವುದು ನಿಜವಾದರೆ, ಅವರಿಗೆ ತಮ್ಮ ನಡುವಳಿಯನ್ನು ತಿದ್ದಿಕೊಳ್ಳಲು ಒಂದೇ ಒಂದಾದರೂ ಅವಕಾಶ ಕೊಡಬಹುದೋ ಏನೋ! ಭಾರತ ಸರಕಾರ ಸ್ಕಾಟರನ್ನು ಬಲಾತ್ಕಾರವಾಗಿ ದೇಶದಿಂದ ಹೊರ ಹೋಗುವಂತೆ ಹೇಳುವುದು ಸೂಕ್ತ ಕಾಲವಲ್ಲವೆಂಬ ನಿರ್ಧಾರಕ್ಕೆ ಬಂದಿರುವುದಕ್ಕೆ ಇದೂ ಒಂದು ಕಾರಣವಿರಬಹುದು.

○ ○ ○

ಇದೇ ಅಕ್ಟೋಬರ ೨ ಮಹಾತ್ಮಾ ಗಾಂಧಿ ಮತ್ತು ಶ್ರೀ ಲಾಲ್‌ಬಹದೂರರ ಜನ್ಮ ದಿನ ಮತ್ತೆ ಬರುತ್ತದೆ. ಅದಿನ ಇಂದಿರುವ ಪಂಜಾಬರಾಜ್ಯವು ಭಾಷಾನುಗುಣವಾಗಿ ಪುನರ್ಘಟನೆ ಗೊಳ್ಳುವುದೆಂದೀಗ ಖಂಡಿತವಾಗಿ ಗೊತ್ತಾಗಿದೆ. ಮುಂದಿನ ಫೆಬ್ರವರಿ ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿದ್ದು ಅದಕ್ಕೆ ಮೊದಲೇ ಪಂಜಾಬಿ ಸಬಾವಾದಿಗಳನ್ನು ಸಂಪೂರ್ಣ ತೃಪ್ತಿ ಪಡಿಸುವುದು ರಾಜಕಾರಣ ದೃಷ್ಟಿಯಿಂದ ಕಾಂಗ್ರೆಸ್‌ಗೆ ಅಗತ್ಯ. ಇದಕ್ಕಾಗಿಯೇ ತುರುಸಿನ ಕ್ರಮಗಳು ಕೈಗೊಳ್ಳಲ್ಪಡುತ್ತವೆ. ಗಡಿ ಗುರುತಿಸಲು ಇಷ್ಟರಲ್ಲೇ ಒಂದು ಏಕ ಸದಸ್ಯ ಇಲ್ಲವೇ ತ್ರಿಸದಸ್ಯ ಸಮಿತಿಯೊಂದು ನೇಮಕವಾಗಲಿದ್ದು ಇದು ವೇಳೆ ಅಂತ್ಯದೊಳಗೆ ವರದಿಯೊಪ್ಪಿಸಲಿದೆ. ಉಳಿದ ಅವಧಿಯಲ್ಲಿ ಪುನರ್ವಿಂಗಡಣೆ ಸಂಬಂಧದ ಅಂಗವಾಗಿ ವಿಧೇಯಕವು ಪಂಜಾಬ ವಿಧಾನ ಸಭೆಯಲ್ಲಿ ಮಂಜೂರಾಗಿ, ಸಂಸತ್ತಿನ ಮಳೆಗಾಲದ ಅಧಿವೇಶನದ ವೇಳೆ ಸ್ವೀಕೃತವಾಗುವ ನಿರೀಕ್ಷೆಯಿದೆ.

ಪಂಜಾಬಿ ರಾಜ್ಯ ವಿಭಜನೆಯಿಂದ ಒಂದು ಸಮಸ್ಯೆ ಹುಟ್ಟುತ್ತದೆ—ಆಡಳಿತಾತ್ಮಕವಾದುದು, ಮುಂದಾಗುವ ಎರಡೂ ರಾಜ್ಯಗಳಲ್ಲಿ ಮುಖ್ಯಮಂತ್ರಿಯ ಆಯ್ಕೆಯು ಅಷ್ಟು ಸರಳವಾದ ಪ್ರಶ್ನೆಯ

(ಹತ್ತನೇ ಪುಟ ನೋಡಿರಿ)

ರಣ ರಂಗದಲ್ಲಿ

ವಿಯತ ಕಾಂಗೋವಿನ ಆಕ್ರಮಣದಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ದಕ್ಷಿಣ ವಿಯತನಾಮವು ಹಲವು ರಾಷ್ಟ್ರಗಳ ಸಹಾಯವನ್ನು ಪಡೆಯುತ್ತಿದೆ. ಇವುಗಳಲ್ಲಿ ನ್ಯೂಜಿಲ್ಯಾಂಡ್ ಕೂಡಾ ಒಂದು. ದಕ್ಷಿಣ ವಿಯತನಾಮದ ಮಿಲಿಟರಿ ಅಸಿಸ್ಟೆಂಟ್ ಕಮಾಂಡಿನ ನಾಯಕ ಜನರಲ್ ವಿಲ್ಲಿಯಂ ವೆಸ್ಟ್‌ಮೋರ್‌ಲ್ಯಾಂಡ್ ನ್ಯೂಜಿಲ್ಯಾಂಡ್‌ನ ಸೈನಿಕನೊಬ್ಬನೊಂದಿಗೆ (ಮಧ್ಯದಲ್ಲಿ) ರಣರಂಗದಲ್ಲಿ.

ಆಚಾರ್ಯ ದೇವೋಭವ

(ಐದನೇ ಪುಟದಿಂದ)

ಇದಕ್ಕಿಂತಲೂ ಹಿರಿಯತನ ಬೇರೇನಿದೆ ಗುರುವಿಗೆ? ಗುರುವಿನ ಗುರಿ ಎರಡು: ಒಂದು ವಿದ್ಯಾ ಪ್ರಸಾರ. ಇನ್ನೊಂದು ಶಿಷ್ಯನ ಏಳಿಗೆ.

ಪ್ರಾಚೀನ ಪರಂಪರೆಯಲ್ಲಿ ಇತಿಹಾಸ ಸಂಗತಿಗಳ ಮೂಲಕ ತಿಳಿದು ಬರುವ ನಲಂದ ವಿಶ್ವವಿದ್ಯಾಲಯದಲ್ಲಿ ಕಾಣ ಬರುವ ಗುರುಗಳ ಸ್ಥಾನಮಾನ ಗೌರವಗಳನ್ನು ಪಾಂಡಿತ್ಯ ಪ್ರತಿಭೆಗಳನ್ನು ಇಂದಿಗೂ ತಿಳಿಯ ಬಹುದಾಗಿದೆ. ಪೂರ್ಣ ವಿದ್ಯಾ ಪರಿಣಿತನಿಗೆ 'ಆಚಾರ್ಯ' ಎಂಬ ಹೆಸರು ಇರುತ್ತಿತ್ತೆಂದು ತೋರುತ್ತದೆ. ಪಂಡಿತ ಪದವಿಗಿಂತಲೂ ಮಿಗಿಲಾದದ್ದು ಆಚಾರ್ಯ ಪದವಿ. ಶಿಲ್ಪಕಲೆ, ಸಾಹಿತ್ಯ ಸಂಗೀತಾದಿಗಳಲ್ಲಿ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಿದವರಿಗೆ ಮಾತ್ರ ಈ ಸಂಬೋಧನೆ, ಪದವಿ, ಪ್ರಶಸ್ತಿ ದೊರೆಯುತ್ತಿತ್ತೆಂದು ತೋರುತ್ತದೆ.

ಹಿಂದಿನ ಆಚಾರ್ಯರ, ಗುರುಗಳ ಸ್ಥಾನ-ಮಾನ ಕಲ್ಪನೆಗಳೇ ಬೇರೆ ಇಂದಿನದೇ ಬೇರೆ. ಹಿಂದಿನ ಇಂದಿನ ಸಂಪ್ರದಾಯ ನೀತಿ-ನಡವಳಿಕೆಗಳನ್ನು ಗಮನಿಸಿದರೆ ಉತ್ತರ ದಕ್ಷಿಣ ಧ್ರುವಗಳನ್ನು ಒಟ್ಟಿಗೆ ಕಂಡಂತಾಗುವುದು. ಇದಕ್ಕೆ ಕಾರಣ ಇಲ್ಲದಿಲ್ಲ, ಕಾಲ ಒಂದೇ ಈ ಮಾರ್ಪಾಡಿಗೆ ಕಾರಣವಿಲ್ಲ. ಕಾಲ ಬದಲಾಗಿದೆ ಎಂದು ಹೇಳುತ್ತದೆಯೇ? ನಮ್ಮ ಸಂಸಾರದ, ಸಂಸ್ಕೃತಿಗಳ ಮೇಲೆ ಯಾವುದೋ ಮಬ್ಬು ಕವಿದಿದೆ.

ಕಲಿಯುವವರ, ಕಲಿತವರ ಸಂಖ್ಯೆ ಹೆಚ್ಚಿತು. ಆದರೆ ಸುಸಂಸ್ಕೃತರ, ವಿದ್ಯಾವಂತರ ಸಂಖ್ಯೆ ಹೆಚ್ಚಿತೆ? ವಿದ್ಯೆಯ ಗೌರವ ಉಳಿದಿದೆಯೆ? ವಿದ್ಯೆ ವ್ಯಕ್ತಿಯ ಮನೋವಿಕಾಸಕ್ಕೆ ಎಡೆಮಾಡಿಕೊಟ್ಟಿತೆ? ವ್ಯಕ್ತಿಯ ಮನದ ಕೊಳೆಯನ್ನು ಕಳೆಯಲು ವಿದ್ಯೆ ಸಮರ್ಥವಾಗಿದೆಯೆ? ಇದೆಲ್ಲದಕ್ಕೂ ಕಾರಣವೇನು? ಎಂಬ ಹಲವು ಸಮಸ್ಯೆಗಳ, ಪ್ರಶ್ನೆಗಳ ಮಾಲೆಯೇ ಎದುರಿಗೆ ನಿಂತಿದೆ.

ಮೊದಲಿಗೆ ಗುರುವಿನ ಬಗ್ಗೆ, ವಿದ್ಯೆಯ ಬಗ್ಗೆ ಜನತೆಗಾಗಲಿ, ನಿಸ್ವಾರ್ಥಿಗಳಿಗಾಗಲಿ ಪೂಜ್ಯ ಭಾವನೆ ಇಂದು ಉಳಿದಿಲ್ಲ. ಈ ಮಾತು ಹೇಳಲು ಸಂಕೋಚವಾಗುತ್ತದೆ. ಆದರೆ ಇದು ಸತ್ಯ ಸಂಗತಿ. ಎಲ್ಲರೂ ವಿದ್ಯಾವಂತರಾದರು. ಯೋಗ್ಯತೆ ಇದ್ದವರು, ಇಲ್ಲದವರು ಎಲ್ಲರೂ ಗುರುಗಳ ಸ್ಥಾನಕ್ಕೆ ಬಂದರು. ಇಂದಿನ ವರೆವಿಗೂ ವಿದ್ಯೆಯ ಶಕ್ತಿ-ಸೌಂದರ್ಯಗಳನ್ನು ಅರಿತವನು ಬ್ರಹ್ಮಸೃಷ್ಟಿಯಲ್ಲಿ ಇಲ್ಲ. ಆದರೆ ಕಲಿತಿದ್ದ ಅಲ್ಪವಾದರೂ, ನಾನು ಕಲಿತವನು ಎಂಬ ಭಾವನೆ ಬೆಳೆಸಿಕೊಂಡವರು ಬಹು ಮಂದಿ. ಇದೊಂದು ಬಗೆಯ ವಿಪರ್ಯಾಸ.

ವಿದ್ಯೆ ಎನ್ನುವ ಮಹಾಗ್ರಂಥದ ಮೊದಲ ಪುಟದ ಪರಿಚಯವಿಲ್ಲದ ವ್ಯಕ್ತಿ ಕೊನೆಯ ಪುಟಕ್ಕೆ ಬಂದ ವಿದ್ಯೆ ಕಲಿಸುತ್ತೇನೆ ಎಂದು. ಕಲಿಸುವವನಿಗೆ ವಿದ್ಯೆ ಇದೆಯೆ? ಆವನು ಕಲಿತವನಾಯ್ತೆ? ಅಥವಾ ಕಲಿಸುವವನಿಗೆ ವಿದ್ಯೆ ಬಂತೆ? ಇಂದು ನಮ್ಮ ಸಮಾಜದಲ್ಲಿ ನಿಕೃಷ್ಟ ಜೀವಿ ಎಂದರೆ ಉಪಾಧ್ಯಾಯ. 'ಗುರು ಸಾಕ್ಷಾತ್ ಪರಬ್ರಹ್ಮ' ಎಂದು ಗುರುವನ್ನು ಸ್ತೋತ್ರ ಮಾಡುತಿದ್ದ ನಾಡಿನಲ್ಲಿ ಗುರುವಿಗೆ ಅನ್ಯಾಯವೂ ಆಗಿದೆ—ಅಪಮಾನವೂ ಆಗಿದೆ. ಇಲ್ಲಿ ಕೆಲವು ಉಪಾಧ್ಯಾಯರ ಲೋಪದೋಷಗಳೂ ಇರಬಹುದಾದರೂ ಎಲ್ಲರನ್ನೂ ಒಂದೇ ಮಾನದಂಡದಿಂದ ಅಳೆಯುವುದು ಸಾಧುವಲ್ಲ.

ಉಪಾಧ್ಯಾಯರಿಗೆ ತಕ್ಕ ತರಬೇತಿ ದೊರೆತಿದೆಯೆ? ಬೋಧಿಸಬಲ್ಲ ಯೋಗ್ಯತೆ ಇದೆಯೆ ಎಂಬುದನ್ನು ನಾವು ಗಮನಿಸಿದ್ದೇವೆಯೆ? ಅಥವಾ ಆ ವೃತ್ತಿಗೆ ಬರುವ ಆ ವ್ಯಕ್ತಿ ಚಿಂತಿಸಿದ್ದಾರೆಯೆ? ಎಲ್ಲರೂ ಉಪಾಧ್ಯಾಯರಾದರು. ಎಲ್ಲರೂ ಬೋಧಿಸಿದರು. ಬಂದದ್ದೇನು? ಮಿಕ್ಕ ಇಲಾಖೆಗಳಲ್ಲಿರುವಂತೆ ಪೂರ್ಣ ಶಿಕ್ಷಣ ತರಬೇತಿ ಕೊಡಿಸಿ ಉಪಾಧ್ಯಾಯರನ್ನು ನೇಮಿಸಿ ಕೊಂಡರೆ ವಿದ್ಯಾಭ್ಯಾಸದ ಮಟ್ಟ ಸುಧಾರಿಸಬಹುದು. ಹೆಚ್ಚು ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗದಿದ್ದಲ್ಲಿ ಶಿಕ್ಷಕರನ್ನು ಶಿಕ್ಷಿಸಿ ಎಂದು ಮಂತ್ರಿವರೇಣ್ಯರ ಸುಗ್ರೀವಾಜ್ಞೆ.

ಸಾಕಷ್ಟು ಉಪಾಧ್ಯಾಯರು ಶಾಲೆಗಳಲ್ಲಿ ಇದ್ದಾರೆಯೆ? ಶಾಲೆಯಲ್ಲಿ ಸಲಕರಣೆಗಳಿವೆಯೆ? ಉಪಾಧ್ಯಾಯರ ಸಮಸ್ಯೆಗಳೇನು? ಶಾಲಾ ಕಟ್ಟಡಗಳಿವೆಯೆ? ನ್ಯೂನತೆಗಳೇನು? ಎಂಬುದನ್ನು ಪರಾಮರ್ಶಿಸುವುದು ಬೇಡವೆ? ವಿದ್ಯೆ, ಉಪಾಧ್ಯಾಯ ಇವರ ಬಗ್ಗೆ ನಮ್ಮ ಸರ್ಕಾರ, ಸಮಾಜಗಳು ಜನತೆಯ ದೃಷ್ಟಿಕೋನ, ಮನೋಭಾವನೆಗಳು ಬದಲಾಗದ ಹೊರತು ವಿದ್ಯೆಯ ಮಟ್ಟ ಸುಧಾರಿಸದು. ಉಪಾಧ್ಯಾಯರ ಏಳಿಗೆಯೂಗದು. ಇನ್ನು ಶಿಷ್ಯರ ಗತಿ, ದೇವರೇ ಗತಿ. 'ಎತ್ತಿಗೆ ಜ್ವರ ಬಂದರೆ ಕತ್ತೆಗೆ ಬರೆ ಎಳ್ಳು' ಎಂಬ ಭಾವನೆ ನಮ್ಮಿಂದ ದೂರವಾದದ್ದು ಕ್ಷೇಮ.

ಇಂದಿನ ಹಳ್ಳಿಗಳಷ್ಟೇ ಹೋಲುವಾಗಿರುವ ಹಳ್ಳಿಯ ಶಾಲೆಗಳು ಮತ್ತು ಅಲ್ಲಿಯ ಉಪಾಧ್ಯಾಯರು ಜೀವನದ ಸುಧಾರಣೆಗೆ ಸರ್ಕಾರ ಸಮಾಜ ಗಮನ ಹರಿಸದಿದ್ದರೆ, ಖರ್ಚು ಮಾಡುವ ಹಣ ಹೊಳೆಯಲ್ಲಿ ಹುಣಿಸೆ ಹಣ್ಣು ತೊಳೆದಂತೆ ನಾನಾ ಬಗೆಯ ಕಷ್ಟ ಕ್ಲೇಶಗಳಿಂದ ವಿದ್ಯೆ, ವಿದ್ಯೆಯನ್ನು ನಂಬಿ ಬದುಕುವ ಬಡ ಉಪಾಧ್ಯಾಯ ದಿನದಿನಕ್ಕೆ ಕ್ಷೀಣಿಸುತ್ತಿದ್ದಾರೆ. ವಿದ್ಯೆ ಮತ್ತು ಉಪಾಧ್ಯಾಯರಿಗೆ ಹತ್ತಿರುವ ಕ್ಷಯ ರೋಗ ವಿದ್ಯಾರ್ಥಿಗಳಿಗೂ ತಗಲುತ್ತಾ ಹೋಗಿದೆ. ರಾಷ್ಟ್ರದ ಭಾವಿ ಸ್ತಂಭಗಳಾದ, ಭಾವಿ ಪ್ರಜೆಗಳಾದ ವಿದ್ಯಾರ್ಥಿಗಳನ್ನು ಸಮಸ್ಯೆಗಳ ಶೃಂಖಲೆಯಿಂದ ಬಿಡಿಸಬೇಕೆಂಬ ಭಾವನೆ ಮೂಡಿ, ಕಾರ್ಯೋನ್ಮುಖರಾದರೆ ಲೇಸಾದೀತು.

ವಿದ್ಯೆ ಕೇವಲ ಹೊಟ್ಟೆ ತುಂಬಿಸಿಕೊಳ್ಳುವ ಸಾಧನವಾಗಿ ಉಳಿದರೆ ಸಾಲದು. ರಾಷ್ಟ್ರ ಜೀವನ, ಶೀಲ, ಸಂಸ್ಕೃತಿ, ಸಂಸ್ಕಾರಗಳನ್ನು ಪ್ರಚಾರ ಮಾಡುವ ಉತ್ತಮ ಸಾಧನವಾಗಬೇಕು. ವಿದ್ಯೆ ಜ್ಞಾನಗಳ ಅರಿವಿಗೆ ಅಭ್ಯಾಸ—ಸಾಧನೆ ಅವಶ್ಯಕ. ವಿನಾಶದ ಹಾದಿಯಲ್ಲಿ ಅತಿ ವೇಗದಿಂದ ಸಾಗುತ್ತಿರುವ ವಿಜ್ಞಾನ ಲೋಕದಲ್ಲಿ ವಿದ್ಯೆ, ಜ್ಞಾನ, ಶಾಂತಿಯ ಆವಶ್ಯಕತೆ ಇದೆ. ವಿದ್ಯೆ ಸ್ಥಾನಮಾನಗಳನ್ನು ಕಾಪಾಡುವಲ್ಲಿ ಉಪಾಧ್ಯಾಯ, ವಿದ್ಯಾರ್ಥಿಗಳ, ಪೋಷಕರ, ವಿದ್ಯಾಭಿಮಾನಿಗಳ, ಸರ್ಕಾರದ ಹೊಣೆಗಾರಿಕೆ ಸಮನಾಗಿದೆ. ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದ ವರೆಗೆ ಎಲ್ಲೆಡೆಯಲ್ಲಿಯೂ ಸುಧಾರಣೆ ಅಗತ್ಯ. ಅಜ್ಞಾನ ಅಳಿಯಲಿ, ಜ್ಞಾನ ಉಳಿಯಲಿ, ನಮಗಾಗಿ ನಿಮಗಾಗಿ; ಲೋಕ ಕ್ಷೇಮಕ್ಕಾಗಿ. "ಆಚಾರ್ಯ ದೇವೋಭವ" ಎಂಬ ಆರ್ಯ ವಾಣಿಯನ್ನು ಸಾರ್ಥಕಪಡಿಸಿಕೊಳ್ಳಲು ಎಲ್ಲರ ಶ್ರಮ ಅಗತ್ಯ.

ಅಮೃತ ಬಿಂದು

ಸಂಕೀರ್ಣ ಮನೋಭಾವದ ಆತ್ಮಕ್ಕೆ ಅಂಟಿದ ರೋಗವೆಂದರೆ ದ್ವೇಷ. ಅದನ್ನು ನಮ್ಮ ಚಿಕ್ಕತನದಿಂದ ಪೋಷಿಸಿ ಅದಕ್ಕೆ ಕ್ರೌರ್ಯದ ರೂಪು ಕೊಡುತ್ತೇವೆ.

o o o

ಅವರನ್ನು ತಿಳಿಯದ ಕಾರಣ ನಾವು ಅವರನ್ನು ದ್ವೇಷಿಸುತ್ತೇವೆ. ಅವರನ್ನು ದ್ವೇಷಿಸುವ ಕಾರಣ ಅವರನ್ನು ನಾವು ತಿಳಿಯಲಾರದವರಾಗಿದ್ದೇವೆ.

o o o

ವಯಸ್ಸು ಹೆಚ್ಚಿದಂತೆ ಜ್ಞಾಪಕ ಶಕ್ತಿ, ಬುದ್ಧಿ, ಚುರುಕುತನ, ಚಪಲತೆ ಬೆಳೆಯುವ ಬದಲು ಕುಗ್ಗುತ್ತವೆ. ಇವು ಕುಗ್ಗಿದರೂ ವಯಸ್ಸಾದಂತೆ ಹೃದಯವನ್ನು ಬೆಳೆಸಿಕೊಳ್ಳಬಹುದು. ಹಾಗೆ ಬೆಳೆಸಿಕೊಳ್ಳದವನ ಜೀವನ ನರಕವಾಗುತ್ತದೆ.

o o o

ಸೂರ್ಯನ ಪ್ರಭೆಯಿಂದ ಲೋಕವು ತನ್ನ ರಂಗು ರಮ್ಯತೆಗಳನ್ನು ಪಡೆಯುವಂತೆ ಹೃದಯದ ಬೆಳಕೇ ನಮ್ಮ ಎಲ್ಲಾ ಕಾರ್ಯಕಲಾಪಗಳಿಗೆ ಬಣ್ಣ ಭಾವಗಳನ್ನೊದಗಿಸುತ್ತದೆ.

o o o

ಪ್ರಪಂಚದಲ್ಲಿ ದೇವರು ಎಲ್ಲಿರುವನೋ ಕಾಣೆನು. ಆದರೆ ಸದ್ಗುಣಿಯಾದ ಮನುಷ್ಯನ ಹೃದಯದಲ್ಲಿ ಮಾತ್ರ ಆತನು ಸದಾ ಇರುತ್ತಾನೆ.

o o o

ಜೀವನಕ್ಕೊಂದು ಗುರಿ ಇರಬೇಕು. ಆ ಗುರಿಯತ್ತ ಸಾಗಲು ಯತ್ನಿಸಿದ ಪ್ರಯತ್ನದಲ್ಲಿ ಇತರರಿಗೆ ಕಲಿಯತಕ್ಕ ಪಾಠವಿರಬೇಕು. ಅದುವೇ ಸಾರ್ಥಕ ಜೀವನ.

o o o

ಸಂತೋಷವನ್ನು ಹೆಚ್ಚಿಸಿ ದುಃಖವನ್ನು ಕಡಿಮೆ ಮಾಡುವ ಪ್ರತಿ ಕೆಲಸವೂ ಒಳ್ಳೆಯ ಕೆಲಸ. ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಹಾನಿ ತರುವ ಪ್ರತಿ ಕೆಲಸವೂ ಕೆಟ್ಟ ಕೆಲಸ.

o o o

ಯೋಜನೆಯಲ್ಲಿ ವಿಶಾಲತೆ, ಕಾರ್ಯಸಾಧನೆಯಲ್ಲಿ ಮಾನವತೆ, ಜಯದಲ್ಲಿ ಸಂಯಮತೆ ಇರುವವನೇ ಮಹಾ ಪುರುಷ.

o o o

ಘನತೆ ಇರುವುದು ಪಶುಬಲದಲ್ಲಿ ಅಲ್ಲ; ಶಕ್ತಿಯ ಸದುಪಯೋಗದಲ್ಲಿ. ಇತರರ ಹೆಗಲಿನ ಮೇಲೆ ತನ್ನನ್ನೇರಿಸಿ ಕೂಡಿಸಬಲ್ಲ ಶಕ್ತಿ ದೇವಶಕ್ತಿ; ಹಿತಶಕ್ತಿಯಲ್ಲ.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ|| ಕೆ.ಎಲ್. ಐತಾಳ್, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ



ಭಾರತಕ್ಕೊಂದು ರಾಷ್ಟ್ರೀಯ ಪಂಚಾಂಗ

(ನಾಲ್ಕನೇ ಪುಟದಿಂದ)

೩೬೫ ದಿನ, ೫ ಗಂಟೆ, ೪೮.೮ ಮಿನಿಟುಗಳುಳ್ಳದ್ದು. ಇಲ್ಲಿ ಭಾರತೀಯ ಪಂಚಾಂಗದ ವರ್ಷಮಾನವು ೨೩.೮ ಮಿನಿಟುಗಳಷ್ಟು ದೊಡ್ಡದಿರುತ್ತದೆ. ಇದರ ಪರಿಣಾಮವಾಗಿ ಕ್ರಿ. ಶ. ೫೦೦ರಲ್ಲಿ ವಸಂತ ವಿಷುವ ದಿನ ವರ್ಷಾರಂಭವಾಗುತ್ತಿದ್ದರೆ ಇಂದು ಅದಕ್ಕಿಂತ ೨೩ ದಿನಗಳ ಮೊದಲು ವರ್ಷಾರಂಭವಾಗುತ್ತದೆ. ಆದುದರಿಂದ ಸಂಪಾತಬಿಂದುವಿನ ಚಲನೆಯನ್ನವಲಂಬಿಸಿಕೊಂಡಿರುವ ಸಂಕ್ರಾಂತಿ ಋತುಗಳು ಸುಮಾರು ೭೦ ವರ್ಷಗಳಲ್ಲಿ ಒಂದು ದಿನದಷ್ಟು ಹಿಂದೆ ಬೀಳುವುದು. ಅಥವಾ ೧೮೦೦ ವರ್ಷಗಳಲ್ಲಿ ಋತುಗಳು, ಸಂಕ್ರಾಂತಿಗಳು ಒಂದು ತಿಂಗಳಿನಂತೆ ಕ್ರಮೇಣ ಹಿಂದೆ ಬೀಳುತ್ತಾ ಹೋಗುವವು. ಇದರ ಪರಿಣಾಮವಾಗಿ ಸೌರ ಆಶ್ವಿನ, ಸೌರ ಕಾರ್ತಿಕಗಳಲ್ಲಿ ಸಂಭವಿಸಬೇಕಾದ ಶರದೃತುವು ಇಂದು ಸೌರ ಭಾದ್ರ, ಸೌರ ಆಶ್ವಿನಿಗಳಲ್ಲಿ ಸಂಭವಿಸುತ್ತದೆ. ಇನ್ನು ಕೆಲವು ಶತಮಾನಗಳ ನಂತರ ಸೌರ ಶ್ರಾವಣ, ಸೌರ ಭಾದ್ರಗಳಲ್ಲಿ ಶರದೃತುವು ಸಂಭವಿಸಬೇಕು. ಇದರಂತೆ ಚಾಂದ್ರ ಆಶ್ವಿನದಲ್ಲಿ ಸಂಭವಿಸಬೇಕಾದ ಶರತ್ ಪೂರ್ಣಿಮೆಯು (ಈಗ ಅದು ಶರತ್ಕಾಲದಲ್ಲಿ ಸಂಭವಿಸುವುದಾದರೂ) ಇನ್ನು ಕೆಲವು ವರ್ಷಗಳ ನಂತರ ಹೇಮಂತ ಋತುವಿನಲ್ಲಿ ಆಚರಿಸಬೇಕೆಂಬ ಅಭಿಪ್ರಾಯವು ನಮ್ಮ ಶಾಸ್ತ್ರಕಾರರಿಗೆ ಖಂಡಿತವಾಗಿಯೂ ಇರಲಿಕ್ಕೆ ಕಾರಣವಿಲ್ಲ.

ಕ್ರಿ. ಶ. ೫೦೦—೬೦೦ರಲ್ಲಿದ್ದ ಜ್ಯೋತಿಷ ಸಿದ್ಧಾಂತಕಾರರು ಸ್ಥೂಲರೀತಿಯ ದೈನಿಕ ಗತಿಯನ್ನು (ಸೌರ ವರ್ಷ ಪ್ರಮಾಣವನ್ನು) ಆಚರಣೆಗೆ ತಂದರು. ಸಂಪಾತ ಬಿಂದುವಿನ ಚಲನೆಯ ಕುರಿತು ತಮ್ಮ ಸಿದ್ಧಾಂತಗಳಲ್ಲಿ ಏನೂ ಹೇಳದ್ದರಿಂದ ಅದರಿಂದ ಉಂಟಾಗುವ ಪರಿಣಾಮವನ್ನು ಬಹುಶಃ ತಿಳಿಯದೆ ಹೋದರು. ಆರ್ಯಭಟ್ಟನಿಂದ ೪೦೦-೫೦೦ ವರ್ಷಗಳ ನಂತರ ಜ್ಯೋತಿಷ ಸಿದ್ಧಾಂತಕಾರರಿಗೆ ಈ ಸಂಪಾತ ಚಲನೆಯು ತಿಳಿದು ಬಂತು. ಆದರೂ ಅವರು ಸೌರ ವರ್ಷ ಪ್ರಮಾಣಕ್ಕೆ ನಿಶ್ಚಿತ ಸಂಸ್ಕಾರಗಳನ್ನು ಮಾಡದೆ ತಪ್ಪಾದ ಸೌರ ವರ್ಷ ಪ್ರಮಾಣವನ್ನೇ ಸಮರ್ಥಿಸಿ ಸಂಪಾತ ಚಲನೆಯು ಒಂದು ನಿಶ್ಚಿತ ಪ್ರಮಾಣದಲ್ಲಿ ಅತ್ತಿತ್ತ ತೂಗಾಡುತ್ತದೆಂದು ಸಾರಿದರು. (ಕೆಲವು ಸಿದ್ಧಾಂತಕಾರರ ಅಭಿಪ್ರಾಯದಂತೆ ಈ ಹಿಂದ ಮುಂದೆ ತೂಗಾಡುವಿಕೆಯು ೨೭ ಡಿಗ್ರಿ, ಇನ್ನು ಕೆಲವರ ಮತ ೨೪ ಡಿಗ್ರಿ) ಈ ಹಿಂದೆ ಮುಂದೆ ತೂಗಾಡುವ ಅಯನ ಚಲನಕ್ಕೆ ಅಯನಾಂದೋಲನವೆಂದು ಕರೆಯುತ್ತಾರೆ. ಈ ಅಯನಾಂದೋಲನಕ್ಕೆ ಸಂಬಂಧಪಟ್ಟ ಶ್ಲೋಕಗಳು ಕ್ರಿ. ಶ. ೧೦೦೦ದ ಸುಮಾರು ತಯಾರಾದ ಮಯಾಸುರ ಸೂರ್ಯ ಸಿದ್ಧಾಂತದಲ್ಲಿ ಸೇರಿಸಲ್ಪಟ್ಟಿವೆ. ಅದು ಕಾರಣ ಪ್ರಾಚೀನ ಪದ್ಧತಿಯ ಪಂಚಾಂಗ ಕರ್ತರು ಸ್ವೀಕರಿಸಿದ ಈ ಸೂರ್ಯ ಸಿದ್ಧಾಂತವನ್ನು ಇತ್ತೀಚಿಗೆ ಖಗೋಲಜ್ಞರು ರಚಿಸಿರಬೇಕು. ಕ್ರಿ. ಶ. ೪೦೦ರಲ್ಲಿ ತಯಾರಾದ ಸೂರ್ಯ ಸಿದ್ಧಾಂತದಲ್ಲಿ ಅಯನಾಂದೋಲನ ಸಂಬಂಧವಾದ ಶ್ಲೋಕಗಳಿಲ್ಲ. ಒಂದು ವೇಳೆ ಈ ಶ್ಲೋಕಗಳಿದ್ದರೆ ಸೂರ್ಯ ಸಿದ್ಧಾಂತಗಳನ್ನೇ ಅವಲಂಭಿಸಿರುವ ಈ ಸಂಪಾತ ಚಲನೆಯು ಆಧುನಿಕ ಜ್ಯೋತಿಷ ಶಾಸ್ತ್ರಗಳಿಂದ ನಿರ್ಧರಿಸಲ್ಪಟ್ಟಿದೆ; ಮತ್ತು ಪ್ರತ್ಯಕ್ಷ ನಿದರ್ಶನಕ್ಕೆ ಬಂದಿದೆ. ಸಂಪಾತ ಬಿಂದುವು ಹಿಂದೆ ಚಲಿಸುತ್ತಾ ಹೋಗಿ ೨೬,೦೦೦ ವರ್ಷಗಳಲ್ಲಿ ಪುನಃ ಮೊದಲಿನ ದಿನದಿಂದ ಆರಂಭವಾದರೂ ಆ ಮಧ್ಯದ ವರ್ಷಗಳಲ್ಲಿ ಋತುಗಳಾರಂಭವು ಹೆಚ್ಚು ವ್ಯತ್ಯಾಸ ಹೊಂದುವುದು. ಪ್ರಾಚೀನ ಗ್ರಂಥಗಳಾದ ವೇದಗಳಿಂದ ವಿಷುವ ದಿನಗಳಿಗೂ ನಕ್ಷತ್ರಗಳಿಗೂ ಇರುವ ಆಧಾರಗಳನ್ನು ನಾವು ತೆಗೆದುಕೊಂಡಲ್ಲಿ ಈ ಅಯನ ಚಲನದ ಹೇಳಿಕೆಯ ಸತ್ಯ ಶೋಧನೆಯಾದೀತು. ಉದಾಹರಣೆಗಾಗಿ ಶತಪಥ ಬ್ರಾಹ್ಮಣದ ಒಂದು ಹೇಳಿಕೆಯನ್ನು ತೆಗೆದುಕೊಳ್ಳೋಣ. ಕೃತ್ತಿಕಾ ನಕ್ಷತ್ರ ಪುಂಜವು ಯಾವಾಗಲೂ ಪೂರ್ವ ದಿಕ್ಕಿನಲ್ಲಿ ಉದಯಿಸುತ್ತದೆಂದು ಹೇಳಲಾಗಿದೆ. ಇದರಿಂದ ಆ ಕಾಲದಲ್ಲಿ ಕೃತ್ತಿಕಾಪುಂಜವು ಭೂಮಧ್ಯ ರೇಖೆಯಲ್ಲಿತ್ತೆಂದು ಸೂಚಿಸಲ್ಪಡುತ್ತದೆ. ಈ ನಕ್ಷತ್ರ ಪುಂಜದ ಯೋಗತಾರೆಯು ಅಲಸ್ಥಿ ಎಂದು ಹೇಳಲ್ಪಡುತ್ತದೆ. ಕ್ರಿ. ಶ. ೫ನೇ ಶತಮಾನದಲ್ಲಿ ವಸಂತ ಸಂಪಾತ ಬಿಂದುವು ಅಶ್ವಿನೀ ನಕ್ಷತ್ರದ ಆರಂಭದಲ್ಲಿತ್ತೆಂದು ತಿಳದು ಬರುವುದರಿಂದ ಕ್ರಾಂತಿ ವೃತ್ತದ ಸಮೀಪವರ್ತಿಯಾದ ಈ ಕೃತ್ತಿಕಾ ಪುಂಜದಲ್ಲಿ ಒಂದು ಕಾಲದಲ್ಲಿ ವಸಂತ ಸಂಪಾತ ಬಿಂದುವಿತ್ತೆಂಬ ಸಿದ್ಧಾಂತಕ್ಕೆ ನಾವು ಮುಟ್ಟಬೇಕಾಗುತ್ತದೆ. ಎಂದರೆ ಸಂಪಾತ ಬಿಂದುವು ಅಶ್ವಿನ್ಯಾರಂಭಕ್ಕಿಂತ ೩೬ ಡಿಗ್ರಿ ಮುಂದೆ ಇತ್ತೆಂದು ಹೇಳಬೇಕು. ಆದುಕಾರಣ ಈ ಸಂಖ್ಯೆಯು ಸಿದ್ಧಾಂತಗಳಲ್ಲಿ ಹೇಳಿದ ೨೭ ಅಥವಾ ೨೪ ಡಿಗ್ರಿಗಳಿಂದ ಅಧಿಕವೆಂದು ಬೇರೆ ಹೇಳಬೇಕಾಗಿಲ್ಲ. ಶತಪಥ ಬ್ರಾಹ್ಮಣದ ಮೇಲಿನ ಹೇಳಿಕೆಯು ಪ್ರಾಚೀನ ಗಣಿತ ಸಿದ್ಧಾಂತಗಳ ಅಯನಾಂದೋಲನಕ್ಕೆ ವಿರೋಧವಾಗಿದೆ. ಆದುದರಿಂದ ನಮ್ಮ ಪಂಚಾಂಗ ಗಣಿತಗಳಲ್ಲಿ ನಾಕ್ಷತ್ರ ಸೌರ ವರ್ಷ ಪ್ರಮಾಣವನ್ನು ಅವಲಂಬಿಸಿಕೊಂಡಿರುವುದು ಯುಕ್ತವೆಂದು ಕಾಣುವುದಿಲ್ಲ.

ನಮ್ಮ ಧಾರ್ಮಿಕ ಉತ್ಸವಗಳನ್ನು ನಿಶ್ಚಿತ ಋತುಗಳಲ್ಲಿ ಆಚರಿಸಬೇಕೆಂದು ನಮ್ಮ ಶಾಸ್ತ್ರಕಾರರು ವಿಧಿಸಿದ್ದಾರೆ. ಈ ನಿಯಮವನ್ನು ನಾವು ಪಾಲಿಸಬೇಕಾದರೆ ವಿಷುವ ವರ್ಷ(ಸಾಂಪಾತಿಕ ಸೌರ ವರ್ಷ)ವನ್ನೇ ಆಧಾರವಾಗಿ ಗಣನೆಗೆ ತೆಗೆದುಕೊಳ್ಳಬೇಕು. ಸೂರ್ಯ ಸಿದ್ಧಾಂತದ ವರ್ಷ ಪ್ರಮಾಣವನ್ನು ತೆಗೆದುಕೊಂಡಲ್ಲಿ ನಮ್ಮ ಶಾಸ್ತ್ರಕಾರರ ಮಾತನ್ನು ಉಲ್ಲಂಘಿಸಿದಂತಾಗುವುದಿಲ್ಲವೆ?

ಕಳೆದ ಸುಮಾರು ಎಪ್ಪತ್ತು ವರ್ಷಗಳಿಂದ ಅಲ್ಲೊಂದು ಇಲ್ಲೊಂದು ಎಂಬಂತೆ ಭಾರತದಲ್ಲಿ ಅನೇಕ ಕಡೆ ಪಂಚಾಂಗಗಳ ಸುಧಾರಣೆ ನಡೆದುವು. ಆದರೆ ಸುಧಾರಕರು ಋತುಗಳು ಯಾವ ರೀತಿಯಲ್ಲಿ ವಿಷುವ ವರ್ಷವನ್ನು ಅನುಸರಿಸಿಕೊಂಡಿವೆಯೆಂಬುದರ ನೈಜ ಬೆಲೆಯನ್ನು ತಿಳಿದಂತೆ ಕಾಣುವುದಿಲ್ಲ. ಈ ಸುಧಾರಕರು ಶುದ್ಧವಾದ ವಿಷುವ ವರ್ಷವನ್ನು ಗಣನೆಗೆ ತೆಗೆದುಕೊಳ್ಳುವ ಬದಲು ೩೬೫ ದಿನ, ೬ ಗಂಟೆ, ೯.೨ ನಿಮಿಷ ಇರುವ ನಕ್ಷತ್ರ ವರ್ಷವನ್ನು ಹೊಂದಿಕೊಂಡಿರುವುದಲ್ಲದೆ ೭೨ ವರ್ಷಗಳಲ್ಲಿ ಒಂದು ದಿನದಂತೆ ಅಥವಾ ೨೨೦೦ ವರ್ಷಗಳಲ್ಲಿ ಒಂದು ತಿಂಗಳಿನಂತೆ ಹಿಂದೆ ಬೀಳುತ್ತದೆ, ಈ ಸುಧಾರಣೆಗಳಾರಂಭ ಕಾಲದಲ್ಲಿ ಕೆಲವರು ಸೂರ್ಯ ಸಿದ್ಧಾಂತದ ವರ್ಷ ಪ್ರಮಾಣವನ್ನೇ ತಮ್ಮ ಪಂಚಾಂಗಗಳಲ್ಲಿ ಆಧಾರವಾಗಿ ತೆಗೆದುಕೊಂಡಿದ್ದರು. ಕ್ರಮೇಣ ಎಂದರೆ ಕಳೆದ ಸುಮಾರು ಮೂವತ್ತೈದು ವರ್ಷಗಳಿಂದ (ಕೇತಕೀ ಪಂಚಾಂಗದಲ್ಲಿ ಕ್ರಿ. ಶ. ೧೮೯೯ರಿಂದ ಮತ್ತು ವೈಜಯಂತಿ ಪಂಚಾಂಗದಲ್ಲಿ ಕ್ರಿ. ಶ. ೧೯೧೭ರಿಂದ) ಶುದ್ಧವಾದ ನಾಕ್ಷತ್ರ ಸೌರ ವರ್ಷ ಪ್ರಮಾಣವನ್ನು ತೆಗೆದುಕೊಂಡರು. ಆದರೆ ಋತುಗಳಿಗೆ ಆಧಾರವಾದ ವಿಷುವ ವರ್ಷ ಪ್ರಮಾಣವನ್ನು ಮಾತ್ರ ಸ್ವೀಕರಿಸುವಷ್ಟು ಮುಂದಕ್ಕೆ ಹೋಗಲಿಲ್ಲ.

ಈ ಹಿನ್ನೆಲೆಯಲ್ಲಿ ಭಾರತ ಸರಕಾರದ ನೇಮಕವಾಗಿದ್ದ ಪಂಚಾಂಗ ಸುಧಾರಣಾ ಸಮಿತಿಯು ಕೆಳಕಂಡ ಕೆಲವು ಮುಖ್ಯ ನಿರ್ಣಯಗಳನ್ನು ಮಾಡಿತು.

೧. ಎಲ್ಲ ಲೌಕಿಕ ವ್ಯವಹಾರಗಳಲ್ಲಿ ಮಹಾ ವಿಷುವ ದಿನ (ವಸಂತ ವಿಷುವ)ದ ಮರುದಿನ ವರ್ಷಾರಂಭವಾಗಬೇಕು. ಒಂದನೆ ಮಾಸ ಚೈತ್ರವು ಮಾರ್ಚ್ ತಾರೀಕು ೨೧ರಿಂದ ಪ್ರಾರಂಭವಾಗಬೇಕು. ಅಧಿಕ ದಿನ (ಫೆಬ್ರವರಿ ತಾ. ೨೯) ಬರುವ ವರ್ಷಗಳಲ್ಲಿ ಮಾರ್ಚ್ ತಾ. ೨೧ರಿಂದ ವರ್ಷಾರಂಭವಾಗಬೇಕು; ಮತ್ತು ಆ ವರ್ಷ ಚೈತ್ರಮಾಸಕ್ಕೆ ೩೧ ದಿನಗಳಿರಬೇಕು. ಇತರ ವರ್ಷಗಳಲ್ಲಿ ಚೈತ್ರಾದಿ ಮಾಸಗಳಿಗೆ ನಿಶ್ಚಿತವಾದಷ್ಟೆ ದಿನಗಳಿರಬೇಕು. ಶಾಲಿವಾಹನ ಶಕವನ್ನು ದೇಶದಾದ್ಯಂತ ಬಳಕೆಯಲ್ಲಿ ತರಬೇಕು. ೧೮೮೨, ೧೮೮೬, ೧೮೯೦ ಇತ್ಯಾದಿ ಶಾಲಿವಾಹನ ಶಕಗಳಿಗೆ ಅಧಿಕ ದಿನಗಳಿರಬೇಕು.

೨. ಧಾರ್ಮಿಕ ವ್ಯವಹಾರಾದಿಗಳಲ್ಲಿನ ವೈಶಾಖಾದಿ ಸೌರಮಾಸಗಳು(ಮೇಷಾದಿ ಮಾಸಗಳು) ನಿಶ್ಚಿತಾಯನಾಂಶ ಯುಕ್ತವಾದ ರವಿಯು ೨೩° ೧೫° ೫೩° ಇತ್ಯಾದಿ ಇರುವಾಗ ಆರಂಭವಾಗಬೇಕು. ಮೇಲೆ ಹೇಳಿದ ಸೌರಮಾಸಗಳಿಗೆ ಸರಿಹೊಂದುವ ಚಾಂದ್ರಮಾಸಗಳು ಅಮಾವಾಸ್ಯಾಂತದಿಂದಾರಂಭವಾಗಬೇಕು. ನಿಶ್ಚಿತ ಅಯನಾಂಶವಾದ ೨೩° ೧೫° ಬದಲು ಚರಾಯನಾಂಶದಿಂದ ನಕ್ಷತ್ರಗಳ ಗಣನೆಯಾಗಬೇಕು. ಈ ನಿಶ್ಚಿತಾಯನಾಂಶದ ೨೩° ೧೫° ೦° ಮಿತಿಯು ೧೯೫೬ನೇ ಇಸವಿ ಮಾರ್ಚ್ ತಾ. ೨೧ಕ್ಕೆ ಎಂದರೆ ಶಕ ೧೮೭೮ನೆ ಚೈತ್ರ ಮಾಸದ ಮೊದಲನೆ ದಿನವಾಗುತ್ತದ. ಆದುದರಿಂದ ಹೊಸ ಪದ್ಧತಿಯ ಲೌಕಿಕಧಾರ್ಮಿಕ ವಿಷಯಗಳುಳ್ಳ ಈ ಪಂಚಾಂಗವು ವಿಷುವ ವರ್ಷದ ತಳಹದಿಯ ಮೇಲೆ ನಿಂತಿದೆ; ಮತ್ತು ಇನ್ನು ಮುಂದೆಯೂ ಇದೇ ಪ್ರಕಾರ ನಡೆಯಬೇಕಾಗಿದೆ. ಆದರೆ ನಕ್ಷತ್ರ ಗಣನೆಯು ನಿರಯನ ಪದ್ಧತಿಯಲ್ಲಿ ಈಗಿನಂತೆ ಮಾಡಬೇಕು.

ಭಾರತ ಸರಕಾರವು ಈ ನಿರ್ಣಯವನ್ನು ಮಾನ್ಯಮಾಡಿ ರಾಷ್ಟ್ರೀಯ ಪಂಚಾಂಗವನ್ನು ಭಾರತದ ಸರ್ವಜನರ ಉಪಯೋಗಕ್ಕಾಗಿ ಪ್ರಕಟಿಸಿತು. ಇದರ ಪ್ರಕಾರ ಶಕ ೧೮೭೯ ಚೈತ್ರ ಒಂದನೇ ದಿನವು ಕ್ರಿ. ಶ. ೧೯೫೭ ಮಾರ್ಚ್ ೨೨ಕ್ಕೆ ಸರಿಹೊಂದುತ್ತದೆ. ಅಂತಯೇ ಕ್ರಿ. ಶ. ೧೯೫೭ನೇ ಮಾರ್ಚ್ ೨೨ಕ್ಕೆ ರಾಷ್ಟ್ರೀಯ ಪಂಚಾಂಗವು ತನ್ನ ೧ನೇ ವರ್ಷದಲ್ಲಿ ಕಾಲಿಟ್ಟಿತು. ಈಗ ಬಳಕೆಯಲ್ಲಿರುವ ಧಾರ್ಮಿಕ ಪಂಚಾಂಗ ಮತ್ತು ಜನರು ಈ ರಾಷ್ಟ್ರೀಯ ಪಂಚಾಂಗದಲ್ಲಿ ನಮೂದಿಸಿ ದಿನಗಳನ್ನೇ ಅನುಸರಿಸಬೇಕೆಂದು ಸರಕಾರವು ಕೋರಿದೆ. ಈ ರಾಷ್ಟ್ರೀಯ ಪಂಚಾಂಗವು ಕನ್ನಡವೂ ಸೇರಿ ಹನ್ನೆರಡು ಭಾಷೆಗಳಲ್ಲಿ ಪ್ರಕಟವಾಗಿ ಜನ ಸಾಮಾನ್ಯರಿಗೆ ಲಭಿಸುವಂತಾಗಿದೆ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

READ &
ADVERTISE IN
NAVAYUGA WEEKLY

ಮನೆ ಜನರೊಡನೆ ವಿರಾಮ

(ಎಲಿಜಬೆತ್ ಜರ್‌ವಿಟ್ಸ್)

ಜನರು ವಾರವೂ ಕೆಲಸಮಾಡಿ ವಾರಾಂತ್ಯದಲ್ಲಿ ಬರುವ ವಿರಾಮ ಕಾಲವನ್ನು ಅನೇಕರು ಅನೇಕ ವಿಧದಲ್ಲಿ ಕಳೆಯುತ್ತಾರೆ. ಆದರೆ ಪಶ್ಚಿಮ ಜರ್ಮನಿಯಲ್ಲಿ ತಮ್ಮ ಸಂಸಾರದೊಡನೆ ಕಾಲ ಕಳೆಯುವುದೇ ಹೆಚ್ಚಾಗಿದೆ.

ಪಶ್ಚಿಮ ಜರ್ಮನಿಯಲ್ಲಿನ ಜನರು ತಮ್ಮ ವಾರದ ಕೆಲಸಗಳನ್ನು ಮಾಡಿ ವಾರಾಂತ್ಯದಲ್ಲಿ ದೊರೆಯುವ ವಿರಾಮಕಾಲವನ್ನು ಹೇಗೆ ಕಳೆಯುತ್ತಾರೆ. ಎಂಬ ಪ್ರಶ್ನೆ ಬಂದಾಗ ಒಬ್ಬೊಬ್ಬರು ಒಂದೊಂದು ವಿಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಆದರೆ ಪ್ರೊಫೆಸರ್ ಇರ್ವಿನ್ ಕೆ ಶಿಯೂಚ್‌ರವರು ಕಲೋನಿನ ವಿಶ್ವವಿದ್ಯಾನಿಲಯದ ಸಾರ್ವಜನಿಕ ಜೀವನ ಹೋಲಿಕೆ ಪ್ರಯೋಗದ ಇನ್ಸ್ಟಿಟ್ಯೂಟ್‌ನ ಡೈರೆಕ್ಟರಾಗಿ ಆ ಪ್ರಶ್ನೆಯ ಮೇಲೆ ಒಂದು ದೊಡ್ಡ ರಚನೆಯನ್ನು ಬರೆದು ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅವರ ತೀರ್ಮಾನದ ಪ್ರಕಾರ ಪಶ್ಚಿಮ ಜರ್ಮನಿ ಮತ್ತು ಪಶ್ಚಿಮ ಕೈಗಾರಿಕಾ ವಿಭಾಗಗಳಲ್ಲಿನ ಜನರು ವಿರಾಮಕಾಲವನ್ನು ಹೆಚ್ಚು ಪ್ರದರ್ಶನೆಗೆ ಅವಕಾಶವಿಲ್ಲದೆ ಕಳೆಯುತ್ತಾರೆಂದು ತಿಳಿದುಬಂದಿದೆ.

ಅನೇಕ ಜರ್ಮನಿಯ ಪ್ರಜೆಗಳು ವಿರಾಮ ಕಾಲದಲ್ಲಿ ತಮ್ಮ ಸಂಸಾರದೊಡನೆ ಅಥವಾ ಜನಗಳ ಗುಂಪಿನಲ್ಲಿ ಕಾಲ ಕಳೆಯುತ್ತಾರೆ. ಯುವಕರು ತಮ್ಮ ಜೊತೆಗಾತಿಯವರೊಡನೆ ಗಂಡಸರೂ, ಜೊತೆಗಾರರೊಡನೆ ಹೆಂಗಸರೂ ಸಂತೋಷಕರ ವಾತಾವರಣದಲ್ಲಿರುತ್ತಾರೆ. ಭಾನುವಾರ ಮತ್ತಿತರ ವಿರಾಮ ದಿನಗಳು ಬೇಜಾರಾಗಿದೆ ಎಂದು ಹೇಳುವವರು ಶೇಕಡಾ 30 ಮಂದಿ ಕೂಡಾ ಇಲ್ಲ. ಇನ್ಸ್ಟಿಟ್ಯೂಟ್‌ನ ವಿಚಾರಣೆಯ ಫಲಿತವಾಗಿ ರಜಾದಿನಗಳಲ್ಲಿ ಮತ್ತು ಭಾನುವಾರಗಳಲ್ಲಿ ಮೂರನೇ ಒಂದು ಭಾಗ ಜನರು ಬೆಳಗ್ಗೆ ಏಳು ಘಂಟೆಗೂ, ಮೂರನೆ ಎರಡು ಭಾಗಕ್ಕೆ ಮೀರಿದ ಜನರು ಎಂಟೂವರೆ ಘಂಟೆಗೂ ಏಳುವರೆಂದು ತಿಳಿದು ಬಂದಿದೆ. ಅಲ್ಲದೆ ಇನ್ನೊಂದು ಗಣತಿಯಿಂದ ಹೆಚ್ಚು ಜನರು ತೋಟಗಳಲ್ಲಿ ಕೆಲಸಮಾಡುತ್ತಲೂ, ಮನೆಯ ಸುತ್ತಮುತ್ತಣ ದುರಸ್ತು ಮಾಡುವ ಕೆಲಸದಲ್ಲಿಯೂ ಕಳೆಯುವರು ಮತ್ತು ಅಷ್ಟೇ ಕಾಲವನ್ನು ಪುಸ್ತಕಾವಲೋಕನದಲ್ಲಿಯೂ ಕಳೆಯುತ್ತಾರೆ. ಗಾಳಿ ಸವಾರಿ ಹೋಗುವುದು, ಸಿನಿಮಾ ಮತ್ತು ಟೆಲಿವಿಷನ್‌ಗಳನ್ನು ನೋಡಲು ಹೋಗುವುದೂ ವಾಡಿಕೆಯಾಗಿದೆ. ಕೇವಲ ಐದು ಶಾಕಡಷ್ಟು ಜನರು ಏನು ಮಾಡುತ್ತಾರೆ ಎಂಬುದು ಪ್ರಶ್ನೆಯಾಗಿದೆ. ಶೇಕಡ ೬೬ ಮಂದಿ ಜನರು ತಮ್ಮ ಸಂಸಾರದೊಡನೆಯೂ, ಶೇಕಡ ೧೯ ಮಂದಿ ತಮ್ಮ ಒಬ್ಬ ಸಂಬಂಧಿಗಳೊಡನೆಯೂ, ಕಳೆಯುವರು. ಸಾಮಾನ್ಯವಾಗಿ ಮನೆಯ ಹೆಂಗಸರನ್ನು ಮಾಮೂಲು ದಿನಚರಿಯ ಅಡಿಗೆ ಮತ್ತು ಇತರ ಕೆಲಸಗಳಿಂದ ವಿರಾಮ ಕೊಡಲು ಪಿಕ್‌ನಿಕ್‌ಗಳಿಗೆ ಹೋಗಿ ಹೋಟೇಲು ಮತ್ತು ಇತರ ಆಹಾರ ಮಾಡುವ ಸಂಸ್ಥೆಗಳಿಗೆ ಹೋಗಬರುವ ವಾಡಿಕೆಯು ಹೆಚ್ಚಾಗಿ ರೂಢಿಗೆ ಬರುತ್ತಿದೆ. ವಿರಾಮ ಕಾಲದಲ್ಲಿ ಬಂಧು ಮತ್ತು ಮಿತ್ರರನ್ನು ಸಂಧಿಸಿ ಸಂತೋಷವಾಗಿ ಕಾಲಕಳೆಯುವ ಒಂದು ಅಭ್ಯಾಸವು ಜನಾಂಗದಲ್ಲಿ ಒಂದು ವಿರಾಮ ವಾತಾವರಣವನ್ನೇ ಏರ್ಪಡಿಸಿದೆ ಎಂದು ಪ್ರೊ. ಶಿಯೂಚ್‌ರವರ ಅಭಿಪ್ರಾಯದಿಂದ ತಿಳಿಯ ಬರುತ್ತದೆ.

(ಏಳನೇ ಪುಟದಿಂದ)

ಲ್ಲ. ರಾಮಕಿಶನ್ನರ ಮೇಲೆ ಈಗಲೇ ಅಸಮಾಧಾನದ ಕಾರ್ಮುಗಿಲು ಗುಡುಗ ತೊಡಗಿದೆ. ಒಮ್ಮತದ ಅಯ್ಕೆಯು ನಡೆಯಲು ಸಾಧ್ಯವಿಲ್ಲವಾದ ಪಕ್ಷದಲ್ಲಿ ಎರಡೂ ರಾಜ್ಯಗಳಲ್ಲಿ ರಾಷ್ಟ್ರಪತಿಗಳ ಆಳಿಕೆಯನ್ನು ಘೋಷಿಸಬೇಕು ಎಂಬ ಅಭಿಪ್ರಾಯವೂ ಬಂದಿದೆ. ನಿಜ; ಇದು ಮುಂದಿನ ನಾಲ್ಕಾರು ತಿಂಗಳ ಅಲ್ಪಕಾಲಾವಧಿಯಲ್ಲಿ ಸುಗಮ ಆಡಳಿತೆಗೆ ಸಹಾಯಕವಾಗಬಹುದು. ಆದರೆ, ಪ್ರಜಾಪ್ರಭುತ್ವವಾದಿ ಕಾಂಗ್ರೆಸ್ ರಾಷ್ಟ್ರಪತಿ ಆಡಳಿತೆಗೆ ಪ್ರೋತ್ಸಾಹವಿತ್ತು ಸಾರ್ವತ್ರಿಕ ಚುನಾವಣೆಯನ್ನು ಎದುರಿಸಲು ಸಿದ್ಧವಿದೆಯೆ? ಇಲ್ಲವೆಂಬುದೇ ಎಲ್ಲರಿಗೂ ಹೊಳೆಯುವ ಸುಲಭ ಉತ್ತರ.

ಕರ್ನಾಟಕ ಯಕ್ಷಗಾನ ನಾಟಕ ಸಭಾ

ಮಂಗಳೂರು

ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿರುವ ಕರ್ನಾಟಕ ಥಿಯೇಟರಿನಲ್ಲಿ

16—4—66ರಿಂದ ಪ್ರತೀ ರಾತ್ರಿ 9-30ಕ್ಕೆ

ತುಳುನಾಡ ಸಿರಿ

ಎಂಬ ಕಥಾಭಾಗವನ್ನು ಅಭಿನಯಿಸುವರು.

ವಿಟ್ಲ ಬಾಬು ರಾಯರ ವರ್ಣರಂಜಿತ ನವ್ಯ ಹಾಗೂ ಭವ್ಯ ಸೀನು ಸಿನೇರಿಗಳು

ನೀವೆಂದೂ ನೋಡದ ಕಣ್ಮನಾನಂದಕರ ಯಕ್ಷಗಾನ ಪ್ರದರ್ಶನ.

ಉದ್ಘಾಟನಾ ಸಮಾರಂಭ

ಬಗ್ವಾಡಿ ಹೋಬಳಿ ಮೊಗವೀರ ಮಹಾಜನಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಶ್ರೀ ಮಹಿಷಾಸುರಮರ್ಧಿನಿ ದೇವಸ್ಥಾನದ (ಕುಂದಾಪುರ ತಾಲೂಕು ಬಗ್ವಾಡಿಯಲ್ಲಿರುವ) ಜೀರ್ಣೋದ್ಧಾರದ ಕೆಲಸ ಪೂರ್ತಿಗೊಂಡು ಅದರ ಹೆಬ್ಬಾಗಿಲ ಉದ್ಘಾಟನಾ ಸಮಾರಂಭವು ತಾ. 12—5—1966ರಂದು ಮೈಸೂರುರಾಜ್ಯದ ಆಹಾರ ಮಂತ್ರಿ ಮಾನ್ಯ ಶ್ರೀ ಬಿ. ಡಿ. ಜತ್ತಿಯವರ ಹಸ್ತದಿಂದ ಜರಗಲಿರುವುದಲ್ಲದೇ ಅಂದಿನ ಸಭೆಯ ಅಧ್ಯಕ್ಷತೆಯನ್ನು ಮುಂಬಯಿಯ ಗಣ್ಯ ಬ್ಯಾರಿಸ್ಟರ್ ಶ್ರೀ ಬಿ. ಕೆ. ಬೊಮನ್-ಬೆಹ್ರಾಮ್ ಇವರು ವಹಿಸಲಿರುವರು. ವಿವಿಧ ಕಾರ್ಯಕ್ರಮಗಳೊಂದಿಗೆ ತಾ. 12—5—66 ಮತ್ತು 13—5—66 ಈ ಎರಡು ದಿನಗಳ ಉತ್ಸವವಾಗಿ ಜರಗಿಸಲಾಗುವುದು. ಈ ಮಹಾತ್ಕಾರ್ಯದಲ್ಲಿ ಸರ್ವರೂ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಹೆಚ್ಚಾಗಿ ದೊರಕುತ್ತಿರುವ ವಿರಾಮ ಕಾಲವು ಅಲ್ಪಾವಧಿಯ ಕಾಲದಿಂದ ದೊರಕುತ್ತಿದ್ದರೂ ಕಾರ್ಯಕ್ಷೇತ್ರಗಳಿಗೆ ಹೋಗಬೇಕಾದಾಗ ಪ್ರಯಾಣ ಸೌಕರ್ಯಗಳಿಗಾಗಿ ಕಾಯುವುದರಿಂದ ಕಳೆದು ಹೋಗುತ್ತದೆ. ಮೊದಲ ಕಾಲಕ್ಕಿಂತಲೂ ಈಗ ಜನರಿಗೆ ದೊರಕುವ ವಿರಾಮಕಾಲವೂ, ಹಣವೂ ಹೆಚ್ಚಾಗುತ್ತದೆ. ಅನೇಕ ಕೈಗಾರಿಕೆಗಳು ಯಾತ್ರಿಕರಿಗೆ ಬೇಕಾದ ಕೈಗಾರಿಕೆ ಮತ್ತು ನೂತನ ಕೈಗಾರಿಕೆಗಳಿಂದ ಲಾಭದ ಮಿತಿಯು ಹೆಚ್ಚಿದೆ. ಬಟ್ಟೆಗಳ ತಯಾರಿಸುವುದರಲ್ಲಿಯೂ ವಿರಾಮ ಕಾಲದ ಬಟ್ಟೆಗಳು ಎಂದೂ ತಯಾರಿಸುತ್ತವೆ. ಮನೆಗಳಲ್ಲಿನ ಅನುಕೂಲಗಳನ್ನು ಹೆಚ್ಚಿಸಿಕೊಳ್ಳಲೂ ಧನವು ವ್ಯಯವಾಗುತ್ತಿದೆ. ಸಂಪಾದಿಸಿದ ಹಣವನ್ನು ರೆಸ್ಟೋರೆಂಟ್‌ಗಳಿಗಾಗಲೀ ಸಂತೋಷ ಸಾಧನಗಳಿಗಾಗಲೀ ವ್ಯಯಮಾಡದೆ ತಮ್ಮ ತಮ್ಮ ಮನೆಗಳಲ್ಲಿನ ಅನುಕೂಲಗಳನ್ನು ಹೆಚ್ಚಿಸಿ ಸುಖಕರವಾಗಿ ಮಾಡಲು ಉಪಯೋಗಿಸುತ್ತಿದ್ದಾರೆ. ಮನೆಗಳಲ್ಲಿನ ಹಳೆಯ ಕಾಲದ ಮರದ ಸಾಮಾನುಗಳು ಹೋಗಿ ಹೊಸ ಶೆಲ್‌ ತಿಂಟೆಲಪ್‌ಸರೆಕ್ಕಾಡಿನೇವಿಯೂದ ಮುರಮಟ್ಟುಗಳಿಗೂ, ಗ್ರಾಮಫೋನ್‌ಗಳಿಗೂ, ಬುಕ್‌ಶೆಲ್ಫ್ ಟೇಪ್‌ರೆಕಾರ್ಡ್‌ಗಳಂತಹ ವಸ್ತುಗಳನ್ನು ಕೊಳ್ಳುವುದು ಹೆಚ್ಚಿದೆ. ಇದರಿಂದ ಸ್ವಚಾಲಕ ಮತ್ತು ಕಟ್ಟಡಗಳ ಕೈಗಾರಿಕೆಗೂ ಲಾಭದಾಯಕವಾಗಿದೆ.

'ಅಪ್ಸರಾ' ಉದ್ಘಾಟನೆ

ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಗಳು, ಮಂಗಳೂರು ನಗರದ ಫ್ಯಾಶನ್ ಕೇಂದ್ರವೆನಿಸಿದ ಹಂಪನಕಟ್ಟೆಯಲ್ಲಿ "ಅಪ್ಸರಾ ಟೆಕ್ಸ್‌ಟೈಲ್ಸ್" ಎಂಬ ಆಧುನಿಕ ವಸ್ತ್ರಾಲಯವನ್ನು ಇದೇ ತಾ. 14ರಂದು ಉದ್ಘಾಟಿಸಿದರು.

ನೂತನವಾಗಿ ತೆರೆಯಲ್ಪಟ್ಟ "ಅಪ್ಸರಾ ಟೆಕ್ಸ್‌ಟೈಲ್ಸ್" ಉಡುಪಿಯ ಶ್ರೀ ಗಜಾನನ ಕ್ಲೋತ್ ಸ್ಟೋರ್ಸಿನ ಸಹ ಸಂಸ್ಥೆಯಾಗಿದೆ. ಶ್ರೀ ಪಾಂಡ್ಯಾ ಅವರು ಈ ಸಂಸ್ಥೆಯ ಸ್ಥಾಪಕರು.

ಶ್ರೀ ಗೋಪಿನಾಥ ಶೆಣೈಯವರು ಸಮಾರಂಭದ ಪ್ರಾರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ವಂದನಾರ್ಪಣೆಗೈದರು.

ಹೊಸ ಟಿ. ಬಿ. ಮುದ್ರೆ ಚಿತ್ರ ಸ್ಪರ್ಧೆಯಲ್ಲಿ ಢಿಲ್ಲಿಯ ಕಲಾಕಾರರಿಗೆ ಬಹುಮಾನ

ಟಿ. ಬಿ. ಎಸೋಸಿಯೇಶನಿನವರು 17ನೇ ಕ್ಷಯರೋಗ ಮುದ್ರೆಮಾರಾಟ ಚಳವಳಿಕ್ಕಾಗಿ ಏರ್ಪಡಿಸಿದ ಹೊಸ ಮುದ್ರೆಯ ಚಿತ್ರಕ್ಕಾಗಿ ಸ್ಪರ್ಧಿಸಿದ 90ಮಂದಿಯಲ್ಲಿ ದೆಹಲಿಯ ಕಲಾಕಾರರಾದ ಶ್ರೀ ಬಿ. ಬಿ. ಬೆನರ್ಜಿಯವರ ಚಿತ್ರವು ಬಹುಮಾನ ಗಳಿಸಿದೆ. ಆರಿಸಲ್ಪಟ್ಟ ಚಿತ್ರವು ವಿವಿಧ ಬಣ್ಣಗಳಿಂದ ಕೂಡಿ ಚಿತ್ತಾಕರ್ಷಕವಾಗಿರುವುದು.

ಸಿಂಡಿಕೇಟ್ ಬ್ಯಾಂಕು

ಶೀಘ್ರದಲ್ಲಿ ಪಂಜಿಮ್‌ನ ಈ ಕೆಳಗಿನ ವಿಳಾಸದಲ್ಲಿ ತನ್ನ ಹೊಸ ಶಾಖೆಯೊಂದನ್ನು ತೆರೆಯುವುದೆಂದು ತಿಳಿಸಲು ಹರ್ಷ ಪಡುತ್ತೇವೆ:—

ಅವೇನಿದಾ ದೋ ಬ್ರೇಜಿಲ್,
ಪೋಸ್ಟ್ ಬಾಕ್ಸ್ ನಂ. 193,
ಪಂಜಿಮ್.

ಸದ್ಯದಲ್ಲಿಯೇ ತೆರೆಯಲ್ಪಡುವ ನಮ್ಮ ಇತರ ಶಾಖೆಗಳು

1. ಮಧುರೈ
2. ಅಹಮದಾಬಾದ್
3. ಪೂನಾ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 80 ಕೋಟಿಗೂ ಮಿಕ್ಕಿ.

..........ವಿಶ್ವದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ.

ರೈತ ಮುರುಗ

(ಎರಡನೇ ಪುಟದಿಂದ)

ಸ್ವಾಮಿ ನಿಷ್ಠೆಯುಳ್ಳವಳೂ ಶ್ರದ್ಧೆಯುಳ್ಳವಳೂ ಆಗಿದ್ದಳು. ಅವರು ಒಬ್ಬರನ್ನೊಬ್ಬರು ಚೆನ್ನಾಗಿ ಪ್ರೀತಿಸುತಿದ್ದರು. ಕೆಡುಕಿನ ದೈವ್ವಗಳು ಅದನ್ನು ಕಂಡು ಹೊಟ್ಟೆಕಿಚ್ಚುಪಡುತ್ತಿದ್ದವು. ಮರವು ಪ್ರಪ್ರಥಮ ಫಲವನ್ನೀಯುವ ಮುಂಚೆಯೇ ಮಿಂಚಿಗಾಹುತಿಯಾಯಿತು. ಪ್ರಸವಕಾಲದಲ್ಲಿ ಆಕೆ ಅವರನ್ನು ಅಗಲಿದಳು. ಹದಿನೈದು ದಿನಗಳೊಳಗೆ ಮಗುವೂ ಸತ್ತುಹೋಯಿತು.

ಟರ್ನರರ ಮನೆ ನಿರ್ಜನವಾದಂತಾಯಿತು. ಅವರು ಏಕಾಂತವಾಸಕ್ಕೆ ಬಲಿಯಾದರು. ಕೊಯ್ಲಿನ ದಿನ ಗದ್ದೆಯು ಮಳೆಯಿಂದಾಗಿ ಪ್ರವಾಹಕ್ಕೂ ಬಿರುಗಾಳಿಗೂ ತುತ್ತಾದಾಗ ರೈತನು ನಿಟ್ಟುಸಿರು ಬಿಡುವಂತೆ ಅವರೂ ಬಿಟ್ಟರು. ಅನಿರೀಕ್ಷಿತ ಬಿರುಗಾಳಿಯು ಸಮುದ್ರದ ಯಾವ ಮೂಲೆಯಿಂದಲೋ ಬಂದು ಕೂವೆ-ಮರವನ್ನು ಮುರಿದು ಹಾಕಿತ್ತು. ಉಪ್ಪು ನೀರಿನಲ್ಲಿ ಹಡಗು ಗಾಬರಿಗೊಳಪಟ್ಟಿತು. ಆದರೆ ಅವರು ಮಾತ್ರ ಸೌಮ್ಯವಾಗಿದ್ದರು. ತನ್ನ ಇಲಾಖೆಯ ಸ್ನೇಹಿತರು ಅವರತ್ತ ಬಾರದಿದ್ದರೂ, ಕರ್ತವ್ಯದ ಕರೆ ಅವರನ್ನು ಕಾರ್ಯಮಗ್ನರಾಗಿರುವಂತೆ ಮಾಡಿತ್ತು.

ಅವರು ಮನಃಪೂರ್ವಕ ಕೆಲಸಮಾಡುತಿದ್ದ ಕಂದಾಯ ಖಾತೆಯು ಈಗ ಅವರಿಗಾಗಿ ಇರಲಿಲ್ಲ. ಈಗ ಅವರು ಮಾನವರಿಂದ ಹಾಗೂ ದೇವತೆಗಳಿಂದ ಕೆಳಗುರುಳಿಸಲ್ಪಟ್ಟವರಾಗಿದ್ದಾರೆ. ಅವರನ್ನು ನ್ಯಾಯ ಇಲಾಖೆಗೆ ಕಳುಹಿಸಲಾಯಿತು. ಅಲ್ಲೂ, ಅವರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಬರುವ ಸಂದರ್ಭಕ್ಕೆ ಅನೇಕ ಅಡೆತಡೆಗಳು ಬಂದುವು. ತನ್ನ ಹೆಂಡತಿಯನ್ನು ಕಳೆದುಕೊಂಡಂದಿನಿಂದ ಅವರು ಅದ್ಯಾವ ಆಶೆ ಆಕಾಂಕ್ಷೆಗಳಿಗೆ ಆಹುತಿಯಾಗಲಿಲ್ಲ. ಪುಸ್ತಕಗಳಲ್ಲಿರುವ ತತ್ವರಾಶಿಯಾಗಲೀ, ಖಾತೆಯಲ್ಲಿನ ಉತ್ತೀರ್ಣತೆಯ ಹಂಬಲವಾಗಲೀ ಅವರನ್ನು ಕಾಡಲು ಅಶಕ್ತವಾಗಿದ್ದುವು. ಅನುಭವಗಳಿಂದ ಅವರ ಹೃದಯ ಪಕ್ವವಾಗಿತ್ತು.

ಇನ್ನು ಒಂದೆರಡು ತಿಂಗಳಲ್ಲಿ ಟರ್ನರ್ ನಿವೃತ್ತಿ ಪಡೆಯುವವರಿದ್ದರು. ಬಹುಶಃ ಮುರುಗನ, ಕೊನೆಯ ದೊಡ್ಡ ವ್ಯಾಜ್ಯಕ್ಕವರು ತೀರ್ಪು ಕೊಡುವದಿತ್ತು. ಆದುದರಿಂದ ಆ ಕೊನೆಯ ಸಮಯದಲ್ಲಿ ಕೂಡಾ ಚೆನ್ನಾಗಿ ಯೋಚಿಸಿ ನ್ಯಾಯಕ್ಕೆ ತಕ್ಕ ಗೌರವವನ್ನು ಕೊಡಬೇಕೆಂದವರು ಮನಸ್ಸು ಮಾಡಿದ್ದರು. ಸ್ಥಾನದಲ್ಲಿ ಇನ್ನೂ ಸರಿಯಾಗಿ ಅವರು ಕುಳಿತುಕೊಂಡರು.

ಕೇದಾರಿಯ ಆಗಮನವು ನ್ಯಾಯಾಲಯಕ್ಕೆ ವಿಶಿಷ್ಟ ಆಕರ್ಷಣೆ ಇತ್ತು. ಆನೆ ಬರುವದಕ್ಕಿಂತ ಮುಂಚೆ ಅದರ ಕೊರಳಲ್ಲಿಯ ಘಂಟಾನಾದ ಕೇಳಿ ಬರುವಂತೆ, ಅವನ ವಾಕ್ಚಾತುರ್ಯದ ಕೀರ್ತಿಯು ನ್ಯಾಯ ಸಭೆ ಹಾಗೂ ಉಳಿದ ಸಾರ್ವಜನಿಕರ ಕಿವಿಗೆ ಮೊದಲು ಬಿದ್ದಿತು. ಇಂಗ್ಲೀಷಿನ ಗೀಳು ಇದ್ದ, ಕಾವೇರಿ ನೀರು ಕುಡಿಯುತ್ತಿರುವ ತಮಿಳು ತರುಣರು, ಮದ್ರಾಸಿನ ಇತ್ತೀಚೆಗಿನ ಹೊಸ ಪದಾನುಪದದ ಸ್ಪಷ್ಟಣೆಯನ್ನು ಕೇಳಲು ನ್ಯಾಯಾಲಯದ ಮುಖಲಿನಲ್ಲಿ ಕಲೆತಿದ್ದರು.

ಕೇದಾರಿಗೆ ನ್ಯಾಯಾಲಯವನ್ನು ನೋಡಿ ನಿರಾಶೆಯಾಗಲಿಲ್ಲ. ಅವನೊಳಗೆ ಅವಿತುಕೊಂಡಿದ್ದ ಪ್ರೇರೇಪಣೆಯು, ಹೆಚ್ಚು ಮೇಲಕ್ಕೆ ಹಾರಿದಷ್ಟು, ಅದು ಗಾಳಿನ ಬಲವನ್ನು ಸೂಚಿಸುತ್ತದೆಂಬುದನ್ನು ಸತ್ಯ ಮಾಡಿ ತೋರಿಸುತ್ತಿತ್ತು. ಕೊರಳುಪಟ್ಟಿ, ಕೊರಳು ಕಟ್ಟುಗಳನ್ನೆಲ್ಲಾ ಧರಿಸಿಕೊಂಡು ಐರೋಪ್ಯರ ಹಾಗೆ ಅವನು ನೋಡುತ್ತಿದ್ದನು. ಅವನು ಬಂದೊಡನೆ ಮಾತಿನ ಪೆಟ್ಟಿಗೆಗಳ ಬೀಗ ತೆಗೆಯಲ್ಪಟ್ಟಿತು. ಓದು ಬರಹದ ಪಂಚೆಯು ಇಲ್ಲದೇ ಇದ್ದವರೂ ಕೂಡಾ ಕೇದಾರಿಯ ನೋಟ, ವೇಷ-ಭೂಷಣಗಳಿಂದ ಆಕರ್ಷಿಸಲ್ಪಟ್ಟರು.

ಆದರೆ ಟರ್ನರರಿಗೆ ಅದು ಮೆಚ್ಚಿಕೆ ಆಗಲಿಲ್ಲ. ಮೊರೆಇಡುವಂತಿರುತ್ತಿದ್ದ ಕೇದಾರಿಯ ದೃಷ್ಟಿಯು ಟರ್ನರರ ದೃಷ್ಟಿಯನ್ನು ಕೂಡಿದಾಗ ಅವರು ಮೆಲ್ಲಗೆ ಗಾಳಿ ಎಳೆದುಕೊಂಡರು. ಭಾರತೀಯರು, ಅವರದೇ ಇರುವ ಚೆಂದದ ಹಾಗೂ ಸರಳ ರೀತಿಯಲ್ಲಿ ಬಟ್ಟೆಗಳನ್ನು ಧರಿಸಿಕೊಂಡಿರಬೇಕೆಂದು ಅವರು ಅಭಿಪ್ರಾಯಪಟ್ಟಿದ್ದರು. ಅಲ್ಲದೆ ಅವರು ಅದೇ ಸ್ಥಳದ ಬುದ್ಧಿವಂತರನ್ನು ಮೆಚ್ಚುತ್ತಿದ್ದರಲ್ಲದೆ ದೂರದಿಂದ ಬಂದಿರುವ ಮದ್ರಾಸಿನ ವಕೀಲರೆಂದರೆ ಅವರಿಗೆ ಹಿಡಿಸುತ್ತಿರಲಿಲ್ಲ. ನಿಜವಾಗಿ ಉಚ್ಚ ನ್ಯಾಯಾಲಯವನ್ನು ಅವರು ವಿರೋಧಿಸುತ್ತಿದ್ದರು. ಮೊದಲ ನೋಟಕ್ಕೇನೇ ಅವರು ಕೇದಾರಿಯನ್ನು ಮೆಚ್ಚಲಿಲ್ಲ. ನ್ಯಾಯ ವಿಚಾರಣೆಯ ಸಮಯ ಅಂತಹ ಭಾವನೆಗಳಿಗೆ ಅವರು ಎಡೆಕೊಡುವಂತಿರಲಿಲ್ಲ.

ಅಪಾದಿತರು ನಿಲ್ಲುವ ಮರದ ಕಟ್ಟೆಯ ಮೇಲೆ ಮುರುಗ ಮತ್ತು ತೊಪ್ಪೈ ಇಬ್ಬರೂ ಒಟ್ಟಿಗೆ ಎದ್ದುನಿಂತರು. ಮುರುಗನಿಗೆ ಸ್ಮೃತಿ ತಪ್ಪುವಂತೆ ಆಗುತ್ತಿತ್ತು. ಅವನ ತಲೆ ತಿರುಗುತ್ತಿತ್ತು. ಕಾಲುಗಳು ನಡುಗುತ್ತಿದ್ದುವು. ಆದರೆ ತೊಪ್ಪೈ ಧೈರ್ಯ ಕಳೆದು ಕೊಂಡಿರಲಿಲ್ಲ, ಧೈರ್ಯ ಹಾಗೂ ಬಲವು ತನ್ನಲಿದೆ ಎಂದಾತನು ನಂಬಿಕೊಂಡಿದ್ದನು ಅಲ್ಲದೆ ಪುಕ್ಕ ಮುರುಗನ ಹೃದಯದಲ್ಲೂ ಧೈರ್ಯ ಬರುವಂತೆ ಅವನು ಗುಟ್ಟಿನಲ್ಲಿ ಹೇಳುತ್ತಿದ್ದನು.

ನೋಡು ಮುರುಗ, ನಮ್ಮ ಮದ್ರಾಸ್ ನ್ಯಾಯವಾದಿಯವರತ್ತ ನೋಡು, ದೊರೆಯಹಾಗೆ ಅವರು ಉಡುಪುಗಳನ್ನು ಧರಿಸಿಕೊಂಡಿದ್ದಾರೆ; ಧೈರ್ಯದಿಂದಿರು. ಅವರು ಹೇಗೆ ನಿಂತುಕೊಂಡಿದ್ದಾರೆ; ನೋಡು. ಬಿಲ್ಲಿನಲ್ಲಿ ಬಾಣವು ಸಿದ್ಧವಾಗಿ ನಿಂತಿರುವಂತೆ ನಿಂತುಕೊಂಡಿದ್ದಾರೆ. ನಮ್ಮ ವೈರಿಗಳ ಮೇಲೆ ಬೀಳಲು ಅವರು ಸಿದ್ಧರಾಗಿದ್ದಾರೆ. ಸ್ವಲ್ಪ ಸಮಯದಲ್ಲೇ ನಾವು ಬಿಡುಗಡೆ ಹೊಂದುತ್ತೇವೆ. ನಮ್ಮ ಕಾಲಿನಲ್ಲಿರುವ ಗಟ್ಟಿಯಾಗಿರುವ ಬಂಧನವು ಕರಗಿ ದ್ರವವಾಗುತ್ತಿರುವಂತೆ ನನಗೆ ಭಾಸವಾಗುತ್ತದೆ. ಮುರುಗ, ಕನಿಷ್ಠ ಪಕ್ಷ, ನಾವು ಬಿಡುಗಡೆ ಹೊಂದಿದ ದಿನವನ್ನು ಕಾಣಲಿಕ್ಕಾಗಿ ಆದರೂ ಧೈರ್ಯದಿಂದಿರು, ಮತ್ತೆ ಬೇಕಾದರೆ ಸಾಯು..."

ಮುರುಗನು ಯಾವದಕ್ಕೂ ಮಾರ್ನುಡಿಯಲಿಲ್ಲ. ಅವನು ಮೆಲ್ಲನೆ ಕೇದಾರಿಯತ್ತ, ನ್ಯಾಯಾಧೀಶರತ್ತ ಹಾಗೆ ಜನಜಂಗುಳಿಯತ್ತ ದೃಷ್ಟಿ ಹಾಯಿಸಿದನು.

ಸಾರ್ವಜನಿಕರು ಹಾಗೂ ದಿನ-ಪತ್ರಿಯ ಮೇಲೆ ಬಂದಿದ್ದ ಕೇದಾರಿ ಎಣಿಸಿದ್ದಂತೆ ಆಗದೆ ವಿಚಾರಣೆಯು ಬೇಗನೆ ಮುಕ್ತಾಯವಾಯಿತು. ಕೇದಾರಿಗೆ ಪಾತಕ ಸಂಬಂಧವಾದ ವ್ಯಾಜ್ಯಗಳ ಅನುಭವ ಇರದಿದ್ದರೂ, ತನ್ನಿಂದಾದಷ್ಟು ಅವನು ಪ್ರಯತ್ನಿಸಿದ್ದನು; ಚತುರತೆ ಹಾಗೂ ಜ್ಞಾನಗಳ ಕೊರತೆಯನ್ನೀಗಿಸಲು ಪನ್ನಸ್ವರ ಹಾಗೂ ಮಾತುಗಳ ಜಾಣ್ಮೆಯನ್ನುಪಯೋಗಿಸಿದ್ದನು.

ಇಂಗ್ಲೀಷ ಭಾಷೆಯನ್ನು ಅರ್ಥಮಾಡಿಕೊಳ್ಳಲಿಕ್ಕೆ ತೊಪ್ಪೈಯಿಂದಾಗದಿದ್ದರೂ ಕೇದಾರಿಯ ಮೇಲೆ ಅವನಿಗೆ ಒಳ್ಳೆಯ ಅಭಿಪ್ರಾಯ ಮೂಡಿತ್ತು. ಅವನು ಸಮುದಾಯದಲ್ಲಿ ಪಟ್ಯಾಚಿ ಹಾಗೂ ಬುದ್ಧಿವಂತನಾಗಿದ್ದನು. ಬೇಟೆ ನಾಯಿಯ ಸ್ಫೂರ್ತಿಯು ಅವರು ಸ್ವೇಚ್ಛೆಯಿಂದಿರುವಂತೆ ಮಾಡಿತ್ತು. ಗಾಯಹೊಂದಿರುವ ಸೈನಿಕನಂತೆ ಅವನು ದುಃಖದಿಂದ ತನ್ನ ಮುಷ್ಟಿಯನ್ನು ಹಿಂಡಿಕೊಳ್ಳುತ್ತಿದ್ದನು. ಪ್ರಪಂಚದಲ್ಲಿರುವ ನೆಣನಾಟದ ಉದ್ಯೋಗಗಳಲ್ಲಿ ಯಾವ ವಿಧದಲ್ಲೇ ಆಗಲಿ— ಸೋಲು ಅಥವಾ ಗೆಲುವಿನ ಮಟ್ಟದಿಂದಲೂ—ಎರಡು ಕಡೆಗೂ ಹಾನಿಯನ್ನುಂಟು ಮಾಡುವ ಮೊದಲ ದೃಷ್ಟಿಯಿಂದಲೂ, ನ್ಯಾಯವಾದಿಗಳ ಉದ್ಯೋಗವು ಯುದ್ಧಕ್ಕಿಂತಲೂ ಮೇಲ್ಮಟ್ಟದ್ದಲ್ಲವೇ?

ತೊಪ್ಪೈಯಲ್ಲಿದ್ದ ಬುದ್ಧಿವಂತಿಕೆ, ಜಗಳಗಂಟತನ ಹಾಗೂ ಕೇದಾರಿಯ ಮೇಲಿನ ಮೆಚ್ಚಿಕೆಯ ಅಭಿಪ್ರಾಯಗಳು ತನ್ನನ್ನು ತಾನೇ ಮರೆಯುವಂತೆ ಮಾಡಿದುವು. ಅವನು ಆಗಾಗ ಮುರುಗನನ್ನು ಮೊಣಕೈಯಿಂದ ತಿವಿಯುತ್ತ, ತಿರಸ್ಕಾರ ಪೂರ್ಣ ಸ್ವರದಲ್ಲಿ ಮಾತಾಡುತ್ತಿದ್ದನು.

"ಏನು ಮುರುಗ, ಈ ಸಂದಿಗ್ಧ ಪರಿಸ್ಥಿತಿಯಲ್ಲೂ ನಿದ್ದೆ ಮಾಡುತ್ತಿರುವೆಯೇನು? ಮದ್ರಾಸ್ ವಕೀಲರತ್ತ ನೋಡು—ಅವರು ಸಿಂಹದಂತೆ ಹಾರುತ್ತಿದ್ದಾರೆ. ನಮ್ಮ ಬಿಡುಗಡೆಯ ಹೋರಾಟವೇ ಇದೆ. ಬಡ ಶಾಸ್ತ್ರಿ, ನಮ್ಮ ಸ್ಥಳೀಯ ನ್ಯಾಯವಾದಿ, ಅವರ ಎಳಿಯಲ್ಲಿ ಕುರಿಯ ಹಾಗೆ ಕುಳಿತುಕೊಂಡು ಅದೇನೋ ಗುಣುಗುಣು ಹೇಳುತಿದ್ದಾರೆ. ಬಹುಶಃ ಪ್ರಾತಃ ಕಾಲದಲ್ಲಿ ಹೇಳಲಿಕ್ಕಾಗದೆ ಉಳಿದಿರುವ ಪ್ರಾತಸ್ಮರಣೆಯನ್ನು ಹೇಳುತಿದ್ದಾರೋ ಏನೊ. ಮದ್ರಾಸಿನವರು ಶಾಸ್ತ್ರಿಯತ್ತ ಕಣ್ಣೆತ್ತಿ ನೋಡುವದೂ ಇಲ್ಲ. ನಾವು ಶಾಸ್ತ್ರಿಯನ್ನು ನಂಬದೆ ಇದ್ದದ್ದು ಒಳ್ಳೆಯದೇ ಆಯಿತು. ಜನಜಂಗುಳಿಯು ಎವೆಯಿಕ್ಕದೆ ಕೇದಾರಿಯ ತುಟಿಯತ್ತ ನೋಡುತ್ತಿದೆ. ಇಂತಹ ದೃಶ್ಯಕ್ಕೆ, ಮುರುಗ, ಒಂದು ತೆಂಗಿನ ತೋಟ ಹಾಗೂ ಸ್ವಲ್ಪ ಹಣ ಉಚಿತವೇ ಇದೆ. ಇದು ನಮ್ಮ ಬಿಡುಗಡೆಯ ಹೋರಾಟ. ಅವರ ವಾಕ್ಪ್ರವಾಹದೆದುರು ಅದ್ಯಾವನು ಎದ್ದು ನಿಂತಾನು? ಎಲ್ಲರೂ ಅವರ ತುಟಿಯನ್ನೇ ನೋಡುತ್ತಿದ್ದಾರೆ, ನೀನೂ ನೋಡುತ್ತಿರುವೆಯೊ, ಮುರುಗಾ?

ಮುರುಗನು ಅಸಮ್ಮತಿಯಿಂದ ಮೆಲ್ಲಗೆ ಹೇಳಿದನು, "ಆದರೆ ತೊಪ್ಪೈ, ನ್ಯಾಯಾಧೀಶರು ನೋಡುತ್ತಿಲ್ಲವಲ್ಲ. ಅವರು ತುಟಿಯನ್ನು ಬಿಗಿಹಿಡಿದುಕೊಂಡು ಕುಳಿತುಕೊಂಡಿದ್ದಾರೆ. ನೀನು ಮಾಡುತ್ತಿರುವಂತೆ ನಮ್ಮ ಮದ್ರಾಸ್ ವಕೀಲರು ಕೂಡಾ ಬೇಕಾದುದಕ್ಕಿಂತಲೂ ಹೆಚ್ಚು ಮಾತಾಡುತ್ತಿದ್ದಾರೆಂದು ಕಾಣುತ್ತದೆ. ಅವರು ಬರೀ ಬಡಾಯಿ ಕೊಚ್ಚಿಕೊಳ್ಳುತ್ತಿರಬಹುದು, ನಮಗಂತೂ ಆ ಭಾಷೆಯು ಅರ್ಥವಾಗುವದಿಲ್ಲ. ನಿನ್ನ ಮೆಚ್ಚಿಗೆಯ ಮನುಷ್ಯ ನನ್ನ ಅಪನಂಬಿಕೆಗೆ ಈಡಾಗಿದ್ದಾರೆ. ದೇವರು ದೊಡ್ಡವರಿದ್ದಾರೆ. ನಾನು ಮಾಡಿರುವ ತಪ್ಪು ನನಗೆ ಗೊತ್ತಿದೆ. ಅದು ಆರೋಪಣಾಪತ್ರದಲ್ಲಿ ಬರೆಯಲ್ಪಟ್ಟಿಲ್ಲವಾದರೂ ನನ್ನ ಹೃದಯದಲ್ಲಿ ಬರೆದಿಡಲ್ಪಟ್ಟಿದೆ. ಪಶ್ಚಾತ್ತಾಪ ಮಾತ್ರ...."

ಎಡೆಬಿಡದೆ ಗುಣುಗುಟ್ಟುತ್ತಿದ್ದುದನ್ನು ಹಾಗೂ ನಿಂತಿದ್ದ ರೀತಿಯನ್ನು ಸಹಿಸದಿದ್ದ, ಪಕ್ಕದಲ್ಲಿದ್ದ, ಸಾಗರ ರಕ್ಷಕರ ಮುಖಂಡನು ಅವನನ್ನೊಂದು ಬಾರಿ ಎಳೆದುದರಿಂದ ಅವನು ನಿಜಲೋಕಕ್ಕೆ ಬಂದನು. ಆ ಮೇಲೆ ಮಾತನ್ನು ಮುಂದುವರಿಸಲು ಅವನಿಗೆ ಮನಸ್ಸು ಬರಲಿಲ್ಲ.

ಮೂರು ದಿನ ವಿಚಾರಣೆ ನಡೆಯಿತು. ನಿಜವಾಗಿ ಕೇದಾರಿಯು ತನ್ನಿಂದಾದಷ್ಟು ಪ್ರಯತ್ನಿಸಿದನು. ಅವನ ವಾಕ್ಚಾತುರ್ಯವು ಪ್ರಭಾವವನ್ನು ಬೀರಿತ್ತು. ಮೂರನೆಯ ದಿನ ಐದು ಗಂಟೆಯ ಹೊತ್ತಿಗೆ ವಿಚಾರಣೆ ಮುಗಿಯಿತು.

ನ್ಯಾಯಾಧೀಶರು ನನ್ನ ಸಂಪ್ರದಾಯಕ್ಕೆ ವಿರುದ್ಧವಾಗಿ ಅಂದು ತೀರ್ಪನ್ನು ಕೊಡದೆ ಉಳಿಸಿಕೊಂಡರು.

(ಮುಂದುವರಿಯುವುದು)

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.



NAVAYUGA 21—4—1966

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಆರೋಗ್ಯ ಸಾಧನೆ

ಸಿಡುಬಿನಿಂದ ದೂರವುಳಿಯಿರಿ

ಈಗಿನ ಕಾಲದಲ್ಲಿ ಅನೇಕ ರೋಗಗಳು ಪ್ರಾಪ್ತವಾಗುತ್ತಿರುವಂತೆಯೇ ಅದರ ನಿವಾರಣೆಗೂ ಅದನ್ನು ತಡೆಗಟ್ಟಲೂ ವೈದ್ಯ ವಿಭಾಗವು ಸತತವಾಗಿ ಪ್ರಯತ್ನಿಸುತ್ತಿದೆ. ಆದರೆ ಘೋರ ರೋಗಗಳಲ್ಲಿ ಒಂದಾದ ಸಿಡುಬಿನ ಅಪಾಯವು ಇನ್ನೂ ತಪ್ಪಿಲ್ಲ.

ಘೋರ ರೋಗಗಳಾದ ಕಾಲರ, ಪ್ಲೇಗು, ಚುಕ್ಕೆಯ ಜ್ವರ, ಹಳದಿ ಜ್ವರ ಮತ್ತು ಸಿಡುಬು ಇವುಗಳಲ್ಲಿ ಮೊದಲಿನ ನಾಲ್ಕು ರೋಗಗಳನ್ನು ಯುರೋಪಿನಿಂದ ಬಹಿಷ್ಕರಿಸಿದೆ ಎನ್ನಬಹುದು. ಆದರೆ ಐದನೆಯ ರೋಗವಾದ ಸಿಡುಬಿನ ರೋಗದಿಂದ ಜನಾಂಗಕ್ಕೆ ಉಂಟಾಗುತ್ತಿರುವ ಅಪಾಯವು ಇನ್ನೂ ತೊಲಗಿಲ್ಲ. ಪ್ರಪಂಚ ಆರೋಗ್ಯ ಸಂಸ್ಥೆಯು ಸಿಡುಬು ರೋಗವು ಬಂದಿರುವ ಪ್ರದೇಶಗಳಲ್ಲಿ ಸಿಡುಬನ್ನು ಹಾಕುವುದರಿಂದ ಅದನ್ನು ಎಷ್ಟೋ ಮಟ್ಟಿಗೆ ತಡೆಯುತ್ತಿದ್ದಾರೆ. ಸಿಡುಬಿನ ರೋಗದ ಸಂಶೋಧನೆಯಲ್ಲಿ ನಿರತವಾಗಿರುವ ಪ್ರೊಫೆಸರ್ ಲಿಪ್ಪೆಲ್ಟ್ ಈಚೆಗೆ ಹ್ಯಾಂಬರ್ಗ್‌ನಲ್ಲಿ ನಡೆದ ಒಂದು ಸಮಾವೇಶದಲ್ಲಿ ಸಿಡುಬಿನ ರೋಗದೊಡನೆ ಹೋರಾಟವು ಇನ್ನೂ ದೂರದಲ್ಲಿದೆ ಎಂದು ವ್ಯಕ್ತಪಡಿಸಿದ್ದಾರೆ.

ಈಚೆಗೆ ಕಂಡುಹಿಡಿದಿರುವ ವ್ಯಾಕ್ಸಿನ್ ಪ್ರಯೋಗದಿಂದ ಅನೇಕ ಖಂಡಗಳಲ್ಲಿ ಈ ರೋಗವು ಕಡಿಮೆಯಾಗುತ್ತಿದೆ ಎಂದು ಪ್ರಪಂಚ ಗಣತಿಯಿಂದ ತಿಳಿದು ಬಂದಿದೆ. ೧೯೬೩ರಲ್ಲಿ ಸಿಡುಬಿನ ವ್ಯಾಧಿಯು ತಗುಲಿದ ಒಟ್ಟು ಪ್ರದೇಶಗಳಲ್ಲಿ ೧೦೦,೦೦೦ ರೋಗಿಗಳು ಎಂದು ತಿಳಿದು ಬಂದಿತು. ೧೯೬೩ರಲ್ಲಿ ಆ ಸಂಖ್ಯೆಯು ೫೦,೦೦೦ಕ್ಕೂ ೧೯೬೪ — ೧೯೬೫ರಲ್ಲಿ ೩೫,೦೦೦ ಇಳುವರಿಯಾಗಿರುವುದು ಗಮನಕ್ಕೆ ಬಂದಿದೆ. ಈ ರೋಗದಿಂದ ಮರಣಕ್ಕೆ ತುತ್ತಾಗುತ್ತಿದ್ದವರ ಸಂಖ್ಯೆಯೂ ಕಡಿಮೆಯಾಗಿದೆ. ಆದರೂ ಈ ರೋಗ ನಿವಾರಣೆಯ ಪ್ರಯತ್ನದಲ್ಲಿ ಅನೇಕ ಅಡಚಣೆಗಳು ಬರುತ್ತಿವೆ.

ಸಿಡುಬಿನ ರೋಗವು 'ಡ್ರಾಪ್ ಇನ್ಫೆಕ್ಷನ್' ಅಂಟುರೋಗವಾದುದರಿಂದ ಆರೋಗ್ಯ ಎಚ್ಚರಿಕೆಗಳಿಂದ ಕಾಲರದಂತಹ ರೋಗಗಳನ್ನು ತಡೆಯುವಂತೆ ತಡೆಯಲಾಗುತ್ತಿಲ್ಲ. ಸಿಡುಬು ರೋಗವು ದಡಾರ ಮತ್ತು ಗ್ರಿಪ್ಪ್ ರೋಗಗಳಂತಹ ಒಂದು ಅಂಟುರೋಗ. ರೋಗವನ್ನು ಹೊಂದಿರುವವರಿಂದ ಇನ್ನೊಬ್ಬರಿಗೆ ಅಂಟುಕೊಂಡುದುದು ಕೂಡಲೇ ಗೊತ್ತಾಗುವುದಿಲ್ಲ. ಅದು ೧೩ ದಿನಗಳ ಕಾಲ ವೃದ್ಧಿಯಾದ ಮೇಲೆ ತಿಳಿಯುತ್ತದೆ. ಕೆಮ್ಮುವುದು ಮತ್ತು ಇತರ ಕಾರಣಗಳಿಂದ ಹರಡುತ್ತದೆ.

ಪ್ರತಿಯೊಂದು ದೇಶದಲ್ಲೂ ಕೆಲವು ಕಾತದಷ್ಟು ಸಿಡುಬು ಹಾಕಿಸಿಕೊಳ್ಳದಿರುವ ಜನರಿಗೆ ಸಿಡುಬು ವ್ಯಾಧಿಯು ಬರುತ್ತದೆ. ಅಥವಾ ಸಿಡುಬು ಹಾಕಿಸಿಕೊಂಡು ವ್ಯಾಕ್ಸಿನ್ನಿನ ಶಕ್ತಿಯು ಕಡಿಮೆಯಾಗಿರುವವರಿಗೆ ಬರುತ್ತದೆ. ಈ ರೀತಿಯ ರೋಗ ಪ್ರಸಾರವು ಕಳೆದ ಅನೇಕ ವರ್ಷಗಳಿಂದ ಯಾವ ಬದಲಾವಣೆಯನ್ನೂ ಹೊಂದಿಲ್ಲ. ಅದು ಬರುವುದಕ್ಕೆ ಮೊದಲ ಚಿಹ್ನೆಯು ನಿಶ್ಯಕ್ತತೆ, ತಲೆ ಮತ್ತು ಮೈ ಕೈಕಾಲು ನೋವು, ವಾಂತಿ ಬರುವುದು ಮತ್ತು ಕೂಡಲೆ ಹೆಚ್ಚಾಗಿ ಜ್ವರ ಬರುವುದು. ಮೊಟ್ಟಮೊದಲು ಚರ್ಮದ ಮೇಲೆ ಕೆಂಪು ಹೊದಿಕೆಯಂತಾಗುವುದು. ಅದು ಹೋಗಿ ನಾಲ್ಕನೆಯ ದಿನದಿಂದ ಸಿಡುಬಿನ ಗುಳ್ಳೆಗಳು ಕಾಣಿಸಿಕೊಳ್ಳುವುವು. ಬಟಾಣಿ ಕಾಳಿನಷ್ಟು ಗಾತ್ರದ ಗುಳ್ಳೆಗಳು ಹೊಪ್ಪಳೆಗಳಂತಾಗುವುದು, ಆದರಲ್ಲಿ ಕೀವೂ ಸೇರಿಕೊಳ್ಳುವುದು. ಆದರ ತೀವ್ರತೆಯು ಹತ್ತನೆ ದಿನಕ್ಕೆ ಉಂಟಾಗುವುದು. ಅದು ನಿವಾರಣೆಯಾಗುವ ಹಾಗಿದ್ದರೆ ಹೊಪ್ಪಳೆಗಳು ಆರಿ ಇಳಿದು ಒಣಗಿಹೋಗುವುದು. ಆದರ ನಿವಾರಣೆಯು ಗುಳ್ಳೆಗಳಿರುವ ಕಡೆಗಳಿಗೆ ಹಚ್ಚುವುದರಿಂದ ಮುಖ್ಯವಾಗಿ ಸಾಧ್ಯ. ಆದರ ನಿವಾರಣಾ ಕಾರ್ಯಗಳು ಇನ್ನೂ ಫಲಕಾರಿಯಾಗಿಲ್ಲ.

ಅದನ್ನು ತಡೆಗಟ್ಟುವ ಪ್ರಯತ್ನವು ಮಾತ್ರ ಸ್ವಲ್ಪ ಮಟ್ಟಿಗೆ ಸಫಲವಾಗಿದೆ. ಈಚೆಗೆ ಕಂಡು ಹಿಡಿದಿರುವ ಹೊಸ ವ್ಯಾಕ್ಸಿನ್‌ಗಳಿಂದ ರೋಗವು ಪ್ರಾಪ್ತವಾಗಿರುವ ಪ್ರಾಂತದಿಂದ ಹೊರಕ್ಕೆ ಹರಡುವುದನ್ನು ತಡೆಯಬಹುದಾಗಿದೆ. ಮೊದಮೊದಲಾಗಿ ತಯಾರಾಗಿರುವ ಉಷ್ಣವನ್ನು ತಡೆಯುವ ವಾಕ್ಸಿನ್ ಇದು ಮುಖ್ಯವಾಗಿ ಉಷ್ಣ ದೇಶಗಳಾದ ಏಷ್ಯ ಮತ್ತು ಪಶ್ಚಿಮ ಆಫ್ರಿಕಗಳಿಗಾಗಿ ತಯಾರಾಗಿದೆ. ಇದು ಶೀಘ್ರದಲ್ಲಿಯೇ ಅಲ್ಲಿನ ಪ್ರಯೋಗ ಕ್ಷೇತ್ರಗಳಿಗೆ ಹೋಗುತ್ತದೆ.

ಪೈರು ಹಾಡಿತು!

ಕೆಸರ ಮೈಯೊಳು ಬಳೆದ ರೈತನೆ
ಕಾಣ್ಕೆ ನಿನಗಿದೊ ಪೊಸ ತೆನೆ!
ನೇಗಿಲೋಳಿಯೊಳೆಲ್ಲಿ ಹೊರಳಿದೆ?
ಅಲ್ಲಿಹೆವು ಕೊಳ್ ನಮ್ಮನೆ! ||

ಹಸುರಿನುಡುಗೆಯನುಡಿಸಿ ಭೂರಮೆ
ಶಿರಕೆ ಹೊನ್ನಿನ ಕಾಳನು
ಮುಡಿಸಿ, ತಂಗಾಳಿಯು ನೃತ್ಯವ
ಕಲಿಸಿ, ಕಳುಹಿದಳೆಮ್ಮನು! ||

ಮುಸಲ ಧಾರೆಗೆ ತಲೆಗುನೊಡ್ಡುತ
ಆಡಿದೆವು ನೀರಾಟವ
ಹೊಸತು ಚೇತನ ಉಕ್ಕೆ ಕಲಿತೆವು
ಕೂಡಿ ಹಸುರಿನ ನಾಟವ ||

ಬಾನ ಚುಕ್ಕೆಯು, ಉಲಿವ ಹಕ್ಕಿಯು
ಕಂಡು ಕೇಳುತ ನಿಂತೆವು!
ಜೇನ ನೆಕ್ಕುವ ಭ್ರಮರ, ಚಿಟ್ಟೆಯ
ನೋಡಿ 'ಬನ್ನಿರಿ' ಎಂದೆವು ||

ಸುಳಿವ ಗಾಳಿಯೊಳೋಲೆವ ನಮ್ಮೆಡೆ
ನುಗ್ಗಿ ಬಂದ ವಸಂತನ
ತೆಕ್ಕೆಯಲಿ ಮೈಯಿಕ್ಕೆ, ಹಿಗ್ಗುತ
ಸುಗ್ಗಿಯಾಯಿತು ಚೇತನ! ||

ನಾವು ಮಣ್ಣಿನ ಕುಸುಮಗಳು ಕಾಣ್
ನಾವು ಚೆಲುವಿನ ಗನಿಗಳು!
ಮುಂದೆ-ಹಬ್ಬಿದ ನಮ್ಮ ನೋಟಕೆ
ಮರುಳುಗೊಂಡವು ಮನಗಳು! ||

ಅಣ್ಣ ರೈತನೆ; ಅನ್ನದಾತನೆ
ನಿನ್ನ ಕಾಣುತ ಈ ಶಿರ
ಬಾಗಿ ನಿಂತಿದೆ!—ಪೈರು ಹಾಡಿದೆ
ಕುಣಿಸಿ ಸಾಸಿರ ಮಣಿಸರ! ||

—ಯನ್. ಕೃಷ್ಣ ಮುಕಾರಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. I. A. No. 115/ 1965

O. S. No. 343/1964

ಇಂದಿರ ಶೆಟ್ಟಿ ಸಹಾ— ಅರ್ಜಿದಾರರು.
(ವಾದಿರು)

ಮತ್ತು

ಅಕ್ಕಣ ಶೆಟ್ಟಿ ಸಹಾ—ಪ್ರತಿವಾದಿರು.
ಎದ್ರಿರು.

ಇವರೊಳಗೆ

ಈ ಮೂಲಕ ಮೇಲಿನ ವ್ಯವಹರಣೆಯ ಎದ್ರಿರು 34 ಸರ್ವೋತ್ತಮ ಶೆಟ್ಟಿ. 36 ಸಿವರಾಮ ಶೆಟ್ಟಿ- ಸರಸು ಶೆಟ್ತಿರ ಮಕ್ಕಳು 42 ಭುಜಂಗ ಶೆಟ್ಟಿ-ಪದ್ಮಾವತಿ ಶೆಟ್ತಿರ ಮಗ.45 ಕರುಣಾಕರ ಶೆಟ್ಟಿ 46ಉಮಾನಾಥ ಶೆಟ್ಟಿ- ಸದ್ರಿ ಪದ್ಮಾವತಿ ಶೆಟ್ತಿರ ಮಕ್ಕಳು. 48 ಪ್ರೇಮ ಶೆಟ್ತಿ. 49 ಶೇಖರ ಶೆಟ್ಟಿ. 50 ಬಾಬು ಶೆಟ್ಟಿ. 51 ಪ್ರಭಾಕರ ಶೆಟ್ಟಿ 52ಹಂಸರಾಜ ಶೆಟ್ಟಿ. 53 ಹೇಮರಾಜ ಶೆಟ್ಟಿ. 54 ಯತಿರಾಜ ಶೆಟ್ಟಿ. 55 ಅರುಣಪ್ರಭ ಶೆಟ್ತಿ- ರಾದು ಶೆಟ್ತಿರ ಮಕ್ಕಳು. ಮಂಗ್ಳೂರು ತಾಲ್ಲೂಕು ಅತಿಕಾರಿಬೆಟ್ಟು ಗ್ರಾಮದ ಕಕ್ವಪರಾರಿಯಲ್ಲಿರುವವರಿಗೆ ಈ ಮೂಲಕ ತಿಳಿಸುವದೇನಂದ್ರೆ—

ಅರ್ಜಿದಾರರು ಮೇಲಿನ ದಾವೆಯಲ್ಲಿ ಫ್ಯಾನಲ್ ಡಿಕ್ರಿ ಕೊಡಿಸಬೇಕಾಗಿ ಬರಕೊಂಡ ಫ್ಯಾನಲ್ ಡಿಕ್ರಿ ವ್ಯವಹರಣೆ ನಿಂಮ ಹಾಜರಿ ಬಗ್ಗೆ ತಾರೀಕು 14_6_1966 ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲಿನ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಸಿವ್ಯಾಯಮೂಡಿ ಮೇಲಿನ ವ್ಯವಹರಣೆ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

(By Order of the Court)

N. M. Adyanthaya.
Advocate for Petitioners

Karkala, 12-4-66

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ! ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

నవయుగ

28—4—1966

NAVAYUGA

౨౦ పైసే

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ರಾಮಚಂದ್ರ ಬಿ. ಎ. ಪಾಸಾಗಿ ವಿವಾಹಿತನಾಗಿ ಊರಿಗೆ ಮರಳಿದ. ಅಲ್ಲಿ ಪ್ರಕೃತಿಯ ವಿಕೋಪದಿಂದ ನೊಂದು ಸಡಪಡ ಕಲೆಕ್ಟರ್ ಕೆಡೆಲರ ಶಿಬಿರ ಗುಮಾಸ್ತನಾದ. ಮುಂದೆ ಕೆಡೆಲ್ ಕಂದಾಯ ಮಂಡಳದ ಹಿರಿಯ ಸದಸ್ಯರಾದರು. ರಾಮು ದೊಡ್ಡ ಉಪಕಾಲೂ ಕಧಿಕಾರಿಯಾದ. ತನ್ನ ಕ್ಷೇತ್ರದ ಅಭಿವೃದ್ಧಿಯತ್ತ ಅತನ ತೀವ್ರ ಗಮನವಿತ್ತು. ಕೆಡೆಲರ ಸಹಾನುಭೂತಿಯೂ ಅತನಿಗಿತ್ತು.

ರಾಮುವಿನ ಒಕ್ಕಲಾಗಿದ್ದ ಮುರುಗನಲ್ಲಿ ಶ್ರೀಮಂತಿಕೆಯೊಡನೆ ದುರ್ವ್ಯಸನಗಳೂ ಬೆಳೆದುವು. ಅತ ತೊಪ್ಪೈಯೊಡನೆ ದೊಂಬಿಯೊಂದರಲ್ಲಿ ಬಂಧಿತನಾದ. ರಾಮುವಿನ ಮಿತ್ರ ಉದಯೋನ್ಮುಖ ವಕೀಲ ಕೋಕಿಲಂಳ ಪತಿ ಕೇದಾರಿಯು ಇವರ ಪರವಾಗಿ ವಾದಿಸಿದರೂ ಸಫಲವಾಗಲಿಲ್ಲ.

ಮುಂದೆ—

ತನ್ನ ದುರಾದೃಷ್ಟಕ್ಕೆ ಶಾಪ ಹಾಕುತ್ತ ತಿರುಚಿನಾಪಳ್ಳಿಯ ಕೇಂದ್ರ ಕಾರಾಗೃಹದಲ್ಲಿ ಮುರುಗನು ಶಾಂತವಾಗಿ ಹಾಗೂ ನಮ್ರತೆಯಿಂದ ಇದ್ದನು. ಆದರೆ ತೊಪ್ಪೈಯು ಇಡೀ ಜಗತ್ತಿನ ಮೇಲೆ ಪ್ರತೀಕಾರ ಮಾಡಲು ಪ್ರತಿಜ್ಞೆ ಮಾಡಿದ್ದನು. ಹುಟ್ಟು ದಂಗೆಖೋರತನದ, ಅಧೀನಕ್ಕೆ ಬಾರದ, ಚೈತನ್ಯವು ಅವನಲ್ಲಿತ್ತು. ಸೆರೆಮನೆಯು ಅದನ್ನು ಮತ್ತಷ್ಟು ಪುಷ್ಟಿ ಮಾಡಿತ್ತು. ಮುರುಗ ಮತ್ತು ತೊಪ್ಪೈ ಆಗಾಗ ಭೇಟಿಯಾಗಲು ಸಾಧ್ಯವಾಗುತ್ತಿತ್ತು. ಆಗ ಮುರುಗನು ತನ್ನ ಸ್ನೇಹಿತನನ್ನು ಅಂಕೆಯಲ್ಲಿಟ್ಟು ಕೊಳ್ಳಲು ಪ್ರಯತ್ನಿಸುತಿದ್ದನು.

"ಕಾರಾಗೃಹದ ಕೆಲಸವು ಬಹಳ ಕಷ್ಟದ್ದಿದೆ. ಅದು ಚಿತ್ರಹಿಂಸೆ. ಇಲ್ಲಿ ಧಾನ್ಯವನ್ನು ಬೀಸಬೇಕು. ನನ್ನ ಜೀವನದ ಇತ್ತೀಚಿನ ದಿನಗಳಲ್ಲಿ ನಾರಿನಿಂದ ಹಗ್ಗವನ್ನು ಹೆಣೆಯುವಂತಹ, ತೆಂಗಿನ ಮಡಲುಗಳನ್ನು ಹೆಣೆಯುವಂತಹ ಕೆಲಸವನ್ನು ಕೂಡಾ ಮರೆತು ಸುಖವಾಗಿ ದಿನಕಳೆದಿದ್ದೆ. ಕೆಲಸದಿಂದಾಗಿ ಈಗ ನನ್ನ ಅಂಗೈಗಳು ಜಜ್ಜಿ ಹೋಗಿವೆ. ಒಂದು ತಿಂಗಳಾದರೂ ಅದಿನ್ನೂ ಗಟ್ಟಿಯಾಗಿಲ್ಲ. ಇತ್ತೀಚಿನ ಕೆಲ ವರ್ಷಗಳಲ್ಲಿ ಸುಖಲೋಲುಪನಾಗಿದ್ದುದರಿಂದ ಸ್ನಾಯುಗಳು ಸಡಿಲವಾಗಿವೆ. ನಾನಾದರೋ ಗಟ್ಟಿ ಮನಸ್ಸಿನಿಂದ ಕೆಲಸ ಮಾಡುತ್ತಿದ್ದೇನೆ. ಆದರೆ ಕಾರಾಗೃಹದ ಅಧಿಕಾರಿಗಳು ಬಹಳ ಕ್ರೂರಿಗಳಿದ್ದಾರೆ. ಬೇಕೆಂದೇ ನನ್ನನ್ನು ಶಿಕ್ಷಿಸಿ, ನಾನು ಕಷ್ಟಪಡುತ್ತಿರುವುದನ್ನು ಕಂಡು ಅವರು ಆನಂದ ಪಡುತ್ತಾರೆ. ಮೊದಲ ಮಾಸವನ್ನು ಕಳೆಯುವದರೊಳಗೆ ನನ್ನ ಮನಸ್ಸು ತತ್ವಶಾಸ್ತ್ರದತ್ತ ಹರಿದಿದೆ. ಸೆರೆಮನೆಯ ಪದ್ಧತಿಯು ಕ್ರೂರತರದ್ದೂ ಭೀಭತ್ಸದ್ದೂ ಇದೆ. ಅದು ನರನನ್ನು ವಾನರನನ್ನಾಗಿ ಮಾರ್ಪಡಿಸುತ್ತದೆ. ದನಗಳನ್ನು ಶಿಕ್ಷಿಸಲು ದೊಡ್ಡಿಯಲ್ಲಿ ಸೇರಿಸುವಂತೆ ಇಲ್ಲಿ ಮನುಷ್ಯರನ್ನು ಕಾರಾಗೃಹದಲ್ಲಿ ಸೇರಿಸುತ್ತಾರೆ. ಪ್ರಪಂಚದಲ್ಲಿ ಅನೇಕಾನೇಕ ವಿಷಯಗಳು ಅಸಂಬಂಧವುಳ್ಳದ್ದಿವೆ. ನೀನು ಹೇಳುತ್ತಿರುವದರಲ್ಲಿ ಹುರುಳಿದೆ ಎಂದು ಆಗಾಗ ನಾನು ಭಾವಿಸಿಕೊಳ್ಳುತ್ತೇನೆ."

'ಆದರೆ ಮುರುಗ, ನೀನು ಚೆಲ್ಲಿಹೋಗಿರುವ ಹಾಲಿಗಾಗಿ ದುಃಖ ಪಡುತ್ತಿರುವೆ. ಎಲ್ಲರೂ ಹಾಗೆಯೇ ಮಾಡುತ್ತಾರೆ. ಹಾಗಾಗಿ ಎಲ್ಲೆಡೆಯಲ್ಲೂ ಕ್ರೂರತೆಯು ತಲೆ ಎತ್ತುತ್ತಿದೆ. ನನ್ನನ್ನು ಗಾಣಕ್ಕೆ ಕಟ್ಟಿ ತೆಗೆಸಿರುವ ಎಣ್ಣೆಯನ್ನು ಕಂಡೊಡನೆ ಅದು ನಮ್ಮ ದಂಗೆಖೋರತನದ ದೀಪಕ್ಕೆ ಹಾಕಲಿಕ್ಕಾಗಿ ತೆಗೆದಿರುವ ಎಣ್ಣೆಯಂತೆ ಭಾಸವಾಗುತ್ತದೆ. ಸುಮ್ಮಗೆ ಕ್ರಮಬದ್ಧರೀತಿಯಲ್ಲಿ ಜೀವಿಸಬೇಕೆಂದು ಹಂಚಿಕೆ ಹೂಡಿದ್ದುದಕ್ಕಾಗಿ ಈ ರೀತಿ ನಮ್ಮನ್ನವರು ಶಿಕ್ಷಿಸುತ್ತಿರುವದರಿಂದ ನನಗೀಗ ಇಡೀ ಸಮಾಜದ ಮೇಲೆ ಹಗೆತನವಿದೆ. ನಾನೆಂದೂ ತಲೆತಗ್ಗಿಸುವದಿಲ್ಲ. ಒಂದೋ ನಾನು ಗೆಲ್ಲಬೇಕು, ಇಲ್ಲಾ ಸಾಯಬೇಕು. ವೈರತ್ವದಿಂದ ಉರಿಯುತ್ತಿರುವ ಗೆಳೆಯನೊಬ್ಬನು ನನಗೆ ದೊರಕಿದ್ದಾನೆ. ನಮ್ಮ ಕಾರಾಗೃಹದ ಅಧಿಕಾರಿಗಳಿಗೂ ಅಂಜಿಕೆ ಉಂಟಾಗಿದೆ; ಒಂದು ಗೂಡಿನಲ್ಲಿ ಹಂಚಿಕೆ ಹೂಡುತ್ತಿರುವ ಎರಡು ತಲೆಗಳು!" ಎಂದಿಗಿಂತಲೂ ಹೆಚ್ಚು ಶಾಂತತೆಯಿಂದ ಮುರುಗನ ಮಾತುಗಳನ್ನು ಕೇಳಿದ ಮೇಲೆ ತೊಪ್ಪೈ ಹೇಳಿದನು.

"ತೊಪ್ಪೈ ಸಮುದ್ರದಲ್ಲಿ ಬಂಡೆಗಳಿಗೆ ತೆರೆಗಳು ಬಂದು ಅಪ್ಪಳಿಸುವಂತೆ, ನಿನ್ನ ಮನಸ್ಸಿನ ಮೇಲೆ ದುರಾಲೋಚನೆಗಳು ಬಂದು ಬಡಿಯುತ್ತಿವೆ. ನೀನು ಇನ್ನೂ ಕೆಟ್ಟವನಾಗುತ್ತಿರುವೆ. ಜಗತ್ತಿನಲ್ಲೆಂದೂ ಹಿಂಸೆಯಿಂದ ಜಯಪಡೆಯಲು ಸಾಧ್ಯವಿರುವದಿಲ್ಲ; ಅವರಲ್ಲೂ ಇಲ್ಲಂತೂ ಸಾಧ್ಯವೇ ಇಲ್ಲ. ದುರಾಕಾಂಕ್ಷೆ ಒಂದು ಶಾಪ. ನನ್ನ ಸ್ವಾಮಿಯು ಅದನ್ನು ಅಡಿಗಡಿಗೆ ಬೋಧಿಸುತಿದ್ದರೂ ಬಹಳ ತಡವಾಗಿ ನಾನು ತಿಳಿದುಕೊಂಡೆನು. ನಾನೊಬ್ಬನೇ ದುಡಿಯುತಿದ್ದಾಗ ನನಗೆ ಬೇಕಾದಷ್ಟು ಫಲ ಸಿಗುತಿತ್ತು. ಅದನ್ನು ಬಿಟ್ಟು, ನಿನ್ನನ್ನು ದುಡಿಸಿ ನಾನುಣ್ಣಲು ಶುರುಮಾಡಿದಾಗಲೇ ನನ್ನ ಜೀವನದ ರುಚಿ ಕೆಟ್ಟುಹೋಯಿತು."

ನಕಾರ ಸೂಚಿಸುತ್ತ ತೊಪ್ಪೈಯು ತಲೆಯಲ್ಲಾಡಿಸಿದನು. ಆದರೂ ಮುರುಗನು ಮುಂದರಿಸಿದನು.

'ಪೊನ್ನಿಯು ಹೂವಾಗಲೂ ಹೇಳುತ್ತಿದ್ದಂತೆ, ಕೆಟ್ಟ ಘಳಿಗೆಯಲ್ಲಿ ನಮ್ಮ ಭೇಟಿಯಾಯಿತು. ಹೆಂಡದಂಗಡಿಯು ನಮ್ಮ ನಾಶದ ಮೂಲ ಹೇತು. ಮಹಾ ಸಾಮ್ರಾಜ್ಯ ಕಟ್ಟುವ ನಿನ್ನ ದುರಾಕಾಂಕ್ಷೆಗಳ ನಮ್ಮನ್ನು ಸೆರೆಮನೆಯಲ್ಲಿ ಸಾಯುವಂತೆ ದೂಡಿವೆ."

"ಆದರೆ ಮುರುಗ, ನಮ್ಮ ವ್ಯಾಜ್ಯದಲ್ಲಿ ಪಾಪದವರಲ್ಲವೇ ಶಿಕ್ಷೆಗೊಳಪಟ್ಟವರು? ದೊಂಬಿಗೆ ನಾವು ಕಾರಣವೇ? ಅದರಲ್ಲಿ ನಮ್ಮ ಪಾಲೇನಾದರೂ ಇತ್ತೇ? ವೈಮೇಲೆ ಬಂದಿರುವ ಬಡಿದಾಟದಲ್ಲಿ ತಮ್ಮ ಧೈರ್ಯವನ್ನು ವರ್ಧಿಸಿಕೊಳ್ಳಲು ತಾವಾಗಿ ಇಷ್ಟಪಡುತ್ತಿದ್ದವರಿಗೆ ನಾ... ಕಳ್ಳನ್ನು ಕೊಟ್ಟಿದ್ದೇವಲ್ಲದೆ ಇನ್ನೇನು ಮಾಡಿದ್ದೇವೆ?"

"ಉದ್ಯೋಗಕ್ಕನುಸಾರವಾಗಿ, ದೊಂಬಿಯಲ್ಲಿ ನಾವು ನಿರಪರಾಧಿಗಳಾಗಿ ಇ... ಬಹುದು. ಆದರೆ, ಈ ಮೂರು ವರ್ಷ... ಗಳಲ್ಲಿ ನಾವು ಮಾಡಿದ್ದಾದರೂ ಏನು? ... ಡವರ ಉಪವಾಸ ಬೀಳುವಂತೆ ಮಾ... ಡೆವು. ಮಕ್ಕಳ ತಂದೆಯಂದಿರಿಗೆ ಹೆಂ... ವನ್ನು ಮಾರಿ ಬಿಟ್ಟು, ಅವರ ನಿಸ್ಸವನ್ನು ಕಸಿದುಕೊಂಡಿರುವೆವು. ಉಳುವವನಿಗೂ ಭೂಮಾಲಿಕನಿಗೂ ಜಗಳವಾಗಲು ಕಾರಣ ಹೆಂಡವೇ. ಹೆಂಡದಂಗಡಿಯಲ್ಲಿ ಒಂ... ಡು ಮಡಕೆ ಕಳ್ಳು ಕುಡಿದು ಇನ್ನೊಂ... ನ್ನು ತೆಗೆಯುವಾಗಿನ ವಿರಾಮಕಾಲದಲ್ಲಿ ನೀನು ತತ್ವಮಯ ಸಮಾಜ ಕಲ್ಯಾಣ... ಮಾತುಗಳನ್ನಾಡುತ್ತ, ಅದನ್ನೆಲ್ಲಾ ಮ... ಡಿದೆ. ನನ್ನ ಸ್ವಂತ ಉದಾಹರಣೆಯಿಂ... ನೀನು ಮಾಡಿದುದಾದರೂ ಇನ್ನೊಂದು ರೀತಿಯಿಂದಿದೆ. ಉಳುತ್ತಿದ್ದವನು ಶ್ರೀಮಂತನಾದೆ, ಹಳ್ಳಿಯ ಪಳ್ಳಗಳ ಹಾಗೂ ಪಡ್ಯಾಚಿಗಳ ಹಗೆಗೆ ಪಾತ್ರನಾದೆ. ಒಂ... ದು ಪದ್ಧತಿಯು ಜಜ್ಜಲ್ಪಟ್ಟಾಗ ಕೆಟ್ಟ... ದೂ ಒಳ್ಳೆದೂ ಒಂದೇ ರೀತಿಯಲ್ಲಿ ನಾ... ದ ದವಡೆಯೊಳಗೆ ಹೋಗಿಬಿಡುತ್ತದೆ."

"ನಾವು ಹಾಗೆ ಮಾಡಿದ್ದಲ್ಲಿ ತಾನೇ... ಮುರುಗ, ನಾವು ಮಾಡಿರುವ ದ... ದರೂ ಏನು? ದೀನ ದಲಿತರನ್ನು, ಬ... ವರನ್ನು ಮೂಢನಂಬಿಕೆಗಳ ಕೂಂ... ಡೊಳಗಿನಿಂದ ಮೇಲಕ್ಕೆತ್ತಲು ಜಗತ್ತಿನಲ್ಲಿರುವ ಉತ್ತಮ ವಿಧಾನವನ್ನು ಅನುಸರಿಸಿದ್ದೆವು. ನೀನು ವರ್ಣಿಸಿರುವಂತೆ ಇರ... ನ ವ್ಯಕ್ತಿ ನಿಮ್ಮ ಸ್ವಾಮಿ. ಅವನ ಮನೆ ಬಾಗಿಲಿನಲ್ಲಿ ಹಸಿದು ಕಂಗೆಟ್ಟು ಜೀವ ಬಿಟ್ಟಿರುವ ಮಂದಿ ಎಷ್ಟು? ಮಕ್ಕಳ ಬಾಯಿಯಿಂದಲೂ ಅನ್ನವನ್ನು ಸೆ... ಳೆದುಕೊಂಡು ತನ್ನ ಸ್ವಸುಖಕ್ಕಾಗಿ— ಬ್ರಾಹ್ಮಣರಿಗೆ, ನ್ಯಾಯವಾದಿಗಳಿಗೆ 'ಹೆಂಗಸರಿಗೆ ಹಾಗೂ ಮಾಂತ್ರಿಕರಿಗೆ— ಹಾಳುಮಾಡಿದ್ದಾನೆ. ನಮ್ಮನ್ನು ಶಿಕ್ಷಿಸಿರುವ ದೇವರು ಅವನನ್ನಾಗಲೀ, ಅವನ ಹಿರಿಯರನ್ನಾಗಲೀ ಶಿಕ್ಷಿಸಿದ್ದಾನೆಯೇ?"

'ತೊಪ್ಪೈ, ತಾಳು. ಈಗಲ್ಲದಿದ್ದರೆ ಹಿಂದಿನ ಜನ್ಮದಲ್ಲಿ ಅವನು ಅಥವಾ ಅವನ ಹಿರಿಯರು ಒಳ್ಳೆಯ ಕೆಲಸವನ್ನು ಮಾಡಿರಬಹುದು. ನಿಜ. ಒಳ್ಳೆಯದಕ್ಕೆ ಸಾ... ಕಾಲವಲ್ಲ. ಒಂದು ದಿವಸ ಅದು ತನ್ನ ಸ್ಥಾನವನ್ನು ಪಡೆದು ಕೊಳ್ಳಬಹುದು.

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	....	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ|| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

—— ಮುಖಪತ್ರದಲ್ಲಿ: ——

ಅಮೇರಿಕದ ಉಪಾಧ್ಯಕ್ಷ ಮಿ|| ಹ್ಯೂಬರ್ಟ್ ಹಂಫ್ರಿಯವರು ಇತ್ತೀಚೆಗೆ ಭಾರತಕ್ಕೆ ಭೇಟಿ ಇತ್ತಾಗ ರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನ್‌ರೊಡನೆ ಚರ್ಚಿಸುತ್ತಿರುವರು.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೩೩	೨೮—೪—೧೯೬೬	No. 33

ಅಮೇರಿಕದ ನೆರವು

ಜಗತ್ತಿನ ಎರಡು ದೊಡ್ಡ ಪ್ರಜಾರಾಜ್ಯಗಳಾದ ಅಮೇರಿಕಾ ಹಾಗೂ ಭಾರತಗಳ ನಡುವಣ ಸಂಬಂಧ ಮಧುರವಾಗಿರಬೇಕಾದುದು ಅತೀ ಅಗತ್ಯವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ನೆರವನ್ನೀಯುವ ಅಮೇರಿಕದ ಯೋಜನೆಗನುಗುಣವಾಗಿ ಭಾರತ ಸ್ವಾತಂತ್ರ್ಯದ ನಂತರ ಅಮೇರಿಕದ ನೆರವನ್ನು ಬಹಳಷ್ಟು ಪಡೆದಿದೆ. ೧೯೬೨ರ ಚೀನೀ ಆಕ್ರಮಣದ ಕಾಲ, ಇತ್ತೀಚೆಗಿನ ಭೀಕರ ಕ್ಷಾಮದ ಸಂದರ್ಭ ಅಮೇರಿಕೆಯು ಇತ್ತ ಕೊಡುಗೈ ಸಹಾಯವನ್ನು ಯಾರೂ ಮರೆಯುವಂತಿಲ್ಲ.

ಕಳೆದ ಒಕ್ಟೋಬರದಲ್ಲಿ ನಡೆದ ಭಾರತ ಪಾಕ್ ಘರ್ಷಣೆಯ ಕಾಲ ನಿಂತು ಹೋದ ಅಮೇರಿಕದ ಸಹಾಯ ಪುನರಾರಂಭವಾಗುವುದಕ್ಕೆ ಇನ್ನೂ ತೊಡಗಲಾಗಿಲ್ಲ. ಇತ್ತೀಚೆಗೆ ನಮ್ಮ ಪ್ರಧಾನಿಯವರು ಅಮೇರಿಕ ಸಂದರ್ಶಿಸಿದಾಗಲೂ ಈ ಪ್ರಸ್ತಾಪ ಬಂದಿತ್ತು. ಅಮೇರಿಕವಾದರೂ ಈ ಬಗ್ಗೆ ಇನ್ನು ಯಾವುದೇ ಕಾರ್ಯ ಕೈಕೊಂಡಂತಿಲ್ಲ. ಈ ಕುರಿತು ಅದು ಪರ್ಯಾಲೋಚಿಸುತ್ತಿದೆ.

ಇತ್ತೀಚೆಗೆ ಭಾರತಕ್ಕೆ ಅಮೇರಿಕದ ನೆರವಿನ ಕುರಿತು ಅಮೇರಿಕದ ವಿದೇಶಾಂಗ ಮಂತ್ರಿ ಶ್ರೀ|| ಡೀನ್‌ರಸ್ಕರು ನೀಡಿರುವ ಹೇಳಿಕೆಯು ಅಮೇರಿಕನ್ ವಿರೋಧೀ ಜನರಿಗೆ ಮಾತಾಡಲು ಅವಕಾಶ ಮಾಡಿಕೊಟ್ಟಂತಾಗಿದೆ. ಅವರ ಹೇಳಿಕೆಗನುಗುಣವಾಗಿ ನೆರವಿನ ಪುನರಾರಂಭವಾಗಲು ಕಠಿಣ ಶರ್ತಗಳನ್ನು ಹೇರಲಾಗುತ್ತಿದೆ ಎಂದು ಅಪವಾದ ಹೊರಿಸುತ್ತಿದ್ದಾರೆ.

ಆದರೆ ಅಮೇರಿಕದ ಟೀಕೆಗಾರರು ಒಂದು ವಿಷಯವನ್ನು ಮರೆತಂತೆ ಕಾಣುತ್ತದೆ. ಯಾವುದೇ ಸರಕಾರವಾಗಲೀ ತನ್ನ ಧೋರಣೆಗಳನ್ನು, ಕಾರ್ಯಕ್ರಮಗಳನ್ನು ಶಾಸಕರ ಮುಂದೆ ಸಮರ್ಥಿಸಬೇಕಾಗುತ್ತದೆ. ನಮ್ಮ ಸರಕಾರವೂ ಇದಕ್ಕೆ ಹೊರತಾಗಿಲ್ಲ. ಶಾಸಕರ ಅನುಮತಿ ಪಡೆದೇ ಅಮೇರಿಕ ಯಾವುದೇ ನೆರವನ್ನು ಈಯಬೇಕಾಗಿದೆ. ಡೀನ್‌ರಸ್ಕರು ಅಮೇರಿಕದ ಸೆನೆಟಿನಲ್ಲಿ ಯಾವುದೇ ಸಹಾಯವಾಗಲೀ ಅದು ಅಮೇರಿಕನ್ ಹಿತಾಸಕ್ತಿ ಹಾಗೂ ಭದ್ರತೆಗಳಿಗೋಸ್ಕರವಾಗಿಯೇ ಕೊಡಲ್ಪಡುವುದೆಂದು ಹೇಳಿದ್ದಾರೆಂದ ಮಾತ್ರಕ್ಕೆ ಸಹಾಯ ಪಡೆಯುವ ರಾಷ್ಟ್ರಗಳು ಅಮೇರಿಕದ ಕೈಗೊಂಬೆಗಳಾಗಬೇಕೆನ್ನುವ ಅರ್ಥ ಬರುವುದಿಲ್ಲ.

ಯಾವುದೇ ನೆರವಿನ ಯೋಜನೆಯಾಗಲೀ ರಾಜಕೀಯ ಹಿತಾಸಕ್ತಿಗಳಿಗಿಂತ ಹೆಚ್ಚು ಇತರ ವಿಚಾರಗಳ ಮೇಲೆ ಹೊಂದಿಕೊಂಡಿದೆ. ನೆರವು ಪಡೆಯುವ ರಾಷ್ಟ್ರವು ತನ್ನ ಸ್ವಾತಂತ್ರ್ಯ ರಕ್ಷಣೆ ಮಾಡಬಲ್ಲುದೇ? ಕೊಟ್ಟ ನೆರವನ್ನು ಸದುಪಯೋಗಗೊಳಿಸಿ ಸ್ವಾವಲಂಬನದ ದಾರಿಯತ್ತ ನಡೆಯುತ್ತಿರುವುದೇ ಎಂಬವುಗಳೇ ಈ ಯೋಜನೆಗಳ ಮೂಲತತ್ವಗಳು. ನೆರವಿನ ಶರ್ತಗಳು ಬೇರೆಯೇನೇ ಇರಲಿ. ಮೇಲಿನವು ಮೂಲ ತತ್ವಗಳು. ಹಾಗಿರುವಾಗ ಅಮೇರಿಕನ್ ನೆರವಿನ ಕುರಿತು ಸಂಶಯ ತಾಳುವುದು ಸರಿಯಲ್ಲ. ಯಾವುದೇ ರಾಷ್ಟ್ರ ತನ್ನ ಸ್ವಾಭಿಮಾನ, ಸ್ವಪ್ರತಿಷ್ಠೆ ಹಾಗೂ ಸ್ವಾತಂತ್ರ್ಯಗಳನ್ನು ಬಲಿಕೊಟ್ಟು ನೆರವಿಗೆ ಯೋಚಿಸುವುದಿಲ್ಲ. ಈ ರೀತಿಯ ತಪ್ಪು ಕಲ್ಪನೆ ಮಾಡುವುದೆಂದರೆ ಎರಡು ರಾಷ್ಟ್ರಗಳೊಳಗಣ ಮೈತ್ರಿ ಹಾಗೂ ಸದ್ಭಾವನೆಗಳನ್ನು ಹಾಳುಗೆಡಹುವುದೇ ಆಗಿದೆ.

ಡೀನ್‌ರಸ್ಕರು ಹಾಕಿರುವ ಎರಡು ಶರ್ತಗಳ ಕುರಿತು ಯಾರೂ ಅಪಾರ್ಥ ಕಲ್ಪಿಸಿಕೊಳ್ಳಬೇಕಾದುದಿಲ್ಲ. ಸ್ವಾವಲಂಬನೆ ಹಾಗೂ ಜನರಿಗೆ ನೆರವಿನ ಫಲ ಮುಟ್ಟಬೇಕು ಎನ್ನುವ ಎರಡು ಶರ್ತಗಳು ತೀರಾ ಸಾಮಾನ್ಯವಾದವುಗಳು. ನೆರವು ಪಡೆಯುವ ರಾಷ್ಟ್ರಗಳು ಕೇವಲ ನೆರವನ್ನೇ ನಂಬಿ ಉದಾಸೀನ ತಾಳದೆ ಸ್ವಾವಲಂಬನೆಗಾಗಿ ದುಡಿಯಬೇಕು ಎನ್ನುವುದನ್ನು ಯಾರೂ ತಪ್ಪು ಎನ್ನಲಾರರು. ಹಾಗೆಯೇ ಕೊಟ್ಟ ನೆರವು ಸಾಮಾನ್ಯ ಜನತೆಯ ಕೈಸೇರಬೇಕೆಂಬುದರಲ್ಲಿ ಕೂಡಾ ಯಾವುದೇ ಅನ್ಯಾಯವಿಲ್ಲ. ಇವುಗಳನ್ನು ಶರ್ತಗಳಾಗಿಟ್ಟುಕೊಳ್ಳದಿದ್ದರೆ ನಾಳೆ ಅಮೇರಿಕನ್ ಸರಕಾರ ತನ್ನ ಶಾಸಕರಿಂದ ಟೀಕೆಗೆ ಗುರಿಯಾಗಬೇಕಾದೀತು.

ಭಾರತವಾದರೂ ಇಲ್ಲಿಯತನಕ ತನಗೆ ದೊರೆತ ನೆರವನ್ನು ಸದುಪಯೋಗಗೊಳಿಸಿದೆ. ಮಾತ್ರವಲ್ಲ ಶಕ್ತಿಮೀರಿ ಸ್ವಾವಲಂಬನೆಗಾಗಿ ಶ್ರಮಿಸುತ್ತಿದೆ. ಸ್ವಾತಂತ್ರ್ಯದ ಬಳಿಕ ಭಾರತ ವಿದೇಶೀ ನೆರವು ಹಾಗೂ ಸ್ವಯಂಯತ್ನಗಳಿಂದ ಮಹಾ ಸಾಧನೆಗಳನ್ನೇ ಮಾಡಿದೆ. ನಾಲ್ಕನೇ ಯೋಜನೆಯಲ್ಲಿ ವ್ಯವಸಾಯ ಹಾಗೂ ಜನನ ನಿಯಂತ್ರಣಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯಿಂದ ಅದು ಎಷ್ಟರ ಮಟ್ಟಿಗೆ ತನ್ನ ಕಾಲ ಮೇಲೆ ನಿಲ್ಲಲು ಯತ್ನಿಸುತ್ತಿದೆ ಎಂಬುದರ ಅರಿವು ಆಗದಿರದು.

ಅಂದಮೇಲೆ ಭಾರತ ಅಮೇರಿಕದ ಎರಡು ಶರ್ತಗಳನ್ನು ಪೂರೈಸುವ ಪ್ರಶ್ನೆಯೇ ಏಳುವುದಿಲ್ಲ. ಅದು ತಾನು ಪಡೆದ ನೆರವಿನ ಫಲವನ್ನು ಪಡೆದಿದೆ. ಜನಸಾಮಾನ್ಯರಿಗೂ ಆ ನೆರವು ಕೈ ಸೇರಿದೆ. ಹೀಗಿರುವಾಗ ರಸ್ಕರು ಎಲ್ಲಾ ರಾಷ್ಟ್ರಗಳಿಗನ್ವಯಿಸಿ ಅಂದ ಮಾತನ್ನು ನಾವು ವಿಪರೀತಾರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ. ನೆರವನ್ನು ಪಡೆಯುವುದರಿಂದ ನಾವು ನಮ್ಮ ಸ್ವಾತಂತ್ರ್ಯವನ್ನು ಒತ್ತೆಯಿಟ್ಟಂತೆಯೂ ಆಗುವುದಿಲ್ಲ.

ವಚನ ಸುಧೆ

ದುಷ್ಕುಲೀನಃ ಕುಲೀನೋ ವಾ
ಮರ್ಯಾದಾಂ ಯೋ ನ
ಲಂಘಯೇತ್ ।
ಧರ್ಮಾಪೇಕ್ಷೀ ಮೃದುರ್ಹ್ರೀಮಾನ್
ಸ ಕುಲೀನ ಶತಾದ್ ವರಃ ॥

ಮರ್ಯಾದೆಯನ್ನು ಮೀರದೆ, ಧರ್ಮಕ್ಕೆ ಹೆದರಿಕೊಂಡು, ಕೋಮಲ ಸ್ವಭಾವ ಸಹಿತನಾಗಿಯೂ ಸಲಜ್ಜನಾಗಿಯೂ ಇರುವವನು ದುಷ್ಕುಲೀನನೇ ಇರಲಿ, ಕುಲೀನನೇ ಆಗಿರಲಿ, ನೂರಾರು ಕುಲೀನರಿಗಿಂತ ಕುಲೀನನು.

ಇಂದಿನ ವಿಷಮ ಪರಿಸ್ಥಿತಿಯಲ್ಲಿ ರಾಷ್ಟ್ರದ ಧೋರಣೆಯಲ್ಲಿ ಆಲೋಚಿತ ಮಾರ್ಪಾಟಾಗಬೇಕಾದು ಅನಿವಾರ್ಯ. ಅಂತಹ ಬದಲಾವಣೆಯನ್ನು ನಮ್ಮ ಸ್ವಾತಂತ್ರ್ಯದ ಬಲಿ ಎಂದು ಹೆಸರಿಸುವ ಅಗತ್ಯವೂ ಇಲ್ಲ. ದೇಶದ ಸ್ವಾತಂತ್ರ್ಯವನ್ನು ಬಲಿಗೊಟ್ಟು ದೇಶಾಭಿವೃದ್ಧಿ ಸಾಧಿಸುವಷ್ಟು ಮೂಢರು ನಮ್ಮವರಲ್ಲ.

ಆದುದರಿಂದ ಡೀನ್‌ರಸ್ಕರ ಹೇಳಿಕೆಯ ಕುರಿತು ನಾವು ತಳಮಳ ಪಡಬೇಕಾಗಿಲ್ಲ. ಅಮೇರಿಕನ್ ಟೀಕಾಕಾರರು ಅವರ ಹೇಳಿಕೆಯನ್ನು ಬಣ್ಣ ಕಟ್ಟಿ ಪ್ರಚಾರಮಾಡುದರಲ್ಲಿ ನ್ಯಾಯವಿಲ್ಲ.

ನಮ್ಮ ನಾಯಕರು ಪದೇ ಪದೇ ಹೇಳಿದಂತೆ ದೇಶದ ಗೌರವಕ್ಕೆ ಕುಂದನ್ನುಂಟುಮಾಡಿ ಯಾರ ನೆರವನ್ನೂ ಪಡೆಯುವುದು ನ್ಯಾಯವಲ್ಲ. ಅಂತಹ ಕಾರ್ಯವನ್ನು ಯಾರು ಮಾಡುವುದೂ ಇಲ್ಲ. ಅಮೇರಿಕದ ಅನುಪಮ ನೆರವು ನಮ್ಮ ಗಂಡಾಂತರ ಕಾಲದಲ್ಲಿ ನಮ್ಮನ್ನು ರಕ್ಷಿಸಿದೆ ಎಂಬುದನ್ನು ನಾವಿಲ್ಲಿ ಮರೆಯಕೂಡದು.

ಅನುಕರಣೀಯ ಆದರ್ಶ

ಜನಸಾಮಾನ್ಯರ ಬ್ಯಾಂಕ್ ಎಂದು ಖ್ಯಾತಿ ಪಡೆದ ಸಿಂಡಿಕೇಟ್ ಬ್ಯಾಂಕ್ ತನ್ನ ವೈಶಿಷ್ಟ್ಯಪೂರ್ಣವಾದ ಸೇವೆಯಿಂದ ಇತರ ಬ್ಯಾಂಕುಗಳಿಗೆ ಮಾರ್ಗದರ್ಶನ ಮಾಡುತ್ತಿದೆ ಎನ್ನುವುದು ಸಂತೋಷಕರ ಸಂಗತಿ.

ಪ್ರಥಮವಾಗಿ ಪಿಗ್ಮಿ ಠೇವಣಿ ಯೋಜನೆಯನ್ನು ಬ್ಯಾಂಕಿಂಗಿಗೆ ತಂದುದಲ್ಲದೆ ಪ್ರಥಮವಾಗಿ ಮಹಿಳೆಯರಿಂದಲೇ ನಡೆಸಲ್ಪಡುವ ಬ್ಯಾಂಕನ್ನು ತೆರೆದುದೂ ಸಿಂಡಿಕೇಟ್ ಬ್ಯಾಂಕ್. ಇದರ ಉಚ್ಚ ಸ್ಥಾನದಲ್ಲಿರುವವರು ಏನಾದರೂ ಹೊಸತನ್ನು ಮಾಡಿ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

"ತುರ್ತು ಪರಿಸ್ಥಿತೀನ ಮುಂದುವರಿಸೋ ನಿರ್ಧಾರಾನ ಮುಖ್ಯಮಂತ್ರಿಗಳು ಮಾಡಿದ್ದಾರಂತೆ. ಅದ್ರಿಂದ ಇನ್ನು ಮೇಲೆ ಎಗರಾಡಿದ್ರೆ ಜೋಕೆ!"

ವಿಚಿತ್ರ ಸತ್ಯ

ಆಕಾಶ ಸಂಗೀತಕ್ಕೆ ರಾಕ್ಷಸ ಕಿವಿ

ಪಶ್ಚಿಮ ಜರ್ಮನಿಯ ಮುಖ್ಯ ಪಟ್ಟಣವಾದ ಬಾನ್‌ನ ಹತ್ತಿರ ಚಲಿಸಲು ಅನುಕೂಲವಾದ ಅತಿ ದೊಡ್ಡದಾದ ರೇಡಿಯೋ ಟೆಲಿಸ್ಕೋಪ್ ಒಂದನ್ನು ಕಟ್ಟಲಾಗುವುದು. ಬಾನ್ ವಿಶ್ವವಿದ್ಯಾನಿಲಯದ ನಕ್ಷತ್ರ ಪರಿಶೋಧನಾ ವಿಭಾಗದಲ್ಲಿ ಮಾದರಿಯನ್ನು ತಯಾರಿಸಿದ್ದಾರೆ. ದೂರದ ನಕ್ಷತ್ರಗಳಿಂದ ಶಬ್ದಗಳನ್ನು ರಾಕ್ಷಸ ಕಿವಿಯಂತಹ ಅಳವಡಿಕೆಯು ಗ್ರಹಿಸಿ ತಿಳಿಸುವುದು. ಆ ಕಿವಿಯು ಯಾವ ದಿಕ್ಕಿಗೆ ಬೇಕಾದರೂ ಚಲಿಸುವುದು. ಈಗಿನ ಅಂದಾಜಿನ ಪ್ರಕಾರ ೯೦ ಮೀಟರುಗಳ ವ್ಯಾಸವೂ, ೧೨೦ ಮೀಟರುಗಳ ಎತ್ತರವೂ ಸುಮಾರು ೧೫೦೦ ಟನ್ನುಗಳ ತೂಕವೂ ಇರುತ್ತದೆ. ಇದರ ನಿರ್ಮಾಣದಿಂದ ನಕ್ಷತ್ರ ಮತ್ತು ಅಂತರಿಕ್ಷದಲ್ಲಿನ ಬದಲಾವಣೆಗಳನ್ನು ಪೂರ್ಣವಾಗಿ ಗ್ರಹಿಸಲು ಅನುಕೂಲವಾಗುವುದೆಂದು ವಿಜ್ಞಾನಿಗಳ ಆಶಯ.

ಚಲಿಸುವ ಹೋಟೇಲ್

ಸ್ಟುಟ್‌ಗರ್ಟ್‌ನಲ್ಲಿ ಈಗ ತಾನೇ ಹೊಸದಾಗಿ ನಿರ್ಮಿಸಿರುವ ಚಲಿಸುವ ಹೋಟೇಲ್ ಒಂದನ್ನು ಹೊರಕ್ಕೆ ತಂದಿದ್ದಾರೆ. ಅದರಲ್ಲಿ ೨೬ ಜನರು ಕೂಡಲು, ಮಲಗಲು ಮತ್ತು ಸ್ನಾನ ಇತ್ಯಾದಿಗಳನ್ನು ಮಾಡಲು ಅನುಕೂಲಗಳಿವೆ, ಕೆಳಭಾಗದಲ್ಲಿ ಬೆಳಗಿನ ವೇಳೆಯಲ್ಲಿ ಸುಖವಾಗಿ ಕುಳಿತು ಪ್ರಯಾಣ ಮಾಡಲೂ ರಾತ್ರಿಯಲ್ಲಿ ಮೇಲಿನ ಅಂತಸ್ತಿನಲ್ಲಿ ಮಲಗಲೂ ಅನುಕೂಲ ಮಾಡಲಾಗಿದೆ. ಈ ವಾಹನವು ಮಾರ್ಚ್ ೨೬ನೇ ತಾರೀಕು ಪ್ರಯಾಣ ಹೊರಟು ಪ್ರಪಂಚದ ಎಲ್ಲಾ ಭಾಗಗಳನ್ನೂ ಸುತ್ತಿ ಬರಲು ಏರ್ಪಾಡಾಗಿದೆ. ಇದು ಸಹಾರಾದಂತಹ ಮರುಭೂಮಿಯಲ್ಲಿಯೂ ನಿರಾತಂಕವಾಗಿ ಪ್ರಯಾಣ ಮಾಡಬಲ್ಲದು. ಇದು ೬೨ ರಾಷ್ಟ್ರಗಳನ್ನು ಆರು ತಿಂಗಳ ಕಾಲದಲ್ಲಿ ಸುತ್ತಿ ಬರಲು ನಿಶ್ಚಯಿಸಿದೆ. ರಾತ್ರಿ ಎಲ್ಲಿ ನಿಲ್ಲಬೇಕೆಂದು ಪ್ರಯಾಣಿಕರಿಗೆ ಪ್ರಶ್ನೆಯೇ ಬರುವುದಿಲ್ಲ. ತಮ್ಮ ದಿನಚರಿಯ ಕಾರ್ಯಗಳನ್ನು ಬೆಳಗಿನಿಂದ ರಾತ್ರಿಯ ವರೆಗೆ ಸುಖವಾಗಿ ಇದರಲ್ಲಿಯೇ ಮಾಡಿಕೊಳ್ಳಬಹುದು. ಇದನ್ನು ತಯಾರಿಸಲು ೧,೮೭,೦೦೦ ಡಿ. ಎಂ. ವೆಚ್ಚವಾಗುವುದೆಂದೂ ಇನ್ನೂ ಸೌಕರ್ಯಗಳಿಂದ ಕೂಡಿದ ವಾಹನಕ್ಕೆ ೨೬೭,೦೦೦ ಡಿ. ಎಂ. ವೆಚ್ಚವಾಗುವುದೆಂದೂ ಅಂದಾಜು ಮಾಡಲಾಗಿದೆ. ಇದು ಪ್ರಪಂಚ ಸುತ್ತುವ ಪ್ರವಾಸಿಗಳಿಗೆ ಬಹಳ ಅನುಕೂಲವಾಗಿದೆ.

ಸಮುದ್ರದ ತಳದಲ್ಲಿ ಮಾರ್ಗ

ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಸಮುದ್ರದ ಮಧ್ಯೆ ಇರುವ ಕಾಲುವೆಯ ಕೆಳಭಾಗದಲ್ಲಿ ದಾರಿಯನ್ನು ಮಾಡಲಾಗಿದೆ. ಉತ್ತರ ಜರ್ಮನಿಯಲ್ಲಿ ಇದು ರೆಂಡ್ಸ್‌ಬರ್ಗ್‌ನ ಹತ್ತಿರವಿದೆ. ಜನರು ಈ ನೀರಿನ ಕೆಳಗಿನ ಸುರಂಗ ಮಾರ್ಗದಲ್ಲಿ ಹೋಗಬಹುದು. ಇದರಿಂದ ನೀರಿನ ಮೇಲೆ ಚಲಿಸುವ ಪ್ರಯಾಣಿಕರು ಇದರಲ್ಲಿ ಹೋಗಬಹುದಾಗಿದೆ. ಎರಡು ಎಸ್ಕಲೇಟರುಗಳು ಹೋಗಿ ಬರುತ್ತ ಜನರನ್ನು ಸಾಗಿಸುತ್ತದೆ. ಇದರ ವೇಗ ಒಂದು ಸೆಕೆಂಡಿಗೆ ೨೦ ಇಂಚುಗಳು ಆದರೂ ಸುರಂಗವನ್ನು ಎರಡು ದಿನಗಳಲ್ಲಿ ದಾಟಬಹುದು. ಒಂದು ಘಂಟೆಯಲ್ಲಿ ೮೦೦೦ ಜನರನ್ನು ಎರಡು ಕಡೆಗಳಿಂದಲೂ ಸಾಗಿಸುವುದು. ಅಪಾಯ ಕಾಲದಲ್ಲಿ ಪ್ರಯಾಣಿಕರೇ ಎಸ್ಕಲೇಟರುಗಳನ್ನು ನಡೆಸಬಹುದು. ಇದು ವಿದ್ಯುತ್ ವಾಹಕಗಳಿಗೆ ಸೇರಿದ ಸ್ವಿಚ್ ಬೋರ್ಡಿನಿಂದ ನಡೆಯುವುದು ಇದರಲ್ಲಿ ಧ್ವನಿವರ್ಧಕಗಳೂ, ಟಿ. ವಿ. ಅಳವಡಿಕೆಗಳೂ ಇವೆ.

ನೀರು ಶುದ್ಧಿ ಮಾಡುವ ಯಂತ್ರ

ಪಶ್ಚಿಮ ಜರ್ಮನಿಯ ಪ್ರಸಿದ್ಧ ಕಂಪೆನಿಯೊಂದು ನೀರನ್ನು ಶುದ್ಧಿಮಾಡಿ ಒದಗಿಸುವ ಯಂತ್ರವೊಂದನ್ನು ತಯಾರಿಸಿದೆ. ಇದು ೩೦೦ ಲೀಟರ್‌ನಷ್ಟು ನೀರನ್ನು ಒದಗಿಸಬಲ್ಲುದು. ಶುದ್ಧವಾದ ನೀರು ದೂರದ ಜಮೀನು ಮತ್ತು ತೋಟಗಳ ಮಧ್ಯೆ ವಾಸ ಮಾಡುವವರಿಗೆ ಇದು ಬಹಳ ಉಪಯೋಗ. ಇದು ಒಂದು ಬಟ್ಟೆ ಒಗೆಯುವ ಯಂತ್ರದಷ್ಟಿದೆ. ಬಾವಿ, ಕೆರೆ ಅಥವಾ ಕೊಳ ಇವುಗಳಿಂದ ಪಂಪು ಮಾಡಿದ ನೀರನ್ನು ಈ ಯಂತ್ರಕ್ಕೆ ಸೇರಿಸಿದರೆ ಇದರಲ್ಲಿ ಶುದ್ಧಿ ಮಾಡುವ ಅಳವಡಿಕೆಗಳ ಮೂಲಕ ನೀರು ಹರಿದು ಅದರಲ್ಲಿ ಕರಗಿರುವ ತೇಲಾಡುವ ಮತ್ತು ಇತರ ಕಲ್ಮಶಗಳನ್ನು ಶೋಧಿಸಿ ಕುಡಿಯಲು ಯೋಗ್ಯವಾಗುವಂತೆ ಮಾಡುತ್ತದೆ. ಇದೊಂದು ಆಧುನಿಕ ಯಂತ್ರ.

ಗಾಯಗಳನ್ನು ಸೇರಿಸಲು ಅಂಟು

ಹ್ಯಾಂಬರ್ಗಿನ ಸರ್ಜನ್‌ರಾದ ಮ್ಯಾಕ್ಸ್ ಜೆಬೆಲ್‌ರವರು ಒಂದು ಹೊಸ ರೀತಿಯ ಅಂಟನ್ನು ತಯಾರಿಸಿ ಗಾಯಗಳಿಗೆ ಉಪಯೋಗಿಸುವಂತೆ ಮಾಡಿದ್ದಾರೆ. ಇದು ಗಾಯಗಳಿಗೆ ಹಾಕಿದ ಕೂಡಲೇ ಅಂಟಿಕೊಂಡು ಗಾಯಗಳಿಗೆ ಧೂಳು ಅಥವಾ ವಿಷ ಕ್ರಿಮಿಗಳು ಸೇರದಂತೆ ಕಾಪಾಡುತ್ತದೆ. ಇದು ನೀರು ಅಥವಾ ಜಿಡ್ಡು ಪದಾರ್ಥಗಳಲ್ಲಿ ಕರಗುವುದಿಲ್ಲ. ಕೆಲವು ದಿನಗಳಾದ ಮೇಲೆ ಕರಗಿಹೋಗುತ್ತದೆ. ಇದನ್ನು ಮುಖದ ಮೇಲೆ ಹಾಕಿಕೊಂಡಾಗ ಕಲೆಗಳು ಮುಚ್ಚಿ ಹೋಗುತ್ತದೆ. ಇದಕ್ಕಿಂತಲೂ ಉತ್ತಮವಾದ ಅಂಟನ್ನು ಕಂಡು ಹಿಡಿಯಲು ಈ ಡಾಕ್ಟರು ಪ್ರಯತ್ನಿಸುತ್ತಿದ್ದಾರೆ.

ಕ್ಯಾನ್ಸರ್ ರೋಗದಲ್ಲಿ ಹೊಗೆಸೊಪ್ಪಿನ ಪಾತ್ರವಿದೆಯೆ?

ಮುಂಬಯಿಯ ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್ (ಟಿಐಎಫ್ ಆರ್)ನ ಬೇಸಿಕ್ ಡೆಂಟಲ್ ರೀಸರ್ಚ್ ಯೂನಿಟ್‌ನವರು ಭಾರತದ ನಾಲ್ಕು ಗ್ರಾಮ ಪ್ರದೇಶಗಳಲ್ಲಿ ಕ್ಯಾನ್ಸರ್ ರೋಗಕ್ಕೂ ಹೊಗೆಸೊಪ್ಪು ಮತ್ತು ವೀಳ್ಯದೆಲೆಯ ಉಪಯೋಗಕ್ಕೂ ಇರಬಹುದಾದ ಸಂಬಂಧಗಳ ಬಗೆಗೆ ಒಂದು ಸಂಶೋಧಕ ಅಧ್ಯಯನವನ್ನು ನಡೆಸುವರು. ಅಮೇರಿಕಾ ಸರ್ಕಾರದ ನ್ಯಾಷನಲ್ ಇನ್ಸ್ಟಿಟ್ಯೂಟ್ಸ್ ಆಫ್ ಹೆಲ್ತ್‌ನವರು ೧,೪೯೦,೩೭೮ ರೂಪಾಯಿಗಳ ಗ್ರಾಂಟನ್ನಿತ್ತು ಈ ಅಧ್ಯಯನಕ್ಕೆ ಸಹಾಯ ಮಾಡುವರು.

ಈ ಗ್ರಾಂಟಿನ ಮೊದಲನೆಯ ಕಂತಾಗಿ ೫೮,೫೫೦ ರೂಪಾಯಿಗಳ ಒಂದು ಚೆಕ್ಕನ್ನು ಮುಂಬಯಿಯಲ್ಲಿರುವ ಅಮೇರಿಕನ್ ಕೌನ್ಸಲ್ ವಿಲ್ಸನ್ ಸಿ. ರಿವಿಂಲ್ ಅವರು ಟಿಐಎಫ್‌ಆರ್‌ನ ಡೈರೆಕ್ಟರ್ ಡಾ|| ಎಂ. ಜಿ. ಕೆ. ಮೆನನ್ ಅವರಿಗೆ ಸೋಮವಾರ ಸಮರ್ಪಿಸಿದರು. ಅಮೇರಿಕದ ಕಾನ್ಸುಲೇಟ್ ಜನರಲ್‌ನಲ್ಲಿ ನಡೆದ ಈ ಅನೌಪಚಾರಿಕ ಸಮಾರಂಭದಲ್ಲಿ ಈ ಪ್ರಾಜೆಕ್ಟಿನ ಪ್ರಮುಖ ಸಂಶೋಧಕ ಡಾ|| ಫಾಲಿ ಎಸ್. ಮೆಹತಾ ಅವರೂ ಭಾಗವಹಿಸಿದ್ದರು.

ಗ್ರಾಮಾಂತರ ಪರಿಸ್ಥಿತಿಯಲ್ಲಿ ಕ್ಯಾನ್ಸರ್ ಯಾವ ಯಾವ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ, ಹೊಗೆಸೊಪ್ಪಿನ ಸೇದುವಿಕೆ ಅಥವಾ ಜಗಿಯುವಿಕೆ ಕ್ಯಾನ್ಸರನ್ನು ಉಂಟುಮಾಡುವುದೇ, ಕ್ಯಾನ್ಸರ್ ಪ್ರಸಾರವನ್ನು ಹೆಚ್ಚಿಸುವುದೇ ಅಥವಾ ಅದರ ಸ್ವರೂಪಗಳ ಮೇಲೆ ಪರಿಣಾಮ ಬೀರುವುದೇ ಎಂಬುದನ್ನು ನಿರ್ಧರಿಸಲು ಈ ಸಂಶೋಧನೆಯನ್ನು ನಡೆಸಲಾಗುವುದು.

ಕ್ಯಾನ್ಸರ್ ಹುಣ್ಣಿನ ಉದ್ಭವ ಮತ್ತು ಸ್ಥಳಕ್ಕೂ, ಹೊಗೆಸೊಪ್ಪಿನ ಉಪಯೋಗದ ವಿಧಾನಕ್ಕೂ ಇರುವ ಸಂಬಂಧಗಳನ್ನು ಸಂಶೋಧಕರು ಪರಿಶೀಲಿಸುವರು.

ಭಾರತದಲ್ಲಿ ಆಸ್ಪತ್ರೆಗೆ ಬರುವ ಕ್ಯಾನ್ಸರ್ ರೋಗಿಗಳಲ್ಲಿ ಹೆಚ್ಚಿನವರು ಬಾಯಿಯ ಕ್ಯಾನ್ಸರ್‌ನಿಂದ ನರಳುವವರು. ಬಾಯಿಯ ಕ್ಯಾನ್ಸರನ್ನು ಭಾರತದಲ್ಲಿ ದೊಡ್ಡ ಸಾರ್ವಜನಿಕ ಆರೋಗ್ಯ ಸಮಸ್ಯೆಯೆಂದು ಪರಿಗಣಿಸಲಾಗಿದೆ.

ಕ್ಯಾನ್ಸರ್‌ನಿಂದ ನರಳುವ ಗಂಡಸು ಸಾಮಾನ್ಯವಾಗಿ ೫೦ಕ್ಕಿಂತ ಅಧಿಕ ವಯಸ್ಸಿನವನು. ವೀಳ್ಯದೆಲೆ ಜಗಿಯುವುದರಿಂದ ಬಾಯಿಯ ಕ್ಯಾನ್ಸರ್ ಆಗುವ ಸಂಭವ ಅಧಿಕವೇ? ಈ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿಯುವುದು ಸಂಶೋಧನೆಯ ಮುಖ್ಯ ಗುರಿಗಳಲ್ಲೊಂದು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 84/1966

ಪಪ್ಪು ದೇಜು ಶೆಟ್ಟಿ — ವಾದಿ

ಮತ್ತು

ಚಿಕ್ಕಿ ಶೆಟ್ಟಿ ಸಹಾ— ಪ್ರತಿವಾದಿರು.

ಇವರೊಳಗೆ

ಈ ಮೂಲಕ ಸದ್ರಿ ದಾವೆಯ ಪ್ರತಿವಾದಿರು 2 ನಾರಾಯಣ ಶೆಟ್ಟಿ, 3 ಬಾಗೀರಥಿ ಶೆಟ್ಟಿ- ಚಿಕ್ಕಿ ಶೆಟ್ಟಿರ ಮಕ್ಕಳು, ಉಡುಪಿ ತಾಲ್ಲೂಕು ನಂದಿಕೂರು ಗ್ರಾಮದ ಅಡ್ವೆತೆಂಕ ಮನೆಯಲ್ಲಿರುವವರಿಗೆ ತಿಳಿಸುವದೇನೆಂದ್ರೆ.

ವಾದಿಯು ನೀವು ಕೂಡಾ 6 ಜನರ ಮೇಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರಿ ಬಗ್ಗೆ ತಾರೀಕು 20—6—1966ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10—30 ಗಂಟೆಗೆ ನೀವು ಸ್ವತಃ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಸಿವ್ವಾಯ ಮಾಡಿ ಮೇಲಿನ ದಾವಾ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

(By Order of the Court)

N. M. Adyanthaya.
Advocate for Plaintiff.

Karkala, 22-4-1966

ಬಂಟರ ಯಾನೆ ನಾಡವರ ಸಂಘ,

ದಕ್ಷಿಣ ಕನ್ನಡ, ಮಂಗಳೂರು

ಮಹನೀಯರೇ, ಕುಂದಾಪುರ, ತಾ. 20—4—1966

ನಮ್ಮ ಸಂಘದ 58ನೇ ವಾರ್ಷಿಕ ಮಹಾಸಭೆಯು
ಇದೇ ತಾರೀಕು 30—4—1966ನೇ ಶನಿವಾರ ಸಂಜೆ ಘಂಟೆ 3ಕ್ಕೆ
ಕುಂದಾಪುರ ಭಂಡಾರ್‌ಕಾರ್ಸ್ ಕೋಲೇಜಿನ ಸಭಾಂಗಣದಲ್ಲಿ
ಶ್ರೀ ಎನ್. ಮೋಹನದಾಸ ಅಡ್ಯಂತಾಯ, ಬಿ.ಎ. ಬಿ.ಎಲ್., ಎಡ್ವೊಕೇಟ್
(ಅಧ್ಯಕ್ಷ, ತಾ. ಅ. ಮಂಡಳಿ, ಕಾರ್ಕಳ)
ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು.
ಸಮಾರಂಭವು ಯಶಸ್ವಿಯಾಗುವಂತೆ ತಾವೆಲ್ಲರೂ ಅಂದು ಆಗಮಿಸಿ,
ಭಾಗವಹಿಸಬೇಕಾಗಿ ವಿನಂತಿ.

ಬಿ. ಮಂಜಯ್ಯ ಹೆಗ್ಡೆ, ಎಡ್ವೊಕೇಟ್
ಸಂಘದ ಅಧ್ಯಕ್ಷ.

ಕೆ. ಸುಂದರರಾಮ ಶೆಟ್ಟಿ, ಎಡ್ವೊಕೇಟ್
ಸಂಘದ ಕಾರ್ಯದರ್ಶಿ

ಕೆ. ವೆಂಕಪ್ಪ ಶೆಟ್ಟಿ, ವಕೀಲ
ಸ್ವಾಗತಸಮಿತಿ ಅಧ್ಯಕ್ಷ.

ಜಿ. ಕುಶಲ ಹೆಗ್ಡೆ, ಎಡ್ವೊಕೇಟ್
ಕೆ. ಶಂಕರ ಶೆಟ್ಟಿ,
ಜತೆಕಾರ್ಯದರ್ಶಿಗಳು, ಸ್ವಾಗತಸಮಿತಿ

ಸಂಘದ ಕಾರ್ಯಕಾರಿ ಸಮಿತಿ ಮತ್ತು ಸ್ವಾಗತಸಮಿತಿ ಸದಸ್ಯರುಗಳ
ಸವಿನಯ ಆಮಂತ್ರಣ

ಹರಸು ಬಾ ಭಾರತಿಯೆ

ಬರೆದವರು: ಬಿ. ನರಸಿಂಗ ರಾವ್,
ಕಾಸರಗೋಡು.

ಕೇಳುತಿದೆ. ಕೇಳುತಿದೆ
ಭಾರತಿಯೆ ನಿನ್ನ ಕರೆ
ಹೊರಟೆನಿದೊ, ಹೊರಟೆನಿದೊ
ರಕ್ಷಿಸಲು ನಾನಿನ್ನ
ತೊಟ್ಟೆನಿದೋ, ತೊಟ್ಟೆನಿದೊ
ರಣವೇಷ ಭೀಕರವ
ಮರೆತಿಲ್ಲ, ಸ್ಮರಿಸಿಹೆನು
ವೀರ ಶಿವ ರಾಣರಂ
ಬರುವೆನಾ, ಬರುವೆನಾ
ಸಂಹರಿಸಿ ಶತ್ರುವಂ
ರುಂಡವಂ ಚೆಂಡಾಡಿ,
ಮುಂಡವಂ ಚೆಲ್ಲಾಡಿ
ಅರ್ಪಿಸುವೆನಿಹೆ ನಿನಗೆ
ತಾಯೆ ಭಾರತಿಯೆ
ಜಯಲಕ್ಷ್ಮಿಯನುಬಲಿಸಿ,
ಜಯಮಾಲೆಯಾನು ಧರಿಸಿ
ಬರುವೆನಾ, ಹರಸು ಬಾ,
ತಾಯೆ ಭಾರತಿಯೆ.

ಸೂಕ್ಷ್ಮ ಪರಿಚಯ

ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರು

...ಶಿಷ್ಟ ಕಾರ್ಯಸಾಧನೆ, ನಿಚ್ಚಳವಾದ ...ಸೇವೆ, ಸುಸಂಪನ್ನ ವ್ಯಕ್ತಿತ್ವ ಇವುಗ...ದ ಸಮಕಾಲೀನ ಕರ್ನಾಟಕದ ರಾಜ...ಣ, ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರತಿ...ತ ವ್ಯಕ್ತಿಯಾಗಿ, ನಾಯಕರಾಗಿ ಜನ...ಖರಾಗಿರುವ, ಕರ್ನಾಟಕ ಏಕೀಕರ...ಪ್ರವರ್ತಕರೆನಿಸಿರುವ ವಿಧಾನ ಪರಿ...ತ್ ಅಧ್ಯಕ್ಷ ಶ್ರೀ ಗುದ್ಲೆಪ್ಪ ಹಳ್ಳಿಕೇರಿ...ವರಿಗೆ ಇದೇ ಜೂನ್ ತಿಂಗಳಿಗೆ ಅರ...ತ್ತು ತುಂಬಲಿದೆ. ಷಷ್ಟ್ಯಬ್ದ ಕೆಲವರಿಗೆ ...ಸ್ಸಿನ ಸೂಚನೆಯಾಗಬಹುದು. ಆದರೆ ...ಹಳ್ಳಿಕೇರಿಯವರಿಗೆ ಅದೊಂದು ಸಂ...ತ್ಮಕ ಮೆಟ್ಟಿಲು ಅಷ್ಟೇ. ಇದನ್ನು ಕಳೆ...ರ್ಧ ಶತಮಾನದಿಂದ ಶ್ರೀ ಹಳ್ಳಿಕೇರಿ...ಯವರು ಕರ್ನಾಟಕ ಜೀವನದ ಒಂದು ...ಗವಾಗಿ ಹೋಗಿದ್ದಾರೆ. ಕಾಂಗ್ರೆಸ್ಸಿನ ...ಣನಾಡಿಯಾಗಿದ್ದಾರೆ.

...ನಾಲ್ಕೈದು ದಶಕಗಳ ಸಕ್ರಿಯ ಸಾ...ಜನಿಕ ಜೀವನದಿಂದ ಪರಿಪಕ್ವಗೊಂಡಿ...ವ ಶ್ರೀ ಹಳ್ಳಿಕೇರಿಯವರನ್ನು ...ಶ್ರೀ ಬೇಕಾದ ಹಾಗೆ ಅರಸಿ ...ದಿದ್ದಾಳೆ. ಆದರೆ ಪ್ರಚಾರಾಡಂಬರ...ದ ದೂರವಾದ ನಿಷ್ಠಾವಂತ ಸೇವೆಯ ...ಕರಿತುಕೊಂಡಿರುವ ಅವರು ಅಂತಹ ...ಕಾರ-ಹೊಗಳಿಕೆಗಳನ್ನು ಒಪ್ಪಿಸಿಕೊ...ವವರಲ್ಲ. ಅವರ ಷಷ್ಟ್ಯಬ್ದ ಸಮಾ...ಭ ನಡೆಸುವ ವಿಷಯವನ್ನು ಅವರ ...ತ್ರರು ಪ್ರಸ್ತಾಪಿಸಿದಾಗ ಸಂಗ್ರಹಿಸುವ ...ಧಿಯನ್ನು ಅವರ ಅಭಿಲಾಷೆಯಂತೆ ವಿ...ದ್ಯಾಪ್ರಸಾರಕ್ಕೆ ಉಪಯೋಗಿಸಲಾಗುವು...ದು ಭರವಸೆ ಖಚಿತವಾಗಿ ದೊರೆತಾಗ ...! ಅವರು ಸಮ್ಮತಿಸಿದರು.

ವರ್ಣಮಯ ವ್ಯಕ್ತಿತ್ವ ಸಾಧನೆ

ಕರ್ನಾಟಕದಲ್ಲಿ ಶ್ರೀ ಹಳ್ಳಿಕೇರಿಯವ...ಹ ವರ್ಣಮಯ ವ್ಯಕ್ತಿತ್ವ—ಸಾಧ...ನೆ ನಾಯಕರು ಬಹುಮಂದಿಯಿಲ್ಲ. ...ದ ಸ್ವಾತಂತ್ರ್ಯ ಹೋರಾಟದಲ್ಲಿ, ಕ...ರ್ನಾಟಕ ಏಕೀಕರಣ ಚಳವಳಿಯಲ್ಲಿ ಇ...ವರ ಪಾತ್ರ ಐತಿಹಾಸಿಕವಾದುದು, ಸ್ಮರ...ಣೀಯವಾದುದು. ಬೃಹತ್ ಮೈಸೂರು ರಾ...ಜ್ಯ ನಿರ್ಮಾಣಾನಂತರ ಅವರು ವಿಧಾ...ನ ಪರಿಷತ್ ಸಭಾಪತಿಯಾಗಿ ತಮ್ಮ ಗಂ...ಭೀರ ವ್ಯಕ್ತಿತ್ವ—ಮುಖಂಡತ್ವಗಳಿಂದ ...ಘನತೆಗ ಮೆರುಗಿತ್ತಿದ್ದಾರೆ.

ಶ್ರೀ ಹಳ್ಳಿಕೇರಿಯವರು ಧಾರವಾಡ ...ಜಿಲ್ಲೆಯ ಹೊಸರಿತ್ತಿ ಗ್ರಾಮದಲ್ಲಿ ...೧೯೦೬ ಜೂನ್ ೭ರಂದು ದೊಡ್ಡ ಅನು...ಕೂಲಸ್ಥ ರೈತರ ಕುಟುಂಬವೊಂದರಲ್ಲಿ ...ಜನಿಸಿದರು. ಬಾಲಕ ಹಳ್ಳಿಕೇರಿ ಚಿಕ್ಕಂದಿ...ನಲ್ಲೇ ಅಸಾಧಾರಣ ಪ್ರತಿಭೆ ತೋರಿ ...ಹನ್ನೆರಡನೇ ವಯಸ್ಸಿಗೇ ಗಣಿತಶಾಸ್ತ್ರ...ಜ್ಞನೆಂಬ ಹೆಸರು ಗಳಿಸಿದ್ದ. ಆತನ ...ಪ್ರತಿಭೆ ಕಂಡ ದಿವಾನ್ ಬಹದ್ದೂರ್ ...ಹಾನಗಲ್ಲರಾಯರು ಅವರು ಹಳ್ಳಿಕೇರಿಯವರ ...ಹದಿನಾರು ವರ್ಷ ವಯಸ್ಸಾದೊಡನ...ವರಿಗೆ ಉನ್ನತ ವ್ಯಾಸಂಗಕ್ಕೆ ಇವ...ರಿಗೆ ಕಳಿಸುವ ವ್ಯವಸ್ಥೆ ಮಾಡಿದ್ದರು. ಆ...

೧೬

ದರೆ ಅಷ್ಟರಲ್ಲಿ ಗಾಂಧೀಜಿ ಬಂದು ಇವರ ನ್ನು ಮುಟ್ಟಿ ಹರಸಿದರು. ಆಗ ಒಳ್ಳೆಯ ಶಿಕ್ಷಣ ಪಡೆದು ಒಳ್ಳೆಯ ಉದ್ಯೋಗ ಹೊಂದಿ ಸುಖಮಯ ಜೀವನ ನಡೆಸಬ ಹುದಾಗಿದ್ದ ಯುವಕ ಅದನ್ನೆಲ್ಲ ತೃಣೀಕ ರಿಸಿ ರಾಷ್ಟ್ರ ಸೇವೆಯನ್ನು ಆರಿಸಿ ಕೊಂಡರು.

೧೯೨೦ರಲ್ಲಿ ಮಹಾತ್ಮ ಗಾಂಧಿಯವ ರು ಧಾರವಾಡಕ್ಕೆ ಭೇಟಿಯಿತ್ತಿದ್ದರು. ಆ ಮಹಾತ್ಮನ ಅನೋಘ ವ್ಯಕ್ತಿತ್ವ, ಆತ ನೀಡಿದ ರಾಷ್ಟ್ರಸೇವೆಯ ಸಂದೇಶ ಶ್ರೀ ಹ ಳ್ಳಿಕೇರಿಯವರನ್ನು ಪೂರ್ಣವಾಗಿ ಆಕ ರ್ಷಿಸಿಬಿಟ್ಟವು. ಒಡನೆಯೇ ದೇಶದ ಸ್ವಾ ತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂ ದು ಅಲ್ಲೇ ನಿರ್ಧರಿಸಿದರು. ಉಳಿದೆಲ್ಲವನ್ನೂ ಬಿಟ್ಟು ಗಾಂಧೀಜಿಯವರ ದೇಶಸೇವೆಯ ಕರೆಗೆ ತಮ್ಮನ್ನು ಮೀಸಲಿಟ್ಟರು.

ಸ್ವಾತಂತ್ರ್ಯ ಹೋರಾಟದಲ್ಲಿ

'ನಮ್ಮ ಜೀವಮಾನದಲ್ಲಿ ದೇಶಸೇವೆ ಯನ್ನಲ್ಲದೆ ಮತ್ತೇನನ್ನೂ ಮಾಡೆವು." ಎಂದು ಪಣ ತೊಟ್ಟು ೧೯೨೧ರಲ್ಲಿ ಸಂಘಟಿ ಸಿದ ಭಾರತೀಯ ತರುಣರ ಸಂಘದ ನಾ ಯಕರಾಗಿ ಶ್ರೀ ಹಳ್ಳಿಕೇರಿಯವರ ವೀರ ಜೀವನ ಆರಂಭವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಕಟ್ಟಾಳೊಬ್ಬರಾಗಿದ್ದ ಶ್ರೀ ಹಳ್ಳಿಕೇರಿ ಆಳರಸರ ಆಗ್ರಹಕ್ಕೆ ಗುರಿ ಯಾಗಿ ಜೈಲುವಾಸ ಅನುಭವಿಸಬೇಕಾ ಯಿತು.

ಮೊದಲಿನಿಂದಲೂ ನಿಚ್ಚಳವಾದ ರಾ ಷ್ಟ್ರ ಜೀವನಕ್ಕೆ ನಿಷ್ಠರಾಗಿರುವ ಶ್ರೀ ಹ ಳ್ಳಿಕೇರಿಯವರು ಜೈಲಿನಲ್ಲಿ ಅನೇಕ ಹಿರಿ ಯ ನಾಯಕರ ನಿಕಟ ಪರಿಚಯ ಪಡೆ ದರು. ಜೈಲುಗಳಲ್ಲಿ ಗುಡಿಸುವ ಕೆಲಸಕ್ಕೆ ಸಾಮಾನ್ಯವಾಗಿ ಹರಿಜನರನ್ನು ಮಾತ್ರ ನೇಮಿಸುತ್ತಿದ್ದರು. ಶ್ರೀ ಹಳ್ಳಿಕೇರಿಯವ ರು ಇದನ್ನು ಪ್ರತಿಭಟಿಸಿ ಹನ್ನೆರಡು ದಿನ ಉಪವಾಸ ಮಾಡಿ ಈ ಕೆಲಸವನ್ನು ಎಲ್ಲ ರೂ ಮಾಡಬೇಕೆಂಬ ಪರಿಪಾಠ ಬಳಕೆಗೆ ಬರುವಂತೆ ಮಾಡಿದರು.

೧೯೩೦ರಲ್ಲಿ ಶ್ರೀ ಹಳ್ಳಿಕೇರಿಯವರಿಗಾ ಗಿ ಪೋಲಿಸರು ತೀವ್ರ ಶೋಧನೆ ನಡೆಸಿ ದರು. ಪೋಲೀಸರು ಹೊಸರಿತ್ತಿಯಲ್ಲಿ ಅವರ ಮನೆಯವರಿಗೆ ಭಾರಿ ಕಿರುಕುಳ ಕೊಟ್ಟು ಒತ್ತಾಯಮಾಡಿದರು. ಆದರೆ ಅವರಿಂದಲೂ ಹಳ್ಳಿಕೇರಿಯವರು ಎಲ್ಲಿ ಇರುವರೆಂಬುದರ ಸುಳಿವು ದೊರೆಯಲಿಲ್ಲ. ಕ್ರುದ್ಧರಾದ ಪೊಲೀಸರು ಅಣ್ಣತಮ್ಮಂದಿ ರು, ಅವರ ಪತ್ನಿಯರು, ಮಕ್ಕಳು ಎಲ್ಲಾ ಸೇರಿ ಇಡೀ ಕುಟುಂಬವನ್ನೇ ಬಂಧಿಸಿದರು; ಅವರಿಗೆಲ್ಲ ಒಂದು ವರ್ಷ ಜೈಲುವಾಸವಾ ಯಿತು. ಸರಕಾರ ಈ ಮನೆತನದ ಮನೆ ಮಠ, ಜಮೀನು ಎಲ್ಲವನ್ನೂ ವಶಪಡಿಸಿ ಕೊಂಡು ಹರಾಜು ಹಾಕಿತು. ಕುಟುಂಬ ಒಮ್ಮೆಗೇ ಕಡುಬಡತನಕ್ಕೆ ಗುರಿಯಾ ಯಿತು.

ಭಾರತದ ಸ್ವಾತಂತ್ರ್ಯಹೋರಾಟದಲ್ಲಿ ಶ್ರೀ ಹಳ್ಳಿಕೇರಿಯವರ ಪಾತ್ರ ಇಡಿ ಕರ್ನಾ ಟಕವೇ ಹೆಮ್ಮೆಪಡುವಂತಹುದು. ಗಾಂ ಧೀಜಿಯವರು ಉಪ್ಪಿನ ಸತ್ಯಾಗ್ರಹಕ್ಕೆ ಗೊಂಡಾಗ ದಂಡೀಯಾತ್ರೆಯಲ್ಲಿ ಇದ್ದ ಇಬ್ಬರು ವೀರ ಕನ್ನಡಿಗರಲ್ಲಿ ಇವರೂ ಒ ಬ್ಬರಾಗಿದ್ದರು. (ಇನ್ನೊಬ್ಬರು: ಶ್ರೀ ದೇಶ ಪಾಂಡೆ ಗಂಗಾಧರರಾಯರು).

ಕಾಂಗ್ರೆಸ್ ಕಟ್ಟಾಳು

ಇದೇ ಅವಧಿಯಲ್ಲಿ ಶ್ರೀ ಹಳ್ಳಿಕೇರಿಯ ವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನಿ ಕಟ ಸಂಪರ್ಕವನ್ನು ಬಳಸಿಕೊಂಡರು. ರಾಷ್ಟ್ರನಾಯಕರಿಂದ ಸ್ಫೂರ್ತಿ ಪಡೆದು ಕರ್ನಾಟಕದಲ್ಲೂ ಕಾಂಗ್ರೆಸ್ ಚಳುವಳಿ ಬೆಳೆಯಲು ಅವಿರತವಾಗಿ ಶ್ರಮಿಸಿದರು. ಮಹಾತ್ಮಾ ಗಾಂಧಿಯವರು ದುಂಡುಮೇ ಜಿನ ಪರಿಷತ್ತಿನಿಂದ ಹಿಂದಿರುಗಿದ ಮೇಲೆ ದೇಶದಲ್ಲಿ ಅಸಹಕಾರ ಚಳವಳಿ ಹುರುಪು ಗೊಂಡಾಗ ಶ್ರೀ ಹಳ್ಳಿಕೇರಿಯವರು ಕನ್ನ ಡ ನಾಡಿನಲ್ಲಿ ಜನರನ್ನು ಸ್ವಾತಂತ್ರ್ಯದ ತ್ತ ಹುರಿದುಂಬಿಸಿದರು.

ಶ್ರೀ ಹಳ್ಳಿಕೇರಿಯವರ ಜೀವನ ಕಥೆ ನಾಡಿನ ಸ್ವಾತಂತ್ರ್ಯ ಹೋರಾಟದ ಕಥೆ ಆಗಿದೆ. ಈಗ್ಗೆ ಮೂರು ದಶಕಗಳಿಂದ ಕೆ. ಪಿ. ಸಿ. ಸಿ. ಮತ್ತು ಎ. ಐ. ಸಿ. ಸಿ. ಗಳ ನಿಕಟ ಸಂಪರ್ಕ ಹೊಂದಿರುವ ಅವರು ಕನ್ನಡ ನಾಡಿನಲ್ಲಿ ಕಾಂಗ್ರೆಸ್ ಸಂಸ್ಥೆ ಸು ಸಂಘಟಿತವಾಗಲು ಬಹಳವಾಗಿ ಶ್ರಮಿಸಿದ್ದಾರೆ; ಸ್ವಾತಂತ್ರ್ಯ ಬಂದ ಮೇಲೂ ಶ್ರೀ ಹಳ್ಳಿಕೇರಿಯವರು ಅಧಿ ಕಾರ ವ್ಯಾಮೋಹಕ್ಕೆ ಸಿಲುಕದೆ ಪಕ್ಷದ, ಜನತೆಯ ನಿಷ್ಠಾವಂತ ಸೇವಕರಾಗಿ ಮುಂದುವರಿದರು. ಕರ್ನಾಟಕ ಏಕೀಕರ ಣಕ್ಕೆ ವಿಶೇಷವಾಗಿ ಶ್ರಮಿಸಿದರು. (ರಾ ಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಇನ್ನೂ ಆಗದಿರುವುದು ಅವರಿಗೆ ವ್ಯಸನದ ಸಂಗತಿಯಾಗಿದೆ).

ಶಿಕ್ಷಣಕ್ಕೆ ಸೇವೆ

ಕರ್ನಾಟಕದಲ್ಲಿ ಶ್ರೀ ಹಳ್ಳಿಕೇರಿಯ ವರ ಸೇವೆ ಕೇವಲ ರಾಜಕೀಯ ಕ್ಷೇತ್ರಕ್ಕೆ ಮೀಸಲಾಗಿಲ್ಲ. ಶಿಕ್ಷಣದ ಬಗ್ಗೆ ಅವರಿಗೆ ವಿಶೇಷ ಆಸಕ್ತಿಯಿದೆ. ವಿದ್ಯಾರ್ಥಿಗಳಿಗೆ ಸುಯೋಗ್ಯ ಶಿಕ್ಷಣ ದೊರಕಿಸುವುದು ನಾ ಳಿನ ಏಳಿಗೆಗಾಗಿ ನಾವಿಂದು ಹೂಡುವ ಬಂಡವಾಳ ಎಂದು ದೃಢವಾಗಿ ನಂಬಿರು ವ ಶ್ರೀ ಹಳ್ಳಿಕೇರಿಯವರು ಅನೇಕ ವಿದ್ಯಾ ಸಂಸ್ಥೆಗಳ ಸ್ಥಾಪನೆ, ಬೆಳವಣಿಗೆಗಳಿಗೆ ಪ್ರೇರಕ ಶಕ್ತಿಯಾಗಿದ್ದಾರೆ.

ಷಷ್ಟ್ಯಬ್ದದ ಸಂದರ್ಭದಲ್ಲಿ ಒಂದು ನಿಧಿ ಸಂಗ್ರಹಿಸಬೇಕೆಂದಾಗ ಶ್ರೀ ಹಳ್ಳಿ ಕೇರಿಯವರು ಆಡಿದ ಮಾತುಗಳು ಅವರ ಈ ವಿದ್ಯಾಸಕ್ತಿಯನ್ನು ಚೆನ್ನಾಗಿ ವ್ಯಕ್ತ ಗೊಳಿಸುತ್ತದೆ; "ಸಂಗ್ರಹಿಸುವ ನಿಧಿಯ ಒಂದೊಂದು ಕಾಸೂ ಹಳ್ಳಿಗಾಡಿನ ಜನರ ಶಿಕ್ಷಣದ ಮೇಲ್ಮೆಗೆ ಮೀಸಲಾಗಬೇಕು. ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನ ಮೇಲೆ ಚಾರಿತ್ರ್ಯವಂತ ಭಾರತೀಯರಿಂ ದಲೇ ಅಪ್ಪಟ ದೇಶಾಭಿಮಾನಿ, ಪ್ರತಿಭಾ ವಂತ, ನೀತಿವಂತ ಭಾವೀ ನಾಯಕರ ನ್ನೂ, ಜನಸಾಮಾನ್ಯರಿಂದಲೇ ಆರಿಸಿ ಕೊಂಡು ರೂಪಿಸಿ ಕೊಡುವಂತಹ ಒಂ ದು ಶಿಕ್ಷಣಾಲಯ ನಿರ್ಮಾಣವಾಗ ಬೇಕು."

ಅವರ ಈ ಆಕಾಂಕ್ಷೆಯನ್ನು ಕಾರ್ಯ ಗತ ಮಾಡಲು ಶ್ರೀ ಹಳ್ಳಿಕೇರಿ ಗುದ್ಲೆಪ್ಪ ನವರ ಷಷ್ಟ್ಯಬ್ದ ಸಮಾರಂಭ ಸಮಿತಿ ಸಂಕಲ್ಪಿಸಿದೆ. ಈ ನಿಧಿಗೆ ನಾಡಿನ ಜನ ಕೋಟಿ ಉದಾರವಾಗಿ ಕಾಣಿಕೆ ನೀಡಿ ಹಿ ರಿಯ ಕನ್ನಡ ನಾಯಕರೊಬ್ಬರಿಗೆ ಷಷ್ಟ್ಯ ಬ್ದದ ಅಭಿನಂದನೆ ಸಲ್ಲಿಸುವುದರ ಜತೆಗೆ ಈ ಆದರ್ಶ ಯೋಜನೆಯ ಸಾರ್ಥಕತೆಗೆ ನೆರವಾಗಬೇಕೆಂದು ಸಮಿತಿ ಆದರದಿಂದ ಆಹ್ವಾನಿಸುತ್ತದೆ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 56 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರ ಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಅಭಿಪ್ರಾಯ

ಭಾರತವು ಅಣ್ವಸ್ತ್ರಗಳನ್ನು ತಯಾರಿಸಬೇಕೇ?

ಬರೆದವರು: ಶ್ರೀ ಎಂ. ನಾರಾಯಣ ಭಟ್ಟ.

ಭಾರತೀಯ ಇತಿಹಾಸದ ಸುವರ್ಣ ಪುಟಗಳತ್ತ ದೃಷ್ಟಿ ಹಾಯಿಸಿದರೆ ನಮ್ಮ ನಾಗರೀಕತೆಯ ಆದಿಯಿಂದ ಆಧುನಿಕ ಯುಗದ ವರೆಗೆ ನಾವು ಶಾಂತಿಗಾಗಿ ಹೋರಾಡಿದ ಹೋರಾಟವು ಕಂಡುಬರುತ್ತದೆ. ಗೌತಮ ಬುದ್ಧ ಹಾಗೂ ವೇದಕಾಲದಿಂದ ಮಹಾತ್ಮಾಗಾಂಧೀಜಿ ಹಾಗೂ ನೆಹರೂರ ಕಾಲದ ವರೆಗೆ ನಾವು ಶಾಂತಿಗಾಗಿ ಹೋರಾಡಿದೆವು; ನಮ್ಮ ಸರ್ವಸ್ವವನ್ನೂ ಧಾರೆಯೆರೆದೆವು. ಅಶೋಕನು ಬೋಧಿಸಿದುದೂ, ಗಾಂಧೀಜಿಯವರು ಅನುಸರಿಸಿದುದೂ ಶಾಂತಿಯ ಮಾರ್ಗವನ್ನೇ. ನಮ್ಮ ದೇಶವು ಒಂದು ಶಾಂತಿಪ್ರಿಯ ದೇಶವಾದುದರಿಂದಲೇ ಅದು ಪ್ರಪಂಚದ ಇತರ ರಾಷ್ಟ್ರಗಳ ನಡುವೆ ತಲೆಯೆತ್ತಿ ನಿಂತಿದೆ. ನಮ್ಮ ಇಂದಿನ ನಾಯಕರೂ ಅದನ್ನೇ ಸಾರುತ್ತಿರುವರು. ಶಾಂತಿಯುತವಾದ ಮಾರ್ಗದಿಂದಲೇ ನಮ್ಮ ನಾಯಕರು ನಮ್ಮ ದೇಶವನ್ನು ಆಂಗ್ಲೇಯರ ದಾಸ್ಯ ಶೃಂಖಲೆಯಿಂದ ಸ್ವತಂತ್ರಗೊಳಿಸಿದುದು.

ಶಾಂತಿಯುತ ಸಹಜೀವನದ ಉದಾತ್ತ ತತ್ವಗಳನ್ನೊಳಗೊಂಡ ಪಂಚಶೀಲಗಳಿಗೆ ನಮ್ಮ ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಹಾಗೂ ಚೈನಾದ ಪ್ರಧಾನಿ ಚೌ ಎನ್ ಲೈ ಅವರು ಸಹಿಯನ್ನಿತ್ತರು. ಆದರೆ ಮೊದಲು ಸಹೋದರರಂತೆ ನಟಿಸಿದ ವಿಶ್ವಾಸಘಾತಕವಾದ ಚೈನಾ ಭಾರತದ ಪವಿತ್ರ ಭೂಮಿಯನ್ನು ಆಕ್ರಮಿಸಿತು. ಅದು ಪಂಚಶೀಲವನ್ನು ಶೂಲಕ್ಕೇರಿಸಿತು. ಪುನಃ ಹಿಂದೊಮ್ಮೆ ಭಾರತದ ಅಂಗವಾಗಿದ್ದ ಪಾಕಿಸ್ತಾನವೂ ಭಾರತವನ್ನು ಆಕ್ರಮಿಸಿತು. ಇಂತಹ "ಚಿಂತಾರ್ಹ" ಪರಿಸ್ಥಿತಿಯಲ್ಲೂ ಶಾಂತಿಪ್ರಿಯರಾದ ನಮ್ಮ ದೇಶದ ನಾಯಕರು ಅಣ್ವಸ್ತ್ರಗಳ ತಯಾರಿಯನ್ನು ಸಲ್ಲದೆಂದರು. ಪ್ರತಿಯೊಬ್ಬ ಮಾನವನೂ ಶಾಂತಿಯನ್ನು ಬಯಸುವನು ಎಂದು ಹೇಳಬಹುದು. ಯುದ್ಧದಿಂದ ಉಂಟಾಗುವ ಅನಾಹುತಗಳನ್ನು ಕಣ್ಣಾರೆ ಕಂಡ ಆತ ಇನ್ನೆಂದೂ ಯುದ್ಧವನ್ನು ಬಯಸಲಾರ. ಆದರೆ ಆಕ್ರಮಣವನ್ನು ತಡೆಹಿಡಿದು ಶಾಂತಿಯನ್ನು ಕಾಪಾಡುವುದು ಹೇಗೆ?

ಪಾಕಿಸ್ತಾನವು ಯುದ್ಧ ವಿರಾಮವನ್ನು ಅಂಗೀಕರಿಸಿ ನಾಲ್ಕು ವರುಷಗಳ ತರುವಾಯ ಪುನಃ ಅದು ಭಾರತವನ್ನು ಆಕ್ರಮಿಸಿತು. ಇಂದು ಪಾಕಿಸ್ತಾನವು ವಿದೇಶ ಸಹಾಯದ ಮೇರೆಗೆ ಅಣ್ವಸ್ತ್ರಗಳನ್ನು ತಯಾರಿಸಬಲ್ಲ ಕಾರ್ಖಾನೆಯೊಂದನ್ನು ಸ್ಥಾಪಿಸಲು ನಿರ್ಧರಿಸಿದೆ. ನಮ್ಮ ನೆಚ್ಚಿನ ಪ್ರಧಾನಿ ಲಾಲ್‌ಬಹದೂರ್ ಶಾಸ್ತ್ರಿಯವರು ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಹೋರಾಡಿ ಕೊನೆಯುಸಿರೆಳೆದರು. ಪಾಕಿಸ್ತಾನ ಹಾಗೂ ಚೈನಾದಂತಹ ವೈರಿಯೊಂದು ಸಮೀಪದಲ್ಲಿರುವಾಗ ಆಧುನಿಕ ಅಸ್ತ್ರಗಳಾದ ಅಣ್ವಸ್ತ್ರಗಳನ್ನು ತಯಾರಿಸುವುದು ನಮ್ಮ ದೇಶದ ರಕ್ಷಣೆಯ ದೃಷ್ಟಿಯಿಂದ ಹಿತಕರ.

ಇಂದು ಚೈನದ ಹಾಗೂ ಪಾಕಿಸ್ತಾನದ ಆಂತರಿಕ ಆರ್ಥಿಕ ಪರಿಸ್ಥಿತಿಯು ಬಹಳಷ್ಟು ಕೆಟ್ಟಿದೆ. ಆದುದರಿಂದ ಅವರು ಭಾರತದ ವಿರುದ್ಧ ತಮ್ಮ ಶಕ್ತಿಯನ್ನುಪಯೋಗಿಸಿ ಕೈ ಸುಟ್ಟುಕೊಳ್ಳುವ ಸಾಹಸ ಮಾಡಲಾರರು ಎನ್ನುವುದು ಕೆಲವರ ವಾದ. ಆದರೆ ನಾವಿದನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ ನೋಡಿದರೆ ಒಂದು ದೇಶದ ಆರ್ಥಿಕ ಬಿಕ್ಕಟ್ಟು ಆ ದೇಶದ ಶಸ್ತ್ರಾಸ್ತ್ರಗಳ ಪ್ರಯೋಗವನ್ನು ತಡೆಹಿಡಿಯಲಾರದು ಎಂದು ಮನದಟ್ಟಾಗುವುದು. ಅವರೀಗಾಗಲೇ ತಮಗೆ ಬೇಕಾದಷ್ಟು ಅಣ್ವಸ್ತ್ರಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಇತ್ತೀಚೆಗಿನ ಪಾಕಿಸ್ತಾನ ಹಾಗೂ ಭಾರತದ ನಡುವಣ ಕೆಲವು ಯುದ್ಧಗಳಿಂದಾಗಿ ಕೇವಲ ಶಾಂತಿಯ ತತ್ವಗಳು ನಮ್ಮನ್ನು ಕಾಪಾಡಲಾರವು ಎಂದು ಮನದಟ್ಟಾಗಿದೆ. ಉತ್ತಮ ಧ್ಯೇಯಗಳಿದ್ದರೆ ಸಾಲದು, ಅವುಗಳನ್ನು ಸಾಧಿಸಬೇಕು. ಎಂದಿನ ತನಕ ಭಾರತವು ತನ್ನ ರಕ್ಷಣಾ ಬಲವನ್ನು ಇನ್ನಷ್ಟು ವೃದ್ಧಿಸುವುದಿಲ್ಲವೋ ಅಂದಿನ ತನಕ ನಮ್ಮ ವೈರಿಗಳನ್ನು ನಮ್ಮ ಪವಿತ್ರವಾದ ಭೂಮಿಯಿಂದ ಹೊಡೆದೋಡಿಸಲು ಅಸಾಧ್ಯ. ಅದು ಕೇವಲ ಕನಸಾಗಿಯೇ ಉಳಿಯಬಹುದು ಅಥವಾ ಕೇವಲ ಬಿಸಿಲುಕುದುರೆಯಾಗಬಹುದು.

ಇನ್ನು ಭಾರತದ ಪರಿಸ್ಥಿತಿಯು ಹೇಗಿದೆಂದು ಪರಿಶೀಲಿಸೋಣ. ಆರ್ಥಿಕ ದೃಷ್ಟಿಯಿಂದ ನೋಡಿದರೆ ಭಾರತವು ಬಹಳಷ್ಟು ಹಿಂದುಳಿದಿದೆ. ದೇಶವು ಭದ್ರವಾಗಿದ್ದರೆ ಮಾತ್ರ ಆ ದೇಶದ ಪ್ರಗತಿಯು ಸಾಧ್ಯ. ಆರ್ಥಿಕ ಬೆಳವಣಿಗೆಗೆ ಇದು ಅತ್ಯಗತ್ಯ. ಇದಕ್ಕಾಗಿ ಪ್ರತಿಯೊಬ್ಬ ಪ್ರಜೆಯು ತನ್ನ 'ಅಳಿಲಸೇವೆ'ಯನ್ನು ಸಲ್ಲಿಸಲೇ ಬೇಕು. ಉತ್ಕಟವಾದ ದೇಶಪ್ರೇಮ ಪ್ರತಿಯೊಬ್ಬರಲ್ಲಿಯೂ ಬೆಳೆಯಬೇಕು. ದೇಶೋದ್ಧಾರಕ್ಕಾಗಿ ಟೊಂಕಕಟ್ಟಿ ನಿಲ್ಲಬೇಕು. ಸ್ವಾರ್ಥವನ್ನು ತ್ಯಜಿಸಿ ಭ್ರಷ್ಟಾಚಾರವನ್ನು ದೂರೀಕರಿಸಬೇಕು.

ಇಪ್ಪತ್ತನೆಯ ಶತಮಾನವನ್ನು ಅಣುಯುಗವೆಂದರೂ ತಪ್ಪಾಗಲಾರದು. ಇಂದು ಪ್ರತಿಯೊಂದು ದೇಶವೂ ಅಣುಶಕ್ತಿಯನ್ನು ಪಡೆಯಬಯಸುತ್ತದೆ. ಮಾತ್ರವಲ್ಲ ಈ ರಂಗದಲ್ಲಿ ದೇಶ ದೇಶಗಳೊಳಗೆ ಸ್ಪರ್ಧೆಯೂ ನಡೆಯುತ್ತದೆ. ಇಂತಹ ಸಂದರ್ಭದಲ್ಲಿ ಕೇವಲ 'ಶಾಂತಿ' ನಮ್ಮನ್ನು ಕಾಪಾಡಲಾರದು. ಉಳಿದ ರಾಷ್ಟ್ರಗಳು ಅದನ್ನು ಬಯಸುತ್ತವೆ ಎಂದ ಮಾತ್ರಕ್ಕೆ ನಾವು ಅವರನ್ನು ಮೂಢರಾಗಿ ನಂಬಬೇಕು ಎಂದು ಅರ್ಥವಲ್ಲ. ಆದರ ಹಿಂದೆ ಬಲವಾದ ಒಂದು ಕಾರಣವಿದೆ. ಇನ್ನು ನಾವು ಅಣ್ವಸ್ತ್ರಗಳನ್ನು ತಯಾರಿಸ ಬಲ್ಲೆವೆ? ಎನ್ನುವ ಪ್ರಶ್ನೆಯೇ ಮೂಡುವಂತಿಲ್ಲ. ಟ್ರೊಂಬೆಯಲ್ಲಿ ಅಣುಶಕ್ತಿ ಪರಿಶೋಧನಾ ಕೇಂದ್ರವೊಂದಿದೆ. ನಮ್ಮ ದೇಶದಲ್ಲಂತೂ ದೊಡ್ಡ ದೊಡ್ಡ ವಿಜ್ಞಾನಿಗಳಿಗೆ ಕೊರತೆಯೇ ಇಲ್ಲ. ಅಣ್ವಸ್ತ್ರಗಳನ್ನು ತಯಾರಿಸಲು ಬೇಕಾದ ವಾತಾವರಣವು ಇರುವಾಗ ನಾವು ಅವುಗಳನ್ನು ಪಡೆಯಲು ಹಿಂಜರಿಯಲೇಬಾರದು. ನಾವು ಹಿಂದೆಯೇ ಅಣ್ವಸ್ತ್ರಗಳನ್ನು ತಯಾರಿಸಿದ್ದರೆ ಚೈನಾ ಯಾ ಪಾಕಿಸ್ತಾನಕ್ಕೆ ಭಾರತವನ್ನು ಆಕ್ರಮಿಸುವ ಧೈರ್ಯವು ಬರುತ್ತಿರಲಿಲ್ಲ.

ನಾವು ಅಣ್ವಸ್ತ್ರಗಳನ್ನು ತಯಾರಿಸಿದರೆ ಯಾವುದೇ ದೇಶವನ್ನು ಆಕ್ರಮಿಸಬೇಕು ಎಂದು ಅರ್ಥವಲ್ಲ. ಪಾಕಿಸ್ತಾನ ಹಾಗೂ ಚೈನವನ್ನು ಎದುರಿಸಲು ಮಾತ್ರವಲ್ಲ, ನಮ್ಮ ದೇಶದ ರಕ್ಷಣೆಯ ಹಿತದೃಷ್ಟಿಯಿಂದಲೂ ನಮಗವು ಅತ್ಯಗತ್ಯ. ಆಧುನಿಕ ಜಗತ್ತಿನ ಎರಡು ಮಹಾಶಕ್ತಿಗಳೆನ್ನಿಸಿಕೊಂಡ ರಶ್ಯಾ ಹಾಗೂ ಅಮೇರಿಕಾಗಳು ತಮಗೆ ಬೇಕಾಗುವಷ್ಟು ಅಣ್ವಸ್ತ್ರಗಳನ್ನು ತಯಾರಿಸಿವೆ. ಸಮಬಲರೆನಿಸಿಕೊಂಡ ಅವರೊಡನೆ ಶಸ್ತ್ರಾಸ್ತ್ರಗಳಿದ್ದರೂ ಮುಂದಾಲೋಚನೆಯಿಲ್ಲದೆ ಅವನ್ನು ಸ್ಫೋಟಿಸುವಂತಿಲ್ಲ.

ಅಮೇರಿಕಾ ಹಾಗೂ ರಷ್ಯಗಳೊಡನೆ ಉತ್ತಮ ಶಸ್ತ್ರಾಸ್ತ್ರಗಳು ಇರುವಾಗ ನಾವು ಅವರ ಸಹಾಯವನ್ನು ಯಾಕೆ ಪಡೆಯಬಾರದು? ಎನ್ನುವುದು ಕೆಲವರ ಅಭಿಪ್ರಾಯ. ಅವರು ನಮಗೆ ಸಹಾಯವನ್ನು ಮಾಡಲು ಮುಂದಾಗಬಹುದು. ನಮ್ಮ ನಾಯಕರು ನಾವು ಆಹಾರ ಧಾನ್ಯಗಳಿಗಾಗಿ ಪರಾವಲಂಬಿಗಳಾಗಬಾರದು ಎಂದು ಹೇಳುವುದನ್ನು ಕೇಳಬಹುದು. ಆಹಾರ ಧಾನ್ಯಗಳಂತೆಯೇ ರಕ್ಷಣಾ ಸಾಮಗ್ರಿಗಳಿಗೂ ನಾವು ಇತರ ದೇಶಗಳನ್ನು ಅವಲಂಬಿಸಿರ ಕೂಡದು. ಇಂದು ಒಂದು ದೇಶವು ನಮಗೆ ಸೈನ್ಯ ಸಹಾಯವನ್ನು ಕೊಡಲು ಒಪ್ಪಬಹುದು. ಆದರೆ, ನಾಳೆ, ನಮಗೆ ಸಹಾಯವನ್ನು ಮಾಡಲು ಒಪ್ಪಿದ ರಾಷ್ಟ್ರವೇ ನಮ್ಮನ್ನು ಆಕ್ರಮಿಸಬಹುದು. ನಾವು ನಮ್ಮ ಕಾಲ ಮೇಲೆಯೇ ನಿಲ್ಲಬೇಕು.

ನಾವು ಯುದ್ಧ ಸಾಮಗ್ರಿಗಳ ತಯಾರಿಯಲ್ಲೇ ಮಗ್ನರಾದರೆ, ನಮ್ಮ ಆರ್ಥಿಕ ಪರಿಸ್ಥಿತಿಯು ಕೆಡಲಾರದೇ ಅನ್ನುವುದು ಕೆಲವರ ವಾದ. ಮೊದಲು ನಮ್ಮ ದೇಶವು ಇತರ ದೇಶಗಳ ವಕ್ರದೃಷ್ಟಿಗೆ ಗುರಿಯಾಗದಂತೆ ನೋಡಬೇಕು. ದೇಶದ ರಕ್ಷಣೆಯ ಕಾರ್ಯವು ಮೊತ್ತ ಮೊದಲನೆಯದು. ನಮ್ಮ ದೇಶದ ಉದ್ಧಾರವು ಆಗಬೇಕಿದ್ದರೆ, ನಮ್ಮ ದೇಶದ ರಕ್ಷಣೆ ಸಾಗಬೇಕಾದುದು ಅತ್ಯಗತ್ಯ. ಇಲ್ಲಿ ನಾವು ರಾಷ್ಟ್ರದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಮೊದಲು ರಷ್ಯವು ಪ್ರಕೃತಿ ಸಂಪತ್ತಿನ ನೆಲೆಬೀಡಾಗಿತ್ತು. ಆದರೆ ಅದು ಬೆಳವಣಿಗೆಯ ಹಂತವನ್ನು ತಲುಪಿರಲಿಲ್ಲ. ಆದರೆ ರಷ್ಯದ ಮಹಾಕ್ರಾಂತಿಯ ತರುವಾಯ ಅಂದರೆ ಕೇವಲ ನಾಲ್ಕುವರೆ ದಶಕಗಳ ಕಾಲದಲ್ಲಿ ಅದು ಪ್ರಗತಿಯನ್ನು ಸಾಧಿಸಿತು. ಇಂದು ರಷ್ಯವು ಅಮೇರಿಕಾದ ಪ್ರತಿಸ್ಪರ್ಧಿ. ಅಮೇರಿಕವು ಎರಡು ಶತಮಾನಗಳಲ್ಲಿ ಏನನ್ನು ಸಾಧಿಸಿತೋ, ಅಷ್ಟನ್ನೇ ಅಥವಾ ಅದಕ್ಕಿಂತಲೂ ಹೆಚ್ಚಿನದನ್ನು ರಷ್ಯವು ಕೇವಲ ನಾಲ್ಕುವರೆ ದಶಕಗಳಲ್ಲಿ ಸಾಧಿಸಿತು. ರಷ್ಯದ ಜನರ ದೇಶ ಪ್ರೇಮ, ನಿಸ್ವಾರ್ಥ ತ್ಯಾಗಬುದ್ಧಿ ಹಾಗೂ ಸ್ಟಾಲಿನ್, ಲೆನಿನ್, ಕೆಲಿಲಿನ್, ಮೊದಲಾದವರ ನಾಯಕತ್ವವೇ ಇದಕ್ಕೆ ಕಾರಣ. ಭಾರತದ ನೀತಿಯು ರಷ್ಯದ ನೀತಿಗಿಂತ ಭಿನ್ನವಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಭಾರತದಲ್ಲಿ ಬೇಕಾದಷ್ಟು ಸಂಪತ್ತಿದೆ. ಆದರೆ ಅದನ್ನು ಸದುಪಯೋಗಿಸುವುದು ತೀರಾ ವಿರಳ. ಮಾತ್ರವಲ್ಲ ರಷ್ಯದಲ್ಲಿ ಇದ್ದಂತಹ ನಾಯಕರು ಇಂದು ನಮ್ಮ ಪಾಲಿಗೆ ಶೂನ್ಯರಾಗಿದ್ದಾರೆ. ತತ್ವಶಾಸ್ತ್ರಜ್ಞರಾದ ನಮ್ಮ ನಾಯಕರು ಯಾವಾಗಲೂ ಶಾಂತಿಯನ್ನೇ ಬಯಸುವುದು ಸಹಜ. ಇಂದು ಜನಸಾಮಾನ್ಯರೂ ಯುದ್ಧಕ್ಕಿಂತ ಶಾಂತಿಯ

(ಹನ್ನೊಂದನೇ ಪುಟ ನೋಡಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಫೋನ್: 77 ಕುಂದಾಪುರ, ದ. ಕ.

ಭಾರತದ ಚಿತ್ರಕಲಾ ವೈಭವ

ಮೊಗಲ್ ಚಿತ್ರಕಲೆ

ಲೇಖಕರು: ಡಾ|| ಮೋತಿಚಂದ್ರ.

ವೇದಕಾಲದಿಂದ ಆಧುನಿಕ ಕಾಲದವರೆಗಿನ ಭಾರತದ ಚಿತ್ರಕಲಾ ವೈಭವ ಕುರಿತು ಆಕಾಶವಾಣಿ ದೆಹಲಿ ಕೇಂದ್ರದವರು ಆರು ವಿದ್ವತ್ಪೂರ್ಣ ಭಾಷಣಗಳನ್ನು ಬಿತ್ತರಿಸಿದರು. ಈ ಮೂರನೆಯ ಭಾಷಣದಲ್ಲಿ ಡಾ|| ಮೋತಿಚಂದ್ರ ಅವರು ಮೊಗಲ್ ಚಿತ್ರಕಲೆಯ ಆರಂಭ ಹಾಗೂ ಅಂತ್ಯವನ್ನು ವಿವೇಚಿಸಿದ್ದಾರೆ. ಅವರ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ.

ಹದಿನಾರನೆಯ ಶತಮಾನವು ಭಾರತದ ಇತಿಹಾಸದಲ್ಲಿಯೇ ಒಂದು ರೋಮಾಂಚಕಾರಿ ಕಾಲವಾಗಿದೆ. ಈ ಸಂಧಿಕಾಲದಲ್ಲಿ ಹಳೆಯ ಮೌಲ್ಯಗಳೆಲ್ಲವೂ ಮಾಯವಾಗಿ ಹೊಸ ಮೌಲ್ಯಗಳು ಬೆಳಕಿಗೆ ಬಂದವು. ವಿಜಯಶೀಲರಾದ ಮೊಗಲ ದೊರೆಗಳು ಹೊಸ ಐತಿಹಾಸಿಕ ಅಧ್ಯಾಯದ ಆರಂಭವನ್ನು ಸೂಚಿಸಲಿದ್ದರು. ಸುಲ್ತಾನರು ಬಹುತೇಕ ಸಮಯವನ್ನು ಪರಸ್ಪರ ಕಚ್ಚಾಟ ಹಾಗೂ ಯಾದವೀ ಯುದ್ಧಗಳಲ್ಲಿ ಕಳೆದರೂ ಅವರ ಕಾಲದಲ್ಲಿ ಚಿತ್ರಕಲೆ ಸಂಗೀತ ಮತ್ತು ಸಾಹಿತ್ಯಗಳು ಭರದಿಂದ ಬೆಳೆದವು. ಜೌನಪೂರ್, ಅಹಮದಾಬಾದ್ ಮತ್ತು ಮಾಂಡುಗಳಂತಹ ಸಂಸ್ಥಾನಗಳ ಪಟ್ಟಣಗಳು ಇಸ್ಲಾಂ ಸಂಸ್ಕೃತಿಯ ಕಲಾಕ್ಷೇತ್ರವಾಗಿ ರೂಪಗೊಂಡವು. ಚಿತ್ರಕಲೆಯಲ್ಲಿ ಹೊಸದೊಂದು ಶೈಲಿಯನ್ನು ನಿರೂಪಿಸಲು, ಹದಿನಾರನೆಯ ಶತಮಾನದ ಪ್ರಥಮಾರ್ಧದಲ್ಲಿ ಮೊಗಲ ದೊರೆಗಳು ವಿಶೇಷ ಆಸಕ್ತಿವಹಿಸಿದ್ದರೆಂದು ನಂಬಲು ಇತ್ತೀಚಿನ ಸಂಶೋಧನೆಯು ಸಹಾಯಕಾರಿಯಾಗಿದ್ದರೂ, ಮೊತ್ತ ಮೊದಲು ಸುಲ್ತಾನರು ವರ್ಣ ಚಿತ್ರಕಲೆಯ ಬೆಳವಣಿಗೆಗಾಗಿ ಪ್ರಜ್ಞಾಪೂರ್ಣ ಪ್ರಯತ್ನಗಳನ್ನು ಮಾಡಿದರು ಎಂದು ನಂಬಲು ಸಬಲ ಕಾರಣಗಳು ಇನ್ನೂ ದೊರೆತಿಲ್ಲ. ಹದಿನಾರನೆಯ ಶತಮಾನದ ಪ್ರಥಮಾರ್ಧದಲ್ಲಿ ಬೆಳಕಿಗೆ ಬಂದ ಹೊಸ ಚಿತ್ರಕಲಾ ಶೈಲಿಯು, ಪಶ್ಚಿಮ ಭಾರತದ ಅನೇಕ ಹಳೆಯ ಮೂಲಭೂತ ಅಂಶಗಳನ್ನು ಒಳಗೊಂಡಿತ್ತು. ಹೊಸ ಶೈಲಿಯಲ್ಲಿ ನೀಲವರ್ಣ, ಬಂಗಾರದ ಬಣ್ಣಗಳನ್ನು ಕೈಬಿಡಲಾಗಿತ್ತಲ್ಲದೇ ಇದರಲ್ಲಿ ಅಭಿವ್ಯಕ್ತಿಯ ಹೊಸ ಮಾದರಿಯನ್ನು ಅಳವಡಿಸಲಾಗಿತ್ತು. ಅಲ್ಲದೆ ಈ ಹೊಸ ಶೈಲಿಯಲ್ಲಿ ಕೆಲವು ವಿದೇಶಿ ಅಂಶಗಳನ್ನು ಅಳವಡಿಸಿಕೊಳ್ಳಲಾಯಿತು. ಬರಬರುತ್ತ ಈ ಅಂಶಗಳು ಭಾರತೀಯ ವರ್ಣ ಚಿತ್ರಕಲೆಯಲ್ಲಿ ಸಮರಸಗೊಂಡವು.

ಈಗ ಪ್ರಾಂತೀಯ ಪುರಾವೆಯನ್ನು ಪರಿಶೀಲಿಸಿದರೆ ಈ ಚಿತ್ರಕಲೆಯ ಪದ್ಧತಿಯಲ್ಲಿ ಶಾಸ್ತ್ರೀಯ ಹಾಗೂ ಜಾನಪದ ರೀತಿಗಳನ್ನು ಅಳವಡಿಸಿಕೊಂಡಿದ್ದು ಕಂಡುಬಂದಿದೆ. "ನಿಮಾತ್ ನಾಮಾ' ಮತ್ತು 'ಲಾರ್ ಚಾಂದಾ"ಗಳ ಪದ್ಧತಿಯಲ್ಲಿ ಶಾಸ್ತ್ರೀಯ ವರ್ಣಶಿಲ್ಪಕಲಾ ಪದ್ಧತಿಯು ಉತ್ಕೃಷ್ಟವಾಗಿ ಪ್ರಕಟಗೊಂಡಿದೆ. ಈ ಪದ್ಧತಿಯಲ್ಲಿ ಕಲಾಕುಶಲತೆಯು ವ್ಯಕ್ತಪಟ್ಟಿದೆ. ಅಲ್ಲದೆ ಸೂಕ್ತ ವರ್ಣಗಳ ಸಂಯೋಜನೆ ಹಾಗೂ ಮನೋಹರವಾದ ನೈಸರ್ಗಿಕ ವಾಸ್ತು ಶಿಲ್ಪಕಲೆಯೂ ಈ ಪದ್ಧತಿಯ ಮುಖ್ಯ ಅಂಶಗಳಾಗಿವೆ. ಆದರೂ ಆ ಕೃತಿಗಳನ್ನು ತಂಡಗಳಲ್ಲಿ ಚಿತ್ರಿಸಿರುವುದು ಅಷ್ಟು ಪರಿಣಾಮಕಾರಿಯಾಗಿಲ್ಲ. ಅಲ್ಲದೆ ಲಂಬರೂಪದಲ್ಲಿಯಾದರೂ ಚಿತ್ರಾಕೃತಿಗಳನ್ನು ಸಂಯೋಜಿಸುವ ಪ್ರಶ್ನೆಯನ್ನು ಬಗೆಹರಿಸಲಾಗಲಿಲ್ಲ.

ಜಾನಪದ ಪದ್ಧತಿಯ ಚಿತ್ರಕಲೆಯಲ್ಲಿ ಭಾರತೀಯ ಹಾಗೂ ಪರ್ಶಿಯನ್ ಚಿತ್ರಕಲೆಗಳ ಸಂಯೋಗವನ್ನು ಕಾಣಬಹುದಾಗಿದೆ. ಈ ಚಿತ್ರ ಪದ್ಧತಿಯು ಜೈನ್ ಗ್ರಂಥಗಳನ್ನು ಚಿತ್ರಿಸಲು ಮಾತ್ರ ಸೀಮಿತವಾಗಿರಲಿಲ್ಲ. ಆದರೆ ಈ ಹೊಸ ಚಿತ್ರಕಲೆಯಲ್ಲಿ ರಾಮಾಯಣ, ಮಹಾಭಾರತ, ಗೀತಗೋವಿಂದ ಹಾಗೂ ಪರ್ಶಿಯನ್ ಮಹಾಕಾವ್ಯಗಳನ್ನು ಸೆರೆಹಿಡಿಯಲಾಯಿತು.

ಮೊಗಲರ ಆಗಮನ

೧೫೨೬ರಲ್ಲಿ ಅತ್ಯಂತ ಮಹತ್ವಪೂರ್ಣ ಘಟನೆಯೊಂದು ಭಾರತದ ಇತಿಹಾಸದಲ್ಲಿ ಘಟಿಸಿತು. ಚಂಗೀಸ್ ಖಾನ್ ಹಾಗೂ ತೈಮೂರರ ವಂಶಜನಾದ ಬಾಬರನು ಪಾಣಿಪತ್ ಯುದ್ಧದಲ್ಲಿ ಇಬ್ರಾಹಿಮ್ ಲೋದಿಯನ್ನು ಸೋಲಿಸಿದ್ದರಿಂದ ಆ ವರ್ಷದಿಂದ ಭಾರತದಲ್ಲಿ ಮೊಗಲರ ಯುಗ ಆರಂಭವಾಯಿತು. ಇದಾದ ನಂತರ ಅನೇಕ ಯುದ್ಧಗಳು ಆದವು. ಕೊನೆಗೆ ೧೫೨೯ರ ಸುಮಾರಿಗೆ ಬಾಬರನು ಬಹು ದೊಡ್ಡ ಸಾಮ್ರಾಜ್ಯವನ್ನು ಕಟ್ಟುವ ಸಾಮರ್ಥ್ಯವನ್ನು ಸಂಪಾದಿಸಿದನು.

ಬಾಬರನು ಸಾಹಿತ್ಯ ಪ್ರೇಮಿಯೂ, ಸೌಂದರ್ಯೋಪಾಸಕನೂ ಆಗಿದ್ದನು. ಆವನು ಪಕ್ಷಿಗಳು, ಹೂ ಗಿಡಗಳು ಸಂಗೀತ, ವರ್ಣಚಿತ್ರ ಹಾಗೂ ವಾಸ್ತುಶಿಲ್ಪಗಳನ್ನು ಪ್ರೀತಿಸುತ್ತಿದ್ದನು ಆದರೆ ಹಿಂದೂಸ್ತಾನದ ಧೂಳು ಉಷ್ಣ ಹವಾಮಾನ ಹಾಗೂ ಇಲ್ಲಿಯ ಜನರು ಅವನಿಗೆ ಹಿಡಿಸಲಿಲ್ಲ. ಆದ್ದರಿಂದಲೇ ಅವನು ತನ್ನ ಮಾತೃಭೂಮಿಯನ್ನು ಸ್ಮರಿಸತೊಡಗಿದನು. ಬಾಬರನು ತನ್ನ ಸಾಮ್ರಾಜ್ಯವನ್ನು ಸ್ಥಿರಗೊಳಿಸಲು ಅವಿಂತವಾಗಿ ಚಳವಳಿ ಹಾಗೂ ಹೋರಾಟಗಳನ್ನು ನಡೆಯಿಸಬೇಕಾದ್ದರಿಂದ ಕಲೆ ಹಾಗೂ ವಾಸ್ತುಶಿಲ್ಪಗಳನ್ನು ಅಭಿವೃದ್ಧಿಗೊಳಿಸಲು ಅವನಿಗೆ ಸಮಯ ಸಿಕ್ಕಲಿಲ್ಲ.

ಪರ್ಶಿಯನ್ ಪ್ರಭಾವ

ಬಾಬರನ ತರುವಾಯ ಪಟ್ಟಕ್ಕೆ ಬಂದ ಹುಮಾಯೂನನು ಗುಜರಾತ್ ಯುದ್ಧದಲ್ಲಿ ವಿಜಯ ಹೊಂದಿ ಆಗ್ರಾದಲ್ಲಿ ಪದ್ಯಗಳನ್ನು ರಚಿಸುತ್ತಾ, ಸಂಗೀತವನ್ನು ಕೇಳುತ್ತಾ ಜೀವನದ ಸಿಹಿಯನ್ನು ಅನುಭವಿಸಿದನು. ಆದರೆ ಶೇರ್‌ಷಹಾನು ತನ್ನ ಧಾಳಿಗಳಿಂದ ಹುಮಾಯೂನನನ್ನು ತೊಂದರೆಗೆ ಸಿಲುಕಿಸಿದನು. ಕೊನೆಗೆ ಹೋರಾಟದಲ್ಲಿ ಶೇರಷಹಾನು ಗೆದ್ದಿದ್ದರಿಂದ ಹುಮಾಯೂನನು ಪರ್ಶಿಯಾಕ್ಕೆ ಓಡಿ ಹೋಗಿ ಷಹಾ ತಿಹಮುಸ್ಪ್ ಸಫ್ವಿನಲ್ಲಿ ಆಶ್ರಯ ಪಡೆದನು. ಸಫ್ವಿ ಚಿತ್ರಕಾರರ ಚಿತ್ರಕಲಾ ವೈಭವವನ್ನು ಕಂಡು ಹುಮಾಯೂನನು ಪ್ರಭಾವಿತನಾದನು. ಆದ್ದರಿಂದ ಓರ್ವ ಹಿರಿಯ ಸಫ್ವಿ ಚಿತ್ರಕಾರರನ್ನು ಅವನು ತನ್ನ ಜೊತೆಗೆ ಇರಲು ಆಹ್ವಾನಿಸಿದನು. ಸಫ್ವಿ ಅರಸನ ಬೆಂಬಲವನ್ನು ಪಡೆದುಕೊಂಡು ಕಳೆದುಹೋದ ತನ್ನ ಸಾಮ್ರಾಜ್ಯವನ್ನು ಮರಳಿಪಡೆಯಲು ಹುಮಾಯೂನನು ಕಾಬೂಲ್‌ನಲ್ಲಿ ಕಾಲೂರಿದನು. ಅವನು ಅಲ್ಲಿರುವಾಗಲೇ ರಾಜಕುಮಾರ ಅಕ್ಬರ್ ಹಾಗೂ ಖ್ಯಾತ ಪರ್ಶಿಯನ್ ವರ್ಣಚಿತ್ರಕಾರರಾದ ಮೀರ್ ಸೈಯದ್ ಅಲಿ ಮತ್ತು ಅಬ್ದುಲ್—ಉಸ್—ಸಮದ್ ಅವರು ೧೫೪೯ರಲ್ಲಿ ಹುಮಾಯೂನನನ್ನೇ ಸೇರಿಕೊಂಡರು. ಹೀಗೆ ಚಿತ್ರಕಲೆಯ ಆರಂಭಕ್ಕೆ ಹಿನ್ನೆಲೆ ಸಿದ್ಧವಾಯಿತು. ಆದರೂ ಈ ನವೀನ ಚಿತ್ರಕಲೆಯು ಪರ್ಶಿಯನ್ ಚಿತ್ರಕಲೆಯಿಂದ ಬೇರ್ಪಡಿಸಲಾರದಷ್ಟು ಏಕರೂಪತೆ ಪಡೆದಿತ್ತು. ಅಕ್ಬರನು ಇಬ್ಬರು ಪರ್ಶಿಯನ್ ತಜ್ಞರನ್ನು ತನ್ನ ಜೊತೆಗೆ ಇಟ್ಟುಕೊಂಡಿದ್ದರಿಂದ ಮೊಗಲರದೇ ಆದ ಒಂದು ಹೊಸ ಶೈಲಿಯು ರೂಪಗೊಳ್ಳಲು ತುಂಬಾ ಅನುಕೂಲವಾಯಿತು:

ಶೇರಷಹಾನು ೧೫೪೫ರಲ್ಲಿ ತೀರಿಕೊಂಡ ಮೇಲೆ ಪಟ್ಟಕ್ಕೆ ಬಂದ ಅವನ ವಂಶಜರು ತುಂಬಾ ದುರ್ಬಲರಾಗಿದ್ದರು. ಈ ಸುಸಂಧಿಯ ಲಾಭವನ್ನು ಪಡೆದುಕೊಂಡೇ ಹುಮಾಯೂನನು ೧೫೫೫ರಲ್ಲಿ ತನ್ನ ಕಳೆದುಹೋದ ಸಾಮ್ರಾಜ್ಯವನ್ನು ಮರಳಿ ಪಡೆದುಕೊಂಡನು.

ಅರ್ಥಾತ್ ೧೫೫೫ರಲ್ಲಿ ಮೊಗಲರು ಮತ್ತೆ ದೆಹಲಿಗೆ ಬಂದು ನೆಲೆಸಿದರು. ಆದರೆ ದುರ್ದೈವಿಯಾದ ಹುಮಾಯೂನನು ತಾನು ಮರಳಿ ಪಡೆದ ಸಾಮ್ರಾಜ್ಯದ ಸುಖವನ್ನು ಅನುಭವಿಸಲಿಲ್ಲ. ತನ್ನ ವಾಚನಾಲಯದ ಮೆಟ್ಟಲುಗಳಿಂದ ಕಾಲು ಜಾರಿಬಿದ್ದು ವಿಧಿವಶನಾದನು.

ಹುಮಾಯೂನನ ತರುವಾಯ ತನ್ನ ಶೌರ್ಯ, ಪರಾಕ್ರಮ, ಗುಣಸಂಪನ್ನ ವ್ಯಕ್ತಿತ್ವ, ಪರಧರ್ಮ ಸಹಿಷ್ಣುತೆ, ಜಾಣ ಆಡಳಿತ ಹಾಗೂ ಸಾಹಿತ್ಯೋಪಾಸನೆ ಮುಂತಾದ ಅಮೌಲ್ಯ ಗುಣಗಳಿಗಾಗಿ ಇತಿಹಾಸದಲ್ಲಿಯೇ ಸುಪ್ರಸಿದ್ಧನಾದ ಅಕ್ಬರನು ಪಟ್ಟಕ್ಕೆ ಬಂದನು. ಅಕ್ಬರನ ದರ್ಬಾರವು ವಿಶ್ವಪ್ರಜ್ಞೆಯ ಪ್ರತೀಕವಾಗಿತ್ತು. ಅವನ ರಾಜಸಭೆಯಲ್ಲಿ ಕವಿಗಳು, ತತ್ವಜ್ಞಾನಿಗಳು, ಜ್ಯೋತಿಷಿಗಳು, ಕಲಾವಿದರು, ಸಂಗೀತಗಾರರು ಹಾಗೂ ವ್ಯಾಪಾರಸ್ಥರಿಗೆ ಸೂಕ್ತ ಮಾನಸನ್ಮಾನಗಳನ್ನು ನೀಡಲಾಗಿತ್ತು. ಅವನ ವಾಚನಾಲಯವು ಕೇವಲ ಪರ್ಶಿಯನ್ ಮ

(ಹತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕಿನ
ಇನ್ನೊಂದು ಹೊಸ ಶಾಖೆಯು

ತಾರೀಕು 25 ಎಪ್ರಿಲ್ 1966ರಂದು ಪಂಜಿಮ್‌ನ
ಈ ಕೆಳಗಿನ ವಿಳಾಸದಲ್ಲಿ ತೆರೆಯಲ್ಪಟ್ಟಿದೆಯೆಂದು
ತಿಳಿಸಲು ನಾವು ಸಂತೋಷಪಡುತ್ತೇವೆ.

ಅವೇನಿದಾ ಡೋ ಬ್ರೇಜಿಲ್,
ಪೋಸ್ಟ್ ಬಾಕ್ಸ್ ನಂ. 193,
ಪಂಜಿಮ್ (ಗೋವಾ).

ಗೋವಾದಲ್ಲಿರುವ ನಮ್ಮ ಇತರ ಶಾಖೆಗಳು

1. ಕುಚೋರಿಮ್ (ಗೋವಾ) 2. ಸಾನ್‌ಕ್ವೆಲಿಮ್ (ಗೋವಾ)
3. ಬೆಟಿಮ್ (ಬಾರ್‌ಡೆಜ್), ಗೋವಾ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು:
200ಕ್ಕೂ ಮಿಕ್ಕಿ.

ಚಲಾವಣಾ ನಿಧಿ:
ರೂ. 80 ಕೋಟಿಗೂ ಮಿಕ್ಕಿ.

ನಮ್ಮಲ್ಲಿ ಖಾತೆ ತೆರೆಯಲು ನಿಮ್ಮ ಬಳಿ
ಇರುವ ಯಾವ ಮೊತ್ತವೂ ಚಿಕ್ಕದಲ್ಲ.

ಬಲ್ಗೇರಿಯಾದ ಷ

ಅವರು ಜನಜೀವನವನ್ನು ಮುಟ್ಟಿಗಣ್ಣ

ಬಲ್ಗೇರಿಯಾದ ಸೋಫಿಯಾದಲ್ಲಿ ಪ್ರತಿ ವರ್ಷವೂ ಒಂದು ರಾಷ್ಟ್ರೀಯ ಕಲಾ ಪ್ರದರ್ಶನಿಯು ಏರ್ಪಡುತ್ತದೆ. ಹೆಚ್ಚಿನ ಪ್ರಾದೇಶಿಕ ನಗರಗಳಲ್ಲಿಯೂ ಇಂತಹುದೇ ಪ್ರದರ್ಶನಿಗಳನ್ನು ಪುಟ್ಟ ಪ್ರಮಾಣದಲ್ಲಿ ವ್ಯವಸ್ಥಿತಗೊಳಿಸಲಾಗುತ್ತಿದೆ ಇವುಗಳ ಒಂದು ಆಕರ್ಷಕ ಭಾಗ—ಮಹಿಳೆಯರ ವಿಭಾಗ. ಇಲ್ಲಿ ಮಹಿಳೆಯರೇ ಬಿಡಿಸಿದ ವರ್ಣ ಚಿತ್ರಗಳು, ರೇಖಾ ಚಿತ್ರಗಳು, ಕಂಚು ಮತ್ತಿತರ ಲೋಹಗಳಿಂದ ತಯಾರಿತವಾದ ಕೆತ್ತನೆಯ ಕೆಲಸಗಳು, ಲಲಿತ ಕಲೆಯ ರೂಪದಲ್ಲಿ ಪ್ರಕಟವಾಗುವ ನಾನಾ ಕಲಾ ಕೃತಿಗಳು ಇರುತ್ತವೆ. ಈ ಕೃತಿಗಳಿಗೆ ಬೇಕಾದ ಮೂಲವು ಪ್ರಕೃತಿದತ್ತವಾದುದೂ ಇರಬಹುದು; ಅಥವಾ ಸಾಮಾಜಿಕ ಜೀವನದಿಂದ ಎರವಲು ತೆಗೆದುಕೊಂಡ ಸನ್ನಿವೇಶಗಳೂ ಇರಬಹುದು; ಜಾನಪದ ಜೀವನಕ್ಕೂ ಇಲ್ಲಿ ಅಪೂರ್ವ ಸ್ಥಾನವಿದೆ. ಇದರಿಂದ ಸ್ಫೂರ್ತಿಗೊಂಡ ಸಾವಿರಾರು ಅಮರಕೃತಿಗಳು ಪ್ರದರ್ಶನಿಯಲ್ಲಿ ಭಾಗವಹಿಸುತ್ತವೆ ಪರಂಪರಾಗತವಾಗಿ ಬಂದ ಪದ್ಧತಿಗಳಿಗೂ ಚಿತ್ರಕಲೆಯಲ್ಲಿ ಸ್ಥಾನವಿದೆ, ಆಧುನಿಕತೆಯ ಗಾಳಿಯ ಸ್ಪರ್ಶವೂ ಇದೆ.

೧

೨

ಚಿತ್ರಕಲೆಯು ಇಂದು ಜನಪ್ರಿಯವಾಗುತ್ತಿದೆ. ಆಧುನಿಕ ಜೀವನದಲ್ಲಿ ಇದರ ಸ್ಥಾನ ಭದ್ರವಾಗುತ್ತ ಬರುತ್ತಿದೆ. ಇಲ್ಲಿ ಬಲ್ಗೇರಿಯಾದ ಮೂವರು ಕುಶಲ ಚಿತ್ರಕಾರರ ಪುಟ್ಟ ಪರಿಚಯವನ್ನು ಮಾಡಿಕೊಡಲಾಗಿದೆ.

ಕಲೀನಾ ತಸೇವಾ

ಕಲೀನಾ ತಸೇವಾ ಎಳೆ ಜನಾಂಗಕ್ಕೆ ಸೇರಿದವಳು. ವ್ಯಕ್ತಿಗತ ಸ್ಪರ್ಶಶಕ್ತಿ ಅತಿ ಸೂಕ್ಷ್ಮ. ಈಕೆಯು ಎಳೆದ ಪ್ರಕಟರೇಖೆಗಳನ್ನು ಮತ್ತು ಬಣ್ಣಗಳು ಕೆನ್‌ವಾಸದ ಮೇಲೆ ಮನೋವೈಜ್ಞಾನಿಕ ಸನ್ನಿವೇಶಗಳನ್ನು ಎತ್ತಿ ತೋರಿಸುತ್ತವೆ. ತಸೇವಾ ಬಳಸುವ ವರ್ಣ ಪದ್ಧತಿ ಮತ್ತು ವಿಷಯ ಜೋಡಣೆಯ ಕ್ರಮಗಳು ಬಲ್ಗೇರಿಯನ್ ಶೈಲಿಗೆ ಸೇರಿದವು.

ಬಲ್ಗೇರಿಯಾ ಜನತೆಯ ಅತೀತ ಕ್ರಾಂತಿಯು ಸ್ಫೂರ್ತಿಯ ಸೆಲೆ. ತಸೇವಾ ಈ ಸೆಲೆಯಿಂದ ಸ್ಫೂರ್ತಿಪಡೆದಿದ್ದಾಳೆ. "ಯಾನೇ ಸಂದಾಸ್ಕಿ" ಮತ್ತು "ಲೇವಸ್ಕಿ ಬಿಫೋರ್ ದಿ ಒಟ್ಟೋಮಾನ್ ಟ್ರಬುನಲ್" ಎಂಬೆರಡು ಚಿತ್ರಗಳಿಗೆ ಬಲ್ಗೇರಿಯನ್ ಜನತೆಯ ಸ್ವಾತಂತ್ರ್ಯ ಹೋರಾಟದ ಘಟನೆಗಳೇ ಮಾತೃಕೆಗಳು. ಈ ಎರಡು ಉತ್ತಮ ಚಿತ್ರಗಳಲ್ಲಿ ಮೊದಲನೆಯದು ಸೋಫಿಯಾದ ಆರ್ಟ್ಸ್ ಗ್ಯಾಲರಿಯಲ್ಲಿಯೂ ಎರಡನೆಯದು ಸೋಫಿಯಾ ಪೀಪಲ್ಸ್ ಕೌನ್ಸಿಲ್‌ನ ಗ್ಯಾಲರಿಯಲ್ಲಿಯೂ ಇದೆ. ಈಕೆಯ ಕೈಯು ಅನೇಕ ಚಿತ್ರಗಳನ್ನು ಎಳೆದಿದ್ದು ಇವುಗಳಲ್ಲಿ ಹೆಚ್ಚಿನವು ಫ್ಯಾಸಿಸಮ್‌ನ ವಿರುದ್ಧ ನಡೆದ ವೀರ ಕದನದ ವಿವಿಧ ಘಟನೆಗಳಿಂದ ಪ್ರೇರಿತವಾಗಿವೆ. ಉದಾಹರಣೆಗೆ 'ಬಾಟಕಿಗೆ ಯಾರೊಬ್ಬರೂ ಮರಳಲಿಲ್ಲ-೧೯೪೪' ಎಂಬ ಚಿತ್ರವು ಅತ್ಯಂತ ಹೃದಯ ಸ್ಪರ್ಶಿಯಾಗಿದೆ. ಇದರ ಹಿನ್ನೆಲೆಯ ಘಟನೆಯನ್ನು ನೆನಪಿಸಿಕೊಂಡಾಗ ಯಾವನಿಗೂ ರೋಮಾಂಚನವಾಗುವುದು.

'ನಾಸೀಗ ನಗರ ಜೀವನವನ್ನು, ಅದರಲ್ಲೂ ಯುವ ಜನಾಂಗವನ್ನು ಬರೆಯುವ ಹಂಚಿಕೆ ಮಾಡುತಿದ್ದೇನೆ' ಎನ್ನುತ್ತಾಳೆ ತಸೇವಾ.

ಕಲೀನಾ ತಸೇವಾ ೧೯೩೭ರಲ್ಲಿ ಸೋಫಿಯಾದಲ್ಲಿಯೇ ಜನಿಸಿದಳು. ಪ್ರೊ|ಡೆಕ್ಕೊ ಉಜನೋವ್ ಮತ್ತು ಪ್ರೊ| ಇಲಿಯಾ ಪೆತ್ರೋವ್‌ರವರ ಮಾರ್ಗದರ್ಶನದಲ್ಲಿ ಎಕೆಡಮಿ ಆಫ್ ಆರ್ಟ್ಸ್‌ನಲ್ಲಿ ಕಲಿತು ಅಲ್ಲಿಯ ಪದವೀಧರೆಯಾದಳು. ಈಕೆಯು ೧೯೬೨ರಿಂದ ಎಲ್ಲ ರಾಷ್ಟ್ರೀಯ ಪ್ರದರ್ಶನಗಳಲ್ಲಿಯೂ ಭಾಗವಹಿಸುತ್ತಿದ್ದಾಳೆ.

ಈ ಕಲಾವಿದೆಯ ಪುಟಾಣಿ ಮಗಳೂ ಹುಟ್ಟು ಕಲಾವಿದೆ. ಈಗಾಗಲೇ ಎಳೆದಿರುವ ರೇಖೆಗಳು ಈಕೆಯು ಮುಂದೆ ಉತ್ತಮ ಕಲಾವಿದೆಯಾಗುವಳೆಂದು ಭವಿಷ್ಯ ನುಡಿಯುತ್ತಿವೆ. ಕಲೀನಾ ಹೇಳುತ್ತಾಳೆ, ಆಕೆಯ ಕಲಾಭಿರುಚಿಯ ಮಾರ್ಗದಲ್ಲಿ ನಾನು ಅಡ್ಡ ಬರುವುದಿಲ್ಲ, ಆಕೆಯ ಮೇಲೆ ಪ್ರಭಾವವನ್ನೂ ಬೀರುವುದಿಲ್ಲ. ಆಕೆಯಲ್ಲಿ ಹುದುಗಿರುವ ಕಲಾಭಿರುಚಿಯು ತನಗೆ ಯುಕ್ತಕಂಡ ರೀತಿಯಲ್ಲೇ ಅಭಿವ್ಯಕ್ತವಾಗಬೇಕು ಕಲಾಕ್ಷೇತ್ರದಲ್ಲಿ ಹೊಸ ಪ್ರಾಣವೂದಬೇಕು.

ತಾಯಿಯ ಆಶೆಆಕಾಂಕ್ಷೆಗಳನ್ನು ಮಗಳು ಸಾಧಿಸುವಳೆಂಬುದು ಎಲ್ಲರ ಅಭಿಲಾಷೆ ತಾಯಿಯನ್ನೂ ಮೀರಿಸಬಲ್ಲ ಈ ಮಗಳು ಆಧುನಿಕಕಾಲದ ಉತ್ತಮ ಕಲಾವಿದೆಯೆನಿಸುವುದರಲ್ಲಿ ಸಂದೇಹವಿಲ್ಲ.

೩

೪

...ಳಾ ಕಲಾವಿದರು

...ತ್ತಾರೆ, ಅದರ ಗೆರೆಯೆಳೆಯುತ್ತಾರೆ.

ಜ್ಲಾತ್ಕಾ ದುಬೋವಾ

ನೆಲಕ್ಕೆ ಹಾಸಿದ ಬಣ್ಣ ಬಣ್ಣದ ಬಟ್ಟೆ—ಚಾಪೆಗಳ ಬೆಳಕು ಚಕಮಕಿಸುತ್ತದೆ ದುಬೋವಾಳ ಕಲಾಗಾರದಲ್ಲಿ. ಆಕೆ ಅವನ್ನೆಲ್ಲಾ ತೋರಿಸುತ್ತ ಹೇಳುತ್ತಾಳೆ: ಇದು ನನ್ನ ಅಜ್ಜ ತಯಾರಿಸಿದ್ದಾರೆ, ಇದು ನನ್ನ ಅಜ್ಜಿ ತಾಯಿಯದು:— ಹೀಗೆ ಹೇಳುವುದರಲ್ಲೂ ಆಕೆಗೆ ತುಂಬು ಅಭಿಮಾನ.

ಜ್ಲಾತ್ಕಾ ದುಬೋವಾಳಿಗೆ ಬರಿಯ ಜಾನಪದ ಕಲೆಯಲ್ಲಿ ಮಾತ್ರ ಅಭಿರುಚಿ-ಆಸಕ್ತಿ. ಆಕೆ ಬಿಡಿಸುವುದಾದರೂ ಇದರಿಂದ ಪ್ರಫುಲ್ಲಿತವಾದ ತನ್ನ ಸ್ಫೂರ್ತಿಯನ್ನು ಅಭಿವ್ಯಕ್ತಿಯನ್ನು ಶತಮಾನಗಳಿಗೆ ಮೊದಲಿನ ಸ್ವಾಧ್ಯಾಯ ನಿರತ ಕಲಾವಿದರು ಮತ್ತು ಅಲಂಕಾರಿಕರು ನಡೆಸಿದಂತೆಯೇ ಚಿಂತನ ಮನನಗಳನ್ನು ಈಕೆ ಮಾಡಿದ್ದಾಳೆ. ಈಕೆಯ ಪದ್ಧತಿ ತೀರ ವ್ಯಕ್ತಿಗತ, ರಚನಾತ್ಮಕ ದೈವ ಶಕ್ತಿಯುಳ್ಳ ಶ್ರೇಷ್ಠ ಕಲಾವಿದನ ವೈಶಿಷ್ಟ್ಯಗಳನ್ನು ಹೊಂದಿರುವುದು.

ದುಬೋವಾ ಕಥೆ ಪುಸ್ತಕಗಳಲ್ಲಿನ ತನ್ನ ರೇಖಾಚಿತ್ರಗಳಿಂದ ತುಂಬ ಪ್ರಸಿದ್ಧಳಾಗಿದ್ದಾಳೆ. 'ಮೊಹ್ಮದ್‌ಸಿನಾಪ್' ಎಂಬ ಬಲ್ಗೇರಿಯನ್ ಕಾದಂಬರಿಕಾರ ವಿಯಾಂಡ್ ಮಿಲ್ ಸ್ಟೊಯನೋವನ ಕೃತಿಯಲ್ಲಿ ಚಿತ್ರಗಳಿಂದ ಈಕೆಯ ಕೀರ್ತಿಲತೆ ಹಬ್ಬತೊಡಗಿತು. ಮುಂದೆ ಇಲಿನ್‌ಪಿಲಿನ್‌ನ ಚಿಕ್ಕಕಾದಂಬರಿ 'ದಿ ಫೇರರ್ ಫ್ಯಾಮಿಲಿ' ಯಲ್ಲಿಯೂ ಹತ್ತಾರು ಮಕ್ಕಳ ಪುಸ್ತಕಗಳಲ್ಲಿಯೂ ಇನ್ನಿತರ ಪ್ರಕಟಣೆಗಳಲ್ಲಿಯೂ ದುಬೋವಾ ಬಿಡಿಸಿದ ಚಿತ್ರಗಳಿಂದ ವಿಶಾಲಕಾಯವಾಗಿ ಬೆಳೆಯಿತು ಈಕೆಯ ಕೀರ್ತಿ, ಯಶಸ್ವೀ ಚಿತ್ರಕಾರಿಯೆಂಬ ಹೆಸರು ತಾನಾಗಿಯೇ ಬಂತು.

ರೊಡೋಪ್ ಪರ್ವತ ಶ್ರೇಣಿಯ ಜನಜೀವನವನ್ನು ದುಬೋವಾ ತುಂಬ ಮೆಚ್ಚುತ್ತಾಳೆ; ಮತ್ತು ಇದರಿಂದಲೇ ಸ್ಫೂರ್ತಿ ಪಡೆದು ಚಿತ್ರ ಬರೆಯುತ್ತಿದ್ದಾಳೆ ೧೯೨೩ರಿಂದ ತೊಡಗಿದ ಫ್ಯಾಸಿಸ್ಟ್ ವಿರೋಧಿ ಚಳುವಳಿಯ ಸಂದರ್ಭ ಸನ್ನಿವೇಶಗಳು ಮತ್ತು ಸಮಾಜವಾದಿ ರಚನಾತ್ಮಕ ಕಾರ್ಯಕ್ರಮಗಳು—ಈಕೆಯ ಚಿತ್ರಕಲೆಯ ಮುಖ್ಯ ವಿಷಯಗಳು.

ಈಕೆಯು ವುಡ್‌ಕಟ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವುದಿಲ್ಲ, ತನ್ನ ರಚನೆಗಳಿಗೆ ಈಕೆ ತುಸು ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡುತ್ತಾಳೆ.

೧೯೨೭ರಲ್ಲಿ ಪಜರ್ಡ್ಜಿಕ್‌ನಲ್ಲಿ ಹುಟ್ಟಿದ ದುಬೋವಾ ಆರ್ಟ್ ಎಕಡೆಮಿಯಲ್ಲಿ ಪ್ರೊ| ಇಲಿಯಾ ಬಿಪ್ಕೊವ್‌ರ ತರಗತಿಯಲ್ಲಿಯೇ ಪದವೀಧರೆಯಾದಳು. ಈಕೆಯು ಎಲ್ಲಾ ರಾಷ್ಟ್ರೀಯ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾಳೆ. ವಿಯನ್ನಾ, ಲಂಡ

(ಹದಿಮೂರನೇ ಪುಟ ನೋಡಿರಿ)

ಚಿತ್ರಗಳು

೧. ಯೌವನ ಕಲಾಗಾರೆ: ಕಲೀನಾತಸೇವಾ

೨. "ಯಾನೇ ಸಂದಾಸ್ಕಿ"—ಕೃತಿ: ಕಲೀನಾ ತಸೇವಾ.

೩. 'ವಿಯೋಗ'—ಕೃತಿಗಾರೆ: ಜ್ಲಾತ್ಕಾ ದುಬೋವಾ (೧೯೨೩ರ ಸಪ್ಟಂಬರದಲ್ಲಿ ನಡೆದ ಫ್ಯಾಸಿಸ್ಟ್ ವಿರೋಧಿ ಹೋರಾಟಕ್ಕೆ ಸಂಬಂಧಿಸಿದ ರೇಖಾಚಿತ್ರ)

೪. 'ಸುಬಂಧ'—ಕೃತಿ: ಫಾನ್ನಿ ಬೋಯದ್ಜೀವಾ.

೫. 'ಉಪಾಹಾರ'—ಕೃತಿ: ಫಾನ್ನಿ ಬೋಯದ್ಜೀವಾ.

ಕೆಂಡದ ಮೇಲೆ ಕುಣಿವ ಬಲ್ಗೇರಿಯಾದ ನರ್ತಕರು

ಮೊಗಲ್ ಚಿತ್ರಕಲೆ

(ಏಳನೇ ಪುಟದಿಂದ)

ಹಾ ಕಾವ್ಯಗಳಿಂದ ಮಾತ್ರವಲ್ಲ ಅನೇಕ ಭಾರತೀಯ ಕಲಾತ್ಮಕ ಮಹಾ ಗ್ರಂಥಗಳಿಂದ ಶೋಭಿಸುತ್ತಿತ್ತು. ಅಕ್ಬರನು ಅನೇಕ ಭಾರತೀಯ ಮಹಾ ಕಾವ್ಯಗಳನ್ನು ಪರ್ಶಿಯನ್ ಭಾಷೆಗೆ ಅನುವಾದಿಸಲು ಕ್ರಮ ಕೈಗೊಂಡನು.

ಅಕ್ಬರನು ಬಾಲ್ಯದಿಂದಲೇ ಪರ್ಶಿಯನ್ ಚಿತ್ರಕಲೆಯ ಬಗ್ಗೆ ಅಪಾರ ಅನುರಾಗವನ್ನು ಹೊಂದಿದ್ದನು. ಆದರೂ ಈ ಚಿತ್ರಕಲೆಯು ಸೂಕ್ಷ್ಮ ವಿನ್ಯಾಸವು ಅವನನ್ನು ತೃಪ್ತಿಪಡಿಸಿರಲಿಲ್ಲ. ತನ್ನ ಸುತ್ತಲೂ ನಿಷ್ಣಾತ ಚಿತ್ರಕಾರರು ಇರುವುದನ್ನು ಕಂಡು ಅಕ್ಬರನು ತನ್ನ ಆಸಕ್ತಿಯ ವೈಶಿಷ್ಟ್ಯಪೂರ್ಣ ಚಿತ್ರಕಲೆಯನ್ನು ಬೆಳೆಯುವಂತೆ ಪ್ರಯತ್ನಿಸಿದನು. ಇದರಿಂದಾಗಿ ಮೊಗಲ್ ಪದ್ಧತಿಯದೇ ಒಂದು ಚಿತ್ರಕಲೆಯು ಮೂಡಿಬರಲು ತುಂಬಾ ಅನುಕೂಲತೆಯಾಯಿತು. ಅಕ್ಬರನು, ತುಂಬಾ ಪ್ರತಿಭಾವಂತರಾದ ಭಾರತೀಯ ಕಲಾವಿದರಿಗೆ ಅತ್ಯಂತ ಶೃಂಗಾರದಿಂದೊಡಗೂಡಿದ ಪರ್ಶಿಯನ್ ಪದ್ಧತಿಯ ಚಿತ್ರಕಲೆಯು ಸರಿಹೊಂದುವುದಿಲ್ಲೆಂದು ಬಗೆದನು.

"ಹಮ್ಜಾ ನಾಮಾ"

ವರ್ಣ ಚಿತ್ರಕಲೆಯ ಬಗೆಗೆ ತನ್ನ ಅಭಿಪ್ರಾಯಗಳನ್ನು ಪ್ರಕಟಪಡಿಸುವ ಉದ್ದೇಶದಿಂದ ೧೫೭೦ರಲ್ಲಿ ಅಕ್ಬರನು, ಪ್ರವಾದಿ ಮೊಹಮ್ಮದರ ತಕ್ಕಂದಿರಾದ ಹಮ್ಜಾರವರ ಸಾಹಸವನ್ನು ವಿವರಿಸುವ ಚಿತ್ರಗ್ರಂಥವನ್ನು ೧೨ ಸಂಪುಟಗಳಲ್ಲಿ ರಚಿಸಲು ಆಜ್ಞಾಪಿಸಿದನು. ಅತ್ಯಂತ ಮಹತ್ವಪೂರ್ಣವಾದ ಈ ಗ್ರಂಥದ ಸುಮಾರು ೨೦೦ ಚಿತ್ರಗಳು ಈಗ ಉಳಿದಿವೆ. ಈ ಗ್ರಂಥದಲ್ಲಿನ ಚಿತ್ರಗಳನ್ನು ಮೀರ್ ಸೈಯದ್ ಆಲಿ ಹಾಗೂ ಅಬದ್-ಉಸ್-ಸಮದ್ ಎಂಬ ಖ್ಯಾತ ಚಿತ್ರಕಾರರು ಬರೆದರೆಂದೂ ಹಾಗೂ ರಾಜಸಭೆಯ ಸುಮಾರು ಐವತ್ತು ಕಲಾವಿದರು ಈ ಚಿತ್ರಗಳಿಗೆ ಬಣ್ಣ ತುಂಬಿದರೆಂದು ಇತ್ತೀಚಿನ ಪುರಾವೆಗಳಿಂದ ತಿಳಿದು ಬರುವುದು.

ಹಮ್ಜಾದ ಚಿತ್ರಗಳನ್ನು ನೋಡಿದರೆ ನಾಟಕೀಯವಾದ ಕಲಾವಿನ್ಯಾಸ, ದಟ್ಟವಾದ ಬಣ್ಣಗಳ ಬಳಕೆ ಹಾಗೂ ನೈಸರ್ಗಿಕ ವಾಸ್ತು ಶಿಲ್ಪಗಳ ಬಗ್ಗೆ ಅದ್ಭುತತಿಳುವಳಿಕೆ ಪ್ರಕಟವಾಗುವುದು. ಈ ಚಿತ್ರಗಳಲ್ಲಿ ಸಹಜವಾಗಿಯೇ ಪರ್ಶಿಯನ್ ಕಲೆಯ ಪ್ರಭಾವ ಎದ್ದು ಕಾಣುವುದು. ಈ ಹೊಸ ಮೊಗಲ್ ಚಿತ್ರಕಲಾ ಶೈಲಿಯಲ್ಲಿ ಅನೇಕ ಹಳೆಯ ಮೂಲ ಅಂಶಗಳೊಂದಿಗೆ ಕಾಶ್ಮೀರ ಹಾಗೂ ನೇಪಾಳಗಳ ಚಿತ್ರಕಲೆಯ ಅಂಶಗಳನ್ನು ಅಳವಡಿಸಿಕೊಳ್ಳಲಾಯಿತು. ೧೫೮೦ರಲ್ಲಿ ಚಿತ್ರಿತವಾದ 'ತೂಟಿ ನಾಮಾ'ದಿಂದ, ಮೊಗಲ್ ಚಿತ್ರಕಲೆಯ ಬೆಳವಣಿಗೆಯ ಒಂದು ವೈಶಿಷ್ಟ್ಯ ಪ್ರಕಟವಾಗುವುದು. ಈಗ ಈ ಗ್ರಂಥವು ಕ್ಲೀವ್‌ಲೆಂಡ್ ವಸ್ತು ಸಂಗ್ರಹಾಲಯದಲ್ಲಿ. ಈ ಗ್ರಂಥದ ಚಿತ್ರಗಳನ್ನು ಬರೆಯುವಾಗ ಹಳೆಯ ಭಾರತೀಯ, ೧೬ನೇ ಶತಮಾನದ ಪ್ರಥಮಾರ್ಧದಲ್ಲಿದ್ದ ಸುಲ್ತಾನರ ಕಾಲದ, ಹಾಗೂ ಪರ್ಶಿಯನ್ ಚಿತ್ರಕಲಾ ಶೈಲಿಯನ್ನೊಳಗೊಂಡು ಅನೇಕ ಇಸ್ಲಾಂ ಚಿತ್ರ ಕಲೆಗಳ ಸಮ್ಮಿಶ್ರ ಪದ್ಧತಿಗಳನ್ನು ಬಳಸಲಾಯಿತು.

ಸೂಕ್ಷ್ಮಕಾರದ ಕಲಾ ಕೌಶಲ್ಯ

ಈಗ ದೊರೆತಿರುವ ಪುರಾವೆಗಳ ಮೇಲಿಂದ, ಮೊಗಲ್ ಚಿತ್ರಕಲೆಯು ಯಾವಾಗಿನಿಂದ ರೂಪುಗೊಂಡಿತೆಂದು ನಿಶ್ಚಿತವಾಗಿ ಹೇಳಲು ಬರುವಂತಿಲ್ಲ. ಆದರೆ ೨೫ ವರ್ಷಗಳ ಸತತ ಹಾಗೂ ಪ್ರಜ್ಞಾಪೂರ್ಣ ಪ್ರಯತ್ನಗಳಿಂದ ಅನೇಕ ಕಲಾವಿದರು ಈ ಹೊಸ ಚಿತ್ರ ಕಲಾಪದ್ಧತಿಯ ಸೂಕ್ಷ್ಮಕಾರದ ಕಲಾಕೌಶಲ್ಯದ ಒಂದು ಸುಂದರ ಶೈಲಿಯನ್ನು ಪ್ರಗತಿಪರವಾಗಿ ಬೆಳೆಸಿದರು. ಈ ಹೊಸಕಲೆಯ ಬೆಳವಣಿಗೆಯದೃಷ್ಟಿಯಿಂದ ಸ್ವತಃ ಅಕ್ಬರನೇ ಮೇಲ್ವಿಚಾರಣೆ ವಹಿಸುತ್ತಿದ್ದನಲ್ಲದೆ ನಿಷ್ಣಾತರಾದ ಪ್ರಗತಿಪರ ಕಲಾವಿದರಿಗೆ ಮಾನ ಸನ್ಮಾನಗಳನ್ನು ನೀಡಿ ಅವರನ್ನು ಪ್ರೋತ್ಸಾಹಿಸುತ್ತಿದ್ದನು.

೧೫೭೦ರಲ್ಲಿ ಪ್ರಕಟವಾದ ಅನ್ವರೀ ದಿವಾನ್ ಎಂಬ ಪುಸ್ತಕದಲ್ಲಿ ಉತ್ಕೃಷ್ಟ ತರಗತಿಯ ಕಾಗದಗಳನ್ನು ಉಪಯೋಗಿಸಲಾಗಿದೆಯಲ್ಲದೇ ಆದರ ಪುಟಗಳಲ್ಲಿ ಅನೇಕ ಪ್ರಾಣಿಗಳ, ಪಕ್ಷಿಗಳ ಹಾಗೂ ಹೂಗಳ ಸುಂದರ ಚಿತ್ರಗಳನ್ನು ಬರೆಯಲಾಗಿದ್ದು ಅವುಗಳನ್ನು ಚಿನ್ನದ ವರ್ಣಗಳಿಂದ ತುಂಬಲಾಗಿದೆ. ಈ ವೈಯಕ್ತಿಕ ಶೈಲಿ ಪ್ರಧಾನವಾದ ಚಿತ್ರಕಲೆಯು ಭಾರಿ ಪ್ರಗತಿಯನ್ನು ಸಾಧಿಸಿತು. ದಾಸವಂತ್, ಬಾಸ್ವಾನ್, ಫರೂತ್‌ಬೇಗ್ ಮುಂತಾದ ಕಲಾವಿದರು ಈ ನವೀನ ರೀತಿಯ ಚಿತ್ರಕಲೆಗಾಗಿ ಶ್ರಮಿಸಿದರು.

ಸಚಿತ್ರ ಇತಿಹಾಸಗಳು

ಸಚಿತ್ರ ಇತಿಹಾಸಗಳನ್ನೂ ಅಕ್ಬರನು ಬರೆಯಿಸಿದನು. ಅವು ಈಗಲೂ ಲಭ್ಯವಾಗಿವೆ. ಸಚಿತ್ರವಾದ ಬಾಬರನ ಆತ್ಮ ಚರಿತ್ರೆ ಹಾಗೂ "ತಾರೀಖ—ಏ ಖಾನದಾನ್—ಎ—ತೈಮೂರಿಯಾ"- ಗ್ರಂಥಗಳು ಮೊಗಲರ ಇತಿಹಾಸದ ಮೇಲೆ ಮಹತ್ವಪೂರ್ಣ ಬೆಳಕು ಚೆಲ್ಲುವವು. ಇದಕ್ಕಿಂತಲೂ ಮಹತ್ವಪೂರ್ಣ ಗ್ರಂಥವೆಂದರೆ ಸೌಥ್ ಕೆನ್ಸಿಂಗ್‌ಟನ್ ವಸ್ತು ಸಂಗ್ರಹಾಲಯದಲ್ಲಿರುವ ಅಕ್ಬರ್ ನಾಮಾ ಅಂದರೆ ಅಕ್ಬರನ ಇತಿಹಾಸ ಎಂಬ ಗ್ರಂಥವು ಸೂಕ್ಷ್ಮಕಾರದ ಕಲಾ ಕೌಶಲ್ಯದ ಪದ್ಧತಿಯಲ್ಲಿ ಅನೇಕ ಪ್ರತಿಭಾಪೂರ್ಣ ಕಲಾವಿದರು ಆದರ ಒಂದೊಂದು ಶಾಖೆಯಲ್ಲಿ ಪರಿಣತಿಯನ್ನು ಪ್ರಕಟಿಸಿದರು. ಈ ಪದ್ಧತಿ ಇದ್ದಾಗಲೂ ಅಕ್ಬರ್ ನಾಮಾ ಗ್ರಂಥದಲ್ಲಿರುವ ಚಿತ್ರಗಳು ಸಾಮ್ರಾಟನ ಜೀವನದ ಅನೇಕ ಘಟನಾವಳಿಗಳನ್ನು ನಿರೂಪಿಸುವ ಒಂದು ಸುಂದರ ಸಚಿತ್ರ ಗ್ರಂಥವಾಗಿದೆ. ಅಲ್ಲದೆ ಕಲಾತ್ಮಕ ದೃಷ್ಟಿಯಿಂದ ವಿನ್ಯಾಸಪೂರ್ಣವಾಗಿದೆ.

ಅಕ್ಬರನ ಹಿಂದೂ ಧರ್ಮ ಪ್ರಿಯತೆಯು ಲೋಕ ವಿಖ್ಯಾತವಾಗಿದೆ. ಭಾರತೀಯ ಸಂಸ್ಕೃತಿಯನ್ನು ಅರಿತುಕೊಳ್ಳಲು ಅಕ್ಬರನು, ರಾಮಾಯಣ, ಮಹಾಭಾರತ ಮತ್ತು ಹರಿವಂಶವನ್ನು ಸಚಿತ್ರವಾಗಿ ಪರ್ಶಿಯನ್ ಭಾಷೆಗೆ ತರ್ಜುಮೆಮಾಡಲು ಆಜ್ಞಾಪಿಸಿದನು. ಇದರಿಂದಾಗಿ ಚಿತ್ರಕಲೆಯು ಹೊಸ ರೂಪವನ್ನು ತಾಳಲು ಅನುಕೂಲವಾಯಿತಲ್ಲದೇ ಆ ಕಾಲದ ಹಿಂದೂ ಜೀವನಪದ್ಧತಿ ಹಾಗೂ ರೀತಿ ನೀತಿಗಳು ಸ್ಫುಟವಾಗಿ ಇಂದಿಗೂ ಪ್ರಕಟಗೊಳ್ಳಲು ಅನುಕೂಲವಾಯಿತು.

ಮೊಗಲ್ ಚಿತ್ರಕಲೆಯ ಇತಿಹಾಸವನ್ನು ಕುರಿತು ಹೇಳುವುದೆಂದರೆ, ಜಹಾಂಗೀರನು ಅಕ್ಬರನ ಯೋಗ್ಯ ಉತ್ತರಾಧಿಕಾರಿಯಾಗಿದ್ದನು, ಅವನು ತನ್ನ ತಂದೆಯ ಚತುರ ರಾಜನೀತಿಯನ್ನೇ ಮುಂದುರಿಸಿಕೊಂಡು ಬಂದನು. ಇದರಿಂದ ಜಹಾಂಗೀರನಿಗೆ ಸೌಂದರ್ಯೋಪಾಸನೆಯಲ್ಲಿ ಮತ್ತು ಸುಖ ಸಂತೋಷಗಳಲ್ಲಿ ಕಾಲ ಕಳೆಯಲು ಹೆಚ್ಚು ಅನುಕೂಲವಾಯಿತು. ಜಹಾಂಗೀರನ ಜೀವನ ಚರಿತ್ರೆಯು ಅವನ ವೈವಿಧ್ಯಪೂರ್ಣ ವ್ಯಕ್ತಿತ್ವ ಹಾಗೂ ಮನುಷ್ಯರು ಮತ್ತು ಘಟನೆಗಳ ವಿಮರ್ಶಾತ್ಮಕ ದೃಷ್ಟಿಯ ಮೇಲೆ ಬೆಳಕು ಚೆಲ್ಲುತ್ತದೆ. ಪಶು ಪಕ್ಷಿಗಳ ವಿಷಯದಲ್ಲಿ ಜಹಾಂಗೀರನಿಗೆ ಅಪಾರ ಪ್ರೀತಿ ಇತ್ತು. ಪ್ರಕೃತಿ ಸೌಂದರ್ಯದಿಂದ ಅವನು ಮಂತ್ರ ಮುಗ್ಧನಾಗುತ್ತಿದ್ದನು. ತಂದೆಯಾದ ಅಕ್ಬರನಂತೆ ಜಹಾಂಗೀರನೂ ಲಲಿತ ಕಲೆಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದನು. ವರ್ಣ ಚಿತ್ರ ಕಲೆ, ಜಹಾಂಗೀರನ ಮೆಚ್ಚುಗೆಯ ಹವ್ಯಾಸವಾಗಿತ್ತು.

ಪಟ್ಟಕ್ಕೆ ಬರುವ ಮೊದಲು ರಾಜ ಕುಮಾರ ಸಲೀಮನು, ಅನೇಕ ಕಲಾವಿದರಿಗೆ ಆಶ್ರಯ ನೀಡಿದ್ದನು. ಜಹಾಂಗೀರನು ಮೊಗಲ ಸಾಮ್ರಾಜ್ಯದ ಚಕ್ರವರ್ತಿಯಾಗಿ, ತನ್ನ ತಂದೆಯ ಕಲಾ ವೈಭವಕ್ಕೆ ಉತ್ತರಾಧಿಕಾರಿಯಾದನು. ಪ್ರಕೃತಿ ಸೌಂದರ್ಯ ಪ್ರಧಾನವಾದ ಕಲೆಗೆ ಜಹಾಂಗೀರನು ವಿಶೇಷವಾಗಿ ಉತ್ತೇಜನ ನೀಡುತ್ತಿದ್ದನು. ಅವನ ಆಳ್ವಿಕೆಯಲ್ಲಿ ದರ್ಬಾರಿನ ಜೀವನವನ್ನು ಕುರಿತು ಚಿತ್ರಗಳನ್ನು ಬರೆಯಲಾಗುತ್ತಿತ್ತು. ಅಪರೂಪವಾಗಿದ್ದ ಹಾಗೂ ತಮ್ಮ ವರ್ಣ ವೈವಿಧ್ಯದಿಂದ ತನ್ನ ಮನಸ್ಸನ್ನು ಆಕರ್ಷಿಸಿದ ಪಶು-ಪಕ್ಷಿಗಳ ಚಿತ್ರಗಳನ್ನು ಬರೆಯುವಂತೆ ಜಹಾಂಗೀರನು ಕಲಾವಿದರಿಗೆ ಆಜ್ಞಾಪಿಸುತ್ತಿದ್ದನು. ಉಸ್ತಾದ್ ಮನಸೂರ್, ಜಹಾಂಗೀರನ ಕಾಲದಲ್ಲಿ ಪಶು-ಪಕ್ಷಿಗಳ ಖ್ಯಾತ ಕಲಾವಿದನಾಗಿದ್ದನು.

ಚಿತ್ರಗಳ ಅಂದಿನ ಸುಂದರ ಅಲಂಕಾರ ಬೇಟೆಯ ದೃಶ್ಯಗಳು ಪಶು-ಪಕ್ಷಿಗಳು, ವನಭೋಜನ, ಸಂಗೀತ ಮತ್ತು ನೃತ್ಯದ ದೃಶ್ಯಗಳು ಮೊಗಲ್ ಚಿತ್ರಕಲೆಯ ವಿಶೇಷ ಆಕರ್ಷಣೆಯಾಗಿವೆ. ಯೂರೋಪಿಯನ್ ಚಿತ್ರಕಲೆಯು ಜಹಾಂಗೀರನ ಮನಸೆಳೆಯಿತು. ಪ್ರಕೃತಿಯ ಚಿತ್ರಣದಲ್ಲಿ ಕಂಡು ಬರುವ ಸಹಜತೆಯಲ್ಲಿ ಸಮಕಾಲಿನ ಯೂರೋಪಿಯನ್ ಚಿತ್ರಕಲೆಯ ಪ್ರಭಾವವನ್ನು ಕಾಣಬಹುದು.

ಜಹಾಂಗೀರನ ಭಾರತದಲ್ಲಿ ಚಿತ್ರಕಲೆಯು, ಆಗಲೇ, ಶಿಥಿಲಗೊಂಡಿತ್ತು. ಅನೇಕ ಮೊಗಲ ಶ್ರೀಮಂತರು, ರಜಪೂತ ಸರದಾರರು, ಮತ್ತು ವ್ಯಾಪಾರಿಗಳು ಮೊಗಲ ಕಲಾ ಶೈಲಿಯಲ್ಲಿ ಪ್ರವೀಣರಾದ ಕಲಾವಿದರನ್ನು ತಮ್ಮ ಆಸ್ಥಾನಗಳಲ್ಲಿ ನೇಮಿಸಿಕೊಂಡರು. ಅವರ ಕಲಾಕೃತಿಗಳು ಸಾಮಾನ್ಯ ತರಗತಿಯದಾಗಿದ್ದರೂ, ಅವರು ಜನಪ್ರಿಯವಾದ ಹೊಸ ಮೊಗಲ ಚಿತ್ರಕಲೆಗೆ ಅಡಿಪಾಯ ಹಾಕಿದರು. ಈ ಹೊಸ ಚಿತ್ರಕಲೆಯ ತಂತ್ರವು ಮೂಲತಃ ಮೊಗಲರದೇ ಆಗಿದ್ದರೂ, ರಾಜಾಸ್ಥಾನಿ ಕಲಾ ಶೈಲಿಯನ್ನು ಯಥೇಷ್ಟವಾಗಿ ಬಳಸಿಕೊಳ್ಳಲಾಗಿತ್ತು.

ಅಂತ್ಯದ ಆರಂಭ

ಷಹಜಹಾನನ ಕಾಲವು, ಶಿಲ್ಪಿಗಳು ಅಮೃತ ಶಿಲೆಯಲ್ಲಿ ವಿಶ್ವಮೋಹಕವಾದ ಸ್ಮಾರಕಗಳನ್ನು ನಿರ್ಮಿಸಿದ ಕಾಲ. ಶಿಲ್ಪ ಕಲಾವಿದರು, ಅಕ್ಕಸಾಲಿಗರು, ಕೈ ಕುಸುರಿನ ಕಲಾವಿದರು, ಜಹಾಂಗೀರನ ಆಳ್ವಿಕೆಯಲ್ಲಿ ಹೆಚ್ಚು ಉತ್ತೇಜನ ಪಡೆದರು. ಸಾಮ್ರಾಟನಿಗೆ ಸಹಜವಾದ ಈ ಎಲ್ಲ ವೈಭವಗಳಿದ್ದಾಗಲೂ, ಚಿತ್ರಕಲೆಯ ಅಂತ್ಯ ಆಗಲೇ ಆರಂಭವಾಗಿತ್ತು. ಷಾಜಹಾನನಿಗೆ ವರ್ಣ ಚಿತ್ರಕಲೆಯಲ್ಲಿ ಅಷ್ಟೊಂದು ಆಸಕ್ತಿಯಿರಲಿಲ್ಲವಾದರೂ ಅದರ ಅಭಿವೃದ್ಧಿಗೆ ಅವನು ಅತಂಕವೊಡ್ಡಲಿಲ್ಲ.

ಷಹಜಹಾನ್ ನಾಮಾದ ಚಿತ್ರಗಳಲ್ಲಿ ಮೊಗಲ ದರಬಾರಿನ ದೃಶ್ಯಗಳು, ಬೇಟೆಯ ದೃಶ್ಯಗಳು, ಮೆರವಣಿಗೆಯ ಮತ್ತು ಯುದ್ಧದ ದೃಶ್ಯಗಳನ್ನು ನೋಡಬಹುದಾಗಿದೆ. ಷಹಜಹಾನನ ಕಾಲದ ಚಿತ್ರಕಲೆಯು ತಾಂತ್ರಿಕವಾಗಿ ಪರಿಪೂರ್ಣಗೊಂಡಿತ್ತು. ಮೊಗಲ ಚಿತ್ರಕಲೆಯ ಉನ್ನತಿಯು ತುತ್ತತುದಿಯನ್ನು ಮುಟ್ಟಿತ್ತು. ಅವನತಿಯೂ ಸನ್ನಿಹಿತವಾಗಿತ್ತು.

ಕುಶಾಗ್ರಮತಿಯಾದ, ಔರಂಗಜೇಬನು ಧಾರ್ಮಿಕ ಅಸೂಯೆಯಿಂದ ತಾನು ಗಾಢವಾಗಿ ಪ್ರೀತಿಸುತ್ತಿದ್ದ ಮೊಗಲ ಸಾಮ್ರಾಜ್ಯದ ಸಮಾಧಿಯನ್ನು ತೋಡಿದನು. ತನ್ನ ಆಳ್ವಿಕೆಯ ಆರಂಭದಲ್ಲಿ ಅವನು ವರ್ಣಚಿತ್ರಕಲಾವಿದರು, ಮತ್ತು ಸಂಗೀತಗಾರರಿಗೆ ಕುಶಲ ಕಲಾವಿದರಿಗೆ ಆಶ್ರಯ ನೀಡಿದ್ದನು. ಔರಂಗಜೇಬನು, ಸ್ವತಃ ಚಿತ್ರಗಳಿಗೆ ಬಣ್ಣ ಹಾಕುವಲ್ಲಿ ಪ್ರವೀಣನಾಗಿದ್ದ ಆದರೆ ೧೬೬೮ರ ನಂತರ ಅವನ ಮನಸ್ಸು ಬದಲಾಯಿತು. ಮೊಗಲ ಚಿತ್ರಕಲಾ ಭಂಡಾರವನ್ನು ಮುಚ್ಚಿಸಿದನು. ದರಬಾರಿನಲ್ಲಿದ್ದ ಸಂಗೀತ ವಿದ್ವಾಂಸರನ್ನು ಮತ್ತು ಕವಿಗಳನ್ನು ಹೊರಗೆ ಹಾಕಿದನು.

ದರಬಾರಿನ ಆಶ್ರಯವನ್ನು ಕಳೆದುಕೊಂಡ ಕಲಾವಿದರು, ಮಾರುಕಟ್ಟೆಯ ಅಭಿರುಚಿಗೆ ತಕ್ಕಂತೆ ಕೀಳುಮಟ್ಟದ ವರ್ಣಚಿತ್ರ ಕಲಾಕೃತಿಗಳನ್ನು ತಯಾರಿಸತೊಡಗಿದರು. ಫಲಸ್ವರೂಪವಾಗಿ, ಅತ್ಯಂತ ಜಾಗರೂಕತೆಯಿಂದ ಬೆಳೆಸಿಕೊಂಡು ಬಂದಿದ್ದ ಮೊಗಲರ ಚಿತ್ರಕಲಾ ಶೈಲಿಯ ಕ್ಷಿಪ್ರ ಅವನತಿ ಆರಂಭವಾಯಿತು. ವೃದ್ಧನಾದ ಚಕ್ರವರ್ತಿ ಔರಂಗಜೇಬನಿಗೆ ತನ್ನ ಸರದಾರರ ಸಹಜವಾದ ಅಭಿರುಚಿಗಳನ್ನು ಪ್ರತಿಬಂಧಿಸುವುದು ಸಾಧ್ಯವಾಗಲಿಲ್ಲ. ಈ ಸರದಾರರು ತಮ್ಮ ತಮ್ಮ

(ಹದಿಮೂರನೇ ಪುಟ ನೋಡಿರಿ)

ಭಾರತವು ಅಣ್ವಸ್ತ್ರಗಳನ್ನು ತಯಾರಿಸಬೇಕೆ?

(ಆರನೇ ಪುಟದಿಂದ)

ನ್ನೇ ಬಯಸುವರು. ಆದರೆ ಶಾಂತಿಯನ್ನು ಸಾಧಿಸುವ ಮಾರ್ಗ ಯಾವುದು? ಅದು ಅರಿತಿಲ್ಲ.

ನಮ್ಮೊಡನೆ ಯಾವರೀತಿಯ ಶಸ್ತ್ರಾಸ್ತ್ರಗಳೂ ಇಲ್ಲದೆ ಕೇವಲ ಶಾಂತಿ ಮತ್ತು ಅಹಿಂಸೆಯ ಉದಾತ್ತ ತತ್ವಗಳನ್ನು ಮುಂದಿಟ್ಟುಕೊಂಡು "ರಾಮರಾಜ್ಯ" ದ ಕನಸನ್ನು ಕಾಣುತ್ತಿದ್ದರೆ ನಮ್ಮ ದೇಶವು ಭದ್ರವಾಗಿ ಉಳಿಯಬಲ್ಲುದೆ? ನಮ್ಮ ದೇಶದ ನಾಗರೀಕರಾದ ನಾವು ಸುಖದಿಂದಿರಬಹುದೆ? ಶಾಂತಿ ಮತ್ತು ಅಹಿಂಸೆಯ ಪ್ರತಿಪಾದಕರಾದ ನಮ್ಮ ನಾಯಕರನ್ನು ಇನ್ನೂ ಕೆಲವು ಕಾಲ ಉಳಿಯಬಹುದೆ? ಇವೆಲ್ಲ ಪ್ರಶ್ನೆಗಳಿಗೂ "ಇಲ್ಲ" ಎಂಬ ಒಂದೇ ಉತ್ತರವನ್ನು ಕೊಡಬೇಕಷ್ಟೆ. ನಾವು ಶಸ್ತ್ರಾಸ್ತ್ರಗಳಿಲ್ಲದೆ ಶಾಂತಿ ಹಾಗೂ ಅಹಿಂಸೆಯನ್ನು ಸಾರುತ್ತಿದ್ದರೆ ಅದು ನಮ್ಮ ಅಸಾಮರ್ಥ್ಯವನ್ನು ವ್ಯಕ್ತಪಡಿಸುತ್ತದೆ. ನಮ್ಮೊಡನೆ ಶಸ್ತ್ರಾಸ್ತ್ರಗಳಿಲ್ಲದಿದ್ದುದರಿಂದಾಗಿ ನಾವು ಶಾಂತಿಯನ್ನು ಬಯಸುವುದೇ ವಿನಾ ನಿಜವಾದ ಅಹಿಂಸೆ ಮತ್ತು ಶಾಂತಿ ಪ್ರಿಯತೆಯಿಂದಲ್ಲ ಎಂದು ಪ್ರಪಂಚದ ಇತರ ರಾಷ್ಟ್ರಗಳು ಹೇಳಲು ಅವಕಾಶವಿದೆ. ನಾವು ಈ ರೀತಿಯ ಅಪಪ್ರಚಾರಗಳಿಗೆ ಎಡೆಗೊಡಬಾರದು. ಮಾತ್ರವೇ ಅಲ್ಲ ನಮ್ಮ ದೇಶದ ರಕ್ಷಣೆಯ ಹಿತದೃಷ್ಟಿಯಿಂದ ನಾವು ಅಣ್ವಸ್ತ್ರಗಳನ್ನು ತಯಾರಿಸಲೇ ಬೇಕು. ತಮ್ಮ ರಟ್ಟೆಯಲ್ಲಿ ಬಲವಿದ್ದು ತರುವಾಯ ನಾವು ಶಾಂತಿಗಾಗಿ ಹೋರಾಡಿ ವಿಶ್ವಶಾಂತಿಯನ್ನು ಸ್ಥಾಪಿಸಲು ಸರ್ವ ಪ್ರಯತ್ನಗಳನ್ನು ಮಾಡಿದಾಗ ಅದು ನಮ್ಮ ಹಿರಿತನವನ್ನು ಪ್ರತಿಬಿಂಬಿಸಬಲ್ಲುದು.

ಪ್ರಪಂಚದ ಇತರ ರಾಷ್ಟ್ರಗಳಲ್ಲಿ ಈಗಾಗಲೇ ಸಾಕಷ್ಟು ಅಣ್ವಸ್ತ್ರಗಳು ಇವೆ. ಇಂತಹ ಸಂದರ್ಭದಲ್ಲಿ ನಾವೂ ಅವುಗಳನ್ನು ತಯಾರಿಸುವುದರಲ್ಲೇ ಮಗ್ನರಾದರೆ ಅದು ತೃತೀಯ ಜಾಗತಿಕ ಯುದ್ಧಕ್ಕೆ ನಾಂದಿಯಾಗಲಾರದೇ? ಜಗತ್ತಿನ ಸರ್ವನಾಶಕ್ಕೆ ಕಾರಣೀಭೂತವಾಗಲಾರದೇ? ಎನ್ನುವುದು ಇನ್ನೂ ಕೆಲವರ ವಾದ. ಈ ರೀತಿಯಾಗಿ ವಾದಿಸುವವರ ಸಂಖ್ಯೆ ನಮ್ಮ ಐವತ್ತು ಕೋಟಿ ಜನರಲ್ಲಿ ನಿರ್ಲಕ್ಷ್ಯವಾದ ಒಂದು ಅಂಗ. ಆಧುನಿಕ ಪರಿಸ್ಥಿತಿಯ ಅರಿವೆಯು ಅವರಿಗೆ ಇಲ್ಲದಿರುವುದೇ ಇದಕ್ಕೆ ಕಾರಣ. ಅವರಿಗೆ ಈ ದೃಷ್ಟಿಯಿಂದ ಉತ್ತಮ ವಿದ್ಯಾಭ್ಯಾಸ ದೊರಕಬೇಕು. ಅದು ಜಾಗತಿಕ ಯುದ್ಧದ ಬದಲು ಜಾಗತಿಕ ಶಾಂತಿಗೆ ನಾಂದಿಯಾಗಬಹುದು. ಇಂತಹ ಯುದ್ಧ ರಹಿತವಾದ ಪ್ರಪಂಚವು ಮಾನವನ ಜೀವನಕ್ಕೆ ಅತ್ಯುತ್ತಮ ಸಾಧನ. ಅಣ್ವಸ್ತ್ರಗಳ ಕುರಿತಾಗಿ ಮಾತನಾಡುವಾಗ ಕೆಲವರು ಮುಂದಾಲೋಚನೆಯಿಲ್ಲದೆ ಅವುಗಳು ಮಾನವ ಜನಾಂಗಕ್ಕೇ ಕೇಡುಕನ್ನು ಉಂಟುಮಾಡುತ್ತವೆ ಎಂಬ ನಿರ್ಣಯಕ್ಕೆ ಬರುತ್ತಾರೆ. ಇಂದು ಎಲ್ಲಾ ದೇಶಗಳೂ ಅಣ್ವಸ್ತ್ರಗಳ ತಯಾರಿಯಲ್ಲಿ ನಿರತರಾದರೆ ಎಲ್ಲಾ ದೇಶಗಳೊಳಗೆ ಒಂದು ರೀತಿಯ ಸಮತ್ವವು ಉಂಟಾಗುತ್ತದೆ. ಹೇರಳವಾದ ಶಸ್ತ್ರಾಸ್ತ್ರಗಳಿದ್ದರೂ ಅವುಗಳನ್ನು ಸ್ಫೋಟಿಸುವಂತಿಲ್ಲ. ಇಂದು ಅಣ್ವಸ್ತ್ರಗಳು ಒಂದೇ ದೇಶದ ಹಿಡಿತದಲ್ಲಿರುತ್ತಿದ್ದರೆ ಆ ದೇಶವು ಇಡಿ ಜಗತ್ತಿನ ಇತರ ದೇಶಗಳನ್ನು ನೆಲಸಮಮಾಡಿ ಬಿಡುತ್ತಿತ್ತು. ಯಾವಾಗಲೂ ಸಮಬಲರಲ್ಲಿ ಯುದ್ಧವಾಗಲಾರದು. ನಾವು ಅಣ್ವಸ್ತ್ರಗಳನ್ನು ತಯಾರಿಸಬೇಕಾದುದು ಇತರ ದೇಶಗಳನ್ನು ಆಕ್ರಮಿಸಲು ಅಲ್ಲ, ಬದಲು ಇತರರು ನಮ್ಮನ್ನು ಆಕ್ರಮಿಸದಂತೆ ಇರಲು. ಅಹಿಂಸೆಯ ಹಾಗೂ ಶಾಂತಿಯ ಉದಾತ್ತ ತತ್ವಗಳು ಶಸ್ತ್ರಾಸ್ತ್ರಗಳ ಇರುವಿಕೆಯ ಮೇರೆ ಹೊಂದಿಕೊಂಡಿಲ್ಲ, ಬದಲು ಅವುಗಳ ಪ್ರಯೋಗದ ಮೇಲೆ ಹೊಂದಿಕೊಂಡಿದೆ. ರಕ್ಷಣೆಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ತಯಾರಿಸಿ ತರುವಾಯ ಶಾಂತಿ ಹಾಗೂ ಅಹಿಂಸೆಗಾಗಿ ಹೋರಾಡಿದರೆ ಅದು ನಮ್ಮ ಹಿರಿತನವನ್ನು ತೋರಿಸುತ್ತದೆ.

ನಾವು ಅಣ್ವಸ್ತ್ರಗಳನ್ನು ಉಪಯೋಗಿಸಕೂಡದು ಎಂಬ ಮಾತ್ರಕ್ಕೆ ಅವನ್ನು ತಯಾರಿಸಬೇಕೆ? ಎನ್ನುವ ಪ್ರಶ್ನೆ ಸಹಜವಾಗಿ ಮೂಡಬಹುದು. ಅದು ಹಣದ ವ್ಯರ್ಥವಲ್ಲವೆ? ಎನ್ನುವುದು ಕೆಲವರ ವಾದ. ರೋಗಿಗೆ ಉತ್ತಮ ಔಷಧ, ವಿಟಾಮಿನ್‌ಗಳನ್ನೊಳಗೊಂಡ ಉತ್ತಮ ಆಹಾರದ ಆವಶ್ಯಕತೆಯಿದ್ದರೆ, ಒಂದು ದೇಶಕ್ಕೆ ಯುದ್ಧ ಸಾಮಗ್ರಿಗಳ ಆವಶ್ಯಕತೆಯಿದೆ. ದೇಶವನ್ನು ರಕ್ಷಿಸಬಲ್ಲ ಅಣ್ವಸ್ತ್ರಗಳನ್ನು ತಯಾರಿಸುವುದು ದೇಶದ ದೃಷ್ಟಿಯಿಂದ ಒಳಿತೆಂದು ನಮ್ಮ ದೇಶದ ವಿಜ್ಞಾನಿಗಳು, ಜನನಾಯಕರು ಮನಗಂಡಿದ್ದಾರೆ. ಇಂತಹ ಮಹಾಶಕ್ತಿಗಳು ಕೇವಲ ಒಬ್ಬಿಬ್ಬರ ಕೈಯಲ್ಲಿ ಕೇಂದ್ರೀಕೃತವಾಗಬಾರದು. ಈ ಶಕ್ತಿಯು ಎಲ್ಲಾ ದೇಶಗಳೊಳಗೆ ಹಂಚಲ್ಪಡಬೇಕು ಮಾತ್ರವಲ್ಲ ಈ ದೃಷ್ಟಿಯಿಂದ ದೇಶಗಳೊಳಗೆ ಸಮಾನತೆ ಇರಬೇಕು. ಪರಿಣಾಮವಾಗಿ ಅದು ಯುದ್ಧ ರಹಿತವಾದ ಒಂದು ಜಗತ್ತನ್ನು ಸೃಷ್ಟಿಸಬಲ್ಲುದು. ಇಂತಹ ಜಗತ್ತು ಮಾನವನ ಜೀವನಕ್ಕೆ ಆದರ್ಶವಾಗಿದೆ. ಯುದ್ಧವು 'ಅನಾಗರಿಕತೆ'ಯ ಒಂದು ಕುರುಹಾಗಿದೆ. ಆದುದರಿಂದ ಯುದ್ಧರಹಿತವಾದ 'ರಾಮರಾಜ್ಯ'ವನ್ನು ಕಟ್ಟುವುದರಲ್ಲಿ ನಾವೂ ನಮ್ಮ ಅಳಿಲ ಸೇವೆಯನ್ನು ಸಲ್ಲಿಸೋಣ.

ಭಾರತದಲ್ಲಿ ಯುದ್ಧ ಸಾಮಗ್ರಿಗಳನ್ನು ದೂರವಿರಿಸಿ, ಶಾಂತಿಯನ್ನು ಬಯಸಿದ ಈ ನೀತಿಯೇ ಹಲವಾರು ಸಮಸ್ಯೆಗಳು ತಲೆದೋರುವಂತೆ ಮಾಡಲು ಕಾರಣವಾಯಿತು. ಆಹಾರ ಸಮಸ್ಯೆ, ಜನಸಂಖ್ಯೆಯ ಸಮಸ್ಯೆ, ಭ್ರಷ್ಟಾಚಾರ, ಆರ್ಥಿಕ ಅಡಚಣೆ, ಇತ್ಯಾದಿಗಳು ಕಾಣಿಸಿಕೊಳ್ಳಲು ಇದೇ ಕಾರಣವೆಂದರೆ ತಪ್ಪಾಗಲಾರದು. ಚೈನಾ ಹಾಗೂ ಪಾಕಿಸ್ತಾನದ ಆಕ್ರಮಣಕ್ಕಿಂತಲೂ ಮೊದಲು ನಾವು ನಮ್ಮ ರಕ್ಷಣಾ ಕಾರ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಆರ್ಥಿಕ ಬೆಳವಣಿಗೆಗೆ ಪ್ರೋತ್ಸಾಹವನ್ನೀಯುತ್ತಿದ್ದೆವು. ನಮ್ಮ ದೇಶದಲ್ಲಿ ಆರ್ಥಿಕ ಬೆಳವಣಿಗೆಗಿಂತ ಹೆಚ್ಚಾಗಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಗಮನವನ್ನು ಕೊಡಲಾಗಿತ್ತು. ೧೯೬೨ರಲ್ಲಿ ಚೈನಾ ಭಾರತವನ್ನು ಆಕ್ರಮಿಸಿದಾಗ ನಮ್ಮ ಗಮನವು ರಾಷ್ಟ್ರ ರಕ್ಷಣೆಯ ಕಡೆಗೆ ಹರಿಯಿತು. ಆಗ ಭಾರತವಿನ್ನೂ ಬೆಳವಣಿಗೆಯ ಹಂತದಲ್ಲಿ ಇದ್ದುದರಿಂದ ಇತರ ಸಮಸ್ಯೆಗಳನ್ನೂ ಪರಿಹರಿಸಿ, ದೇಶರಕ್ಷಣೆಯನ್ನು ಮಾಡುವಷ್ಟು ಎದೆಗಾರಿಕೆ ನಮ್ಮ ಪಾಲಿಗೆ ಇಲ್ಲದಾಯಿತು.

ಒಂದು ದೇಶದ ಬೆಳವಣಿಗೆಯಾಗಬೇಕಾದರೆ ಆ ದೇಶವು ಯಾವಾಗಲೂ ಸಮಸ್ಯೆಗಳನ್ನು ಎದುರಿಸುತ್ತಿರಬೇಕು ಎನ್ನುವುದು ನಿಜ. ಆದರೆ ಇದು ನಿರಂಕುಶ ಪ್ರಭುಗಳಿಂದ ಮಾತ್ರ ಸಾಧ್ಯ. ರಷ್ಯದಲ್ಲಿ ಇದು ಸರಿಯೆಂದು ಸಾಧಿಸಲಾಗಿದೆ. ರಷ್ಯದ ಮಹಾಕ್ರಾಂತಿಯ ತರುವಾಯ ಅದು ಎಲ್ಲಾ ಸಮಸ್ಯೆಗಳನ್ನೂ ತಡೆಹಿಡಿದು ಅಭಿವೃದ್ಧಿ ಹೊಂದಿತು. ಪ್ರಜಾಪ್ರಭುತ್ವವಾದ ಭಾರತದಲ್ಲಿ ಬೆಳವಣಿಗೆಯ ಹಂತದಲ್ಲಿ ಇಂತಹ ಬದಲಾವಣೆಗಳನ್ನು ಮಾಡಕೂಡದು. ರಷ್ಯದ ಜನರಿಗೆ ಅವರ ನಾಯಕರನ್ನು ಅನುಸರಿಸುವ ತಾಳ್ಮೆ ಇತ್ತು. ಆದರೆ, ಭಾರತೀಯರಾದ ನಮಗೆ ಇಂತಹ ನಾಯಕರೂ ಇಲ್ಲ, ಅವರನ್ನು ಅನುಸರಿಸಬಲ್ಲ ಮನೋಭಾವ, ತಾಳ್ಮೆಯೂ ಇಲ್ಲ. ಆದುದರಿಂದ ನಾವಿಂದು ಇತರ ದೇಶಗಳಿಂದ ಹಿಂದುಳಿಯ ಬೇಕಾಗಿದೆ.

ಅಣ್ವಸ್ತ್ರಗಳು ಮೊದಲನೆಯದಾಗಿ ೧೯೪೫ರಲ್ಲಿ ಎರಡನೇ ಜಾಗತಿಕ ಯುದ್ಧದಲ್ಲಿ ಸ್ಫೋಟಿಸಲ್ಪಟ್ಟವು. ಇಂದು ನಮ್ಮ ಯಾವುದೇ ವೈರಿ ದೇಶವು ಆಕ್ರಮಣ ನಡೆಸಿದಲ್ಲಿ ನಾವು ಇತರ ರಾಷ್ಟ್ರಗಳನ್ನು ಅವಲಂಬಿಸುವ ಪರಿಸ್ಥಿತಿ ಬಂದೊದಗಬಾರದು. ಯಾವುದೇ ರೀತಿಯ ವೈರಿಯನ್ನು ಎದುರಿಸಬಲ್ಲ ಎದೆಗಾರಿಕೆ ನಮಗಿರಬೇಕು. ನಮ್ಮ ಬಳಿ ಈ ಮೊದಲೇ ಇಂತಹ ಶಕ್ತಿಯುತ ಯುದ್ಧ ಸಾಮಗ್ರಿಗಳು ಇರುತ್ತಿದ್ದರೆ, ನಮ್ಮ ದೇಶವನ್ನು ಯಾವುದೇ ದೇಶವು ಆಕ್ರಮಿಸುತ್ತಿರಲಿಲ್ಲ.

"ಅಣ್ವಸ್ತ್ರಗಳನ್ನು ವೃದ್ಧಿಗೊಳಿಸಿದುದು ಸರಿ, ಆದರೆ ಸ್ಫೋಟಿಸಿದುದು ತಪ್ಪು. ೩೦೦೦ ಅಡಿಗಳ ಬದಲು ೩೦,೦೦೦ ಅಡಿಗಳಷ್ಟು ಎತ್ತರಕ್ಕೆ ಅವುಗಳನ್ನು ಸ್ಫೋಟಿಸುವುದರ ಮೂಲಕ ಕನಿಷ್ಠ ಜೀವನಷ್ಟ ಅಥವಾ ರಕ್ತಪಾತ ಇಲ್ಲದೇ ನಾವು ಯುದ್ಧವನ್ನು ಕೊನೆಗೊಳಿಸಬಹುದಾಗಿತ್ತು. ಆಗ ಅಲ್ಲಿ ಜೀವನಾಶವಿಲ್ಲದಿದ್ದರೂ ಭಯಂಕರವಾದ ಶಬ್ದ ಹಾಗೂ ಬೆಳಕು ಉಂಟಾಗುತ್ತಿತ್ತು. ಅನಂತರ ಜಪಾನಿನ ನಾಯಕರೊಡನೆ 'ಇದು ಇಡೀ ಪ್ರಪಂಚವನ್ನೇ ಸುಡಬಲ್ಲ ಒಂದು ಅಣ್ವಸ್ತ್ರವಾಗಿತ್ತು. ಶರಣಾಗತರಾಗಿರಿ ಇಲ್ಲವೇ ಭಸ್ಮೀಭೂತರಾಗಿರಿ' ಎಂದು ಹೇಳಬಹುದಾಗಿತ್ತು. ಆಗ ಅವರು ನಿಜವಾಗಿಯೂ ಶರಣಾಗತರಾಗುತ್ತಿದ್ದರು ಎಂದು ನನಗನ್ನಿಸುತ್ತದೆ" ಎಂದು ಹೈಡ್ರೋಜನ್ ಬಾಂಬಿನ ಪಿತಾಮಹನೆಂದೆಣಿಸಲ್ಪಟ್ಟ ಡಾ| ಎಡ್ವರ್ಡ್ ಟೆಲ್ಲರ್ ಹೇಳಿದ್ದಾರೆ. ಇದರಿಂದಾಗಿ ನಮ್ಮ ದೇಶದ ರಕ್ಷಣೆಯ ಹಿತದೃಷ್ಟಿಯಿಂದ ಅಣ್ವಸ್ತ್ರಗಳನ್ನು ತಯಾರಿಸಲೇ ಬೇಕು.

ನಾವು ನಿಜವಾಗಿಯೂ ಯುದ್ಧ ಸಾಮಗ್ರಿಗಳನ್ನು ತಯಾರಿಸಿ ಶಾಂತಿಯನ್ನು ಪ್ರತಿಪಾದಿಸಿದ್ದರೆ ಯಾವುದೇ ಸಮಸ್ಯೆಯು ಸ್ವತಂತ್ರ ಭಾರತದಲ್ಲಿ ಪರಿಹಾರವನ್ನು ಕಾಣದೇ ಇರುತ್ತಿರಲಿಲ್ಲ. ನಮ್ಮ ರಟ್ಟೆಯಲ್ಲಿ ಸಾಕಷ್ಟು ಬಲವು ಇದ್ದರೆ ನಾವು ಯಾವ ಕೆಲಸವನ್ನೂ ಕೈಗೊಳ್ಳಲು ಹಿಂಜರಿಯಬೇಕಾಗಿಲ್ಲ. ನಮ್ಮಲ್ಲಿ ಬೇಕಾದ ಯುದ್ಧ ಸಾಮಗ್ರಿಗಳು ಇಲ್ಲದಿದ್ದುದರಿಂದಲೇ ಇತರ ಹಲವಾರು ಸಮಸ್ಯೆಗಳಿಗೆ ಕಾರಣೀಭೂತವಾದ ಚೈನಾ ಹಾಗೂ ಪಾಕೀಸ್ತಾನಾಕ್ರಮಣಗಳು ನಡೆದುವು. ಆದುದರಿಂದ ಇಂದು ನಮ್ಮ ದೇಶದಲ್ಲಿರುವ ಎಲ್ಲಾ ಸಂಪತ್ತಿನ ಸದುಪಯೋಗದಿಂದಾಗಿ ನಮ್ಮ ದೇಶದ ಪ್ರಗತಿಯಾಗುವುದನ್ನು ನೋಡೋಣ. ದೇಶದ ಜೀರ್ಣೋದ್ಧಾರಕ್ಕಾಗಿ ಟೊಂಕಕಟ್ಟಿ ನಿಲ್ಲೋಣ. ಅಂಧಕಾರದಿಂದ ಬೆಳಕಿನತ್ತ ಚಲಿಸೋಣ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. I. A. No. 827/ 1966

O. S. No. 168/1963

ಸೇಸಿ ಶೆಡ್ತಿ ಸಹಾ — ವಾದಿರು

ಮತ್ತು

ರಾಮು ಶೆಟ್ಟಿ ಸಹಾ — ಪ್ರತಿವಾದಿರು.

ಇವರೊಳಗೆ

ಈ ಮೂಲಕ ಸದ್ರಿ ವ್ಯವಹರಣೆಯ ಪ್ರತಿವಾದಿರು 17 ತಿಮ್ಮಪ್ಪ ಶೆಟ್ಟಿ—ಪದ್ದು ಶೆಡ್ತಿ ರ ಮಗ. 28 ಮುದ್ದಣ ಶೆಟ್ಟಿ. 30 ದೂಜ ಶೆಟ್ಟಿ—ಚೆನ್ನಮ್ಮ ಶೆಡ್ತಿ ರ ಮಕ್ಕಳು—ಮಂಗಳೂರು ತಾಲ್ಲೂಕು ತಾಳಿಪಾಡಿ ಗ್ರಾಮದ ಅಡ್ರಗುತ್ತಿನಲ್ಲಿಯುತ್ತಾರೆ.

ವಾದಿರು ಮೇಲಿನ ದಾವೆಯಲ್ಲಾದ ಡಿಕ್ರಿ ಮೇಲೆ ಫ್ಯಾನಲ ಡಿಕ್ರಿ ಕೊಡ್ಬೇಕೆಂದು ಬರಕೊಂಡ ಮೇಲಿನ ಅರ್ಜಿ ನಿಮ್ಮ ಬಾಬರಿ ಬಗ್ಗೆ ತಾರೀಕು 21-6-1966ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಮೇಲಿನ ವ್ಯವಹಾರ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By Order of the Court)

N. M. Adyanthaya
Advocate for Plaintiffs.

Karkala, 18-4-66

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು—೧

ಸಾಯುತಿದೆ ನಿಮ್ಮ ನುಡಿ

ಓ ಕನ್ನಡದ ಕಂದರಿರಾ!!

ಲೇಖಕರು:
ಶ್ರೀ ರಾಜಗೋಪಾಲ. ಪಿ. ಕೆ., ಪೆರಡಾಲ

"ನಿನ್ನ ಮಂಜೇಶ್ವರದ ಬೀಡು
ಕಾಸರಗೋಡು
ಮುನ್ನಿನಂತೆಯೆ ಮತ್ತೆ ತಾನಾಗೆ
ಕನ್ನಡ ನಾಡು
ತನ್ನ ಸತ್ವಕೆ ಸಾಕ್ಷಿ ತಾನದುವೆ
ಕನ್ನಡ ಜನತೆ
ಕವಿಗೆ ಕಡೆಯುವ ಜಯ ಶ್ರೀ
ಸ್ಮಾರಕಂ ತಾನಲ್ತೆ!"

—ಕನ್ನಡದ ವರಕವಿ "ಕುವೆಂಪು"ರವರ ಈ ಹೃದಯಸ್ಪರ್ಶಿ ಗೀತೆ ಇನ್ನೂ ವಿಶಾಲ ಕರ್ನಾಟಕದ ಜನತೆಯ ಹೃದಯಕ್ಕೆ ಮುಟ್ಟಲಿಲ್ಲವೆ??...

೦ ೦ ೦

"ಕಾಸರಗೋಡು ಎಲ್ಲಿದ್ದರೇನಂತೆ? ಸ್ವತಂತ್ರ ಭಾರತದೊಳಗೆ ಇಲ್ಲವೇನು? ಸ್ವತಂತ್ರ ಭಾರತದೊಳಗೇನೇ ನಾನಾ ಸಮಸ್ಯೆಗಳು ತಾಂಡವನಾಡುತ್ತಿರುವಾಗ, ಇಂತಹ ಹುಲು ಸಮಸ್ಯೆಗಳ ಬಗ್ಗೆ ಗಲಭೆಯೆಬ್ಬಿಸುವುದು ಕುಂಠಿತ ಹಾಗೂ ಸಂಕುಚಿತ ಮನೋಭಾವನೆ ಯೆನಿಸುತ್ತದೆ"-ಕಾಸರಗೋಡು ಪ್ರಶ್ನೆ ಬಗ್ಗೆ ಕರುಣಾಜನಕವಾಗಿ ವಿವರಿಸಿದಾಗ ಖ್ಯಾತ ರಾಜಕಾರಣಿಗಳಿಂದ ದೊರೆತ ಮಾತಿನ ಸರಣಿ ಇದು.

"ಬಾಯಿ ಎಲ್ಲಿದ್ದರೇನಂತೆ? ನಿಮ್ಮ ಪಾದದಲ್ಲಿ ಬಾಯಿ ಇರುತ್ತಿದ್ದರೆ ಏನಂತೆ? ಹೇಗಾದರೂ ನಿಮ್ಮ ಶರೀರದಲ್ಲಿಲ್ಲವೇನು? ಭಾಷಾವಾರು ಪ್ರಾಂತ ರಚನೆಯ ಸುಖ, ಲಾಭ, ಎಲ್ಲರಿಗೂ ಲಭಿಸಬೇಕಾಗಿರುವಾಗ, ಕೆಲವು ಸ್ಥಳಗಳು ಮಾತ್ರ ಆ ಸುಖಕ್ಕೆ ಅರ್ಹವೆನಿಸದೆ, ಪ್ರತ್ಯೇಕವಾಗಿ ಕಷ್ಟವನ್ನು ಅನುಭವಿಸುತ್ತಿರಬೇಕೆ ಈ ಸ್ವತಂತ್ರ ಭಾರತದಲ್ಲಿ?

೦ ೦ ೦

"ಕಾಸರಗೋಡಿಗಾದಂತಹ ಅನ್ಯಾಯ ಭಾರತದ ಯಾವ ಪ್ರದೇಶಕ್ಕೂ ಆಗಿಲ್ಲ. ಕೇರಳ ಸರಕಾರದ ಬೊಕ್ಕಸ ತುಂಬಿಸಲು ಈ ರೀತಿ ಕಾಸರಗೋಡನ್ನು ಕೇರಳಕ್ಕೆ ಸೇರಿಸಿದುದಾಗಿದೆ"ಎಂಬ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಕಡೆಂಗೋಡ್ಲು ಶಂಕರ ಭಟ್ಟರ ಮಾತು ಶತ ಸತ್ಯ.

"ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು" ಎಂಬ ಮಾತೃ ಭಾಷಾ ಪ್ರೇಮಪೂರಿತ ಕವಿವಾಣಿ ಅಚ್ಚಗನ್ನಡ ಪ್ರದೇಶವಾದ ಕಾಸರಗೋಡಿನಿಂದಲ್ಲದೆ ಬೇರೆಲ್ಲಿಂದ ಹೊರಡಬೇಕು? ಇದು ನಾನು ಕಾಸರಗೋಡು ಕನ್ನಡನಾಡು ಎಂಬ ಆತ್ಮಾಭಿಮಾನದಿಂದ ಹೇಳುವ ಮಾತು. ಈ ಪ್ರದೇಶದ ಕಲೆ, ಇತಿಹಾಸ, ಸಂಸ್ಕೃತಿ, ಆಚಾರ, ವಿಚಾರ, ರೀತಿ, ನೀತಿ ಎಲ್ಲದರಲ್ಲೂ ಅಚ್ಚಗನ್ನಡತನ ಎದ್ದು ಕಾಣುತ್ತಿರುವಾಗ, ಯಕ್ಷಗಾನಕವಿ ಪಾರ್ತಿಸುಬ್ಬ, ರಾಷ್ಟ್ರಕವಿ ಗೋವಿಂದ ಪೈ, ಮುಂತಾದ ಕನ್ನಡದ ಬಿಸಿರಕ್ತ ಇಲ್ಲಿಯ ಪ್ರತಿಯೊಬ್ಬನ ನರನಾಡಿಗಳಲ್ಲೂ ಪ್ರವಹಿಸುತ್ತಿರುವಾಗ, ಈ ಪ್ರದೇಶದ ಕನ್ನಡತನಕ್ಕೆ ಈ ಆತ್ಮಸಾಕ್ಷಿಗಿಂತ ಹೆಚ್ಚಿನ ಸಾಕ್ಷಿ ಬೇಕೆ?

ಯಕ್ಷಗಾನದ ತವರೂರು ಕಾಸರಗೋಡು; ಪ್ರತಿಭಾವಂತ ಪಂಡಿತರು ಕವಿಗಳೂ ಆದ ದಿವಂಗತ ಕೆ. ವಿ. ಕೃಷ್ಣ ಭಟ್ಟರಿಗೆ ಜನ್ಮವಿತ್ತ ನಾಡು ಕಾಸರಗೋಡು; ಸಕಲೇಷ್ಟಪ್ರದಾಯಕನಾದ ಮಧೂರು ವಿಘ್ನೇಶನ ನಾಡು ಕಾಸರಗೋಡು; ಯಕ್ಷಗಾನ ಕವಿಪಾರ್ತಿಸುಬ್ಬ, ರಾಷ್ಟ್ರಕವಿ ಗೋವಿಂದಪೈಗಳಿಗೆ ಜನ್ಮವಿತ್ತ ಕಾಸರಗೋಡು ಕವಿ ಕಯ್ಯಾರ ರೈಗಳನ್ನೂ ಪಡೆಯಿತು–ಅಂತಹ ಕಾಸರಗೋಡು ಕನ್ನಡ ನೆಲವಲ್ಲದೆ ಇನ್ನೇನು?

"ಪ್ರಚಂಡ ಮಾರುತವೇ ಎದ್ದರೂ ಕಾಸರಗೋಡು ನಡುಗುವುದಿಲ್ಲವೆಂದು ನಾನು ಹೇಳಬಲ್ಲೆ. ಕನ್ನಡನಾಡಿನವರಿಗೆ ಸಹನೆ ಇದೆ. 'ತಾಳಿದವಗೆ ವಿರುದ್ಧವೆ ಜಗದೊಳ್; ಗಾಳಿಗೆ ಗಿರಿ ನಡುಗುವುದೇ' ಎಂಬ ಪುರಂದರ ದಾಸರ ಉಕ್ತಿಯನು ತಿಳಿಸಿ ಕಾಸರಗೋಡಿನ ಕನ್ನಡಿಗರು ತಾಳ್ಮೆ ಉಳ್ಳವರೆಂದು ವಿಶದ ಪಡಿಸಿದರು ತಿರುಮಲೆ ತಾತಾಚಾರ್ಯ ಶರ್ಮರು. ಕಾಸರಗೋಡಿನ ಕನ್ನಡಿಗರು ಹೇಡಿಗಳಲ್ಲ. ಕನ್ನಡಿಗರಲ್ಲಿ ಎಂದಾದರೂ ಚೇತನ ಶಕ್ತಿ ಕುಂದಿದುದಿದೆಯೇ--ನಿಜಕ್ಕೂ ಇಲ್ಲ--ಟಿಪ್ಪುವಿನಂತಹ, ಅಂಜನೇಯನಂತಹ ಕಲಿಗಳೊಡನೆಯೇ ಇಲ್ಲಿ ಆಧ್ಯಾತ್ಮಿಕ ವಕ್ತಿಗಳ; ಧಾರ್ಮಿಕ ವಿಭೂತಿಗಳ, ಶಾಂತಿಸಹನಾ ಶೀಲ ಪುರುಷರ ಆವಿರ್ಭಾವವಾಗಿದೆ. ದೇಶದಲ್ಲಿ ವಿಷಮ ಪರಿಸ್ಥಿತಿಯ ಕರಾಳ ಉದಯವಾದಾಗ ದೇಶಾಭಿಮಾನದ ವಿಶಾಲ ವರ್ತನೆಗಾಗಿ ಉಕ್ಕಿಬರುತ್ತಿರುವ ನವಚೇತನವನ್ನು ಸುಪ್ತವಾಗಿಸಿ, ಅತಿ ಪ್ರಯತ್ನದಿಂದ ಹತೋಟಿಯಲ್ಲಿಟ್ಟುಕೊಂಡದ್ದೇ ಹೊರತು, ಅದು ದೌರ್ಬಲ್ಯದ ಲಕ್ಷಣವಲ್ಲ. ಅದು ಆತ್ಮಶಕ್ತಿಯ ಚಿತ್ತ ಪ್ರಬಲತೆಯ ದಿವ್ಯ ಸಂಕೇತ; ದೇಶಭಕ್ತಿಯ ಅತ್ಯುನ್ನತ ಪರಾಕಾಷ್ಠೆಯ ಕುರುಹು.

"ಈ ಸಮಸ್ಯೆ ಹುಲುಸಮಸ್ಯೆ; ಇದರ ಪರಿಹಾರ ಪ್ರಯತ್ನ, ಸಂಕುಚಿತ ಮನೋಭಾವವನ್ನು ಪ್ರದರ್ಶಿಸುತ್ತದೆ" ಎಂದು ಹೇಳುವ ರಾಜಕಾರಣಿಗಳು, ಮಾತೃಭಾಷಾ ಪ್ರೇಮದ ಉದ್ದೇಶದಿಂದ ಹಿಂದಿಭಾಷೆಯ ವಿರುದ್ಧವಾಗಿ ವಿದ್ಯಾರ್ಥಿಗಳು ಆಂದೋಲನವೆಬ್ಬಿಸಿದಾಗ, ಇದೇ ರೀತಿ ಹೇಳುವ ಸಾಹಸಕ್ಕೆ ಕೈ ಮಾಡಿದುದಿದೆಯೇ? ಅಂದರೆ ಇದರ ಅರ್ಥ–"ಕಾಸರಗೋಡಿನ ಜನತೆ ದುರ್ಬಲ, ಗಲಭೆ ಎಬ್ಬಿಸಲು ಅಶಕ್ತ" ಎಂಬುದಾಗಿ ಹಾಗೆ ಅರ್ಥಮಾಡಿಕೊಂಡವರು ಈ ಮೊದಲು ವಿವರಿಸಿದ ಮಾತುಗಳನ್ನು ಅರ್ಥಮಾಡಿಕೊಳ್ಳಲಿ.

"ಕಾಸರಗೋಡನ್ನು ಕೇರಳಕ್ಕೆ ತಳ್ಳಿದುದು ಒಂದು ರಾಷ್ಟ್ರೀಯ ಅವಮಾನ; ಸಹಸ್ರಸಹಸ್ರ ಕಾಸರಗೋಡಿನ ಕನ್ನಡ ಸಂಸಾರಗಳನ್ನು ದುರ್ಗತಿಗೆ ತಳ್ಳುತ್ತಿರುವ ಈ ಕುತಂತ್ರ ಕನ್ನಡ ರಾಷ್ಟ್ರಕ್ಕೇ ಇದು ಅವಮಾನ!" - ಇದು ಶ್ರೀ ನಿರಂಜನರ ಅಭಿಪ್ರಾಯ ಕಾಸರಗೋಡಿನ ಬಗ್ಗೆ.

ಅಖಂಡ ಕರ್ನಾಟಕ ಸ್ಥಾಪನೆಯಾಗಬೇಕೆಂದು ಬೊಬ್ಬೆ ಹೊಡೆಯುವ, ಉದ್ದುದ್ದ ಭಾಷಣ ಬಿಗಿಯುವ ಮಹಾಮಹಾ ಮಹನೀಯರುಗಳು ಇನ್ನೂ ಬಗೆಹರಿಯದ ಇಂತಹ ಸಮಸ್ಯೆಗಳ ಬಗ್ಗೆ ಪರಿಪೂರ್ಣವಾಗಿ ವಿವೇಚಿಸಿ ನೋಡಿ ತಮ್ಮ ಮಾತಿನ ಸಾಹಸವನ್ನು ಕೃತಿರೂಪಕ್ಕಿಳಿಸಬೇಕಾಗಿದೆ.

"ಕನ್ನಡದಲ್ಲೇ ಹುಟ್ಟಿ, ಕನ್ನಡದ ಮಣ್ಣಿನಲ್ಲಿ ಉರುಳಾಡಿ, (ನರಳಾಡಿದರೂ ಚಿಂತಿಲ್ಲ) ಕನ್ನಡದ ಗಾಳಿಯನ್ನೇ ಉಸಿರಾಡಿ; ಇಲ್ಲೇ ಬಾಳನ್ನು ಬೆಳಗಿಸಿ, ಕನ್ನಡದಲ್ಲೇ ಸಾಯಬೇಕು, ಜೀವನ ಸಾಫಲ್ಯವನ್ನು ಸಿದ್ಧಿಸಿಕೊಳ್ಳಬೇಕು" ಎಂಬ ಜಾಗೃತ ಅಭಿಮಾನದ ಭಾವ ಭೂಮಿಕೆ ಕನ್ನಡಿಗರಲ್ಲಿದೆ—ನಿಜ. ಕನ್ನಡದಲ್ಲಿ ಹುಟ್ಟುತ್ತಿದ್ದರೆ ಮರ, ನೊಣ, ಶುಕ, ಪಿಕದಂತಹ ಯಾವ ಜನ್ಮವಾದರೂ ಅದೀತೆಂಬ ಕವಿವಾಣಿ ಇಂದಿಗೂ ಇಲ್ಲಿ ಮೊಳಗುತ್ತಿದೆ ನಿಜ. ಆದರೆ—"ಸಾಯುತ್ತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ"—ಎಂಬ ವರಕವಿ ಕುವೆಂಪುರವರ ಎಚ್ಚರಿಕೆಯ ರುದ್ರ ಕಹಳೆ ಕ್ಷಣ ಕ್ಷಣವೂ ಗಂಭೀರ ನಿನಾದದಿಂದ ಕನ್ನಡಿಗರ ಹೃದಯ ಸಮುದ್ರದಲ್ಲಿ ಜಾಗೃತ ತರಂಗಗಳನ್ನು ಹೊಡೆದೆಬ್ಬಿಸುತ್ತಿವೆ. ಇಲ್ಲಿನ ಕನ್ನಡ ವೃಕ್ಷಕ್ಕೆ ಮಲೆಯಾಳ ಬಂದಣಿಕೆ ಹಿಡಿಯುತ್ತಲಿದೆ. ಆ ಬಂದಣಿಕೆಯನ್ನು ಕಿತ್ತು ಬಿಸುಟುವ ಧೈರ್ಯಶಾಲಿಗಳ ಸೃಷ್ಟಿ, ಆ ಕಾರ್ಯಕ್ಕೆ ಸಹಾಯ ನೀಡುವ ಸಹೃದಯರ ಕನಸು ನನಸಾಗುವ ಆಶೆ ಮುಗಿಲಿನ ಗೋಪುರವಾಗಿದೆ. ಆದರೂ ಆಶಾಕಿರಣ ಮೂಡಲು ಸಿದ್ಧವೇ ಇದೆ. ಪ್ರೋತ್ಸಾಹ ನೀಡುವ ವ್ಯಕ್ತಿಗಳು ಕಾಸರಗೋಡಿಗೆ ಇಲ್ಲವೆಂದಲ್ಲ. ಕಾಸರಗೋಡು ಪ್ರಶ್ನೆಯ ನಿವಾರಣೆಗಾಗಿ ಎಷ್ಟೋ ಜನರು ತಮ್ಮ ಅಳಿಲ ಸೇವೆಯನ್ನು ಸಲ್ಲಿಸುತಿದ್ದಾರೆ ಅವರ ಕಾರ್ಯ ನಿಜಕ್ಕೂ ಶ್ಲಾಘನೀಯ.

"ಬೆಂಕಿ ಬಿದ್ದಿದೆ ಮನೆಗೆ ಓಬೇಗ ಬನ್ನಿ ಕನ್ನಡದ ಗಡಿಕಾಯೆ, ಗುಡಿಕಾಯೆ ನುಡಿಕಾಯೆ. ಕಾಯಲಾರದೆ ಸಾಯೆ ಓ ಬೇಗ ಬನ್ನಿ" ಎಂಬ ಕವಿ ಕಯ್ಯಾರರ ಕರೆಗೆ ಕಿವಿಗೊಟ್ಟು ಇನ್ನಾದರೂ ವಿಶಾಲ ಕರ್ನಾಟಕದ ಕನ್ನಡಿಗರು ಕಾರ್ಯಪ್ರವೃತ್ತಿಗಿಳಿಯುವರೇ?

೦ ೦ ೦

ಕನ್ನಡನಾಡಿನೊಂದಿಗೆ ಕಾಸರಗೋಡಿನ ವಿಲೀನೀಕರಣವೇ ರಾಷ್ಟ್ರಕವಿ ಗೋವಿಂದ ಪೈಯವರಿಗೆ "ಕಡೆಯುವ ಜಯಶ್ರೀ ಸ್ಮಾರಕವಾಗಲಿ'. ಕಾಸರಗೋಡಿನವರೇ ಆದ ಅವರಿಗೆ ಅದಕ್ಕಿಂತ ಹಿರಿದಾದ ಸ್ಮಾರಕ ಇನ್ನಾವುದು?

ಚಿಕ್ಕ ಹಿಡುವಳಿದಾರರಿಗೆ' ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ಪ್ರಭೂಸ್
ಬಾಲಾಮೃತ
ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್
ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.
ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—
ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.
ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಮೊಗಲ್ ಚಿತ್ರಕಲೆ

(ಹತ್ತನೇ ಪುಟದಿಂದ)

ಸ್ಥಾನಗಳಲ್ಲಿ—ಅಲ್ಪ ಪ್ರಮಾಣದಲ್ಲಿ ಕಲಾವಿದರಿಗೆ ಆಶ್ರಯ ನೀಡತೊಡಗಿದರು. ಅವರು ಹೀಗೆ ಆಶ್ರಯ ನೀಡಿದ ಕಲೆಯು ಮೊಗಲರ ಮೂಲಭೂತ ಚಿತ್ರಕಲೆಗೆ ಯಾವುದೇ ರೀತಿಯಲ್ಲಿ ಸರಿಸಾಟಿಯಾಗಿರಲಿಲ್ಲ. ಸಂದಾರರ ದರಬಾರಿನಲ್ಲಿದ್ದ ಕಲಾವಿದರು, ಜತನಾಪತ್ರಗಳು, ಕುಡಿತದ ದೃಶ್ಯಗಳು, ಮತ್ತು ಪ್ರಣಯವನ್ನು ಕುರಿತ ಅರ್ಥಹೀನವಾದ ಚಿತ್ರಗಳು ಇವೇ ಮೊದಲಾದ ಚಿತ್ರಗಳನ್ನು ಬರೆಯುತ್ತಿದ್ದರು.

ಉಪಸಂಹಾರ

ರಾಜಕೀಯ ದೃಷ್ಟಿಯಿಂದ ಹೇಳುವುದಾದರೆ ಮೊಗಲ ಸಾಮ್ರಾಜ್ಯದ ಕೊನೆಯ ಚಕ್ರವರ್ತಿಗಳು ಅಷ್ಟೊಂದು ಪ್ರಭಾವಶಾಲಿಗಳಾಗಿರಲಿಲ್ಲ. ಮೊಹಮ್ಮದ ಷಾ ೧೭೧೯ರಲ್ಲಿ ಮೊಗಲ ಸಿಂಹಾಸನವನ್ನೇರಿದನು. ಅವನಿಂದ ಅನೇಕ ಪ್ರಮಾದಗಳು ಘಟಿಸಿದವು. ಆದರೂ ಮೊಹಮ್ಮದ್ ಷಾ ಸಂಗೀತ ಮತ್ತು ಚಿತ್ರಕಲಾ ಪ್ರೇಮಿಯಾಗಿದ್ದ. ಅವನು ತನ್ನ ಬಹುತೇಕ ಸಮಯವನ್ನು ವಿಲಾಸದಲ್ಲಿಯೇ ಕಳೆದನು. ಮಹಮ್ಮದ್ ಷಾನ ಕಾಲದ ಚಿತ್ರಗಳು ನಿರ್ಜೀವವಾಗಿದ್ದವು. ಸೂಕ್ಷ್ಮ ಚಿತ್ರಕಲೆಗಳಲ್ಲಿ ಮೊಗಲರ ಕಲಾ ವೈಭವದ ಪತನವನ್ನು ಕಾಣಬಹುದಾಗಿತ್ತು.

೧೭೩೯ರಲ್ಲಿ ಪರ್ಶಿಯಾದ ನಾದಿರಷಹಾನು ದೆಹಲಿಯ ಮೇಲೆ ದಂಡೆತ್ತಿ ಬಂದು ಅದನ್ನು ಲೂಟಿಮಾಡಿದನು. ನಾದಿರಷಾ ಭಾರತದಿಂದ ಮರಳಿ ಹೋದ ಬಳಿಕ ದೆಹಲಿಯ ಗತವೈಭವವನ್ನು ಪುನಃ ಪ್ರತಿಷ್ಠಾಪನೆ ಮಾಡುವುದು ಮಹಮ್ಮದ್ ಷಾನಿಗೆ ಅಸಾಧ್ಯವಾಗಿ ಕಂಡು ಬಂದಿತು. ದೆಹಲಿಯ ಕಲಾ ವೈಭವ ಮಾಯವಾಗಿ ಪ್ರಾಂತ್ಯಗಳ ರಾಜಧಾನಿಯಲ್ಲಿ ತಲೆಯೆತ್ತತೊಡಗಿತು. ಅಲ್ಲಿ ಕೆಲವು ಕಾಲದ ವರೆಗೆ ಈ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ದೊರೆಯಿತು. ಆದರೆ ಪತನಗೊಂಡ ಮೊಗಲ್ ಚಿತ್ರಕಲಾ ವೈಭವ ಪುನರುಜ್ಜೀವನಗೊಳ್ಳಲೇ ಇಲ್ಲ.

ಎಲ್ಲೆಲ್ಲಿ ಏನೇನು?

ಕಟೀಲಿನಲ್ಲಿ ಸಾಂಸ್ಕೃತಿಕ ಸಮಾರಂಭಗಳು

ದ. ಕ. ಜಿಲ್ಲಾ ಸುಪ್ರಸಿದ್ಧ ಪ್ರೇಕ್ಷಣೀಯ ದೇವಸ್ಥಾನವಾದ ಕಟೀಲಿನಲ್ಲಿ ವರುಷಪ್ರತಿ ಜರಗುವ ವಾರ್ಷಿಕೋತ್ಸವದ ಸಂದರ್ಭದಲ್ಲಿ ಜರಗುವ ಸಾಂಸ್ಕೃತಿಕ ಕಾರ್ಯಕ್ರಮವು ಇದೇ ತಾ. 16ರಂದು ಮೊದಲುಗೊಂಡಿತು. ಮೈಸೂರು ಶಾಸನ ಸಭಾ ಸದಸ್ಯ ಡಾ| ಸಂಜೀವನಾಥ ಐಕಳರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಮೊಕ್ತೇಸರರಾಗಿಯೂ ಅರ್ಚಕರಾದ ಶ್ರೀ ಕೆ. ಗೋಪಾಲಕೃಷ್ಣ ಆಸ್ರಣ್ಣರೇ ಮೊದಲಾದ ಪ್ರಮುಖರು ಅತಿಥಿಗಳನ್ನು ಸ್ವಾಗತಿಸಿದರು. ದೇವಳದ ಜಡಕಟ್ಟಾ ಮೊಕ್ತೇಸರ ಶ್ರೀ ಕೆ. ಶ್ರೀಧರ ಶೆಟ್ಟಿಯವರು ಅತಿಥಿಗಳಿಗೆ ಪುಷ್ಪಹಾರವನ್ನಿತ್ತು ಸತ್ಕರಿಸಿದರು. ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರು ಪ್ರಾಸ್ತಾವಿಕವಾಗಿ ಮಾತಾಡಿದರು. ಮಂಗಳೂರು ಎಲೋಸಿಯಸ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕ ಶ್ರೀ ಎಂ. ಮಂಜುನಾಥ ಭಟ್ಟರು 'ಭಾರತೀಯ ಸಂಸ್ಕೃತಿ' ಎಂಬ ಕುರಿತು ಭಾಷಣವಿತ್ತರು. ಶ್ರೀ ಬಿ. ಪದ್ಮನಾಭ ಸೋಮಯಾಜಿಯವರು 'ಭಕ್ತಿ ಮತ್ತು ವಿರಸ'ವನ್ನು ವಿಷಯದಲ್ಲಿ ಉದ್ಬೋಧಕ ಉಪನ್ಯಾಸವಿತ್ತರು. ಕುಮಾರಿ ಲೀಲಾವತಿ ಅವರು ದೇವರ ನಾಮಗಳನ್ನು ಹಾಡಿದರು. ಅಧ್ಯಕ್ಷ ಭಾಷಣಾನಂತರ ಕಿನ್ನಿಗೋಳಿಯುವಕ ಸಂಘದವರು 'ತ್ರಿಮೂರ್ತಿಗಳು' ಎನ್ನುವ ಹಾಸ್ಯನಾಟಕವನ್ನು ಅಭಿನಯಿಸಿದರು.

2ನೆಯ ದಿನದ ಕಾರ್ಯಕ್ರಮವು ತಾ. 17 ರಂದು ಹೆಜಮಾಡಿ ಪ್ರೌಢ ಶಾಲೆಯ ಪ್ರಧಾನಾಧ್ಯಾಪಕ ಶ್ರೀ ಜಿ. ಎಂ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಶ್ರೀಧರ ಶೆಟ್ಟಿ ಹಾಗೂ ಶ್ರೀ ಕೆ. ಗೋಪಾಲಕೃಷ್ಣ ಆಸ್ರಣ್ಣರೇ ಮೊದಲಾದವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪರು ಪ್ರಾಸ್ತಾವಿಕ ಭಾಷಣಮಾಡಿ, ಅತಿಥಿಗಳ ಪರಿಚಯಮಾಡಿಕೊಟ್ಟರು. ಶ್ರೀ ಪಿ. ವಾದಿರಾಜ ತಂತ್ರಿಗಳು ಸುಶ್ರಾವ್ಯವಾಗಿ ಭಕ್ತಿಗೀತೆಗಳನ್ನು ಹಾಡಿದರು. ಶ್ರೀ ಕೆ. ಎಲ್. ಎನ್. ಉಪಾಧ್ಯಾಯರು ಸದಾಚಾರದ ಬಗ್ಗೆಯೂ, ಶ್ರೀ ಎಸ್. ಶ್ರೀಪತಿ ಆಚಾರ್ಯರು "ಭಾರತೀಯ ಸಂಸ್ಕೃತಿ"ಯ ಹಿರಿಮೆಯ ಕುರಿತೂ ಮಾತನಾಡಿದರು. ಶ್ರೀ ಪಿ. ವಿಷ್ಣುಮೂರ್ತಿ ಭಟ್ಟರು ದೇವರ ನಾಮಗಳನ್ನು ಹಾಡಿದರು.

ಮುಲ್ಕಿಯ ಸರಕಾರೀ ನೌಕರ ಸಂಘದವರಿಂದ 'ಗಂಡಸುತನ' ಎಂಬ ನಾಟಕ ಪ್ರದರ್ಶನವಾಯಿತು.

ಮೂರನೆಯ ದಿನದ ಕಾರ್ಯಕ್ರಮವು ತಾ 18 ರಂದು ಶಿರ್ವ ಹಿಂದೂ ಹೈಸ್ಕೂಲಿನ ಪ್ರಧಾನಾಧ್ಯಾಪಕ ಶ್ರೀ ಬಾಬುರಾವ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಶ್ರೀಧರ ಶೆಟ್ಟಿ ಮತ್ತು ಶ್ರೀ ಕೆ. ಗೋಪಾಲಕೃಷ್ಣ ಆಸ್ರಣ್ಣರು ಪುನ ಪ್ರಮುಖರ ಸಮೇತ ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಪಿ. ವಿಷ್ಣುಮೂರ್ತಿ ಭಟ್ಟರಿಂದ ಪ್ರಾರ್ಥನೆಯಾಯಿತು. ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರು ಸಾಂಸ್ಕೃತಿ ಸಮಾರಂಭದ ಔಚಿತ್ಯವನ್ನು ವಿವರಿಸಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಬೇಲಾಡಿಯ ಶ್ರೀ ವಿಠಲ ಶೆಟ್ಟಿಯವರು ಧರ್ಮಾಭಿಮಾನದ ಕುರಿತು ಮಾತಾಡಿದ ಬಳಿಕ ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರು ತಾವೇ ರಚಿಸಿದ ಭಕ್ತಿ ಗೀತೆಗಳನ್ನು ಹಾಡಿದರು. ಮುದ್ರಾಡಿ ಕೃಷ್ಣಯ್ಯ ಶೆಟ್ಟರು ದೈವೀಭಾವದ ಹಿರಿಮೆಯ ಕುರಿತೂ, ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರು, 'ಸ್ವಧರ್ಮೇ ನಿಧನಂ ಶ್ರೇಯಃ' ಎನ್ನುವ ಕುರಿತೂ ಮಾತಾಡಿದರು. ಶ್ರೀ ಎಂ. ಸಿ. ಸುವರ್ಣ ಮೂಲ್ಕಿಯವರು ತಮ್ಮ ಹಾಸ್ಯ ಚಟಾಕಿಗಳಿಂದ ಸಭಿಕರನ್ನು ನಗಿಸಿದರು. ಅಧ್ಯಕ್ಷರ ಭಾಷಣಾನಂತರ ಸಂಗೀತ ಕಾರ್ಯಕ್ರಮ ನಡೆಯಿತು.

ಪತ್ರಿಕಾ ಗೋಷ್ಠಿಯಲ್ಲಿ ಶ್ರೀ ಟಿ. ಎ. ಪೈ.

ಮಂಗಳೂರು, ಇದೇ ತಾ 14ರಂದು, ಎಸ್. ಸಿ. ಸಿ. ಬ್ಯಾಂಕಿನ ಮಾಳಿಗೆಯಲ್ಲಿ ಪತ್ರಿಕಾ ಗೋಷ್ಠಿಯೊಂದನ್ನು ಉದ್ದೇಶಿಸಿ ಮಾತಾಡುತ್ತಾ, ದ. ಕ. ಜಿಲ್ಲಾ ಕೃಷಿ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾಗಿರುವ ಶ್ರೀ ಟಿ. ಎ. ಪೈಗಳು, ಇದೀಗ ಜಿಲ್ಲೆಯಲ್ಲಿ ಗೊಬ್ಬರ ಸೆಟ್ಟಿಗೆಗಳಿಗೆ ಬೇಡಿಕೆ ಬಂದೇ ಸಮನೆ ಹೆಚ್ಚುತ್ತಿದೆ ಎಂದು ಉತ್ತಮ ರೀತಿಯಲ್ಲಿ ಅದರ ಉಪಯೋಗವಾಗುತ್ತಿದೆಯೆಂದೂ ಅದರೆ ಪಂಪ್‌ಸೆಟ್‌ಗಳು ಬಳಸಿದ ಪಕ್ಷದಲ್ಲೇ ಉದ್ದೇಶ ಸಾಧನೆಯಾಗಲಾರದೆಂದೂ ರೈತರಿಗೆ ಕ್ಲಪ್ತ ಸಮಯದಲ್ಲಿ ಸೂಕ್ತ ಬೆಲೆಗೆ ಡಿಸೆಲ್ ಎಣ್ಣೆ ದೊರೆಯುವಂತೆ ಸರಕಾರ ಮಾಡಬೇಕು ಎಂದು ಹೇಳಿದರು. ಅಲ್ಲದೆ ಲಿಫ್ಟ್ ಇರಿಗೇಷನ್‌ನ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಲು ಡಾ| ಎ. ಎಸ್. ಆಡ್ಯೆಯವರ ನೇತೃತ್ವದಲ್ಲಿ ಸಂಸ್ಥೆಯೊಂದನ್ನು ಕೃಷಿ ಅಭಿವೃದ್ಧಿ ಸಂಸ್ಥೆ ರಚಿಸಿದೆ. ಸರಕಾರಿ ಸಂಸ್ಥೆಗಳು ಅದರ ಮೇಲ್ವಿಚಾರಣೆ ವಹಿಸಲಿವೆ ಎಂದು ನುಡಿದು, ನಮ್ಮ ಜಿಲ್ಲೆಯಲ್ಲಿ ಅಧಿಕ ಆಹಾರ ಧಾನ್ಯ ಬೆಳೆಯುವುದು ಸಾಧ್ಯವೆಂಬ ಭರವಸೆಯನ್ನು ವ್ಯಕ್ತಪಡಿಸಿದರು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಶಿವಪಂಚಾಕ್ಷರಿ ಮಹಿಮೆ ಎಂಬ ಪುಣ್ಯಕಥಾಭಾಗದ ಯಕ್ಷಗಾನ ಕೂಟವು ದಿನಾಂಕ 14 ರಂದು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಲ್ಪಟ್ಟಿತು. ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟ ಈ ಕಾರ್ಯಕ್ರಮದಲ್ಲಿ ಸರ್ವಶ್ರೀ ಕೀ. ವ. ಕೇಶವ, ಸ. ವಿ. ವಿನೋದ, ನಾರಾಯಣ ನಾಯಕ್, ಮಾಸ್ಟರ್, ಕಲ್ಲಡ್ಕ ಬಾಬು ಶೈ, ಎಂ. ಶೀನಪ್ಪಗೌಡ, ಕುಂಬಡಾಜೆ ಮಾಸ್ತರ್ ಜತ್ತಪ್ಪರೈ, ಪಾಟಾಳಿ, ಶ್ರೀಧರ ಗೌಡ, ಸಾಂತಪ್ಪ ರೈ ಮುಂತಾದವರು ಭಾಗವಹಿಸಿದ್ದರು.

ಯುಗಾದಿಗಾಗಿ ಅಳವಡಿಸಲ್ಪಟ್ಟ ಈ ವಿಶೇಷ ಕಾರ್ಯಕ್ರಮವನ್ನು ಶ್ರೀ ಕುಂಬಡಾಜೆಯ ಮಾಸ್ತರ್ ಪಿ. ಜತ್ತಪ್ಪರೈಗಳು ವ್ಯವಸ್ಥೆಗೊಳಿಸಿದ್ದು ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದವಿತ್ತರು.

(ಒಂಭತ್ತನೇ ಪುಟದಿಂದ)

ಬಲ್ ಜಾನಾ, ಲುಗಾನೋ, ಟೋಕಿಯೋ, ಸಾವೊಪಾವಲೋ ಮೊದಲಾದೆಡೆಗಳಲ್ಲಿ ದುಬೋವಾ ಕೃತಿಗಳ ಪ್ರದರ್ಶನ ನಡೆದಿದೆ.

ಈಕೆಯ ಕಲಾಸಕ್ತಿ ಮಾತೃಕವಾದುದು. ಜಾನಪದ ಕಲೆಯಲ್ಲಿ ಈಕೆಯ ಕೈ ತೀರ ಎತ್ತಿದ್ದು.

ಫಾನ್ನಿ ಬೋಯಾದ್ಜೀವಾ

ಈಕೆಯೂ ಸೋಫಿಯಾ ಆರ್ಟ್ ಎಕೆಡೆಮಿಯ ಪದವೀಧರೆ. ೧೯೩೯ರಿಂದ ಬಲ್ಗೇರಿಯಾ ಕಲಾವಿದರ ಸಂಘದ ಸದಸ್ಯೆ. ಇನ್ನೂ ಎಳೆ ವಯಸ್ಸಿನವಳಾದರೂ 'ಮಧ್ಯಾಹ್ನ', ಸಹಕಾರಿ ಬೇಸಾಯದ ಮಹಿಳೆ ಮೊದಲಾದ ಈಕೆಯ ಕಲಾಕ್ಷೇತ್ರವು ಕೃತಿಗಳನ್ನು ಸೋಫಿಯಾದ ರಾಷ್ಟ್ರೀಯ ಕೊಂಡುಕೊಂಡಿದೆ. 'ಗ್ರಾಮೀಣ ಸಮಾಚಾರ ಪತ್ರ ಪ್ರತಿನಿಧಿ' ಎಂಬ ಇನ್ನೊಂದನ್ನು ಪ್ಲೊವ್‌ದಿವ್ ಆರ್ಟ್‌ಗ್ಯಾಲರಿಯು ಪಡೆದಿದೆ.

ಬೋಯಾದ್ಜೀವಾ ಚಿಕ್ಕ ಚಿಕ್ಕ ರೂಪರಾಶಿಯನ್ನೇ ಮೆಚ್ಚುವವಳು. ಹಾಗಿದ್ದರೂ ಮಹತ್ವಪೂರ್ಣ ರಚನೆಯ ಬಗ್ಗೆಯೂ ಈಕೆಗೆ ಕಡಿಮೆ ಆಸಕ್ತಿಯಿಲ್ಲ. ದುಬ್ನಿತ್ಸಾ ಹಳ್ಳಿಯ ಬಳಿಯಲ್ಲಿ ನಡೆದಿದ್ದ ನಿಷೇಧಾತ್ಮಕ ಚಳವಳಿದ ಗೆರಿಲ್ಲಾಗಳಿಗೆ ಸಂಬಂಧಿಸಿದ ಈಕೆಯ ಚಿತ್ರವೊಂದು ಸರ್ವಜನಾದರಣೀಯವಾಗಿದೆ. ಈಕೆಯ ಹೆಚ್ಚಿನ ಕೃತಿಗಳೆಲ್ಲಾ ಬಲ್ಗೇರಿಯಾದ ಸಹಕಾರಿ ಕ್ಷೇತ್ರದ ಜನ ಜೀವನಕ್ಕೆ ಸಂಬಂಧಿಸಿವೆ. ಸಮಾಜವಾದಿ ರಚನಾತ್ಮಕ ಕಾರ್ಯಕ್ರಮಗಳನ್ನೂ, ನಗರ ಜೀವನವನ್ನೂ, ಪ್ರತಿನಿಧೀಕರಿಸುತ್ತವೆ.

ಬೇಗನೆ ಪ್ರಕಟವಾಗಲಿದೆ!

ಮೇರಿ ಕೊಟ್ಟ ಬೆಂಡೋಲೆ

ಯಸ್. ಸದಾಶಿವರಾಯರ ಕಥಾಸಂಕಲನ.

ನಿರೀಕ್ಷಿಸಿರಿ!

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ

ರಿಜಿಸ್ಟ್ರಿ ಫಾರ್ಮುಗಳಿಗೆ—

ವ್ಯಾಪಾರಿಗಳಿಗೆ ಬೇಕಾಗುವ

ವರ್ಗ, ಊಳಿಗ ಮೊದಲಾದ

ಎಕೌಂಟು ಪುಸ್ತಕಗಳಿಗೆ—

ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ

ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,

ಪಾಲುಕೋಟೆ, ಉಡುಪಿ, ದ. ಕನ್ನಡ.

ಕೃಷಿಯಲ್ಲಿ ಕ್ರಾಂತಿಯಾಗಬೇಕು

ಮಡಿ ಫಾರ್ಮಿನಲ್ಲಿ ಶ್ರೀ ಸುಬ್ರಹ್ಮಣ್ಯಂ

ಉಡುಪಿಯಿಂದ 14 ಮೈಲು ದೂರದ ಮಡಿ ಫಾರ್ಮಿನಲ್ಲಿ ಕಳೆದ ತಾ. 22ರಂದು, ರೈತರಿಗೆ ತ್ಯಾಚುಂಗ್—65 ತಳಿಯನ್ನು ಕೇಂದ್ರ ಆಹಾರ ಮತ್ತು ಕೃಷಿ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂರವರು ವಿತರಣೆ ಮಾಡುತ್ತಾ ಮಡಿಯಲ್ಲಿ ರೈತ ಜನರು ತೋರಿದ ಉತ್ಸಾಹವನ್ನು ಶ್ಲಾಘಿಸಿ, ಇನ್ನು ಮೂರು ವರ್ಷಗಳಲ್ಲಿ ನಾವು ಆಹಾರದ ಮಟ್ಟಿಗೆ ಸ್ವಾವಲಂಬಿಗಳಾಗುವೆವೆಂದು ತಾನು ಪಾರ್ಲಿಮೆಂಟಿಗಿತ್ತ ಭರವಸೆ ನಿಜವಾಗುವುದು ಸಾಧ್ಯವಿದೆ ಎಂಬ ಆತ್ಮವಿಶ್ವಾಸ ತನಗಿಲ್ಲಿ ಉಂಟಾಗಿದೆ ಎಂದು ಹೇಳಿದರು. ಮುಂದುವರಿಯುತ್ತಾ ಅವರು, ಆಧುನಿಕ ಕೃಷಿ ಪದ್ಧತಿ ಮೂಲಕ ಹೆಚ್ಚು ಉತ್ಪಾದನೆ ಮಾಡುವುದು ಸಾಧ್ಯ, ಅದರಿಂದ ನಮ್ಮ ದುರ್ದೈವದಿಂದ ನಾವು ಹೊಸ ಸಲಕರಣೆಗಳಿಗೂ ಪರದೇಶಾವಲಂಬಿಗಳು ಅಲ್ಲದೆ ಈ ಸಮಸ್ಯೆ ಪೂರ್ಣವಾಗಿ ನಮ್ಮ ಜನಸಂಖ್ಯೆ ಅಪರಿಮಿತವಾಗಿ ಏರುತ್ತಿದೆ. ರಾಷ್ಟ್ರದಲ್ಲಿ ಅರಾಜಕತೆ ಮತ್ತು ಇತರ ರೀತಿಯ ಕ್ರಾಂತಿ ಆಗ ಕೂಡದೆಂದಿದ್ದರೆ, ಕೃಷಿ ಕ್ರಾಂತಿಯಾಗಬೇಕಾದುದು ಅನಿವಾರ್ಯವೆಂದು ನುಡಿದರು.

ಮತ್ತು ಮುಂದುವರಿಯುತ್ತಾ ಅವರು ಪರದೇಶ ಹಾಗೂ ನಮ್ಮ ಕೃಷಿ ವಿಧಾನಗಳ ತುಲನೆ ಮಾಡಿ ನಮ್ಮ ದೋಷಗಳನ್ನು ಎತ್ತಿ ತೋರಿಸಿದರು. ಮಾತ್ರವಲ್ಲದೆ, ತ್ಯಾಚುಂಗ್ ಬೀಜದ ಉಪಯೋಗದಿಂದ ಪ್ರಕೃತ ದೊರೆಯುವ ಉತ್ಪಾದನೆಗಿಂತ 3—4 ಪಾಲಷ್ಟು ಅಧಿಕ ಉತ್ಪಾದನೆ ಸಾಧ್ಯವಿದೆ. ಉತ್ತಮ ಬೀಜದ ಬಳಕೆಯೊಡನೆ ಗಿಡಗಳಿಗೆ ಬೇಕಾದ ಆಹಾರ ಒದಗಿಸುವುದು ಅವಶ್ಯ. ಬಡ ರೈತರಿಗೆ ಬೇಕಾಗಿರುವ ಪಂಪು ಸೆಟ್ಟುಗಳು ಗೊಬ್ಬರ, ಉತ್ತಮ ಬೀಜ ಇತ್ಯಾದಿಗಳ ಶೀಘ್ರ ಪೂರೈಕೆಯು ಅತೀ ಅವಶ್ಯ ಎಂದು ನುಡಿದು, ಆಹಾರ ಸಮಸ್ಯೆಯ ಪರಿಹಾರದಲ್ಲಿ ರೈತ ಬಾಂಧವರ ಹೊಣೆ ಗುರುತರವಾದುದೆಂದು ಹೇಳಿ, ಮಡಿ ಫಾರ್ಮಿಂಗ್ ಪ್ರದೇಶದಲ್ಲಾಗುತ್ತಿರುವ ಪ್ರಯತ್ನವನ್ನು ಶ್ಲಾಘಿಸಿ, ಸಿಂಡಿಕೇಟಿನ ಪ್ರಯತ್ನ ಆದರ್ಶವಾಗಿದೆಯೆಂದು ನುಡಿದರು.

ಮಡಿ ಕ್ಷೇತ್ರದ ಸಮೀಪದಲ್ಲಿ ಶ್ರೀಮತಿ ಲಕ್ಷ್ಮಿ ಶೆಡ್ತಿಯವರ ಭೂಮಿಯಲ್ಲಿ ಜಿಲ್ಲಾ ಸಹಕಾರ ಅಭಿವೃದ್ಧಿ ಸಂಘದಿಂದ ಒದಗಿಸಲಾದ 1601 ನೇ ಪಂಪು ಸೆಟ್ಟನ್ನು ಉದ್ಘಾಟಿಸಿ ಬಂದ ರಾಜ್ಯದ ವಿದ್ಯುತ್ ಸರಬರಾಯಿ ಮಂಡಳಿಯ ಅಧ್ಯಕ್ಷ ಶ್ರೀ ಬಿ. ಸಾಂಬಶಿವನ್ ಇವರು ಭಾಷಣ ಮಾಡುತ್ತಾ, ವಿದ್ಯುತ್ತಿಗೆ ತುಂಬಾ ಬೇಡಿಕೆ ಇದ್ದರೂ ಅದನ್ನು ಪೂರೈಸಲು ತಮಗಿರುವ ತೊಡಕುಗಳನ್ನು ವಿವರಿಸಿ ಅದಕ್ಕೆ ಶ್ರೀ ಸುಬ್ರಹ್ಮಣ್ಯ ಅವರ ಸಹಕಾರ ಕೋರಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಆರ್. ಎಂ. ಪಾಟೀಲರು ಮಾತನಾಡುತ್ತಾ, ಜನತೆಯಲ್ಲುಂಟಾಗಿರುವ ಜಾಗೃತಿಯನ್ನು ಕೊಂಡಾಡಿ, ಉತ್ತಮ ಬೀಜ ಗೊಬ್ಬರ ಮತ್ತು ಆಧುನಿಕ ಕೃಷಿ ಪದ್ಧತಿಯ ವಿಷಯಕವಾಗಿ ರೈತರಲ್ಲಿ ಆತ್ಮವಿಶ್ವಾಸವುಂಟಾದಾಗ ಆಹಾರ ಸಮಸ್ಯೆ ಬಗೆಹರಿಯುವುದೆಂದು ನುಡಿದರು. ಮಾತ್ರವಲ್ಲದೇ ಮಡಿಯಲ್ಲಾಗಿರುವ ಕಾರ್ಯ ಇಲ್ಲಿನ ಜನ ತೋರಿದ ಉತ್ಸಾಹದಿಂದ ಹೊಸ ಚೈತನ್ಯ ಉಂಟಾಗಿದೆಯೆಂದು ನುಡಿದರು.

ಆರಂಭದಲ್ಲಿ ಡಾ. ಟಿ. ಎಂ. ಎ. ಪೈಗಳು ಮೈಸೂರು ಸರಕಾರದ ಸ್ಥಳೀಯ ಆಡಳಿತ ಮತ್ತು ಪಂಚಾಯತ್ ಸಚಿವ ಶ್ರೀ ಆರ್. ಎಂ. ಪಾಟೀಲ್ ಅವರನ್ನು ಅಧ್ಯಕ್ಷತೆ ವಹಿಸುವಂತೆ ಕೇಳಿಕೊಂಡು ಅವರ ಹಾಗೂ ಶ್ರೀ ಸುಬ್ರಮಣ್ಯಂ ಅವರ ಪರಿಚಯ ಮಾಡಿ ಕೊಟ್ಟರು. ಶ್ರೀ ಟಿ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಇಂದಿನ ಆಹಾರ ಸಮಸ್ಯೆ ಅದಕ್ಕೆ ಪರಿಹಾರ ಮಾರ್ಗಗಳನ್ನು ವಿವರಿಸಿ ರೈತ ಬಾಂಧವರು ವಹಿಸತಕ್ಕ ಪಾತ್ರವನ್ನು ನಿರೂಪಿಸಿದರು.

ಆರಂಭದಲ್ಲಿ ಮಂತ್ರಿ ಸುಬ್ರಹ್ಮಣ್ಯಂ ಮತ್ತು ಶ್ರೀ ಪಾಟೀಲರನ್ನು ಬೇಂಡು ವಾಲಗಗಳ ಮೂಲಕ ಸ್ವಾಗತಿಸಲಾಯಿತು. ಮಡಿ ಫಾರ್ಮಿನಲ್ಲಿ ವಿವಿಧ ರೀತಿಯ ಬೀಜಗಳಿಂದ ಬೆಳೆಸಿದ ಭತ್ತದ ಪೈರನ್ನೂ ತ್ಯಾಚುಂಗ್ 65 ಬೆಳೆಯನ್ನೂ, ಜೋಳ ರಾಗಿ ಜವಾರ್ ಬೆಳೆಯನ್ನೂ ನವೀನ ಯಂತ್ರಗಳ ಪ್ರಯೋಗವನ್ನೂ ಮಂತ್ರಿಗಳು ವೀಕ್ಷಿಸಿದರು.

ಕೊನೆಯಲ್ಲಿ ಶ್ರೀ ಎಸ್. ಧರ್ಮಸಾಮ್ರಾಜ್ಯ ಎಂ. ಎಲ್. ಎ. ಯವರು ವಂದನಾರ್ಪಣೆಗೈದರು.

ಮಂಗಳೂರಿನಲ್ಲಿ ಶ್ರೀ ಸುಬ್ರಹ್ಮಣ್ಯಂ

ಕಳೆದ ತಾ. 23ರಂದು, ಮಂಗಳೂರಿನ ಸರಕಾರಿ ಫ್ರೀಜಿಂಗ್ ಮತ್ತು ಕೋಲ್ಡ್ ಸ್ಟೋರೇಜ್ ಪ್ಲಾಂಟಿನ ಎಕ್ಸ್‌ಟೆನ್ಶನ್ ಕಟ್ಟಡವೊಂದನ್ನು ಕೇಂದ್ರ ಆಹಾರ ಮತ್ತು ಕೃಷಿ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂನವರು ಉದ್ಘಾಟಿಸುತ್ತಾ ಸಮುದ್ರದಲ್ಲಿ ಪ್ರಾಕೃತಿಕವಾಗಿಯೇ ದೊರೆಯುವ ಮತ್ತು ಈ ವರೆಗೆ ಉಪಯೋಗಿಸಿಕೊಳ್ಳಲಾಗಿರದಂತಹ ಮತ್ಸ್ಯ ಸಂಪತ್ತಿನ ಪೂರ್ಣ ಸದುಪಯೋಗಕ್ಕಾಗಿ ಸಾಧ್ಯವಿರುವ ಪ್ರತಿಯೊಂದು ಪ್ರಯತ್ನವನ್ನೂ ಮಾಡಬೇಕೆಂದೂ, ಈ ಗುರಿ ಸಾಧನೆಗೆ ನಾವು ಮಹತ್ತರ ಪ್ರಯತ್ನ ಮಾಡಬೇಕಾಗಿದೆ ಎಂದೂ ನುಡಿದರು. ಮುಂದುವರಿಯುತ್ತಾ ಅವರು, ಮತ್ಸ್ಯ ಜೋಪಾಸನೆಯ ಮಟ್ಟಿಗೆ ನಮ್ಮ ಹಳೆಯ ಕ್ರಮವನ್ನು ಎಷ್ಟು ಶೀಘ್ರವಾಗಿ ನಾವು ತೊರೆಯುವೆವೊ ರಾಷ್ಟ್ರಕ್ಕೆ ಅಷ್ಟಕ್ಕೂ ಹಿತಕರ. ಯಾಂತ್ರಿಕ ದೋಣಿಗಳ ಮೂಲಕ ಮತ್ತು ಆಳ ಸಮುದ್ರದಲ್ಲಿ ಮೀನು ಹಿಡಿಯುವ ಪದ್ಧತಿ ಆರಂಭ ಮಾಡುವುದರ ಮೂಲಕ ಕಳೆದ ಯೋಜನೆಯ ಆರಂಭದ ವೇಳೆ ಮೀನುಗಾರಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಆಧುನಿಕತೆಯ ಆರಂಭವಾಗಿತ್ತು. ಚತುರ್ಥ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಇದನ್ನು ಇನ್ನೂ ಅಧಿಕಗೊಳಿಸಲಾಗುವುದು ಎಂದು ಹೇಳಿದರು.

ಮೀನುಗಾರಿಕೆ ಇಲಾಖೆಗಾಗಿ ಕೈಗೊಳ್ಳಲಾಗಿರುವ ಹಲವಾರು ಸಾರ್ವಜನಿಕ ಕಾರ್ಯಯೋಜನೆಗಳನ್ನು ಸುಪರಿಂಟೆಂಡೆಂಟ್ ಎಂಜಿನಿಯರ್ ಶ್ರೀ ಸುಂದರ ನಾಯ್ಕರು ವಿವರಿಸಿದರು. ಅಂತ್ಯದಲ್ಲಿ ಫಿಶರೀಸ್ ಎಂಜನಿಯರಿಂಗ್ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಎಂ. ಕೃಷ್ಣರಾಜ್ ಇವರು ಧನ್ಯವಾದ ಸಮರ್ಪಿಸಿದರು.

ಸಿಂಡಿಕೇಟ್ ಬೇಂಕ್ ಎಗ್ರಿಕಲ್ಚರಲ್ ಫೌಂಡೇಶನ್ ಉದ್ಘಾಟನೆ

ಮಣಿಪಾಲ, ತಾ. 23, ಶ್ರೀ ಸುಬ್ರಹ್ಮಣ್ಯಂನವರು ಸಿಂಡಿಕೇಟ್ ಎಗ್ರಿಕಲ್ಚರಲ್ ಫೌಂಡೇಶನ್‌ನನ್ನು ಉದ್ಘಾಟಿಸುತ್ತಾ, ಇಂಥ ಫೌಂಡೇಶನ್‌ಗಳು ವಿದೇಶಗಳಲ್ಲಿ ಉತ್ತಮ ಕಾರ್ಯವೆಸಗುತ್ತಿವೆ, ಸಿಂಡಿಕೇಟಿನ ಈ ಕಾರ್ಯ ಅಭಿನಂದನೀಯ ಹಾಗೂ ಇದೊಂದು ಪ್ರಗತಿಪರ ಹೆಜ್ಜೆ. ಈ ಆದರ್ಶವು ಇತರ ಸಂಸ್ಥೆಗಳಿಗೂ ಒಂದು ಮಾದರಿಯಾಗಿದೆ ಎಂದು ನುಡಿದರು. ಮುಂದುವರಿಯುತ್ತಾ ಅವರು ನಮ್ಮ ದೇಶದ ತರುಣರು ಕೃಷಿ ಕ್ಷೇತ್ರದಲ್ಲಿ ಆಸಕ್ತಿ ವಹಿಸಿ ದುಡಿಯಬೇಕೆಂದು ಅಂದರು. ಮಾತ್ರವಲ್ಲದೇ ಮಿಶ್ರ ಆಹಾರ ಪದ್ಧತಿಯಿಂದ ಆಹಾರ ಸಮಸ್ಯೆ ಸುಲಭ ಸಾಧ್ಯವಾಗಬಹುದೆಂದು ವಿವರಿಸಿದರು.

ಪ್ರಾರಂಭದಲ್ಲಿ ಡಾ. ಟಿ. ಮಾಧವ ಪೈಗಳು ಸ್ವಾಗತಿಸುತ್ತಾ, ಸಿಂಡಿಕೇಟು ಆಹಾರ ಸಮಸ್ಯೆಯ ವಿಷಯದಲ್ಲಿ ವಹಿಸಿರುವ ಪ್ರಯತ್ನವನ್ನು ವಿವರಿಸಿದರು. ಸಿಂಡಿಕೇಟ್ ಬೇಂಕಿನ ಕೃಷಿ ಇಲಾಖಾ ಸಲಹೆಗಾರರಾದ ಡಾ. ಎನ್. ಎಸ್. ಮೆಹತಾರವರು ಭಾಷಣ ಮಾಡಿ ರೈತನಿಗೆ ತಾನು ಬೆಳೆಸಿದುದಕ್ಕೆ ಯೋಗ್ಯ ಪ್ರತಿಫಲ ದೊರಕಬೇಕೆಂದೂ, ಈ ಜಿಲ್ಲೆ ಸಾಧಿಸುವ ಪ್ರಗತಿ ದೇಶಕ್ಕೆಲ್ಲ ಮಾದರಿಯಾಗಲೆಂದೂ ಹಾರೈಸಿದರು. ಶ್ರೀ ಟಿ. ಎ. ಪೈಗಳು ಮಾತನಾಡುತ್ತಾ, ಮಿಶ್ರ ಆಹಾರ ಪದ್ಧತಿಯನ್ನು ನಾವು ಬಳಕೆಗೆ ತರಬೇಕೆಂದು ಒತ್ತಿ ಹೇಳಿದರು. ನಾವು ಸ್ವಾವಲಂಬಿಗಳಾಗಿ ನಮ್ಮ ಕಾಲಲ್ಲೇ ನಾವು ನಿಲ್ಲಬೇಕೆಂದು ಅವರು, ಪ್ರತಿಪಾದಿಸಿದರು. ಕೊನೆಯದಾಗಿ ಅವರು, ಇಂಥ ಬೀಜಗಳನ್ನು ಸಿಂಡಿಕೇಟ್ ಬ್ಯಾಂಕಿನ ಎಲ್ಲ ಕೇಂದ್ರಗಳಿಂದ ಹಂಚುವ ಪ್ರಯತ್ನ ನಡೆಸಲಾಗುವುದು ಎಂದೂ, ದ. ಕ. ಜಿಲ್ಲೆ ಉಳಿತಾಯ ಸರಬರಾಜು ಮಾಡುವಂತಾಗಲೆಂದೂ ಹಾರೈಸಿದರು.

ಕೊನೆಯಲ್ಲಿ ಶ್ರೀ ಕೆ. ಕೆ. ಪೈಗಳು ಧನ್ಯವಾದ ಸಮರ್ಪಿಸಿದರು.

ನೆಲ-ಜಲ ಮತ್ತು ಮಾನವ ಪರಿಶ್ರಮದಿಂದಲೇ ಕೃಷಿ ಅಭಿವೃದ್ಧಿ

ಮಣಿಪಾಲ, ಮಡಿ ಬೀಜದ ವಿತರಣೋತ್ಸವದ ಪೂರ್ವಭಾವಿ ತಾ. 20ರಂದು ಜರಗಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತಾಡುತ್ತಾ ಶ್ರೀ ಟಿ. ಎ. ಪೈಗಳು, ಮಡಿಯಲ್ಲಿ ಇದೇ ತಾ. 22ರಂದು ಕೇಂದ್ರ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂರವರಿಂದ ಜರಗುವ ಬೀಜವಿತರಣ ಪ್ರಾರಂಭ ಸಮಾರಂಭದ ಕುರಿತು ಪ್ರಸ್ತಾಪಿಸಿ, ಕೃಷಿ ಅಭಿವೃದ್ಧಿಗೆ ನೆಲ-ಜಲ ಮತ್ತು ಮಾನವ ಪರಿಶ್ರಮಗಳ ಪರಿಪೂರ್ಣ ಪ್ರಯೋಜನ ಪಡೆದು ಗ್ರಾಮ ಮಟ್ಟದಲ್ಲಿ ಪ್ರಯತ್ನಿಸುವುದವಶ್ಯ. ಈ ನಿಟ್ಟಿನಲ್ಲಿ ರೈತರಿಗೆ ಆಧುನಿಕ ಸಾಧನ ಸೌಲಭ್ಯಗಳನ್ನೆಲ್ಲ ಒದಗಿಸಿ ಕೃಷಿಯಲ್ಲೂ ಲಾಭವಿದೆ, ತಮ್ಮ ಭವಿಷ್ಯ ಉಜ್ವಲವಾಗಬಲ್ಲುದು ಎಂದು ಅವರಲ್ಲಿ ಆತ್ಮವಿಶ್ವಾಸ ಮೂಡುವಂತೆ ಮಾಡುವುದು ಇಂದಿನ ಅವ್ಯ ಕರ್ತವ್ಯವಾಗಿದೆಯೆಂದು ನುಡಿದರು.

ಮುಂದುವರಿಯುತ್ತಾ ಅವರು, ಜಿಲ್ಲೆಯಲ್ಲಿ ಈ ವರೆಗೆ ಕೃಷ್ಯಭಿವೃದ್ಧಿಯ ಕುರಿತು ಸಾಧಿಸಲಾದ ಪ್ರಗತಿಯನ್ನು ವಿವರಿಸಿ, ಮಡಿಯಲ್ಲಿನ ಪ್ರಯೋಗ — ಫಲಿತಾಂಶಗಳನ್ನು ರೈತರು ಪ್ರತ್ಯಕ್ಷ ಕಂಡು ಪ್ರಯೋಜನ ಪಡೆಯಲೆಂಬುದೇ ನಮ್ಮ ಉದ್ದೇಶವೆಂದರು. ಮಾತ್ರವಲ್ಲದೇ, ಈ ಎಲ್ಲಾ ಕಾರ್ಯಕ್ರಮಗಳಲ್ಲಿ ರೈತಬಾಂಧವರು ಭಾಗವಹಿಸಿ ತಮ್ಮ ಅನುಭವಗಳನ್ನು ಇಮ್ಮಡಿಸಿಕೊಂಡು ಪ್ರಯೋಜನ ಪಡೆದು ಅಧಿಕ ಆಹಾರ ಉತ್ಪಾದನೆಯಲ್ಲಿ ಈ ಜಿಲ್ಲೆಯನ್ನು ಆದರ್ಶ ಜಿಲ್ಲೆಯಾಗಿ ಮಾಡಬೇಕೆಂದೂ ಹೇಳಿದರು.

ಸಿಂಡಿಕೇಟ್ ಬ್ಯಾಂಕಿನ ಕೃಷಿ ಇಲಾಖೆಯ ಸಲಹೆಗಾರರಾದ ಶ್ರೀ ಮೆಹ್ತಾರವರು ಬ್ಯಾಂಕಿನ ಕೃಷಿ ಇಲಾಖೆಯವರು ಸಾಧಿಸಿದ ಸಾಧನೆಗಳ ವಿವರಣೆಯಿತ್ತರು.

ನಾಟಕೋತ್ಸವ

ತಾ. 16—4—66 ರಂದು ನಿಟ್ಟೂರು ಗೀತಾ ಮಂಡಳಿಯವರಿಂದ ಶ್ರೀ ಕೆ. ಎಸ್. ಭಂಡಾರಿಯವರ ನಿರ್ದೇಶನದಲ್ಲಿ ಭಾಗ್ಯಚಕ್ರ (ಕನ್ನಡ) ಸತ್ಯದ ಬೊಲ್ಪು (ತುಳು) ಎಂಬ ಎರಡು ನಾಟಕಗಳು ನಿಟ್ಟೂರು ಹಾ. ಎ. ಶಾಲಾ ಅಮರ ಕಲಾಮಂದಿರದಲ್ಲಿ ಶ್ರೀ ಎಸ್. ವಿಲಿಯಮ್ ಪಿಂಟೋರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲ್ಪಟ್ಟುವು. ಶ್ರೀ ಕೆ. ಎ. ಸಿ. ಧರ್ಟಾರವರು ಧನ್ಯವಾದವಿತ್ತರು.

ಹೋಂ ಗಾರ್ಡ್ ಯುನಿಟ್ ಉದ್ಘಾಟನೆ

ಉಡುಪಿ ಹೋಂ ಗಾರ್ಡ್ ಯುನಿಟಿನ ಉದ್ಘಾಟನಾ ಸಮಾರಂಭವು ತಾ. 17 ರಂದು ಗಾಂಧಿ ಮೈದಾನದಲ್ಲಿ ಲೆಫ್ಟಿನೆಂಟ್ ಡಿ. ಸಿ. ಜೋಶಿಯವರಿಂದ ನೆರವೇರಿತು. ಆರಂಭದಲ್ಲಿ ದ. ಕ. ಜಿಲ್ಲಾ ಹೋಂಗಾರ್ಡ್ಸ್ ಯುನಿಟಿನ ಕೋಡೆಂಟ್ ಡಾ॥ ಎಂ. ವಿ. ಶೆಟ್ಟರೂ, ಶ್ರೀ ಮಧ್ವರಾಜ್ ಎಂ. ಎಲ್. ಎ. ಯವರೂ ಬಂದ ಅತಿಥಿಗಳನ್ನು ಸ್ವಾಗತಿಸಿದರು. ಲೆಫ್ಟಿನೆಂಟ್ ಜೋಶಿಯವರು ಉದ್ಘಾಟಿಸುತ್ತಾ ಮಂಗಳೂರಿನ ಹೋಂಗಾರ್ಡ್ಸಿನ ತರಬೇತಿಯನ್ನು ಶ್ಲಾಘಿಸಿ, ಹೋಂಗಾರ್ಡ್ಸ್‌ನ ಕರ್ತವ್ಯ ಉಪಯೋಗಗಳನ್ನು ವಿವರಿಸಿದರು.

ಉಡುಪಿ ಯುನಿಟಿಗೆ ಒಟ್ಟಿಗೆ 60 ಜನ ಆಯ್ಕೆಗೊಂಡಿದ್ದು, ಸೋಮ, ಮಂಗಳ ಬುಧವಾರಗಳಲ್ಲಿ ಉಡುಪಿ ತಾಲೂಕು ಆಫೀಸಿನ ವಠಾರದಲ್ಲಿ ತರಬೇತಿಯನ್ನೀಯಲಾಗುವುದೆಂದು ತಿಳಿದು ಬರುತ್ತದೆ.

ಕಥಾ ಸ್ಪರ್ಧೆಯ ಫಲಿತಾಂಶ

ಕಾಸರಗೋಡಿನ ವಾಗ್ದೇವಿ ಪ್ರಕಾಶನದ ಆಶ್ರಯದಲ್ಲಿ ನಡೆದ ದಿ| ರಾಮಕೃಷ್ಣ ಶೆಟ್ಟಿ, ಕಾರ್ಯಹಳ್ಳಿ ಸ್ಮಾರಕ ಕಥಾ ಸ್ಪರ್ಧೆಯಲ್ಲಿ ಕುಮಾರಿ ಶ್ರೀ ದೇವಿಯವರ ‘ಆ ಶಾರದ’ಕ್ಕೆ ಪ್ರಥಮ ಬಹುಮಾನವೂ ಎನ್ಕೆ ಶಂಕರಪನ್ನವರ ‘ಅಂದು—ಇಂದು’ ಕಥೆಗೆ ದ್ವಿತೀಯ ಬಹುಮಾನವೂ ದೊರೆತಿದೆ.

ಅಮೃತ ಬಿಂದು

ಕರುಣೆ, ದಯೆ, ಮಮತೆಗಳಿಂದ ಕೂಡಿರದ ಯಾವ ಮನುಷ್ಯನೂ ಮಹಾತ್ಮನೆನಿಸುವದಿಲ್ಲ.

ಂ ಂ ಂ

ನ್ಯಾಯ, ನೀತಿ, ತೃಪ್ತಿ ಮತ್ತು ಸತ್ಯಪ್ರಿಯತೆಯ ತಳಹದಿ ಇಲ್ಲದ ಯಾವ ಸುಖದ ಗೋಪುರವೂ ಹೆಚ್ಚು ಕಾಲ ನಿಲ್ಲಲಾರದು.

ಂ ಂ ಂ

ತಾನು ಸುಖಿಯೆಂದು ಭಾವಿಸದ ಯಾವ ಮನುಷ್ಯನೂ ಸುಖದಿಂದಿರಲಾರ.

ಂ ಂ ಂ

ನಮಗೆ ಅಪಾರ ಇದೆಯೆಂಬುದು ಸಂತೋಷಕ್ಕೆ ಕಾರಣವಲ್ಲ; ನಾವು ಎಷ್ಟನ್ನು ಅನುಭೋಗಿಸುತ್ತೇವೆಯೆಂಬುದೇ ಸುಖಕ್ಕೆ ಕಾರಣ.

ಂ ಂ ಂ

ಅತೀ ಆಸೆಯಿಂದ ಸುಖಕ್ಕಾಗಿ ಕಾತರ ಪಡಬೇಡ. ಅತೀ ಜಿಗುಪ್ಸೆಯಿಂದ ಕಷ್ಟಕ್ಕೆ ಹೆದರ ಬೇಡ.

ಂ ಂ ಂ

ಕಾಶಿ, ಮಥುರಾ, ರಾಮೇಶ್ವರದಲ್ಲೇನಿದೆ? ನಿಜವನ್ನ ಅರಿಯಬೇಕಾದರೆ ನಿನ್ನೊಳಗೆ ನೋಡು.

ರೈತ ಮುರುಗ

(ಎರಡನೇ ಪುಟದಿಂದ)

ನಿನ್ನ ಕಣ್ಮುಂದೆಯೇ ಅದು ನಡೆದು ಹೋಗಬಹುದು. ತನ್ನ ಸ್ವಾರ್ಥಕ್ಕಾಗಿ ಸ್ವಕಾರ್ಯಕ್ಕಾಗಿ ಯಾರು ಇನ್ನೊಬ್ಬನಿಗೆ ಮೋಸಮಾಡುತ್ತಾನೋ, ಅವನಿಗೆ ಇನ್ನೊಬ್ಬನು ಮೋಸಮಾಡುತ್ತಾನೆ. ಬಾಳಿನ ಈ ನೈಜ ಕಾನೂನಿನಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಪೆರಿಯ ಸ್ವಾಮಿ ಕೂಡಾ ಈಗ ನಾಶಕ್ಕೊಳಗಾದವನಿದ್ದಾನೆ. ಅವನ ಅಂಕೆಗೆ ಆಧಾರೂ ಕಿವಿಕೊಡಲಿಲ್ಲ. ಎಂಬುದನ್ನು ನಾನು ಕೇಳಿದ್ದೇನೆ. ಅಂದರೆ ಎಲ್ಲವೂ ಅಂತ್ಯವಾದಂತೆಯೇ ಸರಿ. ನಮಗೆ ತೆರೆದಿರುವ ಮೂರನೆಯ ಬಾಗಿಲು ಪೌರೀಯ ಕಾರಾಗ್ರಹದ್ದಿದೆ. ಅಲ್ಲಿ ಪೆರಿಯಸ್ವಾಮಿ ನಮ್ಮ ಜೊತೆಗಾರನಾಗಿ ಬರುತ್ತಾನೆ. ತನ್ನ ರೈತನಿಗೆ ಅವನು ಸ್ವ-ಲಾಭಕ್ಕಾಗಿ ಮೋಸಮಾಡಿದಕ್ಕೆ, ಅವನಿಗೆ ವಕೀಲರು, ಸಾಲಕೊಟ್ಟವರು, ಸಂಬಂಧಿಗಳು ಹಾಗೂ ಇತರರು ಅವರ ಲಾಭಕ್ಕಾಗಿ ಮೋಸಮಾಡುತ್ತಾರೆ. ಜೇಡನು ನೊಣದ ಮೇಲೆ ಬಾಳ್ವೆನಡೆಸಿಕೊಂಡಿದ್ದಲ್ಲಿ ಹಲ್ಲಿಯು ಜೇಡನನ್ನು ನಂಬಿಕೊಂಡಿದೆ. ಅದುವೆ ಜೀವನದ ನಿಜವಾದ ಏಣಿ. ಒಂದೇ ಸಮಯದಲ್ಲಿ ಅದರ ಎಲ್ಲಾ ಮೆಟ್ಟಿಲುಗಳನ್ನು ಕಾಣಲು ಸಾಧ್ಯವಿರುವದಿಲ್ಲ.'

"ಮುರುಗ, ಇದು ಪ್ರಶಂಸನೀಯ ತತ್ವವಿದೆ, ಸಂಶಯ ಇಲ್ಲ; ನಾನು ಒಪ್ಪುತ್ತೇನೆ. ಪದ್ಧತಿಯು ಕೆಟ್ಟದಕ್ಕೆ ಕಾರಣ, ದೊಡ್ಡ ಚಕ್ರಗಳ ಹಿಂದುಗಡೆ, ಸುಂಯ್ ಶಬ್ದ ಮಾಡುತ್ತ, ಸುಮ್ಮಗೆ ಅನುರಿಸುವ ಸಣ್ಣ ಚಕ್ರಗಳಂತೆ ವ್ಯಕ್ತಿಯೂ ಪದ್ಧತಿಗಳ ಹಿಂದುಗಡೆ ಸಾಗಬೇಕಾಗುತ್ತದೆ ಎಂಬ ನಿನ್ನ ಮಾತನ್ನು ನಾನೂ ಒಪ್ಪುತ್ತೇನೆ. ಆದರೆ ಅದನ್ನು ನಾವೆಂತು ಸರಿಪಡಿಸುವದು? ಈಗ ಅಥವಾ ಇನ್ನೆಂದಾದರೂ ನೀನು ಮತ್ತು ನಾನು ಅದನ್ನು ವಿರೋಧಿಸದಿದ್ದಲ್ಲಿ ಬೇರಿನ್ನಾರು ವಿರೋಧಿಸಿಯಾರು?"

"ವಿರೋಧಿಸುವದು—ಅದು ದಾರಿ ಇರುವದಿಲ್ಲ—ನಿನ್ನನ್ನೂ ಆ ಸುಳಿಯು ಸೆಳೆದುಕೊಂಡೊಯ್ದು ಎಲ್ಲಾದರೂ ಬಿಸಾಡೀತು. ಕೆಟ್ಟದು ತನ್ನಷ್ಟಕ್ಕೆ ಕೊಳೆತು ಹೋಗಲಿ. ಬಂಕಿಗೆ ಇದ್ದಲನ್ನು ಸೇರಿಸಬೇಡ; ಕ್ರೋಧದ ಬಿಸಿ ಬೂದಿಯು ಬೇಗನೆ ತಣ್ಣಗಾಗಲಿ. ಅದೃಷ್ಟದ ಆಕರ್ಷಕ ಚಕ್ರವನ್ನು ಮುಟ್ಟಿದಲ್ಲಿ ನೀನು ಚೂರು ಚೂರಾಗಿ ಬಿದ್ದು ಹೋಗುವ ವರೆಗೂ ಅದರೊಂದಿಗೆ ಸುತ್ತುತ್ತಿರಬೇಕಾಗುತ್ತದೆ—ನಮ್ಮ ದುರಾದೃಷ್ಟವನ್ನು ನೋಡು. ಇದಕ್ಕಿಂತ ಉತ್ತಮ ಪಾಠ ಬೇರೆ ಬೇಕೇ? ಯಾವ ವಿಧದಲ್ಲೇ ಇರಲಿ, ತೊಪ್ಪೈ, ಹೆಂಡದಂಗಡಿಯನ್ನು ತೆರೆಯುವದೊಳ್ಳೆಯದಲ್ಲ."

"ಅದೊಳ್ಳೆಯದಲ್ಲದೆ ಇರಬಹುದು, ಮುರುಗ, ಆದರೆ ಅದಿನ್ನೂ ನಮ್ಮ ದಾರಿಯಲ್ಲಿ ಉಳಿದಿರುವ ಹಾಗೂ ವಿಶಾಲವಾಗಿ ತೆರೆದಿಟ್ಟಿರುವ ಒಂದೇ ಒಂದು ಬಾಗಿಲು. ಹಳ್ಳಿಯಲ್ಲಿರುವ ಬಡವರಿಗೆ ಸಹಾಯದ ಕೈಯನ್ನು ಕೊಡಲು ಹಾಗೂ ನಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅದೊಂದೇ ಯುಕ್ತವಾದ ಮಾರ್ಗ. ಐಶ್ವರ್ಯವು ನೀರಿನಂತೆ ಮುಂಚಿನ ಮಾರ್ಗದಲ್ಲಿ ಮುಂದರಿಯುತ್ತದೆ. ಪ್ರಿಯ ಮುರುಗ, ನೀನು ಮತ್ತು ನಾನು ಪದ್ಧತಿಯನ್ನು ಬದಲಾಯಿಸಲು ಪ್ರಯತ್ನಿಸದಿದ್ದಲ್ಲಿ ಇನ್ನಾರು ಪ್ರಯತ್ನಿಸಿಯಾರು?"

"ವಿಷಾದಪೂರ್ಣ ವಿಷಯವೆಂದರೆ, ತೊಪ್ಪೈ, ಕಾಲುಗಳನ್ನೂ ಕೈಗಳನ್ನೂ ಕೆಸರಿನಲ್ಲಿ ಬಹಳ ಆಳಕ್ಕೆ ಹಾಗೂ ದಡದಿಂದ ದೂರಕ್ಕೆ ಬಿಸಾಡಿ ಬಿಟ್ಟಿದ್ದೇವೆ." ಮೇಲಿನಿಂದ ಮೇಲೆ ನಿಟ್ಟುಸಿರನ್ನು ಬಿಡುತ್ತ ಮುರುಗನು ಹೇಳಿದನು.

"ಹಲ್ಲು ಕಡಿಯುತ್ತ ತೊಪ್ಪೈ ಉತ್ತರ ಕೊಡಲಾರಂಭಿಸಿದನು: –

"ಎಂದಿಗೂ ಇಲ್ಲ, ಮುರುಗ, ಈ ಒಂದು ವರ್ಷ ನಾವು ಜಂಟಿಬಲಗಳಿಂದ—ಭೂಮಿ, ವಾಯು ಮತ್ತು ನೀರು; ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳಿಂದ—ಬಂಧಿಸಲ್ಪಟ್ಟಿರುವೆವಾದರೂ ಅದು ಸಾಧ್ಯವಿಲ್ಲ. ಪ್ರಾಚೀನ ಕಾಲದಂತೆ ಈಗಲೂ, ಮನುಷ್ಯನು ಮನುಷ್ಯನೊಂದಿಗೆ ನೇರ ಯುದ್ಧ ಮಾಡುವಂತೆ ಮಾಡುವದಿದ್ದಲ್ಲಿ ನಾನು ಕರೆಕೊಡಲು ಸಿದ್ಧನಿದ್ದೇನೆ. ಆದರೆ ಇದು ಬಲ ಅಥವಾ ಧೈರ್ಯದ ದಿನವಲ್ಲ; ಕೇವಲ ಬೂಜು ಹಿಡಿದಿರುವ ಮಾತುಗಳ ಕಾಲ. ಮುರುಗನನ್ನು ಹಾಗೂ ತೊಪ್ಪೈಯನ್ನು ಒಂದು ವರ್ಷ ಸೆರೆಮನೆಯಲ್ಲಿಟ್ಟುದುದಕ್ಕೆ ಪ್ರಪಂಚವು ಚೆನ್ನಾಗಿ ಪ್ರತಿಫಲವನ್ನು ಪಡೆಯಲೇ ಬೇಕು. ಪೆರಿಯಸ್ವಾಮಿಗೆ ಕೊಟ್ಟಾಯ್ತು. ಇನ್ನುಳಿದ...."

"ನೀನೇನು ಮಾಡಬಲ್ಲೆ, ತೊಪ್ಪೈ! ಬಲಶಾಲೀ ಸರಕಾರದೆದುರು ನೀನು, ಒಬ್ಬ ಬಡ ಪಡ್ಯಾಚಿ, ಏನು ತಾನೇ ಮಾಡಲು ಸಾಧ್ಯವಿದೆ?" ಆನಂದಶೂನ್ಯ ಮತ್ತು ವಿಕಾರ ನಗುಹೊರಬರುತ್ತಿದ್ದಂತೆ ಮುರುಗನುಹೇಳಿದನು.

"ಕ್ರಮೇಣ ನಾನು ಹೇಳುತ್ತೇನೆ." ತೊಪ್ಪೈ ಗುರುಗುಟ್ಟಿ ಸುಮ್ಮನಾದನು.

"ದುಡುಕಿ ಮಾಡುವ ಕಲಸವು ನಮ್ಮನ್ನಿನ್ನೂ ನಾಶಪಡಿಸ್ತೊಯ್ಯುತ್ತದೆ." ಮುರುಗನು ಊಹಿಸಿಕೊಂಡನು.

'ಮುರುಗ, ನನ್ನನ್ನೀಗ ನೀನು ವಿಶ್ವಾಸದ್ರೋಹಿ ಎಂದು ಭಾವಿಸಬಹುದು, ನೀನು ನಾಕಟ್ಟಿರುವ ಈ ದೇಹವು ಬಿದ್ದು ಹೋದರೂ ಚಿಂತಿಲ್ಲ; ನಾನು ಮಾಡಿರುವ ತಪ್ಪನ್ನು ಸರಿಮಾಡಬಡುತ್ತೇನೆ."

ಘಂಟೆಯ ಶಬ್ದ ಕೇಳಿ ಬಂತು. ತೊಪ್ಪೈ ತನ್ನ ಕೋಣೆಯ ಒಳಗೆ ಹೋದನು.

ಸಂಜೆ ಸರಿದಂತೆ ಅಂಧಕಾರ ಹಬ್ಬಿತು; ಮುರುಗನಿಗೆ ಗಾಢ ನಿದ್ದೆ ಬಂದಿತ್ತು. ಆತನ ಭುಜಕ್ಕೆ ಯಾರೋ ಹಿಡಿದು ಅವನನ್ನು ಎಚ್ಚರಿಸಿದಾಗ, ಎದುರಿಗೆ ತೊಪ್ಪೈಯು ಇನ್ನೊಬ್ಬನೊಂದಿಗೆ ನಿಂತಿರುವದನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ತೊಪ್ಪೈಯು ಮೆಲ್ಲನೆ ಹೇಳಲಾರಂಭಿಸಿದನು. "ಮುರುಗ, ಈ ದಾರಿಯನ್ನು ನಾವೀಗ ಹಿಡಿಯಬೇಕಾಗಿದೆ. ಇಲ್ಲಿ ನನ್ನೊಂದಿಗಿರುವ ಸ್ನೇಹಿತನ ಉಪಕಾರವನ್ನು ನಾನು ಮರೆಯುವಂತಿಲ್ಲ. ನಿನ್ನನ್ನು ಬಿಟ್ಟು ನಾನು ಹೋಗುವದು ಹೇಗೆ? ಅಸಮ್ಮತಿ ಸೂಚಿಸಲು ತಲೆ ಅಲ್ಲಾಡಿಸದಿರು. ನಾನು ನೀಚನಿರಬಹುದು, ಆದರೆ ಸ್ವಾಮಿನಿಷ್ಠೆಯುಳ್ಳವನು ಹಾಗೂ ಉಪಕಾರ ಸ್ಮರಣೆ ಮಾಡುವವನಿದ್ದೇನೆ. ನೀನು ಒಪ್ಪದಿದ್ದಲ್ಲಿ ನಿನ್ನನ್ನು ಹೊತ್ತುಕೊಂಡು, ಕಷ್ಟದಿಂದ ಪಾರಾಗಬೇಕಾಗುತ್ತದೆ. ನಿನ್ನನ್ನು ಬಿಟ್ಟು ನಾವು ಹೋಗುವ ಹಾಗೆ ಇಲ್ಲ; ಹಾಗೆ ಮಾತು ಆಡುತ್ತ ಇನ್ನೊಂದು ಕ್ಷಣವನ್ನು ಹಾಳು ಮಾಡುವಂತಿಲ್ಲ. ನಾವೀಗಾಗಲೇ ಇಬ್ಬರು ಪಹರೆಯವರನ್ನು ಬಾಯಿಕಟ್ಟಿ, ಕೈಕಾಲು ಬಿಗಿದು ಹಾಕಿ ಬಂದಿದ್ದೇವೆ. ನಮಗಾಗಿ ತನ್ನ ಜೀವವನ್ನು ತ್ಯಾಗ ಮಾಡುತ್ತಿರುವ ಮಹಮ್ಮದೀಯ ತರುಣ ಸಹ—ಕೈದಿಗೆ ಸಹಸ್ರ ನಮಸ್ಕಾರಗಳು. ಈ ರಾತ್ರಿಯೇ ನಾವಿಲ್ಲಿಂದ ತಪ್ಪಿಸಿಕೊಂಡು ಹೋಗದಿದ್ದಲ್ಲಿ ಎಲ್ಲವೂ ನೀರಿನ ಮೇಲೆ ಹೋಮ ಮಾಡಿದ ಹಾಗೆಯೇ ಸರಿ; ಅಲ್ಲದೆ ಇನ್ನು ಒಂದು ವರ್ಷ ಅಲ್ಲ, ಈ ರೀತಿ ತಪ್ಪಿಸಿಕೊಂಡು ಹೋಗಲಿಕ್ಕೆ ಪ್ರಯತ್ನಿಸಿದುದಕ್ಕಾಗಿ ಜೀವನ ವಿಡೀ ಇ ... ಕೊಳೆಯ ಬೇಕಾಗುತ್ತದೆ. ನಾವೇ ... ಮಾಡಿದ್ದೇವೆ, ಪ್ರಶ್ನೆ ಹಾಕಬೇಡ. ಕೇವಲ ಒಂದು ಘಂಟೆಯ ಹಿಂದೆ ನಾವಿನ್ನಿಲ್ಲಿ ಹನ್ನೊಂದು ತಿಂಗಳ ವರೆಗೆ ಕಾದಿರಬೇಕೆಂದು ಆಲೋಚಿಸಿದ್ದೆ. ಧೈರ್ಯಶಾಲಿ ಹಾಗೂ ಬುದ್ಧಿವಂತರಿಗೆ ದೇವರು ದಯಾಳು ಇದ್ದಾರೆ. ಹಾಗೆ ನಮಗವರು ಎತ್ತರವನ್ನಳೆಯಲು ಅಲ್ಲವಾದರೂ ಉದ್ದ ಮಾನ ಖಂಡಗಳನ್ನಿತ್ತಿರುವದಾದರೇತಕ್ಕೆ? ಇಂದೇ ರಾತ್ರಿ, ಈ ಬೆಳದಿಂಗಳು ನಾವು ಸ್ವತಂತ್ರರಾಗಿರುವದನ್ನು ಅಥವಾ ಸತ್ತು ಹೋಗುವದನ್ನು ಕಾಣಬೇಕು. ನಾಗಲಾಪುರ ಮಿನ ಪರ್ವತಗಳಲ್ಲಿ ನಾವು ರಾಜ್ಯವನ್ನು ಕಟ್ಟಿ, ಈ ಸರಕಾರವನ್ನು ನಡುಗಿಸಬೇಕು."

ಕೇವಲ ಅರ್ಧ ಘಂಟೆಯೊಳಗೆ, ಆ ಮುವ್ವರೂ ಕಾರಾಗ್ರಹದ ಆವರಣದ ಗೋಡೆಯಾಚೆ ಹೊರಗೆ ಬಂದರು. ಸಾಧಾರಣ ಒಂದು ಫರ್ಲಾಂಗು ದೂರದಲ್ಲಿದ್ದ ಗಣೇಶ ದೇವಸ್ಥಾನದಲ್ಲಿ, ನಾಯಿಲು ಸಿದ್ಧರಾಗಿದ್ದ ಹಣತೆಯ ದೀಪ ಮಿನುಗುತ್ತಿತ್ತು, ಆ ಮುವ್ವರೂ ಸದ್ದಿಲ್ಲದೆ ದೇವಸ್ಥಾನದೊಳಗೆ ಪ್ರವೇಶಿಸಿ ವಿಘ್ನೇಶ್ವರನಿಗೆ ಪ್ರಣಾಮ ಮಾಡಿದರು.

ಹೊಸಬನು ಮಾತಿಗಾರಂಭಿಸಿದನು: "ನಾನು ದರೋಡೆಗಾರರ ಮುಖಂಡನಿರುವೆನಾದುದರಿಂದ ನಮ್ಮ ಸಮುದಾಯದವರಲ್ಲಿರುವದಕ್ಕಿಂತಲೂ ನಿನ್ನಲ್ಲಿ ಹೆಚ್ಚು ಧೈರ್ಯ ಹಾಗೂ ವಿನಯ ಇರುವದನ್ನು ಕಂಡುಕೊಂಡಿದ್ದೇನೆ. ನನ್ನ ಮುದ್ದು ಮಗುವಿನ ಮೊಗವನ್ನು ಕಾಣದೆ ಮೂರು ವರ್ಷಗಳು ಸಂದಿವೆ. ಅವನಿಗೆ ಆಗ ಸ್ಪಷ್ಟವಾಗಿ ಮಾತನಾಡಲಿಕ್ಕೂ ಬರುತ್ತಿದ್ದಿಲ್ಲ. ಆದರೂ ಆ ದೈವೇಚ್ಛೆಯ ದಿನದಂದು ಅವನು ತೊಡೆಯಿಂದ ಕೆಳಗಿಳಿಯುತ್ತ 'ಅಪ್ಪ, ಅಪ್ಪ, ನೀನ್ಯಾವಾಗ ತಿರುಗಿ ಬರುವುದು?' ಎಂದು ಕೇಳಿರುವದು ಇಂದೂ ಕೇಳಿಬರುತ್ತಿದೆ. ಕೇವಲ ಒಂದು ಘಂಟೆಯ ಹಿಂದೆ, ಇನ್ನೆಂದೂ ನಾನವನ ಮುಖವನ್ನು ಕಾಣಲಿಕ್ಕಿಲ್ಲವೆಂದು ಭಾವಿಸಿದ್ದೆ. ಇನ್ನೂ ಹದಿನೇಳು ವರ್ಷಗಳನ್ನು ನಾನು ಸೆರೆಮನೆಯಲ್ಲಿ ಕಳೆಯಬೇಕಾಗಿತ್ತು. ಪರಂಪರಾಗತ ಉದ್ಯೋಗವನ್ನು ಕೈಗೊಂಡುದುದಕ್ಕಾಗಿ ಈ ಶಿಕ್ಷೆಯನ್ನು ಅನುಭವಿಸಬೇಕಾಗಿದೆ. ಆದರೆ, ತೊಪ್ಪೈ, ನೀನು ಮಗನಿಗೆ ತಂದೆಯನ್ನೂ, ತಂದೆಗೆ ಮಗನನ್ನೂ ತಿರುಗಿ ಕೊಟ್ಟಿರುವೆ. ನನ್ನ ಈ ದೇಹ ಹಾಗೂ ವಸ್ತುಗಳೆಲ್ಲಾ ನಿನ್ನವಿವೆ.

ಅವನು ಚಿಕ್ಕ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು, ಹಾಗೆ ತೊಪ್ಪೈಯ ಕೈಗಳನ್ನು ತನ್ನದರಲ್ಲಿ ತೆಗೆದುಕೊಂಡನು. ಇದನ್ನು ಕಂಡ ಮುರುಗನು ಅವಕ್ಕಾದನು. ಅವನು ತನ್ನಷ್ಟಕ್ಕೆ ಚಲಿಸುವ ಯಂತ್ರದಂತೆ ಮುಂದಕ್ಕೆ ಹೋಗುತ್ತಿದ್ದನು.

ತಮ್ಮ ಕಾಲುಗಳ ಶಬ್ದ ಅವರಿಗೆ ಕೇಳಿಬರುತ್ತಿತ್ತು. ಒಬ್ಬರತ್ತ ಒಬ್ಬರು ದೃಷ್ಟಿಸಿ ನೋಡುತ್ತಿದ್ದರು. ತಪ್ಪಿಸಿಕೊಂಡು ಓಡುತ್ತಿರುವ ಕೈದಿಗಳಿಗೆ ಮಾತ್ರ ಗೊತ್ತಿರುವ ವಿಶಿಷ್ಟ ರೀತಿಯಲ್ಲಿ ಅವರು ಬಯಲನ್ನು ದಾಟುತ್ತಿದ್ದರು.

"ಇಲ್ಲಿಂದ ಇನ್ನು ನಾಗಲಾಪುರಂ ಪರ್ವತಕ್ಕೆ—ನಿಮ್ಮ ಮನೆಗೆ—ಎಷ್ಟು ದೂರವಿದೆ?" ತೊಪ್ಪೈ ವಿಚಾರಿಸಿದನು.

"ನೂರೈವತ್ತು ಮೈಲುಗಳಿವೆ; ಸಾರ್ವಜನಿಕ ರಸ್ತೆಗಳನ್ನು ನಾವು ಉಪಯೋಗಿಸಬಾರದು. ಗುಪ್ತದಾರಿಯಿಂದ ಹೋಗಬೇಕು, ಅದರಲ್ಲಿ ನಮ್ಮ ರಕ್ಷಣೆ. ಪೂರ್ವ ಘಟ್ಟಗಳ ಮೂಲವಿರುವ ಈ ಮಾರ್ಗ ಬಹಳ ಗಟ್ಟಿ, ದೊರಗು ಹಾಗೂ ಕಾಡುಮಯ. ಹೀಗೆ ನಾವು ಮೂರು ದಿನ ಪ್ರಯಾಣ ಮಾಡಬೇಕಾಗಿದೆ. ದಾರಿಯಲ್ಲಿ ನಮಗೆ ಅನೇಕಾನೇಕ ಸ್ನೇಹಿತರು ಸಿಗುತ್ತಾರೆ. ನಮ್ಮ ಕುಲದೇವತೆ ನಮ್ಮನ್ನು ಕಾಪಾಡಲಿ!" ಮುಖಂಡನು ಹೇಳಿ ಪ್ರಾರ್ಥಿಸಿದನು.

"ನಮ್ಮ ಕುಲದೇವತೆ ನಮ್ಮನ್ನು ಕಾಪಾಡಲಿ!" ತೊಪ್ಪೈ ಹಾಗೂ ಮುರುಗ—ಇಬ್ಬರೂ ಒಂದೇ ಸಲ, ಒಂದೇ ಸ್ವರದಲ್ಲಿ ಪ್ರತಿಧ್ವನಿಯಂತೆ ಹೇಳಿದರು.

(ಮುಂದುವರಿಯುವುದು.)

READ &
ADVERTISE IN
NAVAYUGA WEEKLY



NAVAYUGA 28—4—1966
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಚಾರುಚಂದ್ರನ

ಇಂಡೋನೇಸ್ಯಾದ ಬಿರುಗಾಳಿ

ಕೆಂಪು ಚಿಟ್ಟೆಯ ಒಂದು ರೆಕ್ಕೆ ತುಂಡಾಯಿತು;
ಜೋಲುತ್ತಿರುವ ಇನ್ನೊಂದರ ಗತಿಯೇನು?

ಇಂಡೋನೇಸ್ಯಾದ ಬಾಡುಂಗದಲ್ಲಿ ತಟಸ್ಥ ರಾಷ್ಟ್ರಗಳ ಸಮ್ಮೇಳನ ನಡೆದದ್ದು, ರಾಜಕೀಯದಲ್ಲಿ ಪಂಚಶೀಲ ತತ್ವಗಳು ಪ್ರವೇಶ ಪಡೆದದ್ದು ಒಂದು ಅವಿಸ್ಮರಣೀಯ ಘಟನೆ. ಆಗ ಭಾರತದ ಪ್ರಧಾನಿಯಾಗಿದ್ದ ದಿ| ಪಂ. ನೆಹರುರವರೇ ಈ ಸಮ್ಮೇಳನದ ಆತ್ಮ ಶಕ್ತಿಯಾಗಿದ್ದರು.

ಲೋಕಕ್ಕೆ ಪಂಚಶೀಲವನ್ನು ಕಾಣಿಕೆಯಾಗಿತ್ತ ನೆಹರೂರವರೇ ತಮ್ಮ ಕಣ್ಣುಗಳಿಂದಲೇ ಈ ಶೀಲಗಳು ತಮಗೇನೇ ಶೂಲವಾಗಿ ಪರಿಣಮಿಸಿದುದನ್ನು ಕಂಡರು. ಕೆಂಪು ಚೀನಾದ ನಾಯಕತ್ವದಲ್ಲಿ ಪ್ರತ್ಯಕ್ಷವಾಗಿ ಪಂಚಶೀಲವನ್ನು ಒಪ್ಪಿಕೊಂಡ ದೇಶಗಳಲ್ಲಿ ಕೆಲವು ಅದನ್ನು ಕಡೆಗಣಿಸುತ್ತಿರುವುದನ್ನೇ ಅವರೂ ಅವರ ಉತ್ತರಾಧಿಕಾರಿಗಳೂ ಕಾಣಬೇಕಾಯ್ತು.

ಇಂಡೋನೇಸ್ಯಾದ ಯಾವಜ್ಜೀವ ಅಧ್ಯಕ್ಷ ಸುಕರ್ಣರು ತಮ್ಮ ರಾಜಕೀಯ ದಿನಚರಿಯ ಗತಿಯನ್ನು ಕಾಲಕ್ರಮದಲ್ಲಿ ಬದಲಿಸಿದರು. ಅವರ ಮನಸ್ಸು ಕೆಂಪು ಚೀನಾದತ್ತ ಸೆಳೆಯಿತು; ಅಥವಾ ಚೀನಾವೇ ಅವರನ್ನು ತನ್ನತ್ತ ಎಳೆದು ಕೊಂಡಿತು.

ಮಲೇಸ್ಯಾ—ಇಂಡೋನೇಸ್ಯಾ ವಿವಾದ, ಭಿನ್ನಾಭಿಪ್ರಾಯಗಳು ಕೆಂಪು ಚೀನಾಕ್ಕೆ ಸಹಕಾರವಿತ್ತುವು. ಕೆಂಪು ಮಾವ ಸುಕರ್ಣನ ವಿದೇಶ ಮಂತ್ರಿಯನ್ನು ಕಬಳಿಸಿದರೆ, ವಿದೇಶ ಮಂತ್ರಿ ಸುಂಬಾದ್ರಿಯೋ ಸುಕರ್ಣನನ್ನು ನುಂಗಿ ಬಿಟ್ಟ.

ಮಾವನ ಕಾರಬಾರ ಇಂಡೋನೇಸ್ಯಾದಲ್ಲಿ ನಡೆಯಿತು. ಸೊಸೆಯಾಗಿ ಬಂದ ಕಮ್ಯುನಿಜಂ— ಚೀನೀ ಮೈತ್ರಿ ಅತ್ತೆಯಂತೆ ಅಧಿಕಾರ ನಡೆಸತೊಡಗಿತು.

ಸುಂಬಾದ್ರಿಯೋ ದಾರಿಯಲ್ಲಿ ನಡೆದ ಇನ್ನೊಂದು ಏಶ್ಯನ್ ವ್ಯಕ್ತಿ ಪಾಕ್ ವಿದೇಶ ಮಂತ್ರಿ ಜಡ್. ಎ. ಭುಟ್ಟೋ. ಅಧ್ಯಕ್ಷ ಮೇ| ಜ| ಅಯ್ಯೂಬಖಾನರನ್ನು ತನ್ನ ಕೈಗೊಂಬೆ ಮಾಡಿಕೊಳ್ಳುವಲ್ಲಿ ಈತನ ಪ್ರಯತ್ನ ಸಂಪೂರ್ಣ ಯಶದ ದಾರಿಯಲ್ಲಿಲ್ಲ.

ಕೆಂಪು ಚೀನಾವು ತನ್ನ ಉತ್ತರಗಡಿಯಲ್ಲಿ ಗೀಟಿಕರಲ್ಲಿ ಆಕ್ರಮಣಮಾಡಿದಾಗ, ಕೊಲಂಬೋ ಸಮ್ಮೇಳನದ ವೇಳೆ ಇಂಡೋನೇಸ್ಯಾ ತನ್ನ ಅಪರಾಗ ಹಾಡತೊಡಗಿದ್ದನ್ನು ಗಮನಿಸಿತ್ತು, ಭಾರತ. ಆದರೆ, ಅಭಿಪ್ರಾಯ ಸ್ವಾತಂತ್ರ್ಯ ಪ್ರತ್ಯೇಕ ದೇಶಕ್ಕೂ ಇದ್ದೇ ಇದೆ. ಸುಮ್ಮನಿರಲೇ ಬೇಕಿತ್ತು.

ಮಲೇಸ್ಯಾದೊಡನೆ ವಿವಾದ ಹುಟ್ಟಿಸಿಕೊಂಡ ಇಂಡೋನೇಸ್ಯಾ ಅದರ ಬದ್ಧ ಶತ್ರುವಾಯಿತು. ಮಲೇಸ್ಯಾದ ಸಮರ್ಥಕರೆಲ್ಲಾ ಅದರ ವೈರಿಗಳಾದರು. ಮಲೇಸ್ಯಾ ಸರಕಾರವನ್ನು ಭಾರತ ಮನ್ನಿಸಿದ್ದರಿಂದ ಅದು ಸುಕರ್ಣ— ಸುಂಬಾದ್ರಿಯೋರವರ ಮೊದಲ ಶತ್ರುವಾಯಿತು.

ಇದರ ಪರಿಣಾಮ?

ಪಾಕ್— ಇಂಡೋನೇಶ್ಯಗಳ ನಡುವಣ ನಿಕಟ ಸಂಬಂಧ-ಎಲ್ಲಿಯ ವರೆಗೆ? ಕಳೆದ ಸಪ್ಟೆಂಬರದಲ್ಲಾದ ಭಾರತ ಪಾಕ್ ಘರ್ಷಣೆಯ ವೇಳೆ ಅದು ವಿಮಾನ—ಎಣ್ಣೆ, ಶಸ್ತ್ರಾಸ್ತ್ರಗಳನ್ನು ಪಾಕಿಸ್ಥಾನಕ್ಕೆ ಕಳಿಸಿ ಕೊಟ್ಟಿತ್ತು....?

ಇದ್ದರೂ ಇರಬಹುದು.

ಕೃಷ್ಣ ಹೇಳಿದ್ದಾನೆ—ನನ್ನ ಭಕ್ತರು ಕರೆವಲ್ಲಿ ನಾನು ಹೋಗುತ್ತೇನೆ. ದ್ರೌಪದಿಯು ಕಾಡು ನಡುವೆ, ಉರಿಬಿಸಿಲಲ್ಲಿ ಕರೆದಾಗಲೂ ದ್ವಾರಕೆಯಲ್ಲಿ ಪಗಡೆಯಾಟ ನಿಲ್ಲಿಸಿ ಓಡಿ ಹೋಗಲಿಲ್ಲವೆ?

ನನ್ನ ಭಕ್ತ ವಿರೋಧಿಗಳೆಲ್ಲಾ ನನ್ನ ವಿರೋಧಿಗಳು: ಎಂತಲೇ ಕೌರವರ ನಾಶವಾಯಿತು. ಇಲ್ಲವಾದರೆ, ಅವರೇನು ಕೃಷ್ಣನಿಗೆ ಅನ್ಯಾಯ ಮಾಡಿದ್ದಾರೆ? ಇಲ್ಲಿ ಸುಕರ್ಣ ಧುರ್ಯೋಧನನ ಪಕ್ಷವನ್ನೇ ಹಿಡಿದಿದ್ದಾನೆ.

ಸುಕರ್ಣರ ಆರ್ಭಟ ಹೆಚ್ಚಿತು. ಕಾಶ್ಮೀರದಲ್ಲಿ ಪಾಕಿಸ್ತಾನದ ಅಧಿಕಾರವಿದೆಯೆಂಬ ಕೆಂಪು ಚೀನಾದ ನಿಲುವೇ ಇವರದ್ದಾಯಿತು. ಭಾರತದ ಆತ್ಮರಕ್ಷಣೆಯ ಪ್ರಯತ್ನ ಇವರಿಗೆ ಆಕ್ರಮಣವಾಯಿತು.

ಸುಕರ್ಣರು ಎಷ್ಟು ಜಾರಿ ಬೀಳಬಹುದೋ ಅಷ್ಟೂ ಜಾರಿಬಿದ್ದರು. ಸಂಯುಕ್ತ ರಾಷ್ಟ್ರ ಸಂಘದಿಂದ ಹಿಂದೆ ಸರಿದರು— ಇದಕ್ಕೊಂದು ಪ್ರತಿ ಜಾಗತಿಕ ಸಂಸ್ಥೆಯನ್ನು ಕಟ್ಟುತ್ತೇವೆ ಎಂದರು--ಆದರೆ, ಇದು ಸ್ವಂತ ಬುದ್ಧಿಯಿಂದಲೆ?

ಹಾಗಾದರೆ, ಇದು ವರೆಗೂ ಏಕೆ ಆ ಹೊಸ ಸಂಸ್ಥೆ ಹುಟ್ಟಿಲ್ಲ? ಪಾಕಿಸ್ತಾನವೂ ಯುಕ್ತ ರಾಷ್ಟ್ರ ಸಂಸ್ಥೆಯಿಂದೇಕೆ ಹೊರಬಂದಿಲ್ಲ, ಇವರ ಕೈ ಬಲಪಡಿಸಿಲ್ಲ?

ಕೆಂಪು ಚೀನಾ ದೈತ್ಯನ ವಿಶ್ವರೂಪ ಮಾತ್ರವಿದು. ಜಗತ್ತಿನ ಇತರ ರಾಷ್ಟ್ರಗಳನ್ನು ಬೆದರಿಸಿ ಅವುಗಳ ಪ್ರತಿಕ್ರಿಯೆ, ಬಲಾಬಲಗಳನ್ನು ಕೆಚ್ಚನ್ನು ಕಂಡುಕೊಳ್ಳುವ ಕುಹಕ ಕ್ರಮ ಮಾತ್ರ. ಕೆಂಪು ಮನುಷ್ಯ ಸುಕರ್ಣ-ಅಯ್ಯೂಬರನ್ನೂ ಸುಂಬಾದ್ರಿಯೋ ಭುಟ್ಟೋರನ್ನೂ ತನ್ನ ಚತುರ್ಗಗಳಂತೆ ಬಳಸಿಕೊಂಡ.

ಆದರೆ, ಇದರ ಪರಿಣಾಮ?

ಜಗತ್ತು ಸಿಗ್ಗಲಿಲ್ಲ; ಬಗ್ಗಲಿಲ್ಲ.

ಕೆಂಪು ಚೀನಾದ ಗದರಿಕೆ— ಬೆದರಿಕೆಗಳಿಗೆ ಸೊಪ್ಪು ಹಾಕಲಿಲ್ಲ.

ಸುಕರ್ಣರು ತಮ್ಮನ್ನೆತ್ತ ಒಯ್ಯುತ್ತಿದ್ದಾರೆಂಬುದನ್ನು ಇಂಡೋನೇಶ್ಯನ್ನರು ಅರಿತರು— ಜನ ಸೇನೆ ಇಬ್ಭಾಗವಾಯಿತು; ಘರ್ಷಣೆಯೆದ್ದಿತು. ಸುಕರ್ಣ ಇನ್ನಿಲ್ಲವೆಂಬಂತಾಯಿತು.

ಇದೊಂದು ಬಿರುಗಾಳಿ. ಬೀಸಿತು, ಸರಿಯಿತು.

ಆದರೆ ಪರಿಣಾಮ ದೂರಹೋಗಲಿಲ್ಲ. ಆಜೀವ ಅಧ್ಯಕ್ಷ ಸುಕರ್ಣರು ಒಮ್ಮಿಂದೊಮ್ಮೆಲೇ ಬಗ್ಗಿದರು. ತಾನು ನಾಮಮಾತ್ರ ಅಧಿಕಾರಿಯಾಗಿ ಉಳಿಯಲು ಒಪ್ಪಿದರು. ಸೇನಾನಾಯಕರೇ ಅಧಿಕಾರ ಚಲಾಯಿಸಲು ಒಪ್ಪಿದರು, ತನ್ನ ಹೆಸರಲ್ಲಿ. ಇದು ಬೃಹತ್ ಕ್ರಾಂತಿ.

ಸುಂಬಾದ್ರಿಯೋ ಬಂಧನವಾದರೆ, ಕಮ್ಯುನಿಸ್ಟ ಪಕ್ಷಕ್ಕೆ ಪ್ರತಿಬಂಧ ಬಿತ್ತು. ಕೆಂಪು ಚೀನಾದ ಸಂಬಂಧ ಸ್ಥಗಿತವಾಯ್ತು ಮತ್ತೆ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯನಾಗುವ ಆಶಯಾಗ. ಅಮೆರಿಕೆ ಮೊದಲಾದುವುಗಳೊಡನೆ ಕೆಟ್ಟು ಹೋದ ತನ್ನ ಸಂಬಂಧವನ್ನು ಮತ್ತೆ ಸ್ಥಾಪಿಸುವ ಹೆಬ್ಬಯಕೆ ಮೂಡಿದೆಯಾಗ.

ವಿರೋಧಿ ಪಕ್ಷಗಳ ಆಶಯದಂತೆ ಸಾರ್ವತ್ರಿಕ ಚುನಾವಣೆ ನಡೆಸುವುದಕ್ಕೂ ಸುಕರ್ಣರಿಂದು ಒಪ್ಪಿದ್ದಾರೆ. ಅಮೆರಿಕನ್ ಸ್ನೇಹ ಗಳಿಸುವಲ್ಲಿ ಜಪಾನದ ಸಹಾಯ ಕೇಳಿದ್ದಾರೆ. ಶಾಂತಿಯುತ ಸಹ ಜೀವನದ ತತ್ವಗಳನ್ನು ಇಂಡೋನೇಶ್ಯಾ ಅನುಸರಿಸುವುದೆಂದು ಘೋಷಿಸಿದ್ದಾರೆ. ಅಂದರೆ-

ಪಂಡಿತ ಜವಾಹರಲಾಲರ ತಾಟಸ್ಥ್ಯ ನೀತಿಗೆ ಅವರು ಮತ್ತೆ ಮರಳುತಿದ್ದಾರೆ. ಕುಡಿದ ಚೀನೀ ಹೆಂಡದ ಅಮಲೀಗ ಸುಕರ್ಣರ ತಲೆಯಿಂದ ಇಳಿಯತೊಡಗಿದೆ.

ಇದೇನು ಸೂಚಿಸುತ್ತದೆ?

ಕೆಂಪು ಚಿಟ್ಟೆಯ ಒಂದು ರೆಕ್ಕೆ ಪೂರ್ತಿ ತುಂಡಾಯಿತು; ಇನ್ನೊಂದು ಜೋಲುತ್ತಲೇ ಇದೆ.

ಅದೂ ಕಳಚಿ ಬೀಳುವ ದಿನ ದೂರವಿಲ್ಲ.

ಕೆಂಪು ಚಿಟ್ಟೆ ವಿಲಿವಿಲಿ ಒದ್ದಾಡುವುದನ್ನು ಕಾಣುವ ದಿನವೂ ದೂರವಿಲ್ಲ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.